# SHREE SAI SATCHARITA

(KANNADA)

OVI TO OVI

The Life & Teachings of Shirdi Sai Baba





**HEMADPANT**
**(Govind R. Dabholkar – Annasaheb)**
(The Author of the original Sree Sai Satcharita in Marathi)

He, by Baba's grace, had the privilege to compose, in Marathi, Sree Sai Samartha Satcharita, a Gita for Sai devotees

# ಶ್ರೀ ಸಾಯಿ ಸಚ್ಚರಿತ್ರೆ


ಮೂಲ ಮರಾಠಿ :

**ಕೈ|| ಗೋವಿಂದ ರಘುನಾಥ ದಾಭೋಳಕರ**

ಅನುವಾದಕರು :

**ಶ್ರೀಮತಿ ಲಲಿತಾ ಇನಾಮದಾರ**

**ಧಾರವಾಡ**



Publisher :

D. M. Sukthankar
Chairman

Shri Sai Baba Sansthan
Shirdi
'Sai Niketan', 804-B
Dr. Ambedkar Road
Dadar, Mumbai
400 014
Tel : 022-416 6556, 022-416 1293
Fax : 022-415 0798
Email : saidadar@bom3.vsnl.net.in

Shirdi Office
Po. Shirdi
Dist. Ahmednagar
Tel : 02423-55225, 55226, 55175
Fax : 02423-55211
Email : saibaba@pn3.vsnl.net.in

Internet web site : URL:http://www.shrisaibabasansthan.org

E

"**Sri Sai Sacharitha**" written by Late Govinda Raghunatha Dhabolkar, transalated by Smt. Lalitha D. Inamdar, "Chanda" Rajatagiri, Dharwad - 580004 & Published by Sri Sai Baba Samsthana, Shiradi, Ahamednagr Post, Maharastra.

First Edition : 2000

Copy right reserved with publisher.

5.000 copies

Price : Rs. 88.00

Typeset by :
**Sai Devotee K.N. Nagaraj**
Sainath Graphics
No. 205, Cottonpet, Bangalore
Ph : 6700650

Printer
M. D. Rajan
Geeta Offset
C-6, Royal Industrial Estate
Naigaum Cross Road
Wadala, Mumbai 400 031
Tel: 022 - 4124247, 022 - 4134984
Fax: 022 - 4168604

# ಶ್ರೀ ಸಾಯಿ ಸಚ್ಚರಿತ

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥ ಶ್ರೀ ಗುರುಭ್ಯೋ ನಮಃ ॥
ಗುರುರ್ಬ್ರಹ್ಮಾ ಗುರುರ್ವಿಷ್ಣೋಃ ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥೧॥

ಬ್ರಹ್ಮಾನಂದ ಪರಮ ಸುಖದಂ, ಕೇವಲಂ ಜ್ಞಾನ ಮೂರ್ತಿಂ ।
ದ್ವಂದ್ವಾತೀತಂ ಗಗನ ಸದೃಶಂ, ತತ್ವಮಸ್ಯಾದಿ ಲಕ್ಷ್ಯಂ ।
ಏಕಂ ನಿತ್ಯಂ, ವಿಮಲಮ್ಚಲಂ, ಸರ್ವಧೀಸಾಕ್ಷಿ ರೂಪಂ ।
ಭಾವಾತೀತಂ ತ್ರಿಗುಣ ರಹಿತಂ । ಸದ್ಗುರುಂ ತಂ ನಮಾಮಿ ॥೨॥

## ಉಪೋದ್ಘಾತ

ಶ್ರೀ ಸಾಯಿನಾಥ ಮಹಾರಾಜರು ಸುಮಾರು ಐವತ್ತು ವರ್ಷಗಳ ಹಿಂದೆ ಶಿರಡಿಗೆ ಬಂದರು. ಅಹಮದನಗರ ಜಿಲ್ಲೆಯ, ಕೋಪರಗಾವ ತಾಲೂಕಿನಲ್ಲಿ, ಶಿರಡಿ ಊರು ಇರುವುದು. ಮಹಾರಾಜರು ಮೂಲತಃ ಎಲ್ಲಿಯವರು ಮತ್ತು ಅವರ ತಂದೆ ತಾಯಿ ಯಾರು. ಇದರ ಬಗ್ಗೆ ನಿಶ್ಚಿತವಾದ ಮಾಹಿತಿ ಸಿಗುವುದಿಲ್ಲ. ಇಷ್ಟು ಮಾತ್ರ ಖಚಿತವೆನಿಸುವುದು. ಮೊಗಲಾಯಿಯೊಡನೆ ಮಹಾರಾಜರ ಸಂಬಂಧ ಹೆಚ್ಚಾಗಿರಬೇಕು. ಮಹಾರಾಜರ ಮಾತಿನಲ್ಲಿ ಶೇಲೂ, ಜಾಲನಾ ಮಾಣವದ, ಪಾಥರೀ, ಪರಭಣೀ, ಔರಂಗಾಬಾದ, ಬೀಡ, ಬೀದರ ಮೊದಲಾದ ಮೊಗಲಾಯಿಯಲ್ಲಿರುವ ಊರುಗಳ ಬಗ್ಗೆ ಮಾತು ಬರುತ್ತಿತ್ತು. ಒಮ್ಮೆ ಒಬ್ಬ ಪಾಥರಿಯ ಗೃಹಸ್ಥ ಮಹಾರಾಜರ ದರ್ಶನಕ್ಕೆ ಬಂದ. ಮಹಾರಾಜರು ಅವನಿಗೆ ಪಾಥರಿಯ ಸುದ್ದಿಗಳನ್ನು ಕೇಳಿ ಅಲ್ಲಿದ್ದ ಬಹುತೇಕ ಮುಖ್ಯ ಮುಖ್ಯ ಜನರ ಹೆಸರು ಹೇಳಿ ಅವರ ಬಗ್ಗೆ ಮಾಹಿತಿ ಕೇಳಿದರು. ಇದರ ಮೇಲಿಂದ ಮಹಾರಾಜರಿಗೆ ಪಾಥರಿಯ ವಿಶೇಷ ಮಾಹಿತಿ ಇತ್ತು ಎಂಬುದು ತಿಳಿಯುವುದು. ಆದರೆ ಅವರು ಹುಟ್ಟಿದ್ದು ಅಲ್ಲಿಯೇ ಎಂದು ನಿಶ್ಚಯವಾಗಿ ಹೇಳಲು ಬರುವುದಿಲ್ಲ.

ಅದರಂತೆಯೇ ಮಹಾರಾಜರು ಹುಟ್ಟು ಬ್ರಾಹ್ಮಣರೋ ಅಥವಾ ಮುಸಲ್ಮಾನರೋ ಎಂಬುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ. ಅಥವಾ ಅವರ ಹಲವು ಭಕ್ತರ ಅಭಿಪ್ರಾಯದಂತೆ ಅವರು 'ಅಯೋನಿಜ'ರಿದ್ದರೋ ಎಂದೂ ಹೇಳಲು ಬರುವುದಿಲ್ಲ. ಮಹಾರಾಜರನ್ನು ಅಯೋನಿಜರೆನ್ನುವದಾದರೆ ಅವರ ಭಕ್ತರಲ್ಲದವರ ವಿಚಾರದಲ್ಲಿ ಅದು ಅಶಕ್ಯವೆಂದೆನಿಸಬಹುದು. ಆದರೆ ಪ್ರಸ್ತುತ ಲೇಖಕನಿಗೆ ಹಾಗೆನಿಸುವುದಿಲ್ಲ. ಒಂದು ಸಲ ಮಹಾರಾಜರು ಈ ಲೇಖಕನೆದುರಿಗೆ ಸ್ವತಃ ತಾವೇ ಹೇಳಿದ್ದರು, 'ಈಗ ನಾವು ಹೋಗಿ ಮತ್ತೆ ಎಂಟು ವರ್ಷದ ಬಾಲಕನಾಗಿ ಬರುವೆವು.' ಶ್ರೀಕೃಷ್ಣಮೂರ್ತಿಯು ದೇವಕಿಯ ಹತ್ತಿರ ಪ್ರಕಟವಾದಾಗ ಆ ಬಾಲ ಮೂರ್ತಿ ಎಂಟು

ವರ್ಷದವನೇ ಆಗಿದ್ದನಂತೆ. ಎಂದು ಪುರಾಣಾಂತರದಲ್ಲಿ ವರ್ಣನೆ ಇದೆ. 'ಮೂರ್ತಿ ಎಂಟು ವರ್ಷದ್ದು । ಅಸಂಭಾವ್ಯ ದೀಪ್ತಿ ಅವರದು । ದಶದಿಕ್ಕನು ಬೆಳಗಿತು ತೇಜವದು। ಅದರಲಿ ಶಶಿ ಸೂರ್ಯರೂ ಕಾಣದಾದರು।। (ಹರಿ ವಿಜಯ ಅ೩. ಪ. ೧೨೬).

ಮಹಾರಾಜರ ಹೆಚ್ಚಿನ ಭಕ್ತರೆಲ್ಲ, ಅವರನ್ನು ಸಾಧಕನಾಗಿ ಸಿದ್ಧನಾದವರೆಂದು ತಿಳಿಯುವುದಿಲ್ಲ, ಅವರು ಮಹಾರಾಜರನ್ನು ಪ್ರತ್ಯಕ್ಷ ಅವತಾರವೆಂದೇ ಎಣಿಸುವರು, ಹಾಗೂ ಮಹಾರಾಜರ ಲೀಲೆಗಳು ಮತ್ತು ಅವರ ಅದ್ಭುತ ಶಕ್ತಿಯನ್ನು ಕಂಡು ಅವರನ್ನು ಶ್ರೀಕೃಷ್ಣನ ಅವತಾರವೆಂದೇ ತಿಳಿಯುವರು. ಆದರೆ ಮಹಾರಾಜರು ಮಾತ್ರ ಆ ಅಧಿಕಾರವನ್ನು ತಮ್ಮ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಅವರು ಮಾತಾಡುವಾಗ ತಮ್ಮನ್ನು ಪರಮೇಶ್ವರನ ಸೇವಕ (ಬಂದಾ) ಎಂದುಕೊಳ್ಳುತ್ತಿದ್ದರು. ತಮ್ಮ ಗುರುವಿನ ಆಶೀರ್ವಾದ ತಮಗೆ ಪೂರ್ಣವಾಗಿ ಇದೆ ಮತ್ತು ಅವರ ಕೃಪೆಯಿಂದಲೇ ಭಕ್ತರ ಸಂಕಟಗಳು ದೂರವಾಗಿ ಅವರ ಕಲ್ಯಾಣವಾಗುವುದು ಎಂದು ಅವರು ಅನ್ನುತ್ತಿದ್ದರು. ಭಕ್ತರಿಗೆ ಆಶೀರ್ವಾದ ಕೊಡುವಾಗ, 'ಅಲ್ಲಾ ಭಲಾ ಕರೇಗಾ' ಎಂಬ ಶಬ್ದಗಳೇ ಅವರ ಮುಖದಲ್ಲಿರುತ್ತಿದ್ದವು. ಅವರು ಎಂದೂ ತಮಗೆ ದೊಡ್ಡಿಸ್ತನವನ್ನು ತೆಗೆದುಕೊಳ್ಳು ತ್ತಿರಲಿಲ್ಲ. ಅವರು ಎಂದೂ 'ಅನಲ ಹಕ್' ಎಂದರೆ 'ನಾನೇ ಪರಮೇಶ್ವರ' ಎಂದು ಅನ್ನುತ್ತಿರಲಿಲ್ಲ. ಆದರೆ ಅವರು ಆಗಾಗ, 'ಯಾದೋ ಹಕ್' ಅಂದರೆ 'ನಾನು ಪರಮೇಶ್ವರ ಸ್ಮರಣೆ ಮಾಡುವವನು' ಎನ್ನುತ್ತಿದ್ದರು.

ಮಹಾರಾಜರು ಶಿರಡಿಗೆ ಬಂದದ್ದು ಒಬ್ಬ ಮುಸಲ್ಮಾನ ಗೃಹಸ್ಥರ ಮನೆಯ ಮದುವೆಯ ದಿಬ್ಬಣದೊಂದಿಗೆ. ಆ ಗೃಹಸ್ಥನ ಹೆಸರು ಚಾಂದಭಾಯೀ ಎಂದಿತ್ತು. ಅವನು ಧೂಪ ಖೇಡೆ ಎಂಬ ಊರಿನ ಗೌಡನಿದ್ದ. ಒಂದು ದಿನ ಅವನ ಕುದುರೆ ತಪ್ಪಿಸಿಕೊಂಡಿತೆಂದು ಅದನ್ನು ಹುಡುಕಲು ಅವನು (ಊರ ಹೊರಗೆ) ಹೊರಟಿದ್ದ. ಆಗ ಅಲ್ಲಿ ಒಂದು ಮರದ ಕೆಳಗೆ ಕುಳಿತ ಮಹಾರಾಜರನ್ನು ಕಂಡ. ಮಹಾರಾಜರನ್ನು ಅವನು ಮೊದಲು ಎಂದೂ ನೋಡಿರಲಿಲ್ಲ. ಮಹಾರಾಜರು ಅವನನ್ನು ಕರೆದರು ಮತ್ತು ಹುಕ್ಕಾ ಸೇದಿ ಹೋಗುವೆಯಂತೆ ಬಾ ಎಂದರು. ಆಗ ಗೌಡನೆಂದ 'ನನ್ನ ಕುದುರೆ ಕಳೆದಿದೆ. ಅದನ್ನು ಹುಡುಕಲು ನಾನು ಹೊರಟ್ಟಿದ್ದೇನೆ.' ಅದಕ್ಕೆ ಮಹಾರಾಜರೆಂದರು, 'ಅದಕ್ಕೇಕೆ ಅಷ್ಟು ದೂರ ಹೋಗಬೇಕು ? ಅಗೋ ಅಲ್ಲಿ ಆಚೆಗಿರುವ ಬೇಲಿಯ ಮರೆಯಲ್ಲೇ ಇದೆ.' ಎಂದ ಕೂಡಲೇ ಚಾಂದಭಾಯಿ ಮಹಾರಾಜರು ಹೇಳಿದ ಬೇಲಿಯ ಹತ್ತಿರ ನಡೆದ. ನಿಜವಾಗಿಯೂ ಅಲ್ಲಿಯೇ ಅವನ ಕುದುರೆ ಮೇಯುತ್ತಿತ್ತು. ಚಾಂದಭಾಯಿಯು ಕುದುರೆಯನ್ನು ಹಿಡಿದುಕೊಂಡು ಮಹಾರಾಜರ ಹತ್ತಿರ ಬಂದ. ಮಹಾರಾಜರು ಅವನಿಗೆ ಹುಕ್ಕಾ ಸೇದಲು ಕೊಟ್ಟ ನಂತರ ಅವನು ಮಹಾರಾಜರಿಗೆ ತಮ್ಮ ಮನೆಗೆ ಬರಲು ಒತ್ತಾಯ ಮಾಡತೊಡಗಿದ. ಮಹಾರಾಜರೆಂದರು, 'ನಾನು ನಾಳೆ ಬರುವೆನು.' ಅದರಂತೆ ಮರುದಿನ ಮಹಾರಾಜರು ಅವನ ಮನೆಗೆ ಹೋದರು. ಚಾಂದಭಾಯಿಗೆ ಹುಕ್ಕಾ ಸೇದಲು ಕೊಡುವಾಗ ಆ ಬಯಲಲ್ಲಿ (ಅಡವಿಯಲ್ಲಿ) ಬೆಂಕಿ

ಇರಲಿಲ್ಲ. ಮಹಾರಾಜರು ತಮ್ಮ ಕೈಯಲ್ಲಿರುವ ಇಕ್ಕಳವನ್ನು ನೆಲದಮೇಲೆ ಬಡಿದು ಅಲ್ಲಿ ಬೆಂಕಿ ತರಿಸಿದರು ಮತ್ತು ಅದರಿಂದ ತಮ್ಮ ಕೆಲಸ ಮಾಡಿಕೊಂಡರು.

ಮಹಾರಾಜರು ಚಾಂದಭಾಯಿಯ ಮನೆಯಲ್ಲಿ ಕೆಲವು ದಿನ ಉಳಿದರು. ನಂತರ ಚಾಂದಭಾಯಿಯ ಪತ್ನಿಯ ಸೋದರಳಿಯನ ಬೀಗತನ ಶಿರಡಿಯ ಒಂದು ಹುಡುಗಿಯೊಡನೆ ಆದಾಗ ಆ ಲಗ್ನದ ಮನೆಯವರ ಜೊತೆಗೆ ಮಹಾರಾಜರು ಶಿರಡಿಗೆ ಬಂದರು. ಬಂದವರು ಊರ ಹೊರಗೆ ಇದ್ದ ಖಂಡೋಬಾನ ಗುಡಿಯ ಹತ್ತಿರ ಒಂದು ತೋಟದಲ್ಲಿ ಇಳಿದಿದ್ದರು. ಮಹಾರಾಜರು ಖಂಡೋಬಾನ ಗುಡಿಯಲ್ಲಿ ಹೋದಾಗ ಅಲ್ಲಿ ಅವರಿಗೆ ಮ್ಹಾಳಾಸಾಪತಿ ಎಂಬ ಹೆಸರಿನ ಗೃಹಸ್ಥರು ಭೇಟಿಯಾದರು. ಈ ಮ್ಹಾಳಾಸಾಪತಿಯವರು ಶಿರಡಿಯ ನಿವಾಸಿಗಳೇ ಆಗಿದ್ದು ಜಾತಿಯಿಂದ ದೈವಜ್ಞರಿದ್ದರು. ಇವರು ಖಂಡೋಬಾನ ಭಕ್ತರಿದ್ದು ಖಂಡೋಬನ ವಾರಿಯು ಎಷ್ಟೋ ಪೀಳಿಗೆಯಿಂದ ಅವರಲ್ಲಿ ನಡೆದು ಬಂದಿತ್ತು. ಮಹಾರಾಜರು ಖಂಡೋಬಾನ ದೇವಸ್ಥಾನದಲ್ಲಿ ಹೋದಾಗ ಕಫನಿ (ನಿಲುವಂಗಿ), ಟೊಪ್ಪಿಗೆ ಮತ್ತು ಮೈಮೇಲೆ ಧೋತರ ಇತ್ತು. ಅವರನ್ನು ನೋಡಿದ ಕೂಡಲೇ ಮ್ಹಾಳಸಾಪತಿಯವರು 'ಅವೋ ಸಾಯಿಬಾಬಾ' ಎಂಬ ನುಡಿಗಳಿಂದ ಅವರ ಸ್ವಾಗತ ಮಾಡಿದರು. ಮತ್ತು ಅದೇ 'ಸಾಯಿಬಾಬಾ' ಎಂಬ ಹೆಸರನ್ನೇ ಕೊನೆಯವರೆಗೆ ಮಹಾರಾಜರು ಧಾರಣ ಮಾಡಿದರು. ಮಹಾರಾಜರ ಹೆಚ್ಚಿನ ಭಕ್ತರೆಲ್ಲ ಅವರಿಗೆ 'ಸಾಯಿಬಾಬಾ' ಅಥವಾ ಬಾಬಾ ಎಂದೇ ಕರೆಯುತ್ತಿದ್ದರು. ಒಮ್ಮೆ ಒಂದು ಕೆಲಸದಲ್ಲಿ ಮಹಾರಾಜರ ಸಾಕ್ಷಿ ಇತ್ತು. ಆಗ ಮಹಾರಾಜರಿಗೆ ಹೆಸರು ಕೇಳಿದಾಗ ಅವರು, 'ನನಗೆ ಸಾಯಿಬಾಬಾ ಎನ್ನುವರು' ಎಂದು ಹೇಳಿದರು. ಮ್ಹಾಳಸಾಪತಿಯವರು ಮಹಾರಾಜರನ್ನು ಊರೊಳಗೆ ಕರೆದುಕೊಂಡು ಬಂದರು. ಮತ್ತು ಅಲ್ಲಿ ಅವರು ಮಹಾರಾಜರು ಮತ್ತು ತಮ್ಮ ಸಂಗಡಿಗರಾದ ಕಾಶೀರಾಮ ಶಿಂಪಿ ಮತ್ತು ಅಪ್ಪಾ ಜಾಗಲೇ ಇವರನ್ನು ಒಬ್ಬರೊಬ್ಬರಿಗೆ ಪರಿಚಯ ಮಾಡಿಸಿದರು. ಈ ಮೂವರೂ ಊರಿಗೆ ಬಂದ ಸಾಧು ಸಂತರ ಮತ್ತು ಬಾಬಾ, ಬೈರಾಗಿಗಳು, ಫಕೀರರು ಇಂಥವರ ಸೇವೆಯನ್ನು ತಮ್ಮ ಕೈಲಾದಷ್ಟು ಮಾಡುತ್ತಿದ್ದರು ಮತ್ತು ಅವರ ಪರಾಂಬರಿಕೆಯನ್ನು ಮಾಡುತ್ತಿದ್ದರು. ಶಿರಡಿ ಊರು ಬಹಳ ರಹದಾರಿಯದಿದ್ದದರಿಂದ ಅಲ್ಲಿ ಆಗಾಗ, ಮೇಲಿಂದ ಮೇಲೆ ಇಂಥ ಜನ ಬರುತ್ತಿತ್ತು. ಮತ್ತು ಅಂಥವರಿಗೆ ಅಷ್ಟಿಷ್ಟು ಸಂಭಾವನೆ ಈ ಜನರಿಂದ ದೊರೆಯುತ್ತಿತ್ತು. ಮೂವರೂ (ಕಾಶೀರಾಮ, ಅಪ್ಪಾ ಮತ್ತು ಮ್ಹಾಳಸಾಪತಿ) ಮಹಾರಾಜರ ಪೂರ್ಣ ಭಕ್ತರಾದರು. ಇವರಲ್ಲಿ ಕಾಶೀರಾಮ ಮತ್ತು ಅಪ್ಪಾ ಇಬ್ಬರೂ ಮುಂದೆ ಕೆಲ ವರ್ಷಗಳಲ್ಲಿ ತೀರಿಕೊಂಡರು. ಕಾಶೀರಾಮರು ಮೊದಲು ಹೋದರು, ನಂತರ ಕೆಲ ವರ್ಷಗಳಲ್ಲಿ ಅಪ್ಪಾ ತೀರಿಕೊಂಡರು. ಆದರೆ ಅವರಿಬ್ಬರಿಗೂ ಮರಣ ಕಾಲದಲ್ಲಿ ಏಕಾದಶಿ ತಿಥಿ ದೊರಕಿತು. ಹರಿಭಕ್ತರ ಮರಣ ಹರಿ ದಿನದಂದೇ ಆಗುವುದು ಯೋಗ್ಯ. ಅದರಂತೆಯೇ ಇವರಿಬ್ಬರದೂ ಆಯಿತು. ಕಾಶೀರಾಮ, ಮಹಾರಾಜರ ಸೇವೆಯನ್ನು ಅತಿ ಉತ್ತಮ ರೀತಿಯಲ್ಲಿ ಅಂದರೆ ನಿಜವಾಗಿಯೂ ತನು ಮನ ಧನದಿಂದ

ಮಾಡಿ ಮಡಿದ. ಮೊದಲೆಲ್ಲ ಮಹಾರಾಜರ ಕಫನೀ ಕ್ಯಾವಿ ಬಣ್ಣದ್ದು ಇಲ್ಲವೇ ಬಿಳಿಯದು ಇರುತ್ತಿತ್ತು. ಕಾಶೀರಾಮ ಹಸಿರು ಬಣ್ಣದ ಕಫನಿ ಮತ್ತು ಟೊಪ್ಪಿಗೆ ತಂದುಕೊಟ್ಟ (ಹೊಲಿಸಿ). ಆದರೆ ಮಹಾರಾಜರು ಹೆಚ್ಚಾಗಿ ಬಿಳಿಯ ಕಫನಿಯನ್ನೇ ತೊಟ್ಟುಕೊಳ್ಳುತ್ತಿದ್ದರು. ಮತ್ತು ತಲೆಗೆ ಧೋತರವನ್ನು ಕಟ್ಟಿಕೊಳ್ಳುತ್ತಿದ್ದರು. ಅದೇ ಪ್ರಕಾರ ಕಾಶೀರಾಮನು ಮಹಾರಾಜರಿಗೆ, ಚಿಲಿಮಿ, ತಂಬಾಕನ್ನು ಪೂರೈಸಿ ಅವರ ಧುನಿ (ನಿರಂತರ ಉರಿಯುವ ಅಗ್ನಿ)ಗೆ ಉರವಲು ಪೂರೈಸುತ್ತಿದ್ದ ಮತ್ತು ಅವಶ್ಯಕತೆ ಇದ್ದಾಗ ಹಣವನ್ನೂ ಕೊಟ್ಟು ಈ ವ್ರತವನ್ನು ಕಾಶೀರಾಮ ನಡೆಸಿದ. ಬರಬರುತ್ತ ಕಾಶೀರಾಮ ತನ್ನ ಹಣದ ಥೈಲಿಯನ್ನೇ ಮಹಾರಾಜರ ಮುಂದಿಟ್ಟು ಬಿಡುತ್ತಿದ್ದ. ಮಹಾರಾಜರು ತಮಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತಿದ್ದ. ಮಹಾರಾಜರು ಆ ಕಾಲದಲ್ಲಿ ದಕ್ಷಿಣೆ ತೆಗೆದುಕೊಳ್ಳುತ್ತಿರಲಿಲ್ಲ, ಆದರೂ ಕಾಶೀರಾಮನಿಂದ ದುಡ್ಡು ಎರಡು ದುಡ್ಡು ತೆಗೆದುಕೊಳ್ಳುತ್ತಿದ್ದರು. ಮಹಾರಾಜರು ತನ್ನಿಂದ ದಕ್ಷಿಣೆ ತಕ್ಕೊಳ್ಳ ಬೇಕೆಂದು ಕಾಶೀರಾಮರಿಗೆ ಬಹಳ ಆತುರತೆ ಇರುತ್ತಿತ್ತು. ಅಕಸ್ಮಾತ್ ಒಂದು ದಿನ ಮಹಾರಾಜರು ದಕ್ಷಿಣೆ ತೆಗೆದುಕೊಳ್ಳದಿದ್ದರೆ, ಅವನಿಗೆ ಅತಿಶಯ ಕೆಡಕೆನಿಸಿ ಕಣ್ಣಲ್ಲಿ ನೀರು ಬರುತ್ತಿತ್ತು. ಈ ರೀತಿ ಕೆಡಕೆನಿಸಿಕೊಳ್ಳುವುದೂ ಕೂಡ ಪರಮಾರ್ಥಕ್ಕೆ ವಿಘಾತಕವಾಗುವುದು. ಯಾಕೆಂದರೆ ಅದರಲ್ಲಿ, 'ನನಗೆ ದುಡ್ಡು ಕೊಡುವ ಸಾಮರ್ಥ್ಯವಿದೆ ಎಂಬ ಅಭಿಮಾನ ಬರುವುದು. ಅರ್ಥಾತ್ ಭಕ್ತರ ಪರಮಾರ್ಥಕ್ಕೆ ಹಾನಿಕಾರಕವಾಗುವಂಥ ಸಂಗತಿಯನ್ನು ಅವರಿಂದ ದೂರಮಾಡ ಬೇಕೆಂಬುದು ಅವರ ನಿಶ್ಚ ಸಂಕಲ್ಪವಿರುವುದು. ಕಾಶೀರಾಮನದೂ ಹಾಗೆಯೇ ಆಯಿತು. ಕೆಲ ದಿನಗಳ ನಂತರ ಅವನಿಗೆ ದುಡ್ಡಿನ ಪರದಾಟ ಶುರುವಾಯಿತು. ಇತ್ತ ಮಹಾರಾಜರು ಅವನ ಹತ್ತಿರ ದಕ್ಷಿಣೆ ಬೇಡುವುದು ಹೆಚ್ಚಾಯಿತು. ಹಣ ಮುಗಿದಿದೆ ಎಂದು ಹೇಳಲು ಅವನಿಗೆ ಬಹಳ ಕಷ್ಟವಾಗುತ್ತಿತ್ತು. ಇತ್ತ ಬಾಬಾ 'ಮಾರವಾಡಿ ಅಂಗಡಿಕಾರನ ಹತ್ತಿರ ಕೇಳಿ ತಂದು ಕೊಡು' ಎಂದರು. ಅದರಂತೆ ಕೆಲವು ದಿನ ಅಂಗಡಿಕಾರನಿಂದ ಬೇಡಿ ತರುವ ಕ್ರಮವೂ ನಡೆಯಿತು. ಮುಂದೆ ಆ ವ್ಯಾಪಾರಿಯೂ ಇವನಿಗೆ ಹಣ ಕೊಡದಾದ. ಇದೆಲ್ಲ ಆಟ ಕಾಶೀರಾಮನ ಅಭಿಮಾನವನ್ನು ದೂರಮಾಡುವುದಕ್ಕೆಂದೇ ನಡೆದಿತ್ತು. ಆಗ ಅವನಿಗೆ ತನಗಿನ್ನು ಕೊಡುವ ಶಕ್ತಿ ಇಲ್ಲ ಎಂದು ನಿಶ್ಚಿತವಾಗಿ ತಿಳಿಯಿತು. ಇದು ಅವನ ಮನಸ್ಸಿಗೆ ಬಿಂಬಿಸಿದಾಗ ಅವನ ಸಾಂಪತ್ತಿಕ ಸ್ಥಿತಿ ಮತ್ತೆ ಚೇತರಿಸ ತೊಡಗಿತು. ಮತ್ತು ಅವನು ಮೊದಲಿನಂತೆಯೇ ಸುಖವಸ್ತು ಆದ. ಮಹಾರಾಜರು ನಿತ್ಯವೂ ತನ್ನಿಂದ ದಕ್ಷಿಣೆ ತೆಗೆದುಕೊಳ್ಳಬೇಕೆಂಬ ಅವನ ಒದ್ದಾಟ ಸಂಪೂರ್ಣ ನಿಂತು ಹೋಯಿತು.

ಕಾಶೀರಾಮನು ಬಟ್ಟೆ ಮಾರುವ ಉದ್ಯೋಗ ಮಾಡುತ್ತಿದ್ದ. ಮತ್ತು ಬೇರೆ ಬೇರೆ ಊರುಗಳಿಗೆ ಹೋಗಿ ಸಂತೆಯಲ್ಲಿ ತನ್ನ ಮಳಿಗೆ ಹಾಕಿ ವ್ಯಾಪಾರ ಮಾಡುತ್ತಿದ್ದ. ಒಮ್ಮೆ ನಾವೂರದ ಸಂತೆ ಮುಗಿಸಿಕೊಂಡು ತಿರುಗಿ ಬರುವಾಗ (ಕೆಲ ಲೂಟಿಮಾಡುವ) ಕೊಳ್ಳೆ ಹೊಡೆಯುವ ಭಿಲ್ಲರು ಅವನಿಗೆ ಗಂಟುಬಿದ್ದರು. ಕಾಶೀರಾಮ ಕುದುರೆಯ ಮೇಲೆ

ಕುಳಿತು ಹೊರಟಿದ್ದ. ಆ ದಾರಿಗಳ್ಳರು ಮೊದಲು ಅವನತ್ತ ಹೋಗಲಿಲ್ಲ. ಆದರೆ ಅವನ ಜೊತೆಗೆ ಹೊರಟ ಬಂಡಿಯ ಸವಾರರನ್ನು ಅವರು ಅಡ್ಡಗಟ್ಟಿದರು. ಬಳಿಕ ಕಾಶೀರಾಮನತ್ತ ಅವರ ಗಮನ ಹೋದಾಗ ಅವನಕಡೆಗೆ ಅವರು ಓಡಿ ಬಂದರು. ಕಳ್ಳರು ಕಾಶೀರಾಮನನ್ನು ಸುಲಿಗೆ ಮಾಡಬೇಕೆಂದು ಸಿದ್ಧರಾದರು ಮತ್ತು ಅದರಂತೆ ಅವನಿಂದ ಕೆಲವು ಸಾಮಾನುಗಳನ್ನೂ ತೆಗೆದುಕೊಂಡರು. ಆದರೆ ಕಾಶೀರಾಮನು ಅವನಿಗೆ ಅಡ್ಡಿ ಮಾಡಲಿಲ್ಲ. ಆಮೇಲೆ ಆ ಕಳ್ಳರು ಅವರ ಹತ್ತಿರವಿದ್ದ ಒಂದು ಸಣ್ಣ ಗಂಟಿಗೆ ಕೈ ಹಾಕಿದರು. ಕಳ್ಳರಿಗೆ ಆ ಗಂಟಿನಲ್ಲಿಯೇ ಹಣವಿರಬೇಕೆಂದೆನಿಸಿತು. ಆದರೆ ಆ ಗಂಟಿನಲ್ಲಿ ಬರೀ ಪುಡಿಮಾಡಿದ ಸಕ್ಕರೆ ಮಾತ್ರ ಇತ್ತು. ಕಾಶೀರಾಮನಿಗೆ ಜಾನಕೀದಾಸನೆಂಬ ಸತ್ಪುರುಷನು ಇರುವೆಗಳಿಗೆ ಸಕ್ಕರೆ ಹಾಕಬೇಕು ಎಂದು ಉಪದೇಶ ಮಾಡಿದಾಗಿನಿಂದ ಕಾಶೀರಾಮನು ಯಾವಾಗಲೂ ಹತ್ತಿರ ಸಕ್ಕರೆಯನ್ನು ಇಟ್ಟುಕೊಂಡಿರುತ್ತಿದ್ದ. ಅರ್ಥಾತ್ ಆ ಗಂಟು ಅವನಿಗೆ ಬಹಳ ಪ್ರಿಯವಾಗಿತ್ತು. ಅದರಿಂದ ಏನಾದರೂ ಆ ಗಂಟನ್ನು ಕೈ ಬಿಡಬಾರದು ಎಂದು ಅವನು ನಿಶ್ಚಯಿಸಿದ. ಅಷ್ಟರಲ್ಲಿ ಆ ಕಳ್ಳರಲ್ಲಿ ಒಬ್ಬನ ಖಡ್ಗವು ಕೆಳಗೆಬಿದ್ದಿರುವುದನ್ನು ಕಾಶೀರಾಮ ನೋಡಿದ ಅವನು ಅದನ್ನು ಎತ್ತಿಕೊಂಡ ಮತ್ತು ಆ ಕಳ್ಳರಲ್ಲಿ ಇಬ್ಬರನ್ನು ಕೊಂದ. ಅಷ್ಟರಲ್ಲಿ ಮೂರನೆಯ ಕಳ್ಳ ಬಂದು ಅವನ ತಲೆಗೆ ಕೊಡಲಿಯಿಂದ ಹೊಡೆದ. ಕೂಡಲೇ ಕಾಶೀರಾಮ ಎಚ್ಚರ ತಪ್ಪಿ ನಿರ್ಜೀವನಂತೆ ಬಿದ್ದ. ಉಳಿದ ಕಳ್ಳರಿಗೆ ಅವನು ಸತ್ತಿದ್ದಾನೆಂದು ಅನಿಸಿ. ಅವನನ್ನೂ ಅಲ್ಲಿಯೇ ಬಿಟ್ಟು ಹೊರಟು ಹೋದರು. ಆದರೆ ನಿಜವಾಗಿ ಅವನ ಪ್ರಾಣಾಂತವಾಗಿರಲಿಲ್ಲ. ಮುಂದೆ ಸ್ವಲ್ಪ ಸಮಯದ ನಂತರ ಅವನು ಎಚ್ಚರಾದ ಮತ್ತು ಕೆಲ ದಿನಗಳ ಮೇಲೆ ಚೇತರಿಸಿಕೊಂಡ. ಮಹಾರಾಜರ ಮೇಲೆ ಅವನ ಪೂರ್ಣ ಶ್ರದ್ಧೆ ಇದ್ದದ್ದರಿಂದ ಅವನು ಆಸ್ಪತ್ರೆಗೆ ಹೋಗಲು ಒಪ್ಪಲಿಲ್ಲ ಮತ್ತು ಅವನು ತನ್ನನ್ನು ಶಿರಡಿಗೆ ಕರೆದುಕೊಂಡು ಹೋಗಿರೆಂದು ಒತ್ತಾಯ ಮಾಡತೊಡಗಿದ. ಅದರಂತೆ ಅವನನ್ನು ಅಲ್ಲಿಗೆ ತರಲಾಯಿತು ಮತ್ತು ಮಹಾರಾಜರು ಹೇಳಿದಂತೆ ಮಾಧವರಾವ ದೇಶಪಾಂಡೆಯವರಿಂದ ಔಷಧೋಪಚಾರ ಮಾಡಿಸಿದರು. ಅರ್ಥಾತ್ ಮಹಾರಾಜರ ಕೃಪೆಯಿಂದ ಕಾಶೀರಾಮನ ಆರೋಗ್ಯ ಸುಧಾರಿಸಿತು.

ಈ ಶೌರ್ಯದ ಕೆಲಸಕ್ಕಾಗಿ ಮುಂಬಯಿ ಸರಕಾರದಿಂದ ಕಾಶೀರಾಮರಿಗೆ ಬಹುಮಾನವೆಂದು ಒಂದು ಖಡ್ಗವನ್ನು ಕೊಡಲಾಯಿತು. ಅಲ್ಲಿ ಕಳ್ಳರ ಜೊತೆ ಕಾಶೀರಾಮರ ಸಾಹಸ ಕಾರ್ಯ ನಡೆದಾಗ ಇತ್ತ ಶಿರಡಿಯಲ್ಲಿ ಮಹಾರಾಜರು ಗದ್ದಲ ಹಿಡಿಸಿದ್ದರು. ಒಂದೇ ಸಮನೇ ಬೈಗುಳ ಸುರಿಮಳೆ ಬಾಯಿ ಬಡಕೊಳ್ಳುವುದು ಮುಂತಾದ ಕ್ಷೋಭದ ಪ್ರಕಾರಗಳು ನಡೆದವು. ಹತ್ತಿರವಿದ್ದ ಜನರು ಕೂಡಲೇ ಅಂದರು, ಎಲ್ಲೋ ಇವರ ಪ್ರಿಯ ಭಕ್ತನ ಮೇಲೆ ಮಹಾಸಂಕಟ ಬಂದೊದಗಿದೆ. ಈ ಎಲ್ಲ ನಡೆದ ಪ್ರಕಾರಗಳು ಆ ಭಕ್ತನನ್ನು ಸಂಕಟದಿಂದ ಬಿಡಿಸಲೋಸುಗವೇ ! ಅಂದ ಹಾಗೆ ಆ ಪ್ರಸಂಗವಾದರೂ ಅಂಥದೇ ಇತ್ತು. ಕಳ್ಳರು ಬಹಳ ಜನರಿದ್ದರು ಅಲ್ಲದೇ ಅವರೆಲ್ಲ

ಆಯುಧಗಳಿಂದ ಸಜ್ಜಾಗಿದ್ದರು. ಅವರ ಹಿಡಿತದಿಂದ ಜೀವಸಹಿತ ಪಾರಾಗುವುದು ಅಸಾಧ್ಯವೇ ಇತ್ತು ಕಾಶೀರಾಮನಿಗೆ ! ಆದರೆ ಕಾಯುವವನು ಸಮರ್ಥನಿರುವಾಗ ಕೊಲ್ಲುವವನ ಆಟವೇನೂ ನಡೆಯದು. ಇರಲಿ. ಕಾಶೀರಾಮನು ಮುಂದೆ ಕೆಲ ವರ್ಷಗಳವರೆಗೆ ಇದ್ದು ಶಕೆ ೧೮೩೦ ರ ಚೈತ್ರ ಶುದ್ಧ ಏಕಾದಶಿಯಂದು ಮರಣ ಹೊಂದಿದ.

ಮೇಲೆ ಹೇಳಿದ ಮೂವರಲ್ಲಿ ಮ್ಹಾಳಸಾಪತಿಯವರು ಬಹಳ ದಿವಸ ಬದುಕಿದ್ದರು. ಅವರು ಶಕೆ ೧೮೭೭ ರ ಭಾದ್ರಪದದಲ್ಲಿ ಮರಣಹೊಂದಿದರು. ಅವರದು ಮತ್ತು ಮಹಾರಾಜರದು ಅತಿ ನಿಕಟ ಸಂಬಂಧವಿತ್ತು. ಮಹಾರಾಜರು ಮಸೀದಿಯಲ್ಲಿ ಕುಳಿತು ಕೊಳ್ಳುತ್ತಿದ್ದರು ಮತ್ತು ಮಲಗುವುದು ಒಂದು ರಾತ್ರಿ ಮಸೀದಿಯಲ್ಲಿ, ಒಂದು ರಾತ್ರಿ ಚಾವಡಿಯಲ್ಲಿ ಇರುತ್ತಿತ್ತು. ಮಹಾರಾಜರು ಮಸೀದಿಯಲ್ಲಿ ಮಲಗಿದ ರಾತ್ರಿ ಮ್ಹಾಳಸಾಪತಿ ಬೆಳಗಾಗುವವರೆಗೆ ಮಹಾರಾಜರ ಹತ್ತಿರ ಕುಳಿತಿರುತ್ತಿದ್ದರು. ನಡುನಡುವೆ ಅವರಿಬ್ಬರಲ್ಲಿ ಅತಿ ಪ್ರೇಮದ ಮಾತುಗಳು ನಡೆಯುತ್ತಿದ್ದವು. ಮ್ಹಾಳಸಾಪತಿಯವರು ದೇಹಬಿಡುವವರೆಗೆ, ದಿನ ಬಿಟ್ಟು ದಿನ ಮಸೀದಿಯಲ್ಲಿ ರಾತ್ರಿಯಲ್ಲಿ ಕುಳಿತುಕೊಳ್ಳುವ ಈ ಕ್ರಮ ನಡೆದಿತ್ತು. ಇವರು ಒಳ್ಳೆಯ ಅಧಿಕಾರಸ್ಥರಿದ್ದರು ಮತ್ತು ಪೂರ್ಣ ನಿರಪೇಕ್ಷ ಭಾವವಿತ್ತು ಅವರದು ಮತ್ತು ಅವರಿಂದ ಮಹಾರಾಜರ ಭಕ್ತರಿಗೆ ಬೋಧ ಮತ್ತು ಆನಂದ ನಿತ್ಯವೂ ಸಿಗುತ್ತಿತ್ತು. ಬಹುಶಃ ಮಹಾರಾಜರ ಪಶ್ಚಾತ ಅವರ ಭಕ್ತರಿಗೆ ಇದೊಂದು ವಿಶ್ರಾಂತಿಸ್ಥಾನವಾಗಿತ್ತು.

ಮಹಾರಾಜರು ಇಲ್ಲಿ ಬಂದಾಗಿನಿಂದ ಹೆಚ್ಚಾಗಿ ಇಲ್ಲಿಯ ಮಸೀದಿಯಲ್ಲಿಯೇ ವಾಸಮಾಡತೊಡಗಿದರು. ಆ ಕಾಲದಲ್ಲಿ ಮಸೀದಿಯು ತೀರ ಮುರುಕಲು ಸ್ಥಿತಿ ಯಲ್ಲಿತ್ತು. ಮಹಾರಾಜರು ಹಗಲು ಅಲ್ಲಿ-ಇಲ್ಲಿ ಹೋಗುತ್ತಿದ್ದರು. ರಾತ್ರಿಯನ್ನು ಮಸೀದಿಯಲ್ಲೇ ಕಳೆಯುತ್ತಿದ್ದರು. ಯಾರಾದರೂ ಕರೆದರೆ ಊಟಕ್ಕೆ ಹೋಗುತ್ತಿದ್ದರು. ಜನರಿಗೆ ಔಷದೋಪಚಾರ ಮಾಡುತ್ತಿದ್ದರು ಮತ್ತು ಉಪಾಯಗಳನ್ನೂ ಹೇಳುತ್ತಿದ್ದರು. ಅವರು ಅದಕ್ಕೆ ಎಂದೂ ಹಣ ತೆಗೆದುಕೊಳ್ಳುತ್ತಿರಲಿಲ್ಲ. ಇಷ್ಟೇ ಅಲ್ಲದೇ ರೋಗಿಗಳ ಶುಶ್ರೂಷೆ ಸರಿಯಾಗಿ ಆಗದೇ ಇರುವಾಗ ತಾವೇ ಸ್ವತಃ ಹೋಗಿ ಕೆಲಸ ಮಾಡುತ್ತಿದ್ದರು ಮತ್ತು ಈ ರೀತಿಯಾಗಿ ಮಹಾರಾಜರು ಯಾರಿಗೆ ಔಷದೋಪಚಾರಗಳನ್ನು ಮಾಡಿದರು ಮತ್ತು ಯಾರ ಶುಶ್ರೂಷೆಯನ್ನು ಮಾಡಿದರು ಅಂಥ ಜನರು ಇದುವರೆಗೂ ಇಲ್ಲಿ ಇದ್ದಾರೆ. ಮುಂದೆ ಮಹಾರಾಜರು ಈ ಔಷದೋಪಚಾರ ಮಾಡುವುದನ್ನು ನಿಲ್ಲಿಸಿದರು ಮತ್ತು ಬರಿ ಉದಿ ಅಂದರೆ ಅಂಗಾರ ಮಾತ್ರ ಕೊಡತೊಡಗಿದರು. ಮೊದಲೂ ಅಂಗಾರ ಕೊಡುತ್ತಿದ್ದರು, ಜನರಿಗೆ ಅದರಿಂದ ಗುಣವಾಗುತ್ತಲೂ ಇತ್ತು.

ತಾವು ಮೊದಲು ಜನರಿಗೆ ಔಷದೋಪಚಾರ ಮಾಡುತ್ತಿದ್ದೆವು ಎಂಬ ಬಗ್ಗೆ ಪ್ರಸ್ತಾಪ, ಲೇಖಕರ ಹತ್ತಿರ ಒಮ್ಮೆ ಮಾಡಿದ್ದರು. ಅವರೆಂದರು, 'ಕಾಕಾ (ಈ ಲೇಖಕರನ್ನು ಅವರು ಹಾಗೆ ಕರೆಯುತ್ತಿದ್ದರು) ನಾನು ಮುಂಚೆ ಜನರಿಗೆ ಔಷಧಿ

ಕೊಡುತ್ತಿದ್ದೆ. ಮುಂದೆ ಔಷಧ ಕೊಡುವುದನ್ನು ನಿಲ್ಲಿಸಿದೆ ಮತ್ತು 'ಹರಿ ಹರಿ' ಮಾಡತೊಡಗಿದೆ ಮತ್ತು ಹರಿ ಹರಿ ಮಾಡುತ್ತ ಮಾಡುತ್ತ ಹರಿ ನನಗೆ ಭೆಟ್ಟಿಯಾದ.'

ಮಹಾರಾಜರು ಮೊದಲು ಇಲ್ಲಿ ಬಂದಾಗ ಇಲ್ಲಿ ಒಬ್ಬ ದೇವೀದಾಸನೆಂಬ ಸಾಧುಗಳು ಇರುತ್ತಿದ್ದರು ಮತ್ತು ಅವರ ಹತ್ತಿರ ಬೇರೆ ಬೇರೆ ಸಾಧುಗಳು ಬೇರೆ ಬೇರೆ ಹೊತ್ತಿಗೆ ಬರುತ್ತಿದ್ದರು. ಅದರಂತೆ ರಾಮೇಶ್ವರ, ಪಂಢರಪೂರ ಮತ್ತು ಬೇರೆ ದಕ್ಷಿಣದ ಕಡೆಯ ಕ್ಷೇತ್ರಗಳಿಗೆ ಕಾಲುದಾರಿಯಿಂದ ಹೋಗುವ ಯಾತ್ರಿಕರಿಗೆ ಇದೇ ದಾರಿಯಿದ್ದ ದ್ದರಿಂದ ಸಾಕಷ್ಟು ಸತ್ಪುರುಷರ ಪಾದಗಳು ಇಲ್ಲಿ ಆಗಾಗ ಮುಟ್ಟುತ್ತಿದ್ದವು. ಅಂಥವರಲ್ಲಿ ಜಾನಕೀದಾಸರೆಂಬವರೊಬ್ಬರು ಸಾಧುಗಳು ಇಲ್ಲಿ ಬಹಳ ದಿವಸ ಇದ್ದರು. ಅವರು ಉತ್ತಮ ಅಧಿಕಾರಿಗಳಿದ್ದರು (ಅಧ್ಯಾತ್ಮದಲ್ಲಿ) ಎಂದು ಹೇಳುತ್ತಿದ್ದರು. ಅವರು ಮತ್ತು ಬಾಬಾರದು ಒಂದೆಡೆ ಕೂಡುವುದು ಬಹಳ ಇತ್ತು. ಅದರಂತೆಯೇ ಗಂಗಾಗೀರಬಾಬಾ ಅವರೂ ಇಲ್ಲಿ ಬರುತ್ತಿದ್ದರು. ಮಹಾರಾಜರು ಇಲ್ಲಿ ಬಂದನಂತರ ಗಂಗಾಗೀರರು ಮೊದಲ ಸಲ ಬಂದಾಗ ಮಹಾರಾಜರು ಎರಡು ಕೈಯ್ಯಲ್ಲಿ ಎರಡು ಮಣ್ಣಿನ ಮಡಕೆಗಳಲ್ಲಿ ಬಾವಿಯಿಂದ ನೀರು ತುಂಬಿ ತರುತ್ತಿದ್ದರು. ಅವರನ್ನು ಕಂಡಕೂಡಲೇ ಗಂಗಾಗೀರ ಬಾಬಾ ಅಲ್ಲಿ ಹತ್ತಿರದಲ್ಲಿದ್ದ ಜನರಿಗೆಂದರು, 'ಈ ಮೂರ್ತಿ ಇಲ್ಲಿ ಯಾವಾಗ ಬಂತು? ಇದು ಕೇವಲ ರತ್ನವಿದೆ. ಇವರ ಯೋಗ್ಯತೆ ಬಹಳ ದೊಡ್ಡದಿದೆ. ಈ ರತ್ನವು ನಿಮಗೆ ದೊರತಿದ್ದು ಊರಿನದೇ ದೊಡ್ಡ ಭಾಗ್ಯ !' ಬಳಿಕ ಗಂಗಾಗೀರಬಾಬಾ ಮಹಾರಾಜರ ದರ್ಶನಕ್ಕೆ ಹೋದರು. ಅಲ್ಲಿ ಅವರಿಬ್ಬರಲ್ಲಿ ಬಹಳ ಪ್ರೇಮದ ಮಾತು ಕಥೆಗಳಾದವು. ಇದೇ ರೀತಿಯ ಉದ್ಗಾರಗಳನ್ನು ಮಹಾರಾಜರ ವಿಷಯದಲ್ಲಿ ಅತ್ಕಲಕೋಟೆಯ ಆನಂದನಾಥ ಮಹಾರಾಜರು ತೆಗೆದಿದ್ದರು. ಈ ಅತ್ಕಲ ಕೋಟೆಯ ಆನಂಧನಾಥ ಮಹಾರಾಜರು ಸುಪ್ರಸಿದ್ಧ ಸ್ವಾಮಿಗಳ ಶಿಷ್ಯರಾಗಿದ್ದರು. ಅವರು ಯೆವಲಾದ ಹತ್ತಿರದ ನೇವರಗಾವ ಎಂಬಲ್ಲಿ ಒಮ್ಮೆ ಹೋದರು. ಆಗ ಶಿರಡಿಯ ಮಾಧವರಾವ ಬಳವಂತ ದೇಶಪಾಂಡೆ, ದಗಡೂ ಭಾವು ಗಾಯಕೆ, ನಂದ ರಾಮ ಶಿವರಾಮ ಮಾರವಾಡಿ ಮತ್ತು ಭಾಗಚಂದ ಮಾರವಾಡಿ ಅವರ ದರ್ಶನಕ್ಕೆ ಹೋದರು. ದರ್ಶನವಾದ ಮೇಲೆ ಈ ಜನರು ಶಿರಡಿಗೆ ಬರುವುದಕ್ಕೆ ಹೊರಟರು. ಆಗ ಆನಂದನಾಥ ಮಹಾರಾಜರು ಒಮ್ಮೆಲೇ ಓಡಿ ಬಂದು ಅವರ ಗಾಡಿಯಲ್ಲಿ ಕುಳಿತರು ಮತ್ತು ಹೇಳಿದರು 'ನಾನೂ ನಿಮ್ಮ ಜೊತೆ ಬರುವೆ.' ನೆವರಗಾವೆ ಮತ್ತು ಯೆವಲಾದ ಜನರು ಈ ಮಹಾರಾಜರನ್ನು ತಡೆಯುವ ಪ್ರಯತ್ನ ಮಾಡಿದರು. ಆದರೆ ಅದೆಲ್ಲ ವ್ಯರ್ಥವಾಯಿತು. ಆನಂದನಾಥ ಮಹಾರಾಜರು ಇಲ್ಲಿ ಬಂದಾಗ ಮಹಾರಾಜರ ಬಗ್ಗೆ ಅವರು ಆಡಿದ ಶಬ್ದಗಳೆಂದರೆ, 'ಇದೊಂದು ರತ್ನವಿದೆ. ಇದರ ಮೌಲ್ಯ ನಿಮಗೆ ಇಲ್ಲ. ಇದು ತಿಪ್ಪೆಯ ಮೇಲೆ ಬಿದ್ದಿದ್ದರೂ ಒಂದು ಪ್ರತ್ಯಕ್ಷ ರತ್ನವಿದೆ. ಇದನ್ನು ನೆನಪಿಡಿ' ಆಗ ಮಹಾರಾಜರು ಇನ್ನೂ ಪ್ರಸಿದ್ಧ ವ್ಯಕ್ತಿಗಳಾಗಿರಲಿಲ್ಲ ಮತ್ತು ಊರ ಜನರು ಅವರನ್ನು ಒಬ್ಬ ಸಾಧಾರಣ ಅಷ್ಟೇ ಅಲ್ಲ ಬಹುಶಃ ಅವನೊಬ್ಬ ಹುಚ್ಚ ಫಕೀರ ಎಂದುಕೊಂಡಿದ್ದರು.

ಆಗ ಮಹಾರಾಜರ ಸ್ಥಿತಿ 'ಹರಕಾ ಪರಕಾ ಉಡತೇನಿ!ಮನಸ್ಸ ಬಂದಲ್ಲಿ ಕೂತ್ಕೋತೀನಿ!ಹುಚ್ಚಹುಚ್ಚನ್ಹಾಂಗ ಕಾಣ್ತೇನಿ!ಆದರೆ ಬ್ರಹ್ಮಾಂಡವನ್ನೆ ನುಂಗಿ ಇರತೀನರೀ!! ಎಂಬಂತಿತ್ತು. ಮಹಾರಾಜರು ಒಮ್ಮೊಮ್ಮೆ ಹಳ್ಳದ ದಂಡೆಗೆ ಹೋಗಿ ಕುಳಿತುಕೊಳ್ಳುತ್ತಿದ್ದರು. ಒಂದೊಂದು ಸಲ ಯಾರದೋ ತೋಟದಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ಮೈ ಮೇಲಿನ ಬಟ್ಟೆ ಹರಿದಿರುತ್ತಿದ್ದವು. ಒಂದೊಂದು ಸಲ ಉಗ್ರರೂಪ ಧರಿಸುತ್ತಿದ್ದರು. ಈ ರೀತಿಯ ಅವರ ವರ್ತನೆಯಿಂದ ಸಾಧಾರಣ ಜನಸಮಾಜಕ್ಕೆ ಅವರು ಹುಚ್ಚರೆಂದೇ ಎನಿಸುತ್ತಿತ್ತು. ಆದರೆ ಶೀಘ್ರದಲ್ಲಿಯೇ ಜನರ ಈ ಭ್ರಮೆ ದೂರಾಯಿತು ಮತ್ತು ಮಹಾರಾಜರ ಯೋಗ್ಯತೆ ಜನರಿಗೆ ತಿಳಿಯಿತು. ಆ ಪ್ರಕಾರವು ಈ ರೀತಿ ನಡೆಯಿತು.

ಮಹಾರಾಜರಿಗೆ ಮಶೀದಿಯಲ್ಲಿ ಮತ್ತು ಗುಡಿಯಲ್ಲಿ ಬಹಳಷ್ಟು ದೀಪ ಹಚ್ಚುವುದು ಪ್ರಿಯವಾಗಿತ್ತು. ಹಾಗೆ ನೋಡಿದರೆ, 'ಪ್ರಿಯವಾಗಿತ್ತೆನ್ನು'ವದೂ ವ್ಯವಹಾರದ ದೃಷ್ಟಿಯ ಮಾತಾಯಿತು. ಆದರೆ ನಿಜವಾಗಿ ನೋಡಿದರೆ ಅವರ ಈ ಕೃತಿ ಯಾವುದೇ ಪ್ರಿಯವನ್ನುಂಟು ಮಾಡುವವಾಗಿರಲಿಲ್ಲ. ಆದರೆ ಆ ಕೃತಿಯಲ್ಲಿಯೂ ಬೇರೆ ಉದ್ದೇಶ, ಅಂದರೆ ಜನರ ಹಿತದ ಬಯಕೆಯೇ ಇರುತ್ತಿತ್ತು. ಹೀಗಿರುವಾಗ ಆ ದೀಪಗಳಿಗೆ ಹಾಕಲು ಎಣ್ಣೆಯನ್ನು ಅಂಗಡಿಕಾರ ಮತ್ತು ಗಾಣಿಗರ ಹತ್ತಿರ ಹೋಗಿ ಬೇಡಿ ತರುತ್ತಿದ್ದರು. ಕೆಲವು ದಿನ ಅವರು ಎಣ್ಣೆ ಕೊಟ್ಟರು. ಆದರೆ ಆ ವ್ಯವಹಾರಸ್ಥ ಜನರು ಎಷ್ಟು ದಿನ ಎಣ್ಣೆ ಕೊಟ್ಟಾರು? ಒಂದು ದಿನ ಅವರು ಮಹಾರಾಜರಿಗೆ ಎಣ್ಣೆ ಇಲ್ಲವೆಂದು ಹೇಳಿದರು. ಆದರೆ ಅದರಿಂದ ಮಹಾರಾಜರ ನಿತ್ಯಕ್ರಮದಲ್ಲಿ ಬದಲಾಗುವದು ಅಷ್ಟರಲ್ಲೇ ಇದೆ! ಮಹಾರಾಜರು ನಿತ್ಯದಂತೆ ಪಣತಿಗಳಲ್ಲಿ ಎಣ್ಣೆಗೆ ಬದಲಾಗಿ ನೀರು ಹಾಕಿದರು. ನಿತ್ಯದಂತೆ ಬತ್ತಿ ಹೊಸೆದು ಹಾಕಿದರು. ಕಡ್ಡಿ ಗೀರಿ ಪಣತಿಗಳನ್ನು ಹಚ್ಚಿದರು. ಮಹಾರಾಜರು ಈ ಸಿದ್ಧತೆ ಮಾಡಿಕೊಳ್ಳುತ್ತಿದ್ದದ್ದನ್ನು ನೋಡಿ ಜನರಿಗೆ ಅವರು ಹುಚ್ಚರೇ ಎಂಬ ನಂಬಿಕೆಯಾಗ ತೊಡಗಿತು. ಆದರೆ ಯಾವಾಗ ಕಡ್ಡಿ ಗೀರಿ ಬತ್ತಿಗೆ ಹಚ್ಚಿದಾಗ ದೀಪ ಉರಿಯತೊಡಗಿದವೋ ಮತ್ತು ಅವು ರಾತ್ರಿಯೆಲ್ಲ ಉರಿದವೋ ಆಗ ಜನರು ಅಚ್ಚರಿಗೊಂಡರು. ಅವರು ಮಹಾರಾಜರಿಗೆ ಶರಣಾದರು ಮತ್ತು ಮಹಾರಾಜರ ಅವಹೇಳನೆ ಮಾಡಿದ್ದಕ್ಕೆ ಕ್ಷಮೆ ಕೇಳತೊಡಗಿದರು. ಎಷ್ಟೋ ಜನರು ಮಹಾರಾಜರನ್ನು ಬೇರೆ ಬೇರೆ ರೀತಿಯಲ್ಲಿ ಕಾಡಿದ್ದರು. ಅವರೆಲ್ಲ ಬಹಳ ಹೆದರಿದರು. ಆದರೆ ಮಹಾರಾಜರು ಪೂರ್ಣ ದಯಾಳುಗಳು ಅಪಕಾರ ಮಾಡುವವರನ್ನೂ ಉಪೇಕ್ಷೆ ಮಾಡಕೂಡದು. ಅಲ್ಲದೇ ಅವರ ಮೇಲೆಯೇ ಉಪಕಾರವನ್ನು ಮಾಡುವರು. ಇದು ಮಹಾರಾಜರ ತತ್ವ! ಅಂದ ಮೇಲೆ ಅಲ್ಲಿ ಯಾರೂ ಹೆದರುವ ಕಾರಣವೇ ಇರಲಿಲ್ಲ. ಎಲ್ಲ ಜನರ ಮೇಲೂ ಮಹಾರಾಜರ ಪ್ರೇಮವಿದ್ದು ಅವರೆಲ್ಲರನ್ನೂ ಮಕ್ಕಳಂತೆ ರಕ್ಷಣೆ ಮಾಡುತ್ತಿದ್ದರು ಮಹಾರಾಜರು. ಊರಿಗೆ ಯಾವುದೇ ಸಂಕಟ ಬರುವದರಲ್ಲಿದ್ದಾಗ ಮಹಾರಾಜರು ಅದರ ಸೂಚನೆಯನ್ನು ಮುಂದಾಗಿಯೇ

ಜನರಿಗೆ ಕೊಡುತ್ತಿದ್ದರು. ಮತ್ತು ಮಹಾರಾಜರು ಹೇಳಿದಂತೆ ಯಾರು ನಡೆಯುತ್ತಿದ್ದರೋ ಅವರು ನಿರ್ಭಯರಾಗಿರುತ್ತಿದ್ದರು.

ಸಂಪೂರ್ಣ ಊರಿನವರದೇ ಮಹಾರಾಜರ ಮೇಲೆ ಶ್ರದ್ಧೆ ಇತ್ತು. ಆದರೆ ಮಹಾರಾಜರ ಜೊತೆ ನಿಕಟ ಸಂಬಂಧವಿದ್ದವರು ಬಹಳ ಸ್ವಲ್ಪ ಜನರಿದ್ದರು. ಮಹಾರಾಜರ ತೀಕ್ಷ್ಣ ಸ್ವಭಾವದಿಂದಾಗಿ ಅವರೊಡನೆ ಹೆಚ್ಚಿನ ಸಲಿಗೆ ಮಾಡಲು ಯಾರಿಗೂ ಧೈರ್ಯವಿರಲಿಲ್ಲ. ಮತ್ತು ಮಶೀದಿಯಲ್ಲಿ ಜನರು ಬರು ಹೋಗುವುದು ಬಹಳ ಕಡಿಮೆ ಇರುತ್ತಿತ್ತು. ಈ ಕಾಲದಲ್ಲಿ ಇಲ್ಲಿಯ ದೇಶಪಾಂಡೆ ಮನೆತನದ ಮಾಧವರಾವ ಬಳವಂತ ಇವರು ಬರು-ಹೋಗುವದು ವಿಶೇಷವಾಗತೊಡಗಿತು. ಮಶೀದಿಯ ಪಕ್ಕದಲ್ಲಿಯೇ ಒಂದು ಚಿಕ್ಕ ಮನೆ ಇತ್ತು. ಆಗ ಅಲ್ಲಿ ಮರಾಠಿ ಶಾಲೆ ನಡೆಯುತ್ತಿತ್ತು. ಆ ಶಾಲೆಯಲ್ಲಿ ಮಾಧವರಾಯರು ಶಿಕ್ಷಕರಾಗಿದ್ದರು. ಅವರು ಆಗಾಗ ಶಾಲೆಯಿಂದ ಮಶೀದಿಗೆ ಹೋಗುವ ರೂಢಿ ಹಾಕಿದರು. ಮಾಧವರಾಯರು ಅಲ್ಲಿ ಹೋದಾಗ ಚಿಲಿಮಿಯನ್ನು ತುಂಬಿ ತಾವು ಒಂದೆರಡು ಝುರಕಿ ಸೇದಿ ಮಹಾರಾಜರಿಗೆ ಅದನ್ನು ಸೇದಲು ಕೊಡುತ್ತಿದ್ದರು. ಯಾವುದೇ ಕಾರಣದಿಂದಾಗಲೀ ಮಹಾರಾಜರ ಜೊತೆ ಮಾಧವರಾಯರ ಸಲಿಗೆ ಬೆಳೆಯಿತು ಮತ್ತು ಮಹಾರಾಜರು ಮಾಧವರಾಯರ ಮನಸ್ಸನ್ನು ತಮ್ಮತ್ತ ಸೆಳೆಯ ತೊಡಗಿದರು. ಕೆಲವು ವರ್ಷಗಳ ನಂತರ ಮಾಧವರಾಯರು ಎಲ್ಲ ಉದ್ಯೋಗಗಳನ್ನು ಬಿಟ್ಟು ಕೇವಲ ಮಹಾರಾಜರ ಮತ್ತು ಅವರ ದರ್ಶನಕ್ಕೆ ಬರು ಹೋಗುವವರ ಸೇವೆಯ ಉದ್ಯೋಗವನ್ನೇ ವಹಿಸಿಕೊಂಡರು. ಈ ಸೇವೆಗಾಗಿ ಮಾಧವರಾಯರು ಯಾವ ಪ್ರತಿಫಲದ ಅಪೇಕ್ಷೆಯನ್ನೂ ಮಾಡಲಿಲ್ಲ. ಈಗಲೂ ಅವರದು ಮಹಾರಾಜರ ಭಕ್ತರ ಜೊತೆ ನಿಕಟ ಸಂಬಂಧವಿದೆ. ಮತ್ತು ಬಹಳಷ್ಟು ಜನರಿಗೆ ಅವರು ಆಧಾರವೆನಿಸುವರು. ಮತ್ತು ಎಷ್ಟೋ ಜನ ಭಕ್ತರು ಏನಾದರೂ ಹೆಚ್ಚು ಕಡಿಮೆಯಾದರೆ ಮಾಧವರಾಯರ ಸಲಹೆ ಪಡೆಯದೆ ಮುಂದೆ ಹೆಜ್ಜೆ ಇಡುವುದಿಲ್ಲ.

ಮಹಾರಾಜರು ಶಿರ್ಡಿಯನ್ನು ಬಿಟ್ಟು ಹೆಚ್ಚಾಗಿ ಎಲ್ಲಿಯೂ ಹೋಗುತ್ತಿರಲಿಲ್ಲ. ಮಾತ್ರ ಎಂದಾದರೊಮ್ಮೆ ನಿಮಗಾಂವದಲ್ಲಿ ಬಾಬಾಸಾಹೇಬ ಡೇಂಗಳೆ ಎಂಬ ಹೆಸರಿನ ಬಾಬಾರ ಭಕ್ತರಿದ್ದರು, ಅಲ್ಲಿಗೆ ಹೋಗುತ್ತಿದ್ದರು. ಚಂದ್ರಭಾನಶೇಟರು ತೀರಿಕೊಂಡ ನಂತರ ಅವರ ಅಂಗಡಿಯ ಕಾರ್ಯವನ್ನು ಖುಶಾಲಚಂದಶೇಟ ನೋಡಿಕೊಳ್ಳುತ್ತಿದ್ದರು. ಖುಶಾಲಚಂದರನ್ನು ಮಹಾರಾಜರು ಆಗಾಗ ಕರೆಸಿಕೊಳ್ಳುತ್ತಿದ್ದರು. ಮತ್ತು ರಾಹತೆಯಿಂದ ಯಾರಾದರೂ ಬಂದರೆ ಅವರಿಗೆ ಖುಶಾಲಚಂದ ಸಿಕ್ಕಿದ್ದರೇ ಎಂದು ಕೇಳುತ್ತಿದ್ದರು.

ಬಾಬಾಸಾಹೇಬ ಡೇಂಗಳೇಯವರ ಬಂಧು ನಾನಾಸಾಹೇಬ ಡೇಂಗಳೇ ಜಾಳೀ ನಿಮಗಾವದಲ್ಲಿ ಇರುತ್ತಿದ್ದರು. ಅವರಿಗೆ ಗಂಡುಮಗು ಇರಲಿಲ್ಲ. ಮೊದಲ ಹೆಂಡತಿಗೆ ಗಂಡು ಮಗು ಆಗವಲ್ಲದು ಎಂದು ಎರಡನೆಯ ಮದುವೆ ಮಾಡಿಕೊಂಡರು. ಆದರೂ

ಏನೂ ಪ್ರಯೋಜನವಾಗಲಿಲ್ಲ. ಆ ಮೇಲೆ ಬಾಬಾಸಾಹೇಬರು ಅವರನ್ನು ಮಹಾರಾಜರ ದರ್ಶನಕ್ಕೆ ಕಳಿಸಿಕೊಟ್ಟರು. ಮಹಾರಾಜರ ದರ್ಶನಕ್ಕೆ ನಾನಾಸಾಹೇಬ ಡೇಂಗಳೇ ಬಂದರು. ಆಗ ಬಾಬಾ ಗಂಡು ಮಗು ಆಗಲಿ ಎಂದು ಆಶೀರ್ವಾದ ಮಾಡಿದರು. ಮುಂದೆ ಯೋಗ್ಯ ಕಾಲಕ್ಕೆ ಆ ಆಶೀರ್ವಾದವು ಫಲದ್ರೂಪವಾಗಿ ಗಂಡು ಮಗುವಾಯಿತು. ಅದರಿಂದ ನಾನಾಸಾಹೇಬರ ಶ್ರದ್ಧೆಯು ಮಹಾರಾಜರಲ್ಲಿ ಬೆಳೆಯಿತು ಮತ್ತು ಅವರು ಮಹಾರಾಜರ ಹತ್ತಿರ ಮೇಲಿಂದ ಮೇಲೆ ಬರತೊಡಗಿದರು. ಅವರದು ಸರಕಾರೀ ನೌಕರರ ಜೊತೆಗೆ ಸಾಕಷ್ಟು ವಹಿವಾಟು ಇದ್ದದರಿಂದ ಅವರು ಸಹಜವಾಗಿಯೇ ಮಹಾರಾಜರ ಗುಣಗಾನವನ್ನು ಜನರ ಮುಂದೆ ಮಾಡಿದರು ಮತ್ತು ಅದರಿಂದ ಶೀಘ್ರದಲ್ಲಿಯೇ ಕಲೆಕ್ಟರರಚಿಟ್ಣೀಸರಾಗಿದ್ದ ರಾ. ಚಿದಂಬರ ಕೇಶವ ಉರ್ಫ ಅಣ್ಣಾಸಾಹೇಬ ಗಾಡಗೀಳ ಅವರು ಕೆಲವು ಜನರನ್ನು ತಮ್ಮ ಸಂಗಡ ಮಹಾರಾಜರ ದರ್ಶನಕ್ಕೆ ಕರೆದುಕೊಂಡು ಬಂದರು. ಅಣ್ಣಾಸಾಹೇಬ ಗಾಡಗೀಳರ ಮಹಾರಾಜರ ಮೇಲಿನ ಶ್ರದ್ಧೆ ಬರಬರುತ್ತ ಬೆಳೆದು ಅವರು ಮಹಾರಾಜರ ಪೂರ್ಣ ಭಕ್ತರಾದರು.

ಮಹಾರಾಜರು ಯಾವ ಮಸೀದಿಯಲ್ಲಿ ಕುಳಿತುಕೊಳ್ಳುತ್ತಿದ್ದರು ಮತ್ತು ಮಲಗು ತ್ತಿದ್ದರು ಅದು ಸಂಪೂರ್ಣ ಜೀರ್ಣವಾಗಿತ್ತು, ಮತ್ತು ಕೆಳಗೆಲ್ಲ ಧೂಳು ತುಂಬಿತ್ತು, ಮೇಲಿನಿಂದಲೂ ಮಣ್ಣು ಬೀಳುತ್ತಿತ್ತು. ಈ ರೀತಿ ಸ್ಥಿತಿ ಇದ್ದದ್ದರಿಂದ ನಾನಾಸಾಹೇಬ ಡೇಂಗಳೆಯವರು ಮಹಾರಾಜರಿಗೆ ಒಂದು ದಪ್ಪ ಹಲಿಗೆಯನ್ನು ಮಲಗುವದಕ್ಕೆಂದು ತಂದುಕೊಟ್ಟರು. ಅವರ ಉದ್ದೇಶವಿಷ್ಟೇ, ಮಹಾರಾಜರು ಬರೀ ನೆಲದ ಮೇಲೆ ಮಲಗಬಾರದು ಎಂಬದು. ಈ ಹಲಗೆಯನ್ನು ಕೆಳಗೆ ಹಾಕಿಕೊಂಡು ಅದರ ಮೇಲೆ ಮಲಗಲಿ ಎಂದು. ಮಹಾರಾಜರು ಆ ಹಲಿಗೆಯ ಉಪಯೋಗವನ್ನು ಮಲಗಲಿಕ್ಕೆ ಮಾಡಿದರು. ಆದರೆ ಬೇರೆ ರೀತಿಯಲ್ಲಿ ಆ ಹಲಿಗೆಯನ್ನು ನೆಲದ ಮೇಲೆ ಹಾಕದೇ, ಅದನ್ನು ಮಶೀದಿಯ ಜಂತಿಗೆ ಹಳೆಯ ಬಟ್ಟೆಗಳಿಂದ ಕಟ್ಟಿ ಅದರ ಮೇಲೆ ಮಲಗತೊಡಗಿದರು. ಆ ಹರಕಲು ಬಟ್ಟೆಗಳನ್ನು ನೋಡಿದರೆ ಅವು ಆ ಹಲಿಗೆಯ ಭಾರವನ್ನೂ ತಡಿಯುವಂತಿರಲಿಲ್ಲ. ಆದರೆ ಮಹಾರಾಜರ ಪ್ರಭಾವದಿಂದ ಆ ಹಲಿಗೆ ಯದಷ್ಟೆ ಅಲ್ಲ, ಮಹಾರಾಜರ ಶರೀರದ ಭಾರವನ್ನೂ ಅವು ತಡೆದುಕೊಳ್ಳತೊಡಗಿದವು. ಮಲಗುವಾಗ ನಾಲ್ಕೂ ಕಡೆಗೆ ನಾಲ್ಕು ಉರಿಯುವ ಹಣತೆಗಳನ್ನು ಇಡುತ್ತಿದ್ದರು. ಆ ಹಲಿಗೆಯ ಮೇಲೆ ಬಾಬಾರನ್ನು ನೋಡುವದೆಂದರೆ ಪ್ರತಿಯೊಬ್ಬರಿಗೂ ದೊಡ್ಡ ಕೌತುಕವೆನಿಸುವುದು. ಮತ್ತು ಬಹಳಷ್ಟು ಜನ ದೂರ ನಿಂತು ಆ ಕೌತುಕವನ್ನು ನೋಡು ತ್ತಿದ್ದರು. ಆದರೆ ಮಹಾರಾಜರು ಆ ಹಲಿಗೆಯ ಮೇಲೆ ಹತ್ತುವದನ್ನೂ ಇಳಿಯುವದನ್ನು ಯಾರೂ ನೋಡಿರಲಿಲ್ಲ. ಸಾಕಷ್ಟು ಸಲ ಜನರು ಅದನ್ನು ನೋಡಬೇಕೆಂದು ಕಾವಲು ಕಾಯ್ದರು. ಆದರೆ ಮಹಾರಾಜರು ಹತ್ತುವದನ್ನು ಮತ್ತು ಇಳಿಯುವುದನ್ನು ಮಾತ್ರ ಅದು ಯಾರಿಗೂ ಕಾಣಿಸಲಿಲ್ಲ. ಕೊನೆಗೆ ಇದನ್ನು ನೋಡಲು ಬಹಳ ಜನ ಬರತೊಡಗಿದರು. ಆಗ ಬಾಬಾ ಈ ಉಪಾಧಿಯನ್ನು ಕಳೆದುಕೊಳ್ಳಲು ಒಂದು ದಿನ ಆ ಹಲಿಗೆಯನ್ನೇ ಮುರಿದೊಗೆದರು.

ನಾನಾಸಾಹೇಬ ಡೇಂಗಳೆಯವರು ಯಾವ ಕಾರಣಕ್ಕಾಗಿ ಮಹಾರಾಜ ದರ್ಶನಕ್ಕಾಗಿ ಮೊದಲು ಬಂದರೋ, ಅದೇ ಕಾರಣಕ್ಕಾಗಿ ಕೋಪರಗಾವದ ಮುಲ ಸರ್ಕಲ ಇನ್ಸ್ಪೆಕ್ಟರ ಗೋಪಾಳರಾವ ಗುಂಡ ಅವರು ಬಾಬಾರ ದರ್ಶನಕ್ಕೆ ಬಂದರು ಇವರಿಗೆ ಮೂವರು ಹೆಂಡಂದಿರಿದ್ದರೂ , ಪುತ್ರ ಸಂತಾನವಿರಲಿಲ್ಲ. ಇವರಿಗು ಮಹಾರಾಜರ ಆಶೀರ್ವಾದದಿಂದ ಗಂಡು ಮಗುವಾಯಿತು. ಅವರೂ ಮಹಾರಾಜ ಪೂರ್ಣ ಭಕ್ತರಾದರು. ಅವರ ಮನಸ್ಸಿನಲ್ಲಿ ಒಮ್ಮೆ, ಈ ಮಶೀದಿಯು ಬಹ ಜೀರ್ಣವಾಗಿದೆ ಇದನ್ನು ತಾವು ಮತ್ತೆ ಕಟ್ಟಿಸಬೇಕು ಎಂದು ಸಾಕಷ್ಟು ಕಲ್ಲುಗಳನ್ನು ಕೆಲಸಕ್ಕಾಗಿ ತಂದು ಹಾಕಿಸಿದರು. ಆದರೆ ಬಾಬಾ ಅವರಿಗೆ ಮಶೀದಿ ಕಟ್ಟಲು ಪರವಾನ ಕೊಡಲಿಲ್ಲ. ಆ ಕೆಲಸವನ್ನು ಬೇರೊಬ್ಬ ಭಕ್ತನಿಂದ ಮಾಡಿಸಿಕೊಳ್ಳಬೇಕಾಗಿತ್ತು. ಸಂಗತಿಯನ್ನು ಮುಂದೆ ಕೊಡಲಾಗಿದೆ. ಗೋಪಾಳರಾಯರು ತಂದ ಕಲ್ಲುಗಳನ್ನು ಬಾಬಾರ ಆಜ್ಞೆಯಿಂದ ಅಲ್ಲಿಯ ಶನಿಯ ದೇವಸ್ಥಾನಕ್ಕೆ ಕಟ್ಟಿಸುವುದಕ್ಕೆ ಮತ್ತು ಊರೊಳಗಿನ ಬೇರೆ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಉಪಯೋಗಿಸಲಾಯಿತು ಮಹಾರಾಜರ ಗಮನ ಎಲ್ಲ ದೇವಸ್ಥಾನ ಗಳತ್ತ ಇತ್ತು. ಇಲ್ಲಿಯ ಹನುಮಂತದೇವ ದೇವಸ್ಥಾನದ ಜೀರ್ಣೋದ್ಧಾರವನ್ನೂ ಮಹಾರಾಜರು ಮಾಡಿಸಿದರು ಮತ್ತು ದೇವಸ್ಥಾನವನ್ನು ಇನ್ನಷ್ಟು ದೊಡ್ಡದಾಗಿ ಕಟ್ಟಿಸಿದರು. ಯಾವ ಪ್ರಕಾರ ಊರೊಳಗಿ ಗುಡಿಗಳತ್ತ ಮಹಾರಾಜರ ಗಮನ (ಲಕ್ಷ್ಯ) ವಿತ್ತೋ ಅದೇ ಪ್ರಕಾರ ಅಲ್ಲಿಯ ಮಶೀದಿಗಳತ್ತಲೂ ಅವರ ಗಮನವಿತ್ತು. ಊರ ಮಗ್ಗುಲಿಗಿದ್ದ ಬೇವಿನ ಮರದ ಮಹಾರಾಜರು ಒಮ್ಮೊಮ್ಮೆ ಕುಳಿತು ಕೊಳ್ಳುತ್ತಿದ್ದರು ಎಂದು ಮೇಲೆ ಉಲ್ಲೇಖಿ ಲಾಗಿದೆ. ಅಲ್ಲಿ ಒಂದು ಪೀರನ ಸಮಾಧಿ ಇದೆ ಎಂದು ಒಮ್ಮೆ ಮಹಾರಾಜರು ಹೇಳಿದರ ಮತ್ತು ಅಲ್ಲಿ ಅಗಿದು ನೋಡಿದಾಗ ನಿಜವಾಗಿ ಅಲ್ಲಿ ಸಮಾಧಿ ಇತ್ತು. ನಂತರ ದಿವಸ ಜನರು ಊದುತ್ತ ಬಾರಿಸುತ್ತ ಮಹಾರಾಜರ ಮೆರವಣಿಗೆ ಮಾಡಿದರು. ಈ ಸಮಾಧಿಯ ಬಗ್ಗೆ ಮಹಾರಾಜರು ಪ್ರಸ್ತುತ ಲೇಖಕರೆದುರೂ ಮಾತನಾಡಿದ್ದರು ಮಹಾರಾಜರೆಂದಿದ್ದರು ಈ ಸ್ಥಳ ತಮ್ಮ ಹಿರಿಯರದಿದೆಯೆಂದು. ಇಲ್ಲಿ ಪ್ರತಿ ಗುರುವಾ ಮತ್ತು ಶುಕ್ರವಾರ ಊದ ಹಾಕುತ್ತಾ ಇರಬೇಕು. ಹಾಗೆ ಮಾಡುವುದರಿಂದ ತಮ್ಮದೆ ಕಲ್ಯಾಣವಾಗುವದು. ಒಮ್ಮೆ ಗೋಪಾಳರಾವಗುಂಡಾ ಅವರ ಮನಸ್ಸಿನಲ್ಲಿ 'ಇಲ್ಲಿ ಮಹಾರಾಜರಿಗಾಗಿ ಜಾತ್ರೆ ಅಥವಾ ಊರುಸ ವರ್ಷಕ್ಕೊಮ್ಮೆ ಮಾಡಬೇಕು' ಎಂದ ಬಂದಿತು. ಈ ವಿಚಾರವನ್ನು ಅವನು ತಾತ್ಯಾ ಪಾಟೀಲ, ದಾದಾ ಕೋತೆ ಪಾಟೀ ಮಾಧವರಾವ ದೇಶಪಾಂಡೆ ಮುಂತಾದವರ ಮುಂದೆ ಇಟ್ಟಾಗ ಅವರಿಗೂ ಅದ ಹಿಡಿಸಿತು. ಅವರು ಅದಕ್ಕಾಗಿ ವ್ಯವಸ್ಥೆ ಮಾಡುವದನ್ನು ಗೊತ್ತು ಮಾಡಿಕೊಂಡರು ಆದರೆ ಆಗ ಅಲ್ಲಿ ಇದ್ದ ಕುಲಕರ್ಣಿಯಿಂದ ಅದಕ್ಕೆ ಅಡ್ಡಿ ಬಂತು. ಅದರ ಪರಿಣಾವ ವೇನಾಯಿತು ಎಂದರೆ ಕಲೆಕ್ಟರರಿಂದ ಜಾತ್ರೆ ಮಾಡಕೂಡದೆಂದು ಹುಕುಂ ಬಂದಿತು ಆದರೆ ಜಾತ್ರೆ ಮಾಡುವುದಕ್ಕೆ ಬಾಬಾರ ಪೂರ್ಣ ಆಶೀರ್ವಾದವಿತ್ತು. ಅದರಿಂದ ಈ

ಎಲ್ಲರೂ ಮತ್ತೆ ಕಲೆಕ್ಟರರಿಗೆ ಅರ್ಜಿ ಮಾಡಿ ಮೊದಲಿನ ಹುಕುಂಮನ್ನು ರದ್ದುಗೊಳಿಸಿ ಜಾತ್ರೆ ಮಾಡುವ ಹುಕುಂ ತಂದರು. ಆ ಜಾತ್ರೆಯು ಮಹಾರಾಜರ ಆಜ್ಞೆಯಂತೆ ರಾಮನವಮಿಯಂದು ಮಾಡುವದೆಂದು ನಿಶ್ಚಯವಾಯಿತು. ಅಂದಿನಿಂದ ಆರಂಭವಾದ ಆ ಜಾತ್ರೆಯು ಇಂದಿನವರೆಗೂ ಪ್ರತಿ ರಾಮನವಮಿಯಂದು ಜಾತ್ರೆಯಾಗುವದು.

ರಾಮನವಮಿಯ ಜಾತ್ರೆ ಆರಂಭವಾಗುವ ಮೊದಲು ಕೆಲವು ವರ್ಷಗಳ ಹಿಂದೆ ಮಹಾರಾಜರು ಒಬ್ಬ ನಿಷ್ಕಾಮ ಭಕ್ತರನ್ನು ತಮ್ಮತ್ತ ಸೆಳೆದುಕೊಂಡಿದ್ದರು. ಆ ಭಕ್ತನೆಂದರೆ ರಾ. ನಾರಾಯಣ ಗೋವಿಂದ ಉರ್ಫ ನಾನಾಸಾಹೇಬ ಚಾಂದೋರಕರ. ಇವರು ಕಲ್ಯಾಣದಲ್ಲಿ ವಾಸಿಸುವವರು ಆಗಿದ್ದು ಆ ಕಾಲದಲ್ಲಿ ನಗರದ ಕಲೆಕ್ಟರರ ಚಿಟಣೀಸ ರಾಗಿದ್ದರು. ಅವರಿಗೆ ಒಂದು ದಿವಸ, ಇಲ್ಲಿಯ ಕುಲಕರ್ಣಿಯವರಾದ ರಾ. ಕೇಶವ ಅನಂತ ಉರ್ಫ ಅಪ್ಪಾ ಅವರು ಹೇಳಿದರು 'ತಮ್ಮನ್ನು ಮಹಾರಾಜರು ಕರೆದಿದ್ದಾರೆ' ಎಂದು ನಾನಾಸಾಹೇಬರಿಗೆ ಅಪ್ಪಾ ಅವರ ಮಾತು ನಿಜ ಅನಿಸಲಿಲ್ಲ. ಅವರು ತಿರುಗಿ ಅಪ್ಪಾಗೆ ಹೇಳಿದರು. 'ಸುಮ್ಮನೇ ಮಹಾರಾಜರ ಹೆಸರು ಏಕೆ ಹೇಳುತ್ತೀ? ನನ್ನ ಕಡೆಗೆ ನಿನದೇ ನಾದರೂ ಕೆಲಸವಿದ್ದರೆ ಹಾಗೆ ಸ್ಪಷ್ಟವಾಗಿ ಹೇಳು. ಅದಕ್ಕೆ ಅಪ್ಪಾ 'ನಿಜವಾಗಿಯೂ ನಿಮ್ಮನ್ನು ಮಹಾರಾಜರು ಕರೆದಿದ್ದಾರೆ' ಎಂದು ಒತ್ತಿ ಹೇಳಿದಾಗ ನಾನಾಸಾಹೇಬರು ಮಹಾರಾಜರ ದರ್ಶನಕ್ಕೆ ಬಂದರು ಮತ್ತು ಅಲ್ಪ ಸಮಯದಲ್ಲೇ ಮಹಾರಾಜರ ಮೇಲೆ ಅವರಿಗೆ ಶ್ರದ್ಧೆ ಉಂಟಾಯಿತು. ನಂತರ ಅವರು ಮೇಲಿಂದ ಮೇಲೆ ಬಂದು ಮಹಾರಾಜರ ಬೋಧಾಮೃತ ಲಾಭ ಪಡೆಯ ತೊಡಗಿದರು. ಮಹಾರಾಜರೊಡನೆ ಅವರದು ತಾಸುಗಟ್ಟಲೇ ಮಾತು ನಡೆಯುತ್ತಿದ್ದವು. 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇಕ್ಷ್ಯಂತಿ ತೇಜ್ಞಾನಂ ಜ್ಞಾನಿನಃ ತತ್ವದರ್ಶಿನಃ॥ ಈ ಶ್ರೀ ಭಗವದ್ಗೀತೆಯ ಉಕ್ತಿಯಂತೆ ನಾನಾಸಾಹೇಬರ ಪ್ರಣಿಪಾತ, ಪರಿಪ್ರಶ್ನೆ ಮತ್ತು ಸೇವೆ ಇರುತ್ತಿತ್ತು. ಮತ್ತು ಮಹಾರಾಜರು ಅವರಿಗೆ ಉಪದೇಶ ಮಾಡುತ್ತಿದ್ದರು. ಒಂದು ಸಲವಂತೂ ಇದೇ ಶ್ಲೋಕದ ವಿವೇಚನೆ ಮಹಾರಾಜರು ಸುಮಾರು ಒಂದು ಗಂಟೆ ಕಾಲ ಮಾಡಿದರು. ಆ ವಿವೇಚನೆಯಿಂದ, ಮಹಾರಾಜರಿಗೆ ಸಂಸ್ಕೃತವು ಉತ್ತಮವಾಗಿ ಬರುವದು ಎಂದು ನಂಬುಗೆಯಾಯಿತು.

ನಾನಾಸಾಹೇಬರು ಮಹಾರಾಜರ ಸೇವೆಯನ್ನು ಅತಿ ಉತ್ತಮ ರೀತಿಯಿಂದ ಮಾಡಿದರು. ಅದರಲ್ಲೂ ವಿಶೇಷತಃ ಎರಡು ಸಂಗತಿಗಳಿಂದಂತೂ ಅವರು ಮಹಾರಾಜರ ಭಕ್ತರಿಗೆ ಚಿರಸ್ಮರಣೀಯರಾಗಿ ಉಳಿಯುವರು. ಒಂದೆಂದರೆ ಅವರು ಮಹಾರಾಜರ ಹಳೇ ಮಶೀದಿಯನ್ನು ಕೆಡವಿ ಮತ್ತೆ ಕಟ್ಟಿದರು ಅಲ್ಲದೇ ಅದನ್ನು ವಿಸ್ತಾರಗೊಳಿಸಿದರು. ನಾನಾಸಾಹೇಬರಿಗೆ ಈ ಕೆಲಸವನ್ನು ತಾವೇ ನಿಂತು ಮಾಡಿಸಿಕೊಳ್ಳಲು ಪುರುಸೊತ್ತಿರಲಿಲ್ಲ (ಸಮಯವಿರಲಿಲ್ಲ), ಆದ್ದರಿಂದ ಅವರ ವಿನಂತಿಯ ಮೇರೆಗೆ ನಾನಾಸಾಹೇಬ ನಿಮೋಣಕರ ಅವರು ಅಲ್ಲಿ ನಿಂತು ಅಲ್ಲಿ ಸ್ವತಃ ತಾವೇ ಅದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊತ್ತು ಆ ಕಾರ್ಯವನ್ನು ಉತ್ತಮ ರೀತಿಯಿಂದ

ಪಾರುಗಾಣಿಸಿದರು. ಮಶೀದಿಯನ್ನು ಕಟ್ಟುವದಕ್ಕೆ ಮಹಾರಾಜರ ಒಪ್ಪಿಗೆಯನ್ನು ಮಾಳಸಾಪತಿಯವರ ಕಡೆಯಿಂದ ಕೇಳಿಸಿದರು ಮತ್ತು ಮಹಾರಾಜರೂ ಒಪ್ಪಿದರು. ಆದರೂ ಕೆಲಸ ನಡೆದಾಗ ಮಹಾರಾಜರು ಆಗಾಗ ಮಾಡಿದ ಕೆಲಸವನ್ನು ಕೆಡವುವದು ಮತ್ತು ದೊಡ್ಡ ದೊಡ್ಡ ಕಲ್ಲು ಹಾಗೂ ಇಟ್ಟಿಗೆಗಳನ್ನು ತಮ್ಮ ಕೈಯಿಂದ ಎತ್ತಿ ದೂರ ಎಸೆಯುತ್ತಿದ್ದರು. ನಂತರ ಆ ಕೆಲಸವನ್ನು ಮತ್ತೆ ಮಾಡಬೇಕು. ಮಹಾರಾಜರ ಈ ಕೃತ್ಯ ಇತರರಿಗೆ ವಿಚಿತ್ರವೆನಿಸಬಹುದು. ಆದರೆ ಅದರೊಳಗಿನ ನಿಜವಾದ ಇಂಗಿತವನ್ನು ಅರಿತವರಿಗೆ ಮಹಾರಾಜರ ಈ ಕೃತ್ಯದಿಂದ ಆಶ್ಚರ್ಯವೆನಿಸುತ್ತಿರಲಿಲ್ಲ. ಕೊನೆಗೊಮ್ಮೆ ಮಶೀದಿಯ ಕೆಲಸ ಪೂರ್ಣವಾಯಿತು. ಮತ್ತು ಆ ದಿವಸ ಮಹಾರಾಜರು ನಿಮಗಾವಕ್ಕೆ ಹೋಗಿದ್ದರು;ಅವರನ್ನು ಅಲ್ಲಿಂದ ಊದುತ್ತ ಬಾರಿಸುತ್ತ ಮೆರವಣಿಗೆಯಲ್ಲಿ ಕರೆತಂದು ಹೊಸ ಮಶೀದಿಯಲ್ಲಿ ಕೂಡ್ರಿಸಿದರು. ಈ ಮಶೀದಿಯ ಕೆಲಸ ಮಾಡುವದರಲ್ಲಿ ಇಲ್ಲಿಯ ಬಡಿಗ ಕೋಂಡಾಜಿ, ಗಬಾಜಿ ಮತ್ತು ತುಕಾರಾಮ ಈ ಮೂವರು ಬಂಧುಗಳು ಬಹಳ ಉಪಯೋಗಕ್ಕೆ ಬಂದರು. ಮಹಾರಾಜರ ದೇಹಾವಸಾನದವರೆಗೆ ಮಶೀದಿಯನ್ನು ಉಡಗುವದು, ಮಹಾರಾಜರ ಪಾತ್ರೆಗಳನ್ನು ತಿಕ್ಕುವದು, ಮಹಾರಾಜರ ಮುಖ ತೊಳೆಯಲು ನೀರು ಕಾಯಿಸುವದು ಮತ್ತು ಆ ನೀರನ್ನು ಆಚೆ ತಳ್ಳಿ ಸ್ವಚ್ಛ ಮಾಡುವದು ಈ ಎಲ್ಲ ಕೆಲಸಗಳನ್ನು ತುಕಾರಾಮನೇ ಮಾಡುತ್ತಿದ್ದ. ಮಹಾರಾಜರು ಈ ಕೆಲಸವನ್ನು ಮತ್ತೆ ಯಾರಿಗೂ ಮಾಡಲು ಬಿಡುತ್ತಿರಲಿಲ್ಲ. ಈಗಲೂ ರಾಮನವಮಿಯ ನಿಶಾಣೆಯ ಮೆರವಣಿಗೆ ಈ ಬಡಿಗರ ಮನೆಯಲ್ಲಿ ತಯಾರಾಗಿ ಅಲ್ಲಿಂದಲೇ ಹೊರಡುವದು.

ನಾನಾಸಾಹೇಬರ ಇನ್ನೊಂದು ದೊಡ್ಡ ಕಾರ್ಯವೆಂದರೆ ಮಹಾರಾಜರ ಕೀರ್ತಿಯನು ಪ್ರಸಾರ ಮಾಡಿ ಜನರಿಗೆ ಮಹಾರಾಜರ ಆಶೀರ್ವಾದದ ಲಾಭ ಒದಗುವಂತೆ ಮಾಡುವದು. ಇವರು ಮೊದಲು ಮಾಮಲೇದಾರರು ನಂತರ ಡೆಪ್ಯೂಟಿ ಕಲೆಕ್ಟರರಾಗಿದ್ದರಿಂದ ಅವರಿಗೆ ಸಾಕಷ್ಟು ಸ್ಥಳಗಳಿಗೆ ಹೋಗಬೇಕಾಗುತ್ತಿತ್ತು. ಮತ್ತು ತಿರುಗಾಟದಲ್ಲಿ ಹೋದಕಡೆಗಳೆಲ್ಲ ಮಹಾರಾಜರ ಗುಣಗಳ ವರ್ಣನೆ ಮಾಡುತ್ತಿದ್ದರು. ಮತ್ತು ಮಹಾರಾಜರ ದರ್ಶನದ ಬಗ್ಗೆ ಜನರಲ್ಲಿ ಕುತೂಹಲ ಮತ್ತು ಇಚ್ಛೆ ಉಂಟಾಗುವಂತೆ ಮಾಡುತ್ತಿದ್ದರು. ಈ ಗ್ರಂಥದ ಬರಹಗಾರರಿಗೆ ಮಹಾರಾಜರ ದರ್ಶನದ ಲಾಭವಾಗಲು ನಾನಾಸಾಹೇಬರೇ ಕಾರಣರಾದರು. ಮುಂಬಯಿ ಮತ್ತು ಠಾಣೆ ಜಿಲ್ಲೆಯ ಸಾವಿರಾರು ಜನರು ಮಹಾರಾಜರ ದರ್ಶನ ಪಡೆದು ಆನಂದ ಮತ್ತು ಲಾಭವನ್ನೂ ಪಡೆದರು. ಇದಕ್ಕೆ ಕಾರಣಕರ್ತರೂ ನಾನಾಸಾಹೇಬರೇ. ಮುಂಬಯಿಯ ಜನರ ಮನಸೆಳೆಯಲು ನಾನಾಸಾಹೇಬರಲ್ಲದೆ ಇನ್ನೂ ಇಬ್ಬರು ವ್ಯಕ್ತಿಗಳು ವಿಶೇಷ ಕಾರಣೀಭೂತರಾದರು. ಅವರಲ್ಲೊಬ್ಬರು ರಾ. ಗಣೇಶ ದತ್ತಾತ್ರೇಯ ಸಹಸ್ರಬುದ್ಧೆ ಉರ್ಫ್ ದಾಸಗಣೂ ಎಂಬುವರು. ಇವರು ಮೊದಲು ಪೋಲೀಸ್ ಖಾತೆಯಲ್ಲಿದ್ದರು. ಅವರಿಗೆ ತಮಾಶಾ ನೋಡುವ ಹವ್ಯಾಸ ಬಹಳ ಇತ್ತು. ಇವರು ನಾನಾಸಾಹೇಬರಿಗಾಗಿ ಮಹಾರಾಜರ ದರ್ಶನಕ್ಕೆ ಬಂದರು ಹಾಗೂ ಬರಬರುತ್ತ ಮಹಾರಾಜರು ಇವರ ಮನಸ್ಸಿನ ಮೇಲೆ

ಇಷ್ಟೊಂದು ಪರಿಣಾಮ ಮಾಡಿದರು. ಅದರಿಂದ ಅವರು ನೋಕರಿ ಬಿಟ್ಟು ಸಂತಚರಿತ್ರದ ಕೀರ್ತನೆ ಮಾಡುವುದು ಮತ್ತು ಗ್ರಂಥ ರಚನೆಯ ರೂಪದಿಂದ ಜನರಲ್ಲಿ ಪ್ರಸಾರ ಮಾಡುವ ಉಪಕ್ರಮವನ್ನು ಆರಂಭಿಸಿದರು. ಅವರ ಈ ಕ್ರಮವು ಇನ್ನೂ ನಡೆದಿದೆ. ಇವರು ಅರ್ವಾಚೀನ ಭಕ್ತಲೀಲಾಮೃತ, ಸಂತ ಕಥಾಮೃತ, ಭಕ್ತಿ ಸಾರಾಮೃತ ಈ ಸಂತಚರಿತ್ರಾತ್ಮಕ ಗ್ರಂಥಗಳನ್ನು ಬರೆದಿದ್ದಲ್ಲದೆ ಈಶಾವಾಸ್ಯೋಪನಿಷದ ಮತ್ತು ಶ್ರೀ ಜ್ಞಾನೇಶ್ವರ ಮಹಾರಾಜರ ಅಮೃತಾನುಭವ ಈ ಎರಡು ಗ್ರಂಥಗಳ ಮೇಲೆ ಮರಾಠಿಯಲ್ಲಿ ಸುಂದರ ಮತ್ತು ಸುಬೋಧ ಟೀಕೆ ಬರೆದಿದ್ದಾರೆ. ಇವಲ್ಲದೆ ಇನ್ನೂ ಅವರ ಗ್ರಂಥಗಳಿವೆ. ನಾನಾಸಾಹೇಬ ಚಾಂದೋರಕರರು. ಇವರನ್ನು ಮುಂಬಯಿಗೆ ಕರೆದೊಯ್ದು ಭಕ್ತಿರಸದಿಂದ ತುಂಬಿದ ಕೀರ್ತನೆಗಳನ್ನೂ ಮತ್ತು ಅದರಿಂದಲೇ ಮುಂಬಯಿಯ ಜನರಿಗೆ ಮಹಾರಾಜರು ಗುಣಶ್ರವಣದ ಲಾಭ ಒದಗಿಸಿಕೊಟ್ಟರು. ಇವರ ಕೀರ್ತನೆಯಿಂದಾಗಿ ಮುಂಬಯಿಯ ಮತ್ತು ಮುಂಬಯಿಯ ಸುತ್ತಮುತ್ತಲಿನ ಜನರಿಗೆ ಮಹಾರಾಜರ ದರ್ಶನಕ್ಕೆ ಹೋಗುವ ಇಚ್ಛೆಯಾಯಿತು. ಮೇಲೆ ಹೇಳಿದ ಇನ್ನೊಬ್ಬ ವ್ಯಕ್ತಿ ಎಂದರೆ ಸದ್ಯದ ಲೇಖಕ. ಇವರದೂ ಈ ಕಾಲಕ್ಕೆ ಮಹಾರಾಜರ ಚರಣದಲ್ಲಿ ಇರುವ ಅವಕಾಶವು ಹೆಚ್ಚಾಗುತ್ತ ಹೋದದ್ದರಿಂದ ಮುಂಬಯಿಯ ಸಾರ್ವಜನಿಕರ ಚಳುವಳಿಯಿಂದ ಅವರು ಸಹಜವಾಗಿಯೇ ಹೊರಬಂದರು ಮತ್ತು 'ಅವರು ಈಗ ಬಾಬಾ ಆಗಿರುವರು' ಎಂದು ಪಾರ್ಸಿ ಮತ್ತು ಇತರ ಪತ್ರಿಕೆಗಳಲ್ಲಿ ಮುದ್ರಿಸಲ್ಪಟ್ಟಿತು. ಅದರಿಂದ ಇವರಲ್ಲಿ ಯಾರಿಂದಾಗಿ ಈ ಸ್ಥಿತ್ಯಂತರವಾಯಿತೋ ಅವರ ದರ್ಶನ ಪಡೆಯುವದಕ್ಕಾಗಿ ಕೆಲವರು ಬಂದರು. ಒಟ್ಟಿನಲ್ಲಿ ೧೯೧೦ ರಿಂದ ಮಹಾರಾಜರ ದರ್ಶನಕ್ಕೆ ಬರುವವರ ಸಂಖ್ಯೆ ಬೆಳೆಯುತ್ತಾ ಹೋಯಿತು.

ನಾನಾಸಾಹೇಬರು ಇಲ್ಲಿ ಬಂದಾಗ ಇಲ್ಲಿ ದರ್ಶನಕ್ಕೆ ಬರುವ ಜನರು ಉಳಿದು ಕೊಳ್ಳುವದಕ್ಕೆ ಒಂದೂ ದೊಡ್ಡ ಮನೆ ಇರಲಿಲ್ಲ. ಆದರೆ ಈ ಕೊರತೆಯನ್ನು ಮಹಾರಾಜರು ಶ್ರೀಘ್ರದಲ್ಲಿಯೇ ತುಂಬಿ ತೆಗೆದರು. ಈ ಜಿಲ್ಲೆಯಲ್ಲಿ ರಾವಬಹಾದೂರ ಹರಿ ವಿನಾಯಕ ಸಾಠೆ ಡೆಪ್ಯುಟಿ ಕಲೆಕ್ಟರರಿದ್ದರು. ಅವರ ಮೊದಲ ಹೆಂಡತಿ ತೀರಿಕೊಂಡು ಬಹಳ ದಿವಸ ಗಳಾಗಿದ್ದವು. ಆದರೆ ಮತ್ತೆ ಮತ್ತೆ ಮದುವೆ ಮಾಡಿಕೊಳ್ಳುವ ಮನಸ್ಸು ಅವರಿಗಿರಲಿಲ್ಲ. ಅವರಿಗೆ ಪುತ್ರಸಂತಾನ ಇರದೇ ಇದ್ದದ್ದರಿಂದ ಅವರ ಸ್ನೇಹಿತರು ಅವರು ಇನ್ನೊಂದು ಮದುವೆ ಮಾಡಿಕೊಳ್ಳಬೇಕೆಂದು ಒತ್ತಾಯ ಪಡಿಸುತ್ತಿದ್ದರು. ಕೊನೆಗೆ ಮಹಾರಾಜರ ದರ್ಶನಕ್ಕೆ ಹೋಗಿ ಅವರ ಆಜ್ಞೆಯಂತೆ ಮಾಡುವುದೆಂದು ಗೊತ್ತುಮಾಡಿದರು. ಅದರಂತೆ ಅವರು ದರ್ಶನಕ್ಕೆ ಹೋದರು. ಮಹಾರಾಜರು ಮದುವೆಯಾಗಲು ಆಜ್ಞೆ ಕೊಟ್ಟರು ಮತ್ತು ಗಂಡು ಮಗ ಹುಟ್ಟುವನೆಂದು ಆಶೀರ್ವಾದವನ್ನೂ ಮಾಡಿದರು. ರಾವಬಹದ್ದೂರರು ಕನ್ಯೆಯನ್ನು ಒಪ್ಪಿ ಅವಳನ್ನು ಮಹಾರಾಜರಿಗೆ ತೋರಿಸಬೇಕೆಂದು ಹುಡುಗಿಯ ತಂದೆ ರಾ. ಗಣೇಶ ದಾಮೋದರ ಕೇಳಕರ ಇವರಿಗೆ ತಿಳಿಸಿದರು. ಆ ಪ್ರಕಾರ ಅವರು ಮಗಳನ್ನು ಅಲ್ಲಿಗೆ ಕರೆದುಕೊಂಡು

ಬಂದಾಗ ಅವಳ ಉಡಿಯಲ್ಲಿ ಹಣ್ಣುಹಾಕಿ ಅವಳ ಹಣೆಗೆ ಕುಂಕುಮ ಹಚ್ಚಿದರು. ಮುಂದೆ ಯೋಗ್ಯ ಕಾಲಕ್ಕೆ ಲಗ್ನವಾಯಿತು. ಬಳಿಕ ಕೆಲ ಕಾಲದಲ್ಲೇ ಮಹಾ ರಾಜರು ಹೇಳಿದಂತೆ, ಮೇಲೆ ಉಲ್ಲೇಖಿಸಲಾದ ಬೇವಿನ ಮರ ಮತ್ತು ಅದರ ಸುತ್ತಲೂ ಇರುವ ಸ್ಥಳವನ್ನು ಕೊಂಡುಕೊಂಡು ಅಲ್ಲಿ ಒಂದು ಮನೆ ಕಟ್ಟಿಸಿದರು. ಅದರಿಂದ ದರ್ಶನಕ್ಕೆ ಬರುವ ಜನರಿಗೆ ಇಳಿದುಕೊಳ್ಳಲು ಅನುಕೂಲವಾಯಿತು. ಮುಂದೆ ಮೂರು ವರ್ಷಗಳ ನಂತರ ಪ್ರಸ್ತುತ ಲೇಖಕನಿಂದ ಒಂದು ಮನೆ ಕಟ್ಟಿಸಿಕೊಂಡರು. ಅನಂತರ ನಾಗಪುರದ ಸಾಹುಕಾರರು ಗೋಪಾಲರಾವ್ ಉರ್ಫ್ ಬಾಪೂಸಾಹೇಬ ಬುಟಿ ಇವರಿಂದ ಒಂದು ಮನೆ ಕಟ್ಟಿಸಿಕೊಂಡರು. ಈ ಮನೆ ಬಹಳ ದೊಡ್ಡದು ಮತ್ತು ಸಂಪೂರ್ಣ ಕಲ್ಲಿನಿಂದ ಕಟ್ಟಲ್ಪಟ್ಟಿದ್ದು ಗಟ್ಟಿಮುಟ್ಟಾಗಿದ್ದು ಇದಕ್ಕೆ ಸಾಕಷ್ಟು ಹಣ ಖರ್ಚಾಯಿತು. ಶಿರಡಿಯ ಸುತ್ತಮುತ್ತಲಿನಲ್ಲಿ ಅಷ್ಟೇ ಏಕೆ ಇಡೀ ತಾಲೂಕಿನಲ್ಲಿಯಲ್ಲಿಯೇ ಇಂಥಹ ಕಟ್ಟಡ ಇರಬಹುದೆಂದು ಅನಿಸುವುದಿಲ್ಲ. ಇದೇ ವಾಡೆಯಲ್ಲಿ ಮಹಾರಾಜರ ಸಮಾಧಿ ಇದೆ. ಮುಂದೆ ಕೆಲ ಕಾಲದಲ್ಲೇ ಶಿರ್ಡಿಗೆ ಸಂಸ್ಥಾನ ಸ್ವರೂಪ ಬರತೊಡಗಿತು. ಮಹಾರಾಜರಿಗೆ ಆರತಿ ನಡೆಯತೊಡಗಿತು ಮತ್ತು ಆರತಿಯ ಸಮಯಕ್ಕೆ ಚವರಿ ಬೀಸುವರು ಛತ್ರ ಚಾಮರ ಗಳು ಮಹಾರಾಜರಮೇಲೆ ಹಿಡಿಯುವುದು ಆರಂಭವಾಯಿತು. ಮಹಾರಾಜರು ಚಾವಡಿಗೆ ಹೋಗುವಾಗ ಊದುತ್ತ, ಬಾರಿಸುತ್ತ, ಕುದುರೆ, ಪಲ್ಲಕ್ಕಿ, ಚೋಪದಾರರು, ಭಜನೆಯ ಜನರು, ಧ್ವಜ ಪತಾಕೆಗಳು ಈ ಎಲ್ಲ ಸಂಭ್ರಮದೊಡನೆ ಹೋಗಹತ್ತಿದ್ದರು. ಚಾವಡಿಯನ್ನು ಕನ್ನಡಿಗಳು, ಹಂಡೆ, ಝೂಂಬರ, ಕನ್ನಡಿಗಳಿಂದ ಅಲಂಕರಿಸಲಾಯಿತು. ಮಸೀದಿ ಮತ್ತು ಚಾವಡಿಗಳಲ್ಲಿ ಹಾಸುಗಲ್ಲುಗಳನ್ನು ಕೂಡ್ರಿಸಲಾಯಿತು. ಈ ಎಲ್ಲ ಅಲಂಕಾರದ ಶ್ರೇಯ ಹೆಚ್ಚಾಗಿ ಕೈ. ಸುಂದರಾಬಾಯಿ ಕ್ಷೀರಸಾಗರ ಉರ್ಫ್ ರಾಧಾಕೃಷ್ಣಾ ಆಯಿ ಅವರಿಗೇ ಹೋಗುವುದು. ಇವರು ಪ್ರೇಮಳ ಭಕ್ತಿಯ ಆಚಾರ್ಯೆಯಾಗಿದ್ದರು ಎನ್ನಲು ಕಿಂಚಿತ್ತು ಅಡ್ಡಿ ಇಲ್ಲ. ಇವರ ಹತ್ತಿರ ಧನವಂತೂ ಇರಲಿಲ್ಲ. ಆದರೆ ತಮ್ಮ ತನ-ಮನಗಳನ್ನು ಸಂಪೂರ್ಣವಾಗಿ ಮಹಾರಾಜರಿಗೆ ಅರ್ಪಿಸಿದ್ದರು. ಮಹಾರಾಜರ ಬೇರೆ ಬೇರೆ ಭಕ್ತರಿಂದ ಬೇರೆ ಬೇರೆ ವಸ್ತುಗಳನ್ನು ತರಿಸಿಕೊಂಡು ಅವರು ಶಿರ್ಡೀ ಸಂಸ್ಥಾನವನ್ನು ಸುಂದರವಾಗಿ ಅಲಂಕರಿಸಿಕೊಟ್ಟರು. ದುರ್ದೈವದಿಂದ ಅವರು ತಮ್ಮ ವಯಸ್ಸಿನ 33ನೇ ವರ್ಷವೇ ನಿಧನರಾದರು (ಅವತಾರ ಮುಗಿಯಿತು). ಅವರು ಅಲ್ಲಿ ಎಂಟು ಒಂಭತ್ತು ವರ್ಷ ಮಾತ್ರ ಇದ್ದರು. ಆದರೆ ಅಷ್ಟೇ ಕಾಲದಲ್ಲಿ ಅವರು ಮಾಡಿದಷ್ಟು ಕಾರ್ಯವನ್ನು ಬೇರೆಯವರು ಇಪ್ಪತ್ತೈದು ವರ್ಷಗಳಲ್ಲೂ ಮಾಡಲು ಸಾಧ್ಯವಾಗುತ್ತಿತ್ತೋ ಇಲ್ಲವೋ ಎನಿಸುತ್ತಿದೆ. ಈ ಹೆಣ್ಣುಮಗಳಿಂದಲೇ ಚಾವಡಿಯಲ್ಲಿ ರಾತ್ರಿ ಮಹಾರಾಜರ ಶೇಜಾರತಿ ಮತ್ತು ಬೆಳಗಿನಜಾವ ಕಾಕಡ ಆರತಿಯ ಪ್ರಥೆ ಶುರುವಾಯಿತು. ಮಹಾರಾಜರು ಮೊದಲು ತಮ್ಮ ಪೂಜೆಯನ್ನೂ ಮಾಡಗೊಡು ತ್ತಿರಲಿಲ್ಲ. ಅವರು ಮೊದಲನೇ ಪೂಜೆಯನ್ನು ಮ್ಹಾಳಸಾಪತಿಯವರಿಂದ ಮಾಡಿಸಿ ಕೊಂಡರು. ಕೆಲವು ದಿನಗಳ ನಂತರ ನಿಂಬಗಾವದ ಸೀತಾರಾಮ ಡೇಂಗಳ ಪೂಜೆಮಾಡಲು

ಬಂದರು. ಆಗ ಮಹಾರಾಜರು ಅವರ ಮೇಲೆ ಸಿಟ್ಟಿಗೆದ್ದರೂ ಅವರ ಪೂಜೆಯನ್ನು ಪೂರ್ಣಗೊಳಿಸಲು ಬಿಟ್ಟರು. ಮುಂದೆ ಕೆಲದಿನಗಳ ನಂತರ ನಾನಾಸಾಹೇಬ ಚಾಂದೋರಕರರ ಸಣ್ಣ ತಮ್ಮ ಮಹಾದೇವ ಉರ್ಫ್ ಬಾಪೂ ಇವನಿಗೆ ಸಮಾಧಾನ ದಿಂದ ಪೂಜೆ ಮಾಡಗೊಟ್ಟರು. ಮುಂದೆ ಎಲ್ಲರಿಗೂ ಪೂಜೆಮಾಡಲು ಅವಕಾಶ ವಾಯಿತು. ಆದರೆ ಆಗ ಮಹಾರಾಜರು ತಮಗೆ ಆರತಿ ಬೆಳಗಲು ಬಿಡುತ್ತಿರಲಿಲ್ಲ. ಕೆಲ ದಿನಗಳನಂತರ ಮೊದಲ ಸಲ ಆರತಿಮಾಡುವ ಮರ್ಯಾದೆ ರಾ. ಲಕ್ಷ್ಮಣ ಕೃಷ್ಣಾಜಿ ಉರ್ಫ್ ತಾತ್ಯಾ ಸಾಹೇಬ ನೂಲಕರರಿಗೆ ಸಿಕ್ಕಿತು. ಇವರು ಪಂಢರಪೂರದ ಮುನ್ಸಿಫರಾಗಿದ್ದ ಅವರು ಅನಾರೋಗ್ಯದಿಂದಾಗಿ ರಜೆ ತೆಗೆದುಕೊಂಡು ಅಲ್ಲಿಗೆ ಬಂದಿದ್ದರು. ಆದರೆ ಅವರ ಮನಸ್ಸಿನ ಉದ್ದೇಶವೆಂದರೆ ಇನ್ನು ನೌಕರಿಯನ್ನುಬಿಟ್ಟು ಉಳಿದ ಆಯುಷ್ಯದ ದಿನಗಳನ್ನು ಮಹಾ ರಾಜರ ಚರಣದಲ್ಲಿಯೇ ಕಳೆಯಬೇಕೆಂಬುದು ಮತ್ತು ಅದು ಅದರಂತೆಯೇ ನಡೆಯಿತು.

ರಾಧಾಕೃಷ್ಣಾಯಿ ಸ್ವತಃ ಎಲ್ಲಾ ರೀತಿಯ ಸೇವೆ ಮಾಡುತ್ತಿದ್ದರು. ಅವರು ದಿನಾಲು ಎರಡು ಸಲ ಮಹಾರಾಜರು ಹೋಗುವ ದಾರಿಯ ಕಸ ಗುಡಿಸುತ್ತಿದ್ದರು. ಅರ್ಥಾತ್ ಅಲ್ಲಿ ಇರುವ ಎಲ್ಲ ಹೊಲಸನ್ನು ತಾವೇ ಸ್ವಚ್ಛಮಾಡುತ್ತಿದ್ದರು. ಇವರಿಗಿಂತ ಮೊದಲು ಈ ಕ್ರಮವನ್ನು ಬಾಳಾಜಿ ಪಾಟೀಲ್ ಸೇವಾಸಕರ ಇವರು ಆರಂಭಿಸಿದರು. ಇವರು ಪೂರ್ಣ ವಿರಕ್ತಭಕ್ತರು. ಸಂಸಾರದ ಎಲ್ಲ ತಾಪತ್ರಯಗಳನ್ನು ಬಿಟ್ಟು ಇಲ್ಲಿ ಬಂದು ನಿಂತಿದ್ದರು. ಅವರಿಗೆ ತಿಳುವಳಿಕೆ ಹೇಳಿ ತಿರುಗಿ ಕರೆದುಕೊಂಡು ಹೋಗಲು ಬಹಳ ಜನ ಬಂದರು. ಆದರೆ ಇವರು ಮಾತ್ರ ತಿರುಗಿ ಹೋಗಲಿಲ್ಲ. ಇವರು ಯಾವಾಗಲೂ ರಸ್ತೆಗಳನ್ನು ಗುಡಿಸುವುದು, ಮಸೀದಿಯನ್ನು ಸಾರಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ದೂರದಿಂದಲೇ ಮಹಾರಾಜರ ದರ್ಶನ ತೆಗೆದುಕೊಳ್ಳುತ್ತಿದ್ದರು. ಹತ್ತಿರ ಹೋಗುತ್ತಿರಲಿಲ್ಲ. ನೀರು ಕುಡಿಯುವುದಾದರೆ ಮಹಾರಾಜರ ಚರಣತೀರ್ಥ, ಇಲ್ಲವೇ ಸ್ನಾನಮಾಡುವಾಗ ಮಹಾರಾಜರ ಮೈಮೇಲಿಂದ ಬಿದ್ದ ನೀರು ಅಥವಾ ಮಹಾರಾಜರ ಎಂಜಲು ನೀರು ಕುಡಿಯುತ್ತಿದ್ದರು. ತಮ್ಮ ಜಮೀನಿನ (ಉತ್ಪನ್ನ) ಬೆಳೆ ಬಂದಾಗ ಎಲ್ಲವನ್ನೂ ಮಹಾರಾಜರ ಹತ್ತಿರ ತಂದು ಇಡುತ್ತಿದ್ದರು. ಅದರೊಳಗಿಂದ ಮಹಾರಾಜರು ಎತ್ತಿ ಕೊಟ್ಟಷ್ಟನ್ನೆ ತೆಗೆದು ಕೊಳ್ಳುತ್ತಿದ್ದರು. ಅರ್ಥಾತ್ ಮಹಾರಾಜರು ಎಲ್ಲವನ್ನೂ ಬಹುಶಃ ತಿರುಗಿ ಕೊಡುತ್ತಿದ್ದರು. ಎರಡು ವರ್ಷ ಅಲ್ಲಿ ನಿಂತ ನಂತರ ಮಹಾರಾಜರು ಬಾಳಾಜಿ ಪಟೇಲರಿಗೆ ತಮ್ಮ ಮನೆಗೆ ತಿರುಗಿ ಹೋಗಲು ಅಜ್ಞಾಪಿಸಿದರು, ಅದರಂತೆ ಅವರೂ ತಿರುಗಿ ಹೋದರು. ಆದರೂ ಮೇಲಿಂದ ಮೇಲೆ ಮಹಾರಾಜರ ದರ್ಶನಕ್ಕೆ ಬರುತ್ತಿದ್ದರು. ಮತ್ತು ತಮ್ಮ ಎಲ್ಲ ಉತ್ಪನ್ನವನ್ನು ಮಹಾರಾಜರಿಗೆ ಅರ್ಪಣ ಮಾಡುತ್ತಿದ್ದರು. ಇವರು ಮುಂದೆ ಕೆಲವು ವರ್ಷಗಳ ನಂತರ ತೀರಿಕೊಂಡರು.

ರಾಧಾಕೃಷ್ಣ ಅಯೀ ಸ್ವತಃ ಎಲ್ಲ ತರದ ಸೇವೆ ಮಾಡುತ್ತಿದ್ದರು, ಇಷ್ಟೇ ಅಲ್ಲ ಅವರು ಮಹಾರಾಜರ ಬಹುತೇಕ ಎಲ್ಲ ಭಕ್ತರಿಂದ ಮಹಾರಾಜರ ಸೇವೆ

ಮಾಡಿಸುತ್ತಿದ್ದರು. ಅವರು ಬೇರೆ ಬೇರೆ ತರದ ಕೆಲಸಗಳನ್ನು ಮಾಡುತ್ತಿದ್ದರು, ಮತ್ತು ಅದರಲ್ಲಿ ಎಲ್ಲರನ್ನೂ ತೊಡಗಿಸುತ್ತಿದ್ದರು;ಮಾತ್ರ ಎಲ್ಲ ಜನರೂ ಪ್ರೀತಿಯಿಂದ ಮತ್ತೂ ಮುಂದೆ ಬಂದು ಕೆಲಸ ಮಾಡುತ್ತಿದ್ದರು. ಅವರಲ್ಲಿ ಎಲ್ಲ ದರ್ಜೆಯ ಜನರೂ ಇರುತ್ತಿದ್ದರು ಮತ್ತು ಸ್ತ್ರೀಯರೂ ಇರುತ್ತಿದ್ದರು. ಮಣ್ಣು ಕಲ್ಲು ಹೊರುವರು, ದಾರಿಯನ್ನೂ ಉಡುಗುವದು, ಮಣ್ಣು ಕಲಿಸಿ ಅದನ್ನು ಹೊರುವದು, ತಗ್ಗು ಅಗಿಯುವುದು ಮತ್ತು ಅವುಗಳನ್ನು ತುಂಬುವದು, ಗಿಡ ನೆಡುವದು, ಕಟ್ಟಿಗೆ ಒಡೆಯುವುದು, ಮಶೀದಿ ತೊಳೆಯುವುದು ಮತ್ತು ಬಣ್ಣ ಹಚ್ಚುವುದು, ಕಾಗದದ ಹೂವು ಕತ್ತರಿಸುವದು, ಚವರಿ, ನವಿಲುಗರಿ, ನಿಶಾಣೆಗಳನ್ನು ಹಿಡಿಯುವುದು, ನಿಶಾನಿಗಳನ್ನು ಹೊಲಿಯುವುದು, ಮುಂತಾದ ಎಲ್ಲ ಕೆಲಸಗಳನ್ನು ದೊಡ್ಡ ಜನರು ಮತ್ತು ದೊಡ್ಡ ಮನೆತನದ ಹೆಣ್ಣು ಮಕ್ಕಳೂ ಮಾಡುತ್ತಿದ್ದರು. ಮತ್ತೆ ತಮಗೊಂದು ಸೇವೆ ಮಾಡುವ ಅವಕಾಶ ದೊರಕಿತು ಎಂದು ಸಂತೋಷ ಪಡುತ್ತಿದ್ದರು.

ಮಹಾರಾಜರ ನಿತ್ಯಕ್ರಮವನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತಿತ್ತು. ಮಹಾರಾಜರು ಬೆಳಿಗ್ಗೆ ಎಂದು ಧುನಿಯ ಮುಂದೆ ಕುಳಿತು ಕೊಳ್ಳುತ್ತಿದ್ದರು. ನಂತರ ಶೌಚ ವಿಧಿಯನ್ನು ಮುಗಿಸಿ ತಮ್ಮ ಕೈಯಿಂದಲೇ ಅದನ್ನು ಎತ್ತಿ ಒಗೆಯುತ್ತಿದ್ದರು. ಬಳಿಕ ಸ್ವಲ್ಪ ಸಮಯ ಸ್ವಸ್ಥ ಕುಳಿತುಕೊಳ್ಳುತ್ತಿದ್ದರು. ಅಷ್ಟು ಹೊತ್ತಿಗೆ ಭಾಗೋಜಿ ಸಿಂಧೆ ಎಂಬ ಗೃಹಸ್ಥರು ಬಂದು ಮಹಾರಾಜರ ಬಲಗೈಗೆ ಕಟ್ಟಿದ ಪಟ್ಟಿಗಳನ್ನು ಬಿಚ್ಚುತ್ತಿದ್ದನು. ಕೈ ತಿಕ್ಕುವನು ಮತ್ತು ಮೈ ಒತ್ತುತ್ತಿದ್ದನು. ನಂತರ ಚಿಲುಮೆ ತುಂಬಿ ಅದನ್ನು ಹೊತ್ತಿಸಿ ಮಹಾರಾಜರಿಗೆ ಸೇದಲು ಕೊಡುವನು. ಮಹಾರಾಜರು ತಾವು ಸೇದಿ ಅದನ್ನು ಭಾಗೋಜಿಗೆ ಸೇದಲು ಕೊಡುತ್ತಿದ್ದರು. ಹೀಗೆ ಐದಾರು ಸಲ ಆದ ಮೇಲೆ ಭಾಗೋಜಿ ಹೋಗುತ್ತಿದ್ದ. ಈ ಭಾಗೋಜಿಗೆ ಮಹಾರೋಗವಿತ್ತು. ಆದರೂ ಮಹಾರಾಜರು ಅದರ ಬಗ್ಗೆ ಬೇಸರಪಟ್ಟು ಕೊಳ್ಳಲಿಲ್ಲ. ಅಥವಾ ಅವನ ಕಾರಣದಿಂದಾಗಿ ತಮ್ಮ ನಿತ್ಯ ಕ್ರಮವನ್ನೂ ಬದಲಾಯಿಸಲಿಲ್ಲ. ಭಾಗೋಜಿ ಹೋದ ನಂತರ ಮಹಾರಾಜರು ಸ್ವಲ್ಪ ಹೊತ್ತು ಹಾಗೇ ಕುಳಿತುಕೊಳ್ಳುವರು ಮತ್ತು ಆ ಸಮಯಕ್ಕೆ ಕೆಲವು ನಿತ್ಯವೂ ಬರುವ ಭಕ್ತರು ಬಂದು ಸೇವೆ ಮಾಡುತ್ತಿದ್ದರು. ಆಮೇಲೆ ಮಹಾರಾಜರು ಮುಖ ಮಾರ್ಜನಕ್ಕೆ ಏಳುತ್ತಿದ್ದರು. ಮಹಾರಾಜರ ಮುಖ ಮಾರ್ಜನವೂ ನೋಡ ತಕ್ಕದ್ದಿರುತ್ತಿತ್ತು. ಕೈ, ಕಾಲು, ಮುಖ ಮತ್ತು ಕಿವಿಗಳೆಲ್ಲವನ್ನೂ ಯಥೇಚ್ಚ ನೀರಿನಿಂದ ಈ ಎಲ್ಲ ಭಾಗಗಳನ್ನೂ ಚೆನ್ನಾಗಿ ಸ್ವಚ್ಛ ಮಾಡುವದು, ಅದೂ ಅತ್ಯಂತ ನಯವಾಗಿ.

ಏಕನಾಥ ಮಹಾರಾಜರು ಬಣ್ಣಿಸಿದಂತೆ, 'ರೋಮಗಳೆಲ್ಲ ಮರ್ದಿಸಲ್ಪಟ್ಟಾವು। ಅದಕ್ಕೆ ಅಂಗಮರ್ದನ ಮಾಡಬಾರದು।ಈ ಪ್ರಕಾರ ಸ್ವದೇಹದ ದೇಹತ್ವವದು। ಭೂತಹಿಂಸೆಯಗಂಜಿ ಅಹಮತ್ವಕ್ಕೆ ಬರಬಾರದು॥ (ಏಕನಾಥೀ ಭಾಗವತ ಅ ೩) ಇದೇ ಪ್ರಕಾರ ಸ್ನಾನದ ಕಾಲ ದಲ್ಲೂ ನಡೆಯುವದು. ಮುಖಮಾರ್ಜನವಾದ ಮೇಲೆ ಊರಲ್ಲಿ

ಭಿಕ್ಷೆಗೆ ಹೋಗುವರು. ಭಿಕ್ಷೆಗೆ ಗೊತ್ತಾದ, ಐದು ಕಡೆಗೆ ಮಾತ್ರ ಹೋಗಿ ಒಂದು ಕಡೆ ನಿಂತು ಬಿಡುತ್ತಿದ್ದರು. ರೊಟ್ಟಿ, ಪಲ್ಯೆ ಬಂದದ್ದನ್ನು ತೆಗೆದುಕೊಳ್ಳುವದು, ತಿರುಗಿ ಮಸೀದಿಗೆ ಬಂದ ಮೇಲೆ ಸ್ವಲ್ಪ ತಿನ್ನುವದು. ತಿಂಡಿ ಮುಗಿದ ಮೇಲೆ ಒಂದಿಷ್ಟು ಹೊತ್ತು ಬೈಠಕ ನಡೆಯುವದು. ಆಗ ಸಾಕಷ್ಟು ಜನರು ಕೂಡುತ್ತಿದ್ದರು. ಆಗ ಮಹಾರಾಜರು ಮಾತಿನ ಮಧ್ಯವೇ ಕಥಾರೂಪದಲ್ಲಿ ಬೋಧ ಮಾಡುತ್ತಿದ್ದರು. ಒಮ್ಮೊಮ್ಮೆ ಈ ಬೈಠಕದ ಸಮಯದಲ್ಲೇ ಬಾಳೆಹಣ್ಣು, ಪೇರಲಹಣ್ಣು, ಮಾವಿನಹಣ್ಣು ಕೊಂಡು ತೆಗೆದುಕೊಂಡು ಮಹಾರಾಜರು ಬಂದ ಜನರಿಗೆ ಹಂಚುತ್ತಿದ್ದರು. ಮತ್ತು ಬಾಳೆಹಣ್ಣು ಸುಲಿದು ಕೊಡುವದು, ಪೇರಲಹಣ್ಣು ತಮ್ಮ ಕೈಗಳಿಂದಲೇ ತುಂಡು ಮಾಡಿ ಕೊಡುವದು, ಮಾವಿನಹಣ್ಣನ್ನು ತಿಕ್ಕಿ ಮೆತ್ತಗೆ ಮಾಡಿ ಕೊಡುತ್ತಿದ್ದರು. ಈ ಬೈಠಕದ ನಂತರ ಮಹಾರಾಜರು ಲೇಂಡಿಗೆ ಹೋಗಿ ಅಲ್ಲಿ ಒಂದು ಗಂಟೆ ಇರುತ್ತಿದ್ದರು. ಲೇಂಡಿಯಿಂದ ತಿರುಗಿ ಬಂದ ಮೇಲೆ ಎರಡು ಗಂಟೆಯವರೆಗೆ ಮಶೀದಿಯಲ್ಲಿ ಇರುವದು. ಅಷ್ಟೊತ್ತಿನಲ್ಲಿ ಮಹಾರಾಜರ ಪೂಜೆ ಅರ್ಚನೆ ಆರತಿ ಎಲ್ಲ ನಡೆಯುತ್ತಿತ್ತು. ಆಮೇಲೆ ಮಹಾರಾಜರ ಊಟವಾದ ಮೇಲೆ ಮಹಾರಾಜರು ಮತ್ತೆ ಲೇಂಡಿಗೆ ಹೋಗುತ್ತಿದ್ದರು. ಅಲ್ಲಿಂದ ತಿರುಗಿ ಸುಮಾರು ಮುಕ್ಕಾಲು ಗಂಟೆಯ ನಂತರ ಬರುತ್ತಿದ್ದರು. ಮತ್ತು ಆಗಿನಿಂದ ಸಾಯಂಕಾಲದವರೆಗೆ ಮಶೀದಿಯಲ್ಲಿ ಕುಳಿತುಕೊಳ್ಳು ತ್ತಿದ್ದರು. ಸಾಯಂಕಾಲ ಸ್ವಲ್ಪ ಹೊರಗೆ ಹೋಗಿ ಸ್ವಲ್ಪ ಸಮಯದಲ್ಲೇ ತಿರುಗಿ ಬಂದು ಮಶೀದಿಯಲ್ಲಿ ಕುಳಿತುಕೊಳ್ಳುವರು. ಸಾಧಾರಣವಾಗಿ ದಿವಸಕ್ಕೆ ಮೂರು ಬೈಠಕಗಳಾಗು ತ್ತಿದ್ದವು. ಒಂದು ಬೆಳಗಿನ ತಿಂಡಿಯ ನಂತರ, ಎರಡನೆಯದು ಲೇಂಡಿಯಿಂದ ತಿರುಗಿ ಬಂದ ಮೇಲೆ ಮತ್ತು ಮೂರನೆಯದು ಮೂರನೆಯ ಪ್ರಹರದ ಐದು ಗಂಟೆಯ ಹೊತ್ತಿಗೆ. ಮೂರೂ ಬೈಠಕಗಳಲ್ಲಿ ಮಹಾರಾಜರು ಮಾತು ಮಾತುಗಳಲ್ಲೇ ಕಥಾರೂಪ ದಿಂದ ಬೋಧ ಮಾಡುತ್ತಿದ್ದರು. ಮಹಾರಾಜರ ಮಾತಿನಲ್ಲಿ ಅಲ್ಲಿ ಕುಳಿತಿರುವ ಜನರ ಮನದಲ್ಲಿ ನಡೆದಿರುತ್ತಿದ್ದ ಬೇರೆ ಸಂಗತಿಗಳ ವಿಷಯದ ಸಮಾಧಾನವಾಗುತ್ತಿತ್ತು. ಮಹಾರಾಜರು ಗಹನ ವೇದಾಂತ ವಿಷಯದ ಬಗ್ಗೆ ಪ್ರಕಟ ರೂಪದಲ್ಲಿ ವಿವರಣೆ ನೀಡುತ್ತಿರಲಿಲ್ಲ ಅಥವಾ ಉಪನಿಷದದ ಮೇಲೆ ಪ್ರವಚನವನ್ನೂ ಮಾಡುತ್ತಿರಲಿಲ್ಲ. ಮುಖ್ಯವಾಗಿ ಅವರ ಉಪದೇಶವು ನೈತಿಕವಾಗಿರುತ್ತಿತ್ತು. ಶಿಷ್ಯರ ಭೂಮಿಕೆಯನ್ನು ಶುದ್ಧಗೊಳಿಸಿ ಬಳಿಕ ಅದರಲ್ಲಿ ಜ್ಞಾನದ ಬೀಜವನ್ನು ಬಿತ್ತುವದು. ಇದೇ ಸದ್ಗುರುವಿನ ಶಾಸ್ತ್ರೋಕ್ತ ವಿಧಾನವಾಗಿರುವದು. ಮಹಾರಾಜರೂ ಅದನ್ನೇ ಮಾಡುತ್ತಿದ್ದರು. ಆದ್ದರಿಂದ ಅವರ ಉಪದೇಶವು ನೀತಿ ತತ್ವದ್ದೇ ಇರುತ್ತಿತ್ತು. ಆದರೆ ಈ ಬಿಟ್ಟು ಶಬ್ದದ ಬೋಧಕ್ಕಿಂತ ಅಸಂಖ್ಯ ಪಟ್ಟು ಅಮೂಲ್ಯವಾದ ಅನುಭವ ರೂಪದ ಬೋಧ ಮಹಾರಾಜರಿಂದ ದೊರಕುತ್ತಿತ್ತು. ಮತ್ತು ಅದರಿಂದಲೇ ಶ್ರದ್ಧೆಯಿಂದ ಬರುವ ಭಕ್ತರ ಅತಿ ಉಚ್ಚ ಪ್ರಕಾರದ ಹಿತವಾಗುತ್ತಿತ್ತು.

ಮಹಾರಾಜರ ಹತ್ತಿರ ಬರುವವರಲ್ಲಿ ಸಕಾಮ ಭಕ್ತರೇ ಹೆಚ್ಚು ಜನರಿರುತ್ತಿದ್ದರು.

ಆದರೆ ಮಹಾರಾಜರು ಅವರ ಕಾಮನೆಗಳನ್ನು ಪೂರೈಸಿ ಅವರ ಮನಸ್ಸನ್ನು ಅತ್ಯಂತಿಕ ಹಿತದ ಕಡೆಗೆ ಹೊರಳುವಂತೆ ಮಾಡುತ್ತಿದ್ದರು. ಮಹಾರಾಜರ ಅವತಾರವು ಜನರ ಉದ್ಧಾರಕ್ಕೋಸ್ಕರವೇ ಇತ್ತು. ಮತ್ತು ಅವರು ಎಲ್ಲರ ಹಿತವನ್ನೇ ಮಾಡಿದರು ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅವರ ಲೀಲೆಗಳ ಮತ್ತು ಗುಣಗಳ ಯಥಾರ್ಥ ವರ್ಣನೆ ಮಾಡಲು ಅಶಕ್ಯವದು.

ಯೋವಾ ಅನಂತಸ್ಯ ಗುಣಾನನಂತಾನನುಕ್ರಮಿಷ್ಯನ್ ಸ ತು ಬಾಲ ಬುದ್ಧಿಃ||
ರಜಾಂಸಿ ಭೂಮೇರ್ಗಣಯೇತ್ಕಥಂಚಿತ್ಕಾಲೇನ ನೈವಾಖಿಲ ಶಕ್ತಿಧಾಮ್ನಃ||

ಆದರೂ ಶಕ್ಯವಿದ್ದ ಮಟ್ಟಿಗೆ ಮಹಾರಾಜರ ಲೀಲೆಗಳ ಸಂಗ್ರಹವಾದರೆ ಅದು ಎಲ್ಲರಿಗೂ ಹಿತಪ್ರದವಾಗುವದು ಎಂಬ ನಂಬಿಕೆ ಇದೆ. ಇಂಥ ಸಂಗ್ರಹವನ್ನು ನನ್ನ ಸನ್ಮಾನ್ಯ ಮಿತ್ರರು ರಾ. ಗೋವಿಂದ ರಘುನಾಥ ಉರ್ಫ್ ಅಣ್ಣಾ ಸಾಹೇಬದಾಭೋಳಕರ ಇವರು ಮಾಡಿದ್ದು ಅವುಗಳಲ್ಲಿ ಸಾಕಷ್ಟು ಭಾಗವನ್ನು ಅವರು ಓವಿಗಳಲ್ಲಿ ಕಟ್ಟಿದ್ದಾರೆ. ಈ ಓವಿಬದ್ಧ ಗ್ರಂಥದ ಆರಂಭ ಮಹಾರಾಜರು ದೇಹಧಾರಿಗಳಾಗಿದ್ದಾಗ ಅವರ ಪ್ರತ್ಯೇಕ್ಷ ಅನುಜ್ಞೆಯಿಂದಲೇ ಆಗಿದ್ದು ಇಂದಿಗೆ ಅದರ ಮೂವತ್ತೈದ ಅಧ್ಯಾಯಗಳು ಬರೆದು ಸಿದ್ಧವಾಗಿವೆ. ಗ್ರಂಥವು ಬಹಳ ಹೃದಯಂಗಮವಾಗಿದೆ. ಮತ್ತು ಅದು ಮಹಾರಾಜರ ಭಕ್ತರಿಗಷ್ಟೇ ಅಲ್ಲ. ಇತರ ವಾಚಕರಿಗೂ ಹಿತಕರವಾಗುವದೆಂಬುದರಲ್ಲಿ ಸಂದೇಹವಿಲ್ಲ. ಇದರಲ್ಲಿ ಓವಿಗಳು ಏಕನಾಥ ಮಹಾರಾಜರ ಓವಿಗಳ ರೀತಿಯಲ್ಲೇ ಇವೆ. ಗ್ರಂಥವನ್ನು ಓದುವಾಗ ನಾಥ ಮಹಾರಾಜರ ವಾಣಿಯು ಮೇಲಿಂದ ಮೇಲೆ ಸ್ಮರಣೆಗೆ ಬರುವದು. ಸಾರಾಂಶ ಈ ಗ್ರಂಥ ಶ್ರೀ ಸಾಯಿನಾಥ ಮಹಾರಾಜರ ಪ್ರಸಾದದ ಫಲವೇ ಆಗಿದೆ ಎಂಬುದು ಹೆಚ್ಚೆ ಹೆಚ್ಚಿಗೆ ಖಚಿತವಾಗುವದು. ಕೊನೆಗೆ ಈ ಗ್ರಂಥದಿಂದ ಮಹಾರಾಜರ ಭಕ್ತರಿಗೆ ಮತ್ತು ಇತರ ಭಾವಿಕ ವಾಚಕರಿಗೆ ಆನಂದ ಮತ್ತು ಬೋಧ ಪ್ರಾಪ್ತವಾಗುವದು. ಮತ್ತು ಅದರಿಂದ ಮಹಾರಾಜರಲ್ಲಿ ಅವರ ಶ್ರದ್ಧೆ ಹೆಚ್ಚು ಹೆಚ್ಚಾಗಿ ಬೆಳೆಯಲಿ ಹೀಗೆ ಮಹಾರಾಜರ ಪ್ರಾರ್ಥನೆ ಮಾಡಿ ಈ ಉಪೋದ್ಘಾತವನ್ನು ಮುಗಿಸುವೆ.

ಬಾಬಾರ ಒಂದು ಮಗು.
ಹರಿ ಸೀತಾರಾಮ ದೀಕ್ಷಿತ.

ಶ್ರೀ ದತ್ತಚಿತ್ಸಾಯಿ ಸದ್ಗುರುಭ್ಯೋನಮಃ॥

# ಶ್ರೀ ಸಾಯಿಸಚ್ಚರಿತ್ರೆ-ಪ್ರಸ್ತಾವನೆ

ನಮ್ಮ ಈ ಆರ್ಯಾವರ್ತದಲ್ಲಿ ಗುರುಕೃಪೆ ಇಲ್ಲದೆ ಮೋಕ್ಷವಿಲ್ಲ ಎಂಬ ದೃಢ ನಂಬಿಕೆ ದೃಢ ಭಾವನೆ ದೃಢ ಸಿದ್ಧಾಂತವಿದೆ;ಮತ್ತು ಈ ಸಿದ್ಧಾಂತ ಇಂದು ನಿನ್ನೆಯದಲ್ಲ. ಬಹಳ ಹಿಂದಿನಿಂದ ಇದೆ. ಅದು ವೇದಕಾಲದಿಂದ ಇದೆ ಮತ್ತು ಅದಕ್ಕೆ ವೇದಶಾಸ್ತ್ರದ ಆಧಾರವಿದೆ. ಸದ್ಗುರು ಯಾವದೇ ಜಾತಿ, ಧರ್ಮ, ವಯದವನಿರಲಿ, ಪ್ರತ್ಯಕ್ಷ ಅಥವಾ ಗ್ರಂಥರೂಪವಿರಲಿ ಸ್ತ್ರೀ ಇರಲಿ ಪುರುಷನಿರಲಿ, ಸಾಧು ಸಂತ, ದೇವತಾ, ಮಾತಾಪಿತಾ ಇರಲಿ, ಬಂಧು ಬಗಿನಿ ಇರಲಿ,ಗೆಳೆಯ ಮಿತ್ರನಿರಲಿ, ಪತಿ ಇರಲಿ, ಪತ್ನಿ ಇರಲಿ, ಜ್ಞಾತನಿರಲಿ, ಅಜ್ಞಾತನಿರಲಿ. ಅವರು ಹೇಗಿರಬೇಕು ಅವರ ಸೇವೆ ಹೇಗೆ ಮಾಡಬೇಕು. ಅವರ ಕೃಪೆ ಯಾವಾಗಾಗುವುದು. ಅವರು ಯಾವಾಗ ಉಪದೇಶ ಮಾಡುವರು ಜ್ಞಾನಪ್ರಾಪ್ತಿ ಯಾವಾಗ ಆಗುವುದು, ಜ್ಞಾನಪ್ರಾಪ್ತಿ ಯಾವಾಗ ಆಗುವುದು. ಜ್ಞಾನೋತ್ತರ ಮನೋವೃತ್ತಿ ಹೇಗಾಗುವುದು ಇದರ ಸರ್ವೋತ್ಕೃಷ್ಟ ವರ್ಣನೆಯನ್ನು ಭಗವಾನ್ ಶ್ರೀ ಸಮರ್ಥ ಸದ್ಗುರು ಜ್ಞಾನೇಶ್ವರ ಮಹಾರಾಜರು ತಮ್ಮ ಶ್ರೀ ಭಗವದ್ಗೀತಾ ಭಾಷ್ಯದಲ್ಲಿ ಮಾಡಿರುವರು.

ಅಜ್ಞಾನವೇ ಒಳ್ಳೆಯದು । ಮೊದಲದನು ಮನಕೆ ತರುವದು ।
ಅಂದರೆ ಸಂತರ ನೆನೆಯುವದು । ಸರ್ವಸ್ವದಿಂದ ॥೧೬೫॥
ಯಾವದು ಜ್ಞಾನದ ಆಗರ । ಅದಕೆ ಸೇವೆಯೆಂಬುದೇ ದ್ವಾರ ।
ಅದು ಸ್ವಾಧೀನವಾಗುವದು ಧೀರರ । ಅರಿತುಕೊಂಡು ॥೧೬೬॥
ಅದಕೆ ತನುಮನಭಾವಂದಿದೂ । ಚರಣಗಳ ಹಿಡಿಯುವದು ।
ಅಹಂಕಾರವನ್ನೂ ತೊರೆಯುವನು । ದಾಸನಾಗುವನು ॥೧೬೭॥
ಬಳಿಕ ತಮ್ಮ ಇಷ್ಟವನು । ಕೇಳಿದರೆ ಹೇಳಿವರು ಅದನೂ ।
ಅದರಿಂದ ಬೋಧಿಸಿ ಅಂತಂಕರಣವನ್ನು ಸಂಕಲ್ಪಕ್ಕೆ ಬಾರದುವನು ॥೧೬೮॥

[ಜ್ಞಾನೇಶ್ವರಿ ಅಧ್ಯಾಯ 8 ಶ್ಲೋಕ 34]

ಗುರುಸೇವೆಯ ಮಾರ್ಗ, ಸಾಧನಗಳು, ಮತ್ತು ಅದರ ಅಂಗಗಳು ಅನೇಕ ಇರುವವು. ಅದ್ವಿತೀಯ ರಾಜಕಾರಣಿ ಪುರುಷ, ರಾಜ್ಯ ಸಂಸ್ಥಾಪಕ ವೀರ ಪುರುಷ, ಅಲೌಕಿಕ ಶಾಸ್ತ್ರಕಾರ, ಇತಿಹಾಸಕಾರ, ನಾಟಕಕಾರ, ವಿಶಾಲ ಬುದ್ಧಿಯ ಶಿಕ್ಷಕ, ಲೇಖಕರು ಮುಂತಾದ ಶ್ರೇಷ್ಠ ಪುರುಷರು ತಮ್ಮ ವ್ಯವಹಾರ ಗುರು ಎಂದು ತಿಳಿದು ಅವರ ಚರಿತ್ರೆಗಳನ್ನು ಬರೆಯುವದು ಗುರುಸೇವೆ ಮತ್ತು ಜನ ಸೇವೆಯೇ ಆಗಿರುವದು. ಆದರೆ ಈ ಸೇವೆ ಐಹಿತ ಸ್ವರೂಪ ದ್ದಿರುವದು. ಅದರಲ್ಲಿ ಲೋಕ ಶಿಕ್ಷಣ ಪರೋಪಕಾರ ಸಾಕಷ್ಟು ಇರುವದು. ಆದರೂ ಅದು ಸ್ವಾರ್ಥ ಮೂಲವಾಗಿರುವದು. ಅದರಿಂದ ಅದು ಪರಮಾರ್ಥ ಫಲ ನೀಡುವಂಥದು ಆಗಲಾರದು.

೨) ಬಹಳಷ್ಟು ಸಾಧು ಸಂತರ ಚರಿತ್ರೆಗಳನ್ನು ಬರೆಯುವದು ಇದೂ ಒಂದು ಗುರುಸೇವೆಯ ಪ್ರಕಾರವಾಗಿರುವದು. ಮತ್ತು ಅದು ಪರಮಾರ್ಥಫಲದಾಯಕವೂ ಆಗಿರುವದು. ಆದರೆ ಇದು ಮತ್ತು ಮೇಲೆ ಹೇಳಿರುವ ಪ್ರಕಾರಗಳು ಏಕಾಂಗಿಯಾಗಿವೆ. ಇವುಗಳು ಕೇವಲ ಲೇಖನದಿಂದ ಪಾರಮಾರ್ಥಿಕ ಅಂತಿಮ ಧ್ಯೇಯವನ್ನು ಪಡೆಯುವದು ಕಷ್ಟ. ಬಹುಶಃ ಅದು ಸಾಧ್ಯವಿಲ್ಲವೆಂದರೂ ನಡೆದೀತು.

೩) ನನ್ನ ಅಲ್ಪ ತಿಳುವಳಿಕೆಯಂತೆ ಲೇಖನ ಸೇವೆಯಲ್ಲಿ ಎಲ್ಲದರಲ್ಲಿ ಉತ್ತಮ ಮತ್ತು ಖಚಿತ ಮೋಕ್ಷಫಲ ಕೊಡುವ ಮತ್ತು ಶ್ರೇಷ್ಠ ಸೇವೆಯೆಂದರೆ ಗುರುವಿನ ಆಜ್ಞೆಯಿಂದ ಇಲ್ಲವೇ ತಮ್ಮ ಅಂತಃ ಸ್ಫೂರ್ತಿಯಿಂದ ತಮ್ಮ ಸದ್ ಗುರುವಿನ ಚರಿತ್ರೆ ಬರೆದು, ನಿತ್ಯ ನೇಮದಿಂದ ತಾವು ಸ್ವತಃ ಅಧ್ಯಯನ ಮತ್ತು ದೇಶಕಾಲ ಮತ್ತು ಆರೋಗ್ಯಾನುಕೂಲತೆ ಗನುಸಾರವಾಗಿ, ದೃಢ ನಿಶ್ಚಯದಿಂದ, ಶುದ್ಧ ಅಂತಃಕರಣದಿಂದ, ಉತ್ಕೃಷ್ಟ ಶ್ರದ್ಧೆಯಿಂದ ನಿಸ್ಸೀಮ ಪ್ರೇಮದಿಂದ ಮತ್ತು ಅವ್ಯಭಿಚಾರಿ ಭಕ್ತಿ ಭಾವದಿಂದ ನೂರಾರು ಪಾರಾಯಣಗಳು ಮತ್ತು ಸಪ್ತಾಹಗಳನ್ನು ಮಾಡುವದು ಮತ್ತು ಇತರ ಭಕ್ತರಿಗೂ ಹಾಗೆ ಮಾಡಲು ಹಚ್ಚುವದು ಇದುವೇ ಸೇವೆ. ಈ ಸೇವೆ ಶರೀರ ವಾಙ್ಮನೋಯುಕ್ತವಾಗಿದ್ದು ಅದು ಕುಟುಂಬ ಪೋಷಣೆ ಮಾರ್ಗಕ್ಕೆ ಅಥವಾ ಐಶ್ವರ್ಯಕ್ಕೆ ಅಡ್ಡಿ ಆಗುವುದಿಲ್ಲ.

ಚರಿತ್ರ ಲೇಖನದಲ್ಲಿ ಎರಡು ಭೇದಗಳಿರುವುವು. ಸಂಕ್ಷಿಪ್ತ ಮತ್ತು ವಿಸ್ತೃತ, ಗದ್ಯ ಅಥವಾ ಪದ್ಯ, ಅಧ್ಯಯನ, ಪಠಣ, ಪಾರಾಯಣ ಮಾಡುವದಕ್ಕೆ ಅಥವಾ ಸಪ್ತಾಹಕ್ಕೆ ವಿಸ್ತೃತ ಮತ್ತು ಪದ್ಯ ಚರಿತ್ರೆಯೇ ಒಳ್ಳೆಯದು. ಗದ್ಯ ಚರಿತ್ರೆಗಳ ಪಾರಾಯಣ ಅಥವಾ ಸಪ್ತಾಹ ಮಾಡುವದು ರೂಢಿಯಲ್ಲಿಲ್ಲ. ಗದ್ಯ ಪಾಠ ಮಾಡಲು ಕಷ್ಟ. ಪದ್ಯ ಸುಲಭವಾಗಿ ಬಾಯಿಪಾಠವಾಗುವದು, ಸ್ಮರಣದಲ್ಲೂ ಉಳಿಯುವದು ಮತ್ತು ಸರಿಯಾಗಿ ನೆನಪಿನಲ್ಲುಳಿ ಯುವದು. ನಮ್ಮ ಹಳೆಯ ಸಂಸ್ಕೃತ ವಾಙ್ಮಯವು ಬಹುತರ ಪದ್ಯ ರೂಪದಲ್ಲೇ ಇರುವದು. ಅದರ ಕಾರಣವಾದರೂ ಇದೇ ಆಗಿದೆ. ಪದ್ಯ ಮತ್ತು ವಿಸ್ತೃತ ಗುರುಚರಿತ್ರೆಯ ಅಧ್ಯಯನ, ಪಠಣ, ಪಾರಾಯಣ ಮತ್ತು ಸಪ್ತಾಹ ಇವುಗಳಿಂದ ಉತ್ತಮ ಗುರುಸೇವೆ ಯಾಗುವದು ಎಂದ ಎಲ್ಲೆಡೆ ಅನುಭವವಿದ್ದು ನಮ್ಮಲ್ಲಿ ಪದ್ಧತಿಯೂ ಹಾಗೇ ಇದೆ.

೪) ಪಾರಾಯಣ ಮತ್ತು ಸಪ್ತಾಹಗಳನ್ನು ಮಾಡುವ ಪ್ರಥೆ ಬಹಳ ಹಳೆಯ ಕಾಲದಿಂದ ನಡೆದುಬಂದಿದೆ. ಅದು ವೇದಕಾಲದಿಂದಲೂ ಇದೆ. ವೇದಗಳ, ಭಾಗವತದ, ರಾಮಾಯಣ, ಯೋಗವಾಶಿಷ್ಠ ಮುಂತಾದ ಗೀರ್ವಾಣ ಗ್ರಂಥರಾಜಗಳ ಪಾರಾಯಣಗಳು, ಸಪ್ತಾಹಗಳು ನಿತ್ಯವೂ ಎಲ್ಲಿಯಾದರೂ ನಡೆದೇ ಇರುತ್ತದೆ ಎಂಬುದನ್ನು ನಾವು ಓದುತ್ತೇವೆ ಮತ್ತು ಕೇಳಿರುತ್ತೇವೆ.

೬) ಅದರಂತೆಯೇ ಶ್ರೀಜ್ಞಾನೇಶ್ವರೀ, ಶ್ರೀನಾಥಭಾಗವತ, ದಾಸಬೋಧ ಮುಂತಾದ ಮರಾಠಿಯಲ್ಲಿ ಬರೆದ ವಿಶ್ವವಂದ್ಯ ಗ್ರಂಥರಾಜಗಳ ಪಾರಾಯಣ

ಸಪ್ತಾಹಗಳೂ ನಿತ್ಯ ನಡೆಯುತ್ತಿರುತ್ತವೆ. ಈ ಪದ್ಧತಿಯೂ ಪುರಾತನವಾದದ್ದೇ ಇದೆ. ಈ ಚರಿತ್ರೆಗಳು ಗ್ರಂಥ ಗಳಷ್ಟೇ ಅಲ್ಲ, ಕೇವಲ ಐಹಿಕ ಮತ್ತು ಪಾರಮಾರ್ಥಿಕ ಜ್ಞಾನ ಗ್ರಂಥಗಳಾಗಿವೆ. ಆದರೂ ಯಾರು ಈ ಗ್ರಂಥ ನಿರ್ಮಾಪಕರನ್ನು ಅಥವಾ ಈ ಗ್ರಂಥವನ್ನೇ ತಮ್ಮ ಗುರು ಎಂದು ಭಾವಿಸುವರೋ ಅವರಿಗೆ ಈ ಗ್ರಂಥದ ಅಧ್ಯಯನ ಪಠಣ, ಪಾರಾಯಣ ಮತ್ತು ಸಪ್ತಾಹ ಮಾಡುವದರಿಂದ ನಿಃಸಂಶಯವಾಗಿ ಸರ್ವೋತ್ಕೃಷ್ಟ ಅನುಪಮೇಯ ಮತ್ತು ಮೋಕ್ಷ ಫಲದಾಯಕವಾದ ಗುರುಸೇವೆಯೇ ಲಭ್ಯವಾಗುವದು.

೭) ಗುರುಚರಿತ್ರೆ ಅಂದರೆ ಗುರುವಿನದೇ ಅವತಾರ, ಬಾಲ್ಯ, ತಾರುಣ್ಯ, ವೃದ್ಧತ್ವ, ಅವರು ಮಾಡಿದ ಅದ್ಭುತ ಲೀಲೆಗಳು, ತೋರಿದ ಅಸಮ ಚಮತ್ಕಾರಗಳು, ಮಾಡಿದ ಅವತಾರ ಕಾರ್ಯಗಳು, ಮುಂತಾದ ಸಂಗತಿಗಳ ಬಗ್ಗೆ ಬರೆದ ವಿಶ್ವಸನೀಯ ಮತ್ತು ಸತ್ಯ ಗ್ರಂಥ.

೮) ಮೇಲೆ ಕಾಣಿಸಿದ ಕೇವಲ ಜ್ಞಾನಗ್ರಂಥಗಳ ಉಪಯೋಗವನ್ನು ಮಾತ್ರ ಎರಡೂ ಪ್ರಕಾರದಿಂದ ಮಾಡಲಾಗುವದು. ಕಾಮ್ಯ ದೃಷ್ಟಿಯಿಂದ ಮತ್ತು ನಿಷ್ಕಾಮ ಬುದ್ಧಿಯಿಂದ. ಕಾಮ್ಯ ಎಂದರೆ ಐಹಿಕ ಐಶ್ವರ್ಯೋಪಭೋಗದ ಸಲುವಾಗಿ ಇಲ್ಲವೇ ಚಿಂತೆ, ಆಪತ್ತು, ಸಂಕಟ, ರೋಗಯಾತನೆ, ಪೀಡೆಯ ನಿವಾರಣೆಗೋಸುಗ. ಮತ್ತು ನಿಷ್ಕಾಮ ಎಂದರೆ ಸಂಸಾರನಿವೃತ್ತಿ ಅಥವಾ ಜನ್ಮ ಮರಣಗಳಿಂದ ಮುಕ್ತಿ ಪಡೆಯುವದಕ್ಕೆ. ನಿಷ್ಕಾಮ ಗುರು ಸೇವೆಯು ಎಂದಿಗಾದರೂ ಶ್ರೇಷ್ಠವೆನಿಸುವದು. ಬೇಕಾದರೆ ಅದು ಗುರುಚರಿತ್ರ ಲೇಖನ ಸೇವೆ ಇರಲಿ ಅಥವಾ ಅನ್ಯ ಪ್ರಕಾರದ್ದಿರಲಿ.

೯) ಗುರುಚರಿತ್ರ ಲೇಖನ ಸೇವೆಯನ್ನು ನಾರದಪುರಾಣದಲ್ಲಿ ಹೇಳಲಾಗಿದೆ. ಇದರ ಮೇಲಿಂದ ಅದು ಬಹಳ ಪ್ರಾಚೀನವಾದದ್ದೆಂಬುದರಲ್ಲಿ ಸಂಶಯವಿಲ್ಲ.

೧೦) ನಮ್ಮ ಈ ಭಾರತ ಭೂಮಿಯಲ್ಲಿ ಅವತೀರ್ಣವಾದ ಸಾಧುಸಂತರ ಸಂಕ್ಷಿಪ್ತ ಚರಿತ್ರೆಗಳನ್ನು ನಮ್ಮಲ್ಲಿಯ ಪ್ರಸಿದ್ಧ ಶ್ರೀಮನ್ಮಹಿಪತಿ ಕವಿಮಹಾರಾಜರು ಮರಾಠಿಯಲ್ಲಿ ಓವೀ ಪ್ರಬಂಧದಲ್ಲಿ ತಮ್ಮ ಪ್ರಸಿದ್ಧ, ಜಗನ್ಮಾನ್ಯ ಶ್ರೀ ಭಕ್ತಲೀಲಾಮೃತ ಮತ್ತು ಶ್ರೀ ಸಂತಲೀಲಾಮೃತ ಈ ಎರಡು ಗ್ರಂಥಗಳಲ್ಲಿ ಬರೆದಿಟ್ಟಿರುವರು.

೧೧) ಅದರಂತೆ, ಆ ಕಾಲದ ನಂತರದ ಬಹುತೇಕ ಎಲ್ಲ ಮಹಾರಾಷ್ಟ್ರೀಯ ಅರ್ವಾಚೀನ ಸಾಧುಸಂತರ ಸಂಕ್ಷಿಪ್ತ ಚರಿತ್ರೆಗಳನ್ನು ನಮ್ಮ ಕಡೆಯ ಪ್ರಸಿದ್ಧ ಶ್ರೀ ದಾಸಗಣೂ ಮಹಾರಾಜರು ತಮ್ಮ ವಿಖ್ಯಾತ ಶ್ರೀ ಭಕ್ತಲೀಲಾಮೃತ ಸಂತಲೀಲಾಮೃತ, ಶ್ರೀ ಭಕ್ತಿಸಾರಾಮೃತ ಈ ಮೂರು ಮರಾಠೀ ಗ್ರಂಥಗಳಲ್ಲಿ ಓವೀಪ್ರಬಂಧದಲ್ಲಿ ಬರೆದು ಇಟ್ಟಿರುವರು.

೧೨) ಈ ಮೇಲೆ ನಿರ್ದೇಶಿಸಲಾದ ಕವಿವರ್ಯದ್ವಯರು ಬರೆದಿಟ್ಟಿರುವ ಪ್ರತಿಯೊಂದು ಗ್ರಂಥದ ಪಾರಾಯಣ ಅಥವಾ ಸಪ್ತಾಹ ಮಾಡಬಹುದು. ಆದರೆ ಅದರಲ್ಲಿಯ ಯಾವದೇ ಒಬ್ಬ ಸಾಧು ಸಂತರ ಚರಿತ್ರೆಯ ಸಪ್ತಾಹ ಅಥವಾ ಪಾರಾಯಣ ಸ್ವತಂತ್ರವಾಗಿ ಮಾಡುವದೆಂದರೆ ಆ ಚರಿತ್ರೆಗಳು ಸರ್ವಾಂಗ ಪರಿಪೂರ್ಣವಾಗಿರದೇ

ಇರುವದರಿಂದ ಮತ್ತು ಆಯಾ ಚರಿತ್ರೆಗೆ ಕೇವಲ ಎರಡು, ಮೂರು ಪುಟಗಳನ್ನು ಮಾತ್ರ ಬರೆದಿರುವದರಿಂದ ಆ ಚರಿತ್ರೆಯು ಪಾರಾಯಣ ಅಥವಾ ಸಪ್ತಾಹ ಮಾಡಲು ಉಪಯುಕ್ತವಾಗಲಾರವು.

೧೩) ವಿಸ್ತೃತ ಪದ್ಯಮಯ ಗುರುಚರಿತ್ರದ ಅಧ್ಯಯನದಿಂದ, ಪಠಣ ಪಾರಾಯಣಗಳಿಂದ ಅಥವಾ ಸಪ್ತಾಹದಿಂದ ಚರಿತ್ರ ಲೇಖಕರಿಗಂತೂ ಗುರುಸೇವೆ ಒದಗುವದು, ಅದರ ಜೊತೆಗೆ ಇತರ ಭಕ್ತ ಜನರೂ ಚರಿತ್ರದ ಅಧ್ಯಯನ ಮಾಡಿದರೆ, ಪಠಣ, ಪಾರಾಯಣ, ಸಪ್ತಾಹ ಮಾಡಿದರೆ ಲೇಖಕರಿಗೂ, ಜನಜನಾರ್ದನನ ಸೇವೆ ಲಭಿಸಿ ಲೋಕ ಸಂಗ್ರಹದ ಸೇವೆಯ ಶ್ರೇಯವೂ ಲಭಿಸಿ ಇತರ ಭಕ್ತ ಜನರ ಜನ್ಮವೂ ಸಾರ್ಥಕವಾಗುವದು.

೧೪) ಸದ್ಗುರುಗಳು ಗ್ರಂಥರೂಪದಿಂದ ತಮ್ಮ ಭಕ್ತರಿಂದ ಎರಡು ಪ್ರಕಾರದ ಸೇವೆ ತೆಗೆದುಕೊಳ್ಳುವರು. ಒಂದು ಶ್ರೀಜ್ಞಾನೇಶ್ವರಿ, ಶ್ರೀನಾಥಭಾಗವತ ಶ್ರೀ ದಾಸಬೋಧ ಇವುಗಳಂಥ ಮಹಾನಗ್ರಂಥ ತಾವೇ ಸ್ವತಃ ನಿರ್ಮಾಣ ಮಾಡಿ ಅಥವಾ ತಮ್ಮ ಚರಿತ್ರೆಗಳನ್ನು ತಮ್ಮ ಸದ್ಭಕ್ತರಿಂದ ಬರೆಸಿಕೊಂಡು ಅವುಗಳ ಲೇಖಕನಿಂದ ಮತ್ತು ಭಕ್ತ ವೃಂದದಿಂದ ಅಧ್ಯಯನ, ಪಠಣ, ಪಾರಾಯಣರೂಪದಿಂದ ಮತ್ತು ಸಪ್ತಾಹರೂಪದಿಂದ ಸೇವೆ ತೆಗೆದುಕೊಳ್ಳುವದು.

೧೫) ಅನೇಕ ಸದ್ಭಕ್ತರು ತಮ್ಮ ತಮ್ಮ ಇಚ್ಛಾನುಸಾರವಾಗಿ ಮತ್ತು ಅವರವರ ಆಸಕ್ತಿಯಂತೆ ಇಂದಿನವರೆಗೆ ಬೇರೆ ಬೇರೆ ಪ್ರಸಂಗಗಳಲ್ಲಿ ಮತ್ತು ಬೇರೆ ಬೇರೆ ಭಾಷೆಗಳಲ್ಲಿ ತಮ್ಮ ತಮ್ಮ ಗುರುಗಳ ಚರಿತ್ರೆಗಳನ್ನು ಗದ್ಯ ಅಥವಾ ಪದ್ಯರೂಪಗಳಲ್ಲಿ ಬರೆದು ಜನರನ್ನು ತಮ್ಮ ಋಣಿಗಳನ್ನಾಗಿ ಮಾಡಿದ್ದಾರೆ. ಆದರೂ ಪಾರಾಯಣ ಮತ್ತು ಸಪ್ತಾಹ ಮಾಡ ಲೋಸುಗ ವಿಸ್ತೃತ, ಪದ್ಯ ವ್ಯಾಪಕ ಸರ್ವಾಂಗೀಣ, ಪರಿಪೂರ್ಣ, ಪ್ರಸಿದ್ಧ ಹೀಗೆ ಇರುವಂಥದು ನಮ್ಮ ಮಹಾರಾಷ್ಟ್ರದಲ್ಲಂತೂ ಮೊದಲನೆಯದು, ಪುರಾತನವಾದದ್ದು, ರಸಭರಿತ, ಪ್ರಾಸಾಕ, ಶ್ರೀಸರಸ್ವತೀ ಗಂಗಾಧರ ಇವರು ಕ್ಷೇತ್ರ ಔದುಂಬರ, ಶ್ರೀವಾಡಿ, ಶ್ರೀಗಾಣಗಾಪುರನಿವಾಸಿ, ಶ್ರೀ ಸಮರ್ಥ ಸದ್ಗುರುನೃಸಿಂಹಸರಸ್ವತಿ ಮಹಾರಾಜರ ಚರಿತ್ರೆ, ಯಾವದು ಹಿರಿಯ ಮತ್ತು ದೊಡ್ಡ ಗುರುಚರಿತ್ರೆ ಎಂದು ಪ್ರಸಿದ್ಧವಿದೆ. ಯಾವುದು ಆ ಬಾಲವೃದ್ಧರ ಉತ್ತಮ ಪರಿಚಯದ್ದಿದೆ, ಯಾವುದರ ಅಧ್ಯಯನ ಪಠಣ ಸಾವಿರಾರು ಸ್ಥಳಗಳಲ್ಲಿ ನಿಯಮಿತವಾಗಿ ದಿನಾಲು ನಡೆಯುವದೋ ಮತ್ತು ಪ್ರಸಂಗಾನುಸಾರ ಯಾವುದರ ಪಾರಾಯಣ ಮತ್ತು ಪಠಣಗಳು ನಡೆಯುವವು. ಎರಡನೆಯದು, ಇತ್ತೀಚೆಗಿನದು ಮಧುರ, ರಸಪೂರ್ಣ, ಉದ್ಬೋಧಕ, ಪ್ರಸಾದಜನ್ಯ ಕೈ. ಭಕ್ತವರ್ಯ ಶ್ರೀ ರಘುನಾಥ ಉರ್ಫ್ ಅಣ್ಣಾಸಾಹೇಬ ದಾಭೋಳಕರ ಇವರು ಬರೆದ ಶ್ರೀಕ್ಷೇತ್ರ ಶಿರಡಿ (ಶೈಲಧೀ) ತಾಲುಕಾ ಕೋಪರಗಾವ(ಸದ್ಯ ತಾ|| ರಾಹತಾ) ಜಿಲ್ಲಾ ಅಹಮದನಗರ ಇಲ್ಲಿಯ ನಿವಾಸಿ, ಕ್ಷೇತ್ರ ಸಂನ್ಯಾಸಿ, ಆಧುನಿಕ ಸಂತ ಚೂಡಾಮಣಿ, ಶ್ರೀ ಸಚ್ಚಿದಾನಂದ ಸಮರ್ಥ ಸದ್ಗುರು ಸಾಯಿ ಬಾಬಾ ಮಹಾರಾಜ

ಇವರ ಚರಿತ್ರೆ 'ಶ್ರೀ ಸಾಯಿ ಸಚ್ಚರಿತೆ'ಯಾವದು ಈ ಹೆಸರಿನಿಂದ 'ಶ್ರೀಸಾಯಿ ಲೀಲಾ'ಎಂಬ ಪತ್ರಿಕೆಯಲ್ಲಿ ಆರು ವರ್ಷ ಪ್ರತಿಯೊಂದು ಅಂಶದಲ್ಲೂ ಒಂದೊಂದು ಅಧ್ಯಾಯ ರೂಪದಿಂದ ಪ್ರಸಿದ್ಧವಾಗಿ, ಇದೀಗ ಈ ವರ್ಷದ ಅಂದರೆ ಏಳನೇ ವರ್ಷದ 5-6-7-8 ಸಾಲಾದ ಅಂಕಗಳಲ್ಲಿ ಅವತರಣಿಕಾ ಅಧ್ಯಾಯ ಸಹಿತವಾಗಿ ಪೂರ್ಣವಾಯಿತು. ಮತ್ತು ಅದರ ಬಗ್ಗೆ ಈ ಹೊಸ ಪ್ರಸ್ತಾವನೆ ಬರೆಯಲಾಗಿದೆ. ಹೀಗೆ ಈ ಎರಡು ಗುರುಚರಿತ್ರೆಗಳ ಹೊರತಾಗಿ ಮೂರನೆಯದನ್ನು ಯಾರೂ ಈ ರೀತಿ ವಿಸ್ತಾರವಾಗಿ ಬರೆದ ಗುರುಚರಿತ್ರೆ ಕಂಡು ಬರುವುದಿಲ್ಲ.

೧೭) ಶ್ರೀ ಸಮರ್ಥ ಸದ್ಗುರ ಟೇಂಭೇ ಸ್ವಾಮಿ ಉರ್ಫ್ ವಾಸುದೇವಾನಂದ ಸರಸ್ವತಿ ಮಹಾರಾಜರು ಒಂದು ವಿಸ್ತೃತ, ವಿದ್ವತ್ಪಾಪೂರ್ಣ, ವಿವಿಧ ವೃತ್ತಿ, ಶಬ್ದಾಲಂಕಾರ, ಅರ್ಥಾಲಂಕಾರ, ಶಬ್ದಾರ್ಥಾಲಂಕಾರ ಕ್ಕುಕುಟ ಸುಭಾಷಿತಯುಕ್ತವಾಗಿ ಬರೆದು ಛಾಪಿಸಿದ ಗುರುಚರಿತ್ರವು ಬಹಳ ವರ್ಷಗಳ ಹಿಂದೆ ನನ್ನ ದೃಷ್ಟಿಗೆ ಬಿದ್ದದ್ದು ನೆನಪಿದೆ.

೧೭) ಅದರಂತೆಯೇ ಶ್ರೀಸಮರ್ಥ ಸದ್ಗುರು ಶ್ರೀಕ್ಷೇತ್ರ ಬಾಳೇಕುಂದ್ರಿ ಇಲ್ಲಿಯ ನಿವಾಸಿ ಶ್ರೀ ದತ್ತಮಹಾರಾಜರೂ ಒಂದು ಗುರುಚರಿತ್ರವನ್ನು ಬರೆದಿದ್ದಾರೆ ಎಂದು ಕೇಳಿದ್ದೇನೆ. ಆದರೆ ಈ ಗುರುಚರಿತ್ರವು ಇನ್ನೂ ಮುದ್ರಿತವಾಗಿ ಹೊರಬಂದಂತಿಲ್ಲ.

೧೮) ಶ್ರೀಸಮರ್ಥಸದ್ಗುರು ವಾಸುದೇವಾನಂದ ಸರಸ್ವತೀ ಮಹಾರಾಜರು ಬರೆದ ಗುರುಚರಿತ್ರ ಶ್ರೀ ಸರಸ್ವತೀ ಗಂಗಾಧರರು ಬರೆದ ಗುರುಚರಿತ್ರದಷ್ಟು ಇದುವರೆಗೂ ಪ್ರಸಿದ್ಧಿಗೆ ಬಂದಂತೆ ಕಾಣುವುದಿಲ್ಲ. ಒಂದು ವೇಳೆ ಮಹಾರಾಜರ ಭಕ್ತ ಮಂಡಳಿಯಿಂದ (ಜನರಿಂದ) ಅದರ ಅಧ್ಯಯನ ಪಠಣ ಪಾರಾಯಣ ಮತ್ತು ಸಪ್ತಾಹವೂ ಶ್ರೀ ಪುಣ್ಯಮಹಾ ಸರಿತೆಯಾದ ನರ್ಮದಾ ತೀರದಲ್ಲಿರುವ ಗಾಯಕವಾಡಿಯಲ್ಲಿ ಚೌಂದೋರ-ಕರ್ನಾಳಿಯಿಂದ ದೂರದಲ್ಲಿರುವ ಶ್ರೀ ಗರುಡೇಶ್ವರ ಕ್ಷೇತ್ರದಲ್ಲಿ ಮಹಾರಾಜರ ಸಮಾಧಿ ಮಂದಿರದಲ್ಲಿ ನಡೆಯುತ್ತಿರಲೂ ಬಹುದು; ಆದರೆ ಅದರ ವಿಶ್ವಸನೀಯ ಸುದ್ದಿ ತಿಳಿದಿಲ್ಲ. ಈ ಚರಿತ್ರೆಯನ್ನು ಮಹಾರಾಜರು ಸ್ವತಃ ಬರೆದದ್ದರಿಂದ ಅದರ ಗಣನೆ ಶ್ರೀ ಸರಸ್ವತೀ ಗಂಗಾಧರ ಮತ್ತು ಕೈ ಶ್ರೀ ಅಣ್ಣಾ ಸಾಹೇಬ ದಾಬೋಳಕರ ಇವರು ಬರೆದ ಗುರುಚರಿತ್ರ ಲೇಖನದಲ್ಲಿ ಮಾಡಲು ಬರುವದಿಲ್ಲ.

೧೯) ಸ್ವತಃ ಶ್ರೀಸಮರ್ಥ ಸದ್ಗುರು ಸಾಯಿ ಬಾಬಾ ಮಹಾರಾಜರ ಕೃಪೆಗೆ ಪಾತ್ರರಾದ ಮತ್ತು ಅಧುನಿಕ ಕವಿ ಶ್ರೇಷ್ಠರಲ್ಲಿ ಯಾರ ಗಣನೆ ಪ್ರಾಮುಖ್ಯತೆಯಿಂದ ಆಗುವದೋ ಮತ್ತು ಯಾರು ಇಂದಿನವರೆಗೆ ಮನದ ಶ್ಲೋಕಗಳು(ಮನಾಚೆಶ್ಲೋಕ), ಜಲದದೂತ ಕಾವ್ಯ, ನಾಟಕ ಖಂಡ, ಲಾವಣೀಪದಗಳು, ವೀರಗೀತೆ(ಪೋವಾಡೆ), ಗ್ರಾಮ್ಯ ಗೀತೆಗಳು, ಅರ್ವಾಚೀನ ಭಕ್ತಲೀಲಾಮೃತ, ಸಂತಲೀಲಾಮೃತ, ಭಕ್ತಸಾರಾಮೃತ ಈಶಾವಾಸ್ಯ ಭಾವಾರ್ಥ ಮಂಜರೀ, ಅಮೃತಾನುಭವ ಟೀಕಾ, ಗೋದಾಮಹಾತ್ಮ್ಯ ಸ್ತೋತ್ರಗಳು, ಅಷ್ಟಕಗಳು, ಸುಭಾಷಿತಗಳು, ಕೀರ್ತನೋಪಯೋಗೀ ಆಖ್ಯಾನಗಳು,

ಚಕ್ರೀ ಭಜನೆ, ಸ್ಫುಟ ಕವಿತೆಗಳು, ಮುಂತಾದ ಚಿಕ್ಕ-ದೊಡ್ಡ ಬಹಳಷ್ಟು ಗ್ರಂತಗಳನ್ನು ಬರೆದಿರುವರು. ಮತ್ತು ಎಲ್ಲರಿಗೂ ಗೊತ್ತಿರುವಂಥ ಶ್ರೀ ದಾಸಗಣೂ ಮಹಾರಾಜರು ಶ್ರೀ ಬಾಬಾರ ಬಗ್ಗೆ ಎರಡು ಚರಿತ್ರೆಗಳನ್ನು, ಒಂದು ಅವರು ತಮ್ಮ ಭಕ್ತಲೀಲಾಮೃತದಲ್ಲಿ ಮತ್ತು ಇನ್ನೊಂದು ಭಕ್ತಿ ಸಾರಾಮೃತದಲ್ಲಿ ಅನುಕ್ರಮವಾಗಿ ೩೧, ೩೨, ೩೩ ಮತ್ತು ೫೨ ಮತ್ತು ೫೩ನೆಯ ಅಧ್ಯಾಯ ದಲ್ಲಿ ಬರೆದಿರುವರು. ಮೊದಲನೆಯದ ಪೃಷ್ಠ ಸಂಖ್ಯೆ ೧೨ ಇದ್ದು ಓವೀ ಸಂಖ್ಯೆ ೫೮೯ ಇದೆ. ಮತ್ತು ಎರಡನೆಯದರ ಪೃಷ್ಠ ಸಂಖ್ಯೆ ೧೨ ಇದ್ದು ಓವೀ ಸಂಖ್ಯೆ ೪೯೭ ಇದೆ.

೨೦) ಈ ಎರಡೂ ಚರಿತ್ರೆಗಳು ಉತ್ಕೃಷ್ಟ, ಹೃದಯಂಗಮ, ರಸಭರಿತ, ಪ್ರಸಾದಜನ್ಯ ಇವೆ ಎಂಬದರಲ್ಲಿ ಸಂಶಯವಿಲ್ಲ. ಅವು ಅಧ್ಯಯನ, ಪಠಣ, ಪಾರಾಯಣ ಮತ್ತು ಸಪ್ತಾಹ ಮಾಡಲೂ ಯೋಗ್ಯ ಇವೆ. ಇಷ್ಟೇ ಅವು ತೀರ ಚಿಕ್ಕವಿವೆ. ಅವುಗಳಲ್ಲಿಯ ಕಥೆಗಳು ಮತ್ತು ಶ್ರೀ ಸಾಯಿ ಸಚ್ಚರಿತೆಯಲ್ಲಿಯ ಕಥೆಗಳು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಬಹುತರ ಒಂದೇ ಆಗಿವೆ. ತಮ್ಮ ದೇಶದ ಹೀನ ಸ್ಥಿತಿ ಮತ್ತು ಅದರ ಕಾರಣಗಳು, ಇವುಗಳ ಹೃದಯಸ್ಪರ್ಶೀ ಸುಂದರ ಚಿತ್ರವನ್ನು ಶ್ರೀ ದಾಸಗಣೂ ಮಹಾರಾಜರು ಇತರ ಗ್ರಂಥಗಳಂತೆ ಈ ಲಘು ಚರಿತ್ರೆಯಲ್ಲಿಯೂ ಉತ್ತಮವಾಗಿ ಚಿತ್ರಿಸಿರುವರು. ಶ್ರೀ ಅಣ್ಣಾಸಾಹೇಬರು ಈ ಉಸಾಬರಿಗೆ ಹೋಗಿಲ್ಲ.

೨೧) ಶ್ರೀ ಕ್ಷೇತ್ರ ವಾಡಿಯಲ್ಲಿಯ ಶ್ರೀದತ್ತಸ್ತವರಾಜ ಈ ಚಿಕ್ಕ ಪುಸ್ತಕದೊಳಗಿನ ಮಾಹಿತಿಯ ಮೇಲಿಂದ, ಶ್ರೀ ಸರಸ್ವತೀ ಗಂಗಾಧರ ಇವರು ಬರೆದ ಬೃಹತ್ ಗುರು ಚರಿತ್ರಕ್ಕಿಂತ ಒಂದು ಬೇರೆ ಸ್ವತಂತ್ರವಾದ, ಕೇವಲ ೭೦೭ (707) ಶ್ಲೋಕಗಳ 'ಲಘು ಚರಿತ್ರ' ಎಂಬ ಹೆಸರಿನ ಗ್ರಂಥ ವಾಡೀಯಲ್ಲಿ ಇದೆ. ಅದು ದೊಡ್ಡ ಗುರುಚರಿತ್ರೆಗಿಂತ ಬಹಳ ಪ್ರಾಚೀನವಿದೆ ಎಂದು ಅನಿಸುವದು. ಆದರೆ ಇದನ್ನು ಯಾರು ಯಾವಾಗ ಬರೆದರು ಎಂಬುದು ತಿಳಿಯಲು ಮಾರ್ಗವಿಲ್ಲ. ಇದರ ಚರಿತ್ರ ನಾಯಕರು ಅದೇ ದೊಡ್ಡ ಗುರುಚರಿತ್ರದಲ್ಲಿಯ ಚರಿತ್ರ ನಾಯಕರೇ ಆಗಿದ್ದಾರೆ. ಈ ಚರಿತ್ರ ನಾಯಕ ಶ್ರೀ ಸಮರ್ಥ ಸದ್ಗುರು ನೃಸಿಂಹ ಸರಸ್ವತೀ ಇವರ ಸಮಾಧೀಕಾಲ ಶಕೆ ೧೧೪೦ ಇದೆ, ಎಂದು ಲಘು ಗುರುಚರಿತ್ರದೊಳಗಿನ ೭೦೫-೭೦೬-೭೦೭ ಈ ಓವೀಗಳಿಂದ ಕಂಡು ಬರುವದು.

೨೨) ಶ್ರೀ ಸರಸ್ವತೀ ಗಂಗಾಧರ ಇವರ ಉಮನಾಮ ಸಾಬರೆ. ಈ ಸಾಬರೇ ವಂಶದಲ್ಲಿಯ ಶ್ರೀ ಸಾಯಂದೇವ ಶ್ರೀ ಸಮರ್ಥ ಸದ್ಗುರು ನೃಸಿಂಹ ಸರಸ್ವತಿ ಮಹಾರಾಜರ ಕೃಪೆಗೆ ಪಾತ್ರರಾಗಿದ್ದರು. ಆಮೇಲೆ ಅವರಿಗೆ ಸದ್ಗುರುವಿನ ಅನುಗ್ರಹವಾಗಿ, 'ನಿನ್ನ ವಂಶಜರಿಂದ ನನ್ನ ನಿರಂತರ ಸೇವೆಯಾಗುವದು' ಹೀಗೆ ಅವರಿಗೆ ವರ ಪ್ರಧಾನವಾಯಿತು. ಶ್ರೀಸಾಯಂದೇವರಿಂದ ಐದನೇ ಪುರುಷರು ಈ ಶ್ರೀಸರಸ್ವತೀ ಗಂಗಾಧರರು. ಈ ಶ್ರೀಗಂಗಾಧರಸರಸ್ವತೀಯವರಿಗೆ ಇತ್ತೀಚೆಗೆ, ಪ್ರಸಿದ್ಧವಿದ್ದ ಬೃಹತ್ ಗುರುಚರಿತ್ರವನ್ನು ಬರೆಯಲಿಕ್ಕೆ ಸ್ವತಃ ಶ್ರೀಸಮರ್ಥ ಸದ್ಗುರು ನೃಸಿಂಹ ಸರಸ್ವತೀ

ಮಹಾರಾಜರು ಆಜ್ಞೆ ಇತ್ತರು ಎಂದು ಅದೇ ಚರಿತ್ರೆಯಲ್ಲಿ ಬರೆದಿದೆ. ಇದನ್ನು ನೋಡಲಾಗಿ ಈ ಚರಿತ್ರೆ ಕೂಡ ಬಹಳ ವರ್ಷದಷ್ಟು ಹಳೆಯದು ಇರುವದೆಂದು ಅನಿಸುವದು. ಚರಿತ್ರ ಲೇಖನದ ಅಥವಾ ಚರಿತ್ರ ಲೇಖನ ಕಾಲ ಕೊಟ್ಟಿಲ್ಲ.

೨೩) ಇದೇ ಶ್ರೀಸಮರ್ಥ ಸದ್ಗುರು ನೃಸಿಂಹ ಸರಸ್ವತೀ ಮಹಾರಾಜರ ಅವತಾರ ಮತ್ತೆ ಶ್ರೀಕ್ಷೇತ್ರ ಆಳಂದಿಯಲ್ಲಿ ಆಗಿ ಅವರು ೧೮೦೭ನೇ ಸಾಲಿನಲ್ಲಿ ಸಮಾಧಿಸ್ತರಾದರೆಂದು ಶ್ರೀ ದಾಸಗಣೂ ಮಹಾರಾಜರು ತಮ್ಮ ಶ್ರೀ ಭಕ್ತಲೀಲಾಮೃತ ಗ್ರಂಥದಲ್ಲಿ ೩೦ನೇ ಅಧ್ಯಾಯದಲ್ಲಿ ೧೨ ಮತ್ತು ೧೦೩ ನೇ ಓವಿಯಲ್ಲಿ ಬರೆದಿರುವರು. ಇದರ ಮೇಲಿಂದ ಈಗ ಪ್ರಚಾರದಲ್ಲಿರುವ ದೊಡ್ಡ ಗುರುಚರಿತ್ರೆ ಶಕೆ ೧೮೦೭ನೇ ವರ್ಷದ ನಂತರ ಬರೆದಿರದೆ, ಅದು ಲಘುಗುರುಚರಿತ್ರದಷ್ಟು ಹಳೆಯದಿರದಿದ್ದರೂ ಶಕೆ ೧೮೦೭ನೇ ವರ್ಷಕ್ಕಿಂತ ಬಹಳ ಹಿಂದೆಯೇ ಬರೆದಿದ್ದಿರಬೇಕು ಎಂಬದರಲ್ಲಿ ಸಂಶಯವಿಲ್ಲ.

೨೪) ಇರಲಿ. ತಮಗೆ ಗುರುಸೇವೆ ಒದಗಲಿ ತಮ್ಮ ಕೈಯಿಂದ ಸಾಧ್ಯವಿದ್ದಷ್ಟು ಲೋಕ ಸಂಗ್ರಹವೂ ಆಗಲಿ, ಮಾತೃಭಾಷೆಯ ವಾಂಙ್ಮಯರ ಸೇವೆಯಾಗಲಿ ಈ ಉದಾತ್ತ ವಿಚಾರದಿಂದ ಶ್ರೀ ಸಮರ್ಥ ಸದ್ಗುರು ಸಾಯಿ ಬಾಬಾ ಮಹಾರಾಜರ ಆಜ್ಞೆಯಿಂದ ಶ್ರೀ ಅಣ್ಣಾ ಸಾಹೇಬರು ಸೇವಾನಿವೃತ್ತಿಯ ನಂತರ ಈ ಗುರು ಚರಿತ್ರೆಯನ್ನು ಬರೆದಿರುವರು.

೨೫) ಶ್ರೀ ಸರಸ್ವತೀಗಂಗಾಧರರ ಚರಿತ್ರೆಯಂತೆಯೇ ಈ ಶ್ರೀಸಾಯಿ ಸಚ್ಚರಿತದಲ್ಲಿ ಅವತರಣಿಕಾಧ್ಯಾಯ ಹಿಡಿದು ೫೩ ಅಧ್ಯಾಯಗಳಿವೆ. ಮೊದಲಿನದರಲ್ಲಿ ೭೩೦೦ ಓವಿಗಳಿವೆ. ಇದರಲ್ಲಿ ೯೪೫೦ ಓವಿಗಳಿವೆ.

೨೬) ಸಂಸ್ಕೃತದಲ್ಲಿ ಅನುಷ್ಟುಪ ಛಂದವಿದ್ದಂತೆ ಮರಾಠಿಯಲ್ಲಿ ಓವೀ ಪ್ರಬಂಧವಿದೆ. ಇದು ದೊಡ್ಡ ಕವಿತ್ವ ಲೇಖನಕ್ಕೆ ಯೋಗ್ಯವಿದೆ. ಚರಿತ್ರ ಗ್ರಂಥಕ್ಕೆ ಓವೀ ಪ್ರಬಂಧ ಸುಗಮವಿರುವದರಿಂದ ಮರಾಠಿಯಲ್ಲಿಯ ಹೆಚ್ಚಿನ ದೊಡ್ಡ ದೊಡ್ಡ ನಾಮಾಂಕಿತ, ವಿಶ್ವವಂದ್ಯ ಪದ್ಯಗ್ರಂಥಗಳು ಓವೀ ಪ್ರಬಂಧದಲ್ಲಿಯೇ ಬರೆಯಲ್ಪಟ್ಟಿವೆ. ಇದೇ ಕಾರಣಕ್ಕಾಗಿ ಶ್ರೀ ಸಾಯಿ ಸಚ್ಚರಿತವನ್ನೂ ಓವೀ ಪ್ರಬಂಧದಲ್ಲಿ ಬರೆಯಲಾಗಿದೆ.

೨೭) ಶ್ರೀ ಸರಸ್ವತೀ ಗಂಗಾಧರರ ಗುರುಚರಿತ್ರದೊಳಗಿನ ಕಥೆಗಳು ಸಂಪೂರ್ಣವಾಗಿ ವಿಶ್ವಸನೀಯ ಮತ್ತು ಅನುಭವಜನ್ಯವಾಗಿವೆ. ಆದರೆ ಅವು ಪ್ರತ್ಯೇಕ ಶ್ರೀ ಸರಸ್ವತೀ ಗಂಗಾಧರರ ಅನುಭವದ್ದಿವೆಯೇ ಅಥವಾ ಅವುಗಳ ಬಗ್ಗೆ ಮುಖಪರಂಪರೆಯಿಂದ ಅವರು ತಿಳಿದುಕೊಂಡರೋ ಅಥವಾ ಯಾರ ಕಥೆಗಳನ್ನು ಬರೆದಿರುವರೋ ಆ ವ್ಯಕ್ತಿಯು ಅವರಿಗೆ ಸಮಕ್ಷ ಅಥವಾ ಲೇಖನದ್ವಾರದಿಂದ ತಿಳಿಸಿರುವರೋ ಇದನ್ನು ತಿಳಿಯಲಿಕ್ಕೆ ನಮ್ಮ ಹತ್ತಿರ ಮಾರ್ಗವಿಲ್ಲ. ಮತ್ತು ಆ ಗ್ರಂಥದಲ್ಲಿಯೂ ಅದರ ಬಗ್ಗೆ ಯಾವುದೇ ರೀತಿಯ ಉಲ್ಲೇಖವಿಲ್ಲ.

೨೮) ಶ್ರೀ ಸಾಯಿ ಸಚ್ಚರಿತ್ರದಲ್ಲಿ ಯಾವ ಕಥೆಗಳನ್ನು ಅಥವಾ ಲೀಲೆಗಳನ್ನು ವರ್ಣಿಸಲಾಗಿದೆಯೋ ಅದರಲ್ಲಿಯ ಅದರಲ್ಲಿ ಹೆಚ್ಚಿನವು ಸ್ವತಃ ಅಣ್ಣಾಸಾಹೇಬರೇ ತಮ್ಮ ಕಣ್ಣಿಂದ ಕಂಡದ್ದು ಇವೆ. ಮತ್ತು ಉಳಿದವು ಭಕ್ತರಿಗೆ ಶ್ರೀಬಾಬಾರ ಪ್ರತ್ಯಕ್ಷ ಮತ್ತು ಕನಸಿನಲ್ಲಿ ಅನುಭವ ಬಂದಿವೆ ಮತ್ತು ಯಾರು ಆ ಅನುಭವಗಳನ್ನು ತಮ್ಮ ತಿಳುವಳಿಕೆಯ ಪ್ರಕಾರ ಇದ್ದದ್ದು ಇದ್ದಂತೆ ಅಣ್ಣಾಸಾಹೇಬರಿಗೆ ಬರೆದು ತಿಳಿಸಿದರು, ಇಲ್ಲವೇ ಬಾಯಿ ಮಾತಿನಲ್ಲಿಯೇ ಹೇಳಿದರು ಅವರಲ್ಲಿ ಇನ್ನೂ ಕೆಲವರು ಬದುಕಿದ್ದಾರೆ, ಆ ಲೀಲೆಗಳು ಮತ್ತು ಅನುಭವದ ಮೇಲೆ ಅಣ್ಣಾಸಾಹೇಬರು ತಮ್ಮ ಪ್ರಾಸಾದಿಕ ವಾಣಿಯಿಂದ ಕಥಾಸ್ವರೂಪದ, ಪದ್ಯಮಯ, ಮೋಹಕ, ಸುಂದರ ರೂಪವನ್ನಿತ್ತು ಅವುಗಳ ವರ್ಣನೆಯನ್ನು ಶ್ರೀ ಸಾಯಿ ಸಚ್ಚರಿತದಲ್ಲಿ ಮಾಡಿದ್ದಾರೆ.

೨೯) ಪ್ರತಿಯೊಂದು ಅಧ್ಯಾಯದಲ್ಲಿ ಮೊದಲು ವೇದಾಂತ ನಂತರ ಗುರು ಗೌರವ ಆಮೇಲೆ ಕಥೆ ಈ ರೀತಿಯಾಗಿ ಐವತ್ತೊಂದು ಅಧ್ಯಾಯಗಳನ್ನು ರಚಿಸಿದ್ದಾರೆ. ೫೨ನೇ ಅಧ್ಯಾಯದಲ್ಲಿ ಸಿಂಹಾವಲೋಕನ ಮಾಡಿ ಅವತರಣಿಕೆಯನ್ನು ಕೊಟ್ಟು ಗ್ರಂಥವನ್ನು ಪೂರ್ಣ ಮಾಡುವದಾಗಿ ಹೇಳಿದ್ದು, ಅದನ್ನು ಮೊದಲಿನ ಒಂದು ಓವಿಯಲ್ಲಿ ಹೇಳಿದ್ದಾರೆ. ಆದರೆ ಈಗ ಯಾವ ೫೨ನೆಯ ಅಧ್ಯಾಯ ಪ್ರಸಿದ್ಧವಾಗಿದೆಯೋ ಅದರಲ್ಲಿ ಸಿಂಹಾವಲೋಕನವೂ ಕಾಣುವದಿಲ್ಲ. ಮತ್ತು ಅವತರಣಿಕೆಯೂ ಕಾಣುವದಿಲ್ಲ. ಅದರಲ್ಲಿ ಶ್ರೀ ಸದ್ಗುರು ಮಹಾತ್ಮ್ಯ, ಶ್ರೀ ಸಾಯಿ ಸಚ್ಚರಿತ, ಫಲಶ್ರುತಿ, ಗ್ರಂಥಕಾರನ ಪ್ರಸಾದ ಯಾಚನೆ, ಮತ್ತು ಪ್ರಾರ್ಥನೆ ಇಷ್ಟೇ ವಿಷಯಗಳು ಇವೆ. ೫೧ನೆಯ ಅಧ್ಯಾಯ ಪ್ರಸಿದ್ಧವಾಯಿತು. 'ಇನ್ನು ಕೇವಲ ೫೨ನೆಯ ಅಧ್ಯಾಯ ಪ್ರಸಿದ್ಧವಾಗುವದು ಉಳಿಯಿತು. ಅದನ್ನು ಈ ಅಂಶದಲ್ಲಿ ಪ್ರಸಿದ್ಧಗೊಳಿಸಿ ಶ್ರೀ ಸಾಯಿ ಸಚ್ಚರಿತ ಗ್ರಂಥ ಈಗ ಸಂಪೂರ್ಣವಾಗಿದೆ'ಎಂದು ಸ್ವತಃ ಶ್ರೀ ಅಣ್ಣಾಸಾಹೇಬರ ಶಬ್ಧಗಳು 'ಶ್ರೀಸಾಯಿ ಲೀಲಾದ' ಆರನೇ ವರ್ಷದ, ಮೂರನೇ ಅಂಕದಲ್ಲಿ ೮೮೦ನೇ ಪುಟದಲ್ಲಿ ಛಾಪಿಸಲಾಗಿದೆ. ಇದರ ಮೇಲಿಂದ ಅವತರಣಿಕೆಯ ಮತ್ತು ಸಿಂಹಾವಲೋಕನದ ಓವಿಗಳನ್ನು ಬರೆದ ಹಾಳಿಗಳು ಎಲ್ಲಾದರೂ ಕಳೆದಿರಬೇಕೆಂದು ಅನಿಸುವದು. ಅವರ ರೂಢಿಯಂತೆ ಅಣ್ಣಾ ಸಾಹೇಬರು ೫೨ನೇ ಅಧ್ಯಾಯವನ್ನೂ ಬಿಡಿ ಹಾಳೆಗಳಲ್ಲಿಯೇ ಬರೆದಿದ್ದರು ಎನಿಸುವದು. ಆ ಹಾಳೆ ನನ್ನ ಕಡೆಗೆ ಪರೀಕ್ಷಣಕ್ಕಾಗಿ ಬಂದಿತ್ತು. ಅದರಲ್ಲಿ ಓವಿಗಳ ಕ್ರಮಾಂಕವಿರಲಿಲ್ಲ. ಮತ್ತು ಹಾಳೆಗಳ ಅಂಕಿ ೨೦ ರಿಂದ ಮುಂದಿನದುರಿಂದ ಮುಂದಿನದು ಇತ್ತು. ಇದರ ಮೇಲಿಂದ ಸಿಂಹಾವಲೋಕನದ ಮತ್ತು ಅವತರಣಿಕೆಯ ಓವಿಗಳು ಎಲ್ಲೋ ಕಳೆದಿರಬೇಕು, ಅಥವಾ ಮರೆವಿನಿಂದ ತಯಾರ ಮಾಡುವದೇ ಉಳಿದು ಹೋಗಿರಬೇಕು ಎಂದು ಅನಿಸುವದು. ಇತ್ತೀಚೆಗೆ ಅವತರಣಿಕೆಯ ಹೊಸ ಅಧ್ಯಾಯವನ್ನು ಸಿದ್ಧಗೊಳಿಸಿ ಅದನ್ನು ೫೩ನೇ ಅಧ್ಯಾಯವೆಂದು ಗ್ರಂಥದಲ್ಲಿ ಜೋಡಿಸಲಾಗಿದೆ. ಈ ರೀತಿ ಒಟ್ಟು ಈ ಸಾಯಿ ಸಚ್ಚರಿತದ ಅಥವಾ ಗುರುಚರಿತ್ರದ ರಚನೆಯಾಯಿತು.

೩೦) ಶ್ರೀ ಬಾಬಾರ ಶ್ರೀ ಶಿರಡೀ ಕ್ಷೇತ್ರಕ್ಕೆ ಪ್ರಥಮಾಗಮನ, ತಿರೋಭವನ, ಪುನಶ್ಚ ಪ್ರಕಟೀಕರಣ ಅವರ ಅದ್ಭುತ ಲೀಲೆಗಳು, ಅಪ್ರತಿಮ ಚಮತ್ಕಾರಗಳು, ಭಕ್ತಾನುಭವ, ಅನುಗ್ರಹ ಉಪದೇಶ ಗ್ರಂಥವಾಚನ, ಗ್ರಂಥಲೇಖನ, ಪಾದುಕಾಪೂಜನ, ಇಷ್ಟದೇವತಾ ಪೂಜನ, ಈಶ್ವರ ಭಜನ, ಜಪ, ತಪ, ನಾಮಸ್ಮರಣೆ, ಆಸನ, ಉಪಾಸನಾ, ಧನುಸುತದಾರಾ-ದಾನ, ಸಂಕಟನಿವಾರಣ, ವ್ಯಾಧಿನಾಶ, ಯೋಗ್ಯೈಶ್ವರ್ಯ, ಮಶೀದ ಮಾಯಿ ವೈಭವ, ಉದೀಮಾಯಿ ಪ್ರಭಾವ, ಧುನೀಮಾಯಿ-ಪ್ರತಾಪ, ಘರಟ್ಟಪೇಕ್ಷಣ ಪರಾಕ್ರಮ, ನಿತ್ಯಕ್ರಮ, ಆಹಾರವಿಹಾರ, ಶಯನ, ಚಿಲೀಮ, ಪಾದತ್ರಾಣ, ಉಡುಪು, ಸಂತಾವಿಷ್ಕರಣ, ಶಂಕಾನಿರಸನ, ಮಂಚಮಹಾಯಜ್ಞ, ಸಾಮರ್ಥ್ಯ ಧರ್ಮಶಿಕ್ಷಣ, ವ್ಯವಹಾರಶಿಕ್ಷಣ, ಪರಮಾರ್ಥ ಪಾಠ, ಸರ್ವವ್ಯಾಪಕತ್ವ, ಸರ್ವಜ್ಞತೆ, ಮನೋಗತ ಕಥನ, ಪೂರ್ವಕಥನ, ಪೂರ್ವಜನ್ಮ ಕಥನ, ಭವಿಷ್ಯ ಕಥನ, ಹಂಡೀ ಅಥವಾ ಟೇಗ, ಚಾವಡಿ, ಭಿಕ್ಷಾ, ಭಿಕ್ಷಾಧಿಕಾರ, ಮಂದಿರ, ಲೇಂಡೀಬಾಗ, ಉತ್ಸವ, ಪಂಚತಂತ್ರ ಪ್ರಭುತ್ವ, ಪರಸ್ಪರ, ಮನೋಮಯ ಚಿತ್‌ಶಕ್ತಿ ಸಂದೇಶ, ಔದಾರ್ಯ, ಭಕ್ತಿ, ಜ್ಞಾನ, ವೈರಾಗ್ಯ, ದಯಾ, ಕ್ಷಮಾ, ಶಾಂತೀ ನಿರ್ಯಾಣ ಮುಂತಾದವುಗಳು ವಿಷಯದ ಸುಮಾರು ೧೫೦ರಿಂದ ೧೭೫ರಷ್ಟು ಕಥೆಗಳು, ಉಪ ಕಥೆಗಳು ಮತ್ತು ಅಡ್ಡ ಕಥೆ ಇವುಗಳನ್ನು ಶ್ರೀ ಸಾಯಿ ಸಚ್ಚರಿತದಲ್ಲಿ ವರ್ಣಿಸಲಾಗಿದೆ.

೩೧) ಕೆಲವೆಡೆ ಒಂದೊಂದು ಅಧ್ಯಾಯದಲ್ಲಿ ೨,೩,೪,೫ ರವರೆಗೂ ಕಥೆಗಳು ಬಂದಿವೆ. ಮತ್ತೆ ಕೆಲವೆಡೆ ಎರಡು ಅಥವಾ ಮೂರು ಅಧ್ಯಾಯಗಳಲ್ಲಿ ಒಂದೇ ಕಥೆಯನ್ನು ವರ್ಣಿಸಲಾಗಿದೆ.

೩೨) ಕವಿತೆ ಗ್ರಂಥಗಳು ಮೂರು ಪ್ರಕಾರದವಿರುವುವು; ನೈಸರ್ಗಿಕ, ಪ್ರಾಸಾದಿಕ ಮತ್ತು ಕೃತಿಮ. ಕೃತ್ರಿಮ ಕವಿತೆಗಳನ್ನು ಕೇವಲ ವಿದ್ವತ್ತೆಯ ಮತ್ತು ಬುದ್ಧಿಮತ್ತೆಯ ಬಲದಿಂದ ಬರೆದಿರುವದು. ಅದು ಉತ್ತಮವೆಂದು ಪರಿಗಣಿಸಬಹುದು. ಆದರೆ ಅದು ಕೊನೆಯವರೆಗೆ ಬಾಳಲಾರದು ಮತ್ತು ಅದರಲ್ಲಿ ಪ್ರತಿಭೆ, ಪ್ರಸಾರ, ಇಲ್ಲವೇ, ದೇವರದೇಣಿಗೆ ಈ ಗುಣಗಳು ಎಂದೂ ಬರಲಾರವು. ಗುರುಕೃಪೆಯಿಲ್ಲದೆ ಎಂಥ ವಿದ್ವತ್ತೆ ಇದ್ದರೂ ಸದ್ಯದ ಗ್ರಂಥದಂಥ ಗ್ರಂಥ ನಿರ್ಮಾಣವಾಗುವದು ಕಷ್ಟ. ಯಾವುದೇ ಪಾರಮಾರ್ಥಿಕ ಗ್ರಂಥದಲ್ಲಿ ಮೇಲಿನ ಮೂರು ಗುಣಗಳು ಇರದಿದ್ದಲ್ಲಿ ಮುಮುಕ್ಷು ವಾಚಕರ ಮೇಲೆ ಅದರ ಪ್ರಭಾವ ಬೀಳದು. ಮತ್ತು ಅದರ ಮೇಲೆ ಶ್ರದ್ಧೆ, ವಿಶ್ವಾಸ ಕೂಡಲಾರದು. ಶ್ರೀ ಸಾಯಿ ಸಚ್ಚರಿತ ಗ್ರಂಥವು ಪ್ರಸಾದಜನ್ಯವಿದೆ. ಮತ್ತು ಅದರಿಂದಲೇ ಯಾವುದೇ ಮುಮುಕ್ಷು ಭಕ್ತನಿಗೆ ಸೇರು ವಂಥದಾಗಿರುವದು (ಹಿಡಿಸುವದು) ಅದರಿಂದ ಈ ಗ್ರಂಥದ ಅಧ್ಯಯನ ಪಠಣ ನಿತ್ಯವೂ ಆಗಿ ಅದರ ನೂರಾರು ಪಾರಾಯಣಗಳು, ಸಪ್ತಾಗಳು ಆಗುವವು.

೩೩) ಅಣ್ಣಾಸಾಹೇಬ ಮನೆತನದಲ್ಲಿ ಮೊದಲಿನಿಂದಲೂ ಗುರುಭಕ್ತಿ ಇತ್ತೋ ಇಲ್ಲವೋ ಅದು ತಿಳಿಯಲು ಮಾರ್ಗವಿಲ್ಲ. ಆದರೆ ಅಣ್ಣಾಸಾಹೇಬರು ಮೂರನೆಯ

ಅಧ್ಯಾಯದಲ್ಲಿ ತಮ್ಮ ಬಗ್ಗೆ ಯಾವ ಸಂಗತಿಯನ್ನು ಬರೆದಿರುವರೋ ಅದರ ಮೇಲಿಂದ ನೋಡಿದರೆ ಅಣ್ಣಾಸಾಹೇಬರಿಗೆ ಪ್ರಥಮತಃ ಗುರುಭಕ್ತಿ ಅಥವಾ ಗುರುಪ್ರೇಮ ಎಷ್ಟೂ ಇರಲಿಲ್ಲ. ಅದರಂತೆಯೇ ಗುರುವನ್ನು ಮಾಡಿಕೊಳ್ಳುವದೆಂದರೆ ಅದೊಂದು ಪೆಚ್ಚು ಕಲ್ಪನೆ ಎಂದು ಅವರಿಗೆ ಅನಿಸುತ್ತಿದ್ದು, ಗುರುವನ್ನು ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ ಎಂದು ಅವರು ಪ್ರತಿಪಾದಿಸುತ್ತಿದ್ದರು. ಮತ್ತು ಸ್ವಕರ್ತೃತ್ವದ ಅಭಿಮಾನವನೇ ಅವರು ಹೆಚ್ಚಾಗಿ ಇಟ್ಟುಕೊಂಡಿರುತ್ತಿದ್ದರು. ಆದರೆ ಶ್ರೀ ಬಾಬಾರೊಡನೆ ಭೆಟ್ಟಿಯಾದಾಗ ಕೆಲವು ಮನೋಮಯ ಸಾಕ್ಷಿತ್ವ ಶಬ್ದೋಚ್ಚಾರವಾದ ಕೂಡಲೇ ಅವರ ಅಭಿಮಾನ ಕರಗಿತು. ಮತ್ತು ಸದ್ಗುರುವಿನ ಹೊರತು ಶರಣೋಪಾಯವಿಲ್ಲ ಎಂಬ ಬಗ್ಗೆ ನಂಬುಗೆಯಾಯಿತು. ಬಳಿಕ ಅವರ ಮೇಲೆ ಬಾಬಾರ ಕೃಪೆಯೂ ಆಯಿತು. ಶ್ರೀ ಸಾಯಿ ಸಚ್ಚರಿತ ಲೇಖನವು ಆ ಕೃಪೆಯದೇ ಫಲವಾಗಿದೆ. ಅಣ್ಣಾಸಾಹೇಬರು ವಿಶ್ವವಂದ್ಯರಾದಂಥವರ ಬಹಳಷ್ಟು ಸಾಧುಸಂತರ ಜಗನ್ಮಾನ್ಯ ಕಾವ್ಯ ಗ್ರಂಥಗಳನ್ನು ಓದಿದ್ದರಿಂದ ಅವರ ಶ್ರೀ ಸಾಯಿ ಸಚ್ಚರಿತದ ಮೇಲೆ ಮುಖ್ಯವಾಗಿ ಶ್ರೀ ಸಮರ್ಥ ಸದ್ಗುರುನಾಥ ಮಹಾರಾಜರ 'ಏಕನಾಥೀ ಭಾಗವತ'ದ ಭಾಷೆಯ ಪ್ರಭಾವ ಬಿದ್ದಂತೆನಿಸುವದು.

೩೪) ಶ್ರೀ ಸಾಯಿ ಸಚ್ಚರಿತ ಲೇಖನದ ಬಗ್ಗೆ ಆಧುನಿಕ ವಿದ್ವನ್ಮಣಿ ಶ್ರೀ ಚಿಂತಾಮಣರಾವ ವಿನಾಯಕ ಉರ್ಫ್ ನಾನಾಸಾಹೇಬ ವೈದ್ಯ ಅವರು ತಮ್ಮ ಅನುಕೂಲ ಅಭಿಪ್ರಾಯವನ್ನು ಪ್ರಕಟಿಸಿ ಅಣ್ಣಾಸಾಹೇಬರಿಗೆ 'ಮಹಿಪತಿ'ಎಂಬ ಪದವಿ ಕೊಟ್ಟು ಅವರ ಮತ್ತು ಅವರ ಗ್ರಂಥದ ಗೌರವವನ್ನು ಮಾಡಿದ್ದಾರೆ. ಇದರ ಮೇಲಿಂದ ಶ್ರೀ ಸಾಯಿ ಸಚ್ಚರಿತ ಕೇವಲ ಗುರುಚರಿತ್ರವಾಗಿರದೆ ಅದು ಒಂದು ಉತ್ಕೃಷ್ಟ ರಸಾತ್ಮಕ ಕಾವ್ಯವಾಗಿದೆ.

೩೫) ಶ್ರೀ ಸಾಯಿ ಸಚ್ಚರಿತದಲ್ಲಿ ಭಗವಾನ ಶ್ರೀ ಜ್ಞಾನೇಶ್ವರ ಮಹಾರಾಜರೆನ್ನುವರು ಅದರಂತೆ ಅಣ್ಣಾಸಾಹೇಬರ ವಾಣಿಯ ಮತ್ತು ಲೇಖನದ ಸಾರ್ಥಕತೆಯಾಗಿದೆ. 'ನುಡಿಯಲಿ ಅಂದ ಕವಿತ್ವ। ಕವಿತ್ವದಲ್ಲಿ ಅಂದ ರಸಿಕತ್ವ।ರಸಿಕತ್ವದಲ್ಲಿ ಪರತತ್ವ-।-ದ ಸ್ಪರ್ಶದಂತೆ ॥347॥ (ಜ್ಞಾನೇಶ್ವರೀ ಅ.18। ಶ್ಲೋಕ 14) ಗ್ರಂಥದಲ್ಲಿ ದೃಷ್ಟಾಂತ, ಉಪಮೆ, ಅಲಂಕಾರ, ರಸ, ಪರಿಪೋಷಣೆ ಇವುಗಳ ಸಂಗ್ರಹ ಸಾಕಷ್ಟಿದೆ.

೩೬) ಶ್ರೀ ಸರಸ್ವತೀ ಗಂಗಾಧರರು ಬರೆದ ಗುರುಚರಿತ್ರದಂತೆ ಈ ಸಾಈ ಸಚ್ಚರಿತದ್ದೂ ನಿತ್ಯ ಅಧ್ಯಯನ ಮತ್ತು ಪಠಣವಾಗಿ ಅದರ ನೂರಾರು ಪಾರಾಯಣಗಳು, ಸಪ್ತಾಹಗಳು ಆಗಬೇಕು. ಎಂದು ಗ್ರಂಥಕರ್ತರ ಇಚ್ಛೆ ಇತ್ತು. ಅದು ಫಲದ್ರೂಪವಾದದ್ದನ್ನು ನೋಡುವದಕ್ಕೆ ಅವರು ಜೀವಿಸಿಲ್ಲ. ಇದೊಂದು ದೈವದುರ್ವಿಪಾಕವೇ ಸರಿ.

೩೭) ಈ ಗ್ರಂಥವು ಮುಮುಕ್ಷೂ ಭಕ್ತರಿಗೆ ಒಂದು ಪ್ರಕಾರದ ಸಿಹಿಮಧುರವಾದ ಪರಮಾರ್ಥದ ತಿಂಡಿಯಾಗಿದೆ. ಅಣ್ಣಾಸಾಹೇಬರ ಸದಿಚ್ಛೆಗೆ ಮರ್ಯಾದೆ ಕೊಟ್ಟು ಮುಮುಕ್ಷು ಭಕ್ತರು ಸ್ವತಃ ತಾವು ಈ ಭಕ್ಷ್ಯದ ರುಚಿಯನ್ನು ಶ್ರದ್ಧೆ ಮತ್ತು ಭಕ್ತಿಯಿಂದ

ಮತ್ತು ಅಂತಃಕರಣ ಪೂರ್ವಕವಾಗಿ ಕಂಠಪೂರ್ತಿ ಸೇವಿಸಿ ಇತರೆ ಭಕ್ತರಿಗೂ ಹಾಗೆ ಮಾಡಲು ಹಚ್ಚಿದರೆ ಭಗವಾನ ಶ್ರೀ ಜ್ಞಾನೇಶ್ವರ ಮಹಾರಾಜರು ಬರೆದಂತೆ ಮುಮುಕ್ಷು ಭಕ್ತರಿಗೆ ಜ್ಞಾನಯಜ್ಞದಿಂದ ಶ್ರೀ ಸಾಯಿ ಪರಮಾತ್ಮನನ್ನು ಪ್ರಸನ್ನಗೊಳಿಸಿ ದಂತಾಗುವದು. ಅದರಿಂದ ಅವರ ಶರೀರನಾಶದ ನಂತರ ಅದೇ ಶಡ್ಗುಣೈಶ್ವರ್ಯ ಶ್ರೀ ಸಾಯಿ ಪರಮಾತ್ಮನೊಡನೆ ಏಕರೂಪರಾಗುವರು. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ನನ್ನ ನಿನ್ನ ಭೆಟ್ಟಿಯಾದಾಗ್ಯೂ । ಈ ಕಥೆ ಬೆಳೆಯಿತು ಆಗ್ಯೆ। ಮೋಕ್ಷ ಧರ್ಮವೇ ಬದುಕಾದ ಹಾಗೆ। ಇಲ್ಲಿ ಬಂದಂತಿರುವದು ॥ ಅದೇ ಈ ಸಕಲಾರ್ಥಪ್ರದ। ನಮ್ಮಿಬ್ಬರ ಸಂವಾದ।ಮಾಡದೇ ಇನಿತೂ ಪದಭೇದ।ಯಾವಾಗಲೂ ಓದುವವಗೆ॥ ಪ್ರದೀಪ್ತ ಜ್ಞಾನಾನಲದಲ್ಲಿ ಅವರು। ಮೂಲ ವಿದ್ಯೆಯ ಆಹುತಿಯನಿತ್ತಿಹರು। ಅವರು ಸಂತುಷ್ಟಗೊಳಿಸಿದರು। ಪರಮಾತ್ಮನಾದ ನನ್ನನ್ನು॥ ಈ ಮಂತ್ರ ರಹಸ್ಯ ಗೀತೆಯನು। ನನ್ನ ಭಕ್ತರಿಗೆ ಒದಗಿಸಿದವನು। ಮಗುವಿಗೆ ಅನನ್ಯ ಜೀವನವನು ಮಾತೆ ಕೊಡುವಂತೆ॥ ಹಾಗೆ ಭಕ್ತರಿಗೆ ಗೀತೆಯನು। ಆದರದಿಂದ ತಿಳಿಸಿದವನು।ದೇಹವನುತೊರೆದಾಗ ಅವನು। ನನ್ನೊಡನೆಯೇ ಒಂದಾಗುವನು॥ (ಕೊನೆಗೆ ಕರ್ತುಂ ಅಕರ್ತುಂ‌ನ ಸಮರ್ಥ, ಶಕ್ತಿಮಾನ, ಸರ್ವಜ್ಞ, ಸರ್ವಸಾಕ್ಷೀ, ಶ್ರೀ ಸಮರ್ಥಸದ್ಗುರು ಸಾಯಿ ಪರಮಾತ್ಮನ ಪುಣ್ಯ ಚರಣ ಕಮಲಗಳಲ್ಲಿ ಅನನ್ಯ ಭಾವದಿಂದ ನಮ್ರತಾಪೂರ್ವಕ ಮಸ್ತಕವನ್ನಿಟ್ಟು ದೀರ್ಘ ಪ್ರಸ್ತಾವನೆಯನ್ನು ಮುಗಿಸುವೆನು.

ಠಾಣೆ
ತಾ: 20-11-1930

ಬಾಬಾರ ಮಗು
(ಕೈ. ಬಾಳಕೃಷ್ಣ ವಿಶ್ವನಾಥ ದೇವ)

## ಎರಡು ಶಬ್ದಗಳು

(ಗ್ರಂಥಕರ್ತ ಕೈ. ಗೋವಿಂದರಾವ ರಘುನಾಥ ಧಾಭೋಳಕರ ಉರ್ಫ್ ಅಣ್ಣಾಸಾಹೇಬ ಅವರ ಸಂಕ್ಷಿಪ್ತ ಚರಿತ್ರ ಮತ್ತು ಭಕ್ತರಿಗೆ ಸೂಚನೆ)

ಮಹಾರಾಷ್ಟ್ರದ ಮಹಾಭಾಗ್ಯವೆಂದೇ ಪ್ರಾಯಃ ಪ್ರತಿಯೊಂದು ಪೀಳಿಗೆಯಲ್ಲೂ (ಪಿಢಿಯಲ್ಲೂ) ಯಾರಾದರೂ ಮಹಾಪುರುಷರು ಜನ್ಮವೆತ್ತಿ ಜಡಜೀವದ ಉದ್ಧಾರ ಮಾಡುತ್ತಿರುವರು. ಸುಮಾರು ೯೫ ವರ್ಷಗಳ ಹಿಂದೆ ನಗರ ಜಿಲ್ಲೆಯ ಧಾರ್ಮಿಕ ಪರಿಸ್ಥಿತಿ ತೀರ ಬಿಕ್ಕಟ್ಟಿನಲ್ಲಿತ್ತು-ಮಹಾರಾಷ್ಟ್ರದ ಬೇರೆ ಯಾವ ಜಿಲ್ಲೆಗಳಿಗಿಂತಲೂ ಈ ಜಿಲ್ಲೆಯಲ್ಲಿಯ ದುಷ್ಕಾಳದಿಂದಾಗಿದ್ದ ಪರಿಸ್ಥಿತಿಯ ಲಾಭ ಪಡೆದು ಅಲ್ಲಿಯ ಬಡ ಜನತೆಯನ್ನು ಕ್ರಿಶ್ಚಿಯನ ಧರ್ಮಕ್ಕೆ ಮತಾಂತರಿಸುವ ಕೆಲಸ ಆರಂಭವಾಯಿತು. ಇಂಥ ಸಮಯದಲ್ಲಿ ವಯಸ್ಸಿನ 15-16ನೇ ವರ್ಷದಲ್ಲಿ ಶ್ರೀ ಸಾಯಿ ಬಾಬಾ ಶಿರ್ಡೀಗೆ ಬಂದರು. ಅವರ ಅದ್ಭುತ ಲೀಲೆಗಳ ಮತ್ತು ಉಪದೇಶದ ಸಂಗ್ರಹ ಈ ಗ್ರಂಥದಲ್ಲಿದೆ. ಇದನ್ನು ಕೈ. ಗೋವಿಂದರಾವ ಉರ್ಫ್ ಅಣ್ಣಾಸಾಹೇಬ ರಘುನಾಥ ದಾಭೋಳಕರ ಅವರು ಮಾಡಿದರು. ಅವರು ಈ ಗ್ರಂಥವನ್ನು ಬರೆದು ಶ್ರೀ ಸಾಯಿ ಭಕ್ತರ ಮೇಲೆ ಅನಂತ ಉಪಕಾರ ಮಾಡಿದ್ದಾರೆ. ಕೆಲವರು ಈ ಗ್ರಂಥದ ಪಾರಾಯಣವನ್ನು ಏಳು ದಿನಗಳಲ್ಲಿ ಮಾಡುವರು, ಇನ್ನು ಕೆಲವರು ದಿನಾಲು ಒಂದು ಅಧ್ಯಾಯವನ್ನಾದರೂ ಓದುವರು ಅಥವಾ ಕೆಲವು ಓವಿಗಳನ್ನು ದಿನಾಲು ಓದುವರು.

ಕೈ. ಅಣ್ಣಾಸಾಹೇಬ ಧಾಭೋಳಕರರ ಜನ್ಮ ಸನ ೧೮೫೬ರ ಮಾರ್ಗಶೀರ್ಷ ಶು. ೫ ಯಂದು ಠಾಣೆ ಜಿಲ್ಲೆಯ ಕುಡಾಳ ದೇಶಸ್ಥ, ಗೌಡ ಬ್ರಾಹ್ಮಣ ಜಾತಿಯಲ್ಲಾಯಿತು. ಅವರ ತಂದೆ ದೇವ ಭಕ್ತರಿದ್ದರು. ಅವರ ಮನೆತನದ ಸ್ಥಿತಿ ಬಹಳ ಬಡತನದ್ದಿತ್ತು; ಅಂಥದರಲ್ಲಿ ಅವರ ತಂದೆ ಅವರು ಚಿಕ್ಕವರಿರುವಾಗಲೇ ತೀರಿಕೊಂಡದ್ದರಿಂದ ಬಹಳ ಕಷ್ಟಪಟ್ಟು ಶಿಕ್ಷಣ ಪಡೆಯಬೇಕಾಯಿತು. ಇಂಗ್ಲೀಷ ಐದನೇ ಇಯತ್ತೆ ಪಾಸಾದ ಮೇಲೆ ಮುಂದಿನ ಓದನ್ನು ನಿಲ್ಲಿಸಿ ಮನೆಯಲ್ಲಿ ಉಳಿಯಬೇಕಾಯಿತು. ಮನೆಯ ಪರಿಸ್ಥಿತಿ ಬಡತನದ್ದಿದ್ದರೂ, ಚಿಕ್ಕಂದಿನಿಂದಲೂ ಅವರ ಸ್ವಭಾವ ಅತ್ಯಂತ ಉದಾರವಾಗಿತ್ತು. ಬಡತನದ ಕಾರಣದಿಂದ ಮತ್ತು ಎರಡನೆಯದೆಂದರೆ ಉದರ ನಿರ್ವಹಣೆಗೆ ಬೇರೆ ದಾರಿ ಇರದ್ದರಿಂದ ಆರಂಭದಲ್ಲಿ ಅವರಿಗೆ ತಿಂಗಳಿಗೆ ಎಂಟು ರೂಪಾಯಿಯ ಶಾಲಾ ಮಾಸ್ತರರ ಕೆಲಸ ಮಾಡಬೇಕಾಯಿತು. ಉತ್ಕೃಷ್ಟ ರೀತಿಯಿಂದ ಕೆಲವು ದಿನ ನೌಕರಿ ಮಾಡಿದ ಮೇಲೆ ಅವರ ಜಾಣ್ಮೆ ಮತ್ತು ಪ್ರೇಮಳ ಸ್ವಭಾವದಿಂದಾಗಿ ಕೈ. ಸಾಬಾಜಿ ಚಿಂತಾಮಣಿ ಚಿಟಣೀಸ(ಆಗಿನ ಕಾಲದ ಡೆಪ್ಯುಟಿ ಕಲೆಕ್ಟರ) ಅವರ ಸಹಾಯದಿಂದ ತಲಾಠಿಯ ಕೆಲಸ ಸಿಕ್ಕಿತು. ಸಂತುಷ್ಟ ವೃತ್ತಿಯ ಅವರಿಗೆ ಬಡಬಗ್ಗರ ಕಾಳಜೀ ತೆಗೆದುಕೊಳ್ಳುವದು ಅವರಿಗೆ ಇಷ್ಟವಾಗಿತ್ತು. ಅವರ ಸ್ವಭಾವ ಬಹಳ ಕಷ್ಟಪಟ್ಟು ಕೆಲಸ ಮಾಡುವದು, ಮತ್ತು ಕಚೇರಿಯಲ್ಲಿಯ ಕೆಲಸ

ಮಾಡುವಾಗ ಬಹಳ ಕರ್ತವ್ಯದಕ್ಷರಾಗಿದ್ದುದರಿಂದ, ದಿನದಿನಕ್ಕೆ ಕಲೆಕ್ಟರ ಸಾಹೇಬರ ಮರ್ಜಿ ಅವರ ಮೇಲೆ ಹೆಚ್ಚಾಗಿ ಮತ್ತು ಕೆಲದಿನಗಳಲ್ಲಿ, ಅವರು ರೆವಿನ್ಯೂ ಖಾತೆಯ ಪರೀಕ್ಷೆ ಪಾಸಾದ ಮೇಲೆ ಮಹಾಡ ಎಂಬಲ್ಲಿ ಮೊದಲ ದರ್ಜೆಯ (ಫಸ್ಟ್ ಡಿವಿಜನ ಕ್ಲಾರ್ಕ್) ಕಾರಕೂನರೆಂದು ನೇಮಕಾತಿಯಾಯಿತು. ಮುಂದೆ ಅವರಿಗೆ ಪಾರೆಸ್ಟ್ ಸೆಟಲಮೆಂಟದ ಸ್ಥಳಕ್ಕೆ ಬಡತೀ ಸಿಕ್ಕು ಕೆಲದಿನಗಳಲ್ಲಿ ಭಡೋಚ ಎಂಬಲ್ಲಿ ದುಷ್ಕಾಳದ ಕೆಲಸದ ಮೇಲೆ ಕಳಿಸಲಾಯಿತು. ಆಹಾರ ಹಂಚಿಕೆಯ ಯೋಗ್ಯ ವ್ಯವಸ್ಥೆಯಾದದ್ದರಿಂದ, ಅಲ್ಲಿಯ ಜನರ ವಿಶೇಷ ಪ್ರೀತಿ ಅವರ ಮೇಲೆ ಬೆಳೆಯಿತು. ಈ ನಿರಪೇಕ್ಷ ಭಗವತ್ಸೇವೆಯಿಂದಾಗಿ ಅವರಿಗೆ ೧೯೦೧ ರಲ್ಲಿ ಕಾಯಂ ಮಾಮಲೇದಾರರ ಹುದ್ದೆ ಕೊಡಲಾಯಿತು. ಅನಂತರ ೧೯೦೩ ರಿಂದ ೧೯೦೭ ರವರೆಗೆ ವಾಂದ್ರೆಯಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟ ಫಸ್ಟ್ ಕ್ಲಾಸದ ಕೆಲಸ ಮಾಡಿದರು. ೧೯೦೭ ರಲ್ಲಿ ಅವರ ವರ್ಗ ಖೇಡ ಜಿಲ್ಲೆಯಲ್ಲಿ ಆಯಿತು. ಮತ್ತು ೧೯೧೦ ರಲ್ಲಿ ವಾಂದ್ರಾ ಎಂಬಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟರ ಸ್ಥಳದಲ್ಲಿ ಮತ್ತೆ ಅವರನ್ನು ನೇಮಿಸಲಾಯಿತು. ಆ ಹುದ್ದೆಯಲ್ಲಿ ೧೯೧೬ ಮಾರ್ಚ್ ಕೊನೆಯವರೆಗೆ ಉಳಿದು ಅವರು ಸೇವಾ ನಿವೃತ್ತರಾದರು.

ಕೈ. ಅಣ್ಣಾಸಾಹೇಬರು ೧೯೦೩ ರಿಂದ ೧೯೦೭ ನೇ ಸಾಲಿನಲ್ಲಿ ವಾಂದ್ರೆ ಎಂಬಲ್ಲಿ ಇದ್ದಾಗ ಕೈ. ಹರಿ ಸೀತಾರಾಮ ದೀಕ್ಷಿತ ಸಾಲಿಸಿಟರ ಇವರೊಡನೆ ಅವರ ಸ್ನೇಹ ವಿಶೇಷವಾಯಿತು. ಅವರಿಬ್ಬರೂ ಶ್ರೀ ಭಗವದ್ಗೀತೆಯನ್ನು ಓದುತ್ತಿದ್ದರು. ಇಬ್ಬರಲ್ಲಿ ಒಬ್ಬರಿಗೆ ಯಾರಾದರೂ ಮಹಾತ್ಮರು ಭೆಟ್ಟಿಯಾದರೆ ಒಬ್ಬರಿಗೊಬ್ಬರು ಅವರ ಸುದ್ದಿಯನ್ನು ಹೇಳುತ್ತಿದ್ದರು. ದೀಕ್ಷಿತರಿಗೆ ೧೯೦೯ರಲ್ಲಿ ಕೈ. ನಾನಾಸಾಹೇಬ ಚಾಂದೋರಕರರಿಂದಾಗಿ ಶ್ರೀ ಕ್ಷೇತ್ರ ಶಿರ್ಡಿಯಲ್ಲಿಯ ಶ್ರೀ ಸದ್ಗುರ ಸಾಯಿ ಬಾಬಾರ ಮೊದಲ ದರ್ಶನವಾಯಿತು. ಇಂಥ ಅಲೌಕಿಕ ಮಹಾತ್ಮರ ದರ್ಶನವನ್ನು ಕೈ. ಅಣ್ಣಾಸಾಹೇಬರಿಗೂ ಮಾಡಿಸಬೇಕೆಂದು, ಅವರು ತಮ್ಮ ದರ್ಶನದ ಎಲ್ಲ ಸುದ್ದಿಯನ್ನು ಅಣ್ಣಾಸಾಹೇಬರಿಗೆ ಆನಂದದಲ್ಲಿ ಅವರು ರೆಸಿಡೆಂಟ ಮ್ಯಾಜಿಸ್ಟ್ರೇಟರಾಗಿದ್ದಾಗ ತಿಳಿಸಿದರು. ಅದನ್ನು ಓದಿ ಅಣ್ಣಾಸಾಹೇಬರಿಗೆ ಶ್ರೀ ಸಾಯಿ ಬಾಬಾರ ದರ್ಶನದ ಉತ್ಕಂಠತೆ ತೀವ್ರವಾಯಿತು. ಮತ್ತು ಅದರಿಂದ ಅವರು ಒಂದು ತಿಂಗಳ ರಜೆಯನ್ನು ಕೇಳಿ ಉತ್ತರ ಭಾಗದ ಕಮಿಶನರರಿಗೆ ಅರ್ಜಿ ಕಳಿಸಿದರು. ಆದರೆ 'ರಜೆ ಕೊಡ ಲಾಗುವದಿಲ್ಲ'ಎಂದು ಅವರ ಉತ್ತರ ಬಂತು. ಸ್ವಲ್ಪ ದಿನಗಳ ನಂತರ ಕಮಿಶನರ ಸಾಹೇಬರ ಮುಕ್ಕಾಮು ಆನಂದಕ್ಕೆ ಬಂತು. ಅಣ್ಣಾಸಾಹೇಬರು ಅವರಿಗೆ ಪ್ರತ್ಯಕ್ಷ ಭೆಟ್ಟಿಯಾಗಿ ತಮ್ಮನ್ನು ವಾಂದ್ರೆಗಾದರೂ ಬದಲಿ ಮಾಡಿರಿ ಎಂದು ವಿನಂತಿಸಿಕೊಂಡರು. ಆದರೆ ಕಮಿಶನರ ಸಾಹೇಬರು ಅದನ್ನು ನಿರಾಕರಿಸಿದರು. ಯಾಕೆಂದರೆ ವಾಂದ್ರೆಯಲ್ಲಿ ಎರಡು ಸಲ ಅವರು ಮ್ಯಾಜಿಸ್ಟ್ರೇಟರೆಂದು ಕೆಲಸ ಮಾಡಿದ್ದರು. ಮತ್ತು ಈ ಮತ್ತೆ ಅದೇ ಸ್ಥಳಕ್ಕೆ ನೇಮಿಸುವದು ಅವರಿಗೆ ಯೋಗ್ಯವೆನಿಸಲಿಲ್ಲ. ಇತ್ತ ಇವರಿಗಂತೂ ಬಾಬಾರದರ್ಶನದ ಉತ್ಕಂಠತೆ ಅತಿಯಾಗಿತ್ತು. ಅದರಿಂದ ಗುರುಮಾಯಿಯ ಅಂತಃ

ಕರಣ ಕಳವಳಿಸಿತು. ಮತ್ತು ಅವರು ಅಘಟಿತ ಘಟನೆಯನ್ನು ಮಾಡಿ ತೋರಿಸಿದರು. ಕಮಿಶನರ ಸಾಹೇಬರ ಮುಕ್ಕಾಮು ಎಂಟೇ ದಿನಗಳಲ್ಲಿ ಒಮ್ಮೆಲೇ ಆನಂದದಿಂದ ಠಾಣೆಗೆ ಬಂದಿತು. ಮತ್ತು ಅಷ್ಟರಲ್ಲಿ ಒಬ್ಬ ಅಸಿಸ್ಟಂಟ ಕಲೆಕ್ಟರನ ಅಕಸ್ಮಾತ್ ಮೃತ್ಯುವಾಗಿದ್ದರಿಂದ ವರ್ಗಾವಣೆ ಮಾಡುವಾಗ ವಾಂದ್ರಾದ ಜಾಗ ಮತ್ತೆ ಬರಿದಾಯಿತು. ಅದರಿಂದ ಕೂಡಲೇ ಕಮೀಶನರರು ತಾರು ಮಾಡಿ ಅಣ್ಣಾಸಾಹೇಬರನ್ನು ವಾಂದ್ರೆಯಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟ ಎಂದು ನೇಮಿಸಿದರು. ಆ ಸ್ಥಳದ ಚಾರ್ಜ್ ತೆಗೆದುಕೊಂಡ ಕೂಡಲೇ ಹತ್ತು ದಿನದ ರಜೆ ಹಾಕಿ ತಮ್ಮ ಎಲ್ಲ ಪರಿವಾರದೊಂದಿಗೆ ಶ್ರೀ ಸದ್ಗುರು ಸಾಯಿ ಬಾಬಾರ ಪ್ರಥಮ ದರ್ಶನವನ್ನು ತೆಗೆದುಕೊಂಡರು. ಆಗಿನ ಅವರ ದರ್ಶನದ ಆನಂದವನ್ನು ಎಷ್ಟು ಬಣ್ಣಿಸಬೇಕು! ಸದ್ಗುರು ಮಾತೆಯು ಸೂಚಕ ರೂಪದಿಂದ ಅವರ ಪೂರ್ವೇತಿಹಾಸವನ್ನು ಎಲ್ಲರಿಗೂ ತಿಳಿಸಿದರು. ಅದನ್ನು ಕೇಳಿ ಅವರಂತೂ ಚಕಿತರಾದರು! ಮುಂದೆ ಅವರ ಮೇಲೆ ಸದ್ಗುರುರಾಯರ ಪ್ರೀತಿ ಎಷ್ಟಾಯಿತೆಂದರೆ, ಬಾಬಾ ಅವರಿಗೆ, 'ಹೇಮಾಡಪಂತ'ಎಂದು ಬಿರುದು ಕೊಟ್ಟರು. ಮತ್ತು ತಮ್ಮ ಪಶ್ಚಾತ ಅವರಿಂದ 'ಶ್ರೀ ಸಾಯಿ ಸಚ್ಚರಿತದ ೫೨ ಅಧ್ಯಾಯಗಳನ್ನು ಪೂರ್ಣ ಮಾಡಿಸಿಕೊಂಡರು. ಇದು 'ಶ್ರೀ ಸಾಯಿ ಲೀಲಾ ಮಾಸಿಕದಲ್ಲಿ ಪ್ರಸಿದ್ಧವಾಗಿವೆ. ಕೊನೆಯ ೫೨ನೇ ಅಧ್ಯಾಯವನ್ನು ನಿಧನದ ಮೊದಲು ಎರಡೇ ದಿನವಿರುವಾಗ ಅದನ್ನು ಮುದ್ರಿಸಲು ಕಳಿಸಿದರು. ಮತ್ತು ಇದು ನನ್ನ ಕೊನೆಯ ಅಧ್ಯಾಯವೆಂದು ತಮ್ಮ ಕೆಲ ಸ್ನೇಹಿತರಿಗೆ ಮತ್ತು ಬಳಗದವರಿಗೆ ಎರಡು ಮೂರು ದಿನ ಮೊದಲು ತಿಳಿಸಿದರು. ಅವರು ೧೯೧೬ರಲ್ಲಿ ಪೆನ್ಶನ ತೆಗೆದುಕೊಂಡ ನಂತರದ ತಮ್ಮ ಆಯುಷ್ಯವನ್ನು ಪರಮಾರ್ಥಕ್ಕಾಗಿ ಮತ್ತು ಪರೋಪಕಾರದಲ್ಲಿ ಕಳೆದರು.

ಅವರವು ನಿತ್ಯದ ಭಗವತ್ಸೇವೆಯ ನಿಯಮಗಳು ಬಹಳ ಇದ್ದವು. ಸ್ನಾನ ಸಂಧ್ಯೆಗಳಾದ ನಂತರ ಶ್ರೀ ಗುರುಚರಿತ್ರೆ ಓದುವದು, ಶ್ರೀ ವಿಷ್ಣು ಸಹಸ್ರನಾಮದ ಪಠಣ, ಏಕನಾಥೀ ಭಾಗವತ ಮತ್ತು ರಾಮಾಯಣ ಓದುವದು, ಕೆಲವೊಂದು ಉಪನಿಷದಗಳು ಮತ್ತು ಶ್ರೀಮದ್ಭಗವದ್ಗೀತಾ ಮುಂತಾದ ಅಧ್ಯಾತ್ಮಿಕ ಗ್ರಂಥಗಳ ಅಭ್ಯಾಸ ಮಾಡುವದು, ಇವೆಲ್ಲ ಅವರ ನಿತ್ಯದ ಪರಿಪಾಠಗಳಾಗಿದ್ದವು. ಕೊನೆಗೆ ಸುಮಾರು ಒಂದು ತಿಂಗಳು ಅವರು ಪ್ರತಿದಿವಸ ಶ್ರೀ ಕೃಷ್ಣ ನಿಧನದ ಶ್ರೀ ಏಕನಾಥೀ ಭಾಗವತದೊಳಗಿನ ಇಪ್ಪತ್ತನೇ ಅಧ್ಯಾಯವನ್ನು ಬಹಳ ಪ್ರೇಮಪೂರ್ವಕವಾಗಿ ಓದುತ್ತಿದ್ದರು. ಈ ಎಲ್ಲ ನಿಯಮಗಳನ್ನು ಇಟ್ಟುಕೊಂಡು ಅವರು ಶಿರ್ಡೀ ಸಂಸ್ಥಾನ ಮತ್ತು 'ಶ್ರೀ ಸಾಯಿ ಲೀಲಾ'ಮಾಸ ಪತ್ರಿಕೆ ಮುಂತಾದ ಎಲ್ಲ ಕೆಲಸಗಳನ್ನು ಮಾಡಿ ತಮ್ಮ ಕೆಲಸದ ದಿನದ ಡಾಯರಿಯನ್ನು ವ್ಯವಸ್ಥಿತವಾಗಿ ಬರೆದಿಡುತ್ತಿದ್ದರು.

ಯಾರಾದರೂ ಶ್ರೀಮಂತರು ಅಥವಾ ಬಡವರು ಭೆಟ್ಟಿಗೆ ಬಂದರೆ ಅಷ್ಟರಲ್ಲಿಯೇ ವೇಳೆ ತೆಗೆದು ಅವರೊಡನೆ ಪ್ರೀತಿಯಿಂದ ಮಾತನಾಡುತ್ತಿದ್ದರು. ಅವರು ಯಾವಾಗಲೂ ಸಂತಸದಿಂದಿರುತ್ತಿದ್ದರು. ಕಥೆ-ಕೀರ್ತನೆಗಳನ್ನು ಕೇಳುವದು ಅವರಿಗೆ ತುಂಬಾ

ಇಷ್ಟವಾಗಿತ್ತು. ಅದರಿಂದ ಆಮಂತ್ರಣದ ದಾರಿ ಕಾಯದೇ ಕೇಳುವದಕ್ಕೆ ಹೋಗುತ್ತಿದ್ದರು. ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಾಕಷ್ಟು ಸಹಾಯ ಮಾಡಿದ್ದಾರೆ. ಯಾರಾದರೂ ಏನಾದರೂ ಬೇಡಿದರೆ ಅವರೆಂದೂ ಇಲ್ಲವೆನ್ನುತ್ತಿರಲಿಲ್ಲ. ಅವರು ಬಡತನದಿಂದ ಮೇಲೆ ಬಂದದ್ದರಿಂದ ಬಡವರ ಕಷ್ಟಗಳನ್ನು ತಿಳಿದು ಸಾಧ್ಯವಾದ ಮಟ್ಟಿಗೆ ಸಹಾಯ ಮಾಡುತ್ತಿದ್ದರು. ಭೆಟ್ಟಿಯಾಗಲು ಯಾರೇ ಬರಲಿ ಏನಾದರೂ ತಿಂಡಿ ಕೊಡದೆ ಇರಲು ಅವರಿಗೆ ಆಗುತ್ತಿರಲಿಲ್ಲ. ಎಲ್ಲ ಜಾತಿಯವರೂ ಅವರ ಸ್ನೇಹಿತರಿದ್ದರು. ಈ ರೀತಿ ಅಣ್ಣಾಸಾಹೇಬರು ಪ್ರಪಂಚ ಮಾಡಿ ಪರಮಾರ್ಥವನ್ನು ಸಾಧಿಸಿದರು. ಅವರ ನಿಧನ ತಾ 15-7-1929ರಂದು ಮಧ್ಯಾಹ್ನ ಅವರ ಸ್ವಂತ ನಿವಾಸದಲ್ಲಿ ಒಬ್ಬ ಯೋಗಿಗೆ ತಕ್ಕಂತೆ ಬಯಸತಕ್ಕಂಥದಾಯಿತು.

ಶ್ರೀ ಸಾಯಿನಾಥರ ಕೃಪೆಯಿಂದ, ಅಣ್ಣಾಸಾಹೇಬರು ಈ ಗ್ರಂಥರೂಪದ ಅಮೂಲ್ಯ ದೇಣಿಗೆಯನ್ನು ಹಿಂದೆ ಬಿಟ್ಟು ಹೋದರು. ಅದರ ಉಪಯೋಗವನ್ನು ವಾಚಕರು ಅವಶ್ಯ ಮಾಡಿಕೊಳ್ಳಬೇಕು. ಕೊನೆಯ ಅಧ್ಯಾಯದೊಳಗಿನ ೧೮೨ ರಿಂದ ೧೯೪ನೆಯ ಓವಿಯಲ್ಲಿ ಸೂಚಿಸಿದಂತೆ ಈ ಗ್ರಂಥದ ಪಾರಾಯಣ ಅಥವಾ ಸಪ್ತಾಹವನ್ನು ಸಾಯಿ ಭಕ್ತರು ಮಾಡಿ ಅನುಭವ ಪಡೆಯಬೇಕು.

ಶ್ರೀ ಸಾಯಿ ಮಹಾರಾಜರ ಭಕ್ತರು ಕೈ. ಹರೀ ಸೀತಾರಾಮ ದೀಕ್ಷಿತ ಇವರು ಈ ಗ್ರಂಥದ ೩೫ ಅಧ್ಯಾಯಗಳು ಮುಗಿದ ಮೇಲೆ 'ಶ್ರೀ ಸಾಯಿ ಲೀಲಾ'ದಲ್ಲಿ ಒಂದು ಉಪೋದ್ಘಾತವನ್ನು ಪ್ರಸಿದ್ಧಗೊಳಿಸಿದರು. ಅದರಂತೆಯೇ ಗ್ರಂಥವು ಪೂರ್ಣವಾದ ನಂತರ ಸಾಯಿ ಭಕ್ತ ಕೈ. ಬಾಳಕೃಷ್ಣ ವಿಶ್ವನಾಥ ದೇವ ಇವರು ಪ್ರಸ್ತಾವನೆಯನ್ನು ಬರೆದರು. ಶ್ರೀಸಾಯಿ ಮಹಾರಾಜರ ಕಡೆಗೆ ಬರುವ ಸಾವಿರಾರು ಭಕ್ತರಲ್ಲಿ ಭಕ್ತಶ್ರೇಷ್ಠ ಕೈ. ಅಣ್ಣಾಸಾಹೇಬ ದಾಭೋಳಕರ ಇವರೂ ಒಬ್ಬರಾಗಿದ್ದರು. ಕೈ ಅಣ್ಣಾಸಾಹೇಬರಿಂದ ಈ ಪ್ರಾಸಾದಿಕ ಗ್ರಂಥದ ೫೨ ಅಧ್ಯಾಯಗಳು ಪೂರ್ಣಗೊಂಡ ಮೇಲೆ ೫೩ನೆಯ ಅಧ್ಯಾಯದ, ಅಂದರೆ ಅವತರಣಿಕೆಯ ಟಿಪ್ಪಣಿಗಳನ್ನೂ ಇವರು ತಯಾರಿಸಿ ಇಟ್ಟಿದ್ದರು. ಆದರೆ ಇದೇ ಕಾಲಕ್ಕೆ ಅಣ್ಣಾಸಾಹೇಬರು ಈ ಜಗತ್ತನ್ನು ತೊರೆದು, ಬಾಬಾರ ಚರಣದಲ್ಲಿ ವಿಲೀನರಾದದ್ದರಿಂದ ಈ ಟಿಪ್ಪಣಿಗಳು ಸಿಗಲಿಲ್ಲ. ಕೈ. ದೇವ ಉರ್ಫ್ 'ಬಾಬಾರ ಬಾಲಕ' ಇವರು ಈ ಅವತರಣಿಕೆಯನ್ನು ಪೂರ್ಣಗೊಳಿಸಿದರು. ಮೇಲೆ ಹೇಳಿದ ಉಪೋದ್ಘಾತ ಮತ್ತು ಪ್ರಾಸ್ತಾವನೆಯಲ್ಲಿ ಗ್ರಂಥವಾಚನದ ಮಹತ್ವ ಮತ್ತು ಗುರುಚರಿತ್ರದ ಮೇಲೆ ಇದುವರೆಗೆ ಎಷ್ಟು ಮತ್ತು ಯಾರು ಗ್ರಂಥಗಳನ್ನು ಬರೆದರು ಮುಂತಾದರ ಬಗ್ಗೆ ಮಾಹಿತಿಯನ್ನು ಪೂರ್ಣಕೊಡಲಾಗಿದೆ.

ಇತ್ತೀಚೆಗೆ ಮುಂಬಯಿ, ಪುಣೆ, ಗುಜರಾಥ, ಕಲ್ಕತ್ತಾ, ಮದ್ರಾಸ ಮುಂತಾದ ಶಿರ್ಡಿಯಿಂದ ಬಹಳ ದೂರವಿರುವ ಸ್ಥಳಗಳಲ್ಲಿ ಶ್ರೀ ಸಾಯಿ ಮಹಾರಾಜರ ಉತ್ಸವವನ್ನು ಸಾರ್ವಜನಿಕ ರೀತಿಯಿಂದ ಆಚರಿಸಲಾಗುತ್ತಿದೆ. ಅದರಂತೆ, ಬೇರೆ ಬೇರೆ ಪ್ರಾಂತಗಳಿಂದ ಅಸಂಖ್ಯ ಜನರು ಅವರ ಸಮಾಧಿಯ ದರ್ಶನ ಪಡೆಯಲು ನಿತ್ಯವೂ ಶಿರ್ಡಿಗೆ

ಬರುತ್ತಿರುವರು. ಇಂಥ ಸಮಯದಲ್ಲಿ ಪ್ರತಿಯೊಬ್ಬರೂ ಬಹಳ ಎಚ್ಚರಿಕೆಯಿಂದ ಇರಬೇಕು ಎಂಬ ಸೂಚನೆ ಕೊಡಬೇಕು ಎಂದು ಅನಿಸುವದು. 'ತಾವು ಬಾಬಾರ ಪಟಶಿಷ್ಯರಿದ್ದೇವೆ. ಬಾಬಾ ತಮ್ಮೊಡನೆಯೇ ಪ್ರತ್ಯಕ್ಷ ಮಾತನಾಡುವರು. ನಿನಗಾಗಿ ಇಂಥ ಸಂದೇಶವನ್ನು ಕೊಟ್ಟಿದ್ದಾರೆ. ನಿನ್ನ ಅಂಬೋಣವನ್ನು ನಾನು ಬಾಬಾರಿಗೆ ಹೇಳುವೆನು. ಆದರಿಂದ ನಿನ್ನ ಕಾರ್ಯ ಬೇಗ ಕೈಗೂಡುವದು' ಎಂದೆಲ್ಲ ಹೇಳುವ ಮೋಸಗಾರರು ಅಲ್ಲಲ್ಲಿ ಇರುವದು ಕಂಡು ಬರುವದು. ಇಷ್ಟೇ ಅಲ್ಲ ಪ್ರತ್ಯಕ್ಷ ಶಿರ್ಡಿಯಲ್ಲೂ, 'ಶ್ರೀಯ ಪ್ರಾರ್ಥನೆ ಮಾಡಿದ ನಂತರ ದಿನಾಲು ಬಾಬಾ ನನ್ನ ಜೊತೆಗೆ ಮಾತನಾಡುವರು' ಎಂದು ತಮ್ಮ ಸಹಕಾರಿಗಳಿಂದ ಪ್ರಚಾರವನ್ನೂ ಮಾಡುತ್ತಾರೆ. ಮೊದಲ ಸಲ ಶಿರಡಿಗೆ ಬಂದವರು ಶಿರ್ಡಿಯ ಹೆಚ್ಚಿನ ಮಾಹಿತಿ ಇರದ್ದರಿಂದ ಇಂಥ ಮೋಸಗಾರರ ತಂತ್ರಕ್ಕೆ ಬಲಿಯಾಗುವ ಸಂಭವವಿರುವದು.

ಶ್ರೀ ಸಾಯಿ ಬಾಬಾ ಪ್ರತ್ಯಕ್ಷ ಪರಮೇಶ್ವರರಿದ್ದು ತಾವೇ ಮನಃಪೂರ್ವಕ ಮಾಡಿದ ಪ್ರಾರ್ಥನೆ ಅವರಿಗೆ ತಲುಪುವದು. ಅದಕ್ಕಾಗಿ ಮಧ್ಯಸ್ಥರ ಅವಶ್ಯಕತೆ ಇಲ್ಲ. ಇದರ ಪ್ರತ್ಯಂತರವು ಶ್ರೀ ಸಾಯಿ ಬಾಬಾರ ಸಾವಿರಾರು ಭಕ್ತರಿಗೆ ಬಂದಿದೆ. ಅವರ ಸಮಾಧಿಯ ದರ್ಶನ, ಅವರ ಸ್ಮರಣ, ಮನನ, ವಾಚನ ಮುಂತಾದವುಗಳನ್ನು ಮಾಡುತ್ತಿದ್ದರೆ ಈ ಅನುಭವವು ಬಂದೇ ಬರುವದು.ಶ್ರೀ ಸಾಯಿಬಾಬಾರ ಕಾಲದಲ್ಲಿಯೂ ಇಂಥ ಮೋಸಗಾರರು ಅಲ್ಲಿ ಬರುತ್ತಿದ್ದರು ಮತ್ತು ಫಜೀತಿ ಪಟ್ಟು ತಿರುಗಿ ಹೋಗುತ್ತಿದ್ದರು. ಕೈ. ಮುಕ್ತಾರಾಮ(ರಾವೇರ, ಖಾನದೇಶ) ಇವರು ಶ್ರೀಯವರು ಇದ್ದಾಗ ಶಿರ್ಡಿಯಲ್ಲಿ ಇದ್ದರು.ಶ್ರೀ ಸಾಯಿನಾಥರು ದೇಹಬಿಟ್ಟಮೇಲೆ ಎರಡು ದಿನಗಳ ನಂತರ ಈ ಗೃಹಸ್ಥರು ಅಲ್ಲಿಯ ಜನರಿಗೆ ಹೇಳಿದರು'ಶ್ರೀ ಬಾಬಾ ಅವರು ನನಗೆ ತಮ್ಮ ಸ್ಥಳದಲ್ಲಿ ದ್ವಾರಕಾಮಯಿಯಲ್ಲಿ ಕುಳಿತುಕೊಳ್ಳಲು ಆದೇಶ ನೀಡಿದ್ದಾರೆ. ನಾನೇ ಅವರ-ವಾರಸು ದಾರನಾಗಿದ್ದೇನೆ'ಕೈ ತಾತ್ಯಾಬಾ ಕೋತೇಪಾಟೀಲ, ಶ್ರೀ ರಾಮಚಂದ್ರ ಪಾಟೀಲ ಮುಂತಾದವರು, ಹಾಗೆ ಮಾಡದಿರಲು ಅವರಿಗೆ ತಿಳಿಸಿದರು. ಆದರೆ ಯಾರ ಮಾತೂ ಕೇಳದೇ ಎಲ್ಲರನ್ನೂ ಮೀರಿ ಬಾಬಾ ಕುಳಿತುಕೊಳ್ಳುತ್ತಿದ್ದಲ್ಲಿ ಹೋಗಿ ಕುಳಿತರು. ಸ್ವಲ್ಪ ಸಮಯದಲ್ಲೇ ಕೆಳಗಿನಿಂದ ಸೂಜಿಗಳು ಚುಚ್ಚತೊಡಗಿದವು ಮತ್ತು ರಕ್ತಸೋರ ತೊಡಗಿತು. ಅಲ್ಲಿಂದ ಬೇರೆ ಕಡೆ ಕುಳಿತರೂ ಅದೇ ಸ್ಥಿತಿ. ಕೊನೆಗೆ ಏಳೆಂಟು ದಿನಗಳಲ್ಲಿ ಬಹಳ ದಯನೀಯ ಸ್ಥಿತಿಯಲ್ಲಿ ಶ್ರೀಯವರ ಕ್ಷಮೆ ಯಾಚಿಸಿ ಜೀವಬಿಟ್ಟರು. ಇವರ ಸಮಾಧಿಯೂ ಲೇಂಡಿ ಭಾಗದಲ್ಲಿ ಇದೆ.ಇದೇ ರೀತಿ ಹಕ್ಕು ಪ್ರತಿಪಾದಿಸುವ ಇನ್ನೂ ಮೂರು ನಾಲ್ಕು ಜನರಿದ್ದರು ಆಗ. ಆದರೆ ಮೇಲ್ಕಂಡವರ ಗತಿಯನ್ನು ನೋಡಿ ಅವರು ಬೇರೆಡೆಗೆ ಹೋದರು.

ಇಂಥ ಯಾವನಾದರೂ ಢೋಂಗಿ(ಸುಳ್ಳುಬುರುಕ) ಇಂಥ ಆಟ ಆಡತೊಡಗಿದರೆ ತಾನು ದೊಡ್ಡ ಮಹಾರಾಜನೆಂದು ತಿಳಿದುಕೊಂಡು ನಡೆಯತೊಡಗಿದರೆ,'ಸರಿಗಟ್ಟಲು ಬಂದಿರುವೆಯಾ?'ಹೀಗೆ ಹೇಳಿ ಶ್ರೀಸಾಯಿಯವರೇ ಅವನಿಗೆ ಎಚ್ಚರಿಕೆ ಕೊಡುವರು.

ಆದರೆ ಈಗ ಶ್ರೀ ಬಾಬಾರ ದ್ವಾರಕಾಮಾಯಿಯಲ್ಲಿ ಮತ್ತು ಸಮಾಧೀ ಮಂದಿರದಲ್ಲಿ ಕೆಲಜನರು, 'ಶ್ರೀ ಬಾಬಾ ನನ್ನಲ್ಲಿಅವತೀರ್ಣರಾಗಿದ್ದಾರೆ,' ಎಂದು ಜನರಿಗೆ ಭಾಸವಾಗುವಂತೆ ಮಾಡಿ ತಮ್ಮ ಕಾಲು ಮುಟ್ಟಿಸಿಕೊಳ್ಳುವರು(ನಮಸ್ಕಾರ ಮಾಡಿಸಿ ಕೊಳ್ಳುವರು.)ತಮ್ಮ ಸದ್ಗುರುವನ್ನು ಸರಿಗಟ್ಟಿ ನಡೆಯುವ ಸಾಹಸ ಯಾರು ಮಾಡುವರೋ ಅವರ ಗತಿ ಏನಾಗುವುದೆಂಬದು ಮೇಲಿನ ಸಂಗತಿಯಿಂದ ಕಂಡು ಬರುವದು.

ಇಂಥ ಕೃತ್ಯಗಳಿಗೆ ಉತ್ತೇಜನ ಕೊಡುವವರು ಹೆಚ್ಚಾಗಿ ಸುಶಿಕ್ಷಿತ ಸಮಾಜ ದವರಿದ್ದು ಇಂಥ ಮಹಾರಾಜರ ಮಹತ್ವ ಬೆಳೆಸುವ ಸಲುವಾಗಿ ಅವರು ತಮ್ಮ ಹಸ್ತಕರ ಕಡೆಯಿಂದ ಪ್ರಚಾರವನ್ನೂ ಮಾಡಿಸುವರು. ಜಗತ್ತಿನಲ್ಲಿ ಪ್ರತಿಯೊಂದು ವಿಷಯದಲ್ಲಿ ಸಾಧುಜನರು ಇರುವಂತೆಯೇ ಮೋಸಗಾರರೂ ಇರುವದು ಕಂಡು ಬರುವದು. ಪರಮಾರ್ಥದ ವಿಷಯದಲ್ಲಿಯೂ ಇಂಥವರು ಬಹಳ ಜನ. ಯಾಕೆಂದರೆ ಪರಮಾರ್ಥವು - ಬುದ್ಧಿಯ ಆಚೆಗಿನ-ಬುದ್ಧಿಗೆ ನಿಲುಕದ ವಿಷಯವಾಗಿದ್ದು ಅದರಲ್ಲಿ ಅಷ್ಟಿಷ್ಟು ಶ್ರದ್ಧೆಯಿಲ್ಲದೆ ಮುಂದುವರಿಯುವುದು ಸಾಧ್ಯವಿಲ್ಲ. ಖೊಟ್ಟಿ ನಾಣ್ಯವು ಬೇಡವೆಂದರೆ ವ್ಯವಹಾರದಲ್ಲಿ ನಡೆಯುವದೇ? ಆದರೆ ನಾವು ನಾಣ್ಯಗಳನ್ನು ಯಾವರೀತಿ ಪರೀಕ್ಷಿಸಿ ತೆಗೆದುಕೊಳ್ಳುತ್ತೇವೆಯೋ ಹಾಗೆಯೇ ಸಾಧುಗಳನ್ನೂ ಪರೀಕ್ಷಿಸಿ ನೋಡಬೇಕಾಗುವದು. ಬಾಬಾ ಹೇಳುತ್ತಿದ್ದರು, 'ನನ್ನ ಎಲವುಗಳು ಸಮಾಧಿಯೊಳಗಿಂದ ಮಾತನಾಡಿಯಾವು. ಜನರು ಇರುವೆಗಳಂತೆ ಮುಕರುವರು, ನನ್ನ ಮಕ್ಕಳನ್ನು ನಾನು ಹಕ್ಕಿಗೆ ಹೇಗೋ ಹಾಗೆ ಕಾಲಿಗೆ ದಾರ ಕಟ್ಟಿ ಎಳೆದು ತರುವೆನು.' ಮುಂತಾಗಿ. ಈ ಪ್ರತೀತಿ ಈಗ ಬರುತ್ತಿರುವದು.

ಈ ಜನ ಮುಳುಗುತ್ತಿರುವದ ಕಣ್ಣಿಂದ ನೋಡಬಾರದು।
ಅದಕ್ಕೆ ನನ್ನ ಮನ ಅವರಿಗಾಗಿ ಕಳವಳಿಸುವದು॥

ಇವು ತುಕಾರಾಮ ಮಹಾರಾಜರ ಶಬ್ದಗಳು. ನಿಜವಾದಸಾಧುಸಂತರ ಮನಸ್ಸು ಮಾನವ ಪ್ರಾಣಿಗಳ ಕಲ್ಯಾಣಕ್ಕಾಗಿ ತಳಮಳಿಸುವದು. ಈ ಕಾರ್ಯವು ಬೇರೆ ಜನರ ಪ್ರಚಾರಕಾರ್ಯದಿಂದ ಆಗದು. ಪ್ರಚಾರ ಮಾಡುವವರಿಗೂ ಸದ್ಗುರುವಿನ ಆದೇಶವಿರ ಬೇಕಾಗುವದು (ಆಶೀರ್ವಾದ).

ಆರಂಭದಲ್ಲಿ ಹೆಚ್ಚಾಗಿ ಮನುಷ್ಯನು ತನ್ನ ಕಾರ್ಯ ಕೈಗೂಡಲೋಸುಗ ಈಶ್ವರನ ಪ್ರಾರ್ಥನೆಯನ್ನು ಸಕಾಮವಾಗಿಯೇ ಮಾಡುತ್ತಿರುವನು ಅಥವಾ ಇಂಥ ಪವಿತ್ರ ಸ್ಥಾನಕ್ಕೆ ಇಲ್ಲವೇ ಯಾರಾದರೂ ಸತ್ಪುರುಷರ ದರ್ಶನಕ್ಕೆ ಹೋಗುತ್ತಿರುವನು. ಇತ್ತೀಚೆಗೆ ಸಾವಿರಾರು ಜನರಿಗೆ ಶ್ರೀ ಬಾಬಾರ ಅನುಭವವಿದ್ದು , ಕೆಲವು ಕಡೆಗೆ ಬರೀ ತೋರಿಕೆಯ ಜನರೂ ಹಲವೆಡೆಗೆ ತಮ್ಮ ಬಣ್ಣವನ್ನು ತೊಡಿಸುವರು. ಶ್ರೀ ಸಾಯಿ ಮಹಾರಾಜರು 'ಜನ್ಮ ಸಿದ್ಧ ಪುರುಷರಿರುವರು. ಧ್ಯೇಯಸಾಧನೆಗೆ ಸಾಧಕನಪ್ರಯತ್ನ ಬೇಕೇ ಬೇಕು. ಆದರೆ ಪ್ರಯತ್ನ ಮಾತ್ರದಿಂದ ಯಶ ದೊರೆಯುವುದಿಲ್ಲ. ಆ ಪ್ರಯತ್ನದಲ್ಲಿ ಯಶಸ್ಸು

ಸಿಗಲು ಈಶ್ವರ ಕೃಪೆಯ ಸಹಾಯವೂ ಬೇಕು. ಪರಮಾರ್ಥಸಾಧಕರಿಗಾದರೂ ಇದೇ ಪ್ರಕಾರವಿರುವದು. ಸಾಧಕನ ಪ್ರಯತ್ನಕ್ಕೆ ಯಶ ದೊರಕಲು ಗುರುಕೃಪೆ ಬೇಕು. ಗುರುಕೃಪೆಯ ಹೊರತು ಪರಮಾರ್ಥದ ಯೋಗ್ಯ ಸ್ಥಾನವನ್ನು ತಲುಪಲು ಆಗುವುದಿಲ್ಲ. ಗುರುಕೃಪೆಯ ಜೊತೆಗೆ ಈಶ್ವರ ಕೃಪೆಯೂ ಬೇಕು.॥ ಗುರುವಿನಿಂದ ಜ್ಞಾನ ಪಡೆಯುವದು। ಈ ಎಲ್ಲ ಹೊಣೆ ದೇವರದು। ಈಶ್ವರ ಕೃಪೆಯ ಹೊರತು ಎಂದೂ।ಸದ್ಗುರು ಲಭಿಸನು ॥ ಸದ್ಗುರುವು ದೊರೆತರೂ । ಈಶಕೃಪೆಯಿಲ್ಲದೇ ಭಕ್ತರಾಗರು । ಇಲ್ಲಿ ಈಶ್ವರನೇ ಸದ್ಗುರು । ವೇದ ಶಾಸ್ತ್ರಗಳಲಿದು ಹೇಳಿದೆ ॥ ಗುರುಶಿಷ್ಯರಲ್ಲಿ ಭೇದ ಮಾಡಿದ । ಅವನು ತನ್ನನ್ನು ತಾ ಕಳಕೊಂಡ । ಹೀಗೆ ಈಶ್ವರಾನುಗ್ರಹದಿಂದ। ಜ್ಞಾನ ಸಂಪನ್ನನಾಗುವ ಜೀವ ॥

ಈಶ್ವರೀ ಕೃಪೆಯ ಹೊರತು ಸದ್ಗುರುವಿನ ಲಾಭವಾಗಲು ಸಾಧ್ಯವಿಲ್ಲ, ಎಂದು ಈ ಕಾರಣದಿಂದಲೇ ಯೋಗ ವಾಸಿಷ್ಠದಲ್ಲಿ ಹೇಳಿದೆ. ಅಂತಃಕರಣವುಳ್ಳ ತಂದೆತಾಯಿಗಳನ್ನು ಪಡೆಯುವದು ಸುದೈವವನ್ನೇ ಅವಲಂಬಿಸಿದೆ.

ಶ್ರೀ ಸಾಯಿ ಬಾಬಾರ ರೀತಿ ತೀರ ಭಿನ್ನವಾಗಿದೆ. ತನ್ನ ಮರಿಗಳಿಗೆ ಆಮೆಯು (ಕೂರ್ಮ) ತನ್ನ ದೃಷ್ಟಿಯಿಂದಲೇ ಪೋಷಣೆ ನೀಡುತ್ತದೆಯೋ ಅದರಂತೆ ನಮ್ಮ ಸದ್ಗುರುಗಳು ಯಾರಿಗೂ ಉಪದೇಶ ಅಥವಾ ಮಂತ್ರ ಕೊಡದೇ ತಮ್ಮ ಕೃಪೆಯಿಂದಲೇ ಬೇರೆ ಬೇರೆ ಸಮಯಕ್ಕೆ ಭಕ್ತರ ಯೋಗ್ಯತೆಯಂತೆ ಅವರಿಗೆ ಬ್ರಹ್ಮಾನಂದವನ್ನು ದೊರಕಿಸಿ ಕೊಟ್ಟರು. ಶ್ರೀ. ಹ.ಭ.ಪ. ದಾಸಗಣೂ ಮಹಾರಾಜರಿಗೆ ಪಂಢರಪುರದ ವಾರಿಗೆ ಹೋಗುವ ಅವಶ್ಯಕತೆ ತೀವ್ರವಾದಾಗ, 'ನಾನೇ ಶ್ರೀ ಪಾಂಡುರಂಗನಿದ್ದೇನೆ, ಪಂಢರಿಗೆ ಹೋಗುವ ಅವಶ್ಯಕತೆಯಿಲ್ಲ ಇದನ್ನು ತೋರಿಸುವದಕ್ಕೆ. ಶಿರ್ಡಿಯ ದ್ವಾರಕಾ ಮಾಯಿಯಲ್ಲೇ ತಾವೇ ಪಾಂಡುರಂಗನಾಗಿ ದರ್ಶನ ಕೊಟ್ಟರು. ಕೈ. ಬಾಪೂಸಾಹೇಬ ಜೋಗ ಅವರು ಅಕ್ಕಲಕೋಟ ಸ್ವಾಮಿಯವರ ದರ್ಶನದ ಇಚ್ಛೆಯನ್ನು ಪ್ರಕಟಿಸಿದರು. ಹಾಗೂ ಅದರ ಹಟದಿಂದ ಮಧ್ಯಾಹ್ನದ ಆರತಿಗೂ ಬರಲಿಲ್ಲ. ಆರತಿಯ ಹೊತ್ತಿಗೆ ಶ್ರೀಯವರು ಎರಡು ಸಲ ಕರೆಕಳಿಸಿದ ಮೇಲೆ ಬಂದರು. ಆರತಿ ಮುಗಿಯಿತು. ಮತ್ತು ಬಾಬಾರ ಎದುರು ನಮಸ್ಕಾರ ಮಾಡುವಾಗ, ಎಲ್ಲರಿಗೂ, ಶ್ರೀ ಅಕ್ಕಲಕೋಟ ಮಹಾರಾಜರ ರೂಪದಲ್ಲಿಯೇ ಸಾಯಿನಾಥ ಮಹಾರಾಜರು ದರ್ಶನವಿತ್ತರು. ಇಂಥ ಮಹಾತ್ಮರ ಕೃಪೆ ಪಡೆಯಲು ಮಧ್ಯಸ್ಥರ ಅವಶ್ಯಕತೆ ಏನಿದೆ? ಶ್ರೀ ಪಾಂಡುರಂಗ, ಭಗವಾನ ಕೃಷ್ಣ, ರಾಮಚಂದ್ರ ಪ್ರಭು ಆದಿ ದೇವತೆಗಳಿಗೆ ಹೇಗೆ ಯಾರೂ ಶಿಷ್ಯರಾಗಲು ಸಾಧ್ಯವಿಲ್ಲವೋ ಹಾಗೆಯೇ ಶ್ರೀ ಸದ್ಗುರು ಸಾಯಿನಾಥರಿಗೂ ಯಾರೂ ಅವರ ಜೀವನದಲ್ಲಿ ಶಿಷ್ಯರಾಗಲಿಲ್ಲ. ಈಗ್ಯೂ ಇಲ್ಲ, ಮುಂದೆಯೂ ಆಗುವದಿಲ್ಲ. ನಾವೆಲ್ಲ ಅವರ ಭಕ್ತರು. ಪ್ರೇಮದಿಂದ ತಮ್ಮ ದೇವತೆಯನ್ನು ಪ್ರಸನ್ನಗೊಳಿಸಲು ಬರುತ್ತದೆ ಎಂಬುದು ಈ ಗ್ರಂಥದ ಅನುಭವದಿಂದ ಕಂಡುಬರುವದು. ಇತ್ತೀಚೆಗೂ (ಈಗಲೂ) ಇಂಥ ಅನುಭವವು ಬಹುಶಃ ಪ್ರತಿಯೊಬ್ಬರಿಗೂ ಬರುತ್ತಿವೆ. ಶ್ರೀ ಸಾಯಿನಾಥರಿಂದಲೇ

ಶಿರ್ಡೀ ಊರಿಗೆ ಮಹತ್ವ ಬಂದಿದೆ. ಇಷ್ಟೇ ಅಲ್ಲದೇ, ಪಂಢರಪೂರ, ಗಾಣಗಾಪೂರ, ನಾಶಿಕ, ರಾಮೇಶ್ವರ, ಬದ್ರೀನಾರಾಯಣ, ಪ್ರಯಾಗ, ಕಾಶೀ ಇವುಗಳಂತೆ ಶಿರ್ಡೀಯೂ ಕ್ಷೇತ್ರವಾಗಿದೆ. ಅಲ್ಲದೇ ಅದು ಜಾಗೃತ ಸ್ಥಾನವಾಗಿದೆ. ಅದ್ದರಿಂದ ಸಾಯಿ ಬಾಬಾರಿಗೆ ಸಂತ, ಗುರು ಅಥವಾ ದೇವರು ಎಂದು ತಿಳಿದುಕೊಳ್ಳುವವರಿಗೆ ಮತ್ತೆ ಹೇಳ ಬೇಕೆನಿಸುವದು, ಬಾಬಾರ ಚರಣದಲ್ಲಿ ಏನಾದರೂ ಕೇಳಿಕೊಳ್ಳುವದಿದ್ದರೆ ಅದನ್ನು ಶಿರ್ಡೀಯಲ್ಲಿ ಅಥವಾ ಈ ಜಗತ್ತಿನ ಯಾವದೇ ಭಾಗದಲ್ಲಿದ್ದು ಭಕ್ತಿಭಾವದಿಂದ ಮತ್ತು ವಿಶ್ವಾಸವಿಟ್ಟು ಬೇಡಬೇಕು. ಸ್ವಲ್ಪ ತಾಳ್ಮೆ ಇರಬೇಕು. ಮನೋರಥಗಳು ಪೂರ್ಣ ವಾಗುವವು;ಆದರೆ ತಿಳಿಯದೆ ಮೋಸಗಾರರ ಕೈಗೆ ಸಿಕ್ಕು, ತಮಗೆ ಮತ್ತು ಇನ್ನೊಬ್ಬರಿಗೂ ಮೋಸವಾಗಬಾರದು.

ಶ್ರೀ ಸಾಯಿ ಬಾಬಾರ ಪರಮ ಭಕ್ತ ಕೈ ಹರೀ ಸೀತಾರಾಮ ದೀಕ್ಷಿತ ಉರ್ಫ್ ಕಾಕಾ ಇವರ ಉಲ್ಲೇಖವು ಈ ಗ್ರಂಥದಲ್ಲಿ ಬಹಳ ಕಡೆಗೆ ಬಂದಿದೆ. ಅವರು ಬಾಬಾರ ನಿಸ್ಸೀಮ ಭಕ್ತರಿದ್ದರು. ದಕ್ಷಿಣ ಭಾರತದ ಒಬ್ಬಿಬ್ಬರು ಭಕ್ತರು, ಪ್ರಸಿದ್ಧ ಮಾಡಿದ ತಮ್ಮ ಪುಸ್ತಕದಲ್ಲಿ ಶ್ರೀ ಸಾಯಿ ಬಾಬಾ ಇವರು ಮುಸಲ್ಮಾನರಿದ್ದು ಅವರ ಜನ್ಮ ಹೈದರಾಬಾದದಲ್ಲಿ ಒಂದು ಊರಲ್ಲಿ ಆಗಿದೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಕೈ. ದೀಕ್ಷಿತ ಇವರು ೨೫ ವರ್ಷಗಳ ಹಿಂದೆ, 'ಶ್ರೀ ಸಾಯಿ ಲೀಲಾ'ದಲ್ಲಿ ಪ್ರಸಿದ್ಧ ಗೊಳಿಸಲಾದ ಉಪೋದ್ಘಾತದ, ಆರಂಭ ದಲ್ಲಿಯೇ ಮಾಹಿತಿ ನೀಡಿದ್ದಾರೆ. ಬಾಬಾರ ಹೆಸರು ಸಾಯಿಬಾಬಾ ಎಂದು ಯಾರು ಇಟ್ಟರು, ಬಾಬಾರ ಕಡೆಗೆ ಬರುವ ಗೃಹಸ್ಥರು, ಆಗಿನ ಪರಿಸ್ಥಿತಿ ಮುಂತಾದ ಮಾಹಿತಿಯನ್ನು ಸಾಕಷ್ಟು ಇದ್ದದರಿಂದ ಈ ಉಪೋದ್ಘಾತವನ್ನು ಈ ಗ್ರಂಥದ ಆರಂಭದಲ್ಲಿಯೇ ಕೊಡಲಾಗಿದೆ. ಶ್ರೀಯವರ ಕಿವಿ ಚುಚ್ಚಲಾಗಿತ್ತು ಎಂದು ಶ್ರೀಯವರ ಸಾನ್ನಿಧ್ಯದಲ್ಲಿ ಇರುತ್ತಿದ್ದ ಶ್ರೀ ರಾಮಚಂದ್ರ ದಾದಾ ಪಾಟೀಲ, ಸಗುಣ ಮೇರೂ ನಾಯಕ, ಬಾಪ್ಪಾಜಿ ರತ್ನ ಪಾರಖೀ, ದಗಡೂ ಸೋನಾರ ಮುಂತಾದ ಶಿರ್ಡೀಯಲ್ಲಿಯ ಗೃಹಸ್ಥರು ಹೇಳುವರು. ಅವರು ಹಿಂದುಗಳಿದ್ದರೋ, ಯವನರಿದ್ದರೋ ಇದರ ಸಂಶೋಧನದ ಅವಶ್ಯಕತೆ ಇಲ್ಲ. ಈ ವಿಷಯದಲ್ಲಿ ಏಳನೇಯ ಅಧ್ಯಾಯದಲ್ಲಿ ಹೇಮಾಡಪಂತರು ಬರೆದೇ ಇರುವರು. ಶ್ರೀ ಬಾಬಾರ ಹತ್ತಿರ ಎಲ್ಲ ಧರ್ಮಗಳಿದ್ದವು. ಗಿಡವು ಎಷ್ಟೇ ದೊಡ್ಡದಾಗಿರಲಿ, ಅದನ್ನು ಯಾರು ಹಚ್ಚಿದರು? ಅದರಲ್ಲಿ ಎಷ್ಟು ಹಣ್ಣು ಇವೆ ಮುಂತಾದವುಗಳ ಎಣಿಕೆ ಮಾಡದೇ, ತಾವು ಅದರ ಮೇಲಿನ ಸಿಹಿ ಫಲಗಳನ್ನು ಹೇಗೆ ಪಡೆಯಬಹುದು ಎಂಬುದನ್ನು ನೋಡುವಿರಿ; ಆದರೆ ಸಾಧುಸಂತರ ಜಾತಿ, ಅವರ ಧರ್ಮ ಇವುಗಳನ್ನು ತಿಳಿದುಕೊಳ್ಳುವ ಮೋಹವನ್ನು ತಾವು ದೂರಮಾಡುವದಿಲ್ಲ.

ತಮ್ಮ ಧರ್ಮದಲ್ಲಿ ಮನುಷ್ಯನು ತನ್ನ ದೈನಂದಿನ ಆಯುಷ್ಯಕ್ರಮವನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಸಾಕಷ್ಟು ನಿಯಮಗಳಿವೆ. ಅದರಲ್ಲಿಯೇ ಪ್ರಾರ್ಥನೆ ಯದೂ ಸಮಾವೇಶವಿದೆ. ಸಮಾಜದಲ್ಲಿದ್ದು ನಿರ್ವಿಕಲ್ಪ ಪ್ರಾರ್ಥನೆ ಮಾಡುವವಗೆ

ಮುಕ್ತಿ ಸಿಗಬಲ್ಲದು, ಈ ತತ್ವವನ್ನು ಸಂತ ತುಕಾರಾಮ ಮತ್ತು ಏಕನಾಥ ಮಹಾರಾಜರು ತೋರಿಸಿಕೊಟ್ಟಿದ್ದಾರೆ. ಪ್ರಾರ್ಥನೆಯಲ್ಲಿ ನಾಮಸ್ಮರಣೆ, ಕೀರ್ತನ, ಮನನ ಮುಂತಾದವುಗಳ ಸಮಾವೇಶವಾಗುವದು. ಧಾರ್ಮಿಕ ಗ್ರಂಥದ ವಾಚನವೂ ಪ್ರಾರ್ಥನೆಯ ಒಂದು ಭಾಗವಿದೆಯೆಂದು ಕೈ ದೇವ ಇವರ ಪ್ರಸ್ತಾವನೆಯಿಂದ ಕಂಡು ಬರುವದು. ತಮ್ಮ ಪ್ರತಿದಿನದ ೨೪ ಗಂಟೆಗಳಲ್ಲಿ ಕನಿಷ್ಟ ೨೪ ಮಿನಿಟುಗಳನ್ನಾದರೂ ಏಕಾಗ್ರ ಮನಸ್ಸಿನಿಂದ ಪ್ರಾರ್ಥನೆಯಲ್ಲಿ ಕಳೆದರೆ ಮನಸ್ಸು ಶಾಂತವಾಗುವದು. ಪ್ರಾರ್ಥನೆಯ ಬಲ ವರ್ಣಿಸಲಾರದಷ್ಟಿದೆ. ಪೂರ್ವಸಂಚಿತದಂತೆ ಐಹಿಕ ಸುಖದುಃಖಗಳು ಮನುಷ್ಯನು ಭೋಗಿಸಬೇಕಾಗುವದರಿಂದ, ದೈವದಲ್ಲಿದ್ದುದನ್ನು ಯಾರಿಂದಲೂ ತಪ್ಪಿಸಲಾಗದಿದ್ದರೂ ಈ ಜನ್ಮದ ಸೇವೆ ಮತ್ತು ಸತ್ಕೃತ್ಯಗಳು ಈ ಜನ್ಮದ ಸಂಚಿತ ಗಳೆಂದು ಎಣಿಸಲಾಗುವದು. ಪ್ರಾರ್ಥನೆಯು ವೈಯಕ್ತಿಕ ಅಥವಾ ಸಾಮುದಾಯಕವೇ ಆಗಿರಲಿ, ಅದು ಆಯಾ ಶ್ರೇಣಿಯಂತೆ ಯಶಸ್ವಿಯಾಗುವದು. ಸಾಧಕ ಅಥವಾ ಮುಮುಕ್ಷು ಯಾರಾದರೂ ಇರಲಿ ಅವನು ತನ್ನ ಗುರುವಿನ ಮೇಲೆ ನಿಜವಾದ ಪ್ರೇಮವನ್ನಿಟ್ಟು ಸ್ವತಂತ್ರ ಬುದ್ಧಿಯಿಂದ ವಿಚಾರ, ಅಭ್ಯಾಸ ಮತ್ತು ನಿಧಿಧ್ಯಾಸ ಮಾಡಿದರೆ ಅವರವರ ಯೋಗ್ಯತೆಗೆ ತಕ್ಕಂತೆ ಗುರುಕೃಪೆಯಾದೀತೆಂದು ನಂಬುಗೆ ಇದೆ.

ಗುರು ಪೌರ್ಣಿಮ ತಾ 18-7-1951<br>ಶಿರ್ಡೀ ನಾಗೇಶ ಆತ್ಮಾರಾಮ ಸಾವಂತ

❋ ❋ ❋

# ಭೂಪಾಳೀ

(ಶ್ರೀ ರಾಮಚಂದ್ರ ಸೀತಾರಾಮ ದೇವ ಇವರು ೬-೭-೧೯೨೫ ರ ಬೆಳಿಗ್ಗೆ ಸ್ವರಚಿತವಾದ ಈ ಪಾತಃ ಸ್ಮರಣೆಯನ್ನು ಹೇಳಿದರು)

ಏಳಿರಿ ಏಳಿರಿ ಎಲ್ಲ ಜನ । ಬನ್ನಿ ನೋಡುವ ಸಾಯಿ ಚರಣ ।
ಹರಿದು ಹೋಗುವದು ಭವಬಂಧನ । ಭಾವದಿ ನೋಡಲು ಚರಣ ||ಪ||
ಆದಾಗ ಅವರ ದರ್ಶನ । ತೃಪ್ತಿಯ ಹೊಂದುವುವು ನಯನ ।
ಭಾವದಿ ಸಾಷ್ಟಾಂಗ ನಮನ । ಮಾಡಿ ವಂದಿಸಿ ಚರಣ ||೧||
ಆ ಚರಣದಲಿ ಕೋಟಿತೀರ್ಥಗಳು । ಆ ಚರಣಕೊಂದಿಸಿ ಸದ್ಭಾವದೊಳು ।
ನಮಿಸಲು ಹಗಲು ರಾತ್ರಿಗಳಲೂ । ತಪ್ಪುವವು ಜನನ ಮರಣಗಳು ||೨||
ರೂಪವ ನೋಡಲು ಕಂಗಳಲಿ । ಬಹು ಸುಖ ಸಿಗುವುದು ಸಹಜದಲಿ ।
ಅಜ್ಞಾನ ಕಳೆದು ಕ್ಷಣದಲ್ಲಿ । ಜ್ಞಾನ ಜ್ಯೋತಿ ಬೆಳಗುವದಲ್ಲಿ ||೩||
ನೆನೆಯಿರಿ ಸಾಯಿನಾಥನನ್ನು । ನಾಲ್ಕಕ್ಷರದ ಈ ನಾಮವನ್ನು । [||೪||
ತಪ್ಪುವದು ಜನನ ಮರಣವದರಿಂದ । ಲಭಿಸುವುದು ತಪ್ಪದೆ ಮೋಕ್ಷಪದ
ಪರಬ್ರಹ್ಮವಿದು ಅವತರಿಸಿತು । ಅದಕೆ ಈ ನಾಮವ ಪಡೆಯಿತು ।
ಇನ್ನು ಮೊದಲು ನೆನೆಯಿರದನು । ಬಯಸುವರು ತಮ್ಮಯ ಸುಖವನ್ನು ||೫||
ಸಾಯಿ ನಾಮವೆ ಅಗ್ನಿ ಇಲ್ಲಿ । ಮಹತಾಪಗಳ ಕ್ಷಣದಲ್ಲಿ ।
ಹುಲ್ಲಿನೊಲು ಭಸ್ಮ ಮಾಡುತಲಿ । ಸ್ಮರಿಸಲು ಪ್ರಾತಃ ಕಾಲದಲಿ ||೬||
ಧರ್ಮಾಲೋಪವನು ಬೆಳೆದು ಅದಕೆ ಭೂ ಭಾರವು ಬೆಳೆದದ್ದು ।
ಅದಕೆ ಸಮರ್ಥ ಹುಟ್ಟಿ ಬಂದ । ಜಡ ಮೂಢರನುದ್ಧರಿಸಿದ ||೭||
ದರ್ಶನ ಬೆಳಗಿನಲಿ ಎದ್ದು । ಆದರೆ ಮುಕ್ತಿಯು ದೊರಕುವುದು ।
ತಪ್ಪುವದು ಜನನ ಮರಣವದರಿಂದ । ಭಾವದಿ ಪಡೆದ ದರ್ಶನದಿಂದ ||೮||
ರೂಪವದು ಸುಂದರ ಸುಕುಮಾರ । ಕಾಣುವದು ಅತಿಶಯ ಮನಮೋಹಕರ ।
ಅದನೇ ನೋಡುತಿರಲು ಸತ್ವರ । ನಿಮ್ಮಯ ಜೀವನ ಸಾರ್ಥಕ ||೯||
ಹೇಳುವನು ಸೀತಾರಾಮಸುತ । ಸಾಯಿಯ ನೋಡಿರಿ ಪ್ರೇಮಯುಕ್ತ ।
ಸಂದೇಹವಿದರಲಿ ಇಲ್ಲ । ತಾವಾಗುವಿರಿ ಜನ್ಮ ಮುಕ್ತ ||೧೦||

## ಶ್ರೀ ಸದ್ಗುರು ಸಾಯಿಬಾಬಾರವರ ಅಭಯವಾಣಿ

ಶಿರಡಿಯಲಿ ಯಾರು ಹೆಜ್ಜೆ ಊರುವರು । ಎಲ್ಲ ಅಪಾಯಗಳಿಂದ ದೂರಾದವರು ||೧||

ನನ್ನ ಸಮಾಧಿಯ ಮೆಟ್ಟಲೇರಿದವರ । ದುಃಖಗಳೆಲ್ಲ ದೂರಾಗುವವದರಿಂದ ||೨||

ನಾ ಬಿಟ್ಟು ಹೋದರೂ ಈ ಶರೀರವನು । ಭಕ್ತರಿಗಾಗಿ ನಾ ಓಡಿ ಬರುವೆನು ||೩||

ಹರಕೆಗೊಲಿಯುವದು ನನ್ನ ಸಮಾಧಿ । ನನ್ನಲ್ಲಿರಲಿ ನಿಮ್ಮಯ ದೃಢ ಬುದ್ಧಿ ||೪||

ಎಂದಿಗೂ ನಾ ಜೀವಿಸಿರುವೆ ತಿಳಿಯಿರಿದನು ಸತ್ಯ । ಪ್ರಚೀತಿ ಪಡೆಯಿರಿ ಅನುಭವದಿಂದ ನಿತ್ಯ ||೫||

ನನಗೆ ಶರಣು ಬಂದು ಬರಿಗೈಲಿ ಹೋದ । ಅಂಥವನೊಬ್ಬನ ತೋರಿಸಿರಿಂದ ||೬||

ಯಾರು ನನ್ನನ್ನು ಭಜಿಸುವರೆಂತೋ । ನಾನೊಲಿಯುವೆ ಅವರಿಗೆ ಅವರಂತೆ ||೭||

ಹೊರುವೆನು ನಾನು ನಿಮ್ಮ ಭಾರವನ । ಅನ್ಯ ಅಲ್ಲ ನನ್ನಯ ಈ ವಚನ ||೮||

ತಿಳಿಯಿರಿಲ್ಲಿ ಸಹಾಯ ಎಲ್ಲರಿಗಿರುವದು । ಬೇಡಿದುದೆಲ್ಲ ಇಲ್ಲಿ ಲಭಿಸುವುದು ||೯||

ಕಾಯಾವಾಚ ಮನದಿಂದ ನನ್ನವನಾದವಗೆ । ಎಲ್ಲ ಕಾಲದಲ್ಲೂ ಋಣಿಯಾಗಿರುವೆ ಅವಗೆ ||೧೦||

ಸಾಯಿ ಹೇಳುವ ಅವನೇ, ಅವನೇ ಆದ ಧನ್ಯ । ಆಗುವನಾರೋ ನನ್ನ ಚರಣದಲಿ ಅನನ್ಯ ||೧೧||

ಅಭಂಗ ಲೇಖಕ - ಶ್ರೀ ಮೋಹಿನೀರಾಜ ಪಂಡಿತ
ಪೇನ್‌ಶನರ್ ಮಾಮಲೇದಾರ ನಾಶಿಕ.

# ಅರಿಕೆ

ಈ "ಶ್ರೀ ಸಾಯಿ ಸಚ್ಚರಿತ್ರೆ"ಯ ಓವಿ ಬದ್ಧ ಕನ್ನಡ ಅನುವಾದಿತ ಗ್ರಂಥವನ್ನು ಸಮಸ್ತ ಕನ್ನಡಿಗರಿಗೆ, ವಿಶೇಷತಃ ಶ್ರೀ ಸಾಯಿ ಭಕ್ತರ ಕೈಗಿಡುವಾಗ ಅತ್ಯಂತ ಸಂತೋಷ ಹಾಗೂ ಸಂತೃಪ್ತಿ ಭಾವನೆಯಿಂದ ನನ್ನ ಮನಸ್ಸು ತುಂದಿಲವಾಗುತ್ತದೆ.

ಮೂಲತಃ ನಾನೇನು ಸಾಯಿ ಭಕ್ತಳಲ್ಲ, ಸಂಪ್ರದಾಯದವಳಲ್ಲ, ಬಾಬಾರ ಬಗ್ಗೆ ಹೆಚ್ಚು ಓದಿ ತಿಳಿದವಳೂ ಅಲ್ಲ. ಆದರೂ ಆ ಮಹಾಮಹಿಮ ಸಂತ, ನನ್ನಿಂದ ಈ ಗ್ರಂಥ ಕಾರ್ಯವನ್ನು ಮಾಡಿಸಿಕೊಂಡು ನನ್ನನ್ನು ಕೃತಾರ್ಥಳನ್ನಾಗಿಸಿದ್ದಾನೆ. ಶ್ರೀ ಸಾಯಿಬಾಬಾರ ಭಕ್ತರೆಲ್ಲರಿಗೂ ತಿಳಿದಂತೆ ಅವರ ಮಹಿಮೆ ಅಗಮ್ಯ, ಅಪಾರ, ಅತ್ಯಂತ ಸರಳ ಹಾಗೂ ಅರ್ಥಪೂರ್ಣ. ಈ ಮಹಿಮಾ ಘಟನೆಗಳೆಲ್ಲ ಆಶ್ಚರ್ಯಕರ, ಕಲ್ಪನಾತೀತ. ಹೀಗೆಯೇ ನನ್ನಿಂದ ಈ ಗ್ರಂಥ ರಚನೆಯಾದದ್ದು ಅಕಲ್ಪಿತ, ಸರಳ ಹಾಗೂ ಅರ್ಥಪೂರ್ಣ ಘಟನೆ.

ಮೊದಲಿನಿಂದಲೂ ಆಧ್ಯಾತ್ಮ ಸಂಬಂಧಿ, ಧರ್ಮ ಬೋಧಕ ಗ್ರಂಥ, ಸಾಹಿತ್ಯ, ಚರಿತ್ರೆಗಳ ಅಧ್ಯಯನ ನನ್ನ ಹವ್ಯಾಸ. ಅದರ ಜತೆಗೆ ಅದೇ ತಳಹದಿಯ ಮೇಲೆ - ಹಲವಾರು ಚರಿತ್ರೆ, ಗ್ರಂಥ, ಕಾದಂಬರಿ ಹಾಗೂ ಕಾವ್ಯ ರಚನೆಗಳು ಮಾಡಿ, ಸಾಹಿತ್ಯ ಸರಸ್ವತಿಗೆ ಅಳಿಲು ಸೇವೆ ಸಲ್ಲಿಸಿದವಳು ನಾನು. ನನ್ನ ಕನ್ನಡ-ಮರಾಠಿ ಭಾಷೆಗಳ ಅಭ್ಯಾಸ, ಬರವಣಿಗೆ, ದ್ವಿ-ಭಾಷಾ ಸಾಹಿತ್ಯ ರಚನೆಯಲ್ಲಿ ಒಂದು ಓಘವನ್ನು ಕೊಟ್ಟಿದೆ. ಇದಕ್ಕೆ ನನ್ನ ಕುಲದೈವತ - "ಶ್ರೀ ಕಲ್ಲೊಳ್ಳಿ ವೆಂಕಟೇಶ ದೇವರ" ಅನುಗ್ರಹ, "ಹುಟ್ಟಿದ ಮನೆ - ಕೊಟ್ಟ ಮನೆ"ಗಳ ಗುರು-ಹಿರಿಯರ ಆಶೀರ್ವಾದವೇ ಕಾರಣ. ಈ ಸಾಹಿತ್ಯಾಭ್ಯಾಸ - ಕೃಷಿ ಕಾರ್ಯದಲ್ಲಿಯೇ ನನಗೆ, ಇಸ್ವೀ ಸನ್ ೧೯೯೨ ರಲ್ಲಿ ಕೈ-ಗೋವಿಂದ, ರಘುನಾಥ ದಾಭೋಲಕರ (ಹೇಮಾಡಪಂತ) ಕೃತ - "ಶ್ರೀ ಸಾಯಿ ಸಚ್ಚರಿತ್ರೆ" ಮೂಲ ಮರಾಠಿ ಗ್ರಂಥದ ವಾಚನ - ಅಧ್ಯಯನ ಮಾಡುವ ಸುಯೋಗವು ಒದಗಿ ಬಂದಿತು. ಓದಿದಾಗ ಪುನಃ ಪುನಃ ಓದುವ ಆಸೆ ಹೆಚ್ಚಾಯಿತು. ಓದುತ್ತಾ, ಓದುತ್ತಾ ಈ ಮಹಾನ್ ಗ್ರಂಥದ ರಸಸ್ವಾದನೆ ಎಷ್ಟು ಅವಿಸ್ಮರಣೀಯ ಹಾಗೂ ಮಧುರ ವಾಗಿತ್ತೆಂದರೆ, ತಾನೇ ತಾನಾಗಿ ಸಾಯಿಭಕ್ತಿ - ಪರಮಾನಂದ - ಶಾಂತಿ - ಸಮಾಧಾನದ ಪರಮಾನುಭೂತಿಯ ಅನುಭವವಾಯಿತು. ಆಗ ಇದೇ ಅವಿಸ್ಮರಣೀಯ ಪರಮಾನಂದದ ರಸಸ್ವಾದನೆಯನ್ನು ಮರಾಠಿ ಭಾಷೆಯನ್ನರಿಯದ ಲಕ್ಷಾಂತರ ಕನ್ನಡ ಸಾಯಿ ಭಕ್ತರಿಗೆ ಏಕೆ ಉಣಬಡಿಸಬಾರದು ? ಎಂಬ ವಿಚಾರ ಪ್ರಚೋದಿತವಾಯಿತು. ಮೊದಲಿನಿಂದಲೂ ಒಂದು ಶ್ರೇಷ್ಠ ಗ್ರಂಥ ರಚನೆಯ ಇಚ್ಛೆ ಇದ್ದ ನನಗೆ, ಸ್ವತಂತ್ರ ಗ್ರಂಥ ರಚನೆಯಲ್ಲದಿದ್ದರೂ ತನ್ನ ಮಹಾನ್ ಚರಿತ್ರೆಯ ಮೂಲ ಮರಾಠಿ ಗ್ರಂಥದ (ಓವಿಬದ್ಧ) ತದ್ರೂಪ ಕನ್ನಡಾನುವಾದದ ಗ್ರಂಥ ರಚನೆಮಾಡಲು ಆ ಸಾಯಿನಾಥನು

ನನಗೆ ಪ್ರೇರೇಪಿಸಿದನು. ಅದೇ ರೀತಿಯಲ್ಲಿ ಗ್ರಂಥ ರಚನೆಯನ್ನು ನಿರ್ವಿಘ್ನವಾಗಿ ಪೂರ್ಣಗೊಳಿಸಿ, ನನ್ನನ್ನು ಕೃತಾರ್ಥಳನ್ನಾಗಿಸಿದ್ದಾನೆ.

ಶ್ರೀ ಸದ್ಗುರು ಸಾಯಿನಾಥನ ಕೃಪೆಯಿಂದ ಶ್ರೀ ಸಂಸ್ಥಾನದವರು ಈ ಅನುವಾದಿತ ಗ್ರಂಥವನ್ನು ಮಾನ್ಯಮಾಡಿ ಸಂಸ್ಥಾನದಿಂದಲೇ ಮುದ್ರಿಸಿ - ಪ್ರಕಟಿಸುತ್ತಿರುವುದು ಆ ದಯಾಘನನ ಆಶೀರ್ವಾದವೆಂದೇ ಭಾವಿಸುತ್ತೇನೆ. ಈ ಕಾರ್ಯದಲ್ಲಿ ನನಗೆ ನೆರವಾದ ಸಮಸ್ತ ಸಾಯಿ ಭಕ್ತರಿಗೂ ಶ್ರೀ ಸಂಸ್ಥಾನದವರಿಗೂ ಹೃತ್ಪೂರ್ವಕ - ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪ್ರಾಸಾದಿಕ ಗ್ರಂಥವು ಸಮಸ್ತ ಕನ್ನಡ ಸಾಯಿ ಭಕ್ತರ ಮನೆ ಮನಗಳಲ್ಲಿ ಪಠಣ - ಶ್ರವಣ - ಪಾರಾಯಣಗೊಂಡು ಸದ್ಗುರು ಸಾಯಿನಾಥನು ಈ ಮೂಲಕ ಸಮಸ್ತ ಸಾಯಿ ಭಕ್ತರಿಗೂ ಸುಖ-ಸಮೃದ್ಧಿ, ಶಾಂತಿ, ಸದ್ವಿಚಾರ, ಸದಾಚಾರ-ಸದ್ಗತಿಗಳನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀಮತಿ ಲಲಿತಾ ದಾ. ಇನಾಮದಾರ

"ಚಂದಾ", ರಜತಗಿರಿ, ಧಾರವಾಡ - ೫೮೦ ೦೦೪.
"ಬುದ್ಧ ಪೌರ್ಣಿಮಾ"
ತಾ || ೧೮ -೦೫-೨೦೦೦

# ಅವತರಣಿಕೆ


| ಅಧ್ಯಾಯ | ವಿಷಯ | ಪುಟಸಂಖ್ಯೆ |
|---|---|---|
| ೧) | ಮಂಗಳಾಚರಣ | 1 |
| ೨) | ಗ್ರಂಥಕರ್ತನ ಹೆಸರನ್ನು ಹೇಮಾಡಪಂತರೆಂದು ಇಡಲಾಯಿತು | 13 |
| ೩) | ಗ್ರಂಥ ಲೇಖಕ್ಕೆ ಆಜ್ಞೆ, ರೋಹಿಲನ ವೃತ್ತಾಂತ | 29 |
| ೪) | ಶಿರಡಿಗೆ ಸಾಯಿಬಾಬಾರ ಪ್ರಥಮ ಆಗಮನ | 44 |
| ೫) | ಶಿರಡಿಯಲ್ಲಿ ಅವರ ವಸತಿ | 59 |
| ೬) | ಶ್ರೀರಾಮನವಮಿಯ ಉತ್ಸವದ ಆರಂಭ | 73 |
| ೭) | ಶ್ರೀ ಸಾಯಿಬಾಬಾರ ಯೋಗ ಸಾಧನೆ, ಹಿಂದೂ ಅಥವಾ ಯವನ ? ಅವರ ಉಡುಪು, ನಡತೆ, ನಿತ್ಯಕ್ರಮ, ಚಮತ್ಕಾರ, ಮಹಾರೋಗಿಯಿಂದ ಸೇವೆ ಮಾಡಿಸಿಕೊಳ್ಳುವುದು, ಖಾಪರ್ಡೆ ಸಾಹೇಬರ ಮಗನನ್ನು ಪ್ಲೇಗಿನಿಂದ ಉಳಿಸಿದ್ದು, ತಮ್ಮ ಶರೀರದಲ್ಲಿಯೇ ಪ್ಲೇಗಿನ ಗಂಟು ಕಾಣಿಸಿಕೊಂಡದ್ದು. | 85 |
| ೮) | ಭಿಕ್ಷಾಕ್ರಮ, ತಾತ್ಯಾ, ಮ್ಹಾಳಸಾಪತಿ, ಖಿಶಾಲಚಂದ | 96 |
| ೯) | ಒಬ್ಬ ಯುರೋಪಿಯನ್ನನು ಶ್ರೀಯವರ ಅವಜ್ಞೆ ಮಾಡುವನು ಮತ್ತು ದುಃಖ ಹೊಂದವನು | 107 |
| ೧೦) | ಗೇಣಗಲ ಹಲಿಗೆಯ ಮೇಲೆ ಮಲಗುವದು. ಪೈಶಾಚ ವೃತ್ತಿ, ಲೋಕ ಸಂಗ್ರಹ, ಆಸನ, ಧ್ಯಾನ, ಸಾಮರ್ಥ್ಯ, ಮಹಿಮಾನ | 119 |
| ೧೧) | ಡಾ. ಪಂಡಿತರಿಂದ ಪೂಜೆ, ಹಾಜೀ ಸಿದ್ದಿಕ ಫಾಳಕೆ, ಅಭ್ರಾಕರ್ಷಣ, ಅನಿಲದ ಮೇಲೂ ಅಧಿಕಾರ | 131 |
| ೧೨) | ಮಹಾಜನೀ, ಧುಮಾಳ, ನಿಮೋಣಕರ,.ಮುಳೆ ಮುಂತಾದವರು. | 143 |
| ೧೩) | ಬಾಳಾ ಶಿಂಪಿಗನ ಚಳಿಜ್ವರ, ಬುಟೀಸಾಹೇಬರ ಮಹಾಮಾರಿ, ಭೀಮಾಜೀ ಪಾಟೀಲ ಕಫ ಕ್ಷಯ. | 157 |
| ೧೪) | ನಾಂದೇಡದ ಪಾರ್ಶೀ ರತನಜೀ, ನಾಂದೇಡದ ಮೌಲ್ವೀಸಾಹೇಬ, ಮೂರು ರೂಪಾಯಿ ಹದಿನಾಲ್ಕಾಣೆ. | 172 |
| ೧೫) | ದಾಸಗಣೂರಿಗೆ ನಾರದೀಯ ಕೀರ್ತನ ಪದ್ಧತಿಯ ಉಪದೇಶ, ಚೋಳಕರ, ಹಲ್ಲಿ ನುಡಿದುದರ ಅರ್ಥ. | 190 |
| ೧೬) | ಒಬ್ಬ ಗೃಹಸ್ಥನ ಬ್ರಹ್ಮಪ್ರಾಪ್ತಿಯ ಇಚ್ಛೆ. | 200 |
| ೧೭) | ಲೋಭದೊಡನೆ ಬ್ರಹ್ಮನ ಅಖಂಡ ವೈರತ್ವ. | 214 |
| ೧೮) | ಸಾಠೇಯವರ ಗುರುಚರಿತ್ರ ಕಥೆ, ರಾಧಾಬಾಯಿಯ ಉಪದೇಶದ ವಾರ್ತೆ. | 227 |
| ೧೯) | ಹೇಮಾಡರ ಅನುಗ್ರಹ ಕಥೆ. | 240 |
| ೨೦) | ದಾಸಗಣೂರ ಈಶಾವಾಸ್ಯಉಪನಿಷದದ ಶಂಕೆಯನ್ನು ದೀಕ್ಷಿತರ ಮನೆಯ ಹೆಣ್ಣು ಕೆಲಸದಾಳು ನಿವಾರಿಸುವಳು ಮತ್ತು ಮುಂದೆ ಅದರಂತೆಯೇ ಆಗುವರು. | 261 |
| ೨೧) | ಪ್ರಾಂತಾಧಿಕಾರಿ, ಪಾಟಣಕರ ಮತ್ತು ಒಬ್ಬ ವಕೀಲ ಇವರ ಕಥೆಗಳು. | 272 |
| ೨೨) | ದ್ವಾರಕಾಮಾಯೀ, ಮಿರೀಕರ ಮತ್ತು ಬುಟ್ಟಿ ಇವರ ಸರ್ಪದಂಶ ನಿವಾರಣೆ. | 283 |

೨೩) ಮಾಧವರಾಯರ ಅಹಿದಂಶನಿವಾರಣ, ಧುನೀ, ದೀಕ್ಷಿತರಿಗೆ ಗುರುವಿನ ಆಜ್ಞೆ,

೨೪) ಪುರಾಣಿಯ ಮೇಲಿಂದ ಶಿಕ್ಷಣ, ಅಣ್ಣಾ ಬಾಬರೆ, ಮಾವಶೀಬಾಯಿ. 319

೨೫) ದಾಮೂ ಅಣ್ಣಾ ಬಳಿಗಾರ (ಕಾಸಾರ) 331

೨೬) ಪಿತಳೇಯವರಿಗೆ ಅಕ್ಕಲ ಕೋಟೆಯಲ್ಲಿ ಹಣ ಕೊಟ್ಟದ್ದನ್ನು ನೆನಪು ಮಾಡುವದು. 342

೨೭) ಮಾಧವರಾವ ಮತ್ತು ವಿಷ್ಣು ಸಹಸ್ರನಾಮದ ಗ್ರಂಥ 355

೨೮) ಕನಸಿನಲ್ಲಿ ದರ್ಶನವಿತ್ತು ತಿಳಿಸಿ ಹೇಳುವುದು. 372

೨೯) ರಘುನಾಥರಾವ ತೆಂಡೂಲಕರ ಮತ್ತು ಡಾ. ಹಾಟೆ. 390

೩೦) ಸಪ್ತಶೃಂಗೀ ದೇವಿಯ ಉಪಾಸಕ ಕಾಕಾಜಿ, ಖುಶಾಲಚಂದ, ರಾಮಲಾಲ ಪಂಜಲೀ. 406

೩೧) ಮದ್ರಾಸೀ ಸನ್ಯಾಸಿ, ವಿಜಯಾನಂದ, ಬಾಳಾರಾಮ ಮಾನಕರ. 416

೩೨) ಬಾಬಾ ಒಂದು ಕಥೆ ಹೇಳುವರು, ಗೋಖಲೆಬಾಯಿ. 429

೩೩) ವೃಶ್ಚಿಕದಂಶ, ಚಾಂದೋರಕರರ ಮಗಳ ಪ್ರಸೂತಿ, ಬಾಳಾಬುವಾ, ಉದಿಯ ಚಮತ್ಕಾರ. 443

೩೪) ಉದಿಯ ಚಮತ್ಕಾರ. 463

೩೫) ನಿರ್ಗುಣೋಪಾಸಕನು, ಸಗುಣೋಪಾಸಕನಾಗುವನು. ಧರಮಶೀ ಜೇಠಾಭಾಯಿ,
ಸಾಲೀಸೀಟರ ಮತ್ತು ನಿರ್ಬೀಜದ್ರಾಕ್ಷಿ, ಉರೀ-ಪ್ರಚೀತಿ. 477

೩೬) ಗೋಮಾಂತಕದ ಇಬ್ಬರು ಗೃಹಸ್ಥರು. ಔರಂಗಾಬಾದದ ಸಖಾರಾಮ. 496

೩೭) ಚಾವಡೀ ವರ್ಣನೆ. 510

೩೮) ಹಂಡೀ. 528

೩೯) 'ತದ್ವಿದ್ಧಿ ಪ್ರಣಿಪಾತೇನ' ಇದರ ಬಗ್ಗೆ ಶ್ರೀಮುಖದಿಂದ ವಿವರಣೆ. ನಾನಾಸಾಹೇಬ
ಚಾಂದೋರಕರರ ಸಂಸ್ಕೃತಾಭಿಮಾನಹರಣ. ಶ್ರೀ ಬುಟೀ ಅವರಿಗೆ ಮಂದಿರ
ಕಟ್ಟಲು ಅಪ್ಪಣೆ. 543

೪೦) ಬಾಳಾ ಸಾಹೇಬ ದೇವ ಅವರಿಂದ ಡಹಾಣೂದಲ್ಲಿಯ ಬ್ರಾಹ್ಮಣ ಭೋಜನದ ಸ್ವೀಕಾರ. 557

೪೧) ಬಾಳಾ ಸಾಹೇಬ ದೇವ ಅವರಿಗೆ ಜ್ಞಾನೇಶ್ವರಿಯ ಅಧ್ಯಯನದ ಆಜ್ಞೆ, 571

೪೨) ಶ್ರೀ ಸಾಯಿ ದೇಹ-ವಿಸರ್ಜನ ವೃತ್ತಾಂತ. 585

೪೩) ಸದರದಂತೆ. 598

೪೪) ಶ್ರೀಯವರ ಸಮಾಧಿ. 613

೪೫) ಆನಂದರಾವ ಪಾಖಾಡೆಯವರ ಸ್ವಪ್ನ ಮುಂತಾದ್ದು. 628

೪೬) ಮಾಧವರಾಯರ ಗಯಾ ಯಾತ್ರೆ, ಆಡಿನ ಪೂರ್ವಜನ್ಮದ ಕಥೆ. 640

೪೭) ಸರ್ಪ ಮತ್ತು ಕಪ್ಪೆ ಇವು ಪೂರ್ವಾಶ್ರಮದಲ್ಲಿ ಯಾರು ಇದ್ದರು ? 651

೪೮) ಶೇವಡೆ ಮತ್ತು ಸಪಟಣೇಕರ ಇವರ ಕಥೆಗಳು. 667

೪೯) ಹರೀ ಕಾನ್ಹೋಬಾ ಮತ್ತು ಸ್ವಾಮೀ ಸೋಮದೇವ. 682


೫೦) 'ತದ್ವಿದ್ಧಿ ಪ್ರಣಿಪಾತೇನ' ಇದರ ವಿಸ್ತೃತ ಅರ್ಥ. 697

೫೧) ದೀಕ್ಷಿತ, ಬಾಳಾರಾಮ, ನಾಂದೇಡದ ಪುಂಡಲೀಕ ವಕೀಲ, ಇವರ ಕಥೆಗಳು. 714

೫೨) ಗ್ರಂಥ ಸಿಂಹಾವಲೋಕನ. 734

೫೩) ಅವತರಣಿಕೆ-ಶ್ರೀ ಬಾಳಾಸಾಹೇಬ ದೇವಕೃತ 'ಶ್ರೀ ಸಾಯಿನಾಥರ ವಚನಗಳು.' 742













ಶ್ರೀ

## ॥ ಅಥ ಶ್ರೀ ಸಾಯಿ ಸಚ್ಚರಿತ ಪ್ರಾರಂಭಃ ॥

## ಅಧ್ಯಾಯ ಒಂದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಪ್ರಥಮ ಕಾರ್ಯಾರಂಭ ಸ್ಥಿತಿ । ಆಗಬೇಕು ನಿರ್ವಿಘ್ನ ಪರಿ ಸಮಾಪ್ತಿ ।
ಇಷ್ಟ ದೈವತ ಅನುಗ್ರಹ ಪ್ರಾಪ್ತಿ । ಶಿಷ್ಟ ಜನರಿದನಪೇಕ್ಷಿಸುವರು ॥ 1

ಮಂಗಲಾ ಚರಣಕ್ಕೆ ಕಾರಣ । ಸಕಲ ವಿಘ್ನಗಳಿಗಿದು ನಿವಾರಣ ।
ಇಷ್ಟಾರ್ಥ ಸಿದ್ಧಿ ಪ್ರಯೋಜನ । ಅಭಿನಂದನೆ ಎಲ್ಲರದು ॥ 2

ಮೊದಲು ವಂದಿಪೆ ಗಣಪತಿ । ವಕ್ರತುಂಡ ಹೇರಂಭ ಮೂರ್ತಿ ।
ಚತುರ್ದಶ ವಿದ್ಯೆಗಳ ಅಧಿಪತಿ । ಮಂಗಲಾಕೃತಿ ಗಜಮುಖ ॥ 3

ನಿನ್ನುದರವು ಹದಿನಾಲ್ಕು ಲೋಕಗಳಿಗಾಧಾರ । ಆದರಿಂದ ನಿನಗೆಂಬರು
ಲಂಬೋದರ । ಹೊಳೆವ ಪರುಶವ ಹಿಡಿದ ಕರ । ಭಕ್ತರ ವಿಘ್ನಗಳ ಪರಿಹರಿಸಲು ॥ 4

ಹೇ ವಿಘ್ನ ವಿನಾಶೋಪಶಮನ । ಗಣನಾಥಾ ಗಜಾನನಾ ।
ಪ್ರಸಾದಪೂರ್ಣ ಮಾಡೆನ್ನ ವಚನಾ । ಸಾಷ್ಟಾಂಗ ನಮನವ ನಾ ಮಾಡುವೆನು ॥ 5

ನೀನೊದಗುವೆ ಭಕ್ತರ ಸಹಾಯಕೆ । ವಿಘ್ನಗಳುರುಳುವುವು ನಿನ್ನ ಪಾದಕೆ ।
ನಿನ್ನಯ ಪ್ರಸನ್ನ ನೋಟಕೆ । ದಾರಿದ್ರ್ಯವು ದೂರಕೋಡೀತು ॥ 6

ನೀ ಭವಾರ್ಣವ ದಾಟಿಸುವಾತ । ಅಜ್ಞಾನತಮಕೆ ಜ್ಞಾನಜ್ಯೋತ ।
ನೀ ಋದ್ಧಿ ಸಿದ್ಧಿಯರ ಸಹಿತ । ನೋಡು ಸಂತಸದಿ ನನ್ನತ್ತ ॥ 7

ಜಯ ಜಯ ಹೇ ಮೂಷಕವಾಹನಾ । ವಿಘ್ನ ಕಾನನ ನಿಕೃಂತನಾ ।
ಗಿರಿಜಾನಂದನ ಮಂಗಲವದನಾ । ಎನ್ನಭಿವಂದನವನು ಸ್ವೀಕರಿಸು ॥ 8

ನಿರ್ವಿಘ್ನವಾಗಿ ಆಗಲಿದರ ಪರಿಸಮಾಪ್ತಿ । ಅದಕಾಗಿ ಈ ಶಿಷ್ಟಾಚಾರದಯುಕ್ತಿ ।
ಇಷ್ಟದೇವತಾ ನಮಸ್ಕೃತಿ । ಮಂಗಲ ಪ್ರಾರ್ಥ್ಯರ್ಥನಿದ ಆದರಿಸಿದೆ ॥ 9

ಈ ಸಾಯಿಯೇ ಗಣಪತಿ ಇಹನು । ಈ ಸಾಯಿಯೇ ಪರಶು ಹಿಡಿದಿಹನು ।
ಮಾಡುವ ವಿಘ್ನಗಳ ಹನನವನು । ನಿಜವ್ಯುತ್ಪತ್ತಿಯ ಮಾಡಿ ॥ 10

ಇವನೇ ಬಾಲಚಂದ್ರ, ಗಜಾನನ । ಇವನೇ ಏಕದಂತ ಗಜಕರ್ಣ ।
ಇವನೇ ವಿಕಟ ಭಗ್ನರದನ । ಇವನೇ ವಿಘ್ನಕಾನನ ವಿಚ್ಛೇದಕ ॥ 11

ಹೇ ಸರ್ವಮಂಗಲ ಮಾಂಗಲ್ಯಾ । ಲಂಬೋದರಾ ಗಣರಾಯಾ ।
ಅಭೇದರೂಪಾ ಸಾಯಿ ಸದಯಾ । ನಿಜಸುಖ ನಿಲಯಕೆ ಕರೆದೊಯ್ಯೋ ॥ 12

ಇನ್ನು ನಮಿಪೆ ಬ್ರಹ್ಮಕುಮಾರಿ । ಸರಸ್ವತಿಯವಳು ಚಾತುರ್ಯಲಹರಿ ।
ಈ ಎನ್ನ ನಾಲಿಗೆಯ ಮೇಲೇರಿ । ಹಂಸದಂತದನು ವಿನಿಯೋಗಿಸು ॥ 13

ಬ್ರಹ್ಮ ವೀಣೆಯು ಅವಳ ಕರದಲಿ । ಆರಕ್ತ ಕುಂಕುಮರೇಖೆ ಹಣೆಯಲಿ ।
ಹಂಸವಾಹಿನಿಯೇ ಒಪ್ಪುವೆ ಶುಭ್ರವಸ್ತ್ರದಲಿ । ಕೃಪೆಯ ಮಾಡೆನ್ನ ಮೇಲೆ ನೀನು ॥ 14

ಇವಳು ವಾಗ್ದೇವತೆ ಜಗನ್ಮಾತೆ । ದೊರಕಿಸಿದವಳ ಪ್ರಸನ್ನತೆ ।
ಸಾರಸ್ವತ ಕೈಗೆಟುಕೀತೆ । ಬರೆಯಲಾಗೀತೆ ಇದನನ್ನಿಂದ ॥ 15

ಜಗಜ್ಜನನಿಯೇ ಈ ವೇದಮಾತಾ । ವಿದ್ಯಾವಿಭವ ಗುಣಸರಿತಾ ।
ಸಾಯಿ ಸಮರ್ಥ ಚರಿತಾಮೃತಾ । ಕುಡಿಸಲೆಲ್ಲರಿಗೂ ಎನ್ನಕರದಿ ॥ 16

ಸಾಯಿಯೇ ಭಗವತಿ ಸರಸ್ವತಿ ರೂಪದಿ । ಓಂಕಾರವೀಣೆಯ ಹಿಡಿದು ಕರದಿ ।
ತಮ್ಮ ಚರಿತೆಯ ತಾವೇ ಹಾಡಿ । ಭಕ್ತೋದ್ಧಾರಕೆ ನಿಂತಿಹರು ॥ 17

ಉತ್ಪತ್ತಿ ಸ್ಥಿತಿ ಸಂಹಾರಕರ । ರಜಃ ಸತ್ವತಮಗುಣಾಕಾರ ।
ಬ್ರಹ್ಮ ವಿಷ್ಣು ಮತ್ತು ಶಂಕರ । ನಮಸ್ಕಾರವಿದು ಅವರಿಗೆ 18

ಹೇ ಸಾಯಿನಾಥ ಸ್ವಪ್ರಕಾಶ । ನಮಗೆ ನೀವೇ ಗಣಾಧೀಶ ।
ಸಾವಿತ್ರೀಶ ಅಥವಾ ರಮೇಶ । ಅಥವಾ ಉಮೇಶರೂ ನೀವೇ ॥ 19

ನೀವೇ ನಮ್ಮಯ ಸದ್ಗುರುಗಳು । ನೀವೇ ಭವನದಿಯ ಹರಿಗೋಲು ।
ಬಿಭಕ್ತರು ನಾವೇ ಪ್ರವಾಸಿಗಳು । ಆಚೆದಡವನು ಸೇರಿಸಿ ॥ 20

ಪೂರ್ವಜನ್ಮದ ಸುಕೃತವದು । ಒಂದಿಷ್ಟಾದರೂ ಇರುವುದರಿಂದ ।
ಕಂಡೇನೀ ಚರಣಾರವಿಂದ । ಆಶ್ರಯವನಿಲ್ಲಿ ಪಡೆದೆನು ॥ 21

ನಮನವೆನ್ನದು ಕುಲದೇವತೆಗೆ । ನಾರಾಯಣ ಆದಿ ನಾಥನಿಗೆ ।
ಕ್ಷೀರಸಾಗರ ನಿವಾಸಿಗೆ । ದುಃಖಹರ್ತನವ ಎಲ್ಲರಿಗೆ ॥ 22

ಪರಶುರಾಮನು ಸಿಂಧುವನಟ್ಟಿಸಿ । ಹೊಸಭೂಭಾಗವನು ನಿರ್ಮಿಸಿ
ಕೊಂಕಣವೆಂಬಭಿಧಾನವನಿರಿಸಿ । ಅಲ್ಲಿ ಅವತರಿಸಿದ ನಾರಾಯಣ ॥ 23

ಜೀವಗಳ ನಿಯಾಮಕನು । ಅಂತರ್ಯಾಮಿಯವ ನಾರಾಯಣನು ।
ಕೃಪಾಕಟಾಕ್ಷದಿಂದ ರಕ್ಷಿಸುವನು । ಅವನ ಪ್ರೇರಣೆಗೆ ಅಧೀನನು ನಾನು ॥ 24

ಅಂತೆಯೆ ಯಜ್ಞಸಾಂಗತೆಗೆ ಭಾರ್ಗವನು । ಗೌಡದೇಶದ ಮಹಾಮುನಿಯನು ।
ಆ ಮೂಳಪುರುಷನನು ತಂದನು । ಅತ್ಯಾದರದ ನಮನವು ಆತನಿಗೆ ॥ 25

ಇನ್ನು ನಮಿಸುವೆ ಋಷಿ ರಾಜ । ಗೋತ್ರಸ್ವಾಮಿ ಭಾರದ್ವಾಜ ।
ಋಗ್ವೇದ ಶಾಖಾ ಶಾಕಲ ಪೂರ್ವಜ । ಆದ್ಯಗೌಡದ್ವಿಜಜಾತಿ ॥ 26

ಮುಂದೆ ನಮಿಸುವೆ ಧರಾಮರ । ಬ್ರಾಹ್ಮಣ ಪರಬ್ರಹ್ಮಾವತಾರ ।
ಯಜ್ಞವಲ್ಕ್ಯಾದಿ ಯೋಗೀಶ್ವರ । ಭೃಗುಪರಾಶರ ನಾರದರ ॥ 27

ವೇದವ್ಯಾಸ ಪಾರಾಶರ । ಸನಕಸನಂದನ ಸನತ್ಕುಮಾರ ।
ಶುಕ ಶೌನಕ ಸೂತ್ರಕಾರ । ವಿಶ್ವಾಮಿತ್ರ ವಶಿಷ್ಠ ॥ 28

ವಾಲ್ಮೀಕಿವಾಮದೇವ ಜೈಮಿನಿಯರ । ವೈಶಂಪಾಯನ ಮೊದಲಾದವರ ।
ನವಯೋಗಿಂದ್ರಾದಿಕ ಮುನಿವರ । ಅವರ ಚರಣಕೆ ನಮನವಿದು ॥ 29

ಇನ್ನು ವಂದಿಸುವೆ ಸಂತ ಸಜ್ಜನರ । ನಿವೃತ್ತಿ ಜ್ಞಾನದೇವ ಸೋಪಾನ ಮುಕ್ತಾ ಇವರ ।
ಏಕನಾಥ ಮತ್ತು ಸ್ವಾಮಿ ಜನಾರ್ಧನರ । ತುಕಾರಾಮ ನರಹರಿ ಕಾನ್ಹೋರನು ॥ 30

ನಾಮ ನಿರ್ದೇಶ ಮಾಡಲೆಲ್ಲರದು । ಸ್ಥಳಾವಕಾಶ ಇಲ್ಲಿ ಆಗದು । ಅದಕೆ
ಎಲ್ಲರಿಗೂ ನಮನವೆನ್ನದು । ಆಶೀರ್ವಚನವ ಬೇಡಿ ಕೊಳುವೆ ॥ 31

ಇನ್ನು ನಮಿಸುವೆ ಸದಾಶಿವ । ಪಿತಾಮಹನವ ಪುಣ್ಯಪ್ರಭಾವ ।
ಬದರಿ ಕೇದಾರವಾಸಿಯವ । ಸಂಸಾರ ತ್ಯಾಜ್ಯವೆನ್ನುತ ॥ 32

ಇನ್ನು ವಂದಿಸುವೆನೆನ್ನ ಪಿತನನು । ಸದಾಶಿವನ ಆರಾಧಕನು ।
ಕಂಠದಿ ರುದ್ರಾಕ್ಷ ಧರಿಸಿದವನು । ಆರಾಧ್ಯದೇವತೆಯು ಶಿವನವಗೆ ॥ 33

ಇನ್ನು ನಮಿಸುವೆ ಜನ್ಮದಾತೆಗೆ । ಪ್ರೇಮದಿ ಎನ್ನ ಪೋಷಿಸಿದವಳಿಗೆ ।
ಹಗಲು ರಾತ್ರಿ ಶ್ರಮಿಸಿದವಳಿಗೆ । ಅವಳುಪಕಾರವನೆನಿತು ನೆನೆಯಲಿ ॥ 34

ಬಾಲ್ಯದಲ್ಲಿ ಎನ್ನ ಬಿಟ್ಟುಹೋದಳು । ಪಿತ್ರವ್ಯಪತ್ನಿ ಎನ್ನ ಬೆಳೆಸಿದಳು ।
ಶರಣಾಗುವೆನವಳ ಚರಣದೊಳು । ಹರಿಸ್ಮರಣದಿ ನಿರತಳವಳು ॥ 35

ಎಲ್ಲರಿಗಿಂತ ಹಿರಿಯಣ್ಣನು । ಸಹೋದರರಲಿ ಅನುಪಮನು ।
ಎನಗಾಗಿ ಪ್ರಾಣ ಬಿಡುವವನು । ಅವನ ಚರಣದಲೆನ್ನ ಶಿರ ॥ 36

ಶ್ರೋತೃಗಳನಿನ್ನು ನಮಿಸುವೆ । ತಮ್ಮ ಏಕಾಗ್ರಚಿತ್ತವ ಕೋರುವೆ ।
ನೀವು ತೋರಲು ಅನವಧಾನವ । ನನಗೆಂತು ಸಮಾಧಾನವಾದೀತು ॥ 37

ಗುಣಜ್ಞ ಚತುರ ಶ್ರೋತೃಗಳಿರಲು । ಕಥಾಶ್ರವಣಕ್ಕೆ ಆತುರರಿರಲು ।
ಉತ್ತರೋತ್ತರ ವಕ್ತಾರನಲೂ । ಪ್ರಸನ್ನತೆ ತಲೆದೋರುವದು ॥ 38

ನೀವೇ ಇರಲು ಅನವಧಾನ । ಕಥೆಯ ಹೇಳಿ ಏನು ಪ್ರಯೋಜನ ।
ಅದಕೆ ಮಾಡುವೆ ಸಾಷ್ಟಾಂಗ ನಮನ । ಪ್ರಸನ್ನ ಚಿತ್ತರಾಗಿ ಆಲಿಸಿರಿ ॥ 39

ವ್ಯುತ್ಪತ್ತಿ ಜ್ಞಾನವೆನಗಿಲ್ಲ । ಗ್ರಂಥಗಳ ಪಾರಾಯಣವೂ ಇಲ್ಲ ।
ಸತ್ಕಥಾಶ್ರವಣವನೂ ಮಾಡಿಲ್ಲ । ಇದತಾವೆಲ್ಲ ತಿಳಿದಿಹಿರಿ ॥ 40

ಎನ್ನವಗುಣಗಳ ನಾ ತಿಳಿದಿಹೆ । ನನ್ನ ಹೀನತೆಯನೂ ಅರಿತಿಹೆ ।
ಗ್ರಂಥ ಪ್ರಯತ್ನವ ಮಾಡುತಿಹೆ । ಗುರುವಚನವನಾದರಿಸಲು ॥ 41

ಎನ್ನಮನವೇ ಹೇಳುತಿದೆ ಎನಗೆ । ತೃಣಸಮಾನನು ನಾನಿಮ್ಮೆದುರಿಗೆ ।
ಆದರೂ ಹಾಕಿಕೊಳ್ಳಬೇಕು ಉಡಿಗೆ । ಕೃಪಾವಂತರಾಗಿ ತಾವು ॥ 42

ಇನ್ನು ಮಾಡುವೆ ಸದ್ಗುರು ಸ್ಮರಣ । ಪ್ರೇಮದಿ ವಂದಿಸುವೆನವನ ಚರಣ ।
ಕಾಯಾವಾಚಾ ಮನದಿಂದ ಶರಣ । ಆ ಬುದ್ಧಿಸ್ಫುರಣದಾತನಿಗೆ ॥ 43

ಉಣ್ಣುವವ ಊಟಕ್ಕೆ ಕುಳಿತು । ಕೊನೆಗೆ ಉಳಿಸುವಂತೆ ಸಿಹಿ ತುತ್ತು ।
ಅಂತೆಯೇ ಗುರುವಂದನದ ಈ ತುತ್ತು । ತಿಂದು ನಮನವನು ಮುಗಿಸುವಾ ॥ 44

ಓಂ ನಮೋ ಸದ್ಗುರು ರಾಯನೇ । ಚರಾಚರಗಳ ವಿಶ್ರಾಮನೇ ।
ಸಕಲ ವಿಶ್ವಕೆ ಅಧಿಷ್ಠಾನನೇ । ಸದಯಾಂತಃಕರಣ ನೀನಿರುವಿ ॥ 45

ಪೃಥ್ವೀ ಸಪ್ತದ್ವೀಪ ನವಖಂಡ । ಸಪ್ತ ಸ್ವರ್ಗ ಪಾತಾಳ ಅಖಂಡ ।
ಇದ ಪ್ರಸವಿಸಿದೆ ಹಿರಣ್ಯಗರ್ಭಾಂಡ । ಅದೇ ಬ್ರಹ್ಮಾಂಡ ಪ್ರಸಿದ್ಧ ॥ 46

ಈ ಬ್ರಹ್ಮಾಂಡವ ಪ್ರಸವಿಸಿದವಳು । ಅವ್ಯಕ್ತ ಅಥವಾ ಮಾಯೆ ಎನಿಸುವಳು ।
ಇಂಥ ಈ ಮಾಯೆಗಿಂತಲೂ । ಆಚೆಗಿರುವದು ಗುರುವಿನ ಸ್ಥಾನ ॥ 47

ಅವನ ಮಹಿಮೆಯ ವರ್ಣಿಸಲು । ಮೂಕವಾದವು ಶ್ರುತಿ ಸ್ಮೃತಿಗಳು ।
ಯುಕ್ತಿಜುಕ್ತಿಗಳ ಪ್ರಮಾಣಗಳು । ಅಲ್ಲಿ ಇನಿತು ನಡೆಯವು ॥ 48

ಬೇರೆಯಾವುದರ ಉಪಮೆಯನೀಯಲು । ಅದೆಲ್ಲ ನೀನೇ ಸ್ವಭಾವದಲಿರಲು ।
ನೀನೇ ಎಲ್ಲೆಲ್ಲಿಗೂ ದೃಷ್ಟಿ ಬೀರಲು । ನೀನೇ ಎಲ್ಲೆಲ್ಲೂ ನಿಂತಿರುವೆ ॥ 49

ಇಂಥ ಶ್ರೀ ಸಾಯಿನಾಥನೇ । ಕರುಣಾರ್ಣವ ಸದ್ಗುರು ಸಮರ್ಥನೇ ।
ಸ್ವಸಂವೇದ್ಯ ಸರ್ವಾತೀತನೇ । ಅನಾದ್ಯನಂತನೇ ನಿನಗೆ ನಮೋ ॥ 50

ಪ್ರಣಾಮ ನಿನಗೆ ಸರ್ವೋತ್ತಮಾ । ನಿತ್ಯಾನಂದಾ ಪೂರ್ಣಕಾಮಾ ।
ಸ್ವಪ್ರಕಾಶ ಮಂಗಲಧಾಮಾ । ಆತ್ಮಾರಾಮಾ ಗುರುವರ್ಯ ॥ 51

ನಿನ್ನ ಸ್ತವನಕೆ ಮಾಡಿಯತ್ನ । ವೇದಶೃತಿಗಳು ಆದವು ಮೌನ ।
ಅಲ್ಲಿ ನನ್ನದೆಂಥ ಜ್ಞಾನ । ನಿನ್ನ ಆಕಲನವಾಗಲು ॥ 52

ಜಯ ಜಯ ಸದ್ಗುರು ಕರುಣೆಯ ಆಗರಾ । ಜಯ ಜಯ ಗೋದಾತೀರ ವಿಹಾರಾ ।
ಜಯ ಜಯ ಬ್ರಹ್ಮೇಶ ರಮಾವರಾ । ದತ್ತಾವತಾರನೇ ನಿನಗೆ ನಮೋ ॥ 53

ಬ್ರಹ್ಮನಿಗಿರುವ ಬ್ರಹ್ಮತನ । ಅದು ಇಲ್ಲ ಸದ್ಗುರುವಿನ ವಿನಃ ।
ನಿವಾಳಿಸಬೇಕು ಪಂಚಪ್ರಾಣ । ಅನನ್ಯ ಶರಣಾಗತನಾಗಬೇಕು ॥ 54

ಶಿರಬಾಗಿ ಮಾಡಬೇಕು ಅಭಿವಂದನ । ಕರದಿಂದ ಮಾಡಬೇಕು ಚರಣ ಸಂವಾಹನ ।
ಕಣ್ಣಿಂದ ನೋಡುತಿರಬೇಕು ವದನ । ಘ್ರಾಣದಿ ತೀರ್ಥದ ಅವಘ್ರಾಣನ ॥ 55

ಶ್ರವಣದಿ ಸಾಯಿ ಗುಣಶ್ರವಣ । ಮನದಲಿ ಸಾಯಿ ಮೂರ್ತಿಯ ಧ್ಯಾನ ।
ಚಿತ್ತದಿ ಅಖಂಡ ಸಾಯಿ ಚಿಂತನ । ಸಂಸಾರ ಬಂಧನ ಹರಿದೀತು ॥ 56

ಪೂರ್ಣಮನದಿ ತನುಮನ ಧನ । ಸದ್ಗುರು ಚರಣಕೆ ಸಮರ್ಪಣ ।
ಮುಡುಪಿಡಬೇಕು ಆಯುಷ್ಯ ಸಂಪೂರ್ಣ । ಗುರುಸೇವೆಯ ಸಲುವಾಗಿ ॥ 57

ಗುರುನಾಮ ಮತ್ತು ಗುರುಸಹವಾಸ । ಗುರುಕೃಪೆ ಮತ್ತು ಗುರುಚರಣಪಾಯಸ ।
ಗುರುಮಂತ್ರ ಮತ್ತು ಗುರುಗೃಹವಾಸ । ಮಹತ್ಪ್ರಯಾಸದಿ ಪ್ರಾಪ್ತವಿವು ॥ 58

ಪ್ರಚಂಡ ಶಕ್ತಿಯು ಅವನೊಡಲೊಳು । ಭಕ್ತಿಯ ಒರೆಗೆ ಇಳಿಯಲು ।
ಭಕ್ತನನು ಮೋಕ್ಷದ ಬಾಗಿಲು । ದಾಟಿಸುವನು ಬಲು ಸುಲಭದಲೇ ॥ 59

ಗುರುಸಂಗತಿ ಗಂಗಾಜಲ । ಮಲತೊಳೆದು ಮಾಡುವದು ನಿರ್ಮಲ ।
ಬೇರಿಲ್ಲ ಮನದಷ್ಟು ಚಂಚಲ । ಹರಿಚರಣದಿ ನಿಶ್ಚಲ ಮಾಡುವನು ॥ 60

ನಮಗೆ ವೇದ ಶಾಸ್ತ್ರ ಪುರಾಣಗಳು । ಶ್ರೀ ಸದ್ಗುರುವಿನ ಚರಣ ಸೇವೆಯೊಳು ।
ಯೋಗಯಾಗ ತಪ ಸಾಧನಗಳು । ಗುರುಚರಣಕೆ ಸಾಷ್ಟಾಂಗ ನಮನ ॥ 61

ಶ್ರೀ ಸದ್ಗುರುನಾಮ ಪವಿತ್ರ । ಅದೇ ನಮ್ಮ ವೇದ ಶಾಸ್ತ್ರ ।
ಸಾಯಿ ಸಮರ್ಥ ನಮ್ಮ ಮಂತ್ರ । ಯಂತ್ರ ತಂತ್ರವು ಅದೇ ಒಂದು ॥ 62

ಬ್ರಹ್ಮ ಸತ್ಯ ಎಂಬ ನಿಜ ಪ್ರತೀತಿ । ಜಗನ್ಮಿಥ್ಯಾ ಎಂಬ ನಿತ್ಯಜಾಗೃತಿ ।
ಇಂಥ ಈ ಪರಮಪ್ರಾಪ್ತಿಯ ಸ್ಥಿತಿ । ಸಾಯಿ ಈಯುವರು ನಿಜಭಕ್ತರಿಗೆ ॥ 63

ಪರಮಾತ್ಮ ಸುಖ ಪರಮಾಪ್ತ ಪ್ರಾಪ್ತಿ । ಬ್ರಹ್ಮಾನಂದ ಸ್ವರೂಪ ಸ್ಥಿತಿ ।
ಶಬ್ದ ಜಾಲವಿದೆಲ್ಲ ಇಂತೀ । ಆನಂದವೃತ್ತಿ ಇರಬೇಕು ॥ 64

ಯಾವನಲಿ ಇಳಿದಿದೆಯೋ ಈ ವೃತ್ತಿ । ಸದಾಕಾಲದಲೂ ಈ ಒಂದೇ ಸ್ಥಿತಿ ।
ಚಿತ್ತದಲಿ ಸಮಾಧಾನ ಸುಖ ಶಾಂತಿ । ಪರಮ ಪ್ರಾಪ್ತಿಯು ಇದೇ ತಾನೇ ॥ 65

ಸಾಯಿ ಆನಂದವೃತ್ತಿಯ ಗಣಿಯಿರಲು । ಭಕ್ತನು ಭಾಗ್ಯವಂತನಿರಲು ।
ಪರಮಾನಂದಕೆ ಸಾಟಿ ಇಲ್ಲದಿರಲು । ಸಾಗರದಂತೆ ಪರಿಪೂರ್ಣನೆಂದಿಗೂ ॥ 66

ಶಿವಶಕ್ತಿ ಪುರುಷ ಪ್ರಕೃತಿ । ಪ್ರಾಣಗತೀ ದೀಪ ದೀಪ್ತಿ ।
ಇವು ಶುದ್ಧ ಚೈತನ್ಯ ವಿಕೃತೀ । ಐಕ್ಯದಲಿ ದ್ವೈತದ ಕಲ್ಪನೆಯು ಮಾತ್ರ ॥ 67

'ಏಕಾಕಿನ ರಮತೇ'. ಇದು ಶೃತಿ । ಬಹುಸ್ಯಾಮ ಎಂಬುದರಲಿ ಪ್ರೀತಿ ।
ಸೇರುವದು ಇನ್ನೊಬ್ಬರ ಸಂಗತಿ । ಮತ್ತೆ ಒಂದಾಗುವರು ಐಕ್ಯದಲಿ ॥ 68

ಶುದ್ಧ ಬ್ರಹ್ಮರೂಪದ ಸ್ಥಿತಿ । ಅಲ್ಲಿಲ್ಲ ಪುರುಷ ಇಲ್ಲ ಪ್ರಕೃತಿ ।
ದಿನಮಣಿಯದೇ ಇರಲುವಸತಿ । ಹಗಲು ಇರುಳುಗಳು ಎಲ್ಲಿ ಬಂತು ॥ 69

ಗುಣಾತೀತ ಮೊದಲೇ ನಿರ್ಗುಣ । ಭಕ್ತ ಕಲ್ಯಾಣಕ್ಕಾಗಿ ಸಗುಣ ।
ಅವನೇ ಸಾಯಿ ವಿಮಲಗುಣ । ಅನನ್ಯ ಶರಣ ಅವನಿಗೆ ॥ 70

ಸಾಯಿ ಸಮರ್ಥಗೆ ಶರಣು ಹೋಗಲು । ಅನೇಕ ಅನರ್ಥ ತಪ್ಪಿಸಲು ।
ಅದಕ್ಕಾಗಿಯೇ ನಾ ಸ್ವಾರ್ಥದೊಳು । ಅಡಿಯೊಳು ಶಿರವ ಬಾಗಿಸುವೆ ॥ 71

ತತ್ವದೃಷ್ಟಿಯಲಿ ಬೇರೆ ಇರುವ । ಭಕ್ತಿ ಸುಖಕ್ಕಾಗಿ ಬೇರೆಯಾಗುವ ।
ದೈವಭಕ್ತರ ಲೀಲೆಯ ತೋರುವ । ಆ ಪ್ರೇಮ ಮೂರ್ತಿಗೆ ಪ್ರಣಿಪಾತವು ॥ 72

ಚಿತ್ಕಳೆಯವ ಎಲ್ಲ ಜೀವದ । ಸಂವಿತ್ ಸ್ಫುರಣದಿ ಅಧಿಷ್ಠಿಸಿದ ।
ಜಡ ಚೈತನ್ಯದಲಿ ಆಕರತಳೆದ । ಆ ಪ್ರೇಮಮೂರ್ತಿಗೆ ಪ್ರಣಿಪಾತ ॥ 73

ನೀನೇ ಎನ್ನಯ ಪರಮಗತಿ । ನೀನೇ ಎನ್ನಯ ವಿಶ್ರಾಂತಿ । ಎನ್ನಾರ್ತನ
ಆರ್ತಿಯ ಪೂರೈಸುತ್ತೀ । ಸುಖಮೂರ್ತಿಯು ನೀ ಗುರುರಾಯಾ ॥ 74

ಇನ್ನು ಈ ನಮನದ ಅಂತ । ಭೂತ ಮಾತ್ರಗಳಲ್ಲಿ ತುಂಬಿಹ ಭಗವಂತ ।
ಜೀವಮಾತ್ರಕ್ಕೆಲ್ಲ ನಾವಂದಿಸುತ । ಹೃದಯದಿ ಸ್ಥಾನವ ಕೊಡಿರೆನಗೆ ॥ 75

ಸಕಲ ಭೂತ ಜಾತಿಗೆ ವಂದನೆ । ಇಂತು ತುಷ್ಟನಾಗು ಭಗವಂತನೇ ।
ಅಂತರ್ಬಾಹ್ಯವೆಲ್ಲ ನೀನೇ । ಅಭೇದನು ಏಕಾತ್ಮನು ॥ 76

ಈಗ ಪರಿಪೂರ್ಣವಾಯಿತು ನಮನ । ಆರಂಭ ಸಮಾಪ್ತಿಗಳ ಈ ಸಾಧನ ।
ಇದುವೆ ಗ್ರಂಥದ ಮಂಗಲಾಚರಣ । ಇನ್ನು ಪ್ರಯೋಜನ ನಿವೇದಿಸುವೆ ॥ 77

ಶ್ರೀ ಸಾಯಿಯು ತನ್ನ ಕೃಪೆಯಿಂದ । ಅನುಗ್ರಹಿಸಿದನೋ ಅಂದಿನಿಂದ !
ಹಗಲಿರುಳು ಅವನದೇ ಚಿಂತನ ಅದರಿಂದ । ಭವಭಯ ನಿಕೃಂತನವೂ ಸಹ ॥ 78

ಎನಗಿಲ್ಲ ಬೇರೆ ಜಪ । ಎನಗೆ ಬೇರೊಂದಿಲ್ಲ ತಪ ।
ಕಾಣುವೆನೊಂದೇ ಸುಗುಣರೂಪ । ಶುದ್ಧ ಸ್ವರೂಪವದು ಸಾಯಿಯದು ॥ 79

ನೋಡಲು ಶ್ರೀ ಸಾಯಿಯ ಮುಖವನು । ಹಸಿವೆ ನೀರಡಿಕೆಗಳ ಮರೆಯುವೆನು ।
ಅದಕಿಂತ ಬೇರೆ ಸುಖವಿನ್ನೇನು । ಭವ ದುಃಖಗಳು ಮರೆತು ಹೋಗುವವು ॥ 80

ನೋಡಲು ಬಾಬಾರ ನಯನಗಳನು । ಮರೆತು ಬಿಡುವೆ ತನ್ನನ್ನು ತಾನು ।
ಉಕ್ಕಿ ಬರುವ ಅಂತಃ ಪ್ರೇಮವನು । ಆ ರಸರಂಗದಲಿ ಮುಳುಗುವವು ವೃತ್ತಿಗಳು । 81

ಕರ್ಮಧರ್ಮ ಶಾಸ್ತ್ರ ಪುರಾಣ । ಯೋಗ ಯಾಗ ಅನುಷ್ಠಾನ ।
ತಪಾಚರಣೆ ತೀರ್ಥಾಟನ । ಸಾಯಿಯ ಚರಣ ಒಂದೇ ಎನಗೆ ॥ 82

ಅಖಂಡ ಗುರುವಾತ್ಸಲ್ಯ ವೃತ್ತಿ । ಧೃಢವಾಗಿರಲು ಚಿತ್ತವೃತ್ತಿ ।
ಶ್ರದ್ಧೆಯ ಆ ಅಚಲಸ್ಥಿತಿ । ಮತ್ತು ನಿಶ್ಚಲ ಸ್ಥೈರ್ಯ ಪ್ರಾಪ್ತಿಯು ॥ 83

ಇದೇ ಕರ್ಮಾನುಬಂಧ ಸ್ಥಿತಿ । ಬೆಳೆಯಲು ಸಾಯಿ ಪದಾಸಕ್ತಿ ।
ಪ್ರತ್ಯಯ ಬಂದಿತು ಅತರ್ಕ್ಯ ಶಕ್ತಿ । ನಾನೆಷ್ಟೆಂದು ವರ್ಣಿಸಲಿ ॥ 84

ಯಾವ ಶಕ್ತಿಯಲಿ ಹುಟ್ಟುವದು ಭಕ್ತಿ । ಅದೇ ಸಾಯಿ ಚರಣಾಸಕ್ತಿ ।
ಸಂಸಾರದಲ್ಲಿದ್ದೂ ಸಂಸಾರ ನಿವೃತ್ತಿ । ಆನಂದ ವೃತ್ತಿಯ ಕೊಡುವದದು ॥ 85

ನಾನಾ ಪ್ರಕಾರದಿ ನಾನಾ ಜನರು । ಭಕ್ತಿಯ ಪ್ರಕಾರಗಳ ಹೇಳುವರು ।
ಅವುಗಳ ಲಕ್ಷಣ ಸ್ವಲ್ಪದರಲ್ಲಾದರೂ । ಯಥಾಮತಿ ಹೇಳುವೆ ॥ 86

ಸ್ವಸ್ವರೂಪಾನುಸಂಧಾನ । ಇದು ಒಂದು ಭಕ್ತಿಯ ಮುಖ್ಯ ಲಕ್ಷಣ ।
ಎನ್ನುವರು ವೇದ ಶಾಸ್ತ್ರವ್ಯುತ್ಪನ್ನ । ಜ್ಞಾನ ಸಂಪನ್ನ ಆಚಾರ್ಯರು ॥ 87

ಪೂಜಾದಿಗಳಲಿ ಪ್ರೇಮದ ವೃತ್ತಿ । ಅರ್ಚನ ಭಕ್ತಿಯದಿದೊಂದು ರೀತಿ ।
ಇದು ಪರಾಶರ ವ್ಯಾಸರ ಉಕ್ತಿ । ಭಕ್ತಿ ಎಂಬರು ಇದು ಒಂದು ॥ 88

ಗುರುವಿಗಾಗಿ ಉಪವನಕೆ ಹೋಗಿ । ಪುಷ್ಪಗಳು ಪಾರಿಜಾತಾದಿಯಾಗಿ ।
ಗುರುವಿನಂಗಳವ ಸ್ವಚ್ಛ ಉಡುಗಿ । ಗೋಮಯದಿ ಥಳಿ ಅಲ್ಲಿ ಹಾಕಬೇಕು ॥ 89

ಮೊದಲು ಸ್ನಾನ ಸಂಧ್ಯೆಗಳ ಗೈದು । ಗುರುದೇವನಿಗಾಗಿ ಗಂಧವ ತೇಯ್ದು ।
ಪಂಚಾಮೃತದಲಿ ಸ್ನಾನ ಹಾಕುವದು । ಧೂಪ ದೀಪಾರ್ಚನೆಯಿಂದ ॥ 90

ಆಮೇಲೆ ನೈವೇದ್ಯ ಸಮರ್ಪಿಸಬೇಕು । ಆರತಿ ಧೂಪಾರತಿ ಬೆಳಗಬೇಕು ।
'ಅರ್ಚನ' ಹೆಸರಿದೆಲ್ಲಕೂ । ಈ ರೀತಿ ಪ್ರೇಮದಿ ಮಾಡಲು ॥ 91

ತನ್ನ ಹೃದಯದ ಚಿತ್ಕಲೆಯನ್ನು । ನಿರ್ಮಲ ಶುದ್ಧ-ಬುದ್ಧ-ಸ್ವಭಾವವನು ।
ಮೂರ್ತಿಯಲಿ ಆಮಂತ್ರಿಸಿ ಅದನು । ಅರ್ಚನೆಗೆ ತೊಡಗಬೇಕು ॥ 92

ಆಮೇಲೆ ಆ ಚಿತ್ಕಲೆಯನು । ವಿಸರ್ಜಿಸಿ ಪೂಜಾರ್ಚನೆಯನು ।
ನಿಜಹೃದಯದಿ ಮೊದಲಿನಂತದನು । ಸ್ಥಿರ ಅಲ್ಲಿ ನಿಲ್ಲಿಸಬೇಕು ॥ 93

ಇನ್ನು ಅವಾಂತರ ಭಕ್ತಿಯ ಲಕ್ಷಣವನು । ಗರ್ಗಾಚಾರ್ಯರ ಮತದಂತಿದನು ।
ತಲ್ಲೀನ ಗುಣಕೀರ್ತನದಿ ಮನವನು । ಹರಿರಂಗದಿ ಮನವಿಲೀನಗೊಳುವದು ॥ 94

ಅಖಂಡ ಆತ್ಮಾನುಸಂದಾನ । ಕಥಾ ಕೀರ್ತನೆ ವಿಹಿತಾಚರಣ ।
ಇದು ಇರುವದು ಶಾಂಡಿಲ್ಯವಚನ । ಇದುವೆ ಮುಂದಿನ ಭಕ್ತಿಯು ॥ 95

ಸ್ವಹಿತವ ಸಾಧಿಸಬೇಕೆನುವವರು । ವೇದವಿಹಿತವಾಗ್ಯನು ಚರಿಸುವರವರು ।
ನಿಷಿದ್ಧ, ಅವಿಹಿತ ಕರ್ಮವನವರು । ನಿಜ ಹಿತಬಾಧಕಗಳ ಬಿಡುವರು ॥ 96

ಯಾವ ಕ್ರಿಯೆಯಲೂ ಅಥವಾ ಫಲದಲೂ । ಕರ್ತನು ಭೋಕ್ತನು ನಾನಲ್ಲ ನಿಜದಲು ।
ನಿರಹಂಕೃತಿಯ ಈ ಭಾವ ಮೂಡಲು । ಬ್ರಹ್ಮಾರ್ಪಣದ ಯೋಗವದು ॥ 97

ಈ ರೀತಿ ಕರ್ಮ ಮಾಡುವ ಸಹಜದಿ ನೈಷ್ಕರ್ಮತೆ ಮೂಡುತ ।
ಕರ್ಮವ ತ್ಯಜಿಸಲು ಬಾರದೆನುತ । ಕರ್ಮ ಕೃತ್ಯವನು ತ್ಯಜಿಸುವಾ ॥ 98

ತೆಗೆಯಬೇಕು ಮುಳ್ಳಿಂದ ಮುಳ್ಳು । ಕರ್ಮ ನಿಲ್ಲದು ಕರ್ಮವ ಬಿಡಲು ।
ನಿಜಾತ್ಮದ ಗುರುತು ಕೈಗೆ ಸಿಗಲು । ಸಂಪೂರ್ಣ ಕರ್ಮವೇ ಕಳೆದೀತು ॥ 99

ಫಲಾಶೆಗಿತ್ತು ಪೂರ್ಣವಿರಾಮ । ಇದುವೇ ಕಾಮತ್ಯಾಗದ ಮರ್ಮ ।
ಮಾಡಲು ನಿತ್ಯ ನೈಮಿತ್ತಿಕ ಕರ್ಮ । ಶುದ್ಧ ಸ್ವಧರ್ಮವಿದು ಎನಿಸುವದು ॥ 100

ಸರ್ವಕರ್ಮ ಭಗವಂತಾರ್ಪಣ । ಕ್ಷಣದ ವಿಸ್ಮರಣೆಯಲಿ ನಿರ್ವಿಣ್ಣ ಮನ ।
ನಾರದೀಯ ಭಕ್ತಿಯದಿದು ವರ್ಣನ । ಭಿನ್ನಲಕ್ಷಣ ಭಕ್ತಿ ಇದು ॥ 101

ಇಂತು ಭಕ್ತಿಯ ಅನೇಕ ಲಕ್ಷಣ । ಒಂದಕ್ಕಿಂತ ಒಂದು ವಿಲಕ್ಷಣ ।
ನಮಗೆ ಸಾಕು ಗುರುಕಥಾನುಸ್ಮರಣೆ । ಒಣಕಾಲಲಿ ಭವದಾಟುವಾ ॥ 102

ಈ ಗುರುಕಥಾಶ್ರವಣದ ಗುಂಗ । ಹಿಡಿಯಲು ನಾನಾದೆ ದಂಗ ॥
ಅನುಭವ ಸಿದ್ಧ ಕಥಾ ಪ್ರಸಂಗ । ಬರೆದು ಗ್ರಂಥ ರಚಿಸಬೇಕೆಂದೆ ॥ 103

ಮುಂದೊಮ್ಮೆ ಶಿರಡಿಯಲಿದ್ದಾಗ । ದರ್ಶನಕೆ ಮಶೀದಿಗೆ ಹೋದಾಗ ।
ಬಾಬಾ ಗೋದಿ ಬೀಸುತ್ತಿದ್ದರಾಗ । ನೋಡಿ ವಿಸ್ಮಯವಾಯಿತು ॥ 104

ಮೊದಲು ಹೇಳುವೆ ಆ ಕಥೆಯನು । ಚಿತ್ತಗೊಟ್ಟು ಕೇಳಿರಿದನು ।
ಅದರಿಂದ ಸಾಯಿ ಚರಿತ್ರೋದ್ಭವವನು । ಆದ ಪರಿಯನು ಆಲಿಸಿರಿ ॥ 105

ಉತ್ತಮ ಶ್ಲೋಕಗುಣಾನುವಾದ । ಅವರ ಪ್ರೇಮಕಥಾ ಸಂವಾದ ।
ಮಾಡಲು ಆದೀತು ಚಿತ್ತಶುದ್ಧ । ಬುದ್ಧಿಯೂ ವಿಶದವಾದೀತು ॥ 106

ಪುಣ್ಯಶ್ಲೋಕ ಗುಣಾನುವರ್ಣನ । ಅವರ ಲೀಲೆಗಳ ಕಥಾಶ್ರವಣ ।
ಇದರಿಂದ ಭಗವತ್ಪರಿತೋಷಣ । ತ್ರಿತಾಪಗಳ ಕ್ಲೇಶ ನಿವಾರಣ ॥ 107

ಅಧಿ ಭೂತಾದಿ ತಾಪ ನಿರ್ವಿಣ್ಣ । ಆತ್ಮಹಿತೇಚ್ಛು ಆತ್ಮಪ್ರವಣ ।
ಆದರದಿ ಹಿಡಿಯಲವರ ಚರಣ । ಅನುಭವ ಸಂಪನ್ನರಾಗುವರಾಗ ॥ 108

ಇರಲಿನ್ನು ಕೊಟ್ಟು ಚಿತ್ತ । ಕೇಳಿರಿ ಈ ಸವಿ ವೃತ್ತಾಂತ ।
ನೋಡಿ ಬಾಬಾರ ಕೃಪಾವಂತತ್ವ । ಅಚ್ಚರಿ ಬಹು ನಿಮಗಾದೀತು ॥ 109

ಒಂದು ದಿನ ಬೆಳಗಿಗೆ ನೋಡು । ಬಾಬಾ ಹಲ್ಲುಜ್ಜಿಕೊಂಡು ।
ಮುಖ ಪ್ರಕ್ಷಾಲನೆ ಮಾಡಿಕೊಂಡು । ಕುಳಿತು ಬೀಸಲು ತೊಡಗಿದರು ॥ 110

ಕೈಯಲ್ಲೊಂದು ಹಿಡಿದು ಮೊರ । ಹೋದರು ಗೋದಿಯ ಚೀಲದ ಹತ್ತಿರ ।
ತುಂಬಿ ಸೇರಿನ ಮೇಲೆ ಸೇರ । ಗೋದಿಯ ಮೊರದಲಿ ಹಾಕಿದರು ॥ 111

ಬರಿದಾದ ಗೋಣಿ ಚೀಲವ ಹಾಸಿ । ಬೀಸುಕಲ್ಲನು ಅದರ ಮೇಲಿರಿಸಿ ।
ಬೀಸುವಾಗ ಸಡಿಲಾಗಬಾರದೆನಿಸಿ । ಗೂಟವ ಬಡಿದರು ಗಟ್ಟಿಯಾಗಿ ॥ 112

ತೋಳುಗಳನು ಮೇಲೇರಿಸಿ । ಕಫನಿಯನ್ನು ಸರಿಪಡಿಸಿ ।
ಕಲ್ಲಿನ ಬದಿಗೆ ಆಸನ ಹಾಸಿ । ಕಾಲು ಚಾಚಿ ಕುಳಿತರು ಬೀಸಲು ॥ 113

ಮಹದಾಶ್ಚರ್ಯವೆನ್ನ ಮನಕೆ । ಕಾರಣವೇನಿದೆ ಬೀಸುವದಕೆ ।
ಈ ವಿವಂಚನೆ ಇವರಿಗೇಕೆ । ಅಪರಿಗ್ರಹ ಅತಿಂಚನರಿರಲು ॥ 114

ಕೈಯಲಿ ಹಿಡಿದು ಗೂಟವನು । ಕೆಳಗೆ ಹಾಕಿ ಗೋಣನು ।
ತಿರುವುತ್ತಿದ್ದರು ಬೀಸುಕಲ್ಲನು । ಅದರೊಳಗೆ ಮುಕ್ಕು ಹಾಕುತ ॥ 115

ನೋಡಿಹೆನನೇಕ ಸಂತರನು । ಆದರೆ ನೋಡಿಲ್ಲ ಬೀಸುವವರನು ।
ಗೋದಿ ಬೀಸುವುದರಲಿ ಸುಖವೇನು । ಅವನ ಆಟವ ಅವನೇ ಬಲ್ಲ ॥ 116

ಅಚ್ಚರಿಯಲಿ ಜನರು ನೋಡುತಿಹರು । ಧೈರ್ಯ ಸಾಲದು ಕೇಳಲದನು ಆದರೂ ।
ಬಂದರಲ್ಲಿಗೆ ಊರ ನರ ನಾರಿಯರು । ಊರಲ್ಲಿ ಈ ವಾರ್ತೆ ಹಬ್ಬಲು ॥ 117

ಓಡೋಡಿ ಸ್ತ್ರೀಯರು ಬಂದರು । ಲಗುಬಗೆಯಲಿ ಮಶೀದಿಯ ಸೇರಿದರು ।
ಹೋಗಿ ಬಾಬಾರ ಕೈಗಳ ಎಳೆದರು । ಕಸಿದು ಬಿಡಿಸಿದರು ಗೂಟವನು ॥ 118

ಬಾಬಾ ಅವರೊಡನೆ ಜಗಳಾಡಿದರು । ಹೆಂಗಸರು ಸರಸನೆ ಬೀಸತೊಡಗಿದರು ।
ಬೀಸುತ್ತ ಬಾಬಾರ ಹಾಡು ಹಾಡಿದರು । ಬಾಬಾರ ಲೀಲೆಗಳ ವರ್ಣಿಸುತ ॥ 119

ನೋಡಿ ಹೆಂಗಸರ ಪ್ರೇಮವನಿಂತು । ಸುಳ್ಳು ಸಿಟ್ಟಲ್ಲೇ ಮಾಯವಾಯಿತು ।
ಕೋಪ ಕಳೆದು ಪ್ರೀತಿಯುದಿಸಿತು । ಮುಗುಳುನಗೆ ಸೂಸತೊಡಗಿತು ॥ 120

ಪಡಿಹಿಟ್ಟು ಬೀಸಿಯಾಯಿತು । ಮೊರ ರಿಕ್ತವಾಯಿತು ।
ಹೆಂಗಳೆಯರ ಮನ ಕುಣಿಯತೊಡಗಿತು । ಅನಿವಾರ್ಯ ವಿಚಾರ ತರಂಗದಲ್ಲಿ ॥ 121

ಬಾಬಾ ಮಾಡಲಾರರು ರೊಟ್ಟಿ । ಅವರದು ಪ್ರತ್ಯಕ್ಷ ಭೈಕ್ಷ್ಯ ವೃತ್ತಿ ।
ಹೀಗಿರಲು ಈ ಹಿಟ್ಟಿನದೇನು ಗತಿ । ಎಂಬ ವಿಚಾರ ಆ ಸ್ತ್ರೀಯರಿಗೆ ॥ 122

ಹೆಂಡತಿ ಇಲ್ಲ ಮಕ್ಕಳಿಲ್ಲ । ಬಾಬಾ ಒಬ್ಬರೇ ಇರುವರಲ್ಲ ।
ಮನೆಯೂ ಇಲ್ಲ ಸಂಸಾರವೂ ಇಲ್ಲ ಇಷ್ಟೊಂದು ಹಿಟ್ಟು ಇವರಿಗೇಕೆ ॥ 123

ಪರಮ ಕೃಪಾಳುಗಳು ಬಾಬಾ ಇಹರು । ನಮಗಾಗಿಯೇ ಈ ಆಟ ಆಡಿದರು ।
ಹಿಟ್ಟೆಲ್ಲವನು ನಮಗೆ ಕೊಡುವರು । ಎಂದಳವರಲಿ ಒಬ್ಬಳು ॥ 124

ಹಿಟ್ಟಿನಲಿ ಮಾಡಿ ನಾಲ್ಕು ಪಾಲು । ಹೇಳುವರು ಒಂದೊಂದನು ತೆಗೆದುಕೊಳಲು ।
ಈ ರೀತಿ ವಿಚಾರವ ಮಾಡುತಿರಲು । ಮನಸ್ಸಿನಲಿ ಮಂಡಿಗೆ ತಿನ್ನತೊಡಗಿದರು ॥ 125

ಬಾಬಾರ ಆಟವದು ಬಾಬಾರಿಗೇ ಗೊತ್ತು । ಅನ್ಯರಿಗೆ ಅವರ ಅಂತರ್ಯವದೆಂತು ತಿಳಿದೀತು ।
ಆದರೆ ಆ ಹೆಣ್ಣುಮಕ್ಕಳ ಗತ್ತು । ಲೂಟಿ ಹೊಡೆಯುವದು ಬಾಬಾರ ಹಿಟ್ಟು ॥ 126

ಹಿಟ್ಟು ಪಸರಿಸಿತು ಗೋದಿ ಮುಗಿಯಿತು । ಕಲ್ಲನ್ನೆತ್ತಿ ಗೋಡೆಗೆ ಆನಿಸಲಾಯಿತು ।
ಸ್ತ್ರೀಯರು ಮೊರದಲ್ಲಿ ತುಂಬಿದರು ಹಿಟ್ಟು ।ಮನೆಗಳಿಗೆ ಕೊಂಡೊಯ್ಯುವ ಹಂಚಿಕೆಯದು ॥ 127

ಅಲ್ಲಿಯವರೆಗೆ ಬಾಬಾ ಅವರು । ಒಂದು ಚಕಾರವನು ಆಡಲಿಲ್ಲವರು ।
ಹಿಟ್ಟಿನಲಿ ನಾಲ್ಕು ಭಾಗ ಮಾಡಿದರು । ಮುಂದೆ ಆ ಸ್ತ್ರೀಯರಿಗೇನೆಂದರಾಗ ॥ 128
ಬುದ್ಧಿ ಭ್ರಮೆಯೇ ನಿಮಗೆ? ಎಲ್ಲಿಗೊಯ್ಯುವಿರಿ । ಅಪ್ಪನ ಮನೆಗಂಟೆಂದು ತೆಗೆದುಕೊಂಡ್ಹೊರಟಿರಿ ।
ಅಗಸಿಯ ಹೊರಗೆ ನೀವಿದನು ಕೊಂಡೊಯ್ಯಿರಿ । ಹಿಟ್ಟೆಲ್ಲವನು ಅಲ್ಲಿ ಚೆಲ್ಲಿ ಬನ್ನಿ ॥ 129

ಪುಗಸಟ್ಟೆ ತಿನ್ನಲು ಬಂದರಿಲ್ಲಿ । ಓಡಿ ಬಂದಿಹರು ಲೂಟಿ ಮಾಡಲೆನ್ನಲ್ಲಿ ।
ಗೋದಿಯನು ಸಾಲಕೊಂಡೆನೆ ನಾನು ನಿಮ್ಮಲ್ಲಿ । ಹಿಟ್ಟು ಒಯ್ಯಲು ಹವಣಿಸುತ್ತಿರುವಿರಲ್ಲಾ ॥ 130

ಹೆಂಗಸರು ಮನದಲ್ಲಿ ಬಲುನಾಚಿಕೊಂಡರು । ಲೋಭಕ್ಕೆ ಬಿದ್ದು ಫಜೀತಿಯಾದರು ।
ತಮ್ಮೊಳಗೆ ಗುಸುಗುಸು ಮಾತನಾಡಿದರು । ಹಿಟ್ಟು ಒಯ್ದರು ಅಗಸಿ ಬಾಗಿಲಿಗೆ ಆಗ ॥ 131

ಬಾಬಾರ ಆರಂಭ ಯಾರಿಗೂ ತಿಳಿಯದು । ಕಾರಣವು ಮೊದಲಲ್ಲಿ ಏನೇನೂ ಹೊಳೆಯದು ।
ತಾಳ್ಮೆಯಿಂದಿದ್ದರೆ ಪರಿಣಾಮ ಫಲಿಸುವುದು । ರೀತಿಯೇ ಬೇರೆ ಅದು ಬಾಬಾರದು ॥ 132

ಆಮೇಲೆ ನಾನು ಜನರನು ಕೇಳಿದೆ । ಬಾಬಾರು ಹೀಗೇಕೆ ಮಾಡಿದರು ಎಂದೆ ।
ಜನರಿಂದ ಕೇಳಿ ನಾ ಇದನು ತಿಳಿದೆ । ಸಂಪೂರ್ಣ ರೋಗರಾಯಿಯ ಓಡಿಸಿದರದರಿಂದ ॥ 133

ಗೋಧೂಮ ಅಲ್ಲ ಅದು ಅದೇ ಮಹಾಮಾರಿ । ಕಲ್ಲಲ್ಲಿ ಅರೆದರಲ್ಲಾ ಅದೇ ಆ ವೈರಿ ।
ಅದಕ್ಕೆ ಆ ಒಡಕಲನು ಅಗಸಿಯಲಿ ಚೆಲ್ಲಿರಿ । ಎಂದಾಜ್ಞೆ ಮಾಡಿದರು ಬಾಬಾ ಅವರು ॥ 134

ಹಳ್ಳದಾ ದಂಡೆಯಲಿ ಚೆಲ್ಲಿದರು ಹಿಟ್ಟು । ಆಯಿತಾಗಲೆ ಬಂದ ರೋಗದಾ ಹಿಮ್ಮೆಟ್ಟು ॥
ದುರ್ದಿನಗಳೋಡಿದವು ಕಟ್ಟಿ ಗಂಟು । ಇದು ಎಲ್ಲ ಬಾಬಾರ ಕೈ ಚಳಕವು ॥ 135

ಊರಲ್ಲಿ ಬಂದಿತ್ತು ಮಾರಿಯಾ ಬೇನೆ । ಬಾಬಾ ಮಾಡಿದರು ಅದಕೇ ಉಪಾಯವ ।
ರೋಗ ಓಡಿತು ಉಳಿಯಲಿಲ್ಲದರ ಚಿನ್ಹೆ । ಊರಲ್ಲಿ ಶಾಂತಿ ತಲೆದೋರಿತಾಗ ॥ 136

ಬೀಸುವ ದೃಶ್ಯವದು ನೋಡುವದಕೆ । ಕೌತುಕವೆನಿಸಿತು ಎನ್ನ ಮನಕೆ ।
ಕಾರ್ಯಕಾರಣಭಾವ ಏನು ಇದಕೆ । ತಾಳೆ ಹಾಕುವದು ಹೇಗೆ ಇದಕೆ ॥ 137

ಏನು ಇರಬಹುದು ಈ ಅನುಬಂಧ । ಗೋದಿ ರೋಗಗಳಿಗೇನು ಸಂಬಂಧ ।
ನೋಡಲಾ ಅತರ್ಕ್ಯಕಾರಣ ನಿರ್ಬಂಧ । ಎನ್ನಿಸಿತು ಪ್ರಬಂಧವ ಬರೆಯಬೇಕು ॥ 138

ಕ್ಷೀರಸಾಗರದಲಿದರ ತರಂಗ । ಪ್ರೇಮದಿ ಉಕ್ಕೇರಿತು ಅಂತರಂಗ ।
ಎನ್ನಿಸಿತು ಬಾಬಾರ ಈ ಮಧುರರಂಗ । ಕಥೆಯ ಸುಂದರ ಇದನು ರಚಿಸಬೇಕು ॥ 139

ಹೇಮಾಡ ಸಾಯಿನಾಥರಿಗೆ ಶರಣ । ಇಲ್ಲಿಗೆ ಮುಗಿಯಿತು ಮಂಗಲಾಚರಣ ।
ಮುಗಿಯಿತು ಆಪ್ತೇಷ್ಟ ಸಂತಜನ ನಮನ । ಅಖಂಡ ಸದ್ಗುರುವಿನ ವಂದನ ॥ 140

ಮುಂದಿನಧ್ಯಾಯದಲಿ ಗ್ರಂಥ 'ಪ್ರಯೋಜನ' । 'ಅಧಿಕಾರಿ' 'ಅನುಬಂಧ' ದರ್ಶನ ।
ಯಥಾಮತಿ ಮಾಡುವೆ ಕಥನ । ಸ್ವಸ್ಥ ಮನದಲಿ ಶ್ರೋತೃಗಳೇ ಕೇಳಿರಿ ॥ 141

ಅಂತೆಯೇ ವಕ್ತಾರ ಶ್ರೋತೃಗಳ ನಿಜಹಿತ । ಹೀಗಿರುವದೀ ಶ್ರೀ ಸಾಯಿ ಸಚ್ಚರಿತ ।
ರಚಿಸಿದವನಾರು ಈ ಹೇಮಾಡಪಂತ । ಮುಂದೆ ತಿಳಿದೀತು ಇದು ಎಲ್ಲ ॥ 142

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಮಂಗಲಾಚರಣಂ ನಾಮ ಪ್ರಥಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

12.1





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಎರಡು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಪೂರ್ವಾಧ್ಯಾಯದಲಿ ಮಂಗಲಾಚರಣ । ಆಯಿತು ದೇವತಾ ಕುಲಗುರು ವಂದನ ।
ಬಿತ್ತಿ ಶ್ರೀ ಸಾಯಿ ಸಚ್ಚರಿತ್ರ ಬೀಜವನು । ಇನ್ನು ಪ್ರಯೋಜನವನು ಆರಂಭಿಸುವಾ ॥ 1

ಅಧಿಕಾರಿ ಅನುಬಂಧ ದಿಗ್ದರ್ಶನ । ಸಂಕಲಿತ ಮಾಡುವೆನದರ ವಿವೇಚನ ।
ಶ್ರೋತೃಗಳಿಗದರಿಂದ ಗ್ರಂಥ ಪ್ರವೇಶನ । ಆಯಾಸವಿಲ್ಲದೆ ಆದೀತು ॥ 2

ಪ್ರಥಮಾಧ್ಯಾಯದಲಿ ಯಥಾನುಕ್ರಮ । ಮಾಡಿ ಗೋದಿಯ ಪೇಶಣೋಪಕ್ರಮ ।
ಮಾಡಿದರು ಮಹಾಮಾರಿಯ ಉಪಶಮ । ಪರಮಾಶ್ಚರ್ಯ ಗ್ರಾಮಸ್ಥರಿಗೆ ॥ 3

ಇಂಥ ಸಾಯಿಯ ಅಗಾಧಲೀಲೆ । ಆನಂದವದು ಅದರ ಶ್ರವಣದಲ್ಲಿ ।
ಅದೇ ಪ್ರಕಟವಾಗಿದೆ ಕಾವ್ಯ ರೂಪದಲಿ । ಹೊರಹೊಮ್ಮಿದೆ ಪ್ರೇಮದಪೂರ ॥ 4

ಅದಕೆ ಸಾಯಿಯ ಧನ್ಯವಾದ । ಮಾಡಬೇಕು ಯಥಾಮತಿ ವಿಶದ ।
ಭಕ್ತರಿಗಾದೀತಮ ಬೋಧಪ್ರದ । ಅದರಿಂದ ಪಾಪ ನಾಶನವಾದೀತು ॥ 5

ತದರ್ಥ ಈ ಸಾಯಿ ಚರಿತ್ರ । ಬರೆಯತೊಡಗಿದೆ ಅತಿ ಪವಿತ್ರ ।
ಆರಂಭಿಸಿದೆ ನೀ ಕಥಾಸತ್ರ । ಇಹಪರತ್ರದಲಿ ಸೌಖ್ಯದ ॥ 6

ಸನ್ಮಾರ್ಗದರ್ಶಕ ಸಂತ ಚರಿತ್ರ । ಅಲ್ಲ ಇದು ನ್ಯಾಯತರ್ಕಶಾಸ್ತ್ರ ।
ಯಾವನು ಸಂತಕೃಪಾ ಪಾತ್ರ । ಅವನಿಗೆ ವಿಚಿತ್ರ ಯಾವುದೂ ಇಲ್ಲ ॥ 7

ಅದಕೆ ಈ ಪ್ರಾರ್ಥನೆ ಶ್ರೋತೃಗಳಲಿ । ಭಾಗಿಗಳಾಗಿ ಈ ಆನಂದದಲಿ ।
ಧನ್ಯಭಾಗರು ನೀವು ಈ ಸತ್ಸಂಗದಲಿ । ಕಥಾ ವ್ಯಾಸಂಗದಲ್ಲಿ ನಿರತರು ॥ 8

ಚಿರಪರಿಚಿತ ಜೀವದ ಮಿತ್ರ । ಸಹವಾಸ ಅವನದು ದಿನರಾತ್ರಿ ।
ಬರೆಯಲಾರೆ ನಾ ಅವನದೇ ಚಿತ್ರ । ಸಂತಚರಿತ್ರೆಯನೇನು ಬರೆಯಲಿ ॥ 9

ಎಲ್ಲಿ ನನಗೆ ನನ್ನದೇ ಅಂತರಂಗ । ಗುರುತಿಸಲು ಬರದಾಗ ಯಥಾಸಾಂಗ ।
ಅಂಥ ನಾ ಸಂತ ಮನಸಿನ ತರಂಗ । ನಿರ್ವ್ಯಂಗ ವರ್ಣನೆಯ ಮಾಡಲೆಂತು ॥ 10

ಸ್ವರೂಪ ನಿರ್ಧಾರ ಮಾಡ ಹೋಗಲು । ಮೌನ ತಳೆದವು ನಾಲ್ಕು ವೇದಗಳು ।
ಆ ನಿನ್ನ ರೂಪದ ವಿಚಾರದೊಳು । ನನಗೇನು ತಿಳುವಳಿಕೆ ಇದ್ದೀತು ॥ 11
ಮೊದಲು ತಾ ಸಂತನಾಗಬೇಕು । ಯಥಾರ್ಥದಲ್ಲಿ ಸಂತರನು ತಿಳಿಯಬೇಕು ।
ಆಗ ಸಂತರನು ವರ್ಣಿಸಬೇಕು । ಎಂಬುದು ಮೊದಲೇ ನಾನರಿತಿಹೆ ॥ 12

ಸಪ್ತ ಸಾಗರಗಳದೆ ಜಲವಿರಲು । ಸಾಧ್ಯವಿದೆ ಅದನೂ ಅಳೆಯಲು ।
ಸಾಧ್ಯವಿದೆ ನಭವ ಮುಸುಕಿಲಿ ಮುಚ್ಚಲು । ಆದರೆ ಸಂತರು ಅಳತೆಗೆಂದೂ ಸಿಗರು ॥ 13

ನಾನೊಬ್ಬ ಪಾಮರನೆಂದು ಅರಿತಿದೆನ್ನಾಂತರ್ಯ । ಆದರೂ ಬಾಬಾರ ಪ್ರತಾಪವದು ಅನಿವಾರ್ಯ ।
ಕಂಡದನು ಮಾಡುತಿಹೆ ಗುಣ ಗಾನದಾ ಧೈರ್ಯ । ಅದು ಮಾಡದಿರಲೆನ್ನ ಮನ ಕೇಳದು ॥ 14

ಜಯ ಜಯಹೇ ಸಾಯಿರಾಯಾ । ದೀನದಲಿತರಿಗೆ ನೀ ಆಶ್ರಯಾ ।
ವರ್ಣಿಸಲು ಅಳವಲ್ಲ ನಿನ್ನಗಾಧ ಮಾಯಾ । ಈ ದಾಸನ ಮೇಲೆ ತೋರು ದಯಾ ॥ 15

ಸಣ್ಣ ಬಾಯಲಿ ದೊಡ್ಡ ತುತ್ತು । ಎನ್ನ ಸಾಹಸ ಹಾಗಾದೀತು ।
ಆದರೀ ಇತಿಹಾಸ ಬರೆಯಬೇಕೆನಿಸಿತು । ಆಗಗೊಡದಿರು ನನ್ನ ಉಪಹಾಸ ॥ 16

ಸಂತರ ಚರಿತ್ರೆಯನು ಯಾರೇ ಬರೆಯಲಿ । ಭಗವಂತನ ಪ್ರೀತಿ ಇರುವುದು ಅಲ್ಲಿ ।
ಈ ರೀತಿ ಜ್ಞಾನೇಶ್ವರ ಮಹಾರಾಜರು ಹೇಳಿ । ಎನ್ನ ಹೆದರಿಕೆ ದೂರ ಮಾಡಿರುವರು ॥ 17

ನನ್ನ ಮನಸ್ಸಿನಲ್ಲಿಯೂ ಈ ಸ್ಫೂರ್ತಿ । ಮೂಡಿಸಿಹುದು ಆ ಭಗವಂತ ಮೂರ್ತಿ ।
ನಾನಿದ್ದರೂ ಕೂಡ ಜಡಮೂಢಮತಿ । ನಿಜಕಾರ್ಯ ಪೂರ್ತಿಯನು ನಾ ತಿಳಿದಿಹೆ ॥ 18

ಭಕ್ತನು ಯಾವದೇ ಸೇವೆಯನು ಕಲ್ಪಿಸಲು । ಸಂತರು ಸ್ವಯಂ ಅದನು ಮಾಡಿಸಿಕೊಳ್ಳಲು ।
ಅದಕೆಲ್ಲ ಸಂತರದು ಸ್ಫೂರ್ತಿ ಇರಲು । ಕೇವಲ ನಿಮಿತ್ತ ಮಾತ್ರನು ಭಕ್ತನು ॥ 19

ಸಾರಾಂಶ ಈ ಸಾಯಿಯೇ ತಾ ನಿಂತು । ಈ ಚರಿತೆಯನು ಬರೆಸುತಿರುವನು ಇಂತು ।
ಅದರಿಂದಲೇ ಈ ಕಥೆಗೆ ಗೌರವವಿಂತು । ಎನ್ನ ಮೂಢನ ಕೈಲಿ ಅದ ಬರೆಸಿದರೂ ॥ 20

ಸಾಧು ಸಂತರು ಅಥವಾ ಶ್ರೀಹರಿಯೇ ಇರಲಿ । ಯಾರನ್ನಾಗಲಿ ಹಿಡಿದು ನಿಜಕರವಲಿ ।
ತನ್ನ ಕಥೆಯನು ತಾ ನಿವೇದಿಸುತಲಿ । ವರದಹಸ್ತವ ಅವರ ಶಿರದಲಿರಿಸಿ ॥ 21

ಶಕೆ ಹದಿನೇಳು ನೂರು ಸಾಲಿನಲಿ । ಬುದ್ಧಿ ಸ್ಫೂರಿಸಿತು ಆಗ ಮಹಿಪತಿಯಲಿ ।
ಸಾಧುಸಂತರು ಅವನ ಸೇವೆ ಪಡೆಯುತಲಿ । ಅವನ ಕೈಯ್ಯಲಿ ಚರಿತೆಗಳ ಬರೆಸಿದರು ॥ 22

ಅದೇ ಸೇವೆಯ ಹದಿನೆಂಟು ನೂರು ಸಾಲಿನಲಿ । ಮಾಡಿಸಿದರು ದಾಸಗಣುವಿನ ಕೈಲಿ ।
ಮುಂದೆ ಸಂತರ ಚರಿತೆಗಳ ಬರೆಯಿಸಿದರಲ್ಲಿ । ಅವು ಪಾವನವಾದವು ಎಲ್ಲರಿಗೆ ॥ 23

ಭಕ್ತ ಮತ್ತು ಸಂತ ವಿಜಯ ಗ್ರಂಥ । ಭಕ್ತ ಮತ್ತು ಸಂತಲೀಲಾಮೃತ ।
ಈ ನಾಲ್ಕು ಗ್ರಂಥಗಳು ಮಹಿಪತಿ ರಚಿತ । ಅಂತೆಯೇ ಎರಡು ದಾಸಗಣುವಿನವು ॥ 24

ಒಂದರ ಹೆಸರು ಭಕ್ತಲೀಲಾಮೃತ । ಎರಡನೇಯದು ಸಂತಕಥಾಮೃತ ।
ಉಪಲಬ್ಧ ಆರ್ವಾಚೀನ ಭಕ್ತ ಸಂತ । ಉಭಯ ಗ್ರಂಥದಲಿ ವರ್ಣಿಸಿದೆ ॥ 25

ಅವಗಳಲಿ ಭಕ್ತಲೀಲಾಮೃತದಲಿ । ಶ್ರೀಸಾಯಿಯ ಮಧುರ ಚರಿತೆಯನಲ್ಲಿ ।
ವರ್ಣಿಸಿದೆ ಅಧ್ಯಾಯ ಮೂರರಲ್ಲಿ । ಶ್ರೋತೃಗಳು ಅದನಲ್ಲಿ ಓದಬೇಕು ॥ 26

ಜ್ಞಾನಯುತಕಥೆಯೊಂದನದರಂತೆಯೇ । ಹೇಳಿದರು ಒಬ್ಬ ಭಕ್ತಗೆ ಸಾಯಿಯೇ ।
ಅಧ್ಯಾಯ ಹದಿಮೂರರಲ್ಲದರ ವರ್ಣನೆಯೇ । ಇರುವುದದ ಶ್ರೋತೃಗಳೋದಬೇಕು ॥ 27

ಅಲ್ಲದೇ ಸಾಯಿಯ ಅಲೌಕಿಕ ಲೀಲೆ । ರಘುನಾಥ-ಸಾವಿತ್ರೀಭಜನ ಮಾಲೆ ।
ತಣಿಸುವದು ಜನರ ಅನುಭವ ಪೂರ್ವಕದಲೆ । ಅಭಂಗಪದಗಳನು ಹಾಡಿ ॥ 28

ಒಂದು ಬಾಬಾರ ಮಗು ಇದರಲ್ಲೇ । ತೃಷಿತ ಚಕೋರಕೆ ಕರೆದು ಅಮೃತದ ಮಳೆ ।
ತೃಪ್ತರಾಗಲಿ ಜನರು ಇದ ಸೇವಿಸುತಲೇ । ಕಥಾಮೃತದ ಪ್ರೇಮ ಪಡಿತರವಿದು ॥ 29

ದಾಸಗಣುವಿನ ಸ್ಫುಟ ಕವಿತೆಗಳು । ಅತ್ಯಂತ ರಸಭರಿತವಾಗಿ ಅವು ಇರಲು ।
ಆನಂದವಾದೀತು ಶ್ರೋತೃ ಚಿತ್ತದೊಳು । ಲೀಲೆಗಳು ಕೇಳಲು ಬಾಬಾರದು ॥ 30

ಅಮೀದಾಸ ಭವಾನಿ ಮೇಥಾ ಎಂಬವರು । ಚಮತ್ಕಾರ ಕಥೆಗಳನು ಇವರೂ ಹೇಳಿರುವರು ।
ಅತಿ ಪ್ರೇಮ ಪೂರ್ವಕ ಬರೆದಿರುವರು । ಗುರ್ಜರ ಭಕ್ತ ಜನರಿಗಾಗಿ ॥ 31

ಸದ್ಭಕ್ತಿಯನಿಟ್ಟು ಬಾಬಾರಲಿ । ಸಾಯಿಪ್ರಭಾ ಎಂಬ ಹೆಸರಿನಲ್ಲಿ ।
ಹೆಸರಾದ ಪುಣ್ಯನಗರಿಯಲ್ಲಿ । ಬಾಬಾರ ಕಥಾಶ್ರೇಣಿಯ ಪ್ರಕಾಶಿಸುವರು ॥ 32

ಎಂಥೆಂಥ ಕಥೆಗಳು ಈಗ ಇರುತಿರಲು । ಈ ಗ್ರಂಥದ ಅವಶ್ಯಕತೆ ಏನು ಎನಲು ।
ಈ ಶಂಕೆ ಶ್ರೋತೃಗಳ ಚಿತ್ತದಲಿ ಇರಲು । ಅದ ನಿರಾಕರಿಸಲು ಕೇಳಿರಿದನು ॥ 33

ಸಾಯಿ ಚರಿತ್ರ ಮಹಾಸಿಂಧು । ಅನಂತ, ಅಪಾರ ರತ್ನಾಕರವದು ।
ನಾ ಟಿಟ್ಟಿಭ ಅವನು ಅಟ್ಟಿಸುವದು । ಎಂದಾದರೂ ನನ್ನಿಂದ ಇದು ಸಾಧ್ಯವೇ ॥ 34

ಅಂತೆಯೇ ಸಾಯಿಯ ಚರಿತ್ರೆ ಗಹನ । ಅಶಕ್ಯವಿಹುದದರ ಸಂಪೂರ್ಣ ವರ್ಣನ ।
ಆದಕ್ಕಾಗಿ ಮಾಡುವೆನು ಆದಷ್ಟು ಕಥನ । ಅದರಿಂದ ಸಮಾಧಾನ ಎನ್ನ ಮನಕೆ ॥ 35

ಅಪೂರ್ವ ಕಥೆಗಳು ಸಾಯಿಯವನೇಕ । ಭವದ ವಾರ್ತೆಗಳಿಗವು ಶಾಂತಿದಾಯಕ ।
ಶ್ರವಣೋಲ್ಲಾಸವನು ನೀಡುವದು ಜನಕ । ಚಿತ್ತ ಸ್ಥಿರತೆಯನು ನಿಜ ಭಕ್ತರಿಗೆ ॥ 36

ಕಥೆಗಳನು ಹೇಳಿದರು ಪರಿಪರಿಯವು । ವ್ಯಾವಹಾರಿಕ ಮತ್ತು ಉಪದೇಶದವು ।
ಅಂತೆಯೇ ಎಲ್ಲರ ಅನುಭವವು । ವರ್ಮದವು ಮತ್ತು ನಿಜಕರ್ಮದವು ॥ 37

ಅಪೌರುಷೇಯ ಶೃತಿ ವಿಖ್ಯಾತ । ಆಖ್ಯಾಯಿಕೆಗಳ ಸಂಖ್ಯ ವಿಶ್ರುತ ।
ಅಂತೆಯೇ ಮಧುರ ಮತ್ತು ಅರ್ಥಭರಿತ । ಬಾಬಾರು ಅಪರಿಮಿತ ಹೇಳುವರು ॥ 38

ಕೇಳಲವನು ಆಗಿ ಸಾವಧಾನ । ಇತರ ಸುಖಗಳು ತೃಣ ಸಮಾನ ।
ಮರೆಯುವರು ಹಸಿವೆ ನೀರಡಿಕೆಗಳನ । ಅಂತರದಲೂ ಸಮಾಧಾನ ನೆಲೆಸುವುದು ॥ 39

ಕೆಲವರಿಗೆ ಆದೀತುಬ್ರಹ್ಮಸಾಯುಜ್ಯತೆ । ಅಷ್ಟಾಂಗಯೋಗದಲಿ ಪ್ರಾವೀಣ್ಯತೆ ।
ಸಮಾಧಿಸುಖ ನಿರ್ಭರತೆ । ಆದೀತು ಈ ಕಥೆ ಕೇಳಲು ॥ 40

ಶ್ರವಣಾರ್ಥಿಗಳವೆಲ್ಲಾ ಕರ್ಮಪಾಶ । ಹರಿಸುವವು ಈ ಕಥೆಗಳು ಅಶೇಷ ।
ಬುದ್ಧಿಗೆ ಕೊಡುವವು ಸುಪ್ರಕಾಶ । ನಿರ್ವಿಶೇಷ ಸುಖವೆಲ್ಲರಿಗೂ ॥ 41

ಅದರಿಂದ ಸ್ಫುರಿಸಿತೆನ್ನಲಿ ವಾಸನೇ । ಇಂಥ ಸುಸಂಗ್ರಾಹ್ಯ ಅನೇಕ ಕಥೆಗಳನೆ ।
ಪೋಣಿಸಿ ಕಟ್ಟಬೇಕಿದರ ಮಾಲೆಯನೆ । ಇದುವೆ ಒಳ್ಳೆಯ ಉಪಾಸನೆ ॥ 42

ಕಿವಿಗೆ ಬೀಳಲು ಇದರ ನಾಲ್ಕು ಅಕ್ಷರಗಳು । ಅಳಿವವು ಕ್ಷಣದಲ್ಲಿ ಜೀವನ ದುರ್ದಿನಗಳು ।
ಆದರದಿ ಸಂಪೂರ್ಣ ಕಥೆಯನು ಕೇಳಲು । ಭವವ ದಾಟುವರು ಭಾವಾರ್ಥಿಗಳು ॥ 43

ಮಾಡಿ ನನ್ನನ್ನೇ ಲೆಕ್ಕಣಿಕೆಯನು । ಬಾಬಾರೇ ಬರೆಸುವರು ಹಿಡಿದು ಕೈಯನ್ನು ।
ನಿಮಿತ್ತಮಾತ್ರನು ಅಷ್ಟೇ ಇದಕೆ ನಾನು । ಅಕ್ಷರಗಳ ತೀಡುತಿರುವೆನು ॥ 44

ವರ್ಷಗಟ್ಟಲೇ ಬಾಬಾರ ಲೀಲೆಗಳ ನೋಟ । ಮನಸಿನಲಿ ನಡೆಯಿತು ಅದರದೇ ಆಟ ।
ಬಾಬಾರ ಕಥೇಗಳೇ ಮನಕೆ ಇಷ್ಟ । ಪ್ರೀತಿಯಲಿ ಅವುಗಳನು ಆಯ್ದು ಇಟ್ಟೆ ॥ 45

ಆಗಿದ್ದರೂ ಪ್ರತ್ಯಕ್ಷ ದರ್ಶನ । ತಣಿಯಲಿಲ್ಲದರಿಂದ ಯಾರ ನಯನ ।
ಅವರಿಗೆ ಬಾಬಾರ ಮಹಾತ್ಮ್ಯ ಶ್ರವಣ । ಪುಣ್ಯ ಪಾವನ ಇದಾಗಲಿ ॥ 46

ಯಾರೋ ಭಾಗ್ಯರಾದವರ ಮನಕೆ । ಆದೀತು ಕಾಮನೆ ಓದುವುದಕೆ ।
ಪರಮಾನಂದವಾದೀತು ಮನಕೆ । ಸಮಾಧಾನ ದೊರೆತೀತು ಅವಗೆ ॥ 47

ಹೀಗೆ ವೃತ್ತಿ ಹುಟ್ಟಲು ಮನದಲೇ । ಹಾಕಿದೆ ಮಾಧವರಾಯರ ಕಿವಿಯ ಮೇಲೆ ।
ಆದರೂ ಶಂಕೆ ಮಾಡಿತು ಚಿತ್ತದಲ್ಲೇ । ನನ್ನಿಂದ ಇದು ಸಾಧ್ಯವಾದೀತೆ ಎಂದು ॥ 48

ವಯಸು ದಾಟಿತು ಅರವತ್ತು ವರುಷ । ಬುದ್ಧಿಯಾದರೂ ಉಳಿದೀತೆ ಎನ್ನ ವಶ ।
ಅರ್ಧಕ್ಕೆ ನಿಂತು ಹೋದೀತೆ ಈ ಕೆಲಸ । ಬಾಯಿ ಮಾತಷ್ಟೇ ಉಳಿದೀತು ॥ 49

ಅದಾದರೂ ಆದೀತು ಸಾಯಿ ಪ್ರೀತ್ಯರ್ಥ । ಸಾಧಿಸೀತು ಒಂದಿಷ್ಟು ಪರಮಾರ್ಥ ।
ಇಲ್ಲದಿರೆ ಆದೀತು ಅದು ನಿರರ್ಥ । ಅದಕಾಗಿಯೇ ಈ ಯತ್ನವೆಲ್ಲ ॥ 50

ಹಗಲಿರುಳು ಚಿಂತಿಸಲು ಬಂತು ಅನುಭವಕೆ । ಮನಸು ಮಾಡಿದೆ ಈ ವೃತ್ತಾಂತ ಬರೆವುದಕೆ ।
ಯಾವುದರ ಪರಿಶೀಲನೆಯಿಂದ ಮನಕೆ । ವಿಶ್ರಾಂತಿ ಶಾಂತಿ ದೊರಕೀತು ॥ 51

ಆತ್ಮ ತೃಪ್ತಿಯ ಸಹಜ ಮಾತಿನಲೆ । ಸ್ವಾನುಭೂತಿಯ ಅಧಿಷ್ಠಾನದ ಮೇಲೆ ।
ಬಾಬಾ ನುಡಿದರು ಮೇಲಿಂದ ಮೇಲೆ । ಶ್ರೋತೃಗಳ ಮುಂದಿದನು ಇಡಬೇಕು ॥ 52

ಜ್ಞಾನ ಕಥೆಗಳನವರು ಎಷ್ಟೋ ಹೇಳಿದರು । ಭಜನ ಪಂಥಕೆ ಹಲವರನು ಹಚ್ಚಿದರು ।
ಅದರದೇ ಎಲ್ಲ ಸಂಗ್ರಹವ ಮಾಡಿದರೂ । ಸಾಯಿಯ ಚರಿತ್ರೆ ಅದು ಆದೀತು ॥ 53

ಆ ಕಥೆಗಳನು ಹೇಳುವವರು । ಅವುಗಳನು ಸಾದರದಿ ಕೇಳುವವರು ।
ಮನವ ವಿಶ್ರಾಂತಿಯನು ಉಭಯತರೂ । ಪೂರ್ಣಶಾಂತಿಯನೂ ಪಡೆಯುವರು ॥ 54

ಕೇಳಲು ಶ್ರೀ ಮುಖದ ಕಥೆಗಳನು । ಭಕ್ತರು ಮರೆವರು ದೇಹವ್ಯಥೆಗಳನು ।
ಮೂಡಲದರ ಧ್ಯಾನ ಮನನವನು । ಭವನಿರ್ಮುಕ್ತತೆ ತನ್ನಷ್ಟಕೇ ॥ 55

ಶ್ರೀ ಸಾಯಿ ಮುಖದ ವಾರ್ತೆಗಳು । ಅಮೃತಕ್ಕಿಂತ ರಸಭರಿತವಾಗಿರಲು ।
ಪರಮಾನಂದವಾಗುವದು ಅದ ಕೇಳಲು । ಅದರ ಮಧುರತೆಯನೆಂತು ವರ್ಣಿಸಲಿ ॥ 56

ದಂಭವಿಲ್ಲದೇ ಇಂಥ ಕಥೆಗಳನು ಯಾರು । ಹಾಡಿ ವರ್ಣಿಸುವವರ ನಾ ಕಂಡರೂ ।
ಅವರ ಪದರಜದಲ್ಲಿ ಉರುಳಾಡಿದರೂ । ಮೋಕ್ಷ ಕೈಗೆಟಕೀತು ಎನಿಸುವುದು ॥ 57

ಅವರ ಕಥೆಗಳ ಆ ಅಲೌಕಿಕ ಪದ್ಧತಿ । ಶಬ್ದಾಶಬ್ದಗಳ ಆರಿಸಿಡುವ ರೀತಿ ।
ಕೇಳುವಾ ಶ್ರೋತೃಗಣ ತಲ್ಲೀನವಾಗಿ ಅತಿ । ಸುಖವ ಸಂಪೂರ್ಣ ತಳೆದೀತು ॥ 58

ಕಥೆ ಕೇಳಲು ಎಂತು ಶ್ರವಣ । ಇಲ್ಲವೇ ದರ್ಶನ ಪಡೆಯಲು ನಯನ ।
ಅಂತೆಯೇ ಮನವಾಗಿ ಉನ್ಮನ । ಸಹಜ ಧ್ಯಾನದಿ ತೊಡಗಬೇಕು ॥ 59

ಎನ್ನ ತಾಯಿಯೇ ಗುರುಮಾವುಲಿ ಇಹರು । ಅವರ ಕಥೆಯನು ಜನಕೆ ಯಾರು ಹೇಳವರು ।
ಬಾಯಿಂದ ಬಾಯಿಗೆ ಬಂದುದನು ಕೇಳಿದರೂ । ಶ್ರವಣದಲಿ ಆದರದಿ ತುಂಬಿಸಿಡಬೇಕು ॥ 60

ಅದನದನೇ ತಿರುತಿರುಗಿ ಮತ್ತೆ ನೆನೆಯೋಣ । ಹಿಡಿಸಿದಷ್ಟನು ಎಲ್ಲ ಒಳಗೆ ಸಂಚಯಿಸೋಣ ।
ಪ್ರೇಮ ಬಂಧನದಿಂದ ಅವುಗಳನು ಕಟ್ಟೋಣ । ಹಂಚೋಣ ಆಮೇಲೆ ಒಬ್ಬರೊಬ್ಬರಿಗೆ ॥ 61

ಇದರಲಿ ನನ್ನದು ಏನೇನು ಇಲ್ಲ । ಸಾಯಿನಾಥರದೇ ಪ್ರೇರಣೆ ಇದೆಲ್ಲ ।
ಅವರು ಏನೇನು ನುಡಿಸುವರು ಅದನೆಲ್ಲ । ಅದರಂತೆಯೇ ನಾನು ನುಡಿಯುತಿರುವೆ ॥ 62

ಇದು ಅಹಂಕಾರವೇ ನಾ ನುಡಿವೆನೆಂದರೂ । ಸಾಯಿಯೇ ಸ್ವತಃ ಸೂತ್ರಧಾರಿರುವರು ।
ಅವರೇ ವಾಚೆಯನು ಪ್ರವರ್ತಿಸುವರು । ಎನುವಾಗ ನುಡಿವವನು ನಾನಾರು ॥ 63

ನನ್ನ ತನವನು ಸಮರ್ಪಿಸಲವರ ಚರಣಕೆ । ದಾರಿಯಾದೀತಾಗ ಅಪಾರ ಸೌಖ್ಯಕೆ ।
ಕೊರತೆಯಾಗದು ಎಂದೂ ಸಂಸಾರ ಸುಖಕ್ಕೆ । ಅಹಂಕಾರ ದೂರ ಹೋದಾಗ ॥ 64

ಈ ವಿಚಾರವು ಹೊಳೆಯಲು ಮನದಲಿ । ಬಾಬಾರಿಗಿದನು ಹೇಗೆ ಹೇಳಲಿ ।
ಎನುವಾಗ ಮಾಧವರಾಯರು ಬಂದರಲ್ಲಿ । ಅವರ ಕಿವಿಗಿದ ಹಾಕಿದೆ ॥ 65

ಆಗ ಕೂಡಲೇ ಮಾಧವರಾಯರು । ನೋಡಿ ಅಲ್ಲಿ ಇಲ್ಲ ಮತ್ತಾರೂ ।
ಇಂಥ ಪ್ರಸಂಗ ಕಂಡು ಅವರು । ಬಾಬಾರಿಗಿದನು ಕೇಳಿದರು ॥ 66

ಬಾಬಾ ಈ ಅಣ್ಣಾ ಸಾಹೇಬರೆನ್ನುವರು । ಯಥಾಮತಿ ತಮ್ಮ ಚರಿತ್ರೆಯನವರು ।
ಬರೆಯಬೇಕೆಂದಿರುವರು । ತಮ್ಮ ಅನುಮತಿ ಇದ್ದರೆ ॥ 67

ನಾನಿರುವೆ ಭಿಕಾರಿ ಕೇವಲ । ಭಿಕ್ಷಕ್ಕೆ ತಿರುಗುವೆ ಬಾಗಿಲ ಬಾಗಿಲ ।
ಒಣದೋ ಹಸಿಯೋ ರೊಟ್ಟಿ ಪಲ್ಯ । ತಿಂದು ಕಾಲವ ನೂಕುವೆನು ॥ 68

ಇಂಥ ನನ್ನ ಕಥೆ ಏತಕೆ । ಕಾರಣವಾದೀತು ಉಪಹಾಸಕೆ ।
ಹೀಗೆನ್ನದಿರಿ ಈ ವಜ್ರಕೆ । ಕುಂದಣವೂ ಬೇಕೆಬೇಕು ॥ 69

ಇರಲಿ ನೀಡಿರಿದಕೆ ಅನುಜ್ಞೆಯ । ಬರೆವರು ನಿಮ್ಮದಿದ್ದರೆ ಸಹಾಯ ।
ಬರೆಸೀತು ತಮ್ಮ ಚರಣದ ದಯೆ । ಅಪಾಯವ ದೂರಕೋಡಿಸಿ ॥ 70

ಸಂತರ ಆಶೀರ್ವಾದವಿರಲು । ಅದುವೇ ಉಪಕ್ರಮ ಗ್ರಂಥ ರಚಿಸಲು ।
ತಮ್ಮ ಕೃಪಾವಲೋಕನೆ ಇರಲು । ಲೇಖನ ನಿರ್ವಿಘ್ನ ಸಾಗೀತು ॥ 71

ಎನ್ನ ಮನೋಗತ ತಿಳಿಯಿತು । ಸಾಯಿ ಸಮರ್ಥರಿಗೆ ದಯೆ ಬಂತು ।
ನಿನ್ನ ಮನೋರಥ ಈಡೇರೀತು । ಎನಲು ಚರಣದಿ ಶಿರಬಾಗಿದೆ ॥ 72

ಉದಿಯ ಪ್ರಸಾದವನಿತ್ತರು । ಶಿರದಿ ವರದಹಸ್ತವನಿಟ್ಟರು ।
ಸಾಯಿ ಸಕಲ ಧರ್ಮ ವಿಶಾರದವರು । ಭವಸಾಗರ ದಾಟಿಸುವವರು ॥ 73

ಕೇಳಿ ಮಾಧವರಾಯರ ಪ್ರಾರ್ಥನೆ । ಸಾಯಿಯವರಿಗೆ ಬಂತೆನ್ನ ಕರುಣೆ ।
ಅದಕೆ ಅಧೀರ ಮನಸಿನ ಸಾಂತ್ವನೆ । ಮತ್ತು ಧೈರ್ಯ ಪ್ರಧಾನವನು ಕೈಕೊಂಡರು ॥ 74

ಅರಿತೆನ್ನ ಮನದ ಭಾವಾರ್ಥ । ನುಡಿದರು ಅನುಜ್ಞಾಪನಾರ್ಥ ।
"ಕಥಾವಾರ್ತಾದಿ ಅನುಭವಗಳ ಸಾರ್ಥ । ಸಂಗ್ರಹವನು ಮೊದಲು ಮಾಡಬೇಕು ॥ 75

ಸಂಗ್ರಹ ಸರಿಯಾಗಿ ಇಡುವುದಕೆ । ಪೂರ್ಣ ಸಹಾಯವಿದೆ ನನ್ನದು ಅದಕೆ ।
ಅವನಿರುವದು ಕೇವಲ ನಿಮಿತ್ತ ಮಾತ್ರಕೆ । ನನ್ನದನು ನಾನೇ ಬರೆಯಬೇಕು ॥ 76

ನನ್ನ ಕಥೆಯನು ನಾನೇ ಬರೆಯಬೇಕು । ಭಕ್ತೇಚ್ಛೆಯನು ನಾ ಪೂರೈಸಬೇಕು ।
ಆದರಾತನು ಅಹಂ ಬಿಡಬೇಕು । ನನ್ನ ಚರಣದಲದನು ಕರಗಿಸಬೇಕು ॥ 77

ಈ ರೀತಿ ಅವನು ವ್ಯವಹರಿಸಲು । ಈ ಕಥೆಯಷ್ಟೇ ಏಕೆ ಎಲ್ಲ ಪರಿಯಲು ।
ಆಳಾಗಿ ದುಡಿಯುವೆ ನಾನವರ ಮನೆಯೊಳು । ಪೂರ್ಣಸಹಾಯವೆನ್ನದು ಅವನಿಗೆ ॥ 78

ಯಾವಾಗ ಅಹಂ ವೃತ್ತಿ ಕರಗಿತಲ್ಲ । ಆಗ ಅವನೆಂಬದಕೆ ಸ್ಥಳವೇ ಇಲ್ಲ ।
ಆಗ ನಾನೇ ನಾನಾಗಿರವೆನೆಲ್ಲ । ನನ್ನ ಕೈಯಿಂದ ನಾ ಬರೆಯುವೆ ॥ 79

ಈ ಬುದ್ಧಿಯಿಂದ ಕರ್ಮ ಆರಂಭಿಸಲು । ಶ್ರವಣ ಮನನವೇ ಇಲ್ಲ ಲೇಖನವೇ ಮೊದಲು ।
ಅವನದವನೇ ತಾ ಸಂಪಾದಿಸಿರಲು । ನಿಮಿತ್ತ ಮಾಡುವ ಅವನನು ॥ 80

ಅವಶ್ಯವಾಗಿ ದಫ್ತರ (ಸಂಗ್ರಹ)ವನಿಡಲಿ । ಮನೆ ಮಠ ಇಲ್ಲವೇ ಎಲ್ಲೇ ಇರಲಿ ।
ಮೇಲಿಂದ ಮೇಲೆ ನೆನಪು ಬರುತಿರಲಿ । ಜೀವಕ್ಕೆ ಆದೀತು ಆಗ ವಿಶ್ರಾಮ ॥ 81

ಮಾಡಲೆನ್ನ ಕಥಾಶ್ರವಣ । ಅದರ ಕೀರ್ತನೆ ಮತ್ತು ಚಿಂತನ ।
ಆದೀತು ಆಗ ನನ್ನ ಭಕ್ತಿಯ ಜನನ । ಅವಿದ್ಯೆಯ ನಿರಸನ ತತ್ಕಾಲದಲಿ ॥ 82

ಯಾರು ಭಕ್ತ ಶ್ರಧ್ಧಾನ್ವಿತನು । ಆತನಿಗೆ ನಿತ್ಯ ಅಂಕಿತನು ನಾನು ।
ಬೇರೆಡೆಗೆ ಅಪ್ರಾಪ್ತ ಯಾವಾಗಲೂ ನಾನು । ಇದರಲೆನಿತು ಶಂಕೆ ಇರಕೂಡದು ॥ 83

ಸದ್ಭಾವದಿಂದ ಈ ಕಥೆಗಳನು ಆಲಿಸಲು । ನಿಷ್ಠೆ ಉದಯಿಸೀತು ಶ್ರೋತೃಗಳ ಚಿತ್ತದೊಳು ।
ಸಹಜ ಸ್ವಭಾವ ಸ್ವಾನಂದತೆಗಳು । ಸುಖಾವಸ್ಥೆಗಳು ಲಭಿಸುವವು ॥ 84

ಭಕ್ತರಿಗೆ ನಿಜರೂಪ ಜ್ಞಾನ । ಜೀವ-ಶಿವರಿಗೆ ಸಮಾಧಾನ ।
ಸಿಕ್ಕೀತು ಅಲಕ್ಷ ನಿರ್ಗುಣ । ಚೈತನ್ಯ ಘನ ಪ್ರಕಟವಾದೀತು ॥ 85

ಇಂಥ ಈ ಎನ್ನ ಕಥೆಗಳ ವಿಂದಾನ । ಇದಕೂ ಹೆಚ್ಚಿನದು ಬೇಕು ಇನ್ನೇನು ।
ಶೃತಿಗಳದು ಇಹುದು ಇದೇ ಧ್ಯೇಯ ಸಂಪೂರ್ಣ । ಈ ಅರ್ಥದಲಿ ಭಕ್ತ ಸಂಪನ್ನನಾಗುವ ॥ 86

ಎಲ್ಲಿ ವಾದ ವಿವಾದಗಳದೇ ವೃದ್ಧಿ । ಅಂಥಲ್ಲಿ ಅವಿದ್ಯೆ ಮಾಯೆಗಳ ಸಮೃದ್ಧಿ ।
ಅಂಥಲ್ಲಿ ಇರಲಾರದು ಸ್ವಹಿತ ಶುದ್ಧಿ । ಇದ್ದೀತು ಕುತರ್ಕ ಮತ್ತು ದುರ್ಬುದ್ಧಿ ॥ 87

ಆತ್ಮಜ್ಞಾನಕ್ಕೆ ಅವನಲ್ಲ ಪಾತ್ರ । ಇಲ್ಲಿ ಅವನಿಗೆ ಎಂದೂ ಪರತ್ರ ।
ಇಂಥವನ ಗ್ರಹಿಸುವದು ಅಜ್ಞಾನ ಮಾತ್ರ । ಅಸುಖ ಸರ್ವತ್ರ ಯಾವಾಗಲೂ ॥ 88

ಬೇಡ ಸ್ವಪಕ್ಷದ ಸ್ಥಾಪನ । ಬೇಡ ಪರಪಕ್ಷದ ನಿರಾಕರಣ ।
ಬೇಡ ಪಕ್ಷದ್ವಯಾತ್ಮಕ ವಿವರಣ । ಏಕೆ ಈ ಆಯಾಸ ನಿಷ್ಕಾರಣ" ॥ 89

'ಬೇಡ ಪಕ್ಷದ್ವಯಾತ್ಮಕ ವಿವರಣ' । ಆದಾಗ ಈ ಶಬ್ದಗಳ ಸ್ಮರಣ ।
ಹಿಂದೆ ಶ್ರೋತೃಗಳಿಗೆ ಕೊಟ್ಟ ಅಭಿವಚನ । ಬಂದಿತದರ ನೆನಪು ಈಗ ॥ 90

ಹಿಂದೆ ಪ್ರಥಮಾಧ್ಯಾಯ ಮುಗಿಸುವಾಗ । ವಚನವಿತ್ತಿದ್ದೆ ಶ್ರೋತೃಗಳಿಗಾಗ ।
'ಹೇಮಾಡ' ನಾಮಕರಣದ ಕಥೆಯನೀಗ । ಮೊದಲೆಲ್ಲರಿಗೂ ಹೇಳುವೆ ॥ 91

ಕಥೆಗಳ ನಡುವೆ ಈ ಅಡ್ಡಕಥೆ । ಕೇಳಿ ನಿರ್ಧರಿಸಿರಿ ಯುಕ್ತಾಯುಕ್ತತೆ ।
ಜಿಜ್ಞಾಸೆಯಾದೀತು ಪೂರ್ತತೆ । ಈ ಪ್ರೇರಕತೆಯೂ ಸಾಯಿಯದೇ ॥ 92

ಮುಂದೆ ಮತ್ತಾಗುವದು ಪೂರ್ವ ಸಂಧಾನ । ಮಾಡುವೆನು ಸಾಯಿ ಚರಿತ್ರಕಥನ ।
ಅದಕಾಗಿ ಶ್ರೋತೃಗಳೆ ಮಾಡಿರಿದ ಶ್ರವಣ । ಚಿತ್ತಗೊಟ್ಟು ಈ ಕಥೆಯನು ॥ 93

ಇನ್ನು ಈ ಸಾಯಿ ಲೀಲಾಗ್ರಂಥ । 'ಭಕ್ತ ಹೇಮಾಡಪಂತ ವಿರಚಿತ' ।
ಎಂದಾಗಿದೆ ಪ್ರತಿ ಅಧ್ಯಾಯದಂತ । ಇಂಥ ಈ ಪಂತನಾರಿವನು ॥ 94

ಸಹಜ ಆಶಂಕೆಯದು ಶ್ರೋತೃಗಳ ಮನಕೆ । ಅವರ ಜಿಜ್ಞಾಸೆಯನು ದೂರಮಾಡುವುದಕೆ
ಆರಂಭವಾದುದ್ದೇಗೀನಾಮಕರಣಕೆ । ಸಾದರ ಚಿತ್ತರಾಗಿದನು ಕೇಳಿ ॥ 95
ಜನ್ಮದಾರಭ್ಯ ಮರಣದವರೆಗೆ । ಷೋಡಶ ಸಂಸ್ಕಾರಗಳು ದೇಹಗಳಿಗೆ ।
'ನಾಮಕರಣವು' ಒಂದು ಸಂಸ್ಕಾರಸಿದ್ಧಿಗೆ । ಈ ವಿಧಿಯು ಹೆಸರಾಗಿದೆ ॥ 96

ಚಿಕ್ಕ ಕಥೆಯೊಂದಿಗೆ ಅದರ ಬಗ್ಗೆ । ಹೇಳುವೆ ನಾನೀಗ ಶ್ರೋತೃಗಳಿಗೆ ।
ಹೇಮಾಡಪಂತ ನಾಮಕರಣದ ಬಗೆ । ಪ್ರಸಂಗವಶವೆಂದು ತಿಳಿದೀತು ॥ 97

ಮೊದಲೇ ಲೇಖಕನಿವನು ಬಲು ತುಂಟ । ಎಷ್ಟು ತುಂಟನೋ ಅಷ್ಟೇ ಮಾತುಗಂಟ ।
ಮಾತು ಮಾತಿನಲಿ ಬೇರೆಯವರ ಚೇಷ್ಟೆ । ಜ್ಞಾನದ ಅರಿವು ಇನಿತೂ ಇಲ್ಲ ॥ 98

ಗೊತ್ತಿಲ್ಲ ಇವನಿಗೆ ಸದ್ಗುರುವಿನ ಮಹಿಮೆ । ಕುಬುದ್ಧಿ ಮತ್ತು ಕುತರ್ಕಗಳ ಪ್ರತಿಮೆ ।
ತನ್ನ ಜಾಣತನದ್ದೇ ಯಾವಾಗಲೂ ಗರಿಮೆ । ವಾದಕರ್ಮಕೆ ಪ್ರವೃತ್ತನು ॥ 99

ಆದರೂ ಪ್ರಾಕ್ತನದ ರೇಖೆಯೇ ಪ್ರಬಲ । ಅದರಿಂದ ಸಾಯಿಯ ಚರಣ ಕಮಲ ।
ಅದೃಷ್ಟವೆಂದೇ ಕಂಡೆನವನ ಕೇವಲ । ಇದಂತೂ ನಿರ್ವಿವಾದವು ಖಚಿತ ॥ 100

ಕಾಕಾಸಾಹೇಬ ಭಕ್ತ ಪ್ರವರ । ನಾನಾ ಸಾಹೇಬ ಚಾಂದೋರಕರ ।
ಋಣಾನುಬಂಧ ಇರದೇ ಇವರ । ಶಿರಡಿಗೆ ನಾನೇಕೆ ಹೋಗುತ್ತಿದ್ದೆ ॥ 101

ಕಾಕಾ ಸಾಹೇಬರ ಒತ್ತಾಯವಾಯಿತು । ಶಿರಡಿಗೆ ಹೊರಡುವುದು ಗೊತ್ತಾಯಿತು ।
ಹೊರಡುವ ದಿನವೇ ಬದಲಾಯಿತು । ಮನ ತಿರುಗಿತು ಆಕಸ್ಮಾತ ॥ 102

ಇವನ ಒಬ್ಬ ಪರಮ ಮಿತ್ರ । ಅನುಗ್ರಹ ಪಡೆದ ಗುರುಪುತ್ರ ।
ಇರಲು ಲೋಣಾವಳಿಗೆ ಸಹಕಲತ್ರ । ವಿಚಿತ್ರ ಪ್ರಸಂಗ ಒದಗಿತು ॥ 103

ಅವನ ಒಬ್ಬನೇ ಒಬ್ಬ ಮಗ । ಗುಣವಂತ ಮತ್ತು ಸದೃಢನಿರುವಾಗ ।
ಶುದ್ಧ ಹವೆಯ ಆ ಸ್ಥಾನದಲ್ಲಿ ಇರುವಾಗ । ಜ್ವರಾಕ್ರಾಂತನವ ಆದನು ॥ 104

ಮಾನವೀಯ ಉಪಾಯಗಳೆಲ್ಲ ಮುಗಿದವು । ದೈವೀ ಉಪಾಯಗಳೂ ಆದವು ।
ಹತ್ತಿರ ಬಂದು ಕುಳಿತ ಗುರುವು । ಕೊನೆಗೂ ಸುತನವಗೆ ಕೈಕೊಟ್ಟ ॥ 105

ಇಂಥ ಕಠಿಣ ಪ್ರಸಂಗ ಕಂಡು । ದುರ್ಧರ ಸಂಕಟ ನಿವಾರಿಸಲೆಂದು ।
ಪುತ್ರನ ಹತ್ತಿರ ಗುರುವನೇ ತಂದು । ಕೂಡ್ರಿಸಿದರೂ ವ್ಯರ್ಥವಾಯಿತೆಲ್ಲ ॥ 106

ಇಂತು ಈ ಸಂಸಾರ ವಿಚಿತ್ರ । ಯಾರ ಪತ್ನಿ ಯಾರ ಪುತ್ರ ।
ಪ್ರಾಣಿ ಮಾತ್ರರ ಕರ್ಮತಂತ್ರ । ಅದೃಷ್ಟ ಅನಿವಾರ್ಯ ಎಲ್ಲೆಡೆಗೆ ॥ 107

ದುರ್ವಾರ್ತೆಯನು ಇದನು ಕೇಳುತ । ಅತಿ ಉದ್ವಿಗ್ನವಾಯಿತು ಚಿತ್ತ ।
ಆದನೇನು ಗುರುವು ಉಪಯುಕ್ತ । ಇದ್ದೊಬ್ಬ ಮಗನನು ಉಳಿಸಲಿಲ್ಲ ॥ 108

ಪ್ರಾರಬ್ಧ ಕರ್ಮದ ಪ್ರಬಲತೆ । ಅದೇ ಸಾಯಿ ದರ್ಶನಕಾಯಿತು ಶಿಥಿಲತೆ ।
ಚಿತ್ತದೆ ಪ್ರಾಪ್ತವಾಯಿತು ಅಂತೇ । ಗಮನಕೆ ಅಡ್ಡಿಯಾಯಿತು ॥ 109

ಶಿರಡಿಗೆ ಇನ್ನೇಕೆ ಹೋಗಬೇಕು । ಗೆಳೆಯನಿಗೆ ಸಾಂತ್ವನವನೇನು ಹೇಳಬೇಕು ।
ಇದು ತಾನೆ ಗುರುವಿನ ಲಾಭವೆನಬೇಕು । ಕರ್ಮಕೆ ಗುರು ಏನು ಮಾಡುವನು ॥ 110

ಆಗುವದು ಬರೆದಂತೆ ಹಣೆಯ ಬರಹದಲಿ । ಅದುವೆ ಆಗುವದೆಂಬ ನಿಯಮ ಇರುವಾಗಲೆ ।
ನಿಂತಿದೆ ಯಾವುದು ಗುರುವಿಲ್ಲದಲೆ । ಹೋಗಬೇಕೇಕಿನ್ನು ಶಿರಡಿಗೆ ಎನಲು ॥ 111

ಏತಕ್ಕೆ ನಾವಿರುವ ಸ್ಥಳವ ಬಿಡಬೇಕು । ಏತಕ್ಕೆ ಗುರುವಿನ ಹಿಂದೋಡಬೇಕು ।
ಸುಖದ ಜೀವನಕ್ಕೆ ದುಃಖವನ್ನು ಕೊಡಬೇಕು । ಯಾವ ಕಾರಣಕೋ ತಿಳಿಯದು ॥ 112

ಯದೃಚ್ಛೆಯಂತೆಯೇ ಏನೆಲ್ಲ ನಡೆಯಲಿ । ಭೋಗಿಸುವ ಸುಖ ಅಥವಾ ಕಷ್ಟವೇ ಬರಲಿ ।
ಏನಿದೆ ಹೋಗಿಯಾದರೂ ಗುರುವಿನಲ್ಲಿ । ಆಗುವುದು ತಪ್ಪಿಸಲು ಬಾರದೇ ಇರಲು ॥ 113

ಯಾರದ ಅರ್ಜಿತ ಎಂತಿರುವದು । ಬೇಕೆಂದರೂ ಅದು ನಡೆದು ಬರುವದು ।
ಆಗುವದರ ಮುಂದೇನೂ ನಡೆಯದು । ಎಳೆದೊಯ್ದಿತೆನ್ನ ಆ ಶಿರಡಿಗೆ ॥ 114

ಪ್ರಾಂತಾಧಿಕಾರಿ ನಾನಾ ಸಾಹೇಬರು । ವಸಯಿಯ ಪ್ರವಾಸಕೆ ಹೊರಟಿದ್ದರು ।
ಠಾಣೆಯಿಂದ ದಾದರಕ್ಕೆ ಬಂದರು । ಅಲ್ಲಿ ಕ್ಷಣವೊಂದು ಕುಳಿತರು ॥ 115

ನಡುವೆ ಒಂದು ಗಂಟೆ ಕಾಲ । ವಸಯಿಯ ರೈಲು ಬರಬೇಕಲ್ಲ ।
ಈ ಅವಕಾಶ ಬಿಡಲು ಸಲ್ಲ । ಯಾವುದಾದರೂ ಕಾರ್ಯಸಾಧಿಸದೆ ॥ 116

ಇಷ್ಟು ವಿಚಾರ ಮನಕೆ ಬಂತು । ಅದೇ ದಾದರಕೆ ಗಾಡಿ ಬಂತು ।
ಬಾಂದ್ರೆಯವರೆಗಷ್ಟೇ ಹೋಗುತ್ತಿತ್ತು । ಅದರಲ್ಲಿಯೇ ಹತ್ತಿ ಕುಳಿತರವರು ॥ 117

ರೈಲು ತನ್ನ ಠಾಣಕೆ ಬಂದಾಗೆ । ಕರೆಬಂದಿತು ಅವರಿಂದ ನನಗೆ ।
ಸುದ್ದಿ ನಡೆಯಿತು ಶಿರಡಿಯ ಬಗ್ಗೆ । ಭೆಟ್ಟಿಯಾದ ಕ್ಷಣದಲೇ ॥ 118

ಯಾವಾಗ ಹೊರಡುವಿರಿ ಸಾಯಿ ದರ್ಶನಕೆ । ಶಿರಡಿಗೆ ಹೊರಡಲು ಆಲಸ್ಯವೇಕೆ ।
ದೀರ್ಘಸೂತ್ರತೆ ಏಕೆ ಪ್ರಸ್ಥಾನಕೆ । ಮನದ ನಿಶ್ಚಯವೇಕೆ ಮಾಡದಿಹರಿ ॥ 119

ನಾನಾರ ಆತುರತೆಯನು ಕಂಡು । ಮನದಲ್ಲಿ ನಾನೇ ನಾಚಿಕೊಂಡು ।
ಮನವೇತಕೋ ಇನ್ನೂ ಸ್ಥಿರವಾಗದು । ಎಂಬದನು ಅವರೆದುರು ಒಪ್ಪಿಕೊಂಡೆ ॥ 120

ಅದರ ಬಗ್ಗೆ ನಾನಾರ ಬೋಧ । ಕೂಡಿತ್ತು ಕಳಕಳಿ ಪ್ರೇಮಗಳಿಂದ ।
ಅದಾಯಿತಾಗ ಅತಿ ಮೋದಪ್ರದ । ಕೇಳಿ ಶಿರಡಿಯ ಗಮನೋದ್ದೇಶ ॥ 121

'ಕೂಡಲೇ ಹೊರಡುವೆನು' ಎಂದು ವಚನ । ಪಡೆದೇ ನಡೆಸಿದರು ನಾನಾ ಪ್ರಯಾಣ ।
ನಾನೂ ತೆಗೆದಿಟ್ಟೆ ಮುಹೂರ್ತದ ಪ್ರಸ್ಥಾನ । ಮನೆಯ ಮುಟ್ಟಿದ ಕೂಡಲೇ ॥ 122

ಎಲ್ಲ ಸಾಮಾನು ಹೊಂದಿಸಿಕೊಂಡು । ಎಲ್ಲ ವ್ಯವಸ್ಥೆಯನು ನೋಡಿಕೊಂಡು ।
ಸಾಯಂಕಾಲಕೆ ಅದೇ ದಿನದಂದು । ಶಿರಡಿಗೆ ಪ್ರಯಾಣ ಬೆಳೆಸಿದೆ ॥ 123

ಗಾಡಿ ಸಂಜೆಯ ನಂತರದ್ದು । ದಾದರಕೆ ನಿಲ್ಲುವದೆಂದು ತಿಳಿದು ।
ದಾದರಕೆ ಹೋಗಲೆಂದು ತಿಕೀಟನು ಕೊಂಡುಕೊಂಡೆ ॥ 124

ನಾ ಗಾಡಿಯಲ್ಲಿ ಕುಳಿತಿರಲು । ಬಾಂದ್ರಾಕ್ಕೆ ಆ ಗಾಡಿ ಬರಲು ।
ಧಾವಿಸಿ ಬಂದ ಗಾಡಿ ಬಿಡಲು । ಯವನನೊಬ್ಬನು ಅಲ್ಲಿಗೆ ॥ 125

ತಿಕೀಟು ತೆಗೆದುಕೊಂಡೆ ದಾದರಕೆ । ಅದುವೇ ಆರಂಭ ಕಾರ್ಯಘಾತಕೆ ।
'ಮಕ್ಷಿಕಾಪಾತ ಪ್ರಥಮ ಗ್ರಾಸಕೆ' । ಹಾಗೆ ಬಗ್ಗಿ ನೋಡುತಿದ್ದ ॥ 126

ಕಂಡು ನನ್ನ ಸಾಮಾನುಗಳನು । 'ಎಲ್ಲಿ ಗಮನ'ವೆಂದಾತ ಕೇಳಿದನು ।
ಎಂದೆ ದಾದರಕೆ ಹೋಗುವೆನು । ಅಲ್ಲಿ ಮನಮಾಡದ ಗಾಡಿ ಹಿಡಿಯುವೆ ॥ 127

ಹೊತ್ತಿಗೆ ಸರಿಯಾಗಿ ಅವ ಹೇಳಿದ । ದಾದರದಲ್ಲಿ ನೀನಿಳಿಯಬೇಡ ।
ಗಾಡಿ ನಿಲ್ಲದು ಅಲ್ಲಿ ಅದರಿಂದ । ಬೋರಿಬಂದರಕೆ ನೀ ಹೋಗು ॥ 128

ಹೊತ್ತಿಗೀಸೂಚನೆ ಸಿಗದಿದ್ದಲ್ಲಿ । ಗಾಡಿ ಸಿಗುತ್ತಿದ್ದಿಲ್ಲ ದಾದರದಲ್ಲಿ ।
ಗೊತ್ತಿಲ್ಲ ಆಗ ಈ ಚಂಚಲ ಮನದಲ್ಲಿ । ಏನೇನು ಕಲ್ಪನೆಗಳು ಬರುತಿದ್ದವೋ ॥ 129

ಆದರಾದಿನದ ಪ್ರಯಾಣ ಯೋಗ । ಬಲವಾಗಿದ್ದಿತು ಅದೇ ಸುಯೋಗ ।
ಅದರಿಂದ ನಡುವೆ ಈ ಕಥಾಭಾಗ । ಅನೂಕಲಕರ ನಡೆಯಿತು ಅಕಸ್ಮಾತ್ ॥ 130

ಭಾವೂ ಸಾಹೇಬ ದೀಕ್ಷಿತರು ಅಲ್ಲಿ । ಇದ್ದರೆನ್ನ ಮಾರ್ಗ ಪ್ರತೀಕ್ಷೆಯಲಿ ।
ಮರುದಿನ ಒಂಭತ್ತು ಹತ್ತರಷ್ಟರಲಿ । ಇಳಿದೆ ನಾನಲ್ಲಿಗೆ ಹೋಗಿ ॥ 131

ಇಸ್ವೀಸನ್ ಹತ್ತೊಂಭತ್ತು ನೂರಾಹತ್ತು । ಅಂದು ಈ ಸಮಾಚಾರ ನಡೆದಿತ್ತು ।
ಸಾಠೆಯವರ ವಾಡೆ ಒಂದೇ ಇತ್ತು । ಆಗ ಪ್ರವಾಸಿಗರಿಳಿದು ಕೊಳ್ಳಲು ॥ 132

ಟಾಂಗಾದಿಂದ ನಾ ಇಳಿದೆನು । ಹೊತ್ತು ದರ್ಶನದ ಉತ್ಸುಕತೆಯನು ।
ಯಾವಾಗ ಚರಣದಿ ಶಿರವಿಟ್ಟೇನು । ಆನಂದ ಮನದಲ್ಲಿ ಉಕ್ಕಿತು ॥ 133

ಅಷ್ಟರಲಿ ಸಾಯಿಯ ಪರಮ ಭಕ್ತ । ತಾತ್ಯಾಸಾಹೇಬ ನೂಲಕರ ವಿಖ್ಯಾತ ।
ಮಶೀದಿಯೊಳಗಿಂದ ಬಂದರತ್ತ । "ತ್ವರಿತ ದರ್ಶನ ತೆಗೆದುಕೊಳ್ಳಿರಿ" ಎಂದರು ॥ 134

ಭಕ್ತ ಬಳಗದ ಜೊತೆಗೆ ಬಾಬಾ ಬಂದರು । ಧೂಳಿದರ್ಶನ ಮೊದಲು ಆಗಲಿ ಎಂದರು ।
ಮುಂದೆ ಲೇಂಡಿಗೆ ಅವರು ಹೋಗುವರು । ಎಂದೆನಗೆ ಅವರು ಸೂಚಿಸಿದರು ॥ 135

ನಿಮ್ಮ ಸ್ನಾನ ಮುಂತಾದವು ಮುಗಿಯುವಲ್ಲಿ । ಬಾಬಾ ಬರುವರು ಮತ್ತೆ ಇಲ್ಲಿ ।
ಆಗ ಹೋಗಿ ಮಶೀದಿಯಲ್ಲಿ । ಸ್ವಸ್ಥದರ್ಶನ ಪಡೆಯಿರಿ ॥ 136

ಇದಕೇಳಿ ಅವಸರವಸರವಾಗಿ । ಓಡಿದೆ ಬಾಬಾ ಇರುವಲ್ಲಿಗೆ ।
ಧೂಳಿನಲ್ಲೇ ಎರಗಿದೆ ಪಾದಗಳಿಗೆ । ಆನಂದ ಮನಸಿನಲಿ ಹಿಡಿಸದು ॥ 137

ನಾನಾ ಸಾಹೇಬರು ಹೇಳಿದ್ದೇ । ಆದರೂ ಅದಕ್ಕಿಂತ ಅಧಿಕ ಕಂಡೆ ।
ಪ್ರತ್ಯಕ್ಷ ದರ್ಶನದಿಂದ ಧನ್ಯನಾದೆ । ಸಫಲವಾದವು ನಯನಗಳು ॥ 138

ಎಂದೂ ಕಂಡಿಲ್ಲ ಕೇಳಿಲ್ಲ । ಆ ಮೂರ್ತಿಯು ದೃಷ್ಟಿಯ ತಣಿಸಿತಲ್ಲ ।
ಹಿಂಗಿದವು ಹಸಿವು ನೀರಡಿಕೆಗಳೆಲ್ಲ । ಇಂದ್ರಿಯಗಳು ತಟಸ್ಥವಾದವು ॥ 139

ಪಡೆದೆ ಸಾಯಿಯ ಚರಣ ಸ್ಪರ್ಶ । ಪಡೆದೆನು ಆ ಪರಾಮರ್ಶ ।
ಅದೇ ಈ ಜೀವದ ಪರಮೋತ್ಕರ್ಷ । ನೂತನ ಆಯುಷ್ಯ ಮುಂದಿನದು ॥ 140

ಯಾರಿಂದ ದೊರಕಿತೋ ಈ ಸತ್ಸಂಗ । ಪ್ರಸನ್ನವಾಯಿತೆನ್ನಂಗ ಪ್ರತ್ಯಂಗ ।
ಅವರ ಉಪಕಾರವದು ಅವ್ಯಂಗ । ಎನ್ನ ಮೇಲೆ ಅಭಂಗವಾಗುಳಿಯಲಿ ॥ 141

ಯಾರಿಂದ ಪಡೆದೆನು ಈ ಪರಮಾರ್ಥ । ಅವರಿಗಿಂತಿಲ್ಲ ಸ್ವಕೀಯ ಆಪ್ತ ।
ಅವರೇ ಬಳಗ ಎಲ್ಲ ಎನುತ । ಚಿತ್ತದಲಿ ನಾ ತಿಳಿದಿರುವೆ ॥ 142

ಎಷ್ಟೊಂದು ಅವರ ಉಪಕಾರ । ಮಾಡಲು ತಿಳಿಯೆನು ಪ್ರತ್ಯುಪಕಾರ ।
ಅದಕೆ ಕೇವಲ ಮುಗಿದು ಕರ । ಚರಣದಿ ಈ ಶಿರವನಿಡುವೆನು ॥ 143

ಸಾಯಿ ದರ್ಶನ ಲಾಭವಾಯಿತು । ಎನ್ನ ಮನದ ವಿಕಲ್ಪ ದೂರಾಯಿತು ।
ಮೇಲೆ ಸಾಯಿಯ ಸಮಾಗಮವು ದೊರೆಯಿತು । ಪರಮಾನಂದವು ಉದಿಸಿತು ॥ 144

ಸಾಯಿ ದರ್ಶನದ ಚಮತ್ಕಾರವಿದು । ದರ್ಶನ ಮಾತ್ರದಿ ವೃತ್ತಿ ಬದಲಾಗುವದು ।
ಪೂರ್ವಕರ್ಮವು ಅಳಿದು ಹೋಗುವದು । ಅಸಹ್ಯತೆ ಹುಟ್ಟುವದು ವಿಷಯಗಳಲಿ ॥ 145

ಪೂರ್ವಜನ್ಮದ ಪಾಪ ಸಂಚಯ । ಕೃಪಾವಲೋಕನದಿ ಆಯಿತು ಕ್ಷಯ ।
ಆಶೆ ಮೂಡಿತು ಆನಂದ ಅಕ್ಷಯ । ಕೊಟ್ಟವು ಸಾಯಿ ಚರಣಗಳು ॥ 146

ಭಾಗ್ಯದಿ ಪಡೆದಿಹೆ ಚರಣ ಮಾನಸ । ಕಾಣೆಯಾದೀತಿಲ್ಲಿ ರಾಜಹಂಸ ।
ಸಾಯಿ ಮಹಂತನು ಸಂತಾವತಂಸ । ಪರಮಹಂಸ ಸದ್ಯೋಗಿ ಅವ ॥ 147

ಪಾಪ ತಾಪ ವಿನಾಶಿಗಳಾದ । ಇಂಥ ಸಾಯಿಯ ದರ್ಶನದಿಂದ ।
ಇಂದು ಆ ಪುಣ್ಯರಾಶಿಯ ಸಮಾಗಮದಿಂದ । ಬಹಳ ಪುನೀತನಾನಾದೆನಕೇ ॥ 148

ಹಿಂದಿನನೇಕ ಜನ್ಮದ ಪುಣ್ಯವಿತ್ತು । ಅದಕೇ ಸಾಯಿ ಮಹಾರಾಜರ ಭೆಟ್ಟಿಯಾಯಿತು ।
ಸಾಯಿಯೊಬ್ಬನಲಿ ಸ್ಥಿರವಾಗಲು ದೃಷ್ಟಿ । ಸಾಯಿ ರೂಪವೇ ಸಕಲ ಸೃಷ್ಟಿ ॥ 149

ಬಂದ ಮೊದಲ ದಿನವೇ ಶಿರಡಿಗೆ । ಬಾಳಾಸಾಹೇಬ ಭಾಟೆಯವರ ಜೊತೆಗೆ ।
ಶುರುವಾಯಿತು ವಾದವಿವಾದಗಳಿಗೆ । ಗುರುವನೇತಕೆ ಮಾಡಿಕೊಳ್ಳಬೇಕು ॥ 150

ತಮ್ಮ ಸ್ವಾತಂತ್ರ್ಯವನು ಕಳೆದುಕೊಂಡು । ಪರತಂತ್ರತೆಯನೇಕೆ ಅಪ್ಪಿಕೊಳ್ಳುವುದು ।
ಅವಶ್ಯಕತೆ ಏನು ಗುರುವಿನದು । ತಾವು ಕರ್ತವ್ಯ ದಕ್ಷರಿರುವಾಗ ॥ 151

ತಾನೇ ಮಾಡಬೇಕು ತನ್ನ ಕರ್ತವ್ಯವನು । ಮಾಡದಿರೆ ಗುರುವಾದರೂ ಏನು ಮಾಡಿಯಾನು ।
ಕೈ ಕಾಲು ಅಲುಗಿಸದೆ ಮಲಗಿರುವವನು । ಅಂಥವನಿಗೆ ಯಾರೇನು ಕೊಟ್ಟಾರು ॥ 152

ಈ ವಾದ ನನ್ನ ಪಕ್ಷದ್ದು । ಇದಕ್ಕೆ ವಿರುದ್ಧ ಪ್ರತಿಪಕ್ಷದವನದು ।
ದುರಾಗ್ರಹಗಳ ತಕ್ಕಡಿ ಇದು । ವಾದ ಮುಗಿಯಲೇ ಇಲ್ಲ ॥ 153

ಮೈಯಲ್ಲಿ ಹಿಡಿಸಲಾರದ ದೇಹಾಭಿಮಾನ । ಅದರಿಂದಲೇ ಆಗುವದು ವಾದ ವಿವಾದ ಜನನ ।
ಅಹಂಭಾವದ ಗುರುತು ಎನಬೇಕು ಇದನ । ಇದಿಲ್ಲದಿರೆ ಜಗದಿ ವಾದವೇ ಇಲ್ಲ ॥ 154

ಪ್ರತಿಪಕ್ಷದ ನಿಶ್ಚಿತ ಮತ । ಅವನಿರಲಿ ಪಂಡಿತ ವೇದ ಪಾರಂಗತ ।
ಗುರು ಅನುಗ್ರಹದ ವ್ಯತಿರಿಕ್ತ । ಪುಸ್ತಕದ ಜ್ಞಾನ ಮಾತ್ರವೇ ಅವನದು ॥ 155

ದೈವ ಹಿರಿಯದು ಅಥವಾ ಕರ್ತೃತ್ವ ಹಿರಿದು । ವಾದ ನಡೆಯಿತು ಅತಿ ತುರುಸಿನದು ।
ದೈವದ ಮೇಲೆಯೇ ಭಾರ ಹಾಕುವದು । ಅದರಿಂದೇ ನಾಗುವದೆಂಬ ಮತ ನನ್ನದು ॥ 156

ಅದಕೆನ್ನುವ ಎದುರು ಪಕ್ಷಕಾರ । ಆಗುವದಕೆ ಇಲ್ಲ ಪ್ರತಿಕಾರ ।
ಆಗುವದನ್ನಾರು ತಪ್ಪಿಸಲಾರ । ನಾ ನಾ ಎಂಬುವರೂ ಸೋತಿಹರು ॥ 157

ದೈವದೆದುರು ಯಾರದೂ ನಡೆಯದು । ಒಂದು ಮಾಡಲು ಇನ್ನೊಂದು ಆಗುವದು ।
ಇಲ್ಲಿ ನಡೆಯದ ನಿಮ್ಮ ಚಾತುರ್ಯವೊಂದೂ । ಅಭಿಮಾನಕಿಲ್ಲಿ ಎಡೆಯಿಲ್ಲ ॥ 158

ನಾನೆಂದೆ ನಿಮ್ಮ ಈ ಮಾತು ಹೇಗೆ । ಆಲಸ್ಯತನದಿ ಕುಳಿತಿರುವವನಿಗೆ ।
ದೈವವಾದರೂ ಸಹಾಯ ಮಾಡೀತು ಹೇಗೆ । ಮಾಡಬೇಕೆಂದವಗೆ ಎಲ್ಲ ಉಂಟು ॥ 159

ಉದ್ಧರೇದಾತ್ಮನಾತ್ಮಾನಂ ಎಂದು । ಕೂಗಿಹವು ಸ್ಮೃತಿ ವಚನಗಳು ಅಂದು ।
ಅನಾದರ ಮಾಡಿ ಅವುಗಳದು । ದಾಟಿ ಹೋಗುವದಸಾಧ್ಯವು ॥ 160

ಇದನು ಯಾರದು ಅವರೇ ಮಾಡಬೇಕು । ಗುರುವಿನ ಬೆನ್ನೇಕೆ ಹತ್ತಬೇಕು ।
ತಾವೇ ಮೊದಲು ಎಚ್ಚರಿರಬೇಕು । ಗುರುವಿನಿಂದಿದು ಹೇಗೆ ಕೈಗೂಡೀತು ॥ 161

ತಮ್ಮ ಸದಸತ್ ವಿಚಾರಬುದ್ಧಿ । ತಮ್ಮ ಸಾಧನೆ ಮತ್ತು ಆತ್ಮಶುದ್ಧಿ ।
ಇದು ಬಿಟ್ಟು ಇರುತಿರಲು ತಾ ಕುಬುದ್ಧಿ । ಗುರುವೇನು ಸಿದ್ಧಿಯನು ಕೊಟ್ಟಾನು ॥ 162

ಈ ವಾದಕ್ಕೆ ಅಂತವೇ ಇಲ್ಲ । ನಿಷ್ಪನ್ನವೇನೂ ಅದರಿಂದಾಗಲಿಲ್ಲ ।
ಚಿತ್ತಸ್ವಾಸ್ಥ್ಯವ ಮಾತ್ರ ಕಳೆಕೊಂಡೆವಲ್ಲ । ಇದುವೇ ನಾ ಅಂದು ಗಳಿಸಿದ್ದು ॥ 163

ಈ ರೀತಿ ವಾದಿಸುತ ವಾದಿಸುತ । ಒಬ್ಬರೂ ಒಂದಿನಿತೂ ಹಿಮ್ಮೆಟ್ಟದಿರುತ ।
ಹೀಗೆಯೇ ಎರಡು ಗಳಿಗೆಗಳ ಕಳೆಯುತ । ವಾದವನು ಮುಗಿಸಿ ಎದ್ದೆವು ॥ 164

ಆಮೇಲೆ ನಾನೆಲ್ಲರ ಜೊತೆಗೆ । ಮಶೀದೆಗೆ ನಾವು ಹೋದಾಗ ।
ಬಾಬಾ ಕಾಕಾ ಸಾಹೇಬರಿಗೆ । ಏನೆಂದರದನು ಕೇಳಿರೀಗ ॥ 165

ಇದುವರೆಗೆ ವಾಡೆಯಲಿ ನಡೆಯಿತೇನು । ವಾದವೇತರದು ಜಗಳವೇನು ।
ಈ ಹೇಮಾಡ ಪಂತರು ಅಂದದ್ದೇನು । ನನ್ನೆಡೆಗೆ ನೋಡುತ್ತ ಕೇಳಿದರು ಇದನು ॥ 166

ವಾಡೆದಿಂದ ಮಶೀದಿಯವರೆಗೆ । ಸಾಕಷ್ಟು ದೂರ ಇರುವಾಗ್ಗೆ ।
ಬಾಬಾರಿಗೆ ಈ ವಾರ್ತೆ ತಿಳಿಯಿತು ಹೇಗೆ । ಮನಕೆ ಬಹಳ ಆಶ್ಚರ್ಯವಾಯಿತು ॥ 167

ಇರಲಿ ನಾನಾದೆನಿಂತು ವಾಗ್ಬಾಣಹತ । ನಿಶಬ್ದನಾದೆ ನಾ ಲಜ್ಜಾವನತ ।
ಮೊದಲ ಭೆಟ್ಟಿಯಲೇ ನಡೆಯಿತೇ ಅನುಚಿತ । ಅವಿಹಿತವಿದು ನನ್ನಿಂದ ಜರುಗಿತು ॥ 168

ಈ 'ಹೇಮಾಡಪಂತ್' ನಾಮಕರಣಕೆ । ಬೆಳಗಿನ ವಾದವೇ ಕಾರಣ ಇದಕೆ ।
ಹೇಮಾಡ ಸ್ಮರಣೆ ಬಾಬಾರಿಗಾದದು ಅದಕೇ । ಖಚಿತವಾಯಿತು ಅದು ನನ್ನ ಮನಕೆ ॥ 169

ದೇವಗಿರಿಯ ಯಾದವರಾಜರು । ಅವರೇ ದೌಲತಾಬಾದಿನ ಜಾಧವರು ।
ಶತಕ ಹದಿಮೂರರಲಿ ವೈಭವದಿ ಆಳಿದರು । ಬೆಳೆಸಿದರು ಮಹಾರಾಷ್ಟ್ರದ ಗೌರವ ॥ 170

'ಪ್ರೌಢಪ್ರತಾಪ ಚಕ್ರವರ್ತಿ' । 'ಮಹಾದೇವ'ನೆಂಬುವ ಭೂಪತಿ ।
ಅವರ ಅಣ್ಣನ ಮಗ ಪುಣ್ಯಕೀರ್ತಿ । ವಿಕ್ರಮದಿ ಪ್ರಖ್ಯಾತಿಯನು ಪಡೆದನು ॥ 171

ಅವನೂ ಯದುವಂಶ ಚೂಡಾಮಣಿ । ರಾಮರಾಜಾ ರಾಜಾಗ್ರಣೀ ।
ಇದ್ದನಿವಗೆ ಮಂತ್ರಿ ಬಹುಗುಣಿ । ಸರ್ವಲಕ್ಷಣಯುಕ್ತ ಹೇಮಾದ್ರಿ ॥ 172

ಅವ-ಧರ್ಮ ಶಾಸ್ತ್ರಗಳ ಗ್ರಂಥಕಾರ । ಬ್ರಹ್ಮವೃಂದಾರ್ಥ ಬಹಳ ಉದಾರ ।
ಆಚಾರ ವ್ಯವಸ್ಥೆಯನು ಸವಿಸ್ತರ । ಮೊದಲು ರಚಿಸಿದವನೇ ಟಿಹೇಮಾದ್ರಿಟಿ ॥ 173

ವ್ರತದಾನ ತೀರ್ಥಮೋಕ್ಷದ ಖಣಿ । ಹೆಸರಿರುವದಕೆ 'ಚತುರ್ವರ್ಗ ಚಿಂತಾಮಣಿ' ।
ಹೇಮಾದ್ರಿಯು ರಚಿಸಿದ ಗ್ರಂಥನಿದನೀ । ಕೃತಿಯಿಂದ ಖ್ಯಾತಿಯ ಪಡೆದನು ॥ 174

ಗೀರ್ವಾಣ ಭಾಷೆಯಲಿ ಹೇಮಾದ್ರಿಪಂತ । ಪ್ರಾಕೃತ ಭಾಷೆಯಲದೇ ಹೇಮಾಡಪಂತ ।
ಮುತ್ಸದ್ದೀ ರಾಜಕಾರಣನಿಷ್ಣಾತ । ವಿಖ್ಯಾತನಿದ್ದನಾ ಕಾಲದಲಿ । 175

ಅವ ವತ್ಸನಾ ಭಾರದ್ವಾಜ ಗೋತ್ರದವ । ಅವ ಐದು ನಾ ಮೂರು ಪ್ರವರದವ ।
ಅವ ಯಜುರ್ವೇದದವ ನಾ ಋಗ್ವೇದದವ । ಧರ್ಮಶಾಸ್ತ್ರಿಯು ಅವನು ನಾ ಮೂಢನು ॥ 176

ಅವ ಮಾಧ್ಯಂದಿನ ನಾ ಶಾಕಲ । ಅವ ಧರ್ಮಜ್ಞ ನಾ ಭಾಷ್ಕಲ ।
ಅವ ಪಂಡಿತ ನಾ ಮೂರ್ಖ ಅಕುಶಲ । ಸುಮ್ಮನೇ ನನಗೇಕೆ ಈ ಪದವಿ ॥ 177

ಅವ ರಾಜಕಾರಣಧುರಂಧರ ಮುತ್ಸದ್ದಿ । ನಾ ಅಲ್ಪಮತಿ ಮಂದಬುದ್ಧಿ ।
ಅವನದು 'ರಾಜ್ಯಪ್ರಶಸ್ತಿ ಪ್ರಸಿದ್ಧಿ' । ನನಗೊಂದದು ಓವಿಯನು ರಚಿಸಲು ಬಾರದು ॥ 178

ಅವ ಗ್ರಂಥಕಾರ ಕಲಾಭಿಜ್ಞ । ನಾನು ಇಂಥ ಧಡ್ಡ ಅಜ್ಞ ।
ಅವ ಧರ್ಮಶಾಸ್ತ್ರ ವಿಶಾರದ ಸುಜ್ಞ । ನಾ ಅಲ್ಪ ಪ್ರಜ್ಞನು ಇರುವೆ ಹೀಗೆ ॥ 179

ನಾನಾ ಚಿತ್ರಕಾವ್ಯಗಳ ಆಗರದಂಥ । 'ಲೇಖನ ಕಲ್ಪತರು' ಎಂಬವರ ಗ್ರಂಥ ।
ಬಾಬಾರ ಕೈಗೊಸು ನಾನಿರುವೆ ಇಂಥ । ಒಂದು ಓವಿಯನಾದರೂ ಬರೆಯಲಾರೆ ॥ 180

ಗೋರಾ ಚೋಖಾ ಸಾವಂತಾ ಮಾಳಿ ಎಂಬವರು । ನಿವೃತ್ತಿ ಜ್ಞಾನದೇವ ನಾಮಾ ಎಂಬವರು ।
ಭಾಗವತ ಧರ್ಮ ಪ್ರವರ್ತಕರೆಲ್ಲರು । ಉದಯಿಸಿದರೆಲ್ಲರೀ ಕಾಲದಲ್ಲಿ ॥ 181

ಪಂಡಿತ ವೋಪದೇವ ವಿದ್ವನ್ಮಣಿಗಳು । ಮಿರುಗಿದರು ಯಾರ ಸಭಾಂಗಣದೊಳು ।
ಅಲ್ಲಯೇ ಹೇಮಾಡ ಪಂತ ರಾಜಕಾರಣಿ ಇರಲು । ಖ್ಯಾತಿ ಅವನದು ಗುಣವಂತ ಜನರಲ್ಲಿ ॥ 182

ಅಲ್ಲಿಂದ ಮುಂದೆ ಉತ್ತರದ ಕಡೆಯಿಂದ । ಯವನರ ಸೈನ್ಯವಿಲ್ಲಿ ಬಂದುದರಿಂದ ।
ಎಲ್ಲೆಲ್ಲೂ ಮುಸ್ಲಿಮರ ಆಳಿಕೆಯಾಯಿತದರಿಂದ । ದಕ್ಷಿಣದಿ ರಾಜ್ಯವದು ಅಳಿಯಿತು ॥ 183

ಸುಮ್ಮನೇ ಅಲ್ಲ ಈ ಪದವೀದಾನ । (ಜಾಣತನದ) ಈ ಸನ್ಮಾನ ।
ವಾದವಿವಾದಕ್ಕಾಗೀ ವಾಗ್ಬಾಣ । ಅಭಿಮಾನ ಖಂಡನೆಯಾಗಲು ॥ 184

ಅರ್ಧ ಅರಿಸಿಣಬೇರಿನಿಂದಾಗಿ ಪೀತ । ಯೋಗ್ಯತೆ ಇಲ್ಲದೆ ಸುಮ್ಮನೆ ಒರಲುತ ।
ಅಂಥವನ ಕಣ್ಣಿಗೆ ಅಂಜನವ ಹಾಕುತ । ಸಮಯಕ್ಕೆ ಸರಿಯಾಗಿ ಕಣ್ಣು ತೆರೆಸಿದರು ॥ 185

ಇರಲಿ ಹೀಗಿರಲು ಪೂರ್ವೋಕ್ತ ಲಕ್ಷಣ । ಸಾಯಿ ಮುಖೋದಿತ ವಿಲಕ್ಷಣ ।
ಪ್ರಸಂಗೋಚಿತವಾಗಿ ಸರಿನಾಮಕರಣ । ನಾನದನು ಭೂಷಣವೇ ಎಂದುಕೊಂಡೆ ॥ 186

ಇಲ್ಲವೇ ಎನಗಿದರಿಂದ ಸಿಗಬೇಕು ಶಿಕ್ಷಣ । ವಾದವಿವಾದ ಮಾಡುವುದು ಕುಲಕ್ಷಣ ।
ಪರಮ ಅಕಲ್ಯಾಣಕರವಾದ ಅದು ನನ್ನ । ಒಂದು ಕ್ಷಣ ಕೂಡ ಸ್ಪರ್ಶಿಸದಿರಲೆಂದು ॥ 187

ಕಳೆದು ಹೋಗಲಿ ಈ ವಾದದಭಿಮಾನ । ಅದಕಾಗಿಯೇ ಕೊಟ್ಟರು ಈ ಅಭಿಧಾನ ।
ಅಗಿರಬೇಕು ನಿತ್ಯ ನಿರಭಿಮಾನ । ಆಮರಣವೂ ಎಚ್ಚರಿರಲೆಂದು ॥ 188

ರಾಮ ದಾಶರಥಿಯವ ದೇವರವತಾರ । ಪೂರ್ಣಜ್ಞಾನಿ ಅತಿ ವಿಶ್ವಾಸಿಗಳಿಗಾಧಾರ ।
ಅಖಿಲ ಋಷಿ ಗಣಮಾನಸ ವಿಹಾರ । ಚರಣವ ಹಿಡಿದನವ ವಶಿಷ್ಠರದು ॥ 189

ಕೃಷ್ಣ ಸಾಕ್ಷಾತ್ ಪ್ರರಬ್ರಹ್ಮನಿದ್ದರೂ । ಅವನಿಗೂ ಮಾಡಿಕೊಳ್ಳಬೇಕಾಯಿತೊಬ್ಬ ಗುರು ।
ಗುರುಗೃಹದಿ ಉರುವಲನೂ ಹೊತ್ತರು । ಬಹಳ ಕಷ್ಟಗಳ ಪಟ್ಟರಲ್ಲಿ ॥ 190

ಹೀಗಿರಲು ನಾನೆಷ್ಟರವ ಅಂತ । ವಾದವಿವಾದಗಳಲ್ಲಿ ಏನಿದೆ ಅರ್ಥ ।
ಗುರುವಿಲ್ಲದೆ ಜ್ಞಾನ ಅಥವಾ ಪರಮಾರ್ಥ । ಇಲ್ಲೆಂದು ಶಾಸ್ತ್ರಾರ್ಥ ದೃಢ ಮಾಡಿದೆ ॥ 191

ವಾದವಿವಾದವು ಒಳ್ಳೆಯದಲ್ಲ । ಯಾರನ್ನೂ ಸರಿಗಟ್ಟಬೇಕಿಲ್ಲ ।
ಪರಮಾರ್ಥಒಂದಿಷ್ಟೂ ಸಾಧ್ಯವಿಲ್ಲ । ಶ್ರದ್ಧೆ ಮತ್ತು ನಿಧಾನತೆ ಇರದೆ ॥ 192

ಇದು ಮುಂದೆ ಬಂದಿತು ಅನುಭವ । ಈ ತರದ ಈ ನಾಮಗೌರವವ ।
ಪ್ರೇಮ ಪುರಃಸರ ನಿಜಸದ್ಭಾವವ । ಶುದ್ಧ ಸ್ವಭಾವವ ಸ್ವೀಕರಿಸಿದೆ ॥ 193

ಇನ್ನು ಸಾಕು ಈ ಕಥಾನಕ । ಸ್ವಪಕ್ಷ-ಪರಪಕ್ಷ ವಿಚ್ಛೇದಕ ।
ವಾದಪ್ರವಾದ ನಿರರ್ಥಕ । ಎಲ್ಲರಿಗೂ ಸಮಸಾಮ್ಯಬೋಧಕ ॥ 194

ಇರಲಿ ಇಂತೀ ಗ್ರಂಥ ಪ್ರಯೋಜನ । ಅಧಿಕಾರಿ-ಅನುಬಂಧನ ದರ್ಶನ ।
ಗ್ರಂಥಕಾರನ ನಾಮಕರಣ । ಕಥನ ಶ್ರವಣವ ಮಾಡಿಸಿದೆ ॥ 195

ಸಾಕು ಇನ್ನು ಈ ಅಧ್ಯಾಯ ವಿಸ್ತಾರ । ಹೇಮಾಡನು ಸಾಯಿ ಚರಣದಿ ಸಾದರ ।
ಮುಂದೆ ಯಥಾನುಕ್ರಮ ಕಥೆ ಸವಿಸ್ತಾರ । ಶ್ರವಣ ತತ್ಪರರಾಗಬೇಕು ನೀವು ॥ 196

ಸಾಯಿಯೇ ನಮ್ಮ ಸುಖ ಸಂಪತ್ತಿ । ಸಾಯಿಯೇ ನಮ್ಮ ಸುಖ ಸಂವಿತ್ತಿ ।
ಸಾಯಿಯೇ ನಮ್ಮ ಪರಮ ನಿವೃತ್ತಿ । ಅಂತಿಮ ಗತಿಯೂ ಶ್ರೀ ಸಾಯಿಯೇ ॥ 197

ಸಾಯಿ ಚರಿತ್ರವ ಶ್ರವಣ ಮಾಡುವದು । ಅದರಿಂದ ದುಸ್ತರ ಭವವ ದಾಟುವದು ।
ಕಲಿಮಲಗಳು ನಿರ್ಮೂಲ ಹರಣವಾಗುವದು । ಸಾಯಿ ಕೃಪೆಯಿಂದಾಗಿಯೇ ॥ 198


ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಕಥಾಪ್ರಯೋಜನ ನಾಮಕರಣಂ ನಾಮ ದ್ವಿತಿಯೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

28.1





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮೂರು

***ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥***
***ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥***
***ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥***

ಇನ್ನು ಪೂರ್ವಕಥೆಯ ಸಂಗತಿಯಿದು । ಸಾಯಿಪೂರ್ಣ ಆಶ್ವಾಸನವಿತ್ತುದು ।
"ನನ್ನ ಸಂಪೂರ್ಣ ಅನುಮತಿ ಇದೆಯೆಂದು । ಚರಿತ್ರಸ್ಥಿತಿಯ ವರ್ಣಿಸಲು ॥ 1

ನೀವು ನಿಮ್ಮ ಕಾರ್ಯವ ಮಾಡಿರಿ । ಮನದಿ ಒಂದಿಷ್ಟೂ ಹಿಂಜರಿಯದಿರಿ ।
ನನ್ನ ವಚನದಿ ಪೂರ್ಣ ವಿಶ್ವಾಸವಿಡಿ । ನಿರ್ಧಾರ ಮಾಡಿರಿ ಮನಸಿನದು ॥ 2

ಮಾಡಲು ನನ್ನ ಲೀಲೆಯ ಕಥನ । ಆದೀತು ಅವಿದ್ಯಾದೋಷ ನಿರಸನ ।
ಭಕ್ತಿಭಾವದಿ ಮಾಡಲು ಶ್ರವಣ । ಪ್ರಪಂಚದ ಅರಿವು ಅಳಿದೀತು ॥ 3

ಶ್ರವಣ ಸಾಗರದ ಮೇಲೆ ಏಳಲು । ಭಕ್ತಿ ಪ್ರೇಮಾಮೃತದ ತೆರೆಗಳು ।
ಮುಳುಗು ಅದರಲಿ ಹಾಕುತಿರಲು । ದೊರಕುವವು ಬೋಧರತ್ನಗಳು ॥ 4

ಕೇಳಿದೆ ಆಯಿತು ನಿಃಶಂಕಮನ । ಸಾಯಿ ಚರಣಕೆ ಮಾಡಿದೆ ನಮನ ।
ಆಮೇಲೆ ಈ ಚರಿತ್ರ ಲೇಖನ । ಯಥಾಸ್ಮರಣ ಆರಂಭಿಸಿದೆ ॥ 5

ಬಾಬಾರ ಬಾಯಿಂದ ಈ ಮಾತು ಬರಲು । ಅದೇ ಶಕುನದ ಗಂಟೆಂದು ಕಟ್ಟಲು ।
ಈ ಕಾರ್ಯ ನಡೆಯುವದು ಖಚಿತವೆನಿಸಲು । ನಾಮಾತ್ರ ಬರಿ ಕೆಲಸದಾಳು ॥ 6

ನೋಡಿರಿ ಹರಿಯ ಅಗಮ್ಯ ಲೀಲೆ ಹೇಗೆ । ಅವನಿಗಲ್ಲದೆ ತಿಳಿಯದು ಅನ್ಯರಿಗೆ ।
ಅವನಂತ ತಿಳಿದಿದೆ ಯಾರಿಗೆ । ಶೃತಿ ಶಾಸ್ತ್ರವೇದಗಳು ಮೂಕಾದವು ॥ 7

ಶಾಸ್ತ್ರವಿಶಾರದ ವೇದವಾದಿಗಳು । ಪ್ರಜ್ಞಾವಂತ ಪಂಡಿತಾದಿಗಳು ।
ಘಟಘಟಾದಿ ವಾದ ಪ್ರವಾದಿಗಳು । ಅವರ ಹಿಂದೆ ಬೀಳಬೇಡಿರಿ ॥ 8

ಹರಿ ನಿಜ ಭಕ್ತರಿಂದಾದವ । ಅವರ ಸರಳಭಾವಕೆ ಒಲಿದವ ।
ಅವರಿಗೆ ತನ್ನನೇ ಮಾರಿಕೊಂಡವ । ಢಾಂಬಿಕರಿಗೆಂದೂ ಸಿಗನವ ॥ 9

"ಇದರಲ್ಲೇ ನಿಮ್ಮ ಕಲ್ಯಾಣವಿದೆ । ನನ್ನ ಅವತಾರದ ಸಾರ್ಥಕತೆಯೂ ಇದೆ ।
ನಾನು ನಿತ್ಯವೂ ಹೇಳುತ್ತಿರುವುದೂ ಇದೇ । ಇದೇ ನಿಮ್ಮ ಹಿತವನು ನಾ ಮಾಡುತಿರುವೆ ॥ 10

ಇನ್ನೊಂದು ಮಾತು ಹೇಳುವೆ, ಶಾಮಾ ಕೇಳು । ಪ್ರೇಮದಲಿ ನನ್ನ ನಾಮವ ಜಪಿಸಲು ।
ಅವನ ಎಲ್ಲ ಕಾಮನೆಗಳು । ಪೂರೈಸಿ ಪ್ರೇಮವ ಬೆಳೆಸುವೆನು ॥ 11

ಬಳಿಕ ಕೌತುಕದಿಂದ ಹಾಡಿಧರೆನ್ನ ಗುಣಗಳನು । ನನ್ನ ಚರಿತ್ರ ಮತ್ತು ಪವಾಡಗಳನು ।
ಅವನ ಹತ್ತಿರದಲೇ ನಾನಿರುವೆನು । ಸುತ್ತು ಮುತ್ತೆಲ್ಲಾ ತುಂಬಿಕೊಂಡು ॥ 12

ಯಾವ ಭಕ್ತರು ನನಗಾಗಿ । ಇರುವರು ಜೀವಪ್ರಾಣರಾಗಿ ।
ಅವರಿಗೆ ಈ ಕಥಾಶ್ರವಣದಿಂದಾಗಿ । ಆನಂದವಾಗುವದು ಸಹಜವೇ ॥ 13

ಯಾರೇ ಮಾಡಲು ನನ್ನ ಕೀರ್ತನೆ । ಅವರಿಗೀಯುವೆ ಆನಂದ ಘನ ।
ನಿತ್ಯ ಸೌಖ್ಯ ಸಮಾಧಾನ । ಸತ್ಯವಚನವಿದು ತಿಳಿಯಿರಿ ॥ 14

ಯಾರು ನನಗಾಗುವರು ಅನನ್ಯ ಶರಣ । ವಿಶ್ವಾಸದಿಂದೆ ಮಾಡುವರೆನ್ನ ಭಜನ ।
ನನ್ನ ಚಿಂತನೆ ಮತ್ತು ಸ್ಮರಣ । ಅವರುದ್ಧಾರವೇ ನನ್ನ ಧರ್ಮ ॥ 15

ನಾಮವೆನ್ನದು ಭಕ್ತಿ ಎನ್ನದು । ಪುಸ್ತಕವೆನ್ನದು ಪೋಥಿ ಎನ್ನದು ।
ಮನದಲಿ ಅಕ್ಷಯ ಧ್ಯಾನವೆನ್ನದು । ವಿಷಯಗಳ ವಾಸನೆ ಅವರಿಗೆಲ್ಲಿ ॥ 16

ಕೃತಾಂತನ ದವಡೆಯಿಂದೆಳೆದು ತೆಗೆಯುವೆನು । ನನ್ನ ನಿಜಭಕ್ತರನು ನಾನು ।
ಕೇವಳ ಎನ್ನ ಕಥಾಶ್ರವಣವನು । ಮಾಡಲು ರೋಗ ನಿರಸನವಾಗುವದು ॥ 17

ಮಾಡಿ ಸಾದರ ಎನ್ನ ಕಥಾಶ್ರವಣ । ಮಾಡಿ ಅದರ ಮೇಲೆ ಪೂರ್ಣ ಮನನ ।
ಮನನದ ಮೇಲೆ ನಿದಿ ಧ್ಯಾಸನ । ಸಮಾಧಾನವನದರಿಂದ ಪಡೆಯುವಿರಿ ॥ 18

ಅಹಂ ಸೋಹಂ ಕರಗಿ ಹೋಗಿ । ಶ್ರೋತೃಗಳ ಮನ ಉನ್ಮನವಾಗಿ ।
ಚಿತ್ತವು ಚೈತನ್ಯ ಘನವಾಗಿ । ಪರಿಪೂರ್ಣ ಅನನ್ಯ ಶ್ರದ್ಧೆಯಲಿ ॥ 19

'ಸಾಯಿ ಸಾಯಿ' ಎಂಬ ನಾಮಸ್ಮರಣ । ಮಾಡಿತು ಸಕಲ ಕಲಿಮಲ ದಹನ ।
ವಾಣಿ ಶ್ರವಣ ಗತಪಾಪ ಭಂಜನ । ಒಂದು ಸಾಷ್ಟಾಂಗ ನಮನದಿಂದ ॥ 20

ಕಾರ್ಯವಿದು ಅಲ್ಲ ಸಾಮಾನ್ಯ । ಆದರೂ ಆಜ್ಞೆಯ ಶಿರ ಸಾಮಾನ್ಯ ।
ಬಾಬಾರಂಥವರಿರಲು ವದಾನ್ಯ । ಏಕೆ ದೈನ್ಯವ ಸ್ವೀಕರಿಸಬೇಕು ॥ 21

ಯಾರ ಕೈಯಲಿ ಗುಡಿ ಕಟ್ಟಿಸಿದ । ಯಾರನ್ನು ಕೀರ್ತನ ರಂಗಕ್ಕಿಳಿಸಿದ ।
ಯಾರನು ತೀರ್ಥಯಾತ್ರೆಗೆ ಕಳಿಸಿದ । ನನ್ನನ್ನು ಕೂಡ್ರಿಸಿದ ಬರೆಯುವುದಕೆ ॥ 22

ಉಳಿದವರಿಗಿಂತ ನಾ ಪಾಮರನು । ಯಾವ ಗುಣಗಳಿಗಾಗಿ ಈ ಕರುಣಾಸಾಗರನು ।
ಎನ್ನಮೇಲೆ ಈ ದಯೆಯ ಮಳೆಗರೆದನು । ನಾನಂತೂ ಒಂದೂ ತಿಳಿಯೆನು ॥ 23

ಇದುವೇ ವೈಚಿತ್ರ್ಯವಿದೆ ಗುರು ಕೃಪೆಯಲಿ । ಒಂದಿನಿತೂ ಆರ್ದ್ರತೆ ಇಲ್ಲದಿರುವಲ್ಲಿ ।
ಅಂಥಲ್ಲಿ ತರುವು ಉರುಟಾಗಿ ಬೆಳೆಯುವದು । ಅಪ್ರಯಾಸದಿ ಫಲ ಪುಷ್ಪಗಳಿಂದ ॥ 24

ಮುಂದೆ ಯಾರಾದರೂ ಮಠ ಕಟ್ಟಬಹುದು । ದೇವಾಲಯ ಸ್ನಾನ ಘಟ್ಟಗಳ ಕಟ್ಟಬಹುದು ।
ನಮ್ಮದು ಮಾತ್ರ ಸರಳ ಮಾರ್ಗವಿದು । ಸಾಯಿಯ ಚರಿತ್ರ ಪಾಠವು ॥ 25

ಕೆಲವರು ಸತ್ಕಾರಪೂರ್ವಕ ಅರ್ಚನ । ಕೆಲವರು ಮಾಳ್ಪರು ಪಾದ ಸಂವಾಹನ ।
ಉತ್ಕಂಠಿತವಾಯಿತೆನ್ನ ಮನ । ಗುಣ ಸಂಕೀರ್ತನ ಮಾಡಲು ॥ 26

ಕೃತಯುಗದಲ್ಲಿ ಪ್ರಾಪ್ತಯಾವುದು 'ಧ್ಯಾನ'ದಿಂದ । ತ್ರೇತದಲಿ 'ಯಜ್ಞ' ದ್ವಾಪರದಿ 'ಅರ್ಚನೆ'ಯಿಂದ ।
ಅದೆಲ್ಲ ಪ್ರಾಪ್ತವಾಗುವದು ನಾಮ ಸಂಕೀರ್ತನೆಯಿಂದ । ಗುರು ಭಜನೆಯಿಂದ ಈ ಕಲಿಯುಗದಲಿ ॥ 27

ಅನಧಿಕಾರಿಯನು ಕಂಡೂ ಕಂಡೂ । ಹೊರೆ ಹೊರೆ ಚಿಂದಿಗಳಲ್ಲಿ ಗಟ್ಟಿಯಿಲ್ಲ ಒಂದೂ ।
ಅಂಥದರಲ್ಲಿ ಈ ಇಂಥ ಕಠಿಣ ಕಾರ್ಯವಿದು । ಈ ಕಡುಭಾರವಾದುದನು ನಾ ವಹಿಸಿಕೊಳಲೇ ॥ 28

ಯತ್ನಮಾಡದೇ ಸುಮ್ಮನೆ ಕೂಡ್ರಲು । ಆಜ್ಞಾಭಂಗದ ಪಾತಕವೆನಲು ।
ಆಜ್ಞಾಪಾಲನ ಮಾಡಹೋಗಲು । ಈ ಕಾರ್ಯವು ಹೇಗೆ ಆದೀತು ॥ 29

ಸಮರ್ಥ ಸಾಯಿಯವರ ನಿಜ ಸ್ಥಿತಿಯನು । ಯಥಾರ್ಥ ವರ್ಣನೆ ಮಾಡ ಬಲ್ಲರಾರಿದನು ।
ಭಕ್ತರಿಗಾಗಿ ತಾವೇ ಮಾಡುವರು ಕೃಪೆಯನು । ಅವರೇ ಅದನು ನುಡಿಸುವರು ॥ 30

ವಾಣಿಯ ಓಟವು ನಡೆಯದು ಇಲ್ಲಿ । ನಾನೇಕೆ ಆಶೆಯ ಹಿಡಿದೆನಿಲ್ಲಿ ।
ಹೀಗೆ ಹೇಳುವದಕೂ ಅವಕಾಶವಿಲ್ಲಲ್ಲಿ । ಇಟ್ಟಲ್ಲವೆಂಬದನಾರು ತಿಳಿದಿಹರು ॥ 31

ಯಾವಾಗ ಎತ್ತಿದೆ ನಾನು ಲೇಖಣಿಯನು । ಬಾಬಾ ದೂರ ಮಾಡಿದರು ನನ್ನತನವನು ।
ತಾವೇ ಬರೆಯುತಿಹರು ತಮ್ಮ ಕಥೆಯನು । ಯಾರ ಭೂಷಣವು ಅವರಿಗೆ ॥ 32

ಇದು ಅಂತೂ ಸಂತ ಚರಿತ್ರ ಲೇಖನ । ಸಂತರ ಬಿಟ್ಟು ಮಾಡುವರಾರಿದನ ।
ಬಾಬಾರ ಅತರ್ಕ್ಯಗಳ ಆಕಲನ । ಗಗನಕ್ಕೆ ಆಲಿಂಗನ ಮಾಡಿದಂತೆ ॥ 33

ಅತಿಗಹನ ಅವರ ಮಹಿಮೆಯ । ವರ್ಣಿಸಲು ನಾನು ಮತಿಹೀನ ।
ಅವರೇ ಎತ್ತಿ ತಾವೇ ತಮ್ಮನ್ನ । ನಿರ್ಮುಕ್ತ ವಚನರು ಆಗಬೇಕು ॥ 34

ಬಾಬಾ ನಾನಿರುವೆ ಜನ್ಮದಲಿ ಬ್ರಾಹ್ಮಣ । ಆದರೂ ಶೃತಿ ಸ್ಮೃತಿ ನೇತ್ರ ವಿಹೀನ ।
ಇದು ಜನ್ಮಕ್ಕೆ ಇದ್ದರೂ ದೂಷಣ । ಆದರೆ ನನ್ನ ಭೂಷಣವದು ತಾವೇ ॥ 35

ಶೃತಿ ಸ್ಮೃತಿ ಇವು ಬ್ರಾಹ್ಮಣರ ನಯನ । ಒಕ್ಕಣ್ಣನವ ಒಂದರ ವಿಹೀನ ।
ಕುರುಡನೇ ಅವನು ಎರಡೂ ವಿಹೀನ । ಹೀನ ದೀನ ನಾನದರಂತೆ ॥ 36

ತಾವೆನ್ನ ಕುರುಡುನ ಕೈಗೋಲು । ಏನೆನಗೆ ಕೊರತೆ ಇದೇ ಇರಲು ।
ಊರುತ್ತ ಊರುತ್ತ ಅಲ್ಲಲ್ಲೂ । ಸರಳ ಮಾರ್ಗದಿ ನಡೆಯುವೆ ॥ 37

ಇನ್ನು ಮುಂದೇನು ಮಾಡಬೇಕು । ನಾನು ಪಾಮರ ಅದ ಹೇಗೆ ತಿಳಿಯಬೇಕು ।
ತಾವೇ ಬುದ್ಧಿದಾಯಕರಾಗಬೇಕು । ಸಂಪಾದಿಸಬೇಕು ತಾವೇ ನಿಜಕಾರ್ಯವ ॥ 38

ಮೂಕರು ಬೃಹಸ್ಪತಿಯಂತೆ ಮಾತಾಡಬಹುದು । ಪಂಗುವು ಮೇರು ಪರ್ವತವನ್ನು ದಾಟಬಹುದು ।
ಈ ಅತರ್ಕ್ಯ ಶಕ್ತಿ ಯಾರದು । ಅವರ ಯುಕ್ತಿ ಅವರಿಗೇ ಗೊತ್ತು ॥ 39

ನಾನಂತೂ ಕೇವಲ ಈ ಪಾದಗಳ ದಾಸ । ಮಾಡಬೇಡಿರಿ ಎನ್ನನು ಉದಾಸ ।
ದೇಹದಲ್ಲಿರುವವರೆಗೆ ಶ್ವಾಸ । ನಿಜಕಾರ್ಯವನು ಮಾಡಿಸಿಕೊಳ್ಳಿರಿ ॥ 40

ತಾವು ಶ್ರೋತೃ ಜನರನ್ನು । ತಿಳಿದಿಹಿರಿ ಗ್ರಂಥ ಪ್ರಯೋಜನವನು ।
ಸಾಯಿಯೇ ಬರೆವವನು ಬರೆಸುವವನು । ಭಕ್ತ ಕಲ್ಯಾಣ ಮಾಡಲು ॥ 41

ಈ ಕೊಳಲು ಇಲ್ಲದೆ ಪೇಟಿ ಹೇಗೆ ನುಡಿಯುವದು । ಎರಡಕೂ ಚಿಂತೆ ಇಲ್ಲ ಅದರದು ।
ಈ ಪ್ರಯತ್ನವೆಲ್ಲ ನುಡಿಸುವವನದು । ನಾವೇಕೆ ಚಿಂತಿತರಾಗಬೇಕು ॥ 42

ಅಥವಾ ಚಂದ್ರಕಾಂತಮಣಿ ಸ್ರವಿಸುವದು । ಆ ಅಮೃತವೇನದರುದರದಿ ಇರುವದು ।
ಚಂದ್ರನ ಕೌತುಕ ಅದು । ಚಂದ್ರನಿರ್ಮಿತ ಚಂದ್ರೋದಯದಲಿ ॥ 43

ಅಥವಾ ಸಮುದ್ರ ಉಕ್ಕೇರುವದು । ಅದರ ನಿಜಕೃತಿಯಂತೂ ಅಲ್ಲ ಅದು ।
ಈ ಕಾರ್ಯವೂ ಚಂದ್ರೋದಯದ್ದು । ಸಮುದ್ರದ ಕೆಲಸವಲ್ಲ ಅದು ॥ 44

ಅಥವಾ ತಪ್ಪಿಸಿ ಬಂಡೆಗಲ್ಲು, ತಿರುಗಣಿ । ಸಾಗರದಿ ಸುರಕ್ಷಿತ ಸಾಗಲು ದೋಣಿ ।
ಅದಕೆಂತು ಕೆಂಪು ದೀಪವನೇ । ಹಚ್ಚುವರು ನಿದರ್ಶನಕಾಗಿ ॥ 45

ಅದರಂತೆ ಸಾಯಿನಾಥರ ಕಥೆಗಳು । ಅಮೃತವ ನಾಚಿಸುವಷ್ಟು ಸವಿ ಬಲು ।
ಭವಸಾಗರದಿ ದುಸ್ತರದಾರಿಯೊಳು । ಅತಿ ಸುಗಮತೆ ತರುವದು ॥ 46

ಧನ್ಯ ಧನ್ಯ ಈ ಸಂತರ ಕಥೆಗಳು । ಶ್ರವಣ ಮಾರ್ಗದಿ ಅಂತರದಲಿ ಇಳಿಯಲು ।
ದೇಹಾಭಿಮಾನವೆಲ್ಲ ಹೊರಗೆ ಹೋಗಲು । ದ್ವಂದ್ವದ ವಾರ್ತೆಯೇ ಉಳಿಯದು ॥ 47

ಇವುಗಳ ಸಂಚಯವಾದಂತೆ ಹೃದಯದೊಳು । ದಾರಿಸಿಕ್ಕತ್ತ ಓಡುವವು ವಿಕಲ್ಪಗಳು ।
ಜ್ಞಾನ ಸಂಚಯವು ಬೆಳೆಯಲು । ದೇಹದ ಒಗರು ಇಳಿದೀತು ॥ 48

ಬಾಬಾರ ವಿಮಲ ಯಶದ ವರ್ಣನ । ಪ್ರೇಮದಿಂದ ಮಾಡಲದರ ಶ್ರವಣ ।
ಆದೀತು ಭಕ್ತ ಹೃದಯ ಕಶ್ಮಲ ದಹನ । ಸುಲಭಸಾಧನವಿದು ಪರಮಾರ್ಥಕೆ ॥ 49

ಮಾಯಾತೀತ ಬ್ರಹ್ಮವೇನು । ಅದನು ಕಡೆಹಾಯುವ ಉಪಾಯವೇನು ।
ಕರ್ಮಧರ್ಮಾಚರಣೆಯಿಂದ ಪ್ರಿಯನು । ಭಕ್ತರಿಗೆ ಹರಿಯಂತಾದನು ॥ 50

ಆತ್ಯಂತಿಕ ಪ್ರೇಮವೆಂದರೇನು । ಭಕ್ತಿ ಮುಕ್ತಿ ವಿರಕ್ತಿಗಳೆಂದರೇನು ।
ವರ್ಣಾಶ್ರಮ ಧರ್ಮ ಅದ್ವಯ ವಸ್ತುವನು । ಇತ್ಯಾದಿ ತಿಳಿಯುವದು ಅತಿಗೂಢ ವಿಷಯ ॥ 51

ಯಾರಿಗೆ ರುಚಿ ಇರುವದಿದರಲ್ಲಿ । ಅವರು ತಮ್ಮಭಿರುಚಿಯ ಪಡೆಯುವಲ್ಲಿ ।
ಏಕನಾಥ ಜ್ಞಾನದೇವ ಕೃತಗ್ರಂಥಗಳಲಿ । ಸುಖಸಾಧನವ ಸೇವಿಸಲಿ ॥ 52

ಕೃತಯುಗದಿ 'ಶಮದಮಗಳು' । ತ್ರೇತದಿ 'ಯಜನ' ದ್ವಾಪರದಿ 'ಪೂಜನ'ಗಳು ।
ನಾಮಕಥಾ ಕೀರ್ತನೆ ಕಲಿಯುಗದೊಳು । ಸ್ವಲ್ಪ ಸಾಧನ ಪರಮಾರ್ಥಕೆ ॥ 53

ಬ್ರಾಹ್ಮಣಾದಿ ನಾಲ್ಕೂ ವರ್ಣ । ಎಲ್ಲರಿಗೂ ಸಾಧನ ಗುರುಕಥಾ ಶ್ರವಣ ।
ಇರಲಿ ಸ್ತ್ರೀ ಶೂದ್ರ ಅಥವಾ ಜಾತಿಹೀನ । ಇದು ಒಂದೇ ಸಾಧನ ಎಲ್ಲರಿಗೆ ॥ 54

ಪುಣ್ಯವಿರುವದೋ ಯಾರ ಸೆರಗಿನಲಿ । ಅವಗೆ ರುಚಿ ಈ ಕಥಾಶ್ರವಣದಲಿ ।
ಕೇಳುತ ನಿದ್ದೆಯೇ ಬರುತಿರಲಿ । ಎಚ್ಚರಿಪನು ಶ್ರೀಹರಿ ಅವರನು ॥ 55

ವಿಷಯ ಭೋಗಿಸುತ ಅನವರತ । ಅದು ಸಿಗದಿರಲಾಗುವ ದೀನ ಚಿತ್ತ ।
ಅಂಥವನಿಗೂ ಈ ಸಂತಕಥಾಮೃತ । ವಿಷಯ ನಿರ್ಮುಕ್ತ ಮಾಡುವದು ॥ 56

ಯೋಗ ಯಾಗ-ಧ್ಯಾನ ಧಾರಣೆಗೆ । ಪ್ರಯಾಸ ಅವುಗಳಿಗೂ ನಾನಾ ಬಗೆ ।
ಆಯಾಸವಿಲ್ಲ ಈ ಕಥೆಗಳ ಕೇಳುವಾಗ್ಗೆ । ಅವಧಾನವನು ಬಿಟ್ಟು ॥ 57

ಇಂಥ ಸಾಯಿ ಕಥೆ ನಿರ್ಮಲವು । ಪ್ರೇಮಳ ಸಜ್ಜನರು ಕೇಳುತಲಿವು ।
ಪಂಚಮಹಾ ಪಾತಕಗಳು ಭಸ್ಮವಾಗುವವು । ಬೇರುಸಹಿತ ನಾಶವಾಗುವವು ॥ 58

ನಮ್ಮನ್ನು ಭವಪಾಶದಿ ಕಟ್ಟಲಾಗಿದೆ । ಅದು ನಿಜರೂಪವನೆ ಆವರಿಸಿದೆ ।
ಶ್ರವಣದಿ ಆ ಕಟ್ಟುಗಳು ಸಡಿಲಾದಾವು । ಮೂಲ ಸ್ವರೂಪದ ಪಡೆದೆವು ॥ 59

ಕಥೆಗಳದಾಗಬೇಕು ಆಮರಣ ಸ್ಮರಣ । ನಿತ್ಯದಲಿ ಅವುಗಳ ಪರಿಶೀಲನ ।
ಭವದ ವಾರ್ತೆಗಳದಾಗಲಿ ಸಾಂತ್ವನ । ಸಮಾಧಾನವದು ಜೀವಕ್ಕೆ ॥ 60

ಭಕ್ತಿಭಾವದಲಿ ಓದುತ ಕೇಳುತ । ಸಹಜ ಸಾಯಿಯ ಧ್ಯಾನವಾಗುತ ।
ಸಗುಣರೂಪವದು ಕಣ್ಣಿಗೆ ಕಾಣುತ । ಚಿತ್ತದಲಿ ದೃಢವಾಗಿ ಬಿಂಬಿಸಬೇಕು ॥ 61

ಇದರಿಂದ ಆಗಲಿ ಸದ್ಗುರು ಭಕ್ತಿ । ಸಂಸಾರದಿ ಮೂಡಲಿ ವಿರಕ್ತಿ ।
ಗುರುಸ್ಮರಣದಲಿ ಉಂಟಾಗಲಿ ಪ್ರೀತಿ । ಮತಿಯು ನಿರ್ಮಲವಾಗಲಿ ॥ 62

ಇದೇ ವಿಚಾರವ ಮನಸಿನಲಿ ತಂದು । ಸಾಯಿನಾಥರು ಕೃಪೆ ಮಾಡಿದ್ದು ।
ಮುಂದೆ ಮಾಡಿ ನಿಮಿತ್ತವೆನ್ನದು । ತಾವೇ ಈ ಕಾರ್ಯ ಮಾಡಿದರು ॥ 63

ಹೊಟ್ಟೆ ತುಂಬಿ ಮೊಲೆ ಬಿಗಿದು । ಆದರೂ ಕರುವಿಲ್ಲದೆ ತೊರೆಬಿಡದು ।
ಇದು ಆಕಳ ಗುಣ ಹುಟ್ಟಿಬಂದದ್ದು । ಅಂತೆಯೇ ಸಾಯಿಯವರ ಪ್ರೀತಿ ॥ 64

ನಾ ಚಾತಕನೆನ್ನ ಆಶೆಯಿಂದಾಗಿ । ಆನಂದ ಘನವ ಆ ತಾಯಿ ಸುರಿಸಲಾಗಿ ।
ಅದರಿಂದ ಎನ್ನಲ್ಪ ತೃಷೆಯು ಹಿಂಗಿ । ಭಕ್ತರ ಪ್ರಕರ್ಷದಿ ಸಂತೈಸೀತು ॥ 65

ಭಕ್ತಿ ಪ್ರೇಮದ ಕೌತುಕವೆಂತು । ತಾಯಿಯೇ ಮಗುವಿನ ಹಸಿವೆಯನರಿತು ।
ಅದರ ಮುಖದಲಿ ಸ್ತನವನಿಟ್ಟು । ಅದು ಬಾಯಿ ತೆರೆಯದಿದ್ದರೂ ಕುಡಿಸುವಳು ಬಿಡದೆ ॥ 66

ಅವಳ ವೇದನೆ ಯಾರಿಗೆ ತಿಳಿಯುವದು । ಮಗುವಿಗಂತೂ ಅದು ತಿಳಿಯದು ।
ಬೇಕೆನ್ನದೆ ಹಾಲೂಡಿಸುವದು । ತನ್ನ ತಾಯಲ್ಲದೆ ಅನ್ಯರಲ್ಲ ॥ 67

ಮಗುವಿಗಿಡಿಸಲು ಒಡವೆಗಳನು । ಮಗುವಿಗೆ ಅದರ ಸ್ವಾರಸ್ಯವೇನು ।
ತಾಯಿಯೇ ತಿಳಿಯುವಳು ಆ ಕೌತುಕವನು । ಹಾಗೆಯೇ ಸದ್ಗುರುವಿನ ರೀತಿಯು ॥ 68

ಈ ಮಗುವಿನ ಮಮತೆ ನನ್ನದು । ಮಗುವಿನ ಬೇಕು ಬೇಡಗಳ ಪೂರೈಸುವದು ।
ಈ ಚಿಂತೆ ಎಲ್ಲ ತಾಯಿಯದು । ಇಂಥ ಪ್ರೀತಿಯು ದುರ್ಲಭ ॥ 69

ಸನ್ಮಾತೆಯ ಉದರದಿ ಜನಿಸುವದು । ದೇವರಿತ್ತಿರುವ ಮಹಾಭಾಗ್ಯವಿದು ।
ಕಷ್ಟಪಟ್ಟು ಜನ್ಮವಿತ್ತುದು । ಬಾಲಕನಿದಾವುದನು ಅರಿಯನು ॥ 70

ಇದೇ ಅರ್ಥದ ಇನ್ನೊಂದು ವಚನ । ಬಾಬಾ ನುಡಿದದ್ದು ಮಾಡುವೆನು ಕಥನ ।
ಕೇಳಿರಿ ತಾವೆಲ್ಲ ಶ್ರೋತೃಗಳೆ ಇದನು । ಚಿತ್ತಗೊಡಬೇಕು ಆದರದಿ ॥ 71

ಸನ್ ಹತ್ತೊಂಬತ್ತುನೂರಾ ಹದಿನಾರರಲ್ಲಿ । ಸರಕಾರಿ ನೌಕರಿ ಮುಗಿಯುವಲ್ಲಿ ।
ಪಿಂಚಣಿ ಸಿಕ್ಕಿತು ಸರಿಯಾದ ರೀತಿಯಲಿ । ಸರದಿ ಬಂತೀಗ ಶಿರಡಿಯದು ॥ 72

ಗುರುಪೌರ್ಣಿಮ ಆ ದಿನ । ಗುರುಪೂಜೆಗೆ ಕೂಡಿದರೆಲ್ಲ ಭಕ್ತ ಜನ ।
ಅಣ್ಣಾ ಬಾಬಾರೆದುರು ವಿನಂತಿಯನ । ತಾವಾಗಿಯೇ ಮಾಡಿದರು ಅದ ಕೇಳಿ ॥ 73

ಅಣ್ಣಾರಿಗೆ ನನ್ನ ಚಿಂತೆ ದೊಡ್ಡದು । ನಿಂತು ಬಾಬಾರ ಎದುರು ಕೈಮುಗಿದು ।
ಬೆಳೆಯುತ್ತಿರುವ ಸಂಸಾರ ಇವನದು । ಇವನ ಮೇಲೊಂದಿಷ್ಟು ಕೃಪೆಯಾಗಲಿ ॥ 74

ಇನ್ನೊಂದು ಕೆಲಸವವನಿವಗೆ ಕೊಡಿಸಬೇಕು । ಈಗಿರುವ ಪೆನ್ಶನ್ ಎಲ್ಲಿ ಸಾಲಬೇಕು ।
ಅವನ ಚಿಂತೆಯ ಪರಿಹರಿಸಬೇಕು । ಅದಕಾಗಿ ಏನಾದರೂ ಮಾಡಿರಿ ॥ 75

ಪ್ರತ್ಯುತ್ತರದಿ ಬಾಬಾ ನುಡಿದರು । "ಹಾಳಾದ ನೌಕರಿ ಸಿಕ್ಕಿತ್ತಿಲ್ಲಾದರೂ ।
ಸದ್ಯಕ್ಕೆ ನನ್ನ ಚಾಕರಿಯನ್ನೆಲ್ಲ ಮಾಡಲಿವರು । ಸಂಸಾರದಿ ಸುಖ ದೊರಕೀತು" ॥ 76

ಇವರ ತಟ್ಟೆ ತುಂಬಿರುವದು ಯಾವಾಗಲೂ । ಯಾವಜ್ಜೀವ ರಿಕ್ತವಾಗದದೆಂದಿಗೂ ।
ಮತ್ಸರ ಭಾವನಾಗಿರುವವರೆಗೂ । ಅವನ ಕಷ್ಟಗಳು ದೂರಾಗವು ॥ 77

ಏನು ಮಾಡಿದರೂ ಏನಾಯಿತು । ಎನ್ನುವ ಜನರ ಬುದ್ಧಿ ಭ್ರಮಿಸಿತು ।
ಧರ್ಮಾಚರಣೆಯ ಮಾಡುವದ ಬಿಟ್ಟು । ನಡೆವರನ ಮೊದಲು ವರ್ಜಿಸಬೇಕು ॥ 78

ಎದುರು ಬರಲವರು ಬದಿಗೆ ಹಾಯಬೇಕು । ಅವರು ಮಹಾಭಯಂಕರರೆಂದು ತಿಳಿಯಬೇಕು ।
ಅಂಥವರ ನೆರಳೂ ಬೀಳದಂತಿರಬೇಕು । ಅದಕೆ ಕಷ್ಟವಾದರೂ ಸಹಿಸಬೇಕು ॥ 79

ಆಚಾರಹೀನ ಶೀಲಭ್ರಷ್ಟ । ವಿಚಾರಹೀನ ಕರ್ಮನಷ್ಟ ।
ನೋಡಲಾರನವ ಇಷ್ಟಾನಿಷ್ಟ । ಅಭೀಷ್ಟವದೆಂತವಗೆ ಲಭಿಸೀತು ॥ 80

ವಿಶೇಷ ಹತ್ತರಡೆ ಸಂಬಂಧವಿರದವರು । ನಮ್ಮ ಹತ್ತಿರ ಎಂದಿಗೂ ಯಾರೂ ಬರರು ।
ಶ್ವಾನ ಸೂಕರ ಇಲ್ಲ ಮಶಕವಾದರೂ । ಛೀ ಛೀ ಯಾರಿಗೂ ಅನಬಾರದು ॥ 81

ಇನ್ನು ಮುಂದೆ ಭಕ್ತಿ ಭಾವವನಿಟ್ಟು । ನನ್ನ ಸೇವೆಯ ಮಾಡಲಿ ಪೂರ್ಣಮನವಿಟ್ಟು ।
ಲಭಿಸೀತವನಿಗೆ ಅಕ್ಷಯ ಸೊತ್ತು । ದೇವಾಧಿದೇವನ ಕರುಣೆಯಿಂದ ॥ 82

ಇನ್ನೀ ಪೂಜೆಯ ಹೇಗೆ ಮಾಡಬೇಕು । ನಾನು ಯಾರು ಹೇಗೆಂಬುದನು ಖಚಿತ ತಿಳಿಯಬೇಕು ।
ನಾಶವಿರುವದು ಈ ಸಾಯಿ ದೇಹಕ್ಕೂ । ಆತ್ಮವು ಅವಿನಾಶಿ ಸುಪೂಜ್ಯ ॥ 83

ನಾನಂತೂ ಅಷ್ಟಧಾ ಪ್ರಕೃತಿ ರೂಪದಿಂದ । ಎಲ್ಲೆಲ್ಲೂ ತುಂಬಿರುವೆ ಎಲ್ಲ ದಿಕ್ಕುಗಳಿಂದ ।
ಇದನೆ ಗೀತಾವ್ಯಾಖ್ಯಾನದಲಿ ಹೇಳಿದ । ಭಗವಂತನು ಅರ್ಜುನನಿಗಾಗ ॥ 84

ಯಾವನ್ನಾಮರೂಪಾಕೃತಿಯೊಳು । ಸ್ಥಾವರ ಜಂಗಮಾತ್ಮಕವಾಗೆಲ್ಲರೊಳು ।
ನಾನೇ ನಿಂತಿಹೆ ಅಷ್ಟಧಾ ಪ್ರಕೃತಿಯೊಳು । ಈ ಚಮತ್ಕೃತಿಯೆಲ್ಲ ನನ್ನದೇ ॥ 85

ಓಂ ಪ್ರಣವ ಇದು ಎನ್ನ ವಾಚಕ । ವಾಚ್ಯವೂ ನಾನೇ ಅದಕ ।
ವಿಶ್ವಾಕಾರ ವಸ್ತುಗಳು ಅನೇಕ । ನಾನೊಬ್ಬನೇ ತುಂಬಿಹೆನು ಎಲ್ಲದರಲಿ ॥ 86

ಆತ್ಮ ಭಿನ್ನ ವಸ್ತುವಿಲ್ಲ । ಎನುವಾಗ ಕಾಮನೆಯು ಯಾವುದರದಿಲ್ಲ ।
ಎಲ್ಲೆಡೆಯಲೂ ನಾನೇ ತುಂಬಿರುವೆನಲ್ಲ । ಹತ್ತೂ ದಿಕ್ಕುಗಳಲ್ಲೆಲ್ಲ ॥ 87

ಸರ್ವತ್ರ ಪರಿಪೂರ್ಣ ಈ ಭಾವವಿರಬೇಕು । ಎಲ್ಲಿ ನಾ ನನ್ನದೆಂಬುದು ಕರಗಬೇಕು ।
ಅವನು ಕಾಮಿಸುವಂಥದೇನು ಇರಬೇಕು । ಎಲ್ಲದರಲ್ಲಿರಲು ಸರ್ವಸ್ವವಾಗಿ ॥ 88

ಈ ಬುದ್ಧಿಯಿಂದ ಕಾಮನೆಯು ಹುಟ್ಟುವದು । ಆತ್ಮಕ್ಕೆ ಇದರ ಸಂಬಂಧವಿರದು ।
ಸಾಯಿ ಮಹಾರಾಜ ನಿಜಾತ್ಮಮೂರ್ತಿಯದು । ಕಾಮನೆಯ ಉದಯ ಇಂಥಲ್ಲಿ ಎಲ್ಲಿಯದು ॥ 89

ಕಾಮನೆಯ ನಾನಾ ಪ್ರಕಾರಗಳು । ನಿಜದಲು ನಾನಾರೆಂಬುದು ತಿಳಿಯಲು ।
ಕರಗಿ ಹೋಗುವವೆಂತು ಆಣೆಕಲ್ಲು । ರವಿಕರ ನಿಕರ ಸಂತಪ್ತಾಗಲು ॥ 90

ಮನಬುದ್ಧ್ಯಾದಿ ಇಂದ್ರಿಯ ಸಹಿತ । ಅಲ್ಲ ನಾನು ಸ್ಥೂಲ ವಿರಾಟ ।
ನಾನಲ್ಲ ಹಿರಣ್ಯಗರ್ಭ ಅಪ್ರಕಟ । ಅನಾದಿ ಪುರಾತನ ಸಾಕ್ಷಿ ನಾನು ॥ 91

ಈ ರೀತಿ ಗುಣ ಇಂದ್ರಿಯದಾಚೆ ಇಹೆನು । ನಾನೆಷ್ಟೂ ಅಲ್ಲ ವಿಷಯತತ್ಪರನು ।
ಹುಡುಕಿದರೂ ಸಿಗದು ನಾನಿರುವ ಸ್ಥಳವನು । ಮಾಡುವವ ಮಾಡಿಸುವವ ನಾನಲ್ಲ ॥ 92

ಇಂದ್ರಿಯಗಣ ಮನ ಬುದ್ಧ್ಯಾದಿ ಇಂತು । ಜಡಮಾತ್ರಗಳೆಂಬುದೇ ಇದರ ಗುರುತು ।
ಅಂಥಲ್ಲಿಯೇ ವಿರಕ್ತಿ ಹುಟ್ಟೀತು । ಅಜ್ಞಾನದ ಆವರಣವನು ಸರಿಸಿ ॥ 93

ಸ್ವರೂಪದ ವಿಸ್ಮರಣ । ಅದೇ ಮಾಯೆಯ ಆವರಣ ।
ಪೂರ್ಣ ಶುದ್ಧಾನಂದದ ಸ್ಮರಣ । ಅದೇ ಚೈತನ್ಯ ಘನರೂಪ ನಾನು ॥ 94

ನನ್ನೆಡೆಗೆ ವೃತ್ತಿಯ ತಿರುಗಿಸುವದು । ಅದೇ ಸೇವೆಯು 'ಮದ್ಭಕ್ತಿ'ಯೆನಿಸುವದು ।
ಚಿದಾನಂದನೆನ್ನ ಪ್ರತೀತಿಯಾಗುವದು । ಶುದ್ಧ ಸ್ಥಿತಿ ಅದು, ಅದೇ 'ಜ್ಞಾನ' ॥ 95

ಅಯಮಾತ್ಮಾ ಬ್ರಹ್ಮ । ಪ್ರಜ್ಞಾನಮಾನಂದಂ ಬ್ರಹ್ಮ ।
ಜಗನ್ಮಿಥ್ಯೆಯಲಿ ಜಗದ್ಭ್ರಮ । ಸತ್ಯತ್ತ್ವಾದಿ ಅದೇ ಬ್ರಹ್ಮ ನಾನೇ ॥ 96

ನಿತ್ಯ ಶುದ್ಧ ಬುದ್ಧ ಮುಕ್ತ । ವಾಸುದೇವೋಹಂ ಓಂ ಅನ್ವಿತ ।
ಸತ್ಯ ಶ್ರದ್ಧಾ ಭಕ್ತಿ ಸಹಿತ । ಸ್ವಹಿತರಾಗಿರುವ ಪೂಜೆ ಇದು ನನಗೆ ॥ 97

ಹೀಗೆ ನಾನಾರೆಂದು ತಿಳಿದು । ನನ್ನ ಯಥಾರ್ಥ ಪೂಜೆಗೈದು ।
ಅನನ್ಯ ಶರಣರೆನಗಾಗುವದು । ನನ್ನಲ್ಲಿ ಸಮರಸರಾಗಿ ಬಿಡಬೇಕು ॥ 98

ನದಿಯು ಸಮುದ್ರಕೆ ಶರಣಾಗುತೆ । ಮತ್ತದು ತಿರುಗಿ ಬಂದೀತೆ ।
ನದಿ ಅದರಿಂದ ಬೇರಾಗಿ ಉಳಿದೀತೆ । ಅರ್ಣವವನಾಲಿಂಗಿಸಲು ॥ 99

ಅರಳೆಯ ಬತ್ತಿಯ ತುಪ್ಪದಲದ್ದಿದ್ದು । ದೀಪ ಜ್ಯೋತಿಯ ಭೆಟ್ಟಿಯಾಗುವದು ।
ತಾನೂ ದಿವ್ಯದೀಪ್ತಿತ್ವ ಪಡೆಯುವದು । ಸಂತಪದದಲಿಯೂ ಅದೇ ಗತಿ ॥ 100

ಅಲ್ಲಾ-ಮಾಲಿಕ ಚೈತನ್ಯ ಘನ । ಇದ ಬಿಟ್ಟು ಬೇರೆಯದಿಲ್ಲ ಚಿಂತನ ।
ಶಾಂತ ನಿರಪೇಕ್ಷ ಸಮದರ್ಶನ । ಅವನಲ್ಲಿ ನಾನೆಂಬುದೇನಿರುವದು ॥ 101

ನಿರ್ಮತತ್ವ ನಿರಂಹಕೃತಿ । ನಿರ್ದ್ವಂದ್ವ ನಿಷ್ಪರಿಗ್ರಹ ಸ್ಥಿತಿ ।
ಈ ನಾಲ್ಕು ಗುಣಗಳದೆಲ್ಲಿ ವಸತಿ । ಅಲ್ಲಿ ನಾನೆಂಬ ಸ್ಥಿತಿ ಹೇಗಿದ್ದೀತು ॥ 102

ತಾತ್ಪರ್ಯ ಈ ಎಂಟೂ ಗುಣಗಳು । ಸಂಪೂರ್ಣವಾಗಿರಲು ಸಾಯಿಯಲಿ ।
ನಾನೆಂಬುದಕೆ ಅಲ್ಲಿ ಸ್ಥಾನವೆಲ್ಲಿ । ನನ್ನತನವನೆಂತು ಸೇವಿಸಲಿ ॥ 103

ವಿಶ್ವವೇ ತುಂಬಿದೆ ಯಾರ ನಾ ತನ । ಆದರದೇ ಅಂಶವು ನನ್ನದೂ ನಾತನ ।
ಸಾಯಿ ಪದಕೆ ಮಾಡಬೇಕಿದರ ಸಮರ್ಪಣ । ಇದೇ ಸಂಪೂರ್ಣಸೇವೆ ನಾ ಮಾಡುವದು ॥104

ನನ್ನ ಸೇವೆ ನನ್ನ ಭಜನೆಯ ಮಾಡುವವ । ಅನನ್ಯವಾಗಿ ನನಗೆ ಶರಣಾಗುವವ ।
ಅವನೆನ್ನ ರೂಪನೇ ಆಗುವ । ಭಗವಂತ ವಚನವಿದು ಭಾಗವತದಲ್ಲಿ ॥ 105

ಕೀಡಿಗೂ ಇರುವದು ಭ್ರಮರದ ಧ್ಯಾನ । ಆದರಿಂದ ಪಡೆಯುವದು ಭ್ರಮರತನ ।
ಶಿಷ್ಯನು ಮಾಡಲು ಗುರು ಭಜನ । ನಿಜಗುರು ಸಮಾನನಾಗುವನು ॥ 106

ಸಮಾನ ಶಬ್ದಗಳಲಿರುವ ಬೇರೆತನ । ಗುರು ಅದನೂ ಸಹಿಸನು ಒಂದು ಕ್ಷಣ ।
ಗುರುತ್ವವೇ ಅಲ್ಲ ಶಿಷ್ಯನ ವಿನಃ । ಶಿಷ್ಯತ್ವವೇ ಅಭಿನ್ನ ಗುರುತನ ॥ 107

ಯಾರಿಂದ ಪೂಜೆಯನು ಆಜ್ಞಾಪಿಸಿದನು । ಆ ನಾನು ಯಾರೆಂಬುದನು ಈಗ ಹೇಳಿದೆನು ।
ಪುಷ್ಟೀಕರಣಕ್ಕೆ ನೆನಪಾದ ಕಥೆಯನು । ಸಹಜವಾಗಿಲ್ಲಿ ಹೇಳುವೆ ॥ 108

ರೋಹಿಲನೊಬ್ಬ ಶಿರಡಿಗೆ ಬಂದ । ಬಾಬಾರ ಗುಣಕ್ಕೆ ಮೋಹಿತನಾದ ।
ಅಲ್ಲಿಯೇ ಬಹಳ ದಿನ ಇದ್ದ । ಪ್ರೇಮದಿ ಬಾಬಾರಿಗೆ ಸಮರ್ಪಿಸಿಕೊಂಡಿದ್ದ ॥ 109

ಶರೀರದಲಿ ಪುಷ್ಟಕೋಣನಂತಿದ್ದ । ಯಾರನ್ನೂ ಕೇಳದೆ ಸ್ವೈರವರ್ತಿಯಾಗಿದ್ದ ।
ಪಾದದವರೆಗೆ ಕಫನಿಯ ಮಾತ್ರ ಧರಿಸುತ್ತಿದ್ದ । ಮಶೀದಿಯೊಳಗವ ಬಂದು ನಿಂತ ॥ 110

ಹಗಲಿರಲಿ ರಾತ್ರಿಯಿರಲಿ । ಇದು ಮಶೀದಿಯಿರಲಿ ಚಾವಡಿಯಿರಲಿ ।
ಕಲಮಗಳ ಹೇಳುವ ಉಚ್ಛ ಸ್ವರದಲಿ । ಅತಿ ಆವೇಶದಿ ಸ್ವಚ್ಛಂದದಲಿ ॥111

ಶಾಂತಮೂರ್ತಿಯೇ ಮಹಾರಾಜರು । ಗ್ರಾಮಸ್ಥರು ಬಹಳ ಬೇಸತ್ತರು ।
ಬಿಡನವ ತನ್ನ ಕ್ರಮವನು ನಡು ರಾತ್ರಿಯಾದರೂ । ಜನರ ನಿದ್ರೆಗೂ ಭಂಗ ಬರತೊಡಗಿತು ॥ 112

ಹೊಲದಲ್ಲಿ ಇಲ್ಲವೇ ಅಡವಿಯಲಿ । ಹಗಲೆಲ್ಲ ದುಡಿಯುವದು ಬಿಸಿಲು ಗಾಳಿಯಲಿ ।
ಶಾಂತತೆಯ ನಿದ್ರೆಯಿಲ್ಲ ರಾತ್ರಿಗಳಲಿ । ಜನರಿದರಿಂದ ಬಲು ಗೋಳಾಡಿದರು ॥ 113

ಬಾಬಾರಿಗೆ ತಾಪವಾಗತ್ತಿರಲಿಕ್ಕಿಲ್ಲ । ಜನರಿಗೆ ರಾತ್ರಿ ಸುಖದ ನಿದ್ರೆಯಿಲ್ಲ ।
ಅದರಿಂದ ಗೋಳಾಡ ತೊಡಗಿದರು ಜನರೆಲ್ಲ । ರೋಹಿಲನ ಮೇಲೆ ಕಡುಕೋಪ ಬಂತು ॥ 114

ಇತ್ತ ಬಾವಿ ಅತ್ತ ಕೆರೆಯಾದಾಗ । ತಾಳುವದಾದರೂ ಎಲ್ಲಿಯವರೆಗೆ ।
ಹಗಲು ರಾತ್ರಿಯು ಇದೇ ಬಗೆ । ದೊಡ್ಡ ಚಿಂತೆಯಾಯಿತಿದು ॥ 115

ರೋಹಿಲ ತಲೆತಿರುಕನೇ ಜನ್ಮದಿ । ಮೇಲೆ ಬಾಬಾರ ಬೆಂಬಲವಿರಲು ।
ಸಾಧ್ಯವಾರಿಗೆ ಅವನ ತಡೆಯಲು । ಅದರಿಂದ ಆತ ಹೆಚ್ಚಿಕೊಂಡ ॥ 116

ಬಹಳೇ ಏರಿದ ಮತ್ತು ಒರಟಾದ । ಜನರನ್ನು ಬೈಯತೊಡಗಿದ ।
ಅತಿ ಅನಾವರನಾಗಿ ತಿರುಗಿ ಬಿದ್ದ । ಊರೂ ತಿರುಗಿತು ಅವನ ಮೇಲೆ ॥ 117

ಸಾಯಿ ಜನನಿ ಬಲು ಅಂತಃಕರಣದವಳು । ಶರಣಾಗತರನು ಬೆನ್ನಿಗೆ ಹಾಕುವಳು ।
ಊರ ಜನರೆಲ್ಲ ಇದು ಹೀಗಿರಲು । ದೈನ್ಯದಿ ಬಾಬಾರ ಹತ್ತಿರ ಬಂದರು ॥ 118

ಆದರೂ ಬಾಬಾ ಅತ್ತ ಕಿವಿಗೊಡಲಿಲ್ಲ । ತಿರುಗಿ ಹೇಳಿದರು ಗ್ರಾಮಸ್ಥರಿಗೆಲ್ಲ ।
ರೋಹಿಲನನು ಕಾಡಬೇಡಿರಿ ನೀವೆಲ್ಲ । ನನಗವನು ಅತಿ ಪ್ರಿಯನು ॥ 119

ರೋಹಿಲನ ಹೆಂಡತಿ ಮನೆಮುರುಕಿ ಇಹಳು । ಅವನ ಜೊತೆಗೂಡಿ ಇರಲೊಲ್ಲಳು ।
ಅವನ ತಪ್ಪಿಸಿ ನನ್ನೆಡೆಗೆ ಬರಲು । ದಾರಿಯನೇ ಕಾಯುತಿರುವಳು ॥ 120

ಅವಳು ಬುರುಕಿ ಹಾಕುವುದಿಲ್ಲ । ಲಜ್ಜೆ ಎನ್ನುವದವಳಿಗಿಲ್ಲ ।
ಮನೆಯಿಂದ ಹೊರದೂಡಲು ಅವಳ । ಬಲಾತ್ಕಾರದಿ ಒಳಗೆ ಸೇರಿಕೊಳುವಳು ॥ 121

ಅವನು ಒದರುವುದು ನಿಲ್ಲಿಸಲು । ಕೂಡಲೇ ಒಳಹೊಗಲು ಪ್ರಯತ್ನಿಸುವಳು ।
ಇವನೊದರಲು ಅವಳೋಡುವಳು । ಅದರಿಂದೆನಗೆ ಸುಖ ಸಮೃದ್ಧಿ ॥ 122

ಅವನ ತಂಟೆಗೆ ಯಾರೂ ಹೋಗದಿರಿ । ಮುಕ್ತ ಕಂಠದಿಂದ ಒದರಲು ಬಿಡಿರಿ ।
ಅವನ ಬಿಟ್ಟು ಕಳೆಯದೆನ್ನ ರಾತ್ರಿ । ಸೌಖ್ಯವೆನಗೆ ಬಹು ಅವನಿಂದ ॥ 123

ಹೀಗವನು ಕೂಗುವುದರಿಂದ । ನನಗೆ ಹಿತವಾಗುವದು ಅದರಿಂದ ।
ಈ ರೋಹಿಲನು ಎನಗುಪಕಾರಿ ಅದರಿಂದ । ಬಹು ಸುಖಕರನಾಗಿರುವನು ॥ 124

ಕೊನೆಗೆ ಅವ ತಾನೇ ಸೋತು । ತನ್ನಷ್ಟಕ್ಕೆ ಕೂಡ್ರುವನಾಗಿ ಸುಸ್ತು ।
ನಿಮ್ಮ ಕೆಲಸವೂ ಅದರಿಂದಾದೀತು । ಆ ದುಷ್ಟೆಯು ನನ್ನ ಕಾಡಿಸಲಿಕ್ಕಿಲ್ಲ ॥ 125

ಮಹಾರಾಜರು ಹೀಗೆನ್ನಲು । ನಿಂತವು ಎಲ್ಲ ಉಪಾಯಗಳು ।
ಬಾಬಾರೇ ಮನಸು ಮಾಡದಿರಲು । ನಮ್ಮದೇನು ಇನ್ನು ಕೆಲಸ ॥ 126

ರೋಹಿಲನು ಮೊದಲೇ ಅಂಥವ । ಆದರಲಿ ಬಾಬಾರ ಈ ಭಾವ ।
ಕಲಮಗಳ ಜೋರಾಗಿ ಒದರುವ । ಅಸಮ ಸಾಹಸದಲೇ ತೊಡಗಿದ ॥ 127

ಜನರೆಲ್ಲ ಆಶ್ಚರ್ಯಪಟ್ಟರು । ಬಾಬಾ ಎಷ್ಟು ಕ್ಷಮಾವಂತರು ।
ತಲೆಸಿಡಿದು ಹೋಗುವಂತಾದರೂ । ಅದರಲ್ಲೇ ತಲ್ಲೀನರಾಗುವರು ॥ 128

ಇಂಥ ಭಯಂಕರ ಕೂಗಿಗೆ । ಅವನ ಗಂಟಲು ಒಣಗದೋ ಹೇಗೆ ।
ಬಾಬಾರದು ಮಾತ್ರ ಒಂದೇ ಬಗೆ । ಅವನನ್ನು ಬೆದರಿಸಬೇಡಿರಿ ॥ 129

ನೋಡಲು ರೋಹಿಲ ಹುಚ್ಚ ಪೀರ । ಆದರೂ ಬಾಬಾರ ಬಗ್ಗೆ ಅತಿ ಆದರ ।
ಕಲಮಗಳ ನಿಜ ಧರ್ಮಾನುಸರ । ಹರ್ಷನಿರ್ಭರನಾಗಿ ಅನ್ನುವನು ॥ 130

ಧ್ವನಿ ಮಧುರವೋ ಇಲ್ಲ ಗೊಗ್ಗರು । ಅದರ ವಿಚಾರ ಮಾಡುವವರಾರು ।
ಸ್ಫೂರ್ತಿ ಬಂದೊಡನೆ ಕೂಗುವರು । ಹರಿನಾಮದ ಗರ್ಜನೆಯನು ॥ 131

ನಿಸರ್ಗದತ್ತ ಗೊಗ್ಗರು ಸ್ವರ । ನಾಮಗರ್ಜಿಸುವ 'ಅಲ್ಲಾಹೋ ಅಕಬರ್' ।
ಕಲಮಗಳನೆನ್ನುವನಾಗಿ ಆನಂದ ನಿರ್ಭರ । ನಿತ್ಯ ನಿರಂತರವೂ ರೋಹಿಲನು ॥ 132

ಯಾರಿಗೆ ಹರಿನಾಮವೇ ಬೇಸರ । ಬಾಬಾ ಉಳಿಯುವರು ಅವರಿಂದ ದೂರ ।
ಭಜನೆಯಲಿ ಪ್ರೀತಿ ಇದ್ದವರ । ಸುಮ್ಮನೆ ಹೊರಹಾಕುವದೇಕೆ ರೋಹಿಲನನ ॥ 133

'ನನ್ನ ಭಕ್ತರು ಹಾಡುವಲ್ಲಿ । ನಿದ್ದೆಗೆಟ್ಟು ನಿಲ್ಲುವೆನಲ್ಲಿ "।
ಭಗವದುಕ್ತಿಯ ಮಾಡಲು ಸತ್ಯವಿಲ್ಲಿ । ಈ ಪ್ರತೀತಿಯ ತೋರಿದರು ॥ 134

ಒಣದೋ ಹಸಿಯದೋ ಬೇಡಿ ತಿನ್ನುವನು । ಇಲ್ಲದಿದ್ದರೆ ಉಪವಾಸ ಇರುವನು ।
ಅಂಥವಗೆ ಹೆಂಡತಿ ಇರುವಳೇನು । ಬಾಬಾರ ಬಳಿ ಎಲ್ಲಿಂದ ಹೋದಾಳು ॥ 135

ರೋಹಿಲಗೆ ಗತಿ ಇಲ್ಲ ಒಂದು ದಮಡಿಗೆ । ಎಲ್ಲಿಯ ಮದುವೆ ಎಲ್ಲಿಯ ಹೆಂಡತಿ ಅವನಿಗೆ ।
ಬಾಬಾ ಬಾಲಬ್ರಹ್ಮಚಾರಿ ಇರುವಾಗ್ಗೆ । ಈ ಎಲ್ಲ ಕಥೆ ಮಾಯಕವು ॥ 136

ಮಾಡಿಕೊಳ್ಳುವ ಕಂಠಶೋಶ । ಬಾಬಾರಿಗೆ ಕಲಮಗಳ ಸಂತೋಷ ।
ಕೇಳುತ್ತಲಿರುವರು ಅಹರ್ನಿಶ । ನಿದ್ರೆಯಾ ವಿಷದಂತದರ ಮುಂದೆ ॥ 137

ಬೋಧಪ್ರದ ವಾಣಿಯ ಆ ಕಲಮುಗಳೆಲ್ಲಿ । ಗ್ರಾಮಸ್ಥರ ಹುರುಳಿಲ್ಲದ ತಕರಾರೆಲ್ಲಿ ।
ಅವರನ್ನು ದಾರಿಗೆ ತರುವಲ್ಲಿ । ಬಾಬಾರು ಹಾಕಿದ ಸೋಗಿದು ॥ 138

ಈ ಅಭಿಪ್ರಾಯವ ಈ ರೀತಿಯಲ್ಲಿ । ಎಲ್ಲರಿಗೂ ಬಾಬಾ ಪ್ರತೀತಿ ತೋರಿದರಿಲ್ಲಿ ।
ಬಹಳ ಪ್ರೀತಿಯು ಎನಗೆ ಆ ರೋಹಿಲನಲ್ಲಿ । ಅವನೆನಗೆ ಬಹಳ ಹಿಡಿಸುವ ॥ 139

ದೃಶ್ಯ ದೃಷ್ಟಾರ ಮತ್ತು ದರ್ಶನ । ಎಲ್ಲವೂ ಯಾರಿಗೆ ಚೈತನ್ಯ ಘನ ।
ಬ್ರಾಹ್ಮಣನಿರುವ ಅಥವಾ ಪಠಾಣ । ಸಮಸಮಾನದವರಿಬ್ಬರೂ ॥ 140

ಒಂದು ಮಧ್ಯಾಹ್ನದಲಿ ಆರತಿಯ ಮುಗಿಸಿದರು । ಸ್ವಸ್ಥಾನಕೆ ತಿರುಗಿ ಹೊರಟರು ಜನರು ।
ಬಾಬಾ ಮಧುರ ವಚನದಿ ನುಡಿದರು । ಏನೆಂಬುದನು ಕೇಳಿರೀಗ ॥ 141

"ಎಲ್ಲಿಯೇ ಇರಲಿ ಏನೇ ಮಾಡಲು । ಇಷ್ಟು ಮಾತ್ರ ಸದೈವ ನೆನಪಿರಲಿ ।
ಯಾವ ಕೃತಿಯೇ ನಿಮ್ಮಿಂದಾಗಲಿ । ನಿರಂತರ ನನಗದು ತಿಳಿಯುವದು ॥142

ಇದರ ನಿದರ್ಶನ ಹೀಗಿದ್ದ ನಾನು । ಅವನೇ ಎಲ್ಲರ ಅಂತರ್ಯಾಮಿ ನಾನು ।
ಅವನೇ ಹೃದಯಸ್ಥ ಸರ್ವಗಾಮಿ ನಾನು । ನಾನೇ ಎಲ್ಲರ ಸ್ವಾಮಿಯು ॥143

ಭೂತಗಳಲಿ ಸಬಾಹ್ಯಾಂತರದಲಿ । ತುಂಬಿರುವೆನೆಲ್ಲ ಚರಾಚರಗಳಲಿ ।
ಇವೆಲ್ಲ ಸೂತ್ರಗಳು ಈಶ್ವರೀಯ ಇರುವಲ್ಲಿ । ಸೂತ್ರಧಾರಿಯದಕೆ ನಾನೇ ॥ 144

ಎಲ್ಲ ಭೂತಗಳ ಮಾತೆ ನಾನು । ತ್ರಿಗುಣಗಳ ಸಾಮ್ಯಾವಸ್ಥೆಯು ನಾನು ।
ನಾನೇ ಸಕಲೇಂದ್ರಿಯ ಪ್ರವರ್ತಕನು । ಕರ್ತ, ಧರ್ತ, ಸಂಹರ್ತಕನು ॥ 145

ನನ್ನೆಡೆಗೆ ಚಿತ್ತ ಯಾರದು । ಅವಗೆ ಏನೂ ಕೊರತೆಯಾಗದು ।
ಅದೇ ಮರವೆಯಾಗಲು ನನ್ನದು । ಮಾಯೆ ಚಬಕವ ಬೀಸುವಳು ॥ 146

ಈ ದೃಶ್ಯ ವಿಶ್ವವೆಲ್ಲ ನನ್ನದೇ ರೂಪ । ಹುಳು ಹುಪ್ಪಡಿ, ಬಡವ, ಭೂಪ ।
ಈ ಸ್ಥಿರ ಚರ ವಿಶ್ವ ಅಮೂಪ । ನಿಜರೂಪವಿದು ಬಾಬಾರದು" ॥ 147

ಎಷ್ಟು ಮೋಜಿದೆ ಈ ನಿರ್ದೇಶನದಲ್ಲಿ । ಭೇದವಿಲ್ಲ ಸಂತರು ಈಶ್ವರರಲ್ಲಿ ।
ಅಭೇದ ರೂಪನಿರುವ ಚರಾಚರರಲ್ಲಿ । ವಿಶ್ವೋದ್ಧಾರಕ್ಕಾಗಿ ಈ ಅವತಾರ ॥ 148

ಗುರು ಪದದಲ್ಲಾಗಬೇಕಾದರೆ ಲೀನ । ಮಾಡಬೇಕವನು ಗುರುಗುಣಗಾನ ।
ಇಲ್ಲವೆ ಮಾಡಲಿ ಗುರುಕಥಾಕೀರ್ತನ । ಇಲ್ಲವೆ ಭಕ್ತಿಯಲಿದರ ಶ್ರವಣ ॥ 149

ಸಾಧಕನು ಶ್ರವಣ ಮಾಡಬೇಕೆಂತು । ಶ್ರೋತೃಶ್ರವೃತ್ತ್ಯ ಎಲ್ಲ ಕರಗೀತು ।
ಅದರಿಂದ ಚೈತನ್ಯ ಘನ ಪ್ರಕಟವಾದೀತು । ಮನವಾದೀತು ಉನ್ಮನ ॥ 150

ಸಂಸಾರದಲ್ಲಿ ಮುಳುಗಿದ್ದರೂ । ಸಂತರ ಕಥೆ ಕಿವಿಯ ಮೇಲೆ ಬಿದ್ದರೂ ।
ಯತ್ನವಿಲ್ಲದೆ ಕಿಂಚಿತ್ತಾದರೂ । ಅದರ ಗುಣವೇ ಕಲ್ಯಾಣಕರ ॥ 151

ಇನ್ನು ಭಕ್ತಿ ಭಾವದಲಿ ಕೇಳಲಿದು । ಎಷ್ಟೊಂದು ಶ್ರೇಯ ಕೈಗೆಟುಕುವದು ।
ಶ್ರೋತೃಗಳೇ ಮನದಿ ವಿಚಾರ ಮಾಡುವದು । ತಮ್ಮ ನಿಜಹಿತಕ್ಕಾಗಿ ॥ 152

ಅದರಿಂದ ಆದೀತು ಗುರುಪದದಿ ಪ್ರೇಮ । ಕ್ರಮವಾಗಿ ಬೆಳೆದೀತು ಆತ್ಯಂತಿಕ ಕ್ಷೇಮ ।
ಬೇಕಿಲ್ಲ ಬೇರೆ ನಿಷ್ಠೆ ನೇಮ । ಪರಮ ಕಲ್ಯಾಣವಾದೀತು ॥ 153

ಮನಕೆ ಇಂಥ ನಿರ್ಬಂಧ ಹಾಕಲು । ಕಥಾಶ್ರವಣದ ರೂಢಿಯಾಗಲು ।
ಹರಿದು ಹೋಗುವವು ವಿಷಯ ಬಂಧನಗಳು । ಪರಮಾನಂದ ಪ್ರಕಟವಾದೀತು ॥ 154

ಬಾಬಾರ ಮಧುರವಾಣಿಯ ಕೇಳಿ । ನಿರ್ಧಾರ ಮಾಡಿದೆನು ಎನ್ನ ಮನದಲ್ಲಿ ।
ನರಸೇವೆಯನು ಬಿಟ್ಟು ಗುರು ಸೇವೆಯಲ್ಲಿ । ಇನ್ನು ಮುಂದೆ ಇರಬೇಕು ॥155

'ಸಿಕ್ಕೀತು ಬಿಡು ನೌಕರಿ ಹಾಳಾದ್ದು'। ಉತ್ತರದಿ ಬಾಬಾ ಹೀಗೆ ನುಡಿದದ್ದು ।
ಪ್ರತ್ಯಂತರಕೆ ಅದು ಬಂದೇ ಬರುವದು । ಮನಸ್ಸಿನಲ್ಲಿ ವಿಚಾರ ಕಾಡಿತು ॥ 156

ಶಬ್ದಗಳು ಬಾಬಾ ನುಡಿದದ್ದು । ಎಂದಿಗೂ ಅದು ನಡೆಯದಿರದು ।
ನರಸೇವೆಯದೇ ಸಂಬಂಧ ಬಂದು । ಹಿರಿಯ ಹಿತವಾವುದು ಸಾಧಿಸದು ॥ 157

ಸ್ವಯಂಸ್ಫೂರ್ತಿಯಿಂದ ಅಣ್ಣಾ ಕೇಳಿದ್ದು । ಆದರೂ ನಿಜವಾಗಿ ನನ್ನದೂ ಇಚ್ಛೆ ಇದು ।
ಇರಲಿಲ್ಲವೆಂದಿಲ್ಲ ಅನಿಚ್ಛೆ ಇದು । ಪ್ರಾರಬ್ಧ ಭೋಗೇಚ್ಛೆಯು ಇದಲ್ಲ ॥ 158

ನೌಕರಿ ಸಿಗಲೊಂದಿತ್ತೆನ್ನ ಮನದಲ್ಲಿ । ಸಂಸಾರ ನಿರ್ವಹಣೆ ಸರಿಯಾಗಿ ಆಗಲಿ ।
ಸಾಯಿಯಾದರೋ ಬೆಲ್ಲವ ತೋರಿ ಬೆರಳಿನಲಿ । ಔಷಧವನ್ನೇ ಕುಡಿಸುವರು ॥ 159

ಈ ಔಷಧವ ಈ ಬೆಲ್ಲದಾಶೆಯಿಂದ । ಕುಡಿದು ಮುಗಿಸಿದೆ ಭಾಗ್ಯವರದಿಂದ ।
ಹಿಡಿದೆ ದ್ರವ್ಯಾಭಿಲಾಷೆಯಿಂದ । ಅಕಲ್ಪಿತವಾಗಿ ಸಿಕ್ಕ ನೌಕರಿಯ ॥ 160

ಬೆಲ್ಲವಾದರೂ ಕೊನೆಯಲ್ಲದು । ತಿಂದು ತಿಂದು ಬೇಸರವಾಗುವದು ।
ಬಾಬಾರ ಬೊಟ್ಟು ಉಪದೇಶ ಜೇನಿನದು । ನೆಕ್ಕಲು ಬಲು ಸವಿ ಎನಿಸಿತು ॥161

ಕಾಯಂ ನೌಕರಿ ಅಲ್ಲದಿರುವಾಗ್ಗೆ । ಹೊರಟು ಹೋಯಿತು ಬಂದ ದಾರಿಗೆ ।
ಬಾಬಾ ಕೊಡ್ರಿಸಿದರೆನ್ನನು ಎಲ್ಲಿಂದೆಲ್ಲಿಗೆ । ಅಪಾಯವಿಲ್ಲದ ಸೌಖ್ಯ ಭೋಗಿಸಲು ॥ 162

ಈ ವಿಶ್ವ, ಸಂಪೂರ್ಣ ಚರಾಚರ । ಭಗವತ್ಸ್ವರೂಪವೇ ಸಾಕಾರ ।
ಆದರೂ ಭಗವಂತ ವಿಶ್ವಕ್ಕಿಂತ ಪರ । ಪರಾತ್ಪರ ಪರಮಾತ್ಮಾ ॥ 163

ಈಶ್ವರ ಪ್ರಪಂಚದಿಂದ ಅಭಿನ್ನ । ಪ್ರಪಂಚ ಈಶ್ವರನಿಂದ ಅಭಿನ್ನ ।
ಪ್ರಪಂಚದಿಂದಲೇ ಚೇತನಾಚೇತನ । ಅದಕೆ ಅಧಿಷ್ಠಾನ ಈಶ್ವರನದ ॥ 164

ಭಗವಂತನ ಪೂಜಾ ಸ್ಥಾನಗಳು । ಇರುವವು ಅಷ್ಟ ಪ್ರಕಾರದವುಗಳು ।
ಪ್ರತಿಮಾ ಸ್ಥಂಡಿಲಾದಿಗಳು । ಎಲ್ಲವ ನೋಡಲು ಗುರು ಶ್ರೇಷ್ಠ ॥ 165

ಕೃಷ್ಣನು ಸ್ವತಃ ಪೂರ್ಣ ಬ್ರಹ್ಮನು । ಅವನೂ ಹಿಡಿದ ಸಾಂದೀಪನಿ ಚರಣಗಳನು ।
ಹೇಳಿದ ಮಾಡಲು ಸದ್ಗುರು ಸ್ಮರಣೆಯನು । ನಾರಾಯಣನು ನಾ ಸಂತುಷ್ಟನಾಗುವೆ ॥ 166

ನನಗಿಂತಲು ನನಗೆ ಗುರುಸ್ತವನ । ಹಿಡಿಸುವದದು ಸಹಸ್ರಗುಣ ।
ಹೀಗಿದೆ ಸದ್ಗುರುವಿನ ಶ್ರೇಷ್ಠತನ । ಮಹಿಮಾನ ಗಹನ ಅವನದು ॥ 167

ಗುರು ಭಜನಕೆ ಬೆನ್ನು ತಿರುವುವವ । ಅವನೊಬ್ಬ ಅಭಾಗಿ ಪಾಪಿಯವ ।
ಜನ್ಮಮರಣದ ಚಕ್ರ ಭೋಗಿಸುವ । ತನ್ನ ಸ್ವಾರ್ಥವನೆ ಮಣ್ಣು ಮಾಡುವನು ॥ 168

ಮತ್ತೆ ಜನನ ಮತ್ತೆ ಮರಣ । ನಡೆದಿಹುದಿದು ನಿತ್ಯಭ್ರಮಣ ।
ಅದಕಾಗಿ ಮಾಡುವ ಕಥಾಶ್ರವಣ । ನಿಜೋದ್ಧರಣವ ಸಂಪಾದಿಸುವಾ ॥169

ಸಂತರ ಮುಖದ ಸಹಜ ಮಾತು । ಹರಿಯುವದದು ಅವಿದ್ಯೆಯ ಗಂಟು ।
ಅತಿ ಸಂಕಟಬಂದಾಗದು ತಾರಕ ಉಂಟು । ಅದಕದರ ಉದರದಿ ಸಂಚಯಿಸುವಾ ॥ 170

ತಿಳಿಯದು ಹೇಗೆ ಬಂದೀತು ಕಾಲ । ಹಾಕುವನು ಯಾರೊಡನೆ ಹೇಗೆ ಮೇಳ ।
ಅಲ್ಲಾಮಿಯಾನದೇ ಆಟವಿದೆಲ್ಲ । ಪ್ರೇಮಳ ಭಕ್ತನು ಬರಿ ಪ್ರೇಕ್ಷಕನು ಮಾತ್ರ ॥ 171

ತನ್ನಲ್ಲಿರದೆ ಪ್ರಜ್ಞಾಬಲ । ಏನೆನಬೇಕು ಇದ ದೈವ ಬಲ ।
ದೊರಕಿದನಲ್ಲಾ ಸಾಯಿ ಗುರು ಪ್ರಬಲ । ಇದು ಒಂದು ಲೀಲೆ ಅವನದೆ ॥ 172

ಹೇಳಿದರು ಗ್ರಂಥ ಪ್ರಯೋಜನವ । ಹೇಳಿದರೆನಗೆ ಕೊಟ್ಟರು ಆಶ್ವಾಸನ ।
ಮತ್ಪರತ್ವ ಮತ್ತು ಮತ್ಪೂಜನ । ಅದುವೆನಗೆ ದಿಗ್ದರ್ಶನವಾಯಿತು ॥ 173

ಇನ್ನು ನೀವು ಶ್ರೋತೃಗಳು । ಕೇಳುವಿರಿ ಮುಂದಿನಧ್ಯಾಯದೊಳು ।
ಸಮರ್ಥ ಸಾಯಿನಾಥರ ಅವತರಣ । ಶಿರಡಿಯಲಿ ಹೇಗಾಯಿತು ॥ 174

ಸಣ್ಣವರು ದೊಡ್ಡವರು ತಾವೆಲ್ಲ ಜನರು । ಕ್ಷಣವೊಂದು ಸಂಸಾರದಿಂದಾಗಿ ಅಲಿಪ್ತರು ।
ಕೇಳಿರಿ ನೀವು ಸಾಧು ಭಾವಿಕರು । ಸಾಯಿಯ ಚರಿತ್ರವಿದು ಎಲ್ಲಕ್ಕಿಂತ ಬೇರೆ ॥ 175

ಸ್ವಯಂ ತಾನು ನಿರ್ವಿಕಾರಿ । ಸಾಯಿ ನಟನಾಟಕದ ಅವತಾರಿ ।
ಎಂತೋ ಪ್ರಾಪಂಚಿಕ ವ್ಯವಹಾರಿ । ಮಾಯಾಕಾರ್ಯಾನುಸಾರವಾಗಿ ನಡೆವ ॥ 176

ಸಮರ್ಥ ಸಾಯಿ ಈ ಅಲ್ಪ ಮಂತ್ರ । ಜಪಿಸುವನು ಈ ಪದಗಳ ಪವಿತ್ರ ।
ಅಲಗಿಸುವನಾವನೋ ಭಕ್ತ ಭವಮೋಕ್ಷ ಸೂತ್ರ । ಪಾವನ ಚರಿತ್ರವು ಅವನದು ॥ 177

ಅಂತೆಯೇ ಸಾಯಿಯ ಚರಿತ್ರ ಪಾವನ । ಓದುವವನ ವಕ್ತ್ರವು ಪಾವನ ।
ಶ್ರೋತೃಗಳ ಶ್ರೋತೃಗಳು ಪಾವನ । ಅಂತರಂಗ ಪವಿತ್ರವಾದೀತು ॥ 178

ಪ್ರೇಮದಿ ಮಾಡಲು ಕಥಾಶ್ರವಣ । ಭವದುಃಖಗಳದಾಗುವದು ಹರಣ ।
ಸುರಿದೀತು ಸಾಯಿ ಕೃಪಾ ಘನ । ಶುದ್ಧ ಬೋಧವು ಪ್ರಕಟವಾದೀತು ॥ 179

ಲಯ ವಿಕ್ಷೇಪ ಕಶಾಯ । ರಸಾಸ್ವಾದವು ಶ್ರವಣಕೆ ಅಪಾಯ ।
ದೂರವಿರಿಸಿ ಈ ಅಂತರಾಯ । ಶ್ರವಣ ಸುಖದಾಯಕವಾದೀತು ॥ 180

ಬೇಕಿಲ್ಲ ವ್ರತ ಉದ್ಯಾಪನ । ಬೇಕಿಲ್ಲ ಉಪವಾಸ ಶರೀರ ಶೋಷಣ ।
ಬೇಕಿಲ್ಲ ತೀರ್ಥ ಯಾತ್ರಾ ಪರ್ಯಟನ । ಚರಿತ್ರ ಶ್ರವಣ ಒಂದೇ ಸಾಕು ॥ 181

ಪ್ರೇಮವಿರಬೇಕು ಅಕೃತ್ರಿಮ । ತಿಳಿದಿರಬೇಕು ಭಕ್ತಿವರ್ಮ ।
ಸಹಜ ದೊರಕೀತು ಪರಮಾರ್ಥ ಪರಮ । ನಶಿಸೀತು ವಿಷಮ ಅವಿದ್ಯೆಯು ॥ 182

ಬೇಕಿಲ್ಲ ಬೇರೆ ಕಷ್ಟದ ಸಾಧನ । ಮಾಡುವಾ ಸಾಯಿ ಚರಿತ್ರ ಶ್ರವಣ ।
ಸಂಚಿತ ಮತ್ತು ಕ್ರಿಯಮಾಣ । ಅಲ್ಪ ಪ್ರಮಾಣದಲೂ ಉಳಿಸುವದು ಬೇಡ ॥ 183

ಕೃಪಣನು ಎಲ್ಲಿಯೇ ತಿರುಗಾಡುತಿರಲಿ । ಬಚ್ಚಿಟ್ಟ ಧನವೇ ಕಾಣುವದೆದುರಿನಲಿ ।
ಕ್ಷಣಬಿಡದೆ ಹಗಲು ಇರುಳುಗಳಲಿ । ಅದರಂತೆ ಮನದಲ್ಲಿ ಸಾಯಿಯು ವಾಸಿಸಲಿ ॥ 184


ಇತಿ ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಗ್ರಂಥ ಪ್ರಯೋಜನಾನು ಜ್ಞಾಪನಂ ನಾಮ ।

॥ ತೃತಿಯೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

43.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ನಾಲ್ಕು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನೆರಡು ಅಧ್ಯಾಯಗಳಲಿ ಮಂಗಲಾಚರಣ ॥ ಹೇಳಿದೆ ಗ್ರಂಥ ಪ್ರಯೋಜನ ।
ಅಧಿಕಾರಿ-ಅನುಬಂಧ ನಿರೂಪಣ । ಇವುಗಳ ವಿವರಣವಾಯಿತು ॥ 1

ಇನ್ನು ಮೇಲೆ ಈ ಸಂತರು । ಈ ಭೂಮಿಯಲೇಕೆ ಅವತರಿಸಿದರು ।
ಅಂಥ ಪ್ರಖರರ ಕರ್ಮವಾದರೂ । ಯಾವುದದರಿಂದ ಇಲ್ಲಿಗೆ ಬಂದರು ॥2

ಇನ್ನು ಶ್ರೋತೃ ಮಹಾರಾಜರೆ ನೀವು । ನಾನೊಂದು ನಿಮ್ಮ ಚರಣರಜವು ।
ನಿಮ್ಮ ಅವಧಾನದೊಡನೆ ಎನಗೆ ಕಾರ್ಯವು । ಅದಕೇಳಲು ನಾಚಿಕೆಯಿಲ್ಲೆನಗೆ ॥ 3

ಮೊದಲೇ ಸವಿಯಾದ ಸಂತಚರಿತೆಯಿದು । ಅದರಲ್ಲೂ ಸಾಯಿ ಕಥಾಮೃತವಿದು ।
ಸಾಯಿಯ ಅನನ್ಯ ಭಕ್ತರಿದನುಂಡು । ಆನಂದಯುಕ್ತರಾಗಲಿ ॥ 4

ಬ್ರಾಹ್ಮಣರು ಅಲಕ್ಷಿಸುವರು ಆಶ್ರಮ-ವರ್ಣ । ಶೂದ್ರರಾಗಬಯಸುವರು ಬ್ರಾಹ್ಮಣ ।
ಮಾಡಿ ಧರ್ಮಾಚಾರ್ಯರ ಮೌನ ಖಂಡನ । ದಂಡನೆಯ ವಿದಿಸಬಯಸುವರು ॥5

ಯಾರೂ ಧರ್ಮ ವಚನ ಮನ್ನಿಸರು । ಮನೆ ಮನೆ ವಿದ್ವಾನರೇ ಎಲ್ಲರೂ ।
ಒಬ್ಬರಿಗಿಂತ ಮೇಲೆ ಒಬ್ಬರು । ಯಾರೂ ಯಾರದನು ಕೇಳರು ॥ 6

ಸೇವ್ಯಾಸೇವ್ಯ ಭಕ್ಷ್ಯಾಭಕ್ಷ್ಯ । ಆಚಾರ ವಿಚಾರದತ್ತ ಪೂರ್ಣದುರ್ಲಕ್ಷ್ಯ ।
ಮದ್ಯಮಾಸಗಳನು ಎಲ್ಲರ ಸಮಕ್ಷ । ಪ್ರತ್ಯಕ್ಷ ಬ್ರಾಹ್ಮಣರೂ ತಿನ್ನುವರು ॥ 7

ಅಡಗಿ ಧರ್ಮದ ಮುಸುಕಿನೊಳಗೆ । ಅತ್ಯಾಚಾರ ನಡೆಸುವರು ಒಳಗಿಂದೊಳಗೆ ।
ತೊಡಗುವದು ಪಂಥದ್ವೇಷ ಅವರೊಳಗೆ । ಇದರಿಂದ ಜನರು ಗಲಿಬಿಲಿಗೊಳ್ಳುವರು ॥ 8

ಬ್ರಾಹ್ಮಣರಿಗೆ ಸ್ನಾನ ಸಂಧ್ಯೆಗಳ ಬೇಸರ । ಕರ್ಮಠರಿಗೆ ಅನುಷ್ಠಾನಗಳ ಬೇಸರ
ಯೋಗಿಗಳಿಗೆ ಜಪತಪ ಧ್ಯಾನವ ಬೇಸರ । ಇದು ಸಮಯ ಸಂತಾವತರಣಕೆ ॥9

ಜನ ಧನ ಮಾನ ಪುತ್ರದಾರಾ । ಇದೇ ಸುಖಸರ್ವಸ್ವಕೆ ಆಧಾರ ।
ತಿಳಿದು ತೊರೆವರು ಧರ್ಮ ವಿಚಾರ । ಸಂತರಾಗ ಅವರತರಿಸುವರು ॥ 10

ಆತ್ಯಂತಿಕ ಶ್ರೇಯ ಪ್ರಾಪ್ತಿಗೆ । ದೂರಾಗುವರು ಧರ್ಮಗ್ಲಾನಿಯಿಂದಾಗೆ ।
ತೊಡಗಲು ಧರ್ಮ ಜಾಗೃತಿಗೆ । ಸಂತರು ಅವತಾರ ತಳೆವರು ॥ 11

ಆಯುರಾರೋಗ್ಯ-ಐಶ್ವರ್ಯಕ್ಕೆರವಾಗುವರು । ಜನ ಶಿಶ್ನೋದರ ಪಾರಾಯಣರಾಗುವರು ।
ಸರ್ವಸ್ವವಾಗಿ ನಿಜೋದ್ಧರಣ ಮರೆವರು । ಆಗ ಸಂತರವತರಿಸುವರು ॥ 12

ಆಗಲು ವರ್ಣಾಶ್ರಮ ಧರ್ಮರಕ್ಷಣ । ಮಾಡಲು ಅಧರ್ಮದ ನಿರ್ದಲನ ।
ದೀನದರಿದ್ರ, ಅಶಕ್ತರ ಸಂರಕ್ಷಣ । ಕ್ಷಿತಿಯಲಿ ಅವತಾರ ಸಂತರದು ॥ 13

ಸಂತರು ತಮ್ಮಪೃಕ್ಷೇ ಮುಕ್ತರು । ದಿನೋದ್ಧರಣಕೆ ಸದೈವ ಉದ್ಯುಕ್ತರು ।
ಪರಾರ್ಥಕ್ಕಾಗಿಯೇ ಅವತರಿಸುವರು । ನಿಜಸ್ವಾರ್ಥವು ಅವರಿಗಿಲ್ಲ ॥ 14

ನಿವೃತ್ತಿಯ ಅಡಿಪಾಯ ಹಾಕುವರು । ಪ್ರವೃತಿಯ ಇಮಾರತಿಗವರು ।
ಪರಮಾರ್ಥದ ಗುಡಿಯ ಕಟ್ಟುವರು । ಭಕ್ತರನುದ್ಧರಿಸುವರು ಸಹಜದಲಿ ॥15

ಧರ್ಮಕಾರ್ಯ ಧರ್ಮ ಜಾಗೃತಿ ಬಯಸಿ । ಅವತಾರ ಕಾರ್ಯವ ಸಂಪಾದಿಸಿ ।
ನಿಜಕಾರ್ಯವ ಪರಿಪೂರ್ಣಗೊಳಿಸಿ । ಅವತಾರ ಸಮಾಪ್ತಿಯ ಮಾಡುವರು ॥ 16

ಸಕಲಜಗದಾನಂದಕರ । ಪ್ರತ್ಯಗಾತ್ಮನವ ಪರಮೇಶ್ವರ ।
ಆ ಪರಮೇಶ್ವರನೇ ಗುರು । ಅವನೇ ಶಂಕರ ಸುಖಕರ ॥ 17

ಅವನೇ ನಿರತಿಶಯ ಪ್ರೇಮಾಸ್ಪದ । ನಿತ್ಯನಿರಂತರ ಅಭೇದ ।
ಅರಿಯನವ ದೇಶಕಾಲ ವಸ್ತು ಭೇದ । ಪರಿಚ್ಛೇದಾದೀತನವನು ॥ 18

ಪರಾಪಶ್ಯಂತಿ ಮಧ್ಯಮಾವೈಖರಿಯವು । ನಾಲ್ಕು ವೇದಗಳು ವರ್ಣಿಸುತ ದಣಿದವು ।
ನೇತಿ ನೇತಿ ಎಂಬಲ್ಲಿಯೇ ನಿಂತವು । ಚತುರತೆಯು ನಡೆಯದು ವೇದಗಳದು ॥ 19

ನಾಚಿದವು ಘಟಶಾಸ್ತ್ರ ಷಡ್ದರ್ಶನಗಳು । ದಣಿದವು ಪುರಾಣ ಕೀರ್ತನೆಗಳು ।
ಕೊನೆಗೆ ಕಾಯಾ ವಾಚಾ ಮನದಿಂದವುಗಳು । ಅರಿತವು ನಮನವೇ ಸಾಧನವೆಂದು ॥ 20

ಇಂಥ ಸಂತ ಸಾಯಿಯ ಚರಿತ್ರ । ಲೀಲೆಗಳಾದವು ಅತ್ಯಂತ ವಿಚಿತ್ರ ।
ಕೇಳಿ ಯಾರ ಕಥೆಗಳ ವಿಚಿತ್ರ । ಶ್ರೋತೃಗಳು ಪಾವನವಾದವು ॥ 21

ಅವನೇ ಚಾಲಕನು ಸರ್ವೇಂದ್ರಿಯಗಳಿಗೆ । ಬುದ್ಧಿ ಕೊಡುವವನು ಗ್ರಂಥ ರಚನೆಗೆ ।
ಯಥಾಕ್ರಮ ಗ್ರಂಥ ರಚನೆಗೆ । ಆಯಾಸವಾಗದಿರಲು ಕಾರಣನವ ॥ 22

ಸರ್ವರ ಅಂತರ್ಯಾಮಿಯೂ ಅವನು । ಬಾಹ್ಯಾಭ್ಯಂತರ ಸರ್ವಗಾಮಿಯವನು ।
ಇಂತಿರುವಾಗ ಚಿಂತೆ ಎನಗೇನು । ಇನಿತೂ ಕಾರಣವಿಲ್ಲದೆ ॥ 23

ಅವನ ಒಂದೊಂದೇ ಗುಣವ ನೆನೆಸಲು । ವೃತ್ತಿಯೇ ತಟಸ್ಥವಾಗಲು ।
ಬಹುದೆಂತು ನುಡಿಯಲಿ ವರ್ಣಿಸಲು । ದೃಢ ಮೌನತೆಯೇ ತತ್ಕಥನವು ॥ 24

ಸುಮನದಾಘ್ರಾಣನೆಯು ಮೂಗಿನಿಂದ । ಶೀತೋಷ್ಣದ ಸ್ಪರ್ಶವು ತ್ವಚೆಯಿಂದ ।
ಸೌಂದರ್ಯಸುಖದನುಭವ ನಯನದಿಂದ । ತಮ್ಮಷ್ಟಕ್ಕೆ ಸುಖಪಡಬೇಕು ॥ 25

ನಾಲಿಗೆಗೆ ಸಕ್ಕರೆಯ ಸ್ವಾದ । ತಿಳಿದರೂ ಮಾಡಲು ಬಾರದದರ ಅನುವಾದ ।
ಅದರಂತೆ ಸಾಯಿಯ ಗುಣಾನುವಾದ । ವಿಶದವಾಗಿ ಹೇಳಲು ಬಾರದೆನಗೆ ॥26

ಸದ್ಗುರುವಿನ ಮನಸಿಗೆ ಬಂದಾಗ । ಪ್ರೇರಣೆಯ ತಾನೇ ಈಯುವನಾಗ ।
ಅನಿರ್ವಚನೀಯವನು ನುಡಿಸುವಾಗ । ಸ್ವಜನರಿಂದ ಅದನು ಮಾಡಿಸುವನು ॥ 27

ಇದು ಅಲ್ಲ ಕೇವಲ ಶಿಷ್ಟಾಚಾರ । ಮಾತಲ್ಲ ಇವು ಬರಿ ಉಪಚಾರ ।
ಮನೋಭಾವದ ಈ ಉದ್ಗಾರ । ಚಿತ್ತಗೊಡಿರೆಂದು ಪ್ರಾರ್ಥಿಸುವೆ ॥ 28

ಹೇಗೆ ನೃಸಿಂಹವಾಡೀ ಗಾಣಗಾಪುರ । ಮತ್ತೆ ಭಿಲವಡಿ ಅಥವಾ ಔದುಂಬರ ।
ಹಾಗೆಯೇ ಪವಿತ್ರವಿದು ಗೋದೆಯ ತೀರ । ಕ್ಷೇತ್ರ ಶಿರಡಿ ಪ್ರಸಿದ್ಧಿ ಅಲ್ಲಿ ॥ 29

ಗೋದಾವರಿಯ ಪವಿತ್ರ ತೀರ । ಗೋದಾವರಿಯ ಪವಿತ್ರ ನೀರ ।
ಗೋದಾವರಿಯ ಶೀತ ಸಮೀರ । ಇವು ಭವತಿಮಿರ ನಾಶಕಗಳು ॥ 30

ಗೋದಾವರಿಯದು ರುಚಿರ ಮಹಾತ್ಮ್ಯ । ಜಗತ್ತಿನಲ್ಲಿರುವುದು ಪ್ರಖ್ಯಾತ ।
ಶ್ರೇಷ್ಠರ ಒಬ್ಬರೊಬ್ಬರಿಗಿಂತ । ಸಂತ ಪ್ರವರವಾಯಿತು ಅಲ್ಲಿ ॥ 31

ಅನೇಕ ತೀರ್ಥಗಳು ಗೋಮತಿ ತೀರದಲ್ಲಿ । ಅಘ ವಿನಾಶಕ ಜಲವಿರುವದಿಲ್ಲಿ ।
ಸ್ನಾನ ಪಾನಗಳಿಂದ ಭವರೋಗ ಕಳೆಯುವದಿಲ್ಲಿ । ಎಂದು ವರ್ಣಿಸಿದೆ ಪುರಾಣಾಂತರದಿ ॥ 32

ಈ ಗೋದೆ ಇರುವದು ಅಹಮದನಗರದಲ್ಲಿ । ಕೋಪರಗಾಂವ ತಾಲೂಕಿನಲ್ಲಿ ।
ಕೋಪರಗಾಂವ ಊರಿನ ಮಗ್ಗುಲಲ್ಲಿ । ದಾರಿ ಶಿರಡಿಗೆ ಹೋಗುವದು ॥ 33

ಗೋದೆಯ ದಾಟಿ ಆಚೆಯ ದಂಡೆಗೆ । ಸುಮಾರು ಮೂರು ಹರದಾರಿ ಹೋದಾಗ್ಗೆ ।
ವಾಹನ ಪ್ರವೇಶಿಸುವುದು ನಿಮಗಾವದೊಳಗೆ । ಎದುರು ಶಿರಡಿ ಕಾಣುವದು ॥ 34

ನಿವೃತ್ತಿ ಜ್ಞಾನದೇವ ಮುಕ್ತಾಬಾಯಿ । ನಾಮಾಜನೀ ಗೋರಾ ಗೋಣಾಯೀ ।
ತುಕಾ ನರಹರಿ ನರಸೀಭಾಯಿ । ಸಜನಕಸಾಯಿ ಸಾವತಾ ॥ 35

ಹಿಂದೆ ಸಂತರು ಆಗಿ ಹೋದರು । ಇಂದಿಗೂ ಬೇಕಾದಷ್ಟಿರುವರು ।
ವಸುಧೈವ ಕುಟುಂಬಿಗಳವರೆಲ್ಲರೂ । ದುಃಖ ಕಷ್ಟದಲಿ ಆಧಾರರವರು ॥ 36

ರಾಮದಾಸ ಸಂತಪ್ರವರರು । ಗೋದಾ ತೀರವ ಬಿಟ್ಟು ಹೋದರು ।
ಕೃಷ್ಣಾತೀರದಿ ಪ್ರಕಟರಾದರು । ಜಗದುದ್ಧಾರ ಕಾರಣಕ್ಕಾಗಿ ॥ 37

ಅಂತೆಯೇ ಸಾಯಿ ಯೋಗೀಶ್ವರರು । ಜಗದುದ್ಧಾರಕಾಗಿ ಅವರು ।
ಗೋದಾತೀರದಿ ಅವತರಿಸಿದರು । ಶಿರಡಿಯ ಪುಣ್ಯವು ದೊಡ್ಡದೆಂದು ॥ 38

ಪರಿಸದಿಂದ ಲೋಹಕ್ಕೆ ಕನಕತನ । ಅದಕೆ ಸಂತರಿಗೆ ಕೊಡುವರು ಪರಿಸದ ಉಪಮೆಯನ ।
ನೋಡಿ ಸಂತರ ಅಲೌಕಿಕತನ । ಭಕ್ತರಿಗೆ ನಿಜರೂಪವನೆ ಕೊಡುವರು ॥ 39

ದೂರವಿಟ್ಟು ಭೇದಭಾವ । ಸ್ಥಿರಚರವೆಲ್ಲ ಬ್ರಹ್ಮ ಸ್ವಭಾವ ।
ತಮಗೆಲ್ಲ ಈ ವಿಶ್ವವಿಭವ । ಅಖಂಡ ವೈಭವ ಬ್ರಹ್ಮನದು ॥ 40

ಹೀಗೆ ಸರ್ವ ವಿಶ್ವವೇ ಯಾವಾಗ । ನಾನೇ ಆಗಿರುವೆಂಬರಿವಾದಾಗ ।
ಏನು ಹೇಳಲಿ ಆ ಸುಖದ ಸೌಭಾಗ್ಯ । ಪರಮ ಸದ್ಭಾವ ಪಡೆದೀತು ॥ 41

ಇಂಥ ನನ್ನ ತನ ಪಡೆದ ಮೇಲೆ । ವೈರಭಾವವದಿನ್ನಾರ ಮೇಲೆ ।
ನನ್ಹೊರತು ಬೇರೆ ಸ್ಥಳವಿಲ್ಲದ ಮೇಲೆ । ಯಾರಿಗೆ ಯಾಕೆ ಹೆದರುವದು ॥ 42

ದಾಮಾಜಿ ಮಂಗಳವೇಢೆಯಲ್ಲಿ । ಸಮರ್ಥ ರಾಮದಾಸರು ಸಜ್ಜನಗಡದಲ್ಲಿ ।
ನೃಸಿಂಹ ಸರಸ್ವತಿ ವಾಡಿಯಲ್ಲಿ । ಅಂತೆಯೇ ಶಿರಡಿಯಲ್ಲಿ ಸಾಯಿನಾಥರು ॥ 43

ಪರಮ ದುರ್ಘಟ ಮತ್ತು ದುಸ್ತರ । ಗೆದ್ದರಾರೋ ಇಂಥ ಈ ಸಂಸಾರ ।
ಶಾಂತಿಯೇ ಯಾರ ಅಲಂಕಾರ । ಜ್ಞಾನ ಭಂಡಾರವೇ ಮೂರ್ತಿವೆತ್ತ ॥ 44

ವೈಷ್ಣವರಿಗಿದು ತವರುಮನೆ । ಉದಾರರಲೂ ಉದಾರನಿವನೇ ।
ಪರಮಾರ್ಥ ಕರ್ಣನ ಅವತಾರನು । ಎಲ್ಲದರ ಸಾರವೇ ಈ ಸಾಯಿ ॥ 45

ನಾಶವಂತವಲ್ಲ ಅವರ ಪ್ರೀತಿ । ಆತ್ಮ ಸ್ವರೂಪದಲಿ ತೊಡಗಿದೆ ವೃತ್ತಿ ।
ಲಕ್ಷ ಒಂದೇ ಪರಮ ಪ್ರಾಪ್ತಿ । ಆ ಸ್ಥಿತಿಯನೆಂತು ವರ್ಣಿಸಲಿ ॥ 46

ಐಹಿಕದ್ದಿಲ್ಲ ಉತ್ಕರ್ಷಾಪಕರ್ಷ । ಆಮುತ್ರಿಕದ್ದಿಲ್ಲ ಹರ್ಷಾಮರ್ಷ ।
ಅಂತರಂಗ ನಿರ್ಮಲವೆಂತೋ ಆದರ್ಶ । ವಾಚೆಯು ಅಮೃತವ ವರ್ಷಿಸುವದು ॥47

ರಾಜಾರಂಕ ದರಿದ್ರರು ದೀನ । ಅವರ ದೃಷ್ಟಿಯಲಿ ಸರಿಸಮಾನ ।
ತನಗೆ ಗೊತ್ತಿಲ್ಲ ಮಾನಪಮಾನ । ಸರ್ವ ಭೂತಗಳಲಿ ತುಂಬಿರುವ ಭಗವಾನ ॥ 48

ಜನರೊಡನೆ ಆಡುವರು ನಡೆಯುವರು । ಬಯಲಾಟದಲಿ ಕುಣಿತವನ್ನೂ ನೋಡುವರು ।
ಗಝಲಗಾಯನಗಳನು ಕೇಳಿ ನಲಿಯುವರು । ಆದರೂ ಸಮಾಧಿಗಂತೂ ಭಂಗವಿಲ್ಲ ॥ 49

ಅಲ್ಲಾನಾಮದ್ದೇ ಯಾರಿಗೆ ಮುದ್ರೆ । ಜಗವೆಚ್ಚರಿದ್ದಾಗ ಮಾಡುವವನು ನಿದ್ರೆ ।
ಎಚ್ಚರಾಗುವ ಜಗ ಮಾಡಿದಾಗ ನಿದ್ರೆ । ಸಮುದ್ರದಂತೆ ಶಾಂತಂತರಂಗ ॥50

ಆಶ್ರಯ ನಿಶ್ಚಯ ಒಂದೂ ತಿಳಿಯದು । ನಿಶ್ಚಿತ ಕರ್ಮವು ಒಂದೂ ಇರದು ।
ಬಹುಶಃ ಕುಳಿತ ಸ್ಥಳವೂ ಬದಲಾಗದು । ಆದರೂ ವ್ಯವಹಾರಗಳನೆಲ್ಲ ಅರಿತಿರುವನು ॥ 51

ದರಬಾರದಂತೆ ಹೊರಗಿನ ಶಿಸ್ತು । ಕಥೆಗಳ ಹೇಳುವ ಮುನ್ನೂರರವತ್ತು ।
ಇದು ಎಲ್ಲ ನಿತ್ಯ ನಡೆಯುತಿತ್ತು । ಆದರೆ ಮೌನದ ಗಂಟನು ಬಿಚ್ಚನು ॥ 52

ಗೋಡೆಗೆ ಆತು ನಿಲ್ಲುವರು । ಮುಂಜಾನೆ ಮಧ್ಯಾಹ್ನ ಹೊರಗೆ ಹೋಗುವರು ।
ಲೇಂಡಿಗೆ ಇಲ್ಲವೇ ಚಾವಡಿಗೆ ಹೋಗುವರು । ಆದರೆ ಆತ್ಮಸ್ಥಿತಿ ಮಾತ್ರ ಅಖಂಡ ॥ 53

ಗೊತ್ತಿಲ್ಲ ಯಾವ ಜನ್ಮಾಂತರದಲಿ । ಯಾವ ಪ್ರಸಂಗ,ಯಾವ ಕಾಲದಲಿ ।
ತಪವನಾಚರಿಸಿದ್ದೆ ಯಾವ ರೀತಿಯಲಿ । ಸಾಯಿಯು ಎನ್ನ ಉಡಿಯಲಿ ತೆಗೆದುಕೊಂಡರು ॥ 54

ಇದಕೆನ್ನಬೇಕೆ ತಪದಫಲ । ನಾನಂತೂ ಜನ್ಮದಿಂದಲೇ ಬಲ ।
ಸಾಯಿಯೇ ಸ್ವಯಂ ದೀನವತ್ಸಲ । ಈ ನಿಶ್ಚಲ ಕೃಪೆ ಅವರದು ॥ 55

ಸಿದ್ಧಕೋಟಿಗಳಲ್ಲೇ ಇವರ ಜನನವಾದರೂ । ಸಾಧಕರಂತೆ ಅವರು ನಡೆದುಕೊಳ್ಳುವರು ।
ವೃತ್ತಿಯು ಅತಿ ಲೀನ ನಿರಭಿಮಾನಿಗಳವರು । ಎಲ್ಲರ ಮನ ಕಾಯುವರು ॥ 56

ಪೈಠಣವನು ಹೇಗೆ ನಾಥರು । ಅಂತೆಯೇ ಆಳಂದಿಯ ಜ್ಞಾನದೇವರು ।
ಅದರಂತೆ ಶಿರಡಿಯನು ಸಾಯಿಯವರು । ಮಹಿಮಾಸಂಪನ್ನ ಮಾಡಿದರು ॥ 57

ಧನ್ಯ ಶಿರಡಿಯ ತೃಣ ಪಾಷಾಣ । ಅನಾಯಾಸದಲಿ ಯಾರಿಗೆ ಅನುದಿನ ।
ಸಿಕ್ಕಿತು ಬಾಬಾರ ಚರಣ ಚುಂಬನ । ಪದರಜಧಾರಣೆ ಮಸ್ತಕದಿ ॥ 58

ಶಿರಡಿಯೇ ನಮಗೆ ಪಂಢರಪುರ । ಶಿರಡಿಯೆ ಜಗನ್ನಾಥ ದ್ವಾರಕಾನಗರ ।
ಶಿರಡಿಯೇ ಗಯಾ-ಕಾಶಿ-ವಿಶ್ವೇಶ್ವರ । ರಾಮೇಶ್ವರವೂ ಶಿರಡಿಯೇ ॥ 59

ಶಿರಡಿಯೇ ನಮಗೆ ಬದರಿ ಕೇದಾರ । ಶಿರಡಿಯೇ ನಾಶಿಕ-ತ್ರ್ಯಂಬಕೇಶ್ವರ ।
ಶಿರಡಿಯೇ ಉಜ್ಜಯಿನಿ ಮಹಾಂಕಾಳೇಶ್ವರ । ಶಿರಡಿಯೇ ಮಹಾಬಳೇಶ್ವರ ಗೋಕರ್ಣ ॥ 60

ಶಿರಡಿಯಲಿ ಸಾಯಿಯ ಸಮಾಗಮ । ನಮಗದೇ ನಿಗಮಾಗಮ ।
ಅವನೇ ಸರ್ವಸಂಸಾರೋಪಶಮ । ಅತ್ಯಂತ ಸುಗಮ ಪರಮಾರ್ಥ ಅವನೇ ॥ 61

ಸಮರ್ಥ ಸಾಯಿಯವರ ದರ್ಶನ । ಅದರಿಂದಲೇ ನಮಗೆ ಯೋಗಸಾಧನ ।
ಅವರೊಡನೆ ಮಾಡಲು ಸಂಭಾಷಣ । ಪಾಪಗಳ ಕ್ಷಾಲನವಾಗುವದು ॥ 62

ಅವರ ಚರಣಸಂವಾಹನ । ಅದೇ ನಮಗೆ ತ್ರಿವೇಣಿ ಸ್ನಾನ ।
ಅವರ ಚರಣತೀರ್ಥ ಸೇವನ । ಅದೇ ವಾಸನೆಗಳ ನಿರ್ಮೂಲನೆ ॥ 63

ಅವರು ಇತ್ತ ಆಜ್ಞಾಪನ । ಅದೇ ನಮಗೆ ವೇದ ವಚನ ।
ಅವರ ಉದಿಪ್ರಸಾದಗಳ ಸೇವನ । ಸರ್ವಾರ್ಥದಲಿ ಪುಣ್ಯಪಾವನವು ॥ 64

ಸಾಯಿಯೇ ನಮ್ಮ ಪರಬ್ರಹ್ಮ । ಸಾಯಿಯೇ ನಮ್ಮ ಪರಮಾರ್ಥ ಪರಮ ।
ಸಾಯಿಯೇ ಶ್ರೀಕೃಷ್ಣ ಶ್ರೀರಾಮ । ನಿಜಾರಾಮರು ಶ್ರೀಸಾಯಿ ॥ 65

ಸಾಯಿ ಸ್ವತಃ ದ್ವಂದ್ವಾತೀತರು । ಎಂದಿಗೂ ಇಲ್ಲ ಉದ್ವಿಗ್ನ ಅಥವಾ ಉಲ್ಲಸಿತರು ।
ಸದೈವ ನಿಜಸ್ವರೂಪದಿ ಸ್ಥಿತರು । ಯಾವಾಗಲೂ ಸನ್ಮಾತ್ರರು ॥ 66

ಶಿರಡಿಯು ಕೇವಲ ಕೇಂದ್ರ ಸ್ಥಾನ । ಬಾಬಾರ ಕ್ಷೇತ್ರವದು ಅತಿ ವಿಸ್ತೀರ್ಣ ।
ಉತ್ತರ ದಕ್ಷಿಣ ಹಿಂದುಸ್ತಾನ । ದೂರ ದೂರದವರೆಗೆ ಎಷ್ಟೋ ॥ 67

ಸಾಯಿಯ ಸಮಾಧಿ ಶಿರಡಿಯಲಿ । ಎಲ್ಲ ಸಂತರ ವಾಸವಿರುವದಿಲ್ಲಿ ।
ಯಾವ ಮಾರ್ಗದಿ ನಡೆಯುತ ಪ್ರತಿ ಪದದಲಿ । ಜೀವನದ ಗಂಟು ಬಿಚ್ಚುವದು ॥68

ಕೇವಲ ಸಮಾಧಿ ದರ್ಶನದಿಂದ । ಸಾರ್ಥಕ ಜನ್ಮದ್ದಾಗುವದು ಅದರಿಂದ ।
ಸೇವೆಯಲಿ ಜೀವನದ ಸವಿಸುವುದರಿಂದ । ಎಣೆಯೇ ಇಲ್ಲ ಆ ಭಾಗ್ಯಕ್ಕೆ ॥69

ಮಶೀದೆ ಮತ್ತು ವಾಡೆಗಳ ಮೇಲೂ । ಅಂದವಾದ ನಿಶಾನೆಗಳ ಸಾಲು ।
ಆಕಾಶದೆತ್ತರಕೆ ಹಾರಾಡುತಿರಲು । ಭಕ್ತರ ಕೈ ಬೀಸಿ ಕರೆಯುವವು ॥ 70

ಬಾಬಾ ಪ್ರಸಿದ್ಧ ಕೀರ್ತಿ ಮಹಂತರು । ಮಹತಿ ಹರಡಿದೆ ಊರು ಊರು ।
ಶ್ರದ್ಧೆಯಲಿ ಹರಕೆಯ ಹೊರುವರು । ಕೆಲವರು ದರ್ಶನ ಮಾತ್ರದಿಂದಲೆ ಈಪ್ಸಿತ ಪಡೆವರು ॥71

ಯಾರದು ಏನೇ ಇರಲಿ ಮನೋಗತ । ಶುದ್ಧ ಬುದ್ಧಿ ಇರಲಿ ಇಲ್ಲವೇ ಕುತ್ಸಿತ ।
ದರ್ಶನ ಮಾತ್ರದಿಂದ ತಣಿಯುವದು ಚಿತ್ತ । ಜನರು ವಿಸ್ಮಿತರಾಗುವರು ಮನದಲಿ ॥ 72

ವಿಠ್ಠಲ ರುಖುಮಾಯಿ ಫಂಡರಿಯಲ್ಲಿ । ಆನಂದವಾಗುವದಿವರ ದರ್ಶನದಲ್ಲಿ ।
ಅದೇ ವಿಠ್ಠಲ ದರ್ಶನವ ಶಿರಡಿಯಲ್ಲಿ । ಬಾಬಾ ಸಾಯಿಯವರು ಕೊಡುವರು ॥ 73

ಯಾರಿಗೆ ಅನಿಸೀತಿದು ಅತಿಶಯೋಕ್ತಿ । ಕೇಳಿರಿ ಗೌಳಿಬುವಾ ಉಕ್ತಿ ।
ಅವನಿಗೆ ದೃಢ ವಿಠ್ಠಲನ ಭಕ್ತಿ । ಸಂಶಯ ನಿವೃತ್ತಿ ಆದೀತು ॥ 74

ಪಂಡರಪುರದ ವಾರಕರಿಯವರು । ಪ್ರತಿ ವರುಷ ಪಂಢರಪುರಕೆ ಹೋಗುವರು ।
ಅಂತೆಯೇ ಶಿರಡಿಗೂ ಅವರು ಹೋಗುವರು । ಬಾಬಾರ ಪ್ರೀತಿಯು ಬಹಳವರಿಗೆ ॥ 75

ಸಂಗಡ ಒಂದು ಗರ್ದಭ । ಜೊತೆಗೆ ಸಂಗಡಿಗ ಶಿಷ್ಯನೊಬ್ಬ ।
ಜಿವ್ಹೆಯಲಿ 'ರಾಮಕೃಷ್ಣಹರಿ' ಎಂಬ । ಗಜರ ನಿರಂತರ ನಡೆದಿತ್ತು ॥ 76

ವಯಸ್ಸು ತೊಂಭತ್ತೈದು ವರ್ಷ । ಚಾತುರ್ಮಾಸದಲಿ ಗಂಗಾತಟನಿವಾಸ ।
ಪಂಢರಪುರದಲಿ ಎಂಟು ಮಾಸ । ವರ್ಷಕ್ಕೊಂದು ಸಲ ಬಾಬಾರ ಭೆಟ್ಟಿ ॥ 77

ಬಾಬಾರನ್ನು ನೋಡುತ್ತ ನೋಡುತ್ತ । ಅನ್ನ ಬೇಕಿವರು ಆಗಿ ವಿನೀತ ।
ಇವನೇ ನಿಜದಲಿ ಪಂಢರಿನಾಥ । ಅನಾಥನಾಥನವ ದಯಾಳು ॥ 78

ರೇಶಿಮೆ ಅಂಚಿನ ಪಂಚೆ ಉಟ್ಟು । ಯಾರು ತಾನೇ ಸಂತರಾಗುವದುಂಟು ।
ಎಲುವುಗಳ ಸವೆಸಬೇಕು ಕಷ್ಟ ಬಟ್ಟು। ರಕ್ತವೇ ಕರಗಿಸಿ ನೀರಾಗಿಸಬೇಕು ॥ 79

ಸುಲಭವಾಗಿರುವದೇ ದೇವರಾಗುವದು । ಇವನೇ ಪಂಢರಿನಾಥ ಪ್ರತ್ಯಕ್ಷನಹುದು ।
ಜಗವೇ ಹುಚ್ಚವಯ್ಯಾ ದೃಢಭಾವ ಹಿಡಿದು । ಕಾಣಬೇಕು ನಾವು ದೇವರನು ॥ 80

ಪಂಢರಿನಾಥನಲಿ ಯಾವನಿಗೆ ಭಕ್ತಿ । ಅಂಥ ಭಗವದ್ಭಕ್ತನದೇ ಈ ಉಕ್ತಿ ।
ನಾ ಪಾಮರನದೆಷ್ಟು ಅನುಭವದ ಮಿತಿ । ಶ್ರೋತೃಗಳೇ ಪ್ರತೀತಿ ನೋಡಬೇಕು ॥ 81

ಬಹು ಪ್ರೀತಿಯದು ನಾಮ ಸ್ಮರಣೆಯಲ್ಲಿ । 'ಅಲ್ಲಾ-ಮಾಲಿಕ್' ಅಖಂಡ ಮುಖದಲಿ ।
ತಮ್ಮೆದುರು ಹಗಲು ರಾತ್ರಿಗಳಲಿ । ನಾಮ ಸಪ್ತಾಹ ಮಾಡಿಸುವರು ॥ 82

ದಾಸಗಣುವಿಗೊಮ್ಮೆ ಆಜ್ಞೆ ಇತ್ತರು । ನಾಮ ಸಪ್ತಾಹ ಆಗಲೆಂದರು ।
ದಾಸಗಣು ಅದಕೆಂದರು । ವಿಠ್ಠಲನು ಪ್ರತ್ಯಕ್ಷನಾಗಬೇಕು ॥ 83

ಬಾಬಾ ಎದಿಗೆ ಕೈ ಹಚ್ಚಿಕೊಂಡು । ಹೇಳಿದರು ದಾಸಗಣೂನನು ಕಂಡು ।
ಹೌದ್ಹದು ವಿಠ್ಠಲ ಮೂರ್ತಿ ಪ್ರಕಟವಾಗುವದು । ಮಾತ್ರ ಭಕ್ತನು ಭಾವಾರ್ಥಿ ಇರಬೇಕು ॥ 84

ಡಾಕುರನಾಥನ ಡಂಕಪುರಿ । ಅಥವಾ ವಿಠ್ಠಲರಾಯನ ಪಂಢರಿ ।
ಅದೇ ಈ ರಣಛೋಡನ ದ್ವಾರಕಾನಗರಿ । ಅವನ ನೋಡಲು ದೂರ ಹೋಗಬೇಕಿಲ್ಲ ॥ 85

ವಿಠ್ಠಲನೇನು ಏಕಾಂತದಿಂದೆದ್ದು । ಬೇರೊಬ್ಬನಾಗಿ ನಿಲ್ಲುವನಿಲ್ಲ ಬಂದು ।
ಭಕ್ತನ ಪ್ರೇಮವಿದ್ದರೆ ಉತ್ಕಟವಾದದ್ದು । ಇಲ್ಲಿಯೂ ತಾ ಪ್ರಕಟನಾದಾನು ॥ 86

ತಂದೆಯ ಸೇವೆಯನು ಮಾಡಿ ಪುಂಡಲೀಕನು । ವಶಪಡಿಸಿಕೊಂಡನು ಆ ದೇವನನ್ನು ।
ಇಟ್ಟಂಗಿಯ ಮೇಲೆ ವಿಶ್ರಾಂತಿ ಪಡೆದನು । ಪುಂಡಲೀಕನ ಆ ಭಕ್ತಿ ಭಾವಕ್ಕೆ ॥ 87

ಇರಲಿ, ಸಪ್ತಾಹ ಸಮಾಪ್ತಿಯಾಯಿತು । ಎನ್ನುವರು ಭಕ್ತಗಣುವಿಗೆ ಆಯಿತು ।
ವಿಠ್ಠಲ ಮೂರ್ತಿಯ ದರ್ಶನವಿಂತು । ನೋಡಿರಿ ಬಾಬಾರ ಪ್ರಚೀತಿಯ ॥ 88

ಒಮ್ಮೆ ಕಾಕಾ ಸಾಹೇಬ ದೀಕ್ಷಿತರು । ನಿಯಮದಂತೆ ಪ್ರಾತಃಸ್ನಾನ ಮುಗಿಸಿದರು ।
ಆಸನಸ್ಥರಾಗಿ ಧ್ಯಾನಕ್ಕೆ ಕುಳಿತರು । ವಿಠ್ಠಲನ ದರ್ಶನವಾಯಿತವರಿಗಾಗ ॥ 89

ಆಮೇಲೆ ಬಾಬಾರ ದರ್ಶನಕೆ ಹೋಗಲು । ಅಚ್ಚರಿಯಾಯಿತು ಬಾಬಾ ಕೇಳಲು ।
ವಿಠ್ಠಲ ಪಾಟೀಲ್‌ನಿನ್ನ ನೋಡಲು । ಬಂದಿದ್ದನಲ್ಲವೆ? ಭೆಟ್ಟಿಯಾಯಿತೇ ಅವನದು ॥ 90

ಬಹಳ ಚಂಚಲನಿರುವ ಈ ವಿಠ್ಠಲ । ಗೂಟಕ್ಕೆ ಕಟ್ಟಿ ಮಾಡುವನು ಅಚಲ ।
ಕಣ್ಣು ತಪ್ಪಿಸಿ ಓಡಿಹೋದಾನು ಕಳ್ಳ । ಒಂದಿಷ್ಟು ದುರ್ಲಕ್ಷವಾಗಲು ॥ 91

ಈ ಪ್ರಕಾರ ಪ್ರಾತಃಕಾಲದ್ದಾಯಿತು । ಆಮೇಲೆ ಮಧ್ಯಾನ್ಹವಾಯಿತು ।
ಆಗ ಇನ್ನೊಂದು ಪ್ರತ್ಯಂತರ ಬಂತು । ವಿಠ್ಠಲ ದರ್ಶನದ ಕೌತುಕವಿದು ॥92

ಪಂಢರಪುರದ ವಿಠ್ಠಲನದು । ಛಾಯಾಚಿತ್ರಗಳನಿಪ್ಪತ್ತೈದು ।
ಪರಸ್ಥಳದವನೊಬ್ಬ ಮಾರುವದಕೆಂದು । ತೆಗೆದುಕೊಂಡಲ್ಲಿ ಬಂದನು ॥ 93

ಬೆಳಿಗ್ಗೆ ಧ್ಯಾನದಲ್ಲಿ ಕಂಡ ಮೂರ್ತಿ । ಅದರದೇ ಈ ಪ್ರತಿಕೃತಿ ।
ನೋಡಲು ದೀಕ್ಷಿತರಿಗೆ ಆಶ್ಚರ್ಯಅತಿ । ಬಾಬಾರ ಮಾತು ನೆನಪಾಯಿತು ॥ 94

ದೀಕ್ಷಿತರು ಅತಿ ಪ್ರೀತಿ ಬಟ್ಟು । ಮಾರುವವನಿಗೆ ದುಡ್ಡು ಕೊಟ್ಟು ।
ಚಿತ್ರವನೊಂದು ಕೊಂಡು ಅದನಿಟ್ಟು । ಭಾವದಿ ಪೂಜೆಯ ಮಾಡಲು ॥ 95

ವಿಠ್ಠಲ ಪೂಜೆಯಲಿ ಸಾಯಿಗೆ ಆದರ । ಅದರ ಬಗ್ಗೆ ಇನ್ನೊಂದು ಕಥೆ ಸುಂದರ ।
ಕೇಳಲು ಶ್ರವಣ ಮನೋಹರ । ಆನಂದ ನಿರ್ಭರರಾಗಿ ನೀವು ॥ 96

ಭಗವಂತರಾವ ಕ್ಷೀರಸಾಗರ । ತಂದೆ ವಿಠ್ಠಲಭಕ್ತವರ ।
ಪಂಢರಪುರಕ್ಕೆ ವಾರಂ ವಾರ । ಹೋಗುತ್ತಿದ್ದರು ನೇಮದಲಿ ॥ 97

ಮನೆಯಲಿ ವಿಠ್ಠಲ ಮೂರ್ತಿ ಇತ್ತು । ತಂದೆಯವರಿಗೆ ಪಂಚತ್ವವಾಯಿತು ।
ಪೂಜೆನೈವೇದ್ಯಗಳಾಗದಾಯಿತು । ಶ್ರಾದ್ಧವನೂ ಕೂಡ ಮಾಡಲಿಲ್ಲ ॥ 98

ವಾರಿಯದಂತೂ ನೆನಪಿಲ್ಲದಿರಲು । ಭಗವಂತರಾವ ಶಿರಡಿಗೆ ಬರಲು ।
ಬಾಬಾರಿಗೆ ಅವನ ನೆನಪು ಬರಲು । ನುಡಿದರು ಅವನಿದ್ದ ನನ್ನ ಗೆಳೆಯ ॥99

"ಇವನೆನ್ನ ಆ ಸ್ನೇಹಿತನ ಮಗನೆಂದೇ । ಇವನನು ಇಲ್ಲಿಗೆ ಎಳೆದುತಂದೆ ।
ಎಂದಿಗೂ ಇವ ನೈವೇದ್ಯ ಮಾಡದೇ । ಉಪವಾಸ ಎನ್ನ ಇಟ್ಟಿರುವನು ॥ 100

ಉಪವಾಸ ಇರುವ ವಿಠ್ಠಲನ । ಅದಕೆ ಶಿರಡಿಗೆ ಕರೆತಂದೆನಿವನ ।
ಇನ್ನದರ ಸ್ಮರಣೆಯನಿತ್ತು ಅವನ । ಪೂಜೆಯ ಮಾಡಲು ಹಚ್ಚುವೆ" ॥ 101

ಒಮ್ಮೆ ಪರ್ವವಿಶೇಷವೆಂದು । ಪ್ರಯಾಗ ತೀರ್ಥದಲಿ ಸ್ನಾನ ಮಾಡಬೇಕೆಂದು ।
ದಾಸಗಣೂರ ಮನಸಿನಲಿ ಬಂದು । ಅನುಜ್ಞೆಯ ಪಡೆಯಲು ಬಂದರು॥102

ಇತ್ತರರು ಬಾಬಾ ಪ್ರತ್ಯುತ್ತರ । ಅದಕೆ ಹೋಗಬೇಕಾಗಿಲ್ಲ ದೂರ ।
ಇದೇ ತಮ್ಮ ಪ್ರಯಾಗವೆಂಬುದರ । ದೃಢ ವಿಶ್ವಾಸ ಮನದಲಿರಲಿ ॥ 103

ನಿಜದಲೂ ಹೇಳಲೇನೀ ಕೌತುಕ । ಬಾಬಾರ ಚರಣದಲಿಡಲು ಮಸ್ತಕ ।
ಎರಡೂ ಹೆಬ್ಬೆರಳಲಿಳಿಯಿತು ಉದಕ । ಗಂಗೆ ಯಮುನೆಯರ ಜಲಬಂತು ಹರಿದು ॥104

ಬಾಬಾರ ಈ ಚಮತ್ಕಾರವನ್ನು ಕಂಡು । ದಾಸಗಣೂರ ಗಂಟಲು ಕಟ್ಟಿ ತಂದು ।
ಬಾಬಾರ ಉಪಕಾರವೆಷ್ಟು ಎಂದು । ಕಣ್ಣಲ್ಲಿ ನೀರೂರಿತು ಅವರಿಗೆ ॥ 105

ವೈಖರಿಗೆ ಸ್ಫೂರ್ತಿ ಬಂದು । ಪ್ರೀತಿಯಿಂದ ಮನತುಂಬಿ ಬಂದು ।
ಅಗಾಧಶಕ್ತಿ ಅಘಟಿತ ಲೀಲೆಯದು । ಇದನು ವರ್ಣಿಸಿ ಸಮಾಧಾನಗೊಂಡರು ॥106

ದಾಸಗಣೂರ ಈ ಮಧುರ ಪದ್ಯವನು । ಕೇಳುವ ಶ್ರೋತೃಗಳ ಇಚ್ಛೆಯನು ।
ಅದಕೆ ಈ ಪ್ರಸಾದಿಕ ಕವಿತೆಯನು । ಇಲ್ಲಿ ಬರೆದು ಅವರಿಚ್ಛೆ ಪೂರೈಸುವೆ ॥ 107

## ॥ ಪದ ॥

ಅಗಾಧಶಕ್ತಿಯು ಅಘಟಿತ ಲೀಲೆಯು ನಿನ್ನದು ಗುರುರಾಯಾ ।
ಜಡಜೀವವನೀ ಭವದಾಟಿಸಲು ನೌಕೆಯು ನೀ ಸದಯಾ ॥ಪ॥

ವೇಣೀಮಾಧವನಾಗಿ ಪಾದದಲಿ ಪ್ರಯಾಗ ತೋರಿದೆ ।
ಹೆಬ್ಬೆರಳೆರಡಲಿ ಗಂಗೆಯಮುನೆಯರ ಪ್ರವಾಹವನೆ ಹರಿಸಿದೆ ॥1॥

ಕಮಲೋದ್ಭವ, ಕಮಲಾವರ, ಶಿವಹರ ತ್ರಿಗುಣಾತ್ಮಕನಾಗಿ ।
ಸಾಯಿ ಸಮರ್ಥನೇ ಭೂಮಿಯ ಮೇಲೆ ಚರಿಸುವೆ ನೀನಾಗಿ ॥2॥

ಪ್ರಹರ ಸಮಯದಿ ಬ್ರಹ್ಮನಂತೆ ನೀ ಜ್ಞಾನ ಮುಖದಿ ನುಡಿವೆ ।
ತಮೋಗುಣದ ಆ ರುದ್ರರೂಪವನು ತೋರುವೆ ನಡುನಡುವೆ ॥3॥

ಯಾವಾಗಾದರೂ ಕೃಷ್ಣನಂತೆ ನೀ ಬಾಲಲೀಲೆ ತೋರುವೆ ।
ಭಕ್ತ ಹೃದಯವನೆ ಮಾಡಿ ಸರೋವರ ಹಂಸನು ನೀನಾಗುವೆ ॥4॥

ಯವನನೆನ್ನಲು ನಿನಗಿರುವದು ಶ್ರೀಗಂಧದಲಿ ಪ್ರೀತಿ ।
ಹಿಂದುವೆನ್ನಲು ಸದ್ದೈವ ನಿನ್ನದು ಮಶೀದಿಯಲಿ ವಸತಿ ॥5॥

ಧನಿಕನೆನುವೆನಾದರೆ ದಿನದಿನವೂ ಭಿಕ್ಷಾಟನೆಗೈವೆ ।
ಫಕೀರನೆಂದರೂ ಕುಬೇರನನು ನೀ ದಾನದಿ ನಾಚಿಸುವೆ ॥6॥

ನಿನ್ನ ವಸತಿಗೆ ಮಶೀದೆಯನಲಲ್ಲಿರುವದು ತೇಜಾಗ್ನಿ ।
ಉದಿಯನು ಜನರೆಲಿ ಹಂಚಲು ಇಡುವೆ ಪ್ರಜ್ವಲಿತ ಸದಾ ಧುನಿ ॥7॥

ಬೆಳಗಿನಿಂದ ಸಾಬಡೆ ಭಕ್ತನು ನಿನ್ನ ಪೂಜೆಯ ಮಾಡುವ ।
ನೆತ್ತಿಯ ಮೇಲೆ ದಿನಕರ ಬರಲು ಆರತಿಯನು ಬೆಳಗುವ ॥8॥

ನಾಲ್ಕು ದಿಕ್ಕಿನಲು ಸೇವಕರಂದದಿ ಭಕ್ತರು ನಿಂತಿಹರು ।
ಛತ್ರ ಹಿಡಿದು ನಿಂತಿರುವರು ನಿನಗೆ ಚಾಮರ ಬೀಸುವರು ॥9॥

ಕಹಳೆ ತುತೂರಿ ಬಜಂತ್ರಿ ಮತ್ತು ಗಣಗಣಿಸುವ ಗಂಟೆ ।
ವಂದಿಮಾಗಧರು ಡೌಲಲಿನಿಂತರು ಧರಿಸಿ ಬಿಲ್ಲೆ ಪಟ್ಟೆ ॥10॥

ಆತ್ರೆಯದೇವರ ಇಂಥ ಲೀಲೆಗಳ ದಿನವೂ ತೋರುವರಿಲ್ಲಿ ।
ಬಾಬಾರವರೇ ಕಂಡು ಬರುವವು ನಮ್ಮ ಪ್ರತೀತಿಯಲಿ ॥11॥

ಆರತಿ ಸಮಯದಿ ದಿವ್ಯಾಸನದಲಿ ಕಾಣುವೆ ಕಮಲಾವರ ।
ಸಾಯಂಕಾಲದಿ ಧುನಿಯ ಎದುರಿನಲಿ ಆಗುವೆ ಮದನಹರ ॥12॥

ಹೀಗಿರುತಿರಲೂ ಸುಮ್ಮನೆ ಮನ್ಮನ ತಿರುಗುವದೆಲ್ಲೆಲ್ಲಿ ।
ಈ ಚಂಚಲ ಮನವನು ಸ್ಥಿರವಾಗಿಸು ಇದೇ ವಿನಂತಿ ನಿನ್ನಲ್ಲಿ ॥13॥

ಅಧಮಾಧಮ ನಾ ಮಹಾಪಾತಕಿ ಶರಣಾಗತನಾದೆ ।
ಗುರುರಾಯಾ ನೀ ದಾಸಗಣುವಿನ ತ್ರಿತಾಪ ಹರಿಸೆಂದೆ ॥14॥

ಅಘೋರ ಪಾಪಗಳ ತೊಳೆಯಲು । ಜನರುಗಂಗೆಯ ಹತ್ತಿರ ಬರಲು ।
ಸಂತ ಚರಣದಿ ಗಂಗೆ ಬರುವಳು । ನಿಜ ಪಾಪಕಳಕೊಳ್ಳಲು ॥108

ಬಿಟ್ಟು ಪವಿತ್ರವಾದ ಚರಣಗಳ । ಬೇಕಿಲ್ಲ ಯಾತ್ರೆ ಗೋದೆಗಂಗೆಯವರುಗಳ ।
ಭಾವದಿ ಕೇಳಲೀ ಸಂತಸ್ತೋತ್ರಗಳ । ಸಾಯಿಯ ರುಚಿರ ಚರಿತ್ರೆಯನು ॥ 109

ಗೋಣಾಯಿಗೆ ಭೀಮರಥಿಯಲ್ಲಿ । ತಮಾಲನಿಗೆ ಭಾಗೀರಥಿಯಲ್ಲಿ ।
ನಾಮದೇವ ಮತ್ತು ಕಬೀರರು ಶಿಂಪಿಯಲ್ಲಿ । ಸುದೈವದಿ ಪ್ರಾಪ್ತರಾದರು ॥ 110

ಅದರಂತೆ ಶ್ರೀಸಾಯಿನಾಥರು । ಹದಿನಾರು ವರುಷದ ಎಳೆ ಹರೆಯದವರು ।
ಭಕ್ತರಿಗಾಗಿ ಮೊದಲು ಪ್ರಕಟರಾದರು । ಶಿರಡಿಯಲಿ ಬೇವಿನ ಮರದಡಿ ॥ 111

ಪ್ರಕಟರಾದಾಗಲೇ ಬ್ರಹ್ಮಜ್ಞಾನಿಗಳು । ವಿಷಯ ವಾಸನೆ ಇಲ್ಲ ಸ್ವಪ್ನದಲ್ಲೂ ।
ಮಾಯೆಯ ಒದ್ದು ದೂರವಿರಿಸಲು । ಮುಕ್ತಿ ಚರಣದಿ ವಿನೀತವಾಯಿತು ॥ 112

ಜನ್ಮ ಬಾಬಾರದು ಯಾವ ದೇಶದಲಿ । ಇಲ್ಲವೇ ಯಾವ ಪವಿತ್ರ ವಂಶದಲಿ ।
ಯಾವ ಮಾತಾಪಿತರ ಅಂಕದಲ್ಲಿ । ಇದು ಯಾರಿಗೂ ಗೊತ್ತಿಲ್ಲ ॥ 113

ಅವರ ಪೂರ್ವಾವಸ್ಥೆಯನು ಅರಿಯರು ಯಾರೂ । ಮತ್ತೆ ಯಾರವರಿಗೆ ತಂದೆ ತಾಯಿಯರು ।
ಕೇಳಿ ಕೇಳಿ ದಣಿದರೆಲ್ಲರು । ಯಾರಿಗೆ ಏನು ತಿಳಿಯಲಿಲ್ಲ ॥ 114

ಬಿಟ್ಟು ಮಾತಾಪಿತರ ಮತ್ತು ಆಪ್ತಜನ । ಸಂಬಂಧಿಕರು ಮತ್ತು ಜಾತಿಮತಗಳನ ।
ತ್ಯಜಿಸಿದ್ದನೆಲ್ಲ ಸಂಸಾರವನ್ನ । ಪ್ರಕಟನಾದನು ಶಿರಡಿಯಲಿ ಜನಹಿತಾರ್ಥ ॥ 115

ಶಿರಡಿಯಲ್ಲಿದ್ದ ವೃದ್ಧೆಯೊಬ್ಬಳು । ನಾನಾಚೋಸದಾರರ ತಾಯಿಯವಳು ।
ಪರಮ ಚಕಿತಳಾಗಿ ಹೇಳಿದಳು । ಬಾಬಾ ಸಾಯಿಯ ಚರಿತೆಯನು ॥ 116

ಎಂದಳು ಮೊದಲಲ್ಲಿ ಈ ಹುಡುಗ । ಬೆಳ್ಳಗೆ ತೆಳ್ಳಗೆ ಸುಂದರಾಂಗ ।
ಬೇವಿನ ಮರದಡಿಯಲಿ ಕುಳಿತಾಗ । ಮೊದಲು ದೃಷ್ಟಿಗೆ ಬಿದ್ದನು ॥ 117

ಸುಂದರ ಬಾಲ ರೂಪವ ನೋಡಿ । ಜನರಿಗೆ ಬಹು ವಿಸ್ಮಯ ಮನದಿ ।
ಎಳೆಯವಯದಲಿ ಕಟುತರ ತಪದಿ । ಚಳಿಬಿಸಿಲುಗಳೆಲ್ಲ ಒಂದೇ ॥ 118

ವಿಚಿತ್ರ ಇರುವಿದು ಎಳೆಯ ವಯಸ್ಸಿಗೆ । ಆಶ್ಚರ್ಯವಾಯಿತೆಲ್ಲ ಗ್ರಾಮಸ್ಥರಿಗೆ ।
ಊರೂರಿಂದ ಜನರಿಲ್ಲಿಗೆ । ಬರುವರಿವನ ದರ್ಶನಕೆ ॥ 119

ಹಗಲು ಯಾರ ಜೊತೆಯಿಲ್ಲ । ರಾತ್ರಿಯಲಾರ ಭೀತಿಯಿಲ್ಲ ।
ಆಶ್ಚರ್ಯವಾಯಿತು ಜನಗಳಿಗೆಲ್ಲ । ಬಂತೆಲ್ಲಿಂದ ಈ ಬಾಲಮೂರ್ತಿ ॥ 120

ರೂಪರೇಖೆಗಳೆಲ್ಲ ಮುದ್ದಾಗಿರುವದು । ನೋಡಲು ಪ್ರೀತಿ ತುಂಬಿ ಬರುವದು ।
ದಿನರಾತ್ರಿ ಬೇವಿನ ಹತ್ತಿರ ಇರುವದು । ಯಾರ ಮನೆ ಬಾಗಿಲಿಗೆ ಹೋಗನು ॥ 121

ಎಲ್ಲರಿಗೂ ದೊಡ್ಡ ಆಶ್ಚರ್ಯವಿದು । ಹೀಗೆ ಹೇಗೆ ಈ ಬಾಲಕನಿರುವದು ।
ಮನೋಹರ ರೂಪ, ವಯ ಚಿಕ್ಕದು । ದಿನ ರಾತ್ರಿ ಬಯಲಲೇ ಇರುವನಿವ ॥ 122

ಹೊರನೋಟಕೆ ಕಾಣುವ ಚಿಕ್ಕವ । ಕೃತಿಯಿಂದ ಮಾತ್ರ ಹಿರಿಯರಿಗಿಂತ ಹಿರಿಯನಿವ ।
ವೈರಾಗ್ಯವೇ ಮೈವೆತ್ತಿರುವ । ಆಶ್ಚರ್ಯವೆಲ್ಲರಿಗಿದು ದೊಡ್ಡದು ॥ 123

ಒಂದು ದಿನ ವಿಚಿತ್ರ ನಡೆಯಿತು । ಖಂಡೋಬ ಕೆಲವರ ಮೈಯಲಿ ಬಂದು ।
ನಾಲ್ಕಾರು ಜನ ಹೂಂಕರಿಸತೊಡಗಿತು । ಜನರು ಪ್ರಶ್ನೆ ಕೇಳತೊಡಗಿದರು ॥ 124

ಇದು ಯಾವ ಭಾಗ್ಯವಂತರ ಮಗು । ಹೇಗೆ ಎಲ್ಲಿಂದ ಬಂದಿತು ಇಲ್ಲಿಯವರೆಗೂ ।
ತಿಳಿದಿದ್ದರೆ ಇದು ಖಂಡೋಬದೇವರಿಗೂ । ಹೇಳಲೆಂದು ಪ್ರಶ್ನೆ ಕೇಳಿದವನೊಬ್ಬ ॥125

ದೇವರೆಂದಿತು ಗುದ್ದಲಿ ತನ್ನಿರಿ । ನಾತೋರಿಸಿದಲ್ಲಿ ಅಗಿಯಿರಿ ।
ತೋರಿದ ಸ್ಥಳವನು ಈ ಸ್ಥಳದಲ್ಲಗಿಯಿರಿ । ಆಗ ಈ ಬಾಲನ ಗುರುತು ತಿಳಿದೀತು ॥126

ಆಗಲ್ಲಿಯೇ ಊರ ಮಗ್ಗುಲಲ್ಲಿ । ಅದೇ ಬೇವಿನ ಮರದಡಿಯಲಿ ।
ಹಣಿಯಲು ಗುದ್ದಲಿಯ ಮೇಲೆ ಗುದ್ದಲಿ । ಇಟ್ಟಂಗಿ ಆ ಸ್ಥಳದಲಿ ದೊರೆತವು ॥ 127

ಇಟ್ಟಂಗಿಯ ಥರ ಮುಗಿಯಲು । ಬೀಸುಕಲ್ಲಿನ ಪಾಳಿಯ ಸರಿಸಲು ।
ಭುಯಾರ ಬಂದು ಕಣ್ಣಿಗೆ ಬೀಳಲು । ಒಳಗೆ ನಾಲ್ಕು ಸಮಯಿಗಳು ಉರಿಯುತ್ತಿದ್ದವು ॥ 128

ಗಚ್ಚುಗಾರೆಯ ಆ ತಳಮನೆಯಲ್ಲೂ । ಗೋಮುಖ ಮಣೆ ಮತ್ತು ಜಪಮಾಲೆಗಳು ।
ದೇವನೆಂದ ಈತ ಹನ್ನೆರಡು ವರ್ಷ । ತಪವನೀ ಸ್ಥಳದಲಿ ಆಚರಿಸಿದ ॥ 129

ಜನರೆಲ್ಲ ಆಶ್ಚರ್ಯಪಟ್ಟರು । ಕೆದಕಿ ಕೆದಕಿ ಹುಡುಗನ ಕೇಳಿದರು ।
ಕಥೆ ಕಟ್ಟಿ ಹೇಳಿದನು ಏನಾದರೂ । ಅದು ವಿನೋದವೆಂಬಂತೆ ಅವನಿಗೆ ॥ 130

ಎಂದರು ಇದು ಎನ್ನ ಗುರುವಿನ ಸ್ಥಾನ । ಇದು ಅತಿ ಪವಿತ್ರ ನನ್ನ ವತನ ।
ಇದ್ದಂತೆಯೇ ಇಡಿರಿದ ಮಾಡಿ ಜೋಪಾನ । ಎನ್ನ ಸದ್ವಚನವಿದ ಮನ್ನಿಸಿರಿ ॥ 131

ಬಾಬಾ ಹೀಗೆ ನುಡಿದರು । ಎಂದು ಕೇಳಿದವರು ಹೇಳಿದರು ।
ಬಾಬಾ ಏನೇನೋ ಹೇಳಿದರು । ಎನಲು ನಾಲಿಗೆ ಹೇಗೆ ಒಪ್ಪಿತು ॥ 132

ಆಶ್ಚರ್ಯವೆನಿಸಿತು ನನ್ನದು ನನಗೇ । ಹೇಗೆ ಈ ತಿಳುವಳಿಕೆ ಬಾಬಾರ ಬಗ್ಗೆ ।
ಈಗ ತಿಳಿಯಿತು ಅದು ಏಕೆ ಹೀಗೆ । ಇರಬಹುದು ಸಹಜ ವಿನೋದವಿದು ॥ 133

ಬಾಬಾ ಮೊದಲೆ ವಿನೋದಪ್ರಿಯರು । ಅವರದೆ ಸ್ಥಾನವದು ಇರಬಹುದು ಇದ್ದರೂ ।
ಕಳೆಯುವದೇನು ಅದು ಗುರುವಿನದೆಂದರೂ । ಮಹತ್ವ ಕಡಿಮಯಾದೀತೇ ॥ 134

ಬಾಬಾರ ಆಜ್ಞೆಯ ಮನದಟ್ಟು । ಮೊದಲಿನಂತೆಯೇ ಇಟ್ಟಂಗಿ ಇಟ್ಟು ।
ನೆಲಮನೆಯನು ಮತ್ತೆ ಮುಚ್ಚಿ ಬಿಟ್ಟು । ಇದ್ದರು ಗುರುಸ್ಥಾನವದೆಂದು ತಿಳಿದು ॥ 135

ಅಶ್ವತ್ಥ ಇಲ್ಲವೇ ಔದುಂಬರವಿರುವಂತೆ । ಬಾಬಾರಿಗೆ ಈ ನಿಂಬ ವೃಕ್ಷ ಅದರಂತೆ ।
ಆ 'ಬೇವಿನಮರದ' ಮೇಲೆ ಬಹಳ ಮಮತೆ । ಅದನು ಬಹಳ ಆದರಿಸುವರು ॥ 136

ಮ್ಹಾಳಸಾಪತಿ ಮೊದಲಾದವರು । ಹಳೆಯ ಶಿರಡಿಯ ಗ್ರಾಮಸ್ಥ ಜನರು ।
ಬಾಬಾರ ಗುರುವಿನ ಸಮಾಧಿಸ್ಥಾನವೆಂದರು । ವಂದನವ ಮಾಡುವರು ಆದಕೆಲ್ಲರೂ ॥ 137

ಆ ಸಮಾಧಿಯ ಸನ್ನಿಧಿಯಲ್ಲಿ । ಹನ್ನೆರಡು ವರ್ಷ ಮೌನದಲ್ಲಿ ।
ಬಾಬಾ ಮಾಡಿಹರು ತಪಶ್ಚರ್ಯವನಿಲ್ಲಿ । ಪ್ರಸಿದ್ಧ ಜನರಲಿ ಈ ವಾರ್ತೆ ॥ 138

ಸಮಾಧಿ ಮತ್ತು ಆ ಬೇವಿನ ಮರ ಸಹಿತ । ಸುತ್ತುಮುತ್ತಲಿನ ಭೂಮಿಯಕೊಂಡುಕೊಳ್ಳುತ ।
ಸಾಠೆಸಾಹೇಬ ಬಾಬಾರ ಪರಮಭಕ್ತ । ನಾಲ್ಕು ಸಂಪಿನ ಇಮಾರತವ ಕಟ್ಟಿಸಿದರು ॥ 139

ಇದೇ ಇಮಾರತಿ, ವಾಡೆಗಳು । ಆರಂಭಕ್ಕೆ ಯಾತ್ರಿಕರು ಬರಲು ।
ಸ್ಥಾನವಾಗಿತ್ತು ಇಳಿದುಕೊಳ್ಳಲು । ಒಂದೇ ಸಮ ಗದ್ದಲವಲ್ಲಿರುತ್ತಿತ್ತು ॥ 140

ಬೇವಿನ ಮರದ ಸುತ್ತ ಕಟ್ಟೆ ಕಟ್ಟಿದರು । ದಕ್ಷಿಣೋತ್ತರವಾಗಿ ಮಾಳಿಗೆಯ ಮಾಡಿದರು ।
ಉತ್ತರ ಕಡೆಯ ಮೆಟ್ಟಲುಗಳನು ಹಾಕಿದರು । ಅಲ್ಲಿಂದ ಆ ನೆಲಮನೆಯ ತೋರಿಸಿದರು ॥141

ಆ ಮೆಟ್ಟಲುಗಳ ಕೆಳಗೆ ಅಂದವಾಗಿ । ಮಾಡೊಂದನ್ನು ಮಾಡಿರುವರು ಜನರಿಗಾಗಿ ।
ಅಲ್ಲಿಯೇ ಬೇವಿನಕಟ್ಟೆಯು ಎದುರಾಗಿ । ಭಕ್ತ ಜನರು ಕುಳಿತುಕೊಳ್ಳುವರು ॥ 142

'ಗುರುವಾರ ಮತ್ತು ಶುಕ್ರವಾರದ ದಿನ । ಸೂರ್ಯಾಸ್ತಕ್ಕೆ ಸಾರಿಸಿ ಅದನ ।
ಅಲ್ಲಿ ಲೋಬಾನ ಹಾಕಲು ಒಂದು ಕ್ಷಣ। ಅವರಿಗೆ ಶ್ರೀಹರಿ ಸುಖವ ಕೊಡುವನು' ॥ 143

ಅತಿಶಯೋಕ್ತಿ ಇಲ್ಲ ಇದರೊಳು । ಶ್ರೋತೃಗಳು ಮನದಲಿ ಶಂಕಿಸಲು ।
ಸಾಯಿಯವರದೇ ಈ ಶಬ್ದಗಳು । ಕಿವಿಯಾರೆ ನಾ ಕೇಳಿರುವೆನು ॥ 144

ಇದು ನನ್ನ ಕೈಗಂಟಲ್ಲ । ನೀವು ಒಂದಿಷ್ಟು ಶಂಕಿಸಬೇಕಿಲ್ಲ ।
ಪ್ರತ್ಯಕ್ಷ ಇದ ಕೇಳಿದವರಿರುವರಲ್ಲ । ಇದುವರೆಗೂ ಈ ಮಾತು ಕೇಳಿದವರು ॥ 145

ಆ ಮೇಲೆ ದೀಕ್ಷಿತರ ವಾಡೆಯಾಯಿತು । ಪ್ರಶಸ್ತವಾಗಿರಲು ಅನುಕೂಲವಾಯಿತು ।
ಕಲ್ಲು ಕಟ್ಟಡವೂ ಎದ್ದಿತು । ಮುಂದೆ ಕೆಲದಿನಗಳಲ್ಲಿ ॥ 146

ದೀಕ್ಷಿತರು ಮೊದಲೇ ಪುಣ್ಯಕೀರ್ತಿಗಳು । ಭಾವಾರ್ಥದ ಪ್ರತಿಮೂರ್ತಿಗಳು ।
ಆಂಗ್ಲದೇಶಕ್ಕೆ ಪ್ರಯಾಣ ಬೆಳೆಸಲು । ಅಲ್ಲಿಯೂ ನಿಜ ಬೀಜ ಬಿತ್ತಿದರು ॥ 147

ಶ್ರೋತೃಗಳಿಗಿಲ್ಲಿ ಶಂಕೆ ಬರಬಹುದು । ಮಥುರಾ ಕಾಶಿ ದ್ವಾರಕೆ ಬಿಡುವದು ।
ಧರ್ಮಬಾಹ್ಯ ಆಂಗ್ಲ ದೇಶಕ್ಕೆ ತೆರಳುವದು । ಪರಮಾರ್ಥದಾಯಕ ಹೇಗಾದೀತು ॥ 148

ಸಹಜವೇ ಶ್ರೋತೃಗಳ ಶಂಕೆಯಿದು । ನಿರಸನವಾಗಲು ಸಂತಸವಾಗುವದು ।
ಆದರೆ ಇಲ್ಲಿ ಸ್ವಲ್ಪ ವಿಷಯಾಂತರವಾಗುವದು । ಎಲ್ಲರ ಕ್ಷಮೆಯನು ಕೋರುವೆ ॥149

ಕಾಶೀಪ್ರಯಾಗ ಬದರೀಕೇದಾರ । ಮಥುರಾ ವೃಂದಾವನ ದ್ವಾರಕಾಪುರ ।
ಈ ಯಾತ್ರೆಗಳ ಪುಣ್ಯನಿಕರ । ಮೊದಲೇ ಸಂಪಾದಿಸಿದ್ದರವರು ॥ 150

ಅಲ್ಲದೇ ಹಿರಿಯರು ಮಾಡಿದ ಪುಣ್ಯವು । ಧನ್ಯ ಅಪೂರ್ವ ಭಾಗ್ಯವು ।
ಪೂರ್ವಾರ್ಜಿತವೆಲ್ಲ ಕೂಡಿದವು । ಸಾಯಿ ದರ್ಶನವಾಯಿತದರಿಂದ ॥ 151

ಆಂಗ್ಲಭೂಮಿಗೆ ಹೋಗುವದು । ಅಲ್ಲಿ ಕಾಲುಜಾರಿ ಬೀಳುವದು ।
ಅದರಿಂದ ಕಾಲು ಮುರಿದುದು । ಸಾಯಿ ದರ್ಶನಕೆ ಮೊದಲ ಕಾರಣವಾಯಿತು ॥ 152

ಮೇಲ್ನೋಟಕೆ ಅದು ಅನಿಸಿದರೂ ಕುಯೋಗ । ಪರಿಣಾಮದಲದು ಗುರುಪುಷ್ಯಯೋಗ ।
ಅದರಿಂದ ಫಲಿಸಿತು ಸದುದ್ಯೋಗ । ಅಲಭ್ಯ ಸಂಯೋಗ ಸಾಯಿಯದು ॥ 153

ಚಾಂದೋರಕರರ ಭೆಟ್ಟಿಯಾಯಿತು । ಸಾಯಿಯ ಕೀರ್ತಿ ಕಿವಿಗೆ ಬಿತ್ತು ।
ಎಂದರು ನೋಡಿರಿ ದರ್ಶನದ ಗತ್ತು । ಕೂಡಲೇ ಕುಂಟುತನ ಕಳೆದೀತು ॥ 154

ಆದರೂ ಈ ಕುಂಟುತನವೆಲ್ಲ । ದೀಕ್ಷಿತರು ಕೊರತೆಯೆಂದದನು ಭಾವಿಸಲಿಲ್ಲ ।
ಮನದಲ್ಲೆ ಅಡಿಗಿದೆ ಆ ಕುಂಟುತನವೆಲ್ಲ । ಅದನ್ನು ಕಳೆಯಿರೆಂದರು ಸಾಯಿಗೆ ॥ 155

ತ್ವಚೆರುಧಿರ ಮಾಂಸ ಎಲವುಗಳಿಂದ । ನರದೇಹದ ಹಂದರವಾಗಿದೆ ಈ ಸಮುದಾಯದಿಂದ ।
ಕ್ಷಣಭಂಗುರ ಸಂಸಾರಚಕ್ರವಿದ । ಇದರಲಿ ಕುಂಟುಕಾಲನದೇನು ಮಹಾ ॥ 156

ಸನ್ ಹತ್ತೊಂಭತ್ತು ನೂರಾ ಒಂಭತ್ತು । ನವಂಬರ ತಿಂಗಳ ಎರಡು ತಾರೀಖು ಇತ್ತು ।
ದೀಕ್ಷಿತರಿಗೆ ಸಾಯಿ ದರ್ಶನ ಲಭಿಸಿತು । ಮೊದಲಸಲ ಆ ದಿನ ॥ 157

ಮುಂದೆ ಮತ್ತೆ ಅದೇ ವರ್ಷದಲ್ಲಿ । ಹೋದರು ಡಿಸೆಂಬರ ತಿಂಗಳಲ್ಲಿ ।
ಶಿರಡಿಗೆ ಹೋದಾಗ ಶ್ರೀಯ ದರ್ಶನದಲ್ಲಿ । ಅಲ್ಲಿಯೇ ಉಳಿಯಬೇಕೆಂದು ಮನವಾಯಿತು ॥158

ತೆಗೆದುಬಿಡಬೇಕು ಇಪ್ಪತ್ತೈದು ಶೇಅರ । ಹಾಕಿಸಬೇಕೊಂದು ತಗಡಿನ ಚಪ್ಪರ ।
ಯಾತ್ರಿಕರಿಗಾದೀತು ಅನುಕೂಲಕರ । ಮೊದಲ ವಿಚಾರವಿದು ಮೂಡಿತು ॥159

ಕಟ್ಟಬೇಕು ವಾಡೆಯನೊಂದು । ಈ ವಿಚಾರ ಮನದಲಿ ಬಂದು ।
ಅಡಿಗಲ್ಲನಿಟ್ಟರು ಕಲ್ಲಕಟ್ಟಡದ್ದು । ಬರು ವರುಷವೇ ಸುಮುಹೂರ್ತದಲಿ ॥ 160

ಒಂಭತ್ತು ಡಿಸೆಂಬರದ ದಿನದಂದು । ಬಾಬಾರ ಅನುಮತಿಯನ್ನು ಪಡೆದು ।
ಅದನ್ನೇ ಸಮುಹೂರ್ತವೆಂದು ತಿಳಿದು । ಅಡಿಪಾಯವನು ತುಂಬಿದರು ॥ 161

ಕರೆದರೂ ಬಾರದಂತಹವರ । ಅಂದು ದೀಕ್ಷಿತರ ಬಂಧುಗಳಾದರು ।
ಮುಂಚಿತವಾಗಿಯೇ ಬಂದಿದ್ದರು । ಆ ದಿನದ ಸುಮೂರ್ತಕ್ಕೆ ॥ 162

ಶ್ರೀದಾದಾಸಾಹೇಬ ಖಾರ್ಪಡೆಯವರು ಮೊದಲೇ ಸಹಜವಾಗಿ ಬಂದಿದ್ದರು ।
ಬಾಬಾರ ಅನುಜ್ಞೆಯ ಕೇಳಿದರು । ಅದಕಾರು ಅಡ್ಡಿ ಮಾಡುವರು ॥ 163

ಆದರೂ ಖಾರ್ಪಡೆಗೆ ತಿರುಗಿಹೋಗೆಂದು । ದೀಕ್ಷಿತರಿಗೆ ಪಾಯಾತುಂಬೆಂದು ।
ಹತ್ತು ಡಿಸೆಂಬರದ ದಿನದಂದು । ಇಬ್ಬರಿಗೂ ಆಜ್ಞೆಯನಿತ್ತರು ॥ 164

ಇನ್ನೊಂದು ಆ ದಿನದ ಮಹತಿ । ಅಂದಿನಿಂದ ಸುರುವಾಯ್ತು ಶೇಜಾರತಿ ।
ಚಾವಡಿಯಲ್ಲಿ ಬಹಳ ಭಕ್ತಿ । ಪ್ರೀತ್ಯಾದರಗಳಿಂದ ಕೂಡಿ ॥ 165

ಮುಂದೆ ಹತ್ತೊಂಭತ್ತು ನೂರಾ ಹನ್ನೊಂದರಲ್ಲಿ । ರಾಮನವಮಿಯ ಶುಭಮುಹೂರ್ತದಲಿ ।
ಗೃಹಪ್ರವೇಶ ಸಂಸ್ಕಾರವನು ಅಲ್ಲಿ । ವಿಧಿಪುರಃಸರ ಮುಗಿಸಿದರು ॥ 166

ಆ ಮೇಲೆ ಶ್ರೀಮಂತ ಬುಟ್ಟಿಯವರ ಕಟ್ಟಡವನು । ವೆಚ್ಚ ಮಾಡಿ ಬಹಳ ಹಣವನ್ನು ।
ಅಲ್ಲಿಯೇ ಇಟ್ಟರು ಬಾಬಾರ ದೇಹವನ್ನು । ದುಡ್ಡು ಸಾರ್ಥಕವಾಯಿತು ॥167

ಮೂರು ವಾಡೆಗಳಾದುವಲ್ಲ । ಮೊದಲು ಒಂದೂ ಇರದಲ್ಲಿ ।
ಸಾಠೆಯವರ ವಾಡೆಯೇ ಮೊದಲಲ್ಲಿ । ಬಹಳ ಉಪಯೋಗವಾಯಿತೆಲ್ಲರಿಗೆ ॥ 168

ಈ ವಾಡೆಯ ಮಹತ್ವ ಇನ್ನೊಂದು । ಈ ಸ್ಥಾನದಲಿ ಮೊದಲಿಗೊಂದು ।
ಸುಂದರವಾದ ಹೂದೋಟವಿದ್ದು । ಅದ ಸ್ವಹಸ್ತದಿ ಬಾಬಾರೇ ನಿರ್ಮಿಸಿದ್ದು ॥ 169

ಚಿಕ್ಕ ಕಥೆಯು ಈ ತೋಟದ್ದು । ಮುಂದಿನದ್ಧ್ಯಾಯದಲಿ ಬರುವದು ।
ಸಾಯಿ ಚರಣದಿ ಹೇಮಾಡನ ಶಿರವಿದು । ಬಾಗುವದು ಶ್ರೋತೃಗಳ ಸಮವೇತ ॥ 170

ವಾಮನ ತಾತ್ಯಾ ಕೊಡಗಳ ಕೊಡುವರು । ಸಾಯಿ ಸಮರ್ಥರು ನೀರು ಹಣಿಸುವರು ।
ಬಂಜರು ಭೂಮಿಯಲ್ಲಿ ತೋಟ ಬೆಳೆಸುವರು । ಮುಂದವರು ಗುಪ್ತರಾದರು ॥ 171

ಮುಂದೆ ಔರಂಗಾಬಾದದಲ್ಲಿ । ಚಾಂದಪಾಟೀಲರು ಸಿಕ್ಕರಲ್ಲಿ ।
ಮದುವೆಯ ಬೀಗರ ಜೊತೆಯಲ್ಲಿ । ಶಿರಡಿಗೆ ಮರಳಿ ಬಂದರು ॥ 172

ಮುಂದೆ ದೇವಿದಾಸರು ಸಿಕ್ಕರು । ಜಾನಕೀದಾಸರು ಭೆಟ್ಟಿಯಾದರು ।
ಗಂಗಾಗೀರರು ಪರಿಚಿತರಾದರು । ಈ ತ್ರಿಕೂಟವು ಶಿರಡಿಯಲಿ ಸೇರಿತು ॥ 173

ಮೊಹಿದ್ದೀನನೊಡನೆ ಕುಸ್ತಿ । ಅಲ್ಲಿಂದಾಯಿತು ಮಶೀದಿಯಲಿ ವಸ್ತಿ ।
ಉಂಟಾಯಿತು ಡೋಂಗೆಳೆಯವರಲಿ ಪ್ರೀತಿ । ಭಕ್ತರು ಸುತ್ತಲೂ ನೆರೆದರು ॥ 174

ಈ ಎಲ್ಲ ವಾರ್ತೆಗಳ ಕಥನ । ಮುಂದಿನಧ್ಯಾಯದಲ್ಲಿದರ ಶ್ರವಣ ।
ಇನ್ನು ಹೇಮಾಡನು ಸಾಯಿಗೆ ಶರಣ । ಅನನ್ಯಭಾವದಿ ಸಾಷ್ಟಾಂಗನಮನ ॥ 175

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಸಾಯಿ ಸಮರ್ಥ ಸಚ್ಚರಿತೆ । ಸಾಯಿಸಮರ್ಥಾವತರಣಂ ನಾಮ ಚತುರ್ಥೋಽಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥ ॥ ಶುಭಂ ಭವತು ॥

58·1





॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನ ಕಥಾನುಸಾರವಾಗಿ । ಬಾಬಾ ಶಿರಡಿಯಲಿ ಗುಪ್ತರಾಗಿ ।
ಚಾಂದ ಪಾಟೀಲನೊಡನೆ ಬಂದರು ತಿರುಗಿ । ಅದರ ಕಥೆಯನು ಕೇಳಿರಿ ॥1

ಸ್ವತಃ ಬಾಬಾರು ಹೊತ್ತು ನೀರು । ಹೂದೋಟವನು ನಿರ್ಮಿಸಿದರು ।
ಗಂಗಾಗೀರಾದಿ ಸಂತರು ನೆರೆದರು । ಈ ಕಥೆಯು ಪರಮ ಪಾವನವು ॥ 2

ಮುಂದೆ ಕೆಲವು ಕಾಲದವರೆಗೆ । ಬಾಬಾರಿದ್ದರು ಗುಪ್ತರಾಗಿಯೇ ।
ಮುಸಲ್ಮಾನರ ದಿಬ್ಬಣದೊಳಗೆ । ಈ ರತ್ನವು ಶಿರಡಿಯಲಿ ಕಂಡಿತು ॥ 3

ಆದಕೂ ಮೊದಲೇ ದೇವಿದಾಸರು । ಶಿರಡಿಯಲಿ ವಾಸವಾಗಿದ್ದರು ।
ಮುಂದೆ ಜಾನಕೀದಾಸ ಗೋಸಾವಿ । ಶಿರಡಿಯಲಿ ವಾಸಿಸಲು ಬಂದರು ॥ 4

ಅದು ನಡೆದ ಪ್ರಕಾರವನು । ಸವಿಸ್ತಾರವಾಗಿ ಹೇಳುವೆನು ।
ಸ್ವಸ್ಥಚಿತ್ತರಾಗಿ ಇದನು । ಶ್ರೋತೃಗಳೇ ನೀವು ಆಲಿಸಿರಿ ॥ 5

ಔರಂಗಾಬಾದ ಜಿಲ್ಲೆಯಲಿ । ಧೂಪಖೇಡ ಎಂಬ ಊರಲ್ಲಿ ।
ಭಾಗ್ಯವಂತನವ ಮುಸಲ್ಮಾನರಲ್ಲಿ । ಚಾಂದಪಾಟೀಲ ಹೆಸರವನಿಗೆ ॥ 6

ಔರಂಗಾಬಾದದ ಪ್ರವಾಸ ಮಾಡುತಿರಲು । ಅವನ ಕುದುರೆಯೊಂದು ಕಳೆಯಲು ।
ಪತ್ತೆಯಾಗಲಿಲ್ಲದು ಎರಡು ತಿಂಗಳು । ಇನ್ನು ಅದು ಹೇಗೆ ಸಿಕ್ಕೀತು ॥ 7

ಪೂರ್ಣನಿರಾಶರಾದರು ಪಾಟೀಲರು । ಕುದುರೆಗಾಗಿ ಬಲು ಹಳಹಳಿಸಿದರು ।
ಜೀನನ್ನು ಬೆನ್ನಮೇಲೆ ಹೊತ್ತರು । ದಾರಿಹಿಡಿದು ತಿರುಗಿ ಹೊರಟರು ॥ 8

ಔರಂಗಾಬಾದ ಹಿಂದೆ ಬಿತ್ತು । ನಾಲ್ಕೂವರೆ ಹರದಾರಿ ಕಳೆಯಿತು ।
ದಾರಿಯಲಿ ಮಾವಿನಮರ ಕಂಡಿತು । ಅಲ್ಲಿತ್ತು ಈ ಅಮೂಲ್ಯ ರತ್ನ ॥ 9

ಮೈಯಲ್ಲಿ ಕಫನಿ ತಲೆಗೆ ಟೊಪ್ಪಿಗೆ । ದಂಡಕಾಷ್ಠ ಒಂದು ಬಗಲಿಗೆ ।
ತಂಬಾಕು ತಿಕ್ಕಿ ಚಿಲುಮೆಗೆ । ತುಂಬಿದಾಗ ವಿಚಿತ್ರವೊಂದು ನಡೆಯಿತು ॥ 10

ಚಾಂದ ಪಾಟೀಲರು ಮಾರ್ಗದಿ ನಡೆಯುತಿರಲು । ಫಕೀರನವನನು ಕರೆಯುವದು ಕೇಳಲು ।
'ಬಾಚಿಲುಮೆಯ ಸೇದಿ ಹೋಗಲು । ನೆರಳಿಗೆ ಸ್ವಲ್ಪ ಕುಳಿತುಕೋ' ॥ 11

ಫಕೀರ ಕೇಳಿದ 'ಈ ಜೀನ ಎಂಥದು' । ಪಾಟೀಲ ಹೇಳಿದ ಕುದುರೆ ಕಳೆದದ್ದು ।
ಫಕೀರನೆಂದ ಹೋಗಿ ಆ ಹಳ್ಳದಲಿ ಹುಡುಕೆಂದು । ಕೂಡಲೇ ಕುದುರೆ ಸಿಕ್ಕಿತು ॥ 12

ಚಾಂದ ಪಾಟೀಲ ಚಕಿತನಾದ । ಗುರು ಇವನೆನಗೆ ಸಿಕ್ಕನೆಂದ ।
ಅಂತ ತಿಳಿಯದು ಈ ಕೃತ್ಯದ । ಮಾನವನಿವನೆನ್ನಲು ಬಾರದು ॥ 13

ತಿರುಗಿ ಬಂದಾತ ಕುದುರೆಯ ಹಿಡಿದುಕೊಂಡು । ಪಾಟೀಲನು ಪೂರ್ವಸ್ಥಳಕ್ಕೆ ಬಂದು ।
ಫಕೀರನವನಿಗೆ ಕುಳಿತುಕೋ ಎಂದು । ಕರದಿಂದ ಕಾಷ್ಠವನೆತ್ತಿದನು ॥ 14

ಬಳಿಕ ಅದನು ಅಲ್ಲಿಯೇ ಮಣ್ಣಿನಲಿ ಎಬ್ಬಿದನು । ಒಳಗಿನಿಂದ ಉರಿಯುವ ಕೆಂಡವನು ತೆಗೆದನು ।
ಕೈಲಿರುವ ಚಿಲುಮೆಯ ಮೇಲಿಟ್ಟನು । ಮತ್ತೆ ಕಾಷ್ಠವನು ಎತ್ತಿದನು ॥ 15

ಚಿಲುಮೆಗೆ ಬಟ್ಟೆಯ ತೋಯಿಸಲು । ಹತ್ತಿರ ನೀರು ಇಲ್ಲದಿರಲು ।
ಕಾಷ್ಠವ ನೆಲಕೆ ಅಪ್ಪಳಿಸಲು । ಅಲ್ಲಿ ನೀರು ಬರತೊಡಗಿತು ॥ 16

ಬಟ್ಟೆಯ ತೋಯಿಸಿ ಹಿಂಡಿದನು । ಚಿಲುಮೆಗೆ ಅದನು ಸುತ್ತಿದನು ।
ಚಿಲುಮೆಯನ್ನು ಸೇದಿದನು । ಕಂಡು ಪಾಟೀಲನ ಮತಿ ಗುಂಗಾಯಿತು ॥ 17

ಫಕೀರನಿಗೆ ಮಾಡಿದ ಒತ್ತಾಯ । ಪವಿತ್ರಮಾಡಿರೆನ್ನ ಮನೆಯ ।
ಮನ್ನಿಸಿ ಅವನ ವಿನಂತಿಯ । ಮಾಡಿದ ಪಾಟೀಲನ ಮೇಲೆ ಅನುಗ್ರಹ ॥ 18

ಎರಡನೆಯ ದಿವಸ ಊರೊಳಗೆ ಹೋದರು । ಪಾಟೀಲರ ಮನೆಯಲ್ಲಿ ಇಳಿದರು ।
ಕೆಲದಿವಸಗಳವರೆಗೆ ಅಲ್ಲೇ ಉಳಿದರು । ಮತ್ತೆ ಶಿರಡಿಗೆ ವಾಪಸಾದರು ॥ 19

ಈ ಚಾಂದ ಪಾಟೀಲನಿದ್ದ ಕಾರಭಾರಿ । ಧೂಪಖೇಡದ ಗ್ರಾಮಾಧಿಕಾರಿ ।
ಸೋದರಳಿಯಗೆ ವಧುವ ತಂದಳವನ ಸ್ತ್ರೀ । ಶಿರಡಿ ಊರಿನಲ್ಲಿಯದು ॥ 20

ಆ ಚಾಂದಬಾಯಿಯ ಪತ್ನಿಯ । ಮದುವೆಗೆ ಯೋಗ್ಯನಾಗಿದ್ದ ಸೋದರಳಿಯ ।
ಸುಯೋಗ ಒದಗಿತು ಶಿರಡಿಯ । ವಧುವಿನೊಡನೆ ಶರೀರ ಸಂಬಧವಾಗಿ ॥21

ಜೊತೆಗೆ ತೆಗೆದುಕೊಂಡು ಕುದುರೆ, ಗಾಡಿಗಳು । ದಿಬ್ಬಣ ಹೊರಟಿತು ಶಿರಡಿಗೆ ಹೋಗಲು ।
ಚಾಂದ ಬಾಬಾರ ಒತ್ತಾಯವಾಗಲು । ಬಾಬಾರೂ ಅವರೊಡನೆ ಹೊರಟರು ॥ 22

ಮದುವೆ ಮುಗಿಯಿತು ಬೀಗರು ಮರಳಿದರು । ಬಾಬಾ ಒಬ್ಬರು ಮಾತ್ರ ಹಿಂದೆ ಉಳಿದರು ।
ಹಾಗೆ ಉಳಿದ ಅವರು ಉಳಿದೇ ಬಿಟ್ಟರು । ಶಿರಡಿಯ ಭಾಗ್ಯ ತೆರೆಯಿತು ॥ 23

ಸಾಯಿ ಅವಿನಾಶ ಪುರಾತನ । ಹಿಂದುವೂ ಅಲ್ಲ, ಅಲ್ಲಯವನ ।
ಜಾತಿ ಧರ್ಮ ಕುಲಗೋತ್ರಹೀನ । ನಿಜಬೋಧವೇ ಅವನ ಸ್ವರೂಪವು ॥ 24

ಸಾಯಿ ಸಾಯಿ ಎನ್ನುವರು ಜನ । ಇದೇನಿಂಥ ನಾಮಾಭಿಧಾನ ।
ಬಹುಮಾನ ಪುರಃಸರ ಸಂಬೋಧನ । ಮಾಡಿದ್ದೇ ಸಾಯಿ ಎಂದು ಹೆಸರಾಯಿತು ॥ 25

ಖಂಡೋಬನ ಗುಡಿಯ ಹತ್ತಿರದಲಿ । ಮ್ಹಾಳಸಾಪತಿಯ ಹೊಲದಲ್ಲಿ ।
ದಿಬ್ಬಣ ಇಳಿಯಿತು ಆರಂಭದಲ್ಲಿ । ಬಾಬಾ ಅಲ್ಲಿ ಇಳಿದರು ॥ 26

ಮೊದಲಿತ್ತದು ಭಗತನ ಹೊಲ । ಮುಂದೆ ಅಮೀನಭಾಯಿಯದಾಯಿತು ಆ ಹೊಲ ।
ಮದುವೆಗೆ ಬಂದ ದಿಬ್ಬಣವೆಲ್ಲ । ಇಲ್ಲಿ ವೃಕ್ಷದಡಿಯಲಿ ಇಳಿಯಿತು ॥ 27

ಈ ಬಾಲ ಫಕೀರನು ಗಾಡಿಯಿಂದಿಳಿಯಲು । ಭಗತನ ದೃಷ್ಟಿಗೆ ಅವರು ಬೀಳಲು ।
'ಬನ್ನಿ ಸಾಯಿ' ಎಂದು ಎದುರುಗೊಳ್ಳಲು । ಅದೇ ಹೆಸರು ಬಿದ್ದಿತವರಿಗೆ ॥28

ಗಾಡಿಗಳ ಬಿಟ್ಟರು ಹೊಲದಲ್ಲಿ । ಖಂಡೋಬನ ಪಟಾಂಗಣದಲ್ಲಿ ।
ಬಾಬಾರೂ ದಿಬ್ಬಣದ ಜೊತೆಯಲ್ಲಿ । ಎಲ್ಲರೊಡನೆ ಇಳಿದರು ॥ 29

ಆಗಿನಿಂದ ಎಲ್ಲ ಜನ । "ಸಾಯಿ ಸಾಯಿ" ಎಂದು ಕರೆದರವನ ।
ಅದೇ ಆಯಿತು ನಾಮಾಭಿಧಾನ । ಕೊನೆಯವರೆಗೂ ಉಳಿಯಿತು ॥ 30

ಆಮೇಲೆ ಅವರಲ್ಲಿ ಚಿಲುಮೆ ಸೇದಿದರು । ಮಶೀದಿಯಲ್ಲಿ ವಾಸಿಸಿದರು ।
ದೇವಿ ದಾಸರೊಡನೆ ಸಹವಾಸ ಬೆಳೆಸಿದರು । ಆನಂದದಿಂದಿದ್ದರು ಶಿರಡಿಯಲಿ ॥ 31

ಒಮ್ಮೆ ಚಾವಡಿಯಲ್ಲಿರುವರು । ಒಮ್ಮೊಮ್ಮೆ ಮಾರುತಿಯ ।
ಮಂದಿರದಲ್ಲಿರುವರು । ಸ್ವಚ್ಛಂದದಿರತರಾಗಿರುತ್ತಿದ್ದರು ॥ 32

ಶಿರಡಿ ಊರಲ್ಲಿ ಈ ದೇವಿದಾಸರು । ಬಾಬಾ ಬರುವುದಕ್ಕಿಂತ ಮೊದಲೇ ಇದ್ದರು ।
ಬಳಿಕ ಜಾನಕೀದಾಸ ಗೋಸಾವಿ ಎಂಬವರು । ಮಹಾನುಭಾವರು ಶಿರಡಿಗೆ ಬಂದರು ॥33

ಮಹಾರಾಜರಿದ್ದಲ್ಲಿ ಇವರಿರಬೇಕು । ಇಲ್ಲವೇ ಇವರಿದ್ದಲ್ಲಿ ಮಹಾರಾಜರಿರಬೇಕು ।
ಇಬ್ಬರೂ ಮಾತಾಡುತ್ತ ಕೂಡ್ರಬೇಕು । ಜಾನಕೀದಾಸ ಮತ್ತು ಮಹಾರಾಜರು ॥ 34

ಉಭಯತರಲ್ಲೂ ಘನವಾದ ಪ್ರೇಮ । ಕೂಡಿ ಮಾತಾಡುವದವರ ನಿತ್ಯವೇನು ।
ಈ ರೀತಿಯಲಿವರ ಸಮಾಗಮ । ಎಲ್ಲರಿಗೂ ಹಿತಕಾರಿಯಾಗಿತ್ತು ॥ 35

ಅಂತಯೇ ಗಂಗಾಗೀರರೆಂಬುವರು । ಮಹಾಪ್ರಸಿದ್ಧ ವೈಷ್ಣವ ವೀರರು ।
ಗೃಹಸ್ಥಾಶ್ರಮಿಗಳವರು ಪುಣತಾಂಬೆ ಊರವರು । ಮೇಲಿಂದ ಮೇಲೆ ಶಿರಡಿಗೆ ಬರುತಿದ್ದರು ॥36

ಮೊದಮೊದಲು ಸಾಯಿಯವರು ಬಾವಿಯ ಮೇಲೆ । ಮಣ್ಣಿನ ಕೊಡಗಳನು ಎರಡು ಕೈಲೆ ।
ನೀರ ಹೊರುವದ ಕಂಡು ಮನದಲ್ಲೇ । ಗಂಗಾಗೀರರಿಗೆ ಆಶ್ಚರ್ಯವೆನಿಸುತಿತ್ತು ॥ 37

ಈ ರೀತಿಯಲಿ ಸಾಯಿಯವರನು ಕಂಡರು । ಆಮೇಲೆ ಅವರಿಗೆ ಸ್ಪಷ್ಟವಾಗಿಯೇ ಹೇಳಿದರು ।
ಶಿರಡಿಯ ಭಾಗ್ಯವೇ ಹಿರಿಯದೆಂದರು । ಅದರಿಂದ ಈ ಶ್ರೇಷ್ಠರತ್ನವ ಹೊಂದಿದೆ ॥38

ಇಂದಿವನು ಹೆಗಲ ಮೇಲೆ ನೀರು ಹೊರುತ್ತಿದ್ದರೂ । ಈ ಮೂರ್ತಿ ಸಾಮಾನ್ಯ ಅಲ್ಲ ಆದರೂ ।
ಪಡೆದಿದೆ ಪುಣ್ಯ ಈ ಊರು । ಅದರಿಂದಲೇ ಇವರಿಲ್ಲಿಗೆ ಬಂದರು ॥ 39

ಅಂತೆಯೇ ಇನ್ನೊಬ್ಬ ಸಂತರು । ಆನಂದನಾಥರೆಂದು ವಿಖ್ಯಾತರು ।
ಅವರೂ ಇದೇ ಭವಿಷ್ಯ ನುಡಿದರು । ಅದ್ಭುತ ಮಾಡಿ ತೋರಿಸುವರಿವರೆಂದರು ॥40

ಪ್ರಸಿದ್ಧರಾದ ಆನಂದನಾಥರು । ಯೆವಲೆಗ್ರಾಮದಲ್ಲಿ ಮಠ ಸ್ಥಾಪಿಸಿದರು ।
ಕೆಲ ಶಿರಡಿಯ ಜನರೊಡನೆ ಬಂದರು । ಶಿರಡಿ ಊರಿಗೆ ಬಂದರು ॥ 41

ಅಕ್ಕಲಕೋಟಕರ ಮಹಾಪುರುಷ । ಆನಂದನಾಥರು ಅವರ ಶಿಷ್ಯ ।
ಎಂದರು ಸಾಯಿಯನು ಕಂಡು ಸಮಕ್ಷ । ಇದೊಂದು ಪ್ರತ್ಯಕ್ಷ ವಜ್ರವಿಹುದು ॥ 42

ಈಗ ಇದು ಬಿದ್ದಿದೆ ತಿಪ್ಪಿಯ ಮೇಲೆ । ಆದರೂ ಇರುವದಿದು ವಜ್ರ ನಿಜದಲೆ ।
ಬಾಬಾರಿಗಿನ್ನೂ ಚಿಕ್ಕವಯವಿರುವಾಗಲೇ । ಆನಂದನಾಥರಿದ ನುಡಿದರು ॥ 43

ನೆನಪಿನಲ್ಲಿಡಿರಿ ನನ್ನ ಈ ಮಾತು । ಮುಂದೆ ನಾ ಹೇಳಿದ್ದು ಏನೆಂದು ತಿಳಿದೀತು ।
ಮುಂದಿನ ಭವಿಷ್ಯವನು ನುಡಿದಿಂತು । ತಿರುಗಿ ಯೆವಲೆಗೆ ಹೋದರು ॥ 44

ತಲೆಗೂದಲನು ಹಾಗೇ ಬಿಟ್ಟಿದ್ದರು । ಕಷ್ಟವನೆಂದೂ ಮಾಡಿಸಿಕೊಳ್ಳರು ।
ಪೈಲ್ವಾನರಂತೆ ಉಡುಪು ಧರಿಸುವರು । ತರುಣರಾಗಿದ್ದಾಗ ಸಾಯಿಯವರು ॥ 45

ರಹಾತೆ ಊರಿಗೆ ಬಾಬಾ ಹೋದಾಗಲೆಲ್ಲ । ಚೆಂಡು, ಮಲ್ಲಿಗೆ, ಜಾಜಿಯ ಸಸಿಗಳ ।
ತಂದು ಸ್ವಹಸ್ತದಲೇ ಬಂಜೆ ನೆಲದಲಿ ಅವುಗಳ । ನೆಟ್ಟು ನೀರು ಹನಿಸುವರು ನೇಮದಲಿ ॥ 46

ಅವರ ಭಕ್ತರು ವಾಮನ ತಾತ್ಯಾ ಹೆಸರಿನ । ಸುಡದಿರುವ ಕೊಡಗಳು ಮಣ್ಣಿನ ।
ಎರಡು ಕೊಡುವರು ಪ್ರತಿದಿನ । ಅದರಿಂದ ಗಿಡಗಳಿಗೆ ನೀರುಣಿಸುತಿದ್ದರು ಬಾಬಾ ॥ 47

ಹತ್ತಿರದಲೇ ಒಂದು ಬಾವಿ ಇತ್ತು । ಬಾಬಾ ಹೆಗಲಮೇಲೆ ಕೊಡ ಹೊತ್ತು ।
ಸಂಜೆಯಪ್ಪರಲಿ ಕೊಡ ಒಡೆಯುತ್ತಿತ್ತು । ಅದನೊಯ್ದು ಬೇವಿನಡಿ ಇಡುತಿದ್ದರು ॥ 48

ಭೂಮಿಯ ಮೇಲೆ ಇಡುವದೇ ತಡ । ಒಡೆದು ಹೋಗುತ್ತಿದ್ದವು ಕೊಡ ।
ಮರುದಿನ ತಾತ್ಯಾ ಬೇರೆ ಕೊಡ । ಕೊಡುತ್ತಿದ್ದರು ಅವರಿಗೆ ಹೊಸದೊಂದು ॥49

ಗಟ್ಟಿಯಾದ ಕೊಡ ಒಳ್ಳೆಯದು । ಆದರೆ ಆವಿಗೆಯಲ್ಲಿಡದ ಕೊಡವೇ ಬೇಕಾಗುವದು ।
ಕುಂಬಾರನಿಗೆ ಶ್ರಮ ಅವುಗಳ ಸುಡುವದು । ಆಗದೇ ಮಾರಾಟವಾಗಲೆಂದು ॥ 50

ಮೂರು ವರುಷ ಮಾಡಿ ಇದೇ ಕಾರ್ಯವನ । ಬರಿದಾದ ನೆಲದಲಿ ನಿರ್ಮಿಸಿದರುದ್ಯಾನ ।
ಈಗ ಅಲ್ಲಿಯೇ ವಾಡೆಯ ಉಪಭೋಗ ಜನ । ಪಡೆಯುವದು ಇದೇ ಸುಯೋಗವಲ್ಲವೇ ॥51

ಇಲ್ಲಿಯೇ ಬೇವಿನಡಿಯಲಿ ಸಾಧಕರೊಬ್ಬರು । ಭಾಯಿ ಎಂಬ ಹೆಸರಿನವರೊಬ್ಬರು ।
ಅಕ್ಕಲಕೋಟಸ್ವಾಮಿಯ ಪಾದುಕೆ ಸ್ಥಾಪಿಸಿದರು । ಪೂಜಿಸಲಿಚ್ಛಿಸುವವರಿಗಾಗಿ ॥ 52

ಅಕ್ಕಲಕೋಟದ ಸ್ವಾಮಿ ಸಮರ್ಥ । ಇದು ಭಾಯಿಯ ಉಪಾಸ್ಯದೈವತ ।
ಅವರ ಪೂಜನ ನಿತ್ಯನಿಯಮಿತ । ನಿಷ್ಠೆಯಿಂದ ಮಾಡುತಿದ್ದರು ಭಾಯಿಯವರು ॥ 53

ಎನಿಸಿತು ಅಕ್ಕಲಕೋಟಕೆ ಹೋಗಬೇಕು । ಪಾದುಕೆಗಳ ದರ್ಶನ ಪಡೆಯಬೇಕು ।
ಪೂಜೋಪಚಾರಗಳ ಸಮರ್ಪಿಸಬೇಕು । ಪಾದುಕೆಗಳಿಗೆ ಮನೋಭಾವದಿಂದ ॥ 54

ಮುಂಬಯಿಗೆ ಹೋಗಬೇಕೆಂದು । ಎಲ್ಲ ಸಿದ್ಧತೆ ಮಾಡಿಕೊಂಡು ।
ಗೊತ್ತು ಮಾಡಿ ನಾಳೆ ಹೊರಡುವದೆಂದು । ಅದು ಬಿಟ್ಟು ಶಿರಡಿಗೆ ಹೊರಟರು ॥ 55

ನಾಳೆ ಹೋಗಬೇಕೆಂದಾಗ ರಾತ್ರಿಯಲಿ ಸ್ವಪ್ನ । ಶ್ರೀ ಸ್ವಾಮಿ ಸಮರ್ಥರು ಇತ್ತರು ಆಜ್ಞಾಪನ ।
ಸದ್ಯಕ್ಕೆ ಶಿರಡಿಯಲ್ಲಿರುವದೆನ್ನ ಸ್ಥಾನ । ಅಲ್ಲಿಗೆ ನೀ ಪ್ರಯಾಣ ಬೆಳೆಸೆಂದು ॥ 56

ಈ ಆಜ್ಞೆಯನು ಶಿರಸಾ ವಂದಿಸಿ । ಭಾಯಿ ಹೊರಟರು ಮುಂಬಯಿ ಬಿಟ್ಟು ।
ಶಿರಡಿಯಲಿ ಬಂದು ಷಣ್ಮಾಸ ನಿಂತು । ಆನಂದ ತುಂದಿಲರಾದರು ॥ 57

ಭಾಯಿ ನಿಷ್ಠಾವಂತ ಬಲು । ಈ ದೃಷ್ಟಾಂತದ ನೆನಪುಳಿಯಲು ।
ಆದಕೆ ಆ ಬೇವಿನಡಿಯೊಳು । ಸ್ವಾಮಿಯ ಪಾದುಕೆಗಳ ಸ್ಥಾಪಿಸಿದರು ॥ 58

ಶಕೆ ಹದಿನೆಂಟುನೂರಾ ಮೂವತ್ನಾಲ್ಕರಲಿ । ಶ್ರಾವಣ ಶುದ್ಧ ಪರ್ವಕಾಲದಲಿ ।
ಪಾದುಕೆ ಸ್ಥಾಪಿಸಿದರು ಬೇವಿನಡಿಯಲಿ । ಭಜನಪೂರ್ವಕವಾಗಿ ಪ್ರೀತಿಯಿಂದ ॥ 59

ದಾದಾ ಕೇಳ್ಕರರ ಹಸ್ತದಿಂದ । ಮುಹೂರ್ತದಿ ಸಶಾಸ್ತ್ರ ವಿಧಿವಿಧಾನದಿಂದ ।
ಉಪಾಸನಿಯವರು ನಿಜ ಹಸ್ತದಿಂದ । ಪಾದುಕಾ ಸ್ಥಾಪನೆ ಮಾಡಿಸಿದರು ॥60

ಮುಂದಿನ ವ್ಯವಸ್ಥೆಯ ವಿವರಣ । ಪೂಜೆ ಮಾಡುವರು ದೀಕ್ಷಿತ ಬ್ರಾಹ್ಮಣ ।
ವ್ಯವಸ್ಥೆ ನೋಡಿಕೊಳುವರು ಭಕ್ತ ಸಗುಣ । ಹೀಗಿದೆ ಆ ಪಾದುಕೆಗಳ ಆಖ್ಯಾನ ॥ 61

ಹೀಗೆ ಈ ಸಂತರು ನಿರ್ವಿಕಾರ । ಪ್ರತ್ಯಕ್ಷ ಈಶ್ವರನ ಅವತಾರ ।
ಮಾಡಲು ಜಗದುದ್ಧಾರ । ಉಪಕಾರಾರ್ಥ ಅವತರಿಸುವರು ॥ 62

ಮುಂದೆ ಕೆಲದಿನ ಕಳೆಯಲು । ಆಶ್ಚರ್ಯದ ಸಂಗತಿ ಘಟಿಸಲು ।
ಶ್ರೋತೃಗಳು ಸಾದರ ಕೇಳಲು । ವಿಚಿತ್ರವೆಂದೆನಿಸೀತು ॥ 63

ಮೋಹಿದ್ದೀನ ಬಾಯಿ ತಾಂಬೋಳಿ । ಅವನೊಡನೆ ಏನೋ ಬಂತು ತಕರಾರ ।
ಅದರಿಂದ ಕಾದಾಟ ನಡೆಸಿದರು ಪರಸ್ಪರ । ದೊಡ್ಡ ಗದ್ದಲವಾಯಿತು॥ 64

ಇಬ್ಬರೂ ಪೈಲ್ವಾನರೇ ಇದ್ದು । ಕುಶಲರಿದ್ದವರೆದುರು ಬಲನಡೆಯದು ।
ಮೊಹಿದ್ದೀನ ಪ್ರಬಲನಾಗಿದ್ದು । ಬಾಬರು ಸೋತರು ಹತಬಲರಾಗಿ ॥ 65

ಅಲ್ಲಿಂದ ಮುಂದೆ ನಿಶ್ಚಯ ಮಾಡಿದರು । ತಮ್ಮ ಪೋಷಾಕವನೆಲ್ಲ ಬದಲಿಸಿದರು ।
ಲಂಗೋತಿ ಹಾಕಿ ಕಫನಿ ಧರಿಸಿದರು । ತಲೆಗೊಂದು ಬಟ್ಟೆಯನು ಕಟ್ಟಿದರು ॥ 66

ಗೋಣಿಚೀಲದ್ದು ಮಾಡಿ ಆಸನ । ಗೋಮಿಚೀಲದ್ದೇ ಹಾಸಿಗೆಯನ ।
ಹರಕು ಮುರುಕು ಬಟ್ಟೆ ಪರಿದಾನ । ಅದರಿಂದಲೇ ಸಮಾಧಾನವಾಗಿರಬೇಕು ॥ 67

"ಗರೀಬಿ ಅವ್ವಲ ಬಾದಶಾಹಿ । ಅಮೀರಿಸೆ ಲಾಖಸವಾಯಿ ।
ಗರೀಬೋಂಕಾ ಅಲ್ಲಾ ಭಾಯಿ । ಅಕ್ಷಯವಾಗಿ ಇದನನ್ನುತ್ತಿದ್ದರು ಸಾಯಿ" ॥68

ಗಂಗಾಗೀರರದು ಅದೇ ಸ್ಥಿತಿ । ತಾಲೀಮಬಾಜಿಯಲಿ ಬಹಳ ಪ್ರೀತಿ ।
ಒಮ್ಮೆ ಆಡುತಿರುವಾಗ ಕುಸ್ತಿ । ಉಪರತಿಯವರಿಗೆ ಆಯಿತು ॥ 69

ಪ್ರಾಪ್ತಕಾಲ ಒದಗಿ ಬಂದಿತು । ಸಿದ್ಧರದೊಂದು ನುಡಿನುಡಿಯಿತು ।
ದೇವರೊಡನೆ ಆಟವಾಡಿಯಾಯಿತು । ಈ ತನುವ ಸವೆಸಲು ಬೇಕಿನ್ನು ॥ 70

ಕುಸ್ತಿ ಆಡುತಾಡುತ ಕಿವಿಯಲಿ । ನುಡಿ ಕೇಳಿಸಿತು ಅನುಗ್ರಹ ರೂಪದಲಿ ।
ಸಂಸಾರದ ಮೇಲೆ ನೀರು ಚೆಲ್ಲಿ । ಪರಮಾರ್ಥ ಭಜನಕೆ ತೊಡಗಿದರು ॥71

ಪುಣತಾಂಬೆಯ ಹತ್ತಿರದಲ್ಲಿ । ನದಿಯ ಪ್ರವಾಹದ ಮಧ್ಯದಲ್ಲಿ ।
ಬುವಾರ ಮಠವಿದೆ ನಡುಗಡ್ಡೆಯಲ್ಲಿ । ಸೇವೆಗೆ ಶಿಷ್ಯರೂ ಇರುವರು ॥ 72

ಇರಲಿ ಮುಂದೆ ಸಾಯಿನಾಥರು ॥ ಕೇಳಿದಷ್ಟಕ್ಕೇ ಉತ್ತರ ಕೊಡುವರು ।
ತಾವಾಗಿಯೇ ಯಾರೊಂದಿಗೂ ಅವರು । ಮಾತಾಡುತ್ತಲೇ ಇರಲಿಲ್ಲ ॥ 73

ಹಗಲು ನಿಂಬ ವೃಕ್ಷದ ಅಡಿಗೆ । ಒಮ್ಮೊಮ್ಮೆ ಅಗಸಿಯತ್ತ ಹಳ್ಳದ ಕಡೆಗೆ ।
ಜಾಲಿಯ ಟೊಂಗೆಯ ನೆರಳಿಗೆ । ಒಬ್ಬರೇ ಕುಳಿತುಕೊಳ್ಳುತಿದ್ದರು ॥ 74

ಒಮ್ಮೊಮ್ಮೆ ಅಲ್ಲಿಂದ ಒಂದು ಮೈಲಿ । ನೀಮಗಾವ ಊರಿನ ಮಗ್ಗುಲಲಿ ।
ಬಾಬಾ ಮಧ್ಯಾನ್ಹ ಸಾಯಂಕಾಲಗಳಲಿ । ಮನಬಂದಂತೆ ತಿರುಗುವರು ॥ 75

ಪ್ರಸಿದ್ಧ ತ್ರ್ಯಂಬಕಡೋಂಗಳೆಯವರು । ನೀಮಗಾವದ ಜಾಹಗೀರದಾರರು ।
ಅವರಲ್ಲಿ ಬಾಬಾಸಾಹೇಬ ಡೋಂಗಳೆಯವರು । ಬಾಬಾರಿಗೆ ಬಲುಪ್ರಿಯರಾಗಿದ್ದರು ॥76

ನಿಮಗಾವದ ಮೇಲೆ ಹಾದುಹೋಗುವಾಗ್ಗ । ಬಾಬಾ ಹೋಗುವರು ಅವರ ಮನೆಗೆ ।
ಅತಿ ಪ್ರೀತಿಯಿಂದ ಅವರ ಜೊತೆಗೆ । ದಿನವೆಲ್ಲ ಮಾತಾಡುತ್ತಿದ್ದರು ॥ 77

ತಮ್ಮನೊಬ್ಬನಿದ್ದ ಅವಗೆ । ನಾನಾಸಾಹೇಬ ಹೆಸರು ಅವಗೆ ।
ಪುತ್ರಸಂತಾನವಿರಲಿಲ್ಲ ಅವರಿಗೆ । ಅದರಿಂದ ಮನದಲಿ ಖಿನ್ನರಾಗುತ್ತಿದ್ದರು ॥ 78

ಪ್ರಥಮ ಪತ್ನಿಗೆ ಮಂದಯೋಗವೆಂದು । ಎರಡನೆಯವ ಮಾಡಿಕೊಂಡು ।
ಆದರೂ ಋಣಾನುಬಂಧ ತಪ್ಪದು । ದೈವನಿರ್ಬಂಧವೇ ಅಗಾಧ ॥ 79

ಮುಂದೆ ಬಾಬಾ ಸಾಹೇಬರು ಅವನ । ಕಳಿಸಿದರು ಮಾಡಲು ಸಾಯಿ ದರ್ಶನ ।
ಪಡೆದರಾಗ ಆಶೀರ್ವಾದವನ । ಪುತ್ರ ಸಂತಾನವಾಗುವಂತೆ ॥ 80

ಬರಬರುತ್ತ ಸಾಯಿದರ್ಶನವಾರಿತು । ಜನಸಮುದಾಯವೇ ಹರಿದು ಬರಹತ್ತಿತು ।
ಅವರ ಮಹಿಮೆಯೂ ಬೆಳೆಯುತ್ತ ಹೋಯಿತು । ನಗರಕ್ಕೆ ವಾರ್ತೆ ಮುಟ್ಟಿತು ॥ 81

ಅಲ್ಲಿ ಸರಕಾರಿ ಕಚೇರಿಗಳಲ್ಲಿ । ನಾನಾರದು ಸಾಕಷ್ಟು ನಡೆಯುತ್ತಿತ್ತಲ್ಲಿ ।
ಅಂತೆಯೇ ಚಿಟಣೀಸರಾಗಿದ್ದರು ಜಿಲ್ಹೆಯಲಿ । ಚಿದಂಬರ ಕೇಶವ ಎಂಬವರು ॥ 82

ಸಾಯಿ ಸಮರ್ಥರ ದರ್ಶನ ಪಾತ್ರವನ್ನು । ಕರೆದಕೊಂಡು ತಮ್ಮ ಇಷ್ಟ ಮಿತ್ರರನ್ನು ।
ದರ್ಶನಕ್ಕೆ ಪುತ್ರಕಲತ್ರರನ್ನೂ । ಕರೆದುಕೊಂಡು ಬರಲು ಓಲೆ ಬರೆದರು ॥83

ಹೀಗೆ ಒಬ್ಬರ ಹಿಂದೆ ಮತ್ತೊಬ್ಬರು । ಎಲ್ಲರೂ ಶಿರಡಿಗೆ ಬರತೊಡಗಿದರು ।
ಎಲ್ಲೆಲ್ಲಿಯೂ ಹಬ್ಬಿತು ಬಾಬಾರ ಹೆಸರು । ಅಂತೆಯೇ ಅವರ ಪರಿವಾರವೂ ॥ 84

ಅವರಿಗೆ ಸಂದತಿಯಾರದೂ ಬೇಕಿರಲಿಲ್ಲ । ಆದರೂ ಭಕ್ತಪರಿವಾರಾವೃತರಾಗಿ ಹಗಲೆಲ್ಲ ।
ಸೂರ್ಯಾಸ್ತಮಾನದ ನಂತರ ರಾತ್ರಿಯೆಲ್ಲ । ಶಿರಡಿಯ ಮಶೀದಿಯಲಿ ಮಲಗುತಿದ್ದರು ॥85

ಚಿಲಮಿ ತಂಬಾಕು ಟಮರೇಲ ಜೊತೆಗೆ । ಮೈಯಲ್ಲಿ ಕಫನಿ ಪಾದದವರೆಗೆ ।
ಬಿಳಿಯ ಬಟ್ಟೆಯೊಂದು ತಲೆಗೆ । ದಂಡಕಾಷ್ಠ ಜೊತೆಗೆ ಯಾವಾಗಲೂ ॥ 86

ಒಗೆದ ಬಿಳಿಯ ಬಟ್ಟೆಯನೊಂದ । ಎಡಗಿವಿಯ ಹಿಂದೆ ಸ್ವಚ್ಛವಾದ ।
ಜಡೆಯೊಡನೆ ಮುರಗಿ ಹಾಕಿ ಅದ । ತಲೆಗೆ ಸುತ್ತಿಕೊಳ್ಳುತ್ತಿದ್ದರು ॥ 87

ಈ ವಸನಗಳದೇ ಆಚ್ಛಾದನ । ಎಂಟೆಂಟು ದಿನ ಸ್ನಾನವಿಹೀನ ।
ಕಾಲಿಗೆ ಇರಲಿಲ್ಲ ಪಾದ ತ್ರಾಣ । ಆಸನವೊಂದು ಹರಕು ತಟ್ಟಿನದು ॥ 88

ಗೋಣಿಚೀಲದ ತುಂಡೊಂದು । ಅದರ ಮೇಲೆಯೇ ನಿತ್ಯ ಕೂಡ್ರುವುದು ।
ಗೊತ್ತೇ ಇರಲಿಲ್ಲ ತಕ್ಕೆ ಎಂಬುದು । ಆತುಕೊಳ್ಳುವದೆಲ್ಲಿ ಬಂತು ॥ 89

ಅಲ್ಲಿಯವರೆಗೆ ಆತಟ್ಟು ಜೀರ್ಣ । ಅದೇ ಅವರ ಪ್ರೀತಿಯ ಆಸನ ।
ಹಾಗೆಯೇ ಕೂಡ್ರುವರು ಪ್ರತಿದಿನ । ಎಂಟು ಪ್ರಹರಗಳು ಆ ಸ್ಥಳದಲ್ಲಿ ॥ 90

ಅದೇ ಹಾಸಿಗೆ ಅಥವಾ ಆಸನ । ಮೈಗೆ ಒಂದು ಕೌಪೀನ ಪರಿಧಾನ ।
ಇಲ್ಲ ಬೇರೆ ವಸ್ತ್ರ ಪ್ರಾವರಣ । ಶೀತನಿವಾರಣೆಗೆ ಧುನಿಯೊಂದೇ ॥ 91

ದಕ್ಷಿಣಕೆ ಮುಖಮಾಡಿ ಆಸನದಿ ಕುಳಿತು । ಕಟಾಂಜನದ ಮೇಲೆ ಎಡಗೈಯನಿಟ್ಟು ।
ಎದುರಿಗೆ ಧುನಿ ಉರಿಯುತ್ತಿತ್ತು । ಹೀಗೆ ಬಾಬಾ ಮಶೀದಿಯಲಿ ಕೂಡ್ರುವರು ॥ 92

ಅಹಂಕಾರವ ವಾಸನೆಗಳ ಸಮವೇತ । ನಾನಾವಿಧ ವೃತ್ತಿಗಳ ಆಹುತಿಯನೀಯುತ।
ಪ್ರಪಂಚವೃತ್ತಿಯನೆಲ್ಲ ದಹಿಸುತ । ಯುಕ್ತಿ ಪ್ರಯುಕ್ತಿಗಳಿಂದ ಆಧುನಿಯಲ್ಲಿ ॥ 93

ಇಂಥ ಆಪ್ರಖರ ಕುಂಡದಲ್ಲಿ । ಸುಡಹಾಕಿರುವರು ಜ್ಞಾನಾಭಿಮಾನದ ಕೊರಡನು ಅಲ್ಲಿ ।
ಯಾವಾಗಲೂ 'ಅಲ್ಲಾ-ಮಾಲಿಕ್' ಬಾಯಿಯಲ್ಲಿ । ಅವರ ಕೀರ್ತಿಯು ಅಖಂಡ ॥ 94

ಆ ಮಶೀದಿಯಾದರೂ ಎಷ್ಟರದು । ಹೆಚ್ಚೆಂದರೆ ಎರಡಂಕಣದ್ದು ।
ಅಷ್ಟರಲ್ಲಿ ಮಲಗುವದು ಕೂಡುವದು ಏಳುವುದು । ಎಲ್ಲರನು ಕಾಣುವುದೂ ಅಲ್ಲಿಯೇ ॥ 95

ಹತ್ತೊಂಬತ್ತು ನೂರಾ ಹನ್ನೆರಡನೇ ವರ್ಷವಿತ್ತು । ಅಲ್ಲಿಂದ ಹೊಸಪ್ರಕಾರ ಆರಂಭವಾಯಿತು ।
ಮಶೀದಿಯದೂ ಸ್ಥಿತ್ಯಂತರವಾಯಿತು । ನಿಜವಾದ ಆರಂಭ ಅಲ್ಲಿಂದಲೇ ॥ 96

ಗಾದಿ ತಕ್ಕೆ ಎಲ್ಲ ಬಂತು । ಭಕ್ತ ಸಮುದಾಯವು ಸುತ್ತುವರಿಯಿತು ।
ಮೊದಲು ಎಲ್ಲರಿಗೆ ಭಯವೇ ಇರುತಿತ್ತು । ಅವರ ಹತ್ತಿರ ಹೋಗಲು ॥ 97

ಮೊಣಕಾಲ ಉದ್ದ ನೆಲದಲ್ಲಿ । ತಗ್ಗುಗಳಿದ್ದವು ಮಶೀದೆಯಲ್ಲಿ ।
ಕಲ್ಲು ಹಾಸಾಯಿತು ಒಂದೇ ರಾತ್ರಿಯಲ್ಲಿ । ಭಕ್ತರ ಭಾವದಿಂದಾಗಿ ॥ 98

ಮಶೀದೆಗೆ ಬರುವ ಮೊದಲಲ್ಲಿ । ಬಾಬಾ ಇರುತಿದ್ದರು ತಕೀಯಾ ಎಂಬಲ್ಲಿ ।
ಎಷ್ಟೋ ಕಾಲಾವಧಿಯಲ್ಲಿ । ಅಬಾಧಿತವಾಗಿ ಕಳೆದರು ॥ 99

ಅಲ್ಲಿಯೇ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು । ಖಂಜರಿಯಿಂದ ತಾಲ ಹಿಡಿದು ।
ಪ್ರೀತಿಯಿಂದ ಹಾಡುವರು ಹಾಡು । ಅತಿ ಸುಂದರವಾಗಿ ಕುಣಿಯುತ್ತಿದ್ದರು ॥ 100

ಸಾಯಿ ಸಮರ್ಥರಿಗೆ ಆರಂಭಕೆ । ಆಸ್ಥೆ ಬಹಳ ದೀಪೋತ್ಸವಕೆ ।
ಅಂಗಡಿಕಾರರ ಹತ್ತಿರ ಅದಕೆ । ತಾವೇ ಎಣ್ಣೆ ಕೇಳಲು ಹೋಗುತ್ತಿದ್ದರು ॥101

ಕೈಯಲ್ಲಿ ಟಮರೇಲ ಹಿಡಿದು । ಎಣ್ಣೆ ವ್ಯಾಪಾರಸ್ಥರನ್ನು ಕಂಡು ।
ತಾವೇ ಭಿಕ್ಷೆ ಬೇಡಿ ತಂದು । ಪಣತಿಗಳಲಿ ತುಂಬುವರು ॥ 102

ಪಟತಿ ಹಚ್ಚುವರು ಝಗಝಗವಾಗೆ । ಗುಡಿ ಮತ್ತು ಮಶೀದಿಯೊಳಗೆ ।
ಹೀಗೆ ನಡೆಯಿತು ಕೆಲದಿನಗಳವರೆಗೆ । ನಿತ್ಯವೂ ನಡೆಯುತ್ತಿತ್ತು ॥ 103

ದೀಪಾರಾಧನೆಯ ಪ್ರೀಯರವರು । ದೀಪಾವಳಿಗೂ ದೀಪೋತ್ಸವ ಮಾಡುವರು ।
ಹರಕು ಬಟ್ಟೆಯಲಿ ಬತ್ತಿ ಹೊಸೆಯುವರು । ದೀಪ ಹಚ್ಚುವರು ಮಶೀದಿಯಲ್ಲಿ ॥ 104

ದಿನಾಲು ಪುಕ್ಕಟೆ ಎಣ್ಣೆ ತರುವವರು । ಈ ಕಿಟಿಕಿಟಿ ಸಾಕೆಂದರು ।
ಎಲ್ಲ ಅಂಗಡಿಕಾರರು ಮಾತಾಡಿಕೊಂಡರು । ಮನಸಿನಲ್ಲಿ ಕಪಟ ಭಾವ ಮೂಡಿ ॥ 105

ಮುಂದೆ ನಿತ್ಯನಿಯಮಾನುಸಾರವಾಗಿ । ಬಾಬಾ ಹೋಗಿ ಎಣ್ಣೆ ಬೇಡಲಾಗಿ ।
ಎಲ್ಲರೂ ಇಲ್ಲೆನ್ನಲಾಗಿ । ಏನಾಶ್ಚರ್ಯ ಜರುಗಿತು ॥ 106

ಬಾಬಾ ಸುಮ್ಮನೆ ತಿರುಗಿ ಬಂದರು । ಒಣ ಬತ್ತಿಗಳನೇ ಪಣತಿಯಲಿಟ್ಟರು ।
ಎಣ್ಣೆ ಇಲ್ಲದೆ ಇವರೇನು ಮಾಡುವರು । ಎಂದು ಅಂಗಡಿಕಾರರು ನೋಡಿದರು ॥107

ಮಶೀದಿಯ ನಾಗವಂದಿಯಿಂದ । ಟಮರೇಲ ತೆಗೆದರು ಅಲ್ಲಿಂದ ।
ಒಂದೇ ಒಂದಿಷ್ಟಿತ್ತು ಎಣ್ಣೆ ಅದರಿಂದ । ಕಷ್ಟದಿಂದ ಸಂಜೆ ಬತ್ತಿ ಹತ್ತೀತು ॥ 108

ಆ ಎಣ್ಣೆಯಲಿ ಒಂದಿಷ್ಟು ನೀರು ಹಾಕಿದರು । ಬಾಬಾ ಅದನೆಲ್ಲ ಕುಡಿದುಬಿಟ್ಟರು ।
ಇಂತದನು ಬ್ರಹ್ಮಾರ್ಪಣ ಮಾಡಿದರು । ಬರೀ ನೀರನ್ನು ಮಾತ್ರ ತೆಗೆದುಕೊಂಡರು ॥109

ಆ ನೀರನ್ನು ಪಣತೆಗೆ ಹನಿಸಿ । ಒಣಬತ್ತಿಗಳ ಅದರಲಿ ತೋಯಿಸಿ ।
ಕಡ್ಡಿಗೀರಿ ಅವುಗಳನು ಹೊತ್ತಿಸಿ । ದೀಪ ಉರಿಸಿ ತೋರಿಸಿದರು ॥ 110

ಆ ನೀರೇ ಉರಿಯುವದನ್ನು ನೋಡಿದರು । ಅಂಗಡಿಕಾರರು ಬೆರಳು ಕಚ್ಚಿದರು ।
ನಾವು ಬಾಬಾರಿಗೆ ಸುಳ್ಳು ಹೇಳಿದೆವೆಂದರು । ಇದು ತಪ್ಪಾಯಿತೆಂದುಕೊಂಡರು ಮನದಿ ॥ 111

ಒಂದಿನಿತೂ ಎಣ್ಣೆ ಇಲ್ಲ । ದೀಪ ಉರಿದವು ರಾತ್ರಿಯೆಲ್ಲ ।
ನಾವು ಸಾಯಿಯ ಕೃಪೆಗೆ ಅಪಾತ್ರರಾದೆವಲ್ಲ । ಎಂದು ಅವರ ವಂದಿಸತೊಡಗಿದರು ॥ 112

ಇದು ಏನು ಬಾಬಾರ ಪ್ರತಾಪ । ಅಸತ್ಯ ನುಡಿದು ಮಾಡಿದೆವು ಪಾಪ ।
ಬಾಬರಿಗೆ ಇತ್ತೆವು ವ್ಯರ್ಥ ಸಂತಾಪ । ಎಂದೆಲ್ಲ ಪಶ್ಚಾತ್ತಾಪ ಅವರಿಗೆ ॥ 113

ಬಾಬಾರ ಮನದಲಿ ಇದು ಇಲ್ಲ । ಜನರಲಿ ರಾಗದ್ವೇಷ ತಾಳಿದವರೇ ಅಲ್ಲ ।
ಶತ್ರು ಮಿತ್ರರಾರೂ ಅವರಿಗಿಲ್ಲ । ಎಲ್ಲ ಪ್ರಾಣಿಗಳೂ ಅಷ್ಟೇ ಅವರಿಗೆ ॥ 114

ಇರಲಿನ್ನು ಹಿಂದಿನ ಕಥೆ ಮುಂದುವರೆದು । ಕುಸ್ತಿಯಲ್ಲಿ ಮೋಹಿದ್ದೀನನು ಗೆದ್ದು ।
ಚರಿತ್ರ, ಮಹಿಮೆ ಇನ್ನೂ ಹೆಚ್ಚಿನದು । ಚಿತ್ತವಿಟ್ಟು ಆಲಿಸಿರಿ ॥ 115

ಕುಸ್ತಿಯಾಡಿ ಐದು ವರ್ಷಗಳ ನಂತರ । ಅಹಮದನಗರದಿಂದೊಬ್ಬ ಫಕೀರ
'ಜವಾಹರ ಅಲಿ' ಎಂಬ ಹೆಸರ । ಸಶಿಷ್ಯವಾಗಿ ರಾಹತೆಗೆ ಬಂದನು ॥ 116

ಖಾಲಿ ಜಾಗವನು ಕಂಡನು । ವೀರಭದ್ರನ ಗುಡಿಯ ಹತ್ತಿರ ಅವನು ।
ಅಲ್ಲಿಯೇ ತಳ ಊರಿದನು । ಆ ಫಕೀರನ ದೈವ ಬಲವಾಗಿತ್ತು ॥ 117

ಸುದೈವಿ ಅಲ್ಲದಿರೆ ಅವನು । ಹೇಗೆ ಪಡೆಯುತ್ತಿದ್ದನವನು ।
ಸಾಯಿಯಂಥ ಮೋಜಿನ ಶಿಷ್ಯನನು । ಹೆಸರುವಾಸಿಯವ ಎಲ್ಲೆಲ್ಲಿ ॥ 118

ಅನೇಕ ಜನರಿದ್ದರು ಊರಲ್ಲಿ । ಮರಾಠರಿದ್ದರು ಕೆಲವರು ಅವರಲ್ಲಿ ।
ಭಗೂ ಸದಾಫಳನೊಬ್ಬ ಅವರಲ್ಲಿ । ಸೇವಕನಾದನು ಅವರಿಗೆ ॥ 119

ಫಕೀರನಿದ್ದ ಬಲು ಚುರುಕ । ಕುರಾಣ ಶರೀಫಗಳು ಕರತಲಾಮಲಕ ।
ಸ್ವಾರ್ಥಿಪರಮಾರ್ಥಿ ಮತ್ತು ಭಾವಿಕ । ಅನೇಕರು ಅವನ ಕಾಲಿಗೆ ಬಿದ್ದರು ॥ 120

ಈದಗಾ ಕಟ್ಟಲು ಆರಂಭವಾಯಿತು । ಹೀಗೇ ಕೆಲವು ಕಾಲ ಕಳೆಯಿತು ।
ವೀರಭದ್ರ ದೇವರಿಗೆ ಮೈಲಿಗೆಯಾಯಿತು । ಎಂಬ ಆರೋಪವನಿಟ್ಟರು ಅವನ ಮೇಲೆ ॥ 121

ಮುಂದೆ ಈದಗಾ ನಿಂತು ಹೋಯಿತು । ಫಕೀರನ ಊರ ಹೊರಗೆ ಹಾಕಲಾಯಿತು ।
ಆಮೇಲೆ ಶಿರಡಿಗೆ ಆತ ಬಂದಾಯಿತು । ಮಶೀದೆಯಲಿ ಬಾಬಾರ ಹತ್ತಿರ ಇರತೊಡಗಿದ ॥122

ಫಕೀರನದು ಬಲು ಸವಿಮಾತು । ಊರೆಲ್ಲ ಅವನ ಬೆನ್ನು ಹತ್ತಿತು ।
ಬಾಬಾರಿಗೆ ಏನು ಮಾಡಿದನೋ ಯಾರಿಗೆ ಗೊತ್ತು । ಮೋಹಿನಿ ಮಾಡಿದನೆಂದೆಂಬರು ಜನ ॥ 123

ಅವ ಬಾಬಾರಿಗೆಂದ ನೀನನ್ನ ಶಿಷ್ಯನಾಗೆಂದು । ಬಾಬಾರ ಸ್ವಭಾವವೂ ಬಲು ಮೋಜಿನದು ॥
ಫಕೀರನಿಗೆ ಸಂತೋಷ ಬಾಬರ ಒಪ್ಪಿಗೆಯದು । ಬಾಬಾರ ಕರೆದುಕೊಂಡು ಹೊರಟನು ॥ 124

ಬಾಬಾರಂಥವ ಶಿಷ್ಯನಾದ । ಜವಾಹರ ಅಲಿ ಗುರುವೆನಿಸಿದ ।
ಆಮೇಲೆ ಆತ ವಿಚಾರ ಮಾಡಿದ । ರಾಹತೆಯಲ್ಲೇ ಇರುವಾ ಎಂದು ॥ 125

ಗುರುವಿಗೆ ಶಿಷ್ಯನ ಸ್ವಭಾವ ತಿಳಿದಿಲ್ಲ । ಶಿಷ್ಯನಿಗೆ ಗೊತ್ತು ಗುರುವಿನ ಅವಗುಣಗಳೆಲ್ಲ ।
ಆದರೂ ಎಂದೂ ಅನಾದರ ಮಾಡಲಿಲ್ಲ । ಶಿಷ್ಯನ ಧರ್ಮವನುಳಿಸಿಕೊಂಡರು ॥126

ಗುರುಮುಖದಿಂದ ಮಾತು ಬರಲು । ಹೋಗಲಿಲ್ಲ "ಯೋಗ್ಯಾಯೋಗ್ಯ" ನೋಡಲು ।
ಅವನ ವಚನವ ಪಾಲಿಸಲು । ಗುರುಗೃಹದಲಿ ನೀರು ಹೊತ್ತರು ॥ 127

ಹೀಗೆ ಗುರುಸೇವೆಯ ನಡೆಸಿದರು । ಶಿರಡಿಗೂ ಒಮ್ಮೊಮ್ಮೆ ಬರುವರು ।
ಇದೇ ರೀತಿ ನಡೆಯುವರು । ಏನಾಯಿತೆಂಬದನು ನೋಡಿರಿ ॥ 128

ಹೀಗೆ ಮೇಲಿಂದ ಮೇಲೆ । ರಹಾತೆಯಲ್ಲಿ ಉಳಿಯತೊಡಗಿದರು ।
ಬಹಳ ಫಕೀರನ ವಶರಾದರು । ಇನ್ನು ಶಿರಡಿಯನಿವರು ಬಿಟ್ಟಂತೆಯೇ ॥129

ಜನರಿಗೆನಿಸಿತು ಸಾಯಿಯನ್ನು । ಜವಾಹರ ಅಲಿಯು ಯೋಗಬಲದಿಂದ ವಶಗೊಳಿಸಿಹನು ।
ಅವನೇನು ಬಲ್ಲ ಸಾಯಿಯ ಗತ್ತನು । ಅವರಿಗೆ ದೇಹಾಭಿಮಾನವ ದಹಿಸಬೇಕಿತು ॥ 130

ಸಾಯಿಗೆಲ್ಲಿಂದ ಬಂತು ಅಭಿಮಾನ । ಬಂದೀತು ಶ್ರೋತೃಗಳಿಗೀ ಅನುಮಾನ ।
ಇದು ಲೋಕಸಂಗ್ರಹಾರ್ಥ ಆಚರಣ । ಇದುವೇ ಅವತರಣ ಕಾರ್ಯವು ॥131

ಶಿರಡಿಯಲ್ಲಿರುವ ಬಾಬಾರ ಭಕ್ತರು । ಬಾಬಾರಲ್ಲಿ ಬಲು ಆಸಕ್ತಿ ಉಳ್ಳವರು ।
ಬಾಬಾರನ್ನು ಬಿಟ್ಟಿರಲು ಅವರು । ಇದು ಸರಿಯಲ್ಲವೆಂದೆನ್ನುತ್ತಿದ್ದರು ॥ 132

ಸಾಯಿಯು ಸಂಪೂರ್ಣ ಗುರುವಿಗಾ ಧೀನ । ಅದರಿಂದಾಯಿತು ಭಕ್ತರ ಮನ ಉದ್ವಿಗ್ನ ।
ಹೇಗವರ ಮಾಡಿಕೊಳಬೇಕು ತಮ್ಮ ಸ್ವಾಧೀನ । ಈ ವಿಚಾರದಲಿ ಮಗ್ನರವರಾದರು ॥ 133

ಎಂತು ಕನಕ ಮತ್ತು ಕಾಂತಿ । ಎಂತು ದೀಪ ಮತ್ತು ದೀಪ್ತಿ ।
ಅದರಂತೆಯೇ ಈ ಗುರು ಶಿಷ್ಯ ಸ್ಥಿತಿ । ಐಕ್ಯ ಪ್ರತೀತಿಯು ಇಬ್ಬರಿಗೂ ॥134

ಆಮೇಲೆ ಆ ಶಿರಡಿಯ ಭಕ್ತಮಂಡಳಿ । ರಾಹತೆಯ ಈದಗಾದ ಬಳಿ ।
ಪ್ರಬಲ ಪ್ರಯತ್ನ ಮಾಡಿಯಾಗಲಿ । ಬಾಬಾರನು ಕರೆದುಕೊಂಡೇ ಮರುಳುವದೆಂದರು ॥ 135

ಬಾಬಾ ಅವರಿಗೆ ಹೇಳಿದರು ಬುದ್ಧಿ । "ಫಕೀರನಿರುವ ಮಹಾ ಕ್ರೋಧಿ ।
ಅವನ ಗೊಡವೆಗೆ ಹೋಗಬೇಡಿ । ನನ್ನನಗಲಿ ಅವ ಇರಲಾರ ॥ 136

ಓಟಕಿತ್ತಿರಿ ಇಲ್ಲಿಂದಿನ್ನು । ಈಗಲೇ ಆತ ಹಿಂದಿರುಗುವನು ।
ನಿಮ್ಮನ್ನು ನಿಃಸಂತಾನ ಮಾಡಿಯಾನು । ಪರಮ ಕಠಿಣ ಅವರನ ಕ್ರೋಧವು ॥ 137

ಅವನ ಸಿಟ್ಟದು ಬಲು ಖೋಡಿ । ಬರುವನೀಗಲೇ ಕೆಂಪು ಮುಖ ಮಾಡಿ ।
ಹೊರಟು ಹೋಗಿರಿ ಬೇಗನೆ ಓಡಿ । ಶಿರಡಿಯ ದಾರಿಯ ಹಿಡಿಯಿರಿ" ॥ 138

ಇನ್ನು ಮುಂದೇನು ಮಾಡುವದು । ತಿರುವು ಕಥೆಯನೇ ಬಾಬಾ ಹೇಳುವುದು ।
ಅಷ್ಟರಲ್ಲಿಯೇ ಆ ಫಕೀರ ಬಂದು । ಅವರೆಲ್ಲರಿಗೆ ಕೇಳಿದನು ॥ 139

"ಆ ಹುಡುಗನಿಗಾಗಿ ಬಂದಿರುವಿರಿ? । ಏನು ಮಾತುಗಳನಾಡುತ್ತಿದ್ದೀರಿ ।
ಶಿರಡಿಗೆ ತಿರುಗಿ ಒಯ್ಯ ಬೇಕೆನುವಿರಿ । ಆದರೀ ಕಷ್ಟವ ಪಡದಿರಿ" ॥ 140

ಮೊದಲು ಆತ ಹೀಗೆ ನುಡಿದ । ಆದರೂ ಗ್ರಾಮಸ್ಥರೆದುರು ಹಿಂಜರಿದ ।
ನನ್ನನ್ನೂ ಜೊತೆಯಲಿ ಕರೆದೊಯ್ಯಿರೆಂದ । ಬಾಲಕನು ಕರೆದುಕೊಂಡು ಹೋಗುವಾ ॥141

ಇರಲಿ ಫಕೀರನು ಜೊತೆಗೆ ಬಂದ । ಅವನೂ ಬಾಬಾರ ಬಿಟ್ಟಿರದಾದ ।
ಬಾಬಾರೂ ದೂರಿರಲಾರರು ಅವನಿಂದ । ಇದು ಹೇಗೆ ನಡದೀತೆಂದು ತಿಳಿಯದು ॥ 142

ಸಾಯಿ ಪರಬ್ರಹ್ಮದ ಪುತ್ಥಳಿ । ಭ್ರಮೆಯ ಕುಂಬಳ ಜವ್ಹಾರ ಅಲಿ ।
ದೇವಿದಾಸರು ಒರೆ ಹಚ್ಚುತಲೀ । ಕುಂಬಳ ಒಡೆಯಿತು ಶಿರಡಿಯಲಿ ॥ 143

ದೇವಿದಾಸರ ಮೈಕಟ್ಟು ಅಂದ । ಸತೇಜ ಕಣ್ಣುಗಳು ರೂಪವು ಚೆಂದ ।
ವಯಸ್ಸು ಹತ್ತು ಹನ್ನೊಂದು । ಇದ್ದಾಗ ಶಿರಡಿಗೆ ಬಂದನಾತ ॥ 144

ಹೀಗೆ ಚಿಕ್ಕವಯಸ್ಸು ಅವನದು । ಉಡುಪು ಬರೀ ಲಂಗೋಟಿಯೊಂದು ।
ಮಾರುತಿಯ ದೇವಸ್ಥಾನವೊಂದು । ತೀರ್ಥವಾಸಿಯಾಗುಳಕೊಂಡನಿಲ್ಲಿ ॥ 145

ಅಪ್ಪಾಭಿಲ್ಲ ಮತ್ತು ಮ್ಹಾಳಸಾಪತಿಯವರು । ಅವನ ಹತ್ತಿರ ಹೋಗಿ ಬರುವರು ।
ಕಾಶಿರಾಮಾದಿಗಳು ಸೀದಾ ಕೊಡುವರು । ಅವನ ಮಹತಿಯು ಬೆಳೆಯಿತು ॥ 146

ದಿಬ್ಬಣದೊಡನೆ ಬಾಬಾ ಬರಲು । ಹನ್ನೆರಡು ವರುಷ ಅದಕ್ಕೂ ಮೊದಲು ।
ದೇವಿದಾಸರು ಬಂದಿರ ತೊಡಗಲು । ಶಿರಡಿಯಲ್ಲೇ ಉಳಿದರವರು ॥ 147

ಅಪ್ಪಾಭಿಲ್ಲನಿಗೆ ಬರೆಯಲು ಕಲಿಸುವರು । ವೆಂಕಟೇಶ ಸ್ತೋತ್ರವನು ಹೇಳಿಕೊಡವರು ।
ಎಲ್ಲರಿಂದ ಮುಖೋದ್ಗತ ಎನಿಸುವರು । ಪಾಠ ನಡೆಸುವರು ನೇಮದಲಿ ॥ 148

ಮಹಾಜ್ಞಾನಿಗಳು ದೇವಿದಾಸರು । ತಾತ್ಯಾರು ಅವರನ್ನು ಗುರುಮಾಡಿಕೊಂಡರು ।
ಶಿಷ್ಯರಾಗಿ ಅವರ ಚರಣಕೆ ವಂದಿಸಿದರು । ಕಾಶೀನಾಥ ಮೊದಲಾದವರು ॥149

ಅವರೆದುರು ಫಕೀರನ ತಂದರು । ಶಾಸ್ತ್ರೀಯವಾದ ವಿವಾದ ಮಾಡಿಸಿದರು ।
ಬೈರಾಗಿಯು ಫಕೀರನನು ಗೆದ್ದರು । ಅಲ್ಲಿಂದ ಓಡಿಸಿದರವನನು ॥ 150

ಆಮೇಲೆ ಅಲ್ಲಿಂದ ಓಟಕಿತ್ತವನು । ವೈಜಾಪುರಿಗೆ ಹೋಗಿ ನಿಂತನು ।
ಮತ್ತನೇಕ ವರ್ಷಗಳ ಬಳಿಕ ಅವನು । ಬಂದು ಬಾಬಾರಿಗೆ ವಂದಿಸಿದನು ॥ 151

ಸಾಯಿ ಶಿಷ್ಯ ತಾನವನ ಗುರುವು । ಆಯಿತವನೆಲ್ಲ ಭ್ರಮನಿರಸನವು ।
ಪಶ್ಚಾತ್ತಾಪದಿಂದ ಶುದ್ಧನಾದ ಅವನನು । ಬಾಬಾರು ಮೊದಲಿನಂತೆಯೇ ಸತ್ಕರಿಸಿದರು ॥ 152

ಇಂಥ ಅಗಾಧ ಲೀಲೆ ಬಾಬಾರದು । ಇದರ ಪರೀಕ್ಷೆ ಯಾವಾಗ ಆಗುವದು ।
ಆದರೂ ಅವ ಗುರು ತಾ ಶಿಷ್ಯನೆನ್ನುವ ಭಾವವದು । ಅಲ್ಲಿಯವರೆಗೂ ಉಳಿಸಿಕೊಂಡಿದ್ದರು ॥ 153

ಅವನಿಗೆ ಅವನ ಗುರುತ್ವ । ತನಗೆ ತನ್ನ ಶಿಷ್ಯತ್ವ ।
ಅದೇ ಇಲ್ಲಿರುವ ತತ್ವ । ಸಾಯಿನಾಥರು ಇದನು ಆಚರಿಸಿ ತೋರಿಸಿದರು ॥ 154

ಯಾರವರಾದರೂ ತಾವಾಗಿರಬೇಕು । ಇಲ್ಲವೇ ಯಾರನ್ನಾದರೂ ತಮ್ಮವರನ್ನಾಗಿಸಿಕೊಳ್ಳಬೇಕು ।
ಇದಕಿಂತ ಬೇರೆ ಇರುವದು ಒಳ್ಳೆಯದಲ್ಲ ಎನಬೇಕು । ಅದರಿಂದ ಆ ದಡವ ಸೇರೆವು ॥ 155

ಇದೇ ಒಂದು ಪಾಠ ಈ ನಡತೆಯದು । ಆದರೂ ಈ ಸಾಮರ್ಥ್ಯ ದುರ್ಲಭವಾದುದು ।
ಯಾರ ಮನ ಪಕ್ವವಾಗಿರುವದು । ನಿರಭಿಮಾನದ ಕೋಟೆಯನವ ಹತ್ತಿಯಾನು ॥156

ಇಲ್ಲಿ ಸ್ವಬುದ್ಧಿ ಕಲ್ಪಿತವಾದದ್ದು । ಚಾತುರ್ಯವೆಷ್ಟೂ ಕೆಲಸಕ್ಕೆ ಬಾರದು ।
ಮನದಲಿರಲು ಸ್ವಹಿತ ಸಾಧಿಸಬೇಕೆಂಬದು । ಅಭಿಮಾನರಹಿತರವರಾಗಬೇಕು ॥ 157

ದೇಹಾಭಿಮಾನವನು ಸುಟ್ಟವನು । ಸಾರ್ಥಕಮಾಡಿಕೊಳ್ಳುವ ಈ ದೇಹವನು ।
ಬಳಿಕಾರ ಶಿಷ್ಯನಾದರೇನು । ಪರಮಾರ್ಥವನ್ನು ಸಾಧಿಸಲು ॥ 158

ಆ ನಿರ್ವಿಷಯ ಸ್ಥಿತಿಯ ನೋಡಿದವರು । ಚಿಕ್ಕ ದೊಡ್ಡವರೆಲ್ಲ ಚಕಿತರಾಗುವರು ।
ಚಿಕ್ಕ ವಯಸಿನ ಸುಂದರ ಮೂರ್ತಿಯನೆಲ್ಲರು । ಕೌತುಕ ಮಾಡುವರು ಪ್ರೀತಿಯಿಂದ ॥ 159

ದೇಹ ವ್ಯಾಪಾರವು ಜ್ಞಾನಿಯದು । ಪೂರ್ವ ಕರ್ಮಾನುಸಾರ ನಡೆಯುವದು ।
ಅವನಿಗೆ ಪ್ರಾರಬ್ಧ ಕರ್ಮದ ಭಾರವಿರದು । ಕರ್ಮಕರ್ತಾರರೂ ಅವರಲ್ಲ ॥ 160

ಕತ್ತಲಲ್ಲಿ ಸೂರ್ಯನ ಗಮನವಾದಾಗ । ದ್ವೈತಭಾವ ಬಂದೀತು ಜ್ಞಾನಿಗಾಗ ।
ಸ್ವಸ್ವರೂಪದಲೇ ವಿಶ್ವ ತುಂಬಿರುವಾಗ । ಅದ್ವೈತವೇ ಇರುವದೆಲ್ಲಿಯೂ ॥ 161

ಈ ಗುರುಶಿಷ್ಯರ ಆಚರಣೆಯನು । ಸಾಯಿನಾಥರ ಪರಮಭಕ್ತನು ।
ಮ್ಹಾಳಸಾಪತಿಯು ಹೇಳಿದನು । ಅದನೇ ಸಾದ್ಯಂತ ಹೇಳಿರುವೆ ॥ 162

ಇರಲಿ ಇನ್ನೀ ಅಭ್ಯಾಸ । ಮುಂದಿನ ಚರಿತ್ರೆ ಇದಕೂ ಗಹನ ।
ಆದೀತು ಯಥಾಕ್ರಮ ಕಥನ । ಸಾವಧಾನರಾಗಿರಿ ಕೇಳಲು ॥ 163

ಮೊದಲು ಮಶೀದೆಯು ಹೇಗಿತ್ತು । ಎಷ್ಟು ಕಷ್ಟದಿಂದ ಕಲ್ಲು ಹಾಸಲಾಯಿತು ।
ಯಾರಿಗೂ ಸರಿಯಾಗಿ ತಿಳಿಯದಾಗಿತ್ತು । ಸಾಯಿಯು ಹಿಂದುವೋ ಯವನನೋ ಎಂದು ॥ 164

ಧೋತಿ ಪೋತಿ ಖಂಡಯೋಗ । ಮಾಡುವರು ಭೋಗಿಸುವರು ಭಕ್ತರ ಭೋಗ ।
ಈ ಎಲ್ಲದರ ನಿವೇದನೆ ಯಥಾಸಂಗ । ಆಗುವದು ಇನ್ನು ಮುಂದೆಲ್ಲ ಅದು ॥ 165

ಹೇಮಾಡನು ಸಾಯಿಗೆ ಶರಣ । ಚರಣ ಪ್ರಸಾದ ಈ ಕಥಾನಿರೂಪಣ ।
ಶ್ರವಣದಿಂದಾದೀತು ದುರಿತ ನಿವಾರಣ । ಪುಣ್ಯಪಾವನ ಕಥೆ ಇದನು ॥166

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ । ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಶ್ರೀ ಸಾಯಿ ಪುನಃ ಪ್ರಕಟೀಭವನಂ ನಾಮ । ಪಂಚ ಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

72·1





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಆರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಪರಮಾರ್ಥ ಇಧಿಲ್ಲವೇ ಸಂಸಾರವೇ ಇರಲಿ । ಎಲ್ಲಿ ಸದ್ಗುರುವೇ ಕರ್ಣಧಾರನಾಗಿರಲು ।
ಅದೇ ದೋಣಿಯು ಪರತೀರ ಮುಟ್ಟಲು । ಮನುಜರಿಗೆ ಸಹಾಯಕವಾದೀತು ॥ 1

ಸದ್ಗುರುವೆಂಬ ಶಬ್ದ ಮಾಡಲು ಮನದಲ್ಲಿ । ಬಂದೇ ನಿಲ್ಲುವರು ಎದುರಿನಲಿ ।
ನಿಜಹಸ್ತವನು ಶಿರದಲ್ಲಿ । ಇಟ್ಟು ಉದ್ಧರಿಸುವರವರು ॥ 2

ಧುನಿಯೊಳಗಿನ ಉದಿಯ ಜೊತೆಯಲ್ಲಿ । ವರದ ಹಸ್ತವನಿಡಲು ಶಿರದಲಿ ।
ಹೃದಯ ಬಿರಿಯುವದು ಸ್ವಾನಂದದಲಿ । ನಯನದಿ ಪ್ರೀತಿಯು ಹರಿಯುವುದು ॥ 3

ಪ್ರಳಯಾಗ್ನಿಯಲ್ಲಿಯೂ ಸುಡದ । ಜ್ವಲನವಾಗುವದು ಆ ಸೂಕ್ಷ್ಮದೇಹದ ।
ಭಸ್ಮವಾಗುವದವರ ಕರಸ್ಪರ್ಶದಿಂದ । ಹೀಗೆ ಆಶ್ಚರ್ಯಮಯ ಗುರುಹಸ್ತ ಸ್ಪರ್ಶ ॥ 4

ತಪ್ಪಿ ದೇವರ ಕಥಾ-ವಾರ್ತೆಯು ನಡೆಯಲು । ನೋಯತೊಡಗುವದು ತಲೆಯು ।
ಬಾಷ್ಕಳತೆ ಪ್ರವಹಿಸುವದು ನುಡಿಯು । ಅವರಿಗೂ ಸ್ಥಿರತೆ ಸಿಗಲೆಂದು ॥ 5

ಶಿರದಲಿಡಲು ಕರಕಮಲ । ಅನೇಕ ಜನ್ಮಗಳಿಂದ ಪರಿಪಕ್ವವಾದ ಮಲ ।
ತೊಳೆದುಹೋಗಿ ಆಗುವರು ನಿರ್ಮಲ । ಪ್ರೇಮಳ ಸಾಯಿಯ ಭಕ್ತರು ॥ 6

ಆ ಮುದ್ದುರೂಪವ ನೋಡಲು । ಆನಂದದಿಂದ ಬಿಗಿಯುವದು ಗಂಟಲು ।
ಆನಂದದಲಿ ಹನಿಗೂಡುವವು ನಯನಗಳು । ಹೃದಯದಲಿ ಅಷ್ಟ ಭಾವಗಳು ಮೂಡುವವು ॥7

ಸೋಹಂಭಾವವ ಎಚ್ಚರಿಸುತ । ನಿಜನಂದವ ಪ್ರಕಟಿಸುತ ।
ನಾ, ನೀ ನೆಂಬದನಲ್ಲಿಯೇ ಕರಗಿಸುತ । ಸಾಮರಸ್ಯದಲಿ ಅದ್ವೈತ ಮೆರೆಯುವರು ॥8

ಪೋಥಿಪುರಾಣಗಳ ಓದುತ್ತಿರಲೂ । ಸದ್ಗುರು ಸ್ಮರಣೆ ಪದ ಪದದಲ್ಲೂ ।
ರಾಮಕೃಷ್ಣರೆಲ್ಲ ಸಾಯಿಯೇ ಆಗಿರಲು । ನಿಜ ಚರಿತ್ರೆಯನೇ ಶ್ರವಣ ಮಾಡಿಸುವನು ॥ 9

ಕುಳಿತು ಕೊಳ್ಳಲು ಭಾಗವತವನಾಲಿಸಲು । ಕೃಷ್ಣನೇ ಸಾಯಿಯು ನಖಶಿಖದಲೂ ।
ಭಕ್ತರ ನಿಜಹಿತ ಸಾಧಿಸಲು । ಎನಿಸುವದು ಉದ್ಧವ ಗೀತೆಯ ಹಾಡುವನು ॥ 10

ಸಹಜ ಮಾತಾಡುತ್ತ ಕುಳಿತಿರಲು । ಅಲ್ಲಿಯೂ ಸಾಯಿನಾಥರ ಕಥೆಗಳು ।
ಅಕಲ್ಪಿತವಾಗಿ ನೆನಪಾಗಲು । ಯೋಗ್ಯ ದೃಷ್ಟಾಂತವೂ ಸಾಯಿಯವೇ ॥ 11

ಹಾಳೆ ಹಿಡಿದು ಕುಳಿತರೂ ಬರೆಯಲೆಂದು । ಅಕ್ಷರಕ್ಕೆ ಅಕ್ಷರ ಹೊಂದಿಸಲು ಬಾರದು ।
ಆದರವನೇ ಸ್ವ ಸತ್ತೆಯಿಂದ ಬರೆಸುವನು । ಆಗ ಬರೆದಷ್ಟೂ ಮುಗಿಯದಂತಾಗುವದು ॥ 12

ಅಹಂಭಾವವು ತಲೆ ಎತ್ತಿದಲ್ಲಿ । ಕೆಳಕ್ಕೆ ಅದುಮುವರದನು ತಮ್ಮ ಕರಗಳಲಿ ।
ಅದರ ಮೇಲೆ ನಿಜಶಕ್ತಿಪಾತ ಮಾಡುತಲಿ । ಶಿಷ್ಯನ ಕೃತಾರ್ಥ ಮಾಡುವರು ॥ 13

ಕಾಯಾ ವಾಚಾ ಮನಗಳಿಂದಲೂ । ಸಾಯಿ ಸಮರ್ಥರಿಗೆ ಸಾಷ್ಟಾಂಗವೆರಗಲು ।
ಧರ್ಮ-ಅರ್ಥ-ಕಾಮ-ಮೋಕ್ಷಗಳು । ತನ್ನಷ್ಟಕ್ಕೇ ಕೈ ಗೆಟರುವವು ॥ 14

ಕರ್ಮ-ಜ್ಞಾನ-ಯೋಗ-ಭಕ್ತಿಗಳು । ಇವು ನಾಲ್ಕು ಈಶ್ವರ ಪ್ರಾಪ್ತಿಯ ಮಾರ್ಗಗಳು ।
ಈ ನಾಲ್ಕು ನಾಲ್ಕು ದಿಕ್ಕುಗಳಿಗ್ಹೋಗಲೂ । ಆದರೂ ನಿಜಸ್ಥಾನಕೆ ತಲುಪಿಸುವವು ॥ 15

ಜಾಲೀಬನದಲ್ಲಿಯ ದಾರಿ ಈ ಭಕ್ತಿಯಾಗಿರಲು । ತಗ್ಗು ಗುಂಡಿಗಳಿಂದ ಬಿಕ್ಕಟ್ಟು ಬಲು ।
ಇದರಲಿ ಸರಿಯಾಗಿ ಒಂದು ಹೆಜ್ಜೆ ನಡೆಯಲು । ಹರಿಯ ಹತ್ತಿರವೇ ಕರೆದೊಯ್ಯುವದು ॥ 16

ಮುಳ್ಳು ತಪ್ಪಿಸಿ ಇಡಲು ಹೆಜ್ಜೆಯ । ಇದೇ ಒಂದು ಸುಲಭ ಉಪಾಯ ।
ನಿಜಧಾಮ ಪಡೆಯುವಿರಿ ನಿರ್ಭಯ । ಗುರುಮಾತೆ ಇದನೆ ಹೇಳುವಳು ಒತ್ತಿ ॥ 17

ಮನದ ತೋಟಕೆ ಭಕ್ತಿಯ ಜಲವನ್ನು ಸಿಂಚಿಸಲು । ವೈರಾಗ್ಯ ಚಿಗುರಲು ಜ್ಞಾನದ ಹೂವುಅರಳಲು ।
ಕೈವಲ್ಯ ಫಲಿಸುವದು ಚಿತ್ಸುಖವು ಉಕ್ಕುವದು । ಅಂಥವರ ಜನ್ಮ ಮರಣ ತಪ್ಪುವದು ನಿಶ್ಚಯ ॥ 18

ಮೂಲದಲಿ ಪರಮಾತ್ಮನನು ಸ್ವಯಂಸಿದ್ಧ । ಸಚ್ಚಿದಾನಂದನವನೇ ಇರುವ ತ್ರಿವಿಧ ।
ಉಪಾಧಿಯೋಗದಿಂದಾದ ಪ್ರಬುದ್ಧ । ಭಕ್ತರಿಗೆ ಬೋಧಿಸಲು ಪ್ರಕಟನಾದ ॥ 19

ಈ ತ್ರೈಗುಣ್ಯಗಳಲಿ ಆಗುವನು ವ್ಯಕ್ತ । ಮಾಯೆಯೂ ಆಗುವನು ಕ್ರಿಯಾಪ್ರಯುಕ್ತ ।
ಸತ್ವರಜ ತಮಗಳನು ಆಡಿಸುತ । ನಿಜಗುಣವ ಮಾಡುವನು ಸುವ್ಯಕ್ತ ॥ 20

ಮೃತ್ತಿಕೆಯ ವಿಶಿಷ್ಠ ಆಕಾರವನು । ಘಟವೆಂದು ನಿಜದಲಿ ಕರೆವರದನು ।
ಘಟ ಒಡೆಯಲು ಹೊಂದಿ ವಿಕಾರವನು । ನಾಮರೂಪಗಳು ಲಯವಾಗುವವು ॥ 21

ಈ ಅಖಿಲ ಜಗತ್ತೇ ಮಾಯೆಯಲ್ಲಿ । ಪರಸ್ಪರ ಕಾರ್ಯಕಾರಣ ಭಾವದಲಿ ।
ಮಾಯೆಯೇ ಉದ್ಭವಿಸಿರುವಳು ಇಲ್ಲಿ । ಸಾವಯವ ಜಗರೂಪಳಾಗಿ ॥ 22

ಜಗದ ಮೊದಲು ಮಾಯೆಯ ಇರುವು । ನೋಡ ಹೋಗಲು ಇಲ್ಲ ವ್ಯಕ್ತವು ।
ಪರಮಾತ್ಮ ರೂಪದಲ್ಲಿಯೇ ಅವಳ ಇರುವು । ಲೀನವಾಗಿ ಅವ್ಯಕ್ತದಲಿ ನೆಲೆಸಿದಳು ॥ 23

ವ್ಯಕ್ತವಾದರೂ ಆದು ಪರಮಾತ್ಮ ರೂಪ । ಅವ್ಯಕ್ತವಾಗಿದ್ದರೂ ಪರಮಾತ್ಮ ರೂಪ ।
ಹೀಗೆ ಈ ಮಾಯೆಯೇ ಪರಮಾತ್ಮ ರೂಪ । ಪರಮಾತ್ಮನಿಂದ ಅಭೇದಳಿವಳು ॥ 24

ತಮೋಗುಣದಿಂದ ಮಾಯೆಯು ತಾನು । ನಿರ್ಮಿಸಿದಳು ಜಡ ಪದಾರ್ಥವನು ।
ಚಲನವಲನರಹಿತ ನಿರ್ಜೀವವನ್ನು । ಈ ಕ್ರಿಯೆಯು ಪ್ರಥಮದಲಿ ಜರುಗಿತು ॥ 25

ಬಳಿಕ ಮಾಯೆಯ ರಜೋಗುಣದೊಳು । ಪರಮಾತ್ಮ ಚಿದ್ಗುಣದ ಮಿಲನವಾಗಲು ।
ಇಬ್ಬರ ಸ್ವಭಾವ ಗುಣಗಳು । ಅದರಿಂದ ಚೈತನ್ಯಖಣಿ ಬಯಲಾಯಿತು ॥ 26

ಮುಂದೆ ಈ ಮಾಯೆಯ ಸತ್ವಗುಣ । ಅದರಿಂದ ಭಕ್ತಿತತ್ವದ ನಿರ್ಮಾಣ ।
ಅಲ್ಲಿ ಪರಮಾತ್ಮನ ಆನಂದಗುಣ । ಕೂಡಿಕೊಳ್ಳಲು ಸಂಪೂರ್ಣವಾಯಿತು ಈ ಆಟ ॥ 27

ಈ ರೀತಿ ಮಾಯೆ ಮಹಾವಿಕಾರಿ ಇರಲು । ಕ್ರಿಯೋಪಾಧಿಗಳ ಸ್ವೀಕರಿಸಲು ।
ಪೂರ್ವೋಕ್ತ ಪದಾರ್ಥಗಳ ಮಾಡಲು । ಅದುವರೆಗೆ ಅವ್ಯಕ್ತ ತ್ರಿಗುಣವು ॥ 28

ಕ್ರಿಯೆಯನೇನಾದರೂ ಗುಣಾನುರೂಪವಾಗಿ । ಮಾಯೆಯು ವ್ಯಕ್ತ ಮಾಡದಿರಲಾಗಿ ।
ಉಳಿಯಬಹುದು ಅವ್ಯಕ್ತವಾಗಿ । ಸ್ವತಃ ಅಕ್ರಿಯತ್ವವ ಸೇವಿಸುವವರೆಗೆ ॥ 29

ಮಾಯೆಯು ಪರಮಾತ್ಮನ ಕಾರ್ಯ । ಜಗವು ಆ ಮಾಯೆಯ ಕಾರ್ಯ ।
'ಸರ್ವಂ ಖಲ್ವಿದಂ ಬ್ರಹ್ಮತ್ವದ' ಕಾರ್ಯ । ಮೂರರ ಐಕ್ಯವೇ ಇದಾಗಿದೆ ॥ 30

ಹೀಗಿರುವ ಅಭೇದ ಪ್ರತೀತಿ ಇದು । ನಿಶ್ಚಿತವಾಗಿ ಯಾತರಿಂದ ಪ್ರಾಪ್ತವಾಗುವದು ।
ಈ ಉತ್ಕಟೇಚ್ಛೆಯು ಯಾರಲ್ಲಿರುವದು । ಅವರು ವೇದಶೃತಿಗಳ ನೋಡಬೇಕು ॥ 31

ಸಾರಾಸಾರ ವಿಚಾರಶಕ್ತಿ । ವೇದಶಾಸ್ತ್ರ-ಶೃತಿ-ಸ್ಮೃತಿ ।
ಗುರುವೇದಾಂತ ವಾಕ್ಯ ಪ್ರತೀತಿ । ಪರಮಾನಂದ ಪ್ರಾಪ್ತಿಯನೀಯುವದು ॥ 32

ನನ್ನ ಭಕ್ತರ ಮನೆಗಳಲ್ಲಿಲ್ಲ । ಅನ್ನ ವಸ್ತ್ರದ ಕೊರತೆ ಇಲ್ಲ ।
ಎಂಬ ಭರವಸೆಯ ಶ್ರೀಸಾಯಿ ಕೊಡುವರಲ್ಲ । ಭಕ್ತರಿಗೆ ಯಾವಾಗಲೂ ಕರಗತರವರು ॥ 33

ಅನನ್ಯ ಭಾವದಿಂದ ನನ್ನ ಭಜಿಸುವದು । ನಿತ್ಯಾಭಿಯುಕ್ತ ಮನದಿಂದ ನನ್ನ ಸೇವೆಗೈಯುವದು ।
ಅಂಥವರ ಯೋಗಕ್ಷೇಮ ನೋಡಿಕೊಳ್ಳುವುದು । ಈ ನನ್ನ ಬಿರುದನ್ನು ನಾ ತಿಳಿದಿಹೆ ॥ 34

ಇದೇ ಭಗವದ್‌ಗೀತಾ ವಚನ । ಸಾಯಿ ಎನ್ನುವರು ತಿಳಿಯಿರಿದನು ಪ್ರಮಾಣ ।
ಅನ್ನ ವಸ್ತ್ರದ ಕೊರತೆ ಇಲ್ಲವೆನ್ನುದದನ । ಅದಕಾಗಿಯೇ ಪ್ರಾಣವಿಡಬೇಡಿರಿ ॥ 35

ದೇವದ್ವಾರದಲಿ ಮರ್ಯಾದೆಯಾಗಬೇಕು । ದೇವರೆದುರು ಸೆರಗೊಡ್ಡಬೇಕು ।
ಅವನ ಪ್ರಸಾದವನ್ನೇ ಪಡೆಯಬೇಕು । ಲೌಕಿಕದ ಮರ್ಯಾದೆ ಬಿಟ್ಟು ಬಿಡಿರಿ ॥ 36

ಜನರಿಂದ ಹೌದೆನಿಸಿಕೊಂಡರೇನು । ಅದರಿಂದ ತಪ್ಪು ಸುಧಾರಿಸುವದೇನು? ।
ಚಿತ್ತದಿ ಕರಗಿಸಬೇಕು ಆರಾಧ್ಯದೈವತ್ವವನು । ಮೈಯೆಲ್ಲ ಬೆವರಿಳಿಯುತಿರಬೇಕು ॥ 37

ಈ ಧ್ಯೇಯದ್ದೇ ರುಚಿ ಹತ್ತಲಿ । ಇಂದ್ರಿಯಗಳು ಭಕ್ತಿಯಲಿ ಹುಚ್ಚಾಗಲಿ ।
ಇಂದ್ರಿಯ ವಿಕಾರಗಳಿಗೆ ಭಕ್ತಿಯ ಮೊಳಕೆ ಬರಲಿ । ಇನ್ನೇನು ಬಯಕೆ ಉಳಿದೀತು ॥ 38

ಸದೈವ ಹೀಗೆ ಭಜನ ಸಿಗಲಿ । ಬೇರೆ ಏನೇನೂ ಸೇರದಿರಲಿ ।
ಮನಸು ನನ್ನ ನಾಮಸ್ಮರಣೆಯಲಿ ತೊಡಗಲಿ । ಮರೆತು ಹೋಗಲಿ ಉಳಿದುದೆಲ್ಲ ॥ 39

ಇಲ್ಲ ಆಮೇಲೆ ದೇಹ-ಗೇಹ-ವಿತ್ತ । ಪರಮಾನಂದದಲಿ ಮುಳುಗೀತು ಚಿತ್ತ ।
ಮನಸು ಸಮದರ್ಶಿ ಮತ್ತು ಪ್ರಶಾಂತ । ಪರಿಪೂರ್ಣವಾಗುವದು ನಿಶ್ಚಿತ ॥ 40

ಸತ್ಸಂಗ ಮಾಡಿದ್ದರ ಗುರುತು ಇಲ್ಲಿ । ಸಮಾಧಾನವಿರಬೇಕು ವೃತ್ತಿಯಲ್ಲಿ ।
ಮನ ತಿರುಗುವುದು ನಾನಾ ಕಡೆಗಳಲಿ । ಅದು ತಾನೆ 'ಸಲ್ಲೀನತೆ' ಎನಿಸೀತೆ ॥ 41

ಅದಕಾಗಿ ಕೇಳಿರಿ ಆಗಿ ಸಾವಧಾನ । ಶ್ರೋತೃಗಳು ಭಾವಾರ್ಥ ಕೇಳಲೀ ನಿರೂಪಣಾ ।
ಮಾಡಲು ಈ ಸಾಯಿ ಕಥೆ ಶ್ರವಣ । ಭಕ್ತಿ ಪ್ರವಣ ಮನವಾದೀತು ॥ 42

ಕಥೆಗಳ ಕೇಳಿ ಆದೀತು ತೃಪ್ತಿ । ಚಂಚಲ ಮನ ಪಡೆದೀತು ವಿಶ್ರಾಂತಿ ।
ಮನಸಿನ ಕಳವಳದ ನಿವೃತ್ತಿ । ಸುಖ ಸಂವಿತ್ತಿಯ ಪಡೆಯುವಿರಿ ॥ 43

ಇನ್ನು ಹಿಂದಿನ ಕಥಾನುಸಂಧಾನ । ಮಶೀದೆಯ ಜೀರ್ಣೋಧ್ಧಾರಣ ।
ರಾಮಜನ್ಮದ ಕಥಾ ಕೀರ್ತನ । ನಿರೂಪಣವ ಸಾಗಿಸುವ ಮುಂದಕೆ ॥ 44

ಭಕ್ತನೊಬ್ಬ ಗೋಪಾಳ ಗುಂಡ । ಅವನಿಗೆ ಬಾಬಾರ ಭಕ್ತಿ ಉದಂಡ ।
ಮುಖದಲಿ ಬಾಬಾರ ನಾಮ ಅಖಂಡ । ಕಾಲಕ್ರಮಣವು ಈ ರೀತಿಯಲಿ ॥ 45

ಅವನಿಗಿರಲಿಲ್ಲ ಸಂತಾನ ಒಂದೂ । ಮುಂದೆ ಸಾಯಿ ಪ್ರಸಾದದಿಂದೊಂದು ।
ಪುತ್ರರತ್ನವನು ಪಡೆದು । ಚಿತ್ತ ಪ್ರಸನ್ನವಾಯಿತು ॥ 46

ಒಂದು ಜಾತ್ರೆ ಅಥವಾ ಉರುಸ । ಮಾಡಿಸಬೇಕು ಶಿರಡಿಯಲಿ ಪ್ರತಿವರುಷ ।
ಅದರಿಂದ ಜನರಿಗಾದೀತು ಹರುಷ । ಎಂಬ ವಿಚಾರ ಗೋಪಾಳಗುಂಡನಿಗೆ ಬಂದಿತು ॥ 47

ತಾತ್ಯಾಕೋತೆ ದಾದಾಕೋತೆ ಇವರಿಗೂ । ಮಾಧವರಾವಾದಿ ಪ್ರಮುಖ ಜನರಿಗೂ ।
ಹಿಡಿಸಿತೀ ವಿಚಾರ ಎಲ್ಲರಿಗೂ । ಸಿದ್ಧತೆಯ ಮಾಡತೊಡಗಿದರು ॥ 48

ಮೊದಲೊಂದು ನಿಯಮ ನಿರ್ಬಂಧನ । ಜಿಲ್ಹಾಧಿಕಾರಿಗಳ ಅನುಮೋದನ ।
ಅವಶ್ಯ ಮಾಡಬೇಕು ಸಂಪಾದನ । ಈ ವಾರ್ಷಿಕ ಉತ್ಸವ ಮಾಡಲು ॥ 49

ತದರ್ಥ ಕಾರ್ಯ ಆರಂಭಿಸಲು । ಊರಲೊಬ್ಬ ಕುಲಕರ್ಣಿ ಇರಲು ।
ಕುತ್ಸಿತತನದಿಂದ ತಿರುಗಿ ಬೀಳಲು । ಕಾರ್ಯಕ್ಕೆ ಅಡ್ಡಿ ಒದಗಿತು ॥ 50

ಕುಲಕರ್ಣಿಯು ಅಡ್ಡಿ ಮಾಡಿದನು । ನೋಡಿರಿ ಅದರ ಪರಿಣಾಮವನು ।
ಜಿಲ್ಹೆಯವರು ಹೊರಡಿಸಿದರು ಆಜ್ಞೆಯನು । ಶಿರಡಿಯಲಿ ಜಾತ್ರೆ ಮಾಡದಿರಲು ॥ 51

ಶಿರಡಿಯಲಿ ಜಾತ್ರೆಯಾಗಲೆಂದು । ಇಚ್ಛೆ ಇದ್ದಿತು ಬಾಬಾರದೂ ।
ಅದಕ್ಕಾಗಿಯೇ ಆಜ್ಞೆಯನಿತ್ತುದು । ಪೂರ್ಣ ಆಶೀರ್ವಾದದೊಂದಿಗೆ ॥ 52

ಗ್ರಾಮಸ್ಥರು ಅದಕೆ ಬೆನ್ನು ಹತ್ತಿದರು । ಪ್ರಾಣಕ್ಕಿಂತ ಹೆಚ್ಚು ಪ್ರಯತ್ನ ಮಾಡಿದರು ।
ಅಧಿಕಾರಿಗಳು ಆಜ್ಞೆ ಬದಲಿಸಿದರು । ಜನರ ಮರ್ಯಾದೆಯೂ ಉಳಿಯಿತು ॥ 53

ಬಾಬಾರ ಇಷ್ಟದಂತೆ ರಾಮನವಮಿಯಂದು । ಅಂದಿನಿಂದಿನವರೆಗೂ ಜಾತ್ರೆ ನಡೆಯುವುದು ।
ವ್ಯವಸ್ಥೆ ಇತ್ತು ತಾತ್ಯಾಕೋತೆಯದು । ಜಾತ್ರೆ ಕೂಡುವದು ಅಪರಂಪಾರ ॥ 54

ಅದೇ ರಾಮನವಮಿಯ ದಿನದಿ । ಭಜನ ಪೂಜನ ಸಮಾರಂಭದಿ ।
ತಾಸೆ ಬಜಂತ್ರಿಗಳಿಂದ ಕೂಡಿ । ಯಾತ್ರೆ ನಾಲ್ಕೂರಿಗೂ ದೊಡ್ಡದು ॥ 55

ವರ್ಷಕ್ಕೆರಡು ಹೊಸ ನಿಶಾನೆಗಳ ತಂದು । ಸಮಾರಂಭದೊಡನೆ ಅವುಗಳ ಮೆರೆಸುವದು ।
ಮಶೀದಿಯ ಕಳಸಕ್ಕೆ ಅವುಗಳ ಕಟ್ಟುವದು । ಕೊನೆಗೆ ಅಲ್ಲಿಯೇ ಅವುಗಳನು ಊರುವದು ॥ 56

ಅದರಲೊಂದು ನಿಶಾನೆ ನಿಮೋಣಕರರದು । ಇನ್ನೊಂದು ದಾಮೂಅಣ್ಣಾ ಅವರದು ।
ಸಡಗರದ ಮೆರವಣಿಗೆ ನಡೆಯುವದು । ಕಳಸದ ತುದಿಯಲಿ ಹಾರಾಡುವವು ॥ 57

ಮುಂದೆ ಉತ್ಸವ ರಾಮನವಮಿಯಂದು । ಉರುಸದೊಳಗೆ ಹೇಗೆ ಕೂಡಿತೆಂಬುದು ।
ಕೇಳಿರೀ ಅಭಿನವ ಕಥೆಯೊಂದು । ಸ್ವಾನಂದಗೌರವ ಶಿರಡಿಯದು ॥ 58

ಶಕೆ ಹದಿನೆಂಟು ನೂರಾ ಮೂವತ್ತೂರರಲ್ಲಿ । ಮೊದಲ ರಾಮನವಮಿಯ ಆರಂಭದಲ್ಲಿ ।
ಹುಟ್ಟಿಕೊಂಡಿತು ಉರುಸುನಲ್ಲಿ । ಅದಿನಿಂದಿನವರೆಗೂ ಅದು ನಡೆದಿದೆ ॥ 59

ಪ್ರಸಿದ್ಧರಾದ ಕೃಷ್ಣಜೋಗೇಶ್ವರ ಭೀಷ್ಮ । ಅವರಿಂದಲೇ ಈ ಕಲ್ಪನೆಯ ಉಗಮ ।
ಮಾಡಬೇಕು ರಾಮಜನ್ಮೋಪಕ್ರಮ । ಅದರಿಂದ ಕಲ್ಯಾಣವಾಗುವದು ॥ 60

ಅಲ್ಲಿಯವರೆಗೆ ಕೇವಲ ಉರುಸಕ್ಕಾಗಿ । ಜಾತ್ರೆ ಕೂಡುತಿತ್ತು ಹೆಚ್ಚಾಗಿ ।
ಅದರಿಂದ ಈ ಜನ್ಮೋತ್ಸವದ ಉದಯವಾಗಿ । ಆ ವರುಷ ಅಂದವಾಗಿ ಜರುಗಿತು ॥61

ಒಮ್ಮೆ ಸ್ವಸ್ಥಚಿತ್ತರಾಗಿ ಭೀಷ್ಮರು । ವಾಡೆಯಲ್ಲಿ ಕುಳಿತಿದ್ದರು
ಪೂಜಾ ಸಾಹಿತ್ಯದೊಡನೆ ಕಾಕಾ ಹೊರಟಿದ್ದರು । ಮಶೀದಿಗೆ ಹೋಗಲು ಸಿದ್ಧರಾಗಿ ॥ 62

ಸಾಯಿ ದರ್ಶನದ ಇಚ್ಛೆ ಒಳಗೆ । ಉರುಸಕ್ಕೆ ಹೋಗುವದು ತೋರಿಕೆಗೆ ।
ಕಾಕಾ ಒಂದು ದಿನ ಮುಂಚಿತವಾಗೇ । ಶಿರಡಿಗೆ ಉತ್ಸವಕೆ ಹಾಜರು ॥ 63

ಸರಿಯಾದ ಸಮಯವಿದು ಎನಿಸಿದಾಗ್ಗೆ । ಭೀಷ್ಮರು ಕೇಳಿದರು ಕಾಕಾಗೆ ।
ಸದ್ವೃತ್ತಿಯೊಂದು ಸ್ಫುರಿಸಿದೆ ಒಳಗೆ । ಸಹಾಯ ಮಾಡುವಿರಾ ನನಗೆ ಇದಕೆಂದು ॥64

ಇಲ್ಲಿ ವರ್ಷಕ್ಕೊಮ್ಮೆ ಉರುಸಕೂಡುವದು । ರಾಮಜನ್ಮವೂ ಅದೇ ದಿನದಂದು ।
ಎಂದ ಮೇಲೆ ಜನ್ಮೋತ್ಸವ ಜರುಗಿಸುವದು । ಒಳ್ಳೇ ಸುಸಮಯವಿದು ಅನಾಯಾಸದಿ ಒದಗಿದೆ ॥ 65

ಕಾಕಾಗೆ ಈ ವಿಚಾರ ಹಿಡಿಸಿತು ಕೂಡಲೇ । ಆದರೆ ಅದು ಅವಲಂಬಿಸಿದೆ ಬಾಬಾರ ಆಜ್ಞೆಯ ಮೇಲೆ ।
ಅವರು ಆಗಲಿ ಎಂದ ಮೇಲೆ । ಕಾರ್ಯಕ್ಕೇನೂ ತಡವಿಲ್ಲ ॥ 66

ಆದರೆ ಉತ್ಸವಕ್ಕೆ ಬೇಕು ಕೀರ್ತನ । ಉದ್ಭವಿಸಿತು ಇದೊಂದು ಪ್ರಶ್ನ ।
ಈ ಹಳ್ಳಿಯೂರಲ್ಲಿ ಹರಿದಾಸರನ । ತರುವದೆಲ್ಲಿಂದ ಎಂಬುದು ॥ 67

ಭೀಷ್ಮರೆಂದರು ನಾ ಕೀರ್ತನಕಾರ । ನೀವು ಹಿಡಿರಿಯ ಪೇಟಿಯ ಸ್ವರ ।
ಪ್ರಸಾದ ಮಾಡಿಸುವ ಭಾರ । ಹಾಕುವ ರಾಧಾಕೃಷ್ಣಾಬಾಯವರಿಗೆ ॥ 68

ನಡೆಯಿರಿನ್ನು ಬಾಬಾರ ಹತ್ತಿರ । ಶುಭ ಕಾರ್ಯಕ್ಕೆ ಮಾಡಬೇಕು ಅವಸರ ।
ಶುಭಕ್ಕೆ ಶೀಘ್ರತ್ವ ಕೂಡಿದರೆ । ಕೂಡಲೇ ಕಾರ್ಯ ಸಾಧಿಸುವದು ॥ 69

ತಾವು ಹೊರಡಬೇಕಿನ್ನು ಕೇಳಲು । ಕೀರ್ತನಕೆ ಆಜ್ಞೆಯ ಪಡೆಯಲು ।
ಹೀಗೆನುವಾಗಲೇ ಮಶೀದಿಯಲಿ । ಇಬ್ಬರೂ ಆ ಕಾಲಕೆ ಬಂದರು ॥ 70

ಕಾಕಾ ಪೂಜೆ ಆರಂಭಿಸಿದರು । ಆಗ ಬಾಬಾರೇ ಪ್ರಶ್ನೆ ಕೇಳಿದರು ।
ವಾಡೆಯಲಿ ನಡೆದ ವಿಚಾರವೇನೆಂದರು । ಕಾಕಾಗೆ ಒಂದೂ ತೋಚದು ॥ 71

ಕೂಡಲೇ ಬಾಬಾ ಅನ್ಯ ರೀತಿಯಲ್ಲಿ । ಪ್ರಶ್ನೆ ಕೇಳಿದರು ಭೀಷ್ಮರಲ್ಲಿ ।
ಏನು ನಡೆದಿದೆ ಬುವಾರ ಮನದಲ್ಲಿ । ಎಂದು ಕೇಳಿದರವರಿಗೆ ॥ 72

ನೆನಪಾಯಿತು ಆಗ ಕಾಕಾರಿಗೆ । ಉದ್ದಿಷ್ಟಾರ್ಥ ನೀವೇದಿಸುವ ಬಗ್ಗೆ ।
ಒಪ್ಪಿಗೆಯಾಯಿತು ಬಾಬಾರ ಮನಸಿಗೆ । ಉತ್ಸವ ಮಾಡುವದ ನಿಶ್ಚಯಿಸಿದರು ॥ 73

ಮರುದಿನ ಪ್ರಾತಃಕಾಲದಿ । ಬಾಬಾ ಲೇಂಡಿಗೆ ಹೋದದ್ದು ನೋಡಿ ।
ಕೀರ್ತನದ ಸಿದ್ಧತೆಯನು ಮಾಡಿ । ಸಭಾ ಮಂಟಪದಿ ತೊಟ್ಟಿಲ ಕಟ್ಟಿದರು ॥ 74

ಹೊತ್ತಿಗೆ ಸರಿಯಾಗಿ ಶ್ರೋತೃಗಳು ಕೂಡಿದರು । ಬಾಬಾ ಮರಳಿ ಬರಲು ಭೀಷ್ಮರು ಎದ್ದರು ।
ಕಾಕಾ ಪೇಟಿಗೆ ಸ್ವರ ಹಿಡಿದರು । ಕರೆಯ ಕಳಿಸಿದರು ಬಾಬಾರನು ॥ 75

ಬಾಬಾ ನಿಮ್ಮನು ಕರೆಯುವರೆನ್ನಲು । ಧಸ್ಸೆಂದಿತು ಕಾಕಾರ ಎದೆಯೊಳು ।
ಏನಾಯಿತೆಂದು ತಿಳಿಯದು ಮನದೊಳು । ಕಥೆಯು ಮಾತ್ರ ಮರೆಯದಿರಲೆಂದರು ॥ 76

ಬಾಬಾರ ನಿಮಂತ್ರಣ ಕೇಳಿದರು । ಕಾಕಾ ಅಲ್ಲಿಯೇ ಹೌಹಾರಿದರು ।
ಬಾಬಾರೇಕೆ ಕ್ಷುಬ್ಧರಾದರು । ನಿರ್ವಿಘ್ನ ಕೀರ್ತನೆ ನಡೆದೀತೇ ಎಂದು ॥ 77

ಮುಂದೆ ನಡೆವರು ಹಿಂದೆ ನೋಡುವರು । ಹೆದರುತ್ತ ಹೆದರುತ್ತ ಮೆಟ್ಟಲೇರುವರು ।
ಮೆಲ್ಲಮೆಲ್ಲಗೆ ಹೆಜ್ಜೆ ಹಾಕುವರು । ಬಲು ಚಿಂತೆಯಲಿ ಮುಳುಗಿದರು ಕಾಕಾ ॥ 78

ಬಾಬಾ ವಿಚಾರಿಸಿದರು ಅವನು । ಏತಕ್ಕೆ ಕಟ್ಟಿದಿರಿ ತೊಟ್ಟಿಲನು ।
ಕಥಾ ತಾತ್ಪರ್ಯ ಮತ್ತಂದಿನ ಯೋಜನೆಯನು । ಹೇಳಲು ಕೇಳಿ ಮನಕಾನಂದವಾಯಿತು ॥ 79

ಬಳಿಕಲ್ಲಿಯೇ ಹೂ ಮಾರುವವರ ಹತ್ತಿರ । ತೆಗೆದುಕೊಂಡು ಹೂವಿನ ಹಾರ ।
ಕಾಕಾರ ಕಂಠದಲ್ಲೊಂದು ಸುಂದರ । ಇನ್ನೊಂದನು ಭೀಷ್ಮರ ಕೊರಳಿಗೆ ಹಾಕಿದರು ॥ 80

ತೊಟ್ಟಿಲ ಬಗ್ಗೆ ಪ್ರಶ್ನೆ ಕೇಳಲು । ಬಿದ್ದರೆಲ್ಲರು ಚಿಂತೆಯೊಳು ।
ಆದರೆ ಕೊರಳಿಗೆ ಮಾಲೆ ಬೀಳಲು । ಎಲ್ಲರು ನಿಶ್ಚಿಂತರಾದರು ॥ 81

ಮೊದಲೇ ಭೀಷ್ಮರು ಬಹುಶ್ರುತರು । ವಿವಿಧ ಕಥಾ ಪಾರಂಗತರು ।
ರಸಭರಿತವಾಗಿ ಕೀರ್ತನೆ ಹೇಳಿದರು । ಅಪರಿಮಿತ ಆನಂದ ಶ್ರೋತೃಗಳಿಗೆ ॥ 82

ಬಾಬಾರು ಆಗ ಇದ್ದರು ಪ್ರಸನ್ನ ವದನ । ಎಂತು ಕೊಟ್ಟಿದ್ದರೋ ಅನುಮೋದನ ।
ಅಂತೆಯೇ ಮಾಡಿಸಿಕೊಂಡರು ಉತ್ಸವವನ । ಕೀರ್ತನೆ ಭಜನೆಗಳೊಡಗೂಡಿ ॥ 83

ರಾಮಜನ್ಮದ ಕಾಲದಲಿ । ಗುಲಾಲ ಬಿದ್ದಿತು ಬಾಬಾರ ಕಂಗಳಲಿ ।
ಅದರಿಂದವರು ನರಸಿಂಹಾವತಾರ ತಾಳುತಲಿ । ಕೌಸಲ್ಯಾ ಮಂದಿರದಲಿ ಶ್ರೀರಾಮನಿರುವಾಗ ॥ 84

ಗುಲಾಲದ್ದೊಂದು ಕೇವಲ ಆಮಿಷ । ರಾಮಜನ್ಮದ್ದೇ ಆ ಆವೇಶ ।
ಆದೀತು ಅಹಂ-ರಾವಣನ ನಾಶ । ದುರ್ವೃತ್ತಿ ರಾಕ್ಷಸರು ಸತ್ತಾರು ॥ 85

ಒಮ್ಮಿಂದೊಮ್ಮೇಲೆ ಬಂದಿತು ಕೋಪ । ಪ್ರತ್ಯಕ್ಷ ನರಸಿಂಹನದೇ ರೂಪ ।
ಸುರುವಾಯಿತು ಬೈಗುಳ ಮತ್ತು ಶಾಪ । ಇವುಗಳ ಮಳೆಗರಿಯಿತು ಸಾಕಷ್ಟು ॥ 86

ಇನ್ನು ತೊಟ್ಟಿಲೇ ತುಂಡಾದೀತೆಲ್ಲಿ । ಎಂಬ ಭೀತಿ ರಾಧಾಕೃಷ್ಣಳ ಮನದಲ್ಲಿ ।
ಇದು ಇನ್ನು ಸರಿ ಉಳಿದೀತೆ ಎಂಬ ಚಿಂತೆಯಲ್ಲಿ । ದಿಙ್ಮೂಢಳಾದಳವಳು ॥ 87

ತೊಟ್ಟಿಲನು ಬೇಗನೆ ಬಿಚ್ಚಲು । ಒಂದೇ ಸಮನೇ ಅವಳು ಬೆನ್ನು ಹತ್ತಲು ।
ಕಾಕಾ ತೊಟ್ಟಿಲವ ಬಿಚ್ಚಲು । ಮುಂದಕ್ಕೆ ಸರಿದರಾಗ ॥ 88

ಆದಕೆ ಬಾಬಾ ಅತಿ ಸಿಟ್ಟಾದರು । ಕಾಕಾನ ಮೈ ಮೇಲೆ ಏರಿ ಹೋದರು ।
ತೊಟ್ಟಿಲ ಬಿಚ್ಚುವದು ಬಿಟ್ಟುಬಿಟ್ಟರು । ಆಗ ಬಾಬಾರೂ ಶಾಂತರಾದರು ॥ 89

ಆಮೇಲೆ ಮಧ್ಯಾನ್ಹ ಆಜ್ಞೆಯ ಕೇಳಲು । ಬಾಬಾ ನುಡಿದದ್ದು ಆಶ್ಚರ್ಯ ಬಲು ।
ಈಗಲೇ ಏಕೆ ಬಿಚ್ಚುವಿರಿ ತೊಟ್ಟಿಲು । ಇನ್ನೂ ಅದರ ಅವಶ್ಯಕತೆ ಇರಲು ॥ 90

ಈ ಅವಶ್ಯಕತೆಯಾದರೂ ಎಂಥದ್ದು । ಅನ್ಯಥಾ ಅಲ್ಲ ಸಾಯಿ ವಚನವಿದು ।
ವಿಚಾರ ಮಾಡಲು ಬುದ್ದಿಗೆ ಹೊಳೆದುದು । ಉತ್ಸವವು ಸಂಪೂರ್ಣ ಮುಗಿದಿಲ್ಲ ॥ 91

ಇಲ್ಲಿಯವರೆಗೆ ಉತ್ಸವವಾಯಿತು । ಎರಡನೆಯ ದಿನ ಉದಯಿಸಿತು ।
ಗೋಪಾಳ ಕಾಲಾ ಆಗದ ಹೊರತು । ಉತ್ಸವ ಮುಗಿಯಿತೆನಬಾರದು ॥ 92

ಎರಡನೆಯ ದಿನ ಈ ರೀತಿಯಾಗಿ । ಗೋಪಾಳಕಾಲಾ ಕೀರ್ತನೆಗಳಾಗಿ ।
ತೊಟ್ಟಿಲು ಬಿಚ್ಚುವದಕ್ಕಾಗಿ । ಬಾಬಾ ಆಜ್ಞೆಯನಿತ್ತರು ॥ 93

ಮುಂದಿನ ವರ್ಷ ಭೀಷ್ಮವಿಲ್ಲದಿರಲು । ಬಾಳಾಬುವಾ ಸಾತಾರಕರರನು ಕರೆಯಲು ।
ಅವರಿಂದ ಕೀರ್ತನೆ ಮಾಡಿಸಲು । ಕವಠೆಗಿನ್ನು ಹೋಗಬೇಕೆಂದು ॥ 94

ಪ್ರಸಿದ್ಧಿ ಬಾಳಾಬುವಾರದು । ಈ ಕಾಲದ ತುಕಾರಾಮರೆಂದು ।
ಕಾಕಾ ಅವರನ್ನು ಕರೆತಂದು । ಅವರಿಂದ ಉತ್ಸವ ಸಾಂಗ ಮಾಡಿಸಿದರು ॥ 95

ಇವರು ಸಿಗದೇ ಇದ್ದರೂ । ಕಾಕಾ ಅವರೇ ಕೀರ್ತನೆ ಹೇಳುತ್ತಿದ್ದರು ।
ನವಮಿಯ ಕೀರ್ತನೆ ದಾಸಗಣೂ ಬರೆದಿದ್ದರು । ಅದು ಇವರಿಗೆ ಮುಖೋದ್ಗತವಿತ್ತು ॥96

ಮೂರನೆಯ ವರ್ಷ ಬಂದಾಗ್ಗೆ । ಬಾಳಾಬುವಾರೇ ಬಂದರು ಶಿರಡಿಗೆ ।
ಅವರು ಹೊತ್ತಿಗೆ ಸರಿಯಾಗಿ ಬಂದರು ಹೇಗೆ । ಅದ ಚಿತ್ತವಿಟ್ಟು ಕೇಳಿರಿ ॥ 97

ಸಾಯಿ ಬಾಬಾರ ಕೀರ್ತಿ ಕೇಳಿ । ದರ್ಶನದ ಇಚ್ಛೆಯಾಯಿತು ಮನದಲ್ಲಿ ।
ಆದರೆ ಜೊತೆಯೊಬ್ಬರು ಬೇಕು ದಾರಿಯಲ್ಲಿ । ಈ ಇಚ್ಛೆ ಹೇಗೆ ಈಡೇರಿತು ॥ 98

ಬಾಳಾಬುವಾ ಸ್ವತಃ ಹರಿದಾಸರು । ಮೊದಲಿಗೆ ಸಾತಾರೆಯ ಕಡೆಯವರು ।
ಈಗ ಮುಂಬಯಿಯ ಪರೇಳದಲ್ಲಿರುವರು । ಅಲ್ಲಿಯ ನಿವಾಸಿಗಳಾಗಿ ॥ 99

ಬಿರ್ವಾಡ ಸಿದ್ಧ ಕವಠೆ ಎಂದು । ಸಾತಾರ ಜಿಲ್ಲೆಯಲ್ಲಿ ದೇವಸ್ಥಾನವಿದ್ದು ।
ಅಲ್ಲಿಯ ರಾಮನವಮಿ ಕೀರ್ತನದ್ದು । ವರ್ಷಾಸನವಿದೆ ಬುವಾರಿಗೆ ॥ 100

ಏಕಾದಶಿ ಆಷಾಡದ್ದು । ಚೈತ್ರದಲ್ಲಿ ರಾಮನವಮಿಯದು ।
ಈ ಎರಡು ವಾರ್ಷಿಕ ಉತ್ಸವಗಳದು । ಬಾಳಾಬುವಾರಿಗೆ ಸಂಬಂಧ ॥ 101

ಬಾದಶಾಹೀ ಸನದು ನೋಡಲಾಗಿ । ಬಡೆ ಬಾಬಾರ ಖರ್ಚಿಗಾಗಿ ।
ಇಪ್ಪತ್ನಾಲ್ಕು ನೂರು ಇರುವದಾಗಿ । ಮೂಲ ಸಂಸ್ಥಾನಿ ವ್ಯವಸ್ಥೆ ಇರುವದು ॥ 102

ಈ ಎರಡು ಉತ್ಸವಕ್ಕಾಗಿ । ಮೂವತ್ತು ರೂಪಾಯಿ ಬುವಾರ ಬಿದಾಗ ।
ಆದರೆ ಆ ವರ್ಷ ಮಹಾಮಾರಿ ಬರಲಾಗಿ । ಗ್ರಾಮಸ್ಥರು ಆ ಪ್ರಸಂಗಕ್ಕೆ ಒಳಗಾದರು ॥ 103

ಅದರಿಂದ ರಾಮನವಮಿ ನಿಂತಿತು । ಬುವಾರಿಗೆ ಅಲ್ಲಿಂದ ಪತ್ರ ಬಂತು ।
ಊರಿಗೆ ಊರೇ ಖಾಲಿ ಆಯಿತು । ತಾವಿನ್ನು ಬರಬೇಕು ಮುಂದಿನ ವರುಷ ॥ 104

ಸಾರಾಂಶವೆಂದರೆ ರಾಮನ ಸೇವೆ ತಪ್ಪಿತು । ಅದರಿಂದ ಬಿದಾಗಿಯೂ ಅಲ್ಲೇ ಉಳಿಯಿತು ।
ಶಿರಡಿಗೆ ಹೋಗಲು ಅವಕಾಶ ಸಿಕ್ಕಿತು । ದೀಕ್ಷಿತರ ಭೆಟ್ಟಿಯಾಯಿತು ॥ 105

ಬಾಬಾರ ಪರಮಭಕ್ತರು ದೀಕ್ಷಿತ । ಶಿರಡಿ ಗಮನದ ಮನೋಗತ ।
ಅವರಿಚ್ಛಿಸಿದರ ಪೂರೈಸುವದೆನ್ನುತ । ಸ್ವಾರ್ಥ ಪರಮಾರ್ಥಗಳೆರಡೂ ಸಾಧಿಸಿಯಾವು ॥ 106

ಬರಲಿಲ್ಲ ಈ ಸಲ ವರುಷಾಸನ । ಎನಿಸುವದು ಪಡೆಯಬೇಕು ಬಾಬಾರ ದರ್ಶನ ।
ಅಲ್ಲಿಯೇ ಮಾಡಬೇಕು ಕೀರ್ತನ । ದೀಕ್ಷಿತರೆದರು ಹೀಗೆಂದರು ॥ 107

ಬಿದಾಗಿಯದೇನು ಹೇಳಲಿ । ಕೊಡುವದು ಬಿಡುವುದು ಬಾಬಾರ ಕೈಯಲ್ಲಿ ।
ಕೀರ್ತನೆಗೆ ಸಮ್ಮತಿ ಸಿಗಬೇಕು ಮೊದಲಲ್ಲಿ । ಭಾವೂ ಸಾಹೇಬರು ಹೀಗೆಂದರು ॥ 108

ಇಷ್ಟು ಸಂಭಾಷಣೆ ನಡೆದಾಗಲೇ । ಕಾಕಾ ಮಹಾಜನಿ ಬಂದರು ಸಹಜವಾಗಲ್ಲೇ ।
ಶಿರಡಿಯ ಪ್ರಸಾದ ಉದಿ ಹಂಚುತಲೇ । ಶುಭ ಶಕುನವೆನಿಸಿತು ಅದು ಆಗ ॥ 109

ಇರಲಿ ಮುಂದೆ ಬುವಾರಿಗೆ । ಪರಮ ಪ್ರೇಮದಿ ದೀಕ್ಷಿತರೆಂದರು ಹೀಗೆ ।
ಸಂಮತಿಯ ಕೇಳುವೆನು ಬಾಬಾರಿಗೆ । ಆಗಲೆಂದರೆ ನಿಮಗೆ ತಿಳಿಸುವೆನು ॥ 110

ಅದೇ ಕಾಲಕ್ಕೆ ಮಹಾಜನಿಯವರು । ಶಿರಡಿಯಿಂದ ಬಂದಿದ್ದರು ।
ಕ್ಷೇಮ ಕುಶಲ ವೃತ್ತಿ ತಿಳಿಸಿದರು । ಆಮೇಲೆ ನಿಜಸದನಕೆ ತೆರಳಿದರು ॥ 111

ಪತ್ರ ಮುಟ್ಟಿದ ಮೇಲೆ ಶಿರಡಿಗೆ ಬನ್ನಿರಿ । ದಾರಿ ಖರ್ಚು ಹೇಗೆಂದು ಚಿಂತಿಸದಿರಿ ।
ಅದಕೆ ನೀವು ಕೊರಗದಿರಿ । ನಿಶಃಕ ಮನದಿಂದ ತಾವು ಇರಬೇಕು ॥ 112

ಮುಂದೆ ದೀಕ್ಷಿತರು ಮರಳಿ ಹೋದರು । ಬಾಬಾ ಅನುಮತಿಯನು ಕೊಟ್ಟರು ।
ಬಾಳಾಬುವಾ ಶಿರಡಿಗೆ ಬಂದರು । ಯಥೇಷ್ಟ ದರ್ಶನ ಪಡೆದರು ॥ 113

ಸಾಯಿಬಾಬಾರು ಎಲ್ಲರೆದುರು । ಬಾಳಾಬುವಾನಿಂದ ಮಾಡಿಸಿಕೊಂಡರು ।
ಚಕಿತರಾದರೆಲ್ಲರೂ । ರಾಮನವಮಿಯ ಆ ಉತ್ಸವ ನೋಡಿ ॥ 114

ಬಾಳಾಬುವಾ ಸಂತುಷ್ಟರಾದರು । ನೆನೆದ ಕಾರ್ಯಪೂರೈಸಿತೆಂದರು ।
ಸಾಯಿಯವರು ಪ್ರಸನ್ನರಿದ್ದರು । ಮನಕಾಮನೆ ಪೂರೈಸಿತೆಲ್ಲರದು ॥ 115

ಸಂಭಾವನೆಯನ್ನು ಸಾಕಷ್ಟು ಇತ್ತು । ನೂರರ ಮೇಲೆ ಐವತ್ತು ।
ರೂಪಾಯಿ ಪಡೆಯಲು ಆಜ್ಞೆಯಾಯಿತು । ಅಪರಿಮಿತ ಆನಂದ ಬುವಾರಿಗಾಯಿತು ॥ 116

ಕವಠೆಯಲ್ಲಿ ಐದು ವರ್ಷಕೆ । ಸಿಗುವಷ್ಟನು ಒಂದೇ ಉತ್ಸವಕೆ ।
ಕೊಟ್ಟಾಗ ಬಾಳಾಬುವಾರಿಗೆ ಆನಂದವಾಗದೇಕೆ ! । ಬಾಬಾರಿಗೆ ಆಭಾರಿಗಳಾದರು ॥ 117

ಇರಲಿ ಮುಂದೆ ಕೆಲದಿನ ಕಳೆಯಲು । ದಾಸಗಣು ಶಿರಡಿಗೆ ಬರಲು ।
ಅವರೇ ಪ್ರತಿವರ್ಷ ಉತ್ಸವ ಮಾಡಲು । ಬಾಬಾರಿಂದ ಅನುಮತಿ ಕೊಡಿಸಿದರು ॥ 118

ಇದುವರೆಗೆ ಅಲ್ಲಿಂದ ಮುಂದೆ । ಗಜಗಜಿಸಿ ಜನ್ಮೋತ್ಸವ ನಡೆಯುತಿದೆ ।
ಹೊಟ್ಟೆ ಬಿರಿಯುವಷ್ಟು ಅನ್ನ ಸಂತರ್ಪಣವಾಗುತಿದೆ । ಹದಿನೆಂಟು ಜಾತಿಗೂ ತೃಪ್ತಿಯದು ॥119

ಸಮಾಧಿಯ ಮಹಾದ್ವಾರದಲ್ಲಿ । ಮಂಗಲವಾದ್ಯಗಳ ಧ್ವನಿಯಲ್ಲಿ ।
ಸಾಯಿ ನಾಮ ಘೋಷವು ಅಂಬರದಲ್ಲಿ । ಆನಂದ ನಿರ್ಭರತೆ ತುಂಬುವದು ॥ 120

ಜಾತ್ರೆ ಅಥವಾ ಉರುಸು ಹೇಗೆ । ಹಾಗೆ ಸ್ಫುರಿಸಿತು ಗೋಪಾಳಗುಂಡಗೆ ।
ಜೀರ್ಣವಾದ ಈ ಮಶೀದಿಗೆ । ಸುಂದರ ರೂಪವ ಕೊಡಬೇಕು ॥ 121

ಜೀರ್ಣೋದ್ಧಾರವು ಮಶೀದಿಯದು । ತನ್ನ ಕೈಯಿಂದಲೇ ಆಗಬೇಕೆಂದು ।
ನಿರ್ಧಾರ ಗೋಪಾಳಗುಂಡನದು । ಪಾಷಾಣಗಳನು ತಯಾರು ಮಾಡಿಸಿದರು ॥ 122

ಆದರೂ ಈ ಯೋಗ ಜೀರ್ಣೋದ್ಧಾರದ್ದು । ಗುಂಡಾನ ಭಾಗಕ್ಕೆ ಇರಲಿಲ್ಲವೆನಿಸುವದು ।
ಸುಯೋಗವು ಈ ವಿಶಿಷ್ಟ ಕಾರ್ಯದ್ದು । ಇಚ್ಛೆಯಂತೆ ಬಂದಿತು ಮುಂದೆ ॥ 123

ಎನಿಸುವುದು ಇತ್ತು ಬಾಬಾರ ಮನಸಿನಲಿ । ಆಗಲಿ ಈ ಕಾರ್ಯ ನಾನಾರ ಕೈಯಲಿ ।
ಕಲ್ಲುಹಾಸನು ನಂತರದಲ್ಲಿ । ಕಾಕಾರು ಮಾಡಬೇಕೆಂದು ॥ 124

ಅದರಂತೆಯೇ ಮುಂದೆ ನಡೆಯಿತು । ಆಜ್ಞೆಯ ಕೇಳಿ ಸಾಕಾಯಿತು ।
ಮ್ಹಾಳಸಾಪತಿಯ ಮಧ್ಯಸ್ಥಿಯಾಯಿತು । ಬಾಬಾರೂ ಅನುಮತಿ ಇತ್ತರು ॥ 125

ಆಗ ಆಯಿತು ಮಶೀದಿಯಲ್ಲಿ । ಕಲ್ಲುಫರಸಾಯಿತು ಒಂದೇ ರಾತ್ರಿಯಲ್ಲಿ ।
ಮರುದಿನವೇ ಆ ಸ್ಥಳದಲ್ಲಿ । ಬಾಬಾರು ಗಾದಿಯ ಮೇಲೆ ಕುಳಿತರು ॥ 126

ಸಭಾಮಂಟಪವು ಹನ್ನೊಂದು ಸಾಲಿನಲಿ । ಪ್ರಚಂಡವಾದ ಪ್ರಯತ್ನದಿಂದಲಿ ।
ಮಹಾವ್ಯಾಪವಾಯಿತಲ್ಲಿ । ಎಲ್ಲರಿಗೂ ನಡುಕ ಬರುವಂತೆ ॥ 127

ಅದೂ ಕಾರ್ಯ ಇದೇ ರೀತಿಯಲಿ । ಇಂಥದೇ ಎಲ್ಲ ಪರಿಸ್ಥಿತಿಯಲಿ ।
ಪೂರ್ಣಗೊಳಿಸಿದರು ಭಕ್ತಿಯಿಂದಲಿ । ಒಂದೇ ರಾತ್ರಿಯಲಿ ಅತಿ ಪ್ರಯಾಸದಲಿ ॥ 128

ಪ್ರಯಾಸಪಟ್ಟು ರಾತ್ರಿಯಲಿ ಕಂಭ ನಿಲ್ಲಿಸಬೇಕು । ಬೆಳಿಗ್ಗೆ ಬಾಬಾ ಅದಕಿತ್ತ ತೊಡಗಬೇಕು ।
ಸಮಯ ಸಾಧಿಸಿ ಮತ್ತೆ ಇಡಬೇಕು । ಹೀಗೆಲ್ಲರೂ ದಣಿಯಬೇಕು ॥ 129

ಎಲ್ಲರೂ ಕಚ್ಚೆ ಏರಿಸಿ । ರಾತ್ರಿಯನ್ನೇ ಹಗಲಾಗಿಸಿ ।
ದುಡಿದು ಮನದಾಸೆ ಪೂರೈಸಿ । ಅತಿ ಕಷ್ಟ ಪಟ್ಟು ದುಡಿದರೆಲ್ಲಾ ॥ 130

ಮೊದಲಲ್ಲಿತ್ತು ಅಂಗಳ । ಚಿಕ್ಕದೊಂದು ಬಯಲು ಸ್ಥಳ ।
ಸಭಾ ಮಂಡಪಕ್ಕಿದು ಅಡ್ಡಿಯಿಲ್ಲ । ಎಂಬ ವಿಚಾರ ದೀಕ್ಷಿತರಿಗೆ ಬಂತು ॥ 131

ಹತ್ತಿದಷ್ಟು ದುಡ್ಡು ವ್ಯಯಿಸಿ । ಲೋಹದ ಕಂಬಗಳನ್ನು ತರಿಸಿ ।
ಬಾಬಾ ಚಾವಡಿಗೆ ಹೋದ ಸಮಯ ಸಾಧಿಸಿ । ಈ ಕೆಲಸವನು ಮುಗಿಸಿಕೊಂಡರು ॥ 132

ಭಕ್ತರು ರಾತ್ರಿಯನ್ನೇ ಹಗಲು ಮಾಡಿ । ಕಂಭ ನಿಲ್ಲಿಸುವರು ಬಲು ಆಯಾಸದಿ ।
ಬಾಬಾ ಚಾವಡಿಯಿಂದ ಬಂದು ನೋಡಿ । ಕಿತ್ತೊಗೆಯಲು ತೊಡಗುತಿದ್ದರು ॥ 133

ಒಮ್ಮೆ ಅತಿಶಯ ಸಿಟ್ಟಿಗೆದ್ದು । ಒಂದು ಕೈಯಲ್ಲಿ ತಾತ್ಯಾರ ಕುತ್ತಿಗೆ ಹಿಡಿದು ।
ಎರಡನೆಯ ಕೈಯಿಂದ ಕಂಬ ಅಗಳಾಡಿಸುವದು । ಕಿತ್ತಲು ಪ್ರಯತ್ನ ನಡೆಸಿದರು ॥134

ಅಗಳಾಡಿಸಿ ಅಗಳಾಡಿಸಿ ಸಡಿಲುಗೊಳಿಸಿದರು । ತಾತ್ಯಾರ ತಲೆ ಮುಂಡಾಸು ಕಿತ್ತಿಕೊಂಡರು ।
ಸಿಟ್ಟಿನಿಂದದನು ತೆಗ್ಗಿನಲಿ ಒಗೆದರು । ಕಡ್ಡಿ ಗೀರಿ ಹಚ್ಚಿದರದಕೆ ॥ 135

ಆ ಕಾಲಕೆ ಅವರ ಕಂಗಳೆರಡೂ । ಬೆಂಕಿಯ ಉಂಡೆಗಳಂತೆ ಕಾಣುತಿದ್ದವು ।
ಹಾರಿ ಹೋಯಿತೆಲ್ಲರ ಧೈರ್ಯವು । ಯಾರು ಅವರೆದುರು ಹೋದಾರು ಆಗ ॥ 136

ಕೂಡಲೇ ಜೇಬಿಗೆ ಕೈಹಾಕಿದ್ದು । ರೂಪಾಯಿ ಒಂದನು ಹೊರಗೆ ತೆಗೆದು ।
ಅದನ್ನೂ ಅಲ್ಲಿಯೇ ಒಗೆದು । ಸುಮೂರ್ತವನೇ ಮಾಡಿದರೋ ಯಾರಿಗೆ ಗೊತ್ತು ॥ 137

ಶಾಪ ಬೈಗುಳದ ಮಳೆಗರೆಯಿತು । ಪ್ರಸಂಗ ಬಹಳ ಕಠಿಣಬಂತು ।
ಈ ಪ್ರಕಾರ ಹೇಗೆ ನಡೆಯಿತು । ತಾತ್ಯಾನೂ ಬಹು ಬೆದರಿದ ಮನದಲ್ಲಿ ॥ 138

ಜನರೆಲ್ಲ ಆಶ್ಚರ್ಯ ಚಕಿತರಾದರು । ಇಂದಿನದೇನು ದುಶ್ಚಿಹ್ನ ಎಂದರು ।
ತಾತ್ಯಾ ಪಾಟೀಲನ ಮೇಲಿನ ವಿಘ್ನವಾದರೂ । ಹೇಗೆ ತಾನೇ ದೂರಾದೀತು ॥ 139

ಭಾಗೋಜಿ ಸಿಂಧೆ ಧೈರ್ಯದಿಂದ । ಮೆಲ್ಲ ಮೆಲ್ಲನೆ ಮುಂದೆ ಸರಿದ ।
ಅನಾಯಾಸವಾಗಿ ಅವ ಸಿಕ್ಕಿದ । ಅವನನ್ನೂ ಸರಿಯಾಗಿ ತಿರುವಿದರು ॥ 140

ಮಾಧವರಾಯರು ಕೈಗೆ ಸಿಕ್ಕರು । ಅವರೂ ಇಟ್ಟಂಗಿಯ ಪ್ರಸಾದ ಪಡೆದರು ।
ಮಧ್ಯಸ್ಥಿ ಮಾಡಲು ಮುಂದಾದವರು । ಚೆನ್ನಾಗಿಯೇ ಬಾಬಾರ ಅನುಗ್ರಹ ಪಡೆದರು ॥ 141

ಬಾಬಾ ಎದುರು ಹೋಗುವರಾರು? । ತಾತ್ಯಾರನ್ನು ಬಿಡಿಸುವವರಾರು ।
ವಿಚಾರ ಮಾಡುವಷ್ಟರಲ್ಲೇ ಸಿಟ್ಟಿನ ಜೋರು । ಕಡಿಮೆಯಾಗುತ್ತ ಬಂತು ಬಾಬಾರದು ॥ 142

ಕೂಡಲೇ ಅಂಗಡಿಕಾರನ ಕರೆಸಿದರು । ಜರಿಯಂಚಿನ ಮುಂಡಾಸು ತರಿಸಿದರು ।
ಅದನು ತಾತ್ಯಾರ ತಲೆಗೆ ಸುತ್ತಿದರು । ಅದು ಅಲಂಕಾರವೆಂಬಂತೆ ॥ 143

ಆಶ್ಚರ್ಯಚಕಿತರಾದರು ಜನ । ಈ ಸಿಟ್ಟಿಗೇನು ಕಾರಣ ।
ತಾತ್ಯಾರ ಮೇಲೇಕೆ ಈ ಆಕ್ರಮಣ । ಆಕ್ರೋಶವನೇಕೆ ಮಾಡಿದರು ಬಾಬಾ ॥ 144

ಯಾವ ಕಾರಣಕ್ಕೆ ಸಿಟ್ಟಿಗೆದ್ದರು । ಕ್ಷಣದಲಿ ನೋಡಲು ಪ್ರಸನ್ನಚಿತ್ತರು ।
ಇದರ ಕಾರಣ ಕಿಂಚಿತ್ತಾದರೂ । ಯಾರೂ ತಿಳಿಯದಾದರು ॥ 145

ಒಮ್ಮೊಮ್ಮೆ ಶಾಂತಚಿತ್ತರಾಗಿರುವರು । ಪ್ರೇಮದಿಂದ ವಾರ್ತೆಗಳ ಹೇಳುವರು ।
ಮರುನಿಮಿಷದಲೇ ಕ್ಷುಬ್ಧರಾಗುವರು । ಕಾರಣವೇನೂ ಇಲ್ಲದಲೆ ॥ 146

ಇರಲಿ ಹೀಗೆ ಈ ಕಥೆಗಳು ಬಾಬಾರವು । ಒಂದನ್ನು ಹೇಳುತ್ತ ಮತ್ತೊಂದು ನೆನಪಾಗುವವು ।
ಯಾವದು ಹೇಳಿ ಬಿಡಲಿ ಯಾವುವು । ಹೀಗೆ ಭೇದ ಮಾಡುವದು ಸರಿಯಲ್ಲ ॥ 147

ನನಗೂ ಅವುಗಳ ಆಯ್ಕೆ ಮಾಡಲು ಬರದು । ಯಾವುದಕ್ಕೆ ಹೇಗೆ ಸಮಯ ಒದಗುವದು ।
ಅದರಂತೆ ಶ್ರೋತೃಗಳದು । ಶ್ರವಣೇಚ್ಛೆ ಪೂರೈಸೀತು ॥ 148

ಮುಂದಿನಧ್ಯಾಯದಲಿ । ಶ್ರವಣ-ವೃದ್ಧ ಮುಖ ಶೃತ ಪೂರ್ವ ಕಥನ ।
ಬಾಬಾರು ಹಿಂದುಗಳೋ ಇಲ್ಲವೇ ಯವನ । ಯಥಾಮತಿ ಅದ ನಿರೂಪಿಸುವೆ ॥149


ದಕ್ಷಿಣೆಯ ರೂಪದಲಿ ಹಣ ಪಡೆದು । ಅದನು ಜೀರ್ಣೋದ್ಧಾರದಲ್ಲಿ ತೊಡಗಿಸಿದುದು ।
ಹೇಗವರು ದೇಹವ ದಂಡಿಸುತಿದ್ದರು । ಧೋತಿ ಪೋತಿ ಖಂಡದುಖಂಡವಾಗಿ ॥ 150

ಪರರಿಗಾಗಿ ಕಷ್ಟ ಸಹಿಸುವರು ಹೇಗೆ । ಭಕ್ತರ ಸಂಕಟ ನಿವಾರಿಸುವ ಬಗೆ ।
ಮುಂದಿನಧ್ಯಾಯದಲಿ ಸ್ಪಷ್ಟವಾಗೇ । ಶ್ರೋತೃಗಳು ಸಂತುಷ್ಟರಾದರು ॥ 151

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ರಾಮ ಜನ್ಮೋತ್ಸವಾದಿ ಕಥನಂ ನಾಮ ಷಷ್ಠೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಏಳು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಇನ್ನು ಪೂರ್ವಕಥೆಯ ಸಂಗತಿಯನ್ನು । ಮನಸಿನಲಿ ತರುವ ಅದರ ನೆನಪನ್ನು ।
ಗುಡಿಯ ಜೀರ್ಣೋದ್ಧಾರವನು । ಮಾಡುವಲ್ಲಿ ಬಾಬಾರ ಪ್ರೀತಿ ಹೇಗಿತ್ತು ॥ 1

ಪರೋಪಕಾರಕ್ಕಾಗಿ ಹೇಗೆ ಶ್ರಮಿಸುವರು । ಹೇಗೆ ನಿಜಭಕ್ತರನು ರಮಿಸುವರು ।
ಹೇಗೆ ತಮ್ಮ ದೇಹವನು ಸವೆಸುವರು । ಭಕ್ತರ ದುಃಖಗಳನೂ ತಾವೇ ಸಹಿಸುವರು ॥2

ಸಮಾಧಿಯ ಜೊತೆಯಲ್ಲೇ ಖಂಡಯೋಗಾದಿಗಳು । ಅಂತೆಯೇ ಧೋತಿಪೋತಿ ಮುಂತಾದವುಗಳು ।
ಒಮ್ಮೊಮ್ಮೆ ಕರಪದ ಶಿರ ವಿಯೋಗಾದಿ ಪ್ರಯೋಗಗಳು । ಮತ್ತೆ ಅವುಗಳ ಸಂಯೋಗವು ॥ 3

ಹಿಂದೂ ಎನ್ನಲು ಕಾಣುವ ಯವನನಂತೆ । ಯವನನೆನ್ನಲು ಹಿಂದೂ ಸುಲಕ್ಷಣವಂತ ।
ಈ ವಿಲಕ್ಷಣ ಅವತಾರವನಿಂಥ । ಯಾವ ವಿಚಕ್ಷಣರು ವರ್ಣಿಸಬಲ್ಲರು ॥ 4

ಹಿಂದುವೋ ಮುಸಲ್ಮಾನನೋ ಎಂದು । ಅಣುಪ್ರಮಾಣವೂ ಇದು ತಿಳಿಯದು ।
ಉಭಯ ವರ್ಗಗಳಲ್ಲಿ ಸಮಾನರಾಗಿರುವದು । ಯಾವಾಗಲೂ ಅವರ ವರ್ತನೆಯು ॥5

ಹಿಂದುಗಳ ಹಬ್ಬ ರಾಮನವಮಿಯನು । ಮಾಡಿಸುತಿದ್ದರು ತಾವೇ ನಿಂತದನು ।
ಸಭಾ ಮಂಟಪದಲಿ ಕಟ್ಟಿಸಿ ತೊಟ್ಟಿಲವನು । ಕಥಾಕೀರ್ತನವನೂ ಮಾಡಿಸುವರು ॥ 6

ಚೌಕದಲಿ ಎದುರಿಗೇ ತೊಟ್ಟಿಲ ಕಟ್ಟಿಸುವರು । ರಾಮ ಕೀರ್ತನವನು ಮಾಡಿಸಿಕೊಳ್ಳುವರು ।
ಯವನರಿಗೂ ಅನುಜ್ಞೆಯ ಕೊಡುವರು । ಅದೇ ರಾತ್ರಿ ಸಂದಲ ಮೆರವಣಿಗೆಗೆ ॥ 7

ಬಂದಷ್ಟು ಜನ ಯವನರ ಕೂಡಿಸಿ । ಸಮಾರಂಭದಿಂದ ಸಂದಲ ಮೆರೆಸಿ ।
ಎರಡು ಉತ್ಸವಗಳನೂ ಸಮಸಮವಾಗಿಸಿ । ಆನಂದದಿಂದ ನಡೆಸಿಕೊಳ್ಳುವರು ॥ 8

ರಾಮನವಮಿಯ ದಿವಸ ಬರಲು । ಪ್ರೀತಿಯಲ್ಲಿ ಕುಸ್ತಿಯಾಟ ಆಡಿಸಲು ।
ಕುದುರೆ ಕಡಗ ಮುಂಡಾಸಗಳು । ಇನಾಮಾಗಿ ಕೊಡಲು ಉಲ್ಲಾಸ ಅವರ ಮನಕೆ ॥9

ಗೋಕುಳಾಷ್ಟಮಿ ಹಬ್ಬ ಬರಲು । ಗೋಪಾಳಕಾಲಾ ಮಾಡಿಸುತಿರಲು ।
ಅಂತೆಯೇ ಯವನರ ಹಬ್ಬ ಬರಲು । ನಮಾಜಕ್ಕೆಂದೂ ಅಡ್ಡಿ ಇರಲಿಲ್ಲ ॥10

ಒಮ್ಮೆ ಮೊಹರಂ ಹಬ್ಬದಂದು । ಕೆಲ ಯವನರು ಮಶೀದಿಗೆ ಬಂದು ।
ಎಂದರು ತಾಬೂತವ ತಯಾರಿಸಿ ಒಂದು । ಗ್ರಾಮದಲಿ ಮೆರವಣಿಗೆ ಮಾಡುವೆವು ॥ 11

ಆಜ್ಞೆಯಾದೊಡನೆ ತಾಬೂತ ಬಂತು । ನಾಲ್ಕು ದಿನ ಅದನು ಇಡಲಾಯಿತು ।
ಐದನೆಯ ದಿನ ಕೆಳಗೆ ಇಳಿಸಿತು । ಅದರ ಸುಖ ದುಃಖ ಇಲ್ಲವರಿಗೆ ॥ 12

ಯವನನೆನಲು ಕಿವಿ ಚುಚ್ಚಿದೆ । ಹಿಂದೂವೆನಲು ಸುಂತಿ ಆಗಿದೆ ।
ಹೀಗೆ ಹಿಂದೂ ಯವನನೆರಡೂ ಇರದೆ । ಅವತಾರ ಪಾವನ ಸಾಯಿಯದು ॥ 13

ಅವರನ್ನು ಹಿಂದೂ ಎನಲು । ಮಶೀದಿಯಲಿ ನಿವಾಸ ಯಾವಾಗಲೂ ।
ಯವನನೆನ್ನಲು ಹಗಲು ಇರುಳು । ಮಶೀದಿಯಲಿ ಅಗ್ನಿ ಜ್ವಲಿಸುವದು ॥ 14

ಮಶೀದಿಯಲಿ ಕಲ್ಲಿನಲಿ ಬೀಸೋಣ । ಮಶೀದಿಯಲಿ ಗಂಟೆ ಶಂಖಗಳ ವಾದನ ।
ಮಶೀದಿಯಲಿ ಅಗ್ನಿ ಸಂತರ್ಪಣ । ಇವರೆಂಥ ಮುಸಲ್ಮಾನರು ॥ 15

ಮಶೀದಿಯಲಿ ಯಾವಾಗಲೂ ಭಜನ । ಮಶೀದಿಯಲಿ ಅನ್ನ ಸಂತರ್ಪಣ ।
ಮಶೀದಿಯಲಿ ಅರ್ಘ್ಯಪಾದ್ಯ ಪೂಜನ । ಇವರು ಹೇಗೆ ಮುಸಲ್ಮಾನರು ॥ 16

ಎನ್ನಲಿವರ ಮ್ಲೇಚ್ಛ ಜಾತಿಯವರು । ಬ್ರಾಹ್ಮಣೋತ್ತಮರು ಇವರ ಪೂಜಿಸುವರು ।
ಅಗ್ನಿಹೋತ್ರಿಗಳು ಸಾಷ್ಟಾಂಗವೆರಗುವರು । ಮಡಿ ಮೈಲಿಗೆಯ ಭಾವನೆಯ ತ್ಯಜಿಸಿ ॥ 17

ಹೀಗೆ ಜನರು ವಿಸ್ಮಿತರು । ಪ್ರಚೀತಿ ನೋಡಲು ಬಂದವರೂ ।
ತಾವೂ ಅವರಂತೆಯೇ ನಡೆಯುವರು । ದರ್ಶನ ಪಡೆದಾಗ ಮೂಕರಾಗುವರು ॥ 18

ಯಾವಾಗಲೂ ಹರಿಶರಣನಿರುವವಗೆ । ಹಿಂದೂ ಇಲ್ಲವೆ ಯವನನೆನ್ನುವದು ಹೇಗೆ ।
ಶೂದ್ರ ಅತಿ ಶೂದ್ರಯಾತಿ ಹೀನನಿರುವಾಗ್ಗೆ । ಅಣುಮಾತ್ರವೂ ಜಾತಿಯೇ ಪ್ರಮಾಣವಲ್ಲ ಅಲ್ಲಿ॥ 19

ದೇಹಾಭಿಮಾನವೇ ಇಲ್ಲ ಎಲ್ಲಿ । ಅವನು ಹಿಂದುವೇ ಇರಲಿ ಯವನನೇ ಇರಲಿ ।
ಸಮಸಮಾನರು ಎಲ್ಲ ಜಾತಿಗಳಲಿ । ಅವರಿಗೆ ಜಾತಿ ಭೇದವೆಲ್ಲಿ ಬಂತು ॥ 20

ಫಕೀರರ ಪಂಕ್ತಿಯಲಿ ಮಾಂಸಭೋಜನ । ಅಥವಾ ಯದೃಚ್ಛೆಯಲಿ ಮತ್ಸ್ಯಸೇವನ ।
ಅಲ್ಲಿಯೇ ಬಾಯಿ ಹಾಕಲು ಶ್ವಾನ । ಮನಕೆ ಬೇಸರವಿಂತೂ ಇರದು ॥ 21

ಈ ವರ್ಷದ ಧಾನ್ಯದ ಸಂಚಯ । ರೈತ ಮಾಡುವ ಕಟ್ಟಿ ಬೋರಿಯ ।
ಮುಂದಿನವರ್ಷ ಬರುವ ಕೊರತೆಯು । ಕಾಲಬರಲು ಉಪಯೋಗಿಸಲು ॥ 22

ಹಾಗೆ ಸಂಗ್ರಹದಲ್ಲಿ ಗೋದಿಯ ಚೀಲ । ಬೀಸಲು ಮಶೀದಿಯಲಿ ಬೀಸುವ ಕಲ್ಲು ।
ಕೇರಲು ಮೊರವು ಹೀಗಿರಲು ಎಲ್ಲ । ಸಂಸಾರಕ್ಕೆ ನ್ಯೂನತೆ ಇರಲಿಲ್ಲ ॥ 23

ಸಭಾ ಮಂಟಪದಲ್ಲಿ ಶೋಭಾಯಮಾನ । ಅಂದವಾದ ಮುಖ್ಯ ವೃಂದಾವನ ।
ಅಲ್ಲಿಯೇ ಒಂದು ಕಟ್ಟೆಗೆಯ ಸ್ಯಂದನ । ಸುಲಕ್ಷಣವಾಗಿ ಕೆತ್ತಿದ್ದು ॥ 24

ಏನೋ ಒಂದಿಷ್ಟು ಪುಣ್ಯವಿತ್ತು । ಅದರಿಂದ ಈ ಸದ್ವಸ್ತುವಿನ ದರ್ಶನವಾಯಿತು ।
ಹೃದಯ ಸಂಪುಟದಲ್ಲಿ ದೃಢ ಇದನರಿತು । ಇರೆ ಇರದು ಕೊರತೆ ಆಮರಣಾಂತ ॥25

ಪೂರ್ವಜನ್ಮದ್ದೇನೋ ಭಾಗ್ಯವಿತ್ತು । ಅದರಿಂದ ಈ ಪಾದಗಳಿಗೆ ಕೈ ಹತ್ತಿತು ।
ಮನಕೆ ಶಾಂತತೆ ಲಭಿಸಿತು । ನಿಶ್ಚಿಂತತೆಯು ಪ್ರಪಂಚದಲ್ಲಿ ॥ 26

ಮುಂದೆಷ್ಟೋ ಸುಖಸಂಪನ್ನನಾಗುವದು । ಆದರೂ ಆ ಸುಖವು ಮರಳಿಬಾರದು ।
ಯಾವದು ಶ್ರೀಸಾಯಿ ಸಮರ್ಥರ ಸಮಾಗಮದಲ್ಲಿದ್ದು । ಭೋಗಿಸಿ ಧನ್ಯನಾಗಿದ್ದೆ ॥ 27

ಸಾಯಿ ಸ್ವಾನಂದೈಕಚಿದ್ಘನ । ವರ್ಣಿಸಲೆಂತು ಆ ವೈಚಿತ್ರ್ಯವನ ।
ಚರಣದಲಿ ಬಂದವರೆಲ್ಲರನ । ಅಲ್ಲಿಯೇ ಹಿಡಿದು ಇಡುವವರು ॥ 28

ಅಜಿನ-ದಂಡಧಾರಿ ತಾಪಸಿಗಳು । ತಿರುಗಿದವರು ಹರಿದ್ವಾರಾಧಿ ತೀರ್ಥಗಳು ।
ತೀರದಲಿ ತಪಗೈದ ಸನ್ಯಾಸಿಗಳು । ತ್ಯಾಗಿಗಳು ಉದಾಸೀನರು ಎಲ್ಲ ಬರುವರು ॥ 29

ಓಡಾಡಿ ನಕ್ಕು ನಲಿವರು ಉದಂಡ । ನಾಲಿಗೆಯಲಿ ಟಿಅಲ್ಲಾ-ಮಾಲಿಕಟಿ ಅಖಂಡ ।
ಸೇರದು ವಾದ-ವಿವಾದ ವಿತ್ತಂಡ । ಸದಾಕಾಲವೂ ದಂಡವಿರುವದು ಹತ್ತಿರ ॥30

ತಾಪಸ ವೃತ್ತಿಯ ಶಾಂತದಾತ । ವಾಚೆಯಲಿ ಸ್ರವಿಸುವದು ಪೂರ್ಣವೇದಾಂತ ।
ಯಾರಿಗೂ ಹತ್ತಲಿಲ್ಲವರ ಅಂತ । ಕೊನೆಯವರೆಗೂ ಬಾಬಾರದು ॥ 31

ಉಳ್ಳವನಿರಲಿ ಇಲ್ಲವೆ ಬಡವ । ಎಲ್ಲರಲ್ಲಿಯೂ ಒಂದೇ ಸಮಭಾವ ।
ಲಕ್ಷ್ಮೀಪುತ್ರನೋ ಭಿಕ್ಷುಕನೋ ಅವ । ಎಲ್ಲರಿಗೂ ಒಂದೇ ಅಳತೆ ಅಲ್ಲಿ ॥ 32

ಯಾರದೋ ಒಳ್ಳೆಯ ಇಲ್ಲವೇ ಕೆಟ್ಟ ಕರ್ಮ । ತಿಳಿಯುವರು ಜೀವದ ಒಳಗಣ ಮರ್ಮ ।
ಹೇಳುತಿದ್ದರು ಗುರುತು ಮರ್ಮ । ಪರಮಾಶ್ಚರ್ಯವು ಭಕ್ತರಿಗೆ ॥ 33

ತಿಳುವಳಿಕೆಯದೇ ಅದು ಸಂಚಿಕೆ । ತಿಳಿಯದಿರುವಂತೆ ಮೇಲ್‌ಹೊದಿಕೆ ।
ಮಾನ ಸಂಪಾದನೆಯಿಂದೋಡುವರು ದೂರಕೆ । ಇವು ಶ್ರೀ ಸಾಯಿಯವರ ಲಕ್ಷಣಗಳು ॥ 34

ಕಾಯವು ಮಾತ್ರ ಮಾನವನದು । ಗೈವ ಕಾರ್ಯವು ಅಪೂರ್ವ ದೇವರದು ।
ಶಿರಡಿಯಲಿ ಪ್ರತ್ಯಕ್ಷ ದೇವರೆಂದು । ಜನರೆಲ್ಲ ಭಾವಿಸುವರು ಇವರು ॥ 35

ಬಾಬಾರ ಒಂದೊಂದು ಚಮತ್ಕಾರಗಳೇನು । ಎಷ್ಟೆಂದು ವರ್ಣಿಸಲಿ ಪಾಮರನು ನಾನು ।
ದೇವರು-ದೇವಸ್ಥಾನಗಳ ಜೀರ್ಣೋದ್ಧಾರವನು । ಬಾಬಾರು ಬೇಕಾದಷ್ಟು ಮಾಡಿಸಿದರು ॥ 36

ಶಿರಡಿಯಲ್ಲಿ ತಾತ್ಯಾ ಪಾಟೀಲರಿಂದ । ಶನಿ-ಗಣಪತಿ-ಶಂಕರಪಾರ್ವತಿಯಿಂದ ।
ಹಿಡಿದು ಗ್ರಾಮದೇವಿ-ಮಾರುತಿ ಮೊದಲಾದ । ಎಲ್ಲರನ್ನೂ ಸುಸ್ಥಿತಿಗೆ ತಂದರು ॥ 37

ಜನರ ಕಡೆಯಿಂದ ದಕ್ಷಿಣೆಯೆಂದು । ತೆಗೆದುಕೊಳ್ಳುತಿದ್ದರು ಬಾಬಾ ದುಡ್ಡು ।
ಕೆಲವನು ಹಂಚಿ ಧರ್ಮಾರ್ಥವೆಂದು । ಉಳಿದದ್ದು ಹಾಗೇ ಕೊಡುತಿದ್ದರು ॥ 38

ಯಾರಿಗೆ ದಿನಾಲು ರೂಪಾಯಿ ಮೂವತ್ತು । ಯಾರಿಗೆ ಹತ್ತು ಹದಿನೈದು ಐವತ್ತು ।
ಹೀಗೆ ಮನಬಂದಂತೆ ಹಂಚುತ್ತ । ಉಲ್ಹಾಸರಾಗಿರುತಿದ್ದರವರು ॥ 39

ಇದು ಎಲ್ಲ ಧರ್ಮದ ದುಡ್ಡು । ತೆಗೆದುಕೊಳ್ಳುವವಗೆ ಪೂರ್ಣ ಭರವಸೆ ಇರುವದು ।
ವಿನಿಯೋಗವೂ ಅದರಂತೇ ಆಗಬೇಕೆಂದು । ಮನೀಷೆ ಇರುವದು ಬಾಬಾರಿಗೆ ॥ 40

ಅಂಜನವ ಹಾಕದೇ ಕಣ್ಣಿಗೆ । ಕಣ್ಣು ಕಾಣತೊಡಗಿದವು ಅಂಧರಿಗೆ ।
ಕಾಲು ಬಂದವು ಕುಂಟರಿಗೆ । ಬಾಬಾರ ಪದಸ್ಪರ್ಶ ಮಾತ್ರದಿಂದ ॥ 41

ಎಷ್ಟೋ ಜನ ಬಲಹೀನರು ಆದರು ಬಲವಾನರು । ದುಷ್ಟ ದುರ್ಜನರಾದರು ಒಳ್ಳೆಯವರು ।
ಕುಷ್ಟರೋಗವನೂ ಕಳೆದರು । ಮನದಿಷ್ಟವ ಪಡೆದರು ಹಲವರು ॥ 42

ಅನಿವಾರ-ಮಹಿಮೆಯು ಅವರದು । ಅಂತಹತ್ತದು ಯಾರಿಗೂ ಅವರದು ।
ಅಪರಂಪಾರವಾಗಿ ನಾಲ್ದೆಸೆಯಿಂದೂ । ಅಪಾರ ಯಾತ್ರೆ ಬರತೊಡಗಿತಲ್ಲಿ ॥ 43

ಧುನಿಯ ಹತ್ತಿರ ಅದೇ ಸ್ಥಳದಿ । ವಿಸರ್ಜಿಸಿ ಮಲಮೂತ್ರಾದಿ ।
ಸ್ನಾನವಿಲ್ಲದೆ ಒಮ್ಮೆ ಒಮ್ಮೊಮ್ಮೆ ಸ್ನಾನ ಮಾಡಿ । ನಿತ್ಯ ಧ್ಯಾನದಲಿ ತೊಡಗಿದವರು ॥ 44

ಸ್ವಚ್ಛವಾದ ಧೋತರವನುಟ್ಟು । ಮೈಯಲೊಂದು ಅಂಗಿಯನು ತೊಟ್ಟು ।
ತಲೆಗೆ ಬಿಳೀ ರುಮಾಲು ಇರುತಿತ್ತು । ಹೀಗಿತ್ತು ಮೊದಲಲಿ ಅವರ ಉಡುಪು ॥ 45

ಆರಂಭದಲ್ಲಿ ಊರೊಳಗೆ ವೈದ್ಯಕಿ ಮಾಡುತ್ತಿದ್ದರು । ನೋಡಿ ನೋಡಿ ಔಷಧಿ ಕೊಡುತ್ತಿದ್ದರು ।
ವಿಖ್ಯಾತ ಹಕೀಮರೆನಿಸಿದ್ದರು । ಕೈಗುಣವೂ ಚೆನ್ನಾಗಿತ್ತವರದು ॥ 46

ಒಮ್ಮೆ ಒಬ್ಬ ಭಕ್ತನ ಕಣ್ಣಿಗೆ । ಬಾವು ಬಂದು ಆದವು ಕೆಂಪಗೆ ।
ಗುಡ್ಡಿಗಳಿಂದ ರಕ್ತ ಸುರಿಯತೊಡಗೆ । ಶಿರಡಿಯಲಿ ವೈದ್ಯನೊಬ್ಬನೂ ಸಿಗಲಿಲ್ಲ ॥ 47

ಭಕ್ತರು ಭಾವಿಕ ಸಾಧುಗಳು । ಬಾಬಾರಿಗೆ ಕಣ್ಣುಗಳ ತೋರಿಸಲು ।
ಕೇರಕುಟ್ಟಿ ಮಾಡಿದರು ಗುಳಿಗೆಗಳು । ಬೇಗದಲಿ ಬಾಬಾ ಆ ಕಾಲಕೆ ॥ 48

ಕೆಲವರು ಕಣ್ಣಿಗೆ ಸುರಮ ಹಾಕುವರು । ಇಲ್ಲವೇ ಹಾಲಿನಲೆದ್ದಿದ್ದ ಪಟ್ಟಿಯ ನೀಡುವರು ।
ಕರ್ಪೂರದ ಪುಡಿಗಳ ಕೆಲವರು । ಅಂಜನ ಪುಡಿಯ ಕೊಡುವರು ॥ 49

ಬಾಬಾರ ಉಪಾಯವೇ ಬೇರೆ ಬಗೆ । ಸ್ವ ಹಸ್ತದಲಿ ಎತ್ತಿ ಒಂದೊಂದು ಗುಳಿಗೆ ।
ಸಾಕಷ್ಟು ತುಂಬಿದರು ಕಣ್ಣುಗಳಿಗೆ । ಮೇಲೆ ಬಟ್ಟೆಯ ಕಟ್ಟಿದರು ॥ 50

ಬೆಳಿಗ್ಗೆ ಕಣ್ಣಿನ ಪಟ್ಟಿಯ ಬಿಚ್ಚಲು । ಮೇಲೆ ತಣ್ಣೀರ ಧಾರೆಯನು ಹಿಡಿಯಲು ।
ಸ್ವಚ್ಛವಾದವು ಕಣ್ಣುಗಳು । ಕಣ್ಣಿನ ಬಾವೂ ಮಾಯವಾಯಿತು ॥ 51

ಕಣ್ಣಿನಂಥ ನಾಜೂಕು ಸ್ಥಳ । ಆದರೆ ಕೇರಿನಿಂದದು ಉರಿಯಲಿಲ್ಲ ।
ಕೇರಿನಿಂದ ಕಳೆಯಿತು ನೇತ್ರರೋಗವೆಲ್ಲ । ಇಂಥ ಅನೇಕ ಅನುಭವಗಳು ॥ 52

ಧೋತಿ ಪೋತಿಯ ತಿಳಿದಿದ್ದರವರು । ಯಾರಿಗೂ ತಿಳಿಸದೆ ಏಕಾಂತ ಸ್ಥಳಕೆ ಹೋಗುವರು ।
ಕರಳು ಹೊರತೆಗೆದು ತೊಳೆದು ಒಣಗಿಸುವರು । ಸ್ನಾನ ಮಾಡುವ ಮೊದಲು ಅದನು ಹಸಿ ಮಾಡಿ ॥ 53

ಮಶೀದಿಯಿಂದೆಷ್ಟು ದೂರ ಬಾವಿ ಇದೆ । ಅಲ್ಲಿಂದ ಅಷ್ಟೇ ದೂರ ವಟವೃಕ್ಷವಿದೆ ।
ಅದರಾಚೆ ಇನ್ನೊಂದು ಬಾವಿ ಇದೆ । ದಿನ ಬಿಟ್ಟು ದಿನ ಅಲ್ಲಿಗೆ ಹೋಗುವರು ॥ 54

ಪ್ರಖರ ಬಿಸಿಲದು ಮಧ್ಯಾಹ್ನದ್ದು । ಅಲ್ಲಿ ಸುತ್ತ ಯಾರೂ ಇಲ್ಲದುದ ನೋಡಿ ।
ತಾವೇ ಬಾವಿಯಿಂದ ನೀರು ಸೇದಿ । ಮುಖ ಮಾರ್ಜನವ ಮಾಡುವರು ॥ 55

ಹೀಗೊಂದು ಸಲ ಅಲ್ಲಿ ಹೋಗಿ । ಸ್ನಾನಕ್ಕೆ ಕುಳಿತಿರಲಾಗಿ ।
ಕರಳು ಹೊರತೆಗೆದರು ಲಗು ಬಗಿ । ಅಲ್ಲದನು ತೊಳೆಯ ತೊಡಗಿದರು ॥ 56

ಕುರಿ ಕೊಂದಾಗ ಅದರ ಕರುಳನು । ಹೊರಗಿಂದ ಒಳತನಕ ಬಿಚ್ಚಿ ಅದನು ।
ತೊಳೆದು ಹಾಕುವರದರ ಮಡಿಕೆಗಳನು । ನಿರ್ಮಲವನ್ನಾಗಿಸುವರು ॥ 57

ಅದರಂತೆಯೇ ತಮ್ಮ ಕರುಳು ತೆಗೆದು । ಒಳಗಿಂದ ಹೊರತನಕ ಸ್ವಚ್ಛ ತೊಳೆದು ।
ಹರಡಿದರು ಪೇರಲಗಿಡದ ಮೇಲದು । ಬಲು ಆಶ್ಚರ್ಯ ಜನರಿಗಿದರಿಂದ ॥ 58

ಇದನ್ನು ಕಣ್ಣಾರೆ ಕಂಡವರು । ಇನ್ನೂ ಜೀವಿಸಿರುವವರು ।
ಇನ್ನೂ ಶಿರಡಿಯಲ್ಲಿರುವವರು । ಅದೊಂದು ಅಪೂರ್ವ ವ್ಯಕ್ತಿ ಎಂದು ॥ 59

ಒಮ್ಮೊಮ್ಮೆ ಖಂಡಯೋಗ ಮಾಡುವಾಗ್ಗೆ । ಹಸ್ತಪಾದಾದಿಗಳ ಬೇರೆ ಬೇರೆ ಮಾಡಿದಾಗ್ಗೆ ।
ಬಿದ್ದಿರುತಿದ್ದವು ಅಲ್ಲಲ್ಲಿಗೆ । ಆ ಅವಯವಗಳು ಮಶೀದಿಯಲ್ಲಿ ॥ 60

ಹೀಗೆ ದೇಹವು ತುಂಡುತುಂಡಾದ್ದು । ದೃಶ್ಯವಿರುತಿತ್ತು ಮಹಾಭಯಂಕರವದು ।
ಊರ ಜನರು ನೋಡಲು ಓಡುವದು । ಆದರೆ ಬಾಬಾ ಅವರಿಗೆ ಪೂರ್ಣರಾಗಿಯೇ ಕಾಣುವರು ॥ 61

ಈ ಪ್ರಕಾರನು ಒಮ್ಮೆ ನೋಡಿದ । ನೋಡಿದವನು ಅತಿಶಯ ಹೆದರಿದ ।
ಯಾರೋ ದುಷ್ಟ ಬಾಬಾರನು ಕೊಂದ । ಈ ಅತ್ಯಾಚಾರವನೆಸಗಿರುವ ॥ 62

ಮಶೀದಿಯೊಳಗೆ ಅಲ್ಲಲ್ಲಿ । ಅವಯವಗಳು ಬಿದ್ದಿವೆ ನಾಲ್ಕೂ ಮೂಲೆಯಲ್ಲಿ ।
ಹತ್ತಿರ ಬೇರೊಬ್ಬರಿರಲಿಲ್ಲ ಮಧ್ಯರಾತ್ರಿಯಲಿ । ಚಿಂತೆ ಮನಸಿನಲಿ ಮೂಡಿತು ॥ 63

ಯಾರಿಗಾದರೂ ಇದನು ಹೇಳಹೋದರೆ । ಅದು ತಿರುಗಿ ತನ್ನ ಮೇಲೇ ಬರುವಂತಾದರೆ ।
ಈ ವಿಚಾರ ಮನದಲಿ ಬರೆ । ಹೊರಗೆ ಹೋಗಿ ಕುಳಿತನು ॥ 64

ಇದೂ ಒಂದು ಸಾಯಿಯ ಯೋಗವಿರುವದು । ಎಂಬ ವಿಚಾರ ಅವನ ಕನಸಿನಲ್ಲೂ ಬರದು ।
ಭಿನ್ನ ಭಿನ್ನವಾದ ದೇಹವನು ಕಂಡು । ಹುಟ್ಟಿತು ಒಳಗೆ ಹೆದರಿಕೆ ॥ 65

ಇದನು ಯಾರಿಗಾದರೂ ಹೇಳ ಹೋಗಲು । ನಾನೇ ಇದನು ಮಾಡಿದ್ದೆನಲು ।
ಎಂಬ ವಿಚಾರ ಮನದಲಿ ಬರಲು । ಹೊರಗೆ ಹೋಗಿ ಕುಳಿತನು ॥ 66

ಯಾರಿಗಾದರೂ ಇದನು ತಿಳಿಸಿದರಾಯಿತು । ಹೀಗೆ ಅವನಿಗೆ ಬಹಳ ಅನಿಸಿತು ।
ನನ್ನನ್ನೇ ತಪ್ಪಿತಸ್ಥನೆಂದರೆಂತು । ಮೊದಲು ಸುದ್ದಿಯ ತಿಳಿಸಿದಾತನೆಂದು ॥ 67

ಹೀಗಾಗಿ ಬಾರದು ಯಾರಿಗೂ ಹೇಳಲು । ಮನದಲಿ ತುಂಬಿದವು ಅಸಂಖ್ಯ ಕಲ್ಪನೆಗಳು ।
ಮತ್ತೆ ಹೋಗಬೇಕು ಬೆಳಗಾಗಲು । ಎಂದು ನೋಡಲು ವಿಸ್ಮಯ ಮನಕೆ ॥ 68

ಆಗ ನೋಡಿದ ದೃಶ್ಯವು ಮಾಯವಾಗಿ । ಬಾಬಾ ಕುಳಿತಿದ್ದರು ಸಕುಶಲರಾಗಿ ।
ಇರಬಹುದೇ ನಾ ಕಂಡದ್ದು ಸ್ವಪ್ನವಾಗಿ । ಎಂದೆನಿಸಿ ವಿಸ್ಮಿತನಾದನು ॥ 69

ಈ ಯೋಗ ಧೋತಿಪೋತಿಗಳನು । ಬಾಲ್ಯದಿಂದಲೇ ಆಚರಿಸುತಿದ್ದರಿವನು ।
ಯಾರೂ ತಿಳಿದಿರಲಿಲ್ಲ ಈ ಅಗಮ್ಯ ರೀತಿಯನು ಯೋಗಸ್ಥಿತಿಯ ಅವರದು ॥ 70

ಒಬ್ಬರ ದುಡ್ಡನ್ನೂ ಮುಟ್ಟಲಿಲ್ಲವರು । ಗುಣದಿಂದಲೇ ಪ್ರಖ್ಯಾತರಾದರವರು ।
ಬಡಬಗ್ಗರಿಗೆ ಆರೋಗ್ಯವಿತ್ತರು । ಹಕೀಮರೆಂದಾ ಪ್ರಾಂತದಲಿ ಹೆಸರಾದರು ॥71

ಕೇವಲ ಪರಾರ್ಥಕ್ಕೇ ಹಕೀಮನವನು । ನಿಜ ಸ್ವಾರ್ಥದತ್ತ ಉದಾಸೀನನು ।
ಪರರಿಗಾಗಿಯೇ ಸಾಧಿಸಲಿದನು । ಅಸಹ್ಯ ಅನರ್ಥಗಳ ಸಹಿಸಿದರು ॥ 72

ಇದೇ ಅರ್ಥದ ಕಥೆಯೊಂದನು । ಶ್ರೋತೃಗಳಿಗಾಗಿಯೇ ಹೇಳುವೆನು ।
ಅರಿಯುವಿರಿ ಬಾಬಾರ ವ್ಯಾಪಕತೆಯನು । ಅದರಂತೆಯೇ ಅವರ ದಯಾರ್ದ್ರತೆಯನು ॥ 73

ಸನ್ ಹತ್ತೊಂಬತ್ತು ನೂರಾ ಹತ್ತರಲ್ಲಿ । ಧನತ್ರಯೋದಶಿಯ ಸಮಯದಲ್ಲಿ ।
ಬಾಬಾ ಕುಳಿತಿದ್ದರು ಧುನಿಯ ಬಳಿಯಲ್ಲಿ । ಕಟ್ಟಿಗೆಗಳನು ಉರಿಸುತ ॥ 74

ಧುನಿಯಲಿ ಪ್ರಖರವಾಗಿತ್ತು ಬೆಂಕಿ । ಅಂಥದರಲ್ಲಿ ತಮ್ಮ ಕೈ ತುರುಕಿ ।
ನಿಶ್ಚಿಂತರಾಗಿ ಅದರಲ್ಲೇನೋ ಹುಡುಕಿ । ಆಗ ಕೈ ಎಲ್ಲ ಸುಟ್ಟು ಹೋಯಿತು ॥ 75

ಮಾಧವನೆಂಬ ಹೆಸರಿನ ಭಕ್ತ । ಸಹಜ ಲಕ್ಷ ಹೋಯಿತು ಅತ್ತ ।
ದೇಶಪಾಂಡೆಯವರೂ ಧಾವಿಸಿದರತ್ತ । ಅಲ್ಲಿ ಹತ್ತಿರದಲ್ಲಿಯೇ ಇದ್ದರವರು ॥ 76

ಓಡಿ ಅವರ ಹಿಂದೆ ಕುಳಿತುಕೊಂಡು । ಅವರ ನಡಕ್ಕೆ ಬಿಗಿಯಾಗಿ ಹಿಡಿದುಕೊಂಡು ।
ಬಾಬಾರನಿತ್ತ ಜಗ್ಗಿ ತಕ್ಕೊಂಡು । ಕೇಳಿದರವರಿಗೆ ಏನನು ನೋಡಿ ॥ 77

ಹಾ ಹಾ ದೇವಾ ಇದೇನು ಮಾಡಿದಿರಿ । ಎಂದಾಗವರು ಎಚ್ಚರಾಗಿ ।
ಎಂದರು "ಕಂಕುಳಲ್ಲಿ ಮಗುವೊಂದು ಜಾರಿ । ಉರಿವ ಭಟ್ಟಿಯಲಿ ಬಿದ್ದಿತು ॥ 78

ಊದುತ್ತೂದುತ್ತ ಲಕ್ಷ ಹಾರಿತು । ಮಗುವು ಕಂಕುಳಲಿದ್ದದ್ದೇ ಮರೆಯಿತು ।
ಚಂಚಲ ಮಗುವದು ಅಲ್ಲಿಂದ ಜಾರಿತು । ಶ್ಯಾಮಾ ಅದು ಬಿದ್ದ ಕೂಡಲೇ ನಾ ಎತ್ತಿದೆ ॥ 79

ನಿಜ ಪತಿಯ ಕೂಗನು ಕೇಳಿದ । ಹೆಂಡತಿ ಆ ಕಮ್ಮಾರನ ಹೆದರಿಕೆಯಿಂದ ।
ಮಗುವನು ಬಗಲಲಿ ಎತ್ತಿ ಕೊಂಡು । ತಿದಿಯನೊತ್ತುತ್ತಿದ್ದಳಾಗ ॥ 80

ಆ ಮಗುವನು ಅಲ್ಲಿಂದೆತ್ತಲು । ಹೋದಾಗ ಈ ಪ್ರಕಾರ ನಡೆಯಲು ।
ಹೋಗಲಿ ಬಿಡು ನನ್ನ ಕೈ ಸುಡಲು । ಆ ಮಗುವಾದರೂ ಬದುಕಿತಲ್ಲಾ" ॥81

ಈ ಕೈಗಾದ ಗಾಯವನ್ನು । ಹೋಗಿಸಲು ಮಾಡುವದೇನು ।
ಬರೆಯಬೇಕು ಚಾಂದೋರಕರರಿಗೆ ಪತ್ರವನು । ಎಂದರು ಮಾಧವರಾಯರು ॥ 82

ಸವಿಸ್ತರವಾಗಿ ಪತ್ರ ಬರೆದರು । ಶಿರಡಿಗೆ ಚಾಂದೋರಕರರು ಬಂದರು ।
'ಪರಮಾನಂದ'ರೆಂಬ ಪ್ರಸಿದ್ಧ ಡಾಕ್ಟರರು । ಜೊತೆಗವರನ್ನು ಕರೆತಂದರು ॥83

ದಾಹೋಪಶಮನಕೆ ಬಳಸುವಂಥ । ತೆಗೆದುಕೊಂಡು ಅನೇಕ ಔಷಧಿಗಳನು ಇಂಥ ।
ನಾನಾ ಪರಮಾನಂದ ಸಮವೇತ । ಸಾಯಿ ಚರಣಕೆ ಬಂದರು ॥ 84

ಬಾಬಾರಿಗೆ ಅಭಿವಂದನೆ ಮಾಡಿ । ಕುಶಲವಾರ್ತೆಯ ಕೇಳಿ ಮಾತಾಡಿ ।
ಆಗಮನಕೆ ಕಾರಣವ ನೀಡಿ । ಹಸ್ತಾವಲೋಕನಕೆ ಪ್ರಾರ್ಥಿಸಿದರು ॥ 85

ಮೊದಲೇ ಕೈ ಸುಟ್ಟಾಗಿನಿಂದ । ಭಾಗೋಜಿ ಸಿಂಧೆ ತುಪ್ಪದಿಂದ ।
ತಿಕ್ಕಿ ಪಟ್ಟಿಗಳ ಕಟ್ಟುತ್ತಿದ್ದ । ಎಲೆಯನಲ್ಲಿ ಹಾಕಿ ಪ್ರತಿದಿನ ॥ 86

ಆ ಕೈಯನು ಬಿಚ್ಚಿ ನೋಡಬೇಕು । ಪರಮಾನಂದರಿಗೆ ತೋರಿಸಬೇಕು ।
ಔಷಧೋಪಚಾರ ಮಾಡಬೇಕು । ಗುಣವಾಗಬೇಕು ಬಾಬಾರಿಗೆ ॥ 87

ನಾನಾ ಈ ಸದಿಚ್ಛೆಯನು ಮನದಲಿರಿಸಿ । ಮನ ಒಲಿಸಲು ಬಲು ಪ್ರಯತ್ನಿಸಿ ।
ಕಟ್ಟಿದ ಪಟ್ಟಿಗಳನ್ನು ಬಿಚ್ಚಿಸಿ । ನೋಡಲು ಪರಮಾನಂದರು ಯತ್ನಿಸಿದರು ॥88

ಇಂದು ನಾಳೆ ಇಂದು ನಾಳೆ ಎನ್ನುತ । ಅಲ್ಲಾನೇ ತಮ್ಮ ವೈದ್ಯನೆನ್ನುತ ।
ನೋಡಲು ಬಿಡಲಿಲ್ಲ ತಮ್ಮ ಹಸ್ತ । ಅದರ ಖೇದವೂ ಮನಸಿಗಿಲ್ಲ ॥ 89

ಪರಮಾನಂದನು ತಂದ ಔಷಧಕೆ । ತಾಗಲಿಲ್ಲ ಶಿರಡಿಯ ಹವೆಯೂ ಅದಕೆ ।
ಆದರೂ ಸಾಯಿ ದರ್ಶನ ಪಡೆಯುವದಕೇ । ಸುದೈವದಿ ಬಂದಂತಾಯಿತು ॥ 90

ಭಾಗೋಜಿಯಿಂದಲೇ ಸೇವೆಯಾಗಬೇಕು । ಭಾಗೋಜಿಯೇ ಕೈ ತಿಕ್ಕಬೇಕು ।
ಇಷ್ಟಾಗುವಾಗ ಕೈ ವಾಸಿಯಾಯಿತು ಸಾಕು । ಅದರಿಂದೆಲ್ಲರಿಗೂ ಸೌಖ್ಯ ॥ 91

ಈ ರೀತಿ ಕೈ ವಾಸಿಯಾಯಿತು । ಆದರೆ ತಿಳಿಯದು ಬಾಬಾರಿಗೆಂಥ ಬುದ್ಧಿ ಬಂತು ।
ದಿನಾಲು ಪ್ರಾತಃಕಾಲದ ಹೊತ್ತು । ಆ ಅರಿವೆ ಪಟ್ಟಿಗಳ ಕಟ್ಟಬೇಕು ॥ 92

ಕೈಗೇನೂ ವೇದನೆ ಇಲ್ಲದೇ । ನಿತ್ಯ ಅದರ ಉಸಾಬರಿ ತಪ್ಪದೇ ।
ಘೃತಮರ್ದನ ನಿಷ್ಪೀಡನದೇ ಉಪಚಾರ । ಆಮರಣಾಂತವೂ ನಡೆಯಿತು ॥ 93

ಈ ಉಪಾಸನೆ ಭಾಗೋಜಿಯದೇ । ಸಾಯಿ ಸಿದ್ಧರಿಗೆ ಅದರ ಅವಶ್ಯಕತೆ ಇಲ್ಲದೇ ।
ಭಾಗೋಜಿಗೆ ಸೇವೆ ಒದಗಲೆಂದೇ । ನಿತ್ಯ ನೇಮದಿ ಮಾಡಿಸಿಕೊಳುವರು ॥ 94

ಪೂರ್ವಜನ್ಮದ ಮಹಾದೋಷವಿರಲು । ಭಾಗೋಜಿಗೆ ಕುಷ್ಟರೋಗವು ಬರಲು ।
ಆದರೆ ಅವನ ಭಾಗ್ಯ ವಿಶೇಷವೆನ್ನಲು । ಸಾಯಿ ಸಹವಾಸ ದೊರಕಿತು ॥ 95

ಲೇಂಡಿಗೆ ಫಿರತಿ ಹೊರಡಲು । ಭಾಗೋಜಿಯೇ ಬಾಬಾರ ಛತ್ರಧಾರಿಯಾಗಲು ।
ಶರೀರವೆಲ್ಲವ ಕುಷ್ಟ ವ್ಯಾಪಿಸಲು । ಹೀಗಿದ್ದರೂ ಅವನೇ ಮೊದಲ ಸೇವೆಯವ ॥ 96

ಧುನಿಯ ಹತ್ತಿರದ ಕಂಭಕ್ಕೆ । ಕುಳಿತುಕೊಳ್ಳುವರು ನಿಜಾರಾಮಕ್ಕೆ ।
ಬಾಬಾ ದಿನಾಲು ಪ್ರಾತಃಕಾಲಕ್ಕೆ । ಆಗ ಈ ಭಾಗ್ಯಾ ಸೇವೆಗೆ ಹಾಜರು ॥ 97

ಕೈಕಾಲಿಗೆ ಕಟ್ಟಿದ ಪಟ್ಟಿ ಬಿಚ್ಚುವದು । ಅಲ್ಲಿಯ ಸ್ನಾಯುಗಳಿಗೆ ಮಾಲಿಶ ಮಾಡುವದು ।
ಮಾಲಿಶ ಮಾಡಿದಲ್ಲಿ ತುಪ್ಪ ಹಚ್ಚಿ ತಿಕ್ಕುವದು । ಈ ಸೇವೆ ಎಲ್ಲ ಭಾಗ್ಯಾನದೇ ॥ 98

ಪೂರ್ವಜನ್ಮದ ಮಹಾಪಾಪಿಷ್ಠ । ಮೈಯೆಲ್ಲ ವ್ಯಾಪಿಸಿದೆ ರಕ್ತ ಕುಷ್ಟ ।
ಭಾಗೋಜಿ ಶಿಂದೆ ಮಹಾವ್ಯಾಧಿಷ್ಟ । ಆದರೂ ಅವನೇ ವರಿಷ್ಠ ಭಕ್ತನು ಬಾಬಾರಿಗೆ ॥ 99

ಮಹಾರೋಗದಿಂದ ಬೆರಳುಗಳುದುರಲು । ದೇಹವೆಲ್ಲ ಹೊಲಸು ನಾರಲು ।
ಇಷ್ಟು ದೊಡ್ಡದು ಅವನ ದುರ್ಭಾಗ್ಯವಿರಲು । ಸೇವೆಯಿಂದಾಗಿ ಅವ ಭಾಗ್ಯವಂತ ॥ 100

ಎಷ್ಟೆಂತ ನಾ ಶ್ರೋತೃಗಳಿಗೆ ಹೇಳಲಿ । ಬಾಬಾರ ಅಗಾಧ ಲೀಲೆಗಳ ವರ್ಣಿಸಲಿ ।
ಒಮ್ಮೆ ಪ್ಲೇಗ್ ಜ್ವರ ಸುರುವಾಯಿತು ಊರಲ್ಲಿ । ಚಮತ್ಕಾರ ನಡೆದದ್ದು ಕೇಳಲಿ ॥ 101

ದಾದಾಸಾಹೇಬ ಖಾಪರ್ಡೆಯ । ಚಿಕ್ಕ ವಯಸ್ಸಿನವನೊಬ್ಬ ತನಯ ।
ಸಾಯಿ ಸಹವಾಸ ಸುಖವನು ತನ್ನ ತಾಯಿಯ । ಜೊತೆಯಲೇ ಉಪಭೋಗಿಸುತಿದ್ದ ॥102

ಮೊದಲೇ ಹುಡುಗನಿಗೆ ಚಿಕ್ಕ ವಯ । ಜ್ವರವೇರಿತು ಅತಿಶಯ ।
ಒಡೆದು ಹೋಯಿತು ಮಾತೆಯ ಹೃದಯ । ಮನ ಅಸ್ವಸ್ಥವಾಯಿತು ॥ 103

ಉಮರಾವತಿ ಊರು ಅವರದು । ಮನಸಿನಲಿ ಬಂತು ಅಲ್ಲಿ ಹೋಗುವದು ।
ಸಾಯಂಕಾಲದ ಸಮಯ ಕಂಡು । ಅನುಜ್ಞೆ ಪಡೆಯಲು ಬಂದಳು ॥ 104

ಸಾಯಂಕಾಲದ ಫೇರಿಗೆ ಹೊರಟಾಗ । ವಾಡೇದ ಹತ್ತಿರ ಬಾಬಾ ಬಂದಾಗ ।
ಓಡಿ ಹೋಗಿ ಹಿಡಿದಳವರ ಪಾದಗಳನಾಗ । ನಡೆದ ಸಂಗತಿಯನ್ನರುಹಿದಳು ॥105

ಮೊದಲೇ ಸ್ತ್ರೀಯರ ಜಾತಿ ಪುಕ್ಕಲು । ಅದರಲ್ಲಿ ಮಗುವಿನ ಜ್ವರ ನಿಲ್ಲದಿರಲು ।
ಗ್ರಂಥಿ ಜ್ವರದ ಭಯಬೇರೆ ಇರಲು । ಅದನೆಲ್ಲ ಬಾಬಾರೆದುರು ಹೇಳಿದಳು ॥ 106

"ಈಗ ಮೋಡಕವಿದಿದೆ ನೋಡು । ಮಳೆ ಬಿದ್ದು ಬೆಳೆ ಬೆಳೆದು ।
ಈ ಅಭ್ರ ಕರಗಿ ಹೋದೀತು ಎಂದು" । ಬಾಬಾ ನುಡಿದರು ಮೃದು ವಚನ ॥ 107

ಕಫನಿಯ ನಡುವಿನವರೆಗೆ ಎತ್ತಿದರು । ಎಲ್ಲರೆದುರಿಗೂ ತೋರಿಸಿದರು ।
ಅಲ್ಲಿ ಸ್ಪಷ್ಟವಾಗಿ ಗಂಟುಗಳ ನೋಡಿದರು । ಬಾಬಾ ನುಡಿದರು ಹೆದರುವಿರೇಕೆ ॥ 108

ಕೋಳಿಯ ತತ್ತಿಯಷ್ಟು ದೊಡ್ಡವು । ನಾಲ್ಕು ಕಡೆಗೆ ನಾಲ್ಕು ಗಂಟುಗಳೆದ್ದಿದ್ದವು ।
ಎಂದರು ನೋಡಿರಿ ನನ್ನ ಈ ಭೋಗವು । ನಿಮ್ಮೆಲ್ಲರ ಹಿತಕ್ಕೆ ಇರುವದು ॥ 109

ಈ ದಿವ್ಯ ಅಲೌಕಿಕ ಕರ್ಮವನ್ನ । ನೋಡಿ ವಿಸ್ಮಿತರಾದರು ಜನ ।
ಭಕ್ತರಿಗಾಗಿ ಎಷ್ಟೋ ದುಃಖಗಳನ । ಭೋಗಿಸುವರೆಂತು ಸಂತ ಜನರು ॥110

ಮನಸು ಮೆತ್ತಗೆ ಮೇಣದಂತೆ । ಸಬಾಹ್ಯವಿರುವದು ಬೆಣ್ಣೆಯಂತೆ ।
ಲಾಭಕ್ಕಲ್ಲವರ ಭಕ್ತ ಪ್ರೀಯತೆ । ಭಕ್ತರೇ ಬಳಗ ಅವರಿಗೆಲ್ಲ ॥ 111

ನಡೆದುದೊಮ್ಮೆ ಈ ಪ್ರಕಾರ । ನಾನಾಸಾಹೇಬ ಚಾಂದೋರಕರ ।
ಹೊರಟಿದ್ದರು ಬಿಟ್ಟು ನಂದುರಬಾರ । ಪಂಢರಪುರಕ್ಕೆ ಹೋಗಲು ॥ 112

ನಾನಾರ ಭಾಗ್ಯ ತೆರೆಯಿತು । ಸಾಯಿಯ ಸೇವೆ ಫಲಿಸಿತು ।
ಭೂವೈಕುಂಠವೇ ಪ್ರಾಪ್ತವಾಯಿತು । ಮಾಮಲೇದಾರರಾದರಲ್ಲಿ ॥ 113

ನಂದುರಬಾರಕ್ಕೆ ಆಜ್ಞೆ ಬರಲು । ಹೋಗಬೇಕಾಗಿತ್ತು ಬೇಗ ಬಲು ।
ಅವಸರದಿಂದ ಸಿದ್ಧತೆ ಮಾಡಲು । ದರ್ಶನೋದ್ದೇಶ ಒಳಗಿತ್ತು ॥ 114

ಸಹಕುಟುಂಬ ಸಹಪರಿವಾರ ಕೂಡಿ । ಶಿರಡಿಗೆ ಹೋಗುವದು ಗೊತ್ತು ಮಾಡಿ ।
ಮೊದಲ ಪಂಢರಪುರವೇ ಶಿರಡಿ । ಬಾಬಾರಿಗೆ ನಮಸ್ಕಾರ ಮಾಡುವಾ ॥ 115

ಯಾರಿಗೂ ಪತ್ರ ಬರೆದಿಲ್ಲ । ಯಾರ ಹತ್ತಿರವೂ ಹೇಳಿಕಳಿಸಿರಲಿಲ್ಲ ।
ತೆಗೆದುಕೊಂಡು ಸಾಮಾನನ್ನೆಲ್ಲ । ಅವಸರದಲಿ ಗಾಡಿ ಹತ್ತಿದರು ॥ 116

ನಾನಾ ಈ ರೀತಿ ಹೊರಟರು । ಶಿರಡಿಯಲಿ ಯಾರಿಗೂ ತಿಳಿದಿರದಿದ್ದರೂ ।
ಬಾಬಾರಿಗೆ ಮೊದಲು ತಿಳಿದಿತ್ತು ಆದರೂ । ಎಲ್ಲೆಡೆಗೆ ದೃಷ್ಟಿ ಅವರದು ॥117

ನಾನಾ ಸತ್ವರ ಹೊರಟು ಬಂದು । ಇನ್ನೂ ನೀಮಗಾವದ ಅಗಸಿಯಲಿರಬಹುದು ।
ಆಗ ಶಿರಡಿಯಲ್ಲಿ ಚಮತ್ಕಾರ ನಡೆದುದು । ಸತ್ಯವಿದನು ಆಲಿಸಿರಿ ॥ 118

ಬಾಬಾ ಇದ್ದರು ಮಶೀದಿಯಲ್ಲಿ । ಮ್ಹಾಳಸಾಪತಿಯ ಜೊತೆಯಲ್ಲಿ ।
ಅಪ್ಪಾಸಿಂಧೆ ಕಾಶೀರಾಮ ಭಕ್ತರ ಜೊತೆಯಲ್ಲಿ । ಮಾತಾಡುತ್ತ ಕುಳಿತಿದ್ದರು ॥ 119

ಅಷ್ಟರಲ್ಲಿ ಬಾಬಾ ನುಡಿದರು । ಕೂಡಿ ಭಜನೆ ಮಾಡುವಾ ನಾಲ್ವರೂ ।
ತೆರೆದಿದೆ ಪಂಢರಪುರದ ದ್ವಾರವು । ಆನಂದದಿ ಭಜನೆ ಮಾಡುವಾ ॥ 120

ಸಾಯಿಗೆ ತ್ರಿಕಾಲ ಜ್ಞಾನವಿತ್ತು । ಅವರಿಗೆ ಆ ವಾರ್ತೆ ತಿಳಿದೇ ಇತ್ತು ।
ಆದರಿಂದ ಬಾಬಾರಿಗೆ ಭಜನೋಲ್ಲಾಸವಾಯಿತು । ನಾನಾ ಅಗಸಿಯ ಹತ್ತಿರ ಬರಲು ॥ 121

## ಭಜನೆ

"ಘಂಡರಪುರಕಿನ್ನು ಹೋಗುವದು ಹೋಗುವದು । ಅಲ್ಲಿಯೇ ನಾನಿನ್ನಿರುವದು ಇರುವದು ।
ಅಲ್ಲಿಯೇ ನಾನಿನ್ನಿರುವುದು ಇರುವದು । ಮನೆಯದು ನನ್ನಯರಾಯರದು ರಾಯರದು ॥

ಸ್ವತಃ ಬಾಬಾ ಭಜನೆ ಹೇಳುವರು । ಕುಳಿತ ಭಕ್ತರದ ಅನುವಾದ ಮಾಡುವರು ।
ಘಂಡರಿಯ ಪ್ರೇಮದಲಿ ಗುಂಗಾಗಿರುವರು । ಅಷ್ಟರಲಿ ನಾನಾರೂ ಬಂದರು ॥ 122

ಸಹಕುಟುಂಬ ಕಾಲಿಗೆರಗಿದರು । ಪಂಢರಪುರದಲ್ಲಿ ಮಹಾರಾಜರು ।
ನಿವಾಂತ ನಿಶ್ಚಿಂತರಾಗಿರುವರು । ನಮ್ಮೊಡನೆ ಪಂಢರಪುರದಲ್ಲಿಂದರು ॥ 123

ಈ ವಿನಂತಿಯ ಅವಶ್ಯಕತೆಯೇ ಇರದು । ಮೊದಲೇ ಬಾಬಾ ಉಲ್ಲಸಿತರಾಗಿದ್ದು ।
ಪಂಢರಿ ಗಮನದ ಭಜನೆ ಹಾಡಿದ್ದು । ಜನರು ಅವರಿಗೆ ತಿಳಿಸಿದರು ॥ 124

ನಾನಾ ಮನದಲಿ ಅತಿ ವಿಸ್ಮಿತರು । ಲೀಲೆಯ ಕಂಡು ಚಕಿತರಾದರು ।
ಅವರಡಿಯಲಿ ಶಿರವನಿಟ್ಟರು । ಗದ್ಗದಿತ ಕಂಠರಾಗಿ ಅವರು ॥ 125

ತಲೆಬಾಗಿ ನಮಿಸಿ ಉದಿ ಪ್ರಸಾದ । ಮತ್ತು ಪಡೆದು ಆಶೀರ್ವಾದ ।
ಚಾಂದೋರಕರರು ಸಮಾಧಾನದಿಂದ । ಪಂಢರಪುರಕೆ ನಡೆದರು ॥ 126

ಇಂಥ ಕಥೆಗಳ ವಿಚಾರ । ಹೇಳತೊಡಗಿದರಾದೀತು ಗ್ರಂಥ ವಿಸ್ತಾರ ।
ಅದಕಾಗಿ ಈ ಪರದುಃಖ ನಿವೃತ್ತಿಪರ । ವಿಷಯವ ಸ್ವಲ್ಪದರಲ್ಲಿ ಮುಗಿಸುವಾ ॥ 127

ಮುಗಿಸುವಾ ಈ ಅಧ್ಯಾಯವನಿಲ್ಲಿಗೆ । ಅಂತವಿದೆಯೇ ಬಾಬಾರ ಚರಿತೆಗೆ ।
ನಾ ಹೇಳುವೆ ಸ್ವಹಿತಕ್ಕಾಗೇ । ಬೇರೆ ಕಥೆಗಳ ಮುಂದಿನಧ್ಯಾಯದಲಿ ॥ 128

ನಾನೆಂಬುವ ಅಹಂ ವೃತ್ತಿಯದು । ಬಿಡುವೆನೆಂದರೂ ಬಿಡದದು ।
ಈ ನಾ ನಾ ಎಂಬುವದಾವುದು । ಸಾಯಿಯೇ ಹೇಳುವರು ನಿಜಕಥೆಯನು ॥ 129

ಹೇಳುವರು ನರಜನ್ಮದ ಮಹಿತಿ । ನಿವೇದಿಸುವರು ನಿಜ ಭೈಕ್ಷ್ಯವೃತ್ತಿ ।
ಬಾಯಜಾಬಾಯಿಯ ಆ ಭಕ್ತಿ । ಭೋಜನದ ರೀತಿಯೂ ತಮ್ಮದು ॥ 130

ಕರೆದುಕೊಂಡು ಜೊತೆಗೆ ಮ್ಹಾಳಸಾಪತಿಯನು । ಮತ್ತು ಕೋತೇ ತಾತ್ಯಾಗಣಪತಿಯರನು ।
ಸಾಯಿ ಬಾಬಾ ಮಲಗುವ ರೀತಿಯನು । ಮಶೀದಿಯಲ್ಲಿ ಹೇಗಿತ್ತೆಂಬುದನು ಕೇಳಿರಿ ॥131

ಪಂತ ಹೇಮಾಡ ಸಾಯಿಗೆ ಶರಣ । ಎನಿಸುವ ಭಕ್ತರ ಕಾಲಿನ ಪಾದತ್ರಾಣ ।
ಅವನಿಗೆ ಸಾಯಿಯ ಆಜ್ಞೆಯೇ ಪ್ರಮಾಣ । ಇಲ್ಲಿಯವಗೆ ನಿರೂಪಣೆ ಮುಗಿಯಿತು ॥132

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ವಿವಿಧ ಕಥಾ ನಿರೂಪಣಂ ನಾಮ ಸಪ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

### ಅಧ್ಯಾಯ ಎಂಟು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನ ಅಧ್ಯಾಯದಲಾಯಿತು ಕಥನ । ಬಾಬಾರು ಹೇಗೆ ಹಿಂದು ಅಥವಾ ಯವನ ।
ಆ ಶಿರಡಿಯ ಭಾಗ್ಯವೆಂತ ಗಹನ । ನಿಜಸ್ಥಾನವದು ಬಾಬಾರದು ॥ 1

ಹೇಗೆ ಆರಂಭದಲಿ ಬಾಬಾ ಹುಡುಗರಾಗಿದ್ದರು । ಮುಂದೆ ಹುಚ್ಚ ಫಕೀರರಾದರು ।
ಹೇಗೆ ಉಪವನವ ನಿರ್ಮಿಸಿದರು । ಇದುವರೆಗೆ ಬಂಜೆಯಾದ ಭೂಮಿಯಲಿ ॥2

ಹೇಗೆ ಕಾಲಕ್ರಮಿಸಲು ಮುಂದೆ । ಅದೇ ಸ್ಥಳದಲಾಯಿತು ವಾಡೆ ।
ಧೋತಿ ಪೋತಿ ಖಂಡಯೋಗ ವಿದ್ಯೆ । ಸಾಹಸವನು ವರ್ಣಿಸಿದೆ ಬಾಬಾರದು ॥ 3

ಸವೆಸಿ ತಮ್ಮ ಕಾಯವನು । ಹೇಗೆ ಬಾಬಾ ಸಹಿಸಿದರು ಅಪಾಯವನು ।
ಭಕ್ತರಾಧಾರ ಸಾಯಿರಾಯನು । ನಾನೆಷ್ಟು ಅವನ ವರ್ಣಿಸಲಿ ॥ 4

ಕೇಳಿರಿನ್ನು ನರಜನ್ಮದ ಮಹಿಮಾನ । ಸಾಯಿಯವರ ಭೈಕ್ಷ್ಯವೃತ್ತಿಯ ವರ್ಣನ ।
ಬಾಯಜಾಬಾಯಿಯ ಸಂತಸೇವೆಯನ । ಬಾಬಾರ ಊಟದ ಪರಿಯನು ॥5

ತಾತ್ಯಾ, ಬಾಬಾ, ಮ್ಹಾಳಸಾಪತಿ ಮೂವರು । ಹೇಗೆ ಮಶೀದಿಯಲಿ ಮಲಗುತಿದ್ದರು ।
ಹೇಗೆ ಖುಶಾಲಚಂದನ ಮನೆಗೆ ಹೋಗುವರು । ರಾಹತೆ ಊರಿಗೆ ಸಮರ್ಥರು ॥ 6

ಉದಯಾಸ್ತಳಾಗುವವು ದಿನದಿನವೂ । ವರ್ಷಾನುವರ್ಷಗಳು ಕಳೆದುಹೋಗುವವು ।
ನಿದ್ರಾವಸ್ಥೆಯಲಿ ಅರ್ಧಜನ್ಮವು । ಉಳಿದಿದ್ದನ್ನೂ ಸ್ವಸ್ಥವಾಗಿದ್ದು ಭೋಗಿಸಲು ಬಾರದು ॥7

ಬಾಲ್ಯ ಕಳೆಯಿತು ಆಡುತ್ತ ಆಟ । ತರುಣತನ ಹೋಯಿತು ತರುಣಿಯರ ಕೂಟ ।
ವೃದ್ಧಾಪಕಾಲದಲಿ ಮುಪ್ಪಿನ ಕಾಟ । ಸದೈವ ವ್ಯಾಧಿಯಲಿ ತ್ರಸ್ತ ॥ 8

ಹುಟ್ಟಿ ಬಂದದ್ದಕ್ಕೆ ಪುಷ್ಟರಾಗುವದು । ಶ್ವಾಸೋಛ್ವಾಸ ಮಾಡುತ್ತಿರುವದು ।
ದೀರ್ಘಾಯುಷ್ಯದ ಬಗ್ಗೆ ಓದುವದು । ಇದು ಏನು ಈ ಜನ್ಮದ ಸಾಧನೆ ॥ 9

ಪರಮಾತ್ಮ ಪ್ರಾಪ್ತಿ ಇದೇ ನಿಜವಾಗಿಯೂ । ನರಜನ್ಮದ ಇತಿ ಕರ್ತವ್ಯತೆಯು ।
ಅದಲ್ಲದಿರೆ ಶ್ವಾನಸೂಕರಾದಿಯಾಗಿಯೂ । ಜೀವಿಸುವದರಲ್ಲಿ ತಪ್ಪೇನು ॥ 10

ನಾಯಿಯೂ ತನ್ನ ಹೊಟ್ಟೆ ಹೊರೆಯುವದು । ಯಥೇಷ್ಟ ಪ್ರಜೋತ್ಪತ್ತಿಯ ಮಾಡುವದು
ಆಗ ನರದೇಹವೇ ಎಂಬ ಹೆಚ್ಚಳವೇನಿಹುದು । ಸಮಾನ ರೀತಿಯಲಿಬ್ಬರೂ ಬದುಕುವಾಗ ॥ 11

ಪಿಂಡ ಪೋಷಣೆ ಮತ್ತು ಮೈಥುನ । ಇದೇ ಆಗಿದ್ದರೆ ನರದೇಹದ ಸಾಧನ ।
ಇದೇ ಇರುತಿರೆ ಈ ಜನ್ಮದ ಪರ್ಯವಸಾನ । ಆಗ ಆ ನರಜನ್ಮವೂ ನಿರರ್ಥಕ ॥ 12

ಆಹಾರ ನಿದ್ರಾದಿ ಚತುಷ್ಟಯಗಳು । ಇದರಲ್ಲೇ ಆಯುಷ್ಯ ಕಳೆಯಲು ।
ಆಗ ಭೇದವೇನು ಶ್ವಾನ-ಮಾನವರೊಳು । ವಿವೇಕದಿಂದ ನೀವೇ ನಿರ್ಣಯಿಸಿರಿ ॥13

ಇದೇ ಇರಲು ನರಜನ್ಮದ ಸಫಲತೆ । ತರುಜನ್ಮದಲ್ಲೇನು ಕೊರತೆ ।
ತಿದಿಗೂ ಇರುವದು ಶ್ವಾಸೋಚ್ಛ್ವಾಸತೆ । ಶರೀರ ಪುಷ್ಟತೆಯು ಶ್ವಾನಕ್ಕೂ ॥ 14

ಮನುಷ್ಯ ಪ್ರಾಣಿಯು ಮುಕ್ತನಿರುವನು । ಅವನು ನಿರ್ಭಯನು ಸ್ವತಂತ್ರನು ।
ಅರಿವಿರಲವಗೆ ತಾ ಶಾಶ್ವತನು । ಅದು ಸಫಲತೆ ಈ ಜನ್ಮದ್ದು ॥ 15

ಎಲ್ಲಿಂದ ಬಂದೆ ನಾನಾರಿರುವೆನು । ನರಜನ್ಮದ ಕಾರಣವೇನು ।
ಇದರ ಬೀಜಾರ್ಥ ತಿಳಿದವನೇ ಜಾಣನು । ಅದು ಇಲ್ಲದೆ ವ್ಯರ್ಥವೇ ಇದು ಎಲ್ಲ ॥ 16

ಹೇಗೆ ನಂದಾದೀಪದ ಜ್ಯೋತಿಯದು । ಆದಿ ಅಂತ್ಯದಲಿ ಒಂದೇ ಕಾಣುವದು ।
ಆದರೂ ಕ್ಷಣಕ್ಕೂ ಅದು ಬೇರೆ ಇರುವದು । ಅದರಂತೆ ಸ್ಥಿತಿಯು ಈ ದೇಹದ್ದು ॥ 17

ಬಾಲ್ಯ ತಾರುಣ್ಯ ವಾರ್ಧಕ್ಯಾವಸ್ಥೆಗಳು । ಎಲ್ಲ ಜನರಿಗೂ ಬರುತಿರಲು ।
ಸ್ವಾಭಾವಿಕವಾಗಿ ಅವು ಬರುಹೋಗುತಿರಲು । ಯಾರಿಗೂ ಎಂದೂ ತಿಳಿಯದು ॥ 18

ಕಾಣುತ್ತಿರುವದು ತತ್‌ಕ್ಷಣದಲಿ ಅದು ಇರದು । ಅಪರಿಮಿತವಿದ್ದರೂ ಒಂದೇ ಎನಿಸುವದು ।
ಅಂತೆಯೇ ದೇಹ ಈಗಿದೆ ಇನ್ನೊಂದು ಕ್ಷಣಕಿರದು । ಮತ್ತೆ ಮೊದಲಿನ ದೇಹವು ॥ 19

ದೇಹ ಮಲ ಮೂತ್ರಗಳ ಬಚ್ಚಲು । ಶ್ಲೇಷ್ಮ-ಪೂಯ-ಜೊಲ್ಲದಿಂದ ತುಂಬಿರಲು ।
ಮರಣ ಸಮೀಪಿಸುತಿದೆ ಕ್ಷಣ ಕ್ಷಣದೊಲು । ಈ ಎಲ್ಲ ಕುಲಕ್ಷಣಗಳಿದಕೆಹವು ॥ 20

ಕ್ರಿಮಿಕೀಟಕಗಳ ಮನೆಯಿದು । ಆಗರವು ನಾನಾ ರೋಗಗಳದು ।
ಅಶಾಶ್ವತ, ಕ್ಷಣ ಭಂಗುರವಿದು । ಶರೀರ ಮಾನವನದೆನಿಸುವದು ॥ 21

ಮಾಂಸ ಶೋಣಿತ ಸ್ನಾಯುಗಳಿಂದ । ಹಂದರವಿದು ಅಸ್ಥಿ ಚರ್ಮಗಳಿಂದ ಕೂಡಿದ ।
ಒಳಗೆಲ್ಲ ಮಲಮೂತ್ರಗಳ ದುರ್ಗಂಧ । ಜೀವಕೊಂದು ತೊಡಕು ಪ್ರತ್ಯಕ್ಷ ॥ 22

ತ್ವಚಾ ಮಾಂಸ ರುಧಿರ ಸ್ನಾಯು । ಮೇದ ಮಜ್ಜಾ ಅಸ್ಥಿ ಪಾಯಾ ।
ಅಮಂಗಲ ಅಂಗಗಳಿಂದ ಉಪಸ್ಥಪಾಯಾ । ಇಂಥ ಅಲ್ಪಾಯುವಾದ ಕಾಯವಿದು ॥ 23

ಇಂಥ ಅಮಂಗಲ ಮತ್ತು ನಶ್ವರ । ನರದೇಹವಿದು ಕ್ಷಣಭಂಗುರ ।
ಆದರೂ ಆಮಂಗಲ ಧಾಮನಾದ ಪರಮೇಶ್ವರ । ಅವನ ಪಡೆಯಲು ಈ ದೇಹವೇ ಬೇಕು ॥ 24

ಯಾವಾಗಲೂ ನಡೆದದ್ದೇ ಜನ್ಮ ಮರಣ । ಕಲ್ಪನೆಯದೇ ಭಯದಾರುಣ ।
ನುಡಿದಿಲ್ಲ ನಾಲಿಗೆ ಒಂದು ಶಬ್ದವನ । ಪ್ರಾಣ ಹಾರಿ ಹೋದೀತು ಅಷ್ಟರಲ್ಲೇ ॥ 25

ದಿವಸರಾತ್ರಿಗಳ ಲೆಕ್ಕ ಯಾರಿಗೆ । ಎಷ್ಟೋ ಬಂದು ಹೋಗುವವುಗಳಿಗೆ ।
ಮಾರ್ಕಂಡೇಯನ ಆಯಸ್ಸು ಪಡೆದು ಹುಟ್ಟಿದವಗೆ । ಅಂಥವಗೂ ಕಾಲ ತಪ್ಪದು ॥26

ಇಂಥ ಕ್ಷಣಭಂಗುರ ದೇಹವಿರುವಲ್ಲಿ । ಪುಣ್ಯಶ್ಲೋಕರ ಕಥೆಗಳಾಲಿಸುತಲಿ ।
ಕಳೆದ ಕಾಲವೇ ಸಾರ್ಥಕವಿಲ್ಲಿ । ಅದಿಲ್ಲದೇ ವ್ಯರ್ಥ ಹೋಗುವದು ॥ 27

ಈ ಅರಿವು ನಿಶ್ಚಿತವಾಗಿ ಮೂಡಿದಾಗ । ಈ ಜನ್ಮದ ಸಾರ್ಥಕತೆ ಆವಾಗ ।
ಅನುಭವವಿಲ್ಲದಿರುವಾಗ । ಇದರ ನಂಬಿಕೆಯಾಗದು ॥ 28

ಆದರೂ ಪಡೆಯಲು ಈ ಅನುಭವ । ಮಾಡಬೇಕಾಗುವದು ಅಭ್ಯಾಸ ವಿಭವ ।
ಅದರಿಂದ ಶಾಶ್ವತ ಸುಖ ಬಯಸುವ ಈ ಜೀವ । ಆಗ ಆ ವೈಭವವ ಪಡೆದೀತು ॥ 29

ದಾರಾಸುತ ವೈಭವವಿತ್ತ । ಪೃಥ್ವಿಯೇ ಸಮುದ್ರವಲಯಾಂಕಿತ ।
ದೇವರ ದಯೆಯಿಂದ ಇಷ್ಟಾದರೂ ಪ್ರಾಪ್ತ । ಮನಸಿನ ಅತೃಪ್ತತೇ ಮುಗಿಯದು ॥30

ಶಾಶ್ವತ ಸುಖ ಶಾಂತಿ ಪಡೆಯುವ । ಇಟ್ಟು ಮನದಲಿ ಈ ಧ್ಯೇಯವ ।
ಭೂತ ಮಾತ್ರಗಳಲಿ ಭಗವಂತನ ಇರವ । ತಿಳಿಯುವದೇ ಪರಮಪದ ಪ್ರಾಪ್ತಿದಾಯಕ ॥ 31

ತ್ವಚೆ ಮಾಂಸ ರುಧಿರ ಎಲುಬಿನದು । ಸೇರಿಸಿ ಮಾಡಿದ ದೇಹವಿದು ।
ಪರಮಾರ್ಥಕ್ಕೆ ಪ್ರತ್ಯಕ್ಷ ತೊಡಕಿದು । ಅದರ ಮಮತೆಯ ಬಿಡಬೇಕು ॥ 32

ಈ ದೇಹವೊಂದು ಕೆಲಸದಾಳು । ಬಿಡದಿರಿ ಅದನು ತಲೆಯ ಮೇಲೇರಲು ।
ಯಾವಾಗಲೂ ಅದರಿಷ್ಟ ಪೂರೈಸಲು । ಅದೇ ನರಕಕ್ಕೆ ದ್ವಾರವಾದೀತು ॥ 33

ಅವಶ್ಯವಿದ್ದಷ್ಟು ಅನ್ನ ಅಚ್ಛಾದನ । ಅಷ್ಟಕ್ಕಷ್ಟೇ ಲಾಲನ ಪಾಲನ ।
ಹಚ್ಚಿರದಕೆ ಆಧ್ಯಾತ್ಮಿಕ ಮಾರ್ಗವನ । ಜನ್ಮ ಮರಣಗಳ ತಪ್ಪಿಸಲು ॥ 34

ಜನ್ಮ ಮರಣಾದಿ ಅನರ್ಥಾತ್ಮಕ । ಪ್ರತಿಕ್ಷಣ ವಿನಾಶೋನ್ಮುಖ ।
ಎಷ್ಟು ಕ್ಷಣಿಕ ಇದರ ಸುಖ । ನಿರಂತರ ಅಸುಖವಿದು ಇರುವಾಗ ॥ 35

ಇದು ಮಿಂಚುವ ವಿದ್ಯುಲ್ಲತೆಯಂತೆ । ಈಗ ಇದ್ದುದು ಈಗ ಇಲ್ಲದಂತೆ ।
ಕ್ಷಣಿಕ ಸಾಗರದ ಮೇಲಿನ ತೆರೆಯಂತೆ । ಒಂದಿಷ್ಟು ವಿಚಾರ ಮಾಡಬೇಕು ॥ 36

ದೇಹ, ಗೇಹ, ಆಪತ್ಯ, ಸ್ತ್ರೀಯಲ್ಲ ಇದು । ಎಲ್ಲವೂ ನಾಶವಂತವೆಂದು ತಿಳಿದು ।
ತಂದೆ ತಾಯಿಗೆ ಹೆಗಲು ಕೊಟ್ಟದ್ದು । ತಾನೇ ಆದರೂ ಅರ್ಥವಾಗದು ॥ 37

ಸತ್ತವರ ಹಿಂದೆ ಮತ್ತೆ ಸಾಯುವನು । ಜನ್ಮ ಮರಣಗಳ ಚಕ್ರ ಸುತ್ತುವನು ।
ಹೇಗೆ ಇದರಿಂದ ಬಿಡುಗಡೆ ಎಂಬುದನು । ಕ್ಷಣವೊಂದೂ ವಿಚಾರ ಮಾಡನು ॥ 38

ಮಾಡುತ್ತ ನಿತ್ಯ ಕುಟುಂಬದ ಪೋಷಣೆ । ಆಯುಷ್ಯ ಸವೆಯುವದು ಅರಿಯದೇನೇ ।
ಕಾಲವು ತನ್ನ ಕರ್ತವ್ಯ ಮರೆಯದೇನೆ । ಆಯುಷ್ಯವನೆಣಿಸುತ್ತಿರುವದು ॥ 39

ಕೊನೆಯಗಳಿಗೆ ತುಂಬಲು । ಒಂದು ಕ್ಷಣವೂ ಅವನೊಲ್ಲ ತಡೆಯಲು ।
ಮೀನುಗಾರನ ಬಲೆಗೆ ಸಿಕ್ಕ ಮೀನದೋಲು । ಮರಣದಲಿ ಜೀವ ಒದ್ದಾಡುವದು ॥ 40

ಮಹದ್ಭಾಗ್ಯದಿಂದಾಗಿ । ಗಳಿಸಿದ ಪುಣ್ಯದ ಫಲವಾಗಿ ।
ನರದೇಹವಿದು ಸಿಕ್ಕಿರಲಾಗಿ । ಕ್ಷಣಕ್ಷಣವನೂ ಸಾಧನ ಮಾಡಿಕೊಳ್ಳಬೇಕು ॥ 41

ಭಗೀರಥ ಪ್ರಯತ್ನದಿಂದೂ । ಈ ನರ ದೇಹ ಸಿಗಲಾರದು ।
ದೈವವಶಾತ್ ಸಿಕ್ಕಿದೆ ಇದು । ವ್ಯರ್ಥಮಣ್ಣುಗೂಡಿಸಬಾರದು ॥ 42

ಮುಂದಿನ ಜನ್ಮದಲಿ ಮಾಡುವೆನೆಂದರೆ । ಒಮ್ಮೆ ಇದು ಕೈಯಿಂದ ಜಾರಿದರೆ ।
ಮತ್ತೆ ಬರುವದೆಂದು ತಿಳಿದರೆ । ಅದು ಮೂರ್ಖತನವಾದೀತು ॥ 43

ಎಷ್ಟೋ ಜನ ಪಾಪಿ ದೇಹ ಧಾರಿಗಳು । ಕೂಡಲು ಶುಕ್ರ ಬೀಜಗಳು ।
ಪ್ರಾಪ್ತರಾಗುವರು ಯೋನಿದ್ವಾರದೊಳು । ಶರೀರ ಗ್ರಹಣಕ್ಕಾಗಿ ನಿಜಕರ್ಮದಿಂದ ॥ 44

ಎಷ್ಟೋ ಇದಕಿಂತ ಅಧಮ । ಜಂಗಮ ವರ್ಗದಲ್ಲದರ ಜನ್ಮ ।
ಮುಂದೆ ಸ್ಥಾವರ ಜನ್ಮವ ಪರಮ । ಯಥಾಕರ್ಮ ಪ್ರಾಪ್ತವಾಗುವದು ॥ 45

ಯಾವನದು ಹೇಗೆ ಉಪಾರ್ಜಿತ ಜ್ಞಾನ । ಯಾರದು ಹೇಗೆ ಕರ್ಮಾನುಷ್ಠಾನ ।
ತದನುಸಾರ ಅವನ ಶರೀರಗ್ರಹಣ । ಶೃತಿ ಪ್ರಮಾಣವಾಗಿದೆ ಈ ಮಾತು ॥ 46

'ಯಥಾಪ್ರಜ್ಞಂಹಿ ಸಂಭವಾ' । ತಾಯಿ ಶೃತಿಯು ಹೇಳಿದ ವಚನವ ।
ಅನುಸರಿಸಿ ಅವರವರ ವಿಜ್ಞಾನ ಭಾವಾ । ಜನನವು ಜೀವಕೆ ಅದರಂತೆ ॥ 47

ಈಶ್ವರೀ ಲೀಲೆಯು ಅತರ್ಕ್ಯ । ಅದರ ಸಂಪೂರ್ಣ ಜ್ಞಾನವು ಅಶಕ್ಯ ।
ಸಿಕ್ಕರಂಥವ ಯಾರಿಗೆ ಅಂಶಮಾತ್ರವೂ ಲಭ್ಯ । ಧನ್ಯ ನರದೇಹ ಅವನದು ॥ 48

ಪರಮಭಾಗ್ಯದಿಂದ ಈ ನರಜನ್ಮ । ಪರಮಪುಣ್ಯದಿಂದ ಬ್ರಾಹ್ಮಣವರ್ಣ ।
ಈಶ್ವರ ಕೃಪೆಯಿಂದ ಸಾಯಿ ಚರಣ । ಸಂಪೂರ್ಣತಃ ಅಲಭ್ಯ ಲಾಭವಿದು ॥ 49

ಇವೆಯಾದರೂ ನಾನಾ ಯೋನಿಗಳು । ಆದರೂ ಮಾನವನೇ ಶ್ರೇಷ್ಠನು ಅದರೊಳು ।
ಬಂದೆವೆಲ್ಲಿಂದ ನಿರ್ಮಿಸಿದವರಾರೆನಲು । ಈ ವಿವೇಕಶ್ರೇಣಿ ಮಾನವನದೇ ॥ 50

ಅದಕೆ ಈ ನರದೇಹ ನಿರ್ಮಿಸಿ । ಈಶ್ವರನಿಗೆ ಬಹು ಸಂತೋಷವೆನಿಸಿ ।
ವಿವೇಕ ವೈರಾಗ್ಯಗಳ ವರಿಸಿ । ನರನೆನ್ನ ಭಜನೆಯನು ಮಾಡಿಯಾನೆಂದು ॥ 51

ಸಾಧನೆ ಮಾಡಲು ನಾಶವಂತ ನರನು । ಅವಿನಾಶಿಯಿಂದ ನಾರಾಯಣನಾಗವನು ।
ನರದೇಹದಂಥ ಸಾಧನ ಸಂಪನ್ನನು । ಇನ್ನೊಬ್ಬ ಬಾರ ಈ ಸೃಷ್ಟಿಯಲಿ ॥ 52

ಬಹಳ ಚತುರನಾದ ಗಾರುಡಿಗನು । ಅಜ್ಞಾನಿಗಳೆದುರು ಆಟ ಆಡಿಸನು ।
ತಿಳಿದವರು ಕುಶಲತೆಯ ಮರ್ಮಸಾರವನು । ಅಂಥ ಪ್ರೇಕ್ಷಕರನಪೇಕ್ಷಿಸುವನು ॥ 53

ಅಂತೆಯೇ ಪಶುಪಕ್ಷಿ-ವೃಕ್ಷ ಸಂಭಾರ । ಜೀವಜಂತುಗಳ ನಿರ್ಮಿಸಿ ಅಪಾರ ।
ಸಖೇದಾಶ್ಚರ್ಯಪಟ್ಟ ಪರಮೇಶ್ವರ । ಆ ಲೀಲೆ ನಿಃಸಾರವೆನಿಸಿತವಗೆ ॥ 54

ಅಗಾಧವಾದ ಈ ಬ್ರಹ್ಮಾಂಡ ವಿಸ್ತಾರವನು । ಸೂರ್ಯ ಚಂದ್ರ ತಾರಾಗಣಗಳನು ।
ನಿರ್ಮಿಸಿದವನ ಚಮತ್ಕಾರದ ವಿಚಾರವನು । ಒಂದಿಷ್ಟೂ ಯಾರೂ ಮಾಡರು ॥ 55

ಹೂಡುವದರಲಿ ಈ ಎಲ್ಲ ಆಟವನು । ಜಗದೀಶನಾದ ನನ್ನ ಉದ್ದೇಶವೇನು ।
ಈ ಕಾರ್ಯದ ವಿಚಾರವನು । ಒಂದು ಜಂತುವೂ ಅರಿಯದು ॥ 56

ನನ್ನ ಅತುಲ ವೈಭವ ಸಿದ್ಧಿ । ಅದನು ತಿಳುಯವಂಥ ಕುಶಾಗ್ರ ಬುದ್ಧಿ ।
ಪ್ರಾಣಿಯ ನಿರ್ಮಾಣವಾಗುವ ಅವಧಿ । ವಿಫಲ ನನ್ನ ಕಾರ್ಯವಿದು ॥ 57

ಈ ವಿಚಾರದಿಂದ ಜಗದೀಶನು । ಮಾನವನೆಂಬ ಪ್ರಾಣಿಯ ನಿರ್ಮಿಸಿದನು ॥
ತನ್ನ ಸಾರಸಾರ ಬುದ್ದಿಯಿಂದ ಯಾವನು । ನನ್ನ ಸಾಮರ್ಥ್ಯವ ತಿಳಿದಾನು ॥ 58

ಅಗಾಧ ನನ್ನ ವೈಭವ । ಅಂತೆಯೇ ನನ್ನ ಶಕ್ತಿ ಅಪೂರ್ವ ।
ನನ್ನ ಮಾಯೆಯ ಈ ಆಟವ । ಆಶ್ಚರ್ಯಪೂರ್ವಕವಾಗಿ ಅವ ತಿಳಿದಾನು ॥ 59

ಅವನೇ ಜ್ಞಾನ ಸಂಪನ್ನನಾದಾನು । ನನ್ನ ಚಿಂತನೆ ಮತ್ತು ನನ್ನವಲೋಕನ ।
ಅವನೇ ಆದಾನು ಆಶ್ಚರ್ಯಸಂಪನ್ನ । ಆಗ ನನ್ನಾಟ ಪೂರ್ಣವಾದೀತು ॥ 60

ಪ್ರೇಕ್ಷಕನ ಆನಂದ ಸಂಪನ್ನತೆಯು । ಅದೇ ನನ್ನಾಟದ ಸಾಂಗತೆಯು ।
ನರನಿಗೆನಿಸೀತು ಕೃತಾರ್ಥತೆಯು । ನನ್ನ ಜಗನ್ನಿಯಂತೃತೆಯ ಕಂಡು ॥ 61

ಕಾಮ್ಯಕರ್ಮ ಮತ್ತು ದ್ರವ್ಯೋಪಾರ್ಜನೆಯು । ಅದಕಾಗಿಯೇ ಅಲ್ಲ ಈ ಶರೀರ ಪೋಷಣೆಯು ।
ಯಾವಜ್ಜೀವ ತತ್ವಜ್ಞಾನ ಸಂಪಾದನೆಯು । ಜೀವನದ ಸಫಲತೆಯೂ ಇದೇ ॥ 62

ಅಭೇಧ ಜ್ಞಾನವೆಂಬುದೇ ತತ್ವವು । ಅದೇ ಉಪನಿಷತ್ ಬ್ರಹ್ಮಜ್ಞಾನವು ।
ಅದೇ ಪರಮಾತ್ಮ ಉಪಾಸನೆಯು । ಅವನೇ ಭಕ್ತನ ಭಗವಂತನು ॥ 63

ಅಲ್ಲ ಗುರು ಮತ್ತು ಬ್ರಹ್ಮರು ಇಬ್ಬರು । ಈ ಅಭೇಧಜ್ಞಾನವನು ತಿಳಿದವರು ।
ಈ ಭಕ್ತಿಯಿಂದಲೇ ಆಗುವದು । ಮಾಯಾತರಣವು ಸುಲಭವಾಗಿ ॥ 64

ಯಾವ ಶ್ರದ್ಧಾವಂತ ಯೋಗ್ಯ ಪುರುಷರು । ವೈರಾಗ್ಯ ಜ್ಞಾನವನು ಸಂಪಾದಿಸುವರು ।
ಭಕ್ತರವರೇ ಸಭಾಗ್ಯರು । ಈ ಆತ್ಮತತ್ವ ಉಪಭೋಗಿಸುವರು ॥ 65

ಸ್ವಸ್ವರೂಪದ ಅರಿವಿರದೇ । ಈ ಅಜ್ಞಾನದ ನಿರಸನವಾಗದೇ ।
ತನ್ನಷ್ಟಕ್ಕೇ ತಾಕೃತಾರ್ಥನೆನ್ನುವದೇ । ಇದೊಂದು ವಿಲಕ್ಷಣ ಪ್ರತಿಬಂಧವು ॥ 66

ಜ್ಞಾನ ಮತ್ತು ಅಜ್ಞಾನ । ಎರಡೂ ವಿಕಾರಗಳೂ ಅವಿದ್ಯಾಜನ್ಯ ।
ಕಿತ್ತೊಗೆಯಿರಿ ಅವೆರಡನ್ನ । ಮುಳ್ಳಿಂದ ಮುಳ್ಳು ತೆಗೆಯುವಂತೆ ॥ 67

ಜ್ಞಾನದಿಂದ ಅಜ್ಞಾನವ ಕಳಕೊಳ್ಳಿರಿ । ಜ್ಞಾನಾಜ್ಞಾನಾತೀತರಾಗಿರಿ ।
ನಿರ್ಮಲ ಸ್ವಸ್ವರೂಪಸ್ಥರಾಗಿರಿ । ನರಜನ್ಮದ ಪರ್ಯವಸಾನವು ಇದು ಒಂದೇ ॥ 68

ಮೋಹವೆಂಬ ಎಣ್ಣೆ ಉರಿಸದಲೇ । ಅಜ್ಞಾನ ತಮದ ಕತ್ತಲೇ ।
'ನಾ ನನ್ನದೆಂಬ ಬತ್ತಿಯ ಸುಡದಲೇ । ಜ್ಞಾನವು ತನ್ನ ಬೆಳಕು ಬೀರದು ॥ 69

ನರದೇಹಗತವಾದ ಕಾರ್ಯ । ಇರಲದು ನಿವಾರ್ಯ ಇಲ್ಲವೇ ಅನಿವಾರ್ಯ ।
ಇದೆಲ್ಲವಿರುವದು ಬುದ್ಧಿರ್ಕರ್ತವ್ಯ । ನಿಶ್ಚಿಯವಾಗಿದ ತಿಳಿಯಿರಿ ॥ 70

ಬೇರೆ ಕೆಲಸವು ತಮಗಿರದು । ನಿಶ್ಚಿಂತರಾಗಿ ಐಶ್ವರ್ಯಾರಾಮವ ಭೋಗಿಸುವರು ।
ಇಲ್ಲವೇ ರಾಮನಾಮವ ಜಪಿಸುವದು । ನಿಷ್ಕಾಮರಾಗುವಾ ನಾವಿನ್ನು ॥ 71

ಶರೀರೇಂದ್ರಿಯ ಮನ ಬುದ್ದಿ । ಇವು ಎಲ್ಲ ಜೀವಿಗಳ ಉಪಾಧಿ ।
ಸ್ವಯಂ ಇರಲು ಅಭೋಕ್ತ ಅನಾದಿ । ಇಹದಿ ಭೋಕ್ತತ್ವದ ಆಪಾದನೆ ಆತ್ಮಕೆ ॥ 72

ಆತ್ಮಕ್ಕೆ ಭೋಕ್ತೃತ್ವವು ಉಪಾಧಿಮಾತ್ರವಾಗಿ । ಸ್ವಯಂ ಅಭೋಕ್ತನವ ಸ್ವಾಭಾವಿಕವಾಗಿ ।
ಶಾಸ್ತ್ರ-ನ್ಯಾಯ ಅನ್ವಯ-ವ್ಯತಿರಿಕ್ತವಾಗಿ । ಈ ವಿಷಯದ ಪ್ರಮಾಣವ ನೋಡಲು ॥73

ಇದೊಂದು ನಿಜಮರ್ಮವನು ತಿಳಿದು । ಪ್ರಾಪ್ತಕರ್ಮವ ಬುದ್ದಿಗೆ ಒಪ್ಪಿಸುವದು ।
ಅದರ ಕೈಯಲೇ ಮನೋಧರ್ಮವಿರುವದು । ತಾನೂ ನಿಷ್ಕರ್ಮನಾಗಿರಬೇಕು ॥ 74

ಸ್ವಧರ್ಮದ ಅನುಷ್ಠಾನ । ಸದೈವ ಆತ್ಮನಾತ್ಮ ಚಿಂತನ ।
ಇದೇ ನರಜನ್ಮದ ಪರ್ಯವಸಾನ । ಸ್ವರೂಪದಲಿ ಸಮಾಧಾನದಿಂದಿರುವದು ॥ 75

ಸಾಧನವು ಸಾಧಿಸಲು ನಾಲ್ಕು ಪುರುಷಾರ್ಥಗಳ । ನರದೇಹ ಬಿಟ್ಟನ್ನೊಂದಿಲ್ಲ ।
ನಾರಾಯಣಪದ ಪಡೆಯಬಲ್ಲ । ಅಭ್ಯಾಸ ಪರಾಯಣನವನಿರಲು ॥ 76

ಆದಕಾಗಿ ಈ ಶರೀರ ಪತನವಾಗುವ ಮೊದಲು । ಪ್ರಯತ್ನಿಸಿರಿ ಆತ್ಮಜ್ಞಾನ ಪಡೆಯಲು ।
ಒಂದು ಕ್ಷಣವೂ ಈ ನರಜನ್ಮದೊಳು । ಉಪೇಕ್ಷೆಯಿಂದ ಕಳೆಯದಿರಿ ॥ 77

ಸಮುದ್ರದ ಉಪ್ಪು ನೀರದು । ಯಾವಾಗ ಮೇಘರೂಪವಾಗುವದು ।
ಪಿಯೂಷದಂತೆ ಸಿಹಿಯಾಗವದು । ಇಂಥ ಸುಖವಿಹುದು ಗುರುಚರಣದಲ್ಲಿ ॥ 78

ಇಂಥ ನರದೇಹದ ಸದ್ಗತಿಯಾಗುವದು । ಗುರುವಲ್ಲದೇ ಅನ್ಯರಿಗೆ ತಿಳಿಯದು ।
ಕೈಯ ಹಿಡಿಯುವ ಗುರುವೇ ಬಂದು । ಆಗ ಈ ಜಡಜೀವದ ಉದ್ದಾರ ॥ 79

ಮಂತ್ರ ತೀರ್ಥ ದೇವ ದ್ವಿಜ । ಜ್ಯೋತಿರ್ವೇದ ಮತ್ತು ಭೇಷಜ ।
ಅಂತೆಯೇ ಏಳನೆಯದು ಗುರುರಾಜ । ಈ ಎಲ್ಲದಕೂ ಭಾವನೆಯೇ ಕಾರಣವು ॥ 80

ಯಾರಲ್ಲಿ ಭಾವನೆಯು ಎಂತು । ಸಿದ್ಧಿಯೂ ಆ ಪ್ರಮಾಣದಲ್ಲಿ ಅಂತು ।
ಹೆಚ್ಚು ಕಡಿಮೆ ವೇಗವೆಂತು । ಸಿದ್ಧಿಯೂ ಅದರಂತಿರುವದು ॥ 81

ಸಂತರು ಬದ್ಧರನು ಮುಮುಕ್ಷುಗಳ ಮಾಡುವರು । ಮುಮುಕ್ಷುಗಳ ಮುಕ್ತರನ್ನಾಗಿಸುವರು ।
ಅವ್ಯಕ್ತದಿಂದ ವ್ಯಕ್ತರಾಗ್ಯವರು । ಪರೋಪಕಾರಕ್ಕಾಗಿ ಇದ ಮಾಡುವರು ॥ . 82

ಯಾವ ಕಾರ್ಯವಾಗದು ವ್ಯಾಖ್ಯಾನ ಪುರಾಣಗಳಿಂದ । ಅದು ಸುಲಭವಾಗಿ ಆಗುವದು ।
ಸತ್ಪುರುಷರ ಆಚರಣೆಯಿಂದ ಅವರ । ನಡೆನುಡಿಗಳಿಂದ ನಿಃಶಬ್ದ ಉಪದೇಶವಾಗುವದು ॥ 83

ಕ್ಷಮಾಶಾಂತಿ ನಿಃಸಂಗತನ । ಭೂತದಯೆ ಪರೋಪಕಾರತೆಯನ ।
ಇಂದ್ರಿಯ ನಿಗ್ರಹ ನಿರಹಂಕಾರತೆಯನ । ಆಚರಿಸುವವರು ದುರ್ಲಭ ॥ 84

ಗ್ರಂಥಗಳನೋದಿದರೂ ತಿಳಿಯದುದು । ಕ್ರಿಯಾವಂತರ ಕಂಡು ಸುಲಭದಿ ಸಿಗುವದು ।
ಅನಂತ ತಾರಾ ಗಣಗಳಿಂದಾಗದುದು । ಒಬ್ಬ ಚಂದ್ರನು ಮಾಡಿ ತೋರುವ ॥ 85

ಸಂತರ ಸಹಜ ಕ್ರಿಯೆಗಳು ಅನಂತ । ಜೀವನ ಮಾಡುವರು ಬಂಧಮುಕ್ತ ।
ಸೌಖ್ಯವ ಕೊಡುವರು ಅತ್ಯಂತ । ಹೀಗೆ ಈ ಸಂತರ ಉದಾರಿಗಳು ॥ 86

ಸಾಯಿ ಮಹಂತರು ಇಂಥವರಲ್ಲೇ ಒಬ್ಬರು । ಐಶ್ವರ್ಯವಂತರು ಶ್ರೀಮಂತರು ।
ಆದರೂ ಫಕೀರರಂತೆ ಆಚರಿಸುವರು । ಯಾವಾಗಲೂ ಆತ್ಮ ನಿರತರವರು ॥ 87

ಅನವಚ್ಛಿನ್ನ ಅವರ ಸಮತೆಯು । ನಾ ನನ್ನದೆಂಬುದರವಿಲ್ಲ ವಾರ್ತೆಯು ।
ಜೀವ ಮಾತ್ರದಲೆಲ್ಲ ಸದಯತೆಯು । ಭಗವಂತನನು ಕಾಣುವರು ಎಲ್ಲದರಲಿ ॥ 88

ಸುಖ ಬಂದಾಗ ಸಂತೋಷವಿಲ್ಲ । ಕಷ್ಟ ಬಂದಾಗ ದುಃಖವಿಲ್ಲ ।
ಬಡವ ಬಲ್ಲಿದರೆಂಬ ಭೇದವಿಲ್ಲ । ಈ ನಡತೆಯು ಸಾಮಾನ್ಯವೇ ॥ 89

ಯಾರ ಭ್ರೂವಿಕ್ಷೇಪ ಮಾತ್ರವು । ಬಡವರನು ದೈವುಳ್ಳವರ ಮಾಡುವವು ।
ಅಂಥವರು ಹಿಡಿದು ಕೈಯಲಿ ಜೋಳಿಗೆಯ । ಮನೆ ಮನೆ ಅಲಿಯುವರು ಬೇಡಲು ॥ 90

ಧನ್ಯರಾ ಜನರು ಯಾರ ಬಾಗಿಲಿಗೆ । ಬಾಬಾ ಹೋಗುವರು ಭಿಕ್ಷೆಗೆ ।
'ಹುಡುಗಿ ತೊಗೊಂಡು ಬಾ ಎಂದು ತುಂಡು ರೊಟ್ಟಿಗೆ' । ಮುಂದೆ ಮಾಡುವರು ನಿಜಕರಗಳ ॥ 91

ಒಂದು ಕೈಯಲಿ ಟಮರೇಲು । ಇನ್ನೊಂದರಲಿ ಜೋಳಿಗೆ ಹಿಡಿದಿರಲು ।
ತಾವೇ ತಿರುಗುವರು ಬಾಗಿಲು ಬಾಗಿಲು । ನಿತ್ಯದ ಮನೆಗಳಿಗೆ ಪ್ರತಿದಿನ ॥ 92

ಪಲ್ಯ ಸಾಂಬಾರ ಹಾಲು ಮಜ್ಜಿಗೆ । ಪದಾರ್ಥಗಳೆಲ್ಲ ಒಟ್ಟಿಗೆ ।
ಜನರು ಹಾಕುವರು ಟಮರೇಲದೊಳಗೆ । ಅವರ ಈ ಊಟದ ಪರಿಯ ನೋಡಿರಿ ॥ 93

ಬೆಂದ ಅನ್ನ ರೊಟ್ಟಿಗಳಿಗೆ । ನೀಡಿಸಿಕೊಳ್ಳಲು ಒಡ್ಡುವರು ಜೋಳಿಗೆ ।
ಯಾವದೇ ಪದಾರ್ಥವು ಇರಲು ತೆಳ್ಳಗೆ । ಅದನು ಟಮರೇಲಕ್ಕೆ ಹಾಕಿಸುವರು ॥ 94

ಪದಾರ್ಥ ಪದಾರ್ಥಗಳ ರುಚಿ ನೋಡಲು । ಜಿವ್ಹೆಗೆ ರಸಾಸಕ್ತಿ ಇಲ್ಲದಿರಲು ।
ಲಾಲಸೆ ಎಂಬದೇ ಇಲ್ಲದಿರಲು । ಮನಸಿಗೆನಿಸುವದು ಎಲ್ಲಿ ಬಂತು ॥ 95

ಯದೃಚ್ಛೆಯಿಂದ ಜೋಳಿಗೆಗೆ ಬಿದ್ದದ್ದು । ತೃಪ್ತರಾಗುವರು ಅದನೇ ಉಂಡು ।
ರುಚಿಯೋ ಅರುಚಿಯೋ ನೋಡರೆಂದೂ । ನಾಲಿಗೆಗೆ ರುಚಿ ಎಂಬುದೇ ಇಲ್ಲವಲ್ಲ ॥ 96

ಪ್ರಹರ ಹೊತ್ತಿಗೆ ತಿರುಗಿಸುತ್ತ ಮನೆಗಳನ । ಭಿಕ್ಷೆಯ ಬೇಡುವರು ಪ್ರತಿದಿನ ।
ಮಾಡಿಕೊಂಡದರಿಂದ ಉದರ ಪೂರ್ತಿಯನ । ಸಮಾಧಾನದಿಂದಿರುವರು ॥ 97

ತಪ್ಪದೇ ಬೇಡುವರೇ ಭಿಕ್ಷೆಯನಾದರೂ । ಮನಸಿಗೆ ಬಂದರೆ ಬೇಡುವರು ।
ಒಮ್ಮೊಮ್ಮೆ ದಿನಕ್ಕೆ ಹನ್ನೆರಡು ಸಲವಾದರೂ । ಭಿಕ್ಷೆಗೆ ಹೋಗುವರು ಊರಲ್ಲಿ ॥ 98

ಈ ರೀತಿಯಲಿ ತಂದ ಅನ್ನವನ್ನವರು । ಮಶೀದಿಯಲ್ಲೊಂದು ಗೂಡಿನಲಿಡುವರು ।
ನಾಯಿ ಕಾಗೆಗಳು ಅದರಲ್ಲಿ ತಿಂದರೂ । ಅವುಗಳನ್ನೋಡಿಸುತಿರಲಿಲ್ಲ ॥ 99

ಮಶೀದಿ ಅಂಗಳ ಗುಡಿಸುವವಳು । ಅದರಲ್ಲಿಯ ಹತ್ತು ಹನ್ನೆರಡು ರೊಟ್ಟಿಗಳು ।
ತನ್ನ ಮನೆಗೆ ಒಯ್ಯುವಳು । ಅವಳನ್ನಾರೂ ತಡವರು ॥ 100

ನಾಯಿ ಬೆಕ್ಕುಗಳನೂ ತಿರಸ್ಕರಿಸುವದೆ । ಕನಸಿನಲ್ಲಿಯೂ ಕಾಣನು ಅದ ।
ಅಂಥವ ಬಡಬಗ್ಗರಿಗೆಂದಾನೆಯೇ ಬೇಡ । ಧನ್ಯ ಅವನ ಜೀವಿತವು ॥ 101

ಆರಂಭದಲಿ ಅವನು ಹುಚ್ಚು ಫಕೀರ । ಇದೇ ಹೆಸರಿನಿಂದಲೇ ಆಗಿದ್ದ ಮಶಹೂರ ।
ಬೇಡಿದ ತುಣುಕಿನಿಂದ ತುಂಬುವ ಉದರ । ಅವನ ಬಡಿವಾರವದೇನು ॥ 102

ಫಕೀರನಿದ್ದರೂ ಕೊಡುಗೈಯ್ಯವ । ನಿರಪೇಕ್ಷ ಮತ್ತು ಸ್ನೇಹಮಯನವ ।
ನೋಟಕೆ ಚಂಚಲನಿದ್ದರೂ ಅಂತರದಿ ಅಚಲನವ । ಆಕಲನವಾಗದ ಕಳೆ ಅವನದು ॥103

ಅಂಥ ಕುಗ್ರಾಮದಲ್ಲಾದರೂ । ಹುಟ್ಟಿನಿಂದಲೇ ಅತಿ ದಯಾವಂತರು ।
ಅಂಥ ಭಾಗ್ಯವಂತರಿದ್ದರು । ಅವರು ಫಕೀರನ ಮಹಂತನೆನುತಿದ್ದರು ॥ 104

ತಾತ್ಯಾ ಕೋತೆಯವರ ತಾಯಿಯು । ಹೆಸರವಳಿಗೆ ಬಾಯಜಾಬಾಯಿಯು ।
ತಲೆಯ ಮೇಲಿಟ್ಟು ರೊಟ್ಟಿ ಬುಟ್ಟಿಯು । ಅಡವಿಯಲಿ ಹೋಗು ಮಧ್ಯಾಹ್ನ ॥ 105

ಹರದಾರಿ ಹರದಾರಿ ಅಡವಿಯಲಿ ಹುಡುಕುವದು । ದಟ್ಟ ಗಿಡಕಂಟಿ ತುಳಿಯುವದು ।
ಈ ಹುಚ್ಚ ಫಕೀರನ ಹುಡುಕುವದು । ಅವನ ಕಾಲು ಬೀಳುವದು ॥ 106

ಅವಳದೆಷ್ಟು ದೊಡ್ಡ ಗುಣ । ಪಲ್ಯ ಭಕ್ಕರಿ ಹಸಿ ಒಣ ।
ಹೊಲಗಳು ಅಡವಿಯಲಿ ಹೊತ್ತು ಮಧ್ಯಾಹ್ನ । ಬಾಬಾರಿಗವಳು ಉಣಿಸುವಳು ॥ 107

ಇಂಥ ಅವಳ ತಪಾಚರಣ । ಬಾಬಾ ಮರೆಯಲಿಲ್ಲ ಆಮರಣ ।
ಮಾಡಿದರವಳ ಪುತ್ರನ ಕಲ್ಯಾಣ । ಪೂರ್ಣ ನೆನಪಿನಲ್ಲಿಟ್ಟದನು ॥ 108

ಆ ಸ್ತ್ರೀ ಪುರುಷರಿಬ್ಬರಿಗೆ । ನಿಜವಾದ ದೃಢಭಾವ ಬಾಬಾರ ಬಗ್ಗೆ ।
ಫಕೀರನೇ ದೇವರು ಅವರಿಗೆ । ಭಾವಾರ್ಥಿಗಳ ದೇವರವನು ॥ 109

ಫಕೀರನು ಧ್ಯಾನಸ್ಥನಾಗಿರಬೇಕು । ಬಾಯಜಾಬಾಯಿಯು ಎಲೆ ಹಾಕಬೇಕು ।
ಬುಟ್ಟಿಯಲ್ಲಿಯ ಅನ್ನವ ಬಡಿಸಬೇಕು । ಪ್ರಯತ್ನದಿಂದದನು ಉಣಿಸಬೇಕು ॥ 110

'ಫಕೀರಿಯೇ ಶ್ರೇಷ್ಠ ಅರಸುತನ । ಫಕೀರಿಯು ಉಳಿಯುವದು ಚಿರಂತನ ।
ಕ್ಷಣಭಂಗುರವಿರುವದು ಅಮೀರತನ' । ಯಾವಾಗಲೂ ಬಾಬಾ ಎನುತಿದ್ದರು ॥ 111

ಮುಂದೆ ಬಾಬಾ ಅಡವಿಯ ಬಿಟ್ಟರು । ಊರಲ್ಲಿ ಬಂದು ಇರತೊಡಗಿದರು ।
ಮಶೀದಿಯಲ್ಲಿ ಊಟವ ಮಾಡತೊಡಗಿದರು । ತಾಯಿಯ ಕಷ್ಟವ ತಪ್ಪಿಸಿದರು ॥ 112

ಆಗಿನಿಂದ ಈ ನೇಮವನು ಅವರು । ಹಾಗೆಯೇ ಮುಂದೆ ನಡೆಸಿದರಿಬ್ಬರೂ ।
ಹಾಗೆಯೇ ಅವರ ಹಿಂದಾದರೂ । ನಡೆಸಿದರದನು ತಾತ್ಯಾ ಮುಂದೆ ॥ 113

ಧನ್ಯ ಧನ್ಯ ಆ ಸಂತಸದ್ದೈವ । ಯಾರ ಹೃದಯದಲಿ ವಾಸುದೇವ ।
ಧನ್ಯ ಆ ಭಕ್ತರ ಸುದ್ದೈವ । ಸಮಾಗಮ ವೈಭವವನದು ॥ 114

ತಾತ್ಯಾ ಮಹಾ ಭಾಗ್ಯವಾನ । ಮ್ಹಾಳಸಾಪತಿಯದೂ ಪುಣ್ಯಗಹನ ।
ಬಾಬಾರ ಸಮಾಗಮದ ಮಾನ । ಸರಿಸಮನಾಗಿ ಭೋಗಿಸಿದರು ॥ 115

ತಾತ್ಯಾ ಮತ್ತು ಮ್ಹಾಳಸಾಪತಿಯವರು । ಮಶೀದಿಯಲ್ಲಿಯೇ ಮಲಗುವರವರು ।
ಬಾಬಾ ಅತಿಶಯ ಪ್ರೀತಿಸುವರು । ಇಬ್ಬರನ್ನೂ ಒಂದೇ ರೀತಿ ॥ 116

ಪೂರ್ವ ಪಶ್ಚಿಮ ಉತ್ತರದ ಕಡೆಗೆ । ಮೂವರ ತಲೆಗಳು ಮೂರು ದಿಕ್ಕಿಗೆ ।
ತಮ್ಮ ತಮ್ಮ ಕಾಲುಗಳನು ಒತ್ತಟ್ಟಿಗೆ । ಮಧ್ಯ ಬಿಂದುವಾಗಿ ಕೂಡಿಸುವರು ॥ 117

ಹಾಸಿ ಹೀಗೆ ಹಾಸಿಗೆಗಳು । ಮಾತು ಕಥೆಗಳೆಲ್ಲ ನಡೆಯುತಿರಲು ।
ಅವರಲೊಬ್ಬರಿಗೆ ನಿದ್ರೆ ಬರಲು । ಅವರನಿನ್ನೊಬ್ಬರೆಬ್ಬಸಬೇಕು ॥ 118

ತಾತ್ಯಾ ನಿದ್ರಿಸತೊಡಗುವರು । ಆಗ ಬಾಬಾ ಎದ್ದು ಬರುವರು ।
ಅತ್ತಿತ್ತ ಅವನನು ಹೊರಳಾಡಿಸುವರು । ಅವನ ತಲೆಯನೂ ಒತ್ತುವರು ॥ 119

ಮ್ಹಾಳಸಾಪತಿಯನು ಕೂಡಿಕೊಂಡು । ತಾತ್ಯಾನನ್ನು ಹಿಡಿದುಕೊಂಡು ।
ಕಾಲು ಒತ್ತುವರು ಗಟ್ಟಿ ಹಿಡಿದು । ಅವನ ಬೆನ್ನನ್ನೂ ಒತ್ತುವರು ॥ 120

ಹೀಗೆ ಸಂಪೂರ್ಣ ಹದಿನಾಲ್ಕು ವರುಷಗಳು । ಬಾಬಾರೊಡನೆ ತಾತ್ಯಾ ಮಲಗಿದರು ಮಶೀದಿಯೊಳು ।
ಎಂಥ ಭಾಗ್ಯದವು ಆ ದಿನಗಳು । ಅಖಂಡ ನೆನಪಿನಲಿ ಉಳಿದವು ॥ 121

ತಂದೆ ತಾಯಿಯರು ಮನೆಯಲ್ಲಿರಲು । ಬಾಬಾರ ಪ್ರೇಮಕ್ಕಾಗಿ ಮಲಗುವರು ಮಶೀದಿಯೊಳು ।
ಯಾವ ಅಳತೆಯು ಆ ಪ್ರೇಮವ ಅಳೆಯಲು । ಈ ಕೃಪೆಯ ಮೌಲ್ಯವನು ಕಟ್ಟಿದವರಾರು ॥ 122

ಮುಂದೆ ಹಿರಿಯರು ಪಂಚತ್ವ ಪಡೆದರು । ತಾತ್ಯಾ ಮನೆ ಸಂಸಾರದಲಿ ಬಿದ್ದರು ।
ಹೆಂಡತಿಗೆ ಪತಿಯಾಗಿ ಮನೆಯೊಡೆಯರಾದರು । ನಿಜಗೃಹದಲಿ ಮಲಗ ತೊಡಗಿದರು ॥ 123

ಇರಲಿಂತು ನಿಷ್ಠಾವಂತ ಭಾವ ಅವಗೆ । ಸಾಯಿಯ ಅನುಭವ ಬರುವದು ಅವನಿಗೇ ।
ಕರೆಯದೆ ಸ್ವಯಮೇವ ನಿಲ್ಲುವ ಎದರಿಗೆ । ಆ ಭಕ್ತನ ಅಚ್ಚರಿಯ ನೋಡುವಾ ॥ 124

ಅಂತೆಯೇ ರಹಾತೆಯಲ್ಲಿ ಒಬ್ಬ ಗೃಹಸ್ಥ । ಖುಷಾಲಚಂದನೆಂಬ ಹೆಸರಿನಲಿ ವಿಖ್ಯಾತ ।
ಬಾಬಾರ ಭಕ್ತನವ ಧನವಂತ । ನಗರಶೆಟ್ಟಿಯವ ಊರಲ್ಲಿ ॥ 125

ಪ್ರಸಿದ್ಧ ಪಾಟೀಲ ಗಣಪತಿ ಕೋತೆ ಎಂಬವ । ಬಾಬಾರಿಗೆ ಬಹಳ ಪ್ರಿಯನವ ।
ಖುಷಾಲಚಂದನಿಗೆ ದೊಡ್ಡಪ್ಪನಿವ । ಬಾಬಾರಿಗೂ ಬಲು ಪ್ರೀತಿಯವ ॥ 126

ಮಾರವಾಡಿ ಜಾತಿಯವರಾಗಿದ್ದರಸೂ । ಬಾಬಾರನ್ನು ಬಹಳ ಇಷ್ಟ ಪಡುತಿದ್ದರು ।
ಮೇಲಿಂದ ಮೇಲೆ ಅವರಿಬ್ಬರೂ । ಭೆಟ್ಟಿಯ ಸುಖ ಪಡೆಯುತಿದ್ದರು ॥ 127

ಕೆಲಕಾಲದ ನಂತರ ಹರಿ ಇಚ್ಛೆಯಿಂದ । ಹಿರಿಯ ಸೇಠನು ಪಂಚತ್ವ ಪಡೆದ ।
ಆದರೂ ಬಾಬಾರ ಮರೆಯಲಿಲ್ಲದೆ । ಇಮ್ಮಡಿಯಾಯಿತು ಹಿಂದಿನ ಪ್ರೀತಿ ॥ 128

ಮುಂದೆಯೂ ಖುಷಾಲಚಂದನಲಿ । ಬಾಬಾರ ಪ್ರೀತಿ ಇತ್ತು ಬೆಳೆಯುತಲಿ ।
ದೇಹಾಂತದವರೆಗೆ ಹಗಲು ರಾತ್ರಿಯಲಿ । ಅವನ ಕಲ್ಯಾಣ ಚಿಂತಿಸುವರು ॥ 129

ಒಮ್ಮೊಮ್ಮೆ ಗೋರಥಿ (ಚಕ್ಕಡಿ)ಯಲ್ಲಿ ಇಲ್ಲಾ ಹಯರಥ (ಟಾಂಗಾ)ದಲ್ಲಿ । ಪ್ರೀತಿಯಿಂದ ಕರೆದುಕೊಂಡು ಜತೆಯಲ್ಲಿ ।
ಅಲ್ಲಿಂದ ಒಂದೂವರೆ ಮೈಲಿನಲ್ಲಿ । ಇರುವ ರಹಾತೆಗೆ ಬಾಬಾ ಹೋಗುವರು ॥ 130

ಗ್ರಾಮಸ್ಥರು ಎದುರುಗೊಳ್ಳುವರು । ತಾಸೇ ಬಜಂತ್ರಿಯ ಜೊತೆಗೆ ತರುವರು ।
ಅಗಸಿಯಿಂದಲೇ ಬಾಬಾರ ಭೆಟ್ಟಿಯಾಗುವರು । ಸಾಷ್ಟಾಂಗವೆರಗುವರು ಪಾದಗಳಿಗೆ ॥ 131

ಬಾಬಾರನ್ನು ಸಮಾರಂಭ ಸಹಿತ । ಅತಿ ಪ್ರೀತಿಯಿಂದ ಊದುತ್ತ ಬಾರಿಸುತ ।
ಮನವೆಲ್ಲ ಆನಂದ ಭರಿತ । ಊರೊಳಗಲ್ಲಿಂದ ಕರೆದೊಯ್ಯುತಿದ್ದರು ॥ 132

ಖುಶಾಲಚಂದರು ತಮ್ಮ ಮನೆಗೆ । ಕರೆದುಕೊಂಡು ಹೋಗಿ ಬಾಬಾರಿಗೆ ।
ಅಲ್ಪೋಪಹಾರವನು ನೀಡಿ ಅವರಿಗೆ । ಸುಖಾಸನದಿ ಕೂಡ್ರಿಸುತಿದ್ದರು ॥ 133

ಆಮೇಲೆ ಆ ಹಳೆಯ ಕಥೆಗಳನು । ನೆನೆಸಿಕೊಳ್ಳುವರಿಬ್ಬರೂ ಅವಗಳನು ।
ಆಗ ಪರಸ್ಪರರಿಗಾಗುವ ಆನಂದವನು । ಯಾರು ವರ್ಣಿಸಬಲ್ಲರು ॥ 134

ಈ ಪ್ರಕಾರದ ಆನಂದ ವಿಹಾರ । ಮತ್ತು ಮುಗಿಸಿ ಫಲಾಹಾರ ।
ಬಾಬಾರು ಆಗಿ ಆನಂದ ನಿರ್ಭರ । ಸಪರಿವಾರರಾಗಿ ಹಿಂದಿರುಗವರು ॥ 135

ರಹಾತೆ ಊರು ಒಂದು ಕಡೆ । ನೀಮಗಾವವೆಂಬುದು ಮತ್ತೊಂದು ಕಡೆ ।
ಇದೆರಡರ ಮಧ್ಯೆ । ಅವರಿರುವ ಊರು ಶಿರಡಿಯು ॥ 136

ಈ ಮಧ್ಯಬಿಂದುವಿನಿಂದ ಆದರೂ । ಈ ಎರಡು ಊರುಗಳಿಂದಾಚೆಗಾದರೂ ।
ಆನಿರ್ವಾಣಕ್ಕೂ ಪ್ರಯಾಣ ಬೆಳೆಸದಿದ್ದರೂ । ಅವರಿಗೆಲ್ಲೆಡೆಯ ಅರಿವು ಆಗುತ್ತಿತ್ತು ॥ 137

ಇನ್ನೆಲ್ಲಿಯೂ ಪ್ರಯಾಣವಿಲ್ಲ । ಉಗಿಬಂಡೆಯ ದರ್ಶನವಿಲ್ಲ ।
ಆದರೂ ಆ ಬಂಡಿಗಳ ಬರುಹೋಗುವದೆಲ್ಲ । ಸಮಯ ಅವರಿಗೆ ಗೊತ್ತು ॥ 138

ಸಮಯಕ್ಕೆ ಗಾಡಿಯ ಹಿಡಿಯಲು । ಭಕ್ತನು ಸಿದ್ಧನಾಗಿರಲು ।
ಬಂದು ಆಜ್ಞೆಯ ಕೇಳಲು । ಏಕೆ ಇಷ್ಟು ಆತುರವೆನ್ನುವರು ॥ 139

ಬಾಬಾ ನಾನಿನ್ನು ಅವಸರ ಮಾಡದಿದ್ದಲ್ಲಿ । ನನ್ನ ಮುಂಬಯಿ ಗಾಡಿ ಹೊರಟು ಹೋದಲ್ಲಿ ।
ನನ್ನ ನೌಕರಿಯ ಮೇಲೆ ಬಂದೀತು ದಾಳಿ । ಸಾಹೇಬ ನನ್ನ ಮನೆಗೆ ಕಳಿಸಿಯಾನು ॥ 140

ಬೇರೆ ಸಾಹೇಬ ಇಲ್ಲಿಲ್ಲ ಎಂದು । ಏಕೆ ಇಷ್ಟ ಅವಸರ ಪಡುವದು ।
ಒಂದಿಷ್ಟು ರೊಟ್ಟಿ ಗಿಟ್ಟಿ ತಿಂದು । ಊಟ ಮುಗಿಸಿಕೊಂಡು ಮಧ್ಯಾಹ್ನ ಹೋಗು ॥ 141

ಇಂಥ ಪ್ರಾಜ್ಞೆಯು ಯಾರಿಗಿಹುದು । ಬಾಬಾರ ನುಡಿಯ ಅವಜ್ಞೆ ಮಾಡುವದು ।
ಚಿಕ್ಕವರು ದೊಡ್ಡವರು ಜಾಣರು ಸೂಜ್ಞರದು । ಎಲ್ಲರ ಅನುಭವದ ಜ್ಞಾನವಿದು ॥ 142

ಯಾರು ಮನ್ನಿಸಿದರೋ ಅವರ ನುಡಿ । ತಪ್ಪಲಿಲ್ಲೆಂದೂ ಅವರ ಗಾಡಿ ।
ಹೊರಟವರು ಅವರ ಮಾತಿನ ಅವಗಣನೆ ಮಾಡಿ । ಅದರ ಪ್ರಚೀತಿಯ ಪಡೆದರು ॥143

ಒಂದರ ಹಿಂದೆ ಒಂದು ಅಭಿನವ । ಅಸಂಖ್ಯ ಇರುವವು ಇಂಥ ಅನುಭವ ।
ಅನೇಕರವು ಅನೇಕ ಅಪೂರ್ವ । ಸಂಕ್ಷಿಪ್ತವಾಗಿ ನಾ ಹೇಳುವೆ ॥ 144

ಶರಣ ಹೇಮಾಡನು ಸಾಯಿ ಪದದಲಿ । ಇದರದೇ ನಿರೂಪಣೆ ಮುಂದಿನಧ್ಯಾಯದಲಿ ।
ಭಕ್ತನು ತಿರುಗಿ ಊರಿಗೆ ಹೋಗುತಿರುವಲ್ಲಿ । ಬಾಬಾರ ಆಜ್ಞೆ ಅದಕಿರಬೇಕು ॥ 145

ಆಜ್ಞೆಯಾದರೆ ಹೋಗಬೇಕು । ಅಪ್ಪಣೆಯಾಗದಿರೆ ಬಿಡಬೇಕು ।
ಅವಮಾನಿಸಿದರೆ ಅಪಾಯದಿ ಬೀಳಬೇಕು । ಮುಂದಿನಧ್ಯಾಯದಲಿದರ ದಿಗ್ದರ್ಶನ ॥ 146

ಅಂತೆಯೇ ಮಧುಕರಿ ವೃತ್ತಿಯ ಧಾರಣ । ಸಾಯಿಗೇಕೆ ಭಿಕ್ಷಾನ್ನ ಸೇವನ ।
ಪಂಚಸೂನಾದಿ ಪಾತಕ ಕ್ಷಾಲನ । ಕಥಾನಿರೂಪಣೆ ಮುಂದಿದೆ ॥ 147


ಅದಕೆಂದೇ ಪ್ರಾರ್ಥನೆ ಶ್ರೋತೃಗಳ ಚರಣಕೆ । ಒತ್ತಾಯ ಮಾಡುತಿರುವೆ ಕ್ಷಣಕ್ಷಣಕೆ ।
ಸಾಯಿ ಚರಿತ್ರದ ಶ್ರವಣಕೆ । ನಿಜ ಕಲ್ಯಾಣದ ಸಲುವಾಗಿ ॥ 148

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಶ್ರೀ ಸಾಯಿ ಸಮರ್ಥಾವತರಣಂ ನಾಮ ಅಷ್ಟಮೋಧ್ಯಾಯಃ ಸಂಪೂರ್ಣಃ ।

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

106-1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಒಂಭತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಇನ್ನೂ ಪೂರ್ವಕಥಾನುಸಾರವಾಗಿ । ಬಾಬಾರ ಆಜ್ಞೆಗೆ ಹೊರತಾಗಿ ।
ಭಕ್ತನು ತನ್ನ ಊರಿಗೆ ತಿರುಗಿ । ಹೋಗಲು ಹೇಗೆ ಕಷ್ಟದಿ ಸಿಲುಕಿದ ॥ 1

ಅಂತೆಯೇ ಬಾಬಾ ಭೈಕ್ಷ್ಯ ವೃತ್ತಿಯನು । ಆಮರಣಾಂತ ನಡೆಸಿದರದನು ।
ದೂರ ಮಾಡಲು ಪಂಚಸೂನಾದಿ ಪಾತಕಗಳನು । ಮತ್ತು ಭಕ್ತರ ಕಲ್ಯಾಣವನು ತೋರಿ ॥2

ಅಂತೆಯೇ ಆ ಬ್ರಹ್ಮ ಸ್ಥಾವರಗಳಲೆಲ್ಲ । ಸಾಯಿ ತುಂಬಿ ನಿಂತಿರುವನೆಲ್ಲ ।
ಭೂತ ಮಾತ್ರಗಳಲ್ಲಿರುವ ಭಗವಂತನ ಸೊಲ್ಲ । ಸಾಯಿಯೇ ಕೃಪಾವಂತರಾಗಿ ತೋರುವರು ॥3

ಅದಕೇ ಪ್ರಾರ್ಥನೆ ಇದು ತಮ್ಮೊಳು । ಚಿತ್ತವಿಟ್ಟಿದನ ಆಲಿಸಲು ।
ಪಾವನವಾದ ಈ ಕಥೆಗಳು । ನಿಮ್ಮ ಕಲ್ಯಾಣ ಮಾಡುವವು ॥ 4

ಶಿರಡಿಯ ಯಾತ್ರೆಯದೊಂದು ಗುಣವಿದೆ । ಬಾಬಾರ ಅಪ್ಪಣೆಯಾಗದೇ ।
ಯಾತ್ರಿಗಕನು ವಿಘ್ನಗಳ ಆಮಂತ್ರಿಸಿದನೆಂದೇ । ತಿಳಿಯಬೇಕವ ತಿರುಗಿ ಹೊರಟರೆ ॥5

ಅದೇ ಆಜ್ಞೆಯು ದೊರಕಲು । ಕ್ಷಣವೊಂದು ಶಿರಡಿಯಲಿ ಉಳಿಯಲು ।
ವಿಘ್ನವು ಕಟ್ಟಿಟ್ಟದ್ದೇ ಹಾಗೆ ಮಾಡಲು । ಈ ಅನುಭವ ಎಲ್ಲರಿಗೂ ಬಂದಿದೆ ॥ 6

ಆಜ್ಞೆಯ ಮೀರಿ ನಡೆದವರೆಲ್ಲರೂ । ದಾರಿಯಲಿ ಕಷ್ಟಕ್ಕೀಡಾದರು ।
ಕೆಲವರನು ಕಳ್ಳರು ದೋಚಿದರು । ಜನ್ಮವೆಲ್ಲ ನೆನಪುಳಿಯಿತದು ॥ 7

ಊಟ ಮಾಡಿ ಹೋಗಿರೆಂದಾಗ । ಅವಸರದಿಂದ ಹಾಗೇ ಹೊರಟಾಗ ।
ಉಪವಾಸವಿರಬೇಕಾಯಿತು ಗಾಡಿ ಸಿಗದಾಗ । ಇಂಥನೇಕ ಭಕ್ತರ ಕಂಡಿರುವೆವು ॥ 8

ಒಮ್ಮೆ ತಾತ್ಯಾಕೋತೆ ಪಾಟೀಲನು । ಕೋಪರಗಾವಕ್ಕೆ ಹೊರಟಿದ್ದನು ।
ವಾರದ ಸಂತೆಗೆ ಹೊರಟವನು । ಬಂದನಾಗ ಮಶೀದಿಗೆ ॥ 9

ತಾಂಗೆಯ ಹೊರಗೆ ನಿಲ್ಲಿಸಿ । ಬಾಬಾರ ಚರಣಕ್ಕೆ ವಂದಿಸಿ ।
ಅಪ್ಪಣೆ ಪಡೆದಂತೆ ತೋರಿಸಿ । ದರ್ಶನ ಪಡೆದು ಹೊರಟನು ॥ 10

ಭಕ್ತರು ಮಾಡಿದರೂ ಹಾಗೆ ಹೀಗೆ । ಹೊತ್ತು ಗೊತ್ತೆಲ್ಲ ತಿಳಿಯುವದು ಬಾಬಾರಿಗೆ ।
ಅವಸರವಿದ್ದುದ್ದು ನೋಡಿ ತಾತ್ಯಾಗೆ । ಒಂದಿಷ್ಟು ತಡೆಯಬೇಕೆಂದರು ॥ 11

ಸಂತೆಯೇನು ಆದೀತು ಬಿಡು । ಬೇಡ ಊರ ಹೊರಗೆ ನೀ ಹೋಗುವದು ।
ಆದರೂ ತಾತ್ಯಾನ ಒತ್ತಾಯ ಕಂಡು । ಹೇಳಿದರು ಜೊತೆಗೆ ಶ್ಯಾಮನನು ಒಯ್ಯೆಂದು ॥ 12

ಶ್ಯಾಮನನು ಕರೆದೊಯ್ಯುವ ಕಾರಣವೇನು । ಎಂದು ಹೋಗಿ ಟಾಂಗೆಯಲಿ ಕುಳಿತನು ।
ಸಂತೆ ಮಾಡಲು ಹೊರಟನು । ಬಾಬಾರ ಆಜ್ಞೆಯನು ಮೀರಿ ॥ 13

ಎರಡರಲ್ಲೊಂದು ಕುದುರೆ ಚುರುಕು ಬಲು । ಮುನ್ನೂರು ರೂಪಾಯಿಯ ಗಂಟು ಹತ್ತಿರವಿರಲು ।
ಸಾವೂಳಬಾವಿಯ ಹತ್ತಿರ ಬರಲು । ಉಚ್ಛೃಂಬಲವಾಗಿ ಓಡತೊಡಗಿದವು ॥ 14

ಎಂದೂ ಒಂದೇಟು ತಿನ್ನದುದು । ಕ್ಷಣದಲ್ಲಿ ಪೇಟೆಯ ತಲುಪುವಂಥದು ।
ಏನಾಯಿತೋ ಕುದುರೆಯ ನಡು । ಒಮ್ಮೆಲೆ ನೋವಾಗಿ ಬಿದ್ದಿತು ॥ 15

ಎಲ್ಲಿಯ ಸಂತೆ ಎಲ್ಲಿಯದೇನು । ಸಾಯಿ ಮಾತೆಯನಾಗ ನೆನೆಸಿದನು ।
ಬರುತಿರಲಿಲ್ಲ ಈ ಅಪಾಯ ಕೇಳಿದ್ದರವರ ಮಾತನ್ನು । ಆಗಿ ಹೋದದ್ದಕ್ಕೆ ಉಪಾಯವಿಲ್ಲ ॥ 16

ಹೀಗೆಯೇ ಇನ್ನೊಮ್ಮೆ ನಡೆದಾಗ । ತಾತ್ಯಾ ಕೋಲ್ಹಾರಕ್ಕೆ ಹೊರಟಿದ್ದಾಗ ।
ಟಾಂಗಾ ಜೋಡಿಸಿಟ್ಟು ಕೇಳಲು ಬಂದಾಗ । ಬಾಬಾರ ಪಾವನ ಚರಣಗಳ ವಂದಿಸಿದ ॥ 17

ಇನ್ನು ಹೋಗಿಬರುವೆನೆಂದು । ಇನ್ನೂ ಹೇಳದಿರುವಾಗ ಆಗಲಿ ಎಂದು ।
ಆದರೂ ತಾತ್ಯಾ ಹಾಗೆಯೇ ಮುಂದು । ಹೊರಟಾಗ ಏನಾಯಿತು ಕೇಳಿರಿ ॥ 18

ಮೊದಲೇ ಟಾಂಗೆಯು ಭಿರಕಿಯದಿತ್ತು । ಬಹಳ ವೇಗವಾಗಿ ಓಡತೊಡಗಿತು ।
ತಗ್ಗು ದಿನ್ನೆಗಳನ್ನೂ ಗಮನಿಸದಾಯಿತು । ಜೀವದ ಮೇಲಿನ ಪ್ರಸಂಗ ಒದಗಿತು ॥ 19

ಅಂತೂ ಸಾಯಿ ಕೃಪೆಯಿಂದ ಅದು ದಾಟಿತು । ಟಾಂಗೆ ಜಾಲಿ ಮರಕೆ ಅಪ್ಪಳಿಸಿತು ।
ಅಲ್ಲಿಯೇ ಮುರಿದಿದ್ದು ಒಳ್ಳೆಯದಾಯಿತು । ಮುಂದಿನ ಅಪಾಯ ತಪ್ಪಿತು ॥ 20

ಹೀಗೆಯೇ ಒಬ್ಬ ಮುಂಬಯಿಯಲ್ಲಿ ಇರುವಾತ । ಆಂಗ್ಲ ಭೂಮಿಯವ ದೊಡ್ಡ ಗೃಹಸ್ಥ ।
ಮನಸಿನಲ್ಲೇನೋ ಉದ್ದೇಶ ಇಡುತ । ಸಾಯಿಯ ದರ್ಶನಕೆ ಬಂದ ॥ 21

ಚಾಂದೋರಕರರ ವಶೀಲಿ ಇತ್ತು । ಮಾಧವರಾಯರಿಗೆ ಪತ್ರ ಬರೆಯಲಾಗಿತ್ತು ।
ನಿವಾಸಕೆ ತಂಬುವ ಕೊಟ್ಟಿತ್ತು । ಸುಖದ ನಿವಾಸವಾಯಿತವನಿಗೆ ॥ 22

ಬಾಬಾರ ಇಚ್ಛೆಗೆ ವಿರುದ್ಧವಾಗಿ । ಯಾರಾದರೂ ಮಶೀದಿಯಲ್ಲಿ ಹೋಗಿ ।
ದರ್ಶನ ಪಡೆಯುವದು ಸ್ವಚ್ಛಂದವಾಗಿ । ಅಶಕ್ಯವೆಂದು ಪ್ರಸಿದ್ಧವೆಲ್ಲೆಡೆ ॥ 23

ಮೂರು ಸಲ ಪ್ರಯತ್ನಿಸಿದ । ಮಶೀದಿಯೊಳಗೆ ಹೋಗಬೇಕೆಂದ ।
ಆದರೆಲ್ಲ ನಿಷ್ಫಲವಾದದ್ದರಿಂದ । ಪೆಚ್ಚಾದನವನು ಮನದಲ್ಲಿ ॥ 24

ಇಚ್ಛೆ ಇದ್ದಿತು ಅವನ ಮನಸಿನೊಳಗೆ । ಹೋಗಬೇಕು ಮಶೀದಿಯೊಳಗೆ ।
ಮೊಣಕಾಲೂರಿ ವಂದಿಸಿ ಬಾಬಾಗೆ । ಹಸ್ತವನು ಚುಂಬಿಸಿ ಕುಳಿತುಕೊಳ್ಳಬೇಕು ॥ 25

ಅವನಿಚ್ಛೆ ಇದ್ದಿತು ಹೀಗೆ । ಬಾಬಾ ಒಳಬರಗೊಡರು ಅವಗೆ ।
ತಮ್ಮ ಹತ್ತಿರ ಮಶೀದಿಯೊಳಗೆ । ಕುಳಿತುಕೊಳ್ಳಲು ಬೇಕೆಂದಾಗ ॥ 26

ಕೆಳಗೆ ಸಭಾ ಮಂಟಪದಲ್ಲೇ ಇರಬೇಕು । ಬೇಕೆಂದರೆ ಅಲ್ಲಿಯೇ ಕೂಡಬೇಕು ।
ಅಲ್ಲಿಂದಲೇ ದರ್ಶನ ಪಡೆಯಬೇಕು । ಆದರೆ ಅವನು ಮೇಲೆ ಬರಕೂಡದು ॥ 27

ಇರಲವನು ತಿರುಗಿ ಹೊರಡುವಾಗ । ನಿರೋಪ ಪಡೆಯಲು ಅಂಗಳಕೆ ಬಂದಾಗ ।
ನಾಳೆ ಹೋಗುವಿಯಂತೆ ಎಂದರವಗೆ । ಇಷ್ಟೊಂದು ಅವಸರ ಏಕೆಂದರು ॥ 28

ಜನರೂ ಬಹಳ ಹೇಳಿದರು । ನಾನಾ ಪರಿಯಲಿ ಬಿನ್ನವಿಸಿದರು ।
ಅಪ್ಪಣೆ ಇಲ್ಲದೇ ಹೋದವರು । ಬಹಳ ಪಶ್ಚಾತ್ತಾಪ ಪಟ್ಟಿರುವರೆಂದು ॥ 29

ಆಗುವದನು ತಪ್ಪಿಸುವರಾರು । ಒಪ್ಪಲಿಲ್ಲವನು ಯಾರು ಹೇಳಿದರೂ ।
ಅಪ್ಪಣೆ ಇಲ್ಲದೇ ಹೊರಟನಾದರೂ । ಮಾರ್ಗದಿ ಬಹಳ ಕಷ್ಟವಾಯಿತು ॥ 30

ಗಾಡಿ ಮೊದಲು ಸರಿಯಾಗೇ ನಡೆದಿತ್ತು । ಮುಂದೆ ಕುದುರಿ ದಾರಿ ಬಿಟ್ಟಿತು ।
ಸಾವುಳ ಬಾವಿಯ ಮಾತ್ರ ದಾಟಿತು । ಎದುರೊಂದು ಸಾಯಕಲ ಬಂದಿತು ॥ 31

ಗೃಹಸ್ಥ ಹೊರಟಿದ್ದ ಹಿಂದೆ ಕುಳಿತು । ಟಾಂಗಾ ಒಮ್ಮೆಲೇ ಪುಟಿಯಿತು ।
ತೂಕತಪ್ಪಿ ಉರುಳಿತನಿತು । ಹಾಗೇನೆ ಕೆಳಗೆ ಬಿದ್ದನು ॥ 32

ಮಹತ್ಪ್ರಯಾಸದಿಂದ ತಾಂಗಾ ನಿಲ್ಲಿಸಲು । ಗೃಹಸ್ಥನು ಅದರೊಡನೆ ಎಳೆಯುತ್ತ ಬರಲು ।
ತಾಂಗೆಯಲವನ ಎತ್ತಿ ಹಾಕಲು । ತಾಂಗೆಯ ಮುಂದೆ ಹೊಡೆದರು ॥ 33

ಶಿರಡಿಯು ಉಳಿಯಿತು ಒತ್ತಟ್ಟಿಗೆ । ಮುಂಬಯಿ ಮತ್ತೊಂದು ಕಡೆಗೆ ।
ಕೋಪರಗಾವದಲಿ ಆಸ್ಪತ್ರೆ ಇರುವೆಡೆಗೆ । ತಾಂಗೆಯನು ಒಯ್ದರು ॥ 34

ಮುಂದೆ ಕೆಲ ದಿನಗಳನು । ಪಶ್ಚಾತ್ತಾಪ ಪಡೆದ ಗೃಹಸ್ಥನು ।
ಆಸ್ಪತ್ರೆಯಲ್ಲೇ ಬಿದ್ದಿದ್ದನು । ಅವಜ್ಞೆಯ ಕರ್ಮವನು ಭೋಗಿಸುತ ॥ 35

ಇಂಥ ಅಸಂಖ್ಯ ಅನುಭವಗಳಿಂದ ಜನರು । ಸಹಜವಾಗಿಯೇ ಶಂಕಿಸತೊಡಗಿದರು ।
ಬಾಬಾರ ಆಜ್ಞೆ ಪಾಲಿಸ ಹತ್ತಿದರು । ಅದ ಮುರಿಯಲು ಪ್ರಯತ್ನಿಸಲಿಲ್ಲ ॥ 36

ಯಾರದೋ ಗಾಡಿಯ ಗಾಲಿ ಜಾರಿತ್ತು । ಮತ್ತಾರದೋ ಕುದುರೆ ದಣಿಯಿತು ।
ಗಾಡಿ ತಪ್ಪಿ ಉಪವಾಸವಾಯಿತು । ಬರೀ ಚುರ ಮುರಿ ತಿಂದಿದ್ದರು ಕೆಲವರು ॥ 37

ಯಾರು ನಡೆದರೋ ಅವರ ಆಜ್ಞೆಯನಾಂತು । ಹೊತ್ತು ಮೀರಿ ಹೋದರೂ ಅವರಿಗೆ ಗಾಡಿ ಸಿಕ್ಕಿತು ।
ಪ್ರವಾಸವೂ ಸುಖದ್ದಾಯಿತು । ಜನ್ಮವೆಲ್ಲ ನೆನಪುಳಿಯುವಂತೆ ॥ 38

ಭೈಕ್ಷ್ಯ ವೃತ್ತಿಯು ವರ್ಷಾನುವರ್ಷಗಳವರೆಗೆ । ಹೇಗೆ ರುಚಿಸಿತು ಬಾಬಾರಿಗೆ ।
ಯಾರಿಗಾದರೂ ಅನಿಸಿದರೆ ಹೀಗೆ । ಆ ಸಂಶಯ ನಿವೃತ್ತಿಯ ಕೇಳಿರಿ ॥ 39

ಬಾಬಾರ ಆಚರಣೆಯ ನೋಡಿ ಎನಿಸುವದು । ಭಿಕ್ಷೆ ಬೇಡುವದು ಅವರಿಗೆ ಉಚಿತವಾಗಿರುವದು ।
ಆನಂದವಾಗಿ ನಿಜಹಿತವೂ ಸಾಧಿಸುವದು । ಸಾಧಿಸುವದು ಗೃಹಸ್ಥ ಕರ್ತವ್ಯವೂ ॥ 40

ಕಾಯಾ-ವಾಚೆ-ಚಿತ್ತ-ವಿತ್ತಗಳನು । ಸಾಯಿ ಪಾದಕೆ ಅರ್ಪಿಸಿದವನು ।
ಇಂಥ ಸಾಯಿಯ ಅನನ್ಯ ಭಕ್ತನು । ಸಾಯಿಗೆ ಅತ್ಯಂತ ಪ್ರಿಯನವನು ॥ 41

ಯಾವ ಅನ್ನವು ಆಶ್ರಮದಿ ಬೇಯುವದು । ಅದೆಲ್ಲ ಗೃಹಸ್ಥಾಶ್ರಮಿಯದಿರುವದು ।
ಯತಿ ಮತ್ತು ಬ್ರಹ್ಮಚರ್ಯಾಶ್ರಮಿಗಳಿಗದು । ಮೊದಲು ಹೋಮವಾಗಬೇಕು ॥ 42

ಮೊದಲು ಇಂಥವರಿಗೆ ಕೊಡದೆ ದಾನ । ಗೃಹಸ್ಥನು ಮಾಡಿದರೆ ಸೇವನ ।
ಆಚರಿಸಬೇಕವನು ಚಾಂದ್ರಾಯಣ । ಶಾಸ್ತ್ರ ನಿರ್ಬಂಧನವಿರುವದು ನಿಜ ॥ 43

ಯತಿ ಬ್ರಹ್ಮಚಾರಿಗಳಿಗೆ । ಈ ಪಾಕ ನಿಷ್ಪತ್ತಿಯ ನಿಷೇಧಿಸಲಾಗಿ ।
ಚಾಂದ್ರಾಯಣಿ ವ್ರತ ಅವರಿಗಾಗಿ । ಕಟ್ಟಿಟ್ಟದ್ದು ನಿಶ್ಚಯದಿ ॥ 44

ಅವರ ಉದರಪೂರ್ತಿಯ ಭಾರವನದರಿಂದಲೇ । ಶಾಸ್ತ್ರಗಳು ಒಪ್ಪಿಸಿವೆ ಗೃಹಸ್ಥನ ಮೇಲೆ ।
ಯತಿ ಎಂದಿಗೂ ಉದ್ಯೋಗ ಮಾಡಲೇ । ಬಾರದು ಹೊಟ್ಟೆ ಹೊರೆಯುವುದಕೆ ॥ 45

ಬಾಬಾ ಗೃಹಸ್ಥರೂ ಅಲ್ಲ । ವಾನ ಪ್ರಸ್ಥಾಶ್ರಮಿಗಳೂ ಅಲ್ಲ ।
ಬಾಲ ಸನ್ಯಾಸಿ ಬ್ರಹ್ಮಚಾರಿಯವ ಕೇವಲ । ಭಿಕ್ಷೆಯೇ ಪ್ರಶಸ್ಥ ಅವರಿಗೆ ॥ 46

ಅಖಿಲ ವಿಶ್ವವೇ ನನ್ನ ಮನೆ । ವಾಸುದೇವ ವಿಶ್ವಂಭರನು ನಾನೇ ।
ಅಕ್ಷರ ಪರಬ್ರಹ್ಮನೂ ನಾನೇ । ಈ ದೃಢಬೋಧವು ಯಾರದಿಹುದು ॥ 47

ಪೂರ್ಣ ಅಧಿಕಾರ ಈ ಭಿಕ್ಷಾನ್ನದ್ದು । ವಿಶ್ವ ಕುಟುಂಬಿಗೇ ಇರುವದು ।
ಬೇರೆಯವರಿಗೆ ವಿಡಂಬನೆಯಿದು । ಜನರ ಮಧ್ಯದಲಿದರ ನೋಡಬೇಕು ॥ 48

ಮೊದಲು ತ್ಯಜಿಸಬೇಕು ಪುತ್ರೇಕ್ಷಣೆ । ಬಳಿಕ ವಿತ್ತೇಷಣೆ, ಲೋಕೇಷಣೆ ।
ಈ ಏಕ್ಷಣ ತ್ರಯಗಳಿಂದ ಮುಕ್ತನಾದವನೇ । ಭಿಕ್ಷಾನ್ನವನಿಚ್ಛಿಸಬೇಕು ॥ 49

'ಇಲ್ಲದಿರೆ ಭಿಕ್ಷಾ ಪಾತ್ರೆ ಹಿಡಿಯುವದು । ಸುಡಲಿ ಆ ಜೀವನ ನಾಚಿಕೆಗೆಟ್ಟದ್ದು' ।
ತುಕಾರಾಮ ಮಹಾರಾಜರ ವಚನವಿದು ಅರ್ಥವಿಲ್ಲದಿದ್ದೀತೇ ॥ 50

ಸಾಯಿ ಸಮರ್ಥರು ಮಹಾತ್ಯಾಗ ಸಿದ್ಧ । ಹಿರಿಕಿರಿಯರಲ್ಲೆಲ್ಲ ಪ್ರಸಿದ್ಧ ।
ಆದರೆ ನಾವೇ ಇರುವೆವು ಆಶಾಬದ್ಧ । ಅದರಿಂದ ಅಸನ್ನದ್ಧ ಆ ಸತ್ಪದಕೆ ॥ 51

ಪಂಚಯಜ್ಞಗಳ ಹೊರತು । ಗೃಹಸ್ಥನಿಗೆ ಯಾವುದು ನಿಂದ್ಯವಾಯಿತು ।
ಅದನ್ನು ಪವಿತ್ರಗೊಳಿಸುವರು ತಾವೇ ನಿಂತು । ಅದ ಮಾಡಿಸಿಕೊಳ್ಳುತಿದ್ದರು ಸಾಯಿ ॥52

ಪ್ರತಿದಿನವೂ ಒಂದು ಪ್ರಹರಕೆ ಹೊರಟು । ಐದು ಮನೆಗಳ ಎದುರು ನಿಂತು ।
ಅತಿಥಿ ಯಜ್ಞದ ಸ್ಮರಣೆ ಕೊಟ್ಟು । ತಮ್ಮ ಮನೆಗಳಲಿದ್ದೇ ಇದರ ಲಾಭ ಪಡೆಯಿರೆನ್ನುವರು ॥ 53

ಪಂಚಮಹಾ ಯಜ್ಞಗಳ ಮುಗಿಸಿ । ಅವಶಿಷ್ಟಾನ್ನವನು ಸೇವಿಸಿ ।
ಅಜ್ಞಾತ 'ಪಂಚಸೂನಾ'ದಿ ಪಾಪಗಳ ದಹಿಸಿ । ತೋರುವ ನಿದರ್ಶನ ಅವರದೇ ॥ 54

ಕಂಡಣಿ (ಕುಟ್ಟುವದು) ಪರಣೀ (ಬೀಸುವುದು) ಚುಲ್ಲೀ (ಒಲೆಯಹುರಿಸಿ ಅಡಿಗೆ ,ಆಡುವಾಗ) ಉದಕುಂಭೀ ಮತ್ತು ಮಾರ್ಜನೀಗಳಲ್ಲಿ ।
ನಡೆವ ಪಾಪವು ಪಂಚಸೂನವೆಂಬ ಹೆಸರಿನಲ್ಲಿ । ಪ್ರಸಿದ್ಧವಾಗಿವೆ ಜನರಲ್ಲಿ ॥ 55

ದವಸ ಧಾನ್ಯಗಳ ಹಾಕಿ ಒರಳಿನಲ್ಲಿ । ಪೆಟ್ಟು ಹಾಕುವರು ಒನಕೆಯಲ್ಲಿ ।
ಹೊಟ್ಟು ತವಡುಗಳ ತೆಗೆದೊಗೆಯುವಲ್ಲಿ । ಜೀವಹಿಂಸೆಯಾಗುವದು ಅರಿವಾಗದೇ ॥ 56

ಇಷ್ಟೆಲ್ಲ ಉಪಚಾರವಾಗದ ಹೊರತು । ಧಾನ್ಯವು ಪಚನವಾಗುವದೆಂತು ।
ಈ ಪಾಪವೇ 'ಕಂಡಣಿ' ಎಂದು ಹೆಸರಾಯಿತು । ಪಂಚಸೂನುಗಳಲ್ಲಿ ಪ್ರಥಮವಿದು ॥ 57

ಒಲೆಯಲಿ ಉರುವಲು ಉರಿಸಿ । ಅದರಿಂದ ಆಹಾರ ಬೇಯಿಸಿ ।
ತಿಳಿಯದೇ ಮಾಡಿದರೂ ಜೀವಹತ್ಯೆಯನಾಗಿಸಿ । ಆಗ 'ಚುಲ್ಲೀ' ಎಂದೆನಿಸಿತು ಈ ಪಾಪ ॥ 58

ತೆಗೆದುಕೊಂಡು ಬೀಸುವ ಕಲ್ಲು । ಅದರಲ್ಲಿ ಕಾಳು ಬೀಸುವಾಗಲೂ ।
ತಿಳಿಯದೇ ಅಸಂಖ್ಯ ಜೀವ ಜಂತುಗಳು । ಹಾನಿಯಾದಾಗ ಪೇಶಣಿ ಹೆಸರು ಇದಕೆ ॥ 59

ವಾಪಿಕೂಪ ತಡಾಗಗಳಿಂದೂ । ಕುಂಭದಲಿ ನೀರು ತುಂಬಿ ತಂದು ।
ಇಲ್ಲವೆ ಜನರು ಬಟ್ಟೆ ಒಗೆಯುವದು । ಅಸಂಖ್ಯೆ ಪ್ರಾಣಿಗಳು ಸಾಯುವವು ॥ 60

ಕೊಡವನು ಸ್ವಚ್ಛ ಮಾಡುವಲ್ಲಿ । ತಿಕ್ಕಿ ತೊಳೆಯುವಾಗ ಅಲ್ಲಿ ।
ಹತ್ಯೆಯಾಗುವದಾಗ ಉದ್ದೇಶವಿರದಿರಲಿ । 'ಉದಕುಂಭಿ' ಹೆಸರಿನಲಿ ಇದು ನಾಲ್ಕನೆಯ ಪಾಪ ॥ 61

ಶೀತೋಷ್ಣ ಜಲದಿಸ್ನಾನ ಮಾಡುವಾಗ । ಇಲ್ಲವೇ ನೆಲಗುಡಿಸಿ ಸಾರಿಸುವಾಗ ।
ದಾರುಣ ಜೀವ ಹತ್ಯೆ ನಡೆಯುವದಾಗ । 'ಮಾರ್ಜನಿ' ಎಂದು ಹೆಸರಿದಕೆ ॥ 62

ಈ ಪಾಪಗಳ ನಿರ್ಮುಕ್ತಿಗೆ । ಪಂಚ ಮಹಾ ಯಜ್ಞಗಳು ಗೃಹಸ್ಥನಿಗೆ ।
ಈ ಪಂಚಸೂನಗಳ ನಿರಸನವಾದಾಗ್ಗೆ । ಚಿತ್ತಶುದ್ಧಿಯು ಲಭಿಸುವದು ॥ 63

ಚಿತ್ತ ಶುದ್ದಿಯ ಜಲವಿದು । ಉಜ್ವಲ ಶುದ್ಧ ಜ್ಞಾನ ಮೂಡುವುದು ।
ಜ್ಞಾನದ ನಂತರ ಭಾಗ್ಯದಿಂದ ಲಭಿಸುವದು । ನಿಶ್ಚಲ ಮೋಕ್ಷ ಪದವಿಯು ॥ 64

ಇರಲಿನ್ನು ಈ ಸಾಯಿಯ ಭೈಕ್ಷ್ಯ ವ್ರತ । ಬರೆಯುತ್ತ ಹೋದಷ್ಟು ಬೆಳೆದೀತು ಗ್ರಂಥ ।
ಕೇಳಿರೀಗೊಂದು ಕಥೆ ಇದರ ಅನ್ವರ್ಥ । ಆಮೇಲೆ ಈ ಅಧ್ಯಾಯ ಮುಗಿಸುವ ॥ 65

ಮನಸಿನಲಿ ನಿಜವಾದ ಪ್ರೀತಿ ಇರಲು । ಅವರ ಯಾರ ಜೊತೆಯಲೇನೋ ಕಳಿಸಲು ।
ಅದು ತಂದವಗೆ ಮರೆತೇ ಹೋಗಿರಲು । ಬಾಬಾ ಅದ ಮರೆಯದೆ ಕೇಳಿ ಪಡೆಯುವರು ॥ 66

ಇರಲಿದು ರೊಟ್ಟಿ ಪಲ್ಯ ಇಲ್ಲವೇ ಪೇಢೆಯಾದರೂ । ಭಕ್ತಿ ಭಾವದ್ದು ಮಾತ್ರ ಇರಬೇಕು ಜೋರು ।
ಸಿಗಲಿಂಥ ಗಟ್ಟಿಗ ಭಕ್ತರು । ಸಾಯಿಯ ಪ್ರೀತಿಯ ಪೂರ ಉಕ್ಕುವದು ॥ 67

ಇಂಥ ಪ್ರೇಮಳ ಭಕ್ತನ ಕಥೆಯೊಂದ । ಕೇಳಲು ಮನಕಾದೀತು ಆನಂದ ।
ಸ್ವೀಕೃತ ಕಾರ್ಯದಲಿ ತಪ್ಪಾಗಲಾರಿಂದ । ಬಾಬಾರೆ ಮಾರ್ಗವ ತೋರುವರು ॥ 68

ಇಂಥ ಈ ಸವಿಯಾದ ಶಿಕ್ಷಣ ಪದ್ಧತಿ । ಯೋಗ್ಯ ಸಮಯದಿ ಇತ್ತು ಜಾಗೃತಿ ।
ಯಾರು ಅನುಭವಿಸುವರೋ ಈ ಆನಂದ ಸ್ಥಿತಿ । ಧನ್ಯವಾದವರ ಭಾಗ್ಯವ ವರ್ಣನೀಯವು ॥ 69

ರಾಮಚಂದ್ರ ಆ ಭಕ್ತ ಶ್ರೇಷ್ಠನ ನಾಮ । ಅವನ ತಂದೆ ಆತ್ಮಾರಾಮ ।
ತರ್ಖಡ ಎಂದವರ ಉಪನಾಮ । ಸಾಯಿ ವಿಶ್ರಾಮಧಾಮ ಅವರಿಗೆ ॥ 70

ಆದರೆ ಅವರನು ನಿತ್ಯ ಕರೆಯುವದು । ಬಾಬಾಸಾಹೇಬ ತರ್ಖಡ ಎಂದು ।
ಅದೇ ಹೆಸರನು ಇಟ್ಟುಕೊಂಡು । ಕಥೆಯ ಮುಂದೆ ಸಾಗಿಸುವಾ ॥ 71

ಸಾಯಿಯ ಪ್ರೀತಿಯು ಉಕ್ಕೇರಿದಾಗ । ತರ್ಖಡರು ಅದರಲ್ಲಿ ಮುಳುಗಿ ಹೋದಾಗ ।
ಹೇಳ ತೊಡಗುವರು ಅನುಭವದ ಕಥೆಗಳನಾಗ । ಆ ಶ್ರವಣವೆನಿತು ಸುಖಕರ ॥ 72

ಏನು ಹೇಳಲಿ ಅವರ ಭಕ್ತಿವಿಭವ । ಹೆಜ್ಜೆ ಹೆಜ್ಜೆಗೂ ಸಾಯಿಯ ಅನುಭವ ।
ಒಂದಕ್ಕಿಂತ ಒಂದು ಅಭಿನವ । ಸರಸ ಆವಿರ್ಭಾವವದ ಹೇಳುವಾಗ ॥ 73

ಬಾಬಾಸಾಹೇಬರು ಅತುಲ ಪ್ರೇಮಿಗಳು । ಸಾಯಿಯ ಭಾವಚಿತ್ರವೊಂದು ಮನೆಯಲಿರಲು ।
ಅದನು ಉತ್ತಮ ಭವ್ಯ ಮಂಟಪದೊಳು । ಇಟ್ಟು ತ್ರಿಕಾಲ ಪೂಜೆಯ ಮಾಡುವರು ॥ 74

ತರ್ಖಡರವರ ಪುಣ್ಯ ದೊಡ್ಡದಿತ್ತು । ಅದರಿಂದವರ ಪುತ್ರನಿಗೂ ಬಹು ಭಕ್ತಿ ಇತ್ತು ।
ಸಾಯಿಗೆ ನೈವೇದ್ಯ ಸಮರ್ಪಿಸದ ಹೊರತು । ಅನ್ನಗ್ರಹಣವನೆಂದೂ ಮಾಡನು ॥ 75

ಪ್ರಾತಃ ಸ್ನಾನವ ಮುಗಿಸುತಿದ್ದ । ಬಳಿಕ ಕಾಯಾ ವಾಚಾ ಮನಸುಗಳಿಂದ ।
ನಿತ್ಯವೂ ಪೂಜೆ ಮಾಡುವ ಭಕ್ತಿಯಿಂದ । ನೈವೇದ್ಯ ಸಮರ್ಪಿಸುವ ಆ ಭಾವಚಿತ್ರಕ್ಕೆ ॥ 76

ಇದಾಗಿತ್ತವನ ನಿತ್ಯ ಕ್ರಮ । ನಡೆದೇ ಇತ್ತದು ಅವಿಶ್ರಮ ।
ಸಫಲವಾಯಿತು ಪರಿಶ್ರಮ । ಉತ್ತಮ ಅನುಭವ ಪಡೆದನು ॥ 77

ತಾಯಿಯು ಸಾಯಿಯ ಪರಮ ಭಕ್ತಳು । ಸಾಯಿ ದರ್ಶನಕೆ ಹೋಗಲು ಉತ್ಸುಕಳು ।
ಇಚ್ಛೆ ಇತ್ತು ತಂದೆಯ ಮನದೊಳು । ಮಗನೂ ತಾಯಿಯ ಜೊತೆಯಿರಲೆಂದು ॥ 78

ಅವಳಿಚ್ಛೆ ಇತ್ತು ಶಿರಡಿಗೆ ಹೋಗಬೇಕು । ಸಾಯಿ ಸಮರ್ಥರ ದರ್ಶನ ಪಡೆಯಬೇಕು ।
ಕೆಲವು ದಿನ ಅಲ್ಲಿಯೇ ಇರಬೇಕು । ಪ್ರತ್ಯಕ್ಷ ಸಾಯಿಯ ಸೇವೆ ಮಾಡಬೇಕು ॥ 79

ತಂದೆಯದಿತ್ತು ಉದ್ದೇಶವಿದು । ಆದರೆ ಮಗನ ಮನಸಿನಲಿರಲಿಲ್ಲ ಹೋಗುವದು ।
ತಾ ಹೋಗಲು ಯಾರು ಪೂಜೆ ಮಾಡುವದು । ನಿಯಮಿತವಾಗಿ ಎಂಬುವ ಚಿಂತೆಯಿಂದ ॥ 80

ತಂದೆ ಪ್ರಾರ್ಥನಾ ಸಮಾಜದವರು । ಮೂರ್ತಿಪೂಜೆಯ ಮಾಡುವರೇ ಅವರು ।
ಸರಿಯಾದೀತೆ ಅವರಿಗೆ ಕಷ್ಟ ಕೊಡುವದಾದರೂ । ಈ ಸಮಸ್ಯೆಯಾಯಿತು ಮಗನಿಗೆ ॥ 81

ಆದರೂ ತಿಳಿದು ತಂದೆಯ ಇಚ್ಛೆಯನು । ಮಗನು ಪ್ರಯಾಣಕೆ ಹೊರಟನು ।
ವಿನಯದಲಿ ತಂದೆಗೆ ಹೇಳಿಕೊಂಡನು । ಏನೆಂಬುದನು ಕೇಳಿರೀಗ ॥ 82

ನೈವೇದ್ಯವಾಗದೇ ಸಾಯಿಯದು । ಮನೆಯಲ್ಲಾರೂ ಅನ್ನ ಸೇವಿಸಬಾರದು ।
ಒಪ್ಪಿಕೊಂಡರೆ ಮಾತು ಇದೊಂದು । ನಿಶ್ಚಿಂತನಾಗಿ ಹೊರಡಬಹುದು ॥ 83

ಮಗನ ನಿತ್ಯದ ವ್ರತವಿದು । ತಂದೆಗೆ ಮೊದಲೇ ಗೊತ್ತಿತ್ತಿದು ।
'ನಿತ್ಯವೂ ನಾ ನೈವೇದ್ಯ ಮಾಡುವೆನೆಂದು । ನಿಶ್ಚಿಂತೆಯಾಗಿರಲವಗೆ' ಹೇಳಿದರು ॥ 84

'ಸಾಯಿ ಸಮರ್ಪಣವಾಗುವ ಮೊದಲು । ಯಾರು ಅನ್ನಗ್ರಹಣ ಮಾಡದಿರಲು ।
ನನ್ನ ವಚನವೇ ಪ್ರಮಾಣವಿರಲು । ಸ್ವಸ್ಥಚಿತ್ತನಾಗಿ ನೀ ಹೋಗು' ಎಂದರು ॥ 85

ಈ ಪ್ರಕಾರ ಆಶ್ವಾಸನೆ ಪಡೆದಾಗ । ಶಿರಡಿಗೆ ಹೋದನಾಗ ಮಗ ।
ಮರುದಿವಸ ಉದಯವಾದಾಗ । ತರ್ಖಡರು ತಾವೇ ಪೂಜೆ ಮಾಡಿದರು ॥ 86

ಪೂಜನಾರಂಭದ ಎರಡನೆಯ ದಿನದಂದು । ಭಾವಚಿತ್ರದ ಎದುರಿಗೆ ಬಂದು ।
ತರ್ಖಡರು ಸಾಷ್ಟಾಂಗ ಪ್ರಣಾಮಗೈದು । ಬಾಬಾರಿಗೆ ಪ್ರಾರ್ಥಿಸಿದರು ॥ 87

ಮಗನು ಪೂಜೆ ಮಾಡುವಂತೆ । ನಿಮ್ಮ ಪೂಜೆಯಾಗಲಿ ನನ್ನಿಂದೂ ಅದರಂತೆ ।
ನಾ ಮಾಡುವುದು ಬರೀ ಕವಾಯತದಂತೆ । ಆಗದಂತೆ ಪ್ರೀತಿಯ ಕೊಡಿರಿ ಮನಕೆ ॥ 88

ಬ್ರಾಹ್ಮೀ ಮುಹೂರ್ತದಲಿ ಮಾಡಿ ಸ್ನಾನ । ಹೀಗೆ ಪ್ರಾರ್ಥನಾ ಪೂರ್ವಕ ಪೂಜನ ।
ತರ್ಖಡರು ಮಾಡುತ್ತಿದ್ದರು ಪ್ರತಿದಿನ । ನೈವೇದ್ಯ ಸಮರ್ಪಣೆಯ ಸಹಿತವಾಗಿ ॥ 89

ಕಲ್ಲು ಸಕ್ಕರೆಯನು ನೈವೇದ್ಯ ತೋರಿಸುತ । ಬಾಬಾ ಸಾಹೇಬರು ದಿನನಿತ್ಯ ಪೂಜಿಸುತ ।
ಹೀಗೆ ಕೆಲವು ದಿನ ನಿಯಮ ನಡೆಸುತ । ಒಂದು ದಿನ ಅದು ತಪ್ಪಿತು ॥ 90

ವ್ಯವಹಾರದಲ್ಲೇ ತೊಡಗಿದ್ದ ಅತಃಕರಣ । ತರ್ಖಡರಿಗೆ ಉಳಿಯಲಿಲ್ಲ ಸ್ಮರಣ ।
ಆಗಿ ಹೋಯಿತು ಎಲ್ಲರ ಭೋಜನ । ನೈವೇದ್ಯವಿಲ್ಲದೇ ಒಂದು ದಿನ ॥ 91

ಒಂದು ದೊಡ್ಡ ಗಿರಣಿಯಲ್ಲಿ । ತರ್ಖಡರು ಮುಖ್ಯಾಧಿಕಾರಿಗಳಲ್ಲಿ ।
ಅದಕಾಗಿ ನಿತ್ಯ ಪ್ರಾತಃಕಾಲದಲಿ । ಹೊರಗೆ ಹೋಗ ಬೇಕಾಗುತ್ತಿತ್ತು ॥ 92

ಮುಂದೆ ಮಧ್ಯಾನ್ಹವಾದ ಮೇಲೆ । ತಿರುಗಿ ಮನೆಗೆ ಬಂದ ಮೇಲೆ ।
ಊಟಕ್ಕೆ ಕೂಡುವಾಗಲೇ । ನೈವೇದ್ಯದ ಸಕ್ಕರೆ ತೆಗೆದುಕೊಳ್ಳುತ್ತಿದ್ದರು ॥ 93

ಹೀಗೆ ನಿಯಮ ನಡೆಯುತಿರಲು । ಒಂದು ದಿನ ವಿಸ್ಮರಣೆಯಾಗಲು ।
ಕಲ್ಲು ಸಕ್ಕರೆ ನಿವೇದಿಸಲು । ಅಂದು ಪ್ರಸಾದಗ್ರಹಣವಾಗಲಿಲ್ಲ ॥ 94

ಊಟಕ್ಕವರು ಕುಳಿತುಕೊಳ್ಳಲು । ಶೇಷ ಸಕ್ಕರೆಯನು ಅಡಿಗೆಯವಳು ।
ಊಟದ ತಟ್ಟೆಯಲೆ ಹಾಕುವಳು । ಅದೇ ಅನ್ನಶುದ್ಧಿ ಅನುವಂತೆ ॥ 95

ಆದರೂ ಆ ದಿನ ಪೂಜಾ ಸಮಯದಿ । ಆಗಿ ಏನೋ ಗಡಿ ಬಿಡಿ ।
ಸಕ್ಕರೆ ನೈವೇದ್ಯವಾಗದೆ । ಪ್ರಸಾದದಲ್ಲಿ ಅದು ಇರಲಿಲ್ಲ ॥ 96

ಅದೇ ಕಾಲಕ್ಕೆ ತಟ್ಟೆಯ ಮುಂದಿಂದೆದ್ದು । ಸಾಯಿ ಪ್ರತಿಮೆಯ ಮುಂದೆ ಬಂದು ।
ಕಣ್ಣು ತುಂಬ ನೀರು ತಂದು । ಅನುತಾಪಯುಕ್ತರಾಗಿ ಕೈ ಮುಗಿದು ನುಡಿದರು ॥ 97

ಬಾಬಾ ಇದೇನಿದು ಮಾಯೆ ಮಾಡಿದಿರಿ । ನನಗೆಂತು ಮರೆವು ತರಿಸಿದಿರಿ ।
ಕವಾಯತವನ್ನೇ ಮಾಡಿಸಿದಿರಿ । ಕ್ಷಮೆಯ ನೀಡಿರಿರೆನಗಿನ್ನು ॥ 98

ಮರೆವೆಂಬುದು ಮಹಾಪಾತಕವಲ್ಲ । ಮಹದನುತಾಪವಾಗಿದೆಯಲ್ಲ ।
ನಿಃಸಂಶಯವಾಗಿ ನನ್ನದೇ ತಪ್ಪೆಲ್ಲ । ನನ್ನ ಮೇಲೆ ಕೃಪೆಯಾಗಬೇಕು ॥ 99

ಭಾವಚಿತ್ರದೆದುರು ನಮಸ್ಕಾರ ಹಾಕಿದರು । ದುಃಖಿತಾಂತಃಕರಣದಿಂದ ಗದ್ಗದಿತರಾದರು ।
ನನಗೆ ಕರುಣೆಯ ತೋರಿಸೆಂದರು । ಮಹಾರಾಜ ದಯಾಘನಾ ॥ 100

ಪತ್ರ ಬರೆದರು ಹೀಗೆಂದು । 'ತಪ್ಪಾಗಿದೆ ನನ್ನಿಂದ ದೊಡ್ಡದು ।
ಪ್ರಾರ್ಥಿಸವರನು ಕ್ಷಮಿಸಬೇಕೆಂದು' । ದೈನ್ಯದಿಂದ ಕೇಳಿಕೊಂಡು ॥ 101

'ಈ ಅನನ್ಯ ಶರಣನಿಗೆ ದಯೆ ತೋರಬೇಕು' । ಎಂದು ಸಾಯಿಯ ಕರುಣೆ ಬೇಡಬೇಕು ।
ಅಭಯ ವಚನವನವರಿಂದ ಪಡೆಯಬೇಕು । ಈ ದೀನ ದಾಸನ ಸಲುವಾಗಿ ॥ 102

ಈ ಪ್ರಕಾರ ನಡೆದದ್ದು ಬಾಂದ್ರೆಯಲ್ಲಿ । ಅಲ್ಲಿಂದ ಶಿರಡಿ ನೂರ ಹರದಾರಿಯಲ್ಲಿ ।
ಕೂಡಲೇ ಸುದ್ದಿ ಮುಟ್ಟಿತಲ್ಲಿ । ಆಗ ಬಾಬಾ ಏನೆಂದರು ಕೇಳಿರಿ ॥ 103

ಭೂತ ಭವಿಷ್ಯ ವರ್ತಮಾನ । ದೇಶ ಕಾಲಾದ್ಯನವಚ್ಛಿನ್ನ ।
ಮಹಾರಾಜರಿಗೆ ತ್ರಿಕಾಲ ಜ್ಞಾನ । ಅದರ ಪ್ರತ್ಯಕ್ಷ ಪ್ರಮಾಣವ ನೋಡಿರಿ ॥ 104

ಇತ್ತ ಮಗನು ಇರುವಾಗ ಶಿರಡಿಯಲ್ಲಿ । ಅದೇ ದಿನ ಅದೇ ಸಮಯದಲ್ಲಿ ।
ಹೋದಾಗ ಸಾಯಿಯ ಪದಗಳನ ನಮಿಸಲು ಅಲ್ಲಿ । ನಡೆದ ಸಂಗತಿಯ ಚಿತ್ತವಿಟ್ಟು ಕೇಳಿರಿ ॥105

ಹುಡುಗನು ಬಂದು ಅತಿ ಉಲ್ಲಸಿತನಾಗಿ । ತಾಯಿಯೊಡನೆ ಚರಣ ವಂದಿಸುತಿರಲಾಗಿ ।
ಸಾಯಿಯು ತಾಯಿಗೇ ಹೇಳಿದ ಮಾತು ಕೇಳಿ । ಅತ್ಯಂತ ವಿಸ್ಮಿತನಾದನು ॥ 106

"ಏನು ಹೇಳಲಿ ನಾ ದಿನದ ಹಾಗೆ । ಅಮ್ಮಾ ನಾ ಹೋದೆ ಬಾಂದ್ರೆಗೆ ।
ಸಿಗದಿರೆ ಏನೂ ತಿನ್ನಲು । ಉಪವಾಸ ಹಾಗೆ ತಿರುಗಿ ಬರಬೇಕಾಯಿತು ॥ 107

ನೋಡಿರಿ ಎಂಥ ಋಣಾನುಬಂಧವಿದು । ಹೋಗಿ ನೋಡಿದರೆ ಬಾಗಿಲು ಮುಚ್ಚಿದ್ದು ।
ಆದರೂ ಸ್ವಚ್ಛಂದದಿ ಪ್ರವೇಶ ಎನ್ನದು । ಯಾರೆನಗೆ ಮಾಡುವರು ಪ್ರತಿಬಂಧ ॥108

ಒಡೆಯ ಸಿಗಲಿಲ್ಲ ಮನೆಯಲ್ಲಿ । ಬಹಳ ಸಂಕಟವಾಯಿತು ಹೊಟ್ಟೆಯಲಿ ।
ಹಾಗೇ ಅನ್ನವಿಲ್ಲದೆ ತಿರುಗಿ ಇಲ್ಲಿ । ಮಧ್ಯಾನ್ಹದ ಹೊತ್ತಿಗೆ ಬಂದುಬಿಟ್ಟೆ" ॥ 109

ಈ ಪ್ರಕಾರದ ನುಡಿ ಕಿವಿಗೆ ಬಿತ್ತು । ಮಗನಿಗೆ ಕೂಡಲೇ ಹೊಳೆಯಿತು ।
ನನ್ನ ತಂದೆಯು ಬಹುತರ ಮರೆತು । ನೈವೇದ್ಯ ತೋರಿಸಿರಲಿಕ್ಕಿಲ್ಲವೆಂದು ॥ 110

ಬಾಬಾರಿಗೆ ಮಗ ನುಡಿದ ವಿನಯದಿ । ನನ್ನ ಮನೆಗೆ ಹೋಗಗೊಡಿ ।
ಬಾಬಾ ಅವನನ್ನು ಅಲ್ಲಿಯೇ ತಡೆದು । ಅವನಿಂದ ಪೂಜೆ ಮಾಡಿಸಿಕೊಂಡರು ॥ 111

ಅದೇ ದಿವಸ ಶಿರಡಿಯಿಂದ । ಸವಿಸ್ತರ ಪತ್ರ ಬರೆದ ।
ಆ ಪತ್ರವನು ಓದಿ ನೋಡಿದ । ತಂದೆಯ ಕರುಳು ಕರಗಿತು ॥ 112

ಈ ಕಡೆಯಿಂದ ತಂದೆ ಕಳಿಸಿದ ಪತ್ರವೂ ಅಲ್ಲಿ ಮುಟ್ಟಿತು । ಮಗನಿಗೂ ಬಹಳ ಅಚ್ಚರಿಯಾಯಿತು ।
ಅವನ ಕಣ್ಣುಗಳಿಗೂ ನೀರು ಬಂತು । ಬಹಳ ಕೆಡುಕೆನಿಸಿತವಗೆ ॥ 113

ನೋಡಿ ಸಾಯಿಯ ಆಟವನಿಂತು । ಹೇಗೆ ತಾನೇ ಪ್ರೀತಿ ಉಕ್ಕೇರದಿದ್ದೀತು ।
ಅಂಥ ಪಾಷಾಣ ಹೃದಯವಾದರೂ ಯಾರದಿದ್ದೀತು । ಇದರಿಂದ ದ್ರವಿಸದಿರುವಂಥದು ॥114

ಇದೇ ಹುಡುಗನ ಮಮತೆಯ ತಾಯಿಗೆ । ಒಂದು ದಿನ ಶಿರಡಿಯಲಿ ಇರುವಾಗ್ಗೆ ।
ಬಾಬಾ ಅನುಗ್ರಹ ನೀಡಿದರು ಅವಳಿಗೆ । ಅದು ಹೇಗೆಂದು ಕೇಳಿರಿ ॥ 115

ಇರುತಿರಲು ಊಟದ ಮನೆಯೊಳಗೆ । ತಟ್ಟೆಗಳೆಲ್ಲ ಬಡಿಸಿ ಸಿದ್ಧವಾದಾಗ್ಯೆ ।
ನಾಯಿಯೊಂದು ಬಂತು ಬಾಗಿಲಿಗೆ । ಮಧ್ಯಾಹ್ನದ್ಹೊತ್ತಿಗೆ ಹಸಿದಿದ್ದಿತು ॥ 116

ತಟ್ಟೆಯಲಿದ್ದ ರೊಟ್ಟಿಯ ತುಂಡು । ನಾಯಿಗೆ ಹಾಕುತ್ತಿರುವುದ ಕಂಡು ।
ಕೆಸರು ಮೆತ್ತಿದ ಹಂದಿಯೊಂದು । ಹಸಿದು ಅಲ್ಲಿಗೆ ಬಂದಿತು ॥ 117

ಸಹಜವಾಗಿಯೇ ಇದೆಲ್ಲ ನಡೆಯಿತು । ಅವಳಿಗೆ ಅದು ಮರೆತೇ ಹೋಯಿತು ।
ಆದರೆ ಮಧ್ಯಾನ್ಹದಲಿ ಆ ಮಾತು । ಸಾಯಿ ತಾವೇ ಎತ್ತಿದರು ॥ 118

ಮಧ್ಯಾಹ್ನ ಭೋಜನಾನಂತರ । ಮಶೀದಿಯಲಿ ನಿತ್ಯ ಕ್ರಮಾನುಸಾರ ।
ಅವಳು ಬಂದು ಕುಳಿತಳು ದೂರ । ಸಾಯಿ ಅವಳನು ಕೇಳಿದರು ॥ 119

"ಅಮ್ಮಾ ಇಂದು ನೀನೆನಗೆ ಉಣಬಡಿಸಿದೆ । ಅದರಿಂದ ನನ್ನ ಹೊಟ್ಟೆ ತುಂಬಿದೆ ।
ಹಸಿವೆಯನು ನೀ ಹಿಂಗಿಸಿದೆ । ನನ್ನನ್ನು ತೃಪ್ತ ಪಡಿಸಿದೆ ॥ 120

ಈ ರೀತಿಯೇ ಮಾಡುತಿರು ನೀ ನಿತ್ಯ । ಇದುವೆ ಉಪಯೋಗವಾದೀತು ತಿಳಿ ಸತ್ಯ ।
ಮಶೀದಿಯಲಿ ಕುಳಿತು ನಾನೆಂದಿಗೂ ಅಸತ್ಯ । ತ್ರಿಸತ್ಯವಾಗಿಯೂ ನುಡಿಯಲಾರೆನು ॥ 121

ಹೀಗೆಯೇ ನನ್ನ ದಯೆಯು ತಿಳಿದು । ರೊಟ್ಟಿ ಕೊಡಬೇಕು ಬಂದವರಿಗೆ ಹಸಿದು ।
ಬಳಿಕ ನನ್ನ ಹೊಟ್ಟೆಯು ತುಂಬುವದು । ಇದು ಸದೈವ ನೆನಪಿರಲಿ" ॥ 122

ಸಾಯಿ ಸಮರ್ಥರ ಈ ಮಾತಿನದು । ಅರ್ಥ ಅವಳಿಗೆ ಹೊಳೆಯದು ಏನೆಂದು ।
ಅವರ ವಾಣಿ ನಿರರ್ಥಕವೆಂದೂ । ಇರದಿರೆ ಅವರಂದದ್ದೇನು ॥ 123

ನಾನು ನಿಮಗೆ ಬಡಿಸುವ ಹಾಗೆ । ನನ್ನಿಂದದು ಆಗುವದಾದರೂ ಹೇಗೆ ।
ನಾನೇ ಹಣ ಕೊಟ್ಟು ಸಿಗುವಂಥದನು ಉಣುವಾಗ । ಪರತಂತ್ರಳಾಗಿರುವೆನಲ್ಲ ಇಲ್ಲಿ ॥124

"ನೀ ಪ್ರೇಮದಿ ನೀಡಿದ್ದನ್ನು ಉಂಡು । ನಾನೀಗ ಸಂತೃಪ್ತನಾಗಿದ್ದು ।
ತೇಗು ಇನ್ನೂ ಬರುತಿದೆ ನೋಡು" । ಅವಳ ಒಳಗಿನ ವಿಚಾರಕ್ಕೆ ಉತ್ತರಿಸಿದರು ॥125

"ನೀ ಊಟಕೆ ಕುಳಿತಾಗ ಬಾಗಿಲಿಗೆ ಬರಲು । ಹೊಟ್ಟೆಯು ಬಹಳ ಹಸಿದಿರಲು ।
ನೀ ಕಂಡೆ ಆ ನಾಯಿಯ ಸಹಜದೊಳು । ಅದರೊಡನಾಗಿದ್ದೆ ನಾ ಏಕಾತ್ಮ ॥ 126

ಸರ್ವಾಂಗದಿ ಕೆಸರು ಮೆತ್ತಿರುವ । ನೀ ಕಂಡಿದ್ದ ಆ ಸೂಕರವ ।
ಹಸಿವೆಯಿಂದ ಬಳಲುತಿರುವ । ಅದರೊಡನೆಯೂ ನನ್ನ ಏಕಾತ್ಮತೆ" ॥ 127

ಕೇಳಿಂತು ಬಾಬಾರ ಮಾತುಗಳು । ಆ ಸ್ತ್ರೀ ವಿಸ್ಮಯಚಕಿತಳಾದಳು ।
"ತಿರುಗಾಡುವ ಬೆಕ್ಕು ನಾಯಿ ಹಂದಿಗಳು । ಬಾಬಾರೇ ಎಂದು ತಿಳಯಬೇಕೆ ॥ 128

ಯಾವಾಗ ನಾಯಿ ಯಾವಾಗ ಬೆಕ್ಕಾಗಿ । ಇರುವೆಯಾಗಿ ಒಂದೆಡೆ ಇನ್ನೊಂದೆಡೆ ಜಲಚರವಾಗಿ ।
ಒಮ್ಮೊಮ್ಮೆ ಆಕಳು ಮತ್ತೆ ಒಮ್ಮೆ ಹಂದಿಯಾಗಿ । ಹೀಗನೇಕ ರೂಪದಲಿ ನಾಚರಿಸುವೆ ॥129

ಭೂತ ಮಾತ್ರಗಳಲ್ಲಿ ನನ್ನ ಕಾಣುವವ । ತಿಳಿ ಅವನೇ ನನಗೆ ಪ್ರಿಯನಿರುವ ।
ಹೀಗೆಯೇ ನನ್ನನ್ನು ಭಜಿಸುತಿರುವ । ನೀ ಭೇದ ಬುದ್ಧಿಯ ತ್ಯಜಿಸಬೇಕು" ॥ 130

ನುಡಿಯಲ್ಲ ಇವು ಪರಮಾಮೃತ । ಉಂಡು ಆ ತಾಯಿ ಸದ್ಗದಿತ ।
ನೇತ್ರದಿ ಆನಂದಾಶ್ರುಗಳ ತುಂಬುತ । ಕಂಠ ಗದ್ಗದಿತವಾಯಿತು ॥ 131

ಹೀಗೆಯೇ ಇನ್ನೊಂದು ಈ ತಾಯಿಯ । ಪ್ರೇಮ ರಸ ತುಂಬಿದ ಇನ್ನೊಂದು ಕಥೆಯ ।
ಭಕ್ತೈಕ್ಯತೆಯೇ ಸಮರ್ಥ ಸಾಯಿಯ । ಏಕಾತ್ಮತೆಯ ನಿಜಗುರುತು ॥ 132

ಕರೆದುಕೊಂಡು ಕುಟುಂಬ ಮಕ್ಕಳು । ಒಮ್ಮೆ ಪುರಂಧರೆ ಶಿರಡಿಗೆ ಹೊರಟಿರಲು ।
ಅವರೊಡನೆ ಬದನೆಕಾಯಿಗಳ ಕೊಟ್ಟಳು । ಪ್ರೀತ್ಯಾದರಗಳಿಂದ ಕೂಡಿ ॥ 133

ವಿನಂತಿಸಿದಳು ಅವರ ಪತ್ನಿಗೆ । ಒಂದರದು ಭರತ ಮಾಡಿ ಬಾಬಾರಿಗೆ ।
ಇನ್ನೊಂದರದು ಕಾಚರೆ ಕರೆದು ಕಮ್ಮಗೆ । ಸಾಕಾಗುವಷ್ಟು ಬಡಿಸಿರಿ ಎಂದು ॥ 134

ಪುರಂದರೆಯ ಶ್ರೀಮತಿ ಆಗಲೆಂದಳು । ಆ ಸ್ತ್ರೀಯು ಶಿರಡಿಯ ತಲುಪಲು ।
ಆರತಿ ಮುಗಿಸಿ ಭೋಜನ ಕಾಲದೊಳು । ಭರತವ (ಬಜ್ಜಿ) ತೆಗೆದುಕೊಂಡು ಹೋದಳು ॥135

ನಿತ್ಯದಂತೆ ನೈವೇದ್ಯ ತೋರಿಸಿ । ತಿರುಗಿ ಹೋದಳು ತಟ್ಟೆಯನಲ್ಲಿರಿಸಿ ।
ಎಲ್ಲರ ನೈವೇದ್ಯಗಳ ಸೇರಿಸಿ । ಬಾಬಾ ಊಟಕ್ಕೆ ಕುಳಿತರು ॥ 136

ಬಜ್ಜಿ ರುಚಿ ನೋಡಿದರು । ಸವಿ ಎನಿಸಿತು ಎಲ್ಲರಿಗೆ ಹಂಚಿದರು ।
ಕಾಚರೆ ತಿನ್ನಲು ಬಯಸಿದರು । ಅವುಗಳ ತನ್ನಿರೆಂದು ನುಡಿದರು ॥ 137

ಹೇಳಿ ಕಳಿಸಲಾಯಿತು ರಾಧಾಕೃಷ್ಣೆಗೆ । ಊಟಕ್ಕೆ ತಡೆಯಾಗಿದೆ ಬಾಬಾರಿಗೆ ।
ಕಾಚರೆ ತಿನ್ನಲು ಮನಸಾದಾಗ್ಯೆ । ಏನು ಮಾಡಬೇಕೆಂಬುದು ತಿಳಿಯದು ॥ 138

ಬದನೇಕಾಯಿಯ ಹಂಗಾಮು ಇರದು । ಈ ಕಾಲದಲಿ ಆ ಪದಾರ್ಥದ ।
ವಿಚಾರಿಸಿದಾಗ ಭರತದ ಮತ್ತು ಪುರಂದರೆಯವರ ಕುಟುಂಬದ । ಶೋಧಮಾಡಲಾಯಿತು ॥ 139

ಅವಳು ತಂದ ಊಟದ ತಟ್ಟೆಯಲ್ಲಿ । ಬಜ್ಜಿಯ ಬಡಿಸಿದ್ದರದರಲ್ಲಿ।
ಇದ್ದರೆ ಅವಳ ಸಾಮಗ್ರಿಯಲ್ಲಿ । ಬದನೆಕಾಯಿಯೂ ಇರಬಹುದು ॥ 140

ಅದಕಾಗಿ ಕೇಳಲು ಅವಳಿಗೆ । ಕಾಚರೆಯ ಅನ್ವರ್ಥತೆ ತಿಳಿಯತೆಲ್ಲರಿಗೆ ।
ಇಷ್ಟೊಂದು ಆಸ್ಥೆ ಏಕೆ ಬಾಬಾರಿಗೆ । ಅದರ ಬಗ್ಗೆ ಎಂಬದು ॥ 141

ಆ ಸ್ತ್ರೀ ಎಂದಳು ಒಂದರ ಭರತವಾಗಿದೆ । ಮಧ್ಯಾಹ್ನ ಅದನು ಅರ್ಪಿಸಿದೆ ।
ಕಾಚರೆಯ ಆಮೇಲೆ ಒಯ್ಯುವೆನೆಂದೆ । ಅದಕಾಗಿ ಹೆಚ್ಚಿ ಇಟ್ಟಿರುವೆ ॥ 142

ಈ ಬದನೇಕಾಯಿಯ ಕಥೆಯು ಅಲ್ಲಿ । ಬರುಬರುತ್ತ ಹಬ್ಬಿತು ಎಲ್ಲರಲಿ ।
ಆಶ್ಚರ್ಯ ಪಟ್ಟರೆಲ್ಲರು ಮನದಲ್ಲಿ । ಸಾಯಿಯ ವ್ಯಾಪಕತೆಯನು ಕಂಡು ॥ 143

ಇನ್ನೊಮ್ಮೆ ಡಿಸೆಂಬರ ತಿಂಗಳಲ್ಲಿ । ಹತ್ತೊಂಬತ್ತು ನೂರಾ ಹದಿನ್ನೆದರಲ್ಲಿ ।
ಅದೇ ಭಕ್ತಳು ಅತಿ ಪ್ರೀತಿಯಲಿ । ಬಾಬಾರಿಗೆ ಫೇಡೆ ಕಳಿಸಿದಳು ॥ 144

ಬಾಳಾರಾಮನು ತೀರಿಕೊಳ್ಳಲು । ಕ್ರಿಯಾ ಕರ್ಮಾಂತರ ಮಾಡಲು ।
ಅವನ ಮಗ ಶಿರಡಿಗೆ ಹೊರಡಲು । ಕೇಳಿ ಹೋಗಲು ಬಂದನು ॥ 145

ಹೋಗುವೆನೆಂದು ಹೇಳಲಿಕ್ಕೆ । ಹುಡುಗ ಬಂದ ತರ್ಖಡರ ಹತ್ತಿರಕ್ಕೆ ।
ಆಗವರ ಪತ್ನಿಯ ಮನಕೆ । ಎನಿಸಿತು ಬಾಬರಿಗೇನಾದರೂ ಕಳಿಸಬೇಕು ॥ 146

ಫೇಡೆಯನು ಬಿಟ್ಟು ಇನ್ನೊಂದದು । ಕೊಡಬೇಕೆಂದರೆ ಇರಲಿಲ್ಲ ಅಂದು ।
ಅದೂ ಮೊದಲು ನೈವೇದ್ಯ ತೋರಿಸಿದುದು । ಹುಡುಗನಿಗೆ ಹೋಗುವ ಅವಸರ ಬೇರೆ ॥ 147

ಅಲ್ಲದೇ ಹುಡುಗ ಸೂತಕದವ । ಆ ಫೇಡೆಯದು ಮಾಡಿ ಆಗಿದೆ ನೈವೇದ್ಯವ ।
ಅದನೇ ಸಾಯಿಗೆ ಅರ್ಪಿಸುವ । ಎಂದರೆ ಅದು ಸರಿಯಾದೀತೇ ॥ 148

ಎಂದಳು ಮನೆಯಲಿ ಇಲ್ಲ ಮತ್ತೊಂದು । ಇದನ್ನೇ ಹೋಗು ತೆಗೆದುಕೊಂಡು ।
ಪ್ರೇಮ ಪುರಃಸರ ಇದನೇ ಕೊಡು । ಇಷ್ಟಪಟ್ಟು ಸಾಯಿ ತಿನ್ನುವರು ॥ 149

ಆ ಪೇಢೆಯನೇ ಆತ ಕೊಂಡೊಯ್ದನಾಗ । ಆದರವನು ದರ್ಶನಕೆ ಹೋಗುವಾಗ ।
ಮರೆತು ಉಳಿಯಿತು ಪೇಢೆ ಮನೆಯೊಳಗೆ । ಆಗ ಬಾಬಾ ಸುಮ್ಮನಿದ್ದರು ॥ 150

ಮುಂದೆ ಮತ್ತೆ ಮೂರನೇ ಪ್ರಹರದಲ್ಲಿ । ಹುಡುಗ ಮತ್ತೆ ಬಂದ ದರ್ಬಾರದಲ್ಲಿ ।
ಮತ್ತೆ ಮರೆತನು ಮೊದಲಿನ ರೀತಿಯಲಿ । ಬರಿಗೈಲಿ ಮಶೀದಿಗೆ ಬಂದನು ॥ 151

"ನನಗಾಗಿ ತಂದಿರುವೆಯಾ ಏನಾದರೂ" । ಎಂದು ಬಾಬಾ ಕೇಳಿ ನೋಡಿದರು ।
"ಏನೂ ಇಲ್ಲ" ಎಂದಾಗ ಮತ್ತೆ ಹೇಳಿದರು । ಒಂದಿಷ್ಟು ನೆನಪು ಮಾಡಲು ॥ 152

"ನಿನ್ನ ಕೈಯಲ್ಲಿ ಯಾರು ಏನಾದರೂ । ನನಗಾಗಿ ಕೊಟ್ಟಿಲ್ಲವೇ" ಎಂದರು ।
ಅದಕೂ ಇಲ್ಲ ಎಂದಾಗ ಸಾಯಿ ಸಮರ್ಥರು । ಸ್ಪಷ್ಟವಾಗಿಯೇ ಕೇಳಿದರು ॥ 153

"ಏನಪ್ಪಾ ಮನೆಯಿಂದ ಹೊರಡುವ ವೇಳೆಯಲ್ಲಿ । ತಾಯಿ ಕೊಡಲಿಲ್ಲವೇ ನಿನ್ನ ಕೈಯಲ್ಲಿ ।
ಪ್ರೀತಿಯಿಂದ ಕೊಟ್ಟ ಆ ತಿಂಡಿ ಅದೆಲ್ಲಿ" । ಎಂದಾಗ ನೆನಪಾಯಿತವನಿಗೆ ॥ 154

ಆದನಾಗ ಲಜ್ಜಾಯಮಾನ । ಹೇಗಾಯಿತು ನನಗೀ ವಿಸ್ಮರಣ ।
ಕ್ಷಮೆ ಕೇಳಿದನಾಗಿ ಅಧೋವದನ । ಚರಣಕೊಂದಿಸಿ ಹೊರಟನು ॥ 155

ಓಡಿ ಹೋದ ಮನೆಯತ್ತ । ಫೇಡೆ ತಂದು ಬಾಬಾರಿಗಿತ್ತ ।
ಕೈಗೆ ಬಿದ್ದೊಡನೆ ಬಾಯಲಿಡುತ್ತ । ತಾಯಿಯ ಭಾವ ಸಮರ್ಪಣೆ ನಡೆಯಿತು ॥ 156

ಹೀಗೆ ಸಾಯಿಯು ಮಹಾನುಭಾವ । ಯಾರ ಮನದಲಿ ಎಂತು ಭಾವ ।
ಅವರಿಗೆ ಅಂತೇ ಕೊಟ್ಟು ಅನುಭವ । ಭಕ್ತನ ಗೌರವವ ಬೆಳೆಸುವನು ॥ 157

ಇನ್ನೊಂದು ಈ ಕಥೆಯ ಅಂತರಾರ್ಥ । ಸರ್ವಭೂತಗಳಲಿ ಸದೈವ ವಾಸಿಸುವ ಭಗವಂತ ।
ಇದು ತಿಳಿಯಬೇಕೆಂಬುದು ಸಕಲ ಶಾಸ್ತ್ರಸಮ್ಮತ । ಇದೇ ಸಿದ್ಧಾಂತ ಇಲ್ಲಿರುವದು ॥ 158


ಇನ್ನು ಮುಂದಿನ ಅಧ್ಯಾಯದಲಿ । ತಿಳಿದೀತು ಬಾಬಾ ಇರುವರಾವ ರೀತಿಯಲಿ ।
ಮಲಗುವರೆಲ್ಲಿ ಯಾವ ಸ್ಥಳದಲ್ಲಿ । ಚಿತ್ತವಿಟ್ಟದನು ಆಲಿಸಿರಿ ॥ 159


ಹೇಮಾಡ ಸಾಯಿ ಪದದಲಿ ಶರಣ । ಶ್ರೋತೃಗಳು ಆದರದಿ ಮಾಡಿದರೆ ಮನನ ।
ನಡೆದ ಕಥೆಯ ನಿಧಿಧ್ಯಾಸನ । ಕೃತಕಲ್ಯಾಣರಾದೀರಿ ॥ 160

ಭಕ್ತ ಹೇಮಾಡ ಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ನವಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಸರ್ವಲೋಕ ಹಿತರತನು । ಬ್ರಹ್ಮರೂಪದಲಿ ನಿತ್ಯಸ್ಥಿತನು ।
ಅವಿರತ ಸ್ಮರಿಸಿರಿ ಆವನನು । ಪ್ರೇಮಭರಿತ ಅಂತರಂಗದಿಂದ ॥ 1

ಯಾರ ಸ್ಮರಣೆ ಮಾತ್ರದಿಂದ । ಬಿಡುಗಡೆ ಜನ್ಮಮರಣಗಳ ತೊಡಕಿನಿಂದ ।
ಸಾಧನಗಳಲೇ ಸಾಧನಶ್ರೇಷ್ಠ ಆದರಿಂದ । ಒಂದು ಕಪರ್ದಿಕದ ಖರ್ಚಿಲ್ಲ ॥ 2

ಅಲ್ಪ ಪ್ರಯಾಸದಿಂದ ಅನಲ್ಪ ಫಲ । ಅನಾಯಾಸದೆ ದೊರೆಯುವದೆಲ್ಲ ।
ಇಂದ್ರಿಯಗಳಿರುವಾಗಲೇ ಅವಿಕಲ । ಕ್ಷಣಕ್ಷಣವೂ ಸಾಧನಕೆ ತೊಡಗಬೇಕು ॥ 3

ಇತರ ದೇವರೆಲ್ಲ ಮಾಯಿಕರು । ಗುರುವೇ ಒಬ್ಬ ಶಾಶ್ವತ ದೇವರು ।
'ಗೆರೆಯ ಮೇಲೆ ಗೂಟ ಜಡೆಯುವವರು' । ಚರಣದಲಿ ವಿಶ್ವಾಸವಿಟ್ಟು ನೋಡಬೇಕು ॥ 4

ನ್ಯಾಯಮಿಮಾಂಸೆಗಳ ಜ್ಞಾನ । ಬೇಕಿಲ್ಲ ಬೇರೆ ಯತ್ನ ।
ಮಾಡಲು ಚೊಕ್ಕ ಗುರು ಸೇವೆಯನ್ನು ಸಂಸಾರದ ತಾಪತ್ರಯ ಹರಿಯುವದು ॥ 5

ಅಧಿಭೂತ ಮತ್ತು ಆಧ್ಯಾತ್ಮಿಕ । ಮೂರನೆಯ ದುಃಖವು ಅಧಿ ದೈವಿಕ ।
ಹೋಗುವರು ದಾಟಿ ಭಕ್ತರು ಭಾವಿಕ । ಸದ್ಗುರುವೇ ಅಂಬಿಗನಾಗಿರಲು ॥ 6

ತೇಲಲು ಲೌಕಿಕ ಸಾಗರದಲಿ । ವಿಶ್ವಾಸವಿರಬೇಕು ಅಂಬಿಗನಲಿ ।
ಅದರಂತೆ ಇರಬೇಕು ಗುರುವಿನಲಿ । ಅವನೇ ಭವಸಾಗರವ ದಾಟಿಸುವ ॥ 7

ನೋಡಿ ಭಕ್ತರ ಭಾವ ಭಕ್ತಿ । ಕರತಲಗತ ಮಾಡುವ ಸಂವಿತ್ತಿ ।
'ಆನಂದ ಲಕ್ಷಣ' ಮೋಕ್ಷ ಪ್ರಾಪ್ತಿ । ಕೈಗೆ ಕೊಡುವ ಲೀಲೆಯಿಂದ ॥ 8

ಯಾರ ದರ್ಶನದಿಂದ ಹರಿದು ಹೃದಯ ಗ್ರಂಥಿಗಳು । ಎಲ್ಲ ವಿಷಯ ನಿವೃತ್ತಿಯಾಗಲು ।
ಕ್ಷಯಿಸುವವು ಸಂಚಿತ ಕರ್ಮಗಳು । ಅಂಥವನ ಚರಿತೆಯ ಹಾಡುವಾ ॥ 9

ಅಧ್ಯಾಯ ಎಂಟರಲಿ ಆಯಿತು ಕಥನ । ನರಜನ್ಮದ ಪ್ರಯೋಜನ ।
ಒಂಭತ್ತನೆಯದರಲಿ ಭಿಕ್ಷಾವೃತಿಯ ಗಹನ । ಗುಣವರ್ಣನೆ ಕೇಳಿದಿರಿ ॥ 10

ಬಾಯಜಾಬಯಿಯ ರೊಟ್ಟಿ ಪಲ್ಯ । ಖುಶಾಲಚಂದನ ಸಮಾಚಾರವೆಲ್ಲ ।
ಮ್ಹಾಳಸಾಪತಿ ತಾತ್ಯಾರ ಶಯನ ಪ್ರಕಾರಗಳ । ಕಿವಿಗಿಂಪಾದವುಗಳ ವರ್ಣನೆ ಮಾಡಲಾಯಿತು ॥ 11

ಇನ್ನು ಶ್ರೋತೃಗಳಾಗಿ ಸಾವಧಾನ । ಕೇಳಿರಿ ಬಾಬಾರ ಮುಂದಿನ ಚರಿತೆಯನ ।
ಹೇಗಿರುತಿದ್ದರವರು ಎಲ್ಲಿ ಅವರ ಶಯನ । ಅಲಕ್ಷ್ಯ ವಿಚರಣ ಅವರದು ॥ 12

ಎಂಥ ಲೌಕಿಕ ಅವರದಿರುತ । ಹಿಂದುಯವನರೀರ್ವರಗೂ ತಾತ ।
ಹುಲಿಕುರಿಗಳಗೂ ವಿಶ್ವಾಸದ ಆಶ್ರಿತ । ನಿಃಶಂಕ ಪ್ರೀತಿಯಲಿ ವಿಹರಿಸುವರು ॥ 13

ಹೊಟ್ಟೆ ಬಟ್ಟೆಗಳ ಕಥೆ ಮುಗಿಯಿತು । ಇನ್ನು ಅವರು ಇರುವ ರೀತಿಯನು ಮತ್ತು ।
ಎಲ್ಲಿ ಮಲಗುತಿದ್ದರು ಯಾವ ಸ್ಥಳದಲಿದ ಕುರಿತು । ಕೇಳಬೇಕು ಶ್ರೋತೃಗಳು ಆದರದಲಿ ॥ 14

ಹಲಿಗೆಯೊಂದು ನಾಲ್ಕು ಮೊಳ ಉದ್ದ । ಒಂದೇ ಒಂದು ಗೇಣು ಅಗಲದ ।
ಎರಡೂ ತುದಿಗಳಿಗೆ ಚಿಂದಿ ಕಟ್ಟಿದ । ಆದರಿಂದ ಅದನು ಉಯ್ಯಾಲೆಯಂತೆ ತೊಲೆಗೆ ಕಟ್ಟಿತ್ತು ॥ 15

ಇಂಥ ಹಲಿಗೆಯ ಮೇಲೆ ಬಾಬಾ ಮಲಗಲು । ಕಾಲ್ದೆಸೆ ತಲಿದೆಸೆಗೆ ಉರಿವ ಹಣತೆಗಳು ।
ಅಲಕ್ಷ್ಯಗತಿಯ ಚಲನೆವಲನೆಗಳು । ಅದ ಹತ್ತಿ ಇಳಿಯುವದನು ಯಾರೂ ಕಾಣರು ॥ 16

ತಲೆಬಾಗಿಸಿ ಆದರ ಮೇಲೆ ಕುಳಿತಿರುವರು । ಇಲ್ಲವೇ ಅಲ್ಲಿ ನಿದ್ರಿಸುತ್ತಿರುವರು ।
ಆದರೆ ಯಾವಾಗ ಏರುವರು ಇಳಿಯುವರು । ಅದ ಮಾತ್ರ ಯಾರೂ ಅರಿಯರು ॥17

ಹಲಿಗೆ ಕಟ್ಟಿದ ಚಿಂದಿಗಳೆಂಥವು । ಅವರ ತೂಕವನ್ಹೇಗೆ ತಡೆಯುವವು ।
ಹತ್ತಿರ ಮಹಾಸಿದ್ಧಿಗಳಿರುವವು । ಹೆಸರಿಗೆ ಮಾತ್ರ ಆ ಹಲಿಗೆ ॥ 18

ಅತಿ ಸೂಕ್ಷ್ಮ ಕಣವಿದ್ದರೂ ಚುಚ್ಚುವದು ಕಣ್ಣಲ್ಲಿ । ಅಣಿಮಾವಂತನು ಸುಖದಿಂದ ಅಡಗುವನಲ್ಲಿ ।
ನೊಣ, ಹುಳು, ಇರುವೆಗಳ ರೂಪದಲಿ । ಸಂಚಾರ ಸುಲಭವು ಬಾಬಾರಿಗೆ ॥ 19

ಅಣಿಮಾ ಇರಲವರ ಮನೆಯ ಆಳು । ತಡವೇನು ಅವರಿಗೆ ನೊಣವಾಗಲು ।
ಆಕಾಶದಲಿ ಅಂತರದಿ ಇರಬರಲು । ಆ ಹಲಿಗೆಯೊಂದು ನಿಮಿತ್ತವಷ್ಟೇ ॥ 20

ಅಣಿಮಾ-ಮಹಿಮಾ-ಲಘುಮಾದಿಗಳು । ಅಷ್ಟಸಿದ್ಧಿ ನವನಿಧಿಗಳು ।
ಬದ್ಧಾಂಜಲಿಯಾಗಿ ಬಳಿ ನಿಂತಿರಲು । ಹೆಸರಿಗಷ್ಟೇ ಆ ಹಲಿಗೆ ॥ 21

ಹುಳು ಹುಪ್ಪಡಿ ಶ್ವಾನ ಸೂಕರ । ಪಶು ಪಕ್ಷಿ ಮನುಷ್ಯರೆಲ್ಲರ ।
ಬಡವ ಬಲ್ಲಿದ ಚಿಕ್ಕ ದೊಡ್ಡವರ । ಎಲ್ಲರ ಸಮನಾಗಿ ಕಾಣುವನವ ॥ 22

ನೋಡಲು ಶಿರಡಿಯ ನಿವಾಸಿಯವ । ಮೂರುವರೆ ಕೈಯ ದೇಹದವ ।
ಆದರೂ ಎಲ್ಲರ ಹೃದಯ ನಿವಾಸಿಯವ । ಪುಣ್ಯರಾಶಿ ಆ ಮಹಾರಾಜ ॥ 23

ಅಂತರಂಗದಲಿ ನಿಃಸಂಗ ಉದಾಸ । ಹೊರಗೆ ಲೋಕಸಂಗ್ರಹದ ಹರುಷ ।
ಅಂತರದಲ್ಲಿದ್ದರೂ ನಿರಾಶೆ । ಹೊರಗೆ ಪಾಶ ಭಕ್ತರದು ॥ 24

ಅಂತರಂಗದಲಿ ಅತ್ಯಂತ ನಿಷ್ಕಾಮ । ಬಾಹ್ಯದಲಿ ಭಕ್ತರಿಗೆ ಅತಿ ಸಕಾಮ ।
ಒಳಗೆ ನಿಜಶಾಂತಿಯ ಧಾಮ । ಹೊರಗೆ ಪ್ರಕಾಮ ಸಂತಪ್ತ ॥ 25

ಅಂತರದಿ ಪರಬ್ರಹ್ಮಸ್ಥಿತಿ । ಹೊರಗೆ ತೋರುವದು ಪೈಶಾಚ್ಯ ವೃತ್ತಿ ।
ಅಂತರದಿ ಅದ್ವೈತ ಪ್ರೀತಿ । ಹೊರಗೆ ವಿಶ್ವದ ತೊಡಕೆಲ್ಲ ॥ 26

ಒಮ್ಮೊಮ್ಮೆ ಪ್ರೇಮಭಾವದಿಂದಿರುವರು । ಒಮ್ಮೊಮ್ಮೆ ಕೈಲಿ ಕಲ್ಲು ಹಿಡಿದು ಬೆನ್ನಟ್ಟುವರು ।
ಒಮ್ಮೊಮ್ಮೆ ಬೈಗುಳ ಮಳೆಗರೆವರು । ಒಮ್ಮೆ ಪ್ರೀತಿಯಲಪ್ಪಿಕೊಳ್ಳುವರು ॥ 27

ಒಮ್ಮೆ ಶಾಂತದಾಂತ ಉಪರತ । ತಿತಿಕ್ಷೂ ಯಾವಾಗಲೂ ಸಮಾಹಿತ ।
ಆತ್ಮಸ್ಥಿತ ಮತ್ತು ಆತ್ಮರತ । ಪ್ರಸನ್ನ ಚಿತ್ತನು ಭಕ್ತರಿಗೆ ॥ 28

ಏಕಾಸನದಲ್ಲೇ ನಿತ್ಯಲೀನ । ಇರದವನಿಗೆ ಗಮನಾಗಮನ ।
ದಂಡಕಾಷ್ಠವೇ ದಂಡನಿಧಾನ । ತೋಷ್ಣ್ಯವಸ್ಥಾನ ನಿಶ್ಚಿಂತ ॥ 29

ಅಲ್ಲ ಕೀರ್ತಿ ವಿತ್ತೇಷಣೆಗೆ । ಭಿಕ್ಷಾಚರ್ಯವು ಪ್ರಾಣರಕ್ಷಣೆಗೆ ।
ಇಂಥ ಯೋಗಾರೋಹಣೆ ಮಾಡಿದವಗೆ । ಅದೇ ಕಾಲಕ್ರಮಣ ಅವಗೆ ॥ 30

ಪ್ರತ್ಯಕ್ಷ ಯತಿಯವ ಸನ್ಯಾಸವೇಷದಲಿ । ಸಟಕಾ ಅದೇ ದಂಡ ಕೈಯಲ್ಲಿ ।
'ಅಲ್ಲಾ-ಮಾಲಿಕ್' ಮಾತು ಬಾಯಿಯಲಿ । ಅಖಂಡ ಭಕ್ತ ಪ್ರೀತಿಯು ॥ 31

ಹೀಗೆ ಸಾಯಿಯ ಸಗುಣಮೂರ್ತಿ । ಮನುಷ್ಯ ರೂಪದಲಿ ಅಭಿವ್ಯಕ್ತಿ ।
ಪೂರ್ವ ಪುಣ್ಯಾರ್ಜಿತವೇ ಈ ಸಂಪತ್ತಿ । ಅಕಸ್ಮಾತ ಕೈಗೆಟುಕಿದೆ ॥ 32

ಅವರ ಮನುಷ್ಯರೆಂದು ತಿಳಿದವರು । ಆ ಮಂದಮತಿಗಳು ಮಂದಭಾಗ್ಯರು ।
ವಿಚಿತ್ರ ದೈವಗತಿ ಪಡೆದವರು । ಅವರಿಗಿದು ಪ್ರಾಪ್ತವಾದೀತೇ ॥ 33

ಸಾಯಿ ಆತ್ಮಬೋಧದ ಸಂಸ್ಥಾನ । ಸಾಯಿ ಆನಂದ ವಿಗ್ರಹಪೂರ್ಣ ।
ಅವರ ಬೆನ್ನು ಹಿಡಿಯಲು ತೂರ್ಣ । ಭವಾರ್ಣವವ ಸಂಪೂರ್ಣ ದಾಟಿಸುವ ॥ 34

ನಿಜವಾಗಿಯೂ ಯಾವುದು ಅಪಾರ ಅನಂತ । ತುಂಬಿದೆ ಆ ಬ್ರಹ್ಮ ಸ್ತಂಭ ಪರ್ಯಂತ ।
ಹೀಗಿರುವ ಈ ನಿರಂತರ ಅಭಿನ್ನ ಅತ್ಯಂತ । ಬಾಬಾ ಮೂರ್ತಿಮಂತ ಅದಾಗಿರುವರು ॥ 35

ಕಲಿಯುಗದ ಕಾಲಪ್ರಸಾರ । ನಾಲ್ಕು ಲಕ್ಷ ಮೂವತ್ತೆರಡು ಸಾವಿರ ।
ಸ್ಥೂಲಮಾನದಲಾಗದು ಐದು ಸಾವಿರ । ಬಾಬಾರ ಅವತಾರವಾಯಿತು ॥ 36

ಇಲ್ಲಿ ಶ್ರೋತೃಗಳಿಗೆ ಶಂಕೆ ಬರುವದು । ಜನ್ಮತಿಥಿಯೇ ಗೊತ್ತಿರದು ।
ಯಾವ ಆಧಾರದಲಿ ಇದ ನಿಶ್ಚಯಿಸಿದುದು । ಅದಕೆ ಲಕ್ಷವಿಟ್ಟು ಕೇಳಿರಿ ॥ 37

ಆನಿರ್ವಾಣ ಕೃತ ಸಂಕಲ್ಪದಿಂದ । ಶಿರಡಿ ಕ್ಷೇತ್ರ ನಿವಾಸಿಯಾದ ।
ಅರವತ್ತು ಸಂವತ್ಸರಗಳ ಕಳೆದ । ಕ್ಷೇತ್ರ ಸನ್ಯಾಸಿ ವೃತ್ತಿಯಿಂದ ॥ 38

ಹದಿನಾರು ವರ್ಷ ವಯಸ್ಸಿನಲ್ಲಿ । ಪ್ರಕಟರಾದರು ಬಾಬಾ ಶಿರಡಿಯಲ್ಲಿ ।
ಮೂರು ವರ್ಷಗಳು ಆ ಸಮಯದಲ್ಲಿ । ಇಲ್ಲಿ ವಾಸವಾಗಿದ್ದರು ॥ 39

ಆಮೇಲೆ ಎಲ್ಲಿಗೋ ಹೋದವರು । ದೂರ ನಿಜಾಮಶಾಹಿಯಲಿ ಕಂಡರು ।
ಮದುವೆ ದಿಬ್ಬಣದೊಂದಿಗೆ ಬಂದರು । ಶಿರಡಿಯಲುಳಿದರು ಕೊನೆತನಕ ॥ 40

ವಯಸ್ಸಿತ್ತಾಗ ಇಪ್ಪತ್ತು ವರ್ಷ । ಅಲ್ಲಿಂದ ಅಖಂಡ ಶಿರಡಿಯವಾಸ ।
ಅಲ್ಲಿಯೇ ಅರವತ್ತು ವರ್ಷದ ನಿವಾಸ । ಎಲ್ಲರಿಗೂ ಇದ ಬಲ್ಲರು ॥ 41

ಶಕೆ ಹದಿನೆಂಟು ನೂರಾ ನಲವತ್ತು । ಆಶ್ವೀನ ಶುದ್ಧ ದಶಮಿ ಆ ಹೊತ್ತು ।
ವಿಜಯಾದಶಮಿಯ ಸುಮೂರ್ತವಿತ್ತು । ಬಾಬಾ ನಿಜಧಾಮಕ್ಕೆತೆರಳಿದರು ॥ 42

ಈ ರೀತಿ ಎಂಭತ್ತು ವರ್ಷ ವಯಸ್ಸವರಿಗೆ । ಸ್ಥೂಲಮಾನದಿಂದ ನಿಶ್ಚಯವಾಗೆ ।
ಹದಿನೇಳು ನೂರಾ ಅರವತ್ತು ಶಕೆಗೆ । ಬಾಬಾರ ಜನ್ಮ ನಿರ್ಣಯವಾಯಿತು ॥ 43

ಕಾಲದ ತಲೆಯ ಮೇಲೆ ಕಾಲಿಡುವ । ಅಂಥ ಮಹಾತ್ಮನ ಆಯುಷ್ಯವ ।
ನಿಶ್ಚಯವಾಗಿ ಹೇಳುವ । ಸಾಹಸ ಮಾಡುವದು ಕಷ್ಟವೇ ॥ 44

ಮಹಾತ್ಮರು ನಿತ್ಯ ಸ್ವಸ್ಥಾನದಲಿ ಸ್ಥಿತರು । ಜನ್ಮ ಮರಣ ವಿರಹಿತರು ।
ಉದಯಾಸ್ತಗಳಿಲ್ಲದ ಸೂರ್ಯನಂತವರು । ಅಚಲರು ಸ್ವಸ್ಥರು ಯಾವಾಗಲೂ ॥ 45

ಶಕೆ ಹದಿನಾರು ನೂರಾ ಮೂರು । ಆಗ ರಾಮದಾಸರು ಸಮಾಧಿಸ್ತರಾದರು ।
ಉದಯಕ್ಕೆ ಬಂದರು ಸಾಯಿಯವರು । ಎರಡು ಶತಕಗಳು ಕಳೆಯುವ ಮೊದಲೇ ॥ 46

ಭರತಭೂಮಿಯಾಯಿತು ಯವನಾಕ್ರಾಂತ । ಹಿಂದೂ ನೃಪ ಪಾದಾಕ್ರಾಂತ ।
ಭಕ್ತಿ ಮಾರ್ಗವಾಯಿತು ಲುಪ್ತ । ಧರ್ಮರಹಿತ ಜನರಾದರು ॥ 47

ಆಗ ರಾಮದಾಸರು ಮುಂದಾದರು । ಶಿವರಾಯನನು ಕೈಗೆ ಹಿಡಿದರು ।
ಯವನರಿಂದವರು ರಕ್ಷಿಸಿದರು । ಗೋವು ಮತ್ತು ಬ್ರಾಹ್ಮಣರನು ॥ 48

ಇನ್ನೂ ಎರಡು ಶತಕಗಳೂ ಕಳೆಯದಿರಲು । ಮತ್ತೆ ಪರಿಸ್ಥಿತಿ ಹದಗೆಡಲು ।
ಹಿಂದೂ ಅವಿಂಧರಲಿ ಇಬ್ಬಣಗಳಾಗಲು । ಅದನು ಬಾಬಾ ಮುರಿದರು ॥ 49

ರಾಮರಹೀಮರಿಬ್ಬರೂ ಒಂದು । ಒಂದಿಷ್ಟೂ ಭೇದ ಅವರಲ್ಲಿರದು ।
ನಡತೆಯಲೇಕೆ ದೂರಾಗುವದು । ಭಕ್ತಿ ಮಾರ್ಗವನೇಕೆ ಹಿಡಿಯಬೇಕು ॥ 50

ಮಕ್ಕಳೇ ನೀವೆಂಥ ಮೂಢರಾದಿರಿ । ಹಿಂದೂ ಯವನರು ಒಂದಾಗಿರಿ ।
ದೃಢವಾದ ಸುವಿಚಾರಾರೂಢರಾಗಿರಿ । ಅದರಿಂದಲೇ ಆಚೆ ದಡ ಸೇರುವಿರಿ ॥ 51

ವಾದ ವಿವಾದಗಳು ಒಳ್ಳೆಯದಲ್ಲ । ಯಾರು ಯಾರನ್ನೂ ಸರಿಗಟ್ಟಬೇಕಿಲ್ಲ ।
ಶ್ರೀ ಹರಿಯು ರಕ್ಷಿಸುವ ನಿಮನೆಲ್ಲ । ನಿತ್ಯನಿಜಹಿತ ತಿಳಿದು ವರ್ತಿಸಿರಿ ॥ 52

ಯೋಗ ಯಾಗ ತಪ ಜ್ಞಾನ । ಇವುಗಳೆಲ್ಲ ಹರಿ ಪ್ರಾಪ್ತಿಯ ಸಾಧನ ।
ಇವೆಲ್ಲ ಇರಲೂ ಹರಿವಿಹೀನ । ಅಂಥವನ ಜನ್ಮ ನಿರರ್ಥವು ॥ 53

ಯಾರೊಬ್ಬರು ಅಪಕಾರ ಮಾಡಿದರೂ । ಪ್ರತಿಕಾರವನೆಂದೂ ಮಾಡದಿರು ।
ಸಾಧ್ಯವಿದ್ದರೆ ಉಪಕಾರ ಮಾಡುತಿರು । ಅವರ ಉಪದೇಶದ ತಿರುಳಿದು ॥ 54

ಸ್ವಾರ್ಥಕ್ಕೆ ಅಂತೆಯೇ ಪರಮಾರ್ಥಕ್ಕೆ । ಉಪದೇಶವಿರುವದು ಹಿತಾವಹ ಎಲ್ಲಕ್ಕೆ ।
ಸುಲಭಮಾರ್ಗವಿದು ಎಲ್ಲಕ್ಕೆ । ಉಚ್ಚ ನೀಚ ಸ್ತ್ರೀ ಶೂದ್ರರಿಗೆ ॥ 55

ಸ್ವಪ್ನದಲ್ಲಿ ಕಂಡ ರಾಜ ವೈಭವವೆಲ್ಲ । ಎಚ್ಚರಾದಾಗ ಇರುವದಿಲ್ಲ ।
ಅದರಂತೆ ಈ ಸಂಸಾರವೆಲ್ಲ । ಬರಿ ಭಾವನೆ ಮಾತ್ರ ಅದರದು ॥ 56

ದೇಹಾದಿ ಸುಖ ದುಃಖ ಮಿಥ್ಯತ್ವ । ಇದೇ ಯಾರ ಪ್ರಪಂಚ ತತ್ವ ।
ನಿಜಾನುಸಂಧಾನದಿಂದ ಸ್ವಪ್ನ ಭ್ರಮತ್ವವ । ಕಳೆದು ಮುಕ್ತಿತ್ವ ಸಾಧಿಸಿದರು ॥ 57

ಶಿಷ್ಯನ ಬದ್ಧತೆಯನ್ನು ಕಂಡು । ಮನದಿ ಬಲು ಕಳವಳಗೊಂಡು ।
ದೇಹಾತೀತತೆಯ ಹೇಗೆ ಪಡೆದಾನೆಂದು । ಹಗಲಿರುಳು ಚಿಂತೆ ಅವರಿಗೆ ॥ 58

ಅಹಂಬ್ರಹ್ಮಾಕಾರ ವೃತ್ತಿ । ಅಖಂಡಾನಂದದ ಮೂರ್ತಿ ।
ನಿರ್ವಿಕಲ್ಪ ಚಿತ್ತಸ್ಥಿತಿ । ಬಂದೀತು ನಿವೃತ್ತಿಯ ವಿಶ್ರಾಂತಿ ॥ 59

ತಾಳ ವೀಣೆಗಳ ಹಿಡಿದು । ಮನೆಮನೆಗಳಿಗೆ ತಿರುಗುವದು ।
ದೀನರಾಗಿ ಕೈ ಒಡ್ಡುವದು । ಬರುಹೋಗುವರೆದುರಿಗೆ ಇದು ಗೊತ್ತಿಲ್ಲ ॥ 60

ಇರುವರಿಂಥವರು ಬಹುಜನ ಗುರು । ಹಿಡಿಹಿಡಿದು ಶಿಷ್ಯರ ಮಾಡುವರು ।
ಕಿವಿಮಂತ್ರವನ್ನು ಕೊಡುವರು । ಅವರ ವಿತ್ತಾರ್ಥಗಳ ಹೊಡೆದು ॥ 61

ಶಿಷ್ಯನಿಗೆ ನೀಡುವದು ಧರ್ಮಶಿಕ್ಷಣ । ತಾನು ಮಾಡುವದು ಅಧರ್ಮಾಚರಣ ।
ಅಂಥವರಿಂದೆಂಥ ಭಾವತರಣ । ಜನ್ಮ ಮರಣಗಳು ತಪ್ಪಿಯಾವು ॥ 62

ತಮ್ಮ ಧಾರ್ಮಿಕತ್ವ ಪ್ರಸಿದ್ಧವಾಗಬೇಕು । ಅದರ ಧ್ವಜಗಳು ಜಗದಿ ಹಾರಾಡಬೇಕು ।
ಮನದಿ ಇಂಥ ಭಾವನೆಯು ಎಷ್ಟಕ್ಕೂ । ಇರದಂಥ ಮೂರ್ತಿಯದು ಸಾಯಿಯದು ॥ 63

ದೇಹಾಭಿಮಾನಕ್ಕೆ ಇಲ್ಲ ಎಡೆ । ಅತ್ಯಂತ ಪ್ರೀತಿಯು ಶಿಷ್ಯರೆಡೆ ।
ಯಾವಾಗಲೂ ಎಲ್ಲಿ ಪ್ರವೃತ್ತಿ ಇದೇ । ಅಂಥ ಈ ಮೂರ್ತಿ ಸಾಯಿಯದು ॥ 64

ನಿಯತ ಮತ್ತು ಅನಿಯತನೆಂದು । ಗುರುಗಳಲಿ ಎರಡು ಪ್ರಕಾರವಿರುವದು ।
ಕಾರ್ಯ ನಿರ್ಧಾರ ಒಬ್ಬರದು । ಶ್ರೋತೃಗಳಿಗೆ ಸ್ಪಷ್ಟ ಪಡಿಸುವೆ ॥ 65

ದೈವೀ ಸಂಪತ್ತನ್ನು ಪರಿಪಕ್ವಗೊಳಿಸುವದು । ಅಂತಃಕರಣದಿಂದ ನಿರ್ಮಲವಾಗುವದು ।
ಇಷ್ಟೇ ಕೊಡುಗೆ ಅನಿಯತ ಗುರುವಿನದು । ಮೋಕ್ಷದ ದಾರಿಯ ತೋರುವದು ॥ 66

ನಿಯತ ಗುರುವಿನೊಡನಾಗಲು ಸಖ್ಯ । ದ್ವೈತ ಕಳೆದು ಆಗುವದು ಐಕ್ಯ ।
'ತತ್ವಮಸಿ' ಮಹಾವಾಕ್ಯ । ಸಾಕ್ಷಾತ ಅದನು ತೋರುವ ॥ 67

ಚರಾಚರದಲಿ ತುಂಬಿರುವ ಗುರು । ಭಕ್ತರಿಗಾಗಿ ಸಾಕಾರರಾಗುವರು ।
ಅವತಾರಕಾರ್ಯವು ಮುಗಿಯಲಿವರು । ನಿಜಾವತಾರವ ಮುಗಿಸುವರು ॥ 68

ಸಾಯಿ ಇದ್ದರು ಈ ಎರಡನೆಯ ಗುಂಪಿನಲಿ । ಅವರ ಚರಿತ್ರೆಯ ನಾನೇನು ವರ್ಣಿಸಲಿ ।
ಬುದ್ಧಿಯನೀಯುವರು ಅವರಾವ ರೀತಿಯಲಿ । ಅಂತೆಯೇ ಈ ಲೇಖನವಾಗುವದು ॥ 69

ಲೌಕಿಕದಲಿ ವಿದ್ಯೆ ನೀಡುವ ಗುರುಗಳು ಅನೇಕರು । ಸ್ವರೂಪದಲಿ ನಿಲಿಸುವವನೇ ಸದ್ಗುರು ।
ಭವವ ದಾಟಿಸುವವರೇ ಸಮರ್ಥರು । ಅಗೋಚರ ಅವರ ಮಹಿಮೆಯು ॥ 70

ಯಾರೇ ಹೋಗಲಿ ಪಡೆಯಲು ದರ್ಶನ । ಅವರ ಭೂತ ಭವಿಷ್ಯ ವರ್ತಮಾನ ।
ಕೇಳದೆಯೇ ಸಾಯಿ ಮಾಡುವರು ನಿವೇದನ । ಅವರ ಕುಂದು ಕೊರತೆ ಸಂಪೂರ್ಣ ॥ 71

ಬ್ರಹ್ಮಭಾವವನಿಟ್ಟು ಭೂತ ಮಾತ್ರದಲಿ । ನೋಡುವವರಾರೋ ಸರ್ವತ್ರದಲ್ಲಿ ।
ಸರಿಸಮವಾಗಿರುವರು ಅರಿ ಮಿತ್ರರಲ್ಲಿ । ತಿಲಮಾತ್ರ ಭೇದವನರಿಯರು ॥ 72

ನಿರಪೇಕ್ಷ ಮತ್ತು ಸಮದರ್ಶಿಗಳು । ಅಪಕಾರಿಗಳ ಮೇಲೂ ಅಮೃತ ವರ್ಷಿಸಲು ।
ಸಮಚಿತ್ತರು ಉತ್ಕರ್ಷ-ಅಪಕರ್ಷಗಳಲ್ಲೂ ವಿಕಲ್ಪವು ಅವರನು ಸ್ಪರ್ಶಿಸದು ॥ 73

ಈ ನಶ್ವರ ದೇಹವನು ಹೊಂದಿದ್ದರೂ । ದೇಹ ಗೇಹದೊಳಗೆ ಅವರು ತೊಡಗರು ।
ನೋಡಲು ದೇಹಿಗಳಾದರೂ ಅಂತರಂಗದಿ ವಿದೇಹಿಗಳವರು । ಅಂಥವರು ಇದೇ ದೇಹದಲಿ ನಿರ್ಮುಕ್ತರು ॥ 74

ಧನ್ಯರು ಶಿರಡಿಯ ಜನ । ಸಾಯಿಯೇ ಆಗಿರುವ ಅವರ ದೇವತಾರ್ಚನ ।
ಮಾಡುತ್ತ ಅಶನ-ಭೋಜನ-ಶಯನ । ಅಖಂಡ ಚಿಂತನ ಸಾಯಿಯದು ॥ 75

ಹೊಲದಲ್ಲಿ ಹಿತ್ತಲಲಿ ಕೆಲಸ ಮಾಡುತ್ತ । ಕುಟ್ಟುತ್ತ ಬೀಸುತ್ತ ಮೊಸರು ಕಡೆಯುತ್ತ ।
ಬಾಬಾರ ಮಹಿಮೆಯನ್ನು ಹಾಡುತ್ತ । ಇರುವರೇ ಧನ್ಯರು ॥ 76

ಕೂಡುತ್ತ ಉಣ್ಣುತ್ತ ಮಲಗುತ್ತ । ಬಾಬಾರ ಹೆಸರನ್ನು ಅಕ್ಷಯ ಜಪಿಸುತ್ತ ।
ಬಾಬಾರೇ ದೇವರೆನ್ನುತ್ತ । ಮತ್ತೊಬ್ಬ ದೇವರವರಿಗಿಲ್ಲ ॥ 77

ಏನವರ ಬಾಬಾರ ಪ್ರೀತಿಯು । ಏನವರ ಪ್ರೀತಿಯ ಸವಿಯು ।
ನಿರ್ಮಳ ಪ್ರೇಮದ್ದೇ ಆಗುವದು ಕವಿತೆಯು । ಅವರ ಕವಿತ್ವದಲಿ ವಿದ್ವತ್ತೇ ಬೇಕಿಲ್ಲ ॥ 78

ಸಾದಾ ಸರಳ ಭಾಷೆ ನಿಜವದು । ಎಳ್ಳು ಕಾಳಷ್ಟೂ ವಿದ್ಯೆ ಇರದು ।
ಅದರಿಂದ ಹೊರಟ ಕವಿತ್ವ ಮಿಂಚುವದು । ಜಾಣರೂ ತಲೆದೂಗಬೇಕು ॥ 79

ನಿಜವಾದ ಪ್ರೀತಿಯ ಆವಿರ್ಭಾವನ । ನಿಜದಲಿ ಅದಕೇ ಎನಬೇಕು ಕವನ ।
ಬಾಬಾರ ಈ ವಾಣಿಗಳಲಿ ಅದನ । ಶ್ರೋತೃಗಳು ಕಂಡುಕೊಳ್ಳಬೇಕು ॥ 80

ಇವುಗಳ ಸಂಗ್ರಹ ಸಿಗಬಹುದು । ಶ್ರೋತೃಗಳ ಶ್ರವಣೇಚ್ಛೆ ಪೂರೈಸಬಹುದು ।
ಕವನದ್ದೇ ಅಧ್ಯಾಯವಾಗಬಹುದು । ಸಾಯಿಬಾಬಾ ಅದನು ಇಚ್ಛಿಸಿದರೆ ॥ 81

ನಿರಾಕಾರವು ಭಕ್ತರ ಕೃಪೆಗಾಗಿ । ಶಿರಡಿಯಲಿ ಪ್ರಕಟಿಸಿತು ಸಾಯಿ ರೂಪವಾಗಿ ।
ದೇಹಾಹಂಕಾರ ವಿಕಾರಗಳಿಂದ ದೂರಾಗಿ । ಭಕ್ತಿ ಸ್ವರೂಪದಲಿ ಗುರುತಿಸಬೇಕು ॥ 82

ಇಲ್ಲವೇ ಭಕ್ತರ ಪುಣ್ಯ ಫಲಿಸಿತು । ಪ್ರಾಪ್ತ ಕಾಲದವರೆಗೆ ಒಳಗಿದ್ದಿತು ।
ಸಾಯಿ ರೂಪದಲಿ ಪೂರ್ಣ ಅಂಕುರಿಸಿತು । ಹಣ್ಣಾಯಿತದಕೆ ಶಿರಡಿಯಲಿ ॥ 83

ಅನಿರ್ವಾಚ್ಯಕ್ಕೆ ವಾಚೆಯೊಡೆಯಿತು । ಅಜನ್ಮನ ಜನ್ಮವಾಯಿತು ।
ಅಮೂರ್ತದ ಮೂರ್ತಿ ಘಟಿಸಿತು । ಕರುಣರಸವೇ ಹೆಪ್ಪುಗಟ್ಟಿದಂತೆ ॥ 84

ಯಶವಂತ ಮತ್ತು ಶ್ರೀಮಂತ । ವೈರಾಗ್ಯಶಾಲಿ ಜ್ಞಾನವಂತ ।
ಐಶ್ವರ್ಯ ಔದಾರ್ಯಮಂಡಿತ । ಷಡ್ಗುಣಾನ್ವಿತ ಮೂರ್ತಿಯಿದು ॥ 85

ವಿಲಕ್ಷಣ ಬಾಬಾರ ನಿಗ್ರಹ । ಸ್ವಯಂ ಇದ್ದರೂ ಅಪರಿಗ್ರಹ ।
ಅಮೂರ್ತರು ಇದ್ದರೂ ಧರಿಸಿದರು ವಿಗ್ರಹ । ಭಕ್ತಾನುಗ್ರಹದ ಕಾರಣಕೆ ॥ 86

ಅವರ ಕೃಪಾಭಾವವೆಂಥದು । ಭಕ್ತರ ಭಾವದಿ ಹಚ್ಚಿಕೊಳ್ಳುವದು ।
ಇಲ್ಲದಿದ್ದರೆ ಅವರ ಇರುವದು । ಯಾವ ದೇವರಿಗೆ ಸಿಗುತ್ತಿತ್ತು ॥ 87

ವಾಗ್ದೇವತೆ ನುಡಿಯಲು ಹಿಂಜರಿಯಬೇಕು । ಕೇಳಲು ಕಿವಿಗಳೇ ನಾಚಬೇಕು ।
ಅಂಥದನು ಸಾಯಿ ಬಾಬಾ ನುಡಿಯಬೇಕು । ಭಕ್ತರ ಕಲ್ಯಾಣ ಕಾರ್ಯಕ್ಕಾಗಿ ॥ 88

ಆ ಶಬ್ದಗಳ ಅನುವಾದ ಮಾಡುವದು । ಅದಕಿಂತ ಮೂಕರಾಗಿರುವದೇ ಒಳ್ಳೆಯದು ।
ಆದರೂ ಸರಿಯಲ್ಲ ಕರ್ತವ್ಯದಿ ತಪ್ಪುವದು । ಅದಕೆ ನುಡಿಯಬೇಕಾಯಿತು ॥ 89

ಭಕ್ತರ ಕರುಣೆಗಾಗಿ ಬಾಬಾರ ನುಡಿ । ನುಡಿಯಿತು ಬಲು ಲೀನತನದಿ ।
"ದಾಸಾನುದಾಸನಾಗಿರುವೆ ನಾ ನಿಮ್ಮ ಋಣದಿ । ಹೊರಟಿರುವೆ ನಿಮ್ಮ ದರುಶನಕೆ ॥ 90

ಇದು ಒಂದು ದೊಡ್ಡ ಕೃಪೆ ನಿಮ್ಮದು । ಅದರಿಂದ ನಿಮ್ಮ ಚರಣಗಳ ಕಂಡುದು ।
ಹುಳು ನಾ ನಿಮ್ಮ ಹೊಲಸಿನಲ್ಲಿಯದು । ಅದರಿಂದ ಈ ಸೃಷ್ಟಿಯಲಿ ಧನ್ಯ ನಾನು" ॥ 91

ಏನು ಬಾಬಾರ ಲೀನತೆಯಿದು । ನಮ್ರತನದ ಪ್ರೀತಿ ಎಷ್ಟದು ।
ಎಂಥ ಉಚ್ಚ ನಿರಭಿಮಾನತೆ ಇದು । ಶಾಲೀನತೆಯೂ ಇದರಂತೆಯೇ ॥ 92

ಬಾಬಾರು ಹೀಗೆ ನುಡಿದದ್ದನ್ನು । ಸತ್ಯವಿರುವದೆಂದೇ ಸಾದರ ಪಡಿಸಿದೆನು ।
ಯಾರಾದರೂ ಅನಬಹುದವರ ನಾ ಅನಾದರಿಸಿದೆನು । ಅದಕೆ ಶಿರಗೊಡ್ಡಿ ಬೇಡುವೆ ॥ 93

ನಾಲಿಗೆಗಾಗಿದ್ದೀತು ಮೈಲಿಗೆ । ಪಾಪ ಕಳೆಯಲು ಶ್ರವಣಗಳಿಗೆ ।
ಸಾಯಿ ನಾಮದ ಆವರ್ತನೆಗೆ । ಸುರು ಮಾಡಿದರೆ ದೋಷಗಳು ಪರಿಹಾರವಾಗುವವು ॥ 94

ಜನ್ಮಜನ್ಮಗಳ ನಮ್ಮ ತಪಕೆ । ಕೇವಲ ಸಾಯಿ ಕೃಪೆಯೇ ಫಲವದಕೆ ।
ತೃಷಾರ್ತರ ತೃಷೆ ಹಿಂಗುವುದಕೆ । ಶೀತಲ ಜಲದಂತೆ ಸುಖದಾಯಕ ॥ 95

ಜಿಹ್ವೆಯಿಂದ ರುಚಿ ನೋಡುವೆವು । ಎಂದು ಎಲ್ಲರೂ ತಿಳಿಯುವೆವು ।
ರುಚಿ ಕಂಡವರಿಗಿರದದರ ಅರಿವು । ರಸ ಸ್ಫೂರ್ತಿಯ ರಸನೆಯದಲ್ಲಿ ॥ 96

ವಿಷಯ ಸ್ಫೂರ್ತಿಯೇ ಇಲ್ಲದವನು । ಹೇಗೆ ವಿಷಯಗಳ ಸೇವಿಸುವನು ।
ಅವನೇನು ವಿಷಯದಲಿ ತೊಡಗುವನು । ವಿಷಯ ಸ್ಪರ್ಶವೇ ಇಲ್ಲದವನು ॥ 97

ನಯನ ದ್ವಾರದಿಂದ ಅವಲೋಕಿಸುವರು । ಯಾವ ಪದಾರ್ಥವು ಮುಂದೆ ಬಂದರೂ ।
ಆದರೂ ನೋಡಿದ್ದನ್ನೇ ಅರಿಯರು । ಅಲ್ಲಿ ಸ್ಫೂರ್ತಿಕಾರ್ಯ ಮಾಡದ್ದರಿಂದ ॥ 98

ಹೇಗೆ ಹನುಮಂತನ ಹುಟ್ಟುಡುಗೆ । ಕಂಡುದು ತಾಯಿ ಮತ್ತು ರಾಮ ಇಬ್ಬರಿಗೆ ।
ಅಂದಮೇಲವನ ಬ್ರಹ್ಮಚರ್ಯೆಗೆ । ತುಲನೆಯನಾರು ಮಾಡಬಲ್ಲರು ॥ 99

ಆಗಿಲ್ಲದಾಗ ಮಾತೆಗೇ ಲಿಂಗಾವಲೋಕನ । ಇತರರದಲ್ಲೇನು ಕಥನ ।
ಬಾಬಾರ ಬ್ರಹ್ಮಚರ್ಯವೂ ಬಲು ಕಠಿಣ । ಅಪೂರ್ವ ಪೂರ್ಣತ್ವ ಅವರದು ॥ 100

ಉಡುಗೆ ಲಂಗೋಟಿ ಕೌಪೀನ । ಲಿಂಗ ಅಜಾಗಲ ಸಮಾನ ।
ಕೇವಲ ಉಪಯೋಗ ಮೂತ್ರ ವಿಸರ್ಜನ । ಉಳಿದವಯವಗಳಲ್ಲೊಂದು ಅವಯವ ॥ 101

ಹೀಗೆ ದೇಹಸ್ಥಿತಿ ಬಾಬಾರದು । ಇಂದ್ರಿಯಗಳು ಕರ್ಮದಲ್ಲಿ ತೊಡಗಿದ್ದೂ ।
ಅದಕೆ ವಿಷಯ ಸ್ಫೂರ್ತಿ ಎಂಬುದು । ಲವಮಾತ್ರವೂ ಇರಲಾರದು ॥ 102

ಸತ್ವರಜ ತಮಾದಿ ಗುಣಗಳು । ಇಂದ್ರಿಯಗಳಿಗೇ ಅಂಟಿಕೊಂಡಿರಲು ।
ಲೌಕಿಕದಲ್ಲಿ ಅವುಗಳ ಕಾರ್ಯಗಳ । ಯಾರು ತಾನೇ ನಿಲ್ಲಿಸುವರು ॥ 103

ನಿಃಸಂಗ ಚಿನ್ಮಯ ಆತ್ಮಾರಾಮ । ಕಾಮಕ್ರೋಧಗಳ ವಿಶ್ರಾಮಧಾಮ ।
ಬಾಬಾ ಸದೈವ ನಿಷ್ಕಾಮ । ಅವಾಪ್ತ ಕಾಮರು ಪೂರ್ಣತ್ವದಿ ॥ 104

ಅವರ ಮುಕ್ತ ಸ್ಥಿತಿಯೂ ಹೀಗೆ । ವಿಷಯಗಳೂ ಬ್ರಹ್ಮವೇ ಅವರಿಗೆ ।
ಪುಣ್ಯ ಪಾಪಗಳ ರಾಶಿಗೆ । ಪೂರ್ಣನಿವೃತ್ತಿ ಸ್ಥಾನ ಅವರು ॥ 105

ನಾನಾವಲ್ಲಿಯು ಏಳು ಎನಲು । ಗಾದಿ ಬಿಟ್ಟಿದ್ದರು ಸ್ಥಳ ಬಿಟ್ಟು ಕೊಡಲು ।
ದೇಹಾಭಿಮಾನತೆಯು ಯಾರೊಳು । ಇಲ್ಲ ವಿಷಮತೆಯು ಸ್ವಪ್ನದಲಿ ಕೂಡ ॥ 106

ಇಹಲೋಕದಲಿ ಪ್ರಾಪ್ತವ್ಯವಿಲ್ಲ । ಪರಲೋಕಗಳಲೂ ಸಾಧಿಸಬೇಕಾದುದೇನಿಲ್ಲ ।
ಲೋಕಾನುಗ್ರಹಕ್ಕಾಗಿಯೇ ಕೇವಲ । ಈ ಸಂತನು ಬಂದಿಹ ಭೂಮಿಗೆ ॥ 107

ಹೀಗೆ ಈ ಸಂತರು ಕರುಣಾಘನ । ಅವತಾರ ತಾಳುವದರ ಪ್ರಯೋಜನ ।
ಪರಾನುಗ್ರಹವಲ್ಲದೇ ಬೇರೇನು । ಪರಹಿತದಲಿ ಪೂರ್ಣರತರು ॥ 108

ಬೆಣ್ಣೆಯಂತಹ ಹೃದಯವುಳ್ಳವರು । ಅತೀವ ಮೃದು ಎಂಬರು ಕೆಲವರು ।
ಆದರೆ ಪರತಾಪದಿಂದ ಸಂತರು ದ್ರವಿಸುವರು । ನಿಜತಾಪದಿಂದ ಕರಗುವದು ಬೆಣ್ಣೆ ॥109

ತುಂಡು ಜೋಡಿಸಿದ ಕಫನಿಯ ವಸನ । ಗೋಣಿ ಚೀಲದ ಆಸನಾಸ್ತರಣ ।
ವೃತ್ತಿ ಶೂನ್ಯ ಅವರ ಮನ । ಸಿಂಹಾಸನದಿಂದವರಿಗೇನು ॥ 110

ನೋಡಿ ಭಕ್ತರ ಭಾವದ ಕಡೆಗೆ । ಅದೊಂದು ಸಂಕೋಲೆ ಎಂದೆನಿಸಿದರೆ ಅವರಿಗೆ ।
ಅದನ್ನು ತಳ್ಳುವರು ಮನಸಿನಿಂದಾಚೆಗೆ । ಅತ್ತ ಚಿತ್ತವನು ಹರಿಸರು ॥ 111

ಬಾಬಾ ಶಿರಡಿ ಸರೋವರದ ಕಮಲ । ಭಕ್ತರು ಸೇವಿಸುವರದರ ಪರಿಮಳ ।
ಅಭಾಗಿಗಳು ಮಾತ್ರ । ಕೆಸರು ಕಲಿಸುತಲಿರುವರು ॥ 112

ಯಾರಿಗೂ ಹೇಳರು ಆಸನ । ಪ್ರಾಣಾಪಾನ ಇಲ್ಲವೇ ಇಂದ್ರಿಯದಮನ ।
ಮಂತ್ರ-ತಂತ್ರ ಇಲ್ಲವೇ ಭಜನ । ಕಿವಿಯೂದೂವುದೂ ಇಲ್ಲ ಅಲ್ಲಿ ॥ 113

ಲೌಕಿಕದಲಿ ಕಾಣುವರು ಲೋಕಾಚಾರಿ । ಆದರೆ ಒಳಗಿರುವದೇ ಬೇರೆ ಪರಿ ।
ಅತ್ಯಂತ ಕುಶಲ ವ್ಯವಹಾರಿ । ಅಂಥ ಕುಸುರಿತನ ಅನ್ಯರಿಗೆ ಬರದು ॥ 114

ಭಕ್ತಾರ್ಥವಾಗಿಯೇ ಆಕಾರ ತಾಳಲು । ಅದಕಾಗಿಯೇ ಅವರ ವಿಕಾರಗಳು ।
ಇವೇ ಸಂತರ ಲೌಕಿಕಾಚಾರಗಳು । ತಿಳಿಯಿರಿದನೆಲ್ಲರು ನೀವು ॥ 115

ಸಾಯಿ ಮಹಾರಾಜ ಸಂತ ನಿಧಾನ । ಕೇವಲ ಶುದ್ಧ ಪರಮಾನಂದ ಸ್ಥಾನ ।
ಅವರಿಗೆನ್ನ ಸಾಷ್ಟಾಂಗ ನಮನ । ನಿರಭಿಮಾನ ನಿರ್ಲೇಪ ॥ 116

ಪುಣ್ಯಪಾವನ ಸ್ಥಾನವಿದು । ಎಲ್ಲಿ ಮಹಾರಾಜರು ಬಂದರು ನಡೆದು ।
ಇಂಥ ನಿಧಾನ ದುರ್ಲಭವಿರುವದು । ಪೂರ್ವಸಂಚಿತ ಪುಣ್ಯವಿರದೆ ॥ 117

ಶುದ್ಧ ಬೀಜದೊಳಗಿಂದ । ರಸಭರಿತ ಫಲದ ಉತ್ಪತ್ತಿ ಅದರಿಂದ ।
ಈ ಪ್ರಸಿದ್ಧ ಉಕ್ತಿಯು ಶಿರಡಿಯ ಜನದ । ಪ್ರತ್ಯಯಕೇ ಬಂದಿತು ನಿಜವಾಗಿ ॥ 118

ಅವನು ಹಿಂದುವೂ ಅಲ್ಲ ಯವನ । ಇವನಿಗೆ ಇಲ್ಲ ಆಶ್ರಮ ಇಲ್ಲ ವರ್ಣ ।
ಆದರೂ ಮಾಡಿದ ಸಮೂಲ ನಿಕೃಂತನ । ಭವವನು ನಿಃಸಂತಾನವಾಗಿಸಿ ॥ 119

ಅನಂತ ಅಪಾರ ಗಗನವೆಂತು । ಬಾಬಾರ ಚರಿತ್ರವು ಗಹನ ಇಂತು ।
ಅವರಿಗಲ್ಲದೇ ಬೇರಿನ್ನಾರಿಗಾದೀತು । ಅದರ ಯಥಾರ್ಥ ಆಕಲನ ॥ 120

ಚಿತ್ತದ ಕಾರ್ಯವೇ ಚಿಂತನ । ಚಿಂತನೆ ಬಿಟ್ಟು ಇರದು ಒಂದು ಕ್ಷಣ ।
ವಿಷಯವನೇ ಚಿಂತಿಸಲು ಕೊಟ್ಟರೆ, ಅದರ ಚಿಂತನ । ಗುರುವಿನ ಚಿಂತನೆ ಕೊಟ್ಟರೆ ಅದನೇ ಮಾಡುವದು ॥121

ಸರ್ವೇಂದ್ರಿಯಗಳ ಮಾಡಿ ಶ್ರವಣ । ಕೇಳಿದರೆ ಗುರು ಮಹಿಮಾನ ।
ಅದುವೇ ಸಹಜ ಸ್ಮರಣ ಸಹಜ ಭಜನ । ಸಹಜ ಕೀರ್ತನೆ ಸಾಯಿಯದು ॥ 122

ಪಂಚಾಗ್ನಿ ಸಾಧನಯಜ್ಞಯಾಗ । ಮಂತ್ರ, ತಂತ್ರ, ಅಷ್ಟಾಂಗಯೋಗ ।
ಬ್ರಾಹ್ಮಣನಿಗೆ ಮಾತ್ರ ಸಾಧ್ಯವೀ ಪ್ರಯೋಗ । ಬೇರೆಯವರಿಗೇನುಪಯೋಗ ॥ 123

ಸಂತರ ಕಥೆಗಳಿಲ್ಲ ಹಾಗೆ । ಸತ್ಪಥವ ತೋರಿಸುವವೆಲ್ಲರಿಗೆ ।
ಪರಿಹಾರವಿದು ಭವಭಯದ ವ್ಯಥೆಗೆ । ನಿಜ ಪರಮಾರ್ಥವ ತೋರುವರು ॥ 124

ಸಂತಕಥಾಶ್ರವಣ ಮನನ । ಪರಿಶೀಲನೆ ಅಥವಾ ನಿಧಿದ್ಯಾಸನ ।
ದ್ವಿಜ ಶೂದ್ರ, ಅಥವಾ ಸ್ತ್ರೀ ಜನ । ಇದರಿಂದ ಪಾವನರಾಗುವರು ॥ 125

ಪ್ರೇಮವೇ ಇಲ್ಲ ಯಾರಲ್ಲಿ । ಅಂಥವರಿರುವರೇ ಜಗದಲ್ಲಿ ।
ಯಾರಿಗೆ ಯಾವುದರಲ್ಲಿ । ಅಧಿಷ್ಠಾನವಿರುವುದು ಬೇರೆ ಬೇರೆ ॥ 126

ಒಬ್ಬರ ಪ್ರೇಮ ನಿಧಾನ ಸಂತತಿ । ಇನ್ನೊಬ್ಬರದು ಧನ-ಮಾನ-ಸಂಪತ್ತಿ ।
ದೇಹ-ಗೇಹ-ಲೌಕಿಕ ಕೀರ್ತಿ । ವಿದ್ಯಾ ಪ್ರಾಪ್ತಿಯಲಿ ಯಾರಿಗೆ ॥ 127

ಯಾವ ಪ್ರೇಮವು ವಿಷಯದಲಿರುವದು । ಅದು ಎಲ್ಲ ಸೇರಿ ಒಂದುಗೂಡುವುದು ।
ಯಾವಾಗ ಹರಿಚರಣ ಆವಿಯಲಿ ಸುಡುವದು । ಆಗ ಭಕ್ತಿಯ ರೂಪದಲದು ಪ್ರಕಟವಾಗುವದು ॥128

ಅದಕಾಗಿ ದೇಹವ ಪ್ರಪಂಚಕೆ ಒಪ್ಪಿಸಿರಿ । ಚಿತ್ತವನು ಸಾಯಿ ಚರಣಕೆ ಸಮರ್ಪಿಸಿರಿ ।
ಅದರಿಂದ ಅವರ ಕೃಪಾ ಪಾತ್ರರಾಗಿರಿ । ಇದೊಂದು ಸುಲಭ ಉಪಾಯವು ॥ 129

ಇಂಥ ಅಲ್ಪ ಸಾಧನದಿಂದ । ಮಹಲ್ಲಾಭ ಜನರಿಗಿದರಿಂದ ।
ಅದಕೇ ಔದಾಸೀನ್ಯ ಬೇಡ । ಈ ಶ್ರೇಯ ಸಂಪಾದನೆಯಲ್ಲಿ ॥ 130

ಸಹಜವಾಗಿಯೇ ಜನರಿಗೆ । ಅನಿಸಬಹುದು ಹೀಗೆ ।
ಅಲ್ಪೋಪಾಯದಲಿ ಮಹಲ್ಲಾಭ ಇರುವಾಗ್ಗೆ । ಬಹುಜನರು ಅದನು ಆದರಿಸರೇಕೆ ॥ 131

ಇದಕೊಂದೇ ಕಾರಣವಿರುವದು । ಭಗವತ್ಕೃಪೆ ಇಲ್ಲದೇ ಲಾಲಸೆ ಬಿಡದು ।
ಅದೇ ಕೃಪೆಯಾಗಲು ಭಗವಂತನದು । ಈ ಶ್ರವಣ ಲಾಲಸೆ ಉದಯಿಸುವದು ॥132

ಅದಕಾಗಿ ಹೋಗಿರಿ ಸಾಯಿಗೆ ಶರಣ । ಕೃಪೆ ಮಾಡುವನು ನಾರಾಯಣ ।
ಆದೀತು ಶ್ರವಣ ಲಾಲಸೆಯ ಜನನ । ಸ್ವಲ್ಪ ಸಾಧನ ಕೈಗೆ ದೊರಕುವದು ॥ 133

ಅದಕೆ ಗುರುಕಥೆಯ ಸತ್ಸಂಗ ಮಾಡಿಸಿ । ಸಂಸಾರದ ತೊಡಕು ಬಿಡಿಸಿ ।
ಇದರಿಂದ ನಿಮ್ಮ ಜೀವನ ಸಾರ್ಥಕಗೊಳಿಸಿ । ಮನದಿ ವಿಕಲ್ಪವ ತಾರದೆ ॥ 134

ಬಹುಚತುರತನವನು ಬಿಟ್ಟು । 'ಸಾಯಿ ಸಾಯಿ' ಎನ್ನಿರಿ ಯಾವತ್ತೂ ।
ಅದರಿಂದ ಈ ಭವ ಬಿಟ್ಟೀತು । ಸಂದೇಹ ಒಂದಿಷ್ಟೂ ಹಿಡಿಯದಿರಿ ॥ 135

ಈ ಮಾತು ನನ್ನವಲ್ಲ । ಸಾಯಿ ಮುಖದಿಂದಲೇ ಬಂದುವೆಲ್ಲ ।
ತಿಳಿಯಬೇಡಿದನು ಉಪಯೋಗವಿಲ್ಲ । ಇದರ ತೂಕವನು ಎಣಿಸದಿರಿ ॥ 136

ಕುಸಂಗದಿಂದ ಸರ್ವನಾಶ । ಮಹಾದುಃಖಕ್ಕೆ ಅದು ಅವಕಾಶ ।
ಗೊತ್ತಿಲ್ಲದಂತೆಯೇ ಸಾವಕಾಶ । ದುಃಖದ ದಾರಿ ತೋರಿಸೀತು ॥ 137

ಬಿಟ್ಟು ಒಬ್ಬ ಸಾಯಿಯನ್ನು । ಅಥವಾ ಹಿಡಿಯದೆ ಸದ್ಗುರುವನ್ನು ।
ಈ ಕುಸಂಗತಿಯ ಪರಿಮಾರ್ಜನವನು । ಮತ್ತಿನ್ನಾರು ಮಾಡಿಯಾರು ॥ 138

ಅಂತಃಕರಣ ಪೂರ್ವಕ ಗುರುಮುಖದಿಂದ । ಹೊರಟಂಥ ಗುರುವಚನದಿಂದ ।
ಭಕ್ತರೆ ಅವುಗಳ ಶ್ರವಣದಿಂದ । ಕುಸಂಗ ನಿರಸನವಾದೀತು ॥ 139

ಸೃಷ್ಟಿಯೆಲ್ಲ ಕಣ್ಣಲ್ಲಿ ತುಂಬುವದು । ಸೌಂದರ್ಯಲೋಲುಪ ಮನ ಅಲ್ಲಿ ರಮಿಸುವರು ।
ಅದೇ ದೃಷ್ಟಿ ಯಾವಾಗ ಹಿಂದಕ್ಕೆ ತಿರುಗವದು । ಆಗ ಅದೇ ಸತ್ಸಂಗದಲಿ ರಮಿಸುವದು ॥ 140

ಸತ್ಸಂಗದ ಮಹಿಮೆ ಇಷ್ಟೊಂದು । ದೇಹಾಭಿಮಾನವನು ಸಮೂಲ ನಾಶಗೊಳಿಸುವದು ।
ಅದಕ್ಕೇ ಸತ್ಸಂಗಕ್ಕಿಂತ ಬೇರೆಯದು । ಸಾಧನವೇ ಇಲ್ಲಿದಕೆ ॥ 141

ನಿತ್ಯವೂ ಹಿಡಿಯಬೇಕು ಸತ್ಸಂಗ । ಉಳಿದ ಸಂಗಗಳೆಲ್ಲ ಸವ್ಯಂಗ ।
ಸತ್ಸಂಗ ಒಂದೇ ನಿರ್ವ್ಯಂಗ । ಅಂಗ ಪ್ರತ್ಯಂಗಗಳೆಲ್ಲವೂ ನಿರ್ಮಲ ॥ 142

ಸತ್ಸಂಗ ದೇಹಾಸಕ್ತಿಯ ಬಿಡಿಸುವದು । ಇಷ್ಟೊಂದು ಬಲವದರಲ್ಲಿರುವದು ।
ಸಂಸಾರ ನಿರ್ಮುಕ್ತಿ ಆಗುವದು । ಒಮ್ಮಿದರಲ್ಲಿ ಆಸಕ್ತಿ ಹುಟ್ಟಿದರೆ ॥ 143

ಭಾಗ್ಯದಿಂದ ದೊರೆತರೆ ಸತ್ಸಂಗ । ಸಹಜ ಉಪದೇಶವದರಲಿ ಯಥಾಸಾಂಗ ।
ತಕ್ಷಣದಲೆ ದೂರಾಗುವದು ಕುಸಂಗ । ನಿಃಸಂಗದಲಿ ಮನ ತೊಡಗುವದು ॥ 144

ಪರಮಾರ್ಥದ ದಾರಿ ಹಿಡಿಯಲು । ವಿಷಯ ವಿರಕ್ತಿಯೊಂದೇ ಉಪಾಯವಿರಲು ।
ಸತ್ಸಂಗದ ಅಪೇಕ್ಷೆ ಇರದಿರಲು । ಸ್ವರೂಪ ದರ್ಶನವಾಗದು ॥ 145

ಸುಖದ ಹಿಂದೆಯೇ ಬರುವದು ದುಃಖ । ದುಃಖದ ಹಿಂದೆ ಮತ್ತೆ ಸುಖ ।
ಜೀವ ಬಯಸುವದು ಸದಾ ಸುಖ । ದುಃಖದಿಂದ ದೂರಕೋಡುವದು ॥ 146

ಸನ್ಮುಖರಾಗಿರಿ ಇಲ್ಲವೇ ವಿನ್ಮುಖರು । ಆಗುವದನಾರು ತಪ್ಪಿಸುವರು ।
ಈ ಉಭಯ ಭೋಗಗಳ ಮೋಚಕರು । ಸಂತ ಸಜ್ಜನರ ಸಂಗ ಒಂದೇ ॥ 147

ಸತ್ಸಂಗದಿಂದ ದೇಹಾಭಿಮಾನ ನಶಿಸುವದು । ಸತ್ಸಂಗ ಜನ್ಮ ಮರಣವ ದಾಟಿಸುವದು ।
ಸತ್ಸಂಗದಿಂದ ಚೈತನ್ಯಘನ ಪ್ರಕಟವಾಗುವದು । ಗ್ರಂಥಿ ವಿಚ್ಛೇದನವೂ ತತ್ಕಾಲದಲಿ ॥ 148

ಉತ್ತಮಗತಿಯನು ಪಡೆಯಲು । ಸತ್ಸಂಗತಿ ಒಂದೇ ಪಾವನವಿರಲು ।
ಅನನ್ಯ ಭಾವದಿ ಶರಣು ಹೋಗಲು । ನಿಜ ವಿಶ್ರಾಂತಿಯ ಪಡೆಯುವಿರಿ ॥ 149

ನಾಮವಿಲ್ಲ ನಮನವಿಲ್ಲ । ಭಾವವಿಲ್ಲ ಭಜನೆ ಇಲ್ಲ ।
ಸಂತ ಮಹಾರಾಜರ ಅವತಾರಗಳೆಲ್ಲ । ಅಂಥವರ ನಿಜ ಪರಾಯಣರಾಗಿಸಲು ॥ 150

ಗಂಗಾ ಭಾಗೀರಥಿ ಗೋದೆಯರು । ಕೃಷ್ಣೆ ಕಾವೇರಿ ನರ್ಮದೆಯರು ।
ಇವರೆಲ್ಲ ಇಚ್ಛಿಸುತಿರುವರು । ಸ್ನಾನಾರ್ಥ ಬಂದವರ ಪದಸ್ಪರ್ಶವಾಗಲೆಂದು ॥ 151

ಜಗದ ಪಾಪವ ತೊಳೆವರು ತಾವು । ಆದರೂ ನಿವೃತ್ತ ಅವರ ಪಾಪವು ।
ಆಗದೇ ಸಂತಪದ ಸ್ಪರ್ಶವು । ಎಂದಿಗೂ ಆಗದು ॥ 152

ಜನ್ಮಾಂತರದ ಭಾಗ್ಯ ಉದಯಿಸಿತು । ಮಹಾರಾಜ ಸಾಯಿಯವರ ಚರಣ ದೊರೆಯಿತು ।
ಜನ್ಮಮರಣವೆಲ್ಲ ನಿಂತು ಹೋಯಿತು । ಎಲ್ಲರ ಭವಭಯ ದೂರಾಯಿತು ॥ 153

ಶ್ರವಣ ಮಾಡಿದ್ದನ್ನು ಮನನ ಮಾಡುವಾ । ಮಾಡುತ್ತ ಒಂದಿಷ್ಟು ವಿಶ್ರಾಮ ಪಡೆಯುವಾ ।
ಮುಂದಿನ ನಿರೂಪಣವ ಮುಂದುವರೆಸುವಾ । ಇನ್ನು ಶ್ರೋತೃ ಜನಗಳೇ ॥ 154

ಹೇಮಾಡ ಶರಣ ಸಾಯಿಗೆ । ನಾನಂತೂ ಅವರ ಪಾದದ ತೊಡುಗೆ ।
ಕಥಾ ನಿರೂಪಣೆ ಮಾಡುತ್ತಿರುವ ಹಾಗೇ । ಅಷ್ಟರಿಂದಲೇ ಸುಖಸಂಪನ್ನನಾಗುವೆ ॥ 155

ಎಂಥ ಮನೋಹರ ಮುದ್ದು ರೂಪವದು । ಮಶೀದಿಯ ಬಗಲಾಲ್ಲಿ ಕುಳಿತುಕೊಂಡು ।
ಉದಿಪ್ರಧಾನ ಮಾಡುವದು । ಭಕ್ತ ಕಲ್ಯಾಣದುದ್ದೇಶವಿಟ್ಟು ॥ 156

ಸಂಸಾರ ಮಿಥ್ಯೆ ಎಂಬುದು ಯಾರ ಜ್ಞಾನ । ಬ್ರಹ್ಮಾನಂದದಿ ಅಖಂಡಲೀನ ।
ಸದೈವ ಅರಳಿದ ಸುಮದಂತೆ ಮನ । ಸಾಷ್ಟಾಂಗ ನಮನವು ಅವರಿಗೆ ॥ 157

ಕಣ್ಣಿಗೆ ಜ್ಞಾನಾಂಜನವ ಹಾಕಲು । ಅಲ್ಲಿಯೇ ನಿಜನಿಧಾನವ ತೋರಲು ।
ಸಾಯಿಯ ಮಹಿಮೆ ಇಂಥದಿರಲು । ಸಾಷ್ಟಾಂಗ ವಂದನೆ ಅವರಿಗೆ ॥ 158


ಮುಂದಿನ ಅಧ್ಯಾಯ ಇದಕ್ಕಿಂತ ಅಂದ । ಅಂತರದಲಿಳಿಯಲು ಶ್ರವಣದ್ವಾರದಿಂದ ।
ನೈರ್ಮಲ್ಯವಾದೀತು ಹೃದಯಮಂದಿರದ । ಕಲಿಮಲವೆಲ್ಲವೂ ಕಳೆದುಹೋಗಿ ॥ 159

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಶ್ರೀ ಸಾಯಿ ಸಮರ್ಥ ಮಹಿಮಾನಂನಾಮ ದಶಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

130.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹನ್ನೊಂದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಗತಕಥೆಯ ಅನುಸಂಧಾನ । ಗೇಣಗಲ ಹಲಿಗೆಯ ಮೇಲೆ ಬಾಬಾರ ಶಯನ ।
ಅಲಕ್ಷ್ಯ ಆರೋಹ ಅವರೋಹಣ । ಅಕಳ ವಿಂದಾನ ಅವರದು ॥ 1

ಹಿಂದುವಿರಲಿ ಇಲ್ಲವೇ ಇರಲಿ ಯವನ । ಇವರಿಬ್ಬರಿಗೂ ಸಮಸಮಾನ ।
ಆಯಿತು ಆಯುರ್ದಾಯದ ಪರ್ಯಾಲೋಚನ । ಅದೇ ದೇವತಾರ್ಚನೆ ಶಿರಡಿಯದು ॥ 2

ಇನ್ನಿದು ಹನ್ನೊಂದನೆಯ ಅಧ್ಯಾಯ । ಈ ಗುರುಕೃಪೆಯ ಮಧುರ ಕಥೆಯ ।
ದೃಡ ಭಾವವನಿಟ್ಟು ಸಾಯಿಯ । ಚರಣದಲಿದ ಅರ್ಪಿಸಬೇಕು ॥ 3

ಇದರಿಂದಾದೀತು ಸಗುಣಧ್ಯಾನ । ಇದು ಏಕಾದಶ ರುದ್ರದ ಆವರ್ತನ ।
ಪಂಚಭೂತಗಳ ಮೇಲೆ ಸತ್ತೆಯ ಪ್ರಮಾಣ । ಬಾಬಾರ ಮಹಿಮಾನ ತಿಳಿದೀತು ॥ 4

ಹೇಗೆ ಇಂದ್ರ, ಅಗ್ನಿ ವರುಣರು । ಬಾಬಾರ ವಚನಕ್ಕೆ ಮರ್ಯಾದೆ ಕೊಡುವರು ।
ಇನ್ನು ಮಾಡುವ ಅದರ ದಿಗ್ದರ್ಶನ । ಶ್ರೋತೃಗಳೇ ಆಲಿಸಿರಿದನು ॥ 5

ಪೂರ್ಣ ವಿರಕ್ತಿಯ ವಿರಕ್ತಿ । ಇಂಥ ಸಾಯಿಯ ಸಗುಣ ಮೂರ್ತಿ ।
ಅನನ್ಯ ಭಕ್ತರಿಗೆ ನಿಜ ವಿಶ್ರಾಂತಿ । ಸಪ್ರೇಮ ಚಿತ್ತದಲಿ ನೆನೆಸುವಾ ॥ 6

ಗುರು ವಾಕ್ಯೈಕ ವಿಶ್ವಾಸನ । ಇದನೇ ನೀಡುವ ಆಸನ ।
ಸರ್ವ ಸಂಕಲ್ಪ ಸಂನ್ಯಾಸನ । ಪೂಜೆ ಮಾಡುವ ಆ ಸಂಕಲ್ಪದಿಂದ ॥ 7

ಪ್ರತಿಮಾ, ಸ್ಥಂಡಿಲ, ಅಗ್ನಿತೇಜ । ಸೂರ್ಯ ಮಂಡಳ ಉದಕ ದ್ವಿಜ ।
ಈ ಏಳರ ಮೇಲೂ ಗುರುರಾಜರ । ಅನನ್ಯ ಪೂಜೆಯ ಮಾಡುವಾ ॥ 8

ಅನನ್ಯ ಭಾವದಿ ಚರಣ ಹಿಡಿಯಲು । ಗುರುವೇನು ಬ್ರಹ್ಮನೇ ಆಗಳಾಡಲು ।
ಗುರು ಪೂಜೆಯ ಮಹಿಮೆ ಹೀಗಿರಲು । ಗುರುಭಕ್ತರಿದ ಅನುಭವಿಸಬೇಕು ॥ 9

ಸಾಕಾರದ ಪೂಜೆ ಇರುವವರೆಗೆ । ಗುರುವಿರಬೇಕು ದೇಹಧಾರಿಯಾಗೇ ।
ನಿರಾಕಾರವು ನಿರಾಕಾರಿಗೆ । ಇದು ಶಾಸ್ತ್ರದ ನಿರ್ಧಾರವು ॥ 10

ಧ್ಯಾನ ಮಾಡದೇ ಸಗುಣದ್ದು । ಭಕ್ತಿ ಭಾವವು ಪ್ರಕಟವಾಗದು ।
ಮನಸಿನ ಮೊಗ್ಗು ಅರಳದು । ಸಪ್ರೇಮ ಭಕ್ತಿ ಇಲ್ಲದೇ ॥ 11

ಎಲ್ಲಿಯವರೆಗದು ಅರಳಿಲ್ಲ । ಕೇವಲ ಕರ್ಣಿಕೆಗೆ ಗಂಧವಿಲ್ಲ ।
ಅಲ್ಲಿ ಮಕರಂದವೂ ಇಲ್ಲ ಭ್ರಮರವಿಲ್ಲ । ಇದ್ದರೂ ಕ್ಷಣಕಾಲ ನಿಲಲಾರದು ॥ 12

ಸಗುಣವದೇ ಸಾಕಾರ । ನಿರ್ಗುಣವೇ ನಿರಾಕಾರ ।
ಭಿನ್ನವಲ್ಲ ಪರಸ್ಪರ । ಸಾಕಾರ ನಿರಾಕಾರ ಎರಡೂ ಒಂದೇ ॥ 13

ಹೆರೆತರೂ ಅದು ತುಪ್ಪವೇ ಗಟ್ಟಿಯಾದುದು । ಕರಗಿದರೂ ಅದು ತುಪ್ಪವೇ ಎನಿಸುವದು ।
ಸಗುಣ ನಿರ್ಗುಣ ಒಂದೇ ಇರುವದು । ಸಮರಸವಾಗಿದೆ ವಿಶ್ವರೂಪದಲಿ ॥ 14

ಕಣ್ತುಂಬ ನೋಡಲು ಬರುವದು । ಚರಣದಲಿ ಶಿರವಿಡಬಹುದು ।
ಎಲ್ಲಿ ಜ್ಞಾನದ ಲಾಭವಾಗುವದು । ಮನ ತೊಡಗುವದು ಅಂಥಲ್ಲಿ ॥ 15

ಯಾರ ಜೊತೆಯಲ್ಲಿ ಕುಳಿತು । ಆಡಬಲ್ಲೆವು ಪ್ರೇಮದಿಂದ ಮಾತು ।
ಪೂಜಿಸಬಲ್ಲೆವು ಗಂಧಾಕ್ಷತೆ ಇತ್ತು । ಅದಕೆ ಮೊದಲು ಆಕೃತಿ ಬೇಕು ॥ 16

ನಿರ್ಗುಣಕ್ಕಿಂತ ಸಗುಣದ್ದು । ಆಕಲನೆ ಸುಲಭವಾದದ್ದು ।
ಸಗುಣದಲಿ ಪ್ರೀತಿ ದೃಢವಾಗುವದು । ಅದೇ ನಿರ್ಗುಣದ ಭೋದನೆ ॥ 17

ನಿರ್ಗುಣವ ತಿಳಿಯಲು ಭಕ್ತರು । ಬಾಬಾ ಅನಂತ ಉಪಾಯಗಳ ಮಾಡುವರು ।
ಅಧಿಕಾರಾನುರೂಪ ದೂರವಿರಿಸುವರು । ಬಹುಕಾಲ ದರ್ಶನವ ನೀಡರು ॥ 18

ಒಬ್ಬನನು ದೇಶಾಂತರಕ್ಕೆ ಕಳಿಸುವರು । ಒಬ್ಬನ್ನು ಶಿರಡಿಯಲಿ ಏಕಾಂತವಾಗಿಡುವರು ।
ಇನ್ನೊಬ್ಬನನು ವಾಡೆಯಲ್ಲೆ ತೊಡಗಿಸುವರು । ನೇಮದಿಂದ ಪೋಥಿಯನೋದ ಹಚ್ಚಿ ॥19

ವರ್ಷಾನುವರ್ಷಗಳು ಈ ಅಭ್ಯಾಸ ಮಾಡುತ್ತ । ಚಿತ್ತ ಹೊರಳೀತು ನಿರ್ಗುಣದತ್ತ ।
ಆಸನ ಶಯನ ಭೋಜನಗಳ ಮಾಡುತ । ಮನ ಮಾತ್ರ ಬಾಬಾರಲ್ಲಿ ತೊಡಗೀತು ॥ 20

ಈ ದೇಹವಂತೂ ನಾಶವಂತವಿರುವದು । ಈ ದೇಹದ ಕೊನೆ ಎಂದು ಆಗುವದು ।
ಭಕ್ತನೀ ಚಿಂತೆಯ ಮಾಡಲಾಗದು । ಅನಾದ್ಯನಂತದಲಿ ಮನ ತೊಡಗಿಸಬೇಕು ॥ 21

ಬಹುವಿಧ ದೃಶ್ಯ ಪಸಾರವಿದು । ಅವ್ಯಕ್ತದ್ದೇ ಎಲ್ಲ ಸಾರವಿದು ।
ಅವ್ಯಕ್ತದಿಂದಲೇ ಆಕಾರ ತಳೆದುದು । ಮತ್ತೆ ತಿರುಗಿ ಅವ್ಯಕ್ತದಲೇ ಮರೆಯಾಗುವದು ॥ 22

ಈ 'ಆ ಬ್ರಹ್ಮ ಸ್ತಂಭ ' ಸೃಷ್ಟಿ । ವ್ಯಷ್ಟಿ ಹೇಗೋ ಹಾಗೇ ಸಮಸ್ಟಿ ।
ಅವ್ಯಕ್ತದೊಳಗಿಂದ ಹುಟ್ಟಿ । ಕೊನೆಗದರಲ್ಲಿಯೇ ಸಮರಸವಾಗುವದು ॥ 23

ಅದಕಾಗಿ ಯಾರಿಗೂ ಮರಣವಿಲ್ಲ । ಬಾಬಾರಿಗಾದರೂ ಇದು ಇರುವದಿಲ್ಲ ।
ನಿತ್ಯ ಸಿದ್ಧ ಬದ್ಧ ನಿರಂಜನರೆಲ್ಲ । ಇರುವ ಸಾಯಿ ನಿರ್ಮರಣರು ॥ 24

ಯಾರವರಿಗೆನ್ನಲಿ ಭಗವದ್ಭಕ್ತ । ಇನ್ನಾರೆನ್ನಲಿ ಮಹಾಭಾಗವತ ।
ನಮಗಂತೂ ಸಾಕ್ಷಾತ ಭಗವಂತ । ಮೂರ್ತಿಮಂತರು ಅವರಾಗಿರುವರು ॥ 25

ಗಂಗೆ ಸಮುದ್ರಕೆ ಹೋಗಿ ಕೂಡುವಳು । ದಾರಿಯಲಿ ತಪಾರ್ತರ ತಾಪಹರಿಸುವಳು ।
ತೀರದಲಿ ತರುಗಳಿಗೆ ಜೀವನವನೀಯುವಳು । ತೃಷೆಯನೆಲ್ಲರದು ನೀಗಿಸುವಳು ॥ 26

ಅದರಂತೆ ಸಂತರ ಅವತಾರವು । ಪ್ರಕಟವಾಗುವವು ಮತ್ತು ಹೋಗುವವು ।
ಆದರೂ ಅವರ ಆಚಾರವು । ಜಗವ ಪಾವನಗೊಳಿಸುವದು ॥ 27

ಹೇಳತೀರದ ಕ್ಷಮಾಶೀಲತೆ । ನೈಸರ್ಗಿಕವಾದ ಅತ್ಯಂತ ಅಕ್ಷೋಭ್ಯತೆ ।
ಋಜುತನ, ಮೃದುತನ, ಸಹನಶೀಲತೆ । ಅಂತೆಯೇ ನಿರುಪಮ ಸಂತುಷ್ಟತೆ ॥ 28

ಕಾಣಲು ಅವರು ದೇಹಧಾರಿಗಳಾದರೂ । ನಿಜದಲಿ ನಿರ್ಗುಣ ನಿರಾಕಾರಿಗಳವರು ।
ನಿಜ ಅಂತರದಿ ನಿಃಸಂಗ ನಿರ್ಮುಕ್ತರು । ಪ್ರಪಂಚದಲಿ ವಿಹರಿಸುತಿದ್ದರೂ ॥ 29

ಕೃಷ್ಣನೇ ಸ್ವತಃ ಪರಮಾತ್ಮನಿದ್ದರೂ । ಅವನೂ ಎನುತಿದ್ದ ನನ್ನ ಆತ್ಮವೇ ಸಂತರು ।
ನನ್ನ ಸಜೀವ ಪ್ರತಿಮೆಗಳೇ ಸಂತರು । ಸಂತ ಪ್ರೇಮವೇ ನಾನಿಹೆನು ॥ 30

ಪ್ರತಿಮಾರೂಪವು ಸಂತರಿಗೆ ಒಪ್ಪದು । ಸಂತರೆಂದರೆ ನಿಶ್ಚಲ ಸ್ವರೂಪವೇ ನನ್ನದು ।
ಅವರ ಲಜ್ಜೆಯ ಭಾರ ನನ್ನದು । ಅದಕೇ ನಾನದನು ಹೊರುವೆನು ॥ 31

ನನಗೆ ಅನನ್ಯ ಶರಣನಾದ ಸಂತನು । ಅವನ ಚರಣಗಳ ನಾನು ವಂದಿಸುವೆನು ।
ಸಂತರ ಮಹಿಮೆಯನು ಶ್ರೀಕೃಷ್ಣನು । ಈ ರೀತಿ ಉದ್ಧವನಿಗೆ ಹೇಳಿದನು ॥ 32

ಸಗುಣರಲ್ಲಿ ಯಾವನು ಸಗುಣನು । ನಿರ್ಗುಣರಲ್ಲಿ ಯಾವನು ನಿರ್ಗುಣನು ।
ಗುಣವಂತರಲ್ಲಿಯೂ ಯಾವನು ಅತ್ಯಂತ ಗುಣವಂತನು । ಗುಣಗಳಲ್ಲಿಯೂ ಗುಣವಂತನು ಗುಣರಾಜನವ ॥33

ಪರ್ಯಾಪ್ತ ಕಾಮನವ ಕೃತಕೃತ್ಯನು । ಯಾವಾಗಲೂ ಯದೃಚ್ಛಾಲಾಭ ತೃಪ್ತನು ।
ಅನವರತ ಆತ್ಮ ನಿರತನು । ಸುಖದುಃಖಾತೀತನವ ॥ 34

ಆತ್ಮಾನಂದದ ವೈಭವವ ನಿಂತು । ಆಗೌರವವ ಯಾರಿಂದ ವರ್ಣಿಸಲಾದೀತು ।
ಬ್ರಹ್ಮ ದೈವತವೇ ಮೂರ್ತರೂಪಗೊಂಡಿತು । ಅನಿರ್ವಾಚ್ಯವಿದು ಸರ್ವದೈವ ॥ 35

ಈ ಅನಿರ್ವಚನೀಯವಾದ ಶಕ್ತಿಯು ಇಲ್ಲಿ । ದೃಶ್ಯರೂಪದಲಿ ಅವತರಿಸಿದೆ ಭೂಮಿಯಲಿ ।
ಸಚ್ಚಿತ್ಸುಖಾನಂದವೇ ಮೂರ್ತಿಭವಿಸಿದೆ ಇಲ್ಲಿ । ಜ್ಞಾನ ಸಂವಿತ್ತಿಯು ಅದೇ ಅದು ॥ 36

ಬ್ರಹ್ಮಾಕಾರಂತಃಕರಣ ಮೂರ್ತಿ । ಪ್ರಪಂಚದಲಾಗಿದೆ ನಿವೃತ್ತಿ ।
ನಿತ್ಯ ನಿಷ್ಪ್ರಪಂಚ ಬ್ರಹ್ಮಾತ್ಮೈಕ್ಯ ಸ್ಥಿತಿ । ಆನಂದ ಮೂರ್ತಿಯೇ ಕೇವಲ ಅದು ॥ 37

'ಆನಂದೋ ಬ್ರಹ್ಮೇತಿ' ಎಂದು ನುಡಿವರು । ಶ್ರೋತೃಗಳು ನಿತ್ಯ ಇದ ಕೇಳುತಿಹರು ।
ಪುಸ್ತಕ ಜ್ಞಾನಿಗಳು ಪುರಾಣದಲಿ ಓದುವರು । ಭಾವುಕರಿಗಿದರ ಪ್ರತೀತಿ ಶಿರಡಿಯಲ್ಲಿ ॥ 38

ಧರ್ಮಾದರ್ಮಾದಿಗಳು ಯಾವುದರ । ಲಕ್ಷಣ ಅಂಥ ಈ ಸಂಸಾರವು ಬಲು ವಿಲಕ್ಷಣ ।
ಅನಾತ್ಮಜ್ಞನನು ಕ್ಷಣ ಕ್ಷಣ । ರಕ್ಷಣೆ ಮಾಡಬೇಕಾಗುವದು ॥ 39

ಇದು ಅಲ್ಲ ಆತ್ಮಜ್ಞರ ವಿಷಯ । ಅಂಥವರಿಗೆ ಆತ್ಮ ಸ್ವರೂಪದಲ್ಲಿಯೇ ಆಶ್ರಯ ।
ಅವರು ನಿತ್ಯ ಮುಕ್ತ ಆನಂದಮಯ । ಸದಾಚಿನ್ಮಯರೂಪರವರು ॥ 40

ಬಾಬಾರೇ ಎಲ್ಲದರ ಅಧಿಷ್ಠಾನ । ಅಂಥವರಿಗೆ ಯಾತಕ್ಕೆ ಆಸನ ।
ಅದರಲ್ಲಿಯೂ ಕಾಷ್ಯಸಿಂಹಾಸನ । ಭಕ್ತ ಭಾವನರೇ ಬಾಬಾ ಇರುವಾಗ ॥ 41

ಬಹಳ ದಿವಸದ ಆಸನ ಹಳೆಯದು । ಗೋಣಿ ಚೀಲದ ತುಂಡೊಂದು ।
ಅದರ ಮೇಲೆ ಭಾವಿಕ ಭಕ್ತರು ಒಂದು । ಸುಂದರ ಮೆತ್ತೆಯ ಹಾಸುವರು ॥ 42

ಹಿಂದೆ ಗೋಡೆಗೆ ಆತುಕೊಳ್ಳಲು । ತಕ್ಕೆಯನೊಂದು ತಂದಿಡಲು ।
ಭಕ್ತರ ಮನದಿಚ್ಛೆಯೊಲು । ಬಾಬಾರೂ ನಡೆದುಕೊಳ್ಳುವರು ॥ 43

ಅವರು ಶಿರಡಿಯಲ್ಲಿದ್ದಂತೆ ಕಾಣುವದು । ಆದರವರ ವಾಸ್ತವ್ಯ ಎಲ್ಲೆಲ್ಲಿಯೂ ಇರುವದು ।
ನಿಜಭಕ್ತರಿಗೆ ಅನುಭವ ಇದರದು । ಸಾಯಿ ನಿತ್ಯ ತೋರುವರು ॥ 44

ತಾವು ನಿರ್ವಿಕಾರಿಗಳಾಗಿದ್ದರೂ । ಪೂಜೆ ಉಪಚಾರಗಳ ಅಂಗೀಕರಿಸುವರು ।
ಎಲ್ಲವನ್ನೂ ಸ್ವೀಕರಿಸುವರು । ಭಕ್ತಭಾವವನು ಅನುಸರಿಸಿ ॥ 45

ಒಬ್ಬರು ಚಾಮರವ ಬೀಸುವರು । ಒಬ್ಬರು ಬೀಸಣಿಕೆಯಿಂದ ಗಾಳಿ ಬೀಸುವರು ।
ಸನಯಿ ನೌಬತ್ತುಗಳ ಮಂಗಳ ಧ್ವನಿಯ ಮಾಡುವರು । ಕೆಲವರು ಪೂಜೆಯ ಸಮರ್ಪಿಸುವರು ॥ 46

ಒಬ್ಬರು ಹಸ್ತಪಾದ ಪ್ರಕ್ಷಾಲನ । ಒಬ್ಬರು ಅತ್ತರು ಗಂಧಾರ್ಚನ ।
ಒಬ್ಬರು ತ್ರಯೋದಶ ಗುಣದ ತಾಂಬೂಲದಾನ । ಮಹಾನ್ನೈವೇದ್ಯವನೂ ನಿವೇದಿಸುವರು ॥47

ಒಬ್ಬರು ಎರಡು ಬೆರಳಿನ ಅಡ್ಡ ಗಂಧ । ಶಿವಲಿಂಗಕ್ಕೆ ಚರ್ಚಿಸುವಂತೆ ಅದನು ।
ಕೆಲವರು ಕಸ್ತೂರಿ ಬೆರಸಿದ ಸುಗಂಧ । ಅಂತೆಯೇ ಚಂದನವನೂ ಚರ್ಚಿಸುವರು ॥ 48

ತಾತ್ಯಾಸಾಹೇಬ ನೂಲಕರರ ಸ್ನೇಹಿತರು । ಡಾಕ್ಟರ ಪಂಡಿತರೆಂದು ಹೆಸರು ।
ಬಾಬಾರ ದರ್ಶನ ಪಡೆಯಲು ಅವರು । ಒಮ್ಮೆ ಶಿರಡಿಗೆ ಬಂದರು ॥ 49

ಶಿರಡಿಯಲ್ಲಿ ಕಾಲಿಡಲು । ಮಶೀದಿಗೆ ಹೋದರು ಮೊದಲು ।
ವಂದಿಸಿ ಬಾಬಾರ ಚರಣಗಳು । ಕ್ಷಣ ಒಂದು ನಿವಾಂತ ಕುಳಿತರು ॥ 50

ಬಾಬಾ ನುಡಿದರು ಅವರಿಗೆ । "ಹೋಗಿರಿ ದಾದಾಭಟ್ಟರಲ್ಲಿಗೆ ।
ಕೈ ಬೆರಳು ತೋರಿಸಿ ದಾರಿಯ ಅವರಿಗೆ" । ಮಾರ್ಗ ಕ್ರಮಿಸಲು ಹಚ್ಚಿದರು ॥ 51

ಪಂಡಿತರು ದಾದಾರಲ್ಲಿಗೆ ಹೋದರು । ದಾದಾ ಅವರನ್ನು ಸ್ವಾಗತಿಸಿದರು ।
ಬಳಿಕ ದಾದಾ ಬಾಬಾರ ಪೂಜೆಗೆ ಹೊರಟರು । ಬರುವರೇನೆಂದವರನ್ನೂ ಕೇಳಿದರು ॥ 52

ದಾದಾರೊಡನೆ ಪಂಡಿತರು ಹೋದರು । ದಾದಾ ಬಾಬಾರ ಪೂಜೆ ಮಾಡಿದರು ।
ಬಾಬಾರ ಹಣೆಗೆ ಗಂಧದ ತಿಲಕವನಾರೂ । ಇಡುವ ಸಾಹಸನಿದುವರೆಗೆ ಮಾಡಿರಲಿಲ್ಲ ॥ 53

ಯಾರು ಎಂಥ ಭಕ್ತರೇ ಬರಲಿ । ಗಂಧವ ಹಚ್ಚಲು ಬಿಡುತಿರಲಿಲ್ಲ ಹಣೆಯಲಿ ।
ಕೊರಳಿಗೆ ಹಚ್ಚಿಸಿಕೊಳುತಿದ್ದರು ಮ್ಹಾಳಸಾಪತಿಯ ಕೈಲಿ । ಉಳಿದವರು ಪಾದಕ್ಕೆ ಹಚ್ಚುತ್ತಿದ್ದರು ॥ 54

ಆದರೂ ಈ ಪಂಡಿತರು ಭಾವಿಕರ ಸಾಧು । ದಾದಾರ ಕೈಯಿಂದ ತಟ್ಟೆಯ ತಕ್ಕೊಂಡು ।
ಬಾಬಾರ ಮಸ್ತಕವನ್ನು ಹಿಡಿದು । ಅಂದವಾಗಿ ತ್ರಿಪುಂಡವ ಕೊರೆದರು ॥ 55

ಅವರ ಈ ಸಾಹಸವ ನೋಡಿ । ದಾದಾರ ಮನದಲಿ ಎದೆಗುದಿ ।
ಬಾಬಾರೆಲ್ಲಿ ಸಿಡಿಯುವರೇ ಕೋಪದಿ । ಎಂಥ ಧಾರ್ಷ್ಟ್ಯ ಇದನೆನ್ನಬೇಕು ॥ 56

ಹೀಗೆ ನಡೆಯದಿದ್ದದು ನಡೆದರೂ । ಬಾಬಾ ಸುಮ್ಮನೇ ಇದ್ದರು ।
ಅಷ್ಟೇಕೆ ಇನ್ನೂ ಪ್ರಸನ್ನರಾಗೇ ಕಂಡರು । ಒಂದಿಷ್ಟೂ ಸಿಟ್ಟಾಗಲಿಲ್ಲ ಅವನಲಿ ॥ 57

ಆ ಸಮಯವೇನೋ ಕಳೆಯಿತು । ಆದರೂ ದಾದಾರ ಮನದಲಿ ಕಿರಿಕಿರಿ ಉಳಿಯಿತು ।
ಬಾಬಾರ ಕೇಳಿದರು ಅದ ಕುರಿತು । ಅದೇ ದಿನ ಸಾಯಂಕಾಲ ಕೇಳಿದರು ॥ 58

ನಾವು ಒಂದಿಷ್ಟೇ ಗಂಧವನ್ನು । ತಮ್ಮ ಹಣೆಯಲಿ ಇಡಬೇಕು ಇನ್ನು ।
ಎನುವಾಗಲೇ ಮುಟ್ಟಗೊಡದಿರುವಿರಿ ಮುಖವನ್ನು । ಇಂದು ಬೆಳಿಗ್ಗೆ ಮಾತ್ರ ಹೇಗೆ ನಡೆಯಿತು ॥ 59

ನಮ್ಮ ಗಂಧದ್ದು ಬೇಸರ । ಪಂಡಿತರ ತ್ರಿಪುಂಡದ ಅಕ್ಕರೆ ।
ಇದು ಎಂಥ ವಿಚಿತ್ರ ಪ್ರಕಾರ । ತಾಳೆಯೊಂದೂ ಕೂಡದು ॥ 60

ಆಗ ಪ್ರೀತಿಯಲಿ ಸಸ್ಮಿತ ವದನರು । ಸಾಯಿ ದಾದಾರಿಗೆ ನುಡಿದರು ।
ಮನಗೊಟ್ಟು ಕೇಳಿರೆಲ್ಲರೂ । ಬಾಬಾರ ಮಧುರ ನುಡಿಗಳನು ॥ 61

"ಅವನು ಜಾತಿಯಲಿ ಬ್ರಾಹ್ಮಣ । ನಾನು ಇರುವೆ ಮುಸಲ್ಮಾನ ।
ಆದರೂ ಅವನೇ ಎಂದು ತಿಳಿದು ನನ್ನ । ಗುರು ಪೂಜೆಯನು ಮಾಡಿದನು ॥ 62

ತಾನು ದೊಡ್ಡ ಪವಿತ್ರ ಬ್ರಾಹ್ಮಣ । ಇವನಾದರೋ ಅಪವಿತ್ರ ಯವನ ।
ಹೇಗೆ ಮಾಡಲಿ ಇವನ ಪೂಜನ । ಎಂದವನ ಮನ ಶಂಕಿಸಲಿಲ್ಲ ॥ 63

ನನ್ನನ್ನವ ಮರುಳು ಮಾಡಿದ ಹೀಗೆ । ಏನು ಮಾಡಲೂ ತೋಚದಾಯಿತು ಎನಗೆ ।
ಬೇಡವೆನ್ನುವದು ಉಳಿಯಿತು ಬದಿಗೆ । ನನ್ನನ್ನೇ ವಶಮಾಡಿಕೊಂಡನವ" ॥ 64

ಹೀಗವರ ಉತ್ತರ ಕೇಳಿದರೂ । ವಿನೋದದಲಿ ನುಡಿದರೆಂದು ತಿಳಿದರು ।
ಆದರೂ ಮಾತಿನ ಮರ್ಮವನು ತಿಳಿದರು । ತಿರುಗಿ ಮನೆಗೆ ಹೊರಟಾಗ ॥ 65

ಆದರೂ ಬಾಬಾರ ಈ ಮಾತು । ದಾದಾರ ಮನಸಿಗೆ ಬಹಳೇ ಹತ್ತಿತು ।
ಆದರೂ ಪಂಡಿತರೊಡನೆ ನಡೆದಾಗ ಮಾತು । ಅದರ ಅರ್ಥ ಹೊಳೆಯಿತು ॥ 66

ಧೋಪೇಶ್ವರದ ರಘುನಾಥ ಸಿದ್ಧ । ಕಾಕಾ ಪುರಾಣಿಕವೆಂದು ಪ್ರಸಿದ್ಧ ।
ಪಂಡಿತರವರ ಪದದಲಿ ಸನ್ನದ್ಧ । ಶಿಷ್ಯತ್ವದ ಋಣಾನುಬಂಧದಿಂದ ॥ 67

ಕಾಕಾರನ್ನೇ ಅವರಲ್ಲಿ ಕಂಡರು । ಅದರಂತೆ ಅನುಭವವನ್ನೂ ಪಡೆದರು ।
ಮನದಲಿ ಭಾವನೆ ಇದ್ದಂತೆ ಅವರು । ಭಕ್ತಿ ಪ್ರಭಾವವನ್ನು ಹೊಂದಿರುವರು ॥ 68

ಇರಲಿ ಅವರು ಮಾಡಿಸಿಕೊಳ್ಳುವರು ಎಲ್ಲ ಉಪಚಾರ । ತಮ್ಮ ಮನಸಿನಲಿ ಇದ್ದರೆ ಮಾತ್ರ ।
ಇಲ್ಲದಿದ್ದರೆ ತಾಳಿ ನರಸಿಂಹಾವತಾರ । ಪೂಜೆಯ ತಟ್ಟೆಯನ್ನೆತ್ತಿ ಬಿಸುಟುವರು ॥ 69

ಅಂಥ ರೂಪ ಪ್ರಕಟಿಸಿದಾಗ । ಹತ್ತಿರ ನಿಲ್ಲಲು ಧೈರ್ಯ ಯಾರಿಗಾಗ ।
ಅವರ ವೃತ್ತಿ ಸಿಡಿದೆದ್ದಾಗ । ಜೀವಭಯದಿಂದೋಡುವರೆಲ್ಲರು ॥ 70

ಒಮ್ಮೊಮ್ಮೆ ಅಕಸ್ಮಾತ್ತಾಗಿ ಕ್ರೋಧಿತರಾದರೂ । ಭಕ್ತರ ಮೇಲೆ ಕೆಂಡ ಕಾರುವರು ।
ಒಮ್ಮೊಮ್ಮೆ ಮೇಣದಕಿಂತಲೂ ಮೆತ್ತಗೆನಿಸುವರು । ಶಾಂತಿಕ್ಷಮೆಯ ಪುತ್ಥಳಿಯಾಗಿ ॥ 71

ಒಮ್ಮೊಮ್ಮೆ ಕಾಳಾಗ್ನಿರೂಪರಾಗುವರು । ಭಕ್ತರ ಖಡ್ಗದ ಧಾರೆಯ ಮೇಲೆ ಹಿಡಿಯುವರು ।
ಒಮ್ಮೆ ಬೆಣ್ಣೆಗಿಂತಲೂ ನುಣ್ಣಗಾಗುವರು । ಆನಂದ ವೃತ್ತಿಯು ನಲಿಯುವದು ॥ 72

ಕ್ರೋಧದಿ ಕಂಪಿಸುವರು ಥರಥರ । ಕಣ್ಣು ತಿರುಗಿಸುವರು ಗರಗರ ।
ಆದರೂ ಹೊಟ್ಟೆಯಲಿ ಕರುಣೆಯ ನಿರ್ಝರ । ತಾಯಿಗೆ ಮಗುವಿನ ಮೇಲಿರುವಂತೆ ॥73

ಕ್ಷಣದಲಿ ಮತ್ತೆ ಶಾಂತರಾದಾಗ । ಭಕ್ತರ ಹತ್ತಿರ ಕರೆವರಾಗ ।
ಎನ್ನುವರು "ನಾನಾರ ಮೇಲಾದರೂ ಸಿಟ್ಟಿಗೆದ್ದಾಗ । ನನ್ನ ಬುದ್ಧಿಗೆ ಅದು ತಿಳಿಯುವದೇ ಇಲ್ಲ ॥ 74

ತಾಯಿ ಮಗುವನು ಒದ್ದು ಓಡಿಸಿದಾಗ । ಸಮುದ್ರವು ನದಿಗಳನು ತಿರುಗಿ ಕಳಿಸಿದಾಗ ।
ನಾ ನಿಮ್ಮ ಬಿಟ್ಟೆನು ಹಾಗೆ ಆದಾಗ । ನಿಮ್ಮ ಅಹಿತವ ನಾ ಮಾಡಿಯೇನು ॥ 75

ನಾ ನನ್ನ ಭಕ್ತರ ಅಂಕಿತನು । ಹತ್ತಿರವೇ ಎದ್ದು ನಿಂತಿರುವೆನು ।
ನಿಮ್ಮ ಪ್ರೇಮಕ್ಕಾಗಿ ಹಸಿದಿರುವೆನು । ನಿಮ್ಮ ಕರೆಗೆ ಓಗೊಡುವೆನು" ॥ 76

ಬರೆಯುತ್ತಿರುವಾಗ ಈ ಕಥಾ ಭಾಗ । ಸಹಜದಲೆ ಸಮರ್ಪಕ ಕಥೆಯೊಂದು ನೆನಪಾಯಿತಾಗ ।
ಉದಾಹರಣೆಗಾಗಿ ಹೇಳುವೆನೀಗ । ಚಿತ್ತವಿಟ್ಟದನು ಆಲಿಸಿರಿ ॥ 77

ಕಲ್ಯಾಣದಲ್ಲಿರುವ ಯವನನೊಬ್ಬನು । ಸಿದೀಕ ಫಾಳಕೆ ಹೆಸರಿನವನು ।
ಮಕ್ಕಾ-ಮದೀನಾ ಯಾತ್ರೆಗಳನು । ಮುಗಿಸಿಕೊಂಡು ಶಿರಡಿಗೆ ಬಂದನು ॥ 78

ಆ ವೃದ್ಧ ಹಾಜಿಯು ಬಂದು ಅಲ್ಲಿ । ಉಳಿದನು ಉತ್ತರಾಭಿಮುಖ ಚಾವಡಿಯಲ್ಲಿ ।
ಒಂಭತ್ತು ತಿಂಗಳು ದಾರಿಕಾಯುತಿದ್ದನಲ್ಲಿ । ಆದರೂ ಬಾಬಾ ಒಲಿಯಲಿಲ್ಲ ॥ 79

ಅವನರಾಸು ದೈವ ಕೂಡಿ ಬರಲಿಲ್ಲ । ವ್ಯರ್ಥವಾಯಿತು ಓಡಾಟವೆಲ್ಲ ।
ನಾನಾ ರೀತಿಯ ಪ್ರಯತ್ನಗಳೆಲ್ಲ । ಮಾಡಿದರೂ ಬಾಬಾ ಅವನತ್ತ ನೋಡರು ॥ 80

ಮಶೀದಿಯು ಮುಕ್ತ ದ್ವಾರವು ಅವರಿಗೆಲ್ಲ । ಯಾರಿಗೂ ಎಂಥದೂ ಅಡ್ಡಿ ಎಂಬುದಿಲ್ಲ ।
ಆಫಾಳಕೆಗೆ ಮಾತ್ರ ಆಜ್ಞೆಯಾಗಲಿಲ್ಲ । ಮಶೀದಿಯನು ಹತ್ತಲು ॥ 81

ಫಾಳಕೆ ಮನದಲಿ ಖಿನ್ನನಾದ । ನನ್ನ ಪೂರ್ವಕರ್ಮವೆಂಥದು ।
ಮಶೀದಿಯೊಳಗೆ ಹೋಗಗೊಡದು । ಏನು ಪಾಪವಾಗಿದೆ ನನ್ನಿಂದ ॥ 82

ಹೇಗೆ ಮಾಡಿದರೆ ಪ್ರಸನ್ನರಾದಾರು । ಬಾಬಾ ನನ್ನನ್ನು ಮುಂದೆ ಕರೆದಾರು ।
ದಿನರಾತ್ರಿ ಇದೇ ವಿಚಾರದಲಿರುವರು । ಫಾಳಕೆಗೆ ಈ ಹೃದ್ರೋಗ ಹಿಡಿಯಿತು ॥ 83

ಅಷ್ಟರಲ್ಲಿ ಯಾರೋ ತಿಳಿಸಿದರು । ಉದಾಸೀನರಾಗದಿರಲು ಹೇಳಿದರು ।
ಮಾಧವರಾಯರ ಬೆನ್ನು ಬಿಡದಿರು । ಮನದಿಚ್ಛೆ ಪೂರೈಸುವದು ಎಂದು ॥ 84

ಮೊದಲು ನಂದಿಯ ದರ್ಶನ ಪಡೆಯದೇ । ಶಂಕರನು ಪ್ರಸನ್ನನಾಗಬಹುದೇ ।
ಅವನಿಗೆ ಅವಲಂಬನ ಇದೇ ಮಾರ್ಗದ್ದೇ । ಒಳ್ಳೆಯದೆಂದೆನಿಸಿತು ॥ 85

ಸಕೃದ್ದರ್ಶನದಲಿ ಈ ಮಾತು । ಅತಿಶಯೋಕ್ತಿ ಎನಿಸೀತು ।
ಆದರೂ ಈ ಅನುಭವ ಅನೇಕರಿಗಿತ್ತು । ದರ್ಶನಕೆ ಬಂದ ಭಕ್ತರಲ್ಲಿ ॥ 86

ಯಾರ ಮನದಲಿ ಇರಬೇಕು । ಬಾಬಾರೊಡನೆ ಶಾಂತವಾಗಿ ಮಾತಾಡಬೇಕು ।
ಅಂಥವರೊಡನೆ ಹೋಗಬೇಕು । ಮೊದಲು ಮಾಧವರಾಯನು ॥ 87

ಬಂದವರಾರು ಎಲ್ಲಿಂದ ಏಕೆ । ಸವಿಮಾತಿನಲಿ ತಿಳಿಯಬೇಕು ಇಂತಿಂಥದಕ್ಕೆ ।
ಸೂತೋವಾಚವಾದಾಗ ಮಾತನಾಡುವದಕೆ । ಸಮರ್ಥರು ಉದ್ಯುಕ್ತರಾಗುವರು ॥ 88

ಹಾಜಿಯು ಇದನೆಲ್ಲ ಕೇಳಿಕೊಂಡು । ವಿನಂತಿಸಿದ ಮಾಧವರಾಯರ ಕಂಡು ।
ನನ್ನ ಈ ತಳಮಳವ ದೂರಮಾಡಿರೆಂದು । ದೊರಕಲಾರದ ಇದನು ದೊರಕಿಸಿಕೊಟ್ಟು ॥ 89

ಮಾಧವರಾಯರು ದಾಕ್ಷಿಣ್ಯಕ್ಕೆ ಬಿದ್ದು । ಇರಲಿ ಇಲ್ಲದೇ ಇರಲಿ ಈ ಕಾರ್ಯ ಕಷ್ಟದ್ದು ।
ಒಂದು ಕಲ್ಲು ಒಗೆದು ನೋಡುವದು । ಎಂದು ಗಟ್ಟಿ ಮನಸು ಮಾಡಿದರು ॥ 90

ಹೋದರು ಮಶೀದಿಗೆ, ಮಾಡಿ ಧೈರ್ಯವನು । ಮೆಲ್ಲಗೆ ಹೇಳಿದರು ಈ ಮಾತುಗಳನು ।
"ನೋಡಿರಿ ಬಾಬಾ ಆ ಮುದುಕ ಬಹಳ ನೊಂದಿರುವನು । ಅವನ ಮೇಲೊಂದಿಷ್ಟು ಉಪಕಾರ ಮಾಡಿ ॥ 91

ಹಾಜಿಯು ಮಕ್ಕಾ-ಮದೀನಗಳ ಮುಗಿಸಿ । ಬಂದಿಹನಿಲ್ಲಿ ತಮ್ಮ ದರ್ಶನ ಅಪೇಕ್ಷಿಸಿ ।
ಒಮ್ಮೆ ಅವನನ್ನು ಮಶೀದಿಗೆ ಬರಗೊಡಿಸಿ । ಕರುಣೆಯನೊಂದಿಷ್ಟು ತೋರಬೇಕು ॥ 92

ಅಸಂಖ್ಯವಾಗಿ ಜನ ಬರುವರು । ಮಶೀದಿಯಲ್ಲಿ ತಮ್ಮ ದರ್ಶನ ಪಡೆಯುವರು ।
ಕೂಡಲೇ ತಿರುಗಿ ಹೊರಟು ಹೋಗುವರು । ಇವ ಮಾತ್ರ ಕೊಳೆಯುತ್ತ ಬಿದ್ದಿರುವ ॥ 93

ಬೇರಿಒಮ್ಮೆ ಕೃಪಾ ದೃಷ್ಟಿ । ಆಗಲೊಮ್ಮೆ ಅವಗೆ ಮಶೀದಿಯಲ್ಲಿ ಭೆಟ್ಟಿ ।
ತನ್ನ ಮನದಲಿದ್ದುದನು ಕೇಳಿ ನೋಡಿ । ಕೂಡಲೆ ಹೊರಟು ಹೋಗುವನು" ॥ 94

"ಶಾಮ್ಯಾ ನಿನ್ನ ನೆತ್ತಿಯ ಮೇಲಿನ । ಮಾಂಸ ಇನ್ನೂ ಆರಿಲ್ಲ ।
ಅವನ ಮೇಲೆ ಅಲ್ಲಾನ ದಯೆ ಇಲ್ಲ । ಅದಕೆ ನಾನೇನು ತಾನೇ ಮಾಡಬಲ್ಲೆ ॥ 95

ಅಲ್ಲಾ ಮಿಯಾನ ಋಣ ಇಲ್ಲದಿರೆ । ಯಾರಾದರೂ ಈ ಮಶೀದಿಯ ಸೇರುವರೆ ।
ಇಲ್ಲಿಯ ಫಕೀರನದೇ ಈ ಅಘಟಿತ ಲೀಲೆ ಇದೆ । ನಾನದಕೆ ಹೊಣೆಯಲ್ಲ ॥ 96

ಇರಲಿ ಆ ಭಾವಿಯ ಆಚೆಗೊಂದು । ಕಾಲುದಾರಿಯು ಹೋಗುವದು ।
ನೆಟ್ಟಗೆ ಅಲ್ಲಿಂದ ನಡೆದು ಬರುವಿಯಾ ಎಂದು । ಸ್ಪಷ್ಟವಾಗಿ ನೀ ಅವಗೆ ಕೇಳು ಹೋಗು" ॥ 97

ಹಾಜಿ ಎಂದನು ಎಷ್ಟೇ ಬಿಕ್ಕಟ್ಟು । ದಾರಿ ಇರಲಿ ನಾ ಕಷ್ಟ ಪಟ್ಟು ।
ಬರುವೆನಾದರೆ ನನಗೆ ಪ್ರತ್ಯಕ್ಷ ಭೆಟ್ಟಿ ಕೊಟ್ಟು । ತಮ್ಮ ಪಾದದ ಬಳಿ ಕೂಡ್ರಿಸಿಕೊಳ್ಳಬೇಕು ॥ 98

ಶ್ಯಾಮನು ತಂದ ಉತ್ತರವ ಕೇಳಿ । ಮತ್ತೆ ಬಾಬಾ ಕಳಿಸಿದರು ಹೇಳಿ ।
"ನಾಲ್ವತ್ತು ಸಾವಿರ ರೂಪಾಯಿ ನಾಲ್ಕು ಕಂತುಗಳಲ್ಲಿ । ನೀ ಕೊಡುವೆಯಾ ಎಂದು ಕೇಳಿ ಬಾ" ॥ 99

ಮಾಧವರಾಯನು ನಿರೋಪ ತಂದ । ಕೇಳಿ ಹಾಜಿ ಇದು ಏನು ಕೇಳುವಿರೆಂದ ।
ನಾಲ್ವತ್ತು ಲಕ್ಷಗಳನೂ ಕೊಡುವೆನೆಂದ । ಸಾವಿರದ್ದೇನು ಲೆಕ್ಕ ಅಲ್ಲಿ ॥ 100

ಇದ ಕೇಳಿ ಬಾಬಾ ಕಳಿಸಿದರು ಹೇಳಿ । "ಇಂದು ನಮ್ಮ ಮಶೀದಿಯಲ್ಲಿ ।
ಕುರಿ ಕೊಯ್ಯಬೇಕೆಂದಿದೆ ಮನಸಿನಲಿ । ನಿನಗಾವ ಮಾಂಸ ಇರಲಿ ಹೇಳು ॥ 101

ಅಥವಾ ತುವರ ಅಸ್ಥಿ ಇರಲಿ । ಇಲ್ಲವೇ ವೃಷಣ ವಾಸನೆಯೇ ಮನಸಿನಲಿ ।
ಹೋಗಿ ಕೇಳು ಆ ಮುದುಕನಲಿ । ನಿಶ್ಚಯವಾಗಿ ಅವನಿಗೇನು ಬೇಕು" ॥ 102

ಮಾಧವರಾಯ ಹೇಳಿದ ಎಲ್ಲವನು । ಹಾಜಿಗೆ ಬಾಬಾ ಹೇಳದ್ದನ್ನು ।
ಹಾಜಿಯು ಕಳಕಳಿಯಿಂದ ಹೇಳಿದನು । ನನಗದರಲ್ಲಿಯದೇನೂ ಬೇಕಿಲ್ಲ ॥ 103

ಕೊಡಬೇಕು ತಮ್ಮ ಚಿತ್ತಕ್ಕೆ ತಿಳಿದದ್ದು । "ನನಗೊಂದೇ ಆಸ್ಥೆ ಇರುವದು ।
ನಿಮ್ಮ ಹರಿವಾಣದಲ್ಲಿಯ ರೊಟ್ಟಿಯ ತುಣುಕೊಂದು । ಲಭಿಸಿದರೆ ಕೃತ ಕಲ್ಯಾಣನಾದೇನು" ॥ 104

ಹಾಜಿಯ ಈ ನಿರೋಪ ಪಡೆದು । ಮಾಧವರಾಯರು ತಿರುಗಿ ಬಂದು ।
ಬಾಬಾರಿಗೆ ಹೇಳಿದರೆಲ್ಲ ತಂದು । ತಕ್ಷಣ ಬಾಬಾ ಸಿಟ್ಟಿಗೆದ್ದರು ॥ 105

ಹರಿವಾಣ ಮತ್ತು ನೀರಿನ ಕೊಡವನು ಅತ್ತ । ಎತ್ತಿ ಬಿಸುಡಿದರು ಬಾಗಿಲಿನತ್ತ ।
ಕರಕರನೆ ಹಲ್ಲು ಕಡಿಯುತ್ತ । ಹಾಜಿಯ ಹತ್ತಿರ ಬಂದರು ॥ 106

ಕಫನಿಯ ತಮ್ಮ ಎರಡೂ ಕೈಗಳಲ್ಲಿ । ಎತ್ತಿ ಹಿಡಿದರು ಹಾಜಿಯ ಎದುರಿನಲ್ಲಿ ।
ನುಡಿದರು, "ನೀನೇನು ತಿಳಿದಿರುವಿ ಮನಸಿನಲಿ । ನನ್ನೆದುರು ದೊಡ್ಡಿಸ್ತನ ತೋರಿಸುವೆ ॥ 107

ಮುಪ್ಪಿನತನದ ದಿಮಾಕು ತೋರುವಿ । ಹೀಗೆಯೇ ನೀನು ಕುರಾಣ ಓದಿರುವೆಯೇನು ।
ಮಕ್ಕೆಗೆ ಹೋದ ಜಂಬ ತೋರಿಸುವಿ । ಆದರೆ ನನ್ನನ್ನು ನೀ ತಿಳಿದಿಲ್ಲ" ॥ 108

ಹೀಗೆ ಅವನನು ಹೀಯಾಳಿಸಿದರು । ಅವ್ಯಾಚ್ಯ ಶಬ್ದಗಳಿಂದ ಬೈಯ್ದರು ।
ಬಾಬಾ ತಿರುಗಿ ಮಶೀದಿಗೆ ಬಂದರು । ಹಾಜಿ ಗೊಂದಲದಲಿ ಬಿದ್ದ ॥ 109

ಮಶೀದಿಯ ಅಂಗಳಕ್ಕೆ ಬರಲು । ಮಾಲಗಾರ್ತಿಯವರು ಮಾವಿನ ಹಣ್ಣು ತಂದದದ್ದು ನೋಡಲು ।
ಕೊಂಡುಕೊಂಡೆಲ್ಲ ಹಣ್ಣುಗಳನು । ಕಳಿಸಿದರವನು ಹಾಜಿಗೆ ॥ 110

ಹಾಗೇ ತಿರುಗಿ ಬಂದರು । ತಿರುಗಿ ಆ ಫಾಳಕೇನ ಬಳಿಗೆ ಹೋದರು ।
ಜೇಬಿನಿಂದ ಐವತ್ತೈದು ರೂಪಾಯಿ ತೆಗೆದರು । ಅವನ ಕೈಲಿಟ್ಟರು ಅದನ್ನು ಎಣಿಸಿ ॥ 111

ಆಮೇಲೆ ಅವರಿಬ್ಬರಲಿ ಸ್ನೇಹ ಬೆಳೆಯಿತು । ಹಾಜಿಯನು ಊಟಕ್ಕೆ ಆಮಂತ್ರಿಸಲಾಯಿತು ।
ಆದದ್ದನ್ನು ಇಬ್ಬರೂ ಮರೆತು । ನಿಜರಂಗದಲಿ ಸಮರಸರಾದರು ಹಾಜಿ ॥ 112

ಮುಂದೆ ಮತ್ತವರು ಬಂದರು ಹೋದರು । ಬಾಬಾರ ಪ್ರೀತಿಯಲಿ ಮುಳುಗಿದರು ।
ಮುಂದೆಯೂ ಆಗಾಗ ಬಾಬಾ ಅವರು । ಹಣವನು ಅವರಿಗೆ ಕೊಡುತಿದ್ದರು ॥ 113

ಮೇಘಗಳನ್ನು ಆಧೀನದಲ್ಲಿಡುವಂಥ । ಇದ್ದರು ಆ ಇಂದ್ರನನು ಪ್ರಾರ್ಥಿಸುತ ।
ಸಾಯಿ ಸಮರ್ಥರನು ನೋಡಿ ಇಂಥ । ಚಿತ್ತದಿ ಅಚ್ಚರಿ ಆಯಿತು ॥ 114

ಭಯಂಕರ ಇತ್ತು ಆ ಸಮಯ । ನಭವಾಗಿತ್ತು ತಮೋಮಯ ।
ಪಶುಪಕ್ಷಿಗಳಿಗಾವರಿಸಿತ್ತು ಭಯ । ಬಿರುಗಾಳಿಯೂ ಬೀಸತೊಡಗಿತು ॥ 115

ಸೂರ್ಯಾಸ್ತದ ಸಮಯವಾಗಿತ್ತು । ಒಮ್ಮೆಲೆ ಸುಂಟರಗಾಳಿ ಎದ್ದಿತು ।
ಭಯಂಕರ ಗಾಳಿ ಬೀಸತೊಡಗಿತು । ದುರ್ಧರ ಗಲಿಬಿಲಿ ಉಂಟಾಯಿತು ॥ 116

ಅದರಲ್ಲಿ ಮೇಘಗಳ ಗರ್ಜನೆ । ಮಿಂಚು ಹೊಳೆಯುವದು ಚಕಚಕನೆ ।
ಸುಯ್ಯೆಂಬ ಗಾಳಿಯ ಸೋಬಾನೆ । ಬಿರುಸಾಗಿ ಮಳೆ ಸುರಿಯತೊಡಗಿತು ॥ 117

ಮುಸಲಧಾರೆಯಾಗಿ ಮಳೆ ಸುರಿಯುತಿತ್ತು । ಆಣೆಕಲ್ಲುಗಳು ಘಟಘಟ ಸಿಡಿಯುತ್ತಿದ್ದವು ।
ದನಕರುಗಳು ಒದರತೊಡಗಿದವು । ಗ್ರಾಮಸ್ಥರಿಗೂ ಹೆದರಿಕೆಯಾಯಿತು ॥ 118

ಮಶೀದಿಯ ಛಾವಣಿಯ ಕೆಳಗೆ । ಬೇಡಿಕೊಂಡುಂಬುವನ ಆಶ್ರಯದೊಳಗೆ ।
ದನಕರುಗಳೆಲ್ಲ ಸೇರಿದವು ಒಂದೆಡೆಗೆ । ಮಶೀದಿಯೆಲ್ಲ ತುಂಬಿ ಹೋಯಿತು ॥ 119

ನೀರೇ ನೀರು ನಾಲ್ಕು ಕಡೆ ತುಂಬಿತು । ಹುಲ್ಲೆಲ್ಲ ಹರಕೊಂಡು ಹೋಯಿತು ।
ಒಕ್ಕುತ್ತಿದ್ದ ದವಸವೂ ನೆನೆಯಿತು । ಜನರು ಗಲಿಬಿಲಿಗೊಂಡರು ॥ 120

ಗ್ರಾಮಸ್ಥರೆಲ್ಲ ಹೆದರಿದರು । ಸಭಾಮಂಟಪದಲ್ಲಿ ಬಂದು ತುಂಬಿದರು ।
ಕೆಲವರು ಮಶೀದಿಯ ಆಶ್ರಯಕೆ ನಿಂತರು । ಬಾಬಾರಿಗೆ ಬೇಡಿಕೊಂಡು ॥ 121

ಜೋಗಾಯಿ, ಜಾಖಾಯಿ, ಮರಿಯಾಯಿ । ಮಾರುತಿ ಖಂಡೋಬಾ, ಮ್ಹಾಳಸಾಯಿ ।
ಶನಿಶಂಕರ ಅಂಬಾಬಾಯಿ । ಶಿರಡಿಯಲಿ ಅಲ್ಲಲ್ಲಿ ಇದ್ದರು ॥ 122

ಆದರೂ ಕಠಿಣ ಪ್ರಸಂಗ ಬಂದಾಗ । ಒಬ್ಬರದೂ ಆಗದ ಉಪಯೋಗ ।
ಓಡಾಡುವ ಮಾತಾಡುವ ದೇವರು ಅವರಿಗೆ । ರಕ್ಷಣೆ ನೀಡಬೇಕು ಸಾಯಿಯೇ ॥123

ಕುರಿ ಕೋಳಿಯೊಂದೂ ಬೇಕಿಲ್ಲ ಅವಗೆ । ದುಡ್ಡು ದುಗ್ಗಾಣಿಯೂ ಬೇಡ ಅವಗೆ ।
ಹಸಿದಿರುವನವ ಅವರ ಭಾವಭಕ್ತಿಗೆ । ಅದಕೆ ಸಂಕಟಗಳ ಹೊಡೆದೋಡಿಸುವ ॥ 124

ಜನರು ಹೆದರಿದ್ದನ್ನು ಕಂಡು । ಮಹಾರಾಜರು ಕನಿಕರಗೊಂಡು ।
ಗಾದಿ ಬಿಟ್ಟು ಮುಂದೆ ಬಂದು । ಮಶೀದಿಯ ಕಟ್ಟೆಗೆ ನಿಂತರು ॥ 125

ಮೇಘನಿನಾದದಿಂದ ಸಭೆ ತುಂಬಿತ್ತು । ಕಡಕಡನೆ ಮಿಂಚು ಹೊಡೆಯುತಿತ್ತು ।
ಅಂಥದರಲ್ಲಿಯೇ ಸಾಯಿ ಮಹಾರಾಜರು ನಿಂತು । ಉಚ್ಚ ಸ್ವರದಲಿ ಕರೆದರು ॥ 126

ತನ್ನ ಜೀವಕ್ಕಿಂತಲೂ ತನ್ನ ಭಕ್ತ । ದೇವರಿಗೆ ಸೇರುವನು ಸಾಧುಸಂತ ।
ದೇವರು ಅವರ ಮಾತನನುಸರಿಸುತ । ಅವತಾರ ತಾಳುವರು ಅದಕಾಗಿ ॥ 127

ಭಕ್ತರ ಕೂಗು ಕೇಳಿಕೊಂಡು । ದೇವರು ನಿಲ್ಲುವ ಓಡಿ ಬಂದು ।
ಅವರ ಶಬ್ದಗಳ ಎತ್ತಿಹಿಡಿದು । ರಕ್ಷಿಸುವನು ಅವರ ಭಕ್ತಿಯ ಭಾವ ಕಂಡು ॥ 128

ಕೂಗಿನ ಮೇಲೆ ಕೂಗು ನಡೆಯಿತು । ನಾದದಿಂದ ನಭವೆಲ್ಲ ತುಂಬಿತು ।
ಮಶೀದಿಯೇ ಅಲುಗಾಡಿತೆನ್ನಿಸಿತು । ಕಿವಿಗಡಚಿಕ್ಕಿದವೆಲ್ಲರವು ॥ 129

ಆ ಗಿರಿಗಜರ ತಾರಸ್ವರದಿಂದ । ಮಶೀದಿ-ಮಂದಿರಗಳೆಲ್ಲ ಧ್ವನಿಸಿದವು ಅದರಿಂದ ।
ಮೇಘಗರ್ಜನೆಯೂ ನಿವಾರಿಸಿತು ಅದರಿಂದ । ಮಳೆಯ ಸೆಳಕು ಕಡಿಮೆಯಾಯಿತು ॥130

ಬಾಬಾರ ದೊಡ್ಡ ಗರ್ಜನೆ ಕೇಳಿ ನಿಂತು । ಸಭಾಮಂಟಪವೆಲ್ಲ ಅದುರಿತು ।
ಭಕ್ತ ಜನರಲಿ ಗಜಿಬಜಿಯಾಯಿತು । ತಟಸ್ಥರಾಗಿ ಅಲ್ಲಿಯೇ ಉಳಿದರು ॥ 131

ಅತರ್ಕ್ಯ ಬಾಬಾರ ವಿಧಾನ । ಮಳೆಯದಾಯಿತು ಆಕರ್ಷಣ ।
ಗಾಳಿಯೂ ನಿಂತಿತು ತತ್‌ಕ್ಷಣ । ಆಕಾಶವು ಶುಭ್ರವಾಯಿತು ॥ 132

ಮೆಲ್ಲಗೆ ಮಳೆಯೂ ನಿಂತಿತು । ಬಿರುಗಾಳಿಯೂ ಕಡಿಮೆಯಾಯಿತು ।
ನಕ್ಷತ್ರಗಣ ಉದಯಿಸಿತು । ಕತ್ತಲೆಯೂ ಹರಿಯಿತಾಗ ॥ 133

ಆ ಮೇಲೆ ಮಳೆ ಪೂರ್ತಿ ನಿಂತಿತು । ಬೀಸುವ ಗಾಳಿಯೂ ಕಡಿಮೆಯಾಯಿತು ।
ಗಗನದಲಿ ಚಂದ್ರನ ದರ್ಶನವೂ ಆಯಿತು । ಆನಂದವಾಯಿತು ಎಲ್ಲರಿಗೆ ॥ 134

ಇಂದ್ರನಿಗೂ ದಯೆಯುಂಟಾಯಿತೆನಿಸಿತು । ಉಳಿಸಬೇಕಾಯಿತು ಸಂತರ ಮಾತು ।
ಮೋಡವೆಲ್ಲ ಚದುರಿ ಹೋಯಿತು । ಶಾಂತವಾಯಿತು ಬಿರುಗಾಳಿ ॥ 135

ಮಳೆಯು ಸಂಪೂರ್ಣ ನಿಂತಿತು । ಗಾಳಿಯು ಮೆಲ್ಲಗೆ ಬೀಸತೊಡಗಿತು ।
ಗುಡುಗುವುದೂ ನಿಂತು ಹೋಯಿತು । ಧೈರ್ಯ ಬಂದಿತು ಪಶುಪಕ್ಷಿಗಳಿಗೆ ॥ 136

ಮನೆಗಳ ಚಾಟು ಬಿಟ್ಟು ದನಕರುಗಳು । ತೊಡಗಿದವು ಹೊರಗೆ ಓಡಾಡಲು ।
ನಿರ್ಭಯ ಮನದಿಂದ ಪಕ್ಷಿಗಳು । ಆಕಾಶದಲಿ ಹಾರಾಡತೊಡಗಿದವು ॥ 137

ಇದುವರೆಗಿನ ಭಯಂಕರ ಪ್ರಕಾರವನು ನೆನೆಸಿ । ಬಾಬಾರ ಉಪಕಾರವನು ಸ್ಮರಿಸಿ ।
ಜನರೆಲ್ಲ ಹೊರಟರು ಮನೆಗಳನ್ನು ಅರಸಿ । ನಿಂತಿದ್ದ ದನಗಳೂ ಚದುರಿದವು ॥ 138

ಹೀಗೆ ಈ ಸಾಯಿ ಪ್ರೇಮದ ಮೂರ್ತಿ । ಭಕ್ತರ ಬಗ್ಗೆ ಅವನ ಅಂತಃಕರಣ ಅತಿ ।
ತಾಯಿ ಮಕ್ಕಳದೆಂತೋ ಪ್ರೀತಿ । ಹೀಗವನ ಪ್ರೀತಿಯನೇನು ಬಣ್ಣಿಸಲಿ ॥ 139

ಅಗ್ನಿಯ ಮೇಲೂ ಇದೇ ಅಧಿಕಾರ । ಸಂಕ್ಷಿಪ್ತವಾಗಿ ಹೇಳುವೆ ಕಥೆ ಇದರ ।
ಶ್ರೋತೃಗಳೇ ಕೇಳಿರಿ ಸಾದರ । ಅವರ ಅಪೂರ್ವ ಶಕ್ತಿ ತಿಳಿದೀತು ॥ 140

ಒಮ್ಮೆ ಮಧ್ಯಾಹ್ನದ ಹೊತ್ತು । ಧುನಿಯ ಅಗ್ನಿ ಪ್ರಜ್ವಲಿಸಿತು ।
ಭಯಂಕರ ಜ್ವಾಲೆ ಉರಿಯತೊಡಗಿತು । ಅದರ ಹತ್ತಿರ ಯಾರು ನಿಂತಾರು ॥ 141

ಜ್ವಾಲೆಯು ಪ್ರಚಂಡವಾಯಿತು । ಶಖೆ ಛಾವಣಿಯ ಮುಟ್ಟತೊಡಗಿತು ।
ಮಶೀದಿಯೇ ಸುಟ್ಟ ಹೋದಿತು । ಭಸ್ಮವಾದೀತು ಕ್ಷಣದಲಿ ॥ 142

ಆದರೂ ಬಾಬಾ ಸ್ವಸ್ಥಚಿತ್ತರು । ಜನರೆಲ್ಲ ಚಿಂತಾಗ್ರಸ್ತರು ।
ಬೆರಳು ಕಚ್ಚುತ್ತಿದ್ದರೆಲ್ಲರೂ । ಏನಿದು ಬಾಬಾರ ಹೆಚ್ಚಳವೆಂದು ॥ 143

ಒಬ್ಬರು ನೀರು ತನ್ನಿರೆನ್ನುವರು । ತಂದರೆ ಹಾಕುವರಾರೆನ್ನುವರು ಇನ್ನೊಬ್ಬರು ।
ಹಾಕಿದರೆ ತಲೆಗೆ ಬಡಿಗೆ ಏಟೇ ಎನ್ನುವರು । ಯಾರಾ ಸ್ಥಳಕೆ ಹೋದಾರು ॥ 144

ಅಧೀರರಾಗಿದ್ದರೂ ಎಲ್ಲರು ಮನದಲ್ಲಿ । ಕೇಳಲು ಯಾರಿಗೆ ಧೈರ್ಯವೆಲ್ಲಿ ।
ಬಾಬಾರೇ ಎದ್ದು ಕೈಯಲ್ಲಿ । ಸಟಕಾವ ಹಿಡಿದರು ॥ 145

ಹೊತ್ತಿ ಉರಿಯುವ ಜ್ವಾಲೆಯ ಕಂಡು । ಕೈಯಲ್ಲಿ ತಮ್ಮ ಕೋಲು ತೆಗೆದುಕೊಂಡು ।
ಏಟಿನ ಮೇಲೆ ಏಟು ಹಾಕುತಿದ್ದು । ಎನುತಿದ್ದರು 'ನಡೆ, ಹಿಂದೆ ಸರಿ' ॥ 146

ಧುನಿಯಿಂದ ಒಂದು ಕೈ ಅಂತರದ ಮೇಲೆ । ಆಘಾತ ಮಾಡುತಿದ್ದರು ಅಲ್ಲಿದ್ದ ಕಂಬದ ಮೇಲೆ ।
ಆ ಜ್ವಾಲೆಯತ್ತ ನೋಡುತ್ತಲೇ । 'ಸಾಕು ಸಾಕಿನ್ನು' ಎನುತಿದ್ದರು ॥ 147

ಪೆಟ್ಟು ಪೆಟ್ಟಿಗೆ ಕೆಳಗೆ ಕೆಳಗೆ । ಇಳಿಯ ತೊಡಗಿದಾಗ ಅಗ್ನಿ ಮೆತ್ತಗೆ ।
ಧುನಿ ಆಗ ಶಾಂತವಾದಾಗ್ಗೆ । ಭಯವೆಲ್ಲ ಹಾರಿ ಹೋಯಿತು ॥ 148

ಇಂಥ ಈ ಸಾಯಿ ಸಂತವರ । ಈಶ್ವರನದೇ ಇನ್ನೊಂದು ಅವತಾರ ।
ಅವನ ಚರಣದಲಿಡಲು ಶಿರ । ಕೃಪೆಯ ಹಸ್ತವನಲ್ಲಿ ಇಡುವನು ॥ 149

ಆಗಿ ಶ್ರದ್ಧಾಭಕ್ತಿಯುಕ್ತ । ಈ ಅಧ್ಯಾಯದ ಪಾರಾಯಣವನು ನಿತ್ಯ ।
ಮಾಡಲು ಆಗಿ ಸ್ವಸ್ಥಚಿತ್ತ । ಆಪತ್ತಿನಿಂದ ಮುಕ್ತಿಯಾದೀತು ॥ 150

ಹೆಚ್ಚಿಗೇನಿದೆ ಹೇಳಲು । ಶುದ್ಧರಾಗಿ ಅಂತಃಕರಣದೊಳು ।
ನಿಷ್ಠೆ ಇಟ್ಟು ಸಾಯಿ ಚರಣದೊಳು । ಇರಲು ಬ್ರಹ್ಮಸನಾತನವ ಪಡೆಯುವಿರಿ ॥ 151

ಅಪೂರ್ವ ಇಚ್ಛಿತ ಕಾಮನೆ ಪಡೆಯುವಿರಿ । ಕೊನೆಗೆ ಪೂರ್ಣ ನಿಷ್ಕಾಮರಾಗುವಿರಿ ।
ದುರ್ಲಭವಾದ ಸಾಯುಜ್ಯ ಪದವ ಪಡೆಯುವಿರಿ । ಅಖಂಡ ಕಾಮವ ಹೊಂದುವಿರಿ ॥ 152

ಯಾವ ಭಕ್ತರ ಮನದೊಳು । ಇದೆ ಪರಮಾರ್ಥ ಸುಖವ ಭೋಗಿಸಲು ।
ಅವರು ಈ ಅಧ್ಯಾಯಾನುವೃತ್ತಿಯಲೂ । ಆದರ ವೃತ್ತಿಯನಿಡಬೇಕು ॥ 153

ಶುದ್ಧವಾಗುವದು ಚಿತ್ತ ವೃತ್ತಿ । ಕಥಾ ಸೇವನೆಯಿಂದ ಪರಮಾರ್ಥ ಪ್ರವೃತ್ತಿ ।
ಇಷ್ಟ ಪ್ರಾಪ್ತಿ ಅನಿಷ್ಟ ನಿವೃತ್ತಿ । ಪ್ರಚೀತಿ ಇದು ಬಾಬಾರದು ॥ 154

ಹೇಮಾಡಪಂತನು ಸಾಯಿಗೆ ಶರಣ । ಮುಂದಿನ ಅಧ್ಯಾಯ ಅತಿ ಪಾವನ ।
ಗುರುಶಿಷ್ಯರದದು ಮಹಿಮಾನ । ಘೋಲಪ ದರ್ಶನ ಗುರು ಪುತ್ರನಿಗೆ ॥ 155

ಶಿಷ್ಯನಿಗೆ ಎಂಥ ಪ್ರಸಂಗವೇ ಬರಲಿ । ಅದರಿಂದ ನಿಜಗುರುವನು ತ್ಯಜಿಸದಿರಲಿ ।
ತೋರಿ ಅದರ ಪ್ರತ್ಯಕ್ಷ ಅನುಭವವನಿಲ್ಲಿ । ಸಾಯಿ ದೃಢಭಾವ ಬೆಳೆಸುವರು ॥ 156

ಪ್ರತಿಯೊಬ್ಬರಿಗೆ ದರ್ಶನದಲೆಲ್ಲ ಹೊಸತನ । ಬೇರೆ ಬೇರೆಯವರಿಗೆ ಬೇರೆ ಬೇರೆಯದನ ।
ಅಲ್ಲಿಯೇ ದೃಢಪಡಿಸಿದರು ಅವನ । ಚರಣಕೆ ಬಂದ ಭಕ್ತರನು ॥ 157


ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಶ್ರೀ ಸಾಯಿ ಮಹಿಮಾನ ವರ್ಣನಂ ನಾಮ
ಏಕಾದಶೋಧ್ಯಾಯಃ ಸಂಪೂರ್ಣಃ ॥ 158

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥







## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹನ್ನೆರಡು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜಯ ಜಯ ಸದ್ಗುರು ಸಾಯಿನಾಥ । ನಮಿಸುವೆನು ಚರಣದಲಿ ಶಿರವನಿಡುತ ।
ನಿರ್ವಿಕಾರ ಅಖಂಡೈಕ ಸ್ವರೂಪತ್ವ । ಶರಣಾಗತರಿಗೆ ಕೃಪಾಕರ ॥ 1

ಸಚ್ಚಿದಾನಂದಾ ಆನಂದಂಕದಾ । ಭವದ ವಾರ್ತಾಸೌಖ್ಯ ನಿಷ್ಪಂದಾ ।
ಅದ್ವೈತ ಬೋಧದಲಿ ಧ್ವೈತ ಭಂದವ । ಮಂದಮತಿಗಳಿಗೂ ತಿಳಿಸುವಿ ॥ 2

ಎಲ್ಲೆಲ್ಲಿಯೂ ಪೂರ್ಣ ತುಂಬಿದೆ । ಗಗನದಲ್ಲಿಯೂ ವಿಸ್ತರಿಸಿದೆ ।
ನಿನ್ನ ಸ್ವರೂಪವ ಚಿತ್ರಿಸಿದರದೇ । ಅನುಭವಿಗಳು ಬಲು ದೈವಶಾಲಿಗಳು ॥ 3

ಸಾಧುಗಳದಾಗಬೇಕು ಸಂರಕ್ಷಣ । ಅಸಾಧುಗಳದು ಸಮೂಲ ನಿರ್ದಾಲನ ।
ಇದಕಾಗಿಯೇ ಈಶ್ವರ ಅವತರಣ । ಅದಕ್ಕಿಂತ ಸಂತರು ವಿಲಕ್ಷಣ ॥ 4

ಸಾಧು, ಅಸಾಧು ಇಬ್ಬರೂ ಸಮಾನ । ಒಬ್ಬರ ಹಿರಿತನ ಇನ್ನೊಬ್ಬನ ಕಿರಿತನ ।
ಇದನು ತಿಳಿಯದು ಅವರ ಮನ । ಸಂತರು ಸಮಸಮಾನರು ಇಬ್ಬರಿಗೂ ॥ 5

ಸಂತರು ಈಶ್ವರನಿಗಿಂತ ದೊಡ್ಡವರು । ಅ ಸಾಧುವನು ಮೊದಲು ಓಡಿಸುವರು ।
ದೀನರಿಗಾಗಿ ಪ್ರೇಮದಿ ತುಂಬಿರುವರು । ಅವರಿಗಾಗಿ ಮನ ತಳಮಳಿಸುವದು ॥ 6

ಭವಸಾಗರಕಿವರು ಅಗಸ್ತಿ । ಅಜ್ಞಾನ ತಮಕಿವರು ಗಭಸ್ತಿ ।
ಪರಮಾತ್ಮನದು ಇಲ್ಲಿಯೇ ವಸತಿ । ವಸ್ತುತಃ ತದಭಿನ್ನರಿವರು ॥ 7

ಇಂಥವರಲ್ಲಿ ಈ ಸಾಯಿ ನನ್ನವನು । ಭಕ್ತ ಕಾರ್ಯಕ್ಕಾಗಿ ಅವತರಿಸಿದನು ।
ಮೂರ್ತಿಮಂತ ಜ್ಞಾನರಾಜನು । ಕೈವಲ್ಯ ತೇಜಾಧಿಷ್ಠಿತ ॥ 8

ಜೀವ ಮಾತ್ರದಲಿ ಅತ್ಯಂತ ಮಮತೆ । ಬೇರೆಡೆಗೆ ಅತ್ಯಂತ ಅನಾಸಕ್ತತೆ ।
ಎಲ್ಲಿ ಸತ್ತೆ ಎಲ್ಲಿ ವಿರಕ್ತತೆ । ನಿರ್ವೈರ ಸುಮತೆಯು ಎಲ್ಲೆಡೆಗೆ ॥ 9

ಯಾರಿಗೆ ಶತ್ರು ಮಿತ್ರ ಭಾವವಿಲ್ಲ । ಯಾರಿಗೆ ಸಮಾನರು ಬಡವ ಬಲ್ಲಿದರೆಲ್ಲ ।
ಇಂಥ ಸಾಯಿ ಮಹಾನುಭಾವನಿರುವನಲ್ಲ । ಅವನ ಪ್ರಭಾವವ ಕೇಳಿರಿ ॥ 10

ತಮ್ಮ ಪುಣ್ಯವನು ಸಂತರು । ಭಕ್ತರ ಪ್ರೇಮಕ್ಕಾಗಿ ವ್ಯಯಿಸುವರು ।
ಭಕ್ತರಿಗಾಗಿ ಓಡಿ ಹೋಗುವರು । ನೋಡದೆ ತಗ್ಗು ದಿನ್ನೆ ಬಾವಿ ಕೆರೆಗಳ ॥ 11

ಒಬ್ಬರು ಅಜ್ಞಾನಿಗಳಿರುವರೆಂದು ತಿಳಿಯರು । ಪರಮಾರ್ಥವ ಹೇಗೆ ಪಡೆವರು ।
ಸ್ತ್ರೀ-ಪುತ್ರ-ಧನಕಾಮಿಗಳು ತೊಳಲುತಿರುವರು । ಪಾಪ ಅವರೇನು ತಿಳಿದಾರು ॥ 12

ಇಂಥ ತಿಳುವಳಿಕೆ ಇಲ್ಲದ ಅಬಲ ಅಜ್ಞಾನಿಗಳನು । ದೇವರು ಕೃಪೆ ತೋರಿ ಪೊರೆಯುವನು ।
ದೇವರ ಬಿಟ್ಟು ದೇವರಿಂದ ವಿಮುಖರಾದವರನು । ಅಭಿಮಾನವು ದಹಿಸುವದು ॥ 13

ಅಜ್ಞಾನಿಗಳ ಬಗ್ಗೆ ದಯೆ ಬಂದು । ಸಂತರು ಅವರನು ಪ್ರೀತಿಸಬಹುದು ।
ನಿಜ ವಿಶ್ವಾಸ ಪಡೆಯಬಹುದು । ಆದರೆ ಜ್ಞಾನದ ಅಭಿಮಾನ ನಿಷ್ಫಲ ॥ 14

ಪಂಡಿತರೆನಿಸುವ ಮೂಢಮತಿಗಳು । ಸುಮ್ಮನೆ ಉಬ್ಬುವರು ಶುಷ್ಕಾಭಿಮಾನಿಗಳು ।
ಭಕ್ತಿ ಪಂಥದ ಅವಹೇಳನೆಯೊಳು । ತೊಡಗಿದವರ ಸಂಗವೇ ಬೇಡ ॥ 15

ವರ್ಣಸಂಕರದ ಬಂಡಾಯ ಬೇಡ । ವರ್ಣಾಭಿಮಾನದ ಗೊಡ್ಡುತನ ಬೇಡ ।
ವರ್ಣಾಶ್ರಮ ಧರ್ಮಲಂಡರಾಗುವದು ಬೇಡ । ಪಾಖಂಡ ಪಂಡಿತರಾಗುವದೂ ಬೇಡ ॥ 16

ವೇದವೇದಾಂಗ ಪಾರಂಗತ । ಜ್ಞಾನ ಗರ್ವದಿಂದ ಮದೋನ್ಮತ್ತ ।
ಭಕ್ತಿ ಮಾರ್ಗಕ್ಕೆ ಅಡ್ಡ ಬರುತ । ಅಂಥವರ ಗತಿ ಸರಿ ಕಾಣದು ॥ 17

ಅಜ್ಞಾನಿಗಳು ವಿಶ್ವಾಸದ ಆಧಾರದಿಂದ । ಪಾರಾದರು ಭವಭಯವ ತೊಡಕಿನಿಂದ ।
ಆದರೆ ಈ ಶಾಸ್ತ್ರಪಂಡಿತರ ಒಗಟದ । ಒಡೆತ ಯಾರಿಂದಲೂ ಸಾಧ್ಯವಿಲ್ಲ ॥ 18

ಸಂತರ ಚರಣಗಳಲ್ಲಿ ವಿಶ್ವಾಸವಿಡಿದು । ಅಜ್ಞಾನಿಗಳ ಅಜ್ಞಾನ ನಿರಸನವಾಗುವದು ।
ಜ್ಞಾನಾಭಿಮಾನಿಗಳ ವಿಕಲ್ಪ ಕಳೆಯದು । ಸದ್ಭಾವವೆಂದಿಗೂ ಬರಲಾರದವರಿಗೆ ॥ 19

ಇರಲೊಮ್ಮೆ ಸುದೈವವು ಒದಗಿ ಬಂದಾಗ್ಗೆ । ಸಂಗತಿ ಒಂದು ನಡೆಯಿತು ಹೇಗೆ ।
ಇತ್ತೊಬ್ಬ ಕರ್ಮಠನ ಲಲಾಟದೊಳಗೆ । ಅಲಭ್ಯ ಭೆಟ್ಟಿ ಸಾಯಿಯದು ॥ 20

ಆತನ ಸಂಕಲ್ಪವೇ ಬೇರೆ ಇತ್ತು । ಯೋಗಾಯೋಗ ಬೇರೆ ಒದಗಿತು ।
ಅದರಿಂದವಗೆ ಶಿರಡಿ ಲಭಿಸಿತು । ಕಂಡನವನು ನಿಜಗುರುವನು ॥ 21

ಇದು ಅತಿ ಸುರಸಕಥಾನಕ । ಗುರು ಮಹಾತ್ಮ್ಯ ಪ್ರಕಾಶಕ ।
ಇದ ಕೇಳುವದು ಅವಶ್ಯಕ । ಪ್ರೇಮದರ್ಶಕವಿದು ಭಕ್ತರಿಗೆ ॥ 22

ನಾಶಿಕ ಕ್ಷೇತ್ರದ ಕರ್ಮಠ ಮಡಿವಂತ । ಅಗ್ನಿಹೋತ್ರಿಯವ ಮುಳೆ ಎಂಬಾತ ।
ಪೂರ್ವ ಪುಣ್ಯವು ಫಲಿಸುತ । ಶಿರಡಿಗೊಮ್ಮೆ ಬಂದನು ॥ 23

ಈ ಪುಣ್ಯದ ಬಲವಿಲ್ಲದವರು । ಶಿರಡಿಯಲಿ ಒಂದು ಕ್ಷಣ ಉಳಿಯಲಾರರು ।
ಯಾರದು ಎಂಥ ಪ್ರಬಲ ನಿಶ್ಚಯವಿದ್ದರೂ । ಬಾಬಾರೆದುರು ಅವರಾಟ ನಡೆಯದು ॥ 24

ಯಾರಾದರೂ ನಾನಿಲ್ಲರುವೆನೆನಲು । ಇಲ್ಲವೇ ನಾನೀಗ ಹೋಗುವೆನೆನಲು । ಅಲ್ಲಿ ಅವರು
ಸರ್ವಸ್ವದಲಿ ಪರಾಧೀನರಾಗಿರಲು । ಅವರಾಧೀನ ಏನೂ ಇರದು ॥ 25

ಇಂಥ ನಾನಾ ಎನ್ನುವವರು । ನಿಶ್ಚಯ ಮಾಡಿ ದಣಿದರು ಅನೇಕರು ।
ಸಾಯಿ ಒಬ್ಬರೇ ಸ್ವತಂತ್ರ ದೇವರು । ಉಳಿದವರ ಅಹಂ ಅಲ್ಲಿ ಅಳಿದು ಹೋಗುವದು ॥ 26

ತಮ್ಮ ಸರದಿ ಬರದೇ ಎಂದೂ । ಬಾಬಾರಗೆ ತಮ್ಮ ಸ್ಮರಣೆ ಬರದು ।
ಅವರ ಗುಣವರ್ಣನೆಯೂ ಕಿವಿಗೆ ಬೀಳದು । ದರ್ಶನ ಸ್ಫುರಣೆ ಎಲ್ಲಿಯದು ॥ 27

ಸಾಯಿ ಸಮರ್ಥರ ದರ್ಶನಕೆ ಹೋಗಲು । ಎಷ್ಟೋ ಜನರ ಇಚ್ಛೆ ಇರಲು ।
ಅವರಿಗೆ ಯೋಗವೇ ಬಾರದಿರಲು । ಸಾಯಿ ನಿರ್ವಾಣದವರೆಗೆ ॥ 28

ಹೋದರಾಯಿತು ಎಂದುಕೊಂಡು । ದೀರ್ಘ ಸೂತ್ರತೆ ಅಡ್ಡ ಬಂದು ।
ಬರಭೇಕೆನ್ನುತ್ತಲೇ ಉಳಿದುಕೊಂಡು । ಬಾಬಾರೂ ಅಷ್ಟರಲಿ ನಿರ್ಗಮಿಸಿದರು ॥ 29

ಇಂದು ನಾಳೆ ಎನುತ್ತ ಹೋದರು । ಕೊನೆಗೆ ಪ್ರತ್ಯಕ್ಷ ಭೆಟ್ಟಿಯ ಕಳೆದುಕೊಂಡರು ।
ಹೀಗೇ ಪಶ್ಚಾತ್ತಾಪಪಟ್ಟರು । ಕೊನೆಗೂ ದರ್ಶನ ಲಾಭವಾಗದೇ ॥ 30

ಇಂಥವ ಉಳಿದುಹೋದ ಕ್ಷುಧೆ । ಆದರ ಪೂರ್ವಕ ಕೇಳಲವರ ಕಥೆ ।
ಹಾಲಿನ ಹಸಿವೆ ಮಜ್ಜಿಗೆಯಿಂದೆಂಬಂತೆ । ವಿಶ್ವಾಸವೊಂದಿಟ್ಟರೆ ತೀರೀತು ॥ 31

ಸುದೈವದಿಂದ ಅಲ್ಲಿಗೆ ಹೋದರು । ದರ್ಶನ ಸ್ಪರ್ಶನದಿಂದ ಹರ್ಷಿಸಿದರು ।
ಆದರೆ ಅವರೇನು ಯಥೇಚ್ಛೆ ಅಲ್ಲಿ ಉಳಿದರೆ । ಬಾಬಾ ಹಾಗಿರಿಸಬೇಕಲ್ಲ ॥ 32

ತಮ್ಮಿಷ್ಟ ಬಂದಾಗ ಯಾರೂ ಹೋಗಲಾಗದು । ಇರಬೇಕೆನಿಸಿದರೂ ಇರಲಾಗದು ।
ಆಜ್ಞೆ ಇರುವವರೆಗೆ ಮಾತ್ರ ಇರುವದು । ಹೋಗೆಂದಾಗ ತಿರುಗಿ ಹೋಗಬೇಕು ॥ 33

ಒಮ್ಮೆ ಕಾಕಾ ಮಹಾಜನಿಯವರು । ಮುಂಬಯಿಯಿಂದ ಶಿರಡಿಗೆ ಹೋದರು ।
ಒಂದು ವಾರ ಅಲ್ಲಿ ಉಳಿದವರು । ತಿರುಗಿ ಹೋಗಬೇಕೆಂದುಕೊಂಡಿದ್ದರು ॥ 34

ಅಂದವಾಗಿ ಸಿಂಗರಿಸುವರು ಚಾವಡಿಯನ್ನು । ಬಾಬಾರೆದುರು ಕಟ್ಟುವರು ತೊಟ್ಟಿಲನ್ನು ।
ಮಾಡುವರು ಕೃಷ್ಣ ಜನ್ಮೋತ್ಸವವನು । ಆನಂದದಿ ನಲಿವರು ಭಕ್ತ ಜನ ॥ 35

ಗೋಕುಲಾಷ್ಟಮಿಯ ಹಬ್ಬವನ್ನು । ಕಣ್ಣುಗಳಿಂದ ನೋಡಿ ಅದನ್ನು ।
ಇಂಥ ಮೋಜಿನ ಸಮಯವನ್ನು । ಸಾಧಿಸಿ ಶಿರಡಿಗೆ ಬಂದಿದ್ದರವರು ॥ 36

ಆರಂಭದಲೇ ಬಾಬಾರ ದರ್ಶನವನ್ನು । ತೆಗೆದುಕೊಳ್ಳಲು ಹೋದಾಗ ಬಾಬಾ ಕೇಳಿದವರನ್ನು ।
ತಿರುಗಿ ಊರಿಗೆ ಯಾವಾಗ ಹೋಗುವೆ ನೀನು । ವಿಸ್ಮಯವಾಯಿತು ಕಾಕಾರಿಗೆ ॥ 37

ಹೋದ ಕೂಡಲೇ ಏಕೆ ಈ ಪ್ರಶ್ನೆ । ಕಾಕಾ ಆದರು ವಿಸ್ಮಯಾಪನ್ನ ।
ಶಿರಡಿಯಲಿರಬೇಕು ಎಂಟು ದಿನ । ಎಂದವರ ಮನದಲಿದ್ದಿತು ॥ 38

ಬಾಬಾರೇ ಪ್ರಶ್ನೆ ಕೇಳಲಿಂತು । ಕಾಕಾ ಉತ್ತರ ಕೊಡಲೇ ಬೇಕಾಯಿತು ।
ಇದಕೆ ಯೋಗ್ಯ ಉತ್ತರವನ್ನೇ ಕೊಡಬೇಕಾಯಿತು । ಇದನು ಬಾಬಾರೇ ಸೂಚಿಸಿದ್ದರಿಂದ ॥ 39

ಬಾಬಾರ ಆಜ್ಞೆ ಸಿಕ್ಕಾಗೇ । ನಾ ತಿರುಗಿ ಹೋಗುವೆ ಮನೆಗೆ ।
ಈ ಉತ್ತರ ಬರಲು ಕಾಕಾರ ಬಾಯಿಗೆ । ನಾಳೆಯೇ ಹೊರಡಬಹುದೆಂದರು ॥ 40

ಅವರಾಜ್ಞೆಯನು ಶಿರಸಾವಹಿಸಿ । ಬಾಬಾರನ್ನು ಅಭಿವಂದಿಸಿ ।
ಅಷ್ಟಮಿಯ ಹಬ್ಬವನು ಮುಂದೆ ಇರಿಸಿ । ಕೊಂಡು ಪ್ರಯಾಣ ಬೆಳೆಸಿದರದೇ ದಿನ ॥ 41

ಮುಂದವರು ಊರಿಗೆ ಬಂದರು ತಿರುಗಿ । ಅಂಗಡಿಗೆ ಹೋಗಿ ನೋಡಲಾಗಿ ।
ಒಡೆಯ ದಾರಿ ಕಾಯುತಿದ್ದ ಇವರಿಗಾಗಿ । ಯಾವಾಗ ತಿರುಗಿ ಬಂದಾರೆಂದು ॥ 42

ಆಕಸ್ಮಾತ್ತಾಗಿ ಮುನೀಮನಿಗೆ ಜಡ್ಡಾಗಿತ್ತು । ಮಾಲಿಕನಿಗೆ ಕಾಕಾರ ಅವಶ್ಯಕತೆ ಇತ್ತು ।
ಶಿರಡಿಗೆ ಪತ್ರವನೂ ಕಳಿಸಿಯಾಗಿತ್ತು । ಕಾಕಾರಿಗೆ ಬೇಗ ಬರಬೇಕೆಂದು ॥ 43

ಹೊರಟ ಮೇಲೆ ಕಾಕಾ ಅಲ್ಲಿಂದ । ಟಪಾಲಿನವ ಅವರನ್ನು ಹುಡುಕಿದ ।
ಮತ್ತೆ ಆ ಪತ್ರವನು ತಿರುಗಿ ಕಳಿಸಿದ । ತಮ್ಮ ಮನೆಯಲಿ ಕಾಕಾರಿಗದು ಸಿಕ್ಕಿತು ॥ 44

ಕೇಳಿರೀಗ ಇದರ ವಿರುದ್ಧ । ಹೇಳುವೆನು ಅಲ್ಪ ಕಥೆಯೊಂದ ।
ಭಕ್ತನು ತನ್ನಭೀಷ್ಟವ ತಿಳಿಯದ । ಬಾಬಾ ಸ್ಪಷ್ಟವಾಗಿ ಅದನರಿತಿರುವರು ॥ 45

ಒಮ್ಮೆ ನಾಶಿಕದ ಪ್ರಸಿದ್ಧ ವಕೀಲರು । ಭಾವೂ ಸಾಹೇಬ ಧುಮಾಳ ಎಂಬವರು ।
ಬಾಬಾರ ಒಬ್ಬ ಪ್ರೇಮದ ಭಕ್ತರವರು । ಕೇವಲ ದರ್ಶನಕ್ಕೆಂದು ಬಂದರು ॥ 46

ತೆಗೆದುಕೊಂಡು ದರ್ಶನ । ಮಾಡಿ ಚರಣಕೆ ವಂದನ ।
ತೆಗೆದುಕೊಂಡು ಉದಿ ಪ್ರಸಾದಗಳನ । ತಿರುಗಿ ಹೋಗಬೇಕೆಂದಿತ್ತು ಮನದಿ ॥ 47

ತಿರುಗಿ ಬರುವ ದಾರಿಯಲಿ ನಿಫಾಢ ಊರಿಗೆ । ಇಳಿಯಬೇಕಾಗಿತ್ತು ಧುಮಾಳರಿಗೆ ।
ಅಲ್ಲಿ ನಡೆದ ಒಂದು ಮೊಕದ್ದಮೆಗೆ । ಹಾಜರಾಗುವದು ಅವಶ್ಯವಿತ್ತು ॥ 48

ಇದು ಅವರ ಯೋಜನೆಯಾಗಿದ್ದರೂ । ಉಚಿತಾನುಚಿತವನು ಬಾಬಾ ತಿಳಿಯುವರು ।
ತಿರುಗಿ ಹೊರಡಲು ಆಜ್ಞೆಯ ಕೇಳಿದರು । ಬಾಬಾ ಒಪ್ಪಲಿಲ್ಲ ಅದಕೆ ॥ 49

ಒಂದು ವಾರ ಇಟ್ಟುಕೊಂಡರು । ಆಜ್ಞೆ ಕೊಡಲು ಸ್ಪಷ್ಟವಾಗಿ ನಿರಾಕರಿಸಿದರು ।
ಸುನಾವಣೆಯೂ ಮುಂದೆ ಬಿತ್ತು । ಹಾಗೇ ಮೂರು ವಾರಗಳವರೆಗೆ ॥ 50

ವಾರದ ಮೇಲೆಯೂ ಕೆಲ ದಿನ । ಇಟ್ಟುಕೊಂಡರು ಧುಮಾಳರನ ।
ಇತ್ತ ಮೊಕದ್ದಮೆಯ ತಾರೀಖಿನ ದಿನ । ನ್ಯಾಯಾಧೀಶನೇ ಅಸ್ವಸ್ಥನಾಗಿದ್ದ ॥ 51

ಎಂದೂ ಗೊತ್ತಿಲ್ಲ ಜನ್ಮದಲ್ಲೇ । ಅಂಥ ದುರ್ಧರವಾದ ಹೊಟ್ಟೆ ಶೂಲೆ ।
ಮುಂದೆ ಹಾಕಬೇಕಾಯಿತು ಮೊಕದ್ದಮೆಯನದರಿಂದಲೇ । ಧುಮಾಳರ ಸಮಯ ಸಾರ್ಥಕವಾಯಿತು ॥ 52

ಪಕ್ಷಕಾರರ ಚಿಂತೆ ಇನಿತೂ । ಇಲ್ಲದೆ ಸಾಯಿ ಸಹವಾಸ ದೊರಕಿತು ।
ಅಪ್ರಯಾಸವಾಗೇ ಇದೆಲ್ಲ ನಡೆಯಿತು । ವಿಶ್ವಾಸವಿಟ್ಟದ್ದರಿಂದ ಬಾಬಾರ ಮೇಲೆ ॥ 53

ಮುಂದೆ ಯೋಗ್ಯ ಕಾಲ ಬಂತು । ಧುಮಾಳರಿಗೆ ಒಪ್ಪಿಗೆ ಸಿಕ್ಕಿತು ।
ಕಾರ್ಯವೆಲ್ಲ ಸರಿಯಾಗಿ ನಡೆಯಿತು । ಬಾಬಾ ಅಘಟಿತವ ತೋರಿದರು ॥ 54

ನಾಲ್ಕು ತಿಂಗಳು ಮೊಕದ್ದಮೆ ನಡೆಯಿತು । ನ್ಯಾಯಾಧೀಶರು ನಾಲ್ಕು ಜನ ಆಯಿತು ।
ಆದರೂ ಕೊನೆಗೆ ಯಶ ದೊರಕಿತು । ನಿರ್ದೋಷ ಬಿಡುಗಡೆಯಾದ ಆರೋಪಿ ॥55

ಒಮ್ಮೆ ಒಬ್ಬ ಭಕ್ತಪ್ರವರ । ನಾನಾಸಾಹೇಬ ನಿಮೋಣಕರ ।
ಅವರ ಹೆಂಡತಿಗೆ ಇತ್ತು ಸಹಕಾರ । ಹೇಗೆ ಸಹಾಯ ಮಾಡಿದರೆಂಬುದ ಕೇಳಿ ॥ 56

ನಿಮೋಣ ಊರಿನ ವತನದಾರರು । ನ್ಯಾಯಾಧೀಶರಾಗಿದ್ದರವರು ।
ಸರಕಾರದಿಂದ ಆ ಹುದ್ದೆಯ ಪಡೆದಿದ್ದರು । ಊರಲ್ಲಿ ಮರ್ಯಾದೆ ಪಡೆದಿದ್ದರು ॥ 57

ಮಾಧವರಾಯರ ಪಿತೃವ್ಯ ಜೇಷ್ಠ । ವಯೋವೃದ್ಧರು ಪೂಜ್ಯರು ಶ್ರೇಷ್ಠ ।
ಪತ್ನಿಯೂ ಇದ್ದಳು ಏಕನಿಷ್ಠ । ಸಾಯಿಯೇ ಇಷ್ಟ ದೈವತ ಅವರಿಗೆ ॥ 58

ಬಿಟ್ಟು ತಮ್ಮ ವತನದ ಊರು । ಇಬ್ಬರೂ ಶಿರಡಿಯಲ್ಲಿಯೇ ವಾಸವಾಗಿದ್ದರು ।
ಸಾಯಿ ಚರಣದಲಿ ಭಕ್ತಿ ಇಟ್ಟಿದ್ದರು । ಸುಖಸ್ವಭಾವದಿಂದಿರುತಿದ್ದರು ॥ 59

ಬ್ರಾಹ್ಮೀ ಮುಹೂರ್ತದಲಿ ಏಳುತ್ತ । ಪ್ರಾತಃಸ್ನಾನ ಪೂಜೆಗಳನು ಮುಗಿಸುತ್ತ ।
ಹೋಗುತ್ತಿದ್ದರು ಚಾವಡಿಯತ್ತ । ನಿತ್ಯಕಾಕಡಾರತಿ ಮೊದಲು ॥ 60

ಆ ಮೇಲೆ ತಮ್ಮ ಸ್ತೋತ್ರಗಳನ್ನು ಅನ್ನುತ್ತ । ನಾನಾ ಬಾಬಾರ ಹತ್ತಿರವೇ ಇರುತ ।
ಆಗಿ ಅವರ ಸೇವೆಯಲಿ ನಿರತ । ಸಾಯಂಕಾಲದವರೆಗೂ ॥ 61

ಲೇಂಡಿಗೆ ಬಾಬಾರ ಕರೆದೊಯ್ಯುವರು । ಮತ್ತೆ ಮಶೀದಿಗೆ ಕರೆತರುವರು ।
ಮುಂದೆ ಕಂಡದ್ದನ್ನೆಲ್ಲ ಸೇವೆ ಮಾಡುವರು । ಪ್ರೇಮ ಪೂರ್ಣ ಮನಸ್ಸಿನಿಂದ ॥ 62

ಆ ಸ್ತ್ರೀಯೂ ತನ್ನದೇ ಆದ ರೀತಿಯನ್ನು । ಅನುಸರಿಸಿ ಅವರ ಸೇವೆಯನ್ನು ।
ತನ್ನ ಕೈಲಿ ಆದದ್ದನ್ನು । ದಿನವೆಲ್ಲಾ ಅಲ್ಲಿಯೇ ಇದ್ದು ಮಾಡುತ್ತಿದ್ದಳು ॥ 63

ಮಾತ್ರಸ್ನಾನ ಪಾನಕ್ಕೆ । ಅಡಿಗೆ ಊಟಮಾಡುವುದಕ್ಕೆ ।
ಇಲ್ಲವೇ ರಾತ್ರಿ ಮಲಗುವುದಕ್ಕೆ । ತನ್ನ ಮನೆಗೆ ತೆರಳುತ್ತಿದ್ದಳು ॥ 64

ಉಳಿದೆಲ್ಲ ಕಾಲವನ್ನು ಅವರು । ಮುಂಜಾವು ಮಧ್ಯಾಹ್ನ ಸಂಜೆ ಮೂರು ।
ಹೊತ್ತು ಆ ದಂಪತಿಗಳು ಕಳೆಯುತ್ತಿವರು । ಬಾಬಾರ ಹತ್ತಿರವೇ ಇದ್ದು ॥ 65

ಇಬ್ಬರೂ ಮಾಡುವ ಸೇವೆ ವರ್ಣಿಸುತ । ದೊಡ್ಡದಾದೀತು ಈ ಗ್ರಂಥ ।
ನಡೆದ ಸಂಗತಿಯನ್ನಷ್ಟೇ ವಿವರಿಸುತ । ಈ ಭಾಗವನು ತಿಳಿಸುವೆ ॥ 66

ಸ್ತ್ರೀಗೆ ಬೇಲಾಪುರಕ್ಕೆ ಹೋಗಬೇಕಾಗಿತ್ತು । ಅಲ್ಲಿ ಮಗನಿಗೆ ಸ್ವಾಸ್ಥ್ಯ ಕೆಟ್ಟಿತ್ತು ।
ಹೋಗುವುದಕೆ ಸಿದ್ಧತೆಯಾಗಿತ್ತು । ಪತಿಯನ್ನೂ ವಿಚಾರಿಸಿ ॥ 67

ಆಮೇಲೆ ನಿತ್ಯ ಕ್ರಮವನನುಸರಿಸಿ । ಬಾಬಾರ ಕಿವಿ ಮೇಲೆ ಸಂಗತಿ ಇರಿಸಿ ।
ಅವರ ಅನುಮತಿಯ ಸ್ವೀಕರಿಸಿ । ಪತಿಯ ಮುಂದೆ ಹೇಳಿದಳು ॥ 68

ಹೀಗೆಲ್ಲ ನಿಶ್ಚಯವಾಗಿ । ಬೇಲಾಪುರಕ್ಕೆ ಹೋಗುವುದು ಗೊತ್ತಾಗಿ ।
ಆಗ ನಾಳೆಯೇ ಬರಬೇಕು ತಿರುಗಿ । ಎಂದು ನಾನಾ ನುಡಿದರು ॥ 69

ಇರಬೇಕು ಏನೋ ಕಾರಣ । ಅದಕ್ಕೇ ನಾನಾ ನುಡಿದರಿದನ್ನು ।
ಹೋದರೂ ಕೂಡಲೇ ಬರಬೇಕೆಂಬದನ್ನು । ಕೇಳಿ ಅವರ ಸತಿಗೆ ಹೇಗೋ ಎನಿಸಿತು ॥ 70

ಮರುದಿನ ಶ್ರಾವಣದ ಅಮಾವಾಸ್ಯೆ । ಅಲ್ಲಿಯೇ ಇರಬೇಕು ಅದೊಂದು ದಿವಸ ।
ಸ್ತ್ರೀ ಮನಸಿನಲಿ ಈ ಆಸೆ । ನಾನಾರ ಮನಸಿಗಿದುಬಾರದು ॥ 71

ಅಲ್ಲದೇ ಅಮವಾಸ್ಯೆಯ ದಿನದಂದು । ಸರಿಯಲ್ಲ ಊರಿಗೆ ಬರುಹೋಗವದು ।
ಏನು ಮಾಡಬೇಕೆಂದವಳಿಗೆ ತೋಚದು । ಹೇಗೆ ಈ ಪ್ರಶ್ನೆ ಬಗೆಹರಿಯಬೇಕು ॥ 72

ಬೇಲಾಪುರಕೆ ಹೋಗದ ಹೊರತು । ಅವಳಿಗೆ ಹೇಗೆ ಸಮಾಧಾನವಾದೀತು ।
ಪತಿಯ ಆಜ್ಞೆಯ ಮೀರಿ ಎಂತು । ಹೋಗುವದು ಅವನ ಮನ ಮುರಿದು ॥ 73

ಆಮೇಲೆ ಎಲ್ಲ ಸಿದ್ಧತೆ ಮಾಡಿಕೊಂಡು । ಹೊರಟಳು ಬೇಲಾಪುರಕ್ಕೆಂದು ।
ಲೇಂಡಿಗೆ ಹೊರಟ ಬಾಬಾರಿಗೆ ಬಂದು । ನಮಸ್ಕಾರ ಮಾಡಿದಳು ॥ 74

ಎಲ್ಲರೂ ಊರಿಗೆ ಹೊರಡುವ ಮುಂದೆ । ನಿರ್ವಿಘ್ನ ಪ್ರವಾಸವಾಗಲೆಂದೇ ।
ದೇವರಿಗೆ ನಮಸ್ಕಾರ ಮಾಡುವದದೆ । ಅದೇ ಪದ್ಧತಿ ಶಿರಡಿಯಲ್ಲಿ ॥ 75

ಸಾಯಿಯೇ ಶಿರಡಿಯ ದೇವರು । ಹೊರಡುವ ಅವಸರ ಎಷ್ಟೇ ಇದ್ದರೂ ।
ಅವರ ಪಾದಕ್ಕೆರಗುವರು । ಹೊರಡುವ ಸಮಯದಲ್ಲಿ ॥ 76

ಅಲ್ಲಿಯ ಈ ಕ್ರಮಾನುಸಾರವಾಗಿ । ಸಾಠೆಯವರ ವಾಡೆಯ ಎದುರಿಗೆ ।
ಬಾಬಾ ಒಂದು ಕ್ಷಣ ನಿಂತಾಗ್ಯೆ । ಆ ಸ್ತ್ರೀ ಬಾಬಾರಿಗೆ ನಮಸ್ಕಾರ ಮಾಡಿದಳು ॥ 77

ನಾನಾ ಸಾಹೇಬ ನಿಮೋಣಕರರು । ಮೊದಲಾಗಿ ಚಿಕ್ಕವರು ದೊಡ್ಡವರು ।
ದರ್ಶನ ತತ್ಪರರಾಗಿ ಅಲ್ಲಿಗೆ ಬಂದವರು । ಬಾಬಾರಿಗೆ ನಮಸ್ಕಾರ ಮಾಡುವರು ॥ 78

ಹೀಗೆಲ್ಲ ಬಂದ ಜನರೆದುರಿಗೆ । ವಿಶೇಷವಾಗಿ ನಾನಾನ ಎದುರಿಗೇ ।
ಬಾಬಾ ನುಡಿದರು ಆ ಸ್ತ್ರೀಗೆ । ಸಮಯೋಚಿತವಾಗಿ ಏನನ್ನು ತಿಳಿಯಿರಿ ॥ 79

ಹಣೆಯ ಹಚ್ಚಿ ಅವರ ಪಾದಗಳಿಗೆ । ಹೋಗಿ ಬರಲು ಆಜ್ಞೆ ಕೇಳಿದಾಗ್ಗೆ ।
ಹೋಗಿನ್ನು ಬೇಗ ಹೋಗು । ಅಲ್ಲಿ ಸ್ವಸ್ಥ ಚಿತ್ತದಿಂದಿರು ॥ 80

ಹೋದ ಹಾಗೆ ನಾಲ್ಕು ದಿನ ಕಳೆದು । ಸುಖವಾಗಿ ಬೇಲಾಪುರದಲಿದ್ದು ।
ಎಲ್ಲರನ್ನೂ ಕೇಳಿಕೊಂಡು । ತಿರುಗಿ ಶಿರಡಿಗೆ ಬಾ ನೀನು ॥ 81

ಕೇಳಿ ಈ ಬಾಬಾನ ವಚನ । ಸ್ತ್ರೀಗೆ ಅಕಲ್ಪಿತ ಸಮಾಧಾನ ।
ನಿಮೋಣಕರರೂ ತಿಳಿದರಿದನ । ಪತಿಪತ್ನಿಯರಿಬ್ಬರಿಗೂ ಹಿತವದು ॥ 82

ಸಾರಾಂಶವೆಂದರೆ ನಾವೊಂದು ವಿಚಾರ ಮಾಡುವೆವು । ಅದರ ಆದಿ ಅಂತಗಳ ತಿಳಿಯೆವು ನಾವು ।
ಸಂತರಿಗೆ ಗೊತ್ತು ಹಿತಾಹಿತವು । ಅವರು ಅರಿಯದ್ದು ಏನೂ ಇರದು ॥ 83

ಭೂತ ಭವಿಷ್ಯ ವರ್ತಮಾನ । ಕರತಲಾಮಲಕದವರಿಗೆ ಅವರ ಜ್ಞಾನ ।
ಅವರ ಆಜ್ಞೆಯಂತೆ ಇಟ್ಟರೆ ವರ್ತನ । ಭಕ್ತರು ಸುಖಸಂಪನ್ನರಾಗುವರು ॥ 84

ಇರಲಿನ್ನು ಪೂರ್ವಕಥಾನುಸಂಧಾನ । ನಡೆಸುವ ಮುಖ್ಯ ಕಥಾ ನಿರೂಪಣ ।
ಮುಳೆ ಎಂಬುವನ ಮೇಲೆ ತೋರಿ ಕೃಪೆಯನ್ನು । ಅವನ ಗುರುವಿನ ದರ್ಶನ ಕೊಟ್ಟರು ॥ 85

ಶ್ರೀಮಂತ ಬಾಪೂಸಾಹೇಬ ಬುಟ್ಟಿಯವರಿಗಷ್ಟು । ಭೆಟ್ಟಿಯಾಗುವ ಉದ್ದೇಶವಿತ್ತು ।
ಆಮೇಲೆ ಕೂಡಲೇ ತಿರುಗಿ ಹೊರಟು । ಹೋಗಬೇಕೆಂದು ಮುಳೆಯವರ ವಿಚಾರವಿತ್ತು ॥ 86

ಹೀಗವರದೇನೋ ಉದ್ದೇಶವಿತ್ತು । ಆದರೆ ಬಾಬಾರ ಸಂಕೇತ ಬೇರೆಯಾಗಿತ್ತು ।
ಆ ಚಮತ್ಕಾರ ಅದರ ಗುಟ್ಟು । ಮನಸಿಟ್ಟು ಕೇಳಿರಿ ॥ 87

ಶ್ರೀಮಂತರ ಭೆಟ್ಟಿಯಾಯಿತು । ಜನವೆಲ್ಲ ಮಶೀದಿಗೆ ಹೊರಟಿತು ।
ಮುಳೆಯವರಿಗೂ ಇಚ್ಛೆಯಾಯಿತು । ಜನರ ಕೂಡ ತಾವೂ ಹೊರಟರು ॥ 88

ಮುಳೆಗೆ ಷಟ್‌ಶಾಸ್ತ್ರಗಳ ಅಧ್ಯಯನ । ಜ್ಯೋತಿರ್ವಿದ್ಯೆಯಲಿಯೂ ಅತಿ ಪ್ರವೀಣ ।
ಅದರಂತೆಯೇ ಹಸ್ತಸಾಮುದ್ರಿಕದಲ್ಲಿಯೂ ಪರಿಪೂರ್ಣ । ದರ್ಶನವಾದ ಕೂಡಲೇ ಮೈಮರೆತರು ॥ 89

ಫೇಡೆ ಬತ್ತಾಸು ಬರ್ಫಿಗಳ । ತೆಂಗು ಕಿತ್ತಳೆ ಮೊದಲಾದ ಫಲಗಳ ।
ಅರ್ಪಿಸುತ್ತಿದ್ದರು ಸಾಕಷ್ಟು ಜನಗಳೆಲ್ಲ । ಬಾಬಾರ ಪ್ರೀತಿಗೆ ಭಕ್ತಿಯಿಂದ ॥ 90

ಅಲ್ಲಿ ಮಾಲಗಾರ್ತಿಯರು ಬರುವರು । ಪೇರಲ ಬಾಳೆ ಕಬ್ಬುಗಳನ್ನು ತರುವರು ।
ಮನ ತಿಳಿದರೆ ಬಾಬಾ ಕೊಂಡುಕೊಳ್ಳುವರು । ತಮ್ಮ ಕೈಯಿಂದ ದುಡ್ಡು ಕೊಟ್ಟು ॥ 91

ತಮ್ಮ ಪದರಿನ ದುಡ್ಡು ಕೊಡುವರು । ಮಾವಿನ ಹಣ್ಣಿನ ಬುಟ್ಟಿಗಳ ಕೊಳ್ಳುವರು ।
ಬೇಕಾದಷ್ಟು ಬಾಳೆಹಣ್ಣುಗಳನ್ನೂ ತರಿಸುವರು । ಮನಸೋಕ್ತ ಭಕ್ತರಿಗೆ ಹಂಚುವರು ॥ 92

ಒಂದೊಂದು ಮಾವಿನಹಣ್ಣು ಕೈಯಲಿ ತೆಗೆದುಕೊಂಡು । ಎರಡೂ ಅಂಗೈಗಳ ಮಧ್ಯದಲ್ಲಿ ಹಿಡಿದು ।
ಅದನು ತಿಕ್ಕಿ ಮೆತ್ತಗೆ ಮಾಡಿದ್ದು । ಭಕ್ತರಿಗೆ ತಿನ್ನಲು ಕೊಡುವರು ॥ 93

ಮಾವಿನಹಣ್ಣು ಹಚ್ಚಲು ತುಟಿಗೆ । ಒಮ್ಮೆಲೆ ರಸ ಇಳಿಯಬೇಕು ಹೊಟ್ಟೆಯೊಳಗೆ ।
ತುಂಬಿ ಇಟ್ಟಂತೆ ಬಟ್ಟಲೊಳಗೆ । ಸಿಪ್ಪೆ ಗೊರಟಗಳ ಒಗೆಯುವದು ಬಾಕಿ ॥ 94

ಬಾಳೇಹಣ್ಣಿನದಂತೂ ಕಥೆ ಏನು । ಭಕ್ತ ತಿನ್ನಬೇಕು ತಿರುಳನ್ನು ।
ಬಾಬಾ ತಿನ್ನುವರು ಸಿಪ್ಪೆಯನ್ನು । ಇದೆಂಥ ಅದ್ಭುಥ ಶೈಲಿಯೋ ॥ 95

ಈ ಎಲ್ಲ ಹಣ್ಣುಗಳನ್ನು ಬಾಬಾ ಅವರು । ಎಲ್ಲರಿಗೂ ತಮ್ಮ ಕೈಯಿಂದಲೇ ಹಂಚುತಿದ್ದರು ।
ಮನ ತಿಳಿದರೆ ತಾವು ರುಚಿ ನೋಡುತ್ತಿದ್ದರು । ಒಂದೊಂದು ಸಲ ಮಾತ್ರ ॥ 96

ಕೇವಲ ಭಕ್ತ ಜನರಿಗಾಗಿ ಅವರು । ಈ ಪರಿಪಾಠವನಿಟ್ಟಿದ್ದರು ।
ಬಾಳೇಹಣ್ಣಿನ ಬುಟ್ಟಿಗಳನ್ನು ಕೊಂಡುಕೊಳ್ಳುತ್ತಿದ್ದರು । ಬಾಬಾ ಅವುಗಳನು ಹಂಚುತಿದ್ದರೆಲ್ಲರಿಗೂ ॥ 97

ಆಶ್ಚರ್ಯವಾಯಿತು ಶಾಸ್ತ್ರೀಗಳಿಗೆ । ಬಾಬಾರ ಚರಣಗಳ ನೋಡಿದಾಗ್ಗೆ ।
ಧ್ವಜ ವಜ್ರಾಂಕುಶ ರೇಖೆ ನಿರೀಕ್ಷಣೆಗೆ । ಮನ ಆತುರಗೊಂಡಿತು ॥ 98

ಆಗ ಕಾಕಾ ಸಾಹೇಬ ದೀಕ್ಷಿತರು । ಅಲ್ಲಿ ಹತ್ತಿರದಲ್ಲಿಯೇ ನಿಂತಿದ್ದರು ।
ಬಾಬಾರ ಕೈಯಲ್ಲಿ ಅವರಿಟ್ಟರು । ನಾಲ್ಕು ಬಾಳೇಹಣ್ಣುಗಳನ್ನು ॥ 99

ಯಾರೋ ಬಾಬಾರಿಗೆ ವಿನಂತಿಸಿದರು । ಕ್ಷೇತ್ರದಲ್ಲಿ ವಾಸಿಸುವ ಮುಳೆ ಶಾಸ್ತ್ರಿಗಳು ಬಂದಿರುವರು ।
ಪುಣ್ಯವೆಂದೇ ತಮ್ಮ ಚರಣಗಳ ಕಂಡರು । ಪ್ರಸಾದದ ಫಲಗಳನವರಿಗೂ ಕೊಡಬೇಕೆಂದು ॥ 100

ಯಾರಿಗೆ ಏನನ್ನು ಕೊಡವದು ಬಿಡುವದು । ಮಾಡುವರವರು ತಮ್ಮ ಮನ ತಿಳಿದದ್ದು ।
ಬೇರೆಯವರ ವಿನಂತಿಯಲ್ಲಿ ನಡೆಯದು । ಅವರು ತಮ್ಮ ಇಚ್ಛೆಯ ರಾಜರು ॥ 101

ಹಣ್ಣಲ್ಲ ಮುಳೆ ಕೈಯ ಬೇಡುವರು । ಅದಕಾಗಿ ತಮ್ಮ ಕೈಯ ಮುಂದೊಡ್ಡುವರು ।
ಬಾಬಾ ಅತ್ತ ಲಕ್ಷ ಕೊಡರು । ಪ್ರಸಾದ ಹಂಚುವರೆಲ್ಲರಿಗೆ ॥ 102

ಮುಳೆ ಬಾಬಾರಿಗೆ ವಿನಂತಿಸಿದರು । ಹಣ್ಣಲ್ಲ ತಮ್ಮ ಕೈ ಕೊಡಿರೆಂದರು ।
ಹಸ್ತ ಸಾಮೂದ್ರಿಕವನು ತಿಳಿದಿಹೆನೆಂದರು । ಆದರೂ ಬಾಬಾ ಅವರಿಗೆ ಕೈ ತೋರಿಸರು ॥ 103

ಆದರೂ ಮುಳೆ ಮುಂದೆ ಸರಿದರು । ಸಾಮುದ್ರಿಕಕ್ಕೆ ಕೈ ಚಾಚಿದರು ।
ಬಾಬಾ ಅತ್ತ ಕಣ್ಣೆತ್ತಿ ನೋಡರು । ತಮಗದು ತಿಳಿಯದೆಂಬಂತೆ ॥ 104

ಪಸರಿಸಿದ ಮುಳೆಯವರ ಕೈಯಲ್ಲಿ । ನಾಲ್ಕು ಬಾಳೇಹಣ್ಣುಗಳನಿಡುತಲಿ ।
ಕುಳಿತುಕೊಳಲು ಹೇಳಿದರೇ ವಿನಃ । ಅವರ ಕೈಯಲ್ಲಿ ನಿಜಹಸ್ತ ನೀಡಲಿಲ್ಲ ॥ 105

ಆಜನ್ಮ ಈಶ್ವರಾರ್ಥ ಸವೆಸಿದರು ದೇಹವನು । ಅಂಥವರಿಗೆ ಸಾಮೂದ್ರಿಕದಿಂದಾಗುವದೇನು ।
ಸದ್ಭಕ್ತರಿಗೆ ತಂದೆ ತಾಯಿಯಾದವನು । ಅವಾಪ್ತ ಸಕಳಕಾಮ ಸಾಯಿರಾಯ ॥ 106

ಬಾಬಾರ ನಿಃಸ್ಪೃಹತೆಯನು ಕಂಡು । ಸಾಮುದ್ರಿಕದ ಬಗ್ಗೆ ಉದಾಸೀನರಿದ್ದುದು ತಿಳಿದು ।
ಶಾಸ್ತ್ರಿಗಳು ತಮ್ಮ ಕೈ ಹಿಂತೆಗೆದುಕೊಂಡು। ಅವರ ವಿಚಾರವ ಬಿಟ್ಟರು ॥ 107

ಸ್ವಲ್ಪ ಹೊತ್ತು ಸುಮ್ಮನೆ ಕುಳಿತರು । ಜನರೊಡನೆ ವಾಡೆಗೆ ಹೋದರು ।
ಸ್ನಾನ ಸಂಧ್ಯೆ ಮುಗಿಸಿ ಮಡಿ ಉಟ್ಟುಕೊಂಡರು । ಅಗ್ನಿ ಹೋತ್ರವ ಆರಂಭಿಸಿದರು ॥108

ನಿತ್ಯ ಕ್ರಮದಂತೆ ಇತ್ತಕಡೆಗೆ । ಬಾಬಾ ಹೊರಟರು ಲೇಂಡಿಗೆ ।
ಹೇಳಿದರು ಗೇರು ಬಟ್ಟೆ ತೆಗೆದುಕೊಳ್ಳಲು ಜೊತೆಗೆ । ಇಂಥದನು ಪರಿದಾನ ಮಾಡಬೇಕು॥ 109

ಆಶ್ಚರ್ಯಬಟ್ಟರೆಲ್ಲರೂ । ಇಂದೇಕೆ ಗೇರು ಬಟ್ಟೆ ಎಂದರು ।
ಎಲ್ಲರೂ ವಿಚಾರ ಮಾಡತೊಡಗಿದರು । ಇಂದೇಕೆ ಗೇರು ಬಟ್ಟೆ ನೆನಪಾಯಿತಿವರಿಗೆ ॥ 110

ಬಾಬಾರದು ಹೀಗೆ ಸಂದಿಗ್ಧ ಮಾತು । ಯಾರಿಗದರ ಅರ್ಥ ತಿಳಿದಿತು । ಆದರೂ
ಆದರದಿಂದ ಶ್ರವಣದಿ ಹೊತ್ತು । ಅದರರ್ಥದ ವಿಚಾರವ ಬಿಟ್ಟರು ॥ 111

ಸಂತಜನರು ಮಾತಾಡವುದು । ಅರ್ಥಹೀನವೆಂದೂ ಇರದು ।
ಆಳವಾದ ಅರ್ಥವುಳ್ಳದ್ದು । ಅದರ ಬೆಲೆ ಕಟ್ಟುವರಾರು ॥ 112

ಮೊದಲು ವಿಚಾರ ಆಮೇಲೆ ಉಚ್ಚಾರ । ಇದು ಅವರ ನಿತ್ಯದ ವ್ಯವಹಾರ ।
ಉಚ್ಚಾರದಂತೆ ಆಚಾರ । ಸಂತರ ಆಚರಣೆಯು ಹೀಗೆ ॥ 113

ಈ ಸರ್ವಮಾನ್ಯ ಸಿದ್ಧಾಂತಾನುಸಾರ । ಸಂತವಚನಗಳಿರವು ನಿಃಸಾರ ।
ನೆನಪಿಟ್ಟು ಮಾಡಲು ವಿಚಾರ । ಆಗದರ ಅರ್ಥ ಹೊಳೆಯುವುದು ॥ 114

ಇರಲಿ ಇತ್ತ ಕಡೆ ಬಾಬಾರ ಸವಾರಿ ತಿರುಗಿ ಬಂತು । ಅದರ ಗುರತಾಗಿ ಕಹಳೆ ಮೊಳಗಿತು।
ಮೊದಲೇ ಮುಳೆಯವರಿಗೆ ಸೂಚನೆ ಇತ್ತು । ಬಾಪೂ ಸಾಹೇಬ ಜೋಗ ಅವರು ಇಟ್ಟಿದ್ದರು ॥ 115

ಆರತಿಯ ಸಮಯವಾಯಿತು । ಮಸೀದಿಗೆ ಹೋಗುವ ಮಾತು ಬಂತು ।
ಶಾಸ್ತ್ರಿಗಳಿಗೆ ಕಷ್ಟಕ್ಕಿಟ್ಟಿತ್ತು । ಅವರ ಮಡಿ ಮೈಲಿಗೆಯ ವಿಷಯವಾಗಿ ॥ 116

ಪ್ರತ್ಯುತ್ತರವಾಗಿ ನುಡಿದರಿಂತು । ಸಾಯಂಕಾಲ ಹೋದರಾಯಿತು ।
ಜೋಗ ಅವರಿಗೆ ಹೋಗಬೇಕಾಯಿತು । ಅದಕೆ ಆರತಿ ಸಿದ್ಧತೆ ನಡೆಸಿದರು ॥ 117

ಬಾಬಾ ತಿರುಗಿ ಬಂದರು । ನಿಜಾಸನದಲ್ಲಿ ಕುಳಿತರು ।
ಎಲ್ಲರೂ ಪೂಜೆ ಮಾಡಿದರು । ಮಾಡಿದಾರತಿಯ ಇಳಿಸಿದರು ॥ 118

ಅಷ್ಟರಲ್ಲಿ ಬಾಬಾ ನುಡಿದದ್ದು । ಹೊಸ ಬ್ರಾಹ್ಮಣನಿಂದ ದಕ್ಷಿಣೆ ತನ್ನಿರೆಂದು ।
ಬಾಪೂಸಾಹೇಬ ಬುಟ್ಟಿಯವರು ತತ್ಕಾಲದಲ್ಲಿ ಎದ್ದು । ದಕ್ಷಿಣೆ ಕೇಳಲು ಹೋದರು ॥ 119

ಅದೇ ಮುಳೆ ಸ್ನಾನ ಮುಗಿಸಿ । ಮಡಿ ವಸ್ತ್ರವನ್ನು ಧರಿಸಿ ।
ಆಸನದಲ್ಲಿ ಮಂಡಿಸಿ । ಸ್ವಸ್ಥ ಚಿತ್ತನಾಗಿದ್ದ ॥ 120

ನಿರೋಪವನ್ನು ಕೇಳಿದಾಗ್ಯೆ । ವಿಕ್ಷೇಪ ಹುಟ್ಟಿತು ಮನಸಿನೊಳಗೆ ।
ನಾನೇಕೆ ದಕ್ಷಿಣೆ ಕೊಡಬೇಕಿವರಿಗೆ । ನಾನೇ ಶುದ್ಧ ಅಗ್ನಿಹೋತ್ರಿ ಇರುವಾಗ ॥ 121

ಬಾಬಾ ದೊಡ್ಡ ಸಂತರಿರಬಹುದು । ಆದರೆ ನಾನೇನು ಅವರ ಅಂಕಿತನೇ ಎಂದು ।
ನನ್ನ ಹತ್ತಿರ ಅವರೇಕೆ ದಕ್ಷಿಣೆ ಕೇಳುವುದು । ಅಸ್ವಸ್ಥ ಮನವಾಯಿತು ॥ 122

ಸಾಯಿಯಂಥವರು ದಕ್ಷಿಣೆ ಕೇಳುವರು । ಕೋಟ್ಯಾಧೀಶ್ವರರು ಅದನ್ನು ಕೇಳಲು ಬರುವರು ।
ಮುಳೆಯವರ ಮನವಿಂತು ಚಿಂತಿಸಿದರೂ । ಜೊತೆಗೆ ದಕ್ಷಿಣೆ ತೆಗೆದುಕೊಂಡರು ॥123

ಮತ್ತೊಂದು ಸಂಶಯ ಅವರ ಮನದಲ್ಲಿ । ಮಾಡುತಿದ್ದ ಕರ್ಮವನು ಅರ್ಧಕ್ಕೆ ಚೆಲ್ಲಿ ।
ಹೋಗುವದು ಹೇಗೆ ಮಶೀದಿಯಲ್ಲಿ । ಇಲ್ಲೆಂದು ಹೇಳಲಿಕ್ಕೂ ಆಗದಾಯಿತು ॥ 124

ಸಂಶಯಾತ್ಮಿಗೆ ನಿಶ್ಚಯವೊಂಬುದಿಲ್ಲ । ಅಂಥವರಿಗೆ ಈ ಗತಿಯೂ ಇಲ್ಲ ಆ ಗತಿಯೂ ಇಲ್ಲ ।
ಯಾವಾಗಲೂ ಡೋಲಾಯಮಾನ ಮನವೆಲ್ಲ । ಅದರಿಂದ ತ್ರಿಶಂಕು ಸ್ಥಿತಿ ಅವರದು ॥ 125

ಆದರೂ ಆ ಮೇಲೆ ವಿಚಾರ ಮಾಡಿದರು । ಹೋಗುವ ನಿರ್ಧಾರ ಕೈಗೊಂಡರು ।
ಸಭಾಮಂಟಪದ ಒಳಗೆ ಹೋದರು । ದೂರದಲ್ಲಿಯೇ ನಿಂತುಕೊಂಡರು ॥ 126

ತಾನು ಮಡಿಯಲಿರುವೆ ಮಶೀದಿ ಮೈಲಿಗೆ । ಬಾಬಾರ ಹತ್ತಿರ ಹೋಗುವದು ಹೇಗೆ ।
ದೂರದಿಂದಲೇ ಕೈ ಮುಗಿದು ಹಾಗೇ । ಪುಷ್ಪಾಂಜಲಿಯನು ಎಸೆದರು ॥ 127

ಅಷ್ಟರಲ್ಲಿ ಚಮತ್ಕಾರ ಹೀಗೆ । ನಡೆಯಿತು ಅವರ ಕಣ್ಣೆದುರಿಗೇ ।
ಗಾದಿಯ ಮೇಲೆ ಬಾಬಾ ಅದೃಶ್ಯರಾಗೀ । ಅಲ್ಲಿ ಘೋಲಪ ಗುರುಗಳು ಕಂಡರು ॥ 128

ಇತರರಿಗೆ ನಿತ್ಯದ ಸಾಯಿ ಸಮರ್ಥರು । ಮುಳೆಯವರ ಕಣ್ಣಿಗೆ ಘೋಲಪನಾಥರು ।
ಅವರು ಮೊದಲೇ ಬ್ರಹ್ಮೀಭೂತರಾಗಿದ್ದರೂ । ಕಂಡು ಆಶ್ಚರ್ಯಚಕಿತರಾದರು ಮುಳೆ ॥ 129

ಗುರುಗಳಂತೂ ಸಮಾಧಿಸ್ತರಾಗಿದ್ದರು ನಿಜದಲ್ಲಿ । ಆದರೂ ಕಣ್ಣೆದುರು ಕಾಣಿಸುತ್ತಿರುವರಿಲ್ಲಿ ।
ಅದರಿಂದ ಮುಳೆ ಮುಳುಗಿದರು ಅಚ್ಚರಿಯಲ್ಲಿ । ಸಾಶಂಕಿತ ಮನವಾಯಿತು ॥ 130

ಇದಕೆ ಸ್ವಪ್ನವೆಂದರೆ ನಿದ್ರಿಸಿಲ್ಲ । ಎಚ್ಚರೆಂದರೆ ಗುರು ಎದುರಿಗೆ ಕಾಣುವನಲ್ಲ ।
ಒಂದು ಕ್ಷಣ ಮಾತೇ ಹೊರಡಲಿಲ್ಲ । ಗೊಂದಲದಲಿ ಬಿದ್ದನು ॥ 131

ತನಗೆ ತಾನೇ ಚಿವುಟಿಕೊಂಡನು । ಎಂದನು ಅಲ್ಲ ಸುಳ್ಳು ನಾ ನೋಡುತ್ತಿದ್ದುದು ।
ನನಗೇಕೆ ಈ ಒಣ ಸಂಶಯ ಬಂದದ್ದು । ಎಲ್ಲರೊಡನೆ ನಾನಿಲ್ಲಿ ನಿಂತಿರುವಾಗ ॥ 132

ಮುಳೆ ಮೊದಲಿನಿಂದ ಘೋಲಪರ ಭಕ್ತರು । ಬಾಬಾರ ಬಗ್ಗೆ ಶಂಕಿತಮನವಾದರೂ ।
ಮುಂದೆ ಬಾಬಾರಿಗೆ ಅಂಕಿತರಾದರು । ಅಕಲಂಕಿತ ಮನಸಿನಿಂದ ॥ 133

ಸ್ವತಃ ಶ್ರೇಷ್ಠವರ್ಣದ ಬ್ರಾಹ್ಮಣ । ವೇದ ವೇದಾಂತ ಶಾಸ್ತ್ರ ಸಂಪನ್ನ ।
ಮಶೀದಿಯೊಳಗೆ ಘೋಲಪ ದರ್ಶನ । ವಿಸ್ಮಯ ಚಕಿತರಾದರು ॥ 134

ಬಳಿಕ ಮೇಲೆ ಏರಿ ಹೋಗಿ । ನಿಜಗುರುವಿನ ಚರಣದಲಿ ಶಿರಬಾಗಿ ।
ಕೈ ಮುಗಿದು ನಿಂತರು ಎದುರಿಗೆ । ಮುಖಕೆ ಮೌನಮುದ್ರೆ ಇತ್ತು ॥ 135

ಕಾವಿ ಬಟ್ಟೆಯಲ್ಲಿ ಕಾವಿ ಶಾಟಿ ಹೊದ್ದವರು । ಘೋಲಪಸ್ವಾಮಿಯ ಕಣ್ಣಲ್ಲಿ ಕಂಡರು ।
ಓಡಿ ಹೋಗಿ ಪಾದಗಳನಪ್ಪಿದರು । ತತ್‌ಕ್ಷಣದಲಿ ಮುಳೆ ಶಾಸ್ತ್ರಿಗಳು ॥ 136

ಒಬ್ಬ ಮಾಮಲೇದಾರ ಹೀಗೆ । ಸಾಯಿ ದರ್ಶನದ ಅಪೇಕ್ಷೆ ಅವನಿಗೆ ।
ಡಾಕ್ಟರ ಮಿತ್ರನೊಬ್ಬನನು ಕರೆದುಕೊಂಡು ಜೊತೆಗೆ । ಶಿರಡಿಗೆ ಬರಲು ಹೊರಟನು ॥ 151

ಡಾಕ್ಟರನು ಬ್ರಾಹ್ಮಣ ಜಾತಿಯವನಾತ । ರಾಮೋಪಾಸಕ ಆಚಾರವಂತ ।
ಸ್ನಾನ ಸಂಧ್ಯಾದಿ ವಿಹಿತಾ ಚರಣರತ । ನೇಮ ನಿರ್ಬಂಧನೆಗಳು ಇಷ್ಟ ॥ 152

ಸಾಯಿಬಾಬಾ ಮುಸಲಮಾನ । ತನ್ನ ಆರಾಧ್ಯ ದೈವತ ಜಾನಕೀ ಜೀವನ ।
ಅವನು ಗೆಳೆಯನಿಗೆ ಹೇಳಿಬಿಟ್ಟದನ । ನಾನು ಅವರಿಗೆ ನಮಸ್ಕಾರ ಮಾಡಲಾರೆ ॥153

ಮುಸಲ್ಮಾನರ ಚರಣಕ್ಕೆರಗುವದು । ಇದು ನನ್ನ ಮನಸಿಗೆ ಹಿಡಿಸದು ।
ಅದರಿಂದ ಶಿರಡಿಗೆ ಹೋಗವದು । ನನ್ನ ಮನಕೆ ಶಂಕೆ ಇತ್ತು ॥ 154

"ಕಾಲುಬೀಳಲು ಒತ್ತಾಯವನು" ಯಾರೂ । ಅಲ್ಲಿ ನಿನಗೆ ಮಾಡಲಾರರು ।
ಇಂಥ ಎಣಿಕೆ ಹಾಕದಿರು । ಮನಸು ಶಾಂತ ಮಾಡಿಕೊ ॥ 155

"ನನಗೆ ನಮಸ್ಕಾರ ಮಾಡು" ಎಂದು । ಬಾಬಾ ಎನ್ನಲಾರರು ಎಂದೂ ।
ಮಾಮಲೇದಾರರಿಂದ ಆಶ್ವಾಸನೆ ಪಡೆದು । ಹೊರಡಲು ಸಿದ್ಧರಾದರು ॥ 156

ಹೀಗೆ ದೃಢವಾಗಿ ನಿಶ್ಚಯಿಸಿ । ತನ್ನ ಗೆಳೆಯನ ವಚನ ಮನ್ನಿಸಿ ।
ವಿಕಲ್ಪಗಳನೆಲ್ಲ ದೂರವಿರಿಸಿ । ದರ್ಶನ ತೆಗೆದುಕೊಳ್ಳಲು ಹೊರಟರು ॥ 157

ಆದರೆ ಆಶ್ಚರ್ಯವೆಂದರೆ । ಅವರು ಶಿರಡಿಗೆ ಬಂದರು ದರ್ಶನಕೆ ಮಶೀದಿಗೆ ।
ಹೋದರು ತಾವೇ ಮೊದಲು ಸಾಷ್ಟಾಂಗವೆರಗಿದರು । ಸ್ನೇಹಿತನಿಗೆ ಬಲು ಅಚ್ಚರಿಯಾಯಿತು ॥ 158

ಆಗ ಆತ ಕೇಳಿದನವರಿಗೆ । ಕೃತನಿಶ್ಚಯವ ಮರೆತಿರಿ ಹೇಗೆ ।
ನನ್ನ ಮೊದಲು ನೀವೇ ಆ ಚರಣಗಳಿಗೆ । ಹೇಗೆ ನಮಿಸಿದಿರಿ ಮುಸಲ್ಮಾನನಿರಲು ॥ 159

ಅದಕೆ ಡಾಕ್ಟರನು ಹೇಳಿದ ವಿಚಿತ್ರವೇನು । ಶ್ಯಾಮಲ ರಾಮ ರೂಪವನೇ ನಾನಲ್ಲಿ ಕಂಡೆನು ।
ಅದಕ್ಕೇ ನಾ ನಮಸ್ಕರಿಸಿದೆನು । ಆ ನಿರ್ಮಲ ಸುಂದರ ಚರಣಗಳನು ॥ 160

ಅದೇ ನೋಡು ಆ ಆಸನದಲ್ಲಿರುವರು । ಎಲ್ಲರೊಡನೆ ಮಾತಾಡುತ್ತಿರುವರು ।
ಇಷ್ಟು ಹೇಳುತ್ತಿರುವಾಗಲೇ ಕಂಡರು । ಸಾಯಿ ರೂಪವನು ಅಲ್ಲಿ ॥ 161

ಅದರಿಂದ ಡಾಕ್ಟರನಾದ ವಿಸ್ಮಯಾಪನ್ನ । ಇದಕೆ ಎನ್ನಬಹುದೇ ಸ್ವಪ್ನ ।
ನುಡಿದರು ಇವರೆಲ್ಲಿಯ ಮುಸಲ್ಮಾನ । ಯೋಗ ಸಂಪನ್ನ ಅವತಾರೀಪುರುಷನೀವ ॥ 162

ಚೋಖಾಮೇಳಾ ಹೊಲೆಯರವ । ರೋಹಿದಾಸ ಸಮಗಾರನವ ।
ಸಜನನಂತೂ ಕಟುಕರವ, ಹಿಂಸೆ ಮಾಡುವವ । ಇಂಥವರಿಗೆ ಜಾತಿಯ ಪ್ರಶ್ನೆ ಎಲ್ಲಿ ॥ 163

ಕೇವಲ ಜಗತ್ತಿಗೆ ಉಪಕಾರ ಮಾಡಲು । ಜನ್ಮ ಮರಣದ ಚಕ್ರದಿಂದ ತಪ್ಪಿಸಲು ।
ಹುಟ್ಟಿ ಬರುವರು ಸಂತರು ಈ ಜಗದೊಳು । ನಿರ್ಗುಣತ್ವ ನಿರಾಕಾರತೆಯ ತ್ಯಜಿಸಿ ॥ 164

ಇವನಂತೂ ಕಲ್ಪದ್ರುಮ । ಕ್ಷಣದಲಿ ಸಾಯಿ ಕ್ಷಣದಲಿ ರಾಮ ।
ಬಿಡಿಸಿದರೆನ್ನ ಅಹಂಭ್ರಮ । ದಂಡ ಪ್ರಣಾಮವ ಮಾಡಿಸಿ ॥ 165

ಎರಡನೆಯ ದಿನದಿಂದ ವ್ರತ ಹಿಡಿದರು । ಕೃಪೆಯ ಮಾಡದೇ ಸಾಯಿಯವರು ।
ಮಶೀದಿಯಲಿ ಕಾಲಿಡಲಾರೆನೆಂದರು । ಶಿರಡಿಯಲಿ ಉಪವಾಸ ಕುಳಿತರು ॥ 166

ಹೀಗೆ ಮೂರು ದಿನ ಕಳೆಯಿತು । ನಾಲ್ಕನೆಯ ದಿನವೂ ಬಂತು ।
ಆಗ ಏನು ಪ್ರಕಾರ ನಡೆಯಿತು । ಚಿತ್ತವಿಟ್ಟು ಆಲಿಸಿರಿ ॥ 167

ಖಾನದೇಶದಲ್ಲಿ ವಾಸಿಸುವಂಥ । ಇಂಥ ಒಬ್ಬನು ಅಕಸ್ಮಾತ ।
ಅಲ್ಲಿ ಸಾಯಿಯ ದರ್ಶನಾರ್ಥ । ಆತನ ಸ್ನೇಹಿತನು ಬಂದನು ॥ 168

ಒಂಭತ್ತು ವರ್ಷಗಳ ನಂತರ ಭೆಟ್ಟಿಯಾಗಿ । ಆನಂದವು ಒಳಗೆ ಸಹಿಸದಂತಾಗಿ ।
ಕೂಡಲೇ ಅವನ ಜೊತೆಯಾಗಿ । ಮಶೀದಿಗೆ ಹೋದರು ॥ 169

ಹೋದಕೂಡಲೇ ನಮಸ್ಕಾರ ಮಾಡಿದಾಗ್ಯೆ । ಬಾಬಾ ಕೇಳಿದರು ಡಾಕ್ಟರರಿಗೆ ।
ಯಾರು ಕರೆಯಲು ಬಂದರು ನಿಮಗೆ । ಇಲ್ಲಿಗೇಕೆ ಬಂದಿರಿ ಉತ್ತರ ಕೊಡಿರಿ ॥ 170

ಇಂಥ ಮಾರ್ಮಿಕ ಪ್ರಶ್ನೆಯನ್ನು ಕೇಳಲವರು । ಡಾಕ್ಟರರು ಕರಗಿಯೇ ಹೋದರು ।
ಕೃತ ನಿಶ್ಚಯವನು ಮರೆತೇ ಬಿಟ್ಟಿದ್ದರು । ಅನುತಾಪದಿಂದ ಖಿನ್ನರಾದರು ॥ 171

ಆದರೂ ಆ ದಿನ ಮಧ್ಯ ರಾತ್ರಿಯಲ್ಲೇ । ಕೃಪೆ ಆಯಿತು ಅವನ ಮೇಲೆ ।
ಅನುಭವಿಸಿದನು ನಿದ್ರೆಯಲ್ಲೇ । ಆ ಪರಮಾನಂದದ ಮಾಧುರ್ಯವನ್ನ ॥ 172

ಆ ಮೇಲೆ ಡಾಕ್ಟರರು ಸ್ವಗ್ರಾಮಕ್ಕೆ ತೆರಳಲು । ಅದೇ ಸಂಪೂರ್ಣಾನಂದದ ಸ್ಥಿತಿಯನ್ನು ಅಲ್ಲೂ ।
ಹದಿನೈದು ದಿನ ಅನುಭವಿಸುತಿರಲು । ಸಾಯಿ ಪದದಲಿ ಭಕ್ತಿಯು ಬೆಳೆಯಿತು ॥ 173

ಹೀಗೆ ಸಾಯಿಯ ಅನೇಕ ಅನುಭವ ಕುರಿತು । ಹೇಳುತ್ತ ಹೋಗಬಹುದು ಹೊಸಹೊಸತು ।
ಆದರೆ ಅದರಿಂದ ಬಹು ಗ್ರಂಥ ವಿಸ್ತಾರವಾದೀತು । ಅದಕಾಗಿ ಇದನು ಇಷ್ಟಕ್ಕೆ ನಿಲ್ಲಿಸುವೆ ॥ 174

ಮುಳೆಯವರ ಕಥೆಯನು ಆರಂಭದಲ್ಲಿ । ಕೇಳಲು ವಿಸ್ಮಯ ಶ್ರೋತೃಗಳ ಮನದಲ್ಲಿ ।
ಆದರೆ ತಾತ್ಪರ್ಯವೇನಿದೆ ಇದರಲ್ಲಿ । ಅಂತಯೇ ಭೋದೆಯನೂ ತಿಳಿಯಿರಿ ॥ 175

ಯಾರ ಯಾರ ಗುರು ಇರುವನು ಯಾವನು । ಅವನಲ್ಲಿಯೇ ಇಡಬೇಕು ದೃಢ ವಿಶ್ವಾಸವನು ।
ಮತ್ತೆಲ್ಲಿಯೂ ಇಡಬಾರದು ಅದನು । ಈ ಮಾತು ಮನದಲ್ಲಿ ಬಿಂಬಿಸಬೇಕು ॥ 176

ಇದಕಿಂತ ಬೇರಾವ ಉದ್ದೇಶವಿಲ್ಲ । ಕಾಣದು ಈ ಬಾಬಾರ ಲೀಲೆಯಲ್ಲಿ ।
ಯಾವನು ಎಂಥ ವಿಚಾರವಂತನೇ ಆಗಿರಲಿ । ಆದರೂ ಅದರ ಅರ್ಥ ಮಾತ್ರ ಇದೇ ॥ 177

ಯಾರ ಕೀರ್ತಿಯು ಎಷ್ಟೇ ಇರಲಿ । ತನ್ನ ಗುರುವಿನದು ಎಷ್ಟೂ ಇಲ್ಲದಿರಲಿ ।
ಆದರೂ ತನ್ನ ಗುರುವಿನಲ್ಲಿಯೇ ವಿಶ್ವಾಸವಿರಲಿ । ಇದೇ ಉಪದೇಶ ಇರುವದಿಲ್ಲಿ ॥ 178

ಪುರಾಣ ಪೋಥಿಗಳಲ್ಲಿ ಹುಡುಕುತ್ತ ಹೋಗಲು । ಇದೇ ಉಪದೇಶ ತುಂಬಿದೆ ಎಲ್ಲದರಲ್ಲೂ ।
ಆದರೂ ಹೀಗೆ ದೃಢ ನಂಬಿಕೆಯಾಗದಿರಲು । ಅಲ್ಲಿ ಬೇಕೆಂದರೂ ನಿಷ್ಠೆ ಬಾರದು ॥ 179

ಶ್ರೇಷ್ಠ ಆತ್ಮ ನಿಶ್ಚಯವಿಲ್ಲದೇ । ಆತ್ಮ ನಿಷ್ಠತೆಯ ತೋರಿಸಿಕೊಳ್ಳುವರು ತಮ್ಮದೇ ।
ಅವರ ಜನ್ಮದ ಕಷ್ಟ ಕಳೆಯದೇ । ಇದ್ದುದು ಸ್ಪಷ್ಟ ಕಾಣುವದು ॥ 180

'ಅದು ಇಲ್ಲ ಇದು ಇಲ್ಲ' ಎಂಬುದು । ಜೀವನದ ತುಂಬ ವಿವಂಚನೆ ತಪ್ಪದು ।
ಮನಕೆ ಒಂದು ಕ್ಷಣವೂ ಸ್ಥೈರ್ಯ ಲಭಿಸದು । ಆದರೂ ಮುಕ್ತರ ಬಗ್ಗೆ ಚರ್ಚಿಸುವರು ॥ 181

ಇರಲಿ ಮುಂದಿನ ಅಧ್ಯಾಯವದು । ಇದಕಿಂತ ಸವಿ ಎನಿಸುವದು ।
ಸಾಯಿ ದರ್ಶನ ತುಂಬಿರುವದು । ಆನಂದಾಮೃತವನ್ನೇ ಉಣಿಸುವದು ॥ 182

ಭಕ್ತ ಭೀಮಾಜಿ ಪಾಟೀಲ ಎಂಬವಗೆ । ಕ್ಷಯರೋಗವಾದದ್ದನ್ನು ಕಳೆದರು ಹೇಗೆ ।
ಭರವಸೆಯನಿತ್ತರು ಚಾಂದೋರಕರನಿಗೆ । ದೃಷ್ಟಾಂತವನು ತೋರಿಸಿ ॥ 183

ಇದು ಕೇವಲ ದರ್ಶನದ ಪ್ರತಾಪವಿರಲು । ಐಹಿಕದ ಅಳತೆಗೋಲು ।
ಅದಕೆ ಪರಿಹಾರವನು ಕೈ ಕೊಳ್ಳಲು । ದರ್ಶನ ಮಾತ್ರದಿಂದಲೇ ನಿಷ್ಪಾಪರಾಗುವರು ॥ 184

ಯೋಗಿಗಳ ಕೃಪಾ ದೃಷ್ಟಿಯೊಂದು । ನಾಸ್ತಿಕರನೂ ಪಾಪ ಮುಕ್ತ ಮಾಡುವದು ।
ಆಸ್ತಿಕರದ್ದಂತೂ ಕೇಳುವದೇನು । ಸಹಜದಿಂದಲೇ ಪಾಪ ಪರಿಚ್ಯುತರಾಗುರವರು ॥ 185

ತತ್ತ್ವದಲ್ಲಾದ ಬುದ್ಧಿ ಸ್ಥಿರವಾಗಿದೆ । ಯಾರಿಗೆ ಅಪರೋಕ್ಷ ಸಾಕ್ಷಾತ್ಕಾರವಾಗಿದೆ ।
ಅಂಥವನ ದೃಷ್ಟಿ ಮಾತ್ರದಿಂದಲೇ । ಪಾಪಸಾಗರ ದಾಟುವದು ಸುಲಭದಲಿ ॥ 186

ಇಂಥ ಅಗಾಧರಾದ ಬಾಬಾ ಅವರು । ನಿಮ್ಮನ್ನೆಲ್ಲ ಪ್ರೀತಿಸುವರು ।
ಅದಕೆ ತಿಳಿದವರು ತಿಳಿಯದವರೆಲ್ಲರೂ । ನಿರ್ಮಲರಾಗಿ ಕೇಳಿರಿದನು ॥ 187

ಎಲ್ಲಿ ಭಕ್ತಿ ಪ್ರೇಮಗಳ ಆಸ್ಥೆ । ಎಲ್ಲಿ ಜೀವಕ್ಕೆ ಬಾಬಾರ ಬಗ್ಗೆ ಮಮತೆ ।
ಅಲ್ಲಿಯೇ ಕಳಕಳಿಯ ನೈಜತೆ । ಶ್ರವಣದ ಆನಂದವೂ ಅಲ್ಲಿಯೇ ಪ್ರಕಟಿಸುವದು ॥ 188

ಸಾಯಿ ಚರಣಗಳಿಗೆ ಹೇಮಾಡನ ವಂದನವು । ಅನನ್ಯ ಶರಣರಿಗೆ ಇದುವೇ ವಜ್ರಪಂಜರವು
ಯಾರಿಗೂ ತಿಳಿಯದವನ ಅಂತವು । ಭವಭಯಹರಣ ಶಕ್ತನವ ॥ 189

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಶ್ರೀ ಸಂತಘೋಲಪ-ರಾಮ ದರ್ಶನಂನಾಮ
ದ್ವಾದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿಮೂರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಆಕಾರದಲಿ ಸೂತ್ರಮಯ ಅತಿ ಚಿಕ್ಕದು । ಅರ್ಥ ಗಾಂಭೀರ್ಯದಿಂದ ಅತಿಗಹನ ।
ವ್ಯಾಪಕತ್ವದಲಿ ಅತಿ ವಿಸ್ತೀರ್ಣ । ಸಂಕೀರ್ಣತೆಯೂ ಹಾಗೆಯೇ ॥ 1

ಬಾಬಾರ ಮಾತುಗಳು ಇಂಥವು । ಅತಿ ಆಳವಾದ ಅರ್ಥ ತತ್ವಗಳುಳ್ಳವು ।
ಅರ್ಥ ಇಲ್ಲದ ಮಾತು ಎಂದಿಗೂ ಅಲ್ಲ ಅವು । ಸಮತೂಕ ಅತ್ಯಮೂಲ್ಯವಾದವು ॥ 2

ಹಿಂದಿನ ಪರಂಪರೆಯಂತೆ ನಡೆಯಬೇಕು । ಪ್ರಸಂಗದಂತೆ ಬದಲಾಗುತಿರಬೇಕು ।
ಯಾವಾಗಲೂ ನಿತ್ಯತೃಪ್ತನಾಗಿರಬೇಕು । ಸಚಿಂತರಾಗೆಂದೂ ಇರಬಾರದು ॥ 3

"ನಾನು ಫಕೀರನಿರುವೆನು । ಮನೆ ಮಾರುಗಳಿಲ್ಲದೆ ನಿಶ್ಚಿಂತನಿರುವೆನು ।
ಒಂದೇ ಕಡೆಗೆ ಕುಳಿತಿರುವೆನು । ಎಲ್ಲ ಕಿರಿಕಿರಿಗಳನು ಬಿಟ್ಟು ॥ 4

ಆದರೂ ಈ ಮಾಯೆಗೆ ತಡೆ ಎಂಬುದಿಲ್ಲ । ಮೇಲಿಂದ ಮೇಲೆ ನನ್ನನ್ನೂ ಕಾಡುವಳಲ್ಲ ।
ನಾನವಳ ಮರೆತರೂ ಅವಳು ಮರೆಯುವುದಿಲ್ಲ । ಯಾವಾಗಲೂ ನನ್ನ ಹಿಡಕೊಂಡಿರುವಳು ॥5

ಆ ಶ್ರೀಹರಿಯವಳೇ, ಆ ಆದಿಮಾಯೆಯು ಅವಳು । ಬ್ರಹ್ಮಾದಿಗಳನ್ನೇ ಬಿಡದಿರುವವಳು ।
ನಾನಂತೂ ಬಲಹೀನ ಫಕೀರನಿರಲು । ಅವಳ ಮುಂದೆ ನನ್ನಾಟವೇನು ॥ 6

ಹರಿಯೇ ಪ್ರಸನ್ನಾದೊಡೆ । ಆಗ ಮಾತ್ರ ಅವಳಿಂದ ಬಿಡುಗಡೆ ।
ಅವಿಚ್ಛಿನ್ನ ಹರಿಭಜನೆ ಇಲ್ಲದೆ । ಮಾಯಾ ನಿರಸನವಾಗಲಾರದು" ॥ 7

ಹೀಗಿರುವ ಮಾಯೆಯ ಮಹಿತಿಯನ್ನು । ಭಕ್ತರಿಗೆ ಬಾಬಾ ಹೇಳುವರಿದನು ।
ಪಡೆಯಲು ಅವಳಿಂದ ನಿವೃತ್ತಿಯನ್ನು । ಭಜನ ಸ್ಥಿತಿಯನು ಬಣ್ಣಿಸುವರು ॥ 8

ಸಂತರೆನ್ನ ಸಚೇತನದ ಮೂರ್ತಿಗಳು । ಕೃಷ್ಣನೇ ಹೇಳಿರುವನಿದ ಭಾಗವತದೊಳು ।
ಎಲ್ಲರಿಗೂ ತಿಳಿದಿದೆ ಈ ಸ್ಪಷ್ಟೋಕ್ತಿಗಳು । ಉದ್ಧವನಿಗೆ ಹೇಳಿದ್ದು ಶ್ರೀಹರಿ ॥ 9

ಅದಕೆ ಭಕ್ತ ಕಲ್ಯಾಣಕ್ಕೆಂದು । ದಯಾಘನ ಸಾಯಿ ಸಮರ್ಥರು ನುಡಿದದ್ದು ।
ಸತ್ಯ ಮತ್ತು ಅರ್ಥಪೂರ್ಣವಾದದ್ದು । ಅತಿ ವಿನೀತರಾಗಿ ಕೇಳಿರಿ ॥ 10

"ಪಾಪವನ್ನೆಲ್ಲ ಕಳೆದುಕೊಂಡವರು । ಅಂಥ ಪುಣ್ಯಾತ್ಮರು ಮೊದಲಿಗರು ।
ಅವರೇ ನನ್ನ ಭಜನೆಯಲಿ ತೊಡಗಿದರು । ಅವರೆನ್ನನು ಗುರುತಿಸಿದರು ॥ 11

'ಸಾಯಿ ಸಾಯಿ' ಎಂದು ನಿತ್ಯ ಜಪಿಸಿದವರ । ದಾಟಿಸುವೆನವರ ಸಪ್ತಸಮುದ್ರ ।
ಈ ಮಾತುಗಳ ನಂಬಿದವರ । ಕಲ್ಯಾಣ ನಿಶ್ಚಯವಾಗಿ ಆಗುವುದು ॥ 12

ಬೇಕಿಲ್ಲ ನನಗೆ ಪೂಜಾ ಸಂಭಾರ । ಷೋಡಶ ಇಲ್ಲವೇ ಅಷ್ಟೋಪಚಾರ ।
ಇರುವಲ್ಲಿ ಭಾವ ಅಪರಂಪಾರ । ನನ್ನ ವಾಸ್ತವ್ಯ ಅಲ್ಲಿರುವುದು" ॥ 13

ಆಗಾಗ ಬಾಬಾ ನುಡಿಯುತ್ತಿದ್ದರು ಹೀಗೆ । ಭಕ್ತರ ಮೇಲಿನ ಅತಿ ಮಮತೆಗೆ ।
ನೆನೆಸಿ ಆ ಪ್ರೀತಿಯ ಮಾತುಗಳಿಗೆ ಮನಕೆ ಶಾಂತಿಯ ಪಡೆಯುವ ॥ 14

ಇಂಥ ಈ ದಯಾಳು ಸಾಯಿ ಸಖನು । ಯಾವಾಗಲು ಭಕ್ತರ ಬೆನ್ನು ಕಟ್ಟುವನು ।
ಭಕ್ತರಿಗೆ ಇತ್ತು ಬೆಂಬಲವನ್ನು । ತೋರಿದ ಲೀಲೆಯ ನೋಡಿರಿ ॥ 15

ಬಿಟ್ಟು ಚಿತ್ತದ ಚಂಚಲತೆಯನ್ನು । ಏಕಾಗ್ರತೆಯಲಿ ನಿಲಿಸಿ ಅದನು ।
ಕೇಳಿದರೆ ನೂತನ ಕಥೆಯಿದನು । ಕೃತಕಾರ್ಯತೆಯಾದೀತು ॥ 16

ಸಾಯಿಮುಖದ ಅಮೃತವೃಷ್ಟಿ । ಅದೇ ಕೊಡುವಾಗ ಪುಷ್ಟಿ ತುಷ್ಟಿ ।
ಇಟ್ಟುಕೊಂಡು ನಿಜ ಹಿತ ದೃಷ್ಟಿ । ಶಿರಡಿಯ ಕಷ್ಟಗಳಾನಾರು ಗಣಿಸುವರು ॥ 17

ಹಿಂದಿನಧ್ಯಾದಲ್ಲಿ ನೋಡಿದಾಗ್ಯೆ । ಅಲ್ಲಿಗೆ ಬಂದೊಬ್ಬ ಅಗ್ನಿಹೋತ್ರಿಗೆ ।
ಬ್ರಹ್ಮೀಭೂತರಾದ ಗುರುವಿನ ದರ್ಶನವಿತ್ತಾಗ್ಯೆ । ಆನಂದ ಸಂಪನ್ನನಾಗಿದ್ದನಾತ ॥ 18

ಇನ್ನು ಈ ಅಧ್ಯಾಯ ಅದಕ್ಕಿಂತ ಅಂದ । ಒಬ್ಬ ಭಕ್ತನು ಬಳಲುತ್ತಿದ್ದ ಕ್ಷಯ ರೋಗದಿಂದ ।
ಅವಗೆ ನಿಧಿಯನಿತ್ತರು ಆರೋಗ್ಯದ । ಕನಸಿನಲ್ಲಿ ಅವನ ರೋಗ ತೊಲಗಿಸಿ ॥ 19

ಸಾಯಿ ಚರಿತ್ರವಿದು ಗಹನ । ಕಶ್ಮಲ ದಹನಕಾರಕವಿದನ ।
ಕೇಳಿರೆಲ್ಲ ಭಾವಿಕ ಜನ । ಅವಧಾನವನು ಇತ್ತಹರಿಸಿ ॥ 20

ಪುಣ್ಯ ಪಾವನ ಈ ಚರಿತ್ರ । ಗಂಗೆಯ ಜಲದಂತೆ ಪವಿತ್ರ ।
ಧನ್ಯವಾಗುವವು ಕೇಳುಗರ ಶ್ರೋತ್ರ । ಇಹಪರತ್ರ ಸಾಧಕವಿದು ॥ 21

ಅಮೃತದ ಉಪಮೇಯನಿದಕೀಯುತೆ । ಅಮೃತ ಇದರಷ್ಟು ಸಿಹಿ ಆದೀತೆ ।
ಅಮೃತ ಮಾತ್ರ ಪ್ರಾಣರಕ್ಷಿಸೀತೇ । ವಿನಃ ಜನ್ಮನಿವಾರಕ ಅದು ಅಲ್ಲ ॥ 22

ತಿಳಿದು ತಾನೇ ಸತ್ತಾಧೀಶನೆಂದು । ಮಾಡುವದು ತನ್ನ ಇಚ್ಛೆಗೆ ತಿಳಿದದ್ದು ।
ಹೀಗೆ ಯಾರ ಮನಸಿಗೆ ಅನಿಸುವದು । ಅವರು ಈ ಕಥೆಯ ಕೇಳಬೇಕು ॥ 23

ಜೀವನು ಸ್ವತಂತ್ರನಾಗಿದ್ದರೆ ನಿಜದಲಿ । ಸುಖಕ್ಕಾಗಿ ಕಷ್ಟಬಡುವನು ಹಗಲಿರುಳುಗಳಲಿ ।
ಆದರೂ ದುಃಖವೇ ಬೀಳುವುದು ಉಡಿಯಲಿ । ಇದು ಇರುವದು ಸತೆಯ ಕಥೆ ॥ 24

ದುಃಖದಿಂದ ದೂರವಿರುವುದಕ್ಕಾಗಿ । ಇದ್ದರೂ ಎಷ್ಟೇ ಎಚ್ಚರಾಗಿ ।
ಅಂಥವನನ್ನೇ ಹುಡುಕುತ್ತ ಲಗುಬಗಿ । ಅವನ ಬೆಂಬತ್ತಿ ಬರುವದು ॥ 25

ದೂರ ಸರಿದರೂ ಕೊರಳಿಗೆ ಬೀಳುವುದು । ಜಾಡಿಸಿ ಒಗೆದರೂ ಅಂಟಿಕೊಳ್ಳುವದು ।
ಸುಮ್ಮನೇ ಜೀವನದ ಒದ್ದಾಟವಿದು । ದಿನ ರಾತ್ರಿಯ ಶ್ರಮವಿದು ॥ 26

ಜೀವನು ನಿಜವಾಗಿಯೂ ಇದ್ದರೆ ಸ್ವವಶದಲ್ಲಿ । ಅವನಿರಬಹುದು ಪೂರ್ಣ ಸುಖದಲ್ಲಿ ।
ದುಃಖದ ಲವಲೇಶವೂ ಅಲ್ಲಿ । ಒಂದೆಳೆಯಷ್ಟು ಒದಗುತಿರಲಿಲ್ಲ ॥ 27

ಪಾಪವನೆಂದೂ ಆಚರಿಸದೆ । ಸಮೃದ್ಧಿ ಮಾಡಲು ಪುಣ್ಯದ್ದೇ ।
ಸಂಪಾದನೆಯಾಗಲು ಸುಖದ್ದೇ । ಸ್ವತಂತ್ರ ಬುದ್ಧಿ ಇದು ಎಂದು ತಿಳಿದು ॥ 28

ಆದರೂ ಜೀವನವೆಲ್ಲ ಸ್ವತಂತ್ರ । ಬೆನ್ನು ಹತ್ತಿದೆ ಕರ್ಮತಂತ್ರ ।
ಅದರ ಆಟವೇ ವಿಚಿತ್ರ । ಕೀಲಿಕೈ ಇರುವದು ಕರ್ಮದ ಕೈಯಲ್ಲಿ ॥ 29

ಮನಸ್ಸು ಹೋದರೂ ಪುಣ್ಯದತ್ತ । ಕಾಲು ಎಳೆಯವುದು ಪಾಪದತ್ತ ।
ಸತ್ಕರ್ಮದ ದಾರಿ ಹುಡುಕುತ್ತ । ಕುಕರ್ಮಿ ಏನು ಪಡೆದಾನು ॥ 30

ಪುಣೆ ಜಿಲ್ಹೆಯ ಜುನ್ನರವೆಂಬಲ್ಲಿ । ನಾರಾಯಣಗಾವದ ಭೀಮಾಜಿ ಪಾಟೀಲನಿದ್ದನಲ್ಲಿ ।
ಈಗ ಅವನ ಕಥೆಯನ್ನು ಕೇಳಿ । ಅಮೃತದ ರಸ ಕುಂಭವಿದು ॥ 31

ಭೀಮಾಜಿ ಸುಖಸಂಪನ್ನ ಮನೆಯುವನು । ಹೋಗಿ ಬರುವವರಿಗೆ ಅನ್ನ ಹಾಕುವನು ।
ಯಾವಾಗಲೂ ಪ್ರಸನ್ನವದನನು । ಎಂದೂ ಖಿನ್ನನಾಗಿರುತಿರಲಿಲ್ಲ ॥ 32

ಅದೃಷ್ಟದ ಯೋಗ ವಿಚಿತ್ರವಿರುವದು । ಲಾಭ ವಿಯೋಗಗಳು ತಿಳಿಯದೇ ಆಗುವದು ।
ಕರ್ಮಭೋಗವು ಬಂದು ನಿಲ್ಲುವದು । ಅಲ್ಲದ ರೋಗಗಳ ಉದ್ಭವ ಅದರಿಂದ ॥ 33

ಇಸ್ವೀಸನ್ ಹತ್ತೊಂಭತ್ತು ನೂರಾ ಒಂಭತ್ತು । ದುರ್ದೈವವು ಭೀಮಾಜಿಯ ಕಾಡಹತ್ತಿತು ।
ಕಫಕ್ಷಯ ಉಂಟಾಯಿತು । ಅದರಿಂದ ಜ್ವರ ಬರತೊಡಗಿತು ॥ 34

ಅಸಹ್ಯವಾದ ಕೆಮ್ಮು ಬರತೊಡಗಿತು । ಬರುಬರುತ್ತ ಜ್ವರ ಬೆಳೆಯತೊಡಗಿತು ।
ದಿನದಿನಕ್ಕೆ ಬಲಿಯುತ್ತ ಹೋಯಿತು । ನಿರಾಶನಾದ ಭೀಮಾಜಿ ॥ 35

ಬಾಯಲ್ಲಿ ಬುರುಗು ಬರುವದು । ಬಾಯಿಗೆ ಸವುಳು ಮತ್ತು ರಕ್ತ ನೀರು ಬರುವುದು ।
ಹೊಟ್ಟೆಯಲ್ಲಿ ತಳಮಳವಾಗುವದು । ಜೀವಕ್ಕೆ ಸಮಾಧಾನವಾಗದು ॥ 36

ಜಡ್ಡಿನವನಾಗಿ ಹಾಸಿಗೆ ಹಿಡಿದ । ಗಾತ್ರಗಳು ಸೊರಗಿ ಒಣಗುತ್ತ ನಡೆದ ।
ಬೇಕಾದಷ್ಟು ಉಪಾಯ ಮಾಡಿದ । ಬಹಳ ಪೀಡಿತನಾದನು ॥ 37

ಅನ್ನ ನೀರು ರುಚಿಸದು । ಗಂಜಿಯೂ ಜೀರ್ಣಸದು ।
ಅದರಿಂದ ಏನೂ ಮಾಡಲು ತಿಳಿಯದು । ಅಸಹ್ಯ ಕಷ್ಟವು ಜೀವಕ್ಕೆ ॥ 38

ಮಾಡಿ ಆಯಿತು ದೇವರು ದಿಂಡರು । ವೈದ್ಯ ಡಾಕ್ಟರರು ಕೈಯ್ಯೂರಿದರು ।
ಜೀವದ ಆಶೆಯನ್ನೇ ಬಿಟ್ಟರು । ಭೀಮಾಜಿ ವಿಚಾರದಲ್ಲಿ ಮುಳುಗಿದ ॥ 39

ಉದ್ವಿಗ್ನರಾದರು ಪಾಟೀಲರು । ಇನ್ನು ಹೆಚ್ಚು ದಿನ ಬದುಕಿರಲಾರರು ।
ಬರುಬರುತ್ತ ಬಹಳೇ ಸೋತರು । ದಿನಗಳೆಣಿಕೆ ನಡೆಯಿತು ॥ 40

ಕುಲ ದೇವತೆಯನು ಆರಾಧಿಸಲು । ಅವಳು ಆರೋಗ್ಯ ಕೊಡದಾದಳು ।
ಜ್ಯೋತಿಷ್ಯ ಪಂಚಾಕ್ಷರಿಗಳೆಲ್ಲರಲೂ । ಕೇಳಿ ಕೇಳಿ ಪಾಟೀಲರು ದಣಿದರು ॥ 41

ಕೆಲವರೆನ್ನುವರಿದು ಅಂಗರೋಗ । ಎಂಥದಿದ್ದೀತು ಈ ದೈವ ಯೋಗ ।
ಬಂದಿದೆ ಅವರಿಂದ ಈ ಎಲ್ಲ ಭೋಗ । ಮನುಷ್ಯ ಪ್ರಯತ್ನ ನಡೆಯದಿದಕೆ ॥ 42

ಡಾಕ್ಟರರಾದರು ಹಕೀಮರಾದರು । ಉಪಚಾರ ಮಾಡುತ್ತ ಎಲ್ಲರೂ ದಣಿದರು ।
ಯಾರದು ಏನೂ ಉಪಾಯ ನಡೆಯದು । ಪ್ರಯತ್ನ ಮುಗಿಯಿತು ಎಲ್ಲರದೂ ॥ 43

ಪಾಟೀಲ ಬಹಳ ಹತಾಶನಾದ । ದೇವಾ ನಾನೇನು ಮಾಡಿದೆ ಎಂದ ।
ಆದರಲ್ಲೊಂದೂ ಉಪಯೋಗಕ್ಕೆ ಬಾರದೇ । ಅಂಥ ಪಾಪವದಾವುದು ಘಟಿಸಿತು ॥ 44

ದೇವರಾದರೂ ಎಂಥ ವಿಲಕ್ಷಣ । ಸೌಖ್ಯ ಭೋಗಿಸುವಾಗ ಒಂದೇ ಒಂದು ಕ್ಷಣ ।
ಆಗಗೊಡುವುದಿಲ್ಲ ತನ್ನ ಸ್ಮರಣ । ವಿಚಿತ್ರ ರೀತಿ ಅವನದು ॥ 45

ಎಂದ ಮೇಲೆ ಅವನ ಮನಸ್ಸಿಗೇ । ಸಂಕಟ ಪರಂಪರೆಗಳ ಕಳಿಸ ಬೇಕೆನಿಸಿದಾಗ್ಗೆ ।
ತನ್ನ ಸ್ಮರಣವನ್ನೂ ಮಾಡಿಸುವನಾದಾಗ್ಯೆ । 'ಓಡಿ ಬಾ ನಾರಾಯಣ' ಎಂದೆನಿಸುವನು ॥ 46

ಕಳಕಳಿಯ ಈ ಕರೆ ದೇವರಿಗೆ ಕೇಳಿಸಿತು । ಕೂಡಲೇ ದೇವರಿಗೆ ಕರುಣೆ ಬಂತು ।
ಆಗ ಭೀಮಾಜಿಗೆ ಬುದ್ಧಿಯಾಯಿತು । ನಾನಾರಿಗೆ ಪತ್ರ ಬರೆಯಬೇಕೆಂದು ॥ 47

ಬೇರೆಯವರಿಂದ ಆಗದಂತಹುದನು । ನಾನಾ ಏನಾದರೂ ಮಾಡುವನು ।
ಇಂಥ ಪೂರ್ಣವಿಶ್ವಾಸವನು । ಪಾಟೀಲನಿಟ್ಟಿದ್ದನು ನಾನಾನಲ್ಲಿ ॥ 48

ಅದೇ ಅವರ ಶುಭಶಕುನ । ಅದೇ ಅವರ ರೋಗದ ಶಮನ ।
ಮುಂದೆ ಸವಿಸ್ತರ ಪತ್ರವನ । ನಾನಾರಿಗೆ ಬರೆದು ಕಳಿಸಿದರು ॥ 49

ನಾನಾಸಾಹೇಬರ ಸ್ಮರಣೆಯಾಗುವದು । ಸಾಯಿನಾಥರಿತ್ತ ಸ್ಫೂರ್ತಿಯದು ।
ಇದೇ ರೋಗ ನಿವಾರಣಕ್ಕೆ ಕಾರಣವಾದುದು । ಸಂತರ ಲೀಲೆಯೇ ಅತರ್ಕ್ಯವಿರುವದು ॥ 50

ಇದೇನು ಕಾಲಚಕ್ರದ ರಚನೆಯೋ । ಅಥವಾ ಇದೂ ಒಂದು ಈಶ್ವರೀಯ ಯೋಜನೆಯೋ ।
ಎಂಬ ಬಗ್ಗೆ ಅನ್ಯಥಾ ಕಲ್ಪನೆಯು । ಬಂದು ವಾಲ್ಗನೆ ಮಾಡಬಾರದು ॥ 51
ಒಳ್ಳೆಯದೋ ಕೆಟ್ಟದ್ದೋ ಕ್ರಿಯೆ ಆಗುವುದಕೆ । ಈಶ್ವರನೇ ಸೂತ್ರಧಾರಿ ಇದೆಲ್ಲದಕೆ ।
ಅಳಿಸುವುದಕೆ ಉಳಿಸುವುದಕೆ । ಎಲ್ಲಕ್ಕೂ ಅವನೇ ಕಾರ್ಯಕಾರಿ ॥ 52

ಔಷಧಿಗಳ ತಿಂದು ತಿಂದು ಬೇಸತ್ತಿರುವೆ । ಜೀವಿತದ ಬಗ್ಗೆಯೇ ಹತಾಶನಾಗಿರುವೆ ।
ಉದಾಸವಾದಂತಿದೆ ಎಲ್ಲ ಜಗವೇ । ಹೀಗೆ ಪತ್ರ ಬರೆದರು ಚಾಂದೋರಕರರಿಗೆ ॥ 53

ಡಾಕ್ಟರರು ಆಶೆ ಬಿಟ್ಟಿರುವರು । ದುಃಸಾಧ್ಯ ವ್ಯಾಧಿ ಇದು ಎಂದಿರುವರು ।
ಹಕೀಮ ವೈದ್ಯರೆಲ್ಲ ದಣಿದರು । ನನ್ನ ಉತ್ಸಾಹವೂ ಅಳಿದಿದೆ ॥ 54

ಆದರೂ ನನ್ನ ವಿನಂತಿ ತಮಗಿದು । ತಮ್ಮ ಭೆಟ್ಟಿ ನನಗಾಗಲೇ ಬೇಕೆಂದು ।
ಮನಸಿನಲೊಂದು ಆಶೆ ಇರುವದು । ತಮ್ಮ ಚರಣದಲಿ ಈ ಬೇಡಿಕೆ ॥ 55

ಚಾಂದೋರಕರರು ಪತ್ರ ಓದಿದರು । ಅವರೂ ಮನದಲಿ ಖಿನ್ನರಾದರು ।
ಭೀಮಾಜಿ ಪಾಟೀಲ ಬಹಳ ಒಳ್ಳೆಯವರು । ನಾನಾರ ಮನ ಕರಗಿತು ॥ 56

ಉತ್ತರದಲಿ ಬರೆದರು ಉಪಾಯವನೊಂದು । ಸಾಯಿ ಬಾಬಾರ ಚರಣಹಿಡಿಯುವದು ।
ಇದೊಂದೇ ತರಣೋಪಾಯ ಉಳಿದಿರುವದು । ತಂದೆ ತಾಯಿ ಅವನೊಬ್ಬನೇ ॥57

ಎಲ್ಲರಿಗೂ ಕರುಣಾಳು ತಾಯಿ ಅವಳು । ಕರೆದೊಡನೆ ಓಡಿ ಬರುವಳು ।
ಕಳಕಳಿಯಿಂದ ಎತ್ತಿಕೊಳ್ಳುವಳು । ಮಕ್ಕಳ ಅನುಕೂಲತೆಯ ತಿಳಿದು ॥ 58

ಕ್ಷಯ ರೋಗವೇನು ದೊಡ್ಡದು । ದರ್ಶನದಿಂದ ಮಹಾರೋಗವೇ ಹೋಗುವದು ।
ತಿಲಪ್ರಾಯವೂ ಶಂಕಿಸಕೂಡದು । ಗಟ್ಟಿ ಅವರ ಪಾದಗಳ ಹಿಡಿ ಹೋಗು ॥ 59

ಕೊಡುವರು ಯಾರು ಏನು ಕೇಳಿದ್ದು । ಹಿಡಿದಿರುವರವರು ಅಂಥ ಬಿರುದು ।
ಅದಕ್ಕೇ ಹೇಳುವೆ ತ್ವರೆ ಮಾಡು । ದರ್ಶನ ತೆಗೆದುಕೋ ಸಾಯಿಯದು ॥ 60

ಭಯಗಳೊಳಗೇ ಭಯ ದೊಡ್ಡದು । ಮರಣಕ್ಕಿಂತ ಇರುವದಾವುದು ।
ಸಾಯಿಯ ಚರಣಗಳ ಗಟ್ಟಿ ಹಿಡಿಯುವದು । ಅಭಯ ನೀಡುವವನವನೊಬ್ಬನೇ ॥ 61

ಪಾಟೀಲನ ವ್ಯಥೆ ಹೀಗಿದೆ । ಪ್ರಾಣಾಂತಿಕ ಅವಸ್ಥೆಗೆ ತಲುಪಿದೆ ।
ಯಾವಾಗ ಸಾಯಿನಾಥನ ಕಂಡೆನೆಂಬುದೇ । ಚಿಂತೆ ಯಾವಾಗ ಕಾರ್ಯಾರ್ಥಸಾಧಸೀತೆಂದು ॥ 62

ಎಂದನು ಸಾಮಾನು ಕಟ್ಟಿರಿ । ಬೇಗನೆ ಸಿದ್ಧತೆ ಮಾಡಿರಿ ।
ಬೆಳಿಗ್ಗೆ ಶಿರಡಿಯತ್ತ ಹೊರಡಿರಿ । ಪಾಟೀಲ ಹೀಗೆ ನುಡಿದ ಅಧೀರನಾಗಿ ॥ 63

ಈ ರೀತಿ ದೃಢ ನಿಶ್ಚಯದಲಿ । ಹೋಗಿ ಬರುವೆನೆಂದಲ್ಲರಿಗೆ ಹೇಳಿ ।
ಪಾಟೀಲರು ಹೊರಟರು ಶಿರಡಿಯಲ್ಲಿ । ಮಹಾರಾಜರ ದರ್ಶನ ಪಡೆಯಲು ॥ 64

ಜೊತೆಗೆ ಕರೆದುಕೊಂಡು ಆಪ್ತಜನ । ಭೀಮಾಜಿ ಹೊರಟನು ತಡಮಾಡದೆನೆ ।
ಬಹಳ ಉತ್ಕಂಠಿತವಾಗಿದೆ ಮನ । ಶಿರಡಿಯನು ಯಾವಾಗ ಕಂಡೇನೆಂದು ॥ 65

ಮಶೀದಿಯ ಚೌಕದ ಬದಿಗೆ । ಚಕ್ಕಡಿ ಬಂದಿತು ಮುಂದಿನ ಬಾಗಿಲಿಗೆ ।
ನಾಲ್ವರು ಎತ್ತಿಕೊಂಡವನ ಕೈಯ್ಯೊಳಗೆ । ಭೀಮಾಜಿಯ ಮೇಲೆ ತಂದರು ॥ 66

ನಾನಾ ಸಾಹೇಬರು ಜೊತೆಗಿದ್ದರು । ಮಾಧವರಾಯರೂ ಅಲ್ಲಿ ಬಂದಿದ್ದರು ।
ಮಾಧವರಾಯರ ಮಾರ್ಗವಾಗಿಯೇ ಹೋಗುವರು । ಕಾರ್ಯ ಸುಗಮವಾಗಲು ॥ 67

"ಶ್ಯಾಮಾ ಈ ಕಳ್ಳನನು ತಂದು । ನನ್ನ ಮೈ ಮೇಲೆ ಹಾಕುವದು ।
ಒಳ್ಳೆಯದೇ ನಿನ್ನ ಕೃತಿ ಇದು" । ಪಾಟೀಲನ ಕಂಡು ಬಾಬಾ ನುಡಿದರಿಂತು ॥ 68

ಸಾಯಿ ಚರಣದಲಿ ಇಟ್ಟು ತಲೆ । ಭೀಮಾಜಿ ಸಾಯಿನಾಥರಿಗೆ ನುಡಿದನಾಗಲೇ ।
ಕೃಪೆ ಮಾಡಿರಿ ಈ ಅನಾಥನ ಮೇಲೆ । ದೀನಾನಾಥನೇ ರಕ್ಷಿಸಬೇಕು ॥ 69

ನೋಡಿ ಪಾಟೀಲನ ವ್ಯಥೆಯನಿಂತು । ಸಾಯಿನಾಥರಿಗೆ ದಯೆ ಬಂತು ।
ಆಗಲೇ ದುಃಖಾವಸ್ಥೆ ಮುಗಿಯಿತು । ಎಂದು ಪಾಟೀಲ ನಂಬಿದ ॥ 70

ನೋಡಿ ಭೀಮಾಜಿಯ ಅಸ್ವಸ್ಥತೆಯನು । ಕೃಪಾಸಾಗರ ಸಾಯಿ ಸಮರ್ಥನು ।
ಅಪರಿಮಿತವಾಗಿ ಮರುಗಿದನು । ಸಸ್ಮಿತ ಮುಖನಾಗಿ ನುಡಿದನಾಗ ॥ 71

"ಕುಳಿತುಕೋ ಇನ್ನು ಚಿಂತೆ ಬಿಡು । ಚಿಂತೆ ಮಾಡರು ವಿಚಾರವಂತರೆಂದೂ ।
ನಿನ್ನ ಭೋಕ್ತೃತ್ವ ಕೊನೆಗೊಂಡಿತಿಂದು । ಶಿರಡಿಯಲಿ ಕಾಲು ಇಟ್ಟಾಗಲೇ ॥ 72

ಆಕಂಠ ಸಂಕಟಾರ್ಣವದಲ್ಲಿ ಮುಳುಗಿದ್ದರೂ । ಮಹಾದುಃಖದ ಗರ್ತಿಯಲ್ಲಿ ಸಿಕ್ಕಿದ್ದರೂ ।
ಅಂಥವರು ಈ ಮಶೀದಿ ಮಾಯಿಯ ಮೆಟ್ಟಲು ಹತ್ತಿದರೂ । ಸುಖದ ಮೇಲೆಯೇ ಆರೂಢರಾದಂತೆ ತಿಳಿಯಿರಿ ॥ 73

ಇಲ್ಲಿಯ ಫಕೀರ ಬಲು ದಯಾವಂತ । ವ್ಯಥೆಯ ನಿರ್ಮೂಲ ಮಾಡುವನಾತ ।
ಪ್ರೀತಿಯಿಂದ ಪಾಲಿಸುವನಾತ । ಆ ದಯಾವಂತ ಎಲ್ಲರನೂ ॥ 74

ಅದಕಾಗಿ ನೀನು ನೋಡಿಲ್ಲಿ । ಹೋಗಿ ಇರು ಭೀಮಾಬಾಯಿಯ ಮನೆಯಲ್ಲಿ ।
ಆರಾಮ ಆದೀತು ಒಂದೆರಡು ದಿನಗಳಲ್ಲಿ । ಚಿಂತೆಯನೇನೂ ಮಾಡಬೇಡ" ॥ 75

ಯಾವನೋ ಒಬ್ಬ ಆಯುಷ್ಯಹೀನ । ಸುದೈವದಿಂದವನಿಗಾದರೆ ಅಮೃತ ಸಿಂಚನ ।
ಕೂಡಲೇ ಪಡೆಯುವನು ಪುನರುಜ್ಜೀವನ । ಹಾಗೇ ಸಮಾಧಾನ ಪಾಟೀಲನಿಗೆ ॥ 76

ಕೇಳಿ ಸಾಯಿವದನದ ಈ ವಚನ । ಮರಣೋನ್ಮುಖನಿಗೆ ಅಮೃತ ಪಾನ ।
ಅಥವಾ ತೃಷಾರ್ಥನಿಗೆ ಸಿಕ್ಕಂತೆ ಜಲಪಾನ । ಹಾಗೆ ಪಾಟೀಲನಿಗೆ ಸಮಾಧಾನವಾಯಿತು ॥ 77

ಪ್ರತಿ ಐದು ನಿಮಿಷಕ್ಕೆ । ರಕ್ತದ ಮುಕ್ಕಳಿಕೆ ಬರುವುದು ಬಾಯಿಗೆ ।
ಒಂದು ತಾಸು ಬಾಬಾರ ಎದುರಿಗೆ । ಕುಳಿತಾಗ ಆರಾಮ ಎನಿಸಿತ್ತು ॥ 78

ಮಾಡಲಿಲ್ಲ ವ್ಯಥೆಯ ಪರೀಕ್ಷಣ । ಕೇಳಲಿಲ್ಲ ಅದರ ಉದ್ಭವದ ಕಾರಣ ।
ಕೇವಲ ಮಾಡಲು ಕೃಪಾ ನಿರೀಕ್ಷಣ । ರೋಗೋನ್ಮೂಲನ ತತ್ಕಾಲದಲ್ಲಿ ॥ 79

ಕೇವಲ ಅವರ ಕೃಪಾ ನಿರೀಕ್ಷಣಕೆ । ಒಣಗಿದ ಕಾಷ್ಠಕ್ಕೂ ಒಡೆಯುವದು ಮೊಳಕೆ ।
ವಸಂತ ಋತುವಲ್ಲದಿದ್ದರೂ ಅದಕೆ । ಹೂವು ಹಣ್ಣುಗಳಾಗುವವು ಅಂತೆ ॥ 80

ರೋಗವೋ ಆರೋಗ್ಯವೋ ಯಾವುದೇ ಇರಲು । ಪಾಪ ಪುಣ್ಯಗಳ ಕ್ಷಯವಾಗಲು ।
ಯಾರದು ಅವರೇ ಬೇಕು ಭೋಗಿಸಲು । ಅದರ ಹೊರತು ಉಪಾಯವಿಲ್ಲ ॥ 81

ಕೇವಲ ಭೋಗಿಸುವದರಿಂದಲೇ ಅದರ ಕ್ಷಯ । ಜನ್ಮಜನ್ಮಾಂತರದಿಂದ ನಡೆದು ಬಂದಿದೆ ಈ ನಿಶ್ಚಯ ।
ಭೋಗಿಸುವದು ಬಿಟ್ಟು ಬೇರೆ ಉಪಾಯ । ನಿವೃತ್ತಿ ದಾಯಕವಾಗಲಾರದು ॥ 82

ಆದರೂ ಸುದೈವದಿಂದಾದರೆ ಸಂತದರ್ಶನ । ಅದೊಂದು ವ್ಯಾಧಿಗೆ ಉಪಶಮನ ।
ವ್ಯಾಧಿಗ್ರಸ್ತನು ಆಗ ಸಹಿಸುವನು ವ್ಯಾಧಿಯನ । ದುಃಖವಿಲ್ಲದೇ ಸಹಜದಲ್ಲೇ ॥ 83

ವ್ಯಾಧಿತೋರುವದು ದಾರುಣ ಭೋಗವನು । ಸಂತನು ತನ್ನ ಕರುಣೆಯ ದೃಷ್ಟಿ ಬೀರುವನು ।
ಅದರಿಂದ ದುಃಖವಿಲ್ಲದೆ ಭೋಗಿಸುವನು । ಸಂತರು ದುಃಖವ ನಿವಾರಿಸುವರು ॥ 84

ಕೇವಲ ಬಾಬಾರ ಶಬ್ದವೇ ಪ್ರಮಾಣ । ಅದೇ ಇರುವುದು ಚಿಕಿತ್ಸೆ ರಾಮಬಾಣ ।
ಒಮ್ಮೆ ಕೃಷ್ಣಶ್ವಾನವು ತಿನ್ನಲು ಮೊಸರು ಅನ್ನ । ಹಿಮಜ್ವರದ ನಿವಾರಣೆಯಾಯಿತು ॥ 85

ಕಥೆಯ ನಡುವೆ ಈ ಅಡ್ಡ ಕಥೆ ಏನು । ಎನಿಸೀತಾದರೂ ಇದರ ಜೊತೆ ಕೇಳಲಿದನು ।
ತಿಳಿಯುವಿರಿ ಆದರ ಸಮರ್ಪಕತೆಯನು । ಇದರ ಸ್ಮರಣೆ ಮಾಡಿಸಿದ ಸಾಯಿಯೇ ॥ 86

"ನನ್ನ ಕಥೆಯನ್ನು ನಾನೇ ಹೇಳುವೆನು" । ಸಾಯಿಯವರೇ ಹೇಳಿ ಹೋಗಿರುವರಿದನು ।
ಅವರೇ ಈ ಕಥೆಗಳ ನೆನಪನ್ನು । ಕೊಟ್ಟರು ನನಗೆ ಈ ಸಮಯದಲ್ಲಿ ॥ 87

ಬಾಳಾಗಣಪತನೆಂಬ ಹೆಸರು । ಜಾತಿಯಲವನು ಸಿಂಪಿಗನು ।
ಅವನು ಮಶೀದಿಗೆ ಬಂದು । ಅತಿ ದೀನನಾಗಿ ವಿನಂತಿಸುವನು ॥ 88

ನಾನೇನು ಅಂಥ ಪಾಪ ಮಾಡಿದೆ । ಆದ್ದರಿಂದ ಈ ಚಳಿಜ್ವರ ನನ್ನ ಬಿಡದಾಗಿದೆ ।
ಬೇಕಾದಷ್ಟು ಉಪಾಯ ಮಾಡಿದೆ । ಆದರೂ ನನ್ನ ಬಿಟ್ಟು ಸರಿಯದು ॥ 89

ಇನ್ನಿದಕೇನು ಉಳಿದಿದೆ ನಾ ಮಾಡಲು । ಮುಗಿದವೆಲ್ಲ ಔಷಧ ಕಷಾಯಗಳು ।
ನೀವೇ ಇನ್ನು ಈ ಜ್ವರ ಹೋಗಲು । ಉಪಾಯವನೊಂದು ಹೇಳಿರಿ ॥ 90

ಬಾಬಾರಿಗವನ ಮೇಲೆ ದಯೆ ಬಂದು । ಕೊಟ್ಟಿದ್ದ ಪ್ರತ್ಯುತ್ತರವಿದು ।
ಹಿಮಜ್ವರಕೆ ಉಪಾಯವೊಂದು । ಹೇಳಿದ ವಿಚಿತ್ರವನು ಕೇಳಿರಿ ॥ 91

"ಒಂದಿಷ್ಟು ಕಲಿಸಿ ಮೊಸರು ಅನ್ನವ । ಲಕ್ಷ್ಮೀದೇವಿಯ ಗುಡಿಯ ಹತ್ತಿರ ಇರುವ ।
ಕರಿನಾಯಿಗೆ ತಿನಿಸಲು ಆ ಅನ್ನವ । ಹಿಮಜ್ವರವು ಕೂಡಲೇ ಬಿಟ್ಟೀತು" ॥ 92

ಬಾಳಾ ಹೆದರುತ್ತ ಮನೆಗೆ ಹೋದ । ಹೋಗಿ ಮನೆಯಲ್ಲಿ ಹುಡುಕತೊಡಗಿದ ।
ಮುಚ್ಚಿಟ್ಟಿದ್ದ ಅನ್ನವನು ನೋಡಿದ । ಅದರ ಬದಿಗೇ ಮೊಸರೂ ಇದ್ದಿತು ॥ 93

ಬಾಳಾನ ಮನದಲ್ಲಿ ವಿಚಾರ ಬಂತು । ಅನ್ನ ಮೊಸರೇನೋ ಸಿಕ್ಕಿತು ।
ಕರಿಯ ನಾಯಿಯು ಸಾಧಿಸಿ ಅದೇ ಹೊತ್ತು । ಗುಡಿಯ ಹತ್ತಿರ ಬಂದೀತೇ ॥ 94

ಆದರೆ ಬಾಳಾ ಸುಮ್ಮನೆ ಚಿಂತಿಸುತ್ತಿದ್ದ । ನಿರ್ದಿಷ್ಟ ಸ್ಥಳವನ್ನು ಮುಟ್ಟಿದ ।
ಎದುರಿಗೇ ಒಂದು ಕಪ್ಪು ನಾಯಿಯ ಕಂಡ । ಬಾಲ ಅಲ್ಲಾಡಿಸುತ್ತ ನಿಂತಿತ್ತದು ॥ 95

ನೋಡಿ ಯೋಗ ಕೂಡಿದ್ದಿಂತು । ಬಾಳಾಗೆ ಬಹಳ ಆನಂದವಾಯಿತು ।
ಅದಕೆ ಮೊಸರನ್ನವನು ತಿನಿಸಿ ಆಯಿತು । ಬಾಬಾರಿಗೆ ಸುದ್ದಿ ತಿಳಿಸಿದ ॥ 96

ಸಾರಾಂಶ ನಡೆದ ಈ ಪ್ರಕಾರಕ್ಕೆ । ಯಾರು ಏನೇ ಹೇಳಲಿ ಇದಕ್ಕೆ ।
ಆಗಿನಿಂದ ಜ್ವರ ಸರಿಯಿತು ಹಿಂದಕ್ಕೆ । ಬಾಳಾಗೆ ಆರಾಮವಾಯಿತು ॥ 97

ಹೀಗೆ ಒಮ್ಮೆ ಬಾಪೂಸಾಹೇಬ ಬುಟ್ಟಿಯವರಿಗೆ । ಚಳಿಯಿಂದಾಗಿ ಹೊಟ್ಟೆಯೊಳಗೆ ।
ನೋವಾಗಿ ಆಗಿಂದಾಗ್ಗೆ । ವಾಂತಿ ಭೇಧಿಗಳಾಗತೊಡಗಿದವು ॥ 98

ಎಲ್ಲ ಔಷಧಗಳಿಂದ ಕಪಾಟು ತುಂಬಿತು । ಆದರೆ ಒಂದೂ ಉಪಯೋಗ ಬೀಳದಾಯಿತು ।
ಬಾಪೂಸಾಹೇಬರಿಗೆ ಹೆದರಿಕೆಯಾಯಿತು । ಬಹಳ ವಿಚಾರದಲಿ ಬಿದ್ದರು ॥ 99

ವಾಂತಿ ಭೇಧಿಗಳು ಆಗಿ ಆಗಿ । ಬಾಪೂ ಸಾಹೇಬರು ಕ್ಷೀಣರಾಗಿ ।
ನಿತ್ಯ ನೇಮದಂತೆ ಬಾಬಾ ದರ್ಶನಕ್ಕಾಗಿ । ಹೋಗಲು ಬಲ ಉಳಿಯಲಿಲ್ಲ ॥ 100

ಸುದ್ದಿ ಮುಟ್ಟಿತು ಬಾಬಾರಿಗೆ । ಕರೆಸಿಕೊಂಡರವರನು ಎದುರಿಗೆ ।
ಕೂಡ್ರಿಸಿಕೊಂಡು ಆಜ್ಞಾಪಿಸಿದರು ಹೀಗೆ । ಇನ್ನು ಮಲವಿಸರ್ಜನೆಗೆ ಹೋದೀಯೆ ಹುಷಾರ ॥ 101

ಅವನೆದುರು ತೋರ್ಬೆರಳನು ಅಲ್ಲಾಡಿಸಿ । ಮತ್ತೆ ಮೊದಲಿನಂತೆಯೇ ಅವನನ್ನುದ್ದೇಶಿಸಿ ।
ಇನ್ನು ವಾಂತಿ ಮಾಡಿಕೊಳ್ಳುವುದನ್ನೂ ನಿಲ್ಲಿಸಿ । ಎಂದು ಬಾಬಾ ಹೇಳಿದರು ॥ 102

ತಾತ್ಪರ್ಯವೆಂದರೆ ಆ ಶಬ್ದಗಳ ಜೋರು ಕಂಡು । ಎರಡೂ ವ್ಯಾಧಿಗಳು ಹೆದರಿಕೊಂಡು ।
ತಮ್ಮ ತಳಕಿತ್ತುಕೊಂಡು । ಓಡಲಾಗಿ ಬುಟ್ಟಿ ಆರಾಮಾದರು ॥ 103

ಒಮ್ಮೆ ಊರಲ್ಲಿ ಕಾಲರಾ ರೋಗ ಬಂತು । ಆಗ ಅವನಿಗೆ ಬಹಳ ತೊಂದರೆಯಾಯಿತು ।
ವಾಂತಿ ಭೇದಿಯಾಗತೊಡಗಿತು । ನೀರಡಿಕೆಯಿಂದ ಬಾಯಾರತೊಡಗಿತ್ತು ॥ 104

ಹತ್ತಿರವೇ ಡಾಕ್ಟರ್ ಪಿಳ್ಳೆ ಇದ್ದ । ಅವನೆಲ್ಲ ಉಪಾಯಗಳ ಮಾಡಿದ ।
ಉಪಯೋಗವೇನೂ ಆಗದಿದ್ದುದ್ದನ್ನು ನೋಡಿದ । ಆಮೇಲೆ ಬಾಬಾರ ಬಳಿಗೆ ಹೋದ ॥ 105

ಹೇಗೆ ಏನೇನು ನಡೆಯಿತೆಂಬುದ । ಸಾಯಿ ಚರಣದಲಿ ನಿವೇದಿಸಿದ ।
ಅವಗೆ ಕಾಫಿ ಕೊಡುವುದು ಸರಿಯೋ ನೀರು ಕೊಡುವುದೋ । ಎಂದು ಬಾಬಾರನ್ನು ಕೇಳಿದ ॥ 106

ಆಗ ಬಾಬಾ ನುಡಿದರವಗೆ । "ಅಕ್ರೋಟ, ಪಿಸ್ತೆ ಬದಾಮು ಹಾಕಿ ಹಾಲೊಳಗೆ ।
ಚೆನ್ನಾಗಿ ಕುದಿಸಿ ಕುಡಿಯಲು ಕೊಡಿರಿ ಅವನಿಗೆ । ಅದರಿಂದ ಸರಿಯಾಗುವದು ॥ 107

ಅದರಿಂದ ಅವನ ನೀರಡಿಕೆ ಶಮನವಾದೀತು । ವ್ಯಾಧಿಹರಣವೂ ಬೇಗನೆ ಆದೀತು" ।
ಅವರು ಹೇಳಿದಂತೆ ಕೊಡಲು ಅದನಷ್ಟು । ಉಪದ್ರವ ನಿರಸನವಾಯಿತು ॥ 108

'ಅಕ್ರೋಟ ಬದಾಮ ಪಿಸ್ತೆ ಕೊಡಿರೆನ್ನುವದು । ಕೊಡುವದರಿಂದ ಕಾಲರಾ ನಿಲ್ಲುವದು' ।
ಬಾಬಾರ ಶಬ್ದದಲಿಟ್ಟ ವಿಶ್ವಾಸವೇ ಇದು । ಇಲ್ಲಿ ಶಂಕೆ ಸಲ್ಲದು ॥ 109

ಸಾಯಿ ಸಮರ್ಥರ ದರ್ಶನದ ಅಪೇಕ್ಷೆಯಿಂದ । ಬಂದರೊಬ್ಬ ಸ್ವಾಮಿ ಆಳಂದಿಯಿಂದ ।
ಶಿರಡಿ ಗ್ರಾಮಕ್ಕೆ ಬಂದ । ಅವರು ಸಾಯಿ ಆಶ್ರಮಕೆ ಬಂದರು ॥ 110

ಇತ್ತವರಿಗೆ ಕರ್ಣರೋಗ । ಅಸ್ವಸ್ಥತೆಯಿಂದಾಗುತ್ತಿತ್ತು ನಿದ್ರಾಭಂಗ ।
ಮಾಡಿಸಿದರೂ ಶಸ್ತ್ರ ಪ್ರಯೋಗ । ಉಪಯೋಗವಿನಿತೂ ಆಗಿರಲಿಲ್ಲ ॥ 111

ಸಹಿಸಲಾರದ ಹೊಡೆತ ಸುರುವಾಯಿತು । ಅದಕ್ಕೆ ಪ್ರತಿಕಾರ ಯಾವದೂ ನಡೆಯದಾಯಿತು ।
ಎನಿಸಿತು ಇನ್ನು ಹೊರಟರಾಯಿತು । ಅದಕ್ಕೆ ಆಶೀರ್ವಾದ ಪಡೆಯಲು ಹೋದರು ॥ 112

ಸಾಯಿ ಪದಗಳಿಗಭಿವಂದಿಸಿ । ಉದಿ ಪ್ರಸಾದಗಳ ಸ್ವೀಕರಿಸಿ ।
ಯಾವಾಗಲೂ ಕೃಪೆ ಇರಿಸಿ । ಎಂದು ಆಶೀರ್ವಾದವ ಬೇಡಿಕೊಂಡರು ॥ 113

ಮಾಧವರಾವ ದೇಶಪಾಂಡೆಯವರು । ಕಿವಿನೋವಿಗಾಗಿ ವಿನಂತಿಸಿದರು ।
ಮಹಾರಾಜರು ಆಶ್ವಾಸನೆ ಇತ್ತರು । "ಅಲ್ಲಾ ಅಚ್ಛಾ ಕರೇಗಾ" ಎಂದು ॥ 114

ಹೀಗೆ ಆಶೀರ್ವಾದವ ಪಡೆದು । ಸ್ವಾಮಿ ತಿರುಗಿ ಪುಣೆಗೆ ಬಂದು ।
ತಿಳಿಸಿದರು ಪತ್ರ ಬರೆದು । ಹೊಡೆತ ಪೂರ್ತಿ ನಿಂತಿದೆಯೆಂದು ॥ 115

ಊತ ಮಾತ್ರ ಇನ್ನೂ ಇದೆ । ಶಸ್ತ್ರ ಪ್ರಯೋಗ ಮಾಡಬೇಕಾಗಿದೆ ।
ಮತ್ತೆ ಆ ಪ್ರಯೋಗ ಮಾಡಲೆಂದೇ । ಮುಂಬಯಿಗೆ ತಿರುಗಿ ಬಂದಿರುವೆ ॥ 116

ಅದಕೆ ಡಾಕ್ಟರರ ಹತ್ತಿರ ಹೋದೆ । ನೋಡಿದರು ಕಿವಿಯ ಕಡೆ ।
ಊತವನೆಲ್ಲಿಯೂ ಕಾಣದೆ । ಇದ್ದಾಗ ಬಾಬಾರ ಕೃಪೆ ಎಂದೆನಿಸಿತು ॥ 117

ಇದಕೆ ಡಾಕ್ಟರರ ಮಾತಿನಂತೆ । ಶಸ್ತ್ರಪ್ರಯೋಗದಿಲ್ಲ ಅವಶ್ಯಕತೆ ।
ಅದರಿಂದ ಸ್ವಾಮೀಜಿಯ ದುರ್ಧರ ಚಿಂತೆ । ದೂರಾಗಿ ಅಚ್ಚರಿ ಎಲ್ಲರಿಗೆ ॥ 118

ಹೀಗೆಯೇ ಕಥೆಯು ಇನ್ನೊಂದು । ಪ್ರಸಂಗ ವಶವಾಗಿ ಮನಸಿಗೆ ಬಂದು।
ಶ್ರೋತೃಗಳಿಗೆ ಹೇಳಿ ಇದನೊಂದು । ಈ ಅಧ್ಯಯವನು ಮುಗಿಸಬೇಕೆಂದಿದ್ದೆ ॥ 119

ಸಭಾಮಂಟಪದಲ್ಲಿ ಕಲ್ಲು ಹಾಸ । ಕಟ್ಟಲು ಆರಂಭಿಸಿದ ದಿವಸ ।
ಅದರ ಮೊದಲು ಎಂಟು ದಿವಸ । ಮಹಾಜನಿಯವರಿಗೆ ಆಮಸಂಕೆ ಸುರುವಾಯಿತು ॥ 120

ಭೇಧಿ ಬಹಳ ಆಗುತ್ತಿತ್ತು । ಮನದಲಿ ಬಾಬಾರ ಮೇಲೆ ಭಾರವಿಟ್ಟು ।
ಔಷಧ ಉಪಚಾರಗಳ ಮಾಡುವುದು ಬಿಟ್ಟು । ಅತ್ಯಂತ ಬೇಸರ ಪಟ್ಟರು ॥ 121

ಸಾಯಿ ಪೂರ್ಣ ಅಂತ ಜ್ಞಾನಿಗಳಿರುವರು । ಇದನು ಮಹಾಜನಿಯವರು ಅರಿತಿದ್ದರು ।
ಅದಕಾಗಿಯೇ ಈ ಅಸ್ವಾಸ್ಥಯನು ಅವರು । ಬಾಬಾರೆದರು ಹೇಳಲಿಲ್ಲ ॥ 122

ಅವರ ಮನಸಿಗೆ ಬಂದಾಗ್ಗ । ನಿವಾರಣ ಮಾಡುವರು ತಾವಾಗೆ ।
ವ್ಯಾಧಿಯ ತಾಳಿದರು ಅಲ್ಲಿಯವರೆಗೆ । ಪೂರ್ಣ ವಿಶ್ವಾಸವಿಟ್ಟವರ ಮೇಲೆ ॥ 123

ಭೋಗವನು ಭೋಗಿಸುವೆನು ಬಂದದ್ದು । ಆದರೆ ಪೂಜೆಗೆ ಅಡ್ಡಿ ಆಗಬಾರದು ।
ಕಾಕಾರ ಪ್ರಬಲ ಇಚ್ಛೆ ಇದು । ಯಾವಾಗಲೂ ಮನದಲಿ ॥ 124

ಭೇದಿ ಬಹಳ ಸಲ ಆಗ ತೊಡಗಿದಾಗ । ಅದೂ ಪ್ರಮಾಣವನು ಮೀರಿದಾಗ ।
ಇನ್ನು ಆರತಿ ಸೇವೆ ತಪ್ಪೀತೆನಿಸಿದಾಗ । ಏನು ಮಾಡುವರು ನೋಡಿರಿ ॥ 125

ನೀರಿನಿಂದ ತುಂಬಿದ ಒಂದು ತಂಬಿಗೆ । ಕತ್ತಲೆಯಲ್ಲೂ ಕೈಗೆ ಸಿಗುವ ಹಾಗೆ ।
ಮಶೀದಿಯ ಒಂದು ಬದಿಗೆ । ತಂದು ಇಟ್ಟುಕೊಳ್ಳುತಿದ್ದರು ॥ 126

ತಾವೇ ಕುಳಿತುಕೊಳ್ಳಬೇಕು ಬಾಬಾರ ಬಳಿಗೆ । ಚರಣ ಸಂವಾಹನ ಮಾಡುವದಕೆ ।
ತಪ್ಪದೇ ಹಾಜರಿರಬೇಕು ಆರತಿಗೆ । ನಿತ್ಯ ನೇಮ ಅವರದಾಗಿತ್ತು ॥ 127

ಒಂದು ವೇಳೆ ಹೊಟ್ಟೆ ನೊಂದರೆ । ತುಂಬಿದ ತಂಬಿಗೆ ಇರುವುದು ಹತ್ತಿರ ।
ಏಕಾಂತ ಸ್ಥಳ ನೋಡಿ ಹತ್ತಿರ । ನಿರ್ಮಲರಾಗಿ ಬರುವರು ॥ 128

ಹೀಗೆ ಫರಶಿಯ (ಕಲ್ಲು) ಹಾಕಲು । ಬಾಬಾರ ಆಜ್ಞೆಯನು ಕೇಳಲು ।
ತಾತ್ಯಾಬಾರಿಗೆ ಅನುಮತಿ ಕೊಡಲು । ಏನೆಂದರು ಅದ ಕೇಳಿ ॥ 129

"ನಾವು ಹೊರಟಿರುವೆವು ಲೇಂಡಿಗೆ ಈಗಲೇ । ಅಲ್ಲಿಂದ ತಿರುಗಿ ಬಂದ ಮೇಲೆ ।
ಆರಂಭಿಸಬೇಕು ಕೂಡಲೇ । ಈ ಫರಶಿಯ ಕೆಲಸವನು" ॥ 130

ಬಾಬಾ ಹೋಗಿ ತಿರುಗಿ ಬಂದರು । ಆಸನದ ಮೇಲೆ ಹೋಗಿ ಕುಳಿತರು ।
ಪಾದ ಸಂವಾಹನ ಆರಂಭಿಸಿದರು । ಕಾಕಾ ಹೊತ್ತಿಗೆ ಸರಿಯಾಗಿ ಬಂದು ॥ 131

ಕೋಪರಗಾವದಿಂದ ಟಾಂಗೆಯಲ್ಲಿ । ಮುಂಬಯಿಯ ಭಕ್ತರು ಬಂದಿಳಿದಲ್ಲಿ ।
ಪೂಜಾ ಸಾಹಿತ್ಯಗಳ ಜೊತೆಯಲ್ಲಿ । ಬಂದು ಬಾಬಾಗೆ ಅಭಿವಂದಿಸಿದರು ॥ 132

ಎಲ್ಲ ಭಕ್ತರ ಕೂಡಿಕೊಂಡು । ಪೂಜೆಯ ಸಾಹಿತ್ಯ ತೆಗೆದುಕೊಂಡು ।
ಅಂಧೇರಿಯಿಂದ ಪಾಟೀಲರೂ ಬಂದು । ದಾರಿಕಾಯುತ್ತ ಕುಳಿತರು ॥ 133

ಅಷ್ಟರಲ್ಲಿ ಹೊರಗೆ ಅಂಗಳದಲ್ಲಿ । ರಥ ನಿಲ್ಲಿಸುವ ಸ್ಥಳದಲ್ಲಿ ।
ಗುದ್ದಲಿಯ ಪೆಟ್ಟು ಹಾಕಿ ಅಲ್ಲಿ । ಫರಶಿಯ ಕೆಲಸ ಆರಂಭವಾಯಿತು ॥ 134

ಆ ಸಪ್ಪಳ ಕೇಳಿದರು ಮಾತ್ರ । ಬಾಬಾ ತಾಳಿದರು ನೃಸಿಂಹಾವತಾರ ।
ಕಣ್ಣು ಕಿಸಿದು ಭಯಂಕರ । ಕೂಗಾಟ ಆರಂಭಿಸಿದರು ॥ 135

ಯಾರು ಹಾಕಿದರು ಗುದ್ದಲಿಯ ಪೆಟ್ಟನ್ನು । ಅವರ ನಡವನ್ನೇ ಮುರಿಯುವೆನು ।
ಎನ್ನುತ್ತ ಎದ್ದು ತೆಗೆದುಕೊಂಡರು ಕೋಲನ್ನು । ಹೆದರಿ ತಣ್ಣಗಾದರೆಲ್ಲರೂ ॥ 136

ಗುದ್ದಲಿ ಚೆಲ್ಲಿ ಆಳು ಓಡಿದ । ಒಬ್ಬೊಬ್ಬನೇ ಅಲ್ಲಿಂದ ಕಾಲ್ದೆಗೆದ ।
ಕಾಕಾನೂ ಒಳಗೊಳಗೇ ಬೆಚ್ಚಿದ । ಅವನ ಕೈಯನ್ನೇ ಹಿಡಿದರು ಬಾಬಾ ॥ 137

ಎಂದರು ಎಲ್ಲಿ ಹೊರಟೆ ಕೂಡು ಕೆಳಗೆ । ಅಷ್ಟರಲ್ಲಿ ತಾತ್ಯಾ, ಲಕ್ಷ್ಮೀ ಬಂದರಲ್ಲಿಗೆ ।
ಅವರೂ ಸಿಕ್ಕರು ಆ ಬೈಗುಳ ಸುರಿಮಳೆಗೆ । ಸಾಕಷ್ಟು ಬಾಬಾ ಅವರಿಂದ ॥ 138

ಅಂಗಳದ ಹೊರಗೆ ನಿಂತ ಜನರನ್ನು । ಚೆನ್ನಾಗಿ ಬೈದರು ಅವರನ್ನು ।
ಅಲ್ಲಿಯೇ ಬಿದ್ದ ಹರಿದ ನೆಲಗಡಲೆಯ ಚೀಲವನ್ನು । ತಮ್ಮತ್ತ ಎಳೆದುಕೊಂಡರು ॥ 139

ಬಾಬಾ ಆವೇಶದಲ್ಲಿದ್ದಾಗ್ಯೆ । ಯಾರಾದರೂ ಬಂದವರು ಮಶೀದಿಗೆ ।
ಓಡಿ ಹೋದರು ಬಾಬಾರ ಹೆದರಿಕೆಗೆ । ಅಂಥವರಲ್ಲೊಬ್ಬರದಿರಬೇಕದು ॥ 140

ನಾಲ್ಕು ಸೇರಿನಷ್ಟು ಕಾಳು ಇರಬಹುದು । ಮುಷ್ಠಿ ಮುಷ್ಠಿ ಹೊರಗೆ ತೆಗೆದು ।
ಕೈ ಮೇಲೆ ತಿಕ್ಕುವದು । ಊದಿ ಸ್ವಚ್ಛ ಮಾಡುತಿದ್ದರು ॥ 141

ಆಮೇಲೆ ಆ ಸ್ವಚ್ಛವಾದ ಕಾಳುಗಳನು ತಂದು । ಮಹಾಜನಿಯವರಿಗೆ ತಿನ್ನಿಸುವದು ।
ಒಂದು ಕಡೆ ಬಯ್ಯುವದು । ಕಾಳು ತಿಕ್ಕುವದು ನಡೆದೇ ಇತ್ತು ॥ 142

ತಗೋ ತಿನ್ನು ತಿನ್ನು ಅನ್ನುತ್ತ । ಸ್ವಚ್ಛವಾದ ಕಾಳುಗಳನು ಕೈಯಲಿ ಹಾಕುತ್ತ ।
ನಡುನಡುವೆ ತಾವೂ ತಿನ್ನುತ್ತ । ಕಾಳನ್ನೆಲ್ಲ ಮುಗಿಸಿದರು ॥ 143

ಕಾಳು ಮುಗಿಯಲು ಎಂದರು । ನೀರಡಿಕೆಯಾಗಿದೆ ತನ್ನಿರಿ ನೀರು ।
ಕಾಕಾ ತಂಬಿಗೆ ತುಂಬಿ ತಂದರು । ತಾವೂ ಕುಡಿದು ಅವನಿಗೂ ಕುಡಿ ಎಂದರು ॥ 144

ಕಾಕಾ ನೀರು ಕುಡಿದ ಮೇಲೆ ನುಡಿದರಿಂತು । ನಿನ್ನ ಭೇದಿ ಇನ್ನು ನಿಂತುಹೋಯಿತು ।
ಆ ಬಾಮಣರು ಹೋದರೇನೋ ಸತ್ತು । ಹೋಗಿ ಅವರನು ಕರೆದು ತಾ ॥ 145

ಆ ಮೇಲೆ ಹೊರಗೆ ಹೋದ ಜನ ಬಂತು । ಮಶೀದಿ ಮೊದಲಿನಂತೆ ತುಂಬಿತು ।
ಫರಶಿ ಕೂಡಿಸುವ ಕೆಲಸ ಆರಂಭವಾಯಿತು । ಕಾಕಾರ ಆಮಾಂಶ ನಿಂತಿತು ॥ 146

ಭೇದಿಗೆ ಇದು ಎಂಥ ಮದ್ದು । ಆದರೆ ಸಂತರ ಮಾತೇ ಎಲ್ಲದಕೆ ಮದ್ದು ।
ಅವರು ಕೊಟ್ಟಿದ್ದನ್ನೇ ಪ್ರಸಾದವೆಂದು । ಅವರಿಗೆ ಕಷ್ಟವೆಂಬುದಿಲ್ಲ ॥ 147

ಹರದಾ ಶಹರದ ಒಬ್ಬ ಗೃಹಸ್ಥ । ಹೊಟ್ಟೆ ಶೂಲೆಯಿಂದಾಗಿ ತ್ರಸ್ಥ ।
ಹದಿನಾಲ್ಕು ವರ್ಷ ಹೀಗೆ ಕಳೆಯುತ । ಎಲ್ಲ ಉಪಾಯಗಳಾದವು ॥ 148

ಹೆಸರು ಅವನಿಗೆ ದತ್ತೋಪಂತ । ಕರ್ಣೋಪಕರ್ಣವಾಗಿ ಸುದ್ದಿ ತಿಳಿಯುತ ।
ಶಿರಡಿಯಲಿ ಸಾಯಿ ಮಹಾಸಂತ । ದರ್ಶನದಿಂದ ಅಪಾಯವ ಕಳೆಯುವರು ॥ 149

ಹೀಗೆ ಅವರ ಕೀರ್ತಿ ಕೇಳಿ । ಶಿರಡಿ ಗ್ರಾಮಕ್ಕೆ ತೆರಳಿ ।
ವಂದಿಸಿ ಸಾಯಿ ಚರಣದಲಿ । ಅವರ ಕರುಣೆಯ ಯಾಚಿಸಿದರು ॥ 150

ಹದಿನಾಲ್ಕು ವರ್ಷವಾಗಿದೆ । ಈ ಹೊಟ್ಟೆ ಶೂಲೆ ಬೆನ್ನು ಹತ್ತಿದೆ ।
ಸಾಕಾಯಿತಿನ್ನು ಇದರ ಪರಮಾವಧಿಯಾಗಿದೆ । ಭೋಗಿಸಲು ಶಕ್ತಿಯೇ ಉಳಿದಿಲ್ಲ ॥ 151

ಯಾರ ಘಾತ ಪಾತಗಳನ್ನೂ ಮಾಡಿಲ್ಲ । ತಂದೆ ತಾಯಿಗಳ ಅವಮಾನಿಸಿಲ್ಲ ।
ಹಿಂದಿನ ಜನ್ಮದ ಮಾತು ನೆನಪಿಲ್ಲ । ಯಾವುದರಿಂದ ಈ ಕಷ್ಟವಾಗುತಿದೆ ॥ 152

ಕೇವಲ ಸಂತಕೃಪಾವಲೋಕನ । ಸಂತ ಪ್ರಸಾದ-ಆಶೀರ್ವಚನ ।
ಇದರಿಂದಲೇ ವ್ಯಾಧಿನಿರಸನ । ಮತ್ತಿನ್ನೇನೂ ಬೇಕಿಲ್ಲದಕೆ ॥ 153

ಹೀಗೆಯೇ ಅನುಭವ ದತ್ತೋಪಂತರಿಗೆ । ಬಾಬಾ ಕರವನು ಶಿರದಲಿ ಇಟ್ಟಾಗ ।
ವಿಭೂತಿ ಆಶೀರ್ವಾದಗಳು ದೊರೆತಾಗ । ಮನಕೆ ಸಮಾಧಾನವಾಯಿತು ॥ 154

ಆಮೇಲೆ ಮಹಾರಾಜರು ಅವನ । ಅಲ್ಲಿಯೇ ಇಟ್ಟುಕೊಂಡರು ಕೆಲದಿನ ।
ಬರುಬರುತ್ತ ಹೊಟ್ಟೆ ಶೂಲೆಯನ್ನ । ಸಮೂಲ ಕಳೆದು ಬಿಟ್ಟರು ॥ 155

ಇರಲಿ ಇಂಥ ಈ ಮಹಾನುಭಾವರನ್ನು । ಎಷ್ಟೆಂದು ಬಣ್ಣಿಸಲವರ ಪ್ರಭಾವವನ್ನು ।
ಪರೋಪಕಾರದ ಈ ಸ್ವಭಾವವನ್ನು । ಚರಾಚರಗಳಲಿ ಸದ್ಭಾವ ಇಟ್ಟಿರುವನನು ॥ 156

ಹೇಳತೊಡಗಲು ಇಂಥ ಈ ಶಬ್ದ ಸ್ತೋತ್ರ । ಒಂದಕ್ಕಿಂತ ಒಂದು ವಿಚಿತ್ರ ।
ಇನ್ನು ಪೂರ್ವಸಂಧಾನ ಸೂತ್ರ । ಭೀಮಾಜಿ ಚರಿತೆಯ ಮುಂದುವರೆಸುವಾ ॥ 157

ಆಮೇಲೆ ಬಾಬಾ ಉದಿ ತರಿಸಿದರು । ಭೀಮಾಜಿಗೆ ಸ್ವಲ್ಪ ಕೊಟ್ಟರು ।
ಅವನ ಹಣೆಗಷ್ಟು ಹಚ್ಚಿದರು । ಶಿರದಲಿ ನಿಜಹಸ್ತವನಿಟ್ಟರು ॥ 158

ಆಜ್ಞೆಯಾಯಿತು ಹೋಗಲು ಮನೆಗೆ । ಪಾಟೀಲರು ನಡೆದರು ಕಾಲ್ನಡಿಗೆ ।
ತಮ್ಮ ಕಾಲಿನಿಂದಲೇ ಗಾಡಿಯವರೆಗೆ । ಕಷ್ಟವೇನೂ ಅನಿಸಲಿಲ್ಲ ॥ 159

ಅಲ್ಲಿಂದ ನಿರ್ದಿಷ್ಟ ಸ್ಥಾನಕೆ ಹೋಗುವರು । ಆ ಸ್ಥಾನ ಸಂಕುಚಿತವಾಗಿತ್ತಾದರೂ ।
ಬಾಬಾ ಅವರೇ ಅದನ್ನು ಸೂಚಿಸಿದ್ದರು । ಇದೇ ಮಹತ್ವ ಅದರದು ॥ 160

ಹೊಸದಾಗಿ ನೆಲಗಟ್ಟಣೆ ಮಾಡಲಾಗಿತ್ತು । ಅದರಿಂದ ನೆಲ ತಂಪಾಗಿತ್ತು ।
ಆದರೂ ಬಾಬಾರ ಆಜ್ಞೆಯಾಗಿತ್ತು । ಅದಕೆ ಅಲ್ಲಿಯೇ ಅನುಕೂಲ ಮಾಡಿಕೊಂಡರು ॥ 161

ಊರೊಳಗೆ ಒಣ ಜಾಗ ಸಿಗಬಹುದಿತ್ತು । ಭೀಮಾಜಿಗೆ ಊರಲ್ಲಿ ಗುರುತು ಬೇಕಾದಷ್ಟಿತ್ತು ।
ಆದರೀ ಸ್ಥಳ ಬಾಬಾರ ಮುಖದಿಂದ ಬಂದಿತ್ತು । ಅದ ಬಿಟ್ಟು ಬೇರೆಡೆಗೆ ಇರಕೂಡದು ॥ 162

ಅಲ್ಲಿಯೇ ಎರಡು ತಟ್ಟುಗಳ ಹಾಕಿದರು । ಅದರ ಮೇಲೆ ಹಾಸಿಗೆ ಹಾಕಿದರು ।
ಪಾಟೀಲರು ಅದರ ಮೇಲೆ ಮಲಗಿದರು । ಸ್ವಸ್ಥ ಮನಸಿನಿಂದಾಗ ॥ 163

ಅದೇ ರಾತ್ರಿ ಭೀಮಾಜಿಯವರು । ವಿಚಿತ್ರವಾದ ಕನಸು ಕಂಡರು ।
ಕನಸಿನಲಿ ಬಾಲ್ಯದ ಗುರುಗಳು ಬಂದರು । ಹೊಡೆಯ ತೊಡಗಿದರು ಅವರಿಗೆ ॥ 164

ಕೈಯಲ್ಲಿ ಹಿಡಿದಿದ್ದರೊಂದು ಬೆತ್ತ । ಹೊಡೆದು ಹೊಡೆದು ಬೆನ್ನಿನ ಚರ್ಮ ಸುಲಿದಿತ್ತು ।
ಕವಿತೆಯ ಮುಖೋದ್ಗತ ಮಾಡಬೇಕಾಗಿತ್ತು । ಅದಕೆ ಈ ರೀತಿ ಕಷ್ಟ ಕೊಟ್ಟರು ॥165

ಕವಿತೆಯಾದರೂ ಯಾವದಿತ್ತು । ಶ್ರೋತೃಗಳಿಗೆ ಪ್ರಬಲ ಜಿಜ್ಞಾಸೆಯಾಗಿತ್ತು ।
ಆದಕೆ ಅದೇ ಶಬ್ದಗಳನಿಟ್ಟು । ತೋರಿಸುವೆ ಕೇಳಿದಂತೆ ಸಮೂಲ ॥ 166

## ಸವಾಯಿ

"ಪರಗೃಹದಲಿ ಪದಸ್ಪರ್ಶವೆಂದರೆ ಸರ್ಪಶಿರವ ಮೆಟ್ಟಿದೊಲು ।
ಮಾತೇ ದುರ್ಲಭ ಲೋಭಿಯ ಕರದಾ ದುರ್ಮಿಳ ಧನದಒಲು ।
ನಿಜಕಾಂತ ಸಮಾಗಮ ಸ್ವರ್ಗಸುಖವುಲು ಧನವಿರದಿದ್ದರೂ ಮನೆಯೊಳು ।
ಶಾಂತಮನದಿ ನಿಜಕಾಂತ ಮನವರಿತು ಕಾರ್ಯಮಾಡುವಳೇ ಸತಿಯವಳು" ।

ಆದರೀ ಶಿಕ್ಷೆಗೆ ಕಾರಣವೇನೆಂಬುದು । ಅದಂತೂ ಒಂದಿಷ್ಟೂ ತಿಳಿಯದು ।
ಗುರುಗಳು ಬೆತ್ತವನ್ನು ಬಿಡದಾದುದುದ । ಅನಿವಾರ ಹಟದಿಂದಾಗಿ ॥ 167

ಅದು ಮುಗಿಯುವಷ್ಟರಲ್ಲೇ ಇನ್ನೊಂದು ಸ್ವಪ್ನ । ಅದಂತೂ ಇದಕಿಂತ ವಿಲಕ್ಷಣ ।
ಯಾವನೋ ಒಬ್ಬ ಮನುಷ್ಯನು ಅವನ । ಎದೆಯನ್ನೊತ್ತಿ ಕುಳಿತುಬಿಟ್ಟ ॥ 168

ಕೈಯಲಿ ಹಿಡಿದಿದ್ದ ಗುಂಡುಕಲ್ಲು । ವಕ್ಷಸ್ಥಳವನೆ ಮಾಡಿದ ಅರೆಯುವ ಕಲ್ಲು ।
ಜೀವ ಕಸಿವಿಸಿಗೊಂಡು ಕಂಠಕ್ಕೆ ಬರಲು । ವೈಕುಂಠಕ್ಕೆ ಹೊರಟಂತೆನಿಸಿತು ॥ 169

ಸ್ವಪ್ನ ಮುಗಿದು ಜೊಂಪು ಹತ್ತಿತು । ಅದರಿಂದ ಒಂದಿಷ್ಟು ಸಮಾಧಾನವಾಯಿತು ।
ಮರುದಿನದ ಸೂರ್ಯೋದಯವಾಯಿತು । ಎಚ್ಚರಾದ ಪಾಟೀಲ ॥ 170

ಎಂದಿಲ್ಲದಷ್ಟು ಹಗುರೆನಿಸಿತು । ಸಂಪೂರ್ಣ ರೋಗದ ಕಲ್ಪನೆಯೇ ಅಳಿಯಿತು ।
ಕಲ್ಲು ಗುಂಡು ಬೆತ್ತದ ಏಟು । ನೆನಪು ಯಾರಿಗೆ ಅದ ನೋಡಲು ॥ 171

ಸ್ವಪ್ನವನು ಜನರು ಅನ್ನುವರು ಅಭಾಸವೆಂದು । ಒಮ್ಮೊಮ್ಮೆ ಅದರ ವಿರುದ್ಧವೇ ಪ್ರತೀತಿ ಬರುವದು ।
ಅದೇ ಕಾಲಕ್ಕೆ ರೋಗೋಚ್ಛಿತ್ತಿ ಆದುದು । ದುಃಖ ನಿವೃತ್ತಿಯು ಪಾಟೀಲನಿಗೆ ॥ 172

ಪಾಟೀಲ ಮನದಿ ಬಲು ಹರ್ಷ ತಾಳಿದ । ಎನಿಸಿತು ತಾನು ಪುನರ್ಜನ್ಮವನೇ ಪಡೆದ ।
ಆಮೇಲೆ ಮೆಲ್ಲ ಮೆಲ್ಲನೆ ನಡೆದು ಬಂದ । ಬಾಬಾರ ದರ್ಶನ ಪಡೆಯಲು ॥ 173

ನೋಡಿ ಬಾಬಾರ ಮುಖಚಂದ್ರ । ಪಾಟೀಲನ ಆನಂದ ಸಮುದ್ರ ।
ಉಕ್ಕೇರಿ ಬಂತು ಆನಂದ ಮುಖಮುದ್ರ । ನಯನಗಳು ಚಂದ್ರನಲಿನಟ್ಟವು ॥ 174

ಪ್ರೇಮಾಶ್ರುಗಳು ಹರಿದವು ಕಣ್ಣಿಂದ । ಹಣೆಯಿಟ್ಟು ನಮಿಸಿದರು ಚರಣಾರವಿಂದ ।
ಬೆತ್ತಿನ ಹೊಡೆತ, ಹೃದಯ ಸ್ಫೋಟದ । ಸ್ಪಷ್ಟವಾಗಿ ಅದರ ಪರಿಣಾಮ ಸುಖಕರ ॥175

ಅವರ ಈ ಉಪಕಾರವನ್ನು । ನಾ ಪಾಮರನೇನು ತೀರಿಸಲಬಲ್ಲೆನು ।
ಅದಂತೂ ಅಶಕ್ಯವೆಂದೇ ಶಿರವನು । ಪಾದಗಳ ಮೇಲೆ ಇಡುವೆನು ॥ 176

ಇಷ್ಟು ಮಾತ್ರವೇ ನನ್ನಿಂದಾಗುವದು । ಇದಕಿಂತ ಬೇರೆ ಮಾರ್ಗವಿರದು ।
ಅಚಿಂತ್ಯ ಅತರ್ಕ್ಯ ತಮ್ಮ ಚಮತ್ಕಾರವಿದು । ಸಾಯಿ ಬಾಬಾ ನಿಮ್ಮದು ॥ 177

ಹೀಗೆ ಅವರ ಪವಾಡಗಳ ಹಾಡುತ । ಪಾಟೀಲರು ಒಂದು ತಿಂಗಳು ಅಲ್ಲೇ ಇರುತ ।
ಆಮೇಲೆ ನಾನಾರ ಉಪಕಾರ ಸ್ಮರಿಸುತ । ಕೃತಾರ್ಥರಾಗಿ ಹಿಂತಿರುಗಿ ಹೋದರು ॥ 178

ಹೀಗೆ ಭಕ್ತಿ ಶ್ರಧ್ಧಾನ್ವಿತರಾದ । ಪಾಟೀಲರು ಆನಂದ ನಿರ್ಭರ ಚಿತ್ತದಿಂದ ।
ಕೃತಜ್ಞತಾಯುಕ್ತರಾಗಿ ಸಾಯಿ ಕೃಪೆಯಿಂದ । ಮೇಲಿಂದ ಮೇಲೆ ಶಿರಡಿಗೆ ಬರುತಿದ್ದರು ॥ 179

ಎರಡು ಕರ ಒಂದು ಶಿರ । ಅನನ್ಯತೆ ಶ್ರದ್ಧೆ ಸ್ಥೈರ್ಯ ।
ಸಾಯಿನಾಥರಿಗೆ ಬೇಕಿಲ್ಲ ತದನ್ಯ । ಕೃತಜ್ಞತಾಭಾವ ಮಾತ್ರ ಇರಬೇಕು ॥ 180

ಯಾವನೋ ವಿಪದ್ಗ್ರಸ್ತನು । ಸತ್ಯನಾರಾಯಣ ವ್ರತವನು ।
ಸಾಂಗವಾಗಿ ಆಚರಿಸಿದನು । ಸಂಕಟ ನಿರ್ಮುಕ್ತನಾದನು ॥ 181

ಹಾಗೆಯೇ ಪಾಟೀಲನು ಸತ್ಯ ಸಾಯಿ ವ್ರತವನು । ಆಗಿನಿಂದ ಮಾಡತೊಡಗಿದನು ।
ಯಾವಾಗಲೂ ಪ್ರತಿ ಗುರುವಾರವನ್ನು । ಸುಸ್ನಾತನಾಗಿ ವ್ರತಸ್ಥನಿರುತಿದ್ದನು ॥ 182

ಜನರು ಸತ್ಯನಾರಾಯಣ ಕಥೆಯನೋದುವಂತೆ । ಪಾಟೀಲರು ಅರ್ವಾಚೀನ ಭಕ್ತಲೀಲಾಮೃತ ।
ದಾಸಗಣೂ ವಿರಚಿತ ಸಾಯಿ ಚರಿತ । ಸಪ್ರೇಮದಿಂದ ಓದುತಿದ್ದರು ॥ 183

ಆ ನಲವತ್ತೈದು ಅಧ್ಯಾಯಗಳೊಳು । ದಾಸಗಣೂ ಅನೇಕ ಭಕ್ತರ ವರ್ಣಿಸಲು ।
ಅದರೊಳಗಿನ ಸಾಯಿನಾಥರ ಬಗ್ಗೆ ಇರುವ ಮೂರು ಅಧ್ಯಾಯಗಳು । ಸತ್ಯ ಸಾಯಿ ಕಥೆ ಎನಿಸುವವು ॥ 184

ವ್ರತಗಳಲೇ ಉತ್ತಮ ವ್ರತವೆಂಬರು । ಪಾಟೀಲರು ಈ ಅಧ್ಯಾಯತ್ರಯಿಯ ಓದುವರು ।
ಅದರಿಂದ ಅಪರಿಮಿತ ಸೌಖ್ಯ ಪಡೆದರು । ಚಿತ್ತ ಸಮಾಧಾನಗೊಂಡಿತ್ತು ॥ 185

ಆಪ್ತ ಇಷ್ಟ ಬಂಧು ಸಮೇತ । ಪಾಟೀಲರು ಎಲ್ಲರನೂ ಕರೆಯುತ ।
ನೇಮದಿಂದ ಆಚರಿಸುತಿದ್ದರು ಸಾಯಿ ವ್ರತ । ಆನಂದಭರಿತ ಮನದಿಂದ ॥ 186

ನೈವೇದ್ಯ ರೀತಿಯೂ ಅದೇ ಒಂದೂ ಕಾಲಿನದು । ಮಂಗಲೋತ್ಸವವನೂ ಹಾಗೆ ಆಚರಿಸುವದು ।
ಅಲ್ಲಿ ನಾರಾಯಣನಾದರೆ ಇಲ್ಲಿ ಸಾಯಿ ಇರುವದು । ಎರಡದರಲ್ಲಿ ಒಂದಿಷ್ಟೂ ಭೇದ ಇಲ್ಲ ॥ 187

ಪಾಟೀಲನು ಹಾಕಿಕೊಟ್ಟ ಈ ಪಾಠ । ಅದೇ ಜನರಲ್ಲಾಯಿತು ಪರಿ ಪಾಠ ।
ಈ ಸತ್ಯ ಸಾಯಿಯ ಪಾಠ । ಮೇಲಿಂದ ಮೇಲೆ ನಡೆಯತೊಡಗಿತು ॥ 188

ಹೀಗೆ ಈ ಸಂತರು ಕೃಪಾಳುಗಳು । ನಿತ್ಯ ಸೂರ್ಯೋದಯವಾಗಲು ।
ಭವಜಾಲ ಹರಿಯುವದು ದರ್ಶನ ಪಡೆಯಲು । ಕಾಲನನು ಹಿಂದೆ ತಿರುಗಿಸಬಲ್ಲವರು ॥ 189

ಇನ್ನು ಇಲ್ಲಿಂದ ಮುಂದಿನ ಕತೆ । ವರ್ಣಿಸುವದೊಬ್ಬನ ಸಂತತಿ ಚಿಂತೆ ।
ಸಂತ ಸಂತರುಗಳ ಏಕಾತ್ಮತೆ । ಚಮತ್ಕೃತಿಯು ಪ್ರಕಟವಾಗುವದು ॥ 190

ನಾಂದೇಡ ಪಟ್ಟಣದ ಒಬ್ಬ ರಹಿವಾಸಿ । ದೊಡ್ಡ ಶ್ರೀಮಂತನು ಜಾತಿಯಲಿ ಪಾರಶಿ ।
ಬಾಬಾರ ಆಶೀರ್ವಾದವಗಳಿಸಿ । ಪುತ್ರ ಸಂತತಿಯ ಪಡೆಯುವನು ॥ 191

ಮೌಲ್ವಿ ಸಾಹೇಬ ಅಲ್ಲಿಯ ಸಂತ । ಬಾಬಾ ಅವನ ಗುರುತು ತೋರಿಸುತ ।
ಪಾರಶೀ ಅದರಿಂದ ಆಗಿ ಆನಂದ ಭರಿತ । ತಿರುಗಿ ತನ್ನೂರಿಗೆ ಹೋದನು ॥ 192

ಅತಿ ಪ್ರೇಮಳವಿರುವ ಈ ಕಥೆಯನ್ನು । ಸ್ವಸ್ಥಚಿತ್ತರಾಗಿ ಕೇಳಿರಿದನು ।
ಕಾಣುವಿರಿಲ್ಲಿ ಸಾಯಿಯ ವ್ಯಾಪಕತೆಯನು । ಅಂತೆಯೇ ಅವರ ವತ್ಸಲತೆಯ ॥ 193

ಭಕ್ತ ಹೇಮಾಡನು ಸಾಯಿಗೆ ಶರಣ । ಸಂತರು ಶ್ರೋತೃಗಳಿಗೆ ಮಾಡುವೆನು ನಮನ ।
ಮುಂದಿನ ಅಧ್ಯಾದಲಿರುವ ಈ ನಿರೂಪಣ । ಸಾದರ ಶ್ರವಣ ಮಾಡಿರಿ ॥ 194

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಸಾಯಿ ಸಮರ್ಥ ಸಚ್ಚರಿತೆ । ಭೀಮಾಜಿ ಕ್ಷಯ ನಿವಾರಣಂ ನಾಮ ತ್ರಯೋದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥







171.1

## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿನಾಲ್ಕು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜಯ ಜಯ ಸಾಯಿ ಸಂತವರಾ । ಜಯ ಜಯ ದಯಾಳಾ ಗುಣಗಂಭೀರಾ ।
ಜಯ ಜಯ ನಿರ್ವಿಕಾರಾ ಪರಾತ್ಪರಾ । ಜಯ ಜಯ ಅಪಾರಾ ನಿರವದ್ಯಾ ॥ 1

ಅಲಕ್ಷ್ಯದಲಿ ದೃಷ್ಟಿಯನಿರಿಸಿ । ನಿಜಭಕ್ತರಿಗೆ ದಯೆ ತೋರಿಸಿ ।
ಸಂಕಟಗಳಿಂದ ಪಾರುಗಾಣಿಸಿ । ಭಕ್ತರಿಗೆ ಕಾಣಿಸುವೆ ನಾನಾ ಪ್ರಕಾರಗಳಲಿ ॥ 2

ದಿನೋದ್ಧಾರ ಮಾಡಲು । ಇದೊಂದು ಲೀಲಾವತಾರವಿರಲು ।
ದುರ್ಧರವಾದ ಭಕ್ತ ದುರ್ವಾಸನೆಗಳು । ಅವುಗಳ ದುಷ್ಟ ನಿಶಾಚರರೆಂದು ಸಂಹರಿಸಲು ॥ 3

ಸದ್ಭಾವದಿಂದ ದರ್ಶನಕೆ ಬಂದವರು । ಅವರೆಲ್ಲ ಸ್ವಾನಂದರಸವ ಪ್ರಾಸಿಸಿದರು ।
ಆನಂದ ನಿರ್ಭರರಾಗಿ ಅವರು । ಪ್ರೇಮ ಸುಖದಲಿ ಲೋಲಾಡಿದರು ॥ 4

ಏವಂಗುಣ ಸಾಯಿ ಸಮರ್ಥರಡಿಗೆ । ದೀನ ಹೀನ ನಾ ಅತಿ ವಿನೀತನಾಗಿ ।
ಅವರ ಚರಣಾರವಿಂದಗಳಿಗೆ । ಸಾಷ್ಟಾಂಗ ನಮನ ಮಾಡುವೆ ॥ 5

ಇನ್ನು ಪೂರ್ವಕಥಾನುಸಂದಾನ । ಕಪ್ಪುನಾಯಿ ಭಕ್ಷಿಸಲು ಮೊಸರನ್ನ ।
ಹಿಮಜ್ವರದ್ದಾಯಿತು ನಿರಸನ । ಈ ಕತೆಯ ಹೇಳಲಾಯಿತು ॥ 6

ದುರ್ಧರವಾದ ಭೇದಿ ಆಮಾಂಶಗಳು । ತೋಬೆರಳಿನ ಸನ್ನೆಮಾತ್ರದಿಂದವುಗಳು ।
ಹುರಿದ ನೆಲಗಡಲೆಯ ಕಾಳುಗಳನು । ತಿನ್ನಲು ಕೊಟ್ಟಾಗ ನಿಂತುಬಿಟ್ಟವು ॥ 7

ಅದರಂತೆಯೇ ಒಬ್ಬನ ಹೊಟ್ಟೆ ಶೂಲಿ । ಇನ್ನೊಬ್ಬನ ಕಿವಿ ಶೂಲಿ ।
ಇನ್ನೊಬ್ಬ ಬಂದಿದ್ದ ಕ್ಷಯದಿಂದ ಬಳಲಿ । ದರ್ಶನ ಮಾತ್ರದಿಂದ ದೂರಾದವು ॥ 8

ಸಾಯಿಯ ಕೃಪೆಯನ್ನು ಪಡೆದು । ಭೀಮಾಜಿ ಸುಖಸಂಪನ್ನನಾದದ್ದು ।
ಸಾಯಿ ಪದದಲಿ ಕೃತಜ್ಞನಾಗಿದ್ದು । ಅಖಂಡ ಶರಣಾಗತನವರಿಗೆ ॥ 9

ಅದರಂತೆಯೇ ಇದೊಂದು ಹೊಸ ಪ್ರಕಾರ । ಇದು ಒಂದು ಅಪೂರ್ವ ಚಮತ್ಕಾರ ।
ಶ್ರೋತೃಗಳಿಗೆ ಕೇಳಲು ಆತುರ । ಅದಕೆ ಸಾದರಪಡಿಸುತಿರುವೆ ॥ 10

ಕೇಳುಗನು ಮನವಿಟ್ಟು ಕೇಳದಿರಲು । ಹೇಳುವವನಿಗೆ ಹೇಗೆ ಮನಸಾದೀತು ಹೇಳಲು ।
ಹೇಗೆ ಸಾಧ್ಯ ರಸಭರಿತವಾಗಲು । ಗುಣಪೂರ್ಣ ಕಥನ ಆದೀತು ॥ 11

ವಕ್ತಾ ಏನು ಕಥೆ ಹೇಳಿಯಾನು । ಸಂಪೂರ್ಣವಾಗಿ ಶ್ರೋತೃಗಳ ಅಧೀನನವನು ।
ಅವನು ಶ್ರೋತೃಗಳನೇ ಅವಲಂಬಿಸಿರುವನು । ರಸವರ್ಧನವೂ ಅವರಿಂದ ॥ 12

ಮೊದಲೇ ಸಂತ ಚರಿತ್ರವಿದು । ಸ್ವಾಭಾವಿಕವಾಗಿಯೇ ಒಳ ಹೊರಗೂ ಸಿಹಿ ಇದು ।
ಸಂತರ ಆಹಾರವಿಹಾರವೂ ಸವಿಯಾಗಿರುವುದು । ಸಹಜ ನುಡಿದರೂ ಸವಿ ತುಂಬಿರುವದು ॥ 13

ಚರಿತ್ರವಲ್ಲ ಇದು ಸ್ವಾನಂದ ಜೀವನ । ಸಾಯಿ ಮಹಾರಾಜರಾಗಿ ದಯಾಘನ ।
ಸುರಿಸಿದರು ನಿಜಸ್ಮರಣಕ್ಕೆ ಈ ಸಾಧನ । ಭಕ್ತರಿಗಾಗಿ ಪ್ರೀತಿಯಿಂದ ॥ 14

ಕಥೆ ಹೇಳುವರು ಪ್ರವೃತಿಯದು । ಮಾರ್ಗ ತೋರಿಸುವರು ನಿವೃತ್ತಿಯದು ।
ಹೀಗೆ ಪ್ರಪಂಚ ಪರಮಾರ್ಥಗಳೆರಡರದೂ । ಸತ್ಪುರುಷರ ಈ ಕಥೆಗಳು ॥ 15

ಉದ್ದೇಶವಾದರೂ ಇದೇ ಇರಬೇಕು । ಸಂಸಾರದಲ್ಲಿ ಸುಖವಿರಬೇಕು ।
ಆದರೂ ನಿತ್ಯ ಎಚ್ಚರಾಗಿರಬೇಕು । ದೇಹದ ಸಾರ್ಥಕವಾಗಬೇಕು ॥ 16

ಅನಂತ ಪುಣ್ಯದ ಬಲವಿದ್ದಾಗ । ಆಕಸ್ಮಾತ ಜೀವಕ್ಕೆ ನರದೇಹ ದೊರೆತಾಗ ।
ಅದರಲ್ಲೂ ಆತ ಪರಮಾರ್ಥ ಅರಿತಾಗ । ಅದೊಂದು ಭಾಗ್ಯ ಬೇರೆ ತರಹ ॥ 17

ಅಲ್ಲಿಯೂ ಸಾರ್ಥಕ ಮಾಡಿಕೊಳ್ಳದಿರಲು । ಸಾರ್ಥಕವೇನು ಹುಟ್ಟಿ ಭೂಭಾರದಂತಿರಲು ।
ಹೆಚ್ಚಿನದೇನು ಇರುವದು ಪಶುವಿಗಿಂತಲೂ । ಬದುಕುವುದರ ಸುಖ ಅವನಿಗೆ ॥ 18

ಆಹಾರ ನಿದ್ರಾ ಭಯ ಮೈಥುನ । ಇನ್ನೇನೂ ತಿಳಿಯದು ಬೇರೆಯದನ ।
ಅಂತಹ ನರ ಕೇವಲ ಪಶು ಸಮಾನ । ಬಾಲ ಕೋಡುಗಳಿಲ್ಲ ಅಷ್ಟೇ ॥ 19

ಈ ನರಜನ್ಮದ್ದೆಷ್ಟು ಮಹತಿ । ಅದರಿಂದಲೇ ಸಾಧಿಸುವದು ಭಗವದ್ಭಕ್ತಿ ।
ಚರಣಕ್ಕೆರಗುವವು ನಾಲ್ಕು ಮುಕ್ತಿ । ನಿಜಾತ್ಮ ಪ್ರಾಪ್ತಿಯೂ ಇದರಿಂದಲೇ ॥ 20

ಮೇಘಮಂಡಲದಲ್ಲಿ ವಿದ್ಯುಲ್ಲತೆ ಹೊಳೆವಂತೆ । ಈ ಸಂಸಾರ ಚಂಚಲವಿರುವದು ಅದರಂತೆ ।
ಕಾಲಸರ್ಪದ ಹಿಡಿತದಲ್ಲಿ ಸಿಕ್ಕಂತೆ । ಜನಕೆ ಸುಖದ ಕ್ಷಣವೂ ದುರ್ಮಿಳ ॥ 21

ಸೋದರ ಸೋದರಿ ಮಾತಾಪಿತೃಗಳು । ಪತ್ನಿ ಮಗ ಮಗಳು ।
ನದಿಯ ಪ್ರವಾಹದಲಿ ಹರಿಯುತ್ತ ಬಂದಿರಲು । ಒಂದೆಡೆ ಬಂದಿರುವಂತಿದು ॥ 22

ಒಂದು ಕ್ಷಣ ಒಂದೆಡೆ ಇದ್ದಂತೆ ಕಾಣುವುದು । ತೆರೆಯೊಡನೆ ಅತ್ತಿತ್ತ ಚದುರಿ ಹೋಗುವದು ।
ಮತ್ತೆ ಒಂದೆಡೆ ಬರಲಾರವೆಂದೂ । ಒಮ್ಮೆ ದೂರ ಸರಿದ ಮೇಲೆ ॥ 23

ಆತ್ಮಹಿತವನು ಸಾಧಿಸದವನು । ವ್ಯರ್ಥತಾಯಿಯ ಬಳಲಿಸಿದನು ।
ಪಡೆಯದೇ ಸಂತರ ಚರಣಗಳನು । ಜನ್ಮದ ಹಾನಿಯಾದೀತು ॥ 24

ಯಾವಾಗ ಪ್ರಾಣಿಯು ಜನ್ಮಕ್ಕೆ ಬಂದ । ಆಗಿನಿಂದಲೇ ಮೃತ್ಯುವಿನ ದಾರಿಗೆ ನಡೆದ ।
ಇಂದು ನಾಳೆ ನಾಡದುಗಳ ನಂಬಿದ । ಆ ನರ ಮೋಸ ಹೋದಂತೆಯೇ ॥ 25

ಸ್ಮರಣವಿರಬೇಕು ಈ ಮರಣದ್ದು । ಕಾಲದ ಆಹಾರ ಈ ದೇಹವಿರುವದು ।
ಈ ಪ್ರಪಂಚದ ಲಕ್ಷಣವೇ ಇಂಥದು । ಅದಕೆ ಎಚ್ಚರಾಗಿರಬೇಕು ॥ 26

ವ್ಯವಹಾರದಲಿ ಹೆಜ್ಜೆ ಇಡುವಾಗ ವಿಚಾರ ಮಾಡುವದು । ಅದರಿಂದ ಸಹಜದಲಿ ಪರಮಾರ್ಥ ಲಭಿಸುವುದು ।
ಅದರಿಂದ ಪ್ರಪಂಚದಲಿ ಆಲಸ್ಯ ಕೂಡದು । ಪುರುಷಾರ್ಥದೆಡೆ ಉದಾಸರಿರಬಾರದು ॥ 27

ಪ್ರೇಮದಿಂದ ಸಾಯಿ ಕಥೆಯ ಕೇಳುವರು । ನಿಃಶ್ರೇಯಸ ಪ್ರಾಪ್ತಿಯಾಗುವದು ।
ಸಾಯಿ ಚರಣದಲಿ ಭಕ್ತಿ ಬೆಳೆದು । ಸುಖ ಸಂಪತ್ತಿಯ ಪಡೆಯುವರು ॥ 28

ಸಾಯಿಯಲಿ ಪೂರ್ಣ ಪ್ರೇಮ ಇರುವವರಿಗೆ । ಈ ಕಥೆಯ ಸಂಗ್ರಹ ಅವರಿಗೆ ।
ನೆನಪಿಸುವದು ಅದು ಹೆಜ್ಜೆ ಹೆಜ್ಜೆಗೆ । ಸಾಯಿ ಚರಣಜ ಪಂಕಜವ ॥ 29

ನಿಃಶಬ್ದವನು ಶಬ್ದದಿಂದ ಹೇಳಲು । ಅತೀಂದ್ರಿಯವನು ಇಂದ್ರಿಯದಿಂದ ಸೇವಿಸಲು ।
ಈ ಕಥಾಮೃತ ಪಾನವನು ಎಷ್ಟೇ ಮಾಡಲು । ಪೂರ್ಣ ಸಮಾಧಾನ ಲಭಿಸದು ॥ 30

ಅತರ್ಕ್ಯ ಸಂತರ ವಿಂದಾನ । ಅನಿರ್ವಚನೀಯ ಅವರ ಮಹಿಮಾನ ।
ಮಾತಿನಲದರ ಪೂರ್ಣ ಕಥನ । ಮಾಡಲು ಸಮರ್ಥರಾರೂ ಇಲ್ಲ ॥ 31

ನಿತ್ಯವೂ ಈ ಕಥೆಗಳ ಆಲಿಸಲು । ನಿತ್ಯವೂ ಸಾಯಿಯ ಕಾಣುವವು ಕಂಗಳು ।
ಮನದಲಿ ಧ್ಯಾನದಲಿ ಹಗಲಿರುಳು । ಸ್ಮರಣೆಯೊಳು ಚಿಂತನೆಯೊಳು ಉಳಿಯುವುದು ॥32

ಕುಳಿತಾಗ ಮಲಗಿದಾಗ ಮತ್ತು । ಉಣುವಾಗ ಜೊತೆಗೂ ಬರುವನು ।
ಬರು ಹೋಗುವಾಗ । ಊರಿರಲಿ ಕಾಡಿರಲಿ ನಿರಂತರ ॥ 33

ಹೀಗೆ ಬರಲು ನಿಧಿಧ್ಯಾಸದೊಳು । ಮನ ಹೋಗುವದು ಉನ್ಮನಿ ಸ್ಥಿತಿಯೊಳು ।
ಅನುದಿನದಲಿ ಹೀಗಾಗುತಿರಲು । ಚಿತ್ತವು ಚೈತನ್ಯದಲಿ ಸಮರಸವಾದೀತು ॥ 34

ಮುಂದಿನ ಕಥೆಯ ಸಂಗತಿಯನ್ನು । ಪೂರ್ವಾಧ್ಯಾಯದ ಅಂತ್ಯದಲಿ ಹೇಳಿದ್ದನ್ನು ।
ಅದನ್ನು ಮುಂದುವರೆಸುವಾ ಇನ್ನು । ಶ್ರೋತೃಗಳು ಲಕ್ಷ ಕೊಡಿರಿತ್ತ ॥ 35

ಶಿರಾಪುರಿ ಈ ಭಾವ ಭಕ್ತಿಯೆಂಬುದು । ಎಷ್ಟೇ ತಿಂದರೂ ಸಾಕೆನಿಸದು ।
ಕಂಠದವರೆಗೆ ತಿಂದರೂ ಅದು । ಪೂರ್ಣ ತೃಪ್ತಿಯಾಗದು ॥ 36

ಇನ್ನು ಈ ಎರಡನೆಯ ಕಥೆಯನು । ಶ್ರೋತೃಗಳೇ ತಾವು ಕೇಳಲು ಇದನು ।
ಸಂತ ದರ್ಶನದ ಸಾರ್ಥಕತೆಯನು । ಅರಿತಲ್ಲಿ ದೃಢ ಮನವಾದೀತು ॥ 37

ಬಾಬಾ ಹೊರನೋಟಕ್ಕೆ ಏನೂ ಮಾಡರು । ಸ್ಥಳ ಬಿಟ್ಟೂ ಕದಲರು ।
ಆದರೂ ಕುಳಿತಲ್ಲಿಯೇ ಎಲ್ಲ ತಿಳಿಯುವರು । ಅದರನುಭವವನೆಲ್ಲರಿಗೂ ಕೊಡುವರು ॥38

ಸತ್ತ್ವವಿದುದ್ದು ನಿಜಪಿಂಡದಲ್ಲಿ । ಅದೇ ತುಂಬಿದೆ ಅಖಿಲ ಬ್ರಹ್ಮಾಂಡದಲ್ಲಿ ।
ದೇಹವನ್ನದರ ಮೇಲೆ ನಿವಾಳಿಸಿ ಚೆಲ್ಲಿ । ಅಖಂಡತನವ ಅವಲೋಕಿಸಿರಿ ॥ 39

ಆ ಸತ್ತ್ವಕ್ಕೆ ಶರಣಾದವರಿಗೆ । ಸರ್ವದರಲ್ಲಿಯೂ ಏಕತ್ವ ಅವರಿಗೆ ।
ನಾನಾತ್ವವ ಧಾರಣೆ ಮಾಡಿದವರಿಗೆ । ಜನನ ಮರಣ ಪರಂಪರೆ ತಪ್ಪದು ॥ 40

ನಾನಾತ್ವವನು ಕಾಣುವ ಬುದ್ಧಿ । ಅವಿದ್ಯೆಯೆಂದೇ ತಿಳಿಯಬೇಕದನು ತ್ರಿಶುದ್ಧಿ ।
ಗುರುವಿನಾಗಮನದಿಂದಾಗುವದು ಚಿತ್ತ ಶುದ್ಧಿ । ಸ್ವರೂಪ ಸ್ಥಿತಿಯೂ ಅದರಿಂದಲೇ ॥ 41

ಅವಿದ್ಯೆಯಿಂದ ನಿವೃತ್ತಿ ಪಡೆಯುವದು । ಅದೇ ಏಕತ್ವದ ಪ್ರಾಪ್ತಿ ಎನಿಸುವದು ।
ಅಣು ಮಾತ್ರವೂ ಚಿತ್ತದಲಿ ಭೇದವಿರುವದು । ಅನನ್ಯ ಸ್ಥಿತಿ ಹೇಗಾದೀತು ॥ 42

ಬ್ರಹ್ಮಾದಿಯಾಗಿ ಸ್ಥಾವರಗಳಲ್ಲಿದ್ದು । ಯಾವಯಾವದು ಉಪಾಧಿಯನ್ನು ಪಡೆದದ್ದಿರುವದು ।
ಅವಿವೇಕಿಗಳಿಗೆ ಅಬ್ರಹ್ಮದಂತೆ ಕಾಣುವದು । ಆದರದೆಲ್ಲ ಬ್ರಹ್ಮವೇ ತುಂಬಿದೆ ॥ 43

ಅದೆಲ್ಲ ವಿಜ್ಞಾನ ಘನ ಸ್ವಭಾವವುಳ್ಳದ್ದು । ಸಂಸಾರ ಧರ್ಮದ್ದಲ್ಲಿ ಅಭಾವವಿರುವದು ।
ನಾಮರೂಪ ಸ್ಥಳಗಳ ಅಳಿಸಲದು । ನಿರವಯವ ಬ್ರಹ್ಮವೆನಿಸುವದು ॥ 44

ಸ್ವಭಾವ ಭೇದದಿಂದ ಉಪಾಧಿಗಳು । ಪ್ರಮಾದಿಂದ ಅವಿದ್ಯಾ ಮೋಹಾದಿಗಳು ।
ನಾನಾತ್ವದಲಿ ಈ ಚಿತ್ತ ತೊಡಗುವದು । ಏಕತ್ವದ ಭೋದದಿಂದ ಸ್ವಸ್ಥವಾಗುವದು ॥ 45

ನಾಬೇರೆ ಜನ ಬೇರೆ ಎಂಬಂಥದು । ಯಾರಿಗೆ ಬೇರೆಂಬುದೂ ಇರದು ।
ಅಖಂಡವಾಗಿ ಏಕರಸದಿಂದ ತುಂಬಿರುವದು । ಇನ್ನೊಂದೆಂಬುದೇ ಅಲ್ಲಿ ಉಳಿಯದು ॥46

ನಾಮ ರೂಪ ಕೆಲಸ ಮಾಡುವದು । ಇದೆಲ್ಲವನು ಉಪಾಧಿಗಳೆಂದು ತಿಳಿಯುವದು ।
ನಾನಾತ್ವವನು ಸರ್ವಥೈವ ಬಿಡುವದು । ಬ್ರಹ್ಮವಾಗುವದೆಂದರೆ ಅದೇ ॥ 47

ನಾನೇ ಈ ಎಲ್ಲ ಇರುವುದು । ನನ್ನ ಹೊರತು ಬೇರೆ ಏನೂ ಇರದು ।
ಅಶೇಷವಾಗಿ ಹತ್ತು ದಿಕ್ಕುಗಳ ತುಂಬಿದ್ದು । ಮದನ್ಯಯಾವೂದೂ ಇರುವುದಿಲ್ಲ ॥ 48

ಇದೇ ಭಾವನೆಯನ್ನು ದೃಢವಾಗಿ ಹಿಡಿಯಬೇಕು । ಮಾಯೆಯ ಮೂಲವನ್ನು ದೂರ ಸರಿಸಬೇಕು ।
ನನ್ನನಲ್ಲದೇ ಬೇರೆ ವಸ್ತುವೇ ಇಲ್ಲೆನಬೇಕು । ದೃಷ್ಟಿಯ ನಿಂತು ಬೀರಬೇಕು ॥ 49

ಶ್ರೋತೃಗಳಿಗೆ ಸಹಜವಾಗಿಯೇ ಸಂಶಯ ಬರುವದು । ಹಾಗಿದ್ರೆ ಈ ಭೇದ ಹೇಗೆ ಆಗುವದು ।
ಜೀವವು ತಿಳಿಯಕೊಳ್ಳ ತಕ್ಕದ್ದು ಬ್ರಹ್ಮವು ತಿಳಿಯ ತಕ್ಕದ್ದು । ಇದನ್ನು ಕಳೆಯಲು ಉಪಾಯವೇನು ॥ 50

ಭೇದ ಬುದ್ಧಿಯು ಎಳ್ಳು ಕಾಳಷ್ಟದ್ದು । ಅನನ್ಯತ್ವವನು ಹೊಡೆದು ಹಾಕುವದು ।
ಕೂಡಲೇ ನಾನಾತನವನು ಉತ್ಪಾದಿಸುವದು । ಜನ್ಮ ಮರಣಕಾರಕವಾದ ॥ 51

ಅವಿದ್ಯಾತಿಮಿರ ದೃಷ್ಟಿ । ಅದರ ಲೋಪವಾದರೆ ಲೋಪವಾಗುವದು ಸೃಷ್ಟಿ ।
ಸ್ವಸ್ವರೂಪದಿಂದ ತುಂಬೀತು ದೃಷ್ಟಿ । ಕೂಡಲೇ ನಾನಾತ್ವ ಮರೆಯಾದೀತು ॥ 52

ಶುದ್ಧೋದಕದಲಿ ಶುದ್ಧೋದಕವನು । ಹಾಕಲು ಅದೆಲ್ಲಾಒಂದೇ ಆಗುವದು ।
ಒಂದರಲೊಂದು ಬೆರೆತು ಹೋಗುವದು । ಒಂದಿಷ್ಟು ಭೇದ ಉಳಿಯದು ॥ 53

ಕಾಷ್ಠಾಕಾರಗಳು ಭಿನ್ನವಾಗಿದ್ದು । ಅಗ್ನಿ ರೂಪದಲಿ ಒಂದೇ ಆಗುವದು ।
ಆಗ ಅದು ಅವಿಚ್ಛಿನ್ನ ಆಕಾರಹೀನವಾಗುವದು । ನಿಜರೂಪದಲಿ ವಿಲೀನವಾಗಿ ॥ 54

ಇದರಂತೆಯೇ ಆತ್ಮೈಕ್ಯ ವಿಜ್ಞಾನ । ಬೇಕಿಲ್ಲ ಬೇರೆ ಪ್ರತಿಪಾದನ ।
ಎಲ್ಲದರಲ್ಲಿಯೂ ಆತ್ಮವು ಪರಿಪೂರ್ಣ । ರೂಪಹೀನವದು ಸರ್ವಥಾ ॥ 55

ವಿಪರೀತ ಮಿಥ್ಯಾರೋಪ ಕಾರಣ । ಯಾವಾಗಲೂ ಭ್ರಮಿತವಾಗಿರುವದು ಮನ ।
ಅನುಭವಿಸುತ್ತ ಜನ್ಮ ಮರಣಾದಿ ದುಃಖಗಳನ । ದುಶ್ಚಿತ್ತನು ಯಾವಾಗಲೂ ಪ್ರಾಣಿಯು ॥ 56

ನಾಮರೂಪಾದಿ ಉಪಾಧಿಗಳ ತ್ಯಜಿಸಿದ । ವಿಶುದ್ಧ ವಿಜ್ಞಾನ ರೂಪ ಧರಿಸಿದ ।
ಸಿದ್ಧನಿಗೆ ಎಲ್ಲಿಯ ಮಾಯಾ ಬಂಧ । ನಿತ್ಯ ನಿಜಾನಂದದಲಿ ರತನವ ॥ 57

ಇಂತಹ ಸ್ಥಿತಿಯ ಉದಾಹರಣ । ಮೂರ್ತಿಮಂತ ಶ್ರೀ ಸಾಯಿಯ ಚರಣ ।
ಭಾಗ್ಯದಿಂದಾರಿಗೆ ದೊರಕಿದೆಯೋ ದರ್ಶನ । ಅಂಥ ಜನರೇ ಧನ್ಯರು ॥ 58

ಎನಿಸುವದು ಚಂದ್ರನು ನೀರಿನಲ್ಲಿದ್ದಂತೆ । ಆದರೂ ಅವನು ಉದಕಾತೀತನಿರುವಂತೆ ।
ಭಕ್ತ ಪರಿವೇಷ್ಟಿತ ಸಂತರೂ ಅದರಂತೆ । ವಸ್ತುತಃ ಅಲಿಪ್ತರು ಅವರಿಂದ ॥ 59

ಭಕ್ತರಿಂದ ಆವರಿಸಿದಂತೆ ಕಾಣುತ್ತಿರಲು । ಆದರೂ ಅವರಾಸಕ್ತಿ ಇರದು ಎಲ್ಲೂ ।
ಸ್ವಸ್ವರೂಪದಲೇ ಚಿತ್ತವಿರಲು । ಯಾವಾಗಲೂ ಬೇರೇನನು ಕಾಣರು ॥ 60

ಇಂಥ ಈ ಮಹಾ ಸಾಧುಸಂತರು । ಅವರಧೀನನಾಗಿ ನಡೆಯುವನು ದೇವರು ।
ವಿಶ್ವದಲಿ ಅಪ್ರಾಪ್ತವೆಂಬುದೊಂದು ಇಲ್ಲದ ಅವರು । ಜ್ಞಾತವಿಲ್ಲದುದೊಂದೂ ಇರದು ॥ 61

ಉಪದೇಶ ಕೊಡುವರು ತೆಗೆದುಕೊಳ್ಳುವರು । ಇಂಥ ಅನೇಕ ಗುರು-ಶಿಷ್ಯರು ಜಗದಲಿಹರು ।
ಆದರೆ ಉಪದೇಶದ ಜೊತೆ ಅನುಭೂತಿ ಕೊಡುವವರು । ಅಪರೂಪವಾಗಿರುವರೆಲ್ಲೋ ॥ 62

ಈ ಪೂರ್ವವರ್ಣನ ಸಾಕು ಇನ್ನು । ಮಾಡುವ ಮುಖ್ಯ ಕಥಾವತರಣವನು ।
ಅದಕಾಗಿ ಉತ್ಕಂಠಿತರಾದ ಶ್ರೋತೃಗಳೇ ಇನ್ನು । ಶ್ರವಣಸಂಪನ್ನರಾಗುವಾ ॥ 63

ಮೊಗಲಾಯಿಯಲ್ಲಿ ಪಟ್ಟಣ ನಾಂದೇಡ । ಅಲ್ಲಿಯ ಪಾರಶೀ ವ್ಯಾಪಾರಿ ಪ್ರಸಿದ್ಧನಿದ್ದ ।
ಧಾರ್ಮಿಕ ಮತ್ತು ಲೋಕ ಪ್ರಿಯನಾಗಿದ್ದ । ಹೆಸರವನಿಗೆ ರತನಜಿ ಎಂದು ॥ 64

ಧನ ಸಂಪತ್ತು ಬೇಕಾದಷ್ಟು ಜೊತೆಗೆ । ದನಕರು ಹೊಲಗದ್ದೆ ಗಳಿರುವಾಗ್ಗೆ ।
ಅವರ ವಾಡೆಯು ಮುಕ್ತದ್ವಾರ ಎಲ್ಲರಿಗೆ । ಬರಿಗೈಲಿ ಯಾರೂ ಹಿಂದಿರುಗರಲ್ಲಿಂದ ॥ 65

ಹೀಗೆ ನೋಟಕೆ ಆನಂದ ಸಾಗರದಲ್ಲಿ । ಮುಳುಗಿದ್ದರೂ ಹಗಲು ರಾತ್ರಿಗಳಲ್ಲಿ ।
ಅಸಹ್ಯ ಚಿಂತೆ ಬೆಂಕಿ ಅಂತರದಲ್ಲಿ । ಯಾವಾಗಲೂ ಉರಿಯುತ್ತಿತ್ತು ॥ 66

ಇದಂತೂ ಈಶ್ವರೀ ಸೂತ್ರವೇ ಇರುವುದು । ಅಕಲಂಕ ಸೌಖ್ಯವು ಯಾರಿಗೂ ಇರದು ।
ಯಾರಿಗೆ ಯಾವುದು ಯಾರಿಗೆ ಯಾವುದು । ಕೊರಗು ಇದ್ದೇ ಇರುವುದು ॥ 67

ಯಾರೆನ್ನಬಹುದು ನಾನೇ ದೊಡ್ಡವನು । ಸಕಲೈಶ್ವರ್ಯಗಳಲೂ ಶ್ರೇಷ್ಠನು ।
ಮನಬಂದಂತೆ ವರ್ತಿಸುವನು ಸಲ್ಲದ ಅಹಂಕಾರದಲ್ಲಿ ॥ 68

ನಿರ್ವ್ಯಂಗ್ಯವಿದ್ದರೆ ದೃಷ್ಟಿ ತಾಗೀತು । ಎಂದು ದೇವರೆ ಅದಕೊಂದು ಕಪ್ಪು ದೃಷ್ಟಿಯ ಬೊಟ್ಟು ।
ತನ್ನ ಕೈಯಿಂದಲೇ ಸ್ಪಷ್ಟವಾಗಿ ಇಟ್ಟು । ಕಳಿಸಿರುವದು ಸುಪರಿಚಿತವಿರುವುದು ॥ 69

ರತನಜೀ ಧನ ಕನಕ ಸಂಪನ್ನ । ಬರು ಹೋಗುವವರಿಗೆ ಹಾಕುವನು ಅನ್ನ ।
ದೀನರ ದೈನ್ಯವನು ಮಾಡುವ ವಿಚ್ಛಿನ್ನ । ಸುಪ್ರಸನ್ನನವ ಯಾವಾಗಲೂ ॥ 70

ಈ ರೀತಿ ಶೇಠಜಿಯು ಸುಖದಲಿದ್ದ । ಎಂಬ ತಿಳುವಳಿಕೆ ಜನರ ಮನದ ।
ವಿತ್ತದ ಸೌಖ್ಯವೆಂಥದ್ದು ಆ ಪುತ್ರನಿಲ್ಲದ । ಯಾವಾಲೂ ಚಿಂತೆ ಕಾಡುತಿರುವಾಗ ॥ 71

ಕನ್ಯಾ ಸಂಪತ್ತಿ ಇತ್ತು ದೊಡ್ಡದು । ಒಂದರ ಹಿಂದೆ ಒಂದು ಹನ್ನೆರಡು ।
ಸಾಧ್ಯವೇ ಸುಖದ ಗಾಳಿಯೂ ಬೀಸುವುದು । ಮನಸಿಗೆ ಶಾಂತಿ ಇದ್ದೀತೇ॥ 72

ಭಕ್ತಿ ಇಲ್ಲದ ಹರೀ ಕೀರ್ತನ । ತಾಲಸ್ವರವಿಲ್ಲದ ಗಾಯನ ।
ಯಜ್ಞೋಪವೀತವಿಲ್ಲದ ಬ್ರಾಹ್ಮಣ । ಏನು ಶೋಭೆ ತಂದೀತು ॥ 73

ಸಕಲ ಕಲಾ ಪ್ರವೀಣನಾಗಿರಲು । ಸಾರಾಸಾರ ಜ್ಞಾನವಿಲ್ಲದಿರಲು ।
ಆಚಾರ ಸಂಪನ್ನವಿದ್ದು ಭೂತದಯೆ ಇಲ್ಲದಿರಲು । ಏನು ಶೋಭೆ ತಂದಿತು ॥ 74

ಹಣೆಯಲ್ಲಿ ತಿಲಕ ಗೋಪಿ ಚಂದನ । ಕೊರಳಲಿ ತುಲಸೀ ಮಾಲೆ ಭೂಷಣ
ಜಿವ್ಹೆಯಲಿ ಮಾತ್ರ ಸಂತವಿಂಡಬನ । ಅಲ್ಲಿ ಶೋಭೆ ಎಂಥದಿದ್ದಿತ್ತು ।। 75

ಅನುತಾಪವಿಲ್ಲದ ತೀರ್ಥಾಟನ । ಕೊರಳ ಸರವಿಲ್ಲದ ಅಲಂಕರಣ ।
ಪುತ್ರನಿಲ್ಲದ ಗೃಹಸ್ಥ ಸದನ । ಶೋಭೆ ಎಲ್ಲಿಂದ ಬಂದೀತು ॥ 76
ಒಂದಾದರು ಪುತ್ರ ಸಂತಾನ । ಕೊಟ್ಟಾನೇ ಆ ನಾರಾಯಣ ।
ಇದೇ ಚಿಂತೆ ಅನುದಿನ । ಮನ ನಿಶ್ಚಿಂತವಾಗದು ॥ 77

ಶೇಟಜಿ ಇರುತಿರೆ ಯಾವಾಗಲೂ ಖಿನ್ನ । ರುಚಿಸದವನಿಗೆ ನೀರು ಅನ್ನ ।
ಹಗಲು ರಾತ್ರಿ ಉದ್ವಿಗ್ನ ಮನ । ಚಿಂತೆಯಲಿ ಮುಳಗಿರುವ ಯಾವಾಗಲೂ॥ 78

ದೇವಾ ನನ್ನ ಇದ್ದೊಂದು ಕಲಂಕ । ತೊಳೆದು ಮಾಡೆನ್ನ ನಿಷ್ಕಲಂಕ ।
ಕೊಡು ಒಬ್ಬ ವಂಶೋದ್ಧಾರಕ । ಪ್ರಭುವೇ ನನ್ನ ಲಜ್ಜೆಯನುಳಿಸು ॥ 79

ದಾಸಗುಣವಿನ ಮೇಲೆ ಭಕ್ತಿ ಇರುವುದು । ಅಂತರಂಗದ ಮಾತು ಎಲ್ಲ ಹೇಳುವುದು ।
ಹೇಳುವರು ನೀ ಶಿರಡಿಗೆ ಹೋಗೆಂದು । ಮನದಿಚ್ಛೆ ಪೂರ್ಣವಾಗುವುದು ॥ 80

ತೆಗೆದುಕೊಂಡು ಬಾಬಾರ ದರ್ಶನ । ಮಾಡಿ ಅವರ ಚರಣಕೆ ವಂದನ ।
ಸಾದ್ಯಂತ ಹೇಳು ನಿನ್ನ ಮನಲಿದ್ದುದನ್ನ । ಬಾಬಾ ಆಶೀರ್ವಚನವ ಕೊಡುವರು ॥ 81

ಹೋಗಲ್ಲಿ ಆಗುವುದು ನಿನ್ನ ಕಲ್ಯಾಣ । ಆತರ್ಕ್ಯವಿರುವುದು ಬಾಬಾರ ಮಹಿಮಾನ ।
ಹೋಗು ಆ ಸಂತನಿಗೆ ಶರಣ । ಕೃತ ಕಲ್ಯಾಣನಾಗುವಿ ॥ 82

ರತನಜಿಗೆ ಹಿಡಿಸಿತು ವಿಚಾರ । ಮಾಡಿದನು ಮನಸಿನ ನಿರ್ಧಾರ ।
ಕೆಲವು ದಿನಗಳು ಕಳೆದ ನಂತರ । ಶಿರಡಿಗೆ ಬಂದರು ರತನಜಿ ॥ 83

ಮಶೀದಿಗೆ ದರ್ಶನಕ್ಕೆ ಹೋದರು । ಸಾಯಿ ಪಾದಕೆ ಸಾಷ್ಟಾಂಗವೆರಗಿದರು ।
ಪುಣ್ಯರಾಶಿಗಳಾದ ಮಹಾರಾಜರ ನೋಡಿದರು । ಪ್ರೇಮ ಉಕ್ಕಿ ಹರಿಯಿತು ॥ 84

ಹೂವಿನ ಬುಟ್ಟಿಯನು ಬಿಚ್ಚಿದರು । ಕುಸುಮ ಮಾಲೆಯನು ತೆಗೆದು ಕೊಂಡರು ।
ಪ್ರೇಮದಿ ಬಾಬಾರ ಕೊರಳಿಗೆ ಹಾಕಿದರು । ಹಣ್ಣುಗಳ ಸಮರ್ಪಿಸಿದರು ಚರಣದಲಿ ॥ 85

ಆಗ ಅತಿ ವಿನಿತರಾಗಿ । ರತನಜಿ ಆದರಯುಕ್ತರಾಗಿ ।
ಕುಳಿತರು ಬಾಬಾರ ಹತ್ತಿರ ಹೋಗಿ । ಪ್ರಾರ್ಥಿಸಿದರೇನೆಂದು ಕೇಳಿರಿ ॥ 86

ಜನರು ಬೀಳಲು ಸಂಕಟದೊಳಗೆ । ಬರುವರು ನಿಮ್ಮ ಪಾದದೆಡೆಗೆ ।
ಬಾಬಾ ರಕ್ಷಿಸುವರು ಲಗುಬಗೆ । ಎಂಬ ಮಾತನು ನಾ ಕೇಳಿರುವೆನು ॥ 87

ಅದಕಾಗಿ ಬಂದೆ ಇಲ್ಲಿಯವರೆಗೆ । ಉತ್ಕಂಠೆ ಹೊತ್ತು ಮನದೊಳಗೆ ।
ಸಾದರ ಪಡಿಸುತ್ತಿರುವೆ ಚರಣದಲಿ । ತಿರುಗಿ ಕಳುಹಿಸದಿರಿ ಮಹಾರಾಜರೇ ॥ 88

ಬಳಿಕ ಬಾಬಾ ಅವರಿಗೆ ಅಂದದ್ದು । ಬರುವೆ ಬರುವೆ ಅನ್ನುತ್ತ ಈಗ ಬಂದದ್ದು ।
ನನ್ನ ದಕ್ಷಿಣೆಯನೇನು ಕೊಡುವೆಯೋ ಕೊಟ್ಟು ಬಿಡು । ಆಗ ನೀ ಕೃತಾರ್ಥನಾಗುವೆ ॥ 89

ಯಾರೇ ಆಗಲಿ ದರ್ಶನಕ್ಕೆ ಬರಲು । ಚರಣಗಳಿಗೆ ವಂದಿಸ ತೊಡಗಲು ।
ಹಿಂದೂ ಯವನ ಇಲ್ಲವೇ ಪಾರಶಿಯೇ ಇರಲ । ಅವರಿಂದ ದಕ್ಷಿಣೆ ಕೇಳುವರು ॥ 90

ಅದಾದರೇನು ಅಷ್ಟಿಷ್ಟಲ್ಲ । ರೂಪಾಯಿ ಒಂದೆರಡು ಐದು ಅಲ್ಲ ।
ನೂರು ಸಾವಿರ ಲಕ್ಷ ಹೀಗೆಲ್ಲ । ಮನ ಬಂದಂತೆ ಬೇಡುವರು ॥ 91

ಕೊಟ್ಟರೂ ಇನ್ನಷ್ಟು ಬೇಡುವರು । ಮುಗಿಯಿತೆಂದರೆ ಕಡ ತನ್ನಿರೆನ್ನುವರು ।
ಕಡವೂ ಸಿಗದಂತಾದಾಗ ಅವರು । ಬೇಡುವದನು ನಿಲ್ಲಿಸುವರು ॥ 92

ಮತ್ತೆ ಆ ಭಕ್ತನಿಗೆ ಎನ್ನುವರು । "ಒಂದಿಷ್ಟೂ ಚಿಂತೆ ಮಾಡದಿರು ।
ನೀ ನನ್ನ ಹತ್ತಿರ ನಿಶ್ಚಿಂತನಾಗಿ ಕುಳಿತಿರು । ನಾ ಬೇಕಾದಷ್ಟು ಹಣ ಕೊಡುವೆ ನಿನಗೆ ॥ 93

ಜಗದಲಿ ಯಾರಿಗೇ ಆಗಲಿ ಯಾರಾದರೂ ಇರುವರು । ಒಬ್ಬರಿಲ್ಲದಿದ್ದರೆ ಮತ್ತೊಬ್ಬರಾದರೂ ಇರುವರು ।
ನನಗೆ ಮಾತ್ರ ಇಲ್ಲ ಯಾರೂ । ಅಲ್ಲಾನೇ ಅಲ್ಲಾ ನನಗೆಲ್ಲಾ ॥ 94

ನನ್ನನ್ನು ಯಾರು ಕಾಣುವರು ಜೀವ ಪ್ರಾಣದಂತೆ । ಅಂಥವರದೇ ನನಗಿರುವದು ಕೊರತೆ ।
ಒಂದು ಪಟ್ಟು ಅವ ನನಗೆ ಈಯುತೆ । ಅದರ ನೂರರಷ್ಟನು ನಾ ಕೊಡುವೆ" ॥ 95

ಎಷ್ಟೇ ದೊಡ್ಡ ಲಕ್ಷಾಧೀಶನಿರಲು । ಅವನನ್ನೂ ಕಳಿಸುವರು ದಕ್ಷಿಣೆ ಕೇಳಲು ।
ನಿರ್ಧನರ ಮನೆಗೆ ಹೋಗಲು । ಆಜ್ಞೆಯನೀಯುವರವನಿಗೆ ॥ 96

ದೊಡ್ಡ ಧನಿಕನಿರಲಿ ಇಲ್ಲವೇ ರಂಕ । ಬಡ ದುರ್ಬಲ ಇಲ್ಲವೇ ಖಂಕ ।
ಒಬ್ಬ ಕಡಿಮೆ ಒಬ್ಬ ಅಧಿಕ । ಇಂಥದೊಂದು ಗೊತ್ತಿಲ್ಲ ಸಾಯಿಗೆ ॥ 97

ಬಾಬಾರ ಆಜ್ಞೆಯ ಶಿರಸಾವಹಿಸಿ । ಮನದ ಅಭಿಮಾನವನು ತ್ಯಜಿಸಿ ।
ತರುವರು ಬಾಬಾರಿಗಾಗಿ ಯಾಚಿಸಿ । ಹೋಗಿ ಬಡವರ ಮನೆಗಳಿಗೆ ॥ 98

ಆದರೂ ಇದರ ಒಳಗಿನ ಅರ್ಥ । ಮಾಡಿ ದಕ್ಷಿಣೆಯದೊಂದು ನಿಮಿತ್ತ ।
ನಿಜಭಕ್ತರಿಗೆ ಕಲಿಸುತ । ಸಲ್ಲೀನತೆಯ ಬೆಳೆಸಿಕೊಳ್ಳಲು ॥ 99

ಯಾರಾದರೂ ಹೀಗೆ ಶಂಕಿಸಬಹುದು । ಸಾಧುಗಳಿಗೇಕೆ ಧನ ಬೇಕಾಗುವದು ।
ಈ ಮನದ ಶಂಕೆ ನೀಗುವದು । ಅದರ ಬಗ್ಗೆ ಒಂದಿಷ್ಟು ವಿಚಾರ ಮಾಡಲು ॥ 100

ಸಾಯಿಯೇ ಪೂರ್ಣ ಕಾಮನಿರುವನಲ್ಲ । ಎಂದಾಗ ದಕ್ಷಿಣೆ ಕಾರಣವೇ ಇಲ್ಲ ।
ಇವ ಹೇಗೆ ನಿಷ್ಕಾಮನಿರಬಲ್ಲ । ಭಕ್ತರ ಹಣ ಕೇಳುವನು ॥ 101

ಯಾರಿಗೆ ಆಣೀಕಲ್ಲು ಮತ್ತು ವಜ್ರ । ಸುವರ್ಣ ಮುದ್ರೆಗಳು ಮತ್ತು ತಾಮ್ರ ।
ಎಲ್ಲವನ್ನೂ ಒಂದೇ ಪರಿಮಾಣದಲ್ಲಿ ಕಾಣುವರು । ಅವರು ಕೈ ಏಕೆ ಬೇಡಲು ಒಡ್ಡಲಾದೀತು ॥ 102

ಹೊಟ್ಟೆಗೆ ಬೇಕಾಗುವಷ್ಟು ಬೇಡುವರು ಭಿಕ್ಷೆ । ವರಿಸಿದರು ವೈರಾಗ್ಯದ ದೀಕ್ಷೆ ।
ಅಂಥವರಿಗೆಲ್ಲಿ ದಕ್ಷಿಣೆಯ ಅಪೇಕ್ಷೆ । ಆ ನಿರಪೇಕ್ಷ ವಿರಕ್ತನಿಗೆ ॥ 103

ಅಷ್ಟ ಸಿದ್ಧಿಗಳು ಕೈ ಮುಗಿದು । ಯಾವಾಗಲೂ ದ್ವಾರದಲಿ ನಿಂತಿದ್ದು ।
ನವನಿಧಿಗಳವನ ಆಜ್ಞೆಯಲಿದ್ದು । ದ್ರವ್ಯಕ್ಕಾಗಿ ದೀನನಾಗುವನೇ ॥ 104

ಐಹಿಕಗಳನು ಒದ್ದು ಒಗೆದ । ಆಮುಷ್ಮಿಕದತ್ತ ತಿರುಗಿ ನೋಡದ ।
ಇಂಥ ಸಮ್ಯಗ್ದರ್ಶಿ ವಿರಕ್ತನಿಂದ । ಧನದ ಯಾಚನೆ ಏತಕೆ ॥ 105

ಸಂತ ಸಾಧು ಸಜ್ಜನರು । ಉತ್ತಮ ಶ್ಲೋಕ ಪರಾಯಣರು ।
ಭಕ್ತ ಕಲ್ಯಾಣಕ್ಕಾಗಿಯೇ ಜೀವಿಸುವರು । ಅಂಥವರಿಗೆ ಧನದಿಂದಾಗಬೇಕಾದುದೇನು ॥106

ಏತಕೆ ದಕ್ಷಿಣೆ ಬೇಕು ಸಾಧುವಿಗೆ । ಅವನಿರಬೇಕು ನಿರೀಚ್ಛನಾಗೇ ।
ಲೋಭ ಬಿಡವಲ್ಲದು ಫಕೀರನಿರುವಾಗ್ಯೆ । ನಿತ್ಯವೂ ಹಣದ ಆರಾದನೆ ॥ 107

ಪ್ರಥಮ ದರ್ಶನದಿ ಪಡೆವರು ದಕ್ಷಿಣೆ । ಮತ್ತೆ ದರ್ಶನಕೆ ಹೋಗಲು ಕೇಳವರು ದಕ್ಷಿಣೆ ।
ಹೋಗಿ ಬರುವೆಂದಾಗಲೂ ಕೊಡಿರಿ ದಕ್ಷಿಣೆ । ಕ್ಷಣ ಕ್ಷಣಕ್ಕೂ ಇದು ಏನು ॥ 108

ಮೊದಲು ಪಾನೀಯ ಉತ್ತರಾ ಪೋಶನ । ಆಮೇಲೆ ಹಸ್ತ ಮುಖ ಪ್ರಕ್ಷಾಲನ ।
ಕರೋದ್ವರ್ತನ ತಾಂಬೂಲದಾನ । ಆಮೇಲೆ ದಕ್ಷಿಣೆ ಕೊಡುವದು ರೀತಿ ॥ 109

ಆದರೆ ಬಾಬಾರ ಕ್ರಮವೇ ವಿಲಕ್ಷಣ । ಮಾಡತೊಡಗಲು ಚಂದನ ವಿಲೇಪನ ।
ಇಲ್ಲವೇ ಅಕ್ಷತಾಲಂಕಾರಣ । ದಕ್ಷಿಣಾ ಪ್ರದಾನವ ಬಯಸುವರು ॥ 110

ಪೂರ್ವರಾಧನೆಯ ಆರಂಭಿಸಿದಾಗಲೇ । ಬಾಬಾ ದಕ್ಷಿಣೆಯ ಕೇಳುವರು ಮೊದಲೆ।
ಓಂ ತತ್ಸದ ಬ್ರಹ್ಮಾರ್ಪಣ ಎಂದಾಗಲೇ । ಮಾಡಬೇಕಾದದನು ॥ 111

ಆದರೀ ಶಂಕೆಯ ನಿರಸನ । ಮಾಡಲು ಬೇಕಿಲ್ಲ ಹೆಚ್ಚಿನ ಪ್ರಯತ್ನ ।
ಕ್ಷಣವೊಂದು ಚಿತ್ತವಿಟ್ಟು ಕೇಳಲಿದನು । ಸಮಾಧಾನವ ಪಡೆಯುವಿರಿ ॥ 112

ಧನದ ಸಂಚಯ ಮಾಡುವುದು । ಧರ್ಮ ಕಾರಣಕ್ಕೆ ಉಪಯೋಗವಾಗಲೆಂದು ।
ಕ್ಷುಲ್ಲಕ ವಿಷಯಗಳ ಕಾರಣಕ್ಕಾಗಿಯೇ ಅದು। ಹೆಚ್ಚಾಗಿ ವೆಚ್ಚ ಮಾಡಲಾಗುವುದು ॥ 113

ಧನದಿಂದ ಧರ್ಮಒದಗುವುದು । ಧರ್ಮದಿಂದ ಜ್ಞಾನಾರ್ಜನೆಯಾಗುವುದು ।
ಇದರಲ್ಲಿ ಸ್ವಾರ್ಥವಿದ್ದರೂ ಪರಮಾರ್ಥಕ್ಕೆ ಸೇರಿದ್ದು । ಮನಸಿಗೆ ಸಮಾಧಾನ ಸಿಗುವುದು॥ 114

ಆರಂಭದಲಿ ಎಷ್ಟೋ ದಿನ । ತೆಗೆದುಕೊಳ್ಳುತಿರಲಿಲ್ಲ ಬಾಬಾ ಏನನ್ನ ।
ಸಂಗ್ರಹಿಸುತ್ತಿದ್ದರು ಸುಟ್ಟ ಕಡ್ಡಿಗಳನ್ನ । ಅವನ್ನೇ ಜೇಬಿನಲಿ ತುಂಬುತ್ತಿದ್ದರು ॥ 115

ಭಕ್ತರಿರಲಿ ಅಭಕ್ತರಿರಲಿ । ಏನೂ ಬೇಡುತ್ತಿರಲಿಲ್ಲ ಯಾರ ಹತ್ತಿರವೇ ಆಗಲಿ ।
ದುಡ್ಡೆರದು ದುಡ್ಡು ಇಟ್ಟರೂ ಅಲ್ಲಿ । ಅದರಿಂದ ಎಣ್ಣೆ ಅಥವಾ ತಂಬಾಕು ತರುತ್ತಿದ್ದರು ॥ 116

ತಂಬಾಕದ ಮೇಲೆ ಪ್ರೇಮ ಬಹಳ । ಸೇದುತ್ತಿದ್ದರು ಚಿಲಮೆ ಬೀಡಿಗಳ ।
ಆ ಚಿಲಮೆ ಎಂದೂ ನಿರ್ಧೂಮ್ರವಿರುತ್ತಿರಲಿಲ್ಲ । ಅಷ್ಟೊಂದು ಸೇವೆ ಅವರದು ॥ 117

ಮುಂದೆ ಯಾರದೋ ಮನಸ್ಸಿನಲ್ಲಿ । ದಕ್ಷಿಣೆ ಇಲ್ಲದೇ ಬರಿಗೈಯಲ್ಲಿ ।
ದರ್ಶನ ಪಡೆಯಲು ಹೋಗುವದು ಹೇಗೆ ಸಂತರಲ್ಲಿ । ಹೀಗಾಗಿ ದಕ್ಷಿಣೆ ತೆಗೆದುಕೊಳ್ಳತೊಡಗಿದರು ॥ 118

(ತಾಮ್ರದ) ದುಡ್ಡು ಕೊಟ್ಟರೆ ಜೇಬಿಗೆ ಹಾಕುತಿದ್ದರು । ಎರಡು ದುಡ್ಡಿನ ದುಡ್ಡು ಇಟ್ಟರೆ ಯಾರಾದರೂ ।
ಅದನು ಹಾಗೇ ತಿರುಗಿ ಕೊಟ್ಟು ಬಿಡುವರು । ಈ ರೀತಿ ಬಹಳ ದಿನ ನಡೆಯಿತು ॥ 119

ಮತ್ತೆ ಮುಂದೆ ಕೆಲಕಾಲ ಕಳೆಯಿತು । ಸಾಯಿಬಾಬಾರ ಮಹಾತ್ಮ್ಯ ಬೆಳೆಯಿತು ।
ಭಕ್ತರ ತಂಡವೇ ಬರತೊಡಗಿತು । ವಿಧಿಪೂರ್ವಕ ಪೂಜೆ ಆರಂಭವಾಯಿತು ॥ 120

ಸುವರ್ಣ ಪುಷ್ಪ ದಕ್ಷಿಣೆ ಇಡುವದು । ಇದು ನಿತ್ಯ ಪೂಜೆಯ ವಿಧಾನವಿರುವದು ।
ಪೂಜಕನಿಗೆ ಇದು ತಿಳಿದಿರುವದು । ಅದಿಲ್ಲದೆ ಪೂಜೆ ಸಾಂಗವಾಗಲಾರದು ॥ 121

ರಾಜ್ಯಾಭಿಷೇಕ ಸಿಂಚನ । ಇಲ್ಲವೇ ಮಾಡುವಾಗ ಪಾದ ಪೂಜೆಯನ ।
ಪೂಜಕನು ತರುವನು ಉಪಾಯನ । ಅಂತೆಯೇ ಗುರುಪೂಜೆಗೆ ದಕ್ಷಿಣೆ ॥ 122

ಉಚ್ಚಸ್ಥಾನಸ್ಥಿತ ದಕ್ಷಿಣಾವಂತ । ಹಿರಣ್ಯದಾ ಅಮೃತವಂತ ।
ಹೇಮದಾತಾ ಶುದ್ಧಿಮಂತ । ಈ ವಚನ ವೇದಗಳಲಿ ಹೇಳಿದೆ ॥ 123

ಸೌಮಂಗಲ್ಯ ಗಂಧ ದಾನದಿಂದ । ಆಯುಷ್ಯವರ್ಧನ ಅಕ್ಷತೆಗಳಿಂದ ।
ಶ್ರೀ ಐಶ್ವರ್ಯ ಪುಷ್ಪ ತಾಂಬೂಲಾರ್ಪಣೆಯಿಂದ । ದಕ್ಷಿಣೆಯಿಂದ ಬಹುಧನತೆ ॥ 124

ಗಂಧಾಕ್ಷತ ಪುಷ್ಪ ತಾಂಬೂಲ । ಪೂಜಾ ದ್ರವ್ಯಗಳಲಿ ಇರಬೇಕು ಮೊದಲ ।
ಅದರಂತೆಯೇ ಸುವರ್ಣ ಪುಷ್ಪ ದಕ್ಷಿಣೆ ಫಲ । ಬಹುಧನದಾಯಕವಿರುವದು ॥ 125

ದೇವ ಪೂಜನದಲಿ ದಕ್ಷಿಣೆ ಬೇಕು । ಅಂತೆಯೇ ಜನರಲ್ಲಿ ಸತ್ಸಂಗತಿ ಸಿದ್ಧರ್ತಕ್ಕೂ ।
ವ್ರತೋದ್ಯಾಪನದಲಿ ಬಾಗಿಣ ಕೊಡುವುದಕೂ । ಹಿರಣ್ಯವ ಅರ್ಪಿಸಬೇಕಾಗುವದು ॥126

ಜಗದ ಎಲ್ಲ ವ್ಯವಹಾರಕ್ಕೂ । ದುಡ್ಡೇ ಇದ್ದರೆ ಸಾಕು ।
ಅಬ್ರುನುಕ್ಸಾನ ತುಂಬಲಿಕ್ಕೂ । ದುಡ್ಡಿತ್ತರೆ ನಡೆದು ಹೋಗುವದು ॥ 127

ಹಿರಣ್ಯ ಗರ್ಭಗರ್ಭಸ್ಥ । ಇತ್ಯಾದಿ ಮಂತ್ರಗಳ ಉಚ್ಚರಿಸುತ ।
ದೇವಪೂಜೆಗೂ ದಕ್ಷಿಣೆ ಸಮ್ಮತ । ಇರುವಾಗ ಸಂತಪೂಜನಕೇಕೆ ಭೇದ ॥ 128

ಸಂತ ದರ್ಶನಕೆ ಹೋಗುತ್ತ । ತಮ್ಮ ತಮ್ಮ ಜ್ಞಾನ ಅನುಸರಿಸುತ ।
ಯಾರದು ಹೇಗಿರುವದೋ ಚಿತ್ತ । ಒಮ್ಮತವಿದರಲ್ಲಿ ಇರಲಾರದು ॥ 129

ಒಬ್ಬರ ಭಜನ ಭಾವಾರ್ಥವನಿಟ್ಟುಕೊಂಡು । ಇನ್ನೊಬ್ಬನು ಸಂತರ ಪರೀಕ್ಷೆಯ ಮಾಡಲೆಂದು ।
ಯಾರು ಹೇಳುವರು ಮನದಲಿದ್ದುದು । ಅವನೇ ನಿಜದಲಿ ಸಂತನೆಂದು ॥ 130

ಕೆಲವರು ಬೇಡುವರು ದೀರ್ಘಾಯುಷ್ಯವನ್ನು । ಧನಕನಕ ಆನೆ ಮೊದಲಾದವುಗಳನ್ನು ।
ಇನ್ನೂ ಕೆಲವರು ಪುತ್ರ ಪೌತ್ರಾದಿಗಳನ್ನು । ಅಖಂಡವಾಗಿ ಸತ್ತೆಯನು ಬೇಡುವರು ॥ 131

ಅಗಾಧ ಶೈಲಿ ಬಾಬಾರದು । ಯಾರಾದರೂ ಹೋಗಲು ಕುಚೇಷ್ಟೆ ಮಾಡಲೆಂದು ।
ಅವರ ದುರ್ಬುದ್ಧಿಯ ಸುಟ್ಟು ಬೂದಿಯಾಗುವದು । ಕೊನೆಗೆ ಬಾಬಾರ ಚರಣಗಳ ಹಿಡಿಯುವನು ॥132

ಈ ಭಾಗ್ಯವು ಸಂಚಿತದಲ್ಲಿರದಿದ್ದಲ್ಲಿ । ಅನುತಾಪವನು ಪಡೆಯುವರು ಚಿತ್ತದಲ್ಲಿ ।
ನಿರಭಿಮಾನರಾಗಿ ಕೊನೆಯಲ್ಲಿ । ದೃಡ ಪ್ರಚೀತಿಯ ಪಡೆಯುತಿದ್ದರು ॥ 133

ಇವರೆಲ್ಲ ಸಾಧಾರಣ ಭಕ್ತರು । ಸಂಪೂರ್ಣವಾಗಿ ಪ್ರಪಂಚಾಸಕ್ತರು ।
ದಕ್ಷಿಣೆಯ ದಾನದಿಂದ ಶುದ್ಧಚಿತ್ತರು । ಆಗಲೆಂಬ ಇಚ್ಛೆ ಬಾಬಾರದು ॥ 134

'ಯಜ್ಞೇನ ದಾನೇನ ತಪಸಾ' ಈ ಮಾತು । ಆತ್ಮಜ್ಞಾನೋತ್ಸುಕರ ಕುರಿತು ।
ದಕ್ಷಿಣಾ ಪ್ರದಾನವೇ ಸಾಧನವಿಂತು । ಸ್ಪಷ್ಟವಚನೋಕ್ತಿ ಇರುವದು ॥ 135

ಭಕ್ತನು ಸ್ವಾರ್ಥಿಇರಲಿ ಇಲ್ಲವೇ ಪರಮಾರ್ಥಿ । ಇಬ್ಬರಿಗೂ ಆಗಬೇಕು ಇಷ್ಟ ಪ್ರಾಪ್ತಿ ।
ಅದಕ್ಕೇ ದಕ್ಷಿಣೆಯ ನಿಜಗುರು ಪ್ರತಿ । ನಿಜ ಹಿತಾರ್ಥವಾಗಿ ಕೊಡಬೇಕು ॥ 136

ಪ್ರಜಾಪತಿಯೂ ದೇವ ದೈತ್ಯರಿಗೆ । ಮಾನವರ ಸಹಿತ ಮೂರು ಕುಲದವರಿಗೆ ।
ಬ್ರಹ್ಮಚರ್ಯವಾಸ ಮುಗಿಯಲವರಿಗೆ । ಇದೇ ಮಾತುಗಳ ಉಪದೇಶಿಸಿದ ॥ 137

'ದ' ಎಂಬ ಏಕಾಕ್ಷರದ ಉಪದೇಶವನಿತ್ತು । ಇದರಿಂದ ನಿಮಗೇನು ತಿಳಿಯಿತು ।
ಅದನೂ ಕೇಳಿ ದೃಢಪಡಿಸಿದನಿಂತು । ಲೀಲೆ ಗುರುಶಿಷ್ಯರದಿದು ॥ 138

'ದಾಂತರಾಗಬೇಕು' ಎಂದು ದೇವತೆಗಳು ತಿಳಿದರು । ದಯೆ ಮಾಡಿರಿ ಎಂದು ದೈತ್ಯರು ತಿಳಿದರು ।
ದಾನ ಕೊಡಬೇಕೆಂದು ಮಾನವರು ತಿಳಿದರು । ಕೇಳಿ ಪ್ರಜಾಪತಿ ಭಲೆ ಭಲೆ ಎಂದ ॥139

ದೇವನೆಂದರೆ ಅಲ್ಲ ಅನ್ಯ । ಮಾನವರೇ ಆದರೂ ಸ್ವಭಾವದಲಿ ಭಿನ್ನ ।
ಅದಾಂತ ಉತ್ತಮಗುಣ ಸಂಪನ್ನ । ದೇವರೆಂಬಭಿಧಾನ ಅವರಿಗೆ ॥ 140

ಮಾನವರಲ್ಲಿಯೇ ಅಸುರರಿರುವರು । ದುಷ್ಟ ಕ್ರೂರ ಹಿಂಸಾಪರರು ।
ದುರ್ಧರ ಲೋಭದಲಿ ಬಳಲುವರು ಮಾನವರು । ಈ ರೀತಿ ಮೂರು ಪ್ರಕಾರ ಮಾನವರದು ॥141

ಇಂಥ ಲೋಭ ಪ್ರಧಾನನಾದ ನರನನ್ನು । ಲೋಭಗರ್ತೆಯಿಂದ ಮೇಲೆತ್ತಲು ಅವನನ್ನು ।
ಚಾಚಿರುವರು ಭಕ್ತ ಹಿತೇಚ್ಛಗೆ ಕರವನ್ನು । ಕೃಪಾಸಾಗರ ಸಾಯಿನಾಥರು ॥ 142

ತೈತ್ತರೀಯೋಪನಿಷದನುವಾಕದೊಳು । ಏಕಾದಶಿ (ಹನ್ನೊಂದು) ಶ್ರುತಿಯಲಿ ನೋಡಲು ।
ಅಜ್ಞಾಪಿಸಿದೆ ಅನೇಕ ಜ್ಞಾನ ಪ್ರಕಾರಗಳು । ಅದರಲ್ಲಿಯ ಪ್ರತಿಯೊಂದನು ಕೇಳಬೇಕು ॥ 143

ನಿತ್ಯ ಕೊಡುವುದನು ಶ್ರದ್ಧೆಯಿಂದ ಕೊಡಬೇಕು । ಶ್ರದ್ಧೆ ಇಲ್ಲದೇ ಕೊಟ್ಟರೂ ಅದು ನಿರರ್ಥಕ ।
ರಾಜಾಜ್ಞೆ ಶಾಸ್ತ್ರಾಜ್ಞೆಗಳಿಗೆ ಹೆದರಬೇಕು । ನಾಚಿಯಾದರೂ ಕೊಡಬೇಕು ಏನಾದರೂ ॥ 144

ವಿವಾಹಾದಿ ಲೋಕಾಚಾರ । ಅಲ್ಲಿಯೂ ಕೊಡಬೇಕಾಗುವದು ಆಹೇರ ।
ಕೊಟ್ಟು ಕಾಯ್ದುಕೊಳಬೇಕು ಮಿತ್ರಾಚಾರ । ಲೋಕವ್ಯವಹಾರದ ಶಿಕ್ಷಣವಿದು ॥ 145

ಬಾಬಾರದಾರೂ ದಕಾರದಂತೆ ಭಕ್ತರತ್ತ । ಭಕ್ತ ಹಿತಾರ್ಥವಾಗಿ ಅದನೇ ಬೇಡುತ ।
ದಯಮಾಡಿ ದಾನವಿತ್ತು ಆಗಿರಿ ದಾಂತ । ಸೌಖ್ಯ ಅತ್ಯಂತ ಪಡೆಯಿರಿ ॥ 146

ಅದಾಂತತ್ವಾದಿ ದೋಷ ತ್ರಯಗಳು । ಈ ತ್ರಿದೋಷಗಳ ಕ್ಷಯ ಮಾಡಲು ।
ಈ ಏಕಾಕ್ಷರದ ಸ್ವಲ್ಪ ಉಪಾಯದೊಳು । ಗುರುರಾಯನು ಶಿಷ್ಯರಿಗಾಗಿ ಯೋಜಿಸಿದ ॥ 147

ಕಾಮ,ಕ್ರೋಧ ಮತ್ತು ಲೋಭ । ಆತ್ಮೋನ್ನತಿಗೆ ಇವೆಲ್ಲ ಅಶುಭ ।
ಅವುಗಳಿಗೆ ಜಯವಾಗುವದು ದುರ್ಲಭ । ಅದಕಾಗಿಯೇ ಸುಲಭ ಉಪಾಯವಿದು ॥148

ಈ ಶೃತಿ ಹೇಗೋ ಹಾಗೆಯೇ ಸ್ಮೃತಿ । ಅದರದೂ ಹೀಗೆಯೇ ಅನುಮತಿ ।
ಅದರ ಅವತರಣವನೇ ಶ್ರೋತೃಗಳ ಪ್ರತಿ । ದೃಢ ಪ್ರತೀತಿಗಾಗಿ ಕೊಟ್ಟಿದೆ ॥ 149

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮ ಕ್ರೋಧ ಸ್ಥಥಾಲೋಭಂ ತಸ್ಮಾದ್ ಏತತ್ರಯಂ ತ್ಯಜೇತ್ ॥
(ಶ್ರೀಮದ್ಭಗವದ್ಗೀತಾ, ಅ-16 ಶ್ಲೋಕ 21)

ಕಾಮ ಕ್ರೋಧ ಲೋಭಗಳು । ಇವು ಮೂರು ನರಕದ ದ್ವಾರಗಳು ।
ಆತ್ಮವಿನಾಶದ ಕಾರಣಗಳು । ಅದಕಾಗಿ ಅವುಗಳ ತ್ಯಜಿಸಬೇಕು ॥ 150

ಸಾಯಿ ಸಮರ್ಥರು ಪರಮ ದಯಾಳು । ಭಕ್ತ ಹಿತವನು ಸಾಧಿಸಲು ।
ದಕ್ಷಿಣೆ ಬೇಡುತ ಅವರೊಳು । ತ್ಯಾಗದ ಶಿಕ್ಷಣ ಕೊಡುತಿದ್ದರವರಿಗೆ ॥ 151

ದಕ್ಷಿಣೆಯದಾದೀತು ಬೆಲೆ ಏನು । ಸಾಧಿಸಲು ಗುರು ಕಾರ್ಯಾರ್ಥವನ್ನು ।
ಪ್ರಾಣವನೂ ಅರ್ಪಿಸಲು ಸಿದ್ಧನಿರದವನು । ಅವನ ಪರಮಾರ್ಥವೆಂಥದು ॥ 152

ನಿಜವಾಗಿಯೂ ಭಕ್ತ ಕಲ್ಯಾಣದ ಹೊರತು । ಬಾಬಾರಿಗಾದರೂ ದಕ್ಷಿಣೆ ಏಕೆ ಬೇಕಿತ್ತು ।
ಸ್ವತಃ ಅವರ ಜೀವನವಂತೂ । ದಕ್ಷಿಣಯನವಲಂಬಿಸಿರಲಿಲ್ಲ ॥ 153

ಹೊಟ್ಟೆ ತುಂಬಲು ಭಿಕ್ಷೆ ಬೇಡುತ । ಅದರಿಂದ ದಕ್ಷಿಣೆ ಕೇಳುವುದರಲ್ಲಿರಲಿಲ್ಲ ಸ್ವಾರ್ಥ ।
ದಕ್ಷಿಣೆ ಕೊಡುವವರಿಂದಾಗುವದು ಶುದ್ಧ ಚಿತ್ತ । ನಿಜ ಭಕ್ತರದಾಗಬೇಕೆಂದು ಬಯಕೆ ॥154

ಮೇಲೆ ಹೇಳಿದ ವೇದವಚನ । ಅದರನುಸಾರ ದಕ್ಷಿಣಾ ಪ್ರದಾನ ।
ಆಗದೆ ಆಗದು ಸಂಪೂರ್ಣ ಪೂಜನ । ಆದಕೆ ಮೊದಲದನು ಮಾಡಿಸುವರು ॥ 155

ಸಾಕು ಇನ್ನು ಈ ದಕ್ಷಿಣ ಗ್ರಂಥ । ತಿಳಿಯಿತಿನ್ನು ಅದರ ಮಥಿತಾರ್ಥ ।
ಇಲ್ಲಿ ಅಭಿಲಾಷೆ ಇಲ್ಲ ಸ್ವಾರ್ಥ । ಭಕ್ತ ಹಿತಕಾಗಿಯೇ ಆ ದಕ್ಷಿಣೆ ॥ 156

ಅದಕೆ ಇನ್ನು ಕಥಾಭಾಗ । ಮುಂದೆ ಹೇಳುವೆನು ಯಥಾಸಾಂಗ ।
ಕೇಳಿರಿ ರತನಜಿಯ ದಕ್ಷಿಣಾ ಪ್ರಸಂಗ । ಒಳ್ಳೆ ಲೀಲೆಯಿದು ಸಾಯಿಯದು ॥ 157

ಶ್ರೋತೃಗಳಾಗಿ ಪೂರ್ಣಕೃಪಾ ಪೂರ್ವಕ । ಕೇಳಿರಿ ಈ ಅದ್ಭುತ ಕಥಾನಕ ।
ಸಾಯಿ ಸ್ವರೂಪವು ಹೇಗೆ ವ್ಯಾಪಕ । ಹೇಗೆ ಅಲೋಕಿಕವಾಗಿದೆ ನೋಡಿರಿ ॥ 158

ಶೇಡಜಿ ಹತ್ತಿರ ದಕ್ಷಿಣೆ ಕೇಳಲು । ಬಾಬಾ ಹಿಂದಿನ ವೃಂತಾತವ ಹೇಳಲು ।
ಆದರೂ ಶೇಡಜಿ ನೆನಪಾಗದಿರಲು । ವಿಸ್ಮಯವೆನೆಸಿತು ಆವರಿಗೆ ॥ 159

ಮೂರು ರೂಪಾಯಿ ಹದಿನಾಲ್ಕು ಅಣೆಗಳನು । ತಿಳಿದಿರುವೆ ನೀ ನೆನಗೆ ಕೊಟ್ಟಿರುವದನ್ನು ।
ಉಳಿದದ್ದು ತಂದಿರುವೆ ನನಗಾಗಿ ಅದನು । ಆ ದಕ್ಷಿಣೆಯನು ನನಗೆ ಕೊಟ್ಟುಬಿಡು ॥ 160

ಇದೇ ಇರುವುದು ಬಾಬಾರ ಪ್ರಥಮ ದರ್ಶನ । ಅಂಥದರಲ್ಲಿ ಕೇಳಿ ಬಾಬಾರ ವಚನ ।
ರತನಜಿ ಶೇಡಜಿ ವಿಸ್ಮಯಪನ್ನ । ನೆನಪು ಮಾಡಿಕೊಳ್ಳ ತೊಡಗಿದ ॥ 161

ಈ ಮೊದಲು ನಾ ಶಿರಡಿಗೆ ಬಂದಿಲ್ಲ । ಯಾರ ಜೊತೆಯಲ್ಲಿ ಏನು ಕೊಟ್ಟು ಕಳಿಸಿಲ್ಲ ।
ಆದರೂ ಸಾಯಿ ಹೀಗೆ ಹೇಳುವರಲ್ಲ । ಆಶ್ಚರ್ಯಕರವಾಗಿದೆ ಇದು ಎಲ್ಲ ॥ 162

ಹೀಗೆ ಎಂದೂ ನಡೆದೇ ಇಲ್ಲ । ರತನಜಿ ಚಿಂತಿಸಿದರು ಮನದಲ್ಲೇ ।
ದಕ್ಷಿಣೆ ಇತ್ತು ನಮಸ್ಕರಿಸಿದಾಗಲೇ । ಆದರೆ ಈ ಒಗಟು ಒಡೆದಾಯಿತು ॥ 163

ಆ ಮಾತು ಅಷ್ಟಕ್ಕೇ ಬಿಟ್ಟರು । ಬಂದ ಕಾರಣವ ನಿವೇದಿಸಿದರು ।
ಮತ್ತೆ ಪಾದಗಳಿಗೆರಗಿದರು । ಕರ ಮುಗಿದು ಕುಳಿತು ಕೊಂಡರು ॥ 164

ಶೆಟ್ಟಿ ಮನದಲಿ ಬಲು ಖುಷಿಯಾದ । ಬಾಬಾ ಒಳ್ಳೆಯದನ್ನೇ ಮಾಡಿದರೆಂದ ।
ಉದಯಿಸಿತು ಪೂರ್ವಭಾಗ್ಯ ಅದರಿಂದ । ಚರಣಗಳ ದರ್ಶನವಾಯಿತು ॥ 165

ನಾನು ದುರ್ದೈವಿ ಅಲ್ಪಜ್ಞ । ಅರಿಯೆನು ಪೂಜನ ಅರ್ಚನ ಯಜ್ಞ ।
ವಿಧಿ ವಶದಿಂದ ಈ ತ್ರಿಕಾಲಜ್ಞ । ಪ್ರಾಜ್ಞರ ದರ್ಶನವಾಯಿತು ॥ 166

ಎನ್ನ ಚಿಂತೆಯನೀವರಿಯುವಿರಿ । ದಯಾಮಾಡಿ ಅದ ದೂರ ಮಾಡಿರಿ ।
ಈ ಅನನ್ಯ ಭಕ್ತನನು ದೂರ ನೂಕದಿರಿ । ಚರಣಕ್ಕೆ ಬಂದವನನು ದಯಾಳುವೇ ॥ 167

ಎಂದರು ವೃಥಾಚಿಂತೆಯನು ಮಾಡಿದದಿರು ನೀನೂ । ನಿನ್ನ ದುರ್ದಿನಗಳು ಮುಗಿದವಿನ್ನು ।
ಇಳಿಮುಖವಾಗಲಿದೆ ತಿಳಿ ಇದನು । ದಯಾವಂತ ಸಾಯಿನಾಥನು ಹೀಗೆ ॥ 168

ಉದಿಯ ಪ್ರಾಸಾದವನು ಕರದಲಿಟ್ಟರು । ಕೃಪೆಯಕರವನು ಶಿರದಲಿಟ್ಟರು ।
'ಮನದಿಚ್ಛೆಯ ಪೂರೈಸುವ ದೇವರು । ಆಶೀರ್ವಾದವ ಮಾಡಿದರು ಶೇಡಜಿಗೆ ॥169

ಬಳಿಕ ಆಜ್ಞೆಯನು ಪಡೆದರು । ರತನಜೀ ತಿರುಗಿ ನಾಂದೇಡಕ್ಕೆ ಬಂದರು ।
ಎಲ್ಲವನು ಹೇಗೆ ನಡೆಯಿತೆಂಬುದನ ಹೇಳಿದರು । ದಾಸಗಣೂರ ಎದುರಿಗೆ ॥ 170

ಯಥಾ ಯೋಗ್ಯ ದರ್ಶನವಾಯಿತು । ಆನಂದ ನಿರ್ಭರ ಮನಸಾಯಿತು ।
ಪ್ರಸಾದಪೂರ್ವಕ ಆಶ್ವಾಸನ ದೊರೆಯಿತು । ಆಶೀರ್ವಾದವನೂ ಪಡೆದೆನು ॥ 171

ಯಥಾಸ್ಥಿತಿ ನಡೆಯಿತೆಲ್ಲ । ಒಂದು ಮಾತನು ಮಾತ್ರ ನಾ ತಿಳಿಯಲಿಲ್ಲ ।
ನನಗೊಂದೂ ಅರ್ಥವಾಗಲಿಲ್ಲ । ಮಹಾರಾಜರು ಹೀಗೇನು ನುಡಿದರೆಂದು ॥ 172

"ಮೂರು ರೂಪಾಯಿ ಹದಿನಾಲ್ಕು ಆಣೆಗಳನಂತೂ । ನೀ ನೆನಗೆ ಕೊಟ್ಟಿರುವೆ ಇದು ನನಗೆ ಗೊತ್ತು"।
ಬಾಬಾರದು ಇದು ಎಂಥಾ ಮಾತು । ಸ್ಪಷ್ಟವಾಗಿ ತಿಳಿಸಿರೆನಗೆ ॥ 173

ಎಲ್ಲಿಯ ರೂಪಾಯಿ ಆಣೆ ಎಲ್ಲಿಯವು । ಹಿಂದೆ ಯಾವಾಗ ಕೊಡುವದುಳಿದಿರುವವು ।
ತಿಳಿಯಲಿಲ್ಲೆನಗೆ ಇದರೊಳ ಅರ್ಥವು । ಮೊದಲ ಸಲವೇ ನಾ ಶಿರಡಿಗೆ ಹೋಗಿರುವೆ ॥ 174

ನನಗಂತೂ ಇದು ಒಂದೂ ತಿಳಿಯದು । ನನ್ನೆದುರು ಇದೊಂದು ಗೂಢವೇ ಆಗಿರುವುದು ।
ಇದೊಂದು ಒಡೆಯಲಾರದ ಒಗಟಾಗಿರುವುದು । ತಮಗಾದರು ಏನಾದರೂ ಅರ್ಥವಾಯಿತೇ ॥ 175

ಇದಾದರೂ ಒಂದು ಚಮತ್ಕಾರ । ದಾಸಗಣೂ ಮಾಡುವರು ವಿಚಾರ ।
ಏನಿದ್ದೀತು ಇದರಸಾರ । ಮನಕೆ ಖಚಿತವಾಗಿ ತಿಳಿಯದು ॥ 176

ಬಹಳ ವಿಚಾರ ಮಾಡಿದ ಮೇಲೆ । ಬಂದಿತು ಬುವಾರ ಮನಸಿನಲ್ಲೇ ।
ಮೌಲ್ವಿ ಸಾಹೇಬ ಎಂಬ ಹೆಸರಿನಲ್ಲೆ । ಅಲ್ಲೊಬ್ಬ ಸಂತನಿರುವುದು ॥ 177

ಜಾತಿಯಲವನು ಮುಸಲಮಾನ । ಆಚರಣೆ ಎಲ್ಲ ಸಂತರ ಸಮಾನ ।
ಕೈಕೊಂಡು ಹಮಾಲಿಯ ಉದ್ಯೋಗವನ । ದೈವೇಚ್ಛೆಯಂತೆ ಇರುತಿದ್ದನು ॥ 178

ಇವನ ಚರಿತ್ರವ ಸವಿಸ್ತರ ಹೇಳುವುದು । ಅದರಿಂದ ಗ್ರಂಥದಲಿ ವಿಷಯಾಂತರವಾಗುವುದು ।
ಮೌಲ್ವೀ ಸಾಹೇಬರ ಕಥೆ ಇದು । ನಾಂದೇಡದಲ್ಲೆಲ್ಲರಿಗೂ ಗೊತ್ತು ॥ 179

ಶಿರಡಿಗೆ ಹೋಗುವದು ಗೊತ್ತಾದ ನಂತರ । ಮೌಲ್ವೀ ಸಾಹೇಬರ ಸಂಚಾರ ।
ಸಹಜವಾಗಿಯೇ ಶೇಟಜಿಯವರ । ಮನೆಯವರೆಗೆ ನಡೆಯಿತು ॥ 180

ಅವರಿಬ್ಬರಲ್ಲಿಯೂ ಪರಸ್ಪರ । ಪ್ರೀತಿ ಇದ್ದಿತು ಅಪರಂಪಾರ ।
ಫಲತಾಂಬೂಲ ಮತ್ತು ಹೂಹಾರ । ಯಥೋಪಚಾರವಾಗಿ ಅರ್ಪಿಸಿದರು ॥ 181

ಶೇಡಜಿಗೆ ಪ್ರೇರಣೆಯಾಯಿತು । ಮೌಲ್ವಿಗೆ ಚಿಕ್ಕ ಮೇಜವಾನಿ ನೀಡಲಾಯಿತು ।
ತಕ್ಷಣ ದಾಸಗಣೂಗೆ ನೆನಪಾಯಿತು । ಆಗ ನಡೆದ ಖರ್ಚಿನದು ॥ 182

ಅಂದಿನ ಖರ್ಚಿನ ಯಾದಿ ತರಿಸಿದರು । ಒಂದಿಷ್ಟೂ ಬಿಡದೆ ಎಲ್ಲಾ ಎಣಿಸಿದರು ।
ಆಗ ಬೇರಿಜು ಮಾಡಿದರು । ಲೆಕ್ಕ ಸರಿಯಾಗಿ ಕೂಡಿತು ॥ 183

ಮೂರು ರೂಪಾಯಿ ಹದಿನಾಲ್ಕು ಆಣೆಗಳು । ಒಂದಿಷ್ಟೂ ಹೆಚ್ಚು ಕಡಿಮೆ ಇಲ್ಲದೊಲು ।
ಅದರ ರಶೀದಿಯ ಬಾಬಾ ಕೊಡಲು । ಪರಮಾಶ್ಚರ್ಯವಾಯಿತೆಲ್ಲರಿಗೆ ॥ 184

ಸಾಯಿ ಮಹಾರಾಜರು ಜ್ಞಾನ ರಾಶಿಗಳು । ತಿಳಿಯುವರು ಕುಳಿತುಕೊಂಡಲ್ಲೇ ಮಶೀದಿಯೊಳು ।
ಭೂತ ಭವಿಷ್ಯ ವರ್ತಮಾನಗಳ । ಅವು ಯಾವುದೇ ದೇಶದಲ್ಲಿ ನಡೆಯಲಿ ॥ 185

ಏಕಾತ್ಮತೆಯು ಭೂತಮಾತ್ರಗಳೊಳಗೆ । ಇರದಿದ್ದಲ್ಲಿ ಸಾಯಿ ಸಮರ್ಥರಿಗೆ ॥
ಬಂದೀತೆ ಹೇಳಲು ಬೇರೆಯವರಿಗೆ । ಇಲ್ಲವೇ ಈ ಪ್ರಕಾರ ಅನುಭವಿಸಲು 186

ಶಿರಡಿಯಿಂದ ನಾಂದೇಡದೂರ । ಎರಡರಲ್ಲಿಯೂ ಮಹದಂತರ ।
ಗುರುತಿಸಲಾರರೀಸಂತರು ಪರಸ್ಪರ । ಅಂದಾಗ ಈ ಸುದ್ದಿ ಸಾಯಿಗೆ ಹೇಗೆ ತಿಳಿಯಿತು ॥ 187

ಸಾಯಿಬಾಬ ಎನ್ನುವವನೊಬ್ಬ । ಮೌಲ್ವೀ ಸಾಹೇಬನೆಂಬುವ ಬೇರೊಬ್ಬ
ಭೇದ ಬುದ್ಧಿ ಹೀಗೆಂಬ । ಅನೇಕ ತ್ವವಿಲ್ಲ ಇಬ್ಬರಲಿ ॥ 188

ಮೌಲ್ವೀಯಲ್ಲಿರುವ ಆತ್ಮವು । ಅದೇ ಇರುವದು ಎಲ್ಲರ ಅಂತರಾತ್ಮವು ।
ಆದರೆ ಏಕಾತ್ಮತೆಯ ಧರ್ಮದ ಮರ್ಮವು । ಯಾರಿಗೆ ತಿಳಿದಿದೆಯೋ ಅವನೇ ಧನ್ಯ ॥ 189

ಬಾಹ್ಯ ದೇಹದಿಂದಿರಲು ವಿಯುಕ್ತ । ಅಂತರದಲಿಬ್ಬರೂ ನಿತ್ಯಯುಕ್ತ ।
ಅವರಿಬ್ಬರು ಎನ್ನುವುದೇ ಅಯುಕ್ತ । ಅವರೆಂದೂ ವಿಭಕ್ತರಲ್ಲ ॥ 190

ಅವರಿಬ್ಬರ ಜ್ಞಾನ ಒಂದೇ । ಒಂದೇ ಪ್ರಾಣ ಅನುಸಂಧಾನವೂ ಒಂದೇ ।
ಇಬ್ಬರು ಚೈತನ್ಯ ಘನರೊಂದೇ । ಸಮಸಮಾನರು ವೃತ್ತಿಯಲಿ ॥ 191

ಶಿರಡಿನಾಂದೇಡಗಳಲ್ಲಿ ಮಹದಂತರ । ಆದರವರಿಬ್ಬರದೂ ಒಂದೇ ಅಂತರ ।
ಒಂದೇ ಪ್ರಾಣ ಒಂದೇ ಶರೀರ । ಅದರಿಂದ ಈ ಜೋಡಣೆ ಒಬ್ಬರೊಬ್ಬರಿಗೆ ॥ 192

ಎಂಥ ವಿಚಿತ್ರ ಈ ಸಾಧು ಸಂತರು । ತಂತಿ ಇಲ್ಲದೆ ತಾರ ಯಂತ್ರಗಳಿವರು ।
ಸೃಷ್ಟಿಯಲ್ಲಿ ಎಲ್ಲಿ ಏನೇ ನಡೆದರೂ । ಸಾದ್ಯಂತವಾಗಿ ಅದು ತಿಳಿಯುವದರಿಗೆ ॥ 193

ಮುಂದೆ ಯೋಗ್ಯ ಕಾಲವು ಬರಲು । ರತನಜಿಗೆ ದೇವರೊಲಿಯಲು ।
ಅವನ ಸ್ತ್ರೀ ಗರ್ಭಧರಿಸಲು । ಆಶಾವೃಕ್ಷವು ಪಲ್ಲವಿಸಿತು ॥ 194

ಸುಸಮಯದಲಿ ಮನಯಾಕೆಗೆ ಪ್ರಸೂತಿಯಾಯಿತು । ಕೊಟ್ಟ ಆಶೀರ್ವಾದ ಸತ್ಯವಾಯಿತು ।
ಪುತ್ರರತ್ನವು ಉದರಿದಿ ಜನಿಸಿತು । ರತನಜಿಗೆ ಹಿಡಿಸಲಾರದಾನಂದವಾಯಿತು ॥ 195

ಎಷ್ಟೋ ವರುಷಗಳ ಅವರ್ಷಣ । ಇದ್ದಾಗ ಅಕಸ್ಮಾತ್ತಾಗಿ ಆದಾಗ ಪರ್ಜನ್ಯವರ್ಷಣ ।
ಅದರಂತೆ ಶೇಡಜಿಗೆ ಆಯಿತು ಸಮಾಧಾನ । ಪುತ್ರ ಸಂತಾನ ಪ್ರಾಪ್ತಿಯಿಂದ ॥196

ಮುಂದೆ ಆ ವಂಶ ಬಳ್ಳಿಯು ಚಿಗಿದು । ಯಥಾಕ್ರಮ ವಿಸ್ತಾರಗೊಂಡು ।
ಗಂಡು- ಹೆಣ್ಣು ಸಂತಾನಗಳ ಪಡೆದು । ರತನಜಿ ಸೌಖ್ಯವ ಹೊಂದಿದನು ॥ 197

ಮುಂದೆಯೂ ಸಾಯಿ ದರ್ಶನಕೆ ಹೋಗುತ್ತ । ಅವರ ಆಶೀರ್ವಾದ ಪಡೆಯುತ ।
ಅವರೆಲ್ಲ ಮನಕಾಮನೆಗಳು ಪೂರೈಸುತ । ರತಜಿ ಸಂತುಷ್ಟ ಚಿತ್ತರಾದರು ॥ 198

ವಸಂತದಲ್ಲಿ ಫಲಿಸುವದು ಆಮ್ರತರು । ಎಲ್ಲಾ ಫಲಗಳು ಹಣ್ಣುಗುವುದಿಲ್ಲಾ ಆದರೂ ।
ಅದರಂತೆ ಹನ್ನೆರಡರಲ್ಲಿ ನಾಲ್ವರು ಬದುಕಿರುವರು । ಸದ್ಯದಲ್ಲಿ ಸುಖದಿಂದಿರುವರ ॥ 199

ಯದೃಚ್ಛೆಯಿಂದ ಏನೇನು ನಡೆಯುವದು । ಅದರಲ್ಲಿಯೇ ಯಾರ ಮನಸುಖ ಪಡುವುದು ।
ಅಂಥ ಮಧುರ ಸ್ವಭಾವ ರತನಜೀಯದು । ಎಂದೂ ಖೇದವೆನಿಸಿ ಕೊಳ್ಳಲಿಲ್ಲ ॥ 200

ಇನ್ನು ಮುಂದಿನ ಕಥೆಯ ಸಾರ । ಸಾಯಿಯಿಂದ ತುಂಬಿದ ಸ್ಥಿರಚರ ।
ಯಾರು ಎಲ್ಲಾದರೂ ಕುಳಿತು ಸ್ಥಿರ । ಇದರ ಅನುಭವ ಪಡೆಯಬೇಕು ॥ 201

ಠಾಣೆ ಪಟ್ಟಣದೊಳೊಬ್ಬ ಬಡವ ದೀನ । ಚೋಳಕರ ಎಂಬ ಉಪನಾವದನ ।
ಕಂಡು ಅವನ ಭಾವಾರ್ಥವನ । ಗುರುವರ ಪ್ರಸನ್ನನಾದನು ॥ 202

ಮೊದಲೆಂದೂ ಸಾಯಿಯ ನೋಡದಿದ್ದವನು । ಹೇಗೆ ಸಾಯಿಯ ಬೇಡಿಕೊಂಡನು ।
ಪೂರೈಸಿ ಅವನ ಮನೋರಥವನು ಹೇಗೆ ಅನುಭವವನಿತ್ತರು ॥ 203

ಪ್ರೇಮವಿಲ್ಲದ  ಭಜನೆಯಂಥದ್ದು । ಅರ್ಥ ತಿಳಿಯದೇ ಪುರಾಣ ಓದುವದು ।
ಭಾವವಿಲ್ಲದೇ ದೇವರ ನೆನೆಯುವುದು । ಇವೆಲ್ಲ ವ್ಯರ್ಥಶ್ರಮ ಮಾತ್ರ ॥ 204

ಕುಂಕುಮತಿಲಕವಿಲ್ಲದ ಭಾಲ । ಅನುಭವವಿಲ್ಲದ ಜ್ಞಾನ ವಿಫಲ ।
ಬರೀ ಪುಸ್ತಕದಿಂದೋದಿದ ಜ್ಞಾನವಿದಲ್ಲ । ಅನುಭವದಿಂದಿನ ತೂಗಬೇಕು ॥ 205

ಈ ಸಾಯಿಲೀಲಾ ಪ್ರಬಂಧವೇತಕ್ಕೆ । ನನಗಿಲ್ಲ ಇದರ ಬಗ್ಗೆ ತಿಳುವಳಿಕೆ ।
ನನ್ನಿಂದ ಈ ಗ್ರಂಥ ಬರೆಸಿದುದಕೆ । ಪ್ರಯೋಜನವನೂ ಅವನೇ ಬಲ್ಲ ॥ 206

ಇದರಚಿಸಲು ಬೇಕು ಅಧಿಕಾರ ಉಳ್ಳವ । ನಾನಂತೂ ಸಾಯಿಯ ಚಾಕರಿ ಮಾಡುವವ ।
ಅವನದೇ ಈ ಗುಮಾಸ್ತಿತನವ । ಅವನ ಆಜ್ಞಾಧಾರಿಯಾಗಿ ಮಾಡುತಿರುವೆ ॥ 207

ಶ್ರೋತೃಗಳು ತೃಷಾಕೂಲ ಚಾತಕಗಳಿರಲು । ಸಾಯಿ ಸಮರ್ಥನು ಸ್ವಾನಂದ ಘನನಿರಲು ।
ಅಗಾಧ ಕಥಾ ಜೀವನವ ವರ್ಷಿಸಲು । ತೃಷೆಯು ಶಮನಗೊಳಿಸಲು ॥ 208

ಈ ವಾಣಿಯು ಯಾರ ಆಜ್ಞೆಯಲಿ । ಯಾರ ಚರಿತ್ರೆಯ ವರ್ಣಿಸುವದಿಲ್ಲಿ ।
ಅವನ ಪದರಜಕಣಗಳಲ್ಲಿ । ಈ ದೇಹವು ಉರುಳಾಡಲಿ ॥ 209

ಅವನೇ ಈ ವಾಚೆಯ ಪ್ರವರ್ತಕನು । ಅವನೇ ನಿಜ ಕಥೆಯನು ಹೇಳುವವನು ।
ಅವನ ಚರಣಗಳಲೇ ಈ ಚಂಚಲಚಿತ್ತವನು । ಎಂದೆಂದಿಗೂ ಸ್ಥಿರಗೊಳಿಸಲಿ ॥ 210

ಹೀಗೆ ಈ ಕಾಯಕ ಮತ್ತು ವಾಚಿಕ । ಅದರಂತೆಯೇ ಈ ಭಜನೆ ಮಾನಸಿಕ ।
ಆಗಲೆನಗೆ ಅಕ್ಷಯ ಸುಖದಾಯಕ । ನಾ ದೀನ ಸೇವಕ ಸಾಯಿಗೆ ॥ 211

ಚರಿತ್ರೆ, ನುಡಿವನು ಮತ್ತು ನುಡಿಸುವವನು । ಸಾಯಿ ಎಲ್ಲದರಲ್ಲಿ ಇರುವನು ।
ಅಂದಾಗ ಅವನ ಶ್ರೋತೃವಾದರೂ ಹೇಗೆ ಭಿನ್ನನಾದನು । ಅವನೂ ಸಾಯಿಯಿಂದ ಬೇರೆ ॥ 212

ನೋಟಕ್ಕೆ ಕಾಣುವುದು ಚರಿತ್ರೆಯ ಕೇವಲ । ಆದರೂ ಈ ಲೀಲೆ ಸಾಯಿಯದೇ ಎಲ್ಲ ।
ತಾನೇ ಆಟಗಾರನಾಗಿ ಪ್ರೇಮಳ । ಈ ಆಟವನು ಹೂಡಿರುವ ॥ 213

ಅಗಾಧ ಸಾಯಿ ಬಾಬಾ ಚರಿತ್ರೆ । ಭಕ್ತರಿಗೆ ಅನುಭವ ತೋರಿ ವಿಚಿತ್ರ ।
ಮಾಡಿ ನನ್ನನು ನಿಮಿತ್ತ ಮಾತ್ರ । ನಿಜಭಾತ್ರ ಸಮುದಾಯವ ತೋರಿಸುವ ॥ 214

ಚರಿತ್ರವಲ್ಲ ಇದು ಸುಖದ ಧನ । ನಿಜ ಪರಮಾರ್ಥದ ಸೇವನ ।
ಪಡೆದು ಬಂದವನೇ ಸೇವಿಸುವನಿದನ । ಭಕ್ತಿಭಾವದಿಂದ ಕೂಡಿ ॥ 215

ಅಗಾಧ ಗುರು ಕೃಪೆಯ ಮಹಿಮೆಯನು । ಸ್ಮರಣೆಯಲ್ಲಿಡಬೇಕು ನಾವು ಭಕ್ತಿರಿದನು ।
ಅದಕಾಗಿಯೇ ಈ ಗ್ರಂಥ ಪರಿಶ್ರಮವನು । ಭಕ್ತ ವಿಶ್ರಾಮಕ್ಕಾಗಿ ಕೈಗೊಂಡಿದೆ ॥ 216

ಇಷ್ಟಪಟ್ಟು ಈ ಚರಿತ್ರೆಯನೋದಲು । ಸಂತುಷ್ಟವಾದೀತು ಶ್ರವಣ ಸಂಪನ್ನತೆಯು ।
ಕಥಾನುವೃತನು ವಾದದಿಂದ ಭಕ್ತಿ ಪ್ರೀತಿಯು । ಭಕ್ತನಲಿ ಉದಂಡ ಬೆಳೆದೀತು ॥217

ತ್ರಿಪುಟಿ ಶ್ರವಣ ಮಾಡಲು ಹಗಲಿರುಳು । ಹರಿವವು ಮಾಯಾ ಮೋಹ ಬಂಧನಗಳು ।
ಭಾವನೆಯು ದೂರಾಗಲು । ಶ್ರೋತೃಗಳು ಸುಖಸಂಪನ್ನರಾಗುವರು ॥ 218


ಹಿಡಿದು ಶ್ರೀಸಾಯಿ ಚರಣ । ಹೇಮಾಡನು ಅನನ್ಯಭಾವದಿ ಶರಣ ।
ಬಿಟರಲಾರ ಒಂದು ಕ್ಷಣ । ಚರಣದಲಿ ಅಖಂಡ ನಮನ ಅವನದು ॥ 219

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದೀತೆ ।
ಶ್ರೀ ಸಾಯಿ ಸಚ್ಚಸಿತೆ । ರತನಜಿ ಸಾಯಿ ಸಮಾಗಮೋನಾಮ ಚತುರ್ದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ಶುಭಂ ಭವತು ॥

189·1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿನೈದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಯಾರ ಅಗಾಧ ಪುಣ್ಯವು ಫಲಿಸುವುದು । ಅಂಥವರಿಗೆ ಸಾಯಿ ದರ್ಶನ ಲಭಿಸುವುದು ।
ತ್ರಿವಿಧ ತಾಪಗಳವನ ಬಾಧಿಸುವದು । ಪರಮಾರ್ಥದ ಸಾಧನ ಸಾಧಿಸುವದು ॥ 1

ಶ್ರೋತೃಗಳೇ ಕೃಪೆ ಮಾಡುವದು । ನಿಜಗುರು ಚಿಂತನವಮಾಡಿ ಕ್ಷಣವೊಂದು ।
ಕಥೆಯತ್ತ ಸಾದರ ಮನಒಯ್ದು । ಇತ್ತ ಗಮನ ಹರಿಸಬೇಕು ॥ 2

ನೀವೆಲ್ಲ ಗೊತ್ತಿರುವಿರಿ ನಮಗೆ । ಈ ವ್ಯರ್ಥ ಪರಿಶ್ರಮವೇಕೆ ನಿಮಗೆ ।
ದಯಮಾಡಿ ಎನ್ನದಿರಿ ಹಾಗೆ । ಉಪಮೆಯು ನಿಮಗೆ ಸಾಗರದು ಸರಿದೊಪ್ಪವುದು ॥3

ಸಾಗರವು ಅಪರಂಪಾರ ತುಂಬಿರುವುದು । ಆದರೂ ಹರಿದು ಬಂದ ನದಿಗಳ ಹಿಂದಿರುಗಿಸದು ।
ಮೋಡಗಳು ಧಾರಾಕಾರ ಮಳೆ ಸುರಿಸುತ್ತಿದ್ದು । ಅವುಗಳಿಗೂ ಇಂಬು ಮಾಡಿಕೊಡುವುದು ॥ 4

ಹಾಗೆ ನೀವು ಸಜ್ಜನ ಶ್ರೋತೃಗಳು । ಇಚ್ಛಿಸುವೆ ಮುಳುಗಲು ನಿಮ್ಮೊಳು ।
ಬಿನ್ನಹವಿದು ನಿರಾಕರಿಸದಿರಲು । ದೀನರ ದೂರಿರಿಸುವುದು ತರವಲ್ಲ ॥ 5

ಗಂಗೆಯ ನಿರ್ಮಲ ಜಲ ಹರಿದು ಬರಲಿ । ಇಲ್ಲವೇ ಊರೊಳಗಿನ ತೊರೆ ಹಳ್ಳಗಳ ನೀರು ಬರಲಿ ।
ಎರಡಕ್ಕೂ ಸ್ಥಳವಿಹುದು ಸಾಗರದಲ್ಲಿ । ಸಂಗಮದಲಿ ಗಲಿಬಿಲಿ ಇಲ್ಲದೇ ॥ 6

ಅದಕಾಗಿ ಶ್ರೋತೃಗಳೇ ನಿಮ್ಮ ಮನದಲ್ಲಿ । ಆಸ್ಥೆ ಇರುವುದು ಸಂತ ಕಥಾ ಶ್ರವಣದಲ್ಲಿ ।
ಕೃಪೆ ಮಾಡಿ ನನ್ನತ್ತ ನೋಡಿದಲ್ಲಿ । ಅದು ತಾನೇ ಸಫಲವಾಗುವದು ॥ 7

ನಿಧಾನಿಸಿ ಶ್ರಧ್ಧಾಯುಕ್ತರಾಗಿ । ಈ ಕಥಾಮೃತವ ಸೇವಿಸಲಾಗಿ ।
ಪ್ರೇಮಯುತ ಭಕ್ತಿಯಿಂದಾಗಿ । ಶ್ರೋತೃಗಳು ಕೃತ ಕೃತ್ಯರಾಗುವರು ॥ 8

ಭಕ್ತರಿಗೆ ಸಹಜ ಪರಮ ಪ್ರಾಪ್ತಿ । ಶ್ರೋತೃಗಳಿಗೆ ಭಕ್ತಿ ಮತ್ತು ಮುಕ್ತಿ ।
ಭಾವಾರ್ಥಿಗಳಿಗೆ ಸುಖಶಾಂತಿ । ನಿಜ ವಿಶ್ರಾಂತಿಯು ಎಲ್ಲರಿಗೂ ॥ 9

ಗುರುಮುಖದ ಸವಿಕಥೆಗಳು । ಕೇಳಲು ಕಳೆವವು ಭವಭಯದ ವ್ಯಥೆಗಳು ।
ಆನಂದ ಮೂಡೀತು ಶ್ರೋತೃಗಳ ಚಿತ್ತದೊಳು । ನಿಜಾತ್ಮತೆಯು ತಾನೇ ಪ್ರಕಟವಾದೀತು ॥ 10

ಈ ಅಧ್ಯಾಯದಲಿ ನಿರೂಪಣೆ ಇರುವದು । ಪ್ರೇಮಳ ಭಕ್ತನು ಸಾಯಿಗೆ ಪ್ರಾರ್ಥಿಸುವದು ।
ಸಾಯಿಯು ಪ್ರಸನ್ನನಾಗಿ ದರ್ಶನ ವೀಯುವದು । ಇದೆಲ್ಲ ನಡೆದುದು ಹೇಗೆಂದು ॥ 11

ಅದೇ ಹಾಲುಣಿಸಿ ಹೊರಗೆ ಹೋಗಿರಲು । ಮತ್ತೆ ಅಷ್ಟರಲ್ಲೇ ಬೆಕ್ಕು ತಿರುಗಿ ಬರಲು ।
ಆದರೂ ಮತ್ತೆ ಮತ್ತೆ ಮರಿಗಳು । ಹಾಲು ಕುಡಿಯಲು ಧಾವಿಸುವವು ಪ್ರೇಮದಲಿ ॥ 12

ಬೇಸತ್ತು ತಾಯಿ ಎನುವದು ಗುರುಗುರು । ಕ್ಷಣ ಒಂದು ಮರಿಗಳು ಹೆದರಿದರೂ ।
ತಾಯಿ ಸ್ವಲ್ಪ ಶಾಂತಳಾಗಿ ಕುಳಿತರೂ । ಸಾಕು ಮರಿಗಳು ಓಡಿ ಬರುವವು ಕುಡಿಯಲು ॥ 13

ಚೀಪುತ್ತ ಹಾಯುತ್ತ ಪ್ರೀತಿಯಿಂದ । ತಾಯಿ ತೊರೆ ಬಿಡುವದು ಅದರಿಂದ ।
ಬಿಟ್ಟು ಗುರ್ ಗುರ್ ಎನ್ನುವದ । ಸಂತಸದಿ ಹೊರಳುವದು ನೆಲದ ಮೇಲೆ ॥ 14

ಮಮತೆ ತುಂಬಿ ಬೇಸರ ಕಳೆದು । ನಾಲ್ಕು ಕಾಲುಗಳಿಂದ ಮರಿಯ ಅಪ್ಪಿಕೊಂಡು ।
ಆಟವಾಡುತ್ತ ಮೈ ನೆಕ್ಕುವದು । ಅದೆಂಥ ಸಂಭ್ರಮ ನೋಡಲು ॥ 15

ತೀಕ್ಷ್ಣ ನಖಪ್ರಹಾರವು ಮಕ್ಕಳದು । ಅದರಿಂದ ಉದರವು ವಿದಾರಿಸುವದು ।
ಅದರಿಂದ ಮತ್ತಿಷ್ಟು ಪ್ರೀತಿ ಉಕ್ಕಿ ಹರಿಯುವದು । ಹಾಲು ಹರಿಯುವದು ಧಾರೆಯಾಗಿ ॥ 16

ಆ ಮಕ್ಕಳ ಅನನ್ಯ ಭಕ್ತಿ । ಅದರಿಂದ ತಾಯಿಗೆ ದುಗ್ಧೋತ್ಪತ್ತಿ ।
ಹಾಗೆಯೇ ನಿಮ್ಮ ಸಾಯಿಪದಾಸಕ್ತಿ । ಸಾಯಿಯ ಚಿತ್ತವು ದ್ರವಿಸುವದು ॥ 17

ಒಮ್ಮೆ ಹರಿಭಕ್ತಿ ಪರಾಯಣರಾದ । ಸುಶ್ರಾವ್ಯ ಕೀರ್ತನವ ಆ ದಾಸಗಣೂರಿಂದ ।
ಕೌಪೀನೇಶ್ವರನ ಸನ್ನಿಧ । ಠಾಣೆಯ ಜನರು ಮಾಡಿಸಿದರು ॥ 18

ಶಿಷ್ಟರಿಂದಾಗಲು ಆಗ್ರಹ । ದಾಸಗಣೂ ಮಾಡುವರು ಕಥಾನುಗ್ರಹ ।
ಒಂದು ಕಾಸಿನದೂ ಇರದೆ ಪರಿಗ್ರಹ । ಅಥವಾ ದುರಾಗ್ರಹವಿಲ್ಲದೇ ॥ 19

ಕೀರ್ತನೆಗೆ ಖರ್ಚಿಲ್ಲ ಕವಡಿಯದು । ಬರಿಮೈಯಲಿ ತಲೆಗೆ ಪಗಡಿ ಇರದು ।
ಸಾದಾ ಪಂಚೆಯ ಉಡುವದು । ಶ್ರೋತೃಗಳ ಗದ್ದಲ ತುಂಬುತ್ತಿತ್ತು ॥ 20

ಈ ಉಡುಪಿನ ಬಗ್ಗೆ ನಡೆದ ಕಥೆಯನ್ನು । ಕೇಳಲು ವಿನೋದವಾಗಿರುವದನ್ನು ।
ಸ್ವಸ್ಥ ಚಿತ್ತರಾಗಿ ಕೇಳಿರಿನ್ನು । ಬಾಬಾರ ಆಶ್ಚರ್ಯತೆಯನು ನೋಡಿ ॥ 21

ಒಮ್ಮೆ ಶಿರಡಿ ಗ್ರಾಮದಲ್ಲಿ । ದಾಸಗಣೂರ ಹರಿಕೀರ್ತನೆ ಇರುತಲಿ ।
ಮೈಯಲಿ ಅಂಗಿ ಹೆಗಲಿಗೆ ಮೇಲುದ ಫೇಟ ತಲೆಯಲಿ । ಇಟ್ಟು ಈ ವೇಷದಲಿ ನಡೆದರು ॥ 22

ಶಿಷ್ಟಾಚಾರಾನುಸಾರವಾಗಿ । ಬಾಬಾರ ವಂದಿಸಲು ಹೋಗಲಾಗಿ ।
ಬಾಬಾರು ಚಿಮ್ಮಿಸುತ ನಗೆ । ಎಂದರು ಮದುಮಗನಂತಲಂಕರಿಸಿ ಕೊಂಡಿರುವೆಯಲ್ಲ ॥23

'ಇಷ್ಟೆಲ್ಲ ಸಿಂಗರಿಸಿಕೊಂಡು ಹೊರಟಿರುವದೆಲ್ಲಿಗೆ' । ಬಾಬಾ ಕೇಳಲಾಗಿ ಅವರಿಗೆ ।
'ಹೊರಟಿಹೆ ನಾ ಹರಿಕಥೆಗೆ' । ದಾಸಗಣೂ ನುಡಿದರು ॥ 24

ಬಾಬಾ ನುಡಿದರು ಅದಕೆ । 'ಇಷ್ಟೆಲ್ಲ ಉಡುಪು ಧರಿಸುವುದೇಕೆ ।
ಇಷ್ಟೊಂದು ಪ್ರಯಾಸ ಪಟ್ಟುದೇಕೆ । ನನಗಂತೂ ಇದಾವುದೂ ಬೇಕಿಲ್ಲ'॥ 25

ತೆಗೆ ಅವನೆಲ್ಲ ನನ್ನೆದುರಿನಲ್ಲೇ । ಸುಮ್ಮನೇ ಏಕೆ ಈ ಭಾರ ಮೈ ಮೇಲೆ ।
ತೆಗೆದಲ್ಲಿಯೇ ಇಟ್ಟರು ಚರಣಗಳ ಮೇಲೆ । ಬಾಬಾರ ಆಜ್ಞೆಯನು ಅನುಸರಿಸಿ ॥ 26

ಅಂದಿನಿಂದ ಬರಿಮೈಯಲಿ । ಕೈಯಲಿ ತಾಳ ಮಾಲೆ ಕೊರಳಲಿ ।
ಇಷ್ಟೇ ಇರುವದು ಕೀರ್ತನ ಸಮಯದಲಿ । ಉಡುಪು ದಾಸಗಣೂರದು ॥ 27

ಈ ರೀತಿ ಇದ್ದರೂ ಜನವಿರುದ್ಧ । ಆದರೂ ಅದರ ತಳಪಾಯ ಶುದ್ಧ ।
ಪ್ರಬುದ್ಧರಲಿಯೂ ಇದ್ದ ಪ್ರಬುದ್ಧ । ಆ ನಾರದರದೇ ಈ ಮಾರ್ಗ ಪ್ರಸಿದ್ಧ ॥ 28

ಮೂಲ ಪುರುಷರೇ ಇದಕೆ ನಾರದರು । ಅಲ್ಲಿಂದ ಅನೇಕ ಹರಿದಾಸರಾದರು ।
ಅತಃಶುದ್ಧಿಯ ಧ್ಯೇಯದ ಅವರು । ಹೊರಆಂಡಬರವನೊಲ್ಲರು ॥ 29

ಅಧೋಭಾಗವು ವಸ್ತ್ರಾಚ್ಛಾದಿತ । ತಾಳ ವೀಣೆಗಳ ಬಾರಿಸುತ ।
ಮುಖದಲಿ ಹರಿನಾಮವ ಗರ್ಜಿಸುತ । ಇರುವ ಮೂರ್ತಿ ನಾರದರದು ॥ 30

ಸಾಯಿ ಸಮರ್ಥರ ಕೃಪೆ ಪಡೆದು । ತಾವೇ ಸಂತರ ಕಥೆ ಬರೆದು ।
ಹಣವಿಲ್ಲದೆ ಕೀರ್ತನೆ ಮಾಡುವದು । ಅದರಿಂದ ಖ್ಯಾತಿಯ ಪಡೆದರು ॥ 31

ರುಚಿಯನು ಸಾಯಿ ಭಕ್ತಿಯಲಿ । ದಾಸಗಣೂರೇ ಬೆಳೆಸಿದರು ನಿಜದಲಿ ।
ತುಂಬಿದರು ಸಾಯಿ ಪ್ರೇಮ ರಸದಲಿ । ಸ್ವಾನಂದದ ಸಾಗರವ ॥ 32

ಭಕ್ತ ಶಿರೋಮಣಿ ಚಾಂದೋರಕರ । ಅವರದೂ ಇರುವದು ಅತ್ಯಂತ ಉಪಕಾರ ।
ಸಾಯಿ ಚರಣ ಭಕ್ತಿಯ ವಿಸ್ತಾರ । ವಾಗಲು ಮೂಲಕಾರಣರೂ ಅವರೇ ॥ 33

ದಾಸಗಣೂರ ಈ ಕಡೆಗೆ ಆಗಮನ । ಮಾತ್ರಕೆ ಚಾಂದೋರಕರರೇ ಕಾರಣ ।
ಅಲ್ಲಲ್ಲಿ ಅವರ ಕೀರ್ತನ । ಸಾಯಿಯ ಭಜನೆ ನಡೆಯಿತು ॥ 34

ಪುಣೆನಗರ ಸೋಲಾಪುರ ಪ್ರಾಂತಗಳಲಿ । ಮಹಾರಾಜರ ಖ್ಯಾತಿ ಮೊದಲೇ ಇತ್ತಲ್ಲಿ ।
ಆದರೆ ಈ ಕೊಂಕಣದ ಜನರಲ್ಲಿ । ಇವರಿಬ್ಬರು ಭಕ್ತಿಯ ಬೆಳೆಸಿದರು ॥ 35

ಮುಂಬಯಿಯ ಪ್ರಾಂತದಲಿ ಸಾಯಿ ಭಕ್ತಿ । ತರಲು ಕಾರಣ ಈ ಎರಡು ವ್ಯಕ್ತಿ ।
ಸಾಯಿ ಮಹಾರಾಜರ ಕೃಪಾಮೂರ್ತಿ । ಅವರ ಕೈಯಲಿ ಪ್ರಕಟವಾಯಿತು ॥ 36

ಶ್ರೀ ಕೌಪೀನೇಶ್ವರನ ಮಂದಿರದಲ್ಲಿ । ಸಾಯಿ ಕೃಪೆಯ ಕೀರ್ತನೆಗಜರದಲ್ಲಿ ।
ಹರಿನಾಮದ ಆ ಜಯಜಯಕಾರದಲ್ಲಿ । ಚೋಳಕರರ ಲಹರಿ ಎದ್ದಿತು ॥ 37

ಬಹುಜನರು ಬರುವರು ಕೀರ್ತನೆಗೆ । ಕೇಳುಗರಲ್ಲಿಯೂ ಇರುವದು ಅನೇಕ ಬಗೆ ।
ದಾಸರ ವ್ಯುತ್ಪತ್ತಿಯು ಹಿಡಿಸುವುದು ಕೆಲವರಿಗೆ । ಅವರ ಹಾವಭಾವಗಳು ॥ 38

ಕೆಲವರು ಹಾಡಿನಲ್ಲಷ್ಟೇ ರುಚಿ ಇರುವವರು । ಅವರ ಹಾಡುಗಾರಿಕೆಯ ಹೊಗಳುವರು ।
ವಿಠ್ಠಲನಾಮದಲಿ ತಲ್ಲೀನರಾಗುವರು । ಕಥೆಯ ಹೇಳುತ ಪ್ರೇಮದಿ ಕುಣಿಯುವರೆಂದು ॥ 39

ಒಬ್ಬರಿಗೆ ಪೂರ್ವರಂಗದಲಿ ಭಕ್ತಿ । ಇನ್ನೊಬ್ಬರಿಗೆ ಕಥಾ ಭಾಗದಲಿ ಆಸಕ್ತಿ ।
ಕೆಲವರಿಗೆ ಹರಿದಾಸರ ವಿನೋದದಲಿ ಪ್ರೀತಿ । ಆಖ್ಯಾನದಲಿ ರುಚಿ ಇನ್ನಿತರರಿಗೆ ॥40

ದಾಸರು ಹುಟ್ಟಿನಿಂದಿರುವರು ಇಲ್ಲವೇ ಕಲಿತು ಆದವರು । ಒಂದೊಂದು ಪದಕೂ ಬಹು ಅರ್ಥ ತಿಳಿದವರು ।
ಕೇವಲ ಉತ್ತರ ರಂಗ ಪ್ರವೀಣರು । ಕಥಾ ಶ್ರವಣವೀರೀತಿ ನಡೆಯುವದು ॥ 41

ಹೀಗೆ ಕೇಳುವರು ಬಹಳ ಜನರು । ಆದರೆ ಶ್ರವಣದಿಂದ ಶ್ರದ್ಧೆ ಭಕ್ತಿಯ ಪಡೆಯುವರು ।
ಈಶ್ವರ ಇಲ್ಲವೇ ಸಂತ ಚರಣದಲಿ ಪ್ರೀತಿ ಇರುವವರು । ಇಂಥ ಶ್ರೋತೃಗಳು ಅಪರೂಪ ॥42

ಹೊರೆ ಹೊರೆಯಷ್ಟು ಶ್ರವಣ ಮಾಡಿದರೂ । ಅವಿದ್ಯೆಯದೇ ಪದರದ ಮೇಲೆ ಪದರು ।
ಇದೇ ಶ್ರವಣದ ಪ್ರತ್ಯಂತರವೆಂದರೂ । ಕೇಳಿದ್ದೆಲ್ಲ ವ್ಯರ್ಥವಷ್ಟೇ ॥ 43

ಕೊಳೆ ಕಳೆಯುವದು ಯಾವುದರಿಂದಾಗದು । ಅದು ಹೇಗೆ ಸಾಬೂನು ಎಂದು ಕರೆಯುವದು ।
ಅವಿದ್ಯೆಯ ಹೋಗಲಾಡುಸದಂಥದು । ಅದೆಂಥ ಶ್ರವಣ ಎನಬೇಕು ॥ 44

ಚೋಳಕರನು ಶ್ರಧ್ಧಾವಂತ ಮೊದಲೇ । ಅದರಲ್ಲಿ ಸಾಯಿ ಪ್ರೀತಿಯು ತುಂಬಿ ಬಂದ ಮೇಲೆ ।
ಸಾಯಿ ಕೃಪಾಳುವೇ ಎನ್ನುವರು ಮನದಲೇ । ದೀನನನು ನೀವೇ ರಕ್ಷಿಸಬೇಕು ॥ 45

ಅವನೊಬ್ಬ ಬಡ ಉಮೇದವಾರ । ಅಸಮರ್ಥನವ ಹೊರಲು ಕುಟುಂಬದ ಭಾರ ।
ಬಾಬಾರ ಮೇಲೆ ಹಾಕಿದ ಭಾರ । ಸರಕಾರದಲೊಂದು ಕೆಲಸ ಕೊಡಿಸಲೆಂದು ॥ 46

ಆದರೆ ಅಭೀಷ್ಟ ಸಂಪಾದನ । ಹಾಕಿಸುವೆವೆನುವರು ಇಚ್ಛಾ ಭೋಜನ ।
ಮಾಡಿಸುವೆವು ಬ್ರಾಹ್ಮಣ ಸಂತರ್ಪಣ । ಹರಕೆ ಹೊರುವರು ಹೀಗೆ ಕಾಮುಕ ಜನ ॥ 47

ಧನವಂತರ ಹರಕೆಗಳಿವು । ಎನುವರು ಸಹಸ್ರ ಭೋಜನ ।
ಹಾಕಿಸುವೆವು ಇಲ್ಲವೇ ಶತಗೋದಾನ ಮಾಡುವೆವು । ಮನಕಾಮನೆ ಪೂರ್ಣವಾದರೆ ॥ 48

ಚೋಳಕರನು ಮೊದಲೇ ನಿರ್ಧನ । ಹರಕೆ ಹೊರಬೇಕೆಂದು ಬಯಸಿತು ಮನ ।
ನೆನೆಸಿ ಸಾಯಿಯ ಚರಣ । ದೀನವದನನಾಗಿ ನುಡಿದನು ॥ 49

ಬಾಬಾ ನಮ್ಮದು ಬಡ ಸಂಸಾರ । ನೌಕರಿಯೇ ನಮಗೆ ಆಧಾರ ।
ಕಾಯಮ ಆಗಬೇಕು ಪಗಾರ । ಅದಕೆ ಪರೀಕ್ಷೆಗೆ ಕಟ್ಟಬೇಕು ॥ 50

ಪರಿಶ್ರಮ ಒಟ್ಟು ಮಾಡಿ ಸಿದ್ಧತೆಯನ । ಪಾಸಾಗುವುದರ ಮೇಲೆಯೇ ಎಲ್ಲ ಅವಲಂಬನ ।
ಇಲ್ಲದಿದ್ದರೆ ಈಗ ಸಿಗುತಿದ್ದದನ । ಕಳಕೊಳ್ಳಬೇಕಾದೀತು ॥ 51

ಪಾಸಾದರೆ ತಮ್ಮ ಕೃಪೆಯಿಂದ । ಕಾಣುವೆ ತಮ್ಮ ಚರಣಾರವಿಂದ ।
ಕಲ್ಲುಸಕ್ಕರೆ ಹಂಚುವೆ ತಮ್ಮ ಹೆಸರಿನಿಂದ । ಇದು ನನ್ನ ಮನದ ನಿರ್ಧಾರ ॥ 52

ಈ ರೀತಿ ಹರಕೆ ಹೊತ್ತು । ಮನಸಿನಂತಾಗಿ ಆನಂದವಾಯಿತು ।
ಆದರೆ ಹರಕೆ ಮುಟ್ಟಸಲು ವಿಲಂಬವಾಯಿತು । ಸಕ್ಕರೆ ತಿನ್ನುವದನೆ ಬಿಟ್ಟ ಅದಕೆ ॥ 53

ಹೋಗಲು ಹತ್ತಿರ ಏನಾದರೂ ಬೇಕು । ಬರಿಗೈಯಿಂದಲ್ಲಿಗೆ ಹೇಗೆ ಹೋಗಬೇಕು ।
ಆದರಿಂದ ಇಂದು ನಾಳೆ ಎಂದು ಮುಂದೂಡಬೇಕು । ಹೀಗೆ ದಿನ ಕಳೆಯಬೇಕಾಯಿತು ॥ 54

ಸಹ್ಯಾದ್ರಿಯ ಎತ್ತರ ಶಿಖರವದು । ಇಂಥ ನಾಣೇಘಾಟನ್ನೂ ದಾಟಬಹುದು ।
ಆದರೆ ಈ ಮನೆಯ ಹೊಸಿಲು ದಾಟುವದು । ಪ್ರಾಪಂಚಿಕರಿಗೆ ಬಲು ದುಸ್ತರ ॥ 55

ಶಿರಡಿಯ ಹರಕೆಯ ಮುಟ್ಟಿಸಲಾರೆನು । ಅದುವರೆಗೆ ಸಕ್ಕರೆ ತಿನ್ನಲಾರೆನು ।
ಸಕ್ಕರೆ ಇಲ್ಲದ ಚಹವನ್ನು । ಚೋಳಕರರು ಕುಡಿಯ ಹತ್ತಿದರು ॥ 56

ಕೆಲದಿನಗಳು ಕಳೆಯಲು ಇಂತು । ಶಿರಡಿಗೆ ಹೋಗುವ ಕಾಲ ಒದಗಿತು ।
ಹೊತ್ತ ಹರಕೆಯ ಮುಟ್ಟಿಸಿ ಆಯಿತು । ಮನಕಾನಂದವಾಯಿತು ॥ 57

ಆದೊಡನೆ ಸಾಯಿಯ ದರ್ಶನ । ಚೋಳಕರರು ಹಾಕಿ ದೀರ್ಘದಂಡ ಪ್ರಣಾಮ ।
ವಂದಿಸಿ ಬಾಬಾರ ಚರಣ । ಉಲ್ಲಸಿತ ಮನರಾದರು ॥ 58

ಮನ ಮಾಡಿ ನಿರ್ಮಲ । ಹಂಚಿದರು ಸಕ್ಕರೆ ಅರ್ಪಿಸಿದರು ಶ್ರೀ ಫಲ ।
ನುಡಿದರು ಇಂದು ಮನೋರಥಗಳೆಲ್ಲ । ಪೂರ್ಣವಾದವು ನನ್ನವು ॥ 59

ಸಾಯಿ ದರ್ಶನದಿಂದ ಸಂತುಷ್ಟರಾದರು । ಸಂಭಾಷಣೆಯ ಸುಖವನ್ನೂ ಪಡೆದರು ।
ಚೋಳಕರರು ಜೋಗರ ಅತಿಥಿಗಳಾಗಿದ್ದರು । ಅದರಿಂದ ಅವರಲ್ಲಿಗೆ ಹೊರಟರು ॥ 60

ಅತಿಥಿಗಳೊಡನೆ ಜೋಗರೂ ಹೊರಟರು । ಬಾಬಾ ಜೋಗ ಅವರಿಗೆ ಹೇಳಿದರು ।
'ಬಹಳ ಸಕ್ಕರೆ ಹಾಕಿದ ಚಹಾ ಕೊಡಿರಿ ಕುಡಿಯಲಿವರು । ದೊಡ್ಡ ಲೋಟಾಗಳಲಿ ತುಂಬಿ' ॥61

ಕಿವಿಯ ಮೇಲೆ ಬೀಳಲು ಈ ಗುರುತಿನ ಪದಗಳು । ಆಶ್ಚರ್ಯವಾಯಿತು ಚೋಳಕರರ ಮನದೊಳು ।
ಕಣ್ಣಲ್ಲಿ ತುಂಬಿದವು ಆನಂದಾಶ್ರುಗಳು । ಚರಣದೊಳು ಶಿರವನಿಟ್ಟರು ॥ 62

ಕೌತುಕವೆನಿಸಿತು ಜೋಗರಿಗೆ । ಅದಕ್ಕೂ ಇಮ್ಮಡಿ ಚೋಳಕರರಿಗೆ ।
ಅದರ ಕಾರಣ ಗೊತ್ತು ಅವರಿಗೆ । ಮನಸಿಗೆ ಗುರುತು ಒಪ್ಪಿಗೆಯಾಯಿತು ॥ 63

ಚಹಾ ಗೊತ್ತಿಲ್ಲ ಬಾಬಾರಿಗೆ । ನೆನಪಾಗಬೇಕೇಕೆ ಈಗವರಿಗೆ ।
ವಿಶ್ವಾಸ ಹುಟ್ಟಿಸಲು ಚೋಳಕರರಿಗೆ । ಭಕ್ತಿಯು ಒಳಗೆ ಬೇರೂರಲು ॥ 64

ಅಷ್ಟರಲ್ಲಿಯೇ ಹೇಳಿದರು ಸಂಪೂರ್ಣ ಗುರುತು । "ನಿನ್ನ ವಚನದಂತೆ ಸಕ್ಕರೆ ಮುಟ್ಟಿತು ।
ನಿನ್ನ ತ್ಯಾಗ ನೇಮವೂ ಮುಗಿಯಿತು । ಚೋಳಕರರೇ ಇಂದಿಗೆ ॥ 65

ಹರಕೆ ಹೊತ್ತಾಗಿನ ನಿನ್ನ ಚಿತ್ತ । ದೀರ್ಘ ಸೂತ್ರತೆಗಾಗಿ ಮಾಡಿದ ಪ್ರಾಯಶ್ಚಿತ್ತ ।
ನೀನದನಿಟ್ಟರೂ ಗುಪ್ತ । ಅದು ನನಗೆಲ್ಲ ತಿಳಿಯಿತು ॥ 66

ಇದ್ದರೂ ನೀವೂ ಯಾರೂ ಎಲ್ಲೂ । ಭಕ್ತಿಯಿಂದೆನ್ನೆದುರು ಕೈಯ್ಯೊಡ್ಡಲು ।
ನಾ ನಿಂತಿರುವೆ ರಾತ್ರಿ ಹಗಲು । ನಿಮ್ಮ ಭಾವವನನುಸರಿಸಿ ॥ 67

ನನ್ನ ದೇಹವು ಇದ್ದರೂ ಇಲ್ಲಿ । ನೀವಿದ್ದರೂ ಸಪ್ತಸಮುದ್ರದಾಚೆಯಲಿ ।
ಅಲ್ಲಿ ನೀವು ಏನೇ ಮಾಡಲಿ । ನಾನರಿಯುವೆನಿದನು ಕೂಡಲೇ ॥ 68

ಎಲ್ಲಿಯೇ ಹೋಗಿರಿ ಜಗದೊಳಗೆ । ನಾನಿರುವೆನಲ್ಲಲ್ಲಿ ನಿಮ್ಮ ಜೊತೆಗೆ ।
ನಿಮ್ಮ ಹೃದಯವೇ ಮನೆ ನನಗೆ । ನಾ ನಿಮ್ಮ ಅಂತರ್ಯಾಮಿಯು ॥ 69

ನಿಮ್ಮ ಹೃದಯಸ್ಥ ನಾನು ಹೀಗೆ । ನಿತ್ಯವೂ ನಮಿಸಿರಿ ನೀವು ಅವಗೆ ।
ಅಂತರ್ಯಾಮಿಯಾಗಿರುವೆ ಭೂತ ಮಾತ್ರಗಳಿಗೆ । ಅವನೇ ನಾನಾಗಿರುವೆನು ॥ 70

ಅದಕಾಗಿ ನಿಮಗೆ ಯಾರೇ ಸಿಗಲಿ । ಮನೆ ಬಾಗಿಲು ಇಲ್ಲವೇ ಮಾರ್ಗದಲಿ ।
ನನ್ನದೇ ಚಲನೆ ಇರುವದಲ್ಲಿ । ಅವರಲ್ಲಿಯೂ ನಾನೇ ನಿಂತಿರುವೆ ॥ 71

ಹುಳು ಹುಪ್ಪಡಿ ಜಲಚರ ಖೇಚರ । ಪ್ರಾಣಿ ಮಾತ್ರ ಮೊದಲಾಗಿ ಶ್ವಾನ ಸೂಕರ ।
ಎಲ್ಲೆಲ್ಲಿಯೂ ನಾನೇ ನಿರಂತರ । ತುಂಬಿ ನಿಂತಿರುವೆನಿದ ತಿಳಿಯಿರಿ ॥ 72

ನನ್ನೊಡನೆ ಇಡದಿರಿ ಅಂತರ । ನೀವೂ ನಾವು ನಿರಂತರ ।
ಹೀಗೆನ್ನನು ತಿಳಿದ ನರ । ಭಾಗ್ಯವಂತನವನೆನಬೇಕು" ॥ 73

ಕಂಡರೂ ಈ ಸಂಗತಿ ಚಿಕ್ಕದು । ಗುಣದಿಂದ ಇರುವದಿದು ಬಲು ದೊಡ್ಡದು ।
ಆ ಚೋಳಕರನಿಗೆ ಸವಿ ಎಷ್ಟೊಂದು । ಭಕ್ತಿಯ ಜೋಡು ಕೊಟ್ಟರು ॥ 74

ಅವರ ಮನದಲಿ ಏನೇನಿತ್ತು । ಈ ರೀತಿ ಬಾಬಾರು ಅದನೆಲ್ಲ ಕುರಿತು ।
ತೋರಿದರು ಪ್ರತ್ಯಂತರವನಿಂತು । ಸಂತರ ಕಾರ್ಯವೆಂಥದು ॥ 75

ಬಾಬಾರ ಮಾತುಗಳೇ ಅಮೂಲ್ಯ । ಇಳಿಯುವವು ಭಕ್ತ ಹೃದಯದಲಿ ಆಳ ।
ನೀರುಣಿಸಿ ಪ್ರೇಮದ ತೋಟದ ನೆಲ । ಭಕ್ತಿಯ ಬೀಜ ಬಿತ್ತುವರು ॥ 76
ಚಾತಕದ ತೃಷ್ಣೆಯ ಪರಿಹರಿಸಲೆಂದು । ದಯೆ ತೋರಿ ಮೇಘ ಮಳೆಗರೆಯುವದು ।
ಪರಿಣಾಮದಲಿ ಪೂರ್ಣಧರೆ ತಣಿಯುವದು । ಅದರಂತೆಯೇ ಇದು ಆಯಿತು ॥ 77

ಚೋಳಕರರು ಪಾಪ ಎಲ್ಲಿಯವರೆಂತು । ದಾಸಗಣೂರ ಕೀರ್ತನೆ ನಿಮಿತ್ತಕ್ಕಾಯಿತು ।
ಹರಕೆ ಹೊರವ ಮನಸಾಯಿತು । ಬಾಬಾರೂ ಪ್ರಸನ್ನರಾದರು ॥ 78

ಅದರಿಂದಲೇ ಈ ಚಮತ್ಕಾರ । ತಿಳಿಯಿತು ಸಂತ ಜನರ ಅಂತರ ।
ಉಪದೇಶಕ್ಕೆ ಬಾಬಾ ತತ್ಪರ । ಇಂಥ ಅವಕಾಶ ಒದಗಿಸುವರು ॥ 79

ಚೋಳಕರರು ಕೇವಲ ನಿಮಿತ್ತ । ಸಾಧಿಸಲು ಭಕ್ತರ ಹಿತ ।
ಇಂಥ ಬಾಬಾರ ಲೀಲೆ ನಿತ್ಯ। ನೋಡುತ್ತಲೇ ಇರಬೇಕು ॥ 80
ಹೀಗೆಯೇ ಇನ್ನೊಂದು ಲೀಲೆಯ ವರ್ಣನ । ಮಾಡಿ ಈ ಅಧ್ಯಾಯ ಮಾಡುವ ಪೂರ್ಣ ।
ಒಬ್ಬ ಹೇಗೆ ಕೇಳಿದನು ಪ್ರಶ್ನ । ಬಾಬಾ ನಿರಸನ ಹೇಗೆ ಮಾಡಿದರು ॥ 81

ಒಮ್ಮೆ ಬಾಬಾ ಮಶೀದಿಯಲ್ಲಿ । ಕುಳಿತಿದ್ದರು ತಮ್ಮ ಆಸನದಲ್ಲಿ ।
ಭಕ್ತನೊಬ್ಬ ಕುಳಿತಿದ್ದ ಎದುರಿನಲ್ಲಿ । ಆಗ ಹಲ್ಲಿಯೊಂದು ನುಡಿಯಿತು ॥ 82
ಹಲ್ಲಿ ಬೀಳುವುದು ಹಲ್ಲಿ ನುಡಿಯುವುದು । ಮುಂದಿನ ಭವಿಷ್ಯದ ಸೂಚನೆ ಇರುವದು ।
ಸಹಜ ಬಾಬಾರಿಗೆ ಪ್ರಶ್ನೆಯೊಂದು । ಕೇಳಿದ ಜಿಜ್ಞಾಸೆ ಉಳ್ಳವನಾಗಿ ॥ 83

ಬಾಬಾ ಹಿಂದೆ ಗೋಡೆಯ ಮೇಲೆ । ಯಾತಕ್ಕೆ ನುಡಿಯಿತದು ಚುಕ ಚುಕ ಎಂತಲೇ ।
ಏನಿರಬೇಕು ಅದರ ಅಂತರದಲೇ । ಅಶುಭವೇನಾದರೂ ಇರಲಿಕ್ಕಿಲ್ಲವಷ್ಟೇ ॥ 84

ಅದಕೆ ಬಾಬಾ ನುಡಿದರು ಹೀಗೆ । ಆನಂದವಾಗಿದೆ ಈ ಹಲ್ಲಿಗೆ ।
ಈಗ ಅವಳಕ್ಕ ಬರುವಳು ಇಲ್ಲಿಗೆ । ದೂರದ ಔರಂಗಾಬಾದದಿಂದ ॥ 85

ಮೊದಲೇ ಹಲ್ಲಿ ಪ್ರಾಣಿ ಎಂಥದು । ತಂದೆ ತಾಯಿಯೆಲ್ಲ ಅದಕೆಂಥದು ।
ಸೋದರ ಸೋದರಿಯರದಕೆಲ್ಲಿಯದು । ಸಂಸಾರ ಉದ್ಯೋಗ ಅದಕೆಲ್ಲಿಯದು ॥ 86

ಅದಕೆ ಬಾಬಾ ಏನಾದರೂ । ಸುಮ್ಮನೆ ವಿನೋದದಿಂದ ನುಡಿರುವರು ।
ಹೀಗೆಂದುಕೊಂಡು ಸುಮ್ಮನೆ ಕುಳಿತರು । ಕ್ಷಣವೊಂದು ಸ್ವಸ್ಥರಾಗಿ ॥ 87

ಅಷ್ಟರಲ್ಲಿ ಔರಂಗಾಬಾದದಿಂದ । ಗೃಹಸ್ಥನೊಬ್ಬ ಬಂದ ಕುದುರೆಯ ಮೇಲಿಂದ ।
ಬಾಬಾರ ದರ್ಶನಕೆ ಅಲ್ಲಿಗೆ ಬಂದ । ಆಗ ಬಾಬಾ ಸ್ನಾನಕ್ಕೆ ಹೋಗಿದ್ದರು ॥ 88

ಅವನಿಗೆ ಮುಂದೆ ಹೋಗಬೇಕಾಗಿತ್ತು । ತಿನ್ನುವುದಕಿಲ್ಲದೆ ಕುದುರೆ ಮುಂದೆ ನಡೆಯದಾಗಿತ್ತು ।
ಕೊಂಡುಕೊಳ್ಳಲು ಕಡಲೆಯನಷ್ಟು ।3 ಪೇಟೆಯತ್ತ ನಡೆದನು ॥ 89

ಹಲ್ಲಿಯ ಬಗ್ಗೆ ಪ್ರಶ್ನೆ ಕೇಳಿದವನು । ಆಶ್ಚರ್ಯದಿಂದ ಆ ವ್ಯಾಪಾರಿಯ ನೋಡುತಿದ್ದನು ।
ಅಷ್ಟರಲ್ಲಿ ಅವನು ಬಗಲಲ್ಲಿದ್ದ ಚೀಲವನ್ನು । ಕಸಕಡ್ಡಿ ಕಳೆಯಲು ಜಾಡಿಸಿದನು ॥ 90

ತಿರುವು ಮುರುವು ಮಾಡಿ ಚೀಲವ ಬಡಿದ ನೆಲಕೆ । ಅದರೊಳಗಿಂದ ಹಲ್ಲಿಯೊಂದು ಬಂತು ಹೊರಕೆ ।
ಹೆದರಿ ಓಡಿತು ಗೋಡೆಯ ಮೇಲಕೆ । ಎಲ್ಲರೂ ನೋಡುತಿರುವಂತೆ ॥ 91

ಪ್ರಶ್ನೆ ಕೇಳಿದವಗೆ ಬಾಬಾ ಎಂದರು । ಇನ್ನು ಅದರ ಮೇಲೆ ಲಕ್ಷವಿಟ್ಟರು ।
ಚಮತ್ಕಾರವ ನೋಡುತಿರು । ಆ ಹಲ್ಲಿಯ ಅಕ್ಕನೇ ಇದಾಗಿರುವದು ॥ 92

ಅಲ್ಲಿಂದದು ನೆಟ್ಟಗೆ ಓಡಿತು । ಅದರ ತಂಗಿ ಚುಕು ಚುಕು ಎನುತಿತ್ತು ।
ಆ ದನಿಯನ್ನೇ ಗುರಿ ಇಟ್ಟು । ಕುಣಿಯುತ ನಲಿಯುತ ನಡೆಯಿತು ॥ 93

ಆ ಅಕ್ಕತಂಗಿಯರಿಂತು ಭೆಟ್ಟಿ ಆಗಿ ಬಹಳ ದಿನವಾಗಿತ್ತು ।
ಅನುಪಮ ಪ್ರೀತಿ ಪ್ರದರ್ಶನ ನಡೆಯಿತು । ಒಂದನೊಂದು ಚುಂಬಿಸುವದು ಆಲಂಗಿಸುವದು ॥ 94

ಒಂದರ ಸುತ್ತೊಂದು ತಿರುಗಿದವು । ಆನಂದದಲಿ ಗಿರಕಿ ಹೊಡೆದವು ।
ಉದ್ದ ಅಡ್ಡ ಹಾಗೆ ಹೀಗೆ ಓಡಾಡಿದವು । ಸ್ವಚ್ಛಂದದಲಿ ನಲಿದವು ॥ 95

ಎಲ್ಲಿ ಆ ಔರಂಗಾಬಾದ ಶಹರ । ಈ ಶಿರಡಿ ಅಲ್ಲಿಂದೆಷ್ಟು ದೂರ ।
ಅಕಸ್ಮಾತ್ ಬಂದ ಈ ಕುದರಿ ಸವಾರ । ಈ ಹಲ್ಲಿಯೂ ಅವನ ಜೊತೆಯಲ್ಲಿ ॥ 96

ಆ ಹಲ್ಲಿಯು ಔರಂಗಾಬಾದದಲ್ಲಿ । ಹೊಕ್ಕಿರಬೇಕು ಆ ಚೀಲದಲ್ಲಿ ।
ಆದರೆ ಈ ಪ್ರಶ್ನೋತ್ತರಗಳ ಸಂದರ್ಭದಲ್ಲಿ । ಹೇಗೆ ಈ ಸಂಧಿ ಒದಗಿತು ॥ 97

ಆ ಹಲ್ಲಿ ನುಡಿಯುವದೇನು । ಪ್ರಶ್ನೆ ಕೇಳಬೇಕೆಂದೆನಿಸಿದುದೇನು ।
ಅದಕೆ ಕೊಟ್ಟ ಅರ್ಥೋಪಪತ್ತಿ ಏನು । ಅದರ ಪ್ರಚೀತಿಯೂ ತತ್ಕಾಲಕ್ಕೆ ಬಂತು ॥98

ಇಂಥ ಯೋಗವೂ ಅಪ್ರತಿಮ । ವಿನೋದವೆಂದರೆ ಎಲ್ಲರಿಗೂ ಪ್ರೇಮ ।
ಸಂತರು ಸಾಧನೆಯನುಪಯೋಗಿಸಿ ಅನುಪಮ । ಭಕ್ತ ಕ್ಷೇಮವ ಬೆಳೆಸುವರು ॥ 99

ಅಲ್ಲಿ ಈ ಜಿಜ್ಞಾಸೆ ಇರದಿದ್ದಲ್ಲಿ । ಅಥವಾ ಈ ಪ್ರಶ್ನೆಯನಾರೂ ಕೇಳದಿದ್ದಲ್ಲಿ ।
ಸಾಯಿಯ ಮಹಿಮೆಯು ತಿಳಿಯುತ್ತಿತ್ತೆಲ್ಲಿ । ಯಾರಿಗೆ ಈ ಅರ್ಥ ಹೊಳೆಯುತ್ತಿತ್ತು ॥ 100

ಅನೇಕ ಹಲ್ಲಿಗಳು ನುಡಿಯುವದು । ಅನೇಕ ಸಾರಿ ಎಂದೆಲ್ಲರಿಗೂ ತಿಳಿದಿರುವದು ।
ಯಾರು ಕೇಳುವರು ಅದರ ಅರ್ಥವೇನೆಂದು । ಅಥವಾ ಅವುಗಳ ಸುದ್ದಿಯ ॥ 101

ಸಾರಾಂಶ ಇದು ಜಗದ ಆಟವಿದ್ದು । ಸೂತ್ರಗಳು ಗುಪ್ತ ಮತ್ತು ಆಕಲನವಾಗದ್ದು ।
ಯಾರಿಗೆ ತಾನೇ ಅದರ ಕಲ್ಪನೆ ಬರುವದು । ಆಶ್ಚರ್ಯವೆಲ್ಲರಿಗೆನಿಸುವದು ॥ 102

ಹಾಗೆ ನೋಡಲು ಈ ಹಲ್ಲಿ ನುಡಿಯುವದು । ಹೆಚ್ಚಾಗಿ ಅನರ್ಥಸೂಚಕವಾಗಿರುವದೆಂದು ।
ಅದಕೆ 'ಕೃಷ್ಣ ಕೃಷ್ಣ' ಎನ್ನುವದು । ಅದರ ದೋಷ ಕಳೆದುಕೊಳ್ಳಲು ॥ 103

ಇರಲಿ ಹೇಗೂ ಇದರ ವ್ಯುತ್ಪತ್ತಿ । ಆದರೆ ಇದೆಂಥ ಚಮತ್ಕೃತಿ ।
ನಿಜಪದದಲಿ ಬೆಳೆಸಲು ಭಕ್ತಿ । ಬಾಬಾರ ಈ ಯುಕ್ತಿ ಉತ್ತಮವಾದುದು ॥ 104

ಆದರದಿಂದ ಈ ಅಧ್ಯಾಯವನೋದಲಿ । ಅಥವಾ ನೇಮದಿಂದ ಇದರ ಆವರ್ತನ ಮಾಡಲಿ ।
ಗುರುರಾಯ ಅವರ ಸಂಕಟ ನಿವಾರಿಸುವನೆಂಬಲ್ಲಿ । ದೃಢವಾದ ನಂಬಿಕೆ ಇರಲಿ ಇದರಲ್ಲಿ ॥105

ಇಟ್ಟುಕೊಂಡು ಅನನ್ಯ ಭಾವವನು । ಚರಣದಲಿ ಬಾಗಿಸಲು ಶಿರವನು ।
ತ್ರಾತಾ, ಪಾತಾ, ಅಭಯದಾತನು । ಕರ್ತನು ಹರ್ತನು ಅವನೊಬ್ಬ ॥ 106

ಇದರಲ್ಲಿ ಶಂಕೆ ಪಡಬಾರದು । ಸಾಯಿನಾಥನು ಹೀಗೇ ಇರುವದು ।
ನಿಜಾನುಭವದ ಗುಹ್ಯ ಭಾವಾರ್ಥವಿದು । ಭಕ್ತಕಲ್ಯಾಣಾರ್ಥ ನಾ ಹೇಳುವೆ ॥ 107

ಜಗದಿ ಸಂಪೂರ್ಣ ನಾನೇ ಒಬ್ಬ । ನನ್ನ ಹೊರತು ಇಲ್ಲ ಬೇರೊಬ್ಬ ।
ನಾನೇ ಇರುವೆ ತ್ರಿಲೋಕಗಳ ತುಂಬ । ಈ ಲೋಕ ಅಷ್ಟೇ ಅಲ್ಲ ತಿಳಿ ॥ 108

ಈ ಅದ್ವಿತೀಯತ್ವವು ಎಲ್ಲಿ ಸ್ಫುರಿಸುವದು । ಅಲ್ಲಿ ಭಯದ ವಾರ್ತೆಯೇ ಇರದು ।
ಚಿನ್ಮಾತ್ರವೆಲ್ಲ ತುಂಬಿರುವದು । ಈ ನಿರಹಂಕಾರ ನಿರಭಿಮಾನದಿಂದ ॥ 109

ಹೇಮಾಡಪಂತನು ಸಾಯಿಗೆ ಶರಣ । ಬಿಟ್ಟಗಲನು ಕ್ಷಣವೊಂದು ಈ ಚರಣ ।
ಅದರಲ್ಲಿಯೇ ಇರುವದು ಸಂಸಾರತರಣ । ಈ ಮಧುರ ನಿರೂಪಣೆಯ ಕೇಳಿರಿ ॥ 110

ಮುಂದಿನಧ್ಯಾಯದಲಿ ಸಾಯಿ ಗುರುವರರು । ಸುಂದರ ಪ್ರಸಂಗವ ನಿರ್ಮಿಸುವರು ।
ಜನ ಬ್ರಹ್ಮಜ್ಞಾನವ ಬೇಡುವರು । ಚಿಟುಕೆ ಬಾರಿಸುವಷ್ಟರಲ್ಲಿ ಕೊಡಿರೆಂದು ॥ 111

ಯಾವನೋ ಒಬ್ಬ ಲೋಭೀಮನುಷ್ಯನು । ಸಾಯಿಗೆ ಬ್ರಹ್ಮ ಜ್ಞಾನವನು ಕೇಳುವನು ।
ಅವನ ಜೇಬಿನಿಂದಲೇ ತೆಗೆದು ಅದನು । ಮಹಾರಾಜರು ಕೊಡುವರು ಅವನಿಗೆ ॥ 112

ಶ್ರೋತೃಗಳು ಕೇಳಲು ಈ ಕಥಾನಕ । ಕಂಡು ಬರುವದು ಸಾಯಿಯ ಕೌತುಕ ।
ಲೋಭವ ತ್ಯಜಿಸದೆ ನಿಷ್ಪಂಕ । ಅಪ್ರಾಪ್ಯ ಬ್ರಹ್ಮನು ಅಂಥವರಿಗೆ ॥ 113

ಅದಕೆ ಅಧಿಕಾರಿಗಳು ಯಾರು ಇರುವರು । ಅದರ ವಿಚಾರವನು ಯಾರೂ ಮಾಡರು ।
ಅದನು ವಿವರಿಸುವರು ಮಹಾರಾಜರು । ಯಾರಿಗೆ ಹೇಗೆ ಪ್ರಾಪ್ತ ಅದು ಎಂಬುದ ॥ 114


ಅವರ ದಾಸಾನುದಾಸನು ನಾನು । ಶಿರಗೊಡ್ಡಿ ಬೇಡಿಕೊಳ್ಳುವೆನು ।
ಈ ಸಾಯಿ ಪ್ರೇಮವಿಲಾಸವನು । ಉಲ್ಲಸಿತರಾಗಿ ಕೇಳಿರಿ ॥ 115
ಚಿತ್ತವು ಪ್ರಸನ್ನವಾಗುವದು । ಚೈತನ್ಯ ಸಮಾಧಾನ ಲಭಿಸುವದು ।
ಅದಕೆಂದು ಶ್ರೋತೃಗಳು ಗಮನಿಸುವದು । ಸಂತಮಹಿಮಾನವ ತಿಳಿಯಲು ॥ 116

ಸ್ವಸ್ತಿಶ್ರೀ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀಸಾಯಿ ಸಮರ್ಥ ಸಚ್ಚರಿತೆ । ಚೋಳಕರ ಶರ್ಕರಾಖ್ಯಾನಂ ನಾಮಪಂಚದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

199.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿನಾರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ರಾಜಾಧಿರಾಜ ಚಕ್ರವರ್ತಿ । ಶಾಂತಿ ಸಿಂಹಾಸನಸ್ಥ ಮೂರ್ತಿ ।
ನಮಿಸುವಾ ಸ್ವಾನಂದ ಸಾಮ್ರಾಜ್ಯಪತಿ । ಅನನ್ಯ ಗತಿ ಗುರುರಾಜ ॥ 1

ಅಭೇದ ಭಕ್ತಿ ಸಹಜ ಸ್ಥಿತಿಗಳು । ಎಡಬಲದಲಿ ಚವರಿ ಬೀಸುತಿರಲು ।
ಸ್ವಾನುಭೂತಿ ಸದ್ಯಃ ಪ್ರತೀತಿಗಳು । ಯಾರಿಗೆ ವ್ಯಜಿಸುವರು ಅತ್ಯಾದರದಲಿ ॥ 2

ಛತ್ರಧಾರಿಯು ಸ್ವಾತ್ಮ ಸ್ಥಿತಿ । ವೇತ್ರಧಾರಿಯು ಶಾಂತಿ ಸಂವಿತ್ತಿ ।
ಷಡ್ರಿಪು ಮಾಯಾಮೋಹ ವೃತ್ತಿ । ಕ್ಷಣವೊಂದು ಅಲ್ಲಿರಲಾರವು ॥ 3

ಈ ಸಭೆಯ ಅಲಂಕಾರವೆಂತು । ಸೇವಕರು ನಾಲ್ಕು ಆರು ಹದಿನೆಂಟು ।
ಚಿನ್ಮಯ ಛತ್ತದ ಬೆಳಕು ಹರಡಿತು । ಸ್ವಾನಂದ ತುಂಬಿದೆ ಎಲ್ಲೆಲ್ಲೂ ॥ 4

ವಿರಕ್ತಿ ಭಕ್ತಿ ಶುದ್ಧ ಜ್ಞಾನ । ಶ್ರವಣ ಮನನ ನಿಧಿಧ್ಯಾಸನ ।
ನಿಜಾನುಸಂಧಾನ ಸಾಕ್ಷಾತ್ಕರಣ । ಈ ಅಷ್ಟಪ್ರಧಾನರು ಸೇವಾರತರು ॥ 5

ಶಾಂತಿ ದಾಂತಿಗಳೆಂಬ ದಿವ್ಯ ಮಣಿಗಳು । ಹೊಳೆವವಲ್ಲಿ ಕಂಠಭೂಷಣದೊಳು ।
ವೇದಾಂತ ಸಾಗರ ಸುಧಾ ತರಂಗಿಣಿ । ಮಧುರವಾಣಿಯು ಯಾರದೋ ॥ 6

ಹರತಾಗಿ ಸತೇಜ ಹೊಳೆಯುವ । ಜ್ಞಾನಖಡ್ಗದ ಪ್ರಹಾರವ ।
ಮಾಡಲು ಎತ್ತಿದ ಕರವ । ನೋಡಿ ಭವವೃಕ್ಷ ಥರ ಥರ ನಡಗುವದು ॥ 7

ಜಯ ಜಯ ನಿರಂಜನಾ ಅವ್ಯಯಾ । ಗುಣಾತೀತಾ ಯೋಗಿರಾಯಾ ।
ಪರೋಪಕಾರಾರ್ಥ ಧರಿಸಿರುವೆ ಕಾಯಾ । ದೀನ ಜನರನುದ್ಧರಿಸಲು ॥ 8

ಗತಾಧ್ಯಾಯದಲಿ ನಿರೂಪಣ । ಭಕ್ತಭಾವಾರ್ಥವ ಮಾಡಿ ಪೂರ್ಣ ।
ಮುಗಿಸಿ ಅವನು ಹೊತ್ತ ಹರಕೆಯನ । ಮನದ ಗುರುತನು ತಿಳಿಸಿದಿ ॥ 9

ಸದ್ಗುರುವು ಯಾವಾಗಲೂ ಅವಾಪ್ತ ಕಾಮನು । ಶಿಷ್ಯನೇನು ತತ್ಕಾಮವ ಪೂರೈಸಿಯಾನು ।
ಶಿಷ್ಯರ ಸೇವಾಕಾಮನೆಯನು । ಪೂರೈಸಿ ನಿಷ್ಕಾಮರನ್ನಾಗಿಸುವನು ॥ 10

ಹೂವು ಎಲೆಗಳನೇ ಭಾವದಿಂದ ಅರ್ಪಿಸಲು । ಅದನೇ ಸೇವಿಸುವನು ಪ್ರೀತಿಯಿಂದ ಬಲು ।
ಅವನೇ ಸಾಭಿಮಾನರಾಗಿ ಅರ್ಪಿಸಲು । ಮುಖವನತ್ತ ತಿರುವುವನು ॥ 11

ಸಚ್ಚಿತ್ಸುಖದ ಆಗರವದು । ಅದಕೆ ಬಾಹ್ಯೋಪಚಾರದಿಂದೇನಾಗುವದು ।
ಅದನೇ ಭಾವಾರ್ಥದಿಂದ ಇತ್ತುದು । ಸೌಖ್ಯ ನಿರ್ಭರನಾಗಿ ಸೇವಿಸುವನು ॥ 12

ಏನೂ ಅರಿಯದಂತೆ ತೋರಿಸಿಕೊಂಡು । ಜ್ಞಾನವೀಯುವರು ಅಜ್ಞಾನ ಕಳೆದು ।
ಆದರೂ ಮರ್ಯಾದಾತಿಕ್ರಮಣವಾಗದು । ಸವಿ ಮಾತಿನಲೇ ಬುದ್ಧಿ ಕಲಿಸುವರು ॥ 13

ಅವರ ಸೇವೆಯನು ಭಾವದಿ ಮಾಡುವ । ಸೇವಕನು ಬ್ರಹ್ಮಸಾಯುಜ್ಯತೆಯ ಪಡೆವ ।
ಕಳೆದುಕೊಂಡು ಉಳಿದೆಲ್ಲವ । ಗುರುಸೇವೆಯಲಿ ಲೀನರಾಗಬೇಕು ॥ 14

ಒಂದಿಷ್ಟು ಹಿಂದೇಟಾದರೆ ಸೇವೆಯಲಿ । ಇಲ್ಲವೇ ತೋರಿಸಹೋದರೆ ತಮ್ಮ ಜಾಣತನವನಲ್ಲಿ ।
ಸಾಧಕನು ಸಿಗುವನು ಅಪಾಯದಲ್ಲಿ । ಚರಣದಲಿ ವಿಶ್ವಾಸವಿರಬೇಕು ॥ 15

ಶಿಷ್ಯನು ತಾನೇ ಏನು ಮಾಡುವನು । ಸದ್ಗುರುವೇ ಮಾಡಬೇಕವನ ಹಿತವನು ।
ಶಿಷ್ಯನು ಅರಿಯನು ಬರುವ ಅಪಾಯವನು । ಅವನಿಗರಿಯದೆ ಗುರು ಉಪಾಯ ಮಾಡುವನು ॥ 16

ಗುರುವಿಗಿಂತ ದಾತಾ ಹೆಚ್ಚಿನವರು । ತ್ರಿಭುವನದಲ್ಲೆಲ್ಲೂ ಹುಡುಕಿದರೂ ಸಿಗರು ।
ಶರಣರಿಗಿಂತ ಪರಮ ಶರಣರು । ಅನನ್ಯ ಶರಣಾರಾಗುವ ಅವಗೆ ॥ 17

ಉಪಮೆ ಕೊಡಲು ಚಿಂತಾಮಣಿಯದು । ಅದು ಚಿಂತಿಸಿದ್ದನ್ನಷ್ಟೇ ಕೊಡುವದು ।
ಅಚಿಂತ್ಯ ವಸ್ತುವನೂ ಗುರು ಕೊಡವದು । ಪರಮಾಶ್ಚರ್ಯಕರ ನಿಜ ಭಕ್ತನಿಗೆ ॥ 18

ಕಲ್ಪತರುವಿಗೆ ಹೋಲಿಸಲು । ಅದರಿಂದ ಪೂರೈಸುವವು ಕಲ್ಪಿತಾರ್ಥಗಳು ।
ನಿರ್ವಿಕಲ್ಪ ಸ್ಥಿತಿಯನಿಯಲು । ಅಕಲ್ಪಿತವಾಗಿ ಗುರುರಾಯನಿಹನು ॥ 19

ಕಾಮಧೇನುವು ಕಾಮಿಸಿದ್ದನ್ನು ಕೊಡುವದು । ಗುರುಧೇನುವಿನ ಕೊಡುಗೆ ಅದಕಿಂತ ಹಿರಿದು ।
ಅಚಿಂತ್ಯ ದಾನಿ ಎಂದೆನಿಸಿಕೊಳ್ಳುವದು । ಅವನಲ್ಲದೆ ಬೇರಿನ್ನಾರು ॥ 20

ಇದೇ ವಿನಂತಿ ಇನ್ನು ಶ್ರೋತೃಗಳಲ್ಲಿ । ಹೇಳುವೆನೆಂದಿದ್ದೆ ಹಿಂದನಧ್ಯಾಯದ ಕೊನೆಯಲಿ ।
ಆ ಕಥೆಯ ಈಗ ಕೇಳಿರಿಲ್ಲಿ । ಬ್ರಹ್ಮಾರ್ಥಿಗೆ ಬ್ರಹ್ಮಜ್ಞಾನವಿತ್ತುದು ॥ 21

ಬ್ರಹ್ಮಜ್ಞಾನವ ಬಯಸಿ ಬಂದವರಿಗೆ । ಬಾಬಾ ತೃಪ್ತಿಯ ನೀಡುವರು ಹೇಗೆ ।
ನಿಜಭಕ್ತರಿಗೆ ಉಪದೇಶಿಸುವರು ಹೇಗೆ । ಆ ಪರಮಾರ್ಥವ ಕೇಳಿರಿ ॥ 22

ಸಂತರು ನಿತ್ಯವೂ ನಿಷ್ಕಾಮರು । ಸಕಲ ಪರಿಪೂರ್ಣ ಅವಾಪ್ತಕಾಮರು ।
ಆದರೆ ಭಕ್ತರು ಅತ್ಯಂತ ಸಕಾಮರು । ಅತೃಪ್ತ ಕಾಮರವರು ಯಾವಾಗಲೂ ॥ 23

ಕೆಲವರು ಬೇಡುವರು ಪುತ್ರ ಸಂತತಿ । ಕೆಲವರು ಅಖಂಡ ರಾಜ್ಯ ಸಂಪತ್ತಿ ।
ಇನ್ನಿತರರು ಕೇಳುವರು ಭಾವಭಕ್ತಿ । ಭವನಿರ್ಮುಕ್ತಿಯನೆಂದಿಗೂ ॥ 24
ಹೀಗೊಬ್ಬ ಭಾವಾರ್ಥಿ ಭಕ್ತನಿದ್ದ । ಆಧರೆ ಧನಸಂಚಯದಲಿ ನಿಮಗ್ನನಿದ್ಧ ।
ಬಾಬಾರ ಉದಂಡ ಕೀರ್ತಿಯ ಕೇಳಿದ । ದರ್ಶನದ ಆಸಕ್ತಿ ಉಂಟಾಯಿತು ॥ 25

ಸಾಕಷ್ಟು ಸಂತತಿ ಸಂಪತ್ತಿ ಮನೆಯಲಿರಲು । ಅಪರಿಮಿತವಾಗಿ ಆಳುಕಾಳುಗಳು ।
ಮನದಿ ದರ್ಶನದ ಇಚ್ಛೆಯಾಗಲು । ಬಾಬಾರ ಉದಾರ ಮೂರ್ತಿಯದು ॥ 26

ಬಾಬಾ ಇರುವರು ದೊಡ್ಡ ಬ್ರಹ್ಮಜ್ಞಾನಿ । ಸಾಧುಸಂತರ ಮುಕುಟಮಣಿ ।
ಅಗಾಧಕರ್ತೃತ್ವವುಳ್ಳವನ ಈ । ಚರಣದಲಿ ಮಸ್ತಕವನಿಡಬೇಕು ॥ 27

ನನಗೊಂದರದೂ ಕೊರತೆ ಇಲ್ಲದಿರಲು । ನಾ ಹೋಗುವೆ ಬ್ರಹ್ಮಜ್ಞಾನ ಪಡೆಯಲು ।
ಅದೂ ಸಹಜದಲೇ ಸಾಧಿಸಲು । ಧನ್ಯನಾನಾಗುವೆನಾಗ ॥ 28

ಆಗವನ ಮಿತ್ರನೆಂದದ್ದು । ಸುಲಭವಲ್ಲ ಬ್ರಹ್ಮವ ತಿಳಿಯುವದು ।
ನಿನ್ನಂಥ ಲೋಭಿಗೆ ಹೆದರಿ ಅದು । ಪ್ರಕಟವಾಗುವುದೇ ಕಷ್ಟ ॥ 29

ದ್ರವ್ಯ ದಾರಾಸಂತತಿ ಬಿಟ್ಟು । ಇರದು ಬೇರೆ ಸುಖೋತ್ಪತ್ತಿಯೇ ಗೊತ್ತು ।
ಅಂಥವರಿಗೆ ಬ್ರಹ್ಮವೆಂದರೆ ಕೇವಲ ಕಲ್ಪನೆಯ ವಸ್ತು । ಅದರಲಿ ವಿಶ್ರಾಂತಿ ಹೇಗೆ ಲಭಿಸೀತು ॥ 30
ಇಂದ್ರೀಯ ಶಕ್ತಿಯು ಕ್ಷೀಣವಾಗಲು । ಯಾರೂ ತನ್ನನ್ನು ಕೇಳದಿರಲು ।
ಆಗ ಸುಮ್ಮನೇ ಕುಳಿತುಕೊಂಡಿರಲು । ಆ ಬ್ರಹ್ಮದ ಎಳೆಯನು ಹೊಸೆಯುವರು ॥ 31
ನಿನ್ನ ಈ ಬ್ರಹ್ಮ ಜಿಜ್ಞಾಸೆ ಹಾಗಿದೆ । ಜೀನ ನೀನು ಕೈಯಿಂದ ಕಾಸುಬಿಡದೆ ।
ಅಸಾಧ್ಯವು ನಿನಗಂಥವರು ಸಿಗುವುದೇ । ನಿನ್ನ ಜಿಜ್ಞಾಸೆಯ ಪೂರೈಸುವವರು ॥ 32
ಇಂಥ ಅವಸ್ಥೆಯನು ಮನದಲಾಂತು । ಬ್ರಹ್ಮಾರ್ಥಿ ಹೊರಟನು ಶಿರಡಿಯನು ಕುರಿತು ।
ಹೋಗಿ ಬರುವಂಥ ಟಾಂಗೆಯಲಿ ಕುಳಿತು । ಸಾಯಿ ಚರಣದಲಿ ಬಂದನು ॥ 33

ಸಾಯಿಯ ದರ್ಶನ ಪಡೆದನು । ಅವರ ಚರಣಗಳ ವಂದಿಸಿದನು ।
ಆಗ ಸಾಯಿ ನುಡಿದ ಮಧುರ ವಚನವನು । ಶ್ರೋತೃಗಳೇ ಕೇಳಿರೀಗ ॥ 34

ಈ ಸಾಯಿ ಇರುವ ಕಲ್ಪತರುವಿನಂತೆ । ಅವಧಾನ ಪಯಃಪಾನದಿಂದ ಕೂಡಿದಂತೆ ।
ಶ್ರೋತೃಗಳ ಆದರವು ಬೆಳೆದಂತೆ । ಫಲಭಾರವನೂ ಹೊರುವದು ॥ 35

ರಸಭಾವವು ತುಂಬಿ ಸರ್ವಾಂಗದಲಿ । ಸುಗಂಧಪುಷ್ಪಗಳರಳಿಸುತಲಿ ।
ಮಧುರ ಫಲಭಾರದಿಂದ ಜೋಲುತಲಿ । ಭಕ್ತೇಚ್ಛೆಗಳ ಪೂರೈಸುವದು ॥ 36

ಬಂದವನು 'ಬಾಬಾ ಬ್ರಹ್ಮನನು ಕಾಣಬೇಕೆಂದು । ಬಂದಿರುವೆ ನಾ ಮನದಲದನಿಟ್ಟುಕೊಂಡು ।
ಶಿರಡಿಯ ಬಾಬಾ ಬ್ರಹ್ಮನ ತೋರಿಸುವರೆಂದು । ಜನರು ಹೇಳುತಿರುವರು ॥ 37

ಅದಕಾಗಿ ಇಷ್ಟು ದೂರ ಬಂದೆನು । ಮಾರ್ಗ ಕ್ರಮಿಸುವಾಗ ಬಹಳ ಶ್ರಮಪಟ್ಟೆನು ।
ಆದರೂ ಕಂಡರೆ ಬ್ರಹ್ಮನನು । ಕೃತಕೃತ್ಯನಾದಂತಾಗುವೆನು' ॥ 38

ಬಾಬಾ ಎಂದರು "ಬಿಡು ಚಿಂತೆಯನು । ಬ್ರಹ್ಮನನು ಈಗಲೇ ತೋರಿಸುವೆನು ।
ನಿನ್ನಂಥ ಅದ ಕೇಳುವವನೇ ದುರ್ಲಭನು । ಅದಕೆ ಆಮೇಲೆ ಎನ್ನುವ ಮಾತೇ ಇಲ್ಲ ॥ 39

ಬೇಡುವರು ಹೆಚ್ಚಿನ ಧನ ಸಂಪತ್ತು । ಕೇಳವರು ನಿವಾರಿಸಲು ಬಂದ ಆಪತ್ತು ।
ಬೇಡುವರು ಲೌಕಿಕ ಮಾನ ರಾಜ್ಯ ಸಂಪತ್ತು । ಸದಾ ಸೌಖ್ಯವಿರಲೆನ್ನುವರು ॥ 40

ಕೇವಲ ಐಹಿಕ ಸುಖಕ್ಕಾಗೇ । ಜನ ಓಡಿ ಬರುವರು ಶಿರಡಿಗೆ ।
ತೊಡಗುವರು ಈ ಫಕೀರನ ಭಜನೆಗೆ । ಬ್ರಹ್ಮನನು ಮಾತ್ರ ಕೇಳರು ॥ 41

ನನ್ನಲ್ಲಿ ಅಂಥವರಿಗೆ ಬರವಿಲ್ಲ । ನಿನ್ನಂಥವರದೇ ದುಷ್ಕಾಳ ।
ಬ್ರಹ್ಮಜಿಜ್ಞಾಸುಗಳಿಗಾಗಿಯೇ ಸದಾಕಾಲ । ಕಾಯುತಿರುವೆ ನಾ ಹಸಿದಂತೆ ॥ 42

ಯಾವ ಬ್ರಹ್ಮ ವಸ್ತುವಿನ ಹೆದರಿಕೆಯಿಂದ । ರವಿ ಶಶಿಗಳೂ ನಡೆಯುವರು ಅದರಿಂದ ।
ಮೂಡುವದು ಮುಳುಗವದು ನೇಮದಿಂದ । ಪ್ರಕಾಶ ಬೆಳದಿಂಗಳಗಳ ಕೊಡುವದು ॥ 43

ಗ್ರೀಷ್ಮ ವಸಂತಾದಿ ಋತುಕಾಲ । ಇಂದ್ರ ಮೊದಲಾದ ಲೋಕಪಾಲ ।
ನೇಮದಿಂದ ಮಾಡುವರು ಪ್ರಜಾಪತಿ ಪಾಲ । ಅದಕ್ಕೆಲ್ಲಕೂ ಮೂಲ ಬ್ರಹ್ಮವಿರುವದು ॥ 44

ಆದಕ್ಕೇ ಈ ದೇಹವು ಬಿದ್ದು ಹೋಗುವುದಕ್ಕೂ । ಮೊದಲೇ ಜಾಣನು ಬ್ರಹ್ಮ ಪುರುಷಾರ್ಥವ ಸಾಧಿಸಬೇಕು ।
ಇಲ್ಲವೇ ಪುನರಾವರ್ತನೆ ಕೊನೆತನಕೂ । ಅಭಾಧಿತವಾಗಿ ಬೆನ್ನಟ್ಟುವದು ॥ 45

ಈ ಬ್ರಹ್ಮವನು ತಿಳಿಯದ ಹೊರತು । ತಿಳಿ ಈ ಶರೀರ ಪತನವಾಯಿತು ।
ಅಂದರೆ ಸಂಸಾರ ಬಂಧನ ಬೆನ್ನಟ್ಟಿತು । ಅದರಿಂದ ಜನ್ಮ ಮರಣ ತಪ್ಪದು ॥ 46

ಬ್ರಹ್ಮನನ್ನೇ ಏಕೆ ನಾನಿನಗೆ ಎಲ್ಲವನ್ನೂ । ತೋರಿಸುವೆನು ಆ ಬ್ರಹ್ಮ ಗಂಟನ್ನು ।
ಯಾವುದು ಸುತ್ತಿಕೊಂಡಿದೆ ನಿನ್ನ ಒಳ ಹೊರಗುಗಳನು । ಅದನೆಲ್ಲ ಬೇರೆ ಬೇರೆ ವಿಂಗಡಿಸಿ" ॥ 47

ಏನು ಆ ಸುಧಾ ಮಧುರ ವಾಣಿ । ಕೇವಲಾದ್ವೈತದ ಖಣಿ ।
ಸಂಶಯದೋಲಾರೂಢ ಪ್ರಾಣಿ । ಅದರುದ್ಧರಣಕೆ ಸಮರ್ಥವಾದುದು ॥ 48

ಅಪಾತ್ರರಮಣೀಯ ಸುಖಪ್ರಲೋಭನಗಳಲಿ । ತೊಡಗಿರುವವರು ದಿನರಾತ್ರಿಗಳಲಿ ।
ಅಂಥವರೂ ಬಾಬಾರ ವಚನ ಸರಣಿಯಲಿ । ವಿಹಿತಾಚರಣದಲಿ ತೊಡಗುವರು ॥49

ಚಿಂತಾಮಣಿಯು ಪ್ರಸನ್ನವಾಗುವದು । ಅದರಿಂದ ಲೌಕಿಕ ಸುಖವೆಲ್ಲ ಕೈಗೆಟುವದು ।
ಸ್ವರ್ಗಸಂಪತ್ತಿಯೇ ದೊರಕುವದು । ಮಹೇಂದ್ರನು ಪ್ರಸನ್ನನಾಗಲು ॥ 50

ಅದಕಿಂತ ಗುರವು ಅಲೌಕಿಕನು । ದಾತೃವಿನ್ನಿಲ್ಲಗುರುವಿಗೆ ಸಮಾನನು ।
ದುರ್ಲಭ ಬ್ರಹ್ಮನನು ಭಕ್ತನಿಗೆ ತೋರಿಸುವನು । ಸುಪ್ರಸನ್ನತೆಯ ಹೊಂದಿದರೆ ॥ 51

ಈ ಸವಿಯಾದ ಕಥಾ ಶ್ರವಣದಿಂದ । ಮರೆವಾಗುವದು ಸಂಸಾರ ದುಃಖದ ।
ಬ್ರಹ್ಮಾರ್ಥಿಗಳಿಗೆ ಹೇಗೆ ಕಲಿಸಬೇಕೆಂಬುದ । ಬಾಬಾರು ಮಾತ್ರ ತಿಳಿದಿರುವರು ॥ 52

ಇರಲಿ ಆಮೇಲೆ ಅವನನು ಕುಳ್ಳಿರಿಸಿಕೊಂಡು । ಬೇರೆ ವಿಷಯಗಳಲಿ ತೊಡಗಿಸಿ ಕ್ಷಣವೊಂದು ।
ಆ ಪ್ರಶ್ನೆಯೇ ಮರೆತು ಹೋಗಿದೆಯೆಂದು । ಎನಿಸುವಂತವಗೆ ಮಾಡಿದರು ॥ 53

ಆಮೇಲೆ ಬಾಬಾ ಏನು ಮಾಡಿದರು । ಒಬ್ಬ ಹುಡುಗನನು ಹತ್ತಿರ ಕರೆದರು ।
ಬೇಗನೇ ನಿ ಹೋಗೆಂದರು । ಅನಂದುವಿನಲ್ಲಿಗೆ ಹೇಳಿದನು ॥ 54

ಐದು ರೂಪಾಯಿ ಕೈಗಡ ಕೊಡು ಎಂದು । ಬಾಬಾರಿಗೆ ಬಹಳ ಹರಕತ್ತಾಗಿದೆಯೆಂದು ।
ಕ್ಷಣದಲಿ ಮತ್ತೆ ಹಿಂದಿರುಗಿಸುವರು ಎಂದು । ಬೇಗನೇ ಕೊಡಬೇಕೆಂದು ಹೇಳು ॥ 55

ಹುಡುಗ ಹೋದ ನಂದೂನ ಮನೆಗೆ । ಬೀಗವಿತ್ತು ಬಾಗಿಲಿಗೆ ।
ಹಿಂದಿರುಗಿ ಬಂದು ಬಾಬಾರಿಗೆ । ಸಮಾಚಾರವ ಹೇಳಿದನು ॥ 56

ಬಾಬಾ ಎಂದರು ಕೇಳಿಲ್ಲಿ । ಬಾಳಾವಾಣಿ ಇರಬಹುದು ಮನೆಯಲ್ಲಿ ।
ಅವನಿಗೂ ಈಗ ಹೇಳಿದ್ದನ್ನೇ ಹೇಳಿ । ಬೇಗ ದುಡ್ಡು ತೆಗೆದುಕೊಂಡು ಬಾ ॥ 57

ಈ ತಿರುಗಾಟವೂ ವ್ಯರ್ಥವಾಯಿತು । ಬಾಳಾ ಮನೆಯಲ್ಲಿರಲಿಲ್ಲ ಆ ಹೊತ್ತು ।
ಹೋದ ಹುಡುಗ ತಿರುಗಿ ಬಂದ । ನಡೆದುದನ್ನು ಹೇಳಿದನು ॥ 58

ಇನ್ನೂ ಒಂದೆರಡು ಕಡೆಗಳಲೂ । ಬಾಬಾ ಅವನನ್ನು ಕಳಿಸಿದಾಗಲೂ ।
ದುಡ್ಡು ಮಾತ್ರ ಸಿಗದಿರಲು । ಹುಡುಗ ದಣಿದ ಓಡಾಡಿ ॥ 59

ನಂದೂ ಅಥವಾ ಬಾಳಾವಾಣಿ ಇವರು । ಆಗ ಮನೆಯಲ್ಲಿರಲಿಲ್ಲ ಒಬ್ಬರೂ ।
ಇದನು ಪೂರ್ಣ ಬಾಬಾ ತಿಳಿದಿದ್ದರು । ಅಂತರ್ಜ್ಞಾನಿಗಳಾದ ಮಹಾರಾಜರು ॥ 60

ನಡೆವ ನುಡಿವ ಬ್ರಹ್ಮನೇ ಇರಲು ಸಾಯಿ । ಅವನಿಗೆ ಬೇಕಾಗಿದ್ದೀತೆ ಐದು ರೂಪಾಯಿ ।
ಆದರೆ ಆ ಬ್ರಹ್ಮಾರ್ಥಿಗಾಗಿ ಈ । ವಿಚಿತ್ರ ಆಟವ ಹೂಡಿದರು ॥ 61

ಅತಿಥಿಯು ಮನೆಗೆ ಬಂದಿರಲು । ಅವನಿಗೆ ಆತಿಥ್ಯವ ಮಾಡಲು ।
ಮನೆಯಲಿ ಮೃಷ್ಟಾನ್ನದಡಿಗೆಯಾಗಿರಲು । ಆ ಪ್ರಸಾದವು ಉಳಿದವರಿಗೂ ಸಿಗುವದು ॥ 62

ಹಾಗೇ ಈ ಬ್ರಹ್ಮ ಭೋಕ್ತನನು । ನಿಮಿತ್ತ ಮಾಡಿಕೊಂಡು ಅವನನು ।
ಮಹಾರಾಜರು ಉಪದೇಶಿಸಿದರಿದನು । ಎಲ್ಲ ಭಕ್ತರ ಕಲ್ಯಾಣಾರ್ಥವಾಗಿ ॥ 63

ಇನ್ನೂರರ ಮೇಲೆ ಐವತ್ತು । ರೂಪಾಯಿಯ ಗಂಟೇ ಇತ್ತು ।
ಅವನ ಜೇಬಿನಲಿರುವದಿಂತು । ಸಾಯಿಯವರಿಗೆ ಗೊತ್ತಿತ್ತು ॥ 64

ಇದು ಆ ಬ್ರಹ್ಮಾರ್ಥಿಗೆ ತಿಳಿಯದೇ । ಅವನಿಗೇನು ಕಣ್ಣು ಕಾಣದೇ ।
ಜೇಬಿನಲ್ಲಿ ಗಂಟು ಇಟ್ಟುಕೊಂಡೇ । ವಿಕಲ್ಪದಲ್ಲಿ ತೊಡಗಿದನು ॥ 65

ಸಾಯಿಗೆ ಐದು ರೂಪಾಯಿ ಕೈಗಡವಾಗಿ । ಅದೂ ಒಂದು ಘಳಿಗೆಯ ಸಲುವಾಗಿ ।
ಅಷ್ಟೂ ಕೊಡಲು ಧೈರ್ಯವಿಲ್ಲದಾಗ ಈ । ಬ್ರಹ್ಮಸಾಕ್ಷಾತ್ಕಾರವ ಬೇಡ ಬಂದಿರುವನಲ್ಲಾ ॥ 66

ಸಾಯಿ ಮಹಾರಾಜರು ಸತ್ಯವಚನಿಗಳಿದ್ದು । ಕೈಗಡ ಕೇಳಿದ ಮೊತ್ತವೂ ಚಿಕ್ಕದು ।
ಮನಸಿಗೆನಿಸಿದಾಗ ಕೊಟ್ಟು ನೋಡಬೇಕೆಂದು । ವಿಕಲ್ಪವು ಅಡ್ಡ ಬಂದಿತು ॥ 67

ಐದು ರೂಪಾಯಿಯ ಮಾತೇನು । ಅಷ್ಟನ್ನು ಕೊಡಲೂ ಮನವಿಲ್ಲದವನು ।
ಇಷ್ಟನ್ನೂ ಕೈಯಿಂದ ಬಿಡದವನು । ಲೋಭದ ಪ್ರತಿಮೂರ್ತಿಯೇ ಆಗಿರುವನು ॥ 68

ಬೇರೆ ಯಾವನೋ ಸೀದಾಸಾದಾ ಮನುಷ್ಯನು । ಬಾಬಾರ ಬಗ್ಗೆ ಮಮತೆ ಇದ್ದವನು ।
ಕೈಗಡ ಕೇಳುವ ಈ ಪರಿಯನು । ಕಣ್ಣೆದುರು ಕಂಡು ಸುಮ್ಮನಿರುತಿದ್ದನೇ ॥ 69

ಬ್ರಹ್ಮಾರ್ಥಕ್ಕಾಗೀ ಇಷ್ಟೊಂದು ಹಸಿದವ । ಅರಿಯದಿದ್ದಾನೇ ಈ ಪ್ರಶ್ನದ ಅರ್ಥವ ।
ಧನಮೋಹದಲ್ಲಿ ಮುಳುಗಿದವ । ಅಲ್ಲದೇ ಬೇರೇನಿಲ್ಲೆನಿಸುವದೆನಗೆ ॥ 70

ಸುಮ್ಮನೇ ಕುಳಿತುಕೊಳ್ಳಬೇಕು ಅದೂ ಇಲ್ಲ । ತಿರುಗಿ ಹೋಗುವೆನೆಂದು ಅವಸರ ಮಾಡುವನಲ್ಲ ।
ಬಾಬಾ ಬ್ರಹ್ಮನ ತೋರಿಸಿರಿಲ್ಲಿ । ಎಂದು ಕೇಳುತಿರುವನು ॥ 71

ಬಾಬಾ ಎಂದರು "ಕುಳಿತ ಸ್ಥಳದಲ್ಲಿಯೇ । ಬ್ರಹ್ಮನ ತೋರಿಸಬೇಕೆಂಬುದಕ್ಕಾಗಿಯೇ ।
ಉಪಾಯ ಮಾಡಿದೆ ಇದುವರೆಗೆ । ತಿಳಿಯಲೇ ಇಲ್ಲವೇ ನಿಮಗದು ॥ 72

ಬ್ರಹ್ಮವ ಪಡೆಯಲು ಪಂಚಪ್ರಾಣ । ಪಂಚ ಪಂಚೇಂದ್ರಿಯ ಜ್ಞಾನ ।
ಅಹಂಕಾರ ಬುದ್ಧಿ ಮನ । ಸಮರ್ಪಣ ಮಾಡಬೇಕಾಗುವದು ॥ 73

ಬ್ರಹ್ಮ ಮಾರ್ಗದ ಮಾರ್ಗ ಕಠಿಣವಿರುವದು । ಸಾರಸಗಟ ಎಲ್ಲರಿಗೂ ಸುಲಭದಲಿ ಸಿಗದದು ।
ಅಂಥ ಸಮಯ ಒದಗಿ ಬಂದಾಗ ಅದು । ಎಲ್ಲೋ ಒಬ್ಬ ಭಾಗ್ಯವಂತನಿಗೆ ಲಭಿಸುವದು ॥ 74

ಹಿರಣ್ಯ ಗರ್ಭ ಪದದವರೆಗೆ । ವಿರಕ್ತನಾಗಿರಬೇಕು ಅವೆಲ್ಲ ಉತ್ಕರ್ಷದೆಡೆಗೆ । ಅಂಥವನೇ
ಅಧಿಕಾರಿ ಬ್ರಹ್ಮ ವಿದ್ಯೆಗೆ । ಇನ್ನೆಲ್ಲದರಲ್ಲೂ ಅನಾಸಕ್ತನಿರಬೇಕು ॥ 75

ವಿರಕ್ತಿ ಎಂಬದು ಒಂದಿನಿತೂ ಇರದವಗೆ । ಬ್ರಹ್ಮ ತತ್ವೋಪದೇಶವನು ಅಂಥವನಿಗೆ ।
ಯಾರೇ ಅಶೇಷವಾಗಿ ತಿಳಿಸಿದರೂ ಅವಗೆ । ಯಶವೆಂಬದು ಬಂದೀತೇ ॥ 76

ಅಬಾಧಿತ ಬ್ರಹ್ಮ ಭೋದನ । ಉತ್ತಮಾಧಿಕಾರಿಗೆ ಗ್ರಹಣ ।
ಆದರೂ ಮಧ್ಯಮಾಧಿಕಾರಿ ಜನ । ಪರಂಪರಾಧೀನರಾವಾಗಲೂ ॥ 77

ವಿಹಂಗಮ ಮಾರ್ಗ ಸೇವನೆ ಒಬ್ಬನಿಗೆ । ಪರಂಪರಾ ಸೋಪಾನ ಇನ್ನೊಬ್ಬನಿಗೆ ।
ಆದರೂ ಇಂಥ ಅನಧಿಕಾರಿಗಳಿಗೆ । ಬ್ರಹ್ಮನಿಗಾಗಿ ಬಯಸುವುದು ಸರಿಯಲ್ಲ ॥ 78

ಬಿಟ್ಟು ಆತ್ಮವಿವೇಕವನೊಂದು । ನಿರತಿಶಯ ಪ್ರಾಪ್ತಿ ಸಾಧನವಿರದು ಮತ್ತೊಂದು ।
ಸತ್ಯ ವೇದಾಂತವಚನವಿದು । ಆದರೂ ಎಲ್ಲರಿಗೂ ಅದು ಅಧೀನವಲ್ಲ ॥ 79

ಅಭ್ಯಾಸ ಮತ್ತು ಶ್ರಮವಹಿಸಿಬೇಕಾಗುವದು । ಮೈಮುರಿದು ದುಡಿಯಬೇಕಾಗುವದು ।
ಅಂಥವಗೆ ಗುರುಕೃಪೆಯ ಬೆಳಕು ಕಾಣುವದು । ಮೆಲ್ಲ ಮೆಲ್ಲಗೆ ಆಗ ಅದು ಕೈಗೆ ಸಿಗುವದು ॥ 80

ನಾನೇ ಈಶ್ವರ ನಾನೇ ನಿಯಂತನೆಂದು । ಯಾವಾಗ ಹಿರಣ್ಯಗರ್ಭನಿಗೆ "ಅಹಂತೆ" ಬರುವದು ।
ಆಗ ಸ್ವರೂಪದ ವಿಸ್ಮರಣೆಯಾಗುವದು । ಆದರಿಂದ ವಿಶ್ವನಿರ್ಮಾಣವಾಗುವಧು ॥81

'ಬ್ರಹ್ಮಾಹಮಸ್ಮೀತಿ ಜ್ಞಾನವಾದಾಗ' । ಜ್ಞಾತನು ಸ್ವರೂಪದಲಿ ಲೀನನಾಗುವನಾಗ ।
ವಿಶ್ವ ಭಾಸದ್ಧಾಗುವದು ವಿಸರ್ಜನ ಆಗ । ಶೃತಿ ಹೀಗೆ ಗರ್ಜಿಸಿ ಹೇಳುವದು ॥ 82

ಸ್ವಪ್ರಬೋಧದ ಉತ್ಪತ್ತಿಯಾಗಲು । ಬ್ರಹ್ಮಾಕಾರಂತಃಕರಣ ವೃತ್ತಿ ಬರಲು ।
ಬ್ರಹ್ಮಾಗ್ನಿಯಲಿ ವಿಶ್ವದ ಆಹುತಿ ಕೊಡಲು । ವಿಭೂತಿಯಾಗುವದು ಸೃಷ್ಟಿಯದು ॥ 83

ಜೀವಗಳದೂ ಇದೇ ಸ್ಥಿತಿ । ಆದಾಗ ಭ್ರಮ ನಿವೃತ್ತಿ ।
ರಜ್ಜೂ ಕಿರಣ ಮತ್ತು ಶುಕ್ತಿ । ಅಭಾಸವು ಕೂಡಲೇ ಕಳೆವದು ॥ 84

ಶುಕ್ತ್ಯಜ್ಞಾನವೆಂಬುದೇ ರಜತಭಾನ । ರಜತಜ್ಞಾನವೇ ಶುಕ್ತಿ ಜ್ಞಾನ ।
ಭ್ರಮ ನಿವೃತ್ತಿ ಕಾಲದಲಿ ಶೇಷ್ಯಾವಸಾನ । ಶುಕ್ತಿಕಾ ವಿಜ್ಞಾನವು ಸ್ಪಷ್ಟವಾಗುವದು ॥ 85

ಅನ್ಯೋನ್ಯ-ಮೋಹದ್ದೀ । ಲಕ್ಷಣವಿರಲು ಜ್ಞಾನದೀಪವನು ಬೆಳಗಿಸಲು ।
ಅಜ್ಞಾನಮಲವು ತೊಳೆದುಹೋಗಲು । ಪ್ರತಿಭಾಸವು ಮಾಯವಾಗುವದು ॥ 86

ಸಲ್ಲದ ಜನ್ಮ ಮೃತ್ಯುಗಳ ಬಂಧವಿರುವಾಗ । ಈ ಮೋಕ್ಷನಿರ್ಬಂದವೂ ಏತಕ್ಕೆ ಆಗ ।
ಸಂಬಂಧವೆಂಥದು ವೇದಾಂತಕ್ಕೂ ನಮಗೂ ಎನುವಾಗ । ಈ ಪ್ರಬಂಧವಾದರೂ ಯಾತಕ್ಕೆ ॥ 87

ಬದ್ಧನಿರುವೆ ನಾ ನಿರ್ಮುಕ್ತನಾಗಬೇಕೆನುವ । ದೃಢ ನಿಶ್ಚಯವನು ಹೊಂದಿರುವವ ।
ಅಂಥವನೇ ಇಲ್ಲಿಯ ಅಧಿಕಾರಿ ಇರುವ । ಅತಿ ಅಜ್ಞ ಇಲ್ಲವೇ ತಜ್ಞನು ಯುಕ್ತನಲಿದಕೆ ॥88

ಬದ್ಧನೇ ಇರದಾಗ ಮುಕ್ತಿ ಎಂಥದು । ವಸ್ತು ಸ್ಥಿತಿಯು ಇದೇ ಇರುವದು ।
ಬದ್ಧಮುಕ್ತತೆ ಗುಣಸಂಗದಲ್ಲಿರುವದು । ಇದರ ಪ್ರಚೀತಿ ಎಲ್ಲರಿಗಿದೆ ॥ 89

ಎರಡೆಂಬದರದೇ ಅಭಾವವಿರಲು । ಯಾರಿಗೆ ಯಾರು ಕಟ್ಟಲು ಬಿಡಲು ।
ಯಾರೂ ಬದ್ಧನಿಲ್ಲವೆ ಮುಕ್ತನಿರದಿರಲು । ಅಲ್ಲಿ ದ್ವೈತ ಅದ್ವೈತವೆಂಬುದು ಹೋದ ಮೇಲೆ ॥ 90

ಹಗಲು ಇರುಳು ಎಂಬ ಪ್ರಕಾರಗಳು । ದಿನಕರನು ಕಾರಣನಲ್ಲ ಅವ ಉತ್ಪಾದಿಸಲು ।
ದೃಷ್ಟಿ ದೋಷದ್ದೇ ಈ ವ್ಯವಹಾರವಿರಲು । ದಿವಾಕರನು ಅಲಿಪ್ತನಿರುವ ॥ 91

ನಾನೇ ಕರ್ತನು ನಾನೇ ಭೋಕ್ತ । ಈ ಅಭಿಮಾನವ ಚಿತ್ತದಲಿ ಹಿಡಿಯುತ ।
ಸ್ವರ್ಗನರಕ ಸುಖಾಸುಖಗಳನನುಭವಿಸುತ್ತ । ವಾಸನಾಸಕ್ತತೆಯು ಬೆಳೆಯುವದು ॥ 92

ನಿತ್ಯ ಪುರಾಣ ಶಾಶ್ವತವು ಆತ್ಮ । ಜನ್ಮ ಮರಣಾದಿ ವಿಕಾರ ವರ್ಜಿತ ।
ಓಂಕಾರಾಕ್ಷರ ಪ್ರತೀಕವಂತ । ಅನಾದ್ಯನಂತ ನಿತ್ಯವೂ ಅದು ॥ 93

ಯಾವನಿಗೆ ಶರೀರ ಮಾತ್ರಾತ್ಮ ದೃಷ್ಟಿ ಇರುವದು । ತಾನು ಬೇರೆ ಸೃಷ್ಟಿಯೇ ಬೇರೆ ಎಂಬುದು ।
ಅಂಥವನಿಗೆ ಕಷ್ಟ ಬಟ್ಟರೂ ಆತ್ಮಜ್ಞಾನವೆಂಬದು । ಎಂದಿಗೂ ಪರಾಮರ್ಶವಾಗದು ॥ 94

ವಾಣಿ ಆದಿ ಸರ್ವೇಂದ್ರಿಯಗಳ ಲಯ । ಮಾಡಲು ಹಿಡಿಯಿರಿ ಮನದಿ ದೃಢ ನಿಶ್ಚಯ
ಮಾಡಿ ಆ ಮನದ ಕ್ಷಯ । ಬುದ್ಧಿಯ ಮಾರ್ಗ ಹಿಡಿಯಬೇಕು ॥ 95

ಪ್ರಕಾಶ ಸ್ವರೂಪವಾದ ಜ್ಞಾನ ಬುದ್ಧಿಯನು । ಅಲ್ಲಿ ಹಚ್ಚಿ ಮನದ ಸಮಾಧಿಯನು ।
ಮನಸಹಿತ ಸರ್ವೇಂದ್ರಿಯ ಸಮೃದ್ಧಿಯನು । ಒಂದು ಬುದ್ಧಿಯ ಸ್ವಾಧೀನವಾಗಲಿ ॥ 96

ಘಟದ ಮೂಲವಸ್ತು ಮೃತ್ತಿಕೆ । ಹಾಗೆ ಬುದ್ಧಿಯು ಇಂದ್ರಿಯಗಳಿಗೆ ।
ನಿತ್ಯ ಸ್ಥಿತಿ ಅದೇ ಅವುಗಳಿಗೆ । ಎಂಬ ವ್ಯಾಪ್ತಿ ಬುದ್ಧಿಯದು ॥ 97

ಬುದ್ಧಿಯು ತನ್ನ ವ್ಯಾಪಕತನವನ್ನು । ಹರಡಿ ವ್ಯಾಪಿಸುವದು ಮನಾದಿ ಎಲ್ಲ ಇಂದ್ರಿಯಗಳನು ।
ಮಹತ್ತತ್ವದಲಿ ನಿಲಿಸಬೇಕು ಬುದ್ದಿಯನು । ಮಹತ್ತನು ಆತ್ಮದಲಿ ಲೀನಗೊಳಿಸಬೇಕು ॥ 98

ಹೀಗೆಯೇ ಮಾಡಲು ಸಮಾಹಾರ । ಆಗುವದು ಆತ್ಮ ಸ್ವರೂಪದ ನಿರ್ಧಾರ ।
ಆಮೇಲೆ ರಜತ-ಮೃಗಜಲ-ಸರ್ಪಾಕಾರ । ದೃಗ್ ವಿಕಾರಗಳು ಮಾತ್ರ ಎಂದಾಗುವದು ॥ 99

ಅದುವೇ ಈ ವಿಶೇಷ ಅಶೇಷ ರಹಿತವು । ಜನ್ಮಾಪಕ್ಷಯ ವಿಸರ್ಜಿತವು ।
ಯದ್ದರ್ಶನವಿಲ್ಲದೆ ಇಲ್ಲ ಸ್ವಹಿತವು । ಸಾಧುಗಳಿದ ನುಡಿವರು ಸತತ ॥ 100

ಕಾರ್ಯಮಾತ್ರಕ್ಕೆ ಇರುವದು ಕಾರಣ । ಆತ್ಮ ಸ್ವಯಂಭೂ ನಿಷ್ಕಾರಣ ।
ಪುರ್ವ್ಯಾಪಿನವ ಎಂಬದು ಪುರಾಣ । ಬುದ್ಧಿ ಹೀನವದು ಸ್ವಭಾವದಲಿ ॥ 101

ಆಕಾಶದಂತೆ ಅವಿಚ್ಛಿನ್ನ । ಜನ್ಮವಿನಾಶ ವಿಲಕ್ಷಣ ।
'ಓಂ ಪ್ರಣವವೇ' ಯಾರ ಆಲಂಬನ । ನಿರಾಲಂಬನ ನಿಷ್ಕಲವನ ॥ 102

ಪ್ರರಬ್ರಹ್ಮವದು ಜ್ಞಾತವ್ಯ । ಅಪರ ಬ್ರಹ್ಮವದು ಪ್ರಾಪ್ತವ್ಯ ।
ಓಂ ತತ್ವತ್ರೀಕ ಧ್ಯಾತವ್ಯ । ಉಪಾಸಿತವ್ಯ ಸರ್ವದಾ ॥ 103

ಯಾವುದು ಸರ್ವ ವೇದಗಳ ಸಾರ । ಪ್ರಣವ ಸ್ವರೂಪವದೇ ಓಂಕಾರ ।
ಅದರದೇ ಸಾರ್ಥ ನಿರ್ಧಾರ । ಅದೇ ವಿಚಾರ ಮಹಾವಾಕ್ಯದ್ದು ॥ 104

ವೇದಗಳನಾರು ಪ್ರತಿಪಾದಿಸುವರು । ಯಾವುದನು ಅತಿ ಪ್ರಯತ್ನದಿ ಜನ ಸಂಪಾದಿಸುವರು ।
ಯಾವುದಕ್ಕಾಗಿ ಬ್ರಹ್ಮಚರ್ಯವ ಆಚರಿಸುವರು । ಓಂ ಪದವೆನ್ನುವರು ಅದಕ್ಕೇ ॥105

ಇರಲಿ ಆ ಪದದ ಆ ಕ್ರಮ । ಮಾಡಹೋಗಲು ಇರುವದು ದುರ್ಗಮ ।
ಆದರೂ ಅಭ್ಯಾಸಿಗಳಿಗೆ ಅದು ಸುಗಮ । ಪರಮ ಗುರು ಕೃಪೆಯಾಗಲು ॥ 106

ಯಾವುದು ಇಂದ್ರಿಯದೊಳಗಣ ಸ್ಥೂಳ ಪರಮ । ಅಲ್ಲಿಂದ ಹಿಡಿಯಲು ಅನುಕ್ರಮ ।
ಆದರಿಸಲು ಸೂಕ್ಷ್ಮ ತಾರತಮ್ಯ ಕ್ರಮ । ಅವಿಶ್ರಮವಾಗಿ ಸಾಧಕಗೆ ಸಾಧಿಸುವದು ॥ 107

ಅದೇ ಈ ಓಂ ಶಬ್ದ ವಾಕ್ಯ ಅಕ್ಷರ । ಸರ್ವತಪಗಳದ್ದೇ ಸಾರ ।
ಉಚ್ಚಾರ ಮಾತ್ರದಿಂದ ಸ್ಫುರಿಸುವದು ಅರ್ಥಸಾರ । ಆವರ್ತನದಿಂದ ಸಾಕ್ಷಾತ್ಕಾರ ॥ 108

ಸರ್ವವ್ಯಾಪಿಯಾದ ಚೈತನ್ಯ । ಬುದ್ಧಿ ಕ್ಷಯ ವಿಕಾರ ಶೂನ್ಯ ।
ಇಂಥ ಆತ್ಮವನು ತಿಳಿದವನೇ ಧನ್ಯ । ಅನನ್ಯ ಭಕ್ತನವ ಸದ್ಗುರುವಿಗೆ ॥ 109

ಅಧ್ಯಾತ್ಮ-ಅಧಿಭೂತ-ಅಧಿದೈವ । ತ್ರಿವಿಧ ತಾಪಗಳಲಿ ಬೆಂದಿರುವ ಸದೈವ ।
ಅವರಿಗಿದ ಭೋಗಿಸಲು ಎಲ್ಲಿದೆ ಸುದೈವ । ಸಂತರಿಗೆ ಮಾತ್ರ ಈ ವೈಭವ ಲಭ್ಯ ॥ 110

ಅವಿದ್ಯೆಯಿಂದ ಹುಟ್ಟಿದ ಸಂಸ್ಕೃತಿ । ಅದರಿಂದಾಗಲು ನಿವೃತ್ತಿ ।
ಸಾಧನವೀ ಬ್ರಹ್ಮಾತ್ಮೈಕ್ಯ ವೃತ್ತಿ । ಅದರ ಪ್ರಾಪ್ತಿಯು ಇಲ್ಲಿದೆ ॥ 111

ವಿಷಯ ಕಲ್ಪನಾ ಶೂನ್ಯ ಸ್ಥಿತಿ । ಅಹಂ ಬ್ರಹ್ಮಾಸ್ಮೀ ಇತಿ ವೃತ್ತಿ ।
ಈ ಮಹಾವಾಕ್ಯದ ಆವೃತ್ತಿ । ಬುದ್ಧಿ ಪ್ರವೃತ್ತಿಯಾದಾಗ ॥ 112

ಗುರುವಚನಶಾಸ್ತ್ರ ಪ್ರತೀತಿ ಪಡೆದಾಗ । ಅಂತರ್ಬಾಹ್ಯ ಕರಣ ವೃತ್ತಿಗಳಾಗ ।
ಮನಸಹಿತವಾಗಿ ಉಪರತಿಯ ಪಡೆದಾಗ । ಆತ್ಮ ಸಂವಿತ್ತಿಯು ಲಭಿಸುವದು ॥ 113

ಆಗಲೇ ಸಮ್ಯಗ್ದರ್ಶನ ಪ್ರಾಪ್ತಿ । ವಿಷಯಾರ್ಥಾದಿ ಜಡ ನಿವೃತ್ತಿ ।
ಹರಿಯುವವು ಅವಿದ್ಯಾದಿ ಹೃದಯಗ್ರಂಥಿ । ಅವ್ಯಕ್ತದಲಿ ಪ್ರವಿಷ್ಟರಾಗುವದು ॥ 114

ಕಿರಣದಲ್ಲಿಯ ಒಂದು ಅತಿ ಸೂಕ್ಷ್ಮ ಕಣ । ಅದಕ್ಕಿಂತಲೂ ಸೂಕ್ಷ್ಮ ಪ್ರಮಾಣ ।
ಆ ಅಣುವಿಗಿಂತಲೂ ಪರಮಾಣು ಪ್ರಮಾಣ । ಆತ್ಮಾನುಮಾನವು ನಿರ್ಧಾರ ॥ 115

ದೊಡ್ಡದರಲ್ಲಿ ದೊಡ್ಡದೆಂದರೆ ಬ್ರಹ್ಮಾಂಡವಿರವದು । ಆತ್ಮವು ಅದಕಿಂತ ದೊಡ್ಡದು ।
ಆದರೂ ಇದೆಲ್ಲ ಸಾಪೇಕ್ಷ ಪ್ರಮಾಣವಿದ್ದು । ಆತ್ಮವು ಪ್ರಮಾಣವ ಮೀರಿರುವದು ॥ 116

ಸೂಕ್ಷ್ಮತ್ವದಲಿ 'ಅಣೋರಣೀಯಾನ' । ಮಹತ್ತಿನಲಿ ಮಹತೋಮಹೀಯಾನ ।
ಈ ನಾಮ ರೂಪಾದಿ ಉಪಾಧಿಗಳಿಂದದನ । ಕರೆದರೂ ಆತ್ಮವು ಪರಿಪೂರ್ಣ ನಿರುಪಾದಿಕ ॥ 117

ಆತ್ಮಕ್ಕೆ ಜನನ ಮರಣಗಳಿಲ್ಲ । ಮೂಲ ಕಾರಣವೂ ಅದಕ್ಕಿಲ್ಲ ।
ಅಜ-ನಿತ್ಯ-ಶಾಶ್ವತ- ಪುರಾಣವೆಂದೆಲ್ಲ । ಸಹಜ ನಿರ್ಧಾರವೂ ಸುಲಭವಲ್ಲ ॥ 118

ಓಂಕಾರ ಪ್ರತೀಕವಾದ ಬ್ರಹ । ಅದೇ ಅದರ ಸ್ವರೂಪ ಪರಮ ।
ನಿಗಮಗಳಿಗೂ ದುರ್ಗಮ । ಅದು ಎಲ್ಲರಿಗೂ ಸುಲಭ್ಯವಾದೀತೆ ॥ 119

ಯಾವುದನು ನಿರ್ಧರಿಸುತ ದಣಿದವು ವೇದಗಳು । ವನವಾಸಿಗಳಾದರು ತಪಸ್ವಿಗಳು ।
ಕೈಯ್ಯೂರಿದವು ಉಪನಿಷತ್ತುಗಳು । ಯಾರಿಗೂ ಅದನರಿಯಲಾಗಿಲ್ಲ ॥ 120

ಆತ್ಮ ಸ್ವರೂಪಕ್ಕೆ ತಲುಪಬೇಕಾದರೆ । ಅಭೇದದರ್ಶಿಆಚಾರ್ಯನಲ್ಲದೆ ಬೇರೆ ।
ಇರುತಿರಲು ಅವರು ಎಂಥವರೇ । ಆ ತಾರ್ಕಿಕರಿಗಲ್ಲಿ ಪ್ರವೇಶವಿಲ್ಲ ॥ 121

ಕೇವಲ ತಾರ್ಕಿಕರಿಗೆ ಅಲ್ಲಿ ಸ್ಥಳವಿರದು । ಅವರು ಭ್ರಮೆಗೊಂಡು ಗರಗರನೆ ತಿರುಗುವುದು ।
ಆಗದು ಆಚಾರ್ಯರ ಹೊರತು ಇತರರದು । ತತ್ವ ಬುದ್ಧಿ ಸ್ಥಿರವಾಗದು ॥ 122

ಸ್ವಬುದ್ಧಿ ಕಲ್ಪನೆಯ ಅನಂತ ನಕ್ಷತ್ರಗಳು । ತಪ್ಪಿಸಲಾರವು ತಿರುಗುವುದ ಎಂಬತ್ನಾಲ್ಕುಲಕ್ಷ ಸಲಯೋನಿಗಳು ।
ಆಗಮ ಆಚಾರ್ಯರೆಂದು ಒಬ್ಬನೇ ಇರಲು । ತಮದ ಲವಲೇಶವೂ ಉಳಿಯದು ॥ 123

ಇತತರಿಗೆ ಬಹು ಕಷ್ಟದಿಂದ ಸಾಧಿಸದಿದ್ದದ್ದು । ಅದೇ ಅಲ್ಪಯಾಸದಿಂದಲೇ ಸಾಧಿಸುವದು ।
ಅದಕೆ ಸದ್ಗುರುವಿನ ಸೆರಗು ಬಿಡದೆ ದೃಢವಾಗಿ ಹಿಡಿಯುವುದು । ಅಂಥವರಿಗೆ ಸದ್ವಿದ್ಯೆ ಪ್ರಕಟವಾಗುವುದು ॥124

ಯಾವಾಗ ಸಕಾರ್ಯಅವಿದ್ಯೆಯು ಕೊನೆಗೊಳ್ಳುವುದು । ಆಗ ಸಚ್ಚಿದಾನಂದ ಸ್ವರೂಪವು
ಸ್ಥಿರವಾಗುವುದು । ಸ್ವರೂಪ ಸ್ಥಿತಿಯು ಉಂಟಾಗುವುದು । ಅದಕ್ಕೆ ಇನ್ನೊಂದು ಹೆಸರು ಮೋಕ್ಷವೆಂದು ॥ 125

ಇದೇ ಜೀವಿಗಳ ಅಂತ್ಯತಿಕ ಅಭೀಷ್ಟ । ಯಾವುದಕ್ಕಾಗಿ ಪಡುವರು ಬಹಳ ಕಷ್ಟ ।
ಇರುವರು ನಿರಂತರ ಯೋಗ ನಿಷ್ಠ । ಅಂತರ್ನಿಷ್ಠ ಯಾವಾಗಲೂ ॥ 126

ಸ್ವರೂಪದಲ್ಲಿ ಚಂಚಲತೆ ಉಂಟಾದಾಗ । ಏಳುವವು ವಿಷಯಗಳ ತರಂಗಳಾಗ ।
ಸ್ವರೂಪದಲಿ ನಿಶ್ಚಲವಾದಾಗ । ವಿಷಯಗಳು ವಿಕಲತೆಯ ಹೊಂದುವವು ॥ 127

ಸ್ವರೂಪದಿಂದ ಮುಖ ತಿರುವಿದಾಗ್ಯೆ । ಯಾವಾಗಲೂ ವಿಷಯಗಳು ಎದುರು ಅವಗೆ ।
ಅದೇ ಸ್ವರೂಪದತ್ತ ಮುಖ ಮಾಡಿಗಾಗ್ಯೆ। ವಿಷಯಗಳು ಮುಖ ತಿರುವಿ ಓಡುವವು ॥128

ಮೋಕ್ಷ ಮಾತ್ರದ್ದೇ ಇಚ್ಛೆ ಹಿಡಿದರೆ । ಅನ್ಯದ ಬಗ್ಗೆ ನಿರೀಚ್ಛನಾಗಿದ್ದರೆ ।
ಇಹ ಪರತ್ರಗಳ ತೃಷೆ ಲವಲೇಶವಿಲ್ಲದಿರೆ । ಅವನೇ ಮೋಕ್ಷಕ್ಕೆ ಅಧಿಕಾರಿ ॥ 129

ಕೊರತೆ ಇರಲು ಇದರಲಿ ಒಂದು ಲಕ್ಷಣದ್ದೂ । ಅವ ಮುಮುಕ್ಷು ಅಲ್ಲವೆಂದು ಸ್ಪಷ್ಟ ತಿಳಿಯುವುದು ।
ಬರೀ ಮುಮುಕ್ಷುತನದ ಸೋಗು ಮಾತ್ರ ಅದು । ಒಕ್ಕಣ್ಣನು ಚೆಲುವನೆಂದು ತಿಳಕೊಳ್ಳವಂತೆ ॥ 130

ಅಹಂಕಾರವು ತೊಲಗದೆ । ಲೋಭದ ನಿರ್ಮೂಲನೆಯಾಗದೆ ।
ಮನವು ವಾಸನಾರಹಿತವಾಗದೇ । ಬ್ರಹ್ಮಜ್ಞಾನವು ಬಿಂಬಿಸದು ॥ 131

ದೇಹಾತ್ಮ ಬುದ್ಧಿ ಎಂಬುದೇ ಭ್ರಾಂತಿ । ಬಂಧನಕೆ ಕಾರಣವೇ ಆಸಕ್ತಿ ।
ಬಿಟ್ಟಾಗ ವಿಷಯ ಕಲ್ಪನೆಯ ಸ್ಫೂರ್ತಿ । ಬ್ರಹ್ಮ ಪ್ರಾಪ್ತಿಯಾಗುವುದಾಗ ॥ 132

ಕಾಣುವುದು ನಿರ್ವಿಶೇಷ ಪರಬ್ರಹ್ಮ । ಇರುವುದದು ಬಲು ಕಠಿಣ ಕರ್ಮ ।
ಸವಿಶೇಷ ನಿರೂಪಣೆವೇ ವರ್ಮ । ಇದೇ ಧರ್ಮ ಧೀಮಂತರಿಗೆ ॥ 133

ಆತ್ಮವು ಎಲ್ಲರಲ್ಲಿಯೂ ಗೂಢವಾಗಿರುವುದು । ವೇದಾಂತಿಗಳಿಗೆ ಈ ತತ್ವ ತಿಳಿದಿರುವುದು ।
ಆದರೂ ಎಲ್ಲೆಡೆಗೆ ಅನುಭವಕ್ಕೆ ಬರುವುದು । ಈ ಪ್ರತೀತಿಯು ಯಾವುದರಿಂದ ॥ 134

ಮೊದಲಿರಬೇಕು ಚಿತ್ತಶುದ್ದಿ । ಅದರಲ್ಲೂ ಇರಬೇಕು ಕುಶಾಗ್ರಬುದ್ಧಿ ।
ಹಾಗಿದ್ದಾಗ ಪ್ರಕಟವಾಗುವುದು ತ್ರಿಶುದ್ದಿ । ಕೃಪಾ ಸವೃದ್ಧಿ ತಾನಾಗಿಯೇ ॥ 135

ಆತ್ಮವು ನಿತ್ಯ ಅವಿಕೃತ । ಆತ್ಮವಿದನಿರುವನು ಶೋಕರಹಿತ ।
ಅವನೇ ಧೈರ್ಯವಂತ ಧೀಮಂತ । ಭವನಿರ್ಮುಕ್ತನು ಯಾವಾಗಲೂ ॥ 136

ಇಲ್ಲಿ ನಡೆಯದು ಪ್ರವಚನ ಯುಕ್ತಿ । ಅಥವಾ ಗ್ರಂಥಾರ್ಥಧಾರಣೆ ಶಕ್ತಿ ।
ಇಲ್ಲವೇ ವೇದ-ಶ್ರುತಿಗಳ ವ್ಯುತ್ಪತ್ತಿ । ಒಂದೂ ಉಪಯೋಗಕ್ಕೆ ಬಾರದು ॥ 137

ಆತ್ಮವು ನಿತ್ಯ ಅವಿಕೃತ । ಶರೀರವು ಅನಿತ್ಯ ಅನವಸ್ಥಿತ ।
ಇದ ತಿಳಿದು ಸಾಧಿಸುವವನು ಸ್ವಹಿತ । ವಿಹಿತಾವಿಹಿತ ದಕ್ಷನವನು ॥ 138

ಆತ್ಮಜ್ಞಾನಿಯು ಸದಾ ನಿರ್ಭಯ । ಒಬ್ಬನೇ ಒಬ್ಬನವ ಅದ್ವಿತೀಯ ।
ಇನ್ನೊಂದೆಂಬದರದಿಲ್ಲ ವ್ಯತ್ಯಯ । ಶೋಕನಾಶವು ನಿಶ್ಚಯವಲ್ಲಿ ॥ 139

ಆತ್ಮವು ದುರ್ವಿಜ್ಞೇಯವಿರುವುದು । ಪ್ರವಚನ ಶ್ರವಣದಿಂದದು ತಿಳಿಯದು ।
ಕೇವಲ ಜಾಣತನವೇನು ಮಾಡುವುದು । ಆದರೂ ಸುವಿಜ್ಞೇಯ ಉಪಾಯದಿಂದ ॥ 140

ಯಾವನು ತಾನೇ ಎಲ್ಲದರಲಿ ನಿಷ್ಕಾಮನು । ಆತ್ಮ ಜ್ಞಾನೈಕ ಮಾತ್ರದಲ್ಲಿ ಕಾಮನೆ ಇರುವವನು ।
ಇಂಥ ಆತ್ಮವನ್ನೇ ಸತತ ನೆನೆಯುವಂಥವನು । ಅಂಥವನಿಗೆ ಪರಮಲಾಭವಿದರದು ॥ 141

ಶ್ರವಣಾದಿಕಾಲದಲ್ಲಿ 'ಅವನೇ ನಾನು' । ಹೀಗೆ ಅಭೇಧ ದೃಷ್ಟಿಯಲಿ ನೋಡುವವನು ।
ಇದೇ ಅನುಸಂಧಾನದಲಿ ಇರುವವನು । ಆತ್ಮ ಅವನಿಗೆ ಅನುಗ್ರಹಿಸುವುದು ॥ 142

ಯಾವಾಗಲೂ ದುಶ್ಚರಿತಾಸಕ್ತ । ಅಸ್ಥಿರ ಮತ್ತು ಅಶಾಂತ ।
ಇಲ್ಲವಗೆ ಏಕಾಗ್ರಚಿತ್ತ । ಅಂಥಾ ಜ್ಞಾನಿಗೂ ಅಪ್ರಾಪ್ಯವಿದು ॥ 143

ಶ್ರುತಿ ಸ್ಮೃತಿಗಳಿಂದ ಪ್ರತಿಪಾದಿತ । ಅವಿಹಿತವ ಬಿಟ್ಟು ಮಾಡುವ ವಿಹಿತ ।
ಯಾವದಲಿ ಯಾವಾಗಲೂ ಶಾಂತಚಿತ್ತ । ಅಂಥವನಿಗೆ ಆತ್ಮವು ಅಂಕಿತವು ॥ 144

ದುಶ್ಚರಿತದಿಂದ ದೂರವಿರುವನು । ಆಚಾರ್ಯಗುರು ಪದಗಳಲ್ಲಿ ವಿನೀತನು ।
ಫಲದ ಇಚ್ಛೆಯ ಹಿಡಿಯದವನು । ಅವನೀಗೆ ಆ ಆತ್ಮವು ಪ್ರಾಪ್ತವಾಗುವುದಿಲ್ಲ ॥ 145

ವಿಷಯಗಳಲ್ಲಿ ನಿಷ್ಕಾಮನಾಗದೇ । ಕೇವಲ ಆತ್ಮಕಾಮನಾಗದೇ ।
ಎಲ್ಲ ವೃತ್ತಿಗಳಿಗೆ ವಿರಾಮವೀಯದೇ । ಆತ್ಮರಾಮನು ದುರ್ಗಮ ॥ 146

ಜಿಜ್ಞಾಸುಗಳ ತಪನೋಡಿ । ಸ್ವತಃ ಆತ್ಮಕ್ಕೆ ದಯೆಮಾಡಿ ।
ಆಗ ಪ್ರಕಟವಾಗುವುದು ನಿಜಸ್ವರೂಪದಿ । ಗುರುವಿಲ್ಲದೆ ಇದು ಸುಲಭವಲ್ಲ ॥ 147

ಅದಕೆ ಸ್ವರೂಪ ಪ್ರಾಪ್ತ್ಯರ್ಥ ಸಾಧಕನು । ಮಾಡಬೇಕು ಶ್ರವಣ ಮನನಾದಿಗಳನ್ನು ।
ಅಭೇದಭಾವಾನುಸಂಧಾನವಿರಲು । ಸುಖವಾಗಿ ಆತ್ಮ ಲಾಭವಾಗದು ॥ 148

ಈ ಅನುಪಮ ಪ್ರಪಂಚವೆಲ್ಲ । ಹರಡಿದೆ ಅಜ್ಞಾನ ಮೂಲಕವಾಗಿ ಇಷ್ಟೆಲ್ಲಾ ।
ಜ್ಞಾನವಿಲ್ಲದಲ್ಲಿ ಮೋಕ್ಷಕ್ಕೆ ಸ್ಥಳವಿಲ್ಲ । ಎಂಬುದನಷ್ಟು ತಿಳಿಯಬೇಕು ॥ 149

ಅನುಮಾನ ಮತ್ತು ಯುಕ್ತಿ ಪ್ರಭಾವ । ಇದಂತೂ ಶಾಸ್ತ್ರದ ಅನುಭವ ।
ಪ್ರಪಂಚವು ನಶಿಸಿದಾಗಲೇ ಜ್ಞಾನೋದ್ಭವ । ಅನ್ಯತಾ ಅಸಂಭವ ॥ 150

ಮಹಾತ್ಮನೇ ಇರಲಿ ಅಥವಾ ಪಾಪಾತ್ಮ । ಜೀವಾತ್ಮನವನೇ ಪರಮಾತ್ಮ ।
ಇದ ತಿಳಿದು ನಡೆಯುವವನೇ ಮಹಾತ್ಮ । ಅಭೇದಾತ್ಮನು ಅವನೊಬ್ಬ ॥ 151

ಬ್ರಹ್ಮಾತ್ಮೈಕತ್ವ ವಿಜ್ಞಾನ । ಇದೇ ಜ್ಞಾನದ ಪರ್ಯವಸಾನ ।
ಒಮ್ಮೆ ಆದರೆ ಆತ್ಮಜ್ಞಾನ । ಸಮಸ್ತ ಅಜ್ಞಾನವು ಕಳೆಯುವುದು ॥ 152

ಸಂಪೂರ್ಣ ಆತ್ಮಜ್ಞಾನವಾದಾಗ । ಉಳಿಯದಿಷ್ಟೂ ಅಸ್ಥಿರತೆ ಆಗ
ಎಲ್ಲ ವಸ್ತು ಜಾತವೇ ಕರಗತಲವಾಗ । ಸಾಕ್ಷಾತ್ಕಾರಗುವುದು ಆವಗೆ ॥ 153

ಆತ್ಮವಿಜ್ಞಾನದ ಫಲವಾದ । ಅವಿಕಲ ಸಂಸಾರ ನಿವೃತ್ತಿಯಾದಾಗ ।
ಪರಮಾನಂದ ಪ್ರಾಪ್ತಿಯಾಗುವದಾಗ । ಅವನಿಗೆ ಮೋಕ್ಷದ ಸುಕಾಲ ॥ 154

ಆತ್ಮವು ಸೂಕ್ಷ್ಮಕಿಂತ ಸೂಕ್ಷ್ಮತರ । ಮಹತ್ತಿಗಿಂತ ಮಹತ್ತರ ।
ಇದಂತೂ ಸರ್ವವ್ಯಾಪಕತೆಯ ಪ್ರಕಾರ । ದೃಷ್ಟಿಗೋಚರವಾಗಿಸಲಿದ ॥ 155

ಅವನು ಸೂಕ್ಷ್ಮನೂ ಅಲ್ಲ ಮಹತ್ತೂ ಅಲ್ಲ । ತರತಮಭಾವದಲ್ಲಿ ಕಲ್ಪನೆಯಲ್ಲ ।
ಅವನಂತೂ ಆ ಬ್ರಹ್ಮಸ್ತಂಭದವರಿಗೆಲ್ಲ । ಪರಿ ಪೂರಿತನಿರುವ ಚರಾಚರಗಳಲ್ಲಿ ॥ 156

ಅದೇ ಈ ಅನೀರ್ವಚನೀಯ ಸತ್ತಾಗಿರಲು । ಬುದ್ಧಿಯಲದನು ಸಂಕಲಿತವಾಗಿಸಲು ।
ಮಾತಿನ ಮಾರ್ಯಾದೆಯನು ಹಾಕಲು । ಅವನು ಅಮರ್ಯಾದನು ತಾನೇ ॥ 157

ಕೇವಲ ಬುದ್ಧಿ ವೈಭವದಿಂದಾಗೇ । ನಿಜವಾದ ಮರ್ಮವು ಸಿಗುದದು ಕೈಗೆ ।
ಸಾಧುಸದ್ಗುರು ಸಂತರ ಸಂಗವಿದ್ದಾಗೆ । ಸೇವಾ ಅನುರಾಗದಿಂದವನ ಪ್ರಾಪ್ತಿ ॥ 158

ಬ್ರಹ್ಮ ನಿರೂಪಣವೇನು ಅಲ್ಪವಿದೆ । ಪುರಾಣ ಪುಸ್ತಕಗಳಲಿ ಬೇಕಾದಷ್ಟಿದೆ।
ಆದರೂ ಸದ್ಗುರುವಿನ ಕೃಪೆಯಾಗದೇ । ಕಲ್ಪಾಂತದಲ್ಲೂ ಕೈಗೆ ಸಿಗದದು ॥ 159

ನಿತ್ಯ ನೈಯತ್ತಿಕ ಕರ್ಮದ ಅಭಾವವಿರುವಾಗ್ಯೆ । ಶುದ್ಧ ಸಂಸ್ಕಾರಯುಕ್ತ ಮನವಿಲ್ಲದಿರುವಾಗ್ಯೆ।
ಬ್ರಹ್ಮಾನುಭವವಿಲ್ಲ ಅದುವರೆಗೆ । ಒಂದಿಷ್ಟಾದರೂ ದೊರಕದು ॥ 160

ಬ್ರಹ್ಮವು ಮಾತ್ರ ನಿತ್ಯ । ಅದ ಬಿಟ್ಟು ಉಳಿದದ್ದೆಲ್ಲ ಅನಿತ್ಯ ।
ದೃಶ್ಯಜಾತಗಳಲ್ಲ ಶಾಶ್ವತ । ಸತ್ಯ ಸತ್ಯ ತ್ರಿವಾರವಿದು ॥ 161

ಬ್ರಹ್ಮನ ಬಗ್ಗೆ ಹೇಳುವ ವಕ್ತಾರರು । ಅಂತೆಯೇ ನಿರ್ಮಲ ಮನಸಿನ ಕೇಳುಗರು ।
ಅಲ್ಲದೇವತ್ಸಲ್ಯ, ಅನುಭವಶೀಲರಾದವರು ಗುರು । ಇವರೆಲ್ಲ ಸಿಗುವುದು ಅಪರೂಪ । 162

ದಾರಿಯ ಮೇಲೆ ಬಿದ್ದಿದಿಯೇಬ್ರಹ್ಮವೇನಾದರೂ । ಕೆಲವರೂ ಗಿರಿಕಂದರಗಳಲ್ಲಿ ಅಡಗಿದರೂ ।
ಹಲವರು ಯಮನಿಯಮಗಳಲ್ಲಿ ತೊಡಗಿರುವರು । ಧ್ಯಾನ ಧಾರಣಾದಿ ಮಾಡುವರು ॥ 163

ಅಂಥವರಿಗೂ ಗುರು ಕೃಪೆಯ ಹೊರತು । ಬ್ರಹ್ಮರೂಪವು ಕಾಣದಂತಾಯಿತು ।
ಅಂದಾಗ ನಿನ್ನಂಥ ಲೋಭ ಸ್ವರೂಪನಿಗಂತೂ । ಹೇಗೆ ಸಿಕ್ಕಿತ್ತೋನನ್ನಪ್ಪಾ ॥ 164

ಹೆಚ್ಚಿನ ದ್ರವ್ಯಾಸಕ್ತಿ ಇರುವವನಿಗೆ । ಬ್ರಹ್ಮನ ಪ್ರಾಪ್ತಿಯು ಅದು ಹೇಗೆ ।
ಅದೀತು ಕಲ್ಪಾಂತದವರೆಗೆ । ನಿಶ್ಚಿತವಾಗಿ ಇದ ತಿಳಿದಿರು ॥ 165

ಮಾಡುತ್ತಿರಲು ಪರಮಾರ್ಥಶ್ರವಣ। ಮನದಿ ನಡೆದಿರುವುದು ವಿಷಯದ್ದೆ ಚಿಂತನ ।
ಮತ್ತು ಪ್ರಪಂಚದ ನಿಧಿಧ್ಯಾಸನ । ಅಂದ ಮೇಲೆ ಸಾಕ್ಷಾತ್ಕಾರವೂ ಅದರಂತೇಯೇ ॥ 166

ಮಲ-ವಿಕ್ಷೇಪ ಮತ್ತು ಅವರಣ । ಹೀಗೆ ತ್ರಿದೋಷಯುಕ್ತ ಅಂತಃಕರಣ ।
ನಿಷ್ಕಾಮಕರ್ಮದಿಂದ ಮಲ ನಿರ್ಮೂಲನ । ವಿಕ್ಷೇಪಕ್ಷಾಲನಕೆ ಉಪಾಸನೆ ॥ 167

ಸ್ವಕರ್ಮ ಮತ್ತು ಉಪಾಸನೆ ಮಾಡುತ್ತಿರಲು । ಕರ್ತನ ಚಿತ್ತಕ್ಕೆ ಪರಿಪಕ್ವತೆ ಬರಲು ।
ಮಲ ವಿಕ್ಷೇಪನಿರ್ಮೂಲನಾವಾಗಲು । ಆವರಣ ಶೇಷತೆ ಉಳಿವದು ॥ 168

ಅದೇ ಈ ಸರ್ವಾನರ್ಥಬೀಜ ಆವರಣ । ನಶಿಸಿ ಹೋಗುವುದು ಪ್ರಕಟವಾಗಲೂ ಜ್ಞಾನ।
ರವಿಯಾಗಲು ಪ್ರಕಾಶ ಮಾನ । ಕತ್ತಲೆಯು ದೂರಾಗುವ ತೆರದಿ ॥ 169

ಸತ್ಯ ಜ್ಞಾನಾನಂದಾದಿ ಲಕ್ಷಣಗಳಲಿ । ವೇದಾಂತವಿಚಕ್ಷಣರು ಬಣ್ಣಿಸಹರು ವಿಶೇಷದಲಿ ।
ಆ ಬ್ರಹ್ಮನು ತಾನೇ ತಾನಾಗುತಲಿ । ಆ ಜ್ಞಾನವು ಪ್ರಭೆಯ ಬೀರುವುದು ॥ 170

ಸ್ವಲ್ಪ ಕತ್ತಲು ಸ್ವಲ್ಪ ಬೆಳದಿಂಗಳಿರಲು । ಒಬ್ಬನೇ ದಾರಿಕಾರನು ಅಡವಿಯಲಿ ಹೊರಟಿರಲು ।
ಹೆದರಿದ ಕಳ್ಳನೆಂದು ತಿಳಿದು ಕೊರುಡನು ಕಾಣಲು । ಅದರಿಂದಲ್ಲಿಯೇ ಅಡಗಿ ಕುಳಿತ ॥ 171

ಹತ್ತಿರ ದುಡ್ಡಿದೆ ನಾನಿರುವೆ ಒಬ್ಬವ । ಅವನೂಂತ ದಾರಿಗಳ್ಳಕಾದು ಕುಳಿತಿರುವ ।
ತಿಳಿಯಲು ಇನ್ನೇನು ಮಾಡಲೆನ್ನುವ ವಿಚಾರವ । ಈ ಜೀವದ್ದೇ ಭರವಸೆ ಇನ್ನಿಲ್ಲ ॥172

ಅದೇ ದೂರದಿಂದ ಬೆಳಕು ಬರಲು । ಕೊರಡಿನ ರೂಪವ ತಿಳಿಯಲು ।
ಭಯವೆಲ್ಲ ದೂರಾಗಲು । ಕಳ್ಳನ ಆಭಾಸವು ತಿಳಿಯಿತು" ॥ 173


ಹೇಳಿದೆನೀಗ ಆದರ ಪ್ರಾಪ್ತಿಗೆ । ವ್ಯತ್ಯಯ ಯಾವುದೆಂಬುದ ಶ್ರೋತೃಗಳಿಗೆ ।
ಮುಂದಿನಧ್ಯಾನದಲ್ಲಿ ಶ್ರೇಯಾರ್ಥಿಳಿಗೆ । ಶ್ರೇಯವು ನಿಜರೂಪ ತೋರಿಸುವುದು ॥ 174

ಸಾಯಿ ಪದದಲಿ ಉರುಳಾಡಿ । ಬಾಯಿಗೆ ಬಂದಂತೆ ಮಾತಾಡಿ ।
ಸಾಯಿ ಕೃಪೆಯ ಕೈವಶ ಮಾಡಿ । ತೋರಿದ ಕಥೆ ಕೇಳಿರಿ ಭಾವಿಕರು ॥ 175

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತವಾದಿತೆ ।
ಶ್ರೀಸಾಯಿ ಸಮರ್ಥ ಸಚ್ಚರಿಕೆ । ಬ್ರಹ್ಮಜ್ಞಾನ ಕಥನಂ ನಾಮ ಷೋಡಶೋಧ್ಯಾಯಃ
ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿನೇಳು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನ ಅಧ್ಯಾಯದಲಿ ಇತ್ತಂತೆ ವಚನ । ಈ ಅಧ್ಯಾಯದಲಿ ಮಾಡುವೆನು ಕಥನ ।
ಶ್ರೇಯ ಪ್ರೇಯಗಳ ಲಕ್ಷಣ । ಸಾದರರಾಗಿ ಆಲಿಸಿರಿ ॥ 1

ಪ್ರಕಾಶ ಮತ್ತು ಅಂಧಕಾರ । ಹೇಗೆ ಅನ್ಯೋನ್ಯ ವ್ಯತ್ಯಾತಾರ ।
ಭಿನ್ನರೂಪ ಅವು ಪರಸ್ಪರ । ಶ್ರೇಯ ಪ್ರೇಯಗಳು ಅದರಂತೆ ॥ 2

ಪ್ರೇಯಾರ್ಥವಾಗಿ ಯಾವ ಮನ ಧಾವಿಸುವದು । ಸ್ವಾರ್ಥದಲಿ ಅದು ಭ್ರಂಶಗೊಳ್ಳುವುದು ।
ಶ್ರೇಯವು ವಿವೇಕ ರೂಪವಿರುವುದು । ಅವಿವೇಕರೂಪವು ಪ್ರೇಯವದು ॥ 3

ಶ್ರೇಯದ ವಿಷಯವು ಕೇವಲ ವಿದ್ಯೆ । ಪ್ರೇಯದ್ದು ಬರೀ ಅವಿದ್ಯೆ ।
ಪ್ರೇಯವೆಂದೆಂದಿಂಗೂ ಸೂಜ್ಞರ ಮೋಹಿಸದೇ । ಅಜ್ಞರಿಗೆ ಶ್ರೇಯವು ಹಿಡಿಸದು ॥ 4

ಎಲ್ಲಿಯವರೆಗೆ ಕನಕ ಕಾಮಿನಿಯರ ಪ್ರೀತಿ । ಇಂದ್ರಿಯಗಳಿಗೆ ವಿಷಯಗಳಲ್ಲೇ ಆಸಕ್ತಿ ।
ವಿವೇಕ ವೈರಾಗ್ಯಗಳಲಿ ಅನಾಸಕ್ತಿ । ಅದುವರೆಗೆ ಪ್ರೇಯವೆ ರುಚಿಸುವುದವರಿಗೆ ॥ 5

ನೀರಕ್ಷೀರಗಳ ಬೆರಕೆ । ಅದರಂತೆ ಪ್ರೇಮ ಶ್ರೇಯಗಳ ಕೂಡಿಕೆ ।
ಮಾನಸದಲ್ಲಿರುವ ಮರಾಳವು ಹೇಗೆ । ನೀರ ವರ್ಜಿಸಿ ಹಾಲು ಸೇವಿಸುವುದು ॥6

ಹಾಗೆ ಧೀರರಾದ ಬುದ್ಧಿವಂತರು । ವಿವೇಕವುಳ್ಳ ಭಾಗ್ಯವಂತರು ।
ಶ್ರೇಯಕ್ಕೇ ಅಂಟಿಕೊಳ್ಳುವರು । ಯಾವಾಗಲೂ ಪ್ರೇಯಕ್ಕೆ ವಿನ್ಮುಖರಾಗಿ ॥ 7

ಅದೇ ನೋಡಲಾಗಿ ಮಂದ ಬುದ್ಧಿ । ಶರೀರ-ಪಶು-ಪುತ್ರ-ಧನ-ಮಾನಾದಿ ।
ತೊಡಗಿ ಅವುಗಳ ಯೋಗ ಕ್ಷೇಮದಿ । ಪ್ರೇಯವನಷ್ಟೇ ಪಡೆಯುವರು ॥ 8

ಶ್ರೇಯ ಮತ್ತು ಪ್ರೇಯಗಳಲ್ಲಿ । ಜ್ಞಾನವು ಉಂಟಾದರೂ ಎರಡರಲ್ಲಿ ।
ಅಂತೆಯೇ ಅವುಗಳನ್ನು ಪಡೆಯುವಲ್ಲಿ । ಪುರುಷನುಸ್ವತಂತ್ರನಿದ್ದರೆ ॥ 9

ಆದರೂ ಎರಡೂ ಮುಂದಿರುವಾಗ್ಯೆ । ಕಷ್ಟವಿರುವುದು ಅವುಗಳಲ್ಲಿ ಆರಿಸಿಕೊಳ್ಳುವಾಗ್ಯೆ ।
ಮಂದಬುದ್ಧಿಯ ಒಲಿಸಿ ತನ್ನೆಡೆಗೆ । ಪ್ರೇಯವು ಜಯಶಾಲಿಯಾಗುವುದು ॥ 10

ಪ್ರೇಯವ ಬದಿಗಿರಿಸಿ ಶ್ರೇಯವ ಆದರಿಸುವುದು । ಅದೇ ನಿಜವಾದ ಪುರುಷಾರ್ಥವೆನಿಸುವದು ।
ಹಾಲಿದ್ದಾಗ ನೀರು ಬೆರೆತದ್ದು । ಹಂಸವು ಹಾಲನ್ನು ಮಾತ್ರ ಸೇವಿಸುವುದು ॥ 11

ಶ್ರೇಯ ಮತ್ತು ಪ್ರೇಯಗಳೆರಡೂ । ಪುರುಷನ ಸ್ವಾಧೀನಲ್ಲಿದ್ದೂ ।
ವಿಮೋಚನೆ ಮಾಡಲು । ಅಸಮರ್ಥನಿರುವುದು ಮಂದಮತಿಯ ವಿವೇಕಹೀನತನ ॥ 12

ಯಾವುದರಲ್ಲಿ ಶ್ರೇಯವಿರುವುದು । ಆರಂಭದಲಿಯೇ ಅದನ್ನು ನಿಶ್ಚಿತವಾಗಿ ತಿಳಿಯುವುದು ।
ಆದರಿಂದ ಸಾಧ್ಯಂತ ಪ್ರತಿಕಾರ ಮಾಡುವುದು । ದಾರಿಯಲಿ ಬರುವ ಪ್ರತಿಬಂಧಗಳಿಗೆ ॥ 13

ಇಲ್ಲಿಯೇ ಪುರುಷಾರ್ಥವು ಎದುರಿಗೆ । ಬಂದು ನಿಲ್ಲುವುದು ಧೈರ್ಯವಾಗೇ ।
ಅದಕಾಗಿ ಬುದ್ಧಿಯನು ಹಚ್ಚಿ ಒರೆಗೆ । ಶ್ರೇಯಕ್ಕಾಗಿಯೇ ಹೋರಾಡಿರಿ ॥ 14

ಅತರ್ಕ್ಯ ಸಂಸಾರ ಚಕ್ರದ ಸುಳಿ । ಅಖಂಡ ತಿರುಗುವುದು ಅಷ್ಟೇ ಪ್ರಹರಗಳಲ್ಲಿ ।
ಅಧ್ಯಾತ್ಮಿಕಾದಿ ತ್ರಿತಾಪಗಳಲ್ಲಿ । ದುರ್ನಿವಾರ್ಯವಾಗಿ ನರ ಬೀಳುವನು ॥ 15

ಆದರಿಂದ ಅತ್ಯಂತಿಕ ದುಃಖದ ಭಾರ । ಸಹಿಸುತ್ತ ಆಗುವನು ಜರ್ಜರ ।
ಸಾಧನವು ಸುಲಭ ಮತ್ತು ಸುಖಕರ । ಹುಡುಕುವನು ಅದ ನಿವಾರಿಸಲು ॥ 16

ದುಃಸಹ ಈ ಭಾವಚಕ್ರದ ಪರಿವರ್ತನೆ । ಹೇಗಾದಿತು ಇದರ ಸ್ತಂಭನ ।
ಇದಕೇನಿದ್ದೀತು ಸಾಧನ । ಇದರ ಶೋಧದಲಿ ತೊಡಗುವ ॥ 17

ಹಿರಿದಾದ ಭಾಗ್ಯದಿಂದ ಈ ಬುದ್ಧಿಯು ಹುಟ್ಟುವುದು । ಅಲ್ಲಿಂದ ಪುರುಷಾರ್ಥತೆಯು ಬರುವುದು ।
ಆಮೇಲೆ ಸದುಪಾಯ ಸಾಧಿಸಲು । ನಿಜಸ್ವಾರ್ಥವ ಬಿಟ್ಟಾನು ॥ 18

ಅನಾದಿ ಅವಿದ್ಯಾ ಮಾಯೆ ಇವೆಲ್ಲ । ಶುಕ್ತಿರಜತ, ಮೃಗಜಲದಂತೆಲ್ಲ ।
ಈ ಮಹದಾಭಾಸವನು ಕಳೆಯಲು । ಲೋಭವನು ತ್ಯಜಿಸಬೇಕು ॥ 19

ಕನಸಿನಲ್ಲಿ ಬಂಗಾರದ ಆಣೆಕಲ್ಲು ಸುರಿಯುವವು । ಪ್ರಯಾಸಪಟ್ಟು ಅವುಗಳ ಕೂಡಿಸಿಡುವೆವು ।
ತಿಳಿದು ಮುಂದೆಂದಾದರೂ ಉಪಯೋಗವಾದಾವು । ಎಚ್ಚರಾಗಿ ನೋಡಿದಾಗ ಎಲ್ಲ ಮಾಯಾವಾಗಿರುವವು ॥ 20

ದೃಷ್ಟಾದೃಷ್ಟಿ-ಭೋಗವಾಸನೆಗಳು । ಆಸೆ ತೃಷ್ಣೆ ಅಥವಾ ಕಾಮನೆಗಳು ।
ಪ್ರತಿ ಬಂಧಕ ಇವು ಯಾವಾಗಲೂ । ಇವುಗಳ ಸಮೂಲ ಕಿತ್ತೊಗೆಯಿರಿ ॥ 21

ಸೂರ್ಯಪ್ರಕಾಶದಲೂ ಕಾಣಲೂ ಸಾಧ್ಯವಿಲ್ಲದ್ದು । ಬುದ್ಧಿಯು ಎಲ್ಲಿಂದ ಮುಂದೆ ಸಾಗದು ।
ಎಲ್ಲಿ ಪ್ರವೇಶವಿಲ್ಲ ವೇದ ಶ್ರುತಿಗಳದೂ । ಅಂಥದನು ಬೆರಳಲಿಟ್ಟು ಗುರು ತೋರಿಸುವ ॥ 22

ಕಾಮಕ್ರೋಧ ಈ ಎರಡು ವೃತ್ತಿಗಳು । ಬಿಡವು ಜ್ಞಾನ ಪ್ರಾಪ್ತಿಯಾಗಲೂ ।
ಶ್ರವಣ -ಮನನ- ಸಮಾಧಿಗಳು । ಕೂಡಲೇ ಭಂಗವಾಗುವವು ॥ 23

ದೀಪ ಕರ್ಪೂರಗಳ ಸಮಾಗಮವಾಗಲು । ಸಾಧ್ಯವೇ ಎಂದಾದರೂ ಅವು ಕೂಡಿ ಇರಲು ।
ಎರಡೂ ಒಂದೆಡೆ ಸೇರಿದ ಕ್ಷಣದೊಳು । ಕರ್ಪೂರವು ದೀಪವಾಗಿ ಬೆಳಗುವುದು ॥24

ಶೃತಿ-ಸ್ಮೃತಿಗಳಿಗೆ ಸಮ್ಮತವಿಲ್ಲದ । ದುಷ್ಕರ್ಮಗಳಲ್ಲಿ ಸದಾ ಮುಳುಗಿದ ।
ಹಿತವೇನು ಅಂಥಜ್ಞಾನಿಯಿಂದ । ವಿಹಿತಾವಿಹಿತವ ತಿಳಿಯದವ ॥ 25

ಅಂತೆಯೇ ನಿತ್ಯವೂ ಅಶಾಂತನಿರುವವನು । ಅಸಮಾಧಾನದ ಅಂತಃಕರಣವುಳ್ಳವನು ।
ಇಂದ್ರಿಯಲೋಲುಪ್ತತೆಯಿಂದ ವಿಕ್ಷಿಪ್ತ ಮನವಾದವನು । ಜ್ಞಾನದಲಿ ಪರಿಪೂರ್ಣನಾಗನು ॥ 26

ಯಾರದು ಸಮಾಧಾನ ಚಿತ್ತ । ಯಾವನು ಆಚಾರವಂತ ಗುರುಪುತ್ರ ।
ನಿಶ್ಚಲ ಆತ್ಮಾನುಸಂಧಾನವಿರುವಾತ । ಜ್ಞಾನ ಸಂಪನ್ನ ಅವನೊಬ್ಬನೇ ॥ 27

ಸಂಸಾರಿ ಅಥವಾ ಮೋಕ್ಷಗಾಮಿಯೇ ಇರಲಿ । ತನ್ನ ಮನೆಗೇ ಹೋಗುತ್ತಿರಲಿ ।
ಶರೀರವನ್ನೇ ರಥ ಮಾಡಿದಲ್ಲಿ । ಬರೀ ವಾಚಾಳಿಯಾದವನೇನು ಮಾಡಬಲ್ಲ ॥ 28

ಮಾತುಗಳಿಗಿಲ್ಲ ಸ್ಥಾನ ಇಲ್ಲಿ । ಸರ್ವಸಾರವು ಇರುವುದು ಅಭ್ಯಾಸದಲ್ಲಿ ।
ಶರೀರವ ಯೋಜಿಸಿ ರಥ ಸ್ಥಾನದಲ್ಲಿ । ತಾನು ಸ್ಥಿರವಾಗಿ ಕುಳಿತು ಕೊಳ್ಳಬೇಕು ॥ 29

ಈ ನಿಜ ಶರೀರದ ರಥದಲ್ಲಿ । ನಿಜ ಬುದ್ಧಿಯನಾಗಿಸಿ ಸಾರಥಿಯಲ್ಲಿ ।
ತಾನು ಸ್ವಾಮಿಯಾಗಿ ಕುಳಿತು ರಥದಲ್ಲಿ । ಸ್ವಸ್ಥಚಿತ್ತನಾಗಿರು ನೀನು ॥ 30

ದುರ್ಗಮವಾದ ರಸಮಾರ್ಗವನ್ನು (ವಿಷಯಗಳಿಂದ ಕೂಡಿದ) । ದಾಟ ಬೇಕಾದಾಗ ಸಾರಥಿಯು ಯೋಚಿಸುವನು ।
ಯಾವನು ಮನರೂಪದ ಲಗಾಮನ್ನು । ಹಿಡಿದು ದಶೇಂದ್ರಿಯವಾಜಿಗಳ ನಿವಾರಿಸುವನು ॥ 31

ಕುದುರೆಗಳು ಕಂಡಂತೆ ಓಡುತ್ತಿದ್ದು । ಆದರೂ ಲಗಾಮನ್ನು ಬಿಗಿ ಹಿಡಿದು ।
ಕೊಂಡೊಯ್ಯುವ ಸಾರಥಿಯಾಗಿದ್ದು । ಆಗ ನೀ ಸ್ವಸ್ಥಚಿತ್ತನಾಗಿ ಕುಳಿತಿರು ॥ 32

ವಿವೇಕ ಬುದ್ಧಿಯೇ ಇರುವಾಗ್ಗೆ । ಆ ಸಮಾಹಿತ ಸಮನಸ್ಕನಿಗೆ ।
ಪರಮಪದದ ಪ್ರಾಪ್ತಿ ಅವನಿಗೆ । ಅಲ್ಲದೇ ಉಳಿದವರು ದಾರಿಯಲಿ ದಣಿಯುವರು ॥ 33

ಯಾವಾಗಲೂ ಅಯುಕ್ತ ಮನದವಗೆ । ಎಂದೂ ಸಮಾಧಾನವಿರದವಗೆ ।
ಅವನಿಗೆಂದೂ ತತ್ಪದಾಭಿಗಮನವಾಗದು । ಸಂಸಾರ ಪರಿವರ್ತನ ತಪ್ಪದು ॥ 34

ಕುಶಲ ಮತ್ತು ನಿಪುಣ ಸಾರಥ್ಯ । ಇದ್ದರೇನೆ ಸರಿ ಕುದುರೆಗಳ ಓಟ ।
ಮನವೆಂಬ ಲಗಾಮನಿತ್ತು ಪರಹಸ್ತ । ಆಗ ಬಲಹೀನವಾಗುವುದು ॥ 35

ಇಂಥಾ ಆ ಪರಮ ಪದ ದೊಡ್ಡದು । ಅದರ ವ್ಯಾಪ್ತತ್ವವಾದರೂ ಎಲ್ಲಿರರಿವುದು ।
ಎಂಬ ಮನದ ಶಂಕೆ ಹರಿಯುವುದು । ಅದು ತಾನೇ ಪ್ರಕಟವಾದಾಗ ॥ 36

ಅಲ್ಲಿ ನಡೆಯದು ತರ್ಕವಾದ । ಅನುವಾದ ಪ್ರವಾದ ಅಥವಾ ಸಂವಾದ ।
ಈಶ ಕೃಪೆಯಿಂದಲೇ ಪಡೆಯಬೇಕದ । ಇತರ ವಾದಗಳೆಲ್ಲ ವ್ಯರ್ಥ ॥ 37
ಅಲ್ಲಿ ಜಾಣತನ ನಡೆಯದು । ತರ್ಕಜ್ಞನ ಮತಿಯೂ ಕುಂಠಿತವಾಗುವುದು ।
ಸಾಧು ಭಾವವೇ ಕೊನೆ ಮುಟ್ಟುವುದು । ಅಲ್ಲಿಯ ವೈಚಿತ್ರ್ಯವೇ ಇದಾಗಿದೆ ॥ 38

ಸಮ್ಯಗ್‌ಜ್ಞಾನದ ಮಾರ್ಗತೋರುವುದು । ಆ ಗತಿ ಮತ್ತು ಆ ಬುದ್ಧಿ ಬೇರೆಯೇ ಇರುವುದು ।
ಆ ಆಗಮಜ್ಞನ ಇರವೂ ಬೇರೆಯದು । ಉತ್ತಮ ಜ್ಞಾನದಾನಿಯವನು ॥ 39

ಈ ಬೆಲೆಯುಳ್ಳ ಕಾಯವು ವ್ಯರ್ಥವಾಗುತ್ತದೆ । ಧನಕಾಮನೆಯು ಮಧ್ಯಾನ್ಹದ ನೆರಳಿನಂತೆ ।
ಹರಿಯ ದುರ್ಘಟ ಮಾಯೆ ಅರಿವಾಯಿತೇ । ಸಂತರ ಚರಣಗಳ ಹೊಂದಬೇಕು ॥ 40

ಸಂತನು ಭವಸಾಗರದ ಅಂಬಿಗ । ನೀನಾಗು ಆ ದೋಣಿಯಲಿ ಪಯಣಿಗ ।
ನಮ್ಮನು ದಡ ಮುಟ್ಟಿಸಲೋಸುಗ । ಅವನಲ್ಲದೇ ಬೇರಿನ್ನಾರು (ಸಮರ್ಥ) ॥ 41

ವಿವೇಕ ವೈರ್ಯಾಗಗಳ ಜೊತೆ । ಬಂಧಿಸುವಂತಹನಿರಲು ಸಂಗಡ ಮತ್ತೆ ।
ಜಡ ಮೂಢನಾಗುವನೇ ಅವ ಕಲ್ಲಿನಂತೆ । ಭವಸಿಂಧು ಅವನಿಗೆ ಕಷ್ಟದಲ್ಲ ॥ 42

ಭಗವಂತನ ಷಡ್ಗುಣೈಶ್ವರ್ಯ । ಅದರಲ್ಲಿ ಪ್ರಥಮವು 'ವೈರಾಗ್ಯ' ।
ಪಡೆದು ಬಂದವರು ಮಹದ್ಭಾಗ್ಯ । ಅಂಥವರಿಗಲ್ಲದೆ ಇತತರಿಗೆ ಸಿಗದು ॥ 43

ವಿಹಿತ ಕರ್ಮವ ಮಾಡದಿದ್ದಲ್ಲಿ । ಚಿತ್ತ ಶುದ್ಧಿಯ ನಿರ್ಮಾಣವೆಲ್ಲಿ ।
ಚಿತ್ತ ಶುದ್ಧಿಯು ಇದರಲ್ಲಿ । ಜ್ಞಾನ ಸಂಪಾದನೆಯಾಗುವುದು ॥ 44

ಅದಕ್ಕೆ ಕರ್ಮವೇ ಒಂದು । ಜ್ಞಾನ ಪ್ರಾಪ್ತಿಯ ಸಾಧನವಿರುವುದು ।
ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗೈದು । ನಡೆದರೇ ಮಲದ ಕ್ಷಾಲನೆಯಾಗುವುದು ॥45

ಮನವು ಶುದ್ಧವಾದಾಗ ಈ ರೀತಿಯಾಗಿ । ವಿವೇಕ ವೈರಾಗ್ಯಗಳ ಉತ್ಪತ್ತಿಯಾಗಿ ।
ಶಮದಮಾದಿ ಸಾಧನ ಸಂಪತ್ತಿಯಿಂದಾಗಿ । ವಿದೇಹ ಮುಕ್ತಿಯು ದೊರೆಯುವದು ॥ 46

ಫಲಕಾಮ ಸಂಕಲ್ಪ ತ್ಯಾಗದಿಂದ । ಚಿತ್ತೈಕಾಗ್ರತೆಯಾಗುವುದರಿಂದ ।
ಅನನ್ಯತ್ವದಿಂದ ಗುರುವಿಗೆ ಶರಣಾಗತನಾಗುವದರಿಂದ । ಸದ್ಗುರು ಅವನ ತನ್ನುಡಿಗೆ ತೆಗೆದು ಕೊಳ್ಳುವ ॥ 47

ಯಾವನು ಬಹಿಪ್ರ್ರವೃತ್ತಿಶೂನ್ಯ । ಭಾವಿಕ ಭಕ್ತ ಅನನ್ಯ ।
ಜ್ಞಾನದಿಂದ ಲಾಭದಿಂದಾಗುವ ಪ್ರಜ್ಞ। ಅನ್ಯಉಪಾಯ ನಡೆಯದು ॥ 48

ಈ ಜ್ಞಾನವು ಲಭ್ಯವಾದರೆ । ತಿರುಗಿ ಅಧರ್ಮ ಮಾರ್ಗಆಚರಿಸಿದರೆ ।
ಅಲ್ಲೂ ಇಲ್ಲ ಇಲ್ಲೂ ಇಲ್ಲ ಮೇಲೆ ಕೆಳಗೆ । ಇರದೆ ಜೋತಾಡುವನು ತ್ರಿಶಂಕುವಿನಂತೆ ॥49

ಇರುವುದು ಜೀವದ ಅಜ್ಞಾನ ವೃತ್ತಿ । ಅದೇ ನಿಜವಾಗಿ ಸಂಸಾರ ವೃತ್ತಿಯು ।
ಆಗಲು ಆತ್ಮಜ್ಞಾನದ ಪ್ರಾಪ್ತಿ । ಅದೇ ಸಂಸಾರ ನಿವೃತ್ತಿಯು ॥ 50

ಆತ್ಮಜ್ಞನು ಸದಾ ಅಹಂಭಾವರಹಿತ । ಧರ್ಮಾಧರ್ಮ ಶುಭಾಶುಭವಿರಹಿತ
ಅಂಥವನಿಗೆ ಸಂಸಾರಾಂತರ್ಗತ । ಹಿತಾಹಿತವೇನಿರುವುದು ॥ 51

ಕರಗಿದೆ ದೇಹಾಹಂಕಾರ ವೃತ್ತಿ । ಅಲ್ಲಿಯೇ ಆಗಲೇ ಬಂದಿದೆ ನಿವೃತ್ತಿ ।
ಅದೇ ಜೀವದ ಪರಮಾತ್ಮ ಸ್ಥಿತಿ । ಇದು ನಿಶ್ಚಯವೆಂದು ತಿಳಿಯಬೇಕು ॥ 52

ಪ್ರವೃತ್ತಿ ಇರುವಲ್ಲಿ ಶತೃ-ಮಿತ್ರ । ನಿವೃತ್ತಿಯದಿರುವದು ಇದೇ ವಿಚಿತ್ರ ।
ನಾನೇ ನಾನಾಗಿರುವಾಗ ಸರ್ವತ್ರ । ಶತೃತ್ವ- ಮಿತ್ರತ್ವವೆಲ್ಲಿರುವದು ॥ 53

ಇಂಥ ಮಹಾಸುಖದೆದುರಿಗೆ । ದೇಹ ಮಹದುಃಖಮಯವಿರುವಾಗ್ಗೆ ।
ಅಳುವರಾರಿಲ್ಲ ಆ ಐಹಿಕ ಸುಖದ ಬಗ್ಗೆ । ಮಹತ್ಸುಖವೇ ದೊರೆತಾಗ ॥ 54

ಐಹಿಕ ಸುಖದ ಮುಗಿಲೇ । ಕಡಿದು ಬಿದ್ದರೂ ಅವನ ಮೇಲೆ ।
ಎಳ್ಳಕಾಳಷ್ಟೂ ವಿಚಲಿತನಾಗದಲೇ । ಧೈರ್ಯದ ಬೆಟ್ಟದಂತೆ ನಿಲುವನು ॥ 55

ಭಗವಂತನು ಯಾರಿಗೆ ಪ್ರಸನ್ನನಾಗುವನು । ಅವನಿಗೇ ವೈರಾಗ್ಯವನೀಯುವನು ।
ವಿವೇಕದ ಜೊತೆಯ ನೀಡುವನು । ಭವಸಾಗರವ ಪಾರುಗಾಣಿಸುವನು ॥ 56

ಕನ್ನಡಿಯಲಿ ಮುಖವು ಬಿಂಬಿಸುವಂತೆ । ಸ್ಪಷ್ಟಾತ್ಮದರ್ಶನಿಯ ಮನದಲಿರುವಂತೆ ।
ಅವನಿಗೆ ಭೂ ಇಲ್ಲವೇ ಬ್ರಹ್ಮಲೋಕ ದೊರಕೀತೆ । ವಿನಃ ಮೂರನೆಯ ಸ್ಥಳ ಅವನಿಗಿಲ್ಲ ॥ 57

ಯಾಗದಲಾಗಲು ದೇವತೆಗಳ ತೃಪ್ತಿ । ಪಿತೃಲೋಕದ್ದಾಗುವದು ಪ್ರಾಪ್ತಿ ।
ಸಿಗುವದು ಕರ್ಮಫಲೋಪಭುಕ್ತಿ । ಆತ್ಮಸಂವಿತ್ತಿಯ ಪಡೆಯನು ॥ 58

ಗಂಧರ್ವ-ಮಹರ್ಜನಸ್ತಪಃ-ಸತ್ಯ । ಅಲ್ಲಿಯ ಆತ್ಮದರ್ಶನ ಅತಿ ಅವಿವಿಕ್ತ ।
ಅದಕೆ ಯಾರು ಆತ್ಮದರ್ಶನಾಸಕ್ತ । ಭೂಲೋಕವ ಯಥೋಕ್ತ ಇಚ್ಛಿಸುವರು ॥ 59

ಇಲ್ಲಿ ಆಗುವದು ಚಿತ್ತ ಶುದ್ಧಿ । ಕನ್ನಡಿಯಂತೆ ನಿರ್ಮಲ ಬುದ್ಧಿ ।
ಶುದ್ಧ ಆತ್ಮಸ್ವರೂಪವು ತ್ರಿಶುದ್ಧಿ । ಪ್ರತಿಬಿಂಬಿತವಾಗುವದು ॥ 60

ಎರಡನೆಯ ಸ್ಥಾನ ಬ್ರಹ್ಮಲೋಕ । ಅಲ್ಲಿಯೂ ಆಗುವದು ಆತ್ಮಾವಲೋಕ ।
ಆದರೂ ಸಾಯಾಸಬೇಕದಕನೇಕ । ಬಹು ಕಷ್ಟಕರವಾದದು ॥ 61

ಸರ್ಪದಂತೆ ಮಾಯೆಯು ಸುತ್ತಿ । ಒಳಗಿಂದ ಕರುಳು ಹಿಂಡುವದು ಪೂರ್ತಿ ।
ಹೊರಗಿನಿಂದಲೂ ಸರ್ವಾಂಗವ ಒತ್ತಿ । ಇರುವಾಗ ಬಿಡಿಸಿಕೊಳ್ಳುವ ಸಮರ್ಥನಾಗು ॥62

ನೀವು ಕುಳಿತಲ್ಲಿಯೇ ಎಲ್ಲ ನೋಡುತ್ತಿರುವಿರಿ । ಜೇಬಿನಲ್ಲಿ ಐವತ್ತು ಪಟ್ಟು ಹಣ ಇಟ್ಟುಕೊಂಡಿರುವಿರಿ ।
ತೆಗೆಯಿರಿ ಹೊರಗೆ ಈಗಾದರೂ । ಆ ಬ್ರಹ್ಮನು ನಿಮ್ಮ ಜೇಬಿನಲೇ ಇರುವನು" ॥ 63

ತೆಗೆ ಎಂದಾಗ ಕೈ ಹಾಕಿದನು । ಗೃಹಸ್ಥನು ಜೇಬಿನಿಂದ ಪೊಟ್ಟಣವ ತೆಗೆದನು ।
ಹತ್ತು ಹತ್ತರ ಇಪ್ಪತ್ತೈದನು । ನೋಟುಗಳನೆಣಿಸಿದನು ಪೊಟ್ಟಣದಲ್ಲಿ ॥ 64

ಗೃಹಸ್ಥರು ಮನದಲಿ ಕರಗಿದರು । ಎಂಥ ಅಂತರ್ಜ್ಞಾನಿಗಳು ಮಹಾರಾಜರು ।
ಚರಣದಲಿ ಶಿರವನಿಟ್ಟರು । ಆಶೀರ್ವಚನವ ಯಾಚಿಸಿದರು ॥ 65

ಆಗ ಬಾಬಾ ನುಡಿದರಿಂತು । "ನಿನ್ನ ಈ ಬ್ರಹ್ಮಗಂಟನು ಎತ್ತು ।
ಲೋಭನಾಶವಾಗದ ಹೊರತು । ನಿನಗೆ ಬ್ರಹ್ಮ ಸಿಗಲಾರ ॥ 66

ಪುತ್ರ ಪಶು ಆದಿ ವಿತ್ತಾರ್ಜನ । ಅದರಲ್ಲಿಯೇ ತೊಡಗಿದೆ ಯಾರ ಮನ ।
ಅವನಿಗೆಂಥ ಬ್ರಹ್ಮಜ್ಞಾನ । ದ್ರವ್ಯ ವ್ಯವಧಾವ ಬಿಡದೇ ॥ 67

ಮಹಾಕಠಿಣವಿದೆ ವಿತ್ತಮೋಹ । ತೃಷ್ಣಾವರ್ತ ದುಃಖಗಾಹ (ದುಃಖದಮಡು) ।
ಮದ ಮತ್ಸರಗಳೆಂಬ ಮಕರಗಳು ದುಃಸಹ । ನಿಃಸ್ಪೃಹನಿದ್ದವನು ಮಾತ್ರ ದಾಟಿಯಾನು ॥ 68

ಲೋಭದೊಡನೆ ಬ್ರಹ್ಮದ ಅಖಂಡ ವೈರವಿರುವದು । ಅಲ್ಲಿ ಧ್ಯಾನಕ್ಕೆ ಪುರಸತ್ತು ಇರದು ।
ಎಲ್ಲಿಯ ಭಕ್ತಿ ಮುಕ್ತಿ ಸಾಚಾರವಿರುವದು । ಆಚಾರಭ್ರಷ್ಟ ಲೋಭಿಷ್ಟ ॥ 69

ಲೋಭವಿದ್ದಲ್ಲಿ ಶಾಂತಿ ಇರದು । ಸಮಾಧಾನವಿರದು ನಿಶ್ಚಿಂತತೆ ಇರದು ।
ಒಂದು ಲೋಭ ಮಾತ್ರ ಚಿತ್ತದಲಿರುವದು । ಅದರಿಂದ ಸಾಧನಗಳೆಲ್ಲ ಮಣ್ಣುಗೂಡುವವು ॥70

ಶೃತಿ ಸ್ಮೃತಿಗಳಿಗೆ ಅವಿಹಿತ । ಅಂಥ ನಿಷಿದ್ಧ ದುಶ್ಚರಿತ ।
ಅದರಲ್ಲಿಯೇ ಯಾವಾಗಲೂ ಆಸಕ್ತ । ಅಸಮಾಹಿತ ಚಿತ್ತನವನು ॥ 71

ಅವನಿಗೆ ಹೆಸರು 'ವಿಕ್ಷಿಪ್ತ ಚಿತ್ತ'। ಸದ್ದೈವ ದುಷ್ಕರ್ಮಾದಿ ಆವೃತ ।
ಅಖಂಡ ವಿಷಯಕದಲಿ ಹೊರಳಾಡುತ । ಹಿತಾಹಿತವನು ಕಾಣನು ॥ 72

ಬ್ರಹ್ಮವಿಜ್ಞಾನ ಸಂಪನ್ನನಾಗಿದ್ದರೆ । ಆದರೂ ಫಲೇಚ್ಛೆಯ ಬಿಡದವನಿದ್ದರೆ ।
ಅದುವರೆಗೆ ಬ್ರಹ್ಮವಿಜ್ಞಾನ ವ್ಯರ್ಥವಿರೆ । ಆತ್ಮಸಂಪನ್ನನೆಲ್ಲ ಅವನು ॥ 73

ಯಾರೇ ಏನನು ಕೇಳ ಬರಲು । ಅಧಿಕಾರವ ನೋಡುವರು ಸಂತರು ಮೊದಲು ।
ಅವರವರ ಯೋಗ್ಯಾಯೋಗ್ಯತೆಯೊಲು । ಅವರವರಿಗೆ ಕೊಡುವದ ಕೊಡುವರು ॥ 74

ಯಾರ ಮನದಲಿ ರಾತ್ರಂದಿನ । ದೇಹಾಭಿಮಾನ ಮತ್ತು ವಿಷಯ ಚಿಂತನ ।
ಅಂಥವನಿಗೆ ಗುರುಪದೇಶದ ಶ್ರಮ । ವ್ಯರ್ಥ ಉಭಯಾರ್ಥಗಳಲಿ ॥ 75

ಚಿತ್ತ ಶುದ್ಧವಾಗಿರದವರಿಗೆ । ಪರಮಾರ್ಥದಲಿ ಪ್ರವೇಶ ಸಿಕ್ಕಾಗ್ಯೆ ।
ಜ್ಞಾನಗರ್ವದ್ದೇ ಅದು ಮೆರವಣಿಗೆ । ಕೇವಲ ಶ್ರಮವಷ್ಟೇ ಅದು ನಿಜದಲಿ ॥ 76

ಆದಕಾಗಿ ಹಿತವಾಗುವದನ್ನೇ ನುಡಿಯಬೇಕು । ಅರಗುವಷ್ಟನ್ನೇ ಉಣಬೇಕು ।
ಇಲ್ಲದಿದ್ದರೆ ಅಜೀರ್ಣದಿಂದ ಒದ್ದಾಡಬೇಕು । ಇದು ಎಲ್ಲರಿಗೆ ತಿಳಿದ ಮಾತು ॥ 77

ಸಾಕಷ್ಟು ತುಂಬಿದೆ ನನ್ನ ಭಂಡಾರದಲ್ಲಿ । ಕೊಡುವೆನು ಯಾರೇ ಏನೇ ಬೇಡಲಿ ।
ಶಕ್ತಿಯ ಅಳತೆಯ ಮಾಡಿ ಗ್ರಾಹಕನಲ್ಲಿ । ಕೊಡುವೆನು ಅವರವರಿಗೆ ಸಹಿಸುವಷ್ಟನ್ನು ॥ 78

ಚಿತ್ತವಿಟ್ಟದನು ಕೇಳಿದರಿನಿತು । ನಿಮ್ಮ ನಿಜದಿ ಕಲ್ಯಾಣವಾದೀತು ।
ಈ ಪವಿತ್ರ ಮಶೀದಿಯಲ್ಲಿ ಕುಳಿತು । ಅಸತ್ಯವನೆಂದೂ ನುಡಿಯೆನು" ॥ 79

ಈ ಸಂತವಾಕ್ಯ ಸುಧಾಸರಿತೆಯಲಿ । ಮುಳುಗು ಹಾಕಲು ಭಾವಾರ್ಥದಲಿ ।
ಶುದ್ಧತೆ ಲಭಿಸುವದು ಅಂತರ್ಬಾಹ್ಯದಲಿ । ಮಲಿನತೆ ತೊಳೆದು ಹೋಗಲು ॥ 80

ಹೀಗಿರುವ ಸಾಯಿನಾಥರ ಮಹಿಮೆ । ವರ್ಣಿಸತೊಡಗಿದರೆ ಇಲ್ಲದಕೆ ಸೀಮೆ ।
ಆ ನಿರುಪಮನಿಗೆ ಕೊಡಲೆಂಥ ಉಪಮೆ । ಶುದ್ಧ ಪ್ರೇಮಕ್ಕೆ ಅಧೀನನವ ॥ 81

ತಾಯಿಯೇ ಅವಳು ಎಲ್ಲರಿಗೆ । ವಿಶ್ರಾಂತಿಯು ಆರ್ತಶ್ರಾಂತರಿಗೆ ।
ಕಲ್ಪವೃಕ್ಷವು ಆಶ್ರಿತರಿಗೆ । ದೀನ ದುಃಖಿತರಿಗೆ ನೆರಳನೀವ ॥ 82

ಸಂಸಾರದ ಮೇಲೆ ನೀರೆರಚಿ । ಗಿರಿಕಂದಕಗಳಲಿದ್ದು ಮೌನ ಆಚರಿಸಿ ।
ಏಕಾಂತವಾಸವ ಸ್ವೀಕರಿಸಿ । ನಿಜಕಲ್ಯಾಣೈಕದಕ್ಷನಿದ್ದವ ॥ 83

ಕೇವಲ ನಿಜ ಸ್ವಾರ್ಥವ ಸಾಧಿಸುವವರು । ಇಲ್ಲವೇ ನಿಜಪರಮಾರ್ಥವನ್ನಷ್ಟೇ ನೋಡಿಕೊಳ್ಳುವರು ।
ಪ್ರಯೋಜನವೇನು ಪಡೆವರು ಇತರರು । ಇಂಥ ಸಂತರೇ ಬಹಳ ಜನ ॥ 84

ಸಾಯಿಬಾಬಾ ಅಂಥವರಲ್ಲ । ಆಪ್ತೇಷ್ಟರೆಂಬವರವರಿಗಿಲ್ಲ ।
ಮನೆಮಾರು ಹೆಂಡಿರು ಮಕ್ಕಳೂ ಇಲ್ಲ । ಆದರೂ ಪ್ರಪಂಚದಲಿ ಇರುವರು ॥ 85

ಕರತಲಭಿಕ್ಷೆ ಬೇಡುವರು ಐದು ಮನೆಗಳಲಿ । ತರುತಲಿವಾಸವೇ ಅಷ್ಟೇ ಪ್ರಹರಗಳಲಿ ।
ಪ್ರಪಂಚ ಪಸಾರವನು ಹಚ್ಚಿ ಇಲ್ಲಿ । ಎಲ್ಲ ವ್ಯವಹಾರಗಳ ಕಲಿಸುವರು ॥ 86

ನಿಜ ಬ್ರಹ್ಮಸ್ಥಿತಿಯ ಸಾಧಿಸುವರು । ಜನತೆಯ ಕಲ್ಯಾಣಕ್ಕಾಗಿ ದೇಹ ಸವಿಸುವರು ।
ಇಂಥ ವಿಶಾಲ ಬುದ್ಧಿಯ ಸಂತರು । ಅಪರೂಪವಾಗಿರುವರು ಜಗದಲಿ ॥ 87

ಧನ್ಯ ಆದೇಶ ಧನ್ಯ ಆಕುಲ । ಧನ್ಯರಾ ಮಾತಾ ಪಿತೃಗಳು ನಿರ್ಮಲ ।
ಅವರ ಉದರವೂ ಸೋಜ್ವಲ । ಆದಕೆ ಈ ಪುತ್ರ ರತ್ನವ ಪಡೆದರು ॥ 88

ಅನಾಯಾಸವಾಗಿ ಪರಿಸಮಣಿ ಸಿಕ್ಕರೂ । ಕಲ್ಲೆಂದೆಣಿಸಿ ಬಹುಜನ ಬಿಸಾಕಿದರು ।
ಯಾರೂ ಈ ಪರಮಭಾಗವತನನು ತಿಳಿಯದಾದರು । ಶಿರಡಿಯಲ್ಲಿಯೂ ಬಹುಕಾಲದವರೆಗೆ ॥ 89

ತಿಪ್ಪಿಯ ಮೇಲೆ ರತ್ನ ಬೀಳುತ । ಅದು ಸಣ್ಣ ಮಕ್ಕಳ ಕೈಗೆ ಸಿಗುತ ।
ಅವರದನು ಎಲ್ಲೆಂದರಲ್ಲಿ ಬಿಸಾಕುತ । ಕಲ್ಲೆಂದು ಕಾಲಲ್ಲಿ ತುಳಿಯಬೇಕು ॥ 90

ಇರಲಿ ಈ ಪರಿ ಆ ಬ್ರಹ್ಮಭೋಕ್ತನು । ಆಶೀರ್ವಚನದಲಿ ತೃಪ್ತಿಯ ಪಡೆದನು ।
ಅದೇ ಗತಿ ನಮಗೆಲ್ಲರಿಗೆಂಬುದನು । ತಿಳಿದು ಕಠಿಣ ಮಾರ್ಗವ ಬಿಡಬೇಕು ॥ 91

ಎಲ್ಲಿಯವರೆಗೆ ಬಾಹ್ಯ ವಿಷಯಗಳ ಸೇವನ । ಶಬ್ದ ಶ್ರವಣ ಸ್ಪರ್ಶ ಸಂವೇದನ ।
ಸುಗಂಧಾಘ್ರಾಣನ ಬಾಹ್ಯಾಂಗದರ್ಶನ । ಅಲ್ಲಿಯವರೆಗೆ ವಿಷಯನಿರೋಧನವಾಗದು ॥ 92

ಆಗದ ಹೊರತು ಇಂದ್ರಿಯ ನಿರೋಧನ । ಸ್ವಭಾವ ಪ್ರವೃತ್ತ ಪರಾವರ್ತನ ।
ಪ್ರತ್ಯಗ್ರೂಪದ ಅವಲೋಕನ । ಇಲ್ಲವೇ ತದ್ಬೋಧನ ಅಶಕ್ಯ ॥ 93

ಮೊದಲು ಸರ್ವೈಕ್ಷಣಾ ವಿಹೀನರಾಗಿ । ಆಮೇಲೆ ಸದ್ಗುರುವಿಗೆ ಅನನ್ಯ ಶರಣು ಹೋಗಿ ।
ಹೀಗೆ ದೃಢ ಶ್ರಧ್ಧಾ ಸಂಪನ್ನರಾಗಿ । ಆತ್ಮವಿಜ್ಞಾನಕೆ ಪಾತ್ರರಾಗಬೇಕು ॥ 94

ಶ್ರೋತ್ರಾದಿ ಪಂಚೇಂದ್ರಿಯಗಳು । ತಮ್ಮ ತಮ್ಮ ವಿಷಯಗಳ ತ್ಯಜಿಸಲು ।
ಮನ ತಾನೇ ಸಂಕಲ್ಪ ವಿಕಲ್ಪಗಳ ತ್ಯಜಿಸಲು । ಯಾವಾಗ ನಿಶ್ಚಯಿಸುವದು ॥ 95

ಈ ರೀತಿ ಅಂತರವು ಪ್ರತಿ ನಿವೃತ್ತವಾಗಲು । ಬುದ್ಧಿಯೂ ನಿಶ್ಚಯ ವ್ಯಾಪಾರವ ನಿಲ್ಲಿಸಲು ।
ಅದೇ ಪರಮಗತಿ ನಿಜದಲೂ । ನಿರ್ವಿಕಾರ ಬ್ರಹ್ಮವೂ ಅದೇ ॥ 96

ಬುದ್ಧಿಯು ನಿಶ್ಚಯ ಶೂನ್ಯವಾಗಿ । ಚಿತ್ತವು ಚೈತನ್ಯಮಯವಾಗಿ ।
ಅದೇ ಅದಲ್ಲದೇ ಅನ್ಯವಿಲ್ಲದಾಗಿ । ಆತ್ಮಕ್ಕೆ ಧನ್ಯತೆ ಎನಿಸೀತು ॥ 97

ವಿಷಯಗಳಿಂದ ವಿನ್ಮುಖವಾದಾಗ । ಇಂದ್ರಿಯಗಳು ಆತ್ಮೋನ್ಮುಖವಾಗುವವಾಗ ।
ನಿಜ ಸುಖವು ಪ್ರಕಟಿಸುವದಾವಾಗ । ಬೇರೆಲ್ಲ ಅಸುಖವೆನಿಸುವದು ॥ 98

ವಿಷಯ ವಿಕಾರಗಳು ತುಂಬಿರಲು । ಕಷ್ಟಕರ ಅತಿ ಸೂಕ್ಷ್ಮ ಆತ್ಮಜ್ಞಾನವ ಕಾಣಲು ।
ಅತಿಗಹನವಿರುವದಿದು ತಿಳಿಯಲು । ಈ ಪರಮಾನಂದ ಪ್ರಾಪ್ತಿಯ ಸಾಧನವು ॥ 99

ಹಿರಣ್ಯಗರ್ಭ ಪದದ ಪರ್ಯಂತ । ಇಹಾಮುತ್ರ ವಿಷಯಗಳಲಿ ವಿರಕ್ತ ।
ಅವನೊಬ್ಬನೇ ಬ್ರಹ್ಮಪದಾಭಿಷಿಕ್ತ । ಅವನೊಬ್ಬ ಮುಕ್ತನೆಂದು ತಿಳಿಯಬೇಕು ॥ 100

ಚಿತ್ತವನು ವಿಷಯಗಳಿಂದ । ಮೆಲ್ಲ ಮೆಲ್ಲಗೆ ತಿರುಗಿಸಿ ಹಿಂದೆ ।
ಆತ್ಮರೂಪದಲಿ ಸ್ಥಿರಗೊಳಿಸಿ ಮುಂದೆ । ಆತ್ಮಜ್ಞಾನವ ಹೊಂದಬೇಕು ॥ 101

ಇಹಾಮುತ್ರ ಫಲಭೋಗವಿರಾಗ । ಹರ್ಷ ಶೋಕಾದಿ ದ್ವಂದ್ವತ್ಯಾಗ ।
ಬುದ್ಧಿಮಂತನಿಗೇ ಈ ಭೋಗ । ಅಧ್ಯಾತ್ಮಯೋಗವೆನ್ನುವದಿದಕೇ ॥ 102
ಅಧಿದೈವಾಧ್ಯಾತ್ಮಾದಿ ಭೌತಿಕಗಳಲಿ । ನಿಖಿಲ ವಡವಾನಲ ಜ್ವಾಲಾದಿಗಳಲಿ ।
ಸಂತಪ್ತ ಸಂಸಾರಾರ್ಣವದಲಿ । ಯಾರು ತಾನೇ ಸುಖಿ ಇದ್ದಾರು ॥ 103

ಅದರಿಂದ ನಿಜ ಸಮುದ್ಧರಣವಾಗಬೇಕು । ಎನುವವರು ಸಾಯಿ ಪ್ರಸಾದ ಸಂಪನ್ನರಾಗಬೇಕು ।
ಅವರ ಚರಿತೆಯ ಅವಲೋಕನ ಮಾಡಬೇಕು । ಶ್ರವಣ ಮನನಗಳ ಸಾದರದಿ ॥104

ಈ ಸಾಯಿನಾಥ ಚರಿತ್ರ । ಕೇಳಲು ಸಪುತ್ರ-ಮಿತ್ರ-ಕಲತ್ರ ।
ಹೊಂದುವರು ಇಹಪರತ್ರ । ವಿಚಿತ್ರಲೀಲೆ ಬಾಬಾರದು ॥ 105

ಸೌಭಾಗ್ಯ ಶ್ರಧ್ಧಾವಂತ ಶ್ರೋತೃಗಳು । ಅವರೇ ಈ ಕಥೆಯ ಕೇಳಲು ।
ಅತಿ ಹಗುರಮನವಾಗಲು । ಶಾಂತತೆಗೂ ಶಾಂತತೆ ದೊರೆಯುವದು ॥ 106

ಕಥಾ ನಿಃಸ್ಪಂದ ನಿರ್ಝರವಿದು । ಇಲ್ಲಿ ಕರ್ಮಾಕರ್ಮಲವಣವು ಕರಗುವದು ।
ಶ್ರವಣ ದ್ವಾರದಿಂದ ಕಣ್ಣಿಗೆ ಕಟ್ಟುವದು । ಸುಂದರ ರೂಪ ಸಾಯಿಯದು ॥ 107

ಚರಿತ್ರ ಶ್ರವಣದಿಂದ ಪಾತಕದ ನಾಶವು । ಚರಿತ್ರ ಶ್ರವಣದಿಂದ ಕಾಲದ ಮೇಲೆ ವಿಜಯವು ।
ಚರಿತ್ರ ಶ್ರವಣದಿಂದ ಪರಮೋಲ್ಲಾಸವು । ನಿರಾಯಾಸವಾಗಿ ಶ್ರೋತೃಗಳಿಗೆ ಲಭಿಸುವದು ॥108

ಶ್ರವಣದಿಂದ ಶುದ್ಧ ಅಂತಃಕರಣ । ಶ್ರವಣದಿಂದ ತಪ್ಪುವದು ಜನ್ಮಮರಣ ।
ಶ್ರವಣದಿಂದ ಶ್ರೋತೃಗಳಿಗೆ ಬ್ರಹ್ಮತನ । ಕೇವಲ ಬ್ರಹ್ಮಾರ್ಪಣ ಕರ್ಮದಿಂದ ॥ 109

ಹೀಗೆ ಈ ಸಾಯಿ ಸೇವಾಕರ್ಮ । ಸೇವಕನ ಮಾಡುವದು ಸದಾ ನಿಷ್ಕಾಮ ।
ನಿಜ ಭಕ್ತರಿಗೆ ಶ್ರೀ ಸಾಯಿರಾಮ । ಯಾವಾಗಲೂ ಆರಾಮ ನೀಡುವರು ॥ 110

ಭಾಗಶಃ ಈ ಗ್ರಂಥದ ವಾಚನ । ಅಥವಾ ಶ್ರವಣ ಮತ್ತು ಪರಿಶೀಲನ ।
ಮನನ ಮತ್ತು ನಿಧಿಧ್ಯಾಸನ । ಅನುದಿನವೂ ಮಾಡುತಿರಿ ಶ್ರೋತೃಗಳೇ ॥ 111

'ಆನಂದೋ ಬ್ರಹ್ಮೇತಿ ವಿಜಾನಾತ್' । ಇದು ತೈತ್ತರೀಯ ಶ್ರುತಿ ಮಾತು ವಿಖ್ಯಾತ ।
ಅದನ್ನೇ ಬಾಬಾ ಅನುವಾದಿಸುತ । ಶ್ರುತಿ ನಿರ್ಣೀತ ಭಕ್ತರಿಗೆ ॥ 112

'ಚಿಂತೆ ಮಾಡಬಾರದು ಯತ್ಕಿಂಚಿತ । ಯಾವಾಗಲೂ ಇರಬೇಕು ಆನಂಧಭರಿತ ।
ಚಿಂತೆ ಮಾಡದಿರಬೇಕು ಆಮರಣಾಂತ' । ಇದು ನಿತ್ಯ ಉಪದೇಶ ಬಾಬಾರದು ॥113

ಬ್ರಹ್ಮ ತತ್ವ ನಿರ್ಧಾರಣವು । ಈ ಅಧ್ಯಾಯದ ಉದ್ದೇಶವು ।
ಭವತಾರಣದ ಈ ನೌಕೆಯು । ಸಾಯಿಯ ಶರಣವ ಸೇರುವದು ॥ 114

ಮೇಲಿಂದ ಮೇಲಿ ಹಿತವಚನವ । ಹೇಳುವರು ಮಾಡಿರಿ ಪರೋಪಕಾರವ ।
ಬಾಬಾ ಮಾಡಿ ಅದರ ಅನುಕರಣವ । ಅದರಂತೆಯೇ ನಡೆಯುವರು ॥ 115

ಇದು ಸಯುಕ್ತಿಕವೋ ಅಯುಕ್ತಿಕ । ಈ ಮತಭೇದ ಕೇವಲ ವೈಯಕ್ತಿಕ ।
ಯಾವುದರಿಂದ ಸಂತೋಷ ಸಾಮಾನ್ಯಜನಕ । ಅದೇ ದೃಷ್ಟಿ ಈ ಗ್ರಂಥದಲಿ ॥ 116

ಇಲ್ಲಿ ಪ್ರಯೋಜನ ಇದೇ ಇರುವದು । ಬಾಬಾರಿಗೆ ಕಾರ್ಯಕಾರಣ ತಿಳಿದಿರುವದು ।
ಅವರ ಮನೇಪ್ಸಿತ ಎಂತಿರುವದು । ಅಂತೆಯೇ ಎಲ್ಲ ನಡೆಯುವದು ॥ 117

ಗುರುಮುಖದ ಕಥೆಗಳ ಕೇಳಬೇಕು । ಅತರ್ಕ್ಯ ಲೀಲೆಗಳ ಅನುಭವಿಸಬೇಕು ।
ಸ್ಮರಣೆಯಲ್ಲಿರುವವನು ಸಂಗ್ರಹಿಸಬೇಕು । ಬೇರೆಯವರಿಗೂ ಅವನು ಹೇಳಬೇಕು ॥ 118

ಸಾಯಿಯ ಈ ಚರಿತ್ರೆಯನು । ಅತ್ಯಾದರದಿ ಕೇಳಲಿದನು ।
ಕಳೆಯುವದದು ಕೇಳುವ ಹೇಳುವವರ ದೈನ್ಯವನು । ದುರ್ದಿನಗಳೆಲ್ಲರವು ದೂರಾಗುವವು ॥119

ನೋಡಿ ಬಾಬಾರ ಅಲೌಕಿಕ ಲೀಲೆಗಳನೆಲ್ಲ । ಯಾವ ಅಭಾಗಿಯು ಚಕಿತನಾಗಲಿಕ್ಕಿಲ್ಲ ।
ಹಿಡಿದನು ದೀನನಾಗಿ ಪದಕಮಲ । ಕೇವಲ ದರ್ಶನ ಮಾತ್ರದಿಂದ ॥ 120

ವಿಶದ ಚರಿತೆಯ ಈ ಸಾಯಿಯದು । ಪ್ರಶಸ್ತ ಚಿತ್ತದಿಂದ ಕೇಳುವದು ।
ಸಿಕ್ಕಾಗ ಅಪರೂಪದ ಸಂಧಿ ಇದು । ಯಾರು ವ್ಯರ್ಥವಾಗಗೊಡುವರು ॥ 121

ಪುತ್ರ-ಮಿತ್ರ-ಕಲತ್ರಗಳೆಂಬ ತಿರುಗಣೆಗಳು । ಕಾಮಕ್ರೋಧಾದಿ ಮೊಸಳೆಗಳು ।
ನಾನಾ ರೋಗಗಳೆಂಬ ತಿಮಿಂಗಿಲಗಳು । ಆಶಾಕಲ್ಲೋಳದಲಿ ಉದ್ರಿಕ್ತ ॥ 122

ಆಗಾಗ ಉದ್ವೇಗದ ಸೆಳಕು । ಬಂದು ಹೋಗುವದು ಕ್ಷಣಕ್ಷಣಕ್ಕೂ ।
ಜಗಳವಾಗಿ ನಡೆಯುವದು ಮಾತಿನ ಚಕಮಕ್ಕು । ಆದರೂ ತಟ್ಟೆಂದು ಅದ ಹರಿಯಬಾರದು ॥ 123

ತಾನೇ ತನಗೆ ಕೊಡಬೇಕು ಈ ಭೋದ । ನೀನೇ ಇರುವೆ ಆತ್ಮನು ಶುದ್ಧ ।
ದೇಹದೊಡನಾಗಿರುವೆ ಬದ್ಧ । ಪಂಜರದೊಳಗಿನ ಗಿಣಿಯಂತೆ ॥ 124

ಕೇವಲ ಮೋಹಮಾಯೆಗೆ ಮರುಳಾದಿ । ಅದರಿಂದ ಸ್ವಹಿತವ ಮರೆತು ಹೋದಿ ।
ಸ್ವರೂಪಕ್ಕೆ ಬಾ ಬೇಗದಿ । ನಿನ್ನಷ್ಟಕ್ಕೆ ನೀ ಎಚ್ಚರಾಗಿ ॥ 125

ಭ್ರಮದಿಂದ ಬೆಳೆಯಿತು ಭ್ರಮ । ದೇಹಾಭಿಮಾನಾದಿ ಸಂಭ್ರಮ ।
ನಾ ನನ್ನದು ಎಂಬುದು ಮೃಗಜಲಸಮ । ಇದ ತಿಳಿದು ನಿರ್ಮಲನಾಗು ನೀ ॥ 126

'ನಾನು ನನ್ನದು' ಎಂಬ ಈ ಪ್ರಪಂಚದಿ । ತೊಡಗುವದುಚಿತವೇ ತಿಳಿ ವಿಚಾರ ಮಾಡಿ ।
ಕಾಲುಗಳ ಕಟ್ಟನ್ನು ಸಡಿಲು ಮಾಡಿ । ಬಾನಿನೆತ್ತರೆಕ ಹಾರಾಡಿ ನಲಿದಾಡು ॥ 127

ಯುಕ್ತತೆ ಇದ್ದಲ್ಲಿ ಬದ್ಧತೆ । ಬದ್ಧತೆಯ ಬಳಿ ಇಹುದು ಮುಕ್ತತೆ ।
ಇವೆರಡರಿಂದಲೂ ಬೇರ್ಪಟ್ಟೀ । ಶುದ್ಧ ಸ್ವವಶನಾಗು ನೀ ॥ 128

ಇದಂತೂ ಸಾಕ್ಷೇಪತೆಯ ಜ್ಞಾನ । ಸುಖದುಃಖವೆಂಬುದೆಲ್ಲ ಅಜ್ಞಾನ ।
ಅದ ತ್ಯಜಿಸಿ ಸಂಪಾದಿಸು ವಿಜ್ಞಾನ । ಬ್ರಹ್ಮಜ್ಞಾನವೂ ಬಳಿಯಿರುವದು ॥ 129

ಎಲ್ಲಿಯವರೆಗೆ ದೇಹದಲಿ ನಾ ನೀ ಎಂಬುದಿರುವದು । ಅದುವರೆಗೆ ನಿಜಹಿತವು ಕಾಣಿಸದು ।
ಅದ ಬಿಟ್ಟು ತನ್ನನು ತಾನು ನೋಡು । ಕೃಪಣತನವನು ದೂರ ಬಿಸುಡಿ ॥ 130

ಕುಬೇರನಂತೆ ಧನವಂತನಿದ್ದು । ಭಿಕ್ಷಾ ವೃತ್ತಿಯಲಿ ತಿರುಗುವದು ।
ನಷ್ಟ ಚರಿತ ಕೇವಲ ಅದು । ವಿಪರೀತತನ ಅಜ್ಞಾನದಿಂದ ॥ 131

ನಿತ್ಯದಲೂ ಮಾಡಬೇಕು ಸಚ್ಛಾಸ್ತ್ರ ಶ್ರವಣ । ನಂಬಿಗೆ ಇಟ್ಟು ಪಾಲಿಸಬೇಕು ಸದ್ಗುರು ವಚನ ।
ಇರಬೇಕು ಸದಾ ಸಾವಧಾನ । ಅನುಸಂಧಾನವ ಕಾಯ್ದುಕೊಳ್ಳಬೇಕು ॥ 132

ಆ ಆಚಾರ ಪದ್ಧತಿಯ ನೋಡಿ ಜನರು । ನಿಜೋದ್ಧಾರದ ಮಾರ್ಗವನು ತಿಳಿಯುವರು ।
ಅಸಂಖ್ಯ ಜೀವಗಳು ಉದ್ಧಾರವಾಗುವರು । ಸಹಜವಾಗಿಯೇ ಅದರಿಂದ ॥ 133

ಆ ಕ್ಷಣವು ಯಾವಾಗ ಬಂದೀತು । ಭವಪಾಶದಿಂದ ಬಿಡುಗಡೆಯಾದೀತು ।
ಯಾರಿಗೆ ಹಗಲಿರುಳು ತಳಮಳವಿಂತು । ಅಕಸ್ಮಾತ ಬಂಧನ ಕಳಚೀತು ಅವನದು ॥ 134

ಸಾಧಿಸಿದಷ್ಟು ಏಕಾಂತವ ಸಾಧಿಸಿಕೊಂಡು । ಸಂಸಾರ ನಿಃಸಾರವಿದ ದೃಢ ಮನದಿ ಹಿಡಿದು ।
ಅಧ್ಯಯನ ಮತ್ತು ಆತ್ಮಚಿಂತನ ಮಾಡುವದು । ಚಿರಂತನ ಇದರಲಿ ಇರಬೇಕು ॥ 135

ಭಕ್ತಿ ಶ್ರಧ್ಧಾನ್ವಿತ ಮನದಿಂದ । ಶಿಷ್ಯನು ಪೂರ್ಣನಮ್ರತೆಯಿಂದ ।
ಸಾಷ್ಟಾಂಗ ಶರಣಾಗದ ಹೊರತು । ಗುರುಜ್ಞಾನ ಕೊಡಲಾರನು ॥ 136

ಸರ್ವಸ್ವದಲಿ ಗುರು ಶುಶ್ರೂಷೆ ಮಾಡಬೇಕು । ಬಂಧ ಮೋಕ್ಷಗಳ ಬಗ್ಗೆ ಕೇಳಬೇಕು ।
ವಿದ್ಯಾವಿದ್ಯೆಯ ಪ್ರಶ್ನೆಗಳ ಚರ್ಚಿಸಬೇಕು । ಗುರುರಾಜನಿಗೆ ಆಗ ಸಫಲತೆಯುಂಟಾಗುವದು ॥ 137

ಆತ್ಮನಾರು ಪರಮಾತ್ಮನಾರು । ಗುರುವಲ್ಲದೆ ಹೇಳುವರು ಮತ್ತಾರು ।
ಗುರುವಾದರೂ ಆಗದೇ ಸಂಪೂರ್ಣ ಶರಣಾಗತರು । ಜ್ಞಾನದ ಕಣವನೂ ಕೊಡಲಾರನು ॥ 138

ಗುರುಬಿಟ್ಟು ಬೇರೆಯವರಿಂದ ಜ್ಞಾನ ಪಡೆಯುವದು । ಸಂಸಾರನಿವರ್ತಕ ಅದು ಆಗದು ।
ಮೋಕ್ಷ ಫಲಪ್ರದ ಒಂದಿಷ್ಟೂ ಇರದು । ಮನದಾಳಕೆಂದೂ ಇಳಿಯದು ॥ 139

ಅದಕ್ಕೆ ಗುರುವಿನ ಹೊರತು ಜ್ಞಾನವಿಲ್ಲ । ತಿಳಿದಿಹರಿದನು ವಿದ್ವಾನರೆಲ್ಲ ।
ಬ್ರಹ್ಮಾತ್ಮ ವಿಷಯವ ತಿಳಿಸಬಲ್ಲ । ಸಮರ್ಥ ಚರಣಗಳು ಗುರುವಿನವು ಮಾತ್ರ ॥ 140

ಅಲ್ಲಿ ಮಾಡದೆ ಅನುಮಾನ । ಹಿಡಿಯದೆ ಬಿಗುವು ಅಭಿಮಾನ ।
ಆಗಿ ಅಖಂಡ ದಂಡಾಯಮಾನ । ಗುರುಪದದಿ ಮುಖವನ್ನು ತಗ್ಗಿಸಿರಿ ॥ 141

ದಾಸಾನುದಾಸನು ನಾ ನಿಮಗೆ ಇಂದು । ತಮ್ಮ ಚರಣಗಳದೇ ಭರವಸೆಯನೊಂದು ।
ಹಿಡಿದು ಬಂದಿರುವೆನೆಂದು ನುಡಿದು । ದೃಢವಾದ ಮನದಿಂದ ಬೇಡಿಕೊಳ್ಳಬೇಕು ॥ 142

ಆಮೇಲೆ ನೋಡಿ ಅವನ ಚಮತ್ಕಾರವನು । ಆ ಗುರು ದಯಾರ್ಣವವು ತೂಗಾಡುವುದನು ।
ತರಂಗಗಳ ನಿಜ ಶಯ್ಯೆಯಲಿ ಅವನು । ಮೃದುವಾಗಿ ಎತ್ತಿ ಹಿಡಿಯುವನು ॥ 143

ಅಭಯ ಹಸ್ತವನಿಟ್ಟು ಶಿರದಲು । ಉಧ್ವಸ್ತಗೊಳುವವು ಆಗ ಎಲ್ಲ ಪೀಡೆಗಳು ।
ಸುಟ್ಟು ಹೋಗುವವು ಪಾಪದ ರಾಶಿಗಳು । ಹಣೆಗೆ ಉದಿಯನು ಹಚ್ಚಲು ॥ 144

ಈ ರೀತಿಯಲಿ ಬ್ರಹ್ಮಾರ್ಥಿಗಳಿಗೆ ಬ್ರಹ್ಮನಿರೂಪಣ । ಮುಂದೆ ಮಾಡಿ ಈ ನಿಮಿತ್ತವನ ।
ಜೀವಶಿವೈಕ್ಯತೆಯ ಗುರುತನ್ನ । ಭಕ್ತರಿಗೆ ಸಂಪೂರ್ಣ ತಿಳಿಸಿದರು ॥ 145

ಇನ್ನು ಮಹಾರಾಜರ ಇಷ್ಟೊಂದು । ಅತುಲ ಜ್ಞಾನವು ಮತ್ತು ವಿದ್ಯೆ ಪ್ರಚಂಡ ಇರುವದು ।
ಆದರೂ ಚೇಷ್ಟೆಯಲ್ಲಿಯೂ ಆಸಕ್ತಿ ಇರುವದು । ವಿನೋದವೂ ಪ್ರಿಯ ಅವರಿಗೆ ॥ 146

ಶಂಕೆ ಉದಿಸಬಹುದು ಮನದಿ । ಆದರೂ ನೋಡಲು ವಿಚಾರ ಮಾಡಿ ।
ಇದನು ಕೇಳಿದರೆ ಸಾವಧಾನದಿ । ಸಮಾಧಾನವು ಸಿಗಬಹುದು ॥ 147

ಚಿಕ್ಕ ಮಗುವಿನೊಂದಿಗೆ ಮಾತಾಡುತ । ಅವುಗಳ ತೊದಲು ನುಡಿಕೇಳಿ ಆನಂದಿಸುತ ।
ಪ್ರೌಢತ್ವದ ಮಾತುಗಳನೆಂತ । ಅಲ್ಲಿ ಆಡಲಾದೀತು ॥ 148

ಅವರ ಮೇಲೆ ಪ್ರೀತಿ ಇರುವದಿಲ್ಲೇನು । ಮಾಡಬಲ್ಲವರಾರು ಅದರ ವರ್ಣನೆಯನು ।
ಆದರೂ ಬೋಧ ಮಾಡಬೇಕಾದುದನು । ವಿನೋದ ಲೀಲೆಯಿಂದಲೇ ಮಾಡಬೇಕಾಗುವದು ॥ 149

ಹೊಟ್ಟೆಯೊಳಗೆ ರೋಗವಿರುವದು । ಮಗು ತಾನೇ ಏನು ಬಲ್ಲದು ।
ತಾಯಿಯೇ ಮದ್ದು ಕುಡಿಸಬೇಕಾಗುವದು । ಅದು ಹಟಮಾಡಿ ಕುಡಿಯದಿದ್ದರೂ ॥ 150

ಒಮ್ಮೆ ರಮಿಸುವದು ಮೈ ದಡವುವದು । ಒಮ್ಮೆ ಕಣ್ಣು ಕೆಂಪಗೆ ಮಾಡಿ ನೋಡುವದು ।
ಒಮ್ಮೊಮ್ಮೆ ಒಂದೇಟು ಕೊಡುವದು । ಒಮ್ಮೆ ಪ್ರೀತಿಯಲಪ್ಪಿಕೊಳ್ಳುವದು ॥ 151

ಅದೇ ಮುಂದೆ ಬೆಳೆಯ ತೊಡಗಲು । ಯತ್ನಿಸುವದವುಗಳನು ಜಾಣರನು ಮಾಡಲು ।
ತೀವ್ರ ಬುದ್ಧಿಯೇ ಇರಲಿ ಜಡವೇ ಆಗಿರಲು । ಅದದನುಸರಿಸಿ ಜ್ಞಾನವನು ನೀಡುವದು ॥ 152

ತೀವ್ರ ಬುದ್ಧಿಯದು ತೀವ್ರಗ್ರಹಣ । ಹೇಳಿದ್ದನ್ನು ತಿಳಿಯಲು ಹಿಡಿಯದೊಂದು ಕ್ಷಣ ।
ಅದೇ ಜಡಬುದ್ಧಿಯದು ವಿಲಕ್ಷಣ । ಕಷ್ಟದಿ ರಕ್ಷಣೆ ಮಾಡುವದು ॥ 153

ಸಮರ್ಥರು ಸಾಯಿ ಜ್ಞಾನನಿಧಿ । ಯಾವ ಭಕ್ತರದು ಹೇಗೆ ಬುದ್ಧಿ ।
ಮೊದಲೇ ನಿರ್ಧರಿಸಿ ಪಾತ್ರಶುದ್ಧಿ । ಜ್ಞಾನ ಸಮೃದ್ಧಿಯ ವಿತರಿಸುವರು ॥ 154

ಅವರಿಗೆ ಪೂರ್ಣ ಅಂತರ್ಜ್ಞಾನವಿರುವದು । ಮೊದಲೇ ಎಲ್ಲರ ಬಗ್ಗೆ ತಿಳಿದಿರುವದು ।
ಯಾರಿಗೆ ಯೋಗ್ಯ ಸಾಧನವು ಯಾವುದು । ಅದರ ನಿಯಮ ಅಂದರಂತೆಯೇ ॥155

ಯಾರದು ಎಷ್ಟು ಅಧಿಕಾರ । ಮೊದಲೇ ಮಾಡಿ ಅದರ ವಿಚಾರ ।
ಅವರವರ ಯೋಗ್ಯಾಯೋಗ್ಯತೆಯ ಅನುಸಾರ । ಭಕ್ತರ ಭಾರವು ಬಾಬಾರಿಗೆ ॥ 156

ಹಾಗೆಯೇ ನಾವೆಲ್ಲ ನೋಡಲು ದೊಡ್ಡವರು । ಆದರೂ ಅಸಿದ್ಧ ಸಾಯಿಯ ಎದುರು ।
ನಿಜವಾಗಿಯೂ ನಾವು ಕಿರಿಯರಿಗಿಂತ ಕಿರಿಯರು । ವಿನೋದದಲೇ ಆತುರತೆ ಯಾವಾಗಲೂ ॥ 157

ಬಾಬಾ ಮುಂದೆ ವಿನೋದದಲ್ಲಿ । ಯಾರಿಗೆ ರುಚಿ ಯಾವುದರಲ್ಲಿ ।
ಅದನೆಲ್ಲ ಕೊಟ್ಟು ಸಾಕಷ್ಟು ಪ್ರಮಾಣದಲ್ಲಿ । ಭಕ್ತರ ಅವ್ಯಗ್ರರಾಗಿಡುತಿದ್ದರು ॥ 158

ಸುಬುದ್ಧನಿರಲಿ ಇಲ್ಲವೇ ಬುದ್ಧಿಮಂದ । ಓದಲು ಬೆಳೆಯುವದು ಆನಂದ ।
ಕೇಳಲು ಬೆಳೆಯುವದು ಶ್ರವಣ ಚಂದ । ಮನನದಿಂದ ಸ್ವಾನಂದ ಸಂತುಷ್ಟಿ ॥ 159

ಆವರ್ತನದಿಂದ ಪರಮಾರ್ಥ ಬೋಧ । ನಿದಿಧ್ಯಾಸದಿಂದ ಮಹದಲ್ಹಾದ ।
ಸೌಖ್ಯವೆನಿಸುವದು ಅಖಂಡ । ಹೀಗಿರುವದೇ ಲೀಲೆ ಅಗಾಧ ॥ 160

ಸುದೈವದಿಂದಾಗುವ ಇಲ್ಲಿಯ ಅನುಭವವನು । ಒಂದಿಷ್ಟನ್ನಾದರೂ ಅನುಭವಿಸಿದವನು ।
ಕಾಯಾ, ವಾಚಾ, ಮನಸಾ ಅಲ್ಲಿ ತೊಡಗುವನು । ಅತರ್ಕ್ಯ ಲೀಲೆಯು ಸಾಯಿಯದು ॥ 161


ಹೇಮಾಡನು ಸಾಯಿ ಪದಕೆ ಶರಣ । ವಿನೋದ ಮಾರ್ಗವಾಗಿ ಜ್ಞಾನ ಪ್ರದಾನ ।
ಭಕ್ತ ಕಲ್ಯಾಣವೇ ಒಂದು ಪ್ರಯೋಜನ । ನಿಮಿತ್ತವದು ಬ್ರಹ್ಮಾರ್ಥಿಗಳಿಗೆ ॥ 162

ಮುಂದಿನಧ್ಯಾಯವು ಸವಿ ಇದಕಿಂತ । ಪೂರೈಸುವದು ಶ್ರವಣಾರ್ಥಿಗಳ ಈಪ್ಸಿತ ।
ನನ್ನ ಹೃದಯದಲಿ ಅಡಗಿದ ಮಾತ । ಒಡೆ ಒಡೆದು ನುಡಿದಿರುವೆನಿಲ್ಲಿ ॥ 163

ನಾ ಹೋಗುವೆನು ಮಾಧವನ ಬಳಿಗೆ । ಬಾಬಾರ ಸಂದೇಶ ಏನು ಮುಟ್ಟಿಸುವೆನವರಿಗೆ ।
ಅವರ ಅನುಗ್ರಹವನು ಪಡೆಯುವೆನು ಹೇಗೆ । ಸಾದ್ಯಂತವಾಗಿ ಕೇಳಿರಿ ॥ 164

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಬ್ರಹ್ಮಜ್ಞಾನ ಕಥನಂ ನಾಮ ಸಪ್ತದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥ ॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹದಿನೆಂಟು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜಯ ಸದ್ಗುರೋ ಪರಮ ನಿತ್ಯಾ । ಜಯ ಸದ್ಗುರೋ ಬ್ರಹ್ಮ ಸತ್ಯಾ ।
ಅನುಭವದಿಂದ ತೋರುವಿ ಜಗನ್ಮಿಥ್ಯಾ । ಮಾಯಾ ನಿಯಂತನೇ ಜಯಾ ಜಯಾ ॥1

ಜಯ ಜಯ ಹೇ ಅನಾದ್ಯನಂತಾ । ಜಯ ಜಯವೈ ದ್ವಂದ್ವಾತೀತಾ ।
ಜಯ ಜಯ ನಿನಗೆ ವಿಕಾರರಹಿತಾ । ನಿಜರೂಪವ ಭೋದಿಸುವವ ನೀನೊಬ್ಬ ॥ 2

ಹೊರಟಾಗ ಸಾಗರದಲಿ ಸ್ನಾನ ಮಾಡಲು । ಸಾಧ್ಯವೇ ಆ ಉಪ್ಪಿನಗೊಂಬೆ ತಿರುಗಿ ಬರಲು ।
ಇದಂತೂ ಸಾಧ್ಯವಿಲ್ಲ ನಡೆಯಲು । ನಿನ್ನ ಸಾಮೀಪ್ಯವೂ ಹಾಗೆಯೇ ॥ 3

ವೇದ ಶೃತಿಗಳು ಯಾರ ವಿಷಯದಲಿ । ವಿವಾದ ಮಾಡುವುವು ದಿನ ರಜನಿಗಳು ।
ಆ ಅಲಕ್ಷ್ಯವ ನೀ ತೋರುವಿ ಬೆರಳಲಿ । ಅಪ್ರಯಾಸದಿ ಭಕ್ತರಿಗೆ ॥ 4

ದೈವದ ಯೋಗವು ಕೂಡಿಬರಲು । ಸಂಪೂರ್ಣವಾಗಿ ನೀನೆಮ್ಮ ಸುತ್ತಿಕೊಳ್ಳಲು ।
ಇವನಮ್ಮವ ಇವ ಬೇರೆಯವ ಎನ್ನಲು । ಆ ಕುತರ್ಕಕೆ ಸ್ಥಾನವೇ ಇಲ್ಲ ॥ 5

ಗತಾಧ್ಯಾಯದಲಿ ಕಥೆಯುಪಾವನ । ಬ್ರಹ್ಮಗಂಟಿನ ಆವಿಷ್ಕರಣ ।
ಬ್ರಹ್ಮಾರ್ಥಿಯ ಲೋಭಾವರಣ । ಪ್ರತಿಬಂಧ ಕಾರಣವ ವರ್ಣಿಸಲಾಯಿತು ॥ 6

ಇನ್ನು ಎನಗನುಗ್ರಹವಾದ ಕಥೆಯನು । ಶ್ರೋತೃಗಳೇ ಕೇಳಿರಿನ್ನು ।
ಅನುಭವವು ಬಂದೀತು ನಿಮ್ಮ ಮನಕಿನ್ನು । ಬಾಬಾರ ಮಾರ್ಗದರ್ಶಕತೆಯದು ॥ 7

ಈ ಒಂದು ಮಧುರವಾದ ವಾರ್ತೆಯ । ಹೇಳುವೆನದರ ಯಥಾರ್ಥತೆಯ ।
ಶ್ರೋತೃಗಳಿದನು ತಮಗಾಗಿಯೇ । ಸ್ವಸ್ಥ ಚಿತ್ತದಿಂದ ಆಲಿಸಿರಿ ॥ 8

ಇರಲು ಕೇಳುಗ ಸಾದರ । ಹೇಳುವವನಿಗೆ ಉಲ್ಹಾಸ ಮತ್ತು ಆದರ ।
ಹೃದಯದಲಿ ಉಕ್ಕುವುದು ಪ್ರೇಮ ನಿರ್ಝರ । ಆನಂದ ನಿರ್ಭರರಿಬ್ಬರಿಗೂ ॥ 9

ಬುದ್ಧಿ ಭೇದವನಿನಿತೂ ಇಡದೆ । ಯಾರ ಅಧಿಕಾರವು ಹೇಗೆ ।
ನಿಜದಲಿ ಮಾರ್ಗವ ಅವನಿಗೆ ಹಾಗೆ । ಉಪದೇಶ ಪುರಃಸರವಾಗಿ ತೋರಿಸುವರು ॥ 10

ಹಲವರ ಮತ ಹೀಗಿರುವುದು । ಗುರುವು ಯಾರಿಗೆ ಏನು ಹೇಳಿದ್ದು ।
ಬೇರೆಯವರಿಗದು ಹೇಳಬಾರದು । ಅದರಿಂದ ಗುರುವಾಣಿ ವಿಫಲವಾಗುವುದು ॥ 11

ಇದಂತೂ ಕಲ್ಪನೆ ಇರುವುದು ಕೇವಲ । ಸಲ್ಲದ ನಿರರ್ಥಕ ಆಡಂಬರವಿದೆಲ್ಲ ।
ಪ್ರತ್ಯಕ್ಷವೇನು ಕನಸಿನಲಿ ಕಂಡದನ್ನು ಎಲ್ಲ । ಸದ್ಬೋಧಕನು ಹೇಳುವನೆಲ್ಲರಿಗೆ ॥ 12

ತಿಳಿದರೆ ಇದನು ಅಪ್ರಮಾಣ । ಬುಧ ಕೌಶಿಕ ಋಷಿಯೇ ಇದಕೆ ಪ್ರಮಾಣ।
ರಾಮರಕ್ಷಾದೀಕ್ಷೆಯೇ ಸ್ವಪ್ನ । ಕಥನವೆಲ್ಲರಿಗೂ ಮಾಡಿದರು ॥ 13

ಗುರು ವರ್ಷಾಕಾಲದ ಘನವಿದು । ಇಷ್ಟಪಟ್ಟು ಸ್ವಾನಂದಜಲವ ಸುರಿಸುವುದು ।
ಅದನೇನು ಒತ್ತಿ ಹಿಡಿದಿಟ್ಟುಕೊಳ್ಳವದು । ಯಥೇಚ್ಛ ಸೇವಿಸಿ ಸೇವನೆ ಮಾಡಿಸಬೇಕು ॥14

ಬಾಲಕನಿಗೆ ಗದ್ದವನ್ನು ಹಿಡಿದು । ತಾಯಿಯು ಅದರ ಆರೋಗ್ಯವ ತಿಳಿದು ।
ಮಮತೆಯಿಂದ ಔಷಧಿ ಕುಡಿಸುವುದು । ಅದೇ ಕೈಚಳಕ ಬಾಬಾರದು ॥ 15

ಮಾರ್ಗವು ಗುಪ್ತ ಅಲ್ಲ ಅವರದು । ಯಾವ ರೀತಿಯಲಿ ಸಹಜದಲಿ ಹೇಗೆಂದು ।
ನಿಜಭಕ್ತರ ಇಷ್ಟ ಪೂರೈಸುವುದು । ಲಕ್ಷವಿಟ್ಟು ಕೇಳಿರಿ ॥ 16

ಧನ್ಯ ಗುರುವಿನ ಸಂಗದ ಆನಂದ । ಅದರ ಮಹತಿಯ ವರ್ಣಿಸಲಾದೀತು ಯಾರಿಂದ ।
ನೆನೆಸಲವರ ನುಡಿಗಳ ಒಂದೊಂದ । ನಿಜ ಸ್ಫೂರ್ತಿಯು ಪುಟಿದೇಳುವುದು ॥ 17

ಪ್ರೇಮದಿಂದ ಮಾಡಲು ಈಶ್ವರಾರ್ಚನ । ಗುರು ಸೇವೆ ಮತ್ತು ಗುರು ಪೂಜನ ।
ಆದೀತು ಗುರುಗಮ್ಯ ಸಂಪಾದನ । ಇತರ ಸಾಧನಗಳೆಲ್ಲ ವ್ಯರ್ಥ ॥ 18

ವಿಕ್ಷೇಪ ಮತ್ತು ಆವರಣ । ಅದರಿಂದ ಈ ಭವಮಾರ್ಗ ಸಂಕೀರ್ಣ ।
ಗುರು ವಾಕ್ಯ ದೀಪಕಿರಣ । ನಿರ್ವಿಘ್ನ ಮಾರ್ಗದರ್ಶಕಂವು ॥ 19

ಗುರು ಪ್ರತ್ಯಕ್ಷ ಈಶ್ವರ । ಬ್ರಹ್ಮಾ ವಿಷ್ಣು ಮಹೇಶ್ವರ ।
ಗುರುವೇ ವಸ್ತುತಃ ಪರಮೇಶ್ವರ । ಬ್ರಹ್ಮಾ ಪರತ್ಪರ ಗುರುರಾಯಾ ॥ 20

ಗುರುವೇ ಜನನಿ ಗುರುವೇ ಪಿತಾ । ದೇವ ಕೋಪಿಸಲು ಗುರು ತ್ರಾತಾ ।
ಗುರುವೇ ಕೋಪಿಸಲು ಬೇರಿಲ್ಲ ತ್ರಾತಾ । ಯಾವಾಗಲೂ ಇದ ನೆನಪಿಡಬೇಕು ॥21

ಗುರುವು ಪ್ರವೃತ್ತಿಯ ದರ್ಶಕನು । ನಿವೃತ್ತಿಯ ತೀರ್ಥವೃತನು ।
ವಿರಕ್ತಿಯ ಧರ್ಮಾಧರ್ಮನು । ವೇದಶ್ರುತಿಗಳ ಪ್ರವಕ್ತನು ॥ 22

ಬುದ್ಧಿಯ ಕಣ್ಣುತೆರೆಸುವರು । ಸಂತರು ನಿಜರೂಪವ ತೋರುವರು ।
ಭಕ್ತರ ಬಯಕೆಗಳನ್ನು ಪೂರೈಸುವರು । ಅತಿ ಮೃದು ಮನಸಿನ ಕರುಣಾಳುಗಳು ॥ 23

ಆದರಿಂದ ಅಡಗುವವು ವಿಷಯವಾಸನೆಗಳು । ಜ್ಞಾನದ್ದೇ ಕನಸು ನಿದ್ದೆಯಲ್ಲೂ ।
ವಿವೇಕ ವೈರಾಗ್ಯವೆಂಬ ಅವಳಿ ಫಲಗಳು । ಕೃಪಾಬಲದಿಂದ ಕೈಸೇರುವವು ॥ 24
ಆಗಲು ಸತ್ಯಮಾಗಮ । ಸಂತಸೇವೆ ಮತ್ತು ಸಂತಪ್ರೇಮ ।
ಸ್ವತಃ ಭಕ್ತಕಾಮಕಲ್ಪ ದ್ರುಮ । ಎಲ್ಲ ಶ್ರಮಗಳ ಪರಿಹರಿಸುವ ॥ 25

ಯಾವಾಗಲೂ ಸತ್ಪರಾಯಣರಾಗಿರಬೇಕು । ಸಂತರ ಕಥೆಗಳನ್ನು ಕೇಳಬೇಕು ।
ಸಂತರ ಚರಣಗಳ ವಂದಿಸಬೇಕು । ಪಾಪಕ್ಷಾಲನವಾಗುವುದದರಿಂದ ॥ 26

ಇಲಾಖಾಧಿಪತಿಯಾಗಿದ್ದ ಲಾರ್ಡರ್ರೈ ಎಂಬುವನು । ಕ್ರಾಪರ್ಥ್ ಶಾಹಿಯ ಉರುಳಿಸಿದನು ।
ತತ್ಕಾಲಿಕ ಪ್ರಸಿದ್ಧಿ ಕೀರ್ತಿವಂತನು । ಬಾಬಾರ ಭಕ್ತಿಗೆ ತೊಡಗಿದನು ॥ 27

ಈ ಸಂಸಾರತಾಪತ್ರಯದಲಿ ಬೆಂದು । ಅದಕೆ ಕಾರಣವ್ಯಾಪಾರದಲಿ ಹಾನಿ ಬಂದು ।
ಮನದಲಿ ಬಲು ಬೇಸರ ಗೊಂಡು । (ಗಂಟು ಕಟ್ಟಿಕೊಂಡು ) ಚೊಂಬನೆತ್ತಿಕೊಂಡು ನಡೆದನು ॥ 28

ಚಿತ್ತವು ಅತಿ ಅಸ್ಥಿರವಾಯಿತು । ದೂರ ಪ್ರವಾಸಕ್ಕೆ ಹೋಗಬೇಕೆನಿಸಿತು ।
ಸುಖಕರವಾದ ಏಕಾಂತವ ಬಯಸಿತು । ಅದರಿಂದ ಈ ದೃಢವಿಚಾರವ ಕೈಕೊಂಡ ॥ 29

ಜೀವನವು ಅತಿ ಸಂಕಟದಲಿ ಬಿದ್ದಾಗ । ದೇವರ ನೆನಪಾಗುವುದು ಆವಾಗ ।
ಆಮೇಲೆ ಸುರುವಾಗುವುದು ಭಕ್ತನ ಕೂಗ । ದೇವರ ಬೆನ್ನು ಹತ್ತುವನಾಗ ॥ 30

ದುಷ್ಕರ್ಮಗಳು ಇಳಿಮುಖವಾಗುವವರೆಗೆ । ದೇವರ ನಾಮ ಬರದು ಬಾಯಿಗೆ ।
ಅವನ ಸಪ್ರೇಮತೆಯ ಕಂಡಾಗ್ಗೆ । ದೇವರು ಸಂತರ ಭೆಟ್ಟಿಯನಮಗೆ ಮಾಡಿಸುವನು ॥ 31

ಹಾಗೇ ಆಯಿತು ಆ ಭಕ್ತನದು । ಸಂಸಾರದಲಿ ಅತಿ ಜಿಗುಪ್ಸೆಗೊಂಡು ।
ಅವನ ಸ್ನೇಹಿತರವಗೆ ಹೇಳಿದ್ದು । ಆ ಹಿತವಚನವನಾಲಿಸಿರಿ ॥ 32

ನೀವು ಶಿರಡಿಗೆ ಹೋಗಲೊಲ್ಲಿರೇಕೆ । ಸಮರ್ಥ ಸಾಯಿನಾಥರ ದರ್ಶನಕೆ ।
ಪ್ರಾರ್ಥಿಸಿರಿ ವಂದಿಸಿ ಅವರ ಪಾದಕೆ । ದಯಾಘನನಾದ ಆ ಸಂತನಿಗೆ ॥ 33

ಕ್ಷಣವೊಂದು ಸಂತನಿಗೆ ಲಭಿಸುವುದು । ಚಂಚಲಮನ ನಿಶ್ಚಲವಾಗುವುದು ।
ತತ್ಕಾಲ ಹರಿಚರಣದಲಿ ತೊಡಗುವದು । ಅಲ್ಲಿಂದ ಹಿಂದಿರುಗುವುದು ಕಷ್ಟವೇ ॥ 34

ದೇಶ ದೇಶಗಳ ಜನರು ಹೋಗುವರು । ಸಾಯಿ ಪದರಜದಲಿ ಹೊರಳಾಡುವರು ।
ಮಹಾರಾಜರ ಆಜ್ಞೆಯಂತೆ ನಡೆಯುವರು । ಸೇವೆಯಿಂದ ಅಭೀಷ್ಟವ ಪಡೆಯುವರು ॥35

ಅವರ ಕೀರ್ತಿಯ ಪ್ರಸಿದ್ಧಿ ಹೀಗೆ । ತಿಳಿದಿದೆ ಎಲ್ಲ ಅಬಾಲ ವೃದ್ಧರಿಗೆ ।
ದಯೆಯು ಬರಲು ಅವರಿಗೆ । ದುಃಖ ನಿವೃತ್ತಿಯ ಪಡೆಯುವಿರಿ ॥ 36

ಶಿರಡಿಯು ಸಾಂಪ್ರತ ಪವಿತ್ರ ಸ್ಥಾನ । ಯಾತ್ರಿಕರು ಬರುವರು ರಾತ್ರಂದಿನ ।
ನೀವೂ ನೋಡಿರಿ ಆದರ ಅನುಭವವನ । ಸಂತ ದರ್ಶನವು ಹಿತಕಾರಿ ॥ 37

ದರಿದ್ರನೊಬ್ಬ ಅವಕರ್ಷದಿಂದ ಉದ್ವಿಗ್ನನಾಗಿರಲು । ಅಕಸ್ಮಾತ ಮೋಡಕವಿದು ಮಳೆಗರಿಯಲು ।
ಹಸಿವೆಯಿಂದ ಬಳಲುತಿರಲು । ಪಂಚಪಕ್ವಾನ್ನಗಳ ಬಡಿಸಿದೆ ಮುಂದೆ ॥ 38

ಕೇಳಿ ಸ್ನೇಹಿತನ ಈ ಮಾತು । ಭಕ್ತನಿಗೂ ಅದು ಹಿಡಿಸಿತು ।
ಅನುಭವ ಪಡೆಯುವದನ್ನು ಮನದಲಾಂತು । ಶಿರಡಿಯ ದಾರಿಯ ಹಿಡಿದನು ॥ 39

ಊರಿಗೆ ಬಂದು ತೆಗೆದುಕೊಂಡ ದರ್ಶನ । ಚರಣಗಳಿಗೆ ಮಾಡಿದ ಸಾಷ್ಟಾಂಗ ನಮನ ।
ಕೂಡಲೇ ತೃಪ್ತವಾದವು ನಯನ । ಸಮಾಧಾನವಾಯಿತು ॥ 40

ಯಾವದು ಪೂರ್ಣಬ್ರಹ್ಮ ಸನಾತನ । ಸ್ವಯಂಜ್ಯೋತಿ ನಿರಂಜನ ।
ಕಂಡು ಇಂತಹ ಸಾಯಿಯ ರೂಪವನ । ಸುಪ್ರಸನ್ನ ಮನವಾಯಿತು ॥ 41

ಎನಿಸಿತು ಪೂರ್ವಾರ್ಜಿತ ಪುಣ್ಯದಿಂದೇ । ಈಚರಣಗಳನಿಂದು ಕಂಡೆ ।
ಚಿತ್ತಕ್ಕೆ ಶಾಂತತೆ ಲಭಿಸಿದೆ । ನಿಶ್ಚಿಂತತೆಯೂ ದರ್ಶನದಿಂದ ॥ 42

ಸಾತೆ ಎಂಬ ಉಪನಾಮದವರು । ಬಹಳ ದೃಢ ನಿಶ್ಚಯದವರು ।
ಗುರುಚರಿತ್ರೆಯ ಪಾರಾಯಣವನಾರಂಭಿಸಿದರು । ನೇಮನಿಷ್ಠ ಇಟ್ಟುಕೊಂಡು ॥ 43

ಸಪ್ತಾಹ ಪೂರ್ಣವಾದ ರಾತ್ರಿಗೆ । ಬಾಬಾ ದೃಷ್ಟಾಂತವನಿತ್ತರವಗೆ ।
ತಿಳಿಸುತಿದ್ದರು ಅರ್ಥವನು ಸಾತೇಗೆ । ತಮ್ಮ ಕೈಯಲ್ಲಿ ಪೋಥಿಯ ಹಿಡಿದು ॥ 44

ತಾವು ಕುಳಿತಿದ್ದು ನಿಜಾಸನದಲ್ಲಿ । ಸಾತೇನ ಕುಳ್ಳಿರಿಸಿಕೊಂಡು ಎದುರಿನಲ್ಲಿ ।
ಗುರುಚರಿತ್ರವ ಹಿಡಿದು ಕೈಯಲ್ಲಿ । ನಿರೂಪಣದಲ್ಲಿ ತತ್ಪರರಾಗಿದ್ದರು ॥ 45

ಬಾಬಾ ಗ್ರಂಥದ ಆವರ್ತನ ಮಾಡುತ್ತಿದ್ದರು । ಪುರಾಣಿಕರಂತೆ ಕಥೆಯ ನಿರೂಪಿಸುವರು ।
ಸಾದರ ಗುರು ಚರಿತ್ರೆಯ ಕೇಳುತಿದ್ದರು । ಸಾತೆ ಸ್ವಸ್ಥಚಿತ್ತರಾಗಿ ॥ 46

ಇದು ಏನು ತಿರುವು ಮುರುವು ಹೀಗೆ । ಎಂದು ವಿಚಾರ ಬಿದ್ದಿತು ಸಾತೇಗೆ ।
ಬಹಳ ಆಶ್ಚರ್ಯವೆನಿಸಿತು ಅವರಿಗೆ । ಪ್ರೀತಿಯಲ್ಲಿ ಕಂಠ ಬಿಗಿಯಿತು ॥ 47

ಅಜ್ಞಾನತಮ ತಲೆದಿಂಬು । ತಲೆಯ ಕೆಳಗೆ ಇಟ್ಟುಕೊಂಡು ।
ವಾಸನೆಯ ಮಗ್ಗುಲಲಿ ಇರಿಸಿಕೊಂಡು । ಮಲಗಿದವನನೆಬ್ಬಿಸುವೆ ದಯಾಳಾ ॥ 48

ತಟ್ಟಿ ತಟ್ಟಿ ನನ್ನನ್ನು । ಗುರುಚರಿತ್ರ ಪೀಯೂಷವನು ।
ಕೃಪಾಳುವೇ ಕುಡಿಸಿದೆ ನೀನು । ಇಂಥ ಈ ಸಮಯದಲ್ಲಿಯೂ ॥ 49

ಈ ರೀತಿ ದೃಷ್ಟಾಂತವ ಕಂಡು । ಸಾಠೇ ಪೂರ್ಣ ಎಚ್ಚರಗೊಂಡು ।
ಕಾಕಾ ಸಾಹೇಬ ದೀಕ್ಷಿತರ ಕಂಡು । ನಡೆದ ಸಂಗತಿಯ ಸಾದ್ಯಂತ ತಿಳಿಸಿದರು ॥ 50

ಎಂದರು ಇದರರ್ಥ ತಿಳಿಯಲಿಲ್ಲ । ಬಾಬಾ ಸಮರ್ಥರು ತಿಳಿಯಲು ಎಲ್ಲ ।
ಅವರ ಮನದಲೇನಿದೆ ಎಂಬುದು ತಿಳಿಯಲಿಲ್ಲ । ಕಾಕಾ ನೀವು ಸಾದ್ಯಂತ ಕೇಳಿರಿ ॥ 51

ಮತ್ತೆ ಪಾಠವ ಸುರು ಮಾಡಬೇಕೆ । ಇಲ್ಲವೇ ಇಷ್ಟಕ್ಕೇ ನಿಲ್ಲಿಸಬೇಕೆ ।
ತಾವೇ ಕೇಳಿರಿ ಬಾಬಾರ ಇಷ್ಟವೇನಿದಕೆ । ಆಗಲೇ ನನ್ನ ಮನಕೆ ಸಮಾಧಾನ ॥ 52

ಆಮೇಲೆ ಕಾಕಾ ಬಾಬಾರ ಎದುರು । ಸಮಯ ನೋಡಿ ಕನಸು ಹೇಳಿದರು ।
ಈ ದೃಷ್ಟಾಂತದಲಿ ತಾವು ದೇವರು । ಸಾಠೆಗೆ ಏನು ಸೂಚನೆ ಇತ್ತಿರಿ ॥ 53

ಸಪ್ತಾಹವ ಹೀಗೇ ನಡೆಸಬೇಕು । ಅಥವಾ ಇಲ್ಲಿಗೆ ಮುಗಿಸಬೇಕು ।
ದೃಷ್ಟಾಂತ ಅರ್ಥವ ತಾವೇ ವಿವರಿಸಬೇಕು । ದಾರಿ ತೋರಬೇಕು ಅವನಿಗೆ ॥ 54

ಚರಣದಲಿ ಇಷ್ಟೇ ಬೇಡಿಕೊಳ್ಳುವೆನು । ಸಾಠೆ ದೊಡ್ಡ ಭಾವಿಕ ಭಕ್ತನು ।
ಅವನ ಮೇಲೆ ತೋರಿ ಕೃಪೆಯನು । ಅವನಿಷ್ಟವ ಪೂರೈಸಬೇಕು ॥ 55

ಆಗ ಬಾಬಾ ಆಜ್ಞಾಪಿಸುತಲಿ । "ಇನ್ನೊಂದು ಆವೃತ್ತಿ ಆಗಲಿ ।
ಈ ಗುರುವಿನ ಚರಿತ್ರೆ ಓದುವಲ್ಲಿ । ಭಕ್ತನು ನಿರ್ಮಲನಾಗುವನು ॥ 56

ಈ ಪೋಥಿಯ ಪಾರಾಯಣ । ಮಾಡಲು ಆಗುವದು ಕಲ್ಯಾಣ ।
ಪರಮೇಶ್ವರನಾಗುವ ಪ್ರಸನ್ನ । ಭವಬಂಧನದಿಂದ ಬಿಡುಗಡೆಯಾಗುವದು" ॥ 57

ಬಾಬಾ ಮಾಡಿದಾಗಿದನು ಕಥನ । ಮಾಡುತಿದ್ದೆನು ಚರಣ ಸಂವಾಹನ ।
ಮನದಲಾದೆ ವಿಸ್ಮಯಾಪನ್ನ । ವೃತ್ತಿಯು ಸ್ಫುರಣಗೊಂಡಿತು ॥ 58

ಬಾಬಾರಾದರೂ ಇಂತವರು ಹೇಗೆ । ಅಲ್ಪಾಯಾಸದಲಿ ಫಲ ಆ ಸಾಠೆಗೆ ।
ವರ್ಷಾನು ವರ್ಷಗಳು ಕಳೆದವು ನನಗೆ । ಏಳೇ ದಿನದಲಿ ಅವನಿಗೆ ಫಲ ॥ 59

ಗುರುಚರಿತ್ರೆಯ ಒಂದೇ ಪಾಠವನು । ಏಳು ದಿನಗಳಲಿ ಮಾಡಿದ ಸಾಠೇನು ।
ಪಾಠ ಮಾಡುವುದರಲಿ ಕಳೆದೆ ನಲ್ವತ್ತು ವರ್ಷಗಳನು । ಅದರ ವಿಚಾರವೇ ಇಲ್ಲವಲ್ಲ ॥ 60

ಒಬ್ಬನಿಗೆ ಏಳು ದಿನಗಳಲಿ ಫಲ । ಇನ್ನೊಬ್ಬನದು ಏಳು ವರ್ಷಗಳೂ ನಿಷ್ಫಲ ।
ದಾರೀ ಕಾಯುತ್ತಿರುವೆ ಜಾತಕದೊಲ । ದಯಾಘನವೆಂದು ಮಳೆಗರಿದೀತೆಂದು ॥ 61

ಬಂದೀತು ಎಂದಿಗೆ ಆದಿನ । ಎಂದಾದಾನು ಈ ಸಂತಾವತಂಸ ಪ್ರಸನ್ನ ।
ಪೂರೈಸಿಯಾನೆನ್ನ ಮನದಭೀಷ್ಟವನ । ಕೊಟ್ಟು ಉಪದೇಶವನು ನನಗೆ ॥ 62

ಭಕ್ತವತ್ಸಲ ಆ ಸಾಯಿ ಶ್ರೀಗುರು । ನೋಡಿರಿ ಎಂಥ ಅಚ್ಚರಿಯ ತೋರಿದರು ।
ಕೂಡಲೇ ಅವರು ತಿಳಿದರು । ನನ್ನ ಮನದಲೆದ್ದ ಈ ವಿಚಾರವನು ॥ 63

ಅವಿದ್ಯೆಯಿಂದಾಗಿ ಹೀಗೆ । ಕೋಟ್ಯಾನುಕೋಟಿ ವಾಸನೆಗಳು ಎದ್ದಾಗ ।
ಒಳ್ಳೆಯದೋ ಕೆಟ್ಟದ್ದೋ ಆಗಾಗ್ಗೆ । ಅಲ್ಲೆಲ್ಲ ದೃಷ್ಟಿ ಅವರದು ॥ 64

ಮನ ನೆನೆಯುವದನು ವೈರಿಯೂ ನೆನೆಯನು । ಎಲ್ಲರೂ ತಿಳಿದಿಹರು ಈ ಮಾತನು ।
ಬೇರಾರೂ ತಿಳಿಯದಿದ್ದರೂ ಇದನು । ಮಹಾರಾಜರಿಗೆ ತಡವಿಲ್ಲದೆ ತಿಳಿಯುವದು ॥ 65

ಆದರೂ ಆ ತಾಯಿ ಬಲು ಕೃಪಾಳು । ಹೊಟ್ಟೆಯಲಿ ಹಾಕಿಕೊಳುವಳು ನಿಂದ್ಯವಾದುದನೆಲ್ಲ ।
ಅನಿಂದ್ಯವಾದುದನು ಪ್ರಾಪ್ತವಾಗಲು ಕಾಲ । ಅವುಗಳಿಗೆ ಚಾಲನೆ ಕೊಡುವಳು ॥ 66

ಆಗ ನನ್ನ ಮನೋಗತವ ತಿಳಿದು । ಬಾಬಾ ನುಡಿದರು ನನ್ನನು ಕಂಡು ।
ಆ ಶ್ಯಾಮನ ಹತ್ತಿರ ಹೋಗು ಎದ್ದು । ಹದಿನೈದು ರೂಪಾಯಿ ತಕ್ಕೊಂಡು ಬಾ ॥ 67

ಕ್ಷಣವೊಂದು ಅವನ ಹತ್ತಿರ ಕುಳಿತುಕೊಂಡು । ಪರಸ್ಪರ ಮಾತಾಡಿಕೊಂಡು ।
ಅವನಿತ್ತ ದಕ್ಷಿಣೆಯ ತೆಗೆದುಕೊಂಡು । ಬೇಗನೇ ತಿರುಗಿ ಬಾ ಹೋಗು ॥ 68

ಸಾಯಿನಾಥರ ಕೃಪೆ ಮಾಡಿತಂದು । ದಕ್ಷಿಣೆಯ ಕಾರಣ ಮಾಡಿ ಮುಂದು ।
ಎಂದರು ಈಗಲೇ ಹೋಗಿ ತಂದು । ರೂಪಾಯಿಗಳ ಕೊಡು ಶ್ಯಾಮನಿಂದ ॥ 69

ಈ ರೀತಿ ಆಜ್ಞೆಯಾಗಲು । ಧೈರ್ಯ ಯಾರಿಗೆ ಅಲ್ಲಿ ಕುಳಿತುಕೊಳ್ಳಲು ।
ಅವಜ್ಞೆಯಾದೀತಲ್ಲ ಹಾಗೆ ನಿಲ್ಲಲು । ಅನುಜ್ಞೆಯ ಪಡೆದು ಎದ್ದೆನು ॥ 70

ಆ ಮೇಲೆ ನಾನು ತಡ ಮಾಡದೇ । ಶಾಮರಾಯರ ಮನೆಗೆ ಬಂದೆ ।
ಅವರೂ ಸ್ನಾನ ಮುಗಿಸಿದ್ದರು ಅದೇ । ಧೋತರ ಉಡುತಿದ್ದರು ॥ 71

ಅದೇ ಆಗ ಸ್ನಾನ ಮಾಡಿದ್ದರು । ಧೂತ ವಸ್ತ್ರವ ಪರಿಧ್ಯಾನ ಮಾಡಿದರು ।
ಕೈಯಿಂದ ನೀರಿಗೆ ಹಾಕುತ್ತಿದ್ದರು । ಬಾಯಲಿ ನಾಮಜಪ ನಡೆದಿತ್ತು ॥ 72

ಎಂದರು ನಡುವೆಯೇ ಹೇಗಿದು । ಮಶೀದಿಯಿಂದ ಬಂದಂತೆ ಕಾಣುವದು ।
ಮುಖದ ಮೇಲೆ ಮನದ ಅಸ್ಥಿರತೆ ಮೂಡಿರುವದು । ಇಂದು ಒಬ್ಬರೇ ಬಂದಿರಿ ಹೇಗೆ ॥ 73

ಬನ್ನಿರಿ ಕುಳಿತುಕೊಳ್ಳಿರಿ ನಾನಿದೇ ಸ್ನಾನ ಮಾಡಿದೆ । ಹೀಗೇ ಧೋತರ ಉಟ್ಟುಕೊಳ್ಳುತ್ತಲೇ ಹೊರಗೆ ಬಂದೆ ।
ಹೋಗಿ ದೇವರ ತಲೆಯ ಮೇಲೆ ನೀರು ಹಾಕಿದ್ದೇ । ಬಂದೇ ಬಿಟ್ಟೆ ಒಂದು ಕ್ಷಣದಲಿ ॥74

ತಾವು ಹಾಕಿಕೊಳ್ಳುತಿರಲು ತಾಂಬೂಲವನು । ನಾ ಪೂಜಾವಿಧಾನವ ಮುಗಿಸಿ ಬರುವೆನು ।
ಆಮೇಲೆ ಸಾವಕಾಶವಾಗಿ ಆಡುವಾ ಮಾತನು । ಸಮಾಧಾನದಿಂದ ಕುಳಿತು ॥ 75

ಮಾಧವರಾಯರು ಹೋದರು ಒಳಗೆ । ಸಹಜ ನೋಡಲು ಕಿಡಕಿಯ ಮೇಲ್ಗಡೆಗೆ ।
ನಾಥಭಾಗವತದ ಪೋಥಿಯು ಕೈಗೆ । ಸಹಜವಾಗಿಯೇ ಸಿಕ್ಕಿತು ॥ 76

ಸುಮ್ಮನೇ ನೋಡಲು ಗ್ರಂಥವ ತೆಗೆದು । ಅಕಲ್ಪಿತವಾಗಿ ಬೆಳಿಗ್ಗೆ ಆರಂಭಿಸಿದ್ದು ।
ಬೆಳಿಗ್ಗೆ ಅಪೂರ್ಣವಾಗಿ ಉಳಿದದ್ದು । ಓದಲು ಬಂತು ಅದೇ ಭಾಗ ॥ 77

ಅತಿ ಆಶ್ಚರ್ಯವೆನಿಸಿತು ಮನಕೆ । ಬೆಳಿಗ್ಗೆ ಸಾಕೆನಿಸಿ ಬಿಟ್ಟಿದ್ದೇ ಅಷ್ಟಕ್ಕೇ ।
ಬಾಬಾ ಸಂಪೂರ್ಣ ಮಾಡಿಸಿದರದಕೆ । ನಿಯಮವನ್ನೂ ಹಾಕಿದರು ॥ 78

ನೇಮದಿಂದ ಓದುವದೇ ನಿಯಮನ । ಅದರದಾಗದೇ ಸಂಪೂರ್ಣ ನಿಶ್ಚಿಂತ ಪರಿಶೀಲನ ।
ಅರ್ಧಕ್ಕೆ ಬಿಟ್ಟು ನಿಯಮಿತೋಪಾಸನ । ಸ್ಥಾನಬಿಟ್ಟು ಅಲುಗಾಡಬಾರದು ॥ 79

ನಡುವೆ ಒಂದಿಷ್ಟು ಉಪಕಥೆಯಿದು । ಮಾತಿಗೆ ಬಂದಾಗ ಬಿಡಲುಬಾರದು ।
ಶ್ರೋತೃಗಳು ಸಾದರದಿ ಕೇಳುವದು । ಈ ನಾಥಭಾಗವತರ ವಿಷಯವಾಗಿ ॥ 80

ಇದೇ ಆ ನಾಥಭಾಗವತ । ಗುರುಭಕ್ತಿರಸ ಪರಿಪ್ಲುತ ।
ಸಾಯಿ ಕೃಪಾ ಪಾತ್ರರಾದಂಥ । ದೀಕ್ಷಿತರು ನಿತ್ಯದಲಿ ಓದುವರು ॥ 81

ಮಾಡಲೆಂದು ಜಗದುದ್ಧಾರವನು । ಬ್ರಹ್ಮನಲಿ ನಾರಾಯಣನು ಯಾವುದನು ।
ಬಿತ್ತಿ ನಾರದ-ಕ್ಷೇತ್ರದಲಿ ಅದನು । ಆ ಬೀಜದ ತೆನೆ ಮಾಡಿದನು ॥ 82

ದಶಲಕ್ಷಣಗಳುಳ್ಳ ಆ ಕ್ಷೇತ್ರವನು । ಬಾದರಾಯಣನು ಹದಗೊಳಿಸಿದನು ।
ಪರೀಕ್ಷಿತನ ಹೊಲದಲ್ಲಿ ರಾಶಿ ಮಾಡಿದ ಶುಕನು । ಅದರಲಿ ತೆನೆಗಳ ಆರಿಸಿದರು ॥83

ಸ್ವಾಮಿ ಶ್ರೀಧರನು ಕೇರಿದರು । ಸ್ವಾಮಿ ಜನಾರ್ಧನರು ಅಳೆದರು ।
ಸಾಕಷ್ಟು ಸವಿಯಾದ ಪಕ್ವಾನ್ನ ಮಾಡಿದರು । ನಾಥಪ್ರತಾಪದಿ ಭೋಜನವ ॥ 84

ಅದರೊಳಗಿನ ಸ್ಕಂದ ಹನ್ನೊಂದನೆಯದು । ಭಕ್ತಿ ಪ್ರೇಮರಸದ ಗಣಿಯದು ।
ಇದೊಂದು ವೃಂದಾವನವು ಮೂವತ್ತೆರಡು ಅಂಕಣದ್ದು । ದೀಕ್ಷಿತರಿಗೆ ನಿತ್ಯವಾಚನವಿದರದು ॥85

ಹಗಲು (ದಿನಾಲೂ)ಮಾಡುವರು ಅದರ ನಿರೂಪಣ । ರಾತ್ರಿ ಓದುವರು ಭಾವಾರ್ಥ ರಾಮಾಯಣ ।
ಗುರ್ವಾಜ್ಞೆಯಿಂದಲೇ ಈ ಗ್ರಂಥವನ । ಅದೇ ಪ್ರಮಾಣವು ದೀಕ್ಷಿತರಿಗೆ ॥ 86

ಭಕ್ತಿ ಸುಖಾಮೃತದ ಸಾರ । ಜ್ಞಾನೇಶ್ವರಿಯ ಅಪರಾವತಾರ ।
ಇದೊಂದು ನಾಥರು ಮಾಡಿದ ಉಪಕಾರ । ಮಹಾರಾಷ್ಟ್ರದ ಮೇಲೆ ಬಲು ದೊಡ್ಡದು ॥ 87

ಮಾಡಿಕೊಂಡು ಪ್ರಾತಃಸ್ನಾನ । ನಿತ್ಯನೇಮದಿಂದ ಸಾಯಿ ಪೂಜನ ।
ಅನ್ಯ ದೇವ ದೇವತಾರ್ಚನ । ನೈವೇದ್ಯ ನಿರಾಂಜನ ಮುಗಿಯಲು ॥ 88

ಆ ಮೇಲೆ ಶ್ರೋತೃಗಳ ಜೊತೆಯಲ್ಲಿ ಸವಿಸ್ತರ । ಪಯಃ ಪ್ರಸಾದ ಅಲ್ಪಾಹಾರ ।
ಮುಗಿಸಿ ನಿತ್ಯ ಕ್ರಮಾನುಸಾರ । ಆದರದಿ ಪೋಥಿಯ ಓದುವರು ॥ 89

ಯಾವುದರ ಮಾಧುರ್ಯ ಮೆಚ್ಚಿ ಸಹಸ್ರ ಪಾರಾಯಣಗಳನು । ಭಗವತ್ಪರಾಯಣನಾದ ತುಕಾರಾಮನು ।
ಏಕಾಂತದಲಿ ಗುಡ್ಡದ ಮೇಲೆ ಕುಳಿತು ಮಾಡಿದನು । ಅದರ ಸವಿಯನು ಬಣ್ಣಿಸಬಲ್ಲವರಾರು ॥ 90

ಇದು ಮಹಾ ಪ್ರಾಸಾದಿಕ ದಿವ್ಯಗ್ರಂಥ । ಶಿಷ್ಯ ದೀಕ್ಷಿತನೂ ನಿಷ್ಠಾವಂತ ।
ಅದರಿಂದ ಜೀವದ ಉದ್ಧಾರಾರ್ಥ । ಸಾಯಿ ಸಮರ್ಥರಿಂದ ಆಜ್ಞಾಪಿಸಿದರು ॥ 91

ಹೋಗಬೇಕಾಗಿಲ್ಲ ಅರಣ್ಯದಲಿ । ಭಗವಂತ ಪ್ರಕಟನಾಗುವ ಉದ್ಧವ ಗೀತೆಯಲಿ ।
ಪಾರಾಯಣ ಮಾಡಲಿದ ಶ್ರದ್ಧೆಯಲಿ । ಭಗವತ್ಪ್ರಾಪ್ತಿಯು ಕೂಡಲೇ ॥ 92

ಭಾರತದಲಿ ಸಂವಾದ ಕೃಷ್ಣಾರ್ಜುನರದು । ಅದಕಿಂತ ಮಧುರ ಈ ಕೃಷ್ಣ ಉದ್ಧವರದು ।
ಅದು ಈ ನಾಥಭಾಗವತದಲ್ಲಿ ಬರುವದು । ಈ ಪ್ರೇಮಮಯ ಉಪದೇಶವನೋದಿರಿ ॥ 93

ಇಂಥ ಈ ಪ್ರಾಸಾದಿಕ ಗ್ರಂಥವನು । ಜ್ಞಾನದೇವರ ಭಾವಾರ್ಥ ದೀಪಿಕೆಯ ಜೊತೆಗಿದನು ।
ನಿತ್ಯವು ಶಿರಡಿಯಲಿ ಇವುಗಳ ವಾಚನವನು । ಸಾಯಿ ಸಮರ್ಥರು ಮಾಡಿಸುತಿದ್ದರು ॥ 94

ಸಖಾರಾಮ ಹರಿಜೋಗ ಎಂಬವರಿಗೆ । ಬಾಬಾರ ಆಜ್ಞೆಯಾಗಿತ್ತು ಅವರಿಗೆ ।
ಸಾತೆಯವರ ವಾಡೆಯೊಳಗೆ । ಈ ವಾಚನ ಭಕ್ತರಿಗೆ ಅತಿ ಉಪಯುಕ್ತ ॥ 95

ಪ್ರತಿದಿನ ಪಠಣ ಈ ಗ್ರಂಥದ । ಬಾಬಾ ಎಷ್ಟೋ ಭಕ್ತರ ದೆಸೆಯಿಂದ ।
ಶ್ರವಣ ಮಾಡಿಸುವರು ಕಳಕಳಿಯಿಂದ । ಭಕ್ತ ಕಲ್ಯಾಣೇಚ್ಛೆಯಿಂದ ॥ 96

ಅಗಾಧ ಬಾಬಾರ ಅನುಗ್ರಹ ಶೈಲಿ । ಭಕ್ತರಿಗೆ ಉಪದೇಶಿಸುವರು ಪರೋಪರಿಯಲ್ಲಿ ।
ಭಕ್ತನು ಹತ್ತಿರ ಇಲ್ಲವೇ ದೂರದಲಿರಲಿ । ಬಾಬಾ ಎಲ್ಲರ ಬಳಿ ಅವರಂತರಂಗದಲಿ ॥ 97

ತಾವು ಮಶೀದಿಯಲ್ಲಿಯೇ ಕುಳಿತು । ನೇಮಿಸುವರು ಯಾರನ್ನೋ ಯಾವುದೋ ಕಾರ್ಯವ ಕುರಿತು ।
ಅವನಿಗೆ ನಿಜಶಕ್ತಿಯನಿತ್ತು । ಆ ಕಾರ್ಯವ ಮಾಡಿಸಿಕೊಳ್ಳುತಿದ್ದರು ॥ 98

ಬಾಬಾ ಬಾಪೂಸಾಹೇಬ ಜೋಗರಲ್ಲಿ । ಪೋಥಿ ಓದಲೂ ಹೇಳುವರು ವಾಡೆಯಲ್ಲಿ ।
ಅವರೂ ನೇಮದಿಂದ ಓದುವರು ನಿತ್ಯದಲಿ । ಶ್ರೋತೃಗಳು ಕೇಳಲು ಬರುವರು ॥ 99

ಜೋಗರು ಮಧ್ಯಾನ್ಹ ಭೋಜನಾನಂತರ । ನಿತ್ಯವೂ ಹೋಗಿ ಬಾಬಾರ ಹತ್ತಿರ ।
ಚರಣ ವಂದಿಸಿ ವಿಭೂತಿ ಪಡೆದು ಅವರ । ಆಜ್ಞೆ ಪಡೆಯುವರು ಪೋಥಿ ವಾಚನಕೆ ॥ 100

ಒಮ್ಮೊಮ್ಮೆ ಜ್ಞಾನೇಶ್ವರಿಯನೋದುವರು । ಒಮ್ಮೊಮ್ಮೆ ನಾಥ ಭಾಗವತನವರು ।
ಆನಂದದಿ ಪಾರಾಯಣ ಮಾಡುವರು । ಅದರರ್ಥವನೂ ವಿವರಿಸುತಿದ್ದರು ॥ 101

ಹೀಗೆ ಅನುಜ್ಞೆಯು ಆದ ನಂತರ । ಯಾವ ಭಕ್ತರು ಬರುತಿದ್ದರು ಬಾಬಾರ ಹತ್ತಿರ ।
ಪೋಥಿಯ ಕೇಳಲು ಅವರಲ್ಲಿ ಹಲವರ । ಆಗಿಂದಾಗ್ಗೆ ವಾಡೆಗೆ ಕಳಿಸುವರು ॥ 102

ಒಮ್ಮೊಮ್ಮೆ ಹೇಳುವರು ಸಂಕ್ಷಿಪ್ತ ಕಥೆಗಳ । ತಮ್ಮ ಮನದಲಿ ಜನ ಸಂಚಯಿಸುವರವುಗಳ ।
ಅಷ್ಟರಲಿ ಬಾಬಾ ಹೇಳುವರು ಹೋಗಿರೆಲ್ಲ । ವಾಡೆಗೆ ಆ ಪೋಥಿಯ ಕೇಳಲು ॥103

ಭಾವಿಕ ಶ್ರೋತೃಗಳು ಪುರಾಣಕ್ಕೆ ಹೋಗಲು । ಇಂಥದೇ ಕಥೆ ಪುರಾಣದಲ್ಲಿ ಬರಲು ।
ಅದು ಹಿಂದಿನ ಕಥೆಯ ದೃಢಗೊಳಿಸಲು । ಅರ್ಥಬೋಧಕತೆಗೂ ಸಹಾಯಕ ॥ 104

ಜ್ಞಾನೇಶ್ವರರ ಜ್ಞಾನೇಶ್ವರಿಯಲ್ಲಿ । ಅಥವಾ ಏಕನಾಥರ ವೈಖರಿಯಲ್ಲಿ ।
ಬಾಬಾರ ಕಥೆಗಳದೇ ಅನುವಾದವಿರುವದಲ್ಲಿ । ವಿಚಿತ್ರ ನಿಮಗಿದು ಎನಿಸಬಹುದು ॥ 105

ಪುರಾಣದ ಯಾವದೊಂದು ನಿಶ್ಚಿತ ಭಾಗವನು । ಓದಬೇಕೆಂದು ಕಾರಣವೇನೂ ।
ಇಲ್ಲದಿದ್ದರೂ ಹಿಂದೆ ಹೇಳಿದ ಮಾತನ ಸುಯೋಗವನು । ಜೋಗರು ಪೋಥಿಯಲಿ ಓದುವರು ॥106

ಭಗವದ್ಗೀತಾ ಮತ್ತು ಭಾಗವತ । ಮುಖ್ಯವಾಗಿ ಇವೇ ಎರಡು ಗ್ರಂಥ ।
ಇವು ಭಾಗವತ ಧರ್ಮದ ಸಾರಭೂತ । ಜೋಗರು ಇವೆರಡನೂ ನಿತ್ಯ ಪಠಿಸುವರು ॥ 107

ಗೀತಾ ಜ್ಞಾನೇಶ್ವರೀ ಟೀಕಾ । ಅದರ ಹೆಸರು 'ಭಾವಾರ್ಥ ದೀಪಿಕಾ' ।
ನಾಥರ ಪರಮಾರ್ಥ ಭೂಮಿಕಾ । ಭಾಗವತದ ಏಕಾದಶಸ್ಕಂದದಲ್ಲಿರುವದು ॥ 108

ಇರಲು ಹೀಗೆ ನಿತ್ಯಕ್ರಮ । ಭಾಗವತ ವಾಚನದ ನಿತ್ಯನೇಮ ।
ಖಂಡವಾಯಿತು ಅದಕೆ ಆ ದಿನ । ನನ್ನ ನಿರಂತರ ವಾಚನಕೆ ॥ 109

ಒಂದು ಕಥೆ ಅರ್ಧ ಓದಿದಾಗ । ಜನರೆಲ್ಲ ಮಶೀದಿಗೆ ಹೊರಟಾಗ ।
ಅಷ್ಟಕ್ಕೇ ಬಿಟ್ಟು ಪುರಾಣವನು ತೆಗೆದಿಟ್ಟು ಆಗ । ನಾನೂ ಅವರೊಡನೆ ಓಡಿದೆ ॥ 110

ಇಚ್ಛೆ ಬಾಬಾರ ಕಥೆ ಕೇಳಲು । ಬಾಬಾರಂಥವರು ಇಲ್ಲ ಮತ್ತೆಲ್ಲೂ ।
ಭಾಗವತ ಬಿಟ್ಟು ಬೇರೆ ಕಾರ್ಯಗಳು । ಅವರನ್ನು ಸಂತೋಷಗೊಳಿಸವು ॥ 111

ಅದೇ ಕಾರಣಕೆ ಇಲ್ಲಿ ಕಳಿಸಿದುದು । ಅರ್ಧ ಉಳಿದ ಭಾಗವತವ ಓದಿಸಿದರೆನಿಸುವದು ।
ಇದುವೇ ಬಾಬಾರ ಲೀಲೆ ಇರುವದು । ನೆನೆಸಿದರೆ ಪ್ರೀತಿ ಉಕ್ಕುವದು ॥ 112

ಭಾಗವತದ ಕಥೆ ಮುಗಿಯಿತು । ಉಪಕಥೆಯನೂ ಓದಿಯಾಯಿತು ।
ಮಾಧವರಾಯರ ಪೂಜೆಯೂ ಮುಗಿಯಿತು । ಹೊರಗೆ ಬಂದರು ಅವರಾಗ ॥ 113

'ಶ್ಯಾಮಾನ ಹತ್ತಿರ ರೂಪಾಯಿ ಹದಿನೈದು । ದಕ್ಷಿಣೆಯನು ತೆಗೆದುಕೊಂಡು ಬಾ' ಎಂದು ।
ಹೇಳಿ ಕಳಿಸಿದರೆಂದೇ ನಾ ಬಂದುದು । ಬಾಬಾರ ಹೇಳಿಕೆಯಂತೆ ॥ 114

ಕುಳಿತಿದ್ದೆ ನಾ ಸೇವೆ ಮಾಡುತ । ನಿಮ್ಮ ನೆನಪಾಯಿತು ಅಕಸ್ಮಾತ ।
"ಏಳು ಶ್ಯಾಮನ ಹತ್ತಿರ ಹೋಗೆನುತ । ದಕ್ಷಿಣೆ ಪಡೆದು ತಿರುಗಿ ಬಾ" ॥ 115

"ಅವನ ಮನೆಯಲ್ಲಿ ಒಂದಿಷ್ಟು ಕುಳಿತು । ಅವನ ಜೊತೆಯಲಿ ಒಂದಿಷ್ಟು ಆಡಿ ಮಾತು ।
ಪರಸ್ಪರರ ಚಿಂತನೆ ಕುರಿತು । ಆಮೇಲೆ ನೀ ತಿರುಗಿ ಬಾ ಎಂದರು" ॥ 116

ಮಾಧವರಾಯರು ಇದನು ಕೇಳುತ । ಆದರು ಬಹಳ ಆಶ್ಚರ್ಯ ಚಕಿತ ।
ರೂಪಾಯಿ ಬದಲು ತಮ್ಮ ನಮಸ್ಕಾರ ಹೇಳುತ । ಇದೇ ನನ್ನ ದಕ್ಷಿಣೆ ಎಂದರು ॥ 117

ಇರಲಿ ಈಗ ಇದಂತೂ ಆಯಿತು । ಹದಿನೈದು ನಮಸ್ಕಾರಗಳ ತೆಗೆದುಕೊಂಡಾಯಿತು ।
ಇನ್ನು ಬನ್ನಿರಿ ಆಡೋಣ ಮಾತು । ಎಂದು ಅವರಿಗೆ ಹೇಳಿದೆ ॥ 118

ಏನು ಮಾತು ಹೇಳುವಿರೋ ಹೇಳಿರಿ । ನನ್ನ ಶ್ರವಣಗಳನುದ್ಧರಿಸಿರಿ ।
ಬಾಬಾರ ಯಶೋಗಾನವ ಹಾಡಿರಿ । ದುರಿತ ಭಂಗ ಮಾಡುವಂಥದು ॥ 119

ಬಳಿಕ ಮಾಧವರಾಯರು ಕುಳಿತುಕೊಳ್ಳಿರೆನುತ । ಈ ದೇವರದು ಇಂಥವೇ ಆಟ ।
ನಿಮಗಾದರೂ ಇರುವದಿದು ವಿದಿತ । ಕುಳಿತುಕೊಂಡು ಸ್ವಲ್ಪ ವಿಶ್ರಮಿಸಿರಿ ॥ 120

ಈ ಎಲೆ ಮತ್ತು ಕಾತಗಳ ತೆಗೆದುಕೊಳ್ಳಿ । ಸುಣ್ಣ ಅಡಿಕೆ ಇದೆ ಡಬ್ಬಿಯಲ್ಲಿ ।
ಬರುವೆನಾ ಒಂದೇ ಕ್ಷಣದಲ್ಲಿ । ತಲೆಗೆ ಟೊಪ್ಪಿಗೆ ಹಾಕಿಕೊಂಡು ॥ 121

ಅಗಾಧ ಸಾಯಿಬಾಬಾರ ಲೀಲೆಗಳು । ಎಷ್ಟೆಂದು ಹೇಳಲಿ ನಿಮ್ಮೊಳು ।
ಶಿರಡಿಗೆ ಬಂದಾಗಿನಿಂದಲೂ । ನೀವಾದರೂ ಬೇಕಾದಷ್ಟು ನೋಡಿರುವಿರಿ ॥ 122

ನಾನು ಕೇವಲ ಹಳ್ಳಿಯವನಿರಲು । ತಾವೆಲ್ಲ ಪಟ್ಟಣದ ವಾಸಿಗಳು ।
ಏನೇನು ತಮ್ಮ ಹತ್ತಿರ ವರ್ಣಿಸಲು । ಮಿತಿ ಇಲ್ಲದ ಅವರ ಆಟಗಳು ॥ 123

ಬರುವೆನೆಂದು ಒಳಗೆ ಹೋದರು । ದೇವರಿಗೆ ಹೂ ತುಳಸಿ ಏರಿಸಿದರು ।
ಟೊಪ್ಪಿಗೆ ಹಾಕಿಕೊಂಡು ಕೂಡಲೇ ಬಂದರು । ನನ್ನೊಡನೆ ಮಾತಾಡುತ್ತ ಕುಳಿತರು ॥ 124

ಈ ದೇವನದೆಂಥ ಅತರ್ಕ್ಯ ಲೀಲೆ । ಯಾರಿಗೆ ತಿಳಿದೀತಿವನ ಕಳೆ ।
ಆಟ ಮಾಡುವನಂತವಿಲ್ಲದಲೇ । ಆಡಿ ಆಡದಂತಿರುವನು ಮತ್ತೆ ॥ 125

ನೀವಂತೂ ವಿದ್ಯಾಸಕ್ತರು । ಒಬ್ಬರಿಗಿಂತ ಒಬ್ಬ ಜಾಣರು ।
ನಮಗೇನು ತಿಳಿದೀತು ನಾವು ಹಳ್ಳಿಗರು । ಬಾಬಾರ ಅಗಾಧ ಚರಿತ್ರೆಯು ॥ 126

ಅವರೇನು ಮಾತುಗಳ ಹೇಳುವರು । ನಮ್ಮ ಹತ್ತಿರ ಏತಕ್ಕೆ ಕಳಿಸುವರು ।
ಅವರ ಕೃತಿಯ ಅವರೇ ಬಲ್ಲರು । ಮಾನವೀ ವೃತ್ತಿ ಅಲ್ಲ ಅದು ॥ 127

ಈಗ ಮಾತಿಗೆ ಮಾತು ಬಂತು । ಸರಿಯಾದ ಸಂಗತಿಯೇ ನೆನಪಾಯಿತು ।
ಆಡುವ ಬನ್ನಿರಿ ಒಂದಿಷ್ಟು ಮಾತು । ಸಮಯವ ಚೆನ್ನಾಗಿ ಕಳೆಯುವಾ ॥ 128

ಪ್ರತ್ಯಕ್ಷ ನಮ್ಮ ಕಣ್ಣೆದುರಿನಲಿ । ಹೇಳುವೆನು ನಡೆದ ಸಂಗತಿ ಇಲ್ಲಿ ।
ಹೇಗೆ ನಿರ್ಧಾರವು ಯಾರ ಮನದಲ್ಲಿ । ಹಾಗೆಯೇ ಅದನು ಪೂರೈಸುವರು ॥ 129

ಕೆಲವೇಳೆ ಬಾಬಾರೂ ಎಷ್ಟೊಂದು । ಮನುಷ್ಯನ ಪರೀಕ್ಷೆ ಮಾಡುವದು ।
ಭಕ್ತಿ ಪ್ರೇಮವನು ಒರೆಗೆ ಹಚ್ಚುವದು । ಆ ಮೇಲೆ ಉಪದೇಶ ನೀಡುವದು ॥ 130

"ಉಪದೇಶ" ಶಬ್ದ ಕೇಳುತಿದ್ದಂತೆ । ನೆನಪಾಯಿತು ಸಾಠೆಯವರ ಗುರುಚರಿತ್ರದ ಕಥೆ ।
ಒಮ್ಮೆಲೇ ವಿದ್ಯುಲ್ಲತೆಯಂತೆ । ನನ್ನ ಚಿತ್ತದಲಿ ಹೊಳೆಯಿತು ॥ 131

ನನ್ನನ್ನು ಶ್ಯಾಮನ ಹತ್ತಿರ ಕಳಿಸುವ ಈ ಯೋಜನೆಗೆ । ಕಾರಣ ಮಶೀದಿಯಲಿ ನನ್ನ ಚಂಚಲ ಮನಸಿಗೆ ।
ಸ್ಥೈರ್ಯವನು ತರಿಸುವುದಕ್ಕಾಗೇ । ಅಘಟಿತ ಘಟನೆ ಬಾಬಾರದು ॥ 132

ಈ ವಿಚಾರವು ನನ್ನ ಮನಸಿನಲೆದ್ದುದು । ಹಾಗೇ ಒಳಗೆ ಒತ್ತಿ ಹಿಡಿದು ।
ಕಥಾ ಶ್ರವಣದಲಿ ಆಸಕ್ತಿ ಬೆಳೆದಿದ್ದು । ಅದನು ಮೊದಲು ಪೂರ್ತಿಗೊಳಿಸುವಾ ॥133

ಆ ಮೇಲೆ ಬಾಬಾರ ಬಗ್ಗೆ ಸುದ್ದಿಗಳು । ಸ್ವಲ್ಪ ಸ್ವಲ್ಪವಾಗಿ ಆರಂಭವಾಗಲು ।
ಆನಂದವೆನಿಸತೊಡಗಿತು ಚಿತ್ತದೊಳು । ಅವರ ಭಕ್ತ ವತ್ಸಲತೆಯನು ಕಂಡು ॥ 134

ಮುಂದೆ ಮತ್ತೆ ಕಥೆ ಸಾಗಿತು । ದೇಶಮುಖರ ಒಬ್ಬ ಸ್ತ್ರೀಯ ಕುರಿತು ।
ಅವಳ ಮನದಲಿ ಬಂದಿತ್ತು । ಸಂತಸಂಗವ ಮಾಡಬೇಕೆಂದು ॥ 135

ಕೇಳಿ ಸಾಯಿಬಾಬಾರ ಕೀರ್ತಿ । ಸಂಗಮನೇರದ ಜನರ ಸಂಗತಿ ।
ಬಂದಳು ಆ ಅಬಲೆ ಶಿರಡಿಯ ಪ್ರತಿ । ಬಾಬಾರ ದರ್ಶನ ಪ್ರೀತಿಯನಿಟ್ಟುಕೊಂಡು ॥136

ಖಾಶಾಬಾ ದೇಶಮುಖರ ತಾಯಿ । ಹೆಸರು ಅವಳಿಗೆ ರಾಧಾಬಾಯಿ ।
ನಿಷ್ಠೆಯಿಟ್ಟು ಸಮರ್ಥ ಸಾಯಿ । ಚರಣದಲಿ ದರ್ಶನ ತೆಗೆದುಕೊಳ್ಳುವಳು ॥ 137

ಯಥಾಸಾಂಗ ದರ್ಶನವಾಯಿತು । ಮಾರ್ಗಕ್ರಮಿಸಿದ ದಣಿವೂ ಆರಿತು ।
ಶ್ರೀ ಚರಣದಲಿ ಅನುರಾಗ ಉಂಟಾಯಿತು । ತನ್ನ ಕಾರ್ಯವೂ ನೆನಪಾಯಿತು ॥ 138

ಸಾಯಿ ಸಮರ್ಥರ ಗುರು ಮಾಡಿಕೊಳ್ಳುವದು । ಯದಾರ್ಥದಲಿ ಅವರ ಉಪದೇಶ ಪಡೆಯುವದು ।
ಅದರಿಂದ ಪರಮಾರ್ಥವ ಸಾಧಿಸುವದು । ಇದು ಅವಳ ಮನದ ಬಯಕೆ ಇತ್ತು ॥ 139

ವಯಸಿನಲಿ ವೃದ್ಧೆ ಆ ಅಬಲೆ । ಅತ್ಯಂತ ನಿಷ್ಠೆ ಬಾಬಾರ ಮೇಲೆ ।
ನಿರ್ಧಾರ ಮಾಡಿದಳು ಮನದಲ್ಲೇ । ಏನಾದರೂ ಉಪದೇಶ ಪಡೆಯಬೇಕೆಂದು ॥ 140

ಎಲ್ಲಿಯವರೆಗೆ ಬಾಬಾ ಸ್ವತಂತ್ರವಾಗಿ ನನಗೆ । ಕಿವಿಮಂತ್ರವನೊಮ್ಮೆ ಕೊಡುವವರೆಗೆ ।
ಅವರ ಕೃಪಾ ಪಾತ್ರಳಾಗುವವರೆಗೆ । ಇಲ್ಲಿಂದ ಮತ್ತೆಲ್ಲಿಯೂ ಹೋಗಲಾರೆ ॥ 141

ಆಗಬೇಕು ಸಾಯಿ ಮುಖದ್ದೇ ಮಂತ್ರ । ಬೇರೆಡೆಗಾದರೆ ಅದು ಅಪವಿತ್ರ ।
ಶ್ರೀಸಾಯಿ ಸಂತಾಗ್ರಣಿಗಳು ಪವಿತ್ರ । ನನ್ನನ್ನು ಅನುಗ್ರಹಕ್ಕೆ ಪಾತ್ರಳನ್ನಾಗಿಸಲಿ ॥142

ಈ ರೀತಿ ನನ್ನ ಅಂತಃಕರಣದಿ । ದೃಢ ನಿಶ್ಚಯವನ್ನು ಮಾಡಿ ।
ಅನ್ನ ನೀರುಗಳ ವರ್ಜ್ಯ ಮಾಡಿ । ಸತ್ಯಾಗ್ರಹ ಹಿಡಿದು ಕುಳಿತಳು ॥ 143

ಮೊದಲೇ ವೃದ್ಧ ವಯಸಿನ । ಅವಳ ಉದರದಲಿಲ್ಲದೆ ಅನ್ನದ ಕಣ ।
ಮಾಡಲಾರಳು ತೊಟ್ಟು ಜಲಪಾನ । ಉಪದೇಶದಲಿ ಘನ ಶ್ರದ್ಧೆಯನಿಟ್ಟು ॥ 144

ಮೂರು ದಿವಸ ಹಗಲು ರಾತ್ರಿಗಳು । ಮುದುಕಿ ಉಪವಾಸವೇ ಇದ್ದಳು ।
ಪ್ರಾಯೋಪದೇಶ ತನಗೆಂದಳು । ಬಾಬಾರ ಉಪದೇಶ ಸಿಗುವ ದಿನದವರೆಗೆ ॥ 145

ಮಂತ್ರೋಪದೇಶ ಪಡೆಯದ ಹೊರತು । ಏತಕ್ಕೆ ಶಿರಡಿಗೆ ಹೋಗಿ ಬರುವದು ।
ಇಳಿದುಕೊಂಡ ಸ್ಥಳದಲ್ಲೇ ಇದ್ದುಕೊಂಡು । ನಿರ್ವಾಣವನ್ನೇ ಕೈಕೊಂಡಳು ॥ 146

ಮಾಧವರಾಯರಿಗೆ ವಿಚಾರಬಿತ್ತು । ಸರಿಯಲ್ಲ ಈ ನಡೆದ ಪ್ರಕಾರವಂತೂ ।
ಈ ಭವಿತವ್ಯಕ್ಕೇನು ಮಾಡಬೇಕಾಯಿತು । ಅವಳಂತೂ ಮರಣಕ್ಕೂ ಹೆದರಳು ॥147

ಅನ್ನ ನೀರು ಬಿಟ್ಟು ಕೊಟ್ಟಳು । ಹೀಗೆ ಮೂರುದಿನ ತಾಪ ನಡೆಸಿದಳು ।
ಆ ವೃದ್ಧೆ ಬಹಳ ವ್ಯಥೆ ಪಟ್ಟಳು । ಬಹಳ ಉದಾಸಳಾದಳು ॥ 148

ಆ ಮೇಲೆ ಹೋಗಿ ಮಶೀದಿಯಲಿ । ಕುಳಿತುಕೊಂಡರು ಬಾಬಾರ ಬಳಿ ।
ನಿತ್ಯದಂತೆಯೇ ಕುಶಲ ವಾರ್ತೆಗಳಲಿ । ಸಹಜವೆನ್ನುವಂತೆ ಕೇಳಿದರು ॥ 149

ಶಾಮಾ ಈ ಹೊತ್ತಿನ ವಿಚಾರವೇನು । ಸಮಾಚಾರವು ಸರಿಯಾಗಿದೆಯೇನು ।
ಆ ಗಾಣಗ ನಾರಾಯಣನು ಅಂತಸ್ಥ ದುಶ್ಪ್ರವೃತ್ತಿ ಬಹಳೇ ಹೆಚ್ಚಿಕೊಂಡಿರುವನು । ನನಗೆ ಬಹಳ ಕಷ್ಟ ಕೊಡುತಿರುವನು ॥150

ಆ ಮುದುಕಿಯ ವಿಚಾರವಾಗಿ । ಶಾಮನು ಮೊದಲೇ ಬಹಳ ನೊಂದವನಾಗಿ ।
ಅವಳ ಬಗ್ಗೆ ಏನು ಮಾಡಬೇಕೆಂಬುದಾಗಿ । ಬಾಬಾರ ನಿರ್ಧಾರವನು ಕೇಳಿದನು ॥ 151

ದೇವಾ ಇದೆಂಥ ಚಮತ್ಕಾರ ನಿಮ್ಮದು । ನಿಮ್ಮ ಆಟವು ಬೇರೆಯವರಿಗೆ ತಿಳಿಯದು ।
ನೀ ಜನರನು ಒಬ್ಬೊಬ್ಬರಾಗಿ ಇಲ್ಲಿ ತರುವದು । ಮತ್ತೆ ನನಗೇ ವಿಚಾರ ಕೇಳುವಿ ॥ 152

ಆ ದೇಶಮುಖರ ವೃದ್ಧೆ । ಅನ್ನ ನೀರು ತೆಗೆದುಕೊಳ್ಳದೇ ।
ಮೂರು ದಿನ ಕಳೆದಳು ಉಪವಾಸವಿದ್ದೇ । ನಿನ್ನ ಮೇಲೆ ಆಶೆ ಇಟ್ಟುಕೊಂಡು ॥ 153

ಆ ಮುದುಕಿ ಬಲು ಮೊಂಡು । ನಿನ್ನ ಚರಣದಲಿ ನಿಷ್ಠೆ ಇಟ್ಟುಕೊಂಡು ।
ಅವಳೆಡೆಗೆ ನಿನ್ನ ದೃಷ್ಟಿಯಂತೂ ಹಾಯದು । ಅವಳಿಗೇಕೆ ಕಷ್ಟ ಕೊಡುತಿರುವೆ ॥ 154

ಮೊದಲೇ ಅದು ಶುಷ್ಕ ಕಟ್ಟಿಗೆ । ಛಲವೂ ಬಹಳವಿದೆ ಅವಳಿಗೆ ।
ಕಾಣುವುದು ಅನ್ನವಿಲ್ಲದೇ ಹಾಗೇ । ಪ್ರಾಣವನ್ನೇ ತ್ಯಜಿಸುವಳು ॥ 155

ಜನರೆನ್ನುವರು ಮುದುಕಿ ದರ್ಶನಕೆ ಹೋಗಿ । ಆಶೆ ಇಟ್ಟುಕೊಂಡು ಕುಳಿತಳು ಉಪದೇಶಕ್ಕಾಗಿ ।
ಸಾಯಿಬಾಬಾರಿಗೆ ದಯೆ ಇಲ್ಲದಾಗಿ । ಅವಳ ಮರಣಾಧೀನ ಮಾಡಿದರು ॥ 156

ಬಾಬಾ ಆಗಗೊಡದಿರಿ ಇಂಥ ಪ್ರಮಾದ । ಅವಳಿಗೆ ತಿಳಿಸಿ ಅವಳ ಹಿತವಾದ ।
ಮಾಡಿ ಅವಳ ಮೇಲೆ ಪ್ರಸಾದ । ಈ ಅಪ್ರಮಾದವ ಮುಗಿಸಿರಿ ॥ 157

ಮೈಯಲಿ ಉಳಿದಿಲ್ಲ ತ್ರಾಣ । ಕಸಿವಿಸಿಗೊಂಡಿದೆ ಅವಳ ಪ್ರಾಣ ।
ಅವಳು ಹೊಂದಬಹುದು ಮರಣ । ನಿಮಗೆ ಅಪಶಬ್ದ ಬಂದೀತು ॥ 158

ಮುದುಕಿಯದು ಖಡತರ ವ್ರತ । ನಾವಾಗಿರುವೆವು ಚಿಂತಾಕ್ರಾಂತ ।
ದುರ್ದೈವದಿಂದಾದರೆ ಮೃತ । ಅನುಚಿತ ನಡೆದು ಹೋದೀತು ॥ 159

ಮುದುಕಿ ಛಂಡಿ ಹಿಡಿದಿದೆ । ಅವಳ ಮಲೆ ಕೃಪಾನುರಾಗವ ತೋರದೇ ।
ನನಗಂತೂ ದಾರಿ ತೋಚದಾಗಿದೆ । ಸ್ವಮುಖದಿಂದ ಹೇಳಿರವಳಿಗೇನಾದರೂ ॥ 160

ಮುಗಿಸುವೆನಿಲ್ಲಿಗೆ ಅಧ್ಯಾಯವನು । ಶ್ರೋತೃಗಳ ಮುಂದಿನ ಶ್ರವಣೇಚ್ಛೆಯನು ।
ಮುಂದಿನಧ್ಯಾಯದಲಿ ಪೂರೈಸುವೆನು । ಪ್ರೇಮರಸವ ಬೆರೆಸಿ ಅದರಲ್ಲಿ ॥ 161

ಮುಂದೆ ಬಾಬಾ ಮಮತೆಯಿಂದ । ಆ ಮುದುಕಿಗೆ ನೀಡಿದ ಉಪದೇಶದ ।

ಕೇವಲ ಶ್ರವಣ ಮಾತ್ರದಿಂದ । ಅವಿದ್ಯೆ ದೂರ ಓಡೀತು ॥ 162

ಹೇಮಾಡನು ಸಾಯಿ ಚರಣದಲಿ ಶರಣ । ಶ್ರೋತೃಗಳಿಗವನ ಸಾಷ್ಟಾಂಗ ನಮನ ।
ಅಲ್ಪಾಯಾಸದಿಂದ ಭವತರಣ । ಶ್ರವಣ ಮಾಡಲಿದ ತತ್ಪರರಾಗಿರಿ ॥ 163

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಮದನುಗ್ರಹೋ ನಾಮ ಅಷ್ಟಾದಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



# ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹತ್ತೊಂಭತು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಸೂಕ್ಷ್ಮಕ್ಕಿಂತಲೂ ಸೂಕ್ಷ್ಮ ಅತ್ಯಂತ । ಮಹತ್ತಿಗಿಂತಲೂ ಅತ್ಯಂತ ಮಹತ ।
ಹೀಗೆ ಆ ಬ್ರಹ್ಮಸ್ತಂಭ ಪರ್ಯಂತ । ವಸ್ತುಜಾತವೆಲ್ಲವೂ ಈ ಸಾಯಿಯೇ ॥ 1

ಇಂಥ ಈ ಸದ್ವಸ್ತುವನ್ನು । ಕೊಟ್ಟು ರಂಗರೂಪಾದಿ ಆಕಾರಗಳನು ।
ಈ ಚರ್ಮಚಕ್ಷುಗಳಿಂದ ನೋಡಬೇಕಿದನು । ಎಂದು ಅಂತರದಿ ಇಚ್ಛೆ ಉದಿಸಿತು ॥ 2

ಸೂರ್ಯನಿಗೆ ಕಡ್ಡಿ ಬತ್ತಿಗಳನ್ನು ಬೆಳಗುವರು । ಭಕ್ತಿ ಭಾವದಿಂದ ಸೂರ್ಯ ಪೂಜಕರು ।
ಇಲ್ಲವೇ ಬೆಲ್ಲದ ಗಣಪತಿಯನ್ನು ಮಾಡುವರು । ಅವನಿಗೆ ಬೆಲ್ಲದ ನೈವೇದ್ಯೆ ಗಾಣಪತ್ಯರು ಅರ್ಪಿಸುವರು ॥ 3

ಇಲ್ಲವೇ ಮಹಾರ್ಣವದೊಳಗಿಂದ । ನೀರು ತೆಗೆದುಕೊಂಡು ಬೊಗಸೆಯಿಂದ ।
ಅದಕೆ ಅರ್ಘ್ಯವನು ಅರ್ಪಿಸುವದ । ಸಕೃದ್ದರ್ಶನದಿ ಅನುಚಿತ ॥ 4

ಸೂರ್ಯ ಮತ್ತು ಸಿಂಧುಗಳದು । ಮಹಾಪ್ರಭಾವವಿರುವದು ।
ಆದರೆ ಅಲ್ಲಿ ಭಕ್ತಿ ಭಾವವನೇ ನೋಡುವದು । ಉಚಿತಾನುಚಿತಗಳಿಗೆಲ್ಲಿ ಸ್ಥಳ ಅಲ್ಲಿ ॥ 5

'ಸಮಾನ ಶೀಲೆ ವ್ಯಸನೇಷು ಸಖ್ಯಮ್' । ಇದೊಂದು ಇರುವದು ಸಾಮಾನ್ಯ ನಿಯಮ ।
ಆದರೂ ಈ ದೇಹಾತ್ಮ ಸಂಗಮ । ಆ ನಿಯಮಕ್ಕೆ ಅಪವಾದವಾಗಿರುವದು ॥ 6

ಸ್ವಭಾವದಲಿ ಇವೆರಡೂ ಭಿನ್ನ । ಆದರೂ ಇಬ್ಬರ ಸ್ನೇಹ ವಿಲಕ್ಷಣ ।
ಬಿಟ್ಟಿರಲಾರರು ಒಬ್ಬರೊಬ್ಬರನ । ಒಂದು ಕ್ಷಣವೂ ದೂರಿರಲಾರರು ॥ 7

ಈ ದೇಹವಾದರೂ ಇರುವದು ನಶ್ವರ । ಆತ್ಮವು ನಿರ್ವಿಕಾರ ಮತ್ತು ಅಕ್ಷರ ।
ಆದರೂ ಇಬ್ಬರ ಪ್ರೀತಿ ಅಪರಂಪಾರ । ಅದರಿಂದಲೇ ಈ ಸಂಸಾರ ಪರಿಭ್ರಮ ॥ 8

ಆತ್ಮವೇ ಶಕ್ತಿ ಮಹತ । ಆದಕಿಂತಲೂ ಸೂಕ್ಷ್ಮ ಅವ್ಯಾಕೃತ ।
ಅದೇ ಆಕಾರ ಪ್ರಕೃತಿ ಅವ್ಯಕ್ತ । ಮಾಯೆ ಎನ್ನುವರು ಅದಕ್ಕೇ ॥ 9

ಈ ಎಲ್ಲಕಿಂತಲೂ ಪುರುಷನು ಸೂಕ್ಷ್ಮ । ಅಲ್ಲಿಯೇ ಇಂದ್ರಿಯಾದಿಗಳಿಗೆ ಉಪರಮ ।
ಅದೇ ಅಂತಿಮ ಗತಿ ಪರಮ । ಶುದ್ಧ ಬ್ರಹ್ಮವೆಂಬುದು ಅದೇ ॥ 10

ಹೀಗೆ ಈ ಆತ್ಮವು ಸಂಸಾರಿ ಎಂದು । ಎನಿಸುವದು ಮಾಯಾಕರ್ಮಾನುಸಾರಿಯಿದೆಂದು ।
ಸ್ವಯಂ ನಿರ್ವಿಕಾರಿಯಾಗಿದ್ದು । ಸ್ಫಟಿಕದಂತೆ ನಿರ್ಲೇಪನು ॥ 11
ಸ್ಫಟಿಕವನು ಕೆಂಪು ಕಪ್ಪು ಹಳದಿ । ಕಾಣುವದು ಆಯಾ ಬಣ್ಣಗಳ ತೆರದಿ ।
ತಾನಿದ್ದುಕೊಂಡು ನಿರ್ವಿಕಾರದಿ । ಎಲ್ಲ ವಿಕಾರ ವಿರಹಿತನು ॥ 12

ಬಯಲಿನಲ್ಲಿಯ ಮೃಗಜಲದಂತೆ । ಶುಕ್ತಿಕಾಧಿಷ್ಠಿತ ಬೆಳ್ಳಿಯಂತೆ ।
ಇಲ್ಲವೇ ಭಾಸವಾಗುವದು ಹಾವಿನಂತೆ । ಹಗ್ಗದ ಸುರುಳಿಯನು ಕಂಡಾಗ ॥ 13

ಹಗ್ಗವನ್ನು ಸರ್ಪವೆನ್ನುವದು । ವಾಸ್ತವಿಕವಾಗಿ ಸರಿಯಲ್ಲ ಇದು ।
ಹಾಗೆಯೇ ಅಭಿಮಾನವು 'ನಾ ದೇಹ' ವೆಂಬುದ । ಮುಕ್ತನಿಗೆ ಮಿಥ್ಯಾ ಬಂಧನವಿದು ॥14

ದೇಹೇಂದ್ರಿಯ ಮನಃ ಪ್ರಾಣ । ಎಲ್ಲಿ ಇವೆಲ್ಲದರ ಅಭಿಮಾನ ।
ಅಲ್ಲಿ ಈ ಕರ್ತೃತ್ವ ಭೋಕ್ತೃತ್ವ ಪ್ರಮಾಣ । ಸುಖದುಃಖಗಳ ಜ್ಞಾನ ಅನಿವಾರ್ಯವು ॥ 16

ವಟದ ಬೀಜವು ಎಷ್ಟು ಚಿಕ್ಕದು । ಗರ್ಭದಿ ವಟವೃಕ್ಷದ ಶಕ್ತಿಯ ಹೊಂದಿರುವದು ।
ಅಗಣಿತ ಬೀಜಗಳ ವೃಕ್ಷವು ಹೊಂದಿರುವುದು । ವೃಕ್ಷ ಕೋಟಿಗಳು ಅದರಲ್ಲಿ ॥ 17

ಹೀಗೆ ಬೀಜಗಳಿದ್ದಷ್ಟು ವೃಕ್ಷ । ಆಪ್ರಲಯಾಂತ ಕೊಡುವವು ಸಾಕ್ಷ್ಯ ।
ಹೀಗೆಯೇ ವಿಶ್ವವೂ ಪ್ರತ್ಯಕ್ಷ । ಗಮನವಿಟ್ಟು ನೋಡಿರಿ ನೀವು ॥ 18

ಶಾಶ್ವತತೆ ನಿರ್ಭಯತೆ ಮುಕ್ತತೆ । ಸ್ವತಂತ್ರತೆ ಪರಮಾತ್ಮ ಪ್ರಾಪ್ತತೆ ।
ಇದೇ ಜೀವನದ ಸಾಫಲ್ಯತೆ । ಇತಿಕರ್ತವ್ಯತೆಯು ಜನ್ಮದ್ದು ॥ 19

ಜ್ಞಾನದ ಹೊರತು ಮೋಕ್ಷವಿಲ್ಲ । ವಿರಕ್ತಿಯ ಹೊರತು ಜ್ಞಾನವಿಲ್ಲ ।
ಎಲ್ಲಿಯವರೆಗೆ ಸಂಸಾರವು ಅನಿತ್ಯವೆನಿಸಿಲ್ಲ । ವಿರಕ್ತಿ ಭಾವನೆಯೇಬಾರದು ॥ 20

ಈ ಅನಿತ್ಯತ್ವದ ದಾರಿಯಲ್ಲಿ । ದೃಷ್ಟಿ ತೊಡಕುವದು ವಿಶ್ವಾಭಾಸದಲ್ಲಿ ।
ಅದರಿಂದ ಪಾಂಥಸ್ಥ ನಡುದಾರಿಯಲ್ಲಿ । ಮುಂದೆಲ್ಲಿಗೆಂಬದು ತಿಳಿಯದೇ ಒದ್ದಾಡುವನು ॥ 21

ಹೀಗೆ ಈ ವಿಶ್ವಾಭಾಸ । ಚಿನ್ಮಾತ್ರದಲಿ ಮಿಥ್ಯಾ ಮಾಯಾವಿಲಾಸ ।
ಪ್ರಪಂಚವೆಲ್ಲ ಸ್ವಪ್ನ ವಿನ್ಯಾಸ । ಅದಕಾಗಿ ವ್ಯರ್ಥ ಪ್ರಯಾಸವೇಕೆ ॥ 22

ಸ್ವಪ್ನ ಕಾಣುವಾಗ ಎಚ್ಚರಾಗಲು । ಸ್ವಪ್ನವು ಕಾಣದಂತಾಗುವದು ।
ಅದರಂತೆಯೇ ನಿಜ ಸ್ವರೂಪದಿ ಸ್ಥಿತನಿರಲು । ಪ್ರಪಂಚಾರ್ಥವು ಅವನಿಗೆ ತಿಳಿಯದು ॥ 23

ಆತ್ಮೈಕ್ಯ ವಿಜ್ಞಾನದ ಹೊರತು । ಆತ್ಮಯಾಥಾತ್ಮ್ಯ ಪ್ರಕಾಶನದ ಹೊರತು ।
ಹರಿಯಲು ಶೋಕ ಮೋಹಾದಿಗಳ ಕಟ್ಟು । ಬೇರೆ ಜಾಗೃತಿ ಎಂಬುದಿಲ್ಲ ॥ 24

ಎಲ್ಲಕಿಂತಲೂ ಶ್ರೇಷ್ಠವಾದ ಜ್ಞಾನ । ಉಪದೇಶಿಸುತ್ತಿದ್ದರು ಬಾಬಾ ರಾತ್ರಂದಿನ ।
ಆದರೂ ಭಕ್ತಿ ಮಾರ್ಗದ ಅವಲಂಬನ । ಹೇಳುತಿದ್ದರು ಸರ್ವಸಾಧಾರಣವಾಗಿ ॥ 25

ಜ್ಞಾನ ಮಾರ್ಗದ ಮಹಿತಿಯನು ಹೇಳುತಿದ್ದಾಗ್ಯೆ । ಆ ಮಾರ್ಗವು ರಾಮಫಲದ ಹಾಗೆ ।
ಭಕ್ತಿ ಮಾರ್ಗವು ಸೀತಾಫಲ ತಿಂದ ಹಾಗೆ । ಸ್ವಲ್ಪ ಸಾಧನದಿಂದ ರಸಮಧುರ ॥ 26

ಭಕ್ತಿಯು ಸೌಮ್ಯವಾದ ಸೀತಾಫಲ । ಜ್ಞಾನವು ಪರಿಪಕ್ವ ರಾಮಫಲ ।
ಒಂದಕ್ಕಿಂತ ಒಂದು ಮಧುರ ಫಲ । ಪರಿಮಳವೂ ಅದರಂತೆಯೇ ಮಧುರವು ॥ 27

ರಾಮಫಲದ ಒಳಗಿನ ಸಾರ । ಪಾಡಗಾಯಿಯ ತೆಗೆದು ಹಣ್ಣು ಮಾಡಿಸಲು ಉಗ್ರ ।
ಗಿಡದಲ್ಲಿಯೇ ಹಣ್ಣಾಗುವವರೆಗೆ ಕಾಯ್ವವರ । ಪಾಲಿಗೆ ಮಧುರ ಆ ಫಲವು ॥ 28

ರಾಮಫಲವು ರುಚಿ ಬಲು । ಹಣ್ಣಾಗುವವರೆಗೆ ಗಿಡದಲ್ಲಿಯೇ ಬಿಡಲು ।
ಉಗ್ರವಾಗಿರುವದು ಮೊದಲೇ ನೆಲಕೆ ಬೀಳಿಸಲು । ಗಿಡದಲಿ ಹಣ್ಣಾದರೆ ಬಲು ರುಚಿ ॥ 29

ಮೇಲಿಂದ ಮೇಲೆಯೇ ಹಣ್ಣಾಗಿಸಬಲ್ಲ । ಅವನೇ ಅದನು ಆಸ್ವಾದಿಸಬಲ್ಲ ।
ಸೀತಾಫಲಕೆ ಈ ಕಷ್ಟವಿಲ್ಲ । ಅಲ್ಪ ಗುಣದಿಂದಲೇ ಬಹು ಮುಖ್ಯ ॥ 30

ರಾಮಫಲಕೆ ಪತನಭಯವಿರುವಂತೆ । ಜ್ಞಾನಿಗೂ ಇಲ್ಲ ನಿರ್ಭಯತೆ ।
ಆಗದೇ ಒಂದಿಷ್ಟೂ ಅಲಕ್ಷತೆ । ಸಿದ್ಧಿ ವಿಜಯವ ಸಾಧಿಸಬೇಕು ॥ 31

ದಯಾಘನರಾದ ಸಾಯಿ ಅದಕೇ । ಹೆಚ್ಚಾಗಿ ತನ್ನ ಶಿಷ್ಯಗಣಕೆ ।
ಭಕ್ತಿ ಮತ್ತು ನಾಮಸ್ಮರಣಕೆ । ಪ್ರಾಶಸ್ತ್ಯವಿತ್ತು ವಿವರಿಸುತಿದ್ದರು ॥ 32

ಜ್ಞಾನಕ್ಕಿಂತ ಧ್ಯಾನವು ಶ್ರೇಷ್ಠ । ಹೀಗೆ ಅರ್ಜುನನಿಗೆ ಹೇಳಿದ ಭಗವಂತ ।
ಸಾಯಿಯೂ ಈ ಸಾಧನವನೇ ಹೇಳುತ । ಇದ್ದರು ಭಕ್ತ ಭವ ಬಂಧನ ಬಿಡಿಸಲು ॥ 33

ಇರಲಿ ಈ ವಿಷಯದ ಕಥೆಯನ್ನು । ಹೇಳುತ್ತ ಹಿಂದಿನಧ್ಯಾಯದಲಿ ಅಷ್ಟಕ್ಕೇ ನಿಲ್ಲಿಸಿದೆನು ।
ಅದನ್ನೇ ಇಲ್ಲಿ ಮುಂದುವರಿಸುವೆನು । ಶ್ರೋತೃಗಳು ಸಾದರದಿ ಕೇಳಬೇಕು ॥ 34

ವೃದ್ಧ ವಯಸ್ಸಿನ ಶಕ್ತಿ ಕ್ಷೀಣಿಸಿದ । ಮುದುಕಿ ಕುಳಿತಳು ಹಟದಿಂದ ।
ಮಂತ್ರ ಪಡೆಯಲು ಸಾಯಿಯಿಂದ । ಉಪವಾಸ ವ್ರತವ ಕೈಕೊಂಡಳು ॥ 35

ನೋಡಿ ಆ ವೃದ್ಧೆಯ ಸ್ಥಿತಿಯನು । ಮಾಧವರಾಯರು ಗಾಬರಿಯಾದನು ।
ಮಧ್ಯಸ್ಥಿಗಾಗಿ ಬಾಬಾರ ಬಳಿ ಹೋದನು । ಇಲ್ಲಿಯವರೆಗೆ ಕಥೆ ಬಂದಿತ್ತು ॥ 36

ಸಾಯಿ ಸಂಕಲ್ಪದ ವಿದ್ಯೋತಿ । ಬೆಳಗಿತು ಈ ಚರಿತ್ರಜ್ಯೋತಿ ।
ಮಾರ್ಗದರ್ಶಕವಾಗಲಿ ಅವರ ಜ್ಯೋತಿ । ಭಾವಾರ್ಥಿಗಳಿಗೆ ಮಾರ್ಗ ತೋರಲಿ ॥ 37

ಬಾಬಾರ ಆಜ್ಞೆಯಂತೆ । ಮಾಧವರಾಯರೂ ನನ್ನ ಜೊತೆ ।
ಆರಂಭಿಸಿದ ಈ ಸುಂದರ ಕಥೆ । ಅದನೇ ಮುಂದೆ ಸಾಗಿಸುವಾ ॥ 38

ಹೇಳಿದರು ನೋಡಿ ಮುದುಕಿಯ ನಿಗ್ರಹ । ಬಾಬಾ ಕೊಟ್ಟರವಳಿಗೆ ಅನುಗ್ರಹ ।
ಬಿಡಿಸಿ ಅವಳ ಮನದ ಆಗ್ರಹ । ಹೊಸ ತರದ ಕಥೆಯ ಮಾಡಿ ತೋರಿದರು ॥ 39

ಆಮೇಲೆ ಬಾಬಾ ಮಮತೆಯಿಂದ । ಕರೆದು ಅವಳನು ಮುಂದೆ ।
"ತಾಯಿ ನೀನೇಕೆ ಹಟ ಹಿಡಿದೆ ಹಾಗೆ । ನಿನಗೇನು ಸಾಯಬೇಕಾಗಿತ್ತೇ" ॥ 40

ಯಾರೇ ಪ್ರೌಢ ಸ್ತ್ರೀ ಬರಲಿ । ಕರೆಯುವರವಳನು ತಾಯಿ ಎನುತಲಿ ।
ಕರೆವರು ಕಾಕಾ, ಬಾಪೂ ಭಾಯಿ ಪುರುಷರಲಿ । ಮಧುರ ವಚನವೇ ಒಂದು ಚಮತ್ಕೃತಿ ॥ 41

ಹೇಗೆ ಪ್ರೇಮಮಯ ಅವರ ಅಂತರ । ಅಂತೆಯೇ ನುಡಿಯೂ ಮಧುರ ।
ದುಃಖಿದೀನ ದರಿದ್ರರ ಆಧಾರ । ದೀನ ದಯಾಳು ಆ ಸಾಯಿ ॥ 42

ಈ ರೀತಿ ಅವಳನ್ನು ಕರೆದು । ತಮ್ಮೆದುರು ಅವಳನ್ನು ಕೂಡ್ರಿಸಿಕೊಂಡು ।
ಗುಪ್ತ ಬೀಗದ ಕೈ ತಮ್ಮ ಗುರುತ್ವದ್ದು । ಅವಳ ಕೈಗೆ ಇತ್ತರು ॥ 43

ಮಾಡಲು ಭವಸಂತಾಪ ಶಮನ । ಭಕ್ತ ಚಕೋರರ ತೃಷಾಪನಯನ ।
ಮಳೆಗರೆದರು ಬಾಬಾ ಆಗಿ ಚಿದ್ಘನ । ಸ್ವಾನಂದ ಜೀವನವದ ಕುಡಿಯಿರಿ ॥ 44

ಎಂದರು ತಾಯೆ, ನಿಜ ಹೇಳು ನೀನೇಕೆ । ಇಷ್ಟೊಂದು ಕಷ್ಟ ಕೊಟ್ಟೆ ಈ ಜೀವಕ್ಕೆ ।
ನಾ ಕೇವಲ ಫಕೀರ ಬೇಡುವೆನು ಭಿಕ್ಷೆ । ನನ್ನೆಡೆ ನೀ ಮಮತೆಯಲಿ ನೋಡು ॥ 45

ನಿಜವಾಗಿಯೂ ನೀ ತಾಯಿ ನಾ ಮಗನಿರುವನು । ಇನ್ನು ನನ್ನೆಡೆಗೆ ಲಕ್ಷ ಕೊಡು ।
ನಾ ಹೇಳುವೆ ಮಾತು ನಿನಗೊಂದು । ಅದರಿಂದ ಪರಮ ಸುಖವಾದೀತು ॥ 46

ನೋಡು ನನಗೊಬ್ಬ ಗುರು ಇದ್ದ । ಕೃಪಾಸಾಗರನವ ಜ್ಞಾನಿ ದೊಡ್ಡ ।
ಅವನ ಸೇವೆ ಮಾಡಿ ಮಾಡಿ ದಣಿದೆ । ಆದರೂ ಕಿವಿ ಮಂತ್ರವ ಕೊಡಲೊಲ್ಲ ॥ 47

ಹೊಂದಿದ್ದೆ ಪ್ರಬಲವಾದ ಆಸೆಯನ್ನು । ಎಂದೂ ಬಿಡಬಾರದು ಇವನ ಬೆನ್ನು ।
ಇವನ ಮುಖದಿಂದಲೇ ಪಡೆಯಬೇಕು ಮಂತ್ರವನ್ನು । ಎಷ್ಟೇ ಕಷ್ಟವಾದರೂ ॥ 48

ಮೊದಲು ಅವನು ನನ್ನನು ಕಾಡಿದನು । ಎರಡೇ ದುಡ್ಡು ಬೇಡಿದನು ।
ಕೂಡಲೇ ನಾನದ ಕೊಟ್ಟು ಬಿಟ್ಟೆನು । ಮತ್ತು ಮಂತ್ರಾಕ್ಷರಕ್ಕಾಗಿ ಬಲು ಪ್ರಾರ್ಥಿಸಿದೆನು ॥ 49

ನನ್ನ ಗುರುವು ಪೂರ್ಣಕಾಮ । ಹೇಗೆನಬೇಕೆವನಿಗೆ ನಿಷ್ಕಾಮ ।
ಶಿಷ್ಯನಿಗೆ ಕೇಳುವನು ದಾಮ । ಎರಡೇ ದುಡ್ಡನ್ನಾದರೂ ॥ 50

ಹೀಗೆ ಶಂಕಿಸುವದು ಸರಿಯಲ್ಲ । ವ್ಯಾವಹಾರಿಕ ದುಡ್ಡಿನ ಕಾಮನೆ ಇದಲ್ಲ ।
ಇದು ಅವನ ಕಲ್ಪನೆಯೇ ಅಲ್ಲ । ಅವನಿಗೆ ದುಡ್ಡಿನಿಂದೇನಾಗಬೇಕು ॥ 51

ನಿಷ್ಠೆ ಮತ್ತು ಧೈರ್ಯ ಇವೆರಡು । ಬೇರಲ್ಲ ಇವೇ ಎರಡು ಅವ ಕೇಳಿದ ದುಡ್ಡು ।
ನಾನಾಗಲೇ ಕೊಟ್ಟು ಬಿಟ್ಟೆ ತೆಗೆದು । ಅದರಿಂದ ಪ್ರಸನ್ನನಾದ ಆ ಗುರುರಾಯ ॥ 52

ಧೈರ್ಯವೆಂದರೇನೇ ಸಹನೆಯಿಂದ ಕಾಯುವದು । ಕೈ ಬಿಡಬೇಡ ಅದನು ಎಂದೂ ।
ಕಂಗೆಟ್ಟಾಗ ಪ್ರಸಂಗ ಬಂದು । ಅದೇ ಆಚೆದಡ ಸೇರಿಸುವದು ॥ 53

ಪುರುಷರ ಪೌರುಷವೆಂದರೇ ಈ ನಿಧಾನತೆ । ಪರಿಹರಿಸುವದಿದು ಪಾಪ ತಾಪ ದೈನ್ಯತೆ ।
ಯುಕ್ತಿ ಪ್ರಯುಕ್ತಿಗಳಿಂದ ಆಪತ್ತು ದೂರಾಗಿಸುತ್ತೇ । ಭಯಭೀತಿಗಳನು ಬದಿಗೊತ್ತಿ ॥ 54

ನಿಧಾನತೆಯಂತೆ ಯಶದ ಪಾಲು । ಓಡಿ ಹೋಗುವವು ವಿಪತ್ತಿಗಳು ।
ಇಲ್ಲಿ ಅವಿಚಾರದ ಮುಳ್ಳು । ಯಾರಿಗೂ ಗೊತ್ತಿಲ್ಲ ॥ 55

ಸಬೂರಿಯು ಸದ್ಗುಣದ ಖಣಿ । ಸದ್ವಿಚಾರ ರಾಜನಿಗೆ ಇವಳು ರಾಣಿ ।
ನಿಷ್ಠೆ ಇವಳ ಖಾಸ ಭಗಿನಿ । ಜೀವ ಪ್ರಾಣರಿವರಿಬ್ಬರೂ ॥ 56

ಮಾನವನಿರಲು ಸಬೂರಿ ರಹಿತ । ಸ್ಥಿತಿ ಅವನದು ದೈನ್ಯ ಭರಿತ ।
ಪಂಡಿತನಿರಲಿ ಅಥವಾ ಗುಣವಂತ । ಇದು ಇಲ್ಲದ ಜೀವನವೇ ವ್ಯರ್ಥ ॥ 57

ಗುರುವಿದ್ದರೂ ಮಹಾ ಪ್ರಬಲ । ಅಪೇಕ್ಷಿಸುವನು ಶಿಷ್ಯ ಪ್ರಜ್ಞೆಯ ಕೇವಲ ।
ಗುರುಪದದಲಿ ನಿಷ್ಠೆ ಸಬಲ । ಧೈರ್ಯಬಲವೇ ಸಬೂರಿ ॥ 58

ಹೇಗೆ ಮಣಿ ಮತ್ತು ಕಲ್ಲು ಗುಂಡು । ಸಾಣೆ ಹಿಡಿಯಲು ಹೊಳೆಯುವವು ಎರಡೂ ।
ಆದರೂ ಕಲ್ಲು ಕಲ್ಲಾಗಿಯೇ ಉಳಿಯುವದು । ಮಣಿ ಮಾತ್ರ ತೇಜದಿಂದ ಮಿಂಚುವದು ॥ 59

ಒಂದೇ ಸಂಸ್ಕಾರಕೊಟ್ಟರೂ ಎರಡಕ್ಕೂ । ಕಲ್ಲಿಗೆ ಬಂದೀತೆ ಮಣಿಯ ಬೆಳಕು ।
ಕಲ್ಲು ನಿಜಗುಣದಂತೆ ನುಣುಪಾದರೆ ಸಾಕು । ಮಣಿ ಮಾತ್ರ ಸತೇಜ ವಜ್ರವಾಗುವದು ॥ 60

ಹನ್ನೆರಡು ವರ್ಷ ಹತ್ತಿರ ಇಟ್ಟುಕೊಂಡನು । ಗುರುವು ಸಾಕಿ ದೊಡ್ಡವನ ಮಾಡಿದನು ।
ಅನ್ನ ವಸ್ತ್ರಗಳಿಗೆ ಕೊರತೆ ಇರಲಿಲ್ಲವೇನೂ । ಅನಿವಾರ ಪ್ರೀತಿಯೂ ತುಂಬಿತ್ತು ॥ 61

ಭಕ್ತಿ ಪ್ರೇಮಗಳ ಪುತ್ಥಳಿಯಂತೆ । ಅವನಿಗೆ ಶಿಷ್ಯನ ಮೇಲೆ ನಿಜವಾದ ಮಮತೆ ।
ಅಪರೂಪಕ್ಕೆ ದೊರಕುವರು ನನ್ನ ಗುರುವಿನಂತೆ । ಆ ಸುಖವನೇನು ಬಣ್ಣಿಸಲಿ ॥ 62

ಏನು ಆ ಪ್ರೇಮದ ವರ್ಣನೆ ಎನಲು । ಮುಖ ನೋಡಿದರೆ ಧ್ಯಾನಸ್ಥ ನಯನಗಳು ।
ನಾವಿಬ್ಬರೂ ಆನಂದ ಘನರಿರಲು । ಅನ್ಯಾವಲೋಕನವ ಅರಿಯೆ ನಾನು ॥ 63

ಪ್ರೀತಿಯಿಂದ ಗುರುಮುಖಾವಲೋಕನ । ಮಾಡುತಿದ್ದೆ ನಾ ರಾತ್ರಂದಿನ ।
ಮರೆತುಬಿಟ್ಟಿದ್ದೆ ಹಸಿವೆ ನೀರಡಿಕೆಗಳನ । ಗುರುವಿನ ಹೊರತು ಮನ ಅಸ್ವಸ್ಥವಾಗುವದು ॥ 64

ಅವನ ಹೊರತು ಬೇರೆ ಧ್ಯಾನವಿಲ್ಲ । ಅವನ ಬಿಟ್ಟು ಬೇರೆ ಲಕ್ಷ್ಯವಿಲ್ಲ ।
ನಿತ್ಯ ಅನುಸಂಧಾನ ಅವನದೇ ಎಲ್ಲ । ವಿಚಿತ್ರ ಮಹಿಮೆ ಗುರುವಿನದು ॥ 65

ಇದೇ ಅಪೇಕ್ಷೆ ಇತ್ತು ನನ್ನ ಗುರುವಿನದು । ಇಚ್ಛಿಸಲಿಲ್ಲ ಇದಕಿಂತ ಬೇರೊಂದು ।
ಮಾಡಲಿಲ್ಲ ನನ್ನ ಉಪೇಕ್ಷೆಯನೆಂದೂ । ಸಂಕಟದಲಿ ರಕ್ಷಣೆ ಯಾವಾಗಲೂ ॥ 66

ಒಮ್ಮೊಮ್ಮೆ ಸ್ಥಳ ನನಗೆ ಚರಣದೆಡೆ । ಮತ್ತೊಮ್ಮೆ ಸಮುದ್ರದ ಆಚೆ ದಂಡೆ ।
ಆದರೂ ಸಂಗಮ ಸುಖವ ಅಂತರಿಸದೆ । ಕೃಪಾದೃಷ್ಟಿಯಿಂದ ನೋಡಿಕೊಳ್ಳುವರು ॥ 67

ಆಮೆಯು ತನ್ನ ಮರಿಗೆ । ನಿಜ ದೃಷ್ಟಿಯ ಆಹಾರನೀಯುವ ಹಾಗೆ ।
ನನ್ನ ಗುರುವಾದರೂ ಅದರ ಹಾಗೆ । ದೃಷ್ಟಿಯಿಂದ ಮಗುವ ಜೋಪಾನ ಮಾಡುವಳು ॥ 68

ಅಮ್ಮಾ ಕುಳಿತು ಈ ಮಶೀದಿಯಲ್ಲಿ । ಹೇಳುವೆನಿದನು ಪ್ರಮಾಣವೆಂದು ತಿಳಿ ।
ಗುರುಮಂತ್ರ ಊದಲಿಲ್ಲ ನನ್ನ ಕಿವಿಯಲ್ಲಿ । ನಾ ನಿನ್ನ ಕಿವಿಯಲೇನುಸುರಲಿ ॥ 69

ಆಮೆಯ ಆ ಪ್ರೇಮ ದೃಷ್ಟಿ । ಅದರಿಂದಲೇ ಮರಿಗೆ ಸುಖ ಸಂತುಷ್ಟಿ ।
ತಾಯಿ ಏತಕೆ ವ್ಯರ್ಥಪಟ್ಟಿ । ನಿಜವಾಗಿ ಉಪದೇಶದ ಮಾತು ನಾನರಿಯೆನು ॥ 70

ತಾಯೀ ಆಮೆ ನದಿಯ ಆ ದಡದಲ್ಲಿ । ಮರಿಗಳು ದೂರ ಮರಳಿನಲ್ಲಿ ।
ಪಾಲನೆ ಪೋಷಣೆ ದೃಷ್ಟಿ ಮಾತ್ರದಲ್ಲಿ । ಮಂತ್ರದ ಪ್ರಯತ್ನ ಎಲ್ಲ ಸುಳ್ಳು ॥ 71

ಅದಕೆ ಹೋಗಿನ್ನು ಊಟ ಮಾಡು । ಜೀವವ ಮಾಡಬೇಡ ಕಷ್ಟಕ್ಕೆ ಈಡು ।
ನನ್ನ ಕಡೆಗೆ ಮಾತ್ರ ಚಿತ್ತವಿಡು । ಪರಮಾರ್ಥವನ್ನು ಪಡೆಯುವಿ ಅದರಿಂದ ॥ 72

ಅನನ್ಯ ಭಾವದಿಂದ ನೀ ನೋಡು ನನ್ನೆಡೆಗೆ । ನಾನೂ ಹಾಗೇ ನೋಡುವೆ ನಿನ್ನ ಕಡೆಗೆ ।
ನನ್ನ ಗುರು ಬೇರೇನೂ ಕೊಡಲಿಲ್ಲ ನನಗೆ । ಎಂಥ ಶಿಕ್ಷಣವನೂ ಕೊಡಲಿಲ್ಲ ॥ 73

ಸಾಧನ ಸಂಪನ್ನತೆ ಬೇಕಿಲ್ಲ । ಷಟ್‌ಶಾಸ್ತ್ರ ಚಾತುರ್ಯತೆಯ ಅವಶ್ಯಕತೆಯಿಲ್ಲ ।
ಕರ್ತನೂ ಹರ್ತನೂ ಗುರುವೇ ಎಲ್ಲ । ಎಂಬ ಸಂಪೂರ್ಣ ನಂಬಿಕೆ ಇರಬೇಕು ॥ 74

ಅದಕೆ ಗುರುವಿನ ಮಹಿತಿ ದೊಡ್ಡದು । ಹರಿಹರಬ್ರಹ್ಮವೆಲ್ಲ ಗುರುವೆಂದು ।
ಇರುವನು ಹೀಗೆ ತಿಳಿದುಕೊಂಡು । ಮೂಲೋಕದಲಿ ಅವನೇ ಧನ್ಯನು" ॥ 75

ಈ ರೀತಿ ಮುದುಕಿಗೆ ಬೋಧಿಸಲು । ಆ ಕಥೆ ಅವಳ ಮನದಾಳಕೆ ಇಳಿಯಲು ।
ತಲೆ ಇಟ್ಟು ಮಹಾರಾಜರ ಚರಣದೊಳು । ವ್ರತನಿವೃತ್ತಿಯನು ಕೈ ಕೊಂಡಳು ॥ 76

ಕೇಳಿ ಸಂಪೂರ್ಣವಾಗಿ ಈ ಕಥೆಯನು । ಅರಿತು ಅದರ ಸಮರ್ಪಕತೆಯನು ।
ಮನದಲಿ ಸಾನಂದ ವಿಸ್ಮಿತನಾದೆನು । ಕಥೆಯ ಸಾರ್ಥಕತೆಯನು ನೋಡಿ ॥ 77

ಬಾಬಾರ ಈ ಲೀಲೆಯನು ಕಂಡು । ಪರಮಾನಂದದಿ ಕಂಠ ಬಿಗಿದು ।
ಪ್ರೇಮೋದ್ರೇಕದಿಂದ ಅಳು ಉಕ್ಕಿ ಬಂದು । ಅಂತರದಲಿ ಸದ್ಬೋಧದ ಅಚ್ಚೊತ್ತಿತ್ತು ॥ 78

ಕಂಠವು ಸಗದ್ಗದವಾದದ್ದು ಕಂಡು । ಮಾಧವರಾಯರು ನನಗೆಂದುದು ।
ಅಣ್ಣಾ ಸಾಹೇಬರೇ ಏನಿದು । ಸ್ತಬ್ಧರಾಗಿ ಕುಳಿತಿರೇಕೆ ॥ 79

ಅಗಣಿತ ಕಥೆಗಳು ಬಾಬಾರವು ಹೀಗೆ । ಎಷ್ಟೆಂದು ಹೇಳಲಿ ನಾ ನಿಮಗೆ ।
ಮಾಧವರಾಯರು ಹೀಗೆ ನುಡಿಯುತಿರುವಾಗ್ಯೆ । ಗಂಟೆ ನುಡಿಯತೊಡಗಿತು ॥ 80

ದಿನಾಲೂ ಮದ್ಯಾನ್ಹ ಊಟದ ಮೊದಲು । ಭಕ್ತರು ಹೋಗಿ ಮಶೀದಿಯೊಳು ।
ಇತ್ತು ಗಂಧಾಕ್ಷತೆ ಅರ್ಘ್ಯ ಪಾದ್ಯಾದಿಗಳು । ವಿಧಿಪೂರ್ವಕ ಪೂಜೆ ಮಾಡುವರು ಬಾಬಾರದು ॥ 81

ಆಮೇಲೆ ಪಂಚಾರತಿಯದು । ಬಾಪೂಸಾಹೇಬ ಜೋಗರಿಂದ ನಡೆಯುವದು ।
ಭಕ್ತಿ ಪ್ರೇಮದಿಂದ ಬೆಳಗುವದು । ಭಕ್ತ ಜನರ ಆರತಿ ಹಾಡಿನ ಜೊತೆ ॥ 82

ಇದು ಆ ಆರತಿಯ ನಿದರ್ಶಕವು । ಗಣಗಣ ಗಂಟೆಯ ನಾದವು ।
ಕೇಳಿ ನಾವೂ ಮಶೀದಿಗೆ ನಡೆದವು । ಮನದ ಶಂಕೆ ನಿವಾರಣೆಯಾಯಿತು ॥ 83

ಮದ್ಯಾನ್ಹ ಸಮಯದ ಆರತಿಯಿದು । ಸ್ತ್ರೀಪುರುಷರೆಲ್ಲರೂ ಕೂಡಿ ಮಾಡುವದು ।
ಸ್ತ್ರೀಯರು ಮೇಲೆ ಮಶೀದಿಯಲಿದ್ದು । ಪುರುಷರು ಕೆಳಗೆ ಮಂಟಪದಲಿ ॥ 84

ಮಂಗಲ ವಾದ್ಯಗಳು ನುಡಿಯುತಿರಲು । ತಾಸೇ ಬಜಂತ್ರಿಯು ಬಾರಿಸುತಿರಲು ।
ಆರತಿ ಹೇಳುವರು ಉಚ್ಚಸ್ವರಳು । ಹರ್ಷ ನಿರ್ಭರರಾಗಿ ಆಗ ॥ 85

ನಾವು ಮಂಟಪ ದ್ವಾರಕ್ಕೆ ಬರಲು । ಆರತಿ ನಡೆದಿತ್ತು ಘನಗಜರದೊಳು ।
ಗಂಡಸರಿಂದ ತುಂಬಿತ್ತು ಮೆಟ್ಟಲು । ಮೇಲೇರಿ ಹೋಗಲು ದಾರಿ ಇಲ್ಲ ॥ 86

ನನಗೆನಿಸಿತು ಇರಬೇಕಿಲ್ಲೇ ಕೆಳಗೆ । ಆರತಿಯೆಲ್ಲಾ ಮುಗಿಯುವವರೆಗೆ ।
ಮುಗಿದ ಬಳಿಕ ಬಾಬಾರ ಬಳಿಗೆ । ಜನರೆಲ್ಲರ ಜೊತೆ ಹೋಗಬೇಕೆಂದು ॥ 87

ಹೀಗೆ ನಾನೂ ಮನದಲೆಂದರೂ । ಮಾಧವರಾಯರು ಮೆಟ್ಟಿಲು ಹತ್ತಿದರು ।
ಕೈ ಹಿಡಿದು ನನ್ನನ್ನೂ ಎಳೆದರು । ಬಾಬಾರ ಹತ್ತಿರ ಕರೆದೊಯ್ದರು ॥ 88

ಬಾಬಾ ಸ್ವಸ್ಥಾನದಲಿ ಕುಳಿತಿದ್ದರು । ಸ್ವಸ್ಥ ಮನದಿಂದ ಚಿಲುಮೆ ಸೇದುತಿದ್ದರು ।
ಎದುರಿಗೆ ಜೋಗರು ಪಂಚಾರತಿ ಬೆಳಗುತಿದ್ದರು । ಎಡಗೈಲಿ ಗಂಟೆ ಬಾರಿಸುತಿದ್ದರು ॥ 89

ಆರತಿಯು ನಡೆದಿರುವಾಗ ಹೀಗೆ । ಮಾಧವರಾಯರು ಬಾಬಾರ ಬಲಗಡೆಗೆ ।
ತಾವೂ ಕುಳಿತು ನನ್ನನ್ನು ಕೂಡ್ರಿಸಿ ಕೆಳಗೆ । ಬಾಬಾರ ಕುಳಿತ ಸ್ಥಳದೆದುರಿಗೆ ॥ 90

ಆಮೇಲೆ ಶಾಂತ ಮೂರ್ತಿ ಸಂತಮಣಿವರರು । ಮಂಜುಳ ಸ್ವರದಲಿ ಬಾಬಾ ನುಡಿದರು ।
ಶಾಮರಾಯ ದಕ್ಷಿಣೆಯನೇನು ಕೊಟ್ಟರು । ಅದನು ನನಗೆ ಕೊಟ್ಟುಬಿಡು ॥ 91

ಬಾಬಾ ಈ ಶ್ಯಾಮರಾಯರು ಇಲ್ಲೇ ಇರುವರು । ದಕ್ಷಿಣೆಗೆ ಬದಲಾಗಿ ನಮಸ್ಕಾರಗಳ ಕೊಟ್ಟರು ।
ಇವೇ ಹದಿನೈದು ರೂಪಾಯಿಗಳೆಂದರು । ಇದನೇ ಬಾಬಾರಿಗೆ ಅರ್ಪಿಸು ॥ 92

ಹೋಗಲಿ ಅಲ್ಲಿ ಏನಾದರೂ ವಾರ್ತೆ ನಡೆಯಿತೇ । ನಿಮ್ಮಿಬ್ಬರಲಿ ಏನಾದರೂ ಮಾತು ನಡೆಯಿತೇ ।
ಏನು ಮಾತು ಆಡಿದಿರಂತೆ । ಎಲ್ಲವನ್ನೂ ಹೇಳು ನನಗೆ ॥ 93

ಇರಲಿ ನಮಸ್ಕಾರದ ಆ ಕಥೆ । ಅಲ್ಲಿ ಏನು ನಡೆಯಿತು ವಾರ್ತೆ ।
ಹೇಗೆ ಏನು ನಿಮ್ಮಲ್ಲಿ ನಡೆಯಿತು ಮಾತು ಕಥೆ । ಎಲ್ಲ ಸಮಗ್ರವಾಗಿ ಹೇಳು ನನಗೆ ॥ 94

ಕತೆ ಹೇಳಬೇಕೆಂಬ ಈ ಉತ್ಕಟ। ಅತ್ತ ಆರತಿಯ ದೊಡ್ಡ ಗಲಾಟೆ ।
ಪರಮಾನಂದವು ಹಿಡಿಸದೆ ಹೊಟ್ಟೆ । ತುಟಿಗಳೆಡೆಯಿಂದ ಹೊರ ಬರಬಯಸುತಿತ್ತು ॥ 95

ಬಾಬಾ ಕುಳಿತಿದ್ದರು ನೆಂಬಿ ತೆಕ್ಕೆಗೆ । ಮುಂದೆ ಬಾಗಿದರು ಕಥೆ ಕೇಳುವುದಕೆ ।
ನಾನೂ ಮುಖ ಚಾಚಿದೆ ಮುಂದಕೆ । ಆರಂಭಿಸಿದೆ ಕಥೆ ಹೇಳಲು ॥ 96

ಬಾಬಾ ಅಲ್ಲಿ ನಡೆದ ವಾರ್ತೆಗಳು । ಎಲ್ಲವೂ ಸವಿ ಎನಿಸಲು ।
ಅದರಲಿ ಆ ಮುದುಕಿಯ ಕಥೆ ಬಲು । ಆಶ್ಚರ್ಯಕರವೆನಿಸಿತೆನಗೆ ॥ 97

ಹೇಳುತಿದ್ದಾಗ ಶಾಮರಾಯರು ಆ ಕಥೆ । ಅರಿವಾಯಿತಾಗ ತಮ್ಮ ಅಕಳತೆ ।
ನಿಮಿತ್ತ ಮಾತ್ರವಾಯಿತು ಆ ಕಥೆ । ಆದರಿಂದ ನನ್ನ ಮೇಲೆ ಅನುಗ್ರಹ ಮಾಡಿದಿರಿ ಖಚಿತ ॥ 98

ಆಗ ಬಾಬಾ ತೋರಿ ಅತಿ ಉತ್ಸುಕತೆ । ಎಂದರು ಹೇಳು ನನಗೆ ಸಮಗ್ರವಾಗಿ ಆ ಕಥೆ ।
ನೋಡುವಾ ಹೇಗೆ ಅದರಲ್ಲಿ ಇರುವದೆಂಥ ವಿಸ್ಮಯತೆ । ಅನುಗ್ರಹತೆಯದು ಎಂಥದು ॥ 99

ಕಥೆ ಅದೇ ಆಗ ಕೇಳಿದ್ದಿತ್ತು । ಅಲ್ಲದೇ ಮನಸಿನಲ್ಲಿ ಅತಿ ಬಿಂಬಿಸಿತ್ತು ।
ಬಾಬಾರೆದುರು ಅಸ್ಖಲಿತ ನಿವೇದನೆಯಾಯಿತು । ಅವರ ಚಿತ್ತವೃತ್ತಿಯೂ ಪ್ರಸನ್ನವಾದಂತೆ ಕಂಡಿತು ॥ 100

ಹೀಗೆ ಹೇಳಿದೆನೆಲ್ಲ ನಡೆದ ವೃತ್ತಾಂತ । ಬಾಬಾರೂ ಚಿತ್ತಗೊಟ್ಟು ಅದನು ಕೇಳುತ ।
ಕೂಡಲೇ ನನಗೆ ಹೇಳುತ । ಇದನು ನೆನಪಿನಲ್ಲಿಟ್ಟುಕೊಂಡಿರಬೇಕು ಸದಾ ॥ 101

ಮತ್ತೆ ಅತಿ ಉಲ್ಲಸಿತರಾಗಿ ಕೇಳುತ । ಎಂಥ ಸವಿಯಾದದ್ದು ಈ ಕಥೆ ।
ನಿಜವಾಗಿಯೂ ನಿನಗದು ಹಿಡಿಸಿತೇ । ಕೇಳಿ ಸಾರ್ಥಕತೆ ಎನಿಸಿತೇ ॥ 102

ಬಾಬಾ ಕೇಳಿ ಈ ಕಥೆಯನಿಂತು । ನಿಜ ವಿಶ್ರಾಂತಿ ನನಗೆ ಲಭಿಸಿತು ।
ನನ್ನ ಮನದಭೀಷ್ಟ ಪೂರೈಸಿತು । ನಿಶ್ಚಿತ ಮಾರ್ಗ ತಿಳಿಯಿತೆನಗೆ ॥ 103

ಬಳಿಕ ಆಡಿದ ಬಾಬಾರ ನುಡಿ । "ನಮ್ಮ ರೀತಿಯೇ ಬೇರೆ ನೋಡಿ ।
ಈ ಒಂದು ಮಾತನು ನೆನಪಿನಲಿಡಿ । ಬಹಳ ಉಪಕಾರಕವಿರುವದದು ॥ 104

ಆತ್ಮದ ಸಮ್ಯಗ್‌ವಿಜ್ಞಾನ । ಸಮಗ್ವಿಜ್ಞಾನಕ್ಕಾಗಿ ಧ್ಯಾನ ।
ಆ ಧ್ಯಾನವೇ ಆತ್ಮಾನುಷ್ಠಾನ । ಅದರಿಂದಲೇ ವೃತ್ತಿಯ ಸಮಾಧಾನ ॥ 105

ಆಗಿ ಸರ್ವೇಕ್ಷಣ ನಿರ್ಮುಕ್ತನು । ನೆನಪಿಗೆ ತಂದು ಸರ್ವಭೂತಸ್ಥನನು ।
ಸರಿಯಾಗಿ ನಡೆಸಲು ಧ್ಯಾನವನು । ಪ್ರಾಪ್ತವ್ಯವು ಪ್ರಾಪ್ತವಾದೀತು ॥ 106

ಕೇವಲ ಮೂರ್ತದ ಜ್ಞಾನ । ಚೈತನ್ಯ ಅಥವಾ ಆನಂದಘನ ।
ತಿಳಿಯಬೇಕು ನನ್ನ ಸ್ವರೂಪ ಅದೇ ಎಂಬುದನ । ಅದರದೇ ನಿತ್ಯ ಧ್ಯಾನ್ಯ ಮಾಡುತ್ತಿರು ॥ 107

ಇಂಥ ಧ್ಯಾನವು ಸರಿ ಹೋಗದಿದ್ದರೂ । ಮಾಡಬೇಕು ಸಗುಣ ರೂಪ ಸಂಧಾನವೇನಾದರೂ ।
ಸಂಪೂರ್ಣ ಸಗುಣನಾದ ನನ್ನನು ಮನದೆದುರು । ಹಗಲು ರಾತ್ರಿ ತರಬೇಕು ॥ 108

ಹೀಗೆ ಮಾಡಲು ನನ್ನ ಧ್ಯಾನ । ವೃತ್ತಿಯಾಗುವದು ಏಕತಾನ ।
ಧ್ಯಾತಾ-ಧ್ಯಾನ-ಧ್ಯೆಯವೆಂಬುದನ । ನಷ್ಟಗೊಳಿಸಿ ಬಿಡುವದದು ॥ 109

ಈ ರೀತಿ ತ್ರಿಪುಟಿಗಳು ವಿಲೀನಗೊಳ್ಳಲು । ಧ್ಯಾತನು ಚೈತನ್ಯ ಘನತೆಯ ಪಡೆಯಲು ।
ಇದೇ ಧ್ಯಾನದ ಇತಿಕರ್ತವ್ಯತೆಯಾಗಿರಲು । ಬ್ರಹ್ಮಸಮರಸತೆಯ ಹೊಂದುವಿ ॥ 110

ತಾಯಿ ಆಮೆಯು ನದಿಯ ಆ ದಂಡೆಗೆ । ಅದರ ಮರಿಗಳು ಈ ದಂಡೆಗೆ ।
ಕಾವಿಲ್ಲ, ಹಾಲಿಲ್ಲ ಕೇವಲ ದೃಷ್ಟಿ ಅವುಗಳೆಡೆಗೆ । ಮಕ್ಕಳ ಪೋಷಣೆ ಅದರಿಂದ ॥ 111

ಮರಿಗೆ ತಾಯಿಯ ಧ್ಯಾನ ಸದಾಕಾಲ । ಇನ್ನೇನೂ ಮಾಡುವದು ಬೇಕಿಲ್ಲ ।
ಹಾಲು ಅನ್ನ ತಿಂಡಿ ಒಂದೂ ಬೇಕಿಲ್ಲ । ಮಾತೆಯ ನಿರೀಕ್ಷಣೆ ಮಾತ್ರದಿಂದ ಪೋಷಣೆ ॥ 112

ಈ ತರದ ನಿರೀಕ್ಷಣೆ ಕೂರ್ಮದೃಷ್ಟಿ । ಇದಿರುವದು ಪ್ರತ್ಯಕ್ಷ ಅಮೃತವೃಷ್ಟಿ ।
ಮರಿಗೆ ಸಿಗುವುದು ಸ್ವಾನಂದ ಪುಷ್ಟಿ । ಐಕ್ಯ ಸೃಷ್ಟಿ ಇದು ಗುರು ಶಿಷ್ಯರದು" ॥ 113

ಮುಗಿಯಲು ಸಾಯಿ ಮುಖದ ಈ ಮಾತು । ಆರತಿಯ ಗಲಾಟೆಯೂ ಮುಗಿಯಿತು ।
ಜನ "ಶ್ರೀ ಸಚ್ಚಿದಾನಂದ ಸದ್ಗುರು ಮಹಾರಾಜಕೀ ಜಯ ಎಂದಿತು । ಸಂತೋಷಭರಿತರಾಗಿ ಆಗ ॥ 114

ನಿರಾಂಜನೋಪಚಾರ ಮುಗಿಯಿತು । ಸವಿಸ್ತರ ಆರತಿಯೂ ಮುಗಿಯಿತು ।
ಜೋಗರಿಂದ ಕಲ್ಲು ಸಕ್ಕರೆ ಸಮರ್ಪಣೆಯಾಯಿತು । ಬಾಬಾ ಅಂಗೈ ಮುಂದೆ ಚಾಚಿದರು ॥ 115

ಆದರಲ್ಲಿ ನಿತ್ಯಕ್ರಮವನನುಸರಿಸಿ । ಕಲ್ಲು ಸಕ್ಕರೆ ಹಾಕಿದರು ಒಂದು ಬೊಗಸೆ ।
ಜೋಗರು ಬಾಬಾರಿಗೆ ನಮಸ್ಕರಿಸಿ । ನಿಂತರು ಪ್ರೇಮ ಪುರಃಸರವಾಗಿ ಅಲ್ಲಿ ॥ 116

ಬಾಬಾ ಆ ಎಲ್ಲ ಸಕ್ಕರೆಯನು ತಂದು । ನುಡಿದರು ಅದನು ನನ್ನ ಕೈಗೆ ಸುರಿದು ।
ಯಾವಾಗಲೂ ಇದ ನೆನಪಿಡುವದು । ಅದರಿಂದ ಈ ಸಕ್ಕರೆಯಂತಾದೀತು ನಿನ್ನ ಸ್ಥಿತಿ ॥ 117

ಈ ಕಲ್ಲು ಸಕ್ಕರೆಯು ಸಿಹಿ ಹೇಗೆ । ನಿನ್ನ ಮನದಿಚ್ಛೆ ಪೂರೈಸುವದು ಹಾಗೆ ।
ಚೊಕ್ಕಟ ಕಲ್ಯಾಣವಾಗುವದು ನಿನಗೆ । ಅಂತರಂಗದ ಅಭೀಷ್ಟ ಪಡೆಯುವೆ ॥ 118

ಆಮೇಲೆ ನಾ ಅಭಿವಂದಿಸಿ ಬಾಬಾರನು । ಬೇಡಿದೆ ಇದೇ ಕೃಪಾದಾನವನು ।
ಈ ಆಶೀರ್ವಚನವೇ ಸಾಕು ನನ್ನನ್ನು । ನೀವೆ ಸಂಭಾಳಿಸಬೇಕು ॥ 119

ಬಾಬಾ ಎಂದರು ಕಥಾ ಶ್ರವಣ । ಮಾಡಬೇಕು ಮನನ ಮತ್ತು ನಿಧಿ ಧ್ಯಾಸನ ।
ಆಗಲು ಸ್ಮರಣೆ ಮತ್ತು ಧ್ಯಾನ । ಆನಂದ ಘನ ಪ್ರಕಟವಾದೀತು ॥ 120

ಈ ರೀತಿ ಕಿವಿಯಿಂದ ಕೇಳಿದ್ದನ್ನು । ಮನಸಿನಲಿ ಹಿಡಿದರೆ ನೀನು ।
ಹೊಂದುವೆ ನಿಜ ಕಲ್ಯಾಣದ ಖಣಿಯನು । ಪಾಪಗಳೆಲ್ಲ ಸುಟ್ಟು ಹೋಗುವವು ॥121

ಗಾಳಿಯು ಭರದಿಂದ ಬೀಸತೊಡಗಲು । ಸಮುದ್ರದ ಮೇಲೆಳುವವು ತೆರೆಗಳು ।
ಅಸಂಖ್ಯ ಬುರುಗಿನ ಗುಳ್ಳೆಗಳು । ದಂಡೆಗೆ ಬಂದು ಅಪ್ಪಳಿಸುವವು ॥ 122

ತೆರೆಗಳು, ಗುಳ್ಳೆ, ಬುರುಗು, ತಿರುಗಣಿಗಳು । ಎಲ್ಲ ಒಂದೇ ನೀರಿನ ಪ್ರಾಕಾರಗಳು ।
ಇವೆಲ್ಲ ದೃಗ್‌ಭ್ರಮೆಯ ದೃಶ್ಯಗಳು । ಗಾಳಿಶಾಂತವಾಗುವವರೆಗೆ ಮಾತ್ರ ॥ 123

ಈಗಾದ ಪ್ರಕಾರಕ್ಕೆನೆನಬೇಕು । ಅಥವಾ ಎಲ್ಲ ನಾಶವಾಯಿತೆನಬೇಕು ।
ಮಾಯೇಯದೇ ಇದೆಲ್ಲ ಕಾರ್ಯವೆಂದರಿಯಬೇಕು । ಆದದ್ದು ಹೋದದ್ದು ಎಲ್ಲ ಅಷ್ಟೇ ॥ 124

ಸೃಷ್ಟಿಯ ಆಗು ಹೋಗುಗಳೆಲ್ಲ ಇದೇ ರೀತಿ । ವಿವೇಕಿಗಳಿಗಿಲ್ಲದರ ಚಿಂತೆ ।
ಈ ನಶಿಸಿ ಹೋಗುವುದರಲ್ಲಿಲ್ಲ ಅವರ ಪ್ರೀತಿ । ನಿತ್ಯದ ಸಂಗವ ಬೆಳೆಸುವವರು॥ 125

ಜ್ಞಾನಕ್ಕಿಂತ ಧ್ಯಾನವು ದೊಡ್ಡದ್ದು । ಅದಕೆ ಯಥಾರ್ಥ ಜ್ಞಾನ ಬೇಕಾಗುವದು ।
ಸಾದ್ಯಂತ ಅಕಲನವಾಗದೇ ಆ ವಸ್ತುವಿನದು । ಯಥಾರ್ಥಧ್ಯಾನವು ಸಾಧಿಸಾದು ॥ 126

ಸಮ್ಯಗ್ ಜ್ಞಾನವೇ ಮೂಲಧ್ಯಾನ । ಇದಕ್ಕೆನ್ನುವರು ಪ್ರತ್ಯಗಾತ್ಮಾನುಷ್ಠಾನ ।
ಆದರೂ ವಿಕ್ರಿಯಾರಹಿತನಿರುವವನ । ಧ್ಯಾನದಲಿ ಹೇಗೆ ತರಬೇಕು ॥ 127

ಪ್ರತ್ಯಾಗಾತ್ಮನೇ ಈಶ್ವರನು । ಮತ್ತು ಆ ಈಶ್ವರನೇ ಗುರು ಇಹನು ।
ಮೂರರಲಿ ಅಣುಮಾತ್ರ ಭೇದವನು । ಮಾಡಲೆವನೇನೂ ಪಡೆಯನು ॥ 128

ನಿಧಿಧ್ಯಾಸವು ಪರಿಪಕ್ವವಾಗಲು । ಧ್ಯಾನಧ್ಯಾತರು ಕರಗಿ ಒಂದಾಗಲು ।
ಚಿತ್ತವು ನಿರ್ವಾತದೀಪದೊಲು । ಶಾಂತವಾಗಲದೇ ಸಮಾಧಿ ॥ 129

ಆಗಿ ಸರ್ವೇಕ್ಷಣಾವಿನಿರ್ಮುಕ್ತನು । ತಿಳಿದುಕೊಂಡಿರಬೇಕು ಸರ್ವಭೂತಸ್ಥನನು ।
ಅದ್ವೀತಿಯದಿಂದ ಪಡೆಯಲು ಅಭಯವನು । ಆಮೇಲೆ ಧ್ಯಾನಕೆ ತಲುಪುವನು ॥ 130

ಅದರಿಂದ ಅವಿದ್ಯಾಕೃತ ಕರ್ಮಬಂಧ । ತಟತಟನೆ ಹರಿಯುವವು ಅವುಗಳ ಸಂಬಂಧ ।
ಬಿಡುಗಡೆಯಾಗುವುದು ವಿಧಿನಿಷೇಧಗಳು ನಿರ್ಬಂಧ । ಮುಕ್ತಿ ಆನಂದವನು ಭೋಗಿಸುವರು ॥ 131

ಆತ್ಮವು ಇದೆಯೋ ಇಲ್ಲವೋ ಎಂಬುವುದನು ಮೊದಲು । ಅದ್ವೈತವೋ ಬೇರೆ ಬೇರೆಯಾಗಿ ಅಲ್ಲಲ್ಲೊ ।
ಕರ್ತವೋ ಅಕರ್ತವೋ ತಿಳಿಯಲು । ಆರು ಶಾಸ್ತ್ರಗಳ ಹುಡುಕಬೇಕು ॥ 132

ಆತ್ಮಿಕ ವಿಜ್ಞಾನವೇ ಇರುವುದು । ಪರಾಕಾಷ್ಠೆ ಜ್ಞಾನದ್ದು ।
ಮೋಕ್ಷ ಮತ್ತು ಪರಮಾನಂದಗಳದು । ಉತ್ಪತ್ತಿ ನಿಜದಲಿ ಅಲ್ಲಿಂದಲೇ ॥ 133

ಕುರುಡರಿಗೆ ಆನೆಯ ಆಕಾರದ ಬಗ್ಗೆ ತಿಳಿಸಲು ।ಬೃಹಸ್ಪತಿ ಸಮಾನಾದ ಜಾಣನನು ತರಲು ।
ವಕ್ತೃತ್ವದಿಂದಬಾರದು ಸ್ವರೂಪವ ತಿಳಿಯಲು । ವಾಚ್ಯಾತೀತನನು ವರ್ಣಿಸಲು ಸಾಧ್ಯಯವಿಲ್ಲ॥ 134

ವಕ್ತೃವಿನ ವಕ್ತೃ ಇಲ್ಲವೇ ಶ್ರೋತೃವಿನ ಶ್ರೋತೃ । ತರಬಹುದೇ ಎಂದಾದರೂ ಕಳೆದ ನೇತ್ರ ।
ಹಸ್ತಿ ಸ್ವರೂಪಾವಲೋಕನ ಪಾತ್ರ । ನೇತ್ರಗಳು ಮಾತ್ರ ನಿಜದಲಿ ॥ 135

ಹೇಗೆ ಸಾಧ್ಯ ನೇತ್ರಗಳಿಲ್ಲದಿರಲೂ । ಕುರುಡನಿಗೆ ಆನೆಯ ಪ್ರತೀತಿ ಬರಲು ।
ಹಾಗೆ ದಿವ್ಯ ನೇತ್ರಗಳ ಗುರು ಈಯಲು । ಜ್ಞಾನ ಸಂವಿತ್ತಿ ಆಗಲೇ ಸಾಧ್ಯ ॥ 136

ಸಾಯಿ ಸ್ವರೂಪದ ಯಥಾರ್ಥಜ್ಞಾನ । ತಾನೇ ಪರಿಪೂರ್ಣ ವಿಜ್ಞಾನಘನನಾದವನ ।
ಅವನ ಧ್ಯಾನ ಮತ್ತು ಅನುಷ್ಠಾನ । ಇದೇ ದರ್ಶನ ಅವನದು 137

ಅವಿದ್ಯಾ ಕಾಮ-ಕರ್ಮ-ಬಂಧನ । ಇವುಗಳಿಂದಾಗಲು ಸಂಪೂರ್ಣ ವಿಮೋಚನ ।
ಇಲ್ಲ ಇಲ್ಲ ಅನ್ಯ ಸಾಧನ । ಎಂಬುದನ್ನು ಸೆರಗಿಗೆ ಗಂಟು ಕಟ್ಟಿದೆ ॥ 138

ಸಾಯಿ ಅಲ್ಲ ನಮ್ಮವನು ನಿಮ್ಮವನು । ಅವನಂತೂ ಸರ್ವಭೂತಸ್ಥನಾಗಿರುವನು ।
ಸೂರ್ಯನು ಹೇಗೆ ಎಲ್ಲ ಜಗದವನು । ಇವನಾದರೂ ಅದರಂತೆಯೇ ॥ 139

ಇನ್ನು ಕೇಳಿರಿ ಅವರ ಮಾತು । ಸಾಧಾರಣವಾಗಿದ್ದರೂ ಬೆಲೆ ಕಟ್ಟದಷ್ಟು ।
ಆಗಾಗ್ಗೆ ಸ್ಮರಿಸುತಿರಲಿಂತೂ । ಯಾವಾಗಲೂ ಸಫಲ ಸ್ವಾರ್ಥವು ॥ 140

"ಇಲ್ಲದೆಯೆ ಸಂಬಂಧ ಏನೇನೂ । ಯಾರೂ ಎಲ್ಲಿಯೂ ಹೋಗಲಾರನು ।
ಮನುಷ್ಯರೇನೇನು ಪಶು ಪಕ್ಷಿಗಳನೂ । ತುಚ್ಛೀಕರಿಸಬಾರದು ಯಾರನ್ನು ॥ 141

ಒಂದು ಹೋಗುವವರ ಆದರಿಸಲು । ತೃಷಿಕರಿಗೆ ಜಲ ಹಸಿದವಗನ್ನವೀಯಲು ।
ಬರಿ ಮೈಗೆ ವಸ್ತ್ರ ಕುಳಿತುಕೊಳ್ಳಲು ನೆರಳು । ಕೊಡಲು ಶ್ರೀಹರಿ ಸಂತುಷ್ಟನಾಗುವನು ॥ 142

ಯಾರಿಗಾದರೂ ಹಣಬೇಕಾಗಿರಬಹುದು । ನಿನಗೆನಿಸಿದೆ ಹೇಗೆ ಕೊಡುವುದು ।
ಕೊಡಬೇಡ ಬಿಡು ಆದರೂ ಅವನ ಕಂಡು । ನಾಯಿಯಂತೆ ಹರಿಹಾಯಯಬೇಡ ॥ 143

ಯಾರೇ ನೂರು ಕಟು ಮಾತಾಡಿದರೂ । ನೀನು ಮಾತ್ರ ಕಟು ಉತ್ತರ ಕೊಡದಿರು ।
ಯಾವಾಗಲೂ ಸಹಿಷ್ಣುತೆ ತಾಳಿರ । ಅಪಾರ ಸುಖವದರಿಂದ ಲಭಿಸಿತು ॥ 144

ಆಕಡೆಯದೀಕಡೆ ಸರಿಯಾದರೂ ಜಗವಿದು । ತಾವು ಹಿಂದು ಮುಂದಾರರು ।
ನಿಶ್ಚಿಲರಾಗಿ ನಿಂತಲ್ಲಿಯೇ ನಿಂತದ್ದು । ಕೌತುಕವನು ಮಾತ್ರ ನೋಡುತಿರಬೇಕು ॥145

ನಮ್ಮ ನಿಮ್ಮ ನಡುವಿನ ಗೋಡೆ । ಕೆಡವಿ ನೋಡಿದರೆ ಎಲ್ಲೆಡೆ ।
ಬರು ಹೋಗಲು ಮಾರ್ಗ ಪ್ರಶಸ್ತವಾಗಿದೆ । ಒಂದಿಷ್ಟು ಅಳಕಿಲ್ಲದಾದೀತು ॥ 3146

ನಾನು ನೀನೆಂಬ ಭೇದ ವೃತ್ತಿಯನು । ಗುರುಶಿಷ್ಯರ ನಡುವಿನ ಈ ಅಡ್ಡ ಗೋಡೆಯನು ।
ಕೆಡವಿ ಇಡದೆ ನಿಶ್ಚಿತವಾಗಿ ಅದನು । ಅಭೇದ ಸ್ಥಿತಿಯು ದುರ್ಗಮ ॥ 147

'ಅಲ್ಲಾ -ಮಾಲಿಕ- ಅಲ್ಲಾ ಮಾಲಿಕ್' ಎನ್ನು । ಬೇರೆ ತ್ರಾತನಿಲ್ಲ ಬಿಟ್ಟು ಅವನನು ।
ಅವನ ಕೃರ್ತತ್ವ ಅಲೌಕಿಕವಿರುವದು । ಅಮೂಲ್ಯ ಮತ್ತು ಅಗಾಧವಾಗಿರುವುದು ॥ 148

ಅವನು ಮಾಡಿದ್ದೇ ಆಗುವುದು । ಅವನ ಮಾರ್ಗವ ಅವನೇ ತೋರುವುದು ।
ಕ್ಷಣದ ವಿಲಂಬವಿಲ್ಲದೇ ಸಮಯ ಬರುವುದು । ಮನದ ಈಪ್ಸ ಪೂರೈಸುವುದು ॥ 149

ಋಣಾನುಬಂಧವಿರುವುವದೆಂದು । ಭಾಗ್ಯವಶದಿ ನಮ್ಮ ನಿಮ್ಮ ಭೇಟ್ಟಿಯಾಗಿರುವುದು ।
ಪರಸ್ಪರ ಪ್ರೀತ್ಯಾದರಗಳಿಂದಿದ್ದು । ಸುಖ ಸಂತುಷ್ಟಿಗಳ ಅನುಭವಿಸುವಾ ॥ 150

ಇಲ್ಲಿ ಯಾರೂ ಅಮರರಾಗಿರುವರು । ಪರಮಾರ್ಥವ ಪಡೆದವರೇ ಕೃತಾರ್ಥರು ।
ಇಲ್ಲದಿರೆ ಶ್ವಾಸೋಚ್ಛ್ವಾಸ ಮಾಡುವರು । ಜೀವದಿಂದಿರುವರೆಗೆ ಮಾತ್ರ ॥ 151

ಕಿವಿಗೆ ಬೀಳಲು ಕೃಪಾವಚನವಿಂತು । ನನ್ನ ಆತುರ ಮನವು ಸುಖಿಸಿತು ।
ತೃಷಾರ್ತನೆನಗೆ ಜೀವನ ದೊರಕಿತು । ಆನಂದ ಸಂಪನ್ನನಾದೆನು ॥ 152

ಅತುಲ ಪ್ರಜ್ಞೆಯ ಜೋಡಿರಲು । ಅಂತೆಯೇ ದೃಢವಾದ ಶ್ರದ್ಧೆ ಇರಲು ।
ಸಾಯಿಯಂಥ ಗುರುಬಲ ಪಡೆಯಲು । ದೈವವೇ ಸಬಲವಾಗಿರಬೇಕು ॥ 153

ಇದರ ಸಾರಾಂಶವ ತಿಳಿದು ನೋಡಲು । ಭಗವಂತನೇ ನುಡಿದದ್ದೇ ನಿರ್ಧಾರವಿರಲು ।
'ಯೇ ಯಥಾ ಮಾಂ'ಉದ್ಗಾರದೊಲು । ಕರ್ಮದ ಮೇಲೆಯೇ ಎಲ್ಲ ಭಾರ ॥ 154

ಯಥಾಕರ್ಮ ಯಥಾಶ್ರುತ । ಅಭ್ಯಾಸದಂತೇಯೇ ಆಗುವದು ಹಿತ ।
ಇದೇ ಈ ಅಧ್ಯಾಯನದ ಇಂಗಿತ । ಇದೇ ಬೋಧಾಮೃತವಿಲ್ಲಿಯದು ॥ 155

'ಅನನ್ಯಾಶ್ಚಿಂತಯಂತೋ ಮಾಮ' । ಇಂಥ ನಿತ್ಯಯುಕ್ತರ ಯೋಗ ಕ್ಷೇಮ ।
ಇದೇ ಭಗವದ್ಗೀತೆಯ ಮರ್ಮ । ನಡೆಸಿಕೊಡುವನಿದ ಗೋವಿಂದ ॥ 156

ಕೇಳಿ ಈ ಮಧುರ ಉಪದೇಶವನ್ನು । ನೆನಪಾಗುವುದು ಸ್ಮೃತಿವಚನ ।
"ದೇವಾನ್ ಭಾವಯತಾನೇನ" । ಆಗ ನಿನಗಾಗಿ ಕಳವಳಿ ಬರುವದವರಿಗೆ ॥ 157

ನೀನು ವ್ಯಾಯಾಮ ಮಾಡಲು ಸುರುಮಾಡು । ಹಾಲಿನ ಚಿಂತೆಯನೆಲ್ಲ ಬಿಟ್ಟು ಬಿಡು ।
ನಾ ನಿಂತೇ ಇರುವೆ ಬಟ್ಟಲು ಹಿಡಿದು । ನಿನ್ನ ಹಿಂದೆಯೇ ಎಂಬುದ ತಿಳಿ ॥ 158

ನೀನೆನಬಹುದುನಾ ವ್ಯಾಯಾಮ ಮಾಡುವದು । ಹಾಲನ್ನು ಧಾರಾಳ ನೀವು ಕುಡಿಯುವುದು ।
ನಮಗೆ ಗೊತ್ತೆ ಇಲ್ಲ ಇಂಥದ್ದು । ಕಾರ್ಯದಲಿ ದಕ್ಷನಾಗಿರಬೇಕು ॥ 159

ಈ ಬಾಬಾರ ಪ್ರತಿಜ್ಞಾವಾಣಿಯನು ಪ್ರಮಾಣವೆಂದು ತಿಳಿದು ನಡೆದವನು ।
ಇಹಪರದಲಿ ಸುಖದ ಗಣಿಯನು । ಅವನು ಹೊಂದಿದನೆಂದು ತಿಳಿಯಬೇಕು ॥ 160

ಶ್ರೋತೃಗಳಲ್ಲಿ ಇನ್ನೊಂದು ವಿನಂತಿ ಇನ್ನು । ಕ್ಷಣವೊಂದು ಸ್ಥಿರ ಮಾಡಿ ಮನಸನು ।
ಕೇಳಬೇಕೀ ಸ್ವಾನುಭವದ ಕಥೆಯನು । ನಿಶ್ಚಯ ಪೋಷಕತೆ ಸಾಯಿಯದು ॥ 161

ಮಾಡಲು ಸ್ವದ್ವಿತೀಯ ನಿಯಮನ । ಹೇಗೆ ಮಹಾರಾಜರೀಯುವರು ಉತ್ತೇಜನ ।
ಕೇಳಿರಿ ಸಾಯಿಯ ಅನುಗ್ರಹದಾನ । ಮೌನವಾಗಿ ಕುಳಿತುಕೊಂಡು ॥ 162

ಭಕ್ತನು ಅನನ್ಯ ಶರಣಾಗಬೇಕು । ಭಕ್ತಿಯ ಕೌತುಕವ ಅವಲೋಕಿಸಬೇಕು ।
ಆಮೇಲೆ ಸಾಯಿಯ ಲೀಲೆಗಳ ಅನುಭವಿಸಬೇಕು । ನಿತ್ಯ ಹೊಸ ಹೊಸ ರೀತಿಯಲಿ ॥ 163

ಪ್ರಾತಃ ಕಾಲದ ಸಮಯವಾಗಲು । ನಿದ್ರೆಯಿಂದ ಎಚ್ಚರಾಗಲು ।
ಸದ್ಬುದ್ಧಿಯ ತರಂಗಳು ಮನದಲೇಳಲು । ಅದನ್ನೇ ನಿರ್ಧಾರದಿಂದ ಬೆಳೆಸಿಕೊಳ್ಳಬೇಕು ॥ 164

ಅದೇ ವೃತ್ತಿಯದಾಗಲು ಪರಿಪೋಷ । ಮನಕಾದೀತು ಅತಿ ಸಂತೋಷ ।
ಆಗುವುದು ಬುದ್ಧಿಯದೂ ವಿಕಾಸ । ಅಂತರಂಗವೂ ಪ್ರಸನ್ನವಾಗುವದು ॥ 165

ಇದು ಒಂದಿದೆ ಸಂತಉಕ್ತಿ । ಬೇಕೆಂದರೆ ತೆಗೆದುಕೊಳ್ಳವ ಅದರ ಪ್ರತೀತಿ ।
ಅನುಭವದಿಂದುಟಾಯಿತು ಮನಕೆ ಶಾಂತಿ । ಚಿತ್ತದಿ ಆಶ್ಚರ್ಯ ಮೂಡಿತು ॥ 166

ಶಿರಡಿಯಂಥ ಪವಿತ್ರ ಸ್ಥಾನ । ಗುರುವಾರದಂಥ ಮಂಗಲದಿನ ।
ರಾಮನಾಮದ ಅಖಂಡ ಆವರ್ತನ । ಮಾಡಬೇಕೆಂದು ಮನವಾಯಿತು ॥ 167

ಬುಧವಾರ ರಾತ್ರಿ ಹಾಸಿಗೆಯೊಳಗೆ । ದೇಹವು ನಿದ್ರಾವಶವಾಗುವವರೆಗೆ ।
ಮನಸು ರಾಮ ಸ್ಮರಣೆಯೊಳಗೆ । ಹಾಕಿ ಒಳಗೆ ಇಟ್ಟು ಬಿಟ್ಟೆ ॥ 168

ಪ್ರಾತಃ ಕಾಲದಲ್ಲಿ ಎಚ್ಚರಾಗಲು । ರಾಮನಾಮವೇ ಬಂತು ಸ್ಮರಣೆಯೊಳು ।
ಆಮೇಲೆ ಅದೇ ವೃತ್ತಿಯು ಹಾಸಿಗೆಯಿಂದೇಳಲು । ಜಿವ್ಹೆಗೆ ಬಂದು ಸಾರ್ಥಕಗೊಳಿಸಿತು ॥ 169

ನಿಶ್ಚಯದಿಂದ ಮನವನಿಲ್ಲಿಸಿ । ಶೌಚಮುಖಮಾರ್ಜನಗಳನ್ನು ಮುಗಿಸಿ ।
ಸಿಕ್ಕ ಹೂವುಗಳಾನರಿಸಿ । ತೆಗೆದುಕೊಂಡು ಹೊರಟೆ ಸಾಯಿ ದರ್ಶನಕೆ ॥ 170

ಬಿಟ್ಟು ದೀಕ್ಷಿತರ ಮನೆಯನು । ಬುಟ್ಟಿಯವರ ವಾಡೆಯ ಹೊರಗೆ ಬಂದೆನು ।
ಔರಂಗಬಾದಕರರು ಒಂದು ಮಧುರ ಪದ್ಯವನ್ನು । ಅಂದವಾಗಿ ಹಾಡುತ್ತಿರುವುದನ್ನು ಕೇಳಿದೆನು ॥ 171

ಆ ಪದ್ಯದ ಸಮಯೋಚಿತೆಯನಿಲ್ಲಿ । ಓವೀ ರೂಪದಲಿ ಹೇಳಿದಲ್ಲಿ ।
ಕುಂದು ಬಂದೀತು ಮೂಲ ಪದದಲಿ । ಶ್ರೋತೃಗಳ ಮನ ಮುದುಡೀತು ॥ 172

ಅದಕಾಗಿ ಸಮೂಲವಾಗಿ ಆ ಹಾಡನ್ನು । ಅಕ್ಷರವನ್ನೂ ಬಿಡದೆ ಹಾಡುವೆನು ।
ನಿರ್ಮಲ ಉಪದೇಶವಿರುವುದು ಮೂಲ ಪದ್ಯದಲ್ಲಿ । ಅದ್ದರಿಂದ ಆನಂದವಾದೀತು ನಿಮಗೆ ॥ 173

**॥ಪದ॥**

ಗುರು ಕೃಪಾಂಜನ ಪಾಯೋ ಮೇರೆ ಭಾಯಿ । ರಾಮ ಬಿನಾ ಕಛು ಮಾನತ ನಾಹಿ ॥ ಧೃ ॥
ಅಂದರ ರಾಮಾ ಬಾಹರ ರಾಮಾ । ಸಪನೇಮೆ ದೇಖತ ಸೀತಾರಾಮಾ ॥ 1 ॥
ಜಾಗತರಾಮಾ ಸೋವತ ರಾಮಾ । ಜಹಾಂ ದೇಖೇ ವಹಾಂ ಪೂರನ ಕಾಮಾ ॥ 2 ॥
ಏಕಾಜನಾರ್ಧನಿ ಅನುಭವ ನೀಕಾ । ಜಹಾಂ ದೇಖೇ ವಹಾಂ ರಾಮ ಸರೀಖಾ ॥ 3 ॥ಗುರು ॥

ಮೊದಲೇ ಮನದಲ್ಲಿ ನಿಶ್ಚಯಿಸಿದ್ದು । ರಾಮಾನಾಮದಲಿ ಮನ ತೊಡಗಿಸಬೇಕೆಂದು ।
ಇನ್ನು ಆ ನಿಶ್ಚಯವು ಕಾರ್ಯಾಗತವಾಗುವುದು । ಈ ಪದ ಕೇಳಿ ಅದಕೆ ದೃಢತೆಯುಂಟಾಯಿತು ॥174

ಅದರಿಂದನಿಸಿತೆನ್ನ ಚಿತ್ತಕ್ಕೆ । ಈ ನನ್ನ ನಿಶ್ಚಯಯಾಂಕುರಕ್ಕೆ ।
ಸಾಯಿ ಪದಾಂಬುಜ ಸೇಚನವನಿದಕೆ । ಮಾಡುತ್ತಿರುವಂತೆನಿಸಿತು ॥ 175

ತಂಬೂರಿಯ ಹಿಡಿದು ಕೈಯಲಿ । ಸಾಯಿಯ ಎದರು ಅಂಗಳಗಲ್ಲಿ ।
ಔರಂಗಾಬಾದಕರರು ಉಚ್ಚಸ್ವರದಲ್ಲಿ । ಹೇಳುವ ಧ್ವನಿ ಗಾಳಿಯೊಳು ಹರಡಿತು ॥176

ಔರಂಗಾಬಾದಕರ ಬಾಬಾರ ಭಕ್ತ । ನನ್ನ ಹಾಗೇಯೇ ಬಾಬಾರ ಚರಣದಲಿ ಆಸಕ್ತ ।
ಸಾಕಷ್ಟು ಪದಗಳಿರಲು ಮುಖೋದ್ಗತ । ಇವನೇ ಯಾಕೆನಬೇಕು ಆಗ ॥ 177

ನನ್ನ ಮನೋಗತವನ್ನು ಯಾರೂ ಅರಿಯರು । ಹಾಗಿರಲು ಅಗ ಇದೇ ಪದವನ್ನೇಕೆ ಹಾಡಿದರು ।
ಕಾಣುವದೆಂತು ಬಾಬಾ ಸೂತ್ರವನಲುಗಿಸುವರು । ಅಂತೆಯೇ ಇಚ್ಛೆ ಸ್ಫುರಿಸುವನೆಂದು ॥ 178

ನಾವೆಲ್ಲ ಕೇವಲ ಬೊಂಬೆಗಳು । ಸಾಯಿ ಮಾತೆಯೇ ಸೂತ್ರ ಧಾರಿಗಳು ।
ತಾವು ಮಾತಾನಾಡದೆ ಕೊಟ್ಟರೂ ಕೈಯೊಳು । ಸರಿಯಾದ ಉಪಾಸನೆಯನೇ ॥ 179

ವೃತ್ತಿ ಇದ್ದಿತೆನ್ನಂತರಂಗದಲಿ । ಪ್ರತಿ ಬಿಂಬಿಸಿತದು ಬಾಬಾರ ಚಿತ್ತದಲಿ ।
ಪ್ರತ್ಯಕ್ಷ ಪ್ರತೀತಿಯನೀರೀತಿಯಲಿ । ಎನಿಸುವುದು ನಿಶ್ಚಿತವಾಗಿ ತೋರಿಸಿದರು ॥ 180

ಈ ನಾಮದ ಮಹಿಮೆ ಎಷ್ಟೆಂದು । ಸಂತ ಮಹಂತರು ವರ್ಣಿಸಿದ್ದು ।
ನಾ ಪಾಮರನೇನು ವರ್ಣಿಸುವುದು । ಸ್ವರೂಪದ ಪ್ರಾಪ್ತಿ ಇದರಿಂದಲೇ ॥ 181

ಈ ಎರಡಕ್ಷರಗಳೆ ತಿರುವಿ ಸ್ಮರಿಸಿದ । ದಾರಿಗಳ್ಳ ಬೇಡ ಉದ್ಧಾರವಾದ ।
ವಾಲ್ಯಾ ಎಂಬವ ವಾಲ್ಮೀಕಿ ಎನಿಸಿದ । ಆಶ್ಚರ್ಯಕರ ವ್ಯಾಕ್ಸಿದ್ಧಿಯನು ಪಡೆದ ॥ 182

'ಮರಾ ಮರಾ'ವನ್ನು ತಿರುವಿ ಅನ್ನಲು । ರಾಮ ಪ್ರಕಟನಾದನು ಜಿವ್ಹೆಯೊಳು ।
ಅವತಾರ ಚರಿತೆಯನು ರಾಮ ಜನ್ಮದ ಮೊದಲು । ರಾಮ ಚರಿತೆಯನು ಬರೆದನು ॥183

ರಾಮನಾಮದಿಂದ ಪತೀತ ಪಾವನ । ರಾಮನಾಮದಿಂದ ಲಾಭಗಹನ ।
ರಾಮನಾಮಅಭೇಧ ಭಜನ । ಬ್ರಹ್ಮ ಸಂಪನ್ನ ಈ ನಾಮದಿಂದ ॥ 184

ರಾಮನಾಮದ ಆವರ್ತನದಿಂದ । ಬಿಡುಗಡೆ ಜನ್ಮ ಮರಣಗಳಿಂದ ।
ಒಂದು ರಾಮನಾಮದ ಸ್ಮರಣೆಯಿಂದ । ಕೋಟಿಗುಣ ಹೆಚ್ಚು ಲಾಭ ॥ 185

ರಾಮನಾಮದ ಗರ್ಜನೆ ಇರುವಲ್ಲಿ । ವಿಷ್ಣುವಿನ ಸುದರ್ಶನ ತಿರುಗುವುದಲ್ಲಿ ।
ಕೋಟಿ ವಿಘ್ನಗಳ ಅರಿದು ಚೆಲ್ಲಿ । ದೀನ ಸಂರಕ್ಷಣೆ ಮಾಡುವ ನಾಮವಿದು ॥ 186

ಸಾಯಿಗೆ ಉಪದೇಶಕ್ಕೆ ಇಂಥದೇ ಸ್ಥಳವೆಂದಿಲ್ಲ । ಸಮಯ ಹೊತ್ತು ಗೊತ್ತು ಒಂದೂ ಇಲ್ಲ ।
ಕೂಡುತ್ತ ಏಳುತ್ತ ಓಡಾಡುತಿರುವಂತೆಲ್ಲ । ಸಹಜದಲ್ಲೆಲ್ಲ ಉಪದೇಶ ನಡೆವುದು ॥ 187

ಇದರ ಬಗ್ಗೆಯೇ ಒಂದು ಕಥೆ । ಕೇಳುವಾಗಿರಬೇಕು ಸಾದರತೆ ।
ಪ್ರತ್ಯಯಕೆ ಬರುವುದು ಸಾಯಿಯ ಸದಯತೆ ।ಅಂತೆಯೇ ಅವರ ವ್ಯಾಪಕತೆಯು ॥ 188

ಒಮ್ಮೆ ಒಬ್ಬ ಭಕ್ತ ಶ್ರೇಷ್ಠನು । ತೆಗೆದುಕೊಂಡು ಯಾರ ಯಾರದೋ ಸುದ್ದಿಯನು ।
ಕುತರ್ಕಗಳಲಿ ತೊಡಗಿ ತಾನು । ನಿಂದೆಯಲ್ಲಿ ತೊಡಗಿದನು ॥ 189

ಗುಣವೆಂಬುವುದು ಒಂದೆಡೆ ಉಳಿದು । ನಿಂದೆಯ ಪ್ರವಾಹವೇ ಬಾಯಿಂದ ಹರಿದು ।
ಮಾತಿನಲ್ಲಿಯ ಸ್ವಾದ ಕಳೆದು । ನಿಂದೆಯೇ ಉಕ್ಕಿ ಹರಿಯತೊಡಗಿತು ॥ 190

ಅಂಥದೇನಾದರೂ ಕಾರಣವಿದ್ದರೆ । ಯಾರಿಂದಾದರೂ ಕೆಟ್ಟ ಆಚರಣೆಯಾಗಿದ್ದರೆ ।
ಪ್ರಬೋಧನ ಮಾಡಬೇಕು ಮುಖದೆದುರೇ । ಅವನ ಬಗ್ಗೆ ಕನಿಕರ ಬಂದು ॥ 191

ನಿಂದೆಯನೆಂದೂ ಮಾಡಬಾರದು । ಇದು ಪ್ರತಿಯೊಬ್ಬರಿಗೂ ತಿಳಿದಿರುವದು ।
ಆದರೂ ಮಾತು ಹೊಟ್ಟೆಯಲುಳಿಯದು । ಎಷ್ಟೇ ಮನ ಬಿಗಿ ಹಿಡಿದರೂ ॥ 192

ಬಳಿಕ ಅಲ್ಲಿಂದ ಕಂಠದಿ । ಕಂಠದಿಂದ ನಾಲಿಗೆ ತುದಿ ।
ಅಲ್ಲಿಂದ ಮೆಲ್ಲಗೆ ತುಟಿಗಳ ಸಂದಿ । ಅಲ್ಲಿಂದ ಸುಖವಾಗಿ ಪ್ರವಹಿಸುವದು ॥ 193

ನಿಂದಕರಿಗಿಂತಿಲ್ಲ ಬೇರೆ । ಉಪಕಾರಿಗಳು ಮೂಲೋಕದಲಿ ಬೇರೆ ।
ಯಾರ ನಿಂದೆ ನಡೆದಿರುವದೋ ಅವರೇ । ಪರೋಪರಿ ಕಲ್ಯಾಣ ಹೊಂದುವರು ॥ 194
ಕೆಲವರು ಕೊಳೆ ತೊಳೆಯುವರು ಅಂಟ್ಯಾಳದಿಂದ । ಕೆಲವರು ಸಾಬಣಾದಿ ಸಾಧನಗಳಿಂದ ।
ಕೆಲವರು ಶುದ್ಧ ನಿರ್ಮಲ ನೀರಿನಿಂದ । ನಿಂದಕರದ ಜಿವ್ಹೆಯಿಂದ ತೊಳೆಯುವರು ॥ 195

ತನ್ನ ಮಾನಸಿಕ ಅಧೋಗತಿ । ಪರೋಪಕಾರಾರ್ಥವಾಗಿ ಸಹಿಸುವರು ಅತಿ ।
ಅವರ್ಣನೀಯ ಆ ಮಹದುಪಕೃತಿ । ಅದಕೆ ನಿಂದಕನು ಅತಿವಂದ್ಯ ॥ 196

ಹೆಜ್ಜೆ ಹೆಜ್ಜೆಗೆ ಎಚ್ಚರಗೊಳಿಸುವರು । ನಿಂದೆಯ ನಿಮಿತ್ತವಾಗಿ ದೋಷಗಳ ತಿಳಿಸುವರು ।
ಅನ್ಯರ ಮುಂಬರುವ ಅನರ್ಥವ ಕಳೆವರು । ಅವರುಪಕಾರವನೆಷ್ಟೆಂದು ವರ್ಣಿಸಲಿ ॥ 197

ಪರಿಪರಿಯಲಿ ಸಾಧು ಸಂತರು । ಯಾರ ಮಹಿತಿಯ ಹೊಗಳಿರುವರು ।
ಆ ನಿಂದಕ ವೃಂದದೆದುರು । ಸಾಷ್ಟಾಂಗ ನಮನವೆನ್ನದು ॥ 198

ಅತ್ಯಂತ ಹೇಸಿಗೆ ಬಂದಿದೆ ಶ್ರೋತೃಗಳಿಗೆ । ನಿಂದಕರು ಹೊರಟರು ಬಹಿರ್ದೆಶೆಗೆ ।
ಜನರೂ ನಡೆದಿದ್ದರು ಮಶೀದಿಗೆ । ಬಾಬಾರ ದರ್ಶನಕ್ಕೆಂದು ॥ 199

ಬಾಬಾ ಪೂರ್ಣ ಅಂತರ್ಜ್ಞಾನಿಗಳಿದ್ದು । ಭಕ್ತರಿಗೆ ಶಿಕ್ಷಣ ಕೊಡುವರು ಸಮಯ ತಿಳಿದು ।
ಮುಂದೆ ನಡೆಯಿತು ಪ್ರಕಾರ ಯಾವದು । ಹೇಗೆ ಎಂಬುದನು ಕೇಳಿರಿ ॥ 200

ತಮ್ಮ ಜನರ ಜೊತೆ ಹೋಗುವಾಗ ಲೇಂಡಿಗೆ । ಬಾಬಾ ಕೇಳಿದರು ಆ ಭಕ್ತನ ಬಗ್ಗೆ ।
ತಿಳಿಯಿತು ಹೋಗಿಹನವ ಹಳ್ಳದೆಡೆಗೆ । ಬಹಿರ್ದಸೆಯ ಕಾರಣಕೆ ॥ 201

ಕಾರ್ಯಕ್ರಮವನು ಮುಗಿಸಿಕೊಂಡು । ಬಾಬಾ ಲೇಂಡಿಯಿಂದ ತಿರುಗಿ ಬರುತಿದ್ದು ।
ಅದೇ ಕಾಲಕ್ಕೆ ಭಕ್ತನು ಹಳ್ಳದಿಂದ ತಿರುಗಿ ಬಂದು । ಮನೆಯ ಕಡೆಗೆ ಹೊರಟನು ॥ 202

ಪರಸ್ಪರರ ಭೆಟ್ಟಿಯಾಗಲು । ನಡೆಯಿತೊಂದು ಪ್ರಕಾರ ಆ ಕಾಲದೊಳು ।
ಕೈ ಮುಗಿದು ಕೇಳುವೆನು ಶ್ರೋತೃಗಳು । ಚಿತ್ತ ವಿಟ್ಟು ಕೇಳಬೇಕು ॥ 203

ಅಲ್ಲಿಯೇ ಒಂದು ಬೇಲಿಯ ಬದಿಗೆ । ವಿಷ್ಠಾಮಿಷ್ಟಾನ್ನವ ಯಥೇಷ್ಟವಾಗೇ ।
ಗ್ರಾಮ ಸೂಕರಿಯೊಂದು ಚಪ್ಪರಿಸುತಿತ್ತು ನಾಲಿಗೆ । ಬಾಬಾ ಕೈ ಮಾಡಿ ತೋರಿಸಿದರದನು ॥204

'ನೋಡಿರಿ ಆ ನಾಲಿಗೆಯ ಸವಿ ಎಂಥದು । ಜನರು ಮಾಡಿದ ಮಲವನ್ನು ತಿನ್ನುವದು ।
ಬಂಧು ಸ್ವಜನರ ಹಾಯಗೊಡದು । ತನ್ನ ಪ್ರೀತಿಯ ಹರಿಸಿಕೊಳ್ಳುತಿಹುದು ॥ 205

ಬಹಳ ಸುಕೃತಗಳಿಂದ ಕೂಡಿ । ಬಂದ ನರಜನ್ಮವ ಹೀಗೆ ವ್ಯರ್ಥ ಮಾಡಿ ।
ಕೊಳ್ಳುವ ಆತ್ಮಘಾತಕಿಗೆ ಈ ಶಿರಡಿ । ಸುಖದ ಸಾಮ್ರಾಜ್ಯವನೇನು ಕೊಟ್ಟೀತು' ॥206

ಬಾಬಾ ಹೀಗೆ ಹೇಳುತ್ತ ಹೋದರು । ಭಕ್ತರು ಮನದಲ್ಲಿ ಲಜ್ಜಿತರಾದರು ।
ಪ್ರಾತರ್ವೃತ್ತವನೆಲ್ಲ ನೆನೆದರು । ಆ ಮಾತು ಮನಕೆ ಚುಚ್ಚಿದವು ॥ 207
ಹೀಗೆ ಬಾಬಾ ಪರೋಪರಿಯಾಗಿ । ಬೋಧಿಸುವರು ಭಕ್ತರಿಗೆ ಪ್ರಸಂಗಾನುಸಾರವಾಗಿ ।
ಇದರ ಸಾರವ ತಿಳಿದು ಮನದಲ್ಲಿಟ್ಟವರಿಗಾಗಿ । ದೂರವೆಲ್ಲಿದೆ ಆ ಪರಮಾರ್ಥ ॥208

'ದೇವರು ನನ್ನವನೇ ಇದ್ದಲ್ಲಿ । ತಂದು ಕೊಡುವನವ ನಾ ಮಲಗಿದ್ದಲ್ಲಿ'।
ಈ ಗಾದೆಯ ಸತ್ಯತೆ ನಿಜದಲ್ಲಿ । ಅನ್ನ ವಸ್ತ್ರಗಳಿಗೆ ಮಾತ್ರ ಅನ್ವಯಿಸುವದು ॥ 209

ಈ ಮಾತನು ಪರಮಾರ್ಥಕ್ಕೆ ಅನ್ವಯಿಸುವವ । ಸಂಪೂರ್ಣ ಪರಮಾರ್ಥವನೇ ಕಳೆದುಕೊಳ್ಳುವ ।
'ಮಾಡಿದಂತೆ ಪಡಿಯುವದ್ದು' । ಬಹುಮುಖ್ಯ ಮಾತುಗಳು ಬಾಬಾರವಿವು ॥ 210

ಮತ್ತೂ ಬಾಬಾರ ನುಡಿ ಕೇಳಿದಲ್ಲಿ । ಮನವು ಓಲಾಡುವದು ಸ್ವಾನಂದದಲ್ಲಿ ।
ಭಾವಭಕ್ತಿ ಹಸಿಯು ಇದ್ದರೆ ಅಲ್ಲಿ । ಬೇರುಗಳು ಆಳಕ್ಕೆ ಇಳಿಯುವವು ॥ 211

"ಜಲಸ್ಥಲ ಕಾಷ್ಠವೆಲ್ಲದರಲ್ಲಿ । ಜನವನ ದೇಶ ವಿದೇಶಗಳಲ್ಲಿ ।
ತುಂಬಿರುವೆ ನಾ ತೇಜ ಆಕಾಶಗಳಲಿ । ಒಂದೇ ಎಡೆ ನನ್ನದಲ್ಲಿ ॥ 212

ಮೂರು ಮೊಳದ ದೇಹಕ್ಕೆ ಪರಿಮಿತ । ಇದೇ ಮದ್ವ್ಯಾಪ್ತಿ ಎಂದು ತಿಳಿಯುತ ।
ಅವರ ಭ್ರಾಂತಿಯ ಬಿಡಿಸಲೆನುತ । ಮೂರ್ತಿಮಂತ ನಾನಾದೆ ॥ 213

ನಿಷ್ಕಾಮರಾಗಿ ನನ್ನ ಭಜನ । ಯಾರು ಮಾಡುವರು ರಾತ್ರಂದಿನ ।
ಅವರು ಪ್ರತ್ಯಕ್ಷ ನಾನೇ ನನ್ನತನ । ಬೇರೆತನವೆಂಬುದಿಲ್ಲದಂತೆ ॥ 214

ಬೆಲ್ಲವಿದ್ದೀತು ಸಿಹಿ ಬಿಟ್ಟು । ಸಾಗರವು ತರಂಗಗಳ ಹೊರತು ।
ಕಣ್ಣು ತೇಜವ ತ್ಯಜಿಸೀತು । ನನ್ನ ಹೊರತು ಭಾವಿಕ ಭಕ್ತ ಹಾಗೆ ॥ 215

ತಪ್ಪಬೇಕು ಜನ್ಮಮರಣಾವರ್ತ । ಯಾರ ಮನದಲಿ ಹೀಗಿರುವದು ನಿಶ್ಚಿತ ।
ಪ್ರಯತ್ನಪೂರ್ವಕ ಅವರಿರಬೇಕು ಧರ್ಮವಂತ । ಸ್ವಸ್ಥ ಚಿತ್ತರು ಯಾವಾಗಲೂ ॥ 216

ವರ್ಮದ ಮಾತುಗಳನವ ಬಿಡಬೇಕು । ಮರ್ಮದಿ ಯಾರನ್ನೂ ಇರಿಯದಿರಬೇಕು ।
ಸದಾ ಶುದ್ಧ ಕರ್ಮದಲಿ ನಿರತನಿರಬೇಕು । ಚಿತ್ತವನು ಸ್ವಧರ್ಮದಲಿ ಇಟ್ಟುಕೊಂಡು ॥ 217

ಮನಬುದ್ಧಿಗಳನು ನನಗರ್ಪಿಸಿ । ಸದಾಕಾಲವೂ ನನ್ನನ್ನು ಸ್ಮರಿಸಿ ।
ದೇಹದ ಚಿಂತೆಯ ದೂರವಿರಿಸಿ । ಅಂಥವಗೆ ಭಯವೆಂಬುದಿಲ್ಲ ನಿಜದಲಿ ॥ 218

ಯಾವನು ನೋಡುವನು ನನ್ನನು ಅನನ್ಯ । ಹೇಳುವನು ಕೇಳುವನು ನನ್ನಕಥೆಯನವನೇ ಧನ್ಯ ।
ಭಾವದಿ ಹಿಡಿಯದಿಹನು ಮದನ್ಯ । ಚಿತ್ತ ಚೈತನ್ಯವು ಲಭಿಸುವದು" ॥ 219

ನನ್ನ ನಾಮವ ಜಪಿಸು ಶರಣು ಬಾ ನನಗೆಂದು । ಎಲ್ಲರಿಗೂ ಇದನೆ ಹೇಳುತ್ತಲಿದ್ದು ।
ಆದರೂ ತಿಳಿಯಲು ನಾನು ಯಾರೆಂದು । ಶ್ರವಣ ಮನನಗಳ ಆಜ್ಞಾಪಿಸಿದರು ॥ 220

ಒಬ್ಬನಿಗೆ ಭಗವನ್ನಾಮಸ್ಮರಣೆ । ಒಬ್ಬನಿಗೆ ಭಗವಲ್ಲೀಲಾ ಶ್ರವಣ ।
ಒಬ್ಬರಿಗೆ ಭಗವತ್ಪಾದ ಪೂಜನ । ಬೇರೆ ಬೇರೆಯವರಿಗೆ ನಿಯಮನ ಬೇರೆ ಬೇರೆ ॥ 221

ಒಬ್ಬರಿಗೆ ಅಧ್ಯಾತ್ಮ ರಾಮಾಯಣ । ಒಬ್ಬರಿಗೆ ಜ್ಞಾನೇಶ್ವರಿ ಪುರಶ್ಚರಣ ।
ಒಬ್ಬರಿಗೆ ಹರಿವರದಾ ಪಾರಾಯಣ । ಗುರುಚರಿತ್ರಾವಲೋಕನ ಒಬ್ಬರಿಗೆ ॥ 222

ಒಬ್ಬರನು ಕುಳ್ಳಿರಿಸುವರು ಚರಣದಲ್ಲಿ । ಇನ್ನೊಬ್ಬನನು ಖಂಡೋಬನ ಗುಡಿಯಲಿ ।
ವಿಷ್ಣು ಸಹಸ್ರನಾಮಾವಲಿಯನೊಬ್ಬರ ಕೊರಳಲಿ । ಕಟ್ಟುವರು ಬಲು ಕಳಕಳಿಯಿಂದ ॥ 223

ಉಪದೇಶಿರುವರೊಬ್ಬರಿಗೆ ರಾಮವಿಜಯ । ಇನ್ನೊಬ್ಬರಿಗೆ ಧ್ಯಾನ ಮಹಾತ್ಮ್ಯ ।
ಮತ್ತೊಬ್ಬರಿಗೆ ಛಾಂದೋಗ್ಯ ಗೀತಾರಹಸ್ಯ । ವಿಶ್ವಾಸದಿಂದ ಸ್ವಾರಸ್ಯವು ಅನುಭವದಲಿ ॥ 224

ಯಾರಿಗೆ ಯಾವದು ಯಾರಿಗೆ ಯಾವದು । ದೀಕ್ಷಾ ಪ್ರಕಾರಕೆ ಸೀಮೆಯೇ ಇರದು ।
ಯಾರಿಗೆ ಪ್ರತ್ಯಕ್ಷದಲಿ ಯಾರಿಗೆ ದೃಷ್ಟಾಂತದಿಂದೂ । ಉಪದೇಶಿಸುವ ರೀತಿಯೇ ವಿಚಿತ್ರ ॥ 225

ಭಕ್ತರು ಹದಿನೆಂಟು ಜಾತಿಯವರು । ಓಡೋಡಿ ದರ್ಶನಕೆ ಬರುವರು ।
ಮದ್ಯದಲಿ ಅತಿ ಪ್ರೀತಿ ಇದ್ದವರೂ ಬರುವರು । ಅಂಥವರ ಕನಸಿನಲೂ ಹೋಗುವರು ॥ 226

ಅವರೆದೆಯ ಮೇಲೆ ಕುಳಿತುಕೊಂಡು । ಕೈ ಕಾಲುಗಳಿಂದ ಬಡಿದು ವದ್ದು ।
ಮದ್ಯ ಮುಟ್ಟುವದಿಲ್ಲೆಂದು ವಚನ ಪಡೆದು । ತಿರುಗಿಬರುವರು ಅಲ್ಲಿಂದ ॥ 227

ಲಗ್ನ ಗ್ರಹದ ಗೋಡೆಗಳ ಮೇಲೆ ಜ್ಯೋತಿಷಿಗಳು । ಬಿಡಿಸುವರು ಹರಿಹರರ ಚಿತ್ರಗಳು ।
ಬರೆದು ಗುರು ಬ್ರಹ್ಮಾದಿ ಮಂತ್ರಗಳು । ಭಕ್ತಾರ್ಥಿಗಳ ಕನಸಿನಲಿ ಬರೆವರು ॥ 228

ಯಾರು ಕದ್ದು ಆಸನವ ಹಚ್ಚುತ್ತಿರಲು । ಇಲ್ಲವೇ ಹಠಯೋಗ ಸಾಧನೆ ಮಾಡುತಿರಲು ।
ಅಂತರ್ಜ್ಞಾನದಿಂದ ಬಾಬಾರಿಗದು ತಿಳಿಯಲು । ಗುರಿಯಿಟ್ಟು ಬಾಣದಿಂದಿರಿಯುವರು ॥ 229

ಯಾರಿಗೆ ಅಪರಿಚಿತರ ಕೈಲಿ । ಹೇಳಿಕಳಿಸುವರೀ ರೀತಿಯಲಿ ।
ಸಿಕ್ಕಷ್ಟು ರೊಟ್ಟಿ ತಿಂದು ಸುಮ್ಮನೇ ಕುಳಿತುಕೊಳ್ಳಿ । ಸ್ವಲ್ಪ ತಾಳ್ಮೆ ಹಿಡಿದಿರಬೇಕು ॥ 230

ಕೆಲವರಿಗೆ ಇದುರಿನಲ್ಲೇ ಒತ್ತಿ ಹೇಳುವರು । ನಾವಂತೂ ಬಹಳ ಕಹಿ ಜಾತಿಯವರು ।
ಒಂದೆರಡು ಸಲ ಹೇಳಿ ನೋಡುವವರು । ಕೊನೆಯ ಗತಿ ಬಹಳ ಕಠಿಣವಾದೀತು ॥ 231

ಒಮ್ಮೆ ಹೇಳುವೆವು, ಹೇಳುವೆವು ಎರಡು ಸಲ । ಸುಮ್ಮನೇ ಕೇಳದೇ ಹೋದರೆ ನಮ್ಮ ಮಾತುಗಳ ।
ಅವನು ಹೊಟ್ಟೆಯ ಮಗನೇ ಏಕಿರವಲ್ಲ । ಎರಡು ಹೋಳು ಮಾಡಿ ಬಿಸುಡುವೆವು ॥ 232

ಮಹಾನುಭಾವರ ಮತಿಯೂ ಮಹಾನ । ನಾ ಪಾಮರನೆಷ್ಟು ಹೇಳಲಿ ಅವರ ಚಮತ್ಕೃತಿಗಳನ ।
ಒಬ್ಬರಿಗೆ ಕೊಡುವರು ಜ್ಞಾನ ಪ್ರಾಪ್ತಿ ವಿರಕ್ತಿಗಳನ । ಸದ್ಭಾವಭಕ್ತಿಗಳನೊಬ್ಬರಿಗೆ ॥233
ಯಾರಿಗೋ ಯಾವದಾದರೋ ವ್ಯವಹಾರದಲ್ಲಿ । ಪ್ರಶಸ್ತ ವರ್ತನದ ಶಿಸ್ತು ಹಚ್ಚುವರಲ್ಲಿ ।
ಉದಾಹರಣಕ್ಕೆಂದು ಒಂದಿಲ್ಲಿ । ಚುಟುಕಾದ ಕಥೆಯನು ಹೇಳುವೆನು ॥ 234

ಒಮ್ಮೆ ಬಾಬಾ ನಡು ಮಧ್ಯಾನ್ಹದಲ್ಲಿ । ತಿಳಿಯದು ಏನು ಬಂತೋ ಅವರ ಮನದಲ್ಲಿ ।
ರಾಧಾಕೃಷ್ಣಳ ಮನೆಯ ಮಗ್ಗುಲಲ್ಲಿ । ಬಾಬಾ ಅಕಸ್ಮಾತ್ತಾಗಿ ಬಂದರು ॥ 235

ಜೊತೆಗೆ ಕೆಲ ಜನರಿದ್ದರು । ಅವರಿಗೆ ನಿಚ್ಚಣಿಕೆ ತನ್ನಿರೆಂದರು ।
ಕೂಡಲೇ ನಿಚ್ಚಣಿಕೆ ತಂದಿಟ್ಟರು । ಅವರಲಿ ಯಾರೋ ಒಬ್ಬರು ॥ 236

ಬಾಬಾ ಅದನು ಮನೆಯ ಮೇಲೆ ಹಚ್ಚಿದರು । ಸರಸರನೇ ತಾವೇ ಏರಿದರು ।
ಅವರ ಮನದಲಿದ್ದುದ ಯಾರೂ ತಿಳಿಯರು । ಈ ಯೋಜನೆ ಯಾತಕ್ಕಾಗಿ ಎಂದು ॥237

ವಾಮನ ಗೋಂದಕರನ ಮನೆಗೆ । ನಿಚ್ಚಣಿಕೆ ಹಚ್ಚಿಸಿದ್ದರಲ್ಲಿಗೆ ।
ತಾವೇ ಹತ್ತಿ ನಿಚ್ಚಣಿಕೆ । ಚಪ್ಪರವನ್ನೇರಿದರು ॥ 238

ಅಲ್ಲಿಂದ ರಾಧಾಕೃಷ್ಣಳ ಚಪ್ಪರಕೆ । ಇದ್ದಿತಾವುದು ಅದರ ಮಗ್ಗುಲಕೆ ।
ಅದನ್ನೂ ದಾಟಿ ಲಗು ಬಗೆ । ಈ ಚಮತ್ಕಾರವೇನೆಂದು ತಿಳಿಯದು ॥ 239

ರಾಧಾಕೃಷ್ಣಾಬಾಯಿಗೆ ಮಾತ್ರ । ಅದೇ ಕಾಲಕೆ ಬಹಳ ಪ್ರಖರ ।
ಕಾಡ ಹತ್ತಿತ್ತು ಶೀತ ಜ್ವರ । ಅತ್ಯಂತ ಅಸ್ವಸ್ಥರಾಗಿದ್ದರು ॥ 240

ಎರಡೂ ಕಡೆಗೆ ಇಬ್ಬರು । ಹಿಡಿದಾಗ ಮಾತ್ರ ಬಾಬಾ ನಡೆಯುತಿದ್ದರು ।
ತಾವೇ ಇಷ್ಟು ಅಶಕ್ತರಾಗಿದ್ದರೂ । ಈ ಬಲವೆಲ್ಲಿಂದ ಬಂದಿರಬೇಕು ॥ 241

ಕೂಡಲೇ ಅದರ ಬದಿಯ ಚಪ್ಪರವನು । ಜಾರಿ ಅದರ ಇಳಿಜಾರನು ।
ಇಲ್ಲಿಯೂ ಅದೇ ನಿಚ್ಚಣಿಕೆಯನ್ನು । ಹಚ್ಚಿಸಿ ಕೆಳಗಿಳಿದು ಬಂದರು ॥ 242

ಕಾಲು ಮುಟ್ಟಿದ ಕೂಡಲೇ ಭೂಮಿಗೆ । ಎರಡು ರೂಪಾಯಿಗಳ ನಿಚ್ಚಣಿಕೆಯವನಿಗೆ ।
ಬಾಬಾ ದಕ್ಷತೆಯಿಂದ ಕೊಟ್ಟರಾಗ್ಯೆ । ಒಂದು ಕ್ಷಣದ ವಿಲಂಬ ಮಾಡದೇ ॥ 243

ಎರಡು ಕಡೆ ನಿಚ್ಚಣಿಕೆ ಹಚ್ಚಿದ್ದು । ಇಷ್ಟೇ ಅವನು ಶ್ರಮಬಿಟ್ಟದ್ದು ।
ಯಾವುದಕೆ ಬಾಬಾ ಕೊಟ್ಟರು ಇಷ್ಟೊಂದು । ಅದರ ಪರಿಹಾರವೆಂದು ॥ 244

ಸಹಜ ಜಿಜ್ಞಾಸೆ ಜನರ ಮನಸಿಗೆ । ಇಷ್ಟೇಕೆ ದುಡ್ಡು ಕೊಟ್ಟರು ಅವನಿಗೆ ।
ಬಾಬಾ ಕೊಟ್ಟರಾದರೂ ಹೇಗೆ । ಅದನವರಿಗೆ ಕೇಳಬೇಕು ॥ 245

ಆಗ ಒಬ್ಬ ಕೇಳಿದ ಮಾಡಿ ಧೈರ್ಯ । ಅದಕೆ ಬಾಬಾ ಕೊಟ್ಟ ಪ್ರತ್ಯುತ್ತರ ।
ಯಾರದಾದರೂ ಶ್ರಮದ ಭಾರ । ಹಾಗೇ ಎಂದೂ ಇಟ್ಟುಕೊಳ್ಳಬಾರದು ॥ 246
ಯಾರಿಂದಾದರೂ ಕೆಲಸ ಮಾಡಿಸಿಕೊಳ್ಳಬೇಕು । ಆದರೆ ಅವನ ಶ್ರಮದ ಅರಿವಿರಬೇಕು ।
ಮನಕೊಂದು ನಿಯಮವನೇ ಇಡಬೇಕು । ಮೂಲ್ಯವನು ಪರಿಶ್ರಮಕೆ ಕೊಡದಿರಬಾರದು ॥ 247

ಯಾರಿಗೆ ಗೊತ್ತು ಒಳಗಿನ ಮಾತು । ಬಾಬಾ ಹೇಗೆ ಮಾಡಿದರಿಂತು ।
ಇದು ಅವರದು ಅವರಿಗೇ ಗೊತ್ತು । ಅತಿ ಗೂಢ ಸಂತಾಂತರ್ಗತವಿರುವದು ॥ 248

ಕೇಳುವದು ಅವರ ಮುಖದ ಉದ್ಗಾರ । ಅದೇ ಸರ್ವಸ್ವದಲಿ ನಮಗಾಧಾರ ।
ಈ ರೀತಿ ಇರಲು ವರ್ತನ ನಿರ್ಧಾರ । ವ್ಯವಹಾರವು ಸುರಳೀತ ನಡೆಯುವದು ॥ 249

ಮುಂದಿನ ಅಧ್ಯಾಯ ರುಚಿಯದು । ಇದಕಿಂತ ಅತಿ ಸರಸವಾಗಿರುವದು ।
ಒಬ್ಬ ಕೆಲಸದಾಳಿನ ಮಗಳು ಚಿಕ್ಕದು । ಶೃತಿಯ ಅರ್ಥವ ತಿಳಿಸಿದಳು ॥ 250

ಗಣುದಾಸರು ಹರಿದಾಸರವರು ಪ್ರಾಸಾದಿಕ । ಉಪಕಾರ ಮಾಡಲೆಂದು ಪ್ರಾಕೃತ ಜನಕ ।
ಈಶಾವಾಶ್ಯದ ಭಾಷಾಂತರಕ । ಮನಸ್ಸು ಮಾಡಿಯಾಯಿತು ॥ 251

ಸಾಯಿ ಕೃಪೆಯಿಂದ ಗ್ರಂಥ ಮುಗಿಯಿತು । ಆದರೆ ಒಂದು ಗೂಢಾರ್ಥ ಉಳಿಯಿತು ।
ಅದರಿಂದ ಮನದಲಿ ಶಂಕೆ ಉಳಿಯಿತು । ಬಾಬಾ ಅದನು ಪರಿಹರಿಸಿದರು ಹೇಗೆ ॥ 252

ಬಾಬಾ ಹೇಳಿದರು ಕುಳಿತು ಶಿರಡಿಯೊಳು । ಪಾರಲೆಗೆ ತಿರುಗಿ ನೀ ಹೋಗಲು ।
ಅಲ್ಲಿ ಕಾಕಾರ ಮನೆಯ ಕೆಲಸದಾಳು । ನಿನ್ನ ಶಂಕೆ ಕಳೆಯುವಳು ॥ 253

ಈಶಾವಾಸ್ಯ ಕಮಲದ ಸುತ್ತಲೂ । ಶಾರದೆ ಭ್ರಮರ ರೂಪದಲಿ ಸುತ್ತುತಿರುವಳು ।
ಅದರ ಸುಗಂಧವ ಸವಿಯಲು । ಶ್ರೋತೃಗಳು ಅಣಿಯಾಗಬೇಕು ॥ 254

ಮುಂದಿನ ಅಧ್ಯಾಯದಲಿ ಬರುವ ಈ ಕಥನ । ಮಾಡುವ ಮಾಡಿಸುವವ ಸಾಯಿ ದಯಾಘನ ।
ಶ್ರೋತೃಗಳು ಮಾಡಲಿದರ ಶ್ರವಣ । ಬಹಳ ಕಲ್ಯಾಣ ಅವರದು ॥ 255

ಪಂತ ಹೇಮಾಡ ಸಾಯಿಗೆ ಶರಣ । ಆದರಂತೆ ಭೂತ ಮಾತ್ರಗಳು ಭಗವಂತನಲಿ ಲೀನ ।
ಶ್ರೋತೃಗಳೀಯಲಿ ಅವಧಾನದಾನ । ಸಾಯಿ ನಿವೇದನ ಸವಿ ಇದು ॥ 256

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಮದನುಗ್ರಹೋ ನಾಮ
ಏಕೋನವಿಂಶೋಽಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥಃ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಓಂ ನಮೋ ಹೇ ಗುರು ಮಾನಸಸರಾ । ಪ್ರಸಾದ ವಾಕ್ಯ ಮುಕ್ತಾಕರಾ ।
ಅನನ್ಯ ಭಕ್ತ ಮರಾಳನಿಕರಕೆ । ಚರಣದಲಿ ತಾಣ ನಿನ್ನೆಡೆಯಲ್ಲಿ ॥ 1

ಸದಾಶ್ರಯ ನೀ ಮಹಾಉದಾರ । ಪ್ರಸಾದವನ್ನೀಯುವೆ ಮುತ್ತಿನಾಹಾರ ।
ಕೊಟ್ಟು ನಿಜ ವಿಶ್ರಾಂತಿಯ ಆಧಾರ । ಬರುಹೋಗುವ ಚಕ್ರದಿಂದ ಬಿಡಿಸುವಿ ॥ 2

ಎಂಥದು ಆ ಸಾಯಿ ಸಿದ್ಧಾಶ್ರಮ । ದರ್ಶನದಿಂದಿಂಗುವದು ಸಂಸಾರ ಶ್ರಮ ।
ನಿಕಟವಾಸದಿಂದ ಭವ ಭ್ರಮ । ಕಳೆಯುವದು ಅವಿಶ್ರಮ ಸಹವಾಸದಿಂದ ॥ 3

ಮೂಲದಲಿ ಸಾಯಿ ನಿರಾಕಾರ । ಭಕ್ತ ಕಾರ್ಯಕ್ಕಾಗಿ ಆದ ಸಾಕಾರ ।
ಮಾಡಿ ಮಾಯಾ ನಟನೆಯ ಸ್ವೀಕಾರ । ಆಡಿದ ನಿಜದಲಿ ನಟನಂತೆ ॥ 4

ಮಧ್ಯಾನ್ಹ ಆರತಿಯ ನಂತರ । ಬಂದು ಮಶೀದಿಯ ಅಂಚಿನ ಹತ್ತಿರ ।
ಮಹಾರಾಜರಾಗಿ ಕೃಪಾಕರ । ಉದಿ ಹಂಚುವರು ಭಕ್ತರಿಗೆ ॥ 5

ಇಂಥ ಸಾಯಿಯ ತಂದು ನೆನಪಿಗೆ । ಕ್ಷಣವೊಂದು ಹೋಗುವ ಶಿರಡಿಗೆ ।
ಮಧ್ಯಾನ್ಹದ ಆರತಿ ಮುಗಿದಾಗ್ಗೆ । ಲಕ್ಷವಿಟ್ಟು ನೋಡುವಾ ॥ 6

ಪ್ರೇಮಳ ಭಕ್ತರಾದರೂ ಆಗಿಂದಾಗ್ಗೆ । ಸಮ ಚರಣಗಳಿಗಿತ್ತು ಅಪ್ಪುಗೆ ।
ದೃಷ್ಟಿಯನಿರಿಸಿ ಮುಖದೆಡೆಗೆ । ಉದಿಯ ವೃಷ್ಟಿಯಲಿ ಮೀಯುವರು ॥ 7

ಬಾಬಾರೂ ತುಂಬಿ ಹಿಡಿದು ಮುಟ್ಟಿಗೆ । ಹಾಕುವರು ಭಕ್ತರ ಕೈಯೊಳಗೆ ।
ಹೆಬ್ಬೆರಳಿನಿಂದ ಹಚ್ಚುವರು ಹಣೆಗೆ । ಅಂತರಂಗದಿ ಪ್ರೀತಿ ತುಂಬಿ ॥ 8

"ಹೋಗು ಅಣ್ಣಾ ಊಟಕ್ಕೆ ಹೋಗು । ಹೋಗು ಅಣ್ಣಾ ಸುಗ್ರಾಸ ಊಟ ಮಾಡು ಹೋಗು ।
ನಿಮ್ಮ ನಿಮ್ಮ ಮನೆಗಳಿಗೆ ಹೋಗಿ" ಎಂದೆಲ್ಲರಿಗೂ । ಪ್ರತ್ಯೇಕವಾಗಿ ಹೇಳುವರು ॥ 9

ಅದೆಲ್ಲ ಈಗ ಸಿಗದಿದ್ದರೂ ನೋಡಲು । ಆ ಎಲ್ಲ ಸುಖ ಸಮಾರಂಭಗಳು ।
ಆಯಾ ಸ್ಥಾನದಲಿ ಆಯಾ ಸಮಯದೊಳು । ದೃಢ ಧ್ಯಾನ ಬಲದಿಂದ ಕಾಣುವವು ॥ 10

ಹೀಗೆ ಮಾಡಿ ಅವರ ಧ್ಯಾನ । ಅಂಗುಷ್ಟದಿಂದ ಮುಖದವರೆಗೆ ಅವಲೋಕನ ।
ಮಾಡಿ ಅವರ ಅಡಿಗಳಿಗೆ ವಂದನ । ಕಥಾನುಸಂಧಾನವ ನಡೆಸುವಾ ॥ 11

ಹಿಂದಿನಾಧ್ಯಾಯದ ಕೊನೆಯಲ್ಲಿ । ಹೇಳಿಕೊಂಡಿದ್ದೆ ಶ್ರೋತೃಗಳಲಿ ।
ಬಾಬಾ ಕೆಲಸದಾಳಿನ ಕೈಲಿ । ಶೃತಿಯ ಅರ್ಥವನು ಹೇಳಿಸುವರೆಂದು ॥ 12

ಈಶಾವಾಸ್ಯ ಭಾವಾರ್ಥ ಬೋಧಿನಿಯೆಂದು । ದಾಸಗಣೂ ಆರಂಭಿಸಿದ್ದರು ಗ್ರಂಥವನೊಂದು ।
ಶಂಕೆ ಮೂಡಿದಾಗ ಸದ್ಗುರು ಚರಣಕೆ ಬಂದು । ಶಿರಡಿಯಲವರ ಮುಂದಿಟ್ಟರು ॥13

ಬಾಬಾ ಹೇಳಿದರವನಿಗೆ । ನಿನ್ನ ಈ ಶಂಕೆಯ ನಿವಾರಣಗೆ ।
ನೀನು ತಿರುಗಿ ಊರಿಗೆ ಹೋದಾಗ್ಯೆ । ಕಾಕಾರ ಕೆಲಸದಾಳು ಮಗಳೆನ್ನುವದ ಕೇಳಬೇಕು ॥ 14

ಅದೇ ಈಗಿನ ಕಥಾನುಸಂಧಾನ । ಇನ್ನು ನಡೆಸುವಾ ಮುಂದೆ ಅವನ ।
ಶ್ರೋತೃಗಳಾಗಿರಿ ದತ್ತಾವಧಾನ । ಸಂಪೂರ್ಣವಾಗಿ ಕೇಳಿರಿದನ ॥ 15

ತಿಳಿಯದೇ ಇದ್ದವರು ಸಂಸ್ಕೃತವನು । ತಿಳಿಯರು ಈಶಾವಾಸ್ಯೋಪನಿಷದದ ಅರ್ಥವನು ।
ಅದಕೆ ಪದಪದಗಳಾಗಿ ಬಿಡಿಸಿ ಅದನು । ಓವಿರೂಪದಲಿ ವಿವರಿಸಬೇಕೆಂದು ॥ 16

ಹೀಗೆ ಆಸ್ಥೆಯನಿಟ್ಟುಕೊಂಡು । ಈಶಾವಾಸ್ಯ-ಭಾವಾರ್ಥಭೋದಿನಿಯೆಂದು ।
ಪ್ರಾಕೃತ ಭಾಷೆ ಸುಗಮ ಭಾಷೆಯಲೊಂದು । ಗ್ರಂಥವ ಗಣುದಾಸರು ಆರಂಭಿಸಿದರು ॥ 17

ಗೂಢಾರ್ಥ ಪ್ರಚುರ ಈ ಉಪನಿಷದನ । ಭಾಷಾಂತರವಾಯಿತು ಪದ ಪ್ರಪದ ।
ಆಗದೆ ಅಂತರ್ಗತ ಅರ್ಥಬೋಧ । ಆನಂದವಾಗದು ಮನಕೆ ॥ 18

ನಾಲ್ಕು ವೇದಗಳ ಸಾರ । ಈ ಉಪನಿಷದ ಭಾಂಡಾರ ।
ಹರಿಗುರು ಕೃಪೆ ಇಲ್ಲದಿರ । ಅತಿ ದುಸ್ತರವಿದು ಸಿಗಲು ॥ 19

ಯಾರಿಗಾದರೂ ಎನಿಸಿದರೆ ನಾನಿರುವೆ ಜಾಣ । ನನ್ನಷ್ಟಕ್ಕೇ ಮಾಡಿ ಪ್ರಯತ್ನ ।
ಮಾಡುವೆ ಉಪನಿಷದದ ಆಕಲನ । ಯಥಾರ್ಥ ಪ್ರತಿಪಾದನವನು ॥ 20

ಆದರೆ ಹಾಗೆಂದೂ ಆಗದು । ಗುರುಕೃಪೆಯಿರದೆ ಬಿಗಿ ಎನಿಸುವದು ।
ಅದರ ಗುಪ್ತ ಪ್ರಮೇಯ ಕೈಗೆಟುಕದು । ಅಲ್ಲಲ್ಲಿ ತಡೆಯುಂಟಾಗುವದು ॥ 21

ಗುರುಪದದಿ ಯಾರ ಭಕ್ತಿ ಇರುವದು । ಅಂಥವನಿಗೆ ಏನೂ ಕಷ್ಟವೆನಿಸದು ।
ಅವನ ದೃಷ್ಟಿಯ ಎದುರು ನಿಲ್ಲುವದು । ತನ್ನಷ್ಟಕ್ಕೇ ಆಗೂಡಾರ್ಥ ಬಂದು ॥ 22

ಆತ್ಮಜ್ಞಾನದ ಈ ಶಾಸ್ತ್ರ । ಜನ್ಮ ಮರಣಗಳ ಬಿಡಿಸುವ ಶಸ್ತ್ರ ।
ನಿರಭಿಮಾನ ನಿಃಸಂಗರಿರಲು ಮಾತ್ರ । ಅವರು ವಿವೇಚನೆಗೆ ಸತ್ಪಾತ್ರರು ॥ 23

ಅಂಥವರ ಸಂಗ ಹಿಡಿಯಲು । ಅರ್ಥಬೋಧವಾಗುವದು ಕ್ಷಣದೊಳು ।
ಬುದ್ಧಿಯು ಪ್ರತಿಬದ್ಧತೆ ಕಳೆಯುವದು । ಗೂಡಾರ್ಥ ವಿಶದವಾಗುವದು ॥ 24

ಈಶಾವಾಸ್ಯವನು ಪ್ರಾಕೃತಕ್ಕೆ ತರಲು । ದಾಸಗಣೂರದೂ ಇದೇ ಅವಸ್ಥೆಯಾಗಲು ।
ಆದರೂ ಸಾಯಿನಾಥ ಕೃಪೆ ದೊರೆಯಲು । ದುರ್ಗಮವೆಲ್ಲ ಸುಗಮವಾಯಿತು ॥ 25

ಗೀರ್ವಾಣ ಭಾಷೆಯ ಅಲ್ಪ ಜ್ಞಾನವಿದ್ದರೂ । ಕೂಡ ಆಚಾರ್ಯ ವಿದ್ಯಾರಣ್ಯರು ।
ಸಾಯಿ ಚರಣಗಳ ವಂದಿಸಿದರು । ಬಳಿಕ ಓವೀ ಲೇಖನ ಪ್ರಾರಂಭಿಸಿದರು ॥ 26

ಗಣುದಾಸವಾಣಿ ದುಗ್ಧಧಾರೆ । ಅದರಲ್ಲಿ ಸಾಯಿ ಪ್ರಸಾದದ ಸಕ್ಕರೆ ।
ಅಲ್ಲಿಯ ಮಾಧುರ್ಯ ಪರಂಪರೆ । ಕ್ಷಣವೊಂದು ಕೇಳಿರಿ ಶ್ರೋತೃಗಳೇ ॥ 27

ಈ ಭಾವಾರ್ಥ ಬೋಧನಿಯ ದಿಗ್ದರ್ಶನ । ಒಳಮಾತನರಿಯಲು ಮಾಡಿ ಮೂಲಾವಲೋಕನ ।
ಈ ನನ್ನ ಕಥೆಯ ಅನುಸಂಧಾನ । ಇರುವುದದ ಕೇಳಿರಿ ॥ 28

ತನ್ನ ಭಕ್ತನು ಗ್ರಂಥಾವಲೋಕನ ಮಾಡುತಿರಲು । ನಡುವೆ ಅರ್ಥವಾಗದಂಥ ಮಾತುಗಳು ।
ಮಹಾರಾಜರು ಸಮಾಧಾನ ಮಾಡುವರು ಅವು ಬರಲು । ಮಾತನಾಡದಲೇ ಹೇಗೆಂದು ॥ 29

ಈ ಕಥೆಯ ಉದ್ದೇಶವೇನೆಂಬದನು । ಶ್ರೋತೃಗಳು ತಿಳಿಯಲಿ ಇದರ ತಾತ್ಪರ್ಯವನು ।
ಎಂಬ ನನ್ನ ಮನೋಗತವಿರುವದನು । ತಿಳಿದು ಚಿತ್ತವಿಟ್ಟಾಲಿಸಿರಿ ॥ 30

ಓವೀಬದ್ಧ ಟೀಕೆಯ ಬರೆದೆ । ವಿದ್ವಜ್ಜನರಿಗೂ ಅದು ಮೆಚ್ಚಿಗೆಯಾಗಿದೆ ।
ಗಣೂದಾಸರ ಮನೀಷೆ ಪೂರೈಸಿದೆ । ಆದರೂ ಒಂದು ಶಂಕೆ ಉಳಿದಿದೆ ॥ 31

ಇಟ್ಟೆನದನು ಪಂಡಿತ ಜನರೆದುರಿಗೆ । ಬಹಳ ಊಹಾಪೋಹಗಳು ನಡೆಯಲಾಗೆ ।
ಆದರೂ ಆಗಲಿಲ್ಲ ಸಮಾಧಾನವಾಗುವ ಹಾಗೆ । ಆ ಶಂಕೆಯ ನಿರ್ಧಾರವು ॥ 32

ಇಷ್ಟರಲಿ ಏನೋ ಕಾರಣ ಒದಗಿತು । ಅದರಿಂದ ದಾಸಗಣೂ ಶಿರಡಿಗೆ ಹೋಗಬೇಕಾಯಿತು ।
ಆ ಶಂಕೆಯ ನಿವಾರಣೆಯಾಗುವದಿತ್ತು । ಸಹಜದಲೆ ಒದಗಿತಾಗ ॥ 33

ಸಾಯಿ ದರ್ಶನಕೆ ಹೋದರು । ಚರಣದಲಿ ಹಣೆ ಇಟ್ಟರು ।
ಸಾಷ್ಟಾಂಗ ನಮನ ಮಾಡಿದರು । ಸುಖ ಸಂಪನ್ನರಾದರು ॥ 34

ಸಂತ ಕೃಪೆಯ ಅವಲೋಕನ । ಸಂತ ಮುಖದ ಮಧುರ ವಚನ ।
ಸಂತರ ಆ ಸುಹಾಸ್ಯವದನ । ಕೃತ ಕಲ್ಯಾಣ ಭಕ್ತಗಣ ॥ 35

ಕೇವಲ ಸಂತರ ದರ್ಶನ । ಮಾಡುವದೆಲ್ಲ ದೋಷಗಳ ಕ್ಷಾಲನ ।
ಯಾರಿಗವರ ನಿತ್ಯ ಸನ್ನಿಧಾನ । ಅವರ ಪುಣ್ಯವನೇನೆನಬೇಕು ॥ 36

ಏನು ಗಣೂ ಎಲ್ಲಿಂದ ಆಗಮನ । ಬಾಬಾ ಕೇಳಿದರು ವರ್ತಮಾನ ।
ಎಲ್ಲವೂ ಕುಶಲ ಸಮಾಧಾನ । ಚಿತ್ತವು ಪ್ರಸನ್ನವಿರುವದನು ॥ 37

ಗಣುದಾಸರು ನುಡಿದರಾಗ । ನಿಮ್ಮ ಕೃಪಾಛತ್ರವಿರುವಾಗ ।
ಖಿನ್ನವೇಕಾದೀತೆನ್ನಂತರಂಗ । ಆನಂದ ನಿರ್ಭರನಾಗಿರುವೆ ॥ 38

ತಾವು ಇದನೆಲ್ಲ ತಿಳಿದಿರುವಿರಿ । ಆದರೂ ಲೋಕೋಪಚಾರಕ್ಕಾಗಿ ಕೇಳುತ್ತಿರುವಿರಿ ।
ಆದರೂ ನೀವೇಕೆ ಕುಶಲ ವೃತ್ತವ ಕೇಳುತ್ತಿರುವಿರಿ । ನಾನೂ ಅದನು ಬಲ್ಲೆನು ॥ 39

ನೀವೇ ನನ್ನಿಂದ ಆರಂಭ ಮಾಡಿಸಿದಿರಿ । ಅದಕೊಂದು ಆಕಾರವನೂ ಕೊಟ್ಟಿರಿ ।
ಆದರೆ ನಡುವೆಯೇ ಒಂದು ಗೂಟ ಜಡಿದಿರಿ । ಯಾರಿಂದಲೂ ಅದು ಬಿಡಿಸಲಾಗದು ॥ 40

ಹೀಗೆ ಪರಸ್ಪರ ಮಾತು ನಡೆಯಿತು । ಗಣೂದಾಸರಿಂದ ಬಾಬಾರ ಪಾದ ಸಂವಾಹನೆ ನಡೆದಿತ್ತು ।
ಈಶಾವಾಸ್ಯ-ಭಾವಾರ್ಥಬೋಧನ ಕುರಿತು । ಪ್ರಶ್ನೆಯನ್ನು ಕೇಳಿದರು ॥ 41

ಈಶಾವಾಸ್ಯ-ಭಾವಾರ್ಥ ಬೋಧಿನಿಯದು । ಬರೆಯುವಾಗ ನಡುವೆ ಅಡ್ಡಿಯಾಗುವದು ।
ಶಂಕೆ ಕುಶಂಕೆಗಳು ಮನದಲಿ ಬಂದು । ತಾವು ಅವುಗಳ ಬಿಡಿಸಿ ಹೇಳಬೇಕು ॥ 42

ಸಾದ್ಯಂತವಾಗಿ ನಡೆದ ಸಂಗತಿಯನು । ಬಾಬಾರ ಎದುರು ಆದರ ಪೂರ್ವಕವಾಗಿ ಹೇಳಿದನು ।
ಬಿಡಿಸಲಾಗದ ಆ ಆಶಂಕೆಯನು । ಬಾಬಾರ ಮುಂದಿಟ್ಟನು ॥ 43

ಸಾಯಿನಾಥರಿಗೆ ಗಣೂದಾಸ ವಿನಂತಿಸಿದ । ಈ ಈಶಾವಾಸ್ಯದ ಕಥೆಯಿಂದ ।
ನನ್ನ ಪರಿಶ್ರಮವೆಲ್ಲ ವ್ಯರ್ಥವಾಗುವದ । ತಾವು ಎಲ್ಲ ತಿಳಿದಿರುವಿರಿ ॥ 44

ಎಲ್ಲಿಯವರೆಗೆ ಈ ಅಶಂಕೆ ದೂರಾಗದು । ಅಲ್ಲಿಯವರೆಗೆ ಗ್ರಂಥದ ಅರ್ಥವಾಗದು ।
ಮಹಾರಾಜರು ಆಶೀರ್ವಚನವ ನುಡಿದು । ಪ್ರಸನ್ನ ಮನನಾಗಿರೆಂದರು ॥ 45

"ಏನಿರುವುದಿದರಲ್ಲಿ ಬಿಗಿ । ನೀನು ನಿನ್ನ ಊರಿಗೆ ತಿರುಗಿ ಹೋಗಿ ।
ನೋಡು ಕಾಕಾನ ಮನೆಯ ಕೆಲಸದ ಹುಡುಗಿ । ನಿನ್ನ ಶಂಕೆಯ ನಿವಾರಿಸುವಳು" ॥ 46

ಕಾಕಾ ಎಂದರೆ ಭಾವೂ ಸಾಹೇಬ ದೀಕ್ಷಿತರು । ಬಾಬಾರ ಒಬ್ಬ ಪ್ರೇಮಳ ಭಕ್ತರು ।
ಕಾಯಾ ವಾಚಾ ಮನಗಳಿಂದ ಅವರು । ಗುರು ಸೇವಾ ನಿರತರು ಯಾವಾಗಲೂ ॥ 47

ಪ್ರಸಿದ್ಧ ಮುಂಬಯಿ ನಗರದಲ್ಲಿ । ಅಲ್ಲಿಂದ ಸ್ವಲ್ಪ ದೂರದಲ್ಲಿ ।
ಪಾರಲೆ ಎಂಬ ಗ್ರಾಮದಲ್ಲಿ । ಹರಿಭಾವೂ ಇರುವರು ॥ 48

ನಿಜವಾಗಿ ಅವರ ಹೆಸರು ಹರಿ ಎಂದು । ಮನೆಯಲಿ ತಂದೆ ತಾಯಿ ಇಟ್ಟಿದ್ದು ।
ಜನರೆಲ್ಲ ಭಾವೂ ಸಾಹೇಬ ಅನ್ನುತ್ತಿದ್ದರು । ಬಾಬಾ ಮಾತ್ರ ಮೂರನೆಯದನೇ ಇಟ್ಟಿದ್ದರು ॥ 49

ಮಹಾಜನಿಯವರಿಗೆ ಬಡೆ ಕಾಕಾ । ನಿರ್ಮೋಣಕರರಿಗೆ ಮುದುಕ ಕಾಕಾ ।
ಭಾವೂ ಸಾಹೇಬರಿಗೆ ಕುಂಟ ಕಾಕಾ । ಬಂಟ್ಯಾ ಕಾಕಾ ಎಂದೂ ಕರೆಯುತಿದ್ದರು ॥ 50

ತಾಯಿ ತಂದೆ ಇಟ್ಟ ಹೆಸರೊಂದು । ನಕ್ಷತ್ರಾನುಸಾರ ಬರುವ ಹೆಸರೊಂದು ।
ಅಡ್ಡ ಹೆಸರನಿಟ್ಟು ಕರೆಯುವದು ಮತ್ತೊಂದು । ಹೀಗನೇಕ ಪ್ರಕಾರಗಳಿರುವವು ॥ 51

ಮಹಾರಾಜನಿಡುವ ಹೆಸರು ಬೇರೆಯಿರುವದು । ಆ ಮೇಲೆ ಕಾಲಕಾಲಕ್ಕೆ ಅದೆ ನಡೆಯುವದು ।
ಅದೇ ಬಿರುದಾವಳಿ ಎನಬಹುದು । ಪ್ರೇಮದಿಂದ ಕರೆದುದು ॥ 52

ಒಮ್ಮೊಮ್ಮೆ ಭಿಕ್ಷು ಮತ್ತೊಮ್ಮೆ ಕಾಕಾ ಎಂದು । ಬಾಬಾ ಅವರಿಗೆ ಶಿಕ್ಕಾ ಹೊಡೆದುದು ।
ಅದನ್ನೇ ಶಿರಡಿಯ ಜನ ಕರೆಯುವದು । ಅದರಿಂದ ಕಾಕಾ ಎಂದೇ ಪ್ರಸಿದ್ಧರಾದರು ॥ 53

ಆಶ್ಚರ್ಯವೆನಿಸಿತು ಗಣುದಾಸರಿಗೆ । ಆಶ್ಚರ್ಯವೆನಿಸಿತು ಉಳಿದೆಲ್ಲರಿಗೆ ।
ಕಾಕಾರ ಕೆಲಸದವಳು ಹೇಳುವಳು ಹೇಗೆ । ಇದರ ಅರ್ಥದ ಬಗೆ ಏನು ॥ 54

ಆಳೆಂದರವಳು ಆಳೇ । ಅವಳೇನು ಅಂಥ ಕಲಿತವಳೇ ।
ಅಥವಾ ಅಂಥ ವಿಚಕ್ಷಣಳೇ । ವಿಲಕ್ಷಣವೆಲ್ಲರಿಗೆನಿಸಿತು ॥ 55

ಶ್ರುತಿಯ ಅರ್ಥ ವ್ಯುತ್ಪತ್ತಿ ಎಲ್ಲಿ । ಆ ಕೆಲಸದಾಳಿನ ಬುದ್ಧಿ ಎಲ್ಲಿ ।
ಮಹಾರಾಜರು ನುಡಿವರು ವಿನೋದದಲ್ಲಿ । ಜನ ಈ ರೀತಿ ಮಾತನಾಡಿದರು ॥ 56

ಮಹಾರಾಜರು ವಿನೋದ ಮಾಡುವರು । ಎಂದೇ ಎಲ್ಲರೂ ತಿಳಿದರು ।
ಆದರೆ ಬಾಬಾ ವಿನೋದಕ್ಕೆ ಹೇಳಿದರೂ । ದಾಸಗಣುವಿಗೆ ಅದು ಸತ್ಯವೇ ಎನಿಸುವದು ॥ 57

ಕೇಳಿ ಸಾಯಿಯ ಈ ಮಾತು । ಸಹಜದಲಿ ನುಡಿದಿರುವರೆನಿಸಿತು ।
ಜನರ ನೋಟಕೆ ಹಾಗೆನಿಸಿತು । ದಾಸಗಣೂರಿಗೆ ಮಾತ್ರ ಅದು ಸತ್ಯವೇ ॥ 58

ಸಾಯಿ ಸಹಜ ಮಾತಾಡಿದ್ದು । ಆದರೂ ಆ ಮಾತನಲಿ ಲೀಲೆ ಅಡಗಿದ್ದು ।
ಯಾವಾಗಲೂ ಅದನು ನೋಡಲೆಂದು । ಜನರು ಆತುರರಾಗಿರುತಿದ್ದರು ॥ 59

ಅದು ವಿನೋದದ ನುಡಿ ಇದ್ದೀತು ಇಲ್ಲವೇ ಇರಲಿಕ್ಕಿಲ್ಲ । ಮಾತ್ರ ಅದು ಎಂದೆಂದೂ ನಿಷ್ಕಾರಣವಲ್ಲ ।
ಬಾಬಾ ಆಡಿದ ಒಂದೊಂದು ಅಕ್ಷರಗಳಿಗೆಲ್ಲ । ಅರ್ಥದ ಗಣಿಯೇ ಇರುವದು ॥ 60

ಬಾಬಾ ಏನೇ ನುಡಿದರದು । ಮಾತಲ್ಲ ಬ್ರಹ್ಮಲಿಖಿತವದು ।
ಒಂದಕ್ಷರವೂ ವ್ಯರ್ಥವಾಗದು । ಸಮಯಕ್ಕೆ ಕಾರ್ಯಾರ್ಥ ಸಾಧಿಸುವದು ॥ 61

ದಾಸಗಣೂರ ದೃಢ ಭಾವನೆ ಇದು । ಏನೇ ಇರಲಿ ಬೇರೆಯವರದು ।
ಯಾರದು ಎಲ್ಲಿ ಹೇಗೆ ನಿಷ್ಠೆ ಇರುವದು । ಫಲವೂ ಅದರಂತೆಯೇ ಅದಕೆ ॥ 62

ಭಾವನೆ ಇದ್ದಂತೆ ಫಲ । ವಿಶ್ವಾಸವಿದ್ದಂತೆ ಬಲ ।
ಅಂತಃಕರಣವಿರಲು ಪ್ರೇಮಳ । ಬೋಧವೂ ಅಂತೆಯೇ ನಿರ್ಮಲ ॥ 63

ಜ್ಞಾನಿಗಳಿಗವ ಶಿರೋಮಣಿ । ಸುಳ್ಳಿಲ್ಲವೆಂದೂ ಅವನ ವಾಣಿ ।
ನಿಜ ಭಕ್ತೇಚ್ಛೆಯ ಪೂರೈಸುವನೀ । ಬಿರುದು ಚರಣದಲಿ ಕಟ್ಟಿದ್ದ ॥ 64

ಗುರು ವಚನವಲ್ಲ ಅನ್ಯಥಾ । ಮನವಿಟ್ಟು ಕೇಳಿರೀ ಕಥಾ ।
ಕಳೆವುದೆಲ್ಲ ಭವ ವ್ಯಥಾ । ಸಾಧನ ಮಾರ್ಗವ ಹೊಂದುವಿರಿ ॥ 65

ಗಣುದಾಸರು ತಿರುಗಿ ಪಾರಲೆ ಗ್ರಾಮಕೆ ಬಂದರು । ಅಲ್ಲಿ ಕಾಕಾ ಸಾಹೇಬ ದೀಕ್ಷಿತರ ಮನೆಗೆ ಹೋದರು ।
ಕಾಕಾರ ಮನೆಯಾಳಿನ ಬಗ್ಗೆ ಉತ್ಕಂಠಿತರಾಗಿದ್ದರು । ಅವಳು ಹೇಗೆ ತಮ್ಮ ಕಾರ್ಯ ಮಾಡುವಳು ನೋಡಲು ॥ 66

ಎರಡನೆಯ ದಿವಸ ಬೆಳಿಗನ ಜಾವದಲಿ । ಗಣೂ ದಾಸರಿದ್ದರು ಇನ್ನೂ ಹಾಸಿಗೆಯಲ್ಲಿ
ಬೆಳಗಿನ ನಿದ್ದೆಯ ಆನಂದದಲ್ಲಿ । ಆಗೊಂದು ಆಶ್ಚರ್ಯ (ಚಮತ್ಕಾರ) ನಡೆಯಿತು ॥ 67

ಯಾವಳೋ ಒಬ್ಬ ಒಕ್ಕಲಿಗರ ಹುಡುಗಿ । ಹಾಡುತಿದ್ದಳು ಸುಸ್ವರವಾಗಿ ।
ಆ ಮಧುರಗಾನ ಲಹರಿಯು ಹೋಗಿ । ಗಣೂದಾಸರ ಅಂತರಕೆ ತಾಗಿತು ॥ 68

ದೀರ್ಘ ಆಲಾಪನಯುಳ್ಳ ಆ ಗಾನ । ಅದರ ಮಂಜುಳ ಪದ ಬಂಧನ ।
ಕೇಳಿ ತಲ್ಲೀನವಾಯಿತು ಮನ । ಲಕ್ಷವಿಟ್ಟು ಕೇಳತೊಡಗಿದರು ॥ 69

ಸಂಪೂರ್ಣ ಎಚ್ಚರಾಯಿತು । ಗೀತಾರ್ಥ ಭೋಧದಲಿ ಲಕ್ಷ ತೊಡಗಿತು ।
ಸಾವಧಾನವಾಗಿ ಕೇಳುತ ನಿಂತು । ಅಂತರಂಗದಿ ಪ್ರಸನ್ನರಾದರು ॥ 70

ಎಂದರು ಇವಳಿರುವಳು ಯಾರ ಮಗಳು । ಹಾಡುತಿರುವಳು ಗಂಭೀರ ಮತ್ತು ಸುಸ್ವರದಲಿ ।
ಆ ಈಶಾವಾಸ್ಯದ ದೊಡ್ಡ ಒಗಟನು ಕ್ಷಣದಲಿ । ಸಂಪೂರ್ಣವಾಗಿ ಬಿಡಿಸಿದಳು ॥ 71

ಇವಳೇ ಇರಬೇಕು ಆ ಕೆಲಸದವಳು । ನೋಡಬೇಕು ಯಾರಿರುವಳಿವಳು ।
ತನ್ನ ಅಸಂಸ್ಕೃತ ವಾಣಿಯೊಳು । ಶೃತ್ಯರ್ಥವ ಗುರುತಿಸಿ ಕೊಟ್ಟಳು ॥ 72

ಹೊರಗೆ ಹೋಗಿ ನೋಡಲಾಗಿ । ನಿಜದಲಿ ಅವಳು ಒಕ್ಕಲಗಿತ್ತಿಯ ಹುಡುಗಿ ।
ಕಾಕಾರ ಬಚ್ಚಲಲ್ಲಿ ತಲೆ ಬಾಗಿ । ಪಾತ್ರೆಗಳ ಉಜ್ಜುತಿದ್ದಳು ॥ 73

ವಿಚಾರಣೆ ಮಾಡಲಾಗಿ ತಿಳಿದು ಬಂತು । ಹಿಂದೆ ದೀಕ್ಷಿತರ ಮನೆಯಾಳೊಂದಿತ್ತು ।
ಆ ಆಳಿನ ಹೆಸರು ನಾಮ್ಯಾ ಎಂದಿತ್ತು । ಇವಳವನ ತಂಗಿಯೆಂದು ॥ 74

ಇವಳೇ ಆ ಕಾಕಾರ ಕೆಲಸದವಳು । ಹಾಡಿನಲಿ ಶಂಕೆಯ ನಿವಾರಿಸಿದಳು ।
ವೇದ ನುಡಿಸಿದರು ಕೋಣನ ಮುಖದೊಳು । ಸಂತರು ಏನು ತಾನೇ ಮಾಡಲಾರರು ॥ 75

ಹೀಗೆ ಆ ಹುಡುಗಿಯ ಗಾನ । ಅದರಿಂದಾಯಿತು ದಾಸಗಣೂರಿಗೆ ಸಮಾಧಾನ ।
ಬಾಬಾರ ವಿನೋದದ್ದು ಮಹಿಮಾನ । ಎಲ್ಲರಿಗೂ ತಿಳಿದು ಬಂದಿತು ॥ 76

ಕೆಲವರೆನ್ನುವರು ಗಣೂದಾಸರು । ದೇವರ ಪೂಜೆ ಮಾಡುತಿದ್ದರು ।
ಆಗ ಈ ಹಾಡು ಕೇಳಿದರು । ಕಾಕಾರ ದೇವರ ಮನೆಯಲ್ಲಿ ಎಂದು ॥ 77

ಅದು ಹೇಗೆ ನಡೆಯಿತೋ ನಡೆದಿರಬಹುದು । ತಾತ್ಪರ್ಯಾರ್ಥ ಒಂದೇ ಇರುವದು ।
ಮಹಾರಾಜರು ನಿಜಭಕ್ತರಿಗೆ ಕಲಿಸುವರು ಹೇಗೆಂದು । ಅನೇಕ ರೀತಿಯಲಿದ ತಿಳಿಯಬೇಕು ॥ 78

"ಇದ್ದಲಿದ್ದುಕೊಂಡೆನ್ನನು ಕೇಳಬೇಕು । ಸುಮ್ಮನೇ ಅತ್ತಿತ್ತ ಏಕಲಿಯಬೇಕು ।
ಇಷ್ಟೊಂದು ನಂಬಿಕೆ ನನ್ನಲ್ಲಿರಬೇಕು । ನಾನೇ ನಿಮ್ಮಭೀಷ್ಟವ ಪೂರೈಸುವನೆಂದು ॥ 79

ನಾನು ಎಲ್ಲೆಲ್ಲಿಯೂ ತುಂಬಿರುವೆನು । ಒಂದಿಷ್ಟು ಸ್ಥಳವಿಲ್ಲ ಬಿಟ್ಟು ನನ್ನನು ।
ಎಲ್ಲಂದರಲ್ಲಿ ನಾ ಪ್ರಕಟನಾಗುವೆನು । ಭಕ್ತರ ಭಾವವನು ಕಂಡು" ॥ 80

ಆ ಮಗು ಕೇವಲ ಎಂಟು ವರ್ಷದ್ದು । ನಡುವಿರೊಂದುಡಲು ಬಟ್ಟೆ ಹಳೆಯದು ।
ಆದರೆ ಅವಳು ಹಾಡಿನಲಿ ಹಾಡಿದುದು । ಅಂದವಾದ ಸೀರೆಯ ಬಡಿವಾರ ॥ 81

ಏನು ಆ ಸೀರೆಯ ತುಂಬ ಜರಿ । ಅದರ ಅಂಚಿನಲೇನು ಕುಸುರಿ ।
ಅದರ ಸೆರಗಿನ ಅಂದವೇನೆಂದೀರಿ । ಈ ಹಾಡು ಹಾಡುವದರಲ್ಲಿ ಗುಂಗಾಗಿದ್ದಳು ॥ 82

ಹೊಟ್ಟೆ ತುಂಬ ಊಟಕ್ಕಿರದು । ಮೈ ತುಂಬ ಬಟ್ಟೆ ಇರದು ।
ಆದರೂ ಯಾರದೋ ಬೆಲೆಯುಳ್ಳ ಸೀರೆ ಕಂಡು । ಹರ್ಷ ನಿರ್ಭರಳಾಗಿದ್ದಳವಳು ॥ 83

ನೋಡಿ ಅವಳ ದೈನ್ಯ ಸ್ಥಿತಿ । ಮತ್ತು ಮನದ ಸಂತುಷ್ಟ ವೃತ್ತಿ ।
ಗಣುದಾಸರಿಗೆ ದಯೆ ಹುಟ್ಟಿ । ಮೋರೇಶ್ವರರಿಗೆ ನುಡಿದರಿಂತು ॥ 84

ಅವಳ ಮೈ ತುಂಬ ಬಟ್ಟೆ ಇಲ್ಲದ್ದು ನೋಡಿ । ಅವಳಿಗೊಂದು ಸೀರೆಯನ್ನಾದರೂ ಕೊಡಿ ।
ಮುಟ್ಟುವದದು ದೇವರ ಅಡಿ । ಪುಣ್ಯವೂ ಲಭಿಸುವದದರಿಂದ ॥ 85

ಮೋರೇಶ್ವರರು ಮೊದಲೇ ಕೃಪಾ ಮೂರ್ತಿಗಳು । ಮೇಲೆ ಗಣೂದಾಸರ ವಿನಂತಿ ಕೇಳಲು ।
ಸೀರೆಯನೊಂದು ತಂದು ಬಲು । ಅಕ್ಕರೆಯಿಂದ ಆ ಬಾಲಕಿಗೆ ಇತ್ತರು ॥ 86

ನಿತ್ಯದಲೂ ತಿನ್ನುವರು ಕದನ್ನ । ಅಂಥವರಿಗೆ ಸಿಗಬೇಕು ಪಂಚ ಪಕ್ವಾನ್ನ ।
ಹಾಗೇ ಆ ಮಗು ಸುಪ್ರಸನ್ನ । ಆದಳು ಆ ಸೀರೆಯ ಕಂಡು ॥ 87

ಮರುದಿನ ಉಟ್ಟು ಆ ಸೀರೆ । ಗೆಳತಿಯರೊಡನಾಡಿದಳು ಬಗಾಟಬಗರಿ ।
ಕಂಡಳು ಉಳಿದವರಿಗಿಂತ ಸುಂದರಿ । ಸೀರೆ ಬಹಳ ಇಷ್ಟವಾಗಿತ್ತು ॥ 88

ಅದೇ ಮತ್ತೆ ಅದರ ಮರುದಿನ । ಗಂಟಿನಲಿಟ್ಟು ಆ ಸೀರೆಯನ ।
ಹಳೆಯ ಬಟ್ಟೆಯನ್ನೇ ಮೊದಲಿನ । ತೊಟ್ಟರೂ ಅವಳು ಅಸಂತುಷ್ಟೆ ಕಾಣಲಿಲ್ಲ ॥ 89

ಅವಳದನು ಜೋಪಾನವಾಗಿಟ್ಟಳು, ಉಡಲಿಲ್ಲ । ಆದರೂ ಹಿಂದಿನ ಅವಳ ದೈನ್ಯತೆಯಿಲ್ಲ ।
ಗಣೂದಾಸರಿಗೆನಿಸಿತು ಕಳೆದಂತೆಲ್ಲಾ । ಭಾವನೆಯ ಭಿನ್ನತೆಯಿಂದಾಗಿ ॥ 90

ಹೊಸ ಸೀರೆಯನು ಮನೆಯಲಿಟ್ಟು । ಬಂದಿದ್ದರೂ ಅವಳು ಹಳೆಯದನುಟ್ಟು ।
ಆದರೂ ಇರಲಿಲ್ಲವಳು ಖಿನ್ನಳೆಷ್ಟೂ । ಕೊರತೆಯೇ ಅವಳಿಗಿರಲಿಲ್ಲವೆಂಬಂತೆ ॥ 91

ಅಸಮರ್ಥೆಯೆಂದು ಹರಕು ಉಡುವುದು । ಸಮರ್ಥಳಿದ್ದು ಹಾಗೇ ಇರುವದು ।
ಇದಕೆನ್ನುವರು ದೈನ್ಯವನು ಸಂಪನ್ನತೆಯಿಂದ ಮರೆಯುವದು । ಭಾವನೆ ಮಾತ್ರದಿಂದ ಸುಖದುಃಖಗಳು ॥ 92

ಇದೇ ಒಗಟ ಗಣೂದಾಸರಿಗಿತ್ತು । ಈ ರೀತಿ ಅದರ ಪರಿಹಾರವಾಯಿತು ।
ಈಶಾವಾಸ್ಯದ ಮರ್ಮ ಹೊಳೆಯಿತು । ಅಲ್ಲಿಯೇ ಆಯಿತು ಅರ್ಥಬೋಧ ॥ 93

ಈಶ್ವರನಿಂದಲೇ ಆಚ್ಛಾದಿಸಲ್ಪಟ್ಟಿದೆ ಎಲ್ಲ । ಈ ಸಂಪೂರ್ಣ ಬ್ರಹ್ಮಾಂಡವೆಲ್ಲ ।
ಅಲ್ಲಿ ಅವನಿಲ್ಲದ ತಾಣವಿಲ್ಲ । ಯಾರಿಗೆ ಈ ವಿಚಾರ ತಿಳಿದಿದೆ ॥ 94

ಅದೂ ಪೂರ್ಣ ಇದೂ ಪೂರ್ಣ । ಪೂರ್ಣದಿಂದ ನಿರ್ಮಿತವಾಗಿದೆ ಪೂರ್ಣ ।
ಈ ಪೂರ್ಣದಿಂದ ಕಳೆಯಲು ಪೂರ್ಣ । ಪೂರ್ಣವೇ ಮತ್ತೆ ಉಳಿಯುವದು ॥ 95

ಹುಡುಗಿಯ ದೈನ್ಯವೂ ಈಶ್ವರನ ಅಂಶ । ಅವಳುಟ್ಟ ಹರಕೂ ಅದರದೇ ಅಂಶ ।
ದಾತಾ, ದೇಯ, ದಾನ ಇವೆಲ್ಲವೂ ಅಶೇಷ । ಈಶನೊಬ್ಬನಿಂದಲೇ ತುಂಬಿರುವದು ॥ 96

'ನಾ ನನ್ನದೆಂಬದನು' ಪೂರ್ಣ ಬಿಡಬೇಕು । ನಿರಭಿಮಾನತ್ವದಿಂದ ನಡೆಯಬೇಕು ।
ತ್ಯಾಗಪೂರ್ವಕ ಭೋಗ ಭೋಗಿಸಬೇಕು । ಏನನ್ನೂ ಬಯಸಬಾರದು ॥ 97

ಬಾಬಾರ ಅಮೋಘವಾಣಿ ಇದು । ಅನೇಕರಿಗೆ ಪ್ರಚೀತಿ ಬಂದಿದೆ ಇದರದು ।
ಇಡೀ ಜೀವನವೆಲ್ಲ ಶಿರಡಿಯ ಬಿಡದಿದ್ದು । ಜನ ವಿಜನಗಳಲ್ಲೆಲ್ಲೂ ಪ್ರಕಟವಾಗುತ್ತಿದ್ದರು ॥ 98

ಯಾರಿಗೆ ಮಚ್ಛೀಂದ್ರಗಡದಲ್ಲಿ । ಯಾರು ಯಾವುದೇ ಶಹರದಲ್ಲಿರಲಿ ।
ಕೊಲ್ಹಾಪುರ, ಸೋಲಾಪುರ ರಾಮೇಶ್ವರವಿರಲಿ । ಇಚ್ಛಾ ಮಾತ್ರದಿ ಪ್ರಕಟಿಸುತ್ತಿದ್ದರು ॥ 99

ಕೆಲವರಿಗೆ ತಮ್ಮ ಬಾಹ್ಯವೇಷದಲಿ । ಕೆಲವರಿಗೆ ಜಾಗೃತಿ ಅಥವಾ ಸ್ವಪ್ನ ವಿಶೇಷದಲ್ಲಿ ।
ದರ್ಶನವೀಯುವರು ದಿನ ರಾತ್ರಿಗಳಲ್ಲಿ । ಭಕ್ತರ ಕಾಮನೆಗಳ ಪೂರೈಸುವರು ॥ 100

ಇಂಥ ಅನುಭವಗಳು ಒಂದಲ್ಲ ಎರಡಲ್ಲ । ಎಷ್ಟೆಂದು ಹೇಳಲಾದೀತು ಅವುಗಳನೆಲ್ಲ ।
ಇರಲು ಶಿರಡಿಯೇ ಅವರ ವಾಸಸ್ಥಳ । ಅಲಕ್ಷ್ಯ ಪ್ರಸ್ಥಾನವೆಲ್ಲೆಲ್ಲಿಯೂ ॥ 101

ಆ ಹುಡುಗಿ ಯಾರಿಗೆ ಯಾರು ಒಂದು । ಯಃಕಶ್ಚಿತ ಕೆಲಸದಾಳು ಅದು ।
ಜರಿ ಸೀರೆಯ ಬಗ್ಗೆ ಅವಳು ಹಾಡಿದುದು । ಸಹಜ ಬಾಯಿಗೆ ಬಂದದ್ದು ॥ 102

ಶಂಕೆಯನೊಂದು ಬಾಬಾರಿಗೆ ಕೇಳಬೇಕು । ಅದನು ಈ ಆಳು ಮಗು ಪರಿಹರಿಬೇಕು ।
ಅದು ಅವಳು ಕಾಕಾರ ಮನೆಯಲ್ಲಿ ಇರಬೇಕು । ಈ ಪ್ರಸಂಗ ಮಾಯೆಯಂತಲ್ಲವೇ ॥103

ಈ ಆಳು ಅಲ್ಲಿರುವಳೆಂಬುದು ಮೊದಲಿಗೆ । ಬಾಬಾರಿಗೆ ತಿಳಿದಿರಬೇಕು ಹೇಗೆ ।
ಅವಳೂ ಮುಂದೆ ಈ ಹಾಡು ಹಾಡುವಳು ಹೀಗೆ । ಅದರಿಂದ ಶೃತ್ಯರ್ಥಭೋದನವಾದದ್ದು ಹೇಗೆ ॥ 104

ಆದರೂ ನಡೆದದ್ದಂತೂ ನಿಜ ಇದು । ಗಣೂದಾಸರಿಗೆ ಆಶ್ಚರ್ಯವಾಗುವದು ।
ನಿರಸನವಾಯಿತು ಆ ಶಂಕೆಯದು । ಈಶಾವಾಸ್ಯವು ಅರ್ಥವಾಯಿತು ॥ 105

ಶ್ರೋತೃಗಳ ಮನದಲ್ಲಿ ಬರಬಹುದು ಶಂಕೆ । ಇಷ್ಟೆಲ್ಲ ಪ್ರಯತ್ನ (ಖಟಪಟಿ) ಮಾಡಬೇಕೇಕಿದಕೆ ।
ತಾವೇ ಅದನು ಹೇಳಿ ಬಿಡಲಿಲ್ಲವೇಕೆ । ಆ ಶಂಕೆಯನಲ್ಲೇ ಕಳೆಯಬಹುದಾಗಿತ್ತು ॥ 106

ಅಲ್ಲಿಯೇ ಮಾಡಬಹುದಾಗಿತ್ತು ಕೆಲಸವನು । ಆದರೆ ಅದರಿಂದ ತಿಳಿಯುತ್ತಿರಲಿಲ್ಲವರ ಮಹಿಮಾನ ।
ಜೊತೆಗೆ ದೇವರು ಆ ಮಗುವಿಗೂ ಇತ್ತ ಆಚ್ಛಾದನ । ಬಾಬಾರು ಇದನು ಪ್ರಕಟ ಮಾಡಿದರು ॥ 107

ಆತ್ಮದ ಯಥಾತ್ಮತೆಯ ನಿರೂಪಣ । ಇದೇ ಎಲ್ಲ ಉಪನಿಷದಗಳ ಪರ್ಯವಸಾನ ।
ಇದೇ ಮೋಕ್ಷ ಧರ್ಮದ ನಿಷ್ಕರ್ಷಣ । ಗೀತಾರ್ಥದ ಪ್ರವಚನವೂ ಇದೇ ॥ 108

ಪ್ರಾಣಿಯು ಭಿನ್ನ ಆತ್ಮವು ಅಭಿನ್ನ । ಆತ್ಮವು ಕರ್ತೃತ್ವ ಭೋಕ್ತೃತ್ವ ಹೀನ ।
ಅದು ಅಶುದ್ಧ ಪಾಪ ಪುಣ್ಯಗಳಿಗಲ್ಲಾ ಧೀನ । ಕರ್ಮಾಚರಣವೂ ಅದಕಿಲ್ಲ ॥ 109

ನಾ ಜಾತಿಯಿಂದ ಉಚ್ಚ ಬ್ರಾಹ್ಮಣ । ಉಳಿದವರು ನನಗಿಂತ ನೀಚವರ್ಣ ।
ಇರುವತನಕ ಈ ಭೇದ ಜ್ಞಾನ । ಕರ್ಮಾಚರಣೆ ಅವಶ್ಯಕ ॥ 110

ನಾನು ಅಶರೀರಿ ಎಲ್ಲೆಡೆಗೆ ಒಬ್ಬ । ನನಗಿಂತ ಬೇರೆ ಇಲ್ಲ ಮತ್ತೊಬ್ಬ ।
ಎಲ್ಲರಲೂ ವ್ಯಾಪಿಸಿದೆ ನಾನೊಬ್ಬ । ಸ್ವರೂಪೋನ್ಮುಖ ಈ ಜ್ಞಾನ ॥ 111

ಈ ಪೂರ್ಣ ಬ್ರಹ್ಮ ಸ್ವರೂಪಚ್ಯುತ । ಇಂಥ ಈ ಜೀವಾತ್ಮನು ಪೂರ್ವವತ ।
ಎಂದಾದರೂ ಸ್ವಸ್ವರೂಪದತ್ತ । ಮುಟ್ಟಬೇಕೆಂಬುದೇ ಧ್ಯೇಯ ॥ 112

ಶೃತಿ ಸ್ಮೃತಿ ಮತ್ತು ವೇದಾಂತ । ಈ ಎಲ್ಲದರಲ್ಲೂ ಇದೇ ಸಿದ್ಧಾಂತ ।
ಇದೇ ಅಂತಿಮ ಸಾಧ್ಯವು ನಿಶ್ಚಿತ । ಚ್ಯುತನಿಗೆ ಅಚ್ಯುತ ಪದ ಪ್ರಾಪ್ತಿ ॥ 113

'ಸಮಃಸವೇಷು ಭೂತೇಷು' ಎಂಬದು । ಎಲ್ಲಿಯವರೆಗೆ ಈ ಸ್ಥಿತಿ ವಿಶೇಷವು ಪ್ರಾಪ್ತವಾಗಿರದು ।
ಅಲ್ಲಿಯವರೆಗೆ ಭೂತಾತ್ಮನಿಗೆಂದೂ । ಹೃಷಿಕೇಶ ಜ್ಞಾನ ಪ್ರಾಪ್ತವಾಗಲಾರದು ॥ 114

ವಿಹಿತ ಕರ್ಮಗಳಿಂದ ಚಿತ್ತ ಶುದ್ಧ । ಆದಾಗ ಆಗುವದು ಅಭೇದ ಬೋಧ ।
ಶೋಕ ಮೋಹಾದಿ ಸಂಸ್ಕೃತಿ ವಿರುದ್ಧ । ಪ್ರಕಟವಾಗುವದಾಗ ಸಿದ್ಧ ಜ್ಞಾನ ॥ 115

ಸಚರಾಚರವಾಗಿ ಅಖಿಲ ತ್ರೈಲೋಕ್ಯವನು । ಯಾವ ಪರಮೇಶ್ವರನು ಆಚ್ಛಾದಿಸಿರುವನು ।
ನಿಷ್ಕ್ರೀಯ ನಿಷ್ಕಲ ಪರಾತ್ಪರನವನು । ಅಶರೀರ ಮತು ಸದಾತ್ಮಕ ॥ 116

ನಾಮರೂಪಾತ್ಮಕವಾದ ಈ ವಿಶ್ವವನ್ನು । ಸಬಾಹ್ಯ ಆಚ್ಛಾದಿಸಿಹನೀ ಈಶನು ।
ಅವನು ಅಶೇಷವಾಗಿ ತಾನೇ ತಾನಾಗಿ ತುಂಬಿರುವನು । ನಿರ್ವಿಶೇಷ ರೂಪದಿಂದ ॥ 117

ವಸ್ತುತಃ ಇರುವನವನು ನಿರಾಕಾರ । ಮಾಯಾಗುಣದಿಂದ ಎನಿಸುವನು ಸಾಕಾರ ।
ಕಾಮುಕನ ಬೆನ್ನು ಹತ್ತಿದೆ ಈ ಸಂಸಾರ । ಅದೇ ನಿಷ್ಕಾಮನಿಗೆ ಅಸಾರ ॥ 118

ಯತ್‌ಕಿಂಚಿತ್ ಭೂತ ಭೌತಿಕ ಜಗತ್ತಿದು । ಚೇತನಾಚೇತನಾತ್ಮಕವಾಗಿರುವದು ।
ಈಶ್ವರನೊಬ್ಬನೇ ಅದ್ವಿತಿಯನೆಂದು । ನಿಃಶಂಕ ನಿರ್ಧಾರ ಮಾಡಬೇಕು ॥ 119

ಜಗದ್ಬುದ್ಧಿಯ ವಿವೇಕವಿದು । ಮನಸ್ಸಿಗೆ ಒಪ್ಪಿಗೆಯಾಗದಿರದು ।
ಆದರೂ ಈ ಧನಹಿರಣ್ಯಾದಿಗಳದು । ಅಭಿಲಾಷೆಯ ಮಾತ್ರ ಮಾಡಬಾರದು ॥ 120

ನಮ್ಮಿಂದಾಗದಿರೆ ಇದು । ತಿಳಿಯಬೇಕು ಕರ್ಮಾಧಿಕಾರಿಗಳು ಮಾತ್ರ ತಾವಿರುವದು ।
ಕರ್ಮವನೇ ಮಾಡುತ್ತಿರುವದು । ಆಮರಣಾಂತ ನೂರು ವರ್ಷಗಳವರೆಗೂ ॥ 121

ಅದೂ ಸ್ವವರ್ಣಾಶ್ರಮೋಚಿತ । ಯಥೋಕ್ತಾನುಷ್ಠಾನ ಸಹಿತ ।
ಅಗಿ ಹೋತ್ರಾದಿ ನಿತ್ಯ ವಿಹಿತ । ಚಿತ್ತವೂ ಅಕಲಂಕಿತವಾಗುವವರೆಗೆ ॥ 122

ಇದೊಂದು ಚಿತ್ತ ಶುದ್ಧಿಯ ಮಾರ್ಗ । ಎರಡನೆಯದು ಸರ್ವಸಂಗ ಪರಿತ್ಯಾಗ ।
ಇವುಗಳ ಆಕ್ರಮಿಸದೇ ಜ್ಞಾನಯೋಗ । ಕರ್ಮಭೋಗವೇ ಆಗುವದು ಕೇವಲ ॥ 123

ಈ ಬ್ರಹ್ಮ ವಿದ್ಯೆ ಈ ಉಪನಿಷದ ಏನಾದರೂ । ಎಲ್ಲರಿಗೂ ಕೊಡರಿದನು ಅಧಿಕಾರವಿದ ।
ವೃತ್ತಿಯು ಅಭೇದವಾಗದೇ ಇದ್ದವರು । ಅವರಿಗೆ ಉಪನಿಷದ್ಬೋಧ ಶಾಬ್ದಿಕ ಮಾತ್ರ ॥ 124

ಆದರೂ ಆಗಬೇಕು ಮೊದಲು ಅವನೂ । ಜಿಜ್ಞಾಸುವು ಮೊದಲು ಅದನೇ ಬೇಡುವನು ।
ಅದಕಾಗಿಯೇ ಬಾಬಾ ತಿರುಗಿ ಕಳಿಸಿದರವನನು । ಕೆಲಸದಾಳು ಹೇಳುವಳೆಂದು ॥ 125

ಬಾಬಾ ತಾವೇ ಈ ಬೋಧವಿತ್ತಿದ್ದಲ್ಲಿ । ಮುಂದಿನ ಈ ಕಾರ್ಯವಾಗುತ್ತಿತ್ತೆಲ್ಲಿ ।
'ಏಕಮೇವಾದ್ವಿತೀಯ'ದ್ದೆಲ್ಲಿ । ತಿಳಿಯುತ್ತಿತ್ತು ಬಾಬಾರದು ॥ 126

ನನ್ನ ಹೊರತು ಮತ್ತೆ ಯಾರು । ಆ ಕಾಕಾರ ಮನೆಯ ಆಳಾದರೂ ।
ನಾನೇ ಎಂಬ ಗುರುತು ತೋರಿದರು । ಈಶಾವಾಸ್ಯವ ತಿಳಿಸಿದರು ॥ 127

ಪರಮೇಶ್ವರಾನುಗ್ರಹವು ಲವಲೇಶ । ಆಚಾರ್ಯಾನುಗ್ರಹವು ವಿಶೇಷ ।
ಇರದಿರಲು ಆತ್ಮಾಜ್ಞಾನದಿ ಪ್ರವೇಶ । ಸಿದ್ಧೋಪದೇಶವೇ ಅವಶ್ಯಕ ॥ 128

ಆತ್ಮ ಪ್ರತಿಪಾದಕವಿರುವ ಶಾಸ್ತ್ರ । ಕೇಳಬೇಕು ಅವುಗಳನು ಮಾತ್ರ ।
ಪ್ರತಿಪಾದ್ಯ ವಸ್ತುವು ನಾನೇ ಸರ್ವತ್ರ । ನನ್ನ ಬಿಟ್ಟು ಏನೂ ಇಲ್ಲ ಅನ್ಯತ್ರ ॥ 129

ಆತ್ಮ ತತ್ವದ ವಿಕಿರಣವಾಗಲು । ನಾನೇ ಆ ಆತ್ಮ ಬೇರಿಲ್ಲ ಎಲ್ಲೂ ।
ಈ ಅಬೇಧ ಸಂಧಾನವರಿಯಲು । ಆತ್ಮವೂ ಪ್ರಸನ್ನವಾಗುವದವನಿಗೆ ॥ 130

ಆತ್ಮ ನಿರೂಪಣೆ ನಡೆಯುತಿರಲು । ಹೀಗೆ ಆತ್ಮಾನುಸಂಧಾನವಿಟ್ಟುಕೊಳ್ಳಲು ।
ಆತ್ಮವನು ನಿಶ್ಚಲವಾಗಿ ಹೀಗೆ ಹಿಡಿಯಲು । ಪರಮಾತ್ಮನೂ ದೊರಕುವನು ನಿಃಸಂಶಯ ॥ 131

ಮುಂದಿನಧ್ಯಾಯ ಕಥಾನುಸಂಧಾನ । ವಿನಾಯಕ ಠಾಕೂರಾದಿಗಳ ಕಥಾ ಕಥನ ।
ಶ್ರೋತೃಗಳು ಮಾಡಲು ಸಾದರ ಶ್ರವಣ । ಪರಮಾರ್ಥ ಪ್ರವಣರಾಗುವರು ॥ 132

ಆ ಕಥೆಗಳೂ ಹೀಗೆಯೇ ಸವಿಯಾಗಿರುವದು । ಕೇಳಿ ಶ್ರೋತೃಗಳಿಗಾನಂದವಾಗುವದು ।
ಇಚ್ಛೆ ಮಹಾಪುರುಷ ದರ್ಶನದ್ದು । ಭಕ್ತೇಚ್ಛೆ ಪೂರೈಸುವದು ॥ 133

ದಿನಮಣಿಯು ಉದಯಿಸಲು । ಕಳೆಯುವದು ಕತ್ತಲು ।
ಹಾಗೆ ಈ ಕಥಾ ಪಿಯೂಷ ಕುಡಿಯಲು । ಮಾಯೆ ದೂರಾಗುವದು ॥ 134

ಅತರ್ಕ್ಯ ಸಾಯಿಯ ಲೀಲೆ ಇರಲು । ಅದಕಾಗಿಯೇ ಕೇಳಬೇಕೀ ಕಥೆಗಳು ।
ನನ್ನನ್ನು ನಿಮಿತ್ತ ಮಾತ್ರವಿರಿಸಲು । ತಾವೇ ಹೇಳಿಸಿಕೊಳ್ಳುವರು ॥ 135

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಈಶಾವಾಸ್ಯ ಭಾವಾರ್ಥ ಸಂಭೋದನಂ ನಾಮ
ವಿಂಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

271.1





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತೊಂದು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಗತಾಧ್ಯಾಯದ ಅನುಸಂಧಾನ । ಠಾಕೂರಾದಿಗಳಿಗೆ ಮಹಾಪುರುಷನ ದರುಶನ ।
ಹೇಗಾಯಿತೆಂಬುವುದು ಮಾಡಿ ಶ್ರಾವಣ । ಏಕಾಗ್ರ ಚಿತ್ತರಾಗಿ ನೀವು ॥ 1

ಕೇಳಿದಿರೇನು ಆ ವಕ್ತೃವಿನ ಮಾತು । ಕಿವಿಯ ಮೇಲೆ ಬಿದ್ದಾಗ ತಲೆದೂಗದಾಯಿತು ।
ದೇಹವು ರೋಮ ಅಲುಗದಾಯಿತು । ವ್ಯರ್ಥವಾದಂತೆ ಆ ಮಾತುಗಳು ॥ 2

ಯಾವ ಮಾತುಗಳಿಂದ ಕೇಳುಗರ ಮನ ರಮಿಸದು । ಕಣ್ಣೀರು ಬರದು ಕಂಠವು ಬಿಗಿದು ಬರದು ।
ಕಂಗಳಲಿ ಪ್ರೇಮ ನಂದಾಶ್ರು ಉದುರದು । ವ್ಯರ್ಥವಾಯಿತು ಆ ಕಥನ ॥ 3

ಬಾಬಾರ ಮನೋಹರ ಮಾತು । ಉಪದೇಶದ ಅಲೌಕಿಕಗತ್ತು ।
ಪ್ರತಿ ಪದದಲಿ ಲೀಲೆ ಹೊಸ ಹೊಸತು । ಈ ಮಸ್ತಕ ಅವರ ಚರಣದಲಿ ॥ 4

ದೈವವು ತೆರೆಯದಿದ್ದಾಗ್ಯೆ । ಸಾಧು ಸಂತರ ಸಂಗ ಸಿಕ್ಕಿತ್ತು ಹೇಗೆ ।
ಇರಲವನು ತಲೆದಿಂಬಿನ ಮಗ್ಗುಲಗೇ । ಪಾಪರಾಶಿಗಳಿಗವ ಕಾಣನು ॥ 5

ಆ ಪ್ರಮೇಯದ ಸಿದ್ಧತೆಗೆ । ಹೋಗಬೇಕಾಗಿಲ್ಲ ದೇಶ ವಿದೇಶಗಳಿಗೆ ।
ಹೇಳುತಿರುವೆ ನಾ ಶ್ರೋತೃಗಳಿಗೆ । ನನ್ನ ಅನುಭವವನು ನಾನು ॥ 6

ಪೀರಮೌಲಾನಾ ಎಂಬ ಪ್ರಸಿದ್ಧ । ಬಾಂದ್ರೆ ಪಟ್ಟಣದಲ್ಲಿ ಸಿದ್ಧನೊಬ್ಬನಿದ್ದ ।
ಪರಧರ್ಮಿಗಳೂ ಹಿಂದೂ ಪಾರಶೀ ಮೊದಲಾದ । ಅವನ ದರುಶನಕೆ ಹೋಗುತಿದ್ದರು ॥ 7

ನಾನಿದ್ದೆ ಅಲ್ಲಿಯ ನ್ಯಾಯಾಧೀಶ । ಮುಜಾವರನಿದ್ದ ಅವನ ಹೆಸರು ಇನೂಸ ।
ಬೆನ್ನು ಹತ್ತಿದ ಪ್ರತಿ ದಿವಸ । ದರ್ಶನಕೆ ಬರಬೇಕೆಂದುಕೊಂಡು ॥ 8

ಸಾವಿರಾರು ಜನ ಅಲ್ಲಿಬರುತಿರಬೇಕು । ಅಂಥಲ್ಲಿ ನಾವೇಕೆ ಹೋಗಬೇಕು ।
ಅವರಿವರ ದಾಕ್ಷಿಣ್ಯಕ್ಕೆ ಮಣಿಯಬೇಕು । ತನ್ನ ಲೌಕಿಕವ ಕಳಕೊಳ್ಳಬೇಕು ॥ 9

ಹೀಗೇನೋ ಭಾವನೆ ಇಟ್ಟುಕೊಂಡು । ಹೋಗಬಾರದು ದರ್ಶನಕೆ ಎಂದೂ ।
ತಾವೇ ಇರಬೇಕು ತಮ್ಮ ನೆರಳಿಗಂಜಿಕೊಂಡು । ದುರ್ದೈವವು ಅಡ್ಡಿಯಾಗಬೇಕು ॥10

ಹೀಗೆ ಕೆಲವರುಷಗಳುರುಳಲು । ಮುಂದೆ ಅಲ್ಲಿಂದ ವರ್ಗವಾಗಲು ।
ಮುಂದೆ ಆ ಕಾಲ ಒದಗಿ ಬರಲು । ಅಖಂಡ ಶಿರಡೀ ವಾಸವಾಯಿತು ॥ 11

ತಾತ್ಪರ್ಯವೆಂದರೆ ಸಂತಸಮಾಗಮವಾಗಲು । ನಿರ್ಭಾಗ್ಯರಿಗಲ್ಲಿ ಪ್ರವೇಶವಿಲ್ಲದಿರಲು ।
ಅದೇ ಈಶ್ವರ ಕೃಪೆಯಾಗಲು । ಸುಗಮವಾಗಿ ಒದಗುವದು ಆ ಯೋಗ ॥ 12

ಈ ವಿಷಯದಲೇ ಸುಂದರ ಕಥೆಯೊಂದನು । ಹೇಳವೆನು ಶ್ರೋತೃಗಳೇ ಕೇಳಿರಿನ್ನು ।
ಈ ಸಂತರ ಅನಾದಿ ಸಂಸ್ಥೆ ಇರುವುದನ್ನು । ಮತ್ತು ಅದರ ಗುಹ್ಯ ವ್ಯವಸ್ಥೆ ಹೇಗೆಂದನು ॥ 13

ಯಥಾಕಾಲ ವರ್ತಮಾನದೊಳಗೆ । ಯಾವ ಸ್ಥಾನವು ಹಿಡಿಸುವದು ಯಾರಿಗೆ ।
ಅವತಾರ ಪಡೆಯುವರರಿ ಕಾರ್ಯಮಾಡುವ ಸಲುವಾಗೆ । ಆದರೂ ಅವರೆಲ್ಲ ಅಭಿನ್ನರು ॥ 14

ದೇಶ ಕಾಲ ವಸ್ತುಗಳಿರಲು ಭಿನ್ನ । ಆದರೂ ತಿಳಿದಿರುವರವರು ಒಬ್ಬರೊಬ್ಬರನ ।
ಅವರ ಹೆಚ್ಚು ಕಡಿಮೆಗಳ ಸಂಪೂರ್ಣ । ಅಂತರದಲೆಲ್ಲರೂ ಒಂದೇ ಇಹರು ॥ 15

ಸಾರ್ವಭೌಮ ರಾಜರು ಠಾಣೆಗಳ ಹೇಗೆ । ಇಟ್ಟಿರುವರು ಅಲ್ಲಲ್ಲಿಗೆ ।
ಅಧಿಕಾರಿಗಳ ನೇಮಿಸುವರೆಲ್ಲೆಡೆಗೆ । ಸುವ್ಯವಸ್ಥೆಯ ಕಾಪಾಡಿಕೊಳ್ಳುವರು ॥ 16

ಹಾಗೆಯೇ ಈ ಸ್ವಾನಂದ ಸಾಮ್ರಾಟ । ಅಲ್ಲಲ್ಲಿಗೆ ಆಗಿ ಪ್ರಕಟ ।
ನಡೆಸುವನು ನಿಜರಾಜ್ಯ ಶಕಟ । ಅಪ್ರಕಟ ಸೂತ್ರಗಳ ಅಲುಗಾಡಿಸಿ ॥ 17

ಒಮ್ಮೆ ಒಬ್ಬ ಆಂಗ್ಲ ವಿದ್ಯಾ ವಿಭೂಷಿತನು । ಬಿ.ಎ. ಪದವಿಯ ಪಡೆದವನು ।
ಮೆಲ್ಲ ಮೆಲ್ಲನೆ ಮೇಲಕೇರಿದನು । ಹೆಸರಾಂತ ಅಧಿಕಾರಿಯಾದ ॥ 18

ಮುಂದೆ ಮಾಮಾಲೇದಾರನಾಗಿ । ಏರುತ್ತ ಏರುತ್ತ ಕಲೆಕ್ಟರನಾಗಿ ।
ಅವರಿಗೆ ಸಾಯಿ ಬಾಬಾರ ಸಂಗವಾಗಿ । ಸುದೈವವು ತೆರೆಯಿತು ॥ 19

ನೋಡಲು ಈ ಅಧಿಕಾರ ಚಂದ । ದೂರದ ಬೆಟ್ಟವು ಕಾಣುವಂತೆ ಅಂದ ।
ಹತ್ತಿರ ಹೋದಾಗ ತುಂಬಿದೆ ಮುಳ್ಳು ಕಂಟಿಗಳಿಂದ । ಮರ್ಯಾದೆ ಮಾತ್ರ ದೊಡ್ಡದು ಅಲ್ಲಿ ॥ 20

ಹೋದವೀಗ ಆ ಸವಿ ದಿನಗಳು । ಯಾವಾಗ ಆದನು ಬಯಸುತಿದ್ದರು ಅಧಿಕಾರಿಗಳು ।
ಮನ್ನಣೆ ಕೊಡುತಿದ್ದರು ಪ್ರಜೆಗಳು । ಪರಸ್ಪರಿಗಾನಂದವಿರುತ್ತಿತ್ತು ॥ 21

ಈಗಿನ ಕಾಲದ ಕಷ್ಟ ಕೇಳಬಾರದು । ಕಳೆದು ಹೋಗಿದೆ ಕಾಲ ಸುಖದ ನೌಕರಿಯದು ।
ಈಗ ಜವಾಬ್ದಾರಿ ಮಾತ್ರ ಹೆಚ್ಚಿನದು । ಹಸಿ ಬರವಾಗಿದೆ ಹಣದ್ದು ॥ 22

ತಹಸೀಲದಾರನ ಮರ್ಯಾದೆ ಹಿಂದಿನದು । ಅದರಂತೆಯೇ ಹಿಂದಿನ ಕಲೆಕ್ಟರನದು ।
ಕಾಣಬರದು ವೈಭವವಂಥದು । ಕಷ್ಟಬಟ್ಟು ನೌಕರಿ ಮಾಡಿದರೂ ಕೂಡ ॥ 23

ಆ ಅಧಿಕಾರ ಸಂಪಾದಿಸುವದಕ್ಕೂ । ಲೆಕ್ಕವಿಲ್ಲದಷ್ಟು ದುಡ್ಡೆಣಿಸಬೇಕು ।
ಸತತ ಅಭ್ಯಾಸವನೂ ಮಾಡಬೇಕು । ಎಲ್ಲರಿಗೆಲ್ಲಿದು ಸಾಧ್ಯವಾದೀತು ॥ 24
ಬಿ.ಎ. ಮೊದಲು ಪಾಸಾದಾಗ । ಗುಮಾಸ್ತನಾಗಬೇಕು ಆವಾಗ ।
ಸಂಬಳ ಮೂವತ್ತು ರೂಪಾಯಿಗಳಾಗ । ಈ ರೀತಿ ಮಾರ್ಗ ಕ್ರಮಿಸಬೇಕತ್ತು ॥ 25

ಯಥಾಕಾಲ ಘಟ್ಟದ ಮೇಲೆ ಹೋಗಬೇಕು । ಅಲ್ಲಿ ನೀರು ನೆಲಗಳ ಬಗ್ಗೆ ಕೆಲಸ ಕಲಿಯಬೇಕು ।
ಮೋಜಣಿದಾರರ ನಡುವೆ ಇರಬೇಕು । ಮತ್ತೆ ಪರೀಕ್ಷೆ ಪಾಸಾಗಬೇಕು ॥ 26

ಮುಂದೆ ಯಾವಾಗಲಾದರೊಬ್ಬ । ಮನುಷ್ಯ ಹೋಗಲು ವೈಕುಂಠಧಾಮವ ಕಂಡು ।
ಸ್ಥಳವ ಬರಿದು ಮಾಡಿ ತನ್ನದು । ಅದು ಈತನಿಗೆ ಸಿಗಬೇಕಾವಾಗ ॥ 27

ಇರಲಿನ್ನು ಈ ಹರಟೆ ಸಾಕು । ಸಲ್ಲದ ವಟವಟಿಕೆ ಏತಕ್ಕೆ ಬೇಕು ।
ಮುಂದಿನ ಕಥೆಯನು ಕೇಳಬೇಕು । ಹೇಗೆ ಅವನಿಗೆ ಸಾಯಿ ಸಿಕ್ಕರೆಂದು ॥ 28

ಬೆಳಗಾವದ ಹತ್ತಿರದಲ್ಲಿ । ವಡಗಾವವೆಂಬ ಹಳ್ಳಿ ಇರುವುದಲ್ಲಿ ।
ಮೋಜಣಿದಾರರ ಗುಂಪೊಂದು ಅಲ್ಲಿ । ಬಂದು ಒಂದು ವಸತಿಯ ಹಾಕಿತು ॥ 29

ಊರಲ್ಲಿ ಸತ್ಪುರುಷ ನೊಬ್ಬನಿದ್ದು । ಹೋದರೆಲ್ಲರು ಅವರ ದರ್ಶನಕೆ ಎಂದು ।
ನಮಸ್ಕರಿಸಿ ಅವರಿಗೆ ಕೈ ಮುಗಿದು । ಪ್ರಸಾದ ಆಶೀರ್ವಾದಗಳ ಪಡೆದರು ॥ 30

ನಿಶ್ಚಲದಾಸರು ಬರೆದಂಥ । 'ವಿಚಾರ ಸಾಗರ'ವೆಂಬ ಗ್ರಂಥ ।
ಇದ್ದರಾಗ ಅವರು ಓದುತ । ಅದು ಅವರ ಕೈಯಲಿತ್ತಾಗ ॥ 31

ಒಂದಿಷ್ಟು ಸಮಯ ಕಳೆಯಲು । ಹೋಗಿ ಬರುವೆವೆಂದು ಹೊರಡಲು ।
ಆ ಗೃಹಸ್ಥನಿಗೆ ಸಂತೋಷದಿಂದ ಸಾಧುಗಳು । ಏನೆಂದರೆಂಬುದ ಕೇಳಿರಿ ॥ 32

ಆಗಲಿ ತಾವಿನ್ನು ಹೋಗಿ ಬನ್ನಿರಿ । ಈ ಗ್ರಂಥದ ಅವಲೋಕನ ಮಾಡಿರಿ ।
ಈ ಮಾತನ್ನು ನೆನಪಿನಲ್ಲಿಡಿರಿ । ಅದರಿಂದ ನಿಮ್ಮ ಮನೋರಥ ಪೂರ್ಣವಾಗುವದು ॥ 33

ಮುಂದೆ ನೀವು ನಿಮ್ಮ ಕೆಲಸಕ್ಕಾಗಿ । ಉತ್ತರದ ಕಡೆಗೆ ಹೋಗುವಾಗ್ಗೆ ।
ಭಾಗ್ಯವಶದಿಂದ ದಾರಿಯೊಳಗೆ । ಮಹಾಪುರುಷನ ದರ್ಶನವಾಗುವದು ॥ 34

ಮುಂದಿನ ಮಾರ್ಗವನವರು ತೋರಿಸುವರು । ಮನಕೆ ಸ್ಥಿರತೆಯ ನೀಡುವರು ।
ಆ ಮೇಲೆ ಅವರೇ ಉಪದೇಶ ಕೊಡವರು । ನಿಜಬೋಧವನು ಬಿಂಬಿಸುವರು ॥ 35

ಅಲ್ಲಿಯ ಅವರ ಕೆಲಸ ಮುಗಿಯಿತು । ಜನ್ನರವೆಂಬಲ್ಲಿ ವರ್ಗವಾಯಿತು ।
ನಾಣೇಘಾಟವ ಹತ್ತ ಬೇಕಾಯಿತು । ಆಗ ಸಂಕಟ ಬಂದಿತು ॥ 36

ಅಲ್ಲಿ ದಾರಿ ಬಲು ಕಷ್ಟ । ಕೋಣದ ಮೇಲೆ ಕುಳಿತು ಏರಬೇಕು ಘಟ್ಟ ।
ಬೇರೆ ವಾಹನವಿಲ್ಲ ಕೋಣದ ಹೊರತು । ಹತ್ತಲು ಅದನೇ ತಂದರು ॥ 37

ಮುಂದೆ ದೊಡ್ಡ ಅಧಿಕಾರಿಗಳಾಗಬಹುದು । ಆಳು ಕುದುರೆ ಗಾಡಿಗಳು ಸಿಗಬಹುದು ।
ಇಂದು ಮಾತ್ರ ಕೋಣವನೇ ಹತ್ತುವದು । ಸಮಯ ಬಂದಂತೆ ನಡೆಯಲೇಬೇಕು ॥ 38

ಅಸಾಧ್ಯ ಘಟ್ಟವನು ಕಾಲ್ನಡಿಗೆಯಿಂದೇರುವದು । ಕೋಣವನ್ನು ಬಿಟ್ಟರೆ ಬೇರೆ ವಾಹನವಿರದು ।
ಇಂಥ ವೈಚಿತ್ರ್ಯ ಆ ನಾಣೇಘಾಟದ್ದು । ವಾಹನ ಸಿಗುವುದೇ ಅಪರೂಪ ॥ 39

ಆ ಮೇಲೆ ಅವರು ವಿಚಾರ ಮಾಡಿದರು । ಕೋಣವನೊಂದು ತರಿಸಿದರು ।
ತಮ್ಮ ಸಂರಜಾಮನು ಅದರ ಮೇಲೆ ಹೇರಿದರು । ತಾವು ಹತ್ತಿ ಕುಳಿತರು ಕಷ್ಟದಿಂದ ॥ 40

ಹತ್ತಿ ಕುಳಿತರೇನೋ ನಿಜ ಆದರೆ । ಕೋಣದಂತಹ ವಾಹನ ಬೇರೆ ।
ತಗ್ಗು ದಿನ್ನೆಗಳ ದಾರಿ ದಾಟ ಬೇಕಾದರೆ । ಬೆನ್ನೆಲ್ಲ ನೋವಾಗಿ ನುಗ್ಗಾದರು ॥ 41

ಅಂತೂ ಆ ಪ್ರವಾಸ ಮುಗಿಯಿತು । ಜುನ್ನರದ ಕೆಲಸವೂ ಮುಗಿಯಿತು ।
ವರ್ಗಾವಣೆಯ ಹುಕುಂ ಬಂತು । ಆಗ ಆ ಊರು ಬಿಟ್ಟರು ॥ 42

ಕಲ್ಯಾಣಕ್ಕೆ ಬದಲಿಸಿ ಬಂದರು । ಚಾಂದೋರಕರರು ಭೆಟ್ಟಿಯಾದರು ।
ಅವರಿಂದ ಸಾಯಿನಾಥರ ಕೀರ್ತಿ ಕೇಳಿದರು । ದರ್ಶನ ಪಡೆಯಬೇಕೆಂದಿಚ್ಛೆಯಾಯಿತು ॥ 43

ಮರುದಿನವೇ ಆ ಕಾಲ ಬಂತು । ಚಾಂದೋರಕರರ ಸಿದ್ಧತೆಯಾಯಿತು ।
ಎಂದರು ನಡೆಯಿರಿ ನಮಗೂ ಜೊತೆಯಾಯಿತು । ಶಿರಡಿಯವರೆಗೆ ಹೋಗಿ ಬರುವಾ ॥ 44

ಬಾಬಾರ ದರ್ಶನ ತೆಗೆದುಕೊಂಡು । ನಮಿಸಿ ಅವರ ಆಶೀರ್ವಾದ ಪಡೆದು ।
ಎರಡು ದಿನ ಅಲ್ಲಿದ್ದು । ತಿರುಗಿ ಕಲ್ಯಾಣಕ್ಕೆ ಬಂದು ಬಿಡೋಣ ॥ 45

ಆದರೆ ಅದೇ ದಿನ ಠಾಣೆ ಶಹರದಲ್ಲಿ । ದಿವಾಣೀ ನ್ಯಾಯಾಲಯದಲ್ಲಿ ।
ಮುಕದ್ದಮೆ ಸುನಾವಣಿ ನಡೆಯುವದಿತ್ತಲ್ಲಿ । ಅದಕಾಗಿ ಅವರ ಜೊತೆಯಲ್ಲಿ ಹೊರಡಲಾಗಲಿಲ್ಲ ॥ 46

ನಾನಾ ಸಾಹೇಬರು ಒತ್ತಾಯ ಪಡಿಸಿದರು । ನಡೆಯಿರಿ ಬಾಬಾ ಸಮರ್ಥರಿಹರು ।
ನಿಮ್ಮ ದರ್ಶನೋದ್ದೇಶವನ್ನು ಪೂರೈಸುವರು । ಮುಕದ್ದಮೆಯದೇನು ಮಹಾ ॥ 47

ಆದರೂ ಹೇಗವನಿಗೆ ಇದು ಒಪ್ಪಿಗೆಯಾಗುವುದು । ತಾರೀಖು ತಪ್ಪಿಸಲು ಭಯವಾಗುವುದು ।
ತಪ್ಪಿಸುವರಾರು ಎಡೆತಾಕುವದು । ಹಣೆ ಬರಹದಲ್ಲಿ ಬರೆದದ್ದು ॥ 48

ನಾನಾಸಾಹೇಬ ಚಾಂದೋರಕರರು । ಹಿಂದೆ ಬಂದ ಪ್ರತ್ಯಂತರಗಳ ಹೇಳಿದರು ।
ದರ್ಶನೇಚ್ಛೆಯ ಮನದಲ್ಲಿ ಹಿಡಿದರು । ಎಲ್ಲಾ ವಿಘ್ನಗಳು ದೂರಾಗುವುವು ತಾವೇ ॥ 49

ಆದರೂ ವಿಶ್ವಾಸಬಾರದು । ನಿಜ ಸ್ವಭಾವಕ್ಕೇನು ಮಾಡುವುದು ।
ಎಂದರು ಮೊದಲು ಈ ಕಾಟ ತಪ್ಪಿಸುವದು । ದಾವೆಯ ನಿಕಾಲ ಹಚ್ಚಬೇಕು ॥ 50

ಆಮೇಲೆ ಅವರು ಠಾಣೆಗೆ ಹೋದರು । ಚಾಂದೋರಕರರು ಶಿರಡಿಗೆ ಹೋದರು ।
ದರ್ಶನ ತೆಗೆದುಕೊಂಡು ತಿರುಗಿ ಬಂದರು । ಇಲ್ಲೊಂದು ಚಮತ್ಕಾರ ನಡೆದಿತ್ತು ॥51

ಇವರು ಹೊತ್ತಿಗೆ ಸರಿಯಾಗಿ ಹಾಜರಾದರೂ । ದಾವೆಯ ಕೆಲಸವ ಮುಂದೂಡಿದರೂ ।
ಚಾಂದೋರಕರರು ಜೊತೆಯನ್ನು ಕಳೆದುಕೊಂಡರು । ಮನಕೆ ಬೇಜಾರಯಿತು ॥ 52

ವಿಶ್ವಾಸವಿಟಿದ್ದರೆ ಚೆನ್ನಾಗಿತ್ತು । ಚಾಂದೋರಕರರ ಜೊತೆಯು ಇತ್ತು ।
ದರ್ಶನದ ಕಾರ್ಯವೂ ಮುಗಿಯುತ್ತಿತ್ತು । ಸ್ವಸ್ಥ ಚಿತ್ತದಿಂದ ಶಿರಡಿಯಲ್ಲಿ ॥ 53

ದಾವೆಯಂತೂ ಹಾಗೇ ಉಳಿಯಿತು । ಸಾಧು ಸಮಾಗಮವೂ ತಪ್ಪಿತು ।
ಕೊಡಲೇ ನಿಶ್ಚಯಿಸಲಾಯಿತು । ಶಿರಡಿಗೆ ಹೊರಡುವದೆಂದು ॥ 54

ಯಾರಿಗೆ ಗೊತ್ತು ಶಿರಡಿಗೆ ಹೋಗಲು । ಅಲ್ಲಿ ನಾನಾರ ಭೆಟ್ಟಿಯಾಗಲು ।
ಅವರೇ ಸಾಯಿನಾಥರಿಗೆ ತಿಳಿಸಲು । ಚಿತ್ತಕಾನಂದಆದೀತು ॥ 55

ಶಿರಡಿಯಲ್ಲಿ ಯಾರೂ ಪರಿಚಿತರಿಲ್ಲೆನಗೆ । ಸಂಪೂರ್ಣ ಅಪರಿಚಿತ ನಾ ಶಿರಡಿಗೆ ।
ಒಳ್ಳೆಯದಾಗುವುದು ನಾನಾರ ಭೆಟ್ಟಿಯಾಗೆ । ಅದು ಅಕಸ್ಮಾತ ಯೋಗವಿದ್ದರೆ ॥ 56

ವಿಚಾರ ಮಾಡುತ್ತಾ ಹೀಗೆ । ಕುಳಿತರು ಉಗಿ ಬಂಡಿಯೊಳಗೆ ।
ಮರುದಿನ ಬಂದರು ಶಿರಡಿಗೆ । ಅರ್ಥಾತ್ ನಾನಾ ಆಗ ಅಲ್ಲಿರಲಿಲ್ಲ ॥ 57

ಯಾವ ದಿನ ಇವರು ಹೊರಟರು । ಅಂದೆನಾನಾ ತಿರುಗಿ ಊರಿಗೆ ಹೊರಟರು ।
ಅದರಿಂದವರು ಬಹಳ ಹತಾಶರಾದರು । ಅತಿ ನಿರುತ್ಸಾಹಿಗಳಾದರು ॥ 58

ಆದರೂ ಆಮೇಲೆ ಭೆಟ್ಟಿಯಾದರೂ । ಇನ್ನೊಬ್ಬ ಅವರ ಒಳ್ಳೆಯ ಸ್ನೇಹಿತರು ।
ಅವರು ಸಾಯಿಯ ದರ್ಶನ ಮಾಡಿಸಿದರು । ಮನದಭಿಲಾಷೆಯ ಪೂರೈಸಿದರು ॥ 59

ದರ್ಶನದಿಂದ ಮನಚರಣದಲ್ಲಿ ತೊಡಗಿತು । ಸಾಷ್ಟಾಂಗ ಪ್ರಣಾಮವ ಮಾಡಿಯಾಯಿತು ।
ಮೈಯೆಲ್ಲ ರೋಮಾಂಚಿತವಾಯಿತು । ಕಣ್ಣಲ್ಲಿ ಪ್ರೇಮ ಜಲ ಹರಿಯಿತು ॥ 60

ಆಮೇಲೆ ನಿಲ್ಲಲಿಲ್ಲ ಕ್ಷಣ ಹೊತ್ತು । ಆ ತ್ರಿಕಾಲಜ್ಞ ಮುಖದಲ್ಲಿ ನಗೆ ಸೂಸುತ ।
ಬಾಬಾನುಡಿದರು ಏನಂತ । ಚಿತ್ತ ವಿಟ್ಟದನು ಆಲಿಸಿರಿ ॥ 61

"ಆ ಕನ್ನಡ ಅಪ್ಪಾ ನಿನಗೆ ಹೇಳಿದುದು । ಕೋಣದ ಮೇಲೆ ಘಟ್ಟ ಹತ್ತಿದಂತದು ।
ಹೀಗೆ ಸುಲಭವಲ್ಲ ಇಲ್ಲಿ ನಡೆಯುವುದು । ದೇಹ ಸವೆಯುವುದು ಅನಿವಾರ್ಯವಿಲ್ಲ" ॥ 62

ಗುರುತಿನಕ್ಷರ ಕಿವಿಗೆ ಬೀಳಲು । ಅಂತರಂಗ ಮತ್ತಿಷ್ಟು ತುಂಬಿ ಬರಲು ।
ಹಿಂದೆ ಹೇಳಿದ ಸತ್ಪುರುಷನ ಮಾತುಗಳು । ಪ್ರತ್ಯಂತರವನಿಲ್ಲಿ ತೋರಿಸಿದವು ॥ 63

ಆಮೇಲೆ ಮುಗಿದು ಎರಡುಕರ । ಸಾಯಿ ಪದದಲಿ ಇಟ್ಟು ಶಿರ ।
ಎಂದರು ಕೃಪೆ ದೋರು ಸಾಯಿವರ । ಅನಾಥನ್ನೆನು ಸ್ವೀಕರಿಸಿರಿ ॥ 64

ನೀವೇ ನನ್ನ ಮಹಾಪುರುಷ । ನಿಶ್ಚಲ- ದಾಸ ಬೋಧ ಗ್ರಂಥೋಪದೇಶ ।
ಇಂದೆನಗೆ ತಿಳಿಯಿತು ಅಶೇಷ । ನಿರ್ವಿಶೇಷ ಸುಖ ಬೋಧವು ॥ 65

ಎಲ್ಲಿ ಆವಡಗಾವ ಎಲ್ಲಿ ಈ ಶಿರಡಿ । ಏನು ಈ ಸತ್ಪುರುಷ ಮಹಾಪುರುಷರ ಜೋಡಿ ।
ಕೆಲವೇ ಅಕ್ಷರಗಳಲಿ ಸ್ಪಷ್ಟ ಮಾಡಿ । ಉಪದೇಶ ಉಪಶಮನವೆಂಥದ್ದು ॥ 66

ಒಬ್ಬರೆನುವರು ಗ್ರಂಥ ಓದು । ಮುಂದೆ ಮಹಾಪುರುಷರ ಸಂಗಮವಾಗುವುದು ।
ಆಮೇಲೆ ಅವರು ನಿನ್ನ ಮುಂದಿನ ಕರ್ತವ್ಯಗಳದು । ಉಪದೇಶ ನೀಡುವರು ನಿಜದಲ್ಲಿ ॥ 67

ದೈವಯೋಗದಿಂದ ಅವರೂ ಸಿಕ್ಕರೂ । ಅವರೇ ಇವರೆಂಬ ಗುರುತನ್ನೂ ಕೊಟ್ಟರು ।
ಓದಿದೆ ಹೇಳಿದ್ದನ್ನು ಒಬ್ಬರು । ಈ ಎರಡನೆಯವರು ಹೇಳಿದಂತೆ ಆಚರಿಸಲೇ ಬೇಕು ॥63

"ಅಪ್ಪಾ ನಿನಗೆ ಹೇಳಿದ್ದು ಯಥಾರ್ಥದಲ್ಲಿ । ಆದರೂ ಯಾವಾಗ ಅದು ಇಳಿಯುವುದು ಕೃತಿಯಲ್ಲಿ ।
ಆಗ ನಿನ್ನ ಮನೋರಥ ಈಡೇರುವುದು ನಿಜದಲಿ" । ಎಂದು ಬಾಬಾ ಹೇಳಿದರವಗೆ ॥ 69

ನಿಶ್ಚಲದಾಸರ ವಿಚಾರ ಸಾಗರ । ವಡಗಾವದಲ್ಲಿ ಭಕ್ತನಿಗಾಗಿ ಮಾಡಿದರು ಉಚ್ಚಾರ ।
ಸ್ವಲ್ಪ ಕಾಲವನ್ನು ಕಳೆದು ಗ್ರಂಥ ಪಾರಾಯಣದ ನಂತರ । ಶಿರಡಿಯಲಿ ಆಚಾರವ ತಿಳಿಸಿದರು ॥ 70

ಮೊದಲು ಮಾಡಬೇಕು ಗ್ರಂಥಶ್ರವಣ । ಆಮೇಲೆ ಮಾಡಬೇಕದರ ಮನನ ।
ಆಗಲು ಗ್ರಂಥದ ಪಾರಾಯಣ । ನಿಧಿ ಧ್ಯಾಸನ ವಾಗುವುದು ॥ 71

ಓದಿದರೆ ಮಾತ್ರ ಮುಗಿಯಲಿಲ್ಲ । ಕೃತಿಯಲಿಳಿಯಬೇಕು ಅದು ಎಲ್ಲ ।
ಡಬ್ಬು ಕೊಡದ ಮೇಲೆ ನೀರು ಸುರಿಲ್ಲದಂತೆ । ನಿರುಪಯುಕ್ತವಾಗುವದು ॥ 72

ವ್ಯರ್ಥವೆಲ್ಲ ಗ್ರಂಥವಾಚನ । ಪಡೆಯದಿದ್ದರೆ ಅನುಭವ ಜ್ಞಾನ ।
ಗುರುಕೃಪೆಯಿಲ್ಲದೆ ಬ್ರಹ್ಮಜ್ಞಾನ । ಪುಸ್ತಕೀಜ್ಞಾನವು ನಿಷ್ಫಲ ॥ 73

ಇದೇ ಅರ್ಥದ ಚಿಕ್ಕ ಕಥೆ । ತೋರುವದು ಭಕ್ತಿಯ ಯಥಾರ್ಥತೆ ।
ಪುರುಷಾರ್ಥದ ಅತ್ಯಾವಶ್ಯಕತೆ । ಶ್ರೋತೃಗಳು ತಮಗಾಗಿಯೇ ತಿಳುದುಕೊಳ್ಳಲಿ ॥74

ಒಮ್ಮೆ ಒಬ್ಬ ಪುಣೆಯಲಿ ಇರುವವನು । ಅನಂತರಾವ ಪಾಟಣಕರ ಎಂಬವನು ।
ಸಾಯಿ ದರ್ಶನದಲ್ಲಿಟ್ಟು ಮನಸನು । ಶಿರಡಿಗೆ ಬೇಗದಿ ಬಂದನು ॥ 75

ವೇದಾಂತವನೆಲ್ಲ ಶ್ರವಣ ಮಾಡಿದ । ಸಟೀಕೆ ಉಪನಿಷದಗಳನೆಲ್ಲ ಓದಿದ ।
ಯಾವಾಗಲೂ ಅವನ ಮನಸು ಚಂಚಲವಾಗಿರುವುದರಿಂದ । ಅವನ ತಳಮಳ ನಿಲ್ಲದು ॥ 76

ತೆಗೆದುಕೊಳ್ಳಲು ಸಾಯಿ ಸಮರ್ಥರ ದರ್ಶನ । ತೃಪ್ತವಾದವು ಪಾಟಣಕರರ ನಯನ ।
ಚರಣಗಳಿಗೆ ಮಾಡಿ ಅಭಿವಂದನ । ಯಥೋಕ್ತ ಪೂಜೆಯ ಮಾಡಿದರು ॥ 77

ಆ ಮೇಲೆ ಕೈ ಮುಗಿದುಕೊಂಡು । ಬಾಬಾರ ಎದುರು ಕುಳಿತುಕೊಂಡಿದ್ದು ।
ಅನಂತರಾಯರು ಪ್ರೀತಿ ಉಕ್ಕಿ ಬಂದು । ಕರುಣಾಜನಕವಾಗಿ ಕೇಳಿದರು ॥ 78

ವಿವಿಧ ಗ್ರಂಥಗಳೋದಿದೆ । ವೇದ ವೇದಾಂಗ ಉಪನಿಷದಗಳ ಅಧ್ಯಯನ ಮಾಡಿದೆ ।
ಸಚ್ಛಾಸ್ತ್ರ ಪುರಾಣಗಳ ಶ್ರವಣ ಮಾಡಿದೆ । ಆದರೂ ಈ ಮನವೇಕೆ ನಿರ್ವಿಣ್ಣವಾಗಿದೆ ॥79

ಓದಿದ್ದೆಲ್ಲ ವ್ಯರ್ಥವಾಯಿತು । ಎಂದು ಈಗ ಅನ್ನಿಸತೊಡಗಿತು ।
ಅಕ್ಷರ ಹೀನನಾದ ಭಾವಾರ್ಥಿಯಾಗಿರುವುದು ಒಳಿತು । ನನಗಿಂತ ಅವರೆಷ್ಟೋ ಉತ್ತಮ ॥ 80

ನಿರುಪಯುಕ್ತವಾಯಿತು ಗ್ರಂಥಾವಲೋಕನ । ನಿರುಪಯುಕ್ತವಾಯಿತು ಶಾಸ್ತ್ರಗಳ ಪರಿಶೀಲನ ।
ನಿರುಪಯುಕ್ತ ಈ ಎಲ್ಲ ಪುಸ್ತಕದ ಜ್ಞಾನ । ಈ ಮನಸು ಅಸ್ಥಿರವಾಗಿರುವವರೆಗೆ ॥ 81

ಆ ಶಾಸ್ತ್ರ ವ್ಯುತ್ಪತ್ತಿಗಳೆಲ್ಲ ಜೊಳ್ಳು । ಯಾತಕ್ಕೆ ಬೇಕು ಆ ಮಹಾವಾಕ್ಯದ ಜಪಗಳು ।
ಅದರಿಂದ ಚಿತ್ತಕೆ ಶಾಂತಿ ಲಭಿಸದಿರಲು । ಬ್ರಹ್ಮಜ್ಞಾನವಾದರೂ ಯಾತಕ್ಕೆ ॥ 82

ಕರ್ಣೋಪಕರ್ಣದಿಂದ ಕೇಳಿದೆ ವಾರ್ತೆ । ಸಾಯಿ ದರ್ಶನದಿಂದ ಹರಿವುದು ಚಿಂತೆ ।
ಹೇಳುತ್ತ ಹೇಳುತ್ತ ವಿನೋದದ ಕಥೆ । ಸಹಜ ಸತ್ಪಥವ ತೋರಿಸುವರು ॥ 83

ಮಹಾರಾಜ ತಪೋರಾಶಿಗಳೇ ಅದಕ್ಕೇ । ಬಂದಿರುವೆ ನಾ ನಿಮ್ಮ ಚರಣಕೆ ।
ಸ್ಥೈರ್ಯ ಬಂದೀತು ನನ್ನ ಮನಕೆ । ಎನುವಂತೆ ಆಶೀರ್ವದಿಸಬೇಕೆನ್ನ ॥ 84

ಮಹಾರಾಜರಾಗ ಹೇಳಿದ್ದು । ವಿನೋದಪರ ಆಖ್ಯಾಯಿಕೆಯನೊಂದು ।
ಅದರಿಂದ ಅನಂತರಾಯರು ಸಮಾಧಾನ ಪಡೆದು । ಜ್ಞಾನದ ಸಾಫಲ್ಯತೆಯ ಹೊಂದಿದರು ॥85

ಆ ಸ್ವಲ್ಪ ಮಾತಿನಲಿ ಬಹಳ ಅರ್ಥ ತುಂಬಿದೆ । ಹೇಳುವೆನು ಸಿದ್ಧರಾಗಿರಿ ಕೇಳಲದ ।
ವಿನೋದವಿದ್ದರೂ ಬೋಧಪ್ರದ । ಅದನಾರು ಅನಾದರಿಸಿಯಾರು ॥ 86

ಬಾಬಾ ಇತ್ತರು ಪ್ರತ್ಯುತ್ತರ । "ಬಂದನಲ್ಲಿಗೆ ಒಮ್ಮೆ ಒಬ್ಬ ಸೌದಾಗರ ।
ಆಗ ಕುದುರೆಯೊಂದು ಅವನೆದುರ । ಒಂಭತ್ತು ಲದ್ದೆಗಳ ಹಾಕಿತು" ॥ 87

ನಿಜಕಾರ್ಯ ತತ್ಪರನಾದ ಆ ಸೌದಾಗರನು । ಲದ್ದಿ ಬೀಳಲು ಒಡ್ಡಿದ ತನ್ನ ಶೆರಗನು ।
ಅವುಗಳನೆಲ್ಲ ಭದ್ರವಾಗಿ ಕಟ್ಟಿಕೊಂಡನು । ಚಿತ್ತೈಕಾಗ್ರತೆಯ ಪಡೆದನು ॥ 88

ಇದು ಏನು ಸಾಯಿ ಸಮರ್ಥರು ನುಡಿದದ್ದು । ಇದರ ಮಥಿತಾರ್ಥವೇನಿರಬಹುದು ।
ಸೌದಾಗರನೇಕೆ ಲದ್ದಿಗಳ ಸಂಗ್ರಹಿಸಿದ್ದು । ಒಂದೂ ಅರ್ಥವಾಗದು ॥ 89

ಹೀಗೆ ವಿಚಾರ ಮಾಡುತ್ತ । ಅನಂತರಾಯ ತಿರುಗಿ ಬರುತ ।
ಹೇಳಿದ ನಡೆದ ಸಂಭಾಷಣೆಯ ಸಮಸ್ತ । ಕೇಳಕರರ ಎದುರಿಗೆ ಅವನಾಗ ॥ 90

ಎಂದರು ಯಾರು ಆ ಸೌದಾಗರನು । ಆ ಲದ್ದಿಗಳ ಪ್ರಯೋಜನವೇನು ।
ಒಂಭತ್ತೇ ಎನಲು ಕಾರಣವೇನು । ಎಲ್ಲವನೂ ಬಿಚ್ಚಿ ಹೇಳಿರಿ ॥ 91

ದಾದಾ ಈ ಒಗಟ ಎಂಥದು । ನನ್ನ ಅಲ್ಪ ಬುದ್ಧಿಗಂತೂ ಏನೂ ಹೊಳೆಯದು ।
ಬಾಬಾರ ಹೃದಯವು ಒಡೆದು ಕಾಣುವದು । ಎಂಬಂತೆ ಸ್ಪಷ್ಟವಾಗಿ ನನಗೆ ತಿಳಿಸಿ ॥92

ದಾದಾ ಎಂದರು ನನಗೂ ತಿಳಿಯದು । ಬಾಬಾರ ಮಾತುಗಳೆಲ್ಲ ಹೀಗೆ ಇರುವದು ।
ಆದರೂ ಅವರೇ ಇತ್ತ ಬುದ್ಧಿಯದು । ಅದರಿಂದ ತಿಳಿದಷ್ಟು ಮಟ್ಟಿಗೆ ಹೇಳುವೆ ॥ 93

ಈಶ್ವರೀ ಕೃಪೆಯೆಂಬುದೇ ಈ ಕುದುರೆಯಾಯಿತು । ಈ ನವವಿಧಭಕ್ತಿಯ ಹೊರತು ।
ಪರಮೇಶ್ವರನು ದೊರಕುವನೆಂತು । ಒಣಜ್ಞಾನಕ್ಕವ ಸಿಗನೆಂದೂ ॥ 94

ಶ್ರವಣ, ಕೀರ್ತನ, ವಿಷ್ಣು ಸ್ಮರಣ । ಚರಣ ಸೇವನ, ವಂದನ, ಪೂಜನ ।
ದಾಸ್ಯ, ಸಖ್ಯ, ಆತ್ಮ ನಿವೇದನ । ನವವಿಧಾ ಭಕ್ತಿಗಳಿವೆಂಬಂದ ತಿಳಿ ॥ 95

ಪೂರ್ಣಭಾವವನಿಟ್ಟುಕೊಂಡು । ಮಾಡಿದರೆ ಸಾಕು ಇದರಲ್ಲೊಂದು ।
ಪ್ರಕಟನಾಗುವ ಭಕ್ತರ ಮನೆಗೇ ಬಂದು । ಭಾವಕ್ಕೆ ಹಸಿದ ಶ್ರೀಹರಿ ॥ 96

ಜಪ ತಪ ವ್ರತ ಯೋಗ ಸಾಧನ । ವೇದೋಪನಿಷದ ಪರಿಶೀಲನ ।
ಉದಂಡ ಆಧ್ಯಾತ್ಮಜ್ಞಾನ ನಿರೂಪಣ । ಭಕ್ತಿ ವಿಹೀನವಾದರವೆಲ್ಲ ಜೊಳ್ಳು ॥ 97

ಬೇಡ ವೇದ ಶಾಸ್ತ್ರಗಳ ವ್ಯುತ್ಪತ್ತಿ । ಬೇಡ ಜ್ಞಾನಿ ಎಂಬ ದಿಗಂತ ಕೀರ್ತಿ ।
ಬೇಡ ಶುಷ್ಕ ಭಜನದ ಪ್ರೀತಿ । ಪ್ರೀತಿಯಿಂದ ತುಂಬಿದ ಭಕ್ತಿಯೊಂದೇ ಸಾಕು ॥ 98

ತನ್ನನ್ನೇ ಆ ಸೌದಾಗರನೆಂದು ತಿಳಿದು । ಈ ವ್ಯಾಪಾರದ ಭಾವಾರ್ಥವನರಿತು ।
ಹಾರಿಸಲು ಭಕ್ತಿಯ ಧ್ವಜವೊಂದು । ಜ್ಞಾನರಾಜನದರಿಂದ ಸಂತುಷ್ಟ ॥ 99

ಕುದುರೆ ಒಂಭತ್ತು ಲದ್ದೆ ಹಾಕಲು । ವ್ಯಾಪಾರಿ ಓಡಿದನವ ತೆಗೆದುಕೊಳ್ಳಲು ।
ಅದರಂತೆ ನವವಿಧಾ ಭಕ್ತಿ ಭಾವಗಳು । ಮನದಲ್ಲಿ ತುಂಬಿಕೊಳ್ಳಬೇಕು ॥ 100

ಆದರಿಂದ ಮನಕೆ ಬರುವದು ಸ್ಥೈರ್ಯ । ಎಲ್ಲರಲ್ಲೂ ಸದ್ಭಾವ ಗಾಂಭೀರ್ಯ ।
ಆದಿಲ್ಲದೇ ಚಾಂಚಲ್ಯ ಅನಿವಾರ್ಯ । ಗುರುಗಳು ಪ್ರೇಮದಿ ಹೇಳುವರಿದ ॥ 101

ಎರಡನೆಯ ದಿನ ಉದಯಿಸಿಲು । ಹೋದಾಗ ಬಾಬಾರ ಚರಣಕೊಂದಿಸಲು ।
"ಉಡಿಯಲಿ ಕಟ್ಟಿಕೊಂಡಿಯಾ ಆ ಲದ್ದಿಗಳು" । ಎಂದು ಕೇಳಲಾಯಿತು ॥ 102
ಕೃಪೆ ಇರಬೇಕು ದೀನನ ಮೇಲೆ । ಆಗ ಕಟ್ಟಬಹುದವುಗಳ ಸಹಜದಲೆ ।
ಮಹತಿ ಏನಿದೆ ಅದರಲ್ಲೇ । ಅನಂತರಾಯರಿಂತು ಪ್ರಾರ್ಥಿಸಿದರು ॥ 103

ಬಾಬಾ ಆಶೀರ್ವಾದವಿತ್ತರಾಗ । 'ಕಲ್ಯಾಣವಾದೀತು ಎಂದು ಆಶ್ವಾಸನವಿತ್ತಾಗ' ।
ಮುದಗೊಂಡು ಅನಂತರಾಯನಾಗ । ಸುಖಸಮಾಧಾನಗಳ ಹೊಂದಿದನು ॥ 104

ಈಗ ಅಲ್ಪ ಕಥೆ ಇನ್ನೊಂದು । ಶ್ರೋತೃಗಳು ಆದರದಿ ಕೇಳುವುದು ।
ಬಾಬಾರ ಅಂತರ್ಜ್ಞಾನಿತನ ತಿಳಿಯುವದು । ಸನ್ಮಾರ್ಗ ಪ್ರವರ್ತಕತೆಯೂ ಅದರಂತೆ ॥ 105

ಒಮ್ಮೆ ಒಬ್ಬ ವಕೀಲರು ಬಂದರು । ಬಂದ ಕೂಡಲೇ ಮಶೀದಿಗೆ ಹೋದರು ।
ಸಾಯಿನಾಥರ ದರ್ಶನ ಪಡೆದರು । ಅವರ ಚರಣಗಳನು ವಂದಿಸಿದರು ॥ 106

ಕೂಡಲೇ ದಕ್ಷಿಣೆಯನಿತ್ತು । ತತ್ಕ್ಷಣ ಬದಿಗೆ ಕುಳಿತು ।
ಅಲ್ಲಿ ಸಾಯಿಯವರ ಸಂಭಾಷಣೆ ನಡೆಯಿತು । ಕೇಳುವುದರಲಿ ಮನತೊಡಗಿತು ॥ 107

ಬಾಬಾ ಅತ್ತ ಕಡೆ ಮುಖ ತಿರುವಿದರು । ವಕೀಲರನನುಲಕ್ಷಿಸಿ ಮಾತನಾಡಿದರು ।
ವಕೀಲರು ಅನುತಾಪಗೊಂಡರು । ಆ ಮಾತ ಅವರ ಮನಚುಚ್ಚಿದಾಗ ॥ 108

"ಜನರೆಂಥ ಮೋಸಗಾರರಿರುವರು । ನಮಸ್ಕರಿಸಿ ದಕ್ಷಿಣೆಯನ್ನೂ ಕೊಡುವರು ।
ಮನಸ್ಸಿನೊಳಗೇ ಬಯ್ಯುವರು । ಎಲ್ಲ ವಿಚಿತ್ರ ಇರುವದು" ॥ 109

ವಕೀಲರು ಇದ ಕೇಳಿ ಸುಮ್ಮನೇ ಕುಳಿತರು । ಆದರೂ ಒಳಗೇ ಅರಿತುಕೊಂಡರು ।
ಆ ಮಾತುಗಳ ಅರ್ಥ ಮಾಡಿಕೊಂಡರು । ತಾತ್ಪರ್ಯ ಮನದಲಿ ಬಿಂಬಿಸಿತು ॥ 110

ಆ ಮೇಲೆ ಹೋದಾಗ ವಾಡೆಗೆ । ಹೇಳಿದರಿದನು ದೀಕ್ಷಿತರಿಗೆ ।
ಬಾಬಾ ಚುಚ್ಚಿ ಮಾತನಾಡಿದರು ಹೇಗೆ । ಅದೆಲ್ಲ ಸರಿಯೇ ಇದ್ದಿತು ॥ 111

ಬಂದ ಕೂಡಲೇ ನನ್ನನ್ನು ಚಾಡಿಸಿದರು । ಹಾಗೆ ಮಾಡಿ ನನಗೆ ಸೂಚಿಸಿದರು ।
ಅಂತರದಿ ಅವಕಾಶ ಕೊಡದಿರು । ಕುಚೇಷ್ಟೆ ನಿಂದಾದಿಗಳಿಗೆಂದು ॥ 112

ಶರೀರವು ಅಸ್ವಸ್ಥವಾಗಿ । ಮುನ್ಸೂಫರದರಿಂದ ತ್ರಸ್ತರಾಗಿ ।
ಆರೋಗ್ಯ ಸುಧಾರಿಸುವುದಕ್ಕಾಗಿ । ರಜೆ ಪಡೆದು ಅಲ್ಲೇ ಉಳಿದರು ॥ 113

ವಕೀಲರ ಕೋಣೆಯಲ್ಲಿದ್ದಾಗ । ಮುನ್ಸೂಫರ ಬಗ್ಗೆ ಮಾತು ಬಂದಾಗ ।
ವಾಸ್ತವಿಕವಾಗಿ ಸಂಬಂಧವಿರದಾಗ । ಅವರ ಬಗೆಗೆ ಚರ್ಚೆ ನಡೆಯಿತು ॥ 114

ದೇಹ ಜಾಡ್ಯ ಬಂದಾಗ ಔಷಧದ ಹೊರತು । ಬರೀ ಸಾಯಿಯವರ ಬೆನ್ನು ಹತ್ತಿ ಹೇಗೆ ನೆಟ್ಟಗಾದೀತು ।
ಮುನ್ಸೂಫರ ಪದವಿ ಪಡೆದಾಯಿತು । ಇಂಥವರಿಗೆ ಈ ಕೆಲಸ ಒಪ್ಪುವುದೇ ॥ 115

ಹೀಗೆ ಅವರ ನಿಂದೆ ನಡೆಯಿತು । ಸಾಯಿಯವರ ಬಗೆಗೆ ಉಪಹಾಸವೂ ನಡೆಯಿತು ।
ನಾನೂ ಅವರೊಡನಿದ್ದು ಒಂದಿಷ್ಟು । ಅದರ ಅನುಚಿತತೆಯ ತೋರಿದೆ ॥ 116

ಅದು ಬೈಗಳಲ್ಲ ಅನುಗ್ರಹವೆನಬೇಕು । ಸುಮ್ಮನೇ ಯಾರದೋ ಬಗೆಗೆ ಏಕೆ ಚರ್ಚಿಸಬೇಕು ।
ಉಪಹಾಸ ನಿಂದಾದಿಗಳ ಸಂಗ್ರಹಿಸಬೇಕು । ಇಂಥ ಅಸತ್ಪರಿಗ್ರಹ ತ್ಯಜಿಸಬೇಕು ॥ 117

ಹೀಗಿದ್ದು ಇನ್ನೊಂದು ಪ್ರತ್ಯಂತರ । ಇದ್ದಾಗ ನಡುವೆ ನೂರು ಹರದಾರಿಗಳ ಅಂತರ ।
ಸಾಯಿ ತಿಳಿಯುವರು ಎಲ್ಲರ ಅಭ್ಯಂತರ । ನಿಜವಾದ ಅಂತರ್ಜ್ಞಾನಿಗಳವರು ॥ 118

ಇನ್ನೂ ಒಂದು ಆಯಿತು ನಿಶ್ಚಿತ । ಮಧ್ಯೆ ಇರಲು ನದಿ ಪರ್ವತ ।
ಸಾಯಿ ದೃಷ್ಟಿಯದು ಬಲು ದೂರ ಇರುತ । ಆದರೂ ಅವರಿಂದ ಯಾವದೂ ಮುಚ್ಚುಳಿಯಲಾರದು ॥119

ಅಂದಿನಿಂದ ಮುಂದೆಂದೂ । ಇನ್ನು ಮೇಲೆ ನಿಂದೆ ದುರುಕ್ತಿಗಳನ್ನಾಡಕೂಡದು ।
ಮಾಡಿ ನಿಶ್ಚಯ ಹೀಗೆಂದು । ತಮ್ಮ ತಪ್ಪನ್ನು ತಿದ್ದಿಕೊಂಡರು ॥ 120

ತಾವು ಎಲ್ಲಿ ಏನೇ ಮಾಡಿದ್ದು । ಸಾಯಿ ದೃಷ್ಟಿಯಿಂದ ಮುಚ್ಚಲಾರದು ।
ಇದರ ಖಚಿತತೆ ತಿಳಿದು । ಅಸತ್ಕಾರ್ಯಕ್ಕೆ ಮನ ದೂರಾಯಿತು ॥ 121

ಸತ್ಕಾರ್ಯ ಜಾಗರೂಕತೆ ಮೂಡಿದಾಗ । ಹಿಂದೆ ಮುಂದೆ ಎಲ್ಲೆಡೆ ಸಾಯಿ ಇರುವಾಗ ।
ಅವನ ವಂಚಿಸಲು ಸಮರ್ಥರಾರೀಗ । ಎಂಬ ಮಾತು ಮನದಿ ಅಚ್ಚೊತ್ತಿತ್ತು ॥ 122

ವಿಚಾರ ಮಾಡಿದಾಗ ಕತೆಯಿದು । ಆ ವಕೀಲನಿರಿಗೆ ಸಂಬಂಧಿಸಿದ್ದು ।
ಆದರೂ ಎಲ್ಲರಿಗೂ ಎಲ್ಲ ರೀತಿಯಲ್ಲೂ ಅದು । ಎಲ್ಲರಿಗೂ ಬೋಧಪ್ರದವಾದದು ॥ 123

ವಕೀಲ ವ್ಯಕ್ತ ಶ್ರೋತೃಗಳಾದಿಯಾಗಿ । ಮತ್ತೂ ಇತರ ಸಾಯಿಯ ಭಕ್ತರಿಗಾಗಿ ।
ಪ್ರಾರ್ಥಿಸುವೆನು ನಾ ನಿಜವಾಗಿ । ಅವರೂ ಈ ರೀತಿ ನಿರ್ಧಾರ ಕೈಕೊಳ್ಳಬೇಕು ॥ 124

ಸಾಯಿ ಕೃಪಾ ಮೇಘ ಸುರಿದು । ನಮ್ಮೆಲ್ಲರಿಗೂ ತೃಪ್ತಿಯಾಗುವದು ।
ಇದರಲ್ಲೇನೂ ವಿಸ್ಮಯವಿರದು । ಎಲ್ಲರ ತೃಷೆಯ ನೀಗಿಸುವದು ॥ 125

ಸಾಯಿನಾಥರ ಮಹಿಮೆ ಆಗಾಧ । ಅವರ ಕಥೆಗಳು ಪರಮ ಅಗಾಧ ।
ಸಾಯಿ ಚರಿತ್ರೆಗೆ ಸೀಮೆ ಎಲ್ಲಿಂದ । ಮೂರ್ತ ಬ್ರಹ್ಮ ಸ್ವರೂಪವದು ॥ 126

ಮುಂದಿನಾಧ್ಯಾಯದಲಿ ಕಥೆಯನ । ಕೇಳಬೇಕು ಶ್ರದ್ಧೆಯುಳ್ಳ ಶ್ರೋತೃ ಜನ ।
ಪೂರೈಸುವದದು ನಿಮ್ಮ ಮನೋರಥವನ । ಚಿತ್ತಕ್ಕೆ ಸ್ಥಿರತೆಯನು ಕೊಡುವದು ॥ 127

ಭಕ್ತರಿಗೆ ಮುಂಬರುವ ಕಷ್ಟಗಳ ಕುರಿತು । ಸಾಯಿ ಸಮರ್ಥರಿಗೆ ಮುಂದಾಗಿಯೇ ಗೊತ್ತು ।
ಚೇಷ್ಟೆ ವಿನೋದದಲಿ ಆಡಿ ಆ ಮಾತು । ನಗುನಗುತ ಅದನು ಪರಿಹರಿಸುವರು ॥ 128

ಭಕ್ತ ಹೇಮಾಡನು ಸಾಯಿಗೆ ಶರಣ । ಆಯಿತೀ ಕಥೆ ಸಂಪೂರ್ಣ ।
ಮುಂದಿನ ಕಥೆಯ ಅನುಸಂಧಾನ । ಭಕ್ತರ ಸಂಕಟ ನಿವಾರಣೆ ॥ 129


ಸಾಯಿ ಕೃಪಾಸಾಗರರು ಹೇಗೆ । ಮುಂದೆ ಕಂಡು ಕಷ್ಟ ಬರುವದನು ಭಕ್ತನಿಗೆ ।
ಪರಿಹಾರ ಮಾಡುವರದಕೆ ಅದ ತಿಳಿದು ಮೊದಲಿಗೇ । ಹೊತ್ತಿಗೆ ಸರಿಯಾಗಿ ಸೂಚನೆ ಇತ್ತು ॥ 130

ಭಕ್ತ ಹೇಮಾಡಪಂತ ರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಅನುಗ್ರಹ ಕರಣಂ ನಾಮ ಏಕವಿಂಶೋಧ್ಯಾಯಃ
ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

282·1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತೆರಡು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜಯ ಸದ್ಗುರೋ ಆನಂದಘನಾ । ಜ್ಞಾನ ರೂಪಾ ಪರಮ ಪಾವನಾ ।
ಜಯ ಜಯ ಹೇ ಭವಭಯ ನಿಕಂದನಾ । ಕಲಿಮಲದಹನಾ ಪರಿಪೂರ್ಣ ॥ 1

ನೀ ಆನಂದ ಸಾಗರನು ನಿನ್ನೊಳು । ಏಳುವವನೇಕ ವೃತ್ತಿ ಲಹರಿಗಳು ।
ಕೃಪೆ ತೋರುವೆ ನಿಜ ಭಕ್ತರೊಳು । ನೀನೇ ಅವುಗಳ ನಿವಾರಿಸಿ ॥ 2

ಮಬ್ಬು ಗತ್ತಲಲ್ಲಿ ಕಂಡ ಹಾವು । ಅದೇ ಪ್ರಕಾಶದಲಿ ತನ್ನಷ್ಟಕ್ಕೆ ಇರುವದು ಹಗ್ಗವು ।
ಮಬ್ಬುಗತ್ತಲು ಮತ್ತು ಪ್ರಕಾಶವು । ಎರಡರ ಉತ್ಪತ್ತಿ ನಿನ್ನಿಂದಲೇ ॥ 3

ಸರ್ಪಾಕಾರದ ವೃತ್ತಿ ಮೂಡಿಸುವವ । ಅದನ್ನೇ ಹಗ್ಗದ ಆಕಾರದಲಿ ತೋರುವ ।
ನೀನೇ ಹೆದರಿಕೆ ಹುಟ್ಟಿಸುವವ । ಅದ ನಿವಾರಿಸುವವನೂ ನೀನೇ ॥ 4

ಗಾಡಾಂಧಕಾರವಿದ್ದಾಗೆಲ್ಲ । ಸರ್ಪವೂ ಇರಲಿಲ್ಲ ಹಗ್ಗವೂ ಇರಲಿಲ್ಲ ।
ವೃತ್ತಿಗಳೇಳಲು ಇರದಂತೆ ಸ್ಥಳವೆಲ್ಲ । ನಿರಾಕಾರನೂ ನೀನಾಗುವಿ ॥ 5

ಮುಂದೆ ನಿರಾಕಾರಕ್ಕೆ ಆಕಾರ । ಅದೂ ಸಂಧಿ ಪ್ರಕಾಶದ ಅವಸರ ।
ಅದರಿಂದ ಕಂಡಿತು ಸರ್ಪಾಕಾರ । ಈ ಆಭಾಸಕೆ ಕಾರಣನೂ ನೀನೇ ॥ 6

ಹೀಗೆ ದೃಶ್ಯಾದೃಶ್ಯಗಳ ಭಾವ । ಇದು ನಿನ್ನ ವೃತ್ತಿಯ ಆನಂದ ಭಾವ ।
ಭಾವಾಭಾವರಹಿತ ಸ್ವಭಾವ । ಇದರಂತವಾರಿಗೂ ತಿಳಿಯದು ॥ 7

ಇಂತವನ ಬಗ್ಗೆ ಮೌನ ತಾಳಿದವು ಶೃತಿಗಳು । ಅಶೇಷ ಮುಖನನು ಸ್ತವಿಸಲು ।
ಶೇಷನೂ ನಿಜ ಸ್ವರೂಪವ ತಿಳಿಯದಿರಲು । ನಾನಾರು ಅದನು ತಿಳಿಯಲು ॥ 8

ಬಾಬಾ ನಿನ್ನ ಸ್ವರೂಪ ದರ್ಶನ । ಅದರ ಹೊರತು ರುಚಿಸದು ಇನ್ನೇನ ।
ಎನಿಸುವದು ಅದರದೇ ಮಾಡಬೇಕು ಧ್ಯಾನ । ಕಣ್ಣೆದುರಿಗದನೇ ಇಡಬೇಕು ॥ 9

ಕೇವಲ ಶುದ್ಧ ಜ್ಞಾನ ಮೂರ್ತಿಯ । ಪಡೆಯಲು ಆತ್ಯಂತಿಕ ಸೌಖ್ಯಪೂರ್ತಿಯ ।
ಚರಣಗಳಲಲ್ಲದೇ ನಿನ್ನಯ । ಬೇರೆ ಗತಿ ಎಮಗೆ ಇಲ್ಲ ॥ 10

ಏನು ನಿನ್ನ ಆ ನಿತ್ಯದ ಬೈಠಕ । ದರ್ಶನಕೆ ಬರುವವರು ಭಕ್ತರು ಅನೇಕ ।
ಇಟ್ಟು ನಿನ್ನ ಚರಣದಲಿ ಮಸ್ತಕ । ಪ್ರೇಮದಿ ನಿಜ ಸುಖ ಸೂರೆಗೊಳ್ಳುವರು ॥ 11

ಅದೂ ನಿನ್ನ ಚರಣ ಹೇಗೆ । ಶಾಖಾ ಚಂದ್ರನ್ಯಾಯದ ಹಾಗೆ ।
ಪಾದಾಂಗುಷ್ಠವ ಹಿಡಿದಿರುವ ಬಗೆ । ದರ್ಶನ ಜಿಜ್ಞಾಸೆಯ ಪೂರೈಸುವದು ॥ 12

ಕೃಷ್ಣ ಪಕ್ಷದ ಕೊನೆಯ ದಿನದಂದು । ಅಮಾವಾಸ್ಯೆಯ ಕತ್ತಲೆಯ ರಾತ್ರಿಯದು ।
ಕಳೆಯಲು ಚಂದ್ರ ದರ್ಶನದ ಲವಲವಿಕೆಯಾಗುವದು । ಸಹಜವಾಗಿದೆ ಎಲ್ಲರಿಗೆ ॥ 13

ಆ ನಿಜಭಕ್ತರ ಲವಲವಿಕೆ । ಪೂರೈಸಲು ನೀ ಚರಣದೆಡೆಗೆ ।
ಬಲಗಾಲನಿಟ್ಟು ಎಡಮೊಣಕಾಲ ಮೇಗೆ । ಕುಳಿತುಕೊಳ್ಳುವಿ ಆ ಕಾಲದಲಿ ॥ 14

ವದ್ಯಪಕ್ಷದ ರಾತ್ರಿ ಕಳೆಯಲು । ಚಂದ್ರನ ನೋಡಲು ಆತುರರಾಗಲು ।
ನೋಡುವವರೆಲ್ಲರು ಪಶ್ಚಿಮ ದಿಕ್ಕಿನೊಳು । ಆಕಾಶದೆಡೆಗೆ ದೃಷ್ಟಿಸಿ ॥ 15

ಎಡಗೈಯ ತರ್ಜನಿ ಮತ್ತು ಮಧ್ಯಾಂಗುಲಿಯೊಳು । ಶಾಖೆಯಂತೆ ಅಂಗುಷ್ಠವ ಹಿಡಿದಿರಲು ।
ಬಿದಿಗೆಯ ನಖಚಂದ್ರನು ಅಲ್ಲಿ ಹೊಳೆಯಲು । ಆ ದಕ್ಷಿಣಪಾದಾಂಗುಷ್ಠದ ಹತ್ತಿರ ॥ 16

ದರ್ಶನದ ಜಿಜ್ಞಾಸೆ ದೊಡ್ಡದು । ಆದರೆ ಆಕಾಶದಲಿ ಚಂದ್ರಬಿಂಬ ಕಾಣದು ।
ಆಗ ಜಾಣನೊಬ್ಬ ಹೇಳುವುದು । ಇದರೆದುರು ನಿಂತು ನೋಡಿರೆಂದು ॥ 17

ನೋಡಿರೀಗ ಇಬ್ಬೆರಳ ಮಧ್ಯದಲಿ । ಚಂದ್ರ ದರ್ಶನವಾಗುವದು ಎದುರಿನಲಿ ।
ಬಿಂಬವೂ ಚಿಕ್ಕದೇ ಆಗಿರಲಿ । ಅಲ್ಲಿಂದಲೇ ದೃಷ್ಟಿ ಗೋಚರವಾಯಿತು ॥ 18

ವೇಣೀಮಾಧವ ತಾನೇ ಎನಿಸಿ । ಗಂಗೆಯಮುನೆಯರ ಪ್ರಕಟಿಸಿ ।
ದಾಸಗಣುನನು ಸಂತೋಷಗೊಳಿಸಿ । ಅಂಥ ಅಂಗುಷ್ಠದ ಮಹಿಮೆಯೇ ದೊಡ್ಡದು ॥ 19

ಸ್ನಾನ ಮಾಡಬೇಕು ಪ್ರಯಾಗ ತೀರ್ಥದಲಿ । ಎಂದು ಆಜ್ಞಾಪನೆಯ ಕೇಳುತಲಿ ।
ಪ್ರಯಾಗ ತಿಳಿ ನನ್ನಂಗುಷ್ಠದಲಿ । ದರ್ಶನವ ಮಾಡು ನೀನಿಲ್ಲಿಯೇ ॥ 20

ಬಾಬಾ ಹೀಗೆನ್ನಲು ತಲೆ । ದಾಸಗಣುವು ಇಡಲು ಚರಣದಲೇ ।
ಗಂಗೆ ಯಮುನೆಯರಿಬ್ಬರ ಜಲವಲ್ಲೇ । ಪ್ರಕಟವಾಯಿತಲ್ಲಾ ಕ್ಷಣದಿ ॥ 21

ಇಂಥ ಈ ಪ್ರಸಂಗ ಕಂಡು । ದಾಸಗಣೂ ಸುಂದರ ಪದ್ಯ ಬರೆದು ।
ಅಗಾಧ ಶಕ್ತಿ ಅಘಟಿತ ಲೀಲೆಯಿದು । ಶ್ರೋತೃಗಳು ಕೇಳಲಿಚ್ಛಿಸಿದರೆ ॥ 22

ಸಾಯಿ ಸಚ್ಚರಿತ ನಾಲ್ಕನೇ ಅಧ್ಯಾಯದಲಿ । ದಾಸಗಣೂ ಹಾಡಿದರು ನಿಜವಾಣಿಯಲಿ ।
ಶ್ರೋತೃಗಳು ಮತ್ತೊಮ್ಮೆ ಓದಲು ಅಲ್ಲಿ । ಮತ್ತೆ ಹೊಸತನ ಕಂಡು ಬರುವದು ॥ 23

ಶಾಖಾ ಚಂದ್ರ ನ್ಯಾಯವೆನಿಸಿ । ಕಾಲ್ಹೆಬ್ಬೆರಳನು ಎರಡು ಬೆರಳ ಮಧ್ಯದಲಿರಿಸಿ ।
ಭಕ್ತರಿಗದು ತೋರಿಸಿ । ಸುಲಭ ಉಪಾಯವೆಂದು ಭಕ್ತರಿಗೆ ॥ 24

ಎನ್ನುವರು ನಿರಭಿಮಾನಿಗಳಾಗಿ । ಎಲ್ಲರೆದುರು ತಲೆಬಾಗಿ ।
ಏಕ ಅಂಗುಷ್ಠ ಧ್ಯಾನದಲಿ ತೊಡಗಿ । ಸುಲಭ ಸಾಧನವಿದು ಭಕ್ತಿಗೆ ॥ 25

ಇನ್ನು ಹಿಂದಿನ ಕಥಾನುಸಂಧಾನ । ಆಯಿತು ಭಕ್ತಾನುಗ್ರಹ ಕಥನ ।
ಮುಂದಿನ ಅಪೂರ್ವ ಚರಿತ್ರ ಶ್ರವಣ । ಲಕ್ಷವಿಟ್ಟು ಕೇಳಿರಿ ॥ 26

ಶಿರಡಿಯಾಯಿತು ಪುಣ್ಯಕ್ಷೇತ್ರ । ಬಾಬಾರಿಂದಾಗಿ ಅತಿ ಪವಿತ್ರ ।
ಯಾತ್ರಿಕರು ಬರುವರು ಮೂರೂ ಹೊತ್ತು । ಸತ್ಪಾತ್ರ ಪುಣ್ಯಾರ್ಥಿಗಳಲ್ಲಿ ॥ 27

ಹತ್ತು ದಿಶೆಗಳಿಗೂ ಸಾಕ್ಷಿಯಾಗಿ । ತಿಳಿದಿದೆಲ್ಲರಿಗೆ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ।
ಸಾಯಿ ರೂಪದಲಿ ಇದು ಕಲ್ಪವೃಕ್ಷವಾಗಿ । ಪ್ರತ್ಯಕ್ಷ ಶಿರಡಿಯಲಿ ಅವತರಿಸಿದೆ ॥ 28

ಬಡವನಿರಲಿ ಇರಲಿ ಸಿರಿವಂತನು । ಸಮಸಮಾನರಾಗಿ ಕಾಣುವರೆಲ್ಲರನು ।
ಮಾಡಿ ತರ್ಕಕ್ಕೆ ನಿಲುಕದ ಲೀಲೆಯನು । ಭಕ್ತ ಕಲ್ಯಾಣವನು ಸಾಧಿಸುವರು ॥ 29

ಏನು ಆ ನಿಸ್ಸೀಮ ಪ್ರೇಮಳತೆ । ನೈಸರ್ಗಿಕ ಜ್ಞಾನ ಸಂಪನ್ನತೆ ।
ಆತ್ಯಂತಿಕ ಸರ್ವಾತ್ಮ ಭಾವತೆ । ಇದರನುಭವ ಪಡೆದವರೇ ಧನ್ಯರು ॥ 30

ಒಮ್ಮೊಮ್ಮೆ ದೃಢ ಮೌನದಿಂದಿರುವದು । ಅದೇ ಅವರ ಬ್ರಹ್ಮ, ಅವರ ಬ್ರಹ್ಮವ್ಯಾಖ್ಯಾನವಾಗುವದು
।ಒಮ್ಮೊಮ್ಮೆ ಚೈತನ್ಯ ಆನಂದಘನನಾಗಿದ್ದು । ಭಕ್ತಗಣದಿಂದ ಪರಿವೇಷ್ಟಿತ ॥ 31

ಒಮ್ಮೊಮ್ಮೆ ಗೂಢಾರ್ಥದಿಂದ ಕೂಡಿದ ಮಾತು । ಒಮ್ಮೊಮ್ಮೆ ಹಾಸ್ಯವಿನೋದ ನಡೆಯಿತು ।
ಒಮ್ಮೊಮ್ಮೆ ಸಂದಿಗ್ಧತೆಯನು ಬಿಟ್ಟು । ಸಿಟ್ಟಿಗೇಳುವದೂ ನಡೆಯುತ್ತಿತ್ತು ॥ 32

ಒಮ್ಮೆ ಭಾವಾರ್ಥ ಒಮ್ಮೆ ವಿವೇಕ । ಒಮ್ಮೆ ಸ್ಪಷ್ಟ ಶಬ್ದಗಳಲಿ ನಿಶ್ಚಯಾತ್ಮಕ ।
ಹೀಗೆ ಅನೇಕರಿಗೆ ಅನೇಕ । ಪ್ರಕಾರದಲಿ ಉಪದೇಶ ಮಾಡುತಿದ್ದರು ॥ 33

ಸಾಯಿ ಸಮರ್ಥರು ಈ ರೀತಿಯಾಗಿ । ವಾಙ್ಮನೋಬುದ್ಧಿಗಳಿಗತೀತವಾಗಿ ।
ಗೊತ್ತಿಲ್ಲದೇ ಅಕಸ್ಮಾತ್ತಾಗಿ । ಅಕಲ್ಪಿತ ಕಾರ್ಯ ಮಾಡುವರು ॥ 34

ಎಷ್ಟು ಮುಖಾವಲೋಕನ ಮಾಡಿದರೂ ಮನ ತಣಿಯದು । ಅವರೊಡನೆಷ್ಟು ಮಾತಾಡಿದರೂ ಸಾಲದು ।
ಅವರ ಸುದ್ದಿಗಳ ಕೇಳಿದಷ್ಟೂ ಬೇಕೆನಿಸುವದು । ಚಿತ್ತದಲಿ ಹರುಷ ಹಿಡಿಸದು ॥ 35

ಪರ್ಜನ್ಯ ಧಾರೆಗಳನೆಣಿಸಬಹುದು । ಗಾಳಿಯನು ಗಂಟಿನಲಿ ಕಟ್ಟಬಹುದು ।
ಆದರೆ ಈ ಸಾಯಿಯ ಚಮತ್ಕಾರಗಳದು । ಯಾರು ಅಳತೆ ಮಾಡಬಲ್ಲರು ॥ 36

ಇರಲಿನ್ನು ಮುಂದಿನ ಕಥೆಯನು । ಸಾಯಿಗಿರುವ ಭಕ್ತ ರಕ್ಷಣೆಯ ಚಿಂತೆಯನು ।
ಅಂತೆಯೇ ದುರ್ಧರ ಪ್ರಸಂಗಗಳಿಗೆ ಪರಿಹಾರವನು । ಸ್ವಸ್ಥಚಿತ್ತರಾಗಿ ಆಲಿಸಬೇಕು ॥ 37

ಹೇಗೆ ಭಕ್ತರ ಗಂಡಾಂತರ । ತಿಳಿದು ಕೊಟ್ಟವರಿಗೆ ಧೈರ್ಯ ।
ದೂರ ಮಾಡಿ ಅದ ನಿಜ ಪದದಲಿ ಸ್ಥಿರ । ಮಾಡುವ ಕಲ್ಯಾಣತರರು ॥ 38

ಇದೇ ಅರ್ಥದ ಒಂದು ಕಥೆ । ಹಿಡಿಸೀತು ನಿಮಗೆ, ಶ್ರವಣೋತ್ಸುಕತೆ ।
ಬೆಳೆಸೀತು ಸಮಾಗಮದ ಮಧುರತೆ । ಭಾವಿಕರಲಿ ಶ್ರದ್ಧೆ ಬೆಳೆದೀತು ॥ 36

ಇರಲಿ ಹೀನ, ದೀನ ಅಸಹಾಯಕರು । ಸಾಯಿ ಕಥೆಯನು ಇಷ್ಟಪಡುವರು ।
ಪ್ರತಿಕ್ಷಣಕೂ ಸಾಯಿಯ ನಾಮ ಜಪಿಸುವರು । ಅಂತವರ ಪರತೀರಕೊಯ್ಯುವರು ॥ 40

ಕಾಕಾಸಾಹೇಬ ಮಿರಿಕರ । ನಿವಾಸಸ್ಥಾನ ಅಹಮದನಗರ ।
ಪ್ರಸನ್ನವಾಗಿ ಅವರಿಗೆ ಸರಕಾರ । ಸರದಾರ ಪದವಿಯನಿತ್ತಿತು ॥ 41

ಕರ್ತವ್ಯ ತತ್ಪರನಾದ ಅವರ ಮಗ । ಕೋಪರಗಾಂವದ ಮಾಮಲೇದಾರನಾದಾಗ ।
ಚಿಥಳಿಯ ಪ್ರವಾಸದಲ್ಲಿದ್ದಾಗ । ಶಿರಡಿಗೆ ದರ್ಶನಕೆ ಬಂದರು ॥ 42

ಮಶೀದಿಯಲಿ ಹೋಗಿ ಕುಳಿತು । ಬಾಬಾರ ಚರಣದಲ್ಲಿ ಮಸ್ತಕವಿಟ್ಟು ।
ಬಳಿಕ ಕ್ಷೇಮ ಕುಶಲ ಕೇಳಿಯಾಯಿತು । ಹಾಗೇ ಮಾತುಕಥೆ ನಡೆಯಿತು ॥ 43

ಅಲ್ಲಿ ಸಾಕಷ್ಟು ಜನರಿದ್ದರು । ಮಾಧವರಾಯರೂ ಹತ್ತಿರದಲೇ ಇದ್ದರು ।
ಕಥಾಮೃತದಲಿ ಸವಿ ಇದ್ದವರು । ಈ ಹೊಸತನವನು ಸವಿಯಿರಿ ॥ 44

ಹೇಗೆ ಭಾವೀ ಸಂಕಟದ ಸೂಚನೆ । ಉಪಾಯ ಸಹಿತವಾಗಿ ಅದರ ನಿವಾರಣೆಯ ಯೋಜನೆ ।
ಮಾಡಿ ಹೇಗೆ ಮಾಡುತಿದ್ದರು ಭಕ್ತರ ರಕ್ಷಣೆ । ಅಘಟಿತ ಘಟನೆ ಬಾಬಾರದು ॥ 45

ಬಾಬಾ ಮಿರೀಕರರಿಗೆ ಆ ಸ್ಥಳದಲ್ಲಿ । ಪ್ರಶ್ನೆ ಕೇಳಿದರು ವಿಚಿತ್ರ ರೀತಿಯಲಿ ।
"ಗೊತ್ತಿರುವಳೇ ನಿಮಗೆ ಇಲ್ಲಿ । ಆ ನಮ್ಮ ದ್ವಾರಕಾಮಾಯಿ ಎಂಬವಳು" ॥ 46

ಬಾಳಾಸಾಹೇಬರಿಗಂತೂ ಇದು । ಏನೆಂದೇ ಅರ್ಥವಾಗಲೊಲ್ಲದು ।
"ನೋಡಿ ಇದೇ ನಮ್ಮ ದ್ವಾರಕಾಮಾಯಿ ಇರುವದು" । ಎಂದು ಬಾಬಾ ನುಡಿದರು ॥ 47

ನಮ್ಮ ದ್ವಾರಕಾ ಮಾತೆ ಇವಳು । ಈ ಮಶೀದಿಯ ಅಂಕದಲಿ ಕುಳಿತುಕೊಳ್ಳಲು ।
ಮಕ್ಕಳಿಗೆ ನಿರ್ಭಯತೆ ನೀಡುವಳು । ಚಿಂತೆಯ ಸುದ್ದಿಯೇ ಇಲ್ಲಿಲ್ಲ ॥ 48

ಈ ಮಶೀದಿ ಮಾಯಿ ಬಲು ಕೃಪಾಳು । ಸಾಧು ಭಕ್ತರಿಗೆ ಇವಳೇ ತಾಯಿಯಾಗಿರುವಳು ।
ಯಾರಿಗೆ ಎಂಥ ಅಪಾಯವೂ ಒದಗಲು । ಅಲ್ಲಿಯೇ ರಕ್ಷಣೆ ಮಾಡುವಳು ॥ 49

ನೋಡಿದರೊಮ್ಮೆ ಇವಳಂಕದಲಿ ಕುಳಿತು । ತಿಳಿಯಿರಿ ಅವರ ಸಂಕಟ ಕಳೆಯಿತು ।
ಇವಳ ನೆರಳಲ್ಲಿ ಆಸರೆ ಪಡೆದರೆ ಕಿಂಚಿತ್ತು । ಸುಖಾಸನದಲಿ ಅವ ಮಲಗಿದಂತೆ ॥ 50

ಇದೇ ದ್ವಾರಕಾ, ದ್ವಾರಾವತಿ" ಇಷ್ಟು । ಹೇಳಿ ಬಾಬಾ ಅವಗೆ ವಿಭೂತಿಯನಿತ್ತು ।
ಶಿರದಲಿ ಅಭಯ ಹಸ್ತವನಿಟ್ಟು । ಮಿರೀಕರನಾಗ ಹೊರಟು ನಿಂತ ॥ 51

ಮತ್ತೆ ಬಾಬಾರಿಗೆನಿಸಿದ್ದು । ಪ್ರಶ್ನೆ ಕೇಳಬೇಕು ಅವನಿಗೆಂದು ।
ನಿನಗೆ ಗೊತ್ತೇ ಲಂಬೂಬಾಬಾನದು । ಮತ್ತು ಅವನ ವೈಚಿತ್ರ್ಯ ॥ 52

ಎಡಮೊಳಕೈಯನ್ನು ಬಲ ಅಂಗೈಯ್ಯಲ್ಲಿರಿಸಿ । ಅದರಿಂದ ಗುರುತು ಮಾಡಿ ತೋರಿಸಿ ।
ಆ ಎಡಗೈಯ ಮುಷ್ಟಿಯನ್ನು ಆಚೀಚೆ ಅಲುಗಿಸಿ । ನುಡಿದರು, ಹೀಗೆ ಭಯಂಕರನಿರುವನವ ॥ 53

ಆದರೂ ಅವನು ನಮಗೇನು ಮಾಡುವನು ನಾವಿರಲು । ನಮ್ಮ ದ್ವಾರಕಾಮಾಯಿಯ ಮಕ್ಕಳು ।
ಅವಳಗಾಧ ಕೃತಿಯನರಿಯಲು । ಮೌನದಲ ನೋಡುತ್ತಿರಬೇಕು ॥ 54

ದ್ವಾರಕಾಮಾಯಿ ಕಾಯುವಳೆಮ್ಮನು । ಆಗ ಆ ಲಂಬೂಬಾವಾ ಏನು ಮಾಡುವನು ।
ಉಳಿಸುವನ ಮುಂದೆ ಅಳಿಸುವನ ಗತಿ ಏನು । ಏನು ಎಷ್ಟೆಂದು ತಿಳಿಯುವದು ॥ 55

ಇದೇ ಕಾಲಕ್ಕೆ ಬಾಬಾರು ಇಂತು । ಬಿಟ್ಟಿ ಈ ಮಾತು ಏತಕೆ ಹೇಳಬೇಕಾಗಿತ್ತು ।
ಮಿರೀಕರರೊಡನಿದರ ಸಂಬಂಧವೆಲ್ಲಿ ಬಂತು । ಇದೇ ಜಿಜ್ಞಾಸೆ ಎಲ್ಲರಿಗೂ ॥ 56

ಬಾಬಾರ ಕೇಳಬೇಕೆಂದರೆ ಧೈರ್ಯವೆಲ್ಲಿ । ಹಾಗೇ ಶಿರವನಿಟ್ಟು ಚರಣಗಳಲಿ ।
ಚಿಥಳಿಗೆ ಹೋಗಲು ಹೊತ್ತಾಗವದೋ ಎಲ್ಲಿ । ಎಂದು ಮಿರೀಕರರು ನಡೆದರು ॥ 57

ಮಾಧವರಾಯರೂ ಜೊತೆಗಿದ್ದರು । ಇಬ್ಬರೂ ಮಂಟಪದ್ವಾರಕ್ಕೆ ಬಂದರು ।
"ಒಂದು ಕ್ಷಣ ಬಂದು ಹೋಗಿಲ್ಲಿ" ಎಂದು ಕರೆದರು । ಬಾಬಾ ಮಾಧವರಾಯನನು ತಿರುಗಿ ॥ 58

ಎಂದರು, "ನೀನೂ ಮಾಡಿಕೊಂಡು ಸಿದ್ಧತೆ । ಹೋಗು ಈಗ ಅವನ ಜೊತೆ ।
ಚಿಥಳಿಯಲಿಷ್ಟು ಅಡ್ಡಾಡಿ ಬರುವಿಯಂತೆ । ಬಹಳ ಮೋಜು ಎನಿಸೀತು" ॥ 59

ಕೂಡಲೇ ಶ್ಯಾಮಾ ಕೆಳಗೆ ಇಳಿದು । ಮಿರೀಕರರ ಹತ್ತಿರ ಬಂದು ।
ನಿಮ್ಮ ಟಾಂಗೆಯಲೇ ನನಗೂ ಇಂದು । ಚಿಥಳಿಗೆ ಬರಬೇಕಾಗಿದೆ ಎಂದ ॥ 60

ಸಿದ್ಧತೆ ಮಾಡಿಕೊಂಡು ಬರುವೆ ಮನೆಗೆ ಹೋಗಿ । ಒಂದೇ ಕ್ಷಣದಲಿ ಬರುವೆ ತಿರುಗಿ ।
ಬಾಬಾ ಎನ್ನುವರು ನಿಮ್ಮ ಜೊತೆಯಾಗಿ । ನಾನೂ ಚಿಥಳಿಗೆ ಹೋಗಬೇಕೆಂದು ॥ 61

ಮಿರೀಕರರೆಂದರು ಅವರಿಗೆ । ಇಷ್ಟು ದೂರ ಚಿಥಳಿಯವರೆಗೆ ।
ಬರುವ ಕಾರಣವಾದರೂ ಏನಿದೆ ನಿಮಗೆ । ಸುಮ್ಮನೆ ನಿಮಗೆ ತೊಂದರೆಯೇಕೆ ॥ 62

ಮಾಧವರಾಯರು ತಿರುಗಿ ಬಂದು । ಬಾಬಾರೆದುರು ಹೇಳಿದರು ಮಾತು ನಡೆದದ್ದು ।
ಬಾಬಾ ಎಂದರು "ಚೆನ್ನಾಗಿದೆ ಇದು । ನಮ್ಮದೇನು ಹೋಗುವದು ಅದರಿಂದ ॥ 63
ಮಂತ್ರ, ತೀರ್ಥ, ದ್ವಿಜ, ದೇವರು । ದೈವಜ್ಞ, ವೈದ್ಯ ಅಥವಾ ಗುರು ।
ಇದರಲಿ ಯಾವ ರೀತಿ ಭಾವವಿಟ್ಟಿರುವರು । ಅದರಂತೆ ಫಲವ ಪಡೆವರವರು ॥ 64

ನಾವು ನಿತ್ಯ ಒಳ್ಳೆಯದನ್ನೇ ಬಯಸುವದು । ಉಪದೇಶದ ಅರ್ಥವೂ ಸರಿಯಾಗೇ ಇರುವದು ।
ಯಾರ ಕರ್ಮದಲಿ ಹೇಗೆ ಇರುವದು । ಅದರಂತೆಯೇ ನಡೆಯುವದು ನಿಶ್ಚಿತವಾಗಿ" ॥65

ಅಷ್ಟರಲಿ ಎನಿಸಿತು ಮಿರೀಕರರಿಗೆ । ಮನ್ನಣೆ ಕೊಡಬೇಕು ಬಾಬಾರ ಮಾತಿಗೆ ।
ಗುರುತು ಮಾಡಿದರು ಮಾಧವರಾಯರಿಗೆ । ಹೊರಡಿರೆಂದರು ಚಿಥಳಿಗೆ ॥ 66

ಆಗ ಅವರೆಂದುರು ನಿಲ್ಲಿರಿ ಬರುವೆನು । ಬಾಬಾರ ಅನುಜ್ಞೆಯ ಮತ್ತೊಮ್ಮೆ ಪಡೆಯುವೆನು ।
ಆಗಲೆಂದ ಕೂಡಲೇ ತಿರುಗಿ ಬರುವೆನು । ಬಂದೇ ಬಿಟ್ಟೆ ಒಂದು ಕ್ಷಣದಲ್ಲಿ ॥ 67

ಹೊರಟಿದ್ದೆ ನಾ ನೀವೇ ತಿರುಗಿ ಕಳಿಸಿದ್ದು । ಬಾಬಾ ಎಂದರು ಆಯಿತು ಒಳ್ಳೆಯದು ।
ಅದರಿಂದ ನಮ್ಮದೇನು ಹೋಗುವದು । ಎಂದು ನನ್ನ ಸುಮ್ಮನಿರಿಸಿದರು ॥ 68

ಅದಕೆ ಇನ್ನೊಮ್ಮೆ ಕೇಳಿ ನೋಡುವೆ । ಆಗಲೆಂದ ಕೂಡಲೇ ಬಂದು ಬಿಡುವೆ ।
ಅವರು ಹೇಗೆನ್ನುವರೋ ಹಾಗೆ ಮಾಡುವೆ । ಅವರಾಜ್ಞೆಯ ದಾಸ ನಾನು ॥ 69

ಬಾಬಾರ ಹತ್ತಿರ ಹೋಗಿ ಅವರು । ಮಿರೀಕರರೆನಗೆ ಬರಲು ಹೇಳಿದರು ।
ಚಿಥಳಿಗೆ ತಮ್ಮೊಡನೆ ಕರೆದೊಯ್ಯುವರು । ತಮ್ಮ ಆಜ್ಞೆಯ ಕೇಳಿರುವರು ॥ 70

ಆಮೇಲೆ ಸಾಯಿ ನುಡಿದರು ಸೂಸಿ ಮುಗುಳ್ನಗು । "ಆಗಲಿ ಕರೆದೊಯ್ದರೆ ಜೊತೆಯಲಿ ಹೋಗು ।
ಮಶೀದಿ ಮಾಯಿ ಹೆಸರಿರುವಾಗ ಇವಳಿಗೂ । ತನ್ನ ಬಿರುದನು ಹೇಗೆ ಬಿಟ್ಟಾಳು ॥71

ತಾಯಿಯೆಂದರೆ ತಾಯಿಯೇ ಅವಳು ಮಮತೆಯವಳು । ಮಕ್ಕಳ ಮೇಲೆ ಅತೀ ಕನಿಕರ ಉಳ್ಳವಳು ।
ಆದರೆ ಮಕ್ಕಳೇ ಶ್ರದ್ಧಾವಿಹೀನರಾಗಲು । ಅವಳವರ ರಕ್ಷಿಸುವದು ಹೇಗೆ" ॥ 72

ಆಮೇಲೆ ನಮಿಸಿ ಸಾಯಿ ಚರಣಕೆ । ಮಾಧವರಾಯರು ಸಿದ್ಧರಾದರು ಹೊರಡುವದಕೆ ।
ಬಂದು ಮಿರೀಕರರಿದ್ದ ಸ್ಥಳಕೆ । ತಾಂಗೆಯಲಿ ಕುಳಿತುಕೊಂಡರು ॥ 73

ಅವರಿಬ್ಬರೂ ಚಿಥಳಿಗೆ ಹೋದರು । ದಾರಿಕಾಯ್ದು ಅಲ್ಲಿಯ ಅಧಿಕಾರದವರು ।
ಬರಬೇಕಾಗಿತ್ತು ಏಕೋ ಬರಲಿಲ್ಲೆಂದರು । ಸುಮ್ಮನೆ ಕುಳಿತುಬಿಟ್ಟರು ॥ 74

ಮಾರುತಿಯ ದೇವಾಲಯದಲ್ಲಿ । ಇಳಿದುಕೊಳ್ಳಲು ಸೌಕರ್ಯವಿತ್ತಲ್ಲಿ ।
ಆಮೇಲೆ ಇಬ್ಬರೂ ಆ ಸ್ಥಳದಲ್ಲಿ । ಹೋಗಿ ಉಳಿದುಕೊಂಡರು ॥ 75

ಒಂದು ಪ್ರಹರ ರಾತ್ರಿಯಾಯಿತು । ತಮ್ಮ ತಮ್ಮ ಹಾಸಿಗೆ ಹಾಸಿಯಾಯಿತು ।
ಒಬ್ಬರಿಗೊಬ್ಬರು ಆ ಮಾತು ಈ ಮಾತು । ಆಡುತ್ತ ದೀಪದ ಬೆಳಕಿನಲಿ ಕುಳಿತರು ॥ 76

ಅಲ್ಲಿಯೇ ಇದ್ದ ಒಂದು ವೃತ್ತಪತ್ರ । ಮಿರೀಕರರು ಕುಳಿತರು ಓದುತ್ತ ।
ಯಾವುದೋ ಸುದ್ದಿಯಲಿ ತೊಡಗಿತು ಚಿತ್ತ । ಆಗ ಅಲ್ಲೊಂದು ವಿಚಿತ್ರ ನಡೆಯಿತು ॥ 77

ಆ ಸಮಯದಲಿ ಸರ್ಪವೊಂದು । ಗೊತ್ತಿಲ್ಲ ಹೇಗೆ ಎಲ್ಲಿಂದ ಬಂದು ।
ಕುಳಿತಿತ್ತು ಸುರಳಿ ಸುತ್ತಿಕೊಂಡು । ಎಲ್ಲರ ಕಣ್ಣು ತಪ್ಪಿಸಿ ॥ 78

ಮಿರೀಕರರ ನಡುವಿಗೆ । ಇದ್ದ ಶೆಲ್ಲೆಯ ಶೆರಗಿಗೆ ।
ಆಸನವದು ಇತ್ತು ಮೆತ್ತಗೆ । ಭಯವಿಲ್ಲದೆ ಶಾಂತವಾಗಿ ಕುಳಿತಿತ್ತು ॥ 79

ಮುಂದೆ ಸರಿಯಲು ಮೆಲ್ಲ ಮೆಲ್ಲಗೆ । ಕಾಗದದ ಸುರುಸುರು ಸಪ್ಪಳವಾಗೆ ।
ಆ ಸಪ್ಪಳದಿಂದ ಯಾರು ಹೇಗೆ । ಸರ್ಪವಿದ್ದಿತೆಂದು ಶಂಕಿಸಿಯಾರು ॥ 80

ಇಂಥ ಭಯಂಕರ ಪ್ರಸಂಗವಿದ್ದರೂ । ಪತ್ರಿಕೆ ಓದುವುದರಲ್ಲೇ ಗುಂಗಾಗಿದ್ದರು ಮಿರೀಕರರು ।
ಅವರ ಜವಾನನ ಮನದಲ್ಲಿ ಆದರೂ । ಕಲ್ಪನೆ ಏನೋ ಬಂದಿತು ॥ 81

ಈ ಸಪ್ಪಳ ಬರುವದೆಲ್ಲಿಂದ । ಯಾಕೆ ಯಾವ ಕಾರಣದಿಂದ ।
ಎಂದು ದೀಪವ ಮೇಲೆತ್ತಿದ । ಲಂಬೂ ಮಹಾರಾಜರ ಕಂಡ ॥ 82

ಕಂಡೊಡನೆ ಅವ ಹೆದರಿದ । ಹಾವು ಹಾವು ಎಂದು ಮೆಲ್ಲಗೆ ನುಡಿದ ।
ಮಿರೀಕರರಿಗೆ ಹೆದರಿಕೆಯಿಂದ । ಸರ್ವಾಂಗ ಕಂಪಿಸತೊಡಗಿತು ॥ 83

ಶ್ಯಾಮರಾಯರೂ ವಿಸ್ಮಿತರಾದರು । ಎಂದರು ಬಾಬಾ ಇದನೇನು ಮಾಡಿದರು ।
ಇಲ್ಲದ ವಿಘ್ನವನೆಲ್ಲಿಂದ ತಂದರು । ಇನ್ನು ಇದ ಪರಿಹರಿಸಲೇಬೇಕು ॥ 84

ಆಮೇಲೆ ಇಂಥ ಪ್ರಸಂಗವ ಕಂಡು । ಸಿಕ್ಕಿತು ಯಾರ ಕೈಗೆ ಯಾವುದು ।
ಧಾವಿಸಿದರವುಗಳ ಕೈಯಲ್ಲಿ ಹಿಡಿದು । ಪದರವನಿಷ್ಟೂ ಆಗಗೊಡೆದೆ ॥ 85

ಆಗ ಆ ಸರ್ಪವು ನುಡುವಿನಿಂದ ಕೆಳಗೆ । ನೋಡಿದರು ಸರಿಯುವದ ಮೆಲ್ಲ ಮೆಲ್ಲಗೆ ।
ಸರ್ಪವೆಂಥದು ಪ್ರತ್ಯಕ್ಷ ಅನರ್ಥತೆಯೇ ಹೀಗೆ । ಇಳಿದು ಹೋಗುತಿದೆ ಎನಿಸಿತು ॥ 86

ನೋಡ ನೋಡುತ್ತ ಗ್ರಹಣ ಬಿಟ್ಟಿತು । ಮೊದಲೇ ಕೋಲುಗಳೆನೆಲ್ಲರೂ ಎತ್ತಿಯಾಗಿತ್ತು ।
ಧಡಧಡನೇ ಹಾವಿನ ಮೇಲೆ ಏಟು ಬಿತ್ತು । ತುಂಡು ತುಂಡಾಗಿ ಹೋಯಿತು ॥ 87

ಈ ರೀತಿ ಅರಿಷ್ಟ ಕಳೆಯಿತು । ನೋಡಿ ಮಿರ್ಲೀಕರರ ಕಂಠ ಗದ್ಗದಿತವಾಯಿತು ।
ಹೆಚ್ಚಾಗಿ ಪ್ರೀತಿ ಉಕ್ಕಿ ಬಂತು । ಸಾಯಿ ಸಮರ್ಥರ ಮೇಲೆ ಆಗ ॥ 88

ದುಃಖದ ಭರ ಇಳಿಯಿತು । ಕಣ್ಣಿನಲಿ ಪ್ರೇಮ ಹರಿಯತೊಡಗಿತು ।
ಎಂಥ ಅರಿಷ್ಟವಿಂದು ದೂರಾಯಿತು । ಬಾಬಾರಿಗೆ ಇದು ಹೇಗೆ ತಿಳಿಯಿತು ॥ 89

ಹೇಗೆ ಈ ಗಂಡಾಂತರ ದೂರಾಯಿತು । ಆಗಲೇ ಬಾಬಾ ಸೂಚನೆಯನಿತ್ತು ।
ಬೇಡೆಂದರೂ ಟಾಂಗೆಯಲಿ ಇಂತು । ಶಾಮನನು ಕಳಿಸಿದರು ಸಹಾಯಕೆ ॥ 90

ದಯೆ ಎಷ್ಟೊಂದು ತುಂಬಿದೆ ಅವರಲ್ಲಿ । ಎಂಥ ಅಂತರ್ದೃಷ್ಟಿ ಇರುವದದವರಲ್ಲಿ ।
ಮುಂಬರುವ ಸಂಕಟವ ತಿಳಿದು ಮೊದಲಲ್ಲಿ । ಎಷ್ಟೊಂದು ಸುಂದರ ವಾರ್ತೆಯನೇ ಹೇಳಿದರು ॥ 91

ದರ್ಶನದ ಮಹಾತ್ಮ್ಯವ ತೋರಿದರು । ಮಶೀದಿಯ ಮಹತ್ವವ ಬಿಂಬಿಸಿದರು ।
ನಿಜಪ್ರೇಮವ ನಿದರ್ಶನಕೆ ತಂದರು । ಸಹಜ ಲೀಲೆಯ ತೋರಿಸಿ ॥ 92

ಒಮ್ಮೆ ದೊಡ್ಡ ಜ್ಯೋತಿಷಿಯೊಬ್ಬ । ನಾನಾ ಡೇಂಗಳೆ ಹೆಸರಿನಿಂದ ।
ಶ್ರೀಮಂತ ಬುಟ್ಟಿಯವರ ಹತ್ತಿರ ಇದ್ದ । ಏನೆಂದನವರಿಗದ ಕೇಳಿ ॥ 93

ಈ ಹೊತ್ತಿನ ದಿನ ಬಹಳ ಅಶುಭವಿದ್ದು । ತಮಗೆ ಗಂಡಾಂತರವಿರುವದು ।
ಆದರೂ ಧೈರ್ಯಗೆಡಬಾರದು । ಬಹಳ ಎಚ್ಚರದಿಂದಿರಬೇಕು ॥ 94

ಡೇಂಗಳೆಯವರು ಹೀಗೆ ಹೇಳಲು । ಬಾಪೂ ಸಾಹೇಬರು ಅಸ್ವಸ್ಥರಾದರು ಚಿತ್ತದೊಳು ।
ತಿರುತಿರುಗಿ ಚಿಂತೆ ಎನಿಸುತಿರಲು । ದಿನವೇ ಕಳೆಯದಂತಾಯಿತು ॥ 95

ಆಮೇಲೆ ನಿತ್ಯದ ವೇಳೆಗೆ । ಭಕ್ತರು ಹೊರಟರು ಮಶೀದಿಗೆ ।
ಬಾಪೂ ಸಾಹೇಬ ನಾನಾ ಆದಿಯಾಗೆ । ಬಾಬಾರ ಹತ್ತಿರ ಹೋಗಿ ಕುಳಿತರು ॥ 96

ಕೂಡಲೇ ಬಾಬಾ ಬುಟ್ಟಿಗೆ ಕೇಳಿದರು । "ಇದೇನು ಈ ನಾನಾ ಏನನ್ನುವರು ।
ಏನು ಅವರು ನಿನ್ನನ್ನು ಹೊಡೆಯಬೇಕನ್ನುವರು । ಆ ಭೀತಿ ತಮಗೆಷ್ಟೂ ಇಲ್ಲ ॥ 97

ಹೇಗೆ ಹೊಡೆಯುವೆಯೋ ಹೊಡೆದು ನೋಡು । ಅವರಿಗೆ ಹೀಗೆ ಉತ್ತರಕೊಟ್ಟು ಬಿಡು" ।
ಇದಾದ ನಂತರ ನಡೆದದ್ದು । ಮುಂದಿನ ಚಮತ್ಕಾರವ ನೋಡಿರಿ ॥ 98

ಆ ದಿನ ಸಂಜೆಯ ಹೊತ್ತಿಗೆ । ಬಾಪೂಸಾಹೇಬರು ಶೌಚವಿಧಿಗೆ ।
ಶೌಚಕೂಪಕ್ಕೆ ಹೋದಾಗ್ಗೆ । ಸರ್ಪವೊಂದು ಬಂದಿತಲ್ಲಿ ॥ 99

ಆ ಭಯಂಕರ ವಿಘ್ನವ ನೋಡಿ । ಬಾಪೂ ಸಾಹೇಬರು ಬಂದರು ಹೊರಗೋಡಿ ।
ಅವರ ಆಳು ವಿಚಾರಮಾಡಿ । ಕಲ್ಲಿನಿಂದ ಹೊಡೆದು ಕೊಲಬೇಕೆಂದದ ॥ 100

ಆಳು ಲಹಾನು ಬಂದ ಕಲ್ಲನ್ನೆತ್ತಿಕೊಂಡು । ಬಾಪೂ ಸಾಹೇಬರು ಅವನನ್ನು ತಡೆದು ।
ಹೋಗು ಬಾ ಕೋಲು ತೆಗೆದುಕೊಂಡು । ಈ ಕೆಲಸದಲಿ ಅವಸರ ಸರಿಯಲ್ಲ ॥ 101

ಆಳು ಹೋದ ಕೋಲು ತರಲು । ಹಾವು ಗೋಡೆಯ ಮೇಲೇರಬೇಕೆನುತಿರಲು ।
ತೂಕ ತಪ್ಪಿ ಜಾರಿ ಬೀಳಲು । ಸರಿಯಾಗಿ ತೂತಿನಲೇ ಹೋಯಿತು ॥ 102

ಅಲ್ಲಿಂದ ಅದು ಓಡಿ ಹೋಯಿತು । ಹೊಡೆಯುವ ಕಾರಣವೇ ಇಲ್ಲದಾಯಿತು ।
ನೆನಪಾಯಿತಾಗ ಬಾಬಾರ ಮಾತು । ಇಬ್ಬರದೂ ಸಂಕಟ ನಿವಾರಣೆಯಾಯಿತು ॥ 103

ಸಾಯಿ ಸಮಾಗಮದ ಈ ಸಂಭ್ರಮವನು । ಕಣ್ಣಿಂದ ನೋಡಿದ ಭಾಗ್ಯವಂತನು ।
ಅವನಿಂದ ಮರೆಯಲು ಅದನು । ಎಂದೆಂದಿಗೂ ಆಗಲಾರದು ॥ 104

ಎಂಥೆಂಥ ಪ್ರತ್ಯಂತರಗಳ । ತೋರಿ ಸೆಳೆದರು ಭಕ್ತರಗಳು ।
ವರ್ಣನೆ ಮುಗಿಯಲು ಸಾಧ್ಯವಿಲ್ಲ । ಕಾಗದವೇ ಮುಗಿದು ಹೋದೀತು ॥ 105

ಹೀಗೆ ಇನ್ನೊಂದು ಸಮಯದಲ್ಲಿ । ಎರಡು ಪ್ರಹರ ರಾತ್ರಿಯಲ್ಲಿ ।
ನಡೆಯಿತಿದು ಪ್ರತ್ಯಕ್ಷ ಚಾವಡಿಯಲ್ಲಿ । ಬಾಬಾ ಅವರ ಎದುರಿಗೆ ॥ 106

ಕೋಪರಗಾವ ತಾಲೂಕಿನಲಿ ಕೋರಾಳೆ ಎಂಬುದು । ಹೊಲಮನೆಗಳಿದ್ದ ಊರು ಅವನದು ।
ಹೆಸರವನಿಗೆ ಅಮೀರಶಕ್ಕರನೆಂದು । ಸಾಯಿ ಪದದಲಿ ಭಕ್ತಿಯವನಿಗೆ ॥ 107

ಕಟುಕರವನವನು ಉದ್ಯೋಗದಲಿ ದಳ್ಳಾಳಿ । ವಾಂದ್ರೆಯಲ್ಲವನ ಸುದ್ದಿ ಎಲ್ಲೆಲ್ಲಿ ।
ಬೇನೆಯಿಂದ ಬಹಳ ಬಳಲಿ । ಬಹಳ ಬಲಹೀನನಾದನು ॥ 108

ಸಂಕಟ ಬಂದಾಗ ದೇವರ ನೆನಪಾಯಿತು । ಆಗ ಧಂದೆಯ ಉಸಾಬರಿಯನು ಬಿಟ್ಟು ।
ಕೊಡುಕೊಳ್ಳುವ ವ್ಯವಹಾರವನು ಮುಗಿಸಿಕೊಟ್ಟು । ಶಿರಡಿಗೆ ಓಟಕಿತ್ತಿದನು ॥ 109

ಕುಂತಿ ಪಂಚ ಪಾಂಡವರ ತಾಯಿ ಇರಲು । ಅಜ್ಞಾತ ಮತ್ತು ವನವಾಸದೊಳು ।
ಅನಂತ ಅಪಾಯಗಳನೆದುರಿಸಿ ಕಷ್ಟ ಬಟ್ಟಳು । ಆದರೂ ದೇವರಲಿ ಅಪಾಯಗಳನೇ ಕೇಳಿಕೊಂಡಳು ॥110

ಎಂದಳು ದೇವಾ ನಾ ಬೇಡುವೆ ನಿನಗೆ । ಸೌಖ್ಯವನು ಕೊಡು ಅದನು ಬಯಸುವ ಇತರರಿಗೆ ।
ನಿರಂತರ ದುಃಖ ಪರಂಪರೆಯನೇ ಕೊಡು ಎನಗೆ । ಅದರಿಂದ ನಿನ್ನ ನಾಮವು ಮರೆಯದಿರಲಿ ॥ 111

ಇದನ್ನೇ ನಾ ನಿನ್ನಲಿ ಬೇಡುವದು । ಕೊಡುದ್ದರೆ ನನಗೆ ಅದನೇ ಕೊಡುವದು ।
ಆದೀತಾಗ ನಿನ್ನ ನಾಮದ್ದು । ಅಖಂಡ ಪಠಣ ಎನ್ನ ಕಂಠಕೆ ॥ 112

ಹಗಲಿರುಳು ಶ್ರೋತ್ರ ಮತ್ತು ವಕ್ತಾರ । ಇದನೇ ಬೇಡುವ ಸಾಯಿಯ ಹತ್ತಿರ ।
ಮರೆಯದಿರಲೆಂದೂ ನಿನ್ನ ಹೆಸರ । ನಿನ್ನಡಿಯಲೆಮಗೆ ಸ್ಥಳ ಕೊಡು ॥ 113

ಅಮೀರನು ಬಾಬಾರಿಗೆ ವಂದಿಸಿ । ವಿಧಿಯುಕ್ತ ಬಾಬಾರ ಹಸ್ತ ಚುಂಬಿಸಿ ।
ವ್ಯಾಧಿಯ ಬಗ್ಗೆ ಸವಿಸ್ತರ ನಿವೇದಿಸಿ । ದುಃಖ ವಿಮೋಚನೆಯ ಪ್ರಾರ್ಥಿಸಿದ ॥ 114

ವಾತವಿಕಾರವಾದದ್ದಕ್ಕೆ । ಕೇಳಿದ ಪ್ರತಿಕಾರವನದಕ್ಕೆ ।
ಬಾಬಾ ಪ್ರತ್ಯುತ್ತರವಿತ್ತರದಕೆ । ಚಾವಡಿಯಲ್ಲೇ ಉಳಿಯಬೇಕು ನೀನೆಂದು ॥ 115

ಮಶೀದಿಯಿಂದ ತಪ್ಪದೇ । ರಾತ್ರಿ ಬಾಬಾ ಚಾವಡಿಗೆ ಹೋಗುವದೇ ।
ಒಂದು ದಿನ ಬಿಟ್ಟು ದಿನ ಮಧ್ಯೆ । ಅಲ್ಲಿ ಅಮೀರನ ವಸತಿಯಾಯಿತು ॥ 116

ಅಮೀರನಿಗೆ ಸಂಧಿವಾತದ ತೊಂದರೆ ಬಹಳಾಗಿತ್ತು । ಎಲ್ಲಾದರೂ ಊರಲ್ಲಿ ಸುಖವಾಗಿರಬಹುದಾಗಿತ್ತು ।
ಕೋರಾಳೆಗೇ ಹೋದರೂ ನಡೆಯುತ್ತಿತ್ತು । ಅಲ್ಲಿ ಅವರಿಗೆ ಹಿತವಾಗುತ್ತಿತ್ತು ॥ 117

ಚಾವಡಿ ಬಹಳ ಹಳೆಯದಿತ್ತು । ಮೇಲೆ ಕೆಳಗೆಲ್ಲ ಜೀರ್ಣವಾಗಿತ್ತು ।
ಹಲ್ಲಿ ಓತೀಕಾಟ ಚೇಳುಗಳ ಬೀಡಾಗಿತ್ತು । ಅವೆಲ್ಲ ಸ್ವೇಚ್ಛೆಯಲಿ ಓಡಾಡುತಿದ್ದವಲ್ಲಿ ॥ 118

ಅಲ್ಲಿಯೇ ಇರುವರು ಕುಷ್ಟಿಗಳು । ಎಂಜಲು ತಿನ್ನುತಿರುವವು ನಾಯಿಗಳು ।
ಅಮೀರನಿಗೆ ಕಷ್ಟ ಬಲು । ಆದರೆ ಬಾಬಾರೆದುರು ಏನೂ ನಡೆಯದು ॥ 119

ಹಿಂದಿನ ಭಾಗದಲಿ ಕಸ ತುಂಬಿತ್ತು । ಸಾವಿರ ತೂತುಗಳು ಮೊಳಕಾಲಿನಷ್ಟು ।
ದುಃಸ್ಥಿತಿ ನಾಯಿಗಿಂತ ಕಡೆಯಾಯಿತು । ಅದೊಂದು ಜನ್ಮದ ಯಾತ್ರೆಯೇ ನಡೆದಂತೆ ॥ 120

ಮೇಲಿಂದ ಮಳೆ, ಕೆಳಗೆ ತೇವ । ತಗ್ಗು ದಿನ್ನಿಯಾದ ಸಮವಿಲ್ಲದ ನೆಲವು ।
ಮೇಲೆ ಚಳಿಗಾಳಿಗಳ ಸೆಳವು । ಅಮೀರನ ಮನಕೆ ಇದೇ ಚಿಂತೆ ॥ 121

ಶರೀರದ ಸಂದುಗಳೆಲ್ಲ ಹಿಡಿದರೆ । ಮಳೆಗಾಳಿಗಳಿರುವ ಸ್ಥಳ ಬೇರೆ ।
ನೆಲದ ತೇವ ಎಷ್ಟೆಂದರೆ । ಇದಕೆಲ್ಲ ಮದ್ದು ಬಾಬಾರ ವಚನ ಮಾತ್ರ ॥ 122

ಬಾಬಾ ಹೇಳಿದ್ದರವನಿಗೆ ಗಟ್ಟಿ ಮಾತಿನಲಿ । ಗಾಳಿ, ಮಳೆ ತೇವ ಏನೇ ಇರಲಿ ।
ನೆಲ ತಗ್ಗದಿನ್ನೆಗಳಿಂದ ಅಸಮವಾಗಿರಲಿ । ಅದರ ವಿಚಾರ ಮಾಡಬಾರದು ॥ 123

ಆ ಸ್ಥಾನವಿದ್ದರೂ ವಿಕಲ್ಪಾಸ್ಪದ । ಸಾಯಿ ಸಮಾಗಮವೇ ಮಹಾಪ್ರಸಾದ ।
ಅವರ ವಚನವೇ ಇಲ್ಲಿ ಔಷಧ । ಅದನೇ ಸುಖವೆಂದುಕೊಂಡು ಇರುತಿದ್ದ ॥ 124

ಅಲ್ಲಿಯೇ ಇರಬೇಕು ಒಂಭತ್ತು ತಿಂಗಳವರೆಗೆ । ಎಂದು ಅಪ್ಪಣೆಯಾಗಿತ್ತು ಅಮೀರನಿಗೆ ।
ಅಪ್ಪಣೆ ಇರಲಿಲ್ಲ ಹೋಗಲು ಮಶೀದಿಗೆ । ದರ್ಶನಕ್ಕೂ ಬಂಧನ ಮಾಡಿದ್ದರು ॥ 125

ಚಾವಡಿ ಏರಲು ಅಲ್ಲೇ ಎದುರಿಗೆ । ನಡುಮಧ್ಯದಲಿ ಹಾಸಿ ಹಾಸಿಗೆ ।
ಆ ಚಾವಡಿಯಲ್ಲಿ ಒಂಭತ್ತು ತಿಂಗಳವರೆಗೆ । ಅಮೀರ ಶಕ್ಕರನಿದ್ದನು ॥ 126

ಸಂಧಿವಾತವು ಮೈಲಿ ಬೇರೂರಿತ್ತು । ಹೊರ ಲಕ್ಷಣವೆಲ್ಲ ವಿಪರೀತವಾಗಿತ್ತು ।
ಆದರೂ ಅಂತರದಲಿ ವಿಶ್ವಾಸವಿತ್ತು । ಅದರಿಂದೆಲ್ಲ ಸರಿಯಾಯಿತು ॥ 127

ಆದರೂ ಚಾವಡಿಯಂಥ ಸ್ಥಳದಲ್ಲಿ । ಇರಲು ಹೇಳಿದ್ದರು ಅವನಿಗಲ್ಲಿ ।
ಅದರಿಂದ ಬಾಬಾರ ದರ್ಶನವಾಗುವಲ್ಲಿ । ಪ್ರಯಾಸವಾಗುತಿರಲಿಲ್ಲ ॥ 128

ಅದೂ ಸಂಜೆ ಮುಂಜಾನೆ ದಿನಾಲೂ । ದಿನಬಿಟ್ಟು ಒಂದೊಂದು ಹೊತ್ತಿನಲ್ಲೂ ।
ಸಿಗುತಿತ್ತು ಕಣ್ತುಂಬ ನೋಡಲು । ಚಾವಡಿಯಲಿ ಪೂಜೆಯ ಸಂಭ್ರಮವ ॥ 129

ಭಿಕ್ಷೆಗೆ ಹೋಗುವಾಗ ದಿನಾಲು ಬೆಳಿಗ್ಗೆ । ಚಾವಡಿಯ ಮುಂದಿನದೇ ದಾರಿ ಬಾಬಾರಿಗೆ ।
ಅದರಿಂದ ಸಹಜ ದರ್ಶನ ಬರುಹೋಗುವಾಗ್ಗೆ । ಸ್ಥಳ ಬಿಟ್ಟು ಕದಲದೆ ಅಮೀರನಿಗೆ ॥ 130

ಹಾಗೆಯೇ ದಿನಾಲು ಆಗಲು ಸಂಜೆ । ಬಾಬಾ ಬಂದು ಚಾವಡಿಯ ಮುಂದೆ ।
ತರ್ಜನಿ ಮಸ್ತಕಗಳ ತೂಗುವದರಿಂದೇ । ದಿಗ್ವಂದನದಲಿ ತೊಡಗುವರು ॥ 131

ಅಲ್ಲಿಂದ ಮತ್ತೆ ತಿರುಗಿ ಹೋಗುತ । ಸಮಾಧಿಗೃಹದ ಮೂಲೆಯ ಪರ್ಯಂತ ।
ಅಲ್ಲಿಂದ ತಿರುಗಿ ಮಶೀದಿಯತ್ತ । ಭಕ್ತರೊಡಗೂಡಿ ಹೋಗುವರು ॥ 132

ದಿನ ಬಿಟ್ಟು ದಿನ ಚಾವಡಿಯಲ್ಲಿ । ಹೆಸರಿಗೆಂಬಂತೆ ತೆರೆಯಲ್ಲಿ ।
ಹಲಿಗೆಯ ಬಾಗಿಲು ಇಬ್ಬರ ಮಧ್ಯದಲ್ಲಿ । ಇಬ್ಬರಿಗೂ ಮಾತಿನಲಿ ಒಲವು ॥ 133

ಅಲ್ಲಿಯೇ ನಡೆಯುವವು ಪೂಜೆ ಆರತಿಗಳು । ಮುಗಿಸಿ ಹೋಗುವರು ಮನೆಗೆ ಭಕ್ತಜನಗಳು ।
ಆಮೇಲೆ ನಡೆವವು ಮಾತು ಪರಸ್ಪರರೊಳು । ಸ್ವಸ್ಥಚಿತ್ತರಾಗಿ ಆಗ ॥ 134

ಹೊರನೋಟಕೆ ಬಂದೀ ವಾಸವದು । ಒಳಗೆ ಸಾಯಿ ದೃಢ ಸಹವಾಸ ಲಭಿಸುವದು ।
ಭಾಗ್ಯವಿಲ್ಲದೆ ಹೇಗೆಇದು ಸಾಧ್ಯವಾಗುವದು । ಇತರರಿಗೆ ಅಲಭ್ಯವಿದರುಪಭೋಗ ॥ 135

ಆದರೂ ಅಮೀರನಿಗೆ ಬೇಸರ ಬಂತು । ಒಂದೇ ಸ್ಥಳದಲಿ ಇರುವದೆಷ್ಟು । ಅದರಿಂದದು
ಬಂದೀವಾಸವೇ ಎನಿಸಿತು । ಎಲ್ಲಾದರೂ ಊರಿಗೆ ಹೋಗಬೇಕೆಂದುಕೊಂಡ ॥ 136

ಇಷ್ಟ ಅವನಿಗೆ ಸ್ವಾತಂತ್ರ್ಯದ್ದು । ಪರತಂತ್ರತೆ ಹೇಗೆ ಅವನಿಗೆ ಹಿಡಿಸುವದು ।
ಅವಗೆ ಆ ಬಂದೀಖಾನೆ ಸಾಕಾಗಿದ್ದು । ಒಂದು ಕಲ್ಪನೆ ಮೂಡಿತಮೀರನಿಗೆ । 137

ಬಾಬಾರ ಅನುಜ್ಞೆ ಪಡೆಯದೆ ಹೊರಟ । ತನ್ನ ನಿಯಮಿತ ಸ್ಥಳವನು ಬಿಟ್ಟ ।
ಹೋದವ ಕೋಪರಗಾಂವಕ್ಕೆನುತ । ಧರ್ಮಶಾಲೆಯಲಿಳಕೊಂಡ ॥ 138

ನೋಡಿರಿ ಚಮತ್ಕಾರವನಲ್ಲಿಯದು । ಫಕೀರನೊಬ್ಬ ಪ್ರಾಣ ಬಿಡುತಿದ್ದು ।
ತೃಷೆಯಿಂದ ಬಳಲುತಿದ್ದು । ಒಂದು ಗುಟುಕು ನೀರು ಕುಡಿಸಿರೆಂದ ॥ 139

ಅಮೀರನಿಗೆ ದಯೆ ಎನಿಸಲು । ಹೋದನವನಿಗೆ ನೀರು ಕುಡಿಸಲು ।
ಅಲ್ಲಿಯೇ ನೀರು ಕುಡಿದ ಕ್ಷಣದೊಳು । ಆ ಫಕೀರನ ಪ್ರಾಣ ಹೋಯಿತು ॥ 140

ಅವನ ದೇಹಾವಸಾನವಾಯಿತು । ಯಾರೂ ಇಲ್ಲ ಸುತ್ತಮುತ್ತ ।
ಅದರಲ್ಲಿ ಮತ್ತೆ ರಾತ್ರಿಯ ಹೊತ್ತು । ಗಡಬಡಿಸಿತು ಮನ ಅಮೀರನದು ॥ 141

ಜ್ಯೂರಿ ತುಂಬುವದು ಬೆಳಿಗ್ಗೆ । ಆಗ ಈ ಆಕಸ್ಮಿಕ ಮರಣದ ಬಗ್ಗೆ ।
ಸರಕಾರದವರು ಶೋಧಿಸಿದಾಗ್ಯೆ । ಹಿಡಿದೊಯ್ಯಬಹುದು ಅದಕಾಗಿ ॥ 142

ನಡೆದ ಘಟನೆ ನಿಜವಿದ್ದರೂ । ಕೂಡಲೇ ಅದನಾರು ನಿರ್ಧರಿಸುವರು ।
ಸಾಕ್ಷಿ ಪುರಾವೆಗಳ ನಂತರ ನಿರ್ಣಯ ಕೊಡುವರು । ನ್ಯಾಯ ನಡೆಸುವ ರೀತಿಯೇ ಅದು ॥ 143

ನಾನೇ ಇವನಿಗೆ ನೀರು ಕುಡಿಸಿದ್ದು । ಅಕಸ್ಮಾತ್ತಾಗಿ ಫಕೀರ ಸತ್ತಿದ್ದು ।
ಸತ್ಯವಿದ್ದರೂ ಇದು ನಾ ಹೇಳಿದ್ದು । ಅನಾಯಾಸ ಅವರ ಕೈಗೆ ಸಿಕ್ಕು ಬಿಡುವೆ ॥ 144

ನನ್ನದೇ ಸಂಬಂಧ ಬರುವದು ಮೊದಲು । ನನ್ನನ್ನೇ ಈ ಕಾರಣಕೆ ಹಿಡಿಯಲು ।
ಆಮೇಲೆ ಮರಣದ ನಿಜ ಕಾರಣ ತಿಳಿಯಲು । ನಾ ನಿರಪರಾಧಿಯೆಂದು ತಿಳಿದೀತು ॥ 145

ಆದರದು ನಿರ್ಧಾರವಾಗುವವರೆಗೆ । ಆ ದುಃಸಹ ಕಷ್ಟವ ಸಹಿಸುವದು ಹೇಗೆ ।
ಹಾಗೇ ಓಡಿದ ತಿರುಗಿ ಬಂದ ದಾರಿಗೆ । ಮನದಲಿದು ಬಂದ ಕೂಡಲೇ ॥ 146

ಅದರಿಂದ ಅಮೀರ ಆ ರಾತ್ರಿಯಲೇ । ಹೊರಟ ಯಾರಿಗೂ ಕಾಣದಲೇ ।
ಮುಂದೆ ಓಡುತಿದ್ದ ಹಿಂದೆ ನೋಡುತಲೇ । ದಾರಿಯಲಿ ಅಸ್ವಸ್ಥಚಿತ್ತನಾಗಿ ॥ 147

ಹೇಗೆ ಮುಟ್ಟುವೆನು ಚಾವಡಿಯವರೆಗೆ । ನಿಶ್ಚಿಂತವಿಲ್ಲ ಮನ ಅದುವರೆಗೆ ।
ಶಂಕಿತ ವೃತ್ತಿಯಲಿ ಅಮೀರನು ಹೀಗೆ । ಶಿರಡಿಯತ್ತ ನಡೆದನು ॥ 148

ಎಂದ ಬಾಬಾ ನಾನಿದನೇನು ಮಾಡಿದೆ । ಎಂಥ ಕರ್ಮದಲಿ ಸಿಕ್ಕು ಬಿದ್ದೆ ।
ನನ್ನ ಕರ್ಮ ನನಗೇ ಫಲಿಸಿದೆ । ಇದು ಸಂಪೂರ್ಣ ತಿಳಿದಿದೆ ನನಗೆ ॥ 149

ಸುಖ ಬಯಸಿ ಚಾವಡಿ ಬಿಟ್ಟು ಬಂದೆ । ಅದಕಾಗಿ ನನ್ನ ಸೊಕ್ಕು ಮುರಿಸಿದೆ ।
ನನ್ನನಿನ್ನು ಶಿರಡಿಗೆ ಕರೆದೊಯ್ದು । ಈ ದುಃಖದಿಂದ ಮೇಲೆತ್ತು ॥ 150

ಧರ್ಮಶಾಲೆಯಿಂದ ಆ ರಾತ್ರಿಯ ಹೊತ್ತು । ಆ ಹೆಣವನು ಅಲ್ಲೇ ಬಿಟ್ಟು ।
ತಡಮಾಡದೆ ಅಮೀರ ಹೊರಟು । ನಡೆದ ಶಿರಡಿಯ ದಾರಿಯಲಿ ॥ 151.

'ಬಾಬಾ ಬಾಬಾ' ಎಂದು ನುಡಿಯುತ । ಕರುಣೆಯಿಂದವರ ಕ್ಷಮೆಯಾಚಿಸುತ ।
ಬಂದನಾಗ ಚಾವಡಿಯತ್ತ । ಮನಕೆ ಸ್ವಸ್ಥತೆ ಲಭಿಸಿತು ॥ 152

ಈ ರೀತಿ ಒಂದು ಪಾಠ ಕಲಿತು । ಮನದಲಿ ಪಶ್ಚಾತ್ತಾಪ ಬಟ್ಟು ।
ಕೆಟ್ಟ ಕುಮಾರ್ಗಗಳನು ಬಿಟ್ಟು । ಅಮೀರ ವರ್ತಿಸತೊಡಗಿದ ॥ 153

ಇರಲಿ, ವಿಶ್ವಾಸದಿಂದವಗೆ ಗುಣವಾಯಿತು । ಸಂಧಿವಾತವೆಲ್ಲ ಹೋಯಿತು ।
ಮುಂದೆ ಹೇಗೆ ಪ್ರಸಂಗ ಬಂದಿತು । ಎಂಬುದನ್ನು ಕೇಳಿರಿ ॥ 154

ಚಾವಡಿ ಇದ್ದದ್ದು ಮೂರೇ ಅಂಕಣ । ಆಗ್ನೇಯ ಮೂಲೆಯಲಿ ಬಾಬಾರ ಸ್ಥಾನ ।
ನಾಲ್ಕೂ ಕಡೆಗೆ ಹಲಿಗೆಗಳ ವೇಷ್ಟನ । ಅಲ್ಲಿ ಬಾಬಾ ಮಲಗುತಿದ್ದರು ॥ 155

ರಾತ್ರಿಯೆಲ್ಲ ದೀಪಗಳು ಉರಿಯುತಿದ್ದು । ಯಾವಾಗಲೂ ಬೆಳಕಿನಲ್ಲೇ ಮಲಗುವದು ।
ಬಾಬಾ ಬೈರಾಗಿಗಳು ಹೊರಗೆ ಕೂಡುವದು । ಉಳಿದೆಲ್ಲೆಡೆಗೆ ಕತ್ತಲಿರುತ್ತಿತ್ತು ॥ 156

ಅಮೀರನೂ ಅವರಲ್ಲಿ ಒಬ್ಬಾತ । ಇತರ ಜನರು ಸುತ್ತಮುತ್ತ ।
ತಾವೂ ಅಲ್ಲಿಯೇ ಉರುಳುತ್ತ । ಅಂಥವರೂ ಕೆಲವರಿರುತ್ತಿದ್ದರು ॥ 157

ಅಲ್ಲಿಯೇ ಬಾಬಾರ ಹಿಂಭಾಗದಲ್ಲಿ । ಅಂಥಿಂಥ ಸಾಮಾನು ಇಡುವ ಸ್ಥಳದಲ್ಲಿ ।
ಭಕ್ತ ಅಬ್ದುಲನು ಸೇವೆಯಲ್ಲಿ । ತತ್ಪರನಾಗಿ ಇರುತ್ತಿದ್ದನಾ ಪರಮ ವಿರಾಗಿ ॥ 158

ಮಧ್ಯರಾತ್ರಿಯಲಿ ಇರುತಿರಲು ಹೀಗೆ । ಬಾಬಾ ಕೂಗತೊಡಗಿದರು ಅಬ್ದುಲ್ಲಾನಿಗೆ ।
ನೋಡೋ ನನ್ನ ಹಾಸಿಗೆಯ ಮಗ್ಗುಲಿಗೆ । ಭೂತವೊಂದು ಕುಣಿಯುತಿದೆ ॥ 156

ಕೇಳಿ ಒಂದೇ ಸಮನೇ ಅವನ ಕರೆಯವದು । ಅಬ್ದುಲ ಬಂದ ದೀಪ ಹಿಡಿದು ।
ಬಾಬಾ ಕೂಗಿ ಅವನಿಗೆಂದುದು । ಇದೀಗೆ ಇಲ್ಲಿಯೇ ಇತ್ತಲ್ಲ ॥ 160

ಅಬ್ದುಲನೆಂದ ನೋಡಿದೆನಲ್ಲ । ಇಲ್ಲಿ ಏನೂ ಕಾಣಿಸಲಿಲ್ಲ ।
ಬಾಬಾ ಎಂದರು ತೆರೆದು ಕಣ್ಣುಗಳ । ಸರಿಯಾಗಿ ಎಲ್ಲೆಡೆ ನೋಡಯ್ಯ ॥ 161

ಅಬ್ದುಲ ಮತ್ತೆ ಮತ್ತೆ ನೋಡಿದ । ಬಾಬಾ ನೆಲ ಬಡಿಯುತಿದ್ದರು ದಂಡಕಾಷ್ಠದಿಂದ ।
ಎಚ್ಚರಾಗಿ ಹೊರಗೆ ಮಲಗಿದ । ಜನರೆಲ್ಲ ಇದ ನೋಡುತಿದ್ದರು ॥ 162

ಅಮೀರ ಶಕ್ಕರ ಎಚ್ಚರಾದ । ಇಂದು ಇದೇನು ಗಲಾಟೆ ಎಂದ ।
ಈ ಅಪರಾತ್ರಿಯಲಿ ಪ್ರಹಾರ ಕಾಷ್ಠದಿಂದ । ಮೇಲಿಂದ ಮೇಲೇಕೆ ಮಾಡುತಿರುವರು ॥ 163

ನೋಡಿ ಬಾಬಾರ ಈ ಲೀಲೆ । ಅಮೀರ ಮನದಲರಿತ ಕೂಡಲೇ ।
ಹಾವೆಲ್ಲೋ ಬಂದಿದೆ ಆದರಿಂದಲೇ । ಅದ ತಿಳಿದು ಬಾಬಾ ಹೀಗೆ ಮಾಡುತಿಹರು ॥ 164

ಅವನಿಗೆ ಬಾಬಾರ ಅನುಭವ ಸಾಕಷ್ಟಿತ್ತು । ಅಲ್ಲದೇ ಬಾಬಾರ ಸ್ವಭಾವವೂ ಗೊತ್ತಿತ್ತು ।
ಮತ್ತು ಅವರ ಮಾತಿನ ಗತ್ತು । ಆದರಿಂದ ಅವನಿದ ತಿಳಿದುಕೊಂಡು ॥ 165

ಅರಿಷ್ಟವು ಭಕ್ತರ ತಲೆದೆಸೆಗೆ । ಇದ್ದಾಗ ಬಾಬಾ ಅನ್ನುವರು ತಮ್ಮ ಮಗ್ಗುಲಿಗೆ ।
ಈ ಭಾಷೆ ತಿಳಿದಿದೆ ಅಮೀರನಿಗೆ । ಅದರಿಂದವ ಮನದಿ ಗುರುತಿಸಿದ ॥ 166

ಅಷ್ಟರಲಿ ಅವನದೇ ತಲೆದೆಸೆಯತ್ತ । ಏನೋ ಅಲುಗಾಡುವಂತೆ ಕಾಣುತ ।
'ಅಬ್ದುಲ್ಲಾ ದೀಪ ತಾ ಇತ್ತ' । ಎಂದು ಅಮೀರ ಕೂಗಿದ ॥ 167
ದೀಪ ತರಲು ಹೊರಗೆ । ದೊಡ್ಡ ಸುರುಳಿ ಬಿತ್ತು ಕಣ್ಣಿಗೆ ।
ಹಾವು ಈ ದೀಪದ ಬೆಳಕಿಗೆ । ತಲೆ ಮೇಲೆ ಕೆಳಗೆ ಮಾಡುತಿತ್ತು ॥ 168

ಅಲ್ಲಿಯೇ ಅದರ ಶಾಂತಿ ಮಾಡಿದರು । ಬಾಬಾರ ಮಹದುಪಕಾರವನು ಮನ್ನಿಸಿದರು ।
ಇದೆಂಥ ವಿಲಕ್ಷಣ ರೀತಿ ಎಂದರು । ಹೇಗೆ ಎಚ್ಚರಗೊಳಿಸುವರು ॥ 169

ಎಲ್ಲಿಯ ದೀಪ ಎಲ್ಲಿಯ ಬೆಳಕು । ಹೊತ್ತುಗೊತ್ತುಗಳ ಎಚ್ಚರ ಕೊಡಬೇಕು ।
ನಿಜಭಕ್ತರ ಸಂಕಟ ದೂರಾಗಬೇಕು । ಇದೇ ಅವರ ಯುಕ್ತಿಯಿತ್ತು ॥ 170

ಹೀಗೆ ಹಾವಿನ ಅನೇಕ ಕಥೆಗಳು । ಬಾಬಾರ ಚರಿತ್ರೆಯಲಿ ಬಂದಾವು ವರ್ಣಿಸಲು ।
ಗ್ರಂಥ ಅತಿ ವಿಸ್ತಾರವಾಗದಿರಲು । ಸಂಕ್ಷಿಪ್ತತೆಯ ಅವಲಂಬಿಸಿದೆ ॥ 171

'ಹಾವು ಚೇಳುಗಳು ನಾರಾಯಣ' । ಸಂತ ತುಕಾರಾಮರದೀ ವಚನ ।
'ದೂರದಿಂದಲೇ ವಂದಿಸಬೇಕು ಅವುಗಳನ್' । ಈ ವಚನವೂ ಅವರದೇ ॥ 172

ಅವರೇ ಅನ್ನುವರು 'ಅಧರ್ಮ'ವದಕೆ । ಕಷ್ಟಕೊಡುವದೇ ಕಚ್ಚುವದೇ ಕೆಲಸವದಕೆ ।
ಅದರ ವಿಷಯದ ವರ್ತನಕ್ರಮಕೆ । ಇಂಥದೇ ನಿರ್ಬಂಧವೆಂಬದು ತಿಳಿಯದು ॥ 173

ಯಾರದು ಹೇಗೆ ಸ್ವಭಾವಧರ್ಮ । ಅದಕನುಸರಿಸಿ ಅವರ ಕರ್ಮ ।
ಈಶ್ವರೀ ಪ್ರೇರಣೆಯ ಸಮ । ಇದೇ ಇಲ್ಲಿಯ ಮರ್ಮವು ॥ 174

ಸಮಾಧಾನವು ಈ ಶಂಕೆಗೆ । ಒಂದೇ ಇರುವದು ಬಾಬಾರ ಬಳಿಗೆ ।
ಜೀವ ಮಾತ್ರಗಳೆಲ್ಲ ಸರಿಸಮವಿರುವಾಗ್ಯೆ । ಅಹಿಂಸೆಯೇ ಪ್ರಮಾಣ ಸರ್ವಾರ್ಥದಲಿ ॥ 175

ಚೇಳೇನು ಹಾವೇನು । ಈಶ್ವರನೇ ಎಲ್ಲರಲಿರುವವನು ।
ಅವನಿಚ್ಛೆ ಇರದೆ ಅಪಾಯವನೇನು । ಅವು ತಾನೇ ಮಾಡಬಲ್ಲವು ॥ 176

ಈ ಸಂಪೂರ್ಣ ವಿಶ್ವವೇ ಈಶ್ವರಾಧೀನ । ಸ್ವತಂತ್ರವಿಲ್ಲಿಲ್ಲ ಏನೇನ ।
ಇದು ಬಾಬಾರ ಅನುಭವಜ್ಞಾನ । ನಮ್ಮನು ದುರಭಿಮಾನ ಬಿಡಲಾರದು ॥ 177

ಕೆರೆಯಲಿ ಬಿದ್ದ ಚೇಳು ಒದ್ದಾಡುವದು । ನೀರಿನ ತಳಕೆ ಅದು ಹೋಗುವದು ।
ಆನಂದದಿ ಚಪ್ಪಾಳೆ ತಟ್ಟುವದು ಇನ್ನೊಂದು । ನೀನೂ ಇತರರ ಹೀಗೆ ಕಾಡಿಸುವಿ ॥ 178

ಮತ್ತೊಬ್ಬ ಕೇಳಿ ಚಪ್ಪಾಳೆ ತಟ್ಟುವದು । ಕೆರೆಯ ಅಂಚಿಗೆ ಓಡಿ ಬಂದು ।
ನೋಡಿ ಚೇಳು ಮುಳುಗುತಿರುವದು । ಕರುಣೆ ತುಂಬಿ ಕಳವಳಿಸುವ ॥ 179

ಆಮೇಲೆ ಹೋಗಿ ಅದರ ಬಳಿಗೆ । ಎರಡು ಬೆರಳಿನಲ್ಹಿಡಿದ ಮೆಲ್ಲಗೆ ।
ಅದರ ಹುಟ್ಟುಗುಣವೇ ಹಾಗೆ । ಬೆರಳಿಗೆ ಕಡಿದೇ ಬಿಟ್ಟಿತು ॥ 180

ಅಲ್ಲಿ ನಡೆಯುವದೇನು ನಮ್ಮ ಜ್ಞಾನ । ನಾವಿರುವಾಗ ಸಂಪೂರ್ಣ ಪರಾಧೀನ ।
ಬುದ್ಧಿದಾತನವ ನಾರಾಯಣ । ಅವ ಮಾಡಿದಂತೆ ನಡೆಯುವದು ॥ 181

ಅನೇಕರ ಅನೇಕ ಅನುಭವ । ನಾನೂ ಹೇಳುವೆ ನಿಜಾನುಭವ ।
ಸಾಯಿ ವಚನದಿ ವಿಶ್ವಾಸ ಗೌರವ । ವೈಭವ ಕೇವಲ ನಿಷ್ಠೆಯದು ॥ 182

ನಿತ್ಯದಂತೆ ಕಾಕಾಸಾಹೇಬ ದೀಕ್ಷಿತರು । ನಾಥ ಭಾಗವತ ಓದುತಿದ್ದರು ।
ಅದರಂತೆಯೇ ಪ್ರತಿ ರಾತ್ರಿ ಅವರು । ಭಾವಾರ್ಥ ರಾಮಾಯಣವನೋದುವರು ॥ 183

ದೇವರ ಮೇಲೆ ಹೂವು ತಪ್ಪೀತು । ಒಂದು ವೇಳೆ ಸ್ನಾನವೂ ತಪ್ಪೀತು ।
ಬೇರಾವ ನೇಮವಾದರೂ ತಪ್ಪೀತು । ಓದುವ ಸಮಯಮಾತ್ರ ಹಿಂದು ಮುಂದಾಗದು ॥ 184

ಏಕನಾಥರ ಇವೆರಡೂ ಗ್ರಂಥಗಳು । ಪರಮಾರ್ಥದ ಸಾರಸರ್ವಸವವೇ ಆಗಿರಲು ।
ಸಾಯಿ ಸಮರ್ಥರ ಅನುಗ್ರಹದ್ದೇ ನಿಜದೊಳು । ದ್ಯೋತಕವಾಗಿತ್ತು ದೀಕ್ಷಿತರಿಗೆ ॥ 185

ಆತ್ಮಜ್ಞಾನ ವೈರಾಗ್ಯ ನೀತಿ । ಇವುಗಳ ಅಖಂಡ ತ್ರಿಗುಣಜ್ಯೋತಿ ।
ಪ್ರಕಾಶಿಸುವದದವರ ದಿವ್ಯ ದೀಪ್ತಿ । ಈ ಅದ್ವಿತೀಯ ಸವಿ ಗ್ರಂಥದಲಿ ॥ 186

ಇದರೊಳಗಿನ ಬೋಧಾಮೃತದ ಬಟ್ಟಲು । ಭಾಗ್ಯವಶದಿಂದಾರ ತುಟಿಯತಾಗಲು ।
ಒಂದೇ ಸಲ ಅವರ ತ್ರಿತಾಪಗಳು । ಶಾಂತವಾಗಿ ಮೋಕ್ಷವ ಪಡೆವನು ॥ 187

ಸಾಯಿ ಕೃಪೆಯಿಂದ ದೀಕ್ಷಿತರಿಗೆ । ಕೇಳಲು ಕೇಳುಗನೊಬ್ಬ ಬೇಕಿರುವಾಗ್ಯೆ ।
ಭಾಗವತ ಶ್ರವಣದ ಯೋಗ ಒದಗೆ । ಉಪಕಾರವಾಯಿತು ನನಗದರಿಂದ ॥ 188

ಹಗಲು ರಾತ್ರಿ ಹೋಗತೊಡಗಿ । ಆ ಪವಿತ್ರ ಕಥೆಗಳ ಕೇಳುವದಕ್ಕಾಗಿ ।
ಭಾಗ್ಯವಶ ಶ್ರವಣ ಸತ್ರವೇ ತೆರೆಯಲಾಗಿ । ಶ್ರೋತೃಗಳು ಪಾವನವಾದವು ॥ 189

ಹೀಗಿರಲು ಒಂದು ರಾತ್ರಿಯ ಹೊತ್ತು । ಪರಮ ಪವಿತ್ರ ಕಥೆ ನಡೆದಿತ್ತು ।
ವಿಚಿತ್ರ ಅಡ್ಡಕಥೆಯೊಂದು ಬಂತು । ಶ್ರೋತೃಗಳು ಆ ಸಂಗತಿ ಕೇಳಿ ॥ 190

ಏನು ಮಾಡುವದು ಒಂದನ್ನು ವರ್ಣಿಸುತ । ಮತ್ತೊಂದನ್ನೇ ನೆನೆಯುವದು ಚಿತ್ತ ।
ಅದರ ಶ್ರವಣಾರ್ಹತೆಯ ತಿಳಿಯುತ । ಅದನೇಕೆ ಉಪೇಕ್ಷಿಸಲಿ ನಾನು ॥ 191

ರಾಮಾಯಣದ ಸುರಸ ಕಥೆ ನಡೆಯಿತು । ಹಣಮಂತನಿಗೆ ಮಾತೆಯ ಗುರುತು ಸಿಕ್ಕಿತು ।
ಆದರೂ ಒರೆ ನೋಡಲು ಸ್ವಾಮಿಯ ಸಾಮರ್ಥ್ಯ ಕುರಿತು । ಕೊನೆಗೆ ಅನರ್ಥಕೆ ಸಿಕ್ಕಿ ತೊಳಲಿದ ॥192

ರಾಮಬಾಣದ ಬರೀ ಗಾಳಿ ಸೋಕಲು । ಹನುಮಂತ ಆಕಾಶದಲಿ ಗರಗರ ತಿರುಗಹತ್ತಲು ।
ಪ್ರಾಣ ಕಸಿವಿಸಿಗೊಂಡು ಗಾಬರಿಯಾಗಲು । ಅವನ ಪಿತನಾ ಸಮಯಕೆ ಬಂದನಲ್ಲಿ ॥193

ಅವನ ಹಿತವಚನವ ತಿಳಿದು । ಹನುಮಂತ ರಾಮನಿಗೆ ಶರಣು ಬಂದು ।
ಈ ಭಾಗದ ಶ್ರವಣ ನಡೆಯುತಿದ್ದು । ಆಗೊಂದು ವೈಚಿತ್ರ್ಯ ನಡೆಯಿತು ॥ 194

ಕಥಾ ಶ್ರವಣದಲಿ ಚಿತ್ತಸಲ್ಲಗ್ನ । ಶ್ರವಣಾನಂದದಲಿ ಎಲ್ಲರೂ ಮಗ್ನ ।
ಆಗೊಂದು ವೃಶ್ಚಿಕ ಮೂರ್ತಿವೆತ್ತಂತೆ ವಿಘ್ನ । ಎಲ್ಲಿಂದ ಬಂತೋ ತಿಳಿಯದು ॥ 195

ತಿಳಿಯದದರ ಆಟದ ಪರಿ । ಕುಳಿತು ಬಿಟ್ಟಿತು ಹೆಗಲನೇರಿ ।
ಸರಿಯಾಗಿ ಅಲ್ಲಿ ತಳಊರಿ । ಕಥೆಯ ರುಚಿ ಸವಿಯುತಿರುವಂತೆ ॥ 196

ನನಗಿರಲಿಲ್ಲ ಗಮನ ಇತ್ತ । ಆದರೂ ಯಾರದು ಹರಿಕಥೆಯಲ್ಲಿ ಚಿತ್ತ ।
ಅಂಥವರ ಸಂರಕ್ಷಕ ಹರಿಯೇ ಇರುತ । ಬಾಬಾ ಇದ ತೋರಿಸಿಕೊಟ್ಟರು ॥ 197

ಸಹಜ ಹೋಗಲು ದೃಷ್ಟಿಯತ್ತ । ಭಯಂಕರ ಚೇಳನು ಅಲ್ಲಿ ಕಾಣುತ ।
ಉಪರಣೆಯ ಮೇಲೆ ಕುಳಿತಿದೆ ಸ್ವಸ್ಥ । ನನ್ನ ಬಲ ಹೆಗಲಮೇಲೆ ॥ 198

ಒಂದಿನಿತೂ ಇಲ್ಲ ಚಲನ ವಲನ । ಸ್ವಸ್ಥಚಿತ್ತದಿಂದ ಇತ್ತು ಗಮನ ।
ಮಾಡುತಿರುವಂತೆ ಕಥಾಶ್ರವಣ । ನಿಜಾಸನದಲಿ ಕುಳಿತುಕೊಂಡು ॥ 199

ದೇಹ ಸ್ವಭಾವನನುಸರಿಸಿ ಏನಾದರೂ । ತಿಳಿಯದೇ ಕೊಂಡಿಯನು ಅಲುಗಾಡಿಸಿದ್ದರೂ ।
ಹೇಗೆ ಸಾಧ್ಯವಿತ್ತು ಕುಳಿತುಕೊಳ್ಳುವುದಾದರೂ । ಅನಿವಾರ ನೋವುಂಟು ಮಾಡಬಹುದಿತ್ತು ॥ 200

ರಾಮ ಕಥೆಗೇರಿತ್ತು ರಂಗ । ಶ್ರೋತೃವಕ್ತಾರರಿಬ್ಬರೂ ಪುರಾಣದಲಿ ದಂಗ ।
ಎಲ್ಲರದೂ ಆಗುತಿತ್ತಾಗ ರಸಭಂಗ । ಇಂಥ ದುರ್ಧರ ಈ ಕುಸಂಗ ॥ 201

ರಾಮಕಥೆಯ ಮಹಿಮೆಯೇ ಇದು । ಅಲ್ಲಿ ವಿಘ್ನಗಳ ಹೆಚ್ಚಳ ಏನೂ ನಡೆಯದು ।
ಅದಕೇ ಉಪರಮವಾಗಬೇಕಾಗುವದು । ತನ್ನ ಧರ್ಮವನ್ನು ಮರೆತು ॥ 202

ರಾಮ ಕೃಪೆಯಿಂದ ವಿಚಾರ ಬಂದು । ಮೆಲ್ಲಗೆ ಈ ಉಪಾಧಿಯ ದೂರ ಚೆಲ್ಲುವದು ।
ಆಚಂಚಲ ಬುದ್ಧಿಯ ನಂಬಬಾರದು । ಪರಮಾವಧಿಯಾಗುವವರೆಗೆ ॥ 203

ಉಪರಣೆ ಇತ್ತು ಹೊತ್ತಿದ್ದು । ಅದರ ಎರಡೂ ದಂಡೆಗಳನ್ನು ಹಿಡಿದು ।
ಚೇಳನ್ನು ಗಟ್ಟಿಯಾಗಿ ಅದರಲ್ಲಿ ಸುತ್ತಿಕೊಂಡು । ತೋಟದಲಿ ಅದನು ಬಿಟ್ಟು ಬಂದೆ ॥204

ಚೇಳಿನ ಜಾತಿ ಭಯಂಕರ ಮೊದಲೇ । ಹೆದರಿಕೆ ಯಾವಾಗ ಅದು ಹೋದೀತು ತನ್ನ ಜಾತಿಯ ಮೇಲೆ ।
ಬಾಬಾರ ದೃಢ ಆಜ್ಞೆ ಇತ್ತದರಿಂದಲೇ । ಕೊಲ್ಲಲೂ ಮನಬಾರದು ॥ 205

ಇಲ್ಲಿ ಶ್ರೋತೃಗಳು ಶಂಕಿಸಬಹುದು । ದುಷ್ಟ ಚೇಳಿನ ಜಾತಿ ಅದನೇಕೆ ಕೊಲಬಾರದು ।
ಅದು ಕಡಿದರೆ ಸುಖಯಾರಿಗಿರುವದು । ಅದನೇಕೆ ಹೊಡೆಯಬಾರದು ತಿಳಿಯದು ॥ 206

ಹಾವು ಚೇಳುಗಳಂಥ ವಿಷದ ಪ್ರಾಣಿಗಳನು । ಉಪೇಕ್ಷಿಸಬಾರದು ಯಾರೂ ಅವುಗಳನು ।
ಬಾಬಾರಾದರೂ ಅವುಗಳನೇನು । ಬಿಟ್ಟು ಕೊಡಲು ಹೇಳುವರೇ ॥ 207

ಶ್ರೋತೃಗಳ ಶಂಕೆ ನಿಜವಿರುವದು । ಅದೇ ಸ್ಥಿತಿ ಇರುವದು ನನ್ನದೂ ।
ಹಿಂದೆ ಇಂಥ ಪ್ರಸಂಗ ಬಂದಾಗ ನಡೆದುದು । ಬಾಬಾರ ರೀತಿಯನು ಕೇಳಿ ॥ 208

ಇದಕಿಂತ ಕಠಿಣವಿತ್ತು ಪ್ರಸಂಗ । ಶಿರಡಿಯಲಿ ಕಾಕಾರ ವಾಡೆಯೊಳಗ ।
ಒಮ್ಮೆ ಅಟ್ಟದ ಮೇಲೆ ಕಿಡಕಿಯ ಒಳಗೆ । ಕೆಟ್ಟ ಹಾವೊಂದು ಕಾಣಿಸಿತು ॥ 209

ಚೌಕಟ್ಟಿನ ಕೆಳಗಿನ ತೂತಿನೊಳಗಿಂದ । ಹಾವು ಒಳಗೆ ಪ್ರವೇಶ ಮಾಡಿದ ।
ಕಣ್ಣು ಕುಕ್ಕಿದವು ಅಲ್ಲಿಯ ದೀಪದ ಬೆಳಕಿನಿಂದ । ಸುರುಳಿ ಸುತ್ತಿಕೊಂಡಲ್ಲೇ ಕುಳಿತಿತು ॥ 210

ಕಣ್ಣು ಕುಕ್ಕಿದರೂ ಪ್ರಕಾಶವ ಕಂಡು । ಮನುಷ್ಯರ ಓಡಾಟದಿಂದ ಹೆದರಿಕೊಂಡು ।
ಗದ್ದಲವಾಗಲು ಮುದುಡಿಕೊಂಡು । ಸ್ವಲ್ಪ ಹೊತ್ತು ಸುಮ್ಮನೇ ಕುಳಿತಿತ್ತು ॥ 211

ಹಿಂದೂ ಸರಿಯದು ಮುಂದೂ ಬರದಾಯಿತು । ತಲೆಯ ಮೇಲೆ ಕೆಳಗೆ ತೂಗಿಸುತಿತ್ತು ।
ಆಗ ಗಡಿಬಿಡಿ ಸುರು ಆಯಿತು । ಹೇಗಿದನು ಕೊಲ್ಲುವದೆಂದು ॥ 212

ಯಾರು ಕೋಲು ಯಾರು ಕಟ್ಟಿಗೆ । ಹಿಡಿದುಕೊಂಡು ಬಂದರಾಗ್ಯೆ ।
ಆದರೆ ಸ್ಥಳವು ಇಕ್ಕಟ್ಟಿರುವಾಗ್ಯೆ । ಬಹಳ ವಿಚಾರದಲಿ ಬಿದ್ದರು ॥ 213

ಸಹಜ ಒಂದು ಏಟು ಹಾಕಿದಾಗ್ಯೆ । ಇಳಿದು ಬರುತ್ತಿತ್ತು ಗೋಡೆಯಿಂದ ಕೆಳಗೆ ।
ಮೊದಲು ಬರುತಿತ್ತು ನನ್ನ ಹಾಸಿಗೆಯ ಬಳಿಗೆ । ಮಹತ್ಸಂಕಟದಲ್ಲಿನ್ನ ಸಿಲುಕಿಸುತ್ತಿತ್ತು ॥ 214

ಸರಿಯಾಗಿ ಪೆಟ್ಟು ಬಿದ್ದರೆ ಒಳಿತು । ತಪ್ಪಿದರೆ ಅಪಾಯ ಅದು ಇಡುವದು ಸಿಟ್ಟು ।
ದೀಪ ಹಿಡಿದು ಹುಡುಕಲಾಯಿತು । ಅಷ್ಟರಲಿ ಅದಕೆ ಸ್ಥಳ ಸಿಕ್ಕು ಓಡಿತು ॥ 215

ಅದರ ಸಮಯವಿನ್ನೂ ತುಂಬಿ ಬಂದಿದ್ದಿಲ್ಲ । ನಮ್ಮೆಲ್ಲ ದೈವವೂ ಇತ್ತು ಸಬಲ ।
ಇದ್ದಿತ್ತಾದರೂ ಅದು ಕೆಟ್ಟ ಕಾಲ । ಬಾಬಾ ರಕ್ಷಿಸಿದರೆಮ್ಮನು ॥ 216

ಬಂದ ಮಾರ್ಗವನ್ನೇ ಕುರಿತು । ಅದು ಸರಸರನೇ ಹೊರಟು ಹೋಯಿತು ।
ತಾನು ನಿರ್ಭಯನಾಗಿ ಇತರರನೂ ನಿರ್ಭಯವಾಗಿಸಿತು । ಪರಸ್ಪರರಿಗೆ ಸುಖವೆನಿಸಿತು ॥ 217

ಆಮೇಲೆ ಮುಕ್ತಾರಾಮನೆದ್ದ । ಅಂತೂ ಪಾಪ ಬದುಕಿಕೊಂಡಿತು ಎಂದ ।
ಓಡಿಹೋಗದಿದ್ದಲ್ಲಿ ಆ ಛಿದ್ರದಿಂದ । ಜೀವಕ್ಕೆ ಎರವಾಗುತ್ತಿದ್ದಿತು ॥ 218

ಮುಕ್ತಾರಾಮನ ಆ ದಯಾಮಯತೆಯ ನೋಡಿ । ಕೆಡುಕೆನಿಸಿತೆನ್ನ ಮನದಿ ।
ಈ ದಯಾದೃಷ್ಟಿ ಪ್ರಯೋಜನ ಯಾವ ತೆರದಿ । ಹೀಗಾದರೆ ಸೃಷ್ಟಿ ನಡೆದೀತೆ ॥ 219

ಮುಕ್ತಾರಾಮ ಬರುತಿದ್ದನೆಂದಾದರೂ । ಆಗ ಮುಂಜಾವು ಸಂಜೆ ಕೂಡುತ್ತಿದ್ದೆವೆಲ್ಲರೂ ।
ನನ್ನ ಹಾಸಿಗೆ ಸುರುಳಿ ಕಿಡಕಿಯ ಹತ್ತಿರವಿತ್ತಾದರೂ । ನನಗವನ ಮಾತು ಹಿಡಿಸಲಿಲ್ಲ ॥220

ಆವನು ಪೂರ್ವ ಪಕ್ಷ ಮಂಡಿಸಿದ । ನಾ ಪಕ್ಷ ಮಂಡಿಸಿದೆ ಉತ್ತರದೆ ।
ಜೋರಾಗಿ ನಡೆಯಿತು ವಾದ ವಿವಾದ । ನಿರ್ಣಯ ಹಾಗೇ ಉಳಿಯಿತು ॥ 221

ಒಬ್ಬನೆಂದ ಸರ್ಪವ ಕೊಲಬೇಕು । ಒಂದು ಕ್ಷಣವೂ ಉಪೇಕ್ಷಿಸದಿರಬೇಕು ।
ಇನ್ನೊಬ್ಬನೆಂದ ಆ ನಿಷ್ಠುರತೆ ಏಕೆ ಬೇಕು । ಆ ನಿರಪರಾಧಿ ಜೀವದ ಜೊತೆ ॥ 222

ಒಬ್ಬ ಮಾಡುವ ಮುಕ್ತಾರಾಮನ ಧಿಕ್ಕಾರ । ಇನ್ನೊಬ್ಬ ನನಗೀಯುತಿದ್ದ ಪುರಸ್ಕಾರ ।
ವಾದ ಬೆಳೆಯಿತು ಪರಸ್ಪರ । ಅದಕೆ ಅಂತಪಾರವಿಲ್ಲದಾಯಿತು ॥ 223

ಮುಕ್ತಾರಾಮ ಕೆಳಗಿಳಿದು ಹೋದನತ್ತ । ನಾನೂ ಬದಲಿ ಮಾಡಿದೆ ನನ್ನ ಸ್ಥಳನಿತ್ತ ।
ಆ ಛಿತ್ರಕೊಂದು ಕಲ್ಲು ಬಡಿದು ಮುಚ್ಚಿ ಬಿಡುತ । ಮಲಗಲು ಹಾಸಿಗೆ ಬಿಡಿಸಿದೆ ॥ 224

ಬರತೊಡಗಿತು ಕಣ್ಣಿಗೆ ಮಂಪರು । ಎಲ್ಲರೂ ಮಲಗಲು ಹೋದರು ।
ಆಕಳಿಸ ಹತ್ತಿದೆ ನಿದ್ದೆ ಬಂದು । ವಾದ ತನ್ನಷ್ಟಕ್ಕೇ ಮುಗಿಯಿತು ॥ 225

ರಾತ್ರಿ ಕಳೆದು ಬೆಳಗಾಯಿತು । ಶೌಚ ಮುಖಮಾರ್ಜನ ಮುಗಿಯಿತು ।
ಬಾಬಾ ಲೇಂಡಿಯಿಂದ ತಿರುಗಿ ಬಂದಾಯಿತು । ಜನರು ಮಶೀದಿಯಲಿ ಕೂಡಿದರು ॥ 226

ನಿತ್ಯದಂತೆ ಪ್ರಾಥಃಕಾಲದಲಿ । ಮಶೀದಿಗೆ ಬಂದೆ ನಿತ್ಯದ ಸಮಯದಲಿ ।
ಮುಕ್ತಾರಾಮಾದಿ ಎಲ್ಲರೂ ಅಲ್ಲಿ । ತಮ್ಮ ತಮ್ಮ ಸ್ಥಳಗಳಲಿ ಕುಳಿತರು ॥ 227

ಕೈಮೇಲೆ ತಂಬಾಕು ತಿಕ್ಕುವರೊಬ್ಬರು । ಬಾಬಾರ ಚಿಲುಮೆಯ ತುಂಬುತಿದ್ದರಿನ್ನೊಬ್ಬರು ।
ಬಾಬಾರ ಕೈಕಾಲು ಒತ್ತುತ್ತಿದ್ದರು । ಸೇವೆ ಈ ರೀತಿಯಲಿ ನಡೆದಿತ್ತು ॥ 228

ಬಾಬಾ ಎಲ್ಲರ ವೃತ್ತಿಯ ಬಲ್ಲರು । ಆಮೇಲೆ ಮೆಲ್ಲಗೆ ಪ್ರಶ್ನೆ ಕೇಳುವರು ।
ವಾದವಿವಾದ ಏತಕ್ಕಾದರೂ । ನಡೆಯಿತು ವಾಡೆಯಲಿ ನಿನ್ನೆ ರಾತ್ರಿ ॥ 229

ಆಮೇಲೆ ನಾನು ನಡೆದದ್ದು ಹೇಗೆ । ಬಾಬಾರೆದುರು ಹೇಳಿದನೆಲ್ಲ ಹಾಗೇ ।
ಹೊಡೆಯಬೇಕೋ ಬೇಡವೋ ಹೇಗೆ । ಹಾವನು ಈ ಪರಿಸ್ಥಿತಿಯಲಿ ॥ 230

ಬಾಬಾರದಂತೂ ಒಂದೇ ಮಾತು । ಹಾವು ಚೇಳಾದರೇನಾಯಿತು ।
ಈಶ್ವರನೇ ವಾಸಿಸುವ ಎಲ್ಲದರಲಿಂತು । ಅದಕೆಲ್ಲದರಲಿ ಪ್ರೇಮವಿರಬೇಕು ॥ 231

ಈಶ್ವರನೇ ಸೂತ್ರಧಾರಿ ಜಗಕೆಲ್ಲ । ಅವನಾಜ್ಞೆಯಿಂದಲೇ ನಡೆಯುವದೆಲ್ಲ ।
ಹಾವು ಚೇಳು ಏನೇ ಇರಲೊಲ್ಲ । ಆಜ್ಞೆಯ ಬಿಟ್ಟು ನಡೆಯವು ॥ 232

ಅದಕೇ ಪ್ರಾಣಿ ಮಾತ್ರಗಳಲಿ । ಪ್ರೇಮ ಮತ್ತು ದಯೆಯೇ ಇರಲಿ ।
ಸಾಹಸ ಬಿಟ್ಟು ತಾಳ್ಮೆ ಇರಲಿ । ಶ್ರೀಹರಿಯು ರಕ್ಷಿಸುವನೆಲ್ಲರನೂ ॥ 233

ಇಂಥ ಅದೆಷ್ಟೋ ಕಥೆಗಳು । ಸಾಯಿಬಾಬಾರ ಬಗ್ಗೆ ಇರಲು ।
ಅವುಗಳ ಸಾರವನು ಮಾತ್ರ ಗ್ರಹಿಸಲು । ಶ್ರೋತೃಗಳು ತಿಳಿದುಕೊಳ್ಳಬೇಕು ॥ 234

ಮುಂದಿನಧ್ಯಾಯ ಇದಕಿಂತ ಅಂದ । ತುಂಬಿದ ಭಕ್ತಿ ಶ್ರದ್ಧೆಗಳಿಂದ ।
ಭಕ್ತ ದೀಕ್ಷಿತರ ಕಠಿಣ ಪ್ರಸಂಗದ । ಕುರಿ ಕೊಲ್ಲಲು ಹೊರಡುವ ॥ 235

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಅಪಮೃತ್ಯು ನಿವಾರಣಂನಾಮ
ದ್ವಾವಿಂಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

301.1





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

### ಅಧ್ಯಾಯ ಇಪ್ಪತ್ತಮೂರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಈ ಜೀವವು ನಿಜದಲಿ ತ್ರಿಗುಣಾತೀತ । ಆದರೂ ಆಗಿ ಮಾಯಾವಿಮೋಹಿತ ।
ಸಚ್ಚಿದಾನಂದ ಸ್ವರೂಪವ ಮರೆಯುತ । ತಾ ದೇಹವೆಂದೇ ತಿಳಿಯುವದು ॥ 1

ಆಮೇಲೆ ಆ ದೇಹದ ಅಭಿಮಾನದಿಂದ । ನಾ ಕರ್ತಾ ನಾ ಭೋಕ್ತಾ ಎಂದು ತಿಳಕೊಂಡ ।
ತ್ರಸ್ತವಾಗುವದು ಅನರ್ಥ ಪರಂಪರೆಗಳಿಂದ । ಬಿಡುಗಡೆಯ ಮಾರ್ಗವನದರಿಂದ ಕಾಣದು ॥2

ಸಪ್ರೇಮ ಭಕ್ತಿಯೋಗವು ಗುರುಪದದಲ್ಲಿ । ಇದೊಂದೇ ಅನರ್ಥೋಪಶಮನ ಮಾರ್ಗವಿಲ್ಲಿ
।ಭಕ್ತರ ಮುಳುಗಿಸುವ ನಿಜರಂಗದಲ್ಲಿ । ಮಹಾನಾಟಕಿಯವ ಸಾಯಿ ಶ್ರೀರಂಗ ॥ 3

ನಾವೆನ್ನುವೆವು ಅವತಾರಿಗಳವರು । ಏಕೆಂದರೆ ಅವರಿರುವರು ಸರ್ವಲಕ್ಷಣವುಳ್ಳವರು ।
'ನಾ ಅಲ್ಲಾನ ಸೇವೆಯಲ್ಲಿ ದಾಸ' ಎನ್ನುವರು । ತಾವೇ ಈ ರೀತಿ ನುಡಿಯುವರು ॥ 4

ತಾವು ಅವತಾರಿಗಳಾಗಿದ್ದರೂ । ಪೂರ್ಣ ಲೋಕಾಚಾರದಂತೆ ನಡೆಯುವರು ।
ಆಚಾರ ಯೋಗ್ಯ ಪ್ರಚಾರ ನಡೆಸುವರು । ಶುದ್ಧ ವರ್ಣಾಶ್ರಮಗಳದು ॥ 5

ಎಂದೂ ಯಾರನ್ನೂ ಸರಿಗಟ್ಟುವದು । ಮಾಡರು ಮಾಡಗೊಡರು ಯಾವ ರೀತಿಯಿಂದೂ ।
ಚರಾಚರಗಳಲಿ ವಿಶ್ವಂಭರನನೇ ಕಾಣುವದು । ಅಂಥವರಿಗೆ ಲಘುತನವೇ ಒಪ್ಪುವದು ॥ 6

ಯಾರದೂ ಅವಗಣನೆಯಿಲ್ಲ । ಯಾರನ್ನೂ ತುಚ್ಛರೆನ್ನುವುದಿಲ್ಲ ।
ಚೈತನ್ಯ ಘನ ನಾರಾಯಣನೇ ಭೂತ ಮಾತ್ರಗಳೆಲ್ಲ । ಎಂಬ ದೃಷ್ಟಿಯಲಿ ನೋಡುವರು ॥ 7

ಎಂದೂ ಅಂದುಕೊಳ್ಳರು 'ಅನಲಹಕ' (ನಾನೇ ದೇವರು) । ನಾನೊಬ್ಬ ಪರಮೇಶ್ವರನ ಪಾಯಿಕ
।ಬಡವ ನಾ 'ಯಾದೇಹಕ' (ದೇವರ ಸ್ಮರಿಸುವವ) । 'ಅಲ್ಲಾ ಮಾಲೀಕ' ಅವರ ನಿತ್ಯ ಜಪ ॥ 8

ಯಾವ ಸಂತನು ಯಾವ ಜಾತಿಯವ । ಹೇಗೆ ನಡೆಯುವನವನು ಏನು ಉಣ್ಣುವ ।
ಇವೆಲ್ಲದರಿಂದ ಅಲಿಪ್ತರಿರುವ । ಅವರ ಸ್ಥಿತಿ ಅದರಿಂದ ತಿಳಿಯದು ॥ 9

ಜಡಜೀವಗಳ ಉದ್ಧಾರವಾಗಲು । ಪರೋಪಕಾರಿ ಸಂತರ ಅವತಾರಗಳು ।
ಆಗಾಗ ಆಗುವವು ಈ ಭೂಮಿಯೊಳು । ಇದೇ ಸರ್ವೇಶ್ವರ ಕೃಪೆ ॥ 10

ಸಂಚಿತ ಪುಣ್ಯವಿದ್ದಲ್ಲಿ । ಹುಟ್ಟುವದು ಪ್ರೀತಿ ಅಂತರಂಗದಲಿ ।
ಸಂತರ ಕಥೆಗಳ ಕೇಳಿ । ಸುಖ ಸಂತುಷ್ಟಿ ಪಡೆಯಲು ॥ 11

ಒಮ್ಮೆ ಯೋಗಾಭ್ಯಾಸಿಯು ಬಂದು । ಚಾಂದೋರಕರರನು ಜೊತೆ ಮಾಡಿಕೊಂಡು ।
ಬಾಬಾರ ದರ್ಶನ ಪಡೆಯಲೆಂದು । ಮಶೀದಿಯಲಿ ಬಂದಿಳಿದನು ॥ 12

ಪಾತಂಜಲಾದಿ ಯೋಗಶಾಸ್ತ್ರ । ಅಭ್ಯಸಿಸಿದ್ದನವ ಸಮಗ್ರ ।
ಅನುಭವ ನೋಡಲು ವಿಚಿತ್ರ ಕ್ಷಣ । ಮಾತ್ರ ಸಮಾಧಿ ಸಾಧಿಸದು ॥ 13

ಮಹಾರಾಜ ಸಾಯಿ ಯೋಗೀಶ್ವರರದು । ಯಾವಾಗ ನನ್ನ ಮೇಲೆ ಕೃಪೆಯಾಗುವದು ।
ಆಗ ನನ್ನ ಶಂಕೆಗಳೆಲ್ಲ ಕಳೆದು । ನಿರ್ಧಾರದಿ ಸಮಾಧಿ ಆಗುವದು ॥ 14

ಈ ರೀತಿ ಇಟ್ಟುಕೊಂಡು ಉದ್ದೇಶವನು । ಸಾಯಿಯ ದರ್ಶನ ಪಡೆದನವನು ।
ಆಗ ಈರುಳ್ಳಿಯೊಡನೆ ರೊಟ್ಟಿಯನು । ಬಾಬಾ ತಿನ್ನುತಿದ್ದುದನು ಕಂಡನು ॥ 15

ತಂಗಳ ರೊಟ್ಟಿ ಮತ್ತು ಉಳ್ಳಾಗಡ್ಡಿ । ಬಾಯಿಯಲಿ ಇಟ್ಟುಕೊಳ್ಳುತಿದ್ದದ ನೋಡಿ ।
ಇವರೆನ್ನ ಶಂಕೆಯ ಯಾವ ತೆರದಿ । ಕಳೆದಾರೆಂಬ ಸಂಶಯ ಉದ್ಭವಿಸಿತು ॥ 16

ವಿಕಲ್ಪವೆದ್ದಿತು ಅವರ ಮನದೊಳು । ಸಾಯಿ ಮಹಾರಾಜರು ಅಂತರ್ಜ್ಞಾನಿಗಳು ।
ಎಂದರು ನಾನಾ, ಈರುಳ್ಳಿ ತಿಂದು ದಕ್ಕಿಸಿಕೊಳ್ಳಲು । ಸಾಧ್ಯವಿದ್ದವನೇ ಅದನು ತಿನಬೇಕು ॥ 17

ಅರಗಿಸುವ ಬಲ ಇದ್ದವನು । ಸಂತೋಷದಿ ತಿನಬೇಕು ಈರುಳ್ಳಿಯನು ।
ಕೇಳಿದನು ಯೋಗಿ ಮನದಿ ಚಕಿತನಾದನು । ಸದ್ಭಾವದಿ ಶರಣಾಗತನಾದನು ॥ 18

ಯೋಗಾಭ್ಯಾಸಿಯು ಆಮೇಲೆ । ಬಾಬಾರು ಕುಳಿತಾಗ ಆಸನದ ಮೇಲೆ ।
ನಿರ್ವಿಕಲ್ಪ ಅಂತಃಕರಣದಲೇ । ಬಾಬಾರ ಹತ್ತಿರ ಕುಳಿತನು ॥ 19

ಸಾವಧಾನವಾಗಿ ಕೇಳುತಿದ್ದು । ಶಂಕೆಗೆ ಸಮಾಧಾನ ಪಡೆದು ।
ಉದಿ ಆಶೀರ್ವಚನಗಳ ತೆಗೆದುಕೊಂಡು । ಪ್ರಸನ್ನತೆಯಿಂದ ಮರಳಿದರು ॥ 20

ಇನ್ನೂ ಇಂಥ ಅನೇಕ ಕಥೆಗಳು । ಭಕ್ತಿ ಭಾವನೆಯಿಂದ ಕೇಳುತಿರಲು ।
ಭಕ್ತರ ದುಃಖ ಮೋಹಾದಿ ಅನರ್ಥಗಳು । ತ್ವರಿತ ಉಪಶಮನವಾಗುವವು ॥ 21

ಇರಲೊಂದು ಸಣ್ಣ ಜಲಾಶಯ । ದುರ್ಗಂಧ ತುಂಬಿದ ಅತಿಶಯ ।
ಅಲ್ಲಿಯೇ ಸೌಖ್ಯನಿರತಿಶಯ । ಸೂಕರಕೆ ಎನಿಸುವದು ನಿಃಸಂಶಯ ॥ 22

ಒಂದೇ ರೀತಿ ಜೀವ ಶುಕಗಳದು । ಒಂದು ದೇಹದ ಒಳಗೆ ಒಂದು ಪಂಜರದಹುದು ।
ಗಿಳಿ ಸ್ವಾತಂತ್ರ್ಯವನೇ ಕಳಕೊಂಡು । ಪಾರತಂತ್ರ್ಯದಲೇ ಸುಖ ಕಾಣುವದು ॥ 23

ಕೂಪ ಮಂಡೂಕದಂತೆ ಶುಕ । ಪಂಜರದಲ್ಲೇ ಅದರ ಸರ್ವ ಸುಖ ।
ತಿಳಿಯದದು ಸ್ವಾತಂತ್ರ್ಯದ ಬದುಕ । ಜೀವವೂ ಕಾಮುಕ ಅದರಂತೆಯೇ ॥ 24

ಎಂಥ ಮಜಾ ಇದೆ ನನ್ನ ಪಂಜರದಲಿ । ಸುವರ್ಣ ಸಲಾಕೆಯ ಜೋಕಾಲಿ ।
ಕೆಳಗೆ ತಲೆ ಮಾಡಿಯೇ ಜೋತಾಡಲಿ । ಒಂದಿಷ್ಟೂ ಕಾಲು ಜಾರದು ॥ 25

ಹೊರಗೆ ಹೋಗಿ ಈ ಸುಖಕ್ಕೆರವಾಗುವದು । ಡಾಳಿಂಬರದ ಕಾಳು ಅಲ್ಲಲ್ಲಿ ಸಿಗುವದು ।
ಸವಿಯಾದ ಮೆಣಸಿನಹಣ್ಣೂ ಸಿಗದು । ತನ್ನ ಸುಖವ ತಾನೇ ಕಳಕೊಳ್ಳುವದು ॥ 26

ಆದರೂ ಶುಕದ ಸಮಯವು ಕೂಡಿ ಬರಲು । ಅವನಿಗೊಬ್ಬ ಗುರು ಲಭಿಸಲು ।
ಪ್ರೀತಿಯಿಂದ ಬೆನ್ನು ಚಪ್ಪರಿಸಿ । ಕಣ್ಣಿಗೆ ಅಂಜನ ಹಾಕುವ ॥ 27

ಆ ಚಪ್ಪರಿಕೆಯ ಮಾತ್ರದಿಂದ । ಚೊಕ್ಕವಾಗಿ ಕಣ್ಣು ತೆರೆದ ।
ರೆಕ್ಕೆ ಬೀಸಿ ಹಾರತೊಡಗಿದ । ಇನ್ನದನ ಹಿಡಿಯುವವರಾರು ॥ 28

ವಿಶಾಲ ಜಗದೆದುರಿಗೆ ಕಾಣಲು । ಯಥೇಚ್ಛ ಪೇರಲ ಡಾಳಿಂಬದ ತೋಟಗಳು ।
ಆಕಾಶವೇ ತೆರೆದಿದೆ ವಿಹರಿಸಲು । ಸ್ವಾತಂತ್ರ್ಯ ಸೌಖ್ಯವನುಪಭೋಗಿಸುವ ॥ 29

ಅದರಂತೆಯೇ ಆ ಜೀವದ ಸ್ಥಿತಿ । ಈಶ್ವರಾನುಗ್ರಹ ಗುರುಪ್ರಾಪ್ತಿ ।
ಉಭಯಲಾಭದಿಂದ ಬಂಧನ ಮುಕ್ತಿ । ಸ್ವಾತಂತ್ರ್ಯ ಮುಕ್ತಿಯ ಪಡೆಯುವ ॥ 30

ಅವಧಾನಶೀಲರಾಗಿನ್ನು ಮೇಲೆ । ನೀವೆಲ್ಲ ಭಾವಿಕ ಶ್ರೋತೃಗಳೇ ।
ಕೇಳುವಿರಿ ಚಿತ್ತವಿಟ್ಟಿಲ್ಲೇ । ಶುದ್ಧ ಪ್ರೇಮದ ಕತೆಯಿದನು ॥ 31

ಹೋದ ಅಧ್ಯಾಯದಲಿ ವಿಚಿತ್ರ ನಡೆಯಿತು । ಶ್ಯಾಮಾನನ್ನು ಜೊತೆಯಲಿ ಕೊಟ್ಟು ।
ಮಿರೀಕರರನು ಬಾಬಾ ಕಳಿಸಿದರೆಂತು । ಚಿಥಳಿಯ ಪ್ರವಾಸದ ಮೇಲೆ ॥ 32

ಸಾಯಿ ತಿಳಿದು ಮುಂದಾಗುವದನು । ಲಾಂಬ ಬಾವಾನಿಂದಾಗುವ ವಿಘ್ನವನು ।
ಮೊದಲೇ ಎಚ್ಚರಿಸಿ ಮಿರೀಕರರನು । ಸಂಕಟ ಸೂಚನೆ ಇತ್ತರು ॥ 33

ಬರೀ ಸಂಕಟ ಸೂಚನೆಯೇನು । ನಿವಾರಣಾರ್ಥ ಯೋಜನೆಯನೂ ।
ಮಾಡಿ ಕೊರಳಿಗೆ ಕಟ್ಟಿ ಬೇಡವೆಂದರುನೂ । ಮಿರೀಕರರ ಸಂಕಟದಿಂದುಳಿಸಿದರು ॥ 34

ಬಾಬಾ ಭಕ್ತ ಕಲ್ಯಾಣ ತತ್ಪರ । ಬಾಳಾ ಸಾಹೇಬ ಮಿರೀಕರ ।
ಕಳೆದವರ ಗಂಡಾಂತರ । ವಿಚಿತ್ರ ಅನುಭವ ತೋರಿದರು ॥ 35

ಇದಕಿಂತ ಶ್ಯಾಮಾನ ಸ್ಥಿತಿ ನೋಡಲು । ಅಕಸ್ಮಾತ್ತವಗೆ ಸರ್ಪದಂಶವಾಗಲು ।
ಬದುಕುವ ಆಶೆಯೂ ಇಲ್ಲದಾಗಿರಲು । ಅವನನು ಸಂಕಟದಿಂದ ಪಾರು ಮಾಡಿದರು ॥36

ಅದೂ ಒಂದು ಬಾಬಾರ ಲೀಲೆ । ಶ್ರೋತೃಗಳಿಗೆ ಹೇಳುವೆ ಮೊದಲೇ ।
ಉಪಾಯವೇನು ಮಾಡಿದರಾಗಲೇ । ಹಾವೇ ಅವನಿಗೆ ಕಡಿದಿದ್ದರೂ ॥ 37

ಏಳು ಗಂಟೆಯ ಹೊತ್ತಿಗೆ । ಕೈಯ್ಯ ಕಿರುಬೆರಳಿಗೆ ।
ಹಾವು ಕಚ್ಚಿತು ಒಮ್ಮಿಂದೊಮ್ಮೆಗೆ । ವಿಷದಗ್ಧವಾಯಿತು ಆ ಭಾಗ ॥ 38

ಅತ್ಯಂತ ಅಸಹ್ಯ ವೇದನೆಗಳು । ಪ್ರಾಣಾಂತವೇ ಆಗುವಂತಿರಲು ।
ಮಾಧವರಾಯರಿಗೆ ಭಯವಾಗಲು । ಅಂತರದಿ ಚಿಂತಿತರಾದರು ॥ 39

ಅವರ ದೇಹವೆಲ್ಲ ಕೆಂಪಗಾಗಲು । ಆಪ್ತ ಸ್ನೇಹಿತರೆಲ್ಲ ಸೇರಲು ।
ಬೀರೋಬನ ಗುಡಿಗೆ ಹೋಗುವ ಎನಲು । ಜೀವಿತವು ಸಂಕಟದಲಿರುವಾಗ ॥ 40

ನಿಮೋಣಕರರು ಮುಂದೆ ಬಂದು । ಹೋಗಿರೆಂದರು ಉದಿ ತೆಗೆದುಕೊಂಡು ।
ಮಾಧವರಾಯರು ಮಶೀದಿಗೆ ಓಡಿ ಬಂದು । ಆಗ ಬಾಬಾ ಏನು ಮಾಡಿದರು ॥41

ಬಾಬಾರ ದೃಷ್ಟಿಗೆ ದೃಷ್ಟಿ ಕೊಡುತ್ತ । ನೋಡಿರಿ ಬಾಬಾರ ಚಮತ್ಕಾರವೆನುತ ।
ಬೈಗುಳ ಸುರಿಮಳೆಗರಿಯುತ । ಮೇಲೇರಲು ಬಿಡವಲ್ಲರು ॥ 42

"ಲೇ ಭಟ್ಟಾ ಮೇಲೇರಬೇಡ । ಏರಿದರೆ ಸರಿಯಾಗಲಿಕ್ಕಿಲ್ಲ ನೋಡು ।
ಇಳಿ ಕೆಳಗೆ ಹೊರಟು ಹೋಗುಗಡ" । ಬಾಬಾ ಜೋರಾಗಿ ಗರ್ಜಿಸಿದರು ॥ 43

ಬಾಬಾ ಅತ್ಯದ್ಭುತವಾಗಿ ಸಿಟ್ಟಿಗೆದ್ದರು । ಅಕಲ್ಪಿತವಾಗಿ ಬೆಂಕಿಯನ್ನೇ ಕಾರಿದರು ।
ಮಾಧವರಾಯರೂ ದಿಗಿಲುಗೊಂಡರು । ಏತಕ್ಕಾಗಿ ಕಟುವಚನಗಳನಾಡಿದರು ಎಂದು ॥ 44

ಇಂಥ ಪ್ರಕಾರವ ನೋಡಲು । ಮಾಧವರಾಯರು ಹೆದರಿದರು ಬಲು ।
ತಿಳಿಯದು ಏನೊಂದು ವಿಚಾರ ಮಾಡಲು । ದುಃಖಿತರಾಗಿ ಕುಳಿತರು ಕೆಳಗೆ ॥ 45

ಕೋಪಿಸಿಕೊಂಡಾಗ ದೇವರೂ । ಮಾಧವರಾಯರು ಮನದಿ ಹೆದರಿದರು ।
ಬಾಬಾರೇ ದೂರ ಮಾಡಿದರು । ಇನ್ನೇನು ಉಪಾಯವಿಲ್ಲಿದಕೆ ॥ 46

ಯಾರಿಗೆ ತಾನೇ ಹೆದರಿಕೆಯಾಗದು । ಬಾಬಾರ ಈ ರೀತಿ ಸಿಟ್ಟಿಗೆದದ್ದು ಕಂಡು ।
ಕೇಳಿ ಬೈಗಳ ಮಳೆಗರೆದದ್ದು । ಪ್ರಸಂಗ ಭಯಂಕರವೆನಿಸಿತು ॥ 47

ನನ್ನ ತವರು ಮನೆಯೇ ಮಶೀದಿ । ನಾನಿರುವೆ ಬಾಬಾರ ಹೊಟ್ಟೆಯ ಮಗನಂದದಿ ।
ಸಿಟ್ಟಾದಳೇಕೆ ಈ ತೆರದಿ । ಹೆತ್ತ ಆ ತಾಯಿ ಮಗುವಿನ ಮೇಲೆ ॥ 48

ಹಾವು ಕಚ್ಚಿತೆಂದಳುತಲಿ । ತಾಯಿಗಲ್ಲದೆ ಇನ್ನಾರಿಗೆ ಹೇಳಲಿ ।
ಅವಳೇ ಒದ್ದು ದೂರ ತಳ್ಳಿ । ಮಾಡಿದಳೆಂದು ದುಃಖಿತರಾದರು ॥ 49

ಮಗುವು ತನ್ನ ಮಾತೆಗೆ ಹೇಗೆ । ಮಾಧವರಾಯರು ಬಾಬಾರಿಗೆ ಹಾಗೆ ।
ಹಗಲಿರುಳು ಈ ರೀತಿ ಸಂಬಂಧವಿದ್ದಾಗ್ಯೆ । ಇಂದೇ ಏಕೆ ಈ ರೀತಿ ॥ 50

ತಾಯಿಯೇ ಒದ್ದು ಓಡಿಸಿದಾಗ । ಮಕ್ಕಳ ಕಾಯುವರು ಬೇರಾರು ಆಗ ।
ಮಾಧವರಾಯರು ಜೀವದಾಶೆಗೇ । ತಿಲಾಂಜಲಿಯನಿತ್ತರು ॥ 51

ಸ್ವಲ್ಪ ಸಮಯದ ನಂತರ ಬಾಬಾರು । ಮತ್ತೆ ಶಾಂತಚಿತ್ತರಾದರು ।
ಮಾಧವರಾಯರು ಧೈರ್ಯತಳೆದರು । ಮೇಲೆ ಹೋಗಿ ಕುಳಿತರು ॥ 52

ಬಾಬಾ ಎಂದರು "ಧೈರ್ಯ ಬಿಡಬೇಡ । ಏನೊಂದು ವಿಚಾರ ಮಾಡಬೇಡ ।
ಎಲ್ಲ ಸರಿಯಾಗುವದು ಚಿಂತೆ ಬೇಡ । ದಯಾಮಯ ಫಕೀರನು ರಕ್ಷಿಸುವನು ॥ 53

ಮನೆಗೆ ಹೋಗಿ ಸ್ವಸ್ಥ ಕುಳಿತಿರು । ಮನೆ ಬಿಟ್ಟು ಹೊರಗೆ ಹೋಗದಿರು ।
ನಿರ್ಭಯತನದಿ ನಿಶ್ಚಿಂತನಾಗಿರು । ವಿಶ್ವಾಸವಿರಲಿ ನನ್ನಲಿ" ॥ 54

ಆಮೇಲೆ ಅವರು ತಿರುಗಿ ಮನೆಗೆ । ಹೋಗಿ ಮುಟ್ಟುವದರೊಳಗೆ ।
ಬಾಬ ಕಳಿಸಿದರು ತಾತ್ಯಾರಿಗೆ । ಈ ರೀತಿ ಸೂಚನೆಗಳನಿತ್ತು ॥ 55

ಮಲಗಬೇಡೆನಬೇಕು ಅವಗೆ । ತಿರುಗಾಡುತಿರಬೇಕು ಮನೆಯ ಒಳಗೇ ।
ಬೇಕಾದ್ದು ತಿನ್ನಲು ಕೊಡಿ ಅವಗೆ । ಇದಿಷ್ಟನು ಮಾತ್ರ ಜಪ್ಪಿಸಬೇಕು ॥ 56

ಕಾಕಾಸಾಹೇಬ ದೀಕ್ಷಿತರಿಗೆ । ಬಾಬಾ ಹೇಳಿದರು ರಾತ್ರಿಯೊಳಗೆ ।
ಮಲಗಬೇಕನಿಸಬಹುದವಗೆ । ಮಲಗಲು ಮಾತ್ರ ಬಿಡಬೇಡಿರಿ ॥ 57

ವಹಿಸಲಾಗಿ ಎಚ್ಚರಿಕೆಯನಿಂತು । ಬಾಧೆ ದೂರ ಓಡಿಹೋಯಿತು ।
ಬೆರಳಲಿ ಉರುಪು ಕಿಂಚಿತ್ತು । ವಿಷದಿಂದಾಗಿ ಉಳಿಯಿತು ॥ 58

ಮುಂದೆ ಅದೂ ನಿಂತು ಹೋಯಿತು । ಎಂಥ ಭಯಂಕರ ಕುತ್ತು ದಾಟಿತು ।
ಸಾಯಿ ಮಾತೆ ಕರುಣೆಯುಳ್ಳವಳಿಂತು । ಭಕ್ತರಿಗಾಗಿ ಒದ್ದಾಡುವಳು ಚಡಪಡಿಸುವಳು ॥ 59

"ಲೇ ಭಟ್ಟಾ ಏರಬೇಡ ಮೇಲ್" । ಈ ಬಾಬಾರ ಶಬ್ದ ಪ್ರಹಾರ ನಿಜದಲೇ ।
ಇರಲಿಲ್ಲ ಮಾಧವರಾಯರ ಮೇಲೆ । ಸಿಟ್ಟರಲಿಲ್ಲವರ ಮೇಲೆಷ್ಟೂ ॥ 60

ಉದ್ದೇಶಿಸಿ ಮಾಧವರಾಯನ । ಇರಲಿಲ್ಲ ಈ ಶಬ್ದ ಸಂಧಾನ ।
ಕಡಿದು ಹೋದ ಆ ಹಾವಿನ । ಕಂಡು ಆ ತೀವ್ರ ಆಜ್ಞೆ ಇತ್ತು ॥ 61

"ಮೇಲೆ ಏರೀಯಾ ಎಚ್ಚರ" । ಸಾಯಿ ಮುಖದಿ ಹೊರಟ ಆಜ್ಞೆ ಪ್ರಖರ ।
ತಡೆಯಿತಲ್ಲಿಗೇ ವಿಷ ಸಂಚಾರ । ಮುಂದೆ ಶರೀರವ ಭೇದಿಸುವದು ॥ 62

ಇಷ್ಟೇ ನಡೆಯಲಿಲ್ಲ ಆಗ । "ನಡಿ ಹೊರಟು ಹೋಗು ಇಳಿ ಕೆಳಗೆ" ।
ಇದೇ ಸಾಯಿ ಪಂಚಾಕ್ಷರಿ ಮಂತ್ರದಿಂದಾಗ । ವಿಷವನಿಳಿಸಿದರು ತತ್ಕಾಲದಲಿ ॥ 63

ಬೇಕಿಲ್ಲ ಬೇರಾವ ಸಾಧನಗಳು । ಲೌಕಿಕದ ಮಾಂತ್ರಿಕರು ಪಂಚಾಕ್ಷರಿಗಳು ।
ಹೀಗೆ ಸಾಯಿ ಭಕ್ತ ರಕ್ಷಕನಿರಲು । ಪರಿಪರಿಯ ಸಂಕಟಗಳ ಪರಿಹರಿಸುವ ॥ 64

ಮಂತ್ರಾವರ್ತನ ಮಾಡಲಿಲ್ಲ । ಅಕ್ಕಿ ನೀರುಗಳ ಮಂತ್ರಿಸಲಿಲ್ಲ ।
ಜಲಸಿಂಚನೆಯನೂ ಮಾಡಲಿಲ್ಲ । ಆದರೂ ವಿಷ ಹೇಗೆ ಇಳಿಯಿತು ॥ 65

ಅಲ್ಲವೇ ಇದು ಚಮತ್ಕಾರ । ಕೇವಲ ಸಂತ ಮುಖೋದ್ಗಾರ ।
ಅದರಿಂದ ಮಾಧವರಾಯ ಪಡೆದ ಪರಿಹಾರ । ಈ ಕೃಪೆಗೊಂದು ಮಿತಿ ಇದೆಯೇ ॥ 66

ಇನ್ನು ಹಿಂದಿನಧ್ಯಾಯದಲಿ ಸೂಚಿತ । ಕಥೆ ಸುರಸ ಮತ್ತು ಅದ್ಭುತ ।
ಶ್ರೋತೃಗಳೇ ಕೊಡಿರಿತ್ತ ಚಿತ್ತ । ಸಾದ್ಯಂತವಾಗಿ ಅದ ಕೇಳಿ ॥ 67

ಕಥೆಯ ವರ್ಣಿಸಿದೆ ಹಿಂದಿನಧ್ಯಾಯದಲಿ । ಅದಕಿಂತ ಹೊಸತನವಿದೆ ಇದರಲ್ಲಿ ।
ಸಾಯಿ ಹೇಗೆ ಮಾಯೆ ತೋರುವರೆಂಬುದನಿಲ್ಲಿ । ಶ್ರೋತೃಗಳಿಗೆ ಹೇಳಲಾಗುವುದು ॥ 68

ಸುರಸವಾದ ಈ ಕಥೆಗಳ ಕೇಳಲಾಗಿ । ಗುರುವಚನಗಳುಳಿಯುವವು ಮನದಿ ಅಚ್ಚಾಗಿ ।
ಕರ್ಮಾಕರ್ಮವಿಕರ್ಮಗಳ ನಿರಸನವಾಗಿ । ಶ್ರದ್ಧೆಯುದಿಸುವದು ಗುರುಚರಣದಿ ॥ 69

ಸುಲಭದಲಿ ಸುಲಭ ಉಪಾಯ । ಹೃದಯದಿ ಸ್ಮರಿಸಬೇಕು ಚರಣಗಳ ಸಾಯಿಯ ।
ಇದೇ ಒಂದು ತರಣೋಪಾಯ । ಮಾಯಾ ನಿರಸನವಾಗಲು ॥ 70

ಸಂಸಾರ ಭಯ ಹೆಚ್ಚಾಗಿರಲು । ಅದು ಮಾಯಾಸಮುದ್ರದಲಿ ಬಂಡೆಗಲ್ಲು ।
ಇಬ್ಭಾಗವಾಗುವದದು ಕಥಾ ಶ್ರವಣ ಮಾಡಲು । ಅಖಂಡ ಆನಂದ ಲಭಿಸುವದು ॥ 71

ಒಮ್ಮೆ ಶಿರಡಿಯಲಿ ಮಹಾಮಾರಿ ಬಂದಾಗ । ಊರ ಜನರೆಲ್ಲ ಭಯ ಗೊಂಡರಾಗ ।
ಒಮ್ಮತದಿಂದ ಡಂಗುರವ ಹೊಡೆಸಿದರು । ರಹದಾರಿಯ ತಡೆಗಟ್ಟಿದರು ॥ 72

ಮಹಾಮಾರಿಯ ಭಯ ದೊಡ್ಡದು । ಹೃದಯ ತಲ್ಲಣಿಸಿತು ಗ್ರಾಮಸ್ಥರದು ।
ಗಾಳಿಯನೂ ಸೋಂಕಗೊಡರು ಪರಸ್ಥರದು । ವ್ಯವಸಾಯವೆಲ್ಲ ನಿಂತು ಹೋಯಿತು ॥ 73

ಎಲ್ಲಿಯವರೆಗೆ ಈ ರೋಗವಿರುವದು । ಊರಲ್ಲಿ ಯಾರೂ ಕುರಿಕೊಯ್ಯಕೂಡದು ।
ಅಗಸಿಯೊಳಗೆ ಗಾಡಿಗಳ ಬರಗೊಡಬಾರದು । ಎಲ್ಲರೂ ಈ ನಿಯಮವನ್ನು ಪಾಲಿಸಬೇಕು ॥ 74

ಗ್ರಾಮಸ್ಥರ ಈ ಹುಚ್ಚು ನಂಬಿಗೆ । ಎಷ್ಟೂ ಹಿಡಿಸದು ಬಾಬಾರಿಗೆ ।
ಇವೆಲ್ಲ ಕುಕಲ್ಪನೆಗಳು ಅವರ ಮತದೊಳಗೆ । ಅಜ್ಞಾನತನ ಜನರದು ॥ 75

ಅತ್ತ ಅವರು ನಿಯಮ ಮಾಡಬೇಕು । ಇತ್ತ ಬಾಬಾ ಅವುಗಳ ಮುರಿಯಬೇಕು ।
ಹೇಗೆ ಹೇಗೆಂಬುದನು ಕೇಳಬೇಕು । ಶ್ರೋತೃಗಳು ಚಿತ್ತಗೊಟ್ಟು ॥ 76

ಗ್ರಾಮಪಂಚರು ಹೀಗೆ ನಿರ್ಧರಿಸಲು । ಗ್ರಾಮಸ್ಥರು ಪಾಲಿಸುತಿದ್ದರು ನಿಜದಲಿ ।
ಭಂಗ ಬಂದರೆ ಒಂದಿಷ್ಟು ನಿಯಮದಲಿ । ದಂಡತೆರಬೇಕಾಗುತ್ತಿತ್ತು ॥ 77

ಬಾಬಾರಿಗಿಲ್ಲ ದಂಡದ ಭಯ । ಯಾವಾಗಲೂ ಅವರಿರುವರು ನಿರ್ಭಯ ।
ಮನವಗೊಳಿಸಿ ಹರಿಚರಣದಿ ಲಯ । ಕಲಿಕಾಳನಿಗೂ ದುರ್ಜಯರವರು ॥ 78

ಒಮ್ಮೆ ಪರಸ್ಥಳದ ಚಕ್ಕಡಿಯೊಂದು । ಉರುವಲವನದರಲ್ಲಿ ತುಂಬಿಕೊಂಡು ।
ಅಗಸಿಯಲಿ ಬಂದು ನಿಂತದ ಕಂಡು । ಜನರಿಗೆ ಸಮಸ್ಯೆಯುಂಟಾಯಿತು ॥ 79

ಉರುವಲದ ಕೊರತೆ ಇರುವದಲ್ಲಿ । ಇದರ ಅರಿವಿತ್ತು ಗ್ರಾಮಸ್ಥ ಜನರಲ್ಲಿ ।
ಆದರೂ ತಪ್ಪಾಗುವದು ನಿಯಮೋಲ್ಲಂಘನದಲಿ । ಆದರಿಂದೆಲ್ಲರಿಗೆ ಚಿಂತೆಯಾಯಿತು ॥ 80

ಚಕ್ಕಡಿಯವನ ಮೇಲೆ ಬಿದ್ದರು । ಗಾಡಿಯ ತಿರುಗಿ ಕಳಿಸ ಹತ್ತಿದರು ।
ಈ ವರ್ತಮಾನ ತಿಳಿಯಲು ಬಾಬಾರು । ತಾವೇ ಅಲ್ಲಿಗೆ ಬಂದರು ॥ 81

ತಾವೇ ನಿಂತರು ಗಾಡಿಯ ಎದುರಿಗೆ । ಆದರಿಂದ ಧೈರ್ಯ ಬಂತು ಚಕ್ಕಡಿಯವನಿಗೆ ।
ಗ್ರಾಮಸ್ಥರ ಮಾತು ಒತ್ತಿ ಬದಿಗೆ । ಅಗಸಿಯಲಿ ಗಾಡಿಯ ತಂದನು ॥ 82

ಅಲ್ಲಿಂದ ತಂದದನು ಮಂಟಪದ್ವಾರದೆಡೆ । ಆದನು ಬರಿದು ಮಾಡಿಸಿ ಮಂಟಪದ ಒಳಗಡೆ ।
ಯಾರಿಂದಲೂ ಚಕಾರ ಶಬ್ದ ಹೊರಡದೆ । ಸುಮ್ಮನೆ ನಿಂತು ನೋಡಿದರು ॥ 83

ಗ್ರೀಷ್ಮ ಶರದ ಇಲ್ಲವೆ ಹೇಮಂತದಲ್ಲಿ । ವರ್ಷಾ ಇಲ್ಲವೇ ವಸಂತ ಋತುವಿರಲಿ ।
ಎಂಟೂ ಪ್ರಹರಗಳು ಮಶೀದಿಯಲಿ । ಧುನಿ ಉರಿಯುತ್ತಿತ್ತು ಬಾಬಾರದು ॥ 84

ಬಾಬಾರ ನಿರ್ಧಾರ ವಿಚಿತ್ರವಿರುವದು । ಅಗ್ನಿಹೋತ್ರಿಗಳಿಗೂ ಅಗ್ನಿಹೋತ್ರಿಗಳಾಗಿದ್ದು ।
ಬಾಬಾರ ಪವಿತ್ರ ಧುನಿಯದು । ದಿನರಾತ್ರಿ ಪ್ರಜ್ವಲಿತವಿರುತಿತ್ತು ॥ 85

ಕೇವಲ ಈ ಧುನಿಯ ಪ್ರೀತ್ಯರ್ಥ । ಕಟ್ಟಿಗೆ ಹೊರೆಗಳ ಕೊಂಡುಕೊಳ್ಳುತ ।
ಒಟ್ಟುತಿದ್ದರವ ಗೋಡೆಯತ್ತ । ಬಾಬಾ ಮಂಟಪದ ಎದುರಿನಲಿ ॥ 86

ನೋಡಿಕೊಂಡು ಸಂತೆಯ ಸಮಯ । ಬಾಬಾ ತರಿಸುವರು ಕಟ್ಟಿಗೆಯ ।
ಆದರ ಮೇಲೆಯೂ ನೆರೆಹೊರೆಯ । ಕಣ್ಣಿಡದ ಜನರು ದುರ್ಲಭ ॥ 87

ಬಾಬಾ ಒಲೆ ಹಚ್ಚಲು ಕಟ್ಟಿಗೆ ಇರದು । ಕಟ್ಟಿಗೆ ಇಲ್ಲದೆ ಒಲೆ ಉರಿಯದು ।
ಹೀಗೆ ಹೇಳಿಸುಳ್ಳೊಂದು ಸೊಟ್ಟೊಂದು । ಉರುವಲದಿ ಪಾಲು ಅಂಥವರಿಗೂ ॥ 88

ಸ್ವಾರ್ಥಿಗಳ ಜಾತಿಯೇ ಕೆಟ್ಟ ಬಲು । ಅಂಥದರಲ್ಲಿ ಸಭಾ ಮಂಟಪಕಿರಲಿಲ್ಲ ಬಾಗಿಲು ।
ಆದರಿಂದ ಅಂಥವರಿಗೆ ಅವಕಾಶವಿರಲು । ಕಳ್ಳರು ಸುಳ್ಳರು ಎಲ್ಲರೊಂದೇ ॥ 89

ಬಾಬಾರು ಎಷ್ಟು ಪರೋಪಕಾರಿಗಳೆಂಬುದನು । ವರ್ಣಿಸಲಾದೀತೆಷ್ಟು ಅವರ ಮಹಿಮೆಯನು ।
ಹೊರಗೆ ನೋಡಲು ಉಗ್ರರಿದ್ದು । ಅಂತರಂಗದಿ ಅತಿ ಸೌಮ್ಯ ॥ 90

ಅವರ ಅಗಾಧ ಮಹಿಮಾನ । ವಾಣಿಯೇ ಆಗಿ ನಿರಭಿಮಾನ ।
ಮಾಡಿದರವರ ಚರಣಾಭಿವಂದನ । ಅಂದರೆ ಅವಗಾಹನೆಯಾದೀತು ॥ 91

ವ್ಯಾಪಿಸಿ ಸ್ಥಿರ ಚರಗಳನು । ಹೃದಯದಲುಳಿದಿರುವ ವಿಶ್ವಂಭರನು ।
ನಿರಂತರ ಮಾಡಿದರ ವಿಚಾರವನು । ಯಾರೊಡನೆಯೂ ವೈರವ ಮಾಡನು ॥ 92

ಸರ್ವಸೃಷ್ಟಿಯಲಿ ಅವನೇ ತುಂಬಿದ್ದು । ಹತ್ತೂ ದಿಕ್ಕುಗಳು ಹಿಂದು ಮುಂದು ।
ಯಾರ ಮೇಲೆ ವಕ್ರದೃಷ್ಟಿಯಾಗುವದು । ಆದರಿಂದವಗೆ ಕಷ್ಟವಾಗುವದು ॥ 93

ತಾವು ವೈರಾಗ್ಯ ಪೂರ್ಣರಿರಲು । ಆಚರಣೆ ಮಾಡುವರು ಪ್ರಾಪಂಚಿಕರೊಲು ।
ಆಶ್ರಿತರಿಗೆ ಪಾಠ ಕಲಿಸಲು । ಲೋಕಸಂಗ್ರಹಾರ್ಥವಾಗಿ ॥ 94

ಎಂಥ ಲೀನತೆ ಆ ಮಹಾತ್ಮನದು । ಕೇಳಲದ ಆಶ್ಚರ್ಯವೆನಿಸುವದು ।
ಭಕ್ತ ಪ್ರೇಮಳತೆ ಕಂಡು ಬರುವದು । ಅವತಾರ ಸಾರ್ಥಕತೆ ಅವರದು ॥ 95

ಅತುಲ ದೀನವತ್ಸಲತೆ ಒಳಗಿದ್ದು । ಲಘುವೆನಿಸಿಕೊಳ್ಳುವ ಇಷ್ಟ ದೊಡ್ಡದು ।
ಪ್ರತ್ಯಂತರರಾಗಿ ಹೇಳಬಹುದು । ಸಾವಿರಾರು ಕತೆಗಳನು ॥ 96

ಉಂಪಾಸ ತಾಪಾಸಗಳು ಎಂದೂ ಇಲ್ಲ । ಹಠಯೋಗದ ಕಷ್ಟವೂ ಇಲ್ಲ ।
ರಸಾಸಕ್ತಿಯಲಿ ರುಚಿ ಇಲ್ಲ । ಅಲ್ಪಾಹಾರವ ಸೇವಿಸುವರು ॥ 97

ನೇಮಿಸಿಕೊಂಡ ಮನೆಗಳಿಗೆ ಹೋಗಿ । ಒಣದೋ ಹಸಿಯದೋ ರೊಟ್ಟಿ ತರಲಾಗಿ ।
ಈ ಭಿಕ್ಷೆಯೇ ನಿತ್ಯದ ಮಧುಕರಿಯಾಗಿ । ನಾಲಿಗೆಯ ರುಚಿಗೆ ಒಳಗಾದರು ॥ 98

ರಸನೆಯನು ಮುದ್ದು ಮಾಡರು । ಮಿಷ್ಟಾನ್ನವನಿಚ್ಚಿಸಲು ।
ಸಿಹಿ ಸಪ್ಪೆ ಸಿಕ್ಕರೂ ಬಿಟ್ಟರೂ । ಅದನ್ನೇ ಸವಿ ಮಾಡಿ ಉಣ್ಣುವರು ॥ 99

ಈ ರೀತಿಯಲಿ ಪ್ರಾಣಧರಿಸಿಕೊಂಡು । ಶರೀರ ಪೋಷಣೆ ಮಾಡಿಕೊಂಡು ।
ಅದೇ ಮೋಕ್ಷ ಸಾಧನವೆಂದು । ಯಾವಾಗಲೂ ನಿರಭಿಮಾನರಾಗಿರುವರು ॥ 100

ಯಾರಿಗೆ ನಿಜಶಾಂತಿಯೇ ಭೂಷಣ । ಅವರಿಗೇತಕೆ ಮಾಳಾಮಂಡನ ।
ಬೇಕಿಲ್ಲ ಚಂದನ ವಿಭೂತಿಗಳ ಚರ್ಚನ । ಪೂರ್ಣಬ್ರಹ್ಮರು ಶ್ರೀ ಸಾಯಿ ॥ 101

ಬೋಧಪ್ರದ ಮತ್ತು ಪಾವನ । ಭಕ್ತಿ ಪ್ರಧಾನವಾದ ಈ ಆಖ್ಯಾನ ।
ಸಾವಧಾನವಾಗಿ ಮಾಡಲು ಶ್ರವಣ । ಭವದ ಭಾವನೆ ಹಿಂಗೀತು ॥ 102

ಭಾವಾರ್ಥ ಕೇಳುಗ ಸಿಕ್ಕಾಗ । ಸಾಯಿಯವರ ಭಾಂಡಾರ ತೆರೆಯುವದಾಗ ।
ತಿಳಿಯದು ಕ್ಲಿಷ್ಟ ಕುತರ್ಕಗಳಿದ್ದಾಗ । ಮುಗ್ಧ ಭಾವಿಕರಿರಬೇಕು ॥ 103

ಇನ್ನು ಮುಂದಿನ ಕಥಾನುಸಂಧಾನ । ಕೇಳಲು ಶ್ರೋತೃಗಳಾಗಿ ಏಕಾಗ್ರಮನ ।
ತರುವದು ಪ್ರೇಮದ ಸ್ಫುರಣ । ಆನಂದಭಾಷ್ಪಗಳು ನಯನಗಳಲ್ಲಿ ॥ 104

ಬಾಬಾರ ಚಾತುರ್ಯ ರೀತಿ ಎಂಥದು । ಅವರ ಯುಕ್ತಿ ಪ್ರಯುಕ್ತಿಗಳನೇನು ಹೇಳುವರು ।
ತಿಳಿಯಿರಿದು ಸದ್ಭಕ್ತಿಯ ಮರ್ಮವೆಂದು । ಕಾಲಕಾಲಕೆ ಬಂದ ಅನುಭವಗಳು ॥ 105

ಈ ಸಾಯಿ ಚರಿತ್ರವೆಂಬ ಪಿಯೂಷಪಾನ । ಆದರದಿ ಮಾಡಲಿದರ ಶ್ರವಣ ।
ಗುರುಚರಣದಲಿಟ್ಟು ಮನ । ಕಥಾನುಸಂಧಾನವ ಲಕ್ಷಿಸಬೇಕು ॥ 106

ಈ ಕಥೆಯೆಂಬುದು ಅಪೂರ್ವ ಮೃಷ್ಟಾನ್ನ । ಅವಸರಪಡಬಾರದು ಕೇಳುಗರು ಸೇವಿಸಲಿದನ ।
ಪದಾರ್ಥ ಪಧಾರ್ಥಗಳ ಹೊಸತನ । ಯಥೇಷ್ಟವಾಗಿ ಸವಿಯಬೇಕು ॥ 107

ಸಾಕಿನ್ನು ಆ ಚಕ್ಕಡಿಯ ಕಥೆ । ಅದಕಿಂತ ವಿಲಕ್ಷಣ ಹೋತಿನ ವಾರ್ತೆ ।
ಆಶ್ಚರ್ಯವೆನಿಸೀತು ಇದನು ಆಲಿಸುತೆ । ಗುರುಭಕ್ತರಿಗಿದು ಆನಂದ ॥ 108

ಒಮ್ಮೆ ಲೀಲೆ ನಡೆಯಿತೊಂದು । ಯಾರೋ ಹೋತನು ತಂದರೊಂದು ।
ಅದು ಆಸನ್ನ ಮರಣ ದುರ್ಬಲವಿದ್ದು । ಜನರೆಲ್ಲ ನೋಡಲು ನೆರೆದರು ॥ 109

ಅದಕಿರಲಿಲ್ಲ ಒಡೆಯನಿಲ್ಲವೇ ರಕ್ಷಕನಾರು । ಸಾಯಿಯೇ ಅವನ ತಾಯಿಯಾಗಿ ಸಾಕಿದರು ।
ಮಶೀದಿಯಲಿ ಆಶ್ರಯವಿತ್ತರು । ಆ ಹೀನ ದೀನ ಪಶುವಿಗೆ ॥ 110

ಆಗ ಆ ಕಾಲದಲ್ಲಿ ಅಲ್ಲಿ । ಬಡೇಬಾಬಾ ಇದ್ದರು ಹತ್ತಿರದಲ್ಲಿ ।
ಬಾಬಾ ಎಂದರು ಕೊಡಬೇಕು ಅದನು ಬಲಿ । ಒಂದೇ ಪ್ರಹಾರದಲಿ ಮುಗಿಸಬೇಕದನು ॥ 111

ಏನು ಮಹತಿ ಆ ಬಡೇಬಾಬಾರದು । ಕುಳಿತುಕೊಳ್ಳಲು ಸ್ಥಾನ ಬಾಬಾರ ಬಲಕಿನದು ।
ಬಡೇಬಾಬಾರು ಸೇದಿಕೊಟ್ಟ ಮೇಲೆ ಸೇದುವದು । ಬಾಬಾ ಆ ಚಿಲೀಮಯನು ॥ 112

ಯಾವ ಬಡೇಬಾಬಾರ ಹೊರತು । ಬಾಬಾರ ಒಂದು ಎಲೆ ಕೂಡ ಅಲುಗಾಡದಾಗಿತ್ತು ।
ಮೊದಲು ಅವರು ಬಾಯಿಗೆ ಹಾಕಿದ ಮೇಲೆ ತುತ್ತು । ಬಾಬಾರ ಊಟ ನಡೆಯಬೇಕು ॥ 113

ಒಮ್ಮೆ ದೀವಳಿಗೆಯ ದೊಡ್ಡ ಹಬ್ಬ । ಪಕ್ವಾನ್ನಗಳ ಬಡಿಸಿದೆ ತಟ್ಟೆಯ ತುಂಬ ।
ಜನ ಕುಳಿತು ಮಾಡಬೇಕಿನ್ನು ಆರಂಭ । ಎನುವಾಗ ಬಡೇಬಾಬಾ ಎದ್ದುಹೋದರು ಕೋಪದಿಂದ ॥ 114

ಪಂಕ್ತಿಯಲಿರದೆ ಬಡೇಬಾಬಾರು । ಬಾಬಾ ಅನ್ನ ಸೇವಿಸರು ।
ಯಾವಾಗ ಬಾಬಾರೇ ತಿನ್ನದಾದರು । ಉಳಿದವರು ಹೇಗೆ ಉಂಡಾರು ॥ 115

ಅದರಿಂದೆಲ್ಲರೂ ತಡೆದರು । ಬಡೇಬಾಬಾರ ಹುಡುಕಿ ತಂದರು ।
ಯಾವಾಗ ಅವರ ಪಂಕ್ತಿಯಲಿ ಕೂಡ್ರಿಸಿದರು । ಬಾಬಾ ಅನ್ನ ಸೇವಿಸಿದರು ॥ 116

ಇನ್ನು ಬಿಟ್ಟು ನಡೆದ ಕಥೆಯನು । ಬಡೇಬಾಬಾರ ವಾರ್ತೆಯನು ।
ಶ್ರೋತೃಗಳಿಗೆ ಹೇಳಬೇಕಿನ್ನು । ದಯಮಾಡಿ ಅಡ್ಡಕಥೆಯಿದು ಎನದಿರಿ ॥ 117

ಬಡೇಬಾಬಾ ಬಾಬಾರ ಅತಿಥಿಗಳು । ಸಭಾಮಂಟಪದಲಿ ಊಟದ ಸಮಯದೊಳು ।
ಕಿವಿಗೊಟ್ಟು ಅವರ ಕರೆ ಕೇಳಲು । ದಾರಿ ಕಾಯುತ್ತ ಕುಳಿತಿರುವರು ಕೆಳಗೆ ॥ 118

ಇಕ್ಕೆಲದಲಿ ಎರಡು ಸಾಲು । ಬಾಬಾ ಕುಳಿತಿರುವರು ಮಧ್ಯದೊಳು ।
ಬಾಬಾರ ಎಡ ಮಗ್ಗಲಿನೊಳು । ಬಡೇಬಾಬಾರ ಸ್ಥಳ ಖಾಲಿ ಇತ್ತು ॥ 119

ನೈವೇದ್ಯವನೆಲ್ಲ ತಟ್ಟೆಗಳಿಗೆ ಬಡಿಸುವರು । ಆ ತಟ್ಟೆಗಳ ಸಾಲಾಗಿ ಇಡುವರು ।
ನಿಜಸ್ಥಾನದಲಿ ಕೂತವರು ಉಣುವವರು । ಊಟದ ಸಮಯವಾದಾಗ ॥ 120

ಆಮೇಲೆ ಬಾಬಾ ಪರಮಆದರದಿಂದ । ತಾವೇ ಕರೆಯುವರು ಎತ್ತರ ದನಿಯಿಂದ ।
'ಬಡೇ ಮಿಯಾ' ಎಂದಾಗ ತ್ವರಿತದಿಂದ । ಕೈ ಮುಗಿದು ಮೇಲೆ ಬರುವರು ॥ 121

ನಿಷ್ಕಾರಣವಾಗಿ ಅನ್ನದ ಮೇಲೆ ಸಿಟ್ಟು । ಮಾಡಿದವನಿಗಾದರವೇಕಿಷ್ಟು ।
ಅನ್ನನ್ನೇ ಅವಮಾಸಿದನಿಂತು । ಅವನಿಗೇಕಿಷ್ಟು ಸನ್ಮಾನ ॥ 122

ಲೋಕಸಂಗ್ರಹದ ರೀತಿಯೇ ಇದಾದರೂ । ಬಾಬಾ ತಾವೇ ಅದನು ಆಚರಿಸಿ ತೋರಿಸುವರು ।
ಅತಿಥಿಯನು ಬಿಟ್ಟು ಎಂದಾದರೂ । ಅನ್ನ ಸೇವಿಸುವದು ಯುಕ್ತವೇ ॥ 123

ಗೃಹಸ್ಥಾಶ್ರಮ ಮರ್ಯಾದೆ ಇದು । ಬಾಬಾ ಉಲ್ಲಂಘಿಸರು ಅದನೆಂದೂ ।
ಅದರಿಂದ ಭಕ್ತರ ಆಪತ್ತು ಕಳೆಯುವದು । ತಾವೂ ಅದನು ಆಚರಿಸುವರು ॥ 124

ಇಷ್ಟ ಪ್ರಾಪ್ತಿಯಾಗುವದು ಅತಿಥಿ ಪೂಜನದಿಂದ । ಅನಿಷ್ಟ ನಿವೃತ್ತಿಯಾಗುವದು ಅದರಿಂದ ।
ಅದನಾಚರಿಸದಿರೆ ಪ್ರತ್ಯವಾಯವದರಿಂದ । ಅದರಿಂದ ಶಿಷ್ಟರವರನು ಪೂಜಿಸುವರು ॥125

ಅತಿಥಿಯು ಅಶನವಿಹೀನನಾಗುಳಿಯಲು । ವಿನಾಶವಾಗುವವು ಪಶು ಪುತ್ರ ಧಾನ ಧನ್ಯಾದಿಗಳು ।
ಅತಿಥಿ ಉಪವಾಸ ಉಳಿಯಲು । ಅನರ್ಥಕ್ಕೆ ಆಮಂತ್ರಣವಿತ್ತಂತೆ ॥ 126

ಅವನಿಗೆ ದಿನಾಲು ಸಾಯಿ ಸಮರ್ಥರು । ಐವತ್ತು ರೂಪಾಯಿ ದಕ್ಷಿಣೆಯನೀಯುವರು ।
ನೂರು ಹೆಜ್ಜೆ ದೂರ ಕಳಿಸಬರುವರು । ಬಾಬಾ ತಾವೇ ಸ್ವಥಃ ಹೋಗಿ ॥ 127

ಆ ಬಡೇಬಾಬಾರ ಮೇಲೆ ಬಂದುದ । ಆ ಕುರಿಗೆ ಬಂತು ಸರದಿ ಮೊದಲನೆಯದು ।
'ಹೇಗಿದನು ಸುಮ್ಮನೇ ಕಡಿಯುವದು' । ಮುಖದಿಂದ ಹೊರಟ ಮಾತೇ ಕಾರಣ ॥ 128

ಮಾಧವರಾಯ ಅಲ್ಲಿದ್ದರು । ಬಾಬಾ ಅವರಿಗೆ ಆಜ್ಞೆ ಇತ್ತರು ।
ಚೂರಿಯನು ತರು ಹೋಗು ಶ್ಯಾಮಾ ನೀನಾದರೂ । ಇನ್ನೀ ಕುರಿಯ ಕೊಯ್ಯುವಾ ॥ 129

ಮಾಧವರಾಯರು ಧೀರ ಭಕ್ತ । ರಾಧಾಕೃಷ್ಣಬಾಯಿಯತ್ತ ।
ಹೋಗಿ ಚೂರಿಯನ್ನು ತರುತ । ಬಾಬಾರ ಎದುರಿಗೆ ಇಟ್ಟರು ॥ 130

ಚೂರಿಯನು ತಂದ । ಮಾಧವರಾಯ ಪ್ರಯಾಸದಿಂದ ।
ಚೂರಿ ಹಿಡಿದು ಬಂದುದ ಕಂಡ । ಬಾಬಾರ ಮನಸಿಗದು ಬರದಾಯಿತು ॥ 131

ಅಷ್ಟರಲ್ಲಿ ಈ ವಾರ್ತೆ ನಡೆದುದು । ರಾಧಾಕೃಷ್ಣಾ ಬಾಯಿಯ ಕಿವಿಗೆ ಬಿದ್ದು ।
ಚೂರಿಯ ತಿರುಗಿ ತರಿಸಿಕೊಂಡು । ಬಿಟ್ಟಳು ಆ ಕುರಿಯ ದಯೆ ಬಂದು ॥ 132

ಆಮೇಲೆ ಮಾಧವರಾಯರು ಮತ್ತೆ । ಹೋದರು ಚೂರಿ ತರುವುದಕೆ ।
ವಾಡೆಯಲವರು ಕುಳಿತುಬಿಟ್ಟರು ಅತ್ತೇ । ಈ ಹತ್ಯೆ ತನ್ನಿಂದಾಗದಿರಲೆಂದು ॥ 133

ಆಮೇಲೆ ಕಾಕಾರನು ಪರೀಕ್ಷಿಸಲೆಂದು । ಬಾಬಾ ಅವರಿಗೆ ಆಜ್ಞಾಪಿಸಿದ್ದು ।
ಹೋಗು ಚೂರಿಯ ತಾ ಕೊಯ್ಯಲೆಂದು । ಅದನೊಮ್ಮೆ ಮುಕ್ತಗೊಳಿಸು ಈ ಕಷ್ಟದಿಂದ ॥ 134

ಕಾಕಾ ಇದ್ದರು ಚೊಕ್ಕ ಚಿನ್ನ । ಬಾಬಾ ತಿಳಿದಿದ್ದರದನು ಪೂರ್ಣ ।
ಆದರೂ ಅದನು ಸುಡದ ವಿನಃ । ಜನರ ಕಣ್ಣು ತಣಿಯಲು ॥ 135

ಅದು ಚೊಕ್ಕ ಇದೆಯೋ ಇಲ್ಲವೋ ಎಂಬುದ । ಪರೀಕ್ಷಿಸದೆ ಜನ ಕೊಂಡುಕೊಳ್ಳಲು ಅದ ।
ಮಾರ್ಗವದಕೆ ಒರೆ ಹಚ್ಚುವದ । ಬರಿ ಬಾಯಿ ಮಾತಿನಿಂದ ನಂಬರು ॥ 136

ವಜ್ರವು ತನ್ನ ವೈಭವವ ಪಡೆಯಲು । ಸಹಿಸಬೇಕಾಗುವದು ಸುತ್ತಿಗೆಯ ಏಟುಗಳು ।
ಸುತ್ತಿಗೆಯ ಏಟು ಸಹಿಸದೆ ದೊರೆಯಲು । ದೈವತ್ವದ ಗೌರವ ಸುಲಭವಲ್ಲ ॥ 137

ಕಾಕಾ ಬಾಬಾರ ಕೊರಳ ತಾಯಿತು । ಆದರೂ ಜನರಿಗೆ ಹೇಗಿದು ತಿಳಿದೀತು ।
ದಾರದಿ ಕಟ್ಟಿ ವಜ್ರವನ್ನೇ ಆಯಿತು । ಪರೀಕ್ಷಕರು ಅಗ್ನಿಯಲಿ ಹಾಕುವರು ॥ 138

ಸಂತ ವಚನದಿ ತಾಳಲು ವಿಕಲ್ಪ । ಅಯಶಸ್ವಿಯಾಗುವವು ಅವನ ಸಂಕಲ್ಪ ।
ನಿಃಸತ್ವ ನಿಷ್ಫಲ ವಾಗ್ಜಲ್ಪ । ಪರಮಾರ್ಥವಿಷ್ಟು ಸಾಧಿಸದು ॥ 139

ವಂಧ್ಯವೆಂದರಿತು ಗುರುವಚನಾರ್ಥ । ಸಫಲ ಅಂಥವನ ಸ್ವಾರ್ಥ ಪರಮಾರ್ಥ ।
ದೋಷಕುಟಿಲತೆಗಳನೇ ಕಾಣುವಂಥ । ಮನುಷ್ಯ ಅಧಃಪಾತ ಹೊಂದುವನು ॥ 140

ಗುರುಸೇವೆಯಲಿರುವ ತತ್ಪರ । ಗುರುವಿನಾಜ್ಞೆಯದೇ ಮಾಡುವ ಆದರ ।
ಇಷ್ಟಾನಿಷ್ಟತೆಯ ಎಲ್ಲ ವಿಚಾರ । ಗುರುವಿನ ಮೇಲೆಯೇ ಬಿಟ್ಟಿರುವನವ ॥ 141

ಗುರುವಿನಾಜ್ಞೆಯ ಕಿಂಕರನವ । ಸ್ವತಂತ್ರ ವಿಚಾರವನೇ ಬಿಟ್ಟಿರುವ ।
ನಿತ್ಯ ಗುರುವಚನವ ಪಾಲಿಸುವ । ಸಾರಾಸಾರಗಳ ನೋಡನು ॥ 142

ಚಿತ್ತವು ಸಾಯಿ ನಾಮ ಸ್ಮರಣದಲಿ । ದೃಷ್ಟಿಯು ಸಾಯಿ ಸಮರ್ಥ ಚರಣದಲಿ ।
ವೃತ್ತಿಯು ಸಾಯಿ ಧ್ಯಾನ ಧಾರಣದಲಿ । ದೇಹವಿರುವದು ಸಾಯಿ ಕಾರಣಕೆ ॥ 143

ಆಜ್ಞಾಪನ ಮತ್ತು ಆಜ್ಞಾಪಾಲನ । ಇವುಗಳ ಮಧ್ಯ ಕಳೆಯಲು ಒಂದು ಕ್ಷಣ ।
ಆ ವಿಲಂಬವೂ ಆಗದು ಸಹನ । ಈ ವಿಲಕ್ಷಣ ನಡತೆಯು ॥ 144

ದೀಕ್ಷಿತ ವಿಶುದ್ಧ ಸತ್ವಧೀರರು । ನಿಶ್ಚಯದ ಮಹಾಮೇರು ।
ಆ ವಿಚಾರವ ಮನಕೇತಾರರು । ಕುರಿಯ ಹೇಗೆ ಕೊಲುವೆನೆಂಬುದನ ॥ 145

ನಿರಪರಾಧ ಕುರಿ ಸಾಯುವದು । ಅದರಾತ್ಮವು ತಳತಳಿಸುವದು ।
ತನ್ನ ನಿರ್ಮಲ ಯಶಕಲುಷಿತವಾಗುವದು । ಮಹಾಪಾಪ ತಟ್ಟುವದು ॥ 146

ಈ ವಿಚಾರವೇ ಇಲ್ಲ ಅಲ್ಲಿ । ಅಜ್ಞಾಭಂಗವೊಂದೇ ಪಾಪ ಅಲ್ಲಿ ।
ತೊಡಗಿದವರಿಗೆ ಆಜ್ಞಾಪಾಲನೆಯಲ್ಲಿ । ಅದಕಿಂತ ಪುಣ್ಯ ಬೇರೆಯದಿಲ್ಲ ॥ 147

ಯಾರಿಗೆ ಗುರು ಆಜ್ಞೆಯೇ ಪ್ರಮಾಣ । ಅವನಿಗಾಗುವದು ವಿಲಕ್ಷಣ ಸ್ಫುರಣ ।
ಸಹಜ ಕೋಮಲವಾದ ಅಂತಃಕರಣ । ಪ್ರಾಣ ತೆಗೆಯಲೂ ಉದ್ಯುಕ್ತ ॥ 148

ಆಮೇಲೆ ಅವರು ಸಾಠೆಯ ವಾಡೆಗೆ ಹೋದರು । ಆಜ್ಞೆಯಂತೆ ಶಸ್ತ್ರ ತಂದರು ।
ಕುರಿ ಕೊಲ್ಲಲು ಸಿದ್ಧರಾದರು । ಒಂದಿಷ್ಟೂ ಹಿಂದೆ ಮುಂದೆ ನೋಡಲಿಲ್ಲ ॥ 149

ಶ್ರೀ ಗುರುವಾಜ್ಞೆಯ ಪರಿಪಾಲನ । ಅದೇ ವೀರಯ ಸ್ಫುರಣ ।
ಮಾಡಿದರು ಶಸ್ತ್ರದ ಆಲಂಬನ । ಅಂತಃಕರಣವ ದೃಢ ಮಾಡಿ ॥ 150

ಜನ್ಮ ನಿರ್ಮಲ ಬ್ರಾಹ್ಮಣರದು । ಜನ್ಮದಾರಭ್ಯ ವ್ರತ ಅಹಿಂಸೆಯದು ।
ಅಂಥವನಿಗೆ ಈ ಪ್ರಸಂಗ ಬಂದು । ಕೈ ಹೇಗೆ ಮೇಲಕೆದ್ದೀತು ॥ 151

ಗುರು ಆಜ್ಞೆಪಾಲನೆಯಲಿ ಗಟ್ಟಿಗ । ಮನವ ದೃಢಗೊಳಿಸಿಕೊಂಡನಾಗ ।
ಆದರೂ ಎದೆಬಡಿದುಕೊಳ್ಳುತ್ತಿರುವಾಗ । ಮೈಯೆಲ್ಲ ಬೆವೆತು ಹೋಯಿತು ॥ 152

ಕಾಯಾ ವಾಚಾ ಮನಗಳಿಂದ । ಶಬ್ದ ಪ್ರಹಾರವನೂ ಎಂದೂ ಮಾಡದ ।
ಶಸ್ತ್ರ ಪ್ರಹಾರವು ಅಂಥವನಿಂದ । ದುರ್ಘಟ ಕಾರ್ಯವೆಂದರಿದೇ ॥ 153

ಗುರುವಚನವ ಅವಮಾಸಿಸಿದವಗೆ । ಬೇರೆ ಗತಿಯೇ ಇರದು ಅಂಥವನಿಗೆ ।
ಬಾಧೆಯದು ಪೂರ್ವ ಪುಣ್ಯಗಳಿಗೆ । ಎಂಬುದು ನಿಶ್ಚಯ ಅವನಿಗೆ ॥ 154

ಗುರುವಾಜ್ಞೆಯ ಪರಿಪಾಲನ । ಅದೇ ಭೂಷಣಗಳಲಿ ಭೂಷಣ ।
ಸಚ್ಛಿಷ್ಯನ ಗುರುತೆಂಬರಿದನ । ಆಜ್ಞೋಲ್ಲಂಘನೆ ಮಹತ್ಪಾಪ ॥ 155

ಗುರುವಿನಾಜ್ಞೆಯನು ಒಂದು ಕ್ಷಣ । ಕಳೆಯದೇ ಮಾಡಬೇಕು ಪಾಲನ ।
ವಿಚಾರ ಮಾಡುತ್ತ ಹಿಂದೆ ಮುಂದೆ ನೋಡುವವನು ದೈವ ಹೀನ । ಪೌರುಷವಿಲ್ಲದ ನರಪಶು ಅವ ॥ 156

ಅಲ್ಲಿ ಮುಹೂರ್ತವ ನೋಡಬಾರದು । ಶುಭಾ ಶುಭ ಇಲ್ಲವೇ ಈಗ ಆಮೇಲೆಂದು ।
ತತ್ಕಾಲ ಆಜ್ಞೆ ಪಾಲಿಸುವದು ಜಾಣತನದ್ದು । ದೀರ್ಘಸೂತ್ರಿಯವ ದುರ್ಭಾಗ್ಯ ॥157

ಆಮೇಲೆ ಕಚ್ಚೆಯನೇರಿಸಿ ಒಂದು ಕೈಯಿಂದ । ಇನ್ನೊಂದು ಕೈಲಿ ಶಸ್ತ್ರ ಹಿಡಿದ ।
ತೋಳುಗಳನೇರಿಸುತ ಬಂದ । ಕುರಿ ಇದ್ದೆಡೆಗವನು ॥ 158

ಆಶ್ಚರ್ಯಬಡುತಿದೆ ಗ್ರಾಮದ ಜನ । ನೋಡಿ ಈ ಅಲೌಕಿಕ ಕೃತ್ಯವನ ।
ಕಾಕಾರ ಮನದ ಮೃದುತನ । ನಷ್ಟವಾಗಿ ಹೋಯಿತೇನೆಂದು ॥ 159

ಮಾಂಸಾಹಾರಿಯಾದ ಮುಸಲ್ಮಾನನು । ಆ ಒದ್ದಾಡುತಿರುವ ಕುರಿಯನು ।
ಕೊಲ್ಲಲು ಫಕೀರ ಬಾಬಾ ಮುಂದೆ ಬಾರನು । ಅಲ್ಲಿ ಕಾಕಾ ಮುಂದಾಗಿರುವನು ॥ 160

ವಜ್ರಕ್ಕಿಂತ ಕಠೋರ । ಕುಸುಮಕ್ಕಿಂತ ಮೃದುತರ ।
ಎನುವರು ಇರುವರವರು ಲೋಕೋತ್ತರ । ಅವರ ಅಂತರವು ನಿಜದಲಿ ॥ 161

ಗಟ್ಟಿಯಾಗಿ ಹಿಡಿದು ಕತ್ತಿ । ತನ್ನ ಕೈಯನ್ನು ಮೇಲೆತ್ತಿ ।
ಕೊಂದೇ ಬಿಡಲಾ ಬಾಬಾ ಹೇಳಿ ಬಿಡಿ । ಒಮ್ಮೆ ಕೊನೆಯದಾಗಿ ಇನ್ನು ॥ 162

ಆರ್ತರಕ್ಷಣೆಗೆ ಮಾಡುವ ಶಸ್ತ್ರಧಾರಣ । ಅದರಿಂದಲೇ ಈಗ ಅಜಾಹನನ ।
ಆದರೆ ಗುರುಸೇವೆಗೇ ಮೀಸಲು ಈ ಜೀವನ । ಅದಕೆ ಜೀವಕೆ ಅನುಮಾನ ॥ 163

ಕೊಲ್ಲ ಹೋದ ಗಡಿಬಿಡಿಯಿಂದ । ಹೃದಯ ತುಂಬಿತು ಕರುಣೆಯಿಂದ ।
ಕೈಮುಂದೆ ಸಾಗದ್ದರಿಂದ । ಚೂರಿ ಹಿಂದಾಗ ತೊಡಗಿತು ॥ 164

"ಹೂಂ ಹೊಡೆ ನೋಡುವೆಯೇನು" । ಕೇಳಿ ಈ ಕೊನೆಯ ಆಜ್ಞೆಯನು ।
ಆವೇಶದಿಂದ ಹೊಡೆಯಬೇಕಿನ್ನು । ಎಂದು ಅರ್ಧವರ್ತುಲ ತಿರುಗಿದರು ॥ 165

ಚೂರಿ ಹಿಡಿದ ಕೈ ಮೇಲೆ ಹೋಯಿತು । ಕುರಿಯ ಕಾಲ ತುಂಬಿತು ।
ಆದರೆ ದೇವರಿಂದಲೇ ಕಾಪಾಡಲ್ಪಡಬೇಕಾಯಿತು । ಆಗ ದೇವ ಪ್ರಸನ್ನನಾದ ॥ 166

ಇನ್ನಿವನದ ಕೊಂದೇ ಬಿಡುವನೆಂದು । ಸಾಯಿ ಸಮರ್ಥರು ಖಚಿತಗೊಂಡು ।
ಅಪಾಯ ಇನ್ನಿದರ ಅಂತ ನೋಡವದು । ಎಂದು ನುಡಿದರು ಇರಲಿ ಬಿಡು ॥ 167

ಹಾಂ ಹಾಂ ಕಾಕಾ ನಿಲ್ಲು ಸರಿದು । ಎಂಥ ನಿಷ್ಠುರತೆ ನಿನ್ನದಿದು ।
ಬ್ರಾಹ್ಮಣನಾಗಿ ಹಿಂಸೆ ಮಾಡುವದು । ಮನಸಿಗೊಂದಿಷ್ಟು ವಿಚಾರ ಬೇಡವೇ ॥ 168

ಚೂರಿಯನೊಗೆದತ್ತ ಕೇಳಿ ಈ ಮಾತು । ಹಿರಿಕಿರಿಯರಿಗೆಲ್ಲ ಆಶ್ಚರ್ಯವಾಯಿತು ।
ಕುರಿಗೆ ಜೀವದಾನ ಸಿಕ್ಕಿತು । ಗುರುಭಕ್ತಿ ಶಿಖರಕ್ಕೇರಿತು ॥ 169

ಚೂರಿಯೊಗೆದು ಕಾಕಾ ನುಡಿಯುತ । ಆದ ಕೇಳಲೀಯರಿ ಗಮನವಿತ್ತ ।
ಬಾಬಾ ತಮ್ಮ ವಚನಾಮೃತ । ಅದೇ ನಮಗೆ ಧರ್ಮಶಾಸನ ॥ 170

ಗುರುರ್ವಾಜ್ಞೆಯ ಪರಿಪಾಲನ । ಅದೇ ಶಿಷ್ಯನ ಶಿಷ್ಯತನ ।
ಅದೇ ನನಗೆ ನಿಜಭೂಷಣ । ಅವಜ್ಞೆಯೇ ದೂಷಣ ಸರ್ವಾರ್ಥದಲಿ ॥ 171

ನಾವರಿಯೆವು ಬೇರೆ ಧರ್ಮ । ನಮಗದರಲಿಲ್ಲ ನಾಚಿಕೆ ಶರಮ ।
ಗುರುವಚನ ಪಾಲನೆ ಇದೇ ಮರ್ಮ । ಇದೇ ನಮಗೆ ಆಗಮ ॥ 172

ಇದರಿಂದ ಸುಖವೋ ಕಷ್ಟವೆಂಬುದು । ಆ ಪರಿಣಾಮದತ್ತಿಲ್ಲ ದೃಷ್ಟಿ ನಮ್ಮದು ।
ನಮ್ಮ ದೈವದಲ್ಲಿದ್ದಂತಾಗುವದು । ಆ ಪರಮೇಶ್ವರನಿಗೇ ಅದರ ಚಿಂತೆ ॥ 173

ಒಂದೇ ನಮಗೆ ಗೊತ್ತಿರವದು । ತಮ್ಮ ನಾಮವ ನಿತ್ಯ ನೆನೆಯುವದು ।
ಸ್ವರೂಪವ ನಯನದಿ ತುಂಬಿಕೊಳ್ಳುವದು । ಹಗಲಿರುಳು ತಮ್ಮಾಜ್ಞೆಯಲಿರುವದು ॥ 174

ಹಿಂಸೆ ಅಹಿಂಸೆಯ ನಾವರಿಯೆವು । ಸದ್ಗುರು ಚರಣವೇ ನಮಗೆ ತಾರಕವು ।
ಈ ಆಜ್ಞೆ ಏಕೆಂದು ಮನಕೆ ತಾರೆವು । ಪ್ರತಿಪಾಲನೆಯೊಂದೇ ಕರ್ತವ್ಯ ನಮಗೆ ॥175

ಗುರುವಿನಾಜ್ಞೆ ಇರುವಾಗ ಸ್ವಷ್ಟ । ಯುಕ್ತಾಯುಕ್ತ ಇಲ್ಲವೇ ಇಷ್ಟಾನಿಷ್ಟ ।
ಹೀಗೆ ವಿಚಾರಮಾಡುವ ಶಿಷ್ಯನು ನಷ್ಟ । ಸೇವಾಭ್ರಷ್ಟನೆಂದೆನುವೆ ನಾ ॥ 176

ಗುರ್ವಾಜ್ಞೆಯ ಉಲ್ಲಂಘನ । ಅದೇ ಜೀವದ ಅಧಃಪತನ ।
ಗುರ್ವಾಜ್ಞೆಯ ಪರಿಪಾಲನ । ಮುಖ್ಯಧರ್ಮಾಚರಣೆಯಿದು ॥ 177

ಚಿತ್ತವು ಗುರುಪದದಲಿ ಸಾವಧಾನ । ಉಳಿಯಲಿ ಇಲ್ಲವೇ ಕಳಿಯಲಿ ಪ್ರಾಣ ।
ನಮಗೆ ಗುರುವಿನ ಆಜ್ಞೆಯೇ ಪ್ರಮಾಣ । ಪರಿಣಾಮ ನಿರ್ವಾಣ ಎಲ್ಲ ಅವಗೇ ಗೊತ್ತು ॥ 178

ನಾವು ತಿಳಿಯೆವು ಅರ್ಥಾನರ್ಥ। ಗೊತ್ತಿಲ್ಲ ನಮಗೆ ಸ್ವಾರ್ಥಪರಾರ್ಥ ।
ಎಮಗೆ ಗೊತ್ತಿರುವದು ಗುರು ಕಾರ್ಯಾರ್ಥ । ಅದೇ ಪರಮಾರ್ಥ ನಮ್ಮದು ॥ 179

ಗುರುವಚನದ ಮುಂದು । ವಿಧಿನಿಷೇಧವೆಂಬದಿರದು ।
ಗುರುನಿಯೋಗ ಕರ್ತವ್ಯದತ್ತ ಮನವಿರುವದು । ಶಿಷ್ಯನ ಚಿಂತೆ ಗುರುವಿಗೆ ॥ 180

ತಮ್ಮ ಆಜ್ಞೆಯ ದಾಸರು ನಾವು । ಯೋಗ್ಯಾಯೋಗ್ಯವ ಮನಕೆ ತಾರೆವು ।
ಸಮಯ ಒದಗಿದರೆ ಪ್ರಾಣ ಕೊಡುವೆವು । ಗುರುವಚನವ ಪ್ರತಿಪಾಲಿಸುವೆವಾದರೂ ॥ 181

ಯಾವ ಸ್ವಭಾವವು ದಯಾಭೂತ । ಅದೇ ಮನವಾಗುವದು ಪಾಷಾಣವತ ।
ಮ್ಲೇಂಛರೂ ಮಾಡಲು ಹಿಂದೆಗೆಯುತ । ಬ್ರಾಹ್ಮಣನದ ಮಾಡಲು ಮುಂದಾದ ॥ 182

ಶ್ರೋತೃಗಳಿಗಿದು ಕಠಿಣವೆನಿಸಬಹುದು । ಸದ್ಗುರುಗೃಹದ ಮಾಯೇಯೇ ಹಾಗಿರುವದು ।
ಒಮ್ಮೆ ಸದ್ಗುರು ವಚನಾರೂಢರಾಗುವದು । ಕೂಡಲೇ ಈ ಗೂಢ ಬಿಚ್ಚುವದು ॥183

ಅವನ ಶೆರಗನೊಮ್ಮೆ ಹಿಡಿಯುವದು । ಚರಣದಲಿ ಪೂರ್ಣ ವಿಶ್ವಾಸವಿಡುವದು ।
ಆಮೇಲೇನೂ ಕಷ್ಟವಿರದು । ಶಿಷ್ಯನ ಚಿಂತೆಯೆಲ್ಲ ಗುರು ವಹಿಸುವ ॥ 184

ಸಂಪೂರ್ಣ ಅರ್ಪಿಸಿಕೊಳ್ಳಬೇಕು ಚರಣಕೆ । ಆಮೇಲೆ ಇಲ್ಲವಗೆ ಹೆದರಿಕೆ ।
ಮುಟ್ಟಿಸುವದನವನನು ಪರತೀರಕೆ । ಕೇವಲ ಅವನ ಆತ್ಮವಿಶ್ವಾಸವು ॥ 185

ಮೂರು ಪ್ರಕಾರದ ಶಿಷ್ಯರಿರುವರು । ಉತ್ತಮ, ಮಧ್ಯಮ ಅಧಮ ವರ್ಗದವರು ।
ಹೇಗೆ ಪ್ರತ್ಯೇಕ ಪ್ರಕಾರದವರು । ಅದ ಸಂಕಲಿತವಾಗಿ ಹೇಳುವೆ ॥ 186

ಹೇಳದೆ ಮನದಲಿದ್ದದ ತಿಳಕೊಳ್ಳುವದು । ತಿಳದ ಕೂಡಲೇ ಸೇವೆಗೆ ತೊಡಗುವದು ।
ಆಜ್ಞೆ ಕೊಡಲೆಂದು ದಾರಿಕಾಯದಿರುವದು । ಇದು 'ಉತ್ತಮ ಶಿಷ್ಯ'ನ ಲಕ್ಷಣ ॥ 187

ಗುರುವು ಆಜ್ಞೆಯಿತ್ತೊಡನೆ ಮನ್ನಿಸುವದು । ಚಾಚೂ ತಪ್ಪದೇ ಅದನು ಪ್ರತಿಪಾಲಿಸುವದು ।
ಯಾವ ಕಾರಣಕೂ ವಿಲಂಬಮಾಡದಿರುವದು । 'ಮಧ್ಯಮ ಶಿಷ್ಯ'ನ ಸ್ವಭಾವ ॥ 188

ಗುರು ಆಜ್ಞೆ ಈಯುತಿರುವದು । ಮಾಡುವೆ ಮಾಡುವೆ ಎನುತಲೇ ಇರುವದು ।
ಹೆಜ್ಜೆ ಹೆಜ್ಜೆಗೂ ತಪ್ಪು ಮಾಡುವದು । 'ಅಧಮ' ಶಿಷ್ಯನೆಂದರಿಯಬೇಕು ॥ 189

ಪರಮ ವೈರಾಗ್ಯ ಇಲ್ಲ ಮನದಲಿ । ನಿತ್ಯಾನಿತ್ಯ ವಿವೇಕವಿರದಲ್ಲಿ ।
ಅಂಥವರಿಗೆ ಗುರುಕೃಪೆ ಎಲ್ಲಿ । ಜನ್ಮವನ್ನೇ ಕಳೆದರೂ ॥ 190

ಆದರೂ ಗುರುಪದದಲಿರಲು ನಿರಂತರ । ಅವನಿಚ್ಛೆ ಪೂರೈಸುವ ಈಶ್ವರ ।
ನಿಶ್ಚಲ ನಿಷ್ಕಾಮ ಮಾಡುವ ಸತ್ವರ । ಆ ಪರಾತ್ಪರ ಬಂಧುವು ॥ 191

ಇರಬೇಕು ನಿರ್ಮಲ ಶ್ರದ್ಧಾಬಲ । ಮತ್ತೆ ಪ್ರಜ್ಞೆಯ ಬಲವೂ ಪ್ರಬಲ ।
ಜೊತೆಗೆ ನಿಧಾನತೆಯೂ ನಿಶ್ಚಲ । ಅಂಥವರ ಪರಮಾರ್ಥ ಸಬಲವಾಗಿರುವದು ॥ 192

ಇಲ್ಲಿ ಬೇಕಿಲ್ಲ ಪ್ರಾಣನಿರೋಧ । ಅಪಾನೋದಾನಗಳ ಶೋಧ ।
ಹಠಯೋಗ ಸಮಾಧಿ ಇಲ್ಲವೇ ಉದ್ಬೋಧ । ದುರ್ಬೋಧ ಸಾಧನಗಳವು ನಮಗೆ ॥193

ಶಿಷ್ಯನ ಭೂಮಿಕೆ ಸಿದ್ಧವಿದ್ದಾಗ್ಯೆ । ತಡವಿಲ್ಲ ಸದ್ಗುರು ಸಿದ್ಧಿಗೆ ।
ಅವರು ಯಾವಾಗಲೂ ಅನುಗ್ರಹ ತತ್ಪರರಾಗೇ । ಒಂಟಿಗಾಲಿನಲ್ಲಿ ನಿಂತಿರುವರು ॥ 194

ಸಗುಣ ಸಾಕ್ಷಾತ್ಕಾರ ಪ್ರತೀತಿಯನು । ಭಕ್ತಮಾತ್ರನೇ ಅನುಭವಿಸುವನು ।
ಪಡೆವರು ಭಾವಿಕರು ಭಕ್ತಿಯನು । ದೊರೆವದು ಪಾಖಂಡ ಯುಕ್ತಿ ಇತರರಿಗೆ ॥ 195

ಆಮೇಲೆ ಬಾಬಾ ಕಾಕಾಗೆಂದರು । ಈ ನೀರಿನಿಂದ ತುಂಬಿದ ಟಮರೇಲು ಹಿಡಿದಿರು ।
ಇನ್ನು ನಾನೇ 'ಹಲಾಲ' ಮಾಡುವೆ ನೋಡುತಿರು । ಇದಕೆ ಸದ್ಗತಿಯ ಕೊಡುವೆನು ॥196

ಮೊದಲೇ ಈ ಕುರಿ ಮರಣೋನ್ಮುಖವಾಗಿರುವದು । ಅಲ್ಲಿಯೇ ಹತ್ತಿರ ತಕ್ಯಾ ಇರುವದು ।
ಫಕೀರ ಬಾಬಾಗೆ ವಿಚಾರವೊಂದು । ಸಮಯಸೂಚಕವಾಗಿ ನೆನಪಾಯಿತು ॥ 197

ಬಾಬಾರ ವಿಚಾರ ಕೇಳಿಕೊಂಡು । ಹೋತನು ತಕೇದ ಮೇಲೆ ಕೊಲ್ಲಲೆಂದು ।
ಅದಕಾಗಿ ಅದನು ಸ್ಥಲಾಂತರಿಸಲೆಂದು । ಎತ್ತಿದಾಗ ಆ ಹೋತು ಪ್ರಾಣಬಿಟ್ಟಿತು ॥ 198

ಹೋತಂತೂ ಸಾಯುವದಿತ್ತು । ಇದು ಮೊದಲೇ ತಿಳಿದುಹೋಗಿತ್ತು ।
ಆದರೂ ಯೋಗ್ಯ ಸಮಯವ ನೋಡಿ ಇಂತು । ಬಾಬಾ ಆಟ ಆಡಿದರು ॥ 199

ಸದ್ಗುರುವಿಗೆ ಶರಣು ಹೋದ । ಅವ ಸದ್ಗುರು ರೂಪನೇ ಆದ ।
ಸಿಂಧು ಸ್ನಾನಕೆ ಹೋದ ಉಪ್ಪಿನಗೊಂಬೆಯೊಂದ । ಅದರಿಂದ ಅದು ತಿರುಗಿ ಬಂದೀತೇ ॥200

ಜೀವನು ಜಗದ ಭೋಕ್ತಾರನು । ಈಶ್ವರನು ಜಗದ್ಭೋಗ ಪ್ರದಾತನು ।
ಆದರೂ ಸದ್ಗುರುವು ಮೋಕ್ಷದಾತನು । ನಿಜಾತ್ಮೈಕ್ಯ ನಿಧಾನವದು ॥ 201

ಸದ್ಗುರು ಈಯುವನು ದಿವ್ಯ ದೃಷ್ಟಿ । ಬಳಿಕ ಅದರಿಂದ ಈ ಸಕಲ ಸೃಷ್ಟಿ ।
ಕಾಣುವದು ಒಮ್ಮೆಯೇ ಆ ದೃಷ್ಟಿ । ಸದ್ಗುರುವಿನ ಕೃಪೆಯಾಗಲು ॥ 202

ಹೇಮಾಡ ಸಾಯಿ ಚರಣಕೆ ಶರಣ । ಅದಕೆ ಅರ್ಪಿಸಿಹಗಳಲಿ ದೇಹಾಭಿಮಾನ ।
ಮನದಲೆನ್ನುವ ಸಾವಧಾನ । ಬಾಬಾ ನಿರಭಿಮಾನನೆನ್ನನಿಡಿರಿ ॥ 203

ಮುಂದಿನ ಎರಡು ಅಧ್ಯಾಯಗಳಲಿ । ಹಾಸ್ಯ ವಿನೋದಗಳ ರಸದೂಟದಲ್ಲಿ ।
ಅದರ ಕೌತುಕವನ್ನು ಕೇಳಿ । ಮಹಾರಾಜರು ಹೇಗೆ ಮಾಡುತಿದ್ದರೆಂದು ॥ 204


ನೋಡಲು ವಿನೋದ ಮನರಂಜನೆಯೆನಿಸುವದು । ಆದರೆ ಅತ್ಯಂತ ಬೋಧದಾಯಕ ಇರುವದು ।
ಭಾವಿಕ ಭಕ್ತನು ಅಭ್ಯಸಿಸಲಿದ । ಪರಮ ಸುಖವನು ಪಡೆಯುವನು ॥ 205

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ । ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಗುರುಭಕ್ತ ಲೀಲಾ ದರ್ಶನಂ ಇತಿ ನಾಮತ್ರಯೋವಿಂಶತಿತಿಮೋದ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

318.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತನಾಲ್ಕು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಗತಾಧ್ಯಾಯದಲಿ ಕೊಟ್ಟೆ ವಚನ । ಸಾಯಿನಾಥ ಗುರು ಕರುಣಾಘನ ।
ಹಾಸ್ಯ ವಿನೋದಗಳಲಿ ಕೊಡುವರು ಶಿಕ್ಷಣ । ಹೇಗೆಂಬುದನು ಹೇಳುವೆ ನಾನು ॥ 1

ಹೇಳುವೆನೆಂಬದು ಅಹಂಕಾರ । ಗುರುಪದದಲಿರಬೇಕು ನಿರಂಹಕಾರ ।
ಅದರಿಂದಲೇ ಹುಟ್ಟುವದು ಕಥೆಯ ನಿರ್ಝರ । ಸಾದರರಾಗಿ ಅದ ಸೇವಿಸಬೇಕು ॥ 2

ನಿತ್ಯ ನಿರ್ಮಲ ನಿಷ್ಕಲ್ಮಷ । ಸಾಧು ಸಜ್ಜನ ಮಹಾಪುರುಷ ।
ಎಂತೋ ಸ್ವಚ್ಛ ನಿರಭ್ರ ಆಕಾಶ । ಶುದ್ಧ ನಿರ್ದೋಷರದರಂತೆ ॥ 3

ಮಹಾರಾಜ ಸಾಯಿಯವರ ಭಜನ । ಸ್ವಾರ್ಥ ಪರಮಾರ್ಥಗಳೆರಡರ ಸಾಧನ ।
ಸ್ವಸ್ವರೂಪದಲಿ ಅನುಸಂಧಾನ । ಸಮಾಧಾನ ಅಂತರದಲಿ ॥ 4

ಯಾರ ಮನದಿ ಸ್ವಹಿತದ ಬಯಕೆ ಇರುವದು । ಅವರು ಆದರದಿ ಕಥೆಯ ಕೇಳುವದು ।
ಸಹಜ ಪರಮಾನಂದ ಪಡೆಯುವದು । ಜೀವ ಸಾರ್ಥಕತೆ ಪಡೆಯುವದು ॥ 5

ಶ್ರವಣದಿಂದ ಲಭಿಸುವದು ನಿಜ ವಿಶ್ರಾಂತಿ । ನಿರಸನವಾಗುವದು ಭವಭಯದ ಭ್ರಾಂತಿ ।
ಆಗುವದು ಪರಮಾನಂದ ಪ್ರಾಪ್ತಿ । ಶ್ರೋತೃಗಳಿಗೆ ಸದ್ಗತಿ ಸದ್ಯದಲ್ಲೇ ॥ 6

ಅಂತರ ಸಾಕ್ಷಿಗಳಾದ ಸಾಯಿ ಸಮರ್ಥ । ಪೂರ್ಣ ತಿಳಿದಿರುವರು ಭಕ್ತ ಭಾವಾರ್ಥ ।
ಸಂಪಾದಿಸಿ ನಿಜಕರ್ತವ್ಯಾರ್ಥ । ವಚನ ನಿರ್ಮುಕ್ತವಾಗುವದು ॥ 7

ಬುದ್ಧಿ ಪ್ರೇರಕರಾದ ಸಾಯಿ ಸಮರ್ಥ । ಅವರೇ ನುಡಿಸುವರು ನಿಜವಚನಾರ್ಥ ।
ಯಥಾಮತಿ ಹೇಳುವೆನದರ ಭಾವಾರ್ಥ । ಸ್ವಾರ್ಥ ಪರಮಾರ್ಥ ಸಾಧಕವದು ॥ 8

ಕುರುಡರಲ್ಲ ಅಲ್ಲ ಇರುಳುಗಣ್ಣರು । ಕಣ್ಣಿದ್ದರೂ ಜನ ಕುರುಡರು ।
ಕೇವಲ ದೇಹ ಬುದ್ಧಿಯ ಬಲದಿಂದವರು । ನಿಜಹಿತವ ತಿಳಿಯರು ॥ 9

ದೇಹವಾದರೂ ಹೀಗಿರುವದು । ಒಂದು ಕ್ಷಣದ ಭರವಸೆ ಇರದು ।
ಬೊಗಸೆಯನು ಮುಂದೊಡ್ಡುವೆನೆನ್ನದು । ಅದ ತುಂಬಿ ರಸ ಪಾನ ಮಾಡಲು ॥ 10

ಹಾಸ್ಯ ವಿನೋದಗಳಲಿ ಎಲ್ಲರಿಗೂ ಪ್ರೀತಿ । ಬಾಬಾರದಂತೂ ಅಲೌಕಿಕ ರೀತಿ ।
ವಿನೋದದಲಿಯೇ ಅರ್ಥ ಬಿಂಬಿಸುವರು । ಹಿತಕಾರಕವದು ಎಲ್ಲರಿಗೆ ॥ 11

ಜನ ಹಾಸ್ಯಕ್ಕೆ ಕಿವಿಗೊಡರು । ಆದರೆ ಬಾಬಾರ ಹಾಸ್ಯಕ್ಕೆ ಆಸೆ ಪಡುವರು ।
ಇಷ್ಟ ಪಟ್ಟು ದಾರಿ ಕಾಯುವರು । ಅದು ತಮ್ಮ ಪಾಲಿಗೆ ಬಂದೀತೆಂದು ॥ 12

ಬಹುಶಃ ಹಾಸ್ಯ ಯಾರಿಗೂ ಸೇರದು । ಆದರೀ ಹಾಸ್ಯ ಬಹಳ ಸೇರುವದು ।
ಅದರ ಜೊತೆ ಸೇರಿದಾಗ ಅಭಿನಯವದು । ಕೂಡಲೇ ಕಾರ್ಯ ಸಾಧಿಸುವದು ॥13

ಸಹಜ ಅಭಿನಯ ಅಪ್ರಯಾಸ । ಸಸ್ಮಿತ ವದನ ನಯನವಿಲಾಸ ।
ಇವುಗಳಿಂದ ತುಂಬಿ ಹಾಸ್ಯದಲ್ಲಿ ರಸ । ಆದರ ಸುರಸತೆ ಅವರ್ಣ್ಯ ॥ 14

ಈಗ ಹೇಳುವೆನೊಂದು ಅನುಭವ । ಅಲ್ಪ ಬೋಧನ ಕಥೆ ಅಭಿನವ ।
ಹಾಸ್ಯದಲ್ಲಿಯೇ ಪರಮಾರ್ಥೋದ್ಭವ । ಆ ಶಬ್ದಗೌರವವ ಕೇಳಿರಿ ॥ 15

ವಾರದ ಪ್ರತಿ ರವಿವಾರದಂದು । ಶಿರಡಿಯಲ್ಲಿ ಸಂತಿಯಾಗುವುದು ।
ಜಕಾತಿಕೊಟ್ಟು ಬಯಲಲ್ಲಿ ನಡೆಯುವದು । ವ್ಯಾಪಾರೋದ್ಯೋಗವಲ್ಲಿ ॥ 16

ಅಲ್ಲಿಯೇ ದಾರಿಯ ಬದಿಗೆರಡೂ । ಕಾಯಿ ಪಲ್ಲೆಗಳಗುಡ್ಡೆ ಬೀಳುವುದು ।
ಎಣ್ಣೆ ಎಲೆ ಅಡಿಕೆ ಮಾರಾಟಗಾರರದು । ವ್ಯಾಪಾರವಿರುವುದು ಅಲ್ಲಲ್ಲಿಗೆ ॥ 17

ಇಂಥದೇ ಒಂದು ರವಿವಾರವಿತ್ತು । ಬಾಬಾರ ಹತ್ತಿರ ಮಧ್ಯಾಹ್ನದ ಹೊತ್ತು ।
ಪಾದ ಸಂವಾಹನ ನಡೆದಿತ್ತು । ಆಗೊಂದು ಚಮತ್ಕಾರ ನಡೆಯಿತ್ತು ॥ 18

ಈ ಮಧ್ಯಾಹ್ನ ದ ದರಬಾರಿನಲ್ಲಿ । ಸಾಕಷ್ಟು ಜನರಿರುವರು ನಿತ್ಯದಲ್ಲಿ ।
ಸಂತೆಯ ದಿನ ಬೇರೆ ಅಂಥದರಲ್ಲಿ । ಜನರ ಗದ್ದಲ ತುಂಬಿತ್ತು ॥ 19

ಬಾಬಾರ ಎದುರು ಬೆಳಕಿನಲ್ಲಿ ಕುಳಿತುಕೊಂಡು । ಕೆಳಗೆ ಮುಖ ಬಗ್ಗಿಸಿಕೊಂಡು ।
ಪಾದ ಸಂಹಾನ ನಡೆದಿತ್ತು ನನ್ನದು । ನಾಮ ಸ್ಮರಣದ ಜೊತೆಯಲ್ಲಿ ॥ 20

ಮಾಧವರಾಯರು ಎಡಗಡೆಯಲ್ಲಿ । ವಾಮನಾರಾಯರು ಬಲಗಡೆಯಲ್ಲಿ ।
ಶ್ರೀಮಂತ ಬುಟ್ಟಿಯವರೂ ಆಸ್ಥಳದಲ್ಲಿ । ಸೇವೆಗಾಗಿ ಕುಳಿತಿದ್ದರು ॥ 21

ಕಾಕಾ ಅವರೂ ಅಲ್ಲೇ ಕುಳಿತಿದ್ದರು । ಆಷ್ಟರಲ್ಲಿ ಮಾಧವರಾಯರು ನಕ್ಕರು ।
ಏನು ಅಣ್ಣಾ ಸಾಹೇಬ ಎಂದರು । ಎಂಥದೋ ಕಾಳು ಹತ್ತಿದಂತಲ್ಲಿ ಕಾಣುತ್ತಿಲ್ಲ ॥ 22

ಹೀಗೆಂದು ಕೋಟಿನ ತೋಳು । ಮಾಧವರಾಯರು ಬೆಳಕಿನಿಂದ ಮುಟ್ಟಲು ।
ಕೋಟದ ಮಡಿಕೆಯೊಳಗೆ ಕಾಳು । ಹತ್ತಿ ಕೊಂಡಿದ್ದು ಕಂಡಿತ್ತು ॥ 23

ಅದು ಏನೆಂದು ನೋಡಹೋಗಲು । ಎಡ ಮೊಣಕ್ಕೈಯನು ತಿರುವಲು ।
ಉರುಳಿ ಬೀಳಹತ್ತಿದ್ದವು ಪುಠಾಣಿಕಾಳು । ಜನರು ಆರಿಸಿ ಕೊಳ್ಳುತೊಡಗಿದರು ॥ 24

ಕೂಡಿಸಿದರೆಲ್ಲ ಆರಿಸಿ ಒಂದೊಂದು । ಪುಠಾಣಿ ಕಾಳು ಇಪ್ಪತ್ತು ಇಪ್ಪತ್ತೈದು ।
ಹಾಸ್ಯಕ್ಕೆ ಕಾರಣವಾಯಿತದು । ಎಲ್ಲಿಂದ ಬಂದವವು ಅಲ್ಲಿಗೆ ॥ 25

ತರ್ಕದ ಮೇಲೆ ತರ್ಕ ನಡೆಯಿತು । ಎಲ್ಲರೂ ವಿಚಾರದಲ್ಲಿ ಬಿದ್ದು ।
ಪುಠಾಣಿ ಕಾಳು ಕೋಟಿಗೆ ಅಂಟಿದ್ದು । ವಿಸ್ಮಯವೆಲ್ಲರಿಗಾಯಿತು ॥ 26

ಖಾಕೀ ಕೋಟಿನ ಮಡಿಕೆಗಳೆಷ್ಟು । ಅದರಲ್ಲಿ ನಿಂತುದೇಗೆ ಕಾಳುಗಳು ಇಷ್ಟು ।
ಬಂದುವೆಲ್ಲಿಂದ ಹೇಗೆ ಎಂತು । ಯಾರಿಗೂ ಸರಿಯಾಗಿ ತಿಳಿಯಲ್ಲಿಲ್ಲ ॥ 27

ಪಾದ ಸಂವಾದನೆ ಮಾಡುತ್ತಿದ್ದು । ನಾಮಸ್ಮರಣೆಯಲ್ಲೇ ಚಿತ್ತವಿದ್ದು ।
ನಡುವೇ ಈ ಪುಠಾಣಿಯ ಕಥೆಯಿದ್ದು । ಎಲ್ಲಿಂದ ಉದ್ಭವಿಸಿರಬೇಕು ॥ 28

ಇಷ್ಟೊತ್ತು ಸೇವೆ ಮಾಡುತಿದ್ದು । ಅದುವರೆಗೂ ಅವು ಬೀಳದಿದ್ದದ್ದು ।
ಹಾಗೇ ಉಳಿದಿದ್ದವು ಹತ್ತಿಕೊಂಡು । ಹೇಗೆಂದೆಲ್ಲರಿಗೆ ಆಶ್ಚರ್ಯ ॥ 29

ಆ ಪುಠಾಣಿ ಎಲ್ಲಿಂದ ಬಂದವು । ಮಡಿಕೆಯ ಮೇಲೆ ಹೇಗೆ ನಿಂತಿದ್ದವು ।
ಎಲ್ಲರಿಗೂ ಇದೊಂದು ಆಶ್ಚರ್ಯವು । ಬಳಿಕ ಬಾಬಾ ಏನೆಂದರು ಕೇಳಿ ॥ 30

ಶಿಕ್ಷಣದ ವಿಲಕ್ಷಣ ಪದ್ಧತಿಗಳು । ಅನೇಕರವು ಅನೇಕ ರೀತಿ ಇರಲು ।
ಬಾಬಾ ಅವರವರ (ಗಡಿಯೇಲು) ಕೆಲಸದವಲು । ಶಿಕ್ಷಣವನವರಿಗೆ ಕೊಡುವರು ॥ 31

ಪದ್ಧತಿ ವಿಚಿತ್ರ ಬಾಬಾರದು । ಮೋಜಿನ ರೀತಿಯು ನೆನಪಿಡತಕ್ಕದ್ದು ।
ಬೇರೆಲ್ಲಿಯೂ ಹೀಗೆ ನೋಡಿದ್ದು ಕೇಳಿದ್ದು । ನನಗೆ ಪ್ರಚೀತಿಯಲಿಲ್ಲವೇ ಇಲ್ಲ ॥ 32

ಎಂದರು "ಇವಗೆ ಕೆಟ್ಟ ಚಾಳಿ ಇರುವದು । ಒಬ್ಬನೇ ತಾನು ಸವಿಯುವದು ।
ಇಂದು ಸಂತೆಯ ಸಮಯವನು ಕಂಡು । ಪುಠಾಣಿ ಮೆಲಕುತ್ತ ಬಂದನೀತ ॥ 33

ಒಬ್ಬೊಬ್ಬರೇ ತಿನ್ನುವುದು ಒಳ್ಳೆಯದಲ್ಲ । ಚಾಳಿ ಇವನದು ನನಗೆ ಗೊತ್ತಿಲ್ಲ ।
ಈ ಪುಠಾಣಿಗಳದೇ ಪುರಾವೆ ಸಿಕ್ಕಿತ್ತಲ್ಲ । ಸುಮ್ಮನೇ ವಿಸ್ಮಯವೇತಕೆ" ॥ 34

ಆಗ ನಾನೆಂದೆ ಯಾರಿಗೂ ಕೊಡದಿದ್ದು । ಗೊತ್ತಿಲ್ಲ ನನಗೆ ಒಬ್ಬನೇ ತಿನ್ನುವದು ।
ಆಗ ಇಂಥ ಚಾಳಿಯ ಸುದ್ದಿಯೆಲ್ಲಿಯದು । ಮೈಗೆ ಮತ್ತಿದರೆ ಮೆತ್ತಿರಲಿ ॥ 35

ಬಾಬಾ ಇಷ್ಟೊತ್ತಿನವರೆಗೆ ನಾನಿಂದು । ಸಂತೆಯನ್ನೇ ನೋಡಿಲ್ಲ ಶಿರಡಿಯದು ।
ಹೋದರೋ ಪುಠಾಣಿಕೊಂಡು । ತಿನ್ನುವ ಮಾತು ದೂರುಳಿಯಿತು ॥ 36

ಇಂಥದರ ಸವಿ ಇದ್ದವರಿಗಿರಲಿ । ಮಾತ್ರ ನನಗಿಲ್ಲ ಇಂಥ ಚಾಳಿ ।
ಬಾಯಿಗೆ ಹಾಕೆನು ನಾ ಏನೇ ಇರಲಿ । ಬೇರೆಯವರಿಗೊಂದಿಷ್ಟು ಕೊಡದೆ ॥ 37

ನೋಡಿರೀಗ ಬಾಬಾರ ಯುಕ್ತಿ । ತಮ್ಮ ಚರಣದಲಿ ಹುಟ್ಟಿಸಲು ಭಕ್ತಿ ।
ಕೇಳಿ ನನ್ನ ಸ್ಪಷ್ಟೋಕ್ತಿ । ನುಡಿದ ಮಾತಿಗೆ ಚಿತ್ತ ಕೊಡಿ ॥ 38

"ಹತ್ತಿರವಿದ್ದ ಅವರಿಗೆ ಕೊಡುವಿ । ಇರದಿದ್ದಲ್ಲಿ ನೀನೇನು ಮಾಡುವಿ ।
ನಾನಾದರೂ ಏನು ಮಾಡಬೇಕೆನ್ನುವಿ । ನೆನೆಸುವಿಯಾ ನೀ ನನ್ನನ್ನು ॥ 39

ನಾನಿಲ್ಲವೇ ನಿನ್ನ ಬಳಿಗೆ । ಕೊಡುವಿಯೇನು ತುತ್ತು ನನಗೆ" ।
ಪುಠಾಣಿಯ ನಿಮಿತ್ತದಲಿ ಹೀಗೆ । ನಿಶ್ಚಲ ತತ್ವದ ಬಿಂಬಿಸಿದರು ॥ 40

ದೇವತಾ-ಪ್ರಾಣ-ಅಗ್ನಿ-ವಂಚನ । ವೈಶ್ವ ದೇವಾಂತ್ಯದಲಿ ಅತಿಥಿ ವರ್ಜನ ।
ಅದರಿಂದ ಮಾಡಲು ಪಿಂಡ ಪೋಷಣ । ಮಹದ್ದೋಷ ಆ ಅನ್ನಕೆ ॥ 41

ಎನಿಸುವದಿದೊಂದು ಸಣ್ಣ ತತ್ವ । ವ್ಯವಹಾರದಿ ನೋಡಲಾಗಿ ಅತಿ ಮಹತ್ವ ।
ರಸಾಸ್ವಾದನೆಯು ಉಪಲಕ್ಷಣತ್ವ । ಪಂಚವಿಷತ್ವ ಇದರಲ್ಲಿ ॥ 42

ವಿಷಯದಲಿ ಹವ್ಯಾಸ ಇರುವವನಿಗೆ । ಪರಮಾರ್ಥವು ಆಸರೆಯಾಗದವಗೆ ।
ಅದನ್ನೇ ನಂಬಿ ಇದ್ದವರಿಗೆ । ಪರಮಾರ್ಥವು ದಾಸ ಅಂಥವರಿಗೆ ॥ 43

"ಯದಾ ಪಂಚಾವತಿಷ್ಠಂತೆ" ಎಂಬ ಮಂತ್ರದಲಿ । ಏನು ಹೇಳಿದೆ ಆ ಶ್ರುತಿಗಳಲಿ ।
ಅದನ್ನೇ ಬಾಬಾ ವಿನೋದದ ಧಾಟಿಯಲ್ಲಿ । ದೃಢ ಪಡಿಸಿದರೆಲ್ಲರಿಗದ ॥ 44

ಶಬ್ದ ಸ್ಪರ್ಶ ರೂಪಗಂಧ । ಈ ಚತುಷ್ಟಯಗಳದೂ ಇದೇ ಸಂಬಂಧ ।
ಎಂಥ ಬೋಧಪ್ರದವಾಗಿದೆ ಈ ಪ್ರಬಂಧ । ಕಥಾನುಬಂಧವು ಬಾಬಾರದು ॥ 45

ಮನಬುದ್ಧ್ಯಾದಿ ಇಂದ್ರೀಯಗಣ । ಮಾಡಬಯಸಲು ವಿಷಯ ಸೇವನ ।
ಮಾಡಬೇಕು ಮೊದಲು ನನ್ನ ಸ್ಮರಣ । ಆಗ ಅಂಶಾಂಶಗಳಿಂದದು ಸಮರ್ಪಣೆ ನನಗೆ ॥ 46

ಇಂದ್ರಿಯಗಳ ವಿಷಯವಿಲ್ಲದಿರುವದು । ಕಲ್ಪಾಂತದಲೂ ಹೀಗೆ ಆಗದು ।
ಆ ವಿಷಯಗಳನು ಅದೇ ಗುರುಪದಕೆ ಅರ್ಪಿಸಲದು । ಸಹಜದ ಆಸಕ್ತಿ ಆಗಿ ಉಳಿಯುವದು ॥ 47

ಕಾಮವಿದ್ದರೂ ಮದ್ವಿಷಯದ್ದೇ ಇರಬೇಕು । ಕೋಪವಾದರೂ ನನ್ನ ಮೇಲೆಯೇ ಕೋಪಿಸಬೇಕು ।
ಅಭಿಮಾನ ದುರಾಗ್ರಹಗಳನೂ ಸಮರ್ಪಿಸಬೇಕು । ಭಕ್ತಿ ಪೂರ್ವಕವಾಗಿ ಮತ್ಪದದಲಿ ॥ 48

ಕಾಮ ಕ್ರೋಧ ಅಭಿಮಾನಗಳು ಯಾವಾಗ । ತಡೆಯದಷ್ಟು ವ್ಯಗ್ರವಾದಾಗ ।
ನನ್ನನ್ನೇ ಗುರಿ ಇಟ್ಟುಕೊಂಡಾಗ । ಲಕ್ಷವಿಟ್ಟು ನನ್ನ ಮೇಲೆ ಪ್ರಯೋಗಿಸಬೇಕು ॥ 49

ಕ್ರಮಕ್ರಮವಾಗಿ ಈ ರೀತಿಯಲಿ । ಹರಿ ಮಾಡುವ ವೃತ್ತಿ ನಿಕೃಂತವನಲ್ಲಿ ।
ವಿಕಾರತ್ರಯಗಳ ಉದ್ರೇಕವನಲ್ಲಿ । ಪರಿಹರಿಸುವನಾ ಗೋವಿಂದ ॥ 50

ಬಹುತರವಾಗಿ ಈ ವಿಕಾರಗಳು । ಮತ್ಸ್ವರೂಪದಲೇ ಲಯವಾಗಲು ।
ಅಥವಾ ಅವು ಮದ್ರೂಪವೇ ಆಗಲು । ಮತ್ಪದದಲಿ ವಿಶ್ರಾಮ ಪಡೆಯುವವು ॥ 51

ಹೀಗೆ ನಡಯಲು ಅಭ್ಯಸನ । ವೃತಿಗಳು ತಾನೇ ಆಗುವವು ಕ್ಷೀಣ ।
ಕಾಲಾಂತರದಲಿ ಸಮೂಲ ನಿರ್ಮೂಲನ । ವೃತ್ತಿ ಶೂನ್ಯ ಮನವಾಗುವದು ॥ 52

ಗುರು ಹತ್ತಿರವೇ ಇರುವನಾವಾಗಲೂ । ಹೀಗೆ ದೃಢ ಬುದ್ಧಿ ಬೆಳೆಯಲು ।
ಅಂಥವರಿಗೆ ವಿಷಯ ಬಾಧೆಗಳು । ಕಾಡಲಾರವು ಎಂದೆಂದೂ ॥ 53

ಎಲ್ಲಿ ಈ ಸದ್ಭಾವ ದೃಢವಾಯಿತು । ಅವನ ಭವಬಂಧ ಕಳಚಿತು ।
ಗುರು ಪ್ರಕಟಿಸುವ ಪ್ರತಿ ವಿಷಯದಲಿಂತು । ವಿಷಯವೇ ಗುರುರೂಪವಾಗುವದು ॥ 54

ಯತ್ಕಿಂಚಿತ ವಿಷಯ ಸೇವನೆಯಾಗಲು । ಬಾಬಾ ಇರುವರು ಹತ್ತಿರದೊಳು । ಎನಿಸಿ
ಸೇವ್ಯಾಸೇವ್ಯತೆಯ ವಿಚಾರಗಳು । ತತ್ಕಾಲದಲಿ ಮನದಿ ಬರುವವು ॥ 55

ಅಸೇವ್ಯ ವಿಷಯ ಸಹಜದಲಿ ಬಿಡುವದು । ವ್ಯಸನೀ ಭಕ್ತರ ವ್ಯಸನ ಬಿಡುವದು ।
ಅಸೇವ್ಯದ ವಿಷಯದಲಿ ಮನ ಹೇಸುವದು । ಈ ಪಾಠವ ತಪ್ಪದೇ ನೀಡಲು ॥ 56

ವಿಷಯ ನಿಯಮನ ಮಾಡಲು ಮನಸಾಗುವದು । ವೇದವು ನಿಯಮದ ಮೂಲಸ್ಥಾನವಿರುವದು ।
ವಿಷಯ ಸೇವನೆಯೂ ನಿಯಮಾನುಸಾರವಾಗುವದು । ಸ್ವೇಚ್ಛಾಚಾರವು ನಡೆಯದು ॥57

ಮನಸಿಗಿಂಥ ರೂಢಿಯಾಗಲು । ಕ್ಷೀಣಿಸುವವು ವಿಷಯ ಕಲ್ಪನೆಗಳು ।
ರುಚಿ ಹುಟ್ಟುವದು ಗುರುಭಜನೆಯೊಳು । ಶುದ್ಧ ಜ್ಞಾನ ಅಂಕುರಿಸುವದು ॥ 58

ಶುದ್ಧ ಜ್ಞಾನದ ಬೆಳವಣಿಗೆಯಾಗಲು । ಹರಿವವು ದೇಹಬುದ್ಧಿಯ ಬೇಡಿಗಳು ।
ಅಂಥ ಬುದ್ಧಿಯ ಅಹಂ ಬ್ರಹ್ಮದಲಿ ಮುಳುಗುವದು । ಸುಖದ ಆಗರ ಕೈಗೆಟುಕುವದು ॥ 59

ಈ ದೇಹವು ಕ್ಷಣಭಂಗುರವಿದ್ದರೂ ಅದು । ಪರಮ ಪುರುಷಾರ್ಥ ಸಾಧಕವಾಗಿರುವದು ।
ಪ್ರತ್ಯಕ್ಷ ಮೋಕ್ಷಕ್ಕಿಂತಲೂ ಅಧಿಕವಿದು । ಭಕ್ತಿಯುಗದಾಯಕವಿರುವದರಿಂದ ॥ 60

ನಾಲ್ಕೂ ಪುರುಷಾರ್ಥಗಳಿಗಿಂತಲೂ ಈ ಪಂಚಮ ಪುರಷಾರ್ಥ । ಒಂದು ಮೆಟ್ಟಿಲು ಮೇಲು ।
ಯಾವುದಕೂ ಆಗದು ಈ ಯೋಗವು ಸರಿಗಟ್ಟಲು । ಅಲೌಕಿಕ ರೀತಿ ಈ ಭಕ್ತಿಯದು ॥ 61

ಗುರುಸೇವೆಯಿಂದ ಕೃತಾರ್ಥನಾದವನು । ಅವನೇ ಯಥಾರ್ಥದಲಿದರ ಮರ್ಮವ ತಿಳಿವನು ।
ಭಕ್ತಿಜ್ಞಾನ ವೈರಾಗ್ಯಗಳೇ ಸ್ವಾರ್ಥವೆನಿಸಿದವನು । ಅವನೇ ಪರಮಾರ್ಥವ ಪಡೆಯುವನು ॥ 62

ಗುರು ಮತ್ತು ದೇವ ಇವರಲಿ । ಭೇದ ಕಾಣುವದು ಯಾರ ಚಿತ್ತದಲಿ ।
ಅಂಥವನು ಅಖಿಲ ಭಾಗವತದಲ್ಲಿ । ಭಗವಂತನನೆಂದೂ ಕಂಡಿಲ್ಲ ॥ 63

ಸಂಪೂರ್ಣ ರಾಮಾಯಣ ಓದಿದರೂ । ತಿಳಿಯಲಿಲ್ಲ ರಾಮಗೆ ಸೀತೆ ಯಾರು ।
ಗುರು ಮತ್ತು ದೇವರು ಅಭಿನ್ನರು । ಇದನರಿಯಬೇಕು ದ್ವೈತ ಭಾವವ ಬಿಟ್ಟು ॥ 64

ನಿರ್ಮಲ ಗುರುಸೇವೆ ಲಭಿಸಿದಾಗ । ವಿಷಯವಾಸನೆ ನಿರ್ಮೂಲನೆಯಾಗ ।
ಸೋಜ್ವಲ ಶುದ್ಧ ಚಿತ್ತವಾಗುವದಾಗ । ಉಜ್ವಲ ಸ್ವರೂಪವು ಪ್ರಕಟಿಸುವದು ॥ 65

ಇಚ್ಛಾ ಶಕ್ತಿ ಪ್ರಬಲವಾಗಲು । ಪುರಾಣಿಯೇನು ಬಾಬಾರ ಅಂಗೈ ಧೂಳು ।
ಇದಕ್ಕಿಂತ ವಿಲಕ್ಷಣ ಲೀಲೆ ತೋರಲು । ಹೊತ್ತು ಗೊತ್ತೆಂದೂ ಬೇಕಿಲ್ಲ ॥ 66

ಕೇವಲ ಹೊಟ್ಟೆಯ ಪಾಡಿಗಾಗಿ । ಐಂದ್ರಜಾಲಿಕನು ಜನದಿಗಾರುಡಿಗನಾಗಿ ।
ಮಂತ್ರಿಸಿದ ಎಲುವನ್ನು ತಿರುಗಿಸಲಾಗಿ । ಬೇಕಾದ ಪದಾರ್ಥಗಳ ತರಿಸುವನು ॥ 67

ಅಲೌಕಿಕ ಗಾರುಡಿಗ ಸಾಯಿನಾಥನು । ಅವನ ಆಟದ ಹಿರಿಮೆ ಏನು ।
ಇಷ್ಟಪಟ್ಟರೆ ಮಾಡದೆ ಕ್ಷಣದ ವಿಲಂಬವನು । ಬೇಕಾದಷ್ಟು ಪುರಾಣಿ ತರಿಸಬಹುದು ॥ 68

ಆದರೀ ಕಥೆಯ ಸಾರವೇನು । ನೋಡಬೇಕು ನಾವೀಗ ಅದನು ।
ಹಸಿವೆಯೆಂದು (ರುಚಿಗೆಂದು) ಯಾವುದೇ ವಿಷಯವನು । ಬಾಬಾರ ಬಿಟ್ಟು ಸೇವಿಸಬಾರದು ॥ 69

ಮನಕೆ ಈ ರೀತಿ ಪಾಠ ಕಲಿಸಲು । ಹೊತ್ತು ಹೊತ್ತಿಗೆ ಅದರ ನೆನಪಾಗಲು ।
ಕೊಡು ತೆಗೆದುಕೊಳ್ಳುವಾಗ ಸಾಯಿ ಚರಣಗಳು । ಅವುಗಳ ಅನುಸಂಧಾನ ಉಳಿಯುವದು ॥70

ಈ ಶುದ್ಧ ಬ್ರಹ್ಮ ಸುಗುಣ ಮೂರ್ತಿಯದು । ಖಚಿತವಾಗಿ ಕಣ್ಣೆದುರು ನಿಲ್ಲುವದು ।
ಭಕ್ತಿ ವಿರಕ್ತಿ-ಮುಕ್ತಿ ಮೂಡುವದು । ಪರಮಾತ್ಮ ಪ್ರಾಪ್ತಿಯೂ ಲಭಿಸುವದು ॥ 71

ಸುಂದರ ರೂಪವ ಕಣ್ಣಿಂದ ನೋಡಲು । ಹರಿವವು ಸಂಸಾರದ ಹಸಿವೆ ನೀರಡಿಕೆಗಳು ।
ಐಹಿಕ ಸುಖದ ಬಯಕೆ ತಪ್ಪಲು । ಮನವು ಸಮಾಧಾನ ಹೊಂದುವದು ॥ 72

ಹಾಡು ನೆನಪಾಗದು ನೆನಪಿಸಿಕೊಳ್ಳಲು । ಆದರೆ ನೆನಪಾಗುವದದು ಕುಳಿತಾಗ ಬೀಸಲು ।
ಹಾಗೆ ಈ ಚಣಕಲೀಲೆ ಹೇಳುತಿರಲು । ಸುಧಾಮನ ಕಥೆ ನೆನಪಾಯಿತು ॥ 73

ಒಮ್ಮೆ ಬಲರಾಮ, ಕೃಷ್ಣ ಸುದಾಮರು । ಗುರುವಿನಾಶ್ರಮದಲ್ಲಿ ಇರುತಿದ್ದರು ।
ಗುರುಗಳು ಕೃಷ್ಣ ಬಲರಾಮರ ಕಳಿಸಿದರು । ಸೌದೆ ತರಲೆಂದು ಅಡವಿಗೆ ॥ 74

ಗುರುಪತ್ನಿಯ ಆಜ್ಞೆಯಾಗಲು । ಕೃಷ್ಣ ಬಲರಾಮರು ಅರಣ್ಯಮಾರ್ಗದೊಳು ।
ನಡೆಯಹತ್ತಿದಾಗ ಸುಧಾಮನನೂ ಕಳಿಸಿದಳು । ಕೂಡಲೇ ಅವರ ಹಿಂದಿಂದ ॥ 75

ಅವನ ಹತ್ತಿರ ಕಡಲೆ ಕೊಟ್ಟಳು । ಅರಣ್ಯದಲಿ ತಿರುಗಾಡಿ ಹಸಿವೆಯಾಗಲು ।
ಮೂವರೂ ಅವ ತಿನ್ನಲು । ಗುರುಪತ್ನಿ ಅಜ್ಞಾಪಿಸಿದ್ದಳು ॥ 76

ಅಡವಿಯಲಿ ಕೃಷ್ಣ ಸಿಕ್ಕಾಗ ಮುಂದೆ । ಎಂದ "ಅಣ್ಣಾ ನೀರಡಿಕೆಯಾಗಿದೆ" ।
ಆಗ ಕಡಲೆಯ ಸುದ್ದಿಯನೆತ್ತದೇ । ಸುಧಾಮಾ ಏನೆಂದ ಅದ ಕೇಳಿ ॥ 77

ಹಸಿದ ಹೊಟ್ಟೆಯಲಿ ನೀರು ಕುಡಿಯಬಾರದು । ಒಂದು ಕ್ಷಣ ಹಾಗೇ ವಿಶ್ರಮಿಸಿಕೊಳ್ಳುವದು ।
ಎಂದನಾದರೂ ಹೇಳ ಕಡಲೆ ತಿನ್ನುವದು । ಕೃಷ್ಣ ತೊಡೆಯ ಮೇಲೆ ಮಲಗಿದ ॥ 78

ಕೃಷ್ಣನಿಗೆ ನಿದ್ದೆ ಹತ್ತಿದ್ದು ನೋಡಿದ । ಸುದಾಮಾ ಕಡಲೆ ತಿನ್ನಹತ್ತಿದ ।
ಅಣ್ಣಾ ಏನಿದು ತಿನ್ನುವ ಶಬ್ದ । ಕೃಷ್ಣ ನಾಗ ಕೇಳಿದಲಿದನ ॥ 79

ತಿನ್ನಲು ಇಲ್ಲೇನಿರುವದು । ಚಳಿಗೆ ಹಲ್ಲುಗಳ ಶಬ್ದವಾಗುತಿರುವದು ।
ಮುಖದಿಂದ ಸ್ಪಷ್ಟ ಉಚ್ಚಾರಬಾರದು । ವಿಷ್ಣು ಸಹಸ್ರನಾಮದ್ದು ॥ 80

ಕೇಳಿ ಈ ಸುಧಾಮನ ಉತ್ತರ । ಸರ್ವಸಾಕ್ಷಿಯಾದ ಕೃಷ್ಣ ಪರಾತ್ಪರ ।
ಎಂದ ನನಗೂ ನಿಜದಲಿ ಇದರ । ಹಾಗೇ ಕನಸು ಬಿದ್ದಿತು ॥ 81

ಒಬ್ಬರ ಪಾಲಿನದನು ಮತ್ತೊಬ್ಬ ತಿನ್ನುತಿರಲು । ಏನು ತಿನ್ನತಿರುವೆಯಂದಾತ ಕೇಳಲು ।
ಇಲ್ಲೇನಿದೆ ಮಣ್ಣು ತಿನ್ನಲು । ಎಂದಾಗ ವಾಣಿಯೊಂದು ತಥಾಸ್ತು ಎಂದಿತು ॥ 82

ಅಣ್ಣಾ ಸ್ವಪ್ನ ಮಾತ್ರವೇ ಇದು । ಉಂಟೇ ನೀವು ನನ್ನ ಬಿಟ್ಟು ತಿನ್ನುವದು ।
ಪ್ರಶ್ನೆಯನೂ ಕನಸು ನೋಡುತ್ತಲೇ ಕೇಳಿದದು । ಆಗ ಏನು ತಿನ್ನು ತಿರುವಿರೆಂದು ॥ 83

ಸುಧಾಮನಿಗೆ ಪೂರ್ವಾಶ್ರಮದಲ್ಲಿ । ಕೃಷ್ಣಲೀಲೆ ತಿಳಿದಿದ್ದಲ್ಲಿ ।
ಮುಂದೆ ಪ್ರಮಾದ ನಡೆಯುತ್ತಿತ್ತೆಲ್ಲಿ । ಅದರ ಪರಿಣಾಮ ಭೋಗಿಸಬೇಕಾಗುತಿರಲಿಲ್ಲ ॥ 84

ಸಾಧಾರಣವಿತ್ತೇ ಅದಾದರೂ । ಇದನ್ನು ತಿಳಿದಿರುವರೆಲ್ಲರೂ ।
ಆದರೂ ಜನ-ಒಬ್ಬೊಬ್ಬರೇ ತಿನ್ನುವರು । ಅವರು ನೆನಪಿಡಬೇಕೀ ಉದಾಹರಣೆಯನು ॥ 85

ಯಾರಿಗೆ ಕೃಷ್ಣ ಪರಮಾತ್ಮನೇ ಸಖನಾಗಿದ್ದು । ಸುಧಾಮನಂಥ ಭಕ್ತ ತಾನಿದ್ದು ।
ನೀತಿಯಲಿ ಒಂದಿಷ್ಟು ಬಂತು ಕುಂದು । ಆದರಿಂದ ಸಂಸಾರದಲಿ ಮೋಸ ಹೋದ ॥ 86

ಅಂಥವನು ಸ್ವಸ್ತ್ರೀಯ ಕಷ್ಟದಿಂದ ತಂದ । ಮುಷ್ಟಿ ಅವಲಕ್ಕಿಯ ಪ್ರೀತಿಯಿಂದ ನೀಡಿದ ।
ಕೃಷ್ಣ ಪ್ರಸನ್ನ ಚಿತ್ತನಾದ । ಐಶ್ವರ್ಯವಿತ್ತು ತೃಪ್ತಿ ಪಡಿಸಿದನವನ ॥ 87

ಇರಲಿ ಈಗ ಮತ್ತೂ ಒಂದು । ವಾರ್ತೆಯ ಹೇಳುವೆನು ಬೋಧ ಪ್ರದವಾದುದು ।
ಮೊದಲು ಆನಂದ-ವಿನೋದ ಸುಖದ್ದು । ಅಂತ್ಯದಲಿ ಬೋಧವೇ ಪ್ರಮುಖವಿರುವದು ॥ 88

ಕೆಲವರಿಗೆ ಸೇರುವದು ಪರಮಾರ್ಥ ಬೋಧ । ಕೆಲವರಿಗೆ ತರ್ಕಯುಕ್ತಿವಾದ ।
ಮತ್ತೊಬ್ಬರಿಗಿಷ್ಟ ಹಾಸ್ಯ ವಿನೋದ । ಆನಂದವೇ ಆನಂದ ಎಲ್ಲರಿಗೂ ॥ 89

ಹಾಸ್ಯ ವಿನೋದವೇ ಇದೂ ಒಂದು । ಸ್ತ್ರೀ ಮತ್ತು ಪುರುಷ ಹಟಹಿಡಿದು ।
ಸಾಯಿ ದರಬಾರಿನಲ್ಲಿ ತಂಟೆಯಾದುದು । ಕೊನೆಗೆ ಕಲಂಕರಹಿತವಾಗಿ ಮುಗಿದುದು ॥ 90

ಈ ಕಥೆಯೂ ಪರಮ ಸರಸ । ಶ್ರೋತೃಗಳಿಗೆ ತಂದೀತು ಹರುಷ ।
ಭಕ್ತ ಜಗಳಾಡಲು ವಸ ವಸ । ಹಾಸ್ಯರಸ ಹರಡೀತು ॥ 91

ಭಕ್ತ ದಾಮೋದರ ಘನಶ್ಯಾಮ । ಬಾಬರೆ ಅವರ ಉಪನಾಮ ।
ಅಣ್ಣಾ ಬೆಂಚಣೀಕರ ಕರೆವನಾಮ । ನಿಃಸೀಮ ಪ್ರೇಮ ಬಾಬಾರದವಗೆ ॥ 92

ಬಹಳ ಒರಟು ಸ್ವಭಾವದವರು । ಯಾರ ಹಂಗಿಗೂ ಒಳಗಾಗದವರು ।
ವಿಹಿತಾವಿಹಿತವರಿಯದೆ ಸ್ಪಷ್ಟ ನುಡಿವವರು । ಹಿತಾಹಿತವ ನೋಡರು ॥ 93

ಅಣ್ಣಾರ ವೃತ್ತಿ ಇದ್ದರೂ ಕಟ್ಟುನಿಟ್ಟು । ಅಷ್ಟೇ ಸಾತ್ವಿಕ ಮತ್ತು ಸ್ನೇಹಮಯವಿತ್ತು ।
ತುಂಬಿದ ಬಂದೂಕಿನಂಥ ತಲೆ ಇತ್ತು । ಕಿಡಿ ತಾಕಿದರೆ ಢಬ್ ಎನ್ನುತಿತ್ತು ॥ 94

ಯಾವ ಕೆಲಸಕ್ಕೂ ತಡವಿಲ್ಲ । ಆಮೇಲೆ ಎಂಬ ಮಾತೇ ಇಲ್ಲ ।
ಯಾರ ದಾಕ್ಷಿಣ್ಯಕ್ಕೂ ಬಗ್ಗುವವರಲ್ಲ । ವ್ಯವಹಾರವೆಲ್ಲ ಚೊಕ್ಕ ಅವರದು ॥ 95

ಕೈಯಲಿ ಕೆಂಡವನ್ನಾದರೂ ಹಿಡಿಯಬಹುದು । ಅಣ್ಣಾರ ಸಹವಾಸ ಅದಕಿಂತ ಕಷ್ಟದ್ದು ।
ಆದರೂ ನಿಷ್ಕಪಟ ಸ್ವಭಾವವಿದ್ದು । ಅದರಿಂದಲೇ ಬಾಬಾರ ಪ್ರೀತಿ ಅವರಲ್ಲಿ ॥ 96

ಹೀಗೆ ಒಮ್ಮೆ ಮಧ್ಯಾನ್ಹದ ಹೊತ್ತು । ಮಶೀದಿಯಲಿ ದರಬಾರ ಕೂಡಿತ್ತು ।
ವಾಮಹಸ್ತವ ಕಟಕಟೆಯ ಮೇಲಿಟ್ಟು । ಬಾಬಾರ ಸವಾರಿ ಕುಳಿತಿತ್ತು ॥ 97

ಬಾಬಾ ಸ್ವಸ್ಥರಾಗಿ ನೋಡುತಿದ್ದರು । ತಿಳಿಯದಂತೆ ಭಕ್ತರಲಿ ಜಗಳ ಹಚ್ಚುವರು ।
ಸಿಟ್ಟು ಶೆಡವುಗಳೆಲ್ಲ ಮುಗಿದ ಬಳಿಕವರು । ಬುದ್ಧಿವಾದವ ಹೇಳುವರವರಿಗೆ ॥ 98

ಒಬ್ಬರು ಬಾಬಾರ ಬದಿಗಳನೊತ್ತುವರು । ಇನ್ನೊಬ್ಬರು ಕಾಲು ಒತ್ತುವರು ।
ಮತ್ತೊಬ್ಬರು ಹೊಟ್ಟೆ ಬೆನ್ನು ತಿಕ್ಕುವರು । ಸೇವೆ ಈ ರೀತಿಯಲಿ ನಡೆಯುತಿತ್ತು ॥ 99

ಬಾಬಾ ಬಾಲ ಬ್ರಹ್ಮಚಾರಿಗಳು । ಊರ್ಧ್ವರೇತರು ಶುದ್ಧಾಚಾರಿಗಳು ।
ಅವಕಾಶವೀಯುವರು ಎಲ್ಲರಿಗೂ ಸೇವೆ ಮಾಡಲು । ನಾರೀ ನರ ಸಮಸ್ತರಿಗೆ ॥ 100

ಅಣ್ಣಾ ಹೊರಗೆ ಬಗ್ಗಿ ನಿಂತಿದ್ದರು । ಮೆಲ್ಲಮೆಲ್ಲಗೆ ಎಡಗೈ ಒತ್ತುತ್ತಿದ್ದರು ।
ಆಗ ಬಲಗಡೆಯ ಪರಿಸ್ಥಿತಿಯಾದರೂ । ಹೇಗಿತ್ತು ಸ್ವಸ್ಥರಾಗಿ ಕೇಳಿರಿ ॥ 101

ಆ ಕಡೆಗೆ ಒಬ್ಬ ಸ್ತ್ರೀ ಕುಳಿತಿದ್ದು । ಅವಳು ಬಾಬಾರ ಅನನ್ಯ ಭಕ್ತಳಿದ್ದು ।
ಬಾಬಾ ಅವಳಿಗೆ ಅಮ್ಮ ಎನುತಿದ್ದು । ಜನರು ಮಾವಶೀಬಾಯಿ ಎನುತಿದ್ದರು ॥ 102

ಮಾವಶೀಬಾಯಿ ಎಂಬರೆಲ್ಲರೂ । ವೇಣೂಬಾಯಿ ಅವಳ ನಿಜ ಹೆಸರು ।
ಕೌಜಲಗಿ ಅವರ ಮನೆತನದ ಹೆಸರು । ಅನುಪಮ ಭಾವ ಸಾಯಿ ಚರಣದಿ ॥ 103

ಅಣ್ಣಾರಿಗೆ ಐವತ್ತು ವರ್ಷ ಮುಗಿದಿತ್ತು । ಬಾಯಲ್ಲಿ ಒಂದೂ ಹಲ್ಲೂ ಇರದಾಗಿತ್ತು ।
ಆ ಮಾವಶೀಗಾದರೂ ವಯಸ್ಸಾಗಿತ್ತು । ಇಬ್ಬರಲಿ ಜಗಳ ಉಂಟಾಯಿತು ॥ 104

ಅಣ್ಣಾ ಸಹಕುಟುಂಬ ಸೇವೆ ಮಾಡುತಿರಲು । ಆಯೀ ವಿಧವೆಯಾಗಿದ್ದಳು ।
ಹೊಟ್ಟೆ ಬೆನ್ನುಗಳ ಒತ್ತುತ್ತಿರಲು । ನಿಶ್ವಾಸವ ತಡೆಯಲಾಗಲಿಲ್ಲ ॥ 105

ಸಾಯಿ ಸೇವೆಯಲಿ ಸಬಳ । ಮಾವಶೀಬಾಯಿ ಮನದಿ ನಿರ್ಮಲ ।
ತೊಡಕಿಸಿ ಒಂದರಲ್ಲೊಂದು ಕೈಗಳ । ಹೊಟ್ಟೆ ತಿಕ್ಕ ತೊಡಗಿದಳು ॥ 106

ಹಿಂದಿನಿಂದ ಹೊಟ್ಟೆಯ ಮೇಲೆ । ಬಾಬಾರ ಹಿಡಿದುಕೊಂಡು ಎರಡೂ ಕೈಲೇ ।
ಮಜ್ಜಿಗೆಯ ಮಡಿಕೆಯ ತೆರದಲೇ । ಒತ್ತಿ ಒತ್ತಿ ಕಡೆಯುತಿದ್ದಳು ॥ 107

ಚಿತ್ತವಿಟ್ಟು ಸಾಯಿ ನಾಮದಿ । ಒತ್ತುತ್ತಿದ್ದಳು ಮಾವಶೀ ನಿರ್ಭಯತನದಿ ।
ಬಾಬಾರೂ ಹಾಯಹುಯ ಎನ್ನದೆ । ಆರಾಮವೆನಿಸುವಂತೆ ಕುಳಿತಿದ್ದರು ॥ 108

ಒತ್ತುವ ಆ ವಿಲಕ್ಷಣ ರೀತಿ । ಕರಗುವಂತೆ ಬೆನ್ನು ಹೊಟ್ಟೆ ।
ಪ್ರೇಮದಿಂದಲೇ ಆದರೂ ಆ ಸಮಯದಿ । ಮನದಿ ದಯೆ ಹುಟ್ಟಿಸುವಂತಿತ್ತು ॥109

ಸಾಯಿಯ ಈ ನಿಷ್ಕಪಟ ಪ್ರೇಮ । ಕೊಟ್ಟು ತಕ್ಕೊಳ್ಳುವರು ಸೇವೆ ಆನುತ್ತಮ ।
ಇಲ್ಲವೇ ನಿಜಸ್ಮರಣವು ಅವಿಶ್ರಮ । ದೊರೆತು ಭಕ್ತರ ಕ್ಷೇಮವಾಗಲೆಂದು ॥ 110

ತಮ್ಮ ತಪಶ್ಚರ್ಯಯದಷ್ಟು । ಅದರಿಂದ ಸಿಗುವದು ಸಂತ ಸಂಗತಿ ಇಂತು ।
ಆದರೆ ಬಾಬಾರೇ ದೀನ ವತ್ಸಲರೆನಿತು । ಭಕ್ತರ ಉಪೇಕ್ಷಿಸಲಾರರು ॥ 111

ಏನು ಆ ಕುಲುಕಾಟದ ಬಗೆ । ಬಾಬಾ ಅಗಳಾಡುತಿದ್ದರು ಮೇಲೆ ಕೆಳಗೆ ।
ಅವಳೂ ಅಗಳಾಡುವಳು ಹಾಗೇ । ವಿಚಿತ್ರ ರೀತಿಯಿದು ಸೇವೆಯದು ॥ 112

ಅಣ್ಣಾ ಬಾಗಿದ್ದರೂ ಸ್ಥಿರ ಸ್ಥಿತ । ಸ್ತ್ರೀ ತನ್ನ ಸೇವೆಯಲಿ ನಿರತ ।
ಅದರಿಂದ ಮುಖ ಮೇಲೆ ಕೆಳಗಾಗುತ । ಮುಂದೇನು ಪ್ರಕಾರ ನಡೆಯಿತು ॥ 113

ಸಾಯಿ ಸೇವೆಯ ಸಂತಸದಲ್ಲಿರುವಾಗ । ಹೊಟ್ಟೆ ತಿಕ್ಕುತ ತೂಗಾಡುತಿರುವಾಗ ।
ನೋಡಿರಿ ಬಂದಿತು ಅವಳ ಮುಖವಾಗ । ಅಣ್ಣಾರ ಮುಖದ ಹತ್ತಿರ ॥ 114

ಇಂಥ ಈ ಸಮಯವ ನೋಡಿ । ಮಾವಶೀಬಾಯಿ ಮಹಾವಿನೋದಿ ।
ಏನು ಅಣ್ಣಾ ಎಂಥವನಿದ್ದೀ । ನನಗೆ ಮುದ್ದುಕೊಡು ಎನ್ನುವಿಯಾ ॥ 115
ಕೂದಲು ನೆರೆತರೂ ನಾಚಿಕೆಯಿಲ್ಲ । ನನಗೆ ಮುದ್ದುಕೊಡೆನ್ನುವಿಯಲ್ಲಾ ।
ಅಣ್ಣಾ ಏರಿಸಿದ ತೋಳುಗಳ । ಅವಳ ಈ ಮಾತು ಕೇಳಿ ॥ 116

ಎಂದ ನಾ ಮುದಿಗೊಡ್ಡು । ನಾನೇನು ಅಂಥ ಮೂರ್ಖ ಹೆಡ್ಡು ।
ನೀನೇ ಮುಖದ ಹತ್ತಿರ ಮುಖ ತಂದು । ಮತ್ತೆ ಜಗಳಕೆ ಬಂದೆಯಾ ॥ 117

ನೋಡಿ ಜಗಳ ಸುರುವಾದದ್ದು । ಬಾಬಾರಿಗೆ ಅದರಿಂದ ಕಳಕಳಿ ಬಂದು ।
ಇಬ್ಬರ ಶಾಂತಗೊಳಿಸಲೆಂದು । ಪ್ರಬಳ ಯುಕ್ತಿಯ ಹೂಡಿದರು ॥ 118

ಪ್ರೇಮದಿಂದೆಂದರು "ಅಣ್ಣಾ ನೋಡು । ಸುಮ್ಮನಿರು ಜಗಳವೇಕಿದು ।
ಇದರಲ್ಲಿ ಅನುಚಿತವೇನೆಂದು ತಿಳಿಯದು । ತಾಯಿಗೆ ಮುದ್ದು ಕೊಡುವದರಲ್ಲಿ" ॥ 119

ಕೇಳಿ ಮನದಲಿಬ್ಬರೂ ಮೆತ್ತಗಾದರು ಇಂತು । ವಿನೋದವಾಣಿ ಅಲ್ಲಿಗೇ ಮುಗಿಯಿತು ।
ಸಪ್ರೇಮ ನಗೆಯ ಹೊನಲುಕ್ಕಿತು । ಆ ವಿನೋದ ಎಲ್ಲರಿಗೂ ಹಿಡಿಸಿತು ॥ 120

ನೋಡಿದರೆ ಕಥೆ ಒಂದಿಷ್ಟು । ಆದರೆ ಮಾರ್ಮಿಕತೆ ಕೇಳುಗರಿಗ್ಗಿಡಿಸೀತು ।
ಯಾವುದನು ಅರಗಿಸಿಕೊಳುವದೆಂತು । ಈ ಮಾತು ಕಥೆಯಲ್ಲಿ ಸ್ಪಷ್ಟವಾಗುವದು ॥ 121

ತಾಯಿ ಮಕ್ಕಳಂತೆ ಪ್ರೀತಿ ಇದ್ದಲ್ಲಿ । ಉಭಯತರಲಿ ಪ್ರೇಮ ಬುದ್ಧಿ ಇರುವಲ್ಲಿ ।
ಈ ಜಗಳ ಹುಟ್ಟುತಿರಲಿಲ್ಲ ಅಲ್ಲಿ । ಕ್ರೋಧ ವೃತ್ತಿ ಬೆಳೆಯುತ್ತಿರಲಿಲ್ಲ ॥ 122

ಚಬಕದೇಟು ತಿಂದೂ ನಗು ಬರುವದು । ಹೂವಿನೇಟಿನಿಂದ ಅಳು ಉಕ್ಕುವದು ।
ಭಾವನೆಗಳಿಂದುಂಟಾದ ವೃತ್ತಿ ತರಂಗವಿದು । ಈ ಅನುಭವ ಯಾರಿಗೂ ತಿಳಿಯದು ॥ 123

ಬಾಬಾರ ಸಹಜ ಯುಕ್ತಿಗಳ ಚಮತ್ತ । ಮಾತುಗಳನಾಡುವರು ಸಮಯೋಚಿತ ।
ಆದರಿಂದ ಶ್ರೋತೃಗಳ ಚಿತ್ತವಾಗುವದು ಶಾಂತ । ತತ್ಕಾಲ ಬೋಧವ ಪಡೆವರು ॥ 124

ಒಮ್ಮೆ ಬಾಬಾರ ಹೊಟ್ಟೆ ತಿಕ್ಕುತಿದ್ದಾಗ ಹೀಗೆ । ಬಂದಿತು ಬಾಬಾರ ಒಬ್ಬ ಭಕ್ತನಿಗೆ ।
ಕಳಕಳಿ ದಯೆ ಚಿಂತೆಯುಂಟಾದಾಗ್ಯೆ । ಅದರ ಅತಿರೇಕತೆಯ ಕಂಡು ॥ 125

ಅಮ್ಮಾ ಇದು ಏನು ಹೀಗೆ ತಿಕ್ಕುವಿರಿ । ಅಂತರದಿ ಒಂದಿಷ್ಟು ದಯೆ ಇಡಿರಿ ।
ದಯಮಾಡಿ ಈ ರೀತಿ ತಿಕ್ಕದಿರಿ । ಬಾಬಾರ ನರಗಳು ಹರಿದಾವು ॥ 126

ಈ ಮಾತು ಕಿವಿಗೆ ಬಿದ್ದಾಗ । ಬಾಬಾರು ಸ್ವಸ್ಥಾನದಿಂದ ಎದ್ದು ಬೇಗ ।
ಕೈಯಲಿದ್ದ ತಮ್ಮ ಕಾಷ್ಠದಿಂದ ಭೂಮಿಗೆ । ಬಲವಾಗಿ ಪ್ರಹಾರ ಮಾಡಿದರು ॥ 127

ದುರ್ಧರ ಕ್ಷೋಭೆ ಉಂಟಾಗಿದ್ದು । ಸಾಧ್ಯವಾರಿಗೆ ಎದುರು ನಿಲ್ಲುವದು ।
ನೇತ್ರ ಖದಿರಾಂಗಾರದಂತೆ ಹೊಳೆಯುತಿದ್ದು । ಗರಗರನೆ ಸುತ್ತೆಲ್ಲ ತಿರುಗುತಿರುವಾಗ ॥128

ಬೆಕ್ಕಿನ ಕಣ್ಣು ಕತ್ತಲಲ್ಲಿ । ಹೊಳೆವಂತವರ ಕಣ್ಣು ಹಗಲಿನಲ್ಲಿ ।
ಎನಿಸಿತು ಈ ಕಣ್ಣ ಜ್ವಾಲೆಯಲಿ । ಸೃಷ್ಟಿಯೇ ಸುಟ್ಟು ಹೋಗುವದೆಂದು ॥ 129

ಕಾಷ್ಠ ತುದಿಯನು ಹಿಡಿದೆರಡು ಕೈಗಳಲಿ । ಚುಚ್ಚಿಕೊಂಡದನು ಹೊಟ್ಟೆಯ ತಗ್ಗಿನಲಿ ।
ಎರಡನೆಯ ತುದಿಯನು ಎತ್ತಿ ಕಂಬದಲಿ । ಗಟ್ಟಿಯಾಗಿ ಕಂಬವಲನಾಲಂಗಿಸಿದರು ॥ 130

ಮಾರುದ್ದ ಸಟಕಾ ನೋಡುವಾಗೆ । ಹೊಕ್ಕಿತೆನಿಸಿತು ಪೂರ್ತಿ ಹೊಟ್ಟೆಯೊಳಗೆ ।
ಇನ್ನು ಪ್ರಾಣಾಂತವಾಗುವದು ಸ್ಫೋಟವಾಗೆ । ಇನ್ನೊಂದು ಕ್ಷಣದಲಿ ಎನಿಸಿತು ॥ 131

ಹೇಗೆ ಅಲುಗಾಡೀತು ಆ ಗಟ್ಟಿ ಕಂಭವಾದರೂ । ಬಾಬಾ ಅದರ ಹತ್ತಿರ ಹತ್ತಿರ ಹೋದರು ।
ಹೊಟ್ಟೆಯ ಕಂಬಕೆ ಗಟ್ಟಿಯಾಗಿ ಬಿಗಿದರು । ನೋಡುಗರು ಹೌಹಾರಿ ನಿಂತರು ॥132

ಇನ್ನು ಹೊಟ್ಟೆಯ ಸ್ಫೋಟವಾಗುವದು । ನಿಂತರೆಲ್ಲರೂ ಬಾಯಲ್ಲಿ ಬೆರಳಿಟ್ಟುಕೊಂಡು ।
ಅಪ್ಪಾ ಎಂಥ ದುರ್ಘಟ ಪ್ರಸಂಗವಿದು । ದುರ್ಧರ ಸಂಕಟ ಒದಗಿತಿದು ॥ 133

ಹೀಗೆ ಜನ ಚಿಂತೆಗೀಡಾಗಿ । ಏನು ಮಾಡಬೇಕೆಂದು ತಿಳಿಯದಾಗಿ ।
ಈ ಸಂಕಟ ಬಂದದ್ದು ಮಾವಶೀಯಿಂದಾಗಿ । ಭಕ್ತಾಧೀನರೆಂಬ ಬಿರುದಿದು ॥ 134

ಯಾರೇ ಸೇವೆ ಮಾಡುತಿದ್ದಾಗ । ನಡುವೆ ಅನುಚಿತತೆಯ ದರ್ಶಿಸಿದಾಗ ।
ಸೇವೆ ಮಾಡುವವರಿಗೇನಾದರೂ ಎಂದಾಗ । ಬಾಬಾರಿಗದು ಹಿಡಿಸದು ॥ 135

ಪ್ರೇಮಳ ಭಕ್ತನ ಮನಸಿಗೆನಿಸಿತು । ಮಾವಶೀಬಾಯಿಗೆ ಸೂಚಿಸಿದರಾಯಿತು ।
ಅದರಿಂದ ಬಾಬಾರಿಗೆ ಅರಾಮಾದೀತು । ಅದರ ಪರಿಣಾಮ ಹೀಗಾಗಬೇಕೇ ॥ 136

ಅಂತೂ ದೇವರಿಗೆ ಕರುಣೆ ಬಂತು । ಸಾಯಿನಾಥರ ಮನ ಶಾಂತವಾಯಿತು ।
ಈ ಭಯಪ್ರದ ಕಲ್ಪನೆಯ ಬಿಟ್ಟು । ಆಸನದಿ ಬಂದು ಕುಳಿತರು ॥ 137

ಭಕ್ತ ಪ್ರೇಮಳ ಧೈರ್ಯಸ್ಥನಿದ್ದು । ಬಾಬಾರ ಉಗ್ರ ಸ್ವಭಾವ ಕಂಡು ।
ಕಿವಿ ಹಿಡಕೊಂಡ ತಪ್ಪಾಯಿತೆಂದು । ಪಾಠ ಕಲಿತನಿದ ಮುಂದೆಲ್ಲ ॥ 138

ಅಂದಿನಿಂದ ನಿಶ್ಚಯ ಮಾಡಿದ್ದು । ಎಂದೂ ಯಾರ ತಂಟೆಗೂ ಹೋಗಬಾರದೆಂದು ।
ಯಾರ ಮನಸಿಗೆ ಹೇಗೆ ಬರುವದು । ಹಾಗೆಯೇ ಮಾಡಗೊಡಬೇಕೆಂದು ॥ 139

ಸಮರ್ಥರು ಸ್ವತಃ ಸಾಮರ್ಥ್ಯವಂತರು । ನಿಗ್ರಹಾನುಗ್ರಹ ಜ್ಞಾನವುಳ್ಳವರು ।
ಸೇವಕ ಜನರ ಗುಣಾವಗುಣಗಳನರಿತಿರುವರು । ತಾನೇಕೆ ಅದನು ನೋಡಬೇಕು ॥ 140

ಒಬ್ಬರ ಸೇವೆ ಸಾಯಿಗೆ ಸುಖಕರ । ಇನ್ನೊಬ್ಬರದು ಆಗುವದು ಪ್ರಖರ ।
ಇದಂತೂ ನಿಜಬುದ್ಧಿಯ ವಿಕಾರ । ನಿಜ ಪ್ರಕಾರವೇನೆಂದು ತಿಳಿಯದು ॥ 141

ಇರಲಿ ಸಾಕಿನ್ನು ಹಾಸ್ಯ ವಿನೋದ । ಬೇಕೆಂದವ ತೆಗೆದು ಕೊಳ್ಳಲಿದರಿಂದ ಬೋಧ ।
ಸಾಯಿ ಕಥೆಯ ರಸಾಮೋದ । ಮಕರಂದವ ಭಕ್ತರು ಸವಿಯಲಿ ॥ 142

ಹೇಮಾಡ ಸಾಯಿ ಪದದಲಿ ಲೀನ । ಮುಂದಿನಧ್ಯಾಯ ಇದಕಿಂತ ಗಹನ ।
ಭಕ್ತದಾಮೋದರನ ಇಚ್ಛೆಯ ಪೂರ್ಣ । ಸಾಯಿ ದಯಾಘನರು ಮಾಡುವರು ॥ 143


ದೊಡ್ಡ ಚಮತ್ಕಾರವೇ ಅದು । ದಾಮೋದರನು ಸಂಸಾರತ್ರಸ್ತನಿದ್ದು ।
ತಮ್ಮೆದುರು ಅವನನ್ನು ಕರೆದು । ಅವನ ಕಷ್ಟವ ಕಳೆದರು ॥ 144

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ವಿನೋದ ವಿಲಸಿತಂ ನಾಮ
ಚತುರ್ವಿಂಶತಿತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

330.1



## ।। ಅಥ ಶ್ರೀ ಸಾಯಿ ಸಚ್ಚರಿತೆ ।।

## ಅಧ್ಯಾಯ ಇಪ್ಪತ್ತೈದು

*ಶ್ರೀ ಗಣೇಶಾಯ ನಮಃ ।। ಶ್ರೀ ಸರಸ್ವತ್ಯೈ ನಮಃ ।।*
*ಶ್ರೀ ಗುರುಭ್ಯೋ ನಮಃ ।। ಶ್ರೀ ಕುಲದೇವತಾಯೈ ನಮಃ ।।*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ।। ಶ್ರೀ ಸದ್ಗುರು ಸಾಯಿನಾಥಾಯ ನಮಃ ।।*

ಸಾಯಿ ಮಹಾರಾಜರು ಕೃಪಾಸಾಗರರು । ಸಾಕ್ಷಾತ ಈಶ್ವರೀ ಅವತಾರರು ।
ಪೂರ್ಣಬ್ರಹ್ಮ ಮಹಾನಯೋಗೀಶ್ವರರು । ಸಾಷ್ಟಾಂಗ ನಮಸ್ಕಾರ ಅವರಿಗೆ ।। 1

ಜಯ ಜಯ ಹೇ ಸಂತಲಮಾ । ಮಂಗಲ ಧಾಮ ಆತ್ಮರಾಮ ।
ಸಾಯಿ ಸಮರ್ಥಾ ಭಕ್ತ ವಿಶ್ರಾಮ । ಪೂರ್ಣ ನಿನಗೆ ನಮೋ ।। 2

ಪೂರ್ವಾಧ್ಯಾದಲ್ಲಿ ನಿರೂಪಣ । ಹಾಸ್ಯ ವಿನೋದ ಪರಿಶೀಲನ ।
ಆದರೂ ಈ ಸಾಯಿ ಭಕ್ತಭಾವನ । ನಿತ್ಯ ಭಕ್ತರಂಜನ ಮಾಡುವ ।। 3

ಸಾಯಿ ಪರಮದಯಾಮೂರ್ತಿ । ಮಾತ್ರ ಇರಬೇಕು ಅನನ್ಯ ಭಕ್ತಿ ।
ಭಕ್ತನು ಶ್ರದ್ಧೆಯುಳ್ಳವ ಮತ್ತು ಭಾವಾರ್ಥಿ । ಆಗ ಇಚ್ಛಿತಾರ್ಥದಲಿ ನ್ಯೂನವಿಲ್ಲ ।। 4

'ಸದ್ಗುರುವೇ ನನ್ನ ಮೂರ್ತಿ' ಎಂದು । ಉದ್ಧವನಿಗೆ ಕೃಷ್ಣನು ನುಡಿದು ।
ಇಂಥ ಸದ್ಗುರುವ ಪ್ರೀತಿಯಿಂದ ಭಜಿಸುವುದು । ಅನನ್ಯ ಭಕ್ತಿಯೆಂಬಂದಕೆ ।। 5

ಮನದಲುದಿಸಿತು ಮನೋರಥ । ಬರೆಯಬೇಕು ಶ್ರೀ ಸಾಯಿಚರಿತೆ ।
ಲೀಲಾ ಶ್ರವಣಾರ್ಹ ಅತ್ಯದ್ಭುತ । ನನ್ನಿಂದದನು ಬರೆಸಲಾಯಿತು ।। 6

ಇರದೇ ಅಧಿಕಾರ - ಜ್ಞಾನವ್ಯುತ್ಪತ್ತಿ । ಪಾಮರನೆನ್ನಲಿ ಹುಟ್ಟಿಸಿ ಸ್ಫೂರ್ತಿ ।
ನಿಜ ಭಕ್ತರಿಗೆಲ್ಲಾ ಜಾಗೃತಿ । ನನ್ನ ಕೈಲಿ ಗ್ರಂಥ ಬರೆಸಿದರು ।। 7

ಯಾವಾಗ ನನ್ನಂಥ ಅಜ್ಞಾನಿಗೆ । 'ಟಿಪ್ಪಣಿ ಬರೆದಿಡು' ಎಂಬನುಜ್ಞೆಯಾದಾಗೆ ।
ಆಗಲೇ ಎನ್ನ ಅಲ್ಪ ಪ್ರಜ್ಞೆಯು । ಧೈರ್ಯಸಂಪನ್ನವಾಯಿತು ।। 8

ಆಗಲೇ ನಾ ತಿಳಿದು । ಈ ಸಾಯಿ ಗುಣಗಂಭೀರನು ।
ಬರೆದಿಡಿಸುವನು ತನ್ನ ಟಿಪ್ಪಣಿಯನ್ನು । ನಿಜಭಕ್ತೋದ್ಧಾರಕ್ಕಾಗಿ ।। 9

ಇಲ್ಲದಿದ್ದರೆ ಈ ಕೆಲಸ । ಮಾಡಲು ಮಾಡುತಿದ್ದೆನೇ ಸಾಹಸ ।
ಸಂತಚರಣ ಪ್ರಸಾದ ಪಾಯಸ । ಚರಿತ ಸುಧಾರಸವನಿಂತು ॥ 10

ಈ ಸಾಯಿ ಚರಿತರೂಪದೊಳಗೆ । ಭಕ್ತರಿಗಾಗಿ ಸಾಯಿ ಕಥಾಮೃತ ಅರವಟ್ಟಿಗೆ ।
ಸಾಯಿ ಕೃಪೆಯ ಸೇವಿಸಿ ಯಥೇಚ್ಛವಾಗೇ । ಭವತಾಪವ ನಿವಾರಿಸಿಕೊಳ್ಳಿರಿ ॥ 11

ಚರಿತೆಯಲ್ಲ ಇದು ಚಂದ್ರಾಕಾಂತ । ಸಾಯಿ ಕೃಪಾ ಚಂದ್ರಾಮೃತ ಸ್ರವಿಸುತ ।
ಭಕ್ತ ಚಕೋರ ತೃಷಕುಲಿತ । ಮನಸೋಕ್ತ ಪ್ರಾಸಿಸಿ ತೃಪ್ತಿ ಪಡೆಯಲಿ ॥ 12

ಇನ್ನು ಪ್ರೇಮಳ ಶ್ರೋತೃಗಳಾದ । ನೀವು ಸಂಕೋಚರಹಿತ ಏಕಾಗ್ರಚಿತ್ತದಿಂದ ।
ಕೇಳಿರಿ ಈ ಕಲಿಮಲದ ಹನವಾದ । ಸಾಯಿ ಪಾವನ ಕಥೆಯನು ॥ 13

ಕಳೆದು ಭಕ್ತರ ಅನಿಷ್ಟಗಳ । ಪೂರೈಸುವನವರ ಅಭೀಷ್ಟಗಳ ।
ನಿವಾರಿಸುವನವರ ಕಷ್ಟಗಳ । ಒಮ್ಮೆ ಅನನ್ಯ ನಿಷ್ಟೆ ಇಟ್ಟರೆ ಸಾರು ॥ 14

ಇದೇ ಅರ್ಥದ ವಾರ್ತೆಯನು । ತೋರುವುದು ಸಾಯಿಯ ಭಕ್ತವತ್ಸಲತೆಯನ್ನು ।
ಸಾದರದಿಂದ ಹೇಳಲಿದನು । ಚಿತ್ತಕಾನಂದವಾಗುವುದು ॥ 15

ಕಥೆಯ ಕೇಳಿರಿ ಅಭಿನವ । ಮನಒಪ್ಪೀತದರ ಅನುಭವ ।
ಗುರುಮಾಯಿ ಹೇಗಿರುವಳು ದಯಾರ್ಣವ । ತಿಳಿಯುವುದು ಮನವಿಟ್ಟು ಕೇಳಿದರೆ ॥ 16

ಕಥೆ ಇರುವುದು ಚಿಕ್ಕದು । ಆದರೆ ಅರ್ಥಾವ ಬೋಧದಲಿ ದೊಡ್ಡದು ।
ಅವಧಾನವಿಡಿ ಇತ್ತ ಒಂದು ಕ್ಷಣದಿ । ಅಡ್ಡಿಆತಂಕ ದೂರಾಗುವುದು ॥ 17

ಅಹಮದನಗರದ ಗೃಹಸ್ಥ । ಒಬ್ಬ ಬಳೇಗಾರ ಧನವಂತ ।
ದಾಮೂ ಅಣ್ಣಾ ಹೆಸರಿನ ಭಕ್ತ । ಸಾಯಿ ಪದದಲನುರಕ್ತನಾಗಿದ್ದ ॥ 18

ಆ ಪರಮಭಕ್ತನ ಕಥೆಯಿದು । ಕೇಳಲು ಆನಂದವಾಗುವುದು ।
ಭಕ್ತರಕ್ಷಣ ತತ್ಪರತೆ ಕಾಣುವುದು । ಸಾಯಿಯದು ಪ್ರತ್ಯಕ್ಷದಲಿ ॥1 19

ರಾಮನವಮಿ ವಾರ್ಷಿಕೋತ್ಸವದಂದು । ಹೊಸ ದೊಡ್ಡ ನಿಶಾಣೆಗಳೆಂದು ।
ಊರಲ್ಲಿ ಅವುಗಳ ಮೆರೆಸುವರು । ಅಲ್ಲಿರುವವರಿಗೆಲ್ಲ ಗೊತ್ತು ॥ 20

ಅವುಗಳಲ್ಲೊಂದು ನಿಮೋಣಕರದು । ದಾಮೂ ಅಣ್ಣಾ ಅವರದು ಇನ್ನೊಂದು ।
ಅವರ ಈ ನೇಮ ಎಷ್ಟೋ ವರ್ಷದ್ದು । ಅವ್ಯಾಹತವಾಗಿ ನಡೆದಿದೆ ಭಕ್ತಿಪೂರ್ವಕ ॥ 21

ದಾಮೂಅಣ್ಣಾನ ಇಬ್ಬರ ಹೆಂಡಿರಲೂ । ಪುತ್ರಸಂತಾನವಿಲ್ಲದಿರಲು ।
ಸಾಯಿ ಆಶೀರ್ವಾದವಾಗಲು । ಪುತ್ರರತ್ನವ ಪಡೆದರು ॥ 22

ಹೊತ್ತರು ನಿವಾರಣಕೆ ಹರಕೆ । ರಾಮನವಮಿಯ ಉತ್ಸವಕೆ ।
ಅಲ್ಲಿಂದ ನಿಶಾಣೆಯ ಪ್ರತಿ ವರ್ಷಕ್ಕೆ । ಮೆರೆಸುವುದು ಆರಂಭವಾಯಿತು ॥ 23

ಬಡಿಗ ಕೋಂಡಿಬಾನ ಮನೆಯಲ್ಲಿ । ಮೆರವಣಿಗೆಯ ಸಿದ್ಧತೆಯಾಗುವುದಲ್ಲಿ ।
ಇಲ್ಲಿಂದ ವಾದ್ಯಗಳ ಮೇಳದಲ್ಲಿ । ನಿಶಾಣೆಯ ಮೆರೆಸುತ್ತ ಒಯ್ಯುವರು ॥ 24

ಮಶೀದಿಯ ಎರಡೂ ತುದಿಗಳಿಗೆ । ಕಟ್ಟುವರು ಆ ದೀರ್ಘಪತಾಕೆ ।
ಸಮಾರಂಭದಲಿ ಮಹೋತ್ಸವವ ಹೀಗೆ । ಪ್ರತಿವರ್ಷವೂ ನಡೆಸುವರು ॥ 25

ಅಂತೆಯೇ ಅಲ್ಲಿ ಬಂದ ಫಕೀರರಿಗೆ । ಊಟ ಕೊಡುವರು ಹೊಟ್ಟೆ ತುಂಬುವ ಹಾಗೆ ।
ರಾಮನವಮಿಯನು ಹೀಗೆ । ನೆರವೇರಿಸಲು ಆ ಧನಿಕರು ॥ 26

ಅದೇ ಈ ದಾಮೂಅಣ್ಣಾನ ಕಥೆಯನು । ಕೇಳುಗರಿಗೆ ಹೇಳುವೆನಿನ್ನು ।
ಸಾವಧಾನರಾಗಿ ಕೇಳಲಿದನು । ಸಾಯಿ ಸಮರ್ಥತೆಯು ಪ್ರಕಟವಾಗುವುದು ॥ 27

ಮುಂಬಯಿ ನಗರದ ಅವರ ಸ್ನೇಹಿತ । ಮುಂಬಯಿಂದ ಬರೆದ ಪತ್ರ ।
ಎರಡು ಲಕ್ಷ ನಿವ್ವಳ ಲಾಭವಿರುವಂಥ । ಲಾಭದಾಯಕ ಕೆಲಸವಿದು ॥ 28

ಭಾಗಿದಾರರಾಗಿ ನಾವಿಬ್ಬರೂ ಲಕ್ಷ ಲಕ್ಷ ಗಳಿಸಬಹುದು ಪ್ರತಿಯೊಬ್ಬರೂ ।
ಕೊಡಲೇ ಉತ್ತರಿಸಬೇಕೆಂದರು । ಚೊಕ್ಕ ನಿರ್ಭಯ ಉದ್ಯೋಗವಿದಿರುವುದು ॥ 29

ಈಗ ಖರೀದಿ ಮಾಡುವ ಹತ್ತಿಯದು । ನೋಡನೊಡುತ್ತ ದರವೇರುವುದು ।
ಹೊತ್ತಿಗೆ ಸರಿಯಾಗಿ ಖರೀದಿಸದಿರುವುದು । ಆಮೇಲೆ ಪಶ್ಚಾತಾಪವಾಗುವುದು ॥ 30

ಈ ಸಮಯವ ಹೋಗಗೊಡಬಾರದು । ಗೊಂದಲವಿದ್ದಿತು ಅಣ್ಣಾರ ಮನಸಿನದು ।
ಆ ಸ್ನೇಹಿತನ ಮೇಲೆ ಅತಿ ನಂಬಿಕೆ ಇವರದು । ನಿಶ್ಚಿತ ವಿಚಾರ ಹೊಳೆಯದು ॥ 31

ಉದ್ಯೋಗ ಮಾಡುವದೋ ಇಲ್ಲವೊ ಎಂದು । ಅಣ್ಣಾರ ಮನಸಿಗೆ ವಿಚಾರ ಬಿದ್ದು ।
ಏನು ಮಾಡಿದರೆ ಏನಾಗುವದೆಂದು । ಸಮಸ್ಯೆಯಾಯಿತು ಅವರಿಗೆ ॥ 32

ದಾಮೂಅಣ್ಣಾ ಇದ್ದರು ಗುರುಪುತ್ರ । ಬಾಬಾರಿಗೆ ಬರೆದರು ಪತ್ರ ।
ನಮ್ಮ ಬುದ್ಧಿಯಿಲ್ಲ ಸ್ವತಂತ್ರ । ನಿಮ್ಮದೆ ಛತ್ರ ನಮಗಿರುವುದು ॥ 33

ಈ ವ್ಯಾಪಾರವು ಸಕೃದ್ದರ್ಶನದಲ್ಲಿ । ಮಾಡಬೇಕೆಂದು ಬರುವುದು ಮನಗಲ್ಲಿ ।
ಆದರೂ ಲಾಭವಿರುವುದೋ ಹಾನಿ ಇದರಲ್ಲಿ । ತಿಳಿಸುವ ಕೃಪೆ ಮಾಡಬೇಕು ॥ 34

ಮಾಧವರಾಯರಿಗೆ ಪತ್ರ ಬರೆದು । ಈ ಪತ್ರವ ಬಾಬಾರಿಗೆ ಓದಿ ತೋರಿಸುವುದು ।
ಅವರಾಜ್ಞೆ ಏನೆಂದು ತಿಳಿಸುವುದು । ಉದ್ಯೋಗ ಒಳ್ಳೆಯದೆನಿಸುತಿದೆ ॥ 35

ಮರುದಿನ ಮಧ್ಯಾಹ್ನದಲಿ । ಪತ್ರಸಿಕ್ಕಿತು ಮಾಧವರಾಯರ ಕೈಲಿ ।
ಅದನೊಯ್ದು ಮಶೀದಿಯಲಿ । ಬಾಬಾರ ಚರಣದಲಿಟ್ಟರು ॥ 36

"ಏನೋ ಶ್ಯಾಮ ಏನದು ಗಡಿಬಿಡಿ । ಕಾಗದವೆಂಥದ್ದು ಪಾದದಲಿಡುತಿದ್ದೀ" ।
ಬಾಬಾ ಆ ನಗರದ ದಾಮೂಶೆಟ್ಟಿ ಈ ಕಾಗದದಿ । ತಮಗೇನೋ ಕೇಳಬೇಕೆಂದಿರುವನು ॥ 37

"ಯಾಕಂತೆ ಅವನೇನು ಬರೆದಿರುವನು । ಏನು ಎಂಥ ವಿಚಾರ ಮಾಡುತಿರುವನು ।
ಒಮ್ಮೆಲೇ ಮುಗಿಲ ಮುಟ್ಟಬೇಕೆಂದಿರುವನು । ದೇವರುಕೊಟ್ಟದನ್ನು ಬಿಟ್ಟು ॥ 8

ಓದು ಇರಲಿ ಈ ಪತ್ರವನ್ನು" । ಶ್ಯಾಮನೆಂದ ತಾವು ನುಡಿದುದನು ।
ಅದೇ ಅರ್ಥದ ಪತ್ರವಿದನು । ದಾಮೂಅಣ್ಣಾ ಬರೆದಿರುವರು ॥ 39

ದೇವಾ ತಾವು ಅಚಲರಾಗಿ ಕುಳಿತಿರುವಿರಿ । ಭಕ್ತರಲಿ ಗೊಂದಲ ಎಬ್ಬಿಸುವಿರಿ ।
ಆಮೇಲೆ ಚರಣಕೆ ಬರಮಾಡಿಕೊಳ್ಳುವಿರಿ । ಮನದ ತಳಮಳ ತಡೆಯದಾದಾಗ ॥40

ಯಾರನ್ನು ಇಲ್ಲಿ ಎಳೆದು ತರುವಿರಿ । ಕೆಲವರಿಗೆ ಪತ್ರಗಳ ಬರೆಸುವಿರಿ ।
ಅಂತಸ್ಥ ಆ ಸಮಯವ ಮುಂದಾಗಿ ಅರಿತಿರುವಿರಿ । ಮತ್ತೇಕೆ ಓದಲು ಹಚ್ಚುವಿರಿ ॥ 41

"ಲೇ ಶ್ಯಾಮ ಓದು ಓದು । ನನ್ನ ಮಾತೇನು ಸತ್ಯಗಣಿಸುವವನು ।
ನಾನಂತೂ ಹೀಗೆ ಇರುವುದು । ಸುಮ್ಮನೆ ಬೇಕಾದ್ದು ಮಾತಾಡುವೆ" ॥ 42

ಮಾಧವರಾಯರು ಪತ್ರ ಓದಿದರು । ಲಕ್ಷ್ಯವಿಟ್ಟದೆ ಬಾಬಾಕೇಳಿದರು ।
ಕಳಕಳಯಿಂದಾಗ ಬಾಬಾನುಡಿದರು । ಶೆಟ್ಟಿಯ ಬುದ್ಧಿ ಭ್ರಮಿಸಿದೆ ॥ 43

ಬರೆ ಅವನಿಗೆ ಪ್ರತ್ಯುತ್ತರದಲ್ಲಿ । ನಿನಗೇನು ಕೊರತೆಯಾಗಿದೆ ಮನೆಯಲ್ಲಿ ।
ತೃಪ್ತನಾಗಿರು ಇದ್ದರ್ಧರೊಟ್ಟಿಯಲ್ಲಿ । ಲಕ್ಷಗಳಿಸುವುದಕ್ಕೆ ಹೋಗಬೇಡ ॥ 44

ಪತ್ರಕ್ಕೆ ಉತ್ತರವೇನು ಬರುವುದೆಂದು । ಒಂದೇ ಸಮ ದಾಮೂಅಣ್ಣಾ ದಾರಿಕಾಯುತಿದ್ದು ।
ಉತ್ತರ ಬಂದ ಕೂಡಲೇ ಎದ್ದು । ದಾಮೂಅಣ್ಣಾ ಓದಿದರು ॥ 45

ಪ್ರತ್ಯುತ್ತರವನ್ನು ಓದಿ ಇಂತು । ಶೆಟ್ಟಿಗೆ ಬಹಳ ನಿರಾಶೆಯಾಯಿತು ।
ಮನೋರಥದ ದುರ್ಗವೇ ಕುಸಿಯಿತು । ಆಶೆಯ ವೃಕ್ಷವೇ ಬಿದ್ದುತು ಬೇರುಸಹಿತ ॥ 46

ಇನ್ನು ಒಂದು ಲಕ್ಷಗಳಿಸುವೆ । ಅರ್ಧಲಕ್ಷವ ಬಡ್ಡಿಗೆ ಹಚ್ಚುವೆ ।
ಕೂಡಲೇ ಲಕ್ಷಾಧೀಶನಾಗುವೆ । ಆನಂದದಿಂದಿರುವೆ ನಗರದಲಿ ॥ 47

ಮನೋರಾಜ್ಯವ ಮಾಡಿಯಾಗಿತ್ತು । ಅಲ್ಲಿಯದಲ್ಲೆ ಅದು ಕರಗಿಹೋಯಿತು ।
ಶೆಟ್ಟಿಗೆ ಬಹಳ ವಿರಸವಾಯಿತು । ಬಾಬಾ ಇದನೇನು ಮಾಡದಿರೆಂದ ॥ 48

ಪತ್ರ ಬರೆದು ಮೋಸ ಹೋದೆ । ನಾನೇ ನನ್ನ ಅಹಿತ ಮಾಡಿಕೊಂಡೆ ।
ಕಾಣುತ್ತಿರುವಂತೆಯೇ ತುಂಬಿದ ಎಡೆ । ನಾನಾಗಿಯೇ ಒದ್ದು ಬಿಟ್ಟೆ ॥ 49

ಪತ್ರದಲ್ಲಿ ಹೀಗೂ ಸೂಚಿಸಿದ್ದು । ಕಣ್ಣಿಗೂ ಕಿವಿಗೂ ಅಂತರವಿರುವುದು ।
ಅದಕೆ ತಾವು ಪ್ರತ್ಯಕ್ಷ ಬರುವುದು । ಎಂದು ದಾಮೂಅಣ್ಣಾರಿಗೆ ॥ 50

ಹೀಗೆ ಮಾಧವರಾಯರಿಂದ ಸೂಚಿತ । ಸಮಕ್ಷಮ ಹೋಗುವದೇ ಎನಿಸಿತು ಉಚಿತ ।
ಯಾರೂ ಬಲ್ಲರು ಆದರಲಿರಲೂ ಬಹುದು ಹಿತ । ಒಂದು ವೇಳೆ ಅನುಮತಿ ಕೊಡಬಹುದು ॥ 51

ಹೀಗೆ ಮನದಲಿ ವಿಚಾರಮೂಡಿ । ಅಣ್ಣಾ ಬಂದರು ಶಿರಡಿಗೆ ಓಡಿ ।
ಕುಳಿತು ಬಾಬಾರ ಸನ್ನಿಧಾನದಿ । ಸಾಷ್ಟಾಂಗ ನಮನ ಪೂರ್ವಕವಾಗಿ ॥ 52

ಮೆಲ್ಲಮೆಲ್ಲನೆ ಕಾಲೊತ್ತುತ್ತಿದ್ದು । ಕೇಳಬೇಕೆಂದರೆ ಧೈರ್ಯಸಾಲದು ।
ಅಂತರ್ಯದಲೆದ್ದು ವೃತ್ತಿಯೊಂದು । ಬಾಬಾರಿಗೇ ಅದನು ಬಿಟ್ಟು ಕೊಡಬೇಕು ॥ 53

ಮನದಲೆಂದರು ಬಾಬಾ ಅವರೇ । ನನ್ನೀ ವ್ಯಾಪಾರದಲಿ ಸಹಾಯ ಮಾಡಿದರೆ ।
ಲಾಭಾಂಶದ ಭಾಗವ ಅರೆ । ಚರಣದಲ್ಲಿಟ್ಟು ಶರಣಾಗುವೆ ॥ 54

ಶಿರದಿಂದ ನಮಿಸಿ ಸಾಯಿ ಚರಣ । ದಾಮೂಅಣ್ಣಾ ಕುಳಿತರೊಂದು ಕ್ಷಣ ।
ಸಂಕಲ್ಪ-ವಿಕಲ್ಪ ಮನದ ಲಕ್ಷಣ । ವ್ಯಾಪಾರ ಒಳಗೇ ನಡೆದಿತ್ತು ॥ 55

ಭಕ್ತಿಮಾಡಬೇಕೆಂಬ ಮನೋರಥ । ಅವರು ತಿಳಿಯರು ತಮ್ಮ ಸ್ವಾರ್ಥ ।
ಗುರುವಿಗೊಬ್ಬನಿಗೆ ಗೊತ್ತು ಶಿಷ್ಯನ ಹಿತ । ಭಾವೀ-ಭೂತ-ವರ್ತಮಾನ ॥ 56

ತನ್ನ ಮನದ ಮನೋಗತವನು । ಯಾರು ಎಷ್ಟೇ ಬಚ್ಚಿಡಲದನು ।
ಸರ್ವಾಂತರ್ಯಾಮಿ ಸಾಯಿ ಸಮರ್ಥನು । ಒಳಗೆ ನಡೆದುದನೆಲ್ಲ ತಿಳಿಯುವನು ॥ 57

ಯಾರೋಬ್ಬರು ತಮ್ಮ ಅಂತರಂಗದಲಿದ್ದುದ । ಸಾಯಿ ಚರಣದಲಿ ನಿವೇದಿಸಲು ಪ್ರೀತಿಯಿಂದ ।
ಅನುಜ್ಞೆ ಬೇಡುವರು ಪೂರ್ಣ ವಿಶ್ವಾಸದಿಂದ । ಸಾಯಿ ಸತ್ಪಥವ ತೋರಿಸುವವರಿಗೆ ॥ 58

ಇದು ಅವರ ನಿಜದವ್ರತ । ತಿಳಿದಿರುವರಿದ ಭಕ್ತಜನ ಸಮಸ್ತ ।
ಯಾರಾಗುವರವರಿಗೆ ಅನನ್ಯ ಶರಣಾಗತ । ಅವರ ಆಪತ್ತು ಪರಿಹರಿಸುವವರು ॥ 59

ಗುರುವೇ ನಿಜದಲಿ ಮಾತಾಪಿತನು । ಅನೇಕ ಜನ್ಮಗಳ ಶಿಕ್ಷಕನು ರಕ್ಷಕನು ।
ಅವನೇ ಹರಿಹರ ಮತ್ತು ವಿಧಾತನು । ಮಾಡುವ ಮಾಡಿಸುವವನೆಲ್ಲ ಅವನೊಬ್ಬನೇ ॥ 60

ಮಗು ಸಿಹಿತಿಂಡಿ ಬೇಡುವುದು । ತಾಯಿ ಅದಕೆ ಗುಟಿಯ ಹಾಕುವುದು ।
ಮಗು ಅಳುವುದು ಒದ್ದಾಡುವುದು । ಆದರೆ ಪ್ರೀತಿಯ ರೀತಿ ಹೀಗಿರುವುದು ॥ 61

ಗುಟಿಯಲ್ಲಿರುವ ಕಹಿತನ । ಸರಿಯಾದ ಸಮಯಕೆ ತೋರುವದು ಗುಣ ।
ಮಗುವಿಗೇನು ಗೊತ್ತು ಆ ಲಕ್ಷಣ । ಮಾತೆಯ ತಿಳಿವು ಮಾತೆಗೆ ॥ 62

ಅಣ್ಣಾ ಅವರ ಭಾಗ ತೆಗೆದಿಟ್ಟರೂ । ಬಾಬಾ ಅದರಿಂದೆಂದೂ ಮರುಳಾಗರು ।
ಲಾಭವಿಲ್ಲದ ಅವರ ಪ್ರೀತಿಯಿಂದವರು । ನಿಜಭಕ್ತನ ಹಿತವನೇ ಮಾಡುವರು ॥ 63

ಧನ ಕನಕಗಳು ಮಣ್ಣಿನಂತವರಿಗೆ । ಇರುವಾಗ ಭಾಗವೆಂದರೇನವರಿಗೆ ।
ಕೇವಲ ದೀನಜನೋದ್ಧರಣಕ್ಕಾಗೇ । ಜಗದಲವತರಿಸುವರು ಈ 'ಸಂತರು' ॥ 64

ಯಮನಿಯಮಶಮದಮ ಸಂಪನ್ನ । ಮಾಯಾ ಮಾತ್ಸರ್ಯದೋಷ ವಿಹೀನ ।
ಕೇವಲ ಪರಾನುಗ್ರಹ-ಪ್ರಯೋಜನ । ಯಾರ ಜೀವನವಿರುವದೋ ಅವ ಸಂತ ॥ 65

ದಾಮೂಅಣ್ಣಾರು ಭಾಗಕೊಡುವ ಮಾತು । ಅವರ ಮನದ ಒಳಗೇ ಅಡಗಿತ್ತು ।
ಬಾಬಾ ಅದಕೆ ಪ್ರಕಟವಾಗಿ ಉತ್ತರವಿತ್ತು । ತೋರಿದ ವಿಚಿತ್ರವನಾಲಿಸಬೇಕು ॥ 66

ಜೀವ ಮಾತ್ರಗಳ ಮನೋಗತವನು । ಎಲ್ಲ ತಿಳಿದಿರುವರು ಬಾಬಾ ಅದನು ।
ಭೂತ-ಭವಿಷ್ಯ-ವರ್ತಮಾನಗಳು । ಅಂಗೈ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ॥ 67

ನಿಜಭಕ್ತ ಸ್ಥಿತಿ ಮುಂದಿನದು । ಬಾಬಾರಿಗಿದೆಲ್ಲ ತಿಳಿದಿರುವದು ।
ಹೇಗೆ ಹೊತ್ತಿಗೆ ಸರಿಯಾಗಿ ಎಚ್ಚರ ನೀಡುವದು । ಆ ಸ್ಪಷ್ಟೋಕ್ತಿಯ ಕೇಳಬೇಕು ॥ 68

"ನಾವಂತೂ ಇಲ್ಲವಪ್ಪ ಯಾವದರೊಳಗೆ" । ಬಾಬಾ ಸೂಚನೆ ಇತ್ತರು ಅವಗೆ ।
ಈ ವ್ಯಾಪಾರ ಸರಿಕಾಣದು ಬಾಬಾರಿಗೆ । ಅಣ್ಣಾ ಮನದಲಿ ನಾಚಿದ ॥ 69

ಬಾಬಾರ ಈ ಮಾತು ಕೇಳಿದರು । ದಾಮೂ ಅಣ್ಣಾ ತಿಳಕೊಂಡರು ।
ಮನ ಸಂಕಲ್ಪವ ಬಿಟ್ಟುಕೊಟ್ಟರು । ಸುಮ್ಮನೆ ತಲೆಬಾಗಿಸಿ ಕುಳಿತರು ॥ 70

ಮತ್ತೆ ಮನದಲಿ ವಿಚಾರ ಬಂತು । ಬೇರೆ ವ್ಯಾಪಾರ ಮಾಡಿದರೆ ಹೇಗಾದೀತು ।
ಅಕ್ಕಿ-ಗೋದಿ ಮತ್ತೆ ಯಾವದೇ ಆಯಿತು । ಬಾಬಾರ ಉತ್ತರವಿದಕೇನಿತ್ತು ಕೇಳಿರಿ ॥ 71

ಕೊಂಡುಕೊಳ್ಳುವೆ ಐದು ಸೇರಿನಂತೆ । ಮಾರುವೆ ಏಳು ಸೇರಿನಂತೆ ।
ಈ ಮಾತುಗಳ ಬಾಬಾರಿಂದ ಕೇಳಿ ಮತ್ತೆ । ಮನದಿ ಲಜ್ಜಿತನಾದ ಅಣ್ಣಾ ॥ 72

ಎಲ್ಲೂ ಏನೂ ನಡೆಯದು । ಸಾಯಿಯ ದೃಷ್ಟಿಗೆ ಬೀಳದಂತದು ।
ಮೇಲೆ ಕೆಳಗೆ ಒಳಗೆ ಹೊರಗೂ । ಎಲ್ಲೆಡೆ ಅವನೆದುರು ಬಯಲು ॥ 73

ಇತ್ತ ಅವನ ಸ್ನೇಹಿತರು । ಗಹನ ವಿಚಾರದಲ್ಲಿ ಬಿದ್ದರು ।
ತಿಳಿಯದೇ ಮಾಡಬೇಕೇನಿನ್ನು । ಅಣ್ಣಾನಿಂದ ಉತ್ತರ ಬರಲಿಲ್ಲ ॥ 74

ಆಗ ಈ ಶೆಟ್ಟಿ ಪತ್ರವ ಬರೆದ । ನಡೆದ ಸಂಗತಿಯನೆಲ್ಲ ತಿಳಿಸಿದ ।
ಓದಿ ಸ್ನೇಹಿತ ವಿಸ್ಮಿತನಾದ । ಕರ್ಮಗತಿಯೇ ವಿಚಿತ್ರವೆಂದ ॥ 75

ಎಂಥ ವ್ಯಾಪಾರ ನಡೆದುಬಂದಿತ್ತು । ತಾನೇ ವಿಚಾರ ಮಾಡುವದ ಬಿಟ್ಟು ।
ಆ ಫಕೀರನನೇಕೆ ಕೇಳಬೇಕಿತ್ತು । ವ್ಯರ್ಥಲಾಭವ ಕಳೆದುಕೊಂಡ ॥ 76

ದೇವರು ಕೊಟ್ಟರೂ ಕರ್ಮ ಬಿಡದು । ಎನುವಂತೆ ಹೀಗೆ ಬುದ್ಧಿಯಾಗುವದು ।
ಉದ್ಯೋಗವನಿಷ್ಟೊಂದು ತಿಳಿದಿದ್ದು । ಫಕೀರನೇತಕ್ಕೆ ಆಗಿರುವನಲ್ಲಿ ॥ 77

ಬಿಟ್ಟು ಕೊಟ್ಟು ವ್ಯವಹಾರವ । ಮನೆ ಮನೆ ಹುಚ್ಚನಂತೆ ತಿರುಗುವ ।
ಬೇಡಿ ತಂದು ಹೊಟ್ಟೆ ತುಂಬಿಕೊಳ್ಳುವ । ಅಂಥವ ತಾನೇನು ಹೇಳುವನು ॥ 78

ಹೋಗಲಿ ಅವನ ದೈವವಿಲ್ಲ । ಅದರಿಂದ ಹೀಗೆ ಬುದ್ಧಿಯಾಯಿತಲ್ಲ ।
ಬೇರೆ ಪಾಲುಗಾರನ ನೋಡಬೇಕಲ್ಲ । 'ಆಗಲಾರದ್ದೆಂದೂ ಆಗಲಾರದು' ಎಂಬಂತೆ ॥ 79

ಆಯಿತು ಅಣ್ಣಾ ಸ್ವಸ್ಥಕುಳಿತರು । ಕರ್ಮಗತಿಯಿಂದ ಎಳೆತಂದವರು ।
ಆ ಸ್ನೇಹಿತನ ಪಾಲುದಾರರಾದರು । ಆ ಮಾಲೆ ಕೊರಳಿಗೆ ಬಿದ್ದಿತು ॥ 80

ಸಟ್ಟಾ ಮಾಡಲು ಹೋಗಿಯಾಯಿತು । ಆದರೆಅವರ ಕಾಲವೇ ತಿರುಗಿತ್ತು ।
ಹಾನಿಯಾಯಿತು ಪೆಟ್ಟು ಬಿತ್ತು । ಡೊಣ್ಣೆಯ ಬಡಿತ ಹೀಗೆ ಫಕೀರನದು ॥ 81

ಏನು ನನ್ನಾ ದಾಮೂಅಣ್ಣಾ । ಸುದೈವಿ ಮತ್ತು ಬಹಳ ಜಾಣ ।
ನಿಜದಲೂ ಅವನ ಸಾಯಿ ಸಗುಣ । ಅವನ ಭಕ್ತಕರುಣೆ ಎಂಥದು ॥ 82

ನನ್ನ ಜೊತೆ ಸೇರಿದ್ದರೆ ಸ್ನೇಹಿತನೆಂದು । ಹಾಳಾಗುತಿದ್ದನವನೆಲ್ಲ ಕಳಕೊಂಡು ।
ದಾಟಿದನವ ಫಕೀರನ ನುಡಿಕೇಳಿಕೊಂಡು । ನಿಜವಾಗಿ ದೃಢಬುದ್ಧಿ ಅವನದು ॥ 83

ನಗೆಚಾಟಿಕೆ ಅವನ ಹುಚ್ಚುತನದ್ದು । ಅಹಂಕಾರ ನನ್ನ ಜಾಣತನದ್ದು ।
ವ್ಯರ್ಥ ವ್ಯರ್ಥ ಎಲ್ಲ ಇದು । ಈ ಅನುಭವವ ಪಡೆದೆನು ॥ 84

ಸುಮ್ಮನೆ ನಿಂದೆ ಮಾಡದೆ ಆ ಫಕೀರನದು । ನಾನೂ ಅವನನ್ನೇ ಅನುಸರಿಸುತಿದ್ದು ।
ಅದರಿಂದ ನನ್ನನ್ನೂ ಎಚ್ಚರಿಸುತ್ತಿದ್ದು । ಆಗ ಆ ಮೋಸ ನನಗಾಗುತಿರಲಿಲ್ಲ ॥ 85

ಇನ್ನು ಮತ್ತೂ ಒಂದು ವಾರ್ತೆಯನು । ಹೇಳಿ ಮುಗಿಸುವೆನು ಅಣ್ಣಾನ ಗ್ರಂಥವನು ।
ಶ್ರೋತೃಗಳ ಚಿತ್ತಕೀಯುವದು ಆನಂದವನು । ಬಾಬಾರ ಬಗ್ಗೆ ಆಶ್ಚರ್ಯವೆನಿಸೀತು ॥ 86

ಒಮ್ಮೆ ಹೀಗೆ ನಡೆಯಿತು । ಗೋವೆಯಿಂದ ಪಾರ್ಸಲ ಬಂದಿತು ।
ಹೆಸರಾಂತ ಮಾವಿನ ಹಣ್ಣುಗಳದಿತ್ತು । ರಾಳೆ ಹೆಸರಿನ ತಹಸೀಲದಾರ ಕಳಿಸಿದ್ದ ॥ 87

ಮಾಧವರಾಯರ ಹೆಸರಿಗದು । ಬಾಬಾರ ಚರಣದಿ ಸಾದರಪಡಿಸಬೇಕೆಂದು ।
ಕೋಪರಗಾಂವದಲ್ಲಿ ಇಳಿಸಿಕೊಂಡು । ಶಿರಡಿಗದನು ತರಲಾಗಿತ್ತು ॥ 88

ಮಸೀದಿಯಲ್ಲಿ ಬಾಬಾರ ಎದುರಿಗೆ । ತೆಗೆದಾಗ ಸುಂದರ ಮಾವಿನ ಹಣ್ಣು ಒಳಗೆ ।
ಇದ್ದವವು ಮುನ್ನೂರರ ಮೇಲೆ । ಘಮಘಮಿಸುವ ಆ ಮಧುರ ಹಣ್ಣುಗಳು ॥ 89

ಬಾಬಾ ಅವುಗಳನೆಲ್ಲ ನೋಡಿದರು । ಮಾಧವರಾಯರ ಬಳಿಗೆ ಕೊಟ್ಟರು ।
ಅವರು ನಾಲ್ಕನ್ನು ಮಶೀದಿಯಲ್ಲಿಯ ಪಾತ್ರೆಯಲಿ ಹಾಕಿದರು । ಉಳಿದವನ್ನು ಜೊತೆಗೊಯ್ದರು ॥ 90

ಪಾತ್ರೆಯಲಿ ಹಣ್ಣು ಬೀಳಲು । ಶಬ್ದ ಹೊರಟಿತು ಬಾಬಾರ ಮುಖದೊಳು ।
"ದಾಮೂ ಅಣ್ಣಾನಿಗಾಗಿ" ಆ ಹಣ್ಣುಗಳು । ಅಲ್ಲಿಯೇ ಬಿದ್ದುಕೊಂಡಿರಲಿ ॥ 91

ಇದರ ನಂತರ ಎರಡು ತಾಸಿಗೆ । ದಾಮೂ ಅಣ್ಣಾ ಬಂದರು ಮಶೀದಿಗೆ ।
ಪುಷ್ಪಸಂಭಾರದ ಜೊತೆಗೆ । ಪೂಜೆ ಮಾಡಬೇಕೆಂದು ॥ 92

ಅವರಿಗೆ ಇದುವರೆಗೆ ನಡೆದದ್ದೇನೂ ಗೊತ್ತಿಲ್ಲ । ಆದರೂ ಬಾಬಾರ ದೊಡ್ಡದಾಗಿ ಆಡಿದ ಮಾತುಗಳ ।
"ಆ ಹಣ್ಣು ದಾಮೂನವು ನಮ್ಮವಲ್ಲ । ಎಲ್ಲರೂ ಅವ ತಿನ್ನಬೇಕನುತಿದ್ದರೂ ॥ 93

ಯಾರವಿದೆ ಅವರೇ ತೆಗೆದುಕೊಳ್ಳಬೇಕು । ಅವು ನಮಗೆಲ್ಲ ಏಕೆ ಬೇಕು ।
ಯಾರವು ಇರುವವು ಅವರೇ ತಿನ್ನಬೇಕು । ತಿಂದು ಸಾಯಬೇಕು" ॥ 94

ಪ್ರಸಾದವೆಂಬ ಭಾವನೆಯಿಂದ । ಅಣ್ಣಾ ಅವುಗಳ ಸ್ವೀಕರಿಸಿದ ।
ಹೆದರಬಾರದು ವಿಪರೀತಾರ್ಥದಿಂದ । ಇದು ಅಣ್ಣಾಗೆ ಚೆನ್ನಾಗಿ ಗೊತ್ತಿತ್ತು ॥ 95

ಪೂಜೆ ಮುಗಿಸಿ ಅಣ್ಣಾ ಹೋದರು । ಮತ್ತೆ ತಿರುಗಿ ಬಂದು ಕೇಳತೊಡಗಿದರು ।
ಈ ಹಣ್ಣುಗಳ ಕೊಡಬೇಕು ಯಾರಿಗೆಂದು । ಚಿಕ್ಕವಳಿಗೋ ಹಿರಿಯಳಿಗೋ ॥ 96

ಬಾಬಾ ಎಂದರು ಕೊಡು ಚಿಕ್ಕವಳಿಗೆ । ಎಂಟು ಮಕ್ಕಳು ಹುಟ್ಟುವವು ಅವಳಿಗೆ ।
ನಾಲ್ಕು ಗಂಡು ನಾಲ್ಕು ಹೆಣ್ಣು ಹೀಗೆ । ಈ ಆಮ್ರಲೀಲೆಯಿಂದ ಪ್ರಸವಿಸುವಳು ॥ 97

ಪುತ್ರಸಂತಾನವಿಲ್ಲವೆಂದು । ಬಹಳ ಪ್ರಯತ್ನ ಮಾಡಿ ಮುಗಿದು ।
ಭಜನೆ ಮಾಡಿ ಸಾಧುಸಂತರದು । ಕೃಪಾಶೀರ್ವಚನ ಪಡೆಯಬೇಕು ॥ 98

ಅದಕಾಗಿ ಸಾಧುಸಂತರ ಸಂಗ । ಗ್ರಹಪ್ರಸಾದ ಪಡೆಯಲೋಸುಗ ।
ಜ್ಯೋತಿರ್ವಿದ್ಯೆಯ ನೋಡುವಾಗ । ತಾವೇ ಜ್ಯೋತಿರ್ವಿದರಾದರು ॥ 99

ದೈವದಲ್ಲಿಲ್ಲ ಸಂತಾನ । ಇದೇ ಜ್ಯೋತಿರ್ವಿದ್ಯೆಯ ನಿಧಾನ ।
ಅಣ್ಣಾ ಪೂರ್ಣ ತಿಳಿದಿದ್ದರಿದನ । ನಿರಾಶರಾಗಿ ಕುಳಿತಿದ್ದರು ॥ 100

ಆದರೂ ಈ ಆಶ್ವಾಸನ । ಸಾಯಿ ಮುಖದ ವಚನ ।
ಮತ್ತೆ ಆಶೆಯಾಯಿತು ಉತ್ಪನ್ನ । ಸಮರ್ಥರು ಪ್ರಸನ್ನರಾದಾಗ ॥ 101

ಇರಲಿ ಕೆಲಕಾಲಕಳೆಯಲು । ಸಫಲವಾದವು ಬಾಬಾರ ಅಕ್ಷರಗಳು ।
ಸಂತ ಪ್ರಸಾದ ಆಮ್ರಅಂಕುರಿಸಲು । ಸಂತತಿ ಫಲ ಭರದಿಂದ ಪ್ರಸವಿಸಿತು ॥ 102

ಅವರು ನುಡಿದಂತೆಯೇ ಎಲ್ಲ ನಡೆಯಿತು । ತನ್ನ ಜೋತಿರ್ವಿದ್ಯೆ ನಿಷ್ಫಲವಾಯಿತು ।
ಅಮೋಘವಾದವು ಸಾಯಿಯ ಮಾತು । ಹೇಳಿದಂತೆ ಮಕ್ಕಳಾದವು ॥ 103

ಇರಲಿದಾಯಿತು ಬಾಬಾರ ವೈಖರಿ । ಬಾಬಾ ಇದ್ದಾಗ ದೇಹಧಾರಿ ।
ಆದರೆ ದೇಹತ್ಯಾಗದ ನಂತರದಲೂ ತೋರಿ । ನಿಜ ಮಹಿಮೆಯ ಭಕ್ತರಿಗೆ ॥ 104

"ನಾನು ಗತಪ್ರಾಣನಾದ ಮೇಲೂ । ಪ್ರಮಾಣ ತಿಳಿಯಿರಿ ನನ್ನ ಮಾತುಗಳು ।
ಸಮಾಧಿಯೊಳಗಿಂದ ನನ್ನ ಎಲುವುಗಳು । ನಿಮಗೆ ಆಶ್ವಾಸನ ಕೊಡುವವು ॥ 105

ನಾನೇನು ನನ್ನ ಸಮಾಧಿಯೂ ಕೂಡ । ಮಾತಾಡುತ್ತಿರುವದು ನಿಮ್ಮ ಕೂಡ ।
ಯಾರು ಅದಕೆ ಅನನ್ಯ ಶರಣಾಗತನಾದ । ಅವನೊಡನೆ ನಲಿಯುತಿರುವದು ॥ 106

ಆಗುವೆನು ನಾ ನಿಮ್ಮ ಕಣ್ಮರೆ । ಎಂದು ನೀವು ಚಿಂತಿಸದಿರಿ ।
ನನ್ನ ಎಲುವುಗಳು ಮಾತಾಡುವದ ಕೇಳುವಿರಿ । ನಿಮ್ಮೊಡನೆ ಹಿತನುಡಿಗಳಾಡುವದು ॥ 107

ಮಾಡಬೇಕು ಮಾತ್ರ ನನ್ನ ಸ್ಮರಣ । ಇಟ್ಟು ವಿಶ್ವಾಸ ಮುಕ್ತ ಅಂತಃಕರಣ ।
ಮಾಡಿರಿ ನಿಷ್ಕಾಮ ಭಜನ । ಕೃತಕಲ್ಯಾಣರಾಗುವಿರಿ" ॥ 108

ಹೇ ಭಕ್ತಕಾಮಕಲ್ಪತರುವೇ । ಸಮರ್ಥ ಸಾಯಿ ಸದ್ಗುರುವೇ ।
ಪರೋಪರಿಯಲಿ ಕರುಣೆಯ ಬೇಡುವೆ । ನಿನ್ನ ಚರಣಗಳೆಂದೂ ಅಂತರಿಸದಿರಲಿ ॥ 109

ಓಡಿಬಾರಯ್ಯಾ ಗುರುವರಾ । ಭಕ್ತಜನ ಕರುಣಾಕರ ।
ಬಿಡುವಿಲ್ಲದ ಈ ಸಂಸಾರ । ವೃತ್ತಿಗಳಿಂದ ಬಿಡಿಸಯ್ಯಾ ॥ 110

ವಿಷಯ ಪ್ರವೃತ್ತಿಪರರಾದ ನಮ್ಮನು । ಬಾಹ್ಯವಿಷಯಾಲೋಚನಾತತ್ಪರನು ।
ಅಂತರ್ಮುಖವಾಗಿಸೆಮ್ಮ ವೃತ್ತಿಗಳನು । ವಿಷಯಭೋಗಗಳಿಂದ ದೂರವಿರಿಸಿ ॥ 111

ತೆರೆಗಳೊಡನೆ ಸಿಕ್ಕುತ್ತ । ಭವಸಾಗರದಲಿ ತೇಲುತ್ತ ।
ನಡೆದ ನಮ್ಮ ಕೈ ಹಿಡಿಯುತ । ಭವ ನಿರ್ಮುಕ್ತರನ್ನಾಗಿಸು ॥ 112

ಇಂದ್ರಿಯಗಳು ಎತ್ತೆಂದರತ್ತ । ಹರಿದು ದುರಾಚಾರದತ್ತ ।
ಉಚ್ಛೃಂಖಲ ನದಿಗೆ ಒಡ್ಡು ಹಾಕುತ । ಇಂದ್ರಿಯಗಣಗಳ ಹಿಂದಕ್ಕಟ್ಟಿರಿ ॥ 113

ಇಂದ್ರಿಯಗಳಾಗದೇ ಅಂತರ್ಮುಖ । ಆತ್ಮವಾಗುವದೆಂದೂ ಸನ್ಮುಖ ।
ಅದಿಲ್ಲದೆಲ್ಲಿ ಆತ್ಯಂತಿಕ ಸುಖ । ಜನ್ಮ ನಿರರ್ಥಕವಾಗುವದು ॥ 114

ಪುತ್ರ-ಕಲತ್ರ-ಮಿತ್ರರಾರೂ । ಕೊನೆಯಲಿ ಉಪಯೋಗಕ್ಕೆ ಬಾರರು ।
ನೀನೆ ಕೊನೆಗಾಲದ ಜೊತೆಗಾರನಿರು । ಸುಖ ನಿರ್ಮುಕ್ತಿದಾಯಕ ನೀನು ॥ 115

ಕರ್ಮಾಕರ್ಮಗಳ ತೊಡಕಿನಿಂದ ಬಿಡಿಸಿ । ಒಮ್ಮೆ ದುಃಖದಿಂದ ಮುಕ್ತಗೊಳಿಸಿ ।
ದೀನ ದುರ್ಬಲರನುದ್ಧರಿಸಿ । ಕೃಪೆದೋರಬೇಕು ಮಹಾರಾಜಾ ॥ 116

ವಾದವಿವಾದ ಮತ್ತಿತರ ಅವಗುಣಗಳನ । ಕೃಪಾಬಲದಿಂದ ನಷ್ಟಗೊಳಿಸಿ ಅವುಗಳನ ।
ರಸನೆ ನೆನೆಯಲಿ ನಿಮ್ಮ ನಾಮವನ । ಸುನಿರ್ಮಲವಾದ ಸಾಯಿರಾಯಾ ॥ 117

ಇಂಥ ಪ್ರೇಮವ ಮನಕೆ ಕೊಟ್ಟು । ಸಂಕಲ್ಪ ವಿಕಲ್ಪಗಳ ದೂರಕಟ್ಟು ।
ದೇಹಗೇಹಗಳನ್ನು ಮರೆಸಿಬಿಟ್ಟು । ನಾನೆಂಬುದನ್ನು ಬಿಡಿಸಿರಿ ॥ 118

ನಿನ್ನ ನಾಮಸ್ಮರಣೆಯೊಂದಿರಲಿ । ಬೇರೆನೂ ನೆನಪಾಗದಿರಲಿ ।
ಮನವು ನಿಶ್ಚಲವಾಗಲಿ । ಚಂಚಲತೆಯೆಲ್ಲ ದೂರಾಗಲಿ ॥ 119

ನಮ್ಮ ನೀನಪ್ಪಿಕೊಂಡಾಗ । ಅಜ್ಞಾನ ತಮರಾತ್ರಿ ಕಳೆಯುವದಾಗ ।
ಸುಖದಿಂದ ಬಾಳುವೆವು ನಿನ್ನ ಬೆಳಕಿನ ಒಳಗ । ಕೊರತೆ ಯಾವುದರದಿರದಾಗ ॥ 120

ನೀನು ನಮಗೆ ಈ ಒಂದು । ನಿಜ ಚರಿತಾಮೃತವ ಕುಡಿಸಿದ್ದು ।
ಚಪ್ಪರಿಸಿ ಎಚ್ಚರಗೊಳಿಸಿದ್ದು । ಈ ಸುಕೃತವೇನು ಸಾಮಾನ್ಯವೇ ॥ 121

ಮುಂದಿನಧ್ಯಾಯ ಇದಕಿಂತ ಮಧುರ । ಇಚ್ಛೆ ಪೂರೈಸುವದು ಶ್ರವಣಾರ್ಥಿಯರ ।
ಬೆಳೆಯುವದು ಸಾಯಿ ಚರದಲಿ ಆದರ । ಶ್ರದ್ಧೆಯು ಸದೃಢವಾಗುವದು ॥ 122

ಒಬ್ಬ ಭಕ್ತನು ದರ್ಶನಕೆ ಬಂದು । ನಿಜ ಗುರುಚರಣಗಳ ತೊರೆದು ।
ವಂದಿಸಲು ಸಾಯಿ ಪದಾಂಬುಜ ಕಂಡು । ನಿಜಗುರುಸ್ಥಾನವ ದೃಢಗೊಳಿಸಿದರು ॥ 123

ಹಾಗೆಯೇ ಇನ್ನೊಬ್ಬ ಗೃಹಸ್ಥ ಶ್ರೀಮಂತನಾದರೂ ವಿಪದಗ್ರಸ್ತ ।
ಬಂದನು ಪುತ್ರ-ಕಲತ್ರ ಸಹಿತ । ಸಾಯಿಯ ದರ್ಶನಾರ್ಥವಾಗಿ ॥ 124

ಹೇಗವರ ಇಚ್ಛೆ ಪೂರೈಸುತ । ಹೇಗೆ ಅಪಸ್ಮಾರ ಪೀಡಿತ ಪುತ್ರ ।
ದರ್ಶನ ಮಾತ್ರದಿಂದಾದ ವ್ಯಾಧಿ ನಿರ್ಮುಕ್ತ । ಪೂರ್ವದೃಷ್ಟಾಂತವನು ನೆನಪಿಸಿ ॥ 125

ಆದಕೆಯೇ ಹೇಮಾಡನು ಸಾಯಿಗೆ ಶರಣ । ಮಾಡುವ ಶ್ರೋತೃಗಳಿಗೀ ವಿನಂತಿಯನ ।
ಆಗಿ ಸಾಯಿ ಕಥಾಶ್ರವಣ । ಶ್ರವಣಗಳ ಸಾರ್ಥಕಗೊಳಿಸಿರಿ ॥ 126

ಭಕ್ತ ಹೇಮಾಡಪಂತ ವಿರಚಿತೇ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಭಕ್ತಾಭೀಷ್ಟಸಂಪಾದನಂ ನಾಮ ಪಂಚವಿಂಶತಿತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತಾರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಭೂತಭೌತಿಕ ವಿಷಯ ಜಾತಗಳೆಲ್ಲ । ನಿಜಾಂತರ್ಗತವಾಗಿದೆ ಈ ಅಖಿಲ ವಿಶ್ವವೆಲ್ಲ ।
ದರ್ಪಣದಲ್ಲಿ ಪ್ರತಿಬಿಂಬ ವಾದ ನಗರದಂತಿಲ್ಲ । ಮಾಯೆಯಿಂದ ಕೂಡಿದ ಮಾಯಕವಿದು॥1

ವಾಸ್ತವದಲಿ ಇದು ಅನುದ್ಭೂತ । ಆತ್ಮ ಸ್ವರೂಪದಲಿ ಅನುಸ್ಯೂತ ।
ಅದು ಈ ವಿಶ್ವ ಸ್ವರೂಪದಲಿ ಸ್ಥಿತಿ । ಚರಾಚರಾವು ಉದ್ಭುತರಾದಂತೆ ಕಾಣುವುದು ॥ 2

ಕನ್ನಡಿಯಲ್ಲಿ ಕಾಣಿಸುವದೆಲ್ಲ । ವಾಸ್ತವವಾಗಿ ಅದು ಇರುವುದಿಲ್ಲ ।
ವಾಸನಾಮಯ ನಿದ್ರೆಯಲಿ ಕಾಣಿಸುವುದೆಲ್ಲ । ಎಚ್ಚರಾದಾಗ ಅದು ನಷ್ಟವಾಗಿರುವುದು ॥3

ಜಾಗೃತವಸ್ಥೆಯು ಪ್ರಾಪ್ತವಾಗುವುದು । ಆಗ ಸ್ವಪ್ನ ಪ್ರಪಂಚವು ಕರಗಿ ಹೋಗುವುದು ।
ಅದ್ವಯಾನಂದ ಪ್ರಕಾಶ ಹೊಳೆಯುವುದು । ಸದ್ಗುರುವಿನ ಮಹಾವಾಕ್ಯದಿಂದಾಗಿ ॥4

ವಿಶ್ವದ ಸತ್ತೆಯು ಸ್ಫುರಣ ಹೊಂದುವುದು । ಅದರ ಅನ್ಯ ನಿರಪೇಕ್ಷ ಅಧಿಷ್ಠಾನವು ।
ಪ್ರಸನ್ನವಾದಾಗ ಆ ಗುರಾತ್ಮವು । ಸಾಕ್ಷಾತ್ಕರಣವಿದು ಆಗಲೇ ॥ 5

ಸ್ವಪ್ರಕಾಶ ಸದಾತ್ಮಕವಾದ । ತಿಳಿ ಇದೆಲ್ಲ ಆತ್ಮ ಸ್ವರೂಪವೆಂಬದ ।
ವಿಶ್ವವು ಭೂತ ಭೌತಿಕವಾದ । ಮಾಯೆಯ ಲೀಲಾ ವಿನೋದವಿದು ॥ 6

ಆ ಬ್ರಹ್ಮ ಸ್ತಂಭದವರೆಗೆ । ಭೂತ ಭೌತಿಕವೆಲ್ಲ ಕಲ್ಪನೆಯದಿರುವಾಗ್ಯೆ ।
ವಿಸ್ತಾರಗೊಂಡಿದೆ ಈ ಜಗವು ಹೀಗೆ । ಮಾಯಾ ವಿಜೃಂಭಿತ ಮಾತ್ರವಿದು ॥ 7

ಸರ್ಪ-ಮಾಲಾ-ಧಾರಾ-ದಂಡ । ಹಗ್ಗವೆಂದು ತಿಳಿವುದು ಸ್ವರೂಪಜ್ಞಾನದಿಂದ ।
ಹಾಗೆ ಜಗತಸಾರವೆಲ್ಲವಿದ್ದ । ಸ್ವರೂಪದಲಿದಕೆ ಸ್ಥಳವಿರುವುದಿಲ್ಲ (ಅವಕಾಶವಿರುವುದಿಲ್ಲ) ॥ 8

ಈ ದೃಶ್ಯಜಾತವಾದದ್ದೆಲ್ಲ ಮಾಯಾಮಯ । ತತ್ವಜ್ಞಾನದಿಂದದರದಾಗುವದು ಲಯ ।
ಬಂದಾಗ ಗುರುವಾಕ್ಯ ಪ್ರಬೋಧ ಸಮಯ । ಇದೆಲ್ಲದರರಿವಾಗುವುದು ॥ 9

ತೃತೀಯ ಪುರುಷ ಏಕವಚನದಲ್ಲಿ । "ಗುಣಾತಿ" ರೂಪಾರ್ಥವ ತರಲು ಮನದಲಿ ।
ಶಿಷ್ಯನಿಗೆ ತತ್ತ್ವೋಪದೇಶ ಕೊಡುವಲ್ಲಿ । ಗುರು ಒಬ್ಬನೇ ಸಮರ್ಥನು ಸಮಸ್ತದಲ್ಲಿ ॥ 10

ಅದಕಾಗಿ ಪ್ರಾರ್ಥಿಸುವಾ ಬಾಬಾರನು । ಅಂತರಾಸಕ್ತ ಮಾಡಿರಿ ಬುದ್ದಿಯನ್ನು ।
ಇತ್ತು ನಿತ್ಯಾನಿತ್ಯ ವಿವೇಕವನು । ವೈರಾಗ್ಯರತನನ್ನಾಗಿಸಿರಿ ॥ 11

ನಾನಿರುವೆ ಎಂದಿಗೂ ಅವಿವೇಕಿ ಮೂಢ । ಇರುವೆ ಅವಿದ್ಯಾ ವ್ಯವಧಾನ ನಿಗೂಢ ।
ಬುದ್ಧಿಯು ಯಾವಾಗಲೂ ಕುತರ್ಕಾರೂಢ । ಅದರಿಂದಲೀ ಗೂಢ ಬಿದ್ದಿದೆನಗೆ ॥ 12

ಗುರು ವೇದಾಂತ ವಚನಗಳಂತೆ । ನಡೆಸು ಅವು ಆವುಗಳಲಿ ಭರವಸೆ ಇರುವಂತೆ ।
ಮನವನಿರಿಸಲಿ ಕನ್ನಡಿಯಂತೆ । ಅಲ್ಲಿ ನಿಜಬೋಧದ ಬಿಂಬ ಬೆಳಗಲಿ ॥ 13

ಸದ್ಗುರು ಸಾಯಿ ಸಮರ್ಥರೇ ಮತ್ತು । ಮೂಡಿಸಿರಿ ಈ ಜ್ಞಾನದ ಅನರ್ಥತೆ ।
ಅನುಭವವಿಲ್ಲದೆ ಮಾತನಾಡಿದರಾಯಿತೆ । ಅದರಿಂದೇನು ಪರಮಾರ್ಥ ಸಾಧಿಸೀತು ॥ 14

ಬಾಬಾ ತಮ್ಮ ಪ್ರಭಾವ ಹೀಗಿರಬೇಕು । ಅದರಿಂದ ಸ್ವತಃ ಈ ಜ್ಞಾನವ ಅನುಭವಿಸಬೇಕು ।
ಸಹಜ ಸಾಯುಜ್ಯ ಪದ ಪಡೆಯಬೇಕು । ಕೃಪೆ ಮಾಡಿ ಈ ದಾನವೀಯಬೇಕು ॥ 15

ಅದಕೇ ದೇವಾ ಸದ್ಗುರು ಸಾಯಿ ಕೇಳಿಲ್ಲಿ । ಅರ್ಪಿಸುವೆ ದೇಹಾಹಂತೆಯ ಚರಣದಲಿ ।
ನನ್ನ ತನವೆಂಬುವುದೇ ಇರದಾಗ ನನ್ನಲ್ಲಿ । ನಿನೇ ಎಲ್ಲವನೂ ನೋಡಿಕೊಳ್ಳಬೇಕು ॥ 16

ತೆಗೆದುಕೋ ನನ್ನ ದೇಹಾಭಿಮಾನ । ಬೇಡ ಸುಖದುಃಖಗಳ ಜ್ಞಾನ ।
ಇಚ್ಛಾನುಸಾರ ಅಲುಗಿಸು ನಿಜಸೂತ್ರವನ । ಅದರಿಂದ ಮನ್ಮನವ ಸ್ಥಿರವಾಗಿಸು ॥ 17

ಇಲ್ಲವೇ ಈ ನನ್ನ ನನ್ನತನವನ್ನು । ತೆಗೆದುಕೊಂಡಾಗುನೀನೇ ನೀನು ।
ತೆಗೆದುಕೋ ಸುಖದುಃಖಗಳ ಭೋಗಿಸುವುದನ್ನು । ಅದರ ಚಿಂತೆ ಇನಿತೂ ಬೇಡೆನಗೆ ॥18

ಜಯ ಜಯ ಹೇ ಪೂರ್ಣಕಾಮಾ । ಹುಟ್ಟಲಿ ನಿನ್ನ ಚರಣದಲಿ ಪ್ರೇಮಾ ।
ಈ ಚಂಚಲ ಮನಹೇ ಮಂಗಲಧಾಮಾ । ತವಚರಣದಿ ಉಪರಮೆ ಪಡೆಯಲಿ ॥ 19

ನೀನಿಲ್ಲದೇ ಇನ್ನಾರು । ಹಿತವಚನಗಳೆಮಗೆ ಹೇಳುವರು ।
ನಮ್ಮ ದುಃಖ ನಿವಾರಿಸುವರು । ಮನಕೆ ಶಾಂತಿ ನೀಡುವರು ॥ 20

ಶಿರಡಿಯ ಸುದೈವವಿತ್ತೆಂದು । ಬಾಬಾ ತಾವು ಅಲ್ಲಿಗೆ ಬಂದು ।
ಮುಂದೆ ಅಲ್ಲಿಯೇ ವಾಸ್ತವ ಮಾಡಿದ್ದು । ಆಸ್ಥಾನಕ್ಕೆ ಕ್ಷೇತ್ರತ್ವ ತಂದಿರಿ ॥ 21

ಧನ್ಯ ಶಿರಡಿಯ ಸುಕೃತವೆಂದು । ಈ ಸಾಯಿ ಕೃಪಾವಂತ ಅಲ್ಲಿಗೆ ಬಂದು ।
ನಿಜವಾಸ್ತವದಿಂದಲಂಕರಿಸಿದ್ದು । ಆ ಸ್ಥಳದ ಭಾಗ್ಯ ಹಿರಿದೆಂದೇ ॥ 22

ನೀನೆ ನನಗೆ ಚೈತನ್ಯವೀಯುವವ । ನೀನೆ ನನ್ನ ವಾಚೆಯಲಿ ನುಡಿಯುವವ ।
ಹೀಗಿರುವ ನಿನ್ನ ಗುಣಗಾನ ಮಾಡುವವ । ನಾನಾರು ಎಲ್ಲ ಮಾಡುಸುವ ನೀನು ॥23

ನಿತ್ಯ ಸಮಾಗಮ ನಿನ್ನದು । ಆಗಮ - ನಿಗಮ ಎಲ್ಲ ನನಗೆ ಅದು ।
ನಿತ್ಯ ನಿನ್ನ ಚರಿತ್ರ ಕೇಳುವುದು । ಅದುವೇ ನಮಗೆ ಪಾರಾಯಣ ॥ 24

ಒಂದು ಕ್ಷಣ ಬಿಡದೆ ನಿನ್ನ ನಾಮಾವರ್ತನ । ಅದುವೇ ನಮಗೆ ಕಥಾ ಕಿರ್ತನ ।
ಇದೇ ನಿತ್ಯಾನುಸಂಧಾನ । ಇದುವೆ ಸಮಾಧಾನವೆಮಗೆ ॥ 25

ಬೇಕಿಲ್ಲ ನಮಗೆ ಅಂಥಾ ಸುಖ । ಯಾವುದರಿಂದಾಗುವೆವು ಭಜನವಿನ್ಮುಖ ।
ಅದಕ್ಕಿಂತ ಅಧಃ ಪತನ ಅಧಿಕ । ಪರಮಾರ್ಥಬಾಧಕವಿನ್ನಾಗುವುದಿದೆ ॥ 26

ಆನಂದಾ ಶಿರವಿನ ಉಷ್ಣಾಜಲದಿ । ಪವಿತ್ರ ಚರಣಕ್ಷಾಲನ ಮಾಡಿ ।
ಶುದ್ಧ ಪ್ರೇಮದ ಚಂದನವ ತೀಡಿ । ಸಚ್ಛ್ರದ್ಧೆಯದೇ ತೊಡಿಗೆ ತೊಡಿಸುವಾ ॥ 27

ಈ ಅಂತರಂಗ ಪೂಜಾ ವಿಧಾನ । ಇದರಿಂದ ಮಾಡಿ ಪೂಜೆಯನ ।
ಅದರಿಂದ ನಿನ್ನನು ಸುಪ್ರಸನ್ನ । ಸುಖಸಂಪನ್ನವಾಗಿ ಮಾಡುವೆವು ॥ 28

ಸಾತ್ವಿಕ ಅಷ್ಟು ಭಾವ -ಕಮಲ । ಅಷ್ಟದಲ ನಿರ್ಮಲ ।
ಮನಗೊಳಿಸಿ ಏಕಾಗ್ರ, ಅವಿಕಲ । ಅರ್ಪಿಸಿ ನಿಜಫಲವ ಪಡೆಯುವೆವು ॥ 29

ಭಾವಾರ್ಥದ ಬುಕ್ಕಿಟ್ಟು ಹಚ್ಚಿ ಹಣೆಗೆ । ದೃಢ ಭಕ್ತಿಯದೇ ಮಾಡಿಸರಿಗೆ ।
ತೊಡಿಸಿ ಅದನೇ ಕೊರಳಿಗೆ । ಅಲೌಕಿಕ ಆನಂದ ಉಪಭೋಗಿಸುವೆವು ॥ 30

ಪ್ರೀತಿಯೆಂಬ ರತ್ನಾಲಂಕಾರಗಳನ । ನಿವಾಳಿಸುವೆವೆಲ್ಲವನ ।
ಪಂಚಪ್ರಾಣಗಳ ಚಾಮರಾಂದೋಲನ । ಛತ್ರಗಳು ತಾಪ ನಿವಾರಣಕೆಂದು ॥ 31

ಹೀಗೆ ಮಾಡಿ ಸ್ವಾನಂದ ಪೂಜೆಯನ । ಅಷ್ಟಾಂಗ ಗಂಧ - ಅರ್ಗಜೆಗಳನು ।
ಸಾಯಿ ರಾಜಾ ಪೂಜಿಸುವೆವು ನಿನ್ನ । ನಮ್ಮ ಪ್ರಯೋಜನಕಾಗಿಯೆಂದು ॥ 32

ಅಭೀಪ್ಸಿತಾರ್ಥ ಸಿದ್ಧ್ಯರ್ಥ । ನಿತ್ಯ ಸ್ಮರಿಸುವೆವು "ಸಾಯಿ ಸಮರ್ಥ" ।
ದೇ ಮಂತ್ರದಿಂದ ಸಾಧಿಸಿ ಪರಮಾರ್ಥ । ನಿಜನಿಷ್ಠೆಯಿಂದ ಕೃತಾರ್ಥರಾಗುವೆವು ॥ 33

ಹಿಂದಿನಧ್ಯಾಯದಲಿ ಕಥನ । ಸಾಯಿ ಸಮರ್ಥದಯಾಘನ ।
ಮಾಡಲು ನಿಜಭಕ್ತ ಕಲ್ಯಾಣ । ಹೇಗೆ ಶಿಕ್ಷಣ ಕೊಡುತಿದ್ದರೆಂದು ॥ 34

ಇನ್ನು ಈ ಅಧ್ಯಾಯದಲಿ ನಿರೂಪಣ ಗುರು । ಪದದಲಿ ಮಾಡಿ ಭಕ್ತರ ಸ್ಥಾಪನ ।
ಯಾವ ಬಗೆಯಲೆಂಬದನ । ಕಥೆಯ ರೂಪದಲಿ ಕೇಳಿರಿ ॥ 35

ಗತಾಧ್ಯಾಯದ ಕೊನೆಯಲಿ ಹೇಳಿದ । ಭಕ್ತ ಪಂತರ ಕಥಾಮೃತದ ।
ಪಾನ ಮಾಡಿರಿ ಶ್ರವಣದಿಂದ । ತತ್ವವು ನಿಶ್ಚಿತವಾಗುವುದು ॥ 36

ಹೇಗೆ ಹೇಗೆ ಅನುಭವ ತೋರಿದರು । ಹೇಗೆ ಕಣ್ಣಿಗೆ ಅಂಜನವ ಹಾಕಿದರು ।
ಹೇಗೆ ಸ್ವಗುರು ಪದದಲಿ ಸ್ಥಾಪಿಸಿದರು । ಮನ ತುಂಬೀತು ಅದರಿಂದ ॥ 37

ಒಮ್ಮೆ ಬಹಳ ಶ್ರಮವಹಿಸುತ । ಪಂತನೆಂಬ ಹೆಸರಿನ ಭಕ್ತ ।
ಮಿತ್ರನೊಡಗೂಡಿ ಶಿರಡಿಗೆ ಹೋಗುತ । ಸಾಯಿ ದರ್ಶನೇಚ್ಛೆಯಿಂದ ॥ 38

ಅವರು ಮೊದಲೇ ಅನುಗ್ರಹಿತರಿದ್ದು । ನಿಜಗುರು ಸ್ಥಿತರಿದ್ದು ।
ಶಿರಡಿಗೆ ಹೋಗಿ ಏನು ಮಾಡುವುದು । ಎಂದು ಮನದಲಿ ಶಂಕಿಸಿದರು ॥ 39

ಯಾರದಿರುವದು ಯೋಗವೆಂತು । ಅಕಲ್ಪಿತವಾಗಿ ಘಟಿಸುವದಂತು ।
ಸಾಯಿ ದರ್ಶನದ ಕಾಲ ಬಂತು । ಅಮೋಘ ಸುಖದಾಯಕವಾಯಿತು ॥ 40

ನಾವು ಒಂದನ್ನು ಯೋಚಿಸಿದರೆ । ಈಶ್ವರೀಚ್ಛೆ ಇರುವುದು ಹೇಗೆ ।
ನಡೆಯದಾದರೂ ಅದೃಷ್ಟ ಒದಗಿದರೆ । ಎಂಬುದನು ಮನದಿಂದ ಕೇಳಿರಿ ॥ 41

ಶಿರಡಿಗೆ ಹೋಗುವುದನ್ನು ಮಾಡಿಗೊತ್ತು । ಅನೇಕರು ಮನೆಯಿಂದ ಹೊರಟು ।
ಉಗಿ ಬಂಡೆಯಲ್ಲಿ ಕುಳಿತು । ಆನಂದದಿಂದ ನಡೆದರು ॥ 42

ಬಂಡಿ ಏರಿದಾಗ ಆಕಸ್ಮಾತ । ಪಂತರು ಅಲ್ಲಿದ್ದುದನು ಕಾಣುತ ।
ಅವರು ಹೊರಟಿರುವುದು ಶಿರಡಿಯತ್ತ । ಎಂಬುವುದು ಪಂತರಿಗೆ ತಿಳಿಯಿತು ॥ 43

ಅವರಲ್ಲಿ ಕೆಲ ಪಂತರ ಸ್ನೇಹಿತರು । ಇದ್ದರವರಲ್ಲಿ ಬೀಗರು ಬಿಜ್ಜರು ।
ಹೋಗುವುದು ಪಂತರ ಮನದಲಿರದಿದ್ದರೂ । ಅವರ ಒತ್ತಾಯಕೊಳ್ಳಪಟ್ಟರು ॥ 44

ಮೊದಲು ಪಂತರು ವಿಚಾರ ಮಾಡಿದ್ದು । ಎಲ್ಲಿಯವರೆಗೆ ಹೋಗುವುದು ।
ತಿಕೀಟು ಕೊಂಡಿದ್ದರು ಅಲ್ಲಿಯವರೆಗಿನದ್ದ । ಆ ಮೇಲೆ ವಿಚಾರ ಬದಲಾಯಿತು ॥ 45

ಸ್ನೇಹಿತರು ಬೀಗರು ಎಂದರವರಿಗೆ । ನಡೆಯಿರೆಲ್ಲರೂ ಕೂಡಿ ಹೋಗುವ ಶಿರಡಿಗೆ ।
ಪಂತರು ಕೊಟ್ಟರು ಒಪ್ಪಿಗೆ । ಅವರ ಮನವಿರದೆ ಮಣಿದು ಒತ್ತಾಯಕೆ ॥ 46

ಪಂತರು ವಿರಾರಕ್ಕೆ ಇಳಿದರು । ಉಳಿದವರು ಮುಂಬಯಿಗೆ ಹೋದರು ।
ವೆಚ್ಚಕ್ಕೆ ಕೈಗಡ ಹಣ ತೆಗೆದು ಕೊಂಡರು । ಪಂತರೂ ಮುಂಬಯಿಗೆ ಬಂದರು ॥ 47

ಮಿತ್ರರ ಮಾತು ಮೀರಲಾಗದು । ಅದಕೆ ನಿಜಗುರುವಿನ ಅಪ್ಪಣೆ ಪಡೆದು ।
ಬಳಿಕ ಶಿರಡಿಗೆ ಬಂದು । ಇಳಿದರೆಲ್ಲರೂ ಆನಂದದಿಂದ ॥ 48

ಎಲ್ಲರೂ ಹೋದರು ಮಶೀದಿಗೆ । ಬೆಳಗ್ಗಿನ ಹನ್ನೊಂದರ ಹೊತ್ತಿಗೆ ।
ಭಕ್ತರ ಗದ್ದಲ ನಡೆದಿತ್ತು ಪೂಜೆಗೆ । ನೋಡಿ ಸಂತೋಷವಾಯಿತು ॥ 49

ಬಾಬಾರ ರೂಪವನು ಕಂಡು । ಎಲ್ಲರೂ ಆನಂದದಿಂದ ಸಂಪನ್ನರಾಗಿದ್ದರೂ ।
ಅಷ್ಟರಲ್ಲಿ ಪಂತರಿಗೆ ಮೂರ್ಛೆಬಂದು । ಎಚ್ಚರ ತಪ್ಪಿ ಬಿದ್ದು ಬಿಟ್ಟರು ॥ 50

ದೇಹ ವಿಕಲವಾಯಿತು । ಪೂರ್ತಿ ಎಚ್ಚರ ತಪ್ಪಿತು ।
ಜೊತೆಯವರಿಗೆ ಚಿಂತೆಯಾಯಿತು । ಮನದಿ ವ್ಯಗ್ರರಾದರು ॥ 51

ಜನರೆಲ್ಲರ ಸಹಾಯದಿಂದ । ಬಾಬಾರ ಕೃಪಾದೃಷ್ಟಿಯಿಂದ ।
ತಲೆಗೆ ನೀರು ಬಡಿಯುವುದರಿಂದ ಸಂಪೂರ್ಣ ಎಚ್ಚರಾದರು ॥ 52

ಅವರು ಮೂರ್ಛೆಯಿಂದ ಎಚ್ಚರಗೊಂಡು । ಗಡಬಡಿಸಿ ಕುಳಿತರು ಎದ್ದು ।
ಎನಿಸಿತು ನಿದ್ದೆಯಿಂದೆದ್ದು । ಈಗ ತಾನೇ ಕುಳಿತ ಹಾಗೆ ॥ 53

ಬಾಬಾ ಪೂರ್ಣ ಅಂತರ್ಜ್ಞಾನಿಗಳಿದ್ದು । ಅವರ ಗುರು ಪುತ್ರತೆಯ ತಿಳಿದು ।
ಅವರಿಗೆ ಅಭಯತೆಯ ಆಶ್ವಾಸನೆ ಇತ್ತಿದ್ದು । ನಿಜಗುರು ಭಜನೆಯಲಿ ನಿಲಿಸಿದರು ॥ 54

ಬರಲಿ ಪ್ರಸಂಗ ಎಂಥದ್ದೂ । "ತಮ್ಮ ಸ್ಥಾನವ ಬಿಟ್ಟುಕೊಡಬಾರದು ।
ಯಾವಾಗಲೂ ನಿಶ್ಚಲರಾಗಿರುವುದು । ಅನನ್ಯವಾಗಿ ಏಕತ್ವವ ಕಾಣುತ" ॥ 55

ಪಂತರವರಿಗೆ ಗುರುತಿನರಿವಾಯಿತು । ನಿಜ ಗುರುವಿನ ನೆನಪಾಯಿತು ।
ಕೊನೆಯವರೆಗೆ ಸ್ಮರಣೆಯಲ್ಲುಳಿಯಿತು । ಸಾಯಿ ಬಾಬಾರ ದಯಾಳುತನ ॥ 56

ಹಾಗೇಯೇ ಒಬ್ಬ ಮುಂಬಾಪುರುಸ್ಥ । ಹರಿಶ್ಚಂದ್ರನೆಂಬ ಗ್ರಹಸ್ಥ ।
ಪುತ್ರನು ಅಪಸ್ಮಾರವ್ಯಥಾಗ್ರಸ್ತ । ಅದರಿಂದತಿ ತ್ರಸ್ತನಾಗಿದ್ದನು ॥ 57

ಆದರೂ ದೇಶ ವಿದೇಶಗಳ ವೈದ್ಯರೆಲ್ಲ । ಆದರೆ ಉಪಾಯ ಒಂದರಿಂದೂ ಆಗಲಿಲ್ಲ ।
ಮುಗಿದವು ಎನಿಸಿದಾಗ ಪ್ರಯತ್ನಗಳೆಲ್ಲ । ಸಾಧು ಸಂತರ ಮಾರ್ಗ ಒಂದೇ ಉಳಿಯಿತು ॥ 58

ಸನ್ ಹತ್ತೊಂಬತ್ತು ನೂರಾ ಹತ್ತು । ಆಗ ದಾಸಗಣೂರಿಂದ ಕೀರ್ತನೆ ನಡೆಯಿತು ।
ಸಾಯಿ ನಾಥರ ಕೀರ್ತಿಹರಡಿತು । ಶಿರಡಿಯ ಯಾತ್ರೆ ಬೆಳೆಯಿತು ॥ 59

ಕುಗ್ರಾಮವಾದರೂ ಭಾಗ್ಯ ಹಿರಿದು । ಶಿರಡಿಯೇ ಪಂಢರ ಪುರವಾದದ್ದು ।
ಅಪರಂಪಾರ ಮಹಿಮೆ ಬೆಳೆದು । ಯಾತ್ರೇ ಅಪಾರ ನೆರೆಯಿತು ॥ 60

ರೋಗ ಪರಿಹರಿಸುವವರು ದರ್ಶನ ಮಾತ್ರದಿಂದ । ಅಥವಾ ಕೇವಲ ಹಸ್ತ ಸ್ಪರ್ಶದಿಂದ ।
ಇಲ್ಲವೇ ಕೇವಲ ಶುದ್ಧ ಕೃಪಾವಲೋಕನದಿಂದ । ಎಂಬನುಭವ ಬಂದಿತನೇಕರಿಗೆ ॥61

ಆಗಿ ಅನನ್ಯ ಶರಣಾಗತ । ಭಕ್ತನು ಕೃತಾಕಲ್ಯಾಣನಾಗುತ ।
ತಿಳಿದು ಎಲ್ಲರ ಮನೋಗತ । ಎಲ್ಲ ಮನೋರಥಗಳ ಪೂರೈಸುತ್ತಿದ್ದರು ॥ 62

ಉದಿ ಧಾರಣದಿಂದ ಭೂತ ಬಿಡುವುದು । ಆಶೀರ್ವಚನದಿಂದ ಪೀಡೆ ಕಳೆಯುವುದು ।
ಕೃಪಾವಲೋಕನದಿದ ಬಾಧೆ ತಪ್ಪುವುದು । ಅದಕೆ ಜನರೋಡಿ ಬರುವರು ॥ 63

ಹೀಗೆ ಮಹಾತ್ಮ್ಯ ಕೀರ್ತನೆಗಳಲಿ । ದಾಸಗೂಣೂರ ಗ್ರಂಥಗಳಲಿ ।
ಕರ್ಣೋಪಕರ್ಣವಾಗಿ ಕೇಳುತಲಿ । ದರ್ಶನದಿ ಉತ್ಕಂಠೆ ಮೂಡಿತು ॥ 64

ಮಕ್ಕಳು ಮರಿಗಳ ಜೊತೆಗೂಡಿಕೊಂಡು । ಪರಿ ಪರಿಯ ಫಲಗಳ ತೆಗೆದುಕೊಂಡು ।
ಪೂರ್ವಾಜಿತ ಬಲದಿಂದ ದರ್ಶನಕೆಂದು । ಪಿತಳೆ ಶಿರಡಿಗೆ ಬಂದಿಳಿದರು ॥ 65

ಮಗುವನು ಚರಣದಲಿ ಹಾಕಿದರು । ತಾವೂ ಬಾಬಾರಿಗೆ ಸಾಷ್ಟಾಂಗವೆರಗಿದರು ।
ಆದರೆ ಬಹಳ ಗೊಂದಲದಲಿ ಬಿದ್ದರು । ಅಲ್ಲೊಂದು ವಿಪರೀತ ನಡೆದದ್ದು ಕಂಡು ॥ 66

ಸಾಯಿಯೊಡನೆ ದೃಷ್ಟಿ ಕೂಡಿತು । ಮಗು ಆಗ ಎಚ್ಚರ ದಪ್ಪಿತು ।
ಒಮ್ಮೆಲೇ ಕಣ್ಣು ತಿರುಗಿಸಿತು । ತಾಯಿ ತಂದೆ ಗಾಬರಿಯಾದರು ॥ 67

ಎಚ್ಚರವಿಲ್ಲದೆ ಭೂಮಿಗೆ ಬಿದ್ದು । ಬಾಯಲೆಲ್ಲ ಬುರುಗು ಬಂದಿತ್ತು ।
ತಾಯಿ ತಂದೆಯರಿಗೆ ಚಿಂತೆಯಾಯಿತು । ಇನ್ನೀ ದೈವಕ್ಕೇನು ಮಾಡಬೇಕು ॥ 68

ಉಸಿರು ನಿಂತು ಹೋದಂತೆನಿಸಿತು। ಬಾಯಿಂದ ಬುರುಗು ಬರುತಿತ್ತು ।
ಮೈಯೆಲ್ಲಾ ಬೆವೆತು ಹೋಯಿತು । ಜೀವದ ಆಶೆಯೇ ಇಲ್ಲದಾಯಿತು ॥ 69

ಅನೇಕ ಸಲ ಮೊದಲು ಮೂರ್ಛೆಹೀಗೆ । ಬಂದು ಹೋಗಿತ್ತು ಹುಡುಗನಿಗೆ ।
ಆದರೂ ಇಷ್ಟು ಸಮಯದವರೆಗೆ । ಅದೆಂದೂ ಉಳಿದಿರಲಿಲ್ಲ ॥ 70

ಹೀಗೆ 'ನಭೂತೋ ನಭವಿಷ್ಯತಿ' ।ತಂದಿತೀಗಿದು ಪ್ರಾಣಾಂತಿಕ ಗತಿ ।
ನೋಡಿ ಆ ಮಗುವಿನ ಸ್ಥಿತಿ । ತಾಯಿಗೆ ದುಃಖ ತಡೆಯದಾಯಿತು ॥ 71

ಬಂದು ದೇತಕ್ಕೆ ನಡೆಯದಿರುವದೇನು । ಉಪಾಯವಾಯಿತೇನು ।
ಈ ಚರಣಗಳೇ ಘಾತುಕವಾದವೇನು । ವ್ಯರ್ಥವಾಯಿತಲ್ಲಾ ಈ ವ್ಯವಸಾಯ ॥ 72

ಕಳ್ಳರ ಭಯದಿಂದ ಮನೆಯೊಳು ಹೋಗಲು । ಆ ಮನೆಯೇ ಮುರಿದು ಮೈಮೇಲೆ ಬೀಳಲು ।
ಹಾಗಾಯಿತೇ ಇಲ್ಲಿಗೆ ಬಂದುದೆಂದಳು । ಆ ತಾಯಿ ಆಗ ದುಃಖದಿಂದ । 73

ವ್ಯಾಘ್ರವು ತಿಂದೀತೆಂದು ಆಕಳು । ಜೀವದಾಶೆಗೆ ಓಡುತಿರಲು ।
ಇದುರು ಕಟುಕನೊಬ್ಬ ಬರಲು । ಆದಂತಾಗಿದೆ ನಮ್ಮ ಗತಿ ॥ 74

ತಾಳಾಲಾರದೆ ಬಿಸಿಲಿನ ಬೇಗೆ । ದಾರಿಕಾರ ಹೋದ ಗಿಡದ ನೆರಳಿಗೆ ।
ಆ ವೃಕ್ಷವೇ ಕಿತ್ತು ಮೇಲೆ ಬಿದ್ದ ಹಾಗೆ । ಆಯಿತೀಗ ನಮ್ಮ ಸ್ಥಿತಿ ॥ 75

ಭಾವವಿಟ್ಟು ದೇವರೆಂದು । ಗುಡಿಯೊಳಗೆ ಹೋಗಲು ಪೂಜಿಸಲೆಂದು ।
ಗುಡಿಯೇ ಮೈ ಮೇಲೆ ಕಡಕೊಂಡು । ಬಿದ್ದ ಹಾಗಾಯಿತು ಈ ಪರಿ ॥ 76

ಬಾಬಾ ಆಶ್ವಾಸನೆ ಇತ್ತರು ಅವರಿಗೆ । "ಸ್ವಲ್ಪ ಧೈರ್ಯ ತಂದುಕೊಳ್ಳಿರಿ ಮನಸಿಗೆ ।
ತನ್ನಷ್ಟಕ್ಕೆ ಎಚ್ಚರ ಬರುವದವನಿಗೆ । ಸದ್ಯ ಬಾಲಕನನೆತ್ತಿ ಕೊಂಡ್ಹೋಗಿರಿ ॥ 77

ಹುಡುಗನ ತೆಗೆದುಕೊಂಡು ಹೋಗಿರಿ ಮನೆಗೆ । ಕಳೆದಾಗ ಇನ್ನೊಂದು ಘಳಿಗೆ ।
ಪ್ರಾಣ ಬರುವುದು ಆ ದೇಹದೊಳಗೆ । ಸುಮ್ಮನೆ ಅವಸರ ಪಡಬೇಡಿರಿ" ॥ 78

ಇರಲಿ ಅವರು, ಅದರಂತೆ ಮಾಡಲು । ಸತ್ಯವಾದವು ಬಾಬಾರ ಮಾತುಗಳು ।
ದೂರವಾದವಲ್ಲ ಕುತರ್ಕಗಳು । ಪಿತಳೆ ಸಕುಟುಂಬ ಆನಂದ ಬಟ್ಟರು ॥ 79

ಹುಡುಗನ ವಾಡೆಗೆ ಒಯ್ದಮೇಲೆ । ಎಚ್ಚರಾದ ತತ್ಕಾಲದಲೇ ।
ತಾಯಿ ತಂದೆಯರ ಚಿಂತೆ ದೂರಾಯಿತಾಗಲೇ । ಆನಂದ ಮನದಿ ಹಿಡಿಸದು ॥ 80

ಬಳಿಕ ಪಿತಳೆ ಸ್ತ್ರೀ ಸಹಿತ । ಬಾಬಾರ ದರ್ಶನಕ್ಕೆ ಬರುತ ।
ಆಗಿ ಅತಿ ವಿನೀತ । ಸಾಷ್ಟಾಂಗ ಪ್ರಣಿಪಾತ ಮಾಡಿದನು ॥ 81

ತಮ್ಮ ಪುತ್ರನೆದ್ದುದ ಕಂಡು । ಸಾಭಾರ ಮನದಲಿ ಮುದಗೊಂಡು ।
ಬಾಬಾರ ಕಾಲು ಒತ್ತುತ್ತ ಕುಳಿತಿದ್ದು । ಬಾಬಾ ನಗುಮೊಗದಿಕೇಳಿದವರಿಗೆ ॥ 82

ಆ ಸಂಕಲ್ಪ ವಿಕಲ್ಪಗಳ ತೆರೆಗಳೇನಾದರೂ । ಶಾಂತವಾದುವೇ ಈಗಲಾದರೂ ।
ನಿಷ್ಠೆ ಇಟ್ಟು ತಾಳ್ಮೆಯಿಂದಿದ್ದವರು । ಶ್ರೀ ಹರಿಯ ರಕ್ಷಣೆಯ ಪಡೆಯುವರು ॥ 83

ಪಿತಳೆ ಮೊದಲಿನಿಂದಲೇ ಶ್ರೀಮಂತರು । ಮನೆತನದಿಂದಲೂ ಹೆಸರಾದವರು ।
ಮೇವಾ ಮಿಠಾಯಿಗಳ ಸೂರೆ ಮಾಡಿದರು । ಬಾಬಾರಿಗೆ ಹಣ್ಣು ಹೂ ವೀಳ್ಯವನಿತ್ತರು ॥84

ಅವರ ಕುಟುಂಬ ಬಹಳ ಸಾತ್ವಿಕ । ಶ್ರದ್ಧಾಂತ ಪ್ರೇಮಳ ಸಾತ್ವಿಕ ।
ಅನಿಮಿಷ ವಾಗಿ ಬಾಬಾರ ನೋಡುತ । ಕಂಬದ ಹತ್ತಿರ ಕುಳಿತಿದ್ದರು ॥ 85

ನೋಡ ನೋಡುತ ನಯನ ಹನಿ ಗೂಡುವುದು । ಹೀಗೆ ಇದು ನಿತ್ಯವೂ ನಡೆಯುವುದು ।
ಅವಳ ಈ ಬಗೆಯ ಪ್ರೇಮ ಕಂಡು । ಬಾಬಾರೂ ಬಲು ಮೆಚ್ಚುತ್ತಿದ್ದರು ॥ 86

ದೇವರು ಹೇಗೆ ಹಾಗೆಯೇ ಸಂತರು । ಅತ್ಯಂತ ಭಕ್ತ ಪರಾಧೀನರು ।
ಕೃಪಾವಂತರಾಗುವುರು । ಅನನ್ಯತೆಯಿಂದ ಭಜಿಸುವರಿಗೆ ॥ 87

ಹೀಗಿರಲು ಆ ಜನ ತಿರುಗಿ ಹೊರಟರು । ದರ್ಶನಕೆಂದು ಮಶೀದಿಗೆ ಬಂದರು ।
ಬಾಬರ ಅನುಜ್ಞೆ ಉದಿ ಪಡೆದರು । ಹೊರಡುವ ಸಿದ್ಧತೆ ಮಾಡಿದರು ॥ 88

ಅಷ್ಟರಲ್ಲಿ ಬಾಬಾ ತಮ್ಮ ಜೇಬಿನಿಂದ । ಮೂರು ರೂಪಾಯಿಗಳನ್ನು ತೆಗೆದು ।
ಪಿತಳೆಯವರನ್ನು ಹತ್ತಿರ ಕರೆದು । ಏನೆಂದು ಹೇಳಿದರದ ಕೇಳಿ ॥ 89

"ಬಾಪೂ ಹಿಂದೆ ನಾ ನಿನಗೆ ಎರಡನ್ನು । ಕೊಟ್ಟಿರುವೆ ತೆಗೆದುಕೊ ಈ ಮೂರನ್ನು ।
ಇಟ್ಟು ಮಾಡುತಿರಿದರ ಪೂಜೆಯನು । ಕೃತಕಲ್ಯಾಣನಾಗುವಿ ನೀ" ॥ 90

ಪಿತಳೆ ಕೈಯಲ್ಲಿ ರೂಪಾಯಿ ಹಿಡಿದು । ಆನಂದದಿಂದ ಸ್ವೀಕರಿಸಿದ ಪ್ರಸಾದವೆಂದು ।
ಅವರ ಚರಣ ಸ್ಪರ್ಶಿಸಿ ಪ್ರಣಾಮಗೈದು । ಮಹಾರಾಜಾ ಕೃಪೆ ಇರಲೆಂದರು ॥ 91

ಮನದಲೆದ್ದಿತು ವಿಚಾರವೊಂದು । ಮೊದಲ ಸಲವೇ ನಾನಿಲ್ಲಿ ಬಂದುದು ।
ಹೀಗಿರಲು ಬಾಬಾ ಎಂದುದು । ನನಗಂತೂ ಅರ್ಥವಾಗದು ॥ 92

ಬಾಬಾರ ಈ ಮೊದಲು ನೋಡದಿರುವಾಗ್ಯೆ । ಎರಡು ರೂಪಾಯಿ ಕೊಟ್ಟದ್ದು ಹೇಗೆ ।
ಒಂದೂ ತಿಳಿಯದಾಗಿದೆ ನನಗೆ । ಎಂದು ಪಿತಳೆ ವಿಸ್ಮಿತರಾದರು ॥ 93

ಇದರ ಪರಿಸ್ಫುಟತೆಯಾಗುವದು ಹೇಗೆ । ಜಿಜ್ಞಾಸೆ ಬೆಳೆಯುತಿದೆ ಮನಸಿನೊಳಗೆ ।
ಬಾಬಾ ಏನೂ ಹೇಳರು ಇದರ ಬಗ್ಗೆ । ಮುಗ್ಧತೆ ಉಳಿಯಿತು ಹಾಗೆಯೇ ॥ 94

ಸಂತರು ಸಹಜವಾಗಿಯೇ ನುಡಿದದ್ದು । ಸತ್ಯವೇ ಆಗಿರುವದು ಆ ಮಾತು ।
ಪಿತಳೆಯವರ ಮನಕೆ ತಿಳಿಯಿತು । ಅದರಿಂದ ವಿಚಾರಪರವಶವಾದರು ॥ 95

ಆದರೂ ಅವರು ತಿರುಗಿ ಮುಂಬೈಗೆ । ಹೋದ ಮೇಲೆ ತಮ್ಮ ಮನೆಗೆ ।
ಮುದುಕಿಯೊಬ್ಬಳಿದ್ದಳು ಮನೆಯೊಳಗೆ । ಅವಳು ಜಿಜ್ಞಾಸೆಯ ಪರಿಹರಿಸಿದಳು ॥ 96

ಆ ವೃದ್ಧೆ ಪಿತಳೆಯ ತಾಯಿಯಿದ್ದಳು । ಸಹಜ ಶಿರಡಿಯ ವೃತ್ತಾಂತ ಕೇಳಿದಳು ।
ಮೂರು ರೂಪಾಯಿಗಳ ಸುದ್ದಿ ಬರಲು । ಸಂಬಂಧ ಸುದ್ದಿಗೆ ಹೊಂದದಾಯಿತು ॥97

ವಿಚಾರ ಮಾಡಿದಾಗ ನೆನಪಾಗಲು । ತಾಯಿ ಮಗನಿಗೆ ಹೇಳಿದಳು ।
ಈಗ ನನಗೆಲ್ಲ ನೆನಪಾಯಿತೆಂದಳು । ಬಾಬಾ ನಿಜವನ್ನೇ ನುಡಿದಿಹರು ॥ 98

ಈಗ ನೀ ನಿನ್ನ ಮಗನ ಕರೆದೊಯ್ದು । ಶಿರಡಿಯಲಿ ಬಾಬಾರ ದರ್ಶನ ಮಾಡಿಸಿದೆ ।
ಹಾಗೆಯೇ ನಿನ್ನ ತಂದೆಯೂ ಹಿಂದೆ । ನಿನ್ನ ಅಕ್ಕಲಕೋಟೆಗೆ ಕರೆದೊಯ್ದಿದ್ದರು ॥ 99

ಅಲ್ಲಿಯ ಮಹಾರಾಜರು ಸಿದ್ಧ । ಪರೋಪಕಾರಿಗಳವರು ಪ್ರಸಿದ್ಧ ।
ಅಂತರ್ಜ್ಞಾನಿಯೋಗಿಗಳು ಮಹಾಪ್ರಸಿದ್ಧ । ನಿನ್ನ ತಂದೆಯೂ ಶುದ್ಧಾಚರಣೆಗಳು ॥ 100

ಪೂಜೆ ಮಾಡಿಸಿಕೊಂಡು ನಿನ್ನ ಪಿತನಿಂದ । ಯೋಗಿರಾಜನೂ ಪ್ರಸನ್ನನಾದ ।
ಇವುಗಳ ಪೂಜೆ ಮಾಡೆಂದು ಹೇಳಿದ । ಎರಡು ರೂಪಾಯಿಗಳನಿತ್ತು ಪ್ರಸಾದವೆಂದು ॥ 101

ಇವು ಹಿಂದಿನ ಎರಡು ರೂಪಾಯಿಗಳು । ಕೊಟ್ಟಿದ್ದರಾಗ ನಿನಗೆ ಸ್ವಾಮಿಗಳು ।
ಇದರ ಪೂಜಾರ್ಚನೆ ಮಾಡಲು । ಹೇಳಿ ಪ್ರಸಾದವೆಂದು ತಿಳಿಸಿ ॥ 102

ನಿಮ್ಮ ದೇವರ ಪೂಜೆಯ ಸ್ಥಳದೊಳು । ಇದ್ದವೆರಡು ರೂಪಾಯಿಗಳು ।
ನಿನ್ನ ತಂದೆ ಅತಿ ನಿಷ್ಠೆಯೊಳು । ನಿತ್ಯವೂ ಪೂಜಿಸುತ್ತಿದ್ದರು ॥ 103

ಅವರ ನಿಷ್ಠೆ ನನಗೊಬ್ಬಳಿಗೇ ಗೊತ್ತು । ನಡೆಯುತಿದ್ದರು ಬಹಳ ನಿಷ್ಠೆ ಇಟ್ಟು ।
ಅವರ ನಂತರ ಈ ಪೂಜೆಯ ವಸ್ತು । ಮಕ್ಕಳಾಟಿಕೆಯಾಯಿತು ॥ 104

ದೇವರ ಮೇಲಿನ ನಿಷ್ಠೆ ಹಾರಿತು । ಪೂಜೆಯೆಂದರೆ ನಾಚಿಕೆ ಬರತೊಡಗಿತು ।
ಪೂಜೆಗೊಬ್ಬನ ನೇಮಿಸಲಾಯಿತು । ಆರೂಪಾಯಿಗಳ ಚಿಂತೆ ಯಾರಿಗೆ ॥ 105

ಹೀಗೆಷ್ಟೋ ವರ್ಷ ಕಳೆಯಿತು । ಆ ರೂಪಾಯಿಗಳಲಿ ಆಸ್ಥೆ ಇಲ್ಲದಾಯಿತು ।
ಅವುಗಳ ನೆನಪೂ ಇಲ್ಲದಾಯಿತು । ಆ ಎರಡು ರೂಪಾಯಿಗಳು ಕಳೆದುಹೋದವು ॥ 106

ನಿಮ್ಮ ಭಾಗ್ಯವು ದೊಡ್ಡದಿರಲು । ಸಾಯಿ ರೂಪದಿಂದ ಮಹಾರಾಜರೇ ಸಿಗಲು ।
ವಿಸ್ಮರಣೆಯ ತೆರೆಗಳ ಸರಿಸಲು । ಮತ್ತು ಸಂಕಟ ನಿವಾರಿಸಲು ॥ 107

ಅದಕಾಗಿ ಇನ್ನು ಮುಂದು । ತರ್ಕಕುತರ್ಕಗಳ ಬಿಟ್ಟು ಬಿಡು ।
ನಿಮ್ಮ ಪೂರ್ವಜರತ್ತ ನೋಡು । ಅಡ್ಡ ವ್ಯವಹಾರ ಬೇಡಿನ್ನು ॥ 108

ಮಾಡುತ್ತಿರು ಈ ರೂಪಾಯಿಗಳ ಪೂಜನ । ಸಂತ ಪ್ರಸಾದವ ತಿಳಿದು ಭೂಷಣ ।
ಸಮರ್ಥ ಸಾಯಿಯವರು ಇತ್ತು ಗುರುತನ । ಭಕ್ತಿಯ ಪುನರುಜ್ಜೀವನವ ॥ 109

ತಾಯಿಯಿಂದ ಈ ಕತೆಯ ಕೇಳಿ । ಪಿತಳೆ ಪರಮಾನಂದವ ತಾಳಿ ।
ಸಾಯಿಯ ವ್ಯಾಪಕತೆ ಮನದಟ್ಟಾಗುತಲಿ । ದರ್ಶನದ ಸಾರ್ಥಕತೆಯಾಯಿತೆಂದು ॥ 110

ಮಾತೆಯ ಆ ಶಬ್ದಾಮೃತವನುಂಡು । ನಶಿಸಿದ ಭಾವನೆಗಳು ಜಾಗೃತಗೊಂಡು ।
ಪಶ್ಚಾತ್ತಾಪದ ಪ್ರಾಯಶ್ಚಿತ್ತ ಪಡೆದು । ಮುಂಬರುವ ಹಿತವನು ಕಂಡರು ॥ 111

ಇರಲಿ ಆದದ್ದು ಆಗಿ ಹೋಯಿತು । ಸಂತರು ಕಾರ್ಯಕ್ಕೆ ಎಚ್ಚರಿಕೆ ಇತ್ತು ।
ಅವರ ಉಪಕಾರವನು ಅರಿತು । ನಿಜಕಾರ್ಯದಲಿ ತೊಡಗಿದರು ॥ 112

ಹೀಗೆ ಇನ್ನೊಂದು ಪ್ರಚೀತಿಯ ಕಥೆಯನು । ಹೇಳುವೆನು ಕೇಳಿ ಚಿತ್ತಗೊಟ್ಟದನು ।
ಭಕ್ತರ ಉಚ್ಛೃಂಕಲ ಮನೋವೃತ್ತಿಯನು । ಬಾಬಾ ಹೇಗೆ ನಿಲ್ಲಿಸುತ್ತಿದ್ದರೆಂದು ॥ 113

ಗೋಪಾಳ ನಾರಾಯಣ ಎಂಬವ । ಉಪನಾಮ ಆಂಬಡೇಕರ ಆಗಿರುವ ।
ಬಾಬಾರ ಭಕ್ತನವ ಪುಣೆಯಲ್ಲಿ ಇರುವವ । ಅವರ ಕಥೆಯನು ಕೇಳಿರಿ ॥ 114

ಇಂಗ್ಲೀಷರ ಸರಕಾರದಲ್ಲಿ । ನೌಕರಿ ಇತ್ತು ಅಬಕಾರಿ ಇಲಾಖೆಯಲ್ಲಿ ।
ಹತ್ತು ವರ್ಷ ಮಾಡುವಲ್ಲಿ । ಬಿಟ್ಟು ಮನೆಯಲ್ಲಿ ಕುಳಿತುಬಿಟ್ಟ ॥ 115

ದೈವ ತಿರುಗಿ ಬಂದು ಹೀನಗತಿ । ಸದಾಕಾಲವೂ ಇರದು ಒಂದೇ ರೀತಿ ।
ಗೃಹದಶೆಯದು ಒಂದು ಸರತಿ । ಭೋಗಿಸದೇ ಬಿಡುಗಡೆಯೇ ಇಲ್ಲ ॥ 116

ಮೊದಲಿದ್ದರು ಠಾಣೆ ಜಿಲ್ಹೆಯಲ್ಲಿ । ಆ ಮೇಲೆ ಹೋದರು ಜವ್ಹಾರ ಎಂಬಲ್ಲಿ ।
ಹಿಂದೆ ಅಮಲದಾರರಿದ್ದಲ್ಲಿ । ಅಲ್ಲಿಯೇ ನಿರುದ್ಯೋಗಿಗಳಾದರು ॥ 117

ನೌಕರಿಯು ಶಾವಿಎಲೆಯ ಮೇಲಿನ ನೀರಿನಂತೆ । ಹುಡುಕಿದರೂ ಸಿಗುವದೇ ಅದು ಮತ್ತೆ ।
ಮಾಡಿದರೂ ಪ್ರಯತ್ನದ ಪರಾಕಾಷ್ಠೆ । ಮತ್ತೆ ಕೆಲಸ ದೊರಕಿಸಲು ॥ 118

ಆದರೂ ಅದಕ್ಕೆ ಯಶ ದೊರಕದು । ನಿಶ್ಚಯಿಸಿ ಸ್ವತಂತ್ರರಾಗೇ ಉಳಿಯುವದೆಂದು ।
ಬೆಟ್ಟವೇ ಆಯಿತು ಕಷ್ಟದ್ದು । ಎಲ್ಲ ರೀತಿಯಲಿ ಹತಾಶರಾದರು ॥ 119

ವರುಷ ವರುಷಕ್ಕೆ ಇಳಿಯುತ್ತ ಇಳಿಯುತ್ತ । ಸಾಂಪತ್ತಿಕ ಸ್ಥಿತಿ ಹೋಯಿತು ಕೆಡುತ್ತ ।
ಆಪತ್ತಿಯ ಮೇಲೆ ಆಪತ್ತಿಯು ಬರುತ್ತ । ಗೃಹಸ್ಥಿತಿ ದುಃಸಹವಾಯಿತು ॥ 120

ಹೀಗೆ ಏಳು ವರುಷಗಳುರುಳಿದವು । ಶಿರಡಿಗೆ ಹೋಗುತಿದ್ದರು ಪ್ರತಿ ವರುಷವೂ ।
ಹಗಲಿರುಳು ನಮಸ್ಕಾರಗಳಾದವು । ಬಾಬಾರ ಎದುರು ಕಷ್ಟ ತೋಡಿಕೊಳ್ಳುವರು ॥ 121

ಹತ್ತೊಂಭತ್ತು ನೂರಾ ಹದಿನಾರರೊಳಗೆ । ಅತ್ಯಂತ ಬೇಸತ್ತು ಪರಿಸ್ಥಿತಿಗೆ ।
ಮನಸು ಮಾಡಿದರು ಆತ್ಮಹತ್ಯೆಗೆ । ಶಿರಡಿ ಕ್ಷೇತ್ರದಲ್ಲಿ ಹೋಗಿ ॥ 122

ಕುಟುಂಬದೊಡಗೂಡಿ ಈ ಸಮಯದೊಳು । ಶಿರಡಿಯಲುಳಿದರು ಎರಡು ತಿಂಗಳು ।
ಏನು ನಡೆಯಿತು ಒಂದು ರಾತ್ರಿಯೊಳು । ಆ ವಾರ್ತೆಯನು ಕೇಳಿರೀಗ ॥ 123

ದೀಕ್ಷಿತರ ವಾಡೆಯ ಎದುರಿಗೆ । ಒಂದು ಚಕ್ಕಡಿಯಲ್ಲಿ ಕುಳಿತಾಗ್ಯೆ ।
ಆಂಬಡೇಕರನ ಮನಸಿನೊಳಗೆ । ವಿಚಾರ ತರಂಗವೆದ್ದಿತು ॥ 124

ಅವರು ಜೀವಿತಕ್ಕೆ ಬೇಸತ್ತು । ವೃತ್ತಿ ಅತ್ಯಂತ ಉದಾಸವಾಯಿತು ।
ಬೇಡಿನ್ನು ಈ ಕಷ್ಟ ಸಾಕಾಯಿತು । ಎಂದು ಜೀವದ ಹಂಗು ತೊರೆದರು ॥ 125

ಹೀಗೆ ನಿರ್ಧಾರಕ್ಕೆ ಬಂದು । ಜೀವವನ್ನೇ ತೊರೆಯಲೆಂದು ।
ಬಾವಿಯಲ್ಲಿ ಹಾರಲೆಂದು । ಆಂಬಡೇಕರರು ಸಿದ್ಧರಾದರು ॥ 126

ಯಾರೂ ಹತ್ತಿರವಿಲ್ಲದಂಥ । ನಿವಾಂತ ಸಮಯವ ಸಾಧಿಸುತ ।
ಮನದಿಚ್ಛೆ ಪೂರೈಸುವೆನೆನುತ । ದುಃಖದಿಂದ ಮುಕ್ತನಾಗಲು ॥ 127

ಆತ್ಮಹತ್ಯೆಯು ಮಹಾಪಾಪವೆಂದು । ತಿಳಿದೂ ದೃಢ ನಿರ್ಧಾರ ಹಿಡಿದು ।
ಬಾಬಾ ಸಾಯಿಯೇ ಸೂತ್ರಧಾರನಿದ್ದು । ಈ ಅವಿಚಾರದಿಂದ ಪಾರು ಮಾಡಿದರು ॥ 128

ಅಲ್ಲಿಂದ ನಾಲ್ಕು ಹೆಜ್ಜೆ ದೂರದಲ್ಲಿ । ಒಬ್ಬ ಹೋಟೆಲಿನವನ ಮನೆ ಇದ್ದಿತಲ್ಲಿ ।
ಅವನೂ ಇರುತಿದ್ದ ಬಾಬಾರ ಸೇವೆಯಲ್ಲಿ । ಅವನಿಗೂ ಆಧಾರ ಬಾಬಾರದೆ ॥ 129

ಸಗುಣ ರೂಪದಲಿ ಹೊಸ್ತಿಲ ಮೇಲೆ ನಿಂತು । ಆಂಬಡೇಕರರಿಗೆ ಆ ವ್ಯಕ್ತಿ ಕೇಳಿದ್ದು ।
ಅಕ್ಕಲಕೋಟೆ ಮಹಾರಾಜರ ಪೋಥಿ ಇದು । ಇದನೆಂದಾದರೂ ಓದಿದ್ದೀರಾ ॥ 130

ನೋಡುವಾ ತನ್ನಿ ಎನ್ನುತ । ಆಂಬಡೇಕರ ಅದನು ತೆಗೆದುಕೊಳ್ಳುತ ।
ಅದರ ಪುಟಗಳ ತಿರುವುತ । ನಡುವೆಯೇ ಓದಲಾರಂಭಿಸಿದರು ॥ 131

ಕರ್ಮಧರ್ಮ ಸಂಯೋಗವೆಂತು । ಆ ವಿಷಯವೇ ಓದುವದರಲಿ ಬಂತು ।
ಓದುತ್ತ ಅಂತರಂಗದಲಿ ಹೊಕ್ಕಿತು । ಅರ್ಥ ಬಿಂಬಿಸಿತು ಮನದಲಿ ॥ 132

ಸಹಜದಲಿ ಬಂದ ಕಥೆಯನು । ಶ್ರೋತೃಗಳೇ ಹೇಳುವೆ ನಿಮಗದನು ।
ತಾತ್ಪರ್ಯ ತಿಳಿಸಲು ಸಂಕ್ಷಿಪ್ತವಾಗಿದನ್ನು । ಹೇಳುವೆನು ಗ್ರಂಥ ವಿಸ್ತಾರ ಭಯದಿ ॥ 133

ಅಕ್ಕಲ ಕೋಟದಲ್ಲಿ ಸಂತ ಶ್ರೇಷ್ಠರು । ಮಹಾರಾಜರಿರಲು ಅಂತರ್ನಿಷ್ಠರು ।
ವ್ಯಾಧಿಪೀಡಿತ ಭಕ್ತರೊಬ್ಬರು । ಬಹಳ ಕಷ್ಟ ಬಡುತಿದ್ದರು ॥ 134

ವ್ಯಾಧಿ ಮುಕ್ತನಾದೇನೆಂದು । ಬಹಳ ದಿನ ಸೇವೆ ಮಾಡುತಿದ್ದು ।
ಸಹಿಸಲಾಗದಂಥ ಕಷ್ಟವದು । ಅತಿ ಉದ್ವಿಗ್ನನಾದನು ॥ 135

ಆತ್ಮಹತ್ಯೆಯ ನಿರ್ಧಾರ ಮಾಡಿ । ರಾತ್ರಿಯ ಶಾಂತ ಸಮಯ ನೋಡಿ ।
ಅಲ್ಲಿಯ ಬಾವಿಯ ಹತ್ತಿರ ಹೋಗಿ । ಒಳಗೆ ಜಿಗಿದು ಬಿಟ್ಟನು ॥ . 136

ಅಷ್ಟರಲ್ಲಿ ಮಹಾರಾಜರು ಬಂದು । ಸ್ವಹಸ್ತದಿಂದವನ ಮೇಲೆ ತೆಗೆದು ।
'ಭೋಗಿಸತಕ್ಕದ್ದನ್ನು ಭೋಗಿಸಿ ತೀರಿಸುವದು' । ಎಂದು ಉಪದೇಶ ಮಾಡಿದರು ॥ 137

ತಮ್ಮ ಪೂರ್ವಕರ್ಮವಿದ್ದಂತೆ । ವ್ಯಾಧಿ ಕುಷ್ಠ ಕ್ಲೇಶ ಬರುತ್ತೆ ।
ಆಭೋಗ ಪೂರ್ಣಭೋಗಿಸದಿರುತೆ । ಆತ್ಮಹತ್ಯೆಯಿಂದೇನಾಗುವದು ॥ 138

ಈ ಭೋಗವು ಪೂರ್ಣವಾಗದಿರಲು । ಮರುಜನ್ಮವ ಬೇಕು ಪಡೆಯಲು ।
ಅದಕೇ ಒಂದಿಷ್ಟು ಕಷ್ಟ ಸಹಿಸಿಕೊಳು । ಆತ್ಮಘಾತಕನಾದಗದಿರು ॥ 139

ಈ ಸಮಯೋಚಿತ ಕಥೆಯನೋದಿ । ಆಶ್ಚರ್ಯಪಟ್ಟರು ಆಂಬಡೇಕರರು ಮನದಿ ।
ಅಲ್ಲಿಯೇ ಮೆತ್ತಗಾದರು ಸಹಜದಿ । ಬಾಬಾರ ವ್ಯಾಪಕತೆಯ ಕಂಡು ॥ 140

ಆಂಬಡೇಕರರು ಮನದಿ ತಿಳಿದು । ಪೂರ್ವ ಅದೃಷ್ಟ ಭೋಗಿಸಲೇಬೇಕೆಂದು ।
ಯೋಗ್ಯ ಕಾಲಕ್ಕೆ ಈ ಸೂಚನೆ ಇತ್ತಿದ್ದು । ನಾ ಮಾಡಿದ ಯೋಚನೆ ಸರಿಯಲ್ಲ ॥ 141

ಆಕಾಶವಾಣಿಯಂತೆ ಈ ಮಾತು । ಅದರಂತಯೇ ಈ ದೃಷ್ಟಾಂತವಾಯಿತು ।
ಸಾಯಿ ಚರಣದಿ ಮನ ತೊಡಗಿತು । ಅಘಟಿತ ಘಟನೆ ಸಾಯಿಯದು ॥ 142

ಸಾಯಿಯ ಗುರುತು ಮಾಡಿದ ಸಗುಣ ಮುಖದಿಂದ । ಅಕಲ್ಪಿತವಾಗಿ ಈ ಪುಸ್ತಕದ ನೆವದಿಂದ ।
ಒಂದಿಷ್ಟು ವಿಲಂಬವಾಗಿದ್ದರೂ ಅದರಿಂದ । ಜನ್ಮವೇ ಮಣ್ಣುಗೂಡುತಿತ್ತು ॥ 143

ನಿಜಜೀವಕೆರವಾಗುತಿದ್ದೆ । ದುರ್ಧರ ಕುಟುಂಬಘಾತವ ಮಾಡುತಿದ್ದೆ ।
ಸ್ತ್ರೀ ಮೇಲೆ ಅನರ್ಥ ತರುತಿದ್ದೆ । ಸ್ವಾರ್ಥ ಪರಮಾರ್ಥಗಳೆರಡನೂ ಕಳೆದುಕೊಕಳ್ಳುತಿದ್ದೆ ॥ 144

ಪುಸ್ತಕದ ನಿಮಿತ್ತ ತೋರಿಸಿ । ಬಾಬಾ ಸಗುಣವ ಪ್ರವೃತ್ತಗೊಳಿಸಿ ।
ಚಿತ್ತವ ಪರಾವೃತ್ತಗೊಳಿಸಿ । ಆತ್ಮಾಘಾತ ತಪ್ಪಿಸಿದರು ॥ 145

ನಡೆಯದಿದ್ದಲ್ಲಿ ಪ್ರಕಾರ ಹೀಗೆ । ವ್ಯರ್ಥಜೀವಕ್ಕೆರವಾಗುತಿದ್ದೆನಾಗೆ ।
ಆದರೆ ಸಾಯಿಯಂಥ ತಾರಕನಿರುವಾಗ್ಯೆ । ಕೊಲುವವನು ಏನು ಮಾಡಲು ಸಾಧ್ಯ ॥ 146

ಅಕ್ಕಲಕೋಟ ಸ್ವಾಮಿಯ ಭಕ್ತನಿದ್ದ । ಈ ಭಕ್ತನ ತಂದೆಯಾಗಿದ್ದ ।
ಅದನೇ ಮುಂದೆ ನಡೆಸಬೇಕೆಂಬುದ । ಪ್ರಚೀತಿಗೆ ತಂದು ತೋರಿದರು ॥ 147

ಮುಂದೆ ಅವನದೆಲ್ಲ ಒಳಿತಾಯಿತು । ಕಷ್ಟದ ಕಾಲ ಕಳೆದು ಹೋಯಿತು ।
ಜ್ಯೋತಿರ್ವಿದ್ಯೆಯಲ್ಲಿ ಪರಿಶ್ರಮ ಪಟ್ಟು । ಫಲವೂ ದೊರೆಯಿತು ಅದರದು ॥ 148

ಸಾಯಿ ಕೃಪಾ ಪ್ರಸಾದವ ಪಡೆದು । ಮುಂದೆ ಒಳ್ಳೆಯ ದಿನಗಳ ಕಂಡು ।
ಜ್ಯೋತಿರ್ವಿದ್ಯೆಯಲಿ ಪ್ರವೀಣನಾಗಿದ್ದು । ಹಿಂದಿನ ದೈನ್ಯತೆ ದೂರವಾಯಿತು ॥ 149

ಗುರುಪದದಲ್ಲಿ ಪ್ರೀತಿ ಬೆಳೆಯಿತು । ಸುಖಕುಶಲ ಕ್ಷೇಮವಾಯಿತು ।
ಗೃಹಸೌಖ್ಯ ಆರಾಮ ದೊರೆಯಿತು । ಪರಮಾನಂದ ತಳೆದರು ॥ 150

ಅಗಣಿತ ಚಮತ್ಕಾರ ಇಂಥದು । ಒಂದಕ್ಕಿಂತ ಒಂದು ಹಿರಿದು ।
ಹೇಳುತ್ತ ಹೋದಲ್ಲಿ ಗ್ರಂಥ ಬೆಳೆಯುವದು । ಆದಕಾಗಿ ಸಾರರೂಪವಾಗಿ ಹೇಳಿದೆನು ॥ 151

ಹೇಮಾಡ ಸಾಯಿ ಚರಣದಿ ಶರಣ । ಮುಂದಿನಧ್ಯಾಯದಲಿ ಸವಿಕಥನ ।
ವಿಷ್ಣು ಸಹಸ್ರನಾಮದಾನ । ಶ್ಯಾಮನಿಗೆ ಉಪದೇಶಿಸಿದರು ॥ 152

ಶಾಮನು ಬೇಡ ಬೇಡ ಎಂದರೂ । ಅನಿವಾರ ಪ್ರೀತಿಯುಳ್ಳ ಬಾಬಾ ಅವರು ।
ಒತ್ತಾಯದಿಂದ ಸಹಸ್ರನಾಮವನಿತ್ತರು । ಆದರ ಸುಂದರ ಮಹಾತ್ಮ್ಯವ ವರ್ಣಿಸಿ ॥ 153

ಸಾದರ ಚಿತ್ತದಿ ಆ ಕಥೆ ಕೇಳಿರೀಗ । ಅನುಗ್ರಹದ ಸಮಯ ಬಂದಾಗ ।
ಶಿಷ್ಯನು ಇಷ್ಟಪಡದಿದ್ದಾಗ । ಬಾಬಾ ಅದ ನೀಡುವದು ಕಾಣುವಿರಿ ॥ 154


ಅಲೌಕಿಕ ರೀತಿ ಅನುಗ್ರಹದ್ದು । ಸದ್ಗುರು ಗೃಹದಲಿ ಹೇಗಿರುವದು ।
ಮುಂದಿನಧ್ಯಾಯದಲಿ ಕಂಡು ಬರುವದು । ಶ್ರೋತೃಗಳೇ ಆದರದಿ ಆಲಿಸಿರಿ ॥ 155

ಕಲ್ಯಾಣಕ್ಕೂ ಕಲ್ಯಾಣಕರವಾದವ । ಸಾಯಿಗುಣನಿಧಾನನಿವ ।
ಸಭಾಗ್ಯ ಪೂರ್ಣಕೀರ್ತನನವ । ಪರಮ ಪಾವನ ಚರಿತ್ರೆ ಅವನದು ॥ 156

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಅಪಸ್ಮಾರಾತ್ಮಹತ್ಯಾ ನಿವಾರಣಂ ತಥಾ ನಿಜಗುರುಪದ ಸ್ಥಿರೀಕರಣಂ ನಾಮ ಷಡ್ವಿಂಶತಿತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



# ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತೆಳು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

***ಹಿಡಿಯಲು ಶ್ರೀ ಸದ್ಗುರು ಚರಣ । ಘಟಿಸುವದು ಬ್ರಹ್ಮಾದಿತ್ರೈಮೂರ್ತಿ ನಮನ ।***
ಸಾಕ್ಷಾತ್ಪರಬ್ರಹ್ಮಾಭಿವಂದನ । ಸ್ವಾನಂದಘನ ಪ್ರಕಟವಾಗುವದು ॥ 1

ಸಾಗರದಿ ಒಮ್ಮೆ ಮುಳುಗು ಹಾಕಲು । ದೊರಕುವವು ಎಲ್ಲ ತೀರ್ಥಫಲಗಳು ।
ಗುರುಪದದಿ ಸ್ಥಿರವಾಗಿ ಕುಳಿತುಕೊಳ್ಳಲು । ದೇವರುಗಳೆಲ್ಲ ಸಮಾವೇಶಗೊಳ್ಳುವರಲ್ಲಿ ॥ 2

ಜಯ ಜಯ ಸಾಯಿ ಸದ್ಗುರುವೇ । ಜಯ ಜಯ ಸಾಯುಜ್ಯ ಕಲ್ಪತರುವೇ ।
ಜಯ ಜಯ ನಿಜಬೋಧ ಸಾಗರವೇ । ಕಥೆಯಲಿ ಪ್ರೀತಿಯ ಹುಟ್ಟಿಸು ॥ 3

ಮೇಘೋದಕ್ಕಾಗಿ ಚಾತಕ । ಅದರಂತೆ ನಿನ್ನ ಕಥಾಮೃತವ ಭಾವಿಕ ।
ಸೇವಿಸಲಿ ನಿನ್ನ ಭಕ್ತರ ಲೌಕಿಕ । ಸುಖವ ಸದ್ದೈವ ಪಡೆಯಲಿ ॥ 4

ನಿನ್ನ ಕಥೆ ಕೇಳುತಿರಲು । ಬೆವರೊಡೆಯಲಿ ಸರ್ವಾಂಗದೊಳು ।
ಪ್ರೇಮಜಲದಿ ತುಂಬಲಿ ನೇತ್ರಗಳು । ಜೀವವಲ್ಲಿಯೇ ತೊಡಗಿರಲಿ ॥ 5

ಮನ ಗದ್ಗದಿತವಾಗಲಿ । ಮೇಲಿಂದ ಮೇಲೆ ರೋಮಾಂಚನವಾಗಲಿ ।
ಬಿಕ್ಕುವದು, ಅಳುವದು ನಡೆದಿರಲಿ । ಸಪರಿವಾರ ಶ್ರೋತೃಗಳೆಲ್ಲರಿಗೆ ॥ 6

ಪರಸ್ಪರರಲ್ಲಿರುವ ವಿರೋಧ । ಹಿರಿಕಿರಿಯರೆಂಬ ಭೇದಾಭೇದ ।
ದೂರ ಮಾಡುವದೇ ಗುರುಕೃಪಾವಬೋಧ । ಮನದಲಿದನು ಶೋಧಿಸಬೇಕು ॥ 7

ಬರವಲ್ಲದು ದೃಷ್ಟಿಗೆ ತೋರಲು ಇದನು । ಅರಿಯುವವು ಸರ್ವೇಂದ್ರಿಯಗಳಿಗದನು ।
ಸದ್ಗುರುವಲ್ಲದೆ ಬೇರೆಯವರಿದನು । ಹುಡುಕಿದರೂ ಸಿಗರು ತ್ರಿಭುವನದಲಿ ॥ 8

ಕಾಮಾದಿ ಶಡ್‌ವಿಕಾರೋಪಶಮ । ಭಕ್ತಿ ಭಾವ ನಿಃಸೀಮ ಪ್ರೇಮ ।
ಹುಟ್ಟದೇ ಗುರುಪದದಿ ನಿಷ್ಠೆ ಪರಮ । ಅಷ್ಟಭಾವದ ಉದ್ಗಮವಾಗದು ॥ 9

ಭಕ್ತನ ನಿಜಸುಖದಿಂದ । ಗುರುವಿಗೆ ಪರಮಾನಂದ ।
ಭಕ್ತ ಪರಮಾರ್ಥೋನ್ಮುಖನಾಗುವದ । ನೋಡಿ ಗುರುವಿಗೆ ಕೌತುಕವದರದು ॥ 10

ದೇಹ,ಗೇಹ, ಸತಿ, ಪುತ್ರರೆಲ್ಲ । ವ್ಯರ್ಥಮಾಯೆಯದು ನಾ ನನ್ನದೆಂಬುದೆಲ್ಲ ।
ಕ್ಷಣಿಕ ಮಾಯೆ ಇದು ಎಲ್ಲ । ಮಧ್ಯಾಹ್ನದ ನೆರಳಿನಂತೆ ॥ 11

ಸಿಗಕೂಡದು ಮಾಯೆಯ ತೊಡಕಿನಲ್ಲಿ । ಹೀಗೆ ಮನದಲಿದ್ದಲ್ಲಿ ।
ಶರಣಾಗತಿಯ ಸಾಯಿಯಲಿ । ಅನನ್ಯ ಭಾವದಿ ಸಂಪಾದಿಸಿರಿ ॥ 12

ಕೊನೆಗೊಳಿಸಲು ಮಾಯೆಯನ್ನು । ವೇದ ಶಾಸ್ತ್ರಗಳೂರಿದವು ಕೈಗಳನು ।
ಯಾವನು ಭೂತಮಾತ್ರದಲಿ ಭಗವಂತನನು । ಕಾಣುವನವನೇ ದಾಟಬಲ್ಲನು ॥ 13

ನಿಜಾಮಶಾಹಿಯ ಬಿಟ್ಟು ಬಂದು । ಫಕೀರ ಸಾಯಿಯ ಕರೆದುಕೊಂಡು ।
ಮೊದಲು ನೇವಾಸಕ್ಕೆ ಬಂದು । ಇದ್ದ ಚಾಂದಭಾಯಿಯೇ ಧನ್ಯನು ॥ 14

ಅಲ್ಲಿ ವರ್ಷಾರುತಿಂಗಳು ಕಾಲವನು । ನಿವಾಸ ಮಾಡಿದ ಫಕೀರನು ।
ಅಲ್ಲಿಯೇ ಕಾನಡ ಊರಿನ ಕಮಾನನ್ನು । ಜೊತೆಗೆಂದು ಇಟ್ಟಿದ್ದನು ॥ 15

ಮುಂದೆ ಪ್ರಸಿದ್ಧ ಊರು ಟಾಕಳಿಯೆಂಬದು । ಅಲ್ಲಿಂದ ತಾಂಬೋಳಿ ದಗಡೂ ।
ಕಮಾ-ಬಾಬಾರ ಜೊತೆಗೂಡಿಕೊಂಡು । ಅಲ್ಲಿಂದ ಶಿರಡಿಗೆ ಬಂದರು ॥ 16

ಅಲ್ಲಲ್ಲಿಗೆ ಬೇಕಾದಷ್ಟು । ಪವಿತ್ರ ತೀರ್ಥಗಳಿರುವು ।
ಆದರೂ ಸಾಯಿ ಭಕ್ತರಿಗಂತೂ । ಶಿರಡಿಯೇ ಅತ್ಯಂತ ಪವಿತ್ರ ॥ 17

ದೈವಯೋಗವಿರದಿದ್ದಲ್ಲಿ । ಈ ಮಹಾಭಾಗನೆಲ್ಲಿ ।
ನಮ್ಮಂಥ ದೀನರ ಭಾಗ್ಯದಲ್ಲಿ । ಸಹಯೋಗ ಅವನದಾಗುತ್ತಿತ್ತು ॥ 18

ಯಾವ ಭಕ್ತನು ಶರಣಾಗತನಾಗಲು । ಅವನ ಕಾರ್ಯವ ಸಾಧಿಸಲು ।
ಸಾಯಿ ಅವನಿಗೆ ಯಥಾರ್ಥದೊಳು । ಸನ್ಮಾರ್ಗವನವರಿಗೆ ತೋರುತಿದ್ದ ॥ 19

ಅದಕಾಗಿ ನೀವೆಲ್ಲ ಏಕಾಗ್ರಮನ । ಮಾಡಿ ಮಾಡಿರಿ ಸಚ್ಚರಿತದಾವರ್ತನ ।
ಅದೇ ಈ ಗುರುಕೃಪಾಸಾಧನ । ಚರಿತ್ರ ಪಾವನ ಸಾಯಿಯದು ॥ 20

ಹಿಂದಿನಧ್ಯಾಯದಲಿ ಕಥನ । ಒಬ್ಬನ ಮಾಡಿ ಗುರುಪದದಲಿ ಸ್ಥಾಪನ ।
ಅಕ್ಕಲಕೋಟಿ ಸ್ವಾಮಿಯ ಗುರುತನ । ಕೊಟ್ಟು ಎಚ್ಚರಿಸಿದರೊಬ್ಬನನು ॥ 21

ಅಕಲ್ಪಿತ ಯುಕ್ತಿಯನು ಯೋಜಿಸಿ । ಅವನ ಆತ್ಮಘಾತವನು ತಪ್ಪಿಸಿ ।
ನಡೆಯಲಿದ್ದ ದೇಹಾಂತವ ತಪ್ಪಿಸಿ । ಜೀವದಾನವನಿತ್ತರು ಕ್ಷಣದಲಿ ॥ 22

ಇನ್ನು ಈ ಅಧ್ಯಾಯದಲಿ ಕಥನ । ಸಾಯಿ ಯಾವಾಗ ಹೇಗೆ ಪ್ರಸನ್ನ ।
ಆಗಿ ಮಾಡುತಿದ್ದರು ಅನುಗ್ರಹದಾನ । ಭಕ್ತರ ಸುಖಸಂಪನ್ನರಾಗಿಸಿ ॥ 23

ದೀಕ್ಷಾಪ್ರಕಾರವದು ಅದ್ಭುತ । ಯಾರಿಗೆ ಯಾವ ರೀತಿಯಲಿ ಎಂತ ।
ವಿನೋದಪೂರ್ಣ ನಗೆಯಾಡುತ । ಆಗುತಿತ್ತೆಂಬದನು ಕೇಳಿ ॥ 24

ಉಪದೇಶದ ಅನೇಕ ರೀತಿಗಳನು । ಇದೇ ಗ್ರಂಥದಲಿ ಹಿಂದೆ ವರ್ಣಿಸಿದೆ ಅವುಗಳನು ।
ನೋಡಿ ಅವರವರ ಯೋಗ್ಯತೆಯನು । ಅಂತೆಯೇ ಮಾರ್ಗ ಉಪದೇಶಿಸುವರು ॥ 25

ವೈದ್ಯನಿಗೆ ಗೊತ್ತು ರೋಗದ ನಿದಾನ । ಅವನಿಗೇ ಗೊತ್ತು ಮಾತ್ರೆಯದೂ ಗುಣ ।
ರೋಗಿಯೂ ತಿಳಿಯದಿಹನು ಅದನ । ಮೊದಲು ಬೆಲ್ಲವನು ಬೇಡುವನು ॥ 26

ಬೆಲ್ಲ ಸಿಹಿಯಾದರೂ ಹಿತಕರವಲ್ಲ । ರೋಗಿ ಅದ ಬೇಡಿ ಹಠಮಾಡುವನಲ್ಲ ।
ಮದ್ದಿನ ಬಟ್ಟಲನು ಮುಟ್ಟಲೊಲ್ಲ । ಕೈಮೇಲೆ ಬೆಲ್ಲ ಬೀಳದೆ ॥ 27

ರೋಗಿಗೆ ಒತ್ತಾಯ ಸಲ್ಲದು । ಆಗ ವೈದ್ಯನಿಗೆ ಯುಕ್ತಿ ಯೋಜಿಸಬೇಕಾಗುವದು ।
ಮೊದಲು ಬೆಲ್ಲ ಮೇಲೆ ಔಷಧ ಕುಡಿಸುವದು । ಅದರಿಂದ ನಿಜಕಾರ್ಯವ ಸಾಧಿಸುವರು ॥ 28

ಔಷಧಿಯ ಸ್ವಲ್ಪ ಬದಲಿಸುವರು । ಅದರಿಂದ ಸಿಹಿಯ ಪರಿಣಾಮ ತಡೆಯುವರು ।
ಔಷಧವ ಉಪಯುಕ್ತಗೊಳಿಸುವರು । ಅದೇ ರೀತಿ ಬಾಬಾರದು ॥ 29

ಈ ನಿಯಮವಲ್ಲ ಎಲ್ಲರಿಗೆ । ಆಯಾ ಮನೋಧರ್ಮ, ಅಧಿಕಾರದವರಿಗೆ ।
ಸೇವೆ ಭಕ್ತನ ಪ್ರೇಮ ಹೇಗೆ । ಹಾಗೆಯೇ ಅನುಗ್ರಹದ ಉಪಕ್ರಮ ॥ 30

ಬಾಬಾರ ವಿಚಿತ್ರ ಕೃತಿ ಅದ್ಭುತ । ಯಾವಾಗ ಯಾರಿಗೆ ಪ್ರಸನ್ನರಾಗುತ ।
ಮತ್ತವರಿಗೆ ಅನುಗ್ರಹ ನೀಡುತ । ಯಾವ ರೀತಿಯಲೆಂದು ಕೇಳಿರಿ ॥ 31

ಒಮ್ಮೆ ಅವರ ಮನಸಿಗೆ ಬಂದಾಗ । ಯಾರಿಗೂ ಅದರ ಕಲ್ಪನೆಯೂ ಇರದಿದ್ದಾಗ ।
ಸಹಜ ಹಾಸ್ಯ ವಿನೋದ ನಡೆದಾಗ । ಭಕ್ತ ಕೃತಾರ್ಥತೆಯ ಸಾಧಿಸುವರು ॥ 32

ಗ್ರಂಥವಾಚನ ಮಾಡ ಬಯಸಿದಾಗ್ಗೆ । ಸಹಜವೆನಿಸುವದು ಭಕ್ತರ ಮನಸಿಗೆ ।
ಗ್ರಂಥವನಿತ್ತು ಬಾಬಾರ ಕೈಗೆ । ಪ್ರಸಾದವೆಂದದನು ಸ್ವೀಕರಿಸಬೇಕೆಂದು ॥ 33

ಮುಂದೆ ಆ ಗ್ರಂಥದ ವಾಚನ । ಮಾಡಲಾಗುವದು ಶ್ರೇಯ ಸಂಪಾದನೆ ।
ಶ್ರೋತೃ ವಕ್ತಾರರಿಬ್ಬರ ಪರಮಕಲ್ಯಾಣ । ಪ್ರಸಾದ ಪೂರ್ಣ ಶ್ರವಣವಿದು ॥ 34

ಕೆಲವರು ದಶಾವತಾರದ ಚಿತ್ರಗಳ । ಕೆಲವರು ದಶಾವತಾರದ ಸ್ತೋತ್ರಗಳ ।
ಕೆಲವರು ಗೀತೆಯಂಥ ಪವಿತ್ರ ಪುಸ್ತಕಗಳ । ಚರಿತ್ರೆಗಳನೂ ಅರ್ಪಿಸುತಿದ್ದರು ॥ 35

ದಾಸಗಣೂ ಅವರ ಸಂತಲೀಲಾಮೃತ । ಭಕ್ತಲೀಲಾಮೃತವನು ಅರ್ಪಿಸುತ ।
ಕೆಲವರು ವಿವೇಕ ಸಿಂಧು ಗ್ರಂಥ । ಬಾಬಾ ಕೊಡುವರವುಗಳ ಶಾಮನಿಗೆ ॥ 36

ಎನ್ನುವರು ಶಾಮಾ ಈ ಪುಸ್ತಕ ನಿನ್ನದು । ಇದನು ಮನೆಯಲಿ ಕಟ್ಟಿ ಇಡು ।
ಶಾಮನು ಆಜ್ಞೆಯ ಶಿರಸಾವಹಿಸುವದು । ಮತ್ತು ಪುಸ್ತಕಗಳ ಗಂಟಿನಲ್ಲಿ ಕಟ್ಟಿಡುವರು ॥ 37

ಭಕ್ತರು ಮನದಲೆಂದುಕೊಂಡು । ಗ್ರಂಥಗಳ ತರುವರು ಕೊಂಡು ।
ಇದನು ಬಾಬಾ ಕೈಯಲ್ಲಿ ಕೊಡುವದು । ಮತ್ತು ಪ್ರಸಾದವೆಂದದನು ತಿರುಗಿ ಪಡೆಯುವದು ॥ 38

ಬಾಬಾರು ಉದಾರ ಸ್ವಭಾವದವರಿದ್ದರೂ । ಇದನು ಮಾಡಲೂ ಧೈರ್ಯವಿರದವರು ।
ಮಾಧವರಾಯರನು ಜೊತೆಗೆ ಕರೆದೊಯ್ಯುವರು । ಅವರನ್ನೇ ಮುಂದೆ ಮಾಡುವರು ॥39

ಸಮಯ ನೋಡಿ ಬಾಬಾರ ಕೈಯೊಳಗೆ । ಅವರಿಂದಲೇ ಗ್ರಂಥ ಕೊಡಿಸಿದಾಗ್ಯೆ ।
ಗ್ರಂಥದ ಮಹತಿ ತಿಳಿದಿರುವದು ಬಾಬಾಗೆ । ಅಂತೆಯೇ ಭಕ್ತರ ಸ್ಥಿತಿ ಕೂಡಾ ॥ 40

ಭಕ್ತ ಅವರಿಗೆ ಗ್ರಂಥ ಕೊಡಬೇಕು । ಬಾಬಾ ಅದನು ಮೇಲೆ ಮೇಲೆ ನೋಡಬೇಕು ।
ಭಕ್ತ ಮುಂದೆ ಕೈಯೊಡ್ಡಬೇಕು । ಅದನು ತಿರುಗಿ ಪಡೆಯಲು ॥ 41

ಆದರೆ ಬಾಬಾ ಅವರಿಗೆ ಕೊಡರು । ಅದನು ಮಾಧವರಾಯರ ಕೈಗೆ ಕೊಡುವರು ।
ಶಾಮಾ ಸದ್ಯ ಇದನಿಟ್ಟುರು । ನಿನ್ನ ಹತ್ತಿರವೇ ಇರಲಿದು ॥ 42

ಶಾಮನು ಕೇಳುವನು ಸ್ಪಷ್ಟವಾಗೇ । ಇವರು ಕೈಯೊಡ್ಡಿ ಆತುರರಾಗಿ ನಿಂತಿರುವಾಗ್ಯೆ ।
ಅವರದು ಅವರಿಗೆ ಕೊಟ್ಟರೆ ಹೇಗೆ । ಎನುಲವರು ಇರಲಿ ನಿನ್ನೊಡನದು ಸದ್ಯ ॥ 43

ಒಮ್ಮೆ ಭಕ್ತ ಮಹಾಜನಿಯವರು । ಭಾಗವತವಾಚನದಿ ಅಭಿರುಚಿಯುಳ್ಳವರು ।
ಜೊತೆಗೆ ಗ್ರಂಥದ ಪ್ರತಿಯ ತಂದರು । ಶಿರಡಿಗೆ ಬಾಬಾರತ್ತ ಬರುವಾಗ ॥ 44

ಅವರ ಭೆಟ್ಟಿಗೆ ಮಾಧವರಾಯರು । ಬಂದು ಓದಲು ಪುಸ್ತಕವನೆತ್ತಿದರು ।
ಹಿಡಿದುಕೊಂಡು ಮಶೀದಿಗೆ ಬಂದರು । ಬಾಬಾ ಸಹಜವಾಗಿ ಕೇಳಿದರು ॥ 45

ಶ್ಯಾಮಾ ಈ ಪುಸ್ತಕವೆಂಥದು । ಶಾಮ ಹೇಳಿದ ಇದು ಭಾಗವತವೆಂದು ।
ಬಾಬಾ ಅದನು ಕೈಗೆತ್ತಿಕೊಂಡು । ನೋಡಿ ತಿರುಗಿ ಕೊಟ್ಟರು ॥ 46

ಇದೇ ಪುಸ್ತಕದ ಪ್ರತಿಯೊಂದು । ಇದೇ ನಾಥ ಭಾಗವತದ್ದು ।
ಬಾಬಾರ ಕರಸ್ಪರ್ಶದಿಂದ ಪ್ರಸಾದವಾದದ್ದು । ಮಹಾಜನಿಯವರಲ್ಲಿ ಮೊದಲೇ ಇತ್ತು ॥47

ಈ ಗ್ರಂಥ ನನ್ನದಿರದು । ಕಾಕಾ ಮಹಾಜನಿಯವರ ಪುಸ್ತಕವಿದು ।
ಸುಮ್ಮನೇ ಓದಬೇಕೆನಿಸಿತೆಂದು । ಸ್ಪಷ್ಟ ಮಾತಿನಲಿ ತಿಳಿಸಿದರು ॥ 48

ಆದರೂ ಬಾಬಾ ಎಂದರವನಿಗೆ । ನಾನಿದನು ನಿನಗೆ ಕೊಟ್ಟಿರುವಾಗ್ಯೆ ।
ಇಟ್ಟಿರು ಇದನು ಸಂಗ್ರಹದೊಳಗೆ । ಗಂಟಿನೊಳಗಿದ್ದರೆ ಮುಂದೆ ಉಪಯೋಗವಾದೀತು ॥ 49

ಕೆಲದಿನ ಕಳೆದ ಮೇಲೆ ಮತ್ತೆ । ಕಾಕಾ ಬರಲು ಶಿರಡಿಗೆಂತೆ ।
ಜೊತೆಗೆ ಭಾಗವತವ ಮತ್ತೆ । ತಂದು ಸಾಯಿ ಕೈಯಲಿ ಕೊಟ್ಟರು ॥ 50

ಪ್ರಸಾದವೆಂದು ತಿರುಗಿ ಕೊಟ್ಟರು । ಮನಸಿಟ್ಟು ಓದಲು ಆಜ್ಞಾಪಿಸಿದರು ।
ಮತ್ತೆ ಆಶ್ವಾಸನೆಯಿತ್ತರು । ನಿಮ್ಮ ಮನಃಶಾಂತಿಗದು ಬೇಕಾದೀತು ॥ 51

'ಇದೇ ನಿಮಗುಪಯೋಗವಾಗುವದು । ಬೇರೆ ಯಾರಿಗೂ ಕೊಡದಿರು ಇದು' ।
ಬಹಳ ಕಳಕಳಿಯಿಂದ ಹೀಗೆ ನುಡಿದು । ಆಗ ಕಾಕಾ ಸಪ್ರೇಮ ವಂದಿಸಿದರು ॥ 52

ಬಾಬಾ ನಿತ್ಯ ತೃಪ್ತರು । ಪದಾರ್ಥ ಮಾತ್ರಗಳಲಿ ಪೂರ್ಣ ನಿಷ್ಕಾಮರು ।
ಭಾಗವತ ಧರ್ಮವನ್ನೇ ಆಚರಿಸುವವರು । ಎಂದಾಗ ಇದರ ಸಂಗ್ರಹವೇತಕ್ಕೆ ॥ 53

ಯಾರು ತಿಳಿಯರುವರು ಬಾಬಾರ ಮನ । ಆದರೂ ಈ ಗ್ರಂಥಗಳ ಸಂಮೇಲನ ।
ವ್ಯವಹಾರ ದೃಷ್ಟಿಯಿಂದ ಅತಿ ಪಾವನ । ಶ್ರವಣ ಸಾಧನ ನಿಜ ಭಕ್ತರಿಗೆ ॥ 54

ಶಿರಡಿ ಈಗ ಪವಿತ್ರ ಸ್ಥಾನ । ದೇಶ ದೇಶಗಳಿಂದ ಬಾಬಾರ ಭಕ್ತ ಜನ ।
ಆಗಾಗ ಒಟ್ಟು ಸೇರಿ ಜ್ಞಾನ । ಸತ್ರವನಲ್ಲಿ ನಡೆಸುವರು ॥ 55

ಆಗ ಇವುಗಳ ಉಪಯೋಗವಾಗುವದು । ಶಾಮ ಇವುಗಳ ತೋರಿಸುವ ತೆಗೆದು ।
ತಾವಾಗ ನಿಧಾಮಕೆ ತೆರಳಿದ್ದು । ಗ್ರಂಥಗಳು ಪ್ರತಿಮೆಯಾಗುಳಿಯುವವು ॥ 56

ಹೀಗೆ ಈ ಗ್ರಂಥಗಳು ಪರಮಪಾವನ । ಶಿರಡಿಯಲೇ ಇರಲಿ ಇಲ್ಲವೇ ಅನ್ಯ ಸ್ಥಾನ ।
ಓದಿದಾಗ ಭಕ್ತರಿಗಾಗುವದು ಸ್ಮರಣ । ಇದೇ ಸಂಗ್ರಹಕೆ ಕಾರಣವಿರಬಹುದು ॥ 57

ಇರಲಿ ರಾಮಾಯಣ ಅಥವಾ ಭಾಗವತ । ಪರಮಾರ್ಥವಿಷಯದ ಯಾವದೇ ಗ್ರಂಥ ।
ಓದಿದಾಗ ರಾಮಕೃಷ್ಣಾದಿಗಳ ಚರಿತ । ಸಾಯಿಯೇ ಕಾಣುವರು ಎಲ್ಲೆಲ್ಲೂ ॥ 58

ಎನಿಸುವದು ಈ ಗ್ರಂಥದ ಎಲ್ಲ ವಿಭೂತಿಗಳು । ಸಾಯಿ ತಾನೇ ತಾನಾಗಿ ನಿಂತಿರಲು ।
ಶ್ರೋತೃಗಳು ವಕ್ತಾರರು ನಿತ್ಯ ನೋಡುತ್ತಿರಲು । ಎದುರಿನಲಿ ಮೂರ್ತಿ ಸಾಯಿಯದು ॥ 59

ಗ್ರಂಥವ ಗುರುವಿಗೆ ಅರ್ಪಿಸಿದಾಗ । ಅಥವಾ ಬ್ರಾಹ್ಮಣರಿಗೆ ದಾನವಿತ್ತಾಗ ।
ಅದರಲ್ಲಿಯೇ ದಾತರ ಕಲ್ಯಾಣವಿರುವಾಗ । ಈ ಅರ್ಥದ ಶಾಸ್ತ್ರಪ್ರಮಾಣವಿರುವದು ॥ 60

ಬಾಬಾ ಶ್ಯಾಮನ ಇದಕೆ ನಿಯೋಜಿಸಿದ್ದು । ಅಲ್ಪ ಪ್ರಯೋಜನವಲ್ಲ ಇದು ।
ನೀನು ಈ ಗ್ರಂಥಗಳ ಕೊಂಡೊಯ್ದು । ದಪ್ತರದಲಿಟ್ಟು ರಕ್ಷಿಸಬೇಕೆಂದು ॥ 61

ಶಾಮನಿದ್ದ ನಿಃಸೀಮ ಭಕ್ತನು ಹೇಗೆ । ಅಂತೆಯೇ ಅವನ ಮೇಲೆ ಮಮತೆ ಬಾಬಾರಿಗೆ ।
ಒಂದು ನಿಯಮವನು ಹಚ್ಚಬೇಕು ಅವನಿಗೆ । ಎಂಬಿಚ್ಛೆ ಬಾಬಾರಿಗಿದ್ದಿತು ॥ 62

ಅವರೇನು ಮಾಡಿದರು ನೋಡಿ ಆಗ್ಯೆ । ಇಚ್ಛೆ ಇರದಿದ್ದರೂ ಶಾಮನಿಗೆ ।
ಯಾವ ರೀತಿಯಲಿ ಅವನಿಗೆ । ಅನುಗ್ರಹ ಹೇಗೆ ಮಾಡಿದರೆಂದು ಕೇಳಿ ॥ 63

ಒಂದು ದಿನ ಮಶೀದಿಗೆ । ರಾಮದಾಸಿಯೊಬ್ಬ ಬಂದನವನಿಗೆ ।
ನಿತ್ಯನೇಮವನಿಟ್ಟು ಕೊಂಡಿದ್ದ ಹೀಗೆ । ತಪ್ಪದೇ ರಾಮಾಯಣವನೋದುವದು ॥ 64

ಬೆಳಿಗ್ಗೆ ಮುಖ ಮಾರ್ಜನ । ಸ್ನಾನ ಸಂಧ್ಯೆ ಭಸ್ಮಚರ್ಚನ ।
ಕ್ಯಾವಿ ವಸ್ತ್ರಪರಿಧಾನ । ಮಾಡಿ ಅನುಷ್ಠಾನಕೆ ಕುಳಿತುಕೊಳ್ಳುತಿದ್ದ ॥ 65

ವಿಷ್ಣು ಸಹಸ್ರನಾಮದ ಆವರ್ತನ । ಆಮೇಲೆ ಆಧ್ಯಾತ್ಮ ರಾಮಾಯಣ ।
ಪಾರಾಯಣದ ಮೇಲೆ ಪಾರಾಯಣ । ಪರಿಪೂರ್ಣ ಶ್ರದ್ಧೆಯಿಂದ ಮಾಡುತಿದ್ದ ॥ 66

ಹೀಗೆ ಎಷ್ಟೋ ಸಮಯ ಕಳೆಯಲು । ಮಾಧವರಾಯರಿಗೆ ಯೋಗ ಒದಗಲು ।
ಬಂದಿತು ಸಾಯಿ ಸಮರ್ಥರ ಮನದೊಳು । ಏನೆಂಬದನು ತಾವು ಕೇಳಬೇಕು ॥ 67

ಮಾಧವರಾಯರ ಸೇವೆ ಫಲಿಸಿತು । ಇವನಿಗೊಂದು ನಿಯಮವ ಹಚ್ಚಿ ಕೊಟ್ಟು ।
ಭಕ್ತಿಮಾರ್ಗದ ಪ್ರಸಾದವಿತ್ತು । ಸಂಸಾರದಿ ವಿಶ್ರಾಮ ದೊರೆಯಬೇಕು ॥ 68

ಹೀಗೆ ಬಾಬಾರ ಮನಸಿನಲಿ ಬಂದು । ಆ ರಾಮದಾಸಿಯನು ಹತ್ತಿರ ಕರೆದು ।
ಎಂದರು, "ಬಹಳೇ ಹೊಟ್ಟೆ ಕಡಿಯುತಿರುವದು । ಕರುಳೇ ಕಿತ್ತಿ ಬರುವಂತಿದೆ ॥ 69

ಈ ಹೊಟ್ಟೆ ಕಡಿತ ನಿಲ್ಲದು । ಹೋಗಿ ಸೋನಾಮುಖಿಯ ತಂದು ।
ಒಂದಿಷ್ಟು ತೆಗೆದುಕೊಳ್ಳುವದು । ಅಲ್ಲಿಯವರೆಗೆ ಇದು ನಿಲ್ಲದು" ॥ 70

ಪಾಪದ ಆ ಬಾವಾರ್ಥಿ ರಾಮದಾಸಿ । ಪುಸ್ತಕದಲ್ಲೊಂದು ಗುರುತನಿರಿಸಿ ।
ಪೇಟೆಗೆ ಹೋದ ಧಾವಿಸಿ । ಬಾಬಾರ ಆಜ್ಞೆಯ ಪಾಲಿಸಿ ॥ 71

ರಾಮದಾಸ ಹೋದ ಕೆಳಗಿಳಿದು । ಬಾಬಾ ಇತ್ತ ಏನು ಮಾಡಿದ್ದು ।
ಕೂಡಲೇ ಆಸನದ ಮೇಲಿಂದ ಎದ್ದು । ಆ ಪುಸ್ತಕದ ಹತ್ತಿರ ಹೋದರು ॥ 72

ಅಲ್ಲಿ ಬೇರೆ ಪುಸ್ತಕಗಳೂ ಇದ್ದು । ಅದರಲಿ ವಿಷ್ಣು ಸಹಸ್ರನಾಮದ ಪುಸ್ತಕವಿದ್ದು ।
ಅದನು ಬಾಬಾ ಕೈಗೆತ್ತಿಕೊಂಡು । ಸ್ವಸ್ಥಾನಕೆ ತಿರುಗಿ ಬಂದರು ॥ 73

"ಶಾಮಾ ಈ ಪುಸ್ತಕವ ನೋಡು । ಬಹಳ ಕಲ್ಯಾಣಕಾರಕವಿರುವದು ।
ಅದಕ್ಕೇ ನಿನಗೆ ಕೊಡುತಿರುವದು । ನೀನಿದನು ಓದಿ ನೋಡಬೇಕು ॥ 74

ಒಮ್ಮೆ ನನಗೆ ನೋವು ಶುರುವಾಯಿತು । ಎದೆ ಡವ ಡವ ಬಡದುಕೊಳ್ಳತೊಡಗಿತು ।
ಜೀವ ಒದ್ದಾಡತೊಡಗಿತು । ಪ್ರಸಂಗ ಕಠಿಣವೆನಿಸಿತು ॥ 75

ಅಂಥ ಆ ಪ್ರಸಂಗದೊಳಗೆ । ಏನು ಹೇಳಲಿ ಶಾಮಾ ನಿನಗೆ ।
ಈ ಪುಸ್ತಕದಿಂದಾಗೇ । ಅಂದು ಈ ಜೀವ ಉಳಿಯಿತು ॥ 76

ಕ್ಷಣದೊಳು ನೆಮ್ಮದಿ ಎನಿಸತೊಡಗಿತು । ತತ್ಕಾಲ ನೋವು ನಿಂತು ಹೋಯಿತು ।
ಅಲ್ಲಾನೇ ಹೊಟ್ಟೆಯಲಿಳಿದಂತಾಯಿತು । ಇದರಿಂದ ಅಂದು ನಾ ಬದುಕಿದೆ ॥ 77

ಅದಕೇ ಶಾಮಾ ಇದನು ಒಯ್ದಿರು । ಸ್ವಲ್ಪ ಸ್ವಲ್ಪವಾಗಿ ಓದುತ್ತಿರು ।
ದಿನಾಲೂ ಒಂದೊಂದೇ ಅಕ್ಷರವಾದರೂ । ಆನಂದದಾಯಕವಾಗುವದದು ॥ 78

.ಶಾಮಾ ಎಂದ "ನಾ ತೆಗೆದುಕೊಳ್ಳೆನು । ರಾಮದಾಸ ನನಗೆ ಬಯ್ಯುವನು ।
ಅವನಿಲ್ಲದಾಗ ನಾನೇ ಈ ಕೆಟ್ಟ ಕೆಲಸವನು । ಮಾಡಿದೆನೆಂದೆನುವನು ॥ 79

ಹುಚ್ಚನಂತಿರುವನವ ಮೊದಲಿಗೇ । ತಲೆ ತಿರುಕನವ ಸಿಟ್ಟಿನವನಿರುವಾಗ್ಯೆ ।
ಸುಮ್ಮನೇ ಬೇಡ ಈ ಕಟಿಕಟಿ ನನಗೆ । ಯಾತಕ್ಕೆ ಬೇಕಿ ಉಸಾಬರಿ ॥ 80

ಅಲ್ಲದೇ ಸಂಸ್ಕೃತ ಬರೆದಿದೆ ಪುಸ್ತಕದೊಳು । ನನ್ನ ಭಾಷೆ ಕಾಡುಹಳ್ಳಿಯದಿರಲು ।
ಒತ್ತಕ್ಷರಗಳಿಗೂ ಬಾಯಿ ಹೊರಳದಿರಲು । ನನಗೆ ಸ್ಪಷ್ಟ ಉಚ್ಚಾರಬಾರದು ॥ 81

ನೋಡಿ ಈ ಬಾಬಾರ ಕೆಲಸವನೆಲ್ಲ । ಬಾಬಾ ಹಚ್ಚಬೇಕನುವರು ಜಗಳ ।
ಬಾಬಾರಿಗೆ ಶಾಮಾನ ಬಗೆಗಿದ್ದ ವಾತ್ಸಲ್ಯ । ಎಷ್ಟೆಂದು ಅವನಿಗೆ ತಿಳಿಯದು ॥ 82

"ನನ್ನ ಶಾಮಾ ಹುಚ್ಚನಿರಬಹುದು । ಆದರೆ ನನಗವನ ಬಗ್ಗೆ ಮಮತೆ ಇರುವದು ।
ಒಂದು ತರಹದ ಲೋಭವೆನಿಸುವದು । ಅವನ ಬಗ್ಗೆ ಬಹಳ ಕಳಕಳಿ ನನಗೆ ॥ 83

ಈ ವಿಷ್ಣು ಸಹಸ್ರನಾಮದ ಮಾಲೆಯನು । ಸ್ವಹಸ್ತದಿಂದವನ ಕೊರಳಿಗೆ ಕಟ್ಟುವೆನು ।
ಭವದುಃಖದಿಂದವನ ದೂರ ಮಾಡುವೆನು । ನುಡಿಗೆ ರೂಢಿಯ ಕೆಡವುವೆನು ॥ 84

ನಾಮವು ಪಾಪದ ಪರ್ವತವ ಒಡೆಯುವದು । ನಾಮವು ದೇಹದ ಬಂಧನವ ಬಿಡಿಸುವದು ।
ನಾಮವು ಸಮೂಲ ಕಿತ್ತೊಗೆಯುವದು । ದುರ್ವಾಸನೆಯ ಬೇರುಗಳ ॥ 85

ನಾಮವು ಕಾಲದ ಕತ್ತು ಮುರಿಯುವದು । ಜನ್ಮಮರಣದ ಹರತಾಟ ತಪ್ಪಿಸುವದು ।
ಇಂಥ ಈ ಸಹಸ್ರನಾಮದ್ದು । ಶ್ಯಾಮನಿಗೆ ಸವಿ ಹತ್ತಬೇಕಾಗಿದೆ ॥ 86

ಪ್ರಯತ್ನ ಪೂರ್ವಕನಾಮ ತೆಗೆದುಕೊಂಡರೊಳ್ಳೆಯದು । ಅಪ್ರಯತ್ನದಿಂದದು ಬಂದರೂ ಅಲ್ಲ ಕೆಟ್ಟದು ।
ಸಹಜ ಮುಖದಲಿ ಬಂದರೂ ಅದು । ಪ್ರಭಾವವ ಪ್ರಕಟ ಮಾಡುವದು ॥ 87

ನಾಮಕ್ಕಿಂತ ಸುಲಭವಾದುದನ । ಅಂತಃಶುದ್ಧಿಗೆ ಕಾಣೆ ಸಾಧನ ।
ನಾಮವು ಜಿವ್ಹೆಗೆ ಭೂಷಣ । ನಾಮವು ಪೋಷಣೆ ಪರಮಾರ್ಥತೆ ॥ 88

ನಾಮ ಜಪಕೆ ಬೇಕಿಲ್ಲ ಸ್ನಾನ । ನಾಮಕ್ಕೆ ಬೇಕಿಲ್ಲ ವಿಧಿ ವಿಧಾನ ।
ನಾಮದಿಂದ ಸಕಲ ಪಾಪ ಕ್ಷಾಲನ । ನಾಮ ಪಾವನ ಯಾವಾಗಲೂ ॥ 89

ಅಖಂಡ ನನ್ನ ನಾಮದಿಂದ । ಪಾರುಗಾಣುವದು ಭವವ ।
ಅವಶ್ಯಕತೆ ಇಲ್ಲ ಬೇರೆ ಸಾಧನದ । ಮೋಕ್ಷವೇ ಕೈಗೆಟಕುವದು ॥ 90

ನನ್ನ ನಾಮದ ಆವರ್ತನೆ ಮಾಡುವವನಿಗೆ । ಅವನ ಪಾಪದ ಹೋಮ ಆದ ಹಾಗೆ ।
ಗುಣಿಗಳಿಗಿಂತ ಗುಣಿ ಅವ ನನಗೆ । ಮನ್ನಾಮ ಜಪ ಮಾಡುವವನಿಗೆ" ॥ 91

ಹೀಗೆ ಬಾಬಾರ ಮನೋಗತವಿದ್ದು । ಅದರಂತೆ ನಡತೆ ಅವರದು ।
ಶಾಮನೆನುತಿದ್ದರೂ ಬೇಡವೆಂದು । ಬಾಬಾ ಅವನ ಜೇಬಿನೊಳಗದನು ತುರುಕಿದರು ॥92

ಹಿರಿಯರ ಪುಣ್ಯದ ಬಲ । ಅದರಿಂದ ಸಾಯಿ ಕೃಪೆಯ ಫಲ ।
ಇಂಥ ಈ ಸಹಸ್ರನಾಮ ನಿರ್ಮಲ । ಪ್ರಪಂಚದ ತಳಮಳ ನಿವಾರಿಸುವದು ॥ 93

ಇತರ ಕರ್ಮಗಳಿಗೆ ವಿಧಿ ಇರುವದು । ಯಾವಾಗ ಬೇಕಾದಾಗ ನಾಮ ತೆಗೆದುಕೊಳ್ಳಬಹುದು ।
ಅದಕೆ ಅನಧ್ಯಾಯ ಪ್ರದೋಷಗಳ ಬಾಧೆ ಇರದು । ಇದಕಿಂತ ಸರಳ ಉಪಾಸನೆ ಬೇರಿಲ್ಲ ॥94

ನಾಥರಾದರೂ ಇದೇ ರೀತಿಯಾಗೇ । ತಮ್ಮ ಒಬ್ಬ ನೆರೆಮನೆಯವಗೆ ।
ಈ ಸಹಸ್ರನಾಮವನೇ ಕಟ್ಟಿ ತಲೆಗೆ । ಪರಮಾರ್ಥದ ಮಾರ್ಗಕ್ಕೆ ಹಚ್ಚಿದರು ॥ 95

ನಾಥರ ಮನೆಯಲಿ ನಡೆಯುತಿತ್ತು ನಿತ್ಯ ಪುರಾಣ । ನೆರೆಮನೆಯಲಿ ವಾಸಿಸುವನ ಜಾತಿಯಿಂದ ಬ್ರಾಹ್ಮಣ ।
ಆದರೂ ಇರುತಿದ್ದ ಸ್ನಾನ ಸಂಧ್ಯಾವಿಹೀನ । ದುರಾಚರಣಗಳಲಿ ನಿಮಗ್ನ ॥ 96

ಎಂದೂ ಮಾಡನು ಪುರಾಣಶ್ರವಣ । ವಾಡೆಯಲಿ ಕಾಲನಿಡನು ಆ ದುರ್ಜನ ।
ನಾಥರಾಗಿ ಕರುಣಾಪೂರ್ಣ । ಅವನನ್ನು ಕರೆದರು ತಮ್ಮಲ್ಲಿ ॥ 97

ಇದ್ದು ಉಚ್ಚವರ್ಣಾದಿ ಜನ್ಮ । ನೋಡಿ ವ್ಯರ್ಥ ಕಳೆಯುತಿರುವದನ ।
ಹೇಗೆ ಈತ ಹೊಂದುವನು ಉಪರಮ । ನಾಥರಲಿ ಕೃಪೆ ಜನಿಸಿತವನ ಬಗ್ಗೆ ॥ 98

ಆದರೆ ಅವನು ಒಲ್ಲೆನುತಿದ್ದಾಗೆ । ಸಹ್ರನಾಮದ ದೀಕ್ಷೆ ಇತ್ತರವನಿಗೆ ।
ಒಂದೊಂದೇ ಶ್ಲೋಕವ ಕಲಿಸುತಿರುವಾಗ್ಯೆ । ನಿಜೋದ್ಧಾರವನು ಪಡೆದನು ॥ 99

ಈ ಸಹಸ್ರನಾಮದ ಪಾಠ । ಚಿತ್ತ ಶುದ್ಧಿಯ ಮಾರ್ಗವಿದು ಸಗಟ ।
ಪರಂಪರಾಗತ ಈ ಪರಿಪಾಠ । ಅದರಿಂದ ಈ ಪರದಾಟ ಬಾಬಾರದು ॥ 100

ಅಷ್ಟರಲಿ ರಾಮದಾಸ ಲಗುಬಗೆಯಿಂದ ಬಂದ । ತೆಗೆದುಕೊಂಡು ಸೋನಾಮುಖಿ ಔಷಧ ।
ಅಣ್ಣಾ ನಿಂತಿದ್ದನಲ್ಲಿ ಆಗಿ ತುಂಟ ನಾರದ । ಸಾದ್ಯಂತ ವೃತ್ತಾಂತವ ತಿಳಿಸಿಬಿಟ್ಟ ॥ 101

ಮೊದಲೇ ರಾಮದಾಸನ ತಲೆತಿರುಕ ಸ್ವಭಾವಕೆ । ಈ ನಾರದನದು ಬೇರೆ ಮಧ್ಯಸ್ತಿಕೆ ।
ಆಗ ಆದ ಪ್ರಸಂಗದ ಮೋಜು ಕೇಳಬೇಕೆ । ಅದನಾರು ಬಣ್ಣಿಸಬಲ್ಲರು ॥ 102

ರಾಮದಾಸನು ವಿಕಲ್ಪದ ಮೂರ್ತಿಯೇ ಮೊದಲಿಗೆ । ಮಾಧವರಾಯರ ಬಗೆಗೆ ಸಂಶಯಮನದೊಳಗೆ ।
ಎಂದ ಬಾಬಾರ ನಡುವೆ ಮಾಡಿ ಹೀಗೆ । ನನ್ನ ಪುಸ್ತಕ ಅಪಹರಿಸಬೇಕೆಂದಿರುವೆ ॥ 103

ಸೋನಾಮುಖಿಯ ಸುದ್ದಿ ಮರೆತ । ತಿರುಗಿದ ಮಾಧವರಾಯರತ್ತ ।
ಅನಿವಾರ ಕ್ರೋಧದಿಂದಾತ । ಬಾಯಿಗೆ ಬಂದಂತೆ ಕೂಗಾಡಿದ ॥ 104

ಹೊಟ್ಟೆ ನೋವಿನ ಸೋಗು ತೋರಿಸಿ ಹೀಗೆ । ನೀನೇ ಮಾಡಲು ಹಚ್ಚಿದೆ ಬಾಬಾರಿಗೆ ।
ಇದೊಂದೂ ನಡೆಯದು ನನ್ನೆದುರಿಗೆ । ನನ್ನ ಪುಸ್ತಕದ ಮೇಲೆ ಕಣ್ಣಿಟ್ಟಿರುವೆಯಾ ॥ 105

ಹೆಸರು ರಾಮದಾಸನೆನಗೆ ಗಟ್ಟಿಗನಾನಿರುವದು । ಸುಮ್ಮನೇ ನನ್ನ ಪುಸ್ತಕವ ಕೊಟ್ಟು ಬಿಡು ।
ನಿನ್ನೆದುರು ತಲೆ ಒಡೆದುಕೊಳ್ಳುವೆ ನೋಡು । ರಕ್ತದ ಕಾಲುವೆಯನೇ ಹರಿಸುವೆ ॥ 106

ನನ್ನ ಪುಸ್ತಕದ ಮೇಲೆ ನಿನ್ನ ಕಣ್ಣು । ಅದಕೆ ನೀನೇ ಹೂಡಿರುವೆ ಈ ಆಟವನು ।
ಬಾಬಾರ ಮೇಲೆ ಹಾಕಿ ಎಲ್ಲವನು । ಅಮಾಯಕನಂತಿರಬೇಕೆನುವೆ ॥ 107

ಮಾಧವರಾಯರು ತಿಳಿಸಿದರು ಪರಿಪರಿಯಲಿ । ಆದರೂ ರಾಮದಾಸನಿಗೆ ಶಾಂತಿ ಎಲ್ಲಿ ।
ಆಗ ಮಾಧವರಾಯರು ಸೌಮ್ಯ ವೃತ್ತಿಯಲಿ । ಏನೆಂದರು ಅದ ಕೇಳಿ ॥ 108

ನಾ ಕಪಟ ಮಾಡಿದೆನೆಂದು ನನ್ನ ತಲೆಗೆ । ಕಟ್ಟ ಬೇಡಯ್ಯ ಈ ಅಪವಾದ ಸುಮ್ಮಗೇ ।
ಏನು ನಿನ್ನ ಆ ಪುಸ್ತಕದ ಬಗೆ । ಅದೇನೂ ಸಿಗಲಾರದಂಥ ವಸ್ತುವಲ್ಲ ॥ 109

ನಿನ್ನ ಪುಸ್ತಕಕ್ಕೇನು ಬಂಗಾರ ಹತ್ತಿದೆಯೇ । ಅಥವಾ ವಜ್ರ ಕೂಡ್ರಿಸಿದೆಯೇ ತಿಳಿಯೆ ।
ಬಾಬಾರ ಮಾತನ್ನೂ ನಂಬಲಾರೆಯೇ । ಧಿಃಕಾರ ನಿನ್ನ ಈ ಜನ್ಮಕ್ಕೆ ॥ 110

ಅವನ ಅಟ್ಟಹಾಸವನು ಕಂಡು । ಮಧುರವಚನದಿ ಬಾಬಾ ನುಡಿದರು ।
"ರಾಮದಾಸ ಈಗ ಆಗಿರುವುದೇನಂಥದ್ದು । ಏಕೆ ವ್ಯರ್ಥದಣಿಯುತಿರುವಿರಿ ಹೀಗೆ ॥ 111

ಈ ಹುಡುಗ ಶಾಮ ನಮ್ಮವನೆ । ಗಂಟಲು ಹರಿದುಕೊಳ್ಳುತಿರುವೆ ಏಕೆ ಸುಮ್ಮನೇ ।
ಏತಕೆ ಈ ಕಷ್ಟ ಪಡುತಿರುವೆ ಸುಮ್ಮನೆ । ಜನರೆದುರು ಅಸಹ್ಯ ಮಾಡಿ ತೋರಿಸುವೆ ॥ 112

ಜಗಳಗಂಟನೆಂಥವ ನೀನು ಹೀಗೆ । ನುಡಿಯಬಾರದೇ ನೀನು ಮಧುರವಾಗೇ ।
ಅಯ್ಯಾ ಯಾವಾಗಲೂ ಈ ಗ್ರಂಥಗಳ ಓದುತ್ತಿದಾಗೆ । ಇನ್ನು ಅಂತರ ಅಶುದ್ಧವಾಗಿಯೇ ಉಳಿದಿದೆಯಲ್ಲ ॥ 113

ದಿನಾಲು ಅಧ್ಯಾತ್ಮ ರಾಮಾಯಣ ಓದುವಿ । ಸಹಸ್ರನಾಮದ ಆವರ್ತನವ ಮಾಡುವಿ ।
ಆದರೂ ಉಚ್ಛೃಂಖಲವೃತ್ತಿಯ ಬಿಡದಿರುವಿ । ಮತ್ತೆ ಎಂದುಕೊಳ್ಳುವೆ ರಾಮದಾಸನೆಂದು ।।114

ಹೇಗಪ್ಪ ನೀ ರಾಮದಾಸ ಇಂಥವನು । ಸರ್ವಾರ್ಥದಲ್ಲೂ ನೀನಿರಬೇಕು ಉದಾಸಿನನು ।
ಆದರೂ ಬಿಡದಾಗಿರುವೆ ಪುಸ್ತಕದ ಆಶೆಯನು । ಈ ಕರ್ಮಕ್ಕೇನೆನಬೇಕು ಹೇಳು ॥ 115

ರಾಮದಾಸನಿಗೆ ಮಮತೆ ಇರಬಾರದು । ಚಿಕ್ಕ ದೊಡ್ಡದರಲೆಲ್ಲ ಸಮತೆ ಕಾಣುವುದು ।
ಈ ಹುಡುಗನೊಡನೆ ವಿಷಮತೆ ನಿನ್ನದು । ಕೈ ಮುಟ್ಟಿಕಾಡುತಿಹೆ ಪುಸ್ತಕಕ್ಕಾಗಿ ॥ 116

ಹೋಗಿ ನಿನ್ನ ಸ್ಥಾನದಲ್ಲಿ ಕುಳಿತಿರು । ಪುಸ್ತಕ ದೊರೆತಾವು ದುಡ್ಡಿಗೆ ನೂರು ।
ಮನುಷ್ಯ ಸಿಗಲಾರ ಕಲ್ಪಾಂತ ಬಂದರೂ । ಮನದಲಿ ವಿಚಾರ ಮಾಡಬೇಕು ॥ 117

ನಿನ್ನ ಪುಸ್ತಕ ಏನಂಥ ಮಹತಿ । ಶಾಮನಿಗೇನು ಅದರಲ್ಲಿ ಆಸಕ್ತಿ ।
ನಾನೇ ಆ ಪುಸ್ತಕವನೆತ್ತಿ । ಕೊಟ್ಟೆನವನಿಗೆ ನಾನೇ ಅದನು ॥ 118

ಮುಖೋದ್ಗತವಾಗಿದೆ ಅದು ನಿನಗೆ । ಶಾಮನಿಗೆ ಕೊಡಬೇಕೆನಿಸಿತು ಮನಸಿಗೆ ।
ಓದಲಿ, ಇಟ್ಟು ಬಿಡುವ ಆವರ್ತನವಾದಾಗ್ಯೆ। ಆದರಿಂದ ಅತ್ಯಂತ ಕಲ್ಯಾಣವಾದೀತು ।।119

ಏನು ಆ ವಾಣಿಯ ರಸಾಳತೆ । ಅಂತಃ ಕರಣ ಮತ್ತು ಮಧುರತೆ ।
ಅಂತೆಯೇ ಸ್ವಾನಂದ ಜಲದಂಥ ಶೀತಲತೆ । ಅತಿ ಅಪೂರ್ವವಾಗಿರುತಿತ್ತು ॥ 120

ರಾಮದಾಸ ಮನದಲಿ ತಿಳಿದ । ಸಿಡುಕಿನಿಂದಲೇ ಮಾಧವರಾಯನಿಗೆಂದ । ಇದಕೆ
ಬದಲಾಗಿ ಪಂಚರತ್ನಗೀತೆಯನೊಂದು । ನೀಕೊಡಬೇಕೆನಗೆ ಮೊದಲೆ ಹೇಳಿಡುವೆ ॥ 121

ರಾಮದಾಸ ಇಷ್ಟು ದಾರಿಗೆ ಬಂದ । ಮಾಧವರಾಯನಿಗಾಯಿತು ಅನಂದ ।
ಹತ್ತು ಕೊಡುವೆನು ಏಕೆ ಒಂದು । ಗೀತೆಗಳ ಕೊಡುವೆ ನಿನಗೆ ಬದಲಿಗೆ ॥ 122

ಇರಲಿ ಆಮೇಲೆ ಆ ಜಗಳ ಮುಗಿದು । ಗೀತಾಗ್ರಂಥವೇ ಜಾಮಿನಾಗಿದ್ದು ।
ಆದರೆ ಆ ದೇವಗೀತೆಯ ಗತಿಯದು । ಅಂಥವನಿಗೆ ಗೀತೆ ಏತಕೆ ॥ 123

ಸಾಯಿಯ ಮುಂದೆ ಅಧ್ಯಾತ್ಮ ರಾಮಾಯಣದ । ಪಾರಾಯಣ ಮೇಲೆ ಪಾರಾಯಣ ಮಾಡುತ್ತಿದ್ದ ।
ಅಂಥವ ಸಾಯಿ ಎದುರೇ ಜಗಳಾಡಿದ । ಹೀಗೆ ಮಾಡುವುದುಚಿತವೇ ॥ 124

ಇದಾದರೂ ನಾ ಹೇಗೆ ಎನ್ನಲಿ । ದೋಷವನು ಯಾರಿಗೆ ಹೇಗೆ ಕೊಡಲಿ ।
ಈಗ ನಡೆದ ಪ್ರಕಾರವು ನಡೆಯದಿದ್ದಲ್ಲಿ । ಮಹತ್ವವು ಬಿಂಬಿಸುವುದು ಹೇಗೆ ॥ 125

ಇಷ್ಟೊಂದು ಜಗಳ ಮಾಡಿದವನು । ಬಾಬಾರ ಪೀಡೆಯ ಪರಿಹರಿಸಿದನು ।
ಯಾವುದರಲಿ ತಿಳಿದು ಕಲ್ಯಾಣವನು । ಮಾಡುವ ಸಾಯಿಯ ಅಲೌಕಿಕ ಕೊಡುಗೆ ಇದು ॥ 126

ಇಷ್ಟೊಂದು ರಗಳೆ ಆಗದಿದ್ದಲ್ಲಿ । ಕೊಡುತಿತ್ತು ಮಾಧವರಾಯನಿಗೆ ವಿಶ್ವಾಸವೆಲ್ಲಿ ।
ಒಂದಕ್ಷರವೂ ಮೂಡುತ್ತಿರಲಿಲ್ಲವನ ಜಿವ್ಹೆಯಲಿ । ಅದು ಬಾಯಿ ಪಾಠವನಿಗೆ ಆಗುತ್ತಿರಲಿಲ್ಲ ॥ 127

ಸಾಯಿನಾಥನು ಹೀಗೆ ಪ್ರೇಮಮಯಿನಿರಲು । ಪರಮಾರ್ಥದಾಟವ ಹೀಗೆ ಆಡುವ ಸಿಗನೆಲ್ಲೂ ।
ಯಾವ ರೀತಿಯಲಿ ಆಡಿಯಾನೆನಲೂ । ಕಲ್ಪನೆಗೂ ನಿಲುಕದು ಅವನ ಲೀಲೆ ॥ 128

ಮುಂದೆ ಶಾಮರನಿಷ್ಠೆ ಕುಳಿತು । ದೀಕ್ಷಿತ, ನರಕೆಯವರಿಂದ ಕಲಿತು ।
ಮಾಡಿಕೊಂಡು ಅಕ್ಷರ ಗುರುತು । ಪುಸ್ತಕವು ಬಾಯಿಲಿ ಕುಳಿತಿತು ॥ 129

ಮಾಧವರಾಯರ ಈ ವಾದ । ಸಾಯಿ ಶುದ್ಧ ಬೋಧಾನುವಾದ ।
ಪರಮಾನಂದ ಪೂರ್ಣವಾದ ಈ ವಿನೋದ । ನಿರ್ವಿವಾದವಾಗಿ ಸುಖದಾಯಕವು ॥ 130

ಆದರೊಡನೆ ಬ್ರಹ್ಮವಿದ್ಯಾಭ್ಯಾಸ । ಅವರಲ್ಲಿ ಬಾಬಾ ಅಲೇ ಪ್ರೀತಿ ।
ಪ್ರಸಂಗೋಪಾತ್ತ ಅಭಿವ್ಯಕ್ತಿ । ತೋರಿದರ್ಥಿಗೆ ಅವಲೋಕ ॥ 131

ಒಮ್ಮೆ ಜೋಗರ ಹೆಸರಿನ ಪಾರ್ಸಲು । ಟಪಾಲಿನಿಂದ ಶಿರಡಿ ಪೋಸ್ಟಿಗೆ ಬರಲು ।
ಅಲ್ಲಿಗೆ ಅದನು ಸ್ವೀಕರಿಸಲು । ಗಡಿಬಿಡಿಯಿಂದ ಹೊರಟರು ॥ 132

ಪುಸ್ತಕ ಕಂಡಾಗ ಅದಾಗಿತ್ತು ಭಾಷ್ಯ । ಲೋಕಮಾನ್ಯರ ಗೀತಾ ರಹಸ್ಯ ಬಗಲಲಿಟ್ಟುಕೊಂಡು ।
ಆ ಭಾಷ್ಯ । ಮಶೀದಿಗೆ ದರ್ಶನಕ್ಕೆ ಬಂದರು ॥ 133

ನಮಸ್ಕಾರಕ್ಕೆಂದು ತಲೆಬಾಗಿಸಿದಾಗ । ಈ ಪಾರ್ಸಲು ಬಿದ್ದಿತ್ತು ಬಾಬಾರ ಚರಣದಲಿ ಆಗ ।
ಬಾಬಾ ಕೇಳಿದರು ಅದ ನೋಡಿದಾಗ । ಇದು ಏನು ಎಂಥದು ಎಂದು ॥ 134.

ಪಾರ್ಸಲು ಅವರೆದುರು ಒಡೆದು । ಹೇಳಿದರು ಅದರಲ್ಲಿ ಏನಿರುವದೆಂದು ।
ಗ್ರಂಥದ ಸಹಿತವಾಗಿ ಬಾಬಾರ ಕೈಗೀಯಲದು । ಬಾಬಾತೆಗೆದದನು ನೋಡಿದರು ॥135

ಗ್ರಂಥವ ತೆಗೆದುಕೊಂಡು ಕೈಯೊಳಗೆ । ಕಣ್ಣಾಡಿಸಿದರದರ ಮೇಲೆ ಕ್ಷಣದೊಳಗೆ ಕೂಡಲೇ ।
ಕೈಹಾಕಿ ಜೇಬಿನೊಳಗೆ । ರೂಪಾಯಿಯೊಂದನು ತೆಗೆದಿಟ್ಟರದರ ಮೇಲೆ ॥ 136

ಬಳಿಕ ಆ ಗ್ರಂಥವನು ರೂಪಾಯಿಯ ಜೊತೆಯಲ್ಲಿ । ಹಾಕಿದರು ಜೋಗರ ಉಡಿಯಲ್ಲಿ ।
ಎಂದರು ಇದನು ಸಾದ್ಯಂತ ಓದಿದಲ್ಲಿ । ಕಲ್ಯಾಣ ಪ್ರದವಾಗುವುದು ॥ 137

ಹೀಗೆ ಬಾಬಾರ ಅನುಗ್ರಹದ ಕಥೆಗಳನಿ । ವರ್ಣಿಸಬಹುದು ಬೇಕಾದಷ್ಟು ।
ಗ್ರಂಥ ವಿಸ್ತಾರದತ್ತ ಲಕ್ಷಗೊಟ್ಟು । ಸಂಕ್ಷಿಪ್ತತೆ ಸ್ವೀಕರಿಸಲಾಗಿದೆ ॥ 138

ದಾದಾಸಾಹೇಬ ಖಾಪರ್ಡೆ ಎಂಬುವರು । ಒಮ್ಮೆ ಶಿರಡಿಗೆ ಬಂದರು ।
ಸಹಪರಿವಾರವಾಗಿ ಅಲ್ಲಿ ನಿಂತರು । ಬಾಬಾರ ಪ್ರೇಮದಲಿ ತೊಡಗಿ ॥ 139

ಖಾಪರ್ಡೆಯವರಲ್ಲ ಸಾಮಾನ್ಯ ಗೃಹಸ್ಥ । ಅತಿ ವಿದ್ಯಾನರವರದು ದೊಡ್ಡ ಪ್ರಸ್ಥ ।
ಆದರೂ ಬಾಬಾರೆದುರು ಕೈ ಮುಗಿದು ನಿಲ್ಲುತ । ಚರಣದಲಿ ಶಿರವ ಬಾಗಿಸುತಿದ್ದರು ॥ 140

ಆಂಗ್ಲ ವಿದ್ಯಾ ಪಾರಂಗತರು । ಧಾರಾಸಭೆಯಲ್ಲಿ ಕೀರ್ತಿಮಂತರು ।
ವಕ್ತೃತ್ವದಲಿ ಎಲ್ಲರ ಮೀರಿಸುವರು । ಬಾಬಾರೆದುರು ಎಂದೂ ಬಾಯಿ ಬಿಡರು ॥ 141

ಬಾಬಾರಿಗೆ ಭಕ್ತರು ಅಸಂಖ್ಯಾತ । ಆದರೂ ಅವರ ಹತ್ತಿರ ಮೂಕವ್ರತ ।
ಖಾಪರ್ಡೆ ನೂಲಕರ , ಬುಟ್ಟಿಯವರ ವ್ಯತಿರಿಕ್ತ । ಮಾತಾಡುವ ಭಕ್ತರ ಕಂಡಿರಲಿಲ್ಲ ॥142

ಉಳಿದವರೆಲ್ಲ ಬಾಬಾರ ಜೊತೆ ಮಾತಾಡುತ್ತಿದ್ದರು । ಕೆಲವರಂತೂ ಬಾಬಾರ ಜೊತೆ ವಾದಕಿಳಿಯುತ್ತಿದ್ದರು ।
ದಾಕ್ಷಿಣ್ಯ , ನಾಚಿಕೆ ಒಂದೂ ಹಿಡಿಯರು । ಆದರೆ ಈ ಮೂವರಿಗೆ ಮಾತ್ರ ಮೂಕವ್ರತ ॥ 143

ಮಾತಾಡುವದಂತೂ ಇರಲಿದೂರದಲಿ । ಬಾಬಾರೆದುರು ಎತ್ತರು ತಲೆ ।
ಅವರ್ಣನೀಯ ನಮ್ರತೆ ಇರುವಲ್ಲೆ । ಶ್ರವಣ ಶಾಲಿನತೆಯೂ ಅದೇ ಪ್ರಕಾರ ॥ 144

ವಿಧ್ಯಾರಣ್ಯರ ಪಂಚದಶಿಯನ್ನು । ತಿಳಿಸಿ ಹೇಳುವಂಥ ವಿದ್ವತ್ತೆಯನು ।
ಪಡೆದಿದ್ದರೂ ದಾದಾ ಸಾಹೇಬರು ಮೂಕವೃತ್ತಿಯನ್ನು । ಸ್ವೀಕರಿಸುತ್ತಿದ್ದರು ಮಶೀದಿಗೆ ಬಂದಾಗ ॥ 145

ಶಬ್ಧ ಬ್ರಹ್ಮದ ತೇಜವು ಎಷ್ಟೇ ಇದ್ದರೂ । ನಿಃಸ್ತೇಜವದು ಶುದ್ಧ ಬ್ರಹ್ಮದೆದುರು ।
ಸತೇಜ ಪರಬ್ರಹ್ಮವೇ ಸಾಯಿಯವರು । ವಿದ್ವತ್ತೆ ತಲೆಬಾಗಬೇಕು ॥ 146

ಅವರಿದ್ದರಲ್ಲಿ ನಾಲ್ಕು ತಿಂಗಳು । ಅವರ ಕುಟುಂಬ ಏಳು ತಿಂಗಳು ।
ದಿನದಿನಕೆ ಇಬ್ಬರೊಳು । ಅತಿ ಉಲ್ಲಾಸ ಬೆಳೆಯಿತು ॥ 147

ಅವರ ಪತ್ನಿ ಬಲು ನಿಷ್ಠಾವಂತಳು । ಸಾಯಿ ಪದದಲಿ ಪ್ರೀತಿಯುಳ್ಳವಳು ।
ನಿತ್ಯವೂ ಸಾಯಿಗೆ ನೈವೇದ್ಯ ತರುವಳು । ಮಶೀದಿಗೆ ಸ್ವಹಸ್ತದಿಂದ ॥ 148

ನೈವೇದ್ಯ ಗ್ರಹಣವಾಗದವರೆಗೆ । ಉಪೋಷಣ ಆ ಅಬಲೆಗೆ ।
ಮಹಾರಾಜರು ಸ್ವೀಕರಿಸಿದಾಗ । ಅವಳು ಊಟ ಮಾಡುವಳು ॥ 149

ಹೀಗೆ ನಡೆಯಿತು ಒಂದು ಸಲ । ಬಾಬಾ ಪರಮ ಭಕ್ತವತ್ಸಲ ।
ಆ ಸ್ತ್ರೀಯ ಶ್ರದ್ಧೆಯ ಕಂಡು ಅಚಲ । ಸೋಜಿಗ ಮಾರ್ಗವ ತೋರಿದರು ॥ 150

ಅನೇಕರದು ಅನೇಕ ಪರಿ । ಬಾಬಾರದು ಮಾತ್ರ ಬೇರೆಯೇ ದಾರಿ ।
ನಗುತ ಹಾಸ್ಯ ವಿನೋದ ತೋರಿ । ಅದರಲ್ಲಿಯೇ ಅನುಗ್ರಹ ನೀಡುವರು ॥ 151

ಒಮ್ಮೆ ಸಜ್ಜಿಗೆ ಶಿರಾ ಪುರಿಗಳು । ಅನ್ನ ತೊವ್ವೆ ಪಾಯಸಗಳು ।
ಹಪ್ಪಳ ಸಂಡಿಗೆ ಕೋಸಂಬ್ರಿಗಳು । ತಟ್ಟೆ ತುಂಬಿ ತಂದಿಟ್ಟಳು ॥ 152

ಹೀಗೆ ತಟ್ಟೆ ಬರುತಲೇ । ಬಾಬಾ ಅತಿ ಉತ್ಕಂಠೆ ತೋರುತಲೇ ।
ಕಫನಿಯ ತೋಳುಗಳ ಏರಿಸಿ ಮೇಲೆ ಆಸನದಿಂದೆದ್ದಾಗ ॥ 153

ಭೋಜನ ಸ್ಥಾನಕ್ಕೆ ಹೋಗಿ ಕುಳಿತರು । ತಟ್ಟೆಯ ಮುಂದಕೆ ಎಳೆದುಕೊಂಡರು ।
ಅನ್ನ ಸೇವನೆಗೆ ತೊಡಗಿದರು । ಮೇಲೆ ಮುಚ್ಚಿದನ್ನು ಸರಿಸಿ ॥ 154

ಬಹಳಷ್ಟು ಇತರ ನೈವೇದ್ಯಗಳು ಬರುವವು । ಇದಕಿಂತ ಉತ್ತಮವಾಗಿರುವಂಥವು ।
ಅವು ಅಲ್ಲೇ ಬಿದ್ದು ಉಳಿದಿರುವವು । ಇದರ ಮೇಲೆಯೇ ಇಷ್ಟು ಲೋಭವೇಕೆ ॥155

ಇದೇನೋ ಪ್ರಪಂಚದ ಹೊರಲೇ ಇರುವ ಹಾಗೆ । ಮುಟ್ಟಬೇಕೇ ಅದು ಸುಂತರ ಮನಸಿಗೆ ।
ಮಾಧವರಾಯರು ಸಾಯಿ ಸಮರ್ಥರಿಗೆ । ಕೇಳಿಯೇ ಬಿಟ್ಟರು ಈ ವಿಷಮತೆ ಏಕೆಂದು ॥ 156

ಎಲ್ಲರ ತಟ್ಟೆಗಳನಿಟ್ಟು ಬಿಡುವಿರಿ । ಬೆಳ್ಳಿ ತಟ್ಟೆಗಳನ್ನು ದೂರಸರಿಸುವಿರಿ ।
ಈ ಸ್ತ್ರೀಯ ತಟ್ಟೆ ಬಂದಾಗ ತಟ್ಟನೆ ಏಳುವಿರಿ । ಉಣತೊಡಗುವಿರಲ್ಲಾ ಇದು ಅಚ್ಚರಿ ॥ 157

ಅವಳ ಅನ್ನವೆ ಇಷ್ಟು ಸವಿಯೇ । ನಮಗಂತೂ ಬಂದಾಗ ಇದೊಂದು ಗೂಢವೇ ।
ದೇವಾ ಏನಿದು ನಿನ್ನ ಮಾಯೆ । ನಿಮಗೂ ಇಷ್ಟಾನಿಷ್ಟಾ ಇರುವದೇ ॥ 158

ಬಾಬಾ ಎಂದರು ಏನು ಹೇಳಲಿ । ಎಂಥ ಅಪರೂಪ ಇದೆ ಅದರಲ್ಲಿ ।
ಆಕಳಾಗಿದ್ದಳು ವ್ಯಾಪಾರಿಯ ಮನೆಯಲ್ಲಿ । ಚೆನ್ನಾಗಿ ಹಾಲು ಕೊಡುತ್ತಿದ್ದಳು ಹಿಂದಿನ ಜನ್ಮದಲಿ ॥159

ಮುಂದೆ ಅವಳೆಲ್ಲೋ ಕಾಣೆಯಾದಳು । ತೋಟಗಾರನ ಮನೆಯಲ್ಲಿ ಹುಟ್ಟಿ ಬಂದಳು ।
ಆಮೇಲೆ ಕ್ಷತ್ರಿಯರವಳಾದಳು । ಪತ್ನಿಯಾದಳು ವ್ಯಾಪಾರಿಗೆ ॥ 160

ಬಳಿಕ ಹುಟ್ಟಿದಳು ಬ್ರಾಹ್ಮಣರ ಹೊಟ್ಟೆಯೊಳು । ಬಹುಕಾಲದ ನಂತರ ದೃಷ್ಟಿಗೆ ಬಿದ್ದಳು।
ಪ್ರೇಮದಿಂಡೆರಡು ತುತ್ತು ಇತ್ತಿರುವಳು । ಸುಖಸಂತೋಷದಲಿ ಹೋಗಗೊಡು ॥161

ಹೀಗೆಂದು ಯಥೇಷ್ಟ ಉಂಡರು । ಕೈಮುಖಗಳ ತೊಳೆದರು ।
ಸಹಜ ತೃಪ್ತಿಯಿಂದ ತೇಗಿದರು । ಗಾದಿಯ ಮೇಲೆ ಬಂದು ಕುಳಿತರು ॥ 162

ಆ ಸ್ತ್ರೀ ಆಮೇಲೆ ಮಾಡಿನಮನ । ಮಾಡಲಾರಂಭಿಸಿದಳು ಸಾಯಿ ಚರಣಸಂವಾಹನ ।
ಬಾಬಾ ಸಾಧಿಸಿ ಈ ಅವಸರವನ । ಹಿತ ನುಡಿಗಳನವಳಿಗೆ ಹೇಳತೊಡಗಿದರು ॥ 163

ಅವಳು ಕಾಲುಗಳನೊತ್ತುತ್ತಿದ್ದ ಕೈಯನ್ನು । ತಮ್ಮ ಕೈಯಿಂದ ಬಾಬಾಒತ್ತತೊಡಗಿದರದನು ।
ನೋಡಿ ದೇವ ಭಕ್ತರುಗಳ ಪರಸ್ಪರ ಸೇವೆಯನು । ಶಾಮ ಹಾಸ್ಯ ಮಾಡಿ ನುಡಿದನು ॥ 164

ಚೆನ್ನಾಗಿ ನಡೆದಿದೆ ದೇವಾ ಕಾರ್ಯ। ಎಂಥ ಮೋಜಿನದ್ದು ಈ ದೃಶ್ಯ ।
ನೋಡಿ ಪರಸ್ಪರ ಆ ಭಾವನೆಯ । ಆಶ್ಚರ್ಯವೆನಸುವುದು ಅತ್ಯಂತ ॥ 165

ಅವಳ ಸೇವಾಭಾವವ ನೋಡಿ । ಬಾಬಾ ಪ್ರಸನ್ನವಾಗಿ ಅಂತರಂಗದಿ ।
ಮೆಲ್ಲಗೆ ಹೇಳಿದರು ಮುಖದಿಂದ ನುಡಿ । 'ರಾಜಾರಾಮ ರಾಜಾರಾಮ' ಎಂದು ॥ 166

ಹೀಗೆ ಎನುತಿರು ಸತತ । ತಾಯೀ ಅದರಿಂದ ಸಫಲವಾಗುವುದು ನಿನ್ನ ಜೀವಿತ ।
ಶಾಂತವಾಗುವುದು ನಿನ್ನ ಚಿತ್ತ । ಅಪರಿಮಿತ ಹಿತ ಲಭಿಸುವುದು ॥ 167

ಏನು ವಚನದ ಪ್ರಭಾವ । ಹೃದಯಾಂತರಾಳವನು ಹೊಗುವ ।
ವಚನಗಳಿಂದಲೇ ಶಕ್ತಿಪಾತವ । ಕ್ಷಣಾರ್ಧದಲಿ ಮಾಡುವವರು ॥ 168

ಹೀಗೆ ಕೃಪಾವಂತ ಸಾಯಿನಾಥ । ಪ್ರಣತಪಾಲನವ ಸಮರ್ಥ ।
ಪೂರೈಸುವನು ಭಕ್ತಮನೋರಥ । ಅವರ ನಿಜಹಿತವ ಸಾಧಿಸುವ ॥ 169

ಅತ್ಯಂತ ಹಿತ ಅತ್ಯಂತ ಪ್ರೀತಿ । ಅತ್ಯಂತ ಲೀನತೆ ಶ್ರೋತೃಗಳ ಪ್ರತಿ ।
ಅದಕೆ ಮಾಡುತಿರುವೆ ವಿನಂತಿ । ನಾ ಹೇಳುವದನು ಮನಗೊಟ್ಟು ಕೇಳಿರಿ ॥ 170

ಬೆಲ್ಲದ ಸವಿಗೆ ಮರುಳಾಗಿದ್ದು । ಇರುವೆ ಗೋಣು ಮುರಿದರು ಬಿಡದು ।
ಹಾಗೇ ಸಾಯಿ ಚರಣಗಳ ಹಿಡಿದು । ಆ ಕೃಪಾವಂತನ ರಕ್ಷಣೆ ಪಡೆಯಿರಿ ॥ 171

ಗುರು ಭಕ್ತ ಅಲ್ಲ ಬೇರೆ ಬೇರೆ । ಏಕಾಂಗರವರು ರೀತಿ ಬೇರೆ ।
ಇಬ್ಬರ ಬೇರ್ಪಡಿಸಲು ಪ್ರಯತ್ನಿಸಿದರೆ । ಆ ಕರ್ತನ ಅಭಿಮಾನ ಅಳಿಯುವದು ॥ 172

ಒಬ್ಬರ ಬಿಟ್ಟು ಇಲ್ಲ ಒಬ್ಬರು । ಹಸಿಬಿಸಿ ಶಿಷ್ಯಗೆ ಹಸಿಬಿಸಿ ಗುರು ।
ಯಾವನಿಗಿರುವ ಪಕ್ವ ಗುರು । ದ್ವೈತದೊಡನವಗೆ ಮಾತಿಲ್ಲ ॥ 173

ಗುರುವಿರುವನೊಂದು ಊರಲ್ಲಿ । ಶಿಷ್ಯನಿರುವ ಬೇರೆ ಊರಲ್ಲಿ ।
ಯಾರು ತಿಳಿಯುವರು ಈ ರೀತಿಯಲಿ । ಅವರಿಬ್ಬರೂ ತೋರಿಕೆಯವರೆಲ್ಲ ॥ 3174

ಇಲ್ಲದೇ ಇರುವಾಗ ಇಬ್ಬರೆಂಬುವುದು । ಬೇರೆತನವೆಂಬದೆಲ್ಲಿರುವದು ।
ಒಬ್ಬರನಗಲಿ ಒಬ್ಬನಿರುವುದು । ಸಾಧ್ಯವಿಲ್ಲ ದಂತನನ್ಯರವರು ॥ 175

ಅಂತರವಿಲ್ಲ ಗುರು ಭಕ್ತರಲ್ಲಿ । ಹೀಗೆ ವಾಸ್ತವ ನಿರಂತರದಲಿ ।
ಭಕ್ತನ ಶಿರ ಗುರುಚರಣದಲಿ । ಈ ಉಪಚಾರವೂ ಸ್ಥೂಲದ್ದೇ ॥ 176

ಭಕ್ತ ಅದ್ವೈತ ಭಜನಪರ । ಗುರುವೂ ಅದ್ವೈತ ಭಕ್ತಪರ ।
ಹೀಗೆ ಸಮರಸತೆ ಪರಸ್ಪರ । ಈ ವ್ಯವಹಾರ ಕೇವಲ ಹೆಸರಿಗೆ ॥ 177

ಹೇಗೆ ದೊರೆತೀತು ಅನ್ನ ಅಚ್ಛಾದನ । ಕ್ಷಣ ಮಾತ್ರವೂ ಮಾಡದಿರಿ ಚಿಂತನ ।
ಅದೆಲ್ಲವೂ ಪ್ರಾರಬ್ಧಾಧೀನ । ಪ್ರಯತ್ನವಿಲ್ಲದೇ ಸಿಗುವುದು ॥ 178

ಸಂಪಾದಿಸ ಹೋಗಲು ಪ್ರಯತ್ನದಿಂದ । ವ್ಯರ್ಥಶ್ರಮ ಮಾತ್ರ ಅದರಿಂದ ।
ಪರಮಾರ್ಥಸಂಪನ್ನರಾಗಿರಿ ಪ್ರಯತ್ನದಿಂದ । ಹಗಲಿರಳು ಚಿಂತನೆ ಇದರದಿರಲಿ ॥ 179

'ಉತ್ತಿಷ್ಠತ' ಮತ್ತು 'ಜಾಗ್ರತೆ' । ಎನುವಾಗ ಬಿದ್ದಿರುವಿರೇಕೆ ನಿದ್ರಿಸುತ ।
ಶೃತಿಮಾತೆ ತಾರ ಸ್ವರದಲಿ ಕೂಗುತ । ಪ್ರೇಮದಲಿ ಭಕ್ತರ ಎಚ್ಚರಿಸುತಿಹಳು ॥ 180

ಸರ್ವಾನರ್ಥಕ್ಕೆ ಕಾರಣಾವಾದ । ಅವಿದ್ಯಾ ನಿದ್ರೆಯಲಿ ಬಿದ್ದಿದ್ದ ।
ಅಂಥವರು ಸಮಯಕೆ ಸರಿಯಾಗಿ ಎಚ್ಚರಾಗುತ । ಗುರು ಜ್ಞಾನಾಮೃತವ ಪ್ರಾಶಿಸಬೇಕು ॥ 181

ಅತಿ ವಿನೀತರಾಗಿರದಕೇ । ಆಗಿರಿ ಶರಣ ಗುರು ಚರಣಕೆ ।
ಬಾಲಕರು ನಾವು ನಮಗಿಲ್ಲ ತಿಳುವಳಿಕೆ । ಅವನೊಬ್ಬನಿಗಿಹುದು ಹಿತಾಹಿತದ ತಿಳುವಳಿಕೆ ॥ 182

ಸಾಹಂಕಾರ ಕಿಂಚಿದಜ್ಞ ಜೀವ । ನಿರಹಂಕಾರ ಸರ್ವಜ್ಞ ಶಿವ ।
ಇಬ್ಬರಲ್ಲಿಯೂ ಅಭೇದ ಭಾವ । ಬರಲು ಗುರುವೊಬ್ಬ ಉಪಾಯ ॥ 183

ಅವಿದ್ಯೋಪಾಧಿಯುಳ್ಳ ಆತ್ಮವು 'ಜೀವ' । ಮಾಯೋಪಾದಿ ಆತ್ಮವು 'ಶಿವ'।
ಈ ಭೇದ ಭಾವವ ಕಳೆಯುವದ ತಿಳಿದಿರುವ । ಸಮರ್ಥ ಗುರುರಾಯನೊಬ್ಬನು ॥ 184

ಸಂಕಲ್ಪ ವಿಕಲ್ಪಗಳಿಗಾಧೀನ ಮನ । ಮಾಡಿರದನು ಸಾಯಿ ಚರಣದಿ ಸಮರ್ಪಣ ಯ
ಬಳಕಲ್ಲಿಂದ ಸಿಗುವ ಸ್ಫುರಣ । ಅದರ ಅಹಂ ತನ ಅವನಿಗೆ ॥ 185

ಅಂತೆಯೇ ಎಲ್ಲ ಕ್ರಿಯಾಶಕ್ತಿಗಳನ । ಮಾಡಿರಿ ಸಾಯಿಗೆ ಸಮರ್ಪರ್ಣ ।
ಆಮೇಲೆ ಅನುಸರಿಸಿ ಅವನ ಆಜ್ಞೆಯನ । ಅದೇ ಪ್ರಕಾರ ನಡೆಯಬೇಕು ॥ 186

ಎಲ್ಲ ಕಾರ್ಯ ಸಾಯಿಯದೇ ಎಂದು ತಿಳಿದ ಮೇಲೆ । ಎಲ್ಲ ಭಾರವ ಹಾಕಿ ಅವನ ಮೇಲೆ ।
ಕಾರ್ಯಮಾಡಬೇಕು ನಿರಭಿಮಾನದಲೆ । ಅವಿಕಲ ಸಿದ್ಧಿಯ ಪಡೆಯುವಿರಿ ॥ 187

ಆದರೂ ಅಂದೀರಿ ನಾನಿದನು ಮಾಡುವೆನು । ಹಿಡಿದಿರಿ ಅತ್ಯಲ್ಪವಾದರೂ ಅಭಿಮಾನವನು।
ತತ್ಕಾಲದಲೇ ಕಾಣುವಿರದರ ಫಲವನು । ಕ್ಷಣದ ವಿಲಂಬವೂ ಇರದಲ್ಲಿ ॥ 188

ಮಾಯಾಮೋಹಗಳ ಕತ್ತಲೆಯೊಳಗೆ । ಹೊರಳಾಡುತ್ತಿರಲು ಆ ಮಗ್ಗುಲಿಂದೀ ಮಗ್ಗುಲಿಗೆ ।
ಹೇಮಾಡನು ಮೈಮುರಿದು ಕೊಳ್ಳುತಿರುವಾಗ್ಗೆ । ಹರಿಗುರು ಕೃಪೆಯನು ಪಡೆದನು ॥ 189

ಅದು ಕೇವಲ ಅದೃಷ್ಟವಶದಿಂದ । ಅಭ್ಯಾಸ ಮಾಡದೆ , ಸಾಯಾಸವಿಲ್ಲದೆ ।
ಅವನೇ ಕೇವಲ ನಿಜೋದ್ದೇಶದಿಂದ । ಗೌರವಿಸಿದಂತೆ ಎನಿಸುವುದು ॥ 190

ಮಾಡಲು ಭಕ್ತರ ಉದ್ಧಾರ । ಮಾಡಿ ನಿಜ ಚರಿತ್ರ ನಿರ್ಧಾರ ।
ಒತ್ತಾಯದಿಂದ ಹಿಡಿದವನ ಕರ । ಗ್ರಂಥ ಸವಿಸ್ತರ ಬರೆಸಿದ ॥ 191

ಅಖಂಡ ಅನುಸಂಧಾವೆಂಬುವುದೇ ಸೂತ್ರ । ಅನನ್ಯ ಪ್ರೇಮವೇ ಪುಷ್ಪ ವಿಚಿತ್ರ ।
ಪೋಣಿಸಿ ಮಾಲೆಯ ಮನೋಹರ । ಸಾಯಿಗೆ ಅರ್ಪಿಸುವ ಆದರದಿ ॥ 192

ಪಡೆಯುವಾ ಸ್ವರಾಜ್ಯ ಸಿಂಹಾಸನ । ಸ್ವಪದದಲಿ ಆಗಿವಿರಾಜಮಾನ ।
ಭೋಗಿಸುವ ಸ್ವಾನಂದ ನಿರಭಿಮಾನ । ಸುಖದಾಯಕವದನು ನಿಜಾಂತರದಿ ॥ 193

ಹೀಗೆ ಅಗಾಧ ಸಾಯಿ ಚರಿತ್ರ । ಮುಂದಿನ ಕಥೆ ಇದಕ್ಕಿಂತ ವಿಚಿತ್ರ ।
ಚಿತ್ತಗೊಡಿರಿತ್ತ ಕ್ಷಣಮಾತ್ರ । ಶ್ರವಣಗಳು ಪವಿತ್ರವಾಗಲು ॥ 194

ಮುಂಬರುವ ಅಧ್ಯಾಯತ್ರಯಗಳಲಿ । ಬಾಬಾ ಕುಳಿತಿದ್ದು ಕುಳಿತಲ್ಲಿ ।
ಹೊಸತನವ ತೋರುವರು ದೃಷ್ಟಾಂತದಲ್ಲಿ । ಹೇಗೆಂಬುದನು ನೋಡುವಿರಿ ॥ 195

ಮುಂದಿನ ಅಧ್ಯಿಯದ ಆರಂಭದೊಳಗೆ । ಲಾಲಾ ಲಖಮಿ ಚಂದರ ಬಗ್ಗೆ ।
ಪ್ರೇಮ ಸೂತ್ರವ ಕಟ್ಟಿ ಅವನ ಕಾಲಿಗೆ । ನಿಜ ಸ್ಥಳಕೆ ಅವನನ್ನು ಕರೆತಂದರು ॥ 196

ಬಹ್ರಾಣಪುರದಲ್ಲಿ ವಾಸಿಸುವ ಸ್ತ್ರೀ । ಅವಳ ಕೈಯ ಖಿಚಡಿಯ ಬಯಸಿ ।
ಅವಳಲ್ಲಿ ದರ್ಶನೋತ್ಸುಕತೆಯ ಹುಟ್ಟಿಸಿ । ಪ್ರೇಮದ ಕೌತುಕ ತೋರಿದರು ॥ 197

ಮುಂದೆ ಮೇಘಾನ ಕನಸಿನೊಳಗೆ । ತ್ರಿಶೂಲ ಬರೆಯೆಂದು ದೃಷ್ಟಾಂತವಾಗೆ ।
ಅದರ ಹಿಂದೆಯೇ ಅಕಸ್ಮಾತ್ತಾಗೇ । ಶಂಕರನ ಲಿಂಗಪ್ರಾಪ್ತವಾಯಿತು ॥ 198

ಇಂಥಿಂಥ ಅನೇಕ ಕಥೆಗಳು । ಇಲ್ಲಿಂದ ಮುಂದೆ ಬರುತಿರಲು ।
ಭಕ್ತಿಪೂರ್ವಕ ಅವುಗಳ ಕೇಳಲು । ಶ್ರವಣಸಾರ್ಥಕವಾಗುವವು ॥ 199

ಸೈಂಧವ ಸಿಂದುನಿಮಜ್ಜನ (ಉಪ್ಪಿನ ಗೊಂಬೆಯ ಸಮುದ್ರ ಸ್ನಾನ) । ಹಾಗೆ ಹೇಮಾಡನು ಸಾಯಿಗೆ ಶರಣ ।
ಸೋಹಂಭಾವದ ಅಭಿನ್ನತನ । ಆ ಅನನ್ಯತ್ವದಿಂದ ನಮಿಸುವ ॥ 200

ಆಮೇಲೆ ಮಾಡುವ ಪ್ರೇಮದಿಂದ ವಿನಂತಿಯನ । ದಿನರಾತ್ರಿ ಹಿಡಿಯಲಿ ಸಾಯಿಯ ಧ್ಯಾನ ।
ಅದಬಿಟ್ಟು ಬೇರೇನೂ ಕೊಳದಿರಲಿ ಮನ । ಹಾಗೆ ಎಚ್ಚರವಾಗಿರಲಿ ॥ 201


ಹಿಂದಿನದರದಾಗಲಿ ಪರಿಹಾರ । ಮುಂದಿನದ ದಾಟಿ ಮುಟ್ಟಬೇಕು ಪಾರ ।
ಮಧ್ಯದಲೇನಾದರೂ ಉಳಿದರೆ ಅಂತರ । ಇರಲದು ಸದಾ ಗುರು ಚರಣದಿ ॥ 202

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ದೀಕ್ಷಾನುಗ್ರಹದಾನಂನಾಮ ಸಪ್ತವಿಂಶತಿತಮೋಽಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

371.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತೆಂಟು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಸಾಯಿ ಅಲ್ಲ ಏಕದೇಶಿ । ಸಾಯಿ ಸರ್ವಭೂತ ನಿವಾಸಿ ।
ಆ ಬ್ರಹ್ಮ ಹುಳು ಹುಪ್ಪಡಿ ಮೊದಲಾಗಿಸಿ । ವ್ಯಾಪಕ ಸರ್ವತ್ರ ಸರ್ವರಲ್ಲಿ ॥ 1

ಸಾಯಿ ಶಬ್ದ ಬ್ರಹ್ಮದಲಿ ಪೂರ್ಣ । ತೋರಿಸುವ ಪರಬ್ರಹ್ಮದ ಗುರುತನ ।
ಹೀಗೆ ಉಭಯ ಭಾಗದಲೂ ಪ್ರವೀಣ । ಅದರಿಂದ ಸದ್ಗುರುತನ ಅವನಿಗೆ ॥ 2

ತಾನೇ ದೊಡ್ಡ ಜ್ಞಾನಿ ಗಹನ । ಎಂದೆಂದು ಮಾಡುವುದಿಲ್ಲ ಶಿಷ್ಯ ಪ್ರಬೋಧನ ।
ಅಥವಾ ನಿಜಸ್ವರೂಪಾವಸ್ಥಾನ । ಅವನ ಸದ್ಗುರುತನ ಅವನಿಗೆ ॥ 3

ಪಿತನಿಂದ ದೇಹಕ್ಕೆ ಜನನ । ಜನನದ ಬೆನ್ನು ಹತ್ತಿದೆ ಮರಣ ।
ಗುರು ನಿವಾರಿಸುವ ಜನನ ಮರಣ । ಅವನ ದಯಾಳುತನವೇ ಬೇರೆ ॥ 4

ಇನ್ನು ಹಿಂದಿನ ಕಥಾನುಸಂಧಾನ । ಮಾಡಿರಿ ಸ್ವಪ್ನಾಧ್ಯಾಯವ ಶ್ರವಣ ।
ಬಾಬಾ ಹೇಗೆ ಕೊಡುತಿದ್ದರು ದರ್ಶನ । ಭಕ್ತನ ಕನಸಿನಲ್ಲಿ ಹೋಗಿ ॥ 5

ಒಬ್ಬಗೆ ತ್ರಿಶೂಲ ತೆಗೆಯಲು ಹೇಳುವರು । ಇನ್ನೊಬ್ಬರ ಹತ್ತಿರ ಖಿಚಡಿ ಬೇಡುವರು ।
ಒಬ್ಬರ ಬೆನ್ನಿಗೆ ಬಾರಿಸುವರು । ಕೈಯಲ್ಲಿ ಬೆತ್ತವನು ಹಿಡಿದು ಬಾರಿಸಿ ॥ 6

ಯಾರನ್ನು ಕನಸಿನಲಿ ಹೆದರಿಸಿ । ಅವರ ಕುಡಿಯುವ ಚಟವನ್ನು ಬಿಡಿಸಿ ।
ಭಕ್ತರ ಅನೇಕ ಕಷ್ಟಗಳ ಪರಿಹರಿಸಿ । ತಮ್ಮ ಚರಣದ ಸವಿಯನುಣಿಸುವರು ॥ 7

ಹೇಗೆ ಒಬ್ಬರ ಬೆನ್ನು ಸೀಳಿದರು । ಹೇಗೆ ಇನ್ನೊಬ್ಬನ ಎದೆಯ ಗುಂಡು ಕಲ್ಲಿನಲ್ಲಿ ಜಜ್ಜಿದರು ।
ಹಿಂದೆಯೇ ಶ್ರೋತೃಗಳಿದ ಕೇಳಿರುವರು । ಹದಿಮೂರನೆಯ ಅಧ್ಯಾಯದಲಿ ॥ 8

ಮುಂದಿನ ಕಥೆಯ ನಾವಿನ್ಯ । ಹೇಳಿ ಕೇಳಿದವರಿಬ್ಬರೂ ಧನ್ಯ ।
ಹೊಂದುವರಿಬ್ಬರೂ ಸಮರಸತೆಯ । ಅಕ್ಷಯ ಸೌಖ್ಯವ ಪಡೆಯುವರು ॥ 9

ಅಸತ್ಕಥಾನಿಂದಾದಿ ಶ್ರವಣ । ಈ ಪಾಪಗಳದಾಗುವದು ಕ್ಷಾಲನ ।
ಮಾಡುವಾ ಸಂತಕಥಾನುವಾದವನ । ಪರಮಪಾವನಕರವಾದುದು ॥ 10

ಇನ್ನು ಅದೇ ಕಥಾ ನಿರೂಪಣ । ಶ್ರೋತೃಗಳೇ ಸಾದರ ಮಾಡಿರಿ ಶ್ರವಣ ।
ಕಂಡು ಬರುವದು ಕೃಪಾಳುತನ । ಹೆಜ್ಜೆ ಹೆಜ್ಜೆಗೆ ಸಾಯಿಯದು ॥ 11

ಗ್ರೀಕ ವ್ಯಾಪಾರಿಗಳಾದ ರ್‍ಯಾಲಿ ಬಂಧು । ಹಿಂದೂಸ್ತಾನದ ತುಂಬ ವ್ಯಾಪಾರ ಅವರದು ।
ಎಲ್ಲ ಪಟ್ಟಣಗಳಲಿ ಅಂಗಡಿಗಳವರದು । ಅದರಂತೆ ಮುಂಬಯಿ ಪಟ್ಟಣವೂ ಒಂದು ॥12

ಅಲ್ಲಿಯ ಅಧಿಕಾರಿಯ ಕೈಕೆಳಗೆ । ಸಧ್ಯ ನೌಕರಿ ಇದ್ದಿತು ಲಖಮಿಚಂದನಿಗೆ ।
ಅತಿ ವಿಶ್ವಾಸದಿಂದ ಆಜ್ಞಾಧಾರಿಯಾಗೇ । ಮುನಶಿಯೆಂದು ಕೆಲಸ ಮಾಡುತಿದ್ದ ॥ 13

ರೈಲ್ವೆ- ಖಾತೆಯಲಿ ಆರಂಭದಲಿ । ಆಮೇಲೆ ವೆಂಕಟೇಶ ಮುದ್ರಣಾಲಯದಲಿ ।
ಆಗಲೇ ಸಾಯಿಯ ಸಮಾಗಮದಲಿ । ಹೇಗೆ ಬಂದರೆಬುದ ಕೇಳಿ ॥ 14

"ನನ್ನ ಮನಷ್ಯನು ದೂರ ದೇಶದಲಿ । ಸಾವಿರಾರು ಮೈಲು ದೂರವಿರಲಿ ।
ಕಾಲಿಗೆ ದಾರ ಕಟ್ಟಿ ತರುವೆನಿಲ್ಲಿ । ಹಕ್ಕಿಯ ಮರಿಯನು ತರುವಂತೆ" ॥ 15

ಹೀಗೆ ಬಾಬಾ ಬಹಳ ಸಲ ನುಡಿದಿದ್ದರು । ಸಾಕಷ್ಟು ಜನರು ಇದನು ಕೇಳಿದ್ದರು ।
ಬಂದಿತು ಅದರಂತೆಯೇ ಅನುಭವವಾದರೂ । ಆ ಬಾಬಾರ ಲೀಲೆಯನು ವರ್ಣಿಸುವೆ ॥ 16

ಹೀಗೆ ಒಯ್ದರು ಎಷ್ಟೋ ಮರಿಗಳನ್ನು । ದೇಶವಿದೇಶಗಳಿಂದ ಅನೇಕರನು ।
ಅಂಥವರಲಿ ಒಬ್ಬ ಲಖಮಿಚಂದನು । ಬಾಬಾರ ಭಾವಿಕ ಬಾಲನವ ॥ 17

ಬಹುಜನ್ಮಗಳ ದಾಟಿದ ಮೇಲೆ । ಪ್ರಾಕ್ತನ ಕರ್ಮವು ಫಲಿಸಿದ ಮೇಲೆ ।
ಸಂತಸಮಾಗಮ ಲಭಿಸುವಾಗಲೇ । ಮೋಹಜನಿತ ತಮ ಕಳೆದು ॥ 18

ವಿವೇಕಾಗ್ನಿ ಪ್ರದೀಪ್ತಗೊಂಡು । ಭಾಗ್ಯೋದಯದಿಂದ ವೈರಾಗ್ಯಬಿಂದು ।
ಸಂಚಿತ ಕರ್ಮದ ಕ್ಷಯವಾಗುವುದು । ಜೀವನ ಸಾಫಲ್ಯ ದೊರೆಯುವುದು ॥ 19

ಸಾಯಿನಾಥನೇ ತುಂಬಿರಲು ದೃಷ್ಟಿಯಲಿ । ಬೇರೆಯದಕೆಲ್ಲ ಸ್ಥಳವೆಲ್ಲಿ ಅಲ್ಲಿ ।
ಅದರಲ್ಲೂ ನಯನ ನಿಮಿಲೀತವಾದಲ್ಲಿ । ನಾಲ್ದೆಸೆಯಲ್ಲೂ ಸಾಯಿನಾಥನೇ ॥ 20

ಲಾಲಾಜಿಯವರ ಭೆಟ್ಟಿಯಾಯಿತು । ಹೇಳಿದವರು ಸ್ವಾನುಭವದ ಮಾತು ।
ಪ್ರೇಮದಿ ಹೃದಯ ಸಂಪುಟದಿ ತುಂಬಿಟ್ಟು । ಉತ್ಕಂಠೆಗೆಂದು ಅದ ಹೇಳುತ್ತಿರುವೆ ॥ 21

ಬಾಬಾ ಅವನ ಹಿಡಿಯುವ ಸಮಯ ಬಂತು ।ಆ ಲೀಲೆಯೂ ಅತಾಕಿಕವಾಯಿತು ।
ಶ್ರವಣ ಮನಗಳನಿತ್ತ ಕೊಟ್ಟು । ಭಾವಿಕ ಶ್ರೋತಾಗಳು ಕೇಳಲಿದ ॥ 22

ಸನ್ ಹತ್ತೊಂಬತ್ತು ನೂರ ಹತ್ತು । ನಾತಾಳ ರಜೆಯ ಕಾಲವಿತ್ತು ।
ಶಿರಡಿಯ ಪ್ರಯಾಣದ ಯೋಗ ಬಂತು । ಲಾಲಾರಿಗೆ ಆ ಕಾಲದಲಿ ॥ 23

ಆಗಲೇ ಆದದ್ದು ಪ್ರಥಮದರ್ಶನ । ಆದರೂ ಬರುವ ಈ ಯೋಗದ ಲಕ್ಷಣ ।
ಒಂದೆರಡು ತಿಂಗಳು ಮೊದಲೆ ಅವನ । ಕಂಡ ರೀತಿಯ ಕೇಳಿರಿ ॥ 24

ಸಾಂತಾಕ್ರೂಜದಲ್ಲಿರುವಾಗ । ವಿಚಾರದಲಿ ಮನಸಿನಲೇನೂ ಇಲ್ಲದಿರುವಾಗ ।
ಸಹಜವಾಗಿಯೇ ಕನಸು ಬಿದ್ದಿತಾಗ । ವಿಚಿತ್ರ ದೃಷ್ಟಾಂತವ ಕಂಡರು ॥ 25

ಮುದುಕನೊಬ್ಬ ಗಡ್ಡ ಬಿಟ್ಟಿದ್ದ । ಸುತ್ತಲೂ ಭಕ್ತವೃಂದವಿದ್ದ ।
ಇಂಥ ಮಹಾತ್ಮ ನಿಂತಿದ್ದ । ಸಪ್ರೇಮ ವಂದಿಸಿದರವನಿಗೆ ॥ 26

ಮುಂದೆ ದತ್ತಾತ್ರೇಯ ಮಂಜುನಾಥ । ಬಿಜೂರ ಉಪನಾಮದ ಗೃಹಸ್ಥ ।
ಲಖಮಿಚಂದರು ಅಲ್ಲಿಗೆ ಬರುತ । ಗಣೂದಾಸರ ಕಿರ್ತನೆಕೆಂದು ॥ 27

ಗಣೂದಾಸರ ನಿತ್ಯದ ರೀತಿ ಇದು । ಎದುರು ಬಾಬಾರ ಭಾವಚಿತ್ರವಿಡುವದು ।
ಅದ ನೋಡಿದಾಗ ಕನಸಿನಲ್ಲಿ ಕಂಡದ್ದು । ಮೂರ್ತಿ ನೆನಪಾಯಿತು ಲಖಮಿಚಂದಿರಿಗೆ ॥ 28

ಅದೇ ಗಡ್ಡ ಅದೇ ವಯದ । ಅದೇ ಅವಯವ ಅವೇ ಪಾದ ।
ಇವರ ಶ್ರೀ ಮಹಾತ್ಮ ನಿರುವೆಂಬುವುದು । ಲಖಮಿಚಂದರ ಮನದಲಿ ತಿಳಿಯಿತು ॥ 29

ಮೊದಲೇ ದಾಸಗುಣೂರ ಕಿರ್ತನ । ಅದರಲ್ಲಿ ತುಕಾರಾಮನ ಆಖ್ಯಾನ ।
ಆಮೇಲೆ ಆ ಸ್ವಪ್ನದಲಿ ಕಂಡ ಸಾಧುವಿನ ದರ್ಶನ । ಲಾಲಾಜಿ ತಲ್ಲೀನರಾದರೂ ॥ 30

ಮನದಿಂದ ಲಖಮೀಚಂದ ಕೋಮಲ । ಕಣ್ಣಿಗೆ ಬಂತು ಪ್ರೇಮಾಶ್ರು ಜಲ ।
ಎಂದು ನೋಡೇನು ಈ ಮೂರ್ತಿಯನು ಪ್ರೇಮಳ । ಎಂದು ತಳಮಳಗೊಂಡರು ॥ 31

ಮೊದಲು ಕನಸಿನಲ್ಲಿ ಕಂಡದ್ದು । ಕೀರ್ತನದಿ ಮತ್ತೆ ಅದರದೇ ಪ್ರತಿರೂಪವಿದು ।
ಅದರಲ್ಲಿಯೇ ಮನಸ್ಸು ತೊಡಗಿದ್ದು । ಇನ್ನೇನೂ ಮನಸಿನಲಿ ಬಾರದು ॥ 332

ಸಿಗಬಹುದೇ ಯಾರಾದರೂ ಸ್ನೇಹಿತರು । ಶಿರಡಿಗೆ ನನ್ನ ಜೊತೆ ಬರುವವರು ।
ಈ ಚರಣಗಳಲ್ಲಿ ಪ್ರತ್ಯಕ್ಷವಾಗಿ ಎಂದಾರೂ । ಶಿರವನು ನಾನು ಇಟ್ಟೇನೇ ಎಂದು ॥ 33

ಈ ಸಾಧುವಿನ ದರ್ಶನವಾದೀತು ಎಂದು । ಆ ಪ್ರೇಮಾನಂದವು ನನಗೆಂದು ದೊರಕುವುದು ।
ಲಖಮೀಚಂದನಿಗೆ ಉತ್ಸುಕತೆ ಇದರದು । ಒಂದೆ ಸಮನೇ ಹತ್ತಿತ್ತು ॥ 34

ಹಣದ ವ್ಯವಸ್ಥೆಯಾಗಬೇಕು । ಅದಕೆ ಇನ್ನೇನು ಮಾಡಬೇಕು ।
ದರ್ಶನವ ಬೇಗ ಪಡೆಯಬೇಕು । ಅದಕೆ ಉಪಾಯ ಹುಡುಕ ತೊಡಗಿದರು ॥ 35

ಭಾವದ ಹಸಿವೆ ದೇವರಿಗೆ । ಅದಕೆ ಚಮತ್ಕಾರ ನಡೆಯಿತು ಹೀಗೆ ।
ಅದೇ ರಾತ್ರಿ ಎಂಟರ ಸುಮಾರಿಗೆ । ಬಾಗಿಲು ಬಡಿದ ಸ್ನೇಹಿತನೊಬ್ಬ ॥ 36

ಬಾಗಿಲು ತೆರೆದು ನೋಡಿದಾಗ । ಎದುರಿಗೆ ಶಂಕರರಾಯನೆಂಬವರ ಸಂಗಡಿಗ ।
ಲಖಿಮಿಚಂದನಿಗೆ ಕೇಳಿದಾರಾಗ । ಬರುವಿರಾ ಶಿರಡಿಗೆ ಹೋಗೋಣವೆಂದ ॥ 37

ನಾರಾಯಣ ಮಹಾರಾಜರ ದರ್ಶನಕೆ । ಹೋಗಬೇಕೆಂದಿದ್ದರು ಕೇಡಗಾವಕ್ಕೆ ।
ಆದರೆ ಈಗೆನಿಸಿತು ಮನಕೆ । ಮೊದಲು ಶಿರಡಿಗೆ ಹೋಗಬೇಕು ॥ 38

ಪ್ರಯಾಸ ಪಡುತಿರುವುದು ಯಾವುದಕೇ । ಅಪ್ರಯಾಸದಿ ಬಾಗಿಲಿಗೆ ಬಂದಿರುವುದಕೆ।
ಲಖಿಮಿಚಂದರ ಆನಂದಕೆ । ಮೀತಿಯೇ ಇಲ್ಲವಾಯಿತು ॥ 39

ತಮ್ಮ ಅಕ್ಕನಮಗನಿಂದ ತೆಗೆದುಕೊಂಡು । ಕೈಗಡವಾಗಿ ರೂಪಾಯಿ ಹದಿನೈದು ।
ಶಂಕರರಾಯರೂ ಹಾಗೇ ಮಾಡಿದ್ದು । ಪ್ರಯಾಣದ ಸಿದ್ಧತೆ ಮಾಡಿದರು ॥ 40

ಹಾಸಿಗೆ ಹೊದೆಯುವದನು ತೆಗೆದುಕೊಂಡು । ಸಿದ್ಧತೆಯಾಯಿತು ಹೊರಡುವದು ।
ಸಮಯಕ್ಕೆ ಸರಿಯಾದ ತಿಕೇಟು ಪಡೆದು । ಇಬ್ಬರು ಗಾಡಿಯಲಿ ಕುಳಿತರು ॥ 41

ಶಂಕರರಾಯರು ಒಳ್ಳೆ ಭಜನಕಾರರು । ಬಂಡಿಯಲಿ ಭಜನೆ ಮಾಡಿದರಿಬ್ಬರು ।
ಲಖಿಮಿಚಂದರು ಚವಕಶಿಯ ಸ್ವಭಾವದವರು । ದಾರಿಯಲಿ ಚವಕಾಶಿ ಮಾಡಿದರು ॥ 42

ಶಿರಡಿಯ ಕಡೆಯವರಾರಾದರೂ । ಸಿಕ್ಕರೆ ಅವರಿಗೆ ವಂದಿಸುವರು ।
ಬಾಬಾರ ಮಹಿಮೆಯ ಹೇಳಿರೆನ್ನುವರು । ಅನುಭವವೇ ಪ್ರಮಾಣ ನಮಗಿರುವುದು॥ 43

ಸಾಯಿ ಬಾಬಾ ದೊಡ್ಡ ಸಂತರು । ನಗರದತ್ತ ಬಹಳ ವಿಖ್ಯಾತರು ।
ಅವರದೇನಾದರೂ ಪ್ರಚೀತಿ ಇದ್ದರೂ । ನಮಗೆ ಹೇಳಬೇಕೆನುವರು ॥ 44

ಬಂಡಿಯಲಿ ನಾಲ್ವರು ಮುಸಲ್ಮಾನರು । ಅವರು ಶಿರಶಿಯ ಹತ್ತಿರದ ಊರವರು ।
ಮಾತನಾಡಿದರಾಗ ಪರಸ್ಪರರು । ಸಮಾಧಾನವಾಯಿತದರಿಂದ ॥ 45

ಏನಾದರೂ ಸಾಯಿ ಬಾಬಾರ ಬಗ್ಗೆ । ಗೊತ್ತಿದ್ದರೆ ಹೇಳಬೇಕು ನಮಗೆ ।
ಭಾವಾರ್ಥಿಗಳಾದ ಲಖಿಮಿಚಂದರು ಅವರಿಗೆ । ಪ್ರೀತಿಯಿಂದ ಕೇಳುವರು ॥ 46

ಸಾಯಿ ಬಾಬಾ ಮಹಾನ ಸಂತರು । ಬಹಳ ವರ್ಷಗಳಿಂದ ಶಿರಡಿಯಲ್ಲಿರುವರು ।
ಬಹಳ ದೊಡ್ಡ ಗುರುಗಳು । ಎಂದುತ್ತರ ಕೊಟ್ಟರವರು ॥ 47

ಈ ಪ್ರಕಾರ ಹರಟೆ ಹೊಡೆಯುತ್ತ । ಆನಂದದಲಿ ಮಾರ್ಗಕ್ರಮಿಸುತ್ತ ।
ಇಬ್ಬರೂ ಕೋಪರಗಾಂವತೆ ಇಳಿಯುತ । ಶೇಡಜಿಗಾಗ ನೆನಪಾಯಿತು ॥ 48

ಪೇರಲ ಹಣ್ಣೆಂದರೆ ಪ್ರೀತಿಬಾಬಾರಿಗೆ । ಹಣ್ಣು ಬೆಳೆಸುವವರು ಕೋಪರಗಾವದೊಳಗೆ ।
ಎನುವರು ಮಾರುವರು ಗೋದಾವರಿಯ ದಂಡೆಗೆ । ಕೊಂಡವುಗಳ ಬಾಬಾರಿಗೆ ಅರ್ಪಿಸುವ ॥ 49

ಆದರೆ ಗೋದಾವರಿಯ ದಂಡೆಗೆ ಬಂದಾಗ । ಹರುಷಾವಾಯಿತಾ ದೃಶ್ಯವನು ಕಂಡಾಗ ।
ತಾಂಗೆಯು ಆಚೆದಡ ಸೇರಿದಾಗ । ಪೇರಲದ ಮಾತೇ ಮರೆತು ಹೋಯಿತು ॥ 50

ನಾಲ್ಕು ಊರು ದಾಟಿ ಶಿರಡಿ ಅಲ್ಲಿಂದ । ತಾಂಗಾ ಮುನ್ನಡೆಯಿತು ಭರದಿಂದ ।
ನೆನಪು ಮಾಡಿದ ಲಖಮಿಚಂದ । ಆದರೆ ಅಲ್ಲಿ ಹಣ್ಣು ಇರಲಿಲ್ಲ ॥ 51

ಆಗೊಬ್ಬ ಮುದುಕಿ ಹೊತ್ತು ತಲೆಯ ಮೇಲೆ ಬುಟ್ಟಿ । ಓಡುತಿದ್ದುದು ಕಂಡಿತು ತಾಂಗೆಯ ಬೆನ್ನು ಹತ್ತಿ ।
ಅವಳಿಗಾಗಿ ಗಾಡಿಯ ನಿಲ್ಲಿಸಲಾಯಿತು । ಹಣ್ಣೇ ಇವರಿದ್ದಲ್ಲಿ ಬಂದ ಹಾಗಾಯಿತು ॥ 52

ಆನಂದ ಭರಿತನಾದ ಲಖಮಿಚಂದ । ಆರಿಸಿ ಆರಿಸಿ ಹಣ್ಣು ತೆಗೆದುಕೊಂಡ
ಅವಳೆಂದಳು ಬುಟ್ಟಿಯೊಳಗುಳಿದ । ಹಣ್ಣು ಅರ್ಪಿಸಿರಿ ನನಗಾಗಿ ಬಾಬಾರಿಗೊಯ್ದು ॥ 53

ಹಣ್ಣಿನ ನೆನಪಾಗಿ ಮತ್ತೇ ಮರೆತದ್ದು । ಅಕಸ್ಮಾತಾಗಿ ಮುದುಕಿ ಭೆಟ್ಟಿಯಾದದ್ದು ।
ಬಾಬಾರ ಬಗ್ಗೆ ಅವಳಿಗಿರುವ ಭಕ್ತಿಯ ಕಂಡು । ಇಬ್ಬರೂ ವಿಸ್ಮಿತರಾದರು ॥ 54

ಮೊದಲು ಕನಸಲ್ಲಿ ಮುದುಕ ಕಾಣಿಸಿದ । ಅವನೇ ಮತ್ತೇ ಕಿರ್ತನದಲಿ ಕಂಡ ।
ಅವನವರೇ ಇರಬುಹುದೇ ಈ ಮುದುಕಿ ಎಂದು । ಲಾಲಾಜಿ ಎಣಿಸಿದರು ॥ 55

ಇರಲಿ ಮುಂದೆ ಗಾಡಿ ಸಾಗಿತು । ಮಾತಾಡುವುದರಲ್ಲಿ ಶಿರಡಿ ಬಂತು ।
ದೂರಿನಿಂದ ಮಶೀದಿ ಕಾಣಿಸಿತು । ಭಕ್ತಿಯಲಿ ವಂದಿಸಿದರಿಬ್ಬರೂ ॥ 56

ಆಮೇಲವರು ಪೂಜಾ ಸಮಾರಂಭಕ್ಕೆ । ಕೂಡಲೇ ಹೋದರು ಮಶೀದಿಗೆ ।
ಸಾಯಿ ದರ್ಶನವಾದಾಗ್ಯೆ । ಆನಂದದಲಿ ಮುಳಗಿದರು ॥ 57

ಅಂಗಳದ ಬಾಗಿಲು ದಾಟಿದರು । ಸಭಾಮಂಟಪವ ಪ್ರವೇಶಿಸಿದರು ।
ದೂರದಿಂದಲೇ ಬಾಬಾರ ನೋಡಿದರು । ಸದ್ಗದಿತರಾದರು ಮನದಲ್ಲೆ ॥ 58

ಅವರ ದರ್ಶನ ಬಯಸಿದ್ದ । ಲಖಮಿಚಂದ ತಲ್ಲೀನನಾದ ।
ಹಸಿವೆ ನೀರಡಿಕೆಗಳ ಮರೆತು ಹೋದ । ಸ್ವಾನಂದ ಜೀವನವ ಪಡೆದನು ॥ 59

ಕೈಯಲ್ಲಿ ನಿರ್ಮಲ ಜಲ ತೆಗೆದುಕೊಂಡು । ಬಾಬಾರ ಚರಣಕಮಲ ತೊಳೆದರು ।
ಅರ್ಘ್ಯ ಪಾದ್ಯಾದಿ ಪೂಜೆ ಮುಗಿಸಿಕೊಂಡು । ಹಣ್ಣು ಶ್ರೀ ಫಲವನರ್ಪಿಸಿದ ॥ 60

ಧೂಪ ದೀಪ ತಾಂಬೂಲ ದಕ್ಷಿಣೆ ಮಾಡಿದರು ಮಾನಸ ಪ್ರದಕ್ಷಿಣೆ ।
ಮಾಡಿ ಪುಷ್ಪಹಾರ ಸಮರ್ಪಣೆ । ಚರಣ ಸನ್ನಿಧಿಯಲಿ ಕುಳಿತರು ॥ 61

ಪ್ರೇಮಳ ಭಕ್ತನು ಲಖಮಿಚಂದ । ಅವನಿಗೂ ಗುರು ಕೃಪೆಯ ಆನಂದ ।
ಪಡೆದು ಸಾಯಿ ಚರಣಾರವಿಂದ । ಮಿಲಿಂದದಂತೆ ಹರುಷಿತನಾದನು ॥ 62

ಆಗ ಬಾಬಾ ನುಡಿದರು । ಮಕ್ಕಳು ದಾರಿಯಲ್ಲಿ ಭಜನೆ ಮಾಡುವರು ।
ಬೇರೆ ಜನರಲ್ಲಿ ಚವಕಶಿ ಮಾಡುವರು । ಇತರರನ್ನೇಕೆ ಕೇಳಬೇಕು ॥ 63

ಎಲ್ಲವನ್ನೂ ತಮ್ಮ ಕಣ್ಣಿಂದಲೇ ನೋಡಬೇಕು । ಇನ್ನೊಬ್ಬರನ್ನೇಕೆ ಕೇಳಬೇಕು ।
ತಮ್ಮ ವಿಚಾರವ ತಾವು ಮಾಡಬೇಕು । ಸತ್ಯವೋ ಸುಳ್ಳೋ ಈ ಸ್ವಪ್ನವೆಂದು ॥ 64

ಮಾರವಾಡಿಯಿಂದ ಕೈಗಡ ಪಡೆದು । ಅವಶ್ಯವೆನಿತ್ತು ದರ್ಶನಕ್ಕೆ ಬರುವುದು ।
ಪೂರ್ಣವಾಯಿತೇ ಮನದಭೀಷ್ಟವದು" । ಇದು ಕೇಳಿ ಆಶ್ಚರ್ಯವಾಯಿತು ॥ 65

ನಾವು ದಾರಿಯಲಿ ಚವಕಶಿ ಮಾಡಿದ್ದು । ಇಲ್ಲಿ ಬಾಬಾರಿಗೆ ಹೇಗೆ ತಿಳಿದುದು ।
ಪರಮಆಶ್ಚರ್ಯವೆನಿಸಿತಿದು । ಲಖಮಿಚಂದನ ಮನಸಿಗೆ ॥ 66

ದರ್ಶನದ ಇಚ್ಛೆ ಉತ್ಕಂಠೆ ಇತ್ತು । ನಿಜದಲಿ ದುಡ್ಡಿನ ಕೊರತೆಯೂ ಇತ್ತು ।
ಕೈಗಡ ದಿಂದದು ಸರಿ ಹೊಂದಿತು । ಅದೂ ಇವರಿಗೆ ತಿಳಿದಿದೆ ॥ 67

ಮನಯಲಿ ತಾನು ಕನಸು ಕಂಡದ್ದು । ದಾರಿಯಲಿ ಭಜನೆ ಮಾಡಿದ್ದು ।
ಇದೆಲ್ಲ ಬಾಬಾರಿಗೆ ಹೇಗೆ ತಿಳಿದದ್ದು । ಎಂಥ ಅಂತರ್ಜ್ಞಾನವಿದು ॥ 68

ಪರಮಾಶ್ಚರ್ಯ ಲಖಮಿಚಂದಗೆ । ಆಶ್ಚರ್ಯವೆಲ್ಲ ಭಕ್ತವೃಂದದವರಿಗೆ
ಆಶ್ಚರ್ಯ ಸತದ ಪಂಕಜ ಮಿಲಿಂದಗೆ । ಅತರ್ಕ್ಯಬಾಬಾರ ಲೀಲೆಯಿಂದ ॥ 69

ಸಾಲ ಪಡೆದು ಹಬ್ಬ ಮಾಡುವದು । ಅಥವಾ ತೀರ್ಥಯಾತ್ರೆಗೆ ಹೋಗುವುದು ।
ಈ ಸಾಲಗೇಡಿತನ ಬಾಬಾರಿಗೆ ಸೇರದು । ಈ ಶಿಕ್ಷಣವನಿತ್ತರು ಇದರಿಂದ ॥ 70

ಎಲ್ಲ ಭಕ್ತರ ಜೊತೆಯಲ್ಲವರು । ಸಾಠೆಯವರ ವಾಡೆಗೆ ಹೋದರು ।
ಮಧ್ಯಾನ್ಹವಾಗಲೂಟಕ್ಕೆ ಕೂಡುವರು । ಆನಂದಭರಿತ ಮನದಿಂದ ॥ 71

ಅಷ್ಟರಲ್ಲಿ ಪ್ರಸಾದವೆಂದು । ಯಾವನೋ ಭಕ್ತನು ಸಜ್ಜಿಗೆ ತಂದು ।
ಎಲೆಯಲಿ ಬಡಿಸಲಾಗಿದ್ದು । ಅದನುಂಡು ತೃಪ್ತರಾದರು ॥ 72

ಮರುದಿನ ಊಟದ ಹೊತ್ತಿಗೆ । ನೆನಪಾಯಿತು ಲಾಲಾರಿಗೆ ಸಜ್ಜಿಗೆ ।
ಅದು ನಿತ್ಯದ ಕ್ರಮವಿಲ್ಲದಿರುವಾಗ್ಯೆ । ಮನದಲಿ ಉತ್ಸುಕತೆ ಉಳಿಯಿತು ॥ 73

ಆಮೇಲೆ ಮಾರನೆಯ ದಿನ ವಿಚಿತ್ರವಾಯಿತು । ಉಳಿದ ವಾಸನೆ ಪೂರ್ತಿಗೊಂಡಿತ್ತು ।
ಯಾವ ರೀತಿಯಲಿ ಅದು ನಡೆಯಿತು । ಬಾಬಾರಿಂದೆಂಬುದ ಕೇಳಿ ॥ 74

ಗಂಧಾಕ್ಷತೆ ಪುಷ್ಪಾದಿಗಳ ತೆಗೆದುಕೊಂಡಿತು । ಗಂಟೆ ನೀರಾಂಜನ ಪಂಚಾರತಿ ಹಿಡಿದು ಕೊಂಡು ।
ಜೋಗರು ಮಶೀದಿಗೆ ಬಂದು । ಬಾಬಾರಿಗೆ ಕೇಳ ತೊಡಗಿದರು ॥ 75

'ನೈವೇದ್ಯವನೇನು ತರಬೇಕು ಇಂದು' । ಅದಕೆ ಮಹಾರಾಜರು ಆಜ್ಞೆ ಇತ್ತದ್ದು ।
"ಬಾ ತಟ್ಟೆ ತುಂಬ ಸಜ್ಜಿಗೆ ತೆಗೆದುಕೊಂಡು । ಆರತಿ ಪೂಜೆಗಳಾಗಲಿ ಆಮೇಲೆ" ॥ 76

ಪೂಜಾ ಸಾಹಿತ್ಯಗಳನಲ್ಲೇ ಇಟ್ಟು । ಜೋಗರು ಕೂಡಲೇ ಹೋದರು ಹೋರಟು ।
ತಡವಿಲ್ಲದೇ ಎಲ್ಲರಿಗೂ ಸಾಲುವಷ್ಟು । ಶಿರಾ ತೆಗೆದುಕೊಂಡು ಬಂದರು ॥ 77

ಬಳಿಕ ಮಧ್ಯಾಹ್ನ ದ ಆರತಿ ಮುಗಿದು । ಭಕ್ತರು ಮೊದಲೆ ನೈವೇದ್ಯ ತಂದಿದ್ದು ।
ಮೇಲೆ ಬರತೊಡಗಿದ ತಟ್ಟೆಗಳ ಕಂಡು । ಬಾಬಾ ನಿಜ ಭಕ್ತರಿಗೆಂದರು ॥ 78

ಇಂದಿನ ದಿವಸ ಒಳ್ಳೆಯದಿದ್ದು । ಸಜ್ಜಿಗೆ ತಿನ್ನಲು ಮನ ಬಯಸಿದ್ದು ।
ಎಲ್ಲರೂ ಯಥೇಷ್ಟ ತಿನ್ನ ಬೇಕೆಂದು । ತರಿಸಿರದನು ಬೇಗ ಇನ್ನಷ್ಟು ॥ 79

ಆ ಮೇಲೆ ಭಕ್ತರು ಹೋಗಿ ತಂದರು । ಎರಡೂ ಪಾತ್ರೆಗಳ ತುಂಬಿದರು ।
ಲಖಮಿಚಂದ ಚೆನ್ನಾಗಿ ಹಸಿದಿದ್ದರು । ಹೊಟ್ಟೆ ಚೆನ್ನಾಗಿ ಹಸಿದಿತ್ತು ॥ 80

ಹೊಟ್ಟೆ ಹಸಿದದರಿಂದ ಬೆನ್ನಿನಲ್ಲಿ ನೋವು ತುಂಬಿದೆ । ಅದರಿಂದ ಲಖಮಿಚಂದನ ಮನ ಅಸ್ವಸ್ಥವಾಗಿದೆ ।
ಬಾಬಾರ ಮುಖದಿಂದಾಗ ಬಂದ ವಚನವನೊಂದೆ । ಚಿತ್ತಗೊಟ್ಟು ಆಲಿಸಿರಿ ಶ್ರೋತೃಗಳೇ ॥ 81

"ಹಸಿವೆಯಾಗಿದೆ ಒಳ್ಳೆಯದಾಯಿತು । ಬೆನ್ನು ನೋವಿಗೆ ಮದ್ದು ಬೇಕಾಯಿತು ।
ಸದ್ಯ ಸಜ್ಜಿಗೆಯೂ ಬಂತು । ಬೇಗ ಆರತಿ ಮುಗಿಸಿರಿನ್ನು" ॥ 82

ಏನೆಂದು ಲಖಮಿಚಂದರ ಮನದಲ್ಲಿತ್ತು । ಅದೆಲ್ಲ ಬಾಬಾರ ಮಾತಿನಲಿ ಸ್ಪಷ್ಟವಾಗಿ ಇತ್ತು ।
ಶಬ್ದವಿಲ್ಲದೇ ಪ್ರತಿಧ್ವನಿಯಾಗಿತ್ತು । ಅಂತರ್ಜ್ಞಾನಿಗಳಾದ ಮಹಾರಾಜರಿಂದ ॥ 83

ಇರಲಿ ಆರತಿ ಪೂರ್ಣವಾಯಿತು । ಊಟಕ್ಕೆ ಸಜ್ಜಿಗೆ ದೊರೆಯಿತು ।
ಲಖಮಿಚಂದರ ಇಚ್ಛೆ ಪೂರ್ತಿಯಾಯಿತು । ಮನದಲಾನಂದ ತುಂಬಿತು ॥ 84

ಅಂದಿನಿಂದಲೆ ಬಾಬಾರ ಮೇಲೆ ಪ್ರೇಮ ಉಂಟಾಯಿತು । ಊದು ಬತ್ತಿ ಕಾಯಿ ಮಾಲೆಗಳ ನೇಮ ನಡೆಯಿತು ।
ಲಖಮಿಚಂದರಿಗೂ ಕ್ಷೇಮವಾಯಿತು । ಪೂಜಾ ಉಪಕ್ರಮ ನಡೆಯಿತು ॥ 85

ಸಾಯಿಯ ಮೇಲೆ ಇಷ್ಟೊಂದು ಭಕ್ತಿ ಕುಳಿತಿತು । ಶಿರಡಿಯತ್ತ ಹೋಗುವವರು ಸಿಕ್ಕರಾಯಿತು ।
ಮಾಲೆ ದಕ್ಷಿಣೆಗೆ ಕರ್ಪೂರ ಊದುಬತ್ತಿ ಇಷ್ಟು । ಅವರ ಕೈಯಲ್ಲಿ ಕೊಟ್ಟು ಕಳುಹುವರು ॥ 86

ಯಾರೇ ಹೊರಡಲಿ ಶಿರಡಿಗೆ । ತಿಳಿದರೆ ಸಾಕು ಲಖಮಿಚಂದನಿಗೆ ।
ಈ ಮೂರು ವಸ್ತುಗಳ ಮೇಲೆ ದಕ್ಷಿಣೆ ಇತ್ತು ಅದರ ಜೊತೆಗೆ । ನೇಮದಿಂದ ಬಾಬಾರಿಗೆ ಕಳುಹಿಸುವರು ॥ 87

ಅದೇ ಸಲ ರಾತ್ರಿಯಲ್ಲಿ ಚಾವಡಿಯಲ್ಲಿ ನಡೆಯುವ । ನೋಡಲೆಂದು ಆ ಸಮಾರಂಭವ ।
ಹೋದಾಗ ಬಾಬಾರಿಗೆ ಕೆಮ್ಮು ಬಂದು ಜೀವ । ಕಸಿವಿಸಿಯಾಯಿತು ಅದರಿಂದ ॥ 88

ಲಖಮಿಚಂದರು ಮನದಲೆಂದುದು । ಏನು ಈ ಕೆಮ್ಮು ತೊಂದರೆ ಕೊಡುವುದು ।
ಜನರ ದೃಷ್ಟಿತಾಗಿದೆ ಅನಿಸುವುದು । ಕೆಮ್ಮು ಅದರಿಂದಲೇ ಏಳುವುದು ॥ 89

ಇದು ಕೇವಲ ಮನದಲ್ಲಿ ಬಂದಿರಲು । ಇದು ಒಂದು ಲಖಮಿಚಂದನ ವಿಚಾರವಿರಲು ।
ಬೆಳಗ್ಗೆ ಮಶೀದಿಗೆ ಬರಲು । ಅದನ್ನೇ ಬಾಬಾ ನುಡಿದದ್ದು ಬಲು ಆಶ್ಚರ್ಯ ॥ 90

ಅವರ ಹತ್ತಿರ ಮಾಧವರಾಯರು ಬಂದಾಗ್ಯೆ । ತಾವಾಗಿಯೇ ಬಾಬಾ ಹೇಳಿದರು ಅವರಿಗೆ ।
ನಿನ್ನೆ ರಾತ್ರಿ ಕೆಮ್ಮಿನಿಂದ ಬಹಳ ತೊಂದರೆಯಾಯಿತು ನನಗೆ । ಇದು ದೃಷ್ಟಿ ಹತ್ತಿರಬಹುದೇ ॥91

ನನಗಂತೂ ಅನಿಸುವುದು ಇದು । ಯಾರದಾರೂ ದೃಷ್ಟಿಯೇ ತಾಗಿರುವುದು ।
ಅದರಿಂದ ಈ ಕೆಮ್ಮು ಇಷ್ಟೊಂದು । ಜೀವಕ್ಕೆ ಕಷ್ಟ ಕೊಡುತಿದೆ ॥ 92

ಲಖಮಿಚಂದರಿಗೆ ಆಶ್ಚರ್ಯವಾಯಿತು । ನನ್ನ ಮನಸಿನ ವಿಚಾರವೇ ಇದಂತೂ ।
ಬಾಬಾರಿಗೆ ಇದು ಹೇಗೆ ಗೊತ್ತಾಯಿತು । ಎಲ್ಲರಲ್ಲಿಯೂ ಅವರಿರುವರೇ ॥ 93

ಆಮೇಲೆ ಕೈ ಮುಗಿದು ವಿನಂತಿಸಿದನು । ತಮ್ಮ ದರ್ಶನದಿಂದ ಹರುಷಗೊಂಡೆನು ।
ಹೀಗೆಯೇ ಕೃಪೆ ಇಟ್ಟು ಎನ್ನನು । ಮಹಾರಾಜರು ರಕ್ಷಿಸಬೇಕು ॥ 94

ಇನ್ನು ಆ ಚರಣಗಳ ಬಿಟ್ಟರೆನಗೆ । ಬೇರೆ ದೇವರಿಲ್ಲ ಜಗದೊಳಗೆ ।
ಈ ಮನ ತೊಡಗಲಿ ನಿನ್ನ ಭಜನೆಯೊಳಗೆ । ತಮ್ಮ ಚರಣದಲಿ ಎಂದಿಗೂ ॥ 95

ಎಂದರು ಚರಣದಲಿ ಶಿರ ಬಾಗುವೆನು । ಸಾಯಿ ಸಮರ್ಥರೇ ನಿರೋಪ ಬೇಡುವೆನು ।
ಆಜ್ಞೆ ನೀಡಬೇಕು ನಮಗಿನ್ನು । ಹೀಗೆಯೇ ಅನಾಥನನು ರಕ್ಷಿಸಬೇಕು ॥ 96

ನಿತ್ಯವೂ ತಮ್ಮ ಕೃಪಾದೃಷ್ಟಿ ಇರಲಿ । ಇದರಿಂದ ಸಂಸಾರದಿ ಕಷ್ಟಗಳು ಬರದಿರಲಿ ।
ತಮ್ಮ ನಾಮ ಸಂಕೀರ್ತನಾನಂದ ಲಭಿಸಲಿ । ಸುಖ ಸಂತುಷ್ಟಿಗಳಿರಲಿ ಯಾವಾಗಲೂ ॥ 97

ಆಶೀರ್ವಾದ ಸಹಿತ ಉದಿ ತೆಗೆದುಕೊಂಡು । ಸ್ನೇಹ್ನಿತನ ಸಹಿತ ಆನಂದ ಪಡೆದು ।
ದಾರಿಯಲಿ ಸಾಯಿ ಗುಣಗಾನ ಮಾಡತಿದ್ದು । ಲಖಮಿಚಂದನು ತಿರುಗಿ ಹೋದನು ॥ 98

ಹೀಗೆಯೇ ಇನ್ನೊಂದು ಹಕ್ಕಿಯನು । ಬಾಬಾ ಶಿರಡಿಗೆ ತಂದರು ಕಟ್ಟಿ ಇದನು ।
ಕೇಳಿರಿ ವಿಸ್ಮಯ ನಡೆದದೇನು । ಪ್ರತ್ಯಕ್ಷ ದರ್ಶನದ ಸಮಯ ಬಂದಾಗ ॥ 99

ಆ ಹಕ್ಕಿ ಅಂದರೆ ಒಬ್ಬ ಪ್ರೇಮಮಯ ಸ್ತ್ರೀ ಇರುವಳು । ಅವಳ ಕಥೆಯೂ ವಿಚಿತ್ರ ಬಲು ।
ಬರ್ಹಾಣ ಪುರದಲಿ ದೃಷ್ಟಾಂತದಿ ಕಂಡಳು । ಮಹಾರಾಜ ಸಾಯಿ ಸರ್ಮಥರನು ॥ 100

ಎಂದೂ ಆಗಿರಲಿಲ್ಲ ಪ್ರತ್ಯಕ್ಷ ದರ್ಶನ । ಆದರೂ ಆ ಸ್ತ್ರೀಗೆ ಆಯಿತು ಸ್ವಪ್ನ ।
ಬಾಬಾ ಅವಳಿಗೆ ಕೇಳಿದರು ಖಿಚಡಿಯನು । ಅವಳ ಬಾಗಿಲಿಗೆ ಬಂದು ನಿಂತು ॥101

ಅವಳು ಕೂಡಲೇ ಎಚ್ಚರಾಗಿ । ಯಾರು ಇರಲಿಲ್ಲಲ್ಲಿ ನೋಡಲಾಗಿ ।
ದೃಷ್ಟಾಂತವ ಲಗುಬಗೆಯಿಂದಾಗಿ । ಸಮಸ್ತರಿಗೂ ಹೇಳಿದವಳು ॥ 102

ಅವಳ ಪತಿ ಅದೇ ಪಟ್ಟಣದಲ್ಲಿ । ಅಧಿಕಾರಿಯಾಗಿದ್ದ ಟಪಾಲು ಖಾತೆಯಲ್ಲಿ ।
ಬಳಿಕ ಅಕೋಲೆಗೆ ಆಯಿತು ಬದಲಿ । ಆಗ ಶಿರಡಿಗೆ ಹೋಗಲು ಸಿದ್ಧರಾದರು ॥103

ಆ ದಂಪತಿಗಳು ಬಹಳ ಭಾವಿಕರು । ಸಾಯಿ ದರ್ಶನೋತ್ಸುಕರಾದರು ।
ಅಲೌಕಿಕ ಮಾಯೆ ತೋರಿದರು । ಸಾಯಿ ಎಂದು ಕೌತುಕ ಬಿಟ್ಟರು ॥ 104

ಮುಂದೆ ಅನುಕೂಲ ದಿನ ಕಂಡು । ಹೊರಟರಿಬ್ಬರೂ ಶಿರಡಿಗೆಂದು ।
ಮಾರ್ಗದಲಿ ಗೋಮತಿಯ ವಂದಿಸಿ ತೀರ್ಥತಕ್ಕೊಂಡು । ಶಿರಡಿಗೆ ಬಂದು ಇಳಿದರು ॥ 105

ಬಾಬಾರ ದರ್ಶನ ತೆಗೆದುಕೊಂಡು ಪ್ರೇಮದಿಂದ । ಅವರ ಪೂಜೆಯನು ಮಾಡಿ ಭಾವದಿಂದ ।
ನಿತ್ಯ ಚರಣ ಸೇವೆ ಮಾಡುವದರಿಂದ । ಸುಖ ಸಂಪನ್ನರಾದರು ॥ 106

ಹೀಗೆ ಆನಂದದಿಂದ ಆ ದಂಪತಿಗಳು । ಶಿರಡಿಯಲಿದ್ದರು ಎರಡು ತಿಂಗಳು ।
ಅವರ ಭಾವಭಕ್ತಿಗಳ ನೋಡಲು । ಬಾಬಾ ಸಂತುಷ್ಟರಾದರು ಖಿಚಡಿ ಉಂಡು ॥107

ಖಿಚಡಿ ನೈವೇದ್ಯ ಸಮಾರ್ಪಣಾರ್ಥ । ದಂಪತಿಗಳು ಬಂದಿದ್ದರು ಶಿರಡಿಯತ್ತ ।
ಹೀಗೆ ಹದಿನಾಲ್ಕು ದಿನ ಕಳೆಯುತ । ಖಿಚಡಿಯ ನೈವೇದ್ಯ ಆಗಲಿಲ್ಲ ॥ 108

ಮಾಡಿದ ಸಂಕಲ್ಪಕ್ಕೆ ತಡವಾಗುತಿರುವದು । ಆ ಸ್ತ್ರೀಯ ಮನಸಿಗೆ ಬಾರದು ।
ಖಿಚಡಿಯ ತೆಗೆದುಕೊಂಡು ಹದಿನೈದು ದಿನದಂದು । ಮಧ್ಯಾಹ್ನದಷ್ಟರಲ್ಲಿ ಬಂದಳು ॥ 109

ತೆರೆಗಳಳಿ ಬಿಟ್ಟಿದ್ದು । ಭಕ್ತರ ಜೊತೆಯಲಿ ಕರೆದುಕೊಂಡು ।
ಮೊದಲೇ ಬಾಬಾ ಊಟಕ್ಕೆ ಕುಳಿತಿದ್ದು । ಆ ಸ್ತ್ರೀಗೆ ಗೊತ್ತಾಯತು ॥ 110

ಹೀಗೆ ಭೋಜನ ನಡೆದ ಹೊತ್ತಿಗೆ । ಯಾರು ಹೋಗುತಿರಲಿಲ್ಲ ತೆರೆಯ ಒಳಗೆ ।
ಆದರೆ ಅವಸರವಾಗಿತ್ತು ಆ ಸ್ತ್ರೀಗೆ । ಅವಳು ಸುಮ್ಮನೆ ಕೆಳಗೆ ನಿಲ್ಲಲಿಲ್ಲ ॥ 111

ಕೇವಲ ಖಿಚಡಿಯ ನೈವೇದ್ಯಕ್ಕಾಗೇ । ಅಕೋಲಾದಿಂದ ಬಂದಿದ್ದಳು ಶಿರಡಿಗೆ ।
ತಡೆಯುಂಟೆ ಅವಳ ಉತ್ಕಂಠೆಗೆ । ಅದು ಅಪೂರ್ಣ ಉಳಿದೀತೆ ಎಂದಾದರೂ ॥112

ಯಾರ ಮಾತನ್ನು ಮನ್ನಿಸದೇ । ತನ್ನ ಕೈಯಿಂದ ಮೇಲೆತ್ತಿ ಪರದೇ ।
ಪ್ರವೇಶಿಸಿದಳಲ್ಲಿ ಸ್ವಇಚ್ಛೆಯಿಂದಲೇ । ಕಾಮನಾ ಪೂರ್ತಿಯ ಮಾಡಿಕೊಂಡಳು ॥ 113

ಬಾಬಾಕೂಡ ಲೀಲೆ ತೋರಿದರು । ಖಿಚಡಿಗಾಗಿ ಎಷ್ಟೊಂದು ಹಸಿದಿದ್ದರು ।
ಎಂಬಂತೆ ಮೊದಲು ಅದನೇ ಬೇಡ ತೊಡಗಿದರು । ತಟ್ಟೆಯನೆರಡೂ ಕೈಲೆತ್ತಿ ಹಿಡಿದು ॥ 114

ಖಿಚಡಿಯ ಕಂಡು ಮನ ಮುದಗೊಂಡಿತು । ಎತ್ತಿಕೊಂಡು ತುತ್ತಿನ ಮೇಲೆತ್ತುತ್ತು ।
ಬಾಬಾ ಉಂಡರು ಭರ ಭರನೇ ಮುಖದಲ್ಲಿಟ್ಟು । ಅದಕಂಡು ಎಲ್ಲರಿಗೂ ಆಶ್ಚರ್ಯ ॥ 115

ಬಾಬಾರ ಈ ಆತುರತೆ ಕಂಡು । ಎಲ್ಲರು ಮನದಿ ವಿಸ್ಮಯಗೊಂಡು ।
ಕೇಳಲು ಖಿಚಡಿಯ ಕಥೆಯಿದು । ಬಾಬಾರ ಅತಾಕಿಕತೆ ಕಾಣಿಸಿತು ॥ 116

ಇನ್ನು ಮುಂದಿನ ಕಥೆಯಿದು । ಕೇಳಲು ಮನದಿ ಪ್ರೇಮ ಉಕ್ಕುವುದು ।
ಒಬ್ಬ ಗುಜುರಾತಿ ಬ್ರಾಹ್ಮಣ ಸೇವೆಗೆಂದು । ಸಹಜ ಶಿರಡಿಗೆ ಬಂದನು ॥ 117

ರಾವಬಹದ್ದೂರ ಸಾಠೆಯವರಲ್ಲಿ । ಕೆಲಸಕಿದ್ದನಿವ ಆರಂಭದಲಿ ।
ಆ ಶುದ್ಧ ಸೇವಾಭ್ಯಂತರದಲ್ಲಿ । ಬಾಬಾರ ಚರಣಗಳ ಕಂಡನು ॥ 118

ಆ ಕಥೆ ಬಲು ಸುರಸ । ಯಾರಿಗೆ ಭಕ್ತಿ ಪ್ರೇಮದಲ್ಲಿ ರಸ ।
ಹೇಗೆ ಶ್ರೀ ಹರಿ ಪೂರೈಸುವ ಆಸೆ । ಮನದ ಇಷ್ಟವ ಅದ ಕೇಳಿ ॥ 119

ಮೇಘಾ ಎಂಬ ಹೆಸರಿನವ । ಸಾಯಿಯೊಡನೆ ಋಣಾನುಬಂಧವ ।
ಆದರೆ ಶಿರಡಿಯಲ್ಲಿ ಪಡೆದ ಸ್ಥಾನವ । ಆಕಥೆಯ ಕೇಳಲು ಸಿದ್ಧರಾಗಿರಿ ॥ 120

ಸಾಠೇ ಖೇಡಾ ಜಿಲ್ಲೆಯ ಪ್ರಾಂತಾಧಿಕಾರಿಗಳು । ಅಕಾಸ್ಮತ್ ಈ ಮೇಘಾ ಅಲ್ಲಿ ಭೇಟಿಯಾಗಲು ।
ಇಟ್ಟುಕೊಂಡರವನ ತಮ್ಮ ಕೆಲಸದೊಳು । ಶಿವಾಲಯದಲಿ ನಿತ್ಯ ಪೂಜೆಗೆಂದು ॥121

ಮುಂದೆ ಈ ಸಾಠೆ ಶಿರಡಿಗೆ ಬಂದರು । ಅಲ್ಲಿ ಮಹಾರಾಜ ಸಾಯಿಯವರು ।
ಅವರ ಚರಣದಲಿ ತತ್ಪರರಾದರು । ಅವರ ಭಾಗ್ಯದ ಬಾಗಿಲು ತೆರೆಯಿತು ॥ 122

ಅಲ್ಲಿ ಯಾತ್ರಿಕರ ಗದ್ದಲ ಕಂಡು । ಅವರ ಮನದಲುದಿಸಿತು ಕಲ್ಪನೆಯೊಂದು ।
ಇರಬೇಕು ಇಲ್ಲಿ ತಮ್ಮ ವಾಡೆಯೊಂದು । ಜನರ ವಸತಿಗೆ ಅನುಕೂಲವಾದೀತು ॥ 123

ಗ್ರಾಮದ ಮುಖ್ಯಸ್ಥರನೊಂದುಗೂಡಿಸಿ । ಅಲ್ಲೊಂದು ಸ್ಥಳವ ಸಂಪಾದಿಸಿ ।
ವಾಡೆಯ ಸ್ಥಳವ ನಿಶ್ಚಯಿಸಿ । ಆರಂಭದಲಿ ಬಾಬಾರು ಪ್ರಕಟವಾದಲ್ಲಿ ॥ 124

ಈ ಪವಿತ್ರ ಸ್ಥಳದ ಮಹಿಮಾನ । ಚತುರ್ಥಾಧ್ಯಾದಲಿ ಬಂದಿದೆ ಅದರ ವರ್ಣನ ।
ದ್ವಿರುಕ್ತಿಗಿಲ್ಲ ಕಾರಣ । ಅದಕೆ ಕಥೆಯ ಮುಂದೆ ಸಾಗಿಸುವಾ ॥ 125

ಮೇಘಾನ ದೈವ ಚೆನ್ನಾಗಿತ್ತು । ರಾವ್‌ಬಹದೂರ ಸಾಠೆಯವರ ಭೆಟ್ಟಿಯಾಯಿತು ।
ಆಗಲೇ ಅವಗೆ ಪರಮಾರ್ಥದ ಮಾರ್ಗ ದೊರೆಯಿತು । ಅವರ ಬೆಂಬಲದಿಂದಾಗಿ ॥ 126

ಪರಿಸ್ಥಿತಿಯ ವಶದಿಂದ । ಕರ್ಮಭ್ರಷ್ಟನಾಗಿದ್ದ ।
ಅವನನ್ನು ಗಾಯತ್ರಿಉಪದೇಶದಿಂದ । ಸನ್ಮಾರ್ಗಕ್ಕೆ ಹಚ್ಚಿದರು ॥ 127

ಮೇಘಾ ಸಾಠೆಯವರ ಸೇವೆನಿಂತ । ಪರಸ್ಪರರಲಿ ಪ್ರೀತಿ ಬೆಳೆಯುತ ।
ಸಾಠೆಯವರೆನು ಮೇಘಾ ಗುರುವೆಂದು ಭಾವಿಸುತ । ಅವರ ಲೋಭದಲಿ ತೊಡಗಿದ ॥128

ಒಮ್ಮೆ ಸಹಜ ಮಾತಾಡುತ । ನಿಜ ಗುರುವಿನ ಮಹಾತ್ಮ ವರ್ಣಿಸುತ ।
ಪ್ರೇಮದಿಂದ ತುಂಬಿತು ಸಾಠೆಯವರ ಚಿತ್ತ । ಆದರಿಂದ ಮೇಘಾನ ಕೇಳಿದರು ॥129

ಬಾಬಾರಿಗೆ ಮಾಡಿಸಬೇಕು ಗಂಗೋದಕ ಸ್ನಾನ । ಹೀಗೆ ಬಹಳ ಇಚ್ಛಿಸಿದೆ ನನ್ನ ಮನ ।
ಅದಕಾಗಿ ಶಿರಡಿಗೆ ನಿನ್ನ । ಮುಖ್ಯವಾಗಿ ಕಳಿಸುತಿರುವೆ ॥ 130

ಅಲ್ಲದೇ ಅನನ್ಯ ಸೇವೆ ನಿನ್ನದು । ಅದಕೆ ನನ್ನ ಮನಸಿಗೆ ಅನಿಸುವುದು ।
ಸದ್ಗುರುವಿನೊಡನೆ ಸಂಗಮವಾಗಬೇಕು । ಚರಣದಲಿ ಭಾವ ನಿಲಬೇಕು ॥ 131

ನಿನ್ನ ದೇಹದ ಸಾರ್ಥಕವಾಗುವುದು । ಈ ಜನ್ಮದ ಪರಮ ಕಲ್ಯಾಣವಾಗುವುದು ।
ಹೋಗು, ಹೋಗಿ ಕಾಯಾ - ವಾಚಾ- ಮನದಿಂದಲೂ । ಸದ್ಗುರು ಚರಣದ ಸೇವೆ ಮಾಡುತಿರು ॥132

ಮೇಘಾ ಕೇಳಿದ ಅವರ ಜಾತಿಯನು । ನಿಜದಲಿ ಸಾಠೆಯವರೂ ತಿಳಿಯರದನು ।
ಮಶೀದಿಯಲಿ ವಾಸವೆಂದು ಅವರನು । ಯಾರೋ ಮುಸಲ್ಮಾನರೆಂದರು ॥ 133

ಮುಸಲ್ಮಾನ ಶಬ್ದ ಬೀಳಲು ಕಿವಿಗೆ । ದುಃಶ್ಚಿತ್ತತೆ ಬಂದಿತು ಮೇಘನಿಗೆ ।
ನೀಚನಿರಲಾತರರಾರೂ ಯವನನಿಗಿಂತ ಹೆಚ್ಚಿಗೆ । ಅಂಥವರ ಗುರುತ್ವವೆಂಥದ್ದು ॥134

ಇಲ್ಲೆಂದರೆ ಸಾಠೆ ಸಿಟ್ಟಿಗೇಳಬಹುದು । ಹೌದೆಂದರೆ ದುರ್ಗತಿ ಪ್ರಾಪ್ತವಾಗುವುದು ।
ಏನು ಮಾಡುವುದು ಬುದ್ಧಿಗೆ ಹೊಳೆಯದು । ಚಿಂತೆಯಲ್ಲಾತ ಮುಳುಗಿದ ॥ 135

ಇತ್ತ ಬಾವಿ ಅತ್ತ ಕೆರೆಯೆಂಬಂತೆ । ಡೋಲಾಯಮಾನ ಮನಕೆ ಬಂದಿದೆ ಅಸ್ಥಿರತೆ ।
ಸಾಠೆಯವರ ಒತ್ತಾಯ ಮತ್ತೆ । ಅದರಿಂದ ದರ್ಶನದ ನಿರ್ಧಾರ ಮಾಡಿದ ॥ 136

ಆ ಮೇಲೆ ಮೇಘಾ ಶಿರಡಿಗೆ ಬಂದ । ಮಶೀದಿಯ ಅಂಗಳದಲಿ ನಿಂದ ।
ಮೆಟ್ಟಿಲುಗಳ ಹತ್ತ ತೊಡಗಿದ । ಬಾಬಾರ ಲೀಲೆ ಆರಂಭವಾಯಿತು ॥ 137

ಉಗ್ರ ಸ್ವರೂಪವ ಧರಿಸಿದರು ।ಕೈಯಲ್ಲಿ ಕಲ್ಲು ಎತ್ತಿ ಕೊಂಡು ನುಡಿದರು ।
ಖಬರದಾರ , ನನ್ನ ಕಟ್ಟೆಯ ಮೆಟ್ಟದಿರು । ಯವನನು ಈ ಸ್ಥಾನದಲಿರುವನು ॥ 138

ಉಚ್ಚವರ್ಣದ ಬ್ರಾಹ್ಮಣ ನೀನು । ನೀಚರಲ್ಲಿ ನೀಚ ಯವನನು ನಾನು ।
ಮೈಲಿಗೆಯಾದಿತು ನಿನಗಿನ್ನು । ಹೋಗು ತಿರುಗಿ ಹಿಂದಕೆ ॥ 139

ಸಿಟ್ಟಿಗೆದ್ದಾಗಿನ ಆರೂಪ । ಎರಡನೆಯ ಪ್ರಳಯರುದ್ರನದೇ ಸ್ವರೂಪ ।
ಹುಟ್ಟುವದು ನೋಡುವವ ಹೃದಯದಲಿ ಕಂಪ । ಗಡಗಡನೆ ನಡುಗಿದ ಮೇಘಾ ಆಗ ॥ 140

ಆದರೀ ಕೋಪ ಮೇಲೆ ಮೇಲೆಯದು । ಅಂತರದಿ ದಯೆಯ ನಿರ್ಝರ ಹರಿವುದು ।
ಹೇಗವರಿಗೆ ತಿಳಯುವುದು ನನ್ನ ಮನದಲಿದ್ದುದು । ಎಂದು ಮೇಘಾ ಚಕಿತನಾಗಿ ನಿಂತು ಬಿಟ್ಟ ॥ 141

ಎಲ್ಲಿ ಖೇಡ ಜಿಲ್ಲೆ ಇರುವುದು ದೂರ । ಎಲ್ಲಿಂದೆಲ್ಲಿ ಈ ಅಹಮದ ನಗರ ।
ವಿಕಲ್ಪ ತುಂಬಿದ ನನ್ನ ಅಂತರ । ಆವಿಷ್ಕರಣವಿದು ಆದರದೇ ॥ 142

ಬಾಬಾ ಹೊಡೆಯಲು ಧಾವಿಸುತ । ಮೇಘಾ ಮತ್ತಿಷ್ಟು ಹೆದರುತ ।
ಒಂದೊಂದೇ ಹೆಜ್ಜೆ ಹಿಂದೆ ಸರಿಯುತ । ಮುಂದೆ ಹೋಗಲು ಧೈರ್ಯ ಸಾಲದು ॥ 143

ಹಾಗೇ ಕೆಲ ದಿನ ಅಲ್ಲೇ ಉಳಿದ । ಬಾಬಾರ ರಾಗರಂಗವ ತಿಳಿದ ।
ಸಾಧ್ಯವಿದ್ದ ಸೇವೆ ಮಾಡುತಿದ್ದ । ಆದರೂ ದೃಢ ವಿಶ್ವಾಸ ಉಂಟಾಗಲಿಲ್ಲ ॥ 144

ಅವನು ತಿರುಗಿ ಮನೆಗೆ ಹೋದ । ಜ್ವರದಿಂದ ಬಹಳ ಬಳಲಿದ ।
ಆಗ ಬಾಬಾರ ನೆನಿಸತೊಡಗಿದ । ತಿರುಗಿ ಬಂದ ಶಿರಡಿಗೆ ॥ 145

ಆಗ ಬಂದವನು ಅಲ್ಲಿಯೇ ರಮಿಸಿದ । ಸಾಯಿಯ ಚವಣದಲಿ ಮನವನೊಪ್ಪಿಸಿದ ।
ಸಾಯಿಯ ಅನನ್ಯ ಭಕ್ತನಾದ । ಸಾಯಿಯೇ ದೇವರು ಆಗವನ ಪಾಲಿಗೆ ॥ 146

ಮೇಘಾ ಮೊದಲೆ ಶಂಕರನ ಭಕ್ತ । ಸಾಯಿ ಪದದಲಾಗುವ ಅನುರಕ್ತ ।
ಶಂಕರನೇ ಆದರವನಿಗೆ ಸಾಯಿನಾಥ । ಅವನೇ ಉಮಾನಾಥ ಅವನಿಗೆ ॥ 147

ಮೇಘಾ ಮಾಡುತ್ತಿದ್ದ ಅಹರ್ನಿಶ । ಸಾಯಿ ಶಂಕರನ ನಾಮ ಘೋಷ ।
ಬುದ್ಧಿಯೂ ತದಾಕಾರವಾಯಿತು ಅಶೇಷ । ಚಿತ್ತ ಕಲ್ಮಶವಿರಹಿತವಾಗಿ ॥ 148

ಆದನು ಸಾಯಿಯ ಅನನ್ಯ ಭಕ್ತ ಪ್ರತ್ಯಕ್ಷ ಶಂಕರನೆಂದು ಭಾವಿಸುತ ।
ಶಂಕರ ಶಂಕರನೆಂದು ಮುಖದಿ ಗರ್ಜಿಸುತ । ಅನ್ಯ ದೈವತವನರಿಯನು ॥ 149

ಸಾಯಿಯೇ ಅವನ ದೇವತಾರ್ಚನ । ಸಾಯಿಯೇ ಅವನ ಗಿರಿಜಾರಮಣ ।
ಇದನೇ ದೃಷ್ಟಿಯಲಿ ಇಟ್ಟುಕೊಂಡವನ । ಮನನಿತ್ಯ ಪ್ರಸನ್ನವಿರುತಿತ್ತು ॥ 150

ಬಿಲ್ವದಲ ಪ್ರಿಯ ಶಂಕರ । ಆದರೆ ಶಿರಡಿಯಲ್ಲಿಲ್ಲ ಬಿಲ್ವದ ಮರ ।
ಆದರಿಂದ ಮೇಘಾ ಹರಿದಾರಿ ದೂರ । ಹೋಗಿ ತನ್ನ ಮನ ತೃಪ್ತಿ ಪಡುತಿದ್ದ ॥ 151

ಹರದಾರಿ ದೂರವೆಂದರೇನು । ಬಿಲ್ವಕ್ಕಾಗಿ ದಾಟಬೇಕಾದರೂ ಬೆಟ್ಟವನು ।
ಮಾಡಲು ಪೂಜೆಯ ಪರಿಪೂರ್ಣತೆಯನು । ಮನವ ತೃಪ್ತ ಗೊಳಿಸಲು ॥ 152

ದೂರದಿಂದ ಬಿಲ್ವ ತಂದು । ಪೂಜಾ ಸಾಹಿತ್ಯವನೆಲ್ಲ ಜೋಡಿಸಿಕೊಂಡು ।
ಗ್ರಾಮದೇವತೆ ಅನುಕ್ರಮ ಹಿಡಿದು । ಎಲ್ಲರಿಗೂ ಯಥಾವಿಧಿ ಏರಿಸಬೇಕು ॥ 153

ಆಮೇಲೆ ಹಾಗೇ ಹೋಗಿ ಮಶಿದೀಗೆ । ಪ್ರೇಮದಿಂದ ವಂದಿಸುವನು ಬಾಬಾರ ಗಾದಿಗೆ ।
ಮಾಡಿ ಪಾದಸಂವಾಹನಾದಿಯಾಗೆ । ಪಾದತೀರ್ಥವ ಮೊದಲು ಸೇವಿಸುವನು ॥ 154

ಮೇಘಾನ ಅನ್ಯ ಕಥೆಗಳು । ಆನಂದವಾದೀತು ಶ್ರವಣ ಮಾಡಲು ।
ಆದರವನದು ಗ್ರಾಮದೇವತೆಗಳ ವಿಷಯದೊಳು । ಸಾಯಿಯ ವ್ಯಾಪಕತೆ ಕಂಡು ಬರುವುದು ॥ 155

ಮೇಘಾ ಶಿರಡಿಯಲ್ಲಿರುವವರೆಗೆ । ನಿತ್ಯವೂ ಆರತಿಯ ಮೊದಲಿಗೆ ।
ಪೂಜೆ ಮಾಡುತಿದ್ದಾ ಗ್ರಾಮ ದೇವತೆಗಳಿಗೆ । ಬಳಿಕ ಪೂಜೆಗೆ ಮಶೀದಿಗೆ ಹೋಗುತಿದ್ದ ॥ 156

ಹೀಗಿರಲವನ ನಿತ್ಯಕ್ರಮ । ಒಂದು ದಿನ ತಪ್ಪಿತು ಈ ಉಪಕ್ರಮ ।
ಖಂಡೋಬ ದೇವರ ಪೂಜೆಯ ಅತಿಕ್ರಮ । ಆಯಿತು ಎಷ್ಟೇ ಪರಿಶ್ರಮ ವಹಿಸಿದರೂ ॥ 157

ಪೂಜೆ ಮಾಡಲೆಂದು ಹೋಗಿ । ಬಾಗಿಲು ತೆರೆಯದಿರೆ ಯತ್ನಿಸಲಾಗಿ ।
ಆ ಪೂಜೆ ಉಳಿದು ಹೋಯಿತು ಅದರಿಂದಾಗಿ । ಹಾಗೇಯೇ ಆರತಿ ತೆಗೆದುಕೊಂಡು ಬಂದ ॥ 158

ಆಗ ಬಾಬಾ ನುಡಿದರವನಿಗೆ । ಅಡ್ಡಿ ಬಂದಿತಲ್ಲ ನಿನ್ನ ಪೂಜೆಗೆ ।
ಪೂಜೆ ಮುಟ್ಟಿತು ಎಲ್ಲ ದೇವರಿಗೆ । ಒಬ್ಬ ಮಾತ್ರ ಉಳಿದ ಪೂಜೆ ಇಲ್ಲದೆ ॥ 159

ಬಾ ಹೋಗು ಆ ಪೂಜೆ ಮುಗಿಸಿಕೊಂಡು । ಮೇಘಾ ನುಡಿದ ಬಾಗಿಲು ಮುಚ್ಚಿದೆಂದು ।
ಪ್ರಯತ್ನ ಮಾಡಿದರೂ ತೆರೆಯವಲ್ಲದು । ಅದರಿಂದ ಪೂಜೆಯ ತ್ಯಜಿಸಬೇಕಾಯಿತು ॥160

ಬಾಬಾಎಂದರು ನೀ ಹೋಗಿ ನೋಡು । ಈಗ ಬಾಗಿಲು ತೆರೆದೇ ಇರುವುದು ।
ಮೇಘಾ ಕೂಡಲೇ ನೋಡಿದ ಅಲ್ಲಿ ಬಂದು । ಅವರ ಮಾತಿನ ಅನುಭವ ಬಂದಿತು ॥ 161

ಖಂಡೇರಾಯನ ಪೂಜೆಯಾಯಿತು । ಮೇಘಾನ ಮನದ ಹಳಹಳಿ ತಪ್ಪಿತು ।
ಆಮೇಲೆ ಬಾಬಾ ಮಾಡಿಸಿಕೊಂಡರು । ಮೇಘಾನಿಂದ ಪೂಜೆಯನು ॥। 162

ಬಳಿಕ ಗಂಧ ಪುಷ್ಪಾದಿ ಅಷ್ಟೋಪಚಾರಗಳಿಂದ । ಅತಿ ಆದರದಿಂದ ಪೂಜೆ ಮಾಡಿದ ।
ಯಥಾ ಶಕ್ತಿ ದಕ್ಷಿಣೆ ನೀಡಿದ । ಮಾಲೆ ಹಣ್ಣುಗಳನು ಅರ್ಪಿಸಿದ ॥ 163

ಒಮ್ಮೆ ಮಕರ ಸಂಕ್ರಾತಿ ಯಂದು। ಗೋದಾವರಿಯಿಂದ ನೀರು ತಂದು ।
ಬಾಬಾರಿಗೆ ಅಭ್ಯಂಗ ಸ್ನಾನ ಮಾಡಿಸಬೇಕೆಂದು । ಚಂದನ ಚರ್ಚಿಸಿ ಅಭ್ಯಂಗ ॥ 164

ಬೆನ್ನು ಹತ್ತಿದ ಅಪ್ಪಣೆ ಕೇಳಲು । ಮನ ಬಂದಂತೆ ಮಾಡು ಹೋಗೆನಲು ।
ಮೇಘಾ ಹೊರಟ ನೀರು ತರಲು । ಕೊಡ ತೆಗೆದು ಕೊಂಡು ನದಿಯತ್ತ ॥ 165

ಸೂರ್ಯೋದಯದಕಿಂತ ಮೊದಲೇ । ಬರಿಗಾಲು ಬರಿತಲೆಯಿಂದಲೇ ।
ಬರಿ ಕೊಡವ ಹಿಡಿದು ಕೊಳ್ಳುತಲೇ । ನೀರು ತರಲೆಂದು ಗೋಮತಿಗೆ ॥ 166

ಬರುಹೋಗಲು ಎಂಟು ಹರದಾರಿ ಇದ್ದು । ಅಷ್ಟೊಂದು ದಾರಿ ಕ್ರಮಿಸ ಬೇಕಾಗುವದು ।
ಅದಕೆಷ್ಟು ಕಷ್ಟವಾಗುವುದು । ಎಂಬ ಕಲ್ಪನೆ ಮೇಘಾಗೆ ಬರಲೊಲ್ಲದು ॥ 167

ಈ ಚಿಂತೆ ಇಲ್ಲ ಮೇಘಾನಿಗೆ । ಹೊರಟವ ಅಪ್ಪಣೆ ದೊರೆತಾಗ್ಯೆ ।
ದೃಢವಾದ ನಿಶ್ಚಯವಿರುವಾಗ್ಯೆ । ಜೊತೆಗೆ ಕೆಲಸದ ಹುಮ್ಮಸು ಬೇರೆ ॥ 168

ಗಂಗೋದಕದಿಂದ ಸಾಯಿಗೆ ಸ್ನಾನವನು । ಮಾಡಿಸಬೇಕೆಂದು ಹಿಡಿದು ಇಚ್ಛೆಯನು ।
ಎಲ್ಲಿಯ ದಣಿವು ಕಷ್ಟವೇನು । ಶ್ರದ್ಧೆಯೊಂದೇ ಪ್ರಮಾಣವಲ್ಲಿ ॥ 169

ಈ ರೀತಿಯಾಗಿ ನೀರು ತಂದ । ತಾಮ್ರದ ಪಾತ್ರೆಯಲ್ಲಿ ಸುರುವಿದ ।
ಸ್ನಾನಕೇಳಿರೆಂದು ಒತ್ತಾಯಿಸತೊಡಗಿದ । ಆದರೆ ಬಾಬಾ ಒಪ್ಪಲೊಲ್ಲರು ॥ 170

ಮಧ್ಯಾಹ್ನ ದ ಆರತಿ ಮುಗಿದು । ಜನರೆಲ್ಲ ಮನೆಗಳಿಗೆ ತಿರುಗಿ ಹೋಗಿದ್ದು ।
ಸ್ನಾನದ ಎಲ್ಲ ಸಿದ್ಧತೆ ಮುಗಿದು । ಮಧ್ಯಾಹ್ನ ಮೀರಿತೆಂದ ಮೇಘಾ ॥ 171

ಮೇಘಾನ ಅತ್ಯಾಗ್ರಹವ ಕಂಡು । ಮೇಘಾನ ಕೈ ತಮ್ಮ ಕೈಯಲ್ಲಿ ತೆಗೆದುಕೊಂಡು ।
ಅವನಿಗೆ ಈ ರೀತಿ ನುಡಿದದ್ದು । ಆ ಲೀಲಾವಿಗ್ರಹಿ ಸಾಯಿನಾಥ ॥ 172

ಬೇಡಪ್ಪ ನನಗೆ ಗಂಗಾಸ್ನಾನ । ಏನಿದು ನಿನ್ನ ಹುಚ್ಚುತನ ।
ಏತಕ್ಕೆ ಈ ಗಂಗಾಜೀವನ । ಈ ಫಕೀರನಿಗಿದರಿಂದೇನು ॥ 173

ಆದರೂ ಮೇಘಾ ಬಿಡನು । ಶಂಕರನೆಂದೇ ಬಾಬಾರ ತಿಳಿದವನು ।
ಗಂಗಾಸ್ನಾನದಿಂದ ಶಂಕರ ಸಂತುಷ್ಟನಾಗುವನು । ಇದೊಂದೇ ಗೊತ್ತು ಅವನಿಗೆ ॥174

ಎಂದ 'ಬಾಬಾ ಇದೊಂದೇ ದಿನ । ಹಬ್ಬವಿರುವುದು ಮಕರ ಸಂಕ್ರಮಣ ।
ಗಂಗೋದಕದಿಂದ ಶಂಕರನಿಗೆ ಸ್ನಪಿನ । ಮಾಡಿಸಲು ಸುಪ್ರಸನ್ನನಾಗುವನವ ॥ 175

ಬಳಿಕ ಅವನ ಪ್ರೀತಿಯ ಕಂಡು । ಮತ್ತವನ ನೇಮವು ನಿಶ್ಚಲವಿರುವುದು ।
ಎಂದರು ಮಾಡು ನಿನ್ನಚ್ಛೆ ಎಂತಿರುವುದು । ಶುದ್ಧಾಂತರ್ಯಾಮ ಮೇಘಾನದು ॥176

ಹೀಗೆಂದು ಅವರೆದ್ದರು । ಸ್ನಾನಕಿಟ್ಟ ಮಣೆಯ ಮೇಲೆ ಕುಳಿತರು ।
ಮಸ್ತಕವ ಮೇಘಾನೆದುರು ಬಾಗಿಸಿದರು । ಎಂದರು ಒಂದಿಷ್ಟು ನೀರು ಹಾಕಯ್ಯ ॥ 177

ಎಲ್ಲ ಗಾತ್ರಗಳಲ್ಲಿ ಶಿರವೇ ಪ್ರಧಾನ । ಅದರ ಮೇಲೆ ಮಾಡಿದರೆ ಒಂದಿಷ್ಟು ಜಲ ಸಿಂಚನ ।
ಮಾಡಿದಂತಾಗುವುದು ಪೂರ್ಣಸ್ನಾನ । ಇದಿಷ್ಟನ್ನಾದರೂ ಕೇಳಪ್ಪಾ ॥ 178

ಆಗಲೆಂದು ಕಲಶವೆತ್ತಿದ । ಶಿರದಲಿ ಸುರಿವಾಗ ಪ್ರೇಮದಿಂದ ತುಂಬಿದ ।
ಹರಗಂಗೆ ಎನ್ನುತ ಕಲಶ ಬರಿದು ಮಾಡಿದ । ಎಲ್ಲ ಜಲಸುರಿದ ಮೈಮೇಲೆ ॥ 179

ಮೇಘಾನಿಗೆ ಅತ್ಯಂತ ಆನಂದವಾಯಿತು । ಶಂಕರನಿಗೆ ಸ್ವಇಚ್ಛೆ ಸ್ನಾನ ವಾಯಿತು ।
ಬರಿದಾದ ಕೊಡವನು ಕೆಳಗಿಟ್ಟು । ನೋಡಿದಾಗೇನಾಶ್ಚರ್ಯ ॥ 180

ಸರ್ವಾಂಗದ ಮೇಲೆ ಸುರಿದಿದ್ದರೂ ನೀರ । ಒದ್ದೆಯಾಗಿದೆ ತಲೆಯೊಂದೆ ಮಾತ್ರ ।
ಒಣದಾಗಿದೆ ಅವಯವಗಳೆಲ್ಲ ಇತರ । ಬಟ್ಟೆಯ ಮೇಲೂ ಒಂದು ಹನಿ ನೀರಿಲ್ಲ ॥ 181

ಮೇಘಾ ಆದನು ಗಲಿತಾಭಿಮಾನ । ನೋಡುತಿದ್ದವರೆಲ್ಲ ವಿಸ್ಮಯಾಪನ್ನ ।
ತಾವು ಹೀಗೆ ಭಕ್ತೇಚ್ಛೆಗಳನ । ಪೂರೈಸುತಿದ್ದರು ಶ್ರೀ ಸಾಯಿ ॥ 182

ನಿನ್ನ ಮನದಲಿದೆ ಸ್ನಾನ ಮಾಡಿಸುವುದು । ಆಗಲಿ ನಿನ್ನಿಚ್ಛೆ ತಿಳಿದಂತೆ ಮಾಡು ।
ಅದರಲ್ಲಿಯೂ ನನ್ನಂತರದ ಗುರುತೊಂದು । ಸಹಜವೇ ನಿನಗೆ ತಿಳಿಯುವದು ॥ 183

ಇದೇ ಸಾಯಿ ಭಕ್ತಿಯ ಮರ್ಮ । ಸುದೈವದಿಂದಾಗಬೇಕು ಸಮಾಗಮ ।
ಆಮೇಲವನಿಗಿಲ್ಲ ದುರ್ಗಮ । ಸುಗಮವಾಗುವುದೆಲ್ಲ ಕ್ರಮಕ್ರಮವಾಗಿ ॥ 184

ಕೊಡುತೇಳುತ ಮಾತನಾಡುತ । ಬೆಳಗುಬೈಗಿನಲಿ ಅತ್ತಿತ್ತ ಒಡಾಡುತ ।
ಶ್ರದ್ಧೆ ಧೈರ್ಯಗಳಿಂದಿರಲು ಭಕ್ತ । ಈಪ್ಸಿತಾರ್ಥವ ಸಂಪಾದಿಸುವ ॥ 185

ಹೀಗೆ ಏನಾದರೊಂದು ಗುರುತ । ಪ್ರತ್ಯಕ್ಷ ವ್ಯವಹಾರದಲಿ ತೋರಿಸುತ ।
ಕ್ರಮಾನುಸಾರವಾಗಿ ರುಚಿ ಹುಟ್ಟಿಸಿತು । ಪರಮಾರ್ಥಆಕಲನ ಮಾಡಿಸುವ ॥ 186

ಮೇಘಾನ ಇನ್ನೋಂದು ಕಥೆಯನು ಹೀಗೆ । ಕೇಳಿದರೆ ಸಂತೊಷ ಶ್ರೋತೃಗಳಿಗೆ ।
ಸಾಯಿಯ ಭಕ್ತ ಪ್ರೇಮವ ನೋಡಿದಾಗ್ಯೆ । ಮನಕಾನಂದವಾಯಿತು ॥ 187

ಬಾಬಾರ ಒಂದು ದೊಡ್ಡ ಭಾವಚಿತ್ರವನು । ನಾನಾ ಹೊಸದು ತಂದು ಕೊಟ್ಟಿದನು ।
ಮೇಘಾ ವಾಡೆಯಲ್ಲಿಟ್ಟು ಅದನೂ । ಭಕ್ತಿಯಿಂದ ಪೂಜಿಸುತಿದ್ದ ॥ 188

ಮಶೀದಿಯಲಿ ಪ್ರತ್ಯಕ್ಷ ಮೂರ್ತಿ । ವಾಡೆಯಲದರ ಪೂರ್ಣ ಪ್ರತಿಕೃತಿ ।
ಎರಡೂ ಕಡೆ ನಡೆಯುತಿತ್ತು ಪೂಜೆ ಆರತಿ । ದಿನರಾತ್ರಿಗಳೆರಡೂ ಸಮಯದಲಿ ॥ 189

ಹೀಗೆ ಸೇವೆ ನಡೆಯುತಿದ್ದಾಗ । ಹನ್ನೆರಡು ತಿಂಗಳುಗಳು ಕಳೆದಾಗ ।
ಮೇಘಾ ಬೆಳಗಿನ ಜಾವದಲಿ ಎಚ್ಚರಿದ್ದಾಗ । ದೃಷ್ಟಾಂತವನೊಂದು ಕಂಡನು ॥ 190

ಮೇಘಾ ಹಾಸಿಗೆಯಲ್ಲಿದ್ದರೂ । ಅವನು ಕಣ್ಣು ಮುಚ್ಚಿದ್ದರೂ ।
ಅಂತರದಲ್ಲಿದ್ದು ಪೂರ್ಣ ಎಚ್ಚರು । ಬಾಬಾರ ಸ್ವಪ್ನಾಕೃತಿಯ ಕಂಡನು ॥ 191

ಬಾಬಾ ತಿಳಿದು ಅವನು ಎಚ್ಚರಿರುವದನು । ಹಾಸಿಗೆಯ ಮೇಲೆ ಚೆಲ್ಲಿ ಅಕ್ಕಿ ಕಾಳುಗಳನ್ನು ।
ಎಂದರು 'ಮೇಘಾ ಬರೆ ತ್ರಿಶೂಲವನು' । ಮತ್ತೆ ಗುಪ್ತರಾದರಲ್ಲಿಯೇ ॥ 192

ಬಾಬಾರ ಈ ಶಬ್ದಗಳನಾಲಿಸಲು । ಸಂತಸದಿಂದ ಕಣ್ತೆರೆದು ನೋಡಲು ।
ಬಾಬಾ ಅಂತರ್ಧಾನರಾದುದ ಕಾಣಲು । ಬಹು ವಿಸ್ಮಯವಾಯಿತು ಮೇಘಾಗೆ ॥ 193

ಮೇಘಾ ನೋಡಿದ ಸುತ್ತಲೂ । ಹಾಸಿಗೆಯಲಿ ಬಿದ್ದಿವೆ ಅಕ್ಷತೆಗಳು ।
ಮೊದಲಿನಂತೆ ಮುಚ್ಚಿಯೇ ಇವೆ ಬಾಗಿಲು । ಇದೊಂದು ಒಗಟಾಯಿತವನಿಗೆ ॥ 194

ಕೊಡಲೇ ಮಶೀದಿಗೆ ಹೋದನು । ಬಾಬಾರ ದರ್ಶನ ಪಡೆದನು ।
ತ್ರಿಶೂಲದ ಕಥೆ ಹೇಳಿದನು । ತ್ರಿಶೂಲ ಬರೆಯಲಪ್ಪಣೆ ಬೇಡಿದನು ॥ 195

ದೃಷ್ಟಾಂತವ ಕೇಳಿ ಮೇಘಾ ಹೇಳಿದ್ದು । ಬಾಬಾ ಎಂದರು ದೃಷ್ಟಾಂತವೆಂಥದ್ದು ।
ಕೇಳಿಸಲಿಲ್ಲವೆ ನಾ ಹೇಳಿದದು । ತ್ರಿಶೂಲವ ತೆಗೆ ಎಂದೆ ॥ 196

"ದೃಷ್ಟಾಂತವೆಂದು ನನ್ನ ನುಡಿ । ತೂಗಿ ನೋಡಲು ಹೋಗ ಬೇಡಿ ।
ಆಳವಾದ ಅರ್ಥವಿರುವ ನನ್ನ ನುಡಿ । ಒಂದಕ್ಷರವು ವ್ಯರ್ಥವಿರುವುದಿಲ್ಲ ॥ 197

ಮೇಘಾ ಎಂದ ತಾವು ಎಚ್ಚರಿಸಿದೆಂದು । ಮೊದಲು ನನಗೇ ಹಾಗೇ ಎನಿಸಿದ್ದು ।
ಆದರೆ ಇತ್ತು ಬಾಗಿಲು ಮುಚ್ಚಿದ್ದು । ಆದರಿಂದ ಹಾಗೆ ತಿಳಿದುಕೊಂಡೆ ॥ 198

ಅದಕೆ ಬಾಬಾರ ಉತ್ತರವಿದು । "ನನ್ನ ಪ್ರವೇಶಕೆ ಬಾಗಿಲು ಬೇಕಾಗದು ।
ನನಗೆ ಆಕಾರ ವಿಸ್ತಾರ ಒಂದೂ ಇರದು । ಯಾವಾಗಲೂ ಎಲ್ಲೆಡೆ ಇರುವೆ ॥ 199

ಭಾರವ ಹಾಕಿ ನನ್ನ ಮೇಲೆ । ನಂಬಿಕೆ ಇಟ್ಟವ ನನ್ನಲ್ಲೇ ।
ಅವನೆಲ್ಲ ಶರೀರ ವ್ಯಾಪಾರಗಳೇ । ನನ್ನಿಂದಲೇ ನಡೆವವು ಸೂತ್ರಧಾರನಾ" ॥ 200

ಮುಂದಿನ ವಿಚಿತ್ರ ಲೀಲೆಯನ । ಆ ತ್ರಿಶೂಲದ ಪ್ರಯೋಜನ ।
ಶ್ರೋತೃಗಳೇ ಕೇಳಿರಿ ಸಾವಧಾನ । ಅನುಸಂಧಾನ ಪ್ರತ್ಯಯಕೆ ಬರುವುದು ॥ 201

ಇತ್ತ ಮೇಘಾ ತಿರುಗಿ ಬಂದ । ತ್ರಿಶೂಲ ಬರೆಯಲಾರಂಭಿಸಿದ ।
ರಕ್ತ ವರ್ಣದಲಿ ತ್ರಿಶೂಲ ಬರೆದ । ಭಾವಚಿತ್ರದ ಬದಿಗೆ ಗೋಡೆಯ ಮೇಲೆ ॥202

ಮರುದಿನವೇ ಮಣೆಯಿಂದ । ಮಶೀದಿಗೆ ರಾಮದಾಸ ಭಕ್ತ ಬಂದ ।
ಪ್ರೇಮದಿ ಬಾಬಾರ ವಂದಿಸಿದ । ಶಂಕರನ ಲಿಂಗವನರ್ಪಿಸಿದ ॥ 203

ಅಷ್ಟರಲ್ಲಿ ಅಲ್ಲಿಗೆ ಮೇಘಾ ಬಂದ । ಬಾಬಾರಿಗೆ ಸಾಷ್ಟಾಂಗ ಪ್ರಣಾಮ ಮಾಡಿದ ।
ಬಾಬಾ ಎಂದರು , ಇದೋ ಈ ಶಂಕರ ಬಂದ । ನೀನನ್ನು ಜೋಪಾನ ಮಾಡಿವನನು ॥ 204

ಹೀಗೆ ಲಿಂಗವು ಪ್ರಾಪ್ತಿವಾಗಿ । ತ್ರಿಶೂಲ ದೃಷ್ಟಾಂತದ ನಂತರ ಅಕಸ್ಮಾತಾಗಿ ।
ಮೇಘಾ ಲಿಂಗವ ನೋಡತೊಡಗಿದ ತಟಸ್ಥನಾಗಿ । ಪ್ರೇಮದಿ ಸದ್ಗದಿತನಾದನಾಗ ॥ 105

ಕಾಕಾ ಸಾಹೇಬ ದೀಕ್ಷಿತರಿಗೆ ಬಂದ । ನೋಡಿರಿ ಲಿಂಗದ ಅನುಭವ ಇನ್ನೊಂದ ।
ಆದರದಿ ಶ್ರೋತೃಗಳು ಕೇಳಲಿದ । ನಂಬುಗೆ ಸಾಯಿ ಪದದಲುಂಟಾಗುವುದು ॥206

ಇತ್ತ ಲಿಂಗವನು ತೆಗೆದುಕೊಂಡ । ಮೇಘಾ ಮಶೀದಿಯತ್ತ ನಡೆದ ।
ದೀಕ್ಷಿತರು ವಾಡೆಯಲಿ ಸ್ನಾನ ಮುಗಿಸಿದ್ದು । ನಾಮಸ್ಮರಣೆಯಲಿ ನಿಮಗ್ನರಾಗಿ ॥ 207

ಒಗೆದು ಬಟ್ಟೆಯಲಿ ಮೈ ಒರೆಸಿ ಕೊಂಡು । ಕಲ್ಲ ಮೇಲೆ ನಿಂತು ಕೊಂಡು ।
ತಲೆಯ ಮೇಲೆ ಪಂಚೆ ಹಾಕಿಕೊಂಡು । ಸಾಯಿಯ ನಾಮಸ್ಮರಣೆ ಮಾಡುತಿದ್ದರು ॥ 208

ನಿತ್ಯನೇಮಾನುಸಾರವಾಗೆ । ಮುಚ್ಚಿಕೊಂಡು ಶಿರೋಭಾಗ ।
ನಾಮಸ್ಮರಣೆ ಮಾಡುತ್ತಿದ್ದಾಗ । ಲಿಂಗದರ್ಶನವಾಯಿತು ॥ 209

ಮಾಡುತ್ತಿರುವಾಗ ನಾಮಸ್ಮರಣ । ಇಂದೇಕಾಗಬೇಕು ಲಿಂಗದರ್ಶನ ।
ದೀಕ್ಷಿತರಾಗಿದ್ದಾಗ ವಿಸ್ಮಯಾಪನ್ನ । ಎದುರು ಸುಪ್ರಸನ್ನ ಮೇಘಾ ನಿಂತಿದ್ದ ॥ 210

ಮೇಘಾ ಎಂದ 'ಕಾಕಾ ನೋಡಿರಿದ । ಬಾಬಾರು ಕೊಟ್ಟ ಲಿಂಗವಿದೆ' ।
ಆಗ ಕಾಕಾ ಸವಿಸ್ಮಯ ಹರುಷದಿಂದ । ಲಿಂಗ ವಿಷೇಶವನು ನೋಡಿದರು ॥ 211

ರೂಪರೇಖೆ ಆಕಾರ ಲಕ್ಷಣಗಳಲಿ । ಒಂದು ಕ್ಷಣದ ಹಿಂದ ಕಂಡದ್ದು ಧ್ಯಾನದಲಿ ।
ಅದೇ ಆ ಲಿಂಗವ ನೋಡಿ ತತ್‌ಕ್ಷಣದಲಿ । ದೀಕ್ಷಿತರು ಮನದಿ ಸುಖಿಸಿದರು ॥ 212

ಇರಲಿ ಆ ಮೇಲೆ ಮೇಘಾನ । ತ್ರಿಶೂಲ ಲೇಖನವಾಯಿತು ಪೂರ್ಣ ।
ಭಾವಚಿತ್ರದ ಬದಿಗೇ ಲಿಂಗಸ್ಥಾಪನ । ಸಾಯಿಯವರು ಮಾಡಿಸಿದರವನಿಂದ ॥ 213

ಮೇಘಾಗೆ ಪ್ರೀಯ ಶಂಕರ ಪೂಜನ । ಮಾಡಿ ಶಂಕರಲಿಂಗ ಪ್ರದಾನ ।
ಮಾಡಿದರು ತದ್ಭಕ್ತಿಯ ದೃಡೀಕರಣ । ವಿಚಿತ್ರ ವಿಧಾನ ಸಾಯಿಯದು ॥ 214

ಇಂಥ ಕಥೆಯೇನು ಒಂದು । ಅಪರಿಮಿತ ಕತೆಗಳ ಹೇಳಬಹುದು ।
ಆದರೆ ಗ್ರಂಥ ವಿಸ್ತಾರಗೊಳ್ಳುವದು ।ಅದಕೆ ಶ್ರೋತೃಗಳು ಕ್ಷಮಿಸಬೇಕು ॥ 215


ಆದರೂ ತಿಳಿದು ಶ್ರವಣೋತ್ಸ ಕಥೆಯನು । ಹೇಳುವೆನು ಮತ್ತೊಂದು ಕಥೆಯನು ।
ಮುಂದಿನಧ್ಯಾದಲಿ ಸಾಯಿಯ ಕೌತುಕವನು । ಇದಕಿಂತ ಅಲೌಕಿಕವಾದುದನು ॥ 216

ಹೇಮಾಡನಾಗಿ ಸಾಯಿಗೆ ಶರಣ । ಮಾಡಿಸುವ ಸಾಯಿಯ ಚರಿತ್ರ ಶ್ರವಣ ।
ಆದರಿಂದಾಗುವದು ಭವಭಯ ಹರಣ । ದುರಿತ ನಿವಾರಣ ಎಲ್ಲರದೂ ॥ 216

ಭಕ್ತ ಹೇಮಾಂಡಪಂತ ವಿರಚಿತೆ । ಯಥಾಮತಿಲಲಿತಾನುವಾದಿತೇ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ದೃಷ್ಟಾಂತ ಕಥನನಾಮಂಅಷ್ಟವಿಂಶತಿತಮೋಧ್ಯಾಯಃ
ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥರ್ಪಣಮಸ್ತು ॥

॥ ಶುಭಂ ಭವತು ॥



389·1

# ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಇಪ್ಪತ್ತೊಂಭತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನಧ್ಯಾಯದಲಾಯಿತು ಕಥನ । ಅದಕಿಂತ ಈ ಅಧ್ಯಾಯಶ್ರವಣ ।
ಮಾಡಿಸುವೆ ಶ್ರೀಯ ಅತರ್ಕ್ಯ ಮಹಿಮೆಯನ । ಕಥಾನು ಸಂಧಾನ ಒಂದೇ ಇದೆ ॥ 1

ಬಾಬಾರ ಅಗಾಧ ಲೀಲೆಗಳ ಕೇಳಿ । ಇಸವಿ ಸನ ಹತ್ತೊಂಬತ್ತು ನೂರ ಹದಿನಾರದಲಿ ।
ಬಂದಿತೊಂದು ಭಜನ ಮಂಡಳಿ । ಶಿರಡಿಗೆ ದರ್ಶನಾರ್ಥವಾಗಿ ॥ 2

ಪ್ರವಾಸಿಗರು ದೂರದ ಈ ಜನ । ಮದ್ರದೇಶದಲಿ ಕೇಳಿದರು ಕೀರ್ತಿಯನ ।
ಹೊರಟ್ಟಿದ್ದರು ಮಾಡಲು ಕಾಶಿಯಾತ್ರೆಯನ । ದಾರಿಯಲಿ ಶಿರಡಿಯಲಿ ಇಳಿದರು ॥ 3

ಸಾಯಿಬಾಬಾ ಮಹಾಸಂತ । ಧೀರ ಉದಾರ ಮತ್ತು ದಾಂತ ।
ಯಾತ್ರಿಕರಿಗೆ ಆ ಕೃಪಾವಂತ । ಹಣವ ಬಹಳ ಹಂಚುವನೆಂದು ॥ 4

ಆಣೆ ಎರಡಾಣೆಗಳೆಂದರೆ ಕೈಯ ಕಸದಂತೆ । ನಾಲ್ಕಣೆ ಎಂಟಾಣೆಗಳ ಮಳೆಯನೇ ಕರೆಯುತ ।
ರೂಪಾಯಿ ಹತ್ತು ಕೆಲವರಿಗೆ ಇಪ್ಪತ್ತು । ಯಾರು ಯಾರಿಗೆ ಐವತ್ತನ್ನೂ ಈಯುತ ॥ 5

ಇದೇನು ಹಬ್ಬಹರಿದಿನಗಳೇ । ಕಾರ್ಯವಿಶೇಷದಲಿ ಇಲ್ಲವೇ ಪರ್ವಕಾಲದಲೇ ।
ಪ್ರತಿ ದಿವಸ ನಿಶ್ಚಿತ ಪ್ರಮಾಣದಲೇ । ಸಂತೋಷದಿಂದ ಅರ್ಪಿಸುತ್ತಿದ್ದರು ॥ 6

ಹಬ್ಬ ಬಂದಾಗ ನರ್ತಕರು ಕುಣಿವರು । ಯುವಕರು ಹಾಡುವರು ಪರಾಕುಗಳ ಹೇಳುವರು ।
ಆಟಗಾರರು ಬಂದು ಮುಜರೆ ಮಾಡುವರು । ಹರಿಭಕ್ತರು ಭಜನೆಯಲಿ ರಂಜಿಸುವರು ॥7

ಹೀಗೆ ಮಹಾರಾಜರ ಉದಾರ ವೃತ್ತಿ । ದಾನ ಧರ್ಮಗಳಲಿ ಮುಂದಾದ ಖ್ಯಾತಿ ।
ಕರ್ಣೋಪಕರ್ಣದಲಿ ಕೇಳ್ಯವರ ಕೀರ್ತಿ। ದರ್ಶನವನಿಚ್ಛಿಸುವರನೇಕರು ॥ 8

ಒಮ್ಮೊಮ್ಮೆ ಬಂದರೆ ಬಾಬಾರ ಮನಸಿಗೆ । ದುಡ್ಡು ಹಂಚುವರು ಪಾಂಥಸ್ಥರಿಗೆ ।
ದೀನ ದುರ್ಬಲರ ಚಿಂತೆಯೂ ಅವರಿಗೆ । ಕೃಪಾಮೂರ್ತಿ ಸಾಯಿನಾಥರಿಗೆ ॥ 9

ಒಬ್ಬ ಪುರುಷ ಸ್ತ್ರೀಯರು ಮೂವರು । ಹೀಗೆ ಗುಂಪಿನಲಿ ನಾಲ್ವರು ಅವರು ।
ಮಗಳು , ನಾದಿನಿ, ಹೆಂಡತಿ ಮತ್ತುತಾನಿವರು । ಸಂತದರ್ಶನೇಚ್ಛುಗಳಾಗಿದ್ದರು ॥ 10

ಸಾಯಿಯದಾಯಿತು ದರ್ಶನ । ಅದರಿಂದರವರಿಗೆ ಸಮಾಧಾನ ।
ಸಾಯಿಯ ಹತ್ತಿರ ಅನುದಿನ । ನೇಮದಿ ಭಜನೆ ಮಾಡುತಿದ್ದರು ॥ 11

ರಾಮದಾಸೀ ಸಾಂಪ್ರದಾಯದ । ಭಜನೆ ಮಾಡುತಿದ್ದರು ಸಮಾಧಾನದಿಂದ ।
ಬಾಬಾ ಅರ್ಪಿಸುತಿದ್ದರು ಉಲ್ಲಾಸದಿ । ರೂಪಾಯಿ ಎಂಟಾಣೆಗಳನವರಿಗೆ ॥ 12

ಒಮ್ಮೊಮ್ಮೆ ಸಿಹಿ ತಿಂಡಿ ಕೊಡುವರು । ಒಮ್ಮೊಮ್ಮೆ ಬರೀಗೈಲಿ ಕಳುಹಿಸುವರು ।
ಯಾವಾಗಲೂ ಬಾಬಾ ಹೀಗೆ ಮಾಡುವರು । ಆದರೂ ನಿಶ್ಚಿತವಾಗಿತಿರಲಿಲ್ಲ ಏನೂ ॥ 13

ಸತ್ಯವೇ ಇತ್ತು ಅವರು ದುಡ್ಡು ಹಂಚುವದು । ಇದರಲ್ಲಿ ಇರಲಿಲ್ಲವೇನೂ ಅಸತ್ಯವೆಂಬುದು ।
ಆದರೆ ಸಿಗುತಿರಲಿಲ್ಲ ಎಲ್ಲರಿಗೂ ಅದು । ಬಾಬಾರ ಮನವರಾರು ಬಲ್ಲರು ॥ 14

ಫಕೀರ ಮೈಗಳ್ಳರು ಭಿಕ್ಷುಕರು । ನಿತ್ಯವೂ ಬಾಬಾರ ಬಾಗಿಲಿಗೆ ಬರುವರು ।
ಬಾಬಾ ಬಹಳ ದಯಾಳುಗಳಾಗಿದ್ದರೂ । ಎಲ್ಲರಿಗೂ ದಾನ ಮಾಡುತಿರಲಿಲ್ಲ ॥ 15

ಯಾರ ಲಾಭದ ಕಾಲ ಒದಗಿರುತಿತ್ತು । ಅವರಿಗೇ ಈ ಸುಖ ಲಭಿಸುತಿತ್ತು ।
ಸಂತಹಸ್ತ ಸ್ಪರ್ಶವಾದ ಕವಡಿಯಾಯಿತು । ಲಭಿಸಿದರೆ ಭಾಗ್ಯವೇ ಅವರದು ತೆರೆದಂತೆ ॥ 16

ಅದೇ ಅರ್ಥದ ಕಥೆಯೊಂದು । ಕೇಳಲು ಶ್ರೋತೃಗಳಿಗಾಗುವುದು ಆನಂದ ।
ಅವರ ಮುಂದಿಟ್ಟು ಇದನೊಂದ । ಮತ್ತೆ ಮುಂದೆ ಸಾಗುವ ॥ 17

ಪ್ರಾತಃ ಕಾಲದ ತಿಂಡಿಗೆ । ಬಾಬಾ ಕುಳಿತುಕೊಳ್ಳುವರು ಕಂಬದ ಬದಿಗೆ ।
ಧುನಿಯ ಹತ್ತಿರ ಮಶೀದಿಯೊಳಗೆ । ಬಾಲೆ ಅಮನಿ ಬರುತಿದ್ದಾಳಾಗ ॥ 18

ಬರೀ ಮೈಯ್ಯ ಹುಡುಗಿ ಮೂರು ವರ್ಷದ್ದು । ಕೈಯಲ್ಲಿ ತಗಡಿನ ಡಬ್ಬಿ ತೆರೆದದ್ದು ।
ತಾಯಿ ಜಮನಿ ಜೊತೆಗೂಡಿಕೊಂಡು । ಆ ಸಮಯ ಸಾಧಿಸಿ ಬರುವರು ॥ 19

ಅಮನಿ ತೊಡೆಯ ಮೇಲೆ ಕುಳಿತು । ಬಾಬಾರ ಕೈಯಲ್ಲಿ ಡಬ್ಬಿಯನಿಟ್ಟು ।
'ಬಾಬಾ ರೂಪಾಯಿ ರೂಪಾಯಿ' ಎನುತಿತ್ತು । ಬಾಬಾರ ಕೈ ಹಿಡಿದು ಕೊಂಡು ॥ 20

ಬಾಬಾರಿಗೆ ಮಕ್ಕಳ ಹುಚ್ಚು ಬಲು । ಮಗೂವೂ ಮುದ್ದಾಗಿತ್ತು ನೋಡಲು ।
ಮುದ್ದುಕೊಟ್ಟು ತಲೆನೇವರಿಸಲು । ಅದನೆತ್ತಿ ಅಪ್ಪಿಕೊಳ್ಳುತಿದ್ದರು ॥ 21

ಬಾಬಾ ಅಪ್ಪಿಕೊಳಬೇಕದದನು ಎದೆಗೆ । ಅಮನಿಯ ಚಿತ್ತವೆಲ್ಲ ರೂಪಾಯಿಕಡೆಗೆ ।
'ಬಾಬಾ ರೂಪಾಯಿ ಕೊಡಿರಲ್ಲರಿ ನನಗೆ' । ಜೇಬಿನೆಡೆಗೆ ಲಕ್ಷವಿಟ್ಟು ಕೊಂಡು ॥ 22

ಅಮನಿಯಂತೂ ಮಗುವಾಯಿತು । ಆದರೆ ದೊಡ್ಡವರದು ಇದೇ ಗತ್ತು ।
ಸ್ವಾರ್ಥಕ್ಕಾಗಿಯೇ ಎಲ್ಲ ಓಡಾಟವಿತ್ತು । ಪರಮಾರ್ಥ ಬಯಸುವವ ಅಪರೂಪಕೊಬ್ಬ ॥ 23

ಹುಡುಗಿ ಕುಳಿತುಕೊಳ್ಳುವಳು ತೊಡೆಯ ಮೇಗೆ । ತಾಯಿ ದೂರ ಕಟಕಟೆಯ ಹೊರಗೆ ।
ಅಲುಗಾಡದಿರು ಅವರು ಕೊಡುವವರೆಗೆ । ದೂರದಿಂದ ಮಗುವಿಗೆ ಸನ್ನೆ ಎಂದು ಮಾಡುವಳು ॥ 24

"ನಾನೇನಾಗಬೇಕು ನಿಮ್ಮಪ್ಪನಿಗೆ । ಎದ್ದರೆ ಬಿದ್ದರೆ ಬೀಳುವಿರಿ ಬೆನ್ನಿಗೆ ।
ನಿರುಪಯೋಗಿಗಳಿರುವರು ಪುಕ್ಕಟೆ ತಿನಿಸಿಗೆ" । ಬಾಬಾ ಸಿಟ್ಟಿನಿಂದೆನಬೇಕು ॥ 25

ಆದರೆ ಈ ಸಿಟ್ಟು ತೋರಿಕೆಯೆದು । ಹೃದಯವೆಲ್ಲ ಪ್ರೀತಿಯಿಂದ ತುಂಬಿರುವದು ।
ರೂಪಾಯಿಯ ತೆಗೆಯಲೆಂದು । ಜೇಬಿಗೆ ಕೈ ಹಾಕುವುದು ॥ 26

ಡಬ್ಬಿಯಲಿ ಹಾಗೆ ಆ ದುಡ್ಡು । ಬಿದ್ದಾಗ ಅದರ ಮುಚ್ಚಳ ಮುಚ್ಚುವುದು ।
ಕೂಡಲೇ ಆ ಡಬ್ಬಿ ಹಿಡಿದುಕೊಂಡು । ಮನೆಯತ್ತ ಓಟ ಕಿತ್ತುವಳು ॥ 27

ಇದು ನಡೆಯುವುದು ತಿಂಡಿಯ ಸಮಯಕೆ ಬೆಳಿಗೆ । ಅಂತೆಯೇ ಮತ್ತೆ ಬಾಬಾ ಹೊರಟಾಗ ಲೇಂಡಿಗೆ ।
ಆಗಲೂ ಕೊಡುವರೊಂದು ರೂಪಾಯಿ ಅಮನಿಗೆ । ಹಾಗೇಯೇ ಅವಳ ಬೈಯುತ್ತ ॥ 28

ಹೀಗೆ ದಿನಾಲು ಎರಡು ಅವಳಿಗೆ । ಆರು ರೂಪಾಯಿ ಜಮನಿಗೆ ।
ಐದು ದಾದಾ ಕೇಳಕರನಿಗೆ । ಭಾಗ್ಯಾ ಮತ್ತು ಸುಂದರಿಯರಿಗೆ ಎರಡೆರಡು ॥ 29

ಹತ್ತರಿಂದ ಹದಿನೈದರವರೆಗೆ ತಾತ್ಯಾಬಾಗೆ । ಹದಿನೈದರಿಂದ ಐವತ್ತವರೆಗೆ ಫಕೀರ ಬಾಬಾನಿಗೆ ।
ಎಂಟು ಹಂಚುವರು ಬಡ ಬಗ್ಗರಿಗೆ । ನಿತ್ಯನೇಮದೀ ಪ್ರಕಾರ ॥ 30

ಹೀಗಿರುವ ಇವರ ದಾನಶೀಲತೆ । ಮದರಾಸಿಗಳು ಕೇಳಿ ಈ ವಾರ್ತೆ।
ಸಹಜದಲೇ ಹುಟ್ಟಿತು ಅರ್ಥಸ್ವಾರ್ಥತೆ । ಭಜನೋಪಕ್ರಮವನಾರಂಭಿಸಿದರು ॥ 31

ಹೊರಗೆ ನೋಡಿದರೆ ಭಜನೆ ಅಂದ । ಒಳಗೆ ಇರುವುದು ದ್ರವ್ಯಲೋಭದಿಂದ ।
ಹಣ ಕೊಡುವರೆಂಬ ಆಶೆಯಿಂದ । ಸಪರಿವಾರ ಶಿರಡಿಯಲುಳಿದರು ॥ 32

ಅವರಲ್ಲಿ ಆಶೆ ಬಹಳವಿತ್ತು ಮೂವರಿಗೆ । ಬಾಬಾರಿಂದ ಧನ ಪಡೆಯಬೇಕು ಹೆಚ್ಚಿಗೆ ।
ಆದರೆ ಮಾತ್ರ ನಿಜದಲಿರುಸುತಿತ್ತು ಆ ಸ್ತ್ರೀಯಳಿಗೆ । ಸಾಯಿ ಪದದಲಿ ಭಜನೆಯ ಸದ್ಭಾವ ॥ 33

ಮೇಘಗಳ ಎದುರಿಗೆ ಕಂಡ । ನವಿಲು ಕುಣಿಯುವಂತೆ ಆನಂದದಿಂದ ।
ಚಂದ್ರನಿಗಾಗಿ ಚಕೋರನಿಗಿದ್ದ । ಅದರ ಅವಳದು ಆ ರೀತಿ ॥ 34

ಒಮ್ಮೆ ಮಧ್ಯಾಹ್ನದ ಆರತಿ । ನಡೆದಾಗ ಸಾಯಿ ಕೃಪಾಮೂರ್ತಿ।
ನೋಡಿ ಅವಳ ಸದ್ಭಾವ ಸ್ಥಿತಿ। ರಾಮರೂಪದಿ ದರ್ಶನವಿತ್ತರು ॥ 35

ಇತತರಿಗೆ ನಿತ್ಯದ ಸಾಯಿನಾಥ । ಅವಳಿಗೆ ಮಾತ್ರ ಜಾನಕೀಕಾಂತ ।
ಕಣ್ಣಿನಿಂದ ಜಲ ಸುರಿಯುತ । ನೋಡಿ ಜನ ವಿಸ್ಮಿತರಾದರು ॥ 36

ಎರಡೂ ಕೈಗಳಿಂದ ಚಪ್ಪಾಳೆ ಬಾರಿಸುತ । ಕಣ್ಣಿನಿಂದ ಭಕ್ತಿಯ ಅಶ್ರುಜಲ ಸುರಿಸುತ್ತ ।
ಈ ಅಪೂರ್ವವ ನೋಡುತ್ತ । ಜನರಾದರು ವಿಸ್ಮಿತರಾಗ ॥ 37

ಹೀಗೆ ಆ ದೃಶ್ಯವನು ಕಂಡು । ಎಲ್ಲರಲೂ ಹುಟ್ಟಿತು ಜಿಜ್ಞಾಸೆಯೊಂದು ।
ಪ್ರೀತಿ ಉಕ್ಕಿದೆ ಏಕೆ ಇವಳಿಗಿಷ್ಟೊಂದು । ಯಾವುದಕೆ ಆನಂದವಾಗಿದೆ ಅವಳಿಗೆ ॥ 38

ಆಮೇಲೆ ನಿಜಪತಿಗೆ ಮೂರನೆಯ ಪ್ರಹರದೊಳು । ಆನಂದ ನಿರ್ಭರಳಾಗಿ ತಾನಾಗಿಯೇ ಹೇಳಿದಳು ।
ಸಾಯಿ ವಿಸ್ಮಯ ತೋರಿದರೆನಲು । ರಾಮದರುಶನ ಮಾಡಿಸಿ ॥ 39

ನೀಲೋತ್ಪಲದಲಶ್ಯಾಮ । ಭಕ್ತ ಕಾಮ ಕಲ್ಪದ್ರುಮ ।
ಅವನೇ ಈ ಭರತಾಗ್ರಜ ಶ್ರೀ ಸೀತಾಭಿರಾಮ । ದಾಶರಥಿ ರಾಮನನು ನಾ ಕಂಡತೆ ॥ 40

ಶಂಖ ಚಕ್ರಗದಾಧರ । ಶ್ರೀವತ್ಸಲಾಂಛನ ಕೌಸ್ತುಭಹಾರ ।
ಆ ಪುರಷೋತ್ತಮ ಪರಾತ್ಪರ । ರೂಪ ಮನೋಹರ ಕಂಡೆ ॥ 41

ಕಿರೀಟ ಕುಂಡಲ ಮಂಡಿತ । ವನಮಾಲವಿರಾಜಿತ ।
ಪೀತವಸನ ಚತುರ್ಹಸ್ತ । ಜಾನಕಿನಾಥನನು ನಾ ಕಂಡೆ ॥ 42

ಎಂದವಳು ಈ ಮಾನವ ರೂಪಧಾರಿ । ಅಸಾಮಾನ್ಯ ಲೀಲಾವತಾರಿ ।
ಜಾನಕೀ ಜೀವನ ಮನೋಹಾರಿ । ಧನುರ್ಧಾರಿಯಾಗಿ ತೋರಿದನೆನಗೆ ॥ 43

ಫಕೀರನಾಗಿ ಕಾಣುವನಿವ ಬಾಹ್ಯದೊಳು । ಭಿಕ್ಷೆ ಬೇಡುವ ಬಾಗಿಲು ಬಾಗಿಲು ।
ಜಾನಕೀ ಜೀವನ ಮನೋಹರನೊಲು । ಧನುರ್ಧಾರಿಯಾಗಿ ಕಂಡನೆನಗೆ ॥ 44

ಮೇಲೆ ಕಾಣುವನಿವ ಫಕೀರನ ಹಾಗೆ । ಯಾರಿಗೆ ಹೇಗೆ ಕಂಡರೂ ಒಳಗೆ ।
ಜಾನಕೀ ಜೀವನ ಧನುರ್ಧಾರಿಯಾಗೇ । ಮನೋಹರನಾಗೆನಗೆ ಕಾಣಿಸಿದ ॥ 45

ಆ ಸ್ತ್ರೀ ಪರಮಭಾವಾರ್ಥಿ। ಅತ್ಯಂತ ಸ್ವಾರ್ಥಿಅವಳ ಪತಿ ।
ಹೀಗೆ ಇರುವುದು ಮೂಢ ಈ ಸ್ತ್ರೀ ಜಾತಿ । ಎಲ್ಲಿಯ ರಘುಪತಿ ಈ ಸ್ಥಳದಲಿ ॥ 46

ಮನದಲಿರುವುದು ಹೇಗೆ ಹೇಗೆ । ಭಾವಿಕರಿಗೆ ಕಾಣುವುದು ಹಾಗೇ ।
ಸಾಯಿಯೇ ಕಂಡರು ನಮಗೆಲ್ಲರಿಗೆ । ಇವಳಿಗೇ ರಾಮರೂಪ ಅದು ಹೇಗೆ ॥ 47

ಹೀಗೆ ಕುತುರ್ಕಗಳಿಂದ ಕೂಡಿ । ಆ ಹೆಂಗಸಿನ ಅವಹೇಳನೆಯ ಮಾಡಿ ।
ಆದರೂ ವಿಷಾದವಿಲ್ಲ ಅವಳ ಮನದಿ । ಅಸತ್ಯ ಕಲ್ಪನೆ ಅರಿಯಳವಳು ॥ 48

ದೊಡ್ಡ ಅಧಿಕಾರ ಸ್ಥಳವಳು ಮೊದಲೊಳು । ಹೀಗೆ ಅವಳ ಬಗ್ಗೆ ಕಥೆ ಇರಲು ।
ಸುಖಕರವಾದ ರಾಮದರ್ಶನಗಳು । ಕಾಲ ಕಾಲಕ್ಕವಳಿಗಾಗುತಿದ್ದವು ॥ 49

ಮುಂದೆ ಆಶೆ ಹುಟ್ಟಿ ದ್ರವ್ಯದಲಿ । ದ್ರವ್ಯದ ಹತ್ತಿರ ದೇವನೆಲ್ಲಿ ।
ರಾಮದರ್ಶನದ ಅಭಾವವಾಯಿತಲ್ಲಿ । ಹೀಗೆ ಸ್ವಭಾವ ಲೋಭದ್ದು ॥ 50

ಸಾಯಿಗೆ ಇದು ಎಲ್ಲ ತಿಳಿದಿತ್ತು । ತಿಳಿದರು ಅವಳ ದುರಿತ ಕಳೆಯಿತು ।
ಆದರೆ ಮತ್ತೆ ರಾಮ ದರ್ಶನವಿತ್ತು । ಅವಳಭೀಷ್ಟವ ಪೂರೈಸಿದರು ॥ 51

ಹೀಗಿರಲು ಅದೇ ರಾತ್ರಿಯಲಿ । ವಿಚಿತ್ರ ನಡೆಯಿತು ಯಾವ ರೀತಿಯಲಿ ।
ಗೃಹಸ್ಥನು ಕಂಡ ನಿದ್ರೆಯಲಿ । ಭಯಂಕರ ಸ್ವಪ್ನವೊಂದನ್ನು ॥ 52

ತಾನೊಂದು ದೊಡ್ಡ ಪಟ್ಟಣದಲಿದ್ದು । ಪೋಲೀಸರು ತನ್ನ ಮನೆಗೆ ಬಂದು ।
ಕೈಕಾಲುಗಳ ಗಟ್ಟಿ ಬಿಗಿದು । ಹಿಂದೆ ನಿಂತು ಕೈಯಿಂದ ತಿವಿಯುತಿದ್ದ ॥ 53

ಅಲ್ಲಿಯೇ ಒಂದು ಪಂಜರವಿದ್ದ ಹಾಗೆ । ಅದರ ಹತ್ತಿರವೇ ಹೊರಗಡೆಗೆ ।
ಸಾಯಿ ಇದೆಲ್ಲವನು ನೋಡುತಿರುವ ಹಾಗೆ । ಸುಮ್ಮನೆ ನಿಶ್ಚಲರಾಗಿ ನಿಂತಿದ್ದರು ॥ 54

ಮಹಾರಾಜರನು ಕಂಡು ಹತ್ತಿರ । ಜೋಡಿಸಿಕೊಂಡು ಎರಡೂ ಕರ ।
ಮುಖದ ಮೇಲೆ ದೈನ್ಯತರ । ಸುರಿಸುತ್ತ ನುಡಿದ ಹೀಗೆ ॥ 55

ಬಾಬಾ ತಮ್ಮ ಕೀರ್ತಿಯ ಕೇಳಿ । ಬಂದೆವು ನಾವು ತಮ್ಮ ಚರಣದಲಿ ।
ತಾವು ಪ್ರತ್ಯಕ್ಷವಾಗಿ ಇರುವಾಗ ಇಲ್ಲಿ । ನಮ್ಮ ಮೇಲೇಕೆ ಈ ಪ್ರಸಂಗ ॥ 56

ಮಹಾರಾಜರು ಅದಕೆ ನುಡಿದದ್ದು । "ಕೃತಕರ್ಮವ ಭೋಗಿಸಬೇಕಾಗುವದು" ।
ಅತಿ ವಿನಯದಿಂದ ಗೃಹಸ್ಥನೆಂದುದು । ನಾನಂಥದನೇನೂ ಮಾಡಿಲ್ಲ ॥ 57

ಏನೂ ಮಾಡಿಲ್ಲ ಈ ಜನ್ಮದಲಂತೂ । ಯಾವುದರಿಂದ ಇಂಥ ಸಂಕಟ ಒದಗಿತು ।
ಆಗಮಹಾರಾಜರಾಡಿದ ಮಾತು । "ಜನ್ಮಾಂತರದಲಿ ಮಾಡಿರಬಹುದು" ॥ 58

ನುಡಿದನಾಗ ಅವ ಮತ್ತೂ । ಹಿಂದಿನ ಜನ್ಮದ್ದು ನನಗೇನು ಗೊತ್ತು ।
ಇದ್ದರೂ ಅದು ಭಸ್ಮವಾಗಬೇಕಿತ್ತು । ತಮ್ಮ ದರ್ಶನ ಮಾತ್ರದಿಂದ ॥ 59

ನಮಗೆ ತಮ್ಮ ದರ್ಶನವಾಗಲು । ಅಗ್ನಿಯ ಎದುರು ತೃಣದೊಲು ।
ಸಮೂಲವಾಗಿ ಭಸ್ಮವಾಗಬೇಕಾಗಿರಲು । ನಾ ಹೇಗೆ ಅದರಿಂದ ಮುಕ್ತನಾಗೆನು ॥ 60

ಆಗ ಮಹಾರಾಜರೆಂದರವಗೆ । "ಇಷ್ಟಾದರೂ ವಿಶ್ವಾಸವಿರುವದೇ ನಿನಗೆ" ।
ಹೌದೆನ್ನಲು ಆ ಗ್ರುಹಸ್ಥನಿಗೆ । ಕಣ್ಣು ಮುಚ್ಚಲು ಹೇಳಿದರು ॥ 61

ಆಜ್ಞೆಯಂತೆ ಮುಚ್ಚಿ ಕಣ್ಣ । ನಿಂತೇ ಇರುವಂತೆಯೇ ತಕ್ಷಣ ।
ದಡ್ಡನೇ ಯಾರೋ ಬಿದ್ದಂತೆ ಸಪ್ಪಳವನ । ಕಿವಿಗೆ ಕೇಳಿ ಬಂದಿತು ॥ 62

ಸಪ್ಪಳ ಕೇಳಿ ಬೆಚ್ಚಿದ । ಕಣ್ಣು ತೆರೆದು ನೋಡತೊಡಗಿದ ।
ತಾನು ಬಂಧನದಿಂದ ಮುಕ್ತನಾಗಿದ್ದ । ಪೋಲೀಸ ರಕ್ತದ ಮಡುವಿನಲ್ಲಿ ಬಿದ್ದಿದ್ದ ॥ 63

ಆದರಿಂದ ಬಹಳ ಗಾಬರಿಯಾದ । ಮಹಾರಾಜರತ್ತ ನೋಡತೊಡಗಿದ ।
ನಕ್ಕು ನುಡಿದರು ಅವನಿಗಿದ । "ಚೆನ್ನಾಗಿ ಸಿಕ್ಕಿಕೊಂಡೆ ನೀನಿನ್ನು ॥ 64

ಇನ್ನು ಅಧಿಕಾರಿಗಳು ಬರುವರು । ಇಲ್ಲಿಯ ಎಲ್ಲ ಪ್ರಕಾರವ ನೋಡುವರು ।
ನೀನೇ ಈ ಅಪರಾಧಿ ಎನ್ನುವರು । ಮತ್ತೆ ಹಿಡಿದುಕೊಂಡು ಹೋಗುವರು ॥ 65

ಆಮೇಲೆ ಆ ಗೃಹಸ್ಥ ಮಾತನಾಡಿದನಿಂತು । ಬಾಬಾ ನಿಜವೇ ಇರುವದು ನಿಮ್ಮ ಮಾತು ।
ತ್ರಾತನು ಕಾಣೆನು ತಮ್ಮ ಹೊರತು । ಹೇಗಾದರೂ ಬಿಡಿಸಿ ಇದರಿಂದ ॥ 66

ಇದ ಕೇಳಿ ಬಾಬಾ ನುಡಿದರು । "ಮತ್ತೆ ಕಣ್ಣು ಮುಚ್ಚಿರು" ।
ಹಾಗೇ ಮಾಡಿ ಮತ್ತೆ ಕಣ್ಣು ತೆರೆದರು । ಆಶ್ಚರ್ಯವಾಗ ಕಾದಿತ್ತು ಮತ್ತೆ ॥ 67

ತಾನು ಪಂಜರದ ಹೊರಗೆ । ಬಾಬಾ ಇರುವರು ತಮ್ಮ ಬಳಿಗೆ ।
ಸಾಷ್ಟಾಂಗ ನಮನ ಮಾಡಿದನವರಿಗೆ । ಆಗ ಬಾಬಾ ಕೇಳಿದರು ॥ 68

"ಈಗಿನ ನಿನ್ನ ನಮಸ್ಕಾರದ । ಮತ್ತು ಈ ಮೊದಲು ಮಾಡುತ್ತಿದ್ದೆ ನಿರಂತರ ।
ಇವೆರಡರಲ್ಲೂ ಏನಾದರೂ ಅಂತರ । ಅನಿಸುವದೇ ವಿಚಾರ ಮಾಡಿ ಹೇಳು" ॥ 69

ಆಗ ಆ ಗೃಹಸ್ಥನಿತ್ತ ಉತ್ತರ । ಭೂಮ್ಯಾಕಾಶದಷ್ಟು ಇದೆ ಅಂತರ ।
ಕೇವಲ ದ್ರವ್ಯಕ್ಕಾಗಿ ಇತ್ತು ಹಿಂದಿನ ನಮಸ್ಕಾರ । ಸಾಂಪ್ರತ ಪರಮೇಶ್ವರ ಭಾವದಿಂದ ॥ 70

ಯಾವ ಭಾವವೂ ಇರಲಿಲ್ಲ ಮೊದಲು । ಇಷ್ಟೇ ಅಲ್ಲ ತಾವು ಮುಸಲ್ಮಾನರಿರಲು ।
ಹಿಂದುಗಳ ಭ್ರಷ್ಟ ಮಾಡುತಿರಲು । ಸರಿಯಲ್ಲವೆಂಬ ರೋಷವಿತ್ತು ॥ 71

ಅದಕ್ಕೆ ಬಾಬಾ ಕೇಳಿದರು ಹೀಗೆ । ಇಲ್ಲವೇ ನಿನ್ನ ಚಿತ್ತದೊಳಗೆ ।
ಭಕ್ತಿ ಮುಸಲ್ಮಾನ ದೇವರ ಬಗ್ಗೆ । ಇಲ್ಲವೆಂದನಾ ಗೃಹಸ್ಥ ॥ 72

ಬಾಬಾ ಕೇಳಿದವರನಿಗೆ । ಪಂಜಾ ಇಲ್ಲವೇ ನಿನ್ನ ಮನೆಯೊಳಗೆ ।
ಪೂಜಿಸುವದಿಲ್ಲವೇ ತಾಬೂತದ ದಿನಗಳಿಗೆ । ನಿನ್ನಂತರಕೆ ಕೇಳಿ ನೋಡು ॥ 73

ನಿನ್ನ ಮನೆಯೋಳಗಿದೆ 'ಕಾಡು-ಬೀದಿ' । ಲಗ್ನಕಾರ್ಯಗಳಲಿ ಅದನು ಪೂಜಿಸುವಿ ।
ಮಾನಪಾನಗಳಿಂದ ಸಂತುಷ್ಟಗೊಳಿಸುವ । ಅದುವಿರುವದು ಮುಸಲ್ಮಾನಿ ದೈವತ ॥ 74

ಅದೆಲ್ಲವನು ಒಪ್ಪಿಕೊಂಡವ ಹೌದೆಂದು । ಕೇಳಿದರಾಗ ಮತ್ತೇನು ನಿನ್ನಿಚ್ಛೆ ಇರುವದೆಂದು ।
ನಿಜಗುರುಗಳಾದ ರಾಮದಾಸರ ದರ್ಶನವಾಗಬೇಕೆಂದು । ಮನದಲಿಚ್ಛೈಸಿದ ಗೃಹಸ್ಥ ॥ 75

ಆಮೇಲೆ ಅವನಿಗೆ ಮಹಾರಾಜರು । ಹಿಂದೆ ತಿರುಗಿ ನೋಡೆಂದರು ।
ನೋಡಲು ಹಿಂದೆ ತಿರುಗಿದರು । ಸಮರ್ಥ ಮೂರ್ತಿಯ ಎದುರಿನಲೇ ॥ 76

ಎರಗಲು ಸಮರ್ಥರ ಚರಣದಲ್ಲಿ । ಅದೃಶ್ಯರಾದರು ಅದೇ ಸ್ಥಳದಲ್ಲಿ ।
ಆಮೇಲೆ ಜಿಜ್ಞಾಸೆ ಬೆಳೆಯುತಲಿ । ಮತ್ತೆ ಏನೇನೋ ಕೇಳಿದನು ॥ 77

ಬಾಬಾ ನಿಮಗೆ ವಯಸ್ಸಾಗಿದೆ । ಈ ಶರೀರವೂ ಮುಪ್ಪಾಗಿದೆ ।
ತಮ್ಮ ಆಯುಷ್ಯ ಎಷ್ಟಿದೆ । ಎಂಬದು ನಿಮಗೆ ಗೊತ್ತಿದೆಯೇ ॥ 78

ನೀನು ಮುದುಕನೆನ್ನುವೆಯಾ ನನಗೆ । ಓಡು ಬಾ ನೀ ನನ್ನ ಜೊತೆಗೆ ।
ಎಂದು ಸಾಯಿ ಓಡತೊಡಿಗದಾಗ್ಯೆ । ಇವನೂ ಅವರ ಬೆನ್ನು ಹತ್ತಿದ ॥ 79

ಮಹಾರಾಜರು ವೇಗವಾಗಿ ಓಡತೊಡಗೆ । ಧೂಳು ಹರಡಿತು ಮೇಲೆ ಕೆಳಗೆಲ್ಲೆಡೆಗೆ ।
ಅದೇ ಕಾಲಕ್ಕವರು ಅದೃಶ್ಯರಾಗ್ಯೆ । ಎಚ್ಚರಾದನಾ ಗೃಹಸ್ಥ ॥ 80

ಯಾವಾಗ ಅವನಿಗೆ ಎಚ್ಚರಾಯಿತು । ಕನಸಿನಲಿ ನಡೆದದ್ದು ನೆನಪಾಯಿತು ।
ಕೂಡಲೇ ಚಿತ್ತವೃತ್ತಿ ಬದಲಾಯಿತು । ಬಾಬಾರ ಮಹಿಮೆಯ ಹೊಗಳತೊಡಗಿದ ॥ 81

ನೋಡಿ ಈ ರೀತಿಯ ಚಮತ್ಕೃತಿ । ಸಾಯಿ ಪದದಲುಂಟಾಯಿತು ಭಕ್ತಿ ।
ಬಾಬಾರ ಬಗ್ಗೆ ಇದ್ದ ಸಂಶಯ ವೃತ್ತಿ । ಕಳೆದುಹೋಯಿತು ಹಿಂದಿನ ಪರಿಸ್ಥಿತಿ ॥ 82

ಸ್ವಪ್ನ ಮಾತ್ರವೇ ಅದು ನೋಡಲು । ಆದರೆ ಅಲ್ಲಿ ನಡೆದ ಪ್ರಶ್ನೋತ್ತರಗಳು ।
ಕೇಳಿ ಗ್ರಹಿಸಬೇಕು ಶ್ರೋತೃಗಳು । ಅದರ ಒಳಗಿನ ಅರ್ಥವನು ॥ 83

ಈ ಪ್ರಶ್ನೋತ್ತರಗಳಿಂದಾಗಿ । ಮದ್ರಾಸಿಗೆ ಪರಮ ಬೋದವಾಗಿ ।
ಸಾಯಿಯ ಬಗೆಗಿನ ಸಂಶಯ ಹೋಗಿ । ಹಾಸ್ಯ ವಿನೋದದ ರೂಪದಿಂದ ॥ 84

ಮರುದಿನ ಬೆಳಗಿಗೆ । ಜನರು ದರ್ಶನಕೆ ಬಂದರು ಮಶೀದಿಗೆ ।
ಎರಡು ರೂಪಾಯಿಗಳ ಬರ್ಫಿ ಕೊಟ್ಟರವರಿಗೆ । ಸಾಯಿನಾಥರು ಕೃಪೆ ಮಾಡಿ ॥ 85

ಮತ್ತು ಅವರಿಗೆ ತಮ್ಮ ಹತ್ತಿರದವೆರಡು । ರೂಪಾಯಿ ಬಾಬಾ ಅವರೆಲ್ಲರಿಗೂ ಕೊಟ್ಟು ।
ಮತ್ತೆ ಕೆಲದಿನ ಅಲ್ಲಿಯೇ ಇಟ್ಟುಕೊಂಡು । ಭಜನೆ ಪೂಜನೆ ನಡೆಸಿದರು ॥ 86

ಮತ್ತೆ ಕೆಲದಿನ ಅಲ್ಲೇ ಉಳಿದರು । ಬಳಿಕ ಅವರು ತಿರುಗಿ ಹೊರಟರು ।
ಹೆಚ್ಚಿಗೆ ಹಣ ಗಳಿಸದಿದ್ದರೂ । ಸಾಕಷ್ಟು ಆಶೀರ್ವಾದ ಪಡೆದರು ॥ 87

"ಅಲ್ಲಾ ತುಮ್ಹಾರಾ ಭಲಾ ಕರೆಗಾ । ಅಲ್ಲಾ ಮಾಲಿಕ ಬಹೋತ ದೇಗಾ" ।
ಮುಂದೆ ಅವರು ಹೊರಟಾಗ । ಇದೇ ಅವರಿಗೆ ಉಪಯುಕ್ತವಾಯಿತು ॥ 88

ಧ್ಯಾನದಿ ಮನದಿ ಸಾಯಿ ಸ್ಮರಣೆಗಳು । ಮಾರ್ಗ ಕ್ರಮಿಸುತಿರೆ ಹಗಲಿರುಳು ।
ಎಳ್ಳು ಕಾಳಷ್ಟೂ ಕಷ್ಟಗಳಿಲ್ಲದಿರಲು । ಸಾಯಿಯ ಆಶೀರ್ವಾದದಿಂದಾಗಿ ॥ 89

ಆಶೀರ್ವಾದಾನುರೂಪವಾಗಿ ಸಾಕಷ್ಟು ಯಥಾಸಾಂಗ ಯಾತ್ರೆಗಳಾಗಿ ।
ಆಗಲಿಲ್ಲ ಒಂದಿಷ್ಟೂ ತಾಪ ಅವರಿಗೆ । ಸುಖರೂಪ ನಿಜಗೃಹವ ತಲುಪಿದರು ॥ 90

ಒಂದನ್ನೇ ಮನದಲ್ಲಿಟ್ಟು ಕೊಂಡಿದ್ದರೂ । ಅನೇಕ ಯಾತ್ರೆಗಳ ಮಾಡಿದರು ।
ಅನುಪಮ ಆನಂದ ಪಡೆದರು । ಬಾಬಾರ ಲೀಲೆಗಳ ಹೊಗಳುತ ॥ 91

ಸಂತರ ಆಶೀರ್ವಚನವಿದೇ । 'ಅಲ್ಲಾ ಅಚ್ಛಾ ಕರೇಗಾ' ಎಂಬದೇ ।
ಸತ್ಯವಾಯಿತು ಅಕ್ಷರವೂ ತಪ್ಪದೇ । ಮನೋರಥ ಪೂರ್ಣವಾಯಿತು ॥ 92

ಹೀಗೆ ಆ ಎಲ್ಲ ತೀರ್ಥೋಪಾಸಕರು । ಭಗವದ್ಭಕ್ತರಾದ ಮದ್ರಾಸೀ ಜನರು ।
ಸತ್ವಸ್ಥ ಸಾತ್ವಿಕರೆಲ್ಲರೂ । ಬಂಧ ಮೋಚಕ ಸಾಯಿ ಅವರಿಗೆ ॥ 93

ಕಥೆಯ ಹೇಳುವೆ ಇನ್ನೊಂದು । ಶ್ರೋತೃಗಳು ಕೇಳಬೇಕು ಸಾದರದಿಂದದು ।
ಭಕ್ತಿಭಾವದಿಂದ ಶ್ರವಣ ಮಾಡಲದು । ಆಶ್ಚರ್ಯ ಚಿತ್ತದಗಲಾದೀತು ॥ 94

ಭಕ್ತ ಕಾಮ ಕಲ್ಪದ್ರುಮ । ಹೇಗೆ ಸಾಯಿ ದಯಾಳು ಪರಮ ।
ಭಕ್ತೇಚ್ಛೆಗಳ ಹೇಗೆ ಸಪ್ರೇಮ । ಪೂರೈಸುವನು ಸದಾಕಾಲದಲಿ ॥ 95

ಠಾಣೆ ಜಿಲ್ಹೆಯಲಿ ಬಾಂದ್ರೆ ನಗರ । ಅಲ್ಲಿರು ವರು ಭಕ್ತ ಪ್ರವರ ।
ರಘುನಾಥರಾವ ತೇಂಡೂಲಕರ । ಚತುರಧೀರ ಬಹುಶ್ರುತ ॥ 96

ಹಿರಿಯ ಭಕ್ತನವ ಯಾವಾಗಲೂ ಇರುವ ಆನಂದದಲಿ । ಒಪ್ಪಿದ ಸಾಯಿಯ ಪಾದಪದ್ಮಗಳಲಿ ।
ಅಲ್ಲಿಯ ಬೋಧ ಮಕರಂದಸವಿಯುತಲಿ । ಅಖಂಡ ನಾಮ ಜಪಿಸುತಿದ್ದ ॥ 97

'ಭಜನಮಾಲಾ' ರೂಪದಿಂದ । ಸಾಯಿಯ ಲೀಲೆಗಳ ವರ್ಣಿಸಿದ ।
ಭಕ್ತಿ ಪ್ರೇಮಗಳಿಂದೋದಲದ । ಹೆಜ್ಜೆ ಹೆಜ್ಜೆಗೆ ಸಾಯಿಯೇ ॥ 98

ಸಾವಿತ್ರೀ ಎಂಬ ಅವರ ಕಲತ್ರ । ಬಾಬೂ ಅವರ ಜ್ಯೇಷ್ಠ ಪುತ್ರ ।
ನೋಡಿರವರ ಅನುಭವ ವಿಚಿತ್ರ । ಸಾಯಿ ಚರಿತ್ರೆಯ ಕೇಳಿರಿ ॥ 99

ಒಮ್ಮೆ ಬಾಬೂ ಮನದಿ ಶಂಕೆ ಬಡುತ । ವೈದ್ಯಕೀಯ ಶಾಲೆಯಲೋದುತ ।
ಪರದೇಶೀಯ ವೈದ್ಯ ಶಿಕ್ಷಣ ಪಡೆಯುತ । ಪರೀಕ್ಷೆಗೆ ಕುಳಿತುಕೊಳ್ಳದಾದ ॥ 100

ಒಂದೇ ಸಮನೇ ಹಗಲಿರುಳು । ಕಷ್ಟಪಟ್ಟು ಅಭ್ಯಾಸ ಮಾಡಿರಲು ।
ಸಹಜ ಜ್ಯೋತಿಷಿಯ ಕೇಳಲು । ಪರೀಕ್ಷೆಯಲಿ ಉತ್ತೀರ್ಣನಾಗುವೆನೆ ಎಂದು ॥ 101

ಪಂಚಾಂಗದ ಪುಟಗಳ ತಿರುವಿಸಿ । ಗ್ರಹಗಳ ಸ್ಥಾನಗಳನೆಣಿಸಿದ ಜ್ಯೋತಿಷಿ ।
ರಾಶಿನಕ್ಷತ್ರಗಳ ಬೆರಳಿನಿಂದೆಣಿಸಿ । ಸಚಿಂತ ಮುಖ ಮಾಡಿ ನೋಡಿದ ॥ 102

ಎಂದ ಪರಿಶ್ರಮ ಪಟ್ಟಿರುವಿ ಬಹಳ । ಆದರೆ ಈ ವರ್ಷ ಗ್ರಹಗಳ ಬಲವಿಲ್ಲ ।
ಮುಂದಿನ ವರ್ಷ ಪರೀಕ್ಷೆಗೆ ಕಷ್ಟವಿಲ್ಲ । ವಿನಾಯಾಸ ಪಾಸಾಗುವಿ ॥ 103

ಶ್ರಮ ನಿರರ್ಥಕವಾಗುವದಿದ್ದಲ್ಲಿ । ಸಾರ್ಥಕವೇನು ಪರೀಕ್ಷೆಗೆ ಕುಳಿತಲ್ಲಿ ।
ಈ ಭೀತಿಯುಂಟಾಗಿ ವಿದ್ಯಾರ್ಥಿಯಲ್ಲಿ । ಪರೀಕ್ಷೆಗೆ ಹಿಂಜರಿದ ॥ 104

ಆ ವಿದ್ಯಾರ್ಥಿಯ ತಾಯಿ ಆಮೇಲೆ । ಶಿರಡಿಗೆ ಹೋದಳು ಅಲ್ಪಾವಕಾಶದಲೇ ।
ಬಾಬಾರ ಚರಣದಲಿಟ್ಟಳ ತಲೆ । ಕುಶಲವಾರ್ತೆಗಳಿಗಾರಂಭವಾಯಿತು ॥ 105

ಆಗ ಈ ಸುದ್ದಿ ಬರಲು । ಕರುಣಾ ವಚನದಿ ಬಾಬಾರ ಪ್ರಾರ್ಥಿಸಿದಳು ।
ಎಂದಳು ಹುಡುಗ ಪರೀಕ್ಷೆಗೆ ಕುಳಿತುಕೊಳ್ಳಲು । ಗ್ರಹಗಳ ಅನುಕೂಲತೆ ಇರುವದೇ ॥106

ಜ್ಯೋತಿಷಿಗಳು ಪತ್ರಿಕೆ ನೋಡಿದರು । ಈ ವರುಷ ಯೋಗವಿಲ್ಲೆಂದರು ।
ಸಾಕಷ್ಟು ಅಭ್ಯಾಸ ಮಾಡಿದ್ದರೂ । ಹುಡುಗ ಪರೀಕ್ಷೆಗೆ ಕೂಡ್ರಲೊಲ್ಲ ॥ 107

ಬಾಬಾ ಇದೆಂಥ ಗ್ರಹದೆಶೆ । ಈ ವರ್ಷ ಹೀಗೇಕೆ ನಿರಾಶೆ ।
ಈ ಪರೀಕ್ಷೆ ಪಾಸಾದೀತೆಂಬ ಆಶೆ । ಬಹಳವಿದೆ ಎಲ್ಲರ ಮನಸಿಗೆ ॥ 108

ಕೇಳಿರಿನ್ನು ಬಾಬಾ ಆಡಿದ ಮಾತುಗಳು । "ನನ್ನ ಮಾತು ಕೇಳೆಂದು ಅವನಿಗೆ ಹೇಳು ।
ಸುತ್ತಿ ಬಿಸುಟತ್ತ ಆ ಪತ್ರಿಕೆಗಳು । ಸ್ವಸ್ಥಚಿತ್ತದಿಂದ ಪರೀಕ್ಷೆಗೆ ಕಟ್ಟೆಂದು ॥ 109

ಯಾರ ಬೆನ್ನೂ ಹತ್ತುವದು ಬೇಡ । ಜನ್ಮಪತ್ರಿಕೆ ನೋಡುವದು ಬೇಡ ।
ಜ್ಯೋತಿಷಿಯ ನಂಬುವದು ಬೇಡ । ಅಭ್ಯಾಸವು ಮುಂದುವರಿಯಲಿ ॥ 110

ಮಗನಿಗೆ ಹೇಳು ಯಶ ಸಿಗುವದೆಂದು । ಸ್ವಸ್ಥಚಿತ್ತದಿಂದ ಪರೀಕ್ಷೆಗೆ ಕೂಡ್ರವದು ।
ನಿರಾಶನೆಷ್ಟೂ ಆಗಬಾರದು । ನನ್ನ ಮೇಲೆ ವಿಶ್ವಾಸವಿರಲು" ॥ 111

ಬಾಬಾರ ಆಜ್ಞೆಯನ್ನು ಪಡೆದು । ತಾಯಿ ತಿರುಗಿ ಊರಿಗೆ ಬಂದು ।
ಮಗನಿಗೆ ಹೇಳಿದಳು ಬಾಬಾ ನುಡಿದದ್ದು । ಉತ್ಸಾಹದಿಂದ ಆಶ್ವಾಸನೆಯಿತ್ತಳು ॥ 112

ಹೀಗೆ ಬಾಬಾರ ವಚನೋಲ್ಲಾಸವಾದಾಗ । ಪರೀಕ್ಷೆಗೆ ಕುಳಿತ ಹುಡುಗ ।
ಲಿಖಿತ ಪ್ರಶ್ನೆಗೆ ಉತ್ತರಗಳನಾಗ । ಸರಿಯಾಗಿಯೇ ಬರೆದ ॥ 113

ಲೇಖಿ ಪರೀಕ್ಷೆ ಮುಗಿಸಿದ । ಉತ್ತರಗಳನೂ ಸರಿಯಾಗೇ ಬರೆದಿದ್ದ ।
ಆದರೂ ಆತ್ಮವಿಶ್ವಾಸವಿಲ್ಲದೇ ಸಂಶಯದ । ಸುಳಿಗೆ ಬಿದ್ದು ಅಸ್ಥಿರನಾದ ॥ 114

ಸರಿಯಾಗಿ ಉತ್ತರ ಬರೆದರೂ । ಉತ್ತೀರ್ಣನಾಗುವದಕೆ ಅಷ್ಟು ಸಾಕಿದ್ದರೂ ।
ವಿದ್ಯಾರ್ಥಿಗೆ ತೃಪ್ತಿ ಇಲ್ಲ ಆದರೂ । ಅದರಿಂದ ಧೈರ್ಯಗುಂದಿದ ॥ 115

ನಿಜವಾಗಿ ಲೇಖಿ ಪರೀಕ್ಷೆಯಲಿ ಪಾಸ । ಆಗಿದ್ದರೂ ಎನಿಸಿತವನಿಗೆ ತಾ ನಾಪಾಸ ।
ಅದರಿಂದಾಗಿ ಉದಾಸ । ಮೌಖಿಕ ಪರೀಕ್ಷೆಗೆ ಹೋಗಲೊಲ್ಲ ॥ 116

ಮೌಖಿಕ ಪರೀಕ್ಷೆ ಆರಂಭವಾಗಿದ್ದು । ಮೊದಲಿದಿನ ಹಾಗೇ ಹೋಯಿತು ಕಳೆದು ।
ಮರುದಿನ ಒಬ್ಬ ಸ್ನೇಹಿತ ಬಂದು । ವಿದ್ಯಾರ್ಥಿ ಭೋಜನಕೆ ಕುಳಿತಿದ್ದುದನು ಕಂಡು ॥117

ಎಂದ ಏನು ವಿಚಿತ್ರವಿದು । ಪರೀಕ್ಷಕನಿಗೇ ಚಿಂತೆ ನಿನ್ನದು ।
ತೆಂಡೂಲಕರ ನಿನ್ನೆ ಏಕೆ ಬರಲಿಲ್ಲವೆಂದು । ನೋಡಿ ಬಾ ಎಂದು ಕಳುಹಿದರು ॥ 118

ಲೇಖೀ ಪರೀಕ್ಷೆಯಲ್ಲವ ನಾಪಾಸ । ಮತ್ತೇಕೆ ಅವಗೆ ಮೌಖಿಕದ ಆಯಾಸ ।
ಅದಕೇ ಮನೆಯಲುಳಿದ ಆಗಿ ಉದಾಸ । ಸ್ಪಷ್ಟವಾಗಿ ನಾನವರಿಗೆ ಹೇಳಿದೆ ॥ 119

ಆಗ ಪರೀಕ್ಷಕನೆಂದ ನೀ ಹೋಗೆಂದು । ಇದ್ದ ಹಾಗೇ ಕರೆದು ತಾ ಅವನನೆಂದು ।
"ಲೇಖೀ ಪರೀಕ್ಷೆ"ಯಲ್ಲವ ಉತ್ತೀರ್ಣನೆಂದು । ಆನಂದದ ಸುದ್ದಿಯ ತಿಳಿಸವನಿಗೆ ॥ 120

ಆಗಿನ ಆನಂದವನೇನು ಕೇಳುವದು । ಸಾಯಿಮಹಾರಾಜರ ನೆನಸಿಕೊಂಡು ।
ಕಳೆಯದೇ ಕ್ಷಣವೊಂದು । ಉಲ್ಹಾಸದಿಂದೋಡಿದನಲ್ಲಿಗೆ ॥ 121

ಆಮೇಲೆಲ್ಲ ಮಧುರವಾಯಿತು । ಪರೀಕ್ಷೆಯ ಓಡಾಟ ಮುಗಿಯಿತು ।
ಸಾಯಿ ಚರಣದಿ ಮನ ದೃಢವಾಯಿತು । ಅವರು ಮನದಿಚ್ಛೆ ಪೂರೈಸಿದರು ॥ 122

ಬೀಸುವಕಲ್ಲಿನ ಗೂಟವದು । ಅಲ್ಲಾಡಿಸಿ ಬಡಿದರೆ ಗಟ್ಟಿಯಾಗುವದು ।
ಗುರುಪದದ ಸಂಗತಿಯೂ ಹಾಗಿರುವದು । ಅಲುಗಿಸಿ ಗಟ್ಟಿ ಮಾಡುವರು ಸಾಯಿ ॥ 123

ಹೇಳರವರು ಯಾರಿಗೂ ಎಂದು । ಚಿತ್ತವೃತ್ತಿಯ ತಟ್ಟದಂಥದು ।
ಇದು ಬಾಬಾರ ನಿತ್ಯದ ಪ್ರಚೀತಿ ಇರುವದು । ಈ ರೀತಿ ನಿಷ್ಠೆಯ ದೃಢಪಢಿಸುವರು ॥ 124

ಹೇಳಿದ ಮಾರ್ಗದಲ್ಲಿ ನಡೆಯುವದು । ಮೊದಮೊದಲು ಸುಲಭವೆನಿಸುವದು ।
ಮುಂದೆ ಸಹಗೆ ಕಂಟಿಗಳಿರುವದು । ಮುಳ್ಳೇಮುಳ್ಳು ಎಲ್ಲೆಡೆಗೆ ॥ 125

ಬಳಿಕಾ ನಿಷ್ಠೆಗೆ ಟಿಸಿಲೊಡೆದು । ಸಹಜ ಮನದಲಿ ಸಂಶಯ ಬಂದು ।
ಏತಕ್ಕೆ ಸಾಯಿ ಈ ಅಡ್ಡದಾರಿಗೆ ನಡೆಸಿದ್ದು । ಎಂದು ಮನಸಿಗೆನಿಸುವದು ॥ 126

ಹೀಗೆ ಎನಿಸುತಿದ್ದರೂ । ಶ್ರದ್ಧೆಯನಲ್ಲೇ ಇಟ್ಟಿರು ।
ಈ ಸಂಕಟಗಳ ಪರೀಕ್ಷೆ ಎಂದು ತಿಳಿದಿರು । ಅದರಿಂದಲೇ ನಿಜ ಶ್ರದ್ಧೆ ಬರುವದು ॥ 127

ಸಂಕಟಗಳನ್ನು ಎದುರಿಸಿ । ಅಖಂಡ ಸಾಯಿ ಸಮರ್ಥರ ಸ್ಮರಿಸಿ ।
ಅದರಿಂದ ಅಪಾಯದ ಶಿಲೆಯ ಖಂಡಿಸಿ । ನಾಮದ ಪ್ರಚಂಡ ಶಕ್ತಿಯ ಅನುಭವಿಸಿರಿ ॥ 128

ಇದೇ ಆ ಆತಂಕಗಳ ಪ್ರಯೋಜನ । ಅವುಗಳನೂ ಸಾಯಿಯೇ ಮಾಡುವ ನಿರ್ಮಾಣ ।
ಅದರಿಂದಲೇ ಆಗುವದು ಸಾಯಿ ಸ್ಮರಣ । ಸಂಟೋಪಶಮನವೂ ಆವಾಗಲೇ ॥129

ಇರಲಿ ಈ ಹುಡುಗನ ಪಿತ । ಬಾಬಾರ ಅತಿ ಮೆಚ್ಚಿನ ಭಕ್ತ ।
ಧೀರ ಉದಾರ ಸತ್ವಯುತ । ಆತನ ಗಾತ್ರಗಳು ಶಿಥಿಲವಾದವು ॥ 130

ಪ್ರಸಿದ್ಧ ಪರದೇಶೀಯ ವ್ಯಾಪಾರಿಗಳು । ಅವರ ಕಂಪನಿ ಮುಂಬಯಿ ಪಟ್ಟಣದೊಳು ।
ಪಾಮಾಣಿಕ ತನದಿಂದ ಅವರ ಕೈಯೊಳು । ನೌಕರಿ ಮಾಡಿದ್ದರವರು ॥ 131

ಮುಂದೆ ವೃದ್ಧಾಪಕಾಲದಿಂದ । ದೃಷ್ಟಿಯಾಯಿತು ಮಂದ ।
ಇಂದ್ರಿಯಗಳೂ ದಣಿದಿದ್ದರಿಂದ । ನಿಶ್ಚಿಂತೆಯ ಆರಾಮ ಬಯಸುತಿದ್ದರು ॥ 132

ಕೆಲಸ ಮಾಡಲೆಂದರೆ ಇರಲಿಲ್ಲ ಶಕ್ತಿ । ಅದಕ್ಕೆ ಸುಧಾರಿಸಲೆಂದು ಪ್ರಕೃತಿ ।
ರಘುನಾಥರಾಯರು ಇತ್ತು ರಜಾ ಚೀಟಿ । ಸ್ವಸ್ಥ ವಿಶ್ರಾಂತಿ ಪಡೆಯುತಿದ್ದರು ॥ 133

ಬಳಿಕ ಆ ರಜೆ ಮುಗಿಯಿತು । ಅದರಿಂದ ಪೂರ್ಣ ವಿಶ್ರಾಂತಿ ಇಲ್ಲದಾಯಿತು ।
ಅದಕ್ಕೆ ರಜೆಗಾಗಿ ಪ್ರಾರ್ಥಿಸಿಕೊಂಡು ತನ್ನ । ಅರ್ಜಿಯನ್ನವರಿಗೆ ಕಳಿಸಿದರು ॥ 134

ಅರ್ಜಿ ನೋಡಿದ ವರಿಷ್ಠರು । ಅಪೇಕ್ಷಿತ ರಜೆಯ ಸಿಫಾರಸು ಮಾಡಿದರು ।
ಆದರೆ ಆ ಪೇಢಿಯ ವರಿಷ್ಠಾಧಿಕಾರಿಯವರು । ವಿಚಾರವಂತನಾದ ದಯಾಳು ಅವ ॥135

ಉದಾರ ಮನಸಿನ ಒಡೆಯ । ನೋಡಿದ್ದ ಇವರ ಪ್ರಾಮಾಣಿಕತೆಯ ।
ಪ್ರೇಮದಿಂದಿತ್ತ ಅರ್ಧರೊಟ್ಟಿಯ । ಮುಂದಿನ ಚರಿತಾರ್ಥ ನಡೆಸಲು ॥ 136

ಹೀಗೆ ಸಹಕಾರೀ ಪದ್ಧತಿ ಇರುವದಾಗಿ । ಉತ್ತಮ ಪೇಢಿಯವರೂ ಪ್ರಸಂಗೋಪಾತ್ತವಾಗಿ ।
ಪ್ರಾಮಾಣಿಕ ಸೇವಕರಿಗಾಗಿ । ಉತ್ತೇಜನಾರ್ಥ ಅವಲಂಬಿಸುವರು ॥ 137

ಆದರೂ ನನ್ನ ಒಡೆಯ ಈ ರೊಟ್ಟಿಯನು । ನನಗಾಗಿ ಅದ ಕೊಡುವನೇನು ।
ಕೆಲಸ ಕಳೆದುಕೊಂಡಾಗ ನಾನು । ಎಂಬ ಚಿಂತೆಯಲಿ ತೊಡಗಿದನು ॥ 138

ನೂರೈವತ್ತು ನನಗೀಗ ಸಿಗುವದು । ಪಿಂಚಣಿಯಾದರೆ ಎಪ್ಪತ್ತೈದಾಗುವದು ।
ದಿನ ಚರ್ಯೆ ನಡೆಯುವದೂ ಕಷ್ಟವಾಗಬಹುದು । ಮನದಲಿ ವಿಚಾರ ನಡೆಯಿತು ॥139

ಮುಂದೆ ಹೇಗೆ ಮೋಜಾಯಿತು । ಬಾಬಾ ಮಾಡಿ ತೋರಿದರೆಂತು ।
ಅವರ ಕುಟುಂಬ ಜೊತೆ ಹಿತದ ಮಾತು । ಹೇಗೆ ನಡೆಯಿತದರ ಕೌತುಕ ಕೇಳಿ ॥ 140

ಕೊನೆಯ ಆಜ್ಞೆ ಹೊರಡಲು । ಹದಿನೈದು ದಿನದ ಅವಕಾಶವಿರಲು ।
ಹೋಗಿ ಅವಳ ಸ್ವಪ್ನದೊಳು । ಅವಳ ಎಣಿಕೆಯ ಕೇಳಿದರು ॥ 141

"ನಾನು ನೂರು ಕೊಡಬೇಕೆನ್ನುವೆ । ನಿನಗದು ಸಾಕೆನಿಸುವದಲ್ಲದೇ" ।
ಆಗ ಅವಳೆಂದಳು ಇದೇನು ಕೇಳುವೆ । ನಮಗೆ ನಿನ್ನದೇ ಭರವಸೆ ॥ 142

ಕಳಿಸಿದ ಅರ್ಜಿಯ ಮೇಲೆ ಅತ್ತ । ರಘುನಾಥರಾಯ ಪ್ರಾಮಾಣಿಕ ನೌಕರನಿರುತ ।
ಸೇವೆಯನು ಮಾಡಿರುವ ಪಟ್ಟು ಕಷ್ಟ । ಅದಕೆ ಅರ್ಧ ರೊಟ್ಟಿಯ (ಪಗಾರವ) ಕೊಡಬೇಕು ॥ 143

ಬಾಯಿಂದ ನೂರೇ ನುಡಿದಿದ್ದರೂ । ಮತ್ತೆ ಮೇಲೆ ಹತ್ತು ಕೊಟ್ಟರು ।
ಇಂಥ ಕರುಣಾಕರ ಈ ಸಮರ್ಥರು । ಭಕ್ತರ ಮೇಲೆ ಅನಿವಾರ ಮಮತೆ ॥ 144

ಈಗ ಕೇಳಿರಿ ಇನ್ನೊಂದನು । ಮನೋರಂಜಕವಾದ ಸುಂದರ ಕಥೆಯನು ।
ಭಕ್ತ ಪ್ರೇಮೋಲ್ಲಾಸ ತೋರುವಂಥದನು । ಶ್ರೋತೃಗಳಿಗಾನಂದದಾಯಕ ॥ 145

ಕ್ಯಾಪ್ಟನ್ ಹಾಟೆ ಎಂಬ ಡಾಕ್ಟರರು । ಬಹಳ ಶ್ರದ್ಧೆಯುಳ್ಳ ಬಾಬಾರ ಭಕ್ತರು ।
ಬಾಬಾ ಬೆಳಗಿರ್ಗೆ ಸ್ವಪ್ನದಲಿ ದಶನವಿತ್ತರು । ಅದರ ಅಂದವಾದ ಕಥೆಯಿದು ॥ 146

ಹಾಟೆ ಇರುತಿದ್ದರು ಗ್ವಾಲೇರದಲ್ಲಿ । ಬಾಬಾರ ಕಂಡರು ಸ್ವಪ್ನದಲ್ಲಿ ।
ಬಾಬಾ ಅವರಿಗೆ ಪ್ರಶ್ನೆಯ ಕೇಳಿದರು । ಹಾಟೆಯವರೂ ಉತ್ತರಿಸಿದರದಕೆ ಏನೆಂದು ॥ 147

ನನ್ನನ್ನು ಮರೆತೆಯಾ ಎಂದು ಬಾಬಾ ಕೇಳಲು । ಕೂಡಲೇ ಹಾಟೆಯವರು ಹಿಡಿದರು ಕಾಲು ।
ಮಗು ತಾಯಿಯ ಮರೆತಿರಲು । ತರಣೋಪಾಯವೇನದಕೆ ॥ 148

ಲಗುಬಗೆಯಿಂದ ತೋಟಕೆ ಹೋದರು ಎದ್ದು । ತಾಜಾ ಅವರೇಕಾಯಿಗಳ ಹರಿದು ।
ಶೀಧಾ ಸಾಹಿತ್ಯ ಮತ್ತು ದಕ್ಷಿಣೆ ಹಿಡಿದು । ಭಕ್ತಿಯ ಕೊಡುಗೆ ತಯಾರಿಸಿದರು ॥ 149

ಹೀಗೆಲ್ಲ ಸಿದ್ಧತೆಯ ನೋಡಿದರು । ಆ ಮೊರವ ಸಮರ್ಪಿಸಲು ಹಾಟೆ ಮುಂದಾದರು ।
ಕೂಡಲೇ ಎಚ್ಚರಾದರು । ತಾವು ಸ್ವಪ್ನವ ಕಂಡುದ ತಿಳಿದರು ॥ 150

ಕೂಡಲೇ ಎನಿಸಿತು ಹಾಟೆಯವರ ಮನಸಿಗೆ । ಇದಕಾಗಿಯೇ ಹೋಗಬೇಕು ಶಿರಡಿಗೆ ।
ಆ ಎಲ್ಲ ಪದಾರ್ಥಗಳ ಜೊತೆಗೆ । ಬಾಬಾರಿಗೆ ಪ್ರತ್ಯಕ್ಷವಾಗಿಯೇ ಅರ್ಪಿಸಬೇಕು ॥ 151

ಆದರೆ ಆಗವರು ಗ್ವಾಲೇರದಲ್ಲಿದ್ದರು । ಮುಂಬಯಿಯ ಸ್ನೇಹಿತನಿಗೆ ಪತ್ರ ಬರೆದರು ।
ಅದರಲ್ಲೆಲ್ಲ ತಿಳಿಸಿದರು । ನೀವು ಸ್ವತಃ ಶಿರಡಿಗೆ ಹೋಗಬೇಕೆಂದು ॥ 152

ಇದರ ಹಿಂದೆಯೇ ಟಪಾಲಿನಿಂದ ದುಡ್ಡು ಬರುವದು । ತೆಗೆದುಕೊಳ್ಳಬೇಕೆಲ್ಲ ಸಾಹಿತ್ಯವ ಯೋಗ್ಯವೆನಿಸಿದ್ದು ।
ಒಳ್ಳೆಯ ಅವರೇಕಾಯಿ ತೆಗೆದುಕೊಳ್ಳಲು ಮರೆಯಬಾರದು । ಹೇಗಾದರೂ ಮಾಡಿ ದೊರಕಿಸಬೇಕವುಗಳನ ॥ 153

ಉಳಿದ ದುಡ್ಡನು ಜೊತೆಗೆ ಒಯ್ದು । ಶಿಧಾದ ಜೊತೆಗೆ ಬಾಬಾರಿಗೆ ಕೊಡುವದು ।
ಚರಣ ವಂದಿಸಿ ಪ್ರಸಾದ ಬೇಡುವದು । ಆ ಪ್ರಸಾದವ ನನಗೆ ಕಳಿಸಬೇಕು ॥ 154

ದುಡ್ಡು ಬಂದ ಕೂಡಲೇ ಹೊರಟ ಸ್ನೇಹಿತ । ಶಿರಡಿಗೆ ಹೋಗಿ ಎಲ್ಲ ಸಾಮಾನು ಕೊಂಡುಕೊಳ್ಳುತ ।
ಅವರೇಕಾಯಿ ಸಿಗದೆ ಸ್ವಲ್ಪ ಅಡ್ಡಿ ಎನಿಸುತ । ಅಷ್ಟರಲಿ ಒಂದು ಬುಟ್ಟಿ ಬಂತು ॥ 155

ಆ ಬುಟ್ಟಿಯನು ಹೊತ್ತುಕೊಂಡವಳು । ಅವಳ ಕರೆದುನೋಡುತಿರಲು ।
ಕೈ ಹಾಕಿದಾಗ ಅವರೇಕಾಯಿಯೇ ಸಿಗಲು । ಅತೀ ಆಶ್ಚರ್ಯ ಎಲ್ಲರಿಗೆ ॥ 156

ಆಮೇಲೆ ಎಲ್ಲ ಸಾಹಿತ್ಯ ತಂದರು । ಮಹಾರಾಜರಿಗೆ ಅರ್ಪಿಸಿದರು ।
ಅವರು ನಿರ್ಮೋಣಕರರಿಗೆ ಕೊಟ್ಟರು । ಬೆಳಿಗ್ಗೆ ಅಟ್ಟು ನೈವೇದ್ಯ ಮಾಡಿದರು ॥ 157

ಆಮೇಲೆ ಬಾಬಾ ಊಟಕ್ಕೆ ಕುಳಿತರು । ಅನ್ನ ತೊವ್ವೆಗಳನೊಂದೂ ಮುಟ್ಟದಾದರು ।
ಅವರೇಕಾಯಿಯ ಮಾತ್ರ ತೆಗೆದುಕೊಂಡರು । ಆಶ್ಚರ್ಯವೆನಿಸಿತೆಲ್ಲರಿಗೆ ॥ 158

ಅವರೆಯನ್ನಷ್ಟೇ ತೆಗೆದುಕೊಂಡರು । ಅವುಗಳ ಮಾತ್ರ ತಿಂದರು ।
ಎಂಬ ವೃತ್ತಾಂತವ ತಿಳಿದರು । ಹಾಟೆ ಅತ್ಯಾನಂದಭರಿತರಾದರು ॥ 159

ಯಾರ ಮನದಲೆಂತು ಭಾವ । ಅಂತೆಯೇ ಹಾಟೆಯವರಿಗೆ ಬಂತು ಅನುಭವ ।
ಮುಂದಿನ ಕಥೆಯ ಕೌತುಕವ । ಸಾಯಿಯ ಸವಿಸಾಮಿಪ್ಯ ಅನುಭವಿಸಿರಿ ॥ 160

ಸಾಯಿಯ ಹಸ್ತ ಸ್ಪರ್ಶವಾದದ್ದು । ಮನೆಯಲಿರಬೇಕು ರೂಪಾಯಿಯೊಂದು ।
ಹಾಟೆಯವರ ಮನದಿಚ್ಛೆ ಇದು । ಅವರ ಮನೋಗತವ ಪೂರೈಸಿದರು ಸಾಯಿ ॥ 161

ಮನದ ವೃತ್ತಿಗಳು ನೂರೆಂಟು । ಒಳ್ಳೆಯದನೆ ಗ್ರಹಿಸಬೇಕು ಕೆಟ್ಟದನು ಬಿಟ್ಟು ।
ಆಮೇಲೆ ನೋಡಿ ಭಕ್ತರ ಬೆನ್ನಹಿಂದೆ ನಿಂತು । ಮಹಾರಾಜರೆಂತು ತೋರುವರು ಕೈಚಳಕ ॥162

ಹೀಗೆ ಸದಿಚ್ಛೆ ನಿರ್ಮಾಣವಾಗಲು । ಸಫಲವಾಗುವದೊಂದೇ ಕ್ಷಣದೊಳು ।
ಸಾಯಿ ದರ್ಶನೇಚ್ಛೆ ಇರಲು । ಸ್ನೇಹಿತನೊಬ್ಬ ಹೊರಟ ಕೂಡಲೇ ॥ 163

ಮಾತ್ರ ಇರಬೇಕು ಮಧುರ ವೃತ್ತಿ । ಇಚ್ಛೆ ಪೂರೈಸುತ ವಿಚಿತ್ರ ರೀತಿ ।
ಯಾರಿಗೆ ಸದ್ವೃತ್ತಿಯಲಿ ಆಸಕ್ತಿ । ಅವರಿಷ್ಟ ಅವರ ಕೈಯಲ್ಲಿ ॥ 164

ಆ ಸ್ನೇಹಿತನಿಗೆ ಅತಿ ಪ್ರೀತಿಯಾಯಿತು । ಹಾಟೆ ಅವರ ಕೈಯಲಿ ಒಂದು ರೂಪಾಯಿ ಇತ್ತು ।
ಮರೆಯದೇ ಈ ರೂಪಾಯಿಯನಷ್ಟು । ಬಾಬಾರ ಕೈಯಲಿ ಹಾಕಬೇಕು ॥ 165

ಶಿರಡಿಗೆ ಹೋಗಿ ಸ್ನೇಹಿತರು । ಕೂಡಲೇ ಬಾಬಾರ ದರ್ಶನ ಪಡೆದರು ।
ಅವರ ಚರಣದಲಿ ಶಿರವಿಟ್ಟರು । ಬಾಬಾರ ಎದುರಿಗೆ ಕುಳಿತರು ॥ 166

ದಕ್ಷಿಣೆಗಾಗಿ ಕೈಮುಂದೆ ಚಾಚಾಲು । ತಮ್ಮ ದಕ್ಷಿಣೆಯ ಮೊದಲು ಕೊಟ್ಟರು ।
ತಡವಿಲ್ಲದೇ ಬಾಬಾ ಜೇಬಿಗಿಳಿಸಿದರು । ಆಮೇಲೆ ಹಾಟೇನ ರೂಪಾಯಿ ತೆಗೆದರು ಸ್ನೇಹಿತ ॥ 167

ಆ ರೂಪಾಯಿಯನೂ ಕೈಮುಗಿದು । ಬಾಬಾರ ಅಂಗೈಯ್ಯಲ್ಲಿಟ್ಟು ।
ನನ್ನೊಡನೆ ಈ ದಕ್ಷಿಣೆಯನು ಕೊಟ್ಟು । ಡಾಕ್ಟರ್ ಹಾಟೇ ಕಳಿಸಿರುವರೆಂದ ॥ 168

ಸರ್ವ ಹೃದಯವಾಸಿ ಸಾಯಿ ಇವ । ಈಗ ಹಾಟೇ ಗ್ವಾಲೇರದಲ್ಲಿರುವ ।
ಆದರೂ ತಿಳಿದವನ ಮನಕಾಮವ । ಕುಳಿತರು ರೂಪಾಯಿಯನ್ನು ನೋಡುತ ॥ 169

ಪ್ರೇಮದಿಂದ ಕೂಡಿದವರಾಗಿ । ಬಾಬಾ ರೂಪಾಯಿ ಹಿಡಿದರು ಮುಖಕೆ ಎದುರಾಗಿ ।
ತದೇಕಚಿತ್ತದಿಂದದ ನೋಡುತಿರಲಾಗಿ । ಜನರು ಹೀಗೇಕೆಂದು ನೋಡತೊಡಗಿದರು ॥ 170

ಮೇಲಿಂದ ಮೇಲೆ ಅದನು ಬಲ ಹೆಬ್ಬೆರಳಿನಿಂದ ಹಾರಿಸುತ । ಮತ್ತೆ ಅಂಗೈಯಲ್ಲಿ ಹಿಡಿಯುತ ।
ಹೀಗೆ ಕ್ಷಣವೊಂದು ಅದರಿಂದಾಟವಾಡುತ । ಆ ರೂಪಾಯಿಯ ತಿರುಗಿ ಕೊಟ್ಟರು ॥ 171

ಎಂದರು "ಇದನು ಯಾರದವರಿಗೆ ಕೊಡು । ಜೊತೆಗೆ ಉದಿಯಪ್ರಸಾದವನೂ ತೆಗೆದುಕೊಂಡು
।ನಮಗೆ ನಿನ್ನದು ಏನೂ ಬೇಕಾಗಿಲ್ಲವೆಂದು । ಸ್ವಸ್ಥವಾಗಿರಲು ಹೇಳವನಿಗೆ" ॥ 172

ಬಾಬಾರ ಸಾಷ್ಟಾಂಗ ನಮಿಸಿ । ಉದಿ ಪ್ರಸಾದವನಲ್ಲಿಂದಲೇ ಕಳಿಸಿ ।
ಬಾಬಾರ ಆಜ್ಞೆ ಸ್ವೀಕರಿಸಿ । ಗ್ವಾಲೇರದಿ ತನ್ನ ಮನೆಗೆ ಬಂದ ॥ 173

ಗ್ವಾಲೇರಕ್ಕೆ ತಿರುಗಿ ಬಂದು । ಹೇಳಿದನೆಲ್ಲ ವೃತ್ತವ ನಡೆದದ್ದು ।
ಹಾಟೆಯವರ ಹೃದಯ ತುಂಬಿ ಬಂದು । ಆಗ ಆ ರೂಪಾಯಿಯನವರಿಗೆ ಕೊಟ್ಟ ॥ 174

ಎಂದನು ನನ್ನ ಮನದಲಿದ್ದದ್ದು । ಹೇಗೆ ಸಂಕೇತವ ಮಾಡಿದ್ದು ।
ಆ ನನ್ನ ಮನೋಗತವ ತಿಳಿದು । ಬಾಬಾ ಪೂರೈಸಿದರು ಮನೋರಥ ॥ 175

ಹಾಟೆಯವರಿಗೆ ಹೀಗೆ ಎನಿಸಿತು । ಅದಾದರೂ ಅವರ ಕಲ್ಪನೆಯಾಗಿತ್ತು ।
ಸಂತರ ಯೋಜನೆ ಯಾರಿಗೆ ತಿಳಿದೀತು । ಅವರ ಪ್ರಯೋಜನವೇನು ॥ 176

ಇದನೆಲ್ಲ ನಿಶ್ಚಿತವೆಂದು ತಿಳಿದರೆ । ಈ ಎರಡನೆಯ ಪ್ರಚೀತಿಯ ನೋಡಿದರೆ ।
ಅವರ ಮನೋಗತನರಿತವರವರೇ । ಅದು ಇದಕಿಂತ ವಿಪರೀತವಿರುವದು ॥ 177

ಒಬ್ಬನ ರೂಪಾಯಿಯ ತಿರುಗಿ ಕೊಡುವರು । ಇನ್ನೊಬ್ಬರದನು ಬೇಜಿನಲಿಡುವರು ।
ಕಾರಣವಿದಕೆ ತಿಳಿದವರಾರು । ಅವರ ಮನೋಗತ ಅವರಿಗೇ ಗೊತ್ತು ॥ 178

ಅವರ ಕಾರಣ ಅವರಿಗೇ ತಿಳಿದಿರುವದು । ನಾವು ಮಾತ್ರ ಮೋಜು ನೋಡುವದು ।
ಇಂಥ ಸುಸಂಧಿಯ ಕಳಕೊಳ್ಳಬಾರದು । ಈ ಅರ್ಥದ ಕಥೆಯ ಕೇಳಿರಿ ॥ 179

ಒಮ್ಮೆ ವಾಮನ ನಾರ್ವೇಕರ । ಅವರಿಗೆ ಬಾಬಾರ ಪ್ರೇಮ ಅಪಾರ ।
ತಂದಿದ್ದರೊಂದು ರೂಪಾಯಿ ಸುಂದರ । ಭಕ್ತಿ ಪುರಃಸರ ಅರ್ಪಿಸಲು ॥ 180

ಒಂದೆಡೆ ಇದ್ದಿರದರಲಕೆತ್ತಿ । ರಾಮ ಲಕ್ಷ್ಮಣ ಸೀತಾಪತಿ ।
ಎರಡನೆಯ ಮಗ್ಗುಲಿಗೆ ರಮ್ಯ ಮೂರ್ತಿ । ಇತ್ತು ಮಾರುತಿಯು ಕೈಮುಗಿದದ್ದು ॥181

ಅರ್ಪಣ ಮಾಡುವಾಗವರ ಮನದಲಿ । ಹಸ್ತಸ್ಪರ್ಶ ಮಾಡಿ ಅದ ತಿರುಗಿ ಕೊಡಲಿ ।
ಉದೀ ಪ್ರಸಾದಗಳ ಜೊತೆಯಲಿ । ಎಂದು ಕೈಯ್ಯಲಿ ಕೊಟ್ಟಿದ್ದರು ॥ 182

ಯಾರ ಮನದಲಿ ಏನಿರುವದು । ಬಾಬಾರಿಗೆ ಅದು ಎಲ್ಲ ತಿಳಿದಿರುವದು ।
ಆದರೆ ಆ ರೂಪಾಯಿ ಕೈಗೆ ಬೀಳುವದೆ ತಡ । ಜೇಬಿಗೆ ಅದನು ಹಾಕಿದರು ॥ 183

ವಾಮನರಾಯರ ಮನದಲಿದ್ದುದನು । ಮಾಧವರಾಯ ಬಾಬಾರಿಗೆ ಹೇಳಿದನು ।
ಅತ್ಯಂತವಾಗಿ ವಿನಂತಿಸಿದನು । ರೂಪಾಯಿಯ ತಿರುಗಿ ಕೊಡಬೇಕೆಂದು ॥ 184

"ಅವನಿಗೇನದನು ಕೊಡುವದು । ನಾವೇ ಅದನು ಇಟ್ಟುಕೊಳ್ಳುವದು" ।
ಬಾಬಾ ಸ್ಪಷ್ಟವಾಗಿ ಹೀಗೆ ನುಡಿದದ್ದು । ವಾಮನರಾಯರ ಎದುರಿಗೇ ॥ 185

"ಆದರೂ ಇದರ ಬೆಲೆಯೆಂದು । ಕೊಟ್ಟರೆ ರೂಪಾಯಿ ಇಪ್ಪತ್ತೈದು ।
ನಾನಿದವನಿಗೆ ಕೊಡುವೆನೆಂದು । ಹೇಳಬೇಕಿದನು ಅವನಿಗೆಂದರು" ॥ 186

ಆಮೇಲೆ ಆ ರೂಪಾಯಿಗಾಗಿ । ವಾಮನರಾಯರು ಲಗು ಬಗಿ ।
ಯಾರಯಾರದೋ ಹತ್ತಿರ ಹೋಗಿ । ತಂದು ಬಾಬಾರಿಗೆ ಕೊಟ್ಟರು ॥ 187

ಅವುಗಳನೂ ಮೊದಲಿನಂತೆ ಜೇಬಿನಲಿಟ್ಟರು । ಎಂದರು ರೂಪಾಯಿಗಳ ಗುಂಪೆ ಒಟ್ಟಿದರೂ ।
ಆದರ ಬೆಲೆಗೆ ಸರಿಯಾಗದಾದರೂ । ಅವುಗಳ ಬೆಲೆ ಏನದರ ಮುಂದೆ ॥ 188

ಎಂದರು ಶ್ಯಾಮನಿಗೆ ತೆಗೆದುಕೋ ಇದು ನಿನಗೆ । ಇರಲಿದು ನಿನ್ನ ಸಂಗ್ರಹದೊಳಗೆ ।
ಇಟ್ಟಿರು ಇದನು ದೇವರೊಳಗೆ । ನಿತ್ಯ ಪೂಜೆ ಮಾಡಿದರದು ॥ 189

ಇದು ಏಕೆ ಹೀಗೆ ಮಾಡುವಿರೆಂದು । ಕೇಳುವ ಅಧಿಕಾರ ಯಾರದು ।
ಸಾಯಿಗೇ ಯೋಗ್ಯಾಯೋಗ್ಯ ತಿಳಿಯುವದು । ಕೊಡುತೆಗೆದುಕೊಳ್ಳಲು ಸಮರ್ಥರವರು ॥190

ಇರಲಿನ್ನು ಈ ಕಥೆಯ ಮುಗಿಸಿಬಿಟ್ಟು । ಶ್ರೋತೃಗಳ ಚಿತ್ತಕೆ ವಿಶ್ರಾಂತಿ ಕೊಟ್ಟು ।
ಯಾವುದರಿಂದ ಮನನ ಮತ್ತು ನಿಧಿ ಧ್ಯಾಸವಿನಿತು । ಕೇಳಿದ ಕಥೆಯದಾಗುವದು ॥ 191


ಕಿವಿಗಳಿಂದಿದುವರೆಗೆ ಕೇಳಿದ್ದು । ಮನನದ ಹೊರತು ಪಚನವಾಗದು ।
ಶ್ರವಣ ನಿಷ್ಕಾರಣವಾಗುವದು । ನಿಧಿಧ್ಯಾಸವಿಲ್ಲದಿರೆ ॥ 192

ಇನ್ನು ಹೇಮಾಡ ಸಾಯಿಗೆ ಶರಣ । ಮಸ್ತಕದಲಿರಿಸಿಕೊಳುವ ಸಾಯಿಯ ಚರಣ ।
ಎಲ್ಲ ಸಾಧನಗಳಿಗಿದು ಸಾಧನ । ಮುಂದಿನ ನಿವೇದನೆ ಮುಂದೆ ಬರುವದು ॥ 193

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೇ । ಸ್ವಪ್ನ ಕಥನಂ ನಾಮ
ಏಕೋನತ್ರಿಂಶತ್ತಮೋಧ್ಯಾಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣ ಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಓಂ ನಮೋ ಹೇ ಸಾಯಿ ಸದಯಾ । ಭಕ್ತವತ್ಸಲಾ ಕರುಣಾಲಯಾ ।
ದರ್ಶನದಿಂದ ನಿವಾರಿಸುವಿ ಭವಭಯಾ । ಆ ಪದಗಳು ವಿಲಯಕ್ಕೊಯುವಿ ॥ 1

ಮೊದಲಿದ್ದ ನೀ ನಿರ್ಗುಣ ರೂಪದಿಂದ । ಅಂಥ ನೀ ಭಕ್ತ ಭಾವನೆಯ ಗುಣದಿಂದ ।
ಪೋಣಿಸಿ ತಂದೆ ಸುಗುಣತನದಿಂದ । ಸಂತಚೂಡಾಮಣಿ ಸಾಯಿನಾಥ ॥ 2

ನಿಜಭಕ್ತೋದ್ಧಾರಣದ ಕಾರ್ಯ । ಸಂತರಿಗೆಂದಿಗೂ ಅಪರಿಹಾರ್ಯ ।
ನೀನಂತೂ ಸಂತ ವೃಂದದ ಆಚಾರ್ಯ । ನಿನಗೂ ಅದು ಅನಿವಾರ್ಯವೇ ಆಗಿದೆ ॥ 3

ಯಾರು ಹಿಡಿದರು ನಿನ್ನ ಚರಣದ್ವಯ । ಆಯಿತವರದೆಲ್ಲ ಕಲ್ಮಷಲಯ ।
ಆಯಿತು ಪೂರ್ವ ಸಂಸ್ಕಾರೋದಯ । ಮಾರ್ಗ ನಿಷ್ಕಂಟಕ ನಿರ್ಭಯ ॥ 4

ಮಹಾತೀರ್ಥಗಳಿಂದ ಬ್ರಾಹ್ಮಣರು ಬರುವರು । ಗಾಯತ್ರೀ ಪುರಶ್ಚರಣ ಮಾಡುವರು ।
ಪುರಾಣ ಗ್ರಂಥಗಳನೋದುವರು । ನಿಮ್ಮ ಚರಣಗಳ ನೆನೆಸಿಕೊಂಡು ॥ 5

ಸಂಸ್ಕಾರಹೀನ ಅಲ್ಪಶಕ್ತಿ । ಇಂಥವರೇನು ಬಲ್ಲೆವು ಭಕ್ತಿ ।
ಎಲ್ಲರೂ ನಮ್ಮನ್ನು ದೂರ ಮಾಡಿದರೂ ಈ ರೀತಿ । ಸಾಯಿ ಮಾತ್ರ ಕೈ ಬಿಡಲಾರರು ॥ 6

ಅವರ ಕೃಪೆಗೆ ಪಾತ್ರರಾದವರು । ಅಚಿಂತ್ಯ ಮಹಾಶಕ್ತಿಯ ಪಡೆಯುವರು ।
ಆತ್ಮಾನಾತ್ಮ ವಿವೇಕದ್ದಾದರೂ । ಕೂಡಲೇ ಜ್ಞಾನ ಪ್ರಾಪ್ತವಾಗುವದು ॥ 7

ಸಾಯಿ ಮುಖವಚನವನಾಲಿಸಲು । ಭಕ್ತ ಜನರಾಗಿ ಹುಚ್ಚರೊಲು ।
ಒಂದೊಂದು ಶಬ್ದವನೂ ಅಚ್ಚೊತ್ತಿಕೊಳ್ಳಲು । ನಂಬಿ ಪ್ರತೀತಿಯ ಪಡೆವರು ॥ 8

ನಿಜಭಕ್ತರ ಮನೋರಥ । ಸಂಪೂರ್ಣವಾಗಿ ತಿಳಿದಿರವರು ಸಾಯಿನಾಥ ।
ಅವುಗಳ ಪೂರೈಸಲೂ ಅವರೇ ಸಮರ್ಥ । ಅದರಿಂದ ಕೃತಾರ್ಥನು ಅವರಭಕ್ತ ॥ 9

ಸಾಯಿನಾಥಾ ಓಡಿ ಬಾ ಇನ್ನು । ಚರಣದಲಿ ಈ ಶಿರವ ಬಾಗುವೆನು ।
ಮರೆತೆಲ್ಲ ಅಪರಾಧಗಳನು । ದಾಸನ ಚಿಂತೆಯನು ನಿವಾರಿಸು ॥ 10

ಹೀಗೆ ಸಂಕಟದಲಿ ಕಷ್ಟ ಪಡುವಂಥ । ಭಕ್ತನು ನೆನದರೆ ಸಾಯಿನಾಥ ।
ಅವನ ಉದ್ವಿಗ್ನ ಚಿತ್ತ । ಅವನೊಬ್ಬನಿಂದಲೇ ಶಾಂತವಾಗುವದು ॥ 11

ಇಂಥ ಸಾಯಿ ದಯಾಸಾಗರರು । ನನ್ನ ಮೇಲೆ ಕೃಪೆ ಮಾಡಿದರು ।
ಆದರಿಂದಲೇ ಈ ಮಂಗಲಕಾರಕ ಗ್ರಂಥವಾದರೂ । ತಮ್ಮೆದುರು ಸಾದರ ಪಡಿಸುತಿರುವೆ ॥ 12

ಇಲ್ಲದಿರೆ ನನದೆಷ್ಟು ಅಧಿಕಾರ । ಹೊರುತಿದ್ದರಾರು ಈ ಕಾರ್ಯದ ಭಾರ ।
ಅವನದವನೇ ನೋಡಿಕೊಳುವವನಿದ್ದು ಅದರ । ಭಾರವೆಂಥದು ನನ್ನ ಮೇಲೆ ॥ 13

ಇರಲು ಮದ್ವಾಚಾ ಪ್ರಕಾಶಕ । ಸಾಯಿ ಸಮರ್ಥ ಜ್ಞಾನ ದೀಪಕ ।
ಅಜ್ಞಾನ ತಮ ವಿಧ್ವಂಸಕ । ನಾನೇಕೆ ಶಂಕಿತನಾಗಬೇಕು ॥ 14

ಆ ದಯಾಘನ ಪ್ರಭುವಿನದೇ ಭರವಸೆಯಿಲ್ಲ । ಆದರಿಂದ ನನಗೆಷ್ಟೂ ಶ್ರಮವೆನಿಸಿಲ್ಲ ।
ಪೂರೈಸಿತೆನ್ನ ಮನದಿಷ್ಟವೆಲ್ಲ । ಕೃಪಾಪ್ರಸಾದವಿದು ಅವರದು ॥ 15

ಗ್ರಂಥರೂಪದ ಸಂತ ಸೇವೆಯಿದು । ಸಂಚಿತ ನನ್ನ ಪೂರ್ವಪುಣ್ಯದ್ದೇ ಇದು ।
ದೇವನೊಪ್ಪಿಕೊಂಡ ಸವಿಮಾಡಿಕೊಂಡು । ಧನ್ಯ ನಾ ದೈವಾನನದರಿಂದ ॥ 16

ಗತಾಧ್ಯಾಯದಲಿ ಶ್ರವಣವಾಯಿತು । ನಾನಾಪರಿಯ ದೃಷ್ಟಾಂತಗಳನಿತ್ತು ।
ಭಕ್ತರಿಗೆ ಬೋಧಪ್ರಧಾನವೆಂತು । ದಯಾಘನ ಸಾಯಿ ಮಾಡುತಿದ್ದರು ॥ 17

ಈಗ ನಡೆದ ಅಧ್ಯಾಯದಲೊಂದು । ಸಪ್ತ ಶೃಂಗೀ ದೇವಿಯ ಉಪಾಸಕನದು ।
ಸವಿಯಾದ ಕಥೆ ಇರುವದು । ಆನಂದದಾಯಕವಾದುದನು ಕೇಳಿರಿ ॥ 18

ನಿಜಭಕ್ತರನು ದೇವ ದೇವಿಯರು । ಸಂತರ ಕೈಯಿಂದ ಹೇಗೆ ಉದ್ಧರಿಸುವರು ।
ಒಂದು ಚಮತ್ಕಾರವೇ ಇದಾದರೂ । ಸಾದರ ಚಿತ್ತರಾಗಿ ನೋಡಿರಿ ॥ 19

ಮಹಾರಾಜರ ಕಥೆಗಳು ಬಹಳ ಇದ್ದು । ಒಂದಕ್ಕಿಂತ ಒಂದು ಅದ್ಭುತವಾದದ್ದು ।
ಈ ಕಥೆಯಾದರೂ ಕೇಳ ತಕ್ಕಂಥದಿರುವದು । ಲಕ್ಷವಿಟ್ಟು ಕೇಳಬೇಕು ॥ 20

ಕಥೆಯಲ್ಲವಿದು ಅಮೃತಪಾನ । ಇದರಿಂದ ಲಭಿಸುವದು ಸಮಾಧಾನ ।
ತಿಳಿದುಬರುವುದದರಿಂದ ಸಾಯಿಯ ಮಹಿಮಾನ । ವ್ಯಾಪಕತೆಯವರದು ಅದರಂತೆಯೇ ॥ 21

ತರ್ಕವಾದಿಗಳು ಮತ್ತು ಚಿಕಿತ್ಸಕರದು । ಅಂಥವರ ಬೆನ್ನು ಎಂದೂ ಹತ್ತಬಾರದು ।
ಇಲ್ಲಿ ವಾದವಿವಾದಗಳಿರಬಾರದು । ಕೊನೆಯಿಲ್ಲದ ಪ್ರೀತಿ ಮಾತ್ರ ಇರಬೇಕು ॥ 22

ಜ್ಞಾನಿ ಇದ್ದು ಭಾವಿಕನಿರಬೇಕು । ಶ್ರದ್ಧಾಶೀಲನಿದ್ದು ವಿಶ್ವಾಸವಿದ್ದವನಿರಬೇಕು ।
ಅಥವಾ ಸಂತರ ಮನೆಯ ದಾಸನಿರಬೇಕು । ಇತರರಿಗೆಲ್ಲ ಸುಳ್ಳು ಕಥೆಗಳಿವು ॥ 23

ಸಾಯಿ ಲೀಲಾ ಕಲ್ಪತರುವಿದು । ನಿರ್ವಿಕಲ್ಪ ಫಲಪುಷ್ಪ ಬಿಡುವದು ।
ಭಾಗ್ಯಶಾಲಿಯಾದ ಭಕ್ತನಿದ್ದು । ಅಂಥವರಿಗೆ ಇದರಂತ ಹತ್ತುವದು ॥ 24

ಕೇಳಿರಿ ಪರಮಪಾವನ ಕಥೆಯಿದು । ಪರಮಾರ್ಥಿಗಳಿಗೆ ಮೋಕ್ಷದಾಯಕವಿದು ।
ಎಲ್ಲ ಸಾಧನೆಗಳನು ಅಳವಡಿಸಿಕೊಂಡಿದ್ದು । ಕೃತ ಕಲ್ಯಾಣವಿದು ಸಕಲರಿಗೆ ॥ 25

ಸಹಜದಲಿ ಜಡ ಜೀವೋದ್ಧಾರಣ । ಅಂಥ ಈ ಸಾಯಿಕಥಾಮೃತ ಪಾನ ।
ಪ್ರಾಪಂಚಿಕರಿಗೆ ಸಮಾಧಾನ । ಮೋಕ್ಷಸಾಧನ ಮುಮುಕ್ಷುಗಳಿಗೆ ॥ 26

ಇಲ್ಲಿ ಮಾಡಲು ಕಲ್ಪನೆಯೊಂದು । ಬೇರೆ ಕಲ್ಪನೆ ಇಲ್ಲದಾಗುವದು ।
ಹೇಮಾಡನು ಶ್ರೋತೃಗಳ ಕರೆಯುವದು । ಅದಕ್ಕೆ ನಮ್ರನಾಗಿ ತಾನು ॥ 27

ಹೀಗೆ ಕೇಳಲು ಕಥೆಯನೊಂದೊಂದು । ಲೀಲಾರಸಾಸ್ವಾದತೆ ಬೆಳೆಯುವದು ।
ಭವದ ವಾರ್ತೆಯಲಿ ಸಮಾಧಾನವಾಗುವದು । ಸಾಯಿ ಸಮರ್ಥತೆ ಇದೇ ಇಹುದು ॥ 28

ನಾಶಿಕ ಜಿಲ್ಹೆಯಲಿ ವಣಿ ಎಂಬ ಊರು । ಅಲ್ಲಿ ಕಾಕಾ ವೈದ್ಯ ಎಂಬವರು ।
ವಾಸ್ತವ್ಯ ಮಾಡಿಕೊಂಡಿರುವರು । ಉಪಾಧ್ಯ ಆಸ್ಥಾನದಲಿ ದೇವಿಯದು ॥ 29

ದೇವಿಯು ಸಪ್ತಶೃಂಗಿ ಎಂಬ ಹೆಸರ । ಉಪಾಧ್ಯೆ ಅಂತರಂಗದಲಿ ಅಸ್ಥಿರ ।
ಆಪತ್ತಿ ಪ್ರಸಂಗಗಳಲ್ಲಿ ದುರ್ಧರ । ಸಂಸಾರದಲ್ಲಿ ತೊಂದರೆಗೀಡಾದರು ॥ 30

ಕಾಲಚಕ್ರವು ತಿರುಗಲು । ಮನ ತಿರುಗುವದು ತಿರುಗಣಿಯೊಲು ।
ಕ್ಷಣವೊಂದು ಶಾಂತಿ ಲಭಿಸದಾಗಲು । ದೇಹವೂ ಅಸ್ಥಿರವಾಗಿ ತಿರುಗುವದು ॥ 31

ಅದರಿಂದ ಕಾಕಾಜಿ ಅತಿ ದುಃಖಿತರಾಗಿ । ಮಂದಿರ ಒಳಗೆ ಹೋಗಿ ।
ಚಿಂತೆಯಿಂದ ಮುಕ್ತನಾಗಿಸಬೇಕಾಗಿ । ದೇವಿಯ ಬೇಡಿಕೊಂಡರು ದೈನ್ಯದಿಂದ ॥ 32

ಮನೋಭಾವದಿಂದ ಮಾಡಿದ ಪ್ರಾರ್ಥನೆಯನು । ದೇವಿ ಸಂತುಷ್ಟಳಾದಳು ಕೇಳಿ ಅದನು ।
ಅದೇ ರಾತ್ರಿ ಆದ ದೃಷ್ಟಾಂತವನು । ಶ್ರೋತೃಗಳು ಕೇಳಬೇಕದರ ವಿಸ್ಮಯವ ॥ 33

ತಾಯಿ ಸಪ್ತಶೃಂಗೀದೇವಿಯವಳು । ಕಾಕಾಜಿಯ ಕನಸಿನಲಿ ಬಂದಳು ।
ನೀನು ಬಾಬಾರ ಹತ್ತಿರ ಹೋಗೆಂದಳು । ಅದರಿಂದ ನಿನ್ನ ಮನಸ್ಥಿರವಾಗುವದು ॥ 34

ಈ ಬಾಬಾ ಎಲ್ಲಿಯವರಾರು ಎಂಬುದನು । ದೇವಿ ಮಾಡಬಹುದು ಸ್ಪಷ್ಟೀಕರಣವನು ।
ಎನುವಷ್ಟರಲೇ ತೆರೆಯಿತು ಕಣ್ಣು । ಉತ್ಕಂಠಿತ ಮನವಿದ್ದಾಗಲೇ ॥ 35

ಆ ಜಿಜ್ಞಾಸೆ ಹಾಗೇ ಉಳಿಯಿತು । ಸ್ವಪ್ನದ ಭಾವನೆ ಕೂಡಲೇ ಅಳಿಸಿತು ।
ಕಾಕಾಜಿ ಬುದ್ಧಿ ನಡೆಸಿದರಿಂತು । 'ಬಾಬಾ' ಎಂದಳಲ್ಲ ಅವರಾರು ॥ 36

ಬಾಬಾ ಎಂದರೆ ಇರಬಹುದು ತ್ರ್ಯಂಬಕೇಶ್ವರ । ಕಾಕಾಜಿಯ ಮನದಲ್ಲಿ ಇದೇ ನಿರ್ಧಾರ ।
ಹೋಗಿ ದರ್ಶನ ಪಡೆದರು ಸತ್ವರ । ಆದರೂ ಮನದ ತಳಮಳನಿಲ್ಲದು ॥ 37

ಕಾಕಾಜಿ ಹತ್ತು ದಿವಸ । ತ್ರ್ಯಂಬಕೇಶ್ವರದಲ್ಲಿ ಮಾಡಿದರೂ ವಾಸ ।
ಆದರೂ ಉಳಿದರು ಉದಾಸ । ಮನೋಲ್ಲಾಸವು ಲಭಿಸದು ॥ 38

ಮನದ ಚಿಂತೆ ಕಳೆಯದು । ಅದರ ಚಂಚಲತೆ ನಿಲ್ಲದು ।
ದಿನದಿನಕೆ ಉದ್ವಿಗ್ನತೆ ಬೆಳೆದು । ತಿರುಗಿ ಹೊರಟನು ಕಾಕಾಜಿ ॥ 39

ನಿತ್ಯ ಮಾಡಿ ಪ್ರಾತಃಸ್ನಾನ । ರುದ್ರಾಭಿಷೇಕದಿಂದ ಲಿಂಗಾಭಿಷೇಕವನ ।
ಹಿಡಿವನು ಸಂತತಧಾರವನು । ಆದರೂ ಒಳಗಿನ ಅಸ್ಥಿರತೆ ನಿಲ್ಲದು ॥ 40

ಮತ್ತೆ ಹೋಗಿ ದೇವಿಯ ದ್ವಾರಕೆ । ಎಂದ ತ್ರ್ಯಂಬಕೇಶ್ವರಕೆ ಕಳಿಸಿದೆ ಏಕೆ ।
ಬೇಸತ್ತಿರುವೆ ನಾ ಈ ಓಡಾಟಕೆ । ಇನ್ನಾದರೂ ಸ್ಥಿರ ಮಾಡೆನ್ನ ॥ 41

ಈ ರೀತಿ ಅತಿ ಕಕ್ಕುಲತೆಯಿಂದ । ದೇವಿಯನು ಆತ ಪ್ರಾರ್ಥಿಸಿದ ।
ರಾತ್ರಿಯಲಿ ಮತ್ತೆ ದೇವಿದರ್ಶನ ಪಡೆದ । ದೃಷ್ಟಾಂತದಲಿ ಹೇಳಿದಳಾಕೆ ॥ 42

ಬಾಬಾ ಎಂದು ನಾ ಹೇಳಿದ್ದು । ಶಿರಡಿಯ ಸಾಯಿಬಾಬಾರದು ।
ತ್ರ್ಯಂಬಕೇಶ್ವರಕೇತಕೆ ಹೋದದ್ದು । ನಿರರ್ಥಕವಾಗಿ ತಿಳಿದದ್ದು ॥ 43

ಈ ಶಿರಡಿಗೆ ಹೇಗೆ ಹೋಗುವೆನು । ಬಾಬಾ ಯಾರೆಂದು ತಿಳಿಯೆನು ।
ನಮ್ಮಿಂದಲ್ಲಿಗೆ ಹೋಗಲಾದೀತೇನು । ಒಂದೂ ತಿಳಿಯದಾಗಿದೆ ॥ 44

ಆದರೆ ಇರಬೇಕು ಸಂತ ಚರಣದಲಿ ರತ । ಮನದಲಿರಬೇಕು ದರ್ಶನೋದ್ದೇಶಿತ ।
ಸಂತರೇ ಏಕೆ ಪ್ರತ್ಯಕ್ಷ ಅನಂತ । ಅವರ ಸದಿಚ್ಛೆಯ ಪೂರೈಸುವನು ॥ 45

ಯಾರ್ಯಾರು ಸಂತರು ಅವರೆಲ್ಲ ಅನಂತ । ಒಂದಿಷ್ಟೂ ಬೇರಲ್ಲ ಇಬ್ಬರೂ ಒಂದೇ ಇರುತ ।
ಅವರನೆರಡೆಂದು ತಿಳಿಯುವದೇ ದ್ವೈತ । ಸಂತರಿಂದ ಅದ್ವೈತನು ಅನಂತ ॥ 46

ಸಂತ ದರ್ಶನಕೆ ನಡೆದು ಹೋಗುವೆನು । ಮನದ ಇಚ್ಛೆಯ ಪೂರೈಸಿಕೊಳ್ಳುವೆನು ।
ತಿಳಿಯಬೇಕು ಇದು ಕೇವಲ ಅಭಿಮಾನವೆಂಬದನು । ಅಘಟಿತ ಘಟನೆ ಸಂತರದು ॥ 47

ಸಂತರ ಮನಸಿಗೆ ಬಾರದೇ । ಸಂತರ ದರ್ಶನ ಲಭಿಸುವದೇ ।
ಗಿಡದ ಎಲೆಯಾದರೂ ಅಗಲಾಡುವದೇ । ಅವರ ಇಚ್ಛೆಗೆ ಬಾರದೆ ॥ 48

ಯಾರಿಗೆ ಹೇಗೆ ದರ್ಶನದ ಉತ್ಕಂಠೆ । ಹೇಗೆ ಭಾವ ಹೇಗೆ ನಿಷ್ಠೆ ।
ಸ್ವಾನಂದಾನುಭವದ ಪರಾಕಾಷ್ಠೆ । ಭಕ್ತ ಶ್ರೇಷ್ಠನಿಗೆ ಲಭಿಸುವದು ॥ 49

ಸಾಯಿ ದರ್ಶನಕೆ ಹೋಗುವದು ಹೇಗೆ । ವಿವಂಚನೆ ಬಿತ್ತು ಕಾಕಾಜಿಗೆ ।
ಶಿರಡಿಯಿಂದ ಅತಿಥಿಯೊಬ್ಬ ಬಂದನಾಗ್ಯೆ । ಅವರಿರುವ ಸ್ಥಳವನು ಹುಡುಕುತ್ತ ॥ 50

ಸಾಮಾನ್ಯನಲ್ಲ ಅತಿಥಿಯವ । ಎಲ್ಲರಿಗಿಂತ ಬಾಬಾರಿಗೆ ಬೇಕಾದವ ।
ಯಾರೂ ಅವನ ಪ್ರೇಮದ ಸರಿಸಾಟಿ ಇಲ್ಲದವ । ಅಧಿಕಾರವೂ ಧನ್ಯ ಅವನದು ॥ 51

ಮಾಧವರಾಯ ನಾಮಾಭಿಧಾನನು । ದೇಶಪಾಂಡೆ ಮನೆತನದವನು ।
ಬಾಬಾರಿಗೆ ಅತಿ ಸಲುಗೆ ಇರುವವನು । ಬೇರೆಯವರದಲ್ಲಿ ಏನೂ ನಡೆಯದು ॥ 52

ಯಾವಾಗಲೂ ಪ್ರೇಮದ ಜಗಳವನ । ಆಡುವರು ಬಾ ಹೋಗೆಂದು ಮಾತು ಏಕವಚನ ।
ಹೊಟ್ಟೆಯ ಮಗನಂತೆ ಪ್ರೀತಿ ವಿಲಕ್ಷಣ । ಬಂದನು ತಕ್ಷಣದಲಿ ವಣಿಗೆ ॥ 53

ಮಗುವಿಗೆ ಅನಾರೋಗ್ಯವಾಗಲು । ತಾಯಿ ದೇವಿಗೆ ಹರಕೆ ಹೊರುವಳು ।
ಹಾಕಿದೆ ನೀ ಮಗುವನಿನ್ನ ಉಡಿಯೊಳು । ಕಾಯುವದು ಕೊಲುವದು ನಿನ್ನನೇ ಕೂಡಿದೆ ॥ 54

ನನ್ನ ಮಗುವಿಗೆ ಗುಣವಾದ ಮೇಲೆ । ಹಾಕುವೆನು ನಿನ್ನ ಚರಣದ ಮೇಲೆ ।
ಈ ಪ್ರಕಾರ ಹರಕೆ ಕೇಳಿದ ಕೂಡಲೇ । ಮಗುವಿಗೆ ಗುಣವಾಗುವದು ॥ 55

ವೈದ್ಯನನೇನು ಏನು ದೇವರನು । ಕಾರ್ಯ ಮುಗಿದ ಮೇಲೆ ಮರೆತು ಹೋಗವದು ।
ವಿಪತ್ಕಾಲವೊದಗಿದಾಗಲೇ ಹರಕೆ ನೆನಪಾಗವದು । ಅದ ಮುಟ್ಟಸದಿದ್ದರೆ ಭಯವೆಂದಿಗೂ ॥ 56

ಎಷ್ಟೋ ವರುಷ, ತಿಂಗಳು, ದಿನಗಳು । ಕಳೆದಾಗ ಹರಕೆ ಮರೆತು ಹೋಗಿರಲು ।
ಕೊನೆಗೆ ಮಾತೆಯ ಅಂತ ಸಮಯದೊಳು । ಮಾಧವರಾಯನಿಗೆ ವಿನಂತಿಸಿದಳು ॥ 57

ಬಹಳ ವರ್ಷಗಳ ಹರಕೆ ಇದು । ಮುಟ್ಟಸುವೆ ಮುಟ್ಟಸುವೆನೆನುತ ಹೋದವು ದಿನಗಳು ಕಳೆದು ।
ಒಳ್ಳೆಯದಲ್ಲವಿನ್ನು ತಡ ಮಾಡುವದು । ದೇವಿಯ ದರ್ಶನಕೆ ಹೋಗಿ ಬಾ ॥ 58

ಹಾಗೆಯೇ ಮಾತೆಯ ಎರಡೂ ಸ್ತನಗಳಿಗೆ । ಖಂಡಿಕೆ ಹುಣ್ಣಾಗಿ ಬಹಳ ನೋವಾಗೆ ।
ಸಹಿಸಲಾರದ ಕ್ಲೇಶವಾದಾಗ್ಯೆ । ದೇವಿಗೆ ಮತ್ತೊಂದು ಹರಕೆ ಹೊತ್ತಳು ॥ 59

ಮಾತೆ ಬರುವೆ ನಾ ಲೋಟಾಂಗಣದಿಂದ । ಬಿಡಿಸಿದರೆ ನೀನೆನ್ನ ಈ ಯಾತನೆಯಿಂದ ।
ರೌಪ್ಯ ಸ್ತನಗಳನೆರಡು ನಿನ್ನ ಮೇಲಿಂದ । ಇಳಿಸಿ ನಿನಗರ್ಪಿಸುವೆನು ॥ 60

ಮುಟ್ಟಸಬೇಕು ಹರಕೆಯನೆನುತಲಿ । ಮುಟ್ಟಸಲಾಗಿಲಿಲ್ಲ ಆ ಹರಕೆಯನಾಗಲಿ ।
ನೆನಪಾಯಿತು ಅವಳಿಗೆ ಕೊನಯಲಿ । ದೇಹಾವಸಾನದ ಕಾಲಕ್ಕೆ ॥ 61

ಬಾಬಾನಿಗೆ ಈ ನೆನಪು ಮಾಡಿ । ಮುಟ್ಟಿಸುವೆನೆಂಬ ವಚನವ ಬೇಡಿ ।
ಸಮರಸಳಾದಳು ಹರಿ ಚರಣದಿ । ದೇಹಾವಸಾನವಾಯಿತಾಗ ॥ 62

ಮುಂದೆ ಹೋಗೋಣ ಹೋಗೋಣ ಎನ್ನುತ । ದಿವಸ ತಿಂಗಳು ವರ್ಷಗಳಾಗುತ ।
ಮಾಧವರಾಯನೂ ಮರೆತುಬಿಟ್ಟ । ಹರಕೆ ಉಳಿದೇ ಹೋಯಿತು ॥ 63

ಈ ರೀತಿ ಮೂವತ್ತು ವರುಷಗಳಾಗುತ । ಆಗ ಶಿರಡಿಯಲೇನು ನಡೆಯುತ ।
ಜ್ಯೋತಿಷಿಯೊಬ್ಬ ಪ್ರವಾಸ ಮಾಡುತ । ಅದೇ ಸ್ಥಾನಕೆ ಬಂದನು ॥ 64

ಜ್ಯೋತಿರ್ವಿದ್ಯೆಯಲಿ ಜ್ಞಾನಗಹನ । ತಿಳಿದಿದ್ದ ಭೂತ-ಭವಿಷ್ಯ-ವರ್ತಮಾನ ।
ತೃಪ್ತ ಪಡಿಸಿದ್ದ ಅನೇಕ ಜಿಜ್ಞಾಸುಗಳನ । ಒಳ್ಳೇ ಹೆಸರು ಗಳಿಸಿದ್ದ ॥ 65

ಶ್ರೀಮಂತ ಕೇಶವರಾವಜಿ ಬುಟ್ಟಿಯವರನು । ಇನ್ನೂ ಅನೇಕರಿಗೆ ಹೇಳಿ ಭವಿಷ್ಯವನು ।
ಸಂತುಷ್ಟಗೊಳಿಸಿ ಎಲ್ಲರನೂ । ಅಲ್ಪ ಕಾಲದಲೇ ಹೌದೆನಿಸಿಕೊಂಡನು ॥ 66

ಮಾಧವರಾಯರ ಸೋದರ ಚಿಕ್ಕವನು । ಬಾಪಾಜಿ ತನ್ನ ಭವಿಷ್ಯ ಕೇಳಿದನು ।
ಜ್ಯೋತಿಷಿ ಆಗ ಹೇಳಿದನು । ದೇವಿ ಕೋಪವಿದೆ ಅವನ ಮೇಲೆ ॥ 67

ಎಂದ ಮಾತೆ ಕೇಳಿಕೊಂಡ ಹರಕೆ । ಅವಳ ದೇಹಾಂತದ ಕಾಲಕೆ ।
ನಿನ್ನ ಹಿರಿಯ ಅಣ್ಣನಿಗೆ ಅಕೆ । ಅದನು ಮುಟ್ಟಿಸಲು ಅಜ್ಞಾಪಿಸಿದಳು ॥ 68

ಇದುವರೆಗೆ ಅದ ಮುಟ್ಟಿಸದಿರಲು । ದೇವಿ ತೊಂದರೆ ಕೊಡುತಿಹಳು ।
ಮಾಧವರಾವ ಮನೆಗೆ ಬರಲು । ಬಾಪಾಜಿ ಇದನೆಲ್ಲ ಹೇಳಿದವನವನಿಗೆ ॥ 69

ಮಾಧವರಾಯ ನೆನೆಸಿಕೊಂಡ । ಕೂಡಲೇ ಅಕ್ಕಸಾಲಿಗನ ಕರೆಸಿದ ।
ಎರಡು ರೌಪ್ಯ ಸ್ತನವ ಮಾಡಿಸಿದ । ಹೋದ ಮಶೀದಿಗೆ ಅವ ತೆಗೆದುಕೊಂಡು ॥70

ಬಾಬಾರಿಗೆ ನಮಸ್ಕರಿಸಿ । ಬೆಳ್ಳೀ ಸ್ತನಗಳ ಬಾಬಾರೆದುರಿಗಿರಿಸಿ ।
ಎಂದ ಈ ಹರಕೆಯನು ಒಪ್ಪಿಸಿ । ಕೊಳಬೇಕೆಂದು ವಿನಂತಿಸಿದ ॥ 71

ನೀನೇ ನಮ್ಮ ಸಪ್ತ ಶೃಂಗಿ । ನೀನೇ ದೇವಿಯಾಗಿಹೆ ನಮಗಾಗಿ ।
ತೆಗೆದುಕೋ ವಚನದಂತಿತ್ತ ದೇಣಿಗೆ । ತೆಗೆದುಕೊಂಡು ಶಾಂತಳಾಗಿನ್ನು ॥ 72

ಬಾಬಾ ನುಡಿದರು ಪ್ರತ್ಯುತ್ತರವಾಗಿ । ಸಪ್ತ ಶೃಂಗಿಯ ಮಂದಿರಕೆ ಹೋಗಿ ।
ಇದನವಳ ಚರಣದಲಿಡು ಹರಕೆಯಾಗಿ । ಈ ಸುಂದರ ಸ್ತನಗಳ ನಿಜಕರಗಳಿಂದ ॥73

ಹೀಗೆ ಮಾಡಲು ಬಾಬಾ ಆಗ್ರಹ । ಮಾಧವರಾಯರ ಮನದ್ದೂ ಗ್ರಹ ।
ಅಂತಯೇ ಆಗಿ ಬಿಟ್ಟರು ಗೃಹ । ದರ್ಶನದ ನಿಗ್ರಹವಾಯಿತು ॥ 74

ಬಾಬಾರ ದರ್ಶನಕೆ ಹೋದ । ಶುಭಾಶೀರ್ವಾದಗಳ ಬೇಡಿದ ।
ಉದಿ ಪ್ರಸಾದಗಳ ತೆಗೆದುಕೊಂಡು । ಅನುಜ್ಞೆ ಪಡೆದು ಹೊರಟನಾಗ ॥ 75

ಸಪ್ತ ಶೃಂಗಿಗೆ ಬಂದರು । ಕುಲೋಪಧ್ಯಾಯನ ಹುಡುಕತೊಡಗಿದರು ।
ಸುದೈವದಿಂದ ಅನಾಯಾಸವಾಗಿ ಪ್ರಾಪ್ತರಾದರು । ಕಾಕಾಜಿಯ ಮನೆಯಲ್ಲಿ ॥ 76

ಕಾಕಾಜಿಗೆ ಬಹಳ ಆತುರವಾಗಿತ್ತು । ಬೇಗ ಬಾಬಾರ ನೋಡಬೇಕಿತ್ತು ।
ಎನುವಾಗ ಮಾಧವರಾಯರ ಭೆಟ್ಟಿಯಾಯಿತು । ಇದು ಏನು ಸಾಮಾನ್ಯ ಮಾತೆ ! ॥ 77

ತಾವು ಎಲ್ಲಿಯವರು ಯಾರೆಂದು ಕೇಳಲು । ಶಿರಡಿಯಿಂದ ಬಂದಿರುವರೆಂದು ತಿಳಿಯಲು ।
ಮಿತಿಮೀರಿದ ಆನಂದವಾಗಲು । ಅಪ್ಪಿಕೊಂಡರೊಬ್ಬರನೊಬ್ಬರು ॥ 78

ಹೀಗಿಬ್ಬರೂ ಆಗಿ ಪ್ರಸನ್ನಚಿತ್ತ । ಸಾಯಿ ಲೀಲೆಯನು ಹೊಗಳುತ ।
ಹರಕೆಯ ಕೆಲಸವ ಪೂರ್ಣಗೊಳಿಸುತ । ಉಪಾಧ್ಯೆ ಶಿರಡಿಗೆ ಹೊರಟರು ॥ 79

ಮಾಧವರಾಯರಂಥವರ ಜೊತೆ ಸಿಗುತ । ಅದು ದೊರೆತುದು ಹೀಗೆ ಅಕಲ್ಪಿತ ।
ಉಪಾಧ್ಯೆಯವರಾದರು ಆನಂದಭರಿತ । ಶಿರಡಿಯತ್ತ ಹೊರಟರಿಬ್ಬರೂ ॥ 80

ಹರಕೆಯನಲ್ಲಿ ಮುಟ್ಟಿಸಿದರು । ಕೂಡಲೇ ಶಿರಡಿಗೆ ಬಂದರಿಬ್ಬರೂ ।
ತತ್‌ಕ್ಷಣ ಸಾಯಿದರ್ಶನಕೆ ಹೊರಟರು । ಪರಮ ಪ್ರೀತಿಯಲಿ ಉತ್ಕಂಠಿತರಾಗಿ ॥81

ಮೊದಲು ಮನದಲಿ ಯೋಚಿಸಿದಂತೆ । ಹೊರಟರು ಹಾಗೇ ತಡಮಾಡದೇ ।
ಕಾಕಾಜಿ ಬಂದರು ಗೋದಾವರಿಯ ದಡದೇ । ಅಲ್ಲಿಂದ ಶಿರಡಿ ಸನ್ನಿಧ ॥ 82

ಪೂಜಾರಿ ಬಾಬಾರ ಚರಣಕ್ಕೆ ವಂದಿಸಿದ । ಅಶ್ರುಜಲದಲಿ ಚರಣಗಳ ಮೀಯಿಸಿದ ।
ಸುಖಸಂಪನ್ನನಾಗಿ ದರ್ಶನದಿಂದ । ಚಿತ್ತವೂ ಪ್ರಸನ್ನವಾಯಿತು ॥ 83

ದೇವಿಯ ದೃಷ್ಟಾಂತವಿತ್ತದ್ದು ಯಾವುದಕೆ । ಆ ಬಾಬಾ ಸಮರ್ಥರ ಕಂಡು ಎದುರಿಗೆ ।
ಯಥಾರ್ಥದಲಿ ಸುಖವೆನಿಸಿತು ಕಾಕಾಜಿಗೆ । ಅವರ ಮನೋರಥ ಪೂರೈಸಿತ್ತು ॥ 84

ಕಾಕಾಜಿ ಆದರು ಸುಖಸಂಪನ್ನ । ದರ್ಶನ ಲಾಭದಿಂದ ಚಿತ್ತ ಪ್ರಸನ್ನ ।
ನಿಜದಲಿ ನಿಶ್ಚಿಂತವಾಯಿತು ಮನ । ಕೃಪಾಘನ ವರ್ಷಿಸಿದಾಗ ॥ 85

ಮನದ ಅಸ್ಥಿರತೆ ನಿಂತಿತು । ತಮಗೇ ಆಶ್ಚರ್ಯವಾಯಿತು ।
ಎಂಥ ವಿಲಕ್ಷಣ ಜರುಗಿತು । ಎಂದು ತಮ್ಮನ್ನು ತಾವೇ ಕೇಳಿಕೊಂಡರು ॥ 86

ಒಂದೂ ಮಾತನಾಡಿಲ್ಲ । ಪ್ರಶ್ನೆ ಕೇಳಿ ಸಮಾಧಾನ ಹೇಳುವದೂ ನಡೆದಿಲ್ಲ ।
ಆಶೀರ್ವಾದವನೂ ಇತ್ತಿಲ್ಲ । ಕೇವಲ ದರ್ಶನವೇ ಸುಖದಾಯಕವಾಗಿದೆ ॥ 87

ನನ್ನ ಚಂಚಲವೃತ್ತಿ । ದರ್ಶನ ಮಾತ್ರದಿಂದಾಯಿತು ನಿವೃತ್ತಿ ।
ಲಭಿಸಿತು ಅಲೌಕಿಕ ಸುಖಶಾಂತಿ । ದರ್ಶನ ಮಹಾತ್ಮ್ಯವೆಂದರಿದುವೇ ॥ 88

ಸಾಯಿಯ ಚರಣಗಳ ಕಂಡು । ಬಾಯಿಂದ ಮಾತು ಹೊರಡಲೊಲ್ಲದು ।
ಆನಂದ ಮನದಲ್ಲಿ ಹಿಡಿಸದು । ಬಾಬಾರ ಮಾತುಗಳ ಆಲಿಸುತ ॥ 89

ನಿಜಭಾವದಿಂದ ಉಪಾಧ್ಯೆಯವರು । ಸಮರ್ಥರಿಗೆ ಶರಣಾದರು ।
ಹಿಂದಿನ ವೃತ್ತಿಯ ಮರೆತರು । ನಿಜಸುಖವನು ಪಡೆದರು ॥ 90

ಕಾಕಾಜಿ ಹನ್ನೆರಡು ದಿನ ಹೀಗೆ । ಉಳಿದರು ಶಿರಡಿಯೊಳಗೆ ।
ಬಳಿಕ ತಿರುಗಿ ಹೋದರು ಸಪ್ತಶೃಂಗಿಗೆ । ಸುಸ್ಥಿರ ಮನಸ್ಕರಾಗಿ ಅವರು ॥ 91

ಸ್ವಪ್ನಗಳಿಗೂ ಇರುವದು ಕಾಲ । ಉಷಃಕಾಲ ಅಥವಾ ಪ್ರಾತಃಕಾಲ ।
ಆಗ ಬಿದ್ದ ಕನಸುಗಳಿಗುಂಟು ಫಲ । ಇನ್ನಿತರ ಕಾಲದಲಿ ಕಂಡ ಕನಸು ನಿಷ್ಫಲ ॥ 92

ಹೀಗೆ ಪ್ರಸಿದ್ಧಿ ಇದೆ ಎಲ್ಲೆಡೆಗೆ । ಆದರೆ ಶಿರಡಿಯಲಿ ಕಂಡ ಸ್ವಪ್ನ ಸಿದ್ಧಿಗೆ ।
ಸ್ವಪ್ನ ಬೀಳಲಿ ಎಲ್ಲಿಯೇ ಹೇಗೇ । ಭಕ್ತರಿಗೆ ಅಭಾಧಿತ ಅನುಭವ ॥ 93

ಈ ಅರ್ಥದ ವಾರ್ತೆಯನು । ಶ್ರೋತೃಗಳಿಗಾಗಿ ಸಾದರ ಪಡಿಸ್ತುವೆನು ।
ಹೆಚ್ಚಿಸುವದದು ಶ್ರವಣೋಲ್ಹಾಸತೆಯನು । ಕೇಳಿ ಕೌತುಕವೆನಿಸುವುದು ॥ 94

ಒಂದು ದಿನ ಮಧ್ಯಾನ್ಹದಲಿ । ಬಾಬಾ ಹೇಳಿದರು ದೀಕ್ಷಿತರಲ್ಲಿ ।
ರಾಹತೆಗೆ ಹೋಗಿ ಟಾಂಗೆಯಲಿ । ಖುಶಾಲ ಭಾವೂನ ಕರೆದು ತಾ ॥ 95

ಬಹಳ ದಿನಗಳಾಗಿದ್ದು । ಎನಿಸುತಿದೆ ಕಾಣಬೇಕೆಂದು ।
ಅದಕೆ ಬಾಬಾ ಭೆಟ್ಟಿಗೆಂದು । ನಿಮ್ಮನು ಕರೆದಿರುವರೆಂದು ಹೇಳು ॥ 96

ಆಜ್ಞಾಭಿವಂದನವಗೈದು । ದೀಕ್ಷಿತರು ಹೋದರು ಟಾಂಗಾ ತೆಗೆದುಕೊಂಡು ।
ಕೂಡಲೇ ಖುಶಾಲಭಾವೂನ ಕಂಡು । ತಾವು ಬಂದ ಕಾರಣ ನಿವೇದಿಸಿದರು ॥ 97

ಕೇಳಿ ಬಾಬಾರ ಕರೆಯನಿಂತು । ಖುಶಾಲಭಾವೂನಿಗೆ ಆಶ್ಚರ್ಯವಾಯಿತು ।
ಎಂದರು ಇದೀಗ ನಿದ್ದೆ ಮುಗಿಯಿತು । ನಿದ್ದೆಯಲಿದನೇ ಆಜ್ಞಾಪಿಸಿದರೆನಗೆ ॥ 98

ಇದೀಗ ಊಟ ಮುಗಿಸಿಕೊಂಡು । ವಿಶ್ರಮಿಸುತಿದ್ದೆ ಮಲಗಿಕೊಂಡು ।
ಆಗ ಬಾಬಾ ಕನಸಿನಲ್ಲಿ ಇದನೇ ಹೇಳಿದುದ । ಒಂದು ಕ್ಷಣ ಕಣ್ಣು ಮುಚ್ಚಿದಾಗ ॥ 99

ಈಗಲೇ ಶಿರಡಿಗೆ ನಡೆ ಎಂದರು । ಪ್ರಬಲ ಇಚ್ಛೆ ಇತ್ತು ನನಗಾದರೂ ।
ಏನು ಮಾಡಲಿ ಕುದುರೆ ಇಲ್ಲ ಹತ್ತಿರ । ಅದಕೆ ಹುಡುಗನ ಹತ್ತಿರ ಹೇಳಿ ಕಳಿಸಿದೆ ॥ 100

ಹುಡುಗ ಅಗಸಿಯಿಂದ ಹೊರಬಿದ್ದ । ಅದೇ ನಿಮ್ಮ ತಾಂಗೆಯ ಕಂಡ ।
ದೀಕ್ಷಿತ ವಿನೋದದಿಂದ ನುಡಿದ । ಅದಕೆ ನನಗಾಜ್ಞೆಯನಿತ್ತರು ॥ 101

ನೀವೇ ಈಗ ಬರುವವವರಿದ್ದಲ್ಲಿ । ತಾಂಗಾ ನಿಂತಿದೆ ಸಿದ್ಧವಾಗಿ ಹೊರಗಡೆಯಲ್ಲಿ ।
ಆಗ ಶಿರಡಿಗೆ ಆನಂದದಲಿ । ದೀಕ್ಷಿತರೊಡನೆ ಬಂದರು ॥ 102

ತಾತ್ಪರ್ಯವೆಂದರೆ ಖುಶಾಲಭಾವೂ ಭೆಟ್ಟಿಯಾದರು । ಬಾಬಾರ ಮನದಿಚ್ಛೆ ಪೂರೈಸಿದರು ।
ಖುಶಾಲಭಾವೂ ಸದ್ಗದಿತರಾದರು । ಬಾಬಾರ ಈ ಲೀಲೆಯನು ನೋಡಿ ॥ 103

ಒಮ್ಮೆ ಒಬ್ಬ ಪಂಜಾಬೀ ಬ್ರಾಹ್ಮಣ । ರಾಮಲಾಲನೆಂಬ ಹೆಸರಿನ ।
ಮುಂಬಯಿಯಲ್ಲಿ ಇರುತಿದ್ದನವ । ಕನಸಿನಲಿ ದೃಷ್ಟಾಂತವ ತೋರಿದರು ಬಾಬಾ ॥ 104

ದಿಗ್-ರವಿ-ವಾಯು ವರುಣಾದಿ ದೇವತೆ । ಇವರ ಅನುಗ್ರಹದ ಸತ್ತೆ ।
ಸಬಾಹ್ಯಾಂತರ-ವಿಷಯ ಗ್ರಾಹಕತೆ । ಜಾಗೃತತೆ ಎಂದೆಂಬರು ಅದಕೆ ॥ 105

ವಿರಮಿಸುತಿರುವಾಗೆಲ್ಲ ಇಂದ್ರಿಯಗಣ । ಆಗುವದು ಜಾಗ್ರತ್ಸಂಸ್ಕಾರ ಬೋಧನ ।
ಗ್ರಾಹ್ಯಗ್ರಾಹಕ ರೂಪದಲಿ ಸ್ಫುರಣ । ಹೀಗಿರುವದು ಲಕ್ಷಣ ಸ್ವಪ್ನದ್ದು ॥ 106

ಅವನ ಸ್ವಪ್ನದ ರೀತಿ ವಿಲಕ್ಷಣ । ಗೊತ್ತಿರಲಿಲ್ಲವಗೆ ಬಾಬಾರ ರೂಪ ಲಕ್ಷಣ ।
ಮೊದಲೆಂದೂ ಮಾಡಿರಲಿಲ್ಲ ದರ್ಶನ । ಆದರೆ ನನ್ನ ಕಡೆಗೆ ಬಂದು ಹೋಗೆಂದು ಹೇಳಿದರು ॥ 107

ನೋಡಲು ಸಂತರಂತಿದ್ದರು । ಆದರೆ ಗೊತ್ತಿರಲಿಲ್ಲ ಅವರೆಲ್ಲಿದ್ದರು ।
ರಾಮಲಾಲಾನಾಗಿ ಎಚ್ಚರು । ವಿಚಾರಾಕುಲಿತನಾದ ॥ 108

ಹೋಗಬೇಕೆಂದಿತ್ತು ಅವನ ಮನ । ತಿಳಿದಿರಲಿಲ್ಲ ಅವರಿರುವ ಸ್ಥಳ ವಿಳಾಸಗಳನ ।
ಆದರೂ ದರ್ಶನಕೆ ಬಾ ಎಂದು ಕರೆಯುವವನ । ರೂಪ ಅವನಿಗೆ ತಿಳಿದತ್ತು ॥ 109

ಬಳಿಕ ಅದೇ ದಿನ ಮಧ್ಯಾಹ್ನದಲ್ಲಿ । ಸಹಜವಾಗಿ ಹೋಗುತ್ತಿದ್ದಾಗ ದಾರಿಯಲ್ಲಿ ।
ಭಾವಚಿತ್ರವ ಒಂದು ಅಂಗಡಿಯಲ್ಲಿ । ನೋಡಿ ವಿಸ್ಮಿತನಾದನು ॥ 110

ಸ್ವಪ್ನದಲಿ ತಾ ಕಂಡ ರೂಪದ ಹಾಗೇ । ಆ ಚಿತ್ರವು ಕಾಣಿಸಿತು ರಾಮಲಾಲನಿಗೆ ।
ಕೂಡಲೇ ಆ ಅಂಗಡಿಕಾರನಿಗೆ । ಅದರ ಬಗ್ಗೆ ಕೇಳತೊಡಗಿದ ॥ 111

ಲಕ್ಷ್ಯವಿಟ್ಟು ಚಿತ್ರ ನೋಡಿದ । ಇವರು ಯಾರು ಎಲ್ಲಿರುವರೆಂದು ಕೇಳಿದ ।
ಇವರು ಸಾಯಿ ಶಿರಡಿಯಲ್ಲಿರುವರೆಂದು । ಅದ ಕೇಳಿ ರಾಮಲಾಲ ಸುಮ್ಮನಾದ ॥ 112

ಮುಂದಿನದೆಲ್ಲ ಆಮೇಲೆ ತಿಳಿದ । ರಾಮಲಾಲ ಶಿರಡಿಗೆ ಹೋದ ।
ಕೊನೆಯವರೆಗೆ ಅಲ್ಲಿಯೇ ಉಳಿದ । ಬಾಬಾ ನಿರ್ವಾಣ ಪಡೆವ ತನಕ ॥ 113

ತಮ್ಮ ಭಕ್ತರ ಇಚ್ಛೆ ಪೂರೈಸಬೇಕು । ಅವರನು ದರುಶನಕೆ ಬರಮಾಡಿಕೊಳಬೇಕು ।
ಸ್ವಾರ್ಥ ಇಲ್ಲವೇ ಪರಮಾರ್ಥಗಳ ಸಾಧಿಸಿಕೊಳಬೇಕು । ಇದೇ ಮನೋರಥ ಬಾಬಾರದು ॥ 114

ಇಲ್ಲದಿದ್ದರೂ ಅವರು ಅವಾಪ್ತಕಾಮರು । ತಾವು ಯಾವಾಗಲೂ ನಿಷ್ಕಾಮರು ।
ನಿಃಸ್ವಾರ್ಥಿ, ನಿರ್ಮಮ, ನಿರಹಂಕಾರರು । ಭಕ್ತ ಕಲ್ಯಾಣವೊಂದಕೇ ಅವರ ಅವತಾರ ॥ 115

ಕ್ರೋಧದ ಗಾಳಿಯ ಸೋಂಕಿಲ್ಲ । ದ್ವೇಷಕ್ಕಲ್ಲಿ ಸ್ಥಳವಿಲ್ಲ ।
ಹೊಟ್ಟೆಯ ಪಾಡನು ಕಣ್ಣೆತ್ತಿ ನೋಡುವದಿಲ್ಲ । ಅವನೇ ನಿಜವಾದ ಸಾಧು ಎನಬೇಕು ॥ 116

ಎಲ್ಲರಲ್ಲಿಯೂ ಅವರ ಪ್ರೇಮ ನಿಸ್ವಾರ್ಥ । ಇದೇ ಯಾರ ಪರಮ ಪುರುಷಾರ್ಥ ।
ಒಂದು ಕ್ಷಣವೂ ಮಾತನಾಡರು ವ್ಯರ್ಥ । ಧರ್ಮದ ವಿಷಯವೊಂದನು ಬಿಟ್ಟು ॥ 117

ಸಾರಾಂಶವೆಂದರೆ ಹಿಡಿದೆನ್ನ ಕೈಯ್ಯ । ಬರೆಯಿಸಿಕೊಂಡು ತಮ್ಮ ಚರಿತೆಯ ।
ಇಂಗಿತವನರಿಯಬೇಕು ಇಲ್ಲಿಯ । ಭಕ್ತರು ತಮ್ಮ ಸ್ಮರಣೆಯಲಿ ನಿರತರಾಗಬೇಕು ॥ 118

ಅದಕೇ ಹೇಮಾಡನಾಗಿ ವಿನೀತ । ಶ್ರೋತೃಗಳ ವಿನಂತಿಸುವನು ನಿತ್ಯ ।
ಆಗಿ ಶ್ರದ್ಧಾ ಭಕ್ತಿ ಸಮನ್ವಿತ । ಸಾಯಿ ಸಚ್ಚರಿತವ ಕೇಳಿರಿ ॥ 119

ಅದರಿಂದ ಮನಸಿಗೆ ಲಭಿಸುವದು ಶಾಂತಿ । ವ್ಯಸನದಲಿದ್ದವರಿಗಾಗುವದು ಉಪರತಿ ।
ಸಾಯಿ ಚರಣದಲಿ ಹುಟ್ಟುವದು ಭಕ್ತಿ । ಭವ ನಿರ್ಮುಕ್ತಿಯನೀಯುವದು ॥ 120

ಇನ್ನು ಮುಂದಿನ ಅಧ್ಯಾಯದೊಳಗೆ । ಸನ್ಯಾಸಿ ವಿಜಯಾನಂದರಿಗೆ ।
ಹೋಗಲು ಮಾನಸ ಸರಸಿಗೆ । ನಿಜಪದದಲಿ ನಿರ್ಮುಕ್ತಿ ಲಭಿಸಿತು ॥ 121

ಭಕ್ತ ಭಾಳಾರಾಮ ಮಾನಕರನಿಗೆ । ಇದರಂತೆಯೇ ವಿಶ್ರಾಮವಿತ್ತರವನಿಗೆ ।
ಅದೇ ನೂಲಕರ ಮತ್ತು ಮೇಘಾರಿಗೆ । ಅವರಿಷ್ಟವನಿತ್ತರು ಸಾಯಿನಾಥ ॥ 122


ವ್ಯಾಗ್ರದಂತಹ ಕ್ರೂರ ಪ್ರಾಣಿಗಾದರೂ । ತಮ್ಮ ಚರಣದಲಿ ಸ್ಥಳವಿತ್ತರು ।
ಸಾಯಿ ಇಂಥ ಅಗಾಧ ಮಹಿಮರು । ಶ್ರವಣಗಳಿಗಿದು ಮಹೋತ್ಸವ ॥ 123

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಚ್ಚರಿತೆ । ನವಸಾದಿಕಥಾಕಥನಂ ನಾಮ ತ್ರಿಶಂತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

415.1



## || ಅಥಃ ಶ್ರೀ ಸಾಯಿ ಸಚ್ಚರಿತೆ ||

## ಅಧ್ಯಾಯ ಮುವತ್ತೊಂದು

*ಶ್ರೀ ಗಣೇಶಾಯ ನಮಃ || ಶ್ರೀ ಸರಸ್ವತ್ಯೈ ನಮಃ ||*
*ಶ್ರೀ ಗುರುಭ್ಯೋ ನಮಃ || ಶ್ರೀ ಕುಲದೇವತಾಯೈ ನಮಃ ||*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ || ಶ್ರೀ ಸದ್ಗುರು ಸಾಯಿನಾಥಾಯ ನಮಃ ||*

ಹಿಂದಿನಧ್ಯಾಯದಲಾಯಿತು ಕಥನ | ಸಪ್ತ ಶೃಂಗಿಯ ಭಕ್ತನ ಕಥನ |
ಮಾಧವರಾಯನ ಹರಕೆಯ ಪೂರ್ಣ | ಸಾಯಿ ಮಾಡಿಸಿಕೊಂಡರು || 1

ಸ್ವಪ್ನದಲಿ ದರ್ಶನ ಕೊಟ್ಟರು ಹೇಗೆ | ಖುಶಾಲಶೇಟ ಮತ್ತು ರಾಮಲಾಲರಿಗೆ |
ಆನಿರ್ವಾಣ ರಾಮಲಾಲನನು ಹೇಗೆ | ತಮ್ಮ ಹತ್ತಿರ ಇಟ್ಟುಕೊಂಡರು || 2

ಆದಕಿಂತ ಅಪೂರ್ವ ಈ ಕಥೆ ಇರುವದು | ಶ್ರೋತೃಗಳು ಸಾದರರಾಗಿ ಕೇಳುವದು |
ಸಂನ್ಯಾಸಿಯೊಬ್ಬ ಮಾನಸ ಸರೋವರಕೆ ಹೋಗಿದ್ದು | ಹೇಗೆ ನಿಜಮುಕ್ತತೆಯ ಪಡೆದ || 3

ಮಾನಕರ,ನೂಲಕರ, ಮೇಘಾ ಇವರಿಗೆ | ಅವರಿಷ್ಟವ ಪೂರೈಸಿಕೊಟ್ಟರು ಹೇಗೆ |
ಇವರಂತೂ ಮಾನವರು ಆದರೆ ಕ್ರೂರ ಹುಲಿಗೆ | ನಿಜಪದದಲಿ ಸ್ಥಾನವನಿತ್ತರು || 4

ಕಥೆಗಳಿರುವವು ಬಹಳ ವಿಸ್ತೃತ | ಬಹಳ ವಿಸ್ತಾರವಾದೀತು ಗ್ರಂಥ |
ಅದಕೆ ಹೇಳುವೆನು ಸಂಕ್ಷಿಪ್ತ | ಅದರ ಸಾರ ನಿಜಹಿತಸಾಧಕವಿದೆ || 5

ಅಂತಕಾಲದಲಿದ್ದಂತೆ ಮತಿ | ಅದರಂತೆ ಪ್ರಾಣಿಗಳಿಗೆ ಲಭಿಸುವದು ಗತಿ |
ಕೀಟ ಹೊಂದುವದು ಭ್ರಮರ ಸ್ಥಿತಿ | ಹರಿಣ ಪ್ರೀತಿಯಿಂದ ಜಡಭರತನಾದ || 6

ಅಂತಕಾಲದಿ ಎಲ್ಲಿರುವದು ಮನ | ಅದೇ ರೂಪದಲಿ ಪುನರ್ಜನನ |
ಮನವಿರಲು ಭಗವತ್ಪಾದದಲಿ ಲೀನ | ಜನ್ಮವಿಹೀನನವಾಗುವನವ || 7

ಇದಕಾಗಿಯೇ ನಾಮಸ್ಮರಣ | ಅದ ರೂಡಿಸಿಕೊಳ್ಳಲು ಇದೇ ಕಾರಣ |
ಪ್ರಸಂಗದಲಿ ಆಗಬಾರದು ಮತಿ ಹೀನ | ಕೊನೆಗೂ ನೆನಪುಳಿಯಬೇಕೆಂದು || 8

ಜೀವನವೆಲ್ಲ ಎಚ್ಚರಿದ್ದ | ಅಂತಕಾಲದಲಿ ಮರೆತುಹೋದ |
ಕೊನೆಗೂ ವ್ಯರ್ಥವೆಲ್ಲ ಮಾಡಿದ್ದ | ಅದಕಾಗಿ ಸತ್ಸಂಗವಿರಬೇಕು || 9

ಅದಕಾಗಿಯೇ ಭಾವಾರ್ಥಿ ಭಕ್ತರು । ಜೀವವ ಸಂತರಿಗೆ ಒಪ್ಪಿಸುವರು ।
ಗತಿ ನಿರ್ಗತಿಗಳವರು ತಿಳಿದಿರುವರು । ಕೊನೆಯ ಜೊತೆಗಾರ ಅವನೊಬ್ಬ ॥ 10

ಈ ಅರ್ಥದ ಮಧುರ ಕಥೆ । ಸಾಯಿ ಎದುರಲಿ ನಡೆದ ವಾರ್ತೆ ।
ಕೇಳಿದರೆ ತಿಳಿಯುವದು ಭಕ್ತವತ್ಸಲತೆ । ಸಾಯಿ ಸಮರ್ಥರದು ಶ್ರೋತೃಗಳಿಗೆ ॥ 11

ಎಲ್ಲಿ ಮದ್ರಾಸ, ಶಿರಡಿಯೆಲ್ಲಿ । ಮಾನಸ ಸರೋವರದ ಪ್ರದೇಶವೆಲ್ಲಿ ।
ಭಕ್ತರ ಗಳಿಗೆ ತುಂಬಲು ಯಾವ ರೀತಿಯಲ್ಲಿ । ಚರಣಕೆಳಕೊಂಡು ಬರುತಿದ್ದರು ॥ 12

ಒಮ್ಮೆ ಒಬ್ಬ ಮದ್ರಾಸಿ । ವಿಜಯಾನಂದನೆಂಬ ಸಂನ್ಯಾಸಿ ।
ಮಾನಸ ಸರೋವರಕೆ ಮದ್ರಾಸ ತ್ಯಜಿಸಿ । ಮಹದುಲ್ಲಾಸದಿಂದ ಹೊರಟನು ॥ 13

ಒಬ್ಬ ಜಪಾನೀ ಪ್ರವಾಸಿಯದು । ಮಾನಸ ಸರೋವರದ ನಕ್ಷೆ ತೆಗೆದದ್ದು ।
ಅದ ನೋಡಿ ನಿಶ್ಚಯ ಮಾಡಿದ ಮನಸಿನದು । ದರ್ಶನದ ಉತ್ಕಟೇಚ್ಛೆಯಿಂದ ॥ 14

ದಾರಿಯಲಿ ಶಿರಡಿ ಹತ್ತಿತ್ತು । ಬಾಬಾರ ಪ್ರಭಾವ ಕಿವಿಗೆ ಬಿತ್ತು ।
ದರ್ಶನದ ಆಕಾಂಕ್ಷೆಯನು ಹೊತ್ತು । ಸ್ಥಳವ ಹುಡುಕುತ ಬಂದನಾತ ॥ 15

ಸಾಯಿ ಮಹಾರಾಜ ದೊಡ್ಡ ಸಂತರು । ಕೀರ್ತಿಮಂತ ಜಗವಿಖ್ಯಾತರು ।
ದರ್ಶನಾಪೇಕ್ಷೆಯಿಂದವರು । ಹೋಗುವ ಮಾರ್ಗದಲಿ ತಡೆದರು ॥ 16

ಹರಿದ್ವಾರದ ಸ್ವಾಮೀ ಸೋಮದೇವಜಿಯರು । ಆಗ ಶಿರಡಿಯಲ್ಲೇ ಇದ್ದರು ।
ಸಹಜದಲ್ಲೇ ಭೆಟ್ಟಿಯಾದರವರು । ಕೂಡಿದ ಭಕ್ತ ಸಮೂಹದಲಿ ॥ 17

ಸಂನ್ಯಾಸಿಗಳವರಿಗೆ ಕೇಳಿದರು । ಮಾನಸ ಸರೋವರವಿಲ್ಲಿಂದೆಷ್ಟು ದೂರು ।
ಇಲ್ಲಿಂದ ಐದುನೂರು ಮೈಲು ಎಂದರು । ಗಂಗೋತ್ರಿಯ ಮೇಲ್ಗಡೆ ॥ 18

ಅಲ್ಲಿ ಬಹಳ ಹಿಮ ಬೀಳುವದು । ಐವತ್ತು ಹರದಾರಿಗೊಮ್ಮೆ ಭಾಷೆ ಬದಲಿಸುವದು ।
ಭೂತಾನವಾಸಿಗಳಿಗೆ ಸಂಶಯ ಬರುವದು । ಅದರಿಂದ ಪರಸ್ಥರನು ಪೀಡಿಸುವರು ॥ 19

ಸ್ವಾಮಿ ಆಡಿದ ಮಾತುಗಳನ । ಕೇಳಿ ಸಂನ್ಯಾಸಿಯಾದ ಖಿನ್ನ ।
ಕೆಡಕೆನಿಸಿಕೊಂಡಿತನವನ ಮನ । ಚಿಂತಾಮಗ್ನನಾದನು ॥ 20

ಆಯಿತು ಸಾಯಿ ಬಾಬಾರ ದರ್ಶನ । ಮಾಡಿದರು ಸಾಷ್ಟಾಂಗ ನಮನ ।
ಚಿತ್ತವಾಯಿತು ಸುಪ್ರಸನ್ನ । ಆಸನ ಹಾಕಿ ಕುಳಿತರು ॥ 21

ಆಗ ಬಾಬಾ ಸಿಟ್ಟಿಗೆದ್ದರು । ಅವರು ಜನರಿಗೆಂದರು ।
ಈ ಸಂನ್ಯಾಸಿಯನಿಲ್ಲಿಂದ ಓಡಿಸೆಂದರು । ಇವನ ಸಂಗತಿ ಸರಿಯಲ್ಲ ॥ 22

ಮೊದಲೇ ಸಂನ್ಯಾಸಿ ಹೊಸಬನವ । ಗೊತ್ತಿರಲಿಲ್ಲವಗೆ ಬಾಬಾರ ಸ್ವಭಾವ ।
ಮನದಲ್ಲಿಯೇ ನಾಚಿದನವ । ಬಾಬಾರ ಸೇವೆಯ ನೋಡುತ್ತ ಕುಳಿತ ॥ 23

ಪ್ರಾತಃಕಾಲದ ದರಬಾರು ನಡೆದಿತ್ತು । ಜನ ಕಿಕ್ಕಿರಿದು ತುಂಬಿತ್ತು ।
ಭಕ್ತರಿಂದ ಉಪಚಾರ, ಪೂಜಾಸಂಭಾರ ನಡೆದಿತ್ತು । ನೋಡಿ ತಣ್ಣಗಾದನವ ॥ 24

ಒಬ್ಬರು ಬಾಬಾರ ಪಾದ ತೊಳೆದರು । ತೀರ್ಥದ ಸೌಟಿನಲಿ ಅಂಗುಷ್ಠ ತೀರ್ಥ ತೆಗೆದುಕೊಂಡರು
।ಶುದ್ಧ ಸದ್ಭಾವದಿಂದ ಸ್ವೀಕರಿಸಿದರು । ನೇತ್ರಗಳಿಗೆ ಹಚ್ಚಿಕೊಂಡರು ಕೆಲವರು ॥ 25

ಯಾರೋ ಗಂಧ ಹಚ್ಚಿದರು । ಯಾರೋ ಸುಗಂಧಿತ ಎಣ್ಣೆ ಪೂಸಿದರು ।
ಬ್ರಾಹ್ಮಣ ಶೂದ್ರಾದಿಗಳೆಂಬದ ಮರೆತರು । ಜಾತಿ ನಿರ್ಬಂಧವ ಮೀರಿ ॥ 26

ಸಿಟ್ಟು ಬಂದಿದ್ದರೂ ಬಾಬಾರಿಗೆ । ಅನುರಾಗ ಉಕ್ಕಿ ಬಂದಿತು ಸಂನ್ಯಾಸಿಗೆ ।
ತಿರುಗಿ ಹೋಗಲು ಹೆಜ್ಜೆ ಏಳದವನಿಗೆ । ಕುಳಿತ ಸ್ಥಳ ಬಿಟ್ಟು ಕದಲದಾದ ॥ 27

ಎರಡು ದಿನವಿದ್ದ ಶಿರಡಿಯೊಳಗೆ । ಅಷ್ಟರಲಿ ಪತ್ರವೊಂದು ಬಂದಿತು ಅವನಿಗೆ ।
ಊರಲ್ಲಿ ಅಂತ್ಯವಸ್ಥೆ ತಾಯಿಗೆ । ಆದರಿಂದ ಉದಾಸನಾದನಾತ ॥ 28

ತಾಯಿಯ ನೋಡಬೇಕೆನಿಸಿತು ಮನಕೆ । ತಿರುಗಿ ಹೋಗಬೇಕಿನ್ನು ಸ್ವದೇಶಕೆ ।
ಆದರೆ ಹೆಜ್ಜೆ ಏಳದಾಯಿತು ಹೋಗುವದಕೆ । ಬಾಬಾರ ಆಜ್ಞೆಯ ಪಡೆಯದೆ ॥ 29

ಬಳಿಕ ಆ ಪತ್ರ ತೆಗೆದುಕೊಂಡ । ಸಂನ್ಯಾಸಿ ಮಶೀದಿಯತ್ತ ಹೋದ ।
ಬಾಬಾರಿಗೆ ವಿನಂತಿಸ ತೊಡಗಿದ । ತಾಯಿಯ ಸ್ಥಿತಿಯ ನಿವೇದಿಸಿ ॥ 30

ಈ ಮಾರ್ಗಸ್ಥನ ಮೇಲೆ ಕೃಪೆ ಮಾಡಿ । ಪ್ರಸನ್ನ ಚಿತ್ತರಾಗಿ ಅನುಜ್ಞೆ ನೀಡಿ ।
ಮಾತೆಯ ನೋಡುವ ಇಚ್ಛೆ ಮನದಿ । ಮಹಾರಾಜ ಸಾಯಿ ಸಮರ್ಥರೇ ॥ 31

ಬಾಬಾರ ಚರಣ ಹಿಡಿದ ಓಡಿಬಂದು । ಆಜ್ಞೆ ನೀಡಬೇಕು ದಯಾಸಿಂಧು ।
ತಾಯಿ ಕಂಠದಲಿ ಪ್ರಾಣ ಹಿಡಿದು । ನೆಲಹಿಡಿದು ಮಲಗಿರಬೇಕು ॥ 32

ನೋಡುತಿರಬೇಕು ನನ್ನ ಹಾದಿ । ದೃಷ್ಟಿ ಭೆಟ್ಟಿಯನ್ನಾದರೂ ಆಗಗೊಡಿ ।
ಅಸಹ್ಯ ಕಷ್ಟಗಳ ಸಹಿಸಬಹುದು । ಸುಖದಿಂದ ಪ್ರಾಣಬಿಡಬಹುದು ॥ 33

ಸಾಯಿ ಸಮರ್ಥರು ಅಂತರ್ಜ್ಞಾನಿಗಳಿದ್ದು । ಅವನದೇ ಆಯುಷ್ಯ ಮುಗಿದದ್ದು ತಿಳಿದು
ನುಡಿದರಾಗ ಏನೆಂಬದು । ಚಿತ್ತವಿಟ್ಟು ಆಲಿಸಿರಿ ॥ 34

ಇದ್ದಾಗ ಮಾತೆಯ ಮೇಲೆ ಪ್ರೀತಿ ಇಷ್ಟೊಂದು । ಈ ವೇಷವನೇತಕೆ ಧರಿಸಿದ್ದು ।
ಈ ವೇಷಕೆ ಮಮತ್ವ ಶೋಭಿಸದು । ಕಾವಿ ಬಟ್ಟೆಗೇ ಕಲಂಕ ಹಚ್ಚಿದೆ ॥ 35

ಹೋಗಿ ಶಾಂತನಾಗಿ ಕುಳಿತಿರು । ಕಳೆಯಲಿ ಎರಡು ದಿನಗಳಾದರೂ ।
ಮನದ ಧೈರ್ಯವ ಬಿಡದಿರು । ಆಮೇಲೆ ವಿಚಾರ ಮಾಡುವಾ ॥ 36

ವಾಡೆಯಲಿ ಬಹಳ ಕಳ್ಳರಿರುವರು । ಬಾಗಿಲು ಭದ್ರಪಡಿಸಿಕೊಂಡು ಎಚ್ಚರದಿಂದಿರು ।
ಸರ್ವಸ್ವವನೇ ಅಪಹರಿಸಿಯಾರು । ಅನಿವಾರ ಹೊಡೆತ ಹಾಕಿಯಾರು ॥ 37

ವೈಭವವೆಂದಿಗೂ ಅಲ್ಲ ಶಾಶ್ವತ । ಯಾವಾಗಲೂ ತಿಳಿದಿರು ಈ ಶರೀರ ಅನಿತ್ಯ ।
ಮೃತ್ಯು ನಿಂತಿರುವದು ಸನ್ನಿಹಿತ ನಿತ್ಯ । ಧರ್ಮವ ಜಾಗೃತವಿಡಬೇಕು ॥ 38

ದೇಹ ಸ್ತ್ರೀ ಪುತ್ರಾದಿಗಳಲಿ । ಅಹಂ ಅಭಿಮಾನವಿರುವದು ಲೋಕದಲಿ ।
ಅದರಿಂದಾಗಿ ತಾಪತ್ರಯಗಳಲಿ । ಐಹಿಕದ ಅನರ್ಥವಿದನೆಂಬರು ॥ 39

ಪಾರಲೌಕಿಕ ಅನರ್ಥ ಎರಡನೆಯದು । ಪರಲೋಕದಿಚ್ಛೆ ಮಾಡುವ ಜನರದು ।
ಪರಲೋಕವೂ ಮೋಕ್ಷಪ್ರತಿಬಂಧಕವಾಗಿರುವದು । ಮರಳಿ ಬರಬೇಕಿಲ್ಲಿ ಎಂದಾದರೂ ॥ 40

ಪುಣ್ಯ ಸಂಚಯವಲ್ಲಿ ಆಗುವದಿಲ್ಲ । ಅಲ್ಲಿಯ ಪ್ರಾಪ್ತಿಯ ನಿರ್ಭಯವಾಗಿರುವದಿಲ್ಲ ।
ಪತನ ಭಯವಿರುವದು ಪುಣ್ಯ ಮುಗಿದಾಗೆಲ್ಲ । ನಿಃಸಂಶಯವಾಗಿ ಅಲ್ಲಿಯೂ ॥ 41

ಐಹಿಕ ಆಮುಷ್ಮಿಕಗಳಿವು । ಅನರ್ಥಾವಹ ಈ ಎರಡೂ ಭೋಗಗಳಿರುವವು ।
ನಿಃಶೇಷ ಅವುಗಳ ತ್ಯಾಗವು । ಆನಂದೋತ್ಪಾದನೆಯ ಮೂಲವು ॥ 42

ಸಂಸಾರಕ್ಕೆ ಬೇಸತ್ತವರು । ಅಚಲ ಹರಿಪದವ ಹಿಡಿದವರು ।
ಅವರ ಬಂಧನದ ಕಟ್ಟು ಹರಿಯುವದು । ಅವಿದ್ಯೆಯು ಅಲ್ಲಿರಲಾರದು ॥ 43

ಹರಿ ಭಜನ ಸ್ಮರಣದಲಿರುವದು । ಪಾಪ ತಾಪ ದೈನ್ಯ ಪರಿಹರಸುವದು ।
ಭಕ್ತಿ ಭಾವದಿ ಸ್ಮರಣೆ ಮಾಡುವದು । ಅದರಿಂದವ ಕಷ್ಟದಿ ಸಹಾಯಕೆ ಒದಗುವ ॥44

ನಿನ್ನ ಪೂರ್ವಜನ್ಮದ ಪುಣ್ಯವೆಂದು । ಬಂದೆ ಈ ಸ್ಥಾನವ ಹುಡುಕಿಕೊಂಡು ।
ಇನ್ನು ನನ್ನ ಮಾತಿನತ್ತ ಚಿತ್ತವಿಡು । ಜೀವದ ಸಾಧನೆ ಮಾಡಿಕೋ ॥ 45

ನಾಳೆಯಿಂದ ಭಾಗವತದ್ದು । ನಿಷ್ಠೆಯಿಂದ ಪಾರಾಯಣ ಮಾಡುವದು ।
ಮೂರು ಸಪ್ತಾಹ ಆ ಗ್ರಂಥದ್ದು । ಕಾಯಾ ವಾಚಾ ಮನಸಿನಿಂದ ॥ 46

ವಾಸನೆಗಳನೆಲ್ಲ ದೂರಮಾಡಿ । ಈ ಗ್ರಂಥದ ಶ್ರವಣ ಮಾಡಿ ।
ಇಲ್ಲವೇ ಮನೋಭಾವದಿಂದ ಓದಿ । ನಿದಿಧ್ಯಾಸದಲಿರಬೇಕು ॥ 47

ಪ್ರಸನ್ನನಾಗುವನದರಿಂದ ಭಗವಂತ । ಸರ್ವ ದುಃಖಗಳದಾಗುವದು ಅಂತ ।
ಮಾಯಾ ಮೋಹಗಳಾಗುವವು ಶಾಂತ । ಅತ್ಯಂತ ಸೌಖ್ಯ ಲಭಿಸುವದು ॥ 48

ಆಗಿ ನೀನು ಶುಚಿರ್ಭೂತ । ಇಟ್ಟು ಹರಿಚರಣದಲಿ ಚಿತ್ತ ।
ಸಾಂಗವಾಗಿ ಸಂಪಾದಿಸು ಈ ವ್ರತ । ಮೋಹ ನಿರ್ಮುಕ್ತನಾಗುವಿ ॥ 49

ಸಂನ್ನಿಹಿತವಾಗಿದೆ ದೇಹಕೆ ಅಪಾಯ । ಇದ ನೋಡಿ ಬಾಬಾ ಉಪಾಯ ।
ಯೋಜಿಸಿ ಓದಿಸಿದರು ರಾಮ ವಿಜಯ । ಅದರಿಂದ ಮೃತ್ಯುಂಜಯ ಸಂತುಷ್ಟನಾಗುವ ॥ 50

ಬೆಳಗಿನಲೆದ್ದು ಮರುದಿನ । ಮುಗಿಸಿ ಮುಖಮಾರ್ಜನ ಸ್ನಾನ ।
ಬಾಬಾರಿಗರ್ಪಿಸಿ ಪುಷ್ಪಗಳನ । ಚರಣಧೂಲಿಯ ವಂದಿಸಿದರು ॥ 51

ಬಗಲಲಿ ಭಾಗವತವ ನಿಟ್ಟುಕೊಂಡು । ಓದಲು ಏಕಾಂತಬೇಕೆಂದು ।
ಲೇಂಡಿ ಸ್ಥಾನವು ಶಾಂತವಿರುವದೆಂದು । ಅವರ ಮನಸಿಗೆ ಒಪ್ಪಿತು ॥ 52

ಹೋಗಿ ಆಸನ ಹಾಕಿ ಕುಳಿತರು । ಪಾರಾಯಣವ ಆರಂಭಿಸಿದರು ।
ಭಗವರಾಯಣ ಸಂನ್ಯಾಸಿಗಳವರು । ಎರಡು ಸಪ್ತಾಹಗಳ ಮುಗಿಸಿದರು ॥ 53

ಮಾಡಬೇಕಿನ್ನು ಸಪ್ತಾಹ ಮೂರನೆಯದು । ಅನುವಾಗ ಒಮ್ಮೆಲೇ ಅಸ್ವಸ್ಥತೆ ಬಂದು ।
ಅಶಕ್ತತೆ ಬೆಳೆಯತೊಡಗಿದ್ದು । ಅರ್ಧಕ್ಕೇ ಬಿಟ್ಟರು ಓದುವರು ॥ 54

ವಾಡೆಗೆ ತಿರುಗಿ ಬಂದು । ಕಷ್ಟದಿಂದೆರಡು ದಿನ ಕಳೆದು ।
ಬೆಳಿಗ್ಗೆ ಮೂರನೆಯ ದಿನದಂದು । ಸಂನ್ಯಾಸಿ ಕಣ್ಣು ಮುಚ್ಚಿದ ॥ 55

ಫಕೀರ ಬಾಬಾರ ತೊಡೆಯ ಮೇಲೆ । ಇಟ್ಟ ತನ್ನ ತಲೆ ।
ಸಂನ್ಯಾಸಿ ಸ್ಥಿರನಾದನಲ್ಲೇ । ಮುಕ್ತ ಶರೀರ ವಿದೇಹಿ ॥ 56

ಸಂನ್ಯಾಸಿಯ ದೇಹಾವಸಾನ । ಮಾಡಲು ಬಾಬಾರಿಗೆ ನಿವೇದನ ।
ಇತ್ತರವರು ಆಜ್ಞಾಪನ । ದೇಹವ ದಿನವೆಲ್ಲ ಇಡಬೇಕೆಂದು ॥ 57

ಹೊರಟು ಹೋದ ಮೇಲೊಮ್ಮೆ ಪ್ರಾಣ । ಅದು ಬರುವದೇ ತಿರುಗಿ ಇನ್ನು ।
ಆದರೂ ಬಾಬಾರ ಶಬ್ದ ಪ್ರಮಾಣ । ದೇಹವ ಜೋಪಾನವಾಗಿಟ್ಟರು ॥ 58

ಇಷ್ಟರಲೇ ದೇಹವ ಹೂಳಬಾರದು । ಅವನ ಪುನರ್ಜೀವನವಾಗಬಹುದು ।
ಜನರು ಈ ಆಶೆಯನಿಟ್ಟುಕೊಂಡು । ದೇಹದ ರಕ್ಷಣೆ ಮಾಡಿದರು ॥ 59

ಪರಿಣಾಮದಲ್ಲಿ ಅದು ಫಲಿಸಿತು । ನಿವಾರಸಿ ಪ್ರೇತವ ರಕ್ಷಿಸಲಾಯಿತು ।
ಪೋಲೀಸರ ಸಂಶಯ ನಿವಾರಣೆಯಾಯಿತು । ಸತ್ತವನೆಂತು ಬದುಕಿಯಾನು ॥ 60

ಸತ್ತವರನು ಹೇಗೆ ಎಬ್ಬಿಸುವದು । ಬಾಬಾರಿಗೆ ತಿಳಿದಿರಲಿಲ್ಲವೇ ಇದು ।
ಚೌಕಶಿ ಇಲ್ಲದೇ ಹೂಳಿ ಬಿಡುವದು । ಇದು ಮಾತ್ರಯೋಗ್ಯವಲ್ಲವೆಂದು ॥ 61

ನಿವಾರಸಿಗಳ ಧಣಿಗಳು ಅರಸರು । ಆಕಸ್ಮಿಕ ಮರಣದ ಬಗ್ಗೆ ಚೌಕಶಿ ಮಾಡಿದರು ।
ಅದಾಗುವ ಮೊದಲು ಸಂಸ್ಕಾರ ಮಾಡಿದರು । ಎಂದಾಗಬಾರದೆಂದು ನೆಪ ಹೇಳಿದರು ಬಾಬಾ ॥ 62

ಮುಂದೆ ಅದೆಲ್ಲ ಮುಗಿಯಿತು । ಅಂತ್ಯ ಸಂಸ್ಕಾರವೂ ಆಯಿತು ।
ಯೋಗ್ಯ ಸ್ಥಳವನ್ನು ಕುರಿತು । ಸಂನ್ಯಾಸಿಯ ದೇಹವನಲ್ಲಿ ಇಟ್ಟರು ॥ 63

ಹೀಗೆಯೇ ಇನ್ನೊಂದು ಕಥೆಯನು । ಶ್ರೋತೃಗಳಿಗಾಗಿ ಹೇಳುವೆನು ।
ಕೇಳಬೇಕಿತ್ತು ಲಕ್ಷವನು । ಬಾಬಾರ ವ್ಯಾಪಕತೆಯಲ್ಲಿ ಕಂಡು ಬರವದು ॥ 64

ಭಕ್ತನೊಬ್ಬ ಬಾಳಾರಾಮ ಎಂಬವ । ಮಾನಕರ ಎಂಬ ಉಪನಾಮದವ ।
ಬಾಬಾರ ಪರಮಭಕ್ತನವ । ಗೃಹಸ್ಥಾಶ್ರಮಿಯಾಗಿದ್ದ ॥ 65

ಆದರೆ ಮುಂದೆ ಅವರ ಅರ್ಧಾಂಗಿ । ಪಂಚತ್ವವನು ಹೊಂದಲಾಗಿ ।
ಆಶ್ರಮ ಕಾರ್ಯ ವ್ಯತ್ಯಯವಾಗಿ । ಸ್ಥೈರ್ಯ ಕಳೆದುಕೊಂಡರೂ ಪರಮೈಶ್ವರ್ಯಕ್ಕೇರಿದರು ॥ 66

ಪೂರ್ವಾರ್ಜಿತ ಫಲಪ್ರಾಪ್ತಿ । ಲಭಿಸಿತು ಸಾಯಿ ಚರಣ ಸಂಗತಿ ।
ಉಂಟಾಯಿತು ಅಚಲ ಭಕ್ತಿ । ಸಂಸಾರದಲಿ ಪೂರ್ಣ ವಿರಕ್ತರಾದರು ॥ 67

ಆಶಾಪಾಶ ಮಕ್ಕಳು ಮರಿಗಳ । ಹರಿದೊಗೆದು ಎಲ್ಲ ಬಂಧನಗಳ ।
ನೋಡಿರಿ ಮಾನಕರರ ದೈವ ಬಲ । ಸಂಸಾರದಿಂದ ನಿರ್ಮುಕ್ತರಾದರು ॥ 68

ಪರಮಾರ್ಥದ ದ್ವಾರದ ಎದುರಿಗೆ । ಪರಸೇವೆಯ ಮೋಹದ ಒಸಗೆ ।
ಹಾಕಿ ನಿಜಪುತ್ರರ ಕೊರಳಿಗೆ । ಐಹಿಕದ ಕೈಬಿಟ್ಟರು ॥ 69

ಒಂದು ರೀತಿಯ ಸಂನ್ಯಾಸವೇ ಇದು । ಅನೇಕ ಪ್ರಕಾರಗಳಿರಲು ಸಂನ್ಯಾಸದ್ದು ।
ಆದರೆ ಜ್ಞಾನಗರ್ಭನ್ಯಾಸವಲ್ಲದ್ದು । ಹೆಜ್ಜೆ ಹೆಜ್ಜೆಗೆ ಕಷ್ಟದಾಯಕವು ॥ 70

ಅದಕೇ ಈ ಸಾಯಿ ಉದಾರ ಮೂರ್ತಿಗಳು । ಮಾನಕರರ ಅನನ್ಯ ಭಕ್ತಿಯೊಳು ।
ಕೃಪೆ ಮೂಡಿ ಎನಿಸಿತು ಚಿತ್ತದೊಳು । ಅವರ ವಿರಕ್ತಿಯ ದೃಢ ಮಾಡಬೇಕೆಂದು ॥ 71

ಅನಂತ ಜನ್ಮದ ಸಂಸ್ಕಾರ ಬಲ । ಚಂಚಲಮನವಾಗದು ಅಚಲ ।
ಮನೋರಾಜ್ಯದ ತೆರೆಗಳು ಪ್ರಬಲ । ಅದರಿಂದ ವೈರಾಗ್ಯಕ್ಕೆ ಸ್ಥಿರತೆ ಬಾರದಾಯಿತು ॥ 72

ಶಿರಡಿಯೊಂದೇ ಅಲ್ಲ ನನ್ನ ಸ್ಥಾನ । ನಾನಿರವೆ ದೇಶಕಾಲವಾಚ್ಛಿನ್ನ ।
ತೋರಲಿನದು ಸಪ್ರಮಾಣ । ಮಾನಕರನಿಗೆ ಆಜ್ಞಾಪಿಸಿದರು ॥ 73

ಈ ಶಿರಡಿಯ ವಾಸ ಸಾಕು ಮಾಡು । ಈ ಹನ್ನೆರಡು ರೂಪಾಯಿಗಳ ತೆಗೆದುಕೊಂಡು ।
ಮಚ್ಛಿಂದ್ರಗಡಕ್ಕೆ ಹೋಗು ತಪಶ್ಚರ್ಯೆಗೆಂದು । ಸುಖದಿಂದ ಅಲ್ಲಿ ಇರು ನೀನು ॥74

ಕೇಳಿ ಹೀಗೆ ಸಾಯಿ ವಚನ । ಆಜ್ಞೆಗೆ ಮಾಡಿ ಶಿರಸಾವಂದನ ।
ಹಾಕಿ ಸಾಷ್ಟಾಂಗ ನಮನ । ಅಭಿವಂದಿಸಿದರು ಚರಣಗಳ ॥ 75

ಅತಿ ನಮ್ರತೆಯಿಂದ ಸಾಯಿಗೆ । ಬಾಳಾರಾಮನೆಂದ ಹೀಗೆ ।
ಅಲ್ಲಿ ತಮ್ಮ ದರ್ಶನವೇ ಇಲ್ಲದಿರುವಾಗ್ಯೆ । ಅಲ್ಲಿ ನಾನೇನು ಮಾಡಲಿ ॥ 76

ಇಲ್ಲಿ ನಿತ್ಯದಲಿ ಚರಣ ದರ್ಶನ । ಆಗುವದು ಚರಣ ತೀರ್ಥಸೇವನ ।
ಸಹಜಲೇ ಆಗುವದು ಹಗಲಿರುಳು ಚಿಂತನ । ನಾನೊಬ್ಬನೇ ಅಲ್ಲೇನು ಮಾಡಲಿ ॥ 77

ಆದರೆ ಬಾಬಾ ತಮ್ಮನ್ನಗಲಿ । ನನ್ನ ಸ್ವಹಿತವೇನಿರುವದಲ್ಲಿ ।
ಅದ ತಿಳಿಯುವ ಸಾಮರ್ಥ್ಯ ನನಗೆಲ್ಲಿ । ಏತಕೆ ನನ್ನನಲ್ಲಿ ಕಳಿಸುತಿರುವಿರಿ ॥ 78

ಆದರೂ ಒಂದಿಷ್ಟೂ ಇರಬಾರದು ಭಕ್ತನಿಗೆ । ಗುರುವಚನದಲಿ ವಿಕಲ್ಪ ಹೀಗೆ ।
ಎಂಬ ವಿಚಾರ ಬಂದು ಮನದೊಳಗೆ । ಮಾನಕರ ನಿರ್ವಿಕಲ್ಪನಾದನು ॥ 79

ಎಂದನು ಬಾಬಾ ಕ್ಷಮೆ ಇರಲಿ । ಕ್ಷುದ್ರ ಬುದ್ಧಿಯ ವಿಚಾರ ನನ್ನಲ್ಲಿ ।
ಅದರಿಂದ ಮುಳುಗಿದೆ ನಾಚಿಕೆಯಲಿ । ಈ ಶಂಕೆ ನನಗೊಪ್ಪದೆಂದು ॥ 80

ಆ ರಮ್ಯ ಸ್ಥಾನಕ್ಕೆ ಬಂದು । ಶುದ್ಧ ನಿರ್ಮಲ ಜೀವನವಲ್ಲಿಯದು ।
ಮಂದ ಮಂದ ಗಾಳಿ ಬೀಸುವದು । ಸಮಾಧಾನವ ತಂದಿತು ॥ 90

ಸಾಯಿಯವರಿಂದಾಗಿ ಮಾನಕರರು ಹೀಗೆ । ಸಾಯಿ ವಿರಹಿತರಾಗಿ ಗಡದ ಮೇಗೆ ।
ತಪವನಾಚರಿಸಿದರು ಅವರು ಹೇಳಿದ ಹಾಗೆ । ಅವರು ಹೇಳಿದಂತಲ್ಲುಳಿದು ॥ 91

ಬಾಬಾರ ಚಮತ್ಕಾರ ನೋಡಿರೀಗ । ಮಾನಕರರು ತಪನಿಮಗ್ನರಿರುವಾಗ ।
ಸಾಕ್ಷಾತ್ಕಾರವನಿತ್ತರಾಗ ಪ್ರತ್ಯಕ್ಷದರ್ಶನವನಿತ್ತು ಅಲ್ಲಿ ॥ 92

ಸಮಾಧಿಸ್ಥನಿಗೆ ದರ್ಶನವಾಗುವದು । ಅದರಲ್ಲೇನೂ ಆಶ್ಚರ್ಯವಿರದು ।
ಆದರೆ ಕುಳಿತಿದ್ದು ನಿಂತಿದ್ದು ಓಡಾಡುತಿದ್ದು । ಶ್ರೀ ಸಮರ್ಥರನು ಕಂಡದ್ದು ॥ 93

ಕೇವಲ ದೃಷ್ಟಿಯಿಂದ ನೋಡಿದ್ದಲ್ಲ ಹಾಗೆ । ಬಾಳರಾಮನು ಪ್ರತ್ಯಕ್ಷ ಮಾತನಾಡಿ ಕೇಳಿದನವರಿಗೆ
ನನ್ನನ್ನೇತಕೆ ಕಳಿಸಿದಿರಿಲ್ಲಿಗೆ । ಅದಕವರೇನು ಉತ್ತರವನಿತ್ತರು ॥ 94

"ಶಿರಡಿಯಲಿದ್ದಾಗ ಅನೇಕ ಕಲ್ಪನೆಗಳು । ನಿನ್ನಂತರರಂಗದಲೇಳತೊಡಗಲು ।
ನಿನ್ನ ಚಂಚಲಮನವ ಶಾಂತಿಗೊಳಿಸಲು । ಗಡದ ಮೇಲೆ ನಿನ್ನ ಕಳಿಸಿದೆ ॥ 95

ಮಣ್ಣು ಕಲ್ಲು ನೀರುಗಳಿಂದ । ಕಲಸಿ ರಚಿಸಿದ ಮನೆಯೆಂಬುದ ।
ಈ ಮೂರೂವರೆ ಮೊಳ ದೇಹವಿರುವದು । ಶಿರಡಿಯ ಹೊರಗೂ ಎಂದು ನೀ ತಿಳಿಯಲಿಲ್ಲ ॥ 96

ಈಗ ಇಲ್ಲಿರುವ ನಾನೇ ಇರುವೆನಲ್ಲಿ । ನೋಡಿಕೋ ನನ್ನ ಸ್ವಸ್ಥಚಿತ್ತದಲಿ ।
ಅಲ್ಲಿಂದ ನಾ ನಿನ್ನ ಕಳಿಸಿದುದು ಇಲ್ಲಿ । ಇದೇ ಕಾರಣಕಾಗಿ ಎಂಬದ ತಿಳಿ" ॥ 97

ಹೀಗೆ ಮಾನಕರನು ಆಮೇಲೆ । ಉದ್ದಿಷ್ಟ ಕಾಲಕ್ರಮಿಸಿದ ಮೇಲೆ ।
ತಮ್ಮ ಸ್ಥಳಕೆ ತಿರುಗಿ ಬರಲೆನುತಲೇ । ಮಚ್ಛಿಂದ್ರಗಡವನು ಬಿಟ್ಟನು ॥ 98

ತನ್ನ ಊರಾದ ವಾಂದ್ರೆಗೆ । ಬರಬೇಕೆನಿಸಿತು ಮನಸಿಗೆ ।
ಪುಣೆಯಿಂದ ದಾದರದವರೆಗೆ । ಉಗಿಬಂಡಿಯಲಿ ಪ್ರಯಾಣ ಮಾಡಿದ ॥ 99

ಹೋದ ಪುಣೆ ಸ್ಟೇಶನದೊಳಗೆ । ತಿಕೀಟುಕೊಂಡಕೊಳ್ಳಬೇಕೆನುವಾಗ ।
ಕಿಟಕಿಯ ಹತ್ತಿರ ನಿಂತಾಗ । ಚಮತ್ಕಾರ ನಡೆಯಿತು ॥ 100

ಲಂಗೋಟಿಯೊಂದು ನಡುವಿಗೆ । ರೈತರಂತೆ ಕಂಬಳಿಯೊಂದು ಹೆಗಲಿಗೆ ।
ಗುರುತಿಲ್ಲದ ಪ್ರವಾಸಿಯೊಬ್ಬ ಹೀಗೆ । ಕಿಡಕಿಯ ಹತ್ತಿರ ಕಂಡನು ॥ 101

ತೆಗೆದುಕೊಂಡು ದಾದರದ ತಿಕೀಟ । ಆ ರೈತ ತಿರುಗಿ ಹೊರಟ ।
ನೋಡಿದ ಬಾಳಕರಾಮನತ್ತ । ಕೂಡಲೇ ಹತ್ತಿರ ಬಂದನು ॥ 102

ನೀವೆಲ್ಲಗೆ ಹೋಗುವಿರೆಂದು ಕೇಳಿದ । ಬಾಳಕರಾಮ 'ದಾದರಕೆ' ಎಂದ ।
ರೈತ ತನ್ನ ತಿಕೀಟನವಗೆ ಕೊಟ್ಟು ಹೇಳಿದ । ಇನ್ನಿದನು ನೀವು ತೆಗೆದುಕೊಳ್ಳಿ ॥ 103

ನಾನು ಹೋಗಬೇಕೆಂದಿದ್ದೆನಲ್ಲಿ । ಆದರೆ ಮಹತ್ವದ ಕೆಲಸವಿರುವದಿಲ್ಲಿ ।
ನೆನಪಾಗಿ ಉಳಿಯಬೇಕಾಗಿದೆ ಇಲ್ಲಿ । ಅದರಿಂದ ಹೋಗುವದನು ನಿಲ್ಲಿಸಿದೆ ॥ 104

ತಮ್ಮ ಕೈಯಿಂದ ದುಡ್ಡು ಕೊಟ್ಟೂ । ಕಷ್ಟದೆ ದೊರಕಿಸುವದು ತಿಕೀಟು ।
ಹೀಗೆ ಕಷ್ಟವಿಲ್ಲದೆ ದೊರಕಿತು । ಪರಮ ಸಂತೋಷ ಮಾನಕರನಿಗೆ ॥ 105

ಅವನ ದುಡ್ಡು ಕೊಡಲು । ಜೇಬಿನಿಂದ ಹಣ ತೆಗಯುವಷ್ಟರೊಳು ।
ಆ ಒಕ್ಕಲಿಗ ಗದ್ದಲದೊಳು । ಕಾಣದಾದ ಎಲ್ಲೂ ॥ 106

ಆ ರೈತನ ಹುಡುಕಬೇಕೆಂದು । ಬಾಳಕರಾಮನು ಪ್ರಯತ್ನಿಸಿದ್ದು ।
ಆಯಿತೆಲ್ಲ ನಿಷ್ಫಲವದು । ಅಷ್ಟರಲಿ ಉಗಿಬಂಡಿ ಬಂದು ನಿಂತಿತು ॥ 107

ಕಾಲಲ್ಲಿ ಮೆಟ್ಟು ಇರದ । ತಲೆಗೊಂದು ಹರಕು ಬಟ್ಟೆ ಸುತ್ತಿದ ।
ಹೆಗಲಿಗೆ ಕಂಬಳಿ ಲಂಗೋಟಿ ಉಟ್ಟಿದ್ದ । ಈ ಒಕ್ಕಲಿಗನಾರಿರಬಹುದು ॥ 108

ತಿಕೀಟಿಗೆ ದುಡ್ಡು ಕಡಿಮೆಯೇನಿಲ್ಲ । ಅದನು ಆತ ತಾನೇ ಕಟ್ಟಿದನಲ್ಲ ।
ಒಡೆಯದ ಒಗಟವಾಗಿದೆ ಇದೆಲ್ಲ । ಈ ಆಭಾರದ ದಾಕ್ಷಿಣ್ಯ ನನಗೇಕೆ ॥ 109

ಉದಾರ ಮತ್ತು ನಿರಪೇಕ್ಷ ಮನದವನ । ಮೇಲ್ನೋಟಕೆ ಒಕ್ಕಲಿಗನಂತಿರುವವನ ।
ಯಾರೆಂದು ತಿಳಿಯಲಾರದಾದೆ ಅವನ । ಎಂಬ ದುಃಖ ಮಾನಕರರಿಗಾಯಿತು ॥110

ಆಶ್ಚರ್ಯಚಕಿತರಾಗಿ ಅವರು ಹಾಗೇ । ಭೆಟ್ಟಿಯಾದನೆಂಬ ಆಶೆ ಮನದೊಳಗೆ ।
ಉಗಿಬಂಡಿ ಸ್ಥಳಬಿಟ್ಟು ಕದಲುವವರೆಗೆ । ತಟಸ್ಥರಾಗಿ ಬಾಗಿಲಲೇ ನಿಂತರು ॥ 111

ಆಮೇಲೆ ಗಾಡಿ ಬಿಟ್ಟಿತು । ಆಗ ಭೆಟ್ಟಿಯ ಆಶೆಯೇ ಇಲ್ಲದಾಯಿತು ।
ಗಾಡಿಯು ಚಲಿಸತೊಡಗಿತು । ಜಿಗಿದು ಬಂಡಿಯಲಿ ಹತ್ತಿದರು ॥ 112

ಗಡದ ಮೇಲಾದ ಪ್ರತ್ಯಕ್ಷ ಭೆಟ್ಟಿ । ಹಾಗೆಯೇ ಈಗಿಲ್ಲಿ ನಡೆದ ರೀತಿ ।
ನೋಡಿ ರೈತನ ವಿಚಿತ್ರ ನಡತಿ । ಮಾನಕರರ ಮನತಳಮಳಿಸಿತು ॥ 113

ಹೀಗೆ ಈ ಸದ್ಭಕ್ತರು । ಸಾಯಿ ಪದದಲಿ ಪೂರ್ಣ ಅನುರಕ್ತರು ।
ದೃಢ ಶ್ರದ್ಧೆ ಭಕ್ತಿ ಸಂಯುತರು । ಆಗಿ ಕೃತಾರ್ಥರಾದರು ಶಿರಡಿಯಲಿ ॥ 114

ಸಾಯಿ ಸಂಲಗ್ನ ಪದಾಬ್ಜರಜದಲಿ । ಸಾಯಿ ನಾಮದಿ ಗುಂಜಿಸುತಲಿ ।
ಉಳಿದರು ಶಿರಡಿಯಲ್ಲಿ । ಬಾಲಕರಾಮರುಳಿದರು ಭಕ್ತ ಭ್ರಮರರಾಗಿ ॥ 115

ಬಾಬಾರ ಅನುಜ್ಞೆಯನು ಪಡೆದು । ಮುಕ್ತಾರಾಮನನು ಜೊತೆ ಮಾಡಿಕೊಂಡು ।
ಒಂದೊಂದು ಸಲ ಶಿರಡಿಯ ಬಿಟ್ಟು । ಹೊರಗೆ ಪ್ರಯಾಣ ಮಾಡುತಿದ್ದರು ॥ 116

ಆದರೂ ಶಿರಡಿಯೇ ಕೇಂದ್ರಸ್ಥಾನವಿದ್ದು । ಆಗಾಗ ಅಲ್ಲಿಗೆ ತಿರುಗಿ ಬಂದು ।
ಕೊನೆಗೆ ದೇಹ ವಿಸರ್ಜನೆಯಾದದ್ದೂ । ಪರಮಪಾವನ ಶಿರಡಿಯಲೇ ॥ 117

ಧನ್ಯ ಪೂರ್ವಕೃತ ಪುಣ್ಯ । ಆದರು ಸಾಯಿಯ ದೃಷ್ಟಿ ವಿಷಯ ।
ಅವರ ಚರಣದಲ್ಲಿಯೇ ಹತ್ತಿಲಯ । ನಿರ್ಭಯ ಮರಣವ ಪಡೆದರು ॥ 118

ಧನ್ಯ ತಾತ್ಯಾಸಾಹೇಬ ನೂಲಕರರು । ಧನ್ಯ ಮೇಘಾ ಭಕ್ತ ಶ್ರೇಷ್ಠರು ।
ಕೊನೆಗೆ ಶಿರಡಿಯಲಿದ್ದು ಭಜನ ತತ್ಪರರು । ತಮ್ಮ ದೇಹವ ವಿಸರ್ಜಿಸಿದರು ॥ 119

ಮೇಘಾ ಪಡೆದ ಪಂಚತ್ವ । ಆಗ ನೋಡಬೇಕಿತ್ತು ಉತ್ತರವಿಧಿಯ ಮಹತ್ವ ।
ಮತ್ತು ಬಾಬಾರ ಭಕ್ತ ಸಖ್ಯತ್ವ । ಮೇಘಾ ಮೊದಲೇ ಕೃತಕೃತ್ಯನಾಗಿದ್ದ ॥ 120

ಭಕ್ತರೆಲ್ಲರನೂ ಕೂಡಿಕೊಂಡು । ಗ್ರಾಮಸ್ಥರು ಸ್ಮಶಾನ ಯಾತ್ರೆಗೆ ಹೊರಟು ।
ಬಾಬಾರೂ ಸ್ಮಶಾನಕ್ಕೆ ಹೋಗಿದ್ದು । ಹೂವು ಹಾರಿಸುತ ಮೇಘಾನ ಮೇಲೆ ॥ 121

ಮೇಘಾನ ಉತ್ತರಕ್ರಿಯೆ ಆದಾಗ್ಗೆ । ಕಣ್ಣೀರು ಬಂದಿತು ಬಾಬಾರಿಗೆ ।
ಮಾಯೆಯಲಿ ತೊಡಗಿದ ಮಾನವರ ಹಾಗೆ । ಶೋಕಾಕುಲಿತರಾದರು ॥ 122

ಬಾಬಾ ಪ್ರೀತಿಯಲಿ ಸ್ವಕರಗಳಿಂದ । ಪ್ರೇತವ ಆಚ್ಛಾದಿಸಿದರು ಪುಷ್ಪಗಳಿಂದ ।
ಶೋಕ ಮಾಡಿದರು ಕರುಣ ಸ್ವರದಿಂದ । ಬಳಿಕವರು ತಿರುಗಿ ಬಂದರು ॥ 123

ಮಾನವರ ಉದ್ಧಾರ ಮಾಡುವಂಥ । ನೋಡಿರುವೆವು ಸಂತರನು ಅಂಥ ।
ಆದರೆ ಸಾಯಿಬಾಬಾರ ಮಹತ್ವ । ಎಷ್ಟೆಂತ ವರ್ಣನೆ ಮಾಡಲಿ ॥ 124

ವ್ಯಾಘ್ರದಂಥ ಕ್ರೂರಪ್ರಾಣಿಗೆ । ಅದಕೇನು ಜ್ಞಾನವಿರುವದೇ ಮನುಷ್ಯರ ಹಾಗೆ ।
ಆದರೂ ಅದೂ ಬಂದಿತು ಬಾಬಾರ ಚರಣದೆಡೆಗೆ । ಅಘಟಿತ ಲೀಲೆ ಬಾಬಾರದು ॥ 125

ರಮ್ಯ ಕಥೆಯೊಂದನು ಇದರ ಬಗ್ಗೆ । ಹೇಳುವೆನು ಕೇಳಿರಿ ಚಿತ್ತವಿತ್ತು ನೆಟ್ಟಗೆ ।
ಆಗ ತಿಳಿದಿತು ಬಾಬಾರ ವ್ಯಾಪಕತೆಯ ಬಗೆ । ಸಮಚಿತ್ತತೆ ಎಲ್ಲರಲವರದು ॥ 126

ಒಮ್ಮೆ ಶಿರಡಿಯಲಿ ಚಮತ್ಕಾರವಾಯಿತು । ನಿರ್ಯಾಣಕ್ಕಿನ್ನು ಏಳು ದಿನ ಉಳಿದಿತ್ತು ।
ಒಂದು ಎತ್ತಿನ ಬಂಡಿ ಬಂತು । ನಿಂತಿತು ಬಂದು ದ್ವಾರದಲಿ ॥ 127

ಅದರಲ್ಲೊಂದು ವ್ಯಾಘ್ರ ಪ್ರಚಂಡ । ಕೊರಳಿಗೆ ಸರಪಳಿ ಕಬ್ಬಿಣದ ।
ಗಟ್ಟಿಯಾಗಿ ಬಿಗಿದಿದ್ದ । ಭಯಂಕರ ಮುಖ ಹಿಂದುಗಡೆ ॥ 128

ಅದಕೇನೋ ವ್ಯಥೆ ಇದ್ದಿತು । ದರವೇಶಿಗಳು ಉಪಾಯ ಮಾಡಿ ಬೇಸತ್ತು ।
ಕೊನೆಯ ಉಪಾಯವನು ಕುರಿತು । ಸಂತದರ್ಶನಕದನು ತಂದರು ॥ 129

ಆ ದರವೇಶಿಗಳಿದ್ದರು ಮೂರು ಜನ । ಆ ವ್ಯಾಘ್ರವಿತ್ತವರ ಜೀವಿತದ ಸಾಧನ ।
ಊರೂರಿಗೆ ಹೋಗಿ ಆಡಿಸುತ್ತಿದ್ದರದನ । ಅದರಿಂದ ಉಪಜೀವನ ನಡೆಸುತಿದ್ದರು ॥ 130

ತಿರುಗಾಡುತ್ತ ಅತ್ತಕಡೆ ಬಂದಾಗ್ಯೆ । ಬಾಬಾರ ಲೀಲೆ ಬಿತ್ತು ಕಿವಿಗೆ ।
ಹುಲಿಯನ್ನೂ ತೆಗೆದುಕೊಂಡು ಜೊತೆಗೆ । ದರ್ಶನ ಪಡೆಯಲು ಬಂದರು ॥ 131

ಅವರ ಚರಣ ಚಿಂತಾಮಣಿಯಾಗಿದ್ದು । ಅಷ್ಟಸಿದ್ಧಿಗಳು ಕೈ ಮುಗಿಯುತಿದ್ದು ।
ನವನಿಧಿಗಳು ಚರಣದಲಿ ಹೊರಳಾಡುವದು । ಅವರ ಚರಣತೀರ್ಥವ ತೆಗೆದುಕೊಳುವರು ॥ 132

ಅವರಚರಣದಲಿ ಶಿರಬಾಗಿ । ಆಶೀರ್ವಾದವ ಕೇಳುವ ಹುಲಿಗಾಗಿ ।
ಸಂತರ ಆಶೀರ್ವಾದದಿಂದಾಗಿ । ಎಲ್ಲರ ಕಲ್ಯಾಣವಾದೀತು ॥ 133

ಆ ದರವೇಶಿಗಳು ಅದಕೆಂದು । ಹುಲಿಯನು ಕೆಳಕ್ಕಿಳಿಸಿಕೊಂಡು ।
ಗಟ್ಟಿಯಾಗಿ ಸರಪಳಿ ಹಿಡಿದುಕೊಂಡು । ಬಾಗಿಲಿಗೆ ಬಂದು ನಿಂತರು ॥ 134

ಮೊದಲೇ ಹಿಂಸ್ರ ಭಯಾನಕ ಪ್ರಾಣಿಯದು । ಅದರಲಿ ರೋಗ ಪಿಡೀತವಾದದ್ದು ।
ಅದರಿಂದ ಅತ್ಯಂತ ಅಸ್ವಸ್ಥವಾಗಿದ್ದು । ಮೌನ ಕೌತುಕದಿಂದ ನೋಡುತಿದ್ದರು ॥ 135

ದರವೇಶಿಗಳು ಆ ವ್ಯಾಘ್ರದ ಸ್ಥಿತಿಯನು । ಬಾಬಾರ ಕಿವಿಗೆ ಹಾಕಿದರೆಲ್ಲವನು ।
ಪಡೆದುಕೊಂಡು ಬಾಬಾರ ಆಜ್ಞೆಯನು । ತಿರುಗಿ ಬಾಗಿಲಿಗೆ ಬಂದರು ॥ 136

ಸರಪಳಿಯ ಗಟ್ಟಿಯಾಗಿ ಬಿಗಿದು । ಹರಿದುಕೊಂಡು ಓಡಿ ಹೋಗದಿರಲೆಂದು ।
ಆಮೇಲದನು ಎಚ್ಚರದಿಂದ ಹಿಡಿದುಕೊಂಡು । ಬಾಬಾರೆದುರಿಗೆ ತಂದರು ॥ 137

ತೇಜೋರಾಶಿಗಳಾದ ಸಾಯಿಯ ನೋಡುತ್ತಲೇ । ಹುಲಿ ಮೆಟ್ಟಲಿನ ಹತ್ತಿರ ಬಂದ ಕೂಡಲೇ ।
ತಿಳಿಯದೇನು ಹೆದರಿಕೆ ಅದರ ಮನದಲ್ಲೇ । ಅತ್ಯಾದರದಿಂದ ತಲೆ ಬಾಗಿಸಿತು ॥138

ನೋಡಿರೆಂಥ ಚಮತ್ಕಾರ । ನೋಡಿದರಿಬ್ಬರೂ ಒಬ್ಬರೊಬ್ಬರ ।
ಮೆಟ್ಟಲೇರಿದಾಗ ವ್ಯಾಘ್ರ । (ಪ್ರೇಮಪೂರ್ಣ ದೃಷ್ಟಿಯಾಯಿತು) ದೃಷ್ಟಿಯಲಿ ಪ್ರೀತಿ ತುಂಬಿತ್ತು ॥ 139

ಕೂಡಲೇ ಬಾಲವನುಬ್ಬಿಸಿತು । ಮೂರು ಸಲ ನೆಲಕ್ಕೆ ಬಡಿಯಿತು ।
ಸಾಯಿ ಚರಣದಲಿ ದೇಹವಿಟ್ಟಿತು । ನಿಚೇಷ್ಟಿತ ಬಿದ್ದಿತು ವಿಕಲವಾಗಿ ॥ 140

ಒಮ್ಮೆ ಭಯಂಕರವಾಗಿ ಗರ್ಜಿಸಿತು । ಕೂಡಲೇ ಅಲ್ಲಿಯೇ ಪ್ರಾಣ ಬಿಟ್ಟಿತು ।
ಜನರಿಗೆಲ್ಲ ವಿಸ್ಮಯವಾಯಿತು । ವ್ಯಾಘ್ರವು ಶಾಂತಿ ಹೊಂದಿದ್ದು ಕಂಡು ॥ 141

ಒಂದು ರೀತಿಯಲಿ ದರವೇಶಿಗಳಾದರು ಖಿನ್ನ । ಮತ್ತೆ ಅವರು ಕಂಡರು ಪ್ರಸನ್ನ ।
ಈ ರೋಗಗ್ರಸ್ತ ಆಸನ್ನ ಮರಣ । ಪ್ರಾಣಿ ನಿರ್ವಾಣ ಪಡೆಯಿತೆಂದು ॥ 142

ಸಾಧುಸಂತರ ಎದುರಿಗೆ । ಪ್ರಾಣೋತ್ಕ್ರಮಣ ವಾದಾಗ್ಯೆ ।
ಕ್ರಿಮಿ, ಕೀಟಕ, ಹುಲಿಯೇ ಇರುವಾಗ್ಯೆ । ಎಲ್ಲ ಪಾಪಗಳಿಂದ ಮುಕ್ತಿ ಅದಕೆ ॥ 143

ಹೋದ ಜನ್ಮದ ಋಣವಿರಬೇಕು । ಆ ಋಣವನೀಗ ಮುಟ್ಟಿಸಿರಬೇಕು ।
ಸಾಯಿ ಚರಣದಲಿ ದೇಹವಿಡಬೇಕು । ಅಘಟಿತ ಲೀಲೆ ವಿಧಿಯದು ॥ 144

ಸಂತರ ಚರಣದಲಿಟ್ಟು ಶಿರವನ । ಯಾವ ಪ್ರಾಣಿ ಹೊಂದವುದ ಮರಣ ।
ಕೂಡಲೇ ಆಗುವದು ಉದ್ಧಾರ ಅವನ । ಇದೇ ಸಾರ್ಥಕ ಜನ್ಮದ್ದು ॥ 145

ದೈವವನದು ದೊಡ್ಡದಿರದೇ । ಸಂತ ಜನರ ಕಣ್ಣಮುಂದೆ ।
ಅವರ ಶರೀರ ಬೀಳುವದೇ । ಆಗುವದೇ ಅವರ ಉದ್ಧಾರ ॥ 146

ಸಾಧುಗಳ ದೃಷ್ಟಿಯ ಎದುರೊಳು। ಪರಮ ಸುಖವದು ದೇಹವಿಡಲು ।
ಅಮೃತವೇನು ವಿಷವನೇ ಕುಡಿಯಲು । ಮರಣದ ಸುಖದುಃಖಗಳಿಲ್ಲವರಿಗೆ ॥ 147

ದೃಷ್ಟಿಯ ಎದರು ಸಂತರ ಚರಣ । ಇದ್ದಾಗ ಬಿಟ್ಟವರ ಪ್ರಾಣ ।
ಧನ್ಯ ಆ ದೇಹವು ಕೃಷ್ಣಾರ್ಪಣ । ಪುನರ್ಜನನವಿಲ್ಲದಕೆ ॥ 148

ಸಂತರ ದೃಷ್ಟಿಯ ಸನ್ಮುಖ । ಬಂದದ್ದರಿ ಮರಣವಲ್ಲವದು ವೈಕುಂಠ ಸುಖ ।
ಗೆದ್ದನವ ಈ ಮೃತ್ಯು ಲೋಕ । ಪುನರ್ಭವದ ಶೋಕವಿಲ್ಲವನಿಗೆ ॥ 149

ಸಂತರೆದುರಿಗೆ ದೇಹ ತ್ಯಜಿಸಿದ್ದು । ಅಂಥವರಿಗೆ ಪುನರಾವೃತ್ತಿ ಇರದು ।
ಅದೇ ಎಲ್ಲ ಪಾಪಗಳ ನಿಷ್ಕೃತಿಯಾಗಿದ್ದು । ಉದ್ಧಾರಗತಿಯ ಹೊಂದಿದ ನವ ॥ 150

ಆನಖಾಗ್ರ ಸಂತಾವಲೋಕನ । ಮಾಡುತ್ತಿರುವಾಗ ದೇಹ ಪತನ ।
ಅದಕೆನ್ನಲಾಗದು ಮರಣ । ನಿಜೋದ್ಧರಣವೇ ಅದು ನಿಜದಲಿ ॥ 151

ನೋಡ ಹೋಗಲು ಪೂರ್ವ ವಿಧಾನ । ಯಾರೋ ಒಬ್ಬ ಪುಣ್ಯವಾನ ।
ಮೆರೆಸುತಿರಲು ವಿಧ್ಯಾಭಿಮಾನ । ಅವಮಾನಿತನಾದ ಹರಿಭಕ್ತ ॥ 152

ಅವನ ಶಾಪದಿಂದಾಗಿ । ಹುಟ್ಟಿದ ಈ ಕ್ರೂರ ಪ್ರಾಣಿಯಾಗಿ ।
ಚರಣವ ಹೊಂದಿದ ಉಃಶಾಪದಿಂದಾಗಿ । ಅಭಿನವ ಕಾರ್ಯವಿದು ಭಕ್ತನದು ॥ 153

ಎನಿಸಿತದು ಉಃಶಾಪ ಪಡೆಯಿತು । ಸಾಯಿ ದರ್ಶನದಿಂದ ಪಾಪ ನಶಿಸಿತು ।
ಬಂಧ ಹರಿಯಿತು ತಾಪ ಮುಗಿಯಿತು । ತನ್ನಷ್ಟಕ್ಕೇ ಉದ್ಧಾರವಾಯಿತು ॥ 154

ಸಂಪೂರ್ಣ ಸಭಾಗ್ಯನಿರದ ಹೊರತು । ಸಂತರೆದುರು ಮರಣ ಹೇಗೆ ಬಂದೀತು ।
ತ್ರಿತಾಪ ತ್ರಿಗುಣ ಮರ್ದನವಾಯಿತು । ನಿರ್ಗುಣನಾಗಿ ಉರುಳಿದನವ ॥ 155

ಹೀಗೆ ಪೂರ್ವಕರ್ಮಾನುಬಂಧ । ತಪ್ಪಿತು ಕ್ರೂರ ದೇಹ ಸಂಬಂಧ ।
ಹರಿಯಿತು ಲೋಹ ಶೃಂಖಲಾ ಬಂಧ । ಈಶ್ವರೀಯನಿಬಂಧ ಇದು ಒಂದು ॥ 156

ಸಾಧು ಸಂತರ ಚರಣದಲಲ್ಲದೇ । ಉದ್ಧಾರಗತಿ ಇನ್ನೆಲ್ಲಿದೆ ।
ಈ ವ್ಯಾಘ್ರಕೆ ಅದೇ ಸಿಕ್ಕಿದೆ । ದರವೇಶಿಗಳದರಿಂದ ಪ್ರಸನ್ನರು ॥ 157

ವ್ಯಾಘ್ರ ಅವರ ಚರಿತಾರ್ಥ ಸಾಧನ । ವ್ಯಾಘ್ರದಿಂದವರ ಕುಟುಂಬ ಪೋಷಣ ।
ಆ ವ್ಯಾಘ್ರಕ್ಕೆ ಬರಲು ಮರಣ । ದರವೇಶಿಗಳು ಖಿನ್ನರಾದರು ॥ 158

ದರವೇಶಿಗಳು ಮಹಾರಾಜರಿಗೆಂದದ್ದು । ಇನ್ನು ಮುಂದೆ ಗತಿಯೇನಿದರದು ।
ಹೇಗಿದನು ಹೂಳುವದು । ತಾವೇ ಸದ್ಗತಿಯ ತೋರಿರಿದಕೆ ॥ 159

ದುಃಖಿಸದಿರೆಂದರು ಮಹಾರಾಜರು ಇಂತು । ಅದರ ಕೊನೆ ಇಲ್ಲೇ ಆಗುವದಿತ್ತು ।
ಅದೂ ಬಹಳ ಪುಣ್ಯ ಪಡೆದಿತ್ತು । ಅತ್ಯಂತ ಸೌಖ್ಯವ ಹೊಂದಿತು ॥ 160

ಆ ತಕ್ಕೆಯ ಆಕಡೆಯತ್ತ । ಶಂಕರನ ಮಂದಿರವಿರುವತ್ತ ।
ಒಯ್ದು ಅದಕೆ ಗತಿ ಕಾಣಿಸುತ । ಅತ್ಯಂತ ಸೌಖ್ಯವ ಹೊಂದಿತು ॥ 161

ಅದನು ಅಲ್ಲಿ ಹೂಳುವದು । ಅದರಿಂದ ಅದೂ ಸದ್ಗತಿಯ ಪಡೆಯುವದು ।
ಋಣಮುಕ್ತ ಬಂಧ ಮುಕ್ತವಾಗುವದು । ನಿಮ್ಮ ಕೈಗಳಿಂದ ಅದು ॥ 162

ಹೋದ ಜನ್ಮದಲಿ ನಿಮ್ಮ ಋಣಿಯವ । ಆ ಋಣ ತೀರಿಸಲು ಈ ಅವತಾರವ ।
ತಾಳಿ ನಿಮ್ಮ ಬಂಧನದಲಿ ಅವ । ಇಂದಿನವರೆಗೂ ಇದ್ದನು ॥ 163

ಬಳಿಕ ದರವೇಶಿಗಳು ಅದನೆತ್ತಿಕೊಂಡು । ದೇವಸ್ಥಾನದ ಬಳಿ ಹೋದರು ತೆಗೆದುಕೊಂಡು ।
ನಂದಿಯ ಹಿಂದಿನ ಸ್ಥಳದಲ್ಲಿ ತಗ್ಗು ತೆಗೆದು । ಅದರಲ್ಲದನು ಮುಚ್ಚಿದರು ॥ 164

ಎಂಥ ಚಮತ್ಕಾರವಿದು । ವ್ಯಾಘ್ರವು ಕೂಡಲೇ ಪ್ರಾಣ ತ್ಯಜಿಸುವದು ।
ನಡೆದ ಪ್ರಕಾರ ಇಷ್ಟೇ ಇದ್ದಿದ್ದರೂ ಅದು । ಮರೆತುಹೋಗಬಹುದಾಗಿತ್ತು ॥ 165

ಆದರೆ ಅಂದಿನಿಂದ ಏಳೇ ದಿನಗಳಿಗೆ । ಬಾಬಾ ದೇಹವಿಟ್ಟರು ಧರಣಿಗೆ ।
ಅದರಿಂದದು ಮೇಲಿಂದ ಮೇಲೆ ಮನದೊಳಗೆ । ಉಕ್ಕಿ ಉಕ್ಕಿ ಬರುವದು ॥ 166

ಮುಂದಿನಧ್ಯಾಯ ರುಚಿ ಇದಕಿಂತ । ಬಾಬಾರೇ ತಮ್ಮ ಗುರುವಿನ ಚರಿತೆ ಹಾಡುತ ।
ಗೋಖಲೆ ಬಾಯಿಯ ಅಭೀಷ್ಟ ಪೂರೈಸುತ । ಅನುಗ್ರಹವನಿತ್ತರವಳಿಗೆ ॥ 167

ಹೇಮಾಡ ಸಾಯಿನಾಥರಿಗೆ ಶರಣ । ಗುರುವಿನಿಂದ ಬಾವಿಯಲಿ ತಲೆಕೆಳಗಾಗಿ ಜೋತಾಡಿಸಿಕೊಂಡವನ
ಹೇಗೆ ಬಾಬಾ ಮಾಡಿದರು ಕೃಪಾ ಸಂಪಾದನ । ಎಂಬದನ್ನು ಕೇಳಬೇಕು ॥ 168

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ದರ್ಶನ ಮಹಿಮಾನಾಮ ಏಕತ್ರಿಂಶತ್ತಮೋಧ್ಯಾ
ಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತೆರಡು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಇನ್ನು ಹಿಂದಿನ ಅಧ್ಯಾಯದಲಾಯಿತು ಕಥನ । ವಿಜಯಾನಂದ ಪಡೆದ ನಿರ್ವಾಣ ।
ಬಾಳಕರಾಮನಾದ ನಿಜಾನಂದದಿ ಲೀನ । ಸಾಯಿ ಚರಣ ಸನ್ನಿಧಿಯಲಿ ॥ 1

ಅಂತೆಯೇ ತಾತ್ಯಾ ಸಾಹೇಬ ನೂಲಕರ । ಮೇಘಾ ನಿಃಸ್ಸೀಮ ಭಕ್ತರಾವರ ।
ಇಬ್ಬರೂ ಅರ್ಪಿಸಿದರು ಶರೀರ । ಸಮರ್ಥರ ಸಮಕ್ಷಮದಲೇ ॥ 2

ಇದಕಿಂತ ದೊಡ್ಡ ಚಮತ್ಕಾರ । ಕ್ರೂರ ಪ್ರಾಣಿಯಾದ ವ್ಯಾಘ್ರ ।
ಅದರದೂ ನಿಧನ ಪ್ರಕಾರ । ಸವಿಸ್ತಾರವಾಗಿ ಕೇಳಿದಿರಿ ॥ 3

ಇನ್ನು ಈ ಅಧ್ಯಾದಲಿ । ಇರುವಂಥ ಸವಿಯಾದ ಕಥೆಯ ಕೇಳಿ ।
ಅತ್ಯಂತ ಹಿತವಿರುವುದದರಲ್ಲಿ । ಬಾಬಾರೇ ಆ ಕಥೆಯ ಹೇಳಿರುವದರಿಂದ ॥ 4

ಒಮ್ಮೆ ಬಾಬಾ ವನದಲಿರಲಾಗಿ । ಗುರುದರ್ಶನವಾಯಿತು ಅಕಸ್ಮಾತ್ತಾಗಿ ।
ಹೇಗಿರುವುದು ಕೃತಿ ಗುರುವಿನದು ಅದ್ಭುತವಾಗಿ । ಚಿತ್ತವಿಟ್ಟು ಕೇಳಿರಿ ॥ 5

ಈ ಕಥೆಯ ಸ್ವಾರಸ್ಯವನ್ನು । ನಾ ಪಾಮರನೆಷ್ಟೆಂದು ವರ್ಣಿಸಿಯೇನು ।
ಭಕ್ತಿ ಶ್ರದ್ಧೆ ಮುಕ್ತಿದಾಯಕವಿದನು । ಸ್ವಮುಖದಿಂದ ಸಾಯಿ ಹೇಳಿದರು ॥ 6

ಹಾಗೇಯೇ ಒಬ್ಬ ಸ್ತ್ರೀ ಬಯಸಿದ್ದು । ಬಾಬಾರ ದರ್ಶನ ಪಡೆಯಬೇಕೆಂದು ।
ಮೂರು ದಿನ ಅಲ್ಲಿದ್ದು । ಅನಶನ ವ್ರತದಲಿರಬೇಕು ॥ 7

ಇವಳಿಗೆಂಥ ಪ್ರಸಂಗ ತಂದರು । ಅವಳ ನಿರ್ಧಾರವ ಬಿಡಿಸಿದರು ।
ಕಮ್ಮಗಿನ ಹೂರಣ ಹೋಳಿಗೆ ಮಾಡಿಸಿದರು । ಅವಳಿಂದ ಅಂದವಾಗಿ ಹೇಗೆಂದು ॥ 8

ಮಾಡಿಸಿದಷ್ಟೇ ಅಲ್ಲ ಹೋಳಿಗೆ । ಯಥೇಚ್ಛ ತಿನ್ನಿಸಿದರವಳಿಗೆ ।
ದೇಹ ಸವಿಸಿದಕ್ಕೆ ಪರಕಾರ್ಯಕ್ಕಾಗಿ । ಅದರ ಶ್ರೇಯವ ತೋರಿದರು ॥ 9

ಪರಮ ಕಲ್ಯಾಣವಿರುವುದದರೊಳಗೆ । ಉಪವಾಸ ಮಾಡುವುದಕ್ಕಿಂತ ಹೆಚ್ಚಿಗೆ ।
ಇದನು ಅವಳ ಮನದಲ್ಲಿ ಬಿಂಬಿಸಿದರು ಹೇಗೆ । ಎಂದಿಗೂ ಅದು ಮರೆಯದಂತೆ ॥ 10

ಅಂತೆಯೇ ಪರಮಾರ್ಥದ ರುಚಿ ಇದ್ದವಗೆ । ದೃಢವಾಗಿ ಅಭ್ಯಾಸ ಮಾಡುವುದು ಹೇಗೆ ।
ಕಷ್ಟದ ಸಾಹಸ ಮಾಡುವುದು ಹೇಗೆ । ನಿತ್ಯದಲದನು ಸಾಧಿಸಲು ॥ 11

ಈ ಅರ್ಥವಿರುವ ಕಥೆಯ । ರುಚಿ ಅದರದು ಅಮೃತಮಯ ।
ಶ್ರೋತೃಗಳಲಾಗುವುದು ಭಕ್ತಿ ಪ್ರೇಮದ ಉದಯ । ದುಃಖವು ದೂರಾಗುವುದು ॥ 12

ಇನ್ನು ಮುಂದಿನ ಕಥೆ ರಸಮಯ । ಪೂರೈಸುವದು ಶ್ರವಣಾರ್ಥಿಗಳ ಇಚ್ಛೆಯ ।
ಹೇಳುವರು ಕೇಳುಗರು ಆಗುವರು ಅನಂದಮಯ । ಶ್ರವಣೇಚ್ಛೆ ತೃಪ್ತವಾಗುವುದು ॥ 13

ಪ್ರೇಮ ಭರಿತ ಭಕ್ತಿಯ । ನುಡಿಸುವವರು ಸಾಯಿ ಅಂಥ ಕಥೆಯ ।
ನಾ ಪಾಮರ ಮೂರ್ಖಬರಿಯ । ಹೆಜ್ಜೆ ಹೆಜ್ಜೆಗೆ ಕೌತುಕ ಪಡುವೆ ಬರಯುತ್ತಿದ್ದುದ್ದಕೆ ॥ 14

ಗಂಗಾದರ್ಶನದಿಂದ ಪಾಪ । ಚಂದ್ರ ದರ್ಶನದಿಂದ ತಾಪ ।
ಕಳೆಯುವಂತೆ ಈ ಸಾಯಿ ಮುಖದ ಆಲಾಪ । ಪಾಪ ಸಂತಾಪ ಹಾರಕಯಿದು ॥ 15

ಇನ್ನು ತಾವು ಶ್ರೋತೃಜನ । ಶ್ರವಣ ಮಾಡಿರಿ ಕೊಟ್ಟುಮನ ।
ಮಹಾರಾಜ ಸಾಯಿ ಮುಖದ ವಚನ । ನಿಜಗುರುದರ್ಶನ ಕಾರಕ ॥ 16

ಮಾಡಿದ್ದರೂ ವೇದ ವೇದಾಂತಗಳ ಅಧ್ಯಯನ । ಶೃತಿ ಶಾಸ್ತ್ರಗಳನು ಪಾರಾಯಣ ।
ಗುರು ಕೃಪೆಯ ಹೊರತೆಲ್ಲ ಜ್ಞಾನ । ಅದು ವ್ಯರ್ಥಶ್ರಮ ಮಾತ್ರವೇ ॥ 17

ಅವ್ಯಕ್ತಾದಿಯಾಗಿ ಸ್ಥಾವರಾಂತ । ಈ ಸಂಸಾರ ವೃಕ್ಷವು ಅತಿ ವಿಸ್ತೃತ ।
ಜನ್ಮ ಮರಣ ಶೋಕಾಕುಲಿತ । ದೃಶ್ಯವೆಲ್ಲವೂ ನಾಶವಂತ ॥ 18

ಭೇದಶಕ್ತ ಮತ್ತು ನಾಶಯುಕ್ತ । ಅದರಿಂದ ಇದಕೆ ವೃಕ್ಷವೆನುತ ।
ಇದು ಇರುವುದು ಅವ್ಯಕ್ತ ಸ್ಥಾವರಾಂತ । ವೃಕ್ಷದ ಉಪಮೆಯುಳ್ಳ ಈ ಸಂಸಾರ ॥ 19

ಇದು ದೃಶ್ಯವಿದ್ದು ನಷ್ಟ ಸ್ವರೂಪ । ಊರ್ಧ್ವ ಮೂಲ ಈ ಸಂಸಾರವಿಟಪ ।
ಆದರ ಅಪಾರ ಶಾಖಾವ್ಯಾಪ । ಅತ್ಯಲ್ಪವೂ ಯಾರಿಗೂ ತಿಳಿಯದು ॥ 20

ಕ್ಷಣದ ಹಿಂದೆ ಕ್ಷಣ ಹೋಗುವವು । ಅದರಂತೆ ಇದಕೆಟಿಸಿಲೊಡೆಯುವವು ।
ಒಮ್ಮೊಮ್ಮೆ ದೂರದಿಂದ ರಮ್ಯವೆನಿಸುವುದು । ಅಪ್ಪಿದರೆ ಮುಳ್ಳುಗಳು ಮೈ ತುಂಬ ॥ 21

ಕದಳೀ ಸ್ತಂಭದಂತೆ ನಿಃಸಾರ । ಅದರಂತೆ ಮೃಗಜಲ ಅಥವಾ ಗಂಧರ್ವನಗರ ।
ತೃಷ್ಣಾ ಜಲ ಅಥವಾ ಜಲ ತುಂಬಿದ ಸರೋವರ । ಹಾಗೇ ಈ ತರುವರ ಅಂದವೆನಿಸುವುದು ॥ 22

ವಿದಾಯಕಾಮಕರ್ಮೋದ್ಭವ । ಅವ್ಯಕ್ತ ಬೀಜದಲಿದರ ಉದ್ಭವ।
ಯಾವುದಕೆ ಕ್ಷಣಕೊಂದು ಬಗೆಯ ಸ್ವಭಾವ । ತಾನು ಅಭಾವಾತ್ಮಕ ವಾಗಿರಲು ॥ 23

ಅನರ್ಥಾತ್ಮಕವಾದ ಇದು । ಅವಿದ್ಯೆಯುದರದಿ ಜನ್ಮವಿದರದು ।
ಈಕ್ಷಣಾತೃಷ್ಣಾದಿ ಜಲ ತುಂಬಿದ್ದು । ಆವರಣ ಅದರ ಸುತ್ತಲೂ ಇದೆ ॥ 24

ಧನ-ಧಾನ್ಯ-ಪುತ್ರ-ಸತಿ । ಪರಿಗ್ರಹದ್ದೇ ಅದಕೆ ಚಿಂತೆ ।
ದೇಹ ಬುದ್ಧಿಯಿಂದಿದಕೆ ವಸತಿ । ಅದರಾಧಾರದಿಂದದು ವರ್ತಿಸುವುದು ॥ 25

ಅನಂತ ಪ್ರಾಣಿಗಳಲಿರುವ ಲಿಂಗಭೇಧ । ಅದೆ ಈ ವೃಕ್ಷದ ಸ್ಕಂಧ।
ಕರ್ಮವಾಸನಾದಿ ಪ್ರಾರಂಭಿಗಳ ನಿರ್ಬಂಧ । ಆದರಿಂದ ಈ ಸಂಬಂಧ ಹಬ್ಬುವುದು ॥ 26

ಶೃತಿ ಸ್ಮೃತಿ ಆದಿಗಳಿಂದ ತುಂಬಿದೆ । ಶಬ್ದ ಸ್ಪರ್ಶಾದಿಗಳ ಪಲ್ಲವ ಚಿಗುರಿದೆ ।
ಯಜ್ಞ -ದಾನದಿ ಕ್ರಿಯಾ ಕುಸುಮಗಳಿಂದ ಹೂತಿದೆ । ದ್ವಂದ್ವರಸದಿಂದ ಪೂರಿತವಾಗಿದೆ ॥ 27

ಅಂತವೇ ಇಲ್ಲಿದರ ಫಲಗಳಿಗೆ । ಉಪಜೀವಿಕೆಗಾಧಾರ ಇದು ಎಲ್ಲರಿಗೆ ।
ಭೂರ್ಭುವಾದಿ ಲೋಕಗಳೆಲ್ಲ ಇದೇ । ಅದ ಬಿಟ್ಟು ಇರಲಾರದು ॥ 28

ಒಮ್ಮೊಮ್ಮೆ ನೃತ್ಯ ಗೀತ ವಾಹನ । ಒಮ್ಮೊಮ್ಮೆ ಕ್ರೀಡಾ ಹಾಸ್ಯರುದನ ।
ಇಂಥ ಈ ಅಶ್ವತ್ಥ ಸನಾತನ । ಅಧೋವದನವಿದು ಯಾವಾಗಲೂ ॥ 29

ಶಬಲಬ್ರಹ್ಮದಲಿದರ ಆವಿರ್ಭಾವ । ಅಸಂಗ ಶಸ್ತ್ರದಿಂದಿರ ಅಭಾವ ।
ಶುದ್ಧ ಮೂಲಾಧಾರವಾದ ಸದ್ಭಾವ । ಜ್ಯೋತಿ ಸ್ವಭಾವವದ ತಿಳಿ ॥ 30

ಆ ಬ್ರಹ್ಮವೇ ಸತ್ಯ ಸರ್ವಾಧಾರ । ಜಗವಿದು ಮಿಥ್ಯಾ ಸ್ವಪ್ನಾಕಾರ ।
ಅದಕಿಲ್ಲ ಆದ್ಯಂತ ನಿರ್ಧಾರ । ನಡುವೆಯೇ ನಿಂತಿರುವದಿದು ಹೇಗೆ ॥ 31

ಅದಕಾಗಿ ಪರಿಶ್ರಮಿಸುವರು ವಿರಕ್ತರು । ಸಂತರು ಸತತ ಇಲ್ಲಿ ಅನುರಕ್ತರು ।
ಮುಮುಕ್ಷುಗಳಿದನು ಅಪೇಕ್ಷಿಸುವರು । ಇದೇ ಸಾಧಕದ ಸಾಧ್ಯವು ॥ 32

ಇಚ್ಛಿಸುವವರು ಇದ ಪಡೆಯಬೇಕು । ಅವರು ಸಂತರಿಗೆ ಶರಣಾಗತರಾಗಬೇಕು ।
ಬಳಿಕವರು ಹೇಳುವದ ಕೇಳಬೇಕು । ಕುತರ್ಕಗಳನೆಲ್ಲ ವರ್ಜಿಸಿ ॥ 33

ಮನವ ಬಿಗಿಯಾಗಿ ಕಟ್ಟಬೇಕು । ಬುದ್ಧಿಯನಾಚೆ ತಳ್ಳಬೇಕು ।
ಸಂಪೂರ್ಣ ನಿಃಸಂಗರಾಗಬೇಕು । ಗುರುಚರಣವ ಲಕ್ಷಿಸುತಿರಬೇಕು ॥ 34

ಕುತರ್ಕಗಳನಾಚೆ ನೂಕಬೇಕು । ಇಲ್ಲದಿರೆ ಮಾರ್ಗದಲಿ ತರುವವವು ತೊಡಕು ।
ಅಭಿಮಾನವ ತುಳಿಯಬೇಕು । ಅಂದರೇನೇ ಆಚೆದಡವ ಸೇರುವಿರಿ ॥ 35

ಈ ಬಗ್ಗೆ ಒಂದು ಆಖ್ಯಾಯಿಕೆ । ಬಾಬಾರ ಸ್ವಮುಖದ ಹೇಳಿಕೆ ।
ಪರಮ ಸಂತೋಷ ಪಡೆವುದಕೆ । ಗುರುವಚನ ಪಾಯಸ ಕುಡಿಯಬೇಕು ॥ 36

ಒಮ್ಮೆ ನಾವು ನಾಲ್ಕು ಜನ । ಓದಿಕೊಂಡು ಪುರಾಣ ಗ್ರಂಥಗಳನ ।
ಮಾಡತೊಡಗಿದೆವು ಬ್ರಹ್ಮ ನಿರೂಪಣ । ಜ್ಞಾನ ಸಂಪನ್ನರಾಗಿ ॥ 37

'ಉದ್ಧರೇದಾತ್ಮನಾತ್ಮಾನಂ' । ತೆಗೆದುಕೊಂಡು ಈಗೀತೆಯ ವಚನ ।
ಯುಕ್ತವಲ್ಲ ಪರಾವಲಂಬನ । ಎಂದೊಬ್ಬ ಪ್ರವಚನ ಮಾಡಿದನು ॥ 38

ಇನ್ನೊಬ್ಬ ಕೊಟ್ಟ ಅದಕೆ ಉತ್ತರವನ । ಮನಸ್ವಾಧೀನದಲ್ಲಿರುವವನೇ ಧನ್ಯ ।
ಇರಬೇಕು ಸಂಕಲ್ಪ ವಿಕಲ್ಪ ಶೂನ್ಯ । ತಾನಲ್ಲದೇ ಬೇರೇನೂ ಇಲ್ಲ ಜಗದಿ ॥ 39

ಸವಿಕಾರಗಳೆಲ್ಲ ಅನಿತ್ಯ । ನಿರ್ವಿಕಾರ ಒಂದೇ ಸತ್ಯ ।
ಅದಕೆ ಮಾಡಬೇಕು ನಿತ್ಯಾ ನಿತ್ಯ । ವಿಚಾರವನು ನಿರಂತರವೆಂದನಿನ್ನೊಬ್ಬ ॥ 40

ನಾಲ್ಕನೆಯವನಿಗೆ ಸೇರದು ಪುಸ್ತಕದ ಜ್ಞಾನ । ಅವನಿಗೆ ಹಿಡಿಸುವದು ವಿಹಿತಾಚರಣ ।
ಕಾಯೆ ವಾಚೆ ಮೊದಲಾಗಿ ಪಂಚ ಪ್ರಾಣ । ಗುರುಚರಣದಿ ಸಮರ್ಪಿಸಬೇಕೆಂದ ॥ 41

ಗುರುವೇ ಪರಮಾತ್ಮನು ಚರಾಚರಗಳಲಿ । ತುಂಬಿಕೊಂಡಿರುವ ಸಬಾಹ್ಯಾಂತರಗಳಲಿ ।
ಹೀಗೆ ನಿರ್ಧಾರವಾಗಲು ನಿಜದಲಿ । ಅಪಾರ ನಿಷ್ಠೆ ಅವಶ್ಯಕ ॥ 42

ಆಗಮನಗಳನರಿಯದ ಕೇವಲ ತಾರ್ಕಿಕ । ವಾದಕ್ಕೆ ನಿಲ್ಲುವ ಮತ್ತು ಚಿಕಿತ್ಸಕ ।
ಅವನಿಗೊ ಕನಸಿನಲೂ ಆಗದು ಜ್ಞಾನಸಮ್ಯಕ । ಶುದ್ಧ ಭಾವಿಕನು ಬೇಕದಕೆ ॥ 43

ನಾವು ನಾಲ್ವರು ಜಾಣರು ಇಂಥ । ಹೊರಟೆವು ಏನಾದರೂ ಶೋಧ ಮಾಡಬೇಕೆನುತ ।
ಸ್ವಬುದ್ಧಿಯಿಂದಲೇ ಶೋಧ ನಡೆಯಬೇಕು ಸ್ವತಂತ್ರ । ನಿರ್ವೇಧ ಮನಸಿನಿಂದ ಎಂದು ॥ 44

ಹೀಗೆ ಇಚ್ಛೆ ಮೂವರ ಮನದಲಿ । ಸ್ವಚ್ಛಂದವಾಗಿ ಚರಿಸುತಿದ್ದೆವು ವನದಲಿ ।
ವನಚರನೊಬ್ಬ ಸಿಕ್ಕ ದಾರಿಯಲಿ । ಆತನೆಮ್ಮನು ಕೇಳಿದ ॥ 45

ಈ ಪ್ರಖರವಾದ ಬಿಸಿಲಿನೊಳಗೆ । ಏತಕ್ಕೆ ಪ್ರಯಾಣವಿದು ಎಲ್ಲಿಯವರೆಗೆ ।
ನಾವು ಉತ್ತರವಿತ್ತೆವವನಿಗೆ । ವನಾಂತರವ ಶೋಧಿಸಲೆಂದು ॥ 46

ಆತ ನಮ್ಮನ್ನು ಪ್ರಶ್ನಿಸಿದ । ಯಾವುದರದು ಮಾಡುತಿರುವಿರಿ ಶೋಧ ।
ಗುಪ್ತಕಾರ್ಯವದು ಹೇಳಬಾರದು ಅದ । ಎಂದವನಿಗೆ ಹೇಳಿದೆವು ॥ 47

ಅವರ ಒಡಾಟವನಿಂತು । ನೋಡಿ ವನಚರನಿಗೆ ಕೆಡುಕೆನಿಸಿತು ।
ದುರ್ಗಮ ವನವಿದು ತಿಳಿಯದ ದಾರಿಯಲಿಂತು । ಸ್ವೇಚ್ಛೆಯಾಗಿ ತಿರುಗಾಡಬಾರದೆಂದ ॥ 48

ಅಟ್ಟಡವಿಯಲಿ ತಿರುಗಾಡುವುದಕೆ । ದಾರಿಬಲ್ಲವನೊಬ್ಬ ಇರಬೇಕು ಜೊತೆಗೆ ।
ಒಳ್ಳೇ ಮಧ್ಯಾನದಲಿ ಸಾಹಸವ ಹೀಗೆ । ಮಾಡಿ ಏತಕೆ ಆಯಾಸಗೊಳ್ಳುತಿಹರಿ ॥ 49

ಗುಪ್ತಾರ್ಥವನೆನಗೆ ಹೇಳಬೇಡಿರಿ । ಆದರೆ ಕುಳಿತು ಒಂದಿಷ್ಟು ರೊಟ್ಟಿ ತಿನ್ನಿರಿ ।
ನೀರು ಕುಡಿಯಿರಿ ಬಳಿಕ ಹೊರಡಿರಿ । ಸ್ವಲ್ಪ ತಾಳ್ಮೆ ಇರಲಿ ಮನದಲಿ ॥ 50

ಅವನು ಇಷ್ಟೊಂದು ಕಳಕಳಿಯಿಂದ ಹೇಳಿದರೂ । ಹಾಗೆಯೇ ಮುಂದೆ ನಡೆದೆವು ನಾವೆಲ್ಲರೂ ।
ಅತಿಯಾಗಿ ಮಾರ್ಗದಲಿ ಬಳಲಿದೆವಾದರೂ । ಅವನ ವಿನಂತಿಯ ಮನ್ನಿಸಲಿಲ್ಲ ॥ 51

ನಾವೆಲ್ಲರೂ ಜಾಣರಿರುವೆವು । ನಮ್ಮ ದಾರಿಯ ನಾವು ಹುಡುಕಿಕೊಳ್ಳುವೆವು ।
ದಾರಿಕಾರನದೇನು ಉಪಯೋಗವು । ಈ ಅಭಿಮಾನ ಒಳಗೆ ತುಂಬಿತ್ತು ॥ 52

ಆದರೆ ಆ ವನವಿತ್ತು ಅತಿ ವಿಸ್ತೀರ್ಣ । ವಿಶಾಲ ಎತ್ತರ ವೃಕ್ಷಗಳಿಂದ ವಿಕೀರ್ಣ ।
ಪ್ರವೇಶಿಸದಲ್ಲಿ ಸೂರ್ಯಕಿರಣ । ಮಾರ್ಗಕ್ರಮಣ ಮಾಡುವದು ಹೇಗಲ್ಲಿ ॥ 53

ದಿಕ್ಕು ತಪ್ಪಿ ಹೋಗಿ । ಅಲ್ಲಿ ಇಲ್ಲಿ ನಿಷ್ಫಲ ತಿರುಗಿ ।
ಈ ಸ್ಥಲಕೆ ಬಂದೆವು ಸುದೈವದಿಂದಾಗಿ । ಕೊಟ್ಟ ಕೊನೆಯಲ್ಲಿ ॥ 54

ದೈವವು ಬಂದ ದಾರಿಗೇ ತಂದಿತು । ಮತ್ತೆ ವನಚರನ ಭೆಟ್ಟಿಯಾಯಿತು ।
ನುಡಿದ ಎನಿಸುವದು ತಿರುಗಾಡಿ ಸಾಕಾಯಿತು । ಬುದ್ಧಿಯ ಆಟ ನಿಂತಿತೇನೋ ॥ 55

ಕಾರ್ಯವಿರಲಿ ಚಿಕ್ಕದು ಅಥವಾ ದೊಡ್ಡದು । ಬೊಟ್ಟಿಟ್ಟು ದಾರಿ ತೋರಿಸುವವರೊಬ್ಬ ಬೇಕಾಗುವದು ।
ಹಸಿದ ಹೊಟ್ಟೆಯಲಿ ಶೋಧವಾಗದು । ಬುದ್ಧಿಗೆ ಟಿಸಿಲೊಡೆವವು ಸಾವಿರ ॥ 56

ಯಾರಾದರೂ ಕೊಟ್ಟರೆ ರೊಟ್ಟಿಯನ್ನು । ಹೇಳಿದರೆ ಬಾ ಇದನ್ನು ತಿನ್ನು ।
ಶುಭ ಶಕುನವೆಂದು ತಿಳಿದದನು । ಕಾರ್ಯ ನಿರ್ವಿಘ್ನವಾಗುವದೆನಬೇಕು ॥ 57

ಈಶ್ವರೀಯ ಸಂಕೇತವಿರದಿದ್ದು । ದಾರಿಯಲಿ ಯಾರ ಭೆಟ್ಟಿಯಾಗದು ।
ಅನ್ನದತ್ತ ಬೆನ್ನು ತಿರುವಬಾರದು । ಬಡಸಿದನ್ನವನು ತಳ್ಳಬಾರದು ॥ 58

ತೆಗೆದುಕೊಳ್ಳಿರಿನ್ನು ಸ್ವಲ್ಪ ಆಹಾರ । ಒಂದಿಷ್ಟು ಮನದಲಿ ಹಿಡಿಯಿರಿ ಧೀರ ।
ಆದರೆ ಹಿಡಿಸದವರಿಗೆ ಈ ಸುವಿಚಾರ । ಮತ್ತೆ ನಿರಾಹಾರಿಗಳಾಗಿ ಹೊರಟರು ॥ 59

ಏನಾದರೂ ಶೋಧ ಮಾಡದಿದ್ದು । ಅನ್ನ ಸೇವನೆ ಮಾಡಬಾರದು ।
ಅವರು ಈ ರೀತಿ ನುಡಿದು । ದುರಾಗ್ರಹದಿಂದ ನಡೆದರು ॥ 60

ನನಗೆ ಹಸಿವೆಯಾಗಿತ್ತು । ತೃಷೆಯಿಂದ ಗಂಟಲೊಣಗಿತ್ತು ।
ವನಚರನ ಪ್ರೀತಿ ಅಪಾರವಾಗಿತ್ತು । ಅವನ ಕೌತುಕವೆನಿಸಿತು ॥ 61

ನಾವು ವಿದ್ವಾನರು ಬಹಳ ಓದಿದ್ದು । ತಿಳಿಯವು ದಯೆಯೆಂದರೇನೆಂದು ।
ಮುಸುರೆ ಕೈಯಿಂದ ಧನಿಕನೆಂದೂ । ಕಾಗೆಯನ್ನೂ ಹೊಡೆಯನು ॥ 62

ಅನಧಿಕಾರಿ ಅವಿದ್ವಾನನಿವ । ನೀಚವರ್ಣದ ವನಚರನಿರುವ ।
ರೊಟ್ಟಿ ವಣಗಿ ತಿನ್ನು ಎನ್ನುವ । ಸ್ವಾಭಾವಿಕ ಪ್ರೇಮ ಹೃದಯದಲ್ಲಿದೆ ॥ 63

ಹೀಗೆ ಲಾಭವಿಲ್ಲದೇ ಪ್ರೇಮ । ಮಾಡುವವನೇ ಸುಬದ್ಧ ಪರಮ ।
ಅವನ ಆದರವೇ ಅಪ್ರತಿಮ । ವಿದ್ಯೋಪಕ್ರಮವೆನಿಸಿತು ॥ 64

ಆದರ ಪೂರ್ವಕವಾಗಿ ವನಚರ ಕೊಟ್ಟದ್ದು । ಒಂದು ರೊಟ್ಟಿಯ ತುಂಡ ತಿಂದು ನೀರು ಕುಡಿದು ।
ನೋಡಿದಾಗ ನಡೆದ ಚಮತ್ಕಾರವಿದು । ಕೇಳಿರೀಗ ಆದರದಿಂದ ॥ 65

ಗುರುರಾಜ ಬಂದ ಆಕಸ್ಮಾತ್ತಾಗಿ । ಕೇಳಿದ ವಾದವಿವಾದ ಏತಕ್ಕಾಗಿ ।
ಬಳಿಕ ಹೇಳಿದೆ ಸವಿಸ್ತರವಾಗಿ । ನಡೆದ ವೃತ್ತಾಂತವನವಗೆ ॥ 66

ಬರುವಿರಾ ನನ್ನ ಜೊತೆಯಲ್ಲಿ । ಶೋಧ ಮಾಡಿಕೊಡುವೆ ತ್ವರಿತದಲ್ಲಿ ।
ಆದರೆ ನನ್ನ ವಚನವನಾದರಿಸಿದಲ್ಲಿ । ಅವನ ಸ್ವಾರ್ಥ ಮಾತ್ರ ಫಲಿಸುವದು ॥ 67

ಉಳಿದವರು ಮನ್ನಿಸಲಿಲ್ಲದನು । ನಾ ಮಾತ್ರ ಶಿರಸಾಮಾನ್ಯ ಮಾಡಿದೆನು ।
ಆಗ ಗುರುವು ಸ್ವೀಕರಿಸಿದನೆನ್ನನು । ಉಳಿದವರು ಹೊರಟು ಹೋದರು ॥ 68

ಒಂದು ಬಾವಿಯ ಹತ್ತಿರ ಕರೆದೊಯ್ದರು । ಎರಡೂ ಕಾಲಿಗೆ ಹಗ್ಗ ಕಟ್ಟಿದರು ।
ನೀರಿನ ಸಮಾಂತರಕೆ ಇಳಿಸಿದರು । ಕೆಳಗೆ ತಲೆ ಮೇಲೆ ಕಾಲು ಮಾಡಿ ॥ 69

ನೀರಿಗೆ ಕೈ ಮುಟ್ಟಬಾರದು । ಮುಖದಲಿ ನೀರೂ ಹೋಗಬಾರದು ।
ಹೀಗೆ ನನ್ನ ಜೋತು ಬಿಟ್ಟದ್ದು । ಬಾವಿಯಲಿ ಆ ಗುರುರಾಯನು ॥ 70

ದಂಡೆಯಲಿದ್ದ ಒಂದು ಗಿಡಕೆ । ಹಗ್ಗದ ಎರಡನೆಯ ತುದಿಯ ಕಟ್ಟಿ ಆದಕೆ ।
ಯಾರಿಗೆ ಗೊತ್ತು ಎಲ್ಲಿಗೆ । ಗುರುರಾಯ ಹೊರಟು ಹೋದ ನಿಶ್ಚಿಂತ ॥ 71

ಗಳಿಗೆಗಳಾದವು ಹತ್ತು ಹನ್ನೆರಡು । ಆಗ ಅವರು ತಿರುಗಿ ಬಂದು ।
ಸರಸರನೇ ಹೊರಗೆ ತೆಗೆದು । ಚೆನ್ನಾಗಿದ್ದೀಯಾ ಎಂದು ಕೇಳಿದರು ॥ 72

ನಾನಾಗ ಪತ್ಯುತ್ತರಿಸಿದೆ । ಅತ್ಯಂತ ಆನಂದ ನಿರ್ಭರನಾಗಿದ್ದೆ ।
ಅಪಾರ ಸೌಖ್ಯ ಅನುಭವಿಸಿದೆ । ನಾ ಪಾರಮನದನೇನು ವರ್ಣಿಸಬಲ್ಲೆ ॥ 73

ಆಲಿಸಿ ನನ್ನ ಈ ವಚನ । ಗುರುಗಳಾದರು ಸುಪ್ರಸನ್ನ ।
ನಿಜಹಸ್ತದಿಂದ ಸವರಿದರು ಬೆನ್ನ । ಹತ್ತಿರ ಇಟ್ಟುಕೊಂಡರು ॥ 74

ಹೇಳುತಿದನು ಪ್ರೇಮ ಉಕ್ಕುವದು । ಬಳಿಕ ಗುರುವೆನ್ನನು ಶಾಲೆಗೆ ಕರೆದೊಯ್ದು ।
ಹಕ್ಕಿ ಮರಿಗಳ ರೆಕ್ಕೆಯಡಿಯಿಟ್ಟು ರಕ್ಷಿಸುವದು । ಹಾಗೆ ನನಗಾಗಿ ಕಳವಳಗೊಳ್ಳುವರು ॥75

ಏನು ಹೇಳಲಿ ಗುರುವಿನ ಶಾಲೆ । ತಾಯಿ ತಂದೆಗಳ ಮರೆತೆನಲ್ಲೆ ।
ಹರಿಯಿತು ಮೋಹ ಮಮತೆಯ ಶೃಂಖಲೆ । ಸಹಜದಲಿ ಮುಕ್ತಿಯ ಪಡೆದೆನು ॥ 76

ದುರಾಪಾಶವೆಲ್ಲ ಬಿಟ್ಟಿತು । ಪ್ರವೃತ್ತಿಯ ಪ್ರತಿಬಂಧದ ಅಗಳೆ ಮುರಿಯಿತು ।
ಗುರುವಿನಿಂದಗಲಬಾರದೆನಿಸಿತು । ಎನಿಸಿತು ಅವನ ಕಣ್ಣಲ್ಲಿಟ್ಟು ಮುಚ್ಚಿಕೊಳ್ಳಬೇಕು ॥ 77

ಈ ಕಣ್ಣು ಅವನ ಪ್ರತಿ ಬಿಂಬವಲ್ಲಿರದೇ । ಅದು ಕಣ್ಣಲ್ಲ ಬರೀ ಮಾಂಸದ ಮುದ್ದೆ ।
ಅದಕಿಂತ ಒಳ್ಳೆಯದು ನಾ ಕುರುಡನಾಗಿರುವದೇ । ಹಾಗೆ ಈ ಶಾಲೆ ನನಗಾಯಿತು ॥ 78

ಈ ಶಾಲೆಯಲೊಮ್ಮೆ ಕಾಲಿಟ್ಟವನು । ಯಾವ ಹತಭಾಗಿಯವ ತಿರುಗಿಹೋದಾನು ।
ನನ್ನ ಮನೆ ಮಾರು ತಂದೆ ತಾಯಾದನು । ಗುರುರಾಯನೇ ನನಗೆಲ್ಲ ॥ 79

ಇತರ ಇಂದ್ರಿಯಗಳ ಮನಸಹಿತವಾಗಿ ಅವು । ಕಣ್ಣೊಂದರಲೇ ಬಂದು ನೆಲೆಸಿರುವವವು ।
ಬಿಟ್ಟು ನಿಜಸ್ಥಾನವನವು । ಧ್ಯಾನಾವಧಾನವ ಸಲುವಾಗಿ ॥ 80

ಗುರು ಒಬ್ಬನೇ ದೃಷ್ಟಿಯ ಧ್ಯಾನ । ಉಳಿದವೆಲ್ಲ ಗುರು ಸಮಾನ ।
ಗುರುವಲ್ಲದೆ ಇರದು ಮತ್ತಿನ್ನ । ಅನನ್ಯ ವಧಾನ ಎಂಬ ಹೆಸರು ಇದಕೆ ॥ 81

ಗುರುಸ್ವರೂಪ ಧ್ಯಾನ ಮಾಡಲು । ಕುಂಠಿತವಾಗುವವು ಬುದ್ಧಿ ಮನಗಳು ।
ಅದಕೇ ನಮಿಸಬೇಕು ಕೊನೆಯೊಳು । ನಿಃಶಬ್ದವಾದ ಮೌನದಿಂದ ॥ 82

ಜ್ಞಾನಾರ್ಥವಾಗಿ ಮಾಡಿಕೊಳ್ಳಬಾರದಿಂಥ ಗುರುವನು । ಸದುಪದೇಶದ ಹೆಸರಿನಲ್ಲಿ ಶೂನ್ಯನಿರುವವನು ।
ಧನ ಕಳಕೊಳ್ಳಬೇಕು ಇತ್ತು ದಕ್ಷಿಣೆಯನು । ಪರಿಣಾಮದಲಿ ಅನುತಾಪ ಪಡಬೇಕು ॥ 83

ಗುಹ್ಯಜ್ಞಾನದ್ದು ಕೇವಲ ಹೆಸರು । ಪ್ರಾಂಜಲ ತನದ ಪ್ರೌಢಿಮೆ ತೋರಿಸುವರು ।
ದಂಭವನ್ನೇ ಬಾಲಗುಟಿಯಲಿ ಕುಡಿದವರು । ಕೊನೆಗವರೇನು ಕೊಟ್ಟಾರು ॥ 84

ಹೊರನೋಟಕೆ ಬಲು ಮಡಿವಂತ । ಅಂತರ್ಯಾಮದಲಿಲ್ಲ ಮೃದುತ್ವ ।
ಪ್ರಚೀತಿಯಂಬದವಗೇನು ಗೊತ್ತ । ಅಂಥವನ ಶಾಲೆ ನಿರುಪಯುಕ್ತ ॥ 85

ಎಲ್ಲಿ ಶಬ್ದ ಜ್ಞಾನವೇ ಉದಂಡವಾಗಿರುವದು । ಅಲ್ಲಿ ಬ್ರಹ್ಮಜ್ಞಾನದ ಪ್ರಚೀತಿ ಇರದು ।
ಗುರು ತನ್ನ ದೊಡಸ್ತಿಕೆಯ ತಾನೇ ಹೇಳಿಕೊಳ್ಳುವದು । ಶಿಷ್ಯನ ನಿಜಹಿತವೇನಲ್ಲ ॥ 86

ಯಾರ ಮಾತು ಮರ್ಮಕ್ಕೆ ತಗಲವು । ಅಂತರ್ಯಾಮಕ್ಕೆ ಒಪ್ಪವು ।
ಅಂಥವನ ಗುರುತ್ವವೇನು ಪ್ರಯೋಜನವು । ವ್ಯರ್ಥ ಬಾಯಿಬಡಾಯಿ ಮಾತ್ರ ॥87

ನನಗೆಂಥ ಸೇವೆಯನೊಪ್ಪಿಸಿದರು । ಜ್ಞಾನದ ಭಂಡಾರವನೇ ನನಗೆ ತೋರಿದರು ।
ಅರ್ಥ ಹುಡುಕಲು ಕಿಂತಚಿತ್ತಾದರೂ । ಶೋಧ ಮಾಡಬೇಕಾಗಲಿಲ್ಲೆನಗೆ ॥ 88

ಅರ್ಥವೆಲ್ಲ ತಾನೇ ಪ್ರಕಟವಾಯಿತು । ಪ್ರಯಾಸವಿಲ್ಲದೇ ಕೈಗೆಟುಕಿತು ।
ಗುರುಕೃಪೆಯಿಂದೆಲ್ಲ ಆಯಿತು । ಶೋಧಿಸುವದಲ್ಲೇ ಉಳಿಯಿತು ॥ 89

ಕೆಳಗೆ ತಲೆ ಮೇಲೆ ಕಾಲು । ಹೀಗೆ ಗುರುವು ನೇತು ಹಾಕಲು ।
ಆಗ ನನಗಾದ ಆನಂದ ಎನಲು । ಸಮರ್ಥ ಗುರುರಾಯನೇ ತಿಳಿಯಲು ॥ 90

ಸಂತರ ಮನೆಯ ಗುರುತು ತಿರುವು ಮುರುವು । ಈ ಜ್ಞಾನ ಅನುಭವ ಜನ್ಯವು ।
ಇಲ್ಲಿ ನಿಷ್ಠೆಯೊಂದೇ ಪ್ರಮಾಣವು । ಒಂದು ಸಾಧನ ಗುರು ಕೃಪೆ ॥ 91

ವಿಧಿ ನಿಷೇಧತನ ಕರ್ಮಠಗೆ । ಜ್ಞಾನಾಭಿಮಾನ ಜ್ಞಾನಿಗಳಿಗೆ ।
ದಂಭದ ದಣಿವು ಯೋಗಿಗಳಿಗೆ । ವಿಶ್ವಾಸವಿಲ್ಲದೇ ನಡೆಯದು ॥ 92

ಪಂಡಿತರ ಗರ್ವಾಂಧತೆ । ಅಭಿಮಾನವೇ ಮೂರ್ತಿವೆತ್ತಂತೆ ।
ಅಂಥವರ ಕಂಡು ಜ್ಞಾನಿ ದೂರಕೋಡುತೆ । ಕ್ಷಣವೊಂದು ಅವರ ಜೊತೆಗೂಡನು ॥ 93

ಜ್ಞಾನಿ ಎನ್ನುವನು ನನ್ನನ್ನು ಬಿಟ್ಟರೆ । ದೇವರಾರು ಇರುವನು ಬೇರೆ ।
ನಾನೇ ಜ್ಞಾನಸಂಪನ್ನನಿರೆ । ಚಿದ್ಘನ ಪರಿಪೂರ್ಣನೆಲ್ಲ ನಾನೇ ॥ 94

ತನ್ನ ಭಕ್ತಿಭಾವದಲಿ ಭಕ್ತನು । ತನ್ನ ಪ್ರೌಢಿಮೆಯ ತೋರಿಸಿಕೊಳ್ಳನು ।
ತನುಮನಧನದಿಂದ ಸ್ವಾಮಿಯ ನಂಬುವನು । ಸರ್ವಸ್ವವ ಒಪ್ಪಿಸುವನವನಿಗೆ ॥ 95

ಇದು ನಾನೇ ಮಾಡಿದ್ದು । ಈ ಹಿರಿಮೆ ನನ್ನ ಸಾಮರ್ಥ್ಯದ್ದು ।
ಈ ಪ್ರಭಾವ ನನ್ನ ಬುದ್ಧಿ ವೈಭವದ್ದು । ಇಂಥ ಉಬ್ಬು ಅವನಿಗಿರುವದಿಲ್ಲ ॥ 96

ಆಗುವದನೆಲ್ಲ ಮಾಡುವ ದೇವ । ಅವನೇ ಇಳಿಸುವ ಅವನೇ ಏರಿಸುವ ।
ಅವನೇ ಕಾಡುವ ಅಥವಾ ಕಾಡಿಸುವ । ಮಾಡುವವ ಮಾಡಿಸುವವ ಅವನೊಬ್ಬನೇ ॥ 97

ಕರ್ತೃತ್ವವನೆಲ್ಲ ಸ್ವಾಮಿಗೆ ಅರ್ಪಿಸುತ । ತಾನು ಅತಿ ನಮ್ರತೆಯ ಸ್ವೀಕರಿಸುತ ।
ಭಕ್ತನಿಗೆ ಯಾವಾಗಲೂ ದೇವಾಧೀನತೆ । ಸ್ವತಂತ್ರತೆ ಇಲ್ಲ ಅವನಿಗೆ ॥ 98

ಇರಲಿ ಹೀಗೇ ಆ ನಾಲ್ವರು । ಏನನು ಶೋಧಿಸುತಿದ್ದರು ।
ತಿಳಿಯಲೇ ಇಲ್ಲ ಇಷ್ಟಾದರೂ । ಅದರ ಸ್ಪಷ್ಟೀಕರಣವ ಕೇಳಿರಿ ॥ 99

ಇವರೆಲ್ಲ ಕರ್ಮಠ ಘನಪಾಠಿಗಳು । ವಿದ್ವತ್ತೆಯ ಅಹಂಕಾರ ಅವರಿಗೆ ಬಲು ।
ಅದರಿಂದ ಶಬ್ದ ಜ್ಞಾನವ ತೋರಿಸಿಕೊಳ್ಳಲು । ದೇವರ ವಿಷಯ ಬಂದಿತು ॥ 100

ನಿಜಜ್ಞಾನದ ಸಾಮರ್ಥ್ಯದಿಂದಾಗಿ । ದೇಹನೆಲ್ಲಿ ಹೇಗೆ ವಾಸವಾಗಿ ।
ನಮಗೆ ಹೇಗೆ ಯಾವ ಮಾರ್ಗವಾಗಿ । ಯುಕ್ತಿಯಿಂದ ದೊರೆತಾನೆಂಬ ಆಶೆ ॥ 101

ಶ್ರೀ ಸಾಯಿ ಒಬ್ಬ ಪ್ರಬುದ್ಧನಿರುತ । ವಿವೇಕ ವೈರಾಗ್ಯಗಳೇ ಮೂರ್ತಿಮಂತ ।
ಪರಬ್ರಹ್ಮ ತಾನೇ ಇರುತ । ಈ ಅವಿವೇಕವನ್ನೇಕೆ ಅವಲಂಬಿಸುವರು ॥ 102

ಶ್ರೋತೃಗಳಿಗೆ ಎನಿಸಬಹುದು । ಆದರೆ ಲೋಕ ಸಂಗ್ರಹಕ್ಕಾಗಿ ಇಹುದಿದು ।
ಸಾಯಿ ಸಮರ್ಥ ಭಕ್ತೋದ್ಧಾರಕನಿಗಿದು । ಹೀನತ್ವವ ತರಲಾರದು ॥ 103

ಸ್ವತಃ ತಾವೇ ಅವತಾರಿಗಳಿದ್ದು । ಆ ವನಚರನನು ವಂದ್ಯನೆಂದು ।
ಅನ್ನ ಬ್ರಹ್ಮವೇ ನಿಜದಲಿದು । ಎಂದು ಉಂಡು ಹಿರಿಮೆಯ ಹಾಡಿದರು ॥ 104

ಅಂತೆಯೇ ಅದನು ಅವಮಾನಿಸಿದವನಿಗೆ । ಹಾನಿಯಾದದ್ದು ಹೇಗೆ ।
ಹೇಳಿದೆ ಈ ಪ್ರಬುದ್ಧರ ಕಥೆಯೊಳಗೆ । ಗುರುವಿನ ವಿನಃ ಯಾರೂ ಜ್ಞಾನಿಗಳಾಗಲಾರರು ॥105

ಮಾತೃ ಪಿತ್ರಾಚಾರ್ಯನುಶಾಸನ । ಇದಿಲ್ಲದೆ ಅಶಕ್ಯ ಧರ್ಮ ಜ್ಞಾನ ।
ಅದೂ ಎಲ್ಲ ಅಧ್ಯಯನಾಧೀನ । ಅನುಷ್ಠಾನವಿಲ್ಲದೆ ಅದೂ ವ್ಯರ್ಥ ॥ 106

ಸಂಪಾದಿಸಬೇಕಾಗುವದು ಆಶೀರ್ವಚನ । ಆಗು ಮಾತೃವಾನ ಪಿತೃವಾನ ।
ಮತ್ತೆ ಆಗು ಆಚಾರ್ಯವಾನ । ಪ್ರಸಿದ್ಧವಾದ ಶೃತಿವಚನವಿದು ॥ 107

ಈ ತ್ರಯಿಯ ಅನುಸಂಧಾನ । ಅಥವಾ ಈಜ್ಯಾಧ್ಯಯನದಾನ ।
ಜನ್ಮ ಮೃತ್ಯುಂಗಳದಾಲು ಉಲ್ಲಂಘನ । ಪರಮಸಾಧನ ಇದು ಒಂದು ॥ 108

ಇವೆಲ್ಲ ಚಿತ್ತ ಶುದ್ಧಿಯ ಸಾಧನಗಳಿದ್ದು । ಇವಿಲ್ಲದೆ ಆತ್ಮವಸ್ತುವೆಂಬ ನಾಣ್ಯವೆಂದೂ ।
ಸಿಗದಿದ್ದಾಗ ಜೀವನವಂಥದು । ವ್ಯರ್ಥವದರಿಂದ ಈ ಜನ್ಮವು ॥ 109

ಶರೀರ ಇಂದಿಯ ಮತ್ತು ಮನ । ಬುದ್ಧಿಗೂ ಆಗಲಾರದು ಆಕಲನ ।
ಇಂಥ ಈ ಆತ್ಮಸ್ವರೂಪವು ಗಹನ । ಅದರ ದರ್ಶನ ಗುರುಕೃಪೆಯಿಂದ ॥ 110

ಎಲ್ಲಿ ಪ್ರತ್ಯಕ್ಷ ಅಥವಾ ಅನುಮಾನ । ಉಭಯ ಪ್ರಮಾಣದಿಂದಲೂ ಅಪ್ರಮಾಣ ।
ಅದನು ಕರತಲಾಮಲಕದ ಸಮಾನ । ಗುರುವಿನ ಹೊರತಾರು ತೋರಿಸುವರು ॥111

ಧರ್ಮ ಅರ್ಥ ಮೂರನೆಯದು ಕಾಮ । ಪ್ರಾಪ್ತವಾದವು ಪಟ್ಟರೆ ಶ್ರಮ ।
ಆದರೆ ನಾಲ್ಕನೆಯ ಪುರುಷಾರ್ಥ ಪರಮ । ಗುರುವಿನ ಹೊರತು ವ್ಯರ್ಥ ಶ್ರಮ ॥ 112

ಇದು ಶಿರಡಿ ಸಂತನ ದರ್ಬಾರು । ಇಲ್ಲಿ ಜ್ಯೋತಿಷಿಗಳೂ ಬರುವರು ।
ನರದೇಹದ ಮೇಲಿಂದ ಹೇಳುವರು । ದೊಡ್ಡ ದೊಡ್ಡವರ ಭವಿಷ್ಯವನು ॥ 113

ಧನ-ಧಾನ್ಯ-ವೈಭವ ಭೋಗಿಗಳು । ರಾಜ ಮಹಾರಾಜರು ಮತ್ತು ಜೋಗಿಗಳು ।
ಕೋಪಿಷ್ಠರು ತಾಪಿಷ್ಠರು ರಾಗಿ ವಿರಾಗಿಗಳು । ದರ್ಶನೋತ್ಕಂಠಿತವಾಗಿ ॥ 114

ಜಪ ತಪ ವ್ರತ ಮಾಡುವವರು, ಸನ್ಯಾಸಿಗಳು । ಯಾತ್ರಿಕರು ಮತ್ತು ಕ್ಷೇತ್ರ ನಿವಾಸಿಗಳು ।
ಗಾಯಕರು ನರ್ತಕರು ಆದಿ ಪರಿವಾರಗಳು । ಶಿರಡಿಗೆ ದರ್ಶನಕೆ ಬರುವರು ॥ 115

ಹೊಲೆಯನೂ ಬರುವ ಜೋಹಾರಕ್ಕೆ । ಈ ಶ್ರೀಸಾಯಿಯ ದರ್ಬಾರಕ್ಕೆ ।
ನುಡಿವರು ಇವನೇ ತಂದೆ ತಾಯಿ ನಿಜಕ್ಕೆ । ಜನ್ಮ ಮರಣದ ಚಕ್ರವ ತಪ್ಪಿಸುವನು ॥ 116

ಆತ್ಮಲಿಂಗವಿದೆ ಕೊರಳಿಗೆ । ವಿಭೂತಿ ಚರ್ಚಿಸಿದೆ ಹಣೆಗೆ ।
ದೃಷ್ಟಿ ಕೋರಾನ್ನ ಭಿಕ್ಷೆಯೆಡೆಗೆ । ಆಜಂಗಮನ ರೂಪ ನೋಡಬೇಕು ॥ 117

ಎಷ್ಟೋ ಜನ ಗಾರುಡಿಗರು ಬರುವರು । ಗೊಂದಲಿಗರು ಬಂದು ಗೊಂದಲವ ಹಾಕುವರು ।
ಭವಾನಿಯ ಜೋಗವಾ ಬೇಡುವರು । ಅತಿ ಪ್ರೀತಿಯಿಂದ ಬಾಬಾರ ಹತ್ತಿರ ॥ 118

ಕುರುಡರು ಕುಂಟರು ಕಿವಿಹರಕರು । ಜೋಗಿ, ನಾನಕ, ಪರಾಕಿನವ ದೀವಟಿಗೆ ಹಿಡಿದವರು ।
ಸಮರ್ಥಸಾಯಿಯ ಭಕ್ತಿ ಬಾಜಾರು । ಅಲ್ಲಿ ಪ್ರೇಮದಿಂದೋಡಿ ಬರುವರು ॥ 119

ಡಗ್ಗೆ, ಸರೋದ,ನುಡಿಸುವವರು । ಡೊಂಬರೂ ಆಟ ಆಡಿ ತೋರುವರು ।
ಅಲ್ಲಿ ಈ ಪ್ರೇಮಳವನಚರನಾದರೂ । ಸಮಯ ಸಾಧಿಸಿ ಬಂದನು ॥ 120

ಧನ್ಯ ಧನ್ಯ ಸಾಯಿಯ ಆಕೃತಿ । ವೈರಾಗ್ಯದ್ದೇ ಪ್ರತಿಮೂರ್ತಿ ।
ನಿರ್ವಿಷಯ ನಿಃಸಂಗ ನಿಃಸ್ವಾರ್ಥಿ । ಭಕ್ತ ಭಾವಾರ್ಥಿಯವ ಅನುಪಮೇಯ ॥ 121

ಪೂರ್ವ ಸಂಧಾನ ಸಾಕು ಇದು । ಮುಖ್ಯ ಕಥೆಯ ಎಳೆಹಿಡಿದು ।
ಶ್ರೋತೃಗಳೇ ಲಕ್ಷಗೊಟ್ಟು ಕೇಳುವರು । ಆಖ್ಯಾನವನಿನ್ನು ಆರಂಭಿಸುವಾ ॥ 122

ಬಾಬಾ ಉಪವಾಸ ಮಾಡುತಿರಲಿಲ್ಲ । ಯಾರಿಗೂ ಉಪವಾಸವಿರಗೊಡುತಿರಲಿಲ್ಲ ।
ಉಪವಾಸದವರ ಚಿತ್ತ ಸ್ವಸ್ಥವಿರುವದಿಲ್ಲ । ಅವರ ಪರಮಾರ್ಥವಾದರೂ ಎಂತದು ॥ 123

ದೇವ ಸಿಗಲಾರ ಹಸಿದ ಹೊಟ್ಟೆಯವರಿಗೆ । ಆತ್ಮವ ಸಂತುಷ್ಟಗೊಳಿಸಿರಿ ಮೊದಲಿಗೆ ।
ಇನ್ನೊಂದು ಕಥೆಯ ಈ ಉಪದೇಶದ ಬಗ್ಗೆ । ನಿಮಗಾಗಿಯೇ ಹೇಳುವೆ ॥ 124

ಹಿಸಿವೆಯಿಂದ ಮಧ್ಯಾನ್ಹದ ಹೊತ್ತಿಗೆ । ನೆಲದ ಮಣ್ಣು ಮೇಲೇಳುವಾಗ್ಯೆ ।
ಬರುವದು ಚಿತ್ತ ವೃತ್ತಿಗೆ । ಅನ್ನ ಬ್ರಹ್ಮಾಭಿವ್ಯಕ್ತತೆ ॥ 125

ಇಂಥ ದುರ್ಧರವಾದ ಹೊತ್ತಿಗೆ । ಅನ್ನ ಬೀಳದಿದ್ದರೆ ಹೊಟ್ಟೆಗೆ ।
ಹೀನ ದೀನವಾದ ಇಂದ್ರಿಯಗಳಿಗೆ । ನಿಜಕಾರ್ಯದ ಮರೆವಾಗುವದು ಸಂಪೂರ್ಣ ॥ 126

ಹೊಟ್ಟೆಯಲಿ ಅನ್ನದಾಧಾರವಿರದು । ಆಗ ಯಾವ ಕಣ್ಣಿಂದ ದೇವರ ನೋಡುವದು ।
ಯಾವ ನಾಲಿಗೆಯಿಂದವನ ಮಹಿಮೆಯ ಹೊಗಳುವದು । ಯಾವ ಕಿವಿಗಳಿದ ಕೇಳಬೇಕು ॥127

ಸಾರಾಂಶ ಎಲ್ಲ ಇಂದ್ರಿಯಗಳಿಗೆ ಶಕ್ತಿ । ಇದ್ದರೇ ಆಗುವದು ದೇವರ ಭಕ್ತಿ ।
ಪರಮಾರ್ಥದಲ್ಲಿರದದಕೆ ಗತಿ । ಅನ್ನವಿಲ್ಲದೇ ಕ್ಷೀಣವಾದಾಗ ॥ 128

ಅತಿ ಭೋಜನವಲ್ಲ ಹಿತಕರ । ಮಿತಭೋಜನವೇ ಸುಖಕರ ।
ಅತಿಯಾದ ಉಪವಾಸ ಮಾಡುವದರ । ಫಲ ನಿರಂತರ ಅಸೌಖ್ಯ ॥ 129

ಒಮ್ಮೆ ಒಬ್ಬ ಸ್ತ್ರೀ ಶಿರಡಿಗೆ । ಪತ್ರವ ಬರೆಯಿಸಿಕೊಂಡು ಕೇಳಕರರ ಹೆಸರಿಗೆ ।
ಬಂದಳು ಸಾಯಿ ದರ್ಶನಕೆ । ಪರಮಉಲ್ಲಾಸ ಮನದಲಿ ॥ 130

ಮಹಾರಾಜರ ಚರಣದ ಬಳಿಗೆ । ಮೂರು ದಿನ ಕುಳಿತುಕೊಳ್ಳುವದು ಉಪವಾಸವಾಗೆ ।
ಮನಸಿನಲ್ಲಿ ನಿರ್ಧರಿಸಿ ಹೀಗೆ । ತನ್ನೊಳಗೆ ಆ ವಿಷಯವನಿಟ್ಟುಕೊಂಡಳು ॥ 131

ಬಾಬಾರ ನಿತ್ಯಕ್ರಮಾನುಸಾರ । ಮಾಡುವಾಗ ಪರಮಾರ್ಥದ ವಿಚಾರ ।
ಜೊತೆಯಲಿರಬೇಕು ಅನ್ನ ಆಹಾರ । ಆದರೆ ಆ ಸ್ತ್ರೀಯ ನಿರ್ಧಾರ ತಿರುವು ಮುರುವು ॥ 132

ಯಾರ ಮನದಲಿದೆ ದೇವಕ ಕಾಣಬೇಕು । ಅವರು ಮೊದಲು ಆಹಾರ ಸೇವಿಸಬೇಕು ।
ಹೇಗೆ ದೇವರು ಹೊಳೆಯಬೇಕು । ಜೀವದಲಿ ಸಮಾಧಾನವಿಲ್ಲದೆ ॥ 133

ಹಸಿದ ಹೊಟ್ಟೆಯಲ್ಲಿ ದೇವರು ಸಿಗುವದು । ಇದು ಕಲ್ಪಾಂತದಲ್ಲಿಯೂ ಆಗದು ।
ಉಪವಾಸ ಗಿಪವಾಸಗಳ ಬೇಡಿಕೊಳ್ಳುವದು । ನಡೆಯದು ಸಾಯಿಯ ಹತ್ತಿರ ॥ 134

ಅಂತಃಸಾಕ್ಷಿಯಿಂದ ಮಹಾರಾಜರು । ಹಿಂದಿನ ದಿನವೇ ಇದನು ತಿಳಿದಿದ್ದರು ।
ದಾದಾ ಕೇಳಕರರಲ್ಲಿ ಇದ ಹೇಳಿದ್ದರು । ಮುಂಚಿತವಾಗಿಯೇ ಇದನೆಲ್ಲ ॥ 135

ಇನ್ನು ಈ ಹೋಳಿ ಹುಣ್ಣಿಮೆಯ ಹಬ್ಬಕ್ಕೆ । ನನ್ನ ಹುಡುಗರ ಉಪವಾಸವಿರುವದಕೆ ।
ಬಿಟ್ಟೇನೇ ನಾನು ಹಾಗೆ ಮಾಡುವದಕೆ । ಹಾಗಿದ್ದರೆ ನಾನೇಕಿಲ್ಲಿರಬೇಕು ॥ 136

ಸಾಯಿ ಮುಖದಿಂದ ಹೊರಗೆ । ಈ ಶಬ್ದಗಳು ಬೀಳುತಿದ್ದ ಹಾಗೆ ।
ಮರುದಿನವೇ ಶಿರಡಿಗೆ । ಬಂದಳಾ ಸ್ತ್ರೀ ಸಿದ್ಧಳಾಗಿ ॥ 137

ಗೋಖಲೆ ಎಂದು ಉಪನಾಮ ಅವರ । ಮೇಲೆ ಹೇಳಿದಂತೆ ಮನದ ನಿರ್ಧಾರ ।
ಗಂಟು ಮೂಟೆಗಳನಿಟ್ಟು ದಾದಾರ ಹತ್ತಿರ । ಪತ್ರ ಕೊಟ್ಟಳು ಅವರಿಗೆ ॥ 138

ಕಾನೀಟಕರ ಕಾಶೀಬಾಯಿ ಎಂಬವರು । ಬಳಗದವರೆಂದು ಪತ್ರ ಕೊಟ್ಟಿದ್ದರು ।
ಅವಳ ವ್ಯವಸ್ಥೆ ಮಾಡಲು ದಾದಾರಿಗೆ ತಿಳಿಸಿದ್ದರು । ಬಾಬಾರ ದರ್ಶನ ಮಾಡಿಸಲು ॥139

ಆ ಸ್ತ್ರೀ ಶಿರಡಿಗೆ ಬಂದಳು । ಕೂಡಲೇ ಬಾಬಾರ ದರ್ಶನಕೆ ಹೋದಳು ।
ದರ್ಶನ ತೆಗೆದುಕೊಂಡು ಕ್ಷಣ ಹೊತ್ತು ಕುಳಿತಿರಲು । ಅವಳಿಗೆ ಉಪದೇಶ ಆರಂಭವಾಯಿತು ॥ 140

ಯಾರ ಮನದಲ್ಲೇನಿರುವದು । ಸಾಯಿನಾಥರಿಗೆಲ್ಲ ತಿಳಿದಿರುವದು ।
ಭೂಮಂಡಳದಲ್ಲೇನೂ ಇರದು । ಅವರು ತಿಳಿದಿರದಂಥದು ॥ 141

'ಅನ್ನ ಮನ್ನಾದ' ವಿಷ್ಣು ರೂಪ । ಉಪವಾಸ ತಾಪಾಸ ಮತ್ತು ನಿರ್ಲೇಪ ।
ನಿರಾಹಾರ ಮತ್ತು ನಿರಾಪ । ಏತಕ್ಕೆ ಈ ಸುಳ್ಳು ವ್ಯಾಪವೆಲ್ಲ ॥ 142

ಅವಶ್ಯಕತೆ ಏನಿದೆ ತಮಗೆ । ಉಪವಾಸ ವನವಾಸ ಮಾಡುವುದಕೆ ।
ಬಾಬಾ ತಮ್ಮಷ್ಟಕ್ಕೇ ಅವಳಿಗೆ । ಈ ಮಾತುಗಳ ಹೇಳಿದರು ॥ 143

ಹೋಗು ಆ ದಾದಾಭಟ್ಟನ ಮನೆಗೆ । ಮಾಡಲ್ಲಿ ಚಂದಾಗಿ ಹೂರಣದ ಹೋಳಿಗೆ ।
ಉಣಬಡಿಸು ಅವನ ಮಕ್ಕಳು ಮರಿಗಳಿಗೆ । ನೀನೂ ಹೊಟ್ಟೆ ತುಂಬ ಊಟ ಮಾಡು ॥ 144

ಆಶ್ಚರ್ಯ ಆ ಹೋಳಿ ಹುಣ್ಣಿಮೆಯ ಹಬ್ಬಕೆ । ವಿಲಕ್ಷಣ ಯೋಗ ಆ ಸ್ತ್ರೀ ಬರುವದಕೆ ।
ದಾದಾರ ಪತ್ನಿಯೂ ಅದೇ ಕಾಲಕೆ । ಮುಟ್ಟಾಗಿ ದೂರ ಕುಳಿತಳು ॥ 145

ಉಪೋಷಣದ ಹುರುಪು ಇಳಿಯಿತು । ಅಡಿಗೆ ಮಾಡಬೇಕಾಗಿ ಬಂತು ।
ಬಳಿಕವಳು ಪರಮ ಮಮತೆಯಾಂತು । ಬಾಬಾರ ಆಜ್ಞೆಯ ಪಾಲಿಸಿದಳು ॥ 146

ಬಾಬಾರ ಚರಣದಲಿ ಶಿರಬಾಗಿ । ದಾದಾರ ಮನೆಗೆ ಹೋಗಿ ।
ಮಾಡಿದಳು ಹೂರಣ ಹೋಳಿಗೆ । ಎಲ್ಲರನುಣಿಸಿ ತಾನೂ ಉಂಡಳು ॥ 147

ಈ ಆಖ್ಯಾಯಿಕೆ ಎಷ್ಟು ಸುಂದರ । ಅಂತರ್ಗತ ಅರ್ಥ ಆದರ ।
ಆಗಬೇಕು ಹೀಗೆ ಗುರುವಚನದಿ ಸ್ಥಿರ । ಆಗ ಉದ್ಧಾರವಾಗುವದಕೆ ತಡವಿಲ್ಲ ॥ 148

ಇನ್ನೊಂದು ಕಥೆ ಹೀಗೇ । ನೆನಪಾಯಿತು ಸಾಯಿ ಸಮರ್ಥರಿಗೆ ।
ಪ್ರೇಮದಿಂದ ಹೇಳಿದರು ಭಕ್ತರೆಲ್ಲರಿಗೆ । ಶ್ರೋತೃಗಳೇ ಸಾದರರಾಗಿ ಕೇಳಿ ॥ 149

ಯಾರ ಮನದಲ್ಲಿ ಪರಮಾರ್ಥದ ಬಯಕೆ ಇರುವದು । ಅವರು ಸಾಯಾಸ ಮಾಡಬೇಕಾಗುವದು ।
ದೃಢವಾಗಿ ಅಭ್ಯಾಸ ಮಾಡುವದು । ಸ್ವಲ್ಪ ಸಾಹಸವೂ ಬೇಕದಕೆ ॥ 150

ಇಂಥ ಸತ್ಕಥಾಮೃತ ಚರಣತೀರ್ಥ । ಸೇವಿಸಬೇಕು ನಿತ್ಯ ಕಲ್ಯಾಣಾರ್ಥ ।
ಸಂತಚರಣದಲಾಗಲು ವಿನೀತ । ಅಂತರ ಪುನೀತವಾಗುವದು ॥ 151

ಒಮ್ಮೆ ನಾನು ಚಿಕ್ಕವನಿರಲು । ಬಟ್ಟೆಯನೊಂದು ಕಟ್ಟಿ ನಡುವಿನ ಸುತ್ತಲೂ ।
ಉದರ ನಿರ್ವಾಹಕ್ಕೆಂದು ಕೆಲಸ ದೊರಕಿಸಲು । ಮನೆಯಿಂದಾಚೆ ಹೊರಟೆ ॥ 152

ನಡೆಯುತ್ತ ನಡೆಯುತ್ತ ಬೀಡ ಎಂಬಲ್ಲಿ ಬಂದೆ । ಅಲ್ಲಿ ಒಂದಿಷ್ಟು ವಿಶ್ರಮಿಸಿದೆ ।
ಫಕೀರ ಎನ್ನ ಸಂಕಲ್ಪವೇ ಬೇರೆಯಾಗಿದೆ । ಆನಂದವೆನಿಸಿತು ಮನಸಿಗೆ ॥ 153

ಅಲ್ಲೊಂದು ಜರಿಯ ಕೆಲಸ ಸಿಕ್ಕಿತು । ನಾನೂ ದುಡಿದೆ ಕಷ್ಟಪಟ್ಟು ।
ನನ್ನ ಕಷ್ಟವು ಫಲಿಸಿತು । ಆಗ ಫಕೀರನ ಪರಾಕ್ರಮವ ನೋಡಿರಿ ॥ 154

ನನಗಿಂತ ಮೊದಲೇ ಕೆಲಸಕ್ಕೆ ಹತ್ತಿದ । ಜಾಣಜಾಣರೆಂದು ಹೆಸರಾದ ।
ನಾಲ್ಕು ಹುಡುಗರದೂ ಕೆಲಸದ । ಅಳತೆ ಮಾಡಿ ನೋಡಿದರಾಗ ॥ 155

ಒಬ್ಬನದು ಐವತ್ತು ರೂಪಾಯಿಯದು । ಎರಡನೆಯವನದು ನೂರು ರೂಪಾಯಿನದು ।
ಇನ್ನುಳಿದವರದು ನೂರೈವತ್ತು ಆಗಿದ್ದರೆ । ನನ್ನದು ಎಲ್ಲರಿಗಿಂತ ದ್ವಿಗುಣವಾಗಿತ್ತು ॥ 156

ನನ್ನ ಜಾಣತನವ ನೋಡಿ । ಒಡೆಯನಾದ ಸಂತುಷ್ಟ ಮನದಿ ।
ಪರಿಪರಿಯಾಗಿ ಗೌರವ ಮಾಡಿ । ಬಹಳ ಪ್ರೇಮವನಿರಿಸಿದನೆನ್ನಲ್ಲಿ ॥ 157

ನನಗವ ಉಡುಪು ಕೊಟ್ಟ । ಶೆಲ್ಲೆಯ ಹೊರಿಸಿ ತಲೆಗೆ ಪಗಡಿ ಇಟ್ಟ ।
ಆದರೆ ನಾನವುಗಳ ಕಟ್ಟಿಟ್ಟೆ । ಹೇಗೆ ಕೊಟ್ಟಿದ್ದರು ಹಾಗೆಯೇ ॥ 158

ಯಾರು ಕೊಟ್ಟದ್ದೆಷ್ಟು ಸಾಕಾಗುವದು । ಎಷ್ಟೇ ಕೊಟ್ಟರೂ ಅದು ಕಡಿಮೆ ಬೀಳವದು ।
ನನ್ನ ಸರಕಾರ (ಅಲ್ಲಾ) ನನಗೆ ಕೊಡಹತ್ತಿದರೆ । ಅದು ಕಲ್ಪಾಂತದವರೆಗೂ ಮುಗಿಯದು ॥ 159

ನನ್ನ ಸರಕಾರ ನನಗೆ ಕೊಟ್ಟಿದ್ದು । ಅದಕೆ ಸರಿಯಾದೀತೆ ಬೇರೆಯವರದು ।
ಅಮರ್ಯಾದನಿಗೆ ಮರ್ಯಾದೆಯುಳ್ಳದ್ದು । ಭೂಷಣ ಹೇಗೆ ಆದೀತು ॥ 160

ನನ್ನ ಸರಕಾರ ಕೊಂಡೊಯ್ಯು ಎನ್ನುವದು । ಬೇರೆಯವರೆಲ್ಲ ನನಗೇ ಕೊಡು ಕೊಡು ಎನುವದು ।
ಲಕ್ಷವಿಟ್ಟು ನಾ ಹೇಳುತಿದ್ದುದು । ಒಬ್ಬರೂ ಸರಿಯಗಿ ಕೇಳಿಕೊಳ್ಳರು ॥ 161

ಖಜಾನೆ ತುಂಬಿ ಹರಿಯುತಿದ್ದರೂ । ಒಬ್ಬರೂ ಒಂದು ಬಂಡಿಯ ತಾರರು ।
ಅಗಿಯಿರೆಂದರೆ ಒಬ್ಬರೂ ಅಗಿಯರು । ಪ್ರಯತ್ನವನಾರೂ ಮಾಡಲೊಲ್ಲರು ॥ 162

ನಾನೆಂದೆ ಆ ಧನವ ಅಗಿದು ತೆಗೆಯಬೇಕು । ಬಂಡಿಯಲಿ ತುಂಬಿಕೊಂಡೊಯ್ಯಬೇಕು ।
ನಿಜದಲಿ ಅಂಥ ತಾಯಿಯ ಮಗನೇ ಅವನಿರಬೇಕು । ಅವನೇ ಭಾಂಡಾರ ತುಂಬಿಕೊಳ್ಳಬೇಕು ॥ 163

ಕೊನೆಗೆ ಏನು ಗತಿ ನಮ್ಮದು । ಮಣ್ಣಿದದ್ದು ಮಣ್ಣೇ ಆಗುವದು ।
ಗಾಳಿ ಗಾಳಿಯಲಿ ಬೆರೆತುಹೋಗುವದು । ಆಮೇಲೆ ಈ ಕಾಲ ಬರಲಾರದು ॥ 164

ನನ್ನ ಫಕೀರನ ಕಳೆ । ನನ್ನ ದೇವರ ಲೀಲೆ ।
ನನ್ನ ಸರಕಾರದ ತಾಳೆ । ಬಹಳ ಭಿನ್ನವಾಗಿರುವದೆಲ್ಲಕೂ ॥ 165

ನಾನು ಯಾವಾಗಲೋ ಎಲ್ಲಿಗೋ ಹೋಗುವೆ । ಎಲ್ಲೆಲ್ಲಿಯೋ ಹೋಗಿ ಕುಳಿತು ಬಿಡುವೆ ।
ಆದರೆ ಮಾಯೆಯಲಿ ತೊಡಗುವದು ಈ ಜೀವವೇ । ಅದರಿಂದ ಮುಳುಮುಳುಗಿ ಏಳುವದು ॥ 166

ಮಾಯೆಯ ಆಟ ಬಹಳ ಕಠಿಣ । ಅವಳು ಮಾಡಿದಳೆನ್ನ ಹೀನ ದೀನ ।
ಹಗಲಿರುಳೂ ನನ್ನ ಜನಗಳನ । ನೆನಸಿಕೊಳ್ಳುತ್ತಲೇ ಇರುವೆನು ॥ 167

'ಯಾರು ಹೇಗೆ ಮಾಡುವರು । ಅದರಂತೆಯೇ ಅವರು ಉಣ್ಣುವರು' ।
ನನ್ನ ವಚನಗಳ ನೆನಪಿನಲಿಟ್ಟವರು । ಅತಿಯಾದ ಸೌಖ್ಯವ ಪಡೆಯುವರು ॥ 168

ಹೇಮಾಡ ಸಾಯಿಗೆ ಶರಣ । ಅಪೂರ್ವ ಈ ಕಥಾ ನಿರೂಪಣ ।
ಸಾಯಿಯೇ ತಾನೇ ಮಾಡುತಿರಲಿದನ । ನನ್ನ ಸ್ವಂತಿಕೆ ಏನೂ ಇಲ್ಲ ॥ 169

ಅವನೇ ಇದನು ನಿವೇದಿಸುವನು । ಅವನೇ ಓದುವ ಅವನೇ ಕೇಳುವವನೂ ।
ಅವನೇ ಬರೆವನು ಬರೆಸುವವನೂ । ಅದರಲ್ಲಿರುವ ಅರ್ಥವೂ ಅವನೇ ಇರುವ ॥ 170

ಈ ಕಥೆಯೇ ಪ್ರತ್ಯಕ್ಷ ಸಾಯಿ ಇರುವನು । ಈ ಕತೆಯ ಸವಿಯೂ ಅವನು ।
ಅವನೇ ಹೇಳುವ ಕೇಳುವವನೂ । ಸ್ವಾನಂದದ ಭೋಕ್ತಾರನೂ ಅವನೇ ॥ 171

ಅಂದಮೇಲಿದರ ಶ್ರವಣದ ಫಲವೇ । ಪರಮಾರ್ಥದ ಸಾಧನೆ ಅಲ್ಲವೇ ।
ಭಕ್ತನು ಸಭಾಗ್ಯನಿದ್ದರುವೇ । ಈ ಆನಂದವ ಭೋಗಿಸುವ ॥ 172


ಇನ್ನು ಮುಂದಿನಧ್ಯಾಯದ ಸಾರ । ಸಾಯಿಯ ಉದಿಯ ಮಹಿಮೆ ಅಪಾರ ।
ಸೆರಗೊಡ್ಡಿ ಬೇಡುವೆ ಶ್ರೋತೃಗಳ ಸಜ್ಜನರ । ಸಾದರರಾಗಿ ಕೇಳಬೇಕು ॥ 173

ಅತಿ ವಿನಯದಿಂದ ಹೇಮಾಡ ಹೇಳುವದು । ಸಾಯಿ ಸಮರ್ಥ ಕೃಪೆ ತೋರಿದ್ದು ।
ಅವರೇ ನಿಜ ಚರಿತ್ರೆಯ ನುಡಿಸಿದ್ದು । ಅಪೂರ್ವ ರಸಭರಿತ ಕಥೆಯ ॥ 174

ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ । ಶ್ರೀ ಸಾಯಿ ಸಮರ್ಥ ಸಚ್ಚರಿತೆ ಗುರುಮಹಿಮಾ ವರ್ಣನಂ ನಾಮ ದ್ವಾತ್ರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತಾಮೂರು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಇನ್ನು ನಮಿಸುತ ಸಂತ ಸಜ್ಜನ । ಆಗಲು ಅವರ ಕೃಪಾವಲೋಕನ ।
ತತ್ಕಾಲದಲಿ ಪಾತಕಪರ್ವತ ದಹನ । ಕಲಿಮಲಕ್ಷಾಲನವೂ ಆಗುವದು ॥ 1

ಉಪಕಾರಗಳ ರಾಶಿ ಅವರದು । ಜನ್ಮಜನ್ಮಾಂತರ ಕಳೆದರೂ ತೀರದು ।
ಅವರು ನಿಜ ಮಾತನಾಡಿದ್ದು । ಅವಿನಾಶಿ ಮತ್ತು ಸುಖದಾಯಕ ॥ 2

ಇದು ತನ್ನದು ಇದು ಪರರದು । ಅವರ ಚಿತ್ತಕ್ಕೇ ಬಾರದಿದು ।
ಭೇದಭಾವದಿಂದ ಕೂಡಿದ ವಿಚಾರವದು । ಅವರ ಮನದಲ್ಲೇ ಮೂಡದು ॥ 3

ಹಿಂದಿನಧ್ಯಾಯದಲಾಯಿತು ಶ್ರವಣ । ಗುರುಗರಿಮೆಯ ಬಗ್ಗೆ ನಿರೂಪಣ ।
ಇನ್ನು ಈ ಅಧ್ಯಾಯದಲಿ ಶ್ರೋತೃ ಗಣ । ಕೇಳಿರಿ ಉದಿಯ ಮಹಿಮೆಯನ ॥ 4

ಕೇಳಿ ಕೇಳಿ ದಕ್ಷಿಣೆ ತೆಗೆದುಕೊಳ್ಳುವರು । ದೀನದುರ್ಬಲರಿಗೆ ದಾನ ಮಾಡುವರು ।
ಉಳಿದದ್ದರಲಿ ಉರುವಲ ಕೊಂಡುಕೊಳ್ಳುವರು । ಗುಡ್ಡೆಯೊಟ್ಟುವರು ಕಾಷ್ಠದ್ದು ॥ 5

ಆ ಒಣಗಿದ ಕಾಷ್ಠದಿ । ಎದುರಿಗಿದ್ದ ಧುನಿಯಲಿ ಹೋಮ ಮಾಡಿ ।
ಅದರಿಂದ ತಯಾರಾದ ಸಾಕಷ್ಟು ಬೂದಿ । ಉದಿಯೆಂದು ಭಕ್ತರಿಗೆ ಕೊಡುವರು ॥ 6

ಶಿರಡಿಯಿಂದ ತಿರುಗಿ ಊರಿಗೆ ಹೊರಟಾಗ । ಬಾಬಾರ ಹತ್ತಿರ ಅನುಜ್ಞೆ ಬೇಡಿದಾಗ ।
ಉದಿಕೊಡುವ ಪರಿಪಾಠವಿದ್ದಿತಾಗ । ಎಲ್ಲ ಭಕ್ತರಿಗೂ ಇದು ಗೊತ್ತು ॥ 7

ಬಹುಶಃ ಉದಿ ತನ್ನಿರೆಂದು । ಹೇಳಿದಾಗ ನಿಜವಾದ ಆಜ್ಞೆ ದೊರೆಯಿತೆಂದು ।
ಚಿತ್ತದಲಿ ಎಲ್ಲರೂ ಹರುಷಗೊಂಡು । ಮರಳಿ ತಮ್ಮೂರಿಗೆ ಹೋಗುವರು ॥ 8

ಅಂತೇಯೇ ಶಿರಡಿಯಲಿ ವಾಸ್ತವವಿದ್ದವರಿಗೆ । ಮಧ್ಯಾಹ್ನ ಮತ್ತು ಸಾಯಂಕಾಲ ಬೆಳಿಗ್ಗೆ
ಬಾಬಾ ಯಾರಿಗೂ ಉದಿಯ ಕೊಡದೇ ಹಾಗೆ । ಬರಿಗೈಯಿಂದ ಕಳುಸುತ್ತಿದ್ದರು ॥ 9

ಇದು ಇತ್ತು ನಿತ್ಯದ ಕ್ರಮ । ಆದರೆ ಆ ಉದಿಯದೇನು ಗುಣಧರ್ಮ ।
ಮಶೀದಿಯಲೇಕೆ ಧುನಿ ಒಂದೇ ಸಮ । ಏತಕೆ ಈ ಉಪಕ್ರಮ ದಿನ ದಿನವೂ ॥ 10

ವಿಭೂತಿ ದಾನದಲಿರುವ ಮನೋಗತವು । ಈ ದೃಶ್ಯ ವಿಶ್ವಾಂತರ್ಗತವೆಲ್ಲವೂ ।
ಇದೆಲ್ಲ ಬರೀ ಬೂದಿ ಎಂಬ ತಿಳಿವು । ಎಲ್ಲರಿಗೂ ಬರಲೆಂಬ ಸೂಚನೆ ॥ 11

ಕಾಷ್ಟವೇ ಈ ದೇಹ ಪಂಚಭೂತಾತ್ಮಕವಾದದು । ಭೋಗ ಭೋಗಿಸಲೆಂದೇಭೂಮಿಗೆ ಬಂದದ್ದು ।
ಭೋಗ ಮುಗಿದಾಗ ನಿಚೇಷ್ಟೆ ಬೀಳುವುದು । ಬೂದಿಯಾಗೆಲ್ಲೆಡೆಗೆ ಹಾರಿಹೋಗುವದು ॥ 12

ಇದೇ ಸ್ಥಿತಿ ನಿಮ್ಮದು ನನ್ನದು । ನೆನಪಿರಬೇಕು ನಿಮಗದು ।
ಹಗಲಿರುಳೂ ನಾನೂ ಸ್ಮರಣೆಯಲ್ಲಿಡುವದು । ಅದಕಾಗಿ ವಿಭೂತಿ ಕೊಡುವುದು ॥13

ಅಖಿಲ ಬ್ರಹಾಂಡ ಮಾಯಾಮಯವಿದ್ದು । ಬ್ರಹ್ಮ ಸತ್ಯ ಬ್ರಹ್ಮಾಂಡ ಮಿಥ್ಯವಿದು ।
ನಿಜದಲಿ ಈ ಉದಿ ಅವರದೇ ಗುರುತೆಂದು । ನಿಶ್ಚಿತಾರ್ಥವಿದು ಮನಕೆ ॥ 14

ಇಲ್ಲಿ ಇಲ್ಲ ಯಾರಿಗೆ ಯಾರೂ । ಹೆಂಡತಿ ಮಕ್ಕಳು ನಮ್ಮವರು ತಮ್ಮವರು ।
ನಗ್ನರಾಗಿ ಬಂದು ನಗ್ನರಾಗಿಯೇ ಹೋಗುವರು । ಉದಿ ಇದರದೇ ಸ್ಮಾರಕ ॥ 15

ಈ ಉದಿಯ ಮಾಡಲು ಚರ್ಚನ । ಆದಿ ವ್ಯಾಧಿಗಳದಾಗುವದು ನಿರಸನ ।
ಆದರೀ ಉದಿಯ ತತ್ವಾರ್ಥ ಗಹನ । ವಿವೇಕಪೂರ್ಣ ವೈರಾಗ್ಯ ॥ 16

ಕೈಲಾದಷ್ಟು ದಕ್ಷಿಣೆಯನಿತ್ತು । ವೈರಾಗ್ಯ ಲಕ್ಷಣವ ಸಾಧಿಸಿ ಇನಿತು ।
ಬಳಿಕ ಮುಂದೆ ನಿವೃತ್ತಿ ವೈರಾಗ್ಯದ ಗುರುತು । ಮೆಲ್ಲ ಮೆಲ್ಲಗದು ತಿಳಿಯುವದು ನಿಮಗೆ ॥ 17

ವೈರಾಗ್ಯವು ಕೈಗೆ ಬಂದಲ್ಲಿ । ವಿವೇಕದ ಜೊತೆ ಇರದಿದ್ದಲ್ಲಿ ।
ಅದೆಲ್ಲ ಕೂಡಿ ಹೋಗುವದು ಮಣ್ಣಿನಲ್ಲಿ । ಅದಕೆ ವಿಭೂತಿಯ ಪಡೆಯಿರಿ ॥ 18

ವಿವೇಕ ವೈರಾಗ್ಯಗಳು ಜೊತೆ । ಅದೇ ಈ ವಿಭೂತಿ ದಕ್ಷಿಣೆಗಳಿಗೂ ಸಾಂಗತ್ಯ ।
ಒಡ್ಡ ಹಾಕಿ ತಡೆಯದಿದ್ದರೆ ಈ ಭವನದಿಯ । ದಡ ಮುಟ್ಟುವದು ದುಸ್ತರ ॥ 19

ಹಿರಿಕಿರಿಯರೆಲ್ಲ ಬರುತಿದ್ದರು । ಬಾಬಾರ ಚರಣಗಳ ವಂದಿಸುತಿದ್ದರು ।
ಯಾವಾಗ ತಿರುಗಿ ಹೊರಡುತಿದ್ದರವರು । ಬಾಬಾ ವಿಭೂತಿ ಕೊಡುತಿದ್ದರವರಿಗೆ ॥20

ನಿತ್ಯವೂ ಧುನಿ ಮಶೀದಿಯಲ್ಲಿ । ಅಕ್ಷಯ ಉರಿಯುತಿತ್ತು ಹಗಲಿರುಳುಗಳಲಿ ।
ಬಾಬಾ ಅವರಿಗೆ ನಿರೋಪ ಕೊಡುತಲಿ । ಅದರೊಳಗಿನ ರಕ್ಷೆಯ ಕೊಟ್ಟು ಮುಷ್ಟಿ ತುಂಬ ॥ 21

ಪ್ರಸಾದವೆಂದು ಬೂದಿ ಕೊಡುವರು । ತಮ್ಮ ಕೈಯಿಂದ ಹಣೆಗೆ ಹಚ್ಚುವರು ।
ಕೂಡಲೇ ಅದೇ ಕೈ ತಲೆಯ ಮೇಲಿಡುವರು । ಭಕ್ತರಿಗೆ ಕಲ್ಯಾಣ ಹಾರೈಸುತ ॥ 22

ರಕ್ಷೆ, ವಿಭೂತಿ ಮತ್ತು ಉದಿ । ಮೂರು ಶಬ್ದಗಳು ಒಂದೇ ಅರ್ಥದಿ ।
ಇದೇ ಪ್ರಸಾದ ಯಾವಾಗಲೂ ನಿತ್ಯದಿ । ಬಾಬಾ ಎಲ್ಲರಿಗೂ ಹಂಚುತಿದ್ದರು ॥ 23

ಸಂಸಾರವಿರುವದು ಈ ಉದಿಯ ಹಾಗೆ । ಇದೊಂದೇ ಮಹಿಮೆ ಈ ಉದಿಗೆ ।
ಬಂದೀತು ಒಂದು ದಿನ ಹೀಗೆ । ನೆನಪಿನಲ್ಲಿದನಿಡಬೇಕು ನೀವು ॥ 24

ಕಮಲದಲ ಜಲದಂತಿದು । ಈ ನಶ್ವರ ದೇಹ ಬಿದ್ದು ಹೋಗುವದು ।
ಅದಕಾಗಿ ಇದರ ಅಭಿಮಾನ ತ್ಯಜಿಸುವದು । ಎಂಬುದನೇ ಈ ಉದಿ-ದಾನ ತಿಳಿಸುವದು ॥ 25

ಈ ಎಲ್ಲ ವಿಶ್ವದ ಹರವು । ಮುಷ್ಠಿ ಬೂದಿಯಂತಿದರ ಇರುವು ।
ಉದಿಯಲಿ ಈ ಸತ್ಯದ ಅರಿವು । ಜಗನ್ಮಿಥ್ಯಾ ಎಂಬ ವಿಚಾರದ್ದು ॥ 26

ಉದಿ ಎಂದರೆ ಕೇವಲ ಮೃತ್ತಿಕೆ । ಅಂತಿಮಗತಿ ಅಲ್ಲಿ ನಾಮರೂಪಕೆ ।
ಬ್ರಹ್ಮನಿರ್ಮಿತ ಈ ವಿಕಾರಮಯ ಜಗದಕೆ । ಮಣ್ಣೇ ಸತ್ಯದಲಿದರ ಪ್ರತೀತಿ ॥ 27

ಸ್ವತಃ ಬಾಬಾರೂ ಅಕ್ಕರೆಯಿಂದ । ಕೇಳಿರುವರು ಹಾಡು ಹೇಳುವದ ।
ಉದಿಯ ಮಟ್ಟಿಗೆ ಅದರೊಳಗಿನ ಮಾತೊಂದ । ಹೇಳುವೆನು ಕೇಳಿರಿ ಆದರದಿ ॥ 28

"ರಮತೆ ರಾಮ ಆಯೋಜಿ ಆಯೋಜಿ । ಉದಿಯಾಕಿ ಗೋನಿಯಾ ಆಯೋಜಿ" ॥ಧೃ॥

ಬಂದಾಗ ಮನಸಿಗೆ ಸ್ಫೂರ್ತಿ । ಬಾಬಾ ಆಗಿ ಹರ್ಷ ನಿರ್ಭರ ।
ಇಷ್ಟೇ ಧೃಪದವ ಸುಸ್ವರ । ಮೇಲಿಂದ ಮೇಲೆ ಹಾಡುತಿದ್ದರು ॥ 29

ಸಾರಾಂಶವೆಂದರೆ ಈ ಬಾಬಾರ ಧುನಿ । ಹುಟ್ಟಿಸಿತು ಎಷ್ಟೋ ಉದಿಯ ಗೋಣಿ ।
ಸಮರ್ಥರಾರು ಈ ಪರಮ ಕಲ್ಯಾಣಿ । ಉದಿಯ ಎಣಿಕೆ ಮಾಡಲು ॥ 30

ಕೇಳಿ ಉದಿದಾನದ ಗುಹ್ಯಾರ್ಥ । ಅಂತೆಯೇ ಪರಮಾರ್ಥ ಮತ್ತು ಭಾವಾರ್ಥ ।
ಶ್ರೋತೃಗಳು ಕೇಳುವರು ಶುದ್ಧ ಸ್ವಾರ್ಥ । ಯೋಗ ಕ್ಷೇಮಾರ್ಥವಾಗಿ ಉದಿಯದು ॥ 31

ಉದಿಯಲ್ಲಿ ಈ ಗುಣವೂ ಇರುವದು । ಇದರ ಹೊರತು ಆದರ ಮಹತಿ ಹೇಗೆ ಬೆಳೆಯುವರು ।
ಸಾಯಿಯು ಪರಮಾರ್ಥ ಮಾರ್ಗದ ಧುರೀಣನಾಗಿದ್ದು । ಸ್ವಾರ್ಥವನನುಸರಿಸಿ ಪರಮಾರ್ಥ ಕೊಡುವ ॥ಮ 32

ಈ ಉದಿಯ ಯೋಗಕ್ಷೇಮದ ಕಥೆಗಳು । ಅಗಣಿತವಾಗಿರುವವುಗಳು ।
ಆದರೆ ಹೇಳುವೆನವುಗಳ ಸಂಕ್ಷಿಪ್ತದೊಳು । ಗ್ರಂಥ ವಿಸ್ತಾರ ಬೆಳೆಯದಿರಲೆಂದು ॥ 33

ಒಮ್ಮೆ ನಾರಾಯಣ ಮೋತಿರಾಮ । ಜಾನೀ ಎಂದವನ ಉಪನಾಮ ।
ಔದೀಚ್ಯ ಬ್ರಾಹ್ಮಣ ಗೃಹಸ್ಥಾಶ್ರಮ । ನಾಶಿಕದಲ್ಲಿ ವಾಸಿಸುವವ ॥ 34

ಅಂತೆಯೇ ಬಾಬಾರ ಇನ್ನೊಬ್ಬ ಭಕ್ತರು । ರಾಮಚಂದ್ರ ವಾಮನ ಮೋಡಕ ಎಂಬವರು ।
ನಾರಾಯಣರಾಯ ಅವರ ಸೇವಕನ ಹೆಸರು । ಬಾಬಾರ ಭಾವಿಕ ಭಕ್ತ ॥ 35

ಬಾಬಾ ದೇಹಧಾರಿಯಾಗಿದ್ದಾಗ್ಯೆ । ಮಾತೆಯನು ಕರೆದುಕೊಂಡು ಜೊತೆಗೆ ।
ನಾರಾಯಣರಾಯರು ಹೋದರಲ್ಲಿಗೆ । ಬಾಬಾರ ದರ್ಶನಾರ್ಥಿಗಳಾಗಿ ॥ 36

ಆಗ ತಾವಾಗಿಯೇ ಅವಳಿಗೆ । ಹೇಳಿಬಿಟ್ಟಿದ್ದರು ಮೊದಲಿಗೇ ।
ಇನ್ನು ಮುಂದೆ ಸೇವಾ ಧರ್ಮದೊಳಗೆ । ನಮ್ಮ ಸಂಬಂಧ ಉಳಿಯಲಿಲ್ಲ ॥ 37

ಈ ಪರತಂತ್ರತೆ ಸಾಕಿನ್ನು । ಮಾಡಬೇಕು ಸ್ವತಂತ್ರ ಉದ್ಯೋಗವನ್ನು ।
ಮುಂದೆ ಕಳೆಯಲು ಅಲ್ಪ ಕಾಲವನು । ದೇವರಿಗೆ ದಯೆ ಬಂದಿತು ॥ 38

ಪರಾಧೀನತೆಯ ನೌಕರಿಯ ಬಿಟ್ಟು । ಸ್ವತಂತ್ರತೆಯ ಇಷ್ಟಪಟ್ಟು ।
ಭೋಜನ ವಸತಿಗ್ರಹ ವ್ಯವಸ್ಥೆಯ ನಿಂತು । ತಮ್ಮದೇ ಸ್ವಂತದ್ದಾಗಿ ಸ್ಥಾಪಿಸಿದರು ॥ 39

'ಆನಂದಾಶ್ರಮ'ವೆಂದು ಹೆಸರಿಟ್ಟರು । ಅದರಲ್ಲಿಯೇ ಶ್ರಮಪಟ್ಟರು ।
ದಿನದಿಕ್ಕೆ ಗಳಿಸಿ ಹೆಸರು । ಮನಸಿಗೆ ಆರಾಮವೆನಿಸಿತು ॥ 40

ಈ ರೀತಿ ನಡೆದ ಸಂಗತಿಯ ಕಂಡು । ಸಾಯಿ ಚರಣದಿ ನಿಷ್ಠೆ ಬೆಳೆದು ।
ಬಳಿಕದ ದೃಢ ಭಕ್ತಿಯ ಸ್ವರೂಪ ತಳೆದು । ಅನುಭವದಲಿಳಿಯಿತು ಮರೆಯದಂತು ॥ 41

ಸಾಯಿಯವರ ವಚನದ ಪ್ರತ್ಯಯ ಬಂತು । ಶ್ರವಣಾರ್ಥಿಗಳಿಗಿದೊಂದು ಕಥೆಯಾಯಿತು ।
ಸಾಯಿ ಚರಣದಲಿ ಪ್ರೀತಿ ಬೆಳೆಯಿತು । ಅಘಟಿತ ಕೃತ್ಯ ಸಾಯಿಯದು ॥ 42

ಅವರು ಯಾವಾಗಲೂ ಮಾತನಾಡುವದು ಪ್ರಥಮ ಪುರುಷದಲಿ । ಆದರೆ ಆ ಮಾತು ಇರುವದು ಬೇರೆಯವರ ವಿಷಯದಲಿ ।
ಲಕ್ಷವಿಟ್ಟು ನೋಡುತಿದ್ದವರಿಗೆ ಹಗಲು ರಾತ್ರಿಗಳಲಿ । ಇದರ ಪ್ರತ್ಯಯ ಬರುತಿತ್ತು ॥ 43

ಮುಂದೆ ಬರಬರುತ ಅನುಭವ । ಬೆಳೆದಂತೆ ಬೆಳೆಯಿತು ಭಕ್ತಿ ಪ್ರೇಮ ವೈಭವ ।
ಇನ್ನೂ ಒಂದು ಅವರ ಅಭಿನವ । ಭಕ್ತಿ ಭಾವವ ಕೇಳಬೇಕು ॥ 44

ಒಂದಾನೊಂದು ದಿವಸ ಹೀಗೇ । ನಾರಾಯಣರಾಯರ ಗೆಳೆಯನಿಗೆ ।
ಚೇಳು ಕಡಿಯಿತು ಒಮ್ಮಿಂದೊಮ್ಮೆಗೇ । ಬಹಳ ವೇದನೆಯಾಗತೊಡಗಿತು ॥ 45

ದಂಶವಾದ ಸ್ಥಳಕ್ಕೆ ಹಚ್ಚಲು । ಬಾಬಾರ ಉದಿ ಬಹಳ ಉಪಯುಕ್ತವಿರಲು ।
ಆಗ ಅದನು ಹುಡುಕಹೋಗಲು । ಎಲ್ಲೆಲ್ಲೂ ಸಿಗಲೊಲ್ಲದು ॥ 46

ಸ್ನೇಹಿತನಿಗೆ ವೇದನೆ ಸಹಿಸಲಾಗದು । ಆದರೆ ಉದಿ ಮಾತ್ರ ಸಿಗಲೇ ವಲ್ಲದು ।
ಬಾಬಾರ ಭಾವಚಿತ್ರದ ದರ್ಶನ ತೆಗೆದುಕೊಂಡು । ಬಾಬಾರಿಗೆ ಬಹುಪರಿ ಬೇಡಿಕೊಂಡು ॥ 47

ಬಳಿಕ ಅಲ್ಲಿಯೇ ಆ ಭಾವಚಿತ್ರದ ಕೆಳಗೆ । ಸುಡುವ ಊದುಬತ್ತಿಯ ಬದಿಗೆ ।
ಬಿದ್ದಿತ್ತು ಒಂದಿಷ್ಟು ಬೂದಿ ಕೆಳಗೆ । ಅದನ್ನೇ ಉದಿ ಎಂದು ಭಾವಿಸಿದರು ॥ 48

ಅದನೊಂದು ಚಿಮಟಿ ತೆಗೆದುಕೊಂಡು । ದಂಶವಾದಲ್ಲಿ ತಿಕ್ಕುತಿದ್ದು ।
ಮುಖದಲಿ ಸಾಯಿಮಂತ್ರ ಜಪಿಸುತಿದ್ದು । ಭಾವವಿದ್ದಲ್ಲಿ ಅನುಭವ ॥ 49

ಕೇಳಿದರೆ ಆಶ್ಚರ್ಯವೆನಿಸೀತು । ರಕ್ಷೆಯ ಬೆರಳಿನಿಂದ ತಿಕ್ಕಿದಾಗ ಕ್ಷಣಹೊತ್ತು ।
ವೇದನೆಯೆಲ್ಲ ಹೊರಟು ಹೋಯಿತು । ಇಬ್ಬರಿಗೂ ಸಂತೋಷ ಉಕ್ಕಿತು ॥ 50

ಇದಾದರು ಊದು ಬತ್ತಿಯ ವಿಭೂತಿಯಾಗಿತ್ತು । ವ್ಯಥೆಯಾಗುವವನಿಗೆ ಹಚ್ಚಲಾಯಿತು ।
ದಾರಿಯಲಿದ್ದ ಮಣ್ಣೂ ಇದನೇ ತೋರಿಸಿತು । ಉದಿಯೆಂದು ಭಾವನೆಯಿಂದದ ಹಚ್ಚಿದಾಗ ॥51

ಮಣ್ಣಾದರೂ ಅದರ ಸಂಸರ್ಗ । ಯಾರಿಗೆ ಆಗಿದೆ ದೇಹಾಲಸ್ಯ ಅಥವಾ ರೋಗ ।
ಅವರಿಗಾಗಿ ಬೇರೆಯವರ ಮೇಲೆ ಮಾಡಿದರೂ ಅದರ ಪ್ರಯೋಗ । ಉಪಯೋಗವಾಗದಿರಲಾರದು ॥52

ಒಮ್ಮೆ ಒಬ್ಬ ಭಕ್ತನ ಮಗಳು । ಗ್ರಂಥಿ ಜ್ವರದಿಂದ ಬಳಲುತಿರಲು ।
ಈ ವಾರ್ತೆಯನು ಕೇಳಲು । ತಂದೆಗೆ ಚಿಂತೆ ಹತ್ತಿತು ॥ 53

ತಂದೆ ವಾಂದ್ರೆಯಲ್ಲಿ ವಾಸವಾಗಿರಲು । ಆ ಮಗಳು ಇರುತಿದ್ದಳಿನ್ನೊಂದು ಊರೊಳು ।
ಉದಿಯ ಸಂಗ್ರಹ ಹತ್ತಿರವಿಲ್ಲದಿರಲು । ನಾನಾಗೆ ಹೇಳಿ ಕಳಿಸಿದ ॥ 54

ತಾವು ಬಾಬಾರ ಪ್ರಾರ್ಥನೆ ಮಾಡಿ । ನನ್ನ ಚಿಂತೆಯನ್ನು ದೂರಮಾಡಿ ।
ಕಳಿಸಬೇಕು ಆಪ್ರಾಸಾದಿಕ ಉದಿ । ಎಂದು ಚಾಂದೋರಕರ ಕೇಳಿಕೊಂಡರು ॥ 55

ಈ ಸುದ್ದಿ ತಿಳಿಸಲು ಹೊರಟವಗೆ । ನಾನಾ ಸಿಕ್ಕರು ದಾರಿಯೊಳಗೆ ।
ಅವರು ತಮ್ಮ ಕುಟುಂಬದ ಜೊತೆಗೆ । ಕಲ್ಯಾಣಕ್ಕೆ ಹೊರಟಿದ್ದರು ॥ 56

ಠಾಣೆ ಶಹರದ ಸ್ಟೇಶನದ ಬಳಿಗೆ । ಇದ್ದಾಗ ಸುದ್ದಿ ಮುಟ್ಟಿತು ಅವರಿಗೆ ।
ಅವರ ಹತ್ತಿರ ಉದಿ ಇಲ್ಲವೆನುವಾಗ್ಯೆ । ಮಾರ್ಗದ ಮೃತ್ತಿಕೆಯನೆತ್ತಿದರು ॥ 57

ಅಲ್ಲಿಯೇ ನಿಂತುಕೊಂಡು ದಾರಿಯೊಳಗೆ । ಬೇಡಿಕೊಂಡರು ಸಾಯಿ ಸಮರ್ಥರಿಗೆ ।
ಹಿಂದೆ ನಿಂತ ಸ್ವಸ್ತ್ರೀಯ ಹಣೆಗೆ । ಉದಿಯೆಂದು ಅದನು ಹಚ್ಚಿದರು ॥ 58

ಇತ್ತ ಕಡೆಗಾ ಭಕ್ತ ಹೊರಟ । ಮಗಳಿದ್ದ ಊರಿನತ್ತ ।
ಅಲ್ಲಿ ಬಂದಾಗ ಅವನಿಗೆ ತಿಳಿಯಿತು ವೃತ್ತಾಂತ । ಅತ್ಯಂತ ಆನಂದವಾಯಿತವನಿಗೆ ॥ 59

ಮಗಳಿಗೆ ಮೂರು ದಿನ ಜ್ವರ । ಬಂದವು ಅತ್ಯಂತ ಪ್ರಖರ ।
ವೇದನಯಿಂದಾದಳು ಜರ್ಜರ । ನಿನ್ನೆಯೇ ಒಂದಿಷ್ಟು ಹಗುರಾಯಿತು ॥ 60

ವಿಚಾರಿಸಲಾಗಿ ಅದೇ ಆ ಸಮಯ । ಉದಿಯ ಹೆಸರಿನಲಿ ಮೃತ್ತಿಕೆಯ ।
ಹಿಡಿದು ಬೇಡಿಕೊಂಡಿದ್ದರು ಸಾಯಿಯ । ಆಗಿನಿಂದಲೇ ಹಗುರಾಗಿತ್ತು ॥ 61

ಇರಲಿ ಆ ಜಡ್ಡಿನ ಕಥೆಯೀಗ । ಸವಿಸ್ತರವಾಗಿ ಪ್ರಸಂಗ ಬಂದಾಗ ।
ಎಂದಾದರೂ ಹೇಳಬಹುದೀಗ । ಉದಿಯ ಸಲುವಾಗಿ ಮಾತ್ರ ಹೇಳಿದೆ ॥ 62

ಇದೇ ಈ ಚಾಂದೋರಕರರು । ಜಾಮನೇರಿನಲ್ಲಿ ಮಾಮಲೇದಾರರಾಗಿದ್ದರು ।
ನಿಜಭಕ್ತ ಕಲ್ಯಾಣ ತತ್ಪರ ಸಾಯಿಸಮರ್ಥರು । ಮಾಡಿದ ಚಮತ್ಕಾರವ ಕೇಳಿರಿ ॥ 63

ಈ ಉದಿಯ ಮಹಿಮೆ ಅಪಾರ । ಶ್ರೋತೃಗಳಾಗಿರಿ ಶ್ರವಣದಲಿ ತತ್ಪರ।
ಹೇಳುವೆನು ಇನ್ನೊಂದು ಚಮತ್ಕಾರ । ಆಶ್ಚರ್ಯವದ ಕೇಳಿ ಎನಿಸಬಹುದು ॥ 64

ಆಸನ್ನ ಪ್ರಸವಳವರ ದುಹಿತೆ । ಅಸಹ್ಯವಾಯಿತು ಪ್ರಸವವ್ಯಥೆ ।
ಜಾಮನೇರಿನಿಂದಲೇ ಕರೆಯತೊಡಗುತೆ । ಸಾಯಿ ಸಮರ್ಥರೇ ಎಂದಾರ್ತರಾಗಿ ॥ 65

ಜಾಮನೇರದಲ್ಲಿ ನಡೆದಿರುವ ಸಂಗತಿಯೆಲ್ಲ । ಶಿರಡಿಯಲಿ ಯಾರಿಗೂ ತಿಳಿದಿರಲಿಲ್ಲ ।
ಆದರೆ ಬಾಬಾ ತಿಳಿಯದುದು ಯಾವದೂ ಇರಲಿಲ್ಲ । ಸರ್ವಾಂರ್ಗತ ಸರ್ವಜ್ಞರವರು ॥ 66

ಭಕ್ತರ ಜೊತೆಗವರ ಏಕಾತ್ಮತೆ । ತಿಳಿದು ಅಲ್ಲಿ ನಡೆದ ಅವಸ್ಥೆ ।
ಸಾಯಿ ಸಮರ್ಥರ ಚಿತ್ತ ದ್ರವಿಸುತೆ । ಏನು ಮಾಡಿದರದ ಕೇಳಿ ॥ 67

ಉದಿ ಕಳಿಸಬೇಕೆಂದೆನಿಸಿತವರ ಮನಸಿಗೆ । ಅಷ್ಟರಲಿ ಗೋಸಾವಿ ರಾಮಗೀರ ಎಂಬವನಿಗೆ ।
ಎನಿಸತೊಡಗಿತವನ ಮನಸಿಗೆ । ತನ್ನೂರಿಗೆ ಹೋಗಬೇಕೆಂದು ॥ 68

ಅವನ ಊರು ಖಾನದೇಶದಲ್ಲಿದ್ದು । ಹೊರಟರೆಲ್ಲ ಸಿದ್ಧತೆ ಮಾಡಿಕೊಂಡು ।
ಮಶೀದಿಗೆ ಬಂದ ದರ್ಶನಕೆಂದು ಬಾಬಾರ ಚರಣದಲಿ ಆಗ ॥ 69

ಬಾಬಾ ದೇಹಧಾರಿಗಳಾಗಿದ್ದಾಗ್ಯೆ । ಮೊದಲು ಬೀಳದೆ ಅವರ ಚರಣಗಳಿಗೆ ।
ಯಾರೇ ಹೊರಟಿರಲಿ ಎಲ್ಲಿಗೇ । ಅನುಜ್ಞೆ ಪಡೆಯದೆ ಹೋಗುತಿರಲಿಲ್ಲ ॥ 70

ಇರಲಿ ಲಗ್ನ ಅಥವಾ ಮೌಂಜೀ ಬಂಧನ । ಮಂಗಲಕಾರ್ಯ ವಿಧಿವಿಧಾನ ।
ಕಾರ್ಯಕಾರಣ ಅಥವಾ ಪ್ರಯೋಜನ (ವಿಧಿವಿಧಾನ) । ಬಾಬಾರ ಅನುಮೋದನೆ ಬೇಕಾಗುತಿತ್ತು ॥ 71

ಪಡೆಯದೆ ಅವರ ಅನುಜ್ಞಾಪನ । ಉದೀ ಪ್ರಸಾದ ಆಶೀರ್ವಚನ ।
ಆಗಲಾರದು ಕಾರ್ಯನಿರ್ವಿಘ್ನ । ಎಲ್ಲರ ಭಾವನೆ ಹೀಗಿರುವದು ॥ 72

ನಡೆಯುತಿತ್ತು ಆ ಊರಲ್ಲೆಲ್ಲ ಈ ಪ್ರಕಾರ । ಅದರ ಪ್ರಕಾರ ರಾಮಗೀರ ।
ಕಾಲಿಗೆರಗಲು ಬಾಬಾರ ।ಮತ್ತು ಹೊರಡಲು ಅನುಜ್ಞೆ ಬೇಡಲು ॥ 74

ಹೇಳಿದ ಬಾಬಾ ಖಾನದೇಶದವರೆಗೆ । ಹೋಗಿ ಬರುವೆ ನಮ್ಮ ಊರಿಗೆ ।
ಉದಿ ಆಶೀರ್ವಾದಗಳ ಕೊಡಬೇಕೆನಗೆ । ಅನುಜ್ಞೆಯನೂ ಹೊರಡಲು ॥ 75

ಮೊದಲು ಹೋಗು ಜಾಮನೇರಿಗೆ । ಅಲ್ಲಿ ಇಳಿದುಕೋ ನಾನಾರ ಮನೆಯೊಳಗೆ ।
ಬಳಿಕ ನೀ ಹೋಗು ಊರಿಗೆ । ಅಲ್ಲಿ ಅವರ ಸಮಾಚಾರ ತೆಗೆದುಕೊಂಡು ॥ 76

ಹೇಳಿದರು ಮಾಧವರಾವ ದೇಶಪಾಂಡೆಯವರಿಗೆ । ಕಾಗದದ ಮೇಲೆ ಬರೆದುಕೊಡವನಿಗೆ ।
ಅಡಕರರ ಆರತಿಯನು ನಾನಾಗೆ । ಗೋಸಾವಿಯವರ ಕೈಯಲ್ಲಿ ಕೊಡಲವರಿಗೆ ॥ 77

ಬಳಿಕ ಗೋಸಾವಿಗೆ ಉದಿ ಕೊಟ್ಟರು । ಇನ್ನಿಷ್ಟನ್ನು ಒಂದು ಹಾಳಿಯಲ್ಲಿ ಕಟ್ಟಿದರು ।
ಅದನು ಬಾಬಾ ನಾನಾಗೆ ಕಳಿಸಿದರು । ಗೋಸಾವಿಯ ಕೈಯಿಂದ ॥ 78

ಮತ್ತೆ ಬಾಬಾ ನುಡಿದರವಗೆ । ಈ ಆರತಿ ಹಾಡು ಮತ್ತು ಚೀಟಿಗಳನು ಕೊಡು ನಾನಾಗೆ ।
ಕೇಳಿ ಅವರ ಕುಶಲ ಕ್ಷೇಮಗಳ ಬಗ್ಗೆ । ಆಮೇಲೆ ನಿನ್ನೂರಿಗೆ ಹೋಗು ॥ 79

ರಾಮ ಜನಾರ್ಧನರು ಬರೆದ । ಆರತಿ, ಆರತೀ ಜ್ಞಾನಾರಾಜಾ ಎಂಬುದ ।
ಮತ್ತು ಆರತಿ ಸಾಯಿಬಾಬಾದ । ಅಂತಸ್ತೆರಡರದೂ ಸಮಾನವಿದೆ ॥ 80

ರಾಮಾ ಜನಾರ್ಧನ ಜನಾರ್ಧನ ಭಕ್ತ । ಮಾಧವ ಅಡಕರ ಸಾಯಿ ಪದಾಂಕಿತ ।
ಪ್ರಸಾದಪೂರ್ಣ ರಚನೆಗಳೆರಡೂ ಅತ್ಯಂತ । ಅವಿಲ್ಲದ ಭಜನೆ ಅಪೂರ್ಣವಿರುವದು ॥81

ಇರಲಿನ್ನು ಬಾಬಾರಿಗೆ ಹಿಡಿಸಿದ । ಶ್ರೋತೃಗಳೇ ಕೇಳಿರಿ ಸಾದ್ಯಂತ ಆರತಿಪದ ।
ಉದಿಯ ಜೊತೆ ಬಾಬಾ ಕಳಿಸಿದುದ । ಮುಂದೆ ಫಲಶ್ರುತಿಯ ಕಾಣುವಿರಿ ॥ 82

## ಆರತಿ

ಆರತಿ ಸಾಯಿ ಬಾಬಾಗೆ, ಸೌಖ್ಯ ನೀಡುವನೀತ ಜೀವಿಗೆ ।
ಪಾದಧೂಳಿಯ ಕೆಳಗೆ, ಕೊಡು ಆಶ್ರಯ ನೀ ದಾಸಗೆ ॥ ಆರತಿ ॥ಪಲ್ಲ॥

ಸುಟ್ಟು ಭಸ್ಮ ಮಾಡಿ ಕಾಮವ, ಸ್ವಸ್ವರೂಪದಿ ಲೀನನಿರುವೆ ।
ಮುಮುಕ್ಷುಗಳಿಗೆ ತೋರುವ, ನಿಜ ದೃಷ್ಟಿಲೀ ಶ್ರೀರಂಗನ ॥ 1

ಯಾರ ಮನದಲೆಂತು ಭಾವ, ಅದರಂತೆ ಅನುಭವ ।
ಧಯಾಘನನೇ ನೀ ತೋರುವೆ, ಹೀಗಿರುವದು ನಿನ್ನ ಮಾಯ ॥ 2

ನಿಮ್ಮ ನಾಮವ ಜಪಿಸಲು, ದೂರಾಗುವವು ಭವತಾಪಗಳು ।
ಅಗಾಧವೀ ತವಕಾರ್ಯ, ಅನಾಥಗೆ ತೋರುವೆದಾರಿಯ ॥ 3

ಕಲಿಯುಗದಲಿ ಅವತಾರ, ಸಗುಣ ಬ್ರಹ್ಮವೇ ಸಾಚಾರ ।
ಅವತಾರ ತಾಳಿರುವೆ, ಸ್ವಾಮಿ ದತ್ತ ದಿಗಂಬರ । ಸಾಯಿ ದಿಗಂಬರ ॥ 4

ವಾರಕ್ಕೊಮ್ಮೆ ಗುರುವಾರ, ಭಕ್ತರು ಬರುವರು ದರುಶನಕೆ ।
ಪ್ರಭುಪಾದವ ಕಾಣಲು, ಭವಭಯವ ನಿವಾರಿಸಲು ॥ 5

ನನ್ನ ಸಂಪತ್ತಿನ ಭಾಂಡಾರ, ನಿನ್ನ ಚರಣ ರಜಸೇವೆ ।
ಬೇಡಿಕೊಳ್ಳುವೆ ಇದನೇ, ನಿಮ್ಮಲಿ ದೇವರ ದೇವ ॥ 6

ದೀನ ಚಾತುಕದ ಬಯಕೆ, ನಿಜ ಸುಖ ಜಲಪಾನಕೆ ।
ಮಾಧವನ ಮನ ತಣಿಸು, ಉಳಿಸಿಕೊಡು ನಿನ್ನ ಮಾತು ॥ 7
ಆರತಿ ಸಾಯಿ ಬಾಬಾಗೆ ॥

ಗೋಸಾವಿ ನುಡಿದ ಬಾಬಾರಿಗೆ । ಎರಡೇ ರೂಪಾಯಿಗಳಿವೆ ನನ್ನ ಬಳಿಗೆ ।
ಇಷ್ಟರಲಿ ನಾ ಹೇಗೆ । ಜಾಮನೇರಕೆ ಮುಟ್ಟುವೆ ॥ 83

ಬಾಬಾ ಎಂದರು"ನೀ ಹೋಗು ಸುಮ್ಮನೆ । ನಿನ್ನ ವ್ಯವಸ್ಥೆಯಾಗುವದು ತಂತಾನೇ" ।
ಸಾಯಿ ಚರಣದಲಿಟ್ಟು ವಿಶ್ವಾಸವನೇ । ಗೋಸಾವಿ ಊರಿಗೆ ಹೊರಟನು ॥ 84

ಆಜ್ಞೆಯ ವಂದಿಸಿ ಬಾಪೂಗೀರ । ತಿಳಿದುಕೊಂಡು ಬಾಬಾರ ವಿಚಾರ ।
ಉದೀಪ್ರಸಾದದೊಡನೆ ಸತ್ವರ । ಕಾರ್ಯತತ್ಪರನಾಗಿ ಹೊರಟ ॥ 85

ಈಗಿನಂತಾಗ ಜಾಮನೇರಕೆ । ಉಗಿಬಂಡಿ ಇರಲಿಲ್ಲ ಪ್ರವಾಸಕೆ ।
ಸೌಲಭ್ಯಗಳೂ ಇರಲಿಲ್ಲ ಹೋಗುವದಕೆ । ಚಿಂತೆಯಾಯಿತು ಗೋಸಾವಿಗೆ ॥ 86

ಉಗಿಬಂಡಿಯಲ್ಲಿ ಕುಳಿತಿದ್ದು । ಪ್ರವಾಸಿಗಳು ಜಳಗಾವಿಗೆ ಇಳಿದು ।
ಅಲ್ಲಿಂದ ಹೋಗಬೇಕಾಗಿತ್ತು ನಡೆದು । ಮುಂದಿನ ಮಾರ್ಗವನ್ನೆಲ್ಲ ॥ 87

ಒಂದು ರೂಪಾಯಿ ಹದಿ ನಾಲ್ಕು ಆಣೆ । ಕೊಟ್ಟುಕೊಂಡನು ಉಗಿಬಂಡಿಯ ತಿಕೀಟನ್ನೇ ।
ಇನ್ನವನ ಬಳಿ ಉಳಿದದ್ದು ಎರಡೇ ಆಣೆ । ಮುಂದೆ ಹೇಗೆ ಹೋಗಬೇಕು ॥ 88

ಗೋಸಾವಿ ಚಿಂತೆ ಮಾಡುತ ಹೀಗೆ । ಇಳಿದ ಜಳಗಾವ ಸ್ಟೇಶನ್ನಿಗೆ ।
ತೀಕೀಟನಿತ್ತು ಬಂದ ಹೊರಗೆ । ದೂರದಲೊಬ್ಬ ಸಿಪಾಯಿಯ ಕಂಡ ॥ 89

ಆ ಸಿಪಾಯಿ ಹುಡುಕುತ್ತ ಬಂದು । ಆ ಪ್ರವಾಸಿಯ ಮುಂದೆ ನಿಂದು ।
ಶಿರಡಿಯ ಬಾಪೂಗೀರನು ಯಾರೆಂದು । ಹೇಳಬೇಕೆಂದು ಕೇಳಿದನು ॥ 90

ಆ ಸಿಪಾಯಿಯು ಕೇಳುತಿದ್ದುದು । ತನ್ನನ್ನೇ ಎಂದು ತಿಳಿದು ।
ಗೋಸಾವಿ ಅವನ ಮುಂದೆ ಬಂದು । ನಾನೇ ಅವನು ಏನು ಬೇಕಿತ್ತು ಎಂದನು ।।91

ಅವನೆಂದ ನನ್ನ ನಿಮಗಾಗಿಯೇ ಎಂದು । ಚಾಂದೋರಕರರು ಕಳಿಸಿದ್ದು ।
ಬೇಗ ನಡೆಯಿರಿ ಟಾಂಗೆಯಲಿ ಕುಳಿತುಕೊಂಡು । ನಿಮ್ಮದೇ ದಾರಿ ಕಾಯುತಿರುವರು ।।92

ಅತ್ಯಂತ ಆನಂದವಾಯಿತು ಬಾಪೂಗೀರನಿಗೆ । ಶಿರಡಿಯಿಂದ ಸುದ್ದಿ ಬಂದಿರಬೇಕು ನಾನಾಗೆ ।
ಆದರಿಂದ ಟಾಂಗೆ ಬಂದಿದೆ ಹೊತ್ತಿಗೆ ಸರಿಯಾಗೇ । ಇನ್ನು ಚಿಂತೆಯೇ ಕಳೆಯಿತು ।। 93

ಸಿಪಾಯಿ ಬಹಳ ಚತುರ ಕಂಡ । ಗಡ್ಡ ಕಲ್ಲೇ ಮೀಸೆಗಳ ಬಿಟ್ಟಿದ್ದ ।
ಒಪ್ಪಾಗಿ ವಿಜಾರ ತೊಟ್ಟಿದ್ದ । ಟಾಂಗಾ ಕೂಡ ಸುಂದರವಾಗಿತ್ತು ।। ವ94

ಅಂದವಿತ್ತು ಟಾಂಗೆಯಂತೆ ಕುದುರೆಯೂ । ಅವೇನು ಬಾಡಿಗೆಗೆ ಬಂದಿದ್ದುವೆಯಾ ? ।
ಕಾರ್ಯ ಉತ್ಸಾಹ ಕಡಿಮೆಯಾ । ಉಳಿದೆಲ್ಲ ಟಾಂಗೆಗಳ ಮುಂದಕೋಡಿತು ಇದು ।। 95

ರಾತ್ರಿ ಹನ್ನೆರಡು ಗಂಟೆಗೆ । ವೇಗವಾಗಿ ಹೊರಟ ಟಾಂಗೆ ।
ನಿಲ್ಲಿಸಿದನು ಅದ ಬೆಳಿಗ್ಗೆ । ಹಳ್ಳದ ಮಗ್ಗುಲಿಗೆ ದಾರಿಯಲಿ ।। 96

ಆಗ ಟಾಂಗಾದವ ಕುದುರೆಯನ್ನ । ಬಿಚ್ಚಿದ ಕುಡಿಯಲೆಂದು ನೀರನ್ನ ।
ಹೇಳಿದ ಬರುವೆನು ಇರಿ ಒಂದೇ ಕ್ಷಣ । ಬಳಿಕ ಸುಖವಾಗಿ ಫಲಹಾರ ಮಾಡುವ ।। 97

ಇದೋ ಒಂದಿಷ್ಟು ನೀರು ತಂದೆ । ತಿನ್ನುವಾ ಇನ್ನು ಮಾವು ಮತ್ತು ಪೇಢೆ ।
ಮತ್ತೆ ಗುಳಪಾಪಡಿಯೂ ಇದೆ । ಕುದುರೆಯ ಹೂಡಿ ನಡೆಯುವಾ ಮತ್ತೆ ।। 98

ಗಡ್ಡ ಉಡುಪು ಎಲ್ಲ ಮುಸಲ್ಮಾನರದು । ಕೇಳಿ ಅವನು ಮಾತಾಡುವದು ।
ರಾಮಗೀರನ ಮನದಿ ಶಂಕೆ ಬಂದು । ಈ ಫಲಹಾರ ಹೇಗೆ ತಿನಬೇಕು ಎಂದು ।।99

ಎಂದವನ ಜಾತಿಯ ಕೇಳಿದಾಗ್ಯೆ । ಸಂಶಯ ಬಂತೇಕೆ ನಿನಗೆ ।
ನಾನು ಹಿಂದೂ ಗರವಾಲ ಕ್ಷತ್ರಿಯನಿರುವಾಗ್ಯೆ । ಜಾತಿಯಿಂದ ರಜಪೂತನು ।। 100

ನಿನಗಾಗಿಯೇ ಈ ಫಲಾಹಾರವನ್ನಾದರೂ । ನಾನಾರೇ ನನ್ನ ಹತ್ತಿರ ಕೊಟ್ಟಿರುವರು ।
ಒಂದಿಷ್ಟೂ ಮನದಿ ಶಂಕಿಸದಿರು । ಸ್ವಸ್ಥಚಿತ್ತದಿಂದ ತಿನ್ನಿದನು ।। 101

ಹೀಗೆ ವಿಶ್ವಾಸ ಉಂಟಾದಾಗ । ಇಬ್ಬರೂ ಫಲಾಹಾರ ತಿಂದರಾಗ ।
ಬಳಿಕ ಟಾಂಗೆಯಲಿ ಮತ್ತೆ ಹೊರಟರಾಗ । ಪ್ರವಾಸ ಮುಗಿದಾಗ ಅರುಣೋದಯ ಆಗಿತ್ತು ।। 102

ಟಾಂಗಾ ಊರು ಪ್ರವೇಶಿಸಿತು । ಆಗ ನಾನಾರ ಕಛೇರಿ ಕಾಣಹತ್ತಿತು ।
ಕುದುರೆಗಳೂ ನಿಧಾನಿಸಿದವು ಒಂದಿಷ್ಟು । ಆನಂದ ಪಟ್ಟನು ರಾಮಗೀರ ।। 103

ಗೋಸಾವಿ ಲಘುಶಂಕೆಗಾಗಿ । ಕುಳಿತುಕೊಂಡ ಒಂದೆಡೆಗೆ ಹೋಗಿ ।
ತಿರುಗಿ ಬಂದು ಆ ಸ್ಥಳದಲ್ಲಿ ನೋಡಲಾಗಿ । ಎಂಥ ಆಶ್ಚರ್ಯ ಸಂಭವಿಸಿತು ನೋಡಿ ॥ 104

ಅಲ್ಲಿ ಟಾಂಗಾ ಇಲ್ಲ ಕುದುರೆಯೂ ಇಲ್ಲ । ಟಾಂಗೆಯ ಹೊಡೆಯುವವನೂ ಅಲ್ಲಿ ಇಲ್ಲ ।
ಮತ್ತಾರೂ ಅಲ್ಲಿ ಆಗ ಕಾಣಿಸಲಿಲ್ಲ । ಸ್ಥಳವು ಬರಿದಾಗಿದ್ದನ್ನು ಕಂಡ ॥ 105

ಎಂಥ ಚಮತ್ಕಾರ ಇದು । ನನ್ನನ್ನು ಇಲ್ಲಿಯವರೆಗೆ ಕರೆ ತಂದು ।
ಇಷ್ಟರಲ್ಲಿಯೇ ಎಲ್ಲಿ ಮಾಯವಾಗಿರಬಹುದು । ರಾಮಗೀರನಿಗೆ ವಿಚಾರ ಮನದಿ ॥ 106

ಬುವಾ ಕಚೇರಿಯ ಒಳಗೆ ಹೋಗಿ । ನಾನಾ ನಿಜಗೃಹದಲಿರುವರೆಂದು ತಿಳಿಯಲಾಗಿ ।
ಭೆಟ್ಟಿಯಾಗಲು ಉತ್ಕಂಠಿತರಾಗಿ । ಹೊರಡಲು ಸಿದ್ಧರಾದರಾಗ ॥ 107

ಬುವಾ ದಾರಿಯಲ್ಲಿ ಕೇಳುತ್ತ ಹೊರಟಿದ್ದ । ಸಹಜವಾಗಿ ಮನೆ ಕಂಡು ಹಿಡಿದ ।
ಎದುರುಗಡೆ ಕಟ್ಟೆಯ ಮೇಲೆ ಕುಳಿತುಕೊಂಡ । ನಾನಾ ಒಳಗೆ ಕರೆದರವನ ॥ 108

ಪರಸ್ಪರರು ಭೆಟ್ಟಿಯಾಗಿದ್ದು । ಉದೀ ಆರತಿಪದಗಳ ಹೊರಗೆ ತೆಗೆದು ।
ನಾನಾರೆದುರಿಗೆ ಇಟ್ಟನದು । ಸಂಪೂರ್ಣ ಸಂಗತಿಯ ತಿಳಿಸಿದ ॥ 109

ಆಶ್ಚರ್ಯವೆಂದರೆ ಈ ಉದಿ ಆರತಿಗಳು । ಬಂದ ಕಾಲದಲಿಯೇ ನಾನಾರ ಮಗಳು ।
ಪ್ರಸವ ವಿಲಂಬವಾಗಿ ಒದ್ದಾಡುತ್ತಿದ್ದಳು । ಅತಿಶಯ ಕಷ್ಟದಲಿದ್ದಳು ॥ 110

ಆ ಸಂಕಟ ನಿವಾರಣೆಗೆಂದು । ನವಚಂಡಿ ಹೋಮ ಹೂಡಿದ್ದು ।
ಸಪ್ತಶತಿಯ ಪಾಠಪಠಿಸುತಿದ್ದುದು । ನೋಡಿ ಅಚ್ಚರಿಪಟ್ಟ ಗೋಸಾವಿ ॥ 111

ಅಕಲ್ಪಿತವಾಗಿ ಹಸಿದವನೆದುರಿಗೆ । ಪಕ್ವಾನ್ನಗಳಿಂದ ತುಂಬಿದ ತಟ್ಟೆ ಬಂದ ಹಾಗೆ ।
ಅಥವಾ ತೃಷಿತ ಚಕೋರನ ಮುಖದೊಳಗೆ । ಅಮೃತ ಬಿದ್ದಂತಾಯಿತು ನಾನಾಗೆ ॥ 112

ತಮ್ಮ ಹೆಂಡತಿಯ ಕರೆದರು । ಮಗಳಿಗೆ ಕುಡಿಸಲು ಉದಿಯ ಕೊಟ್ಟರು ।
ತಾವು ಆರತಿಯ ಅನ್ನತೊಡಗಿದರು । ಆ ಕಾಲಕೆ ಸಂತಸದಿ ನಾನಾ ॥ 113

ಕಳೆಯಿತೋ ಇಲ್ಲವೋ ಕ್ಷಣಹೊತ್ತು । ಅಷ್ಟರಲ್ಲಿಯೇ ಒಳಗಿನಿಂದ ಕರೆ ಬಂತು ।
ಮುಖದಿ ಬಿದ್ದ ಕ್ಷಣ ಉದಿಯ ತೊಟ್ಟು । ಆರಾಮವಾಯಿತು ಮಗಳಿಗೆ ॥ 114

ಕೂಡಲೇ ಕ್ಲೇಶ ನಿರ್ಮುಕ್ತಳಾದ । ಮಗಳು ಪ್ರಸವಿಸಿದಳು ನಿರ್ವಿಘ್ನದಿಂದ ।
ಎಲ್ಲ ಸರಿಯಾಗಿ ಬಿಡುಗಡೆಯಾದದ್ದರಿಂದ । ಎಲ್ಲರ ಚಿಂತೆ ದೂರಾಯಿತು ॥ 115

ಆ ಟಾಂಗಾದವ ಎಲ್ಲಿ ಹೋದ । ಇಲ್ಲಿಯೂ ಅವ ಕಾಣದಾದ ।
ರಾಮಗೀರ ನಾನಾರ ಕೇಳಿದ । ನೀವು ಕಳಿಸಿದ ಟಾಂಗಾ ಎಲ್ಲಿದೆ ॥ 116

ನಾನಾ ಎಂದರು ನಾ ಕಳಿಸಿಲ್ಲ । ಯಾವ ಟಾಂಗಾ ನನಗೊಂದೂ ಗೊತ್ತಿಲ್ಲ ।
ನೀವು ಬರುವದೂ ನಮಗೆ ಗೊತ್ತಿರಲಿಲ್ಲ । ಟಾಂಗಾ ಏತಕ್ಕೆ ಕಳಿಸಲಿ ॥ 117

ಆಮೇಲೆ ಬುವಾ ಟಾಂಗಾದ ಕಥೆಯನು । ಆಮೂಲಾಗ್ರವಾಗಿ ಎಲ್ಲರಿಗೂ ಹೇಳಿದನು ।
ಬಾಬಾರ ವಾತ್ಸಲ್ಯವನು ಕಂಡು । ವಿಸ್ಮಯವಾಯಿತು ನಾನಾರಿಗೆ ॥ 118

ಎಲ್ಲಿಯ ಟಾಂಗಾ, ಆಳು ಎಲ್ಲಿಯದು । ಶ್ರೀ ಸಾಯಿ ಸಮರ್ಥರೇ ಈ ನಾಟಕವಾಡಿದ್ದು ।
ಸಂಕಟ ಸಮಯದಲಿ ಓಡಿ ಬಂದು । ಭಕ್ತರ ಕರೆಗೆದುರು ನಿಲ್ಲುವ ॥ 119

ಇನ್ನು ಹಿಂದಿನ ಕಥೆಯ ಎಳೆ ಹಿಡಿದು । ಕಥೆಯ ಸಾಗಿಸುವಾ ಮುಂದು ।
ಮುಂದೆ ಕೆಲ ಕಾಲ ಕಳೆದು । ಬಾಬಾರೂ ನಿರ್ವಾಣ ಹೊಂದಿದರು ॥ 120

ಸನ್ ಹತ್ತೊಂಬತ್ತು ನೂರಾ ಹದಿನೆಂಟು । ವಿಜಯಾದಶಮಿ ದಸರೆಯ ದಿನದಂದು ।
ಬಾಬಾ ಆ ಶುಭ ದಿನವ ಕಂಡು । ನಿಜ ದೇಹವನಿಟ್ಟರು ಧರೆಗೆ ॥ 121

ನಾರಾಯಣರಾಯರು ಅದಕ್ಕೂ ಮೊದಲಿಗೆ । ಬಾಬಾ ಇನ್ನೂ ದೇಹಧಾರಿಗಳಾಗಿದ್ದಾಗ್ಯೆ ।
ದರ್ಶನ ಪಡೆದಿದ್ದರು ಎರಡು ವೇಳೆಗೆ । ಬಳಿಕ ಸಮಾಧಿಯಾಯಿತು ಬಾಬಾರದು ॥ 122

ಸಮಾಧಿಗೆ ಆಗಿದ್ದವು ಮೂರು ವರ್ಷಗಳು । ದರ್ಶನೇಚ್ಛೆ ಬಲವಾಗಿರಲು ।
ಆದರೂ ಯೋಗ್ಯ ಕಾರಣ ಸಿಗದು ಬರಲು । ಅದರಿಂದ ಅಧೀರರಾದರು ॥ 123

ಸಮಾಧಿಯಾಗಿ ಒಂದು ವರ್ಷಕಳೆದಾಗಿನಿಂದ । ನಾರಾಯಣರಾಯರು ಬಳಲುತಿದ್ದರು ವ್ಯಾಧಿಯಿಂದ
।ಎಲ್ಲ ಉಪಾಯಗಳು ಔಷಧೋಪಚಾರದ । ಮುಗಿದರೂ ಗುಣವಾಗಲಿಲ್ಲ ॥ 124

ವ್ಯಾಧಿಯಿಂದ ಸೋತು ಹೋಗಿದ್ದರೂ । ಹಗಲಿರುಳೂ ಬಾಬಾರ ಧ್ಯಾನ ಮಾಡುತಿದ್ದರು ।
ಮರಣವಿರುವದೇ ಗುರುರಾಯನಿಗೆಂದಾದರೂ । ನಾರಾಯಣಗೆ ದರ್ಶನವಿತ್ತರು ॥ 125

ಚಿಂತೆಯನೇನೂ ಮಾಡಬೇಡ । ಗುಣವಾಗುವದು ನಾಳೆಯಿಂದ ।
ಒಂದು ವಾರ ಹೋಗಲಿ ಕಳೆದು । ನಿನ್ನಷ್ಟಕ್ಕೇ ಎದ್ದು ಕುಳಿತುಕೊಳ್ಳುವಿ ॥ 126

ರಾತ್ರಿಯಲಿ ಬಿತ್ತು ಕನಸೊಂದು । ಬಾಬಾ ಒಂದು ಗುಹೆಯೊಳಗಿಂದ ಬಂದು ।
ನಾರಾಯಣರಾಯರನು ಕಂಡು । ಆಶ್ವಾಸನವನಿತ್ತರು ಹೀಗೆ ॥ 127

ಬಳಿಕ ಎಂಟು ದಿನ ಕಳೆಯಿತು । ಬಾಬಾರು ಹೇಳಿದಂತೆಯೇ ಎಲ್ಲ ನಡೆಯಿತು ।
ನಾರಾಯಣರಾಯರು ಎದ್ದು ಕುಳಿತು । ಸಮಾಧಾನಹೊಂದಿದರು ಮನದಲಿ ॥ 128

ಕೆಲವು ದಿನಗಳು ಕಳೆಯಲು ಹೀಗೆ । ನಾರಾಯಣರಾಯರು ಬಂದರು ಶಿರಡಿಗೆ ।
ದರ್ಶನ ತೆಗೆದುಕೊಳ್ಳಲು ಸಮಾಧಿಗೆ । ಆಗ ಈ ಕಥೆಯ ಹೇಳಿದರು ॥ 129

ದೇಹಧರಿಗಳೆಂದು ಜೀವಂತ । ಸಮಾಧಿಸ್ತರಾದವರು ಹೇಗೆ ಮೃತ ।
ಸಾಯಿ ಜನನ ಮರಣಾತೀತ । ಸ್ಥಿರಚರಗಳಲಿ ತುಂಬಿಹರು ಯಾವಾಗಲೂ ॥ 130

ಬೆಂಕಿ ಕಟ್ಟಿಗೆಯೊಳಗೆ । ಕಾಣದಿದ್ದರೂ ಇರುವದು ಗುಪ್ತವಾಗೇ ।
ಪ್ರದೀಪ್ತವಾಗುವದು ಘರ್ಷಣೆ ಮಾಡಿದಾಗ್ಯೆ । ಈ ಸಾಯಿ ಹಾಗೇ ಭಕ್ತರಿಗಾಗಿ ॥131

ಒಮ್ಮೆ ಪ್ರೇಮದಿಂದ ನೋಡಿದರೆ ಸಾಕು । ಆಜನ್ಮ ಅವರ ಅಂಕಿತರಾಗಿರಬೇಕು ।
ಕೇವಲ ಅನನ್ಯ ಭಕ್ತಿ ಇದ್ದರೆ ಸಾಕು । ಅವನ ಕರೆಗೋಗೊಡುವ ಸಾಯಿ ॥ 132

ಸ್ಥಲ ಕಾಲಗಳೊಂದೂ ಬೇಕಿಲ್ಲದ ಅವ । ಯಾವಾಗಲೂ ನಿಂತೇ ಇರುವ ।
ಎಲ್ಲಿಂದ ಹೇಗೆ ಲೀಲೆ ತೋರುವ । ಅದನಾರೂ ಬಲ್ಲವರಿಲ್ಲ ॥ 133

ಒಂದೊಂದು ಆಟವನು ಹೂಡುವನು ಹೀಗೆ । ಮನದಿ ಕುತರ್ಕಗಳು ಬರಬೇಕು ನಾನಾ ಬಗೆ ।
ಅವನ ಚರಣದಲಿ ದೃಷ್ಟಿ ನಿಂತಾಗ್ಯೆ । ಧ್ಯಾನ ಧಾರಣೆಗಳು ಬೆಳೆಯುವವು ॥ 134

ಏಕಾಗ್ರಮನವಾದಾಗ ಹೀಗೆ । ತೊಡಗುವದು ಅತ್ಯಂತ ಸಾಯಿ ಚಿಂತನದೊಳಗೆ ।
ಇದೇ ಬೇಕಾಗಿರುವದು ಸಾಯಿಗೆ । ಅದರಿಂದ ಕಾರ್ಯನಿರ್ವಿಘ್ನವಾಗುವದು ॥ 135

ಇದಕೆ ವ್ಯವಹಾರಕ್ಕೇನೂ ತಡೆಯಿಲ್ಲ । ತಮ್ಮಷ್ಟಕ್ಕೇ ತೊಲಗುವವು ಹವ್ಯಾಸಗಳೆಲ್ಲ ।
ಕಾರ್ಯವು ಅಪ್ರಯಾಸವಾಗಿ ಆಗುವದೆಲ್ಲ । ಮನವನೀ ರೀತಿ ರೂಢಿಸಿಕೊಳಲು ॥ 136

ಕರ್ಮಭೂಮಿಗೆ ಬಂದಿದೆ ದೇಹ । ಕರ್ಮಗಳು ನಡೆಯುವವು ನಿಃಸಂದೇಹ ।
ಸ್ತ್ರೀಪುತ್ರ-ವಿತ್ತ ಗೇಹ । ಯಥೇಚ್ಛ ಪರಿಗ್ರಹವಾಗಲಿ ॥ 137

ಆಗುವದನು ಆಗಲು ಬಿಡಿ ಯಥೇಷ್ಟ । ಗುರುಚಿಂತನವೇ ನಮ್ಮ ಅಭೀಷ್ಟ ।
ಸಂಕಲ್ಪ ವಿಕಲ್ಪಗಳಾಗುವವು ನಷ್ಟ । ಸಂಚಿತ ಅನಿಷ್ಟ ಕಳೆಯುವದು ॥ 138

ನೋಡಿಕೊಂಡು ಭಕ್ತನ ಭಾವ । ಹೇಗೆ ಸಾಯಿ ಮಹಾನುಭಾವ ।
ಭಕ್ತರಿಗೆ ತೋರುತಿದ್ದರೊಂದೊಂದು ಅನುಭವ । ಅದರಿಂದ ಭಕ್ತಿಯ ವೈಭವ ಬೆಳೆಸುತಿದ್ದರು ॥ 139

ಬೇಕಾದ ಹಾಗೆ ವೇಷ ಧರಿಸುವರು । ಬೇಕೆನಿಸಿದಲ್ಲಿ ಪ್ರಕಟರಾಗುವರು ।
ಭಕ್ತ ಕಲ್ಯಾಣಕ್ಕೆ ಎಲ್ಲೆಲ್ಲಿಯೋ ತಿರುಗುವರು । ಮಾತ್ರ ಶಿಷ್ಯನು ಭಾವಾರ್ಥಿಯಾಗಿರಬೇಕು ॥140

ಇನ್ನೊಂದು ಕಥೆಯನು ಇದರ ಹಾಗೇ । ಕೇಳಿರಿ ಹೇಳುವೆ ತಮ್ಮೆಲ್ಲರಿಗೆ ।
ಸಂತರು ತಮ್ಮ ಭಕ್ತರಿಗಾಗಿ ಹೇಗೆ । ಹಗಲಿರುಳೆನ್ನದೆ ಶ್ರಮಿಸುವರು ॥ 141

ಕಿವಿಯ ಪರದೆಯ ದೂರ ಮಾಡಿ । ಹೃದಯ ಮಂದಿರವ ತೆರೆದಿಡಿ ।
ಈ ಕಥೆಯನೊಳಗೆ ಸೇರಗೊಡಿ । ಭವ ಭಯದ ಅಡ್ಡಿಯು ದೂರವಾಗುವದು ॥142

ಇದೀಗ ಮುಗಿದಿರುವ ಪ್ರಸಿದ್ಧ । ಪರದೇಶೀಯರ ಯುದ್ಧ ।
ಮಾಡಹತ್ತಿದರು ಲಷ್ಕರವ ಸಿದ್ಧ । ಶತ್ರುಗಳ ವಿರುದ್ಧ ಸಂಗ್ರಾಮಕೆ ॥ 143

ಆಂಗ್ಲಸತ್ತೆಯ ರಾಜ್ಯಾಧಿಕಾರಿಗಳು । ಈ ನಮ್ಮ ಭರತ ಭೂಮಿಯೊಳು ।
ಲಷ್ಕರ ಭರತೀ ಊರೊಳು । ಮಾಡುತಿದ್ದರು ಎಲ್ಲೆಡೆಗೆ ॥ 144

ಸನ ಹತ್ತೊಂಬತ್ತು ನೂರಾ ಹದಿನೇಳನೇ ವರ್ಷದಿ । ಒಬ್ಬ ಭಕ್ತನದು ಬಂದಿತು ಸರದಿ ।
ಠಾಣೆ ಜಿಲ್ಹೆಯಲ್ಲಾಯಿತು ನೇಮಕಾತಿ । ಆಗೊಂದು ವಿಚಿತ್ರ ಕಥೆ ನಡೆಯಿತು ॥ 145

ಅಪ್ಪಾ ಸಾಹೇಬ ಕುಲಕರ್ಣಿ ಅವನ ಹೆಸರು । ಸಾಯಿ ಚರಣದಲಿ ಭಾವವಿಟ್ಟವರು ।
ಸಾಯಿಯದೇ ಪ್ರಭಾವ ಇದಾದರೂ । ಅಗಾಧಲೀಲೆ ಅವರದ್ದು ॥ 146

ಸಂಗತಿ ಕೆಲವರ್ಷ ಪೂರ್ವದಲ್ಲಿ ನಡೆದ । ಬಾಳಾಸಾಹೇಬ ಭಾಟೆಯವರಿಂದ ।
ಪ್ರಾಪ್ತವಾದ ಬಾಬಾರ ಭಾವಚಿತ್ರವೊಂದ । ಪೂಜೆಯಲ್ಲಿ ಇರಿಸಿದ್ದರು ॥ 147

ಕಾಯಾ ವಾಚಾ ಮನಗಳಿಂದ । ಪ್ರಾಪ್ತವಿದ್ದ ಗಂಧಾಕ್ಷತೆ ಪುಷ್ಪಗಳಿಂದ ।
ಪೂಜಿಸುತಿದ್ದರು ನಿತ್ಯನೇಮದಿಂದ । ನೈವೇದ್ಯವನೂ ತೋರಿಸುತಿದ್ದರು ॥ 148

ಈ ಕರ್ಮಭೋಗ ಯಾವಾಗ ಮುಗಿಯುವದು । ಮನದಲ್ಲಿದ್ದಂತೆ ಆಗುವದೆಂದು ।
ಪ್ರತ್ಯಕ್ಷ ದರ್ಶನ ಯೋಗ ಸಾಯಿಯದು । ಎಂಬ ಹೃದ್ರೋಗ ಹಿಡಯಿತು ಅಪ್ಪಾಗೆ ॥149

ಸಾಯಿಬಾಬಾರ ಪಟದ ದರ್ಶನ । ಅದೂ ಪ್ರತ್ಯಕ್ಷ ದರ್ಶನ ಸಮಾನ ।
ಭಾವ ಮಾತ್ರ ಇರಬೇಕು ಪೂರ್ಣ । ಸಮಯ ಬಂದಾಗ ಗುರುತು ಕಂಡೀತು ॥ 150

ಕೇವಲ ಭಾವಚಿತ್ರದ ದರ್ಶನವೂ । ಪ್ರತ್ಯಕ್ಷ ದರ್ಶನಕೆ ಸಮಾನವು ।
ಇದರ ಬಗ್ಗೆ ಅನ್ವರ್ಥವು । ಇರುವದು ಶ್ರೋತೃಗಳೇ ಆಲಿಸಿರಿ ॥ 151

ಒಮ್ಮೆ ಬಾಳಾ ಬುವಾ ಎಂಬ ಬಡಿಗರವ । ಮುಂಬಯಿಯ ನಿವಾಸಿ ಭಜನೆಗಳ ಹಾಡುವವ ।
ಆರ್ವಾಚೀನ ತುಕಾರಾಮ ಎನಿಸಿಕೊಂಡವ । ದರ್ಶನಕೆ ಶಿರಡಿಗೆ ಹೋದನು ॥ 152

ಇದೇ ಅವನ ಪ್ರಥಮ ಭೆಟ್ಟಿಯಾಗಿದ್ದು । ಮೊದಲೆಂದೂ ಒಬ್ಬರನೊಬ್ಬರು ನೋಡದೇ ಇದ್ದು ।
ದೃಷ್ಟಿ ಕೂಡಿದಾಗ ಇಬ್ಬರದೂ । ಸಾಯಿ ಸ್ಪಷ್ಟವಾಗಿ ಅವನಿಗೆಂದರು ॥ 153

ನಾಲ್ಕು ವರ್ಷಗಳ ಹಿಂದಿನಿಂದೂ । ನನಗಿವನ ಗುರುತು ಇರುವದು ।
ಬಾಳಾಬುವಾ ವಿಸ್ಮಯಗೊಂಡು । ಹೀಗೇಕೆ ಇವರೆನ್ನುತಿರುವರು ತಿಳಿಯದೆ ॥ 154

ಬಾಬಾ ಶಿರಡಿಯ ಬಿಟ್ಟಿಲ್ಲ ಎಂದೂ । ನಾನಾದರೂ ಕಣ್ಣೆದುರು ಇಂದೇ ಕಂಡದ್ದು ।
ಹೀಗಿರುವಾಗ ನಾಲ್ಕು ವರ್ಷಗಳ ಹಿಂದೆ ನನ್ನದು । ಗುರುತಾಗಿದೆನ್ನುವರದು ಹೇಗೆ ॥ 155

ಹೀಗೆ ವಿಚಾರ ನಡೆಯಿತು । ನಾಲ್ಕು ವರ್ಷಗಳ ಹಿಂದಿನ ಮಾತು ।
ಬಾಬಾರ ನಮಿಸಿದ್ದು ಚಿತ್ರದಲಿ ಇಂತು । ಬುವಾನ ನೆನಪಿಗೆ ಬಂದಿತು ॥ 156

ಬಳಿಕ ಆ ಮಾತಿನ ಅನ್ವರ್ಥತೆಯನು । ಬಾಳಾಬುವಾ ಒಪ್ಪಿದರದನು ।
ಎಂದರು ಸಂತರ ವ್ಯಾಪಕತೆಯನೂ । ಭಕ್ತವತ್ಸಲತೆಯನೂ ಸತ್ಯವೆಂದು ॥ 157

ನಾನಂತೂ ಬರೀ ಚಿತ್ರವ ನಮಿಸಿದ್ದೆ । ಆದರೆ ಇಂದು ಪ್ರತ್ಯಕ್ಷ ಕಂಡೆ ।
ನಾನದನು ಮರೆತೇ ಬಿಟ್ಟಿದ್ದೆ । ಆದರೆ ಬಾಬಾ ಅದನು ನೆನಪಿಸಿದರು ॥ 158

ಮರೆತಿದ್ದೆನೆಂಬದೂ ಸರಿಯಲ್ಲ । ಆದರೆ ಕೂಡಲೇ ಬಾಬಾರ ಮಾತು ಅರ್ಥವಾಗಲಿಲ್ಲ ।
ನಾನು ತಿಳಿಯಲು ಸಮರ್ಥನಾಗಲ್ಲಿ । ಚಿತ್ರ ನಮನಕ್ಕೆ ಗುರುತೆ ಅರ್ಥವನು ॥ 159

ಬಾಬಾರಿಗೆ ನನ್ನ ಗುರುತಿತ್ತು । ನನಗೆ ಮಾತ್ರ ಅದು ತಿಳಿಯದಾಗಿತ್ತು ।
ಸಂತರೇ ನೆನಪು ಮಾಡಿದಾಗ ಇಂತು । ಆಗ ನನಗೆ ಗೊತ್ತಾಯಿತು ॥3 160

ಸ್ವಚ್ಛ ಕನ್ನಡಿ ಸ್ವಚ್ಛ ಉದಕದಂತೆ । ಅಲ್ಲಿ ಬಿಂಬವೇ ಪ್ರತಿಬಿಂಬಿತವಾಗುವಂತೆ ।
ಚಿತ್ರವಾದರೂ ಪ್ರತಿಬಿಂಬದಂತೆ । ಶುದ್ಧ ಪ್ರತೀಕವದು ಬಿಂಬದ್ದು ॥ 161

ಅದಕೆ ಸಂತರ ಚಿತ್ರದ ದರ್ಶನ । ಇರುವದು ಪ್ರತ್ಯಕ್ಷ ದರ್ಶನದ ಸಮಾನ ।
ಸಂತರ ಸರ್ವದರ್ಶಿತ್ವತನ । ಇದೇ ಶಿಕ್ಷಣ ಎಲ್ಲರಿಗೂ ॥ 162

ಇರಲಿನ್ನು ಹಿಂದಿನ ಕತೆಯನ್ನು । ಲಕ್ಷಗೊಟ್ಟು ಕೇಳಿರಿದನು ।
ಇಟ್ಟು ಇದರ ಅನುಸಂಧಾನತೆಯನು । ಶ್ರೋತೃಗಳು ತಮ್ಮ ಚಿತ್ತದಲ್ಲಿ ॥ 163

ಅಪ್ಪಾ ಇರುತಿದ್ದುದು ಠಾಣೆಯಲ್ಲಿ । ಕೆಲಸವೊಂದು ಬಂದಿತು ಭಿವಂಡಿಯಲ್ಲಿ ।
ತಿರುಗಿ ಬರುವೆನು ಎಂಟು ದಿನಗಳಲಿ । ಎಂದು ಹೇಳಿ ಹೊರಗೆ ಹೋದರು ॥ 164

ಎರಡು ದಿನಗಳು ಕಳೆಯುವದರೊಳಗ । ಅಪೂರ್ವ ಘಟನೆಯೊಂದು ನಡೆಯಿತಿಲ್ಲಿ ಮನೆಯೊಳಗೆ ।
ಒಬ್ಬ ಫಕೀರ ಬಂದ ಬಾಗಿಲಿಗೆ । ಠಾಣೆಯಲ್ಲಿ ಅವರ ಮನೆಗೆ ॥ 165

ಅವನನ್ನು ಕಂಡಲಾಗಾಯಿತು । ಸಾಯಿಯೇ ಇವರೆಂದು ಎಲ್ಲರಿಗೂ ಸ್ಪಷ್ಟವಾಗಿ ಎನಿಸಿತು ।
ಭಾವ ಚಿತ್ರದಂತೆಯೇ ಬಿಡದೆ ಇನಿತು । ರೂಪರೇಖೆಗಳು ಸಂಪೂರ್ಣ ॥ 166

ಕುಟುಂಬ ಮತ್ತು ಮಕ್ಕಳದು । ಫಕೀರನತ್ತಲೇ ದೃಷ್ಟಿ ಎಲ್ಲರದೂ ।
ಎಲ್ಲರೂ ವಿಸ್ಮಿತರಾಗಿದ್ದು । ಬಾಬಾರೇ ಬಂದರೆನ್ನಿಸಿತು ॥ 167

ಮೊದಲೆಂದೂ ಆಗಿಲ್ಲ ಪ್ರತ್ಯಕ್ಷ ದರ್ಶನ । ಆದರೆ ಚಿತ್ರದೊಡನಿರುವ ಸಾದೃಶ್ಯತೆಯನ ।
ನೋಡಿ ತಿಳಿದರು ಇವರು ಬಾಬಾ ಎಂಬದನ । ಜಿಜ್ಞಾಸೆ ಎಲ್ಲರಲಿ ಹುಟ್ಟಿತು ॥ 168

ತಾವು ಶಿರಡಿಯ ಸಾಯಿಯವರು ಹೌದೇನು । ಎಲ್ಲರೂ ಫಕೀರನಿಗೆ ಕೇಳಿದರು ಪ್ರಶ್ನೆಯನು ।
ಅದಕಾ ಫಕೀರನೆಂದುದನ್ನು । ಶ್ರೋತೃಗಳೇ ಆಲಿಸಿರಿ ಚಿತ್ತಗೊಟ್ಟು ॥ 169

ಸಾಯಿಯೇ ಸ್ವತಃ ಅಲ್ಲ ನಾನು । ಆದರೆ ಅವರ ಆಜ್ಞಾಂಕಿತ ದಾಸನು ।
ಮಕ್ಕಳು ಮರಿಗಳ ಸಮಾಚಾರವನು । ತಿಳಿದುಕೊಳ್ಳಲು ಅವರಾಜ್ಞೆಯಿಂದ ಬಂದೆ ॥ 170

ಬಳಿಕವನು ದಕ್ಷಿಣೆ ಕೇಳತೊಡಗಲು । ಆ ಮಕ್ಕಳ ತಾಯಿ ಆಗಲೆಂದಳು ।
ಕೂಡಲೇ ಒಂದು ರೂಪಾಯಿ ಕೊಟ್ಟಳು । ಅವನೂ ಉದೀ ಪ್ರಸಾದಗಳನಿತ್ತ ॥ 171

ಸಾಯಿಬಾಬಾರ ವಿಭೂತಿಯನ್ನು । ಆ ಸ್ತ್ರೀಗೇ ಚೀಟಿಯಲಿ ಕಟ್ಟಿಕೊಟ್ಟನು ।
ಎಂದನು ಆ ಚಿತ್ರದ ಬದಿಯಲಿಡಿರಿದನು । ಸೌಖ್ಯ ಪ್ರಾಪ್ತಿಯಾಗುವದು ॥ 172

ಹೀಗೆ ನಿಜ ಕಾರ್ಯವ ಮುಗಿಸಿಕೊಂಡು । ಸಾಯಿ ದಾರಿ ನೋಡುತಿರಬಹುದೆಂದು ।
ಹೇಳಿ ಹೊರಟನು ಅಪ್ಪಣೆ ಪಡೆದು । ತನ್ನ ಮಾರ್ಗ ಹಿಡಿದನು ಫಕೀರ ॥ 173

ಬಳಿಕವನು ಅಲ್ಲಿಂದ ಹೊರಟ । ಬಂದ ದಾರಿಯಿಂದ ಹೋಗಿಬಿಟ್ಟ ।
ಇತ್ತಕಡೆಗಾಗ ನಡೆದ ವೃತ್ತಾಂತ । ಅಪೂರ್ವ ಲೀಲೆ ಸಾಯಿಯದು ॥ 174

ಅಪ್ಪಾಸಾಹೇಬ ಭಿವಂಡಿಗೆ ಹೊರಟರು । ಆದರೆ ಮುಂದೆ ಹೋಗದೇ ತಿರುಗಿ ಬಂದರು ।
ಟಾಂಗಾದ ಕುದುರೆಗೆ ಅನಾರೋಗ್ಯವೆಂದರು । ಹೋಗವದು ಅಲ್ಲಿಯೇ ನಿಂತಿತು ॥ 175

ಮಧ್ಯಾಹ್ನದಲಿ ಅವರು ಠಾಣೆಗೆ ಬಂದರು । ನಡೆದ ವೃತ್ತವನೆಲ್ಲ ಕೇಳಿದರು ।
ಅಪ್ಪಾ ಸಾಹೇಬರು ಮನದಲಿಹಳಹಳಿಸಿದರು । ತಮಗೆ ದರ್ಶನ ತಪ್ಪಿತೆಂದು ॥ 176

ಒಂದೇ ರೂಪಾಯಿ ದಕ್ಷಿಣೆ ಕೊಟ್ಟಿತು । ಆದರಿಂದ ಮನಸ್ಸಿಗೆ ನಾಚಿಕೆ ಎನಿಸಿತು ।
ನಾನಿರುತಿದ್ದರೆ ಕನಿಷ್ಠ ಹತ್ತು । ಕೊಡದೇ ಇರುತ್ತಿರಲಿಲ್ಲ ॥ 177

ಅಪ್ಪಾ ಸಾಹೇಬರು ಹೀಗೆಂದು । ಮನಸಿಗೆ ಒಂದಿಷ್ಟು ಕೆಡಕೆನಿಸಿದ್ದು ।
ಫಕೀರ ಮಶೀದಿಯಲಿ ಸಿಗಬಹುದೆಂದು । ಉಪವಾಸವೇ ಶೋಧಿಸಲು ಹೊರಟರು ॥178

ಮಶೀದಿ ತಕಿಯಾ ಅಲ್ಲಲ್ಲಿಗೆ । ಜನ ಇಳಿದುಕೊಳ್ಳುವಂಥ ಸ್ಥಳಗಳಿಗೆ ।
ಹುಡುಕಿದರು ಅಪ್ಪಾ ಹೋಗಿ ಎಲ್ಲ ಸ್ಥಾನಗಳಿಗೆ । ಆ ಫಕೀರನಿಗಾಗಿ ॥ 179

ಹುಡುಕಿ ಹುಡುಕಿ ದಣಿದರು । ಫಕೀರನನೆಲ್ಲೂ ಕಾಣದಾದರು ।
ಆಗ ಹಸಿದಿದ್ದ ಅವರು ಹೋಗಿ ಊಟ ಮಾಡಿದರು । ಬಹಳ ನಿರಾಶೆಯಾಯಿತು ॥ 180

ಆದರವನಿಗೆ ಗೊತ್ತಿರದು । ಹಸಿದ ಹೊಟ್ಟೆಯಲಿ ಹುಡುಕಲು ಹೋಗಬಾರದು ।
ಮೊದಲು ತನ್ನಾತ್ಮವನು ತೃಪ್ತಿ ಪಡಿಸುವದು । ಬಳಿಕ ಶೋಧಕೆ ಹೊರಡಬೇಕು ॥ 181

ಈ ಅರ್ಥದ್ದೊಂದು ಬಾಬಾರ ಕತೆ । ತೋರುವದೀ ನಿಜತತ್ವದ ಯಥಾರ್ಥತೆ ।
ಇಲ್ಲಿ ಅದರ ದ್ವಿರುಕ್ತಿ ಏಕೆ ಮತ್ತೆ । ಆ ಅಧ್ಯಾಯವೇ ಶ್ರೋತೃಗಳೆದುರಿಗಿರುವಾಗ ॥ 182

ಗುರು ಗರಿಮಾ ಎಂಬ ಒಂದು । ಹಿಂದಿನಧ್ಯಾಯದಲಿ ಕಥೆಯೊಂದು ।
ಅಲ್ಲಿ ಸ್ವಮುಖದಿಂದ ಭವಿಷ್ಯವಾಣಿ ಗುರುವಿನದು । ಕಾರುಣಿಕ ಶ್ರೀ ಸಾಯಿ ವರ್ಣಿಸಿರುವರು ॥ 183

ಅದೇ ಸತ್ಯ ಅನುಭವಕೆ ಬಂದುದ । ಯಾವಾಗ ಅಪ್ಪಾ ಹೊರಟರು ಊಟ ಮುಗಿಸಿಕೊಂಡು ।
ಚಿತ್ರೆ ಎಂಬ ಸ್ನೇಹಿತನನು ಜೊತೆಗೆ ಕರೆದುಕೊಂಡು । ಸಹಜ ತಿರುಗಾಡಲು ಹೊರಟರು ॥ 184

ಹೀಗೆ ಒಂದಿಷ್ಟು ಮುಂದೆ ಹೋಗಲು । ನೋಡಿದರು ಒಬ್ಬ ಗೃಹಸ್ಥ ।
ಬರುತಿದ್ದ ತಮ್ಮನ್ನೇ ಅನುಲಕ್ಷಿಸುತ । ಅತಿಸತ್ವರನಾಗಿ ಆ ಸ್ಥಳದಿ ॥ 185

ಬಂದು ನಿಂತುಕೊಂಡಾಗ ಹತ್ತಿರ । ಅಪ್ಪಾ ಸಾಹೇಬ ನಿಧಾನವಾಗಿ ಅವಲೋಕಿಸಿ ಅವರ ।
ಇವರೇ ಇರಬಹುದು ಬೆಳಗಿನ ಪ್ರಹರ । ಮನೆಗೆ ಬಂದಿರಬೇಕೆಂದೆನಿಸಿತು ॥ 186

ಮೊದಲು ಹುಡಿಕಿದ್ದೆ ಯಾರ । ಅವನೇ ಇರಬೇಕು ಈ ಫಕೀರ ।
ಒಂದಿಷ್ಟೂ ಬಿಡದೆ ಚಿತ್ರವ ಹೋಲುವ ಇವರ । ನೋಡಿ ವಿಸ್ಮಯವಾಯಿತು ॥ 187

ಹೀಗೆ ಅಪ್ಪಾ ವಿಚಾರ ಮಾಡುತಿದ್ದ । ಅಷ್ಟರಲಿ ಫಕೀರ ಮುಂದೆ ಕೈಯೊಡ್ಡಿದ್ದು ।
ಕೈಯಲಿ ಇಟ್ಟರು ರೂಪಾಯಿ ಒಂದ । ಅಪ್ಪಾ ಆ ಕಾಲದಲ್ಲಿ ॥ 188

ಮತ್ತೆ ಬೇಡಿದಾಗ ಮತ್ತೊಂದು । ಕೊಟ್ಟರು ಮೂರನೇಯದು ।
ಹಾಗೇ ಬೇಡಿದ ಇನ್ನೂ ಒಂದು । ಇದರ ಕೌತುತ ಮುಂದೆ ಇರುವದು ॥ 189

ಚಿತ್ರೆಯವರ ಹತ್ತಿರ ಇದ್ದವು ಮೂರು । ಅವುಗಳನ್ನು ಅಪ್ಪಾ ತೆಗೆದುಕೊಂಡರು ।
ಆಫಕೀರನಿಗೆ ಕೊಟ್ಟರು । ಆದರೂ ಅವ ಬೇಡುವುದು ಬಿಡುವಲ್ಲ ॥ 190

ಅಪ್ಪಾಸಾಹೇಬರು ಅವನಿಗೆ । ಮತ್ತೆ ಕೊಡುವೆನೆಂದರು ಬಂದರೆ ಮನೆಗೆ ।
ಆಗಲೆಂದು ಮನೆಯ ಕಡೆಗೆ । ಮೂವರು ಹೊರಟರು ॥ 191

ಮನೆಗೆ ಬಂದು ಮತ್ತೆ ಮೂರು । ರೂಪಾಯಿಗಳ ಅವನ ಕೈಯ್ಯಲಿಟ್ಟರು ।
ಒಟ್ಟು ಒಂಬತ್ತು ರೂಪಾಯಿಗಳಾದರೂ । ಫಕೀರನ ಸಮಾಧಾನವಾಗಲಿಲ್ಲ ॥ 192

ಕೇಳಿದಾಗ ಮತ್ತೂ ಹೆಚ್ಚಿಗೆ ದಕ್ಷಿಣೆಯನು । ಬಿಟ್ಟು ಹತ್ತರನೋಟೊಂದನು ।
ನನ್ನ ಹತ್ತಿರ ಉಳಿದಿಲ್ಲ ಏನೂ । ಎಂದು ಸ್ಪಷ್ಟವಾಗಿ ಹೇಳಿದರು ಅಪ್ಪಾ ॥ 193

ಮುಗಿದು ಹೋದವು ಚಿಚ್ಚು ರೂಪಾಯಿಗಳೆಲ್ಲ । ಇನ್ನು ಬೇರೆ ಏನು ಉಳಿದಿಲ್ಲ ।
ಫಕೀರನೆಂದ ಕೊಡಿರಿ ನೋಟನ್ನು । ಒಂಭತ್ತು ರೂಪಾಯಿಗಳ ತಿರುಗಿ ಕೊಟ್ಟ ॥ 194

ಕೈಯಲ್ಲಿ ಬಿದ್ದಾಗ ಹತ್ತರ ನೋಟ । ರೂಪಾಯಿಗಳ ತಿರುಗಿ ಕೊಟ್ಟು ಬಿಟ್ಟ ।
ಬಳಿಕ ಫಕೀರ ಬಂದ ದಾರಿಗೆ ಹೊರಟ । ಅತಿ ವೇಗದಿಂದ ಹಿಂದಿರುಗಿ ॥ 195

ನೋಡಿದಾಗ ಈ ಕಥೆಯ ಸಾರ । ಯಾವ ಭಕ್ತನದು ಹೇಗೆ ಉದ್ಧಾರ ।
ಹಾಗೇಯೆ ಪೂರ್ಣ ಮಾಡಿಸಿಕೊಳ್ಳುವರೆಂದವರ । ಬಿರುದೇ ಇತ್ತು ಸಾಯಿಯವರದು ॥ 196

ಶ್ರೋತೃಗಳ ಶ್ರವಣೋತ್ಸಕತೆಯನು ನೋಡಲಾಗಿ । ನೆನಪಾಯಿತು ಪ್ರಸಂಗೋಪಾತ್ತವಾಗಿ ।
ಕೇಳಿರಿ ಅತಿ ಸಾದರರಾಗಿ । ಇದೇ ಅರ್ಥದ ಇನ್ನೊಂದು ಕಥೆಯನು ॥ 197

ಇರುವನೊಬ್ಬ ಭಕ್ತಭಾವಿಕ । ಹೆಸರವದು ಹರಿಭಾವೂ ಕರ್ಣಿಕ ।
ಡಹಾಣೂ ಊರಿನ ಸ್ಥಾಯಿಕ । ಸಾಯಿಯ ಅನನ್ಯ ಭಕ್ತರು ॥ 198

ಸನ ಹತ್ತೊಂಬತ್ತು ನೂರಾಹದಿನೇಳರಲ್ಲಿ । ಪವಿತ್ರ ಗುರು ಪೌರ್ಣಿಮೆಯ ಸಮಯದಲ್ಲಿ
ಯಾತ್ರೆಗೆಂದು ಬಂದರು ಶಿರಡಿಯಲಿ । ಆ ಅಲ್ಪ ಚರಿತೆಯ ಹೇಳುವೆ ॥ 199

ಯಥಾವಿಧಿ ಪೂಜೆ ಮುಗಿಯಿತು । ದಕ್ಷಿಣೆ ವಸ್ತ್ರಗಳನರ್ಪಿಸಲಾಯಿತು ।
ಆಜ್ಞೆಯ ಪಡೆದು ಕೆಳಗಿಳಿದಾಗ ಬಂತು । ವಿಚಾರವೊಂದು ಮನದಲಿ ॥ 200

ಮತ್ತೆ ಎನಿಸಿತು ಹೋಗಿ ಮೇಲೆ । ಇನ್ನೊಂದು ರೂಪಾಯಿ ಕೊಡಬೇಕು ಬಾಬಾರ ಕೈಯ್ಯಲ್ಲೇ ।
ಆದರಾ ವಿಚಾರ ಉಳಿಯಿತು ಅಲ್ಲೇ । ರೂಪಾಯಿ ಹಾಗೇ ಉಳಿಯಿತು ॥ 201

ಯಾವ ಗ್ರಹಸ್ಥನು ಆಜ್ಞೆ ಕೊಡಿಸಿದ । ಅವನೇ ಕೈಸನ್ನೆ ಮಾಡಿ ಹೇಳಿದ ।
ಈಗೊಮ್ಮೆ ಆಜ್ಞೆಯಾಗಿದ್ದು । ಮುಂದಿನ ಮಾರ್ಗವ ಹಿಡಿಯಿರಿ ಎಂದು ॥ 202

ಆ ಸಂಕೇತವನು ನಂಬಿ ಕರ್ಣಿಕರು । ಹಾಗೇ ಮುಂದೆ ನಡೆದರು ।
ಮಿತ್ರನೊಡನೆ ಮಾರ್ಗದಲ್ಲಿವರು । ನಾಸಿಕದಲ್ಲಿ ಇಳಿದರು ॥ 203

ಕಾಳಾರಾಮನ ಮಂದಿರಕೆ । ಕರ್ಣಿಕರು ಹೋದರು ದರ್ಶನಕೆ ।
ಅಲ್ಲಿ ನರಸಿಂಹ ಮಹಾರಾಜರೆಂಬ ಸಂತರವರಿಗೆ । ಸಹಜದಲೇ ದರ್ಶನವಾಯಿತು ॥ 204

ಅವರ ಸುತ್ತಲೂ ಭಕ್ತರಿದ್ದರು । ಮಹಾರಾಜರು ಅಕಸ್ಮಾತ್ತಾಗಿ ಎದ್ದರು ।
ಕರ್ಣಿಕರ ಕೈಹಿಡಿದು ಕೇಳಿದರು । ನನ್ನ ರೂಪಾಯಿ ಕೊಡು ಎಂದು ॥ 205

ಕರ್ಣಿಕ ಮನದಲಿ ವಿಸ್ಮಯಗೊಂಡ । ರೂಪಾಯಿನಿತ್ತ ಆನಂದದಿಂದ ।
ಹೇಗೆ ಈ ಸಾಯಿ ನಾಮನದಲೆಂದ । ರೂಪಾಯಿ ಸ್ವೀಕರಿಸಿದರು ಎನಿಸಿ ॥ 206

ಸಾಯಿ ಸ್ವೀಕರಿಸಿದರೆಂಬದೂ ಸರಿಯಲ್ಲ । ಮನದಲೇನೂ ಆಗ ವಿಚಾರವಿರಲಿಲ್ಲ ।
ಬಲವಂತವಾಗಿ ಎಳೆದು ಕೇಳಿದರಲ್ಲ । ಅವರ ಹಾಗೆಯೇ ಇವರೂ ॥ 207

ಸಂಕಲ್ಪ ವಿಕಲ್ಪಾತ್ಮಕ ಮನವಿದು । ತರಂಗದ ಮೇಲೆ ತರಂಗವೇಳುವದು ।
ಸಕೃದ್ದರ್ಶನದಲೆನಿಸುವದು ಒಂದು । ಪ್ರಸಂಗದಲ ಬೇರೆ ಕಲ್ಪನೆ ॥ 208

ಮೊದಲು ಮನದಲಿದ್ದ ವಿಚಾರ । ಅದು ಸದ್ವೃತ್ತಿಯದೇ ಇದ್ದರೆ ಮಾತ್ರ ।
ಪರಿಪೋಷಣೆ ಆದರೆ ಅದರ । ಕಲ್ಯಾಣಕರವಾಗಿರುವದದು ॥ 209

ಆದರದೇ ಅನುಸಂಧಾನ । ದೃಢಾಭ್ಯಾಸ ನಿದಿಧ್ಯಾಸನ ।
ಆಗಗೊಡಬಾರದದರ ವಿಸ್ಮರಣ । ಪ್ರಯತ್ನದಿಂದುಳಿಸಿಕೊಳಬೇಕು ವಚನ ॥ 210

ಅಪ್ಪಾ ಸಾಹೇಬರು ಮಾತನಾಡಿದರು । ಮುಂದೆ ಮರೆಯಬಹುದಾಗಿತ್ತು ಆದರೂ ।
ಮಾತು ಬಂದಾಗಲೇ ಮುಗಿಸಿಕೊಂಡರು । ಭಕ್ತಿಯ ವೈಚಿತ್ರ್ಯ ತೋರಿದರು ॥ 211

ಅಲ್ಲದಿದ್ದಲ್ಲಿ ಆ ಫಕೀರನಿಗೆ । ನೋಟನ್ನು ಸೇರಿಸಿ ಹತ್ತೊಂಬತ್ತು ಇತ್ತಿದ್ದಾಗ್ಯೆ ।
ಒಂಭತ್ತೇ ಹಿಂದಿರುಗಿಸಿದ ಅಪ್ಪಾಗೆ । ಅವನಿಗೆ ಹತ್ತೇ ಬೇಕಾಗಿತ್ತೆಂದು ॥ 212

ಬಾಬಾರ ಕರಸ್ಪರ್ಷವಾದದ್ದು । ಆ ಒಂಭತ್ತು ಪುತ್ಥಳಿಗಳ ಸರವಿದು ।
ನವವಿಧಾಭಕ್ತಿ ಪ್ರೇಮಗಳ ಸಮೂಹವಿದು । ಸ್ಮರಣಪ್ರಕಾರವಿದು ಬಾಬಾರದು ॥213

ದೇಹ ವಿಸರ್ಜನದ ಕಥೆ ಕೇಳಲು । ಸ್ವಯಂ ಬಾಬಾರೇ ದೇಹವಿಡಲು ।
ನವದಾನವನಾಗ ಕೊಟ್ಟಿರಲು । ಕಾರಣ ತಿಳಿದು ಬರುವದು ಅಭಿನವತೆ ॥ 214

ಕಾಯಾವಾಚಾಮನದಿಂದ ಕೊಟ್ಟದ್ದು । ಅವರ ಪತ್ನಿ ರೂಪಾಯಿಯೊಂದು ।
ಅತಿ ಸಂತುಷ್ಟರಾಗಿ ಸ್ವೀಕರಿಸಿದ್ದು । ಆಗ ಹೆಚ್ಚಿಗೆ ಕೇಳುವದಿರಲಿಲ್ಲ ॥ 215

ಆದರೆ ತನ್ನ ಪತ್ನಿ ಕೊಟ್ಟದ್ದು । ಅಪ್ಪಾರ ಮನಸಿಗೆ ಅಲ್ಪವೆನಿಸಿದ್ದು ।
ನಾನಿದ್ದರೆ ಅದರ ಹತ್ತರಷ್ಟು ಕೊಡುತಿದ್ದುದು । ಆ ಫಕೀರನಿಗೆ ತಿಳಿದಿತ್ತು ಆಗಲೇ ॥ 216

ಹೀಗೆ ಅಪ್ಪಾ ಆಗಿದ್ದರು ವಚನಬದ್ಧ । ಹತ್ತು ರೂಪಾಯಿಗಳ ಕೊಡುತಿದ್ದೆನೆಂದ ।
ಅದು ಸಂಪೂರ್ಣಕೊಡದೆ ನಿರ್ಮುಕ್ತನಾಗುವದು ವಚನದಿಂದ । ಋಣಮುಕ್ತ ಹೇಗೆ ಆದಾನು ॥ 217

ಇತರರಂತಹ ಫಕೀರನವನೇ । ಅವನೇನು ಯಾರೋ ಭಿಕ್ಷುಕನೇ ।
ಕೈಮೇಲೆ ಬಿದ್ದರೆ ಸಾಕು ಏನೇ । ತಿರುಗಿ ಹೋಗಿ ಬಿಡುವನೆನಲು ॥ 218

ಅದಕಿನ್ನೂ ದಿನಗಳು ಕಳೆದಿರಲಿಲ್ಲ । ಮಾತಾಡಿದ ದಿನವೇ ಬಂದುಬಿಟ್ಟನಲ್ಲ ।
ಆದರೂ ಸಾಶಂಕಿತವಾಯಿತು ಅಪ್ಪಾರ ಮನಸ್ಸಿಲ್ಲ । ಆದರೂ ಅವನಾರೋ ಅಪರಿಚಿತ ಫಕೀರನಿರಬೇಕೆಂದು ॥ 219

ಬೇಡ[illegible]ಗಿದಾಗನೆನು [illegible] । ಆರು ರೂಪಾಯಿಗಳಿದ್ದವವರ ಬಳಿ ।
[illegible]ದುದ್ದೆಲ್ಲ [illegible] ಕೈಯಲ್ಲಿ । [illegible]ಗಿಯೇ ಅಲ್ಲವೇ ॥ 220

ಅಪ್ಪಾನ ಮೇಲೆ ಪ್ರೇಮವಿರದಿದ್ದರೆ । ಫಕೀರನ ವೇಷದಿಂದ ಬಾಬಾ ಬರುತಿದ್ದರೇ ।
ದಕ್ಷಿಣೆ ಕೇಳುವ ನೆಪ ಮಾಡದಿದ್ದರೆ । ಈ ಕಥೆಗೆ ರಂಗೇರುತ್ತಿತ್ತೇ ॥ 221

ಹೆಸರಿಗೆ ಮಾತ್ರ ಅಪ್ಪಾ ಸಾಹೇಬನದು । ಒಂದೇ ಗತಿ ನಮ್ಮ ನಿಮ್ಮದು ।
ಇದ್ದರೂ ಮೊದಲು ಉದ್ದೇಶ ಒಳ್ಳೆಯಧು । ಅದು ಉಳಿಯದು ಅಪರಿಚಿತ ಪ್ರಸಂಗಕೆ ॥ 222

ವಾಗ್ದಾನ ಮಾಡುವದರಲಿ ನಾವೆಲ್ಲ ಮುಂದು । ದಾನ ಕೊಡುವಾಗ ಬಲು ಶಂಕಿಸುವರು ।
ಜೀವ ಕೆಳಗೆ ಮೇಲೆ ಆಗುವದು । ನಿಶ್ಚಿತತೆಯಂತೂ ದುರ್ಲಭ ॥ 223

ಆದರೆ ಹಿತಮಿತವಾಗಿ ಮಾತಾಡುವವ । ಆಡಿದಂತೆ ನಡೆಯುವವ ।
ನುಡಿದದ್ದನ್ನು ನಿಜ ಮಾಡಿ ತೋರಿಸುವ । ಹರಿಯ ಪ್ರಿಯನವ ಎಲ್ಲೋ ಒಬ್ಬ ॥224

ಅನನ್ಯ ಭಾವಿಕ ಭಕ್ತನು । ಯಾರು ಏನೇ ಬೇಡಲು ಅದನು ।
ಐಹಿಕವಿರಲಿ ಅಥವಾ ಆಮುಷ್ಮಿಕವನು । ಸಾಯಿ ಸಮರ್ಥ ಫಲದಾಯಕನು ॥ 225

ಅಪ್ಪಾ ಸಾಹೇಬರು ಜಾಣರಿದ್ದರೂ । ಆಂಗ್ಲ ವಿದ್ಯಾವಿಭೂಷಿತರು ।
ಆಂಭದಲಿ ಅವರಗೆ ಸರಕಾರದವರು । ನಲ್ವತ್ತು ರೂಪಾಯಿ ಮಾತ್ರ ವೇತನ ಕೊಡುತಿದ್ದರು ॥ 226

ಮುಂದೆ ಈ ಭಾವಚಿತ್ರ ದೊರೆತ ಮೇಲೆ । ಸಾವಕಾಶವಾಗಿ ಹೋಯಿತು ಬೆಳೆಯುತ್ತಲೇ ।
ನಲ್ವತ್ತರ ಕೆಲಪಟ್ಟು ಮೇಲೇ । ವೇತನವೀಗ ಬರತೊಡಗಿತ್ತು ॥ 227

ಕೊಡಲು ಒಂದಕ್ಕೆ ಹತ್ತರಷ್ಟು । ಅಧಿಕಾರ ಸತ್ತೆಗಳೂ ಬೆಳೆದವು ಹತ್ತು ಪಟ್ಟು ।
ನೋಡನೋಡುವದರೊಳಗೆ ಈ ಅನುಭವ ಬಂತು । ಎಲ್ಲರ ಎದುರಿಗೇ ಬಾಬಾರದು ॥ 228

ಪರಮಾರ್ಥದ ದೃಷ್ಟಿಯೂ ಅದರ ಹೊರತಾಗಿ । ಬೆಳೆಯತೊಡಗಿತು ನಿಷ್ಠೆಯಿಂದಾಗಿ ।
ಇದೇನು ಕಾಣಿಸುವದೇ ಸಾಮಾನ್ಯವಾಗಿ । ವಿಚಿತ್ರ ಬಾಬಾರ ಕೈಚಳಕ ॥ 229

ಆಮೇಲೆ ಅಪ್ಪಾಸಾಹೇಬರು । ಫಕೀರನಿತ್ತ ವಿಭೂತಿಯ ಬೇಡಿದರು ।
ನೋಡಿದರೆ ಅದರ ಚೀಟು ಕಟ್ಟಿದ್ದರು । ಪ್ರೀತಿಯಲಿ ಬಿಚ್ಚಿ ನೋಡಿದರು ॥ 230

ಹೂವು ಅಕ್ಷತೆಗಳು ಉದಿಯ ಜೊತೆಗೆ । ಇದ್ದವು ಆ ಚೀಟಿನೊಳಗೆ ।
ತಾಯಿತ ಮಾಡಿ ಅದ ತಮ್ಮ ಕೈಗೆ । ಅತಿ ಪೂಜ್ಯ ಭಾವನೆಯಿಂದ ಕಟ್ಟಿಕೊಂಡರು ॥ 231

ಮುಂದೆ ಬಾಬಾರ ದರ್ಶನ ತೆಗೆದುಕೊಂಡರು । ಆಗ ಬಾಬಾ ಸ್ವತಃ ಕೊಟ್ಟಿದ್ದರು ।
ಭಕ್ತಿಪೂರ್ವಕವಾಗಿ ಆ ಕೂದಲನ್ನಾದರೂ । ಆ ತಾಯಿತದಲ್ಲಿ ಹಾಕಿಸಿದರು ॥ 232

ಎಷ್ಟೆಂದು ಹೇಳಲಿ ಬಾಬಾರ ಉದಿಯ ಮಹಿಮಾನ । ಉದೀ ಶಂಕರನಿಗೂ ಭೂಷಣ ।
ಭಾವನೆಯಿಟ್ಟು ಮಾಡಲು ಚರ್ಚನ । ಎಟುರಸನ ತತ್ಕಾಲದಲ್ಲಿ ॥ 233

ಮುಗಿಸಿ ಮುಖಮಾರ್ಜನ ಸ್ನಾನಾದಿ । ನಿತ್ಯವೂ ಹಚ್ಚಿಕೊಳ್ಳಲು ಉದಿ ।
ಚರಣ ತೀರ್ಥದ ಜೊತೆ ಪಾನದಿ । ತೆಗೆದುಕೊಂಡವ ಪಾವನನಾಗುವ ॥ 234

ಅಲ್ಲದೇ ಈ ಉದಿಯ ವಿಶೇಷ । ಸೇವಿಸಿದವನಾಗುವ ಪೂರ್ಣಾಯುಷ ।
ಪಾತಕನಿರಸನವಾಗುವದು ಅಶೇಷ । ಸುಖಸಂತೋಷ ಯಾವಾಗಲೂ ॥ 235

ಪಾರಣೆಯ ಈ ಮಧುರ ಕಥಾಮೃತದ । ಸಾಯಿ ಅಪ್ಪಾನ ಸಲುವಾಗಿ ಮಾಡಿಸಿದ ।
ನಾವು ಆಗಂತುಕರು ಅತಿಥಿಯಾಗಿ ಬಂದ । ಪಂಕ್ತಿಗೆ ಕುಳಿತೆವು ಯಥೇಷ್ಟವಾಗಿ ॥236

ಅತಿಥಿಗೆ ಅಥವಾ ಒಡೆಯನಿಗೆ । ಒಂದೇ ಮೇಜವಾನಿ ಇಬ್ಬರಿಗೆ ।
ಭೇದವಿಲ್ಲ ರಸಸ್ವಾದನೆಯೊಳಗೆ । ಸ್ವಾನಂದ ಭೋಜನದಿಂದ ತೃಪ್ತರಾಗಿರಿ ॥ 237

ಹೇಮಾಡ ಸಾಯಿ ಚರಣದಲಿ ಶರಣ । ಸಾಕಿನ್ನೀಗ ಇಷ್ಟೇ ಶ್ರವಣ ।
ಮುಂದಿನಧ್ಯಾಯದಲಿ ಮಾಡುವೆನು ಕಥನ । ಹೆಚ್ಚಿನ ಮಹಿಮಾನ ಉದಿಯದು ॥ 238

ಉದೀ ಚರ್ಚನ ಸಾಯಿ ದರ್ಶನ । ಎಲುಬಿನ ವ್ರಣದ ಸಮೂಲ ನಿರಸನ ।
ನಾರೂ ನಿವಾರಣ ಗ್ರಂಥಿಜ್ವರ ಹರಣ । ಅವಧಾನಪೂರ್ಣರಾಗಿ ಕೇಳಿರಿ ॥ 239

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಉದೀ ಪ್ರಭಾವೋನಾಮ
ತ್ರಯಸ್ತ್ರಿಂಸತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದುಗರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

# ಅಧ್ಯಾಯ ಮುವತ್ತಾನಾಲ್ಕು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನಧ್ಯಾಯದಲಿ ಉದಿಯ ಮಹಿಮೆಯ ಕುರಿತು । ಅದಷ್ಟು ಮಟ್ಟಿಗೆ ಹೇಳಲಾಯಿತು ।
ಈ ಅಧ್ಯಾಯದಲಾದರೂ ಅದನ್ನೇ ಕುರಿತು । ಮತ್ತು ಗುರುಲಕ್ಷಣಗಳ ಮುಂದುವರೆಸುವಾ ॥ 1

ಅದೇ ಕಥೆಯ ಸಂಗತಿಯನು । ಅದೇ ಉದಿಯ ವೈಭವವ ವರ್ಣಿಸುವೆನು ।
ಸದ್ಯದಲಿ ಕೇಳಿ ಸ್ವಸ್ಥ ಚಿತ್ತದಿಂದಿದನು । ಸುಖ ಸಮಧಾನವೀಯುವದದು ॥ 2

ಕೆಟ್ಟ ರೋಗವದು ಎಲುಬಿನ ವ್ರಣ । ಯಾವ ಉಪಾಯದಿಂದಲೂ ಆಗಲಾರದ್ದು ಶಮನ ।
ಸಾಯಿ ಇತ್ತ ಉದಿಯ ಚರ್ಚನ । ವ್ಯಥೆಯ ನಿರ್ಮೂಲನಗೊಳಿಸಿತು ॥ 3

ಇಂಥ ಅನೇಕ ಉದಿಯ ಕಥೆಗಳದ್ದು । ಉದಾಹರಣಕ್ಕೆಂದು ಹೇಳುವೆನು ಒಂದು ।
ಕೇಳಿದರೆ ಕೌತುಕವೆನಿಸುವದು । ಅನುಭವಪೂರ್ವಕ ಹೇಳುವದರಿಂದ ॥ 4

ನಾಶಿಕ ಜಿಲ್ಹೆಯ ಮಾಲೇಗಾವ ಎಂಬಲ್ಲಿ । ಪದವೀಧರ ಡಾಕ್ಟರನೊಬ್ಬನಿದ್ದನಲ್ಲಿ ।
ಅವನ ಅಣ್ಣನ ಮಗ ವ್ಯಥೆಯಿಂದ ಬಳಲಿ । ಯಾವ ಔಷದದಿಂದಲೂ ಗುಣವಾಗದಾಗಿದ್ದ ॥ 5

ತಾನೂ ವೈದ್ಯರೂ । ನಾನಾ ವಿಧ ಉಪಚಾರ ಮಾಡಿದರು ।
ಕುಶಲ ಶಸ್ತ್ರಕ್ರಿಯಾ ತಜ್ಞರೂ । ಏನೂ ತಿಳಿಯದೇ ಸೋತರು ॥ 6

ರೋಗವಿದ್ದಿತು ಎಲುಬಿನ ವ್ರಣ । ದುರ್ಧರ ವ್ಯಾಧಿಯಿದು ವಿಲಕ್ಷಣ ।
ಎಷ್ಟೇ ಮಾಡಿದರು ಪ್ರಯತ್ನ । ಯಾವ ಔಷದದಿಂದಲೂ ಗುಣ ಬರದು ॥ 7

ದೇಶಿ ವಿದೇಶಿಯ ಎಲ್ಲ ಉಪಚಾರಗಳು । ಮಾಡಿ ಮುಗಿದವೆಲ್ಲ ಪ್ರಯತ್ನಗಳು ।
ಶಸ್ತ್ರ ಕ್ರಿಯೆಯನೂ ಮಾಡಲು । ಒಂದಿಷ್ಟು ಯಶಸ್ವಿಯಾಗಲಿಲ್ಲ ॥ 8

ಬಾಲಕನಿನ್ನೂ ಚಿಕ್ಕವನಿದ್ದ । ಆ ವ್ಯಥೆಯನ್ನು ಅವ ತಾಳದಾದ ।
ಕಷ್ಟದಿಂದ ಕಸಿವಿಸಿಗೊಂಡು ಪ್ರಾಣ । ಉದ್ವಿಗ್ನ ಮನರಾದರು ಆಪ್ತೇಷ್ಟರು ॥ 9

ಪರಮಾವಧಿಯಾಯಿತು ಉಪಾಯಗಳದು । ವ್ಯಾಧಿ ಒಂದಿಷ್ಟೂ ಹಿಮ್ಮೆಟ್ಟದು ।
ಇನ್ನುಳಿಯಿತು ದೈವತ್ವದ ಆರಾಧನೆಯೊಂದು । ಅದನೇ ಮಾಡಿರೆಂದರು ಆಪ್ತೇಷ್ಟರು ॥ 10

ದೇವ ದೇವತೆ ಕುಲಸ್ವಾಮಿಯೊಬ್ಬರೂ । ಉಪಯುಕ್ತರಾಗದಾದರು ।
ಒಬ್ಬ ಶ್ರೇಷ್ಠ ಫಕೀರ ಶಿರಡಿಯಲ್ಲಿರುವರು । ಎಂದು ಜನರಿಂದ ತಿಳಿಯಿತು ॥ 11

ಆ ಶಿರಡಿಯ ಸಂತಪ್ರವರ । ಸಾಯಿ ಮಹಾರಾಜ ಯೋಗೀಶ್ವರ ।
ಕೇವಲ ದರ್ಶನದಿಂದ ವ್ಯಾಧಿ ಪರಿಹಾರ । ಮಾಡುವದು ಸತ್ಯವೆಂದು ಕೇಳಿದರು ॥ 12

ಸಾಯಿ ದರ್ಶನದ ಇಚ್ಛೆಯಾಯಿತು । ಇದೂ ಒಂದು ಉಪಾಯ ಮಾಡಿದರಾಯಿತು ।
ಮಾತಾಪಿತರು ನಿಶ್ಚಯವಾಯಿತು । ದೇವರ ಹೆಸರು ತೆಗೆದುಕೊಂಡು ಹೊರಡಲು ॥ 13

ಎಂದರವ ಮಹಾನ ಫಕೀರನಿರುವನು । ಅವನು ಸ್ವಹಸ್ತದಿಂದ ಉದಿಯ ಹಚ್ಚುವನು ।
ಅದರಿಂದ ದುರ್ಧರ ರೋಗಗಳ ಕಳೆಯುವನು । ಅನುಭವ ನೋಡಲೇನು ಹೋದದ್ದು ॥ 14

ನಡೆಯಿರಿ ಅವನ ಪಾದಕೆ ವಂದಿಸೋಣ । ಈ ಕೊನೆಯ ಉಪಾಯವನ್ನೂ ಮಾಡಿನೋಡೋಣ ।
ಇದಾದರೂ ದೂರ ಮಾಡಲಿ ಆ ವ್ಯಾಧಿಯನ । ತರಣೋಪಾಯ ಇದೂ ಒಂದು ॥ 15

ಬಳಿಕ ಆ ತಂದೆ ತಾಯಿಗಳು । ಮಾಡಿಕೊಂಡೆಲ್ಲ ಸಿದ್ಧತೆಗಳು ।
ಶಿರಡಿಗೆ ಸತ್ವರ ಬರಲು । ಸಾಯಿ ದರ್ಶನಕೆ ಆತುರರಾಗಿ ॥ 16

ಬಂದ ತಕ್ಷಣಬಾಬಾರ ದರ್ಶನ ತೆಗೆದುಕೊಂಡರು । ಚರಣಕೊಂದಿಸಿ ಸಾಷ್ಟಾಂಗವೆರಗಿದರು ।
ಮಗುವಿನ ದುಃಖವ ಹೇಳಿಕೊಂಡರು । ಕೈ ಮುಗಿದು ನಿಂತರು ಎದುರಿಗೆ ॥ 17

ವಿಕಲರಾಗಿ ಕೈ ಮುಗಿದು । ಸಾಯಿ ಪಾದಗಳನ್ನು ಹಿಡಿದು ।
ಮುಖದಲ್ಲಿ ದೈನ್ಯ ತುಂಬಿದ್ದು । ವಿನಂತಿ ಮಾಡಿದರು ಸಾಯಿಗೆ ॥ 18

ವ್ಯಥೆಯಿಂದ ಬಳಲುತಿದೆ ಮಗು । ಅದರ ದುಃಖವ ನೋಡಲಾರದಾಗಿದೆ ನಮಗೂ ।
ಹೊಳೆಯದಾಗಿದೆ ಏನೂ ಬುದ್ಧಿಗೂ । ನಮಗಂತೂ ಧೈರ್ಯ ಸಾಲದಾಗಿದೆ ॥ 19

ಪುತ್ರನ ದುಃಖವ ನೋಡಲಾರದೇ । ಸಾಯಿ ಸಮರ್ಥಾ ಬಹಳ ದಣಿದೆ ।
ಅದಕೆ ಅಭಯ ಕರವಿವನ ಶಿರದೆ । ಇಟ್ಟು ವ್ಯಥೆಯ ಕಳೆಯಿರಿ ॥ 20

ತಮ್ಮ ಮಹಿಮೆಯ ಕೇಳಿ । ನಾವು ಓಡಿ ಬಂದೆವಿಲ್ಲಿ ।
ಅನನ್ಯ ಭಾವದಿ ಬಂದೆವೀ ಚರಣಗಳಲಿ । ಜೀವದಾನವ ಯಾಚಿಸುವೆವು ॥ 21

ಆ ಸಾಯಿ ಕರುಣಾಮೂರ್ತಿ ಅವರಿಗೆ । ಆಶ್ವಾಸನೆಯಿತ್ತು ಹೀಗೆ ।
ಮಶೀದಿಯ ಆಶ್ರಯಕೆ ಬಂದವರಿಗೆ । ಕಲ್ಪಾಂತದಲೂ ದುರ್ಗತಿ ಎಂಬುದಿಲ್ಲ ॥ 22

ಇನ್ನು ನೀವು ನಿಶ್ಚಿಂತರಾಗಿರಿ । ಉದಿ ತೆಗೆದುಕೊಂಡು ವ್ರಣಕ್ಕೆ ಹಚ್ಚಿರಿ ।
ದೇವರ ಮೇಲೆ ಭಾರ ಹಾಕಿರಿ । ನಾಲ್ಕೆಂಟು ದಿನಗಳಲಿ ಗುಣವಾಗುವದು ॥ 23

ಮಶೀದಿಯಲ್ಲ ದ್ವಾರಾವತಿಯಿದು । ಯಾರ ಕಾಲು ಇದರ ಭೂಮಿಯ ಮುಟ್ಟುವದು ।
ಕೂಡಲೇ ಕ್ಷೇಮ ಆರೋಗ್ಯವಾಗುವದು । ಇದರ ಪ್ರತೀತಿ ನಿಮಗೂ ಬರುವದು ॥ 24

ಇಲ್ಲಿ ಬಂದರೂ ಅರಾಮಾಗಿಲ್ಲ । ಹೀಗೆ ಕಾಲ ತ್ರಯಗಳಲ್ಲೂ ಆಗುವದಿಲ್ಲ ।
ಈ ಮಶೀದಿಯ ಮೆಟ್ಟಲೇರಿದವರೆಲ್ಲ । ಕಷ್ಟದಿಂದ ಪಾರಾಗುವರು ॥ 25

ಬಳಿಕ ಬಾಬಾರ ಆಜ್ಞೆಯನಾಂತು । ವ್ಯಥಿತನನು ಎದುರಿಗೆ ಕೂಡ್ರಿಸಲಾಯಿತು ।
ಕಾಲ ಮೇಲೆ ಬಾಬಾರ ಹಸ್ತ ಆಡಿತು । ಕೃಪಾವಲೋಕನ ಮಾಡಿದರಾಗ ॥ 26

ಈ ವ್ಯಥೆ ದೈಹಿಕವಿರುವದು । ದೈವಿಕವೇ ಇದ್ದರೂ ಅದು ।
ಅಥವಾ ದುರ್ಧರ ಮಾನಸಿಕದ್ದಿದ್ದು । ಅದೆಲ್ಲ ದರ್ಶನದಿಂದ ಸಮೂಲ ದೂರವಾಗುವದು ॥27

ನೋಡಿದಾಗ ಶ್ರೀ ಸಾಯಿ ಮುಖ । ಕೂಡಲೇ ಕರಗಿತೆಲ್ಲ ದುಃಖ ।
ರೋಗಿಗಾಯಿತು ಪರಮಸುಖ । ವಚನ ಪಿಯೂಷ ಪ್ರಾಶನದಿಂದ ॥ 28

ಮುಂದೆ ಅಲ್ಲಿಯೇ ಅವರು । ನಾಲ್ಕು ದಿನಗಳವರೆಗೆ ನಿಂತರು ।
ಕಡಿಮೆಯಾಗತೊಡಗಿತು ವ್ಯಾಧಿಯಾದರೂ । ಸಾಯಿ ಚರಣದಿ ವಿಶ್ವಾಸ ಉಂಟಾಯಿತು ॥ 29

ಆಮೇಲೆ ಅವರು ಮೂವರೂ । ಬಾಬಾರ ಅನುಮೋದನೆ ಪಡೆದರು ।
ಆನಂದಿತರಾಗಿ ತಿರುಗಿ ಹೋದರು । ಸಮಾಧಾನದಿಂದ ತಮ್ಮೂರಿಗೆ ॥ 30

ಈ ಚಮತ್ಕಾರ ಚಿಕ್ಕದೇನು । ಕಡಿಮೆ ಮಾಡಿತು ಎಲುಬಿನ ವ್ರಣವನು ।
ಉದಿ ಮತ್ತು ಕೃಪಾದೃಷ್ಟಿಯನು । ಬೀರುವದೇ ಅಪೂರ್ವ ಉಪಚಾರ ॥ 31

ಹೀಗೆ ಈ ಮಹಾಪುರುಷದರ್ಶನ । ಭಾಗ್ಯದಿಂದ ಲಭಿಸಲು ಆಶ್ವಾಸನ ।
ಕಲ್ಯಾಣಕಾರಕ ಆಶೀರ್ವಚನ । ಅದರಿಂದಲೇ ವ್ಯಾಧಿಯ ನಿರ್ಮೂಲನ ॥ 32

ಹೀಗೆ ಕೆಲದಿನ ಕಳೆದು । ವ್ರಣಕೆ ಉದಿಯನು ಹಚ್ಚಿ ತಾ ಸೇವಿಸುತಿದ್ದು ।
ಗಾಯ ಒಣಗಿ ತುಂಬಿ ಬಂದು । ಹುಡುಗ ಆರೋಗ್ಯವಂತನಾದ ॥ 33

ಕೇಳಿದನು, ಮಾಲೇಗಾವದಲಿರುವ ಚಿಕ್ಕಪ್ಪನಿಗೆ । ಉತ್ಸುಕತೆಯಾಯಿತು ಸಾಯಿ ದರ್ಶನದ ಬಗ್ಗೆ ।
ಎಂದು ಕೊಂಡು ಮುಂಬಯಿಗೆ ತಿರುಗಿ ಹೋಗುವಾಗ್ಗೆ । ಈ ಇಚ್ಛೆಯ ಪೂರೈಸಿಕೊಳಬೇಕು ॥34

ಮುಂದೆ ಹೊರಟಾಗ ಮುಂಬಯಿಗೆ । ಮಾಲೇಗಾವ ಮತ್ತು ಮನಮಾಡಗಳೊಳಗೆ ।
ಯಾರೋ ವಿಕಲ್ಪ ಹುಟ್ಟಿಸಿದರವರ ಮನದೊಳಗೆ । ಅದರಿಂದ ಶಿರಡಿಯಾತ್ರೆ ನಿಂತಿತು ॥ 35

ಸತ್ಕಾರ್ಯದ ರೀತಿಯೇ ಹೀಗೆ । ಕುತ್ಸಿಕ ಜನ ಅಡ್ಡಿ ಮಾಡುವರು ಮೊದಲಿಗೇ ।
ಆದರೆ ಬಲಿಬೀಳದೇ ಲೋಕ ಪ್ರವಾದಗಳಿಗೆ । ಕೊನೆಗೆ ಸದ್ಗತಿ ಅವರಿಗೆ ॥ 36

ಬಳಿಕ ಸಂತದರ್ಶನವ ತ್ಯಜಿಸಿ ಹಾಗೇ । ನೆಟ್ಟಗೇ ಹೋದರು ಮುಂಬಯಿಗೆ ।
ಉಳಿದ ರಜೆಯನು ಅಲೀಬಾಗದೊಳಗೆ । ಕಳೆಯಬೇಕೆಂದು ವಿಚಾರ ಮಾಡಿದರು ॥ 37

ಈ ರೀತಿ ನಿಶ್ಚಯಿಸಲಾಗಿ । ಮೂರು ರಾತ್ರಿಯಲಿ ಸಾಲಾಗಿ ।
'ಇನ್ನೂ ಅವಿಶ್ವಾಸವೇ ನನ್ನಲ್ಲಿ' । ನಿದ್ರೆಯಲೀ ಮಾತು ಕೇಳಿಸುತಿತ್ತು ॥ 38

ಬಿಟ್ಟೂ ಬಿಡದೇ ಈ ಅಶರೀರ ವಾಣಿಯ ಕೇಳಿ । ಡಾಕ್ಟರ ವಿಸ್ಮಿತನಾದ ಮನದಲಿ ।
ಹಿಂದೆ ನಿಶ್ಚಯಿಸಿದ ಶಿರಡಿಯ ಪ್ರಯಾಣವನಲ್ಲಿ । ಅನ್ವರ್ಥ ಧ್ವನಿ ಎನಿಸಿತು ॥ 39

ಆದರೊಬ್ಬನಿಗೆ ದೂಷಿತ ಜ್ವರ । ಅವನಿಗೆ ಈ ಡಾಕ್ಟರರದೇ ಉಪಚಾರ ।
ಅವನಿಗೆ ಆರಾಮಾದ ನಂತರ । ಕೂಡಲೇ ಹೊರಡುವದೆಂದು ನಿಶ್ಚಯಿಸಿದರು ॥ 40

ಆದರೆ ಆ ಪ್ರಖರವಾದ ಜ್ವರ । ಹಿಮ್ಮೆಟ್ಟದು ಮಾಡಿದರೂ ಎಂಥ ಉಪಚಾರ ।
ಒಂದಿಷ್ಟೂ ಕಾಣದು ಇಳಿತರ । ಆದರಿಂದ ಬೇಗ ಹೊರಡುವದಾಗಲಿಲ್ಲ ॥ 41

ಬಳಿಕ ನಿರ್ಧರಿಸಿ ಮನದಲ್ಲಿ । ಇಂದೇ ಇವನಿಗೆ ಜ್ವರ ನಿಂತಲ್ಲಿ ।
ಶಿರಡಿಗೆ ಹೊರಟು ಬಿಡುವೆ ನಾಳೆ । ಕ್ಷಣದ ವಿಲಂಬವ ಮಾಡದೇ ॥ 42

ಹೀಗೆ ಮಾಡಲು ದೃಢ ಸಂಕೇತ । ಪ್ರಹರ ಪ್ರಹರಗಳಿಗೆ ಜ್ವರ ಇಳಿಯುತ್ತ ।
ಸಫಲವಾಯಿತು ಅವರ ಅಭೀಷ್ಟ । ಡಾಕ್ಟರ ಶಿರಡಿಗೆ ಹೊರಟರು ॥ 43

ಸಂಕಲ್ಪಿಸಿದಂತೆ ಶಿರಡಿಗೆ ಹೋದರು । ಮನೋಭಾವದಿಂದ ಚರಣಗಳಿಗೊಂದಿಸಿದರು ।
ಬಾಬಾರೂ ಒಳಗಿದ್ದ ಅನುಭವವ ತೋರಿಸಿಕೊಟ್ಟರು । ನಿಜಸೇವೆಯ ಚಿತ್ತವನಿಸಿರಿಕೊಂಡರು ॥ 44

ಮಸ್ತಕದಲಿ ಆಶೀರ್ವಾದದ ಹಸ್ತವನಿಟ್ಟು । ಉದೀ ಪ್ರಸಾದವನು ಕೊಟ್ಟು ।
ಆದರಿಂದ ಡಾಕ್ಟರ ಮನದಿ ವಿಸ್ಮಯಪಟ್ಟು । ಬಾಬಾರ ಅಗಾಧಮಹಿಮೆಯನು ಕಂಡು ॥45

ನಾಲ್ಕು ದಿನ ನಿಂತರಲ್ಲಿ । ತಿರುಗಿ ನಡೆದರು ಆನಂದ ತುಂಬಿದೆ ಮನದಲ್ಲಿ ।
ಮುಂದೆ ಹದಿನೈದೇ ದಿನಗಳಲ್ಲಿ । ವಿಜಾಪುರಕೆ ವರ್ಗವಾಯಿತು ಬಡತಿ ಸಿಕ್ಕು ॥ 46

ಅಸ್ಥಿವ್ರಣದ ಕಾರಣದಿಂದ । ಸಾಯಿ ದರ್ಶನಲಾಭ ಪಡೆದ ।
ಸಂತ ಚರಣದ ಸವಿಯುಂಡ । ಕೊನೆವರೆಗೆ ಅದನೇ ಸಾಧಿಸಿಕೊಂಡ ॥ 47

ಒಮ್ಮೆ ಡಾಕ್ಟರ ಪಿಳ್ಳೆಯವರು । ನಾರು ಹುಣ್ಣಿನಿಂದ ಪೀಡಿತರಾದರು ।
ಜೀವಕ್ಕೇ ಬೇಸತ್ತರವರು । ಒಂದರ ಬಳಿಕೊಂದು ಏಳು ಹುಣ್ಣುಗಳಾದಾಗ ॥ 48

ಬಾಬಾರದು ಅವರ ಮೇಲೆ ಪ್ರೇಮ ಬಲು । 'ಭಾವೂ' ಎಂದೇ ಅವರನು ಸಂಭೋದಿಸುತಿರಲು
।ಭಾವೂರ ಕುಶಲ ಕ್ಷೇಮವನು ನಿತ್ಯದಲೂ । ಬಹಳ ಮಮತೆಯಿಂದ ಕೇಳುತಿದ್ದರು ॥ 49

ಸಂಜೆ ಮುಂಜಾವು ಮಶೀದಿಯಲಿ । ಭಾವೂರ ಸ್ಥಳ ಕಟಕಟೆಯ ಹತ್ತಿರದಲಿ ।
ಬಹಳ ಹೊತ್ತು ಭಾವೂನ ಜೊತೆಯಲಿ । ಬಹಳಷ್ಟು ಮಾತಾಡುತಿದ್ದರು ॥ 50

ಚಿಲುಮೆ ಎಳೆಯುವಾಗ ಭಾವೂಬೇಕು । ಬೀಡಿ ಸೇದುವಾಗ ಭಾವೂ ಬೇಕು ।
ನ್ಯಾಯ ನೀಡುವಾಗ ಭಾವೂ ಬೇಕು । ಭಾವೂ ಹತ್ತಿರವಿರದೇ ಸಮಾಧಾನವಿಲ್ಲ ॥ 51

ಹೀಗೆ ಅವರ ಸಂಗತಿ ಇರಲಾಗಿ । ಹುಣ್ಣಿನ ನೋವು ಅಸಹ್ಯವಾಗಿ ।
ದುರ್ಧರ ದುಃಖೋದ್ವೇಗದಿಂದಾಗಿ । ಹಾಸಿಗೆ ಹಿಡಿದರು ಭಾವೂ ಆಗ ॥ 52

ಇಂಥ ದಾರುಣ ಪ್ರಸಂಗದಲ್ಲಿ । 'ಸಾಯಿ' ನಾಮಸ್ಮರಣ ಮುಖದಲಿ ।
ಈ ಯಾತನೆ ಸಾಕಿನ್ನು ಮರಣ ಬರಲಿ । ಎಂದು ಸಾಯಿಗೆ ಶರಣು ಬಂದರು ॥ 53

ಈ ದುಃಖ ಭೋಗಿಸಿ ಬೇಸತ್ತಿರುವೆ ಬಹಳ । ಎಷ್ಟೊಂದು ವ್ರಣಗಳು ಮೈಗೆಲ್ಲ ।
ಇನ್ನಿದನು ನನ್ನಿಂದ ತಡೆಯಲಾಗುವದಿಲ್ಲ । ಎಂದು ಬಾಬಾರಿಗೆ ಹೇಳಿ ಕಳಿಸಿದರು ॥54

ಶುದ್ಧಾಚರಣೆಯಿಂದ ವರ್ತಿಸುತಿದ್ದು । ಏಕೆ ನನಗೀ ದುಃಖಾವಸ್ಥೆ ಬಂದದ್ದು ।
ದುಷ್ಕರ್ಮದತ್ತ ಹೊರಳಿಯೂ ನೋಡದಿದ್ದು । ಏಕೆ ಈ ಪಾಪ ನನ್ನ ತಲೆಗೆ ॥ 55

ಮರಣಪ್ರಾಯ ಈ ನಾರಿನ ವೇದನೆ । ತಡಕೊಳ್ಳುವಷ್ಟಿಲ್ಲ ನನಗಿನ್ನು ಸಹನೆ ।
ಇದಕಿಂತಲೂ ನನಗೆ ಬರಲಿನ್ನು ಮರಣ । ಮುಂದೆ ಮತ್ತಿದನು ಭೋಗಿಸೇನು ॥ 56

ಇದನು ಭೋಗಿಸದ ಹೊರತು ಗತಿ ಇರದು । ಇದಕೆ ಮತ್ತೆ ಜನ್ಮಗಳ ಪಡೆಯಬೇಕಾಗುವದು ।
ಪ್ರಾರಬ್ಧಯೋಗವೆಂದೂ ತಪ್ಪದು । ನಾಮಂದಮತಿಯು ಇದ ತಿಳಿದಿರುವೆ ॥ 57

ಸುಖದಿಂದ ಪಡೆಯುವೆನು ಇನ್ನೂ ಹತ್ತು ಜನ್ಮ । ಆಗ ನಾ ಭೋಗಿಸುವೆ ನನ್ನ ಈ ಕರ್ಮ ।
ಮಾಡಿರಿ ನನಗಿದೊಂದು ಧರ್ಮ । ಈ ಜನ್ಮದಿಂದ ಬಿಡುಗಡೆ ಮಾಡಿರಿ ॥ 58

ಇನ್ನು ಈ ಜನ್ಮದ ಜೀವನ ಸಾಕು । ಈ ಜೀವ ಪ್ರಾಣದಿಂದ ನನ್ನ ಬಿಡುಗಡೆ ಮಾಡಿಸಬೇಕು ।
ಇದೊಂದೇ ನನಗೆ ನೀವು ದಯಪಾಲಿಸಬೇಕು । ಈ ಭೋಗಿಸುವದನ್ನು ಬಿಡಿಸಬೇಕು ॥59

ಸಿದ್ಧಿರಾಜನು ಕೇಳಿ ಪ್ರಾರ್ಥನೆಯನಿಂತು । ಅಂತಃಕರಣ ದಯೆಯಿಂದ ತುಂಬಿತು ।
ಡಾಕ್ಟರ ಪಿಳ್ಳೆಯವರ ಮೇಲೆ ವರ್ಷಿಸಿದರೆಂತು । ಕರುಣಾಮೃತವನದ ಸೇವಿಸಿರಿ ॥ 60

ಬಳಿಕ ಆ ಭಕ್ತಕಾಮ ಕಲ್ಪದ್ರುಮ । ನೋಡಿ ದುಃಖಾವಸ್ಥೆ ಪರಮ ।
ಮಾಡಲಿದರ ಉಪಶಮ । ಏನು ಉಪಕ್ರಮವ ಹೂಡಿದರು ॥ 61

ದೀಕ್ಷಿತರು ತಿರುಗಿ ಬಂದು ಹೇಳಿದರು । ತಿಳಿಸಿದ ಸಂಗತಿಯ ಕೇಳಿ ಬಾಬಾ ಅವರು ।
ಅವನಿಗೆ ಹೋಗಿ ಹೇಳು ಎಂದರು । "ನಿರ್ಭಯನಾಗಿರು ಚಿತ್ತದಲ್ಲಿ" ॥ 62

ಅವನಿಗೆ ಹೇಳಿರೆಂದರು ಮತ್ತೂ । "ಏತಕೆ ವಿಚಾರ ಜನ್ಮಗಳ ಹತ್ತು ।
ಭೋಗಿಸಿದರೆ ಸಾಕು ದಿನಗಳು ಹತ್ತು । ಭೋಗಿಸುವಾ ಪರಸ್ಪರ ವಿಭಾಗಿಸಿಕೊಂಡು ॥ 63

ಮೋಕ್ಷ ಸ್ವಾರ್ಥ ಅಥವಾ ಪರಮಾರ್ಥ । ಇವುಗಳ ನೀಡಲು ನಾನಿರಲು ಸಮರ್ಥ ।
ಇದುವೇ ಏನು ನಿನ್ನ ಪುರುಷಾರ್ಥ । ಅನರ್ಥದ ಮರಣವ ಬಯಸುತಿರುವಿ ॥ 64

ಎತ್ತಿಕೊಂಡು ಬನ್ನಿರಿ ಅವನ । ಭೋಗವ ಭೋಗಿಸಿಯೇ ಮುಗಿಸೋಣ ।
ಹೊತ್ತುಕೊಂಡು ಬೆನ್ನ ಮೇಲೆ ಅವನ । ಹೀಗೆಲ್ಲ ಭಯಪಡಬಾರದೆಂದೂ" ॥ 65

ಡಾಕ್ಟರನನ್ನು ಈ ಸ್ಥಿತಿಯಲ್ಲಿ । ಕೂಡಲೇ ತಂದರು ಮಶೀದಿಯಲ್ಲಿ ।
ತಮ್ಮ ಬೆನ್ನಿಗೆ ಇದ್ದ ತೆಕ್ಕೆಯ ತೆಗೆದು ತಮ್ಮ ಕೈಲಿ । ಬಾಬಾ ಅವನಿಗೆ ಕೊಟ್ಟರು ॥ 66

ಇಟ್ಟರು ತಮ್ಮ ಬಲಬದಿಯಲ್ಲಿ । ಫಕೀರ ಬಾಬಾ ಕುಳಿತುಕೊಳ್ಳುವ ಸ್ಥಳದಲ್ಲಿ ।
ಬಾ ಸುಮ್ಮನೇ ಬಿದ್ದುಕೋ ಇಲ್ಲಿ । ಏನೇನೋ ಚಿಂತೆ ಮಾಡದಿರು ॥ 67

ಕುಳಿತುಕೋ ಉದ್ದವಾಗಿ ಕಾಲು ಚಾಚಿಕೊಂಡು । ಯಾವುದರಿಂದ ನಿನಗೆ ಆರಾಮವೆನಿಸುವದು ।
ಭೋಗಿಸದೇ ಸಂಚಿತ ಮುಗಿಯದು । ನಿಜವಾದ ಉಪಾಯ ಅದು ಒಂದೇ ॥ 68

ಇಷ್ಟಾನಿಷ್ಟ ಸುಖದುಃಖಗಳಿವು । ಕರ್ಮಾನುಸಾರ ಅಮೃತ ಅಥವಾ ವಿಷವಾಗಿರುವವು ।
ಪ್ರವಾಹಪತಿತ ದ್ವಂದ್ವಗಳಿವು । ಅದರ ಹರ್ಷ ದುಃಖಗಳ ಗಣಿಸದಿರು ॥ 69

ಬಂದದ್ದನ್ನೆಲ್ಲ ಸಹಿಸು । ಅಲ್ಲಾ ಮಾಲಿಕನ ಮೇಲೆ ನಂಬಿಕೆ ಇರಿಸು ।
ಅವನ ಚಿಂತನೆಯಲ್ಲಿ ಮನ ತೊಡಗಿಸು । ಅವನೆಲ್ಲ ಚಿಂತೆಯ ಹೊರುವನು ॥ 70

ಚಿತ್ತ-ವಿತ್ತ-ಕಾಯಾ-ಮಾತು । ಇವೆಲ್ಲವುಗಳಿಂದ ಅವನಿಗೆ ಶರಣು ಹೊಕ್ಕು ।
ಯಾವಾಗಲೂ ಅವನನ್ನೇ ನೆನೆಯುತಿದ್ದರೆ ಸಾಕು । ಅವನೇನು ಮಾಡುವನೆಂದು ಕಂಡು ಬರುವದು ॥ 71

ಆಗ ಡಾಕ್ಟರ ಪಿಳ್ಳೆ ಎಂದರು । ಹುಣ್ಣಿನ ಮೇಲೆ ಪಟ್ಟಿ ಕಟ್ಟುರುವರು ।
ನಾನಾ ಸಾಹೇಬ ಚಾಂದೋರಕರ ಅವರು । ಆದರೂ ಒಂದಿಷ್ಟೂ ಗುಣವಿಲ್ಲ ॥ 72

ಬಾಬಾ ಎಂದರು 'ನಾನಾಅವ ಹುಚ್ಚು । ನೀನು ಸತ್ತು ಹೋಗುವ ಮೊದಲು ಆಪಟ್ಟಿಯ ಬಿಚ್ಚು ।
ಇನ್ನು ಕಾಗೆ ಬಂದು ಹೊಡೆಯುವದು ಚುಂಚು । ಬಳಿಕ ನೀ ಆರಾಮಾಗುವಿ' ॥ 73

ಮಾತು ಕಥೆಗಳು ನಡೆದವು ಹೀಗೆ । ಅಬ್ದುಲ್ಲ ಬಂದ ಕೂಡಲೇ ಅಲ್ಲಿಗೆ ।
ಎಣ್ಣೆ ಹಾಕಬೇಕಾಗಿತ್ತು ಹಣತೆಗಳಿಗೆ । ಆಗ ಆಕಸ್ಮಾತ ಏನು ನಡೆಯಿತೆಂದರೆ ॥ 74

ಮಶೀದಿ ಮೊದಲೇ ಚಿಕ್ಕದು । ಬಹಳ ಗದ್ದಲವಲ್ಲಿ ಭಕ್ತರದು ।
ಅಂಥದರಲ್ಲಿಯೇ ವಸತಿ ಪಿಳ್ಳೆಯವರದು । ಅಬ್ದುಲ್ಲನಿಗೆ ಓಡಾಡಲು ಸ್ಥಳವಿಲ್ಲ ॥ 75

ಅಬ್ದುಲ್ಲಾ ನಿಜ ಕಾರ್ಯದಲಿ ದಕ್ಷ । ಹಣತಿಗಳತ್ತಲೇ ಅವನದೆಲ್ಲ ಲಕ್ಷ್ಯ ।
ಅದರಿಂದ ಪಿಳ್ಳೆಯವರತ್ತಾಯಿತು ದುರ್ಲಕ್ಷ್ಯ । ಆಗ ವಿಚಿತ್ರ ಘಟನೆ ನಡೆಯಿತು ॥ 76

ಅಬ್ದುಲ್ಲಾನಾದರೂ ಏನು ಮಾಡಿಯಾನು । ಆಗುವದನು ಅವ ಹೇಗೆ ತಪ್ಪಿಸಿಯಾನು ।
ಪಿಳ್ಳೆಯವರ ಚಾಚಿದ ಕಾಲನು । ತುಳಿದು ಬಿಟ್ಟನು ತಪ್ಪಿ ॥ 77

ಮೊದಲೇ ಕಾಲಿಗೆ ಊತವಿತ್ತು । ಅದರ ಮೇಲೆಯೇ ಅಬ್ದುಲ್ಲಾನ ಕಾಲು ಬಿತ್ತು ।
ಪಿಳ್ಳೆಯವರ ಜೀವ ಅತಿ ಕಳವಳಿಸಿತು । ಬೊಬ್ಬೆ ಹೊಡೆದರು ನೋವಿನಿಂದ ॥ 78

ಒಮ್ಮೆಲೇ ಚಿಟ್ಟನೇ ಚೀರಿ । ನೆತ್ತಿಯ ತನಕ ನೋವು ಏರಿ ।
ಬಾಬಾರಿಗೆ ವಿನಂತಿಸಿದರೀ ಪರಿ । ಕರುಣಾಪೂರಿತರಾಗಿ ಕೈಮುಗಿದು ॥ 79

ವ್ರಣ ಒಡೆದು ಹರಿಯತೊಡಗಲು । ಪಿಳ್ಳೆ ಅತ್ಯಂತ ಅಸ್ವಸ್ಥ ಚಿತ್ತದೊಳು ।
ಒಂದೆಡೆ ನಡೆದಿತ್ತು ಅಳು । ಜೊತೆಗೇ ಆತ ಹಾಡತೊಡಗಿದರು ॥ 80

"ಕರಮಕರ ಮೇರೆ ಹಾಲಪರ ತೂ ಕರೀಮ । ತೇರಾನಾಮ ರಹಿಮಾನ ಹೈಔರ ರಹೀಮ ।
ತೂಹೀ ದೋನೋ ಆಲಮಕಾ ಸುಲ್ತಾನ ಹೈ" । ಜಂಹಾಮೆ ನುಮಾಯಾ ತೇರೀ ಶಾನ ಹಜೈ ।

ಫನಾ ಹೋನೇ ವಾಲಾ ಹೈಸಬಕಾರೋಬಾರ । ರಹೇ ನೂರ ತೇರಾ ಸದಾ ಆಶಕಾರ ।
ತೂ ಆಶಿಕಕಾ ಸದಾ ಮದದಗಾರ ಹೈ ॥

ತಡೆ ತಡೆದು ಕಳೆ ಬರುತಿತ್ತು । ಜೀವ ಕಳವಳಿಸಿ ದೇಹ ವಿಕಲವಾಯ್ತು ।
ಎಲ್ಲರಿಗೂ ತಿಳಿದು ಹೋಯಿತು । ಈ ಆಟವೆಲ್ಲ ಬಾಬಾರದೇ ಎಂದು ॥ 81

ಬಾಬಾ ಎಂದರು "ನೋಡು ಭಾವು । ಈಗ ಹೇಗೆ ಬದಲಿಸಿತು ಬಣ್ಣ" ।
ಪಿಳ್ಳೆ ಅವರಿಗೆ ಕೇಳುತಿದ್ದರು ಕಾಗಣ್ಣ । ಬಂದಿನ್ನೂ ಚಂಚು ಹೊಡೆಯುವದೇ ॥ 82

ಬಾಬಾ ಎಂದರು "ನೀನಿನ್ನು ಹೋಗು । ಸ್ವಸ್ಥವಾಗಿ ವಾಡೆಯಲಿ ಮಲಗು ।
ಇನ್ನು ಆ ಕಾಗೆ ಬರದೆಂದಿಗೂ । ಮತ್ತೆ ನಿನ್ನನ್ನು ಚುಚ್ಚಲು ॥ 83

ಇದೀಗ ಬಂದು ಹೋಗಲಿಲ್ಲವೇನೇ । ಆ ನಿನ್ನ ಕಾಲು ತುಳಿದವನೇ ।
ಆ ಕಾಗೆ ನಿನ್ನ ಚುಚ್ಚಿದವನೇ । ನಾರಿನ ಬೇರು ಕಿತ್ತು ಬಿಟ್ಟ"॥ 84

ಎಲ್ಲಿಯ ಕಾಕ ಎಲ್ಲಿಯ ಕಾಗೆ । ಪ್ರಕಾರ ನಡೆಯಿತೆಲ್ಲ ಕಣ್ಣೆದುರಿಗೇ ।
ಕಾಗೆ ಬಂದಿತ್ತು ಅಬ್ದುಲ್ಲಾನ ರೂಪದೊಳಗೆ । ಆ ಮಾತಿಗೆ ಅನ್ವರ್ಥ ಹಚ್ಚಲಾಯಿತು ॥ 85

ಮಾತು ಅಲ್ಲ ಅದು ಬ್ರಹ್ಮ ಲಿಖಿತ । ಕರ್ಮದ ಮೇಲೂ ಗೂಟದ ಜಡೆತ ।
ಒಂದಿಷ್ಟು ಸಮಯ ಕಳೆಯುತ । ಭಾವೂಗೆ ಹಗುರವೆನಿಸತೊಡಗಿತು ॥ 86

ಉದೀ ಲೇಪನ ಉದಿ ಸೇವನ । ಇದೇ ಔಷಧ ಇದೇ ಅನುಪಾನ ।
ಆಯಿತು ಸಮೂಲ ರೋಗ ನಿರಸನ । ಹತ್ತನೆಯ ದಿನ ಬೆಳಗಾಗುವಷ್ಟರಲ್ಲಿ ॥ 87

ಹೊರಟವು ಸಜೀವ ಏಳು ಜಂತುಗಳು । ನೋವಿನೊಳಗಿಂದ ಸಣ್ಣ ತಂತುಗಳು ।
ಶಾಂತವಾದವು ದುರ್ಧರ ವೇದನೆಗಳು । ದುಃಖವು ಅಂತ್ಯಗೊಂಡಿತು ॥ 88

ತಿಳಿದು ಇಂಥ ಚಮತ್ಕಾರಗಳು । ಪಿಳ್ಳೆಗೆ ಆಶ್ಚರ್ಯ ಮನದೊಳು ।
ಕಣ್ಣಿಂದ ಸುರಿದವು ಪ್ರೇಮಧಾರೆಗಳು । ಆ ಉದಾರಚರಿತನನು ಕಂಡು ॥ 89

ಬಾಬಾರ ಚರಣಗಳಿಗೆ । ಪಿಳ್ಳೆಹಾಕಿದ ಬಿಗಿಯಾದ ಅಪ್ಪುಗೆ ।
ಕಣ್ಣೀರಿನಲಿ ಕಟ್ಟಿತು ಕುತ್ತಿಗೆ । ಮುಖದಲೊಂದು ಮಾತೂ ಬರಲೊಲ್ಲದು ॥ 90

ಹೇಳಿ ಇನ್ನೊಂದು ಅನುಭವವನು । ಮುಗಿಸುವಾ ಅಲ್ಲಿಗೆ ಈ ಉದೀ ಪ್ರಭಾವವನು ।
ಮನದಲ್ಲಿ ಭಾವವಿದ್ದಂತೆ ಇರುವದನು । ಇದೇ ಗ್ರಂಥದ ಗೌರವ ॥ 91

ಒಮ್ಮೆ ಮಾಧವರಾವ ಜೇಷ್ಠ । ಅವರ ತಮ್ಮ ಬಾಪಾಜಿ ಕನಿಷ್ಠ ।
ಹೇಗೆ ಅವರ ಮೇಲೆ ಬರಲು ಅರಿಷ್ಠ । ಉದಿಯಿಂದ ಅಭೀಷ್ಟ ಹೊಂದಿದರು ॥ 92

ಈ ಉದಿಯ ಪ್ರಭಾವವು ಹೀಗೆ । ಅದರ ಚಮತ್ಕಾರಗಳ ಬಣ್ಣಿಸಲಿ ಹೇಗೆ ।
ಗ್ರಂಥಿ ಜ್ವರಗಳಂಥೆಲ್ಲ ರೋಗಗಳಿಗೆ । ಅಪೂರ್ವ ಔಷಧ ಬೇರೆ ಇಲ್ಲ ॥ 93

ಇದ್ದಾಗ ಸಾವುಳ ಬಾವಿಯ ಹತ್ತಿರ । ಪತ್ನಿಗೆ ಬಂದಿತಾಗ ಜ್ವರ ।
ಗ್ರಂಥಿಗಳುದ್ಭವಿಸಿದವು ಕಾಲುಗಳಿಗೆ । ಆಗ ಬಹಳ ಹೆದರಿಕೆಯಾಯಾತು ಬಾಪಾಜಿಗೆ ॥ 94

ನೋಡಿ ಪತ್ನಿಯಾದದ್ದು ಹೈರಾಣ । ಅಂತೆಯೇ ರಾತ್ರಿಯ ವೇಳೆಯೂ ಭಯಾಣ ।
ಬಾಪಾಜಿಯಾದ ಭ್ರಾಂತಮನ । ಅವನ ಧೈರ್ಯವೇ ಉಡುಗಿತು ॥ 95

ಅಂಥ ರಾತ್ರಿಯಲ್ಲಿಯೇ ಓಡೋಡಿ ಹೋದ । ಭಯದಿಂದ ನಡುಗುತ್ತ ಶಿರಡಿಗೆ ಬಂದ ।
ನಡೆದ ಸಂಗತಿಯನ್ನೆಲ್ಲ ಅರುಹಿದ । ತನ್ನ ಸೋದರನ ಮುಂದೆ ॥ 96

ಎರಡು ಗಂಟುಗಳೆದ್ದಿವೆಯೆಂದ । ಕಷ್ಟ ಪಡುತಿರುವಳು ಬಹಳ ಜ್ವರದಿಂದ ।
ನೀವೇ ಬಂದು ನೋಡಿರಿ ನಿಮ್ಮ ಕಣ್ಣಿಂದ । ಲಕ್ಷಣ ಸರಿ ಕಾಣಲೊಲ್ಲದು ॥ 97

ಹೀಗೆ ದೈನ್ಯ ತುಂಬಿ ಬಾಪಾಜಿ ಹೇಳಲು । ಮಾಧವರಾಯ ಬೆಚ್ಚಿದ ಮನದೊಳು ।
ಅವನ ಮುಖ ಬಿಳಚಿಕೊಂಡಿತು । ಮನ ಅಸ್ಥಿರವಾಯಿತು ॥ 98

ಬಹಳ ವಿವೇಕಿ ಮಾಧವರಾವ । ಗ್ರಂಥಿ ಎಂದಾಗ ಹೆದರಿದನವ ।
ಗ್ರಂಥಿ ಜ್ವರದ ಅವಿಲಂಬತನವ । ಎಲ್ಲರಿಗೂ ತಿಳಿದೇ ಇರುವದು ॥ 99

ಪ್ರಸಂಗವು ಒಳ್ಳೆಯದಿರಲಿ ಅಥವಾ ಕೆಟ್ಟದ್ದು । ಕಾರ್ಯವು ಇರಲಿ ಇಷ್ಟಾನಿಷ್ಟ ಎಂಥದ್ದೋ ।
ಮೊದಲು ಸಾಯಿಗೇ ಉಪಾಯ ಕೇಳುವದು । ಶಿರಡಿಯಲಿ ಈ ಪ್ರಥೆಯೇ ಇದ್ದಿತು ॥ 100

ಬಳಿಕವರು ಹೇಳುವರು ಹೇಗೆ । ಆಚರಿಸಬೇಕಲ್ಲ ಅದರ ಹಾಗೇ ।
ಅವರದೇ ನಿವಾರಣೆ ಕಷ್ಟದಲ್ಲಿದ್ದ ಭಕ್ತರಿಗೆ । ಅಂಥ ಅನುಭವಗಳೆನಿಷ್ಟು ವರ್ಣಿಸಬೇಕು ॥ 101

ಹೀಗಿರಲು ಅದರ ಪ್ರಕಾರ । ಮಾಧವರಾಯ ಮಾಡಿದ ವಿಚಾರ ।
ಮೊದಲು ಹೋದ ಬಾಬಾರ ಹತ್ತಿರ । ಸಾಷ್ಟಾಂಗ ನಮಸ್ಕರಿಸಿದ ॥ 102

ಎಂದರು ಜಯ ಜಯ ಸಾಯಿನಾಥಾ । ನಮ್ಮಂಥ ಅನಾಥರ ಮೇಲೆ ದಯೆ ತೋರು ಸಮರ್ಥಾ ।
ಇದೆಂಥ ಸಂಕಟ ಬಂದಿತು ನೋಡೆನ್ನುತಾ । ಸಾಯಿಗೆ ಶರಣಾಗತನಾಗಿ ॥ 103

ನಿನ್ನ ಬಿಟ್ಟು ಯಾರ ಬಳಿಗಿನ್ನು । ನಾವು ಹೋಗೋಣ ಯಾಚಿಸಲಿದನು ।
ದೂರ ಮಾಡು ಆ ಅಬಲೆಯ ಯಾತನೆಗಳನು । ಆಶೀರ್ವಚನವ ನೀಡೆಮಗೆ ॥ 104

ಈ ಸಂಕಟವ ಪರಿಹರಿಸು । ಈ ದುರ್ಧರ ಜ್ವರವ ಶಾಂತಗೊಳಿಸು ।
ಯಾರೆಮಗೆ ರಕ್ಷಕರು ನಿನ್ನ ಹೊರತು । ನಿನ್ನ ಖ್ಯಾತಿ ಉಳಿಸಿಕೊಳಬೇಕು ದೇವಾ ॥105

ಹೋಗಲು ಅನುಜ್ಞೆಯ ಕೇಳಿದಾಗ್ಯೆ । ಬಾಬಾ ನುಡಿದರು ಅವನಿಗೆ ।
"ಉದಿಯನಿಷ್ಟು ಕಳಿಸಿಕೊಡು ಅವಳಿಗೆ । ಈ ಅಪರಾತ್ರಿಯಲಿ ಹೋಗುವದು ಬೇಡ ॥ 106

ಯಾವ ಗಂಟು ಜ್ವರ ಯಾರಿಗೆ । ಅಲ್ಲಾ ಮಾಲಿಕ ನಮ್ಮ ತಂದೆ ಇರುವಾಗ್ಯೆ ।
ಆರೋಗ್ಯ ಹೊಂದುವಳು ಅನಾಯಾಸವಾಗೇ । ತನ್ನಷ್ಟಕ್ಕೆಲ್ಲ ಸರಿಯಾಗುವದು ॥ 107

ಮಾತ್ರ ನೀನು ಸೂರ್ಯೋದಯದ ಕಾಲಕ್ಕೆ ಬೆಳಿಗ್ಗೆ । ಹೋಗಿ ಬಾ ಸಾವುಳ ಬಾವಿಯವರೆಗೆ ।
ಹೋಗುವ ಅವಸರ ಬೇಡ ಈಗ್ಯೆ । ಸ್ವಸ್ಥನಾಗಿ ಇಲ್ಲಿರು ॥ 108

ಹೋಗಿ ಬಾ ನೀ ನಾಳೆ ಬೆಳಗೆದ್ದು । ಬೇಕಿಲ್ಲ ನಿರರ್ಥಕ ಚಿಂತಿಸುವದು ।
ಭಕ್ತಿ ಭಾವದಿಂದ ಉದಿ ಹಚ್ಚಿ ಸೇವಿಸುವದು । ಎಂದಾಗ ನಾವೇತಕೆ ಹೆದರಬೇಕು" ॥ 109

ಕೇಳಿ ಬಾಪೂಜಿ ಹೆದರಿದ । ಅವನು ಬಹಳ ನಿರಾಶನಾದ ।
ಮಾಧವರಾವ ತಿಳಿದಿದ್ದ ಔಷಧದ ಎಲೆಯಿಂದ । ಈಗೇನೂ
ಪ್ರಯೋಜನವಾಗಲಾರದೆಂದು ॥ 110

ಒಂದು ಸಾಯಿಯ ಕೃಪೆಯ ಹೊರತು । ಔಷಧಿಯಲ್ಲಿ ಗುಣವೆಂತು ।
ಈ ಮರ್ಮ ಮತ್ತು ಈ ಗುರುತು । ಮಾಧವರಾಯ ಪೂರ್ಣ ತಿಳಿದಿದ್ದ ॥ 111

ಬಾಬಾರ ಆಜ್ಞೆಯ ವಂದಿಸಿ । ಕೊಟ್ಟರು ಉದಿಯ ಕಳಿಸಿ ।
ಉಳಿದ ಮಾಧವರಾಯ ಸ್ವಸ್ಥಮನವಾಗಿಸಿ । ಬಾಪಾಜಿ ಉದ್ವಿಗ್ನನಾಗಿ ಹೊರಟು ಹೋದ ॥ 112

ಉದಿಯನ್ನು ನೀರಿಲ್ಲಿ ಬೆರೆಸಿ ಕುಡಿಸಲು । ಮೈಗೆಲ್ಲ ಅದನು ಲೇಪಿಸಲು ।
ಮೈಗೆಲ್ಲ ಬೆವರು ಬಿಡಲು । ನಿದ್ರೆ ಹತ್ತಿಬಿಟ್ಟಿತು ॥ 113

ಸೂರ್ಯೋದಯವಾಗುವ ಹೊತ್ತಿಗೆ । ಆರಾಮ ಎನಿಸಿತು ಪತ್ನಿಗೆ ।
ಗಂಟು ಮತ್ತು ಜ್ವರವಾಗಿ ಇಲ್ಲದ ಹಾಗೆ । ಬಾಪಾಜಿಗೆ ಆಶ್ಚರ್ಯವಾಯಿತು ॥ 114

ಇತ್ತ ಮಾಧವರಾಯನೆದ್ದು । ಶೌಚ ಮುಖಮಾರ್ಜನಗಳ ಮುಗಿಸಿಕೊಂಡು ।
ಸಿದ್ಧರಾಗಿ ಸಾವುಳ ಬಾವಿಗೆ ಹೋಗಲೆಂದು । ದರ್ಶನಕೆ ಮಶೀದಿಗೆ ಬಂದರು ॥ 115

ಬಾಬಾರ ದರ್ಶನ ಪಡೆದು । ಚರಣಕ್ಕೆ ವಂದನೆಗೈದು ।
ಉದಿ ಸಮೇತ ಆಶೀರ್ವಾದ ಪಡೆದು । ಕೂಡಲೇ ಅಲ್ಲಿಂದ ಹೊರಟ ॥ 116

ಮೆಟ್ಟಿಲಿಳಿಯುತಿದ್ದಾಗ ಮಶೀದಿಯದು । ಕೇಳಿಸಿತು ಬಾಬಾ ಆಜ್ಞಾಪಿಸಿದ್ದು ।
"ಶಾಮಾ ವಿಲಂಬ ಮಾಡಕೂಡದು । ಕೂಡಲೇ ಹಿಂದಿರುಗಿ ಬಾ" ॥ 117

ಆರ್ತಿಗೆ ನರಳುತ್ತಿರಬಹುದು । ಎರಡೆರಡು ಗಂಟುಗಳ ನೋವು ಹೇಗೆ ಸಹಿಸಬಹುದು ।
ತಳಮಳಿಸುತ್ತ ಬಿದ್ದಿರಬಹುದು । ದಾರಿಯಲಿ ಹಳಹಳಿ ಭಾವನಿಗೆ ॥ 118

ಬಾಬಾ ಏನೋ ಆದೇಶ ನೀಡಿದ್ದು । ಬೇಗನೇ ತಿರುಗಿ ಬಾ ಎಂದೇಕೆ ಹೇಳಿದ್ದು ।
ಅದರಿಂದ ಶಾಮಾ ಹೆದರಿಕೊಂಡು । ಭರಭರನೆ ದಾರಿಯ ಕ್ರಮಿಸಿದರು ॥ 119

ಅವಸರವಸರವಾಗಿ ಸಾವುಳ ಬಾವಿಗೆ । ಧೈರ್ಯವಿರಲಿಲ್ಲ ಮುಟ್ಟುವವರೆಗೆ ।
ಹೊಸಲ ಮೇಲೆ ಹೆಜ್ಜೆ ಇಟ್ಟಾಗ್ಯೆ । ಆಶ್ಚರ್ಯವನು ಕಂಡರು ॥ 120

ಯಾವಳಿಗೆ ರಾತ್ರಿ ಗ್ರಂಥಿ ಜ್ವರವಿತ್ತು । ಅವಳು ಚಹ ಮಾಡುತಿದ್ದಳು ಒಲೆಯ ಮೇಲಿಟ್ಟು ।
ಮಾಧವರಾಯರು ಆಶ್ಚರ್ಯಪಟ್ಟು । ನಿಂತು ಬಿಟ್ಟರು ಸ್ಥಿತ್ಯಂತರವ ನೋಡಿ ॥ 121

ಆಗ ಬಾಪೂಜಿಗೆ ಕೇಳಲು । ಇವಳಂತೂ ನಿತ್ಯ ವ್ಯವಸಾಯದಲಿ ತೊಡಗಿರುವಳು ।
ಈ ಗುಣವೆಲ್ಲ ಇರುವದು ಬಾಬಾರ ಉದಿಯೊಳು । ನಿಶ್ಚಯವಾಗಿ ಎಂದು ಬಾಪಾಜಿ ಹೇಳಿದ ॥ 122

ಎಂದ ನಾ ಬಂದ ಕೂಡಲೇ ಉದಿ ಕುಡಿಸಿದೆ । ತಿಕ್ಕಿ ತಿಕ್ಕಿ ಮೈಗೆಲ್ಲ ಹಚ್ಚಿದೆ ।
ತತ್ಕಾಲವೇ ಬೆವರಿನಿಂದಾಯಿತು ಮೈಯೆಲ್ಲ ಒದ್ದೆ । ನಿದ್ದೆ ಮಾಡಿದಳು ಚೆನ್ನಾಗಿ ॥ 123

ಮುಂದೆ ಸೂರ್ಯೋದಯದ ವೇಳೆಗೆ । ಎದ್ದು ಕುಳಿತಳು ನೆಟ್ಟಗೆ ।
ಗಂಟು ಕರಗಿದವು ಜ್ವರ ಬಿಟ್ಟ ಹಾಗೆ । ಇದೆಲ್ಲ ಮಹಿಮೆ ಬಾಬಾರದು ॥ 124

ಶ್ಯಾಮನಿಗೆ ಈ ಸ್ಥಿತಿಯ ನೋಡಿ । ಕೂಡಲೇ ನೆನಪಾಯಿತು ಬಾಬಾರ ನುಡಿ ।
ತಡ ಮಾಡದೇ ತಿರುಗಿ ಬಂದು ಬಿಡಿ । ಆಶ್ಚರ್ಯವಾಯಿತು ಮನದಲ್ಲಿ ॥ 125

ಹೋಗುವಷ್ಟರಲ್ಲೇ ಕೆಲಸ ಮುಗಿದು । ಚಹ ಕುಡಿದು ಮಾಧವರಾವ ತಿರುಗಿ ಬಂದು ।
ಮಶೀದಿಗೆ ಹೋಗಿ ಬಾಬಾರ ಕಂಡು । ಮೊದಲು ಚರಣಕೊಂದಿಸಿದ ॥ 126

ಎಂದ ದೇವಾ ಏನು ನಿನ್ನಾಟವಿದು । ನೀನೆ ಮನವ ಗಲಿಬಿಲಿಗೊಳಿಸುವದು ।
ಕುಳಿತಲ್ಲಿಂದಲೇ ಬಿರುಗಾಳಿ ಎಬ್ಬಿಸುವದು । ಮತ್ತೆ ಶಾಂತಗೊಳಿಸುವವನೂ ನೀನೆ ॥ 127

ಬಾಬಾ ಅದಕೆ ಪ್ರತ್ಯುತ್ತರವಿತ್ತುದು । "ನೋಡು ಕರ್ಮದ ಗತಿ ಗಹನವಿರುವದು ।
ನಾನು ಮಾಡುವವನೂ ಅಲ್ಲ ಮಾಡಿಸುವವನೂ ಅಲ್ಲದಿದ್ದೂ । ಕರ್ತೃತ್ವವನು ನನ್ನ ತಲೆಗೆ ಕಟ್ಟುವರು ॥ 128

ಕರ್ಮಗಳಾವವು ಘಟಿಸುವವು ಅದೃಷ್ಟವಶದಲ್ಲಿ । ಸಾಕ್ಷೀಭೂತನಾಗಿರುವೆ ಮಾತ್ರ ನಾನಿಲ್ಲಿ ।
ಆಡುವ ಆಡಿಸುವವ ಆ ಅನಂತನಿರುವನಲ್ಲಿ । ಕೃಪಾವಂತನೂ ಅವನೊಬ್ಬನೇ ॥ 129

ನಾನಲ್ಲ ದೇವರು ಅಲ್ಲ ಈಶ್ವರ । 'ಅನಹಲಕ' ನಾನಲ್ಲ ಅಲ್ಲ ನಾ ಪರಮೇಶ್ವರ ।
ನಾನಿರುವದು 'ಯಾದೇಹಕ' ಮಾತ್ರ । ಅಲ್ಲಾನ ದೀನ ದಾಸ ನಾನು" ॥ 130

ಅಹಂಕಾರವನ್ನು ತ್ಯಜಿಸಿ । ಅವನ ಆಭಾರ ಮನ್ನಿಸಿ ।
ಅವನಿಗೆಲ್ಲ ಭಾರವ ಒಪ್ಪಿಸಿ । ಆಗ ಅವನೇ ಭವಸಾಗರವ ದಾಟಿಸುವ ॥ 131

ಹೀಗೆ ಒಬ್ಬ ಇರಾಣಿಯವನದು । ಅನುಭವ ಕೇಳಿರಿ ಮಹತ್ವದ್ದು ।
ಅವನ ಚಿಕ್ಕ ಮಗುವಿನದು । ಬಾಯಿ ಹೋಗಿ ಬಿಡುತ್ತಿತ್ತು ತಾಸು ತಾಸಿಗೆ ॥ 132

ತಾಸುಗಟ್ಟಲೆ ಮೈ ಮಣಿತ ಬಂದು । ಬಿಲ್ಲಿನಂತೆ ಬಿಗಿದು ಬಿದ್ದು ಬಿಡುವದು ।
ಅತ್ಯವಸ್ಥವಾಗಿ ಎಚ್ಚರ ತಪ್ಪುವದು । ಒಂದೂ ಉಪಾಯ ನಡೆಯದದಕೆ ॥ 133

ಅವನ ಒಬ್ಬ ಮಿತ್ರನಿದ್ದ । ಆತ ಉದಿಯ ಚರಿತ್ರೆಯ ವರ್ಣಿಸಿದ ।
ಎಂದ ಇಂಥ ರಾಮಬಾಣ ಔಷಧ । ಬೇರೆಲ್ಲಿಯೂ ಇರಲಾರದು ॥ 134

ಬೇಗ ಹೋಗಿ ಪಾರ್ಲೆಗೆ । ಉದಿಯ ಬೇಡಿರಿ ದೀಕ್ಷಿತನ ಬಳಿಗೆ ।
ಇರುವದದು ಅವನ ಸಂಗ್ರಹದೊಳಗೆ । ಅತಿ ಸಂತೋಷದಿಂದಾತ ಕೊಡುವನು ॥ 135

ಆ ಮೇಲೆ ಆ ಉದಿಯನೊಂದಿಷ್ಟು । ಸಾಯಿ ಸ್ಮರಿಸಿ ಶ್ರದ್ಧೆಯನಿಟ್ಟು ।
ಕುಡಿಸಲು ಶಟಿಬೇನೆ ಹೋಗುವದು ಬಿಟ್ಟು । ಸೌಖ್ಯಾನಂದವನು ಪಡೆಯುವಿರಿ ॥ 136

ಆ ಪಾರಶಿಯವ ಆ ಮಾತು ಕೇಳಿದ । ದೀಕ್ಷಿತರಿಂದ ಉದಿ ಬೇಡಿ ತಂದ ।
ಮಗಳಿಗೆ ಕುಡಿಸಿದ ನಿತ್ಯನೇಮದಿಂದ । ಅದರಿಂದ ಆರೋಗ್ಯ ಹೊಂದಿದಳವಳು ॥ 137

ತಾಸು ತಾಸಿಗೆ ಎಚ್ಚರ ತಪ್ಪುತಿದ್ದವಳು । ಉದಿಯಿಂದ ಕೂಡಲೇ ಆರೋಗ್ಯ ಪಡೆದಳು ।
ಏಳು ಏಳು ತಾಸುಗಳು । ಅಂತರ ಬಿದ್ದಿತು ಅವಳ ಮೂರ್ಛೆಯಲಿ ॥ 138

ತಾಸಿಗೊಮ್ಮೆ ಬರುತ್ತಿದ್ದುದು । ಏಳು ತಾಸಿಗೊಮ್ಮೆ ಬರುತಿದ್ದು ।
ಮತ್ತೆ ಕೆಲದಿನಗಳ ಕಳೆದು । ಸಮಗ್ರ ಪರಿಹಾರವಾಯಿತು ॥ 139

ಹರ್ದಾದ ಹತ್ತರ ಇದ್ದ ಊರೊಂದು । ಅಲ್ಲಿ ಒಬ್ಬ ವೃದ್ಧ ಗೃಹಸ್ಥನಿದ್ದು ।
ಅವನು ಮೂತ್ರದ ಹರಳಿನ ವ್ಯಾಧಿಯಿಂದ । ಬಹಳ ಬಳಲುತಿದ್ದನು ॥ 140

ಈ ರೋಗಕ್ಕೆ ಶಸ್ತ್ರ ಚಿಕಿತ್ಸೆ ಬಿಟ್ಟರೆ । ಅದಕಿಲ್ಲ ಉಪಾಯ ಬೇರೆ ।
ಅದಕೆ ಶಸ್ತ್ರ ಪ್ರವೀಣರು ಇದ್ದರೆ । ನೋಡಿರೆಂದು ಜನರೆಂದರು ॥ 141

ರೋಗಿಗೆ ಬಹಳ ಚಿಂತೆ ಹತ್ತಿತು । ಏನು ಮಾಡಬೇಕೆಂದು ತಿಳಿಯದಾಯಿತು ।
ಮರಣೋನ್ಮುಖರಂತೆ ಶರೀರ ಬಡವಾಯಿತು । ದುಃಖವು ತಡೆಯದಂತಾಯಿತು ॥ 142

ಶಸ್ತ್ರ ಚಿಕಿತ್ಸೆಗೆ ಬೇಕಾಗುವದು ಧೈರ್ಯ । ಆದರೆ ಆ ರೋಗಿಗೆ ಇರಲಿಲ್ಲ ಸ್ಥೈರ್ಯ ।
ಸುದೈವದಿಂದ ಕಳೆಯಿತವನ ನಷ್ಟಚರ್ಯ । ಆ ಆಶ್ಚರ್ಯದ ಸಂಗತಿಯ ಕೇಳಿರಿ ॥ 143

ಇತ್ತ ನಡೆದಾಗ ಈ ಪ್ರಕಾರ । ಆ ಗ್ರಾಮದ ಇನಾಮದಾರ ।
ಸಾಯಿಬಾಬಾರ ಭಕ್ತವರ । ಊರಿಗೆ ಬಂದಿರುವದು ತಿಳಿಯಿತು ॥ 144

ಬಾಬಾರ ವಿಭೂತಿ ಅವರ ಹತ್ತಿರ । ಎಲ್ಲರಿಗೂ ತಿಳಿದಿತ್ತು ಇರುವದು ನಿರಂತರ ।
ರೋಗಾರ್ತರ ಆಪ್ತೇಷ್ಟರು ಅವರ । ಉದಿಕೊಡಲು ಪ್ರಾರ್ಥಿಸುವರು ॥ 145

ಇನಾಮದಾರರು ಕೊಟ್ಟ ಉದಿಯನು । ಮಗ ತಂದೆಗೆ ನೀರಿನಲಿ ಕುಡಿಸಿದನು ।
ಐದು ನಿಮಿಷಗಳೂ ಆಗಿರಲಿಲ್ಲ ಇನ್ನೂ । ಅಷ್ಟರಲ್ಲಿ ಚಮತ್ಕಾರವಾಯಿತು ॥ 146

ಉದಿ ಪ್ರಸಾದವು ಮೈಯಲ್ಲಿ ಹರಡಿತು । ಮೂತ್ರದಲ್ಲಿಯ ಹರಳು ಒಳಗೇ ಕರಗಿತು ।
ಮೂತ್ರದ್ವಾರದಿಂದ ಹೊರಗೆ ಜಾರಿತು । ಆರಾಮವಾಯಿತು ಕೂಡಲೇ ॥ 147

ಒಬ್ಬ ಗೃಹಸ್ಥ ಮುಂಬಾಪುರಿಯವ । ಕಾಯಸ್ಥ ಪ್ರಭು ಜಾತಿಯವ ।
ಹತ್ತಿರ ಬಂದಾಗ ಪ್ರಸವ । ಅವನ ಹೆಂಡತಿ ಅತ್ಯವಸ್ಥಳಾಗುತ್ತಿದ್ದಳು ॥ 148

ಬೇಕಾದಷ್ಟು ಉಪಾಯಗಳ ಮಾಡುತಿದ್ದು । ಗುಣವಾಗುತಿರಲ್ಲ ಯಾವುದರಿಂದಲೂ ।
ಆ ಸ್ತ್ರೀಯ ಜೀವ ಕಸಿವಿಸಿಗೊಂಡು । ಅವನಂತೂ ಬಹಳ ಬೇಸತ್ತ ॥ 149

'ಶ್ರೀರಾಮ ಮಾರುತಿ' ಎಂಬ ಹೆಸರಿನಿಂದ । ವಿಖ್ಯಾತನಾದ ಸಾಯಿಯ ಭಕ್ತನೊಬ್ಬನಿದ್ದ ।
ಈ ಗೃಹಸ್ಥ ಅವನ ಹೇಳಿಕೆಯಿಂದ । ಶಿರಡಿಗೆ ಪ್ರಯಾಣ ಹೊರಟನು ॥ 150

ಪ್ರಸೂತಿಯ ಸಮಯ ಹತ್ತಿರ ಬರುವದು । ಇಬ್ಬರಿಗೂ ಮಹತ್ ಸಂಕಟ ಕಾಲವದು ।
ಒಮ್ಮೆ ಮನದ ನಿಶ್ಚಯ ಮಾಡಿಕೊಂಡು । ಹೊರಟನು ಶಿರಡಿಗೆ ನಿರ್ಭಯನಾಗಿ ॥ 151

ಏನು ಆಗುವದೋ ಆಗಲಿ । ಆದರೆ ಅದು ಬಾಬಾರ ಸನ್ನಿಧಾನದಲಿ ।
ಹೀಗೆ ಸಂಕಲ್ಪಿಸಿ ಮನದಲಿ । ಶಿರಡಿಗೆ ಬಂದು ನಿಂತರು ॥ 152

ಹೀಗೆ ಇಬ್ಬರೂ ಕೆಲವು ತಿಂಗಳು । ಶಿರಡಿಯಲ್ಲೇ ವಾಸವಾಗಿರಲು ।
ಪೂಜೆ ಅರ್ಚನೆ ಸಾಯಿಯ ಸಹವಾಸದೊಳು । ಇಬ್ಬರೂ ಆನಂದದಲಿದ್ದರು ॥ 153

ಹೀಗೆ ಕೆಲವು ಕಾಲ ಕ್ರಮಿಸಿತು । ಪ್ರಸೂತಿ ಸಮಯ ಹತ್ತಿರ ಬಂದಿತು ।
ಇಬ್ಬರಿಗೂ ಚಿಂತೆ ಪ್ರಬಲವಾಯಿತು । ಈ ಸಂಕಟದಿಂದ ಪಾರಾಗುವದು ಹೇಗೆಂದು ॥ 154

ಕೊನೆಗೆ ಪ್ರಸೂತಿಯ ದಿನ ಬಂತು । ಗರ್ಭದ್ವಾರದ ಮಾರ್ಗಕಟ್ಟಿತ್ತು ।
ಎಲ್ಲರಿಗೂ ವಿಚಾರ ಬಿತ್ತು । ಇನ್ನೇನು ಮಾಡುವದೆಂದು ॥ 155

ಸ್ತ್ರೀಗೆ ಯಾತನೆ ಯಾಗತೊಡಗಿತು । ಏನು ಮಾಡಲೂ ತಿಳಿಯದಾಯಿತು ।
ಮುಖದಲಿ ಬಾಬಾರಪ್ರಾರ್ಥನೆ ನಡೆಯಿತು । ಅವನಲ್ಲದಿನ್ನಾರಿಗೆ ಕರುಣೆ ಬಂದೀತು ॥ 156

ನೆರೆಮನೆಯ ಹೆಂಗಸರೋಡಿ ಬಂದರು । ಬಾಬಾರನ್ನು ಬೇಡಿಕೊಂಡರು ।
ಒಂದು ಲೋಟ ನೀರಿನಲಿ ಉದಿಯ ಕಲಿಸಿದರು । ಕುಡಿಸಿದರದನು ಹೆರುವವಳಿಗೆ ॥ 157

ಐದೇ ಐದು ನಿಮಿಷದಿ । ಆ ಸ್ತ್ರೀ ಬಿಡುಗಡೆ ಹೊಂದಿ ।
ಚೈತನ್ಯ ಹೀನವಾಗಿತ್ತು ಮಗು ಗರ್ಭದಿ । ನಿರ್ಜೀವವಾಗಿ ಹೊರಬಂತು ॥ 158

ಹೋಗಲಿ ಆ ಗರ್ಭದ ಕರ್ಮಗತಿ । ಆದೀತು ಮತ್ತೆ ಗರ್ಭಪ್ರಾಪ್ತಿ ।
ಆ ಸ್ತ್ರೀ ಪಡೆದಳು ಭಯನಿರ್ಮುಕ್ತಿ । ಆರೋಗ್ಯವಂತಳಾಗುಳಿದಳು ॥ 159

ವೇದನೆ ಇಲ್ಲದೇ ಗರ್ಭ ಪ್ರಸವಿಸಿತು । ಸುಖದಿಂದಾಗಿ ಬಿಡುಗಡೆಯಾಯಿತು ।
ಮಹತ್ ಚಿಂತೆಯ ಕಾಲ ದಾಟಿತು । ಜನ್ಮದ ಋಣಿಯಾದಳು ಬಾಬಾಗೆ ॥ 160

ಮುಂದಿನಧ್ಯಾಯ ಇದಕಿಂತ ರಸಭರಿತ । ಕೇಳಿ ಶ್ರೋತೃಗಳ ಮನ ತುಂಬುತ್ತ ।
ಚಿಕಿತ್ಸತನದ ಗುಣ ಹೋಗುತ । ಭಕ್ತಿಯ ಜೊತೆ ದೊರಕುವದು ॥ 161

ನಮ್ಮದು ನಿರಾಕಾರದ ಉಪಾಸನೆ । ನಾವು ಕೊಡಲಾರೆವು ದಕ್ಷಿಣೆ ।
ನಾ ಬಾಗಿಸಲಾರೆನು ಶಿರವನೆನೆ । ಮಾತ್ರ ನಾವು ದರ್ಶನಕೆ ಬರುವೆವು ॥ 162

ಕೃತನಿಶ್ಚಯವಿದ್ದರೂ ಹೀಗೆ । ಬಾಬಾರ ಚರಣಗಳ ಕಂಡಾಗ್ಯೆ ।
ದಕ್ಷಿಣೆಯಿತ್ತು ಸಾಷ್ಟಾಂಗವೆರಗೆ । ಎನುವರಿದೇನು ಚಮತ್ಕಾರವೆಂದು ॥ 163

ಉದಿಯ ಅಪೂರ್ವ ಮಹಿಮೆಯಿಂದ । ನೇವಾಸಕರರ ಭಕ್ತಿ ಪ್ರೇಮದಿಂದ ।
ಹೇಗೆ ಹಾವಿಗೆ ಕುಡಿಸಿ ಹಾಲು । ಗೃಹಸ್ಥ ಧರ್ಮವ ರಕ್ಷಿಸಿದರು ॥ 164

ಇಂಥವೆಲ್ಲ ಕಥೆಗಳು ಉತ್ತಮ । ಕೇಳಲು ಉಕ್ಕುವದು ಭಕ್ತಿ ಪ್ರೇಮ ।
ಸಂಸಾರ ದುಃಖದ್ದಾಗುವದು ಉಪಶಮ । ಇದಕಿಂತ ಪರಮಸುಖಯಾವುದು ॥ 165

ಅದಕೇ ಹೇಮಾಡನೆನ್ನುವ ವಿನಂತಿಸುತಲಿ । ವಂದನೆಗೈದು ಸಾಯಿ ಚರಣದಲಿ ।
ಪ್ರೇಮ ನೀಡಬೇಕು ಶ್ರೋತೃ ಹೃದಯದಲಿ । ನಿಜ ಸಚ್ಚರಿತೆಯನಾಲಿಸಲು ॥ 166

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೇ । ಉದೀ ಮಹಿಮಾನಾಮ ಚತುಃಸ್ತ್ರಿಶತ್ತಮೋಽಧ್ಯಾಯಃ
ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



476·1

## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತೈದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಹಿಂದಿನ ಅಧ್ಯಾಯದ ಕೊನೆಯಲ್ಲಿ । ಕಥಾನುಸಂಗತಿಯ ತೋರಿದಂತಲ್ಲಿ ।
ಅದನ್ನೇ ಹೇಳುವೆ ಸದ್ಯದಲ್ಲಿ । ಸ್ವಸ್ಥ ಚಿತ್ತರಾಗಿ ಆಲಿಸಬೇಕು ॥ 1

ಪರಮಾರ್ಥದ ವಿಚಾರ ಮಾಡುತ್ತಿರಲು । ಭಯಂಕರ ಪಂಥಾಭಿಮಾನ ಅಡ್ಡ ಬರಲು ।
ಬೇರೆ ಈ ಅಭಿಮಾನಕ್ಕಿಂತಲೂ । ದುರ್ಧರ ವಿಘ್ನವಿನ್ನಿಲ್ಲ ॥ 2

ನಾವು ನಿರಾಕಾರದ ಪೂಜಕರು । ಭ್ರಮ ಮೂಲಕ ಈ ಸಾಕಾರ ದೇವರು ।
ಸಾಧು ಸಂತರೂ ಮಾನವರೇ ಇರುವರು । ಅವರಿಗೆ ತಲೆಬಾಗುವದೇತಕೆ ॥ 3

ಅವರ ನಮಸ್ಕರಿಸಬಾರದು । ದಕ್ಷಿಣೆ ದಾನಗಳನೀಯಬಾರದು ।
ಅವರಿಗೆಂದೂ ತಲೆಬಾಗಬಾರದು । ವಿಡಂಬನವಿದು ಭಕ್ತಿಯದು ॥ 4

ಶಿರಡಿಯ ಬಗ್ಗೆ ಅನೇಕರು । ಒಂದೊಂದನು ಒಬ್ಬೊಬ್ಬರು ।
ಹೀಗನೇಕ ವಾರ್ತೆಗಳ ಹೇಳಿದರು । ಅವೆಲ್ಲ ವಿಶ್ವಸನೀಯವಲ್ಲ ॥ 5

ಎಂದರು ಅಲ್ಲಿ ಹೋದರೆ ದರ್ಶನಕೆಂದು । ಸಾಯಿಬಾಬಾ ದಕ್ಷಿಣೆ ಬೇಡುವರು ।
ಸಾಧುಗಳೇ ದ್ರವ್ಯ ಸಂಪಾದನೆಗೆ ತೊಡಗುವದು । ಅವರ ಸಾಧುತ್ವತೆ ಹೀನತ್ವವಿದು ॥ 6

ಒಳ್ಳೆಯದಲ್ಲ ಅಂಧಶ್ರದ್ಧೆ । ಪ್ರತ್ಯಕ್ಷ ಅನುಭವ ತೆಗೆದುಕೊಂಡೇ ।
ನಮ್ಮ ಮನದಲ್ಲಿ ನಿರ್ಣಯಿಸಿಕೊಂಡೇ । ಹೇಗೆ ನಡೆಯಬೇಕೆಂಬುದ ಗೊತ್ತು ಮಾಡುವಾ ॥ 7

ನಾವಂತೂ ದಕ್ಷಿಣೆ ಕೊಡಬಾರದು । ಯಾರಲ್ಲಿ ವಿತ್ತದ ಆಶೆ ಇರುವದು ।
ಅಂಥವರ ಸಾಧುತ್ವ ನಮ್ಮ ಮನಕೊಪ್ಪದು । ನಮನಕೆ ಅಪಾತ್ರನವ ನಮಗೆ ॥ 8

ಇರಲಿ, ನಾವು ಶಿರಡಿಗೆ ಹೋಗಿ ಬರೋಣ । ಅವರನು ಭೆಟ್ಟಿಯಾಗೋಣ ।
ಮಾಡುವದು ಬೇಡ ಚರಣವಂದನ । ಅಥವಾ ದಕ್ಷಿಣೆ ಕೊಡ ಕೂಡದು ॥ 9

ಯಾರು ಹೊರಡುವರಿಂಥ ಕುತರ್ಕವಿಟ್ಟುಕೊಂಡು । ತಮ್ಮ ಕೃತನಿಶ್ಚಯಕ್ಕಂಟಿಕೊಂಡು
ಕೊನೆಗೆ ಅಂಥವರೂ ಶರಣಾಗತರಾಗುವದು । ಸಾಯಿದರ್ಶನ ಮಾತ್ರದಿಂದ ॥ 10

ಸಾಯಿಯ ನೋಡಲೆಂದು ಹೋದವರು । ಅಲ್ಲಿಯೇ ಉಳಿದು ಬಿಡುವರು ।
ಮತ್ತೆ ಹಿಂದಿರುಗಿಲ್ಲ ಅವರು । ಸಾಯಿಯ ಚರಣಕ್ಕಂಟಿಕೊಂಡರು ॥ 11

ಬಾಯಲ್ಲಿ ಹಲ್ಲು ಕಚ್ಚಿಕೊಂಡು । ಯಾರಾದರೂ ಶರಣು ಹೋಗುವದು ।
ಹಾಗೆ ಚರಣವಂದಿಸುವರು ಬಂದು । ತಮ್ಮ ಕೃತನಿಶ್ಚಯವನೆಲ್ಲ ಮರೆತು ॥ 12

ಪಂಥಾಭಿಮಾನಕ್ಕೆಲ್ಲ ವಿರಾಮ ದೊರೆಯುವದು । ಜೀವಕ್ಕೆ ಅತ್ಯಂತ ಸೌಖ್ಯವೆನಿಸುವದು ।
ಅಂಥ ಈ ಅಧ್ಯಾಯ ಮೂವತ್ತೈದನೆಯದು । ಶ್ರೋತೃಗಳು ಆದರದಿಕೇಳಬೇಕು ॥ 13

ಅಂತೆಯೇ ಸೂಚಿತವಾಗಿದೆ ಉದಿಯ ಮಹತಿ । ಬಾಳಾ ನೇವಾಸಕರರಿಗೆ ಬಂದಿತು ಪ್ರಚೀತಿ ।
ಹೇಗೆ ಸರ್ಪವ ಕಳಿಸಿದರು ತೋರಿ ಪ್ರೀತಿ । ಸಾಯಿ ಎಂದೇ ಭಾವಿಸಿ ಅದನು ॥ 14

ಶ್ರೋತೃಗಳೇ ಕೃಪೆ ಮಾಡಿರೆನ್ನ ಮೇಲೆ । ನಾನು ಆಜ್ಞೆಯ ಕಿಂಕರನೆಂದಲೇ ।
ಆದರದಿಂದ ಆಜ್ಞೆ ಪಾಲಿಸುತ್ತಲೇ । ಈ ಚರಿತ್ರೆ ಅಕ್ಷರ ರೂಪ ತಾಳಿತು ॥ 15

ಚರಣದ ಮೇಲೆ ದೃಷ್ಟಿ ಇರಲು । ಅಲ್ಲಿಂದೆದ್ದ ಪದಲಹರಿಗಳು ।
ಪವಿತ್ರ ಚರಿತ್ರ ಕುಂಭದೊಳು । ಅಷ್ಟಷ್ಟೇ ತುಂಬುತ್ತಿರುವೆನು ॥ 16

ನಾವು ಆವಿಯ ಮರಿಗಳು । ದೃಷ್ಟಿ ಕ್ಷೇಪದಿಂದಲೇ ಬೆಳೆದವರು ।
ಅಲ್ಲಿ ನೀರಡಿಸಿ, ಹಸಿದು, ದಣಿದವರು । ಸದೈವ ಸಂತೃಪ್ತರಾಗಿರುವವರು ॥ 17

ಇರತಿರಲೊಂದು ದೃಷ್ಟಿಯ ಸುಖ । ಬೇಕಿಲ್ಲ ನಮಗೆ ಅನ್ನ ಉದಕ ।
ದೃಷ್ಟಿಯೇ ಹಸಿವೆ-ತೃಷೆ-ಪರಿಹಾರಕ । ಅದನೆಷ್ಟು ಬಣ್ಣಿಸಬೇಕು ॥ 18

ನಾವಾದರೂ ಇಹೆವು ದೃಷ್ಟಿಯ ವಿಷಯ । ಕೃಪಾಸಿಂಧು ನಮ್ಮ ಸಾಯಿರಾಯ ।
ದೃಶ್ಯ-ದ್ರಷ್ಟಾ-ದರ್ಶನ ತ್ರಿಪುಟಿಯ । ಇರವೇ ಅಳಿಸಿ ಹೋಗುವುದು ॥ 19

ಅಂತೆಯೇ ನಮಗೆ ತ್ವಚೆ ಮತ್ತು ಸ್ಪರ್ಶ । ಇಹನೆರಡರಲ್ಲೂ ಸಾಯಿ ಪ್ರಕಾಶ ।
ಅಥವಾ ಘ್ರಾಣ ಮತ್ತು ವಾಸನೆಗಳಲೂ ನಿವಾಸ । ಶ್ರೀ ಸಾಯಿಯದೇ ಇರುವದು ॥ 20

ಅಥವಾ ಶಬ್ದ ಕಿವಿಗೆ ಬೀಳುವದು । ಅಲ್ಲಿ ಸಾಯಿಯ ರೂಪವೇ ಪ್ರಕಟವಾಗುವದು ।
ಶ್ರಾವ್ಯ, ಶ್ರಾವಕ, ಶ್ರವಣವೆಂಬದು । ತ್ರಿಪುಟಿಯೇ ಅಲ್ಲಿ ಉಳಿಯದು ॥ 21

ಅಥವಾ ಎಲ್ಲ ರಸನೆಯು ರಸದಿಂದ । ತುಂಬಿದಲ್ಲಿ ಸಾಯಿಯೇ ಇರುವನಲ್ಲಿ ಸಮರಸದಿಂದ ।
ರಸನಾ-ರಸ-ರಸಾಸ್ವಾದದ । ತ್ರಿಪುಟಿಯು ಅಲ್ಲಿ ನಿಲ್ಲದು ॥ 22

ಇದೇ ಗತಿ ಕರ್ಮೇಂದ್ರಿಯದ್ದೂ । ಸಾಯಿಯೊಬ್ಬನ ಸೇವೆ ಮಾಡುವದು ।
ಅದರಿಂದ ಎಲ್ಲ ಕರ್ಮಗಳ ನಾಶವಾಗುವದು । ನೈಷ್ಕರ್ಮತೆಯು ಉಂಟಾಗುವದು ॥ 23

ಇರಲಿನ್ನು ಈ ಗ್ರಂಥ ಬೆಳೆಯಿತು । ಸಾಯಿ ಪ್ರೇಮಗಂಗೆಯಲಿ ದೂರ ಹರಿಯತೊಡಗಿತು ।
ಪೂರ್ವಾನು ಸಂಧಾನದತ್ತ ಲಕ್ಷಗೊಟ್ಟು । ಕಥಾಭಾಗವ ಮುಂದುವರಿಸುವಾ ॥ 24

ಒಬ್ಬ ಮೂರ್ತಿ ಪೂಜಾ ಪರಾಙ್ಮುಖ । ನಿರಾಕಾರದ ಪರಮ ಭಜಕ ।
ಆದರು ಶಿರಡೀ ಗಮನೋತ್ಸುಕ । ಕೇವಲ ಚಿಕಿತ್ಸಾ ಬುದ್ಧಿಯಿಂದ ॥ 25

ಎಂದರು ನಾವು ಶಿರಡಿಗೆ ಬರುವೆವು । ಸಾಧುವಿನ ದರ್ಶನ ಪಡೆಯುವೆವು ।
ಮಾತ್ರ ಅವನಿಗೆ ತಲೆಬಾಗೆವು । ಕೊಡಲಾರೆವು ದಕ್ಷಿಣೆಯ ಕೂಡ ॥ 26

ನೀವು ಒಪ್ಪಿದರೆ ನಮ್ಮ ಈ ಎರಡು ಮಾತಿಗೆ । ನಾವು ಬರುವೆವು ಶಿರಡಿಗೆ ।
ಆಗಲೆನ್ನಲು ಮಿತ್ರನ ಜೊತೆಗೆ । ಹೊರಟ ಸ್ವಸ್ಥಮನದಿಂದ ॥ 27

ಕಾಕಾ ಮಹಾಜನೀ ಅವರ ಮಿತ್ರ । ಸಂತರ ಬಗ್ಗೆ ವರ ಭಾವನೆ ಪವಿತ್ರ ।
ಆದರೆ ಈ ಶಂಕೆಕುಶಂಕೆಗಳಿಗೆ ಪಾತ್ರ । ಸ್ನೇಹಿತನಿದ್ದ ಅವರಿಗೆ ॥ 28

ಮುಂಬಯಿಯಿಂದ ರಾತ್ರಿಯ ಹೊತ್ತು । ಶನಿವಾರ ದಿವಸ ಇಬ್ಬರೂ ಹೊರಟು ।
ಆದಿತ್ಯವಾರದ ಬೆಳಗಿನ ಹೊತ್ತು । ಶಿರಡಿಗೆ ಬಂದು ಮುಟ್ಟಿದರು ॥ 29

ಇಬ್ಬರೂ ಹೋದರು ಮಶೀದಿಗೆ । ಸಾಯಿ ದರ್ಶನ ಪಡೆಯುವುದಕೆ ।
ಏನು ಸಂಗತಿ ನಡೆಯಿತು ಆ ಸಮಯಕ್ಕೆ । ಚಿತ್ತವಿಟ್ಟು ಕೇಳಿರದನು ॥ 30

ಇನ್ನೂ ಮೆಟ್ಟಿಲ ಮೇಲಿಟ್ಟಾಗ ಪಾದ । ಆ ಮಿತ್ರನ ನೋಡಿ ದೂರದಿಂದ ।
'ಏತಕ್ಕೆ ಬರಬೇಕಪ್ಪ ಈ ಪರಿಯಿಂದ' । ಎಂದು ಮಧುರುವಾಗಿ ನುಡಿದರು ಬಾಬಾ ॥ 31

ಕೇಳಿ ಈ ಪ್ರೇಮಪೂರಿತ ಮಾತು । ಆ ಮಿತ್ರನ ಮನಸಿಗೆ ಹೊಳೆಯಿತು ।
ಅವನಿಗೆ ತನ್ನ ತಂದೆಯ ನೆನಪಾಯಿತು । ಈ ಪ್ರಕಾರ ಶಬ್ದೋಚ್ಚಾರದಿಂದ ॥ 32

"ಯಾಕೆ ಬರಬೇಕಪ್ಪ" ಎಂಬ ಉಚ್ಚಾರ । ತೆಗೆದಾಗಿನ ಬಾಬಾರ ಸ್ವರ ।
ಕೇಳಿದ ಆ ಕಾಕಾನ ಮಿತ್ರ । ಬಹಳ ಆಶ್ಚರ್ಯಪಟ್ಟನು ॥ 33

ಕೇಳಿ ಆ ಮೋಹಕ ಸ್ವರದ ರೀತಿ । ತರಿಸಿತು ಗತಪಿತನ ಸ್ಮೃತಿ ।
ಅವರ ಸ್ವರದ್ದೇ ಇತ್ತು ಪೂರ್ತಿ । ಅನುಕರಣ ಎಂದೆನಿಸಿತವನಿಗೆ ॥ 34

ಎಂಥ ಮೋಹನ ಶಕ್ತಿ ವಾಣಿಯದು । ಕಾಕಾರ ಮಿತ್ರ ವಿಸ್ಮಯದಿಂದ ಮನದಲೆಂದುದು ।
ನನ್ನ ತಂದೆಯದೇ ನುಡಿ ಇದು । ಸ್ವರವೂ ಪರಿಚಿತವಿರುವದು ನಿಜದಲಿ ॥ 35

ತಂದೆಯ ಮುಖದ್ದೇ ಈ ಮಾತು । ಕೇಳಿ ಮಿತ್ರನ ಹೃದಯ ಕರಗಿತು ।
ಬಾಬಾರ ಚರಣದಲಿ ಶಿರವಿಟ್ಟು । ನಮಿಸಿದ ಬಿಟ್ಟು ತನ್ನ ನಿಶ್ಚಯವ ॥ 36

ಬಾಬಾ ದಕ್ಷಿಣೆ ಬೇಡಿದರು ಆಮೇಲೆ । ಅದು ಕೇವಲ ಕಾಕಾರಲ್ಲೇ ।
ಇಬ್ಬರೂ ತಿರುಗಿ ಹೋದರು ಕಾಕಾ ದಕ್ಷಿಣೆ ಕೊಟ್ಟ ಮೇಲೆ । ಮತ್ತೆ ಮಧ್ಯಾಹ್ನ ತಿರುಗಿ ಬಂದರು ॥ 37

ಆಗಲೂ ಇಬ್ಬರೂ ಕೂಡಿಯೇ ಹೋದರು । ಇಬ್ಬರೂ ಮುಂಬಯಿಗೆ ಹೋಗುವವರಿದ್ದರು ।
ಕಾಕಾ ಆಜ್ಞೆಗಾಗಿ ಪ್ರಾರ್ಥಿಸಿದರು । ದಕ್ಷಿಣೆ ಕೇಳಿದರು ಬಾಬಾ ಅವರಿಗೆ ॥ 38

ಅದೂ ಕೇವಲ ಕಾಕಾರ ಬಳಿಗೆ । ಎಂದರು ಹದಿನೇಳು ರೂಪಾಯಿಗಳ ಕೊಡು ನನಗೆ ।
ಏನೂ ಬೇಡಲಿಲ್ಲ ಅವರ ಮಿತ್ರನಿಗೆ । ಆಗ ಆ ಮಿತ್ರ ಮನದಲಿ ಹಳಹಳಿಸಿದ ॥ 39

ಆಗ ಅವರು ಕಾಕಾಗೆ ಮೆಲ್ಲಗೆ ಕೇಳಿದರು । ನಿಮಗೇ ಏಕೆ ದಕ್ಷಿಣೆ ಬೇಡಿದರು ।
ಬೆಳಿಗ್ಗೂ ನಿಮ್ಮಿಂದಲೇ ತೆಗೆದುಕೊಂಡರು । ಈಗೂ ನಿಮ್ಮ ಹತ್ತಿರವೇ ಕೇಳಿದರು ॥ 40

ನಾನಿರುವಾಗ ನಿಮ್ಮ ಜೊತೆಗೆ । ದಕ್ಷಿಣೆಯ ಕೇಳರೇಕೆ ನನಗೆ ।
ಕಾಕಾ ಉತ್ತರಿಸಿದರು ಮೆಲ್ಲಗೆ । ಬಾಬಾರಿಗೇ ಕೇಳಿರಿದನು ॥ 41

ಅಷ್ಟರಲಿ ಬಾಬಾ ಕೇಳಿದರು ಕಾಕಾಗೆ । ಅವನೇನು ಹೇಳುತ್ತಿರುವ ನಿನಗೆ ।
ಆಗ ಆ ಮಿತ್ರನೇ ಕೇಳಿದ ಬಾಬಾರಿಗೆ । ದಕ್ಷಿಣೆಯನು ನಾ ಕೊಡಲೇ ಎಂದು ॥ 42

"ಕೊಡುವ ಇಚ್ಛೆ ಇರಲಿಲ್ಲ ನಿನಗೆ । ಅದಕೆಂದು ಬೇಡಲಿಲ್ಲ ನಿನಗೆ ।
ಕೊಡುವ ಮನಸಿದ್ದರೆ ಕೊಡು" ಆಗ ಬಾಬಾ ಎಂದರವನಿಗೆ । ಬಾಬಾ ಕೇಳಿದರೆ ಭಕ್ತರುಕೊಡುವರು ॥ 43

ಅದಕೆ ಆ ಮಿತ್ರರು । ಹಂಗಿಸುವರು ಅವರೇ ಬೇಡದೇ ।
ಕೊಡಲೇನೆಂದರು । ವಿಸ್ಮಯವಾಯಿತು ಕಾಕಾರಿಗೆ ॥ 44

ಎಂದರು ಮನಸಿದ್ದರೆ ಕೊಡು । ಆಗ ಆ ಮಿತ್ರ ಅವಸರಗೊಂಡು ।
ಹದಿನೇಳು ರೂಪಾಯಿಗಳ ತೆಗೆದು । ಬೇಡದೆ ಬಾಬಾರ ಚರಣದಲ್ಲಿಟ್ಟರು ॥ 45

ಬಳಿಕ ಬಾಬಾ ಎಂದರವಗೆ । "ಕ್ಷಣ ಬಿಟ್ಟು ಹೋಗುವಿಯಂತೆ ಕುಳಿತುಕೋ ಕೆಳಗೆ" ।
ಸವಿಮಾತಿನಲಿ ಉಪದೇಶಿಸಿದವರಗೆ । ಸಭೇದಾತ್ಮತೆಯ ತೊರೆಯಲು ॥ 46

"ಗಾಣಿಗನ ಗೋಡೆ ಇದೆ ನಮ್ಮ ನಿಮ್ಮ ನಡುವೆ ಈಗ । ಅದನು ಸಂಪೂರ್ಣವಾಗಿ ಕೆಡವಿಬಿಟ್ಟಾಗ ।
ಎದುರು ಎದುರು ಭೆಟ್ಟಿಯಾಗುವದಾಗ । ಪ್ರಶಸ್ತವಾಗಿ ಮಾರ್ಗವೂ" ॥ 47

ಬಳಿಕ ಆಜ್ಞೆಯನಿತ್ತರು । ಆಗ ಮಾಧವರಾಯರು ಪ್ರಾರ್ಥಿಸಿದರು ।
ನೆನೆಯಬಹುದು ಮಳೆಯಲಿವರು । ಮುಗಿಲು ಮೋಡದಿಂದ ತುಂಬಿದೆ ॥ 48

ಬಾಬಾ ಉತ್ತರವಿತ್ತರದಕೆ । ಇರದು ಮಳೆಯದೇನೂ ಹೆದರಿಕೆ ।
ಅಡ್ಡಿ ಇಲ್ಲ ಈಗ ಹೊರಡುವದಕೆ । ದಾರಿಯಲೇನೂ ತೊಂದರೆಯಾಗದು ॥ 49

ಬಾಬಾರ ಚರಣಗಳನೊಂದಿಸಿದರು । ಇಬ್ಬರೂ ಗಾಡಿಯಲ್ಲಿ ಕುಳಿತರು ।
ಮಿಂಚು ಹೊಡೆಯುತ್ತ ಗಾಳಿ ಧೂಳೆಬ್ಬಿಸಿದರು । ಗಂಗೆಗೆ ಹಾಲು ನೊರೆ ಉಕ್ಕಿತು ॥ 50

ಆಕಾಶದಲಿ ಗುಡುಗಿನಾರ್ಭಟವಿತ್ತು । ನೌಕೆಯಲಿ ನದಿಯ ದಾಟಬೇಕಾಯಿತು ।
ಕಾಕಾರ ಮನದಲಿ ಪೂರ್ಣ ವಿಶ್ವಾಸವಿತ್ತು । ಬಾಬಾರು ಆಶ್ವಾಸನೆ ಇತ್ತುದರಿಂದ ॥51

ವಿಚಾರ ಬಿತ್ತು ಗೆಳೆಯನಿಗೆ । ಈಗ ಸುಖದ ಪ್ರವಾಸವಾಗುವದು ಹೇಗೆ ।
ಕಷ್ಟವಾಗಬಹದು ದಾರಿಯೊಳಗೆ । ಸುಮ್ಮನೇ ಹೊರಟಂತಾಯಿತು ॥ 52

ಬಳಿಕವರು ಸುಖದಿಂದ ಹೋದರು । ಉಗಿಬಂಡಿಯಲ್ಲಿ ಕುಳಿತರು ।
ಬಳಿಕ ಮಳೆಯು ಸುರಿಯ ಹತ್ತಿದರೂ । ನಿರ್ಭಯವಾಗಿ ಮುಂಬಯಿಯ ತಲುಪಿದರು ॥ 53

ಆಮೇಲೆ ಮನಗೆ ಬಂದು । ನೋಡಿದರು ಬಾಗಿಲು ಕಿಟಕಿಗಳ ತೆಗೆದು ।
ಒಳಗೆ ಸಿಕ್ಕ ಗುಬ್ಬಿಯೊಂದು । ಹಾರಿ ಹೋಯಿತು ಉಳಿದೆರಡು ಜೀವಕಳಕೊಂಡಿದ್ದವು ॥ 54

ನೋಡಿ ಆ ದೃಶ್ಯವನಿಂತು । ಮನಸಿಗೆ ಬಹಳ ನೋವಾಯಿತು ।
ದೇವಾ ಅನ್ನ ನೀರಿನ ಹೊರತು । ಜೀವಕ್ಕೆರವಾದುವಲ್ಲ ಇವು ॥ 55

ನಾವು ಹೊರಟಾಗ ಶಿರಡಿಗೆ । ದಾರಿ ಬಿಟ್ಟಿದ್ದರೆ ಒಂದಿಷ್ಟು ಕಿಟಕಿಗೆ ।
ಸಿಗುತಿರಲಿಲ್ಲವು ಕಾಲದ ದವಡೆಗೆ । ನನ್ನಿಂದಾಗಿ ಇವು ಸತ್ತವಲ್ಲಾ ॥ 56

ಎದುರು ಈಗ ಹಾರಿ ಹೋದದ್ದು । ಬಾಬಾರಿಗೆ ಅದರದೇ ಚಿಂತೆ ಇದ್ದು ।
ಅದರಿಂದಲೇ ನಮಗೆ ಅನುಮತಿ ಇತ್ತದ್ದು । ನಾವು ತಿರುಗಿ ಹೊರಟು ನಿಂತಾಗ ॥ 57

ಇಲ್ಲದಿದ್ದರೆ ಅದೂ ಸಾಯುತಿತ್ತು । ಅನ್ನ ನೀರುಗಳಿಲ್ಲದೇ ಹೇಗೆ ಬದುಕೀತು ।
ಉಳಿದೆರಡರ ಆಯುಷ್ಯವೇ ಮುಗಿದಿತ್ತು । ಅದರಿಂದೀ ಗತಿಯಾಯಿತವಕೆ ॥ 58

ಇನ್ನೊಂದು ಸಂಗತಿ ಬಂತವರ ಅನುಭವಕೆ । ಅದೂ ಚೆನ್ನಾಗಿದೆ ಕೇಳುವದಕ್ಕೆ ।
ನೋವಿತ್ತವರ ಒಂದು ಕಾಲಿನ ಹಿಮ್ಮಡಕೆ । ಎಷ್ಟೋ ತಿಂಗಳುಗಳಾಗಿತ್ತದಕೆ ॥ 59

ಶಿರಡಿಗೆ ಹೋಗುವ ಮೊದಲು । ಇದ್ದಿತೀ ನೋವು ಎಷ್ಟೋ ತಿಂಗಳು ।
ಅಲ್ಲಿಂದ ತಿರುಗಿ ಬಂದು ಅಲ್ಪಾವಧಿಯೊಳು । ಆ ನೋವು ಕಾಣೆಯಾಯಿತು ॥ 60

ಹೀಗೆಯೇ ಇನ್ನೊಂದು ಕಥೆ ಇದು । ಅಂತ ನೋಡ ಹೋಗಲು ಸಂತರದು ।
ಚರಣದಲಿ ತಲೆಬಾಗಬೇಕಾಗುವದು । ಮನದಲಿರದಿದ್ದರೂ ಅದ ಕೇಳಿ ॥ 61

ಇಟ್ಟುಕೊಂಡಿದ್ದರೂ ದಕ್ಷಿಣೆ ಕೊಡಬಾರದೆಂದು । ಮೋಹಪಾಶದಲಿ ಸಿಕ್ಕಿಕೊಂಡು ।
ತಮ್ಮ ದೃಢನಿಶ್ಚಯವನ್ನು ಮುರಿದು । ದಕ್ಷಿಣೆಯ ಹೇಗೆ ಕೊಡುವರೆಂದು ॥ 62

ಠಕ್ಕರ ಧರಮಸೀ ಜೇಠಾಬಾಯಿಗೆ । ಸಾಲಿಸೀಟರಾಗಿದ್ದ ಮುಂಬಯಿಯೊಳಗೆ ।
ಪೂರ್ವಪುಣ್ಯ ಫಲಿಸಿದಾಗ್ಯೆ । ಸಾಯಿಯ ನೋಡಬೇಕೆನಿಸಿತು ॥ 63

ಇವನೇ ಮಹಾಜನಿಯ ಶೇಟ । ಇಬ್ಬರ ಪರಿಚಯ ಘನವಾಗಿರುತ ।
ಪ್ರತ್ಯಕ್ಷ ದರ್ಶನ ಪಡೆಯಲೆನುತ । ಶಿರಡಿಗೆ ಹೋಗುವ ಮನಸಾಯಿತು ॥ 64

ಕಾಕಾ ಠಕ್ಕರಜಿಯ ಅಂಗಡಿಯಲಿ । ಇದ್ದರು ಮುಖ್ಯ ಕಾರಭಾರಿಯ ಸ್ಥಾನದಲಿ ।
ಸಾಲಾಗಿ ಬಂದ ಸೂಟಿಯಲಿ । ಸಿದ್ಧರಾದರು ಶಿರಡಿಗೆ ಹೋಗಲು ॥ 65

ಕಾಕಾ ಎಂದೂ ಹೊತ್ತಿಗೆ ಸರಿಯಾಗಿ ಬರರು । ಎಂಟೆಂಟು ದಿನ ಶಿರಡಿಯಲ್ಲೇ ಉಳಿಯುವರು ।
ಸಾಯಿ ಅಪ್ಪಣೆ ಕೊಡಲಿಲ್ಲೆನ್ನುವರು । ಇದು ಕೆಲಸ ಮಾಡುವ ರೀತಿಯೇ ? ॥ 66

ಇದೆಂಥ ರೀತಿ ಸಂತರದು । ಇದೆಲ್ಲ ನಮಗೆ ಸರಿಬಾರದು ।
ಶೇಟ ಹೊರಟ ಹೋಳೀ ಹುಣ್ಣಿಮೆಯ ರಜೆಯಂದು । ಸಾಯಿಯ ವಿಚಾರವ ಮುಗಿಸಲು ॥67

ಹಿಡಿದು ದುರ್ಧರ ಅಭಿಮಾನ । ನಿಜ ಐಶ್ವರ್ಯದ್ದೇ ಅಭಿಮಾನ ।
ಸಂತರಾದರೂ ಮಾನವರ ಸಮಾನ । ಅವರಿಗೇನು ತಲೆಬಾಗುವದು ॥ 68

ಸಾಯಿಯ ಅಧಿಕಾರ ಸ್ಥಿತಿಯ ನೋಡಿದಾಗ । ಶಾಸ್ತ್ರಿ ಪಂಡಿತರೂ ಮೆತ್ತಗಾಗುವಾಗ ।
ಬಡಪಾಯಿ ಧರಮಸಿಯು ಅವರೆದುರಿಗ । ನಿಶ್ಚಯವನೆಷ್ಟು ದೃಢ ಹಿಡಿದಾನು ॥ 69

ಅಂಧಶ್ರದ್ಧೆ ಅಲ್ಲ ಒಳ್ಳೆಯದು । ಅದಕೆ ಬರುವದು ಪ್ರತ್ಯಕ್ಷ ನೋಡಿಕೊಂಡು ।
ಹೀಗೆ ನಿಶ್ಚಯ ಮಾಡಿಕೊಂಡು । ಶಿರಡಿಗೆ ಪ್ರಯಾಣ ಬೆಳಿಸಿದರು ॥ 70

ಮೇಲೆ ಬಣ್ಣಿಸಿದೆ ಒಬ್ಬ ಸ್ನೇಹಿತನ ಬಗ್ಗೆ । ಧರಮಸೀಯದೂ ಅದರ ಹಾಗೇ ।
ಹೊರಟರು ಕಾಕಾರ ಕರೆದುಕೊಂಡು ಜೊತೆಗೆ । ಮತ್ತೆ ನುಡಿದರು ಅವನಿಗೆ ॥ 71

ಶಿರಡಿಗೆ ಹೋದಮೇಲೆ ಅಲ್ಲೇ ಉಳಿಯುವದು । ಈಸಲ ಅದೆಲ್ಲ ನಡೆಯದು ।
ನನ್ನ ಜೊತೆಗೇ ತಿರುಗಿ ಬರುವದು । ನಿಶ್ಚಿತವಾಗಿ ಇದ ತಿಳಿದಿರು ॥ 72

ಆಗಕಾಕಾ ನುಡಿದರು । ಅದೆಲ್ಲ ನಮ್ಮ ಕೈಯಲಿರದು ।
ಆಗ ಧರಮಸಿ ಜೊತೆಗೆ ಕರೆದುಕೊಂಡು । ಇನ್ನಷ್ಟು ಜನರನು ನಡೆದರು ॥ 73

ಒಂದು ವೇಳೆ ಕಾಕಾ ಬರದಿದ್ದಲ್ಲಿ । ಜೊತೆಗಾರರಿಲ್ಲದೆ ನಡೆಯದು ದಾರಿಯಲಿ ।
ಹೀಗೆಂದು ಮತ್ತೆ ಮೂವರ ಜೊತೆಯಲಿ । ಕರಕೊಂಡು ಶಿರಡಿಗೆ ನಡೆದರು ॥ 74

ಜಗದಲಿ ಹೀಗನೇಕ ಪ್ರಕಾರಗಳು । ಪರೋಪಕಾರೀ ಭಕ್ತರವರಿರಲು ।
ಅವರ ಸಂಶಯ ನಿವೃತ್ತಗೊಳಿಸಲು । ಬಾಬಾ ಹಿಡಿದಿಡಿದು ಅವರ ತರುವರು ॥ 75

ಬಳಿಕವರು ತಿರುಗಿ ಹೋದಾಗ್ಯೆ । ತಮ್ಮ ಅನುಭವವ ಹೇಳುವರು ಬೇರೆಯವರಿಗೆ ।
ಅವರಿಂದ ಬರೆಯಿಸಿಕೊಳ್ಳುವರು ಹೀಗೆ । ಜನರಿಗೆ ಸತ್ಪಥವ ತೋರುವದಾಗಿ ॥ 76

ತಾತ್ಪರ್ಯ ಅಲ್ಲಿಗೆ ಹೋದವರು । ದರ್ಶನ ಸುಖದಿಂದ ತೃಪ್ತರಾಗುವರು ।
ಆರಂಭದಲಿರಲಿ ಹೇಗಾದರೂ ಅವರು । ಕೊನೆಗೆ ಪರಮಾನಂದವ ಪಡೆಯುವರು ॥ 77

ಅದಕ್ಕೇ ತಾವಾಗಿಯೇ ಹೋಗುವರು ನಡೆದು । ಚಿಕಿತ್ಸಾ ಪ್ರೀತಿಯಿಂದಲೇ ಇರಬಹುದು ।
ಆದರೆ ವಸ್ತುಸ್ಥಿತಿಯೇ ಬೇರೆ ಇರುವದು । ಬಾಬಾರ ಕಾರ್ಯಸಾಧಿಸುವರುವರು ॥78

ಬಾಬಾರೇ ಇಚ್ಛೆ ನೀಡುವರು । ಎಂದಾಗಲೇ ಅಲ್ಲಿಂದ ಹೊರಡುವರು ।
ಅವರಿಗೆ ಪರಮಾರ್ಥದ ದಾರಿ ತೋರುವರು । ಅವರ ವೃತ್ತಿಗಳ ಶಾಂತಗೊಳಿಸಿ ॥79

ತಿಳಿದಿರುವದಾರಿಗೆ ಅವರ ಗುಣ । ನೋಡ ಹೋದಾಗ ಕಾಣುವರು ಅವಗುಣ ।
ಚರಣದಲ್ಲಿ ಉರುಳಾಡಿರಿ ತಳೆದು ನಿರಭಿಮಾನ । ಅತ್ಯಂತ ಸುಖವ ಹೊಂದುವಿರಿ ॥ 80

ಸರಿಯಲ್ಲ ಹೋಗುವದು ಬರಿಗೈಯ್ಯೊಳಗೆ । ದೇವ-ದ್ವಿಜ-ಗುರುಗಳ ಬಳಿಗೆ ।
ಅದಕೆ ಕಾಕಾ ಕೊಂಡರು ದಾರಿಯೊಳಗೆ । ಎರಡು ಸೇರು ದ್ರಾಕ್ಷಿಗಳ ॥ 81

ಏನೇನೋ ಮಾತನಾಡುತ್ತ ಹಾಗೇ । ಬಂದು ತಲುಪಿದರು ಶಿರಡಿಗೆ ।
ಹೋದರು ಮೂವರೂ ಮಶೀದಿಯೊಳಗೆ । ಬಾಬಾರ ದರ್ಶನ ಪಡೆಯಲು ॥ 82

ಒಳಗೆ ಬೀಜವಿರದಂಥ । ದ್ರಾಕ್ಷೆಗಳಾಗ ಉಪಲಬ್ಧವಿರುತ ।
ಆದರೆ ಸಬೀಜವಾದುದನ್ನೇ ಕೊಂಡುಕೊಳ್ಳುತ । ಕಾಕಾ ದಾರಿಯಲ್ಲಿ ಸಿಕ್ಕಂಥದನು ॥ 83

ಬಾಬಾ ಸಾಹೇಬ ತರ್ಖಡ ಎಂಬ ಭಕ್ತರು । ಅವರೂ ಅಲ್ಲೇ ನಿಂತಿದ್ದರು ।
ಜಿಜ್ಞಾಸಾ ಪ್ರೇರಿತರಾದ ಧರಮಸೀ ಅವರು । ಅವರಿಗೇನು ಕೇಳಿದರೆಂಬದ ತಿಳಿಯಿರಿ ॥ 84

ಅಂಥದೇನಿದೆ ತಾವು ಇಲ್ಲಿ ಬರಲು । ತರ್ಖಡರೆಂದರು ದರ್ಶನ ಪಡೆಯಲು ।
ಶೇಟರೆಂದರು ಕೇಳಿದೆವು ವಾರ್ತೆಗಳು । ಇಲ್ಲಿ ಚಮತ್ಕಾರಗಳು ನಡೆಯುವವೆಂದು ॥ 85

ತರ್ಖಡರೆಂದರು ಅವರಿಗೆ । ಅಂಥ ಭಾವನೆ ಇಲ್ಲ ನನಗೆ ।
ಯಾವುದರ ಉತ್ಕಂಠೆ ಯಾರಿಗೆ । ಆದರಂತೆ ಕಾಮನೆ ಸಿದ್ಧಿಸುವದು ॥ 86

ಕಾಕಾ ಶಿರವ ಚರಣದಲಿಟ್ಟರು । ದ್ರಾಕ್ಷಿಗಳ ಕೈಯಲ್ಲಿ ಅರ್ಪಿಸಿದರು ।
ಜನರೂ ಅಲ್ಲಿ ನೆರೆದಿದ್ದರು । ಹಣ್ಣು ಹಂಚುವ ಕಾರ್ಯ ನಡೆಯಿತು ॥ 87

ಆಗ ಬಾಬಾ ಇತರರ ಜೊತೆಗೆ । ಕೆಲವನ್ನು ಕೊಟ್ಟರು ಧರಮಸೀಗೆ ।
ಆದರವು ಸೇರವು ಅವನಿಗೆ । ಬೀಜವಿಲ್ಲದ್ದೇ ಬೇಕವನಿಗೆ ॥ 88

ಈ ದ್ರಾಕ್ಷಿಗಳ ಕಂಡರಾಗದು । ಎನಿಸಿತು ಆರಂಭದಲ್ಲೇ ಅಡ್ಡಿ ಬಂತಿದು ।
ಹೇಗೆ ಇವುಗಳ ತಿನ್ನುವದು । ನಿರಾಕರಿಸುವದೂ ಕಷ್ಟವಾಯಿತು ॥ 89

ಹೊರತಾಗಿ ಡಾಕ್ಟರರು ಹೇಳಿರುವದು । ತೊಳೆಯದೇ ದ್ರಾಕ್ಷಿಯ ತಿನಬಾರದು ।
ತಾವೇ ತೊಳೆಯಬೇಕೆಂದರೂ ಸರಿಕಾಣದು । ನಾನಾವಿಧ ವಿಚಾರಗಳು ಬರತೊಡಗಿವು ॥ 90

ಬಳಿಕ ಹಾಗೆಯೇ ಬಾಯಲ್ಲಿ ಹಾಕಿಕೊಂಡು । ಒಳಗಿನ ಬೀಜಗಳ ಜೇಬಿನಲಿರಿಸಿಕೊಂಡು ।
ಸಾಧುಗಳ ಪವಿತ್ರಸ್ಥಾನವಿದು । ಇದನಪವಿತ್ರಗೊಳಿಸಬಾರದು ಎಂಜಲ ಬೀಜಚೆಲ್ಲಿ ॥ 91

ಆಗ ಆ ಶೇಟ ಮನದಲೆಂದದ್ದು । ಸಾಧುಗಳಿದ್ದು ಇವರಿಗೇಕೆ ತಿಳಿಯಬಾರದು ।
ನನಗೆ ಈ ದ್ರಾಕ್ಷಿ ಸೇರದೆಂದು । ಒತ್ತಾಯದಿಂದೇಕೆ ಕೊಡುವರೆನಗೆ ॥ 92

ಅವನ ಮನದಲಿ ವಿಚಾರ ನಡೆದಿರಲು ಹೀಗೆ । ಬಾಬಾ ಮತ್ತೆ ಅವುಗಳನ್ನೇ ಕೊಟ್ಟರವನಿಗೆ ।
ಅವು ಬೀಜವಿದ್ದವೆಂದು ತಿಳಿದು ಕೈಯಲ್ಲೇ ಇಟ್ಟುಕೊಂಡು । ಬಾಯಲಿ ಹಾಕಿಕೊಳಲೊಲ್ಲ ॥ 93

ಸಬೀಜ ದ್ರಾಕ್ಷಿಗಳವನಿಗೆ ಸೇರದಿದ್ದರೂ । ಬಾಬಾ ತಮ್ಮ ಕೈಯಿಂದ ಕೊಟ್ಟಿದ್ದರು ।
ಶೇಟರು ಏನು ಮಾಡುವದೆಂಬುದ ತಿಳಿಯದಾದರು । ಒಳಗೊಳಗೇ ಚಡಪಡಿಸತೊಡಗಿದರು ॥ 94

ಬಾಯೊಳಗೆ ಹಾಕಿಕೊಳ್ಳಲು ಮನಬಾರದು । ಕುಳಿತರು ಹಾಗೇ ಮುಷ್ಟಿಯಲ್ಲಿಟ್ಟುಕೊಂಡು ।
ಆಗ ಬಾಬಾ ಎಂದರು, "ತಿಂದುಬಿಡು" । ಶೇಟ ಅಪ್ಪಣೆ ಮನ್ನಿಸಿದನು ॥ 95

"ತಿಂದು ಬಿಡು" ಎಂಬ ಬಾಬಾರ ಮಾತಿನಿಂದ । ಶೇಟ ಹಣ್ಣುಗಳ ಬಾಯಲಿ ಹಾಕಿಕೊಂಡ ।
ಅವುಗಳಲಿ ಬೀಜಗಳಿಲ್ಲದುದ ಕಂಡ । ಅತಿ ಆಶ್ಚರ್ಯವಾಯಿತವಗೆ ॥ 96

ನಿರ್ಬೀಜ ದ್ರಾಕ್ಷಿಗಳೆಂದು ತಿಳಿದಾಗ ಹೀಗೆ । ವಿಸ್ಮಯವಾಯಿತಾಗ ಧರಮಸೀಗೆ ।
ಏನು ಅಶಕ್ಯವೀ ಸಂತನಿಗೆ । ಅಗಾಧ ಅಧಿಕಾರವಿದೆ ಇವನಿಗೆ ॥ 97

ನನ್ನ ಮನದಲಿದ್ದುದ ಅರಿತರು । ಮತ್ತೆ ಅವುಗಳನ್ನೇ ನನಗಿತ್ತರು ।
ಆದರೆ ಅವೆಲ್ಲ ಸಬೀಜ ಮತ್ತು ತೊಳೆಯದವಿದ್ದರೂ । ಅವು ನಿರ್ಬೀಜ ಮತ್ತು ಹಿತಕಾರಕವಾಗಿದ್ದವು ॥ 98

ನಿಂತು ಹೋಯಿತು ಚಿತ್ತ ವೃತ್ತಿ । ಚಿಕಿತ್ಸೆಯದಾಯಿತು ವಿಸ್ಮೃತಿ ।
ಕರಗಿತೆಲ್ಲ ಅಹಂಕೃತಿ । ಸಂತರಲಿ ಪ್ರೀತಿ ಹುಟ್ಟಿತು ॥ 99

ಪೂರ್ವಸಂಕಲ್ಪ ಕುಸಿದು ಬಿತ್ತು । ಸಾಯಿಯ ಪ್ರೇಮ ಉದಯಿಸಿತು ।
ಶಿರಡಿಗೆ ಬರುವಾಗ ಉತ್ಕಂಠೆ ಇತ್ತು । ಅದೆಲ್ಲ ಮಾಯವಾಯಿತು ॥ 100

ಬಾಬಾ ತರ್ಖಡರೂ ಅಲ್ಲಿ । ಕುಳಿತಿದ್ದರು ಬಾಬಾರ ಬಳಿಯಲ್ಲಿ ।
ಬಾಬಾ ಕೆಲವನು ಆ ಹಣ್ಣುಗಳಲ್ಲಿ । ಅವರಿಗೂ ಕೊಟ್ಟಿದ್ದರು ॥ 101

ಆಗ ಧರಮಸೀ ಕೇಳಿದ ಅವರಿಗೆ । ತಮ್ಮ ದ್ರಾಕ್ಷಿಗಳು ಇದ್ದವು ಹೇಗೆ ।
ಅವರು ಸಬೀಜವೆಂದು ಹೇಳಿದಾಗ್ಯೆ । ಅತಿಶಯ ಆಶ್ಚರ್ಯವಾಯಿತು ॥ 102

ಆಗ ಶ್ರದ್ಧೆ ಹುಟ್ಟಿತು ಅವರು ಸಾಧುಗಳೆಂದು । ಆದರೂ ಆವಿಶ್ವಾಸವ ದೃಢಪಡಿಸಿಕೊಳಲೆಂದು ।
ಸಾಧುಗಳಿದ್ದರೆ ಈಗ ಮುಂದಿನದು । ಕಾಕಾರಿಗೆ ಕೊಡಲ್ಪಡಬೇಕು ॥ 103

ಬಾಬಾ ಬಹಳ ಜನರಿಗೆ ಹಂಚುತಿದ್ದರು । ಯಾವಾಗ ಶೇಟ ಹೀಗೆಂದುಕೊಂಡರು ।
ಕಾಕಾನ ಮೊದಲ ಮಾಡಿಕೊಂಡೇ ಕೊಡತೊಡಗಿದರು । ಅತಿ ವಿಚಿತ್ರವೆನಿಸಿತು ಶೇಟನಿಗೆ ॥ 104

ಸಾಧುತ್ವದ ಚಿನ್ಹೆ ಹೀಗೆ । ಮನದಲಿದ್ದುದ ತಿಳಿಯುವ ಬಗೆ ।
ಖಚಿತವಾಯಿತು ಧರಮಸಿಯ ಮನಸಿಗೆ । ಸಾಯಿ ನಿಜದಲಿ ಸಾಧುವೆಂದು ॥ 105

ಅಲ್ಲಿಯೇ ಇದ್ದ ಮಾಧವರಾಯರು । ಆಗ ಬಾಬಾರಿಗೆ ನಿವೇದಿಸಿದರು ।
ಕಾಕಾನ ಅಂಗಡಿಯೊಡೆಯರಿವರು । ಎಂದು ಪರಿಚಯಿಸಿದರು ಅವರ ॥ 106

"ಕಾಕಾರ ಮಾಲಿಕ ಇವನೆಲ್ಲಿಯವ । ಅವರ ಮಾಲಿಕ ಬೇರೆಯೇ ಇರುವ" ।
ಬಾಬಾ ಇತ್ತ ಸ್ಪಷ್ಟ ಉತ್ತರವ । ಕೇಳಿ ಕಾಕಾಗೆ ಹರುಷವಾಯಿತು ॥ 107

ಹೇಗಾಯಿತು ವಿಚಿತ್ರವಿನ್ನೊಂದು । ಅಪ್ಪಾ ಎಂಬೊಬ್ಬ ಆಚಾರಿ ಇದ್ದು ।
ಅಲ್ಲಿಯೇ ಧುನಿಯ ಹತ್ತಿರ ನಿಂತಿದ್ದು । ಅವನ ಮೇಲೆ ಹಾಕಿದರು ॥ 108

ಈ ಶೇಟರು ಇಲ್ಲಿಯವರೆಗೆ ಬಂದರಲ್ಲ । ಅವರು ಶ್ರಮವಹಿಸಿದ್ದು ನನಗಾಗಿ ಅಲ್ಲ ।
ಅಪ್ಪಾರ ಬಗೆಗಿನ ಪ್ರೇಮವಿದೆಲ್ಲ । ಅದಕೆ ಶಿರಡಿಗೆ ಬಂದರು ॥ 109

ಹೀಗೆ ಈ ಮಾತಾಯಿತು । ಧರಮಸಿಗೆ ತನ್ನ ನಿಶ್ಚಯ ಮರೆಯಿತು ।
ತಾವಾಗಿಯೇ ಚರಣಕ್ಕೆರಗಿಯಾಯಿತು । ತಿರುಗಿ ವಾಡೆಗೆ ಹೋದರು ॥ 110

ಮಧ್ಯಾಹ್ನದ ಆರತಿ ಆಯಿತು । ಮನೆಗೆ ಹಿಂದಿರುಗುವ ಸಿದ್ಧತೆಯಾಯಿತು ।
ಆಜ್ಞೆ ಪಡೆಯುವ ಸಮಯ ಬಂತು । ಜನರು ಮಶೀದಿಗೆ ನಡೆದರು ॥ 111

ಧರಮಸೀ ಕಾಕಾರಿಗೆ ಹೇಳಿದನು । ನಾನಂತೂ ಆಜ್ಞೆಯ ಬೇಡಲಾರೆನು ।
ನೀವೇ ಕೇಳಿರಿ ನಿಮಗೆ ಬೇಕಾದುದನು । ಆಗ ಮಾಧವರಾಯರೇನೆಂದರು ॥ 112

ಕಾಕಾರಿಗೆ ಆಜ್ಞೆ ಸಿಗದು । ಕಳೆಯದೇ ವಾರವೊಂದು ।
ಇದು ನಿಶ್ಚಿತವಿರುವದು । ಅದಕೆ ನೀವೇ ಅಪ್ಪಣೆ ಕೇಳಿರಲ್ಲ ॥ 113

ಮುಂದೆ ಈ ಮೂವರೂ ಹೋಗಿ ಕುಳಿತಾಗ । ಮಾಧವರಾಯರು ಆಜ್ಞೆ ಬೇಡಿದಾಗ ।
ಬಾಬಾ ಹೇಳಲಾರಂಭಿಸಿದ ವಾರ್ತೆಯನೀಗ । ಸ್ವಸ್ಥ ಚಿತ್ತವಿಟ್ಟು ಕೇಳಿರಿ ॥ 114

"ಇದ್ದನೊಬ್ಬ ಚಂಚಲ ಬುದ್ಧಿ । ಮನೆಯಲಿತ್ತು ಧನ ಧಾನ್ಯ ಸಮೃದ್ಧಿ ।
ಶರೀರದಲಿರಲಿಲ್ಲ ಆಧಿ ವ್ಯಾಧಿ । ಅಲ್ಲದ ಉಪಾಧಿಬೇಕವನಿಗೆ ॥ 115

ಸುಮ್ಮನೇ ಭಾರ ಹೊತ್ತು ತಲೆಯ ಮೇಲೆ । ಇರುವ ಅತ್ತಿತ್ತ ತಿರುಗುತಲೇ ।
ಒಂದಿಷ್ಟು ಕೆಳಗಿಟ್ಟು ಮತ್ತೆ ಎತ್ತಿಕೊಳುವ ಮೇಲೆ । ಮನಸ್ಸಿಗೆ ನಿಶ್ಚಿಂತೆಯೇ ಇಲ್ಲ ॥ 116

ಅವನ ಅವಸ್ಥೆಯ ನೋಡಿ ಹೀಗೆ । ದಯೆ ಹುಟ್ಟಿ ನನ್ನ ಮನಸಿನೊಳಗೆ ।
ಎಂದೆ, ನಿನಗೆನಿಸಿದ ಸ್ಥಳದೊಳಗೆ । ಇನ್ನು ಸ್ಥಿರವಾಗಿ ಇಟ್ಟುಬಿಡು ಎಂದು ॥ 117

ಸುಮ್ಮನೇ ಏತಕೆ ತಿರುಗುವಿ ಹೀಗೆ । ಸ್ವಸ್ಥವಾಗಿ ಕುಳಿತುಕೋ ಒಂದೆಡೆಗೆ" ।
ಮಾತು ಹತ್ತಿತು ಧರಮಸೀಗೆ । ತನಗಾಗಿಯೇ ಈ ಮಾತು ಎಂದರಿತ ॥ 118

ಬೇಕಾದಷ್ಟು ವೈಭವವಿದ್ದು । ಚಿಂತೆಗೆಷ್ಟೂ ಕಾರಣವಿರದು ।
ಸುಮ್ಮನೇ ಚಿಂತೆ ಮಾಡಿ ತಲೆಕೆಡಿಸಿಕೊಳ್ಳುವದು । ಯಾವಾಗಲೂ ನಡೆದಿರುವದು ॥ 119

ವಿಪುಲ ಸಂಪತ್ತಿ ಮರ್ಯಾದೆಗಳಿದ್ದೂ । ಮನಸಿಗೆ ಸಮಾಧಾನವಿರದು ।
ಕಾಲ್ಪನಿಕ ಕಷ್ಟಗಳ ಕಟ್ಟಿಕೊಂಡು । ಅದರಲ್ಲಿಯೇ ನಿಮಗ್ನ ಯಾವಾಗಲೂ ॥ 120

ಸಾಯಿ ಮುಖದಿಂದ ಈ ಮಾತು ಕೇಳಿ । ವಿಸ್ಮಿತನಾದ ಶೇಟಜಿ ಮನದಲಿ ।
ಅತಿ ಲಕ್ಷಗೊಟ್ಟದನು ಕೇಳಿ । ಇದು ತನ್ನ ಮನಸಿನ ಅವಸ್ಥೆಯೇ ಎಂದರಿತ ॥ 121

ಕಾಕಾಗೆ ಇಷ್ಟು ಬೇಗ ಆಜ್ಞೆ । ಸಿಗುವದೇ ಅಸಾಧ್ಯ ಘಟನೆ ।
ಆದರೂ ಸಿಕ್ಕಿದೆ ಪ್ರಯಾಸವಿಲ್ಲದೇನೇ । ಧರಮಸಿ ಮನದಲಿ ಸಂತುಷ್ಟನಾದ ॥ 122

ಕಾಕಾ ಹೊರಡಬೇಕು ತನ್ನ ಜೊತೆಗೆ । ಎಂಬ ಘನವಾದ ಬಯಕೆ ಧರಮಸೀಗೆ ।
ಅದನೂ ಬಾಬಾ ನಡೆಸಿಕೊಟ್ಟಾಗ್ಯೆ । ಹೋಗಲಪ್ಪಣೆಯನಿತ್ತು ॥ 123

ಇದೂ ಒಂದು ಶೇಟಜೀಯ ಪಣವಿದ್ದು । ಹೇಗೆ ಬಾಬಾರಿಗಿದು ತಿಳಿದದ್ದು ।
ಸಾಧುತ್ವದ ಲಕ್ಷಣವೇ ಇದೂ ಒಂದು । ಧರಮಸೀಗೆ ವಿಲಕ್ಷಣ ನಂಬಿಗೆಯಾಯಿತು ॥ 124

ಆಯಿತವರ ಸಂಶಯ ನಿವೃತ್ತಿ । ಸಾಯಿ ಸಾಧುವೆಂಬ ಅಭಿವ್ಯಕ್ತಿ ।
ಯಾರ ಮನದಲಿ ಹೇಗೆ ವೃತ್ತಿ । ಹಾಗೆಯೇ ಅನುಭೂತಿಯನಿತ್ತರು ॥ 125

ಯಾವ ಮಾರ್ಗದಿ ಅವರು ಹೋಗಬಯಸುವರು । ಅದರಂತೆಯೇ ಅವರಿಗೆ ಮಾರ್ಗ ತೋರುವರು ।
ಅವರ ಅಧಿಕಾರವನು ಸಾಯಿ ತಿಳಿದಿರುವರು । ಅದರಂತೆಯೇ ಪರಮಾರ್ಥ ಪ್ರಾಪ್ತಿಯವರಿಗೆ ॥ 126

ಭಾವಾರ್ಥಿ ಅಥವಾ ಕುಚೇಷ್ಟೆಯವನಿರಲು ಭಕ್ತನು । ಸಾಯಿ ಕೃಪಾಳುತನದಿ ನೋಡುವರಿಬ್ಬರನೂ ।
ಒಬ್ಬನ ದೂರ ಸರಿಸಿ ಅಪ್ಪುವದು ಇನ್ನೊಬ್ಬನನು । ಕನಿಕರದ ತಾಯಿ ತಿಳಿಯಳಿದ ॥ 127

ಅವರಿಬ್ಬರೂ ಹೊರಟು ನಿಂತಿರಲು । ಕಾಕಾರ ಹತ್ತಿರ ಹದಿನೈದು ರೂಪಾಯಿಗಳು ।
ಬಾಬಾ ದಕ್ಷಿಣೆ ಕೇಳಲು । ಕೊಟ್ಟಾಗ ಕಾಕಾಗೆ ನುಡಿದರು ಬಾಬಾ ॥ 128

"ದಕ್ಷಿಣೆಯೆಂದು ನನಗೆ ಯಾರಾದರೂ । ಒಂದೇ ರೂಪಾಯಿ ಕೊಟ್ಟಿದ್ದರೂ ।
ಅದರ ಹತ್ತರಷ್ಟು ಬೆಲೆ ಅವಗೆ ನಾನಾದರೂ । ಎಣಿಸಿ ಕೊಡಬೇಕಾಯಿತು ॥ 129

ಯಾರದೇನೂ ಸುಮ್ಮನೇ ತೆಗೆದುಕೊಳ್ಳುವೆನೆ ನಾನು । ಬೇಡುವದಿಲ್ಲ ನಾನೆಲ್ಲ ಕಂಡವರನು ।
ಫಕೀರನು ಯಾರತ್ತ ಬೆರಳಿಟ್ಟು ತೋರುವನು । ಅವನ ಹತ್ತಿರವೇ ಮಾತು ದಕ್ಷಿಣೆಯದು ॥130

ಯಾರಿಗೆ ಫಕೀರನ ಋಣವಿರುವದು । ಅವನ ಹತ್ತಿರ ಮಾತ್ರ ಬೇಡಲಾಗುವದು ।
ದಾತೃವು ತೆಗೆದುಕೊಂಡು ಬಿತ್ತುವದು । ಮುಂದೆ ರಾಶಿ ಮಾಡಲು ॥ 131

ಧರ್ಮದ್ವಾರದಿಂದ ಬಂದ ವಿತ್ತವಿದು । ವಿತ್ತವಂತನಿಗೆ ಉಪಕಾರಿಯಾಗುವದು ।
ಹೀಗೆ ಬಂದದ್ದೇ ಧರ್ಮಫಲವಿರುವದು । ಅಲ್ಲಿ ಜ್ಞಾನಕ್ಕೆ ಅವಕಾಶವಿರುವದು ॥ 132

ಕಷ್ಟ ಸಂಪಾದ್ಯವಾದ ಈ ವಿತ್ತ । ಇರುವದು ಕೇವಲ ಇಷ್ಟೋಪಭೋಗಾರ್ಥ ।
ನಿಷ್ಕಾರಣ ವೆಚ್ಚ ಮಾಡುವರು ವ್ಯರ್ಥ । ಧರ್ಮಸಂಚಿತವಿದನು ಅವಗಣಿಸಿ ॥ 133

ಪೈ ಪೈಯಂತೆ ಕೂಡಿಸಿ । ಕೋಟ್ಯಾಂತರ ಹಣಗಳಿಸಿ ।
ಅದನು ವಿಷಯ ಸ್ವಾರ್ಥಗಳ ಬಯಸಿ । ಎಂದೂ ವ್ಯಯಿಸದವನೇ ಸುಖಿ ॥ 134

'ನಾದತ್ತಮುಪತಿಷ್ಠತಿ'ಎಂದು । ಶೃತಿವಾಕ್ಯ ಎಲ್ಲರಿಗೂ ತಿಳಿದಿರುವುದು ।
ಮೊದಲು ಕೊಟ್ಟಿದ್ದೇ ಮುಂದೆ ಬಂದು ನಿಲ್ಲುವುದು ।ಅದಕಾಗಿ ದಕ್ಷಿಣೆಯ ಕೇಳುವದು ॥ 135

ರಾಮಾವತಾರದಲಿ ರಘುನಂದನನು । ಸ್ವರ್ಣಸ್ತ್ರೀಯರನನೇಕ ದಾನ ಮಾಡಿದನು ।
ಷೋಡಶ ಸಹಸ್ರ ಪ್ರಮಾಣದಲದನು । ಪಡೆದ ಶ್ರೀ ಕೃಷ್ಣ ತತ್ಫಲವಾಗಿ ॥ 136

ಭಕ್ತಿ ಜ್ಞಾನ ವೈರಾಗ್ಯ ಹೀನ । ಹೀಗಿರುವಾಗ ಭಕ್ತನು ಅತಿದೀನ ।
ಮೊದಲು ವೈರಾಗ್ಯದಲಿ ಸ್ಥಾಪಿಸಿ ಅವನ । ಬಳಿಕ ಭಕ್ತಿ ಜ್ಞಾನಗಳ ಕೊಡುವುದು ॥ 137

ಯಾರು ದಕ್ಷಿಣೆಯ ಕೊಡುವರಿಂತು । ಅದು ತಾನೇ ವೈರಾಗ್ಯದ ಗುರುತು ।
ಮುಂದೆ ಭಕ್ತಿ ಪಂಥವ ತೋರಿಂತು । ಜ್ಞಾನ ಪ್ರವೀಣ ಮಾಡುವರು ॥ 138

"ನಾವಾದರೂ ಏನು ಮಾಡುವೆವು । ಒಂದು ತೆಗೆದುಕೊಂಡು ಹತ್ತು ಕೊಡುವೆವು ।
ಕ್ರಮ ಕ್ರಮವಾಗಿ ಜ್ಞಾನಪಥಕೆ ಹಚ್ಚುವೆವು" । ಅದರಿಂದ ಆಶೆಯುದಿಸಿತು ಧರಮಸೀಗೆ ॥ 139

ತಾವಾಗಿಯೇ ಹದಿನೈದು ರೂಪಾಯಿಗಳ ತೆಗೆದರು । ಬಾಬಾರ ಕೈಯಲ್ಲಿಟ್ಟರು ।
ಹಿಂದಿನ ನಿರ್ಧಾರವ ಮರೆತರು । ಎಲ್ಲ ಪ್ರಕಾರವೇ ಅಪೂರ್ವವಾಗಿತ್ತು ॥ 140

ಎನಿಸಿತು ಮೊದಲು ವ್ಯರ್ಥಬಡಬಡಿಸಿದೆ । ಒಳ್ಳೆಯದಾಯಿತು ನಾಪ್ರತ್ಯಕ್ಷ ಬಂದೆ ।
ಸಾಧುಗಳು ಹೇಗಿರುವರೆಂಬದ ತಿಳಿದೆ । ಅದರ ಅನುಭವದಿಂದ ಲುಬ್ಧನಾದೆ ॥ 141

ಮನದಲಿ ದೃಢವಾಗಿ ವಿಚಾರ ಮಾಡದೆ । ನಾ ನಮಿಸಲಾರೆನೆಂದಿದ್ದೆ ।
ಇಲ್ಲಿಗೆ ನಾನಾಗಿಯೇ ಬಂದಿದ್ದೆ । ಸಾಧುಗಳ ಕರ್ತೃತ್ವವೇ ಅಗಾಧ ॥ 142

"ಅಲ್ಲಾ ಮಾಲಿಕ್" ಮುಖದಲಿ ನಿರಂತರ । ಅಂಥವರಿಗೆ ದುಷ್ಕರ ।
ನಾವು ನೋಡುವದಕ್ಕಾಗಿದ್ದೆವು ಆತುರ । ಕೇವಲ ಸಾಧುಗಳ ಚಮತ್ಕಾರಗಳನು ॥143

ವ್ಯರ್ಥವಾಯಿತು ನಮ್ಮ ಪಣ । ಮಾನವನಿಗೆ ಮಾಡಿದೆ ಸಾಷ್ಟಾಂಗ ನಮನ ।
ದಕ್ಷಿಣೆಯನೂ ಕೊಟ್ಟೆ ಬೇಡುವ ಮುನ್ನ । ನಾನಾಗಿಯೇ ಮುಂದಾಗಿ ॥ 144

ನಮ್ಮ ದೊಡ್ಡಿಸಿಕ್ತಯೆಲ್ಲ ವ್ಯರ್ಥವಾದುದು । ನಾವೇ ನಮ್ಮ ಶಿರವನೊಯ್ದು ।
ಭಕ್ತಿಯಲಿ ಸಾಯಿ ಚರಣದಲಿ ಇಟ್ಟದ್ದು । ಇದಕಿಂತ ಹೆಚ್ಚಿಗಿನ್ನೇನು ಬೇಕು ॥ 145

ಸಾಯಿಯ ಲೀಲೆಯನೆಷ್ಟೆಂದು ಬಣ್ಣಿಸುವುದು । ಇದಕ್ಕೆಲವನ್ನು ತಾನೇ ಮಾಡುತಿದ್ದು ।
ಹೊರನೋಟಕೆ ಅಲಿಪ್ತನಂತಿರುವದು । ಇದಕಿಂತ ವಿಸ್ಮಯಕರವೇನಿದೆ ॥ 146

ಯಾರು ಮಾಡಿರಿ ಅಥವಾ ಬಿಡಿರಿ ವಂದನ । ಯಾರು ಕೊಡಲಿ ಅಥವಾ ಬಿಡಲಿ ದಕ್ಷಿಣೆದಾನ ।
ಆನಂದಕಂದ ಆ ಸಾಯಿ ದಯಾಘನ । ಅವಗಣೆಯನಾದರೂ ಮಾಡಸು ॥ 147

ಪೂಜಿಸಿದರೆಂಬ ಹರುಷವಿಲ್ಲ । ಅವಮಾನಿಸಿದರೆಂಬ ಖೇದವಿಲ್ಲ ।
ವಿಷಾದವೆಲ್ಲಿಯದು ಎಲ್ಲಿ ಹರುಷವಿಲ್ಲ । ಪೂರ್ಣನಿರ್ದ್ವಂದ್ವ ಸ್ಥಿತಿಯಿದು ॥ 148

ಯಾರದು ಏನೇ ಉದ್ದೇಶವಿದ್ದರು । ಒಮ್ಮೆ ಯಾರಿಗೆ ದರ್ಶನವಿತ್ತರು ।
ಅವರ ತಮ್ಮ ಭಕ್ತಿಯಲಿ ತೊಡಗಿಸುವರು । ಅದ್ಭುತ ಶಕ್ತಿ ಇದು ಸಾಯಿಯದು ॥149

ಆಮೇಲೆ ತೆಗೆದುಕೊಂಡು ಉದೀ ಪ್ರಸಾದ । ಮತ್ತೆ ಪಡೆದು ಆಶೀರ್ವಾದ ।
ಊರಿಗೆ ಮರಳಿದರು ನಿರ್ವಿವಾದ । ಅಗಾಧ ಖ್ಯಾತಿ ಇದು ಸಾಯಿಯದು ॥ 150

ಅಲ್ಲಿಂದ ತಿರುಗಿ ಹೋಗಲು । ಬೇಕಾಗುವ ಬಾಬಾರ ಆಜ್ಞೆ ಪಡೆಯಲು ।
ಆಜ್ಞೆ ಉಲ್ಲಂಘನೆಯಾಗಲು । ವಿಘ್ನಕ್ಕೆ ನಿಮಂತ್ರಣವಿತ್ತಂತೆ ॥ 151

ತಮ್ಮಿಂಚ್ಛೆಯಿಂದ ತಾವು ಹೊರಡಲು । ಅನುತಾಪ ಮತ್ತು ಕಷ್ಟದಲಿ ದಾರುಣ
ವ್ಯತ್ಯಯಗಳು । ಅವುಗಳ ನಿವಾರಣೆ ದುಃಸ್ಸಾಧ್ಯ ॥ 151

ಹೀಗಲ್ಲಿಂದ ನಿರ್ಗಮನದ ವರ್ಣನೆ ಇರಲು । ನಮ್ಮ ಸ್ಥಿತಿಯೂ ಅದೇ ಆಗಿರಲು ।
"ಬರಲಾರರಾರೂ ಇಲ್ಲಿ ನಾ ಕರೆತರದಿರಲು" । ಎಂಬ ವಂದತಿ ಬಾಬಾರದು ॥ 153

"ನನ್ನ ಇಚ್ಛೆ ಇರದಿರಲು । ಯಾರು ದಾಟುವರು ಈ ಹೊಸಲು ।
ಸ್ವೇಚ್ಛೆಯಾರಿಗೆ ಇಲ್ಲ ದರ್ಶನ ಪಡೆಯಲು । ಶಿರಡಿಗೆ ಆಗಮನವಾದರೂ ಹೇಗಾದೀತು" ।।154

ಸಾಯಿ ಸಮರ್ಥಕೃಪಾ ಮೂರ್ತಿಗೆ । ಅವನಿಗೆ ಅಧೀನ ನಮ್ಮ ಗತಿ ।
ಕೃಪೆ ಮೂಡಿದಾಗ ಅವನ ಮನದೊಳಗೆ । ಆಗ ಮಾತ್ರ ದರ್ಶನಕೆ ಬರುವರು ।।155

ಹೀಗಿರುವದಿಲ್ಲಿಯ ಗಮನಾಗಮನ । ಇರದೇ ಸಾಯಿಯ ಚಿತ್ತ ಪ್ರಸನ್ನ ।
ಸಿಗದು ಯಾರಿಗೂ ಆಜ್ಞಾಪನ । ಉದೀ ಪ್ರಸಾದಗಳ ಸಮವೇತ ।। 156

ಮಾಡಿ ಅವರಿಗೆ ಅಭಿವಂದನ । ಕೇಳ ಹೋದಾಗ ಅವರ ಆಜ್ಞಾಪನ ।
ಉದೀ ಪ್ರಸಾದಗಳ ಜೊತೆಗೆ ಆಶೀರ್ವಚನ । ಅದೇ ಆಜ್ಞಾಪನ ಗಮನಕೆ ।। 157

ಇನ್ನೊಬ್ಬನ್ನ ವಿಭೂತಿ ಅನುಭವ । ಶ್ರೋತೃಗಳಿಗೆ ಹೇಳುವೆ ಅಭಿಮಾನ ।
ಬಳಿಕ ನೇವಾಸಕರರ ಭಕ್ತಿ ಪ್ರಭಾವ । ಮಹಾನುಭಾವರಾದ ಸಾಯಿಯ ಕೃಪೆ ।। 158

ಬಾಂದ್ರ ಶಹರದ ಒಬ್ಬ ಗೃಹಸ್ಥ । ಅವನು ಜಾತಿಯಲಿ ಪ್ರಭುಕಾಯಸ್ಥ ।
ರಾತ್ರಿಯಲಿ ನಿದ್ರೆ ಬಾರದು ಸ್ವಸ್ಥ । ಪ್ರಯತ್ನಗಳನೆಷ್ಟು ಮಾಡಿದರೂ ।। 159

ಕಣ್ಣಿಗೆ ಕಣ್ಣು ಹತ್ತುವುದು । ನಿದ್ರೆ ಬರುವುದು ಕ್ಷಣವೊಂದು ।
ಅಷ್ಟಕ್ಕವನ ಮೃತ ತಾತ ಕನಸಿಸಲಿ ಬಂದು । ಎಚ್ಚರಿಸುತಿದ್ದ ದಿನಾಲೂ ।। 160

ಹಿಂದಿನ ಯುಕ್ತಾಯುಕ್ತ ಪ್ರಕಾರದ । ಗುಪ್ತ ಗಹ್ಯ ಕ್ಲಿಷ್ಟ ವಿಚಾರದ ।
ಅಪಶಬ್ದ ಶಾಪಪೂರ್ವಕ ಶಬ್ದಗಳಿಂದ । ವಾಕ್ಪ್ರಹಾರ ಮಾಡುತಿದ್ದ ।। 161

ಪ್ರತಿದಿನವೂ ಹೀಗೆ ನಡೆಯುತ್ತಿತ್ತು । ಪ್ರತಿದಿನವು ನಿದ್ದೆ ಕೆಡುತಿತ್ತು ।
ಏನು ಮಾಡುವದೆಂದು ತಿಳಿಯದಾಯಿತು । ಬೆನ್ನು ಹತ್ತಿದ್ದ ಭೋಗ ತಪ್ಪದಾಯಿತು ।। 162

ಅದರಿಂದಾ ಗೃಹಸ್ಥ ಬೇಸತ್ತ । ಉಪಾಯವೇನೂ ಹೊಳೆಯದಿರಲು ।
ಒಬ್ಬ ಸಾಯಿ ಭಕ್ತನಿಗೆ ಕೇಳಿದನಾತ । ಇದಕೇನು ಉಪಾಯ ಮಾಡಬೇಕೆಂದು ।। 163

ನಮಗೂ ಬೇರೆ ಉಪಾಯವಿಲ್ಲ ಗೊತ್ತು । ಮಹಾನುಭಾವ ಸಾಯಿಯವರ ಹೊರತು
।ನೀವೂ ಅವರಲಿ ಭಾವವಿಟ್ಟು । ನಡೆದರೆ ಉದಿ ತನ್ನ ಪ್ರಭಾವವ ತೋರಿಸೀತು ।। 164
ಅವನು ಹೇಳಿದ ಹಾಗೆ । ಇವನೂ ಮಾಡಿದ ಅವರ ಹಾಗೆ ।
ಆದರಂತೆಯೇ ಅನುಭವ ಬಂತವನಿಗೆ । ಮತ್ತೆ ದುಃಸ್ವಪ್ನ ಬೀಳಲಿಲ್ಲ ।। 165

ಕರ್ಮಧರ್ಮ ಸಂಯೋಗದಿಂದಾ ಮಿತ್ರ । ಇದ್ದ ಸಾಯಿ ಸಮರ್ಥರ ಭಾತ್ರ ।
ಉದಿಯ ಮಹಿಮೆಯ ಹೊಗಳಿ ವಿಚಿತ್ರ । ಒಂದಿಷ್ಟನಾತನಿಗೆ ಕೊಟ್ಟರು ।। 166

ಹೇಳಿದರು ಮಲಗಿಕೊಳ್ಳಲು ಹೋಗುವಾಗ್ಗೆ । ತಿಕ್ಕಿಕೊಳ್ಳಿರೊಂದಿಷ್ಟು ತಲೆಗೆ ।
ಚೀಟಿನಲಿ ಕಟ್ಟಿ ಇಡಿ ತಲೆದೆಸೆಗೆ । ಶ್ರೀ ಸಾಯಿಯ ನೆನೆದು ಮಲಗಿರಿ ॥ 167

ಮನದಲಿರಲಿ ಭಕ್ತಿ ಭಾವ । ಆಗ ನೋಡಿರಿ ಉದಿಯ ಪ್ರಭಾವ ।
ತತ್ಕಾಲದಲಾಗುವುದು ಪೀಡೆಯ ಅಭಾವ । ಸಹಜ ಗುಣಧರ್ಮ ಅದರದಿದು ॥168

ಹೀಗೆ ಮಾಡಿದಾಗ ಅವನಿಗಂದು । ರಾತ್ರಿಯಲಿ ಚೆನ್ನಾಗಿ ನಿದ್ರೆ ಬಂದು ।
ದುಷ್ಟ ಸ್ವಪ್ನದ ಸುಳಿವೂ ಇರದು । ಆನಂದವಾಯಿತಾ ಗೃಹಸ್ಥನಿಗೆ ॥ 169

ಬಳಿಕ ಅವನ ಆ ಆನಂದವನು । ಕೇಳುವದೇನು ಅವನಿಗಿನ್ನು ।
ಆ ಚೀಟನು ನಿತ್ಯ ತಲೆಗೆಳಗೆ ಇಡುವನು । ಸಾಯಿಯ ನಿತ್ಯ ಸ್ಮರಿಸತೊಡಗಿದ ॥ 170

ಬಳಿಕ ಬಾಬಾರ ಭಾವ ಚಿತ್ರವ ತಂದು । ಮಾಲೆ ಹಾಕುವನದಕೆ ಗುರುವಾರದಂದು ।
ತಲೆಹತ್ತಿರದ ಗೋಡೆಗಿಳಿಬಿಟ್ಟಿದ್ದು । ಆದರದಿಂದದನು ಪೂಜಿಸಿದನು ॥ 171

ಚಿತ್ರದ ದರ್ಶನ ತೆಗೆದುಕೊಳ್ಳ ತೊಡಗಿದ । ಗುರುವಾರ ಮಾಲೆಯ ಅರ್ಪಿಸುತಿದ್ದ ।
ನಿತ್ಯ ಮಾನಸ ಪೂಜೆ ಮಾಡುತಿದ್ದ । ಪೀಡೆ ನಿವಾರಣೆಯಾಯಿತು ॥ 172

ಹೀಗೆ ನೇಮ ನಿಷ್ಠೆ ನಡೆಸಿದ । ಸ್ಥಾಯಿ ಅಭೀಷ್ಟಗಳ ಪಡೆದ ।
ದುಃಸ್ವಪ್ನಾದಿಗಳಿಂದಾಗುವ ನಿದ್ರಾಭ್ರಂಗದಿಂದ । ಬಿಡುಗಡೆಯಾಯಿತು ಕಡೆತನಕ ॥ 173

ಇದು ಒಂದು ಉದಿಯ ಉಪಯೋಗ । ಹೇಳುವೆನು ಮತ್ತೊಂದು ಅದ್ಭುತಯೋಗ ।
ಎಂಥ ಸಂಕಟದಲೂ ಮಾಡಲಾ ಪ್ರಯೋಗ । ಇಚ್ಛೆನ ಫಲವ ಕೊಡುವುದು ॥ 174

ಇದ್ದನೊಬ್ಬ ಶ್ರೇಷ್ಠ ಭಕ್ತವರ । ಬಾಳಾಜೀ ಪಾಟೀಲ ನೇವಾಸಕರ ।
ಬಾಬಾರಿಗಾಗಿ ಸವೆಸಿದ ಶರೀರ । ಲೋಕೋತ್ತರ ಸೇವೆಯನು ಮಾಡಿ ॥ 175

ಊರಲ್ಲಿ ನಿತ್ಯ ಅವರು ಬರು ಹೋಗುವ । ಮತ್ತು ಲೇಂಡಿಯತ್ತ ತಿರುಗಾಡುವ ।
ಈ ಬಾಬಾರ ದಾರಿಗಳ ಉಡುಗುವ । ಕೆಲಸ ನಿತ್ಯ ನೇವಾಸಕರರದು ॥ 176

ಈ ಸೇವೆಯ ಪರಿಪಾಠವಿಂತು । ಕೊನೆಯವರೆಗೂ ನಡೆದಿತ್ತು ।
ರಾಧಾಕೃಷ್ಣ ಬಾಯಿಯ ಕೈಒಂದಿಷ್ಟು । ಈ ಕೆಲಸದಲಿ ಇರುತಿತ್ತು ॥ 177

ಬ್ರಾಹ್ಮಣ ಜಾತಿ ಎಲ್ಲರಿಗೂ ವಂದ್ಯ । ಆಮೇಲೆ ಸೇವೆ ಹೇಗೆ ನಿಂದ್ಯ ।
ಮಾಡಲಿಲ್ಲೆಂದೂ ವಿಚಾರ ವಿಂಥದ । ಅವಳ ಶುದ್ಧ ಮನಸಿಗೆ ॥ 178

ಬೆಳಗಿನಲಿ ಬೇಗನೆದ್ದು । ಕಸಪೊರಕೆಯ ಕೈಯಲ್ಲಿ ಹಿಡಿದು ।
ಕಸಗುಡಿಸುವಳು ಬಾಬಾ ನಡೆದಾಡುವ ದಾರಿಯದು । ಅವಳ ಸೇವೆಯೇ ಧನ್ಯ ॥ 179

ಸ್ವಚ್ಛ ಮತ್ತು ಸತ್ವರ ಅವಳ ಹಾಗೆ । ಮಾಡಲು ಹೇಗೆ ಸಾಧ್ಯ ಬೇರೆಯವರಿಗೆ ।
ಮುಂದೆ ಕೆಲ ಕಾಲ ಕಳೆದಾಗ್ಯೆ । ಅಬ್ದುಲ ಈ ಕೆಲಸಕೆ ಮುಂದಾದ ॥ 180

ಹೀಗೆ ಆ ಪಾಟೀಲ ಮಹಾಭಾಗ । ಸಂಸಾರದಲಿದ್ದೂ ಸಂಸಾರ ವಿರಾಗ ।
ಎಷ್ಟವನ ಸ್ವಾರ್ಥತ್ಯಾಗ । ಆ ಕಥಾಭಾಗವ ಕೇಳಿರೀಗ ॥ 181

ಹೊಲದಲಿ ರಾಶಿ ಮುಗಿದ ಮೇಲೆ । ಧಾನ್ಯ ಬರುವುದು ಮಶೀದಿಯಲೇ ।
ಒಟ್ಟುವರು ಅದನು ಅಂಗಳದಲ್ಲೇ । ಬಾಬಾರ ಚರಣಕೆ ಅರ್ಪಿಸಲೆಂದು ॥ 182

ಬಾಬಾರನ್ನೇ ಅದಕೆ ಒಡೆಯರೆಂದು ತಿಳಿದು । ಅದರೊಳಗಿಂದವರು ಎತ್ತಿಕೊಟ್ಟದ್ದು ।
ಅಷ್ಟೇ ಧಾನ್ಯವನು ಮನೆಗೊಯ್ದು । ಜೀವನ ಸಾಗಿಸುತ್ತಿದ್ದ ॥ 183

ಬಾಬಾ ಸ್ನಾನ ಮಾಡಿದ್ದು । ಕೈ ಕಾಲು ಮುಖ ತೊಳೆಕೊಂಡದ್ದು ।
ಹೀಗೆ ಬಚ್ಚಲದಿಂದ ಮನೆಯಿಂದ ಹರಿದು ಬಂದದ್ದು । ನೀರು ಬಾಳಾ ಕುಡುಯುತಿದ್ದ ॥ 184

ಈ ನೇವಾಸಕರರು ಇರುವವರೆಗೆ । ನಡೆಯಿತು ಈ ನಿಯಮ ಅವ್ಯಾಹತವಾಗೇ ।
ಅವನ ಪ್ರೀತಿಯ ಪುತ್ರ ಅವನು ಇದುವರೆಗೆ । ಅಂಶತಃ ನಡೆಸಿಕೊಂಡು ಬಂದಿರುವನು ॥ 185

ಅವನೂ ಧಾನ್ಯ ಕಳಸುತ್ತಿದ್ದ ಸತತ । ಆದರದ್ದೇ ಜೋಳದ ರೊಟ್ಟಿಯ ನಿತ್ಯ ।
ಮಹಾರಾಜರು ನಿಜ ನಿರ್ವಾಣದ ಪರ್ಯಂತ । ದಿನಕ್ಕೆ ನಾಲ್ಕು ಸಲ ತಿನ್ನುತಿದ್ದರು ॥ 186

ಹೀಗಿರಲು ಒಮ್ಮೆ ಏನಾಯಿತು । ಬಾಳಾನ ವರ್ಷಶ್ರಾದ್ಧ ಬಂತು ।
ಅಡಿಗೆಯೆಲ್ಲ ಸಿದ್ಧವಾಯಿತು । ಬಡಿಸುವವರು ಬಡಿಸತೊಡಗಿದರು ॥ 187

ಊಟಕ್ಕೆ ಬರುವವರ ಲೆಕ್ಕದ ಹಾಗೆ । ಮನೆಯಲಿ ಪಾಕಸಿದ್ಧಿಯಾಗೆ ।
ಲೆಕ್ಕದ ಮೂರು ಪಟ್ಟು ಜನ ಬಂದಾಗ್ಯೆ । ಬಡಿಸುವುದು ಅಂದಾಜು ತಪ್ಪಿತು ॥ 188

ನೇವಾಸಕರರ ಪತ್ನಿ ಗಾಬರಿಯಾದಳು । ಅತ್ತೆಯ ಹತ್ತಿರ ಹೇಳತೊಡಗಿದಳು ।
ಫಜೀತಿಯ ಕಾಲ ಬಂತೆಂದಳು । ಹೇಗೆ ಪಾರುಗಂಡೀತಿದೆಂದು ॥ 189

ಅತ್ತೆಯ ನಿಷ್ಠೆ ದೊಡ್ಡದು । ನಮ್ಮ ಸಾಯಿ ಸಮರ್ಥರು ಸಮರ್ಥರೇ ಇದ್ದು ।
ಏತಕ್ಕೆ ಚಿಂತೆ ಇಷ್ಟೊಂದು । ನೀನು ನಿಶ್ಚಿಂತೆಯಾಗಿರೆಂದಳು ॥ 190

ಅತ್ತೆ ಈ ರೀತಿ ಆಶ್ವಾಸನೆ ಕೊಟ್ಟು । ತೆಗೆದುಕೊಂಡು ಉದಿಯನು ಒಂದು ಮುಷ್ಟಿಯಷ್ಟು ।
ಅನ್ನದ ಪ್ರತಿಯೊಂದು ಪಾತ್ರೆಯಲೊಂದಿಷ್ಟು । ಹಾಕಿ ವಸ್ತ್ರದಿಂದವುಗಳ ಆಚ್ಛಾದಿಸಿದಳು ॥ 191

ಎಂದಳು ನೀ ಇನ್ನು ಸಂತಸದಿ ಬಡಿಸು । ಬಡಿಸುವಷ್ಟಕ್ಕೆ ಬಟ್ಟೆ ಸರಿಸು ।
ಮತ್ತೇ ಮೊದಲಿನಂತೆ ಬಟ್ಟೆ ಹೊದಿಸು । ಇದನಿಷ್ಟು ನೆನಪಿಟ್ಟು ನಡೆಸು ॥ 192

ಇದು ಸಾಯಿಯ ಮನೆಯ ಅನ್ನ । ನಮ್ಮದಿಲ್ಲ ಇದರಲ್ಲಿ ಒಂದು ಕಣ ।
ಅವನೇ ಮಾಡುವ ಲಜ್ಜಾ ರಕ್ಷಣ । ಅದರ ಚಿಂತೆ ಅವನಿಗೆ ॥ 193

ಅವಳ ಅತ್ತೆಯ ನಿಶ್ಚಯವಿದ್ದಂತೆ । ಅವಳಿಗೆ ಪ್ರತ್ಯಯ ಬಂತು ಅದರಂತೆ ।
ಬೇರಾವ ವ್ಯತ್ಯಯ ವಿಲ್ಲಡೆ । ಬಂದವರೆಲ್ಲ ಊಟ ಮಾಡಿದರು ॥ 194

ಬಂದವರದೆಲ್ಲ ಊಟವಾಯಿತು । ಯಥಾಸಾಂಗ ಎಲ್ಲ ನಡೆಯಿತು ।
ಆದರೂ ಅನ್ನ ಇನ್ನೂ ಉಳಿಯಿತು । ಪಾತ್ರೆ ಮೊದಲಿನಂತೆಯೇ ॥ 195

ಉದಿಯದಿರುವದು ಹೀಗೆ ಪ್ರಭಾವ । ಸಂತರದಿದು ಸಹಜ ಸ್ವಭಾವ ।
ಯಾರ ಮನದಲಿ ಹೇಗೆ ಭಾವ । ಅವರಿಗೆ ಅನುಭವವೂ ಅದರಂತೆಯೇ ॥ 196

ಇದೇ ಉದಿಯದು ಇನ್ನೊಂದು ಗಾಥೇ । ನೇವಾಸಕರರದೇ ಇನ್ನೊಂದು ಕಥೆ ।
ನೋಡಿ ಅವರ ಭಕ್ತಿಯುಕ್ತತೆ । ನೆನಪಾಯಿತು ಚಿತ್ತಕೆ ಅದಕೇಳಿ ॥ 197

ವಿಷಯಾಂತರವಾದೀತೆ ಎಂದು । ಮನದಲೊಮ್ಮೆ ಶಂಕೆ ಬಂದು ।
ಏನೇ ಆದರೂ ಹೇಳಿ ಬಿಡುವುದು । ಪ್ರಸಂಗಾನುಸಾರ ಬಂದದನು ॥ 198

ಹೀಗೆ ನಿಶ್ಚಯ ಮಾಡಿ ಮನದಲಿ । ಕಥೆಯ ಹೇಳುವೆ ನಾನಿಲ್ಲಿ ।
ಅದು ಅಸ್ಥಾನವೆಂದೆನಿಸಿದಲ್ಲಿ । ಶ್ರೋತೃಗಳೆನ್ನ ಕ್ಷಮಿಸಬೇಕು ॥ 199

ಶಿರಡಿಯರಹಿವಾಸಿಯೊಬ್ಬನಿದ್ದು । ಅವನ ಹೆಸರು ರಘೂಪಾಟೀಲ ಎಂದು ।
ನೇವಾಸಕ್ಕೆ ಹೋದ ಅತಿಥಿಯೆಂದು । ಇವರ ಮನೆಯಲ್ಲೇ ಇಳಕೊಂಡ ॥ 200

ದನಕರುಗಳನು ದಾವಣಿಯಲ್ಲಿ । ಕಟ್ಟಿದಾಗ ಒಂದು ರಾತ್ರಿಯಲ್ಲಿ ।
ಭುಜಂಗವೊಂದು ಬುಸುಬುಸು ಎನ್ನುತಲಿ । ಬಂದಿತು ಹಟ್ಟಿಯಲಿ ಅಕಸ್ಮಾತ ॥ 201

ಪ್ರಸಂಗವನು ನೋಡಿ ಇಂತು । ಎಲ್ಲರ ಮತಿ ಕುಂಠಿತವಾಯಿತು ।
ಹಾವು ಸ್ವಸ್ಥ ಕುಳಿತುಬಿಟ್ಟಿತು । ಹೆಡೆಯನೆತ್ತಿ ಸುರುಳಿ ಸುತ್ತಿ ಕೊಂಡು ॥ 202

ದನಗಳು ಧಡಪಡಿಸ ಹತ್ತಿದವು । ಬಿಚ್ಚಿಕೊಂಡೋಡಬೇಕೆಂದು ।
ದೃಢವಾದ ನಂಬಿಕೆ ನೇವಾಸಕರರದು । ಸಾಯಿಯೇ ಪ್ರಕಟರಾಗಿರುವರೆಂದು ॥ 203

ಇನ್ನು ದನಗಳ ಬಿಚ್ಚದೆ ಹೊರತು । ಬೇರೆ ಉಪಾಯಕಾಣದಾಯಿತು ।
ಇಲ್ಲವೇ ಅದರ ಮೇಲೆ ಕಾಲ ಬಿದ್ದು । ಅಪಾಯವಾದೀತೆಲ್ಲಾದರೂ ಎಂದು ॥ 204

ಭುಜಂಗವ ನೋಡಿ ದೂರದಿಂದ । ನೇವಾಸಕರಿಗಾಯಿತು ಆನಂದ ।
ಸಾಷ್ಟಾಂಗ ನಮಸ್ಕಾರ ಮಾಡಿದ । ದೇಹ ಪುಲಕಿತವಾಯಿತು ॥ 205

ಸಾಯಿಯದೇ ಕೃಪಾ ದೃಷ್ಟಿ ಇದೆಂದರು । ಭುಜಂಗದ ರೂಪದಿ ಭೆಟ್ಟಿಗೆ ಬಂದಿರುವರು ।
ಬಟ್ಟಲ ತುಂಬ ಹಾಲು ತಂದರು । ಆ ಭುಜಂಗದ ಸಲುವಾಗಿ ॥ 206

ಆ ಬಾಳಾಜಿಯ ವೃತ್ತಿ ಎಂಥದ್ದು । ಕಿಂಚಿತ್ತಾದರೂ ಭೀತಿ ಇರದು ।
ಅವರು ಭುಜಂಗಕೆ ನುಡಿದುದು ಏನೆಂದು ನೀವೆಲ್ಲ ಕೇಳಿರಿ॥ 207

ಏನು ಬಾಬಾ ಬುಸುಬುಸು ಎನ್ನುವಿರಿ । ನಮ್ಮನ್ನೆಲ್ಲ ಹೆದರಿಸುತ್ತಿರುವಿರಿ ।
ಈ ಬಟ್ಟಲು ತುಂಬ ಹಾಲು ತೆಗೆದುಕೊಳ್ಳಿರಿ । ಸ್ವಸ್ಥಚಿತ್ತದಿಂದ ಕುಡಿಯಿರಿ ॥ 208

ಒಂದು ಬಟ್ಟಲಿನಿಂದ ಏನಾಗುವದೆಂದು । ತಪ್ಪೇಲಿ ತುಂಬ ಹಾಲು ತಂದು ।
ಭಾವನೆಯದೇ ಎಲ್ಲ ಭಯವೆಂದು । ನಿರ್ಭಯರಾಗಿ ಅದರ ಮುಂದಿಟ್ಟರು ॥ 209

ಹಾಲು ಇಟ್ಟು ಅದರ ಬಳಿಯಲಿ । ಹೋಗಿ ಕುಳಿತರು ಮೊದಲಿನ ಸ್ಥಳದಲಿ ।
ದೂರವೂ ಅಲ್ಲ ಹತ್ತಿರವೂ ಅಲ್ಲ ಎಂಬಲ್ಲಿ । ಮುಖದಲಿ ಅದರ ಬಗ್ಗೆ ವಿಸ್ಮಯ ॥210

ಭಯಪ್ರಧವಾದ ಭುಜಂಗದ ಆಗಮನ । ಒಂದೇ ತೆರನಿರುವುದಿಲ್ಲ ಎಲ್ಲರ ಮನ ।
ಹೇಗೆ ಕಳೆದೀತು ಈ ವಿಘ್ನ । ಎಂದೆಲ್ಲ ಚಡಪಡಿಸತೊಡಗಿದರು ॥ 211

ಹೋಗಬೇಕೆಂದರೂ ಹೆದರಿಕೆ । ಭುಜಂಗದ ಹೊರಕ್ಕೆ ಮನೆಯೊಳಕೆ ।
ಕಷ್ಟ ಆಮೇಲೆ ಅದನು ಹೊರಗೆ ತೆಗೆಯುವುದಕೆ । ಕುಳಿತರು ಅದನ್ನು ಕಾಯುತ್ತ ॥ 212

ಇತ್ತ ಭುಜಂಗ ತೃಪ್ತವಾಯಿತು । ಎಲ್ಲರ ಕಣ್ಣಿಗೆ ತಪ್ಪಿಸಿ ಹೋಯಿತು ।
ಎಲ್ಲಿಗೆ ಎಂದು ತಿಳಿಯದಾಯಿತು । ಆಶ್ಚರ್ಯವೆನಿಸಿತೆಲ್ಲರಿಗೆ ॥ 213

ಬಳಿಕ ಹುಡುಕಿದರು ಹಟ್ಟಿಯನ್ನೆಲ್ಲ । ಒಂದಿಷ್ಟೂ ಅದರ ಸುಳಿವು ಹತ್ತಲಿಲ್ಲ ।
ಶಾಂತವಾಯಿತು ಬಹುತೇಕ ಜನರ ಮನವೆಲ್ಲ । ನೇವಾಸಕರ ಮಾತ್ರ ಮನದಲಿ ಹಳಹಳಿಸಿದ ॥ 214

ಮೊದಲು ಹಟ್ಟಿಯಲಿ ಬಂದಿತು । ಆಗ ಹೇಗೆ ಕಾಣಿಸಿತು ।
ಹಾಗೇಯೇ ಹೋಗುವಾಗಲೂ ಕಂಡಿದ್ದರಾಗುತ್ತಿತ್ತು । ಇದೇ ಹಳಹಳಿ ಅವನಿಗೆ ॥215

ಬಾಳಾನಿಗಿಬ್ಬರು ಹೆಂಡಿರು । ಅವರ ಪುತ್ರರಿನ್ನೂ ಚಿಕ್ಕವರಿದ್ದರು ।
ನೇವಾಸದಿಂದ ಬರುತ್ತಿದ್ದರು । ದರ್ಶನಕೆ ಎಂದಾದರೊಮ್ಮೆ ॥ 216

ಅವರಿಬ್ಬರಿಗಾಗಿ ಬಾಬಾ ಅವರು । ಸೀರಿ ಕುಪ್ಪಸಗಳ ತರುವರು ।
ಅವರಿಗೆ ಕೊಟ್ಟು ಆಶೀರ್ವದಿಸುವರು । ಇಂಥ ಭಕ್ತವರ ಬಾಳಾಜಿ ॥ 217

ಈ ಸಚ್ಚರಿತ ಮಾರ್ಗದಲಿ । ನಡೆವ ಪರಿಪಾಠವಿದ್ದಲ್ಲಿ ।
ದ್ವಾರಕಾಮಯಿಯ ಮಠವೇ ಅಲ್ಲಿ । ಸಾಯಿಯೂ ಅಲ್ಲಿ ಪ್ರಕಟರಾಗುವರು ॥ 218

ಅಲ್ಲಿಯೇ ಗೋದಾವರಿಯತಟ । ಶಿರಡೀಕ್ಷೇತ್ರವು ಅದರ ನಿಕಟ
ಸಾಯಿ ಧುನೀಸಕಟ । ನೆನೆಸಿದವರ ಸಂಕಟ ನಿವಾರಿಸುವರು ॥ 219

ಎಲ್ಲಿ ಸಾಯಿ ಚರಿತ್ರಪಠಣ । ಅಲ್ಲಿ ಸದೈವ ಸಾಯಿ ನಿವಸನ ।
ಶ್ರದ್ಧೆಯಿಂದ ಚರಿತ್ರದಾವರ್ತನ ಮಾಡಲವ ಪ್ರಸನ್ನ ಸರ್ವಭಾವದಿ ॥ 220

ಸ್ಮರಿಸಲು ಸಾಯಿ ಸ್ವಾನಂದಘನ । ಜಪಿಸಲು ತನ್ನಾಮ ಅನುದಿನ ।
ಬೇಕಿಲ್ಲ ಬೇರೆ ಜಪತಪ ಸಾಧನ । ಧಾರಣಾಧ್ಯಾನಾದಿ ಖಟಿಪಟಿಗಳು ॥ 221

ಸಾಯಿ ಚರಣದಲಿಟ್ಟು ಪ್ರೀತಿಯನು । ಯಾರು ಈ ಸಾಯಿಯ ವಿಭೂತಿಯನು ।
ಲೇಪಿಸಿ ನಿತ್ಯನೇಮದಿಂದದನು । ಅವರು ಇಷ್ಟಾರ್ಥಗಳ ಪಡೆಯುವರು ॥ 222

ಧರ್ಮಾದಿ ನಾಲ್ಕು ಪುರುಷಾರ್ಥ । ಪಡೆದು ಆಗುವರವರು ಕೃತಾರ್ಥ ।
ಪ್ರಕಟವಾಗುವವೆಲ್ಲ ಗುಹ್ಯಾರ್ಥ । ಸ್ವಾರ್ಥಪರಮಾರ್ಥಗಳ ಸಹಿತಾಗಿ ॥ 223

ಮಹಾಪಾಪದಿ ಪಾಪಗಳೆಲ್ಲ । ಅಂತೆಯೇ ಉಪಪಾತಕಗಳೆಲ್ಲ ।
ಉದಿಯ ಸಂಪರ್ಕದಿಂದಾಗಿ ನಿರ್ಮೂಲ । ಸಬಾಹ್ಯ ನಿರ್ಮಲತೆ ಲಭಿಸುವದು ॥ 224

ಹೀಗೆ ಈ ವಿಭೂತಿಧಾರಣ । ಭಕ್ತರಿಗೆ ಗೊತ್ತಿರದ ಮಹಿಮಾನ ।
ಶ್ರೋತೃಗಳದಾಗಬೇಕು ಕಲ್ಯಾಣ । ಎಂದೇ ವಿಸ್ತರವಾಗಿ ಹೇಳುತಿರುವೆ ॥ 225

ಬೆಳೆಸಿದೆನೀ ಗ್ರಂಥ ಅಸಾರ್ಥ । ತಿಳಿಯೆನು ನಾ ಮಹಿಮೆಯ ಯಥಾರ್ಥ ।
ಆದರೂ ಶ್ರೋತೃಗಳ ಹಿತಾರ್ಥ । ಸಂಕಲಿತಾರ್ಥದಲಿ ಹೇಳಿರುವೆ ॥ 226

ಆದಕೆ ಶ್ರೋತೃಗಳಲಿ ಪ್ರಾರ್ಥನೆ । ಮಾಡಿ ಸಾಯಿ ಪ್ರತಿವಂದನೆ ।
ತಾವೇ ಅನುಭವ ಪಡೆಯಿರೆಂಬುದನೇ । ಹೇಳುವೆ ಮನ್ನಿಸಿರಿ ಮದ್ವಚನ ॥ 227

ಇಲ್ಲಿ ತರ್ಕದ ಕೆಲಸವಿರದು । ಬೇಕು ಪ್ರಕಾಮ ಪೂಜ್ಯ ಭಾವವೊಂದು ।
ಬೇಕಿಲ್ಲ ಬುದ್ಧಿಚಾಪಲ್ಯದ ಉಪಕ್ರಮವೊಂದೂ । ಪರಮ ಶ್ರದ್ಧೆಯುಳ್ಳವರಿರಬೇಕು ॥228

ಶ್ರಧ್ಧಾವಿಹೀನನಿದ್ದು ತಾರ್ಕಿಕ । ವಾದೋತ್ಸುಕ ಮತ್ತು ಚಿಕಿತ್ಸಕ ।
ಅವರಿಗಿಲ್ಲ ಸಂತಜ್ಞಾನ ಸಮ್ಯಕ । ಶುದ್ಧ ಭಾವಿಕರು ತಿಳಿವರದನು ॥ 229

ಕಥಾಂತರ್ಗತ ನ್ಯೂನಾತಿರಿಕ್ತ । ಎಲ್ಲವ ತಿಳಿದು ಸಾಯಿ ಪ್ರೇರಿತ ।
ಆಗಿ ದೋಷ ದೃಷ್ಟಿ ವಿರಹಿತ । ಸಾಯಿ ಸಚ್ಚರಿತವ ಓದಬೇಕು ॥ 230

ಸಾಯಿ ಪರಮದಯಾಳು । ರಸಿಕ ವಾಚಕವೃಂದದ ಚಿತ್ತದೊಳು ।
ಈ ಕಾರಣದಿಂದ ನಿಜಮೂರ್ತಿಯ ಸ್ಥಾಪಿಸಲು । ನಿತ್ಯ ಸ್ಮೃತಿ ಇರಲೆಂದು ॥ 231

ಗೋವೆಯೆಲ್ಲಿ ಶಿರಡಿಯೆಲ್ಲಿ । ತೋರಿಸಿ ಕಳ್ಳತನ ನಡೆದದ್ದನು ಅಲ್ಲಿ ।
ಸಾಯಿ ಸಾದ್ಯಂತವಾಗಿ ಹೇಳಿ । ಸುಖಬೀರಿದ ಕಥೆ ಮುಂದಿದೆ ॥ 232

ಅದಕೆ ಹೇಮಾಡನು ಸಾಯಿ ಚರಣದಲಿ । ಶಿರವನಿಡುವ ಅಂತಃಕರಣದಿಂದಲಿ ।
ಕೇಳಿಕೊಳ್ಳುವ ನಮ್ರತೆಯಲಿ । ಶ್ರವಣದಲಿ ಸಾದರರಾಗಬೇಕೆಂದು ॥ 233

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಚಿಕಿತ್ಸಾ ಖಂಡನ-ವಿಭೂತಿ ಮಂಡನಂ ನಾಮ
ಪಂಚತ್ರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥





## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತಾರು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಇನ್ನು ಗತಾಧ್ಯಾಯಾನು ಸಂಧಾನ । ರಮ್ಯ ಚಾರಿರ್ಯಕಥಾ ನಿರೂಪಣ ।
ಕೊಡಲಾಗಿತ್ತು ಆಶ್ವಾಸನ । ದತ್ತಾವಧಾನರಾಗಿನ್ನು ॥ 1

ಕಥೆಯಲ್ಲವಿದು ಸ್ವಾನಂದ ಜೀವನ । ಕುಡಿದಂತೆ ಬೆಳೆಯುವದು ತೃಷ್ಣೆದಾರುಣ ।
ಅದರದ್ದೂ ಆಗಲು ಶಮನ । ಕಥಾಂತರ ಕಥನವಾಗುವದು ॥ 2

ಅದು ಶ್ರವಣ ಮಾತ್ರದಿಂದ ಸುಖವೀಯುವದು । ಹೀಗೆ ಈ ಕಥೆ ಮಧುರವಿರುವದು ।
ಸಂಸಾರಶ್ರಾಂತ ವ್ಯಥೆಯ ನಿವಾರಿಸುವದು । ಸುಖಾವಸ್ಥೆಗೊಯ್ಯುವದು ॥ 3

ನಿಜಹಿತವ ಸಾಧಿಸುವ ಬಯಕೆ । ಇದ್ದರೆ ಸಭಾಗ್ಯರ ಮನಕೆ ।
ಅವರು ಸಾಯಿ ಕಥಾ ಶ್ರವಣಕೆ । ಸಾದರರಾಗಿ ಇರಬೇಕು ॥ 4

ಸಂತರ ಮಹಿಮೆ ಅಪಾರವಾಗಿರುವದು । ಅದನಾರಿಂದ ವರ್ಣಿಸಲಾಗುವದು ।
ಅಲ್ಲಿ ಅಧಿಕಾರವೆಷ್ಟು ನನ್ನದು । ಅದರ ಅರಿವು ನನಗಿದೆ ॥ 5

ಇಷ್ಟಕ್ಕೇ ಮುಗಿಯುವದು ವಕ್ತಾರನ 'ನಾ' ತನ । ಸಾಯಿಯೇ ಹತ್ತಿರ ಕರೆದು ತನ್ನ ।
ಯಾರ ಕಡೆಯಿಂದಾದರೂ ನಿಜಗುಣಕಥನ । ನಿಜಭಕ್ತರಿಗೆ ಶ್ರವಣ ಮಾಡಿಸುವ ॥ 6

ಅಂಥ ಈ ಪರಾತ್ಪರ ಸರೋವರ ಹಂಸ । ಹಂಸಃ ಸೋಹಂ ವೃತ್ತಿ ಉದಾಸ ।
ಬ್ರಹ್ಮ ಮುಕ್ತ ಸೇವನೋಲ್ಲಾಸ । ಅಸಮಸಾಹಸ ಯಾವನಿಗೆ ॥ 7

ಯಾವನಿಗೆ ಊರು ಹೆಸರುಗಳೊಂದೂ ಇಲ್ಲದೇ । ಅಪರಂಪಾರ ವೈಭವ ಮೈಯಲ್ಲಿದೆ ।
ಬಡವನ ಬಲ್ಲಿದನಾಗಿಸುವ ಕ್ಷಣದೇ । ದೃಷ್ಟಿ ಲಾಘವ ಮಾತ್ರದಿಂದ ॥ 8

ಅವನಿರುವ ತತ್ವಜ್ಞಾನಾವತಾರ । ತೋರುವ ಪ್ರತ್ಯಕ್ಷ ಸಾಕ್ಷಾತ್ಕಾರ ।
ತಾನುಳಿದುಕೊಂಡು ದೂರ । ನಾನಾವಿಧ ಆಟಗಳನಾಡಿಸುವ ॥ 9

ಅವನಾರ ಮೇಲೆ ಕೃಪೆ ಮಾಡುವ । ಅವಗೆ ವಿವಿಧ ರೂಪಗಳ ತೋರುವ ।
ಲೆಕ್ಕಮೀರಿ ಅಘಟಿತ ಘಟನೆಗಳ ಮಾಡುವ । ಅವನ ಹಿರಿಮೆಯನು ಕೇಳಿರಿ ॥ 10

ಅವನನ್ನು ಧ್ಯಾನದಲಿ ಕಾಣುವರು । ಅಥವಾ ಪ್ರೀತಿಯಿಂದವನ ಭಜನೆ ಹಾಡುವರು ।
ಅವರಿಗೊಂದೂ ಕೊರತೆಯಾಗಗೊಡರು । ಸಂಪೂರ್ಣವಾಗಿ ಅವರ ರಕ್ಷಿಸುವ ॥ 11

ತನ್ನ ಕಥೆಯವಗೆ ಬಲು ಇಷ್ಟ । ಅದಕೇ ನೆನಪು ಕೊಡುವ ಅನವರತ ।
ಶ್ರೋತೃವಕ್ತಾರರ ಮಾಡಿ ನಿಮಿತ್ತ । ಭಕ್ತರ ಮನೋರಥವ ಪೂರೈಸುವ ॥ 12

ಪರಮಾರ್ಥದ ಮೇಲೆ ಅಭಿಮಾನವಿಟ್ಟು । ಪ್ರಪಂಚದ ಮೇಲೆ ನೀರು ಬಿಟ್ಟು ।
ಭಗವಂತನನ್ನೇ ಹಿಡಿದಿಟ್ಟು । ಅನಂತ ಪ್ರಾಣಿಗಳನುದ್ಧರಿಸಿದ ॥ 13

ಭಜಿಸುವರು ಅವನನ್ನು ದೇಶ ವಿದೇಶಗಳಲಿದ್ದು । ಅವನ ಭಕ್ತಿ ಧ್ವಜವೆಲ್ಲೆಲ್ಲೂ ಹಾರಾಡುವದು ।
ದೀನ ದರಿದ್ರರನು ಹತ್ತಿರ ಕರೆದು । ಎಲ್ಲರ ಇಷ್ಟಗಳ ಪೂರೈಸುವ ॥ 14

ಇರಲಿನ್ನು ಈ ಪರಮ ಪವಿತ್ರ । ಆಲಿಸಿರಿನ್ನು ಈ ಸಾಯಿ ಚರಿತ್ರ ।
ಕೇಳುವ ಹೇಳುವವರ ಶ್ರೋತೃ-ವಕ್ತ್ರ । ಪಾವನವೆಲ್ಲೆಲ್ಲಿಯೂ ಆಗಲಿ ॥ 15

ಗೋಮಾಂತಕದಲಿದ್ದ ಇಬ್ಬರು ಗೃಹಸ್ಥರು । ಸಾಯಿ ದರ್ಶನಕೆ ಬಂದರು ।
ಇಬ್ಬರೂ ಸಾಯಿ ಚರಣದಲುಳಿದರು । ದರ್ಶನದಿಂದಾನಂದವಾಗಿ ॥ 16

ಇಬ್ಬರೂ ಕೂಡಿಯೇ ಬರುತಿದ್ದರೂ । ದಕ್ಷಿಣೆಯೊಬ್ಬನಿಗೇ ಮಾತ್ರ ಬೇಡುವರು ।
ಹದಿನೈದು ರೂಪಾಯಿ ಕೊಡು ನನಗೆ ಎನ್ನುವರು । ಬಳಿಕವ ಆನಂದದಿಂದ ಕೊಡುತಿದ್ದ ॥ 17

ಇನ್ನೊಬ್ಬನನು ಏನೂ ಕೇಳದಿದ್ದಾಗ । ತಾನಾಗಿಯೇ ಆತ ಮೂವತ್ತೈದು ರೂಪಾಯಿ ಇತ್ತಾಗ ।
ಕೂಡಲೇ ಸಾಯಿ ಅದ ನಿರಾಕರಿಸಿದಾಗ । ಅತ್ಯಂತ ಆಶ್ಚರ್ಯ ಅವನಿಗೆ ॥ 18

ಇಂಥ ಈ ಸಮಯದಲ್ಲಿ । ಮಾಧವರಾಯರೂ ಇದ್ದರಲ್ಲಿ ।
ಆ ವಿಷಮತೆಯ ನೋಡುತಲಿ । ಸಾಯಿಗೆ ಅವರು ಕೇಳಿದರು ॥ 19

ಬಾಬಾ ಮಾಡುವಿರಿ ಏಕೆ ಹೀಗೆ । ಇಬ್ಬರೂ ಬಂದಿರುವರು ಜೊತೆಗೆ ।
ಬೇಡಿ ಪಡೆಯುವಿರಿ ಒಬ್ಬನ ಬಳಿಗೆ । ನೀವೇ ತಿರುಗಿಕೊಡುವಿರಿ ಇನ್ನೊಬ್ಬನಿಗೆ ॥ 20

ಸಂತರಿಗೇಕೆ ಈ ಬೇಧವಿರುವದು । ಒಬ್ಬರ ತಾವಾಗಿಯೇ ಕೇಳುವದು ।
ಸ್ವೇಚ್ಛೆಯಿಂದ ಕೊಟ್ಟದ್ದನ್ನು ಹಿಂದಿರುಗಿಸುವದು । ಅವನ ಮನ ನೋಯುವದಿಲ್ಲವೇ ॥ 21

ಅಲ್ಪವಿತ್ತದಲಿಡುವಿರಿ ಪ್ರೀತಿ । ಹೆಚ್ಚಿಗಿತ್ತಾಗ ನಿರ್ಲೋಭ ವೃತ್ತಿ ।
ಮಾಡುತಿರಲಿಲ್ಲ ನಾನು ಈ ರೀತಿ । ನಾನು ನಿಮ್ಮ ಸ್ಥಳದಲ್ಲಿರುತಿದ್ದರೆ ॥ 22

ಶಾಮ್ಯಾ ನಿನಗೆ ಗೊತ್ತಿಲ್ಲ । ನಾನು ಯಾರದೂ ಏನೂ ತೆಗೆದುಕೊಳ್ಳುವುದಿಲ್ಲ ।
ಮಶೀದಿ ಮಾಯಿಯದಿತ್ತು ಹಿಂದಿನ ಸಾಲ । ಕೊಟ್ಟು ಋಣ ಮುಕ್ತನಾಗುವದಾತ ॥ 23

ಇರುವದೇನು ಮನೆ ನನಗೆ । ಅಥವಾ ಸಂಸಾರವಿದೆಯೇ ನನಗೆ ।
ಆದರಿಂದ ಧನಬೇಕಾಗುವದು ನನಗೆ । ನಾನೆಲ್ಲ ರೀತಿಯಲೂ ನಿಶ್ಚಿಂತನಿರುವೆ ॥ 24

ಆದರೂ ಋಣ, ವೈರ ಮತ್ತು ಹತ್ಯೆ ಇವು । ಕಲ್ಪಾಂತದಲೂ ಕರ್ತನ ಬೆನ್ನು ಬಿಡವು ।
ದೇವರ ಹರಕೆ ಅವಶ್ಯಕತೆಗಷ್ಟೇ ಇರುವವು । ಉದ್ಧಾರಕ ನನ್ನನ್ನು ಸಾಯಾಸದಿಂದ ನೆನೆವರು ॥25

ನಿಮಗೇನಿರುವದು ಅದರ ಚಿಂತೆ । ಚರಣಕ್ಕೆ ಬರುವಿರಿ ಸಮಯ ಬಂದಾಗಷ್ಟೇ ।
ಋಣ ಮಾಡದ ಭಕ್ತನಿಗಷ್ಟೇ । ರಾಜಿಯಾಗಿರುವೆ ನಾನು ॥ 26

ಮೊದಲಿನವ ಅಂಚನನಿದ್ದ । ಹದಿನೈದು ರೂಪಾಯಿ ಕೊಟ್ಟಾಗ ಬೇಡಿಕೊಂಡ ।
ಮೊದಲ ಸಂಬಳ ದೇವರಿಗೆ ಕೊಡುವೆನೆಂದ । ಮುಂದೆ ಮರೆತು ಹೋಯಿತದು ॥ 27

ಹದಿನೈದಿದ್ದದ್ದು ಆಯಿತು ಮೂವತ್ತು । ಮೂವತ್ತಿದ್ದದ್ದು ಅವರವತ್ತು, ನಂತರ ನೂರಾಯಿತು ।
ಇಮ್ಮಡಿ ನಾಲ್ಮಡಿಯಾಗಿ ಬೆಳೆಯುತ್ತ ಹೋಯಿತು । ಸಂಬಳ, ಜೊತೆಗೆ ಮರೆವೂ ಬಲವತ್ತರವಾಯಿತು ॥ 28

ಬೆಳೆಯುತ್ತ ಸಂಬಳ ಆಯಿತು ಏಳು ನೂರು । ಈಗ ಕರ್ಮವಶದಿಂದ ಇಲ್ಲಿಗೆ ಬಂದರು ।
ದಕ್ಷಿಣೆಯ ರೂಪದಲಿ ನಾ ಬೇಡಿದ್ದರೂ । ನನ್ನ ಹದಿನೈದು ರೂಪಾಯಿಗಳೆ" ॥ 29

ಇನ್ನೊಂದು ಕಥೆಯನು ಹೇಳುವೆನು ಕೇಳು । ಒಮ್ಮೆ ಸಮುದ್ರದ ದಂಡೆಯಲಿ ತಿರುಗಾಡುತ್ತಿರಲು ।
ದೊಡ್ಡದೊಂದು ಬಂಗಲೆ ಕಾಣಲು । ಅದರ ಕಟ್ಟೆಯ ಮೇಲೆ ಕುಳಿತೆ ॥ 30

ಬಂಗಲೆಯ ಒಡೆಯ ಬ್ರಾಹ್ಮಣ । ಬಹಳ ಧನಿಕ ಮತ್ತು ಕುಲೀನ ।
ಅವನು ಆದರದಿ ಸ್ವಾಗತಿಸಿದನೆನ್ನ । ಯಥೇಷ್ಟ ಅನ್ನೋದಕಗಳನಿತ್ತ ॥ 31

ಅಲ್ಲೇ ಒಂದು ಕಿಡಕಿಯ ಹತ್ತಿರ । ಸ್ಥಳವಿತ್ತು ಸ್ವಚ್ಛ ಸುಂದರ ।
ಅಲ್ಲಿ ನನಗೆ ಮಲಗಲು ಕೊಟ್ಟರು । ನನಗೆ ನಿದ್ರೆ ಹತ್ತಿತು ॥ 32

ನೋಡಿ ನನಗೆ ಗಾಢ ನಿದ್ರೆ ಹತ್ತಿದ್ದು । ಗೋಡೆಯೊಡೆದು ಒಳಗೆ ಬಂದು ।
ತೆಗೆದುಕೊಂಡನೆಲ್ಲ ನನ್ನ ಹತ್ತಿರವಿದ್ದದ್ದು । ನನ್ನ ಜೋಬನು ಕತ್ತರಿಸಿ ॥ 33

ಎಚ್ಚರಾದಾಗ ನನಗಿದು ತಿಳಿಯಿತು । ಒಮ್ಮೆಲೇ ನನಗೆ ಅಳು ಬಂತು ।
ಮೂವತ್ತು ಸಾವಿರ ರೂಪಾಯಿ ಮೊತ್ತ । ಕಳಕೊಂಡು ಬಹಳ ದುಃಖವಾಯಿತು ॥34

ಅವೆಲ್ಲ ಇದ್ದವು ನೋಟು । ಅವಚಿತ ಹಾನಿಯಾಯಿತು ಇಷ್ಟು ।
ನನ್ನ ಎದೆಯೇ ಒಡೆಯಿತು । ತಿರುಗಿ ಬ್ರಾಹ್ಮಣನೇ ರಮಿಸಿತೊಡಗಿದ ॥ 35

ಅನ್ನ ನೀರು ಸವಿ ಹತ್ತದು । ಹೀಗೆ ನಾನು ದೀನನಾಗಿದ್ದು ।
ಅದೇ ಸ್ಥಳದಲಿ ದಿನ ಹದಿನೈದು । ಮೆಟ್ಟಿಲ ಮೇಲೆ ಕುಳಿತು ಕಳೆದೆ ॥ 36

ಹದಿನೈದು ದಿನ ಮುಗಿದಾಗ್ಯೆ । ಪ್ರಶ್ನೆ ಕೇಳುವತ್ತ ಹೋಗುವ ದಾರಿಯ ಮೇಗೆ ।
ಫಕೀರನೊಬ್ಬ ಬಂದನಲ್ಲಿಗೆ । ನಾನಳುವುದನು ಕಂಡನು ॥ 37

ದುಃಖದ ಕಾರಣವ ಕೇಳಿದನವನು । ನಾನೂ ಎಲ್ಲವನೂ ಹೇಳಿದೆನು ।
ಅವನೆಂದ ಆಗುವದಿದರ ನಿವಾರಣ । ನಾ ಹೇಳಿದಂತೆ ನೀ ನಡೆದರೆ ॥ 38

ಫಕೀರನೊಬ್ಬ ಇರುವ ನಾ ಹೇಳುವೆ ನಿನಗೆ । ಅವನ ವಿಳಾಸ ಮತ್ತವನಿರುವ ಬಗೆ ।
ಶರಣು ಹೋದರೆ ನೀ ಅವನಿಗೆ । ಅವ ನಿನ್ನ ಧನವ ತಿರುಗಿ ಕೊಡುವನು ॥ 39

ಆದರೆ ನಾನೊಂದು ಹೇಳುವೆ ವ್ರತ । ಆಚರಿಸಬೇಕದನು ಇಚ್ಛಿತಾರ್ಥ ।
ತ್ಯಜಿಸಬೇಕು ನಿನ್ನ ಇಷ್ಟ ಪದಾರ್ಥ । ಅದರಿಂದ ನಿನ್ನ ಕಾರ್ಯವಾಗುವದು ॥ 40

ಹೀಗೆ ಮಾಡಲು ಫಕೀರನ ಭೆಟ್ಟಿಯಾಯಿತು । ನನ್ನ ಹಣ ನನಗೆ ದೊರಕಿತು ।
ಆಗ ನಾನಾ ಕಟ್ಟಡವ ಬಿಟ್ಟು । ಸಮುದ್ರ ದಡಗುಂಟ ಹೊರಟು ಬಿಟ್ಟೆ ॥ 41

ಹೀಗೆ ಹೊರಟಾಗ ಸಿಕ್ಕಿತು ಡೋಣಿಯೊಂದು । ಆದರದರಲಿ ಹೋಗಲು ಬಾರದು ।
ಆಗೊಬ್ಬ ಒಳ್ಳೆಯ ಸಿಪಾಯಿ ಬಂದು । ನನಗದರಲಿ ಸ್ಥಳವ ಕೊಡಿಸಿದ ॥ 42

ಸುದೈವದ ಗಾಳಿ ಬೀಸಿತು । ಡೋಣಿ ಆಚೆ ದಡ ಸೇರಿತು ।
ಊರಿಗೆ ಬಂದಾಗ ಗಾಡಿಯಲಿ ಕುಳಿತು । ದೃಷ್ಟಿಗೆ ಬಿದ್ದಿತು ಈ ಮಶೀದಿ ಮಾಯಿ" ॥ 43

ಇಲ್ಲಿಗೆ ಬಾಬಾರ ಕಥೆ ಮುಗಿದು । ಶಾಮಾನಿಗೆ ಆಜ್ಞಾಪಿಸಿದ್ದು ।
"ಈ ಅತಿಥಿಗಳನು ಕರೆದುಕೊಂಡು । ಮನೆಗೆ ಹೋಗಿ ಊಟ ಮಾಡಿಸು" ॥ 44

ಊಟಕ್ಕೆ ಎಲೆ ಬಡಿಸಲಾಯಿತು । ಮಾಧವರಾಯರಿಗೆ ಪ್ರಶ್ನೆ ಬಿತ್ತು ।
ಕೇಳಿದನಾತ ಅತಿಥಿಗಳ ಕುರಿತು । ಆ ಕಥೆ ನಿಮಗೆ ಒಪ್ಪಿಗೆಯಾಯಿತೇ ॥ 45

ನೋಡ ಹೋದರೆ ನಿಜವಾದದ್ದು । ಸಾಯಿ ಬಾಬಾ ಇಲ್ಲಿಯವರೇ ಇದ್ದು ।
ಇಲ್ಲ ಸಮುದ್ರ ದೋಣಿ ಅಂಬಿಗ ಎಂಬುದು । ಅವರಿಗಿದು ಗೊತ್ತು ಎಂದಿಗೂ ॥46

ಎಲ್ಲಿಯ ಬ್ರಾಹ್ಮಣ ಎಲ್ಲಿಯ ಮನೆ । ಈ ವೃಕ್ಷದ ಕೆಳಗೆ ಕಳೆದರು ಜನ್ಮವನೇ ।
ಇಷ್ಟೊಂದು ಧನವೆಲ್ಲಿಂದ ಬಂದಿತು ತಾನೇ । ಬಳಿಕ ಕಳ್ಳ ಕದ್ದನದನು ॥ 47

ಹೀಗೆ ಅವರು ಕಥೆ ಹೇಳಿದರು । ಅದನು ನೀವು ಬಂದ ಮೇಲೆ ಆರಂಭಿಸಿದರು ।
ಈ ರೀತಿಯಾಗಿ ನಿಮಗೆ ಅವರು । ಹಿಂದೆ ನಡೆದ ಘಟನೆಯ ನೆನಪಿಸಿರಬಹುದು ॥ 48

ಆಗ ಅತಿಥಿಗಳು ಸದ್ಗದಿತರಾದರು । ಸಾಯಿ ಎಲ್ಲ ಬಲ್ಲವರಿರುವರು ।
ನಿರ್ದ್ವಂದ್ವ ಪರಬ್ರಹ್ಮ ಅವತಾರಿಗಳವರು । ಅದ್ವೈತ ಅಭೇದ ವ್ಯಾಪಕರು ॥ 49

ಅವರು ಕಥೆ ಹೇಳಿದ್ದು । ಪ್ರತಿ ಅಕ್ಷರವೂ ಸತ್ಯವಿದ್ದು ।
ಸವಿಸ್ತರವಾಗಿ ಹೇಳುವೆ ನಿಮಗದು । ಈ ಸವಿ ಊಟ ಮುಗಿದ ಮೇಲೆ ॥ 50

ಬಾಬಾ ಈಗ ಹೇಳಿದ್ದೆಲ್ಲ । ಸತ್ಯವಾಗಿ ನಡೆದದ್ದೇ ಅದೆಲ್ಲ ।
ಗುರುತಿರದಿದ್ದರೂ ತಿಳಿದಿದೆ ಅವರಿಗೆಲ್ಲ । ಅದಕ್ಕೆ ಇದೆಲ್ಲ ಅಘಟಿತವೆನುವದು ॥ 51

ಪೂರ್ಣವಾದ ಮೇಲೆ ಭೋಜನ । ಮಾಧವರಾಯರ ಸಹ ವರ್ತಮಾನ ।
ನಡೆದಾಗ ತಾಂಬೂಲಚರ್ವಣ । ಕಥಾ ನಿರೂಪಣೆಗಾರಂಭವಾಯಿತು ॥ 52

ಅವರಲ್ಲೊಬ್ಬನೆಂದುದು । ಘಟ್ಟವೇ ನಮ್ಮ ಮೂಲ ವಾಸಸ್ಥಾನವಿರುವದು ।
ಆದರೆ ಆ ಸಮುದ್ರದಂಡೆಯದು । ಅನ್ನ ನೀರಿನ ಋಣಾನುಬಂಧವಿತ್ತು ॥ 53

ಅದಕ್ಕೇ ಗೋಮಾಂತಕಕ್ಕೆ ಹೋದೆ । ಅಲ್ಲಿ ನೌಕರಿ ಹಿಡಿಯಬೇಕೆಂದುಕೊಂಡೆ ।
ಅದಕಾಗಿ ದತ್ತನ ಪ್ರಾರ್ಥಿಸಿದೆ । ಆದರದಿ ಹರಕೆಯನೂ ಹೊತ್ತೆ ॥ 54

ದೇವಾ ಕುಟುಂಬ ರಕ್ಷಣೆಗೆಂದು । ನೌಕರಿ ಮಾಡಬೇಕಾಗಿದ್ದು ।
ಕೃಪಾವಂತನಾಗಿ ನೀ ಅದ ಕೊಡಿಸುವದು । ಎಂದು ಚರಣಗಳ ಹಿಡಿಯುವೆ ॥ 55

ಇಂದಿನಿಂದ ಅಲ್ಪಾವಕಾಶದಲಿ । ನೀ ನಿನ್ನ ಖ್ಯಾತಿಯನುಳಿಸಿಕೊಂಡಲ್ಲಿ ।
ಬಂದ ಪ್ರಾಪ್ತಿಯ ಮೊದಲ ತಿಂಗಳಲಿ । ಸಮಗ್ರ ನಿನಗರ್ಪಿಸುವೆನದನು ॥ 56

ಸುದೈವದಿಂದ ದತ್ತ ಪ್ರಸನ್ನನಾದ । ಅಲ್ಪಾವಕಾಶದಲ್ಲೇ ಬೇಡಿದ್ದನ್ನು ನೀಡಿದ ।
ಆರಂಭದಲಿ ಹದಿನೈದು ರೂಪಾಯಿ ಸಂಬಳದ । ನೌಕರಿ ನನಗೆ ಸಿಕ್ಕಿತು ॥ 57

ಮುಂದೆ ಬಾಬಾ ವರ್ಣನೆ ಮಾಡಿದಂತೆಯೇ ನಡೆಯಿತು । ದಿನದಿನಕೆ ಬಡತಿ ಸಿಗುತ್ತ ಹೋಯಿತು ।
ಬೇಡಿಕೊಂಡಿದ್ದು ಪೂರ್ಣ ಮರೆತೇ ಹೋಯಿತು । ಅದರ ನೆನಪನೀರೀತಿ ಮಾಡಿಕೊಟ್ಟರು ॥58

ಎನಿಸುವದವರು ಕೇಳಿದರು ದಕ್ಷಿಣೆ । ಋಣವನ್ನೇ ತೀರಿಸಿದೆ, ಅಲ್ಲ ಅದು ದಕ್ಷಿಣೆ ।
ಈ ರೀತಿಯಲಿ ಕೊಟ್ಟರೆನಗದರ ಸ್ಮರಣೆ । ಅತ್ಯಂತ ಹಳೆಯ ಹರಕೆಯದು ॥ 59

ತಾತ್ಪರ್ಯ ಸಾಯಿ ಧನ ಯಾಚಿಸುತಿರಲಿಲ್ಲ । ಭಕ್ತರಿಗೂ ಯಾಚಿಸಗೊಡುತಿರಲಿಲ್ಲ ।
ಅದರ ಮೋಹದಲಿ ಭಕ್ತರ ಬೀಳಗೊಡುತಿರಲಿಲ್ಲ । ಅರ್ಥವು ಅನರ್ಥಕ್ಕೆ ಮೂಲವೆಂದು ॥ 60

ಮ್ಹಾಳಸಾಪತಿಯಂಥ ಭಕ್ತ । ಯಾವಾಗಲೂ ಸಾಯಿ ಪದದಲಿ ಅನುರಕ್ತ ।
ಅಂಥವನು ಕಷ್ಟದಲಿ ನಡೆಸುತಿದ್ದ ಚರಿತಾರ್ಥ । ಅವನಿಗೊಂದಿಷ್ಟೂ ಅರ್ಥಜೋಡಿಸಗೊಡುತಿರಲಿಲ್ಲ ॥ 61

ಸಾಯಿ ತಾವೇ ಎಷ್ಟೊಂದು ಸಲ ಜನರಿಗೆ । ಬಂದ ಹಣದ ದಕ್ಷಿಣೆಯ ರೂಪದೊಳಗೆ ।
ಹಂಚುತಿದ್ದರೂ ಒಂದು ದುಡ್ಡನೂ ಎಂದಿಗೆ । ಆಪದ್‌ಗ್ರಸ್ತರಿಗೆ ಕೊಡುತಿರಲಿಲ್ಲ ॥ 62

ಅವನಾದರೂ ಬಹಳ ತಿಳುವಳಿಕೆಸ್ಥ । ತಿಳಿದಿದ್ದರೂ ಸಹ ಉದಾರಿಗಳೆನುತ ।
ಇರಲಿಲ್ಲವೆಂದು ಅವರೆದುರು ಕೈಚಾಚುತ । ಯಾಚನಾ ತತ್ಪರನಾಗಿ ॥ 63

ಸಾಂಪತ್ತಿಕ ಸ್ಥಿತಿ ನಿಕೃಷ್ಟ । ಆದರೆ ವೈರಾಗ್ಯ ಅತಿ ಉತ್ಕಷ್ಟ ।
ಸಹಿಸುವರು ಬಡತನದ ಕಷ್ಟ । ಅಲ್ಪ ಸಂತುಷ್ಟನವ ಯಾವಾಗಲೂ ॥ 64

'ಹಂಸರಾಜ'ನೆಂಬ ಹೆಸರಿನವರು । ದಯಾಳುವಾದ ವ್ಯಾಪಾರಸ್ಥರಿದ್ದರು ।
ಮ್ಹಾಳಸಾಪತಿಗೆ ಏನಾದರು ।ಕೊಡಬೇಕೆಂದು ಮನಸಾಯಿತು ॥ 65

ನೋಡಿ ಬಡತನ ಸಂಸಾರ । ಏನಾದರೂ ಮಾಡಬೇಕು ಉಪಕಾರ ।
ಹಚ್ಚಬೇಕಿಷ್ಟು ಕೈಭಾರ । ಎಂಬ ಸಹಜ ಸುವಿಚಾರ ಮೂಡಿತು ॥ 66

ಅವನ ಸ್ಥಿತಿ ಹೀಗಿದ್ದೂ । ಬೇರೆಯಾರಾದರೂ ಅವನಿಗೆ ಕೊಡುವುದು ।
ಅದೂ ಸಾಯಿಗೆ ಹಿಡಿಸದು । ದ್ರವ್ಯದ ಮೋಹದಿಂದ ದೂರಿರಲೆಂದು ॥ 67

ಭಕ್ತನಿಗಾಗಿ ಮನದಲ್ಲಿ ಮರುಗಿದ । ಆ ವ್ಯಾಪಾರಿ ಆಗ ಏನು ಮಾಡಿದ ।
ಅವನ ಕೈಯಲ್ಲಿ ಹಣವಿರಿಸಿದ । ಇಬ್ಬರೂ ಎದುರಿಗಿದ್ದಾಗಲೇ ॥ 68

ಅತೀ ವಿನೀತನಾಗಿ । ಮ್ಹಾಳಸಾಪತಿ ಕೊಟ್ಟನದ ತಿರುಗಿ ।
ಎಂದ ಸಾಯಿಯದಿಲ್ಲದೆ ಪರವಾನಿಗಿ । ನಾನದನು ಸ್ವೀಕರಿಸಲಾರೆ ॥ 69

ಈ ಭಕ್ತನಿರಲಿಲ್ಲ ದುಡ್ಡಿನವ । ಕೇವಲ ಪರಮಾರ್ಥಕ್ಕಾಗಿ ಹಸಿದವ ।
ಕಾಯಾ ವಾಚಾ ಚರಣಕೆ ಅರ್ಪಿಸಿಕೊಂಡವ । ಪ್ರೇಮಮಯ ಅಂತಃಕರಣದ ನಿಸ್ವಾರ್ಥಿ॥ 70

ಸಾಯಿ ಒಂದು ಕವಡಿಯನೂ ಮುಟ್ಟಗೊಡಲಿಲ್ಲ । ಎಂದರು ನನ್ನ ಭಕ್ತರು ದ್ರವ್ಯಲೋಭಿಗಳಲ್ಲ ।
ವಿತ್ತದ ವೈಭವಕೆ ಮರುಳಾಗುವವರಲ್ಲ । ಹಂಸರಾಜ ಅವರ ವಿನಂತಿಸಿಕೊಂಡಾಗ ॥71

ಬಳಿಕ ಬಂದ ಅತಿಥಿಗಳಲಿ ಇನ್ನೊಬ್ಬನು । ನನಗೂ ಹೇಳಿದ್ದು ಒಪ್ಪಿಗೆಯಾಯಿತೆಂದನು ।
ಸಮಗ್ರವಾಗಿ ಹೇಳುವೆ ನನ್ನ ಕಥೆಯನ್ನೂ । ಕೇಳಲು ಸಂತೋಷವಾದೀತು ॥ 72

ಮೂವತ್ತೈದು ವರ್ಷದ ನನ್ನ ಬ್ರಾಹ್ಮಣ । ಕೆಲಸವಂತ ಮತ್ತು ನಂಬಿಗಸ್ಥ ಪೂರ್ಣ ।
ದುರ್ದೈವದಿಂದಾಯಿತು ಬುದ್ಧಿ ಭ್ರಂಶ ಅವನ । ನನ್ನ ಸೊತ್ತನು ಅಪಹರಿಸಿದ ॥ 73

ನನ್ನ ಮನೆಯಗೋಡೆಯೊಳಗೆ ಫಡತಾಳ (ಕಪಾಟ) ಕೂಡ್ರಿಸಲಾಗಿದೆ ಒಳಗೆ ।
ಅಲ್ಲಿಯ ಕಲ್ಲನು ಸರಿಸಿ ಮೆಲ್ಲಗೆ । ಅಲ್ಲೊಂದು ತೂತು ಕೊರೆದನು ॥ 74

ಮೇಲೆ ಬಾಬಾ ಫಡತಾಳ ಎಂದಿದ್ದು । ಅದಕ್ಕೇ ಆತ ಛಿದ್ರ ಕೊರೆದದ್ದು ।
ಅದರಿಂದ ಗೋಡೆಯ ಕಲ್ಲು ತೆಗೆದು । ಎಲ್ಲರೂ ಮಲಗಿದ್ದುದ ಕಂಡು ॥ 75

ಮತ್ತೆ ಬಾಬಾ ಮುಂದೆ ಹೇಳಿದ್ದು । ನನ್ನ ಹಣವ ಕದ್ದನೆಂದು ।
ಅದಾದರೂ ನಿಜವಾಗೇ ಇರುವದು । ನೋಟಿನ ಕಟ್ಟನ್ನೇ ಎತ್ತಿಕೊಂಡೊಯ್ದನು ॥ 76

ಮೂವತ್ತು ಸಾವಿರದ ಮೊತ್ತದು । ತಿಳಿಯದು ಬಾಬಾ ಹೇಗೆ ಅರಿತರೆಂದು ।
ಧನವದು ಕಷ್ಟದಿಂದ ಗಳಿಸಿದ್ದು । ಕಳೆದಾಗ ಹಗಲಿರುಳು ಅಳುತ್ತ ಕುಳಿತು ॥ 77

ಶೋಧಿಸುವಾಗ ಮತಿ ಕುಂಠಿತವಾಯಿತು । ಏನು ಮಾಡಬೇಕೆಂದು ತಿಳಿಯದಾಯಿತು ।
ಹದಿನೈದು ದಿನ ಚಿಂತೆಯಲೇ ಕಳಿಯಿತು । ಯಾವ ಗತಿಯೂ ಹೊಳೆಯದು ॥ 78

ಕಟ್ಟೆಯ ಮೇಲೆ ಕುಳಿತಿದ್ದೆನೊಂದು ದಿನ । ಅತಿ ಅಸ್ವಸ್ಥವಾಗಿತ್ತು ಮನ ।
ಕೇಳುತ್ತ ಕೇಳುತ್ತ ಪ್ರಶ್ನೆಯನ । ದಾರಿಯಲಿ ಫಕೀರನೊಬ್ಬ ಹೊರಟಿದ್ದ ॥ 79

ನನ್ನ ಖಿನ್ನವದನವ ಕಂಡು । ಫಕೀರ ಕೇಳಿದ ದುಃಖದ ಕಾರಣವೇನೆಂದು ।
ನನ್ನಿಂದ ಸಾದ್ಯಂತವಾಗಿ ಕೇಳಿ ತಿಳಿದು । ಅದರ ನಿವಾರಣೆಯ ಹೇಳಿದನೆನಗೆ ॥ 80

ಶಿರಡಿ ಎಂಬ ಗ್ರಾಮವದು । ಕೋಪರಗಾವ ತಹಸೀಲಿನಲ್ಲಿರುವದು ।
ಅಲ್ಲಿ ಸಾಯಿ ಎಂಬ ಫಕೀರನಿದ್ದು । ನೀನವನಿಗೆ ಹರಕೆ ಹೊರು ॥ 81

'ನಿನಗೆ ಬಹಳ ಇಷ್ಟವಿದ್ದದ್ದು । ಅದರ ಸೇವನೆಯ ಬಿಟ್ಟು ಬಿಡು ।
ನಿಮ್ಮ ದರ್ಶನವಾಗುವವರೆಗಿದು । ವರ್ಜ್ಯವೆಂದು ಹೇಳಿಕೋ ಅವಗೆ' ॥ 82

ಹೀಗೆ ನನಗೆ ಫಕೀರ ಹೇಳಿದ್ದೇ । ತಡವಿಲ್ಲದೆ ಅನ್ನವ ವರ್ಜಿಸಿದೆ ।
ಬಾಬಾ, ಕಳವು ಸಿಕ್ಕು ದರ್ಶನವಾದಂದೇ । ಮತ್ತೆ ಇದ ಸೇವಿಸುವೆ ಎಂದೆ ॥ 83

ಮುಂದೆ ಹದಿನೈದೇ ದಿನದಲ್ಲಿ । ಏನು ಬಂದಿತೋ ಮನದಲ್ಲಿ ।
ಬ್ರಾಹ್ಮಣ ತಾನಾಗಿಯೇ ಬಂದನಲ್ಲಿ । ನನ್ನ ಹಣವನು ನನಗೆ ತಿರುಗಿ ಕೊಟ್ಟ ॥ 84

ಎಂದ ನನ್ನ ಬುದ್ಧಿ ಕೆಟ್ಟಿತ್ತು । ಆದರಿಂದ ಈ ಕೆಲಸವಾಯಿತು ।
ಎಂದ ಕಾಲಮೇಳ ತಲೆ ಇಟ್ಟು । 'ನಾ್ಕಕ್ಷಮಿಸಿದೆ' ಎನ್ನಿರಿ ಎಂದು ॥ 85

ಇರಲಿ ಮುಂದೆಲ್ಲ ಸವಿಯಾಯಿತು । ಸಾಯಿ ದರ್ಶನಕೆ ಮನ ಹಾತೊರೆಯಿತು ।
ಆ ಇಚ್ಛೆಯೂ ಇಂದು ಪೂರ್ಣವಾಯಿತು । ಧನ್ಯವೀ ಭಾಗ್ಯ ನನ್ನದು ॥ 86

ಅನುಭವಿಸುತ್ತ ದುಃಖ ಸಂಕಟವ । ನಮ್ಮ ಕಟ್ಟೆಯ ಮೇಲೆ ನಾ ಕುಳಿತವ ।
ನನ್ನ ಸಾಂತ್ವನಕೆಂದೇ ಬಂದನವ । ಮತ್ತವನ ನಾ ಕಾಣಲಿಲ್ಲ ॥ 87

ಯಾರಿಗೆ ಬಂದು ಕಳಕಳಿ । ಸಾಯಿಯ ಬಗ್ಗೆ ನನಗೆ ಹೇಳಿ ।
ಅವನೇ ಶಿರಡಿಯ ತೋರಿದ ಬೆರಳಿನಲಿ । ಮತ್ತವನ ಭೆಟ್ಟಿಯಾಗಲಿಲ್ಲ ॥ 88

ಸಹಜದಲೆ ಅವನೆನಗೆ ಭೆಟ್ಟಿಯಾದದ್ದು । ಪ್ರಶ್ನೆ ಕೇಳುತ್ತ ಅಲ್ಲಿಗೆ ಬಂದದ್ದು ।
ಕೊನೆಗೆ ಹರಕೆಯ ಹೊರಲು ಹೇಳಿ ಹೋದದ್ದು । ಮತ್ತವನ ಭೆಟ್ಟಿ ನನಗಿಲ್ಲ ॥ 89

ಆ ಫಕೀರನೇ ನಿಜದಲಿ ಎನಿಸುವದು । ನಿಮ್ಮ ಈ ಸಾಯಿಯೇ ಆ ಫಕೀರನೆಂದು ।
ತನ್ನ ದರ್ಶನ ಲಾಭವೀಯಲೆಂದು । ತಾನೇ ಬಂದು ಕರೆಸಿದ ॥ 90

ಯಾರು ಏನು ಕೊಡುವೆನೆಂದರೂ । ನನಗಿಚ್ಛೆ ಇರಲಿಲ್ಲ ಈ ದರ್ಶನದ್ದು ।
ಆದರಾ ಫಕೀರ ಮನವ ಮರುಳು ಮಾಡಿದ್ದು । ವಿತ್ತ ಪ್ರಾಪ್ತಿಗಾಗಿಯೇ ॥ 91

ಆ ವಿತ್ತವೂ ಯಾರಿಗೆ ಹರಕೆ ಹೊತ್ತು । ಅಪ್ರಯಾಸವಾಗಿ ಪ್ರಾಪ್ತವಾಯಿತು ।
ಅಂಥವನು ನನ್ನ ಮೂವತ್ತೈದು ರೂಪಾಯಿಗಿಂತು । ಆಶೆ ಪಡುವುದು ಸಾಧ್ಯವಿಲ್ಲ ॥ 92

ಅಲ್ಲದೆ ನಾವು ಅಜ್ಞಾನಿ ನರ । ನಮ್ಮನ್ನು ಮಾಡಲು ಪರಮಾರ್ಥ ಪರ ।
ನಮ್ಮ ಕಲ್ಯಾಣವನೇ ಚಿಂತಿಸುವರು ನಿರಂತರ । ಈ ಕಾರಣದಿಂದ ಈ ಮಾರ್ಗಕೆ ಕರೆತರುವರು ॥ 93

ಈ ಅವತಾರವೂ ಇದಕಾಗೇ । ಇಲ್ಲದೇ ಇದ್ದರೆ ನಮ್ಮಂಥ ಪಾಮರರಿಗೆ ।
ಈ ಭವದಾಟುವದು ಹೇಗೆ । ಸ್ವಸ್ಥ ಚಿತ್ತದಿ ವಿಚಾರ ಮಾಡಿರಿ ॥ 94

ಇರಲಿ ಕಳುವಾದದ್ದು ಸಿಕ್ಕ ಮೇಲೆ । ನನಗಾಯಿತು ಹರ್ಷ ಬಹಳೇ ।
ಹರಕೆಯ ಮರೆತುಬಿಟ್ಟೆ ಅದರಿಂದಲೇ । ವಿತ್ತದ ಮೋಹ ಬಲು ಕೆಟ್ಟದು ॥ 95

ಮುಂದೆ ಕೆಲದಿವಸ ಕಳೆದಾಗ್ಯೆ । ಇದ್ದೆ ನಾನು ಕುಲಾಬಾದ ಕಡೆಗೆ ।
ಸ್ವಪ್ನದಲಿ ಸಾಯಿಯ ನೋಡಿದೆ ಹಾಗೇ । ಹೊರಟು ಬಿಟ್ಟೆ ಶಿರಡಿಗೆ ॥ 96

ಸಮರ್ಥರು ಹೇಳಿದರು ತಮ್ಮ ಪ್ರವಾಸದಲಿ । ಹತ್ತಗೊಡವಲ್ಲರು ದೋಣಿಯಲಿ ।
ಆಗೊಬ್ಬ ಸಿಪಾಯಿಯ ಪ್ರಯತ್ನದಲಿ । ಆ ಕಷ್ಟ ತಪ್ಪಿದ್ದು ಸತ್ಯ ಸಂಗತಿ ॥ 97

ಇವೆಲ್ಲ ನನಗೆ ಬಂದ ಅಡ್ಡಿಗಳು । ಹೋದಾಗ ನಾನು ದೋಣಿ ಹತ್ತಲು ।
ಯಾವನೋ ಸಿಪಾಯಿ ನಿಜದಲೂ । ನನಗಾಗಿ ವಿನಂತಿಸಿಕೊಳುತಿದ್ದ ॥ 98

ಆ ದೋಣಿಯ ಅಧಿಕಾರಿ ಮೊದಲು । ಬಿಡುತಿರಲಿಲ್ಲ ದೋಣಿ ಹತ್ತಲು ।
ಈಗ ಸ್ಥಳಕೊಟ್ಟು ದೋಣಿಯೊಳು । ನನಗುಪಕಾರ ಮಾಡಿದ ॥ 99

ಶಿಪಾಯಿಯದಿರಲಿಲ್ಲ ಗುರುತ ಎಷ್ಟೂ । ಆದರವ ಹೇಳಿದ ನನಗಿವ ಗೊತ್ತು ।
ಅದರಿಂದಲೇ ಯಾರೂ ತಡೆಯದೇ ಕುಳಿತು । ದೋಣಿಯಲಿ ನಾ ಹೊರಟೆ ॥ 100

ಆ ದೋಣಿಯ ಕಥೆ ಹಾಗೆ । ಆ ಶಿಪಾಯಿಯ ಕಥೆ ಹೀಗೆ ।
ನಡೆದದ್ದೆಲ್ಲ ಅದು ನಮಗೇ । ಆದರೆ ಸಾಯಿ ಅದನು ತಮ್ಮ ಮೇಲೆ ತೆಗೆದುಕೊಂಡರು ॥ 101

ಇಂಥ ಅದ್ಭುತ ಸ್ಥಿತಿಯನು ಕಂಡು । ನನ್ನ ಮತಿ ಕುಂಠಿತವಾಗುವದು ।
ಸಾಯಿಯೇ ತುಂಬಿರುವರೆಂದೆನಿಸುವದು । ಈ ಸಂಪೂರ್ಣ ಜಗದಲಿ ॥ 102

ಇಲ್ಲ ಅಣುಕೀಣುವಿನಷ್ಟೂ । ಸ್ಥಳ ಬರಿದು ಇವರ ಹೊರತು ।
ನಮಗೆ ಹೇಗೆ ಪ್ರಚೀತಿಯಾಯಿತು । ಹಾಗೆಯೇ ಇತರರಿಗೂ ಕೊಡುವರು ॥ 103

ನಾವು ಯಾರು ನಮ್ಮ ಸ್ಥಳ ಯಾವುದು । ನಮ್ಮ ಭಾಗ್ಯವೆಷ್ಟು ದೊಡ್ಡದು ।
ನಮ್ಮನ್ನು ಬಲವಂತದಿಂದ ಜಗ್ಗಿ ತಂದು । ಈ ದಾರಿಗೆ ಹಚ್ಚಿದರು ॥ 104

ನಾವು ಬೇಡಿಕೊಳ್ಳುವದೇನು । ನಮ್ಮ ಮನೆ ಕಳುವಾದುದೇನು ।
ಹರಕೆ ಮುಟ್ಟಿಸುವ ರೀತಿಯೇನು । ಕಳೆದ ವಿತ್ತವೂ ದೊರಕಿತು ॥ 105

ನಮ್ಮ ಭಾಗ್ಯವೆಷ್ಟು ದೊಡ್ಡದು । ಹಿಂದೆಂದೂ ದರ್ಶನವಾಗದಿದ್ದು ।
ನೆನೆಯದಿದ್ದುದು ಕೇಳದಿದ್ದುದು । ಅಂಥವನಿಗೆ ನಮ್ಮ ಸ್ಮರಣೆ ಇರುವದು ॥ 106

ಹೀಗಿರುವಾಗ ಅವನ ಜೊತೆಗೆ । ವರ್ಷಾನುವರ್ಷಗಳು ಇರುವವರಿಗೆ ।
ಹಗಲಿರುಳು ತತ್ಪದದಿ ರಮಿಸಿದವರಿಗೆ । ಆ ಭಕ್ತರೇ ಧನ್ಯರೆನಬೇಕು ॥ 107

ಯಾರೊಡನೆ ಸಾಯಿ ಆಡಿದರು । ನಕ್ಕರು ನಲಿದರು ನುಡಿದರು ನಡೆದರು ।
ಉಂಡರು ಮಲಗಿದರು ಮುನಿದರು । ಅವರ ಭಾಗ್ಯವೇ ಬಲು ಶ್ರೇಷ್ಠ ॥ 108

ನಮ್ಮ ಕೈಲಿ ಏನೂ ಆಗದಿದ್ದರೂ । ನಮಗಾಗಿ ಇಷ್ಟು ಕಳಕಳಿ ಪಡುವರು ।
ನೀವು ನಿತ್ಯವೂ ಅವರ ಜೊತೆಯಲಿರುವವರು । ಧನ್ಯ ನಿಮ್ಮ ಭಾಗ್ಯವಿದು ॥ 109

ಎನಿಸುವದು ನಿಮ್ಮ ಪೂರ್ವಾರ್ಜಿತ ಪುಣ್ಯದಿಂದ । ಬಂದನೀತ ಮನುಷ್ಯ ರೂಪದಿಂದ ।
ನಿಮ್ಮ ಪರಮ ಭಾಗ್ಯದ ಬಲದಿಂದ । ಶಿರಡಿಗಿವರನು ಕರೆಸಿದಿರಿ ॥ 110

ಅನಂತ ಪುಣ್ಯದ ಬಲದಿಂದ । ನಮಗೆ ಶಿರಡಿ ಕಾಣಿಸಿತು ಅದರಿಂದ ।
ಎನಿಸುವದು ಶ್ರೀ ಸಾಯಿಯ ದರ್ಶನ ಸುಖದಿಂದ । ಸರ್ವಸ್ವವನವರ ಮೇಲೆ ನಿವಾಳಿಸಬೇಕು ॥ 111

ಸಾಯಿ ಸ್ವತಃ ಅವತಾರಿಗಳಿರುವರು । ಮಹಾವೈಷ್ಣವರಂತೆ ಆಚರಿಸುವರು ।
ಜ್ಞಾನದ್ರುಮದ ಚಿಗುರಿನಂತಿರುವರು । ಈ ಭಾಸ್ಕರನು ಚಿದಂಬರದಲಿ ಹೊಳೆಯುವ ॥ 112

ನಮ್ಮದೇ ಪೂರ್ವ ಪುಣ್ಯವಿರುವದು । ಅದರಿಂದಲೇ ಈ ಮಶೀದಿ ಮಾಯಿಯ ಕಂಡದ್ದು ।
ನಮ್ಮ ಹರಕೆಯ ಮುಟ್ಟಿಸಿಕೊಂಡು । ಕೂಡಲೇ ದರ್ಶನವಿತ್ತರು ॥ 113

ಇವನೇ ಇನ್ನು ನಮ್ಮ ದತ್ತ । ಇವನೇ ಆಜ್ಞಾಪಿಸಿದನೀ ವ್ರತ ।
ಇವನೇ ನಮ್ಮನು ದೋಣಿ ಹತ್ತಿಸುತ । ದರ್ಶನಕೆ ಶಿರಡಿಗೆ ಕರೆತಂದ ॥ 114

ಹೀಗೆ ತನ್ನ ಸರ್ವವ್ಯಾಪಕತ್ವದ । ನಿಜಸರ್ವಾಂತರ್ಯಾಮಿತ್ವದ ।
ನಿಜದಲಿ ಜ್ಞಾನವಿತ್ತುದ । ಸಾಕ್ಷಿತ್ವವೆಲ್ಲೆಡೆಗಿರುವದು ॥ 115

ನೋಡಿ ಸಸ್ಮಿತ ಮುಖ । ಮನಕಾಯಿತು ಪರಮ ಸುಖ ।
ಪ್ರಾಪಂಚಿಕರು ಮರೆವರು ಪ್ರಪಂಚದುಃಖ । ಪರಮಾರ್ಥಿಗಳ ಸಂತೋಷವಂತೂ ಹೇಳತೀರದು ॥116

ಆದದ್ದಾಗಲಿ ಪ್ರಾರಬ್ಧದಲಿದ್ದಂತೆ । ಹೀಗಿರಬೇಕು ಮನದ ನಿಶ್ಚಯತೆ ।
ಸಾಯಿ ಚರಣದ ಅಖಂಡ ಪ್ರೀತಿ । ನಿತ್ಯವೂ ನಯನದಲಿರಲಿ ಆ ಮೂರ್ತಿ ॥ 117

ಅಗಾಧ-ಅಗಮ್ಯ-ಸಾಯಿ ಲೀಲೆಗೆ। ಸೀಮೆ ಇಲ್ಲ ಆ ಉಪಕಾರಗಳಿಗೆ ।
ನಿವಾಳಿಸಿ ಚೆಲಬೇಕೀ ದೇಹವ ನಿಮ್ಮ ಮೇಗೆ । ಎನಿಸುವದು ಹೀಗೆನಗೆ ದಯಾಳಾ ॥ 118

ಇರಲಿನ್ನು ಕೇಳಿರಿ ಕಥೆಯ ಮತ್ತೊಂದು । ಸಾವಧಾನವಾಗಿ ಕ್ಷಣವೊಂದು ।
ಸಾಯಿ ಮುಖದಲಿ ಬಂದ ಅಕ್ಷರ ಒಂದೊಂದು । ಬ್ರಹ್ಮಲಿಖಿತವು ಎನಬೇಕು ॥ 119

ಸಖಾರಾಮ ಔರಂಗಾಬಾದಕರ ಎಂಬವ । ಸೋಲಾಪುರ ಪಟ್ಟಣದಲಿರುವವ ।
ಅವನ ಸತಿ ಪುತ್ರ ಸಂತಾನವ । ಪಡೆಯಲಾತುರಳಾಗಿ ಬಂದಳು ಶಿರಡಿಗೆ ॥ 120

ಸಾಯಿ ಬಾಬಾ ಸಂತ ಪವಿತ್ರ । ಕೇಳಿ ಅವರ ಅಗಾಧ ಚರಿತ್ರ ।
ಜೊತೆಗೆ ಕರೆದುಕೊಂಡು ಸಾಪತ್ನ ಪುತ್ರ । ಬಂದಳು ಸತ್ಪಾತ್ರರ ದರ್ಶನಕೆ ॥ 121

ದೊಡ್ಡವಳಾಗಿ ಕಳೆದವು ಇಪ್ಪತ್ತೇಳು ವರ್ಷಗಳು । ಆದರೂ ಸಂತಾನವಾಗದಿರಲು ।
ಅನೇಕ ದೇವ ದೇವತೆಗಳ ಬೇಡಿಕೊಂಡಳು । ನಿರಾಶಳಾದಳೂ ಚಿತ್ತದಲಿ ॥ 122

ಇರಲು ಆ ಮುತ್ತೈದೆ ಹೀಗೆ । ಬಾಬಾರ ದರ್ಶನೇಚ್ಛೆ ಇಟ್ಟು ಮನದೊಳಗೆ ।
ಬಂದಳೀ ಪ್ರಕಾರ ಶಿರಡಿಗೆ । ವಿಚಾರವೊಂದು ಮನದಲಿ ಬಂತು ॥ 123

ಬಾಬಾ ಯಾವಾಗಲೂ ಇರುವರು ಭಕ್ತರ ಜೊತೆಗೆ । ನಿವಾಂತವಾಗಿ ಭೆಟ್ಟಿಯಾಗುವರು ಹೇಗೆ ।
ನನ್ನ ಹೃದ್ಗತವನು ಹೇಳುವದು ಹೇಗೆ । ಎಂದು ಚಿಂತೆಯಲಿ ಬಿದ್ದಳು ॥ 124

ಮಶೀದಿ ಅಂಗಳ ಎಲ್ಲ ಬಯಲು । ಬಾಬಾರ ಸುತ್ತ ಭಕ್ತರು ಯಾವಾಗಲೂ ।
ಮನದ ದುಃಖವ ಹೇಳಿಕೊಳಲು । ನಿವಾಂತಕಾಲ ಹೇಗೆ ದೊರಕೀತು ॥ 125

ಅವಳು ಮತ್ತು ಅವಳ ಸುತ । ಹೆಸರವನಿಗೆ ವಿಶ್ವನಾಥ ।
ನಿಂತರು ಸಾಯಿಯ ಸೇವೆ ಮಾಡುತ । ಎರಡು ತಿಂಗಳು ಅಲ್ಲಿಯೇ ॥ 126

ಒಮ್ಮೆ ಬೇಡಿಕೊಂಡಳು ಮಾಧವರಾಯರ । ಯಾರೂ ಇಲ್ಲದಾಗ ಬಾಬಾರ ಹತ್ತಿರ ।
ವಿಶ್ವನಾಥ ಅಥವಾ ಮತ್ತೆ ಇತರ । ಎಂಬುದನು ಕೇಳಿರೀಗ ॥ 127

ನೀವಾದರೂ ಸಮಯ ನೋಡಿಕೊಂಡು । ಬಾಬಾ ಶಾಂತ ಸ್ಥಿರರಾಗಿದ್ದುದು ।
ನನ್ನ ಹೃದಯದ ಮಾತೊಂದು । ಅವರ ಕಿವಿಯ ಮೇಲಿಡಿ ॥ 128

ಅದೂ ಒಬ್ಬನೇ ಇದ್ದಾಗ । ಭಕ್ತ ಪರಿವಾರವಲ್ಲಿಲ್ಲದಾಗ ।
ಹೇಳಬೇಕವರಿಗೆ ಮಾತ್ರ ಆಗ । ಬೇರಾರ ಕಿವಿಗೆ ಬೀಳದಂತೆ ॥ 129

ಮಾಧವರಾಯರು ಉತ್ತರವಿತ್ತುದು । ಈ ಮಶೀದಿ ಎಂದೂ ಬರಿದಾಗಿರದು ।
ಯಾರ ಯಾರದೋ ದರ್ಶನಾರ್ಥಿಗಳದು । ಆಗಮನವಾಗುತ್ತಲೇ ಇರುವದು ॥130

ಸಾಯಿಯ ಈ ದರಬಾರ ತೆರೆದದ್ದೇ ಇರುವದು । ಇಲ್ಲಿ ಯಾರು ಬರುವುದಕ್ಕೂ ಅಡ್ಡಿ ಇರದು ।
ಆದರೂ ನಾ ನಿನಗೆ ಹೇಳುತ್ತಿರುವದು । ಸದೈವ ನೆನಪಿನಲ್ಲಿಟ್ಟಿರು ॥ 131

ನನ್ನ ಕೆಲಸ ಪ್ರಯತ್ನ ಮಾಡುವದು । ಯಶಕೊಡುವದು ಮಂಗಲಧಾಮನಿಗೆ ಬಿಟ್ಟಿದ್ದು ।
ಕೊನೆಗವನಿಂದಲೇ ಸುಖ ಲಭಿಸುವದು । ಚಿಂತೆಯ ಉಪಶಮನವಾಗಿ ॥ 132

ನೀನು ಮಾತ್ರ ಕುಳಿತುಕೋ ಕೈಯಲಿ ಹಿಡಿದುಕೊಂಡು । ಊದುಬತ್ತಿ ಮತ್ತು ತೆಂಗಿನಕಾಯಿಯನೊಂದು।
ಬಾಬಾ ಊಟಕ್ಕೆ ಕುಳಿತುಕೊಳ್ಳುವದು । ಸಭಾ ಮಂಟಪದ ಕಲ್ಲುಹಾಸಿನ ಮೇಲೆ ॥ 133

ಬಳಿಕ ನಾನವರ ಭೋಜನ ಮುಗಿದು । ನೋಡಿಕೊಂಡು ಅವರು ಆನಂದದಲಿರುವದು ।
ಸನ್ನೆ ಮಾಡುವೆನು ನಿನ್ನನು ಕಂಡು । ಆಗ ನೀ ಮೇಲೆ ಬರಬೇಕು ॥ 134

ಹೀಗೆಯೇ ನಡೆಯುತ್ತಿದ್ದಾಗ । ಪ್ರಾಪ್ತಗಳಿಗೆಯದು ಬಂತು ಯೋಗ ।
ಒಮ್ಮೆ ಸಾಯಿಯ ಊಟ ಮುಗಿದಾಗ । ಸಹಜದಲೇ ಆ ಸುಸಂಧಿ ಬಂತು ॥ 135

ಸಾಯಿ ತಮ್ಮ ಕೈ ತೊಳೆದು । ಮಾಧವರಾಯ ಅದನು ವರೆಸುತಿದ್ದು ।
ಅವರು ಆನಂದವೃತ್ತಿಯಲಿದ್ದುದ ಕಂಡು । ಅವರೇನು ಮಾಡಿದರು ನೋಡಿರಿ ॥ 136

ಪ್ರೇಮೋಲ್ಲಾಸದಿಂದ ಮಾಧವರಾಯರದು । ಬಾಬಾ ಗಲ್ಲವನು ಚಿವುಟಿದ್ದು ।
ಅಂಥ ಸಮಯದಲಿ ದೇವರು ಮತ್ತು ಭಕ್ತರದು । ನಡೆದ ಸಂವಾದವನೋದಿರಿ ॥ 137

ಮಾಧವರಾಯರು ವಿನಯಸಂಪನ್ನರಿರುವಾಗ್ಯೆ । ಕೋಪಗೊಂಡರು ತೋರಿಕೆಗೆ ।
ವಿನೋದದಿಂದೆಂದರು ಬಾಬಾರಿಗೆ । ಹೀಗೆ ತಾವು ಮಾಡುವದು ಸರಿಯೇ ॥ 138

ಇಂಥ ದೇವರು ಬೇಕಿಲ್ಲ ನಮಗೆ । ಸುಮ್ಮನೆ ಗಲ್ಲ ಚಿವುಟುವುದು ನೋವಾಗುವ ಹಾಗೆ ।
ನಾವೇನು ಆಳುಗಳೇ ನಿಮಗೆ । ಸಲುಗೆಯಿಂದಿದ್ದುದರ ಫಲವೇ ಇದು ॥ 139

ಆಗ ಬಾಬಾ ಪ್ರತ್ಯುತ್ತರವಿತ್ತುದು । "ಇಡೀ ಎಪ್ಪತ್ತೆರಡು ತಲೆಮಾರಿನಲೆಂದೂ ।
ಇದೆಯೇ ನಾ ನಿನಗೆ ಕೈ ಮುಟ್ಟಿದ್ದು । ಇದೆಯೇ ಎಂಬುದನು ನೆನೆಸಿಕೋ" ॥ 140

ಆಗ ನುಡಿದ ಮಾಧವರಾಯ । ನನಗೆ ಬೇಕು ಇಂಥ ದೇವ ।
ಹಸಿದಾಗೆಲ್ಲ ಮಿಠಾಯಿ ಕೊಡುವಂಥವ । ತಿನ್ನಲು ಹೊಸತರದ್ದು ನಿತ್ಯವೂ ॥ 141

ಬೇಕಿಲ್ಲ ನಮಗೆ ನಿನ್ನ ಮಾನ । ಅಥವಾ ಸ್ವರ್ಗಲೋಕದ ವಿಮಾನ ।
ನಿನ್ನ ಚರಣದಲಿರಲಿ ಈ ಮನ । ಇದಿಷ್ಟನು ಕೊಟ್ಟರೆ ಸಾಕೆನಗೆ ॥ 142

ಅದಕೆ ಬಾಬಾ ಹೇಳತೊಡಗಿದ್ದು । ನಾನಿಲ್ಲಿ ಬಂದಿರುವುದೇ ಅದಕೆಂದು ।
ನಿಮಗೆ ಉಣಿಸತೊಡಗಿದ್ದು । ನಿಮ್ಮ ಲೋಭ ನನಗುಂಟಾಯಿತು ॥ 143

ಇಷ್ಟಾಗುವಾಗ ಕಟಾಂಜನದ ಹತ್ತಿರದಲ್ಲಿ । ಬಾಬಾ ಕುಳಿತರು ನಿಜಾಸನದಲ್ಲಿ ।
ಆ ಸ್ತ್ರೀ ಅದಕಾಗಿಯೇ ಕಾಯುತ್ತಿದ್ದಳಲ್ಲಿ । ಮಾಧವರಾಯ ಸನ್ನೆ ಮಾಡಿದಾಗ ॥ 144

ಗುರುತು ಕಂಡ ಕೂಡಲೇ ಎದ್ದಳು । ಬೇಗ ಬೇಗ ಮೆಟ್ಟಲೇರಿದಳು ।
ಬಾಬಾರ ಎದುರಿಗೆ ನಿಂತಳು । ವಿನಯದಿಂದ ನಮ್ರಳಾಗಿ ॥ 145

ಕೂಡಲೇ ಚರಣದಲ್ಲಿಟ್ಟಳು ಶ್ರೀ ಫಲ । ಬಳಿಕ ನಮಿಸಿದಳು ಬಾಬಾರ ಪದ ಕಮಲ ।
ಬಾಬಾ ನಿಜಹಸ್ತದಿಂದ ಆ ಫಲ । ಕಟಾಂಜನದ ಮೇಲೆ ಜೋರಾಗಿ ಬಡಿದರು ॥ 146

ಎಂದರು ಶ್ಯಾಮಾ ಇದ ಏನು ಅನ್ನುವದು । ಕಾಯಿಯು ಬಹಳ ಗುಡುಗುಡು ಮಾಡುವದು ।
ಶಾಮಾ ಅದೇ ಅವಕಾಶ ಸಾಧಿಸಿಕೊಂಡು । ಬಾಬಾರಿಗೇನೆಂದನು ಕೇಳಿ ॥ 147

ಈ ಸ್ತ್ರೀ ಎನ್ನುವಳು ಮನದೊಳಗೆ । ನನ್ನ ಹೊಟ್ಟೆಯಲೂ ಗುಡುಗುಡು ಆಗಲಿ ಹೀಗೆ ।
ಮನವಿರಲಿ ನಿನ್ನ ಅಖಂಡ ಚರಣದೊಳಗೆ । ಅವಳ ಒಗಟು ಬಿಚ್ಚಲಿ ॥ 148

ಕೃಪಾದೃಷ್ಟಿಯಿಂದವಳತ್ತ ನೋಡಿ । ಈ ಕಾಯಿಯ ಅವಳುಡಿಯಲ್ಲಿ ಹಾಕಿಬಿಡಿ ।
ಮತ್ತೆ ಆಶೀರ್ವಾದ ಮಾಡಿ ಬಿಡಿ । ಹೆಣ್ಣು ಗಂಡು ಮಕ್ಕಳಾಗಲಿ ನಿನಗೆಂದು ॥ 149

ಆಗ ಬಾಬಾ ಅವನಿಗೆಂದುದು । "ಕಾಯಿಯಿಂದೇನು ಮಕ್ಕಳಾಗುವದು ।
ಎಂಥ ಹುಚ್ಚು ತಿಳುವಳಿಕೆ ಇದು । ಜನ ಮರುಳಾಗಿರುವರೇನು" ॥ 150

ಶಾಮನೆಂದ ಗೊತ್ತಿರುವದು । ನಿನ್ನ ಮಾತಿನ ಕೌತುಕವಿದು ।
ತನ್ನಷ್ಟಕ್ಕೇ ಹಿಂಡೇ ಬೆನ್ನು ಹತ್ತುವದು । ಅಂಥ ಅಮೂಲ್ಯ ನುಡಿ ನಿನ್ನದು ॥ 151

ಆದರೂ ಈಗ ನಿನಗೆ ಬಂದಿದೆ ಭೇದ । ಕೊಡದಾಗಿರುವೆ ನಿಜವಾದ ಆಶೀರ್ವಾದ ।
ಸುಮ್ಮನೇ ಮಾಡುವೆ ವಾದ ವಿವಾದ । ಇರಲಿ ಅವಳಿಗೆ ಕೊಡು ಕಾಯಿಪ್ರಸಾದ ॥ 152

'ಕಾಯಿ ಒಡೆಯೆಂದು' ಬಾಬಾ ಎನ್ನುವದು । ಉಡಿಯಲಿ ಹಾಕೆಂದು ಶಾಮ ಎನ್ನುವದು ।
ಹೀಗೆ ಬಹಳ ಹೊತ್ತು ನಡೆದು । ಬಾಬಾ ಒಪ್ಪಂದಕ್ಕೆ ಬಂದರು ॥ 153

"ಆಗುವದು ಹೋಗು ಮಗ" ಬಾಬಾ ಎನಲು । ಶಾಮಾ ಎಂದು ಎಂಬುದನು ಹೇಳು ।
"ಹನ್ನೆರಡು ತಿಂಗಳಲ್ಲಿ ಎನ್ನಲು" । ತಟ್ಟನೇ ಕಾಯಿ ಒಡೆದನು ॥ 154

ಅರ್ಧವನು ತಾವಿಬ್ಬರೂ ತಿಂದರು । ಉಳಿದರ್ಧವನು ಅವಳಿಗೆ ಕೊಟ್ಟರು ।
ಮಾಧವರಾಯ ಆ ಸ್ತ್ರೀಗೆಂದರು । ನನ್ನ ಮಾತಿಗೆ ನೀ ಸಾಕ್ಷಿ ॥ 155

ಅಮ್ಮಾ ಇಂದಿನಿಂದ ನಿಮಗೆ । ಹನ್ನೆರಡು ತಿಂಗಳು ತುಂಬುವದರೊಳಗೆ ।
ನಿಮ್ಮುದರದಿ ಮಗು ಜನಿಸದಿದ್ದಾಗ್ಯೆ । ನಾನೇನು ಮಾಡುವೆನದ ಕೇಳು ॥ 156

ಹೀಗೇಯೇ ಕಾಯಿಯ ಇವನ ತಲೆಯ ಮೇಲೊಡೆಯುವೆ । ಈ ದೇವರನು ಮಶೀದಿಯಿಂದಾಚೆ ಓಡಿಸುವೆ ।
ನಾನಿದನು ಮಾಡದೇ ಇರುವೆ । ನಾದರೆ ಮಾಧವ ನನ್ನ ಹೆಸರಲ್ಲ ॥ 157

ಇಂಥ ದೇವರ ಈ ಮಶೀದಿಯೊಳಗೆ । ಇರಗೊಡಲಾರೆ ಖಚಿತವಾಗೇ ।
ಇದರ ಪ್ರಚೀತಿ ಸರಿಯಾದ ಕಾಲದೊಳಗೆ । ಈ ನಿರ್ಧಾರ ಸತ್ಯವೆಂಬುದ ತಿಳಿ ॥158

ಹೀಗೆ ಆಶ್ವಾಸನೆ ಸಿಗಲು । ಆ ಸ್ತ್ರೀ ಮನದಲಿ ಸುಖಿಸಿದಳು ।
ಚರಣಗಳಿಗೆ ನಮನ ಮಾಡಿದಳು । ಸ್ವಸ್ಥಮನದಿಂದ ಸ್ವಗೃಹಕೆ ತೆರಳಿದಳು ॥ 159

ನೋಡಿ ಶಾಮಾನ ಹೆಸರನು । ರಕ್ಷಿಸಬೇಕು ಭಕ್ತನ ಮನೋಗತವನು ।
ಸಾಯಿ ಪ್ರೇಮರಜ್ಜು ನಿಯಂತ್ರಿತನು । ಒಂದಿಷ್ಟೂ ಅಸಮಧಾನಗೊಳಲಿಲ್ಲ ॥ 160

ಭಕ್ತವಚನ ಸತ್ಯಗೊಳಿಸಲು । ಪ್ರಣಿತಪಾಲ ಕರುಣಾಘನನಿರಲು ।
ಭಕ್ತಾಶ್ವಾಸನವನು ಸಾಯಿ ದಯಾಳು । ಮಮತೆಯಿಂದ ಪೂರೈಸುತ ॥ 161

ಶಾಮ ತನ್ನ ಮುದ್ದಿನ ಭಕ್ತ । ಮುದ್ದು ತಿಳಿಯದು ಯುಕ್ತಾಯುಕ್ತ ।
ಸಂತರು ಭಕ್ತ ಸಂಕಲ್ಪವ ಪೂರೈಸುತ । ಇದೇ ನಿಜವ್ರತ ಅವರದು ॥ 162

ಇರಲಿ ಹೀಗೆ ಹನ್ನೆರಡು ತಿಂಗಳು । ಕೃತ ನಿರ್ಧಾರವ ಪೂರ್ತಿಗೊಳಿಸಲು ।
ಈ ಮಾತಿಗೆ ಮೂರೇ ತಿಂಗಳಾಗಲು । ಗರ್ಭದಲಿ ಸಂತಾನ ಮೂಡಿತು ॥ 163

ಸುದೈವದಿಂದ ಪುತ್ರವತೀಯಾಗೇ । ಐದು ತಿಂಗಳ ಮಗುವನ್ನು ಜೊತೆಗೆ ।
ಎತ್ತಿಕೊಂಡು ಬಂದಳು ಶಿರಡಿಗೆ । ಪತಿಯೊಡಗೂಡಿ ದರ್ಶನಕೆ ॥ 164

ಪತಿಯಾದರೂ ಆನಂದದಿಂದ । ಸಾಯಿ ಸಮರ್ಥರ ಚರಣಕ್ಕೊಂದಿಸಿದ ।
ಚರಣದಲಿ ಐನೂರು ರೂಪಾಯಿ ಅರ್ಪಿಸಿದ । ತನ್ನ ಮನದಿಂದ ಕೃತಜ್ಞನಾಗಿ ॥ 165

ಬಾಬಾರ ಕುದುರೆ ಶಾಮಕರ್ಣ । ಅದರ ಸದ್ಯದ ವಸತಿ ಸ್ಥಾನ ।
ಕಟ್ಟಿಸಿಕೊಂಡರದರ ಗೋಡೆಗಳನ । ಇದೇ ಹಣವನು ವ್ಯಯಿಸಿ ॥ 166

ಅದಕೇ ಇಂಥ ಸಾಯಿಯ ಸ್ಮರಿಸಬೇಕು । ಅವನ ಧ್ಯಾನ ಮಾಡಿ ಅವನ ಚಿಂತನೆಗೈಯ್ಯಬೇಕು ।
ಮನಬಾರದೆಲ್ಲಿ ಹೋಗುವುದಕೂ । ಹೇಮಾಡನ ನಿಜ ವಿಶ್ರಾಂತಿ ಸ್ಥಾನವಿದು ॥ 167

ತನ್ನ ನಾಭಿಯಲೇ ಕಸ್ತೂರಿ ಇಟ್ಟುಕೊಂಡು । ಏತಕ್ಕೆ ಅಲ್ಲಿ ಇಲ್ಲಿ ತಿರುಗುವದು ।
ಅಖಂಡ ಸಾಯಿ ಚರಣದಲೇ ಇದ್ದು । ಹೇಮಾಡ ಸುಖವಾಗಿರುವನು ॥ 168

ಮುಂದಿನಧ್ಯಾಯ ಮಧುರ ಇದಕಿಂತ ಹೆಚ್ಚಿಗೆ । ಬಾಬಾರನು ಪ್ರೇಮಳ ಭಕ್ತರು ಹೇಗೆ ।
ಮಶೀದಿಯಿಂದ ಚಾವಡಿಯವರೆಗೆ । ಮೆರವಣಿಗೆಯಲಿ ಕರೆದೊಯ್ಯುತಿದ್ದರು ॥ 169

ಅಂತೆಯೇ ಬಾಬಾರ ಹಂಡಿಯ ಕಥೆ । ಪ್ರಸಾದದಾನದ ವಿನೋದ ವಾರ್ತೆ ।
ಶ್ರೋತೃಗಳಿಗಾಗುವುದು ಉಲ್ಹಾಸತೆ । ಮುಂದಿನಧ್ಯಾಯ ಕೇಳಿದಾಗ ॥ 170

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಸಾಯಿ ಸರ್ವವ್ಯಾಪಕತಾಃ ತದಾಶೀರ್ವಚನಸಾಫಲ್ಯನಾಮ । ಷಟ್‌ತ್ರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

509.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತೆಳು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಧನ್ಯ ಧನ್ಯ ಸಾಯಿಯ ಚರಿತ । ಧನ್ಯ ಅವರ ನಿತ್ಯಾಚರಿತ ।
ಕ್ರಿಯೆಯಾ ಅತಿ ಅದ್ಭುತ । ಸಂಪೂರ್ಣವರ್ಣಿಸಲು ಬಾರದಂತೆ ॥ 1

ಅಗಾಧ ಅವರ ಸಚ್ಚರಿತ । ಧನ್ಯ ಅವರ ಜೀವನ ವೃತ್ತ ।
ಧನ್ಯ ಧನ್ಯ ಆ ಅಪ್ರತಿಹತ । ಅಸಿಧಾರಾವ್ರತ ಅವರದು ॥ 2

ಒಮ್ಮೆ ಬ್ರಹ್ಮಾನಂದದಲಿ ಉನ್ಮತ್ತ । ಮತ್ತೊಮ್ಮೆ ನಿಜಬೋಧದಲಿ ತೃಪ್ತ ।
ಮಗುದೊಮ್ಮೆ ಎಲ್ಲ ಮಾಡಿಯೂ ಅಲಿಪ್ತ । ಹೀಗೆ ಅನಿಶ್ಚಿತ ಅವರ ಸ್ಥಿತಿ ॥ 3

ಒಮ್ಮೆ ಸರ್ವಪ್ರವೃತ್ತಿ ಶೂನ್ಯರು । ಎಂದರಲ್ಲ ನಿದ್ರಾಸಂಪನ್ನರು ।
ನಿಜ ಸ್ವಾರ್ಥದಲಿ ಮನವ ನಿಲಿಸಿರುವರು । ನಿಜರೂಪದಲಿ ಎಚ್ಚರಾಗಿವರು ॥ 4

ಒಮ್ಮೆ ಸಾರದಂತೆ ಪ್ರಸನ್ನ । ಆದರೂ ದುರಂತ ನಿಗೂಢ ಗಹನ ।
ಯಾರಿಂದ ಈ ಅಗಾಧರೂಪದ ನಿರೂಪಣ । ಸರಿಯಾಗಿ ಮಾಡಲಾದೀತು ॥ 5

ಪುರುಷರೊಡನೆ ಸಹೋದರರಂತೆ । ಸ್ತ್ರೀ ಅವರಿಗೆ ಸೋದರಿ, ಮಾತೆ ।
ಹೇ ಬ್ರಹ್ಮ ಚಾರಿಯವ ಊರ್ಧ್ವರೇತ । ಯಾವಾಗಲೂ ಇದನೆಲ್ಲರು ॥ 6

ಇಂಥವನ ಸತ್ಸಂಗತಿಯಲಿ । ಯಾವ ಮತಿ ಪ್ರಾಪ್ತವಾಗುದಿಲ್ಲಿ ।
ಅದೇ ಸ್ಥಿತಿ ಕೊನೆವರೆಗೆ ಉಳಿಯಲಿ । ಆ ಮರಣಾಂತವಾಗಿ ॥ 7

ಉದಂಡವಾಗಲಿ ಸೇವಾವೃತ್ತಿ । ಚರಣದಲಿರಲಿ ಅನನ್ಯ ಭಕ್ತಿ ।
ತನ್ನಾಮದಲಿ ಅಖಂಡ ಪ್ರೀತಿ । ಸರ್ವಭೂತಗಳಲ್ಲಿ ಭಗವಾದ್ಭಾವ ॥ 8

ನೋಡಿ ಅವನ ಒಂದೊಂದು ಕೃತಿಗಳು । ಅದರ ಹಿಂದಿನ ಕಾರಣ ಶೋಧಿಸತೊಡಗಲು
।ಸ್ವಸ್ಥ ಕುಳಿತು ಕೊಳ್ಳುವರು ಏನು ತಿಳಿಯದಿರಲು । ಕೊನೆಯಲಿ ಮತಿ ಕುಂಠಿತವಾಗಿ ॥ 9

ಕೆಲವರು ಸ್ವರ್ಗ ಸೌಖ್ಯವ ಬಯಸುವವರು । ಸ್ವರ್ಗದ ಮಹಿತಿಯ ಬಣ್ಣಿಸುವರು ।
ಭೂಲೋಕವ ತುಚ್ಛವಾಗಿ ಗಣಿಸುವರವರು । ಇಲ್ಲಿ ಮರಣದ ಭಯವಿದೆ ಎಂಬರು ॥ 10

ಆದರೆ ಅವ್ಯಕ್ತದಿಂದ ಆಕಾರಕೆ ಬಂದು । ಅದಕೆ ಎನ್ನುವರು ವ್ಯಕ್ತ ಸ್ಥಿತಿಯೆಂದು ।
ಮತ್ತೆ ಅದೇ ಅವ್ಯಕ್ತದಲಿ ಪ್ರವೇಶಿಸುವದು । ಅದನ್ನೇ ಮೃತ್ಯು ಎಂದು ಕರೆಯುವರು॥ 11

ಅಧರ್ಮ ಅಜ್ಞಾನ ರಾಗದ್ವೇಷ । ಇತ್ಯಾದಿಗಳಿವು ಮೃತ್ಯುಪಾಶ ।
ಇದರ ಉಲ್ಲಂಘನ ಮಾಡಲು ಅಶೇಷ । ಅವನಿಗೇ ಸ್ವರ್ಲೋಕದಲಿ ಪ್ರವೇಶ ॥ 12

ಸ್ವರ್ಗವೆಂಬುವುದಾದರೂ ಬೇರೆನಿರುವುದು । ವೈರಾಗ್ಯವೆಂಬುವುದೇ ಸ್ವರ್ಗಲೋಕವಿರುವುದು ।
ಮಾನಸ ದುಃಖವಿವರ್ಜಿತವಾದುದು । ವಿರಾಟ ಆತ್ಮಸ್ವರೂಪವೇ ॥ 13

ಎಲ್ಲಿ ಇಲ್ಲ ರೋಗಾದಿ ಭಯ । ಅರಿಯರು ವ್ಯಾಧಿ ದುಃಖಗಳ ಚಿಂತೆಯ ।
ಅಲ್ಲಿ ಕಾಣರು ಕ್ಷುಧಾ ತೃಷಾಕುಲತೆಯ । ಮುಪ್ಪಿನ ಭೀತಿಯಿಂದ ವ್ಯಥಿತರಲ್ಲಿಲ್ಲ ॥ 14

ಎಲ್ಲಿ ಇಲ್ಲ ಮೃತ್ಯು ಭಯ । ಇಲ್ಲ ವಿಧಿ ನಿಷೇಧದ್ವಯ ।
ಜೀವರೆಲ್ಲ ಇರುವರು ನಿರ್ಭಯ । ಅದೇ ತಾನೇ ದಿವ್ಯ ಸ್ವರ್ಗಸ್ಥಿತಿ ॥ 15

ಯಾವದು ಆಬ್ರಹ್ಮಸ್ಥಾವರಾಂತವಾಗಿ । ಸ್ಥಾವರಜಂಗಮಾಂತ ಸಂಪೂರ್ಣವಾಗಿ ।
ಇರುವದಾವುದು ನಾನಾತ್ವವಿರಹಿತವಾಗಿ । ಇದೇ ತತ್ವವು ಅಲ್ಲಿ ಇಲ್ಲಿ ಎಲ್ಲೆಲ್ಲಿ ॥ 16

ಇರುವಾಗ ಸಂಸಾರ ಧರ್ಮವರ್ಜಿತವಾಗಿ । ಆದಾಗ ಉಪಾಧಿ ಸಮನ್ವಿತರಾಗಿ ।
ಅದೇ ಕಾಣುವದು ಅಬ್ರಹ್ಮವಾಗಿ । ಅವಿದ್ಯಾ ಮೋಹಿತ ಜೀವಕ್ಕೆ ॥ 17

ನನಗಿಂತ ಭಿನ್ನ ಆ ಪರಬ್ರಹ್ಮವಿರುವದು । ಅದು ನಾನಲ್ಲ ನಾ ಬೇರೆಯೇ ಎಂದು ।
ಯಾರಲ್ಲಿ ಈ ಭೇದ ಜ್ಞಾನವಿರುವದು । ಮರಣಾಧೀನನವನೆಂದಿಗೂ ॥ 18

ಜನನದ ಹಿಂದೆ ಇದೆ ಮರಣ । ಮರಣದ ಹಿಂದೆ ಮತ್ತೆ ಪುನರ್ಜನನ ।
ಇದು ಸಂಸ್ಕೃತಿ ಚಕ್ರ ಪರಿವರ್ತನ । ಚಿರಂತನವಾಗಿರುವದವಗೆ ॥ 19

ಯಜ್ಞತಪೋದಾನಗಳು ದುಷ್ಕರವೆಂದು । ಆಪಾದನೆ ಇರುವದು ಯಾರದು ।
ಆ ನಾರಾಯಣ ಪದವಿಹೀನವಾದದ್ದು । ಸ್ವರ್ಗಾಯತನ ಯಾತಕ್ಕೆ ॥ 20

ಕೇವಲ ವಿಷಯೋಪಭೋಗದ ಸ್ಥಾನ । ನಮಗೆ ಬೇಕಿಲ್ಲ ಅಂಥ ಸ್ವರ್ಭುವನ ।
ಎಲ್ಲಿಲ್ಲ ಗೋವಿಂದ ನಾಮಸ್ಮರಣ । ಅಂದರಿಂದೇನು ಪ್ರಯೋಜನ ॥ 21

ಹೋಗಲು ಸ್ವರ್ಗ ಅಥವಾ ನರಕದೊಳಗೆ । ಅಂತರವಿಲ್ಲ ವಿಷಯೋಪಭೋಗದೊಳಗೆ ।
ನೋಡಿದರೆ ಗರ್ದಭ ಮತ್ತು ಇಂದ್ರರೊಳಗೆ । ಸುಖವೆಂಬದಿರುವದೊಂದೇ ॥ 22

ಇಂದ್ರ ಓಡಾಡುವದು ನಂದನವನದೊಳು । ಕತ್ತೆ ಹೊರಳಾಡುವದು ತಿಪ್ಪೆಯೊಳು ।
ಸುಖದ ತೂಕ ಒಂದೇ ಎರಡರೊಳು । ಒಂದಿಷ್ಟೂ ಭೇದವಿಲ್ಲ ಎರಡರಲ್ಲಿ ॥ 23

ಎಲ್ಲಿಂದಾಗುವದು ಪುಣ್ಯಕ್ಷಯದಿಂದ ಪತನ । ಏತಕ್ಕೆ ಅದಕಾಗಿ ಮಾಡುವರು ಯತ್ನ ।
ಅದಕಿಂತ ಒಳ್ಳೆಯದು ಇಲ್ಲಿಯೇ ಜನನ । ಮಹತ್ವದಲಿ ಹೆಚ್ಚು ಭೂಲೋಕ ॥ 24

ಎಲ್ಲಿ ಕಲ್ಪದಷ್ಟು ಆಯುಷ್ಯ ಪ್ರಮಾಣ । ಆ ಬ್ರಹ್ಮಲೋಕದ್ದಾದರೂ ಏನು ಹಿರಿತನ ।
ಅಲ್ಪಾಯುಷ್ಯವೇಕೆ ಕ್ಷಣಮಾತ್ರದ್ದೇ ಇರಲಿ ಜೀವನ । ಭೂಲೋಕದ ರೀತಿಯೇ ಬೇರೆ ॥25

ಇದ್ದಾಗ ಕ್ಷಣಭಂಗುರ ಆಯುಷ್ಯ ಪ್ರಮಾಣ । ಅಲ್ಲಿ ಕರ್ಮ ಮಾಡಿದ್ದನ್ನು ಒಂದೇ ಕ್ಷಣ ।
ಮಾಡಲದನೆಲ್ಲ ಈಶ್ವರಾರ್ಪಣ । ಅಭಯ ಸ್ಥಾನ ದೊರೆವುದವಗೆ ॥ 26

ಎಲ್ಲಿಲ್ಲ ಭಗವದ್ಭಕ್ತ ಜನ । ನಡೆಯದಲ್ಲಿ ಹರಿಗುರು ಕಥಾವರ್ಣನ ।
ಸಂಗೀತ ನೃತ್ಯ ಭಗವತ್ಪೂಜನ । ಆ ಸ್ಥಾನವೇನು ಪ್ರಯೋಜನ ॥ 27

ಬ್ರಹ್ಮಾತ್ಮೈಕತ್ವ ವಿಜ್ಞಾನ । ಆತ್ಯಂತಿಕ ನಿಃಶ್ರೇಯಸ ಸಾಧನ ।
ಅದಿರುವದು ಸ್ವರ್ಗಕ್ಕಿಂತ ಗಹನ । ಈ ಭೂಲೋಕವೇ ಸಾಧನವದಕೆ ॥ 28

ಕಾಯಾ ವಾಚಮನಗಳೊಡನೆ । ಮಾಡಲು ಪಂಚಪ್ರಾಣಗಳ ಸಮರ್ಪಣ ।
ನಿಶ್ಚಯಾತ್ಮಕವಾದ ಬುದ್ಧಿಯನೂ ಲೀನ । ಸರ್ವಸ್ವದಲಿ ಗುರುವಿನಾಧೀನ ಮಾಡಿ ॥ 29

ಈ ರೀತಿ ಸದ್ಗುರುವಿಗೆ ಶರಣಾಗತನಾಗಲು । ಭವಭಯದ ವಾರ್ತೆಯೇ ಉಳಿಯದೆಲ್ಲೂ
ಎಲ್ಲವನೂ ನೋಡಿಕೊಳ್ಳುವವನಿರಲು । ಪ್ರಪಂಚದ ಚಿಂತೆ ಏತಕೆ ॥ 30

ಅವಿದ್ಯೆಗೆ ಸ್ಥಾನವಿರುವಲ್ಲಿ । ಪುತ್ರ ಪಶು ಆದಿಗಳ ಪಾಶ ಅಲ್ಲಿ ।
ಸಂಸಾರದ ಚಿಂತೆ ಹಗಲಿರುಳುಗಳಲಿ । ಒಂದಿಷ್ಟೂ ಸುವಿಚಾರವಿರದಲ್ಲಿ ॥ 31

ಅವಿದ್ಯೆಯೇ ಎಲ್ಲಕ್ಕೂ ಮೂಲ ಕಾರಣ । ಉಪಸ್ಥಾಪಿಸುವದು ನಾನಾತ್ವದ ಕಲ್ಪನೆಯನ ।
ಅದಕಾಗಿಯೇ ಮಾಡಬೇಕು ಸಂಪಾದನ । ಆಚಾರ್ಯಾಗಮ ಸಂಸ್ಕೃತ ಜ್ಞಾನ ॥ 32

ಆದಾಗ ಅವಿದ್ಯಾ ನಿವರ್ತನ । ಒಂದಿಷ್ಟೂ ಉಳಿಯದು ನಾನಾತ್ವಜ್ಞಾನ ।
ತಪ್ಪುವದವನ ಜನ್ಮಮರಣ । ಏಕತ್ವ ವಿಜ್ಞಾನ ಮೂಲವಿದಕೆ ॥ 33

ಅತ್ಯಲ್ಪ ಭೇದದೃಷ್ಟಿ ಇರುವವ । ಆದರೂ ಜನ್ಮಮರಣಗಳಲಿ ತೊಳಲಾಡುವ ।
ಜನನ ಮತ್ತು ಮರಣಗಳ ನಡುವೆ ಅವ । ಓಡಾಡುತ್ತಲೇ ಇರಬೇಕು ॥ 34

'ಶ್ರೇಯವೇ' ಯಾರ ವಿಷಯ । ಅದುವೇ ವಿದ್ಯೆ ನಿಃಸಂಶಯ ।
'ಪ್ರೇಯ'ವು ಯಾರ ವಿಷಯ । ಅವಿದ್ಯೆಯೆಂಬದು ಹೆಸರದಕೆ ॥ 35

ಮೃತ್ಯುವೆಂಬುದೇ ದೊಡ್ಡ ಭವ ಭಯ । ಅದರಿಂದಾಗಲೂ ನಿರ್ಭಯ ।
ದೃಢವಾಗಿ ಹಿಡಿಯಿರಿ ಗುರುಚರಣದ್ವಯ । ಅದ್ವಯ ಬುದ್ಧಿಯ ನೀಡುವರು ॥ 36

ಎಲ್ಲಿ ಎರಡನೆಯದರ ಅಭಿನಿವೇಶ । ಅಲ್ಲಿಯೇ ಈ ಭಯಕೆ ಪ್ರವೇಶ ।
ಅದಕಾಗಿ ಎಲ್ಲಿಲ್ಲ ಭವಭಯದ ಲವಲೇಶ । ಆ ನಿರ್ವಿಶೇಷ ಪದ ಸೇವಿಸಿರಿ ॥ 37

ಶುದ್ಧ ಪ್ರೇಮವನೇ ಮಲಯಾಗರವಾಗಿಸಿ । ಅವನ ಹಣೆಯಲಿ ಲೇಪಿಸಿ ।
ಭಾವಾರ್ಥ ಪೀತಾಂಬರವನುಡಿಸಿ । ಆಗ ವಿಶ್ವಂಭರನ ತೋರುವ ನಿಜಭಕ್ತರಿಗೆ ॥ 38

ದೃಢ ಶ್ರದ್ಧೆಯ ಸಿಂಹಾಸನ । ಅಷ್ಟಭಾವಮಂಡಿತ ಪೂರ್ಣ ।
ಆನಂದಾಶ್ರುಜಲದಿಂದ ಸ್ನಾನ । ಮಾಡಿಸಿದರೆ ತತ್ಕಾಲ ಪ್ರಸನ್ನನಾಗುವ ॥ 39

ಭಕ್ತಿಯ ಮೇಖಲೆಯ ಕಟ್ಟುವದು । ಸರ್ವಸ್ವವನವನಿಗರ್ಪಿಸುವದು ।
ಪ್ರೀತಿಯಿಂದ ನಿವಾಳಿಸುವದು । ಬಳಿಕ ಭಾವದಿಂದಾರತಿ ಬೆಳಗುವದು ॥ 40

ಪ್ರವಿಲಯವು ಯಾವುದೇ ಕಾರ್ಯದ । ಆಗುವದು ಅಸ್ತಿತ್ವಾಶಯದಿಂದ ।
ಮಣ್ಣಿನ ಘಟಕೆ ಹೊಡೆದಾಗ ಹರಳಿನಿಂದ । ಅದರ ಆಕಾರ ಮುಕ್ತಾಯಗೊಳುವದು ॥ 41

ಸಂಪೂರ್ಣವಾಗಿ ಘಟದ ಅಸ್ತಿತ್ವದ್ದು । ಇಲ್ಲದಂತೆ ಆಗಲಾರದದು ।
ಅದರ ಒಡೆದ ತುಂಡುಗಳಿಂದೂ । ಘಟದ ಅನುವೃತ್ತಿ ಯಾಗುವದು ॥ 42

ಆದಕ್ಕೇ ಕಾರ್ಯದ್ದಾದಾಗವಿಲಯನ । ಆದಾಗಿರುವದು ಅಸ್ತಿತ್ವ ನಿಷ್ಠ ಚಿರಂತನ ।
ಅದಕೆ ಯಾರದೇ ದೇಹಾವಸಾನ । ಶೂನ್ಯತ್ವತದರ ಪರ್ಯವಸಾನವಲ್ಲ ॥ 43

ಕಾರಣದ ವ್ಯತಿರಿಕ್ತ ಕಾರ್ಯವಿರಲಾರದು ಅವ್ಯಕ್ತವೇ ವ್ಯಕ್ತವಾಗಿದ್ದೂ ।
ಇರುವದದು ಸದ್ವೈವ ಸದನ್ವಿತ ಇದು । ಸುಪ್ರತೀತವಾಗಿದೆ ಸರ್ವತ್ರ 44

ಸೂಕ್ಷ್ಮತೆಯ ನ್ಯೂನಾಧಿಕ್ಯವನು । ಪರಂಪರೆಯೂ ತೋರಿಸುವದು ಇದನ್ನು ।
ಸ್ಥೂಲಕಾರಣ ಹೊಂದಲುವಿಲಯನವನು । ಅವನಿಷ್ಟವಾಗುವುದು ಸೂಕ್ಷ್ಮಕಾರಣ॥ 45

ಅದರದೂ ವಿಲಯನಾದಾಗ । ಅದಕಿಂತ ಸೂಕ್ಷವು ಉಳಿದಾಗ ।
ಮನ ಬುದ್ಧಿ-ಸಕಲೇಂದ್ರಿಗಳಾಗ । ಗ್ರಹಣದಲಿ ವಿಕಲತೆ ಹೊಂದುವುದು ॥ 46

ತಾತ್ಪರ್ಯ ಬುದ್ಧಿಯು ಎಲ್ಲಿ ಕುಂಠಿತವಾಗುವದು । ಅಲ್ಲಿ ಮೂರ್ತ ಅಮೂರ್ತ ನಿಲ್ಲುವುದು ।
ಆದರದರ ಸದ್ಭಾವ ಮುಚ್ಚುವುದು । ಸದ್ ಮಾತ್ರ ಮಿನುಗುವುದು ಎಲ್ಲೆಡೆಗೆ ॥ 47

ಬುದ್ಧಿಯು ಕಾರ್ಯಕ್ಕೆ ಇರುವುದು ಆಶ್ರಯ । ಆದಕ್ಕೇ ಅದರದಾದಾಗ ವಿಲಯ ।
ಕೂಡಲೇ ಆಗುವುದು ಆತ್ಮೋದಯ । ಅಕ್ಷಯ ಪದವು ಕೈಗೆಟಕುವುದು ॥ 48

ಅವಿದ್ಯಾ,ಮಾಯಾ, ಕಾಮ ,ಕರ್ಮ । ಇವೇ ಮುಖ್ಯ ಮೃತ್ಯುವಿನ ಧರ್ಮ ।
ಇವೆಲ್ಲದರದಾದಾಗ ಉಪರಮ । ಉಪಶಮವಾಗುವುದು ಬಂಧನದ್ದು ॥ 49

ಆಗಲು ಎಲ್ಲ ಬಂಧನನಾಶ । ಆತ್ಮವು ಪ್ರಕಟಿಸಿವುದು ಅಪ್ರಯಾಸ ।
ಮೇಘಗಳು ಸರಿಯುವುದೇ ಅವಕಾಶ । ಸ್ವಯಂ ಪ್ರಕಾಶಿತನಾಗುವುದು ರವಿ ॥ 50

ಈ ಶರೀರವೇ ನಾನು, ಇದು ನನ್ನ ಧನ । ಇದಕೆ ದೃಢ ಹೆಸರು ದೇಹಾಭಿಮಾನ ।
ಇದೇ ಹೃದಯಗ್ರಂಥಿ ನಿಬಂಧನ । ದುಃಖಾಧಿವೇಶನ ಮಾಯೆಯದು ॥ 51

ಒಂದು ವೇಳೆ ಈ ದೇಹವು ಶಾಂತವಾದರೆ । ಕರ್ಮಬೀಜದಿಂದ ದೇಹಾಂತರ ಲಭಿಸಿದರೆ ।
ಆ ಬೀಜವು ನಿಃಶೇಷವಾಗಿ ದಹಿಸಿದರೆ । ಪುನರ್ಜನ್ಮವು ತಪ್ಪಿದಲ್ಲ ॥ 52

ಮತ್ತೇ ಆ ಬೀಜದಿಂದ ವೃಕ್ಷವಾಗುವುದು । ವಾಸನಾ ಬೀಜದಿಂದ ದೇಹಾಂತರ ಪ್ರಾಪ್ತಿಯಾಗುವದು ।
ಹೀಗೆ ಈ ಚಕ್ರ ಅವ್ಯಾಹತವಾಗಿ ನಡೆಯುವುದು । ವಾಸನೆ ಇಲ್ಲದಂತಾಗುವವರೆಗೆ ॥ 53

ಯಾವಾಗ ಕಾಮಗಳ ಸಮೂಳ ವಿನಾಶ । ಆಗುವುದು ಆಗ ಹೃದಯಗ್ರಂಥಿ ನಿರಾಸ ।
ಆಗ ಅಮರನಾಗುವ ಮರ್ತ್ಯ ಮನುಷ್ಯ । ಇದೇ ವೇದಾಂತಿಗಳ ಉಪದೇಶ ॥ 54

ಧರ್ಮಾಧರ್ಮವಿಹಿತ ಸ್ಥಿತಿಯದು । ಅದಕೆ ಹೆಸರು 'ವಿರಜಾ'ಎಂದು ।
ಅವಿದ್ಯಾಕಾಮ ನಿರ್ಮೂಲನ ಮಾಡುವಂಥದ್ದು । ಅಲ್ಲಿ ಒಂದಿಷ್ಟೂ ಮೃತ್ಯು ಭಯವಿರದು ॥ 55

ವಾಸನೆಗಳ ಪರಿತ್ಯಾಗ । ಅದೇ ಬ್ರಹ್ಮಾನಂದದ ಯೋಗ ।
'ನಿರಾಲೇಖ್ಯ' ವದಕೆ ಶಬ್ದ ಪ್ರಯೋಗ । 'ಅನಿವಾರ್ಯಕ್ಕೆ' ವಾಚಾವಿನಿಯೋಗವಿದು ॥ 56

ಅದಾಗ ಪರಬ್ರಹ್ಮಾಸಂವಿತ್ತಿ । ಅದೇ ಸಕಲಾನಿಷ್ಟನಿವೃತ್ತಿ ।
ಅದೇ ಮನೇಪಿತ ಇಷ್ಟ ಪ್ರಾಪ್ತಿ । ಶೃತಿ ಸ್ಮತಿಗಳಲಿ ಪ್ರಮಾಣವು ॥ 57

'ಬ್ರಹ್ಮವಿದ್ಯಾಪ್ನೋತಿ ಪರಂ' । ಇದೇ ಬ್ರಹ್ಮಾನಂದ ಸಾಧ್ಯ ಚರಮ ।
ಇದಕಿಂತ ಬೇರೆಯಾವುದು ಪರಮ । 'ತರತಿ ಶೋಕಮಾತ್ಮವಿತ್' ॥ 58

ತಮೋಮೂಲವಾದ ಸಂಸಾರಾರ್ಣವ । ಹೊಂದಲದರ ಆಚೆದಡವ ।
ಬ್ರಹ್ಮಜ್ಞಾನವೇ ಉತ್ತಮ ಉಪಾಯನ । ಸಕಲ ಪ್ರಾಪ್ತಿಗೆ ಸಾಧನ ॥ 59

ಪೂರ್ಣ ಶ್ರದ್ಧೆ ಮತ್ತು ಧೀರ । ಅದೇ ಪ್ರತ್ಯಕ್ಷ ಉಮಾ ಮಹೇಶ್ವರ ।
ಶಿರದಲಿರದವನ ಕೃಪಾಕರ । ಹೃದಯಸ್ಥ ವಿಶ್ವಾಂಭರಸಿಗಲಾರನು ॥ 60

ಸಾಯಿನಾಥಗುರುಮರ್ಯರ ಮಾತಿದು । ಅಮೋಘವಚನ ಅವರದು ।
ನಿಷ್ಠೆಯ ಅಲ್ಪ ಧೈರ್ಯಬೇಕೆಂದು । ಅದರಿಂದ ಮಹದೈಶ್ವರ್ಯಪಡೆಯುವಿರಿ ॥ 61

ದೃಶ್ಯವೆಲ್ಲ ಅಸತ್ತೆಂದು । ಇದನ್ನು ಒಪ್ಪಲೆಬೇಕಾಗುವುದು ।
ಸ್ವಪ್ನದರ್ಶನ ಅಥವಾ ಪ್ರತ್ಯಕ್ಷ ದರ್ಶನವಾಗುವುದು । ಎಲ್ಲವೂ ಅದೃಶ್ಯ ಪ್ರಭೋದ ॥ 62

ಇಲ್ಲಿಯೆವರೆಗೆ ಬುದ್ಧಿಯ ಓಟ । ಇಲ್ಲಿಯವರೆಗೆ ಆತ್ಮದ ಒಡನಾಟ ।
ಆದರೇ ಇದರಲ್ಲಿ ಸದಸತ್ । ಅದು ತತ್ವ, ಅದು ಆತ್ಮ ॥ 63

ಸದಸದಾದಿ ಪ್ರತ್ಯಯವರ್ಜಿತ । ಅಲಿಂಗಸರ್ವವಿಶೇಷರಹಿತ ।
ಅದೇ ಶಬ್ದಶಬ್ದಾಂತರ ವರ್ಣಿತ । ಅದೇ ಸರ್ವಗತ ಗುರು ರೂಪ ॥ 64

ಆತ್ಮವು ಸರ್ವವಿಶೇಷರಹಿತ । ಜರಾಜನ್ಮಮರಣಾತೀತ ।
ಅದು ಪುರಾಣ ಮತ್ತು ಶಾಶ್ವತ । ಅಪಕ್ಷಯವರ್ಜಿತಸರ್ವದಾ ॥ 65

ಇದು ಅಜನಿತ್ಯ ಪುರಾತನ । ಸರ್ವಗತವಿರುನಂತೆ ಗಗನ ।
ಅನಾದಿ ಮತ್ತು ಅವಿಚ್ಚಿನ್ನ । ಬುದ್ಧಿಶೂನ್ಯ ಕ್ರಿಯಾಹೀನ ॥ 66

ಯಾವುದು ಅಶಬ್ದ ಮತ್ತು ಅರೂಪ । ಅನಾದಿ ಅನಂತ ಮತ್ತು ಅಮೂಪ ।
ಅವ್ಯಯ ಅಗಂಧ ಮತ್ತು ಅಲೇಪ । ಅದರ ಸ್ವರೂಪವನಾರು ವರ್ಣಿಸಬಲ್ಲರು ॥ 67

ಆದರೂ ಕಾಣದಂಥ ಈ ನಿರ್ಗುಣವನು । ಅಜ್ಞಾನದಿಂದ ತಿಳಿಯದಿದ್ದರೂ ಅದನು ।
ಜ್ಞಾನದಿಂದ ದೂರಮಾಡಿ ಅಜ್ಞಾನವನು । ಆದರೆ ಎಂದೂ ಎನದಿರಿ ಅದನು ಶೂನ್ಯವೆಂದು ॥ 68

ಆ ಪರಮಹಂಸ ಸ್ಥಿತಿ ಎಂಥದು । ಶ್ರೀ ಸಾಯಿಯ ನಿಜಸಂಪತ್ತದು ।
ನೋಡ ನೋಡುತ ಕಾಲವು ಅಪಹರಿಸಿದ್ದು । ಮತ್ತದು ದೃಷ್ಟಿಗೆ ಬಿದ್ದಿದೆ ॥ 69

ಧನಸುತ ದಾರಾಸಕ್ತ ಭಕ್ತ । ಹೊಗಲಿ ಬಿಡಿ ಅಂಥವರ ಮಾತ ।
ದರ್ಶನಕೆ ಬರುತಿದ್ದರು ಯೋಗಿ ವಿರಕ್ತ । ಆಸಕ್ತರಾಗಿರುತಿದ್ದರು ಪದಕಮಲದಲಿ ॥70

ಕಾಮ ಕರ್ಮಗಳಾದಿ ಬಂಧ ವಿಮುಕ್ತ । ಸರ್ವೈಶಣಗಳಿಂದ ವಿನಿರ್ಮುಕ್ತ।
ದೇಹಾಗೇಹಾದಿಗಳ ವಿಷಯದಿ ವಿರಕ್ತ । ಆ ಭಕ್ತನೇ ಧನ್ಯ ಜಗದಲಿ ॥ 71

ಸಾಯಿ ದೃಷ್ಟಿಯ ವಿಷಯ ಯಾರಿಗೆ । ವಸ್ತು ಭೇದ ಕಾಣುವುದೇ ಅವರಿಗೆ ।
ಸಾಯಿಯ ಹೊರತಾಗಿದೃಷ್ಟಿಯೊಳಗೆ । ತೆರವಾದ ಸ್ಥಳವೇ ಇಲ್ಲ ಎಲ್ಲೂ ॥ 72

ಮನದಲಿ ಶ್ರೀ ಸಾಯಿಯ ನಾಮ । ಹೃದಯದಲಿ ಶ್ರೀ ಸಾಯಿಯ ಪ್ರೇಮ ।
ಅಂಥವಗೆ ನಿತ್ಯ ಆರಾಮ ಕ್ಷೇಮ । ಸಾಯಿಯೇ ರಕ್ಷಿಸುವವನು ॥ 73

ಅದೇ ಗತಿ ಶ್ರವಣಗಳದೂ । ಸಾಯಿಯ ಹೊರತು ಶಬ್ದವಿರದು ।
ಸಾಯಿ ಪರಿಮಳ ನಾಸಿಕವ ತುಂಬಿರುವುದು । ರಸನೆ ಸಾಯಿ ರಸ ಸ್ರವಿಸುವುದು ॥74

ಸುಖಕ್ಕಿಂತ ಸುಖಮವಾದುದು । ಸಾಯಿಯ ಸುಹಾಸ್ಯ ಮುಖ ವಿರುವುದು ।
ಧನ್ಯ ಭಾಗ್ಯ ಅವನದು । ಯಾವನು ಶಬ್ದಪಿಯೂಷ ಸೇವಿಸಿದ ॥ 75

ಕಲ್ಯಾಣದಿದ್ದು ನಿಧಾನ । ಸುಖಜಾತಿಯ ಜನ್ಮಸ್ಥಾನ ।
ಸದಾ ಅಂತರದಿ ಸಾವಧಾನ । ಸದಸದ್ವಿವೇಕ ವೈರಾಗ್ಯವಂತ ॥ 76

ಹಾಲು ಕರುವಿಗೆ ಸಾಕಾಗಿದ್ದರೂ । ತಾಯಿಯ ಬಿಟ್ಟು ದೂರಸರಿಯದದು ಆದರೂ ।
ಹಾಗೆ ಕಟ್ಟಬೇಕು ಈ ಮನವನ್ನಾದರೂ । ಗುರು ಚರಣವೆಂಬ ದವಣಿಗೆ ॥ 77

ಪಡೆಯಲು ಗುರು ಕೃಪಾನುರಾಗವನು । ವಂದಿಸಬೇಕು ತತ್‌ಪದಪರಾಗವನು ।
ನೀಡಲು ಹಿತ ಬೋಧದಿಂದ ಎಚ್ಚರವನು । ಹೆಜ್ಜೆ ಹೆಜ್ಜೆಗೆ ಅನುಭವತೆಗೆದು ಕೊಳ್ಳಿ ॥ 78

ಯಥೇಚ್ಛ ರಮಿಸಲು ಇಂದ್ರಿಯಾರ್ಥದಲಿ । ಸಾಯಿ ಪ್ರೇಮವಿರಲಿ ಹೃದಯದಲಿ ।
ಅದೇ ಪ್ರಯೋಜನವಾಗುವುದು ಕೊನೆಯಲಿ । ಸ್ವಾರ್ಥಪರಮಾರ್ಥಗಳೆರಡರಲ್ಲೂ ॥ 79

ಮಂತ್ರ ಸಿದ್ಧಿಯಿಂದ ಮಂತ್ರಿಸಿದ ಅಂಜನ । ಕಾಲು ಮುಂದಾಗಿ ಜನಿಸಿದನಗೆ ತೋರವುದು ಭೂಮಿಗತಧನ ।
ಹಾಗೆಯೇ ಗುರುಪದಧೂಸರ ನಯನ । ಜ್ಞಾನ ವಿಜ್ಞಾನಗಳನರಿಯುವುದು ॥ 80

ಸಿದ್ಧರಲ್ಲಿರುವ ಲಕ್ಷಣಗಳೆಲ್ಲ । ಅವೇ ಸಾಧಕನ ಸಾಧನೆಗಳೆಲ್ಲ ।
ದೀರ್ಘ ಪ್ರಯತ್ನದಿಂದವುಗಳ ಸಾಧಿಸಲು । ಸೂಜ್ಞರು ಪ್ರಯತ್ನ ಮಾಡಲಿ ॥ 81

ಹಾಲಿನಲ್ಲಿರುವ ಘೃತ । ಅದಕೆ ಹೆಪ್ಪು ಹಚ್ಚದ ಹೊರತ ।
ಸಿಗಲಾರದು ಮಜ್ಜಿಗೆ ಅಥವಾನವನೀತ । ಅದಕ್ಕೂ ಸಂಸ್ಕಾರ ಬೇಕಾಗುವುದು ॥ 82

ಮಜ್ಜಿಗೆ ಕಡೆದ ಹೊರತು । ಬೆಣ್ಣೆ ಹೇಗೆ ಆದೀತು ।
ಅದನ್ನು ಮತ್ತೆ ಕಾಯಿಸದ ಹೊರತು । ಸ್ವಾದಿಷ್ಟ ತುಪ್ಪವು ಲಭಿಸದು ॥ 83

ಬೇಕು ಸಂಸ್ಕಾರ ಬಲವತ್ತತೆ । ಪೂರ್ವಾಭ್ಯಾಸದ ಬುದ್ಧಿಮತ್ತೆ ।
ಅಭ್ಯಾಸದ ಹೊರತ್ತಿಲ್ಲ ಚಿತ್ತ ಶುದ್ಧತೆ । ಅದಿಲ್ಲದೆ ಜ್ಞಾನಮಾರ್ಗದುರ್ಗಮವು ॥ 84

ನಿರ್ಮಲವಾದಾಗ ಚಿತ್ತವೃತ್ತಿ । ಅದರಿಂದಲೇ ಆಗುವುದು ಆತ್ಮ ಪ್ರಾಪ್ತಿ ।
ಕೈಗೆಟಕುವವರೆಗೆ ಸ್ವರೂಪಸ್ಥಿತಿ । ಭಗವದ್ಭಕ್ತಿಯ ಬಿಡಬಾರದು ॥ 85

ಬೇಕು ಭಗವದ್ಭಕ್ತಿಯ ಅಡಿಗಲ್ಲು । ಆತ್ಮ ಜ್ಞಾನದ ಮಂದಿರ ಮೇಲೇಳಲು ।
ನಾಲ್ಕೂ ಮುಕ್ತಿಗಳ ಕಳಸ ಹೊಳೆಯಲು । ವಿರಕ್ತಿಯ ಧ್ವಜ ಹಾರಾಡಲು ॥ 86

ಹಗಲಿರುಳು ರೊಜ್ಜಿನಲ್ಲಿ ಹೊರಳಾಡುವವು । ಶ್ವಾನಸೂಕರಗಳು ಹೊಲಸುತಿನ್ನುವವು ।
ವಿಷಯ ಭೋಗವನವೂ ಭೋಗಿಸುವವು । ನರ ದೇಹದ ಮಹತಿಯಾ ಅಷ್ಟೇಯಾ ? ॥ 87

ಯಾವುದರಿಂದಾಗುವದು ಚಿತ್ತಶುದ್ಧಿ । ಯಾವುದರಿಂದ ಅಖಂಡ ಬ್ರಹ್ಮಸಿದ್ಧಿ ।
ಆ ಸ್ವಧರ್ಮಾಚರುಣದಿ । ನರ ದೇಹದಲೀ ತಪಸಾಧಿಸುವುದು ॥ 88

ಸಾಧು ಸೇವೆಯು ಮುಕ್ತಿಯ ಆಗುರ । ಸ್ತ್ರೈಣಸಂಗ ನರಕದ್ವಾರ ।
ಇದು ಪೂಜ್ಯ ಹಿರಿಯರ ಉದ್ಗಾರ । ಸರ್ವಾಥಾ ವಿಚಾರವು ॥ 89

ಸದಾಸದಾಚಾರ ಸಂಪನ್ನ । ದೇಹ ನಿರ್ವಾಹಕ್ಕೆ ಮಾತ್ರ ಅನ್ನ ।
ಗೃಹದಾರಾದಿ ಸ್ಪೃಹಾಶೂನ್ಯ । ಹೀಗಿರುವವನೇ ಸಾಧು ಧನ್ಯ ॥ 90

ಅನಿಮೇಷ ಸಾಯಿಯ ಚಿಂತಿಸುವವರು । ಪ್ರಚೀತಿಯ ವಿಸ್ಮಯವ ಕಾಣುವರು ।
ಸ್ವತಃ ಸಾಯಿ ಅವರನ್ನು ನೆನೆವರು । ಅವರ ಉಪಕಾರ ಮನ್ನಿಸಿ ॥ 91

ನಾಮ ಸ್ಮರಣದ ಮಹತಿ ಘನವಾದುದು । ಗುರುವೇ ಭಕ್ತಸ್ಮರಣ ಮಾಡುವದು ।
ಧ್ಯಾನಿಸುವವನು ಧ್ಯೇಯ ಸ್ಥಿತಿಯ ಹೊಂದುವುದು । ಪೂರ್ಣವಿಸ್ಮತಿ ಪರಸ್ಪರರಿಗೆ ॥92

"ನೀವು ಮಾಡುವುದು ನಿಮಗೆ ಗೊತ್ತು । ನನಗೆ ಹಗಲಿರುಳು ನಿಮ್ಮ ನೆನೆವುದು ಗೊತ್ತು" ।
ಹೀಗೆ ಬಾಬಾರ ಮಮತೆಯ ಮಾತು । ಜನರ ಸ್ಮರಣೆಯಲಿದಿರಬಹುದು ॥ 93

ಬೇಕಿಲ್ಲ ನಮಗೆ ಜ್ಞಾನಕಥೆ । ಸಾಕು ಇದೊಂದೆ ಸಾಯಿಯಗಾಥೆ ।
ನಮ್ಮ ಪಾಪಗಳಿರಲಿ ಎಷ್ಟೇ । ಸಂಕಟದಲಿ ರಕ್ಷಕನಿವ ನಮಗೆ ॥ 94

ಪಾರಾಯಣ ಮಾಡಲಾಗದಿದ್ದರೂ । ಇದರಲ್ಲಿಯ ಗುರುಭಕ್ತಿಯ ಪ್ರಕರಣಗಳನ್ನವರು ।
ನಿತ್ಯ ನೇಮದಿಂದ ಕೇಳಿದರೂ । ಸಾಕು ಹೃತ್ಪೂರ್ವಕವಾಗಿ ॥ 95

ದಿನದ ಯಾವುದೇ ಕಾಲದಲ್ಲಿ । ನಿತ್ಯ ಈ ಚರಿತೆಯನೋದಲಲ್ಲಿ ।
ಶ್ರೀ ಹರಿ ನಿಜಗುರುವಿನ ಜೊತೆಯಲಿ । ಭಾವಿಕರಿಗೆ ಪ್ರತ್ಯಕ್ಷನಾಗುವ ॥ 96

ಲಕ್ಷ್ಮೀ ಅಖಂಡ ಮನೆಯಲಿರುವಳು । ನಿರಂತರವಾಗಿ ಇದನೋದುತಿರಲು ।
ಕೊನೆಗೆ ಒಂದು ಸಪ್ತಾಹವಾದರೂ ಮಾಡಲು । ಅವರ ದಾರಿದ್ರ್ಯ ದೂರವಾಗುವುದು ॥ 97

ಎನ್ನದಿರಿ ಹೇಳುವೆನು ನಾನು ಇದನು । ನನ್ನ ಮುಖದಿಂದ ಇದನು ಸಾಯಿಯೇ ನುಡಿಹನು ।
ಬಿಟ್ಟು ಬಿಡಿ ಕ್ಲಿಷ್ಟ ಕಲ್ಪನೆಯನು । ಮನವ ಸಂಶಯದಿ ಮುಳುಗುವಂಥದನು ॥ 98

ಅವನಿರುವ ಸಕಲ ಸದ್ಗುಣಮಣಿ । ಸಾಯಿ ನಿಜಭಕ್ತ ಕೈವಲ್ಯದಾನಿ ।
ಕಲಿಮಲದಹಿಸುವಂಥ ಕಥೆಯನು । ಕೇಳಬೇಕು ಶ್ರೋತೃಗಳು ॥ 99

ಇಂಥ ಸಂತಕಥೆಯ ಮುಂದೆ । ಸ್ವರ್ಗ ಸೌಖ್ಯವಾದರೂ ಏನಿದೆ ।
ಯಾರು ತಿರುಗಿ ನೋಡವರು ಅದರೆಡೆ । ಇಲ್ಲಿದ್ದ ಸತ್ಕಥನವನು ಬಿಟ್ಟು ॥ 100

ಸುಖ ದುಃಖಗಳಿವು ಚಿತ್ತದ ವಿಕಾರ । ಸತ್ಸಂಗವು ಸರ್ವದಾ ನಿರ್ವಿಕಾರ ।
ಮಾಡುವುದು ಚಿತ್ತವ ನಿರ್ವಿಕಾರ । ಸುಖದುಃಖಕ್ಕೆ ಎಡೆಇಲ್ಲದಂತೆ ॥ 101

ಏಕಾಂತದಲಿ ಸುಖ ವಿರಕ್ತನಿಗೆ । ಅಥವಾ ಭಕ್ತಿ ಮಾಡುವಾಗ ಭಕ್ತನಿಗೆ ।
ಇಂದ್ರನಿರಲಿ ಅಥವಾ ಇರಲಿ ಚಕ್ರವರ್ತಿಯಾಗೇ । ಕಲ್ಪಾಂತದಲಾಸುಖ ಅವರಿಗಿರದು ॥ 102

ಪ್ರಾರಬ್ಧಭೋಗವು ಬಲವತ್ತರ । ಬುದ್ಧಿಯಾಗುವುದು ಕರ್ಮಾನುಸಾರ ।
ಆದರೆ ಈ ನೇಮನೇಮಾಂತರ । ತತ್ಪರ ಭಕ್ತನಿಗೆ ಇರದಿದು ॥ 103

ಭಗೀರಥ ಯತ್ನದಿಂದೂ । ಪ್ರಾರಬ್ಧಭೋಗ ತಪ್ಪದು ।
ಅವಶ್ಯ ಭಾವಿತ್ವದ ಯೋಗವಿದ್ದು । ಅದರ ವಿಯೋಗ ಅವಶ್ಯ ॥ 104

ಅವಾಂಛಿತ ದುಃಖಗಳು ಬರುವ ಹಾಗೆ । ಅಕಲ್ಪಿತ ಸುಖವೂ ಅದರ ಹಾಗೇ ।
ಇದು ಮೊದಲೇ ತಿಳಿದಿರುವದು ಸಂತರಿಗೆ । ದೇಹ ಪ್ರಾರಬ್ಧದ ಈ ರೀತಿ ॥ 105

ಅಖಂಡವಾಗಿ ಅವನ ನಾಮಾವರ್ತನ । ಇದೇ ನಮಗೆ ಜಪ ತಪದಾನ ।
ಹೊತ್ತು ಹೊತ್ತಿಗೆ ಶಿರಡೀ ಪ್ರಯಾಣ । ಇದೇ ತೀರ್ಥಾಟನೆ ನಮಗೆ ॥ 106

ಸಾಯಿ ಸಾಯಿ ಇತಿ ನಾಮಸ್ಮರಣ । ಇದೇ ಮಂತ್ರದ ಅನುಷ್ಠಾನ ।
ಅದೇ ಧ್ಯಾನ ಇದೇ ಪುರಶ್ಚರಣ । ಅನನ್ಯ ಶರಣಾಗಬೇಕವನಿಗೆ ॥ 107

ನಿಷ್ಕಪಟ ಪ್ರೇಮಾನುಸಂಧಾನ । ಇಷ್ಟೇ ನಿಜದಲಿ ಅವನ ಪೂಜನ ।
ಬಳಿಕ ಅಂತರದಲೇ ಪಡೆಯಿರಿ ಅನುಭವವನ । ಅತರ್ಕ್ಯಲೀಲೆ ಅವನದು ॥ 108

ಸಾಕಿನ್ನು ಈ ಕಬ್ಬಿನಗಾಣ । ನಾವು ಪಡೆಯಬೇಕು ಬೇಗ ಬೆಲ್ಲವನ ।
ಪೂರ್ವ ಸೂಚಿತವಾದ ರಸಭರಿತ ಕಥೆಯನು । ಕೇಳಲೆಲ್ಲರೂ ಉತ್ಸುಕರಿಹರು ॥ 109

ಹೀಗಿರುವುದು ಶ್ರೋತೃವೃಂದದ ಭಾವ । ತಿಳಿದು ಸೂಚಿತ ಕಥೆಯ ಸ್ವಭಾವ ।
ನಿಲ್ಲಿಸಿದೆ ಈ ಗ್ರಂಥ ಗೌರವ । ಅವಧಾನ ಸೌಷ್ಠವವನುಳಿಸಲು ॥ 110

ಕಾವ್ಯ ಪದಬಂಧ ವ್ಯುತ್ಪತ್ತಿ । ತಿಳಿಯೆನು ನಾಮಂದಮತಿ ।
ಕೈಯಲ್ಲಿ ಲೆಕ್ಕಣಿಕೆ ಇತ್ತು ಈ ರೀತಿ । ಸಾಯಿ ಬರೆಯಿದಸಿಂತೆ ಬರೆವೆ ॥ 111

ಸಾಯಿಯೇ ಬುದ್ಧಿದಾತನಿರದಿದ್ದಲ್ಲಿ । ಈ ಚರಿತ್ರೆಯ ಬರೆಯುತಿದ್ದೆ ನಾನೆಲ್ಲಿ ।
ಅವನ ಕಥೆಯ ಅವನೇ ಹೇಳಿ । ಬರೆಯಿಸುವವನೂ ಅವನೇ ॥ 112

ಇರಲಿನ್ನು ಕಥಾನು ಸಂಧಾನ । ಚಾವಡೀ ಹಂಡೀ ಪ್ರಸಾದ ಕಥನ ।
ಮಾಡುವನೆಂದು ಕೊಟ್ಟಿರುವೆ ಆಶ್ವಾಸನ । ಆ ಕಥೆಯನೀಗ ಕೇಳಿರಿ ॥ 113

ಮತ್ತೇ ಇರುವಂಥದ್ದು ತದಂಗಭೂತವಾಗೇ । ಅಥವಾ ಬೇರೆ ಬಂದರೆ ನೆನಪಿಗೆ ।
ಅವುಗಳನ್ನೂ ಹೇಳುವೆ ಕೇಳುಗರಿಗೆ । ಅವುಗಳ ಚಿತ್ತವಿಟ್ಟು ಆಲಿಸಿರಿ ॥ 114

ಧನ್ಯ ಸಾಯಿ ಕತೆಗಳ ಸುಶ್ರಾವ್ಯ । ಧನ್ಯ ಅವುಗಳ ಶ್ರವಣ ಪ್ರಭಾವ ।
ಮನದಿಂದ ಪ್ರಕಟವಾಗುವುದು ನಿಜ ಸ್ವಭಾವ । ಸಾಯಿ ಪದದಿ ಸದ್ಭಾವ ಬೆಳೆಯುವದು ॥115

ಇನ್ನು ಮೊದಲು ಚಾವಡಿಯ ವರ್ಣನ । ಮಾಡುವೆನು ಸಮಾರಂಭದ ದಿಗ್ದರ್ಶನ ।
ಬಾಬಾ ಮಾಡುತ್ತಿದ್ದರು ದಿನ ಬಿಟ್ಟು ದಿನ ಶಯನ । ಚಾವಡಿಯಲಿ ನಿಯಮದಿಂದ ॥ 116

ಒಂದು ರಾತ್ರಿ ಮಶೀದಿಯಲಿ । ಎರಡನೆಯದನು ಚಾವಡಿಯಲ್ಲಿ ।
ಬಾಬಾರಕ್ರಮ ಈ ರೀತಿಯಲಿ । ಸಮಾಧಿಯವರೆಗೂ ನಡೆದಿತ್ತು ॥ 117

ಮುಂದೆ ಸನ ಹತ್ತೊಂಬತ್ತು ನೂರ ಒಂಭತ್ತು । ಡಿಸೆಂಬರ ತಿಂಗಳು ತಾರೀಖು ಹತ್ತು ।
ಅಂದಿನಿಂದ ಚಾವಡಿಯಲ್ಲಿ ಸುರುವಾಯಿತು । ಬಾಬಾರ ಅರ್ಚನ ಭಜನ ಮತ್ತು ಪೂಜನ ॥118

ಆ ಚಾವಡಿಯ ಸಮಾರಂಭವನು । ಯಥಾಮತಿ ಹೇಳಲಾರಂಭಿಸುವೆನು ।
ಸಾಯಿಯೇ ಇತ್ತು ಉತ್ಸಾಹವನು । ಕೊನೆಮುಟ್ಟಿಸುವನು ವಿಶ್ವಂಭರ ॥ 119

ಚಾವಡಿಗೆ ಹೋಗುವ ರಾತ್ರಿಯಂದು । ಭಜನ ಮಂಡಲಿ ಮಶೀದಿಗೆ ಬಂದು ।
ಭಜನೆ ಗಂಟೆಗಳೆರಡು । ಮಂಟಪದಲಿ ನಡೆಯುತಿತ್ತು ॥ 120

ಹಿಂದೆ ರಥ ಶೋಭಾಯಮಾನ । ಬಲಗಡೆಗೆ ತುಲಸಿವೃಂದಾವನ ।
ಎದುರಿಗೆ ಬಾಬಾ ಸ್ಥಾನಾಪನ್ನ । ಮಧ್ಯೆ ಭಜನೆ ಮಾಡುವ ಭಕ್ತರು ॥ 121

ಹರಿಭಜನೆಯಲಿ ಆಸಕ್ತಿ ಇದ್ದವರ । ಅಂಥ ಭಕ್ತನರ ನಾರಿಯರ ।
ಜೊತೆಗೂಡಿಕೊಂಡು ಸಭಾಮಂಡಪದಲಿ ಸತ್ವರ । ಭಜನತತ್ಪರರಾಗಿ ನಿಲ್ಲುವುದು ॥ 122

ಕೆಲವರು ತೆಗೆದುಕೊಂಡು ಟಾಳ । ಕೆಲವರು ಚಿಪಳಿಯಿಂದ ಕರತಾಳ ।
ಕೆಲವರು ಮೃದಂಗ ಖಂಜರಿಗಳ । ಬಾರಿಸುತ ಭಜನ ಆರಂಭಿಸುವರು ॥ 123

ಸಾಯಿ ಸಮರ್ಥರು ಚುಂಬಕ ಮಣಿಯಂತಿದ್ದು । ಜಡಲೋಹದಂತಿರುವ ಭಕ್ತರನ್ನು ಎಳೆದು ।
ಗೊತ್ತಿಲ್ಲದಂತೆ ತಮ್ಮ ಚರಣಕೆ ತಂದು । ತೊಡಗಿಸುವರಲ್ಲಿ ನಿಜಸತ್ತೆಯ ಆಕರ್ಷಣೆಯಿಂದ ॥ 124

ಅಂಗಳದಿ ದೀವಟಿಗೆ ಹಚ್ಚುವರು ಕೆಲವರು । ಅಲ್ಲಿಯೇ ಪಲ್ಲಕ್ಕಿ ಶೃಂಗರಿಸುವರು ।
ವೇತ್ರ ಪಾಣಿಗಳು ಜಯಘೋಷ ಮಾಡುವರು । ಸ್ವಾರದಲಿ ಸಜ್ಜಾಗಿ ನಿಂತು ॥ 125

ದಾರಿಯ ಮೇಲೆ ಮಖರ ತೋರಣಗಳು । ಅಂಬರದಿ ಹಾರಾಡುವವು ನಿಶಾನಿಗಳು ।
ನೂತನ ವಸ್ತ್ರ ಆಭರಣಗಳು । ಧರಿಸಿ ಬಾಲಕರು ಶೋಭಿಸುವರು ॥ 126

ಮಶೀದಿಯ ಸುತ್ತ ಮುತ್ತಲು । ಉರಿಸುವರು ಬಹಳ ದೀಪದ ಸಾಲು ।
ಶಾಮಕರ್ಣಕುದುರೆ ದ್ವಾರದೊಳು । ಪೂರ್ಣಶೃಂಗರಿಸಿದ್ದು ನಿಂತಿರುವುದು ॥ 127

ತಾತ್ಯಾಪಾಟೀಲ ಬರುವರು ಅಷ್ಟರಲಿ । ಜನರ ಕರೆದು ಕೊಂಡು ಜೊತೆಯಲಿ ।
ಕುಳಿತು ಕೊಳ್ಳುವರು ಬಾಬಾರ ಹತ್ತಿರದಲಿ । ಬಾಬಾರೊಡನೆ ಹೊರಡಲು ಸಿದ್ದರಾಗಿ ॥ 128

ಬಾಬಾ ಸಿದ್ಧರಾಗಿದ್ದರೂ । ಬರುವವರೆಗೆ ತಾತ್ಯಾ ಪಾಟೀಲರು ।
ಕುಳಿತಲ್ಲಿಯೇ ಕುಳಿತುಕೊಂಡರವರು । ತಾತ್ಯಾರ ದಾರಿಯ ಕಾಯುತ ॥ 129

ಕಂಕುಳಲಿಕ್ಕೈ ಇರಿಸಿ । ತಾತ್ಯಾ ಪಾಟೀಲ ಬಾಬಾರನೆಬ್ಬಿಸಿ ।
ಆಗಲೇ ಬಾಬಾ ಅವರನುಸರಿಸಿ । ಅಲ್ಲಿಂದ ಚಾವಡಿಗೆ ಹೊರಡುವರು ॥ 130

ತಾತ್ಯಾಬಾಬಾರ ಕರೆವರು ಮಾಮಾ ಎಂದು । ಅವರವರ ಪ್ರೀತಿ ಈ ರೀತಿ ಪರಸ್ಪರರದು ।
ಹೀಗೆ ಆಪ್ತಧರ್ಮ ಅವರಿಬ್ಬರದು । ಉಪಮೆಯಿಲ್ಲದಂಥದು ॥ 131

ನಿತ್ಯದ ಕಫನಿಯ ಹಾಕಿಕೊಂಡು । ಕಾಷ್ಟವನು ಬಗಲಲಿರಿಸಿಕೊಂಡು ।
ತಂಬಾಕು ಚಿಲುಮೆಗಳ ತೆಗೆದುಕೊಂಡು । ಹೆಗಲ ಮೇಲೆ ಬಟ್ಟೆ ಹಾಕಿಕೊಂಡು ॥ 132

ಹೀಗೆ ಸಿದ್ಧರಾದಾಗ ಸಾಯಿಯವರು । ತಾತ್ಯಾ ಮೈಮೇಲೆ ಹೊದಿಸುವರು ।
ಜರದಂಚಿನ ಶೆಲ್ಲೆಯ ಸುಂದರ । ತಲೆಯ ಮೇಲದ ಸರಿ ಮಾಡಿ ॥ 133

ಬಳಿಕ ಬಾಬಾ ಹಿಂದಿನ ಗೋಡೆಯ ಬಳಿಗೆ । ಬಿದ್ದ ಉರುವಲದ ಹೊರಗೆ ।
ಬಲಗಾಲ ಬೆರಳ ತುದಿಗೆ । ಆಡಿಸುವರಲ್ಲಿ ಕ್ಷಣವೊಂದು ॥ 134

ಕೂಡಲೇ ಅಲ್ಲಿ ಬೆಳಗುತ್ತಿರುವ ಜ್ಯೋತಿಯನ್ನು । ಬೀಸಿ ತಮ್ಮ ಬಲಗೈಯನ್ನು ।
ಸಾಯಿ ಮೊದಲು ನಂದಿಸಿ ಅದನು । ಬಳಿಕ ಚಾವಡಿಗೆ ಹೊರಡುವರು ॥ 135

ಸಾಯಿ ಹೊರಟು ನಿಂತಿರಲು । ನುಡಿಯ ತೊಡುಗುವವು ಮಂಗಲ ವಾದ್ಯಗಳು ।
ಚಂದ್ರಜ್ಯೋತಿ ದೀವಟಿಗೆಗಳು । ಎಲ್ಲೆಡೆಗೆ ಬೆಳಕು ಬೀರುವವು ॥ 136

ಕೆಲವರು ವರ್ತುಲ ಅಥವಾಧನುಷ್ಯಾಕೃತಿಯುಳ್ಳ । ತುತ್ತೂರಿ ಕಹಳೆ ಮೊದಲಾದ ವಾದ್ಯಗಳ ।
ಇನ್ನಿತರರು ತಾಸೆ ಬಾಜಂತ್ರಿಗಳ । ಬಾರಿಸುವರು ಸುಸ್ವರವಾಗಿ ॥ 137

ಮೃದಂಗ ವೀಣೆಗಳಝುಣತ್ಕಾರದಲಿ । ಸಾಯಿನಾಥರ ಹೆಸರು ಗರ್ಜಿಸುತಲಿ ।
ಸಾಲುಸಾಲಾಗಿ ಭಜನೆ ಮಾಡುತಲಿ । ಪ್ರೇಮದಿಂದೆಲ್ಲರೂ ಹೊರಡುವರು ॥ 138

ದಿಂಡಿ ಪತಾಕೆಗಳ ಹಾರಿಸುತ । ಗರುಡಧ್ವಜಗಳ ಮೆರೆಸುತ್ತ ।
ಕುಣಿಯುತ್ತ ಜಿಗಿಯುತ್ತ ಭಜನೆ ಹಾಡುತ್ತ । ಎಲ್ಲರೂ ಹೊರಡುವರಾ ಕಾಲದಲಿ ॥ 139

ಅತಿ ಆನಂದವೆಲ್ಲ ಜನಕೆ । ಹೊರಡುವರು ಹಿಡಿದು ದಿಂಡಿಪತಾಕೆ ।
ತುತ್ತೂರಿತಾಸೆಗಳ ಝುಣಝುಣಿಕೆ । ಜನರ ಜಯಕಾರ ಕುದುರೆಯ ಕುಣಿತ ॥ 140

ಹೀಗೆ ಮಂಗಲ್ಯವಾದ್ಯಗಳ ಗಜರಿನಲ್ಲಿ । ಮಶೀದಿಯೊಳಗಿಂದ ಹೊರಬರುತಲಿ ।
ವೇತ್ರಧಾರಿಗಳು ಬಿರುದು ಹೇಳುವರು । ಬಾಬಾ ಇನ್ನೂ ಮೆಟ್ಟಲ ಮೇಲೆ ಇರುವಾಗ ॥ 141

ಟಾಳ, ಝಾಂಝು ಮೃದಂಗ ಬಾರಿಸುತ । ವೀಣೆ ಚಿಪಳಿಗಳ ನುಡಿಸುತ ।
ಭಕ್ತ ಜನರು ಭಜನೆ ಮಾಡುತ । ಸಂತೋಷದಿಂದ ಆ ಸ್ಥಾನದಲಿ ॥ 142

ಧ್ವಜ ಪತಾಕೆಗಳ ಹಿಡಿದು ಕೈಯಲ್ಲಿ । ಭಕ್ತರು ನಡೆವರು ಆನಂದದಲಿ ।
ಇಕ್ಕೆಲದಲಿಬ್ಬರು ಚವರಿಬೀಸುತಲಿ । ಜೊತೆಯಲ್ಲೇ ನಡೆವರು ॥ 143

ಶೆಲ್ಲೆ ಧೋತರ ಒಂಟ ಪದರು । ಮಾರ್ಗದಲಿ ನಡೆಮುಡಿಗೆ ಹಾಸುವರು ।
ಕೈ ಹಿಡಿದು ಬಾಬಾರ ನಡೆಸುವರು । ಬೀಸಣಿಗೆ ಬೀಸುತ್ತಿರುವರವರಿಗೆ ॥ 144

ತಾತ್ಯಾ ವಾಮಹಸ್ತವ ಹಿಡಿದು । ಮ್ಹಾಳಸಾಪತಿ ದಕ್ಷಿಣದ ಕೈ ಹಿಡಿದು ।
ಬಾಪೂ ಸಾಹೇಬ ಶಿರದ ಮೇಲೆ ಛತ್ರ ಹಿಡಿದು । ಬಾಬಾರ ಚಾವಡಿಗೆ ಕರೆದೊಯ್ವರು ॥ 145

ಮುಂದೆ ನಡೆಯುವುದು ಕುದುರೆ ತಾಮ್ರವರ್ಣದ್ದು । ಅದಕೆ ಹೆಸರು ಶಾಮಕರ್ಣವೆಂದು
ಕಾಲಿಗೆ ಗೆಜ್ಜೆಗಳ ಕಟ್ಟಿದ್ದು । ಸರ್ವಾಭರಣ ಮಂಡಿತವಾಗಿಯದು ॥ 146

ವೇತ್ರ, ಪ್ರಾಣಿಗಳು ಮುಂದೆ ನಡೆಯುತ್ತ । ಸಾಯಿ ನಾಮವ ಗರ್ಜಿಸುತ ।
ಛತ್ರಧಾರಿಗಳು ಛತ್ರ, ಹಿಡಿಯುತ । ಚವರಿ ಬೀಸುವರು ಚವರಿಕಾರರು ॥ 147

ತಾಸೈವಾಜಂತ್ರಿಗಳು ನುಡಿಯುತ । ಭಕ್ತರು ಜಯಜಯಕಾರ ಮಾಡುಕ ।
ಭಕ್ತ ವೃಂದ ಹೀಗೆ ನಡೆಯುತ । ಭಾಲದಾರರು ಪ್ರೀತಿಯಲಿ ಗರ್ಜಿಸುವರು ॥ 148

ಹರಿನಾಮದ್ದೊಂದೆ ಗಜರ । ಟಾಳ, ಝಾಂಜ, ಮೃದಂಗ, ಸುಸ್ವರ ।
ಜೊತೆಯಲಿ ತಾಲದಲಿ ಗುಂಪು ಭಕ್ತರ । ನಾಮ ಗರ್ಜಿಸುತ ನಡೆಯುವದು ॥ 150

ಟಾಳ ಝೂಂಜ ಡೋಲಗಳ । ವಾದ್ಯ ನುಡಿವವು ಅತಿ ಪ್ರಬಲ ।
ಸಾಯಿ ನಾಮದ ಗಜರ ತುಂಬೆಲ್ಲ । ಪ್ರೇಮದ ಭಜನೆ ಬಲು ಮೋಜಿನದು ॥ 151

ನರನಾರಿಯರು ನಡೆವರು ಜೊತೆಯಲಿ । ಆನಂದ ನಿರ್ಭರರಾಗಿ ಭಜನದಲಿ ।
ಸಾಯಿ ನಾಮದ ಗಜರಿನಲಿ । ಮುಗಿಲು ಮುಟ್ಟುವಂತೆಲ್ಲ ॥ 152

ಗಗನದೊಡಲು ಬಿರಿಯುವಂತೆ ಮೊಳಗುವವು ವಾದ್ಯಗಳು । ಪ್ರೇಕ್ಷಕ ಸಮದಾಯ ಪ್ರಸನ್ನ ಚಿತ್ತದೊಳು ।
ಚಾವಡಿಯ ಮೆರವಣಿಗೆ ಹೀಗೆ ನಡೆಯಲು । ಅನುಪಮ ಶೋಭೆ ಇರುವುದು ॥153

ಅರುಣ ಸಂಧ್ಯಾರಾಗವು ನಭದೊಳು । ತಪ್ತಕಾಂಚನ ಪ್ರಭೆಯಂತಿರಲು ।
ಶ್ರೀ ಮುಖದ ಶೋಭೆಹಾಗಿರಲು । ಚಾವಡಿಯ ಎದುರಿಗೆ ನಿಂತಾಗ ॥ 154

ಆ ಸಮಯದ ಆ ಮುಖಶೋಭೆ । ಹರಡಿದಂತಿರಲು ಬಾಲಾರುಣಪ್ರಭೆ ।
ಕೇವಲ ಚೈತನ್ಯದ್ದೇ ತಿರುಳದೆಂಬೆ । ಯಾರೀಲಾಭಕ್ಕೆರವಾದಾರು ॥ 155

ಧನ್ಯ ಆ ಸಮಯದ ದರ್ಶನ । ಮುಖಪ್ರಭೆ ಆರಕ್ತಣವರ್ಣ।
ಉತ್ತರಾಭಿಮುಖರಾಗಿ ಏಕಾಗ್ರಮನ । ಯಾರನ್ನೋ ಸ್ವಾಗತಿಸುತಿರುವಂತೆ ॥ 156

ತಾಸೆ ಬಾಜಂತ್ರಿಗಳ ಗಜರ । ಮಹಾರಾಜರು ಆನಂದ ನಿರ್ಭರ ।
ಮೇಲೆ ಕೆಳಗೆ ಆಡಿಸುವರು ದಕ್ಷಿಣಕರ । ಮೇಲಿಂದ ಮೇಲೆ ಆ ಕಾಲಕ್ಕೆ ॥ 157

ಪುಷ್ಪಗಳ ಬೆಳ್ಳಿಯ ತಟ್ಟೆಯಲಿ । ಭಕ್ತ ಶ್ರೇಷ್ಠ ದೀಕ್ಷಿತರು ಕೈಯಲ್ಲಿ ।
ತೆಗೆದುಕೊಂಡು ಸರ್ವಾಂಗದ ಮೇಲೆ । ಹೂಮಳೆಗರೆವರು ಮೇಲಿಂದ ಮೇಲೆ ॥ 158

ಸಾಯಿಯವರ ಮಸ್ತಕದ ಮೇಲೆ ಗುಲಾಲ । ಮಿಶ್ರಿತವಾದ ಗುಲಾಬಿ ಪುಷ್ಪಗಳ ।
ಕಾಕಾಸಾಹೇಬರು ಹಾರಿಸುತ್ತೆಲ್ಲ । ಪ್ರೇಮಭಕ್ತಿಗಳಿಂದ ಕೂಡಿ ॥ 159

ಯಾವಾಗ ಆ ಪುಷ್ಪಗಳನೀಂಥ । ಹಾರಿಸುವರು ಕಾಕಾಗುಲಾಲಯುಕ್ತ ।
ತಾಸೆ ವಾಜಂತ್ರಿಗಳ ಮೊರೆತ । ಒಮ್ಮೆಲೆ ಹೆಚ್ಚಾಗುವುದು ॥ 160

ಬಾಬಾರ ಭಕ್ತರಾದ ಗ್ರಾಮದ ಜನರು । ಪ್ರೀತಿಯುಕ್ತರಾಗಿ ದರ್ಶನಕೆ ಬರುವರು ।
ಅರುಣರಾಗದ ಮುಖದಿಂದವರು । ಅಭಿನವ ರೂಪದಲಿ ಕಾಣುವರು ॥ 161

ನೋಡಿ ಆ ತೇಜವಿಲಾದ । ಪ್ರೇಕ್ಷಕರ ನೇತ್ರಗಳು ಹೊಂದಿ ವಿಕಾಸ ।
ಪ್ರೇಮಯುಕ್ತಮನಕಾಗಿ ಉಲ್ಲಾಸ । ಭಾವಸಾಯಾಸ ನಿವೃತ್ತಿ ॥ 162

ಆಗಿನ ಆದಿವ್ಯ ತೇಜ ಅದ್ಭುತ । ಬಾಲ ಭಾಸ್ಕರನಂತೆ ಶೋಭಿಸುತ ।
ಎದುರು ಮಂಗಲ್ಯವಾದ್ಯಗಳು ನುಡಿಯುತ । ಬಹಳ ಹೊತ್ತು ಹಾಗೆ ನಿಲ್ಲುವರು ॥ 163

ದಕ್ಷಿಣ ಕರವನು ಸತತ । ಮೇಲೆ ಕೆಳಗೆ ಅಲುಗಾಡಿಸುತ ।
ಒಂದೇ ಸ್ಥಳದಲ್ಲಿ ನಿಲ್ಲುತ । ಅರ್ಧಪ್ರಹರದವರೆಗೆ ॥ 164

ಪೀತವರ್ಣಕೇತಕಿಯ ಒಳಭಾಗದಂತೆ । ಕಿಂಚಿತ್ ಕೆಂಪು ವರ್ಣಮುಖ ಪ್ರಭೆ ಹೊಳೆಯುತೆ ।
ಅದನು ನಾಲಿಗೆಯಿಂದ ಬಣ್ಣಿಸಲಾದೀತೆ । ಕಂಗಳಿಂದಲೇ ಸವಿಯಬೇಕಾ ಶೋಭೆಯನ್ನು ॥ 165

ಅಷ್ಟರಲ್ಲಿ ಮ್ಹಾಳಸಾಪತಿಯ ಮೈಯೊಳು । ಸಂಚಾರರಾಗಿ ಕುಣಿಯತೊಡಗಲು ।
ಆಗ ಬಾಬಾರ ಏಕಾಗ್ರ ಸ್ಥಿತಿ ನೋಡಲು । ಮನಕ್ಕೆ ಆಶ್ಚರ್ಯವೆನಿಸುವುದು ॥ 166

ದಕ್ಷಿಣಾಂಗದಲಿ ಭಗತನಿದ್ದು । ಬಾಬಾರ ಕೆರಗನು ಕೈಯಲ್ಲಿ ಹಿಡಿದು ।
ಎಡಗಡೆಗೆ ತಾತ್ಯಾ ಕೋತೆ ನಡೆಯುತಿದ್ದು । ಕೈಯಲ್ಲಿ ಕಂದೀಲು ಹಿಡಿದುಕೊಂಡು ॥ 167

ಎಂಥಾ ಮೋಜಿನ ಉತ್ಸವವದು । ಭಕ್ತಿ ಪ್ರೇಮಗಳ ಗೌರವವದು ।
ಅದರ ಆನಂದವ ನೋಡಲೆಂದು । ಸಿರಿವಂತ ಸಾಹುಕಾರರು ಬರುವರಲ್ಲಿ ॥ 168

ಮುಖಚಂದ್ರವು ನಿಜ ತೇಜದಿ ಹೊಳೆಯುತ । ಉಜ್ವಲ ಮತ್ತು ಆರಕ್ತ ।
ಅವರ್ಣನೀಯುವಾಗಿ ಶೋಭಿಸುತ । ಸ್ವಾನಂದ ತುಂಬಿದೆ ಜನನಯನದಲ್ಲಿ ॥ 169

ಮೆಲ್ಲ ಮೆಲ್ಲಗೆ ಮುನ್ನಡೆವರು । ಜನರು ಇಭ್ಭಾಗರಾಗಿ ನಿಲ್ಲುವರು ।
ಅನಿವಾರ ಭಕ್ತಿ ಪ್ರೇಮದಿಂದ ಕೂಡಿ ಅವರು । ಸ್ವಾನಂದಘನದಲಿ ತೇಲುವರು ॥ 170

ಇನ್ನು ಮುಂದೆ ಉತ್ಸವ ಇಂಥದ್ದು । ಯಾರಿಗೆ ಕಣ್ಣಿಂದ ಕಾಣಲು ಸಿಗದು ।
ಹೋದವಾದಿನಗಳು ಆ ಸಮಯ ಕಳೆದು । ನೆನಪಿನಿಂದಲೇ ಮನವನ ತಣಿಸಬೇಕು ॥171

ಅಪಾರ ವಾಜಂತ್ರಿಗಳ ನುಡಿಸುತ । ಮಾರ್ಗದಲಿ ಜಯಜಯಕಾರ ಮಾಡುತ್ತ ।
ಚಾವಡಿಗೆ ಕರೆದೊಯ್ದು ಆಸನದಿ ಕೂಡ್ರಿಸುತ । ದಿವ್ಯೋಪಚಾರಗಳನ್ನರ್ಪಿಸುವರು ॥ 172

ಮೇಲೆ ಶುಭ್ರಛತ್ತು ಕಟ್ಟಿದ । ಹಂಡೆ ಝೂಂಬರಗಳಿಂದ ಅಲಂಕಸಿದ ।
ಪ್ರಕಾಶ ಪರಿವರ್ತಿಸುವ ಕನ್ನಡಿಗಳಿಂದ । ದೈದೀಪ್ಯಮಾನವ ದೃಶ್ಯವದು ॥ 173

ಭಕ್ತ ಜನರೆಲ್ಲ ಕೂಡಿಕೊಂಡು । ಚಾವಡಿಯ ಒಳಗೆ ಬಂದು ।
ತಾತ್ಯಾಬಾ ಇಡುವರು ಆಸನವ ತಂದು । ಅಲ್ಲಿ ಕೈ ಹಿಡಿದು ಬಾಬಾರ ಕೂಡ್ರಿಸುವರು ॥ 174

ವರಾಸನವ ಸಿದ್ಧಮಾಡಿ ಹೀಗೆ । ಲೋಡೋಂದನಿಡುತ ಆನಿಸಲು ಬೆನ್ನಿಗೆ ।
ಬಾಬಾ ಸ್ಥಾನಾಪನ್ನರಾದಾಗ ಹೀಗೆ । ಮೈಯಲ್ಲಿ ಅಂಗಿಯ ತೊಡುವರು ॥ 175

ಮೈಮೇಲೆ ದಿವ್ಯಾಂಬರವ ಹೊದಿಸಿ । ಹರ್ಷನಿರ್ಭರರಾಗಿ ಪೂಜಿಸಿ ।
ಹಾರ ತುರಾಯಿಗಳಿಂದಲಂಕರಿಸಿ । ಧ್ವನಿಏರಿಸಿ ಆರತಿ ಹೇಳುವರು ಬೆಳಗಿ ॥ 176

ಸುಗಂಧ ಚಂದನ ಚರ್ಚಿಸಿ । ಕರೋದ್ವರ್ತನ ಮಾಡಿಸಿ । ಬಹುಮೂಲ್ಯ ವಸ್ತ್ರಗಳಿಂದಲಂಕರಿಸಿ ।
ಶಿರದಿ ಮುಗುಟವಿಟ್ಟು ನೋಡುವರು ನಲಿದು ॥ 177

ಒಮ್ಮೊಮ್ಮೆ ಸುವರ್ಣಮುಕುಟ ಅಂದ । ಮತ್ತೊಮ್ಮೆ ಶಿರಪೇಚ ಮಂದಿಲಗಳಿಂದ ।
ಕಲಗೀ ತುರಾಯಿ ಮೇಲೆ ಮಿರುಗುವದ । ಕಂಠದ ವಜ್ರ ಮಾಣಿಕ್ಯದ ಸರ ॥ 178

ಶುಭ್ರ ಮುಕ್ತಾ ಫಲದ ಮಾಲೆಗಳು । ಹಾಕುವರು ಸಾಯಿಯ ಕೊರಳೊಳು ।
ದೀಪ ಪ್ರಕಾಶದಲಿ ಅವು ಮಿನುಗುತಿರಲು । ತೇಜವೇ ಬೇರೆ ಆ ಉಡುಪಿನದು ॥ 179

ಸುಗಂಧ ಕಸ್ತೂರಿಗಳಿಂದ ಕೂಡಿದ । ಕಪ್ಪು ಊರ್ಧ್ವ ರೇಖೆಯ ಕೊರೆವರರಿಂದ ।
ಹಚ್ಚುವುರು ವೈಷ್ಣವರ ರೀತಿಯಿಂದ । ಕೃಷ್ಣ ತಿಲಕವ ಹಣೆಯಲಿ ॥ 180

ಜರಿ ಕೆಲಸ ಮಾಡಿದ ಮಖಮಲ್ಲಿನ ಅಂಗಿ । ಎರಡೂ ಹೆಗಲ ಮೇಲೆ ಹಾಕಿ ।
ಅದು ಜರಿದರೆ ಮತ್ತೇ ಸರಿಸುವರು ಸರಿಯಾಗಿ । ಹಿಂಬದಿಯಿಂದ ಮೆಲ್ಲಗೆ ಮೇಲಿಂದ ಮೇಲೆ ॥ 181

ಮುಗುಟ ಅಥವಾ ಮಂದಿಲವ ತಲೆಗೆ । ಹಾಕುವರು ಒಂದೊಂದು ಸಲ ಬದಲಾಗಿ ।
ಮೇಲೆ ಎತ್ತಿ ಹಿಡಿವರು ಮೆಲ್ಲಗೆ । ಅವರಿಗೆ ತಿಳಿಯದಂತೆ ಅದನು ॥ 182

ಮುಕುಟ ಅಥವಾ ಮಂದಿಲವೇ ಇರಲಿ । ಸ್ಪರ್ಶವಾದರೆ ಬಿಸಾಡಿ ಬಿಡುವರೋ ಎಲ್ಲಿ ।
ಈ ಚಿಂತೆ ತುಂಬಿದ್ದರೂ ಮನದಲಿ । ಪ್ರೇಮ ಮತ್ತು ಕುತೂಹಲಗಳಿಂದ ಕೂಡಿ ॥ 183

ಸಾಯಿ ಸರ್ವಾಂತರ್ಯಾಮಿಯಾಗಿರುವಾಗ್ಯೆ । ಭಕ್ತರ ಮುಚ್ಚುಮರೆ ತಿಳಿಯದೇ ಅವನಿಗೆ ।
ಆದರೆ ತಿಳಿದೂ ಇರುವ ಮೌನವಾಗೇ । ಭಕ್ತರ ಕೌತುಕವನ್ನು ನೋಡಿ ॥ 184

ಇರುವನವ ಬ್ರಹ್ಮಾನುಭವದಲ್ಲಿ ವಿರಾಜಮಾನ । ಅವನಿಗೆ ಜರತಾರಿಯ ಅಂಗವಸ್ತ್ರ ।
ನಿಜ ಶಾಂತಿಯಿಂದಾಗಿರುವ ಶೋಭಾಯಮಾನ । ಅವನಿಗಲಂಕರಣ ಮುಕುಟದ್ದು ॥185

ಆದರೂ ನಾನಾ ಪ್ರಕಾರದ ಸುರುಚಿರ । ಬಾಬಾರಿಗೆ ತೊಡಿಸುವರು ಅಲಂಕಾರ ।
ಹಣೆಯಲಿ ತಿಲಕ ಮನೋಹರ । ಕೇಶರ ಮಿಶ್ರಿತವಾದದ್ದು ಹಚ್ಚುವರು ॥ 186

ಮುತ್ತು ಮಾಣಿಕ್ಯಗಳ ಸರಗಳ । ಹಾಕಿ ಅಲಂಕರಿಸುವರವನ ಕೊರಳ ।
ಹಣೆಯಲ್ಲಿಡುವರೊಬ್ಬರು ತಿಲಕ । ಭಕ್ತರ ಲೀಲೆ ನಡೆಯುವುದು ॥ 187

ಶೃಂಗಾರವೆಲ್ಲ ಮುಗಿದಾಗ । ಮುಸ್ತಕದಲಿ ಮುಕುಟ ವಿರಾಜಿಸಿದಾಗ ।
ಮುತ್ತಿನಸರ ಕಂಠವ ಭೂಷಿಸಿದಾಗ । ಶೋಭೆ ಅತ್ಯದ್ಭುತ ಕಾಣುವುದು ॥ 188

ನಾನಾ ಸಾಹೇಬ ನಿಮೋಣಕರ । ಬಾಬಾರ ಮೇಲೆ ಹಿಡಿವರು ಶುಭ್ರ ಛತ್ರ ।
ಕೋಲಿನೊಂದಿಗದು ವರ್ತುಲಾಕಾರ । ತಿರುಗುವುದು ಝೂಲರಿಯಿಂದ ಕೂಡಿ ॥ 189

ಬಾಪೂ ಸಾಹೇಬರು ಅತಿ ಪ್ರೀತಿಯಿಂದ । ತೊಳೆಯುವರು ಗುರುಪಾದರವಿಂದ ।
ಅರ್ಘ್ಯ ಪಾದ್ಯಾದಿಗಳನರ್ಪಿಸುವರು ಭಾವದಿಂದ । ಯಥೋಚಿತ ಪೂಜೆಯ ಮಾಡುವರು ॥ 190

ಎದುರಿಗೆ ಬೆಳ್ಳಿ ತಾಬಾಣವಿರಿಸಿ । ಅದರಲ್ಲಿ ಬಾಬಾರ ಚರಣಗಳನಿರಿಸಿ ।
ಅತ್ಯಾದರದಿಂದವುಗಳ ಪ್ರಕ್ಷಾಳಿಸಿ । ಬಳಿಕ ಕರೋದ್ವರ್ತನವ ॥ 191

ಕೇಶರ ಕಲಿಸಿದ ಬಟ್ಟಲು ಹಿಡಿದು । ಬಳಿಕಕೈಗಳಿಗೆ ಉಟಿಯ ಹಚ್ಚುವುದು ।
ಕೈಯಲ್ಲಿ ತಾಂಬೂಲವನೀಯುವುದು । ಆಗ ಸಾಯಿ ಪ್ರಸನ್ನ ದೃಷ್ಟಿಯ ಬೀರುವರು ॥ 192

ಬಾಬಾ ಗಾದಿಯ ಮೇಲೆ ಕುಳಿತುಕೊಳ್ಳುವರು । ಆಗ ತಾತ್ಯಾಬಾ ಮೊದಲಾದವರು ನಿಂತೇ ಇರುವರು ।
ಕೈ ಹಿಡಿದು ಬಾಬಾರ ಕೂಡ್ರಿಸುವರು । ಆದರದಿ ಅವರ ಚರಣಕ್ಕೆ ನಮಿಸುವರು ॥ 193

ನಿರ್ಮಲ ಚಾವಡಿ ನೆಲಶುದ್ಧ । ಗಟ್ಟಿಸಿದ್ದು ಮತ್ತು ಸ್ಫಟಿಕ ಬದ್ಧ ।
ಒಂದೆಡೆ ಸೇರುವರು ಆ ಬಾಲವೃದ್ಧ । ಶ್ರೀ ಪದದಲಿ ಪ್ರೇಮಬದ್ಧರು ॥ 194

ನೆಂಬಿಕೊಂಡು ತಕ್ಕೆಗೆ । ಗಾದಿಯ ಮೇಲೆ ವಿರಾಜಮಾನರಾದಾಗ್ಯೆ ।
ಗಾಳಿ ಬೀಸುವರು ಎಡಬಲದೊಳಗೆ । ನಿಂತು ಚವರಿ ಚಾಮರಗಳಿಂದ ॥ 195

ಮಾಧವರಾಯರು ತಂಬಾಕು ತಿಕ್ಕಿ । ಕೂಡಲೇ ಚಿಲಿಮು ತಯಾರಿಸಿ ।
ತಾತ್ಯಾಬಾರ ಕೈಯಲ್ಲಿರಿಸಿ । ತಾತ್ಯಾಬಾ ಸೇದುವರು ಮೊದಲು ॥ 196

ತಂಬಾಕಿನ ಜ್ವಾಲೆ ಹೊರಡಲು । ತಾತ್ಯಾಬಾ ಕೊಡುವರು ಬಾಬಾರ ಕೈಯೊಳು ।
ಬಾಬಾರ ಮೊದಲ ಝುರಕಿ ಮುಗಿಯಲು । ಅದನು ಭಗತರಿಗೆ ಕೊಡುವರು ॥ 197

ಬಳಿಕ ಆ ಚಿಲಿಮಿ ಮುಗಿಯುವವರೆಗೆ । ಸುತ್ತಲೂ ಅತ್ತಕಡೆಯಿಂದಿತ್ತ ಕಡೆಗೆ ।
ಭಗತ ಶ್ಯಾಮ ತಾತ್ಯಾರ ಜೊತೆಗೆ । ಮೇಲಿಂದ ಮೇಲೆ ತಿರುಗಾಡುತ್ತಿದ್ದ ॥ 198

ಆ ನಿರ್ಜೀವ ವಸ್ತುವೆ ಧನ್ಯವಿಹುದು । ಶ್ರೇಷ್ಠತೆ ಎಷ್ಟು ಅದರ ಭಾಗ್ಯದ್ದು ।
ನಮ್ಮಂಥ ಸಜೀವರಿಗೂ ಅದನು ಸರಿಗಟ್ಟಲುಬಾರದು । ಅದರ ಸೇವೆಯೇ ನಿಜವಾದ ಸೇವೆ॥ 199

ಈ ತಪಶ್ಚರ್ಯ ಬಲು ಕಠಿಣ । ಕಾಲಲ್ಲಿ ತುಳಿದು ಬಾಲ್ಯತನ ।
ಮುಂದೆ ಸಹಿಸಿಶೀತೋಷ್ಣಗಳನ । ಅಗ್ನಿಯಲಿ ಬೆಂದು ಬರಬೇಕು ॥ 200

ಭಾಗ್ಯದಿಂದ ಬಾಬಾರ ಕರಸ್ಪರ್ಶನ । ಮತ್ತೆ ಧುನಿಯಲಿ ಭರ್ಜನ ।
ಬಳಿಕ ಗೈರಿಕಾ ಉಟಿ ಚರ್ಚನ । ಮುಖಚುಂಬನವಾಗ ದೊರೆಯುವುದು ॥ 201

ಇರಲಿನ್ನು ಕರ್ಪೂರ ಕೇಶರ ಚಂದನ । ಮಾಡುವರು ಉಭಯ ಹಸ್ತಗಳಿಗೆ ವಿಲೇಪನ ।
ಕೊರಳಿಗೆ ಹಾಕುವುದು ಹೂಮಾಲೆಗಳನ । ಹೂವಿನಗುಚ್ಛಅವಘ್ರಾಣವ ಮಾಡಿಸುವರು ॥ 202

ಯಾವಾಗಲೂ ಸುಹಾಸ್ಯವದನ । ಅತಿ ಸಪ್ರೇಮ ಸದಯ ಅವಲೋಕನ ।
ಅವನಿಗೇನು ಶೃಂಗಾರದ ಅಭಿಮಾನ । ಭಕ್ತರಿಗಾಗಿ ಮಾಡಿಸಿಕೊಳ್ಳುವನೆಲ್ಲ ಇದನು ॥ 203

ಮೈಯಲ್ಲಿ ಭಕ್ತಿಯ ತೊಡುಗೆ ತೊಟ್ಟಿಹನು । ಶಾಂತಿಯಾಭರಣದಲಿ ಸಿಂಗರಿಕೊಂಡಿಹನು ।
ಈ ಲೌಕಿಕಮಣಿಮಾಲೆಗಳಿಂದ ಅವಗೇನು । ಅಲಂಕಾರವನವರು ಮಾಡಿದರೆ ॥ 204

ಇರಲವನು ವೈರಾಗ್ಯದ ಪುತ್ಥಳಿ । ಅವನಿಗೇತಕೆ ಪಚ್ಚೆಯ ಸರಮಾಲೆ ।
ಆದರೂ ಅರ್ಪಿಸಿದಾಗ ಕೊರಳಲಿ । ಹಾಕಿಕೊಂಡು ಭಕ್ತೇಚ್ಛೆ ಪೂರೈಸುವ ॥ 205

ಸ್ವರ್ಣಪಚ್ಚೆಗಳ ದಿವ್ಯಸರ । ಕೊರಳಲಿ ಹೊಳೆವ ಮುಕ್ತಾಹಾರ ।
ಎಂಟೆಂಟು ಹದಿನಾರು ಏಳೆಗಳ ಅದರ । ಅಭಿನವ ಪುಷ್ಕರಗಳು ಮಧ್ಯೆ ॥ 206

ಜಾಜಿ ಮಲ್ಲಿಗೆ ತುಲಸೀ ಮಾಲೆಗಳು । ಪಾದದವರೆಗೆ ಓಲಾಡುತಿರಲು ।
ಮುತ್ತಿನ ಕಂಠಿಸರ ಕೊರಳ ಅಲಂಕರಿಸಿರಲು । ಅವುಗಳ ಹೊಳಪು ಅಪೂರ್ವ ॥ 207

ಪಚ್ಚೆಯ ಸುವರ್ಣಹಾರ ಜೊತೆಯಲೇ ।ಬಂಗಾರದ ಪದಕ ಹೃದಯದ ಮೇಲೆ ।
ಕಪ್ಪು ತಿಲಕ ಸುಂದರ ಹಣೆಯ ಮೇಲೆ । ಅತಿಯಾಗಿ ಶೋಭೆ ತರುವುದು ॥ 208

ಫಕೀರನೆಂದವಗೆನುವದು ಹೇಗೆ । ಕಾಣುವ ವೈಷ್ಣವ ಶ್ರೇಷ್ಠರ ಹಾಗೆ ।
ಛತ್ರ ಚಾಮರಗಳು ತೂಗುತಿರುವಾಗ್ಯೆ । ಶಿರದ ಮೇಲೆ ಜರದ ಶೆಲ್ಲೆ ಶೋಭಿಸುವದು ॥ 209

ಹೆಚ್ಚಾಗಿ ಜೋಗ ಅವರು ಪ್ರೇಮ ನಿರ್ಭರತೆಯಲ್ಲಿ । ಮಂಗಳ ವಾದ್ಯಗಳ ಧ್ವನಿಯಲ್ಲಿ ।
ಪಂಚಾರತಿಯ ಹಿಡಿದು ಕೈಯಲ್ಲಿ । ಬಾಬಾರಿಗೆ ಬೆಳಗುವರು ಆದರಿಂದ ॥ 210

ಪಂಚೋಪಚಾರ ಪೂಜಾಸಮೇತ । ತೆಗೆದುಕೊಂಡು ಬೆಳಗುವ ಪಂಚಾರತ ।
ನೀರಾಂಜನದಲಿ ಕರ್ಪೂರ ಬತ್ತಿಯುತ । ಬಾಬಾರಿಗೆ ಬೆಳಗುವರವರು ॥ 211

ಬಳಿಕ ಆರತಿಯ ಮುಗಿಸುತ । ಭಕ್ತರೆಲ್ಲ ಒಬ್ಬೊಬ್ಬರೆನುತ ।
ಬಾಬಾರಿಗೆ ಸಾಷ್ಟಾಂಗವೆರಗುತ । ತಮ್ಮ ತಮ್ಮ ಮನೆಗಳಿಗೆ ಹೋಗುವರು ॥ 212

ಚಿಲಿಮೆ, ಅತ್ತರ, ಗುಲಾಬಜಲಗಳನು । ಕೊಟ್ಟು ಪಡೆದುಕೊಂಡು ಬಾಬಾರ ಆಜ್ಞೆಯನು ।
ನೋಡಿ ತಾತ್ಯಾಬಾ ಮನೆಗೆ ಹೊರಟುನಿಂತುದನು । ಬಾಬಾ ಎನಬೇಕು 'ನನ್ನ ಸಂಭಾಳಿಸು' ॥ 213

'ಹೋಗುತ್ತಿರೆ ಹೋಗು ಆದರೆ ರಾತ್ರಿಯಲ್ಲಿ । ನನ್ನನು ವಿಚಾರಿಸಿಕೋ ಮಧ್ಯ ಮಧ್ಯದಲಿ' ।
ಬಳಿಕ ತಾತ್ಯಾಜಿ ನುಡಿದು 'ಆಗಲಿ' । ಚಾವಡಿಯ ಬಿಟ್ಟು ತೆರಳುವರು ಮನೆಗೆ ॥ 214
ಹೀಗೆ ಜನರೆಲ್ಲ ಹೋದ ಮೇಲೆ । ಬಾಬಾ ಗಂಟು ಬಿಚ್ಚುವರು ತಮ್ಮ ಕೈಯಿಂದಲೇ ।
ಧೋತರದ ಗಳಿಗೆಗಳ ಹರಡುತಲೇ । ತಮ್ಮ ಹಾಸಿಗೆಯ ತಾವೇ ಹಾಸಿಕೊಳ್ಳುವರು ॥ 215

ಶುಭ್ರ ಚಾದರಗಳ ಅರವತ್ತು ಅರುವತ್ತೈದು । ಗಳಿಗೆಗಳನು ಮುಂದಿಟ್ಟುಕೊಂಡು ।
ತಾವು ಅವುಗಳ ಸಾಲಾಗಿ ಜೋಡಿಸಿಕೊಂಡು । ಅದರ ಮೇಲೆ ಉರುಳುವುದು ಆಗ ಬಾಬಾ ॥ 216

ಚಾವಡಿಯ ಸಂಗತಿಯು ಇಂತು । ಇಲ್ಲಿಯವರೆಗೆ ಪೂರ್ಣ ಮುಗಿಯಿತು ।
ಇನ್ನು ಬೇರೆ ಕಥೆ ಉಳಿಯಿತು । ಅದನು ಮುಂದಿನಧ್ಯಾಯದಲಿ ಹೇಳುವೆ ॥ 217

ಆದರೂ ಶ್ರೋತೃಗಳಿಂದ ಕೇಳುವೆ ಕ್ಷಮೆ । ಅಗಾಧ ಈ ಸಾಯಿಯ ಮಹಿಮೆ ।
ಸಂಕ್ಷಿಪ್ತ ಹೇಳುಬೇಕೆಂದರೂ ತಪ್ಪುವುದು ಸೀಮೆ । ಮತ್ತೆ ಹೆಚ್ಚಾಗುತ್ತಲೇ ಹೋಗುವುದು ॥ 218

ಇನ್ನು ಸಾಯಿಯ ಹಂಡೆಯ ಕಥೆ । ಮತ್ತೆ ಉಳಿದುಹೋಗಿರುವ ವಾರ್ತೆ ।
ಮುಂದಿನಾಧ್ಯಾದಲಿ ಹೇಳುವೆ ಮತ್ತೆ । ಸಾದರ ಚಿತ್ತರಾಗಿರಬೇಕು ತಾವು ॥ 219

ಅಖಂಡಗುರು ಸ್ಮರಣದ ಸ್ವಾರ್ಥ । ಅದೇ ಹೇಮಾಂಡನ ನಿಜ ಪರಮಾರ್ಥ ।
ಗುರುಚರಣಾಭಿವಂದನೆಯಿಂದ ಕೃತಾರ್ಥ । ನಾಲ್ಕೂ ಪುರುಷಾರ್ಥಗಳ ಪಡೆವೆ ಅದರಲ್ಲಿ ॥ 220

ಭಕ್ತ ಹೇಮಾಂಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೇ । ಚಾವಡೀ ವರ್ಣನಂ ನಾಮ ।
ಸಪ್ತತ್ರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿ ಆನಾಥಾರ್ಪಣಮಸ್ತು ॥

॥ ಶುಭಂ ಭವತು ॥

527-1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತೆಂಟು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಸಕಲ ಜಗದಾನಂದಕರಾ । ಭಕ್ತೇಷ್ಟ ಸಂಪಾದನ ತತ್ಪರಾ ।
ಚರಣಾಶ್ರಿತ ತ್ರಿತಾಪಹರಾ । ನಮನ ಗುರುವರಾ ತವ ಚರಣಗಳಿಗೆ ॥ 1

ಪ್ರಣಿತಪಾಲನೆ ಪರಮ ಉದಾರನೆ । ಶರಣಾಶ್ರಿತ ಭಕ್ತೊದ್ಧಾರನೇ ।
ಲೋಕೋಪಕಾರ ಕಾರ್ಯವನೇ । ಮಾಡಲು ನೀ ಅವತಾರ ತಾಳಿರುವೆ ॥ 2

ಜಯಜಯಹೇ ದ್ವೈತದಲನಾ । ಜಯಜಯ ಭಕ್ತಮನ ಮೋಹನಾ ।
ಜಯಜಯ ಭವಾಪಹರಣಾ । ಜಯ ಕರುಣಾಘನ ಗುರುರಾಯ ॥ 3

ಯಾವ ಭಾಗ್ಯ ಫಲಿಸಿತೆಂದು । ಕಂಡೇನೀ ಚರಣಗಳನಿಂದು ।
ಸಮಾಗಮ ಸುಖವನು ಅನುಭವಿಸಿದ್ದು । ಮತ್ತಾ ಸಮಯ ಬಾರದು ತಿರುಗಿ ॥ 4

ಆ ಸಾಯೀಯೇ ಆತ್ಮರಾಮ । ಅವನೇ ಪೂರ್ಣಾನಂದ ಧಾಮ ।
ಸ್ವಯಂ ಅವಾಪ್ತ ಸಕಲಕಾಮ । ನಿಷ್ಕಾಮ ಮಾಡುವನು ಭಕ್ತರನು ॥ 5

ಕೇವಲ ಬ್ರಹ್ಮದ್ದೇ ಅಚ್ಚಿದು । ಶುದ್ಧ ಸ್ವರೂಪರಸ ಸುರಿದು ।
ಸುಂದರ ಮೂರ್ತಿಯ ಆಕಾರಕ್ಕೆ ತಂದದ್ದು ಅದೇ ಸಂತಾವತಂಸ ಸಾಯಿ ॥ 6

ಸರ್ವಧರ್ಮವಿಧಾರಕನಿವ । ಬ್ರಹ್ಮಾಕ್ಷಾತ ತೇಜನಾಗಿರುವ ।
ಜೊತೆಯಲೇ ಮೃತ್ಯುವನ್ನೂ ಭಕ್ಷಿಸುವವ । ಸಂಕ್ಷಿಪ್ತ ಲಕ್ಷಣವಿದು ಅವನದು ॥ 7

ಜನ್ಮ ಮರಣಾದಿ ಸಂಬಂಧ । ಹರಿದೊಗೆಯುವನೀತ ಎಲ್ಲ ಬಂಧ ।
ಅವನನು ನಾ ಜಡ ಅಂಧ । ಸಾಷ್ಟಾಂಗ ನಮನದಿ ವಂದಿಸುವೆ ॥ 8

ಗತಾಧ್ಯಾಯದಲಿ ಅತಿ ಆದರದಿ । ವರ್ಣಿಸಿದೆ ಸಾಯಿನಾಥರ ಚಾವಡಿ ।
ಇನ್ನು ಈ ಅಧ್ಯಾಯದಲಿ ಹಂಡೀ । ಕೇಳಿರಿ ಅಖಂಡ ಸುಖದಾಯಕವಿದು ॥ 9

ಚಿಕ್ಕ ಮಗು ತಿಂದೇನೆಂಬುವುದು । ಆದರೆ ಏನು ತಿನ್ನಬೇಕೆಂದು ತಿಳಿಯದು ।
ಹಾಲು ಕುಡಿಸುವುದು ಅಥವಾ ಉಣಿಸುವದು । ಇದರ ಚಿಂತ ಮಾಡುವುದು ಮಾತೆಯ ಕೆಲಸ ॥ 10

ನನ್ನ ಸಾಯಿ ಮಾತೆಯು ಹಾಗೇ । ಲೇಖಣಿಯನಿತ್ತು ನನ್ನ ಕೈಗೆ ।
ಈ ಪ್ರಬಂಧ ಬರೆಯಿಸಿಕೊಳುವಳು ಸಹಜವಾಗೇ । ನಿಜ ಭಕ್ತನ ಮೇಲಿನ ಪ್ರೀತಿಯಿಂದ ॥ 11

ಯುಗಯುಗಗಳ ಸಿದ್ಧ ಸಾಧನ । ಮಾನವ ಧರ್ಮ ಶಾಸ್ತ್ರಜ್ಞರ ವಚನ ।
ಕೃತದಲಿ ತಪ ತ್ರೇತದಲಿ ಜ್ಞಾನ । ದ್ವಾಪರದಲಿ ಯಜ್ಞ ದಾನವು ಕಲಿಯುಗದಲಿ ॥ 12

ಸದಾಕಾಲದಲೂ ದಾನಧರ್ಮ। ಕ್ಷುಧಾಶಾಂತಿಯೇ ಅದರ ಮರ್ಮ ।
ಅನ್ನದಾನದ ನಿತ್ಯನೇಮ । ಕರ್ಮದಲಿ ಆದ್ಯಕರ್ಮವಿದು ॥ 13

ಹೊಡೆದಾಗ ಮಧ್ಯಾಹ್ನದ ಹನ್ನೆರಡು । ಅನ್ನ ಆಗಿರದಿದ್ದರೆ ಜೀವ ಚಡಪಡಿಸುವುದು ।
ತಮ್ಮದು ಹೇಗೋ ಹಾಗೇ ಇತರರದು । ಇದನು ತಿಳಿದವನೇ ಶ್ರೇಷ್ಠನು ॥ 14

ಆಚಾರ ಧರ್ಮಗಳಲಿ ಪ್ರಧಾನ । ಮುಖ್ಯವಾದುದು ಅನ್ನದಾನ ।
ನೋಡಲಾಗಿ ಅದಕೂ ಹೆಚ್ಚಿನ । ದಾನ ಒಂದೂ ಇರದು ಶ್ರೇಷ್ಠವಾದುದು ॥ 15

ಪರಬ್ರಹ್ಮ ರೂಪವೇ ಅನ್ನ । ಅದರಿಂದ ಭೂತಗಳಾಗುವವು ನಿಷ್ಪನ್ನ ।
ಅನ್ನವೇ ಜೀವಿಸಲಿರುವ ಸಾಧನ । ಅನ್ನವಿರದಿರೆ ಆಗುವದು ಅವಸಾನ ಲೀನ ॥ 16

ಸಮಾಯಾಸಮಯದಲಿ ಬಂದ ಅತಿಥಿಯನು । ತೃಪ್ತಗೊಳಿಸಬೇಕು ಅನ್ನದಾನದಿಂದ ಗೃಹಸ್ಥನು ।
ಅನ್ನವನೀಯದೆ ಕಳಿಸುವವನು । ದುರ್ಗತಿಯನೇ ಆಮಂತ್ರಿಸಿದಂತೆ ॥ 17

ವಿಚಾರ ಮಾಡಬೇಕಾಗುವುದು ವಸ್ತ್ರಪಾತ್ರಾದಿ ದಾನಗಳಿಗೆ । ಆದಾವುದೂ ಬೇಕಿಲ್ಲ ಅನ್ನದಾನ ಮಾಡುವವಗೆ
। ಯಾರೇ ಯಾವಾಗ್ಯೆ ಬಂದರೂ ಬಾಗಿಲಿಗೆ । ಅವನ ಅನಾದರ ಒಳ್ಳೆಯದಲ್ಲ ॥ 18

ದುಡ್ಡು ದ್ರವ್ಯಾದಿ ಇತರ ದಾನ । ಅನ್ನದಾನದ ಹೊರತು ಎಲ್ಲ ಅಪೂರ್ಣ ।
ಚಂದ್ರನಿಲ್ಲದೆ ಇದ್ದರೇನು ಉಡುಗಣ । ಪದಕವಿಲ್ಲದ ಕೊರಳು ಸರದಂತೆ ॥ 19

ಅನ್ನದಾನದ ಮಹಿತಿ ಹೀಗೆ । ಶೃತಿಯು ಪ್ರಮಾಣವಿರುವುದು ಇದಕ್ಕೆ ।
ಬಾಬಾ ಅನ್ನ ಸಂತರ್ಪಿಸುವುದು ಅದಕಾಗೆ । ಲೌಕಿಕ ರೀತಿಯನು ಅನುಸರಿಸಿ ॥ 20

ಷಡ್ರಸಾನ್ನಗಳಲಿ ವರಾನ್ನ । ಪುಣ್ಯದಲಿ ಪುಣ್ಯ ಅನ್ನದಾನ ।
ಶಿಖರ ಶೋಭಿಸದು ಕಳಸವಿಲ್ಲದನ । ಕಮಲವಿಹೀನ ಕೆರೆಯಂತೆ ॥ 21

ಭಜನೆಯಿಲ್ಲದ ಭಕ್ತಿಯಂತೆ । ಕುಂಕುಮವಿಲ್ಲದ ಮುತ್ತೈದೆಯಂತೆ ।
ಸುಸ್ವರವಿಲ್ಲದ ಹಾಡಿನಂತೆ । ಉಪ್ಪಿಲ್ಲದ ಮಜ್ಜಿಗೆ ರುಚಿ ಇರದು ॥ 22

ಅದರಲ್ಲೂ ರೋಗಿ ಬಲಹೀನ । ಅಂಥ ಕುಂಟ ಕುರುಡರು ದೀನ ।
ಹಾಕಬೇಕಂಥವರಿಗೆ ಮೊದಲು ಅನ್ನ । ಆಪ್ತೇಷ್ಟರೆಲ್ಲರಿಗೂ ತದನಂತರ ॥ 23

ಇನ್ನು ಬಾಬಾರ ಹಂಡಿಯ ಕಲ್ಪನೆ ಬಗ್ಗೆ । ಸಾಧಾರಣಃ ಶ್ರೋತೃಗಳ ಮನಸಿಗೆ ।
ಜಿಜ್ಞಾಸೆ ಇರುವವರಿಗಾಗೇ । ಈ ಯತ್ನ ಮಾಡುತ್ತಿರುವೆನು ॥ 24

ಮಶೀದಿಯ ಅಂಗಳದಲ್ಲಿ । ದೊಡ್ಡದೊಂದು ಹೂಡಿ ಒಲಿ ।
ಅದರ ಮೇಲಿಡುತಿದ್ದರು ದೊಡ್ಡ ಪಾತೇಲಿ । ಯಾವಾಗಲೂ ಅದರಲಿ ನೀರು ಹಾಕಿ ॥ 25

ಒಮ್ಮೆ 'ಮಿಠ್ಠೇ ಚಾವಲ' ಮಾಡುವರು । ಒಮ್ಮೊಮ್ಮೆ ಮಾಂಸ ಮಿಶ್ರಿತ ಪುಲಾವ ಮಾಡುವರು ।
ಇನ್ನೊಮ್ಮೆ ಕಣಕದ ಮುಟ್ಟಿಗೆ ಮಾಡುವರು । ಬೇಳೆಯ ತೊವ್ವೆಯನೂ ಮಾಡುತಿದ್ದರು॥26

ಗೋದಿಹಿಟ್ಟಿನ ದಪ್ಪ ಚಿಕ್ಕ ರೊಟ್ಟಿಯ ಮಾಡಿ । ಇಲ್ಲವೇ ಅದೇ ಹಿಟ್ಟನ್ನು ಎಲೆಯ ಮೇಲೆ ಒತ್ತಿ ।
ಕುದಿವ ತೊವ್ವೆಯಲಿ ಬಿಡುತಿದ್ದರು । ಮುಟ್ಟಿಗೆಗಳ ಜೊತೆಗೆ ಮೆಲ್ಲಗೇ ॥ 27

ಅಸಿಕಲ್ಲಿನ ಮೇಲೆ ಅರಿದು ಮಸಾಲೆಯನು । ತಾವೇ ಮಾಡುತ್ತಿದ್ದರು ಪಾಕ ನಿಷ್ಪತ್ತಿಯನು ।
ಹೆಸರು ವಡೆಗಳ ಮಾಡಿ ಇವನ್ನೂ । ಮೆಲ್ಲಗೆ ಪಾತೇಲಿಯಲಿ ಬಿಡುವರು ॥ 28

ಇಟ್ಟುಕೊಂಡು ಸ್ವರ್ಗಾದಿಗಳ ಆಶೆ । ಯಜ್ಞಕೆಂದು ಮಾಡಿಸಿ ಪಶುಹಿಂಸೆ ।
ಬ್ರಾಹ್ಮಣರೂ ಸೇವಿಸುವರು ಪುರೋಡಾಶೆ । ಅದನು ಸಶಾಸ್ತ್ರ ಹಿಂಸೆ ಎಂಬರು ॥29

ಅದರಂತೆಯೇ ಮುಲ್ಲಾನನ್ನು ಕರೆಸಿ । ಶಾಸ್ತ್ರೋಕ್ತ ಮಂತ್ರೋಚ್ಚಾರಣೆ ಮಾಡಿಸಿ ।
ಬಾಬಾಕೂಡ ಅಜಾಹನನ ಮಾಡಿಸಿ । ವಿಧಿ ವಿಧಾನ ಪುರಃಸರವಾಗಿ ॥ 30

ಒಮ್ಮೊಮ್ಮೆ ಸಣ್ಣದು ಒಮ್ಮೊಮ್ಮೆ ದೊಡ್ಡದು । ಈ ಹಂಡಿಗಳದೂ ಪ್ರಕಾರ ಎರಡು ।
ಅದರಲ್ಲಿ ಅನ್ನ ಬೆಂದದ್ದು । ಅನ್ನಾರ್ಥಿಗಳಿಗೆ ಉಣಿಸುತಿದ್ದರು ॥ 31

ಐವತ್ತು ಜನರಿಗಾಗುವಷ್ಟು ಅನ್ನ । ಬೇಯುವಂಥ ಪಾತ್ರೆಯದು ಸಣ್ಣ ।
ನೂರು ಜನರುಂಡು ಉಳಿಯುವದು ಅನ್ನ । ಆ ಪಾತ್ರೆಗೆ ದೊಡ್ಡದೆನುತಿದ್ದರು ॥ 32

ಅದಕೆ ತಾವೇ ಹೋಗಿ ಅಂಗಡಿಕಾರರಲ್ಲಿ । ಸ್ವತಃ ಎಷ್ಟೆಂದು ಲೆಕ್ಕ ಮಾಡುತಲಿ ।
ಉದ್ದರಿಯ ಮಾತೇ ಇಲ್ಲಲ್ಲಿ । ಕೈಯಲ್ಲಿ ಕೂಡಲೇ ಹಣ ಕೊಡುವರು ॥ 33

ಉಪ್ಪು ಮೆಣಸಿನಕಾಯಿ ಮೆಣಸು ಜೀರಿಗೆ । ಕೊಬ್ಬರಿ ಕಾಯಿ ಪಲ್ಲೆಗಳೇಲವಾಗೇ ।
ಎಲ್ಲವನೂ ತರುವರು ಬಾಬಾ ತಾವಾಗೇ । ಪೂರ್ಣ ವಿಚಾರದಿಂದ ಗೊತ್ತು ಮಾಡಿ ॥ 34

ತಾವೇ ಕುಳಿತುಕೊಂಡು ಮಶೀದಿಯಲ್ಲಿ । ಬೀಸುವ ಕಲ್ಲು ಹಾಕಿ ತಮ್ಮ ಕೈಯಲ್ಲಿ ।
ಜೋಳ ಗೋದಿ ಬೇಳೆಗಳಿರಲಿ । ಅಲ್ಲಿ ಬಾಬಾ ಬೀಸುವರು ॥ 35

ಹಂಡಿಯ ಪ್ರೀತ್ಯರ್ಥಇದ್ದ ಕೆಲಸವನು । ಬಾಬಾ ತಾವೇ ವಹಿಸಿ ಪರಿಶ್ರಮವನು ।
ಮಾಡುತಿದ್ದರು ಮಸಾಲಿ ಅರೆಯುವದನ್ನೂ । ಪರಮ ಮನೋಭಾವದಿಂದ ॥ 36

ದೊಡ್ಡದು ಅಥವಾ ಸಣ್ಣಗೆ ಮಾಡಲು ಉರಿಯನ್ನು । ಒಲೆಯಲ್ಲಿನ ಊರುವಲನ್ನು ।
ತಾವೇ ಮೇಲೆ ಕೆಳಗೆ ಮಾಡಿ ಅದನು । ಸರಿ ಮಾಡುತಿದ್ದರು ಮೇಲಿಂದ ಮೇಲೆ ॥ 37

ಬೇಳೆಯನು ನೆನೆಯಲು ಹಾಕಿಟ್ಟು । ಕಲ್ಲ ಮೇಲೆ ಅರಿಯುವರು ತಾವೇ ಕುಳಿತು ।
ಇಂಗು ಜೀರಿಗೆ ಕೊತ್ತಂಬರಿ ಸೊಪ್ಪು । ಹಾಕಿ ಕಮ್ಮಗೆ ಪದಾರ್ಥಗಳ ಮಾಡುತಿದ್ದರು ॥ 38

ಗೋದಿಯ ಹಿಟ್ಟನು ಕಲಿಸಿ । ದೊಡ್ಡ ದೊಡ್ಡ ಉಂಡೆಯಾಗಿ ವಿಭಾಗಿಸಿ ।
ಬಳಿಕ ಅವುಗಳನೆಲ್ಲ ಲಟ್ಟಿಸಿ । ಅಗಲವಾಗಿ ಚಪಾತಿ ಮಾಡುತಿದ್ದರು ॥ 39

ಜೋಳದ ಹಿಟ್ಟಿನಿಂದ । ನೀರು ಹಾಕಿ ಪ್ರಮಾಣದಿಂದ ।
ಆದರಲ್ಲಿ ಮಜ್ಜಿಗೆ ಹಾಕಿ ಆದರಿಂದ । ಅಂಬಲಿಯ ಬೇಯಿಸುತಿದ್ದರು ಹಂಡಿಯಲ್ಲಿ ॥ 40

ಆ ಅಂಬಲಿಯನು ಎಲ್ಲರಿಗೆ । ಪ್ರೀತಿಯಿಂದ ಬಡಿಸುವರು ತಮ್ಮ ಕೈಯಿಂದಾಗೆ ।
ಅದನೂ ಉಳಿದ ಅನ್ನದ ಜೊತೆಗೆ । ಅತಿ ಆದರದಿಂದಾ ಕಾಲಕೆ ॥ 41

ಆ ಹಂಡಿ ಬೆಂದಿದೆ ಪೂರ್ಣ ಎಂದು । ಸರಿಯಾಗಿ ಪರೀಕ್ಷಿಸಿ ನೋಡಿಕೊಂಡು ।
ಒಲೆಯ ಮೇಲಿಂದ ಇಳಿಸಿಕೊಂಡು । ಮಶೀದಿಯಲೊಯ್ದು ಇಡುವರು ॥ 42

ವಿಧಿ ಪೂರ್ವಕ ಮೌಲ್ವಿಯಿಂದ । ಫಾತ್ಯಾ ತೋರಿಸಿ ಆ ಅನ್ನಕ್ಕೆ ।
ಮ್ಹಾಳಸಾಪತಿಗೆ ಕಳಿಸುವರು ಪ್ರಸಾದ । ಮೊಟ್ಟ ಮೊದಲು ತಾತ್ಯಾಗೆ ॥ 43ಟ

ಬಳಿಕ ಬಾಬಾ ಉಳಿದ ಅನ್ನವನ್ನು । ಬಡಿಸುತಿದ್ದರು ಬಾಬಾ ತಮ್ಮ ಕೈಯಿಂದ ಅದನು ।
ತೃಪ್ತ ಪಡಿಸಿ ಬಡಬಗ್ಗರನು । ಸುಸಮಾಧಾನ ಹೊಂದುವರು ॥ 44

ಆ ಅನ್ನಾರ್ಥಿಗಳು ತೃಪ್ತಿಯಾಗುವವರೆಗೆ । ಉಲ್ಲಸಿತರಾಗಿ ಅನ್ನಉಣುತಿರುವಾಗ್ಯೆ।
ಇನ್ನಷ್ಟು ತೆಗೆದುಕೊಳ್ಳಲು ಬಾಬಾರ ಆಗ್ರಹ ಅವರಿಗೆ । ಬಲು ಅಕ್ಕರೆಯಿಂದ ನಡೆಯುತಿತ್ತು ॥45

ಎಷ್ಟೊಂದು ಹೇಳಬೇಕು ಅವರ ಪುಣ್ಯ । ಯಾರಿಗೆ ಲಭಿಸೀತು ಆ ತೃಪ್ತಿ ಭೋಜನ ।
ಬಾಬಾರೇ ಸ್ವತಃ ಬಡಿಸುವರು ಅನ್ನ । ಎಂಥ ಧನ್ಯ ಭಾಗ್ಯ ಅವರದು ॥ 46

ಇಲ್ಲಿ ಸಹಜ ಶಂಕೆ ಬರಬಹುದು । ಬಾಬಾ ಜನರಿಗೆ ಪ್ರಸಾದವೆಂದು ।
ಅನೇಕರಿಗೆ ಅನ್ನವನು ಮಾಂಸಯುತವಾದದ್ದು । ನಿಃಶಂಕ ಮನದಿಂದೇಕೆ ಹಂಚುತಿದ್ದರು ॥ 47

ಈ ಶಂಕೆಯನು ನಿವಾರಿಸಲು । ಬೇಕಾಗಿಲ್ಲ ಕಷ್ಟ ಬಲು ।
ಯಾರಿಗೆ ಮಾಂಸಾಶನ ನಿತ್ಯದಲೂ । ಇರುತಿತ್ತವರಿಗೆ ಇದನು ಬಡಿಸುತಿದ್ದರು ॥ 48

ಆ ಜನ್ಮದಲಿ ಇಲ್ಲದರ ಸಹವಾಸ । ಸ್ಪರ್ಶಿಸ ಗೊಡರು ಅಂಥವರಿಗೆ ಮಾಂಸ ।
ಎಂದಿಗೂ ಮಾಡರಿಂಥ ಸಾಹಸ । ಪ್ರಸಾದದ ಲಾಲಸೆ ತೋರಿ ಅವರಿಗೆ ॥ 49

ಗುರು ಸ್ವತಃ ಪ್ರಸಾದ ಕೊಡುತಿರಲು ಸೇವ್ಯಾಸೇವ್ಯವೆಂಬ ವಿಕಲ್ಪ ಬರಲು ।
ಶಿಷ್ಯನು ನಿಜಾತ್ಮಘಾತ ಹೊಂದಲು । ಅಧಃಪಾತಕ್ಕೆ ಹೋಗುವನು ॥ 50

ಈ ತತ್ವದ ಅರಿವು ಎಷ್ಟರ ಮಟ್ಟಿಗೆ । ಆಗಿರುವುದು ತಮ್ಮ ಭಕ್ತರಿಗೆ ।
ಎಂದು ಹಾಸ್ಯ ವಿನೋದದೊಳಗೆ । ಬಾಬಾ ಅದರ ಅನುಭವ ನೋಡುತಿದ್ದರು ॥ 51

ವಾರ್ತೆಯೊಂದು ಕೊಡುವುದು ಇದೇ ಅರ್ಥ । ನೆನಪಾಯಿತು ಬರೆಯುತ್ತ ।
ಶ್ರೋತೃಗಳು ಕೇಳುವುದು ಇತ್ತು ಚಿತ್ತ । ನಿಜ ಹಿತಾರ್ಥವಾಗಿ ಇದನು ॥ 52

ಒಮ್ಮೆ ಏಕಾದಶಿಯಂದು । ಬಾಬಾ ದಾದಾರಿಗೆ ಅಂದದ್ದು ।
ತರಿಸುವೆಯಾ ನನಗೆಂದು । ಕೋರ್ಹ್ಳೆಯಿಂದ ಮಾಂಸವನ್ನು ॥ 53

ಅದಕಾಗಿ ಸಾಯಿ ದುಡ್ಡು ತಗೆದರು । ದಾದಾರ ಕೈಯಲ್ಲಿ ಎಣಿಸಿ ಕೊಟ್ಟರು ।
ನೀನೇಹೋಗಬೇಕು ಎಂದು ಆಜ್ಞಾಪಿಸಿದರು । ನಿನ್ನಿಂದಲೇ ಈ ಕೆಲಸವಾಗಬೇಕು ॥ 54

ಹೆಸರವಗೆ ಗಣೇಶ ದಾಮೋದರ । ಉಪನಾಮ ಅವನದು ಕೇಳಕರ ।
ಜನ ಅವರನು ತಿಳಿದು ಹಿರಿಯರ । ದಾದಾ ಎಂದೇ ಕರೆಯುತಿದ್ದರು ॥ 55

ಹರಿ ವಿನಾಯಕ ಸಾಠೆಯವರ । ಶ್ವಸುರನಾಗಿದ್ದು ಸಾಯಿಯ ಪ್ರೀತಿ ಅನಿವಾರ ।
ಬ್ರಾಹ್ಮಣರು ಮತ್ತು ಬ್ರಹ್ಮಕರ್ಮಗಳಲ್ಲಿ ಆದರ । ಆಚಾರ ವಿಚಾರ ಸಂಪನ್ನರು ॥ 56

ಕಳೆಯುತಿದ್ದರೂ ಹಗಲಿರುಳುಗಳ ನಿಜಗುರು ಸೇವೆಯೊಳಗೆ । ತೃಪ್ತಿಯಾಗುತಿರಲಿಲ್ಲ ಮನಸಿಗೆ ।
ಈ ಆಜ್ಞೆಯಿಂದ ಆಶ್ಚರ್ಯವೇನೂ ಅವರಿಗೆ । ಅನಿಸಬೇಕೆಂದಿರಲಿಲ್ಲ ॥ 57

ಯಾರ ಗಾತ್ರಗಳು ಅವಿಕಲ । ಯಾರಿಗಿದೆ ಪೂರ್ವಾಭ್ಯಾಸದ ಬಲ ।
ಅವರ ಮನವಾಗದೆಂದು ಚಂಚಲ । ಬುದ್ಧಿಯು ಗುರುಪದದಲ್ಲಿ ದೃಢವಾಗಿದ್ದಾಗ ॥ 58

ಧನಧಾನ್ಯ ವಸ್ತ್ರಾರ್ಪಣ । ಇದೇ ಅಲ್ಲ ದಕ್ಷಿಣದಾನ ।
ಗುರುವಿನಾಜ್ಞೆಯ ಅನುಷ್ಠಾನ । ಗುರುವನು ಸಂತೋಷ ಪಡಿಸುವದೇ ದಕ್ಷಿಣೆ ॥ 59

ಕಾಯಾವಾಚಾಮನಗಳನು । ನಿವಾಳಿಸಿ ಚೆಲ್ಲುವನು ಎಲ್ಲವನು ।
ಕೊನೆಗೆ ಗುರುಕೃಪೆಯ ಪಡೆವನು । ಅವನ ಪ್ರಾಪ್ತಿ ನಿಜಶ್ರದ್ಧೆ ॥ 60

ಆ ಆಜ್ಞೆಯನು ಶಿರಸಾವಹಿಸಿ । ಹೊರಟರು ಕೂಡಲೇ ಬಟ್ಟೆ ಧರಿಸಿ ।
ಆ ಊರಿಗೆ ಹೋಗುವುದ ನಿಶ್ಚಯಿಸಿ । ಆಗ ಮತ್ತೆ ಹಿಂದೆ ಕರೆದರು ॥ 61

ಎಂದರು "ಇಷ್ಟು ತರುವುದಕೆ । ಮತ್ತಾರನ್ನಾದರೂ ಕಳಿಸಲೊಲ್ಲೆಯೇಕೆ ।
ಸುಮ್ಮನೆ ತೊಂದರೆ ಏಕೆ । ಹೋಗಿ ಬರುವ ಆಯಾಸದಿಂದ" ॥ 62

ಬಳಿಕ ತರಲು ಮಾಂಸವನ್ನು । ದಾದಾ ಕಳಿಸಿದರು ಪಾಂಡೂ ಎಂಬುವವುನನ್ನು ।
ಅಷ್ಟರಲ್ಲಿ ದಾದಾರಿಗೆ ಬಾಬಾ ಹೇಳಿದದೇನು । ಕೇಳಬೇಕು ನೀವೆಲ್ಲ ॥ 63

ಪಾಂಡೂ ಹೊರಡಲು ಸಿದ್ಧನಾದ । ದಾರಿಯನ್ನೂ ನಡೆಯತೊಡಗಿದ ।
ಎಂದರಾಗ ಹೋಗಲಿ ಬಿಡು ಇಂದು ಬೇಡ । ಅವನನು ಹಿಂದೆ ಕರೆದು ಬಿಡೆಂದು ॥ 64

ಮುಂದೆ ಕೆಲದಿನ ಕಳೆದು । ಹಂಡಿ ಬೇಯಿಸುವದೆಂದು ಕೊಂಡು ।
ಒಲೆಯ ಮೇಲೆ ಪಾತ್ರೆಯನಿಟ್ಟು । ಅದರಲಿ ಮಾಂಸವ ಹಾಕಿದರು ॥ 65

ಹಾಕಿದರಲ್ಲಿ ಅಕ್ಕಿ ತೊಳೆದು । ಪ್ರಮಾಣದಷ್ಟು ನೀರು ಸುರಿದು ।
ಅದರ ಕೆಳಗೆ ಉರುವಲ ಸರಿಸುತಿದ್ದು । ಒಲೆಯ ಊದುತ್ತ ಕುಳಿತರು ಬಾಬಾ ॥ 66

ಊರೇ ಇದ್ದಾಗ ಅವರ ಅಂಕಿತದಲ್ಲಿ । ಯಾರಾದರೂ ಈ ಕೆಲಸ ಮಾಡಬಹುದಿತ್ತು ಆನಂದದಿಂದ ।
ಆದರೆ ಯಾರಿಗೂ ಧೈರ್ಯ ಸಾಲಲಿಲ್ಲ । ಬಾಬಾರ ಆಜ್ಞೆ ಇರದ ಹೊರತು ॥ 67

ಅನ್ನವನು ಬೇಯಿಸಿ ತರುವುದಕೆ । ಆಜ್ಞೆಯಾದರೆ ಸಾಕು ಅದಕೆ ।
ಸಾಯಿ ಭಕ್ತರಿಗೆ ಪರಮ ಉತ್ಸಾಹ ಅದಕೆ । ಸಾಯಿಯೇ ಮನಸು ಮಾಡರು ॥ 68

ಮನಸು ಮಾಡರೆನ್ನುವದಾದರೂ ಹೇಗೆ । ಅಡಿಗೆ ಮಾಡುವದರಲ್ಲೇ ಅಭಿರುಚಿ ಇರುವವರಿಗೆ ।
ಏಕೆ ತೊಂದರೆ ಕೊಟ್ಟಾನು ಬೇರೆಯವರಿಗೆ । ಅನ್ನದಾನ ಮಾಡಲೆಬೇಕೆಂದು ಕೊಂಡಾಗ ॥ 69

ಸಾಕಾಗುವಷ್ಟು ತನ್ನ ಹೊಟ್ಟೆಗೆ । ಮಾಧುಕರಿ ಬೇಡುವರು ತಾವಾಗೇ ।
ಅದಕಾಗಿ ತಿರುಗುವರು ಮನೆಮನೆಗೆ । ಬೇಡುವರು ತುಂಡು ರೋಟ್ಟಿಯನ್ನು ॥ 70

ಅದೇ ಮಾಡಲು ಅನ್ನದಾನ । ತಾನೇ ಸಹಿಸಬೇಕು ಕಷ್ಟಗಳನ ।
ಎಂದರೇನೆ ಅವರಿಗೆ ಸಮಾಧಾನ । ಯಾರ ಮೇಲೂ ಅವಲಂಭಿಸುತಿರಲಿಲ್ಲ ॥ 71

ನೂರು ಜನರಿಗೆ ಸಾಲುವಷ್ಟು । ಅಕ್ಕಿ ಬೇಳೆ ಬೆಲ್ಲ ಹಿಟ್ಟು ।
ತರುತಿದ್ದರು ಕೈಯಲ್ಲಿ ದುಡ್ಡು ಕೊಟ್ಟು । ಬಾಬಾ ತಾವೇ ಸ್ವತಃ ಹೋಗಿ ॥ 72

ತಾವೇ ಕೈಯಲ್ಲಿ ಮೊರ ಹಿಡಿದುಕೊಂಡು । ಸಾಮಾನು ತರಲು ಅಂಗಡಿಗೆ ಹೋಗುತಿದ್ದು ।
ವ್ಯವಹಾರದಲಿ ಚೊಕ್ಕರಿರಬೇಕು ಎಷ್ಟೊಂದು । ಜನ ಇದರಿಂದ ತಿಳಿಯಬೇಕು ॥ 73

ವಸ್ತುಗಳ ಕೈಯಲ್ಲಿ ಹಿಡಿದು ನೋಡಿಕೊಂಡು । ದರದುಡ್ಡುಗಳ ಚಕಶಿಮಾಡಿಕೊಡುವದು ।
ಸಾಧ್ಯವಿರಲಿಲ್ಲವರ ಮೋಸಗೊಳಿಸುವುದು । ಅವರ ಅಹಂಕಾರ ತೊಲಗಿ ಹೋಗುತಿತ್ತು ॥ 74

ಹೀಗೆ ಅತಿ ಲೆಕ್ಕವಂತರಂತೆ ತೋರಿಸಿಕೊಳ್ಳುವರು । ಒಂದೂ ಕಾಸು ಅಲ್ಲಿ ಕಳಕೊಳ್ಳಲಾರದು ।
ಐದು ಬೇಡಿದರೆ ಹತ್ತು ಕೊಡುವರು । ಹಣವನು ತಡಮಾಡದೇ ॥ 75

ತಾವೇ ಕೆಲಸ ಮಾಡುವ ಬಯಕೆ ಬಹಳ । ಬೇರೆಯವರು ಮಾಡಿದ್ದು ಹಿಡಿಸುತಿರಲಿಲ್ಲ ।
ಯಾರು ಮಾಡಲೆಂದು ಬಯಸುತಿರಲಿಲ್ಲ । ಆದರೆ ಬೇರೆಯವರ ತೊಂದರೆಯೂ ಇರಲಿಲ್ಲ ॥ 76

ಇದೊಂದು ತತ್ವ ಬಾಬಾರದು । ಹಗಲಿರಳು ಅವರಲಿ ಜಾಗೃತವಿದ್ದು ।
ಕೇಳುತಿರಲಿಲ್ಲ ಸಹಾಯ ಯಾರದೂ । ಈ ಹಂಡಿಯ ಕೆಲಸ ನಡೆದಾಗ ॥ 77

ಹಂಡಿಯದೇ ಏನು ಧುನಿಯ ಆಕಡೆ । ಕಟ್ಟಿಗೆಯೊಟ್ಟುವ ಕೋಣೆಯ ಗೋಡೆ ।
ಬಾಬಾ ರಚಿಸಿದ್ದರು ಸ್ವಹಸ್ತದಿಂದೇ । ಮಾರು ನಾಲ್ಕಾಂಶರಷ್ಟನ್ನು ॥ 78

ಮಹಾದೂ ಕೆಸರು ಕಲಿಸುವದು । ಬಾಬಾ ಅದನ್ನು ಬಳಿಯುವದು ।
ತಮ್ಮ ಕೈಯಿಂದಲೇ ಇಟ್ಟಿಗೆಗಳನೇರಿಸುವದು । ಗೋಡೆ ಕಟ್ಟುತ್ತಿರುವಾಗ ॥ 79

ಮತ್ತೆ ಬಾಬಾ ಏನೇನು ಮಾಡುವರು । ಮಶೀದಿಯನ್ನು ತಾವೇ ಸಾರಿಸುವರು ।
ಕೈಯಿಂದಲೇ ಕಫನಿ ಲಂಗೋಟಿಗಳ ಹೊಲಿಯುವರು । ಯಾರ ದಾರಿಯನ್ನೂ ಕಾಯದೆ ॥ 80

ಹಂಡಿಯೊಳಗಿಂದ ಮೇಲಿನವರೆಗೆ । ಭಯಂಕರ ಉಗಿಯಾಡುತಿರುವಾಗ್ಗೆ ।
ಕಫನಿಯ ತೋಳುಗಳ ಸರಿಸಿ ಮೇಲೆ । ಕೈಹಾಕಿ ಅನ್ನವ ತಿರುವುತಿದ್ದರು ॥ 81

ತಪ್ಪಲೆಯಲಿ ಅನ್ನ ಕುದಿಯುವದ ನೋಡಿ । ಅದನು ಕೈಯ್ಯಾಡಬೇಕೆನ್ನುವ ಕಾಲದಿ ।
ಅಗಾಧ ಲೀಲೆಯ ತೋರುವರು ಮಾಡಿ । ಇಂಥ ಸಮಯದಲಿ ಬಾಬಾ ॥ 82

ಆ ರಕ್ತ ಮಾಂಸಗಳಿಂದಾದ ಕೈಯಲ್ಲಿ । ಆ ಅನ್ನ ಬೇಯುತ್ತಿರುವ ಕಾದ ತಪ್ಪೇಲೆಯಲ್ಲಿ ।
ಆದರೆ ಭಯದ ಚಿನ್ಹೆ ಇನಿತಿಲ್ಲ ಮುಖದಲ್ಲಿ । ಅಥವಾ ಸುಟ್ಟ ಗಾಯಗಳೊಂದಾದರೂ ॥ 83

ಭಕ್ತರನ್ನು ಬಳಲಿಸುವ । ತ್ರಿತಾಪಗಳ ಪರಿಹರಿಸುವ ।
ಜ್ವಾಲೆಗೂ ಅಂಥವನನು ನೋಯಿಸುವ । ಸಾಹಸವಾದೀತೇ ಅವನ ಮಹಿತಿ ತಿಳಿದಾಗ ॥ 84

ನೆನಸಿದ ಬೇಳೆಯನೂ ಹಾಕಿ ಹಾಸುಗಲ್ಲಿನ ಮೇಲೆ । ಆರಿಸುವರು ತಮ್ಮ ಕೈಯಿಂದಲೇ ।
ಗುಂಡುಕಲ್ಲಿನಿಂದರಿಯುವರು ಅದರ ಮೇಲೆ । ಅದರಿಂದ ಬೇಳೆಯ ವಡೆಗಳ ಮಾಡುವರು ॥ 85

ಅವುಗಳನ್ನು ಮೆಲ್ಲಗೆ ಹಂಡಿಯಲಿ ಹಾಕುವರು । ತಳ ಹತ್ತದಿರಲೆಂದು ಕೈಯಾಡಿಸುವರು ।
ಬೆಂದಾಗ ಹಂಡಿಯ ಕೆಳಗಿಳಿಸುವರು । ಪ್ರಸಾದವನು ಎಲ್ಲರಿಗೂ ಹಂಚುವರು ॥ 86

ಕೇಳಬಹುದು ಎಲ್ಲರಿಗೂ ಏಕೆಂದು । ಸಾಯಿಬಾಬಾರಂತೂ ಯವನರಿದ್ದು ।
ಅಧರ್ಮಾಚರಣೆಯನು ಇಂಥದು । ಹೇಗೆ ಮಾಡಿಸುತಿದ್ದರು ॥ 87

ಈ ಶಂಕೆಗೆ ಒಂದೇ ಉತ್ತರ । ಧರ್ಮಾಧರ್ಮಗಳ ವಿಚಾರ ।
ನಿಜದಲೂ ಇತ್ತು ಸಾಯಿಯ ಹತ್ತಿರ । ನಿರಂತರ ನಡೆಯುತಿತ್ತಲ್ಲಿ ॥ 88

ಯಾವ ಪದಾರ್ಥವು ಹಂಡಿಯಲಿ ಬೆಂದುದು । ಅದನೆಲ್ಲರೂ ಸೇವಿಸಬೇಕೆಂದು ।
ಇಂಥ ದುರಾಗ್ರಹವನು ಎಂದೂ । ಸಾಯಿ ಮಾಡುತಿರಲಿಲ್ಲ ॥ 89

ಆದರೆ ಆ ಪ್ರಸಾದದ ಪ್ರಾಪ್ತಿಗಾಗಿ । ಸದಿಚ್ಛೆಯಿಂದ ಪ್ರೇರಿತರಾಗಿ ।
ಬಯಸುವವರ ಇಚ್ಛೆಗನುಸಾರವಾಗಿ ಬೇಧವಿಲ್ಲದೆ ಹಂಚುತಿದ್ದರು ॥ 90

ಅಲ್ಲದೇ ಯಾರಿಗೆ ಗೊತ್ತವರ ಜಾತಿ । ಮಶೀದಿಯಲಿರುತಿದ್ದರೆಂದು ಯವನರೆಂದು ಖ್ಯಾತಿ ।
ಆದರೆ ಅವರ ಆಚರಣೆಯ ರೀತಿ । ನೋಡಿದಾಗ ಜಾತಿ ತಿಳಿಯದು ॥ 91

ಭಕ್ತರವನ ದೇವರೆಂದು ತಿಳಿವರು । ಅವನ ಪದರಜದಲಿ ಹೊರಳಾಡುವರು ।
ಅವನ ಜಾತಿಯನೇನು ಕೇಳುವರು । ಧಿಕ್ ಪರಮಾರ್ಥ ಪ್ರಾಪ್ತಿ ಅವರದು ॥ 92

ಒಳಹೊರಗೆ ತುಂಬಿರುವಾಗ ವಿರಕ್ತಿ । ವಿವೇಕ ವೈರಾಗ್ಯಗಳೇ ಸಂಪತ್ತಿ ।
ನೋಡುವದೇನು ಅಂಥವನ ಜಾತಿ । ಧಿಕ್ ಪರಮಾರ್ಥ ಪ್ರಾಪ್ತಿ ಅವರದು ॥ 93

ಧರ್ಮಾಧರ್ಮಾತೀತ ಸ್ಥಿತಿ । ಯಾರದು ಶುದ್ಧ ಆನಂದ ವೃತ್ತಿ ।
ನೋಡುವದೇನವನಜಾತಿ । ಧಿಕ್ ಪರಮಾರ್ಥ ಪ್ರಾಪ್ತಿ ಅವರಧು ॥ 94

ಬಾಬಾರ ಚರಿತೆ ಹೀಗಿರುವದು । ನಿಜ ಸುಖಕ್ಕಾಗಿ ನಾ ಹಾಡುವದು ।
ಯಾರಿಗೆ ಕೇಳುವ ಬಯಕೆ ಇರುವದು । ಅವರ ಭಾವಾರ್ಥ ಸಿದ್ಧಿಸುವದು ॥ 95

ಈ ಕಥೆಯ ಅನುಸಂಧಾನವಿಂತು । ಮತ್ತೆ ಹಿಂದೆ ಉಳಿದೇ ಹೋಯಿತು ।
ಬಾಬಾ ದಾದಾರನ್ನು ಕುರಿತು । ಹೇಳುದುದರತ್ತ ಲಕ್ಷಗೊಡಿರಿ ॥ 96

ಖಾರಾ ಪುಲಾವ ಮಾಡಲಾಗಿದೆ । ನೋಡಿದೆಯಾ ಅದು ಹೇಗಾಗಿದೆ ।
ಉಪಚಾರಕ್ಕೆ ದಾದಾ ಎಂದ ಚೆನ್ನಾಗಿದೆ । ಅಹಾ ಬಹಳ ಚೆನ್ನಾಗಿದೆ ॥ 97

ದಾದಾ ಹಳೆಯ ಭಕ್ತ ಶ್ರೇಷ್ಠ । ಸ್ನಾನ ಸಂಧ್ಯಾದಿ ನಿಯಮ ನಿಷ್ಠ ।
ನೋಡುವರು ಯಾವಾಗಲೂ ಶಿಷ್ಟಾಶಿಷ್ಟ । ಅವರಿಗಿದು ಇಷ್ಟವೆನಿಸಲಿಲ್ಲ ॥ 98

ಕಣ್ಣಿಂದ ಎಂದೂ ನೋಡಿಲ್ಲ । ನಾಲಿಗೆಯ ಮೇಲೆಂದೂ ಇಟ್ಟಿಲ್ಲ ।
ಅಂಥದಕೆ ಚೆನ್ನಾಗಿದೆ ಎನ್ನುವಿಯಲ್ಲ । ಎಂದು ಬಾಬಾ ದಾದಾರ ಕೇಳಿದರು ॥ 99

ಹಂಡೆಯ ಮೇಲಿನ ಮುಚ್ಚಳ ತೆಗೆದು । ಒಳಗೆ ಕೈಹಾಕಿ ನೋಡು ।
ಎಂದು ತಾವೇ ಅವನ ಕೈ ಹಿಡಿದು । ಹಂಡೆಯ ಒಳಗೆ ತುರುಕಿದರು ॥ 100

ಬಳಿಕೆಂದರು ಕೈ ಹೊರತೆಗೆದು । ನೋಡು ತಟ್ಟೆಯಲಿ ಸೌಟಿನಿಂದ ಹಾಕಿಕೊಂಡು ।
ಮಡಿಮಡಿಯೆಂಬ ಹುಚ್ಚು ಬಿಡು । ಸುಮ್ಮನೇ ಜಂಭ ಮಾಡಬೇಡ ॥ 101

ಸಂತರು ಶಿಷ್ಯರಿಗೆ ಬಾಟನೆನ್ನುವದು । ಮೊದಲು ಈ ಕಲ್ಪನೆಯೇ ಅಸಾಧ್ಯವೆನಿಸುವದು ।
ನಿಬಿಡವಾಗಿ ಸಂತ ಕೃಪೆ ತುಂಬಿದ್ದು । ಅವರ ಮಾರ್ಗ ಗೊತ್ತವರಿಗೆ ॥ 102

ನಿಜವಾದ ಪ್ರೀತಿ ಉಕ್ಕಿ ಬರಲು । ತಾಯಿಯೇ ಮಗುವಿನ ಗಲ್ಲ ಚಿವುಟುವಳು ।
ಮತ್ತೆ ಮಗು ಚೀರಿ ಅಳತೊಡಗಲು । ಅಪ್ಪಿಕೊಂಡದನು ಸಂತೈಸುವಳು ॥ 103

ಅಭಕ್ಷ್ಯ ಭಕ್ಷಣೆಯಲಿ ಯಾರ ಮನ । ಅಂಥವರ ವಾಸನೆಯ ಮಾಡುವರ ಶಮನ ।
ಅದೇ ಮಾಡಿರುವನಾವ ಮನ ದಮನ । ಅವನಿಗೆ ಸಾಯಿ ಅನುಮೋದನೆ ಈಯುವರು ॥ 104

ಆಜ್ಞಾಪಾಲನೆಯ ಮೀಮಾಂಸೆ ಇಂಥದು । ಒಮ್ಮೊಮ್ಮೆ ಎಷ್ಟೊಂದು ಅತಿರೇಕವಾಗುವದು ।
ಮಾಂಸವ ಮುಟ್ಟದಿದ್ದವನೆಂದೂ । ಅಂಥವನ ಮನವೂ ಡಳಮಳಿಸುವದು ॥ 105

ವಸ್ತು ಸ್ಥಿತಿಯ ನೋಡಹೋಗಲು । ಇಂಥ ಭಕ್ತರನಾವ ರೀತಿಯಲೂ ।
ಎಂದೂ ಉನ್ಮಾರ್ಗವರ್ತಿಗಳಾಗಲು । ಬಾಬಾ ತಾವು ಪ್ರವರ್ತಿಸುತ್ತಿರಲಿಲ್ಲ ॥ 106

ಸನ್ ಹತ್ತೊಂಭತ್ತು ನೂರಾ ಹತ್ತು । ಅದಕೆ ಹಿಂದೆ ಒಂದು ವರ್ಷದಿಂದ ।
ಹಂಡಿಯ ಯೋಗ ಮೇಲಿಂದ ಮೇಲೆ ಬರುತಿತ್ತು । ಬಹಳ ಉತ್ಸಾಹದಿಂದ ಕೂಡಿ ॥ 107

ಅಲ್ಲಿಂದ ಮುಂದೆ ಮುಂಬಯಿಯತ್ತ । ದಾಸಗಣೂ ಬಂದರು ಸಂಚರಿಸುತ್ತ ।
ಸಾಯಿ ಮಹಾತ್ಮ್ಯದ ಕೀರ್ತನೆ ಮಾಡುತ್ತ । ಎಲ್ಲರ ಹೃದಯಗಳ ಸೂರೆಗೊಂಡರು ॥ 108

ಬಾಬಾರ ಮಹತಿ ಆಗಿನಿಂದ । ಅಬಾಲ ವೃದ್ಧರಿಗೂ ತಿಳಿದುದರಿಂದ ।
ಆಮೇಲೆ ಶಿರಡಿಗೆ ಬಂದ ಜನದ । ಲೆಕ್ಕವೇ ಇರದಂತಾಯಿತು ॥ 109

ಮುಂದೆ ಪೂಜೆ ಪಂಚೋಪಚಾರಗಳು । ಆರಂಭವಾದವು ಆಹಾರೋಪಹಾರಗಳು ।
ನೈವೇದ್ಯದ ನಾನಾ ಪ್ರಕಾರಗಳು । ಮಧ್ಯಾನ್ಹ ಸಾಯಂಕಾಲ ಬಾಬಾರಿಗೆ ॥ 110

ಅನ್ನ ತೊವ್ವೆ ಶಿರಾಪುರಿ । ಚಪಾತಿ, ಚಟ್ನಿ, ಕೋಸಂಬರಿ ।
ಪಾಯಸ ಪಂಚಾಮೃತ ನಾನಾಪರಿ । ಅನ್ನ ಸಾಮಗ್ರಿ ಬೆಳೆಯಿತು ॥ 111

ಯಾತ್ರೆ ಅಪರಿಮಿತ ಬರತೊಡಗಿದ್ದು । ಯಾರೆಲ್ಲ ಓಡುವರು ದರ್ಶನಕೆ ಎಂದು ।
ಸಾಯಿ ಚರಣದಲಿ ನೈವೇದ್ಯ ಅರ್ಪಿಸುವದು । ಸಹಜದಲೇ ತೃಪ್ತಿಯಾಗುವದು ಕ್ಷುಧಾರ್ತರದು ॥ 112

ಆಗ ತೊಡಗಿದವು ರಾಜೋಪಚಾರ । ತೂಗ ತೊಡಗಿದವು ಛತ್ರ, ಚಾಮರ ।
ತಾಳ ಮೃದಂಗ ವಾದ್ಯಗಜರ । ಭಕ್ತ ಪರಿವಾರ ಬೆಳೆಯಿತು ॥ 113

ಮಹಿಮೆ ಹಬ್ಬಿತು ಸರ್ವತ್ರ । ಹಾಡತೊಡಗಿದರು ಸ್ತುತಿ ಸ್ತೋತ್ರ ।
ಮುಂದೆ ಶಿರಡಿಯಾಯಿತು ಕ್ಷೇತ್ರ । ಪರಮ ಪವಿತ್ರವದು ಯಾತ್ರಿಕರಿಗೆ ॥ 114

ಅದರಿಂದ ಹಂಡಿಯ ಕೆಲಸ ಮುಗಿಯಿತು । ನೈವೇದ್ಯ ಸಾಕಷ್ಟು ಬರತೊಡಗಿತು ।
ಅದರಲ್ಲಿಯೇ ಫಕೀರ ಭಿಕ್ಷುಕರು ತೃಪ್ತರಾದರು । ಮತ್ತೂ ಅನ್ನ ಉಳಿಯಿತು ॥ 115

ಈಗ ಹೇಳುವೆನು ಕಥೆ ಇನ್ನೊಂದು । ಕೇಳಿ ಚಿತ್ತಕೆ ಆನಂದವಾಗುವುದು ।
ಆರಾಧ್ಯ ವಸ್ತುವಿನ ಅನಾದರ ಕಂಡು । ಬಾಬಾ ನಿಜಚಿತ್ತದಲಿ ಅಪ್ರಸನ್ನರಾಗುತ್ತಿದ್ದರು ॥ 116

ಏನಾದರೂ ವಿಚಾರ ಮಾಡುಕೊಂಡು । ಬಾಬಾರಿಗೆನ್ನುವರು ಬ್ರಾಹ್ಮಣನೆಂದು ।
ಕೆಲವನ್ನುವರು ಮುಸ್ಮಲಾನೆಂದು । ಅವನು ಜಾತಿವಿಹೀನನಾಗಿರಲು ॥ 117

ಗೊತ್ತಿಲ್ಲ ಅವನ ಊರು ಸ್ಥಾನ । ಯಾವ ಜಾತಿಯಲಿ ಯಾವಾಗ ಜನನ ।
ಯಾರವನ ತಾಯಿ ತಂದೆ ಎಂಬುದರದಿಲ್ಲ ಜ್ಞಾನ । ಮುಸಲ್ಮಾನ ಅಥವಾ ಬ್ರಾಹ್ಮಣನೆಂಬುದು ॥ 118

ಅವನು ಮುಸಲ್ಮಾನನಿದ್ದಲ್ಲಿ । ಅಗ್ನಿಯಾರಾಧನೆಯೇಕೆ ಮಶೀದಿಯಲ್ಲಿ ।
ಇರುತಿತ್ತೇ ತುಲಸಿ ವೃಂದಾವನವಲ್ಲಿ । ಘಂಟಾನಾದವ ಸಹಿಸುತಿದ್ದನೇ ॥ 119

ಮಾಡಗೊಡುತಿದ್ದನೇ ಶಂಖನಾದವನ । ನಡೆಯಬಹುದಾಗಿತ್ತೇ ಕಥಾ ಕೀರ್ತನ ।
ಟಾಳ ಘೋಳ ಮೃದಂಗವಾದನ । ಹರಿನಾಮಗರ್ಜನೆ ಮಶೀದಿಯಲಿ ॥ 120

ಇರುತಿದ್ದರಾತ ಮುಸಲ್ಮಾನನು । ಮಶೀದಿಯಲಿ ಕುಳಿತು ತಾನು ।
ಮಾಡಿಸಿಕೊಳುತಿದ್ದನೇ ಗಂಧ ಚರ್ಚನವನು । ಸಹಭೋಜನವನಲ್ಲಿ ಮಾಡುತಿದ್ದನೇ ॥121

ಅವನಿರುತಿದ್ದರೆ ಮುಸಲ್ಮಾನನು । ಚುಚ್ಚಿರುತಿದ್ದರೇ ಕಿವಿಗಳನು ।
ವ್ಯಯಿಸಿ ತನ್ನ ಹಣವನ್ನು । ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿಸುತಿದ್ದನೇ ॥122

ಸ್ನಾನ ಮುಗಿದ ನಂತರ । ಉಡುತಿದ್ದನೇ ಮಹಾಪೀತಾಂಬರ ।
ಮತ್ತೆ ಆರಾಧ್ಯದೇವತೆಯ ಅನಾದರ । ಮಾಡಿದರೆಷ್ಟೂ ಹಿಡಿಸುತಿರಲಿಲ್ಲ ॥ 123

ಬೋಧಕ ಕಥೆಯೊಂದು ಈ ಅರ್ಥದ್ದು । ಬರೆಯುತ್ತ ಬರೆಯುತ್ತ ನೆನಪಾಗಿದ್ದು ।
ವಿನೀತನಾಗಿ ಇದ ಸಾದರ ಪಡೆಸುತಿದ್ದು । ಸ್ವಸ್ಥಚಿತ್ತದಿಂದ ಕೇಳಿರಿದನು ॥ 124

ನೋಡಿ, ಒಮ್ಮೆ ಹೀಗೆ ನಡೆಯಿತು । ಬಾಬಾ ಲೇಂಡಿಯಿಂದ ತಿರುಗಿ ಬಂದಾಯಿತು ।
ಮಶೀದಿಯಲಿ ಬಂದು ಕುಳಿತು । ಆ ಭಕ್ತರು ದರ್ಶನಕೆ ಬಂದರು ॥ 125

ಅವರಲ್ಲಿ ಬಾಬಾ ಬಲು ಪ್ರೀತಿಯವನಾದ । ಭಕ್ತವರ ಚಾಂದೋರಕರನೂ ಇದ್ದ ।
ಬಂದಿದ್ದ ದರ್ಶನದ ಕ್ಷುಧೆಯಿಂದ । ಬಿನೀವಾಲೆಯವರ ಸಂಗಡ ॥ 126

ಸಾಯಿನಾಥರಿಗೆ ನಮಸ್ಕರಿಸಿದರು । ಎದುರಿಗೆ ಕುಳಿತರಿಬ್ಬರೂ ।
ಅಕಸ್ಮಾತ ಬಾಬಾ ಸಿಟ್ಟಿಗೆದ್ದರು । ಸಹಜ ಕುಶಲವಾರ್ತೆ ನಡೆದಾಗ ॥ 127

ಎಂದರು, ನಾನಾ ನಿನ್ನಿಂದ ಏನಿದು । ಸರಿಯೇ ಹೇಗೆ ವಿಸ್ಮರಣವಾಗುವದು ।
ಇದನ್ನೇ ಏನು ನೀ ಸಂಪಾದಿಸಿದ್ದು । ನನ್ನ ಸಂಗದಲಿ ದಿನಕಳೆದು ॥ 128

ನೀನಿಷ್ಟು ದಿನ ನನ್ನ ಜೊತೆಯಲಿದ್ದು । ಕೊನೆಗೆ ಇದೇ ನೀನು ಸಾಧಿಸಿದ್ದು ।
ಹೇಗೆ ಮತಿ ಭ್ರಮಿಸಿತು ನಿನ್ನದು । ಯಥಾರ್ಥವಾಗಿ ಹೇಳು ನನಗೆ ॥ 129

ಕೇಳಿದನು ನಾನಾ ಆಗಿ ಅಧೋವದನ । ವಿಚಾರ ಮಾಡತೊಡಗಿದ ಕೋಪದ ಕಾರಣ ।
ಬರಲೊಲ್ಲದು ಏನೊಂದೂ ಸ್ಮರಣ । ಮನ ಉದ್ವಿಗ್ನವಾಯಿತು ॥ 130

ಏನು ತಪ್ಪಾಗಿದೆಯೆಂದು ತಿಳಿಯದು । ಕೋಪಕ್ಕೆ ಕಾರಣವೂ ಸಿಗದು ।
ಆದರೆ ಕಾರಣವೇನೂ ಇರದಿದ್ದು । ಬಾಬಾ ಯಾರನ್ನೂ ನೋಯಿಸಲಾರರು ॥ 131

ಅದಕೆ ಬಾಬಾರ ಕಾಲು ಹಿಡಿದ । ಪರಿಪರಿಯಾಗಿ ವಿನಂತಿಸಿದ ।
ಕೊನೆಗೆ ನಾನಾ ಶಿರಗೊಡ್ಡಿದ । ಕೇಳಿದ ಕೋಪ ಏಕೆಂದು ॥ 132

"ವರ್ಷಾನುವರ್ಷ ನನ್ನ ಜೊತೆಗಿದ್ದು । ನಿನಗೇಕೆ ಗತಿ ಇಂಥದು ।
ನಿನ್ನ ಬುದ್ಧಿಗೇನಾದುದು" । ಬಾಬಾ ನಾನಾರ ಕೇಳಿದರು ॥ 133

"ಯಾವಗ ಬಂದಿರಿ ಕೋಪರಗಾವದಲ್ಲಿ । ಘಟನೆ ಏನು ನಡೆಯಿತು ದಾರಿಯಲ್ಲಿ ।
ಮಾರ್ಗ ಮಧ್ಯದಲಿ ಇಳಿದಿದ್ದಿರೆಲ್ಲಿ । ಅಥವಾ ಟಾಂಗಾ ಸೀದಾ ಬಂದು ಬಿಟ್ಟಿತೇ ॥ 134

ದಾರಿಯಲ್ಲೇನಾದರೂ ವಿಚಿತ್ರ ನಡೆದದ್ದು । ಸಾದ್ಯಂತವಾಗೆಲ್ಲ ಕೇಳಬೇಕೆನಿಸುವದು ।
ಹೇಳಯ್ಯಾ ಎಲ್ಲಿ ಏನು ನಡೆಯಿತೆಂದು । ಸಣ್ಣದು ದೊಡ್ಡದು ಏನೇ ಇರಲಿ" ॥ 135

ಇದನ್ನು ಕೇಳಿ ನಾನಾ ತಿಳಿದರು । ಕೂಡಲೇ ಮುಖ ಚಿಕ್ಕದು ಮಾಡಿದರು ।
ಹೇಳಲು ಮನದಲ್ಲಿ ನಾಚಿಕೆಯಾದರೂ । ಕೊನೆಗೆ ಹೇಳಿಬಿಟ್ಟರು ॥ 136

ಮುಚ್ಚುಮರೆ ಇಲ್ಲಿ ನಡೆಯದು । ಅದಕೆ ಮನದ ನಿರ್ಧಾರ ಮಾಡಿಕೊಂಡು ।
ಬಳಿಕ ಸಾದ್ಯಂತವಾಗಿ ನಡೆದದ್ದು । ನಾನಾ ಬಾಬಾರಿಗೆ ಹೇಳಿದರು ॥ 137

ಬಾಬಾರ ಹತ್ತಿರ ಅಸತ್ಯ ನಡೆಯದು । ಅಸತ್ಯದಿಂದ ಬಾಬಾರ ಪ್ರಾಪ್ತಿಯಾಗದು ।
ಅಸತ್ಯದಿಂದ ಅಧೋಗತಿಗೆ ಹೋಗುವದು । ಕೊನೆಗೆ ದುರ್ಗತಿಯೇ ಅಸತ್ಯದಿಂದ ॥ 138

ಗುರುವಂಚನೆ ಮಹಾದುಷ್ಕೃತಿ ಇದ್ದು । ಆ ಪಾಪಕ್ಕೆ ನಿಷ್ಕೃತಿ ಇರದು ।
ನಾನಾ ಈ ರೀತಿ ತಿಳಿದುಕೊಂಡು । ಬಾಬಾರಿಗೆಲ್ಲವನು ನಿವೇದಿಸಿದರು ॥ 139

ಎಂದರು ಮೊದಲು ಟಾಂಗೆಯ ಗೊತ್ತು ಮಾಡಿಕೊಂಡು । ಸೀದಾ ಶಿರಡಿಗೆ ಹೋಗುವದೆಂದು ।
ಗೋದಾತಟದ ದತ್ತ ದರ್ಶನ ತಪ್ಪಿದ್ದು । ಬಿನೀವಾಲೆಯವರಿಗೆ ಅದರಿಂದ ॥ 140

ಬಿನೀವಾಲೆ ದತ್ತಭಕ್ತರಾಗಿದ್ದು । ದಾರಿಯಲಿ ದತ್ತ ಮಂದಿರವ ಕಂಡು ।
ಮನಕೆನಿಸಿತು ಇಳಿಯಬೇಕೆಂದು । ದತ್ತ ದರ್ಶನ ಮಾಡಲು ॥ 141

ಆದರೆ ನಾನು ಅವಸರದಲಿದ್ದೆ । ಅದರಿಂದ ಅವರನ್ನು ತಡೆದೆ ।
ತೆಗೆದುಕೊಳ್ಳಬಹುದು ದರ್ಶನವೆಂದೇ । ಶಿರಡಿಯಿಂದ ತಿರುಗಿ ಹೋಗುವಾಗ ॥ 142

ಈ ರೀತಿ ಅವಸರಪಟ್ಟು । ಶಿರಡಿಗೆ ಬರಲು ಹೊತ್ತಾದೀತು ।
ಎಂದುಕೊಂಡು ಅನುಮಾನ ಪಟ್ಟು । ದತ್ತದರ್ಶನವ ತಪ್ಪಿಸಿದೆ ॥ 143

ಮುಂದೆ ಗೋದಾಸ್ನಾನ ಮಾಡುವಾಗ್ಗೆ । ದೊಡ್ಡ ಮುಳ್ಳು ನಟ್ಟಿತು ಕಾಲಿಗೆ ।
ಅತ್ಯಂತ ಕಷ್ಟವಾಯಿತು ದಾರಿಯಲಿ ನಡೆವಾಗ್ಗೆ । ಪ್ರಯತ್ನಬಟ್ಟದನು ಕಿತ್ತು ತೆಗೆದೆ ॥ 144

ಆಗ ಬಾಬಾ ಸೂಚಿಸಿದ್ದು । "ಸರಿಯಲ್ಲ ಅವಸರ ಇಂಥದು ।
ಬರಿ ಮುಳ್ಳು ಮುರಿದೇ ನೀ ಉಳಿದುಕೊಂಡಿದ್ದು । ದರ್ಶನದ ಅನಾದರ ಮಾಡಿದಾಗ ॥ 145

ಪೂಜ್ಯ ದೈವತ್ವವು ದತ್ತನಂಥದು । ಬರುವ ಮಾರ್ಗದಲ್ಲೇ ನಿಂತಿದ್ದು ।
ದರ್ಶನ ಪಡೆಯದಿರುವದು ದುರ್ಭಾಗ್ಯ ದೊಡ್ಡದು । ಅಂಥವಗೆ ನಾನೆಂತು ಒಲಿದೇನು" ॥146

ಇನ್ನು ಮತ್ತೆ ಹಂಡಿಯ ವಾರ್ತೆ । ಮಶೀದಿಯಲ್ಲಿ ಸಾಯಿಯ ಜೊತೆ ।
ಅಪರಾಹ್ನ ಭೋಜನದ್ದೆಂಥ ಪಾವನತೆ । ಸಾಯಿಯ ಭಕ್ತ ಪ್ರೇಮಳತೆ ॥ 147

ಮಧ್ಯಾಹ್ನದ ಪೂಜೆ ಮುಗಿದು । ಬಳಿಕ ದಿನಾಲೂ ಬಾಬಾರ ಆರತಿಯಾಗುವದು ।
ಆಮೇಲೆ ಭಕ್ತ ಜನ ತಿರುಗಿ ಹೋಗುವದು । ಆಗ ಎಲ್ಲರಿಗೂ ಉದಿ ಕೊಡುವರು ॥ 148

ಮಶೀದಿಯ ಅಂಚಿನಲ್ಲಿ । ಬಾಬಾ ಬಂದು ನಿಲ್ಲುವರಲ್ಲಿ ।
ಭಕ್ತ ಜನ ನಿಲ್ಲುವರು ಅಂಗಳದಲ್ಲಿ । ಒಬ್ಬೊಬ್ಬರಾಗಿ ಚರಣವಂದಿಸುವರು ॥ 149

ವಂದಿಸಿ ಅವರ ಚರಣಗಳಿಗೆ । ಮುಂದೆ ಬಂದು ನಿಂತವರಿಗೆ ।
ಆಕಾಲಕ್ಕೆ ಆ ಎಲ್ಲರ ಹಣೆಗೆ । ಸಾಯಿ ಉದಿಯ ಹಚ್ಚುತ್ತಿದ್ದರು ॥ 150

ಹಿರಿಕಿರಿಯರೆಲ್ಲರೂ ಇನ್ನು । ಮನೆಗೆ ಹೋಗಿ ಮಾಡಬೇಕು ಭೋಜನವನು ।
ಶಿರಸಾವಂದಿಸಿ ಬಾಬಾರ ಈ ಆಜ್ಞೆಯನು । ಜನ ಹಿಂದಿರುಗಿ ಹೋಗುವರು ॥ 151

ನೋಡಿ ಬಾಬಾ ಅತ್ತ ತಿರುಗಿದರು । ನಿತ್ಯದಂತೆ ತೆರೆ ಎಳೆಯುವರು ।
ತಟ್ಟೆ ಲೋಟಗಳ ಸದ್ದಿನ ಮಧ್ಯೆ ಅವರು । ಪ್ರಸಾದವ ಬಡಿಸುವರು ಅಂದವಾಗಿ ॥ 152

ಸಾಯಿ ಕರಸ್ಪರ್ಶವಾದಂಥ । ಪವಿತ್ರ ನೈವೇದ್ಯವ ಪಡೆಯಲೆನುತ ।
ಅದಕಾಗಿ ಮಾರ್ಗಪ್ರತೀಕ್ಷೆ ಮಾಡುತ್ತ । ಹಲವರು ಅಂಗಳದಲಿ ಕುಳಿತಿರುವರು ॥153

ಇತ್ತ ನಿಂಬ ವೃಕ್ಷದ ಹತ್ತಿರದೊಳು । ಬಾಬಾ ಅದರತ್ತ ಬೆನ್ನು ಮಾಡಿ ಕುಳಿತಿರಲು ।
ಎಡಬಲದಲಿ ಊಟದ ಸಾಲು । ಅತ್ಯಾನಂದವೆಲ್ಲರಿಗೆ ॥ 154

ತಮ್ಮ ತಮ್ಮ ನೈವೇದ್ಯವನು ಎಲ್ಲರೂ ಬಾಬಾರ ಮುಂದೆ ಇಡುವರು ।
ಒಂದು ತಟ್ಟೆಯಲ್ಲವನು ಅವರು । ತಮ್ಮ ಕೈಯಿಂದ ಎಲ್ಲವನೂ ಬೆರೆಸುವರು ॥ 155

ಬಾಬಾರ ಕೈಯ ಆ ಊಟ । ಪಡೆಯಲು ಬೇಕು ಭಾಗ್ಯ ಅಮಿತ ।
ಅದರಿಂದ ಉಣುವವನು ಸಬಾಹ್ಯದಿ ಪುನೀತ । ಸಫಲ ಜೀವಿತ ಅವರದು ॥ 156

ವಡೆ ಅಪೂಪ ಸಜ್ಜಿಗೆಯ ಹೋಳಿಗೆ । ಒಮ್ಮೊಮ್ಮೆ ಸೀಕರಣೆ ಫೇಣಿ ಫಾರಿಗೆ ।
ಬಗೆಬಗೆಯ ತರಕಾರಿ ಪಾಯಸ ಮೊದಲಾಗೆ । ಎಲ್ಲವನು ಬಾಬಾ ಒಂದುಗೂಡಿಸುವರು ॥157

ಆ ಎಲ್ಲ ಅನ್ನವನು ಈ ರೀತಿಯಿಂದ । ಬಾಬಾ ಈಶ್ವರಾರ್ಪಣೆ ಮಾಡಿದ ।
ಬಳಿಕ ಶಾಮಾ ನಾನಾ ಇವರಿಂದ । ತಟ್ಟೆ ತುಂಬಿ ತುಂಬಿ ಬಡಿಸುತಿದ್ದರು ॥ 158

ಬಳಿಕ ಒಬ್ಬೊಬ್ಬರನೇ ಕರೆದು । ತಮ್ಮ ಹತ್ತಿರ ಕೂಡಿಸಿಕೊಂಡು ।
ಹೊಟ್ಟೆ ತುಂಬಿ ಉಣಿಸುತಿದ್ದು । ಪರಮಾನಂದ ಪ್ರೀತಿ ತುಂಬಿ ॥ 159

ಕಮ್ಮಗಿನ ತುಪ್ಪದಿಂದ ಕೂಡಿದ್ದು । ಹೋಳಿಗೆ ತೊವ್ವೆಗಳೆಲ್ಲ ಕಲಿಸಿದ್ದು ।
ಹೀಗೆ ರುಚಿಕರವಾಗಿ ಮಿಶ್ರಿತವಾದದ್ದು । ಬಾಬಾ ಎಲ್ಲರಿಗೂ ಬಡಿಸುವರು ॥ 160

ಇಂಥ ಬುತ್ತಿಯನ್ನುಣಲು । ರುಚಿಯದು ಬ್ರಹ್ಮಾನಂದಕ್ಕಿಂತಲೂ ।
ಉಂಡವನು ಚೀಪುವನು ಬೆರಳು । ಆಗವನಿಗೆ ಅಖಂಡ ತೃಪ್ತಿಯಾಗಿ ॥ 161

ಒಮ್ಮೊಮ್ಮೆ ಮಂಡಿಗೆ ಹೂರಣ ಹೋಳಿಗೆ । ಒಮ್ಮೊಮ್ಮೆ ಚಿರೋಟಿ ಅದ್ದಿದ್ದು ಸಕ್ಕರೆಯೊಳಗೆ ।
ಒಮ್ಮೊಮ್ಮೆ ಖೀರು ಗಳ್ಳೋರಿಗೆ । ಅತಿ ರುಚಿಕರವಾದದ್ದು ॥ 162

ಒಮ್ಮೊಮ್ಮೆ ಬೆಳ್ಳಗಿನ ಅನ್ನ ಅಂಬೇಮೊಹರ । ಅದರ ಮೇಲೆ ತೊವ್ವೆ ಸುಂದರ ।
ಬೆಣ್ಣೆ ಕಾಸಿದ ತುಪ್ಪ ರುಚಿಕರ । ಸುತ್ತೆಲ್ಲ ಶಾಖಾ ಪರಿಕರ ॥ 163

ಉಪ್ಪಿನ ಕಾಯಿ ಹಪ್ಪಳ ಸಂಡಿಗೆ । ಬುರಬುರಿ ಕಾಯಿರಸ ಪರಿಪರಿಯಾಗೆ ।
ಹಾಲು ಮೊಸರು ತುಪ್ಪ ಮಜ್ಜಿಗೆ । ಸಕ್ಕರೆ ಕೂಡಿದ ಪಂಚಾಮೃತ ಹೀಗೆ ॥ 164

ಅಲ್ಲಿ ಸಾಯಿನಾಥನೇ ಭೋಕ್ತನು । ಎಷ್ಟು ಬಣ್ಣಿಸಬೇಕು ಆ ಅನ್ನದ ಮಹಿಮೆಯನು ।
ಭಕ್ತರು ಆಕಂಠ ಉಣ್ಣುವರದನು । ತೃಪ್ತಿಯ ತೇಗು ಬರುವವರೆಗೆ ॥ 165

ತುತ್ತು ತುತ್ತಿಗೂ ಸಮಾಧಾನ । ತುಷ್ಟಿ ಪುಷ್ಟಿ ಕ್ಷುದಾನಾಶನ ।
ಇಂಥ ಆ ರುಚಿಕರ ಮಧುರ ಅನ್ನ । ಪರಮ ಪಾವನ ಪ್ರೇಮಮಯ ॥ 166

ತುತ್ತು ತುತ್ತಿಗೂ ಎಲ್ಲ ಹೆಸರು । ಆ ದಿವ್ಯಾನ್ನದಿಂದ ಆಹುತಿ ಕೊಡುವರು ।
ಪಾತ್ರೆಯನಿತೂ ಬರಿದಾಗದಾದರೂ । ಮೇಲಿಂದ ಮೇಲೆ ಬಡಿಸುತಿದ್ದರೂ ॥ 167

ಯಾವ ಪಕ್ವಾನ್ನದಲಿ ಆಸಕ್ತಿ ಯಾರಿಗೆ । ಪ್ರೀತಿಯಿಂದ ಬಡಿಸುವರು ಅದನವರಿಗೆ ।
ಸೀಕರಣೆಯೇ ಇಷ್ಟವಿದ್ದವರಿಗೆ । ಪ್ರೀತಿಯಿಂದದನೇ ಬಡಿಸುವರು ॥ 168

ಆ ಅನ್ನವನು ಬಡಿಸುವದಕೆ ಹೀಗೆ । ನಾನಾ ಸಾಹೇಬ ನಿಮೋಣಕರರಿಗೆ ।
ಇಲ್ಲವೇ ಮಾಧವರಾವ ದೇಶಪಾಂಡೆಗೆ । ಬಾಬಾ ಆಜ್ಞಾಪಿಸುತಿದ್ದರು ಪ್ರತಿದಿನ ॥ 169

ಅವರದೂ ಇದು ನಿತ್ಯದ ನೇಮ । ಅದಕಾಗಿ ಪಡುವರು ಪರಿಶ್ರಮ ।
ನೈವೇದ್ಯ ಬಡಿಸುವದೇ ಒಂದು ಕಾರ್ಯಕ್ರಮ । ಪರಮಪ್ರೇಮ ಸಮನ್ವಿತರಾಗಿ ॥ 170

ಅನ್ನ ಮಾಡುವರು ವಾಸನೆ ಅಕ್ಕಿಯೊಳಗೆ । ಅಂದವಾಗಿರುವದದು ಮಲ್ಲಿಗೆ ಮೊಗ್ಗಿನ ಹಾಗೆ ।
ಅರಿಸಿಣ ಬಣ್ಣದ ತೊವ್ವೆ ಅದರ ಮೇಲೆ । ಘಮ ಘಮಿಸುವ ತುಪ್ಪ ಒಂದೊಂದು ಸೌಟು ॥ 171

ಬಡಿಸಿದಾಗ ಹರಡುವದು ಸುಗಂಧ । ರುಚಿಯಾದ ಊಟ ಚಟ್ನಿ ಕೋಸಂಬ್ರಿಗಳಿಂದ ।
ಇಲ್ಲಿದರಲ್ಲಿ ಅಪಕ್ವ ಅರುಚಿಕರ ಎಂಬುದಿಲ್ಲ । ಯಥೇಷ್ಟ ಉಣ್ಣುವರೆಲ್ಲರೂ ॥ 172

ಆ ಸ್ವಾನಂದ ತಟ್ಟೆಯ ಸೇವಿಗೆ । ಸಪ್ರೇಮ ಭಕ್ತಿಯ ಸಂಡಿಗೆ ।
ಶಾಂತಿ ಸುಖ ಸ್ವಾನುಭವಿಯಲ್ಲದೆ ಹೇಗೆ । ಯಾರು ಊಟಕ್ಕೆ ಬಂದಾರು ॥ 173

'ಹರಿರನ್ನಂ ಹರಿರ್ಭೋಕ್ತಾ' । ಹರಿಯೇ ರಸವನು ಸವಿಯುವಾತ ।
ಧನ್ಯನಲ್ಲಿಯ ಅನ್ನ ಬಡಿಸುವಾತ । ಧನ್ಯ ಸೇವಿಸುವಾತ, ದಾತನೂ ॥ 174

ಈ ಎಲ್ಲ ಮಧುರತೆಗೆ ಮೂಲ । ನಿಷ್ಠೆಯೊಂದೇ ಗುರುಪದದಿ ಪ್ರಬಲ ।
ಸಕ್ಕರೆ ಬೆಲ್ಲಗಳೇ ಸಿಹಿಯಲ್ಲ । ಸಮೂಲ ಸವಿಯದು ಶ್ರೀ ಶ್ರದ್ಧೆ ॥ 175

ನಿತ್ಯ ಶ್ರೀರ್ನಿತ್ಯ ಮಂಗಳ ಹೀಗೆ । ಅನ್ನ ಪಾಯಸ ಸಜ್ಜಿಗೆ ಒಟ್ಟಿಗೆ ।
ಕಲಿಸಿದ್ದನು ತಿನ್ನುವಾಗ ಹಾಗೆ ಹೀಗೆ । ಒಂದಿಷ್ಟೂ ನಡೆಯಲಾರದಲ್ಲಿ ॥ 176

ಪರಿಪರಿಯ ಪಾಕ ನಿಷ್ಪತ್ತಿ । ಉಂಡು ಆಗಲುಉದರ ಪೂರ್ತಿ ।
ದಧ್ಯೋದನವಿಲ್ಲದಾಗದು ತೃಪ್ತಿ । ಕೊನೆಗೆ ಮಜ್ಜಿಗೆಯನ್ನಾದರೂ ಕೇಳುವರು ॥ 177

ಒಮ್ಮೆ ಸ್ವಚ್ಛ ಮಜ್ಜಿಗೆಯೊಂದು ಲೋಟ । ಗುರುರಾಯ ಸ್ವಹಸ್ತದಿಂದ ತುಂಬುತ ।
ಕುಡಿಯಲು ನನಗೆ ಕೊಟ್ಟ । ನಾನದನು ತುಟಿಗೆ ಹಚ್ಚಿದಾಗ ॥ 178

ಶುಭ್ರ ಸ್ವಚ್ಛವಾದ ಮಜ್ಜಿಗೆ । ಸುಖ ಸಂತೋಷವಾಯಿತದನು ಕಂಡಾಗ್ಯೆ ।
ಲೋಟವ ಹಚ್ಚಲು ತುಟಿಗೆ । ಸ್ವಾನಂದ ಪುಷ್ಟಿಯ ಪಡೆದೆನು ॥ 179

ಮೊದಲೇ ಪಕ್ವಾನ್ನದಿಂದ ತುಂಬಿದೆ ಹೊಟ್ಟೆ । ಅಂಥದರಲಿ ಇದು ಒಳಗೆ ಇಳಿದೀತೇ ।
ಇಂಥ ವಿಚಿತ್ರ ಆಶಂಕೆ ಮನದಲಿ ಮೂಡಿತ್ತೇ । ಆದರೆ ಸವಿದಾಗ ಬಲು ರುಚಿಯಾಗಿತ್ತು ॥180

ನೋಡಿ ನಾನು ಸಂಕೋಚ ಪಡುತಿದ್ದುದು । ಬಾಬಾ ಅತಿ ಪ್ರೀತಿಯಿಂದ ಅಂದದ್ದು ।
"ಅದಷ್ಟನ್ನೂ ಕುಡಿದು ಬಿಡು" । ಇಂಥ ಯೋಗ ಮತ್ತೆ ಬರಲಿಕ್ಕಿಲ್ಲ ॥ 181

ಮುಂದೆ ಪ್ರಚಿತಿಯೇ ಬಂದಿತು ಹಾಗೆ । ಮುಂದೆ ಎರಡು ತಿಂಗಳ ತುಂಬುವುದರೊಳಗೆ ।
ಬಾಬಾ ಅವತಾರ ಮುಗಿಸಿದರು ಅಲ್ಲಿಗೆ । ನಿಜದಲೂ ನಿರ್ವಾಣ ಪಡೆದರು ॥ 182


ಈಗ ಮಜ್ಜಿಗೆಯ ತೃಷೆಯನ್ನು । ಹಿಂಗಿಸುವ ಮಾರ್ಗ ಬೇರೇನೂ ।
ಮಾಡದೇ ಸಾಯಿ ಕಥಾಮೃತ ಪಾನವನು । ಅದೊಂದೇ ಅವಲಂಬನ ನಮಗೆ ॥183

ಹೇಮಾಡ ಸಾಯಿನಾಥನಿಗೆ ಶರಣ । ಸಾಯಿಯೇ ಮುಂದೆ ಕೊಟ್ಟಿದ್ದು ಸ್ಮರಣ ।
ಅದೇ ಆದೀತು ಕಥಾ ನಿವೇದನ । ಶ್ರೋತೃಗಳು ಅವಧಾನವೀಯಬೇಕು ॥ 184

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀಸಾಯಿ ಸಮರ್ಥ ಸಚ್ಚರಿತೆ । ಹಂಡೀವರ್ಣನಂ ನಾಮ ಅಷ್ಟತ್ರಿಂಶತ್ತಮೋಧ್ಯಾಯಃ
ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿ ನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತೊಂಭತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಧನ್ಯ ಧನ್ಯ ಶಿರಡೀ ಸ್ಥಾನ । ಧನ್ಯ ದ್ವಾರಕಾಮಾಯಿ ಭುವನ ।
ಎಲ್ಲಿ ಶ್ರೀ ಸಾಯಿ ಪುಣ್ಯಪಾವನ । ಆ ನಿರ್ವಾಣ ವಾಸಿಸಿದರು ॥ 1

ಧನ್ಯ ಧನ್ಯ ಆ ಶಿರಡಿಯ ಜನರಿಗಾಗಿ । ಯಾರು ಯಾವುದೋ ಕಾರಣಕ್ಕಾಗಿ ।
ಬಂದು ಮಾಡಿದರವರನು ಋಣಿಯಾಗಿ । ಇಷ್ಟೊಂದು ದೂರದಿಂದಲ್ಲಿ ॥ 2

ಶಿರಡಿ ಊರು ಮೊದಲು ಚಿಕ್ಕದು । ಸಾಯಿ ಸಹವಾಸದಿಂದ ಮಹಾನವಾಯಿತು ।
ಅದರಿಂದ ಅತಿ ಪಾವನವಾದ ಅದು । ಯಾತ್ರಾ ಸ್ಥಾನವಾಯಿತು ॥ 3

ಆ ಶಿರಡಿಯು ಸ್ತ್ರೀಯರೂ ಧನ್ಯ । ಧನ್ಯ ಅವರ ಶ್ರದ್ಧೆ ಅನನ್ಯ ।
ಕುಟ್ಟುವಾಗ ಬೀಸುತ್ತಿರುವಾಗ ಧಾನ್ಯ । ಸಾಯಿಸ್ತುತಿಯ ಹಾಡುವರು ॥ 4

ಧನ್ಯ ಧನ್ಯ ಅವರ ಪ್ರೇಮ । ಹಾಡು ಹೇಳುವರು ಅತ್ಯುತ್ತಮ ।
ಅವುಗಳಲಿ ಕೆಲವು ಅನುಪಮ । ಕೇಳಲವುಗಳ ಉಪರಮವಾಗುವದು ॥ 5

ಅದಕ್ಕೆಂದು ಶ್ರೋತೃಗಳಲಿ । ಕಥಾನುಸಂಗತಿಯ ಯಥಾಕಾಲದಲಿ ।
ಅವರ ಜಿಜ್ಞಾಸಾ ತೃಪ್ತಿಯಾಗಲಿ । ಎಂದು ಹೇಳುತಿರುವೆನು ॥ 6

ಸಾಯಿ ಪ್ರಕಟರಾದರು ನಿಜಾಮಶಾಹಿಯಲ್ಲಿ । ಮಾರ್ಗದ ಬದಿಯ ಆಮ್ರವೃಕ್ಷದಡಿಯಲ್ಲಿ ।
ಧೂಪಖೇಡದ ನಿಬ್ಬಣದ ಜೊತೆಯಲ್ಲಿ । ಸಹಜ ಶಿರಡಿಗೆ ಬಂದರು ॥ 7

ಆ ಹಳ್ಳಿಯಲಿ ಪುಣ್ಯವಂತನಾದ । ಚಾಂದಪಾಟೀಲ ಎಂಬವನಿದ್ದ ।
ಮೊದಲು ಅವನೇ ಈ ನಿಧಾನವ ಕಂಡ । ಇತರರಿಗೆ ದರ್ಶನ ಅವರಿಂದ ॥ 8

ಹೇಗೆ ಅವನ ಕುದುರೆ ಕಳಿಯಿತು । ಹೇಗೆ ಸಾಯಿಯ ಭೆಟ್ಟಿಯಾಯಿತು ।
ಅವನಿಗೆ ಚಿಲುಮೆ ಸೇದಲು ಕೊಟ್ಟರೆಂತು । ಕುದುರೆಯನೂ ದೊರಕಿಸಿಕೊಟ್ಟರು ॥ 9

ಚಾಂದಭಾಯಿಯ ಹೆಂಡತಿಯ ಕಡೆಯವ । ಸೋದರಳಿಯನೊಬ್ಬನಿದ್ದ ಮದುವೆಯನ ।
ತಂದುಕೊಂಡರವಗೆ ಶಿರಡಿಯ ವಧುವ । ಅದರಿಂದ ನಿಬ್ಬಣ ವಧುವಿನೂರಿಗೆ ಬಂತು ॥ 10

ಈ ವಿಷಯದ ಸಾದ್ಯಂತ ಕಥೆಯನು । ಶ್ರೋತೃಗಳಿಗೆ ಈ ಮೊದಲೇ ಹೇಳಿರುವೆನು ।
ಪ್ರಸಂಗೋಪಾತವಾಗಿ ನೆನಪಾದುದು । ಪುನರುಕ್ತಿ ಮಾಡಬೇಕಿಲ್ಲ ॥ 11

ಚಾಂದ ಪಾಟೀಲ ಕೇವಲ ನಿಮಿತ್ತ । ಭಕ್ತೋದ್ಧಾರದ ಚಿಂತೆ ಅತ್ಯಂತ ।
ಅದಕಾಗಿ ಸಾಯಿ ಈ ಅವತಾರ ತಾಳುತ । ತಾವೇ ಶಿರಡಿಗೆ ಬಂದರು ॥ 12

ಜಡ ಮೂಢಹೀನ ದೀನ । ವ್ರತ ತಪ ಸಂಸ್ಕಾರ ವಿಹೀನ ।
ಸೀದಾ ಸಾದಾ ಭಾವಿಕ ಜನ । ಅಂಥವರ ಸಾಯಿಯಲ್ಲದೆ ಉದ್ಧರಿಪರಾರು ॥ 13

ಹದಿನೆಂಟು ವರ್ಷದ ವಯ ಅವಗೆ । ಏಕಾಂತದಲಿರುವ ರೂಢಿ ಅವಗೆ ।
ರಾತ್ರಿ ಬೇಕಾದಲ್ಲಿ ಮಲಗುವ ನಿರ್ಭಯನಾಗೇ । ಎಲ್ಲವೂ ಈಶ್ವರಮಯ ಅವನಿಗೆ ॥ 14

ಮೊದಲು ಅಲ್ಲೊಂದು ತಗ್ಗು ಇದ್ದು । ಊರ ಜನರ ತಿಪ್ಪೆಗುಂಡಿಯದು ।
ಹಗಲೆಲ್ಲ ಊರೊಳಗೆ ತಿರುಗಾಡುತಿದ್ದು । ರಾತ್ರಿ ಆ ಸ್ಥಾನದಲಿ ಮಲಗಬೇಕು ॥ 15

ಹೀಗೆ ಬಹಳ ವರ್ಷ ಕಳೆಯಿತು । ಆಗ ಈ ತಿಪ್ಪೆಯ ಭಾಗ್ಯ ಉದಯಿಸಿತು ।
ಸುತ್ತು ವಿಶಾಲವಾಡೆ ನಿರ್ಮಾಣವಾಯಿತು । ಈ ದೀನ ದಯಾಳು ಸಾಯಿಯದು ॥ 16

ಕೊನೆಗೆ ಆ ತಗ್ಗಿನ ಒಳಕ್ಕೆ । ವಿಶ್ರಾಂತಿಸ್ಥಾನ ದೊರೆಯಿತು ಸಾಯಿ ಶರೀರಕ್ಕೆ ।
ಸಮಾಧಿ ನಿರ್ಮಾಣವಾಯಿತದೇ ಸ್ಥಾನಕ್ಕೆ । ಸಾಯಿಯ ಅಕ್ಷಯ ಸ್ಥಾನವಾಗಿ ॥ 17

ಅವನೇ ಭಕ್ತವತ್ಸಲ ಸಾಯಿಸಮರ್ಥ । ದುಸ್ತರ ಭವಾರ್ಣವ ಸಂತರಣಾರ್ಥ ।
ಈ ನಿಜಚರಿತ್ರೆಯೆಂಬ ನೌಕೆಯ ಯಥಾರ್ಥ । ಭಕ್ತಜನ ಹಿತಾರ್ಥವಾಗಿ ನಿರ್ಮಿಸುತಿರುವ ॥18

ಈ ಭವನದಿಯು ಮಹಾದುಸ್ತರ । ಅಂಧ ಪಂಗು ಈ ಭಕ್ತ ಪರಿವಾರ ।
ಅವರ ಬಗ್ಗೆ ಕಳಕಳಿ ಅನಿವಾರ । ಅವರೆಂತು ಭವಪಾರಗಾಣುವರೆಂದು ॥ 19

ಎಲ್ಲರಿಗೂ ಅವಶ್ಯವೀ ಭವತರಣ । ಅದಕೆಂದು ಆಗಬೇಕು ಶುದ್ಧಾಂತಃಕರಣ ।
ಚಿತ್ತಶುದ್ಧಿಯೇ ಮುಖ್ಯಸಾಧನ । ಭಗವದ್ಭಜನೆ ಮೂಲವದಕೆ ॥ 20

ಶ್ರವಣದಂತಿಲ್ಲ ಇನ್ನೊಂದು ಭಕ್ತಿ । ಶ್ರವಣದಲಿ ಸಹಜವೇ ಗುರುಪದಾಸಕ್ತಿ ।
ಹುಟ್ಟುವದು ನಿರ್ಮಲ ಶುದ್ಧಮತಿ । ಅದರಿಂದ ಉತ್ಪತ್ತಿ ಪರಮಾರ್ಥದ್ದು ॥ 21

ಈ ಸಾಯಿಯ ಕಥೆಗಳು ಅಗಣಿತ । ಹೇಳುತ್ತ ಹೋದಂತೆ ಬೆಳೆಯುವದು ಗ್ರಂಥ ।
ಆದರೆ ಹೇಳಬೇಕೆಂದರೂ ಸಂಕಲಿತ । ಅದರ ವಿಸ್ತಾರವಾಗದಿರದು ॥ 22

ಶ್ರೋತೃಗಳಿಗಿದ್ದಷ್ಟು ಕೇಳಬೇಕೆಂಬಾಶೆ । ಅದರಂತೆ ಬೆಳೆಯುವದು ಹೇಳುವವನಪೇಕ್ಷೆ ।
ಪೂರೈಸಿಕೊಳ್ಳುವಾ ಪರಸ್ಪರರ ಅಭಿಲಾಷೆ । ನಿಜಹಿತವನದರಿಂದ ಸಾಧಿಸುವಾ ॥ 23

ಸಾಯಿಯೇ ಕರ್ಣಧಾರನಿಲ್ಲಿ । ದೃಢ ಅವಧಾನವಿದ್ದಲ್ಲಿ ।
ಶ್ರದ್ಧಾದರಗಳು ಕಥಾ ಶ್ರವಣದಲಿ । ತಡವಿಲ್ಲದೆ ಆಚೆದಡ ಮುಟ್ಟುವರು ॥ 24

ಹಿಂದಿನಧ್ಯಾಯದಲಿ ನಿರೂಪಣ । ಆಯಿತು ಸಂಕ್ಷಿಪ್ತವಾಗಿ ಹಂಡೀವರ್ಣನ ।
ದತ್ತ ಭಕ್ತಿಯ ದೃಢೀಕರಣ । ನೈವೇದ್ಯದಿಂದ ಭಕ್ತಸಂತರ್ಪಣ ॥ 25

ಮುಗಿಸುವಾಗ ಪ್ರತಿಯೊಂದು ಅಧ್ಯಾಯವನು । ಮುಂದಿನಧ್ಯಾಯದ ವಿಷಯ ಸೂಚನೆಯನ್ನು ।
ತಿಳಿಯುವಂತೆ ಮಾಡಿದೆ ರಚನೆಯನು । ಇದನೆಲ್ಲರು ಅರಿತಿಹರು ॥ 26

ಮುಗಿಸುವಾಗ ಹಿಂದಿನಧ್ಯಾಯವನು । ಮುಂದಿನಕಥೆಯ ವಿಚಾರವನೇ ಮರೆತೆನು ।
ಸಾಯಿ ನೆನಪಿಸಿಕೊಟ್ಟ ವಿಷಯವನ್ನು । ಕಥೆಯೆಂದು ಬರೆಯುವೆನು ॥ 27

ಸ್ಪಷ್ಟವಾಗಿಯೇ ಹೇಳಿದೆನಿಂತು । ಅದರಂತೆಯೇ ಸಾಯಿ ಕೃಪೆಯಿಂದಾವುದು ನೆನಪಾಯಿತು ।
ಶ್ರೋತೃಗಳಿಗೆ ಅದನ್ನೇ ಕುರಿತು । ಹೇಳುತ್ತಿರುವೆನು ಆದರಿಸಿರಿ ॥ 28

ಶ್ರೋತೃಗಳಲಿ ಪ್ರಾರ್ಥನೆ ಇದು । ಕಾರ್ಯಗಳನೆಲ್ಲ ಆಚೆ ಇಡುವದು ।
ಶಾಂತಚಿತ್ತದಿಂದ ಕೇಳುವದು । ಅದರಿಂದ ಆನಂದವಾಗುವದು ಮನಕೆ ॥ 29

ಒಮ್ಮೆ ಚಾಂದೋರಕರ ಸದ್ಭಕ್ತ । ಮಶೀದಿಯಲ್ಲಿ ಕುಳಿತಾತ ।
ಚರಣ ಸಂವಾಹನ ಮಾಡುತ್ತ । ಮುಖದಿ ಗೀತೆಯ ಗುಣಗುಣಿಸುತಿದ್ದ ॥ 30

ಭಗವದ್ಗೀತೆಯ ನಾಲ್ಕನೆಯ ಅಧ್ಯಾಯ । ಜಿವ್ಹೆಗೆ ಹಚ್ಚಿದ್ದ ಅದೊಂದು ವ್ಯವಸಾಯ ।
ಕೈಯಿಂದ ಒತ್ತುತ್ತ ಚರಣದ್ವಯ । ನಡೆದ ಚಮತ್ಕಾರವ ನೋಡಿರಿ ॥ 31

ಭೂತ ಭವಿಷ್ಯ ವರ್ತಮಾನ । ಸಾಯಿ ಸಮರ್ಥರಿಗೆಲ್ಲದರ ಜ್ಞಾನ ।
ನಾನಾಗೆ ತಿಳಿಸಬೇಕು ಗೀತಾರ್ಥವನ । ಎಂದು ಮನದಲಿ ಬಂದಿತು ॥ 32

ಜ್ಞಾನ ಕರ್ಮ ಸಂನ್ಯಾಸನ । ಬ್ರಹ್ಮಾರ್ಪಣಯೋಗಾಧ್ಯಾಯದ ಪಠಣ ।
ಆ ನಾನಾರ ಅಸ್ಪಷ್ಟ ಗುಣಗುಣ । ಪ್ರಶ್ನೆ ಕೇಳಲು ಕಾರಣವಾಯಿತು ॥ 33

"ಸರ್ವಂ ಕರ್ಮಾಖಿಲಂ ಪಾರ್ಥ" । ಜ್ಞಾನದಲಾಗುವದು ಪರಿಸಮಾಪ್ತ ।
ಮೂವತ್ಮೂರನೆಯ ಶ್ಲೋಕ ಮುಗಿಯುತ । 'ತದ್ವಿದ್ಧಿ ಪ್ರಣಿಪಾತ' ಶ್ಲೋಕ ಬಂತು ॥ 34

ಈ ಮೂವತ್ನಾಲ್ಕನೆಯ ಶ್ಲೋಕ ಬಂದಾಗ । ಅಲ್ಲಿಯೆ ಪಾಠ ನಿಂತಾಗ ।
ಪ್ರಶ್ನೆ ಕೇಳಬೇಕೆಂದು ಬಾಬಾರ ಮನದಾಗ । ನಿಜ ಬೋಧವ ನಾನಾಗೆ ತಿಳಿಸಬೇಕೆಂದು ॥ 35

ಎಂದರು, ನಾನಾ ಗುಣಗುಣಿಸುವೆ ಏನನ್ನು । ಅದನ್ನೇ ಸ್ಪಷ್ಟವಾಗಿ ಕೇಳುವಂತೆ ಅನ್ನು ।
ನೀನು ಬಾಯಲ್ಲಿಯೇ ಅನ್ನುತ್ತಿದ್ದುದನು । ನಾನೂ ಒಂದಿಷ್ಟು ಕೇಳುವೆ ॥ 36

ಹೇಳೆಂದು ಅಂದುದೇ ಆಜ್ಞೆಯಾಗಿರಲು । ಹೇಳಿದ ಶ್ಲೋಕದ ನಾಲ್ಕೂ ಸಾಲು ।
ಬಾಬಾ ಎಂದರು, ಅದರ ಅರ್ಥ ಹೇಳು । ಸ್ಪಷ್ಟೀಕರಣ ಪೂರ್ವಕವಾಗಿ ॥ 37

ಆಗ ನಾನಾ ಅತಿ ವಿನಯದಿಂದ । ಸಂತುಷ್ಟನಾಗಿ ಕೈ ಮುಗಿದ ।
ಮಧುರ ವಚನದಲಿ ನುಡಿದ । ಭಗವಂತ ಹೇಳಿದ ಮನೋಗತ ॥ 38

ಇನ್ನು ಈ ನಾನಾ, ಸಾಯಿಯವರಲಿ ನಡೆದ ಸಂವಾದ । ತಿಳಿಯಬೇಕದು ಎಲ್ಲರಿಗೂ ವಿಶದ ।
ಮೂಲ ಶ್ಲೋಕವನು ಪದಪ್ರಪದ । ಗೀತೆಯಿಂದಲೇ ತೆಗೆದುಕೊಳ್ಳಬೇಕು ॥ 39

ತಿಳಿಯಲು ಪ್ರಶ್ನೆಯ ಮರ್ಮ । ಅಂತೆಯೇ ಸಂತರ ಮನೋಧರ್ಮ ।
ಮಾಡಬೇಕು ಹೀಗೆ ಉಪಕ್ರಮ । ಯಾವುದರಿಂದದರ ಅರ್ಥ ಸ್ಪಷ್ಟವಾಗುವದು ॥40

ಮೊದಲು ಗೀರ್ವಾಣಭಾಷೆ ದುರ್ಗಮ । ಸಾಯಿಗೆ ಇದು ಹೇಗಾಯಿತು ಸುಗಮ ।
ಈ ಸಂತರ ಜ್ಞಾನ ಅಗಮ್ಯ । ಆಶ್ಚರ್ಯವೆಲ್ಲರಿಗೆನಿಸಿತು ॥ 41

ಎಂದು ಸಂಸ್ಕೃತ ಕಲಿತರು । ತಿಳಿಯದು ಗೀತೆಯನೆಂದು ಓದಿದರು ।
ಅದರಿಂದ ಗೀತಾರ್ಥಹೃದ್ಗತ ಜ್ಞಾನವಿದ್ದವರು । ಎನುವಂತೆ ಪ್ರಶ್ನೆ ಕೇಳುತಿರುವರು ॥ 42

ಶ್ರೋತೃಗಳ ಸಮಾಧಾನವಾಗಲು । ಇರಬೇಕು ಮೂಲ ಶ್ಲೋಕದ ಕಲ್ಪನೆ ಮೊದಲು ।
ಅದಕೆ ಅಕ್ಷರಶಃ ಭಗವಂತನ ವಚನಗಳು । ಹೇಳುವೆ ವಿವೇಚನೆಗೆ ಸಹಾಯಕವಾಗಲೆಂದು ॥ 43

"ತದ್ವಿದ್ಧಿ ಪ್ರಣಿಪಾತೇನ । ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯತಿ ತೇ ಜ್ಞಾನಂ । ಜ್ಞಾನಿನಸ್ತತ್ತ್ವದರ್ಶಿನಾ" ॥ 44

ಇದು ಗೀತೆಯ ಮೂಲ ಶ್ಲೋಕ । ಭಾಷಾನುಸಾರ ಅರ್ಥವಿದಕ ।
ಟೀಕಾಕಾರರಾದರು ಅನೇಕ । ಅವರೆಲ್ಲರದೂ ಏಕವಾಕ್ಯವಾಗಿದೆ ॥ 45

ನಾನಾ ಇದ್ದರು ಬಹು ಶ್ರುತ । ಗೀತಾಭಾಷ್ಯ ಪಾರಂಗತ ।
ಹೇಳತೊಡಗಿದರು ಪದಪದದ ಅರ್ಥ । ಯಥಾವಿದಿತ ಶ್ಲೋಕಾರ್ಥವ ॥ 46

ರಸಪೂರಿತ ಮಧುರ ವಾಣಿಯಿಂದ । ನಾನಾ ಸವಿನಯ ನಮ್ರತನದಿಂದ ।
ಅರ್ಥನಿವೇದನೆಯಲಿ ತೊಡಗಿದ । ಅನ್ವಯಾರ್ಥವ ನೆನೆಸಿಕೊಂಡು ॥ 47

ಎಂದರು ಗುರುಚರಣದಲಿ ಪ್ರಣಿಪಾತ । ಗುರುಸೇವೆಯಲಿ ಮುಡಿಪಾಗಿದೆ ಜೀವಿತ ।
ಪ್ರಶ್ನಾದಿಗಳಲಿ ಆದರವಂತ । ಜ್ಞಾನಿಗಳಂಥವನಿಗೆ ಜ್ಞಾನಾರ್ಥ ಉಪದೇಶಿಸುವರು ॥ 48

ಸಾರಾಂಶ ಕೃಪಾಮೂರ್ತಿಯಾದ ಕೃಷ್ಣನು । ಪ್ರೇಮದಿಂದ ಅರ್ಜುನನಿಗೆ ಹೇಳಿದನು ।
ಗುರುಸೇವೆ ಗುರುಪ್ರಣತಿಗಳನು । ಜ್ಞಾನ ಸಂಪ್ರಾಪ್ತಿದಾಯಕಗಳೆಂದು ॥ 49

ಅರ್ಜುನಾ ನಡೆಯಲು ಈ ಮಾರ್ಗವಾಗಿ । ತತ್ವದರ್ಶಿಜ್ಞಾನಿಗಳು ನಿನಗಾಗಿ ।
ಜ್ಞಾನದ ದಾರಿಯ ತೋರುವರೆಂಬುದಾಗಿ । ಈ ಅರ್ಥವನು ನಾ ತಿಳಿದಿರುವೆ ಬಾಬಾ ॥ 50

ಶಂಕರಭಾಷ್ಯ ಆನಂದಗಿರಿಯವರು । ಶಂಕರಾನಂದದಲಿ ವ್ಯಾಖ್ಯೆಯ ಶ್ರೀಧರರು ।
ಮಧುಸೂದನ ನೀಲಕಂಠಾಧಾರಿಯವರು । ಉಪದೇಶಪರಿ ಈ ದೇವರದು ॥ 51

ಮೊದಲಿನೆರಡು ಚರಣಗಳ ಅರ್ಥ । ಮಾನ್ಯ ಮಾಡಿದರು ಸಾಯಿ ಸಮರ್ಥ ।
ಆದರೆ ಉತ್ತರ ಶ್ಲೋಕಾರ್ಥ ಮಥಿತ । ಸಾಯಿ ಏನೆಂದೆರೆದ ಕೇಳಿ ॥ 52

ಉಳಿದ ಭಕ್ತಚಕೋರಗಣ । ಅನುಲಕ್ಷಿಸಿ ಸಾಯಿ ಮುಖಚಂದ್ರವನ ।
ಮಾಡಲು ಅಮೃತಕಣ ಸೇವನ । ಬಾಯಿತೆರೆದು ಕುಳಿತಿದ್ದರು ॥ 53

ಎಂದರು, "ನಾನಾ ತೃತೀಯ ಚರಣ । ಪುನಶ್ಚ ಲಕ್ಷಕ್ಕೆ ತಂದುಕೋಪೂರ್ಣ ।
ಜ್ಞಾನ ಈ ಶಬ್ದದ ಹಿಂದಿನ । ಅವಗ್ರಹವನು ಚೆನ್ನಾಗಿ ಅರ್ಥೈಸು ॥ 54

ವಿಪರೀತವಿದನೇನು ನಾ ಎನ್ನುತಿರುವೆ । ಅರ್ಥದ ಅನರ್ಥ ಮಾಡುತ್ತಿರುವೆ ।
ಹಿಂದಿನ ಭಾಷ್ಯಾರ್ಥವೆಲ್ಲ ಅಸತ್ಯವೇ । ಎಂದೆಲ್ಲ ವ್ಯರ್ಥ ಭಾವಿಸಬೇಡ ॥ 55

ಜ್ಞಾನಿಗಳು ಮತ್ತು ತತ್ವದರ್ಶಿಗಳು । ಜ್ಞಾನವ ಉಪದೇಶಿಸುವರೆಂದು ನೀನೆನ್ನಲು ।
ಅಲ್ಲಿ ಅಜ್ಞಾನ ಪದವನ್ನು ತೆಗೆದುಕೊಳ್ಳಲು । ಯಥಾರ್ಥಬೋಧವ ಪಡೆಯುವಿ ॥ 56

ಜ್ಞಾನವು ಬಾಯಿಮಾತಿನ ವಿಷಯವಿರದು । ಎಂದಾಗ ಉಪದೇಶಿಸುವಂಥದು ಹೇಗಿರುವದು ।
ಅದಕೆ ಜ್ಞಾನ ಶಬ್ದದ ವಿಪರ್ಯಯ ಮಾಡುವದು । ಆಗ ಪ್ರತ್ಯಯವು ಅನುಭವಕೆ ಬರುವದು ॥ 57

ಕೇಳಿದೆ ನಿನ್ನ ಜ್ಞಾನ ಪದದ ಅರ್ಥ । ಅಲ್ಲಿ ಅಜ್ಞಾನವೆಂಬ ಶಬ್ದವನಿಟ್ಟರೇನಂತೆ ।
'ಅಜ್ಞಾನವು' ಮಾತಿನ ವಿಷಯವಾಗುತ । ಜ್ಞಾನವು ಸ್ವಯಂ ಶಬ್ದಾತೀತವಿರುವದು ॥58

ಮಾಸ ಸುತ್ತಿಕೊಂಡಿರುವದು ಗರ್ಭವನು । ಅಥವಾ ಧೂಳು ಆವರಿಸಿರುವದು ಕನ್ನಡಿಯನು ।
ಬೂದಿ ಮುಚ್ಚಿರುವದು ಕೆಂಡವನು । ಹಾಗೆ ಅಜ್ಞಾನವು ಜ್ಞಾನವ ಮುಸುಕಿದೆ ॥ 59

ಅಜ್ಞಾನದಿಂದಾವರಿಸಲ್ಪಟ್ಟಿದೆ ಜ್ಞಾನ । ಗೀತೆಯಲಿ ಭಗವಂತ ಮಾಡಿರುವ ಕಥನ ।
ಅದಕೆ ಆದಾಗ ಅಜ್ಞಾನ ನಿರಸನ । ತನ್ನಷ್ಟಕ್ಕೆ ಜ್ಞಾನವು ಪ್ರಕಾಶಿಸುವದು ॥ 60

ಜ್ಞಾನವಿರುವದು ಸ್ವಯಂಸಿದ್ಧ । ಹಾವಸೆಯಡಿಯ ನೀರಿನಂತೆ ಶುದ್ಧ ।
ಈ ಹಾವಸೆಯ ಸರಿಸುವವ ಪ್ರಬುದ್ಧ । ಅವನು ವಿಶುದ್ಧ ಜಲವ ಪಡೆಯುವನು ॥61

ಇರುವಂತೆ ಚಂದ್ರ ಸೂರ್ಯರ ಗ್ರಹಣ । ಅವರಂತೂ ಯಾವಾಗಲೂ ಪ್ರಕಾಶಮಾನ ।
ಅವರೋಧಿಸುವವು ನಮ್ಮ ನಯನ । ರಾಹು ಕೇತುಗಳದಕೆ ಅಡ್ಡ ಬಂದು ॥ 62

ಚಂದ್ರ ಸೂರ್ಯರಿಗಂತೂ ಚ್ಯುತಿ ಇರದು । ನಮ್ಮ ದೃಷ್ಟಿಯದೇ ಅವರೋಧವದು ।
ಹಾಗೆ ಜ್ಞಾನವೂ ಅಬಾಧಿತವಿರುವದು । ಸ್ವಯಂಸಿದ್ಧ ಸ್ವಸ್ಥಾನದಲಿ ॥ 63

ಕಣ್ಣು ಮಾಡುವದು ಅವಲೋಕನ । ಅದರ ನೋಡುವ ಶಕ್ತಿಯೇ ಜ್ಞಾನ ।
ಅದಕೆ ಪರಿ ಬರುವದೇ ಅಜ್ಞಾನ । ಅದರ ನಿರಸನ ಅವಶ್ಯಕ ॥ 64

ಈ ಪರಿಯನ್ನು ತೊಲಗಿಸಿರಿ । ಹಸ್ತಕೌಶಲ್ಯದಿಂದಾದರೂ ಅದನು ಸರಿಸಿರಿ ।
ನೋಡುವ ಶಕ್ತಿಯನ್ನು ಪಡೆಯಿರಿ । ಅಜ್ಞಾನ ತಿಮಿರವನು ನಾಶಗೊಳಿಸಿ ॥ 65

ನೋಡು ಈ ಎಲ್ಲ ದೃಷ್ಟಿಗೋಚರವಾದಂಥದು । ಹೇಳಲಾರದಷ್ಟು ಮಾಯೆಯಿಂದ ಕೂಡಿದ್ದು ।
ಇದೇ ಅನಾದಿಯಾದ ಅವ್ಯಕ್ತ ಅವಿದ್ಯೆಯಾಗಿದ್ದು । ಅಜ್ಞಾನ ವಿಲಸಿತವಾದುದಿದೇ ॥ 66

ಜ್ಞಾನ ಈ ವಸ್ತುವು ಅರಿಯುವಂಥಾದ್ದು । ಅದು ಅಲ್ಲ ವಿಷಯ ಉಪದೇಶಿಸುವಂಥದು ।
ಪ್ರಣಿಪಾತ, ಪರಿ ಪ್ರಶ್ನೆ ಸೇವೆ ಮುಂತಾದ್ದು । ಗುರು ಕೃಪೆಯ ಸಾಧನೆಗಳು ॥ 67

ವಿಶ್ವದ ಸತ್ಯತ್ವವೇ ಮಹಾಭ್ರಮೆಯಿದ್ದು । ಜ್ಞಾನವನ್ನಾವರಿಸಿದ ತಮವೇ ಇದು ।
ಎಲ್ಲಿಯವರೆಗಿನ ನಿರಸನವಾಗದು । ಅಲ್ಲಿಯವರೆಗೆ ಬ್ರಹ್ಮ ಪ್ರಕಟವಾಗಲಾರದು ॥ 68

ಈ ಸಂಸಾರಬೀಜವಾದ ಅಜ್ಞಾನ । ಕಣ್ಣಿಗೆ ಬೀಳಲು ಗುರುಕೃಪಾಂಜನ ।
ಹರಿಯುವದು ಮಾಯೆಯ ಆವರಣ । ಅದಾಗಿ ಉಳಿಯುವಂಥದು ಸ್ವಾಭಾವಿಕ ಜ್ಞಾನ ॥ 69

ಜ್ಞಾನವೆಂಬದು ಅಲ್ಲ ಸಾಧ್ಯ । ಅದು ಮೊದಲೇ ಇರುವದು ಸ್ವಯಂಸಿದ್ಧ ।
ಇದಂತೂ ಆಗಮನಿಗಮಗಳಲಿ ಪ್ರಸಿದ್ಧ । ಅಜ್ಞಾನವಿದು ಜ್ಞಾನಕ್ಕೆ ವಿರೋಧವಾದುದು ॥ 70

ದೇವರು ಭಕ್ತರಲಿರುವ ಭಿನ್ನತನ । ಅದೇ ಮೊದಲು ವಿಲಕ್ಷಣ ಅಜ್ಞಾನ ।
ಆ ಅಜ್ಞಾನದ ನಿರಸನ । ಆದಾಗ ಉಳಿವುದು ಪೂರ್ಣ ಜ್ಞಾನ ॥ 71

ಹಗ್ಗವ ಕಂಡು ಹಾವೆನ್ನುವದು । ಶುದ್ಧ ಸ್ವರೂಪದ ಬಗೆಗ ಅಜ್ಞಾನವಿದು ।
ಸ್ವರೂಪೋಪದೇಶದಿಂದ ಅಜ್ಞಾನದ್ದಾಗುವದು ನಿರಸನ । ಆಗ ಉಳಿಯುವದಾಗ ಜ್ಞಾನ ಹಗ್ಗದ್ದು ॥ 72

ಒಳಗೆ ಸುವರ್ಣ ಮೇಲೆ ಧೂಳಿಯ ಆವರಣ । ಆವರಣದ ಒಳಗೆ ಶುದ್ಧ ಚಿನ್ನ ।
ಆದರದು ಪ್ರಕಟವಾಗುವ ಮುನ್ನ । ಅಗ್ನಿದಿವ್ಯದ ಮಾಡಬೇಕದು ॥ 73

ಮಾಯಾ ಮೂಲಕವಾಗಿ ದೇಹ ಜನನ । ದೇಹದ ಚಲನೆ ಅದೃಷ್ಟಾಧೀನ ।
ದ್ವಂದ್ವಗಳೆಲ್ಲ ಅದೃಷ್ಟಾಧೀನ । ದೇಹಾಭಿಮಾನವು ಅಜ್ಞಾನ ॥ 74

ಅದಕ್ಕೇ ಯಾವುದು ಸ್ವಯಂ ನಿರಭಿಮಾನ । ಅದಕೆಲ್ಲಿಯ ಸುಖದುಃಖದ ಗಮನ ।
ಅಜ್ಞಾನದ್ದಾಗುವದು ನಿರಸನ । ಯಾವಾಗ ಅಹಂಕಾರ ತೊಲಗುವದು ॥ 75

ಸ್ವರೂಪದ ಬಗ್ಗೆ ಅಜ್ಞಾನ । ಅದೇ ಮಾಯೆಯ ಜನ್ಮಸ್ಥಾನ ।
ಗುರುಕೃಪೆಯಾದಾಗ ಮಾಯಾನಿರಸನ । ಅದಾದಾಗ ಸ್ವರೂಪಜ್ಞಾನ ತನ್ನಷ್ಟಕ್ಕೇ ಆಗುವದು ॥ 76

ಬಿಟ್ಟು ಭಗವದ್ಭಕ್ತಿಯನೊಂದು । ಬೇರೆ ಸಾಧನೆಗಳ ಕಷ್ಟವೇಕೆಂದು ।
ಬ್ರಹ್ಮದೇವನೂ ಮಾಯೆಗೆ ಒಳಪಟ್ಟಿದ್ದೂ । ಅವನಿಗೂ ಭಕ್ತಿಯಿಂದಲೇ ಬಿಡುಗಡೆ ॥ 77

ಬ್ರಹ್ಮಸದನ ಪ್ರಾಪ್ತಿಯಾಗಿದ್ದು । ಭಕ್ತಿಯ ಹೊರತು ಮುಕ್ತಿ ಸಿಗದು ।
ಭಗವದ್ಭಕ್ತಿಗೆ ತಪ್ಪಿ ನಡೆದರೆ । ಪುನರಾವೃತ್ತಿ ಹೊಂದುವನವ ॥ 78

ಮಾಯಾನಿರಸನವಾಗಲು । ಭಗವದ್ಭಜನೆಯೊಂದೇ ಉಪಾಯವಿರಲು ।
ಭಗವದ್ಭಕ್ತನಿಗೆ ಪತನವಿರದು । ಭವಬಂಧನವೂ ಇಲ್ಲವನಿಗೆ ॥ 79

ಜನರೆನ್ನುವರು ಮಾಯೆ ಸುಳ್ಳು । ಆದರೆ ಮಹಾಚೇಟಕಿಯವಳು ।
ಹೆಜ್ಜೆ ಹೆಜ್ಜೆಗೆ ಜ್ಞಾನಿಗಳನೂ ಮೋಸಗೊಳಿಸುವಳು । ಭಕ್ತರವಳನು ಬೆರಳ ಮೇಲೆ ಕುಣಿಸುವಳು ॥ 80

ಜ್ಞಾನ ಸಂಪನ್ನರು ಮರುಳಾಗುವಲ್ಲಿ । ಸ್ಥಿರವಾಗಿ ನಿಲ್ಲುವರು ಭಕ್ತರಲ್ಲಿ ।
ಅವರು ನಿತ್ಯವೂ ಪ್ರಪನ್ನು ಹರಿಚರಣದಲಿ । ಜ್ಞಾನಿಗಳು ಜ್ಞಾನಾಭಿಮಾನಿಗಳಾಗಿರುವರು ॥ 81

ಅದಕ್ಕೆ ಆಗಲು ಮಾಯಾತರಣ । ಹಿಡಿಯಬೇಕು ಸದ್ಗುರು ಚರಣ ।
ಸದ್ಗುರುವಿಗಾಗಬೇಕು ಅನನ್ಯ ಶರಣ । ತತ್ಕಾಲದಲಿ ಭವಭಯ ಹರಣವಾಗ ॥ 82

ಬರುವದಿದ್ದಲ್ಲಿ ಬರಲಿ ಮರಣ । ಆದರೆ ಬೀಳದಿರಲಿ ಹರಿಯ ವಿಸ್ಮರಣ ।
ಇಂದ್ರಿಯದಿಂದ ಆಶ್ರಮವರ್ಣಾಚರಣ । ಚಿತ್ತದಲಿ ಹರಿಚರಣ ಚಿಂತಿಸಬೇಕು ॥ 83

ರಥಕ್ಕೆ ಕುದುರೆಗಳ ಹೂಡಿದಂತೆ । ಈ ಶರೀರಕ್ಕೆ ಇಂದ್ರಿಯಗಳು ಅದರಂತೆ ।
ಬುದ್ಧಿಯ ನಿಜ ಹಸ್ತದಿಂದ ನಿಗ್ರಹಿಸುತ್ತೆ । ಮನದ ಲಗಾಮು ಬಿಗಿಯಾಗಿ ಹಿಡಿದು ॥ 84

ಮನಸ್ಸು ಸಂಕಲ್ಪ ವಿಕಲ್ಪಗಳಿಂದ ತುಂಬಿದ್ದು । ಸ್ವೇಚ್ಛಾವಿಹಾರಿಯಾಗಿ ಓಡುವದು ।
ಬುದ್ಧಿಯದನು ನಿಜನಿಶ್ಚಯದಿಂದ ನಿವಾರಿಸುವದು । ನಿಜ ಸತ್ತೆಯಲಿ ಲಗಾಮು ಹಿಡಿದಿರುವದು ॥ 85

ಬುದ್ಧಿಯಂಥ ಕುಶಲ ಮುಂದಾಳು । ಆ ರಥಕೆ ಸಾರಥಿಯಾಗಿರಲು ।
ರಥ ಸ್ವಾಮಿಗೆ ಚಿಂತೆ ಇಲ್ಲದಿರಲು । ಸ್ವಸ್ಥಚಿತ್ತದಿಂದ ವ್ಯವಹರಿಸುವ ॥ 86

ದೇಹಗತವಾದೆಲ್ಲ ಕಾರ್ಯ । ಬುದ್ಧಿಯದೇ ಅದು ಕರ್ತವ್ಯ ।
ಹೀಗೆ ಮನಸಿಗೆ ಹಾಕಲು ರೂಢಿಯ । ಎಲ್ಲ ವ್ಯವಸಾಯ ಹಿತಮಯ ॥ 87

ಶಬ್ದ ಸ್ಪರ್ಶರೂಪಾದಿ ವಿಷಯ । ಆ ಮಾರ್ಗದಲಿ ತೊಡಗಲು ಇಂದ್ರಿಯ ।
ಆಗುವದು ವ್ಯರ್ಥ ಶಕ್ತಿ ಕ್ಷಯ । ಹೆಜ್ಜೆ ಹೆಜ್ಜೆಗೂ ಪತನ ಭಯ ॥ 88

ಶಬ್ದ ಸ್ಪರ್ಶರೂಪಾದಿಕ । ಪಂಚವಿಷಯಗಳಲಾವ ಸುಖ ।
ಕೊನೆಯಲವೆಲ್ಲ ಅಸುಖ । ಪರಮ ದುಃಖ ಅಜ್ಞಾನ ॥ 89

ಶಬ್ದ ವಿಷಯಕ್ಕೆ ಮೋಹಿಸಿದ ಹರಿಣ । ಕೊನೆಗೆ ಕಳೆದುಕೊಂಡಿತು ತನ್ನ ಪ್ರಾಣ ।
ಸ್ಪರ್ಶ ವಿಷಯವನುಂಡ ವಾರಣ । ಅಂಕುಶದ ಇರಿತಕ್ಕೊಳಗಾಗುವದು ॥ 90

ರೂಪವಿಷಯಕ್ಕೆಳೆಸಿದ ಪತಂಗ । ಸುಟ್ಟುಕೊಳುವದು ತನ್ನದೇ ಅಂಗ ।
ಮೀನ ಭೋಗಿಸುವದು ರಸವಿಷಯಭೋಗ । ಬೇಗದಲೆ ಪ್ರಾಣಕ್ಕೆರವಾಗುವದು ॥ 91

ಸುಗಂಧದಿಂದ ಆಗಿ ಮರುಳು । ಸಿಕ್ಕಿ ಬೀಳುವದು ಕಮಲ ಕೋಶದೊಳು ।
ಒಂದೊಂದಕೇ ಇಷ್ಟೊಂದು ಪ್ರಸಂಗ । ಐದರ ಗುಂಪೆಂಥ ಭಯಂಕರ ॥ 92

ಸ್ಥಾವರ ಜಲಚರ ಪಕ್ಷಿಗಳಿವುಗಳು । ಅವುಗಳ ದುಃಸ್ಥಿತಿ ನೋಡುವಷ್ಟರೊಳು ।
ವಿಷಯಕ್ಕೆಳೆಸುವರು ತಿಳಿದ ಮಾನವರಿರಲು । ಅಜ್ಞಾನವೆಂದರಿನ್ನೇನು ॥ 93

ಅಜ್ಞಾನವಳಿದಾಗ ವಿಷಯ ವಿಮುಖ । ಆದಾಗ ಆಗುವದು ಉನ್ನದಿ ಹರಿಖ ।
ಜೀವ ಜ್ಞಾನ ಸ್ವರೂಪೋನ್ಮುಖ । ಅತ್ಯಂತಿಕ ಸುಖವ ಪಡೆಯುವದು ॥ 94

ಚಿತ್ತದಿಂದ ಮಾಡಿರಿ ಹರಿಗುರು ಚಿಂತನ । ಶ್ರವಣದಿಂದ ಮಾಡಿರಿ ಚರಿತ್ರ ಶ್ರವಣ ।
ಮನದಿಂದ ಮಾಡಿರಿ ಧ್ಯಾನಾನುಸಂಧಾನ । ನಾಮಸ್ಮರಣವ ನಾಲಿಗೆಯಿಂದ ॥ 95

ಚರಣದಿಂದ ಹರಿಗುರು ಗ್ರಾಮಾಗಮನ । ಘ್ರಾಣದಿಂದ ತನ್ನಿರ್ಮಾಲ್ಯಾಘ್ರಾಣನ ।
ಕೈಯಿಂದ ವಂದಿಸಿರವನ ಚರಣ । ಕಣ್ಣಿಂದವನನು ನೋಡಿರಿ ॥ 96

ಹೀಗೆ ಈ ಎಲ್ಲ ಇಂದ್ರಿಯಗಳ ವೃತ್ತಿ । ಅವನಲ್ಲಿಯೇ ಇರಿಸಲವುಗಳ ಪ್ರೀತಿ ।
ಧನ್ಯ ಆ ಭಕ್ತನ ಸ್ಥಿತಿ । ಭಗವದ್ಭಕ್ತಿ ಎಂದರಿನ್ನೇನು ॥ 97

ಸಾರಾಂಶ ಸಮೂಲ ಅಜ್ಞಾನವ ಆಗಿದೊಗೆದು । ಉಳಿದ ಆ ಜ್ಞಾನವನೇ ಶುದ್ಧವೆಂದರಿದು ।
ಹೀಗೆ ಈ ಶ್ಲೋಕದ ಹೃದ್ಗತವಿರುವದು । ಅದ ಶ್ರೀಕೃಷ್ಣ ಅರ್ಜುನನಿಗೆ ತಿಳಿಸಿದ" ॥98

ಮೊದಲೇ ನಾನಾ ವಿನಯ ಸಂಪನ್ನ । ಕೇಳಿ ಈ ಮಧುರ ನಿರೂಪಣ ।
ಪದಗಳಿಗೆ ಮಾಡಿ ಸಾಷ್ಟಾಂಗ ನಮನ । ಚರಣಗಳನೊಂದಿಸಿದ ಎರಡು ಕೈಲಿ ॥ 99

ಬಳಿಕವ ಶ್ರದ್ಧೆಯಿಂದ ಪ್ರಾರ್ಥಿಸಿದ । ಬಿಡಿಸಿರೆನ್ನನೀ ಅಜ್ಞಾನದಿಂದ ।
ನನ್ನ ದುರಭಿಮಾನಕ್ಕೆ ಕೊಡಿರಿ ದಂಡ । ಯಥಾರ್ಥ ರೀತಿಯಲಿ ಶಿಕ್ಷಿಸಿ ॥ 100

ಸಾತ್ವಿಕತೆಯ ಪ್ರೀತಿ ಹೊರಗೆ । ಅಖಂಡ ವಿಕಲ್ಪ ತುಂಬಿದೆ ಒಳಗೆ ।
ಅಪಮಾನವ ಸಹಿಸೆನೊಂದು ಗಳಿಗೆ । ಇದಕಿಂತ ಹೆಚ್ಚಿನ ಅಜ್ಞಾನವೇನು ? ॥ 101

ಪ್ರತಿಷ್ಠೆಯ ಜಂಭ ಒಳಗೊಳಗೆ । ಜ್ಞಾನದ ಅವಿರ್ಭಾವ ತೋರಿಕೆಗೆ ।
ಕಾಮಕ್ರೋಧಗಳ ಅಗ್ನಿ ಒಳಗೆ । ಅಜ್ಞಾನವೆಂದರೆ ಇನ್ನೇನು ॥ 102

ಒಳಗೆಲ್ಲ ಕರ್ಮಗಳು ನಷ್ಟ । ಹೊರಗೆ ತೋರಿಸುವದು ಬ್ರಹ್ಮನಿಷ್ಠ ।
ಆಚಾರಹೀನ ವಿಚಾರ ಭ್ರಷ್ಟ । ಇದಕಿಂತ ಅಜ್ಞಾನವಿನ್ನೇನು ॥ 103

ಬಾಬಾ ತಾವು ಕೃಪಾ ಘನ । ಮಾಡಿ ಕೃಪಾಜಲ ಸಿಂಚನ ।
ಈ ಅಜ್ಞಾನ ದಾವಾನಲವ ಮಾಡಿ ಶಮನ । ಧನ್ಯ ನಾನಾಗುವೆನದರಿಂದ ॥ 104

ಬೇಕಿಲ್ಲ ನನಗೆ ಜ್ಞಾನದ ಮಾತು । ನನ್ನ ಅಜ್ಞಾನ ಕೋಟಿಗಳ ಕಳೆಯಿರಿನಿತು ।
ನನ್ನ ಮೇಲೆ ಕೃಪಾದೃಷ್ಟಿಯನಿಟ್ಟು । ನನಗೆ ಸುಖ ಸಂತುಷ್ಟಿಯದೇ ॥ 105

ಸಪ್ರೇಮ ಕರುಣಾಘನ ಸಾಯಿಯವರು । ನಾನಾನ ನಿಮಿತ್ತ ಮಾಡಿಯವರು ।
ಈ ಗೀತಾರ್ಥ ಪ್ರವಚನವ ಮಾಡಿದರು । ನಮಗೆ ನಿಮಗೆ ಎಲ್ಲರಿಗಾಗಿ ॥ 106

ಗೀತೆಯು ಭಗವಂತನ ವಚನ । ಅದಕೇ ಪ್ರತ್ಯಕ್ಷ ಶಾಸ್ತ್ರವೆಂಬರಿದನ ।
ಕಾಲತ್ರಯದಲೂ ಇದು ಪ್ರಮಾಣ । ಇದರ ಅವಗಣನೆ ಎಂದೂ ಆಗಬಾರದು ॥ 107

ಆದರೂ ಅತ್ಯಂತ ವಿಷಯಾಸಕ್ತ । ಅಥವಾ ಯಾವನು ನಿಜವಾದ ಜೀವನ್ಮುಕ್ತ ।
ಇವರಿಬ್ಬರಿಗೂ ಅನ್ವಯಿಸಲಾರದು ಈ ಶಾಸ್ತ್ರಾರ್ಥ । ಮುಮುಕ್ಷುಗಳಿಗಾಗಿ ಮಾತ್ರವಿದು ॥ 108

ವಿಷಯಗಳಿಗೆ ಅತಿ ಬೇಸತ್ತ । ಎನುವವನು ಎಂದಾದೇನಿದರಿಂದ ಮುಕ್ತ ।
ಮುಮುಕ್ಷು ತಾನಿರಲು ಇಂಥ । ಅವನಿಗಾಗಿ ಈ ಶಾಸ್ತ್ರ ॥ 109

ಇಂಥ ನಿಜ ಭಕ್ತನನು ಕಂಡು । ಸಂತರಿಗೆ ಯಾವಾಗ ಕಳಕಳಿ ಬರುವದು ।
ಏನಾದರೂ ನಿಮಿತ್ತ ತೆಗೆದು । ಈ ರೀತಿ ಉಪದೇಶ ಮಾಡುವರು ॥ 110

ದೇವರು ಅಥವಾ ಗುರುವಾಗಿರಲಿ । ಭಕ್ತಾಧೀನರಿರುವರು ಸರ್ವಸ್ವದಲಿ ।
ಭಕ್ತ ಕಲ್ಯಾಣವನೇ ಚಿಂತಿಸುತಲಿ । ಅವರ ಬಯಕೆಯ ನೀಡುವರು ॥ 111

ಇನ್ನು ಎರಡನೆಯದೊಂದು ಸಣ್ಣ । ವೃತ್ತವ ಮಾಡುವೆನು ಕಥನ ।
ಮಾಡಿಸಿ ಯಾವದೊಂದು ಕಾರ್ಯವನ । ಅರಿಯದವರಂತಿರುವರು ॥ 112

ಚಿಕ್ಕದಿರಲಿ ಅಥವಾ ದೊಡ್ಡದು । ನಿಜವಾದ ಕಾರಣವೆಂದೂ ತಿಳಿಯದು ।
ಮೆಲ್ಲಗೆ ಕಾರ್ಯಸಾಧಿಸುತಿರುವದು । ಎಲ್ಲೂ ಒಂದದರ ಮಾತಿಲ್ಲದಂತೆ ॥ 113

ಸಹಜರೀತಿಯಲೇ ಕೆಲಸವೊಂದು । ಮಾಡಬೇಕೆಂದು ಉಪಕ್ರಮಿಸುವದು ।
ಅದರ ಮೂಲಕಾರಣ ಅಥವಾ ನಾಮ ತಿಳಿಯದು । ಮೇಲೆ ತೋರುವ ಸಂಭ್ರಮ ಬೇರೆಯೇ ॥ 114

'ಮಾತಾಡುವವನೇನು ಮಾಡಿಯಾನು । ಗರ್ಜಿಸಿದರೆ ಮಳೆ ಬರುವದೇನು' ।
ಈ ಗಾದೆ ಮಾತಿನ ಪ್ರತ್ಯಯವನು । ವ್ಯತ್ಯಯವಿಲ್ಲದೆ ಸಾಯಿ ತೋರುವರು ॥ 115

ಬಾಬಾರಂಥ ಅವತಾರ ಮೂರ್ತಿಗಳು । ಪರೋಪಕಾರಾರ್ಥ ಧರೆಯಲವತರಿಸಲು ।
ಇಚ್ಛಿತ ಕಾರ್ಯಪೂರ್ತಿಯಾಗಲು । ಅವ್ಯಕ್ತದಲಿ ಲೀನರಾಗುವರು ॥ 116

ನಮಗೆ ಗೊತ್ತಿಲ್ಲ ಮೂಲಕಾರಣ । ಎಲ್ಲಿಂದ ಬಂದೆವು ಎಲ್ಲಿಗೆ ಪ್ರಯಾಣ ।
ನಾವೇತಕಾದೆವು ನಿರ್ಮಾಣ । ಈ ಜನ್ಮದ ಪ್ರಯೋಜನವಾದರೂ ಏನು ॥ 117

ಇರಲಿ ಸ್ವಚ್ಛಂದದಲಿ ಜೀವನ ಕಳೆದು । ಕೊನೆಗೆ ಮೃತ್ಯುವು ಹತ್ತಿರ ಬಂದು ।
ಸಕಲ ಇಂದ್ರಿಯಗಳು ವಿಕಲಗೊಂಡು । ಆದರೂ ಸುವಿಚಾರ ಹೊಳೆಯದು ॥ 118

ಹೆಂಡತಿ ಮಕ್ಕಳು ತಂದೆ ತಾಯಿಯರು । ಇಷ್ಟಮಿತ್ರರು ಎಲ್ಲ ಸ್ವಜನರು ।
ದೇಹ ತ್ಯಜಿಸಿದ್ದು ಕಣ್ಣಾರೆ ಕಂಡರೂ । ಮನಕೆ ಸುವಿಚಾರ ಹೊಳೆಯದು ॥ 119

ಹಾಗಿರಲಿಲ್ಲ ಸಂತಜನ । ಅವರು ಇರುವರು ಅತ್ಯಂತ ಸಾವಧಾನ ।
ಅಂತಕಾಲದ ಪೂರ್ಣಜ್ಞಾನ । ಗೊತ್ತು ನಿಜ ನಿರ್ವಾಣ ಅವರಿಗೆ ॥ 120

ದೇಹವಿರುವವರೆಗೆ ಅತಿ ಪ್ರೀತಿಯಿಂದಾಗಿ । ದೇಹ ಸವಿಸುವರು ಭಕ್ತರಿಗಾಗಿ ।
ಉಪಯೋಗಿಸುವರು ನಿಜ ಭಕ್ತರ ಹಿತಕ್ಕಾಗಿ । ದೇಹಾವಸಾನದ ನಂತರದವೂ ॥ 121

ದೇಹವಿಡುವ ಮೊದಲೇ ಕೆಲವರು । ತಮ್ಮ ಸಮಾಧಿಯ ಕಟ್ಟಿಸಿಡುವರು ।
ಮುಂದೆ ನಿಜದೇಹಕ್ಕೆ ವಿಶ್ರಾಂತಿ ಸಿಗಲೆಂದು । ಆಸ್ಥಾನದಲಿ ನಿಶ್ಚಿತವಾಗಿ ॥ 122

ಬಾಬಾರೂ ಹಾಗೆಯೇ ಮಾಡಿದ್ದು । ಆದರೆ ಯಾರಿಗೂ ಮೊದಲು ತಿಳಿಯಲಿಲ್ಲ ಅದು ।
ಸಮಾಧಿ ಮಂದಿರವ ಕಟ್ಟಿಸಿಕೊಂಡು । ಅಘಟಿತವ ಮಾಡಿ ತೋರಿದರು ॥ 123

ನಾಗಪುರದ ದೊಡ್ಡ ಧನಿಕರು । ಬಾಪೂಸಾಹೇಬ ಬುಟ್ಟಿ ಎಂಬವರು ।
ಅವರಿಂದ ಬಾಬಾ ನಿರ್ಮಿಸಿದರು । ಬಾಬಾ ತಮ್ಮ ಸ್ಮಾರಕವನು ॥ 124

ಬಾಪೂ ಸಾಹೇಬ ಪರಮ ಭಕ್ತ । ಸಾಯಿಚರಣದಲಿ ನಿತ್ಯಾನುರಕ್ತ ।
ಬಂದರು ನಿಜ ಪರಿವಾರ ಸಹಿತ । ಸೇವೆಗೆ ನಿಂತರು ಶಿರಡಿಯಲಿ ॥ 125

ಸಾಯಿ ಚರಣದಲಿ ಮನಸಿಡುತ । ನಿತ್ಯಾನುವರ್ತಿಯಾಗಿ ಅಲ್ಲೇ ಇರುತ ।
ಮುಂದೆಯೂ ಹಾಗೆಯೇ ನಿತ್ಯಾಂಕಿತ । ಶಿರಡಿಯಲೇ ಇರಬೇಕು ಎನಿಸಿತು ॥ 126

ಒಂದು ಸ್ಥಳವನು ಖರೀದಿಸಿ । ಅಲ್ಲೊಂದು ಚಿಕ್ಕ ಮನೆ ಕಟ್ಟಿಸಿ ।
ಸ್ವತಂತ್ರವಾಗಿ ಅಲ್ಲೇ ಇರಬೇಕೆಂದು ಎಣಿಸಿ । ವಿಚಾರ ಮಾಡಿದರು ಮನದಲಿ ॥127

ಇಲ್ಲಿಯೇ ಬಿತ್ತಿದ ಮೂಲ ಬೀಜವದು । ಆದರದೇ ವೃಕ್ಷ ಈ ಮಂದಿರ ಇಂದು ।
ಭಕ್ತರಿಗಾಗಿ ದೃಶ್ಯ ಸ್ಮಾರಕವಾಗಿದ್ದು । ಸಾಯಿ ಮಹಾರಾಜರ ಪ್ರೇಮದ್ದು ॥ 128

ಹೇಗೆ ಆಯಿತು ಇದರ ಬೆಳವಣಿಗೆ । ಉಪಕ್ರಮವಾಯಿತು ಯಾವ ರೀತಿಯಾಗೆ ।
ಈ ಆಕಾರವನಿದು ತಳೆದುದು ಹೇಗೆ । ಎಲ್ಲ ವೃತ್ತಾಂತವ ಕೇಳಿರಿ ॥ 129

ಈ ವಿಚಾರ ನಡೆದಿತ್ತು ಮನದಲ್ಲೇ । ದೀಕ್ಷಿತರ ಮನೆಯ ಅಟ್ಟದ ಮೇಲೆ ।
ಬಾಪೂಸಾಹೇಬರ ನಿದ್ದೆಯಲಿ । ಮೋಜಿನ ದೃಷ್ಟಾಂತವ ಕಂಡರು ॥ 130

ಅಲ್ಲಿಯೇ ಒಂದು ಹಾಸಿಗೆಯಲ್ಲಿ । ಮಾಧವರಾಯರೂ ಮಲಗಿದ್ದರಲ್ಲಿ ।
ಅವರೂ ಕಂಡರು ಅದೇ ದೃಷ್ಟಾಂತವನಲ್ಲಿ । ಪರಮ ವಿಸ್ಮಿತರಿಬ್ಬರೂ ॥ 131

ಬಾಪೂಸಾಹೇಬರು ಸ್ವಪ್ನ ಕಂಡದ್ದು । ಬಾಬಾ ಅವರಿಗೆ ಆಜ್ಞಾಪಿಸಿದ್ದು ।
ನೀವು ನಿಮ್ಮ ವಾಡೆಯ ಕಟ್ಟುವದು । ಗುಡಿಯ ಸಮವೇತ ಇದು ನಿಶ್ಚಯ ॥ 132

ಕಂಡ ಕೂಡಲೇ ಈ ದೃಷ್ಟಾಂತ । ಬಾಪೂಸಾಹೇಬರು ಎಚ್ಚರಾಗುತ ।
ಸಂಪೂರ್ಣ ಸ್ವಪ್ನವ ನೆನಪಿಸಿಕೊಳ್ಳುತ । ಹಾಸಿಗೆಯಲಿ ಎದ್ದು ಕುಳಿತರು ॥ 133

ಇತ್ತ ಹೀಗೆ ನಡೆದಿತ್ತು । ಅಷ್ಟರಲಿ ಮಾಧವರಾಯರು ಅಳುವದು ಕೇಳಸಿತು ।
ನಿದ್ರಾವಸ್ಥೆ ಕಳೆಯಿತು । ಬುಟ್ಟಿಯವರವನ ಎಚ್ಚರಿಸಿದಾಗ ॥ 134

ಏತಕ್ಕೆ ಅಳುತಿದ್ದಿರಿ ಹೀಗೆ । ಎಂದು ಮಾಧವರಾಯರ ಕೇಳಿದಾಗ್ಯೆ ।
ಎಂದನು ಪ್ರೇಮೋದ್ರೇಕವಾಯಿತೆನಗೆ । ಶ್ರೀಯ ಪ್ರೇಮೋದ್ಗಾರ ಕೇಳಲು ॥ 135

ಕಂಠ ಬಾಷ್ಪ ಗದ್ಗದವಾಯಿತು । ಕಣ್ಣಲ್ಲಿ ಅಶ್ರುಜಲ ಹರಿಯಿತು ।
ಉತ್ಕಟ ಪ್ರೀತಿಯ ತಡೆಯಲಾರದಾಯಿತು । ಅದು ಪರಿಸ್ಫುಟವಾಯಿತು ರುದನದಲಿ ॥ 136

ಬಾಬಾ ನನ್ನ ಹತ್ತಿರ ಬಂದು । ಸ್ಪಷ್ಟ ಶಬ್ದದಲಿ ಆಜ್ಞೆ ಇತ್ತದ್ದು ।
ವಾಡೆ ಗುಡಿಯೆರಡೂ ಕಟ್ಟಬೇಕೆಂದು । ಎಲ್ಲರ ಅಭೀಷ್ಟವ ಪೂರೈಸುವೆ ॥ 137

ಬಾಪೂಸಾಹೇಬರಾದರು ವಿಸ್ಮಿತ । ಇಬ್ಬರಿಗೂ ಒಂದೇ ದೃಷ್ಟಾಂತ ।
ಮನವಾಯಿತು ಸಂಶಯ ರಹಿತ । ಕಾರ್ಯಕ್ಕೆ ತೊಡಗುವದು ನಿಶ್ಚಿತ ॥ 138

ಬುಟ್ಟಿಯವರು ತಾವು ಆಗರ್ಭ ಶ್ರೀಮಂತರು । ವಾಡೆಮಂದಿರ ಕಟ್ಟಿಸಲು ಸಮರ್ಥರು ।
ಮಾಧವರಾಯರು ಮಾತ್ರ ಸುಖವಸ್ತುಗಳಾಗಿದ್ದರು । ಆದರೊಂದೇ ದೃಷ್ಟಾಂತ ಇಬ್ಬರಿಗೂ ॥139

ಪರಸ್ಪರರು ಸ್ವಪ್ನಗಳು ಒಂದಾಗಲು । ಪ್ರೇಮಾನಂದವು ಉಕ್ಕೇರಲು ।
ರೂಪ ರೇಖೆಗಳು ನಿಶ್ಚಿತವಾಗಲು । ಯೋಜನೆಯ ಅನುಮೋದಿಸಿದರು ಕಾಕಾ ॥140

ಹೀಗಿರಲು ಮರುದಿನ ಬೆಳಗಿನಲಿ । ಮೂವರೂ ಹೋದರು ಬಾಬಾರ ಬಳಿ ।
ಬಾಬಾ ಪ್ರೇಮ ಪೂರಿತರಾಗಿ ನಿತ್ಯದಂದದಲಿ । ಶಾಮಾನ ಮುಖವ ನಿರೀಕ್ಷಿಸಿದರು ॥ 141

ಶಾಮಾ ಎಂದ ಏನೂ ತಿಳಿಯದಂಥ । ದೇವಾ ಏನಿದು ನಿನ್ನ ಆಟ ।
ನಿದ್ದೆ ಮಾಡಲೂ ಬಿಡೆ ನಿಶ್ಚಿಂತ । ಅಲ್ಲಿಯೂ ನಮ್ಮನ್ನು ಆಡಿಸುವಿ ॥ 142

ಆಗ ಬಾಬಾ ಕೇಳಿ ಆ ಮಾತು । ತಮ್ಮ ಕಿವಿಗಳ ಮೇಲೆ ಕೈಯಿಟ್ಟು ।
ಎಂದರು, "ನಮ್ಮ ಸ್ಥಳದಲ್ಲಿ ಇರುವೆವು ನಾವಂತೂ । ಯಾರು ಏನೇ ಅನ್ನಲಿ" ॥ 143

ಬಳಿಕ ಮೇಲೆ ಹೇಳಿದ ಯೋಜನೆಯನ್ನು । ಬಾಬಾರೆದುರಿಟ್ಟರು ಅನುಮೋದಿಸಲದನು ।
ಕಟ್ಟಲು ಸಮಂದಿರ ಸದನವನು । ಕೂಡಲೇ ಅನುಜ್ಞೆ ದೊರೆಯಿತು ಬಾಬಾರದು ॥ 144

ಮಾಧವರಾಯರು ನಡಕಟ್ಟಿ ನಿಂತು । ಆಯಿತು ನೆಲಮನೆ ಮತ್ತು ಮೊದಲ ಅಂತಸ್ತು ।
ಅವರ ಕೈಯಿಂದಲೇ ಬಾವಿಯೂ ಆಯಿತು । ಕಾರ್ಯವೀ ಹಂತಕ್ಕೆ ಮುಟ್ಟಿತು ॥ 145

ಬಾಬಾ ಲೇಂಡಿಗೆ ಹೋಗುತಿದ್ದಾಗ । ಅಥವಾ ತಿರುಗಿ ಬರುತಿದ್ದಾಗ ।
ಕಿಡಕಿ ಬಾಗಿಲಗಳ ಕೂಡ್ರಿಸುವಾಗ । ಬಾಬಾ ಉತ್ಸುಕತೆಯಿಂದ ನೋಡುತಿದ್ದರು ॥ 146

ಹೇಳುತಿದ್ದರು ತೋರಿ ಬೆರಳು । ಇಲ್ಲಿ ಕಿಡಕಿ ಇಲ್ಲಿ ಬಾಗಿಲು ।
ಇತ್ತ ಪೂರ್ವಕ್ಕೆ ಗ್ಯಾಲರಿ ಮಾಡಲು । ಅಂದವಾಗಿ ಕಾಣುವದು ॥ 147

ಮುಂದೆ ಕಾರ್ಯಕಾರಣ ನಿಮಿತ್ತದಿಂದ । ಬಾಪೂಸಾಹೇಬ ಜೋಗರ ಹಸ್ತದಿಂದ ।
ಮುಂದಿನ ಕಾರ್ಯ ನಡೆಯಬೇಕಿತ್ತದರಿಂದ । ಅವರಿದನು ಒಪ್ಪಿಸಲಾಯಿತು ॥ 148

ಕೆಲಸ ನಡೆಯುತ್ತಿದ್ದಾಗ ಹೀಗೆ । ವಿಚಾರ ಬಂದಿತು ಬುಟ್ಟಿಯವರ ಮನಸಿಗೆ ।
ಇದರಲ್ಲಿಯೇ ಗರ್ಭಗುಡಿಯೊಂದು ಮಾಡಿದರೆ ಹೇಗೆ । ಅಲ್ಲಿ ಮುರಲೀಧರನನು ಸ್ಥಾಪಿಸಬಹುದು ॥ 149

ಕಲ್ಪನೆಯೇನೋ ಹೊಳೆಯಿತು । ಆದರೆ ಬಾಬಾರ ಇಷ್ಟವ ಕೇಳದ ಹೊರತು ।
ಅವರ ಆಜ್ಞಾಪನೆಯಾಗದ ಹೊರತು । ಬುಟ್ಟಿ ಯಾವಕಾರ್ಯವನೂ ಮಾಡುತಿರಲಿಲ್ಲ ॥ 150

ಇದಾಗಿತ್ತವರ ನಿತ್ಯದ ನೇಮ । ಬಾಬಾರ ಅನುಜ್ಞೆಯೇ ವರ್ಮ ।
ಅಂಥದೊಂದೂ ಇರಲಿಲ್ಲ ಕರ್ಮ । ಯಾವುದು ಬಾಬಾರಿಲ್ಲದೇ ಉಪಕ್ರಮಿಸಲಾಗಿತ್ತು ॥ 151

ನಡುವಿನ ಕೋಣೆಯನಾದರೂ ಏಕೆ ಮಾಡುವರು । ಅದರ ಪ್ರಯೋಜನವಾದರೂ ಏನಿರುವದು ।
ಎರಡೂ ಬದಿಯ ಗೋಡೆಗಳ ಕೆಡವುವದು । ಮತ್ತೆ ಮುರಲೀಧರನ ಸ್ಥಾಪಿಸುವದು ॥152

ಆ ಕೋಣೆಯಾಗಬೇಕು ದೇವಾಲಯ । ಇದು ಬಾಪೂಸಾಹೇಬರ ಮನೋದಯ ।
ಆದರೆ ಕೇಳಬೇಕು ಬಾಬಾರ ಆಶಯ । ಅವರಿಚ್ಛೆಯಿದ್ದರೆ ಮಾಡಬೇಕು ॥ 153

ಎಂದು ಹೇಳಿದರು ಮಾಧವರಾಯರಿಗೆ । ತಾವೇ ಕೇಳಬೇಕು ಬಾಬಾರಿಗೆ ।
ಬಳಿಕ ತೊಡಗಬೇಕು ಮುಂದಿನ ಯೋಜನೆಗೆ । ಸಮರ್ಥರ ಮನಕೆ ಸರಿ ಎನಿಸಿದಂತೆ ॥ 154

ಬಾಬಾ ಫೇರಿಗೆ ಹೊರಟಾಗ । ವಾಡೆಯ ಹತ್ತಿರ ಬಂದಾಗ ।
ಬಾಗಿಲ ಬಳಿ ಬಾಬಾ ಆಗಮಿಸಿದಾಗ । ಶಾಮರಾಯರವರ ಕೇಳುವರು ॥ 155

ದೇವಾ ಆಲಿಸಿರಿ ಬಾಪೂಸಾಹೇಬರ ಅಂಬೋಣ । ಕೆಡವಿ ಆ ಎರಡೂ ಗೋಡೆಗಳನ ।
ಅಲ್ಲಿ ಪ್ರೀತಿಯಿಂದ ಮಾಡುವ ಸ್ಥಾಪನ । ಕೃಷ್ಣಮೂರ್ತಿ ಮುರಲೀಧರನದು ॥ 156

ಮಧ್ಯ ಭಾಗದಲಿ ಬಿಟ್ಟು ಚೌಕಾದ ಸ್ಥಳವನ । ಅಲ್ಲಿ ಮಾಡೋಣ ಸಿಂಹಾಸನ ।
ಅದರ ಮೇಲೆ ಮುರಲೀಧರ ವಿರಾಜಮಾನ । ಶೋಭಾಯಮಾನವಾಗಿ ಕಾಣುವದು ॥ 157

ಬಾಪೂಸಾಹೇಬರು ಹೀಗೆನ್ನುವರು । ನಿಮ್ಮ ಅನುಮತಿ ಬೇಕು ಆದರೂ ।
ಗುಡಿ ಮತ್ತು ವಾಡೆ ಎರಡೂ । ಕೈ ಜೊತೆಗೆ ಮುಗಿದು ಹೋಗುವವು ॥ 158

ಶಾಮನ ಈ ಮಾತು ಕೇಳಿ । ಬಾಬಾ ಆನಂದದಿ ಎಂದರು "ಆಗಲಿ ।
ಮಂದಿರ ಪೂರ್ಣವಾಗಲಿ । ಆಗ ನಾವೂ ಇಲ್ಲಿ ವಸ್ತಿಗೆ ಬರುವೆವು" ॥ 159

ವಾಡೆಯತ್ತ ದೃಷ್ಟಿ ನೆಟ್ಟು । ಬಾಬಾರ ಈ ಮಧುರ ಮಾತು ।
"ವಾಡೆಯೊಮ್ಮೆ ಪೂರ್ಣವಾಯಿತು । ಎಂದರೆ ನಮಗಾಗಿಯೇ ಅದನಿಡುವೆವು ॥ 160

ಇಲ್ಲಿಯೇ ನಾವು ಮಾತಾಡಿ ನಲಿಯೋಣ । ಇಲ್ಲಿ ನಾವೆಲ್ಲ ಆಟವಾಡೋಣ ।
ಪ್ರೀತಿಯಿಂದೊಬ್ಬರೊಬ್ಬರ ಅಪ್ಪಿಕೊಳ್ಳೋಣ । ಆನಂದದಿ ಕಾಲವ ಕಳೆಯೋಣ" ॥ 161

ಆ ಸಾಯಿ ಸಮರ್ಥರಿಗೆ । ಮಾಧವರಾಯರು ಕೇಳಿದರು ಹೀಗೆ ।
ಮುಹೂರ್ತ ಮಾಡುವಾ ಅಡಿಗಲ್ಲಿಗೇ । ಇದೇ ಅನುಜ್ಞೆಯಾಗಿದ್ದರೆ ॥ 162

ದೇವಾ ಸಮಯ ಒಳ್ಳೆಯದಿರುವದಲ್ಲ । ತರಲೇನು ಒಡೆಯಲು ತೆಂಗಿನಕಾಯಿ ।
'ಒಡೆ ಒಡೆ' ಎಂದಾಗ ತತ್ಕಾಲ । ತಂದು ಕಾಯಿಯ ಒಡೆದರು ॥ .163

ಮುಂದೆ ಅಲ್ಲಿ ಗರ್ಭಗುಡಿಯಾಗಿ । ಕಟ್ಟಿಯಾ ಆಯಿತು ಮುರಲೀಧರನಿಗಾಗಿ ।
ಒಬ್ಬ ಶಿಲ್ಪಿಯನೂ ನೇಮಿಸಿದರು ಮೂರ್ತಿಗಾಗಿ । ಬೇಗ ಅದ ತಯಾರಿಸಲೆಂದು ॥ 164

ಮುಂದೆ ಇಂಥ ಸಮಯ ಒದಗಿತು । ಬಾಬಾರಿಗೆ ಅಸ್ವಸ್ಥತೆಯುಂಟಾಯಿತು ।
ಅಂತಕಾಲವೇ ಹತ್ತಿರ ಬಂತು । ಭಕ್ತರ ಮನದಲಿ ತಳಮಳ ॥ 165

ಇನ್ನು ಮುಂದೆ ಈ ವಾಡೆಯ ಸ್ಥಿತಿ । ಏನಾಗುವದೆಂಬ ಚಿಂತೆ ಹುಟ್ಟಿ ।
ಬಾಪೂ ಸಾಹೇಬರು ಅತಿ । ಮನದಿ ಅಸ್ವಸ್ಥರಾದರು ॥ 166

ಇದರ ನಂತರ ಬಾಬಾರ ಚರಣಗಳು । ಪ್ರವೇಶಿಯಾವೇ ಈ ಮಂದಿರದೊಳು ।
ವೆಚ್ಚವಾದವು ಲಕ್ಷಗಟ್ಟಲೇ ರೂಪಾಯಿಗಳು । ಕೊನೆಗೆ ಈ ವ್ಯತ್ಯಯ ಬಂದಿತು ॥ 167

ಬಾಬಾ ದೇಹವಿಟ್ಟನಂತರ । ಏತಕ್ಕೆ ಮನೆ ಏತಕ್ಕೆ ಮುರಲೀಧರ ।
ಏತಕ್ಕೆ ವಾಡೆ ಅಥವಾ ಮಂದಿರ । ಎಂದು ಬುಟ್ಟಿಯವರು ಮನನೊಂದುಕೊಂಡರು ॥168

ಮುಂದೆ ಕರ್ಮಧರ್ಮಸಂಯೋಗದಿಂದ । ಅಂತ ಸಮಯದ ಸಾಯಿಯ ಆಜ್ಞೆಯಿಂದ ।
ಆ ವಾಡೆಯ ಮಹದ್ಭಾಗ್ಯದಿಂದ । ಎಲ್ಲರ ಮನಸಿನಂತೆ ಕಾರ್ಯ ನಡೆಯಿತು ॥ 169

"ವಾಡೆಯಲ್ಲಿ ಇಡಿರಿ ನನ್ನ" । ಇದು ಬಾಬಾರ ಅಂತಕಾಲದ ವಚನ ।
ಬಾಬಾರ ಮುಖದಿಂದ ಹೊರಟದ್ದುದನ । ಕೇಳಿ ಎಲ್ಲರ ಮನ ನಿಶ್ಚಿಂತವಾಯಿತು ॥ 170

ಬಳಿಕ ಆ ಪವಿತ್ರ ಸಾಯಿ ಶರೀರ । ಆಯಿತು ಗರ್ಭಗುಡಿಯಲ್ಲೇ ಸ್ಥಿರ ।
ವಾಡೆಯಾಯಿತು ಸಮಾಧಿ ಮಂದಿರ । ಅಗಾಧ ಚರಿತ್ರೆ ಸಾಯಿಯದು ॥ 171

ಧನ್ಯ ಭಾಗ್ಯ ಆ ಬುಟ್ಟಿಯವರದು । ಯಾರ ಮನೆ ಸ್ವಂತದ್ದು ।
ವಿಶ್ರಾಂತಿ ಪಡೆಯಿತು ಶರೀರ ಶ್ರೀಸಾಯಿಯದು । ನಾಮ ಅವರದು ಅತಿ ಪಾವನ ॥ 172

ಇರಲಿಂತು ಈ ಕಥೆ ಪಾವನ । ಕೇಳಿ ಶ್ರೋತೃಗಳಾಗುವರು ಸುಖ ಸಂಪನ್ನ ।
ಹೇಮಾಡ ಸಾಯಿನಾಥರಿಗೆ ಶರಣ । ಕ್ಷಣವೊಂದು ಆ ಚರಣಗಳ ಬಿಟ್ಟಿರಲಾರ ॥173

ಬರಲಿ ಭೋಗ ಇಷ್ಟಾನಿಷ್ಟ । ಸಾಯಿಯೇ ಇಡುವನೆಮ್ಮನು ಸಂತುಷ್ಟ ।
ನಡೆದರಾ ಮಾರ್ಗದಲಿ ಯಥೋಪದಿಷ್ಟ । ಅಭೀಷ್ಟ ಲಭಿಸುವದು ತಪ್ಪದೇ ॥ 174

ಕಥೆ, ವಕ್ತ ಮತ್ತು ವದನಗಳು । ಶ್ರೀ ಸಾಯಿ ಸಮರ್ಥರೇ ಎಲ್ಲ ಆಗಿರಲು ।
ಹೇಮಾಡರು ಎಲ್ಲಿಯವ ಇಂತಿರಲು । ಬರೀ ಹೆಸರು ಮಾತ್ರದವ ॥ 175


ಅದಕ್ಕೇ ಮುಂದೆ ಪ್ರೇರಣೆಯಾದಂತೆ । ಕೇಳುವಿರಿ ಕಥೆಯನದರಂತೆ ।
ಕಾಲಕಾಲಕೆ ರಚನೆ ಅದರಂತೆ । ಅದರ ಚಿಂತೆ ಇಂದೇಕೆ ॥ 176

ಶ್ರೀ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀಸಾಯಿ ಸಮರ್ಥಸಚ್ಚರಿತೆ ಗೀತಾ ವಿಶಿಷ್ಠ ಶ್ಲೋಕಾರ್ಥ ನಿವೇದನಂ ತಥಾ ಸಮಾಧಿ ಮಂದಿರ ನಿರ್ಮಾಣಂ ನಾಮ । ಏಕೋನ ಚತ್ವಾರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

536.1



## ॥ ಅಥ ಶ್ರೀ ಸಾಯೀ ಸಚ್ಚರಿತ ॥

## ಅಧ್ಯಾಯ ನಾಲವತ್ತು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*॥ ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*॥ ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಧನ್ಯ ಧನ್ಯ ಶ್ರೀ ಸಾಯಿ ಸಮರ್ಥ । ಗ್ರಂಥ ರೂಪದಲ್ಲಿ ಪರಮಾರ್ಥ ॥
ಭೋದಿಸಿ ಭಕ್ತರನು ಮಾಡಿದೆ ಕೃತಾರ್ಥ । ಅದರಿಂದ ಕೃತಕಾರ್ಯಾರ್ಥ ಸಂಪಾದಿಸುವ ॥ 1

ಯಾರ ಕರ ಶಿರದ ಮೇಲಿರಿಸಲು । ಶಕ್ತಿ ಪಾತವಾಗುವುದು ತತ್‌ಕ್ಷಣದೊಳು ।
ಅಪ್ರಾಪ್ಯ ವಸ್ತುವು ಪ್ರಾಪ್ತವಾಗಲು । ಭೇದವು ತೊಲಗಿ ಹೋಗುವುದು ॥ 2

ಕರಗಿಸಿ ನಾ ನೀನೆಂಬ ಭಿನ್ನಾನ್ನಭಾವವನು । ಯಾರಿಗೆ ಮಾಡಲು ಸಾಷ್ಟಾಂಗ ನಮನವನು ।
ಹೃದಯಲ್ಲಪ್ಪಿಕೊಳ್ಳುವನು । ಅನನ್ಯ ಶರಣಾಗತನಾದವನ ॥ 3

ಸಾಗರ ಸರಿತೆ ಹೆಸರಿನಲಿ ಭಿನ್ನವಿಹವು । ಆದರೆ ರೂಪದಲಿ ಒಂದೇ ಅವು ।
ವರ್ಷಾಕಾಲದಲಿ ಸಂಗಮದಿ ಕೂಡುವವು । ಭಿನ್ನತೆಯೆಂಬುದು ಅಲ್ಲಿರದು ॥ 4

ಹಾಗೆಯೇ ಭಾವಿಸಿ ಸದ್ಗುರುನಾಥನನು । ಭಕ್ತಿಯಲಾಗಲು ಅನನ್ಯಶರಣಾಗತನು ।
ಅವನೂ ಭಕ್ತನಿಗೆ ನಿಜಗುರುತ್ವವನೀಯುವನು । ಭಕ್ತನ ಸದ್ಭಾವನೆಯ ನೋಡಿ ॥ 5

ಜಯ ಜಯಹೇ ದೀನದಯಾಳಾ । ಭಕ್ತೋದ್ಧಾರಾ ಪರಮ ಪ್ರೇಮಳಾ ।
ವ್ಯಾಪಿಸಿ ಅಖಂಡ ಬ್ರಹ್ಮಾಂಡ ಮಾಲಾ । ಶಿರಡಿಯಲಿ ಬೇರೆಯಾಗಿ ಇರುವಿ ॥ 6

ಬೀಸುವ ಕಲ್ಲನ್ನಿಟ್ಟು ಕಾಲು ಚಾಚಿಕೊಂಡು । ಸಂತನು ಕಾಳು ಬೀಸುತ್ತಿದ್ದುದು ।
ಗೂಟವ ಒಡಿದು ಮುಕ್ಕು ಹಾಕುತ್ತಿದ್ದುದು । ಆಶ್ಚರ್ಯವಲ್ಲ ನನ್ನ ಮನಕೆ ॥ 7

ಅದೇ ಈ ಗ್ರಂಥಕ್ಕೆ ಮೂಲ । ಮನದಲಿಚ್ಛೆಯಾಯಿತು ಪ್ರಬಲ ।
ಹೀಗೆ ಈ ಕರ್ಮಗಳನ್ನೆಲ್ಲ ವರ್ಣಿಸಿದರೆ ಪಾಪಕಳೆಯುವುದೆಂದು ॥ 8

ಹರಿಯು ತಾನಾಗುವ ಪ್ರಸನ್ನ । ತನಗಿಂತ ತನ್ನ ಭಕ್ತನ ।
ಕೀರ್ತನ ಅಥವಾ ಗುಣಗಾನ । ಮಾಡುವದನು ಕೇಳಿದಾಗ ॥ 9

ಶಂಕಿಸಬಹುದು ಸಜ್ಜನ ಶ್ರೋತೃಗಳು । ಈ ವಿಧಾನವು ನಿರಾಧಾರವೆನಿಸಲು ।
ನೋಡಬೇಕು ಭವಿಷ್ಯೋತ್ತರ ಪುರಾಣದೊಳು । ತ್ರಿಪುರಾರಿಯೇ ಇದನು ಹೇಳಿರುವನು ॥10

ಸಾಯಿಯದೇ ಎಲ್ಲ ಪ್ರೇರಣೆ ಇದು । ಆದರೆ ಲೌಕಿಕ ರೀತಿಯಲಿ ನಿದರ್ಶನವೆಂದು ।
ಈ ರಚನೆಗೆ ಅನುಮೋದನೆ ಅವನದು । ಭಕ್ತ ಕಲ್ಯಾಣಾರ್ಥವಾಗಿ ॥ 11

ಸಾಯಿ ಸಮರ್ಥರ ಕಥೆಯನು । ಈ ಸಾಯಿ ಲೀಲಾವಲಿಯನು ।
ಕೇಳುವವರು ಜನ ಇಟ್ಟು ಬಲು ಪ್ರೀತಿಯನು । ಆಗಿನಿಂದ ತಿಂಗಳಿಂದ ತಿಂಗಳಿಗೆ ॥ 12

ಆ ಸಾಯಿಯೇ ಅನುಮೋದಿಸುವವನು । ಅವನೇ ನನಗೆ ಬುದ್ಧಿದಾತನು ।
ಅವನೇ ಮೂಲ ಚೇತನವ ಪ್ರವರ್ತಿಸುವವನು । ಅವನ ಕಥೆಯನವನೇ ಹೇಳಿಸುವ ॥ 13

ಈ ಹೇಮಾಡನು ಸ್ವಂತ ಬುದ್ಧಿಯಲಿ । ಇದನು ರಚಿವನೆಂಬ ವಿಕಲ್ಪವ ತರದಿರಿ ಮನದಲಿ ।
ಅದಕೆ ವಿನಂತಿಯಿದು ಶ್ರೋತೃಗಳಲಿ । ಗುಣ ದೋಷಗಳ ನೆನೆಗೆ ಹಚ್ಚದಿರಿ ॥ 14

ಗುಣವಿದ್ದರೂ ಅದು ಸಾಯಿಯದು । ದೋಷವಿದ್ದರೂ ಅದು ಅವನದು ।
ನಾನಂತೂ ಸಾಯಿ ಮಾಡಿದ ಸೂತ್ರದ ಗೊಂಬೆಯೊಂದು । ಸೂತ್ರದ ಆಧಾರದಿಂದ ಕುಣಿಯುವೆ ॥ 15

ಸೂತ್ರಧಾರನ ಕೈಯಲ್ಲಿ ಸೂತ್ರ । ಅವನಿಗೆ ಬೇಕಾದಂಥ ಚಿತ್ರ ।
ಬಣ್ಣ ಬಣ್ಣದ್ದು ಅಥವಾ ವಿಚಿತ್ರ । ಕುಣಿಸುವ ಚರಿತ್ರೆಯನನುಸರಿಸಿ ॥ 16

ಇರಲಿಲ್ಲಿಗೆ ಈ ಪ್ರಸ್ತಾಪ । ಕೇಳಲು ನೂತನ ಕಥಾನಕವ ।
ಉತ್ಕಂಠಿತರಾಗುವುದು ಶ್ರೋತೃಸ್ವಭಾವ । ಆ ಗುರುಭಕ್ತಗೌರವವ ಹಾಡುವಾ ॥ 17

ಮುಗಿಸುವಾಗ ಹಿಂದಿನಧ್ಯಾಯ । ಮುಂದಿನಧ್ಯಾಯದ ಸೂತೋವಾಚತೆಯ ।
ಈಗ ನೆನಪಿಗೆ ಬಂದ ಒಂದು ಸ್ಮೃತಿಯ । ಹೇಳುವೆನದ ಕೇಳಿರಿ ಆದರದಿ ॥ 18

ಇನ್ನು ಈ ಮಧುರ ಅಖ್ಯಾನವನು । ಕೇಳಿರಿ ಕೊಟ್ಟು ಗಮನವನು ।
ಪ್ರೀತಿಯಿಂದ ಭಕ್ತನು ನೀಡಲು ಭೋಜನವನು । ಸಾಯಿಗೆ ಬಹಳ ಸಮಾಧಾನ ॥ 19

ತನ್ನ ಮಕ್ಕಳಿಗೆ ಮಮತೆಯ ತಾಯಿ ಇರುವಂತೆ । ಭಕ್ತರಿಗೆ ಶ್ರೀ ಸಾಯಿ ಅದರಂತೆ ।
ಕರೆಗೆ ಬರುವಳು ಓಡಿ ಎಲ್ಲಿಯೇ ಇರುತೆ । ಅವಳುಪಕಾರವನಾರು ಹರಿಸಿಯಾರು ॥ 20

ದೇಹದಿಂದ ಶಿರಡಿಯಲ್ಲೇ ಇದ್ದೂ । ತ್ರೈಲೋಕ್ಯದಲಿ ಸಂಚಾರ ಅವರದು ।
ಸವಿಯಾದ ವೃತ್ತಾಂತವನೊಂದು ಇಂಥದು । ಶಾಂತ ಮನದಿಂದ ಆಲಿಸಬೇಕು ॥21

ಒಮ್ಮೆ ಈ ಸಾಯಿ ಪದದಲಿ ನಿಷ್ಠೆ ಇಟ್ಟ । ಬಾಳಾಸಾಹೇಬನೆಂಬ ಭಕ್ತ ಶ್ರೇಷ್ಠ ।
ಅವನ ತಾಯಿ ವ್ರತ ವೈಕಲ್ಯನಿಷ್ಠ । ಎಲ್ಲರಲ್ಲಿ ಅಭೀಷ್ಟಗಳ ಪಡೆಯುವಳು ॥ 22

ವ್ರತಗಳು ಅನೇಕ ಪರಿಯವು । ಅವಳ ಕೈಯಿಂದ ನಡೆದಿದ್ದವು ।
ಉಳಿದಿತ್ತು ಅವುಗಳ ಉದ್ಯಾಪನವು । ಅವೆಲ್ಲ ಸಾಂಗವಾಗಲು ॥ 23

ವ್ರತ ಸಂಖೆಯಾಗಲು ಪೂರ್ಣ । ಮಾಡಬೇಕಾಗುವುದು ಉದ್ಯಾಪನ ।
ಇಲ್ಲದಿದ್ದರೆ ದೊರೆಯದದರ ಪುಣ್ಯ । ಅಲ್ಲದೇ ವ್ರತವೇ ಅಪೂರ್ಣವು ॥ 24

ಇಪ್ಪತ್ತೈದು ಮೂವತ್ತು ವ್ರತಗಳು । ಇಷ್ಟರ ಉದ್ಯಾಪನೆ ಮಾಡಲು ।
ನೂರಿನ್ನೂರು ಬ್ರಾಹ್ಮಣರ ಉಣ್ಣಲು । ಆಮಂತ್ರಿಸುತ್ತಿದ್ದರು ದೇವ ಅವರು ॥ 25

ಆದಕ್ಕೊಂದು ತಿಥಿಯಗೊತ್ತು ಮಾಡಿಕೊಂಡು । ಈ ಉದ್ಯಾಪನೆ ಮಾಡುವುಕ್ಕೆಂದು ।
ದೇವ ಅವರು ಜೋಗರಿಗೆ ಪತ್ರ ಬರೆದು । ಬಾಬಾರಿಗೆ ವಿನಂತಿ ಮಾಡಲೆಂದು ॥26

ನೋಡಿ ಬರದೇ ಇದ್ದರೆ ತಾವು । ಸಾಂಗವಾಗದು ಈ ಉದ್ಯಾಪನವು ।
ಅದಕೆ ಮನ್ನಿಸಿ ನನ್ನ ಪ್ರಾರ್ಥನೆಯ ತಾವು । ಬಂದು ಈ ದೀನನ ಅಭಾರಿಯಾಗಿಸಬೇಕು ॥ 27

ನಾನಂತೂ ಸರಕಾರದ ಸೇವಕನಿರುವೆ । ಹೊಟ್ಟೆಗಾಗಿ ನೌಕರಿ ಮಾಡುವೆ ।
ಅದರಲ್ಲಿಯೇ ಆದಷ್ಟು ಪರಮಾರ್ಥವನೂ ಮಾಡುವೆ । ಇದನ್ನು ತಾವು ತಿಳಿದಿರುವಿರಿ ॥ 28

ಡಹಾಣೂದಿಂದ ದೂರ ಇಷ್ಟೊಂದು । ಕಷ್ಟವಾಗಿದೆ ನಾನೇ ಬರುವುದು ।
ಅದಕಾಗಿ ಈ ಆಮಂತ್ರಣವ ಸ್ವೀಕರಿಸುವುದು । ತಾವು ಬರುವಿರೆಂದು ಆಶೆ ಇಟ್ಟುಕೊಂಡಿರುವೆ ॥ 29

ಹೀಗೆ ಬಾಪೂಸಾಹೇಬ ಜೋಗರು । ಬಾಬಾರಿಗೆ ಪತ್ರವನು ಓದಿ ತೋರಿಸಿದರು ।
ಈ ಕಾರ್ಯವನು ಮುಗಿಸಿಕೊಡಬೇಕೆಂದರು । ಯಥಾಸಾಂಗವಾಗಿ ದೇವ ಅವರದು ॥30

ಶುದ್ಧ ಭಾವದ ಈ ಆಮಂತ್ರಣ । ಕೇಳಿ ಕೊಂಡರು ಬಾಬಾ ಸಂಪೂರ್ಣ ।
ಎಂದರು ಯಾರಿಗ ನನ್ನ ಸ್ಮರಣ । ನಿರಂತರ , ಅವರ ನೆನಪು ನನಗಿರುವದು ॥ 31

ನನಗೆ ಬೇಕಿಲ್ಲ ಕುದುರೆಗಾಡಿ । ಅಥವಾ ವಿಮಾನ ಇಲ್ಲವೇ ಉಗಿಬಂಡಿ ।
ಅವನ ಕರೆಯೊಂದೇ ಸಾಕು ತುಂಬಿದ ಪ್ರೇಮದಿ । ತಡವಿಲ್ಲದೆ ನಾನಾಕ್ಷಣದಿ ಪ್ರಕಟನಲ್ಲಿ ॥ 32

ನಾನು ನೀನು ಮತ್ತೊಬ್ಬ ಬೇರೆಯವ । ಮೂವರೂ ಕೂಡಿ ಹೋಗುವ ।
ಹೀಗೆ ಬರೆದು ತಿಳಿಸು ಪತ್ರವ । ಬರೆದವನಿಗಾನಂದವಾದೀತು ॥ 33

ಹೀಗಿರಲು ಬಾಬಾ ಅಂದುದು । ದೇವಾ ಅವರಿಗೆ ಜೋಗ ತಿಳಿಸಿದ ।
ದೇವ ಅವರಿಗೆ ಆಯಿತು ಆನಂದ । ಬಾಬಾರ ಅಮೋಘ ಮಾತಿನಿಂದ ॥ 34

ಪೂರ್ಣ ವಿಶ್ವಾಸ ದೇವರಿಗೆ । ಬಾಬಾ ತಪ್ಪದೇ ಬರುವರು ಇಲ್ಲಿಗೆ ।
ಆದರೆ ಇದರ ಅನುಭವ ಬಂದಾಗ್ಯೆ । ಅದು ಸುವರ್ಣಸಮಯವಾಗಾವುದು ॥ 35

ಆದರೆ ದೇವರಿಗೆ ಇದೂ ಗೊತ್ತು । ಮೂರು ಊರುಗಳಿಗೆ ಮಾತ್ರ ಶಿರಡಿಯ ಬಿಟ್ಟು ।
ಹೋಗುತ್ತಿರಾದರೆ ಅದೂ ಅಪರೂಪಕ್ಕಾಗಿತ್ತು । ನಿರಂತರ ಶಿರಡಿಯಲೇ ಅವರು ಇರಬೇಕು ॥ 36

ವರುಷ ಆರು ತಿಂಗಳಿಗೊಮ್ಮೆ ಅದೂ ಬಂದರೆ ಮನಸಿಗೆ । ಒಮ್ಮೊಮ್ಮೆ ಹೋಗುತ್ತಿದ್ದರು ಬಾಬಾ ರಹಾತೆಗೆ ।
ಒಮ್ಮೊಮ್ಮೆ ರುಯಿ-ನೀಮಗಾಂವಗಳಿಗೆ । ಆದರೆ ಅಖಂಡ ವಸ್ತಿ ಇರುವುದು ಶಿರಡಿಯಲೇ ॥ 37

ಬಿಟ್ಟು ಈ ಮೂರರಲ್ಲೊಂದು । ಬೇರೆಡೆ ಹೋಗುತ್ತಿರಲಿಲ್ಲ ಬಾಬಾ ಎಂದೂ ।
ಹೀಗಿರುವಾಗ ದೂರ ಇಷ್ಟೊಂದು । ಡಹಾಣಕ್ಕೆ ನನ್ನಲ್ಲಿ ಬಂದಾರು ಹೇಗೆ ॥ 38

ಆದರೂ ಪೂರ್ಣ ಲೀಲಾವತಾರಿಳವರು । ಇಚ್ಛಾಮಾತ್ರದಿಂದ ಸ್ವಚ್ಛಂದ ಚರಿಸುವರು ।
ಸಬಾಹ್ಯಂತರದಲ್ಲಿ ಪರಿಪೂರ್ಣ ತುಂಬಿಹರು । ಬರುಹೋಗುವುದೆಲ್ಲ ಲೋಕಾಚಾರ ॥39

ಅಲ್ಲಿಂದ ಇಲ್ಲಿಗೆ ಬರುವುದು । ಅಥವಾ ಇಲ್ಲಿಂದ ಅಲ್ಲಿಗೆ ಹೋಗುವುದು ।
ಎರಡನ್ನೂ ಆಕಾಶವು ತಿಳಿಯದು । ಸಬಾಹ್ಯಪರಿಪೂರ್ಣಅವರಿಹರು ॥ 40

ಆದರಂತೆ ಬಾಬಾ ದುರ್ಗಮ ಗತಿ ಇಹರು । ಸ್ಥಿರಚರಗಳಲೆಲ್ಲ ತುಂಬಿ ನಿಂತಿಹರು ।
ಬರುವುದು ಹೋಗುವುದು ಎಲ್ಲಿಂದ ಅವರು । ಸ್ವಚ್ಛಂದದಲಿ ಪ್ರಕಟರಾಗುವರು ॥ 41

ಹೀಗಿರೆ ಸನ್ಯಾಸಿಯೊಬ್ಬ ಈ ಮೊದಲಿಗೆ । ಒಂದು ತಿಂಗಳ ಸುಮಾರಿಗೆ ।
ಬಂದ ಸ್ಟೇಶನ್ ಮಾಸ್ತರರ ಬಳಿಗೆ । ಡಹಾಣೂ ಸ್ಟೇಶನ್‌ಕೆ ನಿಜಕಾರ್ಯಕ್ಕೆಂದು ॥ 42

ಅವನು ಗೋಶಾಲಾಪ್ರಚಾರಕ । ಗೋಸಂಸ್ಥೆಯ ಸ್ವಯಂಸೇವಕ ।
ಬಂದನು ವರ್ಗಣಿ ಬೇಡುವದಕ । ಸಾಂಪತ್ತಿಕ ಸ್ಥಿತಿಯ ಸುಧಾರಿಸಲು ॥ 43

ವೇಷ ಭೂಷಣಗಳಿಂದೆನಿಸಿದ ಬಂಗಾಲಿಯಾಗಿ । ಅದಕೆ ಮಾಸ್ತರ ಹೇಳಿದ ಊರಲ್ಲಿ ಹೋಗಿ ।
ಅಲ್ಲಿಯೇ ನಿಮ್ಮ ವ್ಯವಸ್ಥೆ ಚೆನ್ನಾಗಿ । ಆಗುವುದೆಂದು ಯುಕ್ತಿಯ ಹೇಳಿದ ॥ 44

ಅಲ್ಲಿರುವರು ಮಾಮಲೇದಾರ । ಅವರ ಮುಂದೆ ಇಡಿರಿ ಈ ವಿಚಾರ ।
ಅಲ್ಲಿ ಭೇಟಿಯಾಗುವರು ಶೆಟ್ಟಿ ಸಾಹುಕಾರ । ಅವರು ಕೈ ಭಾರ ಹಚ್ಚುವರು ನಿಮ್ಮ ಕೆಲಸಕೆ ॥ 45

ಒಬ್ಬ ಮಾಮಲೇದಾರ ಮುಂದಾಗಲು । ಹಾಂ ಎನ್ನುವದರಲಿ ಹಣ ಕೂಡವದು ।
ಈ ಧರ್ಮಕಾರ್ಯವ ಮಾಡಲು । ಸ್ವಸ್ಥಚಿತ್ತದಿಂದ ಹೋಗಿರಲ್ಲಿ ॥ 46

ಒಳಗೆ ಈ ಮಾತು ಆಡುವಷ್ಟರಲ್ಲಿ । ಕುದುರೆಯ ಕಾಲ ಸಪ್ಪಳ ಕೇಳಿ ಬಂತು ।
ಸ್ವತಃ ಮಾಮಲೇದಾರರೇ ಬಂದಿದ್ದರಲ್ಲಿ । ಇಳಿದು ಸ್ಟೇಶನದಲ್ಲಿ ಹೋದರು ॥ 47

ಮಾಸ್ತರಿಗೆ ಭೇಟಿಯಾಗಲೆಂದು । ಕೋಣೆಯಲವರು ಬಂದುದ ಕಂಡು ।
ಮಾಸ್ತರರು ಸಂನ್ಯಾಸಿಗೆಂದುದು । ಮಾಮಲೇದಾರರಿಲ್ಲಿಯೇ ಬಂದಿರಲು ॥ 48

ಮಾಸ್ತರರೆಂದರು ಸಂನ್ಯಾಸಿಗೆ । ಸುದೈವದಿಂದ ಬಂದಿರುವರಿವರು ಇಲ್ಲಗೇ ।
ಎಂದಾಗ ಸಂನ್ಯಾಸಿ ಅವರಿಗೆ । ನಿಜ ಮನೋಗತವನರಿಕೆ ಮಾಡಿಕೊಂಡ ॥ 49

ಬಳಿಕವರಿಬ್ಬರೂ ಹೊರಗೆ ಬಂದು । ಅಲ್ಲಿಯೇ ಒಂದು ಪೆಟ್ಟಿಗೆಯ ಮೇಲೆ ಕುಳಿತುಕೊಂಡು ।
ದೇವ ಅವರಿಗೆ ಸಂನ್ಯಾಸಿ ವಿನಂತಿಸಿಕೊಂಡದು । ಈ ಕಾರ್ಯವ ಮಾಡಿಕೊಡಬೇಕು ॥ 50

ಗೋರಕ್ಷಣದ ಈ ಧರ್ಮ ಕಾರ್ಯವು । ಕರಭಾರ ಹಚ್ಚದಿದ್ದರೆ ತಾವು ।
ನನ್ನಂಥ ಪರಕೀಯನಿಂದ ಈ ಕಾರ್ಯವು । ಒಂದಿಷ್ಟಾದರೂ ಆದೀತೆ ॥ 51

ತಾವು ತಾಲುಕಾಟ್ಟು ಅಧಿಕಾರಿಗಳು । ನಾನಂತೂ ಹೀಗೆ ಭಿಕ್ಷುಕನಾಗಿರಲು ।
ತಿರುಗುವೆ ಜನರ ಬಾಗಿಲ ಬಾಗಿಲು । ಆಕಳು ಉಪವಾಸ ಬೀಳದಿರಲೆಂದು ॥ 52

ಹೇಳಿದರೆ ತಾವು ಶಬ್ದ ಒಂದು । ಬೇಗನೆ ನನ್ನ ಕಾರ್ಯವಾಗುವುದು ।
ಗೋಮಾತೆಯ ಆಶೀರ್ವಾದ ದೊರಕುವುದು । ಯಶ ದೊರಕುವುದು ನಿಶ್ಚಿತ ॥ 53

ಸಂನ್ಯಾಸಿಯ ಮಾತು ಕೇಳಿದರು । ದೇವರವರಿಗೆ ಉತ್ತರಿಸಿದರು ।
ಸದ್ಯದಲಿ ವರ್ಗಣಿ ಕೂಡಿಸುತ್ತಿರುವರು । ಊರಲ್ಲಿ ಬೇರೆ ಕಾರ್ಯಕ್ಕಾಗಿ ॥ 54

ರಾವಸಾಹೇಬ ನರೋತ್ತಮ ಶೆಟ್ಟಿ ಯೆಂಬುವ । ದೀನರ ಬಗ್ಗೆ ದಯೆಯುಳ್ಳವ ।
ನಗರ ಶೆಟ್ಟಿಯ ಬಲು ಪ್ರಯತ್ನದವ । ಅವರೊಂದು ಯಾದಿಯ ತಯಾರಿಸಿರುವರು ॥ 55

ನಿಮ್ಮಯಾದಿಗೆ ಅದರಲ್ಲಿ । ಸ್ಥಳ ಹೇಗೆ ಸಿಕ್ಕೀತು ಹೇಳಿ ।
ಸಮಯವಿದ್ದಲ್ಲಿ ನಿಮ್ಮ ಅನುಕೂಲದಲಿ । ಅದಕೆ ಆಮೇಲೆ ವಿಚಾರ ಮಾಡುವಾ ॥ 56

ಅದಕೆ ತಾವು ಇನ್ನೆರಡು ಮೂರು ತಿಂಗಳು । ಬಿಟ್ಟು ಈ ಊರಿಗೆ ಬರಲು ।
ಆಗ ಬರುವುದು ನೋಡಲು । ಇಂದು ಅದು ಸಾಧ್ಯವಿಲ್ಲ ॥ 57

ಹೀಗಿರಲು ಅವನು ಅಲ್ಲಿಂದ ಹೋಗಿ । ಕಳೆದಿರಬಹುದು ಒಂದು ತಿಂಗಳಾಗಿ ।
ಈಗ ಮತ್ತೆ ಡಹಾಣೂಗೆ ಹಿಂದಿರುಗಿ । ಟಾಂಗೆಯಲಿ ಬಂದಿಳಿದಿರುವ ॥ 58

ದೇವ ಅವರ ಮನೆಯ ಎದುರುಗಡೆ । ಪರಾಂಜಪೆ ವಕೀಲರ ಮನೆ ಇದೆ ।
ಅಲ್ಲಿ ಟಾಂಗಾ ನಿಂತಾಗ್ಗೆ । ಸಂನ್ಯಾಸಿ ಅದರಿಂದಳಿದುದ ಕಂಡರು ॥ 59

ಅವನೇ ಆ ಹಿಂದೆ ಬಂದವ । ವರ್ಗಣಿ ಕೂಡಿಸಲು ಮತ್ತೆ ಬಂದಿರುವ ।
ಹೀಗೆ ಮಗನಿಗೆಂದರು ದೇವ । ಮನದಿ ಸಾಶಂಕಿತರಾಗಿ ॥ 60

ಕಳೆದಿಲ್ಲ ಇನ್ನೂ ಒಂದು ತಿಂಗಳು । ಕಾರಣವೇನು ಇಷ್ಟರಲ್ಲಿಯೇ ಇವನು ಬರಲು ।
ಮರೆತನೇ ನಾನು ಅಂದೇ ಹೇಳಿರಲೂ । ಅದರಿಂದ ಮನ ಸಶಂಕಿತವಾಯಿತು ॥ 61

ಅವನಲ್ಲಿಯೇ ಟಾಂಗಾ ಬಿಟ್ಟು । ಅಲ್ಲಿಯೇ ಸಮಯ ಕಳೆದು ಒಂದಿಷ್ಟು ।
ಬಂದ ದೇವ ಅವರ ಮನೆಯತ್ತು । ವನು ಹೇಳ ತೊಡಗಿದ ॥ 62

ಹತ್ತು ಗಂಟೆಯ ಸಮಯವದು । ಬ್ರಾಹ್ಮಣ ಭೋಜನ ಆರಂಭವಾಗಬೇಕಾದುದು ।
ಕಂಡು ದೇವ ಅವರು ಒದ್ದಾಡುವುದು । ಹೇಳಿದ ನನಗೆ ಹಣದ ಅವಸರವಿಲ್ಲ ॥ 63

ಆಯಾ ಹೂಂ ನ ಪೈಸೇಕೆಲಿಯೇ । ಆಜತೋ ಹಮಕೋ ಭೋಜನ ಚಾಹಿಯೇ ।
ದೇವ ಅಂದರು, ಆನಂದ ಹೈ ಆಯಿಯೇ । ಘುರ್‌ಹಿ ಸಮ್‌ಜಿಯೆ ಆಪಕಾ ॥ 64

ಆಗ ಸಂನ್ಯಾಸಿ ಎನುತ । ಹಮಾರೆ ದೋಸ್ತ ಹೈ ಸಾಥ ।
ಬಹುತ ಅಚ್ಛೀ ಹೈ ಎ ಬಾತ್ । ದೇವ ಎಂದರು ಅವನಿಗೆ ॥ 65

ಅವಕಾಶವಿತ್ತು ಊಟಕಿನ್ನೂ । ಅದಕ್ಕೆ ದೇವ ಕೇಳಿದರು ಅವನನ್ನು ।
'ಆಪಕಾ ಉತರಾ ಹೈ ಖಾಸ । ಜಹಾಂ ಮೈ ತಪಾಸಕೋ ಭೇಜೂಂ' ॥ 66

'ಕ್ಯಾಜರೂರತ್ ಕಬ್ ಮೈ ಆವೂಂ । ಕಿಸ್ ಘಂಟೆ ಮೈ ಹಾಜಿರ್ ರಹೂಂ ।
ಜಬ್ ಬೋಲೋಗೆ ತಬ್ ಆತಹೂಂ' । ಸಂನ್ಯಾಸಿಯು ಹೇಳತೊಡಗಿದ ॥ 67

'ಅಚ್ಛಾ ಬಚ್ಚೊಂಕೋ ಲೇಕೆ ಸಾಥ್ ಆನಾ । ಬಾರಾ ಘಂಟೆ ಬಜೆನೇಕೆ ವಖತ ।
ಆವೋ ಭೋಜನ ಪಾವೋ ಸಂತ್' । ದೇವ ಅವನಿಗೆ ಹೇಳಿದರಿಂತು ॥ 68

ಬಳಿಕ ಆ ಸಂನ್ಯಾಸಿ ಹೋದ । ಸರಿಯಾಗಿ ಹನ್ನೆರಡು ಗಂಟೆಗೆ ಬಂದ ।
ಇಬ್ಬರು ಜೊತೆಗಾರರೊಡನೆ ಊಟಮಾಡಿದ । ತೃಪ್ತರಾದರೆಲ್ಲವರು ॥ 69

ಅಡಿಗೆಯೆಲ್ಲ ಸಿದ್ಧವಾದಾಗ । ಬ್ರಾಹ್ಮಣರ ಪಂಕ್ತಿ ಕುಳಿತಿದ್ದಾಗ ।
ಸಪರಿವಾರ ಸಂನ್ಯಾಸಿಗಾಗ । ಉಣಿಸಿ ತೃಪ್ತಪಡಿಸಿ ಯಜಮಾನ ॥ 70

ಜೊತೆಯಲಿಬ್ಬರ ಕರೆದುಕೊಂಡು । ಸಂನ್ಯಾಸಿ ತಾನಾಗಿಯೇ ಬಂದು ।
ಅದರ ಪೂರ್ವತಯಾರಿಯೆಂದು । ಮಾಯೆಯ ಆವರಣಹಾಕಿದ ॥ 71

ಅದರಿಂದ ಇವನಾರೋ ಅತಿಥಿಯೆಂದು । ಭೋಜನವನು ಗಿಟ್ಟಿಸಲೆಂದು ।
ಇಷ್ಟೇ ಮನದಲಿ ತಿಳಿದುಕೊಂಡು । ದೇವರ ಚಿತ್ತವ ಮೋಹ ಆವರಿಸಿತ್ತು ॥ 72

ಈ ರೀತಿ ಮುಗಿಯಲು ಭೋಜನ । ಉತ್ತರಾಪೋಷನ ಶುದ್ಧಾಚಮನ ।
ಸುಗಂಧಯುಕ್ತ ಜಲಪ್ರಾಶನ । ಮುಖಶುದ್ಧಿದಾನದಿಂದ ಸಂಪಾದಿಸಿದರು ॥ 73

ಶಿಷ್ಟಾಚಾರದಂತೆ ಸುಗಂಧಸುಮನ । ತಾಂಬೂಲ, ಅತ್ತರ, ಗುಲಾಬಿದಾನ ।
ಕೊಟ್ಟರೆಲ್ಲರಿಗೂ ಬಹುಮಾನ । ದೇವ ಅವರು ಆನಂದದಿಂದ ॥ 74

ಬಳಿಕ ಇದು ಎಲ್ಲ ಮುಗಿಯಲು । ತಮ್ಮ ತಮ್ಮ ಮನೆಗಳಿಗೆ ಜನ ತೆರಳಲು ।
ಸಂನ್ಯಾಸಿಯೂ ನಿಜ ಪರಿವಾರ ಸಹಿತವಾಗಿ । ನಿಜ ಸ್ಥಳಕೆ ತಿರುಗಿಹೋದನು ॥ 75

ಆನಿಮಂತ್ರಿತ ಅತಿಥಿಗಳು । ಬಂದು ಆಗ ಊಟ ಮಾಡಿರಲು ।
ಎನಿಸಲಿಲ್ಲವರು ಬಾಬಾರೊಲು । ಮನದಿ ಸಂಶಯ ಉಳಿಯಿತು ॥ 76

ಹೀಗೆ ಪ್ರತ್ಯಕ್ಷ ನಡೆದಿದ್ದರೂ । ಮೂವರು ಆಯಾಚಿತರಿಗೆ ತಾವೆ ಬಡಿಸಿದ್ದರೂ ।
ಮನದಲಿ ದೇವ ಸಾಶಂಕಿತರಾದರು । ಜೋಗರ ನೆನಸಿಕೊಂಡರು ॥ 77

ಉದ್ಯಾಪನ ಪೂರ್ತಿಯಾದ ಬಳಿಕ ದೇವ ಅವರು । ಜೋಗ ಅವರಿಗೆ ಪತ್ರ ಬರೆದರು ।
ಹೀಗೆ ಈ ರೀತಿ ಬಾಬಾ ಮೋಸ ಮಾಡಿದರು । ಬಾಯಿಂದ ಅದನು ನುಡಿಯಲಾರೆ ॥78

ತಾವೂ ಜೊತೆಗೆ ಬರಬಹುದು । ಅನ್ಯಥಾ ಆಗದವರು ನುಡಿದದ್ದು ।
ಏನಾದರೂ ಅದರ ಸಾಕ್ಷಿ ಕಾಣಬೇಕಾಗಿದ್ದು । ಅದೇಕಾಗಲಿಲ್ಲವೆಂದೆನಿಸಿತು ॥ 79

ಆದರೂ ನನ್ನಗತಿ ಹೀಗೇಕಾಯಿತು । ನನಗೇ ಏಕೆ ಈ ನಿರಾಶೆಯಾಯಿತು ।
ದಾರಿ ಕಾಯ್ದೆ ಬಹಳ ಅಪೇಕ್ಷೆ ಬಿಟ್ಟು । ಏನೊಂದೂದು ಪ್ರಚೀತಿ ಬರಲಿಲ್ಲ ॥ 80

ಪ್ರೇಮದಿಂದ ಬಾಬಾರ ಆಮಂತ್ರಿಸಿದ್ದೂ । ತಿಳಿಸಿದರೆನಗೆ ಬರುವೆನೆಂದು।
ಆದರೆ ಅದೆಲ್ಲ ಅನ್ಯಥಾ ಆಗಿದ್ದು । ಹೇಗೆಂದು ನನಗೆ ತಿಳಿಯದಾಗಿದೆ ॥ 81

ನಾನು ಬರುವುದರಲ್ಲಿರುವ ಅಸಹಾಯಕತೆಯನು । ಅತಿದೀನನಾಗಿ ಬರೆದು ತಿಳಿಸಿದೆನು ।
ಬಾಬಾ ಹೇಗೆ ವಂಚಿಸಿದರೆನ್ನನು ಎಂದೆನಿಸಿದ್ದನ್ನು । ಯಾವ ಮಾತಿನಲರುಹಲಿ ॥ 82

ಇನ್ನು ನೀವು ಬರುವಿರಿ ಏನೇಕಾರಣದಿ । ಎನಿಸಿತು ಬರುವಿರಿ ಯಾವುದೇ ರೂಪದಿ ।
ಆದರೆನಿಸುವುದು ಆಶ್ಚರ್ಯಮನದಿ । ಆದೊಂದೂ ಹೇಗೆ ನಡೆಯಲಿಲ್ಲವೆಂದು ॥83

ಆ ಎಲ್ಲ ವೃತ್ತಾಂತವನು ಜೋಗರು । ಸಾಯಿ ಚರಣದಿ ನಿವೇದಿಸಿದರು ।
ಬಾಬಾ ಆಶ್ಚರ್ಯಚಕಿತರಾದರು । ಅವನಿಗವರೆಂದರಾಗ ॥ 84

"ಪತ್ರವನು ನನ್ನೆದರು ಬಿಚ್ಚಿದರೆ ಸಾಕು । ತಿಳಿಯುವುದು ಅದರಲ್ಲೇನಿರಬೇಕು ।
ಕಣ್ಣೆದುರು ನಿಲ್ಲುವುದು ಓದುವುದಕೆ । ಮೊದಲೇ ನಿಶ್ಚಯವಾಗಿ ಎಲ್ಲ ॥ 85

ಅವನೆನ್ನುವ ನಾ ಕೊಟ್ಟ ಮಾತನು । ನಂಬಿಸಿ ಅವನನು ವಂಚಿಸಿದೆನು ।
ಹೇಳವನಿಗೆ ನೀನೇ ಗುರುತಿಸಲಿಲ್ಲ ನನ್ನನು । ಹಾಗಿದ್ದಲ್ಲಿ ಕರೆದೆಯಾದರೂ ಏಕೆ ॥86

ಲೌಕಿಕದಲಿ ನಾನಿಲ್ಲೇ ಇದ್ದೆ । ಆದರೆ ಉದ್ಯಾಪನದಲಿ ಉಂಡು ಬಂದೆ।
ಇಬ್ಬರ ಜೊತೆಗೆ ಬರುವೆನೆಂದಿದ್ದೆ । ಅದರಂತೆಯೇ ಹೋದೆ ಇಬ್ಬರ ಜೊತೆ ॥ 87

ಊಟಕ್ಕೆ ಅವಕಾಶವಿತ್ತಿನ್ನು । ಆದರೆ ಮೊದಲೆ ಒಬ್ಬನೇ ಬಂದೆ ನಾನು ।
ಸಂನ್ಯಾಸಿ ವೇಷ ನಿನಗೆ ನೆನಪಾಗದೇನು । ಪ್ರಥಮ ಪ್ರವೇಶವೀಪ್ರಕಾರವಾಗಿ ॥88

ನಾನಕಲ್ಪಿತವಾಗಿ ಬಂದಿದ್ದುನೆ ನೋಡಿ। ದುಡ್ಡು ಕೇಳುವೆನೆಂದು ನೀ ಹೆದರಿಸಿ ।
ಎನಿಸಿರಲಿಲ್ಲವೇ ಹೀಗೆ ನಿನ್ನ ಮನದಿ । ಆಗ ಸಂಶಯ ನಿವೃತ್ತಿಯ ನಾ ಮಾಡಿದೆ ॥ 89

ಊಟಕ್ಕೆ ಮಾತ್ರ ಬರುವೆನು । ಜೊತೆಗೆ ಕರೆದುಕೊಂಡು ಇಬ್ಬರನು ।
ಹೀಗೆ ಹೇಳಿ ಸರಿಸಮಯದಿ ನಾನು । ಇಬ್ಬರೊಡನೆ ಬಂದು ಉಣಲಿಲ್ಲವೇ ॥ 90

ನೋಡು ನನ್ನ ವಚನಕ್ಕಾಗಿ ನಾನು । ಜೀವವನ್ನೇ ಬಿಟ್ಟೇನು ।
ಆದರೆ ನಾನಾಡಿದ ವಚನವನು । ಅನ್ಯಥಾಗೊಳಿಸಲಾರೆನು" ॥ 91

ಸಾಯಿನಾಥರು ನುಡಿದಾಗ ಹೀಗೆ । ಹಿಡಿಸಲಾರದಾನಂದ ಜೋಗರಿಗೆ ।
ಅನುಭವಿದು ಯಾವಾಗಲೂ ಎಲ್ಲರಿಗೆ । ಅವರ ವಚನ ಅನ್ಯಥಾ ಅಲ್ಲವೆಂದು ॥ 92

ಮುಂದೆ ನಡೆದ ಸಂಗತಿಯ ಹೀಗೆ । ಪತ್ರ ಬರೆದು ತಿಳಿಸಿದರು ದೇವ ಅವರಿಗೆ ।
ಅತಿ ಸಂತುಷ್ಟರಾಗಿ ಮನದೊಳಗೆ । ಜೋಗರು ಸವಿಸ್ತರವಾಗಿ ಎಲ್ಲ ॥ 93

ದೇವ ಅವರು ಈ ಪತ್ರವನು ಓದಿ । ಅಶ್ರುಬಲ ತುಂಬಿನೇತ್ರದಿ ।
ಧಿಕ್ ಧಿಕ್ ಸಾಯಿ ದೂಷಿಸಿವೆ ವ್ಯರ್ಥವಾಗಿ । ಎಂದು ಮನ ಕುಗ್ಗಿದವರಾದರು ॥ 94

ಧನ್ಯಬಾಬಾರ ಮಹಿಮನ । ಧಿಕ್ ನನ್ನ ಜಾಣತನದ ಅಭಿಮಾನ ।
ಆದರೆ ಬಾಬಾರೆ ಸಂನ್ಯಾಸಿಗಳೆಂಬ ಅನುಮಾನ । ನನಗೆಂತು ಬರಬೇಕು ತಿಳಿಯದು ॥95

ಏಕೆಂದರೆ ಬಾಬರಿಗಿತ್ತೆ ನಿಮಂತ್ರಣ । ಅದರ ಮೊದಲೇ ಅವರ ಪ್ರಥಮಾಭಿಗಮನ ।
ಅದೂ ಇಟ್ಟುಕೊಂಡು ತಮ್ಮ ಕಾರ್ಯವನ । ವರ್ಗಣೆ ಕೂಡಿಸಲು ಬಂದುದು ॥96

ನಾನವರಿಗೆ ಹೇಳಿಕಳಿಸಿದ್ದು । ನಾಲ್ಕಾರು ತಿಂಗಳು ಬಿಟ್ಟು ಬರಬೇಕೆಂದು ।
ಊಟಕೇಳಿದಾಗ ಅವನೇ ಬಂದು । ಬಾಬಾರೇ ಇರಬಹುದೆಂದು ಎನಿಸಿತೇ ॥ 97

ಮಾತ್ರ ಬಾಬಾರ ವಚನವೊಂದು । ನಾನು ಬರುವಾಗ ಊಟಕ್ಕೆಂದು ।
ಬರುವೆನು ಜೊತೆಗಿಬ್ಬರ ಕರೆದುಕೊಂಡು । ಅದರ ಸ್ಮರಣೆ ಉಳಿಯಲಿಲ್ಲನೆಗೆ ॥ 98

ಬಾಬಾರಿಗೆ ಆಮಂತ್ರಣ ಕಳಿಸಿದ ನಂತರವಾದರೂ । ಇವರೊಡನೆ ಭೇಟಿಯಾಗಿದಿದ್ದರೂ ।
ಕೇವಲ ಊಟಕ್ಕೆಂದೇ ಆದರೂ । ಈ ದೃಷ್ಟಿಯೂ ಮೋಸ ಹೋಗುತ್ತಿರಲಿಲ್ಲ ॥ 99

ಅವ ಬಂದಿದ್ದ ಗೋರಕ್ಷಣೆ ನಿಮಿತ್ತ ಕೈಕೊಂಡು । ಗೋಗ್ರಾಸಕ್ಕೆ ಧನಕೊಡಿಸಲೆಂದು ।
ಅದರ ನಂತರ ಆಮಂತ್ರಣ ಕಳಿಸಿದ್ದು । ಉದ್ಯಾಪನಕೆ ಬರಲು ಬಾಬಾರಿಗೆ ॥ 100

ಅದಕೆ ಮೋಹ ಬಿದ್ದಿತು ಹೀಗೆ । ಅದರಿಂದ ಸಂಗತಿ ನಡೆಯಿತು ।
ಹೀಗೆ ಬಂದು ಊಟಮಾಡಿದರೂ ಇಬ್ಬರ ಜೊತೆಗೆ । ತಿಳಿದೆ ನಾನವನ ಅನ್ನಾರ್ಥಿಯೆಂದು ॥ 101

ಪೂರ್ವಪರಿಚಿತರಿರದೇ ಇದ್ದಲ್ಲಿ । ಅಕಲ್ಪಿತವಾಗಿ ಬಂದಿದ್ದರೇ ಭೋಜನ ಸಮಯದಲ್ಲಿ ।
ಕರೆದುಕೊಂಡಿಬ್ಬರನು ಜೊತೆಯಲಿ । ಅವರು ಸಾಯಿ ಎಂದೇ ಭಾವಿಸುತ್ತಿದ್ದೆ ॥ 102

ಆದರೆ ಸಂತರು ನಡೆಯುವುದು ಈ ರೀತಿಯಲೇ । ಅವರದು ಅದ್ಭುತ ಕೃತಿ, ಅಘಟಿತ ಲೀಲೆ ।
ತಾವೇ ಯೋಜಿಸುವರು ಮೊದಲೇ । ಭಕ್ತರ ಮನೆಯ ಕಾರ್ಯಕ್ರಮವನು ॥ 103

ನಿಜ ಚರಣದಲಿ ಭಕ್ತನು ಶರಣಾಗತನಾಗಿದ್ದು । ಅವರ ಶುಭಕಾರ್ಯವ ಕೈಗೊಡಿಸುವುದು ।
ಹೀಗೆ ಅಕಲ್ಪಿತವಾಗಿ ನಡೆಯುವುದು । ಅತರ್ಕ್ಯಕರ್ತೃವ ಸಂತರದು ॥ 104

ಚಿಂತಾಮಣಿ ಕೊಡುವುದು ಚಿಂತಿಸಿದ್ದನ್ನು । ಕಲ್ಪವೃಕ್ಷವು ಕೊಡುವುದು ಕಲ್ಪಿಸಿದ್ದನ್ನು ।
ಕಾಮಪ್ರಸವಿಣಿ ಇರುವುದು ಕಾಮಧೇನು । ಗುರುವಿನದು ಅಚಿಂತ್ಯದಾನ ॥ 105

ಈಗ ಇಲ್ಲಿ ಬಾಬಾ ಆಮಂತ್ರಿತರಿದ್ದು । ಸಂನ್ಯಾಸಿರೂಪದಿಂದ ಪ್ರಕಟರಾಗಿದ್ದು ।
ಅವರವರ ಲೀಲೆ ಅಘಟಿತವಿರುವನು । ಅಯಾಚಿತರಾಗಿಯೂ ಬರುವರೊಮ್ಮೊಮ್ಮೆ ॥106

ಒಮ್ಮೊಮ್ಮೆ ಛಾಯಾಚಿತ್ರರೂಪದಿಂದ । ಒಮ್ಮೊಮ್ಮೆ ಪಾರ್ಥಿವ ಮೂರ್ತಿಸ್ವರೂಪದಿಂದ ।
ಅಂತವಿಲ್ಲ ಅವರ ಕೃಪೆಗೆ । ತಾವಾಗಿಯೇ ಪ್ರಕಟವಾಗುವರು ಒಮ್ಮೊಮ್ಮೆ ॥ 107

ಈ ಅರ್ಥದ ನನ್ನ ಅನುಭವ । ಕೇಳಿದರೆ ಶ್ರೋತೃಗಳು ಪಡುವರು ವಿಸ್ಮಯವ ।
ಆಗ ತಿಳುಯುವುದು ಸಾಯಿ ಲೀಲಾ ಪ್ರಭಾವ । ಇದು ಅಭಿನವ ಅಪೂರ್ವಕಥೆಯವರದು ॥ 108

ಕಥೆಯೊ ಕಲ್ಪನೆಯೊ ಅದು । ಕೆಲವರು ಹೀಗೂ ಅನ್ನಬಹುದು ।
ಅನ್ನುವರೆನ್ನಲಿ ಬೇಕಾದ್ದು । ಆದರೆ ಈಗ ಕೇಳಲು ಸಿದ್ಧರಾಗಿರು ॥ 109

ಆಲಸ್ಯ ನಿದ್ರೆ ತಂದ್ರಿಗಳ ಬಿಟ್ಟು । ಎಚ್ಚರಾಗಿ ಕೇಳಿರಿದ ಕಿವಿಗೊಟ್ಟು ।
ಇದೊಂದು ದಾನವನು ನನಗೆ ಕೊಟ್ಟು । ನನ್ನನು ಸಮಾಧಾನ ಗೊಳಿಸಿರಿ ॥ 110

ವ್ಯಗ್ರತೆಯ ಬಿಸುಟಿ ಒಂದು ಕ್ಷಣ । ಸ್ವಸ್ಥವಾಗಿಟ್ಟು ಕೊಂಡು ಮನ ।
ಆದರಿಂದ ಉಪಯುಕ್ತವಾದೀತು ಇದರ ಶ್ರವಣ । ಬಳಿಕಿದರೆ ಮನನ ನಿಜ ಧ್ಯಾಸನ ॥ 111

ಅದರ ನಂತರ ಬರುವದು ಸಾಕ್ಷಾತ್ಕಾರ । ಇವೆಲ್ಲದಕೂ ಶ್ರವಣವೇ ಆಧಾರ ।
ಅದೇ ಈ ಎಲ್ಲದರ ಸಾರ । ಆದರಿಂದ ಭವದಾಟುವುದು ನಿಶ್ಚಯ ॥ 112

ಇಸವೀ ಸನ್ ಹತ್ತೊಂಭತ್ತು ನೂರಾ ಹದಿನೇಳು । ಫಾಲ್ಗುಣ ಶುದ್ಧ ಪೂರ್ಣಿಮೆಯಾಗಿರಲು ।
ಹಾಸಿಗೆಯಲ್ಲಿ ಮಲಗಿದಾಗ ಬೆಳಗಿನ ಸಮಯದೊಳು । ಸ್ವಪ್ನ ವನೊಂದು ಕಂಡೆನಾನು ॥ 113

ಆಗ ಸಾಯಿ ಸಂನ್ಯಾಸಿಯ ವೇಷ ಧರಿಸಿ । ನನ್ನ ಕನಸಿನಲ್ಲಿ ಆಗಮಿಸಿ ।
ನಿದ್ದೆಯಿಂದೆನ್ನ ಎಚ್ಚರಿಸಿ । ಇಂದುನಾ ಊಟಕ್ಕೆ ಬರುವೆನೆಂದು ಹೇಳಿದರು ॥ 114

ಅದು ಕನಸಿನಲ್ಲಿಯದೇ ಎಚ್ಚರವಿತ್ತು । ಅದೂ ಪೂರ್ಣ ಕನಸೇ ಆಗಿತ್ತು ।
ಏಕೆಂದರೆ ನಾನದನು ನೆನಪು ಮಾಡಿಕೊಳ್ಳಬೇಕಾಯಿತು । ಎಚ್ಚರವಾದ ನಂತರ ॥ 115

ಕಣ್ಣು ತೆರೆದು ನೋಡಲಾಗಿ । ಸಾಯಿ ಅಥವಯಾರು ಇರದಿರಲಾಗಿ ।
ತಿಳಿದೆ ಕ್ಷಣ ಮೊದಲು ನಾ ಕಂಡಿದ್ದು ಕನಸೆಂಬರಿದಾಗಿ । ಒಂದಿಷ್ಟೂ ಎಚ್ಚರವಿರಲಿಲ್ಲ ಆಗ ॥116

ಮನದ ನಿಶ್ಚಯವಾದಾಗ ಹೀಗೆ । ಸ್ವಪ್ನದಲಿ ಕಂಡುದ ತಂದೆ ನೆನಪಿಗೆ ।
ಅಕ್ಷರವೂ ಬಿಡದೆ ನೆನಪಾದಾಗ್ಯೆ । ಒಂದಿಷ್ಟೂ ವಿಸ್ಮೃತಿಯಾಗಿರಲಿಲ್ಲ ॥ 117

'ನಾನಿಂದು ಊಟಕ್ಕೆ ಬರುವೆನು' । ಎಂದ ಸಾಯಿ ಸ್ಪಷ್ಟ ನುಡಿಗಳನು ।
ಕೇಳಿ ಬಲು ಹರುಷಗೊಂಡೆನು । ಪತ್ನಿಗೂ ಈ ಸಂಗತಿ ಹೇಳಿದೆನು ॥ 118

ಧ್ಯಾನದಲಿ ಮನದಲಿ ಸಾಯಿಯದೇ ಧ್ಯಾನ । ಇವಾಗಿತ್ತು ನಿರಂತರದೇ ಅಭ್ಯಾಸ ।
ಏಳು ವರ್ಷಗಳದಿದ್ದರೂ ಸಹವಾಸ । ಈ ಊಟದ ವಿಚಾರವೆಂದೂ ಇರಲಿಲ್ಲ ॥ 119

ಆದರೂ ಹೆಂಡತಿಗೆ ಸೂಚಿಸಿದೆ । ಹೇಗೊ ಇಂದು ಹೋಳಿ ಹುಣ್ಣಿಮೆ ಇದೆ ।
ಒಂದಿಷ್ಟು ಅಕ್ಕಿಯ ಹೆಚ್ಚಿಗೇ ಹಾಕಲು ಹೇಳಿದೆ । ಮರೆಯದಂತೆ ತಪ್ಪದೇ ॥ 120

ಅವಳಿಗೆ ಹೇಳಿದಾಗ ಇವಿಷ್ಟನ್ನು । ಕೇಳತೊಡಗಿದಳು ಕಾರಣ ।
ನಾನೆಂದೆ ಇಂದು ಹಬ್ಬದ ದಿನ । ಊಟಕ್ಕೊಬ್ಬ ಅತಿಥಿ ಬರುವರು ॥ 121

ಅದಕ್ಕವಳು ಬಹಳ ತವಕಗೊಂಡು । ಕೇಳಿದಳು ಯಾರು ಬರುವರೆಂದು ।
ಆದರೆ ನಿಜವಾದದ್ದನ್ನು ಹೇಳಿದರೆ ನಾನು । ಉಪಹಾಸಕ್ಕೊಳಗಾಗುವೆ ॥ 122

ಇದು ನನಗೆ ಪೂರ್ಣ ಗೊತ್ತಿತ್ತು । ಆದರೆ ನುಡಿಯಬಾರದು ಅಸತ್ಯ ಮಾತು ।
ಎಂದು ಪೂರ್ಣಶ್ರದ್ಧೆಯಿಟ್ಟು । ನಿಜವನ್ನೇ ಅರುಹಿದೆ ॥ 123

ಆದರಿದು ಶ್ರದ್ಧೆಯ ಅವಲಂಬಿಸಿದೆ । ಯಾರ ಒಳಗಿನ ಭಾವನೆ ಹೇಗಿದೆ ।
ಸಂಗತಿ ಸತ್ಯ ಅಥವಾ ಸುಳ್ಳಿದೆ । ತಿಳಿಯುವರು ಅವರವರ ಮನಸ್ಸಿದ್ದಂತೆ ॥ 124

ಎಷ್ಟೇ ನಂಬಿಸಲು ಯತ್ನಿಸಿದರೂ । ಅವಳ ಮನಸಿಗೆ ಒಪ್ಪದು ಆದರೂ ।
ಅವಳೆಂದಳೂ ಶಿರಡಿಯಿಂದ ಇಷ್ಟು ದೂರ । ಬಾಬಾ ಏತಕ್ಕೇ ಬಂದಾರು ॥ 125

ಇಲ್ಲಿ ಎಂಥ ಊಟ ನಮ್ಮದು । ನಮ್ಮ ಹೋಳಿ ಹುಣ್ಣಿಮೆಯಾದರೂ ಎಂಥದೂ ।
ಮೃಷ್ಟಾನ್ನವ ಬಿಟ್ಟು ಶಿರಡಿಯದು । ಈ ಕದನ್ನವನುಣಲೇಕೆ ಬಂದಾರು ॥ 126

ಈ ರೀತಿಯಾಗಿ ನುಡಿಯಲು ಅವಳು । ನಾನೆಂದೆ ಒಂದು ಕೊಳಿವೆ ಅನ್ನ ಮಾಡಲು ।
ನಿನಗೇನು ಆಯಾಸವಾಗುವುದು ಬಲು । ಕೊಳವಿ ಅಕ್ಕಿಗೆ ಕೊರತೆ ಇಲ್ಲ ನಿನಗೆ ॥ 127

ಪ್ರತ್ಯಕ್ಷ ಸಾಯಿಯೇ ಬಂದಾರು । ಹೀಗೆ ನಿನಗೆ ಹೇಳೆನು ನಾನಾದರೂ ।
ಆದರೆ ಬರಬಹುದು ಯಾರಾದರೂ । ಹೀಗೆ ನಿಶ್ಚಯವಾಗಿ ಎನಿಸುವದೆನಗೆ ॥ 128

ಬಳಿಕ ನೀನವರನ್ನು ಯಾರೇತಿಳಿ । ಆದರೆ ಅವರು ಸಾಯಿ ಎಂದೇ ತಿಳಿಯುವೆ ನಾ ಮನದಲಿ ।
ಬಹುಶಃ ಪ್ರತ್ಯಕ್ಷ ಸಾಯಿಯೇ ಬೇಕಿಲ್ಲ ನಿಜದಲ್ಲಿ । ಅನ್ವರ್ಥ ನನ್ನ ಕನಸಾಗುವದಾಗ ॥ 129

ನಮ್ಮಿಬ್ಬರದು ಹೀಗೆ ಮಾತಾಯಿತು । ಮುಂದೇ ಮಧ್ಯಾನ್ಹದ ಸಮಯವಾಯಿತು ।
ಯಥಾ ವಿಧಿ ಹೋಲಿಕಾ ಪೂಜನವಾಯಿತು । ಊಟಕ್ಕೆ ಎಲೆ ಹಾಕಿದರು ॥ 130

ಪುತ್ರ ಪೌತ್ರಾದಿಗೊಂಡು । ದುಹಿತಾ ಜಾಮ್ಯಾತ ಇಷ್ಟ ಮಿತ್ರರೂ ಬಂದು ।
ಪಂಕ್ತಿಗಳ ಬಡಿಸಿದರು ಮಣೆಗಳನ್ನಿಟ್ಟು । ವಿಚಿತ್ರ ರಂಗೋಲಿಗಳನ್ನು ಬರೆದು ॥ 131

ಅದರಲ್ಲುಯೇ ಮುಖ್ಯ ಪಂಙ್ತಿ ಒಂದು । ಅಲ್ಲಿ ನಡುವೆ ಹಾಕಿ ಮಣೆಯನೊಂದು ।
ಪಾತ್ರವನಿಟ್ಟರು ಸಾಯಿಗೆಂದು । ಉಳಿದವರ ಜೊತೆ ಬಡಿಸಿದರು ॥ 132

ಪಾತ್ರೆಯ ಸುತ್ತ ರಂಗೋಲಿ । ಹಳದೀ ಕೆಂಪು ನೀಲಿ ಬಣ್ಣಗಳಲಿ ।
ಎಲ್ಲರಿಗೂ ತಂಬಿಗೆ ಪಾತ್ರೆಗಳಿಡುತಲಿ । ಎಲ್ಲರಿಗೂ ಸರಿಸಮಾನವಾಗಿ ॥ 133

ಚಟ್ನಿ ಕೋಸಂಬ್ರಿ ಹಪ್ಪಳ ಸಂಡಿಗೆ । ಕಾಯಿರಸ ಕಾಯಿಪಲ್ಲೆ ಬಗೆ ಬಗೆ ।
ಬಡಿಸಿಯಾಯಿತು ಪಾಯಸ ಮೊದಲಾಗಿ । ಹೀಗೆಲ್ಲ ಸಿದ್ಧತೆಯಾಯಿತು ॥ 134

ನೋಡಿ ಹೊಡೆಯಿತು ಹನ್ನೆರಡು । ಊಟಕ್ಕೆ ಬಂದವರು ಮಡಿಯುಟ್ಟುಕೊಂಡು ।
ಮಣೆಯ ಮೇಲೆ ಕುಳಿತರು ಒಬ್ಬೊಬ್ಬರೇ ಬಂದು । ಆದರೂ ಮತ್ತಾರೂ ಬರಲಿಲ್ಲ ॥ 135

ತುಂಬಿದವೆಲ್ಲ ತಟ್ಟೆಗಳು । ಬಡಿಸಲು ಅನ್ನಹೋಳಿಗೆ ತೊವ್ವೆಗಳು ।
ಮಧ್ಯದ ಎಲೆಯೊಂದು ರಿಕ್ತವಾಗುಳಿಯಲು । ಉಳಿದಾವುದೂ ಕಡಿಮೆ ಇರಲಿಲ್ಲ ॥ 136

ಯಾರಾದರೂ ನೆಂಟರು ಅಥವಾ ಅತಿಥಿಗಳು । ಬಂದಾರೆಂದು ದಾರಿಕಾಯುತಿರಲು।
ಸಾಶಂಕನಾದೆ ನಾಮನದೊಳು । ದಾರಿಯನೆಷ್ಟೊಂತ ನೋಡುವುದು ॥ 137

ಅದಕೆ ಬಾಗಿಲಿಗೆ ಹಾಕಿಕೊಂಡು । ಕೂಡಲೇ ಮಾಡಿ ಅನ್ನ ಶುದ್ಧಿ ।
ವೈಶ್ಯದೇವನ್ನೈವೇದ್ಯಾದಿ ಮುಗಿದು ಅನ್ನಾರ್ಪಣವಿನ್ನು ಮಾಡಬೇಕು ॥ 138

ಇನ್ನು ತೆಗೆದುಕೊಳ್ಳಬೇಕು ತುತ್ತು । ಎನುವಾಗ ಮೆಟ್ಟಿಲ ಮೇಲೆ ಹೆಜ್ಜೆ ಬಾರಿಸಿತು ।
'ರಾವಸಾಹೇಬರೆಲ್ಲಿ' ಎಂಬ ಮಾತು । ಕೇಳಿ ಎಲ್ಲರೂ ಹಾಗೆ ಕುಳಿತರು ॥ 139

ಯಾರೋ ಬಂದರೆಂದು ಕೊಂಡು । ಹಾಗೆ ಬಾಗಿಲಿಗೆ ಬಂದು ।
ಮೆಲ್ಲನೆ ಬಾಗಿಲ ಚಿಲಕ ತೆಗೆದು । ನೋಡಿದಾಗ ಮೆಟ್ಟಿಲ ಮೇಲೆ ಕಂಡೆನಿಬ್ಬರನ ॥ 140

ಅವರಲ್ಲೊಬ್ಬ ಅಲೀ ಮಹಮ್ಮದ । ಇನ್ನೊಬ್ಬ ಸಂತ ಮೌಲಾನಾ ಶಾರ್ಗೀದ್ ।
ಇಸ್ಮೂ ಮುಜಾವರ ಎಂದು ಹೆಸರಿದ್ದ । ಆನಂದ ಪ್ರದರಿಬ್ಬರೂ ॥ 141

ಎಲೆಬಡಿಸಿ ಜನರು ಕುಳಿತಿರುವರು । ಭೋಜನದ ಸಿದ್ಧತೆಯ ಕಂಡರು ।
ಅದ ನೋಡಿದ ಅಲಿ ವಿನಂತಿಸಿದರು । ತೊಂದರೆನಾ ಕೊಟ್ಟೆ । ಕ್ಷಮಿಸಬೇಕು ॥ 142

ಎನಿಸುವುದು ತಾವು ನನಗಾಗೇ । ಓಡಿ ಬಂದಿರಿ ಊಟವ ಬಿಟ್ಟು ಹಾಗೆ ।
ಕೈ ಇಟ್ಟುಕೊಂಡು ಹಾಗೆ । ತಮಗಾಗೇ ಜನರು ಕಾಯುತ್ತಿರುವರು ॥ 143

ಅದಕೆ ತೆಗೆದುಕೊಳ್ಳಿರು ನಿಮ್ಮ ವಸ್ತುವನು । ಆಮೇಲೆ ನಾ ಮತ್ತೆ ಭೇಟಿಯಾಗುವೆನು ।
ನಡೆದ ಸಂಗತಿಯನೆಲ್ಲ ಆಗ ಹೇಳುವೆನು । ಅತ್ಯದ್ಭುತವಾಗಿರುವದದು ॥ 144

ಹೀಗೆಂದು ತನ್ನ ಬಗಲಲ್ಲಿ ಹಿಡಿದ । ಆಲೀ ಒಂದು ಪೊಟ್ಟಣವ ತೆಗೆದ ।
ಮೇಜಿನ ಮೇಲೆ ಎದುರಿಗದ ಹಿಡಿದ । ಅದರ ದಾರವ ಬಿಚ್ಚತ್ತೊಡಗಿದ ॥ 145

ತೆಗೆದ ಮೇಲೆ ವೃತ್ತಪತ್ರದ ವೇಷ್ಟನ । ಕಂಡಿತು ಸಾಯಿ ಮೂರ್ತಿಯು ತತ್‌ಕ್ಷಣ ॥
ಎಂದ ಇಟ್ಟುಕೊಳ್ಳಿರೀ ವಸ್ತುವನ್ನು । ನನ್ನಿ ಬಿನ್ನಹವ ಮನ್ನಿಸಿ ॥ 146

ಕಂಡು ಸಾಯಿಯ ಭಾವಚಿತ್ರ । ರೋಮಾಂಚಿತವಾಯಿತು ಶರೀರ ।
ಚರಣದಲಿಟ್ಟೆ ಶಿರ । ಅಂತರ ಸದ್ಗದಿತವಾಯಿತು ॥ 147

ಎನಿಸಿತು ಬಹಳ ಚಮತ್ಕಾರ । ಇದು ಸಾಯಿಯ ಲೀಲೆ ವಿಚಿತ್ರ ।
ಎನಿಸಿತೆನ್ನನನು ಮಾಡಿದರು ಪವಿತ್ರ । ತೋರಿಸಿ ಚರಿತ್ರೆಯನು ಹೀಗೆ ॥ 148

ಕೇಳಿದೆ ಉತ್ಕಂಠಿತ ಮನದಿಂದ । ಈ ಭಾವಚಿತ್ರದ ತಂದಿರೆಲ್ಲಿಂದ ।
ಎಂದರು ತಂದೆನಿದೆ ನಾನೊಂದು ಅಂಗಡಿಯಿಂದ । ಕೊಂಡು ಕೊಂಡು ಇದೀಗ ॥ 149

ಬಳಿಕ ಅವರಿಬ್ಬರೂ । ಒಂದು ಕ್ಷಣವೂ ನಿಲ್ಲದಾದರು ।
ನಾವಿನ್ನು ಹೋಗುವೆವೆಂದರು । ತಾವು ಸ್ವಸ್ಥಮನದಿಂದ ಊಟ ಮಾಡಿರಿನ್ನು ॥ 150

ಈಗಲೇ ನಾನಿದರ ಕಾರಣ । ಹೇಳತೊಡಗಿದರೆ ನಿಷ್ಕಾರಣ ।
ತಡೆಯ ಬೇಕಾಗುವುದು ಜನರ ಭೋಜನ । ಸಾವಾಕಾಶ ಮುಂದೆ ಹೇಳುವೆನು ॥ 151

ನನಗೂ ಅದು ಸಮರ್ಪಕವೆನಿಸಿತು । ಭಾವಚಿತ್ರ ಸರಿಯಾದ ಸಮಯಕೆ ಬಂತು ।
ಈ ಹರುಷದಲೇ ಮನ ಮುಳುಗಿತು । ಆಭಾರ ಮನ್ನಿಸಿ ಕಳಿಸಿದೆ ॥ 152

ಆಗಲಿನ್ನು ಹೋಗಿ ಬನ್ನಿರೆಂದು । ನಾವು ನಿವೇದಿಸುವೆವು ಅಂದು ।
ಈ ಚಿತ್ರ ಬಂದ ಕಾರಣವೇನೆಂದು । ಇಂದೇ ಹೇಳಿ ಏನು ಪ್ರಯೋಜನ ॥ 153

ಹೀಗೆ ಅವರು ಹೋದ ಮೇಲೆ ॥ ಯಥಾನಿಶ್ಚಿತ ಸಾಯಿಗೆಂತಲೇ ।
ಮಧ್ಯದಲಿ ಹಾಕಿದ ಮಣೆಯಮೇಲೆ । ಭಾವಚಿತ್ರವನೊಯ್ದು ಸ್ಥಾಪಿಸಿದೆ ॥ 154

ಎಲ್ಲರ ಮನವುಮುದಗೊಂಡು । ಸಾಯಿಯ ಲೀಲೆ ಅತರ್ಕ್ಯವೆಂದು।
ಈ ರೀತಿಯಾಗಿ ಇಲ್ಲಿಗೆ ಬಂದು । ಸ್ವಪ್ನದ ನುಡಿಯ ಸತ್ಯಮಾಡಿದರು ॥ 155

ಯಾರಾದರೂ ಅತಿಥಿ ಬಂದಲ್ಲಿ। ಕುಳಿತು ಕೊಳ್ಳಲಿ ಆ ಸ್ಥಳದಲ್ಲಿ।
ಆ ಅಪೇಕ್ಷೆ ಯಾವ ಮನದಲಿ । ಆಶ್ಚರ್ಯವೆಷ್ಟು ಅವರ ಮನಸಿಗೆ ॥ 156

ಚಿತ್ರದಲ್ಲಿಯ ಸುಂದರ ಮೂರ್ತಿಯ ನೋಡಿದಾಗೆ । ಪರಮಾನಂದವೆಲ್ಲರ ಮನಸಿಗೆ ।
ಅಕಲ್ಪಿತ ರೀತಿಯಲಿದು ನಡೆದುದು ಹೇಗೆ । ಆಶ್ಚರ್ಯವಾಯಿತು ಎಲ್ಲರಿಗೆ ॥ 157

ಹೀಗೆ ಪ್ರತಿಷ್ಠಾಪನೆ ಮಾಡಿದರು । ಅರ್ಘ್ಯಪಾದ್ಯಾದಿಗಳಿಂದ ಪೂಜೆ ಮಾಡಿದರು ।
ಭಕ್ತಿ ಪ್ರೇಮದಿಂದ ನೈವೇದ್ಯ ಅರ್ಪಿಸಿದರು । ಬಳಿಕ ಎಲ್ಲರೂ ಊಟ ಆರಂಭಿಸಿದು॥158

ಅಂದಿನಿಂದ ಇಂದಿವರೆಗೆ । ಆಚಿತ್ರವು ಪ್ರತಿ ಹೋಳಿ ಹುಣ್ಣಿಮೆಗೆ ।
ಶಿಷ್ಟಾಚಾರವ ಮಾಡಿಸಿಕೊಳ್ಳುವುದು ಹೀಗೆ । ಅಷ್ಟೋಪಚಾರ ಪೂಜೆಯಿಂದ ॥ 159

ಪೂಜೆಯಲ್ಲಿಟ್ಟ ಉಳಿದ ದೇವರ ಜೊತೆಗೆ । ಪೂಜೆ ನಡೆಯುವುದು ಈ ಪ್ರತಿಮೆಗೆ ।
ಈ ಸಾಯಿ ಅಪೂರ್ವ ಚರಿತೆಯು ಹೀಗೆ । ಆಗಾಗ ಭಕ್ತರಿಗೆ ತೋರಿಸುವರು ॥ 160

ಹೀಗಿರಲು ಅವರಿಬ್ಬರು ಮತ್ತೆ । ಭೇಟಿಯಾಗೋಣವೆನ್ನುತ್ತೆ ।
ಒಂಭತ್ತು ವರ್ಷ ಕಳೆಯಿತೇ ಹೊರತು । ದರ್ಶನವಾಗಲಿಲ್ಲ ಅವರದು ॥ 161

ಕೊನೆಗೆ ಕರ್ಮ ಧರ್ಮ ಸಂಯೋಗದಿಂದ । ಅಲೀ ಮಹಮ್ಮದ್ ಸಿಕ್ಕಿದ ।
ಈ ವರುಷ ಆತ ಭೆಟಿಯಾದ । ಸಹಜ ನಾದಾರಿ ನೆಡಯುವಾಗ ॥ 162

ಭೇಟಿಯಾದಾಗ ಆತುರಗೊಂಡು । ಭಾವಚಿತ್ರದ ಲೀಲೆ ತಿಳಿಯಬೇಕೆಂದು।
ಏಕೆ ತಾವು ವರ್ಷಗಳ ಇಷ್ಟೊಂದು । ಮೂಕ ವೃತ್ತಿಯ ಸೇವಕರಾದಿರಿ ॥ 163

ಹಿಂದಿನಂತೆಯೇ ಮತ್ತೆ ಇಂದು । ಸಹಜವಾಗಿಯೇ ಭೇಟಿಯಾದದ್ದು ।
ಸಹಜದಲೇ ಯೋಗ ಒದಗಿದ್ದು । ಹೇಳಿರೀಗ ಆ ಸಮಗ್ರ ಸಂಗತಿಯನ್ನು ॥ 164

ಸಾಯಿಯ ಭಕ್ತರೇ ನೀವಾದರೂ । ಎಂದೆಲ್ಲ ತಿಳಿದೆಯಾದರೂ ।
ಅಕಸ್ಮಾತ್ತಾಗಿ ಆದಿನವೇ ಬರಬೇಕೆಂದಾದರೂ। ಏತಕ್ಕೆ ನಿಮಗೆ ಅನಿಸಿತು ॥ 165

ಬಳಿಕ ಆ ಅಲಿ ವೃತ್ತಾಂತ ಹೇಳಿದ । ಕೇಳಿರಿ ಸಾದ್ಯಂತ ಹೇಳುವೆನೆಂದ ।
ನೋಡಿ ಸಾಯಿಯದೇ ಈ ಅದ್ಭುತ ಲೀಲೆ ಇರುವುದು । ಆಗ ಆಶ್ಚರ್ಯಭರಿತರಾದರೆಲ್ಲರೂ ॥166

ಈ ಲೀಲೇಯದೇನು ಅರ್ಥ। ಏನು ಇದರಲ್ಲಿಯ ಕಾರ್ಯಾರ್ಥ ।
ಇದರಲ್ಲೇನಡಗಿದೆ ಭಕ್ತನ ಇಂಗಿತ । ಸಾಯಿಗೆ ಇದರ ಸಂಗತಿ ಗೊತ್ತು ॥ 167

ನಾವೆಲ್ಲ ಈ ಲೀಲೆಗಳ ಒಬ್ಬರಿಂದ । ಇನ್ನೊಬ್ಬರು ಆಲಿಸುವುದು ಕಿವಿಯಿಂದ ।
ಅಥವಾ ಹಾಡುವುದು ನಿಜ ಮುಖದಿಂದ । ನಿಃಶ್ರೇಯಸದಾನಿ ಎಂದುಕೊಂಡು ॥ 168

ಇರಲಿನ್ನು ಇದರ ಮುಂದಿನಭಾಗ । ಮುಂದಿನಧ್ಯಾಯದಲಿ ಹೇಳುವೆನು ಸಾಂಗ ।
ಆನಂದ ಹೊಂದುವುದು ಶ್ರೋತೃಸಂಘ । ಚರಿತ್ರ ಅಮೋಘ ಸಾಯಿಯದು ॥ 169

ಸಾಯಿಯ ನಿರ್ದ್ವೇಷ ಆನಂದಘನ । ನೆನೆಯ ಬೇಕವನನು ಅವಿಚ್ಛನ್ನ ।
ಪಡೆಯುವಿರಿ ನಿಜ ಸುಖ ಸಮಾಧಾನ । ಮನನಿರ್ವಾಸನೆಯಾಗುವುದು ॥ 170

ಚಾತಕವು ನಿಜಸ್ವಾರ್ಥಕ್ಕಾಗಿ ಕರೆವುದು । ಮೇಘವೆಲ್ಲ ಸೃಷ್ಟಿಯ ತೃಪ್ತಿಗೊಳಿಸುವುದು ।
ಬಾಳಾಸಾಹೇಬ ಬಾಬಾರ ಕರೆವುದು । ಬಾಬಾ ಭಕ್ತರೆಲ್ಲರ ಸಂತುಷ್ಟಗೊಳಿಸುವರು ॥ 171

ಭಕ್ತರ ಜೊತೆ ಶ್ರೋತೃಗಳು ಕೊಡ್ರುವರು । ಪ್ರೇಮದಿಂದ ಉದ್ಯಾಪನದ ಕಥೆ ಕೇಳುವರು ।
ಸಾಯಿ ಸಮಾಗಮದ ಆನಂದ ಪಡೆವರು । ತೃಪ್ತಿಯ ತೇಗನ್ನು ಬಿಡುವರು ॥ 172

ಅನಿಮಂತ್ರಿತರಾಗಿಯೂ ಹೇಗೆ ಬರುವರು । ಪಾರ್ಥಿವ ಸ್ವರೂಪದಲಿ ಹೇಗೆ ಪ್ರಕಟಿಸುವರು ।
ನಿಜದಾಸರ ಹೇಗೆ ಋಣಿ ಮಾಡುವರು । ಹೇಗೆ ಎಚ್ಚರಿಸುವರು ಕಾಲಕಾಲಕೆ ॥ 173

ಹೇಮಾಡ ಸಾಯಿಗೆ ಶರಣ । ಮುಂದಿನಧ್ಯಾಯದಲಿದರ ಮಂಡನ।
ಮಾಡಿಸಿ ಹೇಳಿಸಿ ಕೊಳ್ಳುವ ತನ್ನ ಲೀಲೆಯನು । ತನ್ನದು ತಾನೆ ಯಥೇಷ್ಟವಾಗಿ ॥ 174


ಶರಣಾಗತರ ಹಾಕಿಕೊಳ್ಳುವ ಬೆನ್ನಿಗೆ । ಇದೇ ಅವನ ಬಿರುದಿಗಾಗೇ ।
ಹೇಮಾಡನದು ಆ ಚರಣಗಳಿಗೇ । ಅಪ್ಪುಗೆ, ಅವನ ಕೈ ಬಿಡಲಾರನೆಂದು ॥ 175

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಉದ್ಯಾಪನ ಕಥಾಕಥನಂ ನಾಮ
ಚತ್ವಾರಿಂಶತ್ತಮೋಧ್ಯಾಯಃ ಸಂಪೂರ್ಣ ಃ ॥

॥ ಶ್ರೀ ಸದ್ಗುರು ಸಾಯಿ ನಾಥಾರ್ಪಣಮಸ್ತು ॥

॥ಶುಭಂ ಭವತು ॥

570.1



## ॥ ಅಥ ಶ್ರೀ ಸಾಯಿ ಸಚ್ಚರಿತ ॥

## ಅಧ್ಯಾಯ ನಾಲ್ವತ್ತೊಂದು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*॥ ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*॥ ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಇದೇ ಇರುವುದು ಸಾಯಿ ಕಥೆಯ ಮಹಿಮಾನ । ಅವನು ಮತ್ತೆ ಕೇಳಲು ಬೇಕಿಲ್ಲ ಪ್ರೋತ್ಸಾಹನ ।
ಶ್ರೋತೃಗಳೇ ನೆನಪಿಟ್ಟುಕೊಂಡು ಪೂರ್ವಾಸಂಧಾನ। ಶ್ರವಣದಲಿ ಸಾವಧಾನರಾಗಿರುವರು ॥ 1

ಮಾಡಲು ಈ ಕಥಾಮೃತಪಾನ । ಶ್ರೋತೃಗಳೇ ಇರು ಸಾವಧಾನ ।
ಮೊದಲೇ ವೃತ್ತಿಯಾಗಿರಲು ಏಕತಾನ । ಸಾವಧಾನರಾಗಿರೆಂದು ಪ್ರಾರ್ಥಿಸುವುದೇಕೆ ॥ 2

ಹಾಡುವದ ಕೇಳಲು ಗುರುಮಹತೀ । ನಿರ್ಮಲವಾಗುವದು ಚಿತ್ತವೃತ್ತಿ ।
ದೃಢಧ್ಯಾನಾಮಾನುವೃತ್ತಿ। ಸುಖೈತಮೂರ್ತಿ ಪ್ರಕಟಿಸುವುದು ॥ 3

ಗತಾಧ್ಯಾಯದಲಾಯಿತು ಕಥನ । ಹೇಗೆ ಒಂದು ವ್ರತದ ಉದ್ಯಾಪನ ।
ಯಥಾಸಾಂಗ ಆಯಿತು ಪೂರ್ಣ । ದೃಷ್ಟಾಂತದ ಗುರುತಿನೊಂದಿಗೆ ॥ 4

ಹಾಗೆಯೇ ಸಾಯಿ ಭಾವಚಿತ್ರವು । ಅಕಸ್ಮಾತ್ತಾಗಿ ಆದರ ಬರುವು ।
ಯಾವ ರೀತಿಯಲಿ ಬಂದು ಇಚ್ಛೆ ಈಡೇರಿಸುವವು । ಈ ಕಥೆಯ ನೀವು ಕೇಳಿರೀಗ ॥ 5

ಒಮ್ಮೆ ಹೋಳಿಯ ಹಬ್ಬದಿಂದ । ಬರುವೆನಾ ಊಟಕ್ಕೆ ಎಂದು ।
ಸಾಯಿ ಹೀಗೆ ತೋರಿಸಿ ಸ್ವಪ್ನವನೊಂದು । ನಿಜದಲಿ ಮನಕಾಮನೆ ಪೂರೈಸಿದರು ॥ 6

ಈ ಕಥೆಯನು ಸವಿಸ್ತರವಾಗಿ ಹೇಳಿದ ಮೊದಲಿಗೇ । ಆದರೆ ಆ ಪ್ರತಿಮೆ ಹೊತ್ತಿಗೆ ಸರಿಯಾಗಿ ಹೇಗೆ ।
ಬಂದಿತೆಂಬ ಚಮತ್ಕಾರ ಬಗ್ಗೆ । ಇಂದು ಸಾದರವಾಗಿ ಕೇಳಿರಿ ॥ 7

ಕಥೆಯ ಹೇಳಿದ ಅಲೀಮಹಮದ । ಎನಿಸಿತು ಪರಮ ಆಶ್ಚರ್ಯಪ್ರದ ।
ಇದಾದರೂ ಒಂದು ಲೀಲೆಯೇ ವಿಶದ । ಅತಿ ವಿನೋದಕಾರಕ ॥ 8

ಇವನೇ ಈ ಹೋಳಿ ಹುಣ್ಣಿಮೆ ದಿನ । ನಾವು ಊಟಕ್ಕೆ ಕೂಡ್ರುವಾಗ ಮಧ್ಯಾಹ್ನ ।
ನೋಡಿಕೊಂಡು ಸರಿಯಾದ ಸಮಯವನು । ತಂದು ಭಾವಚಿತ್ರದ ಸಂತೋಷಗೊಳಿಸಿದ್ದನೆನ್ನ ॥ 9

ಇದಾಯಿತು ಹಿಂದಿನ ಕಥೆಯ ಅನುಸಂಧಾನ । ಇನ್ನು ಶ್ರೋತೃಗಳಾಗಲಿ ಸಾವಧಾನ ।
ಕೇಳಿರಿ ಮುಂದಿನ ಕಥೆಯನು । ಪಾವನ ಚರಿತ್ರೆಯ ಸಾಯಿಯದು ॥ 10

ಈ ಕಥೆಯು ಸುರಸ ಪೂರ್ಣ । ಶ್ರೋತೃಗಳಾಗಿರುವವರು ಮೊದಲೇ ದತ್ತಾವಧಾನ ।
ವ್ಯಕ್ತವೂ ಸಾಯಿಪದದಲಿ ಲೀನ । ಚರಿತ್ರೆ ಗಹನ ಸಾಯಿಯದು ॥ 11

ಪರೋಪಕಾರದ್ದೇ ಪ್ರತಿಮೆಯದು । ಪರೋಪಕಾರಕ್ಕಾಗಿಯೇ ಆತ್ಮವ ಸವಿಸುವದು ।
ನಿರ್ವೈರ ಧರ್ಮವೇ ಅವರದು । ಅಖಂಡವ ಸತ್ಕರ್ಮಕೆ ಸಮರ್ಪಿಸಿಕೊಂಡಿರುವರು ॥12

ಯಾವುದೇ ಇರಲಿ ಒಳ್ಳೆಯದು ಕೆಟ್ಟದ್ದು । ದೇಹ ಕರ್ಮದಂತೆ ದೇಹವನದು ಬಿಡದು ।
ಅದರಂತರ್ವೃತ್ತಿಯ ತಿರುಗಿಸುವುದು । ಗುರುಚರಣದತ್ತ ಪ್ರೀತಿಯಿಂದ ॥ 13

ಆಗ ನಿಜಭಕ್ತನ ಯೋಗಕ್ಷೇಮ । ಗುರುಹೇಗೆನಡೆಸುವ ಅವಿಶ್ರಮ ।
ಅದನು ಗುರುಚರಣದಲ್ಲಿಟ್ಟು ಪ್ರೇಮ । ಅತ್ಯುತ್ತಮ ಅನುಭವ ಪಡೆಯಬೇಕು ॥ 14

ಈ ಸ್ಥಿತಿಯು ಬೇಡಿಸಿಗದು । ಗುರುಕೀರ್ತನದಿಂದಲೇ ದೊರಕುವುದು ।
ಪ್ರಯತ್ನದಿಂದಲೂ ಸಿಗಲಾರದ್ದು । ಗುರುಕೃಪಾ ಬಲದಿಂದ ನಡೆದು ಬರುವುದು ॥ 15

ದುರಭಿಮಾನವಿಟ್ಟುಕೊಂಡು । ಸೂಕ್ಷ್ಮನಿರೀಕ್ಷಣೆ ಮಾಡಲು ಬಂದು ।
ಅಂಥವರು ಹೋದರು ಅಭಿಮಾನವ ತೊರೆದು । ದರ್ಶನಲಾಭದಿಂದ ಸುಖಿಗಳಾಗಿ ॥16

ಯಶ-ಶ್ರೀ ಔದಾರ್ಯ-ದಾನ । ಶಾಂತಿವೈರಾಗ್ಯ ಈ ಷಡ್ಗುಣ ।
ಇವುಗಳಿಗೆ ಶ್ರೀ ಸಾಯಿ ಭಗವಂತ ಪೂರ್ಣ । ಐಶ್ವರ್ಯದಲಿ ಸಂಪೂರ್ಣಹರಿಯಂತೆ ॥ 17

ನಮ್ಮ ಭಾಗ್ಯವೆಷ್ಟುಗಹನ । ಅದರಿಂದ ಈ ಸಾಯಿ ದಯಾಘನ ।
ಅರ್ಚನ-ಪೂಜನ-ಭಜನಗಳ ವಿನಃ । ದರ್ಶನ ವೀಯುವನಲ್ಲ ನಮಗೆ ॥ 18

ಎನ್ನುವರು ಭಕ್ತಿ ಇದ್ದಲ್ಲಿ ದೇವರು । ನಮ್ಮ ಹತ್ತಿರ ಭಕ್ತಿಯ ಅಭಾವವಿದ್ದರೂ ।
ಈ ಸಾಯಿ ಮಹಾನುಭಾವರು । ದೀನರಿಗೆ ದಯಾಳುವಾಗಿರುವ ॥ 19

ಆ ಅಲಿಯೇ ಹೇಳಿದ ಮಾತಿವು । ಶ್ರೋತೃಗಳೇ ಕೇಳಿರಿ ಸಾದ್ಯಂತವಾಗಿ ಅವು ।
ಆದೀತು ಸಾಯಿಲೀಲೆಯ ಅರಿವು । ಮತ್ತು ನಿಜಸತ್ತೆ ಅವರದ್ದು ॥ 20

ಒಂದು ದಿನ ಮುಂಬಯಿಯಲ್ಲಿ । ಹೋಗುತ್ತಿರುವಾಗ ದಾರಿಯಲ್ಲಿ ।
ಮನೋಹರ ಚಿತ್ರಗಳು ಮತ್ತು ಭಾವಚಿತ್ರಗಳನಲ್ಲಿ । ಮಾರುವ ವ್ಯಾಪಾರಿಯು ಕಂಡನು ॥ 21

ನಾನಾ ತರಹದ ಅಂದವಾದ ಚಿತ್ರಗಳಿದ್ದವು । ಸಂತ-ಮಹಂತಫಕೀರರವು ।
ನೋಡಬೇಕೆಂದಾಯಿತು ಅಪೇಕ್ಷೆಯು । ಯಾರಯಾರವಿದೆಯೆಂದು ॥ 22

ಅದಕೆ ಒಂದೊಂದನ್ನು ನೋಡಿದಾಗ್ಯೆ । ಈ ಚಿತ್ರವು ಹಿಡಿಸಿತು ಮನಸಿಗೆ ।
ಅದರ ಮೋಹಕತೆಯು ಎಲ್ಲದೊಳಗೆ । ಅಲ್ಲದೇ ಆರಾಧ್ಯ ದೇವತೆಯೂ ಅದಾಗಿತ್ತು ॥23

ಮೊದಲೇ ಮನದಲಿ ಪ್ರಿತಿ ಸಾಯಿಯ ಬಗ್ಗೆ । ಅಂಥದರಲ್ಲಿ ಅವರ ಭಾವಚಿತ್ರವೂ ಎದುರಿಗೆ ।
ನೋಡಿ ತೆಗೆದುಕೊಳ್ಳಲೇಬೇಕೆನಿಸಿದಾಗ್ಯೆ । ಹಣವನಿತ್ತೆ ಅವನ ಕೈಮೇಲೆ ॥ 24

ಬಳಿಕ ಆ ಚಿತ್ರ । ಮನೆಗೆ ತಂದು ಗೋಡೆಯ ಮೇಲೆ ತಗುಲಿಸಿದ್ದು ।
ಆನಂದದಿಂದ ನಿತ್ಯದರ್ಶನ ಪಡೆಯುತ್ತಿದ್ದು । ಬಾಬಾರ ಪ್ರೀತಿ ಭಾರಿ ನನಗೆ ॥ 25

ನಾನಿದನು ಕೊಟ್ಟೆನು ನಿಮಗೆ । ಅದಕೂ ಮೂರು ತಿಂಗಳು ಮೊದಲಿಗೆ ।
ಆರಾಮವಿರಲಿಲ್ಲ ಆಗ ನನಗೆ । ಅದರಿಂದ ಬೀಗನ ಸಹವಾಸದಲ್ಲಿದ್ದೆ ॥ 26

ನೂರ ಮಹಮದ ಪೀರಭಾಯಿ ಎಂಬವ । ನನಗೆ ಮೈದುನನವ ।
ನನ್ನ ಕಾಲಿಗೆ ಬಂದಿತ್ತು ಬಾವ । ಅದರಿಂದ ಶಸ್ತ್ರ ಚಿಕಿತ್ಸೆ ನಡೆಯಿತು ॥ 27

ಹೀಗೆ ನಾನು ಜಡ್ಡಿನವನಿದ್ದೆ । ಅವರಿಂದ ಮೂರು ತಿಂಗಳು ಅಲ್ಲೇ ಉಳಿದೆ ।
ನನ್ನ ಮನೆಯಲ್ಲಾಗ ಯಾರೂ ಇರದೆ । ಖಾಲಿಯಾಗಿಯೇ ಉಳಿದಿತ್ತು ॥ 28

ಪ್ರಸಿದ್ಧ ಬಾಬಾ ಅಬದುಲ ರಹಿಮಾನ । ಮೌಲಾನಾಸಾಬ ಮಹಮ್ಮದ ಹುಸೇನ ।
ಬಾಬಾ ಸಾಯಿ ಬಾಬಾ ತಾಜುದ್ದೀನ । ಇವರು ಮಾತ್ರ ಆಸ್ಥಳ ಬಿಟ್ಟಿರಲಿಲ್ಲ ॥ 29

ಇವರವಲ್ಲದೇ ಇನ್ನೂ ಇತರರ । ಇದ್ದವು ಗೋಡೆಯ ಮೇಲೆ ಭಾವಚಿತ್ರ ।
ನನ್ನ ಮನೆಯಲಿದ್ದವು ಮನೋಹರ । ಅವರನ್ನು ಬಿಡಲಿಲ್ಲ ಈ ಕಾಲಚಕ್ರ ॥ 30

ಇತ್ತ ನನ್ನದಂತೂ ಹೀಗೆ ಗತಿ । ಆದರೆ ಚಿತ್ರಗಳಿಗೇಕೆ ಸಾಡೇಸಾತಿ ।
ಎನಿಸುವುದು ವಸ್ತುವಿನದಾದಾಗ ಉತ್ಪತ್ತಿ । ಪ್ರಲಯಸ್ಥಿತಿಯೂ ತಪ್ಪದವಕೆ ॥ 31

ಪರಿಸ್ಥಿತಿಯೇ ಹೀಗಿರುವಲ್ಲಿ । ಸಾಯಿಗಾದರೂ ಅದು ತಪ್ಪಿದ್ದೆಲ್ಲಿ ।
ಇಂದಿನವರೆಗೂ ಇದ ನನ್ನಲ್ಲಿ । ಯಾರೂ ಹೇಳಲು ಸಾಧ್ಯವಿರಲಿಲ್ಲ ॥ 32

ಇದರ ಬಗ್ಗೆ ಸಮೂಲ ಕತೆಯನು । ಕೇಳಿದರೆ ಹೊಂದುವಿರಿ ವಿಸ್ಮಯವನು ।
ತಿಳಿಯುವಿರಿ ಸಾಯಿಯ ಸ್ಥಿರ ಚರಾತ್ಮಕತೆಯನು । ಅತರ್ಕ್ಯ ಲೀಲೆ ಅವನದು ॥ 33

ಸಂತ ಬಾಬಾ ಅಬ್ದುಲ ರಹಿಮಾನರ । ಸಣ್ಣದಾದ ಒಂದು ಚಿತ್ರ ।
ಮಹಮ್ಮದ ಹುಸೇನ ಥಾರಿಯೂ ಇವರ । ಸ್ವಾಧೀನದಲ್ಲಿ ತ್ತಾಗ ॥ 34

ಅವರು ಅದರದೊಂದು ಪ್ರತಿಯನ್ನು ಕೊಟ್ಟು । ನನಗೆ ಬಹಳ ವರ್ಷಗಳಾಗಿತ್ತು ।
ಆಗಿದನ್ನೇ ನಾನೆನ್ನ ಮೈದುನನಿಗೆ ಕೊಟ್ಟು । ಅದು ನಿನ್ನ ಹತ್ತಿರ ಇರಲೆಂದು ॥ 35

ಅದು ಎಂಟು ವರ್ಷಗಳವರೆಗೆ । ಇತ್ತವನು ಮೇಜಿನ ಖಾನೆಯೊಳಗೆ।
ಸಹಜದಲಿ ಅದು ಬಿದ್ದಾಗ ದೃಷ್ಟಿಗೆ । ಮುಂಬಯಿಗೆ ತನ್ನಂಗಡಿಯಲಿ ಒಯ್ದಿದ್ದ ॥ 36

ಬಾಬಾ ಅಬ್ದುಲ ಅವರ । ಅಂದವಾಗಿ ಚಿತ್ರವನ್ನು ಮಾಡಿಸಿದರು ।
ಇದನ್ನೊಯ್ದು ಅವರಿಗೆ ಕಾಣಿಕೆಯೀಯಬೇಕೆಂದರು । ಆದರಿಂದ ಅವರಂತರದಲಿ ಪ್ರೇಮ ಉಕ್ಕೀತೆಂದು ॥ 37

ಅದರ ನಕಲುಗಳನ್ನು ಮಾಡಿಸಿ । ಆಪ್ತೇಷ್ಟರಿಗೆ ಕೊಟ್ಟರು ಕಳಿಸಿ ।
ನಾನದನಿಟ್ಟಿದ್ದೆ ಗೋಡೆಗೆ ತಗುಲಿಸಿ । ನನಗೆ ಅವರು ಕೊಟ್ಟಿದ್ದನ್ನು ॥ 38

ಬಳಿಕ ಆ ಭಾವಚಿತ್ರದ ಅಂದ ಬಲು । ಅಬ್ದುಲ ರಹಿಮಾನರ ದರಬಾರ ತುಂಬಾ ।
ನೂರಮಹಮ್ಮದನು ಮುಂದಾಗಲು । ಅದನವರಿಗೆ ಅರ್ಪಿಸಲು ॥ 39

ಆ ಚಿತ್ರವನು ಕಂಡಾಗ ಅಬ್ದುಲ ರಹಿಮಾನ । ಆದ ಅತ್ಯಂತ ಕೋಪಾಯಮಾನ ।
ಎದ್ದರು ಹೊಡೆಯಬೇಕೆಂದು ಅವನ । ಅವನ ಮನದಲ್ಲಿದ್ದುದ ತಿಳಿದು ॥ 40

ಮಾಡಿ ಅವನ ನಿರ್ಭರ್ತ್ಸನ । ಹೊರಗೆ ಹಾಕಿದರು ಅವನ ।
ಅದರಿಂದವನಾದ ಅತ್ಯಂತ ಖಿನ್ನವದನ । ಗಹನ ಚಿಂತೆಯಾಯಿತವಗೆ ॥ 41

ಬಳಿಕವನಾಗಿ ಹೀನದೀನ । ಉದಾಸ ಮತ್ತು ಉದ್ವಿಗ್ನಮನ ।
ಕಳೆದುಕೊಂಡಾಯಿತು ಅತ್ತಹಣ । ಇತ್ತ ಗುರುಕೃಪೆಗೂ ವಿಘ್ನ ಉಂಟಾಯಿತು ॥ 42

ಈ ಹೊತ್ತೇ ಗುರುಕೃಪಾಸಂಪನ್ನನಾಗಿದ್ದವನು । ಆದೇನೀಗ ಅವರರೋಷಕ್ಕೆ ಕಾರಣ ।
ಹೀಗೆಂದು ಆಗಿ ಸಾಶಂಕ ಮನ । ಚಿತ್ರ ವಿಸರ್ಜನೆಯಲಿ ತೊಡಗಿದ ॥ 43

ಇನ್ನು ಈ ಸಂತ ಪ್ರತಿಮೆಗಳನೆಂದೂ । ಮನೆಯಲ್ಲಿಡಬಾರದೆಂದು ಕೊಂಡು ।
ಅದರಿಂದಲೇ ನಿಜಗುರು ಪ್ರೇಮವ ಕಳೆದುಕೊಂಡದು । ಏತಕ್ಕೆ ಬೇಕಿಂಥ ಉದ್ಯೋಗವೆಂದು ॥ 44

ಯಾವ ಭಾವಚಿಚತ್ರದಿಂದಾಗಿ । ನನ್ನ ಗುರು ನನ್ನ ಮೆಲೆ ಸಿಟ್ಟಾಗಿ ।
ಮಾಡಬಹುದು ಅಪಾಯಕ್ಕೆ ತುತ್ತಾಗಿ । ಅಂಥ ಕೆಲಸ ಪ್ರಯೋಜನವಿಲ್ಲದ್ದು ॥ 45

ಈ ರೀತಿ ಪ್ರತಿಮಾ ಪೂಜೆಗೆ । ನನ್ನ ಗುರುವಿನದಿರದು ಒಪ್ಪಿಗೆ ।
ಅವನೇ ಅಸಂತುಷ್ಟನಿದ್ದಾಗ್ಯೇ । ಚಿತ್ರದ ಪ್ರಯೋಜನವಾದರೂ ಏನು ॥ 46

ಬಹಳ ಹಣವಾಯಿತುಕು ವ್ಯಯ । ಮಾಡಲು ಈ ಚಿತ್ರಗಳು ಸಂಚಯ ।
ಆದರೆ ಇನ್ನದಕಿಲ್ಲ ಬೇರೆ ಉಪಾಯ । ಜಲ ವಿಸರ್ಜನೆ ಮಾಡುವುದೊಂದನ್ನುಳಿದು ॥47

ಅದಕಾಮೇಲೆ ನನ್ನ ಮೈದುನ । ಜೊತೆಗೆ ತೆಗೆದುಕೊಂಡು ಆ ಚಿತ್ರಗಳನ ।
ಬೇಡಿದರೂ ಯಾರಿಗೂ ಕೊಡದೆ ಅವುಗಳನ । ಸುಮುದ್ರದ ದಡಕೆ ಬಂದನು ॥ 48

ಅಪೋಲೋ ಬಂದರಕೆ ಬಂದು । ಬಾಡಿಗೆಯ ದೋಣಿಯ ಮಾಡಿಕೊಂಡು ।
ಆದಷ್ಟು ದೂರ ಸಮುದ್ರದೊಳಗೆ ಬಂದು । ಅಲ್ಲಿ ಅವುಗಳ ವಿಸರ್ಜಜನೆ ಮಾಡಿದರು ॥ 49

ಇಷ್ಟಕ್ಕೇ ಇದನು ಬಿಡದಾಗ । ಬಾಂದ್ರಾದಲ್ಲಿಯೂ ಇದನೇ ಆರಂಭಿಸಿದ್ದು ।
ಎಲ್ಲ ಆಪೇಷ್ಟಮಿತ್ರರಿಗೆ ವಿನಂತಿಸಿದ । ಚಿತ್ರಗಳನ್ನೆಲ್ಲ ಹಿಂದಕ್ಕೆ ಪಡೆದ ॥ 50

ಬಾಬಾ ಅಬ್ದುಲ ಸಿಟ್ಟಾಗಿರುವರೆಂದು । ಯಾರೆಲ್ಲರೂ ತಮ್ಮಲ್ಲಿದ್ದ ।
ಚಿತ್ರಗಳ ಹಿಂದಿರುಗಿಸಬೇಕೆಂದು । ಅವುಗಳನ್ನೆಲ್ಲ ವಿಸರ್ಜಿಸಬೇಕಾಗಿದೆ ॥ 51

ನನಗೆ ಕೊಟ್ಟ ಚಿತ್ರವನ್ನೂ । ನನ್ನ ಸೋದರನ ಬಳಿ ಇರುವುದನ್ನೂ ।
ತಂಗಿಯಲ್ಲಿದ್ದುದನ್ನು ಪಡೆದನು । ಎಲ್ಲಾ ಆರು ಪ್ರತಿಗಳು ಕೂಡಹಾಕಿ ॥ 52

ಆ ಎಲ್ಲಾ ಪ್ರತಿಗಳ ತೆಗೆದುಕೊಂಡು । ಬಾಂದ್ರೆಯ ಸಮುದ್ರದ ದಂಡೆಗೆ ಬಂದು ।
ನೆಲ ಮುಗಿದು ನೀರಿರುವಲ್ಲಿ ನಿಂದು । ಸಂತೋಷದಿಂದ ನೋಡಿದ ॥ 53

ಕರೆದನೊಬ್ಬ ಮೀನುಗಾರನು। ಆ ಸಮಯದಲಿ ಆ ಎಲ್ಲ ಚಿತ್ರಗಳನು ।
ಅವನ ಕೈಯೊಳಗಿತ್ತನು । ಅವನಿಂದ ಜಲದಲಿ ಹಾಕಿದನು ॥ 54

ಆಗ ಅನಾರೋಗ್ಯ ನನಗೆ । ಆದರಿಂದಿದ್ದೆ ಆವನ ಮನೆಯೊಳಗೆ ।
ನನಗೂ ಉಪದೇಶ ಮಾಡಿದ ಹೀಗೆ । ಈ ಪ್ರತಿಗಳು ಸಂಕಟ ತರುವವೆಂದು ॥55

ಅದರೆ ಕೂಡಿಸಿಕೊಂಡು ಅವೆಲ್ಲವುಗಳು । ಸಮುದ್ರದಲ್ಲೊಯ್ದು ವಿಸರ್ಜಿಸಲು ।
ನಿನ್ನ ಬಿಡುಗಡೆಯಾಗುವದು ವ್ಯಥೆಯಿಂದಲೂ । ನಿರ್ಧಾರವಾಗಿ ಇದು ತಿಳಿದಿರು ॥ 56

ನಾನೂ ಕರೆದು ನನ್ನ ಆಳನ್ನು । ಕೊಟ್ಟು ನನ್ನ ಕೀಲಿಕೈಗಳನ್ನು ।
ತರಿಸಿದೆ ನಂತರ ಭಾವಚಿತ್ರಗಳೆಲ್ಲವನ್ನು । ಬೀಗನ ಕೈಗೆ ಅವುಗಳನ್ನೊಪ್ಪಿಸಿದೆ ॥ 57

ಅವನು ಕೂಡಲೇ ತನ್ನ ಮಾಲಿಯ ಕರೆದ । ಅವೆಲ್ಲವುಗಳನ್ನು ಅವನಿಂದ ।
ಚಿಂಭಾಯಿ ಮಂದಿರದ ಹತ್ತಿರದ । ಸಮುದ್ರದಲಿ ಹಾಕಿಸಿದ ॥ 58

ಮುಂದೆ ಕಳೆಯಲು ಎರಡು ತಿಂಗಳು । ನನ್ನ ಆರೋಗ್ಯವು ಸರಿಯಾಗಲು ।
ನನ್ನ ಮನೆಗೆ ತಿರುಗಿ ಹೋಗಲು । ಅತಿಆಶ್ಚರ್ಯವನು ಕಂಡೆ ॥ 59

ನಾನಿಮಗೆ ಕೊಟ್ಟ ಭಾವ ಚಿತ್ರವಲ್ಲೇ । ಎದುರಿಗಿನ ಗೋಡೆಯ ಮೇಲೆ ।
ಸ್ಥಿರವಾಗಿರುವುದನು ನೋಡಿದ ಮೇಲೆ । ಬಹಳ ಆಶ್ಚರ್ಯವಾಯಿತು ॥ 60

ಎಲ್ಲ ಚಿತ್ರಗಳನು ತಂದಾಗಿತ್ತು । ಇದೊಂದು ಮಾತ್ರ ಹೇಗೆ ಉಳಿಯಿತು ।
ಎಂದು ತೆಗೆದು ಕಪಾಟದಲಿ ಬಚ್ಚಿಟ್ಟು । ಕೂಡಲೇ ಯಾರಿಗೂ ತಿಳಿಯದಂತೆ ॥ 61

ಎಲ್ಲಿ ನನ್ನ ಬೀಗನ ಕಣ್ಣಿಗೆ ಬಿದ್ದು । ಕೂಡಲೇ ಹೋಗುವ ತೆಗೆದುಕೊಂಡು ।
ಅದಕೆ ಜಲಸಮಾಧಿಯ ಮಾಡಲೆಂದು । ನನ್ನ ಮನದಲಿ ಭಯವಿತ್ತು ॥ 62

ಮನೆಯಲ್ಲದ ಇಡಲಾಗದು । ನೋಡಿದರೆ ಬೀಗ ಮುಳುಗಿಸುವ ಒಯ್ದು।
ಕೊಡಬೇಕೆಂದರೆ ಅದೂ ಆಗದು । ನಿಃಶಂಕಚಿತ್ತದಿ ಅಭಕ್ತರಿಗೆ ॥ 63

ವಿಚಾರ ಮಾಡದೆ ಯಾರಿಗಾದರೂ ಕೊಟ್ಟಲ್ಲಿ । ಅಲ್ಲಿ ಸರಿಯಾಗಿ ಜೋಪಾನವಾಗದಿದ್ದಲ್ಲಿ ।
ಅಸ್ವಸ್ಥತೆ ಉಳಿಯುವುದು ಮನದಲ್ಲಿ । ಎಂಬ ದೀರ್ಘ ವಿವಂಚನೆ ಮನಸಿಗೆ ॥ 64

ಅದು ಉಳಿದೀತೆಲ್ಲ ಸುರಕ್ಷಿತ । ಅಂಥ ಸ್ಥಳವನು ಹುಡುಕುವುದು ಉಚಿತ ।
ಯಾರು ತಮ್ಮ ಮನೆಯಲ್ಲಿಡುವರು ವ್ಯವಸ್ಥಿತ । ಅಂಥವರ ಕೈಗೆ ಕೊಡಬೇಕು ॥ 65

ಮನ ತೊಡಗಲು ಹೀಗೆ ಚಿಂತೆಯೊಳಗೆ । ಸಾಯಿಯೇ ಸುವಿಚಾರವಿತ್ತನೆನಗೆ ।
ಹೋಗಿ ಪೀರ ಮೌಲಾನಾರ ದರಬಾರದೊಳಗೆ । ಇಸಮೂಗೆ ವೃತ್ತಾಂತ ತಿಳಿಸಬೇಕು ॥66

ಕೂಡಲೇ ನಾ ಹಾಗೆಯೇ ಹೊರಟೆ ಸತ್ವರ । ತಲುಪಿದೆ ಪೀರ ಮೌಲಾನಾ ದರಬಾರ ।
ಮುಜಾವರ ಇಸ್ಮೂನಿಗೆ ವೃತ್ತಾಂತವ ಪಡಿಸಿದೆ ಸಾದರ । ಅತ್ಯಾದರದಲಿ ಏಕಾಂತದಿ ॥67

ನಮ್ಮಿಬ್ಬರ ಈ ನಿರ್ಣಯ । ನಮ್ಮ ಹತ್ತಿರವೇ ಇರಬೇಕಿದು ನಿರ್ಭಯ ।
ಎಂದು ಮಾಡಿದೆವು ಮನದ ನಿಶ್ಚಯ । ಅದೇ ದಿನ ನಾವಿಬ್ಬರೂ ॥ 68

ಸಮರ್ಥ ಸಾಯಿಯವರ ಚಿತ್ರವಿದು । ತಮ್ಮಲ್ಲಿಯೇ ಇರಬೇಕೆಂದು ।
ನಾವೇ ಸ್ವತಃ ಇಲ್ಲಿಗೇ ಬಂದು । ತಮಗೆ ಸಮರ್ಪಿಸುವುದೆಂದು ॥ 69

ಆ ಕೃತ ನಿಶ್ಚಯಾನುಸಾರ । ಇತ್ತೆವು ತಮಗದನು ಸಾದರ ।
ತಿರುಗಿ ಬಂದು ಬಿಟ್ಟೆವು ಸತ್ವರ । ತಮ್ಮ ಭೋಜನದ ಸಿದ್ಧತೆಯನು ಕಂಡು ॥ 70

ಈ ವಿಸ್ತಾರವಾದ ಕಥೆಯನ್ನೆಲ್ಲ । ಹೇಳಲು ಸಮಯವಿರಲಿಲ್ಲ ।
ಮುಂದೆಂದಾರೂ ಹೇಳಿದರಾಯಿತೆಲ್ಲ । ಎಂದುಕೊಂಡು ನಾ ತಿರುಗಿ ಹೋದೆ ॥ 71

ಇಂದು ನಾಳೆ ಎನುತ । ಹೋದೆವು ಒಂಬತ್ತು ವರುಷವುರುಳುತ ।
ಇಂದು ಭೇಟಿಯಾಯಿತು ಅಕಸ್ಮಾತ್ । ಒಬ್ಬರದೊಬ್ಬರಿಗೆ ಈ ಹೊತ್ತು ॥ 72

ಅದರಿಂದ ನೆನಪಾಯಿತು ಹಿಂದಿನದು । ತಾವೂ ಹೇಳಿದಿರಿ ಸ್ವಪ್ನ ಕಂಡದ್ದು ।
ಪ್ರಸಂಗಗಳೊಂದಕ್ಕೊಂದು ಹೊಂದಿದ್ದು । ಅದ್ಭುತ ಲೀಲೆಯಲ್ಲವೇ ಇದು ॥ 73

ಈಗ ಮತ್ತೆ ಕಥೆ ಇನ್ನೊಂದು । ತಾವೆಲ್ಲ ಚಿತ್ತವಿಟ್ಟು ಕೇಳುವುದು ।
ಸಾಯಿ ಅತಿ ಪ್ರೀತಿಯಿಂದ ಕಾಣುತ್ತಿದ್ದುದು । ತನ್ನ ಭಕ್ತರನು ಹೇಗೆಂದು ॥ 74

ಪರಮಾರ್ಥದಲಿ ರುಚಿಯಾರಿಗೆ । ಅಂಥವರು ಬಲು ಪ್ರೀತಿ ಸಾಯಿ ಸಮರ್ಥರಿಗೆ ।
ಸ್ವಾನಂದನೀಯುವರು ಅವರಿಗೆ । ಅವರೆಲ್ಲ ಕಷ್ಟಗಳ ನಿವಾರಿಸಿ ॥ 75

ಈ ಅರ್ಥದ ಸವಿ ಅನುಭವ ಒಂದನು । ಬಾಳಾಸಾಹೇಬ ದೇವರ ಪಣವನು ।
ಗೆದಿಸಿದರು ಪೂರೈಸಿ ಅವರ ಇಚ್ಛೆಯನು । ಭಕ್ತಿಯನು ಕರುಣಿಸಿ ಅವರಿಗೆ ॥ 76

ದಿನವೂ ಮಾಡದೇ ನೌಕರಿ । ಯೋಗಕ್ಷೇಮಕ್ಕಿರಲಿಲ್ಲ ದಾರಿ ।
ಆದರೆ ಪರಮಾರ್ಥಕಾರ್ಯವನು ಮಾಡಲು ರಾತ್ರಿ । ಆದಕೇಕೆ ವ್ಯತ್ಯಯ ಬರಬೇಕು ॥ 77

ನಿತ್ಯವೂ ಜ್ಞಾನೇಶ್ವರಿಯ ಓದಬೇಕೆಂದು । ಇಚ್ಛೆ ಇದ್ದಿತು ಬಹಳ ದಿನದ್ದು ।
ಆದರೆ ವಿಘ್ನ ಏನಾದರೊಂದು । ಬಂದು ಅದು ನಿಂತು ಹೋಗುತ್ತಿತ್ತು ॥ 78

ಭಗವದ್ಗೀತೆಯ ಅಧ್ಯಾಯ ಒಂದು । ಹೇಗೆ ನಿತ್ಯನೇಮದಿ ನಡೆಯುತಿರುವುದು ।
ಹಾಗೆ ನಿಶ್ಚಯ ಜ್ಞಾನೇಶ್ವರಿಯದು । ಆದರಾ ನಿಯಮ ನಡೆಯದಾಗಿತ್ತು ॥ 79

ಬೇರೆ ಗ್ರಂಥಗಳು ಕೈಗೆತ್ತಿಕೊಂಡದ್ದು । ನಿತ್ಯನೇಮದಿ ಓದಲ್ಪಡುತ್ತಿದ್ದು ।
ಜ್ಞಾನೇಶ್ವರಿಯ ಓದುವ ಪ್ರಭಲ ಇಚ್ಛೆ ಇದ್ದೂ । ನಿಯಮವೂ ಕೊನೆ ಮುಟ್ಟುತ್ತಿರಲಿಲ್ಲ ॥ 80

ಒಮ್ಮೆ ಮೂರು ತಿಂಗಳ ರಜೆ ತೆಗೆದುಕೊಂಡು । ದೇವ ಅವರು ಶಿರಡಿಗೆ ಬಂದು ।
ಅಲ್ಲಿಂದ ವಿಶ್ರಾಂತಿ ಪಡೆಯಲೆಂದು । ತನ್ನೂರ ಪೌಂಡಾಕ್ಕೆ ಹೋದರು ॥ 81

ಅಲ್ಲಿ ಇತರ ಕಾರ್ಯಗಳೆಲ್ಲ ಆದವು । ನಿಯಮದ ಪೋಥಿಗಳು ಓದಲ್ಪಟ್ಟವು ।
ಕೊನೆಗೂ ಕೂಡಿಬರಲಿಲ್ಲ ಸಮಯವು । ಜ್ಞಾನೇಶ್ವರಿ ಓದುವುದಕೆ ಮಾತ್ರ ॥ 82

ಜ್ಞಾನೇಶ್ವರಿಯ ಕೈಗೆತ್ತಿಕೊಂಡಾಗ್ಯೆ । ಏನಾದರೂ ವಿಕಲ್ಪವೇಳುವುದು ಮನದೊಳಗೆ ।
ಓದು ನಡೆದರೂ ಹಾಗೆ ಹಾಗೆ । ಒಳಗೆ ಪ್ರೀತಿ ಹುಟ್ಟಲಿಲ್ಲ ॥ 83

ಪ್ರಯತ್ನ ಮಾಡಿದರೂ ಎಷ್ಟು । ಮಾಡಿದ ನಿಶ್ಚಯ ಸಿದ್ಧಿಸಿದಾಯಿತು ।
ನಿತ್ಯ ನೇಮದಿಂದ ಐದು ನುಡಿಗಳೇ ಆಯಿತು । ಪ್ರತಿದಿನ ಓದಬೇಕೆಂದಾಗಲೆಲ್ಲ ॥84

ಕೊನೆಗೆ ಐದೇ ಶ್ಲೋಕಗಳಾದರೂ ಸಾಕು । ನಿಶ್ಚಯ ಮಾಡಿದೆ ಅಷ್ಟನ್ನಾದರೂ ಓದಬೇಕು ।
ವ್ಯತ್ಯವಿರುತ್ತಿತ್ತು ಅದಕೂ ಸಂತೋಷದಿಂದನೂ ಮಾಡದಾದೆ ॥ 85

ಆದಕೆ ಮಾಡಿದೆನೊಂದು ನೇಮ । ಸಾಯಿಯೇ ಹುಟ್ಟಿಸಬೇಕು ಆ ಪ್ರೇಮ ।
ಅವರು "ಓದು" ಎಂದಾಗಲೇ ಉಪಕ್ರಮ । ಮಾಡುವೆನು ನಾ ನಿಶ್ಚಿಂತನಾಗಿ ॥ 86

ಸಾಯಿಚರಣದಲ್ಲಿಟ್ಟು ನಿಷ್ಠೆಯನು । ಯಾವಾಗ ಸಾಯಿ ಕೊಡುವರು ಆಜ್ಞೆಯನು ।
ಅಂದೇ ಓದುವೆನು ಜ್ಞಾನೇಶ್ವರಿಯನು । ಎಂದು ನಿಶ್ಚಯಿಸಿ ಕುಳಿತುಬಿಟ್ಟೆ ॥ 87

ಮಹೋದಯ ಪರ್ವದಂದು । ತಾಯಿ ತಂಗಿಯರ ಕೂಡಿಕೊಂಡು ।
ಗುರುಪೂಜಾಗೌರವವ ನೋಡಲೆಂದು । ದೇವ ಅವರು ಶಿರಡಿಗೆ ಬಂದರು ॥ 88

ಜೋಗ ದೇವ ಅವರಿಗೆ ಕೇಳಿದರಲ್ಲಿ । ನೀವು ಜ್ಞಾನೇಶ್ವರಿಯನು ನಿತ್ಯದಲಿ ।
ಓದುವುದಿಲ್ಲವೇತಕೆ ಇಲ್ಲಿ । ಇದಕೆ ದೇವ ಇತ್ತ ಉತ್ತರವ ಕೇಳಿ ॥ 89

ಜ್ಞಾನೇಶ್ವರಿಯ ಪ್ರೀತಿ ಬಹಳ ನನಗಿದೆ ಆದರೆ ಓದಲು ಸಾಧಿಸದಾಗಿದೆ ।
ಅದಕೆ ಬಾಬಾ ಆಜ್ಞಾಪಿಸಿದಾಗಲೇ ಓದಬೇಕೆಂದೇ । ಸುಮ್ಮನಿದ್ದು ಬಿಟ್ಟಿರುವೆ ॥ 90

ಆಗ ಜೋಗ ಹೇಳಿದರು ಯುಕ್ತಿಯನೊಂದು । ಜ್ಞಾನೇಶ್ವರಿಯ ಪುಸ್ತಕವ ತಂದು ।
ಸಾಯಿಬಾಬಾರ ಕೈಯಲ್ಲಿ ಕೊಡುವುದು । ನೀವು ಓದಿರೆಂದದದನು ಕೊಡುವರು ನಿಮಗೆ ॥ 91

ನನಗೆ ನಿಮ್ಮ ಯುಕ್ತಿ ಬೇಕಿಲ್ಲ । ಬಾಬಾ ನನ್ನ ಮನವ ತಿಳಿದಿರುವರೆಲ್ಲ ।
ಅವರೇಕೆ ನನ್ನಿಷ್ಟ ಪೂರೈಸುವುದಿಲ್ಲ । ಓದೆಂದು ಸ್ಪಷ್ಟವಾಗಿ ಹೇಳಿ ಬಿಟ್ಟು ॥ 92

ಸಮರ್ಥರ ದರ್ಶನ ತೆಗೆದುಕೊಂಡು । ಒಂದು ರೂಪಾಯಿಯ ಅರ್ಪಿಸಿದ ।
ಒಂದೇ ಏಕೆ ಇಪ್ಪತ್ತು ಕೊಡವದ । ಎಂದು ಬಾಬಾ ಅವನಿಗೆ ಹೇಳಿದರು ॥ 93

ಇಪ್ಪತ್ತು ರೂಪಾಯಿ ತಂದಿತ್ತರು । ರಾತ್ರಿ ಬಾಲಕರಾಮರು ಭೇಟಿಯಾದರು ।
ಸಾಯಿ ಕೃಪೆಯ ಹೇಗೆ ಪಡೆದರು ಎಂಬ ಹಿಂದಿನ ವೃತ್ತವ ಕೇಳಿದರು ॥ 94

ನಾಳೆ ಆರತಿಮುಗಿದಾಗ । ನಾನೆಲ್ಲನು ಹೇಳುವೆ ನಿಮಗೆ ।
ಬಾಲಕರಾಮರು ಆಶ್ವಾಸನೆ ಇತ್ತಾಗ । ಆಗಲೆಂದರು ದೇವ ಅವರು ॥ 95

ಮತ್ತೆ ಎರಡನೆಯ ದಿನ ದೇವ ಅವರು । ದರ್ಶನಕೆ ಮಶೀದಿಗೆ ಹೋದರು ।
ಮತ್ತೆ ಇಪ್ಪತ್ತು ರೂಪಾಯಿಗಳು ಬೇಡಿದರು । ಸುಖ ಸಂತೋಷದಿಂದಿತ್ತರು ದೇವ ॥ 96

ಅಲ್ಲಿ ಅತ್ಯಂತ ಗದ್ದಲವಿದ್ದುದ್ದು ಕಂಡು । ದೇವ ನಿಂತು ಬದಿಗೆ ಸರಿದು ।
ಬಾಬಾ ಕೇಳಿದರು ಅವನೆಲ್ಲೆಂದು । ಗದ್ದಲದಲ್ಲೆಲ್ಲಿ ಅಡಗಿ ನಿಂತಿರುವ ॥ 97

ದೇವ ಇತ್ತರು ಪ್ರತ್ಯುತ್ತರವನಲ್ಲಿ । ಬಾಬಾ ನಾನಿರುವೆನಿಲ್ಲಿ ।
ಆಗ ಬಾಬಾ ಕೇಳಿದವನಲ್ಲಿ । ಏಕೆ ಏಳೇ ಕೊಟ್ಟೆಯಲ್ಲ ॥ 98

ಇಪ್ಪತ್ತು ಕೊಟ್ಟೆನೆಂದು ದೇವ ಹೇಳಿದರು । "ದುಡ್ಡು ಯಾರದು ಬಾಬಾ" ಕೇಳಿದರು ।
"ಬಾಬಾ ಅದು ತಮ್ಮದೆ" ಎಂದಾಗ ಅಂದರು । ಮತ್ತೇಕೆ ಓಡಿ ಹೋಗುತ್ತಿರುವಿರಿ ॥ 99

ಬರಬೇಕು ಇಲ್ಲಿ ಹತ್ತಿರ ಬಂದು । ಸ್ವಸ್ಥ ಚಿತ್ತದಿಂದ ಹತ್ತಿರ ಕುಳಿತಿರುವುದು ।
ದೇವ ಮನ್ನಿಸಿ ಆಜ್ಞೆ ಬಾಬಾರದು । ಮನೋಭಾವದಿಂದ ಕುಳಿತರಲ್ಲಿ ॥ 100

ನಿತ್ಯದಂತೆ ಆರತಿ ಮುಗಿಯಿತು । ಜನವೆಲ್ಲ ಸ್ವಸ್ಥಾನಕೆ ತೆರಳಿತು ।
ದೇವ ಬಾಳಕರಾಮರ ಭೇಟಿಯಾಯಿತು । ಹಿಂದಿನ ಸುದ್ದಿಯ ಕೇಳತೊಡಗಿದರು ॥ 101

ಅವರ ಪೂರ್ವ ವೃತ್ತಾಂತವ ಕೇಳಿದರು । ಅವರೂ ಅದನು ಸಾದ್ಯಂತವಾಗಿ ಹೇಳಿದರು ।
ಹೇಗೆ ಉಪಾಸನೆಯಲಿ ತೊಡಗಿಸಿದರು । ಎಂದು ದೇವ ಅವನನು ಕೇಳಿದರು ॥ 102

ನಿಮಗೇನು ಮಾಡಿದರು ನಿವೇದನ । ಹೇಗೆ ಮಾಡಬೇಕು ಬ್ರಹ್ಮಚಿಂತನ ।
ಮಾಡಿರಿ ನನ್ನ ಜಿಜ್ಞಾಸೆಯ ಪೂರ್ಣ । ದೇವ ಅವನಿಗೆ ಪ್ರಾರ್ಥಿಸಿದರು ॥ 103

ಬಾಲಕರಾಮನು ದೇವ ಅವರಿಗೆ । ಜಿಜ್ಞಾಸಾಪೂರ್ತಿ ಮಾಡಲವರಿಗೆ ।
ಉತ್ತರವೀಯು ಬೇಕೆನ್ನುವಾಗ್ಯೇ । ಬಾಬಾ ಕರೆದರು ದೇವ ಅವರನು ॥ 104

ಸಾಯಿ ಪರಮ ಮಮತೆಯುಳ್ಳವರು । ದೇವ ಅವರ ಕರೆಯಲು ಚಂದ್ರೂನ ಕಳುಹಿಸಿದರು ।
ಕ್ಷಣವನ್ನು ಕಳೆಯದೇ ದೇವ ಅವರು । ಶ್ರೀ ಸಾಯಿಯ ಭೇಟಿಗೆ ಬಂದರು ॥ 105

ಮೂರು ಪ್ರಹರದ ಹೊತ್ತಿಗೆ । ಮಶೀದಿಯ ಕಟಕಟೆಗೆ ।
ಎರಡು ಕೈಯೂರಿ ನಿಂತಿದ್ದರು ಎದುರಿಗೆ । ಬಾಬಾರನ್ನು ಕಂಡರು ॥ 106

ದೇವ ಹೋಗಿದೊಡನೆ ವಂದಿಸಿದರು । ಬಾಬಾ ಅವರಿಗೆ ಕೇಳಿದರು ।
ಎಲ್ಲಿ ಯಾರೊಡನೆ ತಾವು । ಸಂಭಾಷಣೆ ನಡೆಸಿದ್ದಿರಲ್ಲಿ ॥ 107

ದೇವರು ಉತ್ತರಿಸಿದರು ಆಗ್ಯೇ। ಕಾಕಾ ಅವರ ಅಟ್ಟದ ಮೇಗೆ ।
ಬಾಲಕರಾಮನ ಜೊತೆಗೆ। ತಮ್ಮದೇ ಕೀರ್ತಿಯ ಕೇಳಿದೆ ॥ 108

ರೂಪಾಯಿ ಇಪ್ಪತ್ತೈದು । ಬಾಬದೇವ ಅವರಿಗೆ ಆಜ್ಞಾಪಿಸಿದ್ದು ।
ಕೂಡಲೇ ಹೋಗದು ತಂದು । ಬಾಬಾರಿಗೆ ಅರ್ಪಿಸಿದರು ॥ 109

ಕೇಳಿದರು ಎಷ್ಟು ತಂದದ್ದು । ದೇವ ಹೇಳಿದರು ಇಪ್ಪತ್ತೈದು ।
ನಡೆ ಕುಳಿತುಕೊ ಬಾಬಾ ಕರೆದು । ಆಗ ಬಾಬಾರೊಡನೆ ಮಶೀದಿಯೊಳಗೆ ಹೋದರು ॥110

ಬಾಬಾ ಕುಂಭದ ಹತ್ತಿರ ಕುಳಿತರು । ಮಶೀದಿಯಲ್ಲಿರಲಿಲ್ಲ ಬೇರೆಯಾರೂ ।
ಆಗ ಬಾಬಾ ಅವನಿಗೆಂದರು । ನೀನನ್ನ ಚಿಂದ ಬಟ್ಟೆಯ ಕದ್ದಿರುವೆ ॥ 111

ನನಗೆ ಚಿಂದಿಗೊತ್ತಿರುದು । ದೇವ ಅವರು ಕಳಕಳಿಯಿಂದ ಹೇಳಿದ್ದು ।
ಇಲೇ ಎಲ್ಲಾದರೂ ಇರಬಹುದು । ಆಗ ಸಾಯಿ ಎಂದರವರೆಗೆ॥ 112

ಚಿಂದಿ ಇಲ್ಲಿ ಎಲ್ಲಿದೆ । ಎಂದ ದೇವ ಅವರ ಮಾತಿಗೆ ।
ಬಾಬಾ ಎದ್ದು ಹುಡುಕು ನೀನೆ ಎಲ್ಲಿದೆ । ಈ ಕಳ್ಳತನದ ಬುದ್ಧಿ ಒಳ್ಳೆಯದಲ್ಲ ॥ 113

ಯಾವ ಮಕ್ಕಳು ಅದನೋಯ್ದದ್ದು ನೋಡು ಅದು ಅಲ್ಲಿಯೇ ಇರಬಹುದು ।
ಇದ ಕೇಳಿ ದೇವ ಮತ್ತು ಹುಡುಕಿದ್ದು । ಆದರೆಲ್ಲೂ ಕಾಣಲಿಲ್ಲ ಅದು ॥ 114

ಬಳಿಕ ಹುಬ್ಬು ಗಂಟು ಮಾಡಿ । ಅತ್ತ ಇತ್ತ ಎಲ್ಲ ನೋಡಿ ।
ಸಾಯಿ ದೇವ ಅವರ ಮೇಲೆ ರೇಗಾಡಿ । ಅವರತ್ತ ಕಣ್ಣುಕಿಸಿದು ನೋಡುತ್ತ ॥ 115

ಎಂದರು ನೀನೆ ಕಳ್ಳ ನಿನ್ನ ಹೊರತು । ಇಲ್ಲಿ ಯಾರು ಈಗ ಬಂದವರು ನಿನ್ನ ಹೊರತು ।
ನನ್ನ ಚಿಂದಿಯ ಕದಿಯಲೆಂದು । ನಾನಿನ್ನೇ ಕಳ್ಳ ಎನ್ನುವೆ ॥ 116

ಹೀಗೆ ಇಲ್ಲಿ ಬಂದದ್ದು ನೀನು । ಕಳವು ಮಾಡುವುದಕ್ಕೆ ಏನು ।
ಕಪ್ಪು ಕೂದಲು ಬೆಳ್ಳಗಾದರೂ । ನಿನ್ನ ಗುಣವಿನಿತೂ ಬದಲಾಗಿಲ್ಲ ॥ 117

ನಿನ್ನನ್ನು ಕೊಡಲಿಯಿಂದ ಕಡಿದು ಹಾಕುವೆ । ನಿನ್ನನು ಚೂರಿಯಿಂದ ಇರಿದು ತುಂಡು ತುಂಡ ಮಾಡುವೆ ನನ್ನಿಂದ ತಪ್ಪಿಸಿಕೊಂಡೆಲ್ಲಿಗೆ ಹೋಗುವೆ ।
ನೀನು ಹೋದರೆ ಅಲ್ಲಿಯೇ । ಬಂದು ಕೊಲ್ಲುವೆನು ನಿನ್ನ ॥ 118

ಮನೆಯಿಂದ ಶಿರಡಿಗೆ ಬಂದಿರುವೆ ನೀನು । ಕಳವು ಮಾಡಲೆಂದೇ ಏನು ।
ತಿರುಗಿ ತೆಗೆದುಕೊ ಇದನು । ಮತ್ತು ನನ್ನ ಚಿಂದಿಯ ಕೊಟ್ಟು ಬಿಡು ॥ 119

ಕ್ರೋಧದಿಂದ ಸಾಯಿ ಕೆಂಪಾಗಿದ್ದು । ಉದ್ಧಾರವಾಯಿತು ಅಮ್ಮ ಅಕ್ಕಂದಿರದು ।
ಸಾಲು ಹತ್ತಿತ್ತು ಬೈಗುಳುಗಳದು । ಸಂತಾಪದಿಂದ ಕೆಂಡವಾದರೂ ॥ 120

ಸಾಯಿ ಸಿಟ್ಟಿಗೆದ್ದುದ ಕಂಡು । ದೇವ ಅವರು ಕೌತುಕ ನೋಡುತ್ತಿದ್ದ ।
ಸುಮ್ಮನೇ ನಿಂತು ಬಿಟ್ಟಿದ್ದ । ಆಶ್ಚರ್ಯ ಭರಿತಮನದಿಂದ ॥ 121

ದೇವ ಅವರು ಒಬ್ಬರೇ ಹತ್ತಿರ ಇದ್ದು । ಇನ್ನು ಹೊಡೆಸಿಕೊಳ್ಳಬೇಕಾಗುವುದು ।
ಅಥವಾ ವಿಶ್ವರೂಪ ದರ್ಶನವೇ ಇದು । ಎಂದೆನಿಸಿ ಆನಂದಿತರಾದರು ॥ 122

ದಂಡಕಾಷ್ಠವನೆತ್ತಿ ಕೊಳ್ಳುವರಿನ್ನು । ದ್ವೇಷದಿಂದ ಹೊಡೆವರೆನ್ನನು ।
ಒಬ್ಬನೇ ಬೇರೆ ಸಿಕ್ಕಿರುವೆ ಇನ್ನು । ಮನ ಬಂದದ್ದು ಮಾಡಲಿ ॥ 123

ಆದರೆ ಈ ಚಿಂದಿಯ ಒಗಟವೇನು । ಅದಂತೂ ದೇವ ಅವರಿಗೆ ತಿಳಿಯದಿನ್ನು ।
ಹೋಗು ಹೊರಟು ಹೋಗು ನೀನಿನ್ನು । ಎಂದಾಗ ಮೆಟ್ಟಲುಗಳತ್ತ ಸರಿದರು ॥ 124

ಈ ಚಿಂದಿಯ ಗುಹ್ಯಾರ್ಥ। ತಿಳಿಯಲಸು ನಾನಲ್ಲಿ ಸಮರ್ಥ।
ಹೊಂದೆನು ಸಾಯಿ ಕೃಪೆಯೆಂಬ ಸ್ವಾರ್ಥ । ಆಗ ಶ್ರೋತೃಗಳಿಗದರರ್ಥ ಹೇಳಿಯೇನು ॥ 123

ಕರೆಯಲು ಅರ್ಥಗಳಿಗೆ । ದೇವ ಬಂದರು ಬಾಬಾರ ಎದುರಿಗೆ ।
ಬೈಗಳು ಸರಮಾಲೆ ನಡೆದಿತ್ತು ಹಾಗೆ । 'ಮೇಲೇಕೆ ಬಂದೆ ನೀ' ಎಂದರು ॥ 126

ಹೋಗು ನಡೆಯಿನ್ನು ಆಚೆಗೆ । ಎಂದಾಗ ವಂದಿಸಿ ಚರಣಗಳಿಗೆ ।
ಮನ್ನಣೆ ಇತ್ತವರ ಆಜ್ಞೆಗೆ । ತಿರುಗಿ ವಾಡೆಗೆ ಹೋದರು ॥ 127

ನಡೆದ ಎಲ್ಲ ಸಂಗತಿಯನ್ನು । ಯಥಾರ್ಥವಾಗಿ ಹೇಗೆ ನಡೆಯಿತೆಂಬದನು ।
ಸಾದ್ಯಂತ ನಿವೇದಿಸಿ ಅದನು । ಜೋಗ ಮತ್ತು ಬಾಳಾರಾಮರಿಗೆ ॥ 128

ಮುಂದೆ ಮತ್ತು ಒಂದು ಗಳಿಗೆ । ಬೈಗಳ ಸುರಿಮಳೆ ನಡೆದಿತ್ತು ಹಾಗೆ ।
ಒಂದೆರಡು ಪ್ರಹರಗಳು ಕಳೆದು ಹೀಗೆ । ಬಾಬಾರೇ ಜನರನ್ನು ಆಮಂತ್ರಿಸಿದರು ॥ 129

ದೇವ ಅವರೂ ಆಗ ಅಲ್ಲಿ ಬಂದರು । ಎಲ್ಲರ ಮಧ್ಯೆ ಕುಳಿತರು ।
ಬಳಿಕ ಸಾಯಿ ಅಂದರು । ಮುದುಕನ ಮನನೊಂದಿರಬೇಕೆಂದು॥ 130

ಹೋಗಲಿ ಬಿಡು ಅದೇನು ದೊಡ್ಡದು ಚಿಂದಿ । ಆದರೆ ನಾನಿನ್ನ ನೋಯಿಸಿದೆ ದುರುಕ್ತಿಗಳನ್ನಾಡಿ ।
ಉಪಾಯವಿರಲಿಲ್ಲ ನೀ ನಿಜದಲಿ ಕಳವು ಮಾಡಿದ್ದಿ । ಆದರಿಂದ ಸುಮ್ಮನಿರಲಾಗಲಿಲ್ಲ ॥ 131

ಇರಲಿ ದೇವರು ಎಲ್ಲವನು ನೋಡುವನು । ಅವನು ಇವನಿಗೂ ಒಳ್ಳೆಯದು ಮಾಡುವನು ।
ಏ ತಮ್ಮಾ ದಕ್ಷಿಣೆ ಕೊಡುವೆಯಲ್ಲಾ । ಎಂದರು ಕ್ಷಮಾಶೀಲ ಶ್ರೀ ಸಾಯಿ ॥ 132

ದೇವ ಕೇಳಿದರು ಎಷ್ಟು ತರಲೆಂದು । ಬೇಗ ತೆಗೆದುಕೊಂಡು ಬಾ ಹನ್ನೆರಡು ।
ನೋಡಲಾಗಿ ನೋಟು ಮಾತ್ರ ಇತ್ತು । ಅದರೆ ರೂಪಾಯಿಗಳು ಸಿಗಲಿಲ್ಲ ॥ 133

ದೇವ ಇದನು, ಬಾಬಾರಿಗೆ ತಿಳಿಸಿದರು । 'ಅವರು ಹೋಗಲಿ ನನಗೆ ಬೇಡ' ಎಂದರು ।
'ಬೆಳಿಗ್ಗೆ ನೀನೆರಡು ಸಲ ಕೊಟ್ಟಿದ್ದರೂ । ನನಗದರ ನೆನಪು ಇರಲಿಲ್ಲ' ॥ 134

ಆದರೂ ದೇವ ರೂಪಾಯಿಗಳ ಸಂಪಾದಿಸಿದರು । ತಂದು ಅವುಗಳ ಬಾಬಾರಿಗೆ ಕೊಟ್ಟರು ।
ಮತ್ತೆ ಚರಣಗಳಿಗೊಂದಿಸಿದರು । ಆಗ ಮಾತನಡೆದದ್ದನ್ನು ಕೇಳಿ ॥ 135

ಕೇಳಿದರು "ಏನು ಮಾಡುತ್ತಿರುವೆ ನೀನೀಗ" । ಆತ 'ಏನೂ ಇಲ್ಲ' ಎಂದು ನುಡಿದಾಗ ।
ಪೋಥಿವಾಚನದಿ ತೊಡಗು ಎಂದು ಆಜ್ಞಾಪಿಸಿದರು । ನಿತ್ಯ ನೇಮದಿಂದ ನೀನು ॥ 136

"ವಾಡೆಗೆ ಹೋಗಿ ಕುಳಿತು ಕೊಂಡು । ನಿತ್ಯನೇಮದಿ ಓದಿಕೊಂಡು ।
ಓದುವಾಗ ಹೇಳುತ್ತಿರಬೇಕು । ನಿರೂಪಣೆ ಮಾಡು ಭಕ್ತಿಯಿಂದ ॥ 137

ಅಂದವಾದ ಜರಿಯ ಶೆಲ್ಲೆಯನ್ನು । ನಿನಗೆ ಕೊಡಲೆಂದು ಕುಳಿತಿರುವಾಗ ನಾನು ।
ಹೋದೆಯೇಕೆ ಕದಿಯಲು ಚಿಂದಿಯನ್ನು । ಈ ಕಳವಿನ ಕೆಟ್ಟ ಚಟವೇಕೆ ನಿನಗೆ" ॥ 138

ಇರಲಿ ಮಾಡಿನ್ನು ಪೋಥಿವಾಚನ । ಈ ಸಾಯಿ ಮುಖದ ವಚನ ಪಡೆದು ।
ತಿಳಿದೆ ನಾ ಅಂತರ ಗುರುತನ । ಅತಿ ಸುಖಸಂಪನ್ನನಾದೆ ॥ 139

ತಿಳಿದು ಈ ಆಜ್ಞೆಯನು ಪ್ರಮಾಣವೆಂದು । ಬಳಿಕ ನಾ ಆದಿನ ಮೊದಲಗೊಂಡು ।
ನಿತ್ಯ ಜ್ಞಾನೇಶ್ವರಿಯನೋದುವದು । ಜೊತೆಗೆ ನಿರೂಪಣೆಯನ್ನು ಮಾಡತೊಡಗಿದೆ ॥ 140

ಈಗ ಇಚ್ಛಿಸಿದ ಆಜ್ಞೆದೊರಕಿತು । ವ್ರತಸ್ಥ ಮನದ ಚಿಂತೆ ಬಗೆ ಹರಿಯಿತು ।
ಇನ್ನು ನಿಯಮಿತತೆ ಬಂದೀತು । ಜ್ಞಾನೇಶ್ವರಿಯ ವಾಚನಕೆನ್ನ ॥ 141

ನಾನಿನ್ನು ಗುರುವಿನಾಜ್ಞಾಧಾರ । ಇನ್ನೆನಗೆ ಪ್ರಸನ್ನ ಜ್ಞಾನೇಶ್ವರ ।
ಇಂದಿನವರೆಗಾದದ್ದೆಲ್ಲ ಆಯಿತು ಹಳೇತರ । ಇನ್ನು ಮುಂದೆ ನಿಯಮದಿಂದ ನಡೆಯುವುದು ॥ 142

ಇದ್ಕಕೆ ಸಾಕ್ಷಿ ನನ್ನದೇ ಮನ । ಮೇಲೆ ಸಾಯಿ ಬಾಬಾರ ಆಜ್ಞೆ ಪ್ರಮಾಣ ।
ಆಜ್ಞಾಬಲದಿಂದ ಪೋಥಿಯ ಪಾರಾಯಣ । ಇನ್ನು ನಿರ್ವಿಘ್ನವಾಗಿ ನಡೆದೀತು ನನ್ನಿಂದ ॥ 143

ಬಾಬಾ ಇದೋ ನನ್ನ ಸಾಷ್ಟಾಂಗ ನಮನ । ಅನನ್ಯಭಾವದಿಂದ ನಾ ನಿಮಗೆ ಶರಣ ।
ಉಡಿಗೆ ಹಾಕಿಕೊಳ್ಳಿರಿ ತಾವು ಈ ಕಂದನ । ನನ್ನಿಂದ ವಾಚನ ಮಾಡಿಸಿಕೊಳ್ಳಿರಿ ॥ 144

ಚಿಂದಿ ಎಂದರೇನೆಂದು ತಿಳಿದೆ । ಬಾಲಕರಾಮನಿಗೆ ನಾನಾಗ ಕೇಳಿದೆ ।
ಅದೇ ಆ ಚಿಂದಿ ಅದು ಬಾಬಾರಿಗೆ ಹಿಡಿಸದೆ । ಸಿಟ್ಟಿನಿಂದ ಬೈದರೆನ್ನ ॥ 145

ಹೇಗೆ ನಿಮ್ಮನ್ನು ಉಪಾಸನೆಗೆ । ಹೇಗೆ ಪರಬ್ರಹ್ಮ ಚಿಂತನೆಗೆ ।
ಹಚ್ಚಿದರೆಂದು ಕೇಳಿದೆ ಬಾಲಕರಾಮರಿಗೆ। ಅದೇ ಬಾಬಾರಿಗೆ ಸರಿಬರಲಿಲ್ಲ ॥ 146

ಬೇಕಾದ ಪ್ರಶ್ನೆಗೆ ಉತ್ತರ । ಕೊಡಲು ತಾವೆ ಇರುವಾಗ ತತ್ಪರ ।
ಚವಕಶಿ ಮಾಡುವುದೇಕೆ ಪರಸ್ಪರ । ಎಂದು ನನ್ನನ್ನು ಬಲು ಕಾಡಿದರು ॥ 147

'ಕಾಡಿದರೆಂಬ' ಮಾತೇ ಉದ್ಧಟತನದ್ದು । ಭಕ್ತರಿಗಾಗಿ ಪ್ರೀತಿ ತುಂಬಿ ತುಳುಕುತ್ತಿದ್ದು ॥
ಭಕ್ತಬ್ಛಲವನವರು ಕನಸಿನಲ್ಲೂ ಕಾಣರು । ಕಾಡಿದರೆಂಬ ಕ್ರಿಯಾಪದವೇ ಅನುಚಿತವಲ್ಲಿ ॥148

ಕಾಡಿಲ್ಲ ಅವರು ಕಲಿಸಿದರೆನೆಗೆ । ಉದ್ಭವಿಸಿದ್ದನ್ನೆಲ್ಲ ನಿನ್ನ ಮನದೊಳಗೆ ।
ನಾನೇ ಪೂರೈಸಬೇಕವಲ್ಲ ಅವನಿಗೆ । ಕಳವು ಮಾಡಿದ್ದೆಂದೂ ಸಾಲದು ॥ 149

ಸಾಯಿ ಬಾಹ್ಯ ಕ್ರೋಧಾಭಿಭೂತರು । ಅಂತರದಲ್ಲಿ ನಿತ್ಯ ಮುದಿತರವರು ।
ಬಾಹ್ಯ ಸಂತಾಪದಿಂದ ಸಂತಪ್ತರಾಗಿ ಕಂಡರೂ । ಅಂತರದಿ ಆನಂದದಿ ತೃಪ್ತರು ॥ 150

ಹೊರಗೆ ಲೌಕಿಕ ಕ್ರೋಧವ ಲಾಘವ । ಅಂತರಂಗದಿ ಪರಮಾನಂದದ ಗೌರವ ।
ಆ ಸಾಯಿ ಲೀಲಾ ವೈಭವ । ಹಾಡಲು ಸುದೈವವೇ ಬೇಕು ॥ 151

ನಿಜ ಸ್ವಾರ್ಥವನು ಸಾಧಿಸಲು । ಅತ್ಯಂತ ಆರ್ತತೆ ಯಾರ ಅಂತರದೊಳು ।
ಅವರು ಬೈದದ್ದು ಲಕ್ಷಪುಷ್ಪಗಳು । ಎಂದೆನಿಸಿ ನಿಜ ಹಿತ ತತ್ಪರರಾಗಬೇಕು ॥ 152

ಕೇಳಿದರೂ ಕರ್ಣಕಟು ಅಶ್ಲೀಲ ವಚನ। ಒಂದಿಷ್ಟು ಕಲಕಲಿಲ್ಲ ದೇವ ಅವರ ಮನ ।
ಉದರದಿ ಪ್ರೀತಿಯ ಸೆಲೆಗಹನ । ಅದರಿಂದ ಅದು ಪುಷ್ಪತಾಡಣ ಎನಿಸಿತು ॥ 153

ದುಗ್ಧದಿಂದ ತುಂಬಿದೆ ಧೇನುವಿನ ಕೆಚ್ಚಲು । ಭಾಗ್ಯವಂತರಿಗೆ ದೊರಕುವುದು ಆ ಹಾಲು ।
'ಚ್ಚಲ ಬಳಿಯೇ ಉಣ್ಣೆ ವಾಸಿಸುತಿರಲು । ಅದರ ಕರ್ಮದಲಿರುವುದು ಅಶುದ್ಧವಾದದ್ದೇ ॥ 154

ಕಪ್ಪೆ ಕಮಲ ಪುಷ್ಪ ಮಗ್ಗುಲಿಗೇ । ಇದ್ದರೂ ಮಕರಂದವ ಸವಿ ಭ್ರಮರದ ಪಾಲಿಗೇ ।
ಕೆಸರಿನಹಾರ ಕಪ್ಪೆ ಪಡೆಯುವ ಹಾಗೇ । ಭ್ರಮರದ ಸುದೈವಕೆ ಎಣೆಯಿಲ್ಲ ॥ 155

ನೀವೂ ಭಾಗ್ಯವಂತರು ಹಾಗೆ । ಇರಲು ಸಾಮಿಪ್ಯ ನಮನಿಮಗೆ ।
ಕೇಳಿಕೊಳ್ಳಿರಿ ಎನಿಸಿದ್ದು ಮನಸಿಗೆ । ಶಂಕೆಗೆ ಸಮಾಧಾನವೆಂದರು ಸಾಯಿ ॥ 156

ನೋಡಿ ನನ್ನ ಪೋಥಿಯ ಪಣ । ಓದು ಎಂದಾಗಲೇ ಓದುವೆನದನ ।
ಅದುವರೆಗೆ ತೆರೆಯನು ಜ್ಞಾನೇಶ್ವರಿಯನ । ಎಂಬ ಇಚ್ಛೆಯ ಪೂರೈಸಿದರು ಬಾಬಾ ॥ 157

ತಾಯಿ ಹೇಗೆ ಮಗುವಿಗೆ ಮಾಡಿ ಮುದ್ದು । ನಿಜ ಬಾಲಕನಾಸೆ ಪೂರೈಸುವುದು ।
ಅದರದೇ ಸವಿ ಪ್ರತೀತಿ ಇದು ಭಕ್ತಿಯ ಕೊಡುಗೆ ಈ ಕಥೆ ॥ 158

ಓದು ಎಂದು ಹೇಳಿ ಸುಮ್ಮನಿರಲಿಲ್ಲ । ದೇವ ಹೇಳಿದರು ಇನ್ನೂ ಒಂದು ವರ್ಷತುಂಬಿರಲಿಲ್ಲ ।
ಸ್ವಪ್ನದಿ ಬಂದು ದರ್ಶನವಿತ್ತರಲ್ಲ । ಆಶ್ಚರ್ಯ ಅವರೆನಗೆ ಕೇಳಿದ್ದು ॥ 159

ಸನ ಹತ್ತೊಂಬತ್ತು ನೂರಾಹದಿನಾಲ್ಕು । ಏಪ್ರಿಲ್ ಎರಡನೆಯ ತಾರೀಖು ।
ಗುರುವಾರ ಮುಂಬೆಳಗಿನ ಹೊತ್ತು । ಒಮ್ಮೆ ಸ್ವಪ್ನ ಪ್ರಸಾದವ ಪಡೆದೆ ॥ 160

ಸಾಯಿ ಸಮರ್ಥರು ಕನಸಿನಲಿ ಬಂದು । ಮನೆಯ ಮಹಡಿಯಲಿ ಕುಳಿತು ಕೊಂಡು ।
ಕೇಳಿದರು ಪೋಥಿ ಓದಿದ್ದು ಅರ್ಥವಾಗುತಿದೆಯೇ ಎಂದು । ಇಲ್ಲೆಂದು ನಾನುತ್ತರಿಸಿದೆ ॥ 161

ಆಗ ಪ್ರಶ್ನೆ ಕೇಳಿದರು ಮತ್ತೊಂದು । ಇನ್ನು ಯಾವಾಗ ತಿಳಿಯುವದೆಂದು ।
ನನ್ನ ಕಣ್ಣಲಿ ನೀರು ತುಂಬಿ ಬಂದು । ನಾನೇನು ಉತ್ತರಿಸಿದೆನಾಗ ॥ 162

ಎಲ್ಲಿಯವರೆಗೆ ತಮ್ಮ ಕೃಪೆಯಾಗದು । ಅದುವರೆಗೆ ವ್ಯರ್ಥಶ್ರಮ ಇದನು ಓದುವುದು ।
ತಿಳಿಯುವುದು ಅದಕಿಂತ ಕಷ್ಟದಿರುವುದು । ಬಾಬಾನಾಮನಃ ಪೂರ್ವಕ ಹೇಳುತಿರುವೆ ॥ 163

ಬಾಬಾ ಎಂದರು ಪೋಥಿ ಓದುವಾಗ್ಯೆ । ಮಾಡುವಿರಿ ಬಹಳ ಲಗುಬಗೆ ।
ಓದಿರಿ ನೋಡುವ ನನ್ನೆದುರಿಗೇ । ನನ್ನ ಹತ್ತಿರ ಕುಳಿತು ಕೊಂಡು ॥ 164

ಏನು ಓದಲಿ ಎಂದು ದೇವ ಕೇಳಿದರು । ಆಧ್ಯಾತ್ಮ ವೆಂದು ಬಾಬಾ ಹೇಳಿದರು ।
ದೇವ ಪೋಥಿಯ ತರಲು ಹೋದರು । ಅಷ್ಟರಲಿ ಎಚ್ಚರವಾಯಿತು ॥ 165

ದೇವ ಅವರು ಎಚ್ಚರಗೊಂಡು । ಸ್ವಪ್ನದ ಸಂಗತಿಯ ನೆನೆಸಿ ಕೊಂಡು ।
ಅವರ ಮನಸಿಗೆ ಏನೆನಸಿರಬಹುದೆಂದು । ನೀವೇ ಊಹಿಸಿರಿ ಶ್ರೋತೃಗಳೇ ॥ 166

ದಾರಿ ಕಾಯ್ದು ವರ್ಷವೊಂದು । ಮಗು ಸರಿಯಾಗಿ ನಡೆಸಿದೆಯೇ ಓದು ।
ಮಾಡುತ್ತಿದೆಯೇ ನಿತ್ಯ ಪೋಥಿಯ ಪಾಠವೆಂದು । ಎಷ್ಟೊಂದು ಚಿಂತೆ ಆ ತಂದೆಗೆ ಬಾಬಾ ॥ 167

ಹೇಳಿಕೊಟ್ಟಂತೆ ಶಿಸ್ತು ಪಾಲಿಸುವನೇನು । ಹಾಕಿಕೊಟ್ಟ ಪಾಠವ ನಿತ್ಯ ತೀಡುವನೇನು ।
ಯಾವ ಕಾರಣಕಾಗಿ ಅಥವಾ ಎಲ್ಲಿ ತಪ್ಪುವನು । ಸತತವಾಗಿದನು ನೋಡುವವರಾರು ॥ 168

ಹೇಗೆ ವಾಚಕನು ಇರಬೇಕು ದಕ್ಷ । ಎಲ್ಲಿ ಕೊಡಬೇಕು ವಿಶೇಷ ಲಕ್ಷ ।
ಸಾಯಿ ಮಾತೆಯಲ್ಲದೆ ಪ್ರತ್ಯಕ್ಷ । ಯಾರಿದನು ಹೇಳಿಕೊಡುವರು ॥ 169

ಸಾಯಿ ಸಮರ್ಥರ ಲೀಲೆ ಹೀಗೆ । ಸ್ವಾನಂದದ ಸಂಭ್ರಮ ಹೀಗೆ ।
ಭಕ್ತರಿದ ಭೋಗಿಸಿಹರನಂತ ವೇಳೆಗೆ । ನಾನದನು ಕಂಡಿರುವೆ ಪ್ರತ್ಯಕ್ಷ ॥ 170

ಇನ್ನು ತಾವು ಶ್ರೋತೃ ಜನ । ಆಗುವಾ ಗುರುಚರಣ ಕಮಲದಲಿ ಲೀನ ।
ಕೇಳುವಾ ಮುಂದಿನ ಕಥೆಯ ನೂತನ । ಮುಂದೆ ಯಥಾ ಕಾಲದಲ್ಲಿ ॥ 171

ನೆನಸಿಕೊಂಡು ಶ್ರೀ ಸಮರ್ಥರ ಚರಣ । ಸದ್ಭಾವದಿಂದ ಮಾಡುವೆ ಸಾಷ್ಟಾಂಗ ನಮನ ।
ಅದರಿಂದಲೇ ಸಕಲ ಭವದುಃಖ ವಿಮೋಚನ । ಭಾವಾರ್ಥದಿ ಶರಣ ಹೇಮಾಡ ॥ 172

ಸಾಯಿಯೇ ಒಬ್ಬ ಅವನ ಸ್ವಾರ್ಥ । ಸಾಯಿಯೇ ನಿರತಿಶಯ ಸುಖ ಪರಮಾರ್ಥ ।
ಸಾಯಿಯೇ ಮಾಡುವನವನ ಕೃತಾರ್ಥ । ನಿಶ್ಚಿತವಾಗಿ ಇದು ಭಾವಾರ್ಥ ಅವನದು ॥173

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಸಾಯಿ ಕೃಪಾನುಗ್ರಹದಾನಂ ನಾಮ
ಏಕಚತ್ವಾರಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತ ॥

## ಅಧ್ಯಾಯ ನಲವತ್ತೆರೆಡು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಓಂ ನಮೋ ಹೇ ಸದ್ಗುರು ದಾತಾರಾ । ಶ್ರೀಮದ್ ಗೋದಾ ತಟವಿಹಾರಾ ।
ಬ್ರಹ್ಮ ಮೂರ್ತೇ ಕೌಪೀನಾಂಬರಾ । ಸಂತವರಾ ನಿನ್ನನಮಿಸುವೆ ॥ 1

ತೋರಿ ಭವನದಿಯ ಆಚೆ ದಡವ । ದೀನರಿಗೆ ನಿಜ ಪದದಲಿ ಕೊಡು ಸ್ಥಾನವ ।
ಭಕ್ತ ಕಾರ್ಯ ಕಲ್ಪತರುವೆ ಇವ । ಸಂತಾವತಾರೀ ಸಾಯಿ ಇವ ॥ 2

ಗತಾಧ್ಯಾಯದಲಾಯಿತು ಕಥನ । ಮಧುರ ಕಥೆ ವಿಚಿತ್ರ ಮಹಿಮಾನ ।
ಸಾಯಿ ಚಿತ್ರದಜಲಮಜ್ಜನ । ತಪ್ಪಿಸಿ ಅದರ ರಕ್ಷಣೆಯಾಯಿತು ॥ 3

ಹಾಗೇ ಒಬ್ಬ ಭಕ್ತನ ಕಾಮನೆಯನು । ಪೂರೈಸಿದರು ಹೋಗಿ ಸ್ವಪ್ನದಲದನು ।
ಓದ ಹಚ್ಚಿದರು ಜ್ಞಾನೇಶ್ವರಿಯನು । ವಿಶಿಷ್ಟ ಅನುಜ್ಞೆಯನು ಕೊಟ್ಟು ॥ 4

ಸಾರಾಂಶವೆಂದರೆ ಗುರುಕೃಪೆಯ ಬೆಳಕಿನಲಿ । ಭವಭಯದ ಒಗಟು ಬಿಡಿಸುತಲಿ ।
ನಿಃಶ್ರೇಯಸ ಮಾರ್ಗದ್ವಾರವ ತೆರೆಯುತಲಿ । ಅಸುಖವಾಗಲೇ ಸುಖವಾಯಿತು ॥ 5

ನಿತ್ಯ ಸ್ಮರಿಸುತಲಿ ಸದ್ಗುರು ಚರಣ । ಕರಗುವುದು ವಿಘ್ನದ ವಿಘ್ನತನ ।
ಮರಣಕ್ಕೂ ಬಂದೀತು ಮರಣ । ಭವದುಃಖದ ವಿಸ್ಮರಣೆಯಾಗುವುದು ॥ 6

ಈ ಸಮರ್ಥರ ಕಥೆಯನು ಅದಕ್ಕೆ । ಕೇಳಿರಿ ತಮ್ಮ ಹಿತಕ್ಕೆ ।
ಪಾವನತೆಯನು ಪಡೆಯುವುದಕೆ । ಶ್ರವಣ ಮಾತ್ರದಿಂದಾಗಿ ॥ 7

ಈ ಅಧ್ಯಾಯದಲಿ ನಾವಿನ್ನು । ಮಾಡುವಾ ಸಾಯಿ ಸ್ವಭಾವ ನಿರೂಪಣೆಯನು ।
ಮನದ ತೀವ್ರತೆ ಮತ್ತು ಮೃದುತನಗಳನು । ಹೇಗಿದ್ದವೆಂಬುದರ ಬಗ್ಗೆ ॥ 8

ತಾವೆಲ್ಲ ಚಿತ್ತ ಏಕಾಗ್ರವಾಗಿಸಿಕೊಂಡು । ಕೇಳುವಿರಿ ಇದುವರೆಗೆ ನಡೆದದ್ದು ।
ಅದರಂತೆಯೇ ಬಾಬಾರ ದೇಹೋತ್ಸರ್ಗ ಚರಿತವಿದು । ಇದನೂ ಮನಗೊಟ್ಟು ಆಲಿಸಿರಿ ॥ 9

ಧನ್ಯ ಧನ್ಯ ಶಿರಡಿಯಲಿ ಜನ । ಅನುಭವಿಸಿದರು ಬಾಬಾರ ಸಹವಾಸ ಸುಖವನ ।
ಮೀರಿ ಅರ್ಧಶತಕವನ । ಅತಿ ಸುಖಕಾರಕ ವಾಗಿತ್ತವರಿಗದು ॥ 10

ಶಕೆ ಹದಿನೆಂಟು ನೂರಾ ನಲವತ್ತರಲ್ಲಿ । ದಕ್ಷಿಣಾಯನದ ಪ್ರಥಮ ತಿಂಗಳಲ್ಲಿ ।
ವಿಜಯಾದಶಮಿ ಶುಕ್ಲಪಕ್ಷದಲ್ಲಿ । ಹಗಲಿನಲ್ಲಿ ದೇಹಾಂತವಾಯಿತು ॥ 11

ಒಂಭತ್ತನೆಯ ತಾರೀಖಿನಂದು । ಕತ್ತಲರಾತ್ರಿಯಲ್ಲಿತ್ತು ಮುಸಲ್ಮಾನರದು ।
ಮೂರನೆಯ ಪ್ರಹರದಲಿ ಸಾಯಿನಾಥರದು ॥ ನಿರ್ವಾಣದ ಸಿದ್ಧತೆಯಾಯಿತು ॥ 12

ಬುದ್ಧನದಂದು ಬುದ್ಧ ಜಯಂತಿ । ಸಾಯಿಯದಂದು ಪುಣ್ಯತಿಥಿ ।
ದೇವಾದಿಗಳದಿದ್ದಾಗ ಜಯಂತಿ । ಅಂದೇ ಪುಣ್ಯತಿಥಿ ಸಂತರದು ॥ 13

ಹನ್ನೆರಡೂವರೆ ಘಂಟೆ ಬಾರಿಸಿತು । ದಶಮಿಯತಿಥಿ ಅಲ್ಲಿಗೆ ಮುಗಿಯಿತು ।
ಏಕಾದಶಿ ತಿಥಿ ಉದಯಿಸಿತು । ಬಾಬಾರ ನಿರ್ಮಾಣ ಕಾಲದಂದು ॥ 14

ಸೂರ್ಯೋದಯದ ಸಮಯಕ್ಕೆ ಬರುವುದು । ಅದನ್ನೇ ಅಂದಿನ ತಿಥಿ ಎನ್ನುವದು ।
ಆದಕೆ ವಿಜಯದಶಮಿಯಂದು । ಉತ್ಸವವ ನಾಚರಿಸುವರು ॥ 15

ಮಂಗಳವಾರದಂತಿತ್ತು ಕತ್ತಲರಾತ । ಹೀಗೆ ಆದಿನವೂ ಅತಿ ವಿಖ್ಯಾತ ।
ಅದಕ್ಕೇ ಆದಿನ ಸಾಯಿ ಮಹಂತ । ಜ್ಯೋತಿಯಲಿ ಜ್ಯೋತಿಯನೊಂದಾಗಿಸಿದರು । 16

ಬಂಗಾಲ ಪ್ರಾಂತದಲಿ ಪ್ರಸಿದ್ಧ । ದುರ್ಗಾ ಪೂಜೆಯ ಸಮಾಪ್ತಿ ದಿನವಂದ ।
ಉತ್ತರ ಹಿಂದೂ ಸ್ಥಾನದಲ್ಲೆಲ್ಲ ಇದು । ಉತ್ಸವದ ದಿಸವೆಲ್ಲರಿಗೆ ॥ 17

ಶಕೆ ಹದಿನೆಂಟು ನೂರಾ ಮುವತ್ತೆಂಟು । ಅಂದು ವಿಜಯದಶಮಿಯದೇ ದಿನವಿತ್ತು ।
ಸಾಯಂಕಾಲದ ಪ್ರದೋಷ ಸಮಯದ ಹೊತ್ತು । ಭವಿಷ್ಯವನ್ನು ಸೂಚಿಸಿದರು ॥18

ಹೇಳುವೆನು ಈ ಅಪೂರ್ವ ಲೀಲೆ ಹೇಗೆ । ಕೇಳಿ ವಿಸ್ಮಯವಾದೀತು ಜನರಿಗೆ ।
ಅದರಿಂದ ತಿಳಿಯುವುದೆಲ್ಲರಿಗೆ । ಸಮರ್ಥ ಸಾಯಿಯ ಅಕಳ ಕಳೆಯು ॥ 19

ಇಸವೀಸನ್ ಹತ್ತೊಂಭತ್ತು ನೂರಾ ಹದಿನಾರನೆಯ । ದಸರೆಯ ಹಬ್ಬ ಸೀಮೋಲ್ಲಂಘನೆಯ ಸಮಯ ।
ತಿರುಗಿ ತಂದಾಗ ಮೆರವಣಿಗೆಯ । ಅದ್ಭುತ ಲೀಲೆ ನಡೆಯಿತು ॥ 20

ನಭದಲ್ಲಿ ಮೇಘ ಗರ್ಜಿಸಿತು । ಅಕಸ್ಮಾತ್ ವಿದ್ಯುಲ್ಲತೆ ಮಿಂಚಿತು ।
ಎನುವಂತೆ ಜಮದಗ್ನಿ - ಸ್ವರೂಪವ ನಿಂತು । ಬಾಬಾ ಪ್ರಕಟ ಪಡಿಸಿದರಾಗ ॥ 21

ಬಿಚ್ಚಿದರು ತಲೆಯ ಬಟ್ಟೆಯನು । ತಡವಿಲ್ಲದೇ ತೆಗೆದರು ಕಫನಿಯನು ।
ತೆಗೆದುಬಿಟ್ಟರು ತಮ್ಮ ಲಂಗೋಟಿಯನ್ನು । ಎಲ್ಲವನ್ನು ಧುನಿಯಲ್ಲಿ ಹಾಕಿ ಉರಿಸಿದರು ॥ 22

ಉಜ್ವಲವಾದ ಅಗ್ನಿಯದು ಮೊದಲೇ । ಅದಕೆ ಪ್ರಬಲವಾದ ಆಹುತಿ ದೊರಕುತಲೇ ।
ಮೇಲಿನವರೆಗೆ ನಾಲಿಗೆ ಚಾಚಿತು ಜ್ವಾಲೆ । ಭಕ್ತರಿಗೆ ಏನೆಂದು ತಿಳಿಯದಾಯಿತು ॥ 23

ಇದೆಲ್ಲ ನಡೆಯಿತು ಆಕಸ್ಮಿಕವಾಗೆ । ತಿಳಿಯದು ಏನಿದೆ ಬಾಬಾರ ಮನದೊಳಗೆ ।
ಇದಾದದ್ದು ಸೀಮೋಲ್ಲಂಘನ ಸಮಯಕ್ಕೆ । ಮಹದ್ಭೀತಿಪ್ರದವಾಗಿತ್ತದು ॥ 24

ನಿಜತೇಜವ ಹರಡಿತು ಅಗ್ನಿ । ಬಾಬಾ ಕಂಡರು ಅದಕಿಂತ ಸತೇಜರಾಗಿ ।
ಜನರ ಕಂಗಳದ ನೋಡಲಸಾಧ್ಯವಾಗಿ । ಜನರೆಲ್ಲ ಪರಾಙ್ಮುಖರಾದರು ॥ 25

ಸಂತ ಹಸ್ತದ ಈ ಅವದಾನ । ಪಡೆದು ಪ್ರಸನ್ನನಾದ ಅಗ್ನಿ ನಾರಾಯಣ ।
ದಿಗಂಬರರಾದರು ಆ ಜಾಮದಗ್ನ್ಯ। ಕಂಡವರ ನಯನಗಳೇ ಧನ್ಯವದು ॥ 26

ತ್ವೇಷದಿಂದ ಕಣ್ಣುಕಿಸಿದು । ಕೋಪದಿಂದ ಕೆಂಡದಂತಾಗಿದ್ದು ।
ಎಂದರು ಹೇಳಿರೋ ಈಗಾದರೂ ಏನೆಂದು । ನಾ ಹಿಂದುವೋ ಮುಸಲ್ಮಾನನೋ ॥ 27

ಕೂಗಿದರು ಬಾಬ ನೋಡಿರಿಂದು । ನಾ ಯವನನೋ ಅಥವಾ ಹಿಂದೂ ।
ನಿರ್ಧರಿಸಿ ಯಥೇಚ್ಛವಾಗಿ ಮನಗಂಡು । ಮನದ ಶಂಕೆಯ ಕಳಕೊಳ್ಳಿರಿ ॥ 28

ನೋಡಿ ಈ ಭಯಂಕರ ದೃಶ್ಯವನ । ಕಂಪಾಯ ಮಾನರಾದರು ಜನ ।
ಆದೀತು ಹೇಗಿವರ ಸಮಾಧಾನ । ಎಂಬ ಚಿಂತೆಯಲಿ ತೊಡಗಿದರು ॥ 29

ಭಾಗೋಜಿ ಶಿಂಧೆ ಮಹಾರೋಗಿಷ್ಠ । ಆದರೂ ಬಾಬಾರ ಭಕ್ತಶ್ರೇಷ್ಠ ।
ಧೈರ್ಯಮಾಡಿ ಬಂದು ನಿಕಟ । ಬಾಬಾರಿಗೆ ಲಂಗೋಟಿ ಉಡಿಸಿದರು ॥ 30

ಎಂದು ಬಾಬಾ ಇದು ಏನು ಚಿನ್ಹೆ। ಇಂದು ದಸರಾ ಹಬ್ಬದ ದಿನ ।
ಎಂದರು "ಇದೇ ನನ್ನ ಸೀಮೋಲ್ಲಂಘನ" । ಮತ್ತು ದಂಡಕಾಷ್ಠವ ಖಟಖಟನೇ ಕುಕ್ಕಿದರು ॥ 31

ಧುನಿಯ ಹತ್ತಿರ ಈ ರೀತಿಯಾಗಿ । ಬಾಬಾ ನಿಂತಿದ್ದರು ದಿಂಗಂಬರರಾಗಿ ।
ಅಂದು ಚಾವಡಿಯ ದಿನವಿತ್ತಾಗಿ । ಅದು ಹೇಗೆ ನೆರವೇರುವುದೆಂಬ ಚಿಂತೆ ॥ 32

ಚಾವಡಿ ಒಂಭತ್ತರದು ಹೋಗಿ ಹತ್ತಾಯಿತಾದರೂ । ಬಾಬಾ ಇನ್ನೂ ಸ್ಥಿರವಾಗದಾದರೂ ।
ಜನರೆಲ್ಲ ಅಲ್ಲಲ್ಲಿ ನಿಂತು ಬಿಟ್ಟರು । ಸುಮ್ಮನೆ ಅತ್ತಿತ್ತ ನೋಡುತ ॥ 33

ನೋಡನೋಡುತ್ತ ಹೊಡೆಯಿತು ಹನ್ನೊಂದು । ಆಗ ಬಾಬಾ ಒಂದಿಷ್ಟು ಶಾಂತರಾಗಿದ್ದು ।
ಹೊಸ ಕೌಪೀನವನುಟ್ಟುಕೊಂಡು । ಕಫನಿ ಮುಂತಾದ ಉಡುಪು ಧರಿಸಿದರು ॥ 34

ಚಾವಡಿಯ ಗಂಟೆ ಬಾರಿಸಿತು । ಜನವೆಲ್ಲ ಸ್ವಸ್ಥ ಕುಳಿತೇ ಇತ್ತು ।
ಹೂವಿನಿಂದ ಪಲ್ಲಕ್ಕಿಯ ಶೃಂಗರಿಸಲಾಯಿತು । ಆಜ್ಞೆ ಪಡೆದು ಅಂಗಳಕೆ ತಂದರದನು ॥ 35

ರಜತದಂಡ ಪತಾಕೆ ಚವರಿಗಳು । ಛತ್ರಧ್ವಜಾದಿ ರಾಜೋಪಚಾರಗಳು ।
ಮೆರವಣಿಗೆಯು ಶೋಭಿಸುತಿರಲು । ಸವಾರಿ ಹೊರಟಿತು ದಿನ ಬಿಟ್ಟು ದಿನದ್ದು ॥ 36

ಆಯಿತಾಗ ಮಹಾಜನರ । ಸಾಯಿನಾಥರ ಜಯಜಯಕಾರ ।
ವರ್ಣಿಸಲೆಷ್ಟು ಆಜಯಕಾರ ಸ್ವರ । ಆನಂದದ ಸರಿತೆ ಉಕ್ಕೇರಿತು ॥ 37

ಬಳಿಕ ಹುಡುಕಿ ಬಿಳಿಯ ಬಟ್ಟೆಯನು । ಬಾಬಾ ತಲೆಗೆ ಸುತ್ತಿಕೊಂಡರದನು ।
ತಂಬಾಕು ಚಿಲುಮಿಕಾಷ್ಠಗಳನು । ಸರಿಯಾಗಿ ತೆಗೆದುಕೊಂಡರವುಗಳ ಅದೇ ಸಮೂಹೂರ್ತವೆಂಬಂತೆ ॥ 38

ಒಬ್ಬರು ಛತ್ರ ಒಬ್ಬರು ಚಾಮರವನು । ಒಬ್ಬರು ಅಂದವಾದ ಮಯೂರ ಪಿಚ್ಛವನು ।
ಒಬ್ಬರು ಗರುಡ ಪತಾಕೆ ಅಂಬಾರಿಗಳನು । ಬೆತ್ತಿನ ಛಡಿಯನೂ ಹಿಡಿದು ಕೊಂಡರು ಕರದಲಿ ॥ 36

ಮಾಡಿ ಪ್ರಕಾರವನು ಹೀಗೆ । ಸೂಚನೆ ಇತ್ತು ಎಲ್ಲರಿಗೆ ।
ಭವಸಾಗರದ ಸೀಮೊಲಂಘನೆಗೆ । ದಸರೇಯೇ ಸುಮುಹೂರ್ತವೆಂದು ॥ 40

ಬಳಿಕ ಒಂದೇ ದಸರೆಗೆ । ಬಾಬಾ ಕಂಡರು ಶಿರಡಿಯ ಜನರಿಗೆ ।
ಮುಂದಿನ ಒಳ್ಳೆಯ ಮುಹೂರ್ತದ ದಸರೆಗೆ । ಧರಾರ್ಪಣ ದೇಹವ ಮಾಡಿದರು ॥ 41

ಕೇವಲ ಸೂಚಿಸಲಿಲ್ಲದನು ಅವರು । ಸ್ವತಃ ಅದನು ಅನುಭವಕೆ ತಂದರು ।
ನಿಜದೇಹವೆಂಬ ಶುದ್ಧ ವಸ್ತ್ರವನರ್ಪಿಸಿದರು । ಯೋಗಾಗ್ನಿಗೆ ಅದೇ ಶುಭದಿನದಂದು ॥ 42

ಸನ್ ಹತ್ತೊಂಭತ್ತು ನೂರಾಹದಿನೆಂಟು । ಅದೇ ಆ ವರುಷದ ದಸರಾಹಬ್ಬವಾಯಿತು ।
ನಿಜವಾದ ಸುಮೂಹೂರ್ತವಿಂತು । ತಮ್ಮನ್ನು ಪರಾತ್ವದಿ ಲೀನಗೊಳಿಸಿದರು ॥ 43

ಬಾಬಾರ ಇನ್ನೊಂದು ಪ್ರಚೀತಿ ಇಂತು । ಬರೆಯುತ್ತಿರುವಂತೆ ನೆನಪಾಯಿತು ।
ಇದೇ ದಸರೆಯ ತಿಥಿಯಾಗಿತ್ತು । ಗೊತ್ತು ಮಾಡ್ದಿದು ಮೊದಲಿಗೆ ॥ 44

ರಾಮಚಂದ್ರದಾದಾ ಶಿರಡಿಯಗೌಡರು । ಒಮ್ಮೆ ಅತಿ ಅನಾರೋಗ್ಯದಿಂದ ಬಳಲಿದರು ।
ಈ ದೇಹದ ಕಷ್ಟವ ಸಹಿಸದಾದರು । ಅತಿತಾಪದಾಯಕವಾದ ಈ ಭೋಗವನು ॥ 45

ಉಪಾಯವೊಂದು ಉಳಿಯಲಿಲ್ಲ । ಜಡ್ಡು ಹಿಡಿತದಲಿ ಬರಲಿಲ್ಲ ।
ಅತಿಯಾಗಿ ನೊಂದ ಬೆಂದ ಪಾಟೀಲ । ಜೀವಕೆ ಬೇಸತ್ತವನಾದ ॥ 46

ಮನದ ಸ್ಥಿತಿ ಹೀಗಾಗಲು । ಒಂದು ದಿನ ಮಧ್ಯರಾತ್ರಿಯೊಳು ।
ಅವರ ತಲೆದಸೆಯೊಳು । ಬಾಬಾ ಪ್ರಕಟರಾದರು ಒಮ್ಮೆಲೆ ॥ 47

ಆಗ ಆ ಪಾಟೀಲ ಅವರ ಕಾಲು ಹಿಡಿದು । ನಿರಾಶರಾಗಿ ಬಾಬಾರಿಗೆಂದದ್ದು ।
ನಿಶ್ಚಿತವಾಗಿ ನನಗೆಂದು ಮರಣ ಬರುವುದು । ಎಂಬದನಷ್ಟು ಹೇಳಿರಿ ॥ 48

ಇನ್ನು ಜೀವ ಬೇಸರ ಬಂತು । ಇಲ್ಲೆನಗೆ ಮರಣ ಭೀತಿ ಇನಿತೂ ।
ಮರಣವೆನೆಗೆಂದು ಬಂದೀತು । ಎಂದು ದಾರಿಯ ಕಾಯುತಿರುವೆ ॥ 49

ಆಗ ಕರುಣಾಮೂರ್ತಿಗಳಾದ ಬಾಬಾ ಅವನಿಗೆ । ಎಂದರು ತರದಿರು ಚಿಂತೆಯ ಮನಸಿಗೆ ।
ಇಲ್ಲಿನ್ನು ಗಂಡಾಂತರದ ಭೀತಿನಿನಗೆ । ಯಾತಕ್ಕೆ ಕೊರಗುತ್ತಿರುವೆಯಪ್ಪಾ ॥ 50

ನಿನಗಿನ್ನು ಭಯವಿಲ್ಲ ಒಂದಿಷ್ಟೂ । ನಿನಗೆ ಬಂದ ಹುಂಡಿ ತಿರುಗಿ ಹೋಯಿತು ।
ಆದರೆ ತಾತ್ಯಾನದು ಮಾತ್ರ ಧಡಗತಿ । ಸರಿ ನನಗೆ ಕಾಣಲೊಲ್ಲದು ॥ 51

ಶಕೆ ಹದಿನೆಂಟು ನೂರಾ ನಲವತ್ತರಲಿ । ದಕ್ಷಿಣಾಯನದ ಅಶ್ವೀನ ಮಾಸದಲ್ಲಿ ।
ವಿಜಯಾದಶಮಿ ಶುಕ್ಲ ಪಕ್ಷದಲ್ಲಿ । ತಾತ್ಯಾ ಅಕ್ಷಯಪದ ಪಡೆಯುವನು ॥ 52

ಇಷ್ಟರಲ್ಲಿ ಹೇಳದಿರುವನಿಗೆ । ಹಚ್ಚಿಕೊಳ್ಳುವನವ ಮನಸಿಗೆ ।
ಮರಣದ ಭಯವಿರದು ಯಾರಿಗೆ । ಸುಮ್ಮನೇ ಕೊರಗತೊಡಗುವನು ॥ 53

ಕೇವಲ ಇನ್ನೆರಡೇ ವರ್ಷ ಉಳಿಯಿತು । ತಾತ್ಯಾನ ಸಮಯ ಹತ್ತಿರ ಬಂತು ।
ರಾಮಚಂದ್ರನಿಗೆ ಚಿಂತೆಯುಂಟಾಯಿತು । ಬಾಬಾರ ನುಡಿಯೆಂದರೆ ವಜ್ರಲೇಪ ॥ 54

ತಾತ್ಯಾನಿಂದ ಆ ಮಾತು ಮುಚ್ಚಿಟ್ಟರು । ಬಾಳಾ ಶಿಂಪಿಗನಿಗೆ ತಿಳಿಸಿದರು ।
ಯಾರಿಗೂ ಹೇಳದಿರೆಂದು ಪ್ರಾರ್ಥಿಸಿದರು । ಇಬ್ಬರೂ ಚಿಂತೆಯಲಿ ಬಿದ್ದರು ॥ 55

ನಿಜವಾಗಿಯೂ ರಾಮಚಂದ್ರ ನೆಟ್ಟಗಾದ । ಹಾಕಿದ ಹಾಸಿಗೆ ಬಿಟ್ಟು ಮೇಲೆದ್ದ ।
ದಿನಗಳನೇರಿಸುತ್ತಲೇ ಕಳೆದ । ತಿಳಿಯದಂತೆ ಕಾಲ ಕಳೆದು ಹೋಯಿತು ॥ 56

ಆಶ್ಚರ್ಯ ಬಾಬರ ಮಾತಿನಗತ್ತು । ನಾಲ್ವತ್ತನೇ ಸಾಲಿನಭಾದ್ರಪದ ಮುಗಿಯಿತು ।
ಅಶ್ವಿನಿ ಮಾಸ ಮೆಲ್ಲಗೆ ಇಣುಕಿತು । ಆಗ ತಾತ್ಯಾಬಾ ಗಟ್ಟಿ ಹಾಸಿಗೆ ಹಿಡಿದ ॥ 57

ಅತ್ತ ತಾತ್ಯಾಜ್ವರದಿಂದ ಮಲಗಿದ್ದು ಇತ್ತ ಬಾಬಾರೂ ಚಳಿಜ್ವರದಿಂದ ಬಳಲುತಿದ್ದು ।
ತಾತ್ಯಾಗೆ ಭರವಸೆ ಬಾಬಾರದು । ಬಾಬಾರ ರಕ್ಷಿಸುವ ಶ್ರೀ ಹರಿ ॥ 58

ತಾತ್ಯಾಗೆ ಹಾಸಿಗೆಯಿಂದ ಏಳಲಿಕ್ಕಾಗದು । ಬಾಬರ ದರ್ಶನಕ್ಕೂ ಬರಲಿಕ್ಕೆ ಆಗದು ।
ದೇಹದಯಾತನೆ ಮಿತಿ ಮೀರಿದ್ದು ॥ ಅವರಿಂದ ತಡೆದುಕೊಳ್ಳಲಿಕ್ಕಾಗದು ॥ 59

ಒಂದು ಅವನು ನಿಜವ್ಯಥೆಯಿಂದ ವ್ಯಥಿತ । ಬಾಬಾರಲ್ಲಿ ತೊಡಗಿದೆ ಚಿತ್ತ ।
ಏಳಲು ಕೂಡ್ರಲು ಬಾರದಿರುತ । ಅನಾರೋಗ್ಯ ಬೆಳೆಯುತ್ತ ಹೋಯಿತು ॥ 60

ಇತ್ತ ಬಾಬಾರ ನರಳಾಟ । ಹೋಯಿತು ಬಹುಬೇಗ ಬೆಳೆಯುತ್ತ ।
ನೋಡುವಷ್ಟರಲ್ಲಿ ಅವರ ಸ್ಥಿತಿ ಕೆಡುತ್ತ । ಅಸಾಧ್ಯವಾಗಿ ಹೋಯಿತು ॥ 61

ಲೆಕ್ಕ ಹಾಕುವಷ್ಟರಲ್ಲಿ ಹತ್ತಿರ ಬಂತು । ಬಾಬಾ ನುಡಿದ ದಿನ ಬಂದು ತಲುಪಿದ ।
ಬಾಳಾಶಿಂಪಿಗನಿಗೆ ಮೈ ಬೆವತಿತು । ಹಾಗೆಯೇ ಪಾಟೀಲ ರಾಮಚಂದ್ರನಿಗೆ ॥ 62

ಎಂದರು ಬಾಬಾರ ಮಾತು ಸತ್ಯವಿತ್ತು । ಹೀಗೆ ಈಗ ಎನಿಸಹತ್ತಿತ್ತು ।
ಸರಿಕಾಣದು ಲಕ್ಷಣವಂತೂ । ಜಡ್ಡಿನ ಪ್ರಮಾಣ ಬೆಳೆಯುತ್ತಲೆ ಇದೆ ॥ 63

ಶುದ್ಧ ದಶಮಿ ಬಂದೇ ಬಿಟ್ಟಿತು । ನಾಡಿಯ ಗತಿ ಕಡಿಮೆಯಾಯಿತು ।
ತಾತ್ಯಾಗೆ ಕೊನೆಯ ಮೂರ್ಛೆ ಬಂತು । ಆಪ್ತೇಷ್ಟರು ದುಃಖಿತರಾದರು ॥ 64

ಆದರೆ ಚಮತ್ಕಾರ ನಡೆಯಿತು । ತಾತ್ಯಾನ ಗಂಡಾಂತರವು ದೂರವಾಯಿತು ।
ಮರಣ ಅದಲು ಬದಲಾದಂತಾಯಿತು । ತಾತ್ಯಾ ಉಳಿದು ಬಾಬಾ ಹೋಗಿಬಿಟ್ಟರು ॥ 65

ನೋಡಿರೀಗ ಬಾಬಾರ ಮಾತು । ತಾತ್ಯಾ ಹೆಸರು ಹಚ್ಚಿಸಿಯಾಗಿತ್ತು ।
ಆದರೆ ತಮ್ಮ ಪ್ರಯಾಣದ ಸಿದ್ಧತೆ ನಡೆದಿತ್ತು । ಸಮಯದಲ್ಲೊಂದಿಷ್ಟು ತಪ್ಪಿಲ್ಲದಂತೆ॥ 66

ಇಲ್ಲೆಂದರೂ ಈ ಸೂಚನೆಯನು । ಕೊಟ್ಟ ನಿದರ್ಶನಕೆ ತಂದರು ಭವಿಷ್ಯವನು ।
ಸಂಗತಿ ಜರಗುವವರೆಗೆ ಅದನು । ಯಾರಿಗೂ ತಿಳಿಯಲಾಗಲಿಲ್ಲ ॥ 67

ಜನರೆನ್ನುವರು ತಾತ್ಯಾನ ಮರಣವನು । ತಪ್ಪಸಿದಕೆ ಬದಲಾಗಿತ್ತು ತಮ್ಮ ದೇಹವನು ।
ಬಾಬಾ ಹೀಗೆ ಮಾಡಿದರು ನಿವಾರಣೆಯನು । ಅವರ ಲೀಲೆಯನ್ನು ತಿಳಿದವರಾರು ॥ 68

ಬಾಬಾ ದೇಹವಿಟ್ಟ ರಾತ್ರಿಯಲಿ । ಅರುಣೋದಯದ ಸುಪ್ರಭಾತದಲಿ ।
ಬಾಬಾ ಸ್ವಪ್ನದಿ ಬಂದು ಪಂಢರಪುರದಲ್ಲಿ । ದೃಷ್ಟಾಂತವನಿತ್ತರು ದಾಸಗಣೂನಿಗೆ ॥ 69

"ಮಶೀದಿಯು ಬಿದ್ದು ಹೋಗಿ । ಎಣ್ಣೆ ವ್ಯಾಪಾರಸ್ಥರಿಂದಾಗಿ ।
ನಾನು ಬಹಳ ತೊಂದರೆಗೀಡಾಗಿ । ಹೊರಟು ಹೋಗುವೆ ನಾನಿಲ್ಲಿಂದ ಇನ್ನು ॥ 70

ಅದಕಾಗೆ ಬಂದೆ ಇಲ್ಲಿಯವರೆಗೆ । ಬಖ್ಖಳ (ಬಹಳಷ್ಟು) ಹೂವುಗಳ ಹಾಕುನನಗೆ ।
ಇದಿಷ್ಟು ನನ್ನಿಚ್ಛೆಯ ಪೂರ್ಣ ಮಾಡುವುದಕೆ । ನಡಿಬೇಗ ಶಿರಡಿಗೆ" ॥ 71

ಅಷ್ಟರಲ್ಲಿ ಶಿರಡಿಯಿಂದ ಪತ್ರ ಬಂತು । ಬಾಬ ಸಮಾದಿಸ್ತರಾದದ್ದು ತಿಳಿಯಿತು ।
ಈ ವಾರ್ತೆ ತಿಳಿಯಲು ಗಣೂದಾಸರೂ ಹೊರಟು । ಕ್ಷಣ ವಿಳಂಬವಿಲ್ಲದೆ ಬಂದರು ಶಿರಡಿಗೆ ॥ 72

ಬಂದು ಶಿಷ್ಯಪರಿವಾರದ ಜೊತೆಗೆ । ನಿಂತು ಸಮಾಧಿಯ ಎದುರಿಗೆ ।
ಕೀರ್ತನೆ ಭಜನೆಗಳು ಎಂಟು ತಾಸುಗಳ ವರೆಗೆ । ನಾಮಸಂಕೀರ್ತನೆಯನ್ನು ನಡೆಸಿದರು ॥ 73

ಹರಿನಾಮದ ಕುಸುಮಹಾರ । ತಾವೇ ಕಟ್ಟಿ ಅತಿ ಮನೋಹರ ।
ಪ್ರೀತಿಯಿಂದ ಸಮಾಧಿಯ ಮೇಲೆ ಏರಿಸಿದರು । ಅನ್ನ ಸಂತರ್ಪಣದ ಜೊತೆಗೆ ॥ 74

ಕೇಳಲು ನಾಮಗಜರವ ಬಿಡುವಿಲ್ಲದಂತೆ । ಶಿರಡಿ ಎನಿಸಿತು ಭೂವೈಕುಂಠದಂತೆ ।
ನಾಮಘೋಷ ಪ್ರವಾಹ ಹರಿಸುತ । ಎಲ್ಲರನದರಲಿ ತೇಲಿಸಿದರು ಗಣೂದಾಸರು ॥ 75

ದಸರೇಯದೇ ಏತಕೆ ಪ್ರೇಮ ಬಾಬಾರದು । ಆ ಮುಹೂರ್ತ ಸಾಡೇತೀನ ಮುಹೂರ್ತದಲಿ ।
ಪ್ರಯಾಣಕೃತ್ಯಕೆ ಶುಭಕಾಲ ವಿರುವುದು । ಇದು ಎಲ್ಲರಿಗೂ ತಿಳಿದಿರುವುದರಿ ॥ 76

ಈ ಮಾತೂ ಸರಿಯಾದುದಲ್ಲ । ಯಾರಿಗೆ ಗಮನಾಗಮವಿಲ್ಲ ।
ಅಂಥವನಿಗೆ ನಿರ್ಯಾಣವೂ ಇಲ್ಲ । ಅಂಥಲ್ಲಿ ಮುಹೂರ್ತದ ಪ್ರಯೋಜನವೇನು ॥ 77

ಯಾರಿಗೆ ಇರಲೊಲ್ಲದು ಧರ್ಮಬಂಧನ । ಆಗಿರುವುದೆಲ್ಲ ಬಂಧೋಪಶಮನ ।
ಯಾರ ಪ್ರಾಣಕ್ಕಿಲ್ಲ ಉತ್ಕ್ರಮಣ । ಅಂಥವನಿಗೆ ನಿರ್ಯಾಣವೆಂದರೇನು ॥ 78

ಬ್ರಹ್ಮೈವಸನ ಬ್ರಹ್ಮಾಪ್ಯೇತಿ ಎಂಬುವಗೆ । ಹೀಗಿರುವ ಸಾಯಿ ಮಹಾರಾಜರಿಗೆ ।
ಆಗತಿ ಅಥವಾ ಗತಿ ಗಳೆಲ್ಲಿಯವರಿಗೆ । ಅವರಿಗೆ ನಿರ್ಯಾಣಸ್ಥಿತಿ ಎಂತಹುದು॥ 79

ಇರಲು ದಕ್ಷಿಣ ಅಥವಾ ಉತ್ತರಾಯಣ । ಯಾರು ಮಾಡುವುದೇ ಇಲ್ಲ ಪ್ರಯಾಣ ।
ಇದ್ದಲ್ಲಿಯೇ ಸಮರಸವಾಗುವುದರ ಪ್ರಾಣ । ದೀಪವಾರಿದ ಮೇಲಿನ ಕತ್ತಲೆಯಂತೆ ॥ 80

ಕೈಗಡ ತಂದ ದೇಹವಿದು । ಒಡೆತನವಿಲ್ಲ ಪಂಚಭೂತಗಳದು ।
ನಿಜ ಸ್ವಾರ್ಥವನು ಸಾಧಿಸಿಕೊಂಡು । ಯಾರದವರಿಗೆ ಹಿಂದಿರುಗಿಸುವುದು ॥ 81

ಮುಂದೆ ನಡೆಯಬೇಕಾದುದನು ಸೂಚಿಸುವ । ಬಾಬಾ ಮೊದಲೇ ತೋರಿದರದರ ಕೌತುಕವ ।
ಕಳೆದುಹೋಯಿತು ಅಮೂಲ್ಯ ಸಮಯ । ಕೀರ್ತಿ ಸ್ಥಿರವಾಗಿ ಉಳಿಯಿತು ॥ 82

ಜ್ವರ ಬಂದಿತೆಂಬುದೊಂದು ನಿಮಿತ್ತ । ಲೌಕಿಕವ ರೀತಿಯ ಅನುಸರಿಸುತ ।
ಒಮ್ಮೊಮ್ಮೆ ನರಳುತ ಹೊರಳುತ । ಅಂತರಂಗದಿ ಸದ್ದೈವ ಜಾಗೃತ ॥ 83

ಹಗಲಿನ ಎಂಟುಗಳಿಗೆ ತುಂಬಿತು । ನಿರ್ಯಾಣದ ಸಮಯ ಹತ್ತಿರ ಬಂತು ।
ತಾವಾಗಿಯೇ ಎದ್ದು ಕುಳಿತು । ಅವಿಕಲ ಚಿತ್ತದಿಂದ ॥ 84

ನೋಡಿ ಬಾಬಾರ ಮುದ್ರೆಯನಿಂತು । ಆಶೆಯ ಸಮುದ್ರ ಉಕ್ಕೇರಿತು।
ಭಯಂಕರವಾದ ಅಭದ್ರಗಳಿಗೆ ಕಳೆಯಿತುಯೆಂದು । ಎಂದು ಕೂಡಿದವರಿಗೆಲ್ಲ ಅನಿಸಿತು ॥ 85

ಹೀಗೆಲ್ಲರೂ ವಿಚಾರಮಾಡುತ । ಕುಳಿತಿರುವಾಗ ಸಚಿಂತ ।
ಹತ್ತಿರ ಬಂತು ಬಾಬಾರ ಅಂತ । ಆಗ ನಡೆದ ಸಂಗತಿಯ ಕೇಳಿರಿ ॥ 86

ಇನ್ನೊಂದು ಕ್ಷಣವಿದೆ ಪ್ರಾಣೋತ್ಕ್ರಮಣಿಕೆ । ತಿಳಿಯದು ಏನೆನಿಸಿತವರ ಮನಕೆ ।
ಹಸ್ತ ವನಿಟ್ಟರು ಕಫನಿಯ ಜೇಬಿನೊಳಕೆ । ಅದು ಧರ್ಮ ಸಮಯವೆಂದು ತಿಳಿದು ॥87

ಸುಲಕ್ಷಣೆಯಾದ ಲಕ್ಷ್ಮೀ ಎಂಬುವಳು । ಹೆಸರಿನಂತೆಯೇ ಅವಳ ಕೃತಿಗಳು ।
ಸಾಯಿ ಚರಣದಿ ನಿತ್ಯನಿರತಳು । ಅಲ್ಲಿಯೇ ಹತ್ತಿರದಲ್ಲಿದ್ದಳು ॥ 88

ಅವಳಿಗೊಂದಿಷ್ಟು ದ್ರವ್ಯದಾನ । ಮಾಡುತ್ತಿದ್ದರು ಬಾಬಾ ಅತಿಸಾವಧಾನ ।
ಇನ್ನು ಕ್ಷಣದಲ್ಲಾಗುವುದು ದೇಹಾವಸಾನ । ಬಾಬಾರಿಗದು ತಿಳಿದೇ ಇತ್ತು ॥ 89

ಲಕ್ಷ್ಮೀಬಾಯಿ ಸಿಂಧೆ ಇವಳೇ । ಮಶೀದಿಯಲಿ ಬಾಬಾರ ಬಳಿಯಲೇ ।
ನಿರತಳು ಕೆಲಸ ಕಾರ್ಯಗಳಲೇ । ನೇಮ ನಿರ್ಬಂಧಗಳಿಂದ ವರ್ತಿಸುತ್ತಿದ್ದಳು ॥ 90

ಇದು ನಿತ್ಯದ ಪರಿಪಾಠವಾಗಿತ್ತು । ದರಬಾರ ಎಲ್ಲರಿಗೂ ತೆರೆದಿರುತ್ತಿತ್ತು ।
ಬಹುಶಃ ಯಾರಿಗೂ ಅಡ್ಡಿಯಿರುತ್ತಿತ್ತು । ಮರ್ಯಾದೆ ದೊಡ್ಡದು ರಾತ್ರಿಯದು ॥ 91

ಸಾಯಂಕಾಲದ ಫೇರಿ ಮುಗಿದು । ಅಲ್ಲಿಂದ ಜನ ತಿರುಗಿ ಹೋದದ್ದು ।
ಮತ್ತೆ ಮರುದಿನ ಬೆಳಗಾಗೆದ್ದು । ಮಶೀದಿಗೆ ಮತ್ತೆ ಬರುತ್ತಿದ್ದರು ॥ 92

ಆದರೆ ಭಕ್ತ ಮ್ಹಾಳಸಾಪತಿ । ದಾದಾ, ಲಕ್ಷ್ಮೀ ಇವರ ಭಕ್ತಿ ।
ನೋಡಿ ಅವರಿಗೆ ಇರಲಿಲ್ಲ ರಾತ್ರಿ । ಬಾಬಾರ ಅಡ್ಡಿ ಇರಲಿಲ್ಲ ॥ 93

ಇದೇ ಲಕ್ಷ್ಮೀ ಅತಿ ಪ್ರೀತಿಯಿಂದಾಗಿ । ಪ್ರತಿದಿನ ಕಳಿಸುವಳು ಬಾಬಾರಿಗೆ ।
ರೊಟ್ಟಿಪಲ್ಯಗಳ ಸಮಯಕ್ಕೆ ಸರಿಯಾಗಿ । ಈ ಸೇವೆಯನ್ನೆಷ್ಟು ಬಣ್ಣಿಸಬೇಕು ॥ 94

ಇತಿಹಾಸವ ಕೇಳಲು ಈ ರೊಟ್ಟಿಯದು । ಬಾಬಾರ ದಯಾದ್ರತೆ ತಿಳಿಯುವುದು ।
ಶ್ವಾನ ಸೂಕರಗಳಲೂ ಬಾಬಾರ ವಾಸವಿರುವುದು । ತಿಳಿದು ಆಶ್ಚರ್ಯವೆನಿಸೀತು ಮನಸಿಗೆ ॥ 95

ಬಾಬಾ ಒಂದುದಿನ ಸಾಯಂಕಾಲ । ಗೋಡೆಗಾನಿಸಿ ವಕ್ಷಸ್ಥಲ ।
ಸಂತಸದಿ ನಡೆಸಿದ್ದರು । ವಾರ್ತಾಲಾಪಗಳ । ಆಗ ಲಕ್ಷ್ಮೀ ಅಲ್ಲಿಗೆ ಬಂದಳು ॥ 96

ತಾತ್ಯಾಪಾಟೀಲ ಅಲ್ಲಿಯೇ ಇದ್ದು । ಇನ್ನು ಯಾರು ಯಾರೋ ಅಲ್ಲಿ ಹಾಜರಿದ್ದು ।
ನಮಿಸಿದಳಾಗ ಲಕ್ಷ್ಮೀ ಬಂದು ಆಗ ಬಾಬಾ ಅವಳಿಗೆಂದರು ॥ 97

"ಲಕ್ಷ್ಮೀ ನನಗಾಗಿದೆ ಹಸಿವೆ" । ಬಾಬಾನಾರೊಟ್ಟಿ ತರುವೆ ।
ಇದೋ ಹೀಗೆ ಹೊರಡುವೆ । ಕೂಡಲೇ ತೆಗೆದುಕೊಂಡು ಬರುವೆ ॥ 98

ಹೀಗೆಂದು ಮನೆಗೆ ಹೋಗಿ । ಮಾಡಿಕೊಂಡು ರೊಟ್ಟಿಪಲ್ಯಾದಿಯಾಗಿ ।
ತಡಮಾಡದೇ ಬಂದು ತಿರುಗಿ । ಬಾಬಾರ ಎದುರಿಗದನಿಟ್ಟಳು ॥ 99

ಬಾಬಾ ಬಡಿಸಿದೆಲಯೆ ಹಾಗೇ ಎತ್ತಿದರು । ನಾಯಿಯ ಎದುರಿಗದನಿಟ್ಟರು ।
ಬಾಬಾ ಹೀಗೇಕೆ ಮಾಡಿದಿರು । ಕೂಡಲೆ ಲಕ್ಷ್ಮೀ ಕೇಳಿದಳು ॥ 100

ನಾನು ಇಷ್ಟು ಬೇಗ ಹೋದೆ । ಕೂಡಲೇ ರೊಟ್ಟಿ ಮಾಡಿದೆ ।
ಅದರ ಗತಿ ಹೀಗಾಗುವುದೇ । ಒಂದು ತುತ್ತು ಕೂಡ ಬಾಯಿಗಿಡಲಿಲ್ಲ ॥ 101

ನಿಮಗಾಗ ಹಸಿವೆಯಾಗಿತ್ತು । ಆದರೆ ಇದೆಂಥ ಹಸಿವೆಯಾಗಿತ್ತು ।
ಬಾಯಿಗಿಡಲಿಲ್ಲ ಒಂದು ತುತ್ತು । ಅದರಿಂದೆನ್ನ ಮನ ನೊಂದಿತು ॥ 102

ಬಳಿಕ ಬಾಬಾ ಎಂದರವಳಿಗೆ । ಸುಮ್ಮನೆ ಹಚ್ಚಿಕೊಳ್ಳುವೆಯೇಕೆ ಮನಸಿಗೆ ।
ಹೊಟ್ಟೆ ತುಂಬಿದಾಗ ಈ ನಾಯಿಗೆ । ನನಗೇ ತೃಪ್ತಿಯಾಯಿತೆಂದು ತಿಳಿ ॥ 103

ಆ ಶ್ವಾನಕೆ ಜೀವವಿಲ್ಲವೇ । ಪ್ರಾಣಿಮಾತ್ರಗಳದೆಲ್ಲ ಒಂದೇ ರೀತಿ ಹಸಿವೆ ।
ಅದು ಮೂಕವಿದ್ದು ನಾ ಮಾತಾಡುತಿರುವೆ । ಆದರಿಂದ ಹಸಿವೆಯಲಿ ವ್ಯತ್ಯಾಸವೇನಾದರೂ ಇದೆಯೇ ॥ 104

ಹಸಿವೆಯಿಂದ ಜೀವ ವ್ಯಾಕುಲವಾದಾಗ್ಯೆ । ಅನ್ನದಾನವನೀಯಲು ಅವುಗಳಿಗೆ ।
ನನ್ನ ಮುಖದಲೇ ಅದನು ಹಾಕಿದ ಹಾಗೆ । ಎಲ್ಲೆಲ್ಲಿಯೂ ಪ್ರಮಾಣವೆಂದು ತಿಳಿ ಇದನು ॥ 105

ಪ್ರಸಂಗ ಸಹಜ ವ್ಯವಹಾರದ್ದು । ಆದರೆ ಬೋಧವೆಲ್ಲ ಪರಮಾರ್ಥದ್ದು ।
ಹೀಗೆ ಸಾಯಿಯ ಮಾತು ಉಪದೇಶಪರವಾದದ್ದು । ಪ್ರೇಮರಸದ ಪರಿಪಾಕವದು ॥ 106

ಮಾತಾಡುವುದು ಸುಲಭ ಪ್ರಪಂಚ ಭಾಷೆ । ಆದರೆ ಅದರಲ್ಲಿ ಇರುವುದು ಪರಮಾರ್ಥದ ರೂಪರೇಷೆ ।
ಯಾರ ಮರ್ಮ ಅಥವಾ ದೋಷವರ್ಣಿಸದೇ । ಶಿಷ್ಯರ ಸಂತುಷ್ಟಗೊಳಿಸುವರು ॥ 107

ಹೀಗೆ ಉಪದೇಶವಾದಂದಿನಿಂದ । ರೊಟ್ಟಿ ಬರತೊಡಗಿತು ಲಕ್ಷ್ಮಿ ಯಿಂದ ।
ಹಾಲಿನಲ್ಲಿ ಮುರಿದು ಹಾಕಿದುದ । ಪರಮ ಪ್ರೀತಿಯಿಂದ ಪ್ರತಿದಿನ ॥ 108

ಆದ ಬಾಬಾ ಕೂಡ ಭಕ್ತಿ ಪ್ರೇಮದಿಂದ । ರೊಟ್ಟಿಯ ತಿನ್ನ ತೊಡಗಿದರು ನೇಮದಿಂದ ।
ಬರುವುದಕೆ ಒಂದಿಷ್ಟು ವಿಲಂಬದಿಂದ । ಊಟ ಸರಿ ಎನಿಸಿದಾಯಿತವರಿಗೆ ॥ 109

ಹೊತ್ತಾದರೆ ಲಕ್ಷ್ಮಿಯ ರೊಟ್ಟಿ ಬರುವುದಕೆ । ಬಡಿಸಿ ಇಟ್ಟಿದ್ದರೂ ಎಲ್ಲ ಪಾತ್ರೆಕೆ ।
ಹೊತ್ತಾದರೂ ಅಂದು ಊಟಕೆ । ಮುಖದಲಿ ತುತ್ತ ಇಡದಾದರು ॥ 110

ಆರಿ ಹೋಗುತ್ತಿದ್ದರೂ ಅನ್ನ ಬಡಿಸಿದ್ದು । ಹಾಗೇ ಕುಳಿತು ಬಿಡುವರು ಹಸಿದು ।
ಬರದ ಹೊರತು ರೊಟ್ಟಿ ಲಕ್ಷ್ಮಿಯದು । ನಡೆಯದಾಯಿತು ಅನ್ನ ಸೇವನೆ ॥ 111

ಮುಂದೆ ಕೆಲವು ತಾಸುಗಳಲಿ । ಶ್ಯಾವಿಗೆಯ ತರಿಸುವರು ಲಕ್ಷ್ಮಿಯ ಕೈಯಲ್ಲಿ ।
ಬಾಬಾ ದಿನಾಲೂ ಮೂರು ಪ್ರಹರದಲಿ । ಅವಳ ಹತ್ತಿರ ಕುಳಿತು ತಿನಬೇಕು ॥ 112

ಬಾಬಾ ಒಂದಿಷ್ಟನ್ನೇ ತಿನ್ನುವರು । ಉಳಿದಿದ್ದನ್ನು ರಾಧಾಕೃಷ್ಣೆಗೆ ಕೊಡುವರು ।
ಈ ಲಕ್ಷ್ಮಿಯ ಕೈಯಿಂದಲೇ ಕೊಡಿಸುತ್ತಿದ್ದರು । ಅವರುಚ್ಛಿಷ್ಟ ಬಲು ಪ್ರೀತಿ ಅವಳಿಗೆ ॥ 113

ನಡೆದಾಗ ದೇಹ ವಿಸರ್ಜನವಾರ್ತೆ । ನಡುವೆಯೇ ಈ ರೊಟ್ಟಿಯ ಅಡ್ಡಕಥೆ ।
ಏತಕ್ಕೆಂದು ಅನದಿರಿ ತಾವು ಮತ್ತು । ಸಾಯಿಯ ವ್ಯಾಪಕತೆಯ ನಿದರ್ಶಕವಿದು ॥ 114

ಈ ಸಕಲ ದೃಷ್ಯಚರಾಚರ । ಅದರಾಚೆಗೂ ಪರಾತ್ಪರ ।
ಸಾಯಿಯೇ ತುಂಬಿರುವ ನಿರಂತರ । ಅಜ ಅಮರನಾಗಿರುವ ಸಾಯಿ ॥ 115

ಈ ಒಂದು ತತ್ವ ಈ ಕತೆಯಲ್ಲಿದೆ । ಲಕ್ಷ್ಮೀಯ ಸವಿಯಾದ ಕಥೆ ಹೀಗಿದೆ ।
ಸಹಜವಾಗಿ ನೆನಪಾದದ್ದೇ । ನಿಮಗಾಗಿ ಎಂದು ತಿಳಿಯುವೆ ನಾ ॥ 116

ಲಕ್ಷ್ಮೀಯ ಸೇವೆ ಇದ್ದಿತು ಹೀಗೆ । ಸಾಯಿ ಮರೆತಾನದನು ಹೇಗೆ ।
ಸಾವಧಾನತೆಯು ವಿಚಿತ್ರ ಹೀಗೆ । ಅದರ ವೃತ್ತಾಂತವ ಕೇಳಬೇಕು ॥ 117

ಕಂಠದಲಿ ಬಂದಿತು ಪ್ರಾಣ । ವಿಕಲ ಶರೀರದಲಿ ಇಲ್ಲ ತ್ರಾಣ ।
ಅಂಥದರಲ್ಲಿ ನಿಜಹಸ್ತದಿಂದೀಯುವರು ದಾನ । ದೇಹಾವಸಾನಕಾಲದಲವಳಿಗೆ ॥118

ಒಮ್ಮೆ ಐದು ಒಮ್ಮೆ ನಾಲ್ಕು । ರೂಪಾಯಿಗಳ ಜೇಬಿನಿಂದ ತೆಗೆದು ।
ಅವಳ ಕೈಮೇಲೆ ಇಟ್ಟದ್ದು । ಅದೇ ಕೊನೆ ಬಾಬಾರದು ॥ 119

ಇದೇನು ನವವಿಧಾನ ಭಕ್ತಿಯ ಗುರುತೇ । ಅಥವಾ ನವರಾತ್ರಿಯ ಅಂಬೆಯ ಪೂಜೆಯಾಯಿತೇ ।
ಸೀಮೋಲಂಘನವಿದೆ ಈ ಹೊತ್ತೇ । ಇದು ಅದರ ದಕ್ಷಿಣೆ ಇರುವುದೇ ॥ 120

ಅಥವಾ ಶ್ರೀ ಮದ್ಭಾಗವತದೊಳಗೆ । ಶ್ರೀ ಕೃಷ್ಣಹೇಳಿದ ಉದ್ಧವನಿಗೆ ।
ಆನವ ಲಕ್ಷಣ ಶಿಷ್ಯ ಸ್ಥಿತಿಯು ಹೀಗೆ । ಅವಳಿಗೆ ನೆನಪುಮಾಡಿ ಕೊಟ್ಟವರೇನೋ ॥ 121

ಏಕಾದಶ ಸ್ಕಂದದ ದಶಮಾಧ್ಯಯದಲಿ । ನೋಡಬೇಕು ಆರನೆಯ ಶ್ಲೋಕದಲಿ ।
ಶಿಷ್ಯನು ನಡೆಯಬೇಕು ಯಾವ ರೀತಿಯಲಿ । ಹೇಗೆ ಜ್ಞಾನ ಸಂಪಾದಿಸಬೇಕು ॥122

ಮೊದಲು ಪೂರ್ವಾರ್ಧದಲಿ ಐದು । ಉತ್ತರಾರ್ಧದಲಿ ನಾಲ್ಕು ಹೇಳಿದ್ದು ।
ಬಾಬಾರೂ ಇದೇ ಕ್ರಮವನನುಸರಿಸಿದು । ಇದೇ ಉದ್ದೇಶವಿರಬಹುದೆನಿಸುವದು ॥123

ಅಭಿಮಾನ ರಹಿತ, ದಕ್ಷ ನಿರ್ಮತ್ಸರ । ಶಿಷ್ಯನಿರಬೇಕು ನಿರ್ಮಮ, ಗುರುಸೇವಾತತ್ಪರ ।
ಇರಬೇಕು ಪರಮಾರ್ಥ ಜಿಜ್ಞಾಸಾತತ್ಪರ । ನಿಶ್ಚಲ ಮನವಿರಬೇಕು ॥ 124

ಅಸೂಯೆಯನ್ನರಿಯ । ಸಲ್ಲದ ವಾಚಾಳಿತನವಿಲ್ಲದ ।
ನಿಜ ಗುರುರಾಯಾನನೂ ಈ ಲಕ್ಷಣಗಳಿಂದ । ಸಂತುಷ್ಟಗೊಳಿಸಲು ಯತ್ನಿಸಬೇಕು ॥ 125

ಇದೇ ಉದ್ದೇಶ ಶ್ರೀ ಸಾಯಿನಾಥರದು । ಈ ರೂಪದಲಿ ಅದನು ಪ್ರಕಟಗೊಳಿಸುತ್ತಿದ್ದು ।
ಕೇವಲ ಸ್ವಭಕ್ತರ ಹಿತಕ್ಕೆಂದು । ಕರುಣಾವಂತರಾದ ಸಂತರು ಸದಾ ॥ 126

ಲಕ್ಷ್ಮೀ ತಿಂದುಂಡು ಸುಖದಿಂದಿರುವ ಮನೆಯವಳು । ಅವಳಿಗೇನು ಮಹಾ ಒಂಭತ್ತು ರೂಪಾಯಿಗಳು ।
ಅಷ್ಟನು ಅವರ ಮೇಲೆ ನಿವಾಳಿಸಿ ಚೆಲ್ಲಬಲ್ಲಳು । ಆದರೆ ಈ ದಾನ ಅಪೂರ್ವ ಅವಳಿಗೆ ॥ 127

ಬಹಳ ದೊಡ್ಡ ಭಾಗ್ಯವಂತಳು । ಅದರಿಂದಲೇ ಈ ಕೃಪೆಗೆ ಪಾತ್ರಳಾದಳು ।
ನವರತ್ನವಲಿಯ ಪಡೆದಳು । ಶ್ರೀ ಸಾಯಿಯ ನಿಜಕರಕಮಲಗಳಿಂದ ॥ 128

ಹೋಗಿವೆ ಹೋದಾವು ಎಷ್ಟೋ ಒಂಭತ್ತು । ಅದರಿಂದ ಅಭಿನವ ದಾನವಾಗಿತ್ತು ।
ಇದು ಅವಳ ಆಜೀವ ಪರ್ಯಂತು । ಸಾಯಿಯ ಸ್ಮರಣೆಯನು ಕೊಡುವುದು॥ 129

ಸನ್ನಿಧ ಬಂದಿದೆ ದೇಹಾವಸಾನ । ಆದರೂ ಇಟ್ಟುಕೊಂಡು ಅನುಸಂಧಾನ ।
ಜೊತೆಗೂಡಿ ಐದು ನಾಲ್ಕುಗಳನು । ಆಮರಣ ಸ್ಮರಣೆ ಇತ್ತರವಳಿಗೆ ॥ 130

ಹೀಗೆ ಎಚ್ಚರ ತೋರಿಸಿದರು । ಹತ್ತಿರಿದ್ದವರ ಊಟಕ್ಕೆ ಕಳುಹಿಸಿದರು ।
ಮಾತ್ರ ಗ್ರಾಮಸ್ಥರಲಿ ಒಬ್ಬಿಬ್ಬರನು ಅವರು । ಕೂಡ್ರಿಸಿ ಕೊಳ್ಳುವದ ಕಂಡರು ॥131

ಆದರೂ ಕೆಲವು ಪ್ರೇಮಳ ಭಕ್ತರು । ಬಹಳ ಹಟಹಿಡಿದರು ।
ಬಾಬಾರ ಬಿಟ್ಟು ಹೋಗಕೂಡದೆಂದರು । ಈ ಸಮಯ ಕಠಿಣವಾದುದೆಂದು ॥ 132

ಆದರೂ ಕೊನೆಯ ಕಾಲಕೆ । ಸಿಲುಕುವೆನೆಲ್ಲಿ ಮೋಹದ ಅಪಾಯಕೆ ।
ಎಂದು ಅವಸರವಸರವಾಗಿಯೇ ಅದಕೆ । ಎಲ್ಲರನು ಅಲ್ಲಿಂದ ಕಳಿಸಿದರು ॥ 133

ತಿಳಿದು ನಿರ್ಯಾಣ ಕಾಲ ಸನ್ನಿಹಿತವಾದುದನು । ಬುಟ್ಟಿ ಕಾಕ ಮೊದಲಾದವರನು ।
ಮುಗಿಸಿ ಬನ್ನಿರಿ ಭೋಜನವನು । ಎಂದು ವಾಡೆಗೆ ಕಳಿಸಿದರು ॥ 134

ಉಳಿದಮರ ವ್ಯಗ್ರತೆಯ ಕಂಡು । ಬಾಬಾ ಮನದಲಿ ನೊಂದುಕೊಂಡು ।
ಹೋಗಿ ಬನ್ನಿರಿ ಊಟ ಮುಗಿಸಿಕೊಂಡು । ಎಂದೆಲ್ಲರಿಗೆ ಆಜ್ಞಾಪಿಸಿದರು ॥ 135

ಹೀಗಿದನು ನಿತ್ಯವೂ ಹೇಳುವರು । ಜೊತೆಯಿರುವ ಸಂಗಡಿಗರು ।
ಅವರ ಮನದಲಿರದಿದ್ದರೂ । ಅವರಾಜ್ಞೆಯಂತೆ ಎದ್ದರು ॥ 136

ಇತ್ತ ಆಜ್ಞೆಯನು ಉಲ್ಲಂಘಿಸಲಾಗದು । ಈ ಕಾಲಕೆ ಸಾನಿಧ್ಯವನೂ ಬಿಡಬಾರದು ।
ಬಾಬಾರ ಮನವನ್ನು ನೋಯಿಸಬಾರದು । ವಾಡೆಗೆ ಊಟಕ್ಕೆ ಹೋದರು ॥ 137

ಇತ್ತ ಅಸ್ವಸ್ಥತೆ ಮಿತಿ ಮೀರಿದ್ದು । ತಿಂಡಿ ತಿನಿಸುಗಳು ಎಲ್ಲಿಯದು ।
ಬಾಬಾರಲ್ಲಿಯೇ ಜೀವ ತೊಡಗಿರುವುದು। ಒಂದು ಕ್ಷಣವೂ ವಿಸ್ಮರಣೆಯಾಗದವರದು ॥ 138

ಆದರೂ ಹೋಗಿ ಊಟಕ್ಕೆ ಕುಳಿತರು । ಅಷ್ಟರಲ್ಲಿ ಹಿಂದೇಯೇ ಕರೆಯಬಂದರು ।
ಅರೆಹೊಟ್ಟೆಯಲೇ ಓಡಿ ಬಂದರು । ಅಂತ್ಯದಲಿ ಭೇಟಿ ತಪ್ಪಿತು ॥ 139

ಆಯುರ್ದಾಯಕ ಎಣ್ಣೆ ಮುಗಿಯಲು । ಪ್ರಾಣಜ್ಯೋತಿಯು ಮಂದವಾಗಲು ।
ಬಯಾಜಿ ಕೋತೆಯ ಮೇಲೆ ತಲೆ ಇಡಲು । ದೇಹವು ವಿಶ್ರಾಮ ಪಡೆಯಿತು ॥ 140

ಅಲ್ಲಿ ಬಿದ್ದುಕೊಂಡು ಅಥವಾ ಮಲಗಿಕೊಂಡು । ಸ್ವಸ್ಥವಾಗಿ ಗಾದಿಯ ಮೇಲೆ ಕುಳಿತು ಕೊಂಡು ।
ಹೀಗೆ ಸ್ವಹಸ್ತದಿಂದ ಧರ್ಮ ಮಾಡುತ್ತಿದ್ದು । ದೇಹ ವಿಸರ್ಜನೆ ಮಾಡಿದರು ॥141

ಸಮರ್ಥರ ಮನೋಗತ । ಯಾರಿಗೂ ತಿಳಿಯದಿರುತ ।
ದೇಹ ವಿಸರ್ಜಿಸಿದರು ನೋಡನೋಡುತ । ಬ್ರಹ್ಮೀ ಭೂತರಾದರು ॥ 142

ದೇಹಮಾಯೆಯ ಬುತ್ತಿ ತೆಗೆದುಕೊಂಡು । ಸಂತ ಧರೆಗೆ ಅವತರಿಸಿ ಬಂದು ।
ಉದ್ಧಾರಕಾರ್ಯವ ಮುಗಿಸಿಕೊಂಡು । ಅವ್ಯಕ್ತದಲಿ ಸಮರಸರಾಗುವರು ॥ 143

ನಟನು ನಾನಾ ವೇಷಗಳ ಹಾಕುವನು । ಆದರೆ ಒಳಗೆ ತಾನದರೊಂದು ತಿಳಿದಿರುವವನು ।
ಅಂಥ ಅವತಾರಿಯಾದನು । ಮರಣದ ತೊಡಕೇನವನಿಗೆ ॥ 144

ಲೋಕ ಸಂಗ್ರಹಕಾಗಿ ಅವತರಿಸಿದ । ಕಾರ್ಯಮುಗಿದಾಗ ಅವತಾರ ಮುಗಿಸಿದ ।
ಅವನೇನು ಅಂಕಿತನೇ ಜನನ ಮರಣದ । ಸ್ವಲೀಲೆಯಲಿ ವಿಗ್ರಹವ ಧರಿಸಿವನು ॥145

ಪರಬ್ರಹ್ಮವೇ ಯಾರ ವೈಭವ । ಅಂಥವನಿಗೆಂಥ ನಿಧನ ಸಂಭವ ।
ನಿರ್ಮಮತ್ವಯಾರ ಅನುಭವ । ಅಂಥವನಿಗೆಂಥ ಭವಭಾವಭಾದೆ ॥ 146

ಕಂಡರೂ ಕರ್ಮದಲಿ ತೊಡಗಿರುವಂತೆ । ಇರುವನು ಎಂದೂ ಕರ್ಮಗಳ ಮಾಡದಂತೆ ।
ಕಾಣುವನಾವಾಗಲೂ ಕರ್ಮದಿ ಅಕರ್ಮತೆ । ಅಹಂಕಾರ ರಹಿತನಾಗಿ ॥ 147

"ನಾ ಭುಕ್ತಂಕ್ಷೀಯ್ಯತೆ ಕರ್ಮ" । ಇದಿರುವದು ಸ್ಮೃತ್ಯುಕ್ತ ಕರ್ಮದ ಮರ್ಮ ।
ಆದರೂ ಬ್ರಹ್ಮಜ್ಞಾನದಿಲ್ಲ ಸಂಭ್ರಮ । ವಸ್ತು ಮಾತ್ರಗಳಲಿ ಬ್ರಹ್ಮನ ಕಾಣುವನವ ॥ 148

ಕ್ರಿಯಾಕಾರಕ ಫಲಜಾತ । ಇದೆಲ್ಲವಂತೂ ಪ್ರಸಿದ್ಧ ದ್ವೈತ ।
ಬ್ರಹ್ಮವಿದ ಬ್ರಹ್ಮವೆಂದೇ ತಿಳಿಯುತ । ಮರಳಿನಲ್ಲಿ ಬೆಳ್ಳಿ ಕಂಡಂತೆ ॥ 149

ಬಾಬಾ ಮಮತೆಯ ಮಾತೆಯಂತಿದ್ದರು । ಹೇಗೆ ಕಾಲದ ಮುಖದಿ ಬಿದ್ದರು ।
ಹಗಲನು ಕತ್ತಲದ ರಾತ್ರಿ ನುಂಗಿ ತೆಂಬರು । ಹಾಗೆಯೇ ಆಯಿತಲ್ಲ ಈ ಕತೆ ॥ 150

ಇನ್ನು ಈ ಅಧ್ಯಾಯವನ್ನಿಲಿಯೇ ಮುಗಿಸುವಾಗ । ಮಾನಸಿಕ ಮರ್ಯಾದೆಯನುಳಿಸುವಾ।
ಇಲ್ಲದಿರೆ ಶ್ರೋತೃಗಳ ಮನವಾ । ದುಶ್ಚಿತ್ತತೆ ಆವರಿಸೀತು ॥ 151


ಮುಂದಿನ ಕಥೆಯನು ನಿರ್ಯಾಣದ್ದು । ಯಥಾಕ್ರಮ ಮುಂದೆ ಹೇಳಲಾಗುವುದು।
ಸಾಯಿ ಚರಣದಿ ನಮನ ಹೇಮಾಡನದು । ಅವರ ಕೃಪೆಯಿಂದ ಕೃತಾರ್ಥನಾದೆ ॥ 152

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದೀತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೇ । ಶ್ರೀ ಸಾಯಿನಾಥ ನಿರ್ಯಾಣಂ ನಾಮ
ದ್ವಿಚತ್ವಾರಿಂಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

597.1



# ॥ ಅಥ ಶ್ರೀ ಸಾಯೀ ಸಚ್ಚರಿತ ॥

## ಅಧ್ಯಾಯ ನಾಲವತ್ತಮೂರು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಪೂರ್ವಾಧ್ಯಾಯದಲಾಯಿತು ನಿರೂಪಣ । ಸಂತ ಸಾಯಿಸಮರ್ಥರ ನಿರ್ಯಾಣ ।
ಇನ್ನು ಉಳಿದಿರುವುದು ಅಪೂರ್ಣ ಅದನಿಲ್ಲಿ ಸಂಪೂರ್ಣ ಮಾಡುವಾ ॥ 1

ಸಾಯಿಯ ಬಗ್ಗೆ ಪ್ರೇಮ ಅದ್ಭುತ । ಅದನೂ ಸಾಯಿ ಸಮರ್ಥನೇ ಹುಟ್ಟಿಸುವಾತ ।
ಹೇಮಾಡನವನ ಚರಣದಲಿ ನಿರತ । ಸಚ್ಚರಿತೆ ರಚಿಸುತ್ತಿರುವನು ॥ 2

ಅವನೇ ಭಕ್ತಿ ಪ್ರೇಮಗಳನೀಯುವನು । ಅವನೇ ಚರಿತ್ರ ಮಹಿಮೆಯ ಬೆಳೆಸುವನು ।
ಅವನಿಂದಲೇ ಹೊಂದುವೆನು ಉಪರತಿಯನು । ಭಜನಗೌರವವನಿಂದ ॥ 3

ಅದರಿಂದ ಕಾಯ ವಾಚೆ ಮನಗಳು । ಅವನ ಚಿಂತನೆಯಲಿ ತೊಡಗಿರಲು ।
ಅವನಿಗೆನ್ನ ಸಹಸ್ರಾರು ನಮನಗಳು । ಅನನ್ಯ ಭಾವದಿ ಶರಣವನಿಗೆ ನಾ॥ 4

ಪಾಪದ ಕೊಳೆ ಕೂಡಾಗಲು । ಅದನ್ನೆಲ್ಲ ತೊಳೆಯಲು ।
ಅಂತರವ ನಿರ್ಮಲ ಗೊಳಿಸಲು । ಇತರ ಸಾಧನಗಳು ನಿಷ್ಫಲ ॥ 5

ಹರಿಭಕ್ತಯಶ ಸ್ಮರಣೆ । ಅವರ ಭಜನೆ ಅಥವಾ ಕೀರ್ತನೆ ।
ಆದ ಬಿಟ್ಟು ಚಿತ್ತ ಶುದ್ಧಿಯ ಸಾಧನೆ । ಹುಡುಕಿದರೂ ಸುಲಭದಲಿ ಸಿಗುವುದಿಲ್ಲ ॥ 6

ಇನ್ನು ಗತಕಥಾನುಸಂಧಾನ । ಮಾಡುವಾ ಸಂಕ್ಷಿಪ್ತ ಪರ್ಯಾಲೋಚನೆ ।
ಸಾಯಿ ನಿಜಾನಂದಾವಸ್ಥಾನ । ವ್ಯಾಖ್ಯಾನವ ಮುಂದೆ ಸಾಗಿಸುವಾ॥ 7

ಹಿಂದೆ ಸಾದ್ಯಂತ ಹೇಳಿಯಾಗಿದೆ । ಏತಕ್ಕೆ ಪ್ರಯಾಣ ವಿಜಯದಶಮಿಯಂದೇ ।
ತಾತ್ಯಾಬಾರ ನಿಮಿತ್ತದಿಂದ ಭವಿಷ್ಯ ಕಥನ । ಮೊದಲೇ ಹೇಗೆ ಹೇಳಲಾಯಿತು ॥ 8

ಇನ್ನು ದೇಹಾವಸಾನವಾಗುವುದು । ಎಂದು ಧರ್ಮಾವಧಾನವನಿಟ್ಟುಕೊಂಡು ।
ಲಕ್ಷ್ಮೀಗೆ ದಾನಕೊಟ್ಟುದು ಹೇಗೆಂದು । ಸಮಗ್ರನಿರೂಪಣೆಯಾಗಿದೆ ॥ 9

ಇನ್ನು ಈ ಅಧ್ಯಾಯದಲಿ ಕಥನ । ಹೇಗೆ ಹತ್ತಿರ ಬಂದಾಗ ನಿದಾನ ।
ಸಾಯಿ ಕೇಳುತ್ತಿದ್ದುದು ರಾಮಾಯಣ । ಹಿತಾರ್ಥವಾಗಿ ಬ್ರಾಹ್ಮಣ ಮುಖದಿಂದ ॥ 10

ಸಮಾಧಿಸ್ಥಾನದ ನಿಯೋಜನೆ ಹೇಗೆ । ಅಕಸ್ಮಾತ ಇಟ್ಟಿಗೆ ಬಿದ್ದದ್ದು ಹೇಗೆ ।
ಇಷ್ಟೇ ಅಲ್ಲ ಅದು ಒಡೆದದ್ದು ಹೇಗೆ । ಎಂಬ ವಿವರಗಳ ಕೇಳಿರಿ ॥ 11

ಒಮ್ಮೆ ಬ್ರಹ್ಮಾಂಡಕೆ ಏರಿಸಿ ಪ್ರಾಣ । ಕುಳಿತು ಬಿಟ್ಟರು ಮೂರು ದಿನ ।
ಇದೆಂಥ ಸಮಾಧಿ ಇದು ದೇಹಾವಸಾನ । ಎಂದು ಜನರೆಲ್ಲ ನಿರ್ಧರಿಸಿದರು ॥ 12

ಉತ್ತರ ವಿಧಿಯ ಸಿದ್ಧತೆ ಮಾಡಿದರು । ಅಷ್ಟರಲಿ ಬಾಬಾ ಸಮಾಧಿಯಿಂದೆದ್ದರು ।
ಆಗ ಜನರೆಲ್ಲ ಬೆಚ್ಚಿದರು । ಯಾವರೀತಿಯಲೆಂಬದ ಕೇಳಿರಿ ॥ 13

ಇರಲಿನ್ನು ಈ ನಿರ್ಯಾಣ ಕಥೆ । ಶ್ರೋತೃಗಳ ಮನತಾಗುವುದು ವ್ಯಥೆ ।
ಇದು ದೇಹಾವಸಾನದ ವಾರ್ತೆ । ಯಾರ ಮನಸಿಗೂ ರುಚಿಸದಿದು ॥ 14

ಆದರೂ ಈ ಸಾಧು ಸಂತರ ನಿರ್ಯಾಣ ಕಥನ । ಹೇಳುವರ ಕೇಳುವ ಮಾಡುವುದು ಪಾವನ ।
ವಿಸ್ತಾರವಾಗಲ್ಲದಿದ್ದರೆ ಭಾಗಶಃ ಶ್ರವಣ । ಕೇಳಬೇಕು ಸಮಾಧಾನವಾಗುವಷ್ಟು ॥ 15

ದೇಹತ್ಯಾಗದಿಂದ ಅಗಮ್ಯಗತಿ । ನಿಜಪ್ರಾಪ್ತಿ ಸುಖದ ವಸತಿ ।
ಬಾಬಾ ಪಡೆದರು ಅಕ್ಷಯ ಸ್ಥಿತಿ । ಪುನರಾವೃತ್ತಿ ವಿರಹಿತ ॥ 16

ದೇಹ ಧಾರಣೆಯಿಂದಾಗಿ ವ್ಯಕ್ತರಿದ್ದರು । ದೇಹಾತ್ಯಾಗದಿಂದ ಅವ್ಯಕ್ತದಿ ಉಳಿದರು ।
ಏಕಾಂತದ ಅವತಾರ ಸಮಾಪ್ತಿಯಾದರೂ । ಸರ್ವಾಂಗದಲಿ ಸುವ್ಯಕ್ತತೆಯ ಪಡೆದರು ॥17

ಏಕದೇಶಿಯತ್ವದ ತೊರೆದರು । ಸರ್ವಗತತ್ವವ ಪಡೆದರು ।
ಪೂರ್ಣರೂಪದಲಿ ಸನಾತನರಾದರು । ನಿಜತ್ವದಲಿ ನಿಜದಿ ಸಮರಸವಾದರು ॥ 18

ಸಾಯಿ ಎಲ್ಲರ ಜೀವನ । ಸಾಯಿ ಎಲ್ಲರರಿಗೂ ಜೀವ ಪ್ರಾಣ ।
ಸಾಯಿಯ ವಿನಃ ಗ್ರಾಮವಾಸೀ ಜನ । ಹೀನದೀನರಾದರು ॥ 19

ದೇಹ ಬೀಳಲು ನಿಚೇಷ್ಟಿತ । ಆಯಿತೆಲ್ಲೆಡೆಗೆ ಆಕಾಂತ ।
ಆಬಾಲವೃದ್ಧರು ಚಿಂತಾಕ್ರಾಂತ । ಪ್ರಾಣಾಂತವಾಯಿತು ಎಲ್ಲರಿಗೆ ॥ 20

ಜ್ವರಾದಿ ಲೌಕಿಕ ಬಾದೆಗಳು । ಪ್ರಪಂಚ ಬದ್ಧರಿಗೆ ಬರುತಿರಲು ।
ಅವು ಒಂದು ಯೋಗಿಯ ದಾರಿಯೊಳು । ಅವರ ಅಮರ್ಯಾದೆ ಮಾಡವು ॥21

ಉರಿಸಿ ತಮ್ಮ ನಿಜತೇಜವನು । ಸಂತರು ದಹಿಸುವರು ನಿಜದೇಹವನು ।
ಅದೇ ಪ್ರಕಾರ ಬಾಬಾ ಅದನು । ನಿಜಹಸ್ತದಿ ಮಾಡಿ ತೋರಿಸಿದರು ॥ 22

ಆಗಬಾರದ್ದು ಆಗಿಹೋಯಿತು । ಜನ ಅತ್ಯಂತ ಹತಾಶವಾಯಿತು ।
ಮನದಲ್ಲಿಯೇ ಚಡಪಡಿಸಿತು । ಮಹಾರಾಜರು ಸಾಯುಜ್ಯತೆಯ ಪಡೆದಾಗ ॥ 23

ಹೋಗಿರದಿದ್ದರೆ ಚೆನ್ನಾಗಿತ್ತು । ಕೊನೆಯ ಭೇಟಿ ತಪ್ಪಿಹೋಯಿತು ।
ಇದ್ದಿದ್ದರೆ ಉಪಯೋ ಬೀಳಬಹುದಾಗಿತ್ತು । ಹೊತ್ತಿಗೆ ಮೈಮರೆತುಬಿಟ್ಟೆ ॥ 24

ಹೀಗೆ ನಾನಾವಿಧ ವಿಚಾರಗಳಿಂದ । ಪ್ರತಿಯೊಬ್ಬ ಮನದಲಿಖಿನ್ನನಾದ ।
ಬಾಬಾರ ಅಂತಃಕರಣದಲ್ಲಿದ್ದು ಯಾರು ತಾನೆ ತಿಳಿದಾರು ॥ 25

ಘುರ ಘುರ ಎನಲಿಲ್ಲ ಶ್ವಾಸ ಹತ್ತಲಿಲ್ಲ । ಕೆಮ್ಮು ದಮ್ಮುಗಳೊಂದೂ ಇಲ್ಲ ।
ಜೀವದ ಕಸಿವಿಸಿಯೂ ಇಲ್ಲ । ಉಲ್ಲಾಸದಿಂದ ಪ್ರಯಾಣಮಾಡಿದರು ॥ 26

ಇನ್ನೆಲ್ಲಿಯ ಸಾಯಿಯ ದರ್ಶನ । ಎಲ್ಲಿಯ ಸಾಯಿಪದ ಸಂವಾಹನ ।
ಎಲ್ಲಿಯ ಸಾಯಿ ಚರಣಕ್ಷಾಲನ । ತೀರ್ಥಪ್ರಾಶನವೆಲ್ಲಿಯದು ॥ 27

ಆದರೂ ಆ ಪ್ರೇಮಳ ಭಕ್ತರೋಡಿ । ಬಂದರು ಅಂತಕಾಲವನೋಡಿ ।
ದೂರಮಾಡಿದಿರೇಕೆ ಇದ್ದು ಹತ್ತಿರದಿ । ಅವರಿಗೆ ಕಳವಳಿಸಹಚ್ಚಿದಿರಿ ॥ 28

ಎಲ್ಲರೂ ಜೀವದ ಭಕ್ತಜನ ಕಂಡು । ಬಂದಿತು ಹತ್ತಿರ ತಿಳಿದು ಅಂತ್ಯಕಾಲವೆಂಬುದು ।
ಆಗ ಬಾಬಾರ ಪ್ರೇಮವು ಪುಟಿದೆದ್ದು । ಅಂತಕಾಲಕೆ ಬರುವಂತೆ ॥ 29

ಸಾಯುಜ್ಯ ಸದನವನು ಪಡೆಯಲು । ಪ್ರೇಮ ಬಂಧನವು ಅಡ್ಡ ಬರುತಿರಲು ।
ಹೊತ್ತಿಗೆ ಅದಕರ ಛೇದನ ಮಾಡದಿರಲು । ನಿರ್ವಾಸನವಾಗುವದೆಂತು ॥ 30

ಹೀಗಾಗದೇ ದೇಹ ಬಿದ್ದ । ಕೂಡಲೇ ಮತ್ತೆ ಜನ್ಮ ಪಡೆಯುವುದು ।
ಮತ್ತೆ ಹೊಸಸಂಸಾರದಿ ಬೀಳುವುದು । ವಾಸನೆಗಳ ಸಂತೆಗೆ ತೊಡಗುವುದು ॥ 31

ಈ ಪ್ರಕಾರವನು ತಪ್ಪಿಸಲು । ದಕ್ಷರಿರುವರು ಸಂತರು ಯಾವಾಗಲು ।
ಇದೇ ನಿರ್ಧಾರಬಾಬಾರ ಮನದಲ್ಲೂ । ಲೋಕವ್ಯವಹಾರವ ರಕ್ಷಿಸುವುದು ॥ 32

ಇದೇ ಎಚ್ಚರವಿರಬೇಕು ಕೊನೆಗಾಲಕೆ । ಶಾಂತತೆ ಮತ್ತು ಏಕಾಗ್ರತೆ ।
ಧ್ಯೇಯ ಮೂರ್ತಿಯು ಬರಬೇಕು ಚಿತ್ತಕ್ಕೆ । ವಿಕ್ಷೇಪದ ವಿರಹಿತವಾಗಿ ॥ 33

'ಅಂತೇ ಮತಿಃ ಸಾ ಗತಿಃ' ಎಂಬುದು । ಪ್ರಸಿದ್ಧ ಮಾತಿದು ಎಲ್ಲರು ತಿಳಿದಿರುವುದು ।
ಭಗವದ್ಭಕ್ತರ ಆಚರಣೆಯಿದು । ಲೋಕಸಂಗ್ರಹದ ರೀತಿ ಇದು ॥ 34

ಇನ್ನು ಹದಿನಾಲ್ಕು ದಿನ ಉಳಿಯಿತು । ಬಾಬಾರ ಕಾಲ ಹತ್ತಿರ ಬಂತು ।
ಅದಕೆ ಬಾಬಾ ವಝೆಯವರನಿಟ್ಟು । ರಾಮವಿಜಯವನೋದಿಸತೊಡಗಿದರು ॥ 35

ವಝೆ ಮಶೀದಿಯಲಿ ಕುಳಿತರು । ಪೋಥಿಪಾರಾಯಣ ಸುರುಮಾಡಿದರು ।
ಬಾಬಾ ಅದನು ಕೇಳ ತೊಡಗಿದರು । ಎಂಟು ದಿನ ಕಳೆಯಿತು ಹೀಗೆ ॥ 36

ಮುಂದೆ ಬಾಬಾ ಆಜ್ಞಾಪಿಸಿದ್ದು । ಪೋಥಿವಾಚನ ಸಾಗಲೆಂದು ।
ಮೂರು ಹಗಲು ರಾತ್ರಿಗಳಿಂತು । ವಝೆ ಓದುತ್ತ ಕುಳಿತರು ॥ 37

ಹೀಗೆ ಹನ್ನೊಂದು ದಿನ ಕುಳಿತರು । ಬಳಿಕ ನಿಃಶಕ್ತಿಯಿಂದ ದಣಿದರು ।
ಓದಿ ಓದಿ ಬೇಸತ್ತರು । ಹೀಗೆ ಮೂರು ದಿನ ಕಳೆಯಿತು ॥ 38

ಮುಂದೆ ಬಾಬ ಏನು ಮಾಡಿದರು । ಪೋಥಿವಾಚನವ ನಿಲ್ಲಿಸಿದರು ।
ವಝೆಯನ್ನು ಅಲ್ಲಿಂತ ಕಳಿಸಿಬಿಟ್ಟರು । ತಾವೊಬ್ಬರೆ ನಿವಾಂತವಾಗಿ ಉಳಿದರು ॥ 39

ಅವರನ್ನು ಕಳಿಸಲು ಕಾರಣ । ಶ್ರೋತೃಗಳೆನ್ನುವರು ಮಾಡಿಸಿರಿ ಶ್ರವಣ ।
ಮಾಡುವೆನು ಯಥಾಮತಿ ನಿವೇದನ । ಚಿತ್ತವಿಟ್ಟು ಆಲಿಸಿರಿದನು ॥ 40

ದೇಹಾವಸಾನ ಹತ್ತಿರ ಬಂದವರು । ಸಾಧುಸಂತ ಮತ್ತು ಸಜ್ಜನರು ।
ಪೋಥಿ ಪುರಾಣಗಳು ಓದಿಸುವರು । ಚಿತ್ತವಿಟ್ಟು ಕೇಳುವರು ॥ 41

ಶುಕಾಚಾರ್ಯರು ಏಳುದಿನ । ಹೇಳುತ್ತಿದ್ದರು ಮಹಾಭಾಗವತವನು ।
ಕೇಳುತ್ತ ಪರೀಕ್ಷಿತನಿಗಾಯಿತು ಸಮಾಧಾನ । ಸುಖದಿಂದ ದೇಹಾಂತ ಹೊಂದಿದನು ॥ 42

ಭಗವಲ್ಲೀಲೆಯ ಕೇಳುತ್ತ । ಭಗವನ್ಮೂರ್ತಿಯ ನೋಡುತ್ತ ।
ಯಾರಿಗೆ ಅಂತಕಾಲ ಒದಗಿತು । ಅವನೇ ನಿಜಸ್ವಾರ್ಥವ ಸಾಧಿಸಿದ ॥ 43

ಇದಂತೂ ಲೋಕಪ್ರವೃತ್ತಿ ಸ್ಥಿತಿಯಿದ್ದು । ಸಂತರಿದನು ಸ್ವತಃ ಆಚರಿಸುವದು ।
ಲೋಕ ಸಂಗ್ರಹಮಾರ್ಗಬಿಡದಿದ್ದು । ಬಹುಶಃ ಅದಕ್ಕಾಗಿಯೇ ಅವತರಿಸುವರು ॥44

ಯಾರಿಗೆ ಅನಾಸ್ಥೆ ಈ ಭೌತಿಕ ಪಿಂಡದ್ದು । ಅಂಥವರಿಗೆ ದೇಹವಾಸನೆಯಲ್ಲಿಯದು ।
ದುಃಖ ಶೋಕಗಳ ಆವೇಗವಿರದು । ಇದು ಸ್ವಾಭಾವಿಕ ಅವರಿಗೆ ॥ 45

ಇಲ್ಲಿ ಶ್ರೋತೃಗಳು ಶಂಕಿಸಬಹುದು । ಯಾರು ಬ್ರಹ್ಮಸುಖವನು ಅನುಭವಿಸುತ್ತಿದ್ದು ।
ಅವರನ್ನು ಮೋಹ ಮಾಯೆಗಳು ಆವತರಿಸುವುದು । ಆಮಾತು ಹೇಗವವರಿಗೆ ಒಪ್ಪುವುದು ॥46

ಯಾರು ಸ್ವರೂಪದಲ್ಲಿ ಸ್ಥಿತರು । 'ಅಲ್ಲಾಮಾಲಿಕ' ಅನುಸಂಧಾನವಿದ್ದವರು ।
ಅಂಥವರಿಗೆ ಭಕ್ತರಸನ್ನಿಧಾನವಾದರೂ । ಪ್ರತಿಬಂಧಕ ಹೇಗಾದೀತು ॥ 47

ಅವನದಂತೂ ಪ್ರಪಂಚ ಮುಗಿಯಿತು । ಪರಮಾರ್ಥವು ಸ್ಥಿರವಾಯಿತು ।
ದ್ವಂದ್ವಭಾವವೇ ಅಳಿಯದು । ತಾವೇ ಸ್ವರೂಪದಲಿ ತುಂಬಿದರು ॥ 48

ಇದರ ಪ್ರತಿ ಅಕ್ಷರವೂ ಸತ್ಯ । ಇದರಲ್ಲಿಲ್ಲ ಇನಿತೂ ಅಸತ್ಯ ।
ಆದರೆ ಲೋಕ ಸಂಗ್ರಹದ ಅವತಾರ ಕೃತ್ಯ ಮುಗಿಸಿಕೃತಕೃತ್ಯರಾಗುವರು ಸಂತರು ॥49

ಸಂತರು ಸದ್ಭಾವ ವಿಕಾರ ವರ್ಜಿತ । ಅವರು ನಿರಂತರ ಅಪ್ರಕಟಸ್ಥಿತ ।
ಪ್ರಕಟರಾಗುವರು ಭಕ್ತೋದ್ಧಾರಾರ್ಥ। ನಿಧನವೆಂಥದು ಅವರಿಗೆ ॥ 50

ದೇಹೇಂದ್ರಿಯ ಸಂಯೋಗವೇ ಜನನ । ದೇಹೇಂದ್ರಿಯ ವಿಯೋಗವೇ ಮರಣ ।
ಈ ಪಾಶಬಂಧನ ಅಥವಾ ವಿಕಲನ । ಜನ್ಮಮರಣ ಎಂಬ ಹೆಸರು ಇದಕೆ 51

ಜನನದ ಬೆನ್ನುಹತ್ತಿದೆ ಮರಣ । ಒಂದರಿಂದೊಂದು ಅಭಿನ್ನ ।
ಮರಣವು ಜೀವ ಪ್ರಕೃತಿ ಲಕ್ಷಣ । ಜೀವದಿ ಜೀವನವೆಂಬುವುದೇ ವಿಕೃತಿ ॥ 52

ಮರಣವನೇ ಕೊಂದು ಉಳಿಯುವವರು । ಮರಣದ ತಲೆಯ ಮೇಲೆ ಕಾಲಿಟ್ಟವರು ।
ಆಯುರ್ದಾಯವನೇ ಅವರುಚಿಂತಿಸುವರು । ಅವರು ಅವತರಿಸುವರು ಸ್ವೇಚ್ಛೆಯಿಂದ ॥ 53

ಭಕ್ತಕಲ್ಯಾಣದೊಂದೇ ಗುರಿಯನ್ನು । ಇಟ್ಟು ಕೊಂಡವತರಿಸುವರನು ।
ಜನ್ಮಮರಣಗಳಿಗೊಳಪಡುವರೇನು । ಮಿಥ್ಯಾಕಲ್ಪನೆಗಳಿವೆರಡೂ ॥ 54

ದೇಹ ಬೀಳುವ ಮೊದಲೇ ಯಾರು । ದೇಹವನು ಭಸ್ಮಮಾಡಿರುವರು ।
ಅವರೇನು ಮರಣಕ್ಕೆ ಹೆದರುವರು । ಮರಣವೇ ಮಣ್ಣು ಅವರೆದುರು ॥ 55

ಮರಣವು ದೇಹದ ಪ್ರಕೃತಿ । ಮರಣವು ದೇಹದ ಸುಖಸ್ಥಿತಿ ।
ಜೀವನವಿದು ದೇಹದ ವಿಕೃತಿ । ವಿಚಾರವಂತರಿದ ತಿಳಿಯ ಬೇಕು ॥ 56

ಸಾಯಿ ಸಮರ್ಥರು ಆನಂದಘನ । ಅವರಿಗೆಲ್ಲಿಯ ದೇಹದ ಜನನ ।
ಅವರ ದೇಹಕ್ಕೆಂದು ಮರಣ ॥ ದೇಹಸ್ಫುರಣ ವರ್ಜಿತವದು ॥ 57

ಸಾಯಿ ಪರಬ್ರಹ್ಮಪೂರ್ಣ। ಅವನಿಗೆಲ್ಲಿಯ ಜನ್ಮಮರಣ ।
ಬ್ರಹ್ಮವು ಸತ್ಯವಿದ್ದು ಜಗನ್ಮಿಥ್ಯಾತನ । ದೇಹದ ಪರಿವೆ ಎಲ್ಲಿ ಅವರಿಗೆ ॥ 58

ಪ್ರಾಣಧಾರಣ ಅಥವಾ ವಿಸರ್ಜನ । ಅಲಕ್ಷಣರೂಪದಲ್ಲಿ ಪರಿಭ್ರಮಣ ।
ಇದಂತೂ ಸ್ವಚ್ಛಂದಯೋಗ ಕ್ರೀಡನ । ಭಕ್ತೋದ್ಧಾರಣ ನಿಮಿತ್ತದಿಂದ ॥ 59

ಏನ್ನುವುದು ರವಿಗೆ ಹತ್ತಿತು ಗ್ರಹಣ । ಆದನವ ಖಗ್ರಾಸ ಪೂರ್ಣ ।
ಇದು ಮಾತ್ರ ದೃಷ್ಟಿಯ ದೋಷಗುಣ । ಸಂತರ ಮರಣವು ಅದರಂತೆಯೇ ॥ 60

ದೇಹವು ಕೇವಲ ಉಪಾಧಿ। ಅವನಿಗೆಂಥ ಆಧಿವ್ಯಾಧಿ ।
ಅವನಿಗೆ ಅವನಿಗೆಲ್ಲದರ ಶುದ್ಧಿ । ಅದು ಪ್ರಾರಬ್ಧಾನುಬಂಧದಿಂದಿದ್ದಲಿ ॥ 61

ಭಕ್ತರ ಪೂರ್ವಾರ್ಜಿತದಿಂದ ಕೂಡಿದ । ಅವ್ಯಕ್ತರೂಪದಲಿ ಭಕ್ತಿಯಲ್ಲಡಗಿದ ।
ಅವನು ಭಕ್ತರ ರಕ್ಷಣೆಗಾಗಿ ಅವತರಿಸಿದ । ಶಿರಡಿಯಲಿ ಕಂಡವನಾಗ ॥ 62

ಈಗ ಭಕ್ತಕಾರ್ಯಕಾರಣ ಮುಗಿಯಿತು । ಅದಕೆಂಬರು ದೇಹ ಬಿತ್ತು ।
ಯಾರಿಗದು ವಿಶ್ವಾಸವಾದೀತು । ಯೋಗಿಗೆ ಯಾವಗತಿಯೆಂದು ॥ 63

ಸಾಯಿ ಸಮರ್ಥರು ಇಚ್ಛಾಮರಣಿಗಳು । ದೇಹ ಸುಟ್ಟರು ಯೋಗಾಗ್ನಿಯೊಳು ।
ತಾವು ಲೀನರಾದರು ಅವ್ಯಕ್ತದೊಳು । ಭಕ್ತರ ಹೃದಯದಲಿ ವಾಸಿಸಿಹರು ॥ 64

ಕೇವಲ ನಾಮ ಸ್ಮರಿಸಲು ಯಾರದು । ಜನ್ಮ ಮರಣದ ವಾರ್ತೆ ಉಳಿಯದು ।
ಮರಣಾವಸ್ಥೆ ಅವನಿಗೆಲಿಯದು । ಮೊದಲಿನ ಅವ್ಯಕ್ತತೆಯನು ಪಡೆದನು ॥ 65

ಜಡ ಸ್ಥಿತಿಯ ದಾಟಿದರು । ಬಾಬಾ ಅವ್ಯಕ್ತದಲಿ ಲೀನರಾದರು ।
ಅಲ್ಲಿಯಾ ಸ್ವರೂಪಸ್ಥಿತಿಯನು ಭೋಗಿಸಿದರು । ಸದಾ ಭಕ್ತರಲಿ ವಾಸಿಸುವರು ॥ 66

ಸಚ್ಚೈತನದಲಿ ತುಂಬಿರುವ । ಭಕ್ತರ ಹೃದಯದಲಿ ಅಚ್ಚೊತ್ತಿರುವ ।
ನಾಶವಾಯಿತೆನ್ನುವರು ಹೇಗೆ ಈ ದೇಹವ । ಈ ಮಾತು ಮನಸಿಗೆ ಒಪ್ಪದು ॥ 67

ಆದರೆ ಸಾಯಿ ಈ ಅನಾದ್ಯನಂತದಲಿ । ಭಂಗವಾಗದೆ ಉಳಿಯುವ ವಿಶ್ವ ಪ್ರಳಯದಲಿ ।
ಜನ್ಮಮರಣಗಳ ಅಪಾಯದಲಿ । ಅವನೆಂದೂ ಸಿಲುಕನು ॥ 68

ಹೋಗಿಬಿಟ್ಟಿರುವರೇ ಜ್ಞಾನೇಶ್ವರರು । ಮೂರು ಶತಕದ ನಂತರ ದರ್ಶನವಿತ್ತರು ।
ನಾಥ ಮಹಾರಾಜರವರ ಭೇಟಿಯಾದರು । ಜಗದ ಮೇಲೆ ಉಪಕಾರ ಅವರದು ॥ 69

ಹೇಗೆ ಕೃಪಾವಂತರಾದ ನಾಥರು । ಪೈಠಣದ ಜ್ಯೋತಿಯಾದರು ।
ದೇಹೂದಲ್ಲಿ ತುಕಾರಾಮ ಮಹಾರಾಜರು । ಆಳಂದಿಯಲಿ ನರಸಿಂಹ ಸರಸ್ವತಿ ॥ 70

ಸಮರ್ಥರಾಮದಾಸರು ಪರಳಿಯಲ್ಲಿ । ಅಕ್ಕಲಕೋಟೆ ಮಹಾರಾಜರು ಅಕ್ಕಲಕೋಟದಲಿ
ಮಾಣಿಕ ಪ್ರಭುಗಳು ಹುಮನಾಬಾದದಲ್ಲಿ । ಅದರಂತೆ ಸಾಯಿ ಶಿರಡಿಯಲಿ ॥ 71

ಯಾರ ಮನದಲಿ ಭಾವ ಹೇಗೆ । ಇಂದಿಗೂ ಹಾಗೆ ಅನುಭವ ಅವನಿಗೆ ।
ಈ ಪ್ರಭಾವವು ಸಿದ್ಧವಿರುವಾಗ್ಯೆ । ಮರಣವೆಲ್ಲಿಯದವರಿಗೆ ॥ 72

ಭಕ್ತರಕಾರ್ಯಾರ್ಥ ನಿಂತಿಹನು । ಶಿರಡಿಯಲವ ದೇಹವಿಟ್ಟನು ।
ಚರಾಚರದಲಿ ತುಂಬಿ ನಿಂತಿರುವನು । ಲೀಲಾವತಾರಿಯವ ಸಮರ್ಥ ॥ 73

ಶಿರಡಿಯಲ್ಲಿನ್ನಿರುವುದು । ಸಮರ್ಥರು ಬ್ರಹ್ಮೀಭೂತರಾಗಿದ್ದು ।
ಹೀಗೆ ಶಂಕೆಪಡಬಾರದೆಂದೂ । ಮರಣಾತೀತರು ಶ್ರೀ ಸಾಯಿ ॥ 74

ಸಂತರೆಂದಿಗೂ ಗರ್ಭಾತೀತರು । ಪರೋಪಕಾರ್ಯಾರ್ಥ ಪ್ರಕರಾಗುವರು ।
ಮೂರ್ತಿಮಂತ ಬ್ರಹ್ಮಸ್ವರೂಪರು । ಭಾಗ್ಯವಂತ ಅವತಾರಿಯವರು ॥ 75

ಜನ್ಮ ಮತ್ತು ಮರಣಸ್ಥಿತಿಯೆಂಬುದು । ಅವತಾರಿಗಳಿಗೆಂದೂ ಬರದು ।
ಕಾರ್ಯ ಮುಗಿದಾಗ ಸ್ವರೂಪದಲಿ ಕೂಡುವುದು । ಅವ್ಯಕ್ತದಲಿ ಸಮರಸಗೊಂಡು ॥ 76

ಈ ದೇಹವು ಕೇವಲ ಮೂರುವರೆ ಮೊಳದ್ದು । ಬಾಬಾ ಹೇಗೆ ಅದರಲ್ಲಿದ್ದುದು ।
ಅವರಿಗೆ ವಿಶಿಷ್ಟ ವರ್ಣರೂಪಗಳಿದ್ದವೆಂಬುದು । ಅಯುಕ್ತವಾದ ಮಾತಿದು ॥ 77

ಅಣಿಮಾಗರಿಮಾ ಅಷ್ಟಸಿದ್ಧಿಗಳು । ಇಲ್ಲವುಗಳಿಂದ ಕ್ಷಯವೃದ್ಧಿಗಳು ।
ಯಾರ ಸಮೃದ್ಧಿಸ್ವಯಂ ಅಖಂಡವಾಗಿರಲು । ಎಂದು ಪ್ರಸಿದ್ಧಿ ಅವರದು ॥ 78

ಇಂಥ ಮಹಾನುಭಾವರ ಉದಯ । ಲೋಕಕಲ್ಯಾಣವೇ ಅದರ ಆಶಯ।
ಉದಯಕ್ಕಿದೆ ಸ್ಥಿತಿ ವಿಲಯ। ಲೋಕ ಸಂಗ್ರಹಕ್ಕಾಗಿ ಸಂತರಿರುವರು ॥ 79

ಜನ್ಮಭ್ರಾಂತಿ ಮೃತ್ಯುಭ್ರಾಂತಿ । ಆತ್ಮೈಕತ್ವ ಅವನಾಶಿಸ್ಥಿತಿ ।
ಸ್ವಪ್ನದೊಳಗಿನ ಸುಖಸಂಪತ್ತಿ । ಅದೇ ಪರಿಸ್ಥಿತಿ ಅವರದು ॥ 80

ಯಾವನಿರುವನು ಜ್ಞಾನ ನಿಧಾನ । ಯಾರಿಗೆ ಸದೈವ ಆತ್ಮಾನುಸಂಧಾನ ।
ಅಂಥವರಿಗೆ ದೇಹದ ಉಳಿವಿನ । ಅಥವಾ ಅಳಿವಿನರ್ಥ ಎಲ್ಲ ಒಂದೇ ॥ 81

ಇರಲಿ, ಬಾಬಾರ ಶರೀರ ಬಿತ್ತು । ದುಃಖದ ಬೆಟ್ಟವೆ ತಲೆಯ ಮೇಲೆ ಬಿತ್ತು ।
ಶಿರಡಿಯಲೆಲ್ಲ ಹಾಹಾರವಾಯಿತು । ಎಲ್ಲ ದುಃಖಮಮವಾಯಿತು ॥ 82

ಕೇಳಿ ಬಾಬಾರ ನಿರ್ಯಾಣ । ಆವಾರ್ತೆ ಚುಚ್ಚಿದಂತಾಯಿತು ಬಾಣ ।
ಬಿಟ್ಟರೆಲ್ಲರು ನಿತ್ಯದ ವ್ಯವಸಾಯವನ । ಎಲ್ಲೆಲ್ಲೂ ಅಶಾಂತಿ ತುಂಬಿತು ॥ 83

ಆ ಅಮಂಗಲ ಸುದ್ದಿ ಹಬ್ಬಿತು । ಎಲ್ಲರಿಗದು ವಜ್ರಾಘಾತವೆನಿಸಿತು ।
ವಿಚಾರವಂತರು ಕುಳಿತರು ಸ್ವಸ್ಥ । ಉಳಿದವರು ಭೋರಿಡತೊಡಗಿದರು ॥ 84

ಅತಿ ಪ್ರೀತಿ ಇದ್ದುದರಿಂದ । ಕಂಠವಾಗಿತ್ತು ಗದ್ಗದ ।
ದುಃಖಶ್ರುಗಳುದುರುತಿದ್ದವು ಕಂಗಳಿಂದ । 'ಶಿವ ಶಿವ ಹರ ಎಂದರು ॥ 85

ಮನೆಮನೆಯಲ್ಲಿ ಗದ್ದಲವಾಯಿತು । ಎಲ್ಲೆಡೆ ಗಡಿಬಿಡಿಸುರುವಾಯಿತು ।
ಎಲ್ಲರೆದೆ ಧಡಧಡ ಎಂದಿತು । ಜನರು ಓಡೋಡಿ ಬಂದರು ॥ 86

ಮಹಾರಾಜರದಾಗ ದೇಹಾವಸಾನ । ಗ್ರಾಮಸ್ಥರಿಗೆ ಬಂದಂತಾಯಿತು ಪ್ರಾಣಾಂತಪೂರ್ಣ।
ಎಂದರು ದೇವಾ ಈ ಪ್ರಸಂಗದಾರುಣ । ಹೃದಯ ವಿದ್ರಾವಕವಾಯಿತಲ್ಲಾ ॥ 87

ಯಾರೆಲ್ಲ ಓಡಿ ಬರತೊಡಗಿದರು । ಮಶೀದಿ ಮಂಟಪದ ತುಂಬ ಜನ ತುಂಬಿದರು ।
ಅವಸ್ಥೆ ನೋಡಿ ಎದೆಯೊಡೆದ ಅವರು । ದುಃಖದಿಂದ ಅಳತೊಡಗಿದರು ॥ 88

ಹೋಯಿತಿನ್ನು ಶಿರಡಿಯ ವೈಭವ ಮುಗಿಯಿತು । ಸುಖಸೌಭಾಗ್ಯವೆಲ್ಲ ಹೊರಟು ಹೋಯಿತು ।
ಎಲ್ಲರ ಕಣ್ಣಲಿ ಅಶ್ರುಜಲ ತುಂಬಿತು । ಧೈರ್ಯಕುಸಿಯಿತೆಲ್ಲರದು ॥ 89

ಸಾಟಿ ಇರಲಿಲ್ಲ ಈ ಮಶೀದಿಯ ವೈಭವಕೆ । ಸಪ್ತಪುರಿಗಳಲೊಂದು ಇದರ ಎಣಿಕೆ ।
ಬಾಬಾ ದ್ವಾರಕಾಮಾಯಿ ಎನುತಿದ್ದರಿದಕೆ । ಯಾವಾಗಲೂ ಪ್ರೀತ್ಯಾದರಗಳಿಂದ ॥90

ಇರಲಿದು ನಿರ್ಯಾಣ, ನಿರ್ವಾಣ ಅಥವಾ ನಿಧನ । ದ್ವಾರಕೆ ಸಾಯುಜ್ಯ ಮುಕ್ತಿಯ ಸ್ಥಾನ ।
ಎಲ್ಲಿ ಈಶ್ವರನ ನಿತ್ಯಾನುಸಂಧಾನ । ಅದಕ್ಕೆ ಈ ಸ್ಥಳದಲಿ ಸ್ಥಾನ ॥ 91

ಅವನೇ ಈ ಗುರುರಾಜ ಸಾಯಿ ಸಮರ್ಥ। ಭಕ್ತದಯೆಯುಳ್ಳಮಾತೆ ತಾತ ।
ಭಕ್ತರ ವಿಶ್ರಾಂತಿಯ ಸ್ಥಳವೆನಿಸುತ । ನಿತ್ಯವೂ ನೆನಪಾಗುವುದು ॥ 92

ಬಾಬಾರಿಲ್ಲದ ಶಿರಡಿಹಾಳು । ಉದಾಸ ಶೂನ್ಯ ದಶ ದಿಕ್ಕುಗಳೂ ।
ಪ್ರಾಣವಿಲ್ಲದ ದೇಹದೊಲು । ಶಿರಡಿಗೆ ಅವಕಳೆ ಬಂದಿತ್ತು ॥ 93

ಕೆರೆಯನೀರು ಬತ್ತಿ ಹೋಗಲು । ತಳಮಳಿಸುವವು ಅದರೊಳಗಿನ ಮೀನುಗಳು ।
ಹಾಗಾಗಿದ್ದರು ಶಿರಡಿಯ ಜನಗಳು । ಉದ್ವಿಗ್ನ ಮತ್ತು ಕಳಾಹೀನರು ॥ 94

ಸರೋವರವು ಕಮಲದ ವಿನಃ । ಪುತ್ರನಿಲ್ಲದ ಶೂನ್ಯಸದನ ।
ದೀಪವಿಲ್ಲದ ದೇವಸ್ಥಾನ । ಹಾಗಾಯಿತು ಮಶೀದಿಯ ಪರಿಸರ ॥ 95

ಒಡೆಯನಿಲ್ಲದ ಮನೆಯಂತೆ । ರಾಜನಿಲ್ಲದ ನಗರಿಯಂತೆ ।
ದ್ರವ್ಯವಿಲ್ಲದ ಭಂಡಾರದಂತೆ । ಬಾಬಾರಿಲ್ಲದ ಶಿರಡಿ ಅಡವಿಯಂತಾಯಿತು ॥ 96

ಬಾಲಕನಿಗೆ ಜನನಿ ಹೇಗೆ । ಅಥವಾ ಚಾತಕಕೆ ಮೇಘವಿದ್ದ ಹಾಗೆ ।
ಅದೇ ಪ್ರೀತಿ ಶಿರಡಿಯ ಜನರಿಗೆ । ಮತ್ತು ಭಕ್ತರೆಲ್ಲರಿಗೆ ॥ 97

ಶಿರಡಿಯಾಯಿತು ಕಳಾಹೀನ । ಮೃತಪ್ರಾಯ ಹೀನದೀನ ।
ಇರುವಂತೆ ನೀರಿನ ಹೊರಗೆ ಮೀನ । ಜನರೆಲ್ಲ ತಳಮಳಿಸುತಿರುವರು ॥ 98

ಕಾಂತೆಯನವಳ ಪತಿ ಕಾನನದಿ ತ್ಯಜಿಸಿದರೆ । ಮಾತೆ ಮೊಲೆಯುಣುವ ಮಗುವ ತೊರೆದರೆ ।
ಆಕಳು ಕರು ಆಕಳಿಂದ ತಪ್ಪಿಸಿಕೊಂಡರೆ ॥ ಆಗುವಗತಿಯಾಯಿತೆಲ್ಲರಿಗೆ ॥ 99

ಅನಿವಾರ ಈ ದುಃಖಾವಸ್ಥೆ । ಹೊಂದಿತು ಶಿರಡಿಯ ಸಮಸ್ತ ಜನತೆ ।
ಬೀದಿ ಬೀದಿಯಲಿ ಅಸ್ತವ್ಯಸ್ತತೆ । ಜನರೆಲ್ಲೆಲ್ಲಿಯೂ ಧಾವಿಸುತಿರುವರು ॥ 100

ಸಾಯಿಯಿಂದಲೇ ಶಿರಡಿ ಪವಿತ್ರ । ಸಾಯಿಯಿಂದಲೇ ಶಿರಡಿಯ ಚರಿತ್ರ ।
ಸಾಯಿಯಿಂದಲೇ ಶಿರಡೀ ಕ್ಷೇತ್ರ। ಸಾಯಿಯದೇ ಛತ್ರವೆಲ್ಲರಿಗೆ ॥ 101

ಕೆಲವರು ಆಕ್ರಂದನ ಮಾಡುತ್ತಿದ್ದರು । ಕೆಲವರು ಶೋಕದಿ ಹೊರಳಾಡುತಿದ್ದರು ।
ಕೆಲವರು ಮೂರ್ಛಿತರಾದರು । ದುಃಖಪೀಡಿತರಾದರು ಜನರೆಲ್ಲ ॥ 102

ದುಃಖಾಶ್ರುಗಳ ಸುರಿಸುತಿವೆ ನಯನ । ನರನಾರಿಯರತಿ ಉದ್ವಿಗ್ನ ।
ತ್ಯಜಿಸಿಹರು ಅನ್ನಪಾನ । ದೀನವದನರಾಗಿರುವರು ॥ 103

ನೋಡಿ ಬಾಬಾರ ಈ ಅವಸ್ಥೆ । ಗ್ರಾಮಸ್ಥರಿಗೆ ಪರಮಾವಸ್ಥೆ ।
ಹೊಂದಿದರೆಲ್ಲ ಮಹದಾವಸ್ಥೆ । ಆ ಬಾಲವೃದ್ಧರಾದಿಯಾಗಿ ॥ 104

ಎಲ್ಲಿ ಕಥೆ ನಡೆಯುತ್ತಿತು । ನಿತ್ಯವು ಆನಂದ ಉಕ್ಕಿ ಹರಿಯುತ್ತಿತ್ತು ।
ಒಳಹೋಗಲು ಸ್ಥಳವಿಲ್ಲದಿರುತ್ತಿತ್ತು । ಅಂಥಮಶೀದಿ ಇಂದು ಉದಾಸ ಕಾಣುತಿದೆ ॥ 105

ನಿತ್ಯ ಶ್ರೀ ನಿತ್ಯಮಂಗಲ । ಇರುತ್ತಿತ್ತು ಶಿರಡಿ ಹಿಂದೆಲ್ಲ ।
ಇದಕ್ಕೆಲ್ಲ ಬಾಬಾರೇಮೂಲ ಕಾರಣ । ಅದರಿಂದ ಗ್ರಾಮಸ್ಥರಿಗೆ ದುಃಖ ॥ 106

ಆನಂದ ವಿಗ್ರಹನವ ಆನಂದಕಂದ । ಭಕ್ತಕಾರ್ಯಾರ್ಥದೇಹ ಧರಿಸಿದ್ದು ।
ಆ ಕಾರ್ಯವನೆಲ್ಲ ಸಂಪಾದಿಸಿದ । ಈಗ ವಿದೇಹ ಹೊಂದಿದ ॥ 107

ಇಪ್ಪತ್ನಾಲ್ಕುಗಂಟೆ ನಿರಲಸ । ಕಳಕಳಿಯಿಂದ ಮಾಡುತ್ತಿದ್ದ ಹಿತೋಪದೇಶ ।
ಹಗಲು ರಾತ್ರಿಗಳನೆಂದೂ ಎಣಿಸಿ । ಆದರೆಮಗೆ ಬುದ್ಧಿ ಭ್ರಂಶವಾಗಿತ್ತು ॥ 108

ಡಬ್ಬು ಕೊಡದ ಮೇಲೆ ನೀರಿನಂತೆ । ಮೇಲಿಂದಲೇ ಅದು ಹರಿದು ಹೋಗುತ್ತೆ ।
ಬಿಂದುವು ಒಳಗೆ ಸೇರದಂತೆ । ಹಾಗಾಯಿತೆಮಗವರ ಉಪದೇಶ ॥ 109

"ನೀವು ಯಾರಿಗಾದರೂ ಕೆಟ್ಟ ಮಾತಾಡುವುದು । ಅದರಿಂದ ನನಗೆ ದುಃಖ ಬರುವುದು" ।
ಹೆಜ್ಜೆ ಹೆಜ್ಜೆಗೆ ಈ ಮಾತು ಹೇಳುತಿದ್ದೂ । ನಾವು ಮಾತ್ರ ಅದ ತಿಳಕೊಳ್ಳಲಿಲ್ಲ ॥ 110

ಹೀಗೆ ತಮ್ಮ ಅಪಾರಾಧಿಗಳು ನಾವೆಲ್ಲ । ತಮ್ಮ ಬುದ್ಧಿಯ ಮಾತನು ಕೇಳಲಿಲ್ಲ ।
ಆ ಅಜ್ಞಾಭಂಗದ ನಿಷ್ಕೃತಿಯನೆಲ್ಲ । ಈ ರೀತಿಯಾಗಿ ಮುಟ್ಟಿಸಿದಿರಾ ॥ 111

ಬಾಬಾ ಆ ಎಲ್ಲರ ಪಾಪದ । ತುಂಬಿತೇ ಇಂದು ಆ ಕೊಡ ।
ಪ್ರಯೋಜನವೇನು ಈಗ ಅನುತಾಪದಿಂದ । ತಮ್ಮ ಭೋಗವ ಭೋಗಿಸಬೇಕು ॥ 112

ಅದರಿಂದ ನಮಗೆ ಬೇಸತ್ತರು । ಅದಕಾಗೆ ತೆರೆಯ ಮರೆಯಾದರು ।
ನಮ್ಮ ಮೇಲೆ ಈ ಪ್ರಹಾರವಾದರೂ । ಹೇಗೆ ಹಾಕಿತು ಈ ಕಾಲವು ॥ 113

ಒಂದೇ ಸಮನೆ ಕೂಗಿ ಹೇಳುತ್ತಿದ್ದು । ನಿಮ್ಮ ಕಂಠವು ಒಣಗುತ್ತಿತ್ತು ।
ಇದರಿಂದಲೇ ಬೇಸತ್ತು । ನಮ್ಮ ಉದಾಸತೆಯ ಕಂಡು ॥ 114

ಆದಕೆ ನಮ್ಮ ಮೇಲಿ ಸಿಟ್ಟು ಬಂತು । ಹಿಂದಿನ ಪ್ರೇಮವೆಲ್ಲ ಮರೆತು ।
ಇಂದು ಋಣಾನುಬಂಧವೇ ಮುಗಿಯಿತು । ಸ್ನೇಹದ ತೊರೆಯೇ ಆಟ್ಟಿಸಿತು ॥ 115

ತಾವು ಇಷ್ಟುಬೇಗ ಹೋಗುವಿರೆಂದು । ತಿಳಿದಿದ್ದರಾಗುತ್ತಿತ್ತು ಒಳ್ಳೆಯದು ।
ಜನರೆಲ್ಲ ಏಚ್ಚರಾಗಿದ್ದು । ತಮ್ಮ ಉಪದೇಶವ ಪಾಲಿಸುತ್ತಿದ್ದರು ॥ 116

ನಾವೆಲ್ಲ ಆಲಸಿಗಳಾದೆವು । ನಿದ್ದೆ ಮಾಡುತ್ತ ಕುಳಿತುಬಿಟ್ಟೆವು ।
ಕೊನೆಗೆ ಮೋಸ ಹೋದೆವು । ನಾವು ಇದ್ದು ಇಲ್ಲದಂತಾಯಿತು ॥ 117

ನಾವು ಗುರುದ್ರೋಹಿಗಳಾದೆವು । ಸಮಯಕ್ಕೇನೂ ಮಾಡದಾದೆವು ।
ಸ್ವಸ್ಥಕುಳಿತಿರುವುದನ್ನೂ ಮಾಡದಾದೆವು । ಎಂಥ ಮೂಢತನವಾಯಿತು ॥ 118

ದೂರದೂರಿಂದ ಶಿರಡಿಗೆ ಬಂದು । ಅಲ್ಲೂ ಹರಟೆ ಹೊಡೆಯುತ್ತ ಕೂಡ್ರುವುದು ।
ತೀರ್ಥಕ್ಕೆ ಬಂದೇವೆಂಬುದನ್ನೇ ಮರೆಯುವುದು । ಅಲ್ಲಿಯೂ ಯಥೇಚ್ಛನಡೆಯುವುದು ॥ 119

ತರತರದ ಅನೇಕ ಭಕ್ತರು । ಜ್ಞಾನಿ, ಅಭಿಮಾನಿ, ಭಾವಾರ್ಥಿ, ತಾರ್ಕಿತರು ।
ಅವರಿಗೆ ಎಲ್ಲವು ಒಂದೇ ದೇವರೆಂಬರು । ಆದರೆ ನ್ಯೂನಧಿಕದ ಭೇದ ಅರಿಯರು ॥ 120

ಜಗದಲಿ ಭಗವಂತನನುಳಿದು। ಅವರ ದೃಷ್ಟಿಯಲಿ ಬೇರೆ ಪದಾರ್ಥವೇ ಇರದು ।
ಈತರದ ದೃಷ್ಟಿಯುಳ್ಳವನದೇ । ತಾನು ಬೇರಾರಲ್ಲವೆಂಬದು ॥ 121

ಭಕ್ತನು ಸ್ವಯಂ ಈಶ್ವರವು । ನಾ ಬೇರೆಯಲ್ಲ ನಾನೇ ಗುರುವು ।
ಇಬ್ಬರಿಗೂ ಸ್ವಸ್ವರೂಪದ ಮರೆವು। ಪರಸ್ಪರ ಭೇದವು ಅದರಿಂದ ॥ 122

ವಸ್ತುತಃ ತಾನೂ ಈಶ್ವರನೇ ಇದ್ದು । ಪರಮಾರ್ಥ ಸ್ವರೂಪವಿಸ್ಮರಣೆಯಾಗುವುದು।
ಮುಖ್ಯಭೇದದ ಈ ಲಕ್ಷಣವೇ । ಅಧಃ ಪತನದ ಕಾರಣವಿರುವುದು ॥ 123

ಸಾರ್ವಭೌಮನು ಕನಸನು ಕಾಣುವನು । ತಾನು ಮನೆ ಮನೆಗೆ ಭಿಕ್ಷೆಗೆ ಹೋಗುವುದನು ।
ನಿಜಬೋಧಿಸಿ ಎಚ್ಚರವಾಗುವುದು । ಕಾಣುವನು ತಾನು ಇದ್ದಲ್ಲಿಯೇ ಇರುವೆನೆಂದು ॥ 124

ಪ್ರವೃತ್ತಿಯೆಂಬುದು ಜಾಗೃತಿ । ನಿವೃತ್ತಿಯೇ ಸ್ವಪ್ನಸ್ಥಿತಿ ।
ನಿಜಾನುಭೂತಿಯಾದಾಗ ನಿಜದಲಿ ಜಾಗೃತಿ । ಪೂರ್ಣ ಅದ್ವೈತದಲಿ ಸಮರಸವಾಗುವುದು ॥125

ಜ್ಞಾನಿ ಅಜ್ಞಾನಿ ಮತ್ತು ಆಶ್ರಿತ । ಎಲ್ಲರ ಮೇಲೂ ಪ್ರೇಮ ಅತ್ಯಂತ ।
ಜೀವಕ್ಕಿಂತಲೂ ಹತ್ತಿರ ತಿಳಿಯುತ । ಭೇದವೆಂಬದೊಂದಿಷ್ಟು ಇರದೆ ॥ 126

ಮನುಷ್ಯರೂಪದಂತ ದೇವನೇ ಇದ್ದು । ತೋರಿಸಿದ್ದರೂ ಇದನು ಪ್ರೀತಿಯಿಂದ ।
ಆದರವನ ಮುದದಿಂದ । ಮೋಸ ಹೋದರವರೆಲ್ಲ ॥ 127

ಕೆಲವರಿಗಿತ್ತು ಧನ ಸಂಪತ್ತಿ । ಇನ್ನು ಕೆಲವರಿಗೆ ಸಂಸಾರಸುಖ ಸಂತತಿ ।
ಅದರಿಂದ ಆವರಿಸಿತು ಭಾರೀ ಭ್ರಾಂತಿ । ಜ್ಞಾನ ಪ್ರಾಪ್ತಿಗೆ ದೂರಾದರು ॥ 128

ಒಮ್ಮೊಮ್ಮೆ ಯಾರೊಡನೆಯೋ ಆಡಿದರೆ ನಗುತ ಮಾತು । ಅವನಿಗೆ ಅಭಿಮಾನ ಬಂದು ಬಿಡುತ್ತಿತ್ತು
ತಮ್ಮ ಮೇಲೆಯೇ ಅವರ ಪ್ರೇಮವೆನಿಸುತ್ತಿತ್ತು । ಬೇರೆಯವರೊಡನವರು ಹಾಗಿಲ್ಲವೆಂದು ॥ 129

ಅದೇ ಯಾರಿಗಾದರೂ ಕ್ರೋಧೋಕ್ತಿಗಳನಾಡಿದರೂ । ನಾನೆಂದರವರಿಗಾಗದೂ ಎನಲಾರರೂ
ನಮ್ಮ ಬಗ್ಗೆಯೇ ಆಸ್ಥೆ ಹೆಚ್ಚಿಗಿಹುದೆಂಬರು । ಬೆರೆಯವರೊಡನೆ ಹೀಗೆಂದಿಗೂ ಮಾಡರು ॥130

ನಾವು ಹೀಗೆಯೇ ಎಣಿಸುವುತಿರುವುದು । ಅದು ಬಾಬಾರ ಕನಸಿನಲ್ಲೂ ಇರದು ।
ಸುಮ್ಮನೇ ನಿಜಸ್ವಾರ್ಥವ ಕಳೆದುಕೊಂಡು । ಕೃತ ಕರ್ತವ್ಯತೆಯು ಮರೆತೆವು ॥ 131

ಪರಬ್ರಹ್ಮ ಸಗುಣ ಮೂರ್ತಿಯದು । ನಮ್ಮ ಮಗ್ಗುಲಲ್ಲೇ ಇದ್ದು ।
ವಿನೋದದಲ್ಲೇ ಕಾಲ ಕಳೆದು । ನಿಜಕಾರ್ಯವನೇ ಮರೆತೆವು ॥ 132

ಬಂದ ಕ್ಷಣ ಬಾಬಾರ ದರ್ಶನ ಪಡೆಯುವುದು । ಹಣ್ಣು ಹೂವುಗಳನ್ನೆಲ್ಲ ಅರ್ಪಿಸುವುದು ।
ದಕ್ಷಿಣೆ ಕೇಳಿದಾಗ ಹಿಂಜರಿಯುವುದು । ಅಲ್ಲಿ ನಿಲ್ಲದೆ ಹೋಗಿ ಬಿಡುವುದು ॥ 133

ಹಿತದ ನುಡಿಗಳ ಹೇಳುತಿದ್ದು । ನಮ್ಮ ಕ್ಷುದ್ರ ದೃಷ್ಟಿ ಯನು ಕಂಡು ।
ಅವನು ದುಃಖಿತನಾದ ನೆನಿಸುವುದು । ಅದಕೆ ಇಷ್ಟರಲಿ ನಿಜಧಾಮಕೆ ತೆರಳಿದ ॥134

ಇನ್ನು ಆ ನಿಮ್ಮ ಸ್ಥಿತಿಯನು । ನಮ್ಮ ಕ್ಷುದ್ರ ದೃಷ್ಟಿ ಕಂಡಾಗಲೇ ಅದನು ।
ಕಳೆದು ಹೋಯಿತು ಆ ಆನಂದ ಮೂರ್ತಿ ಇನ್ನು । ಜನ್ಮ ಜನ್ಮಾಂತರದಲ್ಲೂ ಅದೃಶ್ಯನಾಗಿ ॥ 134

ಇದೇ ದಾರುಣಕರ್ಮವೆಂಬುದು । ಸಾಯಿರಾಜ ನಮ್ಮಿಂದ ದೂರಾದ ।
ಅವನಂಥ ನಿರ್ಹೇತುಕ ದಯಾರ್ದ್ರ । ನಮ್ಮಿಂದ ದೂರಾಗಿ ಬಿಟ್ಟನಲ್ಲ ॥ 136

ಒಳ್ಳೆಯದು ಯಾರನ್ನು ಕಾಡುವುದು । ಅದರಿಂದ ನನಗೆ ನೋವಾಗುವುದದು ।
ಮನಸಿಗೆ ತಾರದಾದೆವು ಬಾಬಾರ ಮಾತಿದು । ಸಾಕಷ್ಟು ಜಗಳ ಕಾದೆವು ॥ 137

ಭಕ್ತಾಭಕ್ತರನು ಕಾಡಿದುದರಿಂದ । ದೂರಾದೆವಲ್ಲ ಸಾಯಿನಾಥನಿಂದ ।
ಅನುತಾಪವಾಗುವುದು ಈಗ ಅದರಿಂದ । ನೆನಪಾಗುವವು ಅವರ ಮಾತುಗಳು ॥138

ಎಂಟು ವರ್ಷದ ಬಾಲಕನಂತೆ । ಜನರಲಿ ಪ್ರಕಟವಾಗುವೆನು ನಾಮತ್ತೆ ।
ಮಹಾರಾಜರು ಭಕ್ತರಿಗೆ ಹೀಗಂತೆ । ಹೇಳುತ್ತಲೇ ಇರುತ್ತಿದ್ದರು ॥ 139

ಇದು ಸಂತರ ವಾಣಿ ಇರುವುದು । ಇದನೆಂದೂ ವೃಥಾ ಎಂದೆನ್ನಬಾರದು ।
ಕೃಷ್ಣಾವತಾರದಲಿ ಚಕ್ರಪಾಣಿಯದು । ಇದೇ ಪ್ರಕಾರ ಆಗಿತ್ತು ॥ 140

ಎಂಟುವರ್ಷದ ಬಾಲಕ ಕಾಂತಿಯುತ । ಚತುರ್ಹಸ್ತಗಳಲಿ ಆಯುಧ ಸಹಿತ ।
ಕೃಷ್ಣ ಮೂರುತಿ ಪ್ರಕಟವಾಗುತ । ಬಂದಿಶಾಲೆಯಲಿ ದೇವಕಿಯ ಮುಂದೆ ॥ 141

ಅಲ್ಲಿಯ ಉದ್ದೇಶ ಭೂಭಾರಹರಣ । ಇಲ್ಲಿ ಈಗ ಭಕ್ತೋದ್ಧಾರಣ ।
ಯಾತ್ಕಕೆ ಸುಮ್ಮನೆ ಶಂಕಿತ ಮನ । ಅತರ್ಕ್ಯ ಲೀಲೆಸಂತರದು ॥ 142

ಇದಲ್ಲ ಒಂದು ಜನ್ಮದ ನಿರ್ಬಂಧ । ಎಪ್ಪತ್ತೆರಡು ಪೀಳಿಗೆಯ ಋಣಾನುಬಂಧ ।
ಭಕ್ತರ ಬಾಬಾಗಿದ್ದ ಪೂರ್ವಸಂಬಂಧ । ಕಥಾನುಬಂಧನು ಹೇಳಿರುವರು ॥ 143

ಹೀಗೆ ಪ್ರೇಮಗ್ರಂಥಿ ಹಾಕಿ ಕಟ್ಟಿದ್ದು । ಬಾಬಾ ಪ್ರವಾಸಕ್ಕೆ ಹೋದರೆನಿಸುವುದು ।
ಮತ್ತೆ ಬರುವುದೆಂಬ ಪೂರ್ಣ ನಂಬಿಕೆ ಇರುವುದು । ಭಕ್ತರ ಅಂತರಂಗದಲಿ ॥144

ಸಾಕ್ಷಾತ್ಕಾರವನು ಕೆಲವರಿಗೆ । ದೃಷ್ಟಾಂತನುಭವವನು ಬಹುತೇಕ ಜನರಿಗೆ ।
ಚಮತ್ಕಾರವನು ಅನೇಕರಿಗೆ । ಗುಪ್ತರೂಪದಿಂದ ತೋರುವರು ॥ 145

ಅಭಾವಿಕರಿಗೆ ಗುಪ್ತಾಗಿರುವರು । ಭಾವಿಕ ಭಕ್ತರಿಗೆ ಇದ್ದಲ್ಲಿಯೇ ಕಾಣುವರು ।
ಯಾರು ಯಾವ ತರದ ಚಿತ್ತವೃತ್ತಿಯವರು । ಹಾಗೆ ಅನುಭೂತಿಯೂ ತತ್ಕಾಲದಲಿ ॥ 146

ಚಾವಡಿಯಲಿ ಗುಪ್ತರೂಪ । ಮಶೀದಿಯಲಿ ಬ್ರಹ್ಮರೂಪ ।
ಸಮಾಧಿಯಲಿ ಸಮಾಧಿರೂಪ । ಸುಖ ಸ್ವರೂಪರೆಲ್ಲೆಲ್ಲಿಯೂ ॥ 147

ಸಧ್ಯಕ್ಕೆ ಇದೇ ವಿಶ್ವಾಸದಲಿ । ಭಕ್ತಿ ಇರಬೇಕು ನಿಜಮನದಲಿ ।
ಸಾಯಿ ಸಮರ್ಥರಿಗೆ ಭಂಗವೆಲ್ಲಿ । ಅಖಂಡ ಅಕ್ಷಯವಾಸವವರದು ॥ 148

ದೇವರು ಹೋಗುವರು ನಿಜಧಾಮಗಳಿಗೆ । ಇದ್ದಲ್ಲಿಯೇ ಬ್ರಹ್ಮಸ್ಥಿತಿ ಸಂತರಿಗೆ ।
ಗಮನಾಗಮನವಿಲ್ಲ ಅವರಿಗೆ । ಆನಂದದಲಿ ಸಮರಸರಾಗುವರು ॥ 149

ಅವರಲ್ಲಿ ಇದೇ ವಿನಂತಿ । ನಮ್ರತೆಯಿಂದ ಮಾಡುವೆ ಪ್ರಣತಿ ।
ಹಿರಿಕಿರಿಯರೆಲ್ಲರ ಪ್ರತಿ । ಸಾದರ ಚಿತ್ತದಿಂದ ಆಲಿಸಿರಿ ॥ 150

ಉಂಟಾಗಲಿ ಉತ್ತಮ ಶ್ಲೋಕಸಂಗತಿ । ಗುರುಚರಣದಲಿ ನಿಷ್ಕಾಮ ಪ್ರೀತಿ ।
ಗುರುಗುಣಾನುಕಥನದಲಿ ಆಸಕ್ತಿ । ನಿರ್ಮಲ ಭಕ್ತಿಪ್ರಕಟವಾಗಲಿ ॥ 151

ಉಂಟಾಗಲಿ ಪ್ರೀತಿ ಅನವಚ್ಛಿನ್ನ । ಆಗದಿರಲಿ ಸ್ನೇಹ ಪಾಶಭಿನ್ನ ।
ಭಕ್ತರಲಿ ಸುಖಸಂಪನ್ನ । ರಾತ್ರಂದಿನ ಗುರುಪದದಲಿ ॥ 152

ಇರಲು ಹೀಗೆ ಆ ದೇಹವ ಉಚಿತ । ಮಾಡುವದೇನೆಂಬುದನು ನಿಶ್ಚಿತ ।
ಇದೇ ವಿಚಾರದಲಿ ಜನ ಸಮಸ್ತ ಶಿಷ್ಯ ಗ್ರಾಮಸ್ಥರು ತೊಡಗಿದರು ॥ 153

ಶ್ರೀಮಂತ ಬುಟ್ಟಿ ದೊಡ್ಡ ಭಾವಿಕರು । ಮುಂದಿನ ಭವಿಷ್ಯದ ಸ್ಮಾರಕದಂತವರು ।
ಮೊದಲೇ ಕಟ್ಟಿಸಿಟ್ಟಿದ್ದರು । ಬಹಳ ದೊಡ್ಡವಾಡೆಯನು ॥ 154

ಇನ್ನು ಆ ಶರೀರವನೆಲ್ಲಿ । ಇಡುವುದೆಂಬ ವಿಷಯದಲ್ಲಿ ।
ಮೂವತ್ತಾರು ಗಂಟೆ ಕಳೆಯುತ್ತಲೆ । ಏನಾಗಬೇಕಿತ್ತದಾಯಿತು ॥ 155

ಒಬ್ಬರೆನ್ನುವರು ಈ ದೇಹವನು । ಮುಟ್ಟಲು ಬಿಡಬಾರದು ಹಿಂದುಗಳನು ।
ಸಮಾರಂಭದಲಿ ಒಯ್ಯೋಣ ಇದನು । ಮುಸಲ್ಮಾನರ ಕಬರಸ್ಥಾನಕ್ಕೆ ॥ 156

ಇನ್ನೊಬ್ಬನೆನ್ನುವ ಈ ಕಳೇಬರವ । ಬಯಲಿನಲ್ಲಿ ಒಯ್ದು ಇಡುವ ।
ಅಂದವಾದೊಂದು ಗೋರಿಯ ಕಟ್ಟುವ । ನಿರಂತರ ಅಲ್ಲಿರಲಿ ಇದು ॥ 157

ಖುಶಾಲಚಂದ ಅಮೀರ ಶಕ್ಕರ । ಇವರದೂ ಅದೇ ಇತ್ತು ವಿಚಾರ ।
ಆದರೆ 'ವಾಡೆಯಲಿ ಬಿದ್ದಿರಲಿ ಈ ಶರೀರ' । ಎಂದೂ ಬಾಬಾ ನುಡಿದಿದ್ದರು ॥ 158

ಪಾಟೀಲ ರಾಮಚಂದ್ರ ಒಂದೇ ಹಿಡಿತದವರು । ಅವರೂ ಒಬ್ಬ ಗ್ರಾಮಾಧಿಕಾರಿಗಳಾಗಿದ್ದರು ।
ಬಾಬಾರ ಪ್ರೀತಿಯ ಸೇವೇಕರಿಗಳವರು । ಅವರು ಗ್ರಾಮಸ್ಥರಿಗೆಂದುರು ॥ 159

ನಿಮ್ಮ ವಿಚಾರಗಳೇನೆ ಇರಲು । ಸಾಧ್ಯವಿಲ್ಲದನು ಸಂಪೂರ್ಣ ಒಪ್ಪಲು ।
ವಾಡೆಯ ಹೊರಗೆ ಬೇರೆ ಸ್ಥಳದೊಳು । ಒಂದು ಕ್ಷಣವೂ ಸಾಯಿಯನಿಡಬಾರದು ॥160

ಹಿಂದುಗಳು ತಮ್ಮ ಧರ್ಮಾನುಸಾರ । ಮುಸಲ್ಮಾನರದೂ ಅದೇ ವಿಚಾರ ।
ಯೋಗ್ಯಾಯೋಗ್ಯ ವಿಚಾರವೀ ಪ್ರಕಾರ । ರಾತ್ರಿಯಲ್ಲ ನಡೆಯಿತು ॥ 161

ಇತ್ತ ಲಕ್ಷ್ಮಣಮಾಮಾ ತಮ್ಮ ಮನೆಯಲ್ಲಿ । ಇದ್ದಾಗ ಇನ್ನು ನಿದ್ದೆಗಣ್ಣನಲ್ಲಿ ।
ಬಾಬಾಅವರನ್ನು ಹಿಡಿದು ಕೈಲಿ । ಎಂದರು "ಬೇಗ ಏಳುನಡೆ" ॥ 162

"ಬಾಪೂ ಸಾಹೇಬನಿಂದು ಬರಲಾರ । ನಾನು ಸತ್ತಿರುವೆನೆಂದವನ ವಿಚಾರ ।
ನೀನಾದರೂ ಕಾಕಡಾರತಿಯ ಮಾಡು ಆದರ । ಜೊತೆಗೆ ಪೂಜೆಯನು ಮಾಡು" ॥ 163

ತಾತ್ಕಾಲದಲಿ ನಿತ್ಯಕ್ರಮದಂತೆ । ಹೊರಟರು ಪೂಜಾಸಾಹಿತ್ಯದ ಜೊತೆ ।
ಲಕ್ಷ್ಮಣಮಾಮಾ ಅಲ್ಲಿ ಬರುತೆ । ಸಮಯಕೆ ಸರಿಯಾಗಿ ಪೂಜೆಗೆ ಹಾಜರಾದರು ॥ 164

ಇವರು ಶಿರಡಿಯ ಗ್ರಾಮಪುರೋಹಿತರು । ಮಾಧವರಾಯರ ಸೋದರಮಾವ ಇವರು ।
ನಿತ್ಯವು ಬಾಬಾರ ಪೂಜೆ ಮಾಡುತ್ತಿದ್ದರು । ಪ್ರಾತಃ ಕಾಲದ ಹೊತ್ತಿಗೆ ॥ 165

ಮಾಮಾ ಬಹಳ ಕರ್ಮನಿಷ್ಠ ಬ್ರಾಹ್ಮಣರಿದ್ದು । ಸ್ನಾನ ಮಾಡುತ್ತಿದ್ದರು ಪ್ರಾತಃ ಕಾಲದಲೆದ್ದು ।
ಮಡಿ ಬಟ್ಟೆಯುಟ್ಟು ಕೊಂಡು । ಬಾಬಾರ ದರ್ಶನ ತೆಗೆದುಕೊಳ್ಳುವರು ॥ 166

ಪಾದ ಪ್ರಕ್ಷಾಲನ ಗಂಧಾಕ್ಷತೆ ಚರ್ಚನ । ಪತ್ರಿ ಪುಷ್ಪ ತುಳಸಿಗಳ ಸಮರ್ಪಣ ।
ಧೂಪ ದೀಪನೈವೇದ್ಯ ನಿರಾಂಜನ । ದಕ್ಷಿಣೆಯನು ಕೊಡುತ್ತಿದ್ದರು ॥ 167

ಪ್ರಾರ್ಥನಾ ಪೂರ್ವಕ ಸಾಷ್ಟಾಂಗನಮನ । ಮಾಡಿ ತೆಗೆದುಕೊಳ್ಳುವರು ಆಶೀರ್ವಚನ ।
ಬಳಿಕೆಲ್ಲರಿಗೂ ಹಂಚಿ ಪ್ರಸಾದವನ । ತಿಲಕವ ಕೊರೆದು ಹೋಗುತ್ತಿದ್ದವರು ॥ 168

ಅಲ್ಲಿಂದ ಮುಂದೆ ಗಜಾನನ । ಶನಿದೇವ ಉಮಾರಮಣ ।
ಮಾರುತೀರಾಯ ಆಂಜನೀನಂದನ । ಇವರ ಪೂಜೆಯ ಮಾಡುತ್ತಿದ್ದರು ॥ 169

ಮಾಮಾ ಮೊದಲೇ ನಿಷ್ಠಾವಂತರು । ಅಂಥದರಲಿ ದೃಷ್ಟಾಂತವ ಕಂಡರು ।
ಕೈಯಲಿ ಕಾಕಡಾರತಿ ಹಿಡಕೊಂಡು ಬಂದರು । ಸಾಷ್ಟಾಂಗ ನಮಸ್ಕಾರ ಮಾಡಿದರು ॥ 170

ಹೀಗೆ ಗ್ರಾಮದೇವತೆಗಳನು । ಜೋಷಿಯವರು ಮಾಡುತಿದ್ದರು ನಿತ್ಯಪೂಜೆಯನು ।
ಅದಕ್ಕೇ ಶವಕೆ ಸಾಗ್ರಪೂಜೆಯನು । ಪ್ರೇಮಭಾವದಿಂದ ತಂದರು ॥ 171

ಮುಖದ ಮೇಲಿನ ವಸ್ತ್ರವ ತೆಗೆದು । ಸಪ್ರೇಮ ಅದನು ನೋಡುತಿದ್ದು ।
ಯಥಾವಿಧಿ ಪೂಜೆಯ ಮುಗಿಸಿದ್ದು । ಕರಚರಣ ಕ್ಷಾಲನ ಶುದ್ಧಾಚಮನ ಮೊದಲ್ಗೊಂಡು ॥ 172

ಮೌಲ್ವೀ ಮೊದಲಾದ ಅವಂಧರು । ಸ್ಪರ್ಶಕ್ಕೆ ಪ್ರತಿಬಂಧ ಮಾಡಿದರು ।
ಮಾಮಾ ಅದಕ್ಕೊಪ್ಪದೆ ಗಂಧ ಹಚ್ಚಿದರು । ಪೂಜೆಯನು ಪೂರ್ಣಮುಗಿಸಿದರು ॥ 173

ಶವವಾದರೂ ಅದು ಸಮರ್ಥರದು । ತಮ್ಮ ಆರಾಧ್ಯದೈವತದ್ದು ।
ಹಿಂದುಗಳದು ಅಥವಾ ಅವಿಂಧರದು । ಅದರತ್ತ ಮಾಮಾರ ಗಮನವಿಲ್ಲ ॥ 174

ಸಜೀವ ವಿದ್ದಾಗ ಪೂಜ್ಯ ಶರೀರವು । ಎಂಥ ಸಂಭ್ರಮ ಆ ಪೂಜೆಯದು ।
ಅದೇ ಈಗಾದಾಗ ನಿರ್ಜೀವವದು । ಪೂಜೆಯ ವೈಭವವಿರಲಿ ಔಪಚಾರಿಕವೂ ಬೇಡವೇ ॥ 175

ಅಂಥದರಲ್ಲಿ ನೋಡಿ ಬಾಬಾರ ಚಿನ್ಹ । ಮೊದಲೇ ಮಾಮಾ ಆಗಿದ್ದಾಗ ಖಿನ್ನ ।
ಮಾಡಬಂದರು ಕೊನೆಯ ಪೂಜನ । ಮತ್ತಿವರ ದರ್ಶನ ದುರ್ಲಭವೆಂದು ॥ 176

ಅಶ್ರುಜಲದಿಂದ ತುಂಬಿತ್ತು ನಯನ । ಮಾಡಲುಬಾರದು ಆ ಸ್ಥಿತಿಯ ಆಲೋಚನ ।
ಕೈಕಾಲುಗಳು ಕಂಪಾಯಮನ । ಉದಾಸಮನ ಮಾಮಾರದು ॥ 177

ಬಿಗಿದ ಮುಷ್ಟಿಯ ಬಿಚ್ಚುತ । ವೀಳ್ಯವನದರಲ್ಲಿ ಇಡುತ ।
ಮತ್ತೆ ಶವವನು ಮುಚ್ಚುತ । ಮಾಮಾ ಹೊರಟು ಹೋದರು ॥ 178

ಮಧ್ಯಾಹ್ನದ ಆರತಿಯನಾ ಮೇಲೆ । ನಿತ್ಯದಂತೆ ಮಶೀದಿಯಲಿ ಮೇಲೆ ।
ಸಾಯಿಗೆ ಇತರರ ಜೊತೆಯಲೇ ಬಾಪೂ ಸಾಹೇಬ ಜೋಗ ಮಾಡಿದರು ॥ 179

ಇನ್ನು ಇದರ ಮುಂದಿನ ವೃತ್ತಾಂತವನು । ಮುಂದಿಧ್ಯಾಯದಲಿ ಹೇಳಲಾಗುವುದದನು ।
ಬಾಬಾರ ದೇಹ ಸಂಸ್ಕಾರ ಹೇಗಾಯಿತೆಂಬುದನು । ಅತಿ ಪ್ರಶಸ್ತ ಸ್ಥಾನದಲ್ಲಿ ॥ 180

ಅವರ ಅತಿ ಪ್ರೀತಿಯ ಇಟ್ಟಿಗೆ । ಬಹಳ ವರ್ಷದ ಜೊತೆಯವರಿಗೆ ।
ಒಡೆದು ದುಃಶ್ಚಿನ್ನವನು ತೋರಿಸಿತು ಹೇಗೆ । ದೇಹಾಂತವನೇ ಅದು ಸೂಚಿಸಿತು ॥ 181

ಈಗ ಯಾವ ಪ್ರಸಂಗ ಬಂತು । ಅದು ಮೂವತ್ತೆರಡು ವರ್ಷಗಳ ಹಿಂದೇ ಬರಬಹುದಾಗಿತ್ತು ।
ಬ್ರಹ್ಮಾಂಡಕೆ ಪ್ರಾಣವನೇರಿಸಲಾಗಿತ್ತು । ದೇಹದ ಅವಸ್ಥೆ ಕಠಿಣವಾಗಿತ್ತು ॥ 182

ಹೇಗೆ ಭಕ್ತ ಮ್ಹಾಳಸಾಪತಿಯವರು । ಹಗಲಿರುಳು ಬಾಬಾರ ಜಪಿಸುತ್ತಿದ್ದರು ।
ಎಲ್ಲರೂ ಆಶೆ ಬಿಟ್ಟಿದ್ದರು । ಆಗ ಆಕಸ್ಮಾತ್ ಎದ್ದು ಬಿಟ್ಟರು ॥ 183

ಹೀಗೆ ಆಮರಣ ಬ್ರಹ್ಮಚರ್ಯ । ಆಚರಿಸಿದನು, ಆ ಯೋಗಾಚಾರ್ಯ।
ಯಾವನು ಜ್ಞಾನಿಗಳಲಿ ಜ್ಞಾನವರ್ಯ। ಆ ಐಶ್ವರ್ಯವನೇನು ಬಣ್ಣಿಸಬೇಕು ॥ 184

ಯಾರ ಮಹತಿ ಇದ್ದಿತು ಹೀಗೆ । ನಮಿಸುವಾ ಸದ್ಭಾವದಿಂದವಗೆ ।
ದೀನ ಹೇಮಾಡಶರಣ ಅವನಿಗೆ । ಅನನ್ಯ ಭಾವದಿ ಹೋಗುವನು ॥ 185

ಭಕ್ತಹೇಮಾಡಪಂತ ವಿರಚಿತೆ । ಯಥಾಮತಿಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥಸಚ್ಚರಿತೇ । ಶ್ರೀ ಸಾಯಿನಾಥ ನಿರ್ಯಾಣ ನಾಮ
ತ್ರಿಚತ್ವಾರಿಂಶತ್ತಮೋಧ್ಯಾಯಃ ಸಂಪೂರ್ಣ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



॥ ಅಥ ಶ್ರೀ ಸಾಯೀ ಸಚ್ಚರಿತ ॥

# ಅಧ್ಯಾಯ ನಲವತ್ತನಾಲ್ಕು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*॥ ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*॥ ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಓಂ ನಮೋ ಶ್ರೀ ಸಾಯಿ ಚಿದ್ಘನ । ಸಕಲ ಸೌಖ್ಯಗಳ ಆಯುತನ ।
ಸಕಲ ಸಂಪದಗಳ ನಿಧಾನ । ದ್ವೈನ ನಿರಸನವು ಯತ್ಕೃಪಾ ॥ 1

ಸಹಜಚರಣಗಳ ವಂದಿಸಲು । ತೊಳೆದು ಹೋಗುವವೆಲ್ಲ ಪಾಪಗಳು ।
ಹೀಗಿರಲು ಭಾವದಿಂದ ಭಜನ ಪೂಜನ ಮಾಡಲು । ಅದಕಿಂತ ಧನ್ಯನಾವನು ॥ 2

ಯಾರ ನಗುಮುಖ ನೋಡಲು । ಮರೆಯುವದೆಲ್ಲ ಸಂಸಾರ ದುಃಖಗಳು ।
ಹಿಂಗಿ ಹೋಗುವವು ಹಸಿವೆ ನೀರಡಿಕೆಗಳು । ಹೀಗೆ ಅಲೌಕಿಕ ದರ್ಶನ ॥ 3

ಯಾರಿಗೆ 'ಅಲ್ಲಾಮಾಲಿಕ್' ನೆಂಬುದೇ ಧ್ಯಾನ । ಅವನಿಹ ನಿಷ್ಕಾಮ ನಿರಭಿಮಾನ ।
ನಿರ್ಲೋಭ ನಿರ್ವಾಸನ ಅವನ ಮನ । ಅವನ ಮಹಿಮೆಯನೆಷ್ಟು ಬಣ್ಣಿಸಲಿ ॥ 4

ಅಪಕಾರಿಗಳಿಗೂ ಉಪಕಾರಿಯಾಗುವುದು । ಇಂಥ ಶಾಂತಿ ಯಾರಲಿ ನೆಲೆಸಿರುವುದು ।
ಅಂಥವನ ಅಗಲಿರಲಾರರು ಯಾರೂ ಕ್ಷಣವೊಂದು । ತಮ್ಮಂತರಂಗದಲ್ಲಿಟ್ಟು ಕೊಳ್ಳಿರವನ ॥ 5

ರಾಮಕೃಷ್ಣ ರಾಜೀವನಯನ । ಒಕ್ಕಣನಿರಲಿ ಇರಲಿದೃಷ್ಟಿಹೀನ ।
ದೇವರೂಪದಲಿ ಸುಂದರ ಸುರೂಪನಿಹನ । ಆನಂದ ಸ್ವರೂಪನವ ಸಂತಸದಾ ॥ 6

ಆಕರ್ಣ ನಯನಗಳು ದೇವರಿಗೆ । ಅಂತವೇ ಇಲ್ಲ ಸಂತರ ದೃಷ್ಟಿಗೆ ।
ನಿಂದಕರ ಬಗ್ಗೆಯೂ ದಯೆಸಂತರಿಗೆ । ದೇವರೂ "ಯೇ ಯಥಾಮಾಂ" ಎನುವಾಗ ॥7

ರಾಮಕೃಷ್ಣ ಸಾಯಿ ಎಲ್ಲಿ । ಒಂದೇ ಅವರಲಿ ಭೇದವಿಲ್ಲಿ ।
ಮೂರು ವಸ್ತುಗಳು ಕಾಣುವಿರಿ ನಾಮದಲಿ । ಆದರೇ ಅವರೆಲ್ಲ ಒಂದೇ ॥ 8

ಅಂಥ ವಸ್ತುವಿಗೆ ಮರಣಾವಸ್ಥೆ । ಸಮೂಲವಾಗಿ ಸುಳ್ಳು ಈ ವಾರ್ತೆ।
ಕಾಲದ ಮೇಲೆಯೂ ಯಾರ ಸತ್ತೆ । ಅಂಥವನ ನೋಯಿಸುವದಾರ ಕೈಯಲ್ಲಿ ॥ 9

ಪ್ರಾರಬ್ಧ ಸಂಚಿತ ತಿಳಿಯದೆಮಗೆ । ಅದರ ಕ್ರಿಯಾಮಾಣಗಳೂ ಗೊತ್ತಿಲ್ಲ ನನಗೆ ।
ಕರುಣಾಕರನಾದ ಸಾಯಿ ಗುರುರಾಜನಿಗೆ । ಕರುಣೆಯಿಂದ ಬೇಡಿಕೊಳ್ಳುತಿರುವೆ ॥ 10

ವಾಸನೆಗಳ ತರಂಗಗಳೆಷ್ಟು । ಮನಕಿಲ್ಲ ಅದರಿಂದ ಪುರಸೊತ್ತು ಒಂದಿಷ್ಟು ।
ನಿನ್ನ ಕೃಪೆ ಇಲ್ಲದ ಹೊರತು । ಜೀವಕ್ಕೆ ಸ್ಥೈರ್ಯ ಬರಲಾರದು ॥ 11

ಗತಧ್ಯಾಯದಾರಂಭದಲಿತ್ತೆ ಮಾತು । ಆದರದು ಹಾಗೇ ಉಳಿಯಿತು ।
ಸಾಂಗ ನಿರೂಪಣೆ ಇಲ್ಲದಾಯಿತು । ಈಗ ಸಾದ್ಯಂತ ಕೇಳಿರಿ ॥ 12

ಅಂತಕಾಲ ಸಮೀಪಿಸಿದ್ದು ತಿಳಿದು । ಬ್ರಾಹ್ಮಣ ಮುಖದಿಂದ ರಾಮಾಯಣದ್ದು ।
ಹಗಲಿರುಳು ಹದಿನಾಲ್ಕು ದಿನ ಶ್ರವಣ ಮಾಡುತಿರಲು । ಬಾಬಾ ಅನುಸಂಧಾನ ಪೂರ್ವಕವಾಗಿ ॥ 13

ಹೀಗೆರಡು ಸಪ್ತಾಹ ಮುಗಿಯಲು । ರಾಮಾಯಣ ಶ್ರವಣ ಮಾಡುತಿರಲು ।
ವಿಜಯಾದಶಮಿಯ ದಿನ ಬರಲು । ಬಾಬಾ ವಿದೇಹತೆಯ ಹೊಂದಿದರು ॥ 14

ಗತಧ್ಯಾಯಲಾಯಿತು ಕಥನ । ಆಗಲು ಬಾಬಾರ ಪ್ರಾಣೋತ್ಕ್ರಮಣ।
ಲಕ್ಷ್ಮಣಮಾಮಾ ಮಾಡಿದರು ಪೂಜನ । ಜೋಗ ಅವರು ಆರತಿ ಬೆಳಗಿದರು ॥ 15

ಮುಂದೆ ಮೂವತ್ತಾರು ಗಂಟೆಗಳ ವರೆಗೆ । ಹಿಂದೂ ಮತ್ತು ಮುಸಲ್ಮಾನರಿಗೆ ।
ಈ ಕಳೇವರಕೆ ಸದ್ಗತಿ ತೋರುವುದು ಹೇಗೆ । ಎಂದು ವಿಚಾರ ನಡೆಯಿತು ॥ 16

ಸಮಾಧಿಸ್ಥಾನದ ನಿಯೋಜನೆ ಹೇಗೆ । ಆಕಸ್ಮಾತ್ ಬಿದ್ದಿತು ಇಟ್ಟಿಗೆ ।
ಒಮ್ಮೆ ಬಾಬಾ ಮೂರುದಿನಗಳವರೆಗೆ । ಬ್ರಹ್ಮಾಂಡಕೆ ಪ್ರಾಣವೇರಿಸಿದ್ದರು ಹೇಗೆ ॥17

ಇದು ಸಮಾಧಿಯೇ ಅಥವಾ ದೇಹಾವಸಾನ । ಎಂದು ಎಲ್ಲರಾದರು ಸಂಶಯಾಪನ್ನ ।
ನೋಡಿ ಶ್ವಾಸೋಚ್ಛ್ವಾಸಾವರೋಧನ । ಇನ್ನವರ ಉತ್ಥಾನ ಅಶಕ್ಯವೆನಿಸಿತು ॥ 18

ಹೀಗೆ ಮೂರು ದಿನ ಕಳೆಯಲು । ಇದು ಪ್ರಾಣೋತ್ಕ್ರಮಣವೇ ಎನಿಸಲು ।
ಉತ್ತರ ವಿಧಿಯ ಬಗ್ಗೆ ವಾರ್ತೆಗಳು । ಸಹಜದಲ್ಲಿಯೇ ಹುಟ್ಟಿದವು ॥ 19

ಇಂಥ ಆ ಸಮಯದೊಳು । ಬಾಬಾ ಸಂಪೂರ್ಣ ಎಚ್ಚರ ಅಂತರದೊಳು ।
ಆಕಸ್ಮಾತ್ ಎಚ್ಚರಿಕೆಗೆ ಬರಲು । ಚಿಂತೆ ದೂರಮಾಡಿದರು ಸಮಸ್ತರದು ॥ 20

ಇತ್ಯಾದಿ ಎಲ್ಲ ಕಥೆಗಳ । ಪ್ರೇಮಭಾವದಿಂದ ಕೇಳಿದ ಶ್ರೋತೃಗಳ ।
ಮನಕಾನಂದವಾಗಿ ಗಂಟಲು । ಶಿರಗಳುಬ್ಬ ಬರಬಹುದು ॥ 21

ಕಥೆಯಲ್ಲ ಇದೊಂದು ಪೆಟ್ಟಿಗೆ । ಸಾಯಿ ರತ್ನವಿದೆ ಇದರೊಳಗೆ ।
ಪ್ರೀತಿಯಿಂದ ತೆಗೆದು ನೋಡಿದಾಗ್ಯೆ । ದರ್ಶನ ಸುಖ ಅನುಭವಕ್ಕೆ ಬಂದೀತು ॥22

ಈ ಸಂಪೂರ್ಣ ಅಧ್ಯಾಯದೊಳಗೆ । ತುಂಬಿ ನಿಂತಿರುವ ಸಾಯಿಯೇ ಕಾಣುವನು ಕಣ್ಣಿಗೆ ।
ಮನಕಾಮನೆ ಪೂರೈಸುವವು ಅದ ಕೇಳಿದಾಗ್ಯೆ । ಸ್ಮರಣದಿಂದ ಸನಾಥರಾಗುವಿರಿ ॥ 23

ಪರಮಉದಾರ ಆಚರಣೆ ಇರುವುದು । ಈ ಚರಿತೆ ಅಂಥ ಸಾಯಿಯದು ।
ಕೇಳಲುದ್ಯುಕ್ತರಾಗುವುದು । ಅವ್ಯಗ್ರಮನವಿಟ್ಟುಕೊಂಡು ॥ 24

ಇಂಥ ಪಾವನ ಕಥೆಯನು ಕೇಳುತಿದ್ದು । ಕೇಳಿದಷ್ಟು ತೃಪ್ತಿಯಾಗದು ।
ಪರಮಾನಂದ ಲಭಿಸುವುದು । ಸಂಸಾರ ಶಾಂತರಿಗಿದು ವಿಶ್ರಾಂತಿ ॥ 25

ಚಿತ್ತಪ್ರಸನ್ನತೆಯ ಆನಂದ । ಎದುರಿಗೆ ನಿಲ್ಲುವುದು ಒಂದು ನಿಜಾನಂದ ।
ಎಲ್ಲ ಸುಖಗಳನೂ ತೆರೆದಿಟ್ಟಂತೆ ಇದ । ಕಥಾನಕ ಮಧುರ ಸಾಯಿಯದು ॥ 26

ಕೇಳಿದಷ್ಟು ನಿತ್ಯನೂತನ । ರಮಣೀಯತೆಯದೇ ಇದು ಲಕ್ಷಣ ।
ಅದೇಕೆ ಈ ಸಂತಕಥೆಯ ಪಾವನ । ಆಗಿ ಮನಸಿಟ್ಟುಕೇಳಬೇಕು ॥ 27

ಮುಂದೇ ಕಳೇವರದ ಸದ್ಗತಿಯ ಬಗ್ಗೆ । ಚರ್ಚೆ ಮಾಡುತ ಹಾಗೆ- ಹೀಗೆ ।
ಎಲ್ಲರೂ ದಣಿದರು ಕೊನೆಗೆ । ಪ್ರಚೀತಿ ಏನೆಂದೂ ನೋಡಿರಿ ॥ 28

ಬುಟ್ಟೀಯವರ ವಾಡೆಯಲ್ಲಿ । ಅದರಲ್ಲಿ ಕಟ್ಟಿದ ಗರ್ಭಗುಡಿಯಲ್ಲಿ ।
ಮುರಲೀಧರನ ಸ್ಥಾಪಿಸಬೇಕೆಂದಿದ್ದಲ್ಲಿ । ಬಾಬಾರ ಸ್ಥಾನ ಮಾಡುವದೆಂದು ಗೊತ್ತಾಯಿತು ॥ 29

ಮೊದಲು ಪಾಯಾ ಅಗಿದಾಗ । ಬಾಬಾ ಲೇಂಡಿಗೆ ಹೋಗುವಾಗ ।
ಮಾಧವರಾಯರ ವಿನಂತಿಗೆ । ಬಾಬಾ ಗೋಣು ಹಾಕಿದ್ದರು (ಆಯಿತೆಂದಿದ್ದರು) ॥ 30

ಬಾಬಾರ ಕೈಯಲ್ಲಿ ಕಾಯಿ ಕೊಟ್ಟು । ಮಾಧವರಾಯರು ವಿನಂತಿಸಿದರಿಂತು ।
ಮುರಳೀಧರನ ಗರ್ಭಗುಡಿಯ ಅಗಿತ ನಡೆಯಿತು । ತಾವು ಕೃಪಾವಲೋಕನ ಮಾಡಬೇಕು ॥31

ನೋಡಿ ಆ ಶುಭವೇಳೆಯನು । ಬಾಬಾ ನುಡಿದರು "ಒಡೆಯಿರಿ ಕಾಯಿಯನು ।
ನಾವೆಲ್ಲ ಬಾಲಗೋಪಾಲರಿನ್ನು । ಇಲ್ಲಿಯೇ ಕಾಲಕ್ರಮಿಸುವಾಗ ॥ 32

ಇಲ್ಲಿಯೇ ನಾವು ಕೂಡಿತೇಳುತಿರಲು । ಆಡುವಾ ಸುಖದುಃಖದ ವಾರ್ತೆಗಳು ।
ಇಲ್ಲಿಯೇ ಮಕ್ಕಳು ಮರಿಗಳು । ಆದಿಯಾಗಿ ಚಿತ್ತಸ್ವಾಸ್ಥ್ಯವ ಪಡೆಯಲಿ" ॥ 33

ಬಾಬಾ ಏನೋ ಮಾತನಾಡಿದರು । ಎಂದು ಎಲ್ಲರೂ ಮೊದಲು ತಿಳಿದಿದ್ದರು ।
ಮುಂದೆ ಅನುಭವದಿಂದ ಅರಿತರು । ಬಾಬಾರ ಮಾತಿನರ್ಥವನು॥ 34

ಬಾಬಾರ ದೇಹಾವಸಾನವಾಯಿತು । ಮುರಲೀಧರನ ಸ್ಥಾಪನೆ ನಿಂತುಹೋಯಿತು ।
ಇದೇ ಸರಿಯಾದ ಸ್ಥಳವೆನಿಸಿತು । ಸಾಯಿನಾಥನ ರಕ್ಷಿಸಲು ॥ 35

"ವಾಡೆಯಲಿ ಬಿದ್ದರಲಿ ಈ ಶರೀರ" । ಎಂಬ ಬಾಬಾರ ಕೊನೆಯ ಉದ್ಗಾರ ।
ಕೊನೆಗೆ ಒಪ್ಪಿಗೆಯಾಯಿತು ಅದೇ ವಿಚಾರ । ಬಾಬಾರೇ ಮುರಲೀಧರನಾದರು ॥36

ಶ್ರೀಮಂತ ಬುಟ್ಟಿ ಮೊದಲಾಗಿ । ಹಿಂದೂ ಮುಸಲ್ಮಾನರೆಲ್ಲ ಜನರಿಗೀ ।
ವಿಚಾರವೇ ಒಪ್ಪಿಗೇಯಾಗಿಯೇ । ವಾಡೆಯ ಸದುಪಯೋಗವಾಯಿತು ॥ 37

ಇಂಥ ಬಹುಮೂಲ್ಯ ವಾಡೆ ಇದ್ದಾಗ । ಬಾಬಾರ ದೇಹವೆಲ್ಲಿಯೋ ಬಿದ್ದಿತ್ತೆಂದಾಗ ।
ಅತ್ಯಂತ ಭಯಾನವೆನಿಸಿಬಹುದಾಗಿತ್ತಾಗ । ಶೂನ್ಯವಾದ ಈ ವಾಡೆಯು ॥ 38

ಇಂದಿಲ್ಲಿ ನಡೆಯುವ ಭಜನ ಪೂಜನ। ಕಥಾಕೀರ್ತನ ಪುರಾಣ ಶ್ರವಣ ।
ಅತಿಥಿ ಅಭ್ಯಾಗತರಿಗೆ ಅನ್ನದಾನ । ಇದೆಲ್ಲಕೆ ಕಾರಣರು ಶ್ರೀಸಾಯಿ ॥ 39

ಈಗ ಅಲ್ಲಿ ನಡೆಯುವ ಅನ್ನಸಂತರ್ಪಣ । ಲಘುರುದ್ರ ಮಹಾರುದ್ರಾವರ್ತನ ।
ದೇಶವಿದೇಶಗಳಿಂದ ಬರುವರು ಜನ । ಅದೆಲ್ಲಕೆ ಕಾರಣ ಶ್ರೀ ಸಾಯಿ ॥ 40

ಇರಲಿ ಇಂಥ ಈ ಸಂತರ ನುಡಿ। ಕರ್ಣಸಂಪುಟದಲಿ ಸಂಚಾರಮಾಡಿ ।
ಏನಾದರೂ ಹೇಳಿರಬಹುದು ಬಿಡಿ । ಎಂದು ಅವಮಾನಿಸಿ ತ್ಯಜಿಸದಿರಿ ॥ 41

ಮೊದಮೊದಲು ಅದು ಎಷ್ಟೇ ಮುಗ್ಧ । ಅಥವಾ ಎನಿಸಿಲು ಸಂದಿಗ್ಧ ।
ಕಾಲಕಳೆದಂತೆ ಆಗುವುದು ಅರ್ಥಬೋಧ । ಆರಂಭದಲಿ ದುರ್ಭೋಧವಾದದ್ದು ॥42

ದೇಹ ಪಾತಕ್ಕಿನ್ನು ಅವಕಾಶ ಇರಲು । ಮುಂದೆ ಬರುವ ಪ್ರಸಂಗವ ತೋರಲು ।
ಕಂಡವು ಕೆಲವೊಂದು ದುಃಶ್ಚಿನ್ಹೆಗಳು । ಶಿರಡಿಯ ಮಶೀದಿಯಲ್ಲಾಗ ॥ 43

ಅದರಲ್ಲಿಯ ಮಾತ್ರ ಒಂದನ್ನು । ಶ್ರೋತೃಗಳಿಗೆ ಹೇಳುತಿರುವೆನು ।
ಹೇಳುಹೋದರೆ ಎಲ್ಲವಿವರವನು । ವಿಸ್ತಾರವಾಗುವುದು ಗ್ರಂಥದ್ದು ॥ 44

ಎಷ್ಟೋ ವರ್ಷಗಳ ಹಿಂದಿನಿಂದ । ಇತ್ತು ಹಳೆಯ ಇಟ್ಟಿಗೆಯೊಂದು ।
ಬಾಬಾ ಅದರ ಮೇಲೆ ಕೈಯ್ಯೂರಿಕೊಂಡು ಆಸನ ಹಾಕಿ ಕುಳಿತುಕೊಳ್ಳತ್ತಿದ್ದರು ॥45

ಆ ಇಟ್ಟಿಗೆಯ ಆಧಾರವಿಟ್ಟುಕೊಂಡು । ಬಾಬಾ ಮಶೀದಿಯಲಿಸ್ವಸ್ಥ ಮನವಿಟ್ಟುಕೊಂಡು ।
ಆಸನ ಹಚ್ಚಿ ಕುಳಿತುಕೊಳ್ಳುತ್ತಿದ್ದು । ಎಲ್ಲಕಡೆಗೆ ಶಾಂತವಾದ ರಾತ್ರಿಯಾದಾಗ ॥ 46

ಹೀಗೆ ಎಷ್ಟೋ ವರ್ಷದ ಕ್ರಮ । ನಿರ್ವೇಧವಾಗಿ ನಡೆದಿತ್ತು ಅವಿಶ್ರಮ ।
ಆದರೂ ಆಗಬೇಕಾದಕ್ಕೆಲ್ಲಿಯ ನಿಯಮ । ಅಕಲ್ಪಿತ ಅತಿಕ್ರಮ ನಡೆದು ಹೋಗುವುದು ॥ 47

ಬಾಬಾ ಮಶೀದಿಯಲಿ ಇಲ್ಲದಿರುವಾಗ । ಕಸಗುಡಿಸುತ್ತಿದ್ದನೊಬ್ಬ ಹುಡುಗ ।
ಕೆಳಗಿನ ಕಸ ತೆಗೆಯಬೇಕೆಂದಾಗ । ಕಿಂಚಿತ್ ಆ ಇಟ್ಟಿಗೆಯ ಎತ್ತಿದನು ॥ 48

ಅದು ಒಡೆಯುವ ಕಾಲ ಬಂದಿತ್ತು । ಹುಡುಗನ ಕೈಯಿಂದ ಇಟ್ಟಿಗೆ ಜಾರಿತು ।
ಧಡ್‌ನೇ ಕೆಳಗೆ ಬಿದ್ದು ಬಿಟ್ಟಿತು । ಇಬ್ಭಾಗವಾಯಿತು ಕೂಡಲೇ ॥ 49

ಇದ ಕೇಳಿದಾಗ ಬಾಬಾರೆಂದ ಮಾತು । ಇಟ್ಟಿಗೆಯಲ್ಲ ಅದು ಕರ್ಮವೇ ಒಡೆಯಿತು ।
ಹೀಗೆಂದಾಗ ಮನಕೆ ಕೆಡುಕೆನಿಸಿತು । ಕಣ್ಣೀರು ಬಂದವು ದುಃಖದಿಂದ ॥ 50

ನಿತ್ಯಯೋಗಾಸನವ ಇಟ್ಟಿಗೆಯ ಆಧಾರದಿಂದ । ಮಾಡುತಿರುವಂಥದು ಒಡೆದುದರಿಂದ ।
ಹೃದಯ ವಿದ್ರಾವಿಸಿತು ದುಃಖದಿಂದ । ಗಂಟಲು ಕಟ್ಟಿತು ಅದರಿಂದ ॥ 51

ಬಹಳ ಕಾಲದಿಂದ ಬಂದದ್ದು । ನಿಜಾಸನದ ಮೂಲ ಪೀಠವದು ।
ಆಕಸ್ಮಾತ್ ಆ ಇಟ್ಟಿಗೆ ಒಡೆದದ್ದು । ಆದರಿಂದ ಆ ಮಶೀದಿಯೇ ಹಾಳು ಬಿದ್ದಂತೆನಿಸಿತವರಿಗೆ ॥ 52

ಆ ಇಟ್ಟಿಗೆಯೇ ಅವರಿಗೆ ಪ್ರಾಣಕ್ಕಿಂತೂ । ಬಾಬಾರಿಗದು ಅತಿ ಇಷ್ಟವಾಗಿತ್ತು ।
ಕಂಡು ಅದರಗತಿ ಹೀಗಾಯಿತು । ಬಾಬಾ ಬಹಳ ಹಳಹಳಿಸಿದರು ॥ 53

ಅದೇ ಇಟ್ಟಿಗೆಯ ಮೇಲೆ ಮೊಳಕೈಯ್ನೂರಿಕೊಂಡು । ಪ್ರಹರ ಪ್ರಹರಗಳ ಬಾಬಾ ಕಳೆಯುತ್ತಿದ್ದು ।
ಆಸನ ಹಾಕಿ ಯೋಗತತ್ಪರರಾಗಿದ್ದು । ಅದರಿಂದ ಅದರ ಮೇಲೆ ಅಷ್ಟು ಪ್ರೀತಿ ॥54

ಯಾವುದರ ಜೊತೆಗೆ ಆತ್ಮಚಿಂತನ । ಅದೆನಗಿತ್ತು ಜೀವ ಪ್ರಾಣ ।
ಅದೇ ಒಡೆಯಿತು ಬಿಟ್ಟು ನನ್ನ ಜೊತೆಯನ್ನ । ಅದಿಲ್ಲದೇ ನಾನೂ ಇರಲಾರೆ ॥ 55

ಇಟ್ಟಿಗೆ ಜನ್ಮದ ಸಂಗಾತಿಯಾಗಿತ್ತು । ಅದು ನನ್ನ ಬಿಟ್ಟು ಹೋಗಿ ಬಿಟ್ಟಿತು ।
ಅದರ ಗುಣಗಳ ನೆನೆಸಿಕೊಂಡಿಂತು । ಬಾಬಾ ಅಳತೊಡಗಿದರು ॥ 56

ಇಲ್ಲಿ ಶಂಕೆ ಬರುವುದು ಸಹಜವೇ । ಇಟ್ಟಿಗೆ ಕ್ಷಣಭಂಗುರು ವಸ್ತುವಲ್ವೇ ।
ಅದಕ್ಕಾಗಿ ದುಃಖಮಾಡುವುದುಚಿತವೇ । ಇದಕ್ಕೆ ಸಾಮಾನ್ಯ ಜನರೇನೆನಬೇಕು ॥ 57

ಪ್ರಥಮದರ್ಶನದಲಿ ಈ ಆಶಂಕೆ । ಬರಬಹುದು ಯಾರದಾದರೂ ಮನಕೆ ।
ನಮನ ಮಾಡಿ ಪದಕೆ । ನಾನಿದನು ಸಮಾಧಾನದಿ ತೆಗೆದಕೊಂಡೆ ॥ 58

ಹೇಗಾದೀತು ಜಗದುದ್ಧಾರ । ಕಡೆಮುಟ್ಟುವರೆಗೆ ದೀನಪಾಮರ ।
ಇದಕ್ಕಾಗಿಯೇ ಸಂತರ ಅವತಾರ । ಬೇರೆ ಕರ್ತವ್ಯವಿಲ್ಲವರಿಗೆ ॥ 59

ಹಾಸ್ಯರುದನಗಳೂ ಕ್ರೀಡೆಯವೇ ಪ್ರಕಾರ । ಲೌಕಿಕ ನಾಟ್ಯವೇ ಇಲ್ಲಿಯಸಾರ ।
ಇರುವಂತೆಯೇ ಅವರ ಶ್ರೇಷ್ಠ ಆಚಾರ । ಲೋಕವ್ಯವಹಾರವು ಹಾಗೆಯೇ ॥ 60

ಸಂತರು ಪೂರ್ಣ ಜ್ಞಾನಿಗಳಿದ್ದರೂ । ಜನದಲ್ಲಿ ಎಲ್ಲ ಅವಾಪ್ತ ಸಂಕಲ್ಪರು ।
ಜನರುದ್ಧಾರಕ್ಕಾಗಿ ಆದರೂ । ಕರ್ಮಾಚರಣೆಯಲಿ ತೊಡಗಿದವರು ॥ 61

ಈ ದೇಹಾವಸಾನವಾಗುವದಕ್ಕೂ ಬಹಳ ಮೊದಲಿಗೆ । ಸಮಾಧಿಯಾಗ ಬಹುದಿತ್ತು ಮೂವತ್ತೆರಡು ವರ್ಷಗಳ ಕೆಳಗೆ ।
ಆದರೆ ಮ್ಹಾಳಸಾಪತಿಯವರ ಸದ್ಬುದ್ಧಿಯಿಂದಾಗೇ । ನಿಜದಲಿ ಆ ಕುಯೋಗ ತಪ್ಪಿತ್ತು ॥ 62

ಈ ದುಷ್ಪಯೋಗವಂದು ಕಳೆಯದಿದ್ದಲ್ಲಿ । ಈ ಸಾಯಿದರ್ಶನದ ಸುಯೋಗವೆಲ್ಲರಿಗೆಲ್ಲಿ ।
ವಿಯೋಗ ವಾಗುತಿತ್ತೆಷ್ಟೋ ವರ್ಷಗಳ ಮೊದಲಲ್ಲಿ । ಅಂಥ ಕುಯೋಗವಿತ್ತದು ॥ 63

ಪೌರ್ಣಿಮಿಯ ದಿನ ಮಾರ್ಗಶಿರ ಶುದ್ಧ । ಅಸ್ವಸ್ಥರಾದರು ಬಾಬಾ ದಮ್ಮಿನಿಂದ ।
ದೇಹ ಧರ್ಮವ ತಡಕೊಳ್ಳಲೆಂದು । ಆತ್ಮವ ಬ್ರಹ್ಮಾಂಡಕ್ಕೇರಿಸಿದರು ॥ 64

ಇನ್ನು ಮುಂದಿನ ಮೂರುದಿನ । ನಾವು ಬ್ರಹ್ಮಾಂಡಕ್ಕೇರಿಸುವೆವು ಪ್ರಾಣ।
ಯಾರೂ ಮಾತಾಡಿಸದಿರೆಮ್ಮನ । ಎಂದು ಬಾಬಾ ಹೇಳಿ ಇಟ್ಟಿದ್ದರು ॥ 65

ನೋಡಿರಿ ಆ ಸಭಾಮಂಟಪದ ಮೂಲೆಯನು । ಬಾಬಾ ಬೆರಳು ಮಾಡಿ ತೋರಿಸಿದರಾಸ್ಥಳವನು ।
ಎಂದರು ಅಲ್ಲಿ ಅಗಿದು ಸಮಾಧಿಯನು । ಅದರಲಿ ನನ್ನನ್ನಿಟ್ಟುಬಿಡಿರಿ ॥ 66

ಮ್ಹಾಳಸಾಪತಿಗೆ ಹೇಳಿದರಿಂತು । ಬಾಬಾ ಚೆನ್ನಾಗಿ ಒತ್ತು ಕೊಟ್ಟು ।
ಬಿಡಬೇಡಿರೆನ್ನ ಉಪೇಕ್ಷೆಯಿಂದ ಬಿಟ್ಟು । ಮೂರು ದಿನಗಳಾಗುವವರೆಗೆ ॥ 67

ಎರಡು ನಿಶಾನಿಗಳನಲ್ಲಿ । ಗುರುತಿಗಾಗಿ ಊರಬೇಕಲ್ಲಿ ।
ಹೀಗೆ ಹೇಳು ಹೇಳುತ್ತಿರುವಲ್ಲಿ । ಪ್ರಾಣವನು ಬ್ರಹ್ಮಾಂಡಕ್ಕೇರಿಸಿದರು ॥ 68

ಒಮ್ಮೆಲೇ ಬಂದಂತೆ ಮೈಮರೆವು । ಬಿದ್ದಿತು ಎಚ್ಚರವಿಲ್ಲದೇ ಕಾಷ್ಠವತದೇಹವು ।
ಮ್ಹಾಳಸಾಪತಿ ಇತ್ತುತ್ತೊಡೆಯನು । ಉಳಿದವರೆಲ್ಲ ಆಶೆಬಿಟ್ಟಿದ್ದರು ॥ 69

ರಾತ್ರಿಯ ಹತ್ತು ಗಂಟೆಯಾಗಿತ್ತು । ಆಗ ಈ ಪ್ರಕಾರ ನಡೆಯಿತು ।
ಜನವೆಲ್ಲ ಸ್ತಬ್ಧವಾಯಿತು । ಏನಿದು ಅವಚಿತ ಪ್ರಸಂಗವೆಂದು ॥ 70

ಉಸಿಲ್ಲ ನಾಡಿಯಿಲ್ಲ । ಎನಿಸಿತು ದೇಹದಲಿ ಪ್ರಾಣವಿಲ್ಲ ।
ಭಯಂಕರ ಪರಿಸ್ಥಿತಿಯಿದು ಜನರಿಗೆಲ್ಲ । ಬಾಬಾರಿಗೆ ಮಾತ್ರ ಸುಖವತ್ಯಂತ ॥ 71

ಬಳಿಕ ಮ್ಹಾಳಸಾಪತಿಯವರು । ಹಗಲಿರುಳು ಎಚ್ಚರುಳಿದರು ।
ಸಾಯಿಬಾಬಾರ ಜಪಿಸುತಿದ್ದರು । ಅಲ್ಲಿಯೇ ಎಚ್ಚರಕುಳಿತುಕೊಂಡು ॥ 72

ಸಾಯಿ ಮುಖದ ಆಜ್ಞೆ ಇದ್ದೂ । ಸಮಾಧಿಯ ಅಗಿಯಬೇಕೆಂದು ।
ಆದರೂ ಹಾಗೆ ಮಾಡುವುದು । ಧೈರ್ಯ ಯಾರಲ್ಲೂ ಇರಲಿಲ್ಲ ॥ 73

ಕಂಡು ಬಾಬಾರ ಸಮಾಧಿಸ್ಥ । ಕೂಡಿದರು ಊರ ಜನ ಸಮಸ್ತ ।
[illegible] ॥74

ತಿಳಿದರೆ ಪ್ರಾಣ ಹೋಯಿತೆಂದು । ಆಘಾತವಾದೀತು ಜನರ ಮನಕ್ಕೆಂದು ।
ಹೇಳಿ ಮೂರುದಿನ ತನ್ನ ಇಡಬೇಕೆಂದು । ಸಾಯಿಯವರು ಜನರ ತಪ್ಪಿಸಿದರು ॥ 75

ಉಸಿರಾಟ ನಿಂತು ಹೋಗಿದೆ । ಇಂದ್ರಿಯಗಳಿಗೆಲ್ಲಿ ತಾಟಸ್ಥ್ಯ ಬಂದಿದೆ ।
ಚಲನವಲನದ ಸುದ್ದಿಯೇ ಇಲ್ಲ ವಾಗಿದೆ । ತೇಜವೂ ಕಡಿಮೆಯಾಗಹತ್ತಿದೆ ॥ 76

ಬಾಹ್ಯಪ್ರಜ್ಞೆ ಇಲ್ಲದಾಗಿದೆ । ಮಾತೂ ನಿಂತೇ ಹೋಗಿದೆ ।
ಹೀಗಿದ್ದೂ ಎಚ್ಚರ ಬರಬಹುದೇ । ಗಹನ ಚಿಂತೆಯಿದು ಎಲ್ಲರಿಗೆ ॥ 77

ದೇಹಕ್ಕೆ ಎಚ್ಚರಬರದಾಯಿತು । ಎರಡು ದಿನದ ಹೊತ್ತು ಕಳೆಯಿತು ।
ಮುಂದಿನ ವಿಚಾರದ ಚರ್ಚೆ ನಡೆಯಿತು । ಮುಲ್ಲಾಫಕೀರ ಮೌಲ್ವಿಗಳೆಲ್ಲರಿಂದ ॥ 78

ಅಪ್ಪಾ ಕುಲಕರ್ಣಿಕಾಶೀರಾಮ ಬಂದರು । ಎಲ್ಲರೂ ಸೇರಿ ನಿರ್ಧರಿಸಿದರು ।
ಬಾಬಾ ನಿಜಸುಖಧಾಮವನ್ನೈದಿದರು । ದೇಹಕೆ ವಿಶ್ರಾಂತಿ ಕೊಡಬೇಕಿನ್ನು ॥ 79

ಕೆಲವರೆಂದರು ಸ್ವಲ್ಪ ತಡೆಯಿರಿ । ಇಷ್ಟ ಅವಸರ ಮಾಡದಿರಿ ।
ಎಲ್ಲರಂತಲ್ಲ ಬಾಬಾರ ಪರಿ ಅಮೋಘ ವೈಖರಿ ಬಾಬಾರದು ॥ 80

ಮತ್ತೊಬ್ಬರೆನಬೇಕು ಅಷ್ಟರಲಿ । ತಣ್ಣಗಾಗಿ ಹೋದ ಶರೀರದಲ್ಲಿ ।
ಚೈತನ್ನ ಬಂದಿತು ಹೇಗೆ । ಇದೆಲ್ಲ ಎಂಥ ಅವಿಚಾರವು ॥ 81

ಸಮಾಧಿಯಗಿಯಿರಿ ಅವರು ತೋರಿಸಿದ ಸ್ಥಳದಲ್ಲಿ । ಕೂಡಿಸಿ ಎಲ್ಲ ಜನರನಿಲ್ಲಿ ।
ಮುಷ್ಟಿ ಮಣ್ಣಕೊಡಿರಿ ಸರಿಹೊತ್ತಿನಲ್ಲಿ । ಸಿದ್ಧತೆಯನೆಲ್ಲ ಮಾಡಿಕೊಳ್ಳಿ ॥ 82

ಹೀಗೆ ಚರ್ಚೆ ನಡೆಸುತ್ತಿರಲು । ಮೂರುದಿನಗಳು ಕಳೆದು ಹೋಗಲು ।
ಬೆಳಗಿನ ಮೂರುಗಂಟೆ ಹೊಡಯಲು । ಚೇತನ ಬರುವ ಲಕ್ಷಣ ಕಂಡಿತು ॥ 83

ಮೆಲ್ಲಮೆಲ್ಲಗೆ ಕಣ್ಣರಳಿಸುತ । ಅಲುಗಾಡ ತೊಡಗಿದರು ಮೈಮುರಿದು ಕೊಳ್ಳುತ ।
ಉಸಿರಾಟವೂ ಆಡತೊಡಗುತ । ಹೊಟ್ಟೆಯೂ ಮೇಲೆಕೆಳಗಾಗತೊಡಗಿತು ॥ 84

ಕಾಣತೊಡಗಿತು ಪ್ರಸನ್ನವದನ । ಆಗ ತೊಡಗಿದವು ನೇತ್ರೋನ್ಮನಯನ ।
ಕಳೆದು ಹೊಯಿತು ನಿಚೇಷ್ಟತನ । ಪ್ರಬೋದಕರ ಲಕ್ಷಣ ಮೂಡಿತು ॥ 85

ದೇಹಭಾವವೇ ಮರೆತಂತಿದ್ದುದು । ಮತ್ತಿದರ ನೆನಪು ಬರುತಿದ್ದುದು ।
ಕಳೆದು ಗಂಟು ಮರಳಿಸಿಕ್ಕಿದ್ದು । ಭಂಡಾರ ತೆರೆದಂತಾಯಿತು ॥ 86

ಸಾಯಿ ಎಚ್ಚರಾದದ್ದು ನೋಡಿದರು । ಎಲ್ಲರೂ ಪ್ರಸನ್ನವದನರಾದರು ।
ಆಶ್ಚರ್ಯಚಕಿತರಾದ ಭಕ್ತಜನರು । ಬಂದ ವಿಘ್ನ ಕಳೆಯಿತಂದರು ॥ 87

ಭಕ್ತನು ಕೌತುಕದಿಂದ ಮುಖವ ನೋಡಿದನು । ಸಾಯಿಯೂ ಅಲ್ಲಾಡಿಸಿದರು ಕತ್ತನು ।
ನೆನಸಿ ತಪ್ಪಿತು ಭಯಂಕರ ಪ್ರಸಂಗವನು । ಮೌಲವಿ ಫಕೀರರು ತಣ್ಣಗಾದರು ॥ 88

ಮೌಲವಿಗಳ ದುರಾಗ್ರಹಕೆ ಮಣಿದು । ಭಕ್ತರನು ಆಜ್ಞಾಪಾಲನೆಯಲಿ ತಪ್ಪಿನಡೆದು ।
ಒಂದಿಷ್ಟೇ ನಿಶ್ಚಯದಿಂದ ಕದಲಿದ್ದು । ಆಗಿದ್ದರೆ ಪ್ರಸಂಗ ಬಹಳ ಕಠಿಣವಾಗುತಿತ್ತು ॥ 89

ನಲವತ್ಮೂರು ವರ್ಷದ ಹಿಂದೆ ಸಮಾಧಿ ಆಗಿರುತ್ತಿತ್ತು । ಆಗ ಇದರ ಗುರುತಾದರೂ ಎಲ್ಲಿ ಇರುತ್ತಿತ್ತು ।
ಈ ಮನೋಹರ ರೂಪದ ದರ್ಶನವೆಂತು । ಆಗುತಿತ್ತು ಶ್ರೀ ಸಾಯಿಯದು ॥ 90

ಲೋಕೋಪಕಾರವೇ ಅದಕೆ ಕಾರಣ । ಮಾಡಿದರು ಸಮಾಧಿ ವಿಸರ್ಜನ ।
ಸಾಯಿ ಮತ್ತೆ ಪಡೆದರು ಉತ್ಥಾನ । ಸಮಾಧಾನ ಭಕ್ತ ಜನರಿಗೆ ॥ 91

ಭಕ್ತ ಕಾರ್ಯಾರ್ಥ ಓಡಿಬಂದ । ಪರಮಾನಂದದಲಿ ಲೀನನಾದ ।
ಅವನ ಲೀಲೆಗಳು ಅಗಾಧ । ಮೊದಲೇ ಹೇಗೆ ಹೇಳ ಬಂದೀತು ॥ 92

ಬಾಬಾ ಎಚ್ಚರಾದುದನು ಕಂಡು । ಭಕ್ತಜನರು ಹರ್ಷಗೊಂಡು ।
ಯಾರೆಲ್ಲ ಧಾವಿಸಿದರು ದರ್ಶನಕೆಂದು । ಪುನರುಜ್ಜೀವನದ ಆನಂದದಿಂದ ॥ 93

ಹಿಂದಿನ ಕಥಾನುಸಂಧಾನ । ಇದು ಕಡೆಯ ದೇಹಾವಸಾನ ।
ಆಯಿತದರ ಸಂಪೂರ್ಣ ಕಥನ । ಯಥಾಸ್ಮರಣ ಇದುವರೆಗೆ ॥ 94

ತಾವೆಲ್ಲ ಶ್ರೋತೃಗಳು ಆದರಿಂದ । ವಿಚಾರ ಮಾಡಿರಿ ಕ್ಷಣವೊಂದ ।
ಆಗುವದೇನು ಹರ್ಷ ಶೋಕಗಳಿಂದ । ಎರಡೂ ಅವಿವೇಕ ಮೂಲಕವಾದವು ॥95

ಮೂರುವರೆ ಅಂಗುಲದ ಸ್ಥೂಲ ದೇಹವಿದು । ಇಂದ್ರಿಯಗಳೆಲ್ಲ ಒಟ್ಟುಗೂಡಿದ್ದು ।
ಅದು ಹೇಗೆ ನಮ್ಮ ಸಾಯಿ ಆಗುವುದು । ಇದೊಂದು ಭ್ರಮ ಅದಬಿಟ್ಟುಬಿಡಿ ॥96

ಸಾಯಿ ಎಂಬುದು ದೇಹವಲ್ಲ । ಆವಿದೇಹಕೆ ಹೆಸರೇ ಇಲ್ಲ ।
ಆ ವಸ್ತುವಿಗೆ ರೂಪವೇ ಇಲ್ಲ । ರೂಪಾತೀತ ಶ್ರೀ ಸಾಯಿ ॥ 97

ದೇಹವಾದರೂ ನಾಶವಂತ । ವಸ್ತುವು ಸ್ವತಂತ್ರ ನಾಶರಹಿತ ।
ದೇಹವು ಪಂಚ ಭೂತಾಂತರ್ಗತ । ನಿಜವಸ್ತುವು ಅನಾದ್ಯನಂತ ॥ 98

ಅದರಲ್ಲಿಯ ಶುದ್ಧ ಸತ್ವಾತ್ಮಕವಾದ । ಚೈತನ್ಯಮಯ ಬಹುರೂಪದ ।
ಜಡರೂಪವ ನಡೆಸುವಂಥದ । ಸಾಯಿ ನಾಮದ ಆ ವಸ್ತು ॥ 99

ಅದಿರುವುದು ಇಂದ್ರೀಯಾತೀತವಾದುದು । ಜಡ ಇಂದ್ರಿಯಗಳಿಗೆ ತಿಳಿಯದದು ।
ಅದೇ ಇಂದ್ರಿಯಗಳ ಪ್ರವರ್ತಿಸುವುದು । ಪ್ರಾಣವನು ಆಡಿಸುವುದು ॥ 100

ಸಾಯಿ ಹೆಸರು ಆಶಕ್ತಿಯದು । ಅದಿಲ್ಲದ ಸ್ಥಳವಿರದು ।
ಅದಿಲ್ಲದ ದಶದಿಕ್ಕುಗಳು ಆಚೇತನವಾಗಿದ್ದು । ಅದರಿಂದಲೇ ತುಂಬಿದೆ ಚರಾಚರ ॥ 101

ಅದೇ ಈಗ ಅವತಾರವಾಗಿದ್ದು । ಅವ್ಯಕ್ತದಲಿ ಮೊದಲಿದ್ದುದು ।
ವ್ಯಕ್ತಿಯಾಗಿ ನಾಮರೂಪದಲಿ ಒಂದು । ಕಾರ್ಯಾಂತದಲಿ ಮತ್ತೆ ಅವ್ಯಕ್ತದಲಿ ಸಮರಸವಾಯಿತು ॥ 102

ಅವತಾರ ಕೃತ್ಯವನು ಮುಗಿಸಿ । ಅವತಾರಿಗಳೂ ದೇಹವ ತ್ಯಜಿಸಿ ।
ನಿರ್ವಿಕಲ್ಪ ಭುವನವ ಪ್ರವೇಶಿಸಿ । ಹೋಗುವಂತೆ ಈ ಸಾಯಿಯದೂ ॥ 103

ಗುಪ್ತರಾಗಬೇಕು ಬರಲು ಮನದಲಿ । ಸ್ವಾಮಿ ದತ್ತಗುರು ಹೇಗೆ ಗಾಣಗಾಪುರದಲಿ ।
ಪರ್ವತಯಾತ್ರೆಗೆ ಹೋಗುವೆನೆನುತಲಿ । ಒಬ್ಬರೇ ಹೊರಟು ಹೋದರು ॥ 104

ಅಡ್ಡಗಟ್ಟಿದಾಗ ಭಕ್ತಜನ । ಮಾಡಿದರವರ ಸಮಾಧಾನ ।
ಲೋಕ ರೂಢಿಯಲಿದು ನನ್ನ ಗಮನ । ಆದರೆ ನಾ ಗಾಣಗಾಪುರವ ಬಿಟ್ಟಿರಲಾರೆ ॥ 105

ಕೃಷ್ಣಾತೀರದಲಿ ಪ್ರಾತಃ ಸ್ನಾನ । ಬಿಂದು ಕ್ಷೇತ್ರದಲಿ ಅನುಷ್ಠಾನ ।
ಮಠದಲಾಗ ಬೇಕು ಪಾದುಕಾ ಪೂಜನ । ಅಲ್ಲಿಯೇ ನಿರಂತರ ವಾಸವೆನ್ನದು ॥ 106

ಸಾಯಿ ಬಾಬಾ ಅವರೂ ಅದೇ ರೀತಿಯಲಿ । ನಿಧನ ಕೇವಲ ಲೋಕವಿಚಾರದಲಿ ।
ನೋಡ ಹೋಗಲು ಸ್ಥಿರಚರಗಳಲಿ । ಸರ್ವಾಂತರದಲಿ ಸಾಯಿ ಇರುವರು ॥ 107

ಯಾರದು ಹೇಗೆ ಭಜನ ಸ್ಥಿತಿ । ಅದರಂತೆವರಿಗೆ ನಿತ್ಯ ಪ್ರಚೀತಿ ।
ಸಂದೇಹ ಹಿಡಿಯಬಾರದು ಮನದಿ । ಈ ಸಾಯಿ ಮರಣಾತೀತರು ॥ 108

ಸಾಯಿ ಸಮರ್ಥದೀನದಯಾಳ । ಭಾವಾರ್ಥಿಗಳಿಗೆ ಪ್ರಣಿತ ಪಾಲ ।
ಎಲ್ಲರಿಗದ ಅತಿ ಪ್ರೇಮಾಳ । ಪರಮ ಪ್ರೀತಿಯ ಕ್ಷುಧೆಯವಗೆ ॥ 109

ಸಾಯಿ ಸ್ಥಿರಚರದಲಿ ತುಂಬಿರುವ । ಸಾಯಿ ಎಲ್ಲರ ಒಳಹೊರಗಿರುವ ।
ಸಾಯಿ ನಮ್ಮ ನಿಮ್ಮೊಳಗಿರುವ । ಎಂದೆಂದಿಗೂ ನಿರಂತರವಾಗಿ ॥ 110

ಚರ್ಮಚಕ್ಷುಗಳಿಗಿವರು ಕಾಣದಿದ್ದರೂ । ಅವರು ಎಲ್ಲೆಲ್ಲೂ ಇರುವರು ।
ತಾವು ಸೂಕ್ಷ್ಮತ್ವದಲಿ ಅಡಗಿದ್ದರೂ । ನಮಗೆಲ್ಲ ಹುಚ್ಚು ಹಿಡಿಸಿಹರು ॥ 111

ಅವರ ನಿಧನ ಕೇವಲ ತೋರಿಕೆ । ಸೋಗು ನಮಗೆಲ್ಲ ಮೋಸಗೊಳಿಸುವುದಕೆ ।
ನಟನಾಗಾರ ಅವ್ಯಂಗ ಇರುವಾಗ್ಯೆ । ಭಂಗಿಸಿ ಆಭಂಗವಾಗಿರುವರು ॥ 112

ನಮಗೆ ಅವರಲ್ಲಿ ಅತ್ಯಂತ ಪ್ರೀತಿ ಅದರಿಂದ ಹುಡುಕುವ ಅವರ ಬೆಂಬತ್ತಿ ।
ಕೊನಗೂ ಅವರ ತೆಗೆದುಹುಡುಕಿ । ಕಾರ್ಯಭಾಗವ ಸಾಧಿಸಿಕೊಳ್ಳುವ ॥ 113

ಮನೋಭಾವದಿಂದ ಪೂಜೆ ಮಾಡಲು । ಭಕ್ತಿ ಭಾವದಿಂದವರ ನೆನೆಯಲು ।
ಅನುಭವ ಬಂದೀತೆಲ್ಲ ಭಕ್ತರೊಳು । ಸರ್ವವ್ಯಾಪಕತೆಯು ಕಂಡು ಬರುವುದು ॥ 114

ಉತ್ಪತ್ತಿ ಸ್ಥಿತಿ ಮತ್ತು ಲಯ । ಚಿತ್ಸ್ವರೂಪಕಿಲ್ಲಿದರ ಭಯ ।
ಅವರು ಸದಾಸರ್ವದಾ ಚಿನ್ಮಯ । ವಿಕಾರಗಳಿಗವಕಾಶವಿರದಲ್ಲಿ ॥ 115

ಹೇಗೆ ಚಿನ್ನ ಚಿನ್ನವಾಗಿ । ಉಳಿಯುವುದು ಒಡವೆಗಳ ಹೊರತಾಗಿ ।
ನಾನಾ ತರದ ಆಭರಣಗಳ ಮಾಡಲಾಗಿ । ಅದರ ಚಿನ್ಮಯ ಗುಣವನದು ಬಿಡಲಾರದು ॥ 116

ಪರಿಪರಿಯ ಅಲಂಕಾರಗಳನು । ಮಾಡಲವೆಲ್ಲ ವಿಕಾರಗಳು ಹೊಂದಲು ವಿನಾಶವನು ।
ಕರಗಿಸಲು ಮತ್ತೆ ಅವಿಕಾರ ಚಿನ್ನವನು । ಹೊಂದುವೆವು ನಾಮರೂಪಾತೀತವಾಗಿ ॥ 117

ಆದರೆ ಆ ಹೇಮದಲಿ ಈ ಹೇಮಾಡಪಂತ । ಕರಗಿ ಹೋಗಲಿ ಸಮೂಲ ನಿತಾಂತ ।
ಏವಂ ಗುಣ ಸಾಯಿ ಪದಾಂಕಿತ । ಆ ಪ್ರಲಯಾಂತ ವಾಸವಾಗಿರಲಿ ॥ 118

ಮುಂದೆ ಮಾಡಿದರು ಹದುಮೂರನೆಯ ದಿನ । ಬಾಬಾ ಸಾಹೇಬ ಭಕ್ತ ರತ್ನ ।
ಎಲ್ಲ ಗ್ರಾಮಸ್ಥ ಬ್ರಾಹ್ಮಣ । ಉತ್ತರ ವಿಧಿಗಳ ಆರಂಭಿಸಿದರು ॥ 119

ಸಚೈಲ ಸ್ನಾನ ಮಾಡಿದ । ಬಾಳಾಸಾಹೇಬರ ಕಡೆಯಿಂದ ।
ಮಾಡಿಸಿದರು ತಿಲತರ್ಪಣ ತಿಲಾಂಜಲಿ ಮೊದಲಾದ । ಪಿಂಡ ಪ್ರದಾನದವರೆಗೆಲ್ಲ ॥120

ಸಪಿಂಡರಿಗೆಲ್ಲ ಉತ್ತರಕ್ರಿಯೆ । ಆಯಾಕಾಲದಲಿ ಶಾಸ್ತ್ರಾಧಾರದಂತೆಯೇ ।
ಮಾಡಿದರೆಲ್ಲಗೂ ಧರ್ಮನ್ಯಾಯ ಪ್ರಮಾಣವಾಗಿಯೇ । ಮಾಸಿಕ ಮೊದಲಾದವುಗಳೆನೆಲ್ಲ ॥121

ಭಕ್ತಶ್ರೇಷ್ಠ ಉಪಸನಿಯವರು । ಜೋಗರ ಜೊತೆಗೆ ಹೋದರು ।
ಹೋಮ ಹವನಗಳ ಮುಗಿಸಿದರು । ಭಾಗೀರಥಿಯ ಪವಿತ್ರ ಸ್ಥಾನದಲಿ ॥ 122

ಬ್ರಹ್ಮ ಭೋಜನ ಅನ್ನ ಸಂತರ್ಪಣ । ಯಥಾಸಾಂಗ ದಕ್ಷಿಣಾ ಪ್ರದಾನ ।
ಮಾಡಿ ಸಶಾಸ್ತ್ರ ವಿಧಿ ವಿಧಾನ । ಬಂದರವರು ತಿರುಗಿ ಹಿಂದೆ ॥ 123

ಇಲ್ಲ ಬಾಬಾ, ಇಲ್ಲ ಸಂವಾದ । ರೀತಿ ಹೀಗಿದ್ದರೂ ಭೇದ ।
ಕಣ್ಣಿಗೆ ಬೀಳಲು ಆ ಮಶೀದಿ । ಗತ ಸುಖಾನುವಾದಗಳು ನೆನಪಾಗುವವು ॥ 124

ಬಾಬಾರ ನಿತ್ಯ ಆಸನವಿರುವಲ್ಲಿ । ಅದರ ಸುಖಾನುಭೂತಿಯಾಗಲಿ ।
ಎಂದು ಅನೇಕ ಭಾವಚಿತ್ರಗಳನಲಿ । ಮಶೀದಿಯಲಿ ಸ್ಥಾಪಿಸಿದರು ॥ 125

ಸಾಯಿ ದೇಹ ನಿವೃತ್ತಿಯಾಯಿತು । ಪ್ರತಿಮಾದರ್ಶದಿಂದ ಅನುವೃತ್ತಿಯಾಯಿತು ।
ನಿಜಭಕ್ತ ಭಾವಾರ್ಥಿಗಳಿಗೆನಿಸಿತು । ಇದು ಪುನರಾವೃತ್ತಿಯೆಂದು ॥ 126

ಶಾಮರಾವ ಜಯಕರ ಎಂಬುವರು । ಸುಂದರವಾದ ಚಿತ್ರಬರೆದರು ।
ಇಂಥ ಈ ಪ್ರತಿಮ ಮನೋಹರ । ನಿರಂತರ ಸ್ಮರಣೆಕೊಡಲಿ ಎಂದು ॥ 127

ಇವರು ಪ್ರಸಿದ್ಧ ಚಿತ್ರಕಾರರು । ಅದರಂತೆ ಬಾಬಾರ ದೊಡ್ಡ ಭಕ್ತರು ।
ಬಾಬಾರ ಆಜ್ಞೆಯಂತವರು । ಆಚರಿಸುತ್ತಿದ್ದರು ವಿಚಾರ ಪೂರ್ವಕವಾಗಿ ॥ 128

ಇವರ ಕೈಯಿಂದ ಬರೆಯಿಸಿದ । ಸುಂದರ ಛಾಯಾಚಿತ್ರವ ತಯಾರಿಸಿ ।
ಭಕ್ತಜನರದನು ಅಲ್ಲಿ ಸ್ಥಾಪಿಸಿ । ಧ್ಯಾನಧಾರಣಾದಿಗಳ ಮಾಡಲೆಂದು ॥ 129

ಸಂತರಿಗಿಲ್ಲ ಎಂದೂ ಮರಣ । ಹಿಂದೆ ಬಹಳಸಲ ಬಂದಿದೆ ಇದರ ವಿವರಣ ।
ಆಗಿದ್ದರೆ ಸಾಕು ಅದರ ಸ್ಮರಣ । ಇನ್ನಷ್ಟು ಸಷ್ಟೀಕರಣ ಬೇಕಿಲ್ಲ ॥ 130

ಇಂದು ಬಾಬಾ ದೇಹಧಾರಿಗಳಲ್ಲದಿದ್ದರೂ । ಯಾರು ಅವರ ಸನ್ಮರಣ ಮಾಡುವರು ।
ಅವರಿಗೆ ಇಂದಿಗೂ ಅವರು ಹಿತಕಾಕರು । ಹಿಂದೆ ಸದೇಹವಾಗಿರುವಂತೆಯೇ ॥ 131

ಯಾರಿಗೆ ಏನೋ ಹೇಳಿಹೋದರು । ಅವರ ಅನುಭವಕೆ ಬರಲಿಲ್ಲ ಆದರೂ ।
ಈಗಂತೂ ವಿದೇಹಿಗಳಾದರವರು । ಅದಕೆ ಹಾಗಾಯಿತೆಂದೆನಬೇಡಿ ॥ 132

ಬ್ರಹ್ಮ ಲಿಖಿತವೇ ಬಾಬಾರ ಮಾತು । ಪ್ರಚೀತಿ ಪಡೆಯಬೇಕು ವಿಶ್ವಾಸ ವಿಟ್ಟು ।
ಅನುಭವ ಬರದಿದ್ದರೆ ತ್ವರಿತದಲಂತೂ । ಕಾಲಾಂತರದಲಾದರೂ ॥ 133

ಇರಲಿ ಜೋಗರ ಬಗ್ಗೆ ಬಂದಾಗ ಮಾತು । ಅಡ್ಡಕಥೆ ಯೊಂದು ನೆನಪಾಯಿತು ।
ಹೇಳುವೆನದರ ಅಪೂರ್ವತೆಯ ಕುರಿತು । ಸಾಯಿ ಪ್ರೇಮಳತನವ ತೋರುವದದು ॥ 134

ಆಗಿದ್ದರೂ ಅದು ಚಿಕ್ಕ ಸಂವಾದ । ಗುರುಭಕ್ತರಿಗದು ಭೋಧಪ್ರದ ।
ಸಭಾಗ್ಯನಿಗದು ವೈರಾಗ್ಯಬೋಧ । ಅಭಾಗಿ ಬದ್ಧನು ಸಂಸಾರದಿ ॥ 135

ಒಮ್ಮೆ ಜೋಗ ಕೇಳಿದರು ಬಾಬಾರನ್ನು । ಇನ್ನು ನನ್ನ ಸ್ಥಿತಿ ಹೇಗಿರುವುದನ್ನು ।
ವಿಚಿತ್ರವಾಗಿದೆ ನನ್ನ ಕರ್ಮಗತಿಯಿನ್ನು । ಸುಸ್ಥಿತಿಯ ನಾನೆಂದು ಹೊಂದುವೆನು ॥ 136

ಅನನ್ಯ ಸೇವೆ ಬಹಳ ವರ್ಷಗಳವರೆಗೆ । ಒದಗಿತು ತಮ್ಮ ಸೇವೆ ದೇವಾ ನನಗೆ ।
ಆದರೂ ವಿಶ್ರಾಮ ಈ ಚಂಚಲ ಮನಸಿಗೆ । ಇನ್ನೂ ಸಿಗದಾಗಿದೆಯಲ್ಲಾ ॥ 137

ಇಷ್ಟೊಂದು ದುರ್ಭಾಗ್ಯನು ನಾನು ಹೇಗೆ । ಇದೇ ಪ್ರಾಪ್ತಿಯೇ ಸತ್ಸಂಗದಿದೆನಗೆ ।
ಭೋಗಿಸುವೆ ನಾಯಾವ ಪ್ರಸಂಗದೊಳಗೆ । ಸತ್ಸಂಗದ ನಿಜಪರಿಣಾಮವ ॥ 138

ಭಕ್ತನ ವಿನಂತಿಯನು ಕೇಳಿ । ಸಾಯಿ ಸಮರ್ಥರು ಪರಮ ಪ್ರೀತಿಯಲಿ ।
ಜೋಗರಿಗೆ ಹೇಳಿದ್ದನ್ನು ಸ್ವಸ್ಥಚಿತ್ತದಲಿ । ಕೇಳಬೇಕು ಆ ಉಪದೇಶವ ॥ 139

ದುಷ್ಕರ್ಮಗಳು ದಹಿಸಿ ಹೋಗಿ । ಪುಣ್ಯಪಾಪಗಳು ಭಸ್ಮವಾಗಿ ।
ನಿನ್ನ ಬಗಲಿಗೆ ಬಂದಾಗ ಜೋಳಿಗೆ । ಆಗ ನಾನಿನ್ನ ಭಾಗ್ಯಶಾಲಿಯೆನ್ನುವೆ ॥ 140

ಉಪಾಧಿಬಿಟ್ಟು ಹೋದಾಗ । ಭಗವದ್ಭಕ್ತಿಯದೇ ನಿತ್ಯಯೋಗ ।
ಆಶಾಪಾಶಗಳೆಲ್ಲ ಹರಿದು ಹೋದಾಗ । ಆಗ ನಾನಿನ್ನ ಸಭಾಗ್ಯನೆನ್ನುವೆ ॥ 141

ವಿಷಯಾಸಕ್ತಿಯ ತಿಳಿದು ತ್ಯಾಜ್ಯ । ನಾನೀನೆಂಬ ಭಾವವೇ ಅಯೋಗ್ಯ ।
ಜಿವ್ಹಾ ಕಾಮಗಳಗೆದ್ದು ಆಗುನೀ ಯೋಗ್ಯ । ಆಗ ನಾ ನಿನ್ನ ಸಭಾಗ್ಯ ನೆನುವನು ॥142

ಮುಂದೆ ಕೆಲಕಾಲ ಕಳೆಯಿತು । ಬಾಬಾರ ನುಡಿ ಅನ್ವರ್ಥವಾಯಿತು ।
ಸದ್ಗುರು ಕೃಪೆಯಿಂದ ಜೋಗರಿಗೆ ಬಂತು । ಬಾಬಾ ಹೇಳಿದ ಆ ವೈರಾಗ್ಯ ॥ 143

ಪುತ್ರ ಸಂತತಿಯ ಪಾಶವಿರದು । ಕಲತ್ರ ಸದ್ಗತಿಯ ಹೊಂದಿರುವುದು ।
ದೇಹತ್ಯಾಗಕೆ ಮುಂಚೆ ಸನ್ಯಾಸ ಪಡೆಯುವುದು । ಎಂದರಾಯಿತು ಸಹಜ ವೈರಾಗ್ಯ ॥144

ಜೋಗ ಅವರೂ ಭಾಗ್ಯವಂತರು । ಸಾಯಿ ವಚನವ ಸತ್ಯವಾಗಿಸಿದರು ।
ಕೊನೆಗೆ ಸಂನ್ಯಾಸವ ಪಡೆದರು । ಬಳಿಕ ಬ್ರಹ್ಮದಲಿ ವಿಲೀನರಾದರು ॥ 145

ಸಾಯಿಯವರು ಹೇಳಿದರು ಹೇಗೆ । ಪರಿಣಾಮದಲಿ ಸ್ಥಿತಿಯಾಯಿತು ಹಾಗೇ ।
ಸಾಯಿಯ ಮಾತು ಸಾರ್ಥಕವಾಗೆ । ನಿಜದಲಿ ಜೋಗರು ಭಾಗ್ಯಶಾಲಿಗಳು ॥ 146

ತಾತ್ಪರ್ಯವೆಂದರೆ ಬಾಬಾ ದಯಾಳುವಾಗಿ । ಭಕ್ತಕಲ್ಯಾಣರ್ಥವಾಗಿ ।
ಸುರಿಸುತ್ತಿದ್ದರು ಬೋಧಾಮೃತದ ಸುಗ್ಗಿ । ತ್ರಿಕಾಲವೂ ಶಿರಡಿಯಲಿ ಅದೇ ಕೇಳಿ ॥ 147

"ಯಾರಿಗೆ ಇರುವುದು ಭಕ್ತಿ ನನ್ನಲಿ । ನಾನಾವಾಗಲೂ ಇರುವೆನವರ ದೃಷ್ಟಿಯಲಿ ।
ಸೃಷ್ಟಿಯೇ ಪಾಳವರಿಗೆ ನಾನಿಲ್ಲದಲಿ । ನನ್ನ ಮಾತೇ ಅವರ ನಾಲಿಗೆಯಲಿ ॥ 148

ಅವನಿಗೆ ಅಖಂಡ ನನ್ನದೇ ಧ್ಯಾನ । ಮುಖದಲಿ ನನ್ನದೇ ನಾಮಾವರ್ತನ ।
ಮಾಡುತಿರಲು ಗಮನಾಮನ । ನನ್ನ ಚರಿತ್ರೆಯ ಗಾನ ನಡೆದಿರುವದು ॥ 149

ಹೀಗೆ ಮದಾಕಾರವಾಗುದು । ಆಗ ಕರ್ಮಾಕರ್ಮಗಳು ಮರೆತು ಹೋಗುವುದು ।
ಎಲ್ಲಿ ನನ್ನ ಸೇವೆಗೆ ಆದರವಿರುವುದು । ನಿರಂತರ ನಾನಲ್ಲಿರುವೆ ॥ 150

ಆಗಿ ನನಗೆ ಅನನ್ಯ ಶರಣ । ಯಾರಿಗೆ ನನ್ನ ಅಖಂಡಸ್ಮರಣ ।
ಅವನದೆನ್ನ ತಲೆಯ ಮೇಲೆ ಋಣ । ಅದ ತೀರಿಸುವೆನವನ ಉದ್ಧಾರ ಮಾಡಿ ॥ 151

ನನಗೆ ಅರ್ಪಿಸಿಯೇ ಮೊದಲು । ಭೋಜನ ರಸಪ್ರಾಶನ ಮಾಡಲು ।
ಸದೈವ ನನ್ನ ನಿಧಿ ಧ್ಯಾನದೊಳಿರಲು । ಅವನಾಧೀನನಾಗಿ ನಾ ನಡೆಯುವೆ ॥ 152

ನನ್ನದೇ ಹಸಿವೆ ನೀರಡಿಕೆ ಅವನಿಗೆ । ಬೇರಾವುದೂ ರುಚಿಸದು ನನ್ನ ಹಾಗೆ ।
ಅವನದೇ ನಿತ್ಯಧ್ಯಾನ ನನಗೆ । ಅವನಾಧೀನನಾಗಿ ನಡೆಯುವೆ ॥ 153

ತಾಯಿ ತಂದೆ ಬಂಧುಗಳು । ಆಪ್ತ ಇಷ್ಟರು ಹೆಂಡತಿ ಮಕ್ಕಳು ।
ಇವರೆಲ್ಲರಿಂದ ಪರಾವೃತ್ತರಾಗಲು । ಅವನೇ ಅನುರಕ್ತನಾಗುವ ಮತ್ಪದದಿ ॥ 154

ವರ್ಷಾಕಾವವದನೇಕ ಸರಿತೆಗಳು । ಹರಿದುಬಂದು ಸಮುದ್ರವ ಕೂಡಲು ।
ಸರಿತಾತನವನೇ ಮರೆತು ಅವುಗಳು । ಸಮುದ್ರತನವನೇ ಹೊಂದುವವು ॥ 155

ರೂಪ ಹೋಯಿತು ನಾಮ ಹೋಯಿತು । ಜಲವೂ ಸಾಗರದಿ ಬೆರೆಯಿತು ।
ಸರಿತಾ ಸಾಗರಗಳ ಲಗ್ನವಾಯಿತು । ಏಕತತ್ವದಲಿ ದ್ವೈತ ಲೋಪವಾಯಿತು ॥ 156

ಹೀಗೆ ಸಮರಸತೆಯನು ಹೊಂದಿ । ಚಿತ್ತ ಮರೆಯಿತು ನಾಮರೂಪಾದಿ ।
ಅದು ನನ್ನನೇ ಕಾಣುವುದು ನಿಜಸ್ವಭಾವದಿ । ನನಗಿಂತ ಬೇರೆ ಸ್ಥಳವಿಲ್ಲ ಅದಕೆ ॥157

ಸ್ಪರ್ಶ ಮಣಿಯಲ್ಲ ನಾಕಲ್ಲು । ಹೀಗೆ ಜನಕೆ ತೋರಲು ।
ಪುಸ್ತಕ ಪಂಡಿತರು ಮಾತಾಡಿಬಲು । ಲೋಹದ ಕಂಬವ ತಂದರು ॥ 158

ಅದರಿಂದ ನನಗೆ ಪ್ರಹಾರ ಮಾಡಲು । ತಿರುಗಿ ಅದುವೇ ಸುವರ್ಣವಾಗಲು ।
ನನ್ನ ಕಲ್ಲುತನವಾಯಿತು ಬಯಲು । ವಿಚಿತ್ರ ಅನುಭವ ಉಂಟಾಗಿ ॥ 159

ಅಣುಪ್ರಮಾಣವೂ ಅಭಿಮಾನವಿಲ್ಲದೆ । ಹೃದಯಸ್ಥನಾದೆನಗೆ ಶರಣು ಬಂದೊಡೆ ।
ನೀರಸನವಾಗುವುದು ಅವಿದ್ಯೆ । ಶ್ರವಣದ ಕಾರಣವೇ ಮುಗಿಯುವುದು ॥ 160

ಅವಿದ್ಯೆಯಿಂದ ಜನಿಸುವುದು ದೇಹಬುದ್ಧಿ । ದೇಹಬುದ್ಧಿಯಿಂದಾಗಿ ಅಧಿವ್ಯಾಧಿ ।
ಅದೇ ತರುವುದು ವಿಧಿನಿಷೇಧಿ । ಆತ್ಮಸಿದ್ಧಿ ವಿಘಾತಕವವು ॥ 161

ಎನಬಹುದು ಈಗ ನಾನೆಲ್ಲಿರುವೆ । ಈಗ ನಾ ನಿಮಗೆಲ್ಲಿ ಭೇಟಿಯಾಗುವೆ ।
ಅದಕೆ ನಾ ನಿಮ್ಮ ಹೃದಯದಲ್ಲೇ ಇರುವೆ । ಕಷ್ಟವಿಲ್ಲದಷ್ಟು ಹತ್ತಿರದಲೇ ॥ 162

ಎನಿಸಬಹುದು ಹೃದಯಸ್ಥರು ಹೇಗೆ ಯಾರು । ಹೇಗೆ ಏನು ಅದರ ಲಕ್ಷಣವಾದರೂ ।
ಹೇಗಿರುವುದೆಂಬ ಚಿನ್ಹೆ ತಿಳಿದರೂ । ಅದರಿಂದ ನಾವದನೀಯಬಹುದು ॥ 163

ಅದಕಾಗಿ ಕೊಟ್ಟು ಚಿತ್ತವನು । ಕೇಳಿರದರ ಸ್ಪಷ್ಟ ವ್ಯಾಖ್ಯೆಯನ ।
ಯಾವುದಕೆ ಹೋಗಬೇಕು ಶರಣ । ಆ ಹೃದಯಸ್ಥರು ಯಾರೆಂದು ॥ 164

ನಾನಾ ನಾಮ ನಾನಾರೂಪಗಳಿಂದ । ಸೃಷ್ಟಿಯಲೆಲ್ಲ ಅಳತೆಯಿಲ್ಲದೆ ತುಂಬಿದ ।
ಯಾರಿಂದಲೂ ಅಳತೆ ಮಾಡಲಾಗದೆ । ಅವೆಲ್ಲ ಸ್ವರೂಪಗಳು ಮಾಯೆಯವು ॥ 165

ಅಂತೆಯೇ ಸತ್ವರಜತಮೋಗುಣ । ದಾಟಿಕೊಂಡು ಆ ತ್ರಿಗುಣಗಳನ ।
ಸತ್ತೆಯದಲ್ಲಿ ಆಗುವುದು ಸ್ಫುರಣ । ಅದೇ ಹೃಯಸ್ಥನ ರೂಪ ॥ 166

ನಾಮರೂಪ ವಿರಹಿತವಾಗಿ । ಉಳಿದಿರುವ ನೀನು ನಿನ್ನತನವಾಗಿ ।
ತಿಳಿದು ಅದನೇ ಹೃದಯಸ್ಥನ ಲಕ್ಷಣವಾಗಿ । ಅದಕೆ ಶರಣಾಗತನಾಬೇಕು ॥ 167

ನಾನೇ ಅವನೆಂದು ನೀನೋಡಲು । ಮುಂದೆ ಅದೇ ದೃಷ್ಟಿ ವಿಸ್ತಾರಗೊಳಲು ।
ಭೂತಮಾತ್ರಗಳೆಲ್ಲ ಹಬ್ಬಲು । ನಾನಿಲ್ಲದ ಬರಿದು ಸ್ಥಳವಿಲ್ಲ ॥ 168

ಅಭ್ಯಾಸ ಮಾಡುತ್ತಿರಲು ಹೀಗೆ । ನನ್ನ ವ್ಯಾಪಕತೆ ಬರುವುದನುಭವಕೆ ।
ಬಳಿಕ ನೀನೆನ್ನೊಡನೆ ಸಮರಸತೆ ಪಡೆದಾಗ್ಯೆ । ಪೂರ್ಣ ಅನನ್ಯತೆಯ ಭೋಗಿಸುವೆ ॥ 169

ಚಿತ್ಸ್ವರೂಪದಲಿ ಅನುಸಂಧಾನ । ಹೊಂದಿ ನೀನಾಗುವೆ ಶುದ್ಧಾಂತಃಕರಣ ।
ಒದಗುವುದು ನಿನಗೆ ಈ ಗಂಗಾಸ್ನಾನ ಗಂಗಾಜಲದಿ ಮುಳುಗದೆ ॥ 170

ಪ್ರಕೃತಿ ಕರ್ಮದ ಅಭಿಮಾನ । ಅದರಿಂದುಂಟಾಗುವುದು ದೃಢ ಬಂಧನ ।
ಅದನಂಟಿಸಿ ಕೊಳದಿರುವುದೇ ಸಜ್ಞಾನ । ಅತಂರಂಗದಿ ಸಾವಧಾನತೆ ಸದೈವ ॥ 171

ಸ್ವಸ್ವರೂಪದಲಿ ಧೃಢವಾಗಿ ನಿಂತು । ಕದಲಬಾರದಲ್ಲಿಂದ ಒಂದಿನಿತೂ ।
ಅವನಿಗೆ ಸಮಾಧಿ ಅಥವಾ ಉತ್ಥಾನಗಳದು । ಪ್ರಯೋಜನವಿಲ್ಲವೆರಡರದೂ ॥172

ಅದಕೆ ಶ್ರೋತೃಗಳ ಚರಣದಲಿ ಶಿರವಿಟ್ಟು । ಸಪ್ರೇಮದಿ ಮಾಡುವೆ ವಿನಂತಿಯನಿಂತು ।
ದೇವರು ಸಂತರು ಭಕ್ತರೆಲ್ಲರ ಕುರಿತು । ಅತಿ ಪ್ರೇಮಳತೆಯಲಿ ಆದರಿಸಬೇಕು ॥ 173

ಬಾಬಾ ಎಷ್ಟುಸಲ ಹೇಳುತಿದ್ದು । ಯಾರು ಯಾರಿಗೂ ಚುಚ್ಚಿ ಮಾತಾಡುವುದು ।
ಅವರದನು ನನಗೇ ಮಾತಾಡಿದಂತಾಗುವುದು । ಅದರಿಂದ ನನ್ನ ಮನಸಿಗೆ ಹತ್ತುವುದು ॥ 174

ಯಾರು ಯಾರಿಗೇ ಕೆಟ್ಟ ಮಾತಾಡುವುದು । ಅದರಿಂದ ಕೂಡಲೇ ನನಗೆ ಜಡ್ಡಾಗುವುದು ।
ಅದೇ ಯಾರು ಅದನ್ನು ಧೈರ್ಯದಿಂದ ತಡೆದುಕೊಂಡು । ಹೋಗುವವರೆನ್ನ ತೋಷಿಸುವುರು ॥ 175

ಹೀಗೆ ಭೂತಮಾತ್ರಗಳಲ್ಲಿ । ಸಾಯಿ ತುಂಬಿರುವ ಎಲ್ಲೆಡೆಯಲ್ಲಿ ।
ಒಂದು ಪ್ರೇಮವಬಿಟ್ಟು ಮತ್ತಾವುದರಲ್ಲಿ । ಇಷ್ಟವಿಲ್ಲ ಅವನಿಗೆ ॥ 176

ಪರಮ ಮಂಗಲ ಪರಮಾಮೃತವಿದು । ಸಾಯಿ ಮುಖದಿಂದ ಸದಾಸ್ರವಿಸುವುದು ।
ಭಕ್ತಾರ್ಥವಿರುವ ಪ್ರೇಮವಿದು । ಕೆಲಸ ಭಾಗ್ಯರಿಗೆ ಲಭಿಸುವುದು ॥ 177

ಯಾರಿಗವರ ಪಂಕ್ತಿಯ ಲಾಭವಿತ್ತು । ಯಾರೊಡನೆ ನಕ್ಕು ನಲಿದ ।
ಅವರಿಗೆ ತನ್ನ ಪ್ರೀತಿಯ ಸವಿ ನೀಡಿದ । ಅವರ ಮನಕೇನೆನಿಸುವದು ॥ 178

ಇಂಥ ಶಿಷ್ಯರ ಭೋಜನದಲ್ಲಿ । ನನಗೆ ರುಚಿಅವರ ಉಚ್ಚಿಷ್ಟದಲಿ ।
ಅಗಳುಗಳನು ಕೂಡಿಸುತಲಿ । ಅದನೇ ಒಂದಿಷ್ಟಿಷ್ಟು ಹಂಚುವೆನಲ್ಲರಿಗೆ ॥ 179

ಯಾರ ಕಥೆ ಇಲ್ಲಿಯ ವರೆಗೆ ನಡೆಯಿತು । ಅವು ಹೇಮಾಡನಿಗೆಲ್ಲಿ ಗೊತ್ತಿತ್ತು ।
ಸಾಯಿ ಸಮರ್ಥನೇ ಎಲ್ಲ ಹೇಳಿಕೊಟ್ಟು । ಬರೆಯಿಸಿದನವನನ್ನಿಂದ ॥ 180

ಈ ಸಾಯಿ ಸಮರ್ಥರ ಕಥೆ ಹೀಗೆ । ಹೇಳಿದಷ್ಟು ಸಾಲದೆನ್ನ ಮನಸಿಗೆ ।
ಸದೈವ ನೆನಹು ತುಂಬಿರುತ್ತದೆ ಚಿತ್ತದೊಳಗೆ । ಕೇಳಿದಾಗ ಸಂತೋಷ ಶ್ರೋತೃಗಳಿಗೆ ॥ 181

ಅಲ್ಲದೆ ಯಾರು ಸಾಯಿ ಕೀರ್ತಿಯ ಹಾಡುವರು । ಮತ್ತೆಯಾರದನು ಸದ್ಭಾವದಿಂದ ಕೇಳುವರು ।
ಇಬ್ಬರೂ ಸಾಯಿ ಸ್ವರೂಪರಾಗುವರು । ಧೃಢವಾಗಿ ಚಿತ್ತದಿಂದ ತಿಳಿಯಿರಿ ॥ 182


ಇನ್ನುರಿ ಈ ಅಧ್ಯಾಯವ ಮಾಡಿ ಪೂರ್ಣ । ಹೇಮಾಡ ಸಾಯಿಗೆ ಮಾಡುವ ಸಮರ್ಪಣ ।
ಪ್ರೀತಿಯಲಿ ಹಿಡಿವ ಸಾಯಿಯ ಚರಣ । ಮುಂದಿನ ನಿರೂಪಣೆ ಮುಂದಕೆ ॥ 183

ಭಕ್ತ ಹೇಮಾಡಪಂತ ವಿರಚಿತ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಶ್ರೀ ಸಾಯಿನಾಥ ನಿರ್ಯಾಣ ನಾಮ ಚತುಃಶ್ಚತ್ವಾರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

627.1



# ॥ ಅಥ ಶ್ರೀ ಸಾಯಿಃ ಸಚ್ಚರಿತ ॥

## ಅಧ್ಯಾಯ ನಲವತ್ತೈದು

*॥ ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*॥ ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*॥ ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಬೀಸುವ ಕಲ್ಲು ಹಾಕಿ ಸಹಜ ಬೀಸುತ್ತ । ನಿಜ ಸಚ್ಚರಿತೆಯ ನಿರ್ಮಿಸುತ ।
ಅವನ ಅಲೌಕಿಕ ಕುಶಲತೆ ಎಂಥ । ಭಕ್ತರಿಗೆ ಸುಪಂಥವ ತೋರಿದ ॥ 1

ಯಾವ ಪಕ್ಷವೆಂದರೆ ಪರಮ ಪುರುಷಾರ್ಥ । ಅದಕಿಂತಲೂ ಗುರಚರಣ ಸಮರ್ಥ।
ಸೇವಿಸಲಿಂಥ ಗುರುಚರಣದ ತೀರ್ಥ । ಮೋಕ್ಷ ತನ್ನಷ್ಟಕ್ಕೆ ಬಾಗಿಲಿಗೇ ಬರುವುದು ॥ 2

ಗುರುವು ಕರುಣಾಕರನಾಗಿದ್ದು । ಆದುದರಿಂದಲೇ ಈ ಸಂಸಾರ ಸುಖದ್ದು ।
ಸಾಧ್ಯವಿಲ್ಲದ್ದು ಸಾಧ್ಯವಾಗುವುದು । ಪರಾಪರವ ತೋರುವ ಕ್ಷಣಾರ್ಧದಲಿ ॥ 3

ಪುಸ್ತಕ ಮುಗಿದರೂ ಇಲ್ಲಿಯವರೆಗೆ । ಕಥೆಯ ಹೇಳುತಿರುವೆ ಸಂಕ್ಷಿಪ್ತವಾಗೇ ।
ಈ ಸಾಯಿಯ ಅಗಾಧ ಕೀರ್ತಿಯ ಹೇಗೆ । ಸಂಪೂರ್ಣವಾಗಿ ನಾ ವರ್ಣಿಸಬಲ್ಲೆ ॥ 4

ಯಾರ ದರ್ಶನದಿಂದ ನಿತ್ಯತೃಪ್ತಿ । ಯಾರ ಸಹಸವಾಸದಲಿ ಆನಂದಭುಕ್ತಿ ।
ಯಾರಿಂದ ಭವಭಯ ನಿರ್ಮುಕ್ತಿ । ಆ ಸಾಯಿ ಮೂರ್ತಿ ಇಂದಿಲ್ಲ ॥ 5

ಯಾರಿಂದ ಪರಮಾರ್ಥ ಮಾರ್ಗ ಪ್ರವೃತ್ತಿ । ಯಾರಿಂದ ಮಾಯಾ ಮೋಹ ನಿವೃತ್ತಿ ।
ಯಾರಿಂದ ಅತ್ಯಂತಿಕ ಕ್ಷೇಮಪ್ರಾಪ್ತಿ । ಆ ಸಾಯಿ ಮೂರ್ತಿ ಇನ್ನಿಲ್ಲ ॥ 6

ಯಾರಿಂದ ಇರಲಿಲ್ಲ ಭವಭಯಭೀತಿ । ಯಾರಿಂದ ಜಾಗೃತ ನ್ಯಾಯ ನೀತಿ ।
ಯಾರಿಂದ ಸಂಕಟಕಾಲದಲಿ ಮನಸಿಗೆ ಧೃತಿ । ಆ ಸಾಯಿ ಮೂರ್ತಿ ಇನ್ನಿಲ್ಲ ॥ 7

ಧ್ಯಾನದಲಿ ಸ್ಥಾಪಿಸಿ ನಿಜಮೂರ್ತಿ । ಸಾಯಿ ಹೋದರು ನಿಜಧಾಮದ ಪ್ರತಿ ।
ನಿಜಾವತಾರವ ಮಾಡಿ ಸಮಾಪ್ತಿ । ಈ ಯೋಗಸ್ಥಿತಿಯು ಅತರ್ಕ್ಯ ॥ 8

ಪೂರ್ಣವಾಗಲು ಅವತಾರ ಕೃತಿ । ಹೋಗಿಬಿಟ್ಟಿತು ಆ ಪಾರ್ಥಿವ ಆಕೃತಿ ।
ಆದರೆ ಈ ಗ್ರಂಥವೆಂಬ ವಾಙ್ಮಯ ಮೂರ್ತಿ । ಸ್ಮೃತಿಯನೀಯುವುದು ಪದೇ ಪದೇ ॥9

ಅಲ್ಲದೇ ಕೇಳುತಿರಲಿವರ ಕಥೆ । ಮನಕೆ ಲಭಿಸುವುದು ಏಕಾಗ್ರತೆ ।
ತಜ್ಜನ್ಯ ಶಾಂತಿಯ ಅಪೂರ್ವತೆ । ಆ ಅವರ್ಣತೆಯನೆಂತು ವರ್ಣಿಸುವುದು ॥ 10

ತಾವು ಶ್ರೋತೃಗಳೆಲ್ಲ ಸಜ್ಜನರು । ನಾನಿರುವೆ ಅಲ್ಪಜ್ಞ ನಿಮ್ಮೆದುರು ।
ಆದರಿಸಿರಿ ಕೃತಜ್ಞತಾ ಬುದ್ಧಿಯಿಂದಾದರೂ । ಈ ಸಾಯಿಸಮರ್ಥರ ವಾಗ್ಯಜ್ಞವನು ॥ 11

ಕಲ್ಯಾಣಪ್ರದ ಈ ವಾಗ್ಯಜ್ಞ । ಮುಂದೆ ಮಾಡಿ ನನ್ನಂಥ ಅಜ್ಞನ ।
ಪೂರ್ಣ ಮಾಡಿಸುತಿರುವ ನಿಜ ಕಾರ್ಯವನ । ಸರ್ವಜ್ಞನ ಶ್ರೋತೃಗಳಿದ ಬಲ್ಲರು ॥ 12

ಇಟ್ಟುಕೊಂಡು ಏಕಾಗ್ರಮನ । ಅಭಿವಂದಿಸಿ ಸಾಯಿ ಚರಣ ।
ಮಹಾಮಂಗಲ ಪರಮಪಾವನ । ಈ ಕಥೆಗಳನಾರು ಆಲಿಸುವರು ॥ 13

ಯಾವ ಭಕ್ತನು ಭಕ್ತಿಸಮನ್ವಿತ । ನಿಜಸ್ವಾರ್ಥ ಸಾಧಿಸುವದರಲಿ ಉದ್ಯತ ।
ಆಗಿ ಆತನು ಏಕಾಗ್ರಚಿತ್ತ । ಈಕಥಾಮೃತವ ಸೇವಿಸುವನು ॥ 14

ಸಾಯಿ ಅವನ ಮನದಿಷ್ಟ ಪೂರೈಸುವ । ಸ್ವಾರ್ಥ ಪರಮಾರ್ಥಗಳ ಕೈಗೂಡಿಸುವ ।
ಸೇವೇ ಎಂದಿಗೂ ವ್ಯರ್ಥವಾಗದಂತ । ಕೊನಗೆ ಕೃತಾರ್ಥನ ಮಾಡುವ ॥ 15

ನಲವತ್ನಾಲ್ಕು ಅಧ್ಯಾಯದವರೆಗೆ । ಸಾಯಿ ನಿರ್ಮಾಣವ ಕೇಳಿದಿರಿ ಕೊನೆಗೆ ।
ಆದರೂ ಈ ಪೋಥಿಯ ಬೆಳವಣಿಗೆ । ಆಗುತಿರುವುದರ ಚಮತ್ಕಾರ ತಿಳಿಯದಾಗಿದೆ ॥ 16

ಗತಾಧ್ಯಾದಲಿ ಸಾಯಿ ನಿರ್ಯಾಣ । ಯಥಾನುಕ್ರಮ ಆಯಿತು ಪೂರ್ಣ।
ಆದರೂ ಈ ಸಾಯಿ ಲೀಲೆಯ ಜೇಡಿನ । ಬಲೆ ಹೆಣೆಯುವುದು ಮುಗಿಯದಾಗಿದೆ ॥17

ನೋಡಹೋದರೆ ಇದು ಆಶ್ಚರ್ಯವಲ್ಲ । ಕೇವಲ ದೇಹಕ್ಕೆ ಈ ನಿರ್ಯಾಣವೆಲ್ಲ ।
ಈ ಸಾಯಿ ಜನ್ಮಮರಣಾತೀತನಿಹನಲ್ಲಿ । ಅವ್ಯಕ್ತನಾಗಿರುವನು ಮೊದಲಿನಂತೆ ॥ 18

ತ್ಯಜಿಸಿಹೋಗಿದ್ದರೂ ದೇಹ ಆಕಾರಗಳು । ಹೇಗಿದ್ದು ಹಾಗೆಯೇ ನಿಂತಹ ಅವ್ಯಕ್ತದೊಳು
।ದೇಹ ನಿರ್ಯಾಣನಂತರವೂ ಲೀಲೆಗಳು । ನಡೆಯುತಿರುವದನೆಲ್ಲರೂ ಬಲ್ಲರು ॥19

ವರ್ಣಿಸತೊಡಗಿದರೆ ಅವೂ ಅಪಾರ । ಆದರೂ ಆಗದಿರಲೀ ಗ್ರಂಥವಿಸ್ತಾರ ।
ಎಂದರಲಿ ತೆಗೆದುಕೊಂಡು ಸಾರ ಮಾತ್ರ । ಶ್ರೋತೃಗಳಿಗೆ ಸಾದರ ಪಡಿಸಲೆಂದು ॥ 20

ಧನ್ಯ ಭಾಗ್ಯ ಸ್ಥಿತಿ ನಮ್ಮದು । ಯಾವ ಕಾಲದಲಿ ಸಾಯಿ ಅವತರಿಸಿದ್ದು ।
ಅದೇ ಕಾಲದಲೀ ಸತ್ಸಂಗತಿ ದೊರೆತದ್ದು । ಸಹಜಾವೃತ್ತಿ ಎನುವಂತೆ ॥ 21

ಹೀಗಿದ್ದರೂ ಚಿತ್ತವೃತ್ತಿ । ಆಗದಿದ್ದರೂ ಸಂಸಾರ ನಿವೃತ್ತಿ ।
ನೆಲೆಸದಿದ್ದರೂ ಭಗವಂತನಲಿ ಪ್ರೀತಿ । ಇದಕಿಂತ ದುರ್ಗತಿ ಯಾವುದು ॥ 22

ಸರ್ವೇಂದ್ರಿಯಗಳಲಿ ಸಾಯಿಯ ಭಕ್ತಿ । ಇದೇ ಇಹುದು ನಿಜವಾದ ಭಜನಸ್ಥಿತಿ ।
ಇಲ್ಲದಿರೆ ಕಣ್ಣಿಂದ ನೋಡಿದರೆ ಆಮೂರ್ತಿ । ಮಾತಿಗೆ ಕಟ್ಟುಬೀಳುವುದು ॥ 23

ಸಾಯಿ ಕೀರ್ತನೆ ಕೇಳಿದಾಗ ಆಗುವುದು ಕಿವಿಗೆ । ಮಧುರ ಅಮೃರಸ ಸವಿದಂತೆ ನಾಲಿಗೆಗೆ ।
ಮಾಡಿದಾಗ ಸಾಯಿ ಪದಸ್ಪರ್ಶನ । ಬಿಟ್ಟಗಲಲು ಆ ಮೃದುತನವ ಮನಸಾಗದು ॥ 24

ಒಂದು ಕ್ಷಣ ಸಾಯಿಯಿಂದ ವಿಭಕ್ತ । ಆಗಿರುವವನೆಂಥ ಸಾಯಿಯ ಭಕ್ತ ।
ಅವನಿಗೆನುವುದು ಹೇಗೆ ಚರಣಾಸಕ್ತ । ಸಂಸಾರದಲಿ ವಿರಕ್ತಿ ತಿಳಿಯದವರೆಗೆ ॥ 25

ಪ್ರತಿಯೊಬ್ಬನನು ಬಿಟ್ಟು ಇನ್ನಾರು । ಬಂದಾಗ ಅವಳಿಗೆ ಎದುರು ।
ಮಾವ ಭಾವ ಅಣ್ಣ ಇಹರವರು । ಎಂದು ತಿಳಿದವರ ವಂದಿಸುವಳು ॥ 26

ನಿಶ್ಚಲ ಮನ ಪತಿವ್ರತೆಯದು । ತನ್ನ ಮನೆಯನೆಂದೂ ಬಿಡದು ।
ನಿಜಪತಿಯ ಪ್ರೀತಿಯೇ ಅಪಾರವಿರುವುದು । ಆಜನ್ಮ ಆಧಾರ ಅದು ಒಂದೇ ॥ 27

ಪತಿವ್ರತೆಯಾದ ಸಾಧ್ವೀಸತಿ । ಅನ್ಯರ ಭಾವಿಸಿ ತನ್ನ ಪತಿ ।
ಅವನ ದರ್ಶನ ತೆಗೆದುಕೊಳ್ಳುವ ಪ್ರತಿ । ಎಂದೂ ಮನದಿ ತಾರಳು ॥ 28

ಅವಳ ಪತಿಯೇ ಅವಳಿಗೆಲ್ಲ । ಬೇರಾರೂ ಅವನ ಸರಿಯಲ್ಲ ।
ಅವನಿಗಾಗಿಯೇ ಅವಳ ಪ್ರೀತಿಯೆಲ್ಲ । ಶಿಷ್ಯನೂ ಗುರುವಿಗಾಗಿ ಅದೇ ರೀತಿ ॥ 29

ಪತಿವ್ರತೆಯ ಪತಿ ಪ್ರೇಮದ್ದು । ಗುರು ಪ್ರೇಮಕ್ಕೆ ಉಪಮೆಕೊಡುವುದು ।
ಆದರೂ ಗುರುಪ್ರೇಮಕ್ಕೆ ಮಿತಿ ಇರದು । ಆ ಮಹಿಮೆಯ ಸಚ್ಛಿಷ್ಯನೇ ಬಲ್ಲ ॥ 30

ಎಂದಾಗ ಯಾರಿಂದ ಸಂಸಾರಕ್ಕೆ ಸಹಾಯವಿಲ್ಲ । ಪರಮಾರ್ಥನ ಸಹಾಯಕ್ಕೇನು ಬಂದಾರುಅವರೆಲ್ಲ ।
ಬೀಗರು ಅಳಿಯ ಹೆಂಡತಿ ಇದ್ದರೂ ಇಲ್ಲ । ಯಾರ ಭರವಸೆಯನೂ ಹಿಡಿಯಲು ಬಾರದು ॥ 31

ಮಾತಾಪಿತೃಗಳು ಮಾಡುವರು ಮಮತೆ । ಅಧಿಕಾರಸ್ಥ ಪುತ್ರನಿಗೆ ಎತ್ತದ ಚಿಂತೆ ।
ಕುಂಕುಮಕ್ಕಾಗಿ ಅತ್ತಾಳು ಕಾಂತೆ । ಆದರೆ ಪರಮಾರ್ಥಕ್ಕೆ ಸಹಕಾರಿ ಯಾರೂ ಅಲ್ಲ ॥ 32

ಮತ್ತೆ ಇನ್ನಾರು ಉಳಿದದ್ದು । ಯಾರಿಂದ ಪರಮಾರ್ಥ ಪಡೆಯುವುದು ।
ನಿಧಾನವಾಗಿ ವಿಚಾರ ಮಾಡುವುದು । ಆಗ ತಿಳಿಯುವುದು ತನಗೆ ತಾನೇ ಎಂದು ॥ 33

ನಿತ್ಯಾನಿತ್ಯ ವಿವೇಕವನನುಸರಿಸಿ । ಐಹಿಕ ಫಲಭೋಗವ ತ್ಯಜಿಸಿ ।
ಶಮದಮಾಡಿ ಪಟ್ಕವ ಸಾಧಿಸಿ । ಮೋಕ್ಷಕ್ಕ ಸಾಧಕನವನೇ ಧನ್ಯ ॥ 34

ಅಂಥವರು ಬೇರೆಯವರ ಆಶೆಯ ಬಿಟ್ಟು । ಧೃಢವಾದ ಆತ್ಮವಿಶ್ವಾಸ ವನಿಟ್ಟು ।
ತಾವೇ ತಮ್ಮಲ್ಲಿ ಹಿಡಿದು ಪಟ್ಟು । ಇದ್ದವನೇ ಸಾಧಿಸುವುದು ಪರಮಾರ್ಥ ॥ 35

ಬ್ರಹ್ಮ ನಿತ್ಯಜಗ ಅನಿತ್ಯ । ಗುರುವೊಬ್ಬನೇ ಬ್ರಹ್ಮಸತ್ಯ ।
ಅನಿತ್ಯ ತ್ಯಾಜ್ಯ ಗುರುವೊಬ್ಬನೇ ಚಿಂತ್ಯ । ಭಾವನಾ ಸಾತತ್ಯ ಸಾಧನೆ ಇದು ॥ 36

ಅನಿತ್ಯ ತ್ಯಜಿಸಿದಾಗ ವೈರಾಗ್ಯ ಜನನ । ಸದ್ಗುರು ಬ್ರಹ್ಮ ಚೈತನ್ಯ ಘನ ।
ಮಾಡುವದು ಭೂತಗಳಲಿ ಭಗವಂತತನ । ಅಭೇದ ಭಜನೆ ಇದಕೆಂಬರು ॥ 37

ಭಯದಿಂದ ಅಥವಾ ಪ್ರಿತಿ ಇಂದಾಗಿ । ನಿತ್ಯಧ್ಯಾನ ನಡೆಸಲಾಗಿ ।
ಧ್ಯಾತಾ ಹೋಗುವನು ಧ್ಯೆರ್ಯವಾಗಿ । ಕಂಸ ರಾವಣ ಕೀಚಕ ನ್ಯಾಯದಿ ॥ 38

ಚಿಂತನದಲ್ಲಾಗ ಬೇಕು ತಲ್ಲೀನ । ಧ್ಯಾನದಂತಿಲ್ಲ ಇನ್ನೊಂದು ಸಾಧನ ।
ಮಾಡುವವನು ತಾನೇ ತನ್ನ ಅಭ್ಯಾಸವನ್ನು । ಅವನಿಗೆ ನಿಜೋದ್ಧಾರ ಕಟ್ಟಿಟ್ಟದ್ದು ॥ 39

ಅಲ್ಲಿ ಎಲ್ಲಿಯ ಜನನ ಮರಣ । ಜೀವಭಾವಗಳದಾಗಲು ಪೂರ್ಣ ವಿಸ್ಮರಣ ।
ಕಳೆದು ಹೋಗುವದು ಪ್ರಪಂಚದ ಗಮನ । ಆತ್ಮಾನುಸಂಧಾನ ಸುಖ ಲಭಿಸುವುದು ॥ 40

ಅದಕೇ ನಿಜಗುರುನಾಮಾವರ್ತನ । ಅದರಿಂದಾಗುವುದು ಪರಮಾನಂದದ ಜನನ ।
ಭೂತ ಮಾತ್ರಗಳಲಿ ಭಗವಂತನ ದರ್ಶನ । ನಾಮದ ಮಹಿಮಾನವೆಷ್ಟೆನ್ನಲಿ ॥ 41

ಯಾರ ನಾಮದ ಮಹಿಮೆ ಹೀಗೆ । ಸದ್ಭಾವದಿಂದ ಮಾಡುವೆ ನಮನ ಅವನಿಗೆ ।
ಕಾಯಾವಾಚಾ ಮನಗಳಿಂದ ನಾನವನಿಗೆ । ಅನನ್ಯಗತಿ ಶರಣಾಗುವೆ ॥ 42

ಈ ಅರ್ಥವ ತೋರುವ ಕಥೆಯನು । ಶ್ರೋತೃಗಳೇ ನಿಮಗಾಗಿ ಹೇಳುವೆ ನಾನು ।
ನಿಜ ಹಿತಾರ್ಥಕ್ಕಾಗಿ ಕೇಳಿರಿದನು । ಏಕಾಗ್ರಚಿತ್ತವ ಮಾಡಿಕೊಂಡು ॥ 43

ಕೈಲಾಸವಾಸೀ ಕಾಕಾ ದೀಕ್ಷಿತ । ಸಾಯಿ ಸಮರ್ಥರ ಆಜ್ಞಾಂಕಿತ ।
ನಿತ್ಯನೇಮದಿಂದ ಓದುತ್ತಿದ್ದರು । ಭಾಗವತ ಇದೆಲ್ಲರಿಗೂ ಗೊತ್ತಿರುವುದು ॥ 44

ಒಂದು ದಿವಸ ದೀಕ್ಷಿತರು । ಕಾಕಾಮಹಾಜನಿಯವರ ಮನೆಯಲ್ಲಿ ಅವರು ।
ಚೌಪಾಟಿಯ ಮೇಲೆ ಊಟ ಮುಗಿಸಿದರು । ನಿತ್ಯ ನೇಮದಂತೆ ಪೋಥಿಯನೋದಿದರು ॥ 45

ಹನ್ನೊಂದನೇಯ ಅಧ್ಯಾಯವನು । ಸುರಸ ಮತ್ತು ಅದ್ವಿತೀಯವಾದುದನು ।
ಅನುಕ್ರಮವಾಗಿ ಕೇಳಲು ಇದನು । ಶ್ರೋತೃಗಳ ಮನ ಮುದಗೊಳುವದು ॥ 46

ಮಾಧವರಾಯರು ಬಾಬಾರ ಭಕ್ತ । ಕಾಕಾ ಮಹಾಜನಿ ಅವರ ಸಮವೇತ ।
ಕುಳಿತರು ಕೇಳಲು ಭಾಗವತ । ಏಕಾಗ್ರ ಚಿತ್ತವಿಟು ಕೊಂಡು ॥ 47

ಸುದೈವದಿಂದ ಕಥೆಯೂ ಬಲುರುಚಿ । ಅದರಿಂದ ಪೂರೈಸುವುದು ಶ್ರೋತೃಗಳ ಅಭಿರುಚಿ ।
ಉಂಟಾಗುವುದು ಸದ್ಭಕ್ತಿಯಲಿ ಪ್ರೀತಿ । ಅಂಥದೇ ಕಥೆಯೂ ಹೊರಟಿತು॥ 48

ಋಷಭ ಕುಲದ ಒಂಭತ್ತು ಮಕ್ಕಳು । ಕವಿ ಹರಿ ಅಂತರಿಕ್ಷಾದಿಗಳು ।
ಇವರದೇ ಅಂದು ಕಥೆ ಹೊರಡಲು । ಆನಂದ ಪ್ರದ ಮತ್ತು ಬೋಧಪ್ರದವಾದುದು ॥ 49

ಆ ಒಂಭತ್ತೂ ಜನರು ಭಗವತ್ಸ್ವರೂಪರು । ಅತಿಶಯ ಕ್ಷಮಾಶಾಂತಿಯುಳ್ಳವರು ।
ಭಾಗವತ ಧರ್ಮಪ್ರತಾಪವ ವರ್ಣಿಸುತ್ತಿದ್ದರು । ಜನಕರಾಜ ನಿಷ್ಕಂಪ ತಟಸ್ಥ ॥ 50

ಏನದು ಅತ್ಯಂತಿಕ ಕ್ಷೇಮ । ಏನದು ಹರಿಯ ಭಕ್ತಿ ಪರಮ ।
ಯಾವುದರಿಂದ ಈ ಹರಿಯ ಮಾಯೆ ಸುಗಮ । ನಿಃಶ್ರೇಯಸ ಉತ್ತಮ ಗುರುಚರಣ ॥ 51

ಕರ್ಮ ಅಕರ್ಮ ಮತ್ತು ವಿಕರ್ಮ । ಇವೆಲ್ಲದರದು ಒಂದೇ ಮರ್ಮ ।
ಗುಣವೇ ರೂಪದಲಿ ಪರಮಾತ್ಮ । ಭಾಗವತ ಧರ್ಮ ಗುರುಭಕ್ತಿ ॥ 52

ಹರಿಚರಿತದಅವತಾರಗುಣ । ದ್ರುಮಿಲನಾಥ ಮಾಡಿದ ನಿರೂಪಣ ।
ಪುರಷಾವತಾರದ ಗುರುತು ತೋರಿಸಿ । ರೂಢ ನಾರಾಯಣ ವರ್ಣಿತ ॥ 53

ಮುಂದೆ ಅಭಕ್ತಗತಿ ವಿನ್ಯಾಸ । ವಿದೇಹರಾಜನಿಗೆ ಹೇಳಿದ ನಾಥ ಚಮಸ ।
ಸರ್ವಸ್ವದ್ದಾಗುವುದು ನಾಶ । ವೇದ ವಿಹಿತ ಕರ್ಮವ ಬಿಟ್ಟರೆ ॥ 54

ಎಲ್ಲದರಲ್ಲಿರುವುದು ಹರಿಯವಾಸ । ಅದಕೆ ಮಾಡಬಾರದು ಯಾರದೂ ದ್ವೇಷ ।
ಪಿಂಡ ಪಿಂಡದಲ್ಲೂ ಕಾಣಬೇತು ಪರೇಶ । ಅವನಿಲ್ಲದ ಸ್ಥಳವಿಲ್ಲ ಅಣು ಪ್ರಮಾಣ ॥ 55

ಕೊನೆಯಲಿ ಒಂಭತ್ತನೆಯ ಕರಭಾಜನ । ಕೃತ ತ್ರೇತಾದಿ ಯುಗಗಳ ಪೂಜನ ।
ಯಾವ ಯಾವ ಮೂರ್ತಿಗಳ ಧ್ಯಾನ । ಮಾಡಲಾಗುತ್ತಿದ್ದರೆಂಬುದ ಹೇಳಲಾಯಿತು ॥ 56

ಕಲಿಯುಗದಲೊಂದೆ ಸಾಧನ । ಹರಿಗುರು ಚರಣಸ್ಮರಣ ।
ಅದರಿಂದಲೇ ಆಗುವುದು ಭವಭಯ ಹರಣ । ಇದೊಂದು ಶರಣಾಗತರಿಗೆ ಶರಣಸ್ಥಾನವು ॥ 57

ಹೀಗೇ ಮುಗಿದ ಮೇಲೆ ಪೋಥಿ । ಕಾಕಾಸಾಹೇಬರು ಕೇಳಿದರೀ ರೀತಿ ।
ಏನು ಇದು ನವನಾಥರ ಕೃತಿ । ಅತರ್ಕ್ಯ ವೃತ್ತಿ ಅವರದು ॥ 58

ಅಭಿರುಚಿಯಿಂದ ಮಾಧವರಾಯರ ಕೇಳಿದರು । ಎಷ್ಟೊಂದು ಕಷ್ಟಕರ ಈ ಭಕ್ತಿಯಾದರೂ ।
ನಮ್ಮಿಂದಾದೀತೆ ಜನ್ಮಜನ್ಮಾಂತರಕ್ಕಾದರೂ । ನಮ್ಮಂಥ ಮೂಢರಿಗೆಲ್ಲಿ ಆಸಕ್ತಿ ॥ 59

ಮಹಾಪ್ರತಾಪಿಗಳಾದ ಆನಾಥರೆಲ್ಲಿ । ಇಲ್ಲಿಯೇ ಒದ್ದಾಡುವ ನಮ್ಮಂಥ ಪಾಪಿಗಳೆಲ್ಲಿ ।
ಭಕ್ತಿಯಾದರೂ ಮಾಡುವುದು ಸುಲಭವಲ್ಲ । ಸಚ್ಚಿದ್ರೂಪಿಗಳಾದವರೇ ಧನ್ಯರು ॥ 60

ಈ ಭಕ್ತಿಯಾದೀತೆ ನಮ್ಮಿಂದೆ । ತರಣೋಪಾಯ ಸಿಗುವುದು ಎಲ್ಲಿಂದ ।
ಜನ್ಮವೇಹೋಯಿತಲ್ಲಾ ಮಾಡದೇ ಏನೊಂದ । ಹತಾಶರಾಗಿ ಕಾಲು ಹೋಗಿಬಿಟ್ಟಿವೆ ॥ 61

ಪ್ರೇಮಳ ಭಕ್ತರಾಗಿರುವ ಕಾಕಾ ಸಾಹೇಬರಿಗೆ । ಹಳಹಳಿ ಇರಬೇಕೇನೋ ಮನಸಿಗೆ ।
ಚಂಚಲತೆ ಬಂತೇಕೆ ಅವರ ಸುಸ್ಥಿರತೆಗೆ । ಶಾಮಾಗೆ ವಿಚಾರ ಬಿದ್ದಿತು ॥ 62

ಶಾಮ ಹೆಸರಿನಲಿ ಮಾಧವರಾವ । ಕಾಕಾರ ಬಗ್ಗೆ ಅವರಿಗೆ ಸದ್ಭಾವ ।
ಅವರಿಗೆ ಕಾಕಾರ ಈ ಸ್ವಭಾವ । ಅದಕಿರುವ ದೈನ್ಯದ ಪ್ರಭಾವ ಹಿಡಿಸಲಿಲ್ಲ ॥ 63

ಎಂದರು ಬಾಬಾರಂಥ ಕೊಡುಗೆ । ಭಾಗ್ಯದಿಂದೆ ಲಭಿಸಿದಿ ನಮಗೆ ।
ಅಂಥಲ್ಲಿ ಮಾಡುವುದು ಮುಖ ಸೊಟ್ಟಗೆ । ಅಂಥವರ ಜೀವನವೇ ವ್ಯರ್ಥ ॥ 64

ದೃಢವಾದ ಶ್ರದ್ಧೆ ಇರುವಾಗ ಸಾಯಿ ಚರಣದಲಿ । ಏತಕ್ಕಾಗಿ ಮನಸಿಗೆ ಈ ಹಳಹಳಿ ।
ನಾಥರ ಭಕ್ತಿ ಪ್ರಬಲವಿದ್ದರೂ ಇರಲಿ । ನಮ್ಮ ಭಕ್ತಿಯೂ ಭಕ್ತಿಯಲ್ಲವೇ ॥ 65

ಏಕನಾಥರ ಟೀಕೆಯ ಸಹಿತ । ಏಕಾದಶಸ್ಕಂದ ಭಾಗವತ ।
ಓದಬೇಕು ಭಾವಾರ್ಥ ರಾಮಾಯಣ ನಿತ್ಯ । ತಮಗೆ ನಿಶ್ಚಿತವಾದ ಆಜ್ಞೆಯಿದು ॥66

ಅದರಂತೆಯೇ ಹರಿಗುರುನಾಮಸ್ಮರಣ । ಈ ಬಾಬಾರ ಆಜ್ಞೆ ಪ್ರಮಾಣ ।
ತಿಳಿಯಬೇಕು ಇದರಿಂದಲೇ ನಮ್ಮ ಭವಭಯತಾರಣ । ಚಿಂತೆಯ ಕಾರಣವಾದರೂ ಏನು ನಮಗೆ ॥ 67

ಆದರೂ ಆ ನವನಾಥರ ಚರಿತ । ಅವರ ಆ ಅಸಿಧಾರಾವ್ರತ ।
ಸಾಧಿಸೀತೇ ನಮಗೆ ಯತ್ಕಿಂಚಿತ । ಸತತ ಇವೇ ಚಿಂತೆ ಕಾಕಾರಿಗೆ ॥ 68

ಮನಸಿಗದೇ ವಿಚಾರ ಹತ್ತಿತ್ತು । ನವಯೋಗಿಗಳ ಭಕ್ತಿಯ ಹಿರಿಮೆಯೆರೀತು ।
ನಮ್ಮಲ್ಲಿ ಅದು ಪ್ರಕಟವಾದೀತು । ಅದಾದಾಗಲೇ ನಮಗೆ ದೇವರು ಸಿಕ್ಕಾನು ॥ 69

ಹೀಗೆ ಮನಸಿಗೆ ಹತ್ತಿತ್ತು ಹುರಹುರ । ಕೂತಾಗ ನಿಂತಾಗ ಇದೇ ವಿಚಾರ ।
ಮರುದಿನ ನಡೆಯಿತು ಚಮತ್ಕಾರ । ಶ್ರೋತೃಗಳು ಸವಿಸ್ತರವಾಗಿ ಕೇಳಬೇಕದನು ॥ 70

ನೋಡಿರಿ ಅನುಭವದ ವೈಚಿತ್ರ್ಯವನಾದರೂ । ಪ್ರಾತಃ ಕಾಲದಲ್ಲಿ ಆನಂದರಾಯರು ।
ಪಾಖಾಡೆ ಎಂಬ ಉಪನಾಮದವರು । ಬಂದರು ಮಾಧವರಾಯರನು ಹುಡುಕುತ್ತ ॥ 71

ಅವರು ಬಂದದ್ದೂ ಬೆಳಗಿಗೆ । ಭಾಗವತವನೋದುವ ಹೊತ್ತಿಗೆ ।
ಕುಳಿತರು ಮಾಧವರಾಯರ ಬಳಿಗೆ । ಕನಸಿನ ಮೋಜನ್ನು ಹೇಳುತ್ತ ॥ 72

ಇತ್ತ ಪೋಥಿವಾಚನ ನಡೆದಿದ್ದು । ಅತ್ತ ಅವರಿಬ್ಬರ ಗುಜುಗುಜು ಮಾತು ನಡೆಯುತಿದ್ದು ।
ಅದರಿಂದ ವಕ್ತಶ್ರೋತೃಗಳೆದಿಬ್ಬರದೂ । ಮನ ಅಸ್ಥಿರವಾಯಿತು ॥ 73

ಚಂಚಲ ವೃತ್ತಿಯ ಆನಂದರಾಯಸು । ಮಾಧವರಾಯರಿಗೆ ಕನಸು ಹೇಳುತಿದ್ದರು ।
ಹೇಳು ಕೇಳುತಿಬ್ಬರೂ ಗುಸುಗುಸು ಮಾತನಾಡುತ್ತಿದ್ದರು । ಅದರಿಂದ ಕ್ಷಣವೊಂದು ಓದು ನಿಂತಿತು ॥ 74

ಕಾಕಾ ಸಾಹೇಬರು ಕೇಳಿದರವರಿಗೆ । ಏನು ಸಂಗತಿ ನಡೆದಿದ್ದೆ ಇಬ್ಬರೊಳಗೆ ।
ಇಬ್ಬರೂ ಮಾಡುತಿರುವಿರಿ ಖುಷಿ ಹೀಗೆ । ನಮಗೂ ಒಂದಿಷ್ಟು ಹೇಳಬಹುದಲ್ಲ ॥ 75

ಆಗ ಮಾಧವರಾಯರೆಂದುದು । ನಿನ್ನೆಯೇ ಬಂದಿತ್ತು ಶಂಕೆ ನಿಮಗೊಂದು ।
ಅದಕೆ ಸಮಾಧಾನ ಸಿಕ್ಕಿದೆ ಇಲ್ಲೊಂದು । ತಾರಕ ಭಕ್ತಿ ಲಕ್ಷಣವೆಂಬುದು ॥ 76

ಕೇಳಿರಿ ಪಾಖಾಡೆಯವರ ಸ್ವಪ್ನ । ಬಾಬಾ ಹೇಗೆ ಅವರಿಗಿತ್ತರು ದರ್ಶನ ।
ಅದರಿಂದಾಗುವದು ನಿಮ್ಮ ಶಂಕೆಯ ನಿರಸನ । ಗುರುಪದವಂದನ ಭಕ್ತಿಯೇ ಸಾಕು ॥ 77

ಬಳಿಕ ಈ ಸ್ವಪ್ನ ಕೇಳಬೇಕೆಂದು । ಪ್ರಬಲ ಜಿಜ್ಞಾಸೆ ಎಲ್ಲರದೂ ।
ಅದರಲ್ಲೂ ವಿಶೇಷವಾಗಿ ಕಾಕಾರದು । ಶಂಕೆ ಆರಂಭವಾದದ್ದೂ ಅವರಿಂದಲೇ ॥ 78

ತಿಳಿದು ಎಲ್ಲರದೂ ಇರುವ ಇಚ್ಛೆಯನು । ಆನಂದರಾಯರು ಹೇಳಿದರು ಸ್ವಪ್ನವನು ।
ಚಿತ್ತದಲ್ಲಿಟ್ಟುಕೊಂಡು ಸದ್ಭಾವವನು । ಶ್ರೋತೃಗಳಿಗೂ ಆಶ್ಚರ್ಯವಾಯಿತದರಿಂದ ॥ 79

ಒಂದು ಮಹಾ ಸಮುದ್ರದಲ್ಲಿ । ನಾ ನಿಂತಿದ್ದೆ ನಡುಮಟ್ಟ ನೀರಿನಲ್ಲಿ ।
ಅಲ್ಲಿ ನನ್ನ ದೃಷ್ಟಿ ಪಥದಲ್ಲಿ । ಅಕಲ್ಪಿತವಾಗಿ ಬಂದರು ಶ್ರೀ ಸಮರ್ಥರು ॥ 80

ರತ್ನ ಖಚಿತ ಸಿಂಹಾಸನ । ಅದರ ಮೇಲೆ ಸಾಯಿ ವಿರಜಮಾನ ।
ನೀರಿನಲ್ಲಿ ಮುಳುಗಿವೆ ಅವರ ಚರಣ । ಹೀಗೆ ನಾನು ಅವರನು ಕಂಡೆ ॥ 81

ನೋಡಿ ಆ ಮನೋಹರ ರೂಪವನು । ಆಯಿತು ಅತ್ಯಂತ ಸಮಾಧಾನ ।
ಅದು ಸ್ವಪ್ನ ಪಂದೆನಿಸದ ನನ್ನ ಮನ । ದರ್ಶನದಿಂದ ಸುಖಸಂಪನ್ನವಾಯಿತು ॥ 82

ಏನು ಈ ಯೋಗದ ವಿಸ್ಮಯವಾದರೂ । ಅಲ್ಲಿಯೇ ನಿಂತಿದ್ದರು ಮಾಧವರಾಯರು ।
ಚರಣಗಳ ಸ್ಪರ್ಶಿಸಿದರೆಂದವರು । ಭಾವಪುರಃಸರವಾಗಿ ನನಗೆ ॥ 83

ಆಗ ನಾನವರಿಗೆ ಹೇಳಿದೆ । ನನಗಾದರೂ ಬಹಳ ಇಚ್ಛೆ ಇದೆ ।
ಆದರಾ ಪಾದದ್ವಯ ಉದಕದಲ್ಲಡಗಿವೆ । ನನ್ನ ಕೈಗೆ ಹೇಗೆ ಸಿಕ್ಕಾವು ॥ 84

ನೀರಿನಲ್ಲಿರುವಾಗ ಚರಣ । ಚರಣದಲಿ ಹೇಗೆ ಇಡಲಿ ಶಿರವನ ।
ಅದಕೆ ನಾನೇನು ಮಾಡಬೇಕಿನ್ನ । ನನಗೇನೂ ತೋಚದಾಗಿದೆ ॥ 85

ಇದನು ಕೇಳಿದ ಮಾಧವರಾಯರು । ಕೇಳಿರಿ ಬಾಬಾರಿಗೆ ಏನೆಂದರು ।
ದೇವಾ ತೆಗೆಯಯ್ಯಾ ಕಾಲು ಮೇಲೆ ಇನ್ನಾದರೂ । ನೀರಿನಲ್ಲವು ಮುಳುಗಿವೆಯಲ್ಲಾ ॥ 86

ಈ ರೀತಿ ಹೇಳಿದ ಕೂಡಲೇ । ಬಾಬಾ ಕಾಲುಗಳ ತೆಗೆದರು ಮೇಲೆ ।
ಆನಂದರಾಯರಾಗ ತಡವಿಲ್ಲದಲೇ । ಆ ಚರಣಗಳ ಹಿಡಿದು ವಂದಿಸಿದರು ॥ 87

ಹೀಗೆ ದೃಢವಾಗಿ ಹಿಡಿಯಲು ಚರಣ । ಬಾಬಾ ಇತ್ತರು ಆಶೀರ್ವಚನ ।
"ಆಗುವುದು ಹೋಗು ನಿನ್ನ ಕಲ್ಯಾಣ । ಹೆದರುವ ಕಾರಣವೇನೂ ಇರದು" ॥ 88

ಬಾಬಾ ಮತ್ತೆ ನುಡಿದದ್ದು । "ರೇಶಿಮೆಯಂಚಿನ ಧೋತ್ರವನೊಂದು ।
ನನ್ನ ಶ್ಯಾಮನಿಗೆ ಕೊಟ್ಟು ಬಿಡು । ನಿನಗದರಿಂದ ಸುಖವಾಗುವುದು" ॥ 89

ಅದಕೆ ಆ ಆಜ್ಞೆಯಶಿರದಲಿ ಹೊತ್ತುಕೊಂಡು । ನಾ ರೇಶಿಮೆಯಂಚಿನ ಧೋತ್ರವ ತಂದು ।
ಕಾಕಾ ಸಾಹೇಬರೇ ತಮ್ಮ ಕೈಯಿಂದಲೇ ಅದು । ಮಾಧವರಾಯರು ಸ್ವೀಕರಿಸುವಂತೆ ಮಾಡಿ ॥ 90

ಮನ್ನಿಸಿ ಎನ್ನ ಈ ವಿನಂತಿಯನು । ಮಾಧವರಾಯರು ಉಡುವಂತೆ ಮಾಡಿರಿದನು ।
ಅದರಿಂದ ಸಮಾಧಾನಗೋಳಿಸಿರೆನ್ನ ಮನವನು । ನಾನದರಿಂದ ಬಲು ಉಪಕೃತನಾಗುವೆನು ॥ 91

ಆನಂದರಾಯರ ಮಾತಿದು । ಸ್ವತಃ ಮಾಧವರಾಯರೇ ಕೇಳುತಿದ್ದು ।
ಕೊಡ ಹೋದಾಗ ಕಾಕಾ ಸಾಹೇಬ ವಸ್ತ್ರವನು । ಮಾಧವರಾಯಸು ಸ್ವೀಕರಿಸದಾದರು ॥ 92

ಅದೇನು ಕನಸು ಎಂದವರ ಮನದಲಿ । ಅದರ ಗುರುತು ನನಗೇ ಸಿಗಲಿ ।
ದೃಷ್ಟಾಂತವೇನಾದರೂ ಆಗಲಿ । ಆಗ ತಾನದನು ಸ್ವೀಕರಿಬೇಕೆಂದು ॥ 93

ಆಗ ಕಾಕಾ ಸಾಹೇಬರೆಂದದ್ದು । ಇನ್ನು ಬಾಬಾರದೇ ಪ್ರಚೀತಿ ನೋಡುವದು ।
ಉಚಿತವೋ ಅನುಚಿತವೋ ಅದನು ತೆಗೆದುಕೊಳ್ಳುವದು । ಚೀಟಿ ಬರೆದದನು ತಿಳಿದುಕೊಳ್ಳುವಾ ॥ 94

ಬಾಬಾ ಚೀಟಿ ಕೊಡುವರು ಹೇಗೆ । ತಿಳಿದುಕೊಳ್ಳುವ ಅವರಾಜ್ಞೆಯೇ ಹಾಗೆ ।
ಚೀಟಿಗಳ ಬಾಬಾರ ಚರಣದ ಬಳಿಗೆ । ಸಂಕಲ್ಪ ಮಾಡಿ ಹಾಕಿದರು ॥ 95

ಭಾರವೆಲ್ಲ ಕಾಕಾ ಸಾಹೇಬರದು । ಸಂಪೂರ್ಣವಾಗಿ ಸಾಯಿಯ ಮೇಲಿದ್ದು ।
ಮೊದಲವರ ವಿಚಾರ ಪಡೆದು । ಬಳಿಕ ವ್ಯವಹಾರ ಮಾಡಬೇಕು ॥ 96

ಇದಾಗಿದ್ದೀತು ಬಾಬಾ ಇರುವಾಗಿನದು । ಅದೇ ಕ್ರಮ ಈಗವರ ಪಶ್ಚಾತ್ತದ್ದೂ ।
ಚೀಟಿ ಹಾಕಿ ಆಜ್ಞೆ ಪಡೆಯುವುದು । ಅದರಂತೆಯೇ ನಡೆಯುತಿದ್ದರು ನಿಶ್ಚಯದಿ ॥ 97

ಕಾರ್ಯವು ಸಣ್ಣದೇ ಆಯಿತು ದೊಡ್ಡದೇ ಆಯಿತು । ಚೀಟಿ ಹಾಕಿ ಆಜ್ಞೆ ಪಡೆಯದ ಹೊರತು ।
ಪ್ರಾಣ ಹೋದರು ಏನು ಮಾಡಕ್ಕೂಡದು । ಅವರನುಜ್ಞೆಯೇ ಪ್ರಮಾಣ ಯಾವಾಗಲೂ ॥ 98

ದೇಹವೇ ತಮ್ಮದಲ್ಲದಿರುವಾಗ । ಒಮ್ಮೆ ಅದ ಬಾಬಾರ ಚರಣಕ್ಕೆ ಅರ್ಪಿಸಿದಾಗ ।
ಅದರ ಚಲನವಲನಕ್ಕೆ ಹೀಗಿರುವಾಗ । ನಮಗೆಲ್ಲಿ ಅಧಿಕಾರಬಂತು ॥ 99

ನೋಡಿರಿ ಈ ಒಂದು ಭಾವನೆಯಿಂದ । ಲಕ್ಷಗಟ್ಟಲೆ ಆದಾಯ ಬರುವುದ ।
ತಳ್ಳಿ ಬಿಟ್ಟರು ಆಚೆ ಪ್ರಕಾರದ । ದೃಢ ನಿರ್ಧಾರ ಕೊನೆಯವರೆಗಿತ್ತು ॥ 100

'ಫಲ ಕೊಡುವದು ನಿನ್ನ ಪ್ರಾಮಾಣಿಕತನ । ನಿನಗಾಗಿ ಕಳಿಸುವೆ ನಾ ವಿಮಾನ ।
ಅದರಲ್ಲಿ ಕುಳ್ಳಿರಿಸಿ ಕರೆದೊಯ್ಯುವೆ ನಿನ್ನ । ನೀ ನಿಃಶ್ಚಿಂತನಾಗಿರು' ॥ 101

ಇದು ಬಾಬಾರ ಪ್ರಸಾದೋಕ್ತಿ । ಪ್ರತಿ ಅಕ್ಷರದ್ದೂ ಬಂದು ಪ್ರಚೀತಿ ।
ಗೊತ್ತಿದೆ ಕಾಕಾರ ನಿರ್ಗಮ ಸ್ಥಿತಿ । ಸಾಯಿ ಲೀಲಾ ವಾಚರಿಗೆ ॥ 102

ಆದಾಗ ಈ ಸಂಗತಿ ಸ್ಮರಣ । ಮತ್ತು ಏನು ಆ ವಿಮಾನ ಪ್ರಯಾಣ ।
ಎಂಥ ಆನಂದಮಯ ಮರಣ । ಗುರುನಾಮಾವರ್ತನ ದೊಂದಿಗೆ ॥ 103

ದೀಕ್ಷಿತರು ತಾವಿದ್ದು ನಿಷ್ಠರು ಹೀಗೆ । ನಿರಂತರ ಸಾಯಿ ಸ್ಮರಣ ಮನದೊಳಗೆ ।
ಇದನೇ ಕಲಿಸಿದರು ಇಷ್ಟ ಮಿತ್ರರಿಗೆ । ಗುರುಚರಣದಲಿ ಲೀನರಾದರು ॥ 104

ಇನ್ನು ಹಿಂದಿನ ಕಥಾನುಸಾರವಿಂತು । ಚೀಟಿಯ ವಿಚಾರ ಇಲ್ಲರಿಗೂ ಹಿಡಿಸಿತು ।
ಇಬ್ಬರಿಗೂ ಕಾಕಾರಲಿ ಪ್ರೀತಿ ಇತ್ತು । ತಡವಿಲ್ಲದೆ ಚೀಡಿಗಳ ಬರೆಸಿದರು ॥ 105

ಒಂದು ಚೀಟಿಯಲಿ ಧೋತರ ತೆಗೆದುಕೊಳ್ಳಬೇಕೆಂದು । ಇನ್ನೊಂದರಲಿ ತೆಗೆದುಕೊಳ್ಳಬಾರದು ।
ಸಾಯಿ ಚರಣದಲಿಟ್ಟರು ಚೀಟಿಗಳೆರಡೂ । ಛಾಯಾ ಚಿತ್ರದೆದುರಿಗೆ ॥ 106

ಅಲ್ಲಿಯೇ ಇದ್ದ ಒಂದು ಮಗುವಿಗೆ । ಹೇಳಿದರು ಚೀಟಿ ತೆಗೆಯುವುದಕೆ ।
ತೆಗೆದಾಗ ಬಂದಿತು ಧೋತರ ತೆಗೆದುಕೊಳ್ಳವುದಕೆ । ಆಜ್ಞೆ ಮಾಧವರಾಯರಿಗೆ ॥107

ಹೇಗೆ ಸ್ವಪ್ನದಲಿ ಚೀಟಿಯಾಲೂ ಹಾಗೇ । ಆನಂದವಾಯಿತು ಎಲ್ಲರ ಮನಸಿಗೆ ।
ಇಟ್ಟರು ಶ್ಯಾಮನ ಕೈಯೊಳಗೆ । ರೇಶಿಮೆಯಂಚಿನ ಧೋತರವ ತರಿಸಿ ॥ 108

ಅವರ ಸ್ವಪ್ನ ಚೀಟಿ ಇವರದು । ಎರಡರ ವಿಚಾರ ಒಂದೇ ಆದುದು ।
ಆದ ಪರಮಾನಂದ ಮನ ಹಿಡಿಸದು । ಸುಖಸುಂತುಷ್ಟಿ ಇಬ್ಬರಿಗೂ ॥ 109

ಬಹಳ ಖುಷಿಯಾಯಿತು ಮಾಧವರಾಯರಿಗೆ । ಆನಂದರಾಯರೂ ತೇಲಿದರು ಖುಷಿಯೊಳಗೆ ।
ಪರಿಪುಷ್ಟಿ ದೊರಕಿತು ಸಾಯಿ ಭಕ್ತಿಗೆ । ಶಂಕಾ ನಿರಸನವಾಯಿತು ಕಾಕಾರಿಗೆ ॥ 110

ಏನು ಈ ಎಲ್ಲ ಕಥೆಯ ಸಾರ । ತಮ್ಮಷ್ಟಕ್ಕೇ ಮಾಡಬೇಕು ವಿಚಾರ ।
ಗುರುಚರಣದಲಿರಿಸಿದರೆ ಶಿರ । ಗುರುವದನೋದ್ಗಾರಗಳ ಮನ್ನಿಸಬೇಕು ॥ 111

ತಾವಾಗಿಯೇ ತಮ್ಮ ಸ್ಥಿತಿಯನ್ನು । ತಮ್ಮ ನಿಲುವು ಅಥವಾ ಚಿತ್ತ ವೃತ್ತಿಯನು ।
ಗುರು ಸಂಪೂರ್ಣವಾಗಿ ತಿಳಿದಿರುವನು । ಅದರಿಂದ ಉದ್ಧಾರದ ಮಾರ್ಗವನೂ ಅವನೇ ॥112

ರೋಗವಿದ್ದಂತೆ ನಿದಾನ । ಅದಕೆ ತಕ್ಕಂತೆ ಔಷಧ ಅನುಪಾನ ।
ಮಾಡಲು ಭವರೋಗ ನಿವಾರಣ । ಗುರು ನೇಮಿಸುವನು ಶಿಷ್ಯನಿಗೆ ॥ 113

ಗುರುವು ತಾ ಮಾಡುತಿದ್ದುದನು । ಮಾಡಬಾರದದರ ಅನುಕರಣೆಯನು ।
ನಿಮಗಾಗಿ ಗುರುಮುಖದಿಂದ ಹೊರಟ ನುಡಿಯನು । ಭಕ್ತಿ ಭಾವದಿಂದ ಆದರಿಸಬೇಕು ॥114

ಅದೇ ಶಬ್ದದ ಮೇಲಿಟ್ಟು ಮನ । ಮಾಡುತಿರಬೇಕದರದೇ ಚಿಂತನ ।
ಅದೇ ನಿಮ್ಮ ಉದ್ಧಾರಕೆ ಕಾರಣ । ಎಂಬದುನು ನಿರಂತರ ನೆನಪಿಡಬೇಕು ॥ 115

ಗುರು ಹೇಳಿದ ಪುಸ್ತಕ ಪುರಾಣ । ಅದಂತೂ ತದ್ವಚನದ ಸ್ಪಷ್ಟೀಕರಣ ।
ಮುಖ್ಯ ಉಪದೇಶದತ್ತಿರಲಿ ಗಮನ । ಅದೇ ನಿಗಮಜ್ಞಾನ ತಮ್ಮದು ॥ 116

ಯಾವುದೇ ಸಂತರ ವಚನ । ಮಾಡಬಾರದದರ ಅಪಮಾನ ।
ತಮ್ಮ ತಾಯಿಯೇ ತಮ್ಮ ಜೋಪಾನ । ಮಾಡುವಳೇ ಹೊರತು ಅನ್ಯರಲ್ಲ ॥ 117

ನಿಜವಾದ ಮಮತೆಯ ಅಂತಃಕರಣ । ಮಕ್ಕಳಿಗಾಗಿ ಅವಳದೇ ಕರುಣಾ ।
ಮಗು ಅರಿಯದದರ ಸುಖವನ । ಅದು ಬಯಸಿದ್ದನ್ನವಳು ಈಯುವಳು ॥ 118

ಬೇಕಾದಷ್ಟು ಸಂತರು ಸೃಷ್ಟಿಯಲಿದ್ದು । "ತನ್ನಪ್ಪನವ ತನ್ನಪ್ಪನೇ" ಎಂದು ।
ಸಾಯಿ ಮುಖದ ಈ ವಚನವೊಂದು । ಹೃದಯ ಪಟಲದ ಮೇಲೆ ಕೊರೆದಿಡಿ ॥119

ಅದಕೇ ಸಾಯಿ ಹೇಳಿದುದನ । ಅಲ್ಲಿಯೇ ಇರಲಿ ಅನುಸಂಧಾನ ।
ಕೊನೆಗೆ ಅವನೇ ಕೃಪಾನಿಧಾನ । ತಾಪತ್ರಯಗಳ ಶಮನ ಮಾಡುವನು ॥ 120

ಅವನ ಲೀಲೆ ಅವನಿಗೇ ತಿಳಿದಿರಬೇಕು । ನಾವು ಆ ಕೌತುಕವ ಕಣ್ಣಿಂದ ನೋಡುತಿರಬೇಕು ।
ಏನದ್ಭುತ ಅವನ ಆಟವಿರಬೇಕು । ಸಹಜದಲಿ ಮಾಡಿ ತೋರಿಸಿ ಬಿಡುವ ॥ 121

ಬೇರೆಯವರು ಹೇಳುತಿದ್ದುದನು । ಸುಮ್ಮನೇ ಕೇಳಿಕೊಳ್ಳಬೇಕದನು ।
ಬಿಡಬಾರದು ತಮ್ಮ ಅನುಸಂಧಾನವನು । ನಿಜಗುರು ವಚನಗಳ ಮರೆಯಬಾರದು ॥ 122

ಅದರಲ್ಲಿಯೇ ಇದೆ ಪರಮಕಲ್ಯಾಣ । ಅದರಿಂದಲೇ ಆಗುವದು ಭವಭಯ ತರಣ ।
ಅದರಲ್ಲಿಯೇ ಎಲ್ಲ ಪೋಥಿ ಪುರಾಣ । ಜಪತಪಾನುಷ್ಠಾನ ಎಲ್ಲ ಅದೇ ॥ 123

ಸಾರಾಂಶವೆಂದರೆ ಗುರುವಿನಲಿಡಿರಿ ಪ್ರೀತಿಯನ । ಅನನ್ಯ ಭಾವದಿಂದವಗೆ ಮಾಡಿರಿ ನಮನ ।
ದಿನಕರನೆದುರಲಿ ಕತ್ತಲಿದೇನ । ಅಂತವಗೆ ಭವಸಾಗರವೆಂಬುದೇ ಇಲ್ಲ ॥ 124

ಇದ್ದರೆಲ್ಲೂ ಈ ಸೃಷ್ಟಿಯಲ್ಲಿ । ಹತ್ತಿರ ಅಥವಾ ದೂರದಲ್ಲಿ ।
ಏಳು ಸಮುದ್ರಗಳಾಚೆಯೇ ಇರಲಿ । ಭಕ್ತರಲಿ ನಿತಾಂತ ಪ್ರೀತಿ ಅವಗೆ ॥ 125

ಇರಲಿ ಬರೆಯುತ್ತಿರುವಾಗ ಹೀಗೆ । ಕಥೆಯೊಂದು ಬಂದಿತು ನೆನಪಿಗೆ ।
ಒಬ್ಬರದು ನೋಡಿ ಬೇರೊಬ್ಬ ಹಾಗೇ । ಮಾಡಲು ವಿಪತ್ತಿಗೊಳಗಾಗುವ ॥ 126

ಒಮ್ಮೆ ಬಾಬಾ ಮಶೀದಿಯಲ್ಲಿ । ಇರುವಾಗ ಮ್ಹಾಳಸಾಪತಿಯ ಜೊತೆಯಲಿ ।
ಹಿಂದಿನ ಹಲಿಗೆಯ ಹಾಸಿಗೆ ನೆನಪಿರಲಿ । ಅಕಸ್ಮಾತ್ತಾಗಿ ಬಂದಿತು ॥ 127

ಅದರ ಅಗಲ ಒಂದೂ ಕಾಲೂ ಗೇಣು । ಎರಡೂ ತುದಿಗೆ ಕಟ್ಟಿದೆ ಚಿಂದಿಗಳನ್ನು ।
ಮಶೀದಿಯ ಛಾವಣಿಗೆ ಕಟ್ಟುತ್ತಿದ್ದರದನು । ಅದರ ಜೋಕಾಲಿಯನ್ನು ಮಾಡಿ ॥ 128

ಮಲಗಬಾರದು ಕತ್ತಲೆಯಲ್ಲಿ । ಎಂದು ತಲೆದೆಶೆ ಕಾಲುದೆಶೆಗಳಲಿ ।
ಹಣತೆಗಳು ಉರಿಯುತಿದ್ದವು ರಾತ್ರಿಯಲ್ಲಿ । ಬಾಬಾ ಆ ಹಲಿಗೆಯ ಮೇಲೆ ಮಲಗುತಿದ್ದರು ॥ 129

ಸಮೂಲ ವೃತ್ತವನು ಈ ಹಲಿಗೆಯ ವಿಷಯದಲಿ । ಹಿಂದಿನ ಒಂದು ಅಧ್ಯಾಯದಲಿ ।
ಹೇಳಿದೆ ಈಗ ಈ ಅಧ್ಯಾಯದಲಿ । ಅದರ ಮಹತ್ವವ ಕೇಳಿರಿ ॥ 130

ಒಮ್ಮೆ ಈ ಹಲಿಗೆಯ ಮಹತ್ವವನು । ಬಾಬಾ ಮನೋಭಾವದಿ ವರ್ಣಿಸಿದರದನು ।
ಕಾಕಾಸಾಹೇಬ ದೀಕ್ಷಿತರ ಬಯಕೆಯನು । ಏನೆಂಬದನು ಕೇಳಿರಿ ॥ 131

ಕಾಕಾ ಎಂದರು ಬಾಬಾರಿಗೆ । ನೀವು ಮಲಗಲುಬೇಕು ಹಲಿಗೆ ।
ನಾನೇ ಅದನು ಕಟ್ಟಿ ಕೊಟ್ಟಾಗ್ಯೆ । ಸ್ವಸ್ಥ ಚಿತ್ತದಿ ಮಲಗಬೇಕದರ ಮೇಲೆ ॥ 132

ಬಾಬಾ ಅವರಿಗೆ ಉತ್ತರಿಸಿದರಿಂತು । "ಮ್ಹಾಳಸಾಪತಿಯನು ಕೆಳಗೆ ಬಿಟ್ಟು ।
ನಾನೇ ಮೇಲೆ ಮಲಗುವದೆಂತು । ಇರಲಿ ನಾ ಕೆಳಗೇ ಮಲಗುವೆ" ॥ 133

ಅದಕೆ ಕಾಕಾ ಅತಿ ಪ್ರೀತಿಯಿಂದ । "ಇನ್ನೊಂದು ಹಲಗೆಯ ಕಟ್ಟೋಣ" ಎಂದ ।
"ಒಂದರ ಮೇಲೆ ನೀವು ಮಲಗಿ । ಇನ್ನೊಂದರ ಮೇಲೆ ಮ್ಹಾಳಸಾಪತಿ ಮಲಗಲಿ" ॥ 134

ಅದಕೆ ಬಾಬಾ ಉತ್ತರವಿತ್ತುದು । ಅವನೇಕೆ ಹಲಿಗೆಯ ಮೇಲೆ ಮಲಗುವದು ।
ಯಾರಲ್ಲಿ ಗುಣಪ್ರಕರವಿರುವದು । ಅವರೇ ಹಲಿಗೆಯ ಮೇಲೆ ಮಲಗಬೇಕು ॥ 135

ಸುಲಭವಲ್ಲ ಹಲಿಗೆಯ ಮೇಲೆ ಮಲಗುವದು । ನಾನಲ್ಲದೇ ಬೇರಾರೂ ಅಲ್ಲಿ ಮಲಗಬಹುದು ।
ನಿದ್ರೆ ಮಾಡದೇ ಕಣ್ತೆರೆದಿರುವದು । ಅಂಥವರಿಗೇ ಈ ಶಯನ ಸಾಧ್ಯ ॥ 136

ನಾನು ಮಲಗತೊಡಗಿದಾಗ । ಆಜ್ಞಾಪಿಸಿದ್ದೆ ನಾನವನಿಗ ।
ಕುಳಿತಿರು ನನ್ನ ಹತ್ತಿರ ಹೀಗ । ನನ್ನೆದೆಯ ಮೇಲೆ ಕೈಯಿಟ್ಟು ॥ 137

ಆ ಕೆಲಸವೂ ಆಗಲಿಲ್ಲ ಇವನಿಂದ । ಕುಳಿತಲ್ಲಿಯೇ ತೂಕಡಿಸತೊಡಗಿದ ।
ಹಲಗೆಯ ಹಾಸಿಗೆ ನನ್ನದ । ಇಂಥವನಿಗದು ಸರಿಯಲ್ಲ ॥ 138

ನಾಮಸ್ಮರಣೆ ನಡೆದಿರುವದು ಹೃದಯದಲ್ಲಿ । ನೋಡಿಕೋ ಕೈಯಿಟ್ಟು ಅಲ್ಲಿ ।
ನಿದ್ರೆ ಹತ್ತಿದರೆ ಎಚ್ಚರಗೊಳಿಸು ಎನುತಲಿ । ಆಜ್ಞಾಪಿಸಿದರೂ ಅವನಿಗೆ ॥ 139

ಅವನಿಗೇ ನಿದ್ದೆ ಹತ್ತಲು । ಅವನ ಕೈ ಭಾರವಾಯಿತು ಕಲ್ಲಿನಂತೆ ।
"ಭಗತ್" ಎಂದಾಗ ನಿದ್ದೆ ಹಾರಲು । ಗಡಬಡಿಸಿ ಕಣ್ಣು ತೆರೆಯುತಿದ್ದ ॥ 140

ನೆಲದ ಮೇಲೆ ಕುಳಿತುಕೊಳ್ಳಲಿಕ್ಕಾಗದು । ಯಾರ ಆಸನವೇ ಸ್ಥಿರವಿರದು ।
ಯಾವನು ನಿದ್ರಾತಮ ಕಿಂಕರನಿದ್ದೂ ನಿದ್ರಾದಾಸನಾಗಿದ್ದು । ಎತ್ತರದಲಿ ಹೇಗೆ ಮಲಗಿಯಾನು ॥ 141

ಅದಕ್ಕೇ ತನ್ನದು ತನಗೆ । ಇನ್ನೊಬ್ಬರದು ಇನ್ನೊಬ್ಬರಿಗೆ" ।
ಇದನು ಬಾಬಾ ಕೆಲವೊಂದು ಪ್ರಸಂಗದೊಳಗೆ । ಭಕ್ತಾನುರಾಗದಿಂದ ಹೇಳುತಿದ್ದರು ॥ 142


ಸಾಯಿನಾಥರ ಲೀಲೆ ಅಗಾಧ । ಅದರಿಂದ ಹೇಮಾಡನವರಿಗೆ ಶರಣಾದ ।
ಅವರೂ ಇತ್ತು ಕೃಪಾಶೀರ್ವಾದ । ಅಖಂಡ ನಿಜಸ್ಮರಣದಲಿಟ್ಟರು ॥ 143


ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಈ ಸಾಯಿ ಸಮರ್ಥ ಸಚ್ಚರಿತೆ । ಶ್ರೀ ಗುರುಚರಣ ಮಹಿಮಾ ನಾಮ
ಪಂಚಚತ್ವಾರಿಂಶೋಽಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

639.1





## ॥ ಅಥಃ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ನಲವತ್ತಾರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಶ್ರೀ ಸಾಯಿ ನಿನ್ನ ಚರಣ ಧನ್ಯ । ನಿನ್ನ ಸ್ಮರಣೆ ಧನ್ಯ ।
ನಿನ್ನ ದರ್ಶನ ಧನ್ಯ । ಕರ್ಮಬಂಧನ ಮೋಚಕವಾದಂಥದು ॥ 1

ಸದ್ಯ ಇದ್ದರೂ ಅದೃಶ್ಯ ಮೂರ್ತಿ । ಇಟ್ಟು ನಡೆದರೆ ಭಾವ ಭಕ್ತಿ ।
ಸಮಾಧಿಸ್ಥರಿದ್ದೂ ಬೆಳಗುವದು ಜ್ಯೋತಿ । ಸದ್ಯಃ ಪ್ರತೀತಿ ಭಕ್ತರಿಗೆ ॥ 2

ಸೂಕ್ಷ್ಮ ದಾರವ ಹೀಗೆ ಹಿಡಿದಿರುವೆ । ನೋಡ ಹೋದರೆ ಕಾಣಗೊಡದಿರುವೆ ।
ಆದರದರಿಂದ ಭಕ್ತರ ಎಳೆದು ತರುವೆ । ದೇಶ ವಿದೇಶಗಳೆಲ್ಲೇ ಇರಲಿ ॥ 3

ತಂದು ಬಿಡುವೆ ನಿಜ ಚರಣದ ಬಳಿಗೆ । ಪ್ರೀತಿಯಿಂದ ಹಾಕಿಕೊಳ್ಳುವೆ ಉಡಿಗೆ ।
ನಿಜಬಾಲಕನನು ತಾಯಿ ಹೇಗೆ । ಹಾಗೆ ನೀನವನ ಕಾಪಾಡುವೆ ॥ 4

ಸೂತ್ರವ ಚಲಿಸುವೆ ಹೀಗೆ । ಎಲ್ಲಿರುವೆಯೆಂಬದು ತಿಳಿಯದು ಯಾರಿಗೆ ।
ಆದರೆ ಪರಿಣಾಮ ನೋಡಲು ಎನಿಸುವದು ಮನಸಿಗೆ । ನೀನಿರುವೆ ಭಕ್ತರ ಬೆಂಬಲಕೆ ॥ 5

ಜ್ಞಾನಿಗಳು ಪಂಡಿತರು ತಿಳಿದವರೆಲ್ಲರೂ । ಅಭಿಮಾನದಿಂದ ಸಂಸಾರ ಗರ್ತದಲಿ ಬೀಳುವರು ।
ಸಾಧು ಸಜ್ಜನ ಅಜ್ಞಾನಿಯಾದವರು । ಎಲ್ಲರ ನಿಜಸತ್ತೆಯಲಿ ಆಡಿಸುವೆ ॥ 6

ಒಳಗೊಳಗೇ ಎಲ್ಲ ಆಟ ಆಡಿಸುವೆ । ಮತ್ತೆ ಅಲಿಪ್ತತೆಯ ತೋರಿಸಿಕೊಳುವೆ ।
ಮಾಡಿಯೂ ಮಾಡದವನೆನಿಸಿಕೊಳುವೆ । ನಿನ್ನ ಚರಿತ್ರೆ ಯಾರಿಗೂ ತಿಳಿಯದು ॥ 7

ಅದಕ್ಕೇ ಕಾಯಾ ವಾಚೆ ಮನಗಳನ । ನಿನ್ನ ಚರಣಕೆ ಮಾಡಿ ಅರ್ಪಣ ।
ಮುಖದಲಿ ನಿರಂತರ ನಾಮಸ್ಮರಣ । ಪಾಪಕ್ಷಾಲನವಾಗುವದು ॥ 8

ಸಕಾಮರ ಕಾಮನೆ ಪೂರೈಸುವಿ । ನಿಷ್ಕಾಮರಿಗೆ ನಿಜಸುಖಧಾಮ ಕೊಡುವಿ ।
ಹೀಗೆ ನಿನ್ನ ನಾಮ ಬಲು ಸವಿ । ಸುಲಭ ಉಪಾಯವು ಸದ್ಭಕ್ತರಿಗೆ ॥ 9

ಅದರಿಂದ ಪಾಪದ್ದಾಗುವದು ಕ್ಷಯ । ರಜತಮಗಳು ನಾಶವಾಗುವವು ನಿಃಸಂಶಯ ।
ಕ್ರಮಕ್ರಮವಾಗಿ ಸತ್ವಗುಣಗಳ ಉಪಚಯ । ತದನಂತರ ಧರ್ಮಸಂಚಯ ॥ 10

ಧರ್ಮ ವೃತ್ತಿಯಾಗಲು ಜಾಗೃತ । ವೈರಾಗ್ಯ ಬರುವದು ಹಿಂದೆ ಓಡುತ ।
ವಿಷಯವು ನಾಮಶೇಷವಾಗುತ । ಕೂಡಲೇ ನಿಜಜ್ಞಾನ ಪ್ರಕಟವಾಗುವದು ॥ 11

ವಿವೇಕಕ್ಕೆ ಜ್ಞಾನ ಲಭಿಸಲು । ಅನುಸಂಧಾನವಾಗುವದು ಸ್ವಸ್ವರೂಪದೊಳು ।
ಅದೇ ಅವಸ್ಥಾನ ಗುರುಪದದೊಳು । ಪೂರ್ಣ'ಗುರ್ವರ್ಪಣ' ನಾಮವಿದಕೆ ॥ 12

ಮನ ಸಾಯಿ ಪದದಲಿ ಅರ್ಪಣ । ಆಗಿದೆ ಎನುವುದಕೆ ಒಂದೇ ಕಾರಣ ।
ಸಾಧಕನಾಗುವ ಶಾಂತಿ ಪ್ರವಣ । ನಿಜಭಕ್ತಿಯಲಿ ಪೂರ್ಣ ಸಂತುಷ್ಟ ॥ 13

ಸಪ್ರೇಮ ಗುರುಭಕ್ತಿಗೆಂಬರು 'ಧರ್ಮ' । ಅವನೇ ನಾನೆಂದರಿಯುವದೇ 'ಜ್ಞಾನಮರ್ಮ' ।
ವಿಷಯಗಳಲರತಿಯೇ ವೈರಾಗ್ಯ 'ಪರಮ' । ಸಂಸಾರಕೆ 'ಉಪರಮ' ಅಂಥಲ್ಲಿ ॥ 14

ಇಂಥ ಭಕ್ತಿಯ ಮಹಿಮೆ ಧನ್ಯ । ಮಾಡಲು ಮನಃಪೂರ್ವಕ ಅನನ್ಯ ।
ಯಾವಾಗಲೂ ಅಂಥವರ ಅಧೀನ । ಶಾಂತಿ, ವಿರಕ್ತಿ ಕೀರ್ತಿಗಳೆಲ್ಲ ॥ 15

ಗುರುಭಕ್ತಿ ಯಾರಿಗೆ ಹೀಗೆ । ಏನು ಕೊರತೆ ಇರುವದು ಅಂಥವರಿಗೆ ।
ಇಚ್ಛಿಸಿದರೇನೇ ತನ್ನ ಮನದೊಳಗೆ । ಅದೆಲ್ಲ ಸಹಜದಲಿ ಲಭಿಸುವದು ॥ 16

ಇಂಥ ಆ ಭಕ್ತಿ ಎಲ್ಲಿರಲು । ಬ್ರಹ್ಮಸ್ಥಿತಿಯೂ ಅಲ್ಲಿ ಕೂಲಿಯಾಳು ।
ಚರಣದಲ್ಲಿ ವಾಸಿಸುವವು ತೀರ್ಥಗಳು । ಅಲ್ಲಿ ಮೋಕ್ಷವನ್ನಾರು ಕೇಳುವರು ॥ 17

ಹಿಂದಿನಧ್ಯಾಯದಲಾಯಿತು ಕಥನ । ದೀಕ್ಷಿತರ ಭಾಗವತ ವಾಚನ ।
ನವಯೋಗಿಗಳ ಭಕ್ತಿ ವರ್ಣನ । ಚರಣ ದರ್ಶನ ಸಾಯಿಯದು ॥ 18

ಸಾಯಿ ಭಕ್ತ ಆನಂದರಾವ । ಪಾಖಾಡೆ ಎಂಬ ಉಪನಾಮದವ ।
ಹೇಳಿತವನ ಸ್ವಪ್ನ ಪ್ರಭಾವ । ಭಕ್ತಿಯ ವೈಭವ ಸಾಯಿಯದು ॥ 19

ಸಾಯಿ ಯಾರಿಗೆ ತನ್ನವನೆಂದರು । ಮನೆಯಲಿರಲಿ ಇರಲಿ ದ್ವೀಪಾಂತರದಲವರು ।
ಅವರ ಹತ್ತಿರ ಅಷ್ಟೇ ಪ್ರಹರೂಳಲಿ । ಶ್ರೀ ಸಾಯಿ ವಾಸವಿರುವದು ನಿರ್ಧಾರ ॥ 20

ಸಾಯಿ ಭಕ್ತನೆಲ್ಲಿಯೇ ಹೋದಲ್ಲಿ ಅಲ್ಲೆಲ್ಲ । ಅದು ಯಾವುದೇ ಸ್ಥಳವಿರಲಿ ।
ಮುಂದಾಗಿಯೇ ಹೋಗಿ ನಿಲ್ಲುವನಲ್ಲಿ । ಅಕಲ್ಪಿತ ದರ್ಶನವೀಯುವವನು ॥ 21

ಅದೇ ಅರ್ಥದ ಇನೊಂದು ಕಥೆ । ಶ್ರೋತೃಗಳಿಗಾಗಿ ಹೇಳುವೆ ಮತ್ತೆ ।
ಕೇಳಲೆನಿಸೀತು ವಿಸ್ಮಯತೆ । ಆನಂದವಾದೀತು ಚಿತ್ತಕೆ ॥ 22

ಇಲ್ಲಿಯ ಸಾಯಿ ಮುಖದ ನುಡಿಗಳು । ಶ್ರವಣ ದ್ವಾರದಿಂದ ಭಾವದಿ ಸೇವಿಸಲು ।
ಸದ್ಭಕ್ತನು ನಲಿಯುವ ಸ್ವಾನಂದದೊಳು । ಸಮಾಧಿ ಸೌಖ್ಯವೂ ಹಿಂದಿರುಗುವದು ॥ 23

ಎಲ್ಲಿ ಹೆಜ್ಜೆ ಹೆಜ್ಜೆಗೂ ಚಮತ್ಕಾರಗಳು । ಇಂಥ ಈ ಕಥೆಯನು ಕೇಳಲು ।
ತನ್ನನು ತಾನೇ ಮರೆತುಬಿಡಲು । ತಡೆಯಲಾರದೆ ಬಿಕ್ಕ ಹತ್ತುವ ॥ 24

ಕಾಕಾಸಾಹೇಬ ದೀಕ್ಷಿತರ । ಬಾಬೂ ಎಂಬುವ ಅವರ ಜೇಷ್ಠ ಪುತ್ರ ।
ಅವನ ವ್ರತ ಬಂಧವನು ಮಾಡುವ ವಿಚಾರ । ನಾಗಪುರದಲ್ಲೆಂದು ಗೊತ್ತಾಯಿತು ॥ 25

ನಾನಾಸಾಹೇಬ ಚಾಂದೋರಕರ । ಅವರ ಜೇಷ್ಠ ಪುತ್ರ ।
ಅವನದೂ ಲಗ್ನದ ವಿಚಾರ । ಅದಕೆ ಗ್ವಾಲೇರಕೂ ಹೋಗಬೇಕು ॥ 26

ಮೌಂಜೀ ಬಂಧನ ಮುಗಿಸಿಕೊಂಡು । ಗ್ವಾಲೇರಕ್ಕೆ ಮದುವೆಗೆಂದು ।
ಕಾಕಾರಿಂದಾಗಿ ಅದು ತಪ್ಪಬಾರದು । ಎಂದಿತ್ತು ನಾನಾರ ಮನದಲಿ ॥ 27

ಗ್ವಾಲೇರಕ್ಕೆ ನಾಗಪುರದಿಂದ । ಕಾಕಾ ಬರಬೇಕು ಸ್ವಸ್ಥ ಮನದಿಂದ ।
ಅದಕೆ ಇಬ್ಬರಿಗೂ ಅನುಕೂಲವಾಗುವಂಥ । ಮುಹೂರ್ತಗಳನಿಟ್ಟುಕೊಂಡಿದ್ದರು ॥ 28

ಬಳಿಕ ಬಾಬಾರ ದರ್ಶನಕೆ । ಹಾಗೂ ಮದುವೆಗೆ ಆಮಂತ್ರಿಸುವದಕೆ ।
ಉತ್ಸಾಹದಿಂದ ಬಂದರು ಶಿರಡಿಗೆ । ಭಕ್ತ ಶ್ರೇಷ್ಠ ನಾನಾಸಾಹೇಬರು ॥ 29

ಕಾಕಾ ಸಾಹೇಬರೂ ಇದ್ದರಲ್ಲಿ । ನಾನಾ ಹೋಗಿ ಮಶೀದಿಯಲ್ಲಿ ।
ಬಾಬಾರ ನಿಮಂತ್ರಿಸಿದರು ಲಗ್ನಕ್ಕೆ ಬರಲು । ಕರದ್ವಯಗಳ ಮುಗಿದುಕೊಂಡು ॥ 30

ಆಗ ಬಾಬಾ ಅಗಲೆಂದರು । ಹಾಗೂ "ಶ್ಯಾಮ್ಯಾನ ಕರೆದೊಯ್ಯಿ" ಎಂದೂ ಹೇಳಿದರು ।
ಮುಂದೆರಡು ದಿನಕೆ ಕಾಕಾ ಬಂದರು । ಅವರೂ ಮುಂಜಿಗೆ ಕರೆದರು ॥ 31

ಅವರಿಗೂ ಬಾಬಾ ಅದನೇ ಹೇಳಿದರು । "ಶ್ಯಾಮನ ಕರೆದುಕೊಂಡು" ಹೋಗೆಂದರು ।
ಕಾಕಾ ಸಾಹೇಬರು ಒತ್ತಾಯ ಮಾಡಿದರು । ಸ್ವತಃ ಬರಬೇಕೆಂದು ಅವರಿಗೆ ॥ 32

ಕೂಡಲೇ ಅದಕೂ ಉತ್ತರವಾಗಿ । ಸತ್ವರ ಬರುವೇ ಕಾಶಿ ಪ್ರಯಾಗಗಳಿಗೆ ಹೋಗಿ ।
ಶ್ಯಾಮನಿಗಿಂತಲೂ ಮುಂಚಿತವಾಗಿ । ನನಗೆಷ್ಟೊತ್ತೂ ಅಲ್ಲಿಗೆ ಬರಲು ॥ 33

ಇನ್ನು ಈ ಶಬ್ದಗಳ ಮೇಲೆ ಶ್ರೋತೃಗಳು । ಚಿತ್ತವಿಟ್ಟಿರಬೇಕು ಅರ್ಥ ತಿಳಿಯಲು ।
ಅದರ ಪ್ರತ್ಯಂತರವ ಕಾಣಲು । ಬಾಬಾರ ಸರ್ವವ್ಯಾಪಕತೆಯದು ॥ 34

ಊಟವನ್ನು ಮುಗಿಸಿದ ಮೇಲೆ । ಮಾಧವರಾಯರು ವಿಚಾರ ಮಾಡಿದರು ಮನದಲೆ ।
ಒಮ್ಮೆ ಗ್ವಾಲೇರಕ್ಕೆ ಬಂದ ಮೇಲೆ । ಕಾಶಿಯೇನೂ ದೂರವಲ್ಲ ॥ 35

ನೂರು ರೂಪಾಯಿಗಳ ಖರ್ಚಿಗೆಂದು । ನಂದರಾಮನಿಂದ ಕೈಗಡ ತೆಗೆದುಕೊಂಡು ।
ಹೋದರು ಬಾಬಾರ ಅಪ್ಪಣೆ ಪಡೆಯಲೆಂದು । ಅತಿ ಆದರ ಪೂರ್ವಕವಾಗಿ ॥ 36

ಇನ್ನು ಲಗ್ನ ಮುಂಜಿವೆಗಳಿಗೆಂದು । ಗ್ವಾಲೀರದವರೆಗೂ ಹೇಗೂ ಹೋಗಬೇಕಾಗುವದು ।
ಹಾಗೆಯೇ ಕಾಶಿಯನ್ನೂ ಮುಗಿಸಿಕೊಂಡು ಬರುವದು । ಉಚಿತವೆಂದೆನಿಸುವದು ॥ 37

ಅದಕೆ ದೇವಾ ನಮಿಸಿ ಈ ಚರಣಗಳನು । ಕೇಳುತಿರುವೆ ಕಾಶಿಗಯಾಗಳಿಗೆ ಹೋಗಿ ಬರಲೇನು ।
ಹೋಗಲು ಬಾಬಾ ಇತ್ತರು ಆಜ್ಞೆಯನು । ಆನಂದದಿ ಮಾಧವರಾಯರಿಗೆ ॥ 38

ಮತ್ತೂ ಅವರು ಅಂದುದೇನು । ನೀನೇನೂ ಕೇಳಿಲ್ಲ ಕೇಳಬಾರದ್ದನ್ನು ।
ಸಹಜದಲಿ ಪ್ರಯಾಸವಿಲ್ಲದೆ ಒದಗುವಂಥದನು । ತಪ್ಪದೇ ಸಾಧಿಸಿಕೊಳ್ಳುವದೇ ಜಾಣತನ ॥39

ಹೀಗೆ ಆಜ್ಞೆ ಪಡೆದುಕೊಂಡು । ಎತ್ತಿನ ಬಂಡಿಯನು ಹೂಡಿಸಿಕೊಂಡು ।
ಹೊರಟರು ಕೋಪರಗಾವಕ್ಕೆಂದು । ಆಗ ಭೆಟ್ಟಿಯಾದರು ಅಪ್ಪಾ ಕೋತೆ ॥ 40

ತಮ್ಮ ಮೊಮ್ಮಗಳನ್ನು ಕರೆತರಲು । ಚಾಂದವಡಕ್ಕೆ ಅಪ್ಪಾ ಹೊರಟಿರಲು ।
ಕಾಶಿಯ ಬಗ್ಗೆ ಸುದ್ಧಿ ತಿಳಿಯಲು । ಟಾಂಗೆಯೊಳಗಿಂದ ಜಿಗಿದೇ ಬಿಟ್ಟರು ॥ 41

ಪ್ರವಾಸ ಮಾಡಲು ಕಾಶಿಯವರೆಗೆ । ದುಡ್ಡು ಇರದಿದ್ದರೂ ಅವರ ಬಳಿಗೆ ।
ಮಾಧವರಾಯರಂಥವನ ಸಹವಾಸವನವರಿಗೆ । ಬಿಟ್ಟು ಕೊಡಲು ಮನಬಾರದಾಯಿತು ॥ 42

ಮಾಧವರಾಯರು ಧೈರ್ಯವಿತ್ತರು । ಅಪ್ಪಾ ಕೋತೆ ಅಷ್ಟೇ ಸಾಕೆಂದರು ।
ಆನಂದದಲಿ ಬಂಡಿಯಲಿ ಕುಳಿತರು । ತಡಮಾಡದೇ ತತ್ಪರತೆಯಿಂದ ॥ 43

ಅಪ್ಪಾ ಕೋತೆ ಪಾಟೀಲರಿದ್ದರೂ ಸಧನ । ದಾರಿಯಲೆಲ್ಲಿ ಬರಬೇಕು ದುಡ್ಡಿನ ಸಾಧನ ।
ಆದರಿಂದಲ್ಲಿ ಈ ಕಾಶಿಯ ಪ್ರಯಾಣ । ತಪ್ಪುವದೋ ಎಂಬ ಚಿಂತೆ ಅವರಿಗೆ ॥ 44

ಹರಿವ ಗಂಗಾಜಲದಲ್ಲಿ । ಕೈತೊಳೆಯಬೇಕೆಂಬುದು ಮನದಲ್ಲಿ ।
ಮಾಧವರಾಯರಂಥವರ ಸಂಗತಿಯಲ್ಲಿ । ಅದನು ಸಾಧಿಸುವದೆಂದು ಯೋಚನೆ ॥ 45

ಇದೊಂದು ಸಮಯವೆಂದು ತಿಳಿದು । ಅವರಿಗೆ ಧೈರ್ಯವನು ತುಂಬಿದ್ದು ।
ಮಾಧವರಾಯರು ಜೊತೆಯಲಿ ಕರೆದೊಯ್ದು । ಅವರಿಗೆ ಕಾಶೀಯಾತ್ರೆಯ ಮಾಡಿಸಿದರು ॥46

ಮುಂದೆ ಹೋದರು ನಾಗಪುರದವರೆಗೆ । ಅಲ್ಲಿ ಕಾಕಾ ಸಾಹೇಬರ ಪುತ್ರನ ಮುಂಜಿವೆಗೆ ।
ಅಲ್ಲಿ ಕಾಕಾ ಸಾಹೇಬರು ಮಾಧವರಾಯರಿಗೆ । ಇನ್ನೂರು ರೂಪಾಯಿಗಳ ಕೊಟ್ಟರು ॥ 47

ಅಲ್ಲಿಂದ ಹೋದರು ಗ್ವಾಲೇರಕ್ಕೆ । ಅಲ್ಲಿಯ ಮದುವೆಯ ಸಮಾರಂಭಕ್ಕೆ ।
ನಾನಾ ಸಾಹೇಬರು ಆ ಸಮಯಕೆ । ಮಾಧವರಾಯರಿಗೆ ನೂರು ರೂಪಾಯಿಗಳನಿತ್ತರು ॥ 48

ನಾನಾರ ಬೀಗರು ಶ್ರೀಮಂತ ಜಠಾರರು । ಅವರೂ ನೂರು ರೂಪಾಯಿಕೊಟ್ಟರು ।
ಈ ರೀತಿಯಲಿ ಪ್ರೀತಿ ತೋರಿದರು । ನಾನಾರ ಗುರುಬಂಧುವಿನ ಮೇಲೆ ॥ 49

ಕಾಶಿಯಲಿ ಮಂಗಳಘಾಟವೆಂಬಲ್ಲಿ । ಅಂದವಾಗಿ ಕೆತ್ತಿದ ವಜ್ರ ವೈಡೂರ್ಯಗಳಲಿ ।
ಅಂಥ ಲಕ್ಷ್ಮೀನಾರಾಯಣರ ಮಂದಿರಲ್ಲಿ । ಜಠಾರರ ಒಡೆತನದ್ದಿರುವದು ॥ 50

ಅಯೋಧ್ಯೆಯಲೂ ಶ್ರೀರಾಮ ಮಂದಿರ । ಜಠಾರರದೇ ಇರುವದು ಸುಂದರ ।
ಎರಡೂ ಕ್ಷೇತ್ರಗಳಲಿ ನಡೆವ ಆದರ ಸತ್ಕಾರ । ಅವರ ಮುನೀಮರಿಗೊಪ್ಪಿಸಲಾಗಿದೆ ॥ 51

ಗ್ವಾಲೇರದಿಂದ ಮಥುರೆಗೆ ಹೋದರು । ಜೊತೆಗೆ ಓಝಾ, ಬಿನೀವಾಲೆ ಎಂಬವರು ।
ಮತ್ತು ಪೆಂಡಾರಕರರೂ ಹೋಗಿದ್ದರು । ಆ ಮೂವರೂ ಹಿಂದಿರುಗಿದರು ಅಲ್ಲಿಂದ ॥ 52

ಮಾಧವರಾಯ ಮತ್ತು ಕೋತೆ ಇಬ್ಬರೂ । ಅಲ್ಲಿಂದ ಪ್ರಯಾಗಕ್ಕೆ ಹೋದರು ।
ರಾಮನವಮಿಯ ಉತ್ಸವಕ್ಕವರು । ಅಯೋಧ್ಯೆಯಲ್ಲಿದ್ದರು ॥ 53

ಇಪ್ಪತ್ತೊಂದು ದಿನ ಅಲ್ಲಿ ಉಳಿದರು । ಎರಡು ತಿಂಗಳು ಕಾಶಿಯಲಿ ಕಳೆದರು ।
ಚಂದ್ರ ಸೂರ್ಯ ಗ್ರಹಣಗಳಾದ ಮೇಲಿಬ್ಬರೂ । ಗಯೆಯತ್ತ ಹೊರಟರು ॥ 54

ಗಯೆಯಲ್ಲಿ ಗ್ರಂಥಿಜ್ವರದ ಪಿಡುಗಿತ್ತು । ಅದರಿಂದ ಜನವೆಲ್ಲ ಚಿಂತೆಯಲ್ಲಿತ್ತು ।
ಹೀಗೆ ಸುದ್ದಿ ಎಲ್ಲೆಲ್ಲೂ ಹರಡಿತ್ತು । ಇಬ್ಬರೂ ಉಗಿಬಂಡಿಯಲಿ ಹೊರಟಾಗ ॥ 55

ಉಗಿಬಂಡಿ ಸ್ಟೇಶನಕೆ ಬಂದಿತು । ಆಗ ರಾತ್ರಿಯಾಗಿತ್ತು ।
ಹತ್ತಿರದಲ್ಲಿಯೇ ಧರ್ಮಶಾಲೆಯಿತ್ತು । ಅಲ್ಲಿಯೇ ರಾತ್ರಿ ಕಳೆದರಿಬ್ಬರೂ ॥ 56

ಹೀಗೆ ರಾತ್ರಿ ಕಳೆದು ಬೆಳಗಾದಾಗ । ಭೆಟ್ಟಿಗೆ ಬಂದ ಗಯಾವಳನಾಗ ।
ಅವಸರ ಪಡಿಸಿದ ಹೊರಡಲು ಬೇಗ । ಯಾತ್ರಿಕರೆಲ್ಲರೂ ಹೊರಟಿರುವರೆಂದು ॥57

ಉದ್ವಿಗ್ನ ಚಿತ್ತರಾಗಿ ಮಾಧವರಾಯರು । ಮೆಲ್ಲಗೆ ಅವನನ್ನು ಕೇಳಿದರು ।
ಬರುವೆವಾದರೆ ನಿಮ್ಮ ವಸ್ತಿಯಲ್ಲೇನಾದರೂ । ಜ್ವರದ ಪಿಡುಗು ಇದೆಯೇ ॥ 58

ಆಗ ಅವ ಹೇಳಿದನವರಿಗೆ । ಬಂದಾದರೂ ನೋಡಿರಿ ಅಲ್ಲಿಯವರೆಗೆ ।
ನಿಃಶಂಕರಾಗಿ ನಡೆಯಿರಿ ನನ್ನ ಜೊತೆಗೆ । ಅಲ್ಲಿ ಅಂಥದೇನೂ ಇಲ್ಲ ॥ 59

ಹೀಗೆ ಹೇಳಿದ ಬಳಿಕ ಅವರಿಬ್ಬರೂ । ಗಯಾವಳನಲ್ಲಿಗೆ ಹೋದರು ।
ನೋಡಿ ಪ್ರಸನ್ನರಾದರು । ವಿಸ್ತೀರ್ಣವಾದವನ ಮನೆಯನು ॥ 60

ಇನ್ನೊಂದು ಕಾರಣ ಪ್ರಸನ್ನತೆಗೆ । ಅವರು ಅಲ್ಲಿ ಹೋಗಿ ಕುಳಿತಾಗ್ಯೆ ।
ಕಂಡರು ಬಾಬಾರ ಭಾವಚಿತ್ರವನೆದುರಿಗೆ । ಮಾಧವರಾಯರು ಸದ್ಗದಿತರಾದರು ॥ 61

ಇರಲಿಲ್ಲವೆಂದೂ ಕನಸು ಮನಸಿನಲಿ । ಗಯೆಯಂಥ ದೂರದೂರಿನಲಿ ।
ಸಾಯಿಯ ಭಾವಚಿತ್ರವನೀ ತೆರದಲಿ । ಕಂಡೇವೆಂಬ ಕಲ್ಪನೆ ಕೂಡ ॥ 62

ಮಾಧವರಾಯರು ಅತಿ ಸದ್ಗದಿತರಾದಾಗ । ಆನಂದಾಶ್ರುಗಳು ಕಣ್ಣಿಂದ ಸುರಿಯತೊಡಗಿದಾಗ ।
ಆ ಗಯಾವಳನೆಂದನವರಿಗೆ । ತಾವೇಕೆ ಅಳುತ್ತಿರುವಿರಿ ॥ 63

ಇರದಿರೆ ಕಾರಣ ಏನೊಂದೂ । ಮಾಧವರಾಯರು ಅಳುತ್ತಿರುವದು ।
ಗಯಾವಳನಿಗೆ ಸಂದೇಹ ಬಂದು । ಉದ್ವಿಗ್ನ ಮನನಾದನವ ॥ 64

ಗ್ರಂಥಿ ಜ್ವರವಿದೆ ಗಯೆಯೊಳಗೆ । ನಮ್ಮ ಯಾತ್ರೆಯಾಗುವದು ಹೇಗೆ ।
ಈ ವಿಚಾರವಿದೆ ಮಾಧವರಾಯರಿಗೆ । ಎಂದು ಗಯಾವಳ ಚಿಂತಿಸತೊಡಗಿದ ॥ 65

ಮೊದಲೇ ನಾ ನಿಮಗೆ ಹೇಳಿದ್ದು । ಇಲ್ಲಿ ಗ್ರಂಥಿ ಜ್ವರವಿಲ್ಲವೆಂದು ।
ಆದರೂ ನೀವು ಚಿಂತೆ ಮಾಡುತ್ತಿದ್ದುದು । ಕಂಡು ಆಶ್ಚರ್ಯವೆನಿಸುತಿದೆ ಎನಗೆ ॥ 66

ನಮ್ಮ ಮೇಲೆ ವಿಶ್ವಾಸವಿರದಿದ್ದಲ್ಲಿ । ಈ ಎಲ್ಲರನೂ ನೀವೇ ಕೇಳಿ ।
ನಿಮಗೆ ಕೂದಲೆಳೆಯಷ್ಟೂ ಭಯವಿಲ್ಲ ಇಲ್ಲಿ । ಸುಮ್ಮನೇ ಏಕೆ ಕಣ್ಣೀರು ಹಾಕುವಿರಿ ॥ 67

ಗ್ರಂಥಿ ಜ್ವರಕ್ಕೆ ಹೆದರಿರುವ । ಅದರಿಂದ ಧೈರ್ಯವನ್ನೇ ಕಳೆದುಕೊಂಡಿರುವ ।
ಆದಕೆ ಈ ಯಾತ್ರಿಕ ಅಳುತ್ತಿರುವ । ಹೀಗೆ ತಡೆಯಿಲ್ಲದೆ ಒಂದೇ ಸಮನೇ ॥ 68

ಗಯಾವಳ ಸಮಾಧಾನ ಪಡಿಸುತ್ತಿದ್ದ ಹೀಗೆ । ಅತ್ತ ಮಾಧವರಾಯರ ಮನಸಿನೊಳಗೆ ।
ನನ್ನ ಗುರುಮಾಯಿ ನನಗಿಂತ ಮುಂದಾಗಿ ಹೇಗೆ । ಬಂದು ನನ್ನೆದುರು ಕುಳಿತಿರುವಳಲ್ಲಿ ॥ 69

"ಬೇಗ ಮುಗಿಸಿ ಕಾಶೀ ಪ್ರಯಾಗ । ಬರುವೆ ಶಾಮನಿಗಿಂತ ಮೊದಲಿಗೆ" ।
ಎಂದ ಬಾಬಾರ ಮಾತಿನದೀಗ । ಮೂರ್ತಿಮಂತ ಪ್ರತ್ಯಂತರ ಬಂತು ॥ 70

ಬಾಬಾರ ಚಿತ್ರ ಕಣ್ಣೆದುರೊಳು । ಗೃಹಪ್ರವೇಶವಾದೊಡನೆ ಕಾಣಲು ।
ಈ ಪ್ರಕಾರವು ಅಕಲ್ಪಿತವಿರಲು । ಅತ್ಯಂತ ಆಶ್ಚರ್ಯವೆನಿಸಿತು ॥ 71

ಕಂಠವು ಪ್ರೇಮದಿಂದ ಸದ್ಗದ । ಆನಂದಾಶ್ರುಗಳು ಸುರಿಯುತಿವೆ ಕಣ್ಣಿಂದ ।
ಸರ್ವಾಂಗದಲಿ ರೋಮಾಂಚನಗೊಂಡ । ಮೈಯಲ್ಲಾ ಬೆವರೊಡೆಯಿತು ॥ 72

ಮಾಧವರಾಯರ ಸ್ಥಿತಿ ಹೀಗೆ । ವಿಪರೀತ ವಿಚಾರ ನಡೆದಿದೆ ಗಯಾವಳನ ಮನದೊಳಗೆ ।
ಗ್ರಂಥಿ ಜ್ವರದ ಹೆದರಿಕೆಗೇ । ಆವನಳುತ್ತಿರುವದೇ ಸತ್ಯವೆಂದು ॥ 73

ಶ್ಯಾಮನೇ ಬಳಿಕ ಜಿಜ್ಞಾಸೆಯಿಂದ । ಗಯಾವಳನಿಗೆ ಕೇಳತೊಡಗಿದ ।
ನಿಮಗಿದೂ ದೊರಕಿತು ಎಲ್ಲಿಂದ । ಅದನು ಸಾದ್ಯಂತವಾಗಿ ಹೇಳಿರಿ ॥ 74

ಗಯಾವಳನಾಗ ಹೇಳತೊಡಗಿದನು । ಸಮಗ್ರವಾಗಿ ಅದರ ವೃತ್ತಾಂತವನು ।
ಹನ್ನೆರಡು ವರ್ಷಗಳ ಹಿಂದೆ ನಡೆದುದನು । ಆ ವಿಚಿತ್ರವ ಕೇಳಿರಿ ॥ 75

ಇನ್ನೂರು ಮುನ್ನೂರು ಕೆಲಸಗಾರರು । ಗಯಾವಳನಲ್ಲಿ ದುಡಿಯುತಿಹರು ।
ಸವಿಸ್ತರ ಯಾತ್ರೆಯ ನೋಂದಾಯಿಸುವರು । ಯಾತ್ರಿಕರು ಮನಮಾಡ ಪುಣತಾಂಬೆಗಳಲಿ ॥76

ಯಾತ್ರಿಕರ ವ್ಯವಸ್ಥೆ ಮಾಡುವದು । ಗಯಾವಳನ ನಿತ್ಯ ವ್ಯವಸಾಯವಾಗಿರುವದು ।
ಗಯಾವಳ ಶಿರಡಿಗೆ ಹೋದದ್ದು । ಈ ಕಾರ್ಯ ನಡೆದಾಗ ॥ 77

ಸಾಯಿ ಸಮರ್ಥರು ದೊಡ್ಡ ಸಂತರೆಂದು । ಸಂಗತಿಯನಾತ ಅಲ್ಲಲ್ಲಿ ಕೇಳಿದ್ದು ।
ಅವರ ದರ್ಶನದಿಂದ ಪುನೀತನಾಗಬೇಕೆಂದು । ಮನದಲಿ ಬಯಸಿ ಹೋಗಿದ್ದ ॥ 78

ಬಾಬಾರ ದರ್ಶನ ಪಡೆದ । ಚರಣಗಳನೂ ವಂದಿಸಿದ ।
ಅವರ ಭಾವಚಿತ್ರವನೊಂದ । ಪಡೆಯಬೇಕೆಂದು ಬಯಸಿದ ॥ 79

ಮಾಧವರಾಯರ ಹತ್ತಿರ ಒಂದು । ಇದ್ದ ಭಾವಚಿತ್ರವ ಗೋಡೆಗೆ ತಗಲಿಸಿದ್ದು ।
ಗಯಾವಳ ಅದನ್ನೇ ಬೇಡತೊಡಗಿದ್ದು । ಬಾಬಾರ ಅಪ್ಪಣೆ ಪಡೆದದ ಕೊಟ್ಟರವನಿಗೆ ॥ 80

ಈ ಭಾವಚಿತ್ರ ತಾನೇ ಕೊಟ್ಟದ್ದು । ನೆನಪಾಯಿತಾಗ ಅವನೇ ಈ ಗಯಾವಳನೆಂದು ।
ಬಾಬಾ ಇಲ್ಲಿಯೇ ಹೇಗೆ ನನ್ನ ಕಳಿಸಿದುದು । ದೀರ್ಘಕಾಲದ ನಂತರ ಭೆಟ್ಟಿ ಮಾಡಿಸಿದರಲ್ಲ ॥81

ವಸ್ತುಸ್ಥಿತಿಯನೋಡಲಾಗಿ । ಹನ್ನೆರಡು ವರುಷವಾಗಿದೆ ಈ ಸಂಗತಿ ಜರುಗಿ ।
ಯಾರಿಗೆ ಅದರ ನೆನಪು ಯಾತಕ್ಕಾಗಿ । ಎಂದೂ ಸ್ಮರಣೆಯಾಗಿರಲಿಲ್ಲ ॥ 82

ಆದರೆ ಬಾಬಾರ ಲೀಲೆ ಅಗಾಧವಿರುವದು । ಅಲ್ಲಿಯೇ ಶ್ಯಾಮನನು ಕಳಿಸಿದುದು ।
ಅಲ್ಲಿಯೇ ನಿಜದರ್ಶನವನಿತ್ತಿದ್ದು । ಗಯಾವಳನಿಗೂ ಸಂತೋಷವಾಯಿತು ॥ 83

ಇದನ್ನೇ ನನ್ನ ಹತ್ತಿರವಿದ್ದುದ ಕೊಟ್ಟಿದ್ದು । ಸಾಯಿ ಬಾಬಾರ ಆಜ್ಞೆ ಪಡೆದು ।
ಇದೇ ಗಯಾವಳಿನಿಗೆಂದು । ಶ್ಯಾಮನಿಗೆ ನೆನಪಾಯಿತಾಗ ॥ 84

ಹಿಂದೆ ನಾನು ಇವರ ಮನೆಯಲ್ಲಿ । ಇಳಿದುಕೊಂಡಿದ್ದೆ ಶಿರಡಿಯಲ್ಲಿ ।
ಬಾಬಾರ ದರ್ಶನ ಮಾಡಿಸಿದನವನೇ ಅಲ್ಲಿ । ಎಂದೆಲ್ಲ ಗಯಾವಳನಿಗೆ ನೆನಪಾಯಿತು ॥85

ಕೃತೋಪಕಾರದ ನೆನಪಾಗಿ । ಮಿತಿಮೀರಿ ಆನಂದಿತರಾಗಿ ।
ಅವರು ಶ್ಯಾಮನ ವ್ಯವಸ್ಥೆಯನ್ನು ಗಯೆಯೊಳಗೆ । ಅತಿ ಉತ್ತಮವಾಗಿಟ್ಟರು ॥ 86

ಎಂಥ ಐಶ್ವರ್ಯ ಅವರ ಮನೆಯಲಿ । ಆನೆ ತೂಗಿತಿದೆ ಬಾಗಿಲಲಿ ।
ತಾವು ಕುಳಿತುಕೊಂಡು ಪಲ್ಲಕ್ಕಿಯಲಿ । ಶ್ಯಾಮನ ಆನೆಯ ಮೇಲೆ ಕೂಡ್ರಿಸುವರು ॥ 87

ಪೂಜಾಸಂಭಾರವನು ತೆಗೆದುಕೊಂಡು ಜೊತೆಗೆ । ಆನಂದದಿ ಹೋಗಿ ವಿಷ್ಣು ಪಾದದೆಡೆಗೆ ।
ಅಭಿಷೇಕ ಮಾಡಿ ದೇವರಿಗೆ । ಯಥಾ ವಿಧಿ ಪಿಂಡಪ್ರದಾನವ ಮಾಡಿದರು ॥ 88

ಆಯಿತಾಗ ಬ್ರಾಹ್ಮಣ ಸಂತರ್ಪಣ । ನೈವೇದ್ಯ ಸಮರ್ಪಣ ಪೂರ್ವಕ ಭೋಜನ ।
ಆನಂದದಿಂದಾಯಿತು ಯಾತ್ರೆ ಸಂಪೂರ್ಣ । ಬಾಬಾ ಮಾಡಿಸಿಕೊಂಡರು ॥ 89

ಈ ಎಲ್ಲ ಕಥೆಯ ಸಾರ । ಸಾರ್ಥಕವಾಯಿತು ಬಾಬಾರ ಮುಖೋದ್ಗಾರ ।
ಅನುಭವಕೆ ಬಂತು ಪ್ರತಿ ಅಕ್ಷರ । ಭಕ್ತರ ಮೇಲೆ ಪ್ರೀತಿ ಬಲು ॥ 90

ಇದಂತೂ ಆಯಿತು ಭಕ್ತರ ಪ್ರೇಮ । ಇತರ ಜೀವಗಳನೂ ನೋಡಿಕೊಳ್ಳುವರು ಇದೇ ಸಮ ।
ಅವುಗಳೊಡನೆಯೂ ತದಾತ್ಮ್ಯಪರಮ । ನಿಃಸೀಮ ಪ್ರೀತಿ ಇವುಗಳದೂ ॥ 91

ಒಮ್ಮೊಮ್ಮೆ ಲೇಂಡಿಯಿಂದ ಮಶೀದಿಗೆ ಬರುವಾಗ । ಸಹಜ ದಾರಿಯಲಿ ನಡೆಯುವಾಗ ।
ಆಡುಗಳ ಹಿಂಡು ಎದುರಾದಾಗ । ಪರಮಾನಂದ ಬಾಬಾರಿಗೆ ॥ 92

ಆಗ ನೋಡಿ ಆಡಿನ ಹಿಂಡು ಸಮಸ್ತವನೂ । ಹರಿಸಿ ತಮ್ಮ ಕೃಪಾದೃಷ್ಟಿಯನು ।
ಒಮ್ಮೊಮ್ಮೆ ಅವುಗಳಲೊಂದೆರಡನು । ಆರಿಸಿ ತೆಗೆಯುವರು ಆಚೆಗೆ ॥ 93

ಅದರೊಡೆಯ ಕೇಳಿದಷ್ಟು ಬೆಲೆ । ಕೊಟ್ಟು ಬಿಟ್ಟು ಆಗಿಂದಾಗಲೇ ।
ಇಡುತಿದ್ದರು ಕೋಂಡಾಜಿಯ ಬಳಿಯಲೇ । ಬಾಬಾರದಿದ್ದಿತು ಈ ರೀತಿ ॥ 94

ಒಂದು ದಿನ ಎರಡು ಆಡುಗಳ । ಬೆಲೆಯನಿತ್ತು ಮೂವತ್ತೆರಡು ರೂಪಾಯಿಗಳ ।
ಬಾಬಾ ಕೊಂಡುಕೊಂಡು ಬಂದಾಗವುಗಳ । ಎಲ್ಲರಿಗೂ ಆಶ್ಚರ್ಯವಾಯಿತು ॥ 95

ಬೀಳಲವುಗಳ ಮೇಲೆ ದೃಷ್ಟಿ । ಒಮ್ಮೆಲೇ ಅವುಗಳ ಬಗ್ಗೆ ದಯೆ ಹುಟ್ಟಿ ।
ಅವುಗಳ ಹತ್ತಿರ ಹೋಗಿ ತಟ್ಟಿ । ಬೆನ್ನು ಚಪ್ಪರಿಸಿದರು ಪ್ರೀತಿಯಿಂದ ॥ 96

ಇಬ್ಬರನೂ ನೋಡಿ ಪಶುಜನ್ಮದೊಳಗೆ । ಕೃಪೆ ಮೂಡಿತು ಅವರ ಬಗ್ಗೆ ।
ಸ್ಥಿತಿ ಕಂಡು ನೊಂದರು ಮನದೊಳಗೆ । ಪ್ರೀತಿಯುಕ್ಕಿ ಬಂದಿತು ॥ 97

ಹತ್ತಿರ ತೆಗೆದುಕೊಂಡು ಅವುಗಳ । ಸಾಯಿ ಪ್ರೇಮದಲಿ ಮೈದಡವುತವುಗಳ ।
ಆಶ್ಚರ್ಯಪಟ್ಟರು ಜನರೆಲ್ಲ । ನೋಡಿ ಬಾಬಾರ ಈ ಹೊಸ ಆಟ ॥ 98

ಬಹಳ ಲೋಭವಿತ್ತು ಹಿಂದಿನ ಜನ್ಮದೊಳಗೆ । ಅದೆಲ್ಲ ನೆನಪಾಯಿತು ಸಾಯಿಗೆ ।
ಅಂಥವರ ಪಶುಜನ್ಮವ ನೋಡಿದಾಗ್ಯೆ । ಬಹಳ ನೊಂದುಕೊಂಡರು ॥ 99

ಎರಡೂ ರೂಪಾಯಿ ಅವುಗಳ ಕಿಮ್ಮತ್ತು । ಮೂರು ಅಥವಾ ನಾಲ್ಕೆಂದರೆ ಹೆಚ್ಚಾಯಿತು ।
ಬಾಬಾ ತಂದರಿವುಗಳ ಮೂವತ್ತೆರಡನು ಕೊಟ್ಟು । ಕಂಡಿದನು ತಾತ್ಯಾಬಾ ಚಕಿತನಾದ ॥ 100

'ಅವ ಕೊಟ್ಟ ಇವಕೊಂಡ' । ಎನುವದನು ಕಣ್ಣಿಂದ ಕಂಡ ।
ತಾತ್ಯಾರಂತೆ ಮಾಧವರಾಯರೂ ಕೂಡ । ಬಾಬಾರನು ಜರಿದರು ॥ 101

ಎರಡೂ ರೂಪಾಯಿಯ ವಸ್ತುವಿಗೆ ಹದಿನಾರು ಕೊಟ್ಟು। ಬಾಬಾರಿಗೇ ತಿಳಿಯದೇ ಹಣದ ಕಿಮ್ಮತ್ತು।
ಅಥವಾ ಎಂದರೆ ಮನಬಂದಂತೆ ಮಾಡಿದರಾಯಿತು । ಹೀಗೆನಲೂ ಮನಸು ಒಪ್ಪದು ॥ 102

ಇಬ್ಬರೂ ಮನದಲಿ ಕುದಿದರು । ಬಾಬಾ ವ್ಯಾಪಾರ ಮಾಡುವದು ಹೀಗೇನು ಎಂದರು ।
ಇಬ್ಬರೂ ಬಾಬಾರ ದೂಷಿಸಿದರು । ಇದೇನು ರೀತಿ ವ್ಯಾಪಾರದ್ದೆಂದು ॥ 103

ಹೀಗೆ ಹೇಗೆ ಬಾಬಾ ಮೋಸ ಹೋದರು । ನೋಡಲು ಜನರೆಲ್ಲ ನೆರೆದರು ।
ಬಾಬಾ ಸ್ವಸ್ಥ ಮನದಿಂದಿದ್ದು ಬಿಟ್ಟರು । ಏನೂ ಕಳಕೊಂಡಿಲ್ಲ ಎನುವಂತೆ ॥ 104

ಇವರಿಬ್ಬರೂ ಹೀಗೆ ಸಿಟ್ಟಿಗೆದ್ದರು । ಬಾಬಾರನ್ನು ದೂಷಿಸಿದರು ।
ಆದರೂ ಬಾಬಾ ವಿಚಲಿತರಾಗಲಿಲ್ಲ ರವದಷ್ಟಾದರೂ । ನಿಶ್ಚಲರಾಗುಳಿದರು ಶಾಂತಿ ಸುಖದಲಿ ॥ 105

ಬಳಿಕ ವಿನಯ ವೃತ್ತಿಯ ತಂದು ಕೊಂಡು । ಇಬ್ಬರೂ ಬಾಬಾರಿಗೆ ಕೇಳಿದ್ದು ।
ಇದೆಂಥ ಉದಾರತನದ ರೀತಿಯಿದು । ಸುಮ್ಮನೇ ಮೂವತ್ತೆರಡು ರೂಪಾಯಿ ಹೋದವಲ್ಲ ॥ 106

ಕೇವಲ ಹಣದ್ದೇ ತಾನೇ ಪ್ರಶ್ನೆ । ಕೇಳಿ ಬಾಬಾ ಸುಹಾಸ್ಯವದನ ।
ಮನದಲೆಂದರು ಇವರು ಹುಚ್ಚು ಜನ । ನಾನು ಹೇಗೆ ಇವರ ಸಂತೈಸಲಿ ॥ 107

ಆದರೂ ಬಾಬಾರ ಶಾಂತಿ ವಿಲಕ್ಷಣ । ಸ್ಥೈರ್ಯಕಳಕೊಳ್ಳಲಿಲ್ಲ ಅಣು ಪ್ರಮಾಣ ।
ಪರಮಶಾಂತಿಯದಿದು ಲಕ್ಷಣ । ಆಶ್ಚರ್ಯವೆಲ್ಲರಿಗೆನಿಸಿತು ॥ 108

ಯಾರು ಕ್ರೋಧವೆಂಬುದನ್ನೇ ಅರಿಯರು । ಪರಮಶಾಂತಿಯ ಅನುಭವಿಸುತಿರುವರು ।
ಭೂತ ಮಾತ್ರಗಳಲ್ಲಿ ಭಗವಂತನ ಕಾಣುವರು । ಅಂಥವರ ಅವಿವೇಕಿತನ ಸೋಂಕೀತೆ ॥ 109

ವಿವೇಕ ದೃಷ್ಟಿಯಲಿ ಹಿರಿದಾದವರು । ಕ್ರೋಧವನೆಂದೂ ಮುಂದೆ ಹಾಯಗೊಡರು ।
ಅಕಲ್ಪಿತವಾಗಿ ಪ್ರಸಂಗ ಒದಗಿದರೂ । ಶಾಂತಿಯ ಭಂಡಾರವೇ ಆಗಿರುವರು ॥ 110

'ಅಲ್ಲಾ ಮಾಲೀಕ' ನಿರಂತರ ಧ್ಯಾನ । ಎಷ್ಟು ಬಣ್ಣಿಸಲವರ ಮಹಿಮೆಯನ ।
ಅವರ ಚರಿತ್ರೆ, ಅಗಾಧ ಮತ್ತು ಗಹನ । ಅತಿಪಾವನ ಹಿತಕರ ॥ 111

ಜ್ಞಾನಗರ್ಭನವ ವೈರಾಗ್ಯ ನಿಧಿ । ನಿಜ ಶಾಂತಿಯದೇ ಉದದಿ ।
ಕರುಣಾಪರಿಪೂಣ ಅವರ ಬುದ್ಧಿ । ಆನಂದನದ ಕೇಳಿ ॥ 112

ಕಂಡು ಇಬ್ಬರದೂ ಆಗ್ರಹ । ಬಾಬಾ ಮಾಡಿದರು ನಿಗ್ರಹ ।
ನನಗಿರದು ಕುಳಿತುಕೊಳ್ಳಲು ಸ್ಥಳ ಅಥವಾ ಗೃಹ । ಅಂಥ ನನಗೇತಕೆ ಬೇಕೀ ಸಂಗ್ರಹ ॥ 113

ಎಂದರು ಹೋಗಿರಿ ಅಂಗಡಿಗೆ । ಕೊಂಡು ತನ್ನಿರಿ ಬೇಳೆಯ ಮೊದಲಿಗೆ ।
ತಿನ್ನಿಸಿರದನು ಇವರಿಗೆ ಸಾಕಾಗುವವರೆಗೆ । ಮತ್ತವನು ಕುರುಬನಿಗೆ ಕೊಟ್ಟು ಬಿಡಿರಿ ॥ 114

ಆಜ್ಞಾನುಸಾರವಾಗಿ ಕೂಡಲೇ । ಆಡುಗಳಿಗೆ ತಿನ್ನಿಸಿದರು ಬೇಳೆ ।
ಬಳಿಕ ಒಂದಿಷ್ಟೂ ತಡ ಮಾಡದಲೇ । ತಿರುಗಿ ಕಳಿಸಿದರು ಅವುಗಳ ಹಿಂಡಿನಲ್ಲಿ ॥ 115

ಮೂರ್ತಿವೆತ್ತ ಪರೋಪಕಾರ । ಅದೇ ಈ ಸಾಯಿಯ ಅವತಾರ ।
ಅಂಥವರಿಗೆ ತಾತ್ಯಾ ಶ್ಯಾಮಾ ಅಥವಾ ಇತರ । ಯಾರೇನು ಸುವಿಚಾರ ಹೇಳಬಲ್ಲರು ॥ 116

ಬೇಳೆಯ ತಿನ್ನಿಸಿ ಪ್ರೀತಿಯಿಂದ । ಕಂಡು ಆಡುಗಳು ತೃಪ್ತವಾದುದ ।
ಎಂದರು ಕಳಿಸಿರಿನ್ನಿವನು ಅವುಗಳ ಒಡೆಯನತ್ತ । ವಿಶ್ರಾಂತಿ ಪಡೆಯಲಿ ತಮ್ಮ ಹಿಂಡಿನೊಳಗೆ ॥ 117

ತಾತ್ಯಾನದು ಹೇಗೆ ಶ್ಯಾಮನದೂ ಹಾಗೇ । ಇಬ್ಬರ ಮೇಲೂ ಪ್ರೀತಿ ಬಾಬಾರಿಗೆ ।
ಅವರ ಕೋಪವಿಳಿಸಲು ಅವರಿಗೆ । ಮನೋರಮ ಕಥೆಯೊಂದು ಹೇಳಿದರು ॥ 118

ಹಣದಂತೆ ಹಣವನು ಕಳೆದುಕೊಂಡು । ಪುಕ್ಕಟೆ ಹೋದವು ಆಡುಗಳೆರಡೂ ।
ಬಳಿಕ ಬಾಬಾ ಅವುಗಳ ಗತ ಜನ್ಮದ್ದು । ವಿಚಿತ್ರ ಕಥೆಯನು ಹೇಳಿದರು ॥ 119

ಸಾಯಿ ತಾವೇ ಸ್ವಂತವಾಗಿ । ಹೇಳಿದರಿದನು ಅವರಿಬ್ಬರಿಗಾಗಿ ।
ಆಡುಗಳ ಹಿಂದಿನ ಕಥೆ ಏನೆಂಬುದಾಗಿ । ಶ್ರೋತೃಗಳು ತಾವೂ ಕೇಳಿರಿ ॥ 120

ಪೂರ್ವಜನ್ಮದಲಿ ಸುದೈವ ಇವರದು । ಆಗ ಈ ಜೀವಿಗಳು ಮಾನವರಿದ್ದು ।
ನನ್ನ ಹತ್ತಿರವೇ ಅವರಿಗೆ ಸ್ಥಳವಿದ್ದುದು । ಇವರದೂ ಕರ್ಮ ಪ್ರಭಾವವೇ ॥ 121

ಈಗ ನೀವು ಕಂಡ ಆಡುಗಳು । ಕಳೆದ ಜನ್ಮದಲಿವರು ಬಂಧುಗಳು ।
ಅವರಲ್ಲಿಯ ಜಗಳ ಮಿತಿ ಮೀರಲು । ಈ ಪರಿಣಾಮವ ಹೊಂದಿದರು ॥ 122

ಬಂಧು ಬಂಧಗಳಲ್ಲಿ ಮೊದಲಿತ್ತು ಪ್ರೇಮ । ಒಂದೆಡೆಗೆ ಅಶನಶಯನ ಎಂಬ ನೇಮ ।
ನಿತ್ಯವೂ ಚಿಂತಿಸುವರೊಬ್ಬರೊಬ್ಬರ ಕ್ಷೇಮ । ಬಹಳ ಒಗ್ಗಟ್ಟು ಇಬ್ಬರಲಿ ॥ 123

ಅಣ್ಣ ತಮ್ಮಂದಿರಿಬ್ಬರೂ ಇದ್ದರೂ ಹೀಗೆ । ದುರ್ಧರ ಕರ್ಮಧರ್ಮ ಸಂಯೋಗ ಒದಗಿದಾಗ್ಯೆ ।
ಅತಿ ದ್ರವ್ಯಲೋಭ ಬೆಳೆದ ಹಾಗೆ । ಪರಸ್ಪರರಲ್ಲಿ ವೈರತ್ವ ತಲೆದೋರಿತು ॥ 124

ಮಹಾಸೋಮಾರಿ ಹಿರಿಯವ । ಚಿಕ್ಕವ ಹಗಲಿರುಳು ದುಡಿಯುವವ ।
ಸಾಕಷ್ಟು ದ್ರವ್ಯ ಸಂಪಾದಿಸಿದನವ । ಅದರಿಂದ ಮತ್ಸರ ಹಿರಿಯವಗೆ ॥ 125

ಈ ಮುಳ್ಳನು ಕಿತ್ತಿ ಒಗೆಯುವದು । ಆಗ ನನಗೇನೂ ದ್ರವ್ಯದ ಕೊರತೆ ಇರದು ।
ಇಂಥ ದುಷ್ಟ ವಿಚಾರ ಬಂದು । ಧನ ಲೋಭದಿಂದ ಅಡ್ಡದಾರಿ ಹಿಡಿದ ॥ 126

ಧನಲೋಭದಿಂದ ಕುರುಡಾದ । ಕಣ್ಣಿದ್ದೂ ಕುರುಡನಂತಾದ ।
ಬಂಧು ಪ್ರೇಮವ ಮರೆತು ಹೋದ । ತಮ್ಮನ ಘಾತಕ್ಕೆ ಸಿದ್ಧನಾದ ॥ 127

ಪ್ರಾರಬ್ಧ ಭೋಗವು ಬಲು ಕಠಿಣ । ವೈರಯೋಗ ಹುಟ್ಟಿತು ನಿಷ್ಕಾರಣ ।
ತಡೆಯದಾದ ಲೋಭದ ಆವೇಗವನ । ಕಪಟ ಪ್ರಯೋಗಗಳಾರಂಭವಾದವು ॥128

ಅವರ ಆಯುಷ್ಯವೇ ಮುಗಿದು ಬಂದಿತ್ತು । ಬಂಧು ಪ್ರೇಮವೆಲ್ಲ ಮರೆತುಹೋಯಿತು ।
ಅತ್ಯಂತ ದುರಭಿಮಾನ ತಲೆಗೇರಿತು । ಒಬ್ಬರಿಗೊಬ್ಬರು ಶತ್ರುಗಳಾದರು ॥ 129

ಲಾಠಿಯಿಂದ ಹೊಡೆದು ತಲೆಗೆ । ಒಬ್ಬ ಇನ್ನೊಬ್ಬನನ್ನು ಕೆಡವಿದ ಕೆಳಗೆ ।
ಕೊಡಲಿ ಇತ್ತವನ ಕೈಯೊಳಗೆ । ಆದರಿಂದ ಸೋದರನನು ಹೊಡೆದ ॥ 130

ಬಳಿಕ ಇಬ್ಬರೂ ಮೂರ್ಛಿತರಾಗಿದ್ದು । ರಕ್ತದ ಮಡುವಿನಲಿ ನೆನೆದು ।
ಅಲ್ಪಾವಕಾಶದಲೇ ಅಸುವಳಿದು । ಇಬ್ಬರೂ ಮರಣವನಪ್ಪಿದರು ॥ 131

ಅವರ ಅಂತವಾಯಿತು ಹೀಗೆ । ಜನ್ಮ ತಾಳಿದರು ಮತ್ತೆ ಈ ಯೋನಿಯೊಳಗೆ ।
ಅವರ ಜೀವನ ವೃತ್ತಾಂತವಿರುವದು ಹೀಗೆ । ಅವರ ನೋಡಿದಾಗೆಲ್ಲ ನೆನಪಾಯಿತು ॥132

ಆ ಕೃತಕರ್ಮವನು ಭೋಗಿಸಲು । ಜನಿಸಿದರು ಆಗಿ ಆಡುಗಳು ।
ಅಕಸ್ಮಾತ ಹಿಂಡಿನಲವರನು ಕಾಣಲು । ಪ್ರೇಮಾವೇಶವಾಯಿತೆನಗೆ ॥ 133

ಅದಕೆ ವ್ಯಯಿಸಿ ಹತ್ತಿರದ ದುಡ್ಡು । ಅವುಗಳಿಗೆ ವಿಶ್ರಾಮ ಒದಗಿಸಬೇಕೆನಿಸಿದ್ದು ।
ನಿಮ್ಮ ರೂಪದಲಿ ಅವರ ಕರ್ಮ ಬಂದು । ಅಡ್ಡ ನಿಂತಿತು ಎದುರಿಗೆ ॥ 134

ದಯೆಯಿತ್ತು ಆ ಆಡುಗಳ ಸಲುವಾಗಿ । ಆದರೆ ನಿಮ್ಮ ಒತ್ತಾಯಕ್ಕಾಗಿ ।
ಅವುಗಳನು ಒಡೆಯನಿಗೆ ಕೊಡಲು ತಿರುಗಿ । ನಾನೂ ಕೊನೆಗೆ ಒಪ್ಪಿದೆ ॥ 135

ಇರಲಿನ್ನು ಈ ಕಥೆ ಮುಗಿಯಿತಿಲ್ಲಿಗೆ । ಶ್ರೋತೃಗಳು ಕ್ಷಮೆ ನೀಡಬೇಕೆನಗೆ ।
ಮುಂದಿನಧ್ಯಾಯ ಕೇಳುವಾಗ್ಯೆ । ಮನಕಾನಂದವಾದೀತು ॥ 136

ಅದಾದರೂ ಪರಮ ಪ್ರೇಮ ಭರಿತ । ಸಾಯಿ ಮುಖದಿಂದ ಅಮೃತ ಸ್ರವಿಸುತ ।
ಹೇಮಾಡ ಸಾಯಿ ಚರಣದಿ ವಿನೀತ । ಶ್ರೋತೃಗಳಿಗೆ ವಿನಂತಿಸಿಕೊಳ್ಳುವ ॥ 137

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿಸಮರ್ಥ ಸಚ್ಚರಿತೇ । ಕಾಶೀಗಯಾಗಮನ, ಅಜಾಜನ್ಮಕಥನಂ ನಾಮ
ಷಡ್ ಚತ್ವಾರಿಂಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥ ॥ ಶುಭಂ ಭವತು ॥

650.1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ನಲವತ್ತೆಳು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಯಾರದು ಕ್ಷಣವೊಂದು ನೋಡಲು ವದನ । ಆಗುವದು ಅನಂತ ಜನ್ಮದ ದುಃಖದಲನ ।
ಆ ಪರಮಾನಂದದ ಜನನ ಸ್ಥಾನ । ಧನ್ಯಶ್ರೀ ವದನ ಸಾಯಿಯದು ॥ 1

ಅವರ ಕೃಪಾವಲೋಕನದಿಂದ । ತತ್ಕಾಲ ವಿಮೋಚನೆ ಕರ್ಮ ಬಂಧನದಿಂದ ।
ನಿಜಭಕ್ತರಿಗೆ ಸ್ವಾನಂದ । ಕ್ಷಣವಿಲಂಬವಿಲ್ಲದೆ ಲಭಿಸುವದು ॥ 2

ಯಾರ ಕೃಪಾ ದೃಷ್ಟಿಯಿಂದ । ಬಿಚ್ಚುವದು ಕಗ್ಗಂಟು ಕರ್ಮಾಕರ್ಮದ ।
ಯತ್ಕೃಪಾ ಸೂರ್ಯನ ಬೆಳಕಿನಿಂದ । ಭವಖದ್ಯೋತವು ನಿಸ್ತೇಜವಾಗುವದು ॥ 3

ಜಗದ ಪಾಪವ ಗಂಗೆ ತೊಳೆವಳು । ಅದರಿಂದವಳು ಮಲಿನಳಾಗುವಳು ।
ಕೂಡಿದ ನಿಜಮಲ ಕಳೆಯಲು । ಅವಳು ಸಾಧುಗಳ ಚರಣರಜ ಬಯಸುವಳು ॥ 4

ಎಂದು ಸಾಧು ಚರಣ ಸ್ಪರ್ಶವಾಗುವದು । ನನ್ನಲ್ಲಿ ಸ್ನಾನಕ್ಕೆ ಬರುವರೆಂದು ।
ಅದಿಲ್ಲದೆ ನಿಜ ಪಾಪ ನಿರ್ಗತಿಯಾಗದು । ಇದ ನಿಶ್ಚಯವಾಗಿ ತಿಳಿದಿರುವಳವಳು ॥ 5

ಸಾಧುಗಳ ಮುಕುಟಮಣಿ ಇಂಥವನು । ಇವನ ಈ ಅಮೃತ ವಾಣಿಯನು ।
ಕರ್ಣದ್ವಯದಿಂದ ಪ್ರಾಶಿಸಿರಿದನು । ಭಾವಿಕ ಸಜ್ಜನರೇ ಆದರದಿಂದ ॥ 6

ಈ ಕಥೆಯ ಮಹಿಮಾನ ಚಮತ್ಕಾರವಿರಲು । ಅಜ್ಞಾನ ಅಥವಾ ಸಜ್ಞಾನ ಶ್ರೋತೃಗಳು ।
ಹರಿವದು ಭವಬಂಧನ ಇದ ಕೇಳಲು । ಈ ಪರಮ ಪಾವನ ಕಥೆಯನು ॥ 7

ನಯನಗಳಿಗೂ ನಯನ ಸಾಯಿ ಇವ । ಶ್ರವಣಗಳಿಗೂ ಶ್ರವಣನಿವ ।
ಅವನೇ ಹೊಕ್ಕು ನನ್ನ ಹೃದಯವ । ಈ ವಾರ್ತೆಯ ಹೇಳಿಸುತಿರುವ ॥ 8

ಸಾಯಿ ತಾನೇ ಮಹಾನುಭಾವ । ಕೇಳಲೀ ಕಥೆಯ ವೈಚಿತ್ರ್ಯವ ।
ಶ್ರೋತೃಗಳು ಮರೆಯುವರು ದೇಹಭಾವವ । ಅಷ್ಟಪ್ರೇಮ ಭಾವಗಳು ಉದಯಿಸುವವು ॥ 9

ಸಾಯಿ ಮುಖದ ಈ ಕಥೆಗಳು । ಅದರ ಹೃದ್ಗತವನ್ನು ಅರಿಯಲು ।
ತಾತ್ಪರ್ಯದತ್ತ ದೃಷ್ಟಿ ಹರಿಸಲು । ಕೃತಕರ್ತವ್ಯತೆ ಶ್ರೋತೃಗಳಿಗೆ ॥ 10

ಶ್ರೋತೃಗಳಿಗೊಂದು ವಿನಂತಿಯ ಕೇಳುವದು । ನನ್ನದೇ ಇದ್ದರೂ ವಕ್ತೃತ್ವವಿದು ।
ನಾನೂ ನಿಮ್ಮಂತೆಯೇ ರಿಕ್ತನಾಗಿರಬೇಕಾಗುವದು । ಇದರ ಮಥಿತಾರ್ಥವ ಗ್ರಹಿಸದಿದ್ದರೆ ॥ 11

ನೆನೆಸಿಕೊಂಡರವರ ಭಕ್ತ ಪ್ರೇಮ । ಮನ ಮರೆಯುವದು ತನ್ನ ಮನೋಧರ್ಮ ।
ಸಂಸಾರ ತ್ರಸ್ತರಿಗಾಗುವದು ಉಪರಮ । ಇದಕಿಂತ ಪರಮಲಾಭ ಯಾವುದು ॥ 12

ಇನ್ನು ಪೂರ್ವಕಥೆಯ ಅನುಸಂಧಾನ । ಶ್ರೋತೃಗಳೇ ಕೇಳಿರಿ ಚಿತ್ತವಿಟ್ಟದನ ।
ಆಗುವದದರಿಂದ ಜೀವಕೆ ಸಮಾಧಾನ । ಕಥೆಯ ಎಡೆಬಿಡದೆ ಕೇಳಲು ॥ 13

ಹಿಂದಿನಾಧ್ಯಾಯದ ಕೊನೆಗೆ । ಆಡುಗಳ ಕಥೆಯ ಹೇಳಲಾಯಿತು ಶ್ರೋತೃಗಳಿಗೆ ।
ಅವುಗಳಲಿ ಬಲು ಪ್ರೀತಿ ಬಾಬಾರಿಗೆ । ಗತಜನ್ಮದ ಸ್ಮೃತಿ ಅವುಗಳದು ॥ 14

ಇನ್ನು ಈ ಕಥೆಯೊಳಗೂ ಹಾಗೇ । ದ್ರವ್ಯ ಲೋಭವು ಮುಟ್ಟಲು ಪರಮಾವಸ್ಥೆಗೆ ।
ಅದು ಒಯ್ಯುವದು ಅಧಃಪತನಕೆ ಹೇಗೆ । ಸಾವಧಾನರಾಗಿ ಕೇಳಿರಿ ॥ 15

ಪೂರ್ಣ ಕೃಪಾದೃಷ್ಟಿಯಿಂದ ಸಾಯಿಯವರು । ಆಗಾಗ ಕಥೆಗಳ ಸೂಚಿಸುವರು ।
ಕೇಳುಗರಿಗೆ ಕೊರತೆಯಾಗಗೊಡರು । ಸುಖ ಸಂತುಷ್ಟಿಯನೀಯುವರು ॥ 16

ಕಥೆ ಕಥೆಗಾರ ಮತ್ತು ಕಥನವು । ಸ್ವತಃ ಸಾಯಿನಾಥರೇ ಎಲ್ಲವೂ ।
ಅಲ್ಲಿ ಹೇಮಾಡನಿಗೆಲ್ಲಿಯ ಇರವು । ಸುಮ್ಮನೇ ಹೆಸರು ಮಾತ್ರದವ ॥ 17

ಕುಳಿತಿರುವಾಗ ಸಾಯಿಕಥಾಬ್ಧಿಯ ದಂಡೆಗೆ । ಅಲ್ಲಿ ಕಥೆಗಳದೇನು ಕೊರತೆ ನಮಗೆ ।
ಕಲ್ಪತರುವಿನ ಅಡಿಗೆ । ಇಚ್ಛಿಸಿದ್ದೆಲ್ಲ ಲಭಿಸುವದು ॥ 18

ದಿನಕರನ ಮನೆಗೆ ಹೋದಾಗ ಯಾರು । ದೀಪದ ಚಿಂತೆಯ ಮಾಡುವರು ।
ಯಾವಾಗಲೂ ಅಮೃತಪಾನ ಮಾಡುವವರು । ವಿಷವನ್ನೇಕೆ ಮೂಸಿಯಾರು ॥ 19

ನಮ್ಮ ಬೆನ್ನಿಗೆ ಸಾಯಿಯಂತಹವರು । ಸದ್ದೈವ ರಕ್ಷಕರಿರುವರು ।
ಅವರು ಕಥಾಪಿಯೂಷವ ಕುಡಿಸುವರು । ಯಥೇಚ್ಛ ಆದರಾನಂದನೀವರು ॥ 20

ಕರ್ಮಸೂತ್ರವು ಬಲು ಗಹನವಾದುದು । ಯಾರಿಗೂ ಅದು ಅಳತೆಗೆ ಸಿಗದು ।
ಮಹಾಸಜ್ಞಾನಿಗಳನೂ ಮೋಸಗೊಳಿಸುವದು । ಆದರೆ ಭಾವಾರ್ಥಿ ಅಜ್ಞಾನಿಗಳೂ ಅದನು ದಾಟುವರು ॥ 21

ಅದರಂತೆಯೇ ಈಶ್ವರೀ ನಿಯಮವೂ ದುರ್ಗಮ । ಯಾರು ಮಾಡಬಲ್ಲರದನ ಅತಿಕ್ರಮ ।
ಆಚರಿಸಿ ನಿತ್ಯ ಲೌಕಿಕ ಧರ್ಮ । ತತ್ಕರ್ಮವ ಮಾಡುತಿರಬೇಕು ॥ 22

ಅತ್ಯಂತ ಅಧರ್ಮಿಯಾಗಿದ್ದವ । ಕೊನೆಗೆ ಮರಣ ಹೊಂದುವ ।
ಅನುಸರಿಸಿ ತನ್ನ ಕರ್ಮವ । ಅದರಂತೆ ಜನ್ಮವ ಪಡೆಯುವ ॥ 23

'ಯಥಾ ಕರ್ಮ ಯಥಾಶ್ರುತ' । ಶುಕ್ರ ಬೀಜ ಸಮನ್ವಿತ ।
ಕೆಲವು ಯೋನಿದ್ವಾರವ ಪ್ರವೇಶಿಸುತ । ಸ್ಥಾವರ ಭಾವದತ್ತ ಕೆಲವು ॥ 24

'ಯಥಾ ಪ್ರಜ್ಞಂ ಹಿ ಸಂಭವಾಃ' । ತಿಳಿಯದವರಾರಿಹರು ಇದರರ್ಥವ ।
ಯಾವುದ ಇಷ್ಟಪಡುವದೋ ಜೀವ । ಅದೇ ಜನ್ಮವ ಪಡೆಯುವದು ॥ 25

ತಿಳಿಯಿರಿದ ಈ ಮೂಢ ಅವಿದ್ಯಾವಂತರು । ಶರೀರ ಗ್ರಹಣಕ್ಕಾಗಿ ಪ್ರಯತ್ನಿಸುವರು ।
ಅವರು ಶರೀರವ ಪಡೆವರು । ಅವರವರ ಉಪಾರ್ಜನೆ ಇದ್ದಂತೆ ॥ 26

ಅದಕೆ ತ್ಯಜಿಸುವ ಮೊದಲು ಈ ಶರೀರವನು । ನರಜನ್ಮದ ಬೆಲೆಯುಳ್ಳ ಸುಸಂಧಿಯನು ।
ಆತ್ಮ ಭೋಧದ ಅವಧಿಯ ಕಳೆದುಕೊಳ್ಳದವನು । ಅವನೇ ಒಬ್ಬ ಎಚ್ಚರುಳ್ಳವನೆನಬೇಕು ॥ 27

ಅವನೇ ಸಂಸಾರ ಬಂಧ ಮುಕ್ತ । ಇತರರು ಸಂಸಾರ ಚಕ್ರದಲ್ಲಿ ಸಿಗುತ ।
ಶರೀರತ್ವದಿಂದಾಗರೆಂದೂ ಮುಕ್ತ । ಜನ್ಮದ ಯಾತನೆಗಳೆಂದೂ ತಪ್ಪವವರಿಗೆ ॥ 28

ಇನ್ನು ಈ ಕಥೆಯ ಆಶ್ಚರ್ಯವಿದು । ದುಷ್ಟ ವೃತ್ತಿಯೊಳಗಡಗಿರುವದು ।
ಯಾವಾಗ ನಾ ದೇಹವೆಂಬದು ಮರೆಯುವದು । ಸಾತ್ವಿಕ ಅಷ್ಟಭಾವಗಳು ಪ್ರಕಟವಾಗುವವು ॥ 29

ಹತ್ತಿರವಿದೆ ಬೇಕಾದಷ್ಟು ಧನ । ಅವ ಸ್ವಭಾವದಿಂದ ಅತ್ಯಂತ ಜಿಪುಣ ।
ಧಿಕ್ ಅಂಥವನ ಜೀವನ । ಆಮರಣ ಕಷ್ಟವ ಅನುಭವಿಸುವ ॥ 30

ಅದರಲ್ಲೂ ವೈರ ವೃತ್ತಿಯ ಗಾಳಿಗೂ । ನಿಲ್ಲಬಾರದು ಎಂದೆಂದಿಗೂ ।
ಸೋಂಕಗೊಡದರಿ ಅದನು ಮನಸಿಗೆಂದೂ । ಅದು ಜನ್ಮವನೇ ನಾಶಮಾಡುವದು ॥ 31

ಪರಸ್ಪರ ವೈರದ ಪರಿಣಾಮ । ಉತ್ತಮನಿದ್ದವನೂ ಆಗುವನು ಅಧಮ ।
ಋಣ-ವೈರ-ಹತ್ಯೆಗಳ ಧರ್ಮ । ಜನ್ಮ ಪರಂಪರೆಗಳೂ ನಡೆಯುವದು ॥ 32

ಈ ಅರ್ಥದ ಅಮೃತ ವಚನ । ಸಾಯಿ ಮುಖೋದ್ಗಾರ ಪರಮ ಪಾವನ ।
ಶ್ರೋತೃಗಳಿಗಾಗಿ ಸಾದರ ಪಡಿಸುವೆನದನ । ಕೇಳಿರಿದ ಚಿತ್ತಗೊಟ್ಟು ॥ 3

ಆ ಕಥೆಯನ್ನೂ ಹೇಗೆ ಕೇಳಿದೆ । ಹೇಗೆ ನನ್ನ ಸ್ಮರಣೆಯಲ್ಲುಳಿದಿದೆ ।
ಹಾಗೆಯೇ ಹೇಳುವೆ ನುಡಿಯೂ ಅದೇ । ನನ್ನ ಗುರುಮಾಯಿ ಆಗ ಹೇಳಿದುದು ॥ 3

ಸಾಯಿಯೇ ಸ್ವತಃ ಚರಿತ್ರಕಾರ । ಬರೆಯಿಸಿಕೊಳ್ಳುವ ಕಥೆಯ ಸವಿಸ್ತರ ।
ಹೇಮಾಡನಿಹ ನಿಮಿತ್ತ ಮಾತ್ರ । ಸೂತ್ರಧಾರ ಅವನೇ ಇರುವ ॥ 3

'ಒಂದು ದಿನ ಬೆಳಿಗ್ಗೆ । ಎಂಟು ಗಂಟೆಯ ಸುಮಾರಿಗೆ ।
ನ್ಯಾಹರಿಯ ಮುಗಿಸಿದಿನದ ಹಾಗೆ । ಅಡ್ಡಾಡಲು ಹೊರಗೆ ಹೊರಟೆ ॥ 36

ದಾರಿ ನಡೆದು ನಡೆದು ದಣಿದೆ । ನದಿಯ ದಂಡೆಯ ಮೇಲೆ ಬಂದೆ ।
ಕಾಲು ತೊಳೆದೆ ಸ್ನಾನ ಮಾಡಿದೆ । ಮನದಲಿ ಸಮಾಧಾನ ಹೊಂದಿದೆ ॥ 37

ಆ ನದಿಯಾದರೂ ಇದ್ದಿತೆಷ್ಟು । ನಮ್ಮ ಈ ರಹಾತೆಯ ನದಿಯಷ್ಟು ।
ಎರಡೂ ದಡದವರೆಗೆ ನೀರು ತುಂಬಿತ್ತು । ದಂಡೆಗೆ ಹುಲ್ಲು ಬೆಳೆದಿತ್ತು ಎತ್ತರ ॥ 38

ಅಲ್ಲಿ ಕಾಲುದಾರಿ ಇತ್ತು । ಚಕ್ಕಡಿಗಳ ದಾರಿಯೂ ಸ್ಪಷ್ಟವಾಗಿತ್ತು ।
ದಟ್ಟವಾದ ಗಿಡಗಂಟೆಗಳು ಬೆಳೆದಿತ್ತು । ನೆರಳೂ ಚೆನ್ನಾಗಿ ಬಿದ್ದಿತ್ತು ॥ 39

ಗಾಳಿ ಬೀಸುತಿತ್ತು ಮಂದ ಮಂದ । ಅದರಿಂದ ಮನಕೆ ಬಲು ಆನಂದ ।
ಕಣ್ಣಿಗೆ ಬೀಳಲು ವೃಕ್ಷ ವೃಂದ । ಆರಾಮದಿ ಕುಳಿತೆ ನೆರಳಿಗೆ ॥ 40

ಹೋಗಲು ಚಿಲಿಮು ತುಂಬಲೆಂದು । ಅದಕೆ ಬಟ್ಟೆ ತೋಯಿಸಲೆಂದು ।
ಕೇಳಿಸಿತು 'ಡರಾಂವ ಡರಾಂವ' ಎಂದು । ಕಪ್ಪೆ ಒದರುತಿದ್ದುದೆನಗೆ ॥ 41

ನೀರಿರುವಲ್ಲಿ ಇದು ಏನು ಆಶ್ಚರ್ಯವೇ । ಅಂಥಲ್ಲಿ ಕಪ್ಪೆಗಳಿರುದು ಸಹಜವೇ ।
ಬಟ್ಟೆ ತೋಯಿಸಿಕೊಂದು ಬಂದವನೇ । ಚಕಮಕಿಯ ಕೈಗೆತ್ತಿ ಕೊಂಡೇ ॥ 42

ಆಣೆ ಕಲ್ಲನು ಹೊಡೆದು ಕಿಡಿಬೀಳಿಸಿ । ಚಿಲುಮೆ ತಯಾರಾಯಿತು ಹೊತ್ತಿಸಿ ।
ಅಷ್ಟರಲ್ಲೊಬ್ಬ ದಾರಿಕಾರ ಬಂದು ನಮಿಸಿ । ನನ್ನ ಹತ್ತಿರ ಕುಳಿತು ಕೊಂಡು ॥ 43

ವಿನಯದಿಂದ ನನ್ನ ಕಡೆಯಿಂದ । ಚಿಲುಮೆಯನು ತೆಗೆದು ಕೊಂಡು ।
'ಬಹಳ ದೂರ ಬಂದಿರಲ್ಲ' ಎಂದ । ಆದರದಿಂದ ನನ್ನ ಮಾತನಾಡಿಸುತ ॥ 44

ಮಶೀದಿ ಇಲ್ಲಿಂದ ದೂರ ಬಲು । ಅಲ್ಲಿಗೆ ಹೋಗುವವರೆಗಾಗುವುದು ಬಿಸಿಲು ।
ಚಿಲಿಮೆ ಸೇದಿ ಮುಗಿಯಲು । ಹತ್ತಿರವೇ ನನ್ನ ಮನೆ ಅಲ್ಲಿ ಹೋಗೋಣ ॥ 45

ಅಲ್ಲಿ ಒಂದಿಷ್ಟು ರೊಟ್ಟಿ ತಿಂದು । ಒಂದಿಷ್ಟು ವಿಶ್ರಾಂತಿ ತೆಗೆದುಕೊಂಡು ।
ಬಳಿಕ ಬಿಸಿಲಿಳಿದ ಬಳಿಕಂದು । ತಿರುಗಿ ಅಲ್ಲಿಗೆ ಹೋಗುವಿರಂತೆ ॥ 46

ನಾನೂ ಬರುವೆ ಅಲ್ಲಿಯವರೆಗೆ' । ಮಾತು ಮುಗಿದ ಮೇಲೆ ಹೀಗೆ ।
ಚಿಲಿಮಿಯ ಹೊತ್ತಿಸಿ ದಾರಿಕಾರನೆನಗೆ । ಸೇದಲು ಆದರರಿಂದ ಕೊಡ ಮಾಡಿದ ॥ 47

ಅತ್ತ ಕಪ್ಪೆ ಆರ್ತಸ್ವರದಿಂದ । ಕೂಗತೊಡಗಿತು ದೈನ್ಯದಿಂದ ।
ಆ ದಾರಿಕಾರ ಚವಕಶಿ ಮಾಡಿದ । ಯಾರಿವನು ಒದರುತ್ತಿರುವದು ॥ 48

ಆಗ ನಾನೆಂದೆ ನದಿದಂಡೆಯಲ್ಲಿ । ಕಪ್ಪೆ ಸಿಕ್ಕಿದೆ ಸಂಕಟದಲ್ಲಿ ।
ಕರ್ಮ ಬಿದ್ದಿದೆ ಅವನ ಬೆನ್ನಿನಲಿ । ಕೇಳು ಆ ಕಥೆಯ ಹೇಳುವೆ ॥ 49

ಪೂರ್ವಜನ್ಮದಲಿ ಮಾಡಿದ್ದು ಹೇಗೆ । ಅದರಂತೆ ಪಡೆಯಬೇಕಿ ಜನ್ಮದೊಳಗೆ ।
ಈಗ ಕರ್ಮಭೋಗವ ಅನುಭವಿಸುವಾಗ್ಯೆ । ಏತಕ್ಕೆ ಹೀಗೆ ಅಳಬೇಕು' ॥ 50

ಕೇಳಿಕೊಂಡು ಬಳಿಕ ಈ ಮಾತು । ನನ್ನ ಕೈಯಲ್ಲಿ ಚಿಲಿಮಿ ಕೊಟ್ಟು ।
ದಾರಿಕಾರ ಅಲ್ಲಿಂದ ಹೊರಟು । ಎಂದ ನಾ ನೋಡಿ ಬರುವೆನೆಂದು ॥ 51

ನಿಜದಲಿ ಅದು ಕಪ್ಪೆಯೇ ಆಗಿರುವದೋ । ಅಥವಾ ಇನ್ನಾವುದೋ ಪ್ರಾಣಿ ಇರುವದೋ ।
ಅದಕೇನು ದುಃಖವಿರುವದೋ । ಎಂದು ತಿಳಿದು ನಿಃಶಂಕರಾಗುವಾ ॥ 52

ಹೀಗಿವನ ಮನಸಿದ್ದುದನು ಕಂಡು । ಹೇಳಿದೆ ಹೋಗಿ ಬಾ ನೋಡಿಕೊಂಡು ।
ಒಂದು ದೊಡ್ಡ ಸರ್ಪದ ಬಾಯಲೊಂದು । ಕಪ್ಪೆ ಸಿಕ್ಕು ಕೂಗುತಿದೆ ॥ 53

ಮಹಾಕದೀಮರಿಬ್ಬರೂ । ಇಬ್ಬರೂ ಕೃತಿಗಳಲಿ ದುಷ್ಟರು ।
ಪೂರ್ವಜನ್ಮದ ಭಯಂಕರ ಪಾಪದಿಂದಿವರು । ಅದ ಭೋಗಿಸಲು ಈ ದೇಹಗಳ ಪಡೆದಿರುವರು ॥54

ವಿಚಾರ ನಡೆದಿರುವಾಗ ಹೀಗೆ । ದಾರಿಕಾರ ಹೋದನಲ್ಲಿಗೆ ।
ಪ್ರತ್ಯಕ್ಷ ಪ್ರಕಾರವ ನೋಡಿ ಬಂದಾಗ್ಯೆ । ನೀವು ಹೇಳಿದುದು ಸರಿ ಎಂದ ॥ 55

ಸರ್ಪವು ಪ್ರತ್ಯಕ್ಷ ಕಾಲನಂತಿದೆ । ಇಷ್ಟಗಲ ಮುಖ ತೆರೆದಿದೆ ।
ಕಪ್ಪೆಯಾದರೂ ಬಹಳ ವಿಕ್ರಾಳವಾಗಿದೆ । ಆದರೂ ಅದು ಹಾವಿಗೆ ಆಹಾರವಾಗುವುದು ಸತ್ಯ ॥ 56

ಗಳಿಗೆ ಅರ್ಧಗಳಿಗೆಯ ಸಂಗತಿ । ಸರ್ಪಮುಖಕದು ಆಗುವದಾಹುತಿ ।
ಏನು ವಿಚಿತ್ರ ಕರ್ಮದಗತಿ । ಕ್ಷಣದಲಿ ನಿಶ್ಚಿಂತೆಯಾಗುವುದು ॥ 57

ಆಗವನಿಗೆಂದೆ ನಾನು । ಅವನೇನು ಕೊಡುವ ನಿಶ್ಚಿಂತೆಯನು ।
ಅವನಪ್ಪನಲಿಲ್ಲಿ ಕುಳಿತಿಲ್ಲವೇ ನಾನು । ಹಾಗಾಗುವದಾದರೆ ನಾನಿಲ್ಲಿರುವದೇತಕೆ ॥ 58

ಬಿಟ್ಟು ನನ್ನ ಸ್ಥಾನವನ್ನು । ಬಂದಲ್ಲಿ ನಾ ಕುಳಿತಿರುವೆನು ।
ಕಪ್ಪೆಯ ತಿನ್ನಗೊಡುವಸಕ್ಕೆನು । ನೋಡು ನಾ ಅದನ್ನೀಗೆ ಬಿಡುಸುವೆ ॥ 59

ಈ ಕಾದಾಟವ ಬಿಡಿಸುವ ಮೊದಲಿಗೆ । ಆ ಮೇಲೆ ಹೋಗೋಣ ನಮ್ಮ ಮನೆಯೊಳಗೆ ।
ಒಮ್ಮೆ ಚಿಲುಮೆಯ ತುಂಬಿ ತಾ ಇಲ್ಲಿಗೆ । ಬಳಿಕ ನೋಡುವ ಸರ್ಪ ಏನು ಮಾಡುವದೆಂದು ॥ 60

ಚಿಲಮಿ ತತ್ಕಾಲದಲಾಯಿತು ಸಿದ್ಧ । ಆ ದಾರಿಕಾರ ಅದ ಹೊತ್ತಿಸಿದ ।
ತಾನೊಂದು ದಂ ಎಳೆದು ನನಗೆ ನೀಡಿದ । ಸೇದಲು ನಾ ಕೈಯಲ್ಲಿ ಹಿಡಿದು ಕೊಂಡೆ ॥ 61

ನಾನೆರಡು ಝುರಕಿ ಎಳೆದೆ । ದಾರಿಕಾರನ ಜೊತೆಗೆ ಕರೆದುಕೊಂಡು ।
ಆ ಹುಲ್ಲಿನ ಮಧ್ಯದಲಿ ನಡೆದೆ । ಆ ವಿವಕ್ಷಿತ ಸ್ಥಾನವ ತಲುಪಿದೆವು ॥ 62

ಮತ್ತೆ ಆ ಸರ್ಪವ ಕಂಡು । ದಾರಿಕಾರ ಹೆದರಿಕೊಂಡು ।
ಎಂಥ ದೊಡ್ಡ ಪ್ರಾಣಿ ಇದೆಂದು । ಹಿಡಿದುಕೊಂಡ ನನ್ನ ಹೆದರಿಕೆಯಿಂದ ॥ 63

ಎಂದ ಹೋಗಬೇಡಿರಿ ಮುಂದೆ । ಆ ಹಾವು ಬಂದೀತು ನಮ್ಮ ಕಡೆ ।
ಓಡಲು ದಾರಿಯೂ ಇಕ್ಕಟ್ಟಾಗಿದೆ । ಬೇಡ ಅತ್ತ ಹೋಗಬೇಡಿರಿ ॥ 64

ಇಂಥ ದೃಶ್ಯವನು ಕಂಡ । ದಾರಿಕಾರ ಜೀವಕ್ಕೆ ಹೆದರಿದ ।
ಬಳಿಕ ಆ ಎರಡರ ವೈರಭಾವದ ಕಂಡ । ಬಗೆಯ ಉಪದೇಶವನಾಲಿಸಬೇಕು ॥ 65

ಅಯ್ಯಾವೀರಭದ್ರಪ್ಪಾ । ಇನ್ನೂ ಈ ನಿನ್ನ ವೈರಿ ಬಸಪ್ಪಾ ।
ಹೊಂದಲಿಲ್ಲ ಅನುತಾಪಾ । ಕಪ್ಪೆಯಾಗಿ ಜನ್ಮ ತಾಳಿದ್ದರೂ ॥ 66

ನೀನೂ ಸರ್ಪವಾಗಿ ಜನ್ಮ ತಾಳಿದ್ದು । ಆದರೂ ನಿನ್ನ ವೈರತ್ವ ಮುಗಿಯದು ।
ಇನ್ನಾದರೂ ನಾಚಿಕೊಂಡು । ವೈರವನ್ನು ಬಿಟ್ಟು ಸ್ವಸ್ಥವಾಗಿರಿ ॥ 67

ಶಬ್ದಗಳು ಬರಲು ಮುಖದಿ ಇಂತು । ಸರ್ಪ ಓಡಿತು ಕಪ್ಪೆಯ ಬಿಟ್ಟು ।
ಆಳವಾದ ನೀರಲ್ಲಡಗಿತು । ಮತ್ತದ್ದು ಕಾಣದಾಯಿತು ॥ 68

ಮೃತ್ಯು ಮುಖದಲಿ ಸಿಕ್ಕಿತ್ತು । ಅಂಥ ಕಪ್ಪೆಯೂ ಜಿಗಿದು ಓಡಿ ಹೋಯಿತು ।
ಗಿಡಗಳಲ್ಲದು ಅಡಗಿಕೊಂಡಿತು । ದಾರಿಕಾರನಿಗೆ ಬಲು ಆಶ್ಚರ್ಯ ॥ 69

ಎಂದ ತಿಳಿಯಲಿಲ್ಲದು ನನಗೇನೆಂದು । ಮುಖದಿಂದ ಶಬ್ದ ಉಚ್ಚಾರವಾದದ್ದು ।
ಅದರಿಂದ ಹಾವು ಕಪ್ಪೆಯ ಬಿಟ್ಟದು । ಹಾವೂ ಅಡಗಿಕೊಂಡಿತು ಹೇಗೆ ॥ 70

ಇದರಲ್ಲಿ ವೀರಭದ್ರಪ್ಪನಾರು । ಮತ್ತು ಈ ಬಸಪ್ಪನಾರು ।
ಅವರ ವೈರತ್ವಕ್ಕೆ ಕಾರಣವಾದರೂ । ಏನೆಂದು ದಾರಿಕಾರ ಕೇಳಿದ ನಯವಾಗಿ ॥ 71

ಆಗಲಿ ಹೋಗಿ ಗಿಡದ ಕೆಳಗೆ । ಚಿಲಮಿ ಸೇದುವಾ ಮೊದಲಿಗೆ ।
ಬಳಿಕ ಉತ್ತರ ನಿನ್ನ ಜಿಜ್ಞಾಸೆಗೆ । ಹೇಳಿ ನಾ ನನ್ನ ಸ್ಥಳಕ್ಕೆ ಹೋಗುವೆ ॥ 72

ಕುಳಿತೆವು ಗಿಡದ ಕೆಳಗೆ ಬಂದು । ಅಲ್ಲಿ ದಟ್ಟ ನೆರಳಿದ್ದು ।
ತಂಪು ಗಾಳಿ ಬೀಸುತಿದ್ದು । ಮತ್ತೆ ಅಲ್ಲಿ ಚಿಲಮಿ ಹೊತ್ತಿಸಿದೆವು ॥ 73

ದಾರಿಕಾರ ಮೊದಲು ಸೇದಿದ । ಬಳಿಕ ನನ್ನ ಕೈಗೆ ನೀಡಿದ ।
ಅದನು ಸೇದುತ್ತ ಹಿಂದೆ ನಡೆದ । ಕಥೆಯನವನಿಗೆ ಹೇಳಿದೆ ॥ 74

ನೋಡು ನಾನಿರುವ ಸ್ಥಳದಿಂದ । ಒಂದೆರಡು ಹರದಾರಿ ದೂರದ ।
ಹಳೆಯ ಮತ್ತು ಮಹಿಮಾ ಸಂಪನ್ನವಾದ । ಪವಿತ್ರಸ್ಥಾನವೊಂದಿತ್ತು ॥ 75

ಅಲ್ಲಿತ್ತು ಮಹಾದೇವನ ದೇವಸ್ಥಾನ ಒಂದು । ಹಳೆಯದು ಹರಕು ಮುರುಕಾದದ್ದು ।
ಅದರ ಜೀರ್ಣೋದ್ಧಾರ ಮಾಡಬೇಕೆಂದು । ಎಲ್ಲರ ಮನದಲಿ ಬಂದಿತ್ತು ॥ 76

ಅದಕಾಗಿ ವರ್ಗಣಿ ಕೂಡಿಸುವದೆಂದಾಯಿತು । ಬಹಳಷ್ಟು ಹಣವೂ ಕೂಡಿತು ।
ಪೂಜೆ ಅರ್ಚನೆಗಳ ವ್ಯವಸ್ಥೆ ಗೊತ್ತು ಪಡಿಸಲಾಯಿತು । ಪೂರ್ಣರೂಪರೇಖೆ ತಯಾರಾಯಿತು ॥ 77

ಅಲ್ಲಿಯ ಒಬ್ಬ ದೊಡ್ಡ ಧನಿಕ । ಅವನನ್ನು ಮಾಡಲಾಯಿತು ವ್ಯವಸ್ಥಾಪಕ ।
ಅವನನ್ನೇ ಮಾಡಿ ಪೂರ್ಣನಿರ್ಣಾಯಕ । ಹಣವನವನ ವಶಕ್ಕೊಪಿಸಲಾಯಿತು ॥ 78

ಅವನು ಜಮಾಖರ್ಚನ್ನಿಡಬೇಕು । ಅದರಲ್ಲಿ ತನ್ನ ವರ್ಗಣಿಯನ್ನೂ ರೋಖ ।
ಜಮಾ ಮಾಡಬೇಕು ಈ ಕಾರ್ಯವ ಚೊಕ್ಕ । ಪ್ರಾಮಾಣಿಕತನದಿಂದ ಮಾಡಬೇಕು ॥ 79

ಆದರವ ಬಲು ಕಂಜೂಷನಿದ್ದು । ತನ್ನ ಗಂಟಿಗೆ ಕೈ ಹತ್ತಬಾರದು ।
ಈ ರೀತಿಯಲಿ ಕೆಲಸ ನಡೆಸುತಿದ್ದು । ಅದರಿಂದ ಕೆಲಸ ಮುಂದುವರೆಯದಾಯಿತು ॥ 80

ಎಲ್ಲ ಹಣ ಖರ್ಚಾಯಿತೆಂದು । ಕೆಲಸವಾಯಿತು ಅರ್ಧಮರ್ಧ ।
ಖರ್ಚು ಮಾಡನವ ಹಣವ ತನ್ನ ಪಾಲಿನದ । ಒಂದು ಕಾಸನ್ನೂ ಕೈ ಬಿಡದಾದ ॥ 81

ಇಹನೇನೋ ದೊಡ್ಡ ಸಾಹುಕಾರ । ಜಿಪುಣತನದ ಪೂರ್ಣವತಾರ ।
ಬಾರದಾಯಿತು ಕೆಲಸಕ್ಕೆ ಆಕಾರ । ಬರೀ ಬಾಯ್ಮಾತು ಸಿಹಿಸಕ್ಕರೆ ॥ 82

ಮುಂದೆ ಅವನ ಮನೆಯಲ್ಲಿ ಕೂಡಿದರು । ಹಣ ಕೂಡಿಸಿದ ಎಲ್ಲ ಜನರು ।
ಅಯ್ಯಾ ನೀನೆಂಥ ಸಾಹುಕಾರ । ಅದರಿಂದೇನು ಪ್ರಯೋಜನವೆಂದರು ॥ 83

ಮಹಾದೇವರ ಜೀರ್ಣೋದ್ಧಾರ । ಹತ್ತದೆ ನಿನ್ನ ಕೈಭಾರ ।
ತಿಳಿಯದೆಂತಾಗುವದು ಪೂರ್ಣ । ಇದರ ವಿಚಾರವನೇನಾದರೂ ಮಾಡು ॥ 84

ಮತ್ತೆ ಜನರ ಮನ ಒಲಿಸಿ । ಇನ್ನಷ್ಟು ಹಣ ಕೂಡಿತು ।
ಅದನೂ ನಿನ್ನ ಹತ್ತಿರವೇ ಕಳಿಸಿ । ಕೊಡುವೆವಾದರೆ ಈ ಕೆಲಸ ಪೂರೈಸು ॥ 85

ಮುಂದೆ ಮತ್ತೇ ಹಣ ಕೂಡಿತು । ಉತ್ತಮ ರೀತಿಯಲ್ಲಿ ಕೈ ಸೇರಿತು ।
ಅದರದೇನೂ ಪ್ರಯೇಜನವಿಲ್ಲದಾಯಿತು । ಧನಿಕ ಸುಮ್ಮನೇ ಕುಳಿತುಬಿಟ್ಟ ॥ 86

ಕೆಲದಿನಗಳು ಕಳೆಯಲು ಹೀಗೆ । ಬಂದಿತಾಗ ದೇವರ ಮನಸಿಗೆ ।
ಅದೇ ಧನಿಕನ ಹೆಂಡತಿಗೆ । ದೃಷ್ಟಾಂತವಾಯಿತಾ ಕಾಲಕೆ ॥ 87

ಏಳು ನೀನಾದರೂ ಎಚ್ಚರಾಗು । ನನ್ನ ಗುಡಿಯ ಗುಮುಟ ಕಟ್ಟಿಸ ಹೋಗು ।
ನೂರು ಪಟ್ಟು ನೀ ಮಾಡುವ ಖರ್ಚಿಗೂ । ಆ ನೀಲಕಂಠ ನಿನಗೀಯುವ ॥ 88

ಮರುದಿನ ಈ ದೃಷ್ಟಾಂತ । ಪತಿಯ ಕಿವಿಗೆ ಹಾಕಿದಳು ಸಾದ್ಯಂತ ।
ಕವಡಿ ವ್ಯಯಿಸಿದರೂ ಯಾವನಿಗೆ ಪ್ರಾಣಾಂತ । ಅವನಿಗಿದರಿಂದ ಅತಿ ಉದ್ವೇಗ ॥ 89

ಹಗಲಿರುಳು ಮಾಡಬೇಕು ಧನ ಸಂಚಯ । ತಿಳಿಯದವನ ಮನಕೆ ಬೇರೆ ವಿಷಯ ।
ಅವನಿಗೆ ಈ ಕನಸಿನ ಆಶಯ । ಧನದವ್ಯಯ ಹೇಗೆ ಒಪ್ಪಿಗೆಯಾಗಬೇಕು ॥ 90

ಆತ ಹೇಳಿದ ತನ್ನ ಪತ್ನಿಗೆ । ದೃಷ್ಟಾಂತದಲಿ ವಿಶ್ವಾಸವಿಲ್ಲೆನಗೆ ।
ನನಗಿದೆಷ್ಟೂ ಇಲ್ಲ ಒಪ್ಪಿಗೆ । ಎಂದವಳ ಉಪಹಾಸ ಮಾಡಿದ ॥ 91

ಯಾರದು ಹೇಗೆ ಚಿತ್ತವೃತ್ತಿ । ಹಾಗೆಯೇ ಅವರ ಜಗತ್‌ಸ್ಥಿತಿ ।
ತಾನಿದ್ದಾಗ ಶಠಪ್ರವೃತಿ । ಇತರರೂ ಹಾಗೇ ಕಾಣುವರು ॥ 92

ನನ್ನದೇ ಹಣ ತೆಗೆದುಕೊಳ್ಳಬೇಕೆಂದು । ಇದ್ದುದೇ ಆದರೆ ಮನಸು ದೇವರದು ।
ನಾನು ನಿನ್ನ ಹತ್ತಿರವೇ ಇದ್ದು । ನಿನ್ನ ಕನಸಿನಲೇ ಏಕೆ ಬಂದ ॥ 93

ಈ ದೃಷ್ಟಾಂತವಾಯಿತು ನಿನಗೇ ಏಕೆ । ನನಗೆ ಅವ ತೋರಿಸಲಿಲ್ಲೇಕೆ ।
ವಿಶ್ವಾಸವೆನಿಸಲಾರದಾಗಿದೆ ಅದಕೆ । ಇದರರ್ಥ ತಿಳಿಯದಾಗಿದೆ ॥ 94

ಈ ಕನಸು ಸುಳ್ಳಿರಬೇಕು । ಅಥವಾ ದೇವರ ಯತ್ನವಿರಬೇಕು ।
ಗಂಡ ಹೆಂಡಿರಲುಂಟಾಗಬೇಕು । ಮತಭೇದವೆಂದೆನಿಸುವದೆನಗೆ ॥ 95

ಜೀರ್ಣೋದ್ಧಾರದ ಕಾರ್ಯಕ್ಕೆ । ಅಳತೆಯಿಲ್ಲ ನನ್ನ ಸಹಾಯಕೆ ।
ಆಗುತಿದೆ ತಿಂಗಳು ತಿಂಗಳಿಗೆ । ನಾವು ತುಂಬಿದ ಹಣದ ಚೀಲ ಬರಿದು ॥ 96

ಎಲ್ಲ ಹಣವನು ಜನ ತರುವರು । ಹೊರನೋಟಕೆ ಇದು ನಿಜವಾಗಿದ್ದರೂ ।
ಜಮಾ ಖರ್ಚು ನೋಡಲು ವ್ಯಾಪಾರೀ ಪದ್ಧತಿಯನುಸಾರ । ಬಹಳ ಹಾನಿಕಾರಕವಾಗಿದೆನಗೆ ॥ 97

ಜನರಿಗೆ ಯಾವದು ತಿಳಿಯದು । ಅದು ನಿನಗೇನು ತಿಳಿಯುವದು ।
ಎನುವಾಗ ನಿನ್ನ ದೃಷ್ಟಾಂತವಿದು । ಯಥಾರ್ಥವೆನಿಸದಾಗಿದೆ ॥ 98

ಇದ ನಂಬಿದರೆ ಮೋಸವಾಗುವದು । ನಿದ್ರಾ ಭಂಗದಿಂದ ಕನಸು ಬೀಳುವದು ।
ಅದನಾರು ಸತ್ಯವೆನುವದು । ಧನಿಕ ಈ ಸಿದ್ಧಾಂತವನನುಸರಿಸಿದ ॥ 99

ಕೇಳಿ ವನಿತೆ ಸುಮ್ಮನಾದಳು । ಪತಿಗೆ ಪ್ರತಿ ಹೇಳದಾದಳು । ಜನ ಹಣವ ಕೊಡತಿಹರೆನಲು ।
ಖುಷಿಯಿಂದ ಕೊಡುವವರು ಅಪರೂಪವೇ ॥ 100

ಪ್ರೀತಿಯಿಲ್ಲದೇ ದಾಕ್ಷಿಣ್ಯಕ್ಕೆಂದು । ಅಥವಾ ಒತ್ತಾಯದಿಂದ ಒಪ್ಪಿಕೊಂಡು ।
ಕೊಟ್ಟದು ದೇವರಿಗೆ ಹಿಡಿಸದು । ಸಂತೋಷದಿಂದ ಅಲ್ಪವಿತ್ತದ್ದೂ ಅಮೂಲ್ಯವಾದದ್ದು ॥ 101

ದುಡ್ಡು ಕೊಡುವದು ಹೇಗೆ ಹೇಗೆ । ಕೆಲಸ ನಡೆಯುವದು ಹಾಗೆ ಹಾಗೆ ।
ಕೆಲಸವೂ ನಿಲ್ಲುವದು ಹಣ ನಿಂತಾಗ್ಯೆ । ಹೀಗೆ ಅವ್ಯವಸ್ಥೆ ನಡೆಯಿತು ॥ 102

ಕೃಪಣ ಧನಿಕ ಕೈ ಬಿಡದಾದ । ಒಂದೂ ಕಾಸನ್ನೂ ತನ್ನ ಚೀಲದಿಂದ ।
ಹೇಗಾಯಿತು ದೃಷ್ಟಾಂತ ಮತ್ತೊಂದು । ಪತ್ನಿಗೆಂಬುದನು ಕೇಳಿರೀಗ ॥ 103

ಒತ್ತಾಯ ಪಡಿಸಬೇಡ ಪತಿಗೆ । ಹಣ ಕೊಡಲು ದೇವರ ಗುಡಿಗೆ ।
ನಿನ್ನ ಭಾವವೇ ಸಾಕು ದೇವರಿಗೆ । ನಿನಗಿಷ್ಟವಿದ್ದುದ ನೀ ಕೊಡು ॥ 104

ಮನೋಭಾವದಿಂದ ಕಾಸೊಂದು । ಲಕ್ಷಕ್ಕೆ ಸರಿ ತನ್ನ ಸ್ವಸತ್ತೆಯದು ।
ದೇವರಿಗೆ ಅರ್ಪಣೆ ಮಾಡು । ನಿನ್ನ ಪತಿಯ ಕೇಳಿಕೊಂಡು ॥ 105

ವ್ಯರ್ಥ ತೊಂದರೆ ತೆಗೆದುಕೊಳ್ಳದೇ । ಕೊಡಬೇಕು ತಮ್ಮ ಮನಕೆ ತಿಳಿದುದೇ ।
ಸ್ವಸತ್ತೆಯದಿರಲಿ ಅಲ್ಪ ಪ್ರಮಾಣದ್ದೇ । ಅಷ್ಟೇ ಅರ್ಪಣೆ ಮಾಡಿದರೆ ಸಾಕು ॥ 106

ಇಲ್ಲಿ ಭಾವದ್ದೇ ಮಹತ್ವವಿರುವದು । ನಿನಗದು ಇದೆ ಎಂದು ತಿಳಿದು ।
ಏನಾದರೂ ಕೊಡು ಕೊಡು ಎಂದು । ದೇವರು ಒತ್ತಾಯ ಪಡಿಸಿದ ॥ 107

ಅದು ಎಷ್ಟೇ ಅಲ್ಪವಿದ್ದರೂ । ನೀ ಕೊಟ್ಟು ನಿಶ್ಚಿಂತಳಾಗಿರು ।
ಅನುಚಿತವದು ಭಾವವಿಲ್ಲದೇ ಕೊಟ್ಟರೂ । ದೇವರಿಗೂ ಅದು ಸರಿಬರದು ॥ 108

ಭಾವವಿಲ್ಲದೇ ಕೊಟ್ಟದ್ದು । ಅದು ಎಲ್ಲ ಮಣ್ಣಿನಷ್ಟೇ ಬೆಲೆಯುಳ್ಳದ್ದು ।
ಕೊನೆಗೆ ಸಂಪೂರ್ಣ ನಿಷ್ಫಲವಾಗುವದು । ಈ ಅನುಭವ ವಿಲಂಬವಿಲ್ಲದೇ ಬರುವದು ॥ 109

ಈ ದೃಷ್ಟಾಂತವ ಕೇಳಲು । ಅವಳು ಮನದಲಿ ನಿಶ್ಚಯಿಸಿದಳು ।
ತಂದೆ ಕೊಟ್ಟ ಅಲಂಕಾರಗಳು । ಕೊಟ್ಟು ಬೇಡಿಕೆಯನೀಡೇರಿಸಬೇಕು ॥ 110

ಬಳಿಕವಳು ತನ್ನ ಪತಿಗೆ । ತನ್ನ ನಿಶ್ಚಯವನು ತಿಳಿಸಿದಾಗ್ಯೆ ।
ಅದನು ಕೇಳಿದ ಪತಿ ತನ್ನ ಮನದೊಳಗೆ । ಅತ್ಯಂತ ಉದ್ವಿಗ್ನನಾದನು ॥ 111

ಲೋಭ ಹೆಚ್ಚಿದಾಗ ವಿಚಾರವೆಲ್ಲಿಯದು । ಇಲ್ಲ ದೇವ ಧರ್ಮ ಆಚಾರವೊಂದೂ ।
ಮನದಲೆಂದ ಅವಿಚಾರವಿದೆಂಥದು । ಇವಳಿಗೆ ಭ್ರಾಂತಿಯಾಗಿದೆ ॥ 112

ಎಂದ ಅವಳ ಈ ಅಲಂಕಾರಗಳನು । ಲೆಕ್ಕ ಮಾಡಿ ಎಲ್ಲದರದು ।
ಒಂದು ಸಾವಿರ ರೂಪಾಯಿ ಬೆಲೆ ಮಾಡುವದು । ಅದರ ಬದಲು ಭೂಮಿಯ ಅವಳ ಹೆಸರು ಮಾಡುವದು ॥113

ತಾನೇ ಆ ಅಲಂಕಾರಗಳನು ಕೊಂಡು ಕೊಂಡು । ದುಡ್ಡಿಗೆ ಬದಲಾಗಿ ಹೆಂಡತಿಗೊಂದು ।
ಕೊಟ್ಟ ಉಪ್ಪು ನೆಲವಿದ್ದ ಜಮೀನೊಂದು । ಯಾರೋ ಒತ್ತೆ ಇಟ್ಟದ್ದೂ ಅದೂ ॥ 114

ಆ ಭೂಮಿಯೂ ಇತ್ತು ಬೀಳು ಬಿದ್ದದ್ದು । ಮಳೆಗಾಲದಲ್ಲೂ ಬೆಳೆ ಬರದಂಥದು ।
ಹೆಂಡತಿಗೆಂದ ಇದ ಕೊಟ್ಟು ಬಿಡು । ದಾನವಾಗಿ ಪಿನಾಕಪಾಣಿಗೆ ॥ 115

ಸಾವಿರ ರೂಪಾಯಿ ಬೆಲೆಯ ಈ ಜಮೀನು । ದೇವರಿಗೆ ಕೊಡಮಾಡಿದರೆ ದಾನ ।
ದೃಷ್ಟಾಂತದಂತೆ ಆಗುವನವ ಪ್ರಸನ್ನ । ನೀನೂ ಋಣ ಮುಕ್ತಳಾಗುವೆ ॥ 116

ಒಪ್ಪಿಕೊಂಡು ಪತಿಯ ವಚನ । ಕೃಪಣಕಾಂತೆ ಆ ನೆಲವನ ।
ಪ್ರೇಮಭಾವದಿಂದ ಮಾಡಿದಳರ್ಪಣ । ಶಂಕರನ ಸಂತೋಷ ಪಡಿಸಲು ॥ 117

ನಿಜ ಸಂಗತಿಯ ನೋಡ ಹೋಗಲು । ಇನ್ನೂರು ರೂಪಾಯಿ ಸಾಲದೊಳು ।
ಧನಿಕನಲ್ಲಿ ಒತ್ತೆ ಇಟ್ಟಿರಲು । ಡುಬಕಿಯ ಅಧಿಕಾರ ಅದರ ಮೇಲೆ ॥ 118

ಡುಬುಕಿ ಒಬ್ಬ ಅನಾಥ ಹೆಂಗಸು । ಈ ಭೂಮಿ ಅವಳ ಒಡೆತನದ್ದು ।
ಅವಳೂ ಒತ್ತೆ ಹಾಕಿದ್ದು । ಹಣದ ಅಡಚಣೆಯಿಂದಾಗಿ ॥ 119

ಆದರೆ ಧನಿಕ ಮಹಾಲೋಭಿಯಾಗಿದ್ದ । ಶಂಕರನ ಮೋಸಗೊಳಿಸಲೂ ಹಿಂಜರಿಯದಾದ ।
ಹೆಂಡತಿಯ ಸ್ತ್ರೀ ಧನದಿಂದ । ಕಪಟಲಾಭದಲಿ ಸಂತುಷ್ಟನಾದ ॥ 120

ಈ ವಿಷಯಲಾಲಸೆ ಬಲುಕೆಟ್ಟದ್ದು । ವಿಷಯಾಸಕ್ತನ ನಾಶ ಮಾಡುವದು ।
ಈ ವಿಷಯ ಪಾಶದಲೆಂದೂ ಸಿಗಬಾರದು । ಜೀವಿತದಾಶೆ ಇದ್ದವನು ॥ 121

ಶ್ರವಣ ಲಾಲಸೆಯಿಂದ ಸತ್ತಿತು ಕುರಂಗ । ಸುಂದರ ಮಣಿಧಾರಣೆಯಿಂದ ಭುಜಂಗ ।
ತೇಜಾವಲೋಕನದ ಲೋಭಕೆ ಪತಂಗ । ಈ ರೀತಿ ಕುಸಂಗವೀ ವಿಷಯದ್ದು ॥ 122

ವಿಷಯ ಭೋಗಕ್ಕೆ ಬೇಕು ಧನ । ಅದಕೆ ಮಾಡಬೇಕು ಗಹನ ಯತ್ನ ।
ಆದರೂ ವಿಷಯ ತೃಷ್ಣೆ ಬೆಳೆದು ದಾರುಣ । ನಿವಾರಿಸಲಶಕ್ಯವಾಗುವದು ॥ 123

ನಿಃಸಂಶಯವಾಗಿ ಅದು ಸಾಲದಲಿ ಮುರಿದ ಜಮೀನ । ಪ್ರಯತ್ನ ಪಟ್ಟರೂ ಬೆಳೆಯದೊಂದು ಕಣ ।
ಅಂಥದನು ಮಾಡೆಂದ ಶಿವಾರ್ಪಣ । ಎಂಥ ಪುಣ್ಯವಿದು ದಾನದ್ದು ॥ 124

ಎಲ್ಲಿಲ್ಲ ಯತ್ಕಿಂಚಿತ್ತೂ ಸಂಕಲ್ಪ । ಕೃಷ್ಣಾರ್ಪಣವದು ನಿರ್ವಿಕಲ್ಪ ।
ಹಾಗಲ್ಲ ಈ ಗಳಿಸಿದ ಪಾಪ । ಕೊನೆಗದು ಸಂತಾಪಕಾರಕವಾಗುವದು ॥ 125

ಇತ್ತ ಕಡೆಗೆ ಆ ಬಡ ಬ್ರಾಹ್ಮಣ । ಯಾರು ಮಾಡುವರು ದೇವರ ಪೂಜನ ।
ದೇವರಿಗೆಂದಾದಾಗ ಜಮೀನು ಸಂಪಾದನ । ಅತ್ಯಂತ ಸಮಾಧಾನಪಟ್ಟನು ॥ 126

ಮುಂದೆ ಕೆಲಕಾಲ ಕಳೆಯಿತು । ವಿಪರೀತವೇ ನಡೆದು ಹೋಯಿತು ।
ಕೃತ್ತಿಕಾನಕ್ಷತ್ರದ ಮಳೆ ಧಾರಾಕಾರ ಸುರಿಯಿತು । ಭಯಂಕರ ಬಿರುಗಾಳಿ ಬೀಸಿತು ॥ 127

ಒಮ್ಮೆಂದೊಮ್ಮೆ ಸಿಡಿಲು ಬಿತ್ತು । ಕಟ್ಟಡವೆಲ್ಲ ಬಿದ್ದುಹೋಯಿತು ।
ವಾರಸವಿಲ್ಲದ ಮನೆ ನೆಲ ಮಾತ್ರ ಉಳಿಯಿತು । ಸುಟ್ಟು ಹೋಯಿತು ಉಳಿದದ್ದೆಲ್ಲ ॥ 128

ಧನಿಕನೂ ಆಪತ್ತಿಗೊಳಗಾದ । ನಿಜಕಾಂತೆಯ ಸಹ ಅವನೂ ಸತ್ತು ಹೋದ ।
ಡುಬಕಿಯೂ ಸತ್ತಳದರಿಂದ । ಕೊನೆಯಾಯಿತಲ್ಲಿ ಮೂವರದೂ ॥ 129

ಮುಂದೆ ಈ ಧನಿಕನು ಮಥುರೆಯಲ್ಲಿ । ಒಬ್ಬ ಬಡ ಬ್ರಾಹ್ಮಣನ ಉದರದಲ್ಲಿ ।
ಮತ್ತವನ ಭಾವಿಕ ಪತ್ನಿ ಪೂಜಾರಿಯ ಮನೆಯಲ್ಲಿ । ಕನ್ಯೆಯಾಗಿ ಜನಿಸಿದಳು ॥ 130

ಹೆಸರಿಟ್ಟವಳಿಗೆ ಗೌರಿ ಎಂದು । ಬೇರೆಯೇ ಪರಿ ಆ ಡುಬಕಿಯದು ।
ನಾರಿಯ ಬದಲು ನರನಾಗಿ ಹುಟ್ಟಿದ್ದು । ಶಂಕರನ ಗೊರವನ ಮನೆಯಲ್ಲಿ ॥ 131

ಆ ಮಗುವಿನ ತೊಟ್ಟಿಲಿಗಿಟ್ಟರು । ಚೆನ್ನಬಸಪ್ಪ ಎಂದು ಹೆಸರು ।
ಹೀಗೆ ಸ್ಥಿತ್ಯಂತರ ಹೊಂದಿದರು ಮೂವರೂ । ಅವರವರ ಕರ್ಮದ ಫಲವಾಗಿ ॥132

ಧನಿಕನು ಮತ್ತೆ ಹುಟ್ಟಿ ಬಂದು । ವೀರಭದ್ರನೆಂಬ ಹೆಸರಿನಿಂದಿದ್ದು ।
ಇದೇ ಪ್ರಾರಬ್ಧ ಕರ್ಮವೆಂಬುದು । ಭೋಗದಿಂದಲೇ ಅದನು ಮುಗಿಸಬೇಕು ॥133

ಶಂಕರನ ಪೂಜಾರಿಯಾಗಿದ್ದ । ಅವ ನನಗೆ ಬಹಳ ಪ್ರಿಯನಾಗಿದ್ದ ।
ನನ್ನೊಡನೆ ಚಿಲುಮೆ ಸೇದುತಿದ್ದ । ದಿನಾಲೂ ನಮ್ಮ ಮನೆಗೆ ಬಂದು ॥ 134

ಆಗ ಸಂತೋಷದಿಂದ ನಾವೆಲ್ಲ । ಮಾತನಾಡುತಿದ್ದೆವು ರಾತ್ರಿಯೆಲ್ಲ ।
ಬೆಳೆದು ಉಪವರಳಾಗಿದ್ದ । ಗೌರಿಯೂ ಬರುತಿದ್ದಳವನ ಜೊತೆಗೆ ॥ 135

ಅವಳೂ ಭಕ್ತಿ ಮಾಡುತಿದ್ದಳು ಎನ್ನ । ಆಗ ಪೂಜಾರಿ ಕೇಳಿದ ಒಂದು ದಿನ ।
ಎಲ್ಲೆಲ್ಲಿ ಹುಡುಕಿದರೂ ಸ್ಥಳಗಳನ । ಹುಡುಗಿಯ ಮದುವೆ ಕೂಡಿಬರಲೊಲ್ಲದು ॥ 136

ಬಾಬಾ ವರ ಹುಡುಕಿ ದಣಿದೆ । ಪ್ರಯತ್ನ ಮಾಡಿ ಸಾಕಾಗಿದೆ ।
ಯಾಕೆ ಚಿಂತಿಸುವೆ ನಾನೆಂದೆ । ಹುಡುಗ ಬರಹತ್ತಿದ್ದಾನೆ ॥ 137

ನಿನ್ನ ಮಗಳು ಭಾಗ್ಯಶಾಲಿಯಿರುವಳು । ಬಹಳ ಧನವಂತಳಾಗುವಳು ।
ಅವಳನು ಹುಡುಕುತ್ತ ತಾನೇ ಬರಲು । ಮಾರ್ಗ ಕ್ರಮಿಸುತ್ತಿರುವನು ॥ 138

ಅಲ್ಪಾವಕಾಶದಲೇ ನಿನ್ನ ಮನೆಗೆ ಬರುವ । ನಿನ್ನ ಮನಕಾಮನೆಯ ಪೂರೈಸುವ ।
ಗೌರಿಯ ಪಾಣಿಗ್ರಹಣ ಮಾಡುವ । ನಿನ್ನ ವಚನವ ಮನ್ನಿಸಿ ॥ 139

ಇತ್ತ ವೀರಭದ್ರನ । ಮನೆಯಲ್ಲಿ ಕಡುಬಡತನ ।
ತಂದೆ ತಾಯಿಗೆ ಹೇಳಿ ಧೈರ್ಯವನ । ಮನೆ ಬಿಟ್ಟು ಹೊರಟನು ॥ 140

ಅವನು ಊರೂರಲ್ಲಿ ಭಿಕ್ಷಾಟನ । ಒಮ್ಮೊಮ್ಮೆ ಮಾಡಿ ಕೂಲಿ ಕುಂಬಳಿಯನ ।
ತಿನ್ನುತ್ತ ಯಾವಾಗ ಏನು ಸಿಕ್ಕಿತು ಅದನ । ಸಂತುಷ್ಟನಾಗಿ ತಿರುಗಾಡುತಿದ್ದ ॥ 141

ತಿರುಗುತ್ತ ತಿರುಗುತ್ತ ದೈವದಿಂದ । ಪೂಜಾರಿಯ ಮನೆಗೆ ಬಂದ ।
ಎಲ್ಲರಿಗೂ ಅವ ಬೇಕಾದವನಾದ । ಅಲ್ಲಾಮಿಯಾನ ದಯೆಯಿಂದ ॥ 142

ಬರಬರುತ್ತ ಲೋಭ ಬೆಳೆಯಿತು । ಗೌರಿಯನವನಿಗೆ ಕೊಡಬೇಕೆನಿಸಿತು ।
ಗೋತ್ರ, ನಾಡಿ ಗಣ ಯೋಗ ಕೂಡಿತು । ಆನಂದವಾಯಿತು ಪೂಜಾರಿಗೆ ॥ 143

ಜೊತೆಗೆ ವೀರಭದ್ರನ ಕರೆದುಕೊಂಡು । ಒಂದು ದಿನ ಪೂಜಾರಿ ಬಂದು ।
ಇಬ್ಬರನೂ ಆ ಹೊತ್ತಿನಲಿ ಕಂಡು । ಒಮ್ಮೆಲೇ ವಿಚಾರ ಹೊಳೆಯಿತು ॥ 144

ವಿಚಾರ ಬರುವದೇ ತಡ ಬಂತು ಅದು ಮಾತಿನಲಿ । ಸದ್ಯ ಮದುವೆಯ ಮುಹೂರ್ತವಿದ್ದಲ್ಲಿ ।
ಕೊಟ್ಟು ನೀ ಪಾರಾಗು । ನಿನ್ನ ಗೌರಿಯನಿವನಿಗೆ ॥ 145

ಕಾಂತೆಯ ಅನುಮತಿ ಪಡೆದು । ವೀರಭದ್ರನ ನಿಶ್ಚಯಿಸಿ ವರನೆಂದು ।
ನೋಡಿ ವಿವಾಹ ಮುಹೂರ್ತವನೊಂದು । ಯಥೋಚಿತ ವಿವಾಹ ಮಾಡಿದರು ॥ 146

ನಿಜಕಾರ್ಯಾರ್ಥವೆಲ್ಲ ಮುಗಿದು । ಬಂದರು ನನ್ನ ದರ್ಶನಕ್ಕೆಂದು ।
ಮತ್ತು ನನ್ನ ಆಶೀರ್ವಾದ ಪಡೆದು । ಪ್ರಪಂಚದಲಿ ಕೃತಾರ್ಥರಾಗಲು ॥ 147

ಸಂತಸದಿಂದಿತ್ತೆ ಆಶೀರ್ವಚನ । ದೊರಕತೊಡಗಲು ಸುಖದ ಅನ್ನ ।
ವೀರಭದ್ರನ ಮುದ್ರೆ ಪ್ರಸನ್ನ । ಆಗಿ ಸುಖಸಂಪನ್ನನಾಗಿರಲು ॥ 148

ಅವನೂ ನನ್ನ ಭಕ್ತನಾದ । ಅಲ್ಪಾವಕಾಶದಲೇ ಸಂಸಾರ ಹೂಡಿದ ।
ಯಾರಿಹನಿಲ್ಲಿ ಅಂಥ ಭಾಗ್ಯದವ । ದುಡ್ಡಿಲ್ಲದಿರೆ ವ್ಯಥೆ ಬಿಡದವ ॥ 149

ಈ ದುಡ್ಡಿನ ಆಟ ದೊಡ್ಡದು । ದೊಡ್ಡ ದೊಡ್ಡವರನ್ನೂ ಅದು ಬಿಡದು ।
ವೀರಭದ್ರನಿಗೂ ಬಯಕೆಯಿದ್ದು । ಧನದಾಶೆಯೇ ಅಂಥದು ॥ 150

ಬಾಬಾ ಈ ಸಂಸಾರ ಬಲು ಕಷ್ಟದ್ದು । ದುಡ್ಡಿಲ್ಲದೇ ಇದು ಸಾಗದು ।
ಹೇಳಿರಿದಕೆ ಪ್ರತಿಕಾರವೊಂದು । ಈ ಸಂಸಾರ ಸುಗಮವಾಗುವಂತೆ ॥ 151

ನಿಮ್ಮ ಚರಣಕೊಂದಿಸಿ ಬೇಡುವೆ । ಇನ್ನು ಈ ಪ್ರತಾರಣೆ ತರವೇ ? ।
ನನ್ನ ಕಷ್ಟ ಪರಿಹರಿಸುವವರು ನೀವೇ । ನೀವೇ ಈ ಮದುವೆ ಮಾಡಿಸಿದಿರಿ ॥ 152

ನಾನೂ ಅವನಿಗೆ ಬೋಧಿಸಿದೆ । ಪ್ರೇಮದಿಂದ ಆಶೀರ್ವದಿಸುತಿದ್ದೆ ।
'ಅಲ್ಲಾ ಮಾಲೀಕ'ನಿಗೆಲ್ಲ ತಿಳಿದಿದೆ । ಅವನೇ ಈ ಸಂಕಟದಿಂದ ಬಿಡಿಸಬೇಕು ॥ 153

ವೀರಭದ್ರನ ಮನೋಗತವ ತಿಳಿದು । ಇಚ್ಛಿತ ಮನೋರಥ ಪೂರ್ಣವಾಗಲೆಂದು ।
ನಾನವನಿಗೆ ಆಶ್ವಾಸನೆ ಇತ್ತಿದ್ದು । ಒಂದಿಷ್ಟೂ ಮನದಿ ಮರುಗಬೇಡ ॥ 154

ನಿನ್ನ ಭಾಗ್ಯದ ಕಾಲ ಹತ್ತಿರವಿದೆ । ಇರು ವ್ಯರ್ಥ ಸಂಕಟ ಪಡದೆ ।
ದ್ರವ್ಯ ನಿನ್ನ ಕೈಕಸವಾಗುವದು । ಅದರ ಸುಕಾಲವಾಗುವದು ॥ 155

ದ್ರವ್ಯದಿಂದಾಗಿದೆನ್ನ ಅವಹೇಳನೆ । ಉಳಿಯವಲ್ಲದು ಪತ್ನಿಯ ಒಂದಾಣೆ ।
ಸಾಕು ಸಾಕಿನ್ನೀ ವಿಡಂಬನೆ । ಈ ಮದುವೆಯ ದೊಡ್ಡಿಸ್ತನವೂ ಸಾಕು ॥ 156

ಹೀಗಿರಲು ಮುಂದೆ ಬೇರೆಯೇ ಆಯಿತು । ಗೌರಿಯ ಗ್ರಹ ತಿರುಗಿತು ।
ಬಂಜೆ ಭೂಮಿಗೆ ಬೆಲೆ ಬಂತು । ದೇವರ ಮಾಯೆ ತಿಳಿಯದು ॥ 157

ಒಬ್ಬ ಅದನು ಕೊಂಡುಕೊಳ್ಳಲು ಬಂದು । ಒಂದು ಲಕ್ಷ ರೂಪಾಯಿ ಕೊಡಲು ಸಿದ್ಧ ।
ಅರ್ಧ ಈಗಲೇ ಕೊಡುವವನಿದ್ದ । ಉಳಿದರ್ಧವ ಕಂತಿನ ಮೇಲೆ ॥ 158

ಪ್ರತಿ ವರ್ಷ ಎರಡು ಸಾವಿರದ ಕಂತ । ಕೊಡಬೇಕು ಬಡ್ಡಿಯನದರಲಿ ಕೂಡಿಸುತ ।
ಇಪ್ಪತ್ತೈದು ವರ್ಷಗಳಾಗುತ । ಪೂರ್ತಿ ಹಣ ಗೌರಿಯದಾಗುವದು ॥ 159

ವಿಚಾರ ಎಲ್ಲರಿಗೂ ಒಪ್ಪಿಗೆಯಾಗಿದ್ದು । ಗೊರವ ಚೆನ್ನ ಬಸಪ್ಪನಾಗ ಎದ್ದು ।
ಹೇಳಿದ ಹಣ ಶಂಕರನಿಗೆ ಅರ್ಪಿಸಿದ್ದು । ಅದರ ಮೊದಲ ಹಕ್ಕು ಗೊರವನದು ॥ 160

ಅವನೆಂದ ಗೊರವನಾದ ನನಗೆ । ಅರ್ಧ ಬಡ್ಡಿ ವರ್ಷದ ಕೊನೆಗೆ ।
ಲೆಕ್ಕದಂತೆ ಬರಬೇಕು ನನಗೆ । ಅದಿಲ್ಲದೇ ನನಗೆ ಸಮಾಧಾನವಿಲ್ಲ ॥ 161

ವೀರಭದ್ರಪ್ಪ ಏನೂ ಕೊಡಲೊಲ್ಲ । ಚನಬಸಪ್ಪ ಸುಮ್ಮನಾಗಲೊಲ್ಲ ।
ಇಬ್ಬರದೂ ಹತ್ತಿತು ಜಗಳ । ಇಬ್ಬರೂ ಬಂದರು ನನ್ನೆಡೆಗೆ ॥ 162

ಶಂಕರನೇ ಅದರ ಪೂರ್ಣ ಒಡೆಯನಿರುವಾಗ್ಯೆ । ಭೂಮಿ ಬಾರದು ಬೇರೆಯವರ ಪಾಲಿಗೆ ।
ಸುಮ್ಮನೇ ಬೀಳದಿರಿ ಅದರ ಲೋಭದೊಳಗೆ । ಇಬ್ಬರಿಗೂ ನಾನಿದ ಹೇಳಿದೆ ॥ 163

ಶಂಕರನಿಗೆ ಅರ್ಪಿತವಾಗಿದ್ದು । ಅದರ ಬೆಲೆ ಈಗ ಬಂದಿರುವದು ।
ಗೌರಿಯ ಹೊರತು ಇದಕೆ ಆಶೆ ಪಡುವವರು । ಅವರು ಮಣ್ಣು ಮುಕ್ಕಿದಂತೆಯೇ ॥ 164

ದೇವರ ಅಪ್ಪಣೆಯ ಹೊರತು । ಮುಟ್ಟಿದರಿದನು ಯಾರೇ ಆಯಿತು ।
ಎದುರಿಸಬೇಕಾಗುವದು ದೇವರ ಸಿಟ್ಟು । ಇದೆಲ್ಲ ಸೊತ್ತು ದೇವರದು ॥ 165

ಯಾವುದರ ಮೇಲೆ ಪೂಜಾರಿಯ ಹಕ್ಕಿರುವದು । ಅದೆಲ್ಲ ಗೌರಿಯದು ವಾರಸುದಾರಳೆಂದು ।
ಅಲ್ಲಿ ಬೇರೆಯವರದೇನು ನಡೆಯುವದು । ಗೌರಿಯ ಸ್ವಂತದಧಿಕಾರದ ಧನವದು ॥ 166

ಬಳಿಕ ನಾನವರಿಗೆ ಹೇಳಿದ್ದೂ । ಗೌರಾಯಿಯು ಹೇಳಿದಂತೆ ನಡೆದು ।
ಅವಳ ಅನುಮತಿಯನ್ನು ಪಡೆದು । ಅದರಂತೆ ನಡೆದರೆ ಕಲ್ಯಾಣವಾಗುವದು ॥ 167

ವಿರುದ್ಧವಾಗಿ ನಡೆದರೆ ಅವಳಿಚ್ಛೆಗೆ । ಅದಕೆಂದೂ ಇರದು ದೇವರ ಒಪ್ಪಿಗೆ ।
ಅಧಿಕಾರವಿಲ್ಲ ವೀರಭದ್ರಪ್ಪನಿಗೆ । ಸ್ವತಂತ್ರ ವ್ಯವಹಾರ ನಡೆಸಲು ॥ 168

ನಾನು ನನ್ನ ವಿಚಾರ ಹೀಗೆಂದು । ನಿಜದಿಂದಲೂ ಸ್ಪಷ್ಟಪಡಿಸಿದ್ದು ।
ಆಗ ವೀರಭದ್ರ ನನ್ನ ಮೇಲೆ ಸಿಟ್ಟಿಗೆದ್ದು । ಅಪಶಬ್ದಗಳ ಸುರಿಮಳೆಗರೆದ ॥ 169

ಎಂದ ಬಾಬಾ ನಿಮ್ಮ ಮನದಲ್ಲಿರುವದು । ನನ್ನ ಹೆಂಡತಿಯ ಒಡೆತನ ಸ್ಥಾಪಿಸುವದು ।
ಎಲ್ಲ ಹಣವನು ನುಂಗಿ ನೀರು ಕುಡಿಯುವದು । ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವದು ॥ 170

ಅವನಾಡಿದ ಆ ನುಡಿಯ ಕೇಳಿ । ಸ್ತಬ್ಧನಾದೆ ನಾ ಕುಳಿತಲ್ಲಿ ।
ಅಲ್ಲಾಮಿಯಾನದೆಲ್ಲ ಆಟವಿರುವಲ್ಲಿ । ಸುಮ್ಮನೇ ಏಕೆ ವ್ಯಥೆ ಪಡುವದು ॥ 171

ವೀರಭದ್ರಪ್ಪ ನನಗೆ ಹೀಗೆಂದ । ಮನೆಯಲಿ ಪತ್ನಿಯ ಮೇಲೆ ರೇಗಾಡಿದ ।
ಆಗ ದರ್ಶನಕೆಂದು ಮಧ್ಯಾನ್ಹ । ಬಂದಾಗ ವಿನಂತಿಸತೊಡಗಿದಳವಳು ॥ 172

ಬಾಬಾ ಅವರಿವರ ಮಾತು ಕೇಳಿ । ನನ್ನ ಮೇಲೆ ತಮ್ಮ ಅವಕೃಪೆಯಾಗದಿರಲಿ ।
ಈ ಮಗಳ ಮೇಲೆ ತಮ್ಮ ಲೋಭವಿರಲಿ । ಎಂದು ಸೆರಗೊಡ್ಡಿ ಬೇಡುವೆ ॥ 173

ಅವಳು ಬೇಡಿಕೊಳ್ಳಲು ಹೀಗೆ । ನಾನಾಶ್ವಸನೆಯನಿತ್ತೆ ಅವಳಿಗೆ ।
ಏಳು ಸಮುದ್ರದಗಳಷ್ಟನ್ನೀಯುವೆ ನಿನಗೆ । ಆದರೆ ನೀ ಖಿನ್ನಳಾಗಬಾರದು ॥ 174

ಮಲಗಿದಾಗ ಅದೇ ರಾತ್ರಿಯಲಿ । ಗೌರಿ ದೃಷ್ಟಾಂತವ ಕಾಣುತಲಿ ।
ಶಂಕರನು ಬಂದು ಕನಸಿನಲಿ । ಹೇಳಿದನೇನೆಂಬದು ಕೇಳಿರಿ ॥ 175

ಈ ದುಡ್ಡೆಲ್ಲ ಇರುವದು ನಿನ್ನದು । ನೀನಾರಿಗೂ ಅದನು ಕೊಡಬಾರದು ।
ವ್ಯವಸ್ಥೆಯನು ನಾ ಹೇಳಿದ್ದು । ಅದು ಯಾವಾಗಲೂ ಇರುವಂತೆ ಮಾಡು ॥ 176

ದೇವಸ್ಥಾನಕ್ಕಾಗಿ ದುಡ್ಡು । ಚೆನ್ನಬಸಪ್ಪ ಹೇಳಿದಂತೆ ಕೊಡು ।
ನನಗವನ ವಿಶ್ವಾಸವಿರುವದು । ಈ ನಿರ್ಬಂಧವಿಟ್ಟುಕೊಂಡಿರು ॥ 177

ಬೇರೆ ಕಾರ್ಯಕ್ಕೆ ಹಣ ಕೊಡುವದು । ಅದರಿಂದ ಹಣದ ಅವ್ಯವಸ್ಥೆಯಾಗಬಾರದು ।
ಅದಕೆ ಮಶೀದಿಯೊಳಗಿನ ಬಾಬಾರ ಕೇಳುವದು । ಅದಿಲ್ಲದೆ ಯಾವ ವ್ಯವಸ್ಥೆಯನ್ನೂ ಮಾಡಬಾರದು ॥ 178

ಗೌರೀಬಾಯಿ ನನಗೆ ಸಾದ್ಯಂತ । ದೃಷ್ಟಾಂತವ ಕಥೆ ಹೇಳುತ ।
ನಾನೂ ಸಲಹೆಯನಿತ್ತೆ ಯಥೋಚಿತ । ದೃಷ್ಟಾಂತದಂತೆ ನಡೆಯಲು ॥ 179

ಅಸಲನು ನಿನ್ನದು ನೀ ತೆಗೆದುಕೊಂಡು । ಚನ್ನಬಸಪ್ಪನಿಗೆ ಅರ್ಧ ಬಡ್ಡಿಯ ಕೊಡು ।
ಇದೇ ಪ್ರಕಾರ ಯಾವಾಗಲೂ ಮಾಡು । ವೀರಭದ್ರನಿಗಿದು ಸಂಬಂಧವಿಲ್ಲ ॥ 180

ನಾವು ಮಾತನಾಡುತಿದ್ದಾಗ ಹೀಗೆ । ಇಬ್ಬರೂ ಜಗಳಾಡುತ್ತ ಬಂದರಲ್ಲಿಗೆ ।
ಪರಸ್ಪರರು ಶಾಂತರಾಗುವಂತೆ । ಉಪಾಯವನೊಂದು ಮಾಡಿದೆ ॥ 181

ಶಂಕರನ ಆ ದೃಷ್ಟಾಂತವನು । ಗೌರಾಯಿ ರಾತ್ರಿ ಕಂಡದ್ದನ್ನು ।
ಇಬ್ಬರಿಗೂ ಸಾದ್ಯಂತ ಹೇಳಿದೆನು । ಕೇಳಿ ವೀರಭದ್ರ ಉನ್ಮತ್ತನಾದ ॥ 182

ವೀರಭದ್ರ ಬೈಗಳ ಸುರಿಮಳೆಯನು । ಪ್ರತಿ ಪಕ್ಷದ ಮೇಲೆ ಯಥೇಚ್ಛ ಕರೆದನು ।
ಯದ್ವಾ ತದ್ವಾ ಮಾತಾಡಿದನು । ಕೇಳಿ ಎದುರಾಳಿಯೂ ರೇಗಿದ ॥ 183

ಅವನು ಆದನು ಉನ್ಮತ್ತ । ಬಾಯಿಗೆ ಬಂದ ಹಾಗೆ ಬಯ್ದು ಶಪಿಸುತ ।
ಎಲ್ಲಿ ಸಿಕ್ಕಲ್ಲಿ ಮಾಡುವೆ ನಿನ್ನ ಘಾತ । ಎಂದು ಅನ್ನತೊಡಗಿದ ॥ 184

ಅನುಲಕ್ಷಿಸಿ ಚನಬಸಪ್ಪನನು । ಉನ್ಮತ್ತನಾಗಿ ವೀರಭದ್ರನು ।
ಎಂದ ನಿನ್ನ ತುಂಡು ಮಾಡುವೆನು । ನಿನ್ನ ಹಾಗೇ ನುಂಗಿ ಬಿಡುವೆನು ॥ 185

ಚನಬಸಪ್ಪ ಹೆದರಿದ । ಗಟ್ಟಿ ನನ್ನ ಕಾಲು ಹಿಡಿದ ।
ನನ್ನನ್ನೀ ಸಂಕಟದಿಂದ ಬಿಡಿಸಿರೆಂದ । ಆಗ ನಾನವನಿಗೆ ಅಭಯವನಿತ್ತೆ ॥ 186

ಆಗ ನಾ ದೀನನಾದ ಚನಬಸಪ್ಪನಿಗೆ । ಧೈರ್ಯದ ಮಾತು ಹೇಳಿದೆ ಹೀಗೆ ।
ವೀರಭದ್ರನ ಕೈಯೊಳಗ । ನಿನ್ನ ಸಾಯಲು ಬಿಡಲಾರೆ ॥ 187

ಬಳಿಕ ವೀರಭದ್ರನಿಗಾಯಿತು ವಾತ । ಅದರಲ್ಲಿಯೇ ಮೃತನಾದನಾತ ।
ಸರ್ಪವಾಗಿ ಜನ್ಮ ತಾಳುತ । ಹೀಗಿರುವದು ಅವನ ಕಥೆ ॥ 188

ಚನಬಸಪ್ಪ ಹೆದರಿಕೊಂಡ । ಅದರಿಂದಲೇ ಆತ ಮೃತನಾದ ।
ದುರ್ಧರ ಯೋನಿಯಲಿ ಹುಟ್ಟಿದ । ಹೀಗವನ ದೇಹಾಂತರವಾಯಿತು ॥ 189

ಪೂರ್ವಜನ್ಮದ ವೈರತ್ವ ಸಾಧಿಸಲು । ಹುಟ್ಟಿಬಂದ ಸರ್ಪ ಯೋನಿಯೊಳು ।
ಬಸಪ್ಪನೆಂಬ ಕಪ್ಪೆಯ ಬೆನ್ನು ಹತ್ತಲು । ಕೊನೆಗೆ ವೀರಭದ್ರನದ ಹಿಡಿದು ಬಿಟ್ಟ ॥ 190

ದುರ್ಧರ ರೂಪದಲಿದ್ದ ಬಸಪ್ಪ ದೀನನಾಗಿದ್ದ । ಭದ್ರಪ್ಪ ಹಾವಿನ ಬಾಯಿಗೆ ಬಿದ್ದ ।
ಅದರ ಕರುಣಾ ವಚನವ ಕೇಳಿದ । ನನ್ನ ಹೃದಯ ಕರಗಿತು ॥ 191

ಹಿಂದೆ ಕೊಟ್ಟ ವಚನವ ನಾ ನೆನೆಸಿಕೊಂಡು ಆ ದೊಡ್ಡ । ಸರ್ಪದ ಬಾಯಿಗೆ ಬಿದ್ದು ।
ಒದರುವ ಬಸಪ್ಪನನು ಮುಕ್ತ ಮಾಡಿದ್ದು । ನನ್ನ ವಚನವ ನಾ ಉಳಿಸಿಕೊಂಡೆ ॥ 192

ಅಲ್ಲಾ ನಿಜ ಭಕ್ತರಿಗೆಂದು । ಸಂಕಟ ಸಮಯದಲಿ ರಕ್ಷಿಸುವ ಓಡಿ ಬಂದು ।
ಅವನೇ ನನ್ನನ್ನು ಇಲ್ಲಿಗೆ ಕಳಿಸಿದ್ದು । ಭಕ್ತನ ರಕ್ಷಣೆ ಮಾಡಿಸಿದ ॥ 193
ಇದಂತೂ ಪ್ರತ್ಯಕ್ಷ ಅನುಭವಕೆ ಬಂದುದು । ವೀರಭದ್ರಪ್ಪನ ಓಡಿಸಿಬಿಟ್ಟಿದ್ದು ।
ಚನಬಸಪ್ಪನನು ಸಂಕಟದಿಂದ ಪಾರು ಮಾಡಿದ್ದು । ಇದೆಲ್ಲ ದೇವರು ಮಾಡಿದ್ದು ॥ 194

ಹೋಗಲಿ ಚಿಲುಮೆಯ ತುಂಬು ಇನ್ನು । ಸೇದಿ ಬಿಟ್ಟು ನನ್ನ ಸ್ಥಾನಕೆ ಹೋಗುವೆನು ।
ನಿನ್ನ ಊರಿಗೆ ಹೋಗು ನೀನೂ । ನನ್ನ ಹೆಸರಿನಲಿ ಲಕ್ಷ್ಯ ತೊಡಗಿಸು ॥ 195

ಹೀಗೆಂದು ಚಿಲುಮೆ ಸೇದಿದೆ । ಸತ್ಸಂಗತಿಯ ಸೌಖ್ಯ ಪಡೆದೆ ।
ಸಾವಕಾಶ ನಡೆದು ತಿರುಗಿ ಬಂದೆ । ನಿಜಾಂತರದಲಿ ಪರಮ ತೃಪ್ತಿ ಹೊಂದಿದೆ ॥ 196

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ । ಶ್ರೀ ಸಾಯಿಸಮರ್ಥ ಸಚ್ಚರಿತೆ । ಶ್ರೀ ಸಾಯಿ ಮುಖ ಶೃತಕಥಾ ಕಥನಂ ನಾಮ ಸಪ್ತ ಚತ್ವಾರಿಂಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ನಲವತ್ತೆಂಟು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಈ ಅಧ್ಯಾಯವನಾರಂಭಿಸಬೇಕಿನ್ನು । ಎನುವಾಗ ಶ್ರವಣದಲಿ ಅತ್ಯಂತ ಆಸಕ್ತಿಯುಳ್ಳವನು ।
ಶ್ರೋತೃವು ಕೇಳ ತೊಡಗಿದನು । ಸಾಯಿ ಗುರುವೋ ಸದ್ಗುರುವೋ ಎಂದು ॥ 1

ಅವನ ಸಮಾಧಾನಕ್ಕೆಂದು । ಸಂಕ್ಷಿಪ್ತದಲಿ ಸದ್ಗುರುವಿನ ಲಕ್ಷಣ ಹೇಳುತ್ತಿರುವದು ।
ಅದರಿಂದ ಕಂಡು ಬರುವುದು । ಸಾಯಿ ಚರಣದಿ ಸದ್ಗುರುವಿನ ಗುರುತು ॥ 2

ಎಲ್ಲಿ ವೇದಾಧ್ಯಯನ ಪ್ರಾಪ್ತವಾಗುವುದು । ಅಥವಾ ಆರು ಶಾಸ್ತ್ರಗಳ ಜ್ಞಾನಲಭಿಸುವುದು ।
ಯಾರಿಂದ ವೇದಾಂತ ನಿರೂಪಣ ಕಲಿತದ್ದು । ಜ್ಞಾನಿಗಳು ಸದ್ಗುರು ಎನ್ನರಂಥವರಿಗೆ ॥ 3

ಯಾರು ವಾಯುವ ನಿರೋಧಿಸುವರು । ತಪ್ತ ಮುದ್ರೆ ಧಾರಣ ಮಾಡುವರು ।
ಬ್ರಹ್ಮಾನುವಾದದಿಂದ ಶ್ರೋತೃಗಳ ರಂಜಿಸುವರು । ಜ್ಞಾನಿಗಳವರಿಗೆ ಸದ್ಗುರು ಎನ್ನರು ॥ 4

ಶಿಷ್ಯರಿಗೆ ಶಾಸ್ತ್ರೋಕ್ತ ಮಂತ್ರವನ್ನು ಕೊಡುವರು । ಜಪ ಮಾಡಲು ಆಜ್ಞಾಪಿಸುವರು ।
ಯಾವಾಗ ಫಲಪ್ರಾಪ್ತಿಯಾಗುವುದು ಎಂದು ಆದರೂ । ಯಾರ ಮನಸಿಗೆ ವಿಶ್ವಾಸವಿರದು ॥ 5

ಅತಿ ರಸಭರಿತ ತತ್ವ ನಿರೂಪಣ । ಸಾಕಷ್ಟು ಶಬ್ದ ಜ್ಞಾನ ।
ಆದರೆ ಸ್ವಾನರಿಭವಿದ್ದ ವಿನಃ । ಅದೆಲ್ಲ ಟೊಳ್ಳು ಶಾಬ್ದಿಕ ಜ್ಞಾನ ಮಾತ್ರ ॥ 6

ಕೇಳುತಿರುವಾಗ ನಿರೂಪಣೆಯನ್ನು । ಎನಿಸಬಹುದು ಭೋಗ ಸಾಕಿನ್ನು ।
ಆದರೆ ಸರಿಯಾಗಿ ಅನುಭವದ ಸವಿಯನ್ನು । ಅನುಭವಿಸಿದವನೇ ಹೇಳಬಹುದು ॥ 7

ಸಂಪೂರ್ಣ ಶಬ್ದ ಜ್ಞಾನವಿದು । ಪೂರ್ಣಾನುಭವವು ಅಪರೋಕ್ಷವಾಗಿದ್ದು ।
ಅಂಥವನಿಗೇ ಶಿಷ್ಯೋಪದೇಶಕ್ಕೆ ಅಧಿಕಾರವಿದ್ದು । ಅಂಥವನಿಗೆನಬೇಕು ಸದ್ಗುರು ॥ 8

ಯಾರು ಸ್ವತಃ ಅನುಭವ ಪಡೆದಿಲ್ಲ । ಅಂಥವ ಶಿಷ್ಯನಿಗೇನು ಕೊಡಬಲ್ಲ ।
ಯಾರಿಗೆ ಅಪರೋಕ್ಷ ಅನುಭವವಿಲ್ಲ । ಅಂಥವಗೆ ಸದ್ಗುರುವೆಂದೆಂದೂ ಅನ್ನಬಾರದು ॥ 9

ಶಿಷ್ಯನಿಂದ ಸೇವೆ ಮಾಡಿಸಿಕೊಳ್ಳಬೇಕೆಂದು । ಸ್ವಪ್ನದಲೂ ಅಂಥವನಿಗಿರದು ।
ತಿರುಗಿ ಶಿಷ್ಯನಿಗಾಗಿ ನಿಜದೇಹ ಸವಿಸುವುದು । ಎಂದಿಚ್ಛಿಸುವವನೇ ಸದ್ಗುರು ॥ 10

ಶಿಷ್ಯನ ತಿಳಿಯುವ ಕಃಪದಾರ್ಥ। ಗುರುವು ಮಾತ್ರ ಪರಮ ಶ್ರೇಷ್ಠ ।
ಇಂಥ ಅಹಂಭಾವ ವಿರಹಿತ । ಇದ್ದವನೇ ಸದ್ಗುರು ॥ 11

ಶಿಷ್ಯನಾದರೂ ಪೂರ್ಣಬ್ರಹ್ಮ । ಅವನಲ್ಲಿಯೂ ಇಡುವ ಪುತ್ರಪ್ರೇಮ ।
ಅವನಿಂದ ಇಚ್ಛಿಸಲಾರ ಯೋಗಕ್ಷೇಮ । ಆ ಸದ್ಗುರುವೇ ಪರಮ ಶ್ರೇಷ್ಠ ಜಗದಿ ॥ 12

ಪರಮ ಶಾಂತಿಯದದು ನಿಧಾನ । ವಿದ್ವತ್ತೆಯದಲ್ಲಿಲ್ಲ ಅಭಿಮಾನ ।
ಸಣ್ಣವರು ದೊಡ್ಡವರೆಲ್ಲ ಸರಿಸಮಾನ । ಅದೇ ಸದ್ಗುರು ಸ್ಥಾನವೆಂದು ತಿಳಿಯಬೇಕು ॥ 13

ಸರ್ವಸಾಧಾರಣವಾಗಿ ಈ ರೀತಿಯೊಳು । ಸದ್ಗುರುವಿನ ಸಂಕ್ಷಿಪ್ತ ಲಕ್ಷಣಗಳು ।
ಹೇಳಿದೆ ನಾ ಅನನ್ಯ ಶರಣದೊಳು । ಶ್ರೋತೃಗಳಿಗಾಗಿ ಸಂಕ್ಷಿಪ್ತದಲಿ ॥ 14

ಸಾಯಿ ದರ್ಶನದಿಂದ ತುಷ್ಟವಾಗಿದೆ ಕಣ್ಣು । ಅಂಥ ಭಾಗ್ಯವಂತರಿಗಾಗಿ ನಾನು ।
ವರ್ಣಿಸಲಿ ಇದಕ್ಕಿಂತ ಹೆಚ್ಚಿಗಿನ್ನೇನು । ಸದ್ಗುರು ಲಕ್ಷಣವಿದು ಸತ್ಯ ॥ 15

ಜನ್ಮಜನ್ಮಾಂತರದ ಹಿರಿಯ ಪುಣ್ಯ । ಕೂಡಿ ಆಗಿರಬೇಕು ಅದರ ಸಂಚಯ ।
ಅದರಿಂದ ಪಡೆದನೀ ಚರಣದ್ವಯ । ಈ ಸದ್ಗುರುರಾಯ ಸಾಯಿಯವು ॥ 16

ಪೂರ್ಣ ತಾರುಣ್ಯದಲೂ ಅಪರಿಗ್ರಹ । ಇಲ್ಲಿ ಆಧಾರ ಇಲ್ಲ ಗ್ರಹ ।
ತಂಬಾಕು ಚಿಲಮೆಗಳೇಸಂಗ್ರಹ । ಮನೋನಿಗ್ರಹ ಭಯಂಕರ ॥ 17

ಅವನಿದ್ದಾಗ ಹದಿನೆಂಟು ವರ್ಷದವ । ಆಗಿನಿಂದಲೇ ಮನವ ಜಯಿಸಿದವ ।
ಯಾವಾಗಲೂ ನಿರ್ಭಯನಾಗಿ ಏಕಾಂತದಲಿರುವ । ಸ್ವರೂಪದಲಿ ಚಿತ್ತವಿಟ್ಟು ॥ 18

ನೋಡಿ ಭಕ್ತರ ಚಿತ್ತವ ಶುದ್ಧ । 'ಭಕ್ತ ಪರಾಧೀನ ನಾ' ಎಂಬ ಬಿರುದ ।
ಭಕ್ತ ವೃಂದಕೆ ಪಡಿಸಲು ವಿಶದ । ಭಕ್ತರ ಪ್ರೀತಿಗೊಳಗಾಗಿ ನಡೆಯುತಿದ್ದ ॥ 19

ಜಯ ಪರಬ್ರಹ್ಮ ಸನಾತನಾ । ಜಯದಿನೋದ್ಧಾರ ಪ್ರಸನ್ನವದನಾ ।
ಜಯ ಚೈತನ್ಯಘನ ಭಕ್ತಾಧೀನಾ । ನಿಜಭಕ್ತರಿಗೆ ದರುಶನವ ದಯಾಪಾಲಿಸು ॥ 20

ಜಯಜಯ ಹೇ ದ್ವಂದ್ವಾತೀತಾ । ಜಯ ಜಯ ಅವ್ಯಕ್ತವ್ಯಕ್ತಾ ।
ಸರ್ವಸಾಕ್ಷಿ ಸರ್ವಾತೀತಾ । ಅನಾಕಲನೀಯ ಅಭಕ್ತರೆಲ್ಲರಿಗೆ ॥ 21

ಜಯಜಯ ಭವಸಂತಾಪಹರಣಾ । ಜಯ ಜಯ ಭವಗಜವಿದಾರಣಾ ।
ಜಯಜಯ ಅಶ್ರಿತ ಪ್ರೇಮ ಪೂರ್ಣಾ । ಸಂಕಟ ನಿರಸನಾಸದ್ಗುರುರಾಯ ॥ 22

ಅವ್ಯಕ್ತದಲಿ ನೀ ಸಮರಸತೆ ಹೊಂದುವೆ । ನಿರಾಕಾರವೇ ಆಕಾರ ತಳೆದಿರುವೆ ।
ದೇಹವಿಟ್ಟರೂ ಬಿಡದಿರುವೆ । ನೀ ನಿನ್ನ ಭಕ್ತ ಕಲ್ಯಾಣಕಾರ್ಯ ॥ 23

ಯಾವ ಕೃತಿಯಾಗಿತ್ತು ದೇಹದಲ್ಲಿರಲು । ಅದೇ ಅವ್ಯಕ್ತದಲಿ ಸಮರಸನಾದಾಗಲೂ ।
ಅದೇ ಅನುಭವ ಪಡೆದರು ಈಗಲೂ । ನಿನ್ನ ಭಕ್ತಿಯಲಿ ತೊಡಗಿದವರು ॥ 24

ನೀನೆನ್ನ ನಿಮಿತ್ತವಾಗಿಟ್ಟುಕೊಂಡು । ಅವಿದ್ಯಾ ರಜನಿಯ ತೊಲಗಿಸಲೆಂದು ।
ಪ್ರಕಟಗೊಳಿಸಿದೆ ನಿಜಚರಿತೆ ಜ್ಯೋತಿಯೊಂದು । ಭಕ್ತೋದ್ಧಾರಣದಿ ಸಮರ್ಥವಾದದ್ದು ॥ 25

ಆಸ್ತಿಕ್ಯ ಬುದ್ಧಿ ಶ್ರದ್ಧಾಸ್ಥಿತಿ । ಇದೇ ಭಕ್ತರ ಹೃದಯ ಪಣತಿ ।
ಪ್ರೇಮ ಸ್ನೇಹಗಳಿಂದ ಬೆಳಗಿದರೆ ಬತ್ತಿ । ಜ್ಞಾನ ಜ್ಯೋತಿಯು ಪ್ರಕಟವಾಗುವುದು ॥ 26

ಪ್ರೇಮವಿಲ್ಲದ ಶುಷ್ಕಜ್ಞಾನ । ಅದರಿಂದ ಯಾರಿಗೇನು ಪ್ರಯೋಜನ ।
ಪ್ರೇಮವಿರದಲ್ಲಿಲ್ಲ ಸಮಾಧಾನ । ಅವಿಚ್ಛಿನ್ನ ಪ್ರೇಮವಿರಬೇಕು ॥ 27

ಪ್ರೇಮದ ಮಹಿಮೆಯನು ಬಣ್ಣಿಸಲೀ ಎಷ್ಟೆಂದು । ಅದರೆದುರು ಬೇಕಿಲ್ಲ ತುಚ್ಛವಿಹುದು ।
ಗಹನವಾದ ಪ್ರೀತಿಯ ಅಭಾವವಿದ್ದು । ಮಾಡಿದ ಶ್ರವಣ ವಾಚನಗಳು ನಿಷ್ಫಲ ॥ 28

ಪ್ರೇಮವಿದ್ದಲ್ಲಿ ಇರುವುದು ಭಕ್ತಿ । ಅಲ್ಲಿಯೇ ಎಲ್ಲ ಶಾಂತಿವಿರಕ್ತಿ ।
ಅಂಥವರ ಹಿಂದೆಯೇ ನಿಂತಿರುವದು ಮುಕ್ತಿ । ನಿಜಸಂಪತ್ತಿಯ ಸಹಿತವಾಗಿ ॥ 29

ಭಾವವಿಲ್ಲದೆ ಪ್ರೇಮ ಹುಟ್ಟದು । ಭಾವವಿದ್ದಲ್ಲಿ ದೇವನಿರುವುದು ।
ಭಾವದಿಂದಾಗಿ ಪೂರ್ಣತ್ವ ಪ್ರೀತಿಯದು । ಭಾವವೇ ಭವತಾರಣಕೆ ಕಾರಣ ॥ 30

ಗಂಗೋದಕದಂತೆ ಪರಮ ಪವಿತ್ರ । ಬಹಳ ರುಚಿ ಸಾಯಿ ಚರಿತ್ರ ।
ಅವರೇ ಅಲಂಕರಿಸಿದರು ಅವರ ಸ್ತೋತ್ರ । ನಿಮಿತ್ತ ಮಾತ್ರನು ಹೇಮಾಡನು ॥ 31

ಶ್ರವಣ ಮಾಡಲು ಸಾಯಿ ಸಚ್ಚರಿತ । ಹೇಳುವರು ಕೇಳುವರು ನಿತ್ಯಪೂತ ।
ಪಾಪ ಪುಣ್ಯಗಳದಾಗುವದು ಘಾತ । ನಿತ್ಯ ಮುಕ್ತರವರಿಬ್ಬರೂ ॥ 32

ಆ ಭಾಗ್ಯವೇ ಬೇರಿಹುದು ಕೇಳುವ ಕಿವಿಗಳದು । ಭಾಗ್ಯವೇ ಬೇರೆ ವಕ್ತಾರನ ನಾಲಗೆಯದು ।
ಧನ್ಯ ಈ ಸಾಯಿ ಸ್ತೋತ್ರವೆಂಬುವುದು । ನಿಜ ಭಕ್ತರಿಗೆ ಅತಿ ಪವಿತ್ರವಾಗಿಹುದು ॥ 33

ಶುದ್ಧ ಚಿತ್ತವುಳ್ಳವರಾಗಿ । ಸದ್ಭಾವದಿಚರಿತೆ ಕೇಳಲಾಗಿ ।
ಅವರೆಲ್ಲ ಮನೋರಥಗಳಿಗೆ । ಸದೈವ ಸಫಲತೆ ದೊರಕುವುದು ॥ 34

ಪರಮ ಭಾವಾರ್ಥದಿಂದ ಆದರ ಸಹಿತವಾಗಿ । ಈ ಸಚ್ಚರಿತೆಯ ಕೇಳುತಿರಲಾಗಿ ।
ನಿಜಪದ ಭಕ್ತಿಯು ಸಹಜವಾಗಿ । ತಡವಿಲ್ಲದೆ ಲಭಿಸುವದವರಿಗೆ ॥ 35

ಭಕ್ತಿ ಭಾವದಿ ಸೇವಿಸಲು ಸಾಯಿ ಚರಣ । ಹಾಗೇಯೇ ಮಾಡುತಿರಲವರ ಸ್ಮರಣ ।
ನಡೆದಿದ್ದರೂ ಯಥೇಚ್ಛ ಇಂದ್ರಿಯಾಚರಣ । ಸಹಜ ಭವತರಣ ನಿಶ್ಚಿತ ॥ 36

ಭಕ್ತ ಚಾತಕಗಳಿಗೆ ನಿಜಜೀವನ । ಅಂಥದ್ದು ಈ ಸಾಯಿ ಸಚ್ಚರಿತ ಕಥನ ।
ಶ್ರೋತೃವು ಕೇಳಿ ಮಾಡಿದರೆ ಮನನ । ಅ ಪ್ರಯತ್ನದಿ ಶ್ರೀ ಕೃಪೆಯ ಲಾಭ ॥ 37

ಸರ್ವಾವಸ್ಥೆಯಲೂ ಇದ್ದು ಸಾವಧಾನ । ಶ್ರೋತೃಗಳು ಮಾಡಲಿದರ ಶ್ರವಣ ।
ಸಹಜದಲಾಗುವದು ಭವತರಣ । ಕರ್ಮ ಬಂಧನಗಳು ಹರಿದು ॥ 38

ಮನದಲಿ ಶ್ರೋತೃಗಳೆನುತಿರಬಹುದು । ಕಥೆಯ ಆರಂಭ ಯಾವಾಗ ಆಗುವದು ।
ಓಡಿಸುವೆ ಅಸ್ವಸ್ಥತೆ ಅವರದು । ಪ್ರಸ್ತಾವನೆಯನು ಮುಗಿಸಿ ಈಗ ॥ 39

ಹಿಂದಿನಧ್ಯಾಯದಲಾಯಿತು ಕಥನ । ವೈರತ್ವ ಹತ್ಯೆ ಮತ್ತು ಋಣ ।
ಇವುಗಳ ಮುಗಿಯಲು ಪುನರ್ಜನ್ಮ । ಬರುವುದು ನಿಜ ಕರ್ಮವ ಭೋಗಿಸಲೆಂದು ॥ 40

ಅವರಿಗೆಲ್ಲ ಪೂರ್ವಸ್ಮರಣ । ಸಂತರಿಗೆಂದೂ ಇಲ್ಲ ವಿಸ್ಮರಣ ।
ಮಾಡುವರು ನಿಜಭಕ್ತ ಸಂಕಟ ನಿವಾರಣ । ಅವರು ಎಲ್ಲಿಯೇ ಹುಟ್ಟಿರಲಿ ॥ 41

ಹಾಗೇಯೇ ಈಗ ಇನ್ನೊಂದು ಕಥೆ । ಕೊಡು ತೆಗೆದುಕೊಳ್ಳುತ ಕೊಡುತೇಳುತೆ ।
ಸಂತರಡಿಗಳಲಿ ವಿಶ್ವಾಸವಿಡುತೆ । ನಿಜ ಭಕ್ತರು ಸಫಲತೆ ಹೊಂದುವರು ॥ 42

ಕರ್ಮಾರಂಭವನು ಮಾಡುತ್ತ । ಮೊದಲು ಹರಿಗುರು ಚರಣ ಸ್ಮರಿಸುತ ।
ಅವರೇ ನಿಜ ಭಕ್ತರ ಚಿಂತೆ ಹರಿಸುತ । ಕರ್ಮದಲಿ ನಿಜ ದಕ್ಷತೆ ಇರಲು ॥ 43

ನಾನು ಕರ್ಮವ ಮಾಡುವವನು । ಸಮರ್ಥ ಹರಿಗುರು ಫಲವೀಯುವವನು ।
ಹೀಗೆ ದೃಢ ನಿರ್ಧಾರವಿದ್ದವನು । ಅವನ ಕಷ್ಟ ಕಳೆಯುವುದು ಸತ್ಯ ॥ 44

ಸಂತರು ಉಗ್ರರೆನಿಸುವರು ಮೊದಲಲಿ । ಲಾಭವ ಬಯಸದ ಪ್ರೀತಿ ನೆಲೆಸಿರುವದವರಲ್ಲಿ ।
ಸ್ವಲ್ಪ ತಾಳ್ಮೆ ಬೇಕು ಮನದಲ್ಲಿ । ಕೊನೆಯಲಿ ಹಿತವನೇ ಮಾಡುವರು ॥ 45

ಶಾಪತಾಪ ಸಂಸ್ಕೃತಿ ಮಾಯೆಗಳು । ಸತ್ಸಂಗದ ನೆರಳು ಬೀಳಲು ।
ಸ್ಥಳದಲ್ಲೇ ಲಯ ಹೊಂದುವವುಗಳು । ಅದಕೆಂದು ಅವರ ಚರಣದಿ ಲೀನರಾಗಬೇಕು ॥ 46

ಸವಿನಯ ಮತ್ತು ಅನುದ್ಧತ । ಆಗಿ ಸಂತರಿಗೆ ಶರಣಾಗತ ।
ಪ್ರಾರ್ಥಿಸಿದರವರಲ್ಲಿ ನಿಜಹಿತ । ಚಿತ್ತ ಸ್ವಾಸ್ಥ್ಯವನೀಯುವರು ॥ 47

ಅಲ್ಪಜ್ಞಾನದ್ದೇ ಅಭಿಮಾನ ಹಿಡಿದು । ಸಂತವಚನದಲಿ ವಿಕಲ್ಪ ತಿಳಿದು ।
ಅದರಿಂದ ಹಾನಿ ಮೊದಲವರಿಗಾಗುವದು । ವಿಶ್ವಾಸದಿಂದ ಕೊನೆಗೆ ಕಲ್ಯಾಣವಾಗುವದು ॥ 48

ಶುದ್ಧ ಮನದಿಂದ ಅಥವಾ ಕಪಟದಿಂದಾದರೂ । ನಿಜವಾದ ಸಂತರ ಚರಣ ಹಿಡಿದರೂ ।
ಕೊನೆಗೆ ನಿರ್ಮುಕ್ತತೆಯ ಪಡೆವರು । ಅಗಾಧ ಯೋಗ್ಯತೆ ಸಂತರದು ॥ 49

ಈ ಅರ್ಥವ ಭೋದಿಸಲು ಕಥೆಯಿದು । ಚಿತ್ತವಿಟ್ಟದನು ಕೇಳುವುದು ।
ಮನವದರಿಂದ ಸ್ವಾನಂದ ನಿರ್ಭರವಾಗುವದು । ಹೇಳುವವನೂ ಸಂತುಷ್ಟ ॥ 50

ಅಕ್ಕಲಕೋಟೆದಲ್ಲಿದ್ದ ವಕೀಲನು । ಸಪಟ್ನೇಕರ ಎಂಬವನು ।
ಕೇಳಿರವರ ಅನುಭವವನು । ಅದರಿಂದ ಮನ ಉಲ್ಹಿಸಿತವಾಗುವುದು ॥ 51

ಹಗಲಿರುಳು ವಕೀಲಿಯ ಅಭ್ಯಾಸವನು । ಮಾಡುತಿದ್ದಾಗ ಭೆಟ್ಟಿಯಾದನು ।
ವಿದ್ಯಾರ್ಥಿ ಶೇವಡೆ ಎಂಬವನು । ಪರಸ್ಪರ ಯೋಗಕ್ಷೇಮ ವಿಚಾರಿಸಿದರು ॥ 52

ಬೇರೆ ಸಹಾಧ್ಯಾಯಿಗಳೂ ಬಂದರು । ಅದೇ ಕೋಣೆಯಲ್ಲೆಲ್ಲರೂ ಕುಳಿತರು ।
ಒಬ್ಬರೊಬ್ಬರಿಗೆ ಪ್ರಶ್ನೆ ಕೇಳತೊಡಗಿದರು । ತಮ್ಮ ಓದಿನ ವಿಷಯವಾಗಿ ॥ 53

ನೋಡಿ ಯಾರು ಏನು ತಪ್ಪುವರು । ಯಾರು ಸರಿಯಾಗಿ ಉತ್ತರಿಸುವರು ।
ಶಂಕೆಗಳಿದ್ದರೆ ಅವುಗಳ ತಿದ್ದುವರು । ಚಿತ್ತ ಸ್ವಸ್ಥತೆಗೆಂದು ॥ 54

ಶೇವಡೆ ಉತ್ತರ ತಪ್ಪು ಹೇಳಿದರು । ಕೊನೆಗೆ ಉಳಿದ ವಿದ್ಯಾರ್ಥಿಗಳೆಂದರು ।
ಯಾವುದನ್ನೂ ಪೂರ್ತಿ ಓದದಿದ್ದವರು । ಇವರು ಹೇಗೆ ಉತ್ತೀರ್ಣರಾಗುವರು ॥ 55

ಅವರೆಲ್ಲ ಉಪಹಾಸ ಮಾಡಿದರೂ । ಪೂರ್ಣವಿಶ್ವಾಸ ಹೊಂದಿದ್ದರು ಶೇವಡೆಯವರು ।
ಪೂರ್ಣವೋ ಅಪೂರ್ಣವೋ ಓದಿದ್ದರೂ । ತಾವೂ ಪಾಸಾಗಿಯೇ ಆಗುವರೆಂದು ॥ 56

ಅಭ್ಯಾಸ ಮಾಡದಿದ್ದರೂ ನಾನು । ನನ್ನ ಸಾಯಿ ಬಾಬಾ ನನ್ನನ್ನು ।
ಪಾಸು ಮಾಡಿಸಲೇ ಕುಳಿತಿರುವನು । ಎನುವಾಗ ನಾನೇಕೆ ಚಿಂತೆ ಮಾಡಬೇಕು ॥ 57

ಕೇಳಿದಾಗಿಂಥ ಮಾತು । ಸಪಟಣೇಕರನಿಗೆ ಆಶ್ಚರ್ಯವಾಯಿತು ।
ಶೇವಡೆಯನು ಕೇಳತೊಡಗಿದ ನಿಂತು । ಒಬ್ಬನನೇ ಆಚೆ ಕರೆದೊಯ್ದು ॥ 58

ರೀ ಈ ಸಾಯಿಬಾಬಾ ಎಂದರೆ ಯಾರದು । ಇಷ್ಟೊಂದು ಗುಣವರ್ಣನೆ ಮಾಡುತಿದ್ದು ।
ಅವರ ಮೇಲೆ ನಿಮಗೆ ಪೂರ್ಣವಿಶ್ವಾಸವಿರುವದು । ಅವರಿರುವ ಸ್ಥಳವಾದರೂ ಯಾವುದು ॥ 59

ಬಳಿಕ ಆ ಸಾಯಿಬಾಬಾರ ಮಹಿತಿಯನು । ಮತ್ತು ತನ್ನ ಆತ್ಮ ವಿಶ್ವಾಸದ ಸ್ಥಿತಿಯನು ।
ಸ್ಪಷ್ಟವಾಗಿ ಅವರಿಗೆ ಹೇಳಿದನು । ಪ್ರತ್ಯುತ್ತರವಾಗಿ ಶೇವಡೆ ॥ 60

ಸುಪ್ರಸಿದ್ಧ ನಗರ ಜಿಲ್ಹೆಯಲ್ಲಿ । ಶಿರಡಿ ಎಂಬ ಊರಲ್ಲಿ ।
ಫಕೀರನೊಬ್ಬ ಕುಳಿತಿಹ ಮಶೀದಿಯಲ್ಲಿ । ಬಹಳ ಹೆಸರಾಂತ ಸತ್ಪುರುಷ ॥ 61

ಅಲ್ಲಲ್ಲಿ ಬೇಕಾದಷ್ಟು ಸಂತರಿರಲು । ಆದರವರ ದರ್ಶನವಾಗಲು ।
ಹತ್ತಿರ ಅಮೋಘ ಪೂಣ್ಯದ ಬಲವಿರದಿರಲು । ಪ್ರಯತ್ನ ಬಟ್ಟರೂ ಈ ಸುಯೋಗ ಲಭಿಸದು ॥ 62

ಅವರ ಮೇಲೆ ಪೂರ್ಣವಿಶ್ವಾಸ ನನ್ನದು । ಅವರು ಮಾಡಿದ್ದೆ ಆಗುವುದು ।
ಅವರು ಆಡಿದ್ದೇ ನಡೆಯುವದು । ಕಲ್ಪಾಂತದಲೂ ಅದು ತಪ್ಪದು ॥ 63

ಈ ವರ್ಷ ಎಷ್ಟೇ ಪ್ರಯಾಸಬಟ್ಟರೂ ನಾನು । ಪರೀಕ್ಷೇಯಲಿ ಉತ್ತೀರ್ಣನಾಗೆನು ।
ಮುಂದಿನ ವರ್ಷ ಮಾಡದೇ ಪ್ರಯತ್ನವನೇನೂ । ಪಾಸಾಗುವೆಂಬುದು ತ್ರಿಸತ್ಯ ॥ 64

ನನಗವರಿತ್ತಿರುವರು ಆಶ್ವಾಸನ । ಅವರ ಮೇಲೆ ನನ್ನ ನಂಬಿಕೆ ಪೂರ್ಣ ।
ಅನ್ಯಥಾ ಆಗದೆಂದೂ ಅವರ ವಚನ । ನಾ ಮನಸಿಗೆ ಗಂಟು ಕಟ್ಟಿಟ್ಟಿರುವೆ ॥ 65

ಆಶ್ಚರ್ಯವೇನು ಇದಂತೂ ಆಗುವುದು । ಅಲ್ಲದೇ ಇದರ ಮುಂದಿನದೂ ಆಗುವುದು ।
ಈ ಮಾತು ಹಾಸ್ಯಾಸ್ಪದ ವೆನಿಸುವುದು । ನಿಃಸಂಶಯವಾಗಿ ಇದೆಲ್ಲ ಗೊಳ್ಳೆಂದು ಸಪಟಣೇಕರನಿಗೆ ॥ 66

ಅವನ ಮನವಿಕಲ್ಪ ಪೂರ್ಣವಾದದ್ದು । ಅವನಿಗೇನು ಈ ಮಾತು ಹಿಡಿಸುವುದು ।
ಶೇವಡೆ ಹೊರಟು ಹೋದ ಅಲ್ಲಿಂದೆದ್ದು । ಕೇಳಿರಿ ವಾರ್ತೆಯ ಮುಂದಿನದು ॥ 67

ಮುಂದೆ ಅನುಭವಕ್ಕೆ ಬರಲು । ಸತ್ಯವಾದದ್ದು ಶೇವಡೆಯ ಮಾತುಗಳು ।
ಪಾಸಾದರು ಎರಡೂ ಪರೀಕ್ಷೆಗಳು । ಸಪಟಣೇಕರನ ಮನಕೆ ಆಶ್ಚರ್ಯ ॥ 68

ಮುಂದೆ ವರ್ಷಗಳು ಉರುಳಲು ಹತ್ತು । ದುರ್ದೈವ ಒಮ್ಮೆಲೇ ಎದುರಾಯಿತು ।
ಸಪಟಣೇಕರನ ಮನ ಉದ್ವಿಗ್ನವಾಯಿತು । ಬಹಳ ಉದಾಸರಾದರು ॥ 69

ಅವರ ಒಬ್ಬನೇ ಒಬ್ಬ ಮಗ । ಕಂಠರೋಗದಿಂದ ಸತ್ತಾಗ ।
ಸಂಸಾರದಲಿ ಅತ್ಯಂತ ಬೇಸರಗೊಂಡನಾಗ । ಹತ್ತೊಂಭತ್ತು ನೂರಾ ಹದಿಮೂರರಲಿ ॥70

ಪಂಢರಪುರವ ಮೊದಲುಗೊಂಡು । ಗಾಣಗಾಪುರದಿ ತೀರ್ಥಗಳಿಗೆ ಹೊಗಿದ್ದು ।
ಆದರಿಂದಲ್ಲೂ ಮನ ಶಾಂತವಾಗದಿದ್ದು । ವೇದಾಂತವನೋದತೊಡಗಿದರು ॥ 71

ಹೀಗೂ ಕೆಲಕಾಲ ಕಳೆಯಿತು । ಮನಸಿಗೆ ಶಾಂತಿ ಲಭಿಸಿತು ।
ಎಂದು ದಾರಿ ಕಾಯ್ದಾಯಿತು । ಆಗ ಶೇವಡೆಯ ವೃತ್ತಾಂತ ನೆನಪಾಯಿತು ॥ 72

ಶೇವಡೆಯ ನಿಶ್ಚಯ ನೆನಪಾಯಿತು । ಸಾಯಿ ಪದದಲಿದ್ದ ವಿಶ್ವಾಸವೂ ನೆನಪಾಯಿತು ।
ತಾವೂ ಶ್ರೀ ದರ್ಶನಕ್ಕೆ ಹೋಗಬೇಕೆನಿಸಿತು । ಆಗ ಅವರ ಮನಸಿಗೆ ॥ 73

ಸಂತದರ್ಶನದ ಇಚ್ಛೆಯಾಗಿ ಮನದಲಿ । ಸನ್ ಹತ್ತೊಂಭತ್ತು ನೂರಾ ಹದಿಮೂರರಲ್ಲಿ ।
ಹೊರಟರು ಬಂಧುವಿನ ಜೊತೆಯಲ್ಲಿ । ಶಿರಡಿಗೆ ಹೋಗುವ ವಿಚಾರದಿಂದ ॥ 74

ಶೇವಡೆಯವರ ಸ್ಮರಣೆಯ ನಿಮಿತ್ತ । ತಮ್ಮ ಚರಣಗಳ ವಂದಿಸಲೆನುತ ।
ಸಾಯಿ ಅವನನ್ನು ಕರೆಸುತ । ಅದನು ಚಿತ್ತಗೊಟ್ಟು ಆಲಿಸಿರಿ ॥ 75

ತಮ್ಮ ಪಂಡಿತರಾವನೆಂದು । ಅವನನ್ನು ಜೊತೆಗೆ ಕರೆದುಕೊಂಡು ।
ಸಪಟಣೇಕರರು ಸಂತದರ್ಶನಕೆಂದು । ಸಪರಿವಾರ ಹೊರಟರು ॥ 76

ಹೀಗೆ ಅಣ್ಣ ತಮ್ಮಂದಿರಲ್ಲಿಗೆ ಬಂದರು । ಬಂದೊಡನೆ ಶ್ರೀಯ ದರ್ಶನಕೆ ಹೊರಟರು ।
ದೂರದಿಂದಲೇ ಬಾಬಾರ ಕಂಡರು । ಬಹಳ ಸಮಾಧಾನ ಹೊಂದಿದರು ॥ 77

ಆ ದೃಷ್ಟಿ ಮಿಲನ ದೂರನಿಂದಾದರೂ । ಕೂಡಲೇ ಹತ್ತಿರ ಹೋದರು ।
ಇಬ್ಬರು ಕರಗಳ ಮುಗಿದರು । ಬಾಬಾರ ಎದುರು ನಿಂತರು ॥ 78

ಇಬ್ಬರು ಅತಿ ವಿನೀತದಿ । ಬಾಬಾರಿಗೆ ಸಾಷ್ಟಾಂಗ ವಂದಿಸಿದರು ।
ಸಾಯಿ ಚರಣದಿ ಶ್ರೀ ಫಲವ ಅರ್ಪಿಸಿದರು । ಶುದ್ಧ ಭಾವದಿಂದ ಪ್ರೇಮಯುತ ॥ 79

ಶ್ರೀ ಸಮರ್ಥರ ಚರಣಗಳಿಗೆ । ಸಪಟಣೇಕರರು ಶ್ರೀ ಫಲವ ಅರ್ಪಿಸಿದಾಗ್ಯೆ ।
"ಚಲ್‌ಹಟ್" ಎಂದರು ಸಪಟಣೇಕರನಿಗೆ । ಧಿಃಕಾರ ಪೂರ್ವಕವಾಗಿ ಬಾಬಾ ॥ 80

ಸಪಟಣೇಕರರಿಗೆ ಚಿಂತೆಯಾಯಿತು । ಬಾಬಾರಿಗೇಕೆ ಕೋಪ ಬಂತು ।
ಬಾಬಾರ ನಿಕಟವರ್ತಿಗಳನ್ನು ಕುರಿತು । ಇದರ ಬಗ್ಗೆ ಕೇಳಿ ತಿಳಿಯಬೇಕೆಂದರು ॥ 81

ಈ ದರ್ಶನದಿಂದಾಗಬೇಕಿತ್ತು ಪ್ರಸನ್ನ । ಅಂಥದ್ದು ಈ ಶಬ್ದಗಳನಾಲಿಸಿ ಆದರು ಖಿನ್ನ ।
ಕೆಳಗೆ ಬಾಗಿಸಿ ಮುಖವನ । ಹಿಂದೆ ಸರಿದು ಕುಳಿತರು ॥ 82

ಇನ್ನು ಯಾರ ಹತ್ತಿರ ಹೋಗಬೇಕು । ಯಾವ ಭಕ್ತನಿಗೆ ಕೇಳಬೇಕು ।
ಬಾಬಾರ ಮಾತಿನ ಅರ್ಥವೇನಿರಬೇಕು । ಅವರ ಮನೋಗತನಾರಿಂದ ತಿಳಿಯಬೇಕು ॥ 83

ಅವರ ಮನದಲಿ ಹೀಗೆ ಇದ್ದುದನು ಕಂಡು । ಯಾರೋ ಅವರ ಸಮಾಧಾನಕ್ಕೆಂದು ।
ಹೆಸರು ಹೇಳಲು ಬಾಳಾ ಸಿಂಪಿಗನದು । ಅವನಿರುವ ಸ್ಥಳವ ಹುಡುಕಿದರು ॥ 84

ಅವನಿಗೆ ಸಪಟಣೇಕರರು । ನಡೆದ ವೃತ್ತಾಂತವನರುಹಿದರು ।
ಬಾಬಾ ನನ್ನನ್ನುಧಿಃಕರಿಸಿದರು । ಬಹಳ ಕಟು ವಚನಗಳಿಂದ ॥ 85

ನೀವಾದರೂ ಬಂದು ನನ್ನ ಜೊತೆಯಲಿ । ದರ್ಶನ ಮಾಡಿಸಬೇಕು ಶಾಂತ ರೀತಿಯಲಿ ।
ಬಾಬಾರ ಕೃಪಾವಲೋಕನವಾಗಲಿ । ನಮ್ಮ ಮೇಲೆ ಕೋಪಗೊಳದೇ ॥ 86

ಬಾಳಾ ಇದನು ಒಪ್ಪಿಕೊಂಡ । ಸಪಟಣೇಕರ ನಿಶ್ಚಿಂತನಾದ ।
ಬಾಬಾರ ಭಾವಚಿತ್ರವಕೊಂಡು ತರಿಸಿದ । ಬಾಬಾರ ದರ್ಶನಕೆ ಹೊರಟರು ॥ 87

ಬಾಳಾ ಸಿಂಪಿಗ ಜೊತೆಯಲಿದ್ದ । ಚಿತ್ರವ ತನ್ನ ಕೈಯಲಿ ಹಿಡಿದಿದ್ದ ।
ಬಾಳಾ ಅದನು ಬಾಬಾರ ಕೈಯಲಿಡುತ । ವಿಜ್ಞಪ್ತಿಯ ಮಾಡಿಕೊಂಡ ॥ 88

ನೋಡಿ ಬಾಬಾ ಇದು ಯಾರ ಚಿತ್ರ । ನೋಡಿ ಬಾಬಾ ಕೊಟ್ಟರು ಉತ್ತರ ।
ಈ ಚಿತ್ರದಲ್ಲಿರುವವ ಇವನ ಮಿತ್ರ । ಎಂದು ಸಪಟಣೇಕರನ ತೋರಿಸಿದರು ॥ 89

ಹೀಗೆಂದು ಬಾಬಾ ನಕ್ಕರು । ಜೊತೆಗೆ ಜನರೂ ನಕ್ಕರು ।
ಬಾಬಾ ಏನಿದೆ ಇದರ ಒಳಗುಟ್ಟಾದರೂ । ಬಾಳಾ ಬಾಬಾರ ಕೇಳಿದ ॥ 90

ಕೂಡಲೆ ಬಾಳಾ ಸಪಟಣೇಕರನಿಗೆಂದ । ತೆಗೆದುಕೊಳ್ಳಿರಿ ದರ್ಶನ ಮಾಡದೆ ತಡ ।
'ಚಲ ಹಟ' ಉದ್ಗಾರಗಳ ಕೇಳಿದ । ಅವರು ದರ್ಶನ ತೆಗೆದುಕೊಳ್ಳುವಾಗ ॥ 91

ಅದೇ ಮೊದಲಿನ ಚಲ ಹಟ ಎಂಬದು । ಇನ್ನೂ ನನ್ನ ಬೆನ್ನು ಬಿಡದು ।
ಇನ್ನೇನು ಉಪಾಯ ಮಾಡಬೇಕೆಂದು । ದೊಡ್ಡ ಪ್ರಶ್ನೆ ಇದೆಂದು ಸಪಟಣೇಕರನೆಂದುಕೊಂಡ ॥ 92

ಬಳಿಕವರಿಬ್ಬರೂ ಕೈ ಮುಗಿದು । ನೋಡಿ ಎದುರು ನಿಂತಿದ್ದು ।
ಕೊನೆಗೆ ಬಾಬಾ ಆಜ್ಞಾಪಿಸಿದ್ದು । 'ಹೊರಟು ಹೋಗಿರಿಲ್ಲಿಂದ ಬೇಗ' ॥ 93

ಸ್ವಾಮಿ ಸಮರ್ಥರೇ ಆಜ್ಞೆ ತಮ್ಮದು । ಯಾರಿಗಾದರೂ ಅನುಲ್ಲಂಘನೀಯವಿರುವದು ।
ಅಲ್ಲಿ ಪಾಡೇನು ನಮ್ಮಂಥ ಪಾಮರರದು । ಹೊರಟೆವು ಇದೇ ಕ್ಷಣದಲಿ ॥ 94

ಕೇಳಿ ತಾವು ಮಹಾ ಉದಾರಿಗಳೆಂದು । ಧಿಃಕರಿಸಲ್ಪಟ್ಟೆವು ದರ್ಶನಕೆ ಬಂದು ।
ಚಲ ಹಟ ಶಬ್ದದಿಂದಾಯಿತು ಸತ್ಕಾರ ನಮ್ಮದು । ಇದೇನು ಚಮತ್ಕಾರವೋ ತಿಳಿಯದು ॥ 95

ಇನ್ನು ಇರಲಿ ತಮ್ಮ ಕೃಪಾವಲೋಕನ । ಕೊಡಬೇಕೆಮಗೆ ಆಶೀರ್ವಚನ ।
ಸತ್ವರ ಆಗಲಿ ಪುನದರ್ಶನ । ಎಂದು ಆಶ್ವಾಸನೆಯ ಕೇಳಿದರು ॥ 96

ಅಂಥ ಜ್ಞಾನಿಗಳಾರಿರುವರು । ಬಾಬಾರ ಮನದಲ್ಲಿದ್ದುದ ತಿಳಿಯುವಂಥವರು ।
ಆದರೆ ಬಾಬಾರ ಆಜ್ಞೆಯ ಮನ್ನಿಸಿದರು । ಸ್ವಸ್ಥಾನಕೆ ತಿರುಗಿ ಹೋದರು ॥ 97

ಹೀಗೆ ಅವರಿಬ್ಬರಿಗೆ ಪ್ರಥಮ ದರ್ಶನ । ಅದರಿಂದಾಯಿತು ಮನ ಉದ್ವಿಗ್ನ ।
ತಿರುಗಿ ಕಂಡರು ತಮ್ಮ ಸ್ಥಳವನ । ಒಂದಿಷ್ಟೂ ಸಮಯ ಕಳೆಯದೆ ॥ 98

ಮುಂದೆ ಮತ್ತೊಂದು ವರ್ಷ ಕಳೆಯಿತು । ಆದರೂ ಮನಸ್ಥಿರವಾಗದಾಯಿತು ।
ಗಾಣಗಾಪೂರಕ್ಕೆ ಮತ್ತೆ ಹೋಗುವದಾಯಿತು । ಅದರಿಂದ ಇನ್ನಷ್ಟು ಮನ ಅಶಾಂತವಾಯಿತು ॥ 99

ವಿಶ್ರಾಂತಿಗೆಂದು ಸಪಟಣೇಕರರು । ಬಳಿಕ ಮಾಢೇಗಾವಕೆ ಹೊರಡಲು ।
ಕೊನೆಯಲಿ ವಿಚಾರ ಮಾಡಿದರು । ಕಾಶೀ ಕ್ಷೇತ್ರಕ್ಕೆ ಹೋಗಬೇಕೆಂದು ॥ 100

ಇನ್ನು ಕಾಶಿಗೆ ಹೊರಡಲು । ಉಳಿದಿದ್ದವೆರಡೇ ದಿನಗಳು ।
ಆಗವರ ಹೆಂಡತಿಗೆ ದೃಷ್ಟಾಂತವಾಗಲು । ಅಷ್ಟಕ್ಕೆ ಪ್ರವಾಸ ನಿಂತು ಹೋಯಿತು ॥ 101

ಆ ದೃಷ್ಟಾಂತದ ಚಮತ್ಕಾರ । ಹೇಗಿತ್ತದರ ಅಭಿನವ ಪ್ರಕಾರ ।
ಹೇಳುವೆನಾಗಿರಿ ತಾವು ಶ್ರವಣ ತತ್ಪರ । ಲೀಲಾಚರಿತ್ರ ಸಾಯಿಯದು ॥ 102

ಹಾಸಿಗೆಯಲ್ಲಿ ಮಲಗಿರಲು । ಕಣ್ಣೆದುರು ಸ್ವಪ್ನವು ಕಾಣುತಿರಲು ।
ಕೊಡ ತೆಗೆದುಕೊಂಡು ಸ್ತ್ರೀಯವಳು । ಲಕ್ಕಡಶಾನ ಬಾವಿಗೆ ಹೊರಟಿದ್ದಳು ॥ 103

ಅಲ್ಲೊಂದು ಬೇವಿನ ಮರದಡಿಗೆ । ಬಟ್ಟೆ ಸುತ್ತಿದಂಥವ ತಲೆಗೆ ।
ಫಕೀರನೊಬ್ಬ ಕುಳಿತಿದ್ದನಾಗ್ಯೆ । ಅವ ನನ್ನ ಹತ್ತಿರ ಬಂದನೆಂದಳು ॥ 104

"ಏಕೆ ವ್ಯರ್ಥ ಶ್ರಮ ಬಡುತಿರುವೆ ಮಗಳೇ । ಫಕೀರನೆಂದ ಮೃದುವಚನದಲೇ ।
"ನಿನ್ನ ಕೊಡವ ತುಂಬಿಕೊಡುವೆ ನೀಗಲೇ । ನಿರ್ಮಲವಾದ ಜಲದಿಂದ" ॥ 105

ಫಕೀರನಿಗೆ ಹೆದರಿಕೊಂಡು । ಬರಿಕೊಡವನೆತ್ತಿಕೊಂಡು ।
ಬಂದೆ ಮನೆಯ ದಾರಿ ಹಿಡಿದು । ಜೊತೆಗೆ ಹಿಂದೆ ಹಿಂದೆಯೇ ಫಕೀರ ॥ 106

ಹೀಗೆ ಸ್ವಪ್ನವನು ಕಂಡೆ । ಎಚ್ಚರಾಗಿ ಕಣ್ಣು ತೆರೆದೆ ।
ಹೀಗೆ ಸ್ವಪ್ನವ ಹೇಳಿದಾಗ ಕಾಂತೆ । ಶಿರಡಿಗೆ ಹೋಗುವುದನ್ನು ನಿಶ್ಚಯಿಸಿದರು ॥ 107

ಅದೇ ಮುಹೂರ್ತಕೆ ಇಬ್ಬರೂ ಹೊರಟರು । ಬೆಳಿಗ್ಗೆ ಶಿರಡಿಗೆ ಬಂದು ಮುಟ್ಟಿದರು ।
ಕೂಡಲೇ ಮಶೀದಿಗೆ ಹೋದರು । ಆಗ ಬಾಬಾ ಲೇಂಡಿಗೆ ಹೋಗಿದ್ದರು ॥ 108

ಬಾಬಾ ತಿರುಗಿ ಬರುವವರೆಗೆ । ಇಬ್ಬರೂ ಅಲ್ಲಿಯೇ ಕೂಡ್ರುತ ।
ಬಾಬಾರ ಮಾರ್ಗ ಪ್ರತೀಕ್ಷೆ ಮಾಡುತ । ಅಷ್ಟರಲ್ಲಿ ಬಾಬಾ ಬಂದರು ॥ 109

ಇದೇ ಮೂರ್ತಿ ದೃಷ್ಟಾಂತದಲಿ ಕಂಡದ್ದು । ಚಾಚೂ ಬಿಡದೇ ಅದೇ ಇದ್ದು ।
ಆ ಸ್ತ್ರೀ ಬಹಳ ವಿಸ್ಮಯಗೊಂಡು । ಹಾಗೇ ನೋಡುತ್ತ ನಿಂತಳು ॥ 110

ಬಾಬಾ ಕೈ ಕಾಲು ತೊಳಕೊಂಡು ಬರಲು । ಅವಳು ದರ್ಶನ ತೆಗೆದುಕೊಳ್ಳಲು ಹೋದಳು ।
ಸಾಯಿ ಚರಣಗಳ ವಂದಿಸಿದಳು । ಕುಳಿತಳು ಅವರನ್ನು ನೋಡುತ್ತಲೇ ॥ 111

ನೋಡಿ ಅವಳ ವಿನಯವನ । ಉಲ್ಲಸಿತವಾಯಿತು ಬಾಬಾರ ಮನ ।
ಮೆಲ್ಲಗೆ ಬಾಬಾ ಆರಂಭಿಸಿದರು ಕಥೆಯನ । ಅವಳ ವ್ಯಥೆಯ ಕಳೆಯುವಂತೆ ॥ 112

ಆಗ ನಿತ್ಯ ಕ್ರಮಾನುಸಾರ । ಬಾಬಾ ತಮ್ಮದೇ ವ್ಯಥೆಯ ಸವಿಸ್ತರ ।
ಹೇಳತೊಡಗಿದರು ಪ್ರೇಮ ಪುರಃಸರ । ಅಲ್ಲಿಯೇ ಇದ್ದ ಬೇರೊಬ್ಬನಿಗೆ ॥ 113

ಹಾಗೆ ನೋಡಿದರೆ ಅವಳ ಕಥೆಯನು । ಅವಳಿಗೆ ಹೇಳಬೇಕಾಗಿದ್ದುದನು ।
ಮೂರನೆಯವರಿಗೆ ಹೇಳುತ್ತಿರುವದನು । ಅತಿ ಸಾವಧಾನಳಾಗಿ ಕೇಳಿದಳು ॥ 114

ನನ್ನ ಕೈಕಾಲು ಹೊಟ್ಟೆ ನಡು । ಬಹಳ ದಿವಸಗಳಿಂದ ವಿಪರೀತ ನೋಯುತಿದ್ದು ।
ಬೇಸರಾಯಿತು ಔಷಧ ತೆಗೆದುಕೊಡು । ವ್ಯಥೆ ಹಿಮ್ಮೆಟ್ಟದಾಯಿತು ॥ 115

ಬೇಸತ್ತೆ ನಾ ಔಷಧ ತಿಂದು । ಗುಣವೆಂಬುದೇ ಬರವಲ್ಲದು ।
ಆದರೆ ನನಗೆ ಆಶ್ಚರ್ಯವೆನಿಸುವದು । ಒಮ್ಮೆಲೇ ಈಗ ವ್ಯಥೆ ನಿಂತು ಹೋಯಿತಲ್ಲ ॥116

ಅವಳ ಕಥೆಯನು ಹೇಗೆ । ಹೇಳಿದರು ಅವಳ ಹೆಸರದರಲ್ಲಿ ಬರದ ಹಾಗೆ ।
ಅವಳದೇ ಈ ಸುದ್ಧಿ ಅವಳಿಗೇ । ಸಂಬಂಧಿಸಿದ್ದಿದಾಗಿತ್ತು ॥ 117

ಮುಂದೆ ಸಮಯ ಕಳೆಯಲು ಒಂದೆರಡು ತಿಂಗಳ । ಬಾಬಾ ವರ್ಣಿಸಿದ್ದರು ಅವಳ ।
ನಿವೃತ್ತಿಯಾಯಿತು ಆ ವ್ಯಥೆಯಲ್ಲ । ಆಗ ಆ ಪ್ರತೀತಿಯಲ್ಲಿ ಎಲ್ಲರಿಗೆ ನಂಬಿಕೆಯಾಯಿತು ॥ 118

ಪೂರ್ಣವಾಯಿತು ಕಾಮನೆ ಆ ಸತಿಯದು । ಆಗ ಸಪಟಣೇಕರರು ಬರಲು ದರ್ಶನಕೆಂದು ।
ಚಲ ಹಟ ಸಂಭಾವನೆಯೇ ಹಿಂದಿನದು । ಮತ್ತೆ ಬಾಬಾ ಉಚ್ಚರಿಸಿದರು ॥ 119

ತಿಳಿಯದು ನನ್ನ ತಪ್ಪೇನು । ಬಾಬಾ ತಪ್ಪದೇ ಧಿಃಕರಿಸುವರೆನ್ನನು ।
ನನಗವರು ಅದೇ ಉತ್ತರವನು । ನಾ ನಮಸ್ಕರಿಸಿದಾಗ ಕೊಡುವರು ॥ 120

ನನ್ನ ಪೂರ್ವಾರ್ಜಿತವೇನಿರುವದು । ನನ್ನ ಮೇಲೇಕೆ ಸಿಟ್ಟಿವರದು ।
ಇತರರಲಿ ಪ್ರೇಮದಿಂದವರು ವರ್ತಿಸುವದು । ನನ್ನೆದುರಿನಲೇ ನಾ ನೋಡುವೆ ॥ 121

ಮುಂಜಾನೆ ಸಂಜೆ ಯಾವಾಗ ನೋಡಿದರೂ । ಬಾಬಾರ ಹತ್ತಿರ ಇರುವವರೆಲ್ಲರೂ ।
ಆನಂದದಲಿ ನಿತ್ಯ ದೀಪಾವಳಿಯ ಅನುಭವಿಸುವರು । ನನ್ನ ದೈವಕೆ ಮಾತ್ರ ಚಲ ಹಟ ॥ 122

ನನ್ನ ಕರ್ಮ ವಿಕೋಪಕ್ಕೆ ಮುಟ್ಟಿರಬಹುದು । ಅಥವಾ ನನ್ನಿಂದ ಧರ್ಮ ವಿಲೋಪವಾಗಿರಬಹುದು ।
ಇಲ್ಲವೇ ಅನೇಕ ಪಾಪಗಳಿಗಾಶ್ರಯನಾಗಿರಬಹುದು । ಆದರಿಂದಲೇ ಈ ಅವಕೃಪೆ ನನ್ನಲಿ ॥ 123

ಆರಂಭದಲಿ ಬಾಬಾರ ಬಗೆಗೆ ನಾನು । ಕುತರ್ಕವುಳ್ಳವ ಮತ್ತು ಸಂಶಯಿತನಾಗಿದ್ದೆನು ।
ಎನಿಸುವದದರಿಂದಲೇ ಬಾಬಾ ನನ್ನನ್ನು । ಇದ್ದಲ್ಲಿಯೇ ತಲೆ ಹೊಡೆಯುತಿಹರು ॥124

ನಿಜ ನಿರ್ಧಾರ ಮಾಡಿದೆನದಕಾಗೇ । ಬಾಬಾರ ಅನುಗ್ರಹವಾಗುವವರೆಗೆ ।
ಇಲ್ಲಿಯೇ ವೃತ್ತಿಯನಿಟ್ಟು ಸ್ಥಿರವಾಗಿ । ಸ್ವಸ್ಥ ಚಿತ್ತದಿಂದಿರಬೇಕು ॥ 125

ತ್ರಿವಿಧ ತಾಪದಿಂದ ಬಳಲಿದವ । ಬಾಬಾರ ದರ್ಶನಕಾಗಿ ಆಶಿಸಿದವ ।
ವಿನ್ಮುಖನಿಂಥವನು ಹೋದನಾವ । ಮನಃಶಾಂತಿಯ ಪಡೆಯದೇ ॥ 126

ಆದರೂ ಆ ದಿನ ಬಹಳ ಉದ್ವಿಗ್ನ । ರುಚಿಸದಾಯಿತು ಅನ್ನಪಾನ ।
ಸೇರಲೊಲ್ಲದು ಗಮನಾಗಮನ । ನಿದ್ರೆಯಿಲ್ಲದೆ ಬಿದ್ದುಕೊಂಡಿದ್ದ ಹಾಸಿಗೆಯಲಿ ॥ 127

ಹತ್ತಿರ ಇರಬಾರದು ಬೇರೆ ಯಾರೂ । ಗಾದಿಯ ಮೇಲೆ ಬಾಬಾ ಇರಬೇಕು ಒಬ್ಬರೇ ಒಬ್ಬರು ।
ನೋಡಿಕೊಂಡಿಂಥ ಸಮಯವನಾದರೂ । ಬಾಬಾರ ಚರಣಗಳ ಹಿಡಿಯಬೇಕು ॥ 128

ಹೀಗೆ ಸಪಟಣೇಕರರ ನಿಶ್ಚಯವಾಯಿತು । ಅವರ ನಿರ್ಧಾರ ಫಲಿಸಿತು ।
ಕಂಠ ಸದ್ಗದಿತವಾಯಿತು । ಆಗ ಬಾಬಾರ ಚರಣಗಳ ಹಿಡಿದರು ॥ 129

ಚರಣಗಳ ಮೇಲಿಟ್ಟರು ಶಿರ । ಬಾಬಾ ಅದರ ಮೇಲಿಟ್ಟರು ನಿಜಕರ ।
ಕಾಲೊತ್ತುತ್ತಿದ್ದರು ಸಪಟಣೇಕರ । ಆಗ ಬಂದಳೊಬ್ಬಳು ಕುರುಬರವಳು ॥ 130

ಆ ಹೆಂಗಸು ಅಲ್ಲಿಯವರೆಗೆ ಬಂದು । ಒತ್ತತೊಡಗಿದಳು ಬಾಬಾರ ನಡು ।
ಬಾಬಾ ನಿತ್ಯಕ್ರಮವನನುಸರಿಸಿಕೊಂಡು । ಅವಳೊಡನೆ ಮಾತನಾಡಿದರು ॥ 131

ಆ ಮಾತಿನ ಚಮತ್ಕಾರ । ಲಕ್ಷವಿಟ್ಟು ಕೇಳುತಿದ್ದ ಸಪಟಣೇಕರ ।
ಅವನದೇ ಸುದ್ದಿಯಾಗಿತ್ತು ಸಮಗ್ರ । ಒಂದಕ್ಷರವನೂ ಬಿಡದಂತೆ ॥ 132

ಆ ಕುರುಬತಿ ಹೌದೆನ್ನುತಿದ್ದರೂ । ಸಪಟಣೇಕರರು ಆಶ್ಚರ್ಯ ಭರಿತರಾಗಿದ್ದರು ।
ತಮ್ಮದೇ ಕಥೆಯ ಕೇಳುತ್ತ ಕುಳಿತರು । ಅದರಿಂದ ವಿಸ್ಮಿತರಾಗಿ ಮನದಿ ॥ 133

ಆ ಕಥೆ ಒಬ್ಬ ವ್ಯಾಪಾರಸ್ಥನದು । ಆದರೆ ನಿಜದಲಿದ್ದಿತದು ಆತನದು ।
ಅದರಲ್ಲೂ ಅವನ ಮೃತ ಮಗನದು । ಮರಣದ ವಾರ್ತೆ ನಡೆಯಿತು ॥ 134

ಯಾರೋ ಅತ್ಯಂತ ಪರಿಚಿತ । ಒಳಗದವರು ಹೇಳುತ್ತಿರುವಂತೆ ।
ಜನ್ಮದಿಂದ ಮರಣದ ಪರ್ಯಂತ । ಸಾದ್ಯಂತವಾಗಿ ಹೇಳಿದರು ॥ 135

ಆ ಸ್ತ್ರೀ ಎದುರು ಹೇಳುತಿದ್ದರು ಕಥೆಯನು । ಅದರದಿರಲಿಲ್ಲ ಸಂಬಂಧ ಅವಳಿಗೇನೂ ।
ಪಿತಾಪುತ್ರರದೇ ವಾರ್ತೆಯಾಗಿದ್ದುದನು । ಎಲ್ಲ ವಿಷಯವೂ ಅವರಿಬ್ಬರದು ॥ 136

ಹೀಗೇ ತನ್ನದೇ ಕಥೆಯನು । ಸಾಯಿ ಮುಖದಿಂದ ಕೇಳಿದ ಸಪಟಣೇಕರನು ।
ಪರಮ ವಿಸ್ಮಿತನಾದನು । ಸಾಯಿ ಪದದಲಿ ಆದರ ಮೂಡಿತು ॥ 137

ಅವನಿಗೆ ಬಹಳ ಕೌತುಕವೆನಿಸಿತು । ಇದು ಎಲ್ಲ ಬಾಬಾರಿಗೆ ಹೇಗೆ ಗೊತ್ತು ।
ಆದರೆ ಅದು ಅಂಗೈಯ ನೆಲ್ಲಿಯಷ್ಟು । ಬಾಬಾರಿಗೆ ಸುಲಭವಾಗಿತ್ತು ॥ 138

ತಾನೇ ಬ್ರಹ್ಮ ಸ್ವರೂಪನಿರುವಾಗ । ವಿಶ್ವವೇ ಅವನ ಪರಿವಾರವಾಗಿರುವಾಗ ।
ಅಥವಾ ಅವನೇ ವಿಶ್ವನಾಗಿ ನಿಂತಿರುವಾಗ । ಇದೇ ಗುರುತು ಸಾಯಿಯದು ॥ 139

ಏಕಾತ್ಮತೆಯ ವಿಸ್ತಾರ । ಅದೇ ಸಾಯಿಯ ಅವತಾರ ।
ಅವನಿಗೆಲ್ಲಿಯ ಆಪಪರ । ತಾನೇ ಸವಿಸ್ತರ ಜಗರೂಪ ॥ 140

ಈ ರೀತಿ ನಟಿಸಿರುವ ಪರಮ ಪುರುಷನಿಗೆ । ದ್ವೈತಭಾಷೆಯೆಲ್ಲಿಯದವನಿಗೆ ।
ದೃಷ್ಟಾರ ದರ್ಶನ ಅಥವಾ ದೃಶ್ಯಗಳಿಗೆ । ಅಲಿಪ್ತ ಆಕಾಶಕೆ ಲೇಪದಂತೆ ॥ 141

ಬಾಬಾ ಇಹರು ಮಹಾನ ಅಂತರ್ಜ್ಞಾನಿಗಳು । ಎಂದೆನಿಸಲು ಅವನ ಚಿತ್ತದೊಳು ।
ಬಾಬಾ ಏನೆಂದರು ಅವನೊಳು । ತಾವು ಸಜ್ಜನರು ಕೇಳಬೇಕು ॥ 142

ಬೊಟ್ಟು ತೋರಿಸಿ ಅವನತ್ತ । ಆಶ್ಚರ್ಯದಿ ಬಾಬಾ ಉದ್ಗರಿಸುತ ।
ನನ್ನ ಮೇಲೆ ಆರೋಪ ಹೊರಿಸುವನೀತ । ಇವನ ಮಗನ ನಾ ಕೊಂದೆನೆಂದು ॥143

ನಾ ಮಂದಿಯ ಮಕ್ಕಳ ಕೊಲ್ಲುವವ । ಎಂದಾಗ ಇವನೇಕೆ ನನ್ನ ಮಶೀದಿಯಲಿ ಬಂದು ಅಳುತಿರುವ ।
ಆಗಲಿ ನಾನಿನ್ನು ಹೀಗೆ ಮಾಡುವೆ । ಇವನುದರದಲಿ ಅವನ ಪುತ್ರನ ತರುವೆ ॥ 144

ಹೇಗೆ ಸತ್ತರಾಮದಾಸನನು । ಆ ಸ್ತ್ರೀಗೆ ಮತ್ತೆ ಕೊಟ್ಟೆನು ।
ಹಾಗೆ ಮತ್ತೆ ಅವನ ಮಗನನು । ಅವನ ಹೊಟ್ಟೆಯಲೇ ಹಾಕುವೆ" ॥ 145

ಸಪಟಣೇಕರನು ಕೇಳಿ ಹೀಗೆ । ನಿಂತ ನೋಡುತ್ತ ಬಾಬಾರ ಕಡೆಗೆ ।
ಅವನ ತಲೆಯ ಮೇಲೆ ಕೈಯಿಟ್ಟು ಅವನಿಗೆ । ಬಾಬಾ ಧೈರ್ಯವನಿತ್ತರು ॥ 146

ಎಂದರು, "ಈ ಚರಣ ಬಹಳ ಪುರಾತನ । ನಿನ್ನ ಚಿಂತೆ ಬಿಟ್ಟಿತು ಇನ್ನು ।
ನನ್ನ ಮೇಲೆ ವಿಶ್ವಾಸವಿರಲಿ ಪೂರ್ಣ । ಬೇಗನೇ ಕೃತಾರ್ಥನಾಗುವೆ" ॥ 147

ಮಾಡುತ್ತಿದ್ದಾಗ ಪಾದ ಸಂವಾಹನ । ಕೇಳಿ ಬಾಬಾರ ಮಧುರ ವಚನ ।
ಸಪಟಣೇಕರ ಸಜಲನಯನ । ಪದಾಭಿವಂದನೆ ಮಾಡಿದ ॥ 148

ಅಷ್ಟಭಾವಗಳು ಒತ್ತಿ ಬಂದು । ನಯನದಲಿ ತುಂಬಿ ಆನಂದ ಜಲಬಿಂದು ।
ಅದರಿಂದ ಬಾಬಾರ ಪಾದ ತೊಳೆದು । ಪ್ರೇಮ ಪೂರಿತನಾಗಿ ಆಗ ॥ 149

ಮತ್ತೆ ಬಾಬಾ ತಲೆಯ ಮೇಲೆ । ಕೈಯಿಟ್ಟು ಎಂದರು ಕುಳಿತುಕೋ ಸುಮ್ಮನೇ ।
ಆಗ ಮನೆಗೆ ಮರಳಿದ ಸಪಟಣೇಕರ ತಾನೇ । ಆನಂದ ಪುಲಕಿತ ಮನದಿಂದ ॥ 150

ನೈವೇದ್ಯದ ಸಿದ್ಧತೆ ಮಾಡುತ । ನಿಜಪತ್ನಿಯ ಕೈಯಲಿ ಕೊಡುತ ।
ಆ ತಟ್ಟೆ ಬಾಬಾರ ಮುಂದೆ ಇಡುತ । ಪೂಜೆ ಆರತಿಗಳು ಮುಗಿದ ಮೇಲೆ ॥ 151

ಬಳಿಕ ಪ್ರೋಕ್ಷಣೆ ಮಾಡಿ ಪಾತ್ರೆಗಳಿಗೆ । ವಿಧಿಪೂರ್ವಕ ಸ್ಪರ್ಶ ಮಾಡಿ ನೇತ್ರಗಳಿಗೆ ।
ಸಮರ್ಪಿಸಿದನದನು ಬಾಬಾರಿಗೆ । ಪ್ರಾಣಾಪಾನವ್ಯಾನೋದಾನಗಳಿಂದ ॥ 152

ಬಳಿಕ ನಿತ್ಯಕ್ರಮವನನುಸರಿಸಿ । ಬಾಬಾರ ಕರವನದಕೆ ಸ್ಪರ್ಶಿಸಿ ।
ಆ ನೈವೇದ್ಯವನು ಸ್ವೀಕರಿಸಿ । ಸಪಟಣೇಕರ ಸಂತೋಷಪಟ್ಟ ॥ 153

ಬಳಿಕ ಅಲ್ಲಿದ್ದ ಇತರ ಭಕ್ತರು । ಬಾಬಾರ ಚರಣಗಳನೊಂದಿಸುತಿದ್ದರು ।
ಸಪಟಣೇಕರ ಆ ಗದ್ದಲದಲಿ ಹೊಕ್ಕರು । ಮತ್ತೆ ತ್ವರಿತದಿ ನಮಸ್ಕರಿಸಿದರು ॥ 154

ಅಂಥ ಆ ಗದ್ದಲದಲ್ಲಿ । ತಲೆ ತಲೆಗಳು ಬಡಿಯುತಲಿ ।
ಆಗ ಬಾಬಾ ಸಪಟಣೇಕರನಲ್ಲಿ । ಹೇಗೆ ಶಾಂತವಾಗಿ ನುಡಿದರು ॥ 155

ಅಯ್ಯಾ ಯಾತಕ್ಕೆ ಮತ್ತೂ ಮತ್ತೂ । ನಮಸ್ಕಾರದ ಮೇಲೆ ನಮಸ್ಕಾರಗಳನಿಂತು ।
ಮಾಡುತ್ತಿರುವೆ ಸಾಕಿನಿತು । ಆದರ ಸತ್ಕಾರ ಪೂರ್ವಕ ಒಮ್ಮೆ ಮಾಡಿದ್ದು ॥ 156

ಆ ರಾತ್ರಿ ಚಾವಡಿಯ ವಸತಿ ಇತ್ತು । ಸಪಟಣೇಕರ ಅತಿ ಇಷ್ಟಪಟ್ಟು ।
ಪ್ರೀತಿಯಿಂದ ಪಲ್ಲಕ್ಕಿ ಎದುರು ನಡೆದು । ದಂಡಧಾರಿಯಾಗಿ ಆನಂದದಿಂದ ॥ 157

ಇರಲಿ ಈ ಚಾವಡಿಯ ಮೆರವಣಿಗೆ । ಹಿಂದೆಯೇ ಹೇಳಿದೆ ಶ್ರೋತೃಗಳಿಗೆ ।
ಮತ್ತದರ ಪುನರುಕ್ತಿಗೆ । ಕಾರಣವಿಲ್ಲೆಂದು ಅದ ವರ್ಜಿಸಿದೆ ॥ 158

ಹೀಗಿರಲು ಆ ರಾತ್ರಿಗೆ । ಬಾಬಾ ಸಪಣೇಕರರ ಕಣ್ಣಿಗೆ ।
ಕಂಡರು ಪಾಂಡುರಂಗನ ಹಾಗೆ । ಬಾಬಾರ ಲೀಲೆ ಅಗಾಧ ॥ 159

ಆ ಮೇಲೆ ಕೇಳಿದಾಗ ಆಜ್ಞೆ । ಉಂಡು ಹೋಗಲು ದೊರೆಯಿತು ಅನುಜ್ಞೆ ।
ಮಾಡದೆ ಒಂದಿಷ್ಟೂ ಅವಜ್ಞೆ । ಹೊರಡುವಾಗ ದರ್ಶನಕೆ ಹೋದರು ॥ 160

ಅಷ್ಟರಲ್ಲಿ ಅವನ ಮನಸಿನೊಳಗೆ । ಕಲ್ಪನೆಯೊಂದು ಬಂದಿತು ಒಮ್ಮೆಗೇ ।
ಬಾಬಾ ಬೇಡಿದರೆ ದಕ್ಷಿಣೆಯ ಹೇಗೆ । ನಾನಿನ್ನು ಕೊಡಬಲ್ಲೆ ಅವರಿಗೆ ॥ 161

ಹತ್ತಿರಿದ್ದ ಹಣ ಮುಗಿದಿದ್ದು । ಗಾಡಿ ಹಾಸಲಿಗೆ (ಖರ್ಚಿಗೆ) ಮಾತ್ರ ಉಳಿದಿದ್ದು ।
ಕೇಳಿದರೆ ದಕ್ಷಿಣೆ ಕೊಡು ಎಂದು । ಅದರುತ್ತರವ ತಾನೇ ಹುಡುಕಿಕೊಂಡು ॥ 162

ಅವರು ಬೇಡುವ ಮೊದಲೇ । ಒಂದು ರೂಪಾಯಿ ಇಡಬೇಕು ಕೈಮೇಲೆ ।
ಮತ್ತೆ ಕೇಳಿದರೂ ಕೊಡಬೇಕು । ಬಳಿಕ ಕೇಳಿದರಿಲ್ಲೆನಬೇಕು ॥ 163

ಉಗಿ ಬಂಡಿಯ ತಿಕೀಟಿಗಾಗೇ । ಅವಶ್ಯವಿದ್ದಷ್ಟನಿಟ್ಟುಕೊಂಡಿರುವೆ ಬಳಿಗೆ ।
ಬಾಬಾರಿಗೆ ಸ್ಪಷ್ಟವಾಗಿ ಹೇಳಬೇಕು ಹೀಗೆ । ಎಂದುಕೊಂಡು ಭೆಟ್ಟಿಗೆ ಹೋದರು ॥ 164

ನಿಶ್ಚಯಿಸಿಟ್ಟಂತೆ ಮೊದಲು । ರೂಪಾಯಿಯೊಂದು ಕೈಯಲ್ಲಿಡಲು ।
ಮತ್ತೆ ಒಂದನ್ನೇ ಬೇಡಿದರು ಅದರ ಮೇಲೂ । ಕೊಟ್ಟಾಗ ಚೆನ್ನಾಗಿ ಮಾತನಾಡಿಸಿದರು ॥ 165

ಎಂದರು, "ಈ ಕಾಯಿಯ ತೆಗೆದುಕೊಂಡು । ನಿನ್ನ ಪತ್ನಿಯ ಉಡಿಯಲಿ ಹಾಕುವದು ।
ಆಮೇಲೆ ನೀ ಹೋಗಿಬಿಡು । ಮನದ ಚಿಂತೆಯ ದೂರವಿಟ್ಟು" ॥ 166

ಮುಂದೆ ಹನ್ನೆರಡು ತಿಂಗಳ ನಂತರ । ಅವರ ಹೊಟ್ಟೆಯಲಿ ಜನಿಸಿದ ಪುತ್ರ ।
ಎತ್ತಿಕೊಂಡು ಎಂಟು ತಿಂಗಳ ಸುಕುಮಾರ । ಮಗುವಿನೊಡನೆ ದರ್ಶನಕೆ ಬಂದರು ಮತ್ತೆ ॥167

ಮಗುವನ ಹಾಕಿ ಬಾಬಾರ ಪಾದಗಳಿಗೆ । ತಿಳಿಯದು ಸಂತರ ವಿಚಿತ್ರ ಬಗೆ ।
ಅವರಿಬ್ಬರೂ ಕೈ ಮುಗಿದು ಅವರಿಗೆ । ವಿನಂತಿಸಿದರೇನೆಂದು ಕೇಳಿರಿ ॥ 168

ಸಾಯಿನಾಥಾ ತಮ್ಮ ಈ ಉಪಕಾರವನು । ಹೇಗೆ ತೀರಿಸಬಲ್ಲೆವೆಂಬದನು ।
ತಿಳಿಯದಾಗಿಹೆವು ಅದಕಿನ್ನು । ಈ ಶಿರವನು ತಮ್ಮ ಚರಣಗಳಿಡುತಿರುವೆವು ॥ 169

ಹೀನ ದೀನ ಪಾಮರರು ನಾವು । ನಮ್ಮ ಮೇಲೆ ಕೃಪಾದೃಷ್ಟಿ ಇರಿಸಬೇಕು ತಾವು ।
ಇನ್ನು ಮುಂದೆ ನಿರಂತರವೂ । ತಮ್ಮ ಚರಣದಲೆಮಗೆ ಎಡೆ ಇರಬೇಕು ॥ 170

ಎಚ್ಚರಿದ್ದಾಗೇನು ಕನಸಿನಲ್ಲೂ । ಮನದಲೇಳುವವು ನಾನಾ ತರಂಗಗಳು ।
ಪುರಸೊತ್ತಿಲ್ಲದೆ ಹಗಲಿರುಳು । ಆದರೆ ನಿನ್ನ ಸ್ಮರಣೆಯನು ಅನವರತ ನೀಡೆಮಗೆ ॥ 171

ಹೀಗೆ ಆ ಕಂದ ಮುರಲೀಧರನ । ಮತ್ತೆ ಇಬ್ಬರು ಭಾಸ್ಕರ ದಿನಕರ ।
ಇವರ ಜೊತೆಯಲಿ ಸಪಟಣೇಕರ । ಪ್ರಸನ್ನಾಂತರರಾದರು ॥ 172

ಬಳಿಕವರು ಭಾರ್ಯೆಯನೊಡಗೂಡಿ । ಸಾಯಿ ಸದಯನಿಗೆ ವಂದನೆ ಮಾಡಿ ।
ಚಂಚಲ ಮನಸಿಗೆ ಸ್ಥೈರ್ಯವ ಹೊಂದಿ । ಕೃತಕಾರ್ಯರಾಗಿ ಹಿಂದಿರುಗಿದರು ॥ 173

ಸಂಕ್ಷಿಪ್ತದಲಿ ಕಥೆಯ ಹೇಳುವೆನೆಂದು । ಆರಂಭದಲಿ ವಿಚಾರವಿದ್ದು ।
ಆದರೆ ನುಡಿಸುವವ ಸಾಯಿನಾಥನಿದ್ದು । ಅದರಿಂದ ಈ ಗ್ರಂಥ ವಿಸ್ತರಿಸಿತು ॥ 174

ಅವನಿಗೆ ಈ ಹೇಮಾಡ ಶರಣ । ಮುಂದಿನ ಕಥೆಯ ಅನುಸಂದಾನ ।
ತಾತ್ಪರ್ಯಾರ್ಥ ದಿಗ್ದರ್ಶನ । ಶ್ರೋತೃಗಳಿಗಾಗಿ ಮಾಡುವೆ ॥ 175

ಮುಂದಿನ ಕಥೆ ಇದಕಿಂತ ಬಲು ಸೊಗಸು । ಚಮತ್ಕಾರಗಳಲಿರುವದಾರ ಮನಸು ।
ಅಂಥ ಒಬ್ಬ ಭಕ್ತನ ಕನಸು । ತಪ್ಪದೇ ನಿಜಗೊಳಿಸಿದರು ಸಾಯಿ ॥ 176

ಜನ ವರ್ಣಿಸಲು ಸಾಯಿಯ ಗುಣ । ದೋಷದರ್ಶಿಗಳು ಕಾಣುವರು ಅವಗುಣ ।
ತಾವಿರದಿದ್ರೂ ಸ್ವಾರ್ಥ ಪರಮಾರ್ಥಪರಾಯಣ । ದೋಷೈಕ ಉದ್ದೇಶವೇ ಮನದಲಿ ॥ 177

ಸಾಯಿ ಬಾಬಾ ಸಂತರಾಗಿದ್ದಲ್ಲಿ । ಅವರೆನಗೆ ಪ್ರಚೀತಿಯ ಕೊಡಲಿ ।
ನನಗದರ ಅನುಭವ ಬರದಿದ್ದಲ್ಲಿ । ನಾನೊಂದಿಷ್ಟು ಅವರನು ಮನ್ನಿಸೆನು ॥ 178


ಕೇವಲ ಪರೀಕ್ಷೆ ಮಾಡಲೆಂದು । ಹೋದವರ ಇಚ್ಛೆಯೂ ಪೂರೈಸುವದು ।
ಇದೇ ಕಥೆ ಮುಂದಿನಧ್ಯಾಯದಲಿದ್ದು । ಶ್ರವಣ ಮಾಡಬೇಕು ಸತ್‌ಶ್ರೋತೃಗಳು ॥ 179

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೇ ।
ಶ್ರೀ ಸಾಯಿಸಮರ್ಥ ಸಚ್ಚರಿತೆ । ಸಾಶಂಕ ಭಕ್ತಾನುಗ್ರಹಣಂನಾಮ । ಅಷ್ಟ ಚತ್ವಾರಿಂಶೋಧ್ಯಾಯ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

68/.1



## ॥ ಅಥಃ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ನಲವತ್ತೊಂಭತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಸಾಂಗೋಪಾಂಗವಾಗಿ ಸದ್ಗುರುವಿನ ಸ್ತವಿಸುವಾಗ । ವೇದ ಪುರಾಣಗಳೇ ದಣಿದು ಹೋದಾಗ ।
ಅಜ್ಞಾನಿ ನಾನೇನೂ ತಿಳಿಯದವನಿರುವಾಗ । ನಿವಾಂತವಾಗಿರುವದೇ ಒಳ್ಳೆಯದು ॥1

ನಿಜವಾಗಿ ನೋಡಲು ಇರಬೇಕು ಮೌನ । ಅದೇ ವಸ್ತುತಃ ಸದ್ಗುರುಸ್ತವನ ।
ಆದರೆ ಸಾಯಿಯ ಒಂದೊಂದು ಗುಣ । ಮೌನವನೇ ಮರೆಸಿಬಿಡುವವು ॥ 2

ಸಾಯಿಯ ಅಗಾಧ ಲೀಲೆಗಳ ಕಂಡಾಗ್ಯೆ । ಸುಮ್ಮನಿರಲಾಗಲಿಲ್ಲ ನನಗೆ ।
ಪಕ್ವಾನ್ನವು ಸವಿಹತ್ತಿ ನಾಲಿಗೆಗೆ । ಶ್ರೋತೃವೃಂದದ ನೆನಪಾಯಿತು ॥ 3

ಅವರನ್ನೂ ಪಂಙ್ತಿಗೆ ಕರೆಯುವದು । ಅದರಿಂದ ನಿಜರಸಾನಂದ ದ್ವಿಗುಣವಾಗುವದು ।
ನನ್ನ ಮನಕೆ ಹೀಗೆ ಅನಿಸಿದ್ದು । ಅದರಿಂದ ಊಟಕ್ಕೆ ರಂಗೇರಿತು ॥ 4

ಪಕ್ವಾನ್ನವು ಬಲು ರುಚಿಯಾಗಿದ್ದರೂ । ಜೊತೆಯಲಿರದೆ ಸಜ್ಜನ ಸ್ನೇಹಿತರು ।
ಕಡಿಮೆಯೆನಿಸುವದದರ ಸವಿಯಾದರೂ । ಒಬ್ಬನೇ ಸವಿಯಲು ಸೇರದು ॥ 5

ಸಾಯಿ (ಸಕಲೇಚ್ಛೆತೃಪ್ತನಾದವನು ) ಯಾವಾಗಲೂ ತೃಪ್ತಕಾಮ । ಸಾಯಿ ಸಕಲಸಂತಲಲಾಮ ।
ಸಾಯಿ ನಿಜಭಕ್ತ ವಿಶ್ರಾಮಧಾಮ । ದುರ್ಧರ ಭವಭ್ರಮನಿವಾರಕ ॥ 6

ಅನಿರ್ವಾಚ್ಯ ಲೀಲೆ ಅವನದು । ವರ್ಣಿಸಬಲ್ಲದೆಷ್ಟು ವಾಣಿ ನನ್ನದು ।
ಅತರ್ಕ್ಯನ ಕಲೆ ಅತರ್ಕ್ಯವಾದುದು । ಹೇಗೆ ನನಗಾಕಲನವಾಗುವದು ॥ 7

ಕಲ್ಯಾಣಕ್ಕೂ ಕಲ್ಯಾಣಮಯನಾದ । ಅಂಥ ಈ ಸಾಯಿ ನಿಜಕೃಪೆಯಿಂದ ।
ನಿಜ ಕಥೆಯ ಸ್ಮರಣೆ ಈಯುವದರಿಂದ । ಈ ಗ್ರಂಥ ಪರಿಪೂರ್ಣವಾಗುತಿದೆ ॥ 8

ಹಾಡತೊಡಗಿದರವನ ಅಗಾಧ ಮಹಿಮಾನ । ಸಮರ್ಥರಾರಿಲ್ಲಿ ಅದ ಮಾಡಲು ಕಥನ ।
ಪರಾಕೊಡ ತಿರುಗಿ ಹೊರಟಂಥದನ । ಮಧ್ಯಮದ ಕಥೆ ಯಾರು ನೋಡಬೇಕು ॥9

ಎಲ್ಲಿ ಮೂವರು ಬಾಯಿ ಬಿಡದಿದ್ದು । ಅಲ್ಲಿ ನಾಲ್ಕನೇ ವೈಖರಿ ಯಾವುದಿಹುದು ।
ಇದನು ನಾ ಪೂರ್ಣ ತಿಳಿದಿದ್ದೂ । ಮನ ಸ್ವಸ್ಥ ಕುಳಿತಿರಲು ಬಿಡದಾಯಿತು ॥ 10

ಚರಣಗಳಾಶ್ರಯವಿರದೆ ಸದ್ಗುರುವಿನದು । ಯಥಾರ್ಥ ಸ್ವರೂಪ ಕೈಗೆಟುಕದು ।
ಸಂತರು ತಾವೇ ಶ್ರೀಹರಿಸ್ವರೂಪರಿದ್ದು । ಅವರ ಕೃಪಾಹಸ್ತಕ್ಕೆ ಪ್ರಾರ್ಥಿಸಬೇಕು ॥ 11

ಮನವೆಮ್ಮದು ಗುರುಚರಣದೆಡೆಗೆ । ಅದೇ ಸರ್ವಸ್ವವ ನೀಡುವದೆಮಗೆ ।
ರಮಿಸುವೆ ನಾ ಸಂತಸಹವಾಸದೊಳಗೆ । ಆ ಪ್ರೇಮ ಸಹವಾಸ ಲಭಿಸಲೆಮಗೆ ॥ 12

ಯಾರಿಗೆ ಪೂರ್ಣ ದೇಹಾಭಿಮಾನ । ಒಪ್ಪದವನಿಗೆ 'ಭಕ್ತ'ನೆಂಬಭಿದಾನ ।
ಇದ್ದಾಗ ತಾ ಪೂರ್ಣ ನಿರಭಿಮಾನ । ನಿಜವಾದ ಭಕ್ತತನ ಅವನಲ್ಲಿ ॥ 13

ಎಲ್ಲಿರುವದು ಜ್ಞಾತೃತ್ವದ ಸೊಕ್ಕು । ಶ್ರೇಷ್ಠತ್ವದ ಅಭಿಮಾನದ ಉಕ್ಕು ।
ಕೇವಲ ದಂಭದ್ದೇ ಪರಾಕು । ಅಂಥವನ ಪ್ರತಿಷ್ಠೆ ಏತರದು ॥ 14

ತನ್ನ ಗುರುವಿನದೇ ಕೀರ್ತಿಯನು । ಹಾಡಾಲಾರದ ದುರ್ಭಾಗ್ಯನು ।
ಕಿವುಡನಾಗಿರದಿದ್ದರೂ ಕೇಳದವನು । ಅವನು ಮೂರ್ತಿವೆತ್ತ ಮಂದಮತಿ ॥ 15

ತೀರ್ಥ ವ್ರತ ಯಜ್ಞ ದಾನ । ಅದಕೂ ದೊಡ್ಡ ತಪಾಚರಣ ।
ಅದಕಿಂತಲೂ ಹೆಚ್ಚಿನದು ಹರಿಭಜನ । ನಿಜಗುರುಧ್ಯಾನ ಹೆಚ್ಚಿಲ್ಲದಕ್ಕೂ ॥ 16

ಸಾಯಿಯೇ ಅವರ ಭಕ್ತನ ಧ್ಯಾನ । ಸಾಯಿಯೇ ಅವರ ದೇವತಾರ್ಚನ ।
ಸಾಯಿಯೇ ಅವರ ಗುಪ್ತ ನಿಧಾನ । ಉಳಿಸಿಕೊಳ್ಳಬೇಕದನು ಜಿಪುಣತನ ಬಿಟ್ಟು ॥17

ಒಮ್ಮೊಮ್ಮೆ ನನಗೂ ಆಲಸ್ಯ ಬಂದಾಗ । ಅಂತರಂಗದಲಿರುವ ಸಾಯಿ ಆಗ ।
ಕಥೆಯೂ ಮರೆಯತೊಡಗಿದಾಗ । ನೆನಹು ಕೊಡುವನು ಸರಿಯಾದ ಸಮಯಕ್ಕೆ ॥ 18

ಕ್ಷಣವೊಂದು ಸುಮ್ಮನೇ ಕುಳಿತಿರುವೆನೆಂಬಲ್ಲಿ । ನನ್ನದೇನೂ ನಡೆಯದಲ್ಲಿ ।
ಲೆಕ್ಕಣಿಕೆ ಹಿಡಿಯಲೇ ಬೇಕಾಗುವದು ಕೈಯಲ್ಲಿ । ಅಂಥ ಕಥೆ ಅಕಸ್ಮಾತ ಹೊಳೆದಾಗ ॥ 19

ಇಂಥವನ ಅಗಾಧ ಕಥೆಗಳು । ನಿಜ ಭಕ್ತರಿಗವುಗಳ ಕೇಳಿಸಲು ।
ಪ್ರವರ್ತಿಸಿದರು ನಿಜ ಚರಿತೆ ಬರೆಯಲು । ನನ್ನ ನಿಜಸ್ವಾರ್ಥದ ಹಿತಕ್ಕೂ ॥ 20

ಸಂತರ ಕಥೆಗಳು ಹಾಗಿಲ್ಲದಿದ್ದಲ್ಲಿ । ತಮ್ಮಷ್ಟಕ್ಕೇ ರಚಿಸಿ ಬರೆದಿದ್ದಲ್ಲಿ ।
ಅವನಿತ್ತ ಸ್ಫೂರ್ತಿ ಇರದಿದ್ದಲ್ಲಿ । ಅಲ್ಲಲ್ಲಿ ನೀರಸತೇಯೇ ತುಂಬಿರುತ್ತಿತ್ತು ॥ 21

ಕೃಪಾಳು ಸಾಯಿನಾಥನು ಹೀಗೆ । ಪ್ರವೇಶಿಸಿ ನನ್ನಂತಃಕರಣದೊಳಗೆ ।
ನನ್ನ ಮನೋರಥವೂ ಪೂರೈಸುವ ಹಾಗೆ । ತನ್ನ ಗ್ರಂಥ ರಚನೆಯ ಮಾಡಿಸಿಕೊಂಡ ॥ 22

ಮುಖದಲಿ ಸಾಯಿ ನಾಮಾವರ್ತನ । ಚಿತ್ತದಲವನ ವಚನ ಚಿಂತನ ।
ಮನದಲವನ ಮೂರ್ತಿಯ ಧ್ಯಾನ । ಪೂರ್ಣ ಸಮಾನಧಾನ ಅದರಿಂದೆನಗೆ ॥ 23

ವದನದಲಿ ಶ್ರೀಸಾಯಿಯ ನಾಮ । ಅಂತರಂಗದಿ ಶ್ರೀಸಾಯಿಯ ಪ್ರೇಮ ।
ಯಾರದು ಸಾಯಿ ಪ್ರೀತ್ಯರ್ಥವೇ ಕರ್ಮ । ಅಂಥವಗೆ ಪರಮಋಣಿಯಾಗಿರುವ ಸಾಯಿ ॥ 24

ಹರಿಯಲು ಸಂಸಾರ ಬಂಧನ । ಇದಕಿಂತಿಲ್ಲ ಬೇರೆ ಸಾಧನ ।
ಸಾಯಿ ಕಥೆ ಪರಮ ಪಾವನ । ಅದರ ಸೇವನೆ ಸದಾಸುಖದಾಯಕ ॥ 25

ಕಾಲುಗಳಿಂದ ಸಾಯಿಯ ಪ್ರದಕ್ಷಿಣ । ಮಾಡಿರಿ ಕಿವಿಯಿಂದ ಸಚ್ಚರಿತ ಶ್ರವಣ ।
ಸರ್ವಾಂಗಕ್ಕಿರಲಿ ಅವರ ಪ್ರೇಮಾಲಿಂಗನ । ಕಣ್ಣಿಂದ ದರ್ಶನ ಪಡೆಯಿರಿ ॥ 26

ವಂದಿಸಬೇಕವನ ಸಾಷ್ಟಾಂಗದಲಿ । ಮಸ್ತಕವಿರಿಸಬೇಕವನ ಚರಣದಲಿ ।
ಜಿಹ್ವೆಯ ತೊಡಗಿಸಬೇಕವನ ನಾಮಸ್ಮರಣೆಯಲಿ । ಮೂಗಿನಲಿ ನಿರ್ಮಾಲ್ಯವನವಘ್ರಾಣಿಸಿರಿ ॥ 27

ಇನ್ನು ಪೂರ್ವ ಕಥಾನುಸಂದಾನ । ಚಮತ್ಕಾರ:ಪ್ರಿಯ ಭಕ್ತಕಥಾಕಥನ ।
ಮಾಡುವೆನೆಂದಿತ್ತಿದ್ದೆ ವಚನ । ಗತಾಧ್ಯಾಯದಲಿ ಶ್ರೋತೃಗಳಿಗೆ ॥ 28

ತಾನಿರನು ಸ್ವಾರ್ಥ ಪರಮಾರ್ಥ ಪರಾಯಣ । ಇರದೆ ಸಂತರ ಅಧಿಕಾರದ ಜ್ಞಾನ ।
ಯಾರಾದರೂ ಮಾಡಿದರವರ ವರ್ಣನ । ಅವನ ಮನ ಅದನೊಪ್ಪದು ॥ 29

ಸಾಯಿಯ ಕಥೆ ಕೇಳಿದರೂ ಸ್ನೇಹಿತರಿಂದ । ಕೇಳುವನವುಗಳ ದೂಷಿತ ದೃಷ್ಟಿಯಿಂದ ।
ಅವನಿಗೆ ಸ್ವಾನುಭವವಾಗದ । ಸೃಷ್ಟಿಯಲಾವುದನೂ ಒಪ್ಪನಾತ ॥ 30

ಹೆಸರವನಿಗೆ ಹರಿ ಕಾನೋಬಾ ಎಂದು । ಮುಂಬಯಿಯಿಂದವ ಸ್ನೇಹಿತರ ಕೂಡಿಕೊಂಡು ।
ಸಾಯಿಯ ಪರೀಕ್ಷೆ ಮಾಡಲೆಂದು । ಹೊರಟನಾಗ ಪ್ರವಾಸಕೆ ॥ 31

ಆದರೆ ಸಾಯಿಯ ಕಲಾಕುಶಲತೆ । ಪ್ರಕಾಶಿಸುವದೆಲ್ಲರಂತರಂಗದೆ ।
ಆ ಲಾಘವ ಆ ವೈಚಿತ್ರ್ಯತೆ । ಯಾರು ಸರಿಯಾಗಿ ತಿಳಿಯಬಲ್ಲರು ॥ 32

ಹರಿಭಾವೂ ಹೊರಟಾಗ ಶಿರಡಿಗೆಂದು । ಹೊರಟ ಕಾರಣ ಸಮರ್ಥರಿಗೆ ತಿಳಿಯಿತು ।
ಕೇವಲ ಅವಗೆ ಚಮತ್ಕಾರದಲಿ ರುಚಿ ಇತ್ತು । ಅಷ್ಟೇ ಅವನ ಪಾತ್ರಕೆ ॥ 33

ಅಷ್ಟೇ ಅವಗೆ ತೋರಿಸಿ ಚಳಕ । ತಮ್ಮವನ ಮಾಡಿಕೊಂಡರು ನಿಷ್ಟಂಕ ।
ಅವನ ಶ್ರಮವೂ ಆಯಿತು ಸಾರ್ಥಕ । ಯುಕ್ತಿ ಪ್ರಯೋಜಕರು ಸಂತರು ನಿಜದಲಿ ॥ 34

ಕೋಪರಗಾವದಲ್ಲಿ ಸ್ನೇಹಿತನ ಸಮವೇತ । ಹರಿಭಾವೂ ಟಾಂಗೆಯಲಿ ಕುಳಿತ ।
ಗೋದಾವರಿಯಲಾಗಿ ಸುಸ್ನಾತ । ವಿಲಂಬ ಮಾಡದೆ ಹೊರಟರು ಶಿರಡಿಯತ್ತ ॥ 35

ಕೋಪರಗಾವದಿಂದ ಬಂದು । ಹಸ್ತ ಪಾದಗಳನ್ನು ತೊಳೆದು ।
ಸಂತರನು ನೋಡಲೆಂದು । ಹರಿಭಾವೂ ಹೊರಟನು ॥ 36

ಕಾಲಲ್ಲಿ ಹೊಸ ಚಪ್ಪಲಿ ಮೆಟ್ಟಿ । ಜರದ ಪಟಕ ತಲೆಗೆ ಸುತ್ತಿ ।
ಸಾಯಿಬಾಬಾರ ದರ್ಶನ ಬಯಸಿ । ಉತ್ಕಂಠಿತನಾಗಿದ್ದ ಆತ ॥ 37

ಬಳಿಕವರು ಮಶೀದಿಗೆ ಬಂದು । ಸಾಯಿಬಾಬಾರನ್ನು ಕಂಡು ।
ಎನಿಸಿತವರ ಹತ್ತಿರ ಬಂದು । ಸಾಷ್ಟಾಂಗ ನಮಸ್ಕಾರ ಮಾಡಬೇಕೆಂದು ॥ 38

ಆದರೆ ಬಿಡಬೇಕೆಂದರೆ ಚಪ್ಪಲಿ । ನಿರ್ಭಯವಾದ ಸ್ಥಳವೆಲ್ಲಿ ।
ಕೊನೆಗೊಂದು । ಮೂಲೆಯಲ್ಲಿ ಸರಿಸಿಟ್ಟರವುಗಳನು ॥ 39

ಬಳಿಕವರು ಮೇಲೆ ದರ್ಶನಕೆ ಹೋದರು । ಪ್ರೇಮದಲಿ ಸಾಯಿಯ ಚರಣಕೊಂದಿಸಿದರು ।
ಉದಿ ಪ್ರಸಾದ ತೆಗೆದುಕೊಂಡು ತಿರುಗಿ ಬಂದರು । ವಾಡೆಗೆ ಹೋಗಬೇಕೆಂದು ಹೊರಟರು ॥ 40

ಕಾಲಿಗೆ ಹಾಕಿಕೊಳಬೇಕಿನುತಲಿ । ಎಲ್ಲಿ ಹುಡುಕಿದರೂ ಸಿಗದಾಗುತಲಿ ।
ತಿರುಗಿ ಬಂದರು ಬರಿಗಾಲಿನಲಿ । ಖಿನ್ನರಾಗಿ ಅದರಾಶೆಯಬಿಟ್ಟು ॥ 41

ಏಕೆಂದರೆ ಅಲ್ಲಿ ಬಹಳ ಜನ । ಬರು ಹೋಗುವವರು ಬಿಟ್ಟುಬಿಡದನ ।
ಕೇಳುವದಾದರೂ ಇಲ್ಲಿ ಯಾರನ್ನು । ಏನೊಂದೂ ತೋಚದಾಯಿತು ॥ 42

ಹೀಗವರದು ದುಶ್ಚಿತ್ತಮನ । ಒಂದೇಸವನೇ ಪಾದತ್ರಾಣ ಚಿಂತನ ।
ಕಣ್ಣಿಗೆ ಕಟ್ಟಿವೆ ಪಾದತ್ರಾಣ । ಎಲ್ಲ ವಿಚಾರ ಅದರದೇ ॥ 43

ಅಕ್ಕರತೆಬಟ್ಟು ಕೊಂಡುಕೊಂಡವು । ಆ ಪಾದತ್ರಾಣಗಳು ಕಳೆದವು ।
ಅಂದರೆ ಯಾರಾದರೂ ಮಾಡಿರಬೇಕು ಕಳುವು । ನಿಶ್ಚಯವಾಗೆಂದೆನಿಸಿತವಗೆ ॥ 44

ಆಮೇಲೆ ಮುಗಿಸಿದರು ಸ್ನಾನ । ಮುಗಿಸಿ ಪೂಜೆ ನೈವೇದ್ಯಾದಿಗಳನ ।
ಪಂಕ್ತಿಯಲಿ ಕುಳಿತು ಮಾಡಿದರು ಭೋಜನ । ಆದರೆ ಮನಕೆ ಸಮಾಧಾನವಿರಲಿಲ್ಲ ॥ 45

ಸಭಾ ಮಂಟಪ ಸಾಯಿಯ ಸ್ಥಾನ । ತಪ್ಪಿಸಿ ಅವರ ಕಣ್ಣುಗಳನ ।
ಯಾರು ಒಯ್ದರೆನ್ನ ಪಾದ ತ್ರಾಣ । ಇದೇನು ಸಾಮಾನ್ಯ ಆಶ್ಚರ್ಯವೇ ॥ 46

ತಳಮಳಿಸುತಿತ್ತವನ ಚಿತ್ತ । ಮನಸಿಲ್ಲ ಅನ್ನ ಪಾನಗಳತ್ತ ।
ಜನರ ಜೊತೆ ಹೊರಗೆ ಬರುತ । ಕೈ ತೊಳೆದು ಬಾಯಿ ಮುಕ್ಕಳಿಸಲೆಂದು ॥ 47

ಅಷ್ಟರಲ್ಲೊಬ್ಬ ಹುಡುಗ ಬಂದ । ಕಳೆದ ಚಪ್ಪಲಿಯ ಬಾವುಟ ಮಾಡಿದ್ದ ।
ಒಂದು ಕೋಲ ತುದಿಗವುಗಳನು ಹಾಕಿದ್ದ । ಅಕಸ್ಮಾತ್ತಾಗಿ ಬಂದನವನಲ್ಲಿಗೆ ॥ 48

ಜನರು ಉಂಡು ಕೈ ತೊಳೆಯುತಿದ್ದಲ್ಲಿ । ಬಾಲಕ ಹುಡುಕುತ್ತ ಬಂದನಲ್ಲಿ ।
ಎಂದ ಬಾಬಾ ನನ್ನ ಕಳಿಸಿದರಿಲ್ಲಿ । ಈ ಕೋಲು ನನ್ನ ಕೈಗಿತ್ತು ॥ 49

"ಹರಿಕಾ ಬೇಟಾ ಜರೀಕಾ ಪೇಟಾ" ಹೀಗೆ । ಕೂಗುತ್ತ ಹೋಗು ನೀನಲ್ಲಿ ಗೆ ।
"ಇವು ನನ್ನವೇ ಎಂದು ಉತ್ಕಂಠೆಯಿಂದೆಂದವಗೆ" । ಕೊಟ್ಟು ಬಿಡು ಇವುಗಳನೆಂದು ॥ 50

ಆದರೆ ಯಾರಿರುವ ಹರಿಯಬಾಲಕ । ಅವನಿಗಿರಬೇಕು ಜರಿಯಪಟಕ ।
ಇದು ನಿಶ್ಚಿತವಾದ ಬಳಿಕ । ಸುಮ್ಮನೆ ಕೊಟ್ಟು ಬಿಡವುಗಳ" ॥ 51

ಈ ಮಾತು ಕಿವಿಗೆ ಬೀಳಲು । ಗುರುತಿಸಿದನಾ ಚಪ್ಪಲಿ ಕಂಡು ಪ್ರತ್ಯಕ್ಷದೊಳು ।
ಹರಿಭಾವು ಅಲ್ಲಿಗೆ ಓಡಿ ಬರಲು । ಮನಕಾಶ್ಚರ್ಯವಾಯಿತು ॥ 52

ಕಣ್ಣಲ್ಲಿ ತುಂಬಿದವು ಆನಂದ್ರಾಶ್ರುಗಳು । ಗದ್ಗದಿತವಾಯಿತು ಹರಿಭಾವೂ ಗಂಟಲು ।
ನೋಡಿ ತನ್ನ ಪಾದ ತ್ರಾಣಗಳು । ಅತ್ಯಂತ ಚಮತ್ಕಾರವಿದೆನಿಸಿತು ॥ 53

ಬಾಲಕನಿಗೆಂದ ಬಾ ಇಲ್ಲಿ । ತೋರಿಸು ನೋಡೋಣ ಆ ಚಪ್ಪಲಿ ।
ನೋಡಿ ಕೇಳಿದನವಗೆ ಸಿಕ್ಕವಿವು ನಿನಗೆಲ್ಲಿ । ನಿಜ ಸಂಗತಿಯ ಹೇಳೆಂದು ॥ 54

ಬಾಲಕನೆಂದ 'ನನಗೆ ಗೊತ್ತಿಲ್ಲ ಅದು । ನಾನು ಬಾಬಾರ ಆಜ್ಞೆ ಪಾಲಿಸುವದು ।
ಹರಿಕಾಬೇಟಾ ಇದ್ದವನು ಬಂದು । ಜರದ ಪೇಟವ ತೋರಬೇಕೆನಗೆ ॥ 55

ಅವನಿಗೇ ನಾನಿವುಗಳ ಕೊಡುವದು । ಬೇರೇನೂ ನನಗೆ ಗೊತ್ತಿರದು ।
ಗುರುತು ನನಗೆ ತೋರಿಸುವದು । ಆಗ ಚಪ್ಪಲಿ ಪಡೆಯುವದು ॥ 56

"ಲೇ ಹುಡುಗಾ ಇವು ನನ್ನವೇ ಚಪ್ಪಲಿ" । ಎಂದರೂ ಆ ಹುಡುಗ ಕೊಡವಲ್ಲ ।
ಬಳಿಕವನು ಬಾಬಾ ಹೇಳಿದ ಗುರುತುಗಳನೆಲ್ಲ । ಹುಡುಗನಿಗೆ ಒಪ್ಪಿಸಿದನು ॥ 57

ಎಂದ ಮಗೂ ಆ ಹರಿಯೇ ನಾನು । ಕಾನ್ಹೋಬಾನ ಮಗನೆಂಬವನು ।
ಇದೆಲ್ಲ ಸಂಬಂಧಿಸಿದ್ದು ನನ್ನನು । ಸಂಪೂರ್ಣವಾಗಿ ಸತ್ಯವಿದೆ ॥ 58

ಇದು ನೋಡು ಪಟಕಾ ಜರಿಯದು । ಇದರಿಂದ ನಿನ್ನ ಸಂಶಯ ದೂರಾಗುವದು ।
ಬಳಿಕ ಈ ಪಾದತ್ರಾಣದ ಒಡೆಯ ನಾನಾಗುವೆನೆಂದು । ಇದನಾರೂ ತನ್ನದೆನ್ನದು" ॥ 59

ಆಗ ಹುಡುಗನಿಗೂ ಒಪ್ಪಿಗೆಯಾಗಿ । ಹರಿಭಾವೂಗೆ ಚಪ್ಪಲಿ ಕೊಟ್ಟ ತಿರುಗಿ ।
ಅವನ ಮನೋರಥ ಪೂರ್ಣವಾಗಿ । ಸಾಯಿ ಸಂತರೆಂಬುದು ಅನುಭವಕೆ ಬಂತು ॥ 60

ನನಗೆ ಜರದ ಪಟಕವಿರುವದು । ಅದೇನು ಅಂಥ ವಿಶೇಷವಾದುದು ।
ಅದು ನನ್ನ ತಲೆಯ ಮೇಲಿರುವದು । ಎಲ್ಲರಿಗೂ ಕಾಣುತ್ತದೆ ॥ 61

ನಾನಿರುವಾಗ ಪರಸ್ಥಳದೊಳಗೆ । ಮೊದಲ ಸಲವೇ ಬಂದಿರುವೆ ಶಿರಡಿಗೆ ।
ಸಾಯಿಬಾಬಾರಿಗೆ ಅದು ಹೇಗೆ । ನನ್ನ ಹೆಸರು ಗೊತ್ತಾಯಿತು ॥ 62

ಕಾನ್ಹೋಬಾ ನನ್ನ ತಂದೆಯ ಹೆಸರು । ನೋಡಿಲ್ಲವನನಿಲ್ಲಿ ಯಾರೂ ।
"ಕಾ" ಎಂಬ ಹೆಸರನ್ನು ಉಪಲಕ್ಷಿಸಿದರು । ಅತಿ ಆಶ್ಚರ್ಯವಾಯಿತವಗೆ ॥ 63

ಹಿಂದೆ ಸಾಯಿ ಸಂತನ ಮಹಿಮೆಯನು । ನನಗೆ ನನ್ನ ಸ್ನೇಹಿತನು ಹೇಳಿದನು ।
ಅವಮಾನಿಸಿದೆನಾಗ ನಾ ಅವನ ಮಾತನ್ನು । ಈಗದರ ಪಶ್ಚಾತ್ತಾಪವಾಗುತಿದೆ ॥ 64

ಈಗ ನನಗೆ ಬರಲನುಭವ । ತಿಳಿಯಿತು ಸಾಯಿ ಬಾಬಾರ ಪ್ರಭಾವ ।
ಶ್ರೀಸಾಯಿ ಸಂತನಿರುವ ಮಹಾನುಭಾವ । ಎಂಬಲ್ಲಿ ಸಂಶಯ ಉಳಿಯಲಿಲ್ಲ ॥ 65

ಅವನ ಮನದಲಿ ಅದೇ ಭಾವವಿತ್ತು । ಅದರಂತೆಯೇ ಹರಿಭಾವೂಗೆ ಅನುಭವ ಬಂತು ।
ಸಂತ ಪರೀಕ್ಷಣದ ಲಾಲಸೆ ಇತ್ತು । ಪರಮಾರ್ಥದ ಭಾವನೆಯೇ ಇಲ್ಲ ಅಲ್ಲಿ ॥ 66

ಸಾಯಿ ಸಮರ್ಥ ಮಹಾನುಭಾವ । ಸ್ನೇಹಿತ ಸಂಬಂಧಿಗಳು ಹೇಳುವರು ಅನುಭವ ।
ತಾನು ಸ್ವತಃ ನೋಡಬೇಕದರ ಸತ್ಯವ । ಎಂಬುದೇ ಶಿರಡಿಯಾಗಮನದ ಕಾರಣ ॥ 67

ಜೀವವ ಮುಡಿಪಾಗಿಸಬೇಕು ಸಂತ ಚರಣದಲಿ । ಅದರಿಂದ ತಿಳಿಯಬೇಕು ದೇವನೆಲ್ಲಿ ।
ಇಂಥದೇನೂ ಇಲ್ಲ ಮನಸಿನಲ್ಲಿ । ಓತಿಕಾಟದ ಓಟ ಎಲ್ಲಿಯವರೆಗೆ ಬಂತು ॥ 68

ಸಂತರ ದ್ವಾರದವರೆಗೆ ಹೋಗಿದ್ದವನು । ಚಮತ್ಕಾರದ ಮಾತ್ರ ಕಾಣಬೇಕೆಂದನು ।
ಆದರಿಂದ ಹೊಸ ಚಪ್ಪಲಿಯ ಜೋಡನು । ತಾನಿದ್ದಲ್ಲಿಯೇ ಪಡೆದನಲ್ಲ ॥ 69

ಇಲ್ಲದಿದ್ದರೂ ಕ್ಷುಲ್ಲಕ ಚಪ್ಪಲಿಯದು । ಕಳೆದರೇನಂಥ ಹಾನಿ ದೊಡ್ಡದು ।
ಆದರದಕಾಗಿ ಮನ ಚಡಪಡಿಸುತಿದ್ದು । ಅದು ಸಿಗುವವರೆಗೆ ಸಮಾಧಾನವಿಲ್ಲ ॥ 70

ಸಂತ ಪ್ರಾಪ್ತಿಯ ಮಾರ್ಗಗಳೆರಡು । ಒಂದು ಭಕ್ತಿ ಜ್ಞಾನ ಇನ್ನೊಂದು ।
ಜ್ಞಾನ ಮಾರ್ಗವು ಬಹಳ ಕಷ್ಟದ್ದಾಗಿದ್ದು । ಭಕ್ತಿಯ ಸಾಧನವೇ ಸುಲಭವು ॥ 71

ಹೀಗೆ ಭಕ್ತಿ ಸರಳ ಸುಲಭವಾಗಿದ್ದರೂ । ಎಲ್ಲರದನೇಕೆ ಮಾಡರಾದರೂ ।
ಮಹತ್ ಭಾಗ್ಯಬೇಕು ಅದಕ್ಕಾದರೂ । ಅಂದರೇನೇ ಅದಾದರೂ ಒದಗುವದು ॥72

ಕೋಟಿ ಜನ್ಮಗಳ ಪುಣ್ಯವಿದ್ದಾಗ । ಸಂತರ ಸಂಗ ದೊರೆಯುವದು ಆಗ ।
ಸಂತ ಸಮಾಗಮದ ಸೌಖ್ಯ ಲಭಿಸಿದಾಗ । ವಿಕಸಿತವಾಗುವದು ನಿಜಭಕ್ತಿ ॥ 73

ನಾವೆಲ್ಲ ಬಲ್ಲೆವು ಪ್ರವೃತ್ತಿ । ಅದರಲ್ಲಿಯೇ ನಮ್ಮ ಆಸಕ್ತಿ ತಿಳಿಯೆವು ನಿವೃತ್ತಿ ।
ಹೀಗಿರುವಾಗ ಮನದ ವೃತ್ತಿ । ಅದೆಂಥ ಭಕ್ತಿ ಎನಬೇಕು ॥ 74

ನಮ್ಮದಿರುವಂತೆ ಭಕ್ತಿ । ಅದರಂತೆ ನಮಗೆ ಪ್ರಾಪ್ತಿ ।
ಹೀಗಾಗುವದು ಎಂದಿಗೂ ನಿಶ್ಚಿತಿ । ತಿಲಮಾತ್ರ ಭ್ರಾಂತಿ ಇಲ್ಲಲ್ಲಿ ॥ 75

ವಿಷಯಭೋಗಾರ್ಥ ಹಗಲಿರುಳು । ನಾವೆಲ್ಲ ಸಾಯಿಯ ಬಳಿ ಕೂಡಿರಲು ।
ನಮಗವರ ಕೊಡುಗೆಯೂ ಅದರೊಲು । ಪರಮಾರ್ಥ ಬಯಸಿದವಗೆ ಪರಮಾರ್ಥ ॥ 76

ಇರಲೀಗ ಸಂಗತಿ ಇನ್ನೊಂದು । ಸೋಮದೇವ ಸ್ವಾಮಿ ಹೆಸರವನದು ।
ಸಾಯಿಯ ಪರೀಕ್ಷೆ ಮಾಡಲೆಂದು । ಪ್ರತ್ಯಕ್ಷ ಶಿರಡಿಗೆ ಬಂದರು ॥ 77

ಸನ್ ಹತ್ತೊಂಭತ್ತು ನೂರಾ ಆರರಲ್ಲಿ । ಉತ್ತರ ಕಾಶಿ ಎಂಬಲ್ಲಿ ।
ಪಾಂಥಸ್ಥ ನಿವಾಸದಲ್ಲಿ । ಭಾಯಿಜೀಗೆ ಈ ಗೃಹಸ್ಥ ಭೆಟ್ಟಿಯಾದ ॥ 78

ಕೈಲಾಸವಾಸೀ ದೀಕ್ಷಿತರು ಪ್ರಸಿದ್ಧ । ಭಾಯಿಜಿ ಅವರ ಬಂಧುವಾಗಿದ್ದ ।
ಬದರೀಕೇದಾರದ ಯಾತ್ರೆ ಮಾಡುತಿದ್ದ । ಆಗ ದಾರಿಯಲಿ ಭೆಟ್ಟಿಯಾದರು ॥ 79

ಬದರೀ ಕೇದಾರ ಮುಗಿಸಿದರು । ಭಾಯಿಜಿ ಅಲ್ಲಿಂದ ಕೆಳಗಿಳಿದರು ।
ಅಲ್ಲಲ್ಲಿ ಕುಳಿತಿದ್ದ ಪಾಂಥಸ್ಥರು (ಯಾತ್ರಿಕರು) । ಅಲ್ಲಲ್ಲಿ ವಿಶ್ರಾಂತಿ ಪಡೆಯತೊಡಗಿದರು ॥ 80

ಅವರಲ್ಲಿಯ ಒಬ್ಬ ಆಸಾಮಿ । ಅವನೇ ಮುಂದೆ ಹರಿದ್ವಾರದ ಸ್ವಾಮಿ ।
ಎಲ್ಲೆಡೆ ಪ್ರಸಿದ್ಧರು ಈ ನಾಮದಿ । ಅವರು ಬಾಬಾರ ಲಗಾಮಕೆ ಸಿಕ್ಕರು ॥ 81

ಅವರ ಈ ಕಥೆ ಬೋಧಪ್ರದ । ಬಾಬಾರ ಸ್ವರೂಪವ ಮಾಡುವದು ವಿಷದ ।
ಕೇಳುಗರಿಗೀಯುವದು ಮೋದ । ನಿಜಾನಂದವದೆಲ್ಲರಿಗೆ ॥ 82

ಭಾಯೀಜಿ ಹೋದಾಗ ಪ್ರಾತಃರ್ವಿಧಿಗೆ । ಈ ಸ್ವಾಮಿಜಿ ಸಿಕ್ಕರು ದಾರಿಯೊಳಗೆ ।
ಮಾತನಾಡುತ್ತ ಹೋಗುವಾಗ್ಯೆ । ಅನುರಾಗವು ಬೆಳೆಯಿತು ॥ 83

ಗಂಗೋತ್ರಿಯ ಕೆಳಗಿನ ಪ್ರದೇಶದಲ್ಲಿ । ಬುವಾ ಇರುವಾಗ ಉತ್ತರ ಕಾಶಿಯಲ್ಲಿ ।
ಡೆಹರಾಡೂನಿನಿಂದ ಎಪ್ಪತ್ತು ಹರದಾರಿ ದೂರದಲ್ಲಿ । ಅಲ್ಲಿ ಈ ಸಹವಾಸವಾಯಿತು ॥ 84

ತಂಬಿಗೆ ಹಿಡಿದುಕೊಂಡು ಬಹಿರ್ದೆಶೆಗೆ । ಬುವಾ ಹೊರಟರು ಬೆಳಗಿನ ಜಾವಿಗೆ ।
ಭಾಯೀಜಿಯವರೂ ಅದೇ ಸ್ಥಳಕ್ಕೆ । ಅದೇ ಕಾರ್ಯಕ್ಕೆ ಹೊರಟಿದ್ದರು ॥ 85

ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು ಮೊದಲು । ಮುಂದೆ ದಾರಿಯಲಿ ಇಬ್ಬರ ಭೆಟ್ಟಿಯಾಗಲು ।
ಪರಸ್ಪರರ ಯೋಗಕ್ಷೇಮದ ಮಾತುಗಳು । ಸುಖಸಂತೋಷದಿಂದ ನಡೆದವು ॥ 86

ಯೋಗ ಕ್ಷೇಮಗಳ ಕೇಳುತಲಿ । ಹುಟ್ಟಿತು ಸ್ನೇಹ ಭಾವ ಅವರಲಿ ।
ಒಬ್ಬರೊಬ್ಬರು ತಾವು ಇರುವದೆಲ್ಲಿ । ಎಂದೆಲ್ಲ ತಿಳಿದುಕೊಂಡು ॥ 87

ನೀವು ಹರಿದ್ವಾರದಲ್ಲಿರುವವರು । ನಾವು ನಾಗಪುರದವರು ।
ಯಾವಾಗಲಾದರೂ ಅತ್ತ ಕಡೆಗೆ ಬಂದರೂ । ಅವಶ್ಯ ದರ್ಶನವೀಯಬೇಕು ॥ 88

ಯಾತ್ರೆ ಮಾಡುತ್ತ ಅತ್ತ ಕಡೆಗೆ । ಬಂದರೆ ಬರಬೇಕು ನಮ್ಮ ಮನೆಗೆ ।
ಪುನರ್ದರ್ಶನವಿತ್ತೆಮಗೆ । ನಮ್ಮ ಅಲ್ಪ ಸೇವೆಯ ಸ್ವೀಕರಿಸಬೇಕು ॥ 89

ಇರಲಿ ನಮ್ಮ ನೆನಪು ನಿಮಗೆ । ನಿಮ್ಮಡಿಗಳು ಸ್ಪರ್ಶವಾಗಲೆಮ್ಮ ಮನೆಗೆ ।
ಇದೇ ನನ್ನ ವಿನಂತಿ ನಿಮಗೆ । ನಾರಾಯಣನೀ ಇಚ್ಛೆ ಪೂರ್ಣಗೊಳಿಸಲಿ ॥ 90

ಹತ್ತೊಂಭತ್ತು ನೂರಾ ಆರರಲ್ಲಿ । ಉತ್ತರ ಕಾಶಿಯ ಕೆಳಬದಿಯಲ್ಲಿ ।
ಮಾತುಕತೆ ನಡೆಯಿತು ಪರಸ್ಪರರಲ್ಲಿ । ಈ ರೀತಿ ಸ್ನೇಹಯುತವಾದದ್ದು ॥ 91

ಪರಸ್ಪರರ ಇರುವ ಸ್ಥಳಗಳನು । ಇಬ್ಬರೂ ಕೇಳಿಕೊಂಡರದನೆಲ್ಲವನು ।
ನೋಡಿ ಹತ್ತಿರ ಬಯಲು ಬಂದುದನು । ಅನ್ಯೋನ್ಯರ ಬಿಟ್ಟು ಹೊರಟರು ॥ 92

ಕಳೆದು ಹೋದಾಗ ಐದು ವರ್ಷಗಳು । ಸಾಯಿ ಸಮಾಗಮದ ಸಮಯ ಬರಲು ।
ಭಾಯೀಜಿಗೆ ಭೆಟ್ಟಿಯಾಗಲು । ಮನ ತಳಮಳಿಸತೊಡಗಿತು ॥ 93

ಸನ್ ಹತ್ತೊಂಭತ್ತು ನೂರಾ ಹನ್ನೊಂದಕೆ । ಸ್ವಾಮೀಜಿ ಬಂದರು ನಾಗಪುರಕೆ ।
ಕೇಳಿ ಆನಂದವಾಯಿತು ಮನಕೆ । ಪವಿತ್ರ ಸಾಯಿನಾಥರ ಚರಿತೆಯನು ॥ 94

ಭಾಯೀಜಿಕೊಟ್ಟರು ಶಿಫಾರಸು ಪತ್ರ । ಸುಖವಾಗಿ ತಲುಪಿರಿ ಶಿರಡೀ ಕ್ಷೇತ್ರ ।
ಹೀಗೆ ಯೋಜನೆ ಹಾಕಿಕೊಂಡು ಸಮಗ್ರ । ಸ್ವಾಮೀಜಿ ನಾಗಪುರ ಬಿಟ್ಟರು ॥ 95

ಅವರಿಳಿದಾಗ ಮನಮಾಡದಲ್ಲಿ । ಕೋಪರಗಾವದ ಗಾಡಿ ಸಿದ್ಧವಾಗಿತ್ತಲ್ಲಿ ।
ಹೊರಟರು ಕುಳಿತು ಟಾಂಗಾದಲ್ಲಿ । ದರ್ಶನಕೆ ಆನಂದ ನಿರ್ಭರರಾಗಿ ॥ 96

ಎಲ್ಲಿಯೇ ಹೋದರೂ ಸಾಧುಗಳ ವರ್ತನ । ಅಥವಾ ಅವರ ಇರುವು-ಚಲನ ।
ಒಬ್ಬರಂತೊಬ್ಬರದಿರದನ । ಅವರವರದು ಬೇರೆಯೇ ॥ 97

ಒಬ್ಬ ಸಂತನ ಆಚರಣ । ಅಗು ಇನ್ನೊಬ್ಬನಿಗಲ್ಲ ಪ್ರಮಾಣ ।
ಹಚ್ಚಲು ಯೋಗ್ಯಾಯೋಗ್ಯತೆಯ ಅನುಮಾನ । ಅದೆಂದಿಗೂ ಸಾಧನವಾಗಲಾರದು ॥ 98

ಮೊದಲು ಹೋಗುವಾಗ ಸಂತದರ್ಶನಕೆ । ಇಂಥ ವಿವಂಚನೆಯಾದರೂ ಏತಕೆ ।
ಹೋದರೆ ಅವರ ವರ್ತನೆ ನೋಡುವುದಕೆ । ಆಗುವರು ನಿಜಕಲ್ಯಾಣದಿಂದ ವಂಚಿತರು ॥ 99

ಸ್ವಾಮೀಜಿಯ ಮನದಲಿ । ತರ್ಕಕುತರ್ಕಗಳೇಳುತಲಿ ।
ಶಿರಡಿಯ ನಿಶಾನಿ ದೂರದಿಂದ ಕಾಣುತಲಿ । ಸ್ವಾಮಿಯ ಕಲ್ಪನೆಗಳು ನಡೆದವು ॥100

ಅವರೊಡನಿದ್ದ ಜನರಿಗೆ । ದೂರದಿಂದ ಬೀಳಲು ದೃಷ್ಟಿಗೆ ।
ಆ ಮಶೀದಿಯ ಮೇಲಿನ ನಿಶಾನಿಗೆ । ಪ್ರೇಮದಿಂದ ವಂದನೆ ಮಾಡಿದರು ॥ 101

ಇನ್ನು ಮೇಲಾಗುವದು ಸಾಯಿಯ ದರ್ಶನ । ಅದರಿಂದಾಯಿತು ಉತ್ಕಂಠಿತ ಮನ ।
ಆದರವನಿಗೆ ಎದುರಿಗಿರುವ ನಿಶಾನೆ । ಅದನ್ನೂ ಆತ ಸಹಿಸದಾದ ॥ 102

ನಿಶಾನೆ ದರ್ಶನದಿಂದ ಪ್ರೇಮ ಸ್ಫುರಿಸುವದು । ಇದಂತೂ ಎಲ್ಲರಿಗೂ ತಿಳಿದಿರುವದು ।
ಇದು ಭಕ್ತಿ ಪ್ರೇಮದ ಲಕ್ಷಣವಾಗಿರುವದು । ಅಂಥ ವಿಲಕ್ಷಣವೇನದರಲಿ ॥ 103

ಆದರೆ ಈ ಸ್ವಾಮಿಯ ಕುತ್ಸಿಕ ಮನಸಿಗೆ । ಆ ನಿಶಾನಿಯ ದೂರದಿಂದ ನೋಡಿದಾಗ್ಯೆ ।
ನಾನಾತರದ ಕಲ್ಪನೆಗಳಿಗೆ । ಎಡೆಗೊಟ್ಟಿತು ಅವನ ಮನ ॥ 104

ಪತಾಕೆಗಳಿನಿಷ್ಟ ಪಡುವದು । ಎಂಥ ಸಾಧುತ್ವದ ಕಲ್ಪನೆ ಇದು ।
ದೇವಸ್ಥಾನದ ಮೇಲೆ ನಿಶಾನೆ ಹಚ್ಚುವದು । ಇದಂತೂ ಸಾಧುತ್ವದ ಹೀನತನ ॥ 105

ಸಾಧುವು ಇದರಿಂದ ಬೇಡುವಂತಿದೆ ಮರ್ಯಾದೆ ಎನಿಸುವದು । ಇದಂತೂ ಕೇವಲ ಲೋಕೇಷಣೆಯಾಗಿರುವದು ।
ಇಂಥವನ ಸಾಧುತ್ವ ಮನಸಿಗೆ ಬಾರದು । ಇದು ಅವನಲ್ಲಿರುವ ಕೊರತೆಯನು ತೋರುವದು ॥ 106

ಸಾರಾಂಶವೆಂದರೆ ಮನದ ಗ್ರಹಿಕೆಯಿದ್ದಂತೆ । ಸಾಧು ನಿರ್ಣಯದಲ್ಲೂ ಆಗ್ರಹ ಅದರಂತೆ ।
ಸ್ವಾಮಿಯ ಮನದ ನಿಗ್ರಹವಾಯಿತು । ನನಗಿವನ ಅನುಗ್ರಹ ಬೇಕಿಲ್ಲ ॥ 107

ಸುಮ್ಮನೇ ಬಂದೆ ಇಲ್ಲಿಯವರೆಗೆ । ಬಹಳ ಅನಾದರ ಹುಟ್ಟಿತು ಸ್ವಾಮಿಗೆ ।
ನಿರ್ಧರಿಸಿದನಲ್ಲಿಂದ ಆಗಿಂದಾಗ್ಯೆ । ತಿರುಗಿ ಹೊರಟು ಬಿಡುವದೆಂದು ॥ 108

ಲೋಕೇಷಣದ ದುರಭಿಮಾನ । ಸಾಧುವಿಗೇಕೆ ಬೇಕಿಂಥ ಮಾನ ।
ಇದಕಿಂತ ಬೇರೆ ಅನುಮಾನ । ಈ ನಿಶಾನೆಗಳಿಂದೆನಗೆ ಬಾರದು ॥ 109

ನಿಶಾನೆಯಿಂದ ತನ್ನ ದೊಡ್ಡಿಸ್ತನವನು । ಸಾಧುವು ಎಲ್ಲರ ನಿದರ್ಶನಕ್ಕೆ ತರುವನು ।
ಇದೇ ತರುತಿದೆ ಸಂತತನಕೆ ಹೀನತ್ವವನು । ಇಂಥವನ ದರ್ಶನಕೆ ಏನೆಂದು ಹೋಗಲಿ ॥ 110

ತೆಗೆದುಕೊಳ್ಳುವುದರಿಂದಿಂಥವರ ದರ್ಶನ । ಹೇಗೆ ಸಮಾಧಾನ ಹೊಂದುವದು ಮನ ।
ಇದಂತೂ ಡಂಭ ಧ್ವಜ ಪ್ರದರ್ಶನ । ಇದರಿಂದ ಮನವೆಂದೂ ತಣಿಯದು ॥ 111

ಬಂದಂತೆ ತಿರುಗಿ ಹೋಗಿಬಿಡುವದು । ಮನಸಿನಲಿ ಹೀಗೆಂದುಕೊಂಡು ।
ಆದರೂ ಆ ವಿಚಾರಕ್ಕೂ ಮನಸೊಪ್ಪದು । ನಿಜವಾಗಿ ಕಷ್ಟದಲ್ಲಿ ಸಿಕ್ಕುಬಿದ್ದೆ ॥ 112

ಜೊತೆಗಿದ್ದವರೆಂದರವಗೆ । ಇಷ್ಟು ದೂರ ಬಂದಿರೇಕೆ ಇಲ್ಲಿಯವರೆಗೆ ।
ಕೇವಲ ನಿಶಾನೆಗಳಿಂದ ಚಿತ್ತ ವೃತ್ತಿಗೆ । ಅಸ್ಥಿರತೆ ಬಂದುದು ಹೇಗೆ ॥ 113

ಈಗ ನಾವು ಹತ್ತಿರವೇ ಬಂದಿರುವೆವು । ರಥ ಪಲ್ಲಕ್ಕಿ ಕುದುರೆ ಎಲ್ಲವೂ ।
ಕಂಡಾಗ ಆ ಎಲ್ಲ ಸರಂಜಾಮುವೂ । ನಿಮ್ಮ ಮನವೆಷ್ಟು ತಳಮಳಿಸೀತು ॥ 114

ಕೇಳಿ ಸ್ವಾಮಿ ಮತ್ತಷ್ಟು ಅಸ್ವಸ್ಥ ಚಿತ್ತ । ನಗಾರಿ ಪಲ್ಲಕ್ಕಿ ಕುಧುರೆಗಳಿರುವಂಥ ।
ಬೇಕಾದಷ್ಟು ಸಾಧುಗಳ ಕಂಡಿರುವೆನಿಂಥ । ಇಂಥವರ ದೊಡ್ಡಿಸ್ತನವೇ ಹೆಚ್ಚು ॥ 115

ಹೀಗೆ ಮನದಲಿ ವಿಚಾರ ಬಂದು । ಸೋಮದೇವಜಿ ತಿರುಗಿ ಹೋಗಲೆಂದು ।
ದಾರಿ ಹಿಡಿದ ನದಿಯದು । ಶಿರಡಿಯ ವಿಚಾರವೇ ಸರಿ ಎನಿಸದೆ ॥ 116

ಆಗ ಜೊತೆಗಿದ್ದ ದಾರಿ ಪ್ರವಾಸಿಗಳು । ಅವನಿಗೆ ಒತ್ತಾಯ ಮಾಡತೊಡಗಿದರು ।
ತಾವು ಇಲ್ಲಿಯವರೆಗೆ ಬಂದವರು । ಹಿಂದಿರುಗಿ ಹೋಗುವದು ಸರಿಯಲ್ಲವೆಂದು ॥ 117

ಬಂದಂತೆ ಇನ್ನು ಮುಂದೆ ನಡೆಯಿರಿ । ಅಂಥಿಂಥ ತರ್ಕಗಳ ಬಿಟ್ಟು ಬಿಡಿರಿ ।
ಮಶೀದಿಯ ಮೇಲೆ ಹಾರುವ ನಿಶಾನಿ ನೋಡಿದಿರಿ । ಅದರ ಸಂಬಂಧವಿಲ್ಲ ಸಾಧುವಿಗೆ ॥ 118

ಈ ಸಾಧುವಿಗೆ ಬೇಕಿಲ್ಲ ನಿಶಾನೆ । ಬೇಕಿಲ್ಲ ಅವಗೆ ಲೋಕೇಷಣ ।
ಗ್ರಾಮಸ್ಥರಿಗೇ ಎನಿಸಿ ಇದು ಭೂಷಣ । ಇದು ಅವರ ಭಕ್ತಿಯದೇ ಪ್ರಮಾಣ ॥ 119

ನೀವು ನಿಶಾನಿಗಳ ನೋಡಬೇಡಿರಿ । ಹೋಗಿ ದರ್ಶನ ಮಾತ್ರ ತೆಗೆದು ಕೊಳ್ಳಿರಿ ।
ಬಳಿಕಲ್ಲಿ ಒಂದು ಕ್ಷಣ ನಿಲ್ಲಬೇಡಿರಿ । ಹೋಗಿಬಿಡಿರಿ ಹಿಂದಿರುಗಿ ॥ 120

ಶಿರಡಿ ಹತ್ತಿರ ಬಂತು ಅಷ್ಟರಲಿ । ಎನಿಸಿತು ಜನರ ಉಪದೇಶ ಕೇಳಿ ।
ತೆಗೆದು ಬಿಡಬೇಕು ಮನದ ಮಳಮಳಿ । ಮತ್ತೆ ಹಳಹಳಿಸುವದು ಬೇಡ ॥ 121

ಹೀಗೆಂದವ ಶ್ರೀ ಸಮರ್ಥ ದರ್ಶನದಿಂದ । ಸ್ವಾಮಿ ಅಲ್ಲಿಯೇ ಕರಗಿ ಹೋದ ।
ಕಣ್ಣೀರುಕ್ಕಿತು ಪ್ರೇಮದಿಂದ । ಕಂಠ ಸದ್ಗದವಾಯಿತು ॥ 122

ಚಿತ್ತವಾಯಿತು ಸುಪ್ರಸನ್ನ । ನಯನ ಸಂತಸದಿಂದ ಸುಖ ಸಂಪನ್ನ ।
ಯಾವಾಗವರ ಚರಣ ರಜ ಸ್ನಾನ । ಆದೀತೆನಗೆಂದಾಯಿತವಗೆ ॥ 123

ನೋಡಿ ಆ ಅಲೌಕಿಕ ರೂಪವನಿಂತು । ಮನ ನಯನಗಳು ಅಲ್ಲಿಯೇ ನೆಟ್ಟು ।
ಕಣ್ಣವೆ ಬಡಿಯದೆ ನೋಡುತ್ತ ನಿಂತು । ಮೋಹದಲಿ ಸಿಕ್ಕು ಬಿದ್ದರು ॥ 124

ಮನದ ಕುತರ್ಕಗಳು ಅರಗಿದವು । ಚಿತ್ತ ವೃತ್ತಿಗಳು ದರ್ಶನಾನಂದಲಿ ಕರಗಿದವು ।
ನಯನದಲಿ ತುಂಬಿತು ಸಗುಣ ರೂಪವು । ಸ್ವಾಮಿ ತಲ್ಲೀನನಾಗಿ ಬಿಟ್ಟ ॥ 125

ಮಹಾನುಭಾವನ ಕಣ್ಣಿಂದ ನೋಡಲು । ಸೋಮದೇವನಿಗೆ ಆನಂದ ಬಲು ।
ಆತ್ಮಾರಾಮನು ಅರಾಮ ಹೊಂದಲು । ಎನಿಸಿತಲ್ಲಿಯೇ ಇರಬೇಕೆಂದು ॥ 126

ದರ್ಶನದಿಂದ ವಿಕಲ್ಪ ಇಂಗಿ । ಬುದ್ಧಿ ಅಲ್ಲಿಯೇ ಸ್ಥಿರವಾಗಿ ।
ದ್ವೈತ ಭಾವವೆಲ್ಲ ಕರಗಿ । ಸಬಾಹ್ಯ ಐಕ್ಯರಾದರು ॥ 127

ಬಾಯಿಗೆ ನಿಃಶಬ್ದದ ಮೌನ । ನಿಮೇಷೋನ್ಮೇಷರಹಿತ ನಯನ ।
ಅಂತರ್ಬಾಹ್ಯ ಚೈತನ್ಯ ಘನ । ಸಮಾಧಾನದಲಿ ಸಮರಸರಾದರು ॥ 128

ನಿಶಾನ ದರ್ಶನದಿಂದ ಬಾಡಿದರು । ಮುಂದೆ ಪ್ರೇಮೋದ್ರೇಕದಲ್ಲಿ ನೆನೆದರು ।
ಸಾತ್ವಿಕ ಅಷ್ಟಭಾವಗಳಲಿ ಮುಳುಗಿದರು । ಬಾಬಾರ ಪ್ರೇಮದಿಂದಾವೃತರಾದರು ॥ 129

ಎಲ್ಲಿ ಮನ ಪೂರ್ಣತೊಡಗಿತು । ಅದೇ ತಮ್ಮ ಮೊದಲ ಸ್ಥಾನವಿತ್ತು ।
ನಿಜಗುರುಗಳ ಈ ಮಾತು । ನೆನಪಾಗಿ ಪ್ರೇಮವುಕ್ಕಿತು ಸ್ವಾಮಿಯದು ॥ 130

ಸ್ವಾಮಿ ಮುಂದೆ ಸರಿಯುತಿರುವಾಗ ಮೆಲ್ಲಮೆಲ್ಲಗೆ । ಬಾಬಾರ ಸಿಟ್ಟು ಬೆಳೆಯತೊಡಗಿತು ಹಾಗೇ ।
ಬೈಗುಳ ಮಳೆಗರೆದರು ಶಿಷ್ಯರಿಗೆ । ಆಗ ಆವನ ಪ್ರೀತಿಯಾಗುತಿತ್ತು ದ್ವಿಗುಣಿತ ॥ 131

ಸಮರ್ಥ ಬಾಬಾರ ಕರ್ತೃತ್ವ ಅತರ್ಕ್ಯ । ಅವರದೆಲ್ಲ ವಿಲಕ್ಷಣ ಕಾರ್ಯ ।
ನರಸಿಂಹಾವತಾರದ್ದೇ ಪ್ರತಿ ಚರ್ಯ । ಸಂಪೂರ್ಣವಾಗಿ ಇಳಿದಿತ್ತಲ್ಲಿ ॥ 132

"ನಮ್ಮ ತೋರಿಕೆಯೆಲ್ಲ ಇರಲಿ ನಮ್ಮಲ್ಲಿ । ನಡೆ ಹೊರಡು ಬರಬೇಡ ನೀನಿಲ್ಲಿ ।
ಕಾಲಿಟ್ಟರೆ ನೋಡಿಕೋ ನನ್ನ ಮಶೀದಿಯಲ್ಲಿ । ಇನ್ನು ಮುಂದೆ ತಿರುಗಿ ಮತ್ತೆ ॥ 133

ಮಶೀದಿಯ ಮೇಲೆ ಹಚ್ಚುವ ನಿಶಾನ । ಏತಕ್ಕೆ ಬೇಕಂಥವರ ದರ್ಶನ ।
ಇದೇ ಏನು ಸಂತರ ಲಕ್ಷಣ । ನಡೆ ಇಲ್ಲೊಂದು ಕ್ಷಣ ನಿಲ್ಲಬೇಡ" ॥ 134

ಬಳಿಕ ಸಾಶಂಕ ಮನದಿಂದ । ಸಭಾಮಂಡಪದಲ್ಲಿ ಸ್ವಾಮಿ ಬಂದ ।
ದೂರದಿಂದ ಸಾಯಿಯ ನೋಡಿದ । ಆಗ ಸ್ವಾಮಿಗೆ ಸುಮ್ಮನಿರಲಾಗಲೊಲ್ಲದು ॥ 135

ತನ್ನ ವಿಚಾರದ್ದೇ ಪ್ರತಿಧ್ವನಿ ಇದು । ಶಬ್ದಶಃ ಕಿವಿಯ ಮೇಲೆ ಬಿದ್ದು ।
ಸ್ವಾಮಿ ಅಲ್ಲಿಯೇ ನಾಚಿ ನೀರಾಗಿದ್ದು । ಮಹಾರಾಜರು ಅಂತರ್ಜ್ಞಾನಿಗಳೆಂದು ತಿಳಿದರು ॥ 136

ಇರುವೆವು ನಾವೆಷ್ಟು ಅಪ್ರಬುದ್ಧ । ಮಹಾರಾಜರಾದರೋ ಎಂಥ ಪ್ರಬುದ್ಧ ।
ನನ್ನ ಆ ಕಲ್ಪನೆಗಳೆಷ್ಟು ವಿರುದ್ಧ । ಎಂಥ ಶುದ್ಧ ಅಂತರವಿದು ॥ 137

ಸಾಯಿ ಕೆಲವರ ಅಪ್ಪಿಕೊಳ್ಳುವರು । ಕೆಲವರಿಗೆ ಕರಸ್ಪರ್ಶ ಮಾಡುವರು ।
ಕೆಲವರಿಗೆ ಆಶ್ವಾಸನೆ ಈಯುವರು । ಕೃಪಾವಲೋಕನ ಕೆಲವರಿಗೆ ॥ 138

ಕೆಲವರತ್ತ ನಗುಮುಖದಿಂದ ನೋಡುವರು । ಕೆಲವು ದುಃಖಿತರ ಸಂತೈಸುವರು ।
ಕೆಲವರಿಗೆ ಉದೀ ಪ್ರಸಾದ ಕೊಡುವರು । ಎಲ್ಲರ ಸಮಾಧಾನ ಮಾಡುವರು ॥ 139

ಹೀಗಿರುವಾಗ ನನ್ನ ಮೇಲಿನ ಕ್ರೋಧ । ಎನಿಸುವದು ಇತ್ತದು ನನ್ನ ವರ್ತಾನಾನುರೋಧ ।
ಕ್ರೋಧವಲ್ಲದು ನನಗಿತ್ತರು ಬೋಧ । ಅದೇ ಆನಂದದಾಯಕವಾದೀತು ॥ 140

ಮುಂದೆ ಹಾಗೇ ಆಯಿತು । ಬಾಬಾರ ಸಹವಾಸದಲಿ ಮನರಮಿಸಿತು ।
ಸಾಯಿ ಕೃಪೆಯಿಂದವರ ಮನ ನಿರ್ಮಲವಾಯಿತು । ನಿರಂತರ ಅಲ್ಲಿಯೇ ಉಳಿದರದರಿಂದ ॥ 141

ಸಾಯಿ ಭಕ್ತಿ ಬೀಜ ಪ್ರಭಾವದಲಿ । ದುರ್ವಾಸನೆ ಮಾತ್ಸರ್ಯಗಳು ಕರಗಲಿ ।
ಶಾಂತಿ ಶ್ರೀ ಧೈರ್ಯಗಳು ಮೊಳೆಯಲಿ । ಕೃತಕಾರ್ಯರನ್ನಾಗಿಸಲಿ ನಿಜಭಕ್ತರ ॥ 142

ಗಂಧರ್ವ ಯಕ್ಷ ಸುರಾಸುರ । ಇವುಗಳಿಂದ ತುಂಬಿದೆ ಈ ಚರಾಚರ ।
ಆ ಅಖಿಲ ವಿಶ್ವದಲೀ ವಿಶ್ವಂಭರ । ನಿರಂತರ ತುಂಬಿರುವನಾದರೂ ॥ 143

ತಿಳಿಯದೇ ಇದ್ದರೆ ಆಕಾರ । ಉಳಿದಿದ್ದರೆ ಸದೈವ ನಿರಾಕಾರ ।
ನಾವು ಮಾನವರಿರುವಾಗ ಸಾಕಾರ । ಅವರಿಂದೀ ಉಪಕಾರ ನಮಗಾಗುತಿರಲಿಲ್ಲ ॥ 144

ತಾತ್ಪರ್ಯ ಸಾಯಿ ಲೀಲಾವಿಗ್ರಹಿಗಳಾಗಿ ಬರದೇ । ಈ ಲೋಕ ಸಂಗ್ರಹವ ಮಾಡದೇ ।
ಅಥವಾ ದುಷ್ಟದುರ್ಜನಮತ ನಿಗ್ರಹಿಸದೇ । ಇದ್ದಿದ್ದರೆಲ್ಲಿ ಈ ಭಕ್ತಾನುಗ್ರಹವಿರುತಿತ್ತು ॥ 145

ಈ ಅಧ್ಯಾಯ ಮುಗಿಯುತ್ತ ಬಂತು । ಈಗ ನನಗೊಂದು ಸಂಗತಿ ನೆನಪಾಯಿತು ।
ಅದು ನಿಮಗೆ ಹಿತಾವಹವಾದೀತು । ಈ ಸಾಯಿ ಸದುಪದೇಶದ ಮಾದರಿ ॥ 146

ವೃತ್ತಾಂತವು ಅತಿ ಚಿಕ್ಕದಿರುವದು । ನೆನಪಿಟ್ಟವನಿಗೆ ಕಲ್ಯಾಣವಾಗುವದು ।
ಆದಕೆ ನನ್ನತ್ತ ಒಂದು ಕ್ಷಣ ಲಕ್ಷ ಕೊಡುವದು । ಎಂದು ಶ್ರೋತೃಗಳ ಬೇಡಿಕೊಳ್ಳುವೆ ॥ 147

ಒಮ್ಮೆ ಮ್ಹಾಳಸಾಪತಿಯವರು । ಜೊತೆಗೆ ನಾನಾ ಸಾಹೇಬರಿದ್ದರು ।
ಇಬ್ಬರೂ ಮಶೀದಿಯಲ್ಲಿ ಕುಳಿತಿದ್ದರು । ಆಗೇನು ಚಮತ್ಕಾರ ನಡೆಯಿತದ ಕೇಳಿ ॥ 148

ಯಾರೋ ಶ್ರೀಮಂತ ಗೃಹಸ್ಥರು । ವೈಜಾಪುರದ ನಿವಾಸಿಗಳವರು ।
ಪರಿವಾರದ ಜೊತೆ ಅಲ್ಲಿ ಬಂದಿದ್ದರು । ಸಾಯಿ ಸಮರ್ಥರ ದರ್ಶನೋತ್ಸುಕರಾಗಿ ॥ 149

ಸ್ತ್ರೀಯರು ಘೋಷಾದಲ್ಲಿದ್ದದ ನೋಡಲು । ನಾನಾ ಸಂಕೋಚಗೊಂಡರು ಮನದೊಳು ।
ಬಂದವರ ಸಂತೋಷ ಪಡಿಸಲು । ತಾವೇ ಎದ್ದವರಿಗೆ ಅವಕಾಶ ಮಾಡಿಕೊಡಬೇಕೆನಿಸಿತು ॥150

ಹೀಗೆಂದು ನಾನಾ ಏಳಬೇಕೆನುವಾಗಲೇ । ಬಂದವರು ತಾವೇ ಬರುವರು ಮೇಲೆ ।
ನೀ ಸ್ವಸ್ಥ ಚಿತ್ತದಿಂದ ಕುಳಿತಿರು ಅಲ್ಲೇ । ಎಂದು ಬಾಬಾ ಅವನ ತಡೆದರು ॥ 151

ಅವರೂ ದರ್ಶನಕ್ಕೆ ಬಂದಿರುವರು । ಬರಲು ಅಡ್ಡಿ ಇಲ್ಲ ಬರಬೇಕವರು ।
ಎಂದು ಯಾರೋ ಹೇಳಿದರು । ಅವರು ಬಂದು ಸಾಯಿಗೆ ವಂದಿಸಿದರು ॥ 152

ಅವರಲ್ಲಿಯ ಸ್ತ್ರೀಯೊಬ್ಬಳು । ವಂದಿಸುವಾಗ ಬುರಕಿ ಸರಿಸಿದಳು ।
ಆ ಅತಿ ಸೌಂದರ್ಯವ ನೋಡಲು । ನಾನಾ ಮನದಲಿ ಮೋಹಿತರಾದರು ॥ 153

ಜನರೆದುರು ಕಷ್ಟ ನೋಡುವದು । ನೋಡದಿರಲಾಗಲೊಲ್ಲದು ।
ತಿಳಿಯದಾಯಿತು ಹೇಗೆ ಮಾಡಬೇಕೆಂದು । ಮೋಹದಾವೇಗ ತಡೆಯದು ॥ 154

ಮನಕೆ ಬಲು ನಾಚಿಕೆ ಬಾಬಾರ ಎದುರು । ಅದರಿಂದ ಮುಖವೂ ಮೇಲೆತ್ತರು ।
ನಾನಾ ಕತ್ತರಿಯಲಿ ಸಿಕ್ಕಂತಾದರು । ದೃಷ್ಟಿ ಆ ಕಡೆಗೇ ಓಡುತಿರುವದರಿಂದ ॥ 155

ಇದಾಗಿತ್ತು ನಾನಾರ ಅಂತಃಸ್ಥಿತಿ । ಸರ್ವಾಂತರ್ಯಾಮಿ ಬಾಬಾರಿಗೀ ಸಂಗತಿ ।
ತಿಳಿದಿತ್ತಾದರೂ ಇತರರಿಗೇನದರ ಪ್ರತೀತಿ । ಅದನು ಶಬ್ದದಲಿ ಹೇಗಿಳಿಸುವದೆಂದವರು ॥ 156

ಹೀಗೆ ನಾನಾರ ವೃತ್ತಿಯಾಗಿದ್ದು । ಬಾಬಾ ಮನದಲ್ಲಿ ತಿಳಿದುಕೊಂಡು ।
ಆ ಮತಿಯನು ಸ್ವಸ್ಥಾನಕ್ಕೆ ತರಲೆಂದು । ಬಾಬಾ ಮಾಡಿದ ಉಪದೇಶವ ಕೇಳಿ ॥ 157

"ನಾನಾ ಈ ಮನದ ಗೊಂದಲವೇಕೆ । ನಡೆಯಗೊಡು ಅದರದರ ನಿಜ ಧರ್ಮದಂತದಕೆ ।
ಸುಮ್ಮನೆ ಅಡ್ಡಿಯಾಗುವದು ಅದಕೆ ಏಕೆ । ಅದರಿಂದ ಏನೇನೂ ಹಾನಿ ಇಲ್ಲ ॥ 158

ಬ್ರಹ್ಮದೇವನು ಸೃಷ್ಟಿ ರಚಿಸಿರಲು । ನಾವು ಅದರ ಕೌತುಕ ಮಾಡದಿರಲು ।
ಕಾರಣವಾದೀತು ರಸಿಕತೆ ವ್ಯರ್ಥವಾಗಲು । ಇರುತಿರುತ ಎಲ್ಲ ಸರಿ ಹೋಗುವದು ॥ 159

ಯಾವಾಗ ಮುಂದಿನ ದ್ವಾರ ತೆರೆದಿರುವದು । ಆಗ ಹಿಂಬಾಗಿಲಿನತ್ತೇಕೆ ಹೋಗುವದು ।
ಎಲ್ಲಿ ಅಂತರಂಗ ಶುದ್ಧವಿರುವದು । ಅಲ್ಲಿ ಯಾವ ತೊಂದರೆಯೂ ಇರುವುದಿಲ್ಲ ॥ 160

ಮನದಲಿಲ್ಲ ಕೆಟ್ಟ ಭಾವನೆಯು । ಅಲ್ಲಿ ಯಾರಿಂದೇನು ಮಚ್ಚುಮರೆಯು ।
ದೃಷ್ಟಿಯ ಕರ್ತವ್ಯ ಮಾಡುತಿದೆ ದೃಷ್ಟಿಯು । ಅಲ್ಲಿ ಯಾರ ದಾಕ್ಷಿಣ್ಯವೇತಕೆ" ॥ 161

ಅಲ್ಲಿದ್ದರು ಮಾಧವರಾವ । ಅವರದು ಮೊದಲೇ ಚಿಕಿತ್ಸಕ ಸ್ವಭಾವ ।
ನಿಜಜಿಜ್ಞಾಸೆಯ ಪೂರ್ತಿಗಾಗಿ ಅವ । ಆ ಮಾತಿಗೆನರ್ಥವ ಕೇಳಿದ ॥ 162

ಮಾಧವರಾಯನು ಕೇಳಲು ಹೀಗೆ । ನಾನಾ ಎಂದ ಸುಮ್ಮನಿರುವಾಗ್ಯೆ ।
ತಿರುಗಿ ಹೋಗುವಾಗ ವಾಡೆಗೆ । ನಾನೆಲ್ಲ ಬಾಬಾರ ಮನೋಗತವ ಹೇಳುವೆ ॥ 163

ಕುಶಲ ಕ್ಷೇಮದ ವಾರ್ತೆ ಮುಗಿಸಿ । ಸಾಯಿ ಸಮರ್ಥರಿಗೆ ಅಭಿವಂದಿಸಿ ।
ಹೊರಟರು ಇಬ್ಬರೂ ಕೂಡಿಸಿ । ನಾನಾ ತನ್ನ ಮನೆಗೆ ಹೊರಟಾಗ ॥ 164

ಕೂಡಲೇ ಮಾಧವರಾಯರು ನಾನಾಗೆ ಕೇಳಿದ್ದು । "ನಾನಾ ಬರುಬರುತ್ತ ಸರಿಹೋಗುವದು" ।
ಮೊದಲಿನಿಂದ ಬಾಬಾರ ನುಡಿಯಿದು । ಇದರ ಸ್ಪಷ್ಟಾರ್ಥವ ಹೇಳುವಿರಾ ॥ 165

ಅರ್ಥ ಹೇಳಲು ಮನಸಾಗದು । ಬಹಳ ಹಾರಿಕೆಯ ಮಾತು ನಡೆದು ।
ಅದರಿಂದ ಮಾಧವರಾಯರಿಗೆ ಮತ್ತಷ್ಟು ಸಂಶಯ ಬಂದು । ಮನಸಿಗೆ ಸಮಾಧಾನವಿಲ್ಲದಾಯಿತು ॥ 166

ಬಳಿಕ ಬಿಚ್ಚು ಮನಸ್ಸಿನಿಂದ । ನಾನಾ ಸಂಗತಿಯ ಅಲ್ಲಿ ನಡೆದುದ ।
ಎಲ್ಲವನೂ ಮಾಧವರಾಯರಿಗೆ ಹೇಳಿದ । ಅದರಿಂದ ಆ ಒಗಟು ಒಡೆಯಿತು ॥ 167

ಅಬ್ಬಾ ಬಾಬಾ ಎಂಥ ದಕ್ಷರು । ಯಾರದು ಎಲ್ಲೇ ಲಕ್ಷ ಹೋದರೂ ।
ಅದಕೆಲ್ಲ ಅವರು ಅಂತಃಸಾಕ್ಷಿಯಾಗಿರುವರು । ಎಲ್ಲವೂ ಅವರಿಗೆ ಪ್ರತ್ಯಕ್ಷ ॥ 168

ಈ ಚಿಕ್ಕ ಹೊಸಬಗೆಯ ವಾರ್ತೆ ಹೀಗೆ । ಕೇಳಲು ಆಶ್ಚರ್ಯ ಶ್ರೋತೃಗಳಿಗೆ ।
ಅದರ ಮತಿತಾರ್ಥ ನೋಡಿದಾಗ್ಯೆ । ಸ್ಥೈರ್ಯ ಗಂಭೀರತೆಗಳು ಅತ್ಯಮೂಲ್ಯ ॥ 169

ಮನವೆಂಬುದೇ ಮೊದಲು ಚಂಚಲ । ಅದನಾಗಗೊಡಬಾರದು ಉಚ್ಛೃಂಖಲ ।
ಇಂದ್ರಿಯದ್ವಾರಗಲಿ ಖಳಬಳ । ಶರೀರ ಅದಕುತ್ಸುಕವಾಗಬಾರದು ॥ 170

ಇಂದ್ರಿಯಗಳ ವಿಶ್ವಾಸವಿರದು । ವಿಷಯಕ್ಕಾಗಿ ಅವು ಹಂಬಲಿಸುವದು ।
ಮೆಲ್ಲಮೆಲ್ಲಗೆ ಅಭ್ಯಾಸವಾಗುವದು । ಚಾಂಚಲ್ಯವೂ ನಿರಸನವಾಗುವದು ॥ 171

ಇಂದ್ರಿಯಾಧೀನರಾಗಬಾರದು । ಅವುಗಳು ಒತ್ತಿಟ್ಟರೂ ತಡೆಯದು ।
ವಿಧಿ ಪೂರ್ವಕ ಅವುಗಳ ನಿಯಂತ್ರಿಸುವದು । ಪ್ರಸಂಗವ ನೋಡಿಕೊಂಡು ॥ 172

ರೂಪವಿದು ದೃಷ್ಟಿಯ ವಿಷಯ । ವಸ್ತುವಿನ ಸೌಂದರ್ಯ ನೋಡಬೇಕಾಗಿ ನಿರ್ಭಯ ।
ಕಾರಣವೇನಲ್ಲಿ ನಾಚಿಕೆಯ । ದುರ್ಬುದ್ಧಿಗೆ ಅವಕಾಶ ಕೊಡಬಾರದು ॥ 173

ವಾಸನಾರಹಿತ ಮಾಡಿ ಮನ । ಮಾಡಿರಿ ಈಶ ಕೃತಿಯ ನಿರೀಕ್ಷಣ ।
ಸಹಜವಾಗಿಯೇ ಆಗುವದು ಇಂದ್ರಿಯ ದಮನ । ವಿಷಯ ಸೇವನೆಯ ವಿಸ್ಮರಣೆ ॥ 174

ರಥವನೊಯ್ಯಲು ಇಷ್ಟ ಸ್ಥಳಗಳಿಗೆ । ಸಾರಥಿಯೇ ಮೂಲಕಾರಣನಿರುವಹಾಗೆ ।
ಹಿತಕಾರಕ ಬುದ್ಧಿಯೂ ಹಾಗೆ । ಇಂದ್ರಿಯಾಕರ್ಷಣೆಯಲಿ ದಕ್ಷವಾಗಿ ॥ 175

ಸಾರಥಿ ಮಾಡುವ ರಥ ನಿಯಮನ । ಹಾಗೆ ಬುದ್ಧಿ ಮಾಡುವದು ಇಂದ್ರಿಯ ದಮನ ।
ತಡೆಯುವದು ಶರೀರದ ಸ್ವೈರಗಮನ । ಅನಿವಾರ ಚಂಚಲ ಮನಸಿನದು ॥ 176

ಶರೀರ ಇಂದ್ರಿಯ ಮನೋಯುಕ್ತವಾದ । ಇರುವದು ಭೋಕ್ತೃತ್ವ ಈ ಜೀವದ ।
ಅದು ಮುಗಿದಾಗ ಪ್ರಾಪ್ತವಾಗುವದು ವೈಷ್ಣವ ಪದ । ಇಂಥ ಸಾಮರ್ಥ್ಯ ಈ ಬುದ್ಧಿಯದು ॥ 177

ಚಕ್ಷುಗಳಾದಿ ಇಂದ್ರಿಯ ಸಮೂಹಗಳದು । ಭಿನ್ನ ಭಿನ್ನ ಹಯಸ್ಥಾನದಲಿದ್ದು ।
ರೂಪರಸಾದಿವಿಷಯಗಳದು । ಮಾರ್ಗ ಪ್ರವರ್ತಕವಾಗಿರುವವು ॥ 178

ಯತ್ಕಿಂಚಿತ ವಿಷಯಾಭಿಲಾಷ । ಮಾಡುವದು ಪಾರಮಾರ್ಥಿಕ ಸುಖದ ನಾಶ ।
ಅದಕೆ ತ್ಯಜಿಸಬೇಕದನು ನಿಃಶೇಷ । ಅಂದರೆಯೇ ಮೋಕ್ಷ ಸಾಧಿಸುವದು ॥ 179

ಬಾಹ್ಯೇಂದ್ರಿಯಗಳಾಗಿದ್ದರೂ ನಿವೃತ್ತ । ಅಂತಃಕರಣವಿರಲದರಲಿ ಆಸಕ್ತ ।
ಜನ್ಮ ಮರಣಗಳಿಗಿಲ್ಲ ಅಂತ । ವಿಷಯಗಳು ಅತ್ಯಂತ ಘಾತಕ ॥ 180

ಸಾರಥಿ ವಿವೇಕವುಳ್ಳವ ಸಿಕ್ಕಲ್ಲಿ । ವಿವೇಕದಿಂದ ಲಗಾಮು ಹಿಡಿದು ಕೈಯಲ್ಲಿ ।
ಇಂದ್ರಿಯವಾಜಿಗಳು ನಡೆವುದು ಕುಮಾರ್ಗದಲಿ । ಎಂದೆಂದಿಗೂ ಸಾಧ್ಯವಿಲ್ಲ ॥ 181

ಇಂಥ ಮನಃಸಮಾಧಾನ ಪಡಿಸುವ । ವಿವೇಕೀ ಕುಶಲ ದಕ್ಷನಾದವ ।
ಲಭಿಸಿದರೆ ಸಾರಥಿ ಚತುರನಾದವ । ವಿಷ್ಣು ಪದವಿನ್ನು ದೂರವಿಲ್ಲ ॥ 182

ಅದೇ ಪದ ಪರಬ್ರಹ್ಮ । 'ವಾಸುದೇವ'ನೆಂದದಕೆ ಬೇರೆ ನಾಮ ।
ಅದೇ ಸರ್ವೋತ್ಕೃಷ್ಟ ಪದಪರಮ । ಪರಂಧಾಮ ಪರಾತ್ಪರ ॥ 183

ಈ ಅಧ್ಯಾಯ ಇಲ್ಲಿಗೆ ಮುಗಿಯಿತು । ಮುಂದಿನಧ್ಯಾಯ ಸವಿ ಇದಕ್ಕಿಂತೂ ।
ಸದ್ಭಕ್ತರ ಮನ ಮುದಗೊಳಿಸೀತು । ಕ್ರಮವಾಗಿ ಅದ ಕೇಳಿರಿ ॥ 184

ಇರಲಿ ಕೊನಗೆ ಜಗಚ್ಚಾಲಕ । ಸದ್ಗುರುವೇ ಬುದ್ಧಿ ಪ್ರೇರಕ ।
ಅವನ ಚರಣದಲಿ ಅಭಾರಪೂರ್ವಕ । ಹೇಮಾಡ ಶಿರವ ಬಾಗಿಸುವ ॥ 185

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೇ ।
ಶ್ರೀ ಸಾಯಿಸಮರ್ಥ ಸಚ್ಚರಿತೇ । ಸಂತ ಪರೀಕ್ಷಣ ಮನೋನಿಗ್ರಹಣಂ ನಾಮ ಏಕೋನಪಂಚಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದುಗರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐವತ್ತು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜನ್ಮದಾತರು ತಾಯಿ ತಂದೆ । ಅವರ ಉಪಕಾರಕ್ಕೆಲ್ಲಿ ಎಣೆ ಇದೆ ।
ನಾನವರುದರದಿ ಹುಳುವಾಗಿ ಹುಟ್ಟಿದೇ । ಮಾನವ ದೇಹವನಿತ್ತರವರೆನಗೆ ॥ 1

ಮಾತೆಯ ಉದರಕ್ಕೆ ಶೂಲಾಗಲಿಲ್ಲ । ಕುರುಡ ಕುಂಟ ಒಕ್ಕಣ್ಣನಾಗಲಿಲ್ಲ ।
ಕಿವುಡ ಮೂಕನಾಗಿ ಹುಟ್ಟಲಿಲ್ಲ । ಹುಟ್ಟಿದೆ ಪೂರ್ಣ ಸುಪಿಂಡವಾಗಿ ॥ 2

ದೇವರು ವಂದಿಸುವರಾರ ಚರಣ । ಅಂಥ ಆ ಉತ್ತಮ ಬ್ರಾಹ್ಮಣ ವರ್ಣ ।
ಈಶ್ವರ ಕೃಪೆಯಿಂದಲ್ಲಿ ಅವತೀರ್ಣ । ಆದ ನಾನೇ ಸುದೈವಿ ॥ 3

ಜನ್ಮ ಜನ್ಮಾಂನತರದ ಮಾತಾಪಿತರು । ಕೋಟಿ ಗಟ್ಟಲೆ ಜನ್ಮ ತಳೆದರೂ
ಈ ಜನ್ಮಮರಣವ ತಪ್ಪಿಸುವವರು । ಅಂಥವರು ಸಿಗುವದು ಅಪರೂಪ ॥ 4

ಜನ್ಮದಾತನು ಪಿತ । ಎರಡನೆಯವ ಮೌಂಜೀ ಬಂಧನ ಕರ್ತ ।
ಮೂವನೆಯವ ಅನ್ನವನಿತ್ತು ರಕ್ಷಿಸುವಾತ । ನಾಲ್ಕನೆಯವ ಭವಭೀತಿಗಳ ಬಿಡಿಸುವವ ॥ 5

ಜಗದಲಿವರೆಲ್ಲ ಸರಿಸಮಾನರು । ಕೃಪಾಳು ಸದ್ಗುರುನ ಬಿಟ್ಟು ಮತ್ತಾರು ।
ನಿಜವಾದ ಜನಕನಾಗಲಾರರು । ಇದರ ವಿಚಿತ್ರ ಪರಿಯನಾಲಿಸಬೇಕು ॥ 6

ಜನನೀ ಗರ್ಭದಲಿ ನೀಕ್ಷೇಪಿಸಲು ವೀರ್ಯವನು । ಯೋನಿದ್ವಾರದಿಂದ ಜನ್ಮದಾತನು ।
ಇವನು ಕೇವಲ ಲೌಕಿಕ ಪಿತನು । ಸದ್ಗುರುವು ಅಲೌಕಿಕ ಜನಕನು ॥ 7

ವ್ಯಯಿಸದೆ ವೀರ್ಯವನೊಂದಿನಿತು । ನೀಚಯೋನಿದ್ವಾರದ ಹೊರತು ।
ನಿಜಪುತ್ರನಿಗೆ ಜನ್ಮವಿತ್ತು । ಪೂರ್ಣಾನುಗ್ರಹವ ಅನುಗ್ರಹಿಸುವನು ॥ 8

ಆ ಜನ್ಮಮರಣ ನಿವರ್ತಕನಿಗೆ ನಮನ । ಜ್ಞಾನ ಪ್ರಕಾಶನವ ಕರುಣಾಘನ ।
ವೇದಗುಹ್ಯ ಸಚ್ಚಿತ್ಪ್ರಕಾಶಕನವ । ಸರ್ವವ್ಯಾಪಕನಾದ ಗುರುವರ್ಯನ ಚರಣಗಳಿಗೆ ॥9

ನಮೋ ಸಂಸಾರತಮ ದಿನಕರಾ । ಆತ್ಮಾನುಭವ ಸಂತಶೇಖರಾ ।
ಭಕ್ತಚಿತ್ತ ಚಕೋರಾ ಚಂದ್ರಾ । ಕಲ್ಪತರುವರಾ ಗುರುವರ್ಯಾ ॥ 10

ಅಗಾಧ ಗುರುರಾಯನ ಮಹಿಮಾನ । ವರ್ಣಿಸಲು ತೊಲಗುವದು ವಚನದಭಿಮಾನ ।
ಇರುವದೊಳ್ಳೆಯದು ಮೂಕರ ಸಮಾನ । ಗುರುಚರಣದಲಿ ನತಮಸ್ತಕನಾಗಿ ॥ 11

ಪೂರ್ವಜನ್ಮದಲಿ ಸಂಪೂರ್ಣ । ಇರದಿದ್ದಲ್ಲಿ ತಪಃ ಸಂಪನ್ನ ।
ಅಂಥವರಿಗಾಗುತಿರಲಿಲ್ಲ ಸಂತದರ್ಶನ । ತ್ರಿತಾಪನಿರಸನಕಾರಕ ॥ 12

ಪರಮಾರ್ಥ ಮೋಕ್ಷ ಅಥವಾ ನಿಜಹಿತ । ಸಾಧಿಸಬೇಕೆಂದಿದ್ದವರು ಸತ್ಸಂಗತಿ ।
ಅವರಾಗಬೇಕು ಸಂತರಿಗೆ ಅಂಕಿತ । ಬಳಿಕವನಿಗೇನೂ ಕೊರತೆಯಿರದು ॥ 13

ಧನ್ಯ ಧನ್ಯ ಸತ್ಸಂಗತಿ । ಎಷ್ಟು ವರ್ಣಿಸಬೇಕದರ ಮಹತಿ ।
ಅವರಲ್ಲಿರುವದು ವಿವೇಕ ವಿರಕ್ತಿ । ಪರಮಶಾಂತಿ ಸದ್ಭಕ್ತರಿಗೆ ॥ 14

ಸಾಯಿ ಕೇವಲ ಚೈತನ್ಯ ಮೂರ್ತಿ । ಅವ್ಯಕ್ತವೇ ಆಗಿದೆ ವ್ಯಕ್ತಿ ।
ಏನವರ ನಿರ್ವಿಷಯ ಸ್ಥಿತಿ । ಯಾರದನು ಬಣ್ಣಿಸಬಲ್ಲರು ॥ 15

ಭಕ್ತ ಭಾವಾರ್ಥಿ ಪ್ರೇಮಳ ಶ್ರೋತೃಗಳು । ಅಂಥವರಿಗವನೇ ದಯಾಳು ।
ಪ್ರೇಮದಿಂದ ನಿಜ ಚರಿತವ ಹೇಳಲು । ಕೇವಲ ಅವನದೇ ಮಂದಿರವದು ॥ 16

ಯಾರ ಕರ ಸ್ಪರ್ಶವಾಗಲು ಶಿರದಿ । ಅಹಂಭಾವದ್ದಾಗುವದು ಹುಡಿ ।
ತುಂಬಿಹೋಗುವ ಸೋಹಂಭಾವದಿ । ಆನಂದ ನಿರ್ಭರವೆಲ್ಲ ದೃಶ್ಯಜಾತ ॥ 17

ಪಾಮರ ನನಗೆಲ್ಲಿಯ ಶಕ್ತಿ । ಬಣ್ಣಿಸಲು ಅವನ ಕೀರ್ತಿ ।
ಅವನದವನೇ ಇರಿಸಿ ಭಕ್ತರಲಿ ಪ್ರೀತಿ । ಈ ಪುಸ್ತಕವ ಪ್ರಕಟಗೊಳಿಸುತಿರುವ ॥ 18

ಆ ಸಾಯಿ ಚರಣದಿ ಸಾಷ್ಟಾಂಗ ನಮನ । ಶ್ರೋತೃಗಣಕ್ಕೂ ಅಭಿವಂದನ ।
ಸಾಧು ಸಂತ ಸಜ್ಜನರಿಗೆ ನಮನ । ಪ್ರೇಮಾಲಿಂಗನವೆಲ್ಲರಿಗೆ ॥ 19

ಸಹಜ ಲೀಲೆಯಲಿ ವಾರ್ತೆ ಹೇಳುವದು । ಅದರಂತರಂಗದಲಿ ನೀತಿ ತುಂಬಿಹುದು ।
ನಿತ್ಯ ಶಾಂತಿಯೇ ಅವರ ಒಡವೆಯಾಗಿಹುದು । ಮಹಾನುಭಾವರು ನಿತ್ಯ ನೆನೆವರವರ ॥ 20

ಸೂರ್ಯನೂ ಸರಿಯಲ್ಲವರ ಉಪಮೆಗೆ । ಅಸ್ತವಾಗುವದು ಸೂರ್ಯನಿಗೆ ।
ಕ್ಷಯಿಸುವ ಚಂದ್ರನ ಉಪಮೆ ಸರಿಯಾಗದವರಿಗೆ । ಸದೈವ ಸಂಪೂರ್ಣ ಸಾಯಿಯವ ॥ 21

ಹೇಮಾಡ ವಿನೀತನವರಡಿಗಳಲಿ । ಪ್ರೇಮದಿಂದೀ ವಿನಂತಿ ಶ್ರೋತೃಗಳಲಿ ।
ಶ್ರದ್ಧಾಯುಕ್ತರಾಗೀ ಕಥೆಯ ಕೇಳಿ । ಚಿತ್ತವಿಟ್ಟು ಪ್ರೀತಿಯಿಂದ ॥ 22

ಭೂಮಿಯನು ಹರಗಿ ಚೆನ್ನಾಗಿ । ಅದರಲಿ ಬೀಜವ ಬಿತ್ತಲಾಗಿ ।
ನೀವು ಕೃಪಾಘನವ ವರ್ಷಿಸದಿರಲಾಗಿ । ಬೆಳೆ ಹೇಗೆ ನಿರ್ಮಾಣವಾಗುವದು ॥ 23

ಸಂತರ ಕಥೆ ಬೀಳಲು ಕಿವಿಗೆ । ಅಲ್ಲಿ ಸ್ಥಳವೆಲ್ಲಿ ಪಾತಕಗಳಿಗೆ ।
ಕಥಾಶ್ರವಣದಿಂದ ಪುಣ್ಯವೇ ಜನಿಸುವಾಗ್ಯೆ । ಈ ಪುಣ್ಯ ಕಾಲದ ಲಾಭ ಪಡೆಯಿರಿ ॥ 24

ಸಲೋಕಾದಿ ನಾಲ್ಕೂ ಮುಕ್ತಿ । ಬೇಕಿಲ್ಲ ನಮಗದರಲಿಲ್ಲ ಆಸಕ್ತಿ ।
ದೊರಕಲೆಮಗೆ ಸಾಯಿಯ ಸ್ಥಿರ ಭಕ್ತಿ । ಪರಮಪ್ರಾಪ್ತಿ ಅದೇ ನಮಗೆ ॥ 25

ನಾವೆಷ್ಟೂ ಆಗಿರದಾಗ ಬದ್ಧ । ನಮಗೇನು ಆ ಮುಕ್ತಿಯ ಸಂಬಂಧ ।
ಆಗಲಿ ಸಂತ ಭಕ್ತಿಯ ಉದ್ಬೋಧ । ಅದರಿಂದಲೇ ಶುದ್ಧವಾಗುವದಂತರ ॥ 26

ಎಲ್ಲಿಲ್ಲ ನಾನೀನೆಂಬ ಸಂಗತಿ । ಯಾವದು ಇಂಥ ಸಹಜ ಸ್ಥಿತಿ ।
ನಮಗೆ ಬೇಕು ಆ ಅಭೇಧ ಭಕ್ತಿ । ಇದನೇ ಸಾಯಿಯ ಹತ್ತಿರ ಬೇಡವುದು ॥ 27

ಇನ್ನೀ ವಿನಂತಿ ಶ್ರೋತೃಗಳಿಗೆ । ಗ್ರಂಥವನೋದಲು ಎತ್ತಿಕೊಂಡಾಗ ಕೈಗೆ ।
ವಾಚ್ಯವಾಚನವಾಚಕ ವ್ಯಕ್ತಿಯೊಳಗೆ । ಏಕಾತ್ಮ ಸ್ಥಿತಿಯ ಕಾಣಬೇಕು ॥ 28

ಹೇಮಾಡಪಂತನ ಮರೆತುಬಿಡುವದು । ಈ ಸಚ್ಚರಿತೆಯ ಕರ್ತೃ ಅವನಲ್ಲವೆಂದು ।
ಕೇವಲ ನಿಮಿತ್ತ ಮಾತ್ರನಾಗಿರುವದು । ಭಕ್ತರ ನಿಜ ಹಿತಾರ್ಥಕ್ಕಾಗಿ ॥ 29

ದೈವದಿಂದ ಲಭಿಸಿದ ಮುತ್ತಿದ್ದ ಶಿಂಪಿಯ ಬಿಟ್ಟಾಗ್ಯೆ । ತನ್ನ ಕೈಯಿಂದವ ಮುತ್ತು ಕಳೆದುಕೊಂಡ ಹಾಗೆ ।
ಏನು ಪ್ರಯೋಜನ ಅಶ್ವತ್ಥೋತ್ಪತ್ತಿಯಾಗೆ । ಅದಕೆ ಸ್ವಕಲ್ಯಾಣದತ್ತಉದಾಸೀನರಾಗಬಾರದು ॥30

ಇಲ್ಲಿ ಶಬ್ದ ಮಾತ್ರಗಳನ್ನು ಶಬ್ದಿಸಿದರೆ । ಸಾಯಿಯಂಥವರಿಲ್ಲ ಯಾರೂ ಬೇರೆ ।
ಶ್ರಾವ್ಯ ಶ್ರವಣ ಶ್ರೋತೃವೆಲ್ಲ ಅವನೇ ಆಗಿರೆ । ಈ ಏಕಾತ್ಮತೆಯ ಭಂಗವಾಗಿಸಬಾರದು ॥ 31

ಇಲ್ಲದಿದ್ದಲ್ಲಿ ಅದು ಅಲ್ಲ ವಾಚನ । ಶ್ರವಣದತ್ತಿಲ್ಲ ಕರ್ಣ ।
ಅದರಿಂದ ವೃತ್ತಿಯಲಿಲ್ಲ ಏಕತಾನ । ಅಲ್ಲಿ ಪರೀಕ್ಷಿಸುವರಾರು ಶಬ್ದಾರ್ಥವ ॥ 32

ಶ್ರವಣದಲಿರಲಿ ನಿರಭಿಮಾನತೆ । ಮನದಲೆಣಿಸಬೇಕು ಶ್ರೋತೃಗಳೂ ಸಾಯಿಯೇ ಎನುತೇ ।
ಅಂದರೇನೆ ಆ ಶ್ರವಣದ ಸಾರ್ಥಕತೆ । ಅಖಂಡ ಅದ್ವೈತತೆಯ ಸಾಧಿಸಬೇಕಲ್ಲಿ ॥33

ಹಾಗಾದರೇ ಎಲ್ಲ ಇಂದ್ರಿಯ ವೃತ್ತಿಗಳು । ಖಚಿತವಾಗಿ ಸಾಯಿ ರೂಪವಾಗಲು ।
ಜಲದಲಿ ಜಲತರಂಗದೊಲು । ವೃತ್ತಿಗಳು ಸಮರಸವಾಗುವವು ॥ 34

ಹಾಗಾದಾಗಲೇ ಜ್ಞಾನಿಗಳಿಗೆ ಅರ್ಥಬೋಧ । ವಿನೋದ ಬಯಸುವವರಿಗೆ ವಿನೋದಾನಂದ ।
ಕವಿತಾಕೋವಿದರಿಗೆ ಪದ ಪ್ರಬಂಧ । ಈ ಗ್ರಂಥದಲಾನಂದ ಎಲ್ಲರಿಗೂ ॥ 35

ಈ ಸಚ್ಚರಿತದ ಹಿಂದಿನಧ್ಯಾಯದಲಿ । ಅಧ್ಯಾಯ ನಲತ್ತೊಂಬತ್ತರಲಿ ।
ತಮ್ಮ ಒಬ್ಬ ನಿಜ ಭಕ್ತನಲ್ಲಿ । ಸಮರ್ಥರು ಮಾಡಿದರು ಉಪದೇಶ ॥ 36

ಬಾಬಾರ ಹತ್ತಿರ ಇರುವಾಗ ಆ ಭಕ್ತನು । ಭಗವದ್ಗೀತೆಯ ನಾಲ್ಕನೆಯ ಅಧ್ಯಾಯವನು ।
ಆರಂಭದಿಂದದರ ಆವರ್ತನವನು । ಆ ಸಮಯಕೆ ಮಾಡುತಿದ್ದ ॥ 37

ಇತ್ತ ಚರಣಸೇವೆ ನಡೆದಿರಬೇಕು । ಅತ್ತ ಮೆಲ್ಲಗೆ ಪಾಠವೆನುತಿರಬೇಕು ।
ಮೂವತ್ಮೂರನೆಯ ನುಡಿ ಮುಗಿದಾಗ । ಮೂವತ್ನಾಲ್ಕನೆಯದನನತೊಡಗಿದ ॥ 38

ನಿಶ್ಚಲ ಮನದಿಂದ ಲಯದೊಳಗೆ । ಎನುತಿದ್ದನು ತನ್ನ ಮನದೊಳಗೆ ।
ಆದರೆ ತಿಳಿಯದಂತೆ ಜನದೊಳಗೆ । ಎಲ್ಲಿಯದೇನಿರುವರು ॥ 39

ಮೂವತ್ನಾಲ್ಕನೆಯದೆನ ತೊಡಗಲು । ಬಂತು ಸಾಯಿನಾಥರ ಮನದೊಳು ।
ಭಕ್ತನಿಗೆ ಸನ್ಮಾರ್ಗ ತೋರಲು । ಅನುಗ್ರಹವನೀಯ ಬೇಕವನಿಗೆ ॥ 40

ನಾನಾ ಎಂದು ಹೆಸರು ಆ ಭಕ್ತನಿಗೆ । ಆಗ ಬಾಬಾ ಎಂದರು ಅವನಿಗೆ ।
"ನಾನಾ ಏನೆನ್ನುತಿರುವಿ ಮನಸಿನೊಳಗೆ । ಸ್ಪಷ್ಟವಾಗಿ ಮುಖದಿಂದೇಕೆನಲೊಲ್ಲೆ ॥ 41

ಯಾವಾಗಿನಿಂದ ನಾ ನೋಡುತ್ತಿರುವೆ । ಬಾಯೊಳಗೊಳಗೇ ಏನೋ ಅನ್ನುತ್ತಿರುವೆ ।
ಆದರೆ ಸ್ಪಷ್ಟ ಧ್ವನಿಯನ್ನು ಮಾಡದಿರುವೆ । ಅಂಥ ಗುಹ್ಯವಾದದೇನಿರುವದು" ॥ 42

ಆಗ ನಾನಾ ಸ್ಪಷ್ಟ ಹೇಳಿದ್ದು । ಗೀತಾ ಪಾಠವನಾನೆನುತಿದ್ದು ।
ಉಳಿದವರಿಗೆ ತೊಂದರೆಯಾಗಬಾರದು । ಎಂದು ಬಾಯಲ್ಲಿಯೇ ಅನ್ನುತಿರುವೆ ॥ 43

ಹೋಗಲಿ ಬಿಡು ಬೇರೆಯವರ ಮಾತು । ನನಗಾದರೂ ಹೇಳು ಇಷ್ಟು ।
ನಿನ್ನದು ನಿನಗಾದರೂ ಅದು ತಿಳಿದಿರುವದೆಷ್ಟು । ಸರಿಯಾಗಿ ಎಂಬುದನು ನೋಡೋಣ ಎಂದರು ಶ್ರೀ ॥ 44

ಬಳಿಕ "ತದ್ವದ್ಧಿಪ್ರಣಿಪಾತೇನ" । ಉಚ್ಚ ಸ್ವರದಲೆಂದು ಈ ಶ್ಲೋಕವನ ।
ತೋರಿದ ಮಾಡಿ ನಮಸ್ಕಾರವನ । ಕೇಳಿ ಬಾಬಾರಿಗೆ ಸಮಾಧಾನವಾಯಿತು ॥ 45

ಮುಂದೆ ಈ ಶ್ಲೋಕದ ಅರ್ಥ ಕೇಳಲು । ಪೂರ್ವಾಚಾರ್ಯರು ಹೇಳಿದ ಅರ್ಥದೊಲು ।
ಯಥಾಸಾಂಗವಾಗಿ ನಾನಾ ಹೇಳಲು । ಬಾಬಾ ಆಗಲೆಂದು ತಲೆಯಲ್ಲಾಡಿಸಿದರು ॥ 46

ಮತ್ತೆ ನಾನಾಗೆ ಕೇಳಿದರು ಪ್ರಶ್ನೆ । 'ಉಪದೇಕ್ಷಂತಿ ತೇ ಜ್ಞಾನಂ' ।
ನಾನಾ ಇದಿರುವದು ತೃತೀಯ ಚರಣ । ಇದರ ಮನನ ಮಾಡಬೇಕು ॥ 47

ಅದರೊಳಗಿನ ತೇ ಅಕ್ಷರದ ಹಿಂದೆ । 'ಅ'ಕಾರಾರ್ಥೀ ಅವಗ್ರಹವಿದೆ ।
ಅದರಿಂದ ಅಜ್ಞಾನಪದವಾಗುವದೇ । ತಿರುವು ಮುರುವಾಗಿ ನೋಡಯ್ಯಾ ॥ 48

ಶಂಕರಾನಂದ ಜ್ಞಾನೇಶ್ವರ । ಆನಂದಗಿರಿ ಮತ್ತು ಶ್ರೀಧರ ।
ಮಧುಸೂದನಾದಿ ಭಾಷ್ಯಕಾರ । ಜ್ಞಾನಪರವಾಗಿ ಮಾಡುವರಾವ ಅರ್ಥ ॥ 49

ಅದು ಎಲ್ಲರಿಗೂ ಮಾನ್ಯವಿರುವದೆಂದು । ನನಗೂ ಅದು ತಿಳಿದಿರುವದು ।
ಆದರೆ ಅವಗ್ರಹದಿಂದುಂಟಾಗುವ ಮೋಜಿನದು । ತಿಳಿದೂ ಅಷ್ಟಕ್ಕೇ ಸವಿಯದೇ ಬಿಡುವದೇಕೆ ॥ 50

ಸಾಯಿ ಕೃಪಾಘನನು ಹೀಗೆಂದು । ಭಕ್ತ ಚಕೋರ ಚಾತಕಗಳಿಗೆಂದು ।
ಬೋಧಾಮೃತ ಕಣ ವರ್ಷಿಸಿದ್ದು । ಅದರ ನಿರೂಪಣೆ ಹಿಂದೆಯೇ ಆಗಿದೆ ॥ 51

ಆದರೂ ಈ ಸಾಯಿ ಲೀಲೆಯ ವಾಚಕರಿಗೆ । ಕೌತುಕವೆನಿಸಲಿಲ್ಲಿದರದು ಎಲ್ಲರಿಗೆ ।
ಅವರು ಸಾಶಂಕವಾಗಿ ಉಳಿದರೆಂದಾಗ್ಯೆ । ಆಶ್ಚರ್ಯಕರವಾಗಿಯಿದು ॥ 52

ಇರಲವರ ಸಮಾಧಾನಕ್ಕೆಂದು । ಮಾಡುವೆ ಅಲ್ಪ ಪ್ರಯತ್ನವನಿನ್ನೊಂದು ।
ಅವರ 'ಅಜ್ಞಾನ' ಸಮರ್ಥನೆಗೆಂದು । ಅದು ಸಪ್ರಮಾಣವಾದೀತು ॥ 53

ಸಂಸ್ಕೃತದ ಜ್ಞಾನ ಬಾಬಾರಿಗೆಲ್ಲಿಯದು । ಕೆಲವರಿಗೆ ಹೀಗೂ ಅನಿಸಬಹುದು ।
ಸಂತರಿಗೆ ತಿಳಿಯದಂತಾವುದೂ ಇರದು । ಶಂಕೆಗೆ ಕಾರಣ ಬೇರೆಯೇ ॥ 54

'ಏಕೇನ ಜ್ಞಾತೇನ ಸರ್ವಹಿ' । ವಿಜ್ಞಾತಂ ಭವತಿ ಇದು ಪ್ರಮಾಣ ।
ಯಾರು ಒಪ್ಪರು ಈ ಶ್ರುತಿ ವಚನ । ಆ ಅಪರೋಕ್ಷ ಜ್ಞಾನವಿತ್ತು ಸಾಯಿಗೆ ॥ 55

ಕರತಲದಲಿದ್ದ ನೆಲ್ಲಿಯ ಹಾಗೆ । ಈ ಸಂಪೂರ್ಣ ವಿಶ್ವವೇ ಇರುವಾಗ ಹಾಗೆ ।
ಏನು ಗೊತ್ತಿರದು ಆ ಸಂತರಿಗೆ । ಸೂರ್ಯನಿಗೂ ಪ್ರಕಾಶ ಯಾರಿಂದ ॥ 56

ಯಾರಿಗೆ ಇದ್ದೆಲ್ಲ ಒಂದೆಂಬ ಜ್ಞಾನ । ಅವರಲ್ಲೆಲ್ಲುಳಿಯುವದು ಅಜ್ಞಾನ ।
ಎಲ್ಲ ವಿದ್ಯೆಗಳಲ್ಲೂ ಅವರಿಗೆ ಜ್ಞಾನ । ಸಂಸ್ಕೃತದ್ದೇನು ಮಹಾ ಅವರಿಗೆ ॥ 57

ಯಾರೋ ಈ ಲೀಲೆಯ ವಾಚಕ । ಎನುವರು "ನಾನಾ ಅಪ್ರಾಮಾಣಿಕ ।
ಅವನ ಸ್ವಕಪೋಲ ಕಲ್ಪಿತ ಅಪ್ರಯೋಜಕ । ಅಜ್ಞಾನ ವ್ಯಂಜಕ ಅವಗ್ರಹ ॥ 58

ಅವನೇ ಈ ಸುಳ್ಳು ಕಥೆ ಎಬ್ಬಿಸಿದ । ಅವಗ್ರಹಾನ್ವಿತ ಅಜ್ಞಾನದ ।
ಸುಮ್ಮನೇ ಹುಟ್ಟಿಸಿ ವಾದ ವಿವಾದ । ನಿಜ ಜ್ಞಾನವ ತೋರಿಸಿಕೊಳ್ಳಲು ॥ 59

ಇಲ್ಲ ಅವಗ್ರಹವನಲ್ಲಿ ತರುತ । ಜ್ಞಾನವೆಂದಿದ್ದಲ್ಲಿ ಅಜ್ಞಾನವೆನ್ನುತ ।
ಹೀಗೇನಾದರೊಂದು ವಿಪರೀತ । ಗೀತೆಯ ಅರ್ಥವ ಹಚ್ಚುತಿಹರು" ॥ 60

ಆದರೆ ವಸ್ತು ಸ್ಥಿತಿಯ ನೋಡಲು । ಸೂಕ್ಷ್ಮ ರೀತಿಯಲಿ ವಿಚಾರ ಮಾಡಲು ।
ಮೂವತ್ತೊಂಭತ್ತನೆಯ ಅಧ್ಯಾಯದೊಳು । ಕಥೆಯಲಸಂಬಂಧ್ಧವೇನೂ ಕಾಣದು ॥ 61

ಯಾರದೇನೇ ಕಲ್ಪನೆಯಿರಲಿ । ನಾನಾ ಪ್ರಾಮಾಣಿಕ ಅಪ್ರಾಮಾಣಿಕನೇನೇ ಆಗಿರಲಿ ।
ಅದು ವೃಥಾವಾಲ್ಗನೆ ಎನ್ನದಿರಲಿ । ಅವನು ಹೇಳಿದ ಕಥೆಯನು ॥ 62

ಬಿಟ್ಟು ನಾನಾನ ದ್ವೇಷವನು । ವಿಕಾರ ವಶರಾಗದಿರಲಿ ವಾಚಕರಿನ್ನು ।
ದೂರ ಮಾಡಲು ದೃಷ್ಟಿಯ ದೋಷವನು । ಎಲ್ಲವೂ ನಿರ್ದೋಷ ಕಾಣುವದು ॥ 63

ಉತ್ತಮೋತ್ತಮ ಸಾಯಿ ಲೀಲೆಯನು । ಮೂವತ್ತರೊಂಭತ್ತನೇಯ ಅಧ್ಯಾಯವನು ।
ಅಲ್ಲಿಯೇ ಬಿಟ್ಟು ಓದಲು ಅದನು । ಸುಗಮವಾಗಿ ಸಾಗದದು ॥ 64

ಭಗವದ್ಗೀತೆಯಲಿ ಕೃಷ್ಣನ ಮುಖದಲ್ಲಿ । ಜ್ಞಾನಯಜ್ಞವೆಂಬ ಅಧ್ಯಾಯದಲಿ !
ಮೂವತ್ನಾಲ್ಕನೆಯ ಶ್ಲೋಕದಲ್ಲಿ । ಅಜ್ಞಾನದ ಬಗ್ಗೆ ಪ್ರವಚನವಿದೆ ॥ 65

"ತದ್ವಿದ್ಧಿ ಪ್ರಣಿಪಾತೇನ । ಪರಿಪಶ್ನೇನ ಸೇವಯಾ ।
ಉಪದೇಕ್ಷಂತಿ ತೇ ಜ್ಞಾನಂ । ಜ್ಞಾನಿನಸ್ತತ್ವ ದರ್ಶಿನಃ" ॥ 66

ಗೀತೆಯ ಮೂಲ ಶ್ಲೋಕವಿದು । ಇದರ ಮೂರನೆಯ ಚರಣ ನೋಡುವದು ।
ಜ್ಞಾನಪದದ ಮೊದಲು ಅವಗ್ರಹ ಒಂದು । ಅಜ್ಞಾನ ನಿದರ್ಶಕವಾಗುವದು ॥ 67

ಮನಸಿಗೆ ತಾರದಿರೆ ಈ ಅವಗ್ರಹ । ಜ್ಞಾನ ಪದವೇ ಬರುವದು ನಿಃಸಂದೇಹ ।
ಆದರ ವಿರುದ್ಧವಿರದಾದರೂ ದುರಾಗ್ರಹ । ಆ ಅರ್ಥವು ಸಂಗ್ರಾಹ್ಯ ಎಲ್ಲರಿಗೂ ॥ 68

'ಜ್ಞಾನಾತ್ ಏವತು ಕೈವಲ್ಯಂ' ಎಂಬುದು । ಶ್ರುತಿ ವಚನವೆಲ್ಲರಿಗೂ ಮಾನ್ಯವಿರುವದು ।
ಜ್ಞಾನವೇ ತತ್ವಜ್ಞನ ಉಪದೇಶ್ಯವಿದ್ದು । ಅದಕೇ ಬಂಧನ ಅನವಶ್ಯಕ ॥ 69

ಅಹಮಾತ್ಮಾ ಸಾಕ್ಷೀ ನಿರ್ಮಲ । ಶುದ್ಧ ಬುದ್ಧ ಮುಕ್ತ ಕೇವಲ ।
ಪ್ರತ್ಯಗ್ಭೂತ ಚೈತನ್ಯ ಸೋಜ್ವಲ । ಅದ್ವಯಾನಂದ ನಿಶ್ಚಯದಲಿ ॥ 70

ಆದರೆ ಅಜ್ಞಾನ ನಾನಲ್ಲ । ಅಜ್ಞಾನದ ಕಾರ್ಯವೂ ನಾನಲ್ಲ ।
'"ಅಯಮಾತ್ಮಾ ಬ್ರಹ್ಮ' ನಾನಿದ್ದು । 'ಪ್ರಜ್ಞಾನಮಾನಂದ' ನಿಧಾನ ನಾನು ॥ 71

ನಿತ್ಯ ಸ್ಫುರಣವು 'ಅಹಂಬ್ರಹ್ಮಾಸ್ಮಿ' ಎಂದು । ಇದೇ ಶುದ್ಧ ವಿದ್ಯೆ ಎಂಬುದು ।
ನಾ ಪಾಪಿ ಅಭಾಗೀ ದೈವಹೀನನೆಂಬದು । ಈ ವೃತ್ತಿಯೇ ಅವಿದ್ಯೆಯ ಮೂಲವು ॥ 72

ಇವು ಮಾಯೆಯ ಪುರಾತನ ಶಕ್ತಿ । ಒಂದರಿಂದಾಗಿ ಬಂಧ ಸ್ಥಿತಿ ।
ಇನ್ನೊಂದರಿಂದ ಬಂಧ ನಿರ್ಮುಕ್ತಿ । ಈ ಜೀವಕೆ ಅನಾದಿಕಾಲದಿಂದ ॥ 73

ನಾಮರೂಪಗಳದೆಲ್ಲ ಭ್ರಮೆ । ಇದೆಲ್ಲವಿದೆ ಮಾಯೆಯ ಸಂಭ್ರಮ ।
ಅನಿರ್ವಚನೀಯ ಮಾಯೆ ಪರಮ । ಬಲು ದುರ್ಗಮ ದಾಟಲು ॥ 74

ಯಾವಯಾವುದು ಕಲ್ಪನೆಯ ಸ್ಫುರಣ । ಅದೆಲ್ಲ ಮಾಯೆಯ ನಿವಾಸಸ್ಥಾನ ।
ಬದ್ಧಮುಕ್ತವೆಂಬ ಸ್ಥಿತಿಯ ಜನನ । ಕಲ್ಪನೆಯೊಳಗಿಂದಲೇ ನಿಶ್ಚಿತ ॥ 75

'ಜ್ಞಾನಾತ್ ಏವತು ಕೈವಲ್ಯಂ' ಎಂಬುದು । ಶೃತಿ ಪ್ರಮೇಯವಿದು ಅಬಾಧಿತವಿರುವದು ।
ಆದರೆ ಪಾಪಕರ್ಮ ಕ್ಷಯಸದಿರದು । ಅದುವರೆಗೆ ಜ್ಞಾನೋದಯವಾಗಲಾರದು ॥76

ಶುದ್ಧ ಜ್ಞಾನ ನೆಲೆಸಿದೆ ಯಾರಲ್ಲಿ । ಅವರು ಸಂಕಲ್ಪದಿಂದದನು ತ್ಯಜಿಸಿದಲ್ಲಿ ।
ವಿಕಾರಕ್ಕೇ ಸ್ಥಾನವಿರದಿದ್ದಲ್ಲಿ । ಮಾಯೆಯ ಬಂಧನವೆಲ್ಲಿಯದವರಿಗೆ ॥ 77

ಶುಕನಂಥ ಪರಮಜ್ಞಾನಿಗೆ । ವಿಕಲ್ಪದಿಂದಾಯಿತು ಹಾನಿ ಅವನಿಗೆ ।
ಅಜ್ಞಾನ ಪ್ರಕಟವಾಗುವದು ವಿಕಲ್ಪದಿಂದಾಗೇ । ಅದು ಗುರುವಿನಿಂದಲ್ಲದೆ ನಿರಸನವಾಗದು ॥78

ಜ್ಞಾನಿಯಲ್ಲಿ ವಿಕಲ್ಪ ಮೂಡಿದಾಗ । ಅವನಿಗೂ ಅಭಿಮಾನ ಬರುವದಾಗ ।
ಕೊಡ ಹಾಲು ಕೆಡುವುದು ಒಂದು ಹನಿ ಮಜ್ಜಿಗೆ ಬಿದ್ದಾಗ । ಹಾಲು ಹೊಲಸಾಗಿ ಹೋಗುವದು ॥ 79

ಅದಕೆ ಮೊದಲು 'ಅಜ್ಞಾನ'ವನರಿಯುವದು । ಅದು ನಿರಸನವಾದಾಗ ಮನ ಶುದ್ಧವಾಗುವದು ।
ಆಗ ವಿಲಂಬವಿಲ್ಲದೆ 'ಜ್ಞಾನ' ಪ್ರಕಟವಾಗುವದು । ಅಭೇದ ಸಮಾಧಿ ಹತ್ತುವದು ॥ 80

ಯಾರಿಗೆ ದ್ರವ್ಯ ವೈಭವದ್ದೇ ಧ್ಯಾನ । ವಿಷಯ ಸೇವನದಿಂದ ಅತೃಪ್ತ ಮನ ।
ಸ್ತ್ರೀ ಪುತ್ರರದಖಂಡ ಚಿಂತನ । ಅವನ ಜ್ಞಾನವೆಂದರೆ ಅಜ್ಞಾನವೇ ॥ 81

ಹೀಗೆ ಧನಸುತದಾರಾಮೋಹಿತ । ಜ್ಞಾನಿಯಾಗಿದ್ದೂ ತಿಳಿಯನವ ನಿಜಹಿತ ।
ಅದಕೆ ಎಲ್ಲಿಯವರೆಗೆ ಭಕ್ತಿ ರಹಿತ । ಅಜ್ಞಾನಾವೃತ ಜ್ಞಾನವವನದು ॥ 82

ಜೀವ ಸಮುದಾಯವೇ ಅಜ್ಞಾನ ಯುಕ್ತ । ಅಜ್ಞಾನದೊಳಗಿಂದ ಆಗಿ ಮುಕ್ತ ।
ಜ್ಞಾನಿಯು ಮತ್ತೂ ಜ್ಞಾನಾತೀತ । ಆದಾಗಲೇ ಬ್ರಹ್ಮರೂಪ ನಿಶ್ಚಿತ ॥ 83

ಅಜ್ಞಾನ ಹೋದಾಗ ಪ್ರಕಟವಾಗುವದು ಜ್ಞಾನ । ಕ್ಷಮಾಶೀಲನೇ ಸಜ್ಞಾನ ।
ಹೋಗಿಲ್ಲ ಎಲ್ಲಿಯವರೆಗೆ ಅಭಿಮಾನ । ಅದುವರೆಗೆ ಪ್ರಕೃತಿಗಾಧೀನನವ ॥ 84

ರಾಮಕೃಷ್ಣಾದಿ ಅವತಾರ । ಸಂತ ಸನಕಾದಿ ಶಿಷ್ಟ ಪ್ರವರ ।
ಪ್ರಕೃತಿ ಅವರಾಜ್ಞೆಯ ಕಿಂಕರ । ಇವರ ಬಿಟ್ಟೆಲ್ಲರನವಳು ಆಡಿಸುವಳು ॥ 85

ಭೂತ ಮಾತ್ರಗಳಲ್ಲಿ ಹೃದಯಸ್ಥನಾಗಿದ್ದರೂ । ಸ್ವರೂಪ ಸ್ಥಿತಿಯ ತಿಳಿಯರಾರೂ ।
ಹೀಗೆ ಈ ಮಾಯೆಯ ಸ್ಥಿತಿಯನರಿಯರಾರೂ । ಅದರಾವರಣ ಶಕ್ತಿ ಅಗಾಧ ॥ 86

ಆದರೂ 'ನಾ ಕೃರ್ತ ನಾಭೋಕ್ತ'ನೆನ್ನುವ । ಬಿಡಿಸದೇ ಈ ಅಹಂತನವ ।
ಆ ಹೃದಯಸ್ಥನಿಗೆ ಶರಣಾಗದವ । ನಿಜ ನಿರ್ಮುಕ್ತತೆಯ ಪಡೆಯನು ॥ 87

ನಿತ್ಯಾನಿತ್ಯ ವಸ್ತು ವಿವೇಚನ । ಶ್ರವಣ ಮನನ ನಿಧಿಧ್ಯಾಸನ ।
ಆಗಿರಿ ಶಮದಮಾದಿಷಟ್ಕ ಸಂಪನ್ನ । ಅದರಿಂದಲೇ ಅಜ್ಞಾನತಮ ಹರಿಯುವದು ॥ 88

ಜ್ಞಾನ ಪ್ರತಿಪಾದಕ ವೇದ ಶಾಸ್ತ್ರಗಳ । ಅಲ್ಲಿಯ ಅನುಬಂಧ ಚತುಷ್ಟಯದ ಪ್ರಕಾರಗಳ ।
ಪರಮ ಭಾಷ್ಯಕಾರರು ಅವುಗಳ । ವಿಸ್ತಾರ ಪೂರ್ವಕ ವರ್ಣಿಸಿರುವರು ॥ 89

'ಅಧಿಕಾರಿ' 'ವಿಷಯ' 'ಸಂಬಂಧ' । ಪ್ರಯೋಜನ ನಾಲ್ಕನೆಯ 'ಅನುಬಂಧ' ।
ಪ್ರಯೋಜನದ ವಿವೇಚನೆಯಿಂದ । ಅಜ್ಞಾನ ನಿವರ್ತನ ತಿಳಿಯುವದಾಗ ॥ 90

ಐಕ್ಯತೆ ಜೀವಬ್ರಹ್ಮಗಳದು । ಅದೇ ಮುಖ್ಯ 'ವಿಷಯ' ಈ ವೇದಾಂತದ್ದು ।
ಆ ಐಕ್ಯ ಪ್ರೇಮೇಯದಲಾವ ಅಜ್ಞಾನತೆ ಇರುವದು । ಅದರ ನಿವರ್ತನೆ ಮಾಡುವದೇ 'ಪ್ರಯೋಜನ' ॥ 91

ಆ ಮೂಲ ಜ್ಞಾನದ ನಿವೃತ್ತಿ । ಅದೇ ತಾ ಸ್ವರೂಪಾನಂದ ಪ್ರಾಪ್ತಿ ।
ಅದಕೆ ಮಾಡಿ ಯುಕ್ತಿ ಪ್ರಯುಕ್ತಿ । ಅಜ್ಞಾನ ದೂರಗೊಳಿಸುವದು ಅವಶ್ಯ ॥ 92

ಯಾರಲ್ಲಿ ಭೇದದ ನಿರಸನೆಯಾಗಿಲ್ಲ । ಅಂಥವನಾರೂ ಸಜ್ಞಾನಿಯಲ್ಲ ।
ದೇಹಾಭಿಮಾನಿಗಳ ಜ್ಞಾನ । ಅದು ಪೂರ್ಣ ಅಜ್ಞಾನವೇ ॥ 93

ತಾನೇ ಸಜ್ಞಾನನೆಂದುಕೊಳ್ಳುತ । ಕರ್ಮಾಚರಣೆ ಮಾಡುವ ಅವಿಹಿತ ।
ಸುಡಲಿ ಅವನ ಜಾಗೃತತೆ ಅಂಥ । ಅವನು ಮಲಗಿದ ಕುಂಭಕರ್ಣನೇ ॥ 94

ಮಾಡುವ ವೇದಬಾಹ್ಯ ಆಚರಣ । ಮಾಡುತಿಲ್ಲ ವರ್ಣಾಶ್ರಮ ಪರಿಪಾಲನ ।
ಅವನ ಚಿತ್ತ ಶುದ್ಧಿಯ ಸಾಧನ । ಅವಿದ್ಯಾ ನಿರಸನವೊಂದೇ ॥ 95

ಸತ್ವಾದಿ ಮೂರು ಪ್ರಕಾರಗಳು । ಶಬ್ದಾದಿ ವಿಷಯದಂಥ ನಾನಾ ವಿಕಾರಗಳು ।
ಉಪಸ್ಥ ಮತ್ತು ಜಿವ್ಹಾದಿಗಳು । ಬ್ರಹ್ಮಾದಿಗಳನ್ನೂ ಮೋಸಗೊಳಿಸಿವೆ ॥ 96

ಜಗಜ್ಜಂಗಮ ಪ್ರಾಣಿಜಾತ । ಅನಾದಿ ಅವಿದ್ಯಾ ಮಾಯಾ ಪರಿವೃತ ।
ರಾಗ ದ್ವೇಷಾದಿ ವಿಕಾರಗಳಿಂದ ಮೋಹಿತ । ಅಜ್ಞಾನಾವೃತ ಇವೆಲ್ಲ ॥ 97

ಅವಿದ್ಯೆಯಲಿ ಜೀವನುಬದ್ಧ । ಪ್ರಕಟವಾಗಲು ಅದರ ರೂಪ ಶುದ್ಧ ।
ಅವಿದ್ಯೆ ಕಾಮ ಕರ್ಮಬಂಧ । ಇವುಗಳ ಸಂಬಂಧ ಹರಿಯಬೇಕು ॥ 98

ಸ್ತನ ಹಾಲಿನಿಂದ ತುಂಬಿದೆ । ಅದರ ಮೇಲೆಯೇ ಉಣ್ಣೆ ಇದೆ ।
ಆದರದಕೆ ಪ್ರೀತಿ ಅಶುದ್ಧದ್ದೇ ಹಾಲಿನ ಇಚ್ಛೆ ಅದಕಿಲ್ಲ ॥ 99

ಕಪ್ಪೆ ಮತ್ತು ಭ್ರಮರಗಳದು । ಕಮಲದ ಸಮೀಪವೇ ವಾಸವಿರುವದು ।
ಭ್ರಮರವು ಪರಾಗದಲಿ ವಿಹರಿಸುವದು । ಕಪ್ಪೆ ಮಾತ್ರ ಕೆಸರಿಲ್ಲಿ ॥ 100

ಜ್ಞಾನದ ಗಡ್ಡೆಯೇ ಇದೆ ಎದುರಿಗೆ । ಆದರೆ ಅಜ್ಞಾನದತ್ತ ಎಳೆತ ಮೂರ್ಖರಿಗೆ ।
ಅಜ್ಞಾನವೇ ಜ್ಞಾನವೆನಿಸುವದವರಿಗೆ । ಜ್ಞಾನದ ಎಣಿಕೆ ಏನವರಿಗೆ ॥ 101

ಅವಿದ್ಯೆಯದಾಗಲು ನಿರ್ಮೂಲನ । ಸ್ವಯಂ ಪ್ರಕಟವಾಗುವದು ಬ್ರಹ್ಮಜ್ಞಾನ ।
ಅದಕ್ಕೆಂದು ಅವಿದ್ಯೆಯ ಪ್ರತಿಪಾದನ । ಆರಂಭದಲಿ ಪ್ರತಿಪಾದಕ ॥ 102

ಬ್ರಹ್ಮ ಜ್ಞಾನಕ್ಕೆ ಸಮನಾದುದು । ತ್ರಿಜಗದಲ್ಲಿಲ್ಲ ಬೇರೊಂದು ।
ಅದರ ಉಪದೇಶಕ್ಕೇ ಮರ್ಯಾದೆ ಇರುವದು । ಅದಿಲ್ಲದ ಜೀವನ ನಿಷ್ಫಲ ॥ 103

ಬುದ್ಧ್ಯಾದಿಗಳಾಡುವ ವಿಷಯ । ಬ್ರಹ್ಮ ಅದಿರುವದು ಇಂತ ಕಾರ್ಯ ।
ಆದರೂ ಒಂದಾದರೂ ಇಂದ್ರಿಯ । ಅದನು ಹೌದೆಂದು ತೋರುವದು ॥ 104

ಬ್ರಹ್ಮ ತತ್ವವು ಬುದ್ಧಿಗ್ರಾಹ್ಯವಿದ್ದು । 'ಬುದ್ಧಿಗ್ರಾಹ್ಯ ಮತೀಂದ್ರಿಯ' ಎಂದು ।
ಸ್ಮೃತಿ ಹೀಗೆ ಸಾರುತಿದ್ದು । ಶೃತಿಗಳಿಗದು ಸಮ್ಮತವಿಲ್ಲ ॥ 105

ಬುದ್ಧ್ಯಾದಿಗಳ ಅಭಾವವಾದಾಗ । ಗ್ರಹಣಕಾರಣಕಿಲ್ಲ ಮಾರ್ಗ ।
ಬಳಿಕ ಬ್ರಹ್ಮದ ಅಸ್ತಿತ್ವ ಭಾವಕ್ಕೆ ಜಾಗ । ಉಳಿಯುವದೇ ಇಲ್ಲ ಭಾವಿಸಲು ॥ 106

ಇಂದ್ರೀಯಗೋಚರವಾದುದೆಲ್ಲ । ಇದೆ ಆದರೆ ಬೇರೆಯದೇನೂ ಇಲ್ಲ ।
ಬ್ರಹ್ಮವೆಂದೂ ಇರುವದಿಲ್ಲ । ಇದು ಪ್ರಸಿದ್ಧವಾಗಿದೆ ಜಗದಲಿ ॥ 107

ಹೀಗಾದರೆ ಅದರ ಅರ್ಥ । ಅದರಿಂದಾದೀತು ಅನರ್ಥ ।
ಸೂಕ್ಷ್ಮ ತಾರತಮ್ಯ ಪರಂಪರಾರ್ಥ । ಬುದ್ಧಿಯೂ ನಿರಂತರ ಸತ್ ಆಗಿದೆ ॥ 108

ಆಗವಲ್ಲ ದೇಕದರ ಪ್ರಲಯ । ಅಲ್ಲಿಯೂ ಇರುವದದರ ಸತ್ವತ್ಕಯ ।
ಆತ್ಮವು ವಿಶ್ವದ ಮೂಲ ನಿಃಸಂಶಯ । ಅಸ್ತಿತ್ವ ನಿಷ್ಠ ಲಯವೆಲ್ಲ ॥ 109

ಮಣ್ಣು ಮಡಕೆಗೆ ಕಲ್ಲೆಸೆಯಲು । ಮಡಕೆಯು ಒಡೆದು ಆಕಾರ ಕಳೆದುಳಿವವು ತುಂಡುಗಳು ।
ಮಡಕೆಯಾಕಾರ ಕಳೆದುಕೊಳ್ಳಲು । ಅನುವೃತ್ತಿದರ್ಶಕ ತುಂಡುಳಿಯುವವು ॥ 110

ಘಟಕಾರ್ಯದ್ದಾದರೂ ಧ್ವಂಸ । ಘಟಾಸ್ತಿತ್ವಕ್ಕಿಲ್ಲ ನಾಶ ।
ಅನುವೃತ್ತಿಗೆ ಕಾರಣ ಮಡಕೆಯಂಶ । ಕಾರ್ಯಾಸ್ತಿತ್ವ ಆದರಿಂದ ॥ 111

ಶೂನ್ಯತ್ವದಲಾವುದರ ಪರ್ಯವಸಾನ । ಹಾಗಿರದಾವುದೂ ಕಾರ್ಯಪ್ರವಿಲಾಪನ ।
ಅಸ್ತಿತ್ವ ನಿಷ್ಠಕ್ಕೆ ಲಯವೇ ಪ್ರಮಾಣ । ಸತ್ವಲಯಲೀನ ಸದ್ಬುದ್ಧಿ ॥ 112

ಸರ್ವ ತೀರ್ಥ ವ್ರತಗಳು ಪಾವನ । ಆ ಪಾವನತೆಗಿಂತ ಪಾವನ ಜ್ಞಾನ ।
ಬಿಟ್ಟು ಆ ಬ್ರಹ್ಮ ಜ್ಞಾನವನ । ಭಜನ ಪೂಜನ ನಿರರ್ಥಕ ॥ 113

ಅವಿದ್ಯೆಯ ಚಿತ್ತ ಮಲಿನ । ಆ ಚಿತ್ತದ ಮಲಪ್ರಕ್ಷಾಲನ ।
ಇಲ್ಲ ಬಿಟ್ಟು ಈಶಭಕ್ತಿಯೊಂದನ । ಭಕ್ತಿಯ ಹೊರತು ಜ್ಞಾನೋದಯವಾಗದು ॥ 114

ಅದಕೆ ಮೊದಲು ತಿಳಿ ಅಜ್ಞಾನವೆಂದರೇನು । ಅದರ ಬೇಧಅದರ ನಿರೂಪಣ
ಕೇಳಿದಾಗಾದೀತು ತದ್ಬಂಧ ನಿರಸನ । ಭಕ್ತಿಯೇ ಪ್ರಮಾಣ ಅದಕೆ ॥ 115

ಕಾಲ್ಮಂದಾಗಿ ಹುಟ್ಟಿದವನ ಕಣ್ಣಿಗೆ ಅಂಜನ । ಹಚ್ಚಲಾತನಿಗೆ ಕಾಣುವದು ಭೂಮಿಗತ ಧನ ।
ಹಾಗೆ ಭಕ್ತಿಯದಾಗಲು ಅವಲಂಬನ । ಅಜ್ಞಾನ ಕಳೆದು ಆಗುವದು ಜ್ಞಾನೋದಯ ॥116

ಜ್ಞಾನವದೇ ಸ್ವರೂಪ ಪ್ರಾಪ್ತಿ । ಅದಕೆ ಮೂಲ ಅಜ್ಞಾನ ನಿವೃತ್ತಿ ।
ಕೈ ಕೊಳ್ಳದೇ ಈಶಭಕ್ತಿ । ಮಾಯೆಯ ಶಕ್ತಿ ಅನಿವಾರ ॥ 117

ಜ್ಞಾನ ಅಜ್ಞಾನಗಳದಾಗಿದೆ ಮಿಶ್ರಣ । ಬೇರ್ಪಡಿಸಬೇಕದರೊಳಗಿಂದ ಅಜ್ಞಾನ ।
ಕಲ್ಲಾರಿಸಿ ತೆಗೆದುಕೊಳ್ಳಬೇಕು ಅಕ್ಕಿಯನ । ಎಸರಿನಲಿ ಹಾಕಲು ॥ 118

ಭಗವಂತ ನೆಲೆಸಿರುವನೆಲೆಲ್ಲೂ । ಜ್ಞಾನಯಜ್ಞಾದಿ ಉಪಾಸನೆಗಳು ।
ವಿಶ್ವತೋಮುಖ ಕೃಷ್ಣನನು ನೋಡಲು । ಜ್ಞಾನಕ್ಕಾಗಿ ಅಜ್ಞಾನವ ದಹಿಸುವ ॥ 119

ಇನ್ನು ಜ್ಞಾನ ಯಜ್ಞದ ಸ್ವರೂಪ । 'ಅಹಂ ಬ್ರಹ್ಮಾಸ್ಮಿಯೇ' ಇಲ್ಲಿಯಾಪಗ ।
ಪಂಚಮಾಹಭೂತಗಳದೇ ಯಜ್ಞ ಮಂಟಪ । ಜೀವೇಶ್ವರ ಭೇದವೇ ಪಶು ಅಲ್ಲಿ ॥ 120

ಪಂಚೇಂದ್ರಿಯಗಳು ಪಂಚ ಪ್ರಾಣ । ಇದೇ ಯಜ್ಞದ ಉಪಚಾರಾಭರಣ ।
ಜ್ಞಾನಾಗ್ನಿಯದಲ್ಲಿ ಪ್ರದೀಪನ । ಮನಬುದ್ಧಿಯ ಕುಂಡದೊಳಗೆ ॥ 121

ಯಜ್ಞ ಕರ್ತಾ ಜೀವವೇ ಯಜಮಾನ । ಮಾಡುವ ಅಜ್ಞಾನಘೃತಾವದಾನ ।
ಆತ್ಮಾನಂದರಸದಲಿ ನಿಮಗ್ನ । ಅವಭೃತ ಸ್ನಾನವದು ಜೀವಕ್ಕೆ ॥ 122

ತಾತ್ಪರ್ಯವೆಂದರೆ ಅಜ್ಞಾನಘೃತದ ಹೊರತು । ಜ್ಞಾನ ಹುತಾಶನ ಪ್ರಕಟವಾಗದೆಂದೂ ।
ಜೀವೇಶ್ವರ ಭೇದವನು ಸುಟ್ಟು ಅದು । ಅಭೇದ ಜ್ಞಾನವ ಪ್ರಕಟಗೊಳಿಸುವದು ॥ 123

ಸ್ವಚ್ಛ ಕನ್ನಡಿಯು ಧೂಳಿನಿಂದಾಚ್ಛಾದಿತ । ಅಗ್ನಿಯ ಜ್ವಾಲೆಯು ಹೊಗೆಯಿಂದಾವೃತ ।
ಹಾಗೆ ಕಾಮ ಕ್ರೋಧಾಭಿಭೂತ । ಅಜ್ಞಾನದಿಂದಾವರಿಸಿದೆ ಜ್ಞಾನವು ॥ 124

ರಾಹು ಗ್ರಹಿಸುವ ಚಂದ್ರಬಿಂಬವನು । ಹಾಗೆ ಹಾವಸೆ ಜಲವನು ।
ಅದರಂತೆ ಸ್ವಯಂ ಪ್ರಕಾಶ ಜ್ಞಾನವನು । ಈ ಮಾಯೆ ಅಚ್ಛಾದಿಸಿರುವದು ॥ 125

ದೊಡ್ಡ ದೊಡ್ಡ ಜ್ಞಾನಿಗಳ ಮತಿ । ಭ್ರಷ್ಟವಾಗಿ ಹೊಂದುವರು ಅಧೋಗತಿ ।
ಉಪಾಯ ತಿಳಿದಿದ್ದರೂ ಅದ ದಾಟದ ಸ್ಥಿತಿ । ಅವರ ಯಥೇಚ್ಛ ಆಚರಣೆಯಿಂದಾಗಿ ॥ 126

ಕಣ್ಣಿದ್ದೂ ಕುರುಡರಾಗುವರು । ಸಂಗ ಬಿಟ್ಟು ನಿಃಸಂಗರಂತಿರುವರು ।
ತಿಳಿದೂ ಕುಸಂಗತಿಯ ಮಾಡುವರು । ಯಥೇಚ್ಛ ಆಚರಣೆ ಮಾಡುತ ॥ 127

ವಾನಪ್ರಸ್ಥವ ಬಿಟ್ಟು ಗೃಹಸ್ಥಾಶ್ರಮಿಗಳಾಗುವರು । ಮಾಡಬಾರದ್ದನ್ನು ತಪ್ಪದೇ ಮಾಡುವರು ।
ತ್ಯಾಜ್ಯ ವಸ್ತುವನ್ನೇ ತೆಗೆದುಕೊಳ್ಳುವರು । ಅದೇ ತಮಗೆ ಪ್ರೀಯವೆಂದು ॥ 128

ಪ್ರಯತ್ನದಿಂದ ಪಾಪಗಳಿಂದ ತಪ್ಪಿಸಿಕೊಳ್ಳುವರು । ಅವರೂ ಅದೃಷ್ಟದಿಂದ ಪಾಪದಲಿ ಬೀಳುವರು ।
ಇಂಥ ಸ್ಥಿತಿಗೇನೆಂಬರು । ಇದೆಂಥ ಜ್ಞಾನಿಗಳ ಜಾಣ್ಮೆ ॥ 129

ಮಹಾಜ್ಞಾನಿ ಇದ್ದವನು । ಪಾಪದ ನೆರಳನ್ನೂ ಬಯಸಲು ।
ಆದರೂ ಕಾರ್ಯಾಕಾರ್ಯವನು ಮರೆವನು । ದೀಪಕ್ಕೆ ಪತಂಗ ಮೋಹಿಸುವಂತೆ ॥ 130

ಪಾಪ ಮಾಡುವದೆಂದರೆ ಅಜ್ಞಾನ । ಇದನವ ತಿಳಿದಿರುವ ಸಂಪೂರ್ಣ ।
ಆದರೆ ಈ ಕಾಮ ಪ್ರವೃತ್ತಿಯ ಕಾರಣ । ಅದರತ್ತ ಗಮನ ಹರಿಸನು ॥ 131

ಈ ಕ್ರಿಯೆಯಿಂದಾಗುವದೆಲ್ಲ । ಕಾಮದಾಟವೇ ಇದೆಲ್ಲ ।
ಕಾಮವೇ ಕಾರಣ ಅನರ್ಥಗಳಿಗೆಲ್ಲ । ಅದೇ ಕ್ರೋಧರೂಪವ ತಳೆಯುವದು ॥ 132

ಕಾಮಗತಿಗಾಗಲು ಅವರೋಧ । ಆಗಲೇ ಆ ಕಾಮವಾಗುವದು ಕ್ರೋಧ ।
ಹೆಜ್ಜೆ ಹೆಜ್ಜೆಗೂ ಇದು ಮೋಕ್ಷಕೆ ವಿರುದ್ಧ । ಜ್ಞಾನ ಪ್ರತಿಬಂಧಕ ಈ ವೃತ್ತಿ ॥ 133

ತೊಂದರೆ ಕಾಮ ಕ್ರೋಧಗಳದು । ಈ ಜೀವಕ್ಕೆ ಹತ್ತಿಯೇ ಬಿಟ್ಟಿರುವದು ।
ಬ್ರಹ್ಮ ಸ್ವರೂಪದ ಸುತ್ತುಮುತ್ತೇ ಇರುವದು । ಜ್ಞಾನದ ಪಂಕ್ತಿಯಲಿದರ ಅಸ್ತಿತ್ವ ॥134

ನೀರಿಲ್ಲದೇ ಮುಳುಗಿಸುವವು । ಅಗ್ನಿಯಿಲ್ಲದೇ ದಹಿಸುವವು ।
ಶಸ್ತ್ರವಿಲ್ಲದೆ ಕೊಲ್ಲುವವು । ಹಗ್ಗವಿಲ್ಲದೇ ಬಂಧಿಸುವವು ॥ 135

ಜ್ಞಾನಿಗಳಿಗಿಲ್ಲ ಅದರೆದುರು ಉಳಿಗಾಲ । ಅದರೊಡನೆ ಪಂದ್ಯದಲಿ ಜ್ಞಾನಿಗಳಿಗೇ ಸೋಲ ।
ಸಾಮರ್ಥ್ಯ ಮಹಾಪ್ರಲಯವ ಮಾಡಬಲ್ಲ । ತಿಳಿಯದಂತೆಯೇ ಪ್ರಾಣಗಳ ಗ್ರಹಿಸಿಬಿಡುವದು ॥ 136

ಚಂದನದ ವೃಕ್ಷದಡಿಯಲಿ । ಕಾಳ ಸರ್ಪವು ಕುಳಿತಿರುವುದು ಸುತ್ತಿ ಸುರುಳಿ ।
ಹಾಗೇ ಕಾಮ ಕ್ರೋಧಗಳು ಒಂದಾಗುತಲಿ । ಜ್ಞಾನಗರ್ಭದ ಮೇಲೆ ಸುತ್ತಿಕೊಂಡಿರುವವು ॥ 137

ಇಂದ್ರಿಯಗಳು ಬುದ್ಧಿ ಮತ್ತು ಮನ । ಇವು ಆ ಕಾಮದ ಸಾಧನ ।
ಅವುಗಳಿಂದ ಜೀವದ ಜ್ಞಾನ । ಮುಚ್ಚಿ ಮೋಹ ಆವರಿಸುವುದು ॥ 138

ಮೊದಲು ಸರ್ಪವ ಕೊಂದು । ನೀವು ಚಂದನವ ಪಡೆಯುವದು ।
ಕಾಮಕ್ರೋಧದಾವರಣಕಿತ್ತೊಗೆದು । ಜ್ಞಾನದ ನಿಧಾನವ ಪಡೆಯಬೇಕು ॥ 139

ಸರ್ಪವನು ಮೊದಲು ಕೊಲ್ಲದೇ । ಯಾರಿಗಾದರೂ ಚಂದನ ಸಿಗುವುದೇ ।
ಕಾಳಸರ್ಪಸಂಹಾರವಿಲ್ಲದೇ । ಹೂಳಿಟ್ಟ ಧನಲಭಿಸದು ॥ 140

ಹಾಗೆ ಪರತತ್ವ ಆತ್ಮಜ್ಞಾನವನು । ಪಡೆಯಲು ಬಯಕೆಯುಳ್ಳವನು ।
ಸರಿಸಬೇಕು ಪ್ರಕೃತಿ - ಜವನಿಕೆಯನು । ಇದೊಂದೇ ಸಾಧನ ಅದಕೆ ॥ 141

ಅದಕೆ ಮೊದಲು ಇಂದ್ರಿಯದಮನ । ಬಳಿಕ ಕಾಮಕ್ರೋಧ ನಿರ್ದಾಲನ ।
ಜೀವವು ಕಾಮ ಕ್ರೋಧಗಳಿಗಾಧೀನ । ಜ್ಞಾನಕ್ಕೆ ಆವರಣ ಅಜ್ಞಾನದ್ದು ॥ 142

ದೇಹಕ್ಕಿಂತ ಇಂದ್ರಿಯ ಸೂಕ್ಷ್ಮ। ಇಂದ್ರಿಯಗಳಿಗಿಂತ ಮನಸೂಕ್ಷ್ಮ ।
ಮನಕಿಂತ ಬುದ್ಧಿ ಸೂಕ್ಷ್ಮ । ಬುದ್ಧಿಗಿಂತ ಸೂಕ್ಷ್ಮ ಪರಮಾತಮ್ಮ ॥ 143

ಸರ್ವಸಂಸಾರ ಧರ್ಮವರ್ಜಿತ । ಹೀಗೆ ಈ ಪರಾತ್ಪರ ಪರಮ ಸತ್।
ಅವನೇ ಈ ಪರಮಾತ್ಮ ಪರಮಹಿತ । ಅದೇ ಅಮೃತ ನಿಜರೂಪದಲಿ ॥ 144

ಶುದ್ಧ , ಬುದ್ಧ , ನಿತ್ಯ ,ಮುಕ್ತ। ಅದೇ ತತ್ವ ಅಭೇಧ ಸ್ಥಿತ ।
ಅದೇ ಪರಮಾನಂದ ಭೂತ । ಪ್ರತ್ಯದ್ಭೂತ ಚೈತನ್ಯದ್ದು ॥ 146

ಯಾವುದಕ್ಕೆಂಬರು ಪಂಚೀಕರಣ । ಅದೇ ತಾ ಮಾಯಾರೂಪ ದರ್ಶನ ।
ಅಧ್ಯಾರೋಪಾಪವಾದೈಕ ಸಾಧನ । ಅದರ ಪ್ರಭೋಧನವಾಗಲು ॥ 145

ಅಪಂಚೀಕೃತ ಪಂಚಭೂತಗಳು । ಎಂಬರು ತನ್ಮಾತ್ರೆಗಳೆಂದವುಗಳು ।
ಅವುಗಳ ಕಾರ್ಯ ಪ್ರಾಣೇಂದ್ರಿಯ ಮನೋಬುದ್ಧಿಯೊಳು । ಆತ್ಮದ 'ಸೂಕ್ಷ್ಮ'ಶರೀರವಾಗಿರುವುದು ॥ 146

ಪಂಚೀಕೃತ ಪಂಚಭೂತಗಳು । ಅದರಿಂದ ವಿರಾಟ ಉದಯವಾಗಲು ।
ಆ ಆತ್ಮದ 'ಸ್ಥೂಲ' ದೇಹಕ್ಕೆ ಜ್ಞಾನಿಗಳು । 'ವಿರಾಟ' ಎಂದೆನ್ನುವರು ॥ 5147

ಸ್ಥೂಲ -ಸೂಕ್ಷ್ಮ - ಶರೀರದಿಂದ । ಕೇವಲ ಸ್ವಸ್ವರೂಪಜ್ಞಾನವದರಿಂದ ।
ಅದೇ ಸಾಭಾಸ 'ಅವ್ಯಾಕೃತ' ಎಂಬರದನ । 'ಕಾರಣ' ಶರೀರ ಆತ್ಮದ್ದು ॥ 148

ಈ ಕಾರಣ ಶರೀರವೆಂಬದು । ಚೈತನ್ಯ ಸ್ವರೂಪವ ಬಿಂಬಿಸುವುದು ।
ಕೇವಲ ಅಜ್ಞಾನಕ್ಕೆ ಕಾರಣೀಭೂತವಾಗುವುದು । ಅವ್ಯಾಕೃತ ಅವ್ಯಕ್ತವೆಂಬರದಕೆ ॥149

ಆತ್ಮದ ಅಜ್ಞಾನವೇ ಇದಕೆ ಕಾರಣವಿರುವುದು । ಸಾವಯವ ನಿರವಯವ ಅಥವಾ ಎರಡೂ ಅಲ್ಲ ಇದು ।
ಈ ದೇಹದ ನಿರಸನವಾಗುವುದು । ಕೇವಲ ಆತ್ಮೈಕ ಜ್ಞಾನದಿಂದ ॥ 150

ಸ್ವಸ್ವರೂಪದಲಿ ಅವಸ್ಥಾನ । ಅದಕೇ ಮೋಕ್ಷವೆಂಬ ಅಭಿಧಾನ ।
ಇದಬಿಟ್ಟು ಮೋಕ್ಷವಿರದಿನ್ನ । ಸ್ವರೂಪಾವಸ್ಥಾನವೇ 'ಮೋಕ್ಷವು' ॥ 151

ಕೇವಲ ಬ್ರಹ್ಮಾತ್ಮೈಕತ್ವದ ಜ್ಞಾನ । ಆದರೆ ಆಗದು ಅಜ್ಞಾನ ನಿರಸನ ।
ಅದಕೆ ತಿಳಿಯಲು ಅಜ್ಞಾನವೆಂದರೇನೆಂಬದನ । ನಿರೂಪಣೆ ಬೇಕದಕೆ ॥ 152

ಅವಿದ್ಯೆಯಿಂದ ಶಬಲವಾಯಿತು । ಅದರಿಂದ ಬ್ರಹ್ಮಕ್ಕೆ ಶಬಲತ್ವ ಬಂತು ।
ಅದಕ್ಕೆ 'ಸತ್' ಎನ್ನಲಾಯಿತು । ಹೀಗದು ವಾಚ್ಯತ್ವ ಪಡೆಯಿತು ॥ 153

ಮೂಲದಲದು ಅತೀಂದ್ರಿಯವಾಗಿತ್ತು । ವಾಚೆಯಿಂದದು 'ಬುದ್ಧಿ ಗ್ರಾಹ್ಯವಾಯಿತು' ।
ಆಗದು ಮನವ ಪ್ರವೇಶಿಸಿತು । ಆಕಾರ ತಳೆಯಿತು ಓಂಕಾರ ॥ 154

ಈ ಓಂಕಾರ ಬ್ರಹ್ಮದ ಜ್ಞಾನ । ಜೊತೆಗೆ ಮಾಡುತ್ತಿರಲು ಈಶ್ವರ ಸ್ಮರಣ ।
ಯಾರದಾಗುವದು ದೇಹಾವಸಾನ । ಅವರ ಜನ್ಮ ಸಾರ್ಥಕವಾಗುವುದು ॥ 155

ಈ ವಾಚ್ಯಬ್ರಹ್ಮದಿಂದ । ಪ್ರಾದುರ್ಭಾವವಾಗುವುದು ಅವ್ಯಕ್ತದ ।
ಅವ್ಯಕ್ತದಿಂದ ಮಹತ್ವದ । ಅದರಿಂದ ಅಹಂಕಾರ ಹುಟ್ಟುವುದು ॥ 156

ಪಂಚ ತನ್ಮಾತ್ರಗಳು ಅಹಂಕಾರದಿಂದ । ಪಂಚಮಹಾಭೂತಗಳು ಅಂದರಿಂದ
ಪಂಚಮಹಾಭೂತಗಳೊಳಗಿಂದ । ಜಗ ನಿರ್ಮಾಣವಾಯಿತು ॥ 157

ಅವಿದ್ಯಾ ಮಾಯಾರೂಪ ದರ್ಶನ । ಅದೇ ಈ ಜಗದರೂಪಲಕ್ಷಣ ।
ಮಾಡಲೀ ಅವಿದ್ಯೆಯ ನಿರಸನ । ಅಜ್ಞಾನದ ವಿವೇಚನೆ ಅವಶ್ಯಕ ॥ 158

ಅತ್ಯಂತ ವಿಶುದ್ಧ ಮತ್ತು ನಿರ್ಮಲ । ಯಾವುದು ಚಿನ್ಮಾತ್ರ ಸ್ವರೂಪ ಕೇವಲ ।
ಅದಕಿಂತ ಬೇರೆ ಆದ 'ಶಬಲ' । ಎರಡನ್ನು ಕೂಡಿಸಲು ಬಾರದು ॥ 159

ಲಕ್ಷವಾದ ಬ್ರಹ್ಮವೇ ಬೇರೆ ಇರುವುದು । ವಾಚ್ಯಕಿಂತ ಬಹಳ ಬೇರೆ ಅದು ।
ಅದಕ್ಕೆ ಈ ಅಜ್ಞಾನವೆಂಬ ಅಡ್ಡಿಯಿದು । ಉಪದೇಶದಿಂದದನು ದೂರ ಮಾಡುವುದು ॥ 160

ನಿದ್ರೆಯಲಿ ಕನಸು ಬಿದ್ದು । ಕಣ್ಣು ಮುಚ್ಚಿದ್ದರೂ ಕಾಣುತಿರುವದು ।
ಅಖಿಲ ತ್ರಿಭುವನಗಳನೂ ಕಾಣುವುದು । ಇದಲ್ಲಕ್ಕೆ ಕಾರಣ ಅವಿದ್ಯೆ ॥ 161

ನೋಡಹೋಗಲು ವಸ್ತುವನೊಂದು । ಅದು ಬೇರೆಯಾಗಿಯೇ ಕಾಣುವುದು ।
ಹಗ್ಗವು ಸರ್ಪದಂತೆನಿಸುವುದು । ಸಿಂಪಿಯಲ್ಲಿ ಬೆಳ್ಳಿ ಕಾಣುವುದು ॥ 162

ನೋಡಿ ಕೇವಲ ಸೂರ್ಯಕಿರಣಗಳ । ಜನರೆನ್ನುವರದಕೆ ಮೃಗಜಲ ।
ಆದರಿದು ಮಾಯೆಯಾಟ ಕೇವಲ । ಜ್ಞಾನಿಗಳೂ ಹತಬಲರಿದರೆದುರು ॥ 163

ಹೊತ್ತಿಸಿದ ದೀವಿಟಿಗೆ ಕೈಯಿಲ್ಲಿ ಹಿಡಿದು । ಯಾರಾದರೂ ಗರಗರನೇ ತಿರುಗಿಸುತಿದ್ದು ।
ಆಗ ಅಗ್ನಿ ಕಂಕಣವು ದೃಗ್ಗೋಚರವಾಗುವುದು । ಈ ಖ್ಯಾತಿಮಾಯೆಯದು ॥ 164

ಅಗ್ನಿಯು ನಿಜವಾಗಿ ಅಲ್ಲಿರುವದು । ಆದರೆ ಈ ಅಗ್ನಿಚಕ್ರವೆಲ್ಲಿರುವುದು ।
ಹಾಗೇಯೇ ಮಾಯಾ ಮೋಹದ ಸುತ್ತು ಇದ್ದು । ಇಲ್ಲದ ಸಂಸಾರವ ನಿರ್ಮಿಸುವುದು ॥ 165

ಇಂಥ ನಿರ್ಧಾರದಿಂದ ಭ್ರಮಕಳೆದು । ಸಂಸಾರದಿ ಉಪರಮವಾಗುವುದು ।
ಈ ದೇಹ ಕಲತ್ರಮನೆ ನನ್ನದು । ಈ ಎಲ್ಲ ಪರಿಶ್ರಮ ವ್ಯರ್ಥ ॥ 166

ಪುತ್ರ ಪಶು ಆದಿ ತೃಷ್ಣಾಪಾಶದಿಂದ । ಅಶೇಷವಾಗಿ ಆವರಿಸಲ್ಪಟ್ಟಿದ್ದ ।
ಜ್ಞಾನಿ ಪಂಡಿತರೆಂದರೆನಿಸಿಕೊಂಡ । ಅವರು- ಸುಖದ ಲವಲೇಶವೂ ಇರದವರಿಗೆ ॥ 167

ಶಾಸ್ತ್ರಕುಶಲ ಪ್ರಜ್ಞಾವಾನ । ಇನ್ನೊಬ್ಬರಿಲ್ಲ ತನ್ನ ಸಮಾನ ।
ಒಳಗೊಳಗೆ ಇವರ ದೊಡ್ಡ ಅಭಿಮಾನ । ಆದರೆ ಅಸಮಾಧಾನಕರವೇ ಅದು ॥ 168

ಇದೇ ಮಾಯೆ ಅಥವಾ ಅಜ್ಞಾನ । ಅಥವಾ ಅವಿದ್ಯಾ ಪ್ರಕೃತಿ ಪ್ರದಾನ ।
ಆರಂಭದಲಿ ಜ್ಞಾನಿಗಳು ಇದರ ನಿರಸನ । ಮಾಡಿದಾಗ ಜ್ಞಾನೋದಯವಾಗುವುದು ॥ 169

ಜ್ಞಾನವೇ ಸ್ವಯಂ ಪ್ರಕಾಶ । ಮಾಡಬೇಕಾಗಿಲ್ಲಿದರ ಉಪದೇಶ ।
ಅಜ್ಞಾನದ್ದಾಗಲು ನಿರಾಸ । ಜ್ಞಾನೋಲ್ಲಾಸ ಪ್ರಕಟವಾಗುವುದು ॥ 170

ತೇಜಃ ಪುಂಜವಾದ ರತ್ನವೊಂದು । ಕಸದಲ್ಲಿ ಬಿದ್ದು ಹೋಯಿತು ಮಣ್ಣಲ್ಲಿ ಹುಗಿದು ।
ಎಷ್ಟೋ ವರ್ಷಗಳು ಹೋದವು ಕಳೆದು । ಅದರ ನೆನಪೂ ಮರೆಯಾಯಿತು ॥ 171

ಕರ್ಮಧರ್ಮ ಸಂಯೋಗ ಬರಲು । ಎಂದೋ ಮತ್ತೆ ಅದು ಸಿಗಲು ।
ಇದು ತನ್ನ ತೇಜವ ಕಳೆದು ಕೊಂಡಿದೆ ಎನಿಸುತಿರಲು । ಕಲ್ಲು ಮಣ್ಣುಗಳ ಜೊತೆ ಸೇರಿ ॥ 172

ಬಳಿಕದನು ಸ್ವಚ್ಛ ತೊಳೆದು । ಮೇಲಿನ ಮಣ್ಣು ಮಶಿಯೆಲ್ಲ ಹೋಗಲು ಕಳೆದು ।
ಹಿಂದಿನಂತೆಯೇ ಹೊಳೆಯತೊಡಗಿದ್ದು । ಹಾಗಿದೆ ಅವಸ್ಥೆ ಜ್ಞಾನದ್ದು ॥ 173

ಮಣ್ಣು ಮಶಿದಿಯೆಂಬುದೇ ಅಜ್ಞಾನ । ಈ ಅಜ್ಞಾನದಿಂದಲೇ ಆವರಿಸಿದ ಜ್ಞಾನ ।
ದೂರ ಮಾಡಲು ಮಣ್ಣು ಮಶಿಗಳನ । ಸಹಜದಲೆ ಹೊಳೆಯುವುದು ರತ್ನ ॥ 174

ಪಾಪಕರ್ಮ ವಿನಾಶಕ । ನಿತ್ಯಾನಿತ್ಯ ವಸ್ತು ವಿವೇಕ ।
ಅದೇ ಸತ್ವ ಶುದ್ಧಿ ಪ್ರದಾಯಕ । ಅದೇ ಜ್ಞಾನದ ಉತ್ಪಾದಕ ॥ 175

ಮಾಯೆಯ ಸಂತೆ ಈ ಜಗತ್ತು । ತುಂಬಿದೆ ಅಸಲಿ ನಕಲಿಯಲಿ ವಸ್ತು ।
ಅಸಲೀ ಎಂದು ನಕಲಿಯನೇ ಕೊಳ್ಳುವದು । ಇಂಥ ಗಿರಾಕಿಗಳೇ ಬಹಳಿಲ್ಲಿ ॥ 176

ಅಸಲಿ ನಕಲಿಗಳನಾರಿಸುವುದು ಹೇಗೆ । ಹೊಳೆಯದಿದು ನಾನಾನೆಂಬರವರ ಬುದ್ಧಿಗೆ ।
ಅದರ ಲಕ್ಷಣವ ತಿಳಿಯುವುದು ಹೇಗೆ । ಅದಾದರೂ ಮೊದಲು ತಿಳಿಯಬೇಕಲ್ಲ ॥ 177

ಜೊತೆಗಿರಬೇಕು ತಿಳಿದವರು ಅದಕೇ । ನಕಲೀ ಅಸಲಿಯಂತೆ ಕಾಣುವುದೇಕೆ ।
ಇದನವನು ತೋರುವ ಪ್ರತ್ಯಕ್ಷತೆ । ಅದರಿಂದ ಹೋದಿತು ಅಜ್ಞಾನದಿಂದಾ ದೊಡ್ಡಿ ಸ್ತನ ॥ 178

ಅಜ್ಞಾನ ಕಳೆದಾಗುಳಿಯುವುದು ಜ್ಞಾನ । ಸಹಜದಲೇ ಆಗುವದಾಗ ಮಾಯಾ ನಿರಸನ ।
ಉಳಿದದ್ದೇ ಸದ್ವಸ್ತು ಎಂಬದನ । ಪ್ರತ್ಯಕ್ಷ ತಿಳಿಯಲು ತಡವಿಲ್ಲ ॥ 179

ಬುದ್ಧಿಯ ದೃಷ್ಟಿ ಉಜ್ವಲವಿದ್ದೂ । ಕಲ್ಪನಾಂಧಃಕಾರದಿಂದ ಕಾಣದಾಗಿದ್ದು ।
ಉಪದೇಶದಿಂದೀ ಕತ್ತಲೆ ಓಡುವುದು । ಆಗ ಉಳಿದಿರುವದೆಲ್ಲ ಜ್ಞಾನವೇ ॥ 180

ವಸ್ತುತಃ (ನಿಜದಲಿ ) ದಾರಿಯಲಿ ಬಿದ್ದಿರಲು ಮಾಲೆ । ಅದನು ನೋಡುವಾಗಿದ್ದರೆ ಸಂಜೆಯ ವೇಳೆ ।
ಸರ್ಪದಂತೆನಿಸುವುದು ಆ ಮಾಲೆ । ಅಜ್ಞಾನದಡ್ಡಿ ಕಾರಣವದಕೆ ॥ 182

ಜೇಬಿನಲ್ಲಿದ್ದ ಗುಪ್ತ ದೀಪ । ಬೆಳಗಲಿದನು ಅಜ್ಞಾನಲೋಪ ।
ಪ್ರಕಟವಾಗುವುದು ನಿಜ ಸ್ವರೂಪ । ಹಾವೆಂಬ ತಿಳುವಳಿಕೆ ಹೋಯಿತು ತಾನೇ ॥ 183

ಅದಕೆ ಅಜ್ಞಾನದ ಅಪಾಯವ । ಕಳೆಯಲು ಉಪದೇಶವೇ ಉಪಾಯ ।
ಆದಕೆ ಜ್ಞಾನಿಗಳು ಸವೆಸಿಕಾಯ । ಅಜ್ಞಾನವೆಂದರೇನು ತಿಳಿಸಿದರು ॥ 184

ಇರಲು ವರ್ತಮಾನ ಪ್ರಪಂಚದಲಿ । ಪ್ರಸಂಗದಿಂದ ಬಂದದ್ದು ಪ್ರಾರಬ್ದದಲಿ ।
ಅದು ಆಜ್ಞಾನದಿಂದಾಗುವ ಕಾರ್ಯ ಭೂತಕಾಲದಲಿ । ಎಂಬ ಜ್ಞಾನವಾಗಬೇಕು ಮೊದಲು ॥ 185

'ಸತ್ಯಂ ಜ್ಞಾನಮನಂತಂ ಬ್ರಹ್ಮ' । ಅವಿದ್ಯೆ ಮಾಯೆ ಎಲ್ಲ ಭ್ರಮ ।
ಆದಾಗ ಇದಕೆ ಉಪರಮ । ಆಗ ಜ್ಞಾನದ ಸಂಭ್ರಮ ॥ 186

ಯಾರ ಬಿಟ್ಟಿಲ್ಲ ದೇಹಾಭಿಮಾನ । ಯಾರೆನಬೇಕಂಥವಗೆ ಸಜ್ಞಾನ ।
ಅಭಿಮಾನದ ಅಧಿಷ್ಠಾನ । ಅದೇ ಮೂರ್ತಿವೆತ್ತ ಅಜ್ಞಾನ ॥ 187

ಯಾವುದಕೆನ್ನುವರು ಮಾಯಾಮಯವೆಂದು । ಯಾವುದರಲ್ಲಿ ಜಗವೆಲ್ಲ ಮುಳುಗಿದ್ದು
ಅವನು ಕಾಣುವನು ಸಂಸಾರ ಸುಳ್ಳೆಂದು । ಅಜ್ಞಾನವೇ ಮೂಲಾಧಾರ ಅದಕೆ ॥ 188

ಅಜ್ಞಾನದಿಂದಲೇ ಇದರ ಉದ್ಭವ । ಅಜ್ಞಾನ ಜನಿತ ಇದರ ವೈಭವ ।
ಏಕತ್ವದಲ್ಲಿದ್ದ ಅನೇಕತ್ವದ ಭಾವ । ಅದರ ಮೂಲವೇ ಅಜ್ಞಾನ ॥ 189

ಒಂದಿಷ್ಟು ಬೆಳಕು ಒಂದಿಷ್ಟು ಕತ್ತಲಲಿ । ಮಾರ್ಗದಲಿ ಹಗ್ಗವೇ ಬಿದ್ದಿರಲಿ ।
ಹಾವಿನಂತದ ಕಾಣುತಲಿ । ಬಹಳ ಭಯವಾಗುವುದು ॥ 190

ಸರ್ಪಾಭಾಸವು ಕೇವಲ ಅಜ್ಞಾನ । ಆ ಆಜ್ಞಾನದಿಂದ ಮುಚ್ಚಿದ ಜ್ಞಾನ ।
ಆಗದೇ ಈ ಅಜ್ಞಾನದ ನಿರಸನ । ಮನ ನಿರ್ಭಯವಾಗವುದು ॥ 191

ಯಾರಿಗೆನಿಸುವುದು ಹೂಮಾಲೆ । ಯಾರಿಗೆ ಕಾಣುವುದು ಕೋಲಿನಂತಲೇ ।
ಕೊನೆಗೂ ಇದು ಎಲ್ಲ ಭಾಸವೇ । ಭ್ರಾಂತಿಯಿಂದುಟಾಗುವ ತಪ್ಪಿವು ॥ 192

ಕೇವಳ ಆಗಮಚನವನನುಸುರಿಸುವವ । ಆಸ್ತಿಕ್ಯ ಶ್ರದ್ದೆಗಳನನುಕರಿಸುವ ।
ಅವನೇ ಬ್ರಹ್ಮಜ್ಞಾನಕ್ಕಧಿಕಾರಿಯಾಗುವ । ನಾಸ್ತಿಕನು ಜನ್ಮ ಜನ್ಮಾಂತದಲೂ ತಿಳಿಯನದ ॥ 193

ವಿಪರೀತದರ್ಶಿಗಳಿಗೀ ವಿಶ್ವದ ಭ್ರಮೆಯಿದ್ದು । ಅಂಥವರ ಜನ್ಮ ಮರಣ ಕ್ರಮ ತಪ್ಪದ್ದು ।
ಅವರಿಗೆ ಬ್ರಹ್ಮತತ್ವವು ದುರ್ಗಮವಾಗಿರುವುದು । ಆ ಅಧಿಕಾರಿಗಳಿಗತ್ಯಂತ ಸುಗಮ ॥194

ಇಲ್ಲಿ ಪ್ರವಚನವು ಕೆಲಸಕ್ಕೆ ಬಾರದು । ಅಥವಾ ಅನೇಕ ವೇದಗಳ ನೋಡಿದ್ದು ।
ಅಥವಾ ಗ್ರಂಥಾರ್ಥವ ಗ್ರಹಿಸುವ ಬುದ್ಧಿಯದು । ಗ್ರಂಥಾವಲೋಕನ ಬಹುಶ್ರುತತೆಯದು ॥ 195

ಶಬ್ದಗಳಿಂದಾಗುವದು ಶಬ್ದಜ್ಞಾನ । ಅದರಿಂದಾದಿತೇ ವಸ್ತು ವಿಜ್ಞಾನ ।
ಬುದ್ಧಿ ಇದ್ದಲ್ಲಿ ಅತಿ ವಿವೇಕ ಸಂಪನ್ನ । ವಸ್ತು ಅವಶಾಧೀನವೆಂದಿಗೂ ಅಲ್ಲ ॥ 196

ಶ್ರುತಿಗಳು ದೊಡ್ಡ ಆಶೆ ತೋರುವವು । ಆದರೆ ಲಭಿಸದೆ ವಸ್ತುವಿನ ಇರವು ।
ಉಳಿದವಲ್ಲೆ ಹೀಗಿದೆ ವಸ್ತುವಿನ ವೈಭವವು ।ಬುದ್ಧಿಯ ಓಟ ನಿಲ್ಲುವದಲ್ಲಿಯೇ ॥ 197

ಷಡ್ದರ್ಶನಗಳೂ ದಣಿದು । ಇನ್ನೂ ವಾದವಿವಾದವೇ ನಡೆದಿದ್ದು ।
ಆತ್ಮವಸ್ತು ಅಲ್ಲೇ ಉಳಿದು । ಅದು ಶಬ್ದಗಳತೆಗೆಂದೂ ಸಿಕ್ಕಿಲ್ಲ ॥ 198

ಆಗಿ ಹೋದರು ದೊಡ್ಡ ಶಬ್ದ ಪಂಡಿತ । ವಸ್ತು ಸೂರ್ಯದೆದುರು ಅವುಖದ್ಯೋತ ।
ಒಮ್ಮೆ ಆದರೆ ವಸ್ತು ಪ್ರಾಪ್ತ । ಶಬ್ದಜಾಲದಲಿ ಬಿಟ್ಟು ಹೋಗುವುದು ॥ 199

ಜಗದಲಿ ರಾತ್ರಿಯ ಕತ್ತಲಲ್ಲಿ । ಕೆಲಸಸಾಗುವವು ದೀಪ ಪ್ರಕಾಶದಲಿ ।
ಅದೇ ಬೆಳಿಗ್ಗೆ ಸೂರ್ಯೋದಯವಾಗಲಿ । ಆಗ ದೀಪವನ್ನಾರು ಕೇಳುವರು ॥ 200

ಮಾತಿನ ವಿಷಯವೇ ಅದಲ್ಲದಿರಲು । ಹೇಗೆ ಸಾಧ್ಯ ಅದು ಉಪದೇಶ್ಯವಾಗಲು ।
ಅದಕೆ ಇರಬೇಕು ವಕ್ತೃವಿನೊಳು । ಅಜ್ಞಾನ ನಿರಸನದ ಧ್ಯೇಯ ಮಾತ್ರ ॥ 201

ಒಂದು ಅಸ್ತಿತ್ವ ಬುದ್ಧಿಯಿಂದ ಉಪಸನ । ಅದರಿಂದ ಆತ್ಮನಾಗಿ ಪ್ರಸನ್ನ ।
ಮಾಡುವ ನಿಜ ತತ್ವ ಪ್ರಕಾಶನ । ಉಪಲಭ್ಯಮಾನವಾಗುವುದು ಉಪಾಸಕನಿಗೆ ॥202

ಆತ್ಮದಲ್ಲಿ ಪರಮಾತ್ಮ ಧ್ಯಾನ । ಎರಡರಲ್ಲೂ ಅಭೇಧ ಅನುಸಂಧಾನ ।
ಈ ರೀತಿ ಮಾಡಲು ಉಪಾಸನ । ಉಪಾಸಕನಿಗಾತ್ಮ ಪ್ರಸನ್ನಳಾಗುವುದು ॥ 203

ಅದಕಿಲ್ಲ ಬೇರೆ ಸಾಧನ । ಅದರಿಂದಲೇ ಆಗಬೇಕು ಪ್ರಸನ್ನ ।
ಸಾಧಕನ ಕಂಡು ಆತ್ಮ ಪ್ರವಣ । ಆತ್ಮ ತಾನೇ ಅವನಿಗೆ ಕೃಪೆ ಮಾಡುವುದು ॥ 204

ವಿಷಯಸಮಾಪ್ತಿಯಾಗಿದಾಗ ವಕ್ತಾರನು ಶ್ರೋತೃಗಳಿಗೆ ಸದೈವ ಪ್ರಾರ್ಥಿಸುವನು ।
ಶ್ರವಣ ಶ್ರಮಕ್ಕಾಗಿ ಕ್ಷಮೆ ಕೇಳುವನು । ಶಿಷ್ಟಾಚಾರವಿದು ಎಲ್ಲೆಡೆ ॥ 205

ಈ ಸಚ್ಚರಿತದ್ದು ಹಾಗಲ್ಲ । ಇದರ ಕರ್ತೃತ್ವ ನನ್ನದಲ್ಲ ।
ಸ್ವಂತ ಸಾಯಿಯೇ ಬರೆಯಿಸುತಿರುವವರೆಲ್ಲ । ನನ್ನ ಕೈಗೆ ಲೆಕ್ಕಣಿಕೆಯನಿತ್ತು ॥ 206

ಅದಕೆ ಗ್ರಂಥಕರ್ತನು ನಾನಲ್ಲ । ನನಗಾಗಿ ಯಾರೂ ದಣಿದಿಲ್ಲ ।
ಅದಕೆ ಕ್ಷಮೆ ಕೇಳಲು ಶ್ರೋತೃಗಳ । ಕರ್ತೃತ್ವದ ಭಾರ ಬರುವುದು ನನ್ನ ತಲೆಗೆ ॥ 207

ಅದರಿಂದ ನನಗಿಲ್ಲ ಭೂಷಣ । ಅಥವಾ ಬರದೆನಗೆ ದೂಷಣ ।
ಎಲ್ಲಿ ಇದಕೆಲ್ಲ ಸಂಪೂರ್ಣ । ಸಾಯಿಯೇ ಕರ್ತೃರಿರುವಾಗ ॥ 208

ಸಾಯಿಯ ಆಜ್ಞೆಯಂತೆ ನಡೆದು । ಅವರು ಹೇಗೆ ಹೇಳಿದ್ದು ।
ಅದರಂತೆಯೇ ಬರೆದದ್ದು । ಅಜ್ಞಾನವಿವೇಚನೆಯ ಶ್ರವಣಾರ್ಥವಾಗಿ ॥ 209

ಪ್ರಕಟ ಪಡಿಸಲು ನಿಜ ವೈಭವ । ತಮ್ಮ ಪ್ರತಾಪ ತಮ್ಮ ಗೌರವ ।
ಪ್ರವೇಶಿಸಿ ನನ್ನಲ್ಲಿ ಸ್ವಯಮೇವ । ವಿಕ್ಷಯಾರ್ಥವ ಗುರುದೇವ ಪ್ರಕಾಶಿಸಿರುವ ॥ 210

ಈ ಗ್ರಂಥವು ದೂಷಿಸಿದವನು । ಮತ್ತು ಈ ಗ್ರಂಥವು ಭೂಷಣವೆನಿಸಿದವನು ।
ವಂದಿಸುವೆ ನಾನವರಿಬ್ಬರನೂ । ನಿಜ ನಾರಾಯಣ ಸ್ವರೂಪರೆಂದು ॥ 211

ಭಕ್ತರ ನಿಜಹಿತವನನುಲಕ್ಷಿಸಿ। ತಾವೇ ನಿಜದ ಚಿಂತೆಯ ರಚಿಸಿ ।
ಶ್ರೀ ಸಾಯಿ ಕಥೆ ಬರೆಯಿಸಿ । ಹೇಮಾಡನ ಕೈ ಹಿಡಿದು ॥ 212


ಯಾರು ಶರೀರವ ಹೊಂದಿದ್ದು । ಕೇವಲ ಲೋಕಾನುಗ್ರಹಕ್ಕೆಂದು ।
ಕುತರ್ಕ ದುರಾಗ್ರಹವ ಖಂಡಿಸಲೆಂದು । ಲೋಕಸಂಗ್ರಹವ ರಕ್ಷಿಸಲು ॥ 213

ಅದಕೆ ಹೇಮಾಡ ಅವರ ಚರಣದಲಿ । ನಮಿಸುವ ಅನನ್ಯ ಭಾವದಲಿ ।
ಮುಂದಿನ ರಸಭರಿತ ಕಥೆಗಳಲಿ । ಶ್ರೋತೃಗಳು ಚಿತ್ತವಿಟ್ಟು ಆಲಿಸಲೆಂದು ॥ 214

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದೀತೇ
ಶ್ರೀ ಸಾಯಿ ಸಮರ್ಥ ಸಚ್ಚರಿತೇ । ಅಜ್ಞಾನ ನಿರಸನಂ ನಾಮ ಪಂಚಾಶತ್ತಮೋಧ್ಯಾಯಃ ಸಂಪೂರ್ಣ॥

ಶ್ರೀ ಸಾಯಿ ಸದ್ಗುರು ಸಾಯಿ ನಾಥಾರ್ಪಣಮಸ್ತು ॥

॥ ಶುಭಂ ಭವತು॥



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐವತ್ತೊಂದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಜಯಜಯ ಸಾಯಿ ಭಕ್ತಧಾರನೇ ಗೀತಾರ್ಥ ಪ್ರಕಾಶಕ ಗುರುವರನೇ ।
ಸರ್ವ ಸಿದ್ಧಿ ಪ್ರದಾಯಕನೇ । ಕೃಪೆ ಮಾಡೆನ್ನ ಮೇಲೆ ॥ 1

ಮಾಡಲು ಶಾಖಶಮನ । ಮಲಯಗಿರಿಯಲಿ ಬೆಳೆಯುವರು ಚಂದನ ।
ಅಥವಾ ವಿಶ್ವ ಜನಕೀಯಲು ಸುಖವನ । ಘನ ವರ್ಷಿಸುವದು ಭೂಮಿಯ ಮೇಲೆ ॥ 2

ಅಥವಾ ದೇವರ ಪೂಜೆಗಾಗಲು । ವಸಂತದಲರಳುವವು ಸುಮಗಳು ।
ಅಥವಾ ಶ್ರೋತೃಗಳ ಸಮಾಧಾನಗೊಳಿಸಲು । ಆಖ್ಯಾನ ಪರಂಪರೆ ಆರಂಭವಾಯಿತು॥ 3

ಕೇಳಲು ಈ ಸಾಯಿಚರಿತ್ರ । ಹೇಳುಗ ಕೇಳುಗರಿಬ್ಬರೂ ಪವಿತ್ರ
ಕೇಳುಗರ ಕಿವಿಗಳು ಪವಿತ್ರ । ಮುಖ ಪವಿತ್ರ ಹೇಳುವವನದು ॥ 4

ಗತಾಧ್ಯಾಯದಲ್ಲಿ ಅಜ್ಞಾನ ನಿರಸನ । ಆದಾಗ ಹೇಗೆ ಪ್ರಕಟವಾಗುವುದು ಜ್ಞಾನ ।
'ತ್ವದ್ವಿದ್ಧಿ ಪ್ರಣಿಪಾತೇನ' । ಶೋಕ್ಲಾರ್ಥದ ನಿರೂಪಣೆಯಾಯಿತು ॥ 5

ಪರಿಸಮಾಪ್ತಿ ಭಗವದ್ಗೀತೆಗೆ । ಹದಿನೆಂಟು ಅಧ್ಯಾಯಗಳ ಕೊನೆಗೆ ।
ಶ್ರೀ ಕೃಷ್ಣ ಕೇಳುವ ಅರ್ಜುನನಿಗೆ । ಎಪ್ಪತ್ತೆರಡನೆಯ ಶ್ಲೋಕದಲ್ಲಿ ॥ 6

ಇಲ್ಲಿಯವರೆಗಾಯಿತು ಪ್ರವಚನ । 'ಅದರಿಂದಾಯಿತೇ ಮೋಹನಿರಸನ' ।
ಆಯಿತೇ ನೀ ಕೇಳುತಿದ್ದುದರ ಜ್ಞಾನ । ಎಂದು ಸ್ಪಷ್ಟ ಪ್ರಶ್ನೆಯ ಕೇಳಿದನು ॥ 7

ಹಾಗೇಯೇ ಪಾರ್ಥನೂ ಉತ್ತರವಿತ್ತು । 'ನನ್ನ ಮೋಹವೆಲ್ಲ ಹಾರಿಹೋಯಿತು' ।
ಮತ್ತೆಂದ 'ಮೋಹವಿಚ್ಛಿತಿಯಾಯಿತು । ಆದರೇ ಜ್ಞಾನ ಪ್ರಾಪ್ತಿಯಾಗಲಿಲ್ಲ' ॥ 8

ಮೋಹವೆಂಬುದು ಕೇವಲ ಅಜ್ಞಾನವಿದ್ದು । ನೋಡಲು ಮಾತ್ರ ಶಬ್ದಗಳು ಎರಡು ।
ಅರ್ಥಭೋಧದಲ್ಲಿ ಭೇಧ ವಿರದದ್ದು । ಗೀತಾರ್ಥಜ್ಞರು ತಿಳಿದಿರುವರಿದ ॥ 9

ಯತ್ವಯೋಕ್ತವಚಸ್ತೆನ' । 'ಮೋಹೊಯಂ ವಿಗತೋ' ಎಂಬದನ್ನ ।
ಹೊನ್ನೊಂದನೆಯ ಅಧ್ಯಾಯಾರಂಭದಲಿ ಅರ್ಜುನ । ಶ್ರೀ ಕೃಷ್ಣನಿಗೆ ಹೇಳಿರುವನು ॥ 10

ಈಗಿನ ಹೊಸ ಅಧ್ಯಾಯಾರಂಭದಲಿ । ಕಾಕಾ ಸಾಹೇಬರನು ತಂದು ಅಲ್ಲಿ ।
ಹೇಗೆ ಸ್ಥಾಪಿಸಿದರವರನು ಶಿರಡಿಯಲ್ಲಿ । ಆ ವಿಸ್ಮಯಯಜನಕ ವಿವೇಚನೆ ಕೇಳಿರಿ ॥11

ಅವರಿಗೆ ಶಿರಡಿಯ ಋಣಾನುಬಂಧ । ಸಾಯಿಯೊಡನವರ ದೃಢಸಂಬಂಧ ।
ಮೂಲದಲಿ ಹೇಗೆ ಕಾರಣ ನಿರ್ಭಂಧ । ಅದನೆಲ್ಲ ಸಂಪೂರ್ಣ ಹೇಳುವೆ ॥ 12

ಅವರ ಕಥೆಗಳು ಬೇಕಾದಷ್ಟು । ಹಿರಿಕಿರಿಯರಿಗೆಲ್ಲ ಗೊತ್ತು ।
ಆದರವರು ಆರಂಭದಲಿ ಹೇಗೆ ಶಿರಡಿಯ ಕುರಿತು । ಬಂದರೆಂಬುವುದು ತಿಳಿದಿಲ್ಲ ಎಲ್ಲರಿಗೂ ॥ 13

ಪೂರ್ವಪುಣ್ಯದ್ದೆ ಇದು ಸಂಗತಿ । ಅದರಿಂದಲೇ ದೇವರ ಕೃಪಾ ದೃಷ್ಟಿ ।
ಇದರಿಂದ ಮುಂದೆ ಸದ್ಗುರುವಿನ ಭೆಟ್ಟಿ । ಸ್ವಾನಂದ ಪುಷ್ಟಿ ಶಿಷ್ಯನಿಗೆ ॥ 14

ಇದು ಹಿಡಿದು ಈಗ ಈ ಅಧ್ಯಾಯ । ಹೇಳುವುದು ಕಥಾತ್ರಯ ।
ಮೂರುಭಕ್ತರ ಈ ಮಹೋದಯ । ಶ್ರೋತೃಗಳ ಹೃದಯ ತಣಿಸುವುದು ॥ 15

ಇದಲ್ಲದೆ ಉಪಾಯ ನೂರಾರು । ಪರಮಾರ್ಥ ಪ್ರಾಪ್ತಿಗಾಗಿ ಮಾಡಿದರೂ ।
ಬೀರದಿರೆ ಕೃಪಾದೃಷ್ಟಿ ಗುರು । ಪರಮಾರ್ಥವೆಂದೂ ಸಿಗಲಾರರು ॥ 16

ಈ ಅರ್ಥದ ಕಥೆಯ ರುಚಿರ । ಕೇಳಿದಾಗ ತಣಿಯುವುದು ಆತುರ ।
ಶ್ರೋತೃಗಳ ಮನದಲ್ಲಿ ಆದರ । ನಿಜ ಸ್ವಾರ್ಥದ್ದಾದೀತಿದರಿಂದ ॥ 17

ಗುರುಭಕ್ತರ ಸಮಾಧಾನ । ಮಾಡುವದೀ ಅಧ್ಯಾಯ ಪರಮಾಪಾವನ ।
ಶ್ರೋತೃಗಳಾಗಿ ಸಾವಧಾನ । ಹಿತಕರವಾದಿದನು ಕೇಳಬೇಕು ॥ 18

ಆ ಪೂರ್ವಪೀಠಿಕೆ ಅವರದು । ರಸಿಕರಿಗೆ ಆನಂದದಾಯಕವದು ।
ಭಕ್ತಭಾವಿಕರಿಗೆ ಹೇಳುತಿದ್ದು । ಶ್ರವಣಾನಂದ ಪಡೆಯುವುದಕೆ ॥ 19

ಹರಿಸೀತಾರಾಮ ದೀಕ್ಷಿತರು । ಕಾಕಾ ಸಾಹೇಬರೆಂದು ಹೆಸರಾದವರು ।
ಸಾಯಿಬಾಬಾರ ಎಲ್ಲ ಭಕ್ತರು । ಪ್ರೀತ್ಯಾದರಗಳಿಂದ ನೆನೆವರವರನು ॥ 20

ಸನ್ ಹತ್ತೊಂಬತ್ತು ನೂರಾ ಒಂಭತ್ತರವರೆಗೆ । 'ಸಾಯಿ' ಈ ಹೆಸರೇ ಗೊತ್ತಿರಲಿಲ್ಲವರಿಗೆ ।
ಮುಂದೆ ಅವರೇ ಪರಮಭಕ್ತರಾದರು ಸಾಯಿಗೆ । ಇದೆಲ್ಲರಿಗೂ ತಿಳಿದಿದೆ ॥ 21

ವಿಶ್ವವಿದ್ಯಾಲಯದ ಶಿಕ್ಷಣ ಮುಗಿದು । ಎಷ್ಟೋ ವರ್ಷಗಳೂ ಹೋಗಲು ಕಳೆದು ।
ನಾನಾ ಸಾಹೇಬ ಚಾಂದೋಕರರದು । ಒಮ್ಮೆ ಆಗಮನವಾಯಿತು ಲೋಣಾವಲೆಗೆ ॥ 22

ದೀಕ್ಷಿತರವರ ಹಳೆಯ ಮಿತ್ರರು । ಎಷ್ಟೋ ವರ್ಷಗಳ ನಂತರ ಭೆಟ್ಟಿಯಾಗಿದ್ದರು ।
ಸುಖ ದುಃಖದ ವಾರ್ತೆಗಳನವರು । ಪರಸ್ಪರರಿಗೆ ಹೇಳಿಕೊಂಡರು ॥ 23

ಲಂಡನ್ ನಗರದಲ್ಲಿ ರೈಲು ಹತ್ತುತ್ತಿರಲು । ಜಾರಿತು ದೀಕ್ಷಿತರ ಕಾಲು ।
ಆ ವ್ಯಥೆಗೆ ಮಾಡಿದರೂ ನೂರಾರು ಉಪಾಯಗಳು । ಉಪಯೋಗವಿಲ್ಲದಂತಾಯಿತು ॥ 24

ಸಾದ್ಯಂತ ವಾರ್ತೆ ಆ ವ್ಯಥೆಯದು । ಸಹಜ ಸಂಭಾಷಣೆಯಲಿ ಬಂದು ।
ಅಲ್ಲಿ ನಾನಾರ ನೆನಪಿಗೆ ಬಂದದು । ಶ್ರೀ ಸಾಯಿಬಾಬಾರ ಉಪಯುಕ್ತತೆ ॥ 25

ನಿಮ್ಮ ಆ ಕಾಲು ಕುಂಟುವದು । ಎನಿಸುವದೇ ಅದು ನಿಃಶೇಷ ಸರಿಯಾಗಬೇಕೆಂದು ।
ನಡೆಯಿರಿ ನಮ್ಮ ಗುರುವಿನ ದರ್ಶನಕ್ಕೆ ಎಂದು । ಆಗ ನಾನಾ ದೀಕ್ಷಿತರಿಗೆ ಹೇಳಿದರು ॥26

ಬಳಿಕ ನಾನಾ ವಿಸ್ಮಯ ವಿಶೇಷವೆಂದು । ಸಂಪೂರ್ಣ ಸಾಯಿಯ ವೃತ್ತ ಹೀಗೆಂದು ।
ಆನಂದದಿ ದೀಕ್ಷಿತರಿಗೆ ಹೇಳಿದ್ದು । ಮಹಾತ್ಮೆ ಸಂತಾವಸಂತರದು ॥ 27

"ನನ್ನವರೆಂಬ ಮನುಷ್ಯರು । ಏಳು ಸಮುದ್ರಗಳಾಚೆ ಇದ್ದರೂ ।
ನಾ ಅವರ ಹಕ್ಕಿಯ ಕಾಲಿಗೆ ದಾರಕಟ್ಟಿದಂತಾದರೂ । ತಡವಿಲ್ಲದವರ ಎಳೆತರುವೆ" ॥ 28

ಇದು ಬಾಬಾರ ನಿತ್ಯವಚನ । ಅದರ ಮೇಲೆ ನಾನಾರ ಪ್ರವಚನ ।
ಎಂದರು ಆಗದು ನಿಮಗವರ ಆಕರ್ಷಣ । ನೀವವರವಲ್ಲದಿರಲು ॥ 29

ನೀವವರವರಿದ್ದ ವಿನಃ । ನಿಮಗಾಗಲಾರದವರ ದರ್ಶನ ।
ತಿಳಿಯಿರಿ ಇದೇ ಬಾಬಾರ ಮುಖ್ಯ ಗುರುತೆಂಬದನ । ಅದಿಲ್ಲದೇ ನೀವೇ ಅಲ್ಲಿ ಹೋಗಲಾದಿತೇ ॥ 30

ಸಾಯಿಯ ವರ್ಣನೆಯ ಕೇಳಿ ಹೀಗೆ । ಸಮಾಧಾನವಾಯಿತು ದಿಕ್ಷೀತರ ಮನಸಿಗೆ ।
ಬಳಿಕವರೆಂದರು ನಾನಾಗೆ । ನಾನೂ ಬಾಬಾರ ದರ್ಶನ ತೆಗೆದುಕೊಳ್ಳವೆ ॥ 31

ನನ್ನಕಾಲಿದು ಏನಂಥದು । ಈ ದೇಹವೇ ನಶ್ವರವಾದುದು ।
ನನ್ನ ಕಾಲಿನ ವ್ಯಥೆ ಕೊನೆತನಕ ಇರವಲ್ಲದು । ನನಗದರ ಚಿಂತೆ ಇಲ್ಲ ॥ 32

ನನ್ನ ಗುರುವಿನ ದರ್ಶನಕ್ಕೆ ನಾ ಹೋಗುವೆನು । ಪಡೆಯಲು ಆ ನಿರತಿಶಯ ಸುಖದ ಸಂಪಾದನೆಯನು ।
ಹಿಡಿದಿಲ್ಲ ಅಲ್ಪ ಸುಖದ ಕಾಮನೆಯನು । ಅದರ ಯಾಚನೆ ನಾ ಮಾಡಲಾರೆ ॥ 33

ಬ್ರಹ್ಮವ ಬಿಟ್ಟು ಬೇರಿಲ್ಲ ಸುಖ । ಆ ಸುಖವೇ ಆಮೌಲಿಕ ।
ನಾನಾಗುವೆ ನಿಮ್ಮ ಸೇವಕ । ಈ ಒಂದು ಅಮೂಲ್ಯ ಸುಖಕ್ಕಾಗಿ ॥ 34

ಇರಲೆನ್ನ ಕಾಲಿನ ಕುಂಟು । ಅದರ ವಿವಂಚನೆ ನನಗಿಲ್ಲ ಇನಿತೂ ।
ಆದರೆ ನನ್ನ ಕುಂಟು ಮನವಿನಿನಿತು । ಸರಿಪಡಿಸಲೆಂದು ಪ್ರಾರ್ಥಿಸುವೆ ।. 35

ಸಾಧನೆ ಮಾಡುತ್ತ ಬಹಳ ದಣಿದೆ । ಆದರೂ ಮನ ನಿಶ್ಚಲವಾಗದೇ ।
ಪ್ರಯತ್ನದಿಂದ ಸ್ವಾಧೀನದಲ್ಲಿಡಬೇಕೆಂದೆ । ಆದರೆ ಜಾರುವುದು ನಾನರಿಯದಂತೆ ॥ 36

ಎಷ್ಟೇ ಎಚ್ಚರಿಕೆ ವಹಿಸಿದರೂ । ಅತ್ಯಂತ ಮನೋನಿಗ್ರಹ ಮಾಡಿದರೂ ।
ಕಣ್ಣು ತಪ್ಪಿಸಿಹೋಗುವುದು ಆದರೂ । ಆಶ್ಚರ್ಯವೆನಿಸುತಿದೆ ಈ ಮನಸಿನದು ॥ 37

ಆದರೂ ನಾನಾ ಮನಃ ಪೂರ್ವಕವಾಗಿ ನಾನು । ನಿಮ್ಮ ಗುರುವಿನ ದರ್ಶನ ತೆಗೆದುಕೊಳ್ಳುವೆನು
।ನನ್ನ ಮನಸಿನ ಈ ಕುಂಟುತನವನು । ಕಳೆಯಬೇಕೆಂದು ಪ್ರಾರ್ಥಿಸುವೆ ॥ 38

ನಶ್ವರ ಶರೀರ ಸೌಖ್ಯದತ್ತ ಉದಾಸಿನತೆ । ಆತ್ಯಂತಿಕ ಸೌಖ್ಯದತ್ತ ಆಸ್ಥೆ ।
ಇಂಥ ಭಕ್ತನ ಪರಮಾರ್ಥಕ್ಕೆ । ಪರಮ ಉಲ್ಹಾಸ ಸಾಯಿಗೆ ॥ 39

ಧಾರಾಸಭೆಯ ಚುನಾವಣೆಬಂದು । ಎಲ್ಲೆಡೆ ವಿಷಯ ಅದೇ ಒಂದು ।
ಎಲ್ಲೆಲ್ಲೂ ಅನೇಕ ಜನ ತೊಡಗಿದ್ದು । ಈ ಕೆಲಸ ಬಹು ಸಂಖ್ಯ ॥ 40

ಕಾಕಾ ಸಾಹೇಬರು ತಮಗಾಗಿ । ಜನಮತಗಳಿಸುವ ಸಲುವಾಗಿ ।
ಬಂದಾಗ ಸ್ನೇಹಿತರ ಭೆಟ್ಟಿಗಾಗಿ । ತತ್ಕಾಲದಲಿ ಅಹಮದ ನಗರಕ್ಕೆ ॥ 41

ಕಾಕಾ ಸಾಹೇಬ ಮೀರೀಕರ । ಎಂಬ ಒಬ್ಬ ಅಲ್ಲಿಯ ಸರದಾರ ।
ಮನೆಯವರಂತೇ ಇದ್ದ ಆ ಸ್ನೇಹಿತರ । ಮನೆಯಲ್ಲಿ ಸುಖವಾಗಿ ಇದ್ದರು ॥ 42

ಅದೇ ಆ ಸಮಯದಲ್ಲಿ । ಕುದುರೆಯ ಪ್ರದರ್ಶನವಿತ್ತು ನಗರದಲ್ಲಿ ।
ಅದಕೆ ನಾನಾ ಪ್ರಕಾರದ ಜನರಲ್ಲಿ । ತೊಡಗಿದ್ದರು ಆ ಕಾರ್ಯದಲ್ಲಿ ॥ 43

ಬಾಳಾ ಹಾಸೇಬ ಮೀರೀಕರರು । ಕೋಪರಗಾವದ ಮಾಮಲೆದಾರರು ।
ಪ್ರದರ್ಶನಕ್ಕೆ ಹಾಜರಿದ್ದರು । ಅಹಮದನಗರ ಪಟ್ಟಣದಲ್ಲಿ ॥ 44

ಯಾವುದಕೆ ದೀಕ್ಷಿತರ ಆಗಮನವಾಗಿತ್ತು । ಅದೆಲ್ಲ ಕಾರ್ಯ ಆಗ ಮುಗಿದಿತ್ತು ।
ಶಿರಡಿಯವರೆಗೆ ಹೇಗೆ ಹೋಗಲಾದೀತು । ಯಾರೆನ್ನನಲ್ಲಿ ಕರೆದೊಯ್ಯಬೇಕು॥ 45

ಅಲ್ಲಿಯ ಕಾರ್ಯವೆಲ್ಲ ಮುಗಿದಾಗ । ಕಾಣ ತೊಡಗಿತು ಶಿರಡಿಯ ಮಾರ್ಗ ।
ಬರಬೇಕು ಬಾಬಾರ ದರ್ಶನಯೋಗ । ಇದೊಂದೇ ಒಳಗಿರುವ ಅನಿಸಿಕೆ ॥ 46

ನನ್ನ ಜೊತೆಗಾರು ಬಂದಾರು । ಬಾಬಾರೆದುರು ಕರೆದೊಯ್ದಾರು ।
ಅವರ ಚರಣಗಳ ಮೇಲೆನ್ನ ಹಾಕಿಯಾರು । ಇದೇಚಿಂತೆ ದೀಕ್ಷಿತರಿಗೆ ॥ 47

ಚುನಾವಣೆಯ ಕೆಲಸ ಮುಗಿಯಿತು । ಇನ್ನು ಶಿರಡಿಗೆ ಹೋಗುವದೆಂತು ।
ದೀಕ್ಷಿತರಿಗೀ ಚಿಂತೆ ಹತ್ತಿತು । ಆದರದಿ ಮೀಶರರಿಕೆರರಿಗೆ ವಿನಂತಿಸಿದರು ॥ 48

ಕಾಕಾಸಾಹೇಬ ಮೀರಿಕರ । ಬಾಳಾಸಾಹೇಬ ಅವರ ಕುಮಾರ ।
ವಿಚಾರ ಮಾಡಿದರು ಪರಸ್ಪರ । ದೀಕ್ಷಿತರೊಡನಾರು ಹೋಗಬೇಕೆಂದು ॥ 49

ಇಬ್ಬರಲ್ಲಿ ಯಾರಾದರೊಬ್ಬರು । ಇದ್ದರೆ ಜೊತೆಗೆ ಬೇಕಿಲ್ಲ ಇನ್ನೊಬ್ಬರು ।
ಆದರೂ ಯಾರು ಹೋಗುವರು । ಎಂಬ ವಿಚಾರ ನಡೆಯಿತು ॥ 50

ಮಾನವನ ರೀತಿಯಲ್ಲಿ ಮನುಷ್ಯನ ಕಲ್ಪನೆ । ಆದರೆ ಈಶ್ವರನದು ಬೇರೆಯೇ ಯೋಜನೆ।
ನಡೆಯಿತು ಅಕಲ್ಪಿತ ಘಟನೆ । ದೀಕ್ಷಿತರ ಶಿರಡೀಗಮನದ್ದು ॥ 51

ಇಲ್ಲಿ ಹೀಗಿವರು ತಳಮಳಿಸುತಿದ್ದುದು । ಮತ್ತೊಂದೆಡೆ ಏನು ನಡೆಯುತ್ತಿರುವುದು ।
ಭಕ್ತನ ಪ್ರಬಲ ಇಚ್ಛೆಯನು ಕಂಡು । ಬಾಬಾ ಹೇಗೆ ಕಳವಳಗೊಂಡರು ॥ 52

ದೀಕ್ಷಿತರು ವಿಚಾರ ಮಾಡುತ್ತ ಈ ರೀತಿಯಾಗಿ । ಕುಳಿತರಲ್ಲಿ ಸಂಚಿತರಾಗಿ ।
ಆಶ್ಚರ್ಯವಾಯಿತೆಲ್ಲರಿಗೆ । ಮಾಧವರಾಯರೇ ಬಂದಾಗ ನಗರಕ್ಕೆ ॥ 53

ಮಾಧವರಾಯರಿಗವರ ಮಾವನಿಂದ । ತಂತಿ ಬಂದಿತು ನಗರದಿಂದ ।
ಅದರಲ್ಲಿ ಅವರತ್ತೆ ತೀರ ಅಸ್ವಸ್ಥರಿದ್ದ । ಕಾರಣ ಹೊರಟು ಬರಲು ತಿಳಿಸಿದ್ದರು ॥ 54

ತಂತಿ ಸಿಕ್ಕ ಕೂಡಲೇ ಸಿದ್ಧರಾದರು । ಬಾಬಾರ ಅನುಜ್ಞೆಯನ್ನೂ ಪಡೆದರು ।
ಚಿಥಳಿ ಸ್ಟೇಶನ್ನಿಗೆ ಹೊರಟರು । ಜೊತೆಗೆ ಪತ್ನಿಯ ಕರೆದುಕೊಂಡು ॥ 55

ಮೂರುಗಂಟೆಯ ಗಾಡಿಹಿಡಿದರು । ಇಬ್ಬರೂ ನಗರಕ್ಕೆ ಬಂದರು ।
ಬಂಡಿಯಿಂದ ಕೆಳಗಿಳಿದರಿಬ್ಬರೂ । ಬಾಗಿಲಿಗೆ ಗಾಡಿ ಬಂದಾಗ ॥ 56

ಇಷ್ಟಾಗುವಾಗ ನಾನಾ ಸಾಹೇಬ ಪಾನಶೆಯವರು । ಮತ್ತು ಅಪ್ಪಾಸಾಹೇಬ ಗದ್ರೆಎಂಬವರು ।
ಪ್ರಸಂಗವಶವಾಗಿ ಅಲ್ಲಿಗೆ ಬಂದರು । ಪ್ರದರ್ಶನ ನೋಡಲು ಆ ಮಾರ್ಗದಲ್ಲಿ ॥57

ಮಾಧವರಾಯರು ಕೆಳಗಿಳಿಯುವದು । ಅಕಸ್ಮಾತ ಅವರ ದೃಷ್ಟಿಗೆ ಬಿದ್ದು ।
ಬಹಳ ಆಶ್ಚರ್ಯವೆನಿಸಿದ್ದು । ಹಿಡಿಸಲಾರದಷ್ಟಾನಂದವಾಯಿತು ॥ 58

ಎಂದರು ನೋಡಲ್ಲಿ ಸುದೈವದಿಂದ ಇವರು। ಶಿರಡಿಯಲ್ಲಿ ಪೂಜಾರಿಯಾದ ಮಾಧವಾರಾಯರು ।
ಇದಕಿಂತ ಬೇರೆ ಒಳ್ಳೆಯವರು । ದೀಕ್ಷಿತರ ಕರೆದೊಯ್ಯುಲಿನ್ನಾರು ಬೇಕು ? ॥ 59

ಬಳಿಕವರನ್ನು ಕರೆದು ಹೇಳಿದರು । ದೀಕ್ಷಿತರೆ ಕಾಕಾ ಬಂದಿರುವರು ।
ಮಿರೀಕರರಲ್ಲಿಳಿದು ಕೊಂಡಿರುವರು । ಬಾಬಾರ ಕೌತುಕವ ನೋಡಿರಿ ॥ 60

ದೀಕ್ಷಿತರು ನಮ್ಮ ಪರಮ ಸ್ನೇಹಿತರಿದ್ದು । ನಿಮಗವರ ಗುರುತಾಗುವದು ।
ಅವರು ಶಿರಡಿಗೆ ಹೋಗಲತ್ಯಂತ ಉತ್ಸುಕರಾಗಿದ್ದು । ನಿಮ್ಮ ಆಗಮನದಿಂದ ಸಂತೋಷ ಅವರಿಗೆ ॥ 61

ಹೀಗವರಿಗೆ ಹೇಳಿಕಳಿಸಿ । ದೀಕ್ಷಿತರಿಗೂ ವಾರ್ತೆ ತಿಳಿಸಿ ।
ಅವರ ಚಿಂತೆ ದೂರಾಯಿತದನಾಲಿಸಿ । ಅತ್ಯಂತ ಹರುಷಗೊಂಡರು ॥ 62

ಮಾವನ ಮನೆಗೆ ಹೋಗಿ ನೋಡಿದಾಗ । ಸರಿಯಾಗಿತ್ತು ಅತ್ತೆಯ ಆರೋಗ್ಯ ।
ಮಿರೀಕರರವರೆ ಕರೆಕಳುಹಿದಾಗ । ಮಾಧವರಾಯರು ವಿಶ್ರಾಂತಿ ಪಡೆಯುತ್ತಿದ್ದರು ॥ 63

ಮನ್ನಣೆಯಿತ್ತು ಅವರ ಕರೆಗೆ । ಒಂದಿಷ್ಟು ಸಂಜೆಯಾದ್ಯಾಗೆ ।
ಮಾಧವರಾಯರು ಹೋದರಲ್ಲಿಗೆ । ದೀಕ್ಷಿತರ ಭೆಟ್ಟಿಯಾಗಲು ॥ 64

ಭೆಟ್ಟಿಯಾಗುತಿದ್ದು ಅದೇ ಮೋದಲ ಸಲ ಅವರು । ಬಾಳಾ ಸಾಹೇಬ ಇಬ್ಬರಪರಿಚಯ ಮಾಡಿಸಿದರು ।
ರಾತ್ರಿ ಹತ್ತು ಗಂಟೆಯಗಾಡಿಗೆ ಅವರಿಬ್ಬರೂ । ಹೊರಡುವದನು ಗೊತ್ತು ಮಾಡಿದರು ॥ 65

ಹೀಗೆ ಈ ವಿಚಾರ ಗೊತ್ತು ಪಡಿಸಿದ್ದು । ಬಳಿಕ ನೋಡಿರಿ ಚಮತ್ಕಾರ ನಡೆದದ್ದು ।
ಬಾಳಾಸಾಹೇಬರು ಬದಿಗೆ ಸರಿಸಿದ್ದು । ಬಾಬಾರ ಭಾವಚಿತ್ರದ ಮೇಲಿನ ತೆರೆಯನು ॥ 66

ಬಾಬಾರ ಭಾವ ಚಿತ್ರವಿದು । ಮೇಘಾ ಬಾಬಾಬರಪರಮಭಕ್ತನಿದ್ದು ।
ಪರಮ ಪ್ರೀತಿಯಿಂದ ಪೂಜಿಸುತಿದ್ದು । ಶಂಕರ ತ್ರಿನೇತ್ರನೆಂಬ ಭಾವನೆ ಇಟ್ಟುಕೊಂಡು ॥ 67

ಅದರ ಕಾಜು ಒಡೆದಿತ್ತು । ಅದನು ಮತ್ತೇ ಕೂಡಿಸಬೇಕಾಗಿತ್ತು ।
ಬಾಳಾಸಾಹೇಬರ ಜೊತೆಗೆ ಹೊರಟು । ನಗರಕ್ಕೆ ಬಂದಿದ್ಧರು ಮೊದಲ ಸಲ ॥ 68

ಈಗ ಆ ಭಾವಚಿತ್ರವು ಸಿದ್ಧವಾಗಿ ಮತ್ತೇ । ದೀಕ್ಷಿತರದೇ ದಾರಿ ನೋಡುತ್ತಿರುವಂತೆ ।
ಇಡಲಾಗಿತ್ತು ವಸ್ತ್ರದಲ್ಲಿ ಸುತ್ತಿ ಮೀರಿಕರರ ಪಡಸಾಲೆಯಲ್ಲಿ ॥ 69

ಅಶ್ವ ಪ್ರದರ್ಶನ ಮುಗಿಸಿಕೊಂಡು । ಬಾಳಾಸಾಹೇಬರು ತಿರುಗಿ ಬರುವದು ।
ಇನ್ನು ತಡವಾಗುವದೆಂದು । ಮಾಧವರಾಯರ ಕೈ ಗೊಪ್ಪಿಸಿದರದನು ॥ 70

ಮುಸುಕಿನಿಂದದನು ಹೊರತೆಗೆದು । ಮಾಧವರಾಯರ ಕೈಗೆ ಕೊಡುತಿದ್ದು ।
ಎಂದರು ಬಾಬಾರಜೊತೆ ಮಾಡಿಕೊಂಡು । ಸುಖದಿಂದಶಿರಡಿಗೆ ಹೋಗಿ ಬನ್ನಿ ॥ 71

ಆಗ ಆ ಮನೋಹರವಾದ ಚಿತ್ರವನ । ಮೊದಲ ಸಲ ಮಾಡಲು ಅದರ ಅವಲೋಕನ ।
ಕಾಕಾಸಾಹೇಬರದಕೆ ಮಾಡಿ ನಮನ । ಆನಂದ ನಿರ್ಭರರಾಗಿ ನೋಡತೊಡಗಿದರು ॥ 72

ನೋಡಿ ಆ ಘಟನೆ ವಿಚಿತ್ರ । ಅಂತೆಯೇ ಅಕಲ್ಪಿತ,ರಮ್ಯ, ಪವಿತ್ರ ।
ಸಮರ್ಥಸಾಯಿಯ ಭಾವ ಚಿತ್ರ । ದೀಕ್ಷಿತರ ನೇತ್ರಗಳಲ್ಲಿ ಸ್ಥಿರವಾದವು ॥ 73

ಯಾರ ದರ್ಶನದ ಉದ್ದೇಶವಿತ್ತು । ಅವರದೇ ಮೂರ್ತಿವೆತ್ತ ಪ್ರತಿಮೆ ಇದಾಗಿತ್ತು ।
ದಾರಿಯಲ್ಲಿದ್ದಾಗಲೇ ನೋಡಲು ಸಿಕ್ಕಿತು । ಅತ್ಯಂತ ಅಲ್ಹಾದವಾಯಿತು ॥ 74

ಅದೂ ಬರಬೇಕು ಶಿರಡಿಯಲ್ಲಿ । ಕಾಕಾಸಾಹೇಬ ಮಿರೀಕರರ ಮನೆಯಲ್ಲಿ ।
ಅದೇ ಕಾಲಕ್ಕಿರಬೇಕು ದೀಕ್ಷಿತರೂ ಅಲ್ಲಿ । ಈ ವಿಚಿತ್ರ ಯೋಗವನ್ನು ನೋಡಿ ॥ 75

ದೀಕ್ಷಿತರ ಮನದ ಭಾವಾರ್ಥ । ಪೂರೈಸಲು ಸಾಯಿ ಸಮರ್ಥ ।
ಎನಿಸಿತು ಬಂದು ನಿಂತಿಹರು ಈ ನಿಮಿತ್ತ । ಭಕ್ತಮಿರೀಕರರ ಮನೆಯಲ್ಲಿ ॥ 76

ಲೋಣಾವಳಿಯಲ್ಲಿ ನಾನಾರ ದರ್ಶನ । ಅವರೊಡನೆ ನಡೆದ ಸಂಭಾಷಣ ।
ಅಲ್ಲಿಯೇ ಬಾಬಾರ ಗುರುತ್ವಾಕರ್ಷಣ । ಭೇಟಿಯ ಬೀಜಾರೋಪಣವಾಯಿತು ॥ 77

ಇಲ್ಲದಿದ್ದರೆ ಶಿರಡಿಯಲ್ಲಿದ್ದ ಚಿತ್ರವದು । ಅದೇ ಕಾಲಕ್ಕೇಇಲ್ಲಿಗೇಕೆ ಬಂದದ್ದು ।
ಇಷ್ಟು ದಿನ ಇಲ್ಲಿಯೇ ಉಳಿದದ್ದು । ಮುಸುಕಿನಲ್ಲಾವೃತವಾಗಿ ॥ 78

ಈ ಪ್ರಕಾರ ಗೊತ್ತು ಪಡಿಸಿದ್ದು । ಆ ಭಾವಚಿತ್ರದು ಜೊತೆಗೆ ತೆಗೆದಕೊಂಡು ।
ಮಾಧವರಾಯ,ದೀಕ್ಷಿತರು ಕೂಡಿಕೊಂಡು । ಹೊರಟರು ಮನದಲಿ ಮೋದಭರಿತರಾಗಿ ॥ 79

ಊಟ ಮುಗಿಸಿ ಅದೇ ರಾತ್ರಿಗೆ । ಹೋದರಿಬ್ಬರೂ ನಿಲ್ದಾಣಕ್ಕೆ ।
ತಿಕೀಟು ಪಡೆದು ಎರಡನೆಯ ವರ್ಗಕ್ಕೆ । ದಾರಿ ಕಾಯುತ್ತ ನಿಂತರು ॥ 80

ಹತ್ತರ ಗಂಟೆ ಬಿದ್ದಾಗ ಕಿವಿಗೆ । ಉಗಿಬಂಡಿ ಬಂದಿತಲ್ಲಿಗೆ ।
ಎರಡನೆಯ ವರ್ಗದ ಡಬ್ಬಿ ನೋಡಿದಾಗ್ಯೆ । ಅತಿ ವ್ಯತಿರಕ್ತ ತುಂಬಿದ್ದು ಕಂಡಿತ್ತು ॥81

ಪ್ರಸಂಗ ಇಂಥದ್ದು ಬಂದೊದಗಿತ್ತು । ಇಬ್ಬರಿಗೂ ಚಿಂತೆಯಾಯಿತು ।
ಸಮಯವೂ ಸ್ವಲ್ಪೇ ಉಳಿದಿತ್ತು । ಇನ್ನೇನು ಮಾಡಬೇಕೆಂದು ತಿಳಿಯದು ॥ 82

ಇನ್ನು ಈ ಗದ್ದಲದಿಂದಾಗಿ ।ಮನಗೆ ಹೋಗಬೇಕು ತಿರುಗಿ ।
ನಾಳೆ ಹೋದರಾಯಿತು ಶಿರಡಿಗೆ । ಎಂದಿಬ್ಬರೂ ನಿಶ್ಚಯಿಸಿದರು ॥ 83

ಅಷ್ಟರಲ್ಲಿ ಗಾಡಿಯಗಾರ್ಡ ಸಹಜದೊಳು । ದೀಕ್ಷಿತರ ಗುರುತಿನವನೇ ಹೊರಡಲು ।
ಮೊದಲ ವರ್ಗದಲಿ ಕುಳಿತುಕೊಳ್ಳಲು । ತೊಂದರೆಯಿಲ್ಲದೆ ವ್ಯವಸ್ಥೆ ಮಾಡಿದನವ ॥ 84

ಮುಂದೆ ಬಂಡಿಯಲಿ ಕುಳಿತು ಕೊಳ್ಳಲು । ಮನಸೋಕ್ತನಡೆದವು ಬಾಬಾರ ಸುದ್ದಿಗಳು ।
ಮಾಧವರಾಯರು ಕಥಾಮೃತಾ ನೀಡುತ್ತಿರಲು । ದೀಕ್ಷಿತರು ಆನಂದ ತುಂದಿಲರಾದರು ॥ 85

ಹೀಗೆ ಆ ಮಾರ್ಗವನು ಸುಖದಲಿ ಕ್ರಮಿಸಿದ್ದು । ತಿಳಿಯಲಿಲ್ಲ ಹೊತ್ತುಹೋದದ್ದು ।
ಕೋಪರಗಾಂವಕ್ಕೆ ನಿಂತಾಗ ಗಾಡಿ ಬಂದು । ಸಂತೋಷ ತುಂಬಿ ಇಳಿದರಿಬ್ಬರೂ ॥ 86

ಸ್ಟೇಶನ್ ಮೇಲೆ ಅದೇ ಸಮಯದಿ । ನಾನಾ ಸಾಹೇಬ ಚಾಂದೋರಕರರನ್ನು ನೋಡಿ ।
ದೀಕ್ಷಿತರು ಅತ್ಯಂತ ಆನಂದಿಂದ । ಪರಸ್ಪರ ಭೆಟ್ಟಿಯಾದರು ಅಕಲ್ಪಿತವಾಗಿ ॥ 87

ಅದರೂ ಬಾಬಾರ ದರ್ಶನಕ್ಕೆಂದು । ಹೊರಟಿದ್ದರು ಶಿರಡಿಗೆಂದು ।
ಆಗ ಈ ಅನಪೇಕ್ಷಿತ ಯೋಗ ಕಂಡು । ವಿಸ್ಮಯಾಪನ್ನರಾದರು ಮೂವರು ॥ 88

ಆಗ ಆ ಮೂವರೂ ಟಾಂಗಾದಲ್ಲಿ ಕುಳಿತರು । ದಾರಿಯಲ್ಲಿ ಗೋದಾವರಿಯ ಸ್ನಾನ ।
ಮುಗಿಸಿಕೊಂಡು । ಪಾವನವಾದ ಶಿರಡಿಗೆ ಮುಟ್ಟಿದರು ॥ 89

ಬಳಿಕ ಆದಾಗ ಸಾಯಿಯ ದರ್ಶನ । ದ್ರವಿಸಿತಾಗ ದೀಕ್ಷಿತರ ಮನ ।
ನಯನಗಳಾದವು ಅಶ್ರುಪೂರ್ಣ । ಸ್ವಾನಂದ ಜೀವನ ಉದುರಿತಲ್ಲಿ ॥ 90

ಬಳಿಕ ಸಾಯಿ ನುಡಿದರು ಸ್ಪಷ್ಟವಾಗೇ । ಶಾಮನನು ಕಳಿಸಿದೆನಲ್ಲಿಗೆ ।
ಅಹಮದನಗರಕ್ಕೆ ನಿನ್ನ ಭೆಟ್ಟಿಗೆ । ನಿನ್ನ ದಾರಿಯ ನೋಡಿ ॥ 91

ದೀಕ್ಷಿತರ ಶರೀರ ರೋಮಾಂಚಿತವಾಯಿತು । ಗಂಟಲು ಕಟ್ಟಿ ಕಣ್ಣೀರಿಳಿಯಿತು ।
ಚಿತ್ತ ಹರ್ಷ ನಿರ್ಭರವಾಯಿತು । ಮೈಯ್ಯೆಲ್ಲ ಬೆವರುಬಿಟ್ಟಿತು ॥ 92

ದೇಹವಾಯಿತು ಸೂಕ್ಷ್ಮ ಕಂಪಾಯಮಾನ । ಚಿತ್ತವೃತ್ತಿ ಸ್ವಾನಂದನಿಮಗ್ನ ।
ನೇತ್ರಗಳಾದವು ಅರ್ಧೋನ್ಮೀಲಿನ । ಆನಂಧಘನ ಆವರಿಸಿತು ॥ 93

ಇಂದೆನ್ನ ದೃಷ್ಟಿಯಾಯಿತು ಸಫಲ । ಎಂದಪ್ಪಿಕೊಂಡರು ಚರಣಗಳ ।
ಮನಕೆ ಧನ್ಯತೆ ಎನಿಸಿ ಬಹಳ । ಆನಂದ ಹಿಡಿಸದಷ್ಟಾಯಿತು ॥ 94

ಮುಂದೆ ವರುಷಗಳೇ ಹೋದವು ಉರುಳಿ । ನಿಷ್ಠೆ ಕುಳಿತಿತು ಸಾಯಿ ಚರಣದಲಿ ।
ಪೂರ್ಣ ಸಾಯಿಯ ಕೃಪಾಪಾತ್ರರಾಗುತಲಿ । ಸೇವೆಗೆ ಅರ್ಪಿಸಿಕೊಂಡರು ನಿಜಕಾಯವ ॥ 95

ಯಥಾಸಾಂಗ ಒಳ್ಳೆಯ ಸೇವೆಯ । ಮಾಡಲೆಂದು ಕಟ್ಟಿಸಿದರು ಮನೆಯ ।
ಬಹುಕಾಲ ಶಿರಡಿಯಲಿ ಮಾಡಿದರು ವಸತಿಯ । ಸಾಯಿಯ ಮಹತಿಯ ಬೆಳೆಸಿದರು ॥ 96

ಸಾರಾಂಶ ಅವನ ಕಾಮನೆ ಹಿಡಿದವನು । ನಿಶ್ಚಯದಿಂದಿವನ ನಿಷ್ಕಾಮ ಮಾಡುವನು ।
ಸಾಯಿ ನಿಜ ಭಕ್ತ ವಿಶ್ರಾಮಧಾಮನು । ಪರಮ ಸುಖದಾಯಕ ಭಕ್ತರಿಗೆ ॥ 97

ಅನೇಕ ಚಕೋರಗಳು ಚಂದ್ರನಿಗೆ । ಆದರೆ ಚಂದ್ರನೊಬ್ಬನೇ ಚಕೋರಗಳಿಗೆ ।
ಅದರಂತೆ ತಾಯಿಗೆ ಮಕ್ಕಳನೇಕ ಇರಬಹುದು । ಆದರೆ ಮಕ್ಕಳಿಗೆ ತಾಯಿ ಒಬ್ಬಳೇ ॥ 98

ದಿನಕರನಿಗೆ ಕುಮುದಿನಿಗಳು ಅಪಾರ । ಆದರೆ ಕುಮುದಿನಿಗಳಿಗೆ ಒಬ್ಬನೇ ದಿನಕರ ।
ನಿನಗೆ ಕೊರತೆಯಿರದು ಭಕ್ತರ । ಆದರೆ ತಂದೆ ನೀನೊಬ್ಬನೇ ಗುರುವರ ॥ 99

ಮೇಘಕ್ಕಾಗಿ ಆತುರವಾಗಿರುವ ಚಾತಕಗಳೆಷ್ಟೊಂದು । ಆದರೆ ಚಾತಕಗಳಿಗೆ ಅಲ್ಲಿರುವದು ಮೇಘವೊಂದು ।
ಹಾಗವನಿಗೆ ಭಕ್ತರನೇಕರಿದ್ದು । ಆದರೆಲ್ಲರ ಜನನೀ ಜನಕನವನೊಬ್ಬನೇ ॥ 100

ಸದ್ಭಾವದೆ ಶರಣ ಬಂದವರು ಸಹಜದಲಿ । ಅವರ ಮಾನವನು ಉಳಿಸುತಲಿ ।
ಪ್ರೀತಿಯಿಂದ ತಾನೇ ಅವರ ಕಾರ್ಯ ಮಾಡುತಲಿ । ಅದನು ಪ್ರತ್ಯಕ್ಷ ನೋಡುತಲಿರುವೆವು ॥ 101

ಜಗದಲಿರುವ ಪ್ರಾಣಿಗಳಿಗೆ ಜೀವಂತ । ಮರಣದಿಂದಾಗುವದವುಗಳ ಅಂತ ।
ಸಾಯಿ ಭಕ್ತರಿಗೆ ಅಭಯ ನೀಡುತ । "ನಾ ನಿನ್ನ ವಿಮಾನದಲ್ಲಿ ಕರೆದೊಯ್ಯುವೆನೆಂದು" । 102

ಹೇಗೆ ಇತ್ತು ಸಾಯಿಯ ಮಾತು । ಹಾಗೆಯೇ ದೀಕ್ಷಿತರಿಗೆ ಮರಣ ಬಂತು ।
ಬಾಯಲ್ಲಿ ಸಾಯಿಯ ಗುಣಗಾನ ನಡೆದಿತ್ತು । ನಾ ನನ್ನ ಕಣ್ಣಿಂದ ನೋಡಿರುವೆ ॥103

ಉಗಿಬಂಡಿಯಲ್ಲಿ ಕುಳಿತೆಡೆ । ನಮ್ಮ ನಮ್ಮಲ್ಲಿ ಮಾತು ನಡೆದಿದೆ ।
ವಾರ್ತೆಯೆಲ್ಲ ಸಾಯಿಯದೇ । ಒಮ್ಮೆಲೇ ವಿಮಾನವನೇರಿದಂತೆ ॥ 104

ನೋಡಿರಿ ಅಕಸ್ಮಾತ ಹೇಗೆ ಸಮಯ ಬಂತು । ನನ್ನ ಹೆಗಲ ಮೇಲೆ ತಲೆ ಇಟ್ಟು ।
ವಿಮಾನ ಸಿದ್ಧಿಯೇ ಸಾಧಿಸಿತು । ಅನಂತ ಸೌಖ್ಯದಲಿ ಲೀನರಾದ ದೀಕ್ಷಿತರಿಗೆ ॥ 105

ಮೈ ಮುರಿಯಲಿಲ್ಲ ಒದ್ದಾಟವಿಲ್ಲ। ಘೋರಘೋರವಿಲ್ಲ ನೋವಿಲ್ಲ ।
ಮಾತಾಡುತ್ತ ಕುಳಿತಾಗ ನೋಡುತಿರುವಂತೆ ಜನರೆಲ್ಲ । ಶರೀರ ನಿಶ್ಚಲವಾಯಿತಲ್ಲಿ ॥ 106

ಮಾನವ ಭೂಮಿಯ ಹೀಗೆ ವಿಸರ್ಜಿಸಿ । ನಿಜರೂಪದಲಿ ನಿಜಜ್ಯೋತಿಯ ಬೆರೆಸಿ ।
ವಿಮಾನ ಮಾರ್ಗದಲಿ ನಿಜರೂಪದಲಿ ಸ್ಥಾಪಿಸಿ । ಜ್ಯೋತಿಯಲಿ ನಿಜಜ್ಯೋತಿಯು ಲೀನವಾಯಿತು ॥ 107

ಸಾಯಿ ಚರಣದಲಿ ಲೀನವಾಗಲು ಮನ । ಕಳೆದು ಹೋಯಿತು ಪೂರ್ಣ ದೇಹಾಭಿಮಾನ ।
ವೃತ್ತಿ ಹೊಂದಿತು ಸಮಾಧಾನ । ಪೂರ್ಣ ಕೃಷ್ಣಾರ್ಪಣ ದೇಹವು ॥ 108

ಶಕೆ ಹದಿನೆಂಟು ನೂರಾನಲವತ್ತೆಂಟು । ಜೇಷ್ಠ ವದ್ಯ ಏಕಾದಶಿ ಇತ್ತು ।
ಆಗ ದೀಕ್ಷಿತರು ಈ ಕರ್ಮಭೂಮಿಯ ಬಿಟ್ಟು । ಬ್ರಹ್ಮಪದವ ಹೊಂದಿದರು ॥ 109

ಎನ್ನಿರಿದಕೆ ಅವರ ದೇಹಾವಸಾನ । ಅಥವಾ ಬಂದಿತವರ ಕರೆಯಲು ವಿಮಾನ ।
ಆದರವರು ಸಾಯಿ ಪದದಲಿ ಲೀನ । ಯಾರಿಗೂ ಪ್ರಮಾಣ ಈ ಮಾತು ॥ 110

ಇಂಥ ಉಪಕಾರವ ತೀರಿಸಬೇಕನ್ನುವ । ಭಕ್ತನಲ್ಲಿ ಅವ ಪೂರ್ಣ ಅಭಕ್ತನಾಗಿರುವ ।
ದೃಶ್ಯದಾನದಿಂದ ಇಂಥ ಉಪಕಾರವ । ತೀರಿಸುವದು ಕನಸಿನಲೂ ಸಾಧ್ಯವಿಲ್ಲ ॥ 111

ಚಿಂತಾಮಣಿಯ ಕೊಡುವಿರಿ । ನಿತ್ಯ ಚಿಂತೆಯನೆ ಬೆಳೆಸುವಿರಿ ।
ಅಚಿಂತ್ಯದಾನಿಯದು ತೀರಿಸಬಲ್ಲಿರಿ । ಉಪಕಾರವೆನ್ನುವುದು ಹುಡುಗಾಟದ ಮಾತು ॥112

ಗುರುವಿನುಪಕಾರ ತೀರಿಸಲೆಂದು । ಕಲ್ಪತರುವನೇ ಕೊಡಬಹುದು ।
ನಿರ್ವಿಕಲ್ಪ ದಾನಿಯಾದ ಗುರುವಿನದು । ಉಪಕಾರ ತೀರಿದಂತಾದೀತೇ ॥ 113

ಇದೆಲ್ಲಕ್ಕಿಂತ ಹೆಚ್ಚಿನದು । ಗುರುವಿಗೆ ಸ್ಪರ್ಶ ಮಣಿಯ ಕೊಡಬಹುದು ।
ಅದರಿಂದ ಲೋಹ ಸುವರ್ಣವಾಗುವದು । ಆದರೆ ಗುರುಬ್ರಹ್ಮರಸವನ್ನೇ ಕುಡಿಸುವ ॥ 114

ಕಾಮಧೇನುವ ಅರ್ಪಿಸಿ ಗುರುವಿಗೆ । ಎನಬಹುದು ಆಯಿತು ಗುರುವಿನುಪಕಾರ ತೀರಿಸಿದ ಹಾಗೆ ।
ಕಾಮನೆಗಳದತ್ಯಂತ ಆಗಬಹುದು ಬೆಳವಣಿಗೆ । ಗುರುವಿರುವ ನಿಷ್ಕಾಮ ನಿರಾಯಾಸ ದಾನಿ ॥ 115

ಸಂಪೂರ್ಣ ವಿಶ್ವದಲ್ಲಿಯ ಸಂಪತ್ತು । ಗುರುವಿನ ಉಪಕಾರ ತೀರುಸುವೆನೆಂದು ಕೊಟ್ಟು ।
ಅಮಾಯಕ ದಾತೃವಿಗೆ ಮಾಯೆಯನಿತ್ತು । ಅದರಿಂದ ಉತ್ತೀರ್ಣರಾಗಬಹುದು ॥ 116

ಗುರುವಿನ ಮೇಲೆ ದೇಹವ ನಿವಾಳಿಸುವುದು । ಆದರೆ ಕೇವಲ ನಶ್ವರವೇ ಅದೂ ।
ಜೀವವನೇ ನಿವಾಳಿಸಬೇಕೆಂದರೆ ಅದೂ । ತಾನೇ ಮಿಥ್ಯಾ ಇರುವದು ॥ 117

ಸತ್ಯ ವಸ್ತುವಿನ ದಾತೃ ಸದ್ಗುರು । ಅಂಥವಗೆ ಮಿಥ್ಯಾ ವಸ್ತುವನಿತ್ತರೂ ।
ಹೇಗೆ ಉತ್ತೀರ್ಣನಾಗುವ ಅದರಿಂದಾದರೂ । ಈ ಮಾತು ಅಶಕ್ಯವಾಗಿದೆ ॥ 118

ಅದಕೆ ಅನನ್ಯ ಶ್ರದ್ಧಾ ಪೂರ್ಣರಾಗಿ । ಉದ್ದಕೆ ನಮಸ್ಕಾರ ಹಾಕಿ ।
ಉಪಕಾರ ಸ್ಮರಣ ಪೂರ್ವಕವಾಗಿ । ಸದ್ಗುರು ಚರಣದಲಿ ಶಿರವನಿಡಬೇಕು ॥ 119

ಅಖಂಡ ಗುರುವಿನ ಉಪಕಾರ ಸ್ಮರಿಸುವುದು । ಶಿಷ್ಯನಿಗೆ ಭೂಷಣವಾಗಿದೆ ಇದು ।
ಶಿಷ್ಯನು ನಿಜ ಸುಖವನೇ ಕಳೆದು ಕೊಳ್ಳುವನು । ಗುರುವಿನುಪಕಾರ ತೀರಿಸುವೆನೆಂದರೆ ॥ 120

ಕಥೆ ಕೇಳಲು ಇಲ್ಲಿಯವರೆಗೆ । ತೃಷೆ ಹೆಚ್ಚಿತು ಕೇಳುಗರಿಗೆ ।
ಸಣ್ಣ ಕಥೆಯನೊಂದು ಹೇಳುವೆನವರಿಗೆ । ಅವರ ಜಿಜ್ಞಾಸೆ ಪೂರ್ಣ ಆತುರತೆ ನೋಡಿ ॥ 121

ತಮ್ಮ ಬಂಧು ಪ್ರೇಮವನು ಸಂತರೂ । ಸಂಸಾರಿಗಳಂತೆಯೇ ವ್ಯಕ್ತ ಮಾಡುವರು ।
ಅಥವಾ ಅದರ ಮರ್ಮವ ತಿಳಿಸುವರು । ಲೋಕ ಸಂಗ್ರಹ ದಕ್ಷರಾಗಿ ॥ 122

ಅಥವಾ ಸ್ವತಃ ಸಾಯಿಯೇ ತಾನು । ಮಾಡಲು ನಿಜ ಭಕ್ತ ಕಲ್ಯಾಣವನು ।
ಆ ಭೂಮಿಕೆಗಳನು ತಾನೇ ನಟಿಸುವನು । ಪರಮಾರ್ಥ ಶಿಕ್ಷಣ ಕೊಡುವಾಗ ॥ 123

ಈ ಅರ್ಥದ ಚಿಕ್ಕ ಕಥೆಯೊಂದು । ಶ್ರೋತೃಗಳು ಚಿತ್ತವಿಟ್ಟು ಕೇಳುವದು ।
ಏನೂ ಹೇಳದೆಯೇ ತಿಳಿಯುವದು । ಸಂತರಿಗೆ ಸಂತರ ನಿಜಗುರುತು ॥ 124

ಒಮ್ಮೆ ಗೋದಾವರಿ ತಟದಲಿ । ಪ್ರಸಿದ್ಧಿ ರಾಜಮಹೇಂದ್ರಿ ಶಹರದಲ್ಲಿ ।
ಶ್ರೀ ವಾಸುದೇವಾನಂದರು ಬಂದರಲ್ಲಿ । ಸರಸ್ವತಿಯೆಂಬ ಉಪನಾಮದಿಂದ ॥ 125

ಬಹಳ ದೊಡ್ಡ ಅಂತರ್ಜ್ಞಾನಿಗಳು । ಕರ್ಮ ಮಾರ್ಗದ ಕಡು ಅಭಿಮಾನಿಗಳು ।
ಎಲ್ಲೆಲ್ಲೂ ಪಸರಿಸಿತ್ತು ಕೀರ್ತಿ ಅವನಿಯೊಳು । ಅಖಂಡವಾಗಿ ಅವರದು ॥ 126

ಕರ್ಣೋಪಕರ್ಣವಾಗಿ ವಾರ್ತೆ ಹರಡಿದ್ದರಿಂದ । ಪುಂಡಲೀಕರಾವ ಮೊದಲಾದ ।
ಉದ್ದೇಶವಿಟ್ಟುಕೊಂಡು ದರ್ಶನದ । ನಾಂದೇಡ ಪಟ್ಟಣದ ಜನರೆಲ್ಲ ॥ 127

ಹೊರಟರಲ್ಲಿಂದ ಎಲ್ಲ ಜನರು । ರಾಜಮಹೇಂದ್ರಿಗೆ ಬಂದರು ।
ಗೋದಾತೀರಕ್ಕೆ ಬೆಳಗಿನಲಿ । ಸ್ವಾಮಿಯ ದರ್ಶನಕೆ ಬಂದರು ॥ 128

ಸುಪ್ರಭಾತದ ಸಮಯವಿತ್ತು । ನಾಂದೇಡದಿಂದ ಬಂದ ಜನ ಯಾವತ್ತೂ ।
ಸ್ನಾನಕ್ಕೆ ನದಿಯತ್ತ ಹೊರಟಿತು । ಸ್ತೋತ್ರ ಪಠಿಸುತ್ತ ಸುಸ್ವರವಾಗಿ ॥ 129

ಕಂಡು ಸ್ವಾಮಿಗಳಲ್ಲೇ ನಿಂತಿರುವದಾಗಿ । ಸದ್ಭಾವದಿಂದವರಿಗೆ ಸಾಷ್ಟಾಂಗವೆರಗಿ ।
ಸಹಜ ಕುಶಲ ಪ್ರಶ್ನೆ ಕೇಳುತಿರಲಾಗಿ । ಶಿರಡಿಯ ಸುದ್ದಿ ಬಂದಿತು ॥ 130

ಕಿವಿಗೆ ಬಿದ್ದಾಗ ಸಾಯಿ ನಾಮ । ಎರಡು ಕೈ ಮುಗಿದು ಮಾಡಿದರು ಪ್ರಣಾಮ ।
ಎಂದರವರೆಮ್ಮ ಬಂಧುಗಳು ನಿಷ್ಕಾಮ । ನಿಃಸ್ಸೀಮ ಪ್ರೀತಿ ಎಮಗವರದು ॥ 131

ಒಂದು ಶ್ರೀಫಲವ ತೆಗೆದುಕೊಂಡು । ಪುಂಡಲೀಕರಾಯರ ಕೈಗೆ ಕೊಟ್ಟು ।
ಎಂದರು ಶಿರಡಿಗೆ ಹೋದಾಗಿದನರ್ಪಿಸುವದು । ಬಂಧು ಪದಕಮಲಗಳ ವಂದಿಸಿ ॥ 132

ನನ್ನ ನಮಸ್ಕಾರಗಳವರಿಗೆ ಹೇಳಿ । ಹೇಳಿರಿ ಈ ದೀನನ ಮೇಲವರ ಕೃಪೆಯಿರಲಿ ।
ಇವನ ಮರೆವೆಂದೂ ಆಗದಿರಲಿ । ನಿರಂತರ ಪ್ರೇಮ ವರ್ಧಿಸುತಲಿ ॥ 133

ನೀವು ಶಿರಡೀ ಊರಿಗೆ । ಮತ್ತೊಮ್ಮೆ ಯಾವಾಗಾದರೂ ಹೋದಾಗ್ಯೆ ।
ಅರ್ಪಿಸಿರಿದನು ನನ್ನ ಬಂಧುವಿಗೆ । ಆದರದಿಂದ ನೆನಪಿಟ್ಟುಕೊಂಡು ॥ 134

ನಾವು ಸ್ವಾಮಿಗಳು ಯಾರಿಗೂ ವಂದಿಸಬಾರದು ಎಂದು ನಮಗೆ ಈ ನಿಬಂಧನೆಯಿದ್ದೂ ।
ಆ ನಿಯಮದ ಉಲ್ಲಂಘಿಸುವದು । ಕೆಲ ಪ್ರಸಂಗದಲಿ ಕಲ್ಯಾಣಕಾರಕ ॥ 135

ಆದಕೆ ತೆಗೆದುಕೊಳ್ಳುವಾಗ ಸಾಯಿ ದರ್ಶನ । ಆಗಗೊಡದಿರಿ ಇದರ ವಿಸ್ಮರಣ ।
ಸಾಯಿ ಪದದಲಿ ಶ್ರೀಫಲದ ಅರ್ಪಣ । ನೆನಪಿಟ್ಟುಕೊಂಡು ಮಾಡಬೇಕು ॥ 136

ಅವರ ಈ ವಚನಗಳನಾಲಿಸಿ । ಪುಂಡಲೀಕರಾಯರವರ ಚರಣಗಳ ವಂದಿಸಿ ।
ಎಂದರು ಸ್ವಾಮಿಯ ಅನುಜ್ಞೆಯನನುಸರಿಸಿ । ಹಾಗೆಯೇ ಮಾಡುವೆ ನಿಶ್ಚಯದಿ ॥ 137

ಆಜ್ಞೆಯನು ಮಾಡಿ ಶಿರಸಾಮಾನ್ಯ । ಇದರಿಂದ ನಾ ತಮ್ಮನು ತಿಳಿಯುವೆ ಧನ್ಯ ।
ಸ್ವಾಮಿಗಳಿಗೆ ಶರಣಾಗಿ ಅನನ್ಯ । ಹೊರಟರಲ್ಲಿಂದ ಪುಂಡಲೀಕರಾವ ॥ 138

ಸ್ವಾಮಿಗಳು ಬಾಬಾಗೆ ಬಂಧುವೆಂದರು । ನಿರರ್ಥಕವಿದ್ದೀತೇ ಅದೇನಾದರೂ ।
'ಯಾವಜ್ಜೀವಂ ಅಗ್ನಿಹೋತ್ರಂ ಜುಹುಯಾತ್' ಎಂಬರು । ಬಾಬಾ ಅದರಂತೆಯೇ ವರ್ತಿಸುತಿದ್ದರು ॥ 139

ಯಾವುದಕೆ ಜನರೆನ್ನುತಿದ್ದರು 'ಧುನಿ' ಅಂತ । ಅದು ಬಾಬಾರ ಸಮ್ಮುಖದಲ್ಲಿ ನಿತ್ಯ ।
ಅಷ್ಟ ಪ್ರಹರವಿರುತಿತ್ತು ಪ್ರಜ್ವಲಿತ । ಇದು ಬಾಬಾರ ವ್ರತವಿದ್ದೀತು ॥ 140

ಅಗ್ನಿ ಹೋತ್ರಾದಿ ಸಾಧನಗಳು । ಚಿತ್ತ ಶುದ್ಧಿ ದ್ವಾರದಂತಿರಲು ।
ಬ್ರಹ್ಮಪ್ರಾಪ್ತಿಗಾಗಿ ಧರಿಸುತಿರಲು । ಲೋಕ ಸಂಗ್ರಹಕಾರಣವದಕೆ ॥ 141

ವಾಸುದೇವಾನಂದ ಸರಸ್ವತಿಯವರು । ಅವರೂ ಯತಿಗಳು ವ್ರತಸ್ಥರು ।
ಬಳಿಕವರು ಬಾಬಾರ ಬಂಧುವೆನ್ನುವರು । ಆ ಮಾತು ನಿರರ್ಥಕವಾದದ್ದೇ ? ॥ 142

ತಿಂಗಳು ಕಳೆದಿರಲಿಲ್ಲ ಇನ್ನೂ । ಜೊತೆಗೆ ಕರೆದುಕೊಂಡು ನಾಲ್ಕು ಜನ ಮಿತ್ರರನು ।
ಪಡೆಯವ ಸಾಯಿಯ ದರ್ಶನವನು । ಪುಂಡಲೀಕರಾಯರಿಗೆ ಯೋಗ ಒದಗಿತು ॥ 143

ಜೊತೆಗೆ ತೆಗೆದುಕೊಂಡರು ಹಣ್ಣು ಹಂಪಲುಗಳು । ನೆನಪಿನಿಂದ ತೆಗೆದುಕೊಂಡರು ಶ್ರೀಫಲ ।
ಸಾಯಿ ದರ್ಶನಕೆ ಹೊರಟರೆಲ್ಲ । ಆನಂದದಿ ಶುದ್ಧ ಮನಸ್ಸಿನಿಂದ ॥ 144

ಮುಂದೆ ಮನಮಾಡದಲ್ಲಿ ಇಳಿದ ಮೇಲೆ । ಕೋಪರಗಾಂವದ ಗಾಡಿ ಬಿಟ್ಟ ಮೇಲೆ ।
ಸ್ವಲ್ಪ ಅವಕಾಶವಿದ್ದುದದರಿಂದ ಹಳ್ಳದಲೆ । ನೀರು ಕುಡಿಯಲೆಂದು ಹೋದರು ॥145

ಬರಿ ಹೊಟ್ಟೆಯಿಂದ ನೀರು ಕುಡಿಯುವದು । ಆರೋಗ್ಯಕ್ಕೆ ಹಾನಿಕರವೆಂದು ।
ತಂದರೊಬ್ಬರು ಪೊಟ್ಟಣವೊಂದು । ಬಾಯಾಡಿಸಲೆಂದು ಅವಲಕ್ಕಿಯದು ॥ 146

ಬಾಯಿಗೆ ಹಾಕಿದಾಗ ಒಂದು ತುತ್ತು । ಅವಲಕ್ಕಿ ಅತ್ಯಂತ ಖಾರ ಹತ್ತಿತು ।
ಪ್ರಯತ್ನವೆಲ್ಲ ವ್ಯರ್ಥವಾದಂತೆನಿಸಿತು । ಇದರ ಜೊತೆಯಲಿ ಕೊಬ್ಬರಿ ಇಲ್ಲದೆ ॥ 147

ಆಗ ಅವರಲ್ಲೊಬ್ಬನೆಂದುದು । ಉಪಾಯ ಹೊಳೆದಿದೆ ನನಗೊಂದು ।
ಕಾಯಿಯೊಡೆದು ಅವಲಕ್ಕಿಯಲಿ ಬೆರೆಸುವದು । ಆಗ ನೋಡಿರಿ ರುಚಿ ಅವಲಕ್ಕಿಯದು ॥ 148

ಕಾಯಿ ಎಂದಾಗ ಕಾಯಿ ತಯಾರಿತ್ತು । ಅದನು ಒಡೆಯಲು ಅವಕಾಶವೆಷ್ಟು ।
ಕೂಡಿಸಿದಾಗ ಅವಲಕ್ಕಿ ರುಚಿ ಹತ್ತಿತು । ತಿಂದು ಮೇಲೆ ನೀರು ಕುಡಿದರು ॥ 149

ಕಾಯಿ ಎಂದಾಗ ಕಾಯಿ ಸಿಕ್ಕಿದ್ದು । ಕೇಳಲಿಲ್ಲಾರು ಅದು ಯಾರದೆಂದು ।
ಗದ್ದಲ ಹಿಡಿದಿತ್ತು ಹಸಿವೆಯದು । ಮರೆತಿತು ಉಳಿದದ್ದೆಲ್ಲ ಎಲ್ಲರಿಗೆ ॥ 150

ಬಳಿಕ ಹೋದರು ನಿಲ್ದಾಣದೊಳಗೆ । ಕುಳಿತರು ಕೋಪರಗಾವದ ಬಂಡಿಯೊಳಗೆ ।
ಆಗ ಪುಂಡಲೀಕರಾಯರಿಗೆ । ನೆನಪಾಯಿತು ತಮ್ಮ ಟೆಂಗಿನಕಾಯಿಯದು ॥ 151

ನೋಡಿ ಶಿರಡಿ ಹತ್ತಿರ ಬಂದುದು । ಪುಂಡಲೀಕರಾಯರು ತಳಮಳಿಸುತಿದ್ದು ।
ವಾಸುದೇವಾನಂದರದೇ ಕಾಯಿ ತಂದು । ಅವಲಕ್ಕಿಯಲಿ ಬೆರೆಸಲಾಗಿತ್ತು ತಪ್ಪಿ ॥ 152

ತಿಳಿದಾಗ ಅದೇ ಕಾಯಿಯ ಒಡೆಯಿತು । ಪುಂಡಲೀಕಾರಾಯರಿಗೆ ಭಯವಾಯಿತು ।
ಮೈಯಲ್ಲಿ ನಡುಕ ಹುಟ್ಟಿತು । ಸಂತರ ಅಪರಾಧ ಮಾಡಿದೆನೆಂದು ॥ 153

ಅವನಿಗೆ ಬಹಳ ಸಂತಾಪವಾಯಿತು । ತನ್ನಿಂದೆಂಥ ಪಾಪವಾಯಿತು ।
ಇದರಿಂದೆನಗೆ ಸ್ವಾಮಿಯ ಶಾಪ ತಟ್ಟೀತು । ಆಗ ನಾನಾಡಿದ್ದೆಲ್ಲ ವ್ಯರ್ಥ ಮಾತಾಯಿತು ॥ 154

ಶ್ರೀಫಲದ ಗತಿ ಹೀಗೆ । ಆಗಿ ದೊಡ್ಡ ಮೋಸವಾಯಿತೆನಗೆ ।
ಪುಂಡಲೀಕರಾಯರು ಮನದೊಳಗೇ । ವಿಸ್ಮಯದಿಂದ ತಟಸ್ಥರಾದರು ॥ 155

ಬಾಬಾರಿಗೆ ಇನ್ನೇನು ಕೊಡಲಿ । ಹೇಗೆ ಅವರಿಗಿದನ್ನು ತಿಳಿಸಲಿ ।
ಅವರಿಗೆ ಮುಖವನ್ನಾದರೂ ಹೇಗೆ ತೋರಿಸಲಿ । ಶ್ರೀಫಲ ಕಳಕೊಂಡು ಕುಳಿತೆನಲ್ಲ ॥156

ಸಾಯಿ ಚರಣಕೆ ಅರ್ಪಿಸಬೇಕಾದುದು । ಫಲಾಹಾರ (ಉಪಹಾರ)ವಾಯಿತಲ್ಲ ಅದರದು ।
ಪುಂಡಲೀಕರಾಯರು ಮನದಲಿನೊಂದು । ಎಂದರು ಇದು ಅಪಮಾನ ಸಂತರದು ॥157

ಇನ್ನು ಯಾವಾಗ ಬಾಬಾ ಕಾಯಿ ಬೇಡುವರು । ಆಗ ಎಲ್ಲರೂ ಅಧೋವದನರಾಗುವರು ।
ಮನಮಾಡದಲದನು ತಿಂದರು । ಎಂಬುದರ ಕಳವಳ ಎಲ್ಲರಿಗೆ ॥ 158

ಇಂದು ಕಾಯಿ ಹತ್ತಿರವಿರದು । ನಿಜ ಹೇಳಬೇಕೆಂದರೆ ನಾಚಿಕೆ ಬರುವದು ।
ಸುಳ್ಳು ಮಾತಲ್ಲಿ ನಡೆಯದು । ಸಾಯಿ ಮಹಾರಾಜರು ಸರ್ವಸಾಕ್ಷಿಗಳು ॥ 159

ಹೀಗಿರಲು ಸಾಯಿದರ್ಶನ ತೆಗೆದುಕೊಂಡು । ಜನರೆಲ್ಲ ಸಂತುಷ್ಟರಾಗಿದ್ದು ।
ಆನಂದಾಶ್ರುಗಳು ಕಣ್ಣಿಗೆ ಬಂದು । ಪ್ರಸನ್ನವದನರೆಲ್ಲರೂ ॥ 160

ಇನ್ನು ಹಗಲಿರುಳೂ ನಾವು । ತಂತಿ ಇಲ್ಲದೇ ಸಂದೇಶ ಕಳಿಸುತಿರುವೆವು ।
ಅದರ ಜಂಭವನೀಗ ತೋರಿಸುವೆವು । ಎಂದರು ಅಭಿಮಾನವಶರಾಗಿ ॥ 161

ಯಾವುದಕ್ಕೆ ಅಪಾರ ಹಣದ ವೆಚ್ಚದಿಂದ । ಅಲ್ಲಲ್ಲಿ ಕಂಭ ನೆಡಬೇಕಾಗುವದ ।
ಬಿಟ್ಟು ಈ ಸಂತರು ಸಂದೇಶ ಕಳಿಸುವರಂತೆ ಮನದಿಂದ । ಸಾಧನಗಳೇನೂ ಇಲ್ಲದಲೇ ॥ 162

ಸ್ವಾಮಿಯವರು ಪುಂಡಲೀಕರಾಯರಿಗೆ । ಕಾಯಿ ಕೊಟ್ಟ ಸಮಯದೊಳಗೆ ।
ಕಳಿಸಿದ್ದರು ಸಾಯಿನಾಥರಿಗೆ । ತಂತಿ ಇಲ್ಲದ ಸಂದೇಶವನು ॥ 163

ಪುಂಡಲೀಕರಾಯ ದರ್ಶನ ತೆಗೆದುಕೊಂಡಾಗ । ಬಾಬಾ ತಾವಾಗಿಯೇ ಕೇಳಿದರವಗ
"ನನ್ನ ವಸ್ತುವ ಕೊಡು ನನಗೆ । ನನ್ನ ಬಂಧುವಿನ ಹತ್ತಿರ ತಂದದ್ದು" ॥ 164

ಬಳಿಕ ಪುಂಡಲೀಕರಾಯ ಖಿನ್ನರಾಗಿ । ಬಾಬಾರ ಚರಣಗಳ ಹಿಡಿದು ಗಟ್ಟಿಯಾಗಿ ।
ಇಲ್ಲೆನಗೆ ಉಪಾಯ ಕ್ಷಮೆಯ ಹೊರತಾಗಿ । ನಾನೇನು ಹೇಳಲಿನ್ನು ದೇವಾ ॥ 165

ನನಗೆ ಕಾಯಿಯ ನೆನಪಿತ್ತು । ಆದರೆ ಹಸಿವೆ ಹಿಂಗಿಸಬೇಕಿತ್ತು ।
ಅದರಿಂದೆಲ್ಲರಿಗೆ ಮರೆತು ಹೋಯಿತು । ಹಳ್ಳದ ದಂಡೆಗೆ ಹೋದಾಗ ॥ 166

ಅಲ್ಲಿ ತಿನ್ನುವಾಗ ಅವಲಕ್ಕಿಯನು । ಬೆರೆಸಿದೆವದರಲಿ ಒಡೆದು ಆ ಕಾಯಿಯನು ।
ಅದಕೆ ಇನ್ನೊಂದು ಕಾಯಿಯ ತರುವೆನು । ನಿಶ್ಚಲ ಮನದಿಂದದನು ಸ್ವೀಕರಿಸಬೇಕು ॥167

ಹೀಗೆಂದು ಹೇಳತೊಡಗಲು । ಪುಂಡಲೀಕರಾಯ ಕಾಯಿ ತರಲು ।
ಸಾಯಿ ಮಹಾರಾಜರು ಅವನ ಕೈ ಹಿಡಿದು ತಡೆಯುತಿರಲು । ಎಲ್ಲರೂ ನೋಡುತಿದ್ದರು ॥ 168

ಅಪರಾಧವಾಯಿತು ತಿಳಿಯದಲಿ । ದಯಾಳುಗಳಾದ ತಾವು ಹಾಕಿಕೊಳ್ಳಿರಿ ಉಡಿಯಲಿ ।
ಕ್ಷಮಿಸಿ ಕೃಪಾವಂತರಾಗುತಲಿ । ನಾನಿರುವೆ ನಿತಾಂತ ಅಪರಾಧಿ ॥ 169

ಸ್ವಾಮಿಗಳಂಥ ಸಾಧೂ ಸಜ್ಜನ । ಅವಗಣಿಸಿ ಅಂಥವರ ವಚನ ।
ಮಾಡಬೇಕಾದ್ದನ್ನು ತಮಗೆ ಅರ್ಪಣ । ಆ ಫಲವೆ ಭಕ್ಷಣ ಮಾಡಿದೆನಲ್ಲಾ ॥ 170

ಸಂತರ ವಚನಗಳ ಮೀರಿದಂತಿದು । ಎಂಥ ಅಪರಾಧ ನನ್ನಿಂದಾದುದು ।
ಈ ಪಾಪಕ್ಕೆ ಉಪಶಮನವೇನಿರುವದು । ಎಂಥ ಲಜ್ಜಾಹೀನನಾದೆ ನಾನು ॥ 171

ಆಗ ಕೇಳಿ ಈ ಮಾತು । ಸಾಯಿನಾಥ ನುಡಿದರು ನಕ್ಕು ।
"ಕಾಯಿಯ ಕೈಯಲ್ಲೇಕೆ ತೆಗೆದುಕೊಳ್ಳಬೇಕಾಗಿತ್ತು । ಸರಿಯಾಗಿ ಅದನಿಡದಿರದಲ್ಲಿ" ॥ 172

ನೀವು ನನ್ನ ವಸ್ತುವನ್ನು ನನಗೆ । ನಿಶ್ಚಿತವಾಗಿ ಕೊಡುವಿರೆನ್ನುವ ಮಾತಿಗೆ ।
ನಂಬಿ ನನ್ನ ಬಂಧುವು ನಿಮ್ಮ ಕೈಗೆ । ಅತ್ಯಂತ ವಿಶ್ವಾಸದಿಂದದ ಕೊಟ್ಟನು ॥ 173

ಆಗಬೇಕೇ ಹೀಗದರ ಪರಿಣಾಮ । ಇದೇ ತಾನೇ ತಾವು ಇರುವದು ವಿಶ್ವಾಸಧಾಮ ।
ಪೂರೈಸಲಿಲ್ಲೆನ್ನ ಬಂಧುವಿನ ಕಾಮ । ಇಂಥದೇ ಏನು ನಿಮ್ಮ ಕೆಲಸ" ॥ 174

ಎಂದರು "ಆ ಫಲದ ಯೋಗ್ಯತೆ । ಬರಲಾರದು ಎಷ್ಟೇ ಕೊಟ್ಟರೂ ಮತ್ತೆ ।
ಇನ್ನೇತಕೆ ವ್ಯರ್ಥ ದುಶ್ಚಿತತೆ । ಆಗುವದು ಆಗಿ ಹೋದ ಮೇಲೆ ॥ 175

ಸ್ವಾಮಿ ನಿನಗೆ ಕಾಯಿ ಕೊಟ್ಟದು । ಅದೂ ಕೇವಲ ನನ್ನದೇ ಸಂಕಲ್ಪವಿರುವದು ।
ನನ್ನ ಸಂಕಲ್ಪದಿಂದಲೇ ಆ ಕಾಯಿ ಒಡೆದುದು । ನಿಷ್ಫಲ ಅಭಿಮಾನವೇಕೆ ನಿನಗೆ ॥176

ಹಿಡಿದು ಅಹಂಕಾರದ ಬುದ್ದಿ । ಅದರಿಂದ ಎಂದುಕೊಳ್ಳುವೆ ನೀ ಅಪರಾಧಿ ।
ಇಷ್ಟು ನಿರಹಂಕರ್ತೃತ್ವ ಹಿಡಿ । ಅದರಿಂದೆಲ್ಲ ಉಪಾಧಿಗಳು ತೊಲಗುವವು ॥ 177

ಪುಣ್ಯದ್ದು ಮಾತ್ರ ಏಕೆ ಅಬಿಮಾನ । ಏಕೆ ಹಿಡಯಲಾರೆ ಪಾಪದ ಅಭಿಮಾನ ।
ಎರಡರ ಪ್ರತಾಪವೂ ಸರಿಸಮಾನ । ಅದಕೆ ನಿರಭಿಮಾನನಾಗಿರಬೇಕು ॥ 178

ನನ್ನ ದರ್ಶನ ಲಭಿಸಲಿ ನಿನಗೆ । ನನಗೆ ಎನಿಸಿದ್ದರಿಂದಲೇ ಹೀಗೆ ।
ಆಗಲೇ ಕಾಯಿ ನಿನ್ನ ಕೈಯೊಳಗೆ । ಬಿತ್ತೆಂಬುದು ತ್ರಿವಾರ ಸತ್ಯ ॥ 179

ನೀವಾದರೂ ನನ್ನವೇ ಮಕ್ಕಳು । ಕಾಯಿ ಬೀಳಲು ನಿಮ್ಮ ಮುಖದೊಳು ।
ಅದೇ ನೀವೆನಗೆ ಅರ್ಪಿಸಿದೊಲು । ತಿಳಿಯಿರದು ನನಗೆ ಮುಟ್ಟಿತೆಂದು" ॥ 180

ಸಾಯಿಯು ತಿಳಿಸಿ ಹೇಳಲು ಹೀಗೆ । ಆಗ ಪುಂಡಲೀಕರಾಯನ ಮನಸಿಗೆ ।
ಸಾಯಿ ಮುಖದ ವಚನದಿಂದ ಮೆಲ್ಲಗೆ । ಉದ್ವಿಗ್ನತೆ ಕರಗತೊಡಗಿತು ॥ 181

ಕಾಯಿ ಹೋದ ನಿಮಿತ್ತವಾಗಿ । ಉಪದೇಶದಿಂದ ಉದ್ವಿಗ್ನ ಮನ ಶುದ್ಧವಾಗಿ ।
ಈ ರೀತಿ ಇದ್ದವರು ಅಹಂಕಾರಯುತರಾಗಿ । ಅಭಿಮಾನ ನಿರ್ಮುಕ್ತ ನಿರ್ದೋಷಿಗಳಾದರು ॥ 182

ಇಷ್ಟೇ ಈ ಕಥೆಯ ಸಾರ । ವೃತ್ತಿಯಾದಾಗ ನಿರಹಂಕಾರ ।
ಪರಮಾರ್ಥದಲಿ ಲಭಿಸುವದು ಅಧಿಕಾರ । ಸಹಜ ಭವಪಾರುಗಾಣುವಿರಿ ॥ 183

ಇನ್ನು ಮೂರನೆಯ ಭಕ್ತನದು ಅಭಿನವ । ಶ್ರವಣ ಮಾಡಿರಿ ಈ ಮಧುರ ಅನುಭವ ।
ಕಂಡು ಬರುವದಲ್ಲಿ ಬಾಬಾರ ಅತುಲ ಅನುಭವ । ಸಾಮರ್ಥ್ಯ ಗೌರವಗಳೊಂದಾಗಿ ॥ 184

ಬಾಂದ್ರೆ ಎಂಬ ತಾಲೂಕಿನಲ್ಲಿ । ಉತ್ತರಕ್ಕೆ ಬಾಂದ್ರೆ ಪಟ್ಟಣದ ಮಗ್ಗುಲಲ್ಲಿ ।
ಸಾಂತಾಕ್ರೂಜ ಎಂಬಲ್ಲಿ । ಇರುತಿದ್ದರು ಧುರಂಧರರೆಂಬ ಹರಿಭಕ್ತರು ॥ 185

ಸಂತ ಪ್ರೇಮವೆಲ್ಲ ಬಂಧುಗಳಲ್ಲಿ । ಅವರ ದೃಢವಾದ ನಿಷ್ಠೆ ಶ್ರೀರಾಮನಲಿ ।
ಅನನ್ಯ ಶ್ರದ್ಧೆ ರಾಮನಾಮದಲ್ಲಿ । ಸಲ್ಲದ ಉಸಾಬರಿ ಹಿಡಿಸುತಿರಲಿಲ್ಲ ॥ 186

ಸರಳವಾಗಿತ್ತವರ ಜೀವನ ಸರಣಿ । ಅದರಂತೆ ಮಕ್ಕಳೂ ಮರಿಗಳಿಗೂ ಅದೇ ಅನುಕರಣೆ ।
ಸ್ತ್ರೀಯರದೂ ನಿರ್ದೋಷ ಆಚರಣೆ । ಚಕ್ರಪಾಣಿಯೂ ಋಣಿ ಅವರಿಗೆ ಅದರಿಂದ ॥ 187

ಬಾಳಾರಾಮನೂ ಅವರಲ್ಲೊಬ್ಬ । ಪುಣ್ಯವಂತನವ ವಿಠ್ಠಲನ ಭಕ್ತನಿದ್ದ ।
ರಾಜದರಬಾರದಲೂ ಹೆಸರಾಗಿದ್ದ । ಎಲ್ಲರಿಗೂ ಬೇಕಾದವನಾಗಿದ್ದ ॥ 188

ಹತ್ತೊಂಭತ್ತು ಫೆಬ್ರುವರಿಯ ದಿನ । ಹದಿನೆಂಟು ನೂರಾ ಎಪ್ಪತ್ತೆಂಟು ಸನ್ ।
ಆಗ ಒಬ್ಬ ರಾಮಭಕ್ತನ । ಉದರದಿ ಜನಿಸಿತೀ ರತ್ನ ॥ 189

ಅಲಂಕಾರ ಪಠಾರೆ ಪ್ರಭು ಜಾತಿಯಲ್ಲಿ । ಪ್ರಸಿದ್ಧ ಮನೆತನದವರ ಮನೆಯಲ್ಲಿ ।
ಸನ್ ಹದಿನೆಂಟುನೂರಾಎಪ್ಪತ್ತೆಂಟರಲಿ । ಮುಂಬಯಿಯಲ್ಲಿವನ ಜನನವಾಯಿತು ॥ 190

ಪಾಶ್ಚಾತ್ಯ ವಿದ್ಯಾ ಪಾರಂಗತರು । ಅಡ್ವೋಕೇಟ ಪದವಿ ವಿಭೂಷಿತರು ।
ತತ್ವಜ್ಞಾನದಲ್ಲಿ ನಿಷ್ಣಾತರು । ಎಲ್ಲೆಡೆಗೆ ವಿಖ್ಯಾತರು ವಿದ್ವಾನರವರು ॥ 191

ಪಾಂಡುರಂಗನ ಮೇಲೆ ಅತಿ ಪ್ರೇಮ । ಪರಮಾರ್ಥದಲ್ಲಿ ಆಸ್ಥೆ ಪರಮ ।
ತಂದೆಯ ಆರಾಧ್ಯ ದೈವತ ರಾಮ । ಪುತ್ರನಿಗೆ ವಿಠ್ಠಲನ ಪ್ರೀತಿ ॥ 192

ಎಲ್ಲ ಬಂಧುಗಳಿದ್ದರು ಪದವೀಧರ । ಸದೈವ ಅವರ ವೃತ್ತಿ ಧರ್ಮಪರ ।
ಶುದ್ಧ ಬೀಜದ ಶುದ್ಧ ಸಂಸ್ಕಾರ । ಬಾಳಾರಾಮನ ಮೇಲೆ ಇತ್ತು ಅಪೂರ್ವ ॥ 193

ಮಾತನ್ನು ಅಂದವಾಗಿ ಮಂಡಿಸುವ ಜಾಣ್ಮೆ । ಸರಳ ಶುದ್ಧ ವಿಚಾರ ಸರಣಿ ।
ಕುಶಾಗ್ರ ಬುದ್ಧಿಯವ ಸದಾಚರಣೆ । ಈ ಗುಣವವನವು ಅನುಕರಣೀಯ ॥ 194

ಸಮಾಜ ಸೇವೆಯ ಬಹಳ ಮಾಡಿದರು । ಸ್ವತಃ ಸಮಾಜ ವೃತ್ತಾಂತ ಬರೆದರು ।
ಮುಗಿದಾಗ ಹಿಡಿದ ಈ ವ್ರತ ಹೊರಟರು । ಪರಮಾರ್ಥ ಸಾಧಿಸಲು ॥ 195

ಅದರಲ್ಲೂ ಸಾಕಷ್ಟು ಮುಂದುವರಿದು । ಭಗವದ್ಗೀತಾ ಜ್ಞಾನೇಶ್ವರಿ ಗ್ರಂಥಗಳದು ।
ಓದಿ ಅದರಲ್ಲಿ ಪ್ರಾವೀಣ್ಯತೆ ಪಡೆದು । ಅಧ್ಯಾತ್ಮ ವಿಷಯದಲಿ ಹೆಸರಾದರು ॥ 196

ಸಾಯಿಯ ಪರಮ ಭಕ್ತರವರು । ಹತ್ತೊಂಭತ್ತು ನೂರಾ ಇಪ್ಪತ್ತೈದರಲ್ಲವರು ।
ಚಿಕ್ಕ ವಯಸ್ಸಿನಲ್ಲಿಯೇ ಬ್ರಹ್ಮೀ ಭೂತರಾದರು । ಅವರ ಸಚ್ಚರಿತೆಯನೊಂದಿಷ್ಟು ಕೇಳಬೇಕು ॥ 197

ಜೂನ್ ತಿಂಗಳ ಒಂಭತ್ತನೆಯ ತಾರೀಖಿನಂದು । ಸನ್ ಹತ್ತೊಂಭತ್ತು ನೂರಾ ಇಪ್ಪತ್ತೈದು ।
ಇಹಲೋಹದ ಯಾತ್ರೆ ಮುಗಿಸಿಕೊಂಡು । ವಿಠ್ಠಲನಲ್ಲಿ ವಿಲೀನರಾದರು ॥ 198

ಸನ್ ಹತ್ತೊಂಭತ್ತು ನೂರಾ ಹನ್ನೆರಡು । ಆಗ ಒಂದು ಒಳ್ಳೆಯ ದಿನ ನೋಡಿಕೊಂಡು ।
ಸಾಯಿ ದರಬಾರಕ್ಕೆ ಸಂತದರ್ಶನಕೆಂದು । ಬರುವ ಯೋಗ ಒದಗಿತಾ ಬಂಧುಗಳಿಗೆ ॥ 199

ಜೇಷ್ಠ ಸಹೋದರ ಬಾಬೂಜೀ ಶಿರಡಿಯಲಿ । ಕರೆದುಕೊಂಡು ವಾಮನರಾಯರ ಜೊತೆಯಲಿ ।
ಆರು ತಿಂಗಳ ಹಿಂದೆ ದರ್ಶನ ತೆಗೆದುಕೊಳ್ಳುತಲಿ । ಸಂತೋಷದಿ ಹಿಂದಿರುಗಿದ್ದರು ॥ 200

ಆ ಮಧುರ ಅನುಭವ ಅವರದು । ಇತರರೆಲ್ಲ ತಾವೂ ಅನುಭವಿಸಬೇಕೆಂದು ।
ದರ್ಶನ ಲಾಭವ ಪಡೆಯಲೆಂದು । ಬಾಳಕರಾಮಾದಿಗಳು ಹೋದರು ॥ 201

ಬಾಬಾ ಎಲ್ಲರೆದುರು ಹೇಳಿದ್ದರು । "ಇಂದು ನನ್ನ ದರಬಾರದವರು ।
ಬಹಳ ಜನ ಇಲ್ಲಿ ಬರಲಿರುವರು" । ಎಂದು ಅವರಿನ್ನೂ ಅಲ್ಲಿ ಹೋಗುವ ಮೊದಲೇ ॥ 202

ಈ ಪ್ರೇಮದ ವಾರ್ತೆಯನು ಕೇಳಿದಾಗ್ಯೆ । ಅತಿ ವಿಸ್ಮಯ ಧುರಂದರ ಬಂಧುಗಳಿಗೆ ।
ಬಾಬಾರಿಗೆ ಈ ವಾರ್ತೆ ತಿಳಿಯಿತು ಹೇಗೆ । ನಾವು ಶಿರಡಿಗೆ ಬರುವದನಾರಿಗೂ ಹೇಳಿಲ್ಲವಲ್ಲ ॥ 203

ಬಳಿಕ ಸಾಯಿಯ ಕಣ್ಣಿಂದ ನೋಡಿ । ಚರಣಗಳ ಬಿಗಿದಪ್ಪಿದರು ಹೋಗಿ ಓಡೋಡಿ ।
ಸಾವಕಾಶವಾಗಿ ತೊಡಗಿದರು ಮಾತಿನಲಿ । ಸುಖಸಂತೋಷವೆಲ್ಲರಿಗೆ ॥ 204

ಇದಲ್ಲದೇ ಕಂಡು ಇವರು ಬಂದುದು । ಬಾಬಾರ ಮುಖದಿಂದ ನುಡಿ ಮೂಡಿದ್ದು ।
"ನೋಡಿರಿ ನಾ ನಿಮಗೆ ಹೇಳಿದ್ದು । ದರಬಾರದ ಜನ ಬಂದರು" ॥ 205

ಮತ್ತೆ ಮುಂದೆ ಬಾಬಾ ನುಡಿದರು । ಆ ಸತ್ಯ ವಚನವನಾಲಿಸಬೇಕೆಲ್ಲರೂ ।
"ನಮ್ಮ ನಿಮ್ಮ ಪರಿಚಯ ಅರವತ್ತು ತಲೆಮಾರು । ಮೊದಲಿನಿಂದಲೂ ಇರುವದು" ॥ 206

ಬಾಳಾರಾಮಾದಿ ಬಂಧು ಜನ । ಅವರೆಲ್ಲರೂ ವಿನಯ ಸಂಪನ್ನ ।
ನಿಂತರೆದುರಿಗೆ ಮುಗಿದು ಕರಗಳನ । ಶ್ರೀ ಚರಣಗಳನನುಲಕ್ಷಿಸಿ ॥ 207

ಸಾಯಿಯ ದರ್ಶನವಾದಾಗ್ಯೆ । ಬಾಳಾರಾಮದಿ ಎಲ್ಲರ ಮನಸಿಗೆ ।
ಅನಿವಾರ ಪ್ರೇಮಾವಸ್ಥೆ ಒದಗಿದಾಗ್ಯೆ । ಅಲ್ಲಿಗೆ ಬಂದದ್ದು ಸಾರ್ಥಕವೆನಿಸಿತು ॥ 208

ಕಂಗಳಲಿ ಜಲ ತುಂಬಿ । ಅದರಿಂದ ಗಂಟಲು ಶಿರಉಬ್ಬಿ।
ರೋಮಾಂಚನವಾಯಿತು ಸರ್ವಾಂಗದಿ । ಅಷ್ಟಭಾವಗಳೊತ್ತಿ ಬಂದವು ॥ 209

ಬಾಳಾರಾಮನ ಈ ಅವಸ್ಥೆ ನೋಡಿದಾಗ್ಯೆ । ಸಂತೋಷವಾಯಿತು ಸಾಯಿಯ ಮನಸಿಗೆ ।
ಅವರು ಹೇಳತೊಡಗಿದರವರೆಲ್ಲರಿಗೆ । ಉಪದೇಶದ ಮಾತುಗಳ ಪ್ರೇಮದಿಂದ ॥ 210

ಶುಕ್ಲ ಪಕ್ಷದಲಿ ಬೆಳೆಯುವ ಚಂದ್ರನ । ಹಾಗೆ ಭಜಿಸುವರಾರು ನನ್ನ ।
ಧನ್ಯನವನಾರು ತನ್ನ ಮನೋಧರ್ಮವನ । ಸಂಪೂರ್ಣವಾಗಿ ನನಗೊಪ್ಪಿಸುವ ॥211

ದೃಢವಿಶ್ವಾಸವ ಹಿಡಿದು ಮನದಲ್ಲಿ । ತೊಡುಗುವನಾರು ನಿಜಗುರುವಿನ ಭಜನೆಯಲಿ ।
ಈಶ್ವರನವರ ಋಣಿ ಸರ್ವಸ್ವದಲಿ । ಅವನನಾರೂ ವಕ್ರದೃಷ್ಟಿಯಿಂದ ಕಾಣರು ॥212

ಒಂದರ್ಧ ಗಳಿಗೆಯನೂ ವ್ಯರ್ಥಗೊಳಿಸದೇ । ಯಾರಿಗೆ ಹರಿಗುರು ಭಜನದಲಿ ಪ್ರೀತಿಯಿದೆ ।
ಅಂಥವನಿಗವರು ತಪ್ಪದೇ । ಭವಸಾಗರವ ದಾಟಿಸುವರು ॥ 213

ಕೇಳುತಿದ್ದಾಗ ಈ ಅವರ ವಚನ । ಎಲ್ಲರ ಕಂಗಳಲಿ ತುಂಬಿತು ಆನಂದ ಜೀವನ ।
ಚಿತ್ತವಾಯಿತು ಸುಪ್ರಸನ್ನ । ಅಂತಃಕರಣ ಸದ್ಗದಿತ ॥ 214

ಸಾಯಿ ವಾಕ್ಯ ಸುಮನಮಾಲೆ । ಎಲ್ಲರೂ ನಮಿಸಿ ಧರಿಸಿದರು ಕೊರಳಿನಲಿ ।
ಅದರಿಂದ ಎಲ್ಲರೂ ತೇಲಿದರು ಆನಂದದಲಿ । ಅದು ಭಕ್ತಿಯ ಉಕ್ಕೇರಿದರಿಂದ ॥ 215

ಬಳಿಕವರು ವಾಡೆಗೆ ಬಂದರು । ಉಂಡು ಸ್ವಲ್ಪ ವಿಶ್ರಮಿಸಿದರು ।
ಮೂರನಯ ಪ್ರಹರದಲಿ ಮತ್ತೆ ಹೋದರು । ದಂಡವತ್ ಪ್ರಣಾಮಗೈದರು ಬಾಬಾಗೆ ॥ 216

ವಿನಯ ಸಂಪನ್ನನಾದ ಬಾಳಾರಾಮನು । ಪಾದ ಸಂವಾಹನೆ ಮಾಡತೊಡಗಿದನು ।
ಬಾಬಾ ಅವನಿಗಿತ್ತು ಚಿಲೀಮನು । ಸೇದಲು ಸನ್ನೆ ಮಾಡಿದರು ॥ 217

ಬಳಿಕಾ ಚಿಲೀಮನ್ನು ಪ್ರಸಾದವೆಂದು । ರೂಢಿ ಇರದಿದ್ದರೂ ಕಷ್ಟದಿಂದ ಸೇದಿದ್ದು ।
ಪುನಃ ಬಾಬಾರ ಕೈಗೆ ಕೊಡುತ । ಸದ್ಭಾವದಿಂದ ವಂದಿಸಿದನು ॥ 218

ಬಾಳಾರಾಮನ ಭಾಗ್ಯದ । ದಿನ ಉದಯಿಸಿತಂದಿನಿಂದ ।
ದಮ್ಮಿನ ವ್ಯಥೆ ನಿಂತಿತು ಅಂದಿನಿಂದ । ಪೂರ್ಣ ಸಮಾಧಾನವಾಯಿತು ॥ 219

ಒಂದೆರಡು ದಿನವಾಗಿರಲಿಲ್ಲ ಆ ದಮ್ಮಿಗೆ । ಪೂರ್ಣ ಆರು ವರ್ಷಗಳಾಗಿರುವಾಗ್ಗೆ ।
ಕಿವಿಯಲಿ ಮಂತ್ರ ಹೇಳಿದ ಹಾಗೆ । ಆ ಚಿಲೀಮೆ ಪ್ರಭಾವ ತೋರಿತು ॥ 220

ಒಂದು ದಮ್ಮು ಚಿಲೀಮೆ ಸೇದಿ । ತಿರುಗಿ ಕೊಟ್ಟಿದ್ದ ನಮಿಸಿ ವಿನಯದಿ ।
ಅಂದು ಹೋದದ್ದು ಆ ದಿನದಿ । ಮತ್ತೆಂದೂ ಬರಲಿಲ್ಲ ॥ 221

ಮಾತ್ರ ನಡುವೆ ಒಂದು ದಿನ ಇಂತು । ಬಾಳಾರಾಮನಿಗೆ ಕೆಮ್ಮು ಬಂತು ।
ಎಲ್ಲರಿಗೂ ಆಶ್ಚರ್ಯವಾಯಿತು । ಕಾರಣ ಯಾರಿಗೂ ತಿಳಿಯಲಿಲ್ಲ ॥ 222

ಆಮೇಲೆ ಅದರ ಮಾಡಲು ಚೌಕಶಿಯನು । ಬಾಬಾ ಅದೇ ದಿನ ಇಟ್ಟರು ನಿಜ ದೇಹವನು ।
ಎಲ್ಲರೂ ತಿಳಿದಾಗ ಇದನು । ಭಕ್ತನಿಗದರ ಗುರುತು ತೋರಿದರೆಂದರು ॥ 223

ಬಾಳಾರಾಮನಿಗೆ ಠಸಿಗೆ ಹತ್ತಿದ ದಿನ । ಅತ್ತ ಬಾಬಾ ಅಂದೇ ನಿಜ ದೇಹವನ ।
ಭೂಮಿಗೆ ಮಾಡಿದರು ಸಮರ್ಪಣ । ಅದರ ಕುರುಹನೇ ತೋರಿದರೇನೋ ॥ 224

ಅಂದಿನಿಂದ ಮತ್ತೆ ಅವನಿಗೆ । ಕೆಮ್ಮು ಬರಲಿಲ್ಲ ಸಾಯುವವರೆಗೆ ।
ಈ ಚಿಲಿಮಿನ ಅನುಭವ ಹೀಗೆ । ಮರೆಯಲಾದೀತೇ ಎಂದಾದರೂ ॥ 225

ಅದರಲ್ಲೂ ಗುರುವಾರದ ದಿನವದು । ಅಂದು ಚಾವಡಿಯ ಮೆರವಣಿಗೆ ಇರುವದು
ಅದರಿಂದ ದ್ವಿಗುಣಿತ ಆನಂದದ್ದು । ಅವರಿಗೆ ಸ್ಮರಣೀಯವಾಯಿತು ॥ 226

ಎಂಟರಿಂದ ಒಂಭತ್ತರವರೆಗೆ । ಬಾಬಾರೆದುರು ಅಂಗಳದೊಳಗೆ ।
ತಾಳ ಮೃದಂಗಗಳೊಂದಿಗೆ । ಭಜನೆಗೆ ರಂಗೇರುತ್ತಿತ್ತು ॥ 227

ಒಂದೆಡೆ ಅಭಂಗವೆನ್ನುವರು । ಇನ್ನೊಂದೆಡೆ ಪಲ್ಲಕ್ಕಿಯ ಅಲಂಕರಿಸುವರು ।
ಬಳಿಕ ಬಾಬಾ ಚಾವಡಿಗೆ ಹೊರಡುವರು । ಪಲ್ಲಕ್ಕಿ ಸಿದ್ಧವಾದ ಮೇಲೆ ॥ 228

ಹಿಂದೆ ಮೂವತ್ತೇಳನೆಯ ಅಧ್ಯಾಯದಲ್ಲಿ । ಚಾವಡಿಯ ಸಂಗತಿಯನದರಲ್ಲಿ ।
ಸವಿಸ್ತರವಾಗಿ ವರ್ಣಿಸಿದೆಯಲ್ಲಿ । ಮತ್ತೆ ಹೇಳಿದರೆ ದ್ವಿರುಕ್ತಿಯಾಗುವದು ॥ 229

ಮಶೀದಿಯಲಿರುವರು ರಾತ್ರಿಯೊಂದು । ಚಾವಡಿಯಲಿ ಕಳೆಯುವರು ಎರಡನೆಯದು ।
ಹೀಗೆ ಬಾಬಾರ ನಿಯಮ ನಡೆದದ್ದು । ಸತತ ಮರಣದವರೆಗೆ ॥ 230

ಚಾವಡಿಯ ಸಂಭ್ರಮ ನೋಡುವದು । ಬಾಳಾರಾಮನಿಗೆ ಬಹಳ ಇಷ್ಟವಿದ್ದು ।
ಅದಕ್ಕೇ ಚಾವಡಿಯ ದಿನ ನೋಡಿಕೊಂಡು । ಧುರಂಧರರೆಲ್ಲ ಬಂದಿದ್ದರು ॥ 231

ಶಿರಡಿಯ ಸ್ತ್ರೀ ಪುರುಷರು । ಕರೆದುಕೊಂಡು ಜೊತೆಯಲಿ ಬಾಬಾರ ಅವರು ।
ಉಲ್ಹಾಸದಿಂದ ಜಯ ಜಯಕಾರ ಮಾಡುತಿದ್ದರು । ಹೊರಟರೆಲ್ಲರೂ ಚಾವಡಿಗೆಂದು ॥ 232

ಮೈಮೇಲೆ ಜರತಾರಿ ಝೂಲು ಹಾಕಿದ । ಎಲ್ಲ ಆಭರಣಗಳಿಂದ ಅಲಂಕರಿಸಿದ ।
ಶ್ಯಾಮಸುಂದರವೆಂದೇ ಹೆಸರಿದ್ದ । ಕುದುರೆ ಮುಂದೆ ಕುಣಿಯುತ್ತ ಸಾಗುತ್ತಿತ್ತು ॥ 233

ಕಹಳೆ ತುತ್ತೂರಿಗಳ ನುಡಿಸುತ । ಆ ಅಲಂಕರಿಸಿದ ಶ್ಯಾಮಕರ್ಣದ ಸಹಿತ ।
ಜೊತೆಗೆ ಪಲ್ಲಕ್ಕಿ ಮೆಸೆಸುತ್ತ । ಭಕ್ತರಿಂದ ಸುತ್ತುವರಿದು ಶಿರದಿ ಛತ್ರ ಶೋಭಿಸುತ ॥ 234

ಧ್ವಜ ಪತಾಕೆಗಳ ಕೈಯಲ್ಲಿ ಹಿಡಿದು । ಶ್ರೀಯ ತಲೆಯ ಮೇಲೆ ಛತ್ರವ ಹಿಡಿದು ।
ನವಿಲುಗರಿಯ ಚಾಮರ ಬಿಧುಸುತಿದ್ದು । ನಾಲ್ದೆಸೆಗೆ ದೀವಿಟಿಗೆಗಳುರಿಯುತಿವು ॥235

ಜೊತೆಗೆ ನುಡಿಸುತ್ತ ಮೃದುಂಗ ಸುಸ್ವರ । ಟಾಳಘೋಷ ವಾದ್ಯ ಮಧುರ ।
ಭಜನೆ ಮಾಡುತ ಭಕ್ತ ನಿಕರ । ಬಾಬಾರ ಇಕ್ಕೆಲಗಳಲೂ ನಡೆಯುತಿದ್ದರು ॥ 236

ಇಂಥ ಆ ರಮ್ಯ ಮೆರವಣಿಗೆ । ಬಂದಾಗ ಚಾವಡಿಯ ಎದುರಿಗೆ ।
ಬಾಬಾ ನಿಲ್ಲುವರು ಮುಖ ಮಾಡಿ ಉತ್ತರದ ಕಡೆಗೆ । ವಿಧಿಪೂರ್ವಕ ಹಸ್ತಕ್ರಿಯೆ ಮಾಡುತಿದ್ದರು ॥ 237

ಬಲಗಡೆಗೆ ಬಾಬಾರ ಭಕ್ತನಿದ್ದು । ನಿಜಕರದಲಿ ಬಾಬಾರ ಸೆರಗು ಹಿಡಿದು ।
ತಾತ್ಯಾಪಾಟೀಲ ಕೈಯಲ್ಲಿ ಕಂದೀಲು ಹಿಡಿದು । ಬಾಬಾರ ಎಡಗಡೆಗೆ ಇರುತಿದ್ದ ॥ 238

ಮೊದಲೇ ಬಂಗಾರದಂತೆ ಬಾಬಾರ ಮೈಬಣ್ಣ । ಅದರಲಿ ದೀಪದ ಬೆಳಕಿನ ಮಿಶ್ರಣ ।
ತಾಮ್ರ ಮಿಶ್ರಿತವಾದ ಸುವರ್ಣ । ಅಂತೆಯೇ ಬಾಬಾರ ಮುಖದಲಿರುತಿತ್ತು ಅರುಣಪ್ರಭೆ ॥ 239

ಧನ್ಯ ಆ ಕಾಲದ ಪವಿತ್ರ ದರ್ಶನ । ಉತ್ತರಾಭಿಮುಖವಾಗಿ ಏಕಾಗ್ರಮನ ।
ಮೇಲೆ ಕೆಳಗೆ ಅಲುಗಿಸುವ ಬಲಗೈಯನ । ನೋಡಿ ಯಾರನೋ ಕರೆಯುತಿರುವಂತೆನಿಸುತ್ತಿತ್ತು ॥ 240

ಅಲ್ಲಿಂದ ಮುಂದೆ ಬಾಬಾರ ಚಾವಡಿಯತ್ತ । ಸನ್ಮಾನದಿಂದ ಕರೆದೊಯ್ದು ಕೂಡ್ರಿಸುತ ।
ದಿವ್ಯಾಲಂಕಾರ ವಸ್ತ್ರಗಳನೀಯುತ । ಚಂದನವ ಚರ್ಚಿಸುವರು ಸರ್ವಾಂಗಕೆ ॥ 241

ಶಿರಪೇಚ ಕಳಗಿ ತುರಾಯಿಗಳ ಒಂದು ದಿನ । ಅಂದವಾದ ಸುವರ್ಣ ಮುಗುಟವನಿನ್ನೊಂದು ದಿನ ।
ಒಮ್ಮೊಮ್ಮೆ ಹಾಕುವರು ಮಂದಿಲವನ । ಸುರುಚಿರ ಭರಜರಿಯ ಉಡುಪುಗಳನುಡಿಸಿ ॥ 242

ವಜ್ರ ಮುತ್ತು ಪಚ್ಚೆ ಸರಗಳ । ಹಾಕಿ ಅಲಂಕರಿಸುವರು ಬಾಬಾರ ಕೊರಳ ।
ಸುಗಂಧಿತ ಕಸ್ತೂರಿ ತಿಲಕದಿಂದವರ ಭಾಲ । ಪ್ರದೇಶವನಲಂಕರಿಸುತಿದ್ದರು ॥ 243

ಯಾರಾದರೂ ಪಾದ ಪ್ರಕ್ಷಾಲನ ಮಾಡಿಸುವರು । ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸುವರು ।
ಕೇಶರದ ಉರುಟಣೆ ಹಚ್ಚುವರು । ತಾಂಬೂಲವ ನೀಡುವರು ಮುಖದಲ್ಲಿ ॥ 244

ಪಂಚಾರತಿಯನು ಹಚ್ಚಿಕೊಂಡು । ಕರ್ಪೂರದಾರತಿಯ ತಕ್ಕೊಂಡು ।
ಅನುಪಮ ಶೋಭೆ ತೋರುವದು । ಬಾಬಾರಿಗೆ ಆದರಿಂದ ಬೆಳಗುವಾಗ ॥ 245

ಪಾಂಡುರಂಗ ಮೂರ್ತಿಯ ವದನ । ದಿವ್ಯ ತೇಜದಿಂದ ಶೋಭಾಯಮಾನ ।
ಆಗುವಂತೆ ಬಾಬಾರ ಮುಖಮಂದನ । ಕಂಡು ವಿಸ್ಮಯ ಚಕಿತರಾದರು ಧುರಂದರ ॥246

ಮಿಂಚು ಹೊಳೆದಂತೆ ನಭೋಮಂಡಲದಲ್ಲಿ । ಭೂಮಿಯಲ್ಲಾದರೂ ಲಕ್ಷಿಸದಿರುತಲಿ ।
ಅಂಥ ತೇಜ ಸಾಯಿಯ ಹಣೆಯಲಿ । ಹೊಳೆದಾಗ ಕಣ್ಣು ಕುಕ್ಕಿದವು ॥ 247

ಕಾಕಡಾರತಿ ಇತ್ತು ಬೆಳಗಿಗೆ । ಧುರಂಧರರೆಲ್ಲ ಹೋದರಲ್ಲಿಗೆ ।
ಅಲ್ಲಿಯೂ ಬಾಬಾರ ಮುಖದೊಳಗೆ । ಅದೇ ತೇಜವನು ಕಂಡರು ॥ 248

ಅಂದಿನಿಂದ ಆಮರಣಾಂತ । ಬಾಳಾರಾಮನ ನಿಷ್ಠೆ ಅತ್ಯಂತ ।
ಸಾಯಿ ಪದದಲುಂಟಾದದ್ದು ನಿಶ್ಚಿತ । ಒಂದಿಷ್ಟೂ ಕಡಿಮೆಯಾಗಲಿಲ್ಲ ॥ 249

ಹೇಮಾಡ ಸಾಯಿ ಪದಕೆ ಶರಣ । ಮುಂದಿನಧ್ಯಾಯದಲಿ ಗ್ರಂಥ ಪೂರ್ಣ ।
ಸಿಂಹಾವಲೋಕನದಲಾಗುವದು ನಿರೂಪಣ । ಚಿತ್ತ ಕೊಡಿರಿ ನನ್ನತ್ತ ಕೊನೆಯದಾಗಿ ॥250

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೇ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಭಕ್ತ ತ್ರಯವೃತ್ತ ಕಥನಂ ನಾಮ । ಏಕ ಪಂಚಾಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥

733·1



## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐವತ್ತೆರಡು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಇನ್ನು ಮಾಡುವೆ ಸಿಂಹಾವಲೋಕನ । ತದನಂತರ ಗ್ರಂಥ ಸಂಪೂರ್ಣ ।
ಮಾಡುವೆನು ಕೊಟ್ಟು ಅವತರಣಿಕೆಗಳನು । ಸಾರಾಂಶ ನಿವೇದನೆ ಗ್ರಂಥದ್ದು ॥ 1

ದೇಹದಲ್ಲಿರುವಾಗ ನಿಜ ಭಕ್ತರಿಗೆ । ಯಾವ ಅನುಭವವಿತ್ತರು ಹೊತ್ತು ಹೊತ್ತಿಗೆ ।
ಅದರದೇ ಈ "ಸಾಯಿ ಲೀಲಾ" ಹೊತ್ತಿಗೆ । ಸ್ಮರಣಾರ್ಥ ಗ್ರಂಥವ ಬರೆಸಿದರು ॥ 2

"ಸಾಯಿ ಲೀಲಾ" ಪರಮ ಪವಿತ್ರ । ಅದರಲ್ಲಿಯ ಸಚ್ಚರಿತ ಕಥಾ ಸತ್ರ ।
ಓದಿರಿ ಈ ನಿಜಗುರು ಚರಿತ್ರ । ಇಹಪರತ್ರ ಪ್ರಬೋಧಕ ॥ 3

ಸಂಗ್ರಹದಲಿದ್ದ ಅಸಂಖ್ಯಾತ । ಆದರೆ ವ್ಯುತ್ಪತ್ತಿ ವಿದ್ಯಾರಹಿತ ।
ಕೈಗೆ ಹಿಡಿದು ಹೇಮಾಂಡಪಂತ । ಅವನಿಂದ ನಿಜ ಸಚ್ಚರಿತೆ ಬರೆಸಿದರು ॥ 4

ತಾವೇ ತಮ್ಮ ಖ್ಯಾತಿಗಳ ಕೆಲವನು । ಸ್ವಮುಖದಿಂದ ಶಿಷ್ಯರಿಗೆ ಹೇಳಿದನ್ನು ।
ಅವರು ಹೋದಾಗ ಅರಸಿ ನಿಜಧಾಮವನು । ಅವರಿಂದ ಸ್ಫೂರ್ತಿ ಈ ಗ್ರಂಥಕ್ಕೆ ॥ 5

ಹಲವು ಬಗೆಯ ವಾರ್ತೆಗಳ ಗಹನ । ಸಾಯಿ ಮಾಡುತಿದ್ದಾಗ ಕಥನ ।
ಶ್ರೋತೃಗಳಾಗಿ ಅತ್ಯಂತ ತಲ್ಲೀನ । ಹಸಿವೆ ನೀರಡಿಕೆಗಳ ಮರೆಯುತಿದ್ದರು ॥ 6

ಯಾರು ನೋಡಿದರು ಸಾಯಿ ಸ್ವರೂಪ । ದೂರವಾದವವರ ತ್ರಿವಿಧ ತಾಪ ।
ಹೀಗೆ ಯಾರ ತೇಜಃ ಪ್ರತಾಪ । ಸಾದ್ಯಾಂತ ವರ್ಣಿಸಲಾದೀತೆ ॥ 7

ಹೀಗೆ ಸಾಯಿ ಉದಾರ ಕೀರ್ತಿ । ಯಾರು ಮಾಡುವರವರ ಭಕ್ತಿ ।
ಅವರ ಉದ್ಧಾರ ಮಾಡಲು ಈ ರೀತಿ । ನಿಜಖ್ಯಾತಿಯ ಬರೆದಿಟ್ಟರು ॥ 8

ಗೋದಾವರಿಯ ಪವಿತ್ರ ಸ್ನಾನ । ಮಾಡಿ ತೆಗೆದುಕೊಂಡು ಸಾಯಿ ದರ್ಶನ ।
ಮಾಡಬೇಕು ಈ ಸಚ್ಚರಿತೆ ಶ್ರವಣ । ಅದರಿಂದ ತ್ರಿತಾಪ ಶಮನವಾಗುವುವು ॥ 9

ಸಹಜವಾಗಿ ಮಾತಾನಾಡಿದರೆ ಯಾರ ಸಂಗತಿ । ತಿಳಿಯದೇ ಆಗುವದವರಿಗೆ ಪರಮಾರ್ಥ ಪ್ರಾಪ್ತಿ।
ದೂರವಾಗುವ ಪಾಪ ಕೋಟಿ । ಪ್ರೇಮದಿ ಈ ಗ್ರಂಥ ದೃಷ್ಟಿ ಹಾಯಿಸಲು ॥ 10

ಜನ್ಮ ಮರಣಗಳ ಚಕ್ರವನು । ತಪ್ಪಿಸಬೇಕೆಂದಿಚ್ಛಿಸುವವನು ।
ಅಖಂಡ ಸ್ಮರಣ ಭಕ್ತಿಯನು । ಮತ್ತು ಗುರುಪದಗಳಾಸಕ್ತಿ ಹೊಂದಬೇಕು ॥ 11

ಪ್ರಮಾದಮಿಥ್ಯಾ ಜ್ಞಾನದ ಕಾರಣ । ಆತ್ಮರೂಪದಲಿ ಮಾಡದೆ ಅನುಸಂಧಾನ ।
ಅದರಿಂದುದ್ಭವಿಸುವದು ಜನನ ಮರಣ । ಸರ್ವ ಅನರ್ಥಗಳ ಮೂಲವದು ॥ 12

ಮೋಹವೆಂದರೇನೇ ಮಿಥ್ಯಾಜ್ಞಾನ । ಅನಾತ್ಮದಲಿ ಆತ್ಮಾಭಿಮಾನ ।
ಅದೇ ಮೃತ್ಯುವೆಂಬರು ವಿದ್ವಜ್ಜನ । ಅದರ ಲಕ್ಷಣವ ಹೇಳುತ ॥ 13

ಸಾಯಿ ಕಥಾ ಸಾಗರ ಮಂಥನ । ಮಾಡಲು ಸಾಯಿ ಕಥಾಕಥನ ।
ಸವಿ ಅದರದು ನಿತ್ಯ ಶ್ರೋತೃಗಳ । ಅಧಃ ಪತನ ತಪ್ಪಿಸುವದು ॥ 14

ಸಾಯಿ ಗುಣಮಯ ಸ್ಥೂಲಸ್ವರೂಪ (ದೊಡ್ಡ ಪಾತ್ರೆ) । ಮಾಡದಲರ ಧ್ಯಾನ ಅಮೂಪ ।
ಪ್ರಕಟವಾಗವುದು ಸೂಕ್ಷ್ಮತಮ ಆತ್ಮ ಸ್ವರೂಪ । ಲೋಪವಾಗಿ ಸಗುಣದ್ದು ॥ 15

ಆಗದೇ ಸಗುಣರೂಪದಲಿ ಪ್ರವೇಶ । ತಿಳಿಯದು ಆತ್ಮ ಜ್ಯೋತಿಯ ಪ್ರಕಾಶ ।
ಪ್ರರಬ್ರಹ್ಮವದು ನಿರ್ವಿಶೇಷ । ದುರ್ಬೋಧ ನಿಃಶೇಷ ತಿಳಿಯಲು ॥ 16

ಯಾರು ತಮ್ಮ ಚರಣಗಳ ತೋರಿಸಿ । ಪ್ರೇಮದಿಂದ ನಿಜ ಭಕ್ತರ ಒತ್ತಾಯಿಸಿ ।
ದೇಹದಲ್ಲಿರುವಾಗಲೇ ವಿದೇಹವಾಗಿಸಿ । ಪರಮಾರ್ಥದಲ್ಲಿ ತೊಡಗಿಸಿದರು ತಿಳಿದಂತೆ ॥ 17

ಸಾಗರವನಪ್ಪಿದ ಸರಿತೆ । ತನ್ನ ಸರಿತಾತನವನೇ ಮರೆಯುವಂತೆ ।
ಭಕ್ತನ ಬೇರೆತನವನು ಅಳಿಸಿ । ಶರಣ ಭಕ್ತರ ನಿನ್ನವರನ್ನಾಗಿಸುವಿ ॥ 18

ಜ್ಯೋತಿಗಳೆರಡು ಕೂಡಿದಾಗ । ಒಂದನ್ನೊಂದು ಆಲಂಗಿಸಿದಾಗ ।
ದ್ವೈತಸ್ಥಿತಿ ಉಳಿಯದು ಆಗ । ಒಂದೇ ದೀಪ್ತಿ ಏಕತ್ವದಿಂದ ॥ 19

ಕರ್ಪೂರವ ಬಿಟ್ಟದರ ದ್ಯುತಿ (ಬೆಳಕು) । ಸೂರ್ಯನ ಬಿಟ್ಟವನದೀಪ್ತಿ ।
ಕನಕವ ಬಿಟ್ಟದರ ಕಾಂತಿ । ಬೇರೆಯಾಗುಳಿಯಲು ಸಾಧ್ಯವೇ ॥ 20

ಸಾಗರವ ಸೇರಿದ ಸರಿತೆ । ಸಾಗರವಾಗಿಯೇ ಉಳಿಯುವಂತೆ ।
ಅಥವಾ ಉಪ್ಪು ಸಾಗರವ ಸೇರುತೆ । ಕೂಡಲೇ ಅದರೊಡನೆ ಸಮರಸವಾಗುವುದು ॥ 21

ಅದರಂತೆ ಬರಲು ಸಾಯಿ ಪದಕೆ ಶರಣ । ಭಕ್ತನಿಗುಳಿಯದು ಬೇರೆತನ ।
ಭಕ್ತನಾಗುವನು ಸಮಸಮಾನ । ತ್ಯಜಿಸಿ ತನ್ನ ತನವನು ॥ 22

ಜಾಗೃತಿ, ಸ್ವಪ್ನ ಅಥವಾ ಸುಷುಪ್ತಿ । ಮೂರರಲ್ಲಾವದೇ ಸ್ಥಿತಿ ।
ಆದಾಗ ಸಾಯಿ ಮಯ ವೃತ್ತಿ । ಸಂಸಾರ ನಿವೃತ್ತಿಯೆಂದರೆ ಬೇರೆನು ॥ 23

ಇನ್ನು ಸಾಷ್ಟಾಂಗದಿ ಅವರ ನಮಿಸುವೆ । ಅವರಲ್ಲಿ ಇದನ್ನೆ ಬೇಡುವೆ ।
ನಿನ್ನ ಬಿಟ್ಟು ಅನ್ಯಕೆನ್ನ ಮನವ । ಎಳೆಸದಂತಾಗಿಸು ಎಂದೆಂದೂ ॥ 24

ಬ್ರಹ್ಮಾದಿಸ್ತಂಭದವರೆಗೆ । ಘಟಮಠಗಳಲಿ ಸಬಾಹ್ಯ ಅಂತರಂಗದೊಳಗೆ ।
ಪರಿಪೂರ್ಣವಾಗೆಲ್ಲ ಭೂತಗಳೊಳಗೆ । ವಿಷಮತೆಯನೋಂದಿಷ್ಟು ತಿಳಿಯದವನವ ॥ 25

ಭಕ್ತರೆಲ್ಲರು ಅವನಿಗೆ ಸಮಸಮಾನ । ತಿಳಿಯದನ ಮಾನಾಪಮಾನ ।
ಪ್ರಿಯಾಪ್ರಿಯವನರಿದ ಮನ । ಎಳ್ಳುಕಾಳಷ್ಟು ವಿಷಮತನವಿಲ್ಲವವನಲಿ ॥ 26

ಶರಣಾಗತರಾಗುವ ಆ ಸಾಯಿ ಸಮರ್ಥನಿಗೆ । ನಿಜಸ್ಮರಣೆಯಿಂದ ಸರ್ವಾರ್ಥವನೀಯುವವಗೆ ।
ಅಖಂಡ ಶಿರವನವರಡಿಯೊಳಗೆ । ಇಟ್ಟು ಕೃತಾರ್ಥರಾಗುವಾ ॥ 27

ಇನ್ನು ಶ್ರೋತೃ ಸಜ್ಜನ ಭಕ್ತ ಪ್ರವರ । ಎಲ್ಲರಿಗೂ ನನ್ನ ನಮಸ್ಕಾರ ।
ನೀವು ಹಿರಿಯರ ಮತ್ತು ಸ್ನೇಹಿತರ । ವಿನಂತಿಕೊಳ್ಳುವೆನದಕೇಳಿ ॥ 28

ತಿಂಗಳಗಟ್ಟಲೆ ತೆಗೆದು ಸಮಯವನು । ಕೇಳುತಿದ್ದಿರಿ ಯಾರ ಕಥೆಗಳನು ।
ಒಂದು ಕ್ಷಣವೂ ಅವನ ಮರೆವನು । ಆಗಗೊಡದಂತೆ ನೋಡಿಕೊಂಡಿರಿ ॥ 29

ತಾವು ಸಪ್ರೇಮ ಚಿತ್ತದಿಂದ ಕೇಳುತಿರಲು । ಈ ಸಾಯಿ ಸಮರ್ಥರ ಕಥೆಗಳು ।
ಅವು ಹೇಳುವಂಥ ವಕ್ತಾರ ನಾನೇ ಇರಲು । ಆ ಸಾಯಿ ಸಂತೋಷ ಕೊಡುವರು ॥ 30

ಅಂತೆಯೇ ಶ್ರೋತೃಗಳಾಗದಿರಲು ದತ್ತಾವಧಾನ । ವಕ್ತಾರನೆಂದೂ ಆಗಲಾರ ಪ್ರಸನ್ನ ।
ಇಲ್ಲದೆ ಪರಸ್ಪರರಿಗೆ ಪ್ರಸನ್ನತನ । ವ್ಯರ್ಥಶ್ರಮ ಕೇಳಿದ್ದು ॥ 31

ಪರಮದುಸ್ತರ ಈ ಭವಸಾಗರ । ಅಲ್ಲಿ ಮೋಹದ ತೆರೆಗಳು ಅಪಾರ ।
ಕೆಡುವುವವು ಧೈರ್ಯತರುವರ । ಅಪ್ಪಳಿಸಿ ಅವಿಚಾರದ ತಟವನು ॥ 32

ಅಹಂಕಾರದ ಗಾಳಿ ಬೀಸಲು । ಸಾಗರವೆಲ್ಲ ಕಡೆದಂತಾಗಲು ।
ಕ್ರೋಧ ದ್ವೇಷದ ಮೊಸಳೆಗಳು । ಅಲ್ಲಿ ನಿರ್ಭಯವಾಗಿ ಸಂಚರಿಸುವುವು ॥ 33

'ನಾ ನನ್ನದು' ಎಂಬ ನಕ್ರವದರಲ್ಲಿ । ವಾಸನೆ ವಿಕಲ್ಪಗಳೆಂಬ ತಿರುಗಣೆ ಮಡುಗಳಿರುತಲಿ ।
ಅಸಂಖ್ಯ ಜಲಚರಗಳಾಗರವಾಗಿರುತಲಿ । ನಿಂದೆ, ಅಸೂಯೆ, ತಿರಸ್ಕಾರಗಳೆಂಬ ॥ 34

ಇಂಥ ಈ ಭಯಂಕರ ಸಾಗರ । ಅಗಸ್ತಿರೂಪದಲಿ ಪ್ರಕಾಶಿಸುವ ಗುರುವರ ।
ಇರಲವರ ಚರಣ ರಜ ಕಿಂಕರ । ಅವರಿಗವುಗಳ ಭಯವೆಷ್ಟೂ ಇರದು ॥ 35

ಅದಕೆ ಸಾಯಿ ಸಮರ್ಥ ಸದ್ಗುರು । ಭವಾಬ್ಧಿಯಲಿ ಡೋಣಿಯಂತವರು ।
ನಾವು ಅವರ ಅಸರೆಗಿದ್ದವರು । ಆ ಎಲ್ಲರ ಆಚೆ ದಡ ಸೇರಿಸುವರು ॥ 36

ಮಹಾ ದುಸ್ತರವಿಭವಜಲಧಿ । ಅದರಲಿ ಸಾಯಿ ಚರಣಗಳ ಡೋಣಿ ಮಾಡಿ ।
ಅವ ಆಚೆದಡ ತೋರುವ ನಿರ್ಭಯದಿ । ನಿಷ್ಠೆಯ ಚಮತ್ಕಾರವ ನೋಡಿರಿ ॥ 37

ವ್ರತ ಮಾಡಲು ಇಂಥದು । ಸಂಸಾರ ದುಃಖದ ತ್ರೀವ್ರತೆ ಅರಿವಾಗದು ।
ಇದಕಿಂತ ಹೆಚ್ಚಿನ ಲಾಭವಿರದು । ಸೇವ್ಯ ಸಮರ್ಥತೆಯೇ ಇದು ॥ 38

ಸಾಯಿ ಚರಣದಿ ಅತ್ಯಂತ ಭಕ್ತಿ । ನಯನದಲಿ ತುಂಬಲಿ ಸಾಯಿ ಮೂರ್ತಿ ।
ಭಕ್ತನಿಗೆ ಬರಲಿಂಥ ಸ್ಥಿತಿ । ಭೂತ ಮಾತ್ರಗಳಲಿ ಕಾಣಲಿ ಸಾಯಿ ॥ 39

ಸ್ವಚ್ಛಂಧವರ್ತಿಗಳಾಗಿ ನಡೆದು । ಪೂರ್ವಜನ್ಮದಲಿ ಚ್ಯುತಿ ಹೊಂದಿದ್ದು ।
ಇನ್ನಾದರೂ ಲಭಿಸಲಿ ಎಂದು । ಸಂಗನಿರ್ಮುಕ್ತಿ ಎಂಬುದಿದೇ ॥ 40

ಕಾಯುವವರಿರಲು ಸಾಯಿ ಸಮರ್ಥರು । ಯಾರೂ ಕೂದಲೆಳೆ ಕೊಂಕಿಸಲಾರರು ।
ಈ ನಿರ್ಧಾರದಿಂದಾರು ನಿರ್ಭಯರಾಗಿರುವರು । ಆ ಸಾಯಿಯ ಭಕ್ತರೇ ಧನ್ಯರು ॥ 41

ಈಗ ಮನಸಿಗೆನಿಸುವದು । ಬಾಬಾರ ಚರಣಗಳ ಹಿಡಿದು ।
ಅವರಿಗೊಂದು ಪ್ರಾರ್ಥನೆ ಮಾಡುವುದು । ಎಲ್ಲ ಭಕ್ತಜನರಿಗಾಗಿ ॥ 42

ಯಾರ ಮನೆಯಲ್ಲಿ ಈ ಗ್ರಂಥವಿರುವದು । ನಿತ್ಯ ಪಾಠಾಂತರ ನಡೆಯುವದು ।
ಪಾರಾಯಣವೂ ನಿಯಮದಿಂದಾಗುವುದು । ಅಂಥವರ ಸಂಕಟಗಳ ಪರಿಹರಿಸಬೇಕು ॥43

ಶುಚಿರ್ಭೂತನಾಗುತಲಿ । ಪ್ರೇಮದಿಂದ ಶ್ರದ್ಧೆಯಲಿ ।
ಓದಿದರಿದನು ಏಳು ದಿನಗಳಲಿ । ಅವರನಿಷ್ಟಗಳು ಶಾಂತವಾಗುವವು ॥ 44

ಆಧ್ಯಾತ್ಮ ತಂತುಗಳಿಂದ ನೇಯ್ದಿದ್ದಿದು । ಕೃಷ್ಣ ಬ್ರಹ್ಮ ಕಥೆಯಿಂದ ತುಂಬಿದ್ದು ।
ಬ್ರಹ್ಮಾತ್ಮೈಕ್ಯ ರಸದಿಂದ ಕಳೆಕಟ್ಟಿದ್ದು । ಅಪೂರ್ವ ಅದ್ವೈತದಲಿ ನಿಂತಿದೆ ॥ 45

ಈ ನಾಥಕಾವ್ಯಾನಂದನವನದಲ್ಲಿ । ಮೂವತ್ತೆರಡಂಕಣದ ವೃಂದಾವನದಲಿ ।
ಈ ಮಧುರ ಮನೋಹರ ಸದುಗ್ಧದಲಿ । ಜ್ಞಾನಿ ಅಜ್ಞಾನಿಗಳೆಲ್ಲ ರಮಿಸುವರು ॥ 46

ಮಾಡಲು ಈ ಸಚ್ಚರಿತದ ಶ್ರವಣ । ಅಥವಾ ನೇಮದಿಂದ ಪಾರಾಯಣ ।
ತಡವಿಲ್ಲದೆ ಸಂಕಟ ನಿವಾರಣ । ಮಾಡುವವು ಸಾಯಿ ಸಮರ್ಥಚರಣ ॥ 47

ಧನೇಚ್ಛುಗಳಿಗೆ ಲಭಿಸುವುದು ಧನ । ಶುದ್ಧ ವ್ಯವಹಾರಿಗಳಿಗೆ ಯಶ ಪೂರ್ಣ ।
ನಿಷ್ಠ ಇದ್ದಂತೆ ಪಡೆವರು ಫಲವನ । ಭಾವವಿಲ್ಲಡೆ ಅನುಭವ ಬರಲಾರದು ॥ 48

ಆದರದಿಂದ ಮಾಡಲು ಗ್ರಂಥ ಪಠಣ । ಸಾಯಿ ಸಮರ್ಥನಾಗುವ ಸುಪ್ರಸನ್ನ ।
ಮಾಡುವ ಅಜ್ಞಾನ ದ್ರಾರಿದ್ರ್ಯ ವಿಚ್ಛಿನ್ನ । ಜ್ಞಾನಧನ ಸಂಪನ್ನತೆಯ ಕೊಡುವ ॥ 49

ಗ್ರಂಥ ರಚನೆಯಲಿ ಸಾಯಿ ಸಂಕೇತ । ಅಂತೆಯೇ ಅವನ ಗುಪ್ತ ಮನೋಗತ ।
ಪೂರ್ಣವಾಗುವವು ಆದರೆ ತತ್ಪರಣತ । ಆ ಭಕ್ತನ ಜೀವಿತವೇ ಧನ್ಯ ॥ 50

ಚಿತ್ತ ಮಾಡಿ ಸುಸಮಾಹಿತ । ನೇಮ ನಿಷ್ಠೆಗಳಿಂದ ಈ ಸಚ್ಚರಿತ ।
ಇರಬೇಕು ಒಂದಾದರೂ ಅಧ್ಯಾಯ ಒದುತ । ಇದು ಅಮಿತ ಸುಖದಾಯಕವಾಗುವದು ॥ 51

ಸ್ವಹಿತ ವಿಚಾರ ಮನದಲ್ಲಿದ್ದವನು । ನಿಜದಲೋದಬೇಕಿ ಗ್ರಂಥವನು ।
ಜನ್ಮಜನ್ಮಾಂತರಗಳಲೂ ಸಾಯಿಯ ಉಪಕಾರವನು । ಆನಂದ ನಿರ್ಭರನಾಗಿ ನೆನೆಸುವನು ॥ 52

ಗುರುಪೂರ್ಣಿಮೆ ಗೋಕುಲಾಷ್ಟಮಿಯಂದು । ಪುಣ್ಯತಿಥಿರಾಮನವಮಿಯಂದು ।
ಈ ಸಾಯಿಯ ಉತ್ಸವದಂದು । ತಪ್ಪದೇ ಈ ಗ್ರಂಥವನೋದಬೇಕು ತಮ್ಮ ಮನೆಯಲಿ ॥ 53

ಚಿತ್ತದಲಿ ಸಂಗತಿ ಇರುವುದು ಹೇಗೆ । ಜನ್ಮ ಪ್ರಾಪ್ತಿಯೂ ಅದರ ಹಾಗೆ ।
ಗತಿಯಾಗುವದು ಅಂತದಲಿ ಮತಿ ಇದ್ದ ಹಾಗೆ । ಶಾಸ್ತ್ರ ಸಮ್ಮತಿ ಇರುವದಿದಕೆ ॥ 54

ಭಕ್ತರಿಗೆ ಶ್ರೀ ಸಾಯಿಯೇ ಆಧಾರ । ಅವನಿಲ್ಲದೆ ವಿಘ್ನಗಳೋಡವು ದೂರ ।
ಪ್ರೇಮದಿ ಕಾಣುವಳು ತಾಯಿ ತನ್ನ ಕಂದರ । ಅದರಲ್ಲಿ ಆಶ್ಚರ್ಯವೇನಿಹುದು ॥ 55

ಇದಕಿಂತ ಬಣ್ಣಿಸಲಿ ಏನು ಈ ಕಥೆಯನು । ಶಬ್ದಗಳೇ ಹೊಂದುತಿರೆ ಉಪರತಿಯನು ।
ಎನಿಸುವದು ತಾಳಬೇಕು ಮೌನವನು । ಅದೇ ಯೋಗ್ಯ ಸ್ತುತಿಯಾದೀತು ॥ 56

ಅದಕೆ ಶುದ್ಧ ಮೋಕ್ಷೇಚ್ಛೆಯನು ಹಿಡಿದು ಮನದಿ । ಶುಭಕರ್ಮಗಳನೇ ನಿತ್ಯ ಮಾಡಿ ।
ನವವಿಧ ಭಕ್ತಿಯ ಸೇವಿಸಿ ಶ್ರವಣಾದಿ । ಮಾಡಿದರೆ ಶುದ್ಧಾಂತಃಕರಣವಾಗವುದು ॥ 57

ಇದು ಸದ್ಗುರು ಪ್ರಸಾದದ ಹೊರತಲ್ಲ । ಅವನ ಹೊರತು ಪರತತ್ವಜ್ಞಾನವಿಲ್ಲ ।
ಗುರುನಿಷ್ಠಾ ಪ್ರವಣನವನಾಗಬಲ್ಲ । 'ಬ್ರಹ್ಮೈವಾಹಂ' ನಿತ್ಯ ಸ್ಮರಣದಿಂದ ॥ 58

ಸಂಬಂಧವಿದು ಇದ್ದಂತೆ ಪಿತಾಪುತ್ರ । ಗುರುವೆಂಬ ಉಪಮೆ ನಾಮಮಾತ್ರ ।
ತಂದೆ ಇಹಸುಖಕೆ ಮಾಡುವ ಪಾತ್ರ । ಗುರುಇಹಾಮುತ್ರ ಸುಖದಾತ ॥ 59

ಪಿತನೀಯುವ ಕ್ಷಣಿಕವಿತ್ತ । ಗುರುವೀಯುವ ಕ್ಷಯಾತೀತ ।
ಅವಿನಾಶಿ ವಸ್ತುವ ಪಡಿಸಿ ಪ್ರಸ್ತುತಿ । ಅಪರೋಕ್ಷವಾಗಿ ಕೈಗೀಯುವ ॥ 60

ಮಾತೆ ಮಗುವ ಒಂಬತ್ತು ತಿಂಗಳು ಹೊಟ್ಟೆಯಲಿಟ್ಟು । ಹೊರಗೆ ಹಾಕುವಳು ಜನ್ಮವಿತ್ತು
ಗುರುಮಾತೆಯದು ತಿರುವು ಮುರುವಿನ ಗತ್ತು । ಹೊರಗಿಂದ ಒಳಗೆ ಹಾಕಿಕೊಳುವ ॥ 61

ಕೊನೆಯಲಿ 'ಗುರುಗುರು' ಎಂದು ಮಾಡಲು ಸ್ಮರಣೆಯ । ಶಿಷ್ಯನು ಶಂಕೆಯಿಲ್ಲದೆ ಪಡೆವ ಸಾಯುಜ್ಯ ।
ಗುರುವವನನು ದಂಡಿಸಲು ಸ್ವಯಂ । ಪೂರ್ಣ ಬ್ರಹ್ಮತೆಯ ಪಡೆಯುವ ॥ 62

ಗುರುವಿನ ಕೈಯ ಆಘಾತ । ಮಾಡುವದು ಜನ್ಮ ಮರಣ ನಿಃಪಾತ ।
ಗುರುವೇ ಮಾಡಿದರೆ ದೇಹದ ಅಂತ । ಅವಗಿಂತ ಭಾಗ್ಯವಂತನಾರಿಹನು ॥ 63

ಖಡ್ಗ, ತೋಮರ ಪರುಶ, ಶೂಲಾದಿ । ಬರಬಹುದು ಕೈಗೆತ್ತಿ ಕೊಳಬೇಕಾಗಿ ।
ಆಘಾತವಾದಾಗ ಇದ್ದೀತು ಶುದ್ಧಿ । ಆಗ ಸದ್ಗುರುವಿನ ಮೂರ್ತಿ ಕಾಣಬಹುದು ॥ 64

ಎಷ್ಟೇ ಮಾಡಿರಿ ಈ ದೇಹವ ಜೋಪಾನ । ಎಂದಾದರೊಮ್ಮೆ ಆಗಲೇ ಬೇಕಿದರ ಪತನ ।
ಅಂದಾಗ ಗುರುಹಸ್ತದಿಂದಾರೆ ಹನನ । ಪುನರ್ಜನರಹಿತವಾಗುವಿರಿ ॥ 65

ಜೀವ ಹೋಗುವವರೆಗೆ ಹೊಡೆಯಿರಿ । ನನ್ನ ಅಹಂಕಾರ ಸಮೂಲ ಮುರಿಯಿರಿ ।
ಇಷ್ಟು ಭಯಂಕರ ಹೊಡೆಯಿರಿ । ಅದರಿಂದ ಪುನರ್ಜನ್ಮ ಬರಬಾರದು ॥ 66

ಸುಟ್ಟು ಬಿಡಿರೆನ್ನ ಕರ್ಮಾಕರ್ಮ । ನಿವಾರಿಸಿರೆನ್ನ ಧರ್ಮಾಧರ್ಮ ।
ಯಾವುದರಿಂದಾಗುವದು ಸುಖ ಪರಮ । ಅಂಥ ಮೋಹಭ್ರಮೆಯ ಭೇದಿಸಬೇಕು ॥ 67

ಕಳೆಯಿರೆನ್ನ ಸಂಕಲ್ಪ । ಮಾಡಿರೆನ್ನ ನಿರ್ವಿಕಲ್ಪ ।
ಪುಣ್ಯವೂ ಬೇಡ ಬೇಡೆನಗೆ ಪಾಪ । ಈ ಉಪದ್ವ್ಯಾಪವೇ ಬೇಡ ಜನ್ಮದ್ದು ॥ 68

ಬಂದರೆ ಶರಣಾಗತನಾಗಲೆನುತಲಿ । ನೀನಿಂತಿರುವೆ ನಾಲ್ದೆಸೆಯಲಿ ।
ಪೂರ್ವ ಪಶ್ಚಿಮ ಎಲ್ಲ ದಿಕ್ಕುಗಳಲಿ । ಮೇಲೆ ಕೆಳಗೆ ಆಕಾಶ ಪಾತಾಳಗಳಲಿ ॥ 69

ಎಲ್ಲೆಲ್ಲಿಯೂ ನೀವಾಸವಾಗಿರುವಿ । ಆದರೆ ನನ್ನೊಳಗೂ ನೀನೆ ಇರುವೆ ।
ಬಹುಶಃ ಭೇದ ಭಾವ 'ನಾ ನೀ' ಎಂಬುದೀ । ತಿಳಿಯಲು ಕಷ್ಟವಾಗುವದೆನಗೆ ॥ 70

ಅದಕೆ ಹೇಮಾಡ ಅನನ್ಯ ಶರಣ । ದೃಢವಾಗಿ ಹಿಡಿವ ಸದ್ಗುರುವಿನ ಚರಣ ।
ತಪ್ಪಿಸು ಪುನರ್ಜನ್ಮ ಮರಣ । ಇಂಥ ನಿಜೋದ್ಧರಣ ಕೊಡು ಎನಗೆ ॥ 71

ಉದ್ಧರಿಸಲು ಅನೇಕ ಭಕ್ತರನು । ನಿರ್ಮಾಣ ಮಾಡಿದೆ ಈ ನಿಜ ಚರಿತೆಯನು ।
ಈ ಕಾರ್ಯವು ಸಾಮಾನ್ಯವೇನು । ಹೇಮಾಡನ ಹೆಸರು ಮುಂದೆ ಮಾಡಿ ॥ 72

ಈ ಸಾಯಿ ಸಮರ್ಥ ಸಚ್ಚರಿತ । ನನ್ನಿಂದಾದದ್ದೇ ಅಘಟಿತ ।
ಇಲ್ಲದೆ ಇದ್ದರೆ ಸಾಯಿಯ ಕೃಪೆಯ ಹೊರತು । ಪಾಮರನೆನ್ನಿಂದ ಇದು ಅಸಾಧ್ಯ ॥ 73

ಬಹಳ ದಿನಗಳ ಸಹವಾಸವಿಲ್ಲ । ಸಂತರ ಗುರುತಿಸುವ ರೂಢಿ ಇಲ್ಲ ।
ಶೋಧಕ ದೃಷ್ಟಿಯೂ ನನ್ನಲಿಲ್ಲ । ನೋಡಲಿದೆಲ್ಲ ವಿಶ್ವಾಸವಾಗದು ॥ 74

ಅನನ್ಯ ಭಾವದಿಂದ ಉಪಾಸನೆ ಮಾಡಿಲ್ಲ । ಕ್ಷಣವೊಂದು ಭಜನೆಗೆ ಕೂಡಲಿಲ್ಲ ।
ಮಾಡಿತೋರಿದಿಜನಕೆಲ್ಲ । ಅಂಥವನ ಕೈಯಿಂದ ಈ ಚರಿತ್ರೆ ಲೇಖನ ॥ 75

ಸಾಧಿಸಲು ನಿಜವಚನಾರ್ಥ। ಸಾಯಿಯೇ ನೆನಪಿಸಿ ಕೂಡುವರೀ ಗ್ರಂಥ ।
ಪೂರೈಸಿಕೊಳ್ಳತಿಹರು ನಿಜಕಾರ್ಯಾರ್ಥ । ಹೇಮಾಡನಿವ ವ್ಯರ್ಥ ಹೆಸರಿಗೆ ॥ 76

ಮಶಕವೇನು ಎತ್ತೀತು ಮೇರುವ । ಟಿಟ್ಟಿಭ ಬರಿದು ಮಾಡೀತೆ ಸಾಗರವ ।
ಆದರೆ ಅದ್ಭುತ ಕಾರ್ಯವ ಮಾಡಿಸುವ । ಗುರುವಿರಲು ಬೆನ್ನಿಗೆ ॥ 77

ಇರಲಿನ್ನು ನಿಮಗೆ ಶ್ರೋತೃಜನ । ಮಾಡುವೆನಿದೋ ಅಭಿವಂದನ ।
ಆಯಿತೀ ಗ್ರಂಥ ಸಂಪೂರ್ಣ । ಸಾಯಿಯದು ಸಾಯಿ ಸಮರ್ಪಣ॥ 78

ಶ್ರೋತೃವೃಂದದ ಹಿರಿಯ ಕಿರಿಯರಿಗೆ । ನಮನವೆನ್ನದು ನಿಮ್ಮೆಲ್ಲರಿಗೆ ।
ನಿಮ್ಮಿಂದಾಗಿ ಈ ಧರ್ಮಸತ್ರಕ್ಕೆ । ಬಂದೀತು ಪೂರ್ಣತೆ ಸಾಯಿ ಸಚ್ಚರಿತೆಗೆ॥ 79

ಅದಕೆತ್ಯಜಿಸಿ ಬೆಂಗುಡಿಗೆ ಅಭಿಮಾನ । ಹಾಡಬೇಕು ನಿಜಗುರು ಗುಣಾನುವಾದ ।
ಬೋಧಪ್ರದ ಮತ್ತು ಮನೋಜ್ಞ । ಅಂಥ ವಾಗ್‌ಯಜ್ಞವನಿಲ್ಲಿ ಮುಗಿಸುವೆ ॥ 80

ಮುಗಿಸುವವನಾದರು ನಾನಾರು । ವ್ಯರ್ಥವೇ ಈ ಅಹಂಕಾರವಾದರೂ ।
ಎಲ್ಲಿ ಸಾಯಿಯೇ ಇರುವಾಗ ಸೂತ್ರಧಾರರು । ಅಲ್ಲಿ ಹೀಗೆನ್ನುವವ ನಾನಾರು ॥ 81

ಇಲ್ಲಿಗೆ ಪೂರ್ಣವಾಯಿತು ಈ ಗ್ರಂಥ । ಪೂರೈಸಿ ತನ್ನ ಮನೋರಥ ।
ಪೂರ್ಣವಾಯಿತು ಸಾಯಿ ಕಾರ್ಯಾರ್ಥ । ನಾನೂ ಕೃತಾರ್ಥನಾದೆನು ॥ 82

ಇಂಥ ಗ್ರಂಥದಧ್ಯಯನ ಪೂರ್ಣ । ಮನಃ ಕಾಮನೆಗಳ ಮಾಡುವದು ಪೂರ್ಣ ।
ಹೃದಯದಲ್ಲಿಡಿದರೆ ಸದ್ಗುರು ಚರಣ । ಆದೀತು ಉತ್ತೀರ್ಣ ಭವಸಾಗರ ॥ 83

ರೋಗಿಗಳಿಗಾಗುವುದು ಆರೋಗ್ಯ । ದರಿದ್ರನಿದ್ದವನಾಗುವ ಧನಾಢ್ಯ ।
ಸಂಕಲ್ಪ ವಿಕಲ್ಪಗಳಿಗೆ ಬರುವುದು ಸ್ಥೈರ್ಯ । ದೀನರಿಗೆ ಔದಾರ್ಯಲಭಿಸುವದು ॥ 84

ಪಿಶಾಚಬಾಧೆ ಅಪಸ್ಮಾರ । ಗ್ರಂಥಾವರ್ತನದಿಂದಾಗುವವು ದೂರ ।
ಮೂಕ ಪಂಗು ಮತ್ತು ಬಧೀರ । ಅವರಿಗೂ ಸುಖಕರ ಈ ಶ್ರವಣ ॥ 85

ಶಕ್ತಿವಂತನಾದ ಪರಮೇಶ್ವರನದು । ಅವನ ದಾರಿಗೆ ಮರೆವಾಗುವುದು ।
ಇಂಥ ಅವಿದ್ಯಾ ಮೋಹಿತ ಜನರದು । ಉದ್ಧಾರವಾಗುವದಿದರಿಂದ ॥ 86

ನರರಿದ್ದೂ ಆಸುರೀ ಆಚಾರ । ಮಾಡಿ ವ್ಯರ್ಥಗೊಳಿಸುವ ಶರೀರ ।
ತಿಳಿವರು ಸಂಸಾರವ ಸುಖದ ಆಗರ । ಉದ್ಧಾರವಾಗುವುದು ಅಂಥವರದು ॥ 87

ಅಗಾಧ ಸಾಯಿಯ ಕರಾಮತ್ತು । ಹೇಮಾಡನಿಗೆ ನಿತಾಂತ ಚರಣದಲಿ ಸ್ಥಾನವಿತ್ತು
ಅವರಿಗೆ ನಿಜಸೇವೆಯ ಅವಕಾಶ ಕೊಟ್ಟು । ಮಾಡಿಸಿಕೊಂಡರಾ ಸೇವೆಯನು ॥ 88

ಕೊನೆಗೆ ಆ ಜಗಚ್ಚಾಲಕ । ಸದ್ಗುರು ಪ್ರಬುದ್ಧಿ ಪ್ರೇರಕ ।
ಅವನ ಚರಣದಲಿ ಭಕ್ತಿ ಪೂರ್ವಕ । ಲೆಕ್ಕಣಿಕೆ ಪುಸ್ತಕಗಳರ್ಪಿಸುವೆ ॥
ಭಕ್ತ ಹೇಮಾಡಪಂತ ವಿತಚಿತೆ । ಯಥಾಮತಿ ಲಲಿತಾನುವಾದಿತೆ
ಶ್ರೀ ಸಾಯಿಸಮರ್ಥ ಸಚ್ಚರಿತೆ । ದ್ವಿಪಂಚಾದಶತ್ತಯೋಽಧ್ಯಾಯಃ ॥

॥ ಶ್ರೀ ಸದ್ಗುರು ಸಾಯಿನಾಥಪರ್ಣಮಸ್ತು ॥

॥ ಶುಭಂ ಭವತು ॥

## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐವತ್ತಮೂರು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
*ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥*
*ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥*

ಶ್ರೀ ಸಾಯಿ ಸಾಕ್ಷಾತ ಬ್ರಹ್ಮಮೂರ್ತಿ । ಸಂತ ಸಾಮ್ರಾಟ ಚಕ್ರವರ್ತಿ ।
ಸಮರ್ಥಸದ್ಗುರು ದಿಗಂತ ಕೀರ್ತಿ। ಬುದ್ಧಿ ಸ್ಫೂರ್ತಿ ಪ್ರದಾಯಕ ॥ 1

ಅನನ್ಯ ಭಾವದಿಂದವಗೆ ಹೋಗಿ ಶರಣ । ವಂದಿಸುವಾ ಅವನ ಪುಣ್ಯ ಚರಣ।
ಮಾಡುವ ಸಂಸ್ಕೃತಿ ಭಯದ ಹರಣ । ಜನ್ಮ ಮರಣವ ತಪ್ಪಿಸುವ ॥ 2

ಹಿಂದಿನಧ್ಯಾಯದಲಿತ್ತೆ ವಚನ । "ಮೊದಲು ಮಾಡಿ ಸಿಂಹಾವಲೋಕನ ।
ಬಳಿಕ ಕೊಟ್ಟು ಅವತರಣಿಕೆಯನ । ಗ್ರಂಥವ ಪೂರ್ಣಗೊಳಿಸುವೆ" ॥ 3

ಹೇಮಾಡಪಂತರು ಹೀಗೆಂದರು । ಅದು ಹಾಗಾಗಲಿಲ್ಲ ಆದರೂ ।
ಅವತರಣಿಕಾ ರೂಪಾಸಾರವ ತೆಗೆದರೋ । ಅಥವಾ ಮರೆತು ಬಿಟ್ಟರೋ ॥ 4

ಗ್ರಂಥ ಲೇಖನದ ಆರಂಭಯಾರಿಂದ । ಪೂರ್ಣವಾಗಬೇಕದು ಅವರಿಂದ ।
ಕೊನೆಗೆ ಅವತರಣಿಕೆ ಕೊಡುವದು । ಹೀಗೆ ನಿಯಮವಿರುವದೆಲ್ಲೆಡೆಗೆ ॥ 5

ಆದರೆ ನಿಯಮಕ್ಕೆ ಅಪವಾದವಿರುವುದು । ಅದರದೇ ಪ್ರತ್ಯಂತರ ಇಲ್ಲಿ ಕಾಣುವುದು ।
ಯಾವುದೂ ಸ್ವೇಚ್ಛಾವಶವವಿರದು । ಬಾಬಾರ ಮನೋಗತವಿದ್ದಂತಾಗುವದು ॥ 6

ಹೇಮಾಡ ಆದರು ಅಕಸ್ಮಾತ ದಿವಂಗತ । ಎಲ್ಲರ ಮನವಾಯಿತು ದುಖಿತ ।
ಅವತರಣಿಕೆಯ ಸುದ್ದಿ ತಿಳಿಯದಾಗುತ । ಯಾರಿಗೂ ಏನು ಹೊಳೆಯದಾಯಿತು ॥ 7

ಅಣ್ಣಾ ಸಾಹೇಬರ ಬರವಣಿಗೆ ಗಹನ । ಪ್ರಯಾಸ ಬಟ್ಟು ಮಾಡಿ ಅದರ ಸಂಶೋಧನ।
ಅವರ ಚಿರಂಜೀವರಾದ ಶ್ರೀ ಗಜಾನನ । ಅವಶ್ಯವಿದ್ದುದನು ನನಗಿತ್ತರು ॥ 8

ಅಣ್ಣಾ ಸಾಹೇಬರು ಬಹಳ ಹಿಡಿತದವರು । ಒಂದು ಹಾಳಿಯ ತುಂಡನ್ನೂ ವ್ಯರ್ಥಹೋಗ ಗೊಡರು ।
ಕಲಾ ಕುಶಲತೆಯಿಂದ ಕೆಲಸ ಮಾಡುವರು । ಅವರ ಸ್ವಭಾವದ ರೀತಿಯೇ ಹಾಗೆ ॥9

ಅಧ್ಯಾಯವ ಬರೆವರು ಸಣ್ಣ ಹಾಳಿಯೊಳಗೆ । ಅದನ್ನೇ ಕೊಡುವರು ಮುದ್ರಕರಿಗೆ ।
ಅನಾವಶ್ಯಕ ವೆಚ್ಚ ಹಿಡಿಸದವರಿಗೆ । ಅವರ ಸಮ ಯಾರಿಗೂ ಬರದು ॥ 10

ನಿರ್ಜೀವವಾದ ಈ ಹಾಳಿಗಳ ಬಗ್ಗೆ । ಕರುಣೆ ಅವರ ಅಂತಃಕರಣದೊಳಗೆ ।
ಇವುಗಳುದ್ಧಾರವಾಗುವುದು ಹೇಗೆ । ಸಂತ ಶ್ರೇಷ್ಠರ ಸೇವೆಯ ಹೊರತು ॥ 11

ಎನಿಸುವುದು ಬಂದಿರಬೇಕು ಹೇಮಾಡರ ಮನದೊಳಗೆ । ಹಾಳಿಗಳ ಕೂಡಿಸಿದರು ಒಂದೆಡೆಗೆ ।
ಅವುಗಳ ತೊಡಗಿಸಿದರು ಸೇವೆಗೆ । ಈ ಉದಾತ್ತ ಭಾವನೆಯೇ ಇರಬೇಕವರಲಿ ॥ 12

ಅಂತಿಮಧ್ಯಾಯದ್ದೂ ಅದೇ ಬಗೆ । ಬರೆದಿದ್ದರೂ ಬಿಡಿಹಾಳಿಯೊಳಗೆ ।
ಅವತರಣಿಕೆ ಸಿಗದಾಯಿತದರೊಳಗೆ । ಬಹಳ ಮನನ ಮಾಡಿದರೂ ॥ 13

ಗಜಾನನರಾವ್ಹಾದಿಗಳಿಗೆ ತಿಳಿಸಿತು ಈ ಮಾತು । ಬಾಬಾ ಸಾಹೇಬರಿಗೂ ಅದನ್ನೇ ಹೇಳಿತು ।
ಎಲ್ಲರ ಮತವೂ ಇದೇ ಇದ್ದಿತು । ಅವತರಣಿಕೆ ಸಿದ್ಧವಾಗಬೇಕೆಂದು ॥ 14

ಬಾಬಾ ಸಾಹೇಬರು ಗಡುವು ಕೊಟ್ಟರು । ಸಾಯಿ ಲೀಲೆಯಲದನು ಪ್ರಸಿದ್ಧ ಮಾಡಿದರು ।
ಗಡುವಿನ ದಿನಗಳು ಮುಗಿದರೂ । ಅವತರಣಿಕೆ ಅವತರಿಸಲಿಲ್ಲ ॥ 15

ಹೇಮಾಡ ಗೋವಿಂದ ಸದ್ಗುಣಗಳಾಗರವಾಗಿದ್ದು । ಅವರ ಮುಖದಲಿ ವೇದಾಂತ ಆಳಿನಂತಾಗಿದ್ದು ।
ಗ್ರಂಥದಲಿ ಪ್ರಸಾದವಾಣಿ ಪ್ರಕಟವಾಗಿದ್ದು । ಗುರುವಿನ ಅದ್ಭುತ ಕಾರ್ಯವಿದು ॥ 16

ಸದ್ಗುರು ಸಾಯಿಯ ಭಕ್ತರು ಅನಂತ । ಅವರಲ್ಲಿ ಕವಿರತ್ನ ಹೇಮಾಡಪಂತ ।
ಇವರಂಥವನೇ ಪ್ರಜ್ಞಾವಂತ । ಅವನೇ ಈ ಕಾರ್ಯ ಮಾಡಬೇಕು ॥ 17

ಎಲ್ಲಿಂದಲೂ ಅವತರಣಿಕೆ ಅವತರಿಸವಲ್ಲದು । ಅದರಿಂದೆನ್ನ ಮನಕೆ ಖಿನ್ನತೆ ಬಂದು ।
ಪ್ರಾರ್ಥನೆ ಮಾಡಿದೆ ದತ್ತ ಗುರುವಿನದು । ಅವರ ಕರುಣೆಯ ಕೋರಿದೆ ॥ 18

ನಾನಿಹೆ ಪಾಮರ ಬುದ್ಧಿಮಂದ । ಇಲ್ಲೆನಗೆ ವಿಚಾರ ವಿದ್ಯಾಗಂಧ ।
ನನ್ನಿಂದ ಹೇಗಾದೀತು ಓವೀ ಪ್ರಬಂಧ । ಕವಿತ್ವ ಅಂಥ ನಾಲ ಮೊದಲಿ ॥ 19

ಆದರಿದಕೊಂದಿದೆ ಆಧಾರವೆನಲು । ದತ್ತ ಗುರುವೇ ಸಾನುಕೂಲನಿರಲು ।
ಮೇರುವನೆತ್ತಿಸಬಹುದು ಮಶಕದ ಕೈಲೂ । ಅಧಿಕಾರ ದೊಡ್ಡದು ಅವರದು ॥ 20

ಮತ್ತೆ ಪ್ರಾರ್ಥಿಸಿದೆ ಉಮಾರಮಣನಿಗೆ । ಕೃಪೆಮೂಡಿತು ಸಾಯಿ ನಾರಾಯಣನಿಗೆ ।
ಪ್ರೇರಣೆ ಇತ್ತರು ನನ್ನ ಬುದ್ಧಿಗೆ । ಅವತರಣಿಕೆಯ ಲೇಖನಕೆ ಶೀಘ್ರದಲಿ ॥ 21

ಕವಿತ್ವ ಶಕ್ತಿ ಇಲ್ಲ ನನಗೆ । ನನ್ನ ಮಂದಮತಿ ತಿಳಿದಿದೆ ಗುರುರಾಯನಿಗೆ ।
ಭಾರ ಹಾಕಿ ಅವನ ಚರಣಗಳಿಗೆ । ಅವತರಣಿಕೆಗೆ ಆರಂಭವಾಯಿತು ॥ 22

ಅವತರಣಿಕೆಯೊಂದು ಗ್ರಂಥ ಖಂಡ । ಮಾಡಿಸುವವ ಸಾಯಿ ವಕ್ರತುಂಡ ।
ಅವನ ವೈಭವ ಅದ್ಭುತ ಅಖಂಡ । ನಿಮಿತ್ತ ಮಾತ್ರನು ನಾನಿರುವೆ ॥ 23

ಪ್ರಥಮಾಧ್ಯಾಯದಲಿ ಮಂಗಲಾಚರಣ । ವಿಘ್ನಹರ್ತ ವಿಶ್ವಾದಿಕಾರಣ ।
ಗೌರೀಶಂಕರ ಕಂಠ ಮಂಡನ । ಶ್ರೀ ಗಜವದನನ ನಮಿಸಲಾಗಿದೆ ॥ 24

ಯಾವಳು ಅಭಿನವವಾಗ್ವಿಲಾಸೀನೀ । ಚಾತುರ್ಯಕಲಾಕಾಮಿನೀ ।
ಆ ಶ್ರೀ ಶಾರದೆ ವಿಶ್ವಮೋಹಿನಿ । ಇಷ್ಟಾರ್ಥದಾಯಿನಿಯ ನಮಿಸಿದೆ ॥ 25

ಕುಲಗುರು ಮತ್ತು ಆಪ್ತೇಷ್ಟಗುರುಜನ । ಸಗುಣಾವತಾರಿಗಳಾದ ಸಂತಸಜ್ಜನ ।
ಶರಣ್ಯ ಸದ್ಗುರು ಕೈವಲ್ಯನಿಧಾನ । ಸಾಯಿ ಭಗವಾನರ ನಮಿಸಿದೆ ॥ 26

ಗೋಧೂಮಾಪೇಶಣ ಕಥೆ ಹೇಳಿಅವರು । ಹೇಗೆ ಮಹಾಮರಿಯಾ ಪುರ್ಣೋಪಶಮನ ಮಾಡಿದರು ।
ಇದನೆಲ್ಲ ವಿವರವಾಗಿ ಹೇಳಿದರು ಮತ್ತು ಸಾಯಿ ಸಾಮರ್ಥ್ಯವ ವರ್ಣಿಸಿದರು ॥ 27

ಪ್ರಸ್ತುತ ಗ್ರಂಥದ ಪ್ರಯೋಜನ । ಹೇಮಾಡಪಂತ ನಾಮಕರಣ ।
ಗುರುವಿನವಶ್ಯಕತೆ ವಿವಾದ ಖಂಡನ । ಹೇಮಾಡನಿಗೆ ದರ್ಶನ ದ್ವಿತಿಯಾಧ್ಯಾದಲಿ ॥ 28

ಗ್ರಂಥ ಲೇಖನಕೆ ಅನುಜ್ಞಾಪನವೆಂತು । ಸಾಯಿ ಮುಖದಿಂದ ಬಂದಿತು ।
ರೋಹಿಲನ ವೃತ್ತ ಕಥನವಾಯಿತು । ಸಂಪೂರ್ಣತೃತೀಯಾಧ್ಯಾಯದಲಿ ॥ 29

ಜಗತ್ಪಾಲಕನ ಕಂಠಾಭರಣ । ಸಾಧು ಸಂತರು ಅವತರಣ ।
ಭೂಮಂಡಲದಲಿ ಏನು ಕಾರಣ । ಮಾಡಿದರೆಂಬುದರ ವಿಚರಣೆ ವಿಸ್ತಾರದಿ ॥ 30

ದತ್ತಾವತಾರ ಅತ್ರಿನಂದನ । ಸಾಯಿ ಸಾಕ್ಷಾತ ಹರಿ ಚಂದನ (ಕಲ್ಪವೃಕ್ಷ ) ।
ಶಿರಡಿ ಕ್ಷೇತ್ರದಲಿ ಪ್ರಥಾಮಾಗನ । ಇದರ ಸಮಗ್ರವರ್ಣನೆ ಚತುರ್ಥದಲಿ ॥ 31

ಶಿರಡಿ ಕ್ಷೇತ್ರದಿಂದ ಗುಪ್ತರಾದರು । ಮತ್ತೆ ಅಲ್ಲಿ ಪ್ರಕಟರಾದರು ।
ಎಲ್ಲರನೂ ಚಕಿತಗೊಳಿಸಿದರು । ಶ್ರೀಮಂತ ಪಾಟೀಲನ ಸಮವೇತ ॥ 32

ಗಂಗಾಗೀರಾದಿ ಸಂತರು ದೊರೆತದ್ದು । ದೂರದ ನೀರನು ತಲೆಯಮೇಲೆ ಹೊತ್ತು ತಂದು ।
ಉದ್ಯಾನವನ ಹೇಗೆ ನಿರ್ಮಿಸಿದ್ದು । ಇದರೆಲ್ಲ ನಿರೂಪಣೆ ಪಂಚಮದಲಿ ॥ 33

ರಾಮನವಮಿಯ ಉತ್ಸವ ದೊಡ್ಡದು । ಬಾಳಾಬುವಾ ಕೀರ್ತನಕಾರನದು ।
ಮಶೀದಿಮಾಯಿಯ ಜೀರ್ಣೋದ್ಧಾರದ್ದು । ಸವಿಸ್ತರ ಕಥನ ಆರನೆಯದರಲಿ ॥ 34

ಬಾಬಾರ ಸಮಾಧಿ- ಖಂಡಯೋಗ । ಧೋತಿ ಪೋತಿ ಇತ್ಯಾದಿ ಪ್ರಯೋಗ ।
ಬಾಬಾ ಹಿಂದೂ ಅಥವಾಯವನ । ಸಂತಾಂತರಂಗ ಅಗಾಧ । 35

ಬಾಬಾರ ಉಡುಗೆ ವರ್ತನೆ ಮದ್ದು । ಚಿಲೀಮು ಬೀಸುಗಲ್ಲು ಧುನೀ ದೀಪಗಳದ್ದು ।
ಅವರ ಅನಾರೋಗ್ಯ ಸೇವೆ ಅವರದು । ಅಗಮ್ಯ ದೃಶ್ಯವೆಲ್ಲವೂ ॥ 36

ಭಾಗೋಜಿ ಶಿಂದೆಯ ಮಹಾವ್ಯಾಧಿ । ಖಾಪರ್ಡೆಸುತನಿಗೆ ಗ್ರಂಥಿ ಜ್ವರೌಷಧಿ ।
ನಾನಾಗೆ ಪಂಢರೀದರ್ಶನ ಬುದ್ಧಿ । ಹೇಳಿದರು ಕವಿಗಳು ಏಳನೆಯದರಲಿ ॥ 37

ನರಜನ್ಮದ ಅಪೂರ್ವಮಹಿಮಾನ । ಸಾಯಿಯ ಭೈಕ್ಷ್ಯವೃತ್ತಿಯ ವರ್ಣನ ।
ಬಾಯಜಾಬಾಯಿಯ ಸಂತಸೇವೆಯನ । ಭೋಜನ ವಿಂದಾನ ಬಾಬಾರದು ॥ 38

ಬಾಬಾ ತಾತ್ಯಾ ಮ್ಹಾಳಸಾಪತಿ ಇವರು । ರಾತ್ರಿ ಮಶೀದಿಯಲಿ ಮಲಗುತಿದ್ದರು ಮೂವರು ।
ಬಾಬಾರ ಪ್ರೇಮದವರಿಬ್ಬರೂ । ಸಮಸಮಾನಾಗಿದ್ದರು ॥ 39

ರಹಾತೆ ಗ್ರಾಮದ ಖುಶಾಲಚಂದ । ಬಾಬಾ ಶಾಂತಿ ಜ್ಞಾನ ಕಂದ ।
ಪರಸ್ಪರ ಪ್ರೇಮ ಸಂಬಂಧ । ನಿರೂಪಣೆ ಇದೇ ಅಷ್ಟಮಾಧ್ಯಾಯದಲಿ ॥ 40

ತಾತ್ಯಾ ಸಾಹೇಬ ನೂಲಕರ । ತಾತ್ಯಾ ಪಾಟೀಲ ಭಕ್ತವರ ।
ಆಂಗ್ಲ ಭೂಮಿಯಯಿಂದ ಬಂದ ಗೃಹಸ್ಥನಿಗೆ ಘೋರ । ಪ್ರಾಯಶ್ಚಿತ ಆಜ್ಞಾಭಂಗದ್ದು ॥41

ಪಂಚಮಹಾಯಜ್ಞ ಮಾಡಿಸಿ । ಬಾಬಾ ಇರುತಿದ್ದರು ಭಿಕ್ಷಾನ್ನ ಸೇವಿಸಿ ।
ಹೇಳುತಿದ್ದರು ಚಾತುರ್ಯದಿಂದ ವರ್ಣಿಸಿ । ಭಿಕ್ಷಾಧಿಕಾರ ಸಂಪನ್ನರ ಲಕ್ಷಣಗಳ ॥42

ಬಾಬಾ ಸಾಹೇಬ ತರ್ಖಡರು ಶ್ರೇಷ್ಠ । ಕಟ್ಟಾ ಪ್ರಾರ್ಥನಾ ಸಮಾಜಿಷ್ಟ ।
ಆದರು ಸಾಯಿ ಭಕ್ತರು ಏಕನಿಷ್ಠ । ಈ ಉತ್ಕಷ್ಠ ಕಥೆ ನವಮಾಧ್ಯಾಯ ದಲಿ ॥ 43

ನಾಲ್ಕು ಮೊಳ ಉದ್ದ । ಒಂದು ಗೇಣು ಅಗಲದ । ಹಲಿಗೆಯೊಂದು ನೇತಾಡುತಿತ್ತು
ಮಶೀದಿಯ ಜಂತಿಯಿಂದ । ಅಲ್ಲಿ ಶಯನ ಯೋಗೇಶ್ವರ ಬಾಬಾರದು ॥ 44

ಯಾವಾಗ ಶಿರಡಿಗೆ ಬಂದರು । ಎಷ್ಟು ವರ್ಷಬಾಳಿದರು ।
ಯಾವಾಗ ದೇಹಾವಸಾನ ಹೊಂದಿದರು । ಇದನು ಹೃದಯಂಗಮವಾಗಿನಿರೂಪಿಸಲಾಗಿದೆ ॥45

ಒಳಗೆ ಶಾಂತ ನಿರಿಚ್ಛ ಸ್ಥಿತಿ । ಹೊರಗೆ ತೋರುತಿದುದ್ದು ಪಿಶಾಚವೃತ್ತಿ ।
ಲೋಕ ಸಂಗ್ರಹವೇ ನಿತ್ಯ ಮನದಿ । ಅಚಲ ಪ್ರವೃತ್ತಿಗುರುರಾಯನದು ॥ 46

ವೇದ ಶಾಸ್ತ್ರ ಧರ್ಮಲಕ್ಷಣ । ಪರಮಾರ್ಥಮತ್ತು ವ್ಯವಹಾರ ಶಿಕ್ಷಣ ।
ಭಕ್ತಾ ಭಕ್ತ -ಚಿತ್ತ ಪರೀಕ್ಷಣ । ಇದರಲ್ಲಿ ವಿಲಕ್ಷಣ ಚಾತುರ್ಯಸದ್ಗುರುವಿನದು ॥ 47

ಬಾಬಾರ ಆಸನ ಬಾಬಾರ ಜ್ಞಾನ । ಬಾಬಾರ ಧ್ಯಾನ ಬಾಬಾರ ಸ್ನಾನ ।
ಅವರ ಸಾಮರ್ಥ್ಯ ಮತ್ತು ಮಹಿಮಾನ । ಇವುಗಳ ಸಂಪೂರ್ಣ ಕಥನ ದಶಮದಲ್ಲಿ ॥ 48

ಸಚ್ಚಿದಾನಂದ ಸ್ವರೂಪ ಸ್ಥಿತಿ । ದಿಗಂತದಲಿ ಬಾಬಾರ ಪ್ರಖ್ಯಾತಿ ।
ಡಾಕ್ಟರ ಪಂಡಿತರ ಪ್ರೇಮ ಭಕ್ತಿ । ಸಿದಿಕವೃತ್ತಿಯ ವರ್ಣಿಸಿದೆ ॥ 49

ಹೇಗೆ ಮಾಡಿದರು ಮೇಘಾಕರ್ಷಣ । ಹೇಗೆ ಗಾಳಿಯ ಮೇಲೂ ಅಧಿಕಾರವಿಲಕ್ಷಣ ।
ಬೆಂಕಿಯಿಂದ ಸಂರಕ್ಷಣ । ರಸಪೂರ್ಣ ವಿವರಗಳು ಏಕಾದಶದಲಿ ॥ 50

ಕಾಕಾ ಧುಮಾಳ ಮತ್ತು ನಿಮೋಣಕರ । ಒಬ್ಬ ಮಾಮಲೇದಾರ ಒಬ್ಬ ಡಾಕ್ಟರ ।
ಪ್ರಸಂಗ ಭಿನ್ನ ಭಿನ್ನ ಪ್ರಕಾರ । ವರ್ಣಿಸಲಾಗಿದೆ ಮಧುರ ವಾಣಿಯಿಂದ ॥ 51

ಸಂಶಯ ವೃತ್ತಿಯ ಅಗ್ನಿಹೋತ್ರಿ ಮುಳೆಯು । ಸಂತ ಘೋಲಪರಾಮಾನುಯಾಯಿಯ ।
ಅವರ ಸಾಯಿದರ್ಶನ ವೈಚಿತ್ರ್ಯ । ದ್ವಾದಶಾಧ್ಯಾಯದಲಿ ಹೇಳಿದೆ । 52

ಬಾಳಾಶಿಂಪಿಯ ಹಿಮಜ್ವರನಾಶನ । ಮಾಡಿದರು ಕೃಷ್ಣಶ್ವಾನಕಿತ್ತು ದಧ್ಯೋದನ ।
ಬಾಪೂ ಸಾಹೇಬರ ಮಹಾ ಮಾರಿಯಶಮನ । ಅಕ್ರೋಢ ಪಿಸ್ತ ತಿನ್ನಸಿ ಮಾಡಿದರು ॥ 53

ಆಳಂದಿ ಸ್ವಾಮಿಯ ಕರ್ಣರೋಗ । ಆಶೀರ್ವಚನದಿಂದಲೇ ಮಾಡಿದರು ನಿರೋಗ ।
ಕಾಕಾರ ಜುಲಾಬ ಪೀಡಾಭೋಗ । ನಿಲ್ಲಿಸಿದರು ನೆಲಗಡಲೆ ಕಾಳು ತಿನಿಸಿ ॥ 54

ಹರ್ದಾದ ಭಕ್ತ ದತ್ತೋಪಂತ । ಹೊಟ್ಟೆಶೂಲಿ ವ್ಯಾದಿಗ್ರಸ್ತ ।
ಆಶೀರ್ವಾದದಿಂದಲೇ ಮಾಡಿದರು ಮುಕ್ತ । ಸಮಸ್ತ ಜನರೆದುರಿನಲೇ ॥ 55

ಭೀಮಾಜಿ ಪಾಟೀಲನೆಂಬುವನದು । ಕಫಕ್ಷಯ ವ್ಯಾದಿಯಿದ್ದು ।
ಉದಿ ಹಚ್ಚಿ ಅದನು ಕಳೆದದ್ದು । ವರ್ಣಿಸಿದೆ ತ್ರಯೋದಶಾಧ್ಯಾಯದಲಿ ॥ 56

ನಾಂದೇಡದ ಶೇಟರತನಜೀ ಪಾರಶೀಯವ । ವಿಖ್ಯಾತ ವ್ಯಾಪಾರಿ ಖಿನ್ನ ಮನದವ ।
ಕೊಟ್ಟವನಿಗೆ ಪುತ್ರ ಸಂತಾನವ । ಆನಂದಾಸನದಲಿ ಮಂಡಿಸಿದರವನ ॥ 57

ಮೌಲ್ವಿಸಾಹೇಬ ಗುಪ್ತಸಂತ । ನಾಂದೇಡ ಪಟ್ಟಣದಿ ಹಮಾಲಿ ಮಾಡುತ ।
ಸಾಯಿ ಸಂಕೇತ ವಚನದಿಂದರಿಯುತ । ಇದರ ಅದ್ಭುತ ಕಥೆ ಹದಿನಾಲ್ಕನೆಯದರಲಿ ॥58

ನಾರದೀಯ ಕೀರ್ತನ ಪದ್ಧತಿ । ಬಾಬಾ ದಾಸಗಣೂಗೆ ತಿಳಿಸಿ ।
ಚೋಳಕರನ ವ್ರತ ಬಿಡಿಸಿ । ಸಕ್ಕರೆಯ ಚಹವ ಕುಡಿಸಿ ಅವನಿಗೆ ॥ 59

ಔರಂಗಬಾದನಿಂದ ಹಲ್ಲಿ ಬಂತು । ಮಶೀದಿಯ ಹಲ್ಲಿಗೆ ಭೆಟ್ಟಿಯಾಯಿತು ।
ಹಲ್ಲಿ ನುಡಿಯುವದ ಕೇಳಿ ಹೇಳಿದ್ದು । ಕಥೆಯಿರುವದು ಹದಿನೈದನೆಯದರಲಿ ॥ 60

ಸಂತತಿ ಸಂಪತ್ತಿ ಸಂಪನ್ನನಾದ । ಸಾಯಿಯಶೋ ದುಂದುಭಿಯ ಕೇಳಿದ ।
ಗೃಹಸ್ಥನೊಬ್ಬ ಶಿರಡಿಗೆ ಬಂದ । ಬ್ರಹ್ಮಜ್ಞಾನವ ಪಡೆಯಲು ॥ 61

ಯಾರು ಬಯಸುವರು ಬ್ರಹ್ಮಪ್ರಾಪ್ತಿ । ಅವರಿಗಾಗಬೇಕು ಸಂಸಾರವಿರಕ್ತಿ ।
ಬಿಟ್ಟು ಹೋಗಬೇಕು ಧನಾಸಕ್ತಿ । ಮೊದಲವನ ಚಿತ್ತದಿಂದ ॥ 62

ಐದು ರೂಪಾಯಿ ಕೈಗಡ । ಒಂದು ಕ್ಷಣಕ್ಕಾಗಿ ಬಾಬಾರಿಗೆ ಕೊಡದ ।
ವಸ್ತ್ರಾಂತರದಲಿ ನೋಟಗಳನಿಟ್ಟಿದ್ದ । ಅಂಥವನಿಗೆ ಬ್ರಹ್ಮಾಪ್ರಾಪ್ತಿ ಹೇಗಾದೀತು ॥ 63

ಸಾಯಿಯ ಬೋಧಶೈಲಿ ಸುಂದರವಾಗಿದ್ದು । ಮೇಲೆ ಪ್ರಾಸಾದಿಕ ಭಾಷೆ ಹೇಮಾಡರದು ।
ಸಹಾಲು ಸಕ್ಕರೆ ಕೂಡಿದಂಥ ಯೋಗವಿದು । ಷೋಡಶದಲಿ ಮನೋಹರೂ ಕಥೆಯಿದು॥ 64

ಪೂರ್ವಕಥೆಯದೇ ಅನುಸಂಧಾನ । ಬ್ರಹ್ಮಜ್ಞಾನ ವಿಸ್ತಾರ ಕಥನ ।
ಧನಲೋಭಿಯ ನಿಃಸಂತಾನ । ಮಧುರ ವರ್ಣನೆ ಹದಿನೇಳರಲಿ ॥ 65

ಸಾಠೆಯ ಗುರುಚರಿತ್ರ ಕಥೆ । ರಾಧಾಬಾಯಿಯ ಉಪದೇಶ ವಾರ್ತೆ ।
ಹೇಮಾಡರ ಅನುಗ್ರಹತೆ । ಕಥನ ಕುಶಲತೆ ಹದಿನೆಂಟರಲಿ ॥ 66

ಅನುಗ್ರಹ ಕಥೆಯ ವಿಸ್ತಾರ । ಸಾಯಿ ಶ್ರೀಬೋಧಾನುಸಾರ ।
ಮಾಡಿರುವರದರ ವಿಚಾರ । ವಿಪುಲವಾಗಿ ಹತ್ತೊಂಭತ್ತರಲ್ಲಿ ॥ 67

ಈಶಾವಾಸ್ಯ ಭಾವಾರ್ಥಬೋಧಿನಿಯನು । ಬರೆಯಲಾರಂಭಿಸಿದ ದಾಸಗಣೂ।
ಅದರಲ್ಲಿ ಒಂದೆಡೆ ಬಂದ ಶಂಕೆಯನು । ಕೇಳಿದರವರು ಬಾಬಾರಿಗೆ ॥ 68

ಬಾಬಾ ಎಂದರು ಕಾಕಾರ ಮನೆಯ । ಕೆಲಸದಾಳು ಮಾಡುವಳದರ ನಿವಾರಣೆಯ ।
ಅಸಾಧಾರಣ ಸದ್ಗುರು ಮಹಿಮೆಯ । ಅಂದವಾಗಿ ನಿರೂಪಿಸಲಾಗಿದೆ ಇಪ್ಪತ್ತನೆಯದರಲಿ॥ 69

ಒಬ್ಬ ಪ್ರಾಂತಾಧಿಕಾರಿ ಸುಲಕ್ಷಣ । ಎರಡನೆಯವರು ಪಾಟಣಕರ ವಿಚಕ್ಷಣ ।
ಮೂರನೆಯವರೊಬ್ಬ ವಕೀಲ ವಿಲಕ್ಷಣ । ಮೂವರ ಅನುಗ್ರಹವಿದೆ ಇಪ್ಪತ್ತೊಂದರಲಿ ॥ 70

ಮಶೀದಿಮಾಯಿ ಭವತಾರಕೆ । ಅದೇದ್ವಾರಾವತಿ ದ್ವಾರಕೆ ।
ಬಾಬಾ ಹೇಳುವರು ಎಲ್ಲ ಜನಕೆ । ಅದರ ಭಾವಾರ್ಥಒಬ್ಬರಿಗೂ ತಿಳಿಯದು ॥ 71

ಮಶೀದಿಮಾಯಿಯ ಗುಣಬಣ್ಣಿಸುವರು । ಮಿರೀಕರ ಬುಟ್ಟಿಯವರ ಅಹಿದಂಶವ ನಿವಾರಿಸಿದರು ।
ಅಮಿರ ಶಕ್ಕರನ ವಾತ ಕಳೆದರು । ಅವನ ಅಹಿಭಯವ ದೂರ ಮಾಡಿದರು ॥ 72

ಹೇಮಾಡ ವೃಶ್ಚಿಕದಂಶದ ಸಂಕಟ । ಇತರರ ಉರಗಾರಿಷ್ಟ ।
ನಿವಾರಿಸಿದರು ಅಪಮೃತ್ಯು ದುರ್ಘಟ । ಆ ಪ್ರಸಂಗ ಹೇಳಲಾಗಿದೆ ಇಪ್ಪತ್ತೆರಡರಲ್ಲಿ ॥ 73

ಯೋಗಾಭ್ಯಾಸಿಗಳ ಶಂಕಾನಿರಸನ । ಮಾಧವರಾಯರ ಅಹಿದಂಶನಿವಾರಣ ।
ಧುನಿಇಂಧನ ಅಜಾಹನನ । ವರ್ಣಿಸಲಾಗಿದೆ ಅತಿ ರಮ್ಯ ॥ 74

ಬಡೇ ಬಾಬಾನ ಬಡೇ ಜಾವ । ಗುರ್ವಾಜ್ಞಾನಿಷ್ಠೆಯ ಅಭಾವ ।
ಎಷ್ಟು ಕೊಟ್ಟರು ತೃಪ್ತಿ ಇಲ್ಲದವ । ಅತೃಪ್ತ ಸ್ವಭಾವ ಮೂಲದಲಿ ॥ 75

ಕಾಕಾ ಸಾಹೇಬ ಭಕ್ತ ಶ್ರೇಷ್ಠ । ಗುರ್ವಾಜ್ಞೆಯಲಿ ಪರಮನಿಷ್ಠ ।
ಸದ್ಗುರು ಲೀಲಾಕಥನ ವಿಶಿಷ್ಟ । ಉತ್ಕೃಷ್ಟ ಮಾಡಿದೆ ಇಪ್ಪತ್ಮೂರರಲಿ ॥ 76

ಪುರಾಣೆಯ ನಿಮಿತ್ತ ಮಾಡಿ । ಹೇಮಾಡಪಂತರಿಗೆ ಹೇಳಿದರು ಬುದ್ಧಿ ।
ತೊಡಗಬಾರದು ವಿಷಯ ಸೇವನದಿ ಸದ್ಗುರುವನು ಸ್ಮರಿಸದೆ ॥ 77

ಅಣ್ಣಾ ಬಾಬರೆ ಮತ್ತೆ ಮಾವಶೀಬಾಯಿಯಲಿ । ಸಾಯಿ ಕಲಹ ಹಚ್ಚಿದರು ಇಬ್ಬರಲಿ ।
ಆ ಹಾಸ್ಯ ವಿನೋದಗಳ ಬಣ್ಣಿಸುತಲಿ । ಕವಿವರ್ಯನು ಇಪ್ಪತ್ನಾಲ್ಕರಲ್ಲಿ ॥ 78

ಭಕ್ತ ದಾಮೂಅಣ್ಣಾ ಕಾಸಾರ ಎಂಬವ । ಅಹಮದನಗರದಲ್ಲಿರುವವ ।
ಮಾಡಬೇಕೆಂದ ವ್ಯಾಪಾರವ । ದೊಡ್ಡ ಪ್ರಮಾಣದಲಿ ಅಕ್ಕಿ ಹತ್ತಿಗಳದು ॥ 79

ಈ ಉದ್ಯಮದಲಾಗುವುದು ಹಾನಿ ಸತ್ಯ । ಆಮ್ರಫಲಸೇವನೆಯಿಂದಾಗುವುದು ಆಪತ್ಯ ।
ಎಂದು ಸಾಯಿ ಜ್ಞಾನಾದಿತ್ಯ । ಇದರ ನಿರೂಪಣೆ ಇಪ್ಪತ್ತೈದನೇಯದರಲಿ ॥ 80

ಪಂತ ಎಂಬ ಹೆಸರಿನವನೊಬ್ಬ ಭಕ್ತ । ಅನ್ಯ ಸಂತರಿಂದ ಅನುಗ್ರಹಿತ ।
ತೋರಿಸಿಕೊಟ್ಟರವಗದರ ಗುರುತ । ಪಂತ ಸಂತುಷ್ಟನಾದನು ॥ 81

ಹರಿಶ್ಚಂದ್ರ ಪಿತಳೆ ಭಕ್ತ । ಅವರ ಮಗ ಅಪಸ್ಮಾರ ಗ್ರಸ್ತ ।
ಕೃಪಾವಲೋಕನದಿಂದಲೇ ಸಮಸ್ತ । ರೋಗ ಅಸ್ತವಾಯಿತು ॥ 82

ಪಿತಳೆಗೆ ಮೂರು ರೂಪಾಯಿಗಳ ಕೊಟ್ಟು ಎಂದರು ಈ ಮೋದಲೇ ಕೊಟ್ಟಿರುವೆನೆರಡು ।
ಬಾಬಾ ಎಂದರು ಇವುಗಳ ಪೂಜೆ ಮಾಡು । ಈ ಸಿಹಿಕಥೆ ಇಪ್ಪತ್ತಾರರಲಿ ॥ 83

ಕೈಯಲ್ಲಿ ಕೊಟ್ಟು ಭಾಗವತ ಗ್ರಂಥವನು । ತಮ್ಮ ಕೈಯಿಂದ ಕೊಡಬೇಕು ಪ್ರಸಾದವೆಂದಿದನು ।
ಈ ಇಚ್ಛೆಯಿಂದ ಕಾಕಾ ಕೊಟ್ಟದನು । ಬಾಬಾ ಕೊಟ್ಟರು ಮಾಧವರಾಯನಿಗೆ ॥ 84

ವಿಷ್ಣು ಸಹಸ್ರನಾಮದ ಪುಸ್ತಕ । ಇತ್ತು ಒಬ್ಬ ರಾಮದಾಸಿಯ ಸಂಗ್ರಹಕ ।
ಅದನೂ ಬಾಬಾ ಕೊಟ್ಟರು ಮಾಧವರಾಯರತ್ತ । ರಾಮದಾಸಿಗೆ ತಿಳಿಯದಂತೆ ॥ 85

ವಿಷ್ಣು ಸಹಸ್ರನಾಮದ ಪೋಥಿಯನಿತ್ತು । ಶಾಮರಾಯರಿಗಿತ್ತು ಅನುಗ್ರಹವನಿಂತು ।
ಹೇಗೆ ಸಾಯಿ ಭಗವಾನರಿಂದಾಯಿತು । ಕಥಾನಿರೂಪಣ ಇಪ್ಪತ್ತೇಳರಲ್ಲಿ ॥ 86

ಭಕ್ತಲಖಮಿಚಂದ ಮುನಶೀ । ಮೇಘಾ ಬ್ರಾಹ್ಮಣ ಪುಣ್ಯರಾಶಿ ।
ಚಿಡೀಬಾಯೀ ಬರ್ಹಾಣಪುರವಾಸಿ । ಬಾಬಾರ ಚರಣಕೆ ಬಂದರು ॥ 87

ದೃಷ್ಟಾಂತವನೆಲ್ಲರಿಗಿತ್ತು ಸ್ವಪ್ನದಲಿ । ಅದರ ಪ್ರಚೀತಿಯ ತೋರಿಸಿ ಜಾಗೃತಾವಸ್ಥೆಯಲಿ ।
ಸದ್ಗುರುವಿನ ಅಗಮ್ಯ ರೀತಿಯನಿಲ್ಲಿ । ಪ್ರೇಮದಿಂದ ಹೇಳಿರುವರು ಇಪ್ಪತ್ತೆಂಟರಲಿ ॥ 88

ಮದ್ರದೇಶದ ಭಜನಿ ಮಂಡಳ । ಶಿರಡಿ ಕ್ಷೇತ್ರಕ್ಕೆ ಬಂದರೆಲ್ಲ ।
ನೋಡಲು ದಾನ ಔದಾರ್ಯಗಳ । ಸಾಧು ಶಂಕರರಾದ ಬಾಬಾರದು ॥ 89

ರಘುನಾಥರಾವ ತೇಂಡೂಲಕರ । ಅವನ ತನಯನ ಪರೀಕ್ಷಾ ಪ್ರಕಾರ ।
ಅವರ ಪೇನ್ಶನದ ಚಿಂತೆಯ ದೂರ । ಮಾಡಿ ತೋರಿದ ಲೀಲೆ ಬಾಬಾರದು ॥ 90

ಕ್ಯಾಪ್ಟನ್ ಡಾಕ್ಟರ್‌ಭಾಟೆ ಎಂಬವರು । ಸಾಯಿ ಚರಣದಿ ಬಹಳ ಪ್ರೀತಿ ಇದ್ದವರು ।
ಬೆಳಗಿಗವರಿಗೆ ಸ್ವಪ್ನ ದರ್ಶನವಿತ್ತರು । ಅಂದವಾದ ಕತೆ ಇಪ್ಪತ್ತೊಂಭತ್ತರಲಿ ॥ 91

ಯಾರೋ ಕಾಕಾಜೀ ವೈದ್ಯಯನೆಂದು । ಸಪ್ತ ಶೃಂಗೀ ದೇವಿಯ ಉಪಾಸಕನಿದ್ದು ।
ದೇವಿ ಅವನಿಗೆ ದೃಷ್ಟಾಂತವಿತ್ತದ್ದು । ಸಂತವರ ಸಾಯಿಯ ನೋಡಬೇಕೆಂದು ॥ 92

ಶ್ಯಾಮರಾಯನೂ ಅದೇ ದೇವಿಗೆ । ಹೊತ್ತಿದ್ದನೊಂದು ಹರಕೆ ।
ಅವನು ಹರಕೆ ಮುಟ್ಟಿಸಲೆಂದು ವಣಿಗೆ । ಮೂವತ್ತು ವರ್ಷಗಳ ನಂತರ ಹೋಗಿದ್ದ ॥ 93

ರಾಹತೆಯ ಶೇಠಖುಶಾಲ ಚಂದನಿಗೆ । ಮತ್ತು ಪಂಜಾಬಿ ಬ್ರಾಹ್ಮಣ ರಾಮಲಾಲನಿಗೆ ।
ಶಿರಡಿಗೆ ನಡೆ ಎಂದು ಸ್ವಪ್ನದಲಿಬ್ಬರಿಗೆ । ಸಾಯಿ ಹೇಳಿದರೆಂಬ ಕಥೆ ಮೂವತ್ತರಲಿ ॥ 94

ಮದ್ರಾಸಿ ಯತಿ ವಿಜಯಾನಂದ । ಮಾನಸ ಸರೋವರಕೆ ಹೊರಟಿದ್ದ ।
ತಮ್ಮ ಹತ್ತಿರವೆ ಇಟ್ಟುಕೊಂಡ । ಶ್ರೀ ಸಮರ್ಥಬಾಬಾರ ಕಥೆ ॥ 95

ಭಕ್ತ ಶಾರ್ದೂಲಮಾನಕರ । ಸಾಯಿ ಪದಾಂಬುಜ ಮಧುಕರ ।
ಹಿಂಸ್ರ ಪಶುವ್ಯಾಘ್ರೋದ್ಧಾರ । ಇವೆಲ್ಲ ಇವೆ ಮೂವತ್ತೊಂದರಲಿ ॥ 96

ನಾವು ನಾಲ್ವರು ಸಂತಸಜ್ಜನರು । ದೇವರ ಹುಡುಕಲು ಅಡವಿಯಲಿ ಅಲೆದಾಡುತಿದ್ದವರು ।
ಕೊನೆಗೆ ನನಗೆ ಗುರುರಾಯ ದರ್ಶನವಿತ್ತರು । ನನ್ನ ಅಭಿಮಾನವೆಲ್ಲ ಬಿಟ್ಟಾಗ ॥ 97

ಉಪವಾಸ ಮಾಡುವ ಗೋಖಲೆ ಅಮ್ಮ । ಸಾಯಿ ಇಂಥದ್ದೆ ಇನ್ನೊಂದು ಕಥೆಯನ್ನ ।
ಸ್ವಮುಖದಿಂದ ಹೇಳಿದರೆಲ್ಲವನ । ಹೇಮಾಡ ಅದ ಹಾಡಿದ ಮೂವತ್ತೆರಡರಲಿ ॥98

ನಾರಾಯಣ ಜಾನಿಯ ಮಿತ್ರನಿಗೆ । ಅಕಸ್ಮಾತ ವೃಶ್ಚಿಕದಂಶವಾದಾಗ್ಗೆ ।
ಅಂತೆಯೇ ಒಬ್ಬ ಭಕ್ತನ ಮಗಳಿಗೆ । ಜ್ವರ ಭಾಧೆಯಾದಾಗ್ಯೆ ॥ 99

ಚಾಂದೋರಕರರ ಮಗಳಿಗೆ । ಭಾರೀ ಪ್ರಸವವೇದನೆಯಾದಾಗ್ಯೆ ।
ಜ್ಞಾನಿಯೇ ದುಃಖಿತನಾದ ಮನದೊಳಗೆ । ಏನು ಮಾಡಬೇಕೆಂದು ತಿಳಿಯದೆ ॥ 110

ಕುಲಕರ್ಣಿಸಾಹೇಬ ಭಕ್ತವರ । ಬಾಳಾಬುವಾ ಭಜನಕಾರ ।
ಇವರೆಲ್ಲರಿಗೂ ಬಲವತ್ತರ । ಉದಿಪ್ರಭಾವ ತಿಳಿಯಿತು ॥ 101

ಭಕ್ತ ಹರಿಭಾವೂ ಕಾರ್ಣಿಕ । ಶ್ರದ್ಧಾವಂತ ಮತ್ತು ಭಾವಿಕ ।
ಅವನ ದಕ್ಷಿಣೆಯ ಕಥೆ ಮೋಹಕ । ಬೋಧ ಪ್ರದಾಯಕ ಮೂವತ್ಮೂರರಲಿ ॥ 102

ಮಾಲೇಗಾವದ ಒಬ್ಬ ಡಾಕ್ಟರ । ಅವರಣ್ಣನ ಮಗ ಎಲುಬು ಹುಣ್ಣಿನಿಂದ ಜರ್ಜರ ।
ಪಿಳ್ಳೆ ಡಾಕ್ಟರ ಭಕ್ತವರ । ನಾರು ಹುಣ್ಣಿನಿಂದ ಪೀಡಿತ ಬಹು ॥ 103

ಬಾಪಾಜೀ ಶ್ರೀ ಶಿರಡಿಕರ । ಅವರ ಪತ್ನಿಗೆ ಗ್ರಂಥಿ ಜ್ವರ ।
ಒಬ್ಬ ಇರಾಣಿಯ ಚಿಕ್ಕಪೂರ । ವ್ಯಥಿತನಾಗಿದ್ದ ಬಾಲಗ್ರಹದಿಂದ ॥ 104

ಹರ್ದಾರ ಒಬ್ಬ ಗೃಹಸ್ಥ । ಮೂತ್ರದಲ್ಲಾದ ಕಲ್ಲಿನಿಂದ ಅತ್ಯವಸ್ಥ ।
ಮುಂಬಯಿಯ ಒಬ್ಬ ಪ್ರಭು ಕಾಯುಸ್ಥ । ಅವನ ಸತಿಗ್ರಸ್ತ ಪ್ರಸೂತಿ ರೋಗದಿಂದ ॥ 105

ಕೇವಲ ಉದೀಸ್ಪರ್ಶದಿಂದ । ಉಪರಿನಿರ್ದಿಷ್ಟ ವ್ಯಾಧಿಗಳಿಂದ ।
ಅವಕಾಶವಿಲ್ಲದೆ ಕ್ಷಣದ । ಉಚಾಟ್ಟಣೆಯಾದುದು ಮೂವತ್ನಾನೆಯದರಲಿ ॥ 106

ಮಹಾಜನಿಯ ಮಿತ್ರನೊಬ್ಬ । ನಿರ್ಗುಣದ ಭಜಕನಿದ್ದ ।
ಅವನು ಮೂರ್ತಿ ಪೂಜಕನಾದ । ದರ್ಶನೈಕ ಮಾತ್ರದಿಂದ ॥ 107

ಧರಮಸೀಜೇಠಾಬಾಯಿ ಠಕ್ಕರ । ಅವ ಮುಂಬಯಿಯ ಒಬ್ಬ ಸಾಲಿಸೀಟರ ।
ಅವನಿಗೆ ಸಬೀಜ ದ್ರಾಕ್ಷಿಗಳ ನಿರ್ಬೀಜ ಮಾಡಿತ್ತರು । ತಡವಿಲ್ಲದೆ ಗುರುವರರು ॥ 108

ವಾಂದ್ರೆಯ ಒಬ್ಬ ಕಾಯಸ್ಥ ಬ್ರಾಹ್ಮಣ । ಮಾಡುತಿರಲಿಲ್ಲ ಸ್ವಸ್ಥ ನಿದ್ರೆಯನ ।
ನೇವಾಸದಲ್ಲಿರುವ ಬಾಳಾ ಪಾಟೀಲನಿಗಾದ ಉದೀ ಪ್ರಚೀತಿಯನ ಮೂವತ್ತೈದರಲಿ ಹೇಳಿದೆ ॥ 109

ಗೋಮಾಂತಕದಲ್ಲಿರುವ ಗೃಹಸ್ಥರಿಬ್ಬರು ಭಿನ್ನ ಭಿನ್ನವಾಗಿ ಹರಕೆ ಹೊತ್ತರು ।
ಒಬ್ಬ ಸೇವಾ ವೃತ್ತಿಗಾಗಿ । ಸ್ತೇನ ಶೋಧನೆಗಾಗಿ ಇನ್ನೊಬ್ಬ ॥ 110

ಇಬ್ಬರೂ ಹರಕೆ ಮರೆತಿದ್ದರು । ಸಾಯಿ ಸಮರ್ಥರು ನೆನಪಿಸಿಕೊಟ್ಟರು ।
ತ್ರಿಕಾಲಜ್ಞಾನಿ ಬ್ರಹ್ಮಾಂಡ ವ್ಯಾಪ್ತರವರು । ಅವರ ಕೀರ್ತಿಯ ವರ್ಣಿಸಬಲ್ಲವರಾರು ॥ 111

ಔರಂಗಬಾದದ ಸಖಾರಾಮ ಜಾಯೆ ಬಂದಳು । ಪುತ್ರಾರ್ಥಶ್ರೀಯ ಚರಣಹಿಡಿದಳು ।
ಶ್ರೀ ಫಲ ಪಡೆದು ಇಷ್ಟಾರ್ಥ ಹೊಂದಿದಳು । ಅದರ ಕಥನ ಮೂವತ್ತಾರರಲ್ಲಿ ॥112

ಚಾವಡಿ ಸಮಾರಂಭದಂಥದು । ಅಪರೂಪ ನೋಡಲು ಸಿಗುವುದು ।
ಹೇಮಾಡರು ವರ್ಣಿಸಿಹರದನು ಪ್ರತ್ಯಕ್ಷ ಕಂಡು । ಅದರ ವರ್ಣನೆ ಮೂವತ್ತೇಳರಲಿ ॥ 113

ಹಂಡೆಯಲಿ ಪದಾರ್ಥಗಳ ಭಿನ್ನ । ಬೇಯಿಸಿ ಮಾಡುವರು ಪರಿಪರಿಯ ಪಕ್ವಾನ್ನ ।
ಎಲ್ಲರಿಗೂ ಕೊಡುವರು ಪ್ರಸಾದ ಭೋಜನ । ಅದರ ಮನೋಹರ ವರ್ಣನೆ ಮೂವತ್ತೆಂಟರಲಿ ॥ 114

"ತ್ವದ್ವಿದ್ಧಿ ಪ್ರಣಿ ಪಾತೇನ" । ಈ ಗೀತಾ ಶ್ಲೋಕದ ವಿವರಣೆಯನ ।
ಚಾಂದೋರಕರರಿಗೆ ಹೇಳಿದರದನ । ಸಂಸ್ಕೃತಾಭಿಮಾನವ ಕಳೆಯಲು ॥ 115

ಸಂತ ನೃಪತಿಯವ ದೃಷ್ಟಾಂತವಿತ್ತು । ಬಾಪೂ ಸಾಹೇಬ ಬುಟ್ಟಿಯ ಕುರಿತು ।
ಮಂದಿರ ಕಟ್ಟಲು ಆಜ್ಞೆಯಿತ್ತು । ಆ ವೃತ್ತಾಂತ ಮೂವತ್ತರೋಂಭತ್ತರಲಿದೆ ॥ 116

ಮಾತೋಶ್ರೀಯ ವ್ರತೋದ್ಯಾಪನ । ಅದಕೆ ದೇವ ಹಾಕಿಸಿದರು ಬ್ರಾಹ್ಮಣಭೋಜನ ।
ಬಾಬಾರಿಗಿತ್ತರು ನಿಮಂತ್ರಣ । ಪತ್ರವನ್ನವರಿಗೆ ಬರೆದು ॥ 117

ಯತಿವೇಷವ ಧರಿಸಿದವರು । ಆ ದಿವಸ ಮೂವರು ಬಂದರು ।
ಬ್ರಾಹ್ಮಣರೊಡನೆ ಉಂಡು ಹೋದರು । ಗುರುವಿನ ಯೋಜನೆ ತಿಳಿಯಲಿಲ್ಲ 118

ದಷ್ಟಾಂತವನಿತ್ತು ಹೇಮಾಡನಿಗೆ । ಬಾಬಾ ಬಂದರು ಭೋಜನಕೆ ।
ಭಾವಚಿತ್ರದ ರೂಪದೊಳಗೆ । ಸುರಸ ವರ್ಣನೆಯದರದು ನಲವತ್ತನೆಯದರಲಿ ॥ 119

ಆ ಭಾವಚಿತ್ರದ ಕಥೆಯವಿಸ್ತಾರವಾಗಿ । ಕವಿಗಳು ಹೇಳುವರು ಭಕ್ತರಿಗಾಗಿ ।
ನಿರೂಪಿಸುವರು ಸುರಸವಾಗಿ । ಸದ್ಗುರುವಿನ ಅತರ್ಕ್ಯ ಮಹಿಮೆಯನ ॥ 120

ರುದ್ರಾವತಾರ ತಾಳಿ । ಸುರಿಸಿದರು ಬೈಗುಳ ಸುರಿಮಳಿ ।
ದೇವ ಅದರ ಮೇಲೆ ಶ್ರೀ ಸಾಯಿ ಕ್ರೋಧವ ತಾಳಿ । ಕೆಂಡದಂತೆ ಕೆಂಪಾಗಿ ॥ 121

"ಜ್ಞಾನೇಶ್ವರಿಯನು ನಿತ್ಯ ನೇಮದಿಂದ । ಓದು" ಎಂದು ಶ್ರೀ ಸಾಯಿ ಹೇಳಿದ ।
ಸ್ವಪ್ನದಲಿ ವಾಚನದ ರೀತಿಯ ತಿಳಿಸಿದ । ವಿವರವಿದೆ ನಲ್ವತ್ತೊಂದರಲಿ ॥ .122

ಭಕ್ತ ದಾತೆಯ ತ್ರಿಪುಂಡ್ರಲೇಪನವನು । ಸಾಯಿನಿಧನದ ಪೂರ್ವ ಸೂಚನೆಯನು ।
ರಾಮಚಂದ್ರನ ಮರಣವನು । ಮತ್ತು ತಾತ್ಯಾರ ಮರಣವ ತಪ್ಪಿಸಿದ್ದು ॥ 123

ಸಾಯಿ ಸದ್ಗುರು ನಿರ್ಯಾಣವಾರ್ತೆ । ಹುಟ್ಟಿಸಿತು ಶ್ರೋತೃಗಳಲಿ ಉದ್ವಿಗ್ನತೆ ।
ಹೇಮಾಡರ ಚಿತ್ತಕೆ ವ್ಯಾಕುಲತೆ । ಈ ಪಾವನ ಕಥೆ ನಲವತ್ತೆರಡರಲಿ ॥ 124

ಪೂರ್ವಾಧ್ಯಾಯದಲಿ ಅಪೂರ್ಣವಾಗಿದ್ದ । ವೃತ್ತಾಂತ ಬಾಬಾರ ನಿಧನದ ।
ಅದನ್ನೇ ಸಂಪೂರ್ಣಗೊಳಿಸಿದ । ಕಥೆ ಇದೆ ನಲವತ್ಮೂರರಲಿ ॥ 125

ಒಮ್ಮೆ ಕಾಕಾ ಸಾಹೇಬ ದೀಕ್ಷಿತ । ಕಾಕಾ ಮತ್ತು ಮಾಧವರಾಯ ಸಮವೇತ ।
ಓದುತಿದ್ದಾಗ ನಾಥ ಭಾಗವತ । ಶಂಕಿತಮನಸ್ಕರಾದರು ॥ 126

ಮಾಧವರಾಯರು ಶಂಕೆ ನಿರಸನನ ಮಾಡುವದು । ಆದರಿಂದ ದೀಕ್ಷಿತರ ಮನಕೆ ಸಮಾಧಾನವಾಗದು ।
ಆನಂದರಾವ ಪಾಖಾಡೆ ಸ್ವಪ್ನವ ಹೇಳುತಿದ್ದು । ಶಂಕಾನಿರಸನ ಮಾಡುತಿದ್ದರು ॥ 127

ಜಂತಿಗೆ ನೇತು ಹಾಕಿದ ಹಲಗೆ । ಅಲ್ಲಿ ಏಕೆ ನಿದ್ದೆ ಬರದು ಮ್ಹಾಳಸಾಪತಿಗೆ ।
ಸಾಯಿ ಸಮರ್ಥರು ಈ ಶಂಕೆಗೆ । ನಾಲ್ವತ್ತೈದನೆಯ ಅಧ್ಯಾಯದಲೀವರು ಸಮಾಧಾನ ॥ 128

ಇದ್ದಲಿಯೇ ಇದ್ದು ತಿರುಗುವರೆಲ್ಲೆಡೆಗೆ । ಚಮತ್ಕೃತಿಯ ತೋರುವರು ಜನಗಳಿಗೆ ।
ವಿಚಿತ್ರಅವರ ಗಮನ ಕಾಶಿ ಗಯೆಗಳಿಗೆ । ಅದ್ಭುತ ಚರಿತ್ರೆ ಬಾಬಾರದು ॥ 129

ಚಾಂದೋರಕರರ ಮಗನ ಮದುವೆಗೆ । ಬಾಬಾ ಹೋಗ ಹೇಳಿದರು ಶಾಮನಿಗೆ ।
ಗಯಾ ಪಟ್ಟಣದಿ ಭಾವ ಚಿತ್ರದೊಳಗೆ । ಬಾಬಾರ ಇರವು ಕಂಡನು ಶಾಮಾ ॥ 130

ಎರಡು ಆಡುಗಳ ಪೂರ್ವಜನ್ಮ ವೃತ್ತ ಕಥನ । ಸ್ವಮುಖದಿಂದ ಮಾಡಿದರು ಸಾಯಿ ತ್ರಿನಯನ ।
ರಮ್ಯ ಮಧುರ ಪವಿತ್ರಗಹನ । ಕಥಾವರ್ಣನ ನಲವತ್ತಾರರಲಿ ॥ 131

ಹೀಗೆಯೇ ಒಂದು ಹಾವು ಕಪ್ಪೆಗಳ । ಅಥವಾ ಸಾಹುಕಾರ ಸಾಲಗಾರರುಗಳ ।
ಅವರ ಸತ್ಯ ಕಥೆಯ ಪೂರ್ವಜನ್ಮಗಳ । ಹೇಳಿದರು ಸಾಯಿ ದೇವರು ॥ 132

ವೈರ ಹತ್ಯೆ ಮತ್ತು ಋಣ । ತೀರಿಸುವುದಕ್ಕಾಗಿ ಪುನರ್ಜನನ ।
ಬಾಬಾ ಮಾಡಿಸುವರು ಕಥಾಮೃತಪಾನ । ಆ ಹೃದಯಂಗಮ ಕಥೆ ನಲವತ್ತೇಳರಲಿ ॥ 133

ಶೇವಡೆ ಒಬ್ಬ ಭಕ್ತ ಪ್ರವರ । ಇನ್ನೊಬ್ಬ ವಿಶ್ವಾಸವಿಲ್ಲದ ಸಪಟಣೇಕರ ।
ಒಬ್ಬನ ವಕೀಲಿ ಪರೀಕ್ಷೆಯ ಪ್ರಕಾರ । ಇನೊಬ್ಬನ ಮೇಲೆ ಕೃಪೆ ನಲವತ್ತೆಂಟರಲಿ ॥ 134

ಹರಿಕಾನೋಬಾ ಮುಂಬಯಿಯವ । ಸ್ವಾಮಿ ಸೋಮದೇವ ಕುಟಿಲ ಮನಸಿನವ ।
ಮನದಲಿಟುಕೊಂಡು ಅಭಿಮಾನವ । ಸಂತಪರೀಕ್ಷಗೆ ಬಂದ ಶಿರಡಿಗೆ ॥ 135

ದರ್ಶನಕೆ ಬಂದಾಗಲೇ ಮನೋಗತ ಹೇಳಿದರು । ಕೂಡಲೇ ಇಬ್ಬರೂ ಲಜ್ಜಿತರಾದರು ।
ಸಾಯಿ ಚರಣದಿ ಭಕ್ತರಾದರು । ಜನ್ಮಾಂತರದ ಪಾಪನಾಶವಾಗಿ ॥ 136

ಕುಳಿತಾಗ ಬಾಬಾರ ಸನ್ನಿಧ । ಸ್ತ್ರೀರೂಪ ನೋಡಿ ವಿಕಾರವಶನಾದ ।
ಚಾಂದೋರಕರರ ಮನದ । ವರ್ಣನೆಯಿದೆ ನಲ್ವತ್ತೊಂಬತ್ತನೆಯದರಲಿ ॥ 137

"ತದ್ವಿದ್ಧಿ ಪ್ರಣಿಪಾತೇನ" । ಇದರದೇ ಅರ್ಥದ ವಿಸ್ತಾರವನ ।
ಮಾಡಿದರು ಅದರ ಸಮರ್ಥನ । ರಘುನಾಥನಂದನು ಐವತ್ತನೆಯದರಲಿ ॥ 138

ದೀಕ್ಷಿತ ಹರೀಸೀತಾರಾಮ । ಭಕ್ತಧುರಂಧರ ಬಾಳಾರಾಮ ।
ನಾಂದೇಡದ ವಕೀಲ ಪುಂಡಲಿಕನಾಮ । ಮೊದಲು ಶಿರಡಿಗೆ ಹೇಗೆ ಬಂದರು ॥139

ಒಬ್ಬೊಬ್ಬರ ಕಥೆ ಅದ್ಭುತ । ಕೇಳಿದವರಾಗುವರು ವಿಸ್ಮಿತ ।
ಭಕ್ತ ಮನೋದಧಿ ಉಕ್ಕೇರುತ । ಐವತ್ತೊಂದನೆಯದರಲಿದರ ವರ್ಣನೆಯಿದೆ ॥ 140

ಮಾಡಿ ಗ್ರಂಥ ಸಿಂಹಾವಲೋಕನ । ಬಳಿಕ ತೆಗೆದುಕೊಳ್ಳುವದು ಪಸಾಯದಾನ ।
ಕಳೆದು ಕೇಡಿಗಳ ಕೆಟ್ಟತನ । ಸಜ್ಜನ ಸಂರಕ್ಷಣೆ ಮಾಡಬೇಕು ॥ 141

ಸದ್ಗುರು ಚರಣದಲಾಗಿ ಲೀನ । ಮಾಡಿ ಮನ ಬುದ್ಧಿ ಲೆಕ್ಕಣಿಕೆ ಅರ್ಪಣ ।
ಮುಗಿಸಿ ಎಲ್ಲ ಗ್ರಂಥವನ । ಕೃತಾರ್ಥನಾದ ಸಂಗತಿ ಐವತ್ತೆರಡನೆಯದರಲಿ ॥ 142

ಈ ರೀತಿ ಸಾಯಿ ಚರಿತಾಧ್ಯಾಯ । ಪೂರ್ಣ ಮಾಡಿದರು ಗೋವಿಂದರಾಯ ।
ಪ್ರೇಮದಿ ಮಾಡಿಅವರಿಗೆ ವಂದನೆಯ । ವಿಶ್ವ ಗುರುಮಾಯಿಯನ ನಮಿಸುವೆ ॥143

ಅಧ್ಯಾಯದ್ಯಾಯಗಳಸಾರ ತೆಗೆದು । ಹೇಳುವದಕೆನ್ನುವರು ಅವತರಣಿಕೆಯೆಂದು ।
ಮುಮುಕ್ಷು ರಸಿಕರಿಗದಾಗುವುದು । ಕೈವಲ್ಯ ಪುರಿಯ ಸತ್ಪಥ ॥ 144

ಶೆಲ್ಲೆಗೆ ತ್ಯಾಪಿ ಹಚ್ಚಿದಂತಿದು । ಎಂದು ಜನ ಹೀಯಾಳಿಸಬಹುದು ।
ಆದರೊಮ್ಮೆ ವಿನಂತಿಯ ದಾಸನದು । ಚತುರ ಶ್ರೋತೃಗಳು ಕೇಳಬೇಕು ॥ 145

ಶೆಲ್ಲೆ-ಶಿಶು ಎರಡೂ ಅಂದವಿದ್ದು । ಕೆಟ್ಟ ದೃಷ್ಟಿತಾಗದಿರಲೆಂದು ।
ಕಪ್ಪು ಬೊಟ್ಟೆಂಬಂತೆ ಅವತರಣಿಕೆಯಿದು । ಬಾಳನಿವ ಅದಕೆ ಹಚ್ಚುತಿರುವ ॥ 146

ಗ್ರಂಥ ಸುಂದರ ಷಡ್ರಸ ಅನ್ನ । ಅಧ್ಯಾಯಾರ್ಥವೆಂಬ ಪದಾರ್ಥಗಳ ಭಿನ್ನ ।
ಉಂಡಾದ ಮೇಲೆ ಪಚನಕೆ ತಕ್ರಪಾನ । ಅದಂತೆ ಈ ಅವತಾರಣಿಕಾ ಲೇಖನ ॥147

ಸದಾಫಲದಾಯಿನಿಯಾದ ಗ್ರಂಥ ಸುರಭಿಗೆ । ಶುಚಿಯಾದ ಅಧ್ಯಾಯಾವಯಗಳಿಗೆ ।
ದೃಷ್ಟಿ ಹತ್ತದಿರಲೆಂದು ಕೊರಳಿಗೆ । ದೃಷ್ಟಿ ಮಣಿ ಮಾಲೆ ಈ ಅವತರಣಿಕೆ ॥ 148

ಇರಲಿನ್ನು ಅಧ್ಯಾಯ ಪದ್ಧತಿ । ಹೇಮಾಡಪಂತರು ಅನುಸರಿಸಿದ ರೀತಿ ।
ಅದನು ಹೇಳುವೆನು ಯಥಾಮತಿ । ಸಾದರರಾಗಿ ಶ್ರೋತೃಗಳು ಕೇಳಬೇಕು ॥ 149

ಪ್ರಥಮಾರಂಭದಲಿ ಸದ್ಗುರುಸ್ತವನ । ಬಳಿಕ ಮಾಡಿರುವರು ವೇದಾಂತ ನಿರೂಪಣ।
ಸಾಯಿ ಬ್ರಹ್ಮ ಸ್ವರೂಪವರ್ಣನ । ಅನುಭವ ಕಥನ ತದನಂತರ ॥ 150

ಮೊದಲೇ ಹೇಮಾಡವ್ಯುತ್ಪನ್ನ । ಅದರಲಿ ಸದ್ಗುರು ಸಾಯಿ ಪ್ರಸನ್ನ ।
ತತ್‌ಕ್ಷಣದಲಿ ಮಾಡಿದರು ಪ್ರತಿಭಾಸಂಪನ್ನ । ಗ್ರಂಥ ಪಕ್ವಾನ್ನ ನಿರ್ಮಿಸಲು॥ 151

ಅದರ ಸವಿಯ ಅನುಭವಿಸಿದಾಗ । ಜನ್ಮ ಮರಣದ ನಾಡಿ ನಿಂತು ಹೋಗುವದಾಗ ।
ನಿರ್ವಾಣ ಪದದ ಒಡೆತನ । ಅಕ್ಷಯವಾಗಿ ದೊರಕುವದು ॥ 152

ಹೇಮಾಡರರದು ರಸಭರಿತ ಮಾತು । ಮೇಲೆ ಸಾಯಿ ಪ್ರಸಾದ ಲಭಿಸಿತು ।
ಹಾಲಿಗೆ ಕಬ್ಬಿನರಸ ಬೆರೆತಂತಾಯಿತು । ಗ್ರಂಥದ ಹಿರಿಮೆಯನೇನು ಬಣ್ಣಿಸುವದು ॥ 153

ಬಹಳಷ್ಟು ಗ್ರಂಥಕಾರರಿರಬಹುದು । ಅವರಿಗೆಲ್ಲ ಪ್ರಸಾದವಾಣಿಯ ಅಧಿಕಾರಬಾರದು ।
ಯಾವಾಗ ನಿಜವಾದ ಸದ್ಗುರುವಿನ ಲಾಭವಾಗುವುದು । ವಿಶ್ವಾಧಾರ ರಮಾಪತಿಯದು ॥ 154

ವಿದ್ಯಾಧ್ಯಯನವಾಗಿದ್ದೂ । ಇಂಥ ಗ್ರಂಥಲೇಖನ ಹುಟ್ಟದು ।
ತ್ರಿವಾರ ಸತ್ಯ ಮಾತಿದು । ಸದ್ಗುರುವಿನ ಕೃಪೆಯಿಲ್ಲದೆ ॥ 155

ಸಾಯಿ ಸಚ್ಚರಿತೆಯನಾರು ಬಣ್ಣಿಸಬಲ್ಲರು । ಎಂಥ ಅನುಪಮ ಗ್ರಂಥ ಯೋಗ್ಯತೆಯಾದರೂ ।
ಹೇಮಾಡಪಂತರಂಥ ಕರ್ತರು ಲಭಿಸಿದರು । ಮುಮುಕ್ಷುಗಳ ಸೌಭಾಗ್ಯದಿಂದ ॥156

ಯಾವ ಪ್ರಕಾರ ಗ್ರಂಥವು ಮಹೀತಲದಲಿ । ಅದೇ ಪ್ರಕಾರ ಕೀರ್ತಿ ಭೂಮಂಡಲದಲಿ ।
ಗೋವಿಂದರಾಯರು ಮಾಡಿದರು ದೀಪಾವಳಿ । ಆಗಲೇ ಮುಮುಕ್ಷುಗಳ ಸಲುವಾಗಿ ॥ 157

ಗ್ರಂಥರಾಜನೇ ಧನ್ಯ ಧನ್ಯ । ಸಾಯಿಸದ್ಗುರು ಪ್ರಸಾದ ಜನ್ಯ ।
ಮುಮುಕ್ಷು ಜೀವರಿಗಾಗುವುದು ಮಾನ್ಯ । ವಿಚಾರ ದೈನ್ಯವ ಹರಿಸುವದು ॥ 158

ಅನಂತ ಜನ್ಮದ ಸುಕೃತದ ಗಂಟು । ಅದರಿಂದ ಸಾಯಿ ಸೇವೆ ಲಭಿಸಿತು ।
ಗೋವಿಂದರಾಯರಿಗೆ ಮಿಠಾಯಿ ದೊರಕಿತು । ಮಧುರತಮ ಗ್ರಂಥ ಲೇಖನದ್ದು ॥ 159

ಹೇಮಾಡಪಂತರು ಕಟ್ಟಾ ಭಕ್ತರು । ಕವಿ ವೇದಾಂತ ವಿದ್ಯಾಸಕ್ತರು ।
ಸಾಯಿ ಸದ್ಗುರು ಪದಾನುರಕ್ತರು । ಹಗಲಿರೂಳೂ ಆಗಿರುವರು ॥ 160

ಅತಿಗಹನ ವಿಷಯ ವೇದಾಂತ । ವಿರಕ್ತಿ-ಭಕ್ತಿ-ಜ್ಞಾನಗಳನೊಟ್ಟುಗೂಡಿಸುತ ।
ನಿರ್ಮಿಸುವುದು ಇಂಥ ಗ್ರಂಥ । ಗುರುಕೃಪೆಯಿಲ್ಲದೇ ಬಲುಕಷ್ಟ ॥ 161

ಅಧ್ಯಾಯವಲ್ಲ ಇವು ಹೇಮಾಕುಂದನಗಳು । ಅದರಲ್ಲಿ ಕೂಡ್ರಿಸಿದೆ ಕಥೆಯೆಂಬ ರತ್ನಗಳು ।
ಅವುಗಳ ಅರ್ಥಪ್ರಭೆ ಬೆಳಗಲು । ಮಹಾಪ್ರಯತ್ನ ಗೋವಿಂದರಾಯರದು ॥ 162

ನಾನಾ ಅಧ್ಯಾಯಗಳ ಸುಗಂಧ ಸುಮಮಾಲೆಯನು । ಶ್ರೀ ಸಾಯಿ ಸದ್ಗುರು ಕಂಠಕೆ ತೊಡಿಸುತಿರುವನು।
ಪ್ರೇಮಳ ಮತಿಯ ಗೋವಿಂದರಾಯನು । ನಿರ್ಮಲಭಾವದಿಂದ ಕೂಡಿ ॥ 163

ನಾನಾ ಅಧ್ಯಾಗಳ ಶುದ್ಧ ಹೇಮ ಕುಂಭ । ಅದರಲ್ಲಿ ಶ್ರೀ ಸಾಯಿ ಸಚ್ಚರಿತ ಗಂಗಾಭ( ಗಂಗಾಜಲ)।
ತುಂಬಿ ಇಟ್ಟಿರುವ ರಘುನಾಥ ಡಿಂಭ (ಕಂದ) । ಮುಮುಕ್ಷುದಂಭವ ದೂರ ಮಾಡಲು ॥ 164

ನಾನಾ ಗ್ರಂಥ ರಣಾಂಗಣ ಸಭೆ । ಅಂಥಲ್ಲಿ ನಿಲಿಸಿದರು ಅಧ್ಯಾಯ ಯಶಸ್ತಂಭ ।
ಮರ್ದಿನಿ ಅಸುರದರ್ಪಾಭಿಮಾನದಂಭ । ರಘುನಾಥ ಡಿಂಭಮತಿ ಖಡ್ಗದಿಂದ ॥165

ಗ್ರಂಥವು ರತ್ನ ಜಡಿತ ಪಂಚಾರತಿ । ಅಧ್ಯಾಯ ಕಥಾರ್ಥ ಸ್ನೇಹ ಸೂತ್ರ ಜ್ಯೋತಿ ।
ಎತ್ತಿಕೊಂಡು ವಿರಕ್ತಿ ಮತ್ತು ಶಾಂತಿ । ಸಂತನೃಪತಿಗೆ ಬೆಳಗುವರು ॥ 166

ಗ್ರಂಥಾಮಾಯೆ ವಿಶ್ವರೂಪಸಿ । ಅಧ್ಯಾಯ ಬಾಹುಗಳ ಮೇಲಕ್ಕೆ ಎತ್ತರಿಸಿ ।
ಕಥಾರ್ಥ ಕೇಯೂರದಿಂದಕಾಯವ ಶೃಂಗರಿಸಿ । ಸಾಯಿ ಬ್ರಹ್ಮನನಾಲಂಗಿಸಲು ಸಿದ್ಧ ॥ 167

ಸಾಯಿ ಸಚ್ಚರಿತ ಗ್ರಂಥ ಸಾಮ್ರಾಟ । ಅಧ್ಯಾಯಗಳದರ ಚತುರ ಹೊಗಳುಭಟ್ಟ ।
ಶ್ರದ್ಧಾ ಜ್ಞಾನ ವೇದಾಂತಗಳ ವಿರಾಟ । ವೈಭವವನು ವರ್ಣಿಸುವವು ॥ 168

ಸಾಯಿ ಸಚ್ಚರಿತ ಪರಮಾರ್ಥ ಸಂತೆ । ಒಂದೊಂದು ಅಧ್ಯಾವೂ ಅದರಲ್ಲಿಯ ಪೇಟೆ ।
ಅದರಲ್ಲಿ ಸಾಕಷ್ಟು ಅನುಭವ ಕಥೆ । ರಚಿಸಿರುವರಂದವಾಗಿ ಕವಿವರ್ಯರು ॥ 169

ಗ್ರಂಥ ಗಂಗಾ ಪಾತ್ರದೊಡ್ಡದು । ಅಧ್ಯಾಯ ರಚನೆಯ ಘಾಟ ಅಂದವಾದದ್ದು ।
ಕಥಾರಸಾಮೃತ ಪ್ರವಾಹ ವೇಗದ್ದು । ಅಲ್ಲಿ ಸಾಮಾರ್ಥ್ಯ ಮಿತಿ ಮೀರಿ ಗುರು ಕೃಪೆಯದು ॥170

ಗ್ರಂಥವಲ್ಲ ಇದು ಕಲ್ಪವೃಕ್ಷ । ಸಂಸಾರಿಗಳಿಗೆನಿಸುವದು ರುಕ್ಷ ।
ಮುಮುಕ್ಷುಗಳಿಗೆ ಕೇವಲ ಮೋಕ್ಷ । ಪ್ರತ್ಯಕ್ಷ ಅನುಭವ ನೋಡಬೇಕು ॥ 171

ಇದಕೇ ಎನಬೇಕು ನಿಜವಾದ ಸ್ಮಾರಕ । ಯಾವದು ಸಂಸ್ಕೃತಿತ ಮತಾಪಹಾರಕ ।
ಮೋಹಮಾಯಾನಿರಯತಾರಕ । ಶಾಂತಿದಾಯಕ ಅಕ್ಷಯ್ಯ ॥ 172

ಗ್ರಂಥಕಾರರಾಯ ಗೋವಿಂದ । ಸಾಯಿ ಸದ್ಗುರುಪಾದಾರವಿಂದ ।
ನಿತ್ಯ ನವ ಮಧು ಮಕರಂದ । ಸೇವಿಸುವ ಭಕ್ತ ಮಿಲಿಂದವಾಗಿ ॥ 173

ಉಪನಾಮ ಅವರದು ದಾಬೋಳಕರ । ಆಂಗ್ಲ ಪ್ರಭು ಸೇವಾ ತತ್ಪರ ।
ವಿದ್ಯಾವಿನಯ ಆಚಾರ ವಿಚಾರ । ಅಧಿಕಾರ ಸಂಪನ್ನರಾದವರು ॥ 174

ರಖುಮಾಬಾಯಿ ಅವರ ಗೃಹಿಣಿ । ಸುಶೀಲಭಾವಿಕ ಸದ್ಗುಣಖಣಿ ।
ಪತಿಪರಾಯಣೆ ವಿನೀತವಾಣಿ । ಸಾಯಿ ಚರಣದಲಿ ದೃಢಬಾವ ॥ 175

ವೆಂಗುರ್ಲೆಯ ಹತ್ತಿರ ದಾಬೋಳಿ ಎಂಬುದು । ಅವರ ಮೂಲವಸ್ತಿ ಅಲ್ಲಿಯದು ।
'ಕೇಳವೆ' ಗ್ರಾಮಕ್ಕೆ ನಂತರ ಬಂದದ್ದು । ಕವಿಯಮನೆತನದವರೆಲ್ಲ ॥ 176

ಶಕೆ ಹದಿನೇಳುನೂರ ಎಂಭತ್ತೊಂದು । ಮಾರ್ಗಶಿರದ ಶುಕ್ಲದ ಪಂಚಮಿಯಂದು ।
ಪುಣ್ಯರಾಶಿ ಗೋವಿಂದ ಹುಟ್ಟಿದ್ದು । ರಘುನಾಥಭಾರ್ಯೆ ಲಕ್ಷ್ಮಿಯುದರದಲ್ಲಿ ॥ 177

ಗೌಡ ಸಾರಸ್ವತ ಬ್ರಾಹ್ಮಣರ ಮನೆಯಲ್ಲಿ । ಭಾರದ್ವಾಜ ಗೋತ್ರದ ಇವರು ಎಪ್ಪತ್ತನೆಯ ವಯಸಿನಲ್ಲಿ ।
ಆಷಾಢ ಶುಕ್ಲ ಪಕ್ಷದ ನವಮಿ ತಿಥಿಯಲ್ಲಿ । ಹದಿನೆಂಟು ನೂರಾ ಐವತ್ತೊಂದರಲಿ ನಿರ್ವಾಣ ಇರವದು ॥ 178

ಶಕೆ ಹದಿನೆಂಟುನೂರ ನಲವತ್ನಾಕರಲಿ । ಗ್ರಂಥ ಆರಂಭಿಸಿದರು ಚೈತ್ರ ಮಾಸದಲಿ ।
ಶಕೆ ಐವತ್ತೊಂದು ಜೇಷ್ಠ ಮಾಸದಲಿ । ಐವತ್ತೆರಡು ಅಧ್ಯಾಯಗಳ ಪೂರ್ಣಗೊಳಿಸಿದರು ॥ 179

ಗೋವಿಂದರಾಯರಿಗೆ ಒಬ್ಬನೇ ಸುತ । ಐದು ಕನ್ಯೆಯರಲ್ಲಿ ನಾಲ್ವರು ।
ವಿವಾಹಿತ ವೈದ್ಯಕೀ ಕಲಿಯುತ್ತಿರುವ ಸುತ ವಿವಾಹಿತ । ಅವಿವಾಹಿತ ಕನ್ಯೆಯೂಅದನೇ ಓದುತಿರುವಳು ॥ 180

ಇನ್ನು ಹೇಳುವೆ ಪಾರಾಯಾಣ ಪದ್ಧತಿ । ಅಂತೆಯೇ ಸಪ್ತಾಹದ ಸುಗಮ ರೀತಿ ।
ಗುರುಚರಿತ್ರೆ ಅಥವಾ ಅನ್ಯ ಗ್ರಂಥಗಳಂತೆ । ಕೃಪಾವಧಾನರಾಗಬೇಕು ಶ್ರೋತೃಗಳು ॥181

ಶುದ್ಧವಿಟ್ಟುಕೊಂಡು ಅಂತಃಕರಣ । ಭಕ್ತಿಭಾವದಿಂದ ಮಾಡಬೇಕು ಪಾರಾಯಣ ।
ಒಂದು ಎರಡು ಅಥವಾ ಮೂರು ದಿನಗಳಲಿ ಮಾಡಿದರೆ ಪೂರ್ಣ। ಸಾಯಿ ನಾರಾಯಣ ಸಂತುಷ್ಟನಾಗುವ ॥ 182

ಇಲ್ಲವೇ ಮಾಡಬೇಕು ಸಪ್ತಾಹವ । ಆದರಿಂದ ಪಡೆಯುವಿರಿ ಪುಣ್ಯ ಸಂಪತ್ತಿಯ ಲಾಭವ ।
ಸಾಯಿ ಪೂರೈಸುವ ಮನಧಭೀಷ್ಟವ । ಭವಭಯಗಳು ದೂರವಾಗುವವು॥ 183

ಪ್ರಾರಂಭಿಸಬೇಕು ಗುರುವಾರದಂದು । ಸ್ನಾನ ಮಾಡಬೇಕು ಉಷಃ ಕಾಲದಲೆದ್ದು ।
ಬೇಗನೆ ನಿತ್ಯ ಕರ್ಮಗಳ ಮುಗಿಸಿಕೊಂಡು । ಆಸನದ ಮೇಲೆ ಕುಳಿತುಕೊಳ್ಳಬೇಕು ॥ 184

ರಮ್ಯ ವಿಸ್ತೀರ್ಣ ಮಂಟಪವ ರಚಿಸಿ । ಬಾಳೆ ಕದಳಿಗಳಿಂದದನಲಂಕರಿಸಿ ।
ಮೇಲೆ ಅಂದವಾಗಿ ಆಚ್ಛಾಧಿಸಿ । ವಿಭೂಷಣಗೊಳಿಸಬೇಕು ॥ 185

ಅಲ್ಲಿ ಹಾಕಿ ಉಚ್ಚಾಸನ । ಸುತ್ತಲೂ ಬರೆಯಬೇಕು ಭಿನ್ನಭಿನ್ನ ।
ರಂಗವಲ್ಲಿಗಳ ವಿವಿಧ ಬಣ್ಣ । ಕಣ್ಣಿಗಾನಂದವೀಯುವಂತೆ ॥ 186

ಸದ್ಗುರುವಿನ ಪ್ರತಿಮೆಯನೊಂದು । ಅಥವಾ ಅಂದವಾದ ಭಾವ ಚಿತ್ರವ ತಂದು ।
ಜೋಪಾನದಿಂದ ಉಚ್ಚಾಸನದಲ್ಲಿಟ್ಟು । ಪ್ರೇಮಾಭಾವದಿ ವಂದಿಸಿ ॥ 187

ರೇಶಿಮೆಯ ವಸ್ತ್ರದಲ್ಲದನು ಆಚ್ಛಾದಿಸಿ । ಸದ್ಗುರುವಿನ ಹತ್ತಿರ ಅದನಿರಿಸಿ ।
ಪಂಚೋಪಚಾರದಿಂದಿವುಗಳ ಪೂಜಿಸಿ। ವಾಚನವನಾರಂಭಿಸಬೇಕು ॥ 188

ವ್ರತಸ್ಥನಾಗಿರಬೇಕು ಎಂಟು ದಿನಗಳು । ಸೇವಿಸಬೇಕು ಗೋಕ್ಷೀರ ಅಥವಾ ಫಲಹಾರಗಳು ।
ಅಥವಾ ಹುರಿದ ಧಾನ್ಯ ಪದಾರ್ಥಗಳು । ರಾತ್ರಿಯಲಿ ಅಥವಾ ಏಕಭುಕ್ತನಾಗಿರಬೇಕು ॥ 189

ಮುಖವ ಮಾಡಿ ಪೂರ್ವದಿಕ್ಕಿನತ್ತ । ಮನದಿ ಸದ್ಗುರು ಮೂರ್ತಿಯ ಸ್ಮರಿಸುತ ।
ಮನವನಿಟ್ಟುಕೊಂಡು ಸ್ವಸ್ಥ । ಗ್ರಂಥವಾಚನ ಮಾಡುವದು ಮೋದದಿಂದ ॥ 190

ಎಂಟು ಎಂಟು ಮತ್ತು ಏಳು । ಎಂಟು ಆರು ಎಂಟು ಏಳು ।
ಈ ರೀತಿ ಓದಬೇಕು ದಿನ ಏಳು । ಎಂಟನೆಯ ದಿನ ಅವತರಣಿಕೆ ಮಾತ್ರ । 191

ವ್ರತಪಾರಣೆ ಅಷ್ಟಮದಿನದಿ । ಸಾಯಿ ನಾರಾಯಣನಿಗೆ ನೈವೇದ್ಯ ಮಾಡಿ ।
ಸುಗ್ರಾಸ ಭೋಜನವ ಆಪೇಷ್ಟ ಬ್ರಾಹ್ಮಣರೊಡಗೂಡಿ । ಅವರಿಗೆ ದಕ್ಷಿಣೆಯ ಕೊಡಬೇಕು ಯಥಾಶಕ್ತಿ ॥ 192

ಆಮಂತ್ರಿಸಿ ವೈದಿಕ ಬ್ರಾಹ್ಮಣರನು । ರಾತ್ರಿಯಲಿ ಮಾಡಬೇಕು ವೇದ ಘೋಷಣೆಯನು ।
ಪಯಶರ್ಕರಾಪಾನ ದಕ್ಷಿಣೆಗಳನು । ಕೊಟ್ಟವರ ಮನ ತಣಿಸಬೇಕು ॥ 193

ಕೊನೆಗೆ ಸದ್ಗುರು ಚರಣಗಳ ವಂದಿಸಿ । ಅವರಿಗೆ ಉಚಿತ ದಕ್ಷಿಣೆಯನರ್ಪಿಸಿ ।
ಭಾಂಡಾರಭುವನಕ್ಕದ ಕಳಿಸಿ । ಸಂಸ್ಥಾನನಿಧಿ ವರ್ಧನಕ್ಕೆಂದು ॥ 194

ಅದರಿಂದ ಸಂತುಷ್ಟನಾಗುವ ಸಾಯಿ ಭಗವಾನ । ಭಕ್ತರಿಗೀಯುವನು ಪಸಾಯದಾನ।
ಛೇದಿಸಿ ಭವಭಯ ಸರ್ಪವನ । ಮೋಕ್ಷದ ನಿದಾನವ ತೋರುವ ॥ 195

ಶ್ರೋತೃಗಳು ಸಂತರ ತವರು ಮನೆಯಾಗಲಿ । ಅವತರಣಿಕೆಯ ಮರೆವಾಗದಿರಲಿ ।
ಗ್ರಂಥಾರ್ಥದತ್ತ ಗಮನವಿರಲಿ । ಕಿಂಕರನ ವಿನಂತಿಯಿದು ಚರಣಗಳಲಿ ॥ 196

ಶ್ರೋತೃಸಜ್ಜನ ಕೃತಾಂತ ಕಾಲ । ಎಲ್ಲರದೂ ದಾಸನ ಮೇಲೆ ಕೃಪೆಯಿರಲಿ ।
ಶಿರವಿಟ್ಟು ತಮ್ಮ ಚರಣದಲಿ । ಬಾಬಾನ ಬಾಳನಿವ ಪ್ರಾರ್ಥಿಸುವಾ ॥ 197

ಏನಾದರೂ ಹೆಚ್ಚು ಕಡಿಮೆಯಾಗೆ । ಆದನೆಲ್ಲ ಬಿಡಬೇಕು ನನ್ನದು ನನಗೆ ।
ಸಾರವ ಮಾತ್ರ ಗ್ರಹಿಸುವ ಹಾಗೆ । ಮನ ಅದರಲಿ ತೊಡಗಲಿ ॥ 198

ನಮೋ ಸಾಯಿ ಶಿವನಂದನಾ । ನಮೋ ಸಾಯಿಕಮಲಾಸನ ।
ನಮೋ ಸಾಯಿ ಮಧುಸೂಧನ । ಪಂಚವದನಾ ಸಾಯಿ ನಮೋ ॥ 199

ನಮೋ ಸಾಯಿ ಅತ್ರಿನಂದನಾ । ನಮೋ ಸಾಯಿ ಪಾಕಶಾಸನಾ ।
ನಮೋಸಾಯಿ ನಿಶಾರಮಣ । ವಹ್ನಿನಾರಾಯಣಾ ಸಾಯಿ ನಮೋ ॥ 200

ನಮೋ ಸಾಯಿ ರುಕ್ಮಿಣೀವರಾ । ನಮೋ ಸಾಯಿಚಿದ್ಭಾಸ್ಕರಾ ।
ನಮೋ ಸಾಯಿ ಜ್ಞಾನಸಾಗರಾ ಜ್ಞಾನೇಶ್ವರಾ ಶ್ರೀ ಸಾಯಿ ನಮೋ ॥ 201

ಅವತರಣಿಕಾ ವಾಕ್ಪುಷ್ಪಾಂಜಲಿ । ಅಂತೇಯೇ ನಮನ ನಾಮಾದಲಿ ।
ಪ್ರಾರ್ಥಿಸುವೆ ಅರ್ಪಿಸಿ ಗುರುಪದ ಕಮಲದಲಿ । ಸಾಯಿ ಮಾತೆ ಸಂತುಷ್ಟಳಾಗಲಿ ॥ 202

ಇತಿದಾಸ ಬಾಬಾ ಬಾಳ ವಿರಚಿತೆ । ಯತಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಅವತರಣಿಕಾನಾಮತ್ರಿಪಂಚಾಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿ ನಾಥಾರ್ಪಣಮಸ್ತು ॥

॥ ಶುಭಂ ಭವತು ॥

**॥ ಸಮಾಪ್ತೋಯಂ ಗ್ರಂಥ ॥**



